KARNATAKA STATE ARCHIVES

KARNATAKA STATE ARCHIVES

KARNATAKA STATE ARCHIVES

KARNATAKA STATE ARCHIVES

ARS 34 APP 82

NAVAYUGA KANNADA WEEKLY

From 13 6 · 1957
Cont'd From Roll No. 146
Roll No. 147

ARS 34 APP 82

NAVAYUGA KANNADA WEEKLY

From 13 6 · 1957
Cont'd From Roll No. 140
Roll No. 147

ARS 34 APP 82

NAVAYUGA KANNADA WEEKLY

From 13 6 · 1957
Cont'd From Roll No. 146
Roll No. 147

ಭೂ-ಸುಧಾರಣೆ

ನ್ಯಾಯವಾದ ಮತ್ತು ಶಾಂತಿಯುತವಾದ ಕಾನೂನಿನ ರಚನೆಯೊಗಲಿ

* *

ಧನಿಕ-ವಕ್ಕಲುಗಳೊಳಗೆ ವೈಷಮ್ಯವನ್ನು ಹರಡಿಸಿರುವ ಇಂದಿನ ವಾತಾವರಣ ಶೀಘ್ರವೇ ತಿಳಿಯಾಗಲಿ

ಅಧಿಕಾಹಾರೋತ್ಪತ್ತಿ, ನಿರುದ್ಯೋಗ ನಿವಾರಣೆ ಮತ್ತು ಆರ್ಥಿಕ ಸಮಾನತೆಗಳ ಮೂರು ಮುಖ್ಯ ಧ್ಯೇಯಗಳನ್ನಿಟ್ಟುಕೊಂಡು ಸಮಾಜವಾದೀ ರಾಷ್ಟ್ರ ನಿರ್ಮಾಣದ ಕಡೆಗೆ ಭರದಿಂದ ಹೆಜ್ಜೆಯಿಡುವುದಾಗಿ ಸಾರಿದ ನಮ್ಮ ಜನತಾ ರಾಜ್ಯವು ಮೈಸೂರು ಪ್ರಾಂತ್ಯದಲ್ಲೊಂದು ಭೂಸುಧಾರಣಾ ಸಮಿತಿಯನ್ನು ನೇಮಿಸಿ ಆ ಮೂಲಕ ಈ ಧ್ಯೇಯಗಳ ಸಾಧನೆಗಾಗಿ ಹೊರಟಿರುವುದು ಸ್ವಾಗತಾರ್ಹವಾದುದೇ ಎಂದಿನ ವರೆಗೆ ಹೊಲದಲ್ಲಿ ಗೇಯುವ ರೈತನಿಗೆ ಆ ಹೊಲದ ಮೇಲೆ ಒಂದುರೀತಿಯ ಅಧಿಕಾರವಿರುವುದಿಲ್ಲವೋ ಅಂದಿನ ತನಕ ನಮ್ಮ ಅಧಿಕಾಹಾರೋತ್ಪತ್ತಿಯ ಉತ್ಪತ್ತಿಯ ಹೆಚ್ಚಳದ ಯಾವ ಕಾರ್ಯಕ್ರಮವು ಪ್ರತ್ಯಕ್ಷ ಫಲದಾಯಕವಾಗಲಾರದು. ಬದಲಿಗೆ ಅದು ಕೇವಲ ಪುಸ್ತಕದ ಬದನೆಕಾಯಿಯಾಗಿಯೇ ಉಳಿಯುವುದು. ಉತ್ಪತ್ತಿಯನ್ನು ಬೆಳೆಸುವುದಂಲ್ಲಿ ಪ್ರಮುಖ ಮತ್ತು ಕೇಂದ್ರ ಸ್ಥಾನದ ಪಾತ್ರವು ವ್ಯವಸಾಯಗಾರನದೇ. ಏರುತ್ತಿರುವ ಜನಸಂಖೆಯ ಪ್ರಮಾಣದಲ್ಲಿ ಹೊಲ್ಯಗಳ ಸಂಖ್ಯೆಯೂ, ಹಾಗೆಯೇ ರೈತನ ಅಭಿರುಚಿಯೂ ವೃದ್ಧಿಯಾದರೆ ಮಾತ್ರ ಇವೆಲ್ಲ ಸಾಧ್ಯವೆಂಬುದು ಅಕ್ಷರಶಃ ಸತ್ಯ. ಬೋಳು ಗುಡ್ಡವಾದರೂ ಅದು ತನ್ನದೆಂಬ ಮಮತೆ ಆ ನೆಲದ ಮೇಲೆ ಹುಟ್ಟಿಕೊಂಡರೆ ಅದನ್ನಾತ ಬಂಗಾರದ ಬಯಲಾಗಿ ಪರಿವರ್ತಿಸಿಯಾನು ತನ್ನ ಕಾಯಕಷ್ಟದಿಂದ ಕಡಿದು ಕೊಚ್ಚಿ ಮಾಡಿದ ಹೊಲದ ಮೇಲೆ ನೆಟ್ಟು ನೀರೆರೆದು ಬೆಳೆಸುವ ಗಿಡಮರಗಳ ಮೇಲೆ ಆತನಿಗೆ ಅಧಿಕಾರವಿದ್ದರೆ ಮಾತ್ರ ಆ ಕಾರ್ಯದಲ್ಲಿ ಆತ ಅಭಿರುಚಿ ತೋರಿಸಿಯಾನು. ಆದ್ದರಿಂದ ಗೇಯುವ ನೆಲದ ಒಡೆತನ ಗೇಯುವ ರೈತನಿಗೆ ದೊರಕಬೇಕೆಂಬ ತತ್ವಕ್ಕೆ ಇಂದು ಮನ್ನಣೆ ದೊರಕಿದೆ.

ಕೇವಲ ಮಣ್ಣಿನ ಮೇಲೆ ಅಧಿಕಾರ, ಹಿಡುವಳಿಯ ಭದ್ರತೆ ಮಾತ್ರ ಸಾಕಾಗಲಾರದು. ಸಕಾಲಿಕ ಸಹಾಯವನ್ನು ಸಹಾ ಸರಕಾರ ಸಲ್ಲಿಸಬೇಕು. ಬಾವಿ ತೋಡಲಿಕ್ಕೆ, ಗೊಬ್ಬರ ಬೀಜಗಳಿಗೆ ಸರಕಾರ ಸಾಲದ ರೂಪದಲ್ಲಿ ಸಹಾಯವನ್ನೂ ನೀಡಬೇಕು. ಪಂಪು ಸೆಟ್ಟುಗಳನ್ನು ಸಹಾ ಪೂರೈಸಬೇಕು. ಆದರೆ ಸಾಕಷ್ಟು ಭದ್ರತೆಯಿಲ್ಲದೆ ಸರಕಾರ ಸಾಲ ಕೊಡಲಾರದು. ಗೇಯುವ ಹೊಲ ಇತರರಿಂದಾದ ಮೇಲೆ ಧನಿಯ ಒಪ್ಪಿಗೆ ವಿನಹ ಸಾಲ ಸಿಗಲಾರದು. ಆದ್ದರಿಂದ ಭಾರತದ ಬಡ ರೈತ ಇಂದು ಈ ಯೋಜನೆಗಳ ಸಹಾಯವನ್ನು ಪಡೆಯಲಾರದ ಸ್ಥಿತಿಯಲ್ಲಿದ್ದಾನೆ. ಇದಕ್ಕೆ ಹೊಲದ ಮೇಲೆ ಆತನಿಗಾವ ಭದ್ರತೆಯೂ ಇಲ್ಲದಿರುವುದೇ ಕಾರಣ,

ಇದನ್ನು ಸರಕಾರ ಒಪ್ಪಿದೆ. ಕಾಂಗ್ರೆಸ್, ಪಿ. ಯಸ್. ಪಿ., ಕಮ್ಯೂನಿಸ್ಟ್ ಈ ಎಲ್ಲಾ ಪಕ್ಷಗಳೂ ಈ ಮಾತನ್ನು ಹೌದೆಂದು ಹೇಳುತ್ತಿವೆ. ಮೊನ್ನೆ ಅಂದರೆ ತಾ 31ರಂದು ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಪಂಡಿತ ನೆಹರುಗಳು ಈ ಕಟು ಸತ್ಯವನ್ನೆ ಪುನರುಚ್ಚರಿಸುತ್ತಾ ಹೀಗೆಂದಿದ್ದಾರೆ. "ಭೂಸುಧಾರಣೆಯ ಗತಿ ಅತಿ ನಿಧಾನಗೊಂಡುದು ಹೆಚ್ಚಿನ ಸಂತಾಪದಾಯಕ. ಇನ್ನಾದರೂ ಪ್ರಗತಿಪರ ಭೂ ಸುಧಾರಣೆಗಳು ಶಾಸನರೂಪದಲ್ಲಿ ಕಾರ್ಯರೂಪಕ್ಕೆ ಬರಬೇಕು. ಇದಕ್ಕಾಗಿ ಕಾಂಗ್ರೆಸು ಹೆಚ್ಚಿನ ಆಸ್ಥೆಯಿಂದ ದುಡಿಯಬೇಕು. ಉಳುವವನಿಗೆ ವಿಶೇಷ ಸೌಲಭ್ಯವನ್ನು ಒದಗಿಸಿಕೊಡದಿದ್ದರೆ ವ್ಯವಸಾಯದ ಉತ್ಪಾದನೆ ಎಂದಿಗೂ ಅಭಿವೃದ್ಧಿಯಾಗದು. ಮತ್ತು ಅವನಲ್ಲಿಯ ಕಾರ್ಯತತ್ಪರತೆ ಸಹ ಬಲಿತುಕೊಳ್ಳುವಂತಿಲ್ಲ." ಮಾತ್ರವಲ್ಲ ನಮ್ಮ ಎಲ್ಲಾ ಪ್ರಮುಖ ಪಕ್ಷಗಳು ಕಳೆದ ಚುನಾವಣೆಯ ಕಾಲಕ್ಕೆ ಹೊರಡಿಸಿದ ಘೋಷಣೆಗಳೂ ಕೃಷಿಕ-ವಕ್ಕಲಿಗೆ ಸುಖವನ್ನು ಕಂದುಕೊಡುತ್ತೇವೆಂದು ಸಾರುತ್ತಿದ್ದುವು. ಚುನಾವಣಾ ಸಭೆಗಳಲ್ಲಿಂತೂ ಈ ಪಲ್ಲವಿಗಳನ್ನು ಹಾಡಿದ್ದಾರೆ; ಕೂಗಿದ್ದಾರೆ ಅಂದಮೇಲೆ ಎಲ್ಲರೂ ಒಪ್ಪತಕ್ಕ ಈ ತತ್ವದ ಕಾರ್ಯಾಚರಣೆಗೆ ವಿಳಂಬವೇಕೆಂದು ಅರ್ಥವಾಗಲಾರದು.

ಧನಿಕ ವರ್ಗದವರಲ್ಲಿ ಕೆಲವರು ಭೂಸುಧಾರಣೆಎಂಡೊಡನೆ ಅದೇಕೋ ಒಂದು ರೀತಿಯ ವೈಮನಸ್ಸನ್ನು ತಾಳುತ್ತಾರೆ. ಯಾವ ಪಕ್ಷಕ್ಕೆ ಸೇರಿದವರಾದರೂ ಭೂಸುಧಾರಣೆ ಎಂದೊಡನೆ ಎಲ್ಲವನ್ನೂ ಮರೆತುಬಿಟ್ಟು ತಮ್ಮದೇ ಆದ ಧನಿಕರ ಪಕ್ಷವನ್ನು ಕಟ್ಟಲು ತೊಡಗುತ್ತಾರೆ ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿಯಾದರೂ ಸಹಾಯ ಮಾಡುತಿದ್ದಾರೆ. ಎಂಬ ಆಪಾದನೆ ಕೇಳಿಬರುತ್ತಿದೆ.

ಕಾಲವು ಬದಲಾಗುತ್ತಿದೆ ಎಂಬ ಸತ್ಯವನ್ನು ನಮ್ಮ ಧನಿವರ್ಗದವರು ಅರಿತುಕೊಳ್ಳಬೇಕು. ಸಾಮ್ರಾಜ್ಯ ಶಾಹಿ. ಸಂಸ್ಥಾನಿ ಆಡಳಿತೆ, ಜಹಗೀರು ಪದ್ಧತಿಗಳೆಲ್ಲವೂ ಈ ಕಾಲಚಕ್ರದ ಉರುಳಾಟಕ್ಕೆ ಸಿಕ್ಕಲೇಬೇಕಾಯಿತು ಎಂಬುದನ್ನು ತಿಳಿದುಕೊಂಡು ಉದಾರ ಹೃದಯರಾಗಬೇಕು. ಶಾಂತಿಯಿಂದಾಗುವ ಕಾರ್ಯವನ್ನು ಕ್ರಾಂತಿಯಿಂದಲೇ ಆಗುವಂತೆ ಅನುವು ಮಾಡಬಾರದು. ದುಡ್ಡುಕೊಟ್ಟು ಭೂಮಿಯನ್ನು ಪಡೆದುಕೊಂಡ ಭೂಮಾಲಿಕನ ಭಂಡವಾಳವನ್ನು ಸರಕಾರವೂ ಜನತೆಯೂ ಒಪ್ಪಬೇಕು. ಭೂಮಾಲಿಕರಿಗೆ ಸಲ್ಲುವ ಗೇಣಿಯೆಂಬುದು ಆತನು ವಿನಿಯೋಗಿಸಿದ ನಿಧಿಗೆ ದೊರಕುವ ಬಡ್ಡಿಯೆಂಬ ತತ್ವವನ್ನು ಎಲ್ಲರೂ ಒಪ್ಪಿಕೊಳ್ಳಬೇಕು.

ಸರಕಾರ ಆದಷ್ಟು ಬೇಗನೇ ಭೂಸುಧಾರಣೆಯನ್ನು ಬಳಕೆಗೆ ತಂದು ಕೃಷಿಕ—ಒಕ್ಕಲುಗಳಿಗೆ ಹಿಡುವಳಿಯ ಮೇಲೆ ಭದ್ರತೆಯೂ, ದನಿಗೆ ನ್ಯಾಯ ಗೇಣಿಯು ಸಿಗುವಂತೆ ಶಾಸನವನ್ನು ಶೀಘ್ರವೇ ತರಬೇಕು. ಇಲ್ಲದಿದ್ದರೆ ಇದು ಧನಿ-ವಕ್ಕಲುಗಳ ಮನಸ್ಸನ್ನು ಕದಡಿಸುತ್ತಾ ಹೋಗುವ ವಿಷವೃಕ್ಷವಾಗಬಹುದು ಎಷ್ಟು ತೀವ್ರ ಈ ಕಾನೂನು ಬಳಕೆಗೆ ಬರುವುದೋ ಅಷ್ಟು ರಾಷ್ಟ್ರಕ್ಕೆ ಹಿತವಾಗುವುದು ಈ ಭಾರಿ ಈ ಕಾರ್ಯವು ಆಗಿಯೇ ಮುಗಿಯಬೇಕು. ಈ ಸಮಿತಿ ರಚನೆ ಈ ಸಂಚಾರ ಇವುಗಳೆಲ್ಲಾ ಕಾಲಹರಣ ಮಾಡಲು ಉಪಾಯಗಳು. ಎಂದು ಜನರಾಡದಂತೆ ಜಾಗ್ರತೆ ವಹಿಸಬೇಕು. ಆದ್ದರಿಂದ ನಮ್ಮ ಮಂದಾಳುಗಳು, ಸರಕಾರ, ಶಾಸನಾ ಸಭಾ ಸದಸ್ಯರು ಈ ಇತ್ಯರ್ಥ ಈ ಬಾರಿ ಆಗಿಯೇ ತೀರಬೇಕೆಂದು ನಿರ್ಧರಿಸಿ ಬಿಡಬೇಕು

ಸಮಿತಿಯ ರಚನೆ, ಮತ್ತು ಸಂಚಾರ ವಾರಂಭವಾದೊಡನೆ ನಮ್ಮ ಧನಿಕ ವರ್ಗದವರು ಸಾಕಷ್ಟು ಪ್ರತಿನಿಧಿತ್ವವನ್ನು ವಹಿಸಿದ್ದಾರೆ. ಕೃಷಿಕ-ವಕ್ಕಲುಗಳು ಇಂದು ಈ ಸಮಿತಿಯ ಮುಂದೆ ಬಂದು ಅಭಿಪ್ರಾಯ ಕೊಡುವ ಅಥವಾ ಪ್ರಶ್ನಾವಳಿಯನ್ನು ಬರೆದು ಕಳುಹಿಸುವ ಯೋಗ್ಯತೆಯಲ್ಲಿಯೂ, ಅನುಕೂಲತೆಯಲ್ಲಿಯೂ ಹಿಂದುಳದಿದ್ದಾರೆ. ಮಾತ್ರವಲ್ಲ ಇದರಿಂದ ಧನಿಕ ವರ್ಗದವರು ಸಿಟ್ಟು ಗೇಳಬಹುದೆಂಬ ಭೀತಿಯೂ ಅವರನ್ನು ಕಾಡಿಸದಿಲ್ಲ. "ನನ್ನ ಭೂಮಿಯ ಮೇಲೆ ನನಗೆ ಹಕ್ಕು ಬೇಕು" ಎಂದು ಹೇಳುವ ಪರಿಸ್ಥಿತಿಯಲ್ಲಿ ಇಂದು ನಮ್ಮ ವಕ್ಕಲುಗಳಲ್ಲಿ ಶೇಕಡಾ ಒಂದೆರಡು ಮಂದಿಯೂ ಇಲ್ಲ. ಈ ವಿಷಯವನ್ನು ಸಹಾ ಅಂದರೆ ಕೃಷಿಕ-ವಕ್ಕಲುಗಳ ನಿಸ್ಸಹಾಯಕತೆಯನ್ನು ಸಹಾ ಮನಗಂಡು, ಸಮಿತಿಯವರು ತಮ್ಮ ಪರದಿಯನ್ನು ರೂಪಿಸಬೇಕು

ಪ್ರಾಮುಖ್ಯವಾಗಿ ಈ ವಿಷಯಗಳ ಕಡೆಗೆ ಸಮಿತಿ ಗಮನವೀಯಬೇಕು.

1. ಉತ್ಪತ್ತಿಯ ಮೇಲೆ ಶೇಕಡಾ 25 ರಿಂದ 33ರಿಗೆ ಮಿಕ್ಕದ ಗೇಣಿ ನಿರ್ಣಯ.

2. ಚಿಕ್ಕ ಭೂಮಾಲಿಕರಿಗೆ 5 ಮೆಂಬರರ ಒಂದು ಕುಟುಂಬಕ್ಕೆ 5 ಎಕ್ರೆ ಸ್ವಯಂ ಸಾಗುವಳಿ.

3. ಬೇರೇನೂ ಉತ್ಪತ್ತಿಯಿಲ್ಲದವರಿಗೆ ಮಾತ್ರ ಸ್ವಾಧೀನ ಪಡೆಯುವ ಅರ್ಹತೆ.

4) ರಶೀದಿಯನ್ನು ಕೊಡದಿದ್ದರೆ ಜುಲುಮಾನೆ.

ಹಿಡುವಳಿಯ ಭದ್ರತೆ ಈ ಎರಡರಲ್ಲೊಂದು ಮಾರ್ಗವನ್ನನುಸರಿಸುವುದು ಸೂಕ್ತವಾಗಬಹುದು.

1) ಯೋಗ್ಯ ಗೇಣಿ ನಿರ್ಣಯವಾದ ಮೇಲೆ ಕೃಷಿಕ ವಕ್ಕಲಿಗೆ ಮೂಲಗೇಣಿ ಹಕ್ಕನ್ನು ಕೊಡುವುದು.

ಅಥವಾ

ನಿರ್ದಿಷ್ಟ ಅವಧಿ (ಸುಮಾರು 20 ವರುಷ) ಯೊಳಗೆ. ಪರಿಹಾರ ಸಲ್ಲಿಸಿ ಧನಿ ತನವನ್ನು ರದ್ದುಗೊಳಿಸುವುದು.

ಈ ಪರಿಹಾರವನ್ನು ಸರಕಾರವೇ ಬೋಂಡ್ ರೂಪದಲ್ಲಿ ಸಲ್ಲಾಯಿ ಧನಿಗಳ ಜೀವನೋಪಾಯಕ್ಕೆ ಒಂದು ದಾರಿಮಾಡಿಕೊಟ್ಟು ವಕ್ಕಲುಗಳಿಂದ ತೀರ್ವೆಯ ಜೊತೆಗೆ ವಸೂಲುಮಾಡಬೇಕು.

ಸರಕಾರವು ಪ್ರಕಟಿಸಿದ ಪ್ರಶ್ನಾವಳಿಯು ಹಳ್ಳಿಯ ರೈತರಿಗೆ ಸಿಗುವಂತೆಯೂ ಇಲ್ಲ. ಅವುಗಳನ್ನು ಉತ್ತರಿಸಲು ಅವರಿಂದ ಸಾಧ್ಯವೂ ಇಲ್ಲ. ಜನತೆಯ ಅಭಿಪ್ರಾಯವನ್ನು ನಮ್ಮ ಮಂದಾಳುಗಳು ತಿಳಿದಿದ್ದಾರೆ, ಸರಕಾರವೂ ಅರಿತಿದೆ. ನ್ಯಾಯ ಸಿಗುವಂತೆ ಸ್ವಾರ್ಥವನ್ನು ಮರೆತು ದೇಶದ ಹಿತದೃಷ್ಟಿಯಿಂದ ಉತ್ಪತ್ತಿಯ ಹೆಚ್ಚಳ, ಆರ್ಥಿಕ ಅಭಿವೃದ್ಧಿಗಳಿಗಾಗಿ ದುಡಿಯುವುದೇ ಮುಖ್ಯ. ಈ ಪವಿತ್ರ ಧ್ಯೇಯಕ್ಕಾಗಿ ದುಡಿಯುವ ದೊಡ್ಡ ಮನಸ್ಸು ವಿಶಾಲ ಬುದ್ಧಿ ನಮ್ಮವರಿಗೆ ಬಂದು ಧನಿ-ವಕ್ಕಲುಗಳ ಮಧ್ಯೆ ಹರಡಿಬಿಟ್ಟಿರುವ ಈ ವಿಷವಾಯು ಇನ್ನಾದರೂ ಹಾರಿಹೋಗಲಿ.

—ಶ್ರೀ. ದಾಂತಿ

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಮೂಲ ಲೇಖಕ: ಜಾನ್ ಡ್ಯೂಯಿ

ಅನುವಾದಕ: ಕು. ಶಿ. ಹರಿದಾಸ ಭಟ್ಟ

'ಸ್ವಾತಂತ್ರ್ಯ ಎಂದರೇನು? ಅದನ್ನು ಜನ ಬೆಲೆಯುಳ್ಳದ್ದೆಂದು ಭಾವಿಸಲೇನು ಕಾರಣ? ಸ್ವಾತಂತ್ರ್ಯದ ಅಪೇಕ್ಷೆ ಮನುಷ್ಯ ಸ್ವಭಾವದಲ್ಲಿಯೆ ಅಡಗಿರುವುದೇ ಅಥವಾ ವಿಶೇಷ ಪರಿಸ್ಥಿತಿಯಿಂದ ಉತ್ಪನ್ನವಾಗುವುದೆ? ಅದು ನಮ್ಮ ಲಕ್ಷ್ಯವೋ ಅಥವಾ ಇತರ ವಿಷಯಗಳ ಸಾಧನೆಗೆ ಉಪಕರಣವೋ? ಸ್ವಾತಂತ್ರ್ಯವನ್ನು ಪಡೆದ ಮೇಲೆ ಹೊಣೆಗಾರಿಕೆಯುಂಟೇ ಇಲ್ಲವೆ? ....' ಈ ಮೊದಲಾದ ಪ್ರಶ್ನೆಗಳಿಗೆ ಪ್ರಸಿದ್ಧ ದಾರ್ಶನಿಕರೂ, ಶಿಕ್ಷಣತಜ್ಞರೂ ಆದ ಜಾನ್ ಡ್ಯೂಯಿಯವರ ಉತ್ತರವನ್ನು ಅಮೇರಿಕದ ಈ ಜನಪ್ರಿಯ ಗ್ರಂಥದಲ್ಲಿ ನೋಡಬಹುದು.

ಪುಟ: ೮ + ೧೮೮. ಬೆಲೆ: ಎರಡು ರುಪಾಯಿ.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್, ಲಿಮಿಟೆಡ್, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೬ VOL.36

13—6—1957

ಸಂಚಿಕೆ ೪೦ NO. 40

ಆಹಾರದ ಸಮಸ್ಯೆ

ವಸ್ತು ಸ್ಥಿತಿಯನ್ನರಿತು ತಕ್ಕ ಮದ್ದನ್ನು ನಮ್ಮ ರಾಜಕಾರಣಿಗಳರೆಯಲಿ.

"ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಎಂದು ನಾಲ್ಕು ಶತಮಾನಗಳ ಹಿಂದೆ ಕನಕದಾಸರು ಹಾಡಿದ್ದರು. "ಹೊಟ್ಟೆಬಟ್ಟೆಗಿಲ್ಲದೆ ಮಾನವನು ಕೆಟ್ಟೆ" ಎಂದು ಜನರು ಅಂದುಕೊಳ್ಳುತ್ತಿದ್ದರೆ. ಪ್ರತಿಯೊಬ್ಬನೂ ಕಾಯಕಷ್ಟ ಮಾಡುವುದು ಕೇವಲ ಹೊಟ್ಟೆ ಮತ್ತು ಬಟ್ಟೆಗಳ ಸಲುವಾಗಿ. ಅವನ್ನು ಸಂಪಾದಿಸಿ, ಮರ್ಯಾದೆಯಿಂದ ಜೀವಿಸುವಷ್ಟು ದಿನ ಬಾಳಿಬೆಂಕು ಎನ್ನುವುದೇ ಸಾಮಾನ್ಯ ಮಾನವನ ಜೀವನೋದ್ದೇಶ. ಎಂದರೆ, ಹೊಟ್ಟೆ ಪಾಡಿಗಾಗಿಯೇ ಆತನು ಮಾಡುವ ಸಕಲ ಕಾರ್ಯಗಳೂ, ಉದ್ಯೋಗವೂ. ಅದೊಂದಿಲ್ಲವಾದರೆ, ಈ ಪ್ರಪಂಚವೇ ಬಾಳುವುದು ದುಸ್ತರ.

ಹೊಟ್ಟೆಯ ಪಿಟ್ಟನ್ನು ಯಾವನೂ ಸಹಿಸಲಾರ. ಒಂದಲ್ಲ ಒಂದು ವಿಧದಿಂದ ಅದನ್ನು ಹೊರೆದುಕೊಳ್ಳಲೇಬೇಕು. ಉದರದೇವನ ಸೇವೆಯನ್ನು ಮಾಡದಿರುವ ಈಗಿನ ಕಾಲದಲ್ಲಿರಲಾರ. "ಹುಟ್ಟಿಸಿದ ದೇವನು ಹುಲ್ಲು ಮೇಯಿಸಲಾರ" ಎಂಬ ಮಾತಿನಲ್ಲಿ ಇಂದು ವಿಶ್ವಾಸವಿಲ್ಲ; ತಮ್ಮ ಮೇಲೆಯೇ ತಮಗೆ ವಿಶ್ವಾಸವಿಲ್ಲದವರು ಯಾರೋ ಯಾವ ಕಾಲದಲ್ಲೋ ಹೇಳಿದರೆಂದು ವರದಿಯಾದ (?) ಮಾತುಗಳನ್ನು ಗ್ರಹ್ಯದೃಷ್ಟಿಯಿಂದ ನೋಡಿದರೆ ಅದಕ್ಕಾಗಿ ಆಶ್ಚರ್ಯಪಡಬೇಕಾಗಿಲ್ಲ. ಆದುದರಿಂದಲೇ "ಹೊಟ್ಟೆಯೇ ದೇವರು" ಎನ್ನುವ ತತ್ವಜ್ಞಾನಿಗಳೂ ಬಹಳ ಹಿಂದೆಯೇ ಹುಟ್ಟಿದ್ದರು. ಅಗ್ನಿಯು, ಪಾರ್ಥನೊಡನೆ ತನ್ನ ಜಠರಾಗ್ನಿಯ ರೋಗವನ್ನು ಕಳೆದುಕೊಳ್ಳಲು ಖಾಂಡವವೆಂಬ ಇಂದ್ರೋದ್ಯಾನವನ್ನೇ ಕಬಳಿಸಲು ಕೇಳಿಕೊಂಡನೆಂದಾಗ ಈ "ಅಗ್ನಿ"ಗೆ ಪ್ರಾಚೀನಕಾಲದಿಂದಲೂ ಒಂದು ಮಹತ್ವವಿದ್ದಿತೆಂದರೆ ಯಾರೂ ಹೆದರಬೇಕಾಗಿಲ್ಲ.

ವಿಶ್ವದ ಕೆಲವೊಂದು ರಾಷ್ಟ್ರಗಳಲ್ಲಿದ್ದಂತೆ ಇದೀಗ ಭಾರತದಲ್ಲಿ ಪುನಃ ಈ "ಕ್ಷುಧಾಶಾಂತಿ"ಯ ಅಭಾವವುಕಂಡುಬರುತ್ತಿದೆ. ದೇಶದಲ್ಲಿ ಆಹಾರಧಾನ್ಯಗಳ ಕೊರತೆ ಒಂದೇ ಸವನೆ ಪ್ರದರ್ಶನಕ್ಕೆ ಬಂದಿದೆ. ಒಂದೆಡೆ ಅತಿವೃಷ್ಟಿಯಿಂದ ಬೆಳೆಗಳು ನೆರೆನೀರಲ್ಲಿ ಕೊಚ್ಚಿಹೋಗಿ ವಿಶಾಲಸಾಗರದಲ್ಲಿನ ವಿಮಾನುಗಳ ಉದರ ಪೋಷಣೆಯನ್ನು ಮಾಡಿದ್ದರೆ ಇನ್ನೊಂದೆಡೆಯಲ್ಲಿ ಬಿತ್ತಿದ ಬೀಜ ಮೊಳೆತು ಬೆಳೆಯಲು ಸಾಕಷ್ಟು ವೃಷ್ಟಿಯಿಲ್ಲದೆ, ಅನಾವೃಷ್ಟಿಯ ದೆಸೆಯಿಂದಾಗಿ ಸೂರ್ಯ ದೇವನ ಕರತಾಪಕ್ಕೊಳಗಾಯಿತು. ಭಾರತದಂತಹ ವಿಶಾಲ ವಿಫುಲ ದೇಶಕ್ಕೆ, ವಿವಿಧ ಹವಾಮಾನ, ಭೂಸ್ವರೂಪಗಳಿಂದ ಕೀರ್ತಿಪಡೆದ ರಾಷ್ಟ್ರಕ್ಕೆ ಇದೊಂದು ವಿಶೇಷ ನವ್ಯವೆನ್ನಬರುವುದಿಲ್ಲ. ದೇಶದ ಒಂದಲ್ಲ ಒಂದೆಡೆಯಲ್ಲಿ ಪ್ರತಿ ವರ್ಷವೂ ಇದೇ ತರದ ಮಳೆರಾಯನ ಪ್ರಕೋಪ-ವಿಕೋಪಗಳು ಕಂಡು ಬರುತ್ತಿವೆ.

ಇನ್ನು ದಿನವೊಂದಕ್ಕೆ ೧೬ ಸಾವಿರದಂತೆ ಬೆಳೆಯುತ್ತಿರುವ ಜನಸಂಖ್ಯೆ ನಮ್ಮ ಜನಬಲಗಳಿಸಿದ ದೇಶದ್ದು. ನಿಜವಾಗಿಯೂ ಭಾರತದ ಶಕ್ತಿಯೆಂದರೆ, ಜನಬಲ. ಈ ಹೆಚ್ಚುತ್ತಿರುವ ಜನಸಂಖ್ಯೆಯ ಪ್ರಮಾಣದಲ್ಲಿ ಆಹಾರಧಾನ್ಯಗಳ ಉತ್ಪಾದನೆಯು ಹೆಚ್ಚುವುದಿಲ್ಲವೆಂಬುದುಸರ್ವಜನಿತವಿದೆ. ಭಾರತದ ವಿಸ್ತೀರ್ಣವು ಹೆಚ್ಚಲಾರದು. ಪರರಾಷ್ಟ್ರಗಳ ಮೇಲೆ ಧಾಳಿಯಿಡುವ ಯೋಚನೆ ಶಾಂತಿಪ್ರಿಯ ಭಾರತಕ್ಕಿಲ್ಲ. ಸಮುದ್ರರಾಜನನ್ನು ಹಿಮ್ಮೆಟ್ಟಿಸುವ ಆಧುನಿಕ ಪರಶುರಾಮ ಸದ್ಯ ಜನಿಸುವ ನೀರಿಕ್ಷೆಯಿಲ್ಲ. ಹಿಂಗಾಗಿ "ತ್ಯಕ್ತೇನ ಭುಂಜೀಥಾಃ" ಎಂಬಂತೆ ಪರಮಾತ್ಮ ಕೊಟ್ಟದರಲ್ಲಿಯೇ ತೃಪ್ತಿಪಟ್ಟುಕೊಳ್ಳಬೇಕೆಂಬುದು ಸ್ವಯಂ ಸಿದ್ಧ.

ನಮ್ಮ ಜನಪ್ರಿಯ ಸರಕಾರವು ಕಡಿಮೆ ಭೂಮಿಯಲ್ಲಿ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಿಸುವ ಗುರಿಯನ್ನಿಟ್ಟುಕೊಳ್ಳಬೇಕಾಗಿ ಬಂತು. ಒಂದು ಬೆಳೆತೆಗೆವಲ್ಲಿ ಎಂಡು, ಎಂಡರಲ್ಲಿ ಮೂರು ಹೀಗೆ ಅಧಿಕ ಬೆಳೆ ಬೆಳೆಯಲು, ಉತ್ತಮ ಬೀಜದಿಂದ, ಒಳ್ಳೆಯ ಗೊಬ್ಬರದ ಉಪಯೋಗದಿಂದ ಅಧಿಕ ಧಾನ್ಯಗಳನ್ನು ಬೆಳೆಸಲು ನಿರ್ಧರಿಸಿ, ತನ್ನ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಧಾನ್ಯಾನ್ನವನ್ನಿತ್ತಿತು. ಅದರಂತೆ ರೈತರಿಗೆ ತಮ್ಮ ಭೂಮಿಯಲ್ಲಿ ಹೆಚ್ಚು ಬೆಳೆಯಿಸಲು ತಕ್ಕ ನೀರಾವರಿ ಯೋಜನೆಗಳು, ಪಂಪು ಸೆಟ್ಟುಗಳು, ಕೆರೆ ಬಾವಿಗಳ ಸುಧಾರಣೆ, ಆಧುನಿಕ ಯಾಂತ್ರಿಕೋಪಕರಣಗಳು, ಬೇಕಾದಲ್ಲಿ ಹಣದ ಸಾಲ. ಹೀಗೆ ಎಲ್ಲವನ್ನೂ ಒದಗಿಸುವ ಮನಸ್ಸು ಮಾಡಿದರು ಇವೆಲ್ಲವುಗಳ ಪ್ರಯೋಜನವನ್ನು ಅದೆಷ್ಟು ಜನ ಪಡೆದುಕೊಂಡರೋ, ಸರಕಾರದ ಲೆಕ್ಕದಿಂದ ಆಹಾರ ಧಾನ್ಯಗಳ ಉತ್ಪತ್ತಿಯು ಅಧಿಕವಾಗಿದೆಯೆಂದು ತಿಳಿಯುತ್ತದೆ. ತತ್ಪರಿಣಾಮವಾಗಿ, ದ್ವಿತೀಯ ಲೋಕಯುದ್ಧದ ಕಾಲದಲ್ಲಿ ಅಮಲಿ ಬಂದಿದ್ದ ನಿಯಂತ್ರಣವು ಶಿಥಿಲಗೊಂಡಿತು. ವಿನಿಯಂತ್ರಣದಿಂದಾಗಿ ಆಹಾರ ಧಾನ್ಯಗಳು ಧಾರಾಳ ದೊರೆಯುವಂತಾದುವು.

ಆಹಾರದ ಅಭಾವವು ಈ ವರ್ಷ ಪುನಃ ತೇರಿಬಂದಿದೆ. ಅಭಾವವೆಂದರೆ ಇದು ನಿಜವಾದ ಅಭಾವವೆಂದು ಹೇಳಲಾಗುವುದಿಲ್ಲ. ಏಕೆಂದರೆ, ಹೇಳಿದ ಬೆಲೆಯನ್ನಿತ್ತರೆ ಸಾಕೆನಿಸುವಷ್ಟು ಅಕ್ಕಿಯಾಗಲೀ ಇತರ ಆಹಾರ ಧಾನ್ಯಗಳಾಗಲೀ ಪೇಟೆಯಲ್ಲಿ ದೊರೆಯುತ್ತದೆ. ೩೫ ರೂಪಾಯಿ ಕೊಡುವೆವೆಂದರೂ ಅಕ್ಕಿಯೇ ಸಿಗದ ಕಾಲವೊಂದಿತ್ತು. ಆದರೆ ಇಂದಿನ ಪರಿಸ್ಥಿತಿ ಆಹಾರದ ಅಭಾವವಲ್ಲ, ಆದರ ಬೆಲೆಯಲ್ಲಿ ನಿಯಂತ್ರಣ ಮೀರಿದ ಏರಿಕೆ ಮಾತ್ರ. ಏರಿದ ಬೆಲೆಯು ತಗ್ಗದೆ ಏರುತ್ತಲೇ ಹೋಗುತ್ತಿರುವುದು ಈ ವರ್ಷದ ವೈಶಿಷ್ಟ್ಯಗಳಲ್ಲೊಂದು.

ಈ ರೀತಿಯಲ್ಲಿ ಆಹಾರ ಧಾನ್ಯಗಳ ಬೆಲೆಯು ಏರುತ್ತಾ ಹೋದರೆ, ಭಾರತದಂತಹ ಅರೆಹೊಟ್ಟೆಯುಣ್ಣುವ ದರಿದ್ರ ನಾಡಿನಲ್ಲಿ ಬಡ ಜನರು ಹತಾಶರಾಗುವುದು ಸಹಜವೇ. ಜನತೆಯ ಕೂಗು ಸರಕಾರಕ್ಕೂ ಮುಟ್ಟಿತು. ರಾಜ್ಯ ಹಾಗೂ ಕೇಂದ್ರಸರಕಾರಗಳು ಬೆಲೆ ತಗ್ಗಿಸಲು ತಕ್ಕ ಕಾರ್ಯಕ್ರಮ ಕೈಗೊಳ್ಳುವ ಭರವಸೆಯಲ್ಲಿವೆ. ಈ ಸಲುವಾಗಿ ಲೋಕಸಭೆಯಲ್ಲಿ ಅಗತ್ಯಬಿದ್ದಲ್ಲಿ ಆಹಾರಧಾನ್ಯಗಳನ್ನು ಸರಕಾರಕ್ಕೆ ಸ್ವಾಧೀನಪಡಿಸಿಕೊಳ್ಳಲು ವಿಶೇಷ ಅಧಿಕಾರವೀಯುವ ಮಸೂದೆಯೊಂದು ಮಂಜೂರಾಯಿತು. ರಿಸರ್ವ ಬೆಂಕಿನವರು ಆಹಾರಧಾನ್ಯಗಳ ಭದ್ರತೆಯ ಮೇಲೆ ಕೊಡುವ ಸಾಲದ ಮೊಬಲಗಿನ ಕುರಿತಾಗಿ ಕೆಲವೊಂದು ನಿಯಮಗಳನ್ನು ಮಾಡಿದರು. ಇವು ಬೆಲೆತಗ್ಗಿಸುವ ವಿಧಾನಗಳಲ್ಲಿ ಒಂದು ಎಂದು ಆಹಾರ ಮಂತ್ರಿಗಳು ಹೇಳಿದರು. ಇದರ ಪರಿಣಾಮವನ್ನು ಮಾತ್ರ ಕಾದು ನೋಡಬೇಕಾಗಿದೆ.

ಈ ನಡುವೆ ಪಶ್ಚಿಮ ಬಂಗಾಳದ ಮಂತ್ರಿಗಳೊಬ್ಬರು ಭಾರತೀಯರು ಹೆಚ್ಚು ಉಣ್ಣುತಿದ್ದಾರೆ ಅವರಿಗೆ ಆವಶ್ಯಕವಾಗಿದ್ದದಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ನಿಯಂತ್ರಣ ತಿನ್ನುತ್ತಾರೆಂಬ ದೂರೊಂದನ್ನು ಹೊರಿಸಿದರು. ಇದು ಸತ್ಯವಿದ್ದರೂ ಇರಬಹುದು. ಆದರೂ ಕಳೆದ ಯುದ್ಧದಕಾಲದಿಂದ ಭಾರತೀಯರ ಆಹಾರದ ಪ್ರಮಾಣವು ಬಹಳ ಕಡಿಮೆಯಾಗಿದೆಯೆಂದು ಧೈರ್ಯವಾಗಿ ಹೇಳಬಹುದು.

ಪ್ರಥಮ ಯೋಜನೆಯಲ್ಲಿ ಕೈಗೊಂಡ ಕೆಲವೊಂದು ಅಭಿವೃದ್ಧಿಯ ಕಾರ್ಯಕ್ರಮಗಳು ನಿರೀಕ್ಷಿತ ಫಲವಿತ್ತಿಲ್ಲ. ಇದರಿಂದಾಗಿ ಆಹಾರದ ಕೊರತೆಯು ಹೆಚ್ಚು ಸುಧಾರಿಸಲಾರದೆ, ನಾವು ಇನ್ನೂ ಸಾವಂಬಿ

(೯ನೇ ಪುಟ ನೋಡಿರಿ).

RED CROSS

Needs your help in combating the threatened epidemic of

INFLUENZA

Segragate the patient, avoid congregation, consult the nearest doctor and inform the Health Officer of any 'flu in your house

Space kindly donated by

VIJAYA BANK, LIMITED.

ಆಧ್ಯಾತ್ಮಿಕ ಸಾಧನೆ

ಯೋಗಸಾಧಕ ಶ್ರೀ ಅರವಿಂದರ ಅಸಾಮಾನ್ಯ ಯೋಗಜೀವನ

ಭಾರತದಲ್ಲಿ ಮಾತ್ರವಲ್ಲ ಬಾಹ್ಯ ರಾಷ್ಟ್ರಗಳಲ್ಲಿ ಸಹ ಇಂದು ಜನರು ಶ್ರೀ ಅರವಿಂದರ ಹೆಸರನ್ನು ತಿಳಿದಿರುವರಲ್ಲದೆ ಅವರ ವಿಶಿಷ್ಟ ಜೀವನದರ್ಶನ ಮತ್ತು ಯೋಗಸಾಧನೆಯ ಪದ್ಧತಿಯನ್ನು ತಿಳಿಯಲು ಅದವಾ ಸ್ವೀಕರಿಸಲು ಉತ್ಸುಕರಾಗಿದ್ದಾರೆ ಶ್ರೀ ಅರವಿಂದರೊಬ್ಬರು ಯೋಗಿ ಬಾಹ್ಯದೃಷ್ಟಿಯಿಂದ ಜನರೊಬ್ಬ ವಿರಾಟ್ ಮೌಲಿಕ ಪ್ರತಿಭಾಸಂಪನ್ನ, ದೇಶಪ್ರೇಮಿ, ಮಹಾಪಂಡಿತ, ಪುಣ್ಯ ಚರಿತರಾಗಿರುವ ಮಹರ್ಷಿ ಅಂತರಿಕವಾಗಿ ಯೋಗೇಶ್ವರ, ಬ್ರಹ್ಮಭೂತ ಬ್ರಹ್ಮದರ್ಶಿ, ಬ್ರಹ್ಮಜ್ಞಾನಿ ಯೋಗಿ ಅವರ ಯೋಗದರ್ಶನದ ಸ್ವರೂಪವು ಗತಾನುಗತಿಕ ಸಾಧದಿಂದ ವಿಭಿನ್ನವಾಗಿತ್ತು. ಬೇರೆ ಯೋಗಿಗಳಂತೆ ಶ್ರೀ ಅರವಿಂದರು ಜೀವನದ ಸುಖ ದುಃಖ, ಸಾಮಾಜಿಕ-ರಾಜನೈತಿಕ, ಉತ್ಥಾನ-ಪತನ-ಸಮಗ್ರ ಜಾಗತಿಕ ವ್ಯಾಪಾರವು ತುಚ್ಛವೆಂದು ಅದರಿಂದ ವಿಮುಕ್ತರಾಗಿರಲಿಲ್ಲ, ಅಕಸ್ಮಾತ್ ಉದಾಸೀನರಾಗಿರಲಿಲ್ಲ ಅವರ ಯೋಗದರ್ಶನದಲ್ಲಿ ಸಮಗ್ರ ವಿಶ್ವಚೇತನದ ಸ್ಪಂದನವು ಕಂಡುಬರುತಿತ್ತು ಅವರ ಯೋಗವು ಎಲ್ಲವುಗಳ ಸಮನ್ವಯವಾಗಿತ್ತು. ಸಮಗ್ರ ಮಾನವ ಸಮಾಜದ ಸರ್ವಾಂಗೀಣ ಪೂರ್ಣತೆ ಅದವಾ ವಿಕಾಸ, ಮನುಷ್ಯ-ಪ್ರಕೃತಿಯ ಆಮೂಲ ಪರಿವರ್ತನೆ, ಮನುಷ್ಯ ಜೀವನದಲ್ಲಿ ದಿವ್ಯ ಭಾವ ದಿವ್ಯ ಮೂರ್ತಿಯ ಸ್ಫುರಣೆ, ದಿವ್ಯೋಪಲಬ್ಧಿ ಅಥವಾ ಚರಮ ಸಾರ್ಥಕತೆಯ ಲಾಭವೇ ಅವರ ಯೋಗದ ಏಕಮಾತ್ರ ಉದ್ದೇಶವಾಗಿತ್ತು ತನ್ನ ಆತ್ಮಕ್ಕೆ ವ್ಯಕ್ತಿಯನ್ನು ಒದಗಿಸಿಕೊಳ್ಳಲು ಅವರು ಯೋಗಸಾಧನ ನಿರಂತರಾಗಿರದೆ ದಿವ್ಯಾತ್ಮನ ಅಂಶವಾದ ಮಾನವಾತ್ಮನಲ್ಲಿ ದಿವ್ಯ ಸ ಭಾವನೆಯ ವಿಕಾಸವೇ ಅವರ ಲಕ್ಷ್ಯವಾಗಿತ್ತು ಅಜ್ಞಾನದ ಆವರಣವನ್ನು ಕಳಚಿಹಾಕಿ ಮಾನವ ಜೀವನದಲ್ಲಿರುವ ದಿವ್ಯ ಜೀವನದಲ್ಲಿ ಮಾನವಾತ್ಮಗಳನ್ನು ಪ್ರತಿಷ್ಠಿಸುವುದೇ ಯೋಗೇಶ್ವರ ಶ್ರೀ ಅರವಿಂದರ ಜೀವನದ ಸಾಧನೆಯಾಗಿತ್ತು

ಸಾಮೂಹಿಕ ಮಾನವ ಜೀವನದ ಆಧ್ಯಾತ್ಮಿಕ ಕಲ್ಯಾಣ ಅಥವಾ ಆತ್ಮಿಕ ವಿಕಾಸವು ಅರವಿಂದರ ಧ್ಯೇಯವಾಗಿತ್ತು ಶ್ರೀ ಅರವಿಂದರ ದೃಷ್ಟಿ ಸರ್ವಪ್ರಥಮವಾಗಿ ಶೃಂಖಲಿತ, ಪದನತ ಭಾರತ ವರ್ಷದ ದೇಶವಾಸಿಗಳತ್ತ ಹರಿಯಿತು ಸ್ವಾಧೀನತ, ರಾಜನೈತಿಕ ಸ್ವತಂತ್ರತೆಯ ಹೊರತಾಗಿ ಯಾವುದೇ ಜಾತಿಯು ಯಾವ ಕ್ಷೇತ್ರದಲ್ಲಾದರೂ ಉನ್ನತಿ ಹೊಂದುವುದು ಅಸಾಧ್ಯವೆಂದವರು ಕಂಡುಕೊಂಡರು ಅದುದರಿಂದ ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗಲು ಸಂಗ್ರಾಮವನ್ನು ಕೈಗೊಳ್ಳುವುದು ತನ್ನ ಧರ್ಮವೆಂದು ತಿಳಿದು, ದೇಶದ ಎಲ್ಲೆಡೆಗಳಲ್ಲಿಯೂ ವಿಪ್ಲವಾಗ್ನಿಯನ್ನು ಜ್ವಲಿಸಿ ದೇಶವಾಸಿಗಳನ್ನು ಪ್ರಬುದ್ಧರನ್ನಾಗಿ ಮಾಡಿದರು. ಭಾರತದ ಜಾತೀಯ ಜಾಗರಣದಿಂದ ವಿಶ್ವಸಂಸಾರದಲ್ಲಿ ನವಚೇತನ, ನವಪ್ರೇರಣೆ ನವಜೀವನದ ದ್ಯೋತನವು ಪ್ರಸಾರಿತವಾಗುವುದು ಮತ್ತು ಈ ಜಾಗೃತಿಯು ಅಂತರಾಳದಲ್ಲಿ ವಿಶ್ವಾಧಾರ, ಪರಮಪುರುಷನ ವಿಶೇಷ ಇಂಗಿತವು ನಿಹಿತವಾಗಿದೆಯೆಂಬ ವಿಶ್ವಾಸವು ಶ್ರೀ ಅರವಿಂದರ ಮನಸ್ಸಿನಲ್ಲಿ ದೃಢವಾಗಿ ಬೇರೂರಿತು. ಜಾತೀಯ ಅಂದೋಲನ, ರಾಜನೈತಿಕ ಸಂಗ್ರಾಮಗಳು ಕೇವಲ ಸಂಗ್ರಾಮಗಳಾಗದೆ ಭಾರತೀಯ ದೆವ್ವವನ್ನು ಪುನಃ ಸ್ಥಾಪನೆಮಾಡುವುದರಲ್ಲಿ ಸಂಘಟಿತವಾಗಿದ್ದುವು ಸ್ವದೇಶ ಮತ್ತು ಸ್ವಧರ್ಮಗಳಲ್ಲಿ ಯಾವ ಭೇದವೂ ಇರಲಿಲ್ಲ. ಸ್ವದೇಶಮಾತೆಯು ದೈವೀ ಶಕ್ತಿಯ ಅನಂತ ರೂಪಗಳಲ್ಲಿ ಒಂದು 'ವಂದೇ ಮಾತರಂ' ಎಂಬುದು ಅರವಿಂದರ ಮಹಾ ಮಂತ್ರವಾಗಿತ್ತು ಕೇವಲ ರಾಜನೈತಿಕ ಸ್ವಾತಂತ್ರ್ಯವೇ ಭಾರತದ ಏಕಮಾತ್ರ ಪರಮಾರ್ಥವೆಂದವರು ತಿಳಿಯಲಿಲ್ಲ. ಭಾರತೀಯರು ಪರಮ ಪೂರ್ಣತೆಯನ್ನು ಚರಮ ಶ್ರೇಯಸ್ಸನ್ನೆಂದು ಪಡೆದೇ ಅಂದು ಅವರ ಅಧ್ಯಾತ್ಮಿಕ ವಿಕಾಸವು ಸಾರ್ಥಕವಾಗುವುದು, ರಾಜನೈತಿಕ ಸ್ವಾತಂತ್ರ್ಯವು ಈ ಪಥದ ಪ್ರಥಮ ಸೋಪಾನವೆಂದವರು ಬಾವಿಸಿದ್ದರು

ರಾಜನೀತಿಹಾಗೂ ಸ್ವಾತಂತ್ರ್ಯ ಸಮರಗಳಿಗೆ ಆಧ್ಯಾತ್ಮಿಕ ರೂಪವನ್ನೀಯುವುದು ಶ್ರೀ ಅರವಿಂದರ ಯೋಗದರ್ಶನದ ವೈಶಿಷ್ಟ್ಯ ಇದರಿಂದ ಪ್ರೇರಿತರಾಗಿ ಅವರು ದೇಶವಾಸಿಗಳಲ್ಲಿ ಸ್ವರಾಜ್ಯದಲ್ಲಿ ಆತ್ಮ ವಿಶ್ವಾಸ, ಆತ್ಮನಿರ್ಭರಶೀಲ ಹಾಗೂ ಆತ್ಮೋನ್ನತಿಯನ್ನು ಎತ್ತರಿಸುವುದರಲ್ಲಿ ಪ್ರಯಾಸಪಟ್ಟರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತವು ನಿಜವಾಗಿಯೂ ಜಯಶೀಲವಾಗುವುದೆಂಬ ವಿಶ್ವಾಸ ಅವರಲ್ಲಿತ್ತು. ಸ್ವತಂತ್ರ ಭಾರತದಲ್ಲಿ ಸಂಚರಿಸುವ ಯುಗಚೇತನದ ನಿಯಂತ್ರಣಕ್ಕಾಗಿ ಅನನ್ಯ ಸಾಧಾರಣ ಸಾಧನೆ ಮತ್ತು ವ್ಯಕ್ತಿತ್ವದ ವಿಕಾಸದ ಪ್ರಯೋಜನವೊದಗಬೇಕು ಈ ವೈಯಕ್ತಿಕ ವಿಕಾಸದಲ್ಲಿ ಅಧ್ಯಾತ್ಮ ಚೇತನ, ದಿವ್ಯೋಪಲಬ್ಧಿ, ದಿವ್ಯ ಜೀವನದ ಜ್ಞಾನ ದರ್ಶನವು ಸಂಮಿಲಿತವಾಗದ ವರೆಗೆ ಭಾರತದ ಸ್ವಾತಂತ್ರ್ಯವು ಅಪೂರ್ಣ, ಹಾಗೂ ವಿಫಲವಾಗಿಯೇ ಉಳಿಯುವುದು— ಎಂದು ಅವರು ಭಾವಿಸಿದ್ದರು ಆಗ ಶ್ರೀ ಅರವಿಂದರು ಪ್ರತ್ಯೇಕ ಭಾರತೀಯನಿಗೆ ಮತ್ತು ವಿಶ್ವವಾಸಿಗೆ ದಿವ್ಯ ಜೀವನವನ್ನು ಪ್ರಾಪ್ತಿಮಾಡಿಕೊಳ್ಳಲು ಆಹ್ವಾನವಿತ್ತರು. "ಆತ್ಮಾನಂವಿದ್ಧಿ" ಎಂದು ಪೂರ್ವಕಾಲದ ಋಷಿಗಳು ಹೇಳಿದ್ದರು ಶ್ರೀ ಅರವಿಂದರು ಸಹ ಆತ್ಮಜ್ಞಾನ, ಆತ್ಮ ವಿಕಾಸ, ಮತ್ತು ಆತ್ಮನ ಪರಿಪೂರ್ತಿಗಳು ಮಾತ್ರ ಮಾನವನ ಧ್ಯೇಯವೆಂದು ಮಾನಿಸಿದರು. ಭಾರತದ ಆತ್ಮ ಮತ್ತು ಅಧ್ಯಾತ್ಮಿಕ ಸಂಭಾವನೆಯಲ್ಲಿ ಶ್ರೀ ಅರವಿಂದರಿಗೆ ಅಚಲ ವಿಶ್ವಾಸವಿತ್ತು. ಅಧ್ಯಾತ್ಮ ಭಾರತವು ಒಂದು ದಿನ ಸಮಗ್ರ ಮಾನವ ಜಾತಿಯ ದಿವ್ಯ ಚೇತನದ ವಿಕಾಸದಲ್ಲಿ ಅಗ್ರಗಣ್ಯ ಮಾರ್ಗದರ್ಶಕವಾಗುವುದೆಂದವರು ಭವಿಷ್ಯ ನುಡಿದಿದ್ದರು

ಶ್ರೀ ಅರವಿಂದರು ಜನ್ಮಯೋಗಿಯಾಗಿದ್ದರು ಅವರ ಬಾಲ್ಯಕಾಲದಲ್ಲಿಯೇ ಯೋಗಿಯ ಲಕ್ಷಣಗಳು ಕಂಡುಬರುತಿದ್ದುವು ವಿಲಾಯತಿಯ ವಿದೇಶೀ ವಾತಾವರಣ ಸುತ್ತು ಶಿಕ್ಷಣವು ಅವರ ಆತ್ಮನ ಜಾತೀಯ ಸ್ವರೂಪವನ್ನು ವಿಕೃತ ಅಥವಾ ನಷ್ಟಗೊಳಿಸಲು ಸಮರ್ಥವಾಗಲಿಲ್ಲ ಬಾಲ್ಯಕಾಲದಿಂದಲೂ ಅವರು ದೇಶಮಾತೆಯ ಏಕನಿಷ್ಠ ಪೂಜಾರಿಯಾಗಿದ್ದರು ವಿಜಾತೀಯ ಸಂಸ್ಕೃತಿಯ ಪ್ರಾದುರ್ಭಾವದಲ್ಲಿ ವಾಸಿಸಿದ್ದರೂ ಆ ಸುಕುಮಾರ ಬಾಲಕನ ಮನಸ್ಸು ಸ್ವದೇಶದ ಅನಾಗತ ಭವಿಷ್ಯದ ಸುವರ್ಣ ಸ್ವಪ್ನಗಳನ್ನು ಕಾಣುತ್ತಿತ್ತು ವಿಂಟಿ ವಿಪ್ಲವದ ಭೂಳಯಂಕರ ಭೂಕಂಪದಿಂದ ಭಾರತದ ಜಾತೀಯ ಜೀವನದಲ್ಲಿ ಯಾವ ವಿಧಾನದ ಪರಿವರ್ತನೆಗಳಂಗಬಹುದು— ಯ ಗಾಂತಕಾರಿಯಾದ ಈ ಮಹಾ ಪ್ರಳಯಕಾಲದಲ್ಲಿ ತನ್ನ ಕರ್ತವ್ಯವೇನೆಂಬುದಾಗಿ ಬಾಲಕ ಅರವಿಂದರಚಿತ್ತವು ಆಲೋಚಿಸುತಿತ್ತು. ಇದರೊಂದಿಗೆ ಅವರ ಜ್ಞಾನ ಸಾಧನೆ ಹಾಗೂ ಆತ್ಮಪ್ರಸ್ತುತಿಗಳು ನಡೆಯುತ್ತಲೇ ಇದ್ದುವು. ಐ ಸಿ ಎಸ್. ಪದತ್ಯಾಗವು ಇದರ ಪ್ರಥಮ ಸೋಪಾನವಾಯಿತು ರಾಜಕೀಯ ಪದವನ್ನು ಅವಹೇಳನ ಮಾಡಿ ಶ್ರೀ ಅರವಿಂದರು ನೂತನ ಜೀವನದ ನೂತನ ಪದವನ್ನು ಸ್ವೀಕರಿಸಿದರು. ಭಾರತಮಾತೆಯ ಸುಸುತ್ರನು ಭಾರತದಲ್ಲಿ ಪಾದಾರ್ಪಣ ಮಾಡಿದನು. ಶ್ರೀ ಅರವಿಂದರು ಕರ್ಮಯೋಗವನ್ನು ಸಾಧಿಸತೊಡಗಿದರು ಬರೋಡದ ಮಹಾರಾಜರು ಅವರನ್ನು ತನ್ನ ರಾಜಸ್ವ ವಿಭಾಗದಲ್ಲಿ ನಿಯೋಜಿಸಿದರು ಆದರೂ ಮುಂದೆ, ಶ್ರೀ ಅರವಿಂದರ ಮಹಾ ಪಾಂಡಿತ್ಯದಿಂದ ಪ್ರಭಾವಿತರಾಗಿ ಶಿಕ್ಷಣ ವಿಭಾಗದ ಒಂದು ಉಚ್ಚ ಪದವಿಯಲ್ಲಿರಿಸಿದರು ಆ ಸಮಯದಿಂದಲೇ ಶ್ರೀ ಅರವಿಂದರ ಗುರುವ್ರತದ ಆರಂಭವಾಯಿತು

ಬರೋಡಾ ರಾಜ್ಯದಲ್ಲಿನ ಅರವಿಂದರ ಜೀವನವು ಅವರ ಜ್ಞಾನ ತಪಸ್ಸಿನ ಮಹತ್ವಪೂರ್ಣ ಪರ್ವವಾಗಿತ್ತು. ಆ ಸಮಯದಿಂದಲೇ ಅವರ ಜೀವನವು ತಪಸ್ವಿ ಜೀವನವಾಗಿ ಮಾರ್ಪಟ್ಟಿತು ಅವರ ಆಚಾರ-ವ್ಯವಹಾರ, ಉಡುಗೆ ತೊಡುಗೆಗಳಲ್ಲಿ ಅವರ ಉಗ್ರಜಾತೀಯತಾ ಬೋಧೆಯು ಅವಾಗುತಿತ್ತು. ಸ್ವಾತಂತ್ರ್ಯವಿಲ್ಲದೆ ಯಾವ ಜಾತಿಯೂ ಯಾವ ಸಾಧನೆಯಲ್ಲಿಯೂ ಸಿದ್ಧಿಪಡೆಯುದೆಂಬ ದೃಢ ವಿಶ್ವಾಸದಿಂದ ಶ್ರೀ ಅರವಿಂದರು ಕರ್ಮಯೋಗದಲ್ಲಿ ಪ್ರವೃತ್ತರಾಗಿದ್ದರು ದೇಶ

(೧೦ನೇ ಪುಟ ನೋಡಿರಿ)



ಅಭಿವೃದ್ಧಿಯೋಜನೆ

ದ್ವಿತೀಯ ಯೋಜನೆಯಲ್ಲಿ ಉಕ್ಕಿನ ಕೈಗಾರಿಕೆಯು ಅಪ್ರತಿಮ ಸ್ಥಾನ ಪಡೆದಿದೆ!

ಉಕ್ಕಿನ ಕೈಗಾರಿಕೆಯ ಅಭಿವೃದ್ಧಿಯು ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಯ ಮೂಲೋದ್ದೇಶವಾಗಿದ್ದು ನಮ್ಮ ಮುಂದಿನ ಯೋಜನೆಗಳ ಬೀಗದ ಕೈಯಂತಿದೆ ದ್ವಿತೀಯ ಯೋಜನೆಯಲ್ಲಿ ಈಗ ಸಿಗುತ್ತಿರುವ ನಾಲ್ಕು ಪಾಲಷ್ಟು ಉಕ್ಕನ್ನು ತಯಾರಿಸಲು ಅವಕಾಶವನ್ನು ಕಲ್ಪಿಸಲಾಗಿದೆ ಔದ್ಯೋಗಿಕಾಭಿವೃದ್ಧಿ ಕಾರ್ಯದಲ್ಲಿ ಒಂದು ದೇಶಕ್ಕೆ ಅಗತ್ಯಬೇಕಾದ ಉಕ್ಕಿನ ಪರಿಮಾಣವನ್ನು ಕಡಿತಮಾಡಿಕೊಳ್ಳುವುದು ಅಸಾಧ್ಯ. ಕಬ್ಬಿಣ ಮತ್ತು ಉಕ್ಕು ಕೇವಲ ಔದ್ಯೋಗೀಕರಣ ಪದ್ಧತಿಯಲ್ಲಿ ಮಾತ್ರವಲ್ಲ, ಆಧುನಿಕ ಜಗತ್ತಿನಲ್ಲಿ ದಿನನಿತ್ಯದ ಜೀವನ ವಿಧಾನಕ್ಕೂ ಅತ್ಯವಶ್ಯಕವೆನಿಸಿದ ಪದಾರ್ಥಗಳಾಗಿ ಪರಿಣಮಿಸಿವೆ ಉಕ್ಕಿನ ಉತ್ಪಾದನೆಯಲ್ಲಿಂಟಾದ ಹೆಚ್ಚಳವು ದೇಶದ ಸಣ್ಣ ದೊಡ್ಡ ಕೈಗಾರಿಕೆಗಳಭಿವೃದ್ಧಿಗೆ ಹೇತುವಾಗುವುದು ಉಕ್ಕಿನ ಅಭಾವವು ಯಂತ್ರೋತ್ಪಾದನೆಯನ್ನು ತಡೆಗಟ್ಟಬಹುದು, ಆದರಿಂದಾಗಿ ಅವಶ್ಯಕ ವಸ್ತುಗಳ ಕೊರತೆಯಾಗಬಹುದು, ಅಭಿವೃದ್ಧಿ ಯೋಜನೆಗಳ ಕಾರ್ಯಗಳನ್ನು ಇದು ಸ್ಥಗಿತಗೊಳಿಸಬಹುದು

ಒಂದು ದೇಶವು ಉಪಯೋಗಿಸುವ ಉಕ್ಕಿನ ಪರಿಮಾಣವು ಅದರ ಔದ್ಯೋಗಿಕ ಪ್ರಾಮುಖ್ಯದ ಗುರುತಾಗಿದೆ ಆದುದರಿಂದ ಔದ್ಯೋಗಿಕ ಕಾರ್ಯಗಳಲ್ಲಿ ನುಂದುವರಿಯುವ ರಾಷ್ಟ್ರಗಳು ತಮ್ಮ ಉಕ್ಕಿನ ಉತ್ಪಾದನೆಯನ್ನು ಹೆಚ್ಚಿಸುವ ಯೋಜನೆಯನ್ನು ಕೈಗೊಳ್ಳುವುದು ಸ್ವಾಭಾವಿಕವಾಗಿದ ಇತಿಹಾಸದ ಪುಟಗಳನ್ನು ಮಗುಚಿ ಹಾಕಿದರೆ, ಭಾರತವು ಕಬ್ಬಿಣ ಮತ್ತು ಉಕ್ಕುಗಳನ್ನು ತಯಾರಿಸಿದ ಪ್ರಥಮ ರಾಷ್ಟ್ರವೆಂದು ಕಂಡುಬರುವುದು ನಿಶ್ಚಿತ ಇತಿಹಾಸವಿರುವ ಕ್ರಿಶ ಒಂದು ಅಥವಾ ಎರಡನೆಯ ಶತಮಾನದ ಕಾಲದಲ್ಲಿ ಭಾರತದಲ್ಲಿ ಉತ್ತಮ ರೀತಿಯಲ್ಲಿ ಸ್ಥಾಪಿಸಲ್ಪಟ್ಟ ಉಕ್ಕಿನ ಕೈಗಾರಿಕೆಯುತ್ತಿಂಬುದು ದಿಲ್ಲಿ ನಗರದ ಸಮೀಪವಿರುವ ಕ್ಯೂತಬ್ ಎಂಬಲ್ಲಿ ಕಾಣಸಿಗುವ ಉಕ್ಕಿನ ಸ್ತಂಭದಿಂದ ತಿಳಿಯುತ್ತದ. ಇಂತಹ ಪ್ರಾಚೀನವಾದ ಉಕ್ಕಿನ ಇತಿಹಾಸವು ಪ್ರಸಂಚದ ಬೇರೆಡೆಯಲ್ಲಿದುವರೆಗೆ ದೊರೆಯದಿರುವುದು ಒಂದು ಮಹತ್ವದ ಸಂಗತಿಯಾಗಿದೆ.

ಭಾರತದಲ್ಲಿ ಉತ್ತಮ ರೀತಿಯಲ್ಲಿ ಅತ್ಯಧಿಕ ಪ್ರಮಾಣದ ಉಕ್ಕಿನ ಕೈಗಾರಿಕೆಯನ್ನು ಸ್ಥಾಪಿಸಲು ಪ್ರಕೃತಿದತ್ತ ಅನುಕೂಲತೆಗಳವ ನಮ್ಮ ಉಕ್ಕಿನ ಅದುರುಗಳ . ಪ್ರಶಸ್ತವಾದುವುಗಳೆಂದು ಹೆಸರು ಪಡೆದಿದ ಕಲ್ಲಿದ್ದಲು, ಸುಣ್ಣದಕಲ್ಲು, ಡೊಲೊಮೈಟ್, ಮತ್ತು ಮ್ಯಾಂಗನೀಸ್ ನೊದಲಾದ ಲೋಹಗಳು ಕಬ್ಬಿಣದ ಅದುರುಗಳ ದೊರೆಯುವ ಮುಖ್ಯವೆದೆಗಳ ಸಮೀಪದಲ್ಲೇ ದೊರೆಯುತ್ತನೆ. ಐತಿಹಾಸಿಕಕಾರಣಗಳದೆಸೆಯಿಂದಾಗಿ ಭಾರತದಲ್ಲಿ ಉಕ್ಕಿನ ಉತ್ಪಾದನೆಯ ನವೀನ ಕಾರಖಾನೆಯು ೧೯೫೦ರ ವರೆಗೂ ಪ್ರಾರಂಭಿಸಲ್ಪಡಲಿಲ್ಲ ಆ ವರ್ಷದಲ್ಲಿ ಜಮ್ಶೆಡ್ಜೀನ ಸ್ಟೇಂಪ್ಸ್ಜೀ ತಾತ ಎಂಬ ಮಹಾಶಯರು ಜಮ್ಶೆಡ್‌ಪುರ ಎಂಬ ಪಟ್ಟಣದಲ್ಲಿ "ಟಾಟಾ ಆಯರ್ನ್ ಎಂಡ್ ಸ್ಟೀಲ್ ವರ್ಕ್ಸ್" ಎಂಬುದೊಂದು ಉಕ್ಕಿನ ಕಾರಖಾನೆಯನ್ನು ಸ್ಥಾಪಿಸಿದರು. ಅದರನಂತರ ಮೈಸೂರಿನ ಭದ್ರಾವತಿಯಲ್ಲೊಂದು ಸಣ್ಣ ಪ್ರಮಾಣದ ಹಾಗೂ ಆಸ್ಸಾಮ್‌ಸ್ಟೀಲ್‌ನ ಸಮೀಪದಲ್ಲಿ ಬರ್ನ್ಸ್‌ಪುರ ಎಂಬಲ್ಲೊಂದು ದೊಡ್ಡ ಪ್ರಮಾಣದ ಉಕ್ಕಿನ ಕಾರಖಾನೆಗಳು ಸ್ಥಾಪಿಸಲ್ಪಟ್ಟವು

ಈ ಮೂರು ಉಕ್ಕಿನ ಕರ್ಮಾಲೆಗಳಲ್ಲಿ ಸಿದ್ಧವಾಗುವಉಕ್ಕಿನಬಟ್ಟೆಪರಿಮಾಣವು ಸುಮಾರು ೧೩ ಲಕ್ಷ ಟನ್‌ಗಳು ಮಾತ್ರ ಇದು ದೇಶದ ಹೆಚ್ಚುತ್ತಿರುವ ಉಕ್ಕಿನ ಬೇಡಿಕೆಯಲ್ಲಿ ಅತ್ಯಲ್ಪಾಂಶವಾಗಿದೆ. ಭಾರತದ ಪ್ರಥಮ ಪಂಚವಾರ್ಷಿಕ ಯೋಜನೆಯು ಕೃಷಿಯ ಅಭಿವೃದ್ಧಿಗೆ ಪ್ರಮುಖ ಸ್ಥಾನವನ್ನು ಕೊಟ್ಟಿದ್ದದರಿಂದ, ಉತ್ಪತ್ತಿಯಾಗುತಿದ್ದ ಅಲ್ಪ ಪ್ರಮಾಣದ ಉಕ್ಕಿನಲ್ಲಿಯೇ ಯೋಜಕರು ತೃಪ್ತಿಪಟ್ಟಕೊಂಡಿರಬೇಕಾಯಿತು ಅದದರಿಂದ ಅವರು ಹೊಸ ಕಾರಖಾನೆಗಳನ್ನು ಸ್ಥಾಪಿಸದೆ, ಈಗ ಕೆಲಸ ಮಾಡುತಿದ್ದ ಕಾರಖಾನೆಗಳಲ್ಲಿಯೇ ಕೆಲಸವನ್ನು ಧಾರಿಸುವುದರಿಂದ ಅವರು ತಮ್ಮ ಮೂಲ ಉದ್ದೇಶಕ್ಕೆ ಬೇಕಾದ ಉಕ್ಕನ್ನು ಪಡೆದುಕೊಳ್ಳಬೇಕಾಯಿತು ಟಾಟಾ ಮತ್ತು ಇಂಡಿಯನ್ ಆಯರ್ನ್ ಎಂಡ್ ಸ್ಟೀಲ್ ಕಂಪೆನಿಗಳಲ್ಲಿ ವ್ರತಿಯೊಂದಕ್ಕೆ ಹತ್ತು ಕೋಟಿಯಷ್ಟು ರೂಪಾಯಿಗಳನ್ನು ಮಂಗಡವಾಗಿ ಕೊಟ್ಟತಲ್ಲದೆ, ಎರಡನೆಯದಕ್ಕೆ ಲೋಕಬೇಂಕಿನ ಹದಿನೈದು ಕೋಟಿ ರೂಪಾಯಿಯ ಸಾಲಕ್ಕೆ ತಕ್ಕ ಭರವಸೆಯನ್ನಿತ್ತಿತು ಈ ಸಾಲವು ಆ ಕಾರಖಾನೆಯ ವಿಸ್ತರಣೆ ಮತ್ತು ನವೀನೀಕರಣಕ್ಕೆ ಅತ್ಯಗತ್ಯವಾಗಿತ್ತು

ಪ್ರಥಮ ಪಂಚವಾರ್ಷಿಕ ಯೋಜನೆಯು ಮುಗಿದು ದ್ವಿತೀಯ ಯೋಜನೆಯ ಮೂಲತತ್ವಗಳಲ್ಲಿ ಆರ್ಥಿಕ ವಿಚಾರವು ಕುರಿತಾಗಿ ಹೆಚ್ಚು ಧ್ಯಾನವೀಯಲಾಯಿತು ಹಾಗಾಗಿ, ಸ್ವಾಭಾವಿಕವಾಗಿ ಉಕ್ಕಿನ ಬೇಡಿಕೆ ಹೆಚ್ಚಾಯಿತು ಆಗಿನ ವಾಣಿಜ್ಯ ಮತ್ತು ಕೈಗಾರಿಕೆಗಳ ಮಂತ್ರಿಗಳಾದ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ೧೯೫೪ರ ಬೇಸಿಗೆ ಕಾಲದಲ್ಲಿ ಔದ್ಯೋಗಿಕ ಸಲಹಾಗಾರ ಮಂಡಲವನ್ನುದ್ದೇಶಿಸಿ ಭಾಷಣ ಮಾಡುತ್ತ ರಾಷ್ಟ್ರಕ್ಕೆ ೬೦ ಲಕ್ಷ ಟನ್‌ಗಳಷ್ಟು ಉಕ್ಕನ್ನು ಉತ್ಪಾದಿಸುವ ಗುರಿಯನ್ನು ಸೂಚಿಸಿದ್ದರು ಅನುಭವಿಕ ಅರ್ಥಶಾಸ್ತ್ರಜ್ಞರೂ ಔದ್ಯೋಗಿಕಜ್ಞರೂ ಆ ಸಮಯದಲ್ಲಿ ಆ ಗುರಿಯು ಅತ್ಯಧಿಕವಾದ ದೆಂದು ಆಲೋಚಿಸಿದ್ದರು. ಆದರೆ ಸ್ವಲ್ಪಸಮಯದಲ್ಲಿಯೇ ಈ ಜನರು ಹಾಗೂ ಇತರರು ರಾಷ್ಟ್ರದ ಆಳವಿನಲ್ಲಿ ಸಾಧಿಸಲಾಗುವ ಗುರಿಯೆಂದೂ ಆದರೆ, ಔದ್ಯೋಗಿಕಾಭಿವೃದ್ಧಿಯ ಹೆಚ್ಚಿನನ್ನು ದೇಶದಲ್ಲಿ ನಿಧಾನವಾಗಿದದೆ ಹೋದರೆ, ಈ ಪ್ರಮಾಣವು ಕೀಳಾ ಅಲ್ಪವೆಂದೂ ತಿಳಿದು ಕೊಂಡರು.

ಭಾರತ ಸರಕಾರವು ಜರ್ಮನಿಯ ಒಂದು ಕಂಪೆನಿಯೊಡನೆ ಭಾರತದಲ್ಲಿ ೫ ಲಕ್ಷ ಟನ್‌ಗಳಷ್ಟು ಉಕ್ಕನ್ನು ತಯಾರಿಸುವ ಕಾರಖಾನೆಯೊಂದನ್ನು ಸ್ಥಾಪಿಸುವ ವಿಚಾರದಲ್ಲೊಂದು ಒಪ್ಪಂದವನ್ನು ಮಾಡಿಕೊಂಡಿತು ೧೯೫೪ರ ಕೊನೆಯಲ್ಲಿ ಸೋವಿಯೆಟ್ ರಷ್ಯವೂ ಇನ್ನೊಂದು ಉಕ್ಕಿನ ಕಾರಖಾನೆಯನ್ನು ಸ್ಥಾಪಿಸಲ ತನ್ನ ಸಹಾಯವನ್ನು ಈಯಲು ಮುಂದೆ ಬಂತು. ಆ ಕೂಡಲೇ ಸರಕಾರವು ಸೋವಿಯೆಟ್ ಸರಕಾರದೊಂದಿಗೆ ಹತ್ತು ಲಕ್ಷ ಟನ್ ಉಕ್ಕನ್ನುತ್ಪಾದಿಸುವ ಕಾರಖಾನೆಯೊಂದರ ರಚನೆಯ ಬಗ್ಗೆ ಒಪ್ಪಂದಕ್ಕೆ ಬಂದು ಕಾರಖಾನೆ ಮತ್ತದರ ಇಲಕರಣೆಗಳಿಗೆ ದೀರ್ಘಾವಧಿಯ ಸಾಲವ ಪಡೆಯಿತು ಸಾರ್ವಜನಿಕ ವಿಧಾನದಿಂದ ಮೂರನೆಯ ಉಕ್ಕಿನ ಕಾರಖಾನೆಯೊಂದನ್ನು ಸ್ಥಾಪಿಸುವ ವಿಚಾರದಲ್ಲಿ ಸರಕಾರಕ್ಕೆ ಸಲಹನೀಡಲು ತಾಂತ್ರಿಕಜ್ಞರ ನಿಯೋಗವೊಂದನ್ನು ಕಳುಹಿಸಲು ಬ್ರಿಟಿಷ ಸರಕಾರವು ಅನುಮೋದಿಸಿತು. ಈ ಕಾರಖಾನೆಯ ಸ್ಥಾಪನೆ ಮತ್ತು ಸಲಕರಣೆಗಳ ವೆಚ್ಚದಲ್ಲಿ ಒಂದಂಶವನ್ನು ಬ್ರಿಟಿಷ ಬೇಂಕಗಳ ಸಮೂಹವೊಂದು ಸಾಲವಾಗಿಯಲು ಮುಂದೆ ಬಂತು ಈ ಶರ್ತವನ್ನನುಸರಿಸಿಯೇ ಬ್ರಿಟಿಷ ಸಲಹೆಗಾರ ಮಂಡಲವು ಭಾರತಕ್ಕೆ ಬಂತು ಇದರಿಂದಾಗಿ ಭಾರತ ಸರಕಾರ ಮತ್ತು ಬ್ರಿಟಿಷ ಬೇಂಕುಗಳ ಸಮೂಹಗಳ ನಡುವೆ ಮೂರನೆಯ ಉಕ್ಕಿನ ಕಾರಖಾನೆಯ ಯೋಜನೆಯ ವಿಚಾರದಲ್ಲೊಂದು ಒಪ್ಪಂದವಾಯಿತು. ಈ ನಡುವೆ ಭಾರತ ಸರಕಾರವು ತಾನು ಸ್ಥಾಪಿಸಿದ ಪ್ರಥಮ ಕಾರಖಾನೆಯ ಉತ್ಪತ್ತಿಯನ್ನು ೫ ಲಕ್ಷ ಟನ್ನಿನಿಂದ ೧೦ ಲಕ್ಷ ಟನ್ನುಗಳಿಗೇರಿಸಲು ನಿಶ್ಚಯಿಸಿತು.

ಹೀಗೆ ಯೋಜಕರು ೬೦ ಲಕ್ಷ ಟನ್ನುಗಳಷ್ಟು ಉಕ್ಕನ್ನು ತಯಾರಿಸುವ ಗುರಿಯನ್ನು ಚರ್ಚಿಸಿ ಒಪ್ಪಿರುವಾಗ, ಆಡಳಿತದಾರರು ಪರದೇಶ ಮತ್ತು ಸಂಸ್ಥೆಗಳೊಂದಿಗೆ ತಾಂತ್ರಿಕ ಜ್ಞಾನ, ತರಬೇತಿ ಸೌಕರ್ಯ ಮತ್ತು ಗಣ್ಯ ಆರ್ಥಿಕ ಸಹಾಯಗಳ ಕುರಿತಾಗಿ ಒಪ್ಪಂದಗಳನ್ನು ಮಾಡಲು ಪ್ರಯತ್ನಿಸುತ್ತಲಿದ್ದು ಗುರಿಯನ್ನು ಸಾಧಿಸಲು ಬದ್ಧಕಂಕಣರಾಗಿದ್ದಾರ ಅದೇ ಸಮಯದಲ್ಲಿ ಸರಕಾರವು ಭಾರತದ ಎರಡು ದೊಡ್ಡ ಉಕ್ಕಿನ ಕಾರಖಾನೆಗಳಿಗೆ ತಾವು ಬಯಸಿದ ವಿಸ್ತರಣೆಯನ್ನು ಮಾಡಲು, ತನ್ಮೂಲಕ ದೇಶದ ಉಕ್ಕಿನುತ್ಪಾದನೆಯ ಹೆಚ್ಚಳವನ್ನು ಸಾಧಿಸಲು ಜಾಗತಿಕ ಬೇಂಕಿನಿಂದ ಪಡೆಯುವ ಸಾಲಕ್ಕೆ ವಿಶ್ವಸ್ಥವಾಗಿ ನಿಂತು ಪ್ರೋತ್ಸಾಹಿಸಿತು ಹೀಗೆ ದ್ವಿತೀಯ ಯೋಜನಾಂಶದ ಕಾಲದಲ್ಲಿ ಉಕ್ಕಿನ ಅಭಿವೃದ್ಧಿ ಚಿತ್ರವು ಸಾಮಾನ್ಯವಾಗಿ ಸಂಪೂರ್ಣವಾಗಿತ್ತು. ಅಲ್ಲಲ್ಲಿ ಕೆಲವೊಂದು ಸ್ಪರ್ಶವನ್ನೀಯುವ ಕಾರ್ಯ ಮಾತ್ರ ಬಾಕಿಯುಳಿದಿತ್ತು.

ಹಳೆಯ ಸಂಸ್ಥೆಗಳಾದ ಟಾಟಾ ಆಯರ್ನ್ ಎಂಡ್ ಸ್ಟೀಲ್ ಕಂಪೆನಿಯಲ್ಲಿ ಈಗ ೮ ಲಕ್ಷ ಟನ್, ಇಂಡಿಯನ್ ಆಯರ್ನ್ ಎಂಡ್ ಸ್ಟೀಲ್‌ವರ್ಕ್ಸ್‌ನಲ್ಲಿ ೩ ಲಕ್ಷ ಟನ್ ಮತ್ತು ಮೈಸೂರು ಆಯರ್ನ್ ಎಂಡ್ ಸ್ಟೀಲ್ ವರ್ಕ್ಸ್‌ನಲ್ಲಿ ೨೫ ಸಾವಿರ ಟನ್‌ಗಳಷ್ಟು ಉಕ್ಕು ಉತ್ಪಾದನೆಯಾಗುವುದ. ಇವುಗಳು ವಿಸ್ತರಣೆಗೊಂಡಾಗಲು ಕ್ರಮವಾಗಿ ೧೫ ಲಕ್ಷ ಟನ್ ೮ ಲಕ್ಷ ಟನ್ ಮತ್ತು ೧ ಲಕ್ಷ ಟನ್‌ಗಳಷ್ಟು ಉಕ್ಕು ತಯಾರಾಗುವುದ ಹೊಸವಾಗಿ ಸ್ಥಾಪಿಸಲಾದ ರೂರ್ಕೇಲಾ ಕಾರಖಾನೆಯಲ್ಲಿ ೭೨೦ ಸಾವಿರ ಟನ್, ಭಿಲೈ ಕಾರಖಾನೆಯಲ್ಲಿ ೭೭೦ ಸಾವಿರ ಟನ್ ಮತ್ತು ದುರ್ಗಾಪುರ ಕಾರಖಾನೆಯಲ್ಲಿ ೭೯೦ ಸಾವಿರ ಟನ್ ಉಕ್ಕು ಉತ್ಪಾದನೆಯೊಗುತ್ತದೆ. ಹೀಗೆ ಭಾರತದಲ್ಲಿ ೪೬,೮೦,೦೦೦ ಟನ್‌ಗಳಷ್ಟು ಉಕ್ಕು ಉತ್ಪಾದಿಸಲ್ಪಡುವುದು.

ಒಂದೆರಡು ವರ್ಷಗಳ ಪೂರ್ವದಲ್ಲಿ ರೂರ್ಕೇಲಾ, ಭಿಲೈ, ಅಥವಾ ದುರ್ಗಾಪುರಗಳಂತಹ ಹೆಸರುಗಳು ಅನೇಕ ಜನರ ಮನಸ್ಸನ್ನು ತಡೆಹಿಡಿದಿದ್ದರೂ ಇದೀಗ ಅವು ಸಾಮಾನ್ಯ ಸ್ಥಳಗಳಾಗಿ ಪರಿಣಮಿಸಿವೆ. ಸ್ವಲ್ಪ ಜ್ಞಾನಶೀಲನಾದ ಮಾನವನು ಪ್ರಚಲಿತ ಸ್ಥಿತಿಗತಿಗಳ ಮನನರಿಕೆಯುಳ್ಳವನಾದರೆ, ಒಂದು ಸಮಯದಲ್ಲಿ ವಿಪಾತುಕ ಹೆಳ್ಳಗಳಾಗಿದ್ದ ಈ ಸ್ಥಳಗಳು ಇದೀಗ ದೇಶದ ಆರ್ಥಿಕ ಭವಿಷ್ಯವನ್ನು ರೂಪಿಸುವ, ದೇಶದ ಜನರನ್ನು ಸ್ವಾವಲಂಬನೆಯತ್ತ ಸಾಗಿಸುವ ಪುಣ್ಯಕ್ಷೇತ್ರಗಳೆಂಬುದನ್ನು ಅರಿಯದಿರಲಾರ

(೧೨ನೇ ಪುಟ ನೋಡಿರಿ)

ಸಮಯ ಇನ್ನೂ ಮಿಂಚಿಹೋಗಿಲ್ಲ

ಜೀವನದಲ್ಲಿ ಒಂದು ರೀತಿಯ ವ್ಯವಸ್ಥೆಯಿರಬೇಕಾದರೆ ಆಪತ್ಕಾಲದಲ್ಲಿ ಸಹಾಯಕ್ಕೊದಗುವ ಒಂದು ಆವರ್ತನ ಸಂಗ್ರಹದ ಯೋಜನೆಯನ್ನು ಚಿಕ್ಕಂದಿನಿಂದಲೇ ಆರಂಭಿಸಬೇಕೆಂಬುದು ಸಹಜವೇ ಆದರೆ ಕಾಲ ಕಳೆದು ಹೋಯಿತೆಂದು ಕಣ್ಣೀರು ಕರೆಯುತ್ತಾ ಕುಳಿತುಕೊಳ್ಳುವುದಕ್ಕಿಂತ ಇಂದಿನಿಂದಲೇ ಸ್ವಲ್ಪ ಸ್ವಲ್ಪ ಹಣವನ್ನಾದರೂ ಉಳಿತಾಯಮಾಡಲು ಯತ್ನಿಸುವುದೇ ಮುಖ್ಯ ಸಮಯವಿನ್ನೂ ಮಿಂಚಿಹೋಗಿಲ್ಲ ಹಲವಾರು ಆಕರ್ಷಕ ಮತ್ತು ಸುಲಭಸಾಧ್ಯವಾದ ಉಳಿತಾಯದ ಯೋಜನೆಗಳಿಗೆ-

ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಚಾರಿಸಿರಿ

96 ಶಾಖೆಗಳು

ರೂ 10.64 ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ

ಇವುಗಳಿಂದ ಸಾವಿರಾರು ಜನರ ಆರ್ಥಿಕ ಆವಶ್ಯಕತೆಗಳಲ್ಲಿ ಸಹಕರಿಸಲ್ಪಟ್ಟ

ಶೆಡ್ಯೂಲ್ಡ್ ಬೇಂಕು

ಟಿ ಎ ಪೈ, ಬಿ.ಕಾಂ (ಬೊಂಬಾಯಿ), ಎಫ್ ಆರ್ ಇ ಎಸ್ (ಲಂಡನ್), ಎ ಐ ಬಿ, ಜನರಲ್ ಮೆನೇಜರ್.

ಡಾ ಟಿ ಎಂ ಎ ಪೈ, ಎಂ ಬಿ,ಬಿ ಎಸ್, ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate, Ltd.,

Head Office: UDIPI: S India

ಅಭಿವೃದ್ಧಿಯೋಜನೆ

ದ್ವಿತೀಯ ಯೋಜನೆಯಲ್ಲಿ ಉಕ್ಕಿನ ಕೈಗಾರಿಕೆಯು ಅಪ್ರತಿಮ ಸ್ಥಾನ ಪಡೆದಿದೆ!

ಉಕ್ಕಿನ ಕೈಗಾರಿಕೆಯು ಅಭಿವೃದ್ಧಿಯು ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಯ ಮೂಲೋದ್ದೇಶವಾಗಿದ್ದು ನಮ್ಮ ಮುಂದಿನ ಯೋಜನೆಗಳ ಬೀಗದ ಕೈಯಂತಿದೆ. ದ್ವಿತೀಯ ಯೋಜನೆಯಲ್ಲಿ ಈಗ ಸಿಗುತ್ತಿರುವ ನಾಲ್ಕು ಪಾಲಷ್ಟು ಉಕ್ಕನ್ನು ತಯಾರಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಔದ್ಯೋಗಿಕಾಭಿವೃದ್ಧಿ ಕಾರ್ಯದಲ್ಲಿ ಒಂದು ದೇಶಕ್ಕೆ ಅಗತ್ಯಬೇಕಾದ ಉಕ್ಕಿನ ಪರಿಮಾಣವನ್ನು ಕಡಿತಮಾಡಿಕೊಳ್ಳುವುದು ಅಸಾಧ್ಯ. ಕಬ್ಬಿಣ ಮತ್ತು ಉಕ್ಕು ಕೇವಲ ಔದ್ಯೋಗೀಕರಣ ಪದ್ಧತಿಯಲ್ಲಿ ಮಾತ್ರವಲ್ಲ, ಆಧುನಿಕ ಜಗತ್ತಿನಲ್ಲಿ ದಿನನಿತ್ಯದ ಜೀವನ ವಿಧಾನಕ್ಕೂ ಅತ್ಯಾವಶ್ಯಕವೆನಿಸಿದ ಪದಾರ್ಥಗಳಾಗಿ ಪರಿಣಮಿಸಿವೆ. ಉಕ್ಕಿನ ಉತ್ಪಾದನೆಯಲ್ಲುಂಟಾದ ಹೆಚ್ಚಳವು ದೇಶದ ಸಣ್ಣ ದೊಡ್ಡ ಕೈಗಾರಿಕೆಗಳಭಿವೃದ್ಧಿಗೆ ಹೇತುವಾಗುವುದು. ಉಕ್ಕಿನ ಅಭಾವವು ಯಂತ್ರೋತ್ಪಾದನೆಯನ್ನು ತಡೆಗಟ್ಟಬಹುದು; ಇದರಿಂದಾಗಿ ಅವಶ್ಯಕ ವಸ್ತುಗಳ ಕೊರತೆಯಾಗಬಹುದು; ಅಭಿವೃದ್ಧಿ ಯೋಜನೆಗಳ ಕಾರ್ಯಗಳನ್ನು ಇದು ಸ್ಥಗಿತಗೊಳಿಸಬಹುದು.

ಒಂದು ದೇಶವು ಉಪಯೋಗಿಸುವ ಉಕ್ಕಿನ ಪರಿಮಾಣವು ಅದರ ಔದ್ಯೋಗಿಕ ಪ್ರಾಮುಖ್ಯದ ಗುರುತಾಗಿದೆ. ಅದುದರಿಂದ ಔದ್ಯೋಗಿಕ ಕಾರ್ಯಗಳನ್ನು ಮುಂದುವರಿಯುವ ರಾಷ್ಟ್ರಗಳು ತಮ್ಮ ಉಕ್ಕಿನ ಉತ್ಪಾದನೆಯನ್ನು ಹೆಚ್ಚಿಸುವ ಯೋಜನೆಯನ್ನು ಕೈಗೊಳ್ಳುವುದು ಸ್ವಾಭಾವಿಕವಾಗಿದೆ. ಇತಿಹಾಸದ ಪುಟಗಳನ್ನು ಮಗುಚಿ ಹಾಕಿದರೆ, ಭಾರತವು ಕಬ್ಬಿಣ ಮತ್ತು ಉಕ್ಕುಗಳನ್ನು ತಯಾರಿಸಿದ ಪ್ರಥಮ ರಾಷ್ಟ್ರವೆಂದು ಕಂಡುಬರುವುದು. ಸ್ಥಿತಿತ ಇತಿಹಾಸವಿರುವ ಕ್ರಿ. ಶ. ಒಂದು ಅಥವಾ ಎರಡನೆಯ ಶತಮಾನದ ಕಾಲದಲ್ಲಿ ಭಾರತದಲ್ಲಿ ಉತ್ತಮ ರೀತಿಯಲ್ಲಿ ಸ್ಥಾಪಿಸಲ್ಪಟ್ಟ ಉಕ್ಕಿನ ಕೈಗಾರಿಕೆಯಿತ್ತೆಂಬುದು ದಿಲ್ಲಿ ನಗರದ ಸಮೀಪವಿರುವ ಕ್ಯೂತಾಬ್ ಎಂಬಲ್ಲಿ ಕಾಣಸಿಗುವ ಉಕ್ಕಿನ ಸ್ತಂಭದಿಂದ ತಿಳಿಯುತ್ತದೆ. ಇಂತಹ ಪ್ರಾಚೀನವಾದ ಉಕ್ಕಿನ ಇತಿಹಾಸವು ಪ್ರಪಂಚದ ಬೇರೆಡೆಯಲ್ಲಿದುವರೆಗೆ ದೊರೆಯದಿರುವುದು ಒಂದು ಮಹತ್ವದ ಸಂಗತಿಯಾಗಿದೆ.

ಭಾರತದಲ್ಲಿ ಉತ್ತಮ ರೀತಿಯಲ್ಲಿ ಅತ್ಯಧಿಕ ಪ್ರಮಾಣದ ಉಕ್ಕಿನ ಕೈಗಾರಿಕೆಯನ್ನು ಸ್ಥಾಪಿಸಲು ಪ್ರಕೃತಿದತ್ತ ಅನುಕೂಲತೆಗಳಿವೆ. ನಮ್ಮ ಉಕ್ಕಿನ ಅದುರುಗಳು, ಪ್ರಶಸ್ತವಾದುವುಗಳೆಂದು ಹೆಸರು ಎಂದಿದೆ. ಕಲ್ಲಿದ್ದಲು, ಸುಣ್ಣದಕಲ್ಲು, ಡೊಲೊಮೈಟ್, ಮತ್ತು ಮ್ಯಾಂಗನೀಸ್ ಮೊದಲಾದ ಲೋಹಗಳು ಕಬ್ಬಿಣದ ಅದುರುಗಳ ದೊರೆಯುವ ಮುಖ್ಯಎಡೆಗಳ ಸಮೀಪದಲ್ಲೇ ದೊರೆಯುತ್ತವೆ. ಐತಿಹಾಸಿಕಕಾರಣಗಳಿದೆಯೆಂದಾಗಿ ಭಾರತದಲ್ಲಿ ಉಕ್ಕಿನ ಉತ್ಪಾದನೆಯ ನವೀನ ಕಾರಖಾನೆಯು ೧೯೫೦ರ ವರೆಗೂ ಪ್ರಾರಂಭಿಸಲ್ಪಡಲಿಲ್ಲ. ಆ ವರ್ಷದಲ್ಲಿ ಜಮ್‌ಶೆಡ್ಜೀನು ಸ್ಟೀಲ್ವಾಸ್ಜೀ ತಾತ ಎಂಬ ಮಹಾಶಯರು ಜಮ್‌ಶೆಡ್‌ಪುರ ಎಂಬ ಪಟ್ಟಣದಲ್ಲಿ "ಟಾಟಾ ಅಯರ್ನ್ ಎಂಡ್ ಸ್ಟೀಲ್ ವರ್ಕ್ಸ್" ಎಂಬುದೊಂದು ಉಕ್ಕಿನ ಕಾರಖಾನೆಯನ್ನು ಸ್ಥಾಪಿಸಿದರು. ಅದರ ನಂತರ ಮೈಸೂರಿನ ಭದ್ರಾವತಿಯಲ್ಲೊಂದು ಸಣ್ಣ ಪ್ರಮಾಣದ ಹಾಗೂ ಅಸ್ಸಾನ್ಸೋಲ್‌ನ ಸಮೀಪದಲ್ಲಿ ಬರ್ನ್ಸ್‌ಪುರ ಎಂಬಲ್ಲೊಂದು ದೊಡ್ಡ ಪ್ರಮಾಣದ ಉಕ್ಕಿನ ಕಾರಖಾನೆಗಳು ಸ್ಥಾಪಿಸಲ್ಪಟ್ಟವು.

ಈ ಮೂರು ಉಕ್ಕಿನ ಕರ್ಮಶಾಲೆಗಳಲ್ಲಿ ಸಿದ್ಧವಾಗುವಉಕ್ಕಿನಒಟ್ಟುಪರಿಮಾಣವು ಸುಮಾರು ೧೫ ಲಕ್ಷ ಟನ್‌ಗಳು ಮಾತ್ರ. ಇದು ದೇಶದ ಹೆಚ್ಚುತ್ತಿರುವ ಉಕ್ಕಿನ ಬೇಡಿಕೆಯಲ್ಲಿ ಅತ್ಯಲ್ಪಾಂಶವಾಗಿದೆ. ಭಾರತದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಯ ಅಭಿವೃದ್ಧಿಗೆ ಪ್ರಾಮುಖ್ಯ ಸ್ಥಾನವನ್ನು ಕೊಟ್ಟಿದ್ದುದರಿಂದ, ಉತ್ಪತ್ತಿಯಾಗುತ್ತಿದ್ದ ಅಲ್ಪ ಪ್ರಮಾಣದ ಉಕ್ಕಿನಲ್ಲಿಯೇ ಯೋಜಕರು ತೃಪ್ತಿಪಟ್ಟುಕೊಂಡಿರಬೇಕಾಯಿತು. ಆದುದರಿಂದ ಅವರು ಹೊಸ ಕಾರಖಾನೆಗಳನ್ನು ಸ್ಥಾಪಿಸದೆ, ಈಗ ಕೆಲಸ ಮಾಡುತಿದ್ದ ಕಾರಖಾನೆಗಳಲ್ಲಿಯೇ ಕೆಲಸವನ್ನು ಸುಧಾರಿಸುವುದರಿಂದ ಅವರು ತಮ್ಮ ಮೂಲ ಉದ್ದೇಶಕ್ಕೆ ಬೇಕಾದ ಉಕ್ಕನ್ನು ಪಡೆದುಕೊಳ್ಳಬೇಕಾಯಿತು. ಟಾಟಾ ಮತ್ತು ಇಂಡಿಯನ್ ಅಯರ್ನ್ ಎಂಡ್ ಸ್ಟೀಲ್ ಕಂಪೆನಿಗಳಲ್ಲಿ ಪ್ರತಿಯೊಂದಕ್ಕೆ ಹತ್ತು ಕೋಟಿಯಷ್ಟು ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟಿರಲ್ಲದೆ, ಎರಡನೆಯದಕ್ಕೆ ಲೋಕಬೇಂಕಿನ ಹದಿನೈದು ಕೋಟಿ ರೂಪಾಯಿಯ ಸಾಲಕ್ಕೆ ತಕ್ಕ ಭರವಸೆಯನ್ನಿತ್ತಿತು. ಈ ಸಾಲವು ಆ ಕಾರಖಾನೆಯ ವಿಸ್ತರಣೆ ಮತ್ತು ನವೀನೀಕರಣಕ್ಕೆ ಅತ್ಯಗತ್ಯವಾಗಿತ್ತು.

ಪ್ರಥಮ ಪಂಚವಾರ್ಷಿಕ ಯೋಜನೆಯು ಮುಗಿದು ದ್ವಿತೀಯ ಯೋಜನೆಯ ಮೂಲತತ್ವಗಳಲ್ಲಿ ಆರ್ಥಿಕ ವಿಚಾರವಾಗುರಿತಾಗಿ ಹೆಚ್ಚು ಧ್ಯಾನವೀಯಲಾಯಿತು. ಹಾಗಾಗಿ, ಸ್ವಾಭಾವಿಕವಾಗಿ ಉಕ್ಕಿನ ಬೇಡಿಕೆ ಹೆಚ್ಚಾಯಿತು. ಆಗಿನ ವಾಣಿಜ್ಯ ಮತ್ತು ಕೈಗಾರಿಕೆಗಳ ಮಂತ್ರಿಗಳಾದ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ೧೯೫೪ರ ಬೇಸಿಗೆ ಕಾಲದಲ್ಲಿ ಔದ್ಯೋಗಿಕ ಸಲಹೆಗಾರ ಮಂಡಲವನ್ನುದ್ದೇಶಿಸಿ ಭಾಷಣ ಮಾಡುತ್ತ ರಾಷ್ಟ್ರಕ್ಕೆ ೬೦ ಲಕ್ಷ ಟನ್‌ಗಳಷ್ಟು ಉಕ್ಕನ್ನು ಉತ್ಪಾದಿಸುವ ಗುರಿಯನ್ನು ಸೂಚಿಸಿದ್ದರು. ಅನುಭವಿಕ ಅರ್ಥಶಾಸ್ತ್ರಜ್ಞರೂ ಔದ್ಯೋಗಿಕಜ್ಞರೂ ಆ ಸಮಯದಲ್ಲಿ ಆ ಗುರಿಯು ಅತ್ಯಧಿಕವಾದುದೆಂದು ಆಲೋಚಿಸಿದ್ದರು. ಆದರೆ ಸ್ವಲ್ಪಸಮಯದಲ್ಲಿಯೇ ಈ ಜನರು ಹಾಗೂ ಇತರರು ರಾಷ್ಟ್ರದ ಅಳವಿನಲ್ಲಿ ಸಾಧಿಸಲಾಗುವ ಗುರಿಯೆಂದೂ ಆದರೆ, ಔದ್ಯೋಗಿಕಾಭಿವೃದ್ಧಿಯ ಹೆಜ್ಜೆಯನ್ನು ದೇಶದಲ್ಲಿ ನಿಧಾನವಾಗಿಡದೆ ಹೋದರೆ, ಈ ಪ್ರಮಾಣವು ತೀರಾ ಅಲ್ಪವೆಂದೂ ತಿಳಿದು ಕೊಂಡರು.

ಭಾರತ ಸರಕಾರವು ಜರ್ಮನಿಯ ಒಂದು ಕಂಪೆನಿಯೊಡನೆ ಭಾರತದಲ್ಲಿ ೫ ಲಕ್ಷ ಟನ್‌ಗಳಷ್ಟು ಉಕ್ಕನ್ನು ತಯಾರಿಸುವ ಕಾರಖಾನೆಯೊಂದನ್ನು ಸ್ಥಾಪಿಸುವ ವಿಚಾರದಲ್ಲೊಂದು ಒಪ್ಪಂದವನ್ನು ಮಾಡಿಕೊಂಡಿತು. ೧೯೫೪ರ ಕೊನೆಯಲ್ಲಿ ಸೋವಿಯೆಟ್ ರಷ್ಯವೂ ಇನ್ನೊಂದು ಉಕ್ಕಿನ ಕಾರಖಾನೆಯನ್ನು ಸ್ಥಾಪಿಸಲು ತನ್ನ ಸಹಾಯವನ್ನು ಈಯಲು ಮುಂದೆ ಬಂತು. ಆ ಕೂಡಲೇ ಸರಕಾರವು ಸೋವಿಯೆಟ್ ಸರಕಾರದೊಂದಿಗೆ ಹತ್ತು ಲಕ್ಷ ಟನ್ ಉಕ್ಕನ್ನುತ್ಪಾದಿಸುವ ಕಾರಖಾನೆಯೊಂದರ ರಚನೆಯ ಬಗ್ಗೆ ಒಪ್ಪಂದಕ್ಕೆ ಬಂದು ಕಾರಖಾನೆ ಮತ್ತದರ ಸಲಕರಣೆಗಳಿಗೆ ದೀರ್ಘಾವಧಿಯ ಸಾಲವನ್ನು ಪಡೆಯಿತು. ಸಾರ್ವಜನಿಕ ನಿಧಾನದಿಂದ ಮೂರನೆಯ ಉಕ್ಕಿನ ಕಾರಖಾನೆಯೊಂದನ್ನು ಸ್ಥಾಪಿಸುವ ವಿಚಾರದಲ್ಲಿ ಸರಕಾರಕ್ಕೆ ಸಲಹೆನೀಡಲು ತಾಂತ್ರಿಕಜ್ಞರ ನಿಯೋಗವೊಂದನ್ನು ಕಳುಹಿಸಲು ಬ್ರಿಟಿಷ ಸರಕಾರವು ಅನುಮೋದಿಸಿತು. ಈ ಕಾರಖಾನೆಯ ಸ್ಥಾಪನೆ ಮತ್ತು ಸಲಕರಣೆಗಳ ವೆಚ್ಚದಲ್ಲಿ ಒಂದಂಶವನ್ನು ಬ್ರಿಟಿಷ ಬೇಂಕುಗಳ ಸಮೂಹವೊಂದು ಸಾಲವಾಗಿಯಲು ಮುಂದೆ ಬಂತು. ಈ ಶರತ್ತನ್ನನುಸರಿಸಿಯೇ ಬ್ರಿಟಿಷ ಸಲಹೆಗಾರ ಮಂಡಲವು ಭಾರತಕ್ಕೆ ಬಂತು. ಇದರಿಂದಾಗಿ ಭಾರತ ಸರಕಾರ ಮತ್ತು ಬ್ರಿಟಿಷ ಬೇಂಕುಗಳ ಸಮೂಹಗಳ ನಡುವೆ ಮೂರನೆಯ ಉಕ್ಕಿನ ಕಾರಖಾನೆಯ ಯೋಜನೆಯ ವಿಚಾರದಲ್ಲೊಂದು ಒಪ್ಪಂದವಾಯಿತು. ಈ ನಡುವೆ ಭಾರತ ಸರಕಾರವು ತಾನು ಸ್ಥಾಪಿಸಿದ ಪ್ರಥಮ ಕಾರಖಾನೆಯ ಉತ್ಪತ್ತಿಯನ್ನು ೫ ಲಕ್ಷ ಟನ್ನಿನಿಂದ ೧೦ ಲಕ್ಷ ಟನ್ನುಗಳಿಗೇರಿಸಲು ನಿಶ್ಚಯಿಸಿತು.

ಹೀಗೆ ಯೋಜಕರು ೬೦ ಲಕ್ಷ ಟನ್ನುಗಳಷ್ಟು ಉಕ್ಕನ್ನು ತಯಾರಿಸುವ ಗುರಿಯನ್ನು ಚರ್ಚಿಸಿ ಒಪ್ಪಿರುವಾಗ, ಆಡಳಿತದಾರರು ಪರದೇಶ ಮತ್ತು ಸಂಸ್ಥೆಗಳೊಂದಿಗೆ ತಾಂತ್ರಿಕ ಜ್ಞಾನ, ತರಬೇತಿ ಸೌಕರ್ಯ ಮತ್ತು ಗಣ್ಯ ಆರ್ಥಿಕ ಸಹಾಯಗಳ ಕುರಿತಾಗಿ ಒಪ್ಪಂದಗಳನ್ನು ಮಾಡಲು ಪ್ರಯತ್ನಿಸುತ್ತಲಿದ್ದು ಗುರಿಯನ್ನು ಸಾಧಿಸಲು ಬದ್ಧಕಂಕಣರಾಗಿದ್ದಾರೆ. ಅದೇ ಸಮಯದಲ್ಲಿ ಸರಕಾರವು ಭಾರತದ ಎರಡು ದೊಡ್ಡ ಉಕ್ಕಿನ ಕಾರಖಾನೆಗಳಿಗೆ ತಾವು ಬಯಸಿದ ವಿಸ್ತರಣೆಯನ್ನು ಮಾಡಲು, ತನ್ಮೂಲಕ ದೇಶದ ಉಕ್ಕಿನುತ್ಪಾದನೆಯ ಹೆಚ್ಚಳವನ್ನು ಸಾಧಿಸಲು ಅಗತಿಕ ಬೇಂಕಿನಿಂದ ಸಡೆಯುವ ಸಾಲಕ್ಕೆ ವಿಶ್ವಸ್ಥವಾಗಿ ನಿಂತು ಪ್ರೋತ್ಸಾಹಿಸಿತು. ಹೀಗೆ ದ್ವಿತೀಯ ಯೋಜನಾಂಶದ ಕಾಲದಲ್ಲಿ ಉಕ್ಕಿನ ಅಭಿವೃದ್ಧಿ ಚಿತ್ರವು ಸಾಮಾನ್ಯವಾಗಿ ಸಂಪೂರ್ಣವಾಗಿತ್ತು. ಅಲ್ಲಲ್ಲಿ ಕೆಲವೊಂದು ಸ್ವಕಾವನ್ನೀಯುವ ಕಾರ್ಯಮಾತ್ರ ಬಾಕಿಯುಳಿದಿತ್ತು.

ಹಳೆಯ ಸಂಸ್ಥೆಗಳಾದ ಟಾಟಾ ಅಯರ್ನ್ ಎಂಡ್ ಸ್ಟೀಲ್ ಕಂಪೆನಿಯಲ್ಲಿ ಈಗ ೮ ಲಕ್ಷ ಟನ್, ಇಂಡಿಯನ್ ಅಯರ್ನ್ ಎಂಡ್ ಸ್ಟೀಲ್‌ವರ್ಕ್ಸ್‌ನಲ್ಲಿ ೩ ಲಕ್ಷ ಟನ್ ಮತ್ತು ಮೈಸೂರು ಅಯರ್ನ್ ಎಂಡ್ ಸ್ಟೀಲ್ ವರ್ಕ್ಸ್‌ನಲ್ಲಿ ೨೫ ಸಾವಿರ ಟನ್‌ಗಳಷ್ಟು ಉಕ್ಕು ಉತ್ಪಾದನೆಯಾಗುವುದು. ಇವುಗಳು ವಿಸ್ತರಣೆಗೊಂಡಾಗ, ಕ್ರಮವಾಗಿ ೧೫ ಲಕ್ಷ ಟನ್ ೮ ಲಕ್ಷ ಟನ್ ಮತ್ತು ೧ ಲಕ್ಷ ಟನ್‌ಗಳಷ್ಟು ಉಕ್ಕು ತಯಾರಾಗುವುದು. ಹೊಸದಾಗಿ ಸ್ಥಾಪಿಸಲಾದ ರೂರ್ಕೇಲಾ ಕಾರಖಾನೆಯಲ್ಲಿ ೭೨೦ ಸಾವಿರ ಟನ್, ಭಿಲೈ ಕಾರಖಾನೆಯಲ್ಲಿ ೭೭೦ ಸಾವಿರ ಟನ್ ಮತ್ತು ದುರ್ಗಾಪುರ ಕಾರಖಾನೆಯಲ್ಲಿ ೭೯೦ ಸಾವಿರ ಟನ್ ಉಕ್ಕು ಉತ್ಪಾದನೆಯಾಗುತ್ತದೆ. ಹೀಗೆ ಭಾರತದಲ್ಲಿ ೪೬,೮೦,೦೦೦ ಟನ್‌ಗಳಷ್ಟು ಉಕ್ಕು ಉತ್ಪಾದಿಸಲ್ಪಡುವುದು.

ಒಂದೆರಡು ವರ್ಷಗಳ ಹಿಂದೆ ರೂರ್ಕೇಲಾ, ಭಿಲೈ, ಅಥವಾ ದುರ್ಗಾಪುರಗಳಂತಹ ಹೆಸರುಗಳು ಅನೇಕ ಜನರ ಮನಸ್ಸನ್ನು ತಡೆಹಿಡಿದಿದ್ದರೂ ಇದೀಗ ಅವು ಸಾಮಾನ್ಯ ಸ್ಥಳಗಳಾಗಿ ಪರಿಣಮಿಸಿವೆ. ಸ್ವಲ್ಪ ಜ್ಞಾನಶೀಲನಾದ ಮನುಷ್ಯನು ಪ್ರಚಲಿತ ಸ್ಥಿತಿಗತಿಗಳ ಮನವರಿಕೆಯುಳ್ಳವನಾದರೆ, ಒಂದು ಸಮಯದಲ್ಲಿ ವಿಖ್ಯಾತುಕ ಹಳ್ಳಿಗಳಾಗಿದ್ದ ಈ ಸ್ಥಳಗಳು ಇದೀಗ ದೇಶದ ಆರ್ಥಿಕ ಭವಿಷ್ಯವನ್ನು ರೂಪಿಸುವ, ದೇಶದ ಜನರನ್ನು ಸ್ವಾವಲಂಬನೆಮತ್ತು ಸಾಗಿಸುವ ಪುಣ್ಯಕ್ಷೇತ್ರಗಳೆಂಬುದನ್ನು ಅರಿಯದಿರಲಾರ.

(೧೨ನೇ ಪುಟ ನೋಡಿರಿ)

ಸಮಯ ಇನ್ನೂ ಮಿಂಚಿಹೋಗಿಲ್ಲ

ಜೀವನದಲ್ಲಿ ಒಂದು ರೀತಿಯ ವ್ಯವಸ್ಥೆಯಿರಬೇಕಾದರೆ ಆಪತ್ಕಾಲದಲ್ಲಿ ಸಹಾಯಕ್ಕೊದಗುವ ಒಂದು ಆಪದ್ಧನ ಸಂಗ್ರಹದ ಯೋಜನೆಯನ್ನು ಚಿಕ್ಕಂದಿನಿಂದಲೇ ಆರಂಭಿಸಬೇಕೆಂಬುದು ಸಹಜವೇ. ಆದರೆ ಕಾಲ ಕಳೆದು ಹೋಯಿತೆಂದು ಕಣ್ಣೀರು ಕರೆಯುತ್ತಾ ಕುಳಿತುಕೊಳ್ಳುವುದಕ್ಕಿಂತ ಇಂದಿನಿಂದಲೇ ಸ್ವಲ್ಪ ಸ್ವಲ್ಪ ಹಣವನ್ನಾದರೂ ಉಳಿತಾಯಮಾಡಲು ಯತ್ನಿಸುವುದೇ ಮುಖ್ಯ. ಸಮಯವಿನ್ನೂ ಮಿಂಚಿಹೋಗಿಲ್ಲ

ಹಲವಾರು ಆಕರ್ಷಕ ಮತ್ತು ಸುಲಭಸಾಧ್ಯವಾದ ಉಳಿತಾಯದ ಯೋಜನೆಗಳಿಗೆ-

ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಚಾರಿಸಿರಿ.

96 ಶಾಖೆಗಳು

ರೂ. 10.64 ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ

ಇವುಗಳಿಂದ ಸಾಮಿರಾರು ಜನರ ಆರ್ಥಿಕ ಆವಶ್ಯಕತೆಗಳಲ್ಲಿ ಸಹಕರಿಸಬಲ್ಲ ಶೆಡ್ಯೂಲ್ಡ್ ಬೇಂಕು

ಟಿ. ಎ ಪೈ, ಬಿ.ಕಾಂ.(ಬೊಂಬಾಯಿ), ಎಫ್.ಆರ್.ಇ.ಎಸ್.(ಲಂಡನ್), ಎ.ಎ.ಐ.ಬಿ., ಜನರಲ್ ಮೆನೇಜರ್.

ಡಾ॥ ಟಿ. ಎಂ. ಎ. ಪೈ, ಎಂ..ಬಿ.ಬಿ.ಎಸ್., ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate, Ltd.,

Head Office: UDIPI· S India.

ಶಿಕ್ಷಕರ ಸಮಸ್ಯೆ

ಜಿಲ್ಲೆಯ ಹಲವಾರು ಶಿಕ್ಷಕರನ್ನು ಮನೆಗೆ ಕಳುಹಿಸುವ ಆಜ್ಞೆ ರದ್ದಾಗಬೇಕು

ತಾ. 1-6-56ರ ನಂತರ ಕೆಲಸಕ್ಕೆ ಸೇರಿದ ಶಿಕ್ಷಕರನ್ನು ನಿವೃತ್ತಿಗೊಳಿಸುವ ಆಲೋಚನೆ.

"1-6-56ರಿಂದ ಸೇರಿದ ಶಿಕ್ಷಕರನ್ನು ಸರಾಸರಿ ಹಾಜರಿಯು 30 ಇಲ್ಲದಿದ್ದಲ್ಲಿ ನಿವೃತ್ತಿಗೊಳಿಸಬೇಕು; ಅಂತವರಿಗೆ ಸಹಾಯಧನ (ಸಂಬಳ) ಸಿಗಲಾರದು" ಎಂಬರ್ಥದ ಆಜ್ಞೆಯು ನಮ್ಮ ವಿದ್ಯಾಧಿಕಾರಿಗಳಿಂದ ಹೊರಡಿಸಲ್ಪಟ್ಟಿದೆಯೆಂಬ ವಾರ್ತೆಯು ಬಂದಿದೆ. ಇದು ಹೌದೆಂದಾದರೆ ಸಹನೆಗೆ, ಶಾಂತಿಯುತವಾದ ರೀತಿಯ ಶಿಕ್ಷಕರ ಕೇಳಿಕೆಗಳಿಗೆ, ನಮ್ಮ ಸರಕಾರ ಅಥವಾ ನಮ್ಮ ಅಧಿಕಾರಿಗಳು ಎಂತಹ ಬೆಲೆ ಕೊಡುತಿದ್ದಾರೆ ಎಂಬುದರ ಅರಿವಾದಂತಾಯಿತು.

ಮೈಸೂರು ಸರಕಾರ ಹಳೆಯ ಮೈಸೂರಿನ ನೌಕರರಿಗೆ ಸಂಬಳವೇರಿಸಿತು. ಮದ್ರಾಸು ಸರಕಾರವೂ ರಾಜ್ಯಪುನರ್ರಚನೆಯಾದೊಡನೆ ಅಂದರೆ ನಮ್ಮ ಜಿಲ್ಲೆಯನ್ನು ಬಿಟ್ಟು ಕೊಟ್ಟೊಡನೆ ತನ್ನ ಶಿಕ್ಷಕರಿಗೆ ಸಂಬಳವನ್ನೇರಿಸಿತು. ಅತ್ತ ಕೊಡಗಿನಲ್ಲಿ ಇತ್ತ ಬೊಂಬಾಯಿಯಲ್ಲಿ ಎಲ್ಲಾ ಪ್ರದೇಶಗಳಲ್ಲಿ ಈ ಜಿಲ್ಲೆಗಿಂತ ಕಚ್ಚಿನ ಸಂಬಳ ಶಿಕ್ಷಕರಿಗೆ ದೊರೆಯುತ್ತಿದೆ, ನೆರೆಯ ಕೇರಳದಲ್ಲಂತೂ ತೀವ್ರಗತಿಯ ಬದಲಾವಣೆ, ಸಂಬಳದ ಹೆಚ್ಚಳ ಉದ್ಯೋಗಸಿಲ್ಲದವರಿಗೆ ಉದ್ಯೋಗ ಕೊಡುವ ಕಾರ್ಯಾಚರಣೆಯಾಗುವಂಗೆ ನಮ್ಮ ಜಿಲ್ಲೆಯಲ್ಲಿ ಯಾವ ಸುಧಾರಣೆಯೂ ಆಗುವ ಬದಲಿಗೆ ಇದ್ದ ಶಿಕ್ಷಕರನ್ನು ಮನೆಗೆ ಕಳುಹಿಸುವ ಆಲೋಚನೆ ನಡೆಯುತ್ತಿದೆ, ಇದು ನಮ್ಮ ಜಿಲ್ಲೆಯ ಶಿಕ್ಷಕರ ದೌರ್ಭಾಗ್ಯ. ನಮ್ಮ ಜಿಲ್ಲೆಯವರೇ ಇದಕ್ಕೆ ಕಾರಣರೆಂದು ಅಲ್ಲಲ್ಲಿ ಕೇಳಿಬರುತ್ತಾ ಇದೆ. ಹಾಗಾದರೆ ಈ ಜಿಲ್ಲೆಯಲ್ಲಿ ಹುಟ್ಟಿದುದಕ್ಕೆ ಇಲ್ಲಿ ಉದ್ಯೋಗ ನಡೆಸಿದುದಕ್ಕೆ, ಶಿಕ್ಷಕರಾಗಿದ್ದುದಕ್ಕೆ ಪ್ರಾಶಿಕ್ಷಕರು ಅನುಭವಿಸಬೇಕಾದ ತಕ್ಕ ಫಲವಿದೆಂದು ಭಾವಿಸಬೇಕಾಗುತ್ತದೆ (!)

ರಾಜ್ಯ ಪುನರ್ರಚನೆಯ ನಂತರ ಅಯಾ ರಾಜ್ಯಗಳಿಂದ ಬಂದ ಪ್ರದೇಶಗಳು ಆಗ ಅಲ್ಲಿ ರೂಢಿಯಲ್ಲಿದ್ದ ಕ್ರಮಗಳನ್ನು ಮುಂದೆ ಮಹಾಮೈಸೂರಿನ ಶಿಕ್ಷಣದ ಕ್ರೋಡೀಕರಣದ ವರೆಗೆ ಅನುಸರಿಸಬೇಕು ಈಮಧ್ಯೆ ಯಾವುದೇ ಗೊಂದಲಗಳಿಗೆ ಕಾಶ ಕೊಡಬಾರದೆಂಬ ತತ್ವವನ್ನು ನಮ್ಮ ಹೊಸ ಸರಕಾರ ಒಪ್ಪಿರುವುದಾಗಿಯೂ, ತಜ್ಞರ ಸಮಿತಿಯ ಶಿಫಾರಿಸಿಗೆ ಸುಗುಣವಾಗಿ ಪ್ರಾಂತ್ಯದ ದ್ಯಂತ ಒಂದೇ ರೀತಿಯ ಶಿಕ್ಷಣವನ್ನು ರೂಢಿಗೆ ತರಲು ಯತ್ನಿಸುವುದಾಗಿಯೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ, ಡೈರೆಕ್ಟರೂ ವಿದ್ಯಾಂಗದ ಕಾರ್ಯದರ್ಶಿಯವರೇ ಮೊದಲಾದ ಅಧಿಕಾರಿಗಳೂ, ವಿದ್ಯಾಮಂತ್ರಿಗಳೂ ಅಲ್ಲಲ್ಲಿ ಹೇಳಿರುವುದನ್ನು ಕೇಳಿದ್ದೇನೆ. ಪತ್ರಿಕೆಗಳಲ್ಲಿ ಓದಿದ್ದೇನೆ. ತನ್ಮಧ್ಯೆ ಹಲವಾರು ಮಂದಿಯನ್ನು ಮನೆಗೆ ಕಳುಹಿಸುವ ಈ ಯೋಚನೆ ಏಕೆ ಒಂತೋ ತಿಳಿಯಲಾಗುವುದಿಲ್ಲ. ಮದ್ರಾಸು ಸರಕಾರವು ಪ್ರತಿ ಶಿಕ್ಷಕನಿಗೆ ಸರಾಸರಿ ಹಾಜರಿ ಮೂವತ್ತು ಇರಬೇಕೆಂಬ ಕಾನೂನು ಮಾಡಿರುವುದರಿಂದ ಅದೇ ಕಾನೂನನ್ನು ಇಲ್ಲಿಯೂ ಬಳಕೆಗೆ ತರಬೇಕೆಂದು ಯತ್ನಿಸಲಾಗುತ್ತಿದೆ ಹೊಂಶು ಮೈಸೂರು ಸರಕಾರ ಈ ಕುರಿತು ಯಾವ ಕಡ್ಡಾಯವನ್ನೂ ಮಾಡಿಲಿಲ್ಲವೆಂದೂ ಕೇಳಿ ಬರುತ್ತಿದೆ. ಮದ್ರಾಸು ಸರಕಾರ ಶಿಕ್ಷಕರಿಗೆ ಸಂಬಳವೇರಿಸಿದೆ. ಮದ್ರಾಸಿನ ಕಾನೂನನ್ನೇ ಇಲ್ಲಿಗೆ ಅನ್ವಯಿಸಬೇಕೆಂದಿದ್ದರೆ ಮದ್ರಾಸಿನಲ್ಲಿ ಕೊಡುವ ಸಂಬಳದ ದರವನ್ನು ಸಹಾ ಕೊಡಬೇಕು ತಾನೆ? "ಸಂಬಳ ಏರಿಸುವುದೊಂದನ್ನು ಬಿಟ್ಟು ಉಳಿದುದೆಲ್ಲಾ ನಿಮಗೆ ಜ್ಯಾರ!" ಎಂಬ ರೀತಿ ಸರಿಯಾದುದೆ?

ನಿರುದ್ಯೋಗ ನಿವಾರಣೆಗಾಗಿ ಸರಕಾರ ಕೋಟಿಗಟ್ಟಲೆ ವ್ಯಯಿಸಿ ಒಂಟಿ ಶಿಕ್ಷಕರ ಶಾಲೆಗಳನ್ನು ತೆರೆಯುತ್ತಿದೆ ತರಬೇತಾಗದವರಿಗೆ ಕೆಲವು ತಿಂಗಳು ತರಬೇತು ಕೊಡಿಸಿ ಏಕೋಪಾಧ್ಯಾಯ ಶಾಲೆಗೆ ಕಳುಹಿಸಿ ನಿರುದ್ಯೋಗ ನಿವಾರಿಸಬೇಕೆಂದು ಹಾತೊರೆಯುತ್ತಿದೆ. ಉದ್ಯೋಗವಿಲ್ಲದವರಿಗೆ ಹೆಚ್ಚುಮಾಡಿ ಉದ್ಯೋಗ ಕಲ್ಪಿಸಲು ಶಿಕ್ಷಕವೃತ್ತಿಗೆ ಒಂದೆಡೆಯಿಂದ ತರುತ್ತಿರುವಾಗ ಮತ್ತೊಂದೆಡೆಯಿಂದ ತರಬೇತುಗೊಳಿಸಿ, ಕೆಲಸಕ್ಕೆ ಸೇರಿದ್ದ ಶಿಕ್ಷಕರನ್ನು ನಿವೃತ್ತಿಗೊಳಿಸುವ ಇಂತಹ ಕೆಲಸಕ್ಕೆ ಗಾದೆಮಾತಿನಲ್ಲಿ "ಕೆತ್ತುವುದು ಮೆತ್ತುವುದು" "ಮೆತ್ತುವುದು ಕೆತ್ತುವುದು" ಎನ್ನಬೇಕಾಗುತ್ತದೆ. ಇದು ನಮ್ಮ ಸರಕಾರದ ಧೋರಣೆಯಾಗಿರಲಾರದು.

ವರುಷಂಪ್ರತಿ 300-400 ಮಂದಿ ಶಿಕ್ಷಕರನ್ನು ವೇತನವಿತ್ತು ಸ್ವಯಂ ವೆಚ್ಚದಿಂದ ಸರಕಾರ ತರಬೇತಿಗೊಳಿಸುತ್ತಿದೆ. ಈಗಾಗಲೇ ಸಾವಿರಾರು ಶಿಕ್ಷಕರು ತರಬೇತಾಗಿ ಉದ್ಯೋಗವಿಲ್ಲದೆ ಒಳಲುತಿದ್ದಾರೆ. ಸಿಕ್ಕಿದಷ್ಟು ಸಿಗಲಿ ಎಂದು ಕಡಿಮೆ ಸಂಬಳಕ್ಕೆ ಒಪ್ಪಿ ವಿದ್ಯಾಕ್ಷೇತ್ರದ, ಸಂಘಗಳ, ಅಡಳಿತದಾರರ, ಶಿಕ್ಷಕರ ಎಲ್ಲರ ಮುಖಕ್ಕೂ ಮಂಗಳಾರತಿಯಾಗುವಂತೆ ಮಾಡುತಿದ್ದಾರೆಂದೂ ದೂರು ಬರುತ್ತಿದೆ. ಈ ನಿರುದ್ಯೋಗೀ ತಂಡದ ಜೊತೆಗೆ ಸೇರಿಕೊಳ್ಳಲಿಕ್ಕೆ ಎಂಬಂತೆ 1-6-56 ನಂತರ ಕೆಲಸಕ್ಕೆ ಸೇರಿದ ಶಿಕ್ಷಕರನ್ನು ನಿವೃತ್ತಿಗೊಳಿಸಲಾಗುತ್ತಿದೆಯೆ? ಈ ವರುಷವೂ ತರಬೇತಿಗೆ ಆಯ್ಕೆ ಇರುವುದಾಗಿ ಕೇಳಿದ್ದೇನೆ. ಇವರನ್ನೂ ತರಬೇತು ಮಾಡಿ ಎತ್ತ ಕಳುಹಿಸುವುದು? ಇದನ್ನು ಯೋಚಿಸುವಾಗ ಇದು ನಿರುದ್ಯೋಗ ನಿವಾರಣೆಯೇ ಅಥವಾ ನಿರುದ್ಯೋಗ ಬೆಟ್ಟಕ್ಕೆ ಮಣ್ಣು ಹೊಗುವುದೆ?

ತಾತ್ಪೂರ್ಕ ವಿಚಾರಗಳು, ಕಾನೂನಿನ ಸಿಕ್ಕುಗಳು, ಇಂಟರ್‌ಪ್ರಿಟೇಶನುಗಳು ಏನೇ ಇರಲಿ, ಇದ್ದವರನ್ನು ಕಡ್ಡಾಯವಾಗಿ ಸರಾಸರಿ ಹಾಜರಿಯ ಹೆಚ್ಚಳದ ನೆವನದಿಂದ ನಿವೃತ್ತಿಗೊಳಿಸುವ ಯೋಚನೆಯನ್ನು, ಆಜ್ಞೆಯನ್ನು ಸಂಬಂಧಪಟ್ಟವರು ತಡೆಹಿಡಿಯಬೇಕು. ಈ ರೀತಿ ಮಾಡುವುದರಿಂದ ನಿವೃತ್ತರಾಗುವ ತರಬೇತಾದ ಶಿಕ್ಷಕರೆಷ್ಟು, ಅವರ ಜೀವನೋಪಾಯಕ್ಕೆ ದಾರಿ ಏನು? ಅವರು ಕೊಟ್ಟ ಬೋಂಡಿನ ಅವಸ್ಥೆ ಏನು? ಸರಾಸರಿ ಹಾಜರಿಯನ್ನು ಕಾಡಲೇ ಹೆಚ್ಚಿಸುವುದು ಸುಳ್ಳು ಮಾರ್ಗದಿಂದ ಹೊರತು ಸತ್ಯ ರೀತಿಯಲ್ಲಿ ಸಾಧ್ಯವೇ? ಎಂಬ ಕುರಿತು ಒಂದು ವಿಚಾರಗೋಷ್ಠಿಯನ್ನು ನಡೆಸಿ, ಮೈಸೂರು ಸರಕಾರಕ್ಕೆ ವರದಿ ಮಾಡಿ ಮತ್ತೂ ಸರಕಾರ ಒಪ್ಪುವುದಿಲ್ಲ; ನಮ್ಮ ಶಾಸನಸಭಾ ಸದಸ್ಯರು, ಮಂತ್ರಿಗಳು ನಮ್ಮ ಮಾತಿಗೆ ಕಿವಿಗೊಡುವುದಿಲ್ಲ; ಶಿಕ್ಷಕರ ನಿವೃತ್ತಿಯಾಗಲೇಬೇಕು; ಎಂದೆ. ಹರತೊಟ್ಟರೆ ಆಗ ನೋಡೋಣ. ಅಷ್ಟರ ವರೆಗೆ ಈ ಆಜ್ಞೆಯನ್ನು ರದ್ದುಗೊಳಿಸಬೇಕು. 31-5-57 ರಲ್ಲಿದ್ದಷ್ಟು ಶಿಕ್ಷಕರಿಗೆ ಸರಾಸರಿ ಹಾಜರಿಯ ಹೆಚ್ಚಳದ ಕಾರಣದಿಂದ ನಿವೃತ್ತಿಯಾಗದಂತೆಯೂ, ಹಾಗೆ ಆದವರಿದ್ದರೆ ಸಂಬಂಧಪಟ್ಟವರು ಅವರನ್ನು ಪುನಃ ಕೆಲಸಕ್ಕೆ ಸೇರಿಸುವಂತೆಯೂ ಆಜ್ಞೆಯಾಗಬೇಕು.

ಇದಕ್ಕೆ ನಮ್ಮ ಜಿಲ್ಲೆಯ ಎಲ್ಲಾ ಶಾಸನ ಸಭಾ ಸದಸ್ಯರೂ ಬೆಂಬಲ ಕೊಡಬಹುದೆಂಬುದರಲ್ಲಿ ಅನುಮಾನವಿಲ್ಲ ನಮ್ಮ ಜಿಲ್ಲೆಯ ಮಾನ್ಯ ಮಂತ್ರಿ ಬಾಳಿಗರೂ, ನಮ್ಮನ್ನು ಸಹಾನುಭೂತಿಯಿಂದ ಕಾಣುವುದಾಗಿ ಮಾತ್ರವಲ್ಲ ಮಾನ್ಯ ಮುಖ್ಯ ಮಂತ್ರಿಗಳು ಹಿಂದೊಮ್ಮೆ "ಈ ರೀತಿ ನಿವೃತ್ತಿಯಾಗದಂತೆ ನೋಡುತ್ತೇನೆ" ಎಂದು ಹೇಳಿದ ಮಾತನ್ನು ವರೆಯಲಾರರಿಗಿ ನಿಜಕ್ಕೂ ನಂಬಬಹುದು.

ಕೈಯೆತ್ತಿ ಬೇಡುತ್ತಿರುವ ಶಿಕ್ಷಕ ಸಮೂಹದ ಕೇಳಿಕೆಗಳನ್ನು ಸಹಾನುಭೂತಿಯಿಂದ ಪರ್ಯಾಲೋಚಿಸುವುದಾಗಿ ಹೇಳುತ್ತಿರುವಾಗಲೇ ಹಾಗೆ ಪ್ರಾರ್ಥಿಸುತ್ತಿರುವವರಲ್ಲಿ ಕೆಲವರನ್ನು ಹೊರದಬ್ಬುವುದು ನೋಡುವವರಿಗೂ ಬೇಡುವವರಿಗೂ, ನೀಡುವವರಿಗೂ ದೂಡುವವರಿಗೂ ಚಂದ ಗುಣಲಾರದು.

ನಮ್ಮ ಜಿಲ್ಲಾ ವಿದ್ಯಾಧಿಕಾರಿಗಳು, ಈ ಕುರಿತು ತನಿ ಖಾದ ಸಹಕಾರವನ್ನು ನೀಡಬೇಕು ನೂರಾರು ಬಡ ಕುಟುಂಬಗಳನ್ನು ಉಪವಾಸ ಹಾಕುವ, ಬಡ ಶಿಕ್ಷಕರನ್ನು ನಿವೃತ್ತಿಗೊಳಿಸುವ ಈ ಪಾಪ ಕಾರ್ಯದಿಂದ ಅವರು ಆದಷ್ಟು ದೂರವಿರಲು, ಸಾಧ್ಯವಿದ್ದಷ್ಟು ಹಾಗಾಗದಂತೆ ನೋಡಲು ಯತ್ನಿಸಿ ಪುಣ್ಯ ಕಟ್ಟಿಕೊಳ್ಳಲಿ. ಜಿಲ್ಲೆಯ ವಿದ್ಯಾಕ್ಷೇತ್ರದ, ಶಿಕ್ಷಕರ, ವಿದ್ಯಾರ್ಥಿಗಳ ಮಾತ್ರವಲ್ಲ ನಾಡಿನ ಹಿತದೃಷ್ಟಿಯಿಂದ ಅವರು ಈ ಆಜ್ಞೆಯನ್ನು ರದ್ದುಗೊಳಿಸಬೇಕು. ವಿಷಯವು ಕೈಮೀರಿ ಹೋಗದಂತೆ ಅದಷ್ಟು ಶೀಘ್ರ ಈ ಆಜ್ಞೆ ರದ್ದಾಗಲಿ!

ಶ್ರೀ. ದಾಂತಿ.

ಏಲಂ ನೋಟೀಸು

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್ ಶಿರ್ವಾ.

ಈ ಕೆಳಗೆ ಕಾಣಿಸಿದ ಮಹನೀಯರು ಸದ್ರಿ ಬೇಂಕಿನಲ್ಲಿ ಚಿನ್ನದ ನಗದ ಈಡಿನ ಮೇಲೆ ಸಾಲಪಡೆಕೊಂಡು ಕ್ಲಪ್ತ ವಾಯಿದೆಗೆ ಅಸಲು, ಬಡ್ಡಿ ವಗೈರೆ ಕೊಡದೆ ಬಾಕಿನೂರಿರುವುದರಿಂದಲೂ, ಆಲ್ಲದೆ ಕ್ರಮಪ್ರಕಾರ ರಿಜಿಸ್ಟರ್ಡ್ ನೋಟೀಸು ಕೊಟ್ಟಲ್ಲಿ ಸದ್ರಿ ಕೆಲವರಿಗೆ ರಿಜಿಸ್ಟ್ರಿ ನೋಟೀಸು ಸಿಕ್ಕದೆ ಹಿಂದೆ ಬಂದಿರುವುದರಿಂದಲೂ, ಸದ್ರಿ ಕೆಲವರಿಗೆ ನೋಟೀಸು ಸಿಕ್ಕಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಜೂನ್ 19ನೇ ತಾರೀಕಿನ ಒಳಗೆ ಬ್ಯಾಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲ್ಲಿಸಿ ಬಿಡಿಸಿಕೊಂಡು ಹೋಗದೆ ಇದ್ದಪಕ್ಷದಲ್ಲಿ, ಇದೇ ತಿಂಗಳ ತಾರೀಕು 22.6.1957 ಶನಿವಾರ ಮಧ್ಯಾಹ್ನ ಗಂಟೆ 12ಕ್ಕೆ ಯಾ ನಮಗೆ ಯುಕ್ತಕಂಡ ತಾರೀಕಿನಲ್ಲಿ ಮುನ್ನ ನೋಟೀಸು ಕೊಡದೆನೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
31/818	ಕಿಟ್ಟಿ ಶೆಟ್ಟಿ N/o ಬಾಬು ಶೆಟ್ಟಿ, ಅಂಡೆಮಾರ್ ಗುತ್ತು ಪಾದೂರು P. O.	80/-
517	ಲಕ್ಷ್ಮೀನಾರಾಯಣ ಭಟ್, S/o ಶ್ರೀನಿವಾಸ ಭಟ್, ಕಟ್ಟಿಂಗೇರಿ, ಎಣ್ಮೇರು, ಮೂಡುಬೆಳ್ಳೆ P O.	36/-
325	ತೌಡೆ ಮುಕಾರಿ, S/o ಕೂಕ್ರ ಮುಕಾರಿ, ಪಾಣ್ಮರು ದರ್ಕಾಸ್ತು, ಬಡ P. O	35/-
858	ಕಾಂಪರೆ ಪೂಜಾರಿ, N/o ತಿಮ್ಮ ಪೂಜಾರಿ ಎಲ್ಲೆದಡಿ, ಪಿಲಾರು P. O	220/-
1206	— Do —	25/-
32/273	— Do —	45/-
31/1248	ಕೆ. ಭೋಜ ಶೆಟ್ಟಿ; N/o ರಾಮಯ್ಯ ಶೆಟ್ಟಿ ಕಂಜಾಸ, ಕುತ್ಯಾರು P. O.	150/-
1797	ಗಿರಿಯ ಪೂಜಾರಿ, N/o ಮೊಂಟಿ ಪೂಜಾರಿ ತಂಬೆಕೊಟ್ಟು, ಪಿಲಾರ್ P. O.	35/-
2443	ಅಂತೋನಿ ಮಥಾಯಸ್, S/o ಲುಸಿಯಾ ಮಥಾಯಸ್, ಟೀಚರ್ ಕಂಜಾಸ, ಕುತ್ಯಾರು P. O.	136/-
32/189	ವೆಂಕಟಯ್ಯ ಶೆಟ್ಟಿ, S/o ಕಿಟ್ಟಣ್ಣ ಶೆಟ್ಟಿ, ಚತ್ರಬೈಲು, ಸಿಂಜೂರು P. O	11/-
556	ಲೂಸಿ ಡಿಸೋಜ, W/o ಗಾಬ್ರಿಲ್ ಫೆರ್ನಾಂಡಿಸ್, ಮಲ್ಯೊಟ್ಟು, ಸಿಂಜೂರು P O.	45/-

Office of the Catholic Bank, Ltd SHIRVA. 10th June, 1957.

E. D. CUNHA, Ag. Agent.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Directors of public Instruction Madras

ಹಾಲಿನ ಉಪಯೋಗ

ಮೊಲೆ ಹಾಲಿಗಿಂತ ಉತ್ತಮ ಹಾಲಿಲ್ಲ--- ಮಿತಿಯರಿತೇ ಹಾಲನ್ನು ಸೇವಿಸುವುದಗತ್ಯ.

ಈ ಧರಿತ್ರಿಯಲ್ಲಿರುವ ಪ್ರತಿ ಜೀವಿಗೂ ಜೀವನಾಂಶವನ್ನು ಸೃಷ್ಟಿಸಿಯೇ ಇರುತ್ತಾನೆ—ಆ ಪರಮಾತ್ಮ ಆತನ ಆದೇಶವಿಲ್ಲದೆ ಒಂದು ಹುಲ್ಲು ಕಡ್ಡಿಯಾದರೂ ಅತ್ತಿತ್ತ ಅಲುಗಾಡಲಾರದು ಒಂದೇ ಒಂದು ನಿಮಿಷ ಕೂಡಾ ಅವುದೂ ಜೀವಿಸಲಾರದು ಎಂದರೆ ಅವೆಲ್ಲ ವಿಧಿಯ ಅಧೀನಕ್ಕೆ ಒಳಪಟ್ಟಿದೆ

ಮಾತೆಯ ಉದರದಲ್ಲಿ-ಆ ಕತ್ತಲೆಯ ಕೋಣೆಯಲ್ಲಿ-ಕಣ್ಣೆವೆ ಮುಚ್ಚಿ ಶಾಂತವಾಗಿ ಮಲಗಿದ ಶಿಶುವಿಗೆ ತಾಯಿಯ ಆಹಾರವೇ ಅದರ ಆಹಾರ. ಮುಂದೆ ಅದು ಈ ಪ್ರಪಂಚಕ್ಕೆ ಬಂದಾಗಿನಿಂದ ಹಲ್ಲು ಬಂದು--ಗಟ್ಟಿಯಾದ ಆಹಾರ ಜೀರ್ಣಿಸಿಕೊಳ್ಳುವ ತನಕ-ಆ ಮಗುವಿಗೋಸುಗವೇ ಮೊಲೆಹಾಲಿನ ತಯಾರಿ ತನ್ನಿಂದ ತಾನೇ ಆಗುತ್ತಿದೆ. ಇದು ಮನುಷ್ಯವರ್ಗದಲ್ಲಿ ಮಾತ್ರವೆಂದಲ್ಲ-ಸಕಲ ಜೀವ ಕೋಟಿಗಳಲ್ಲೂ ಇದೆ ಎಂದರೆ ಮಗು ತಾಯ ಮೊಲೆಹಾಲನ್ನುಣ್ಣಲೇ ಬೇಕು ಅದು ಮಗುವಿನ ಮುಂದಿನ ಬೆಳವಣಿಗೆಗೆ ಸಂಪೂರ್ಣ ಸಹಾಯಮಾಡುತ್ತದೆ ಎಂತಲೇ ಈ ವಿಷಯದು ಈಗತಾನೇ ಕರುಹಾಕಿದ ದನವೊಂದರೆಡೆ ದೃಷ್ಟಿಬೀರಿ-ಆ ಪುಟ್ಟಕರು ತಾಯ ಮೊಲೆಯನ್ನೆರುತ್ತಾ ತನ್ನಿಂದ ತಾನಾಗಿ ತಾಯ ಕಚ್ಚಲಿಗೆ ಬಾಯನ್ನೊಡ್ಡಿ ಅಮೃತಪಾನವನ್ನು ಗೈಯ್ಯುತ್ತದೆ 'ಉಣ್ಣು ಮೊಲೆಹಾಲನ್ನಣ್ಣು, ಅದೋ ಅಲ್ಲಿದೆ' ಎಂದು ನೀವಾದರೂ ಆದೇಶವಿತ್ತಿರಾ ಅದಕ್ಕೆ? ಇಲ್ಲ ಅದಕ್ಕೆ 'ಪ್ರಕೃತಿ'ಯೇ ಪ್ರೇರಣೆಯನ್ನೀಯುತ್ತದೆ ಎಂಬಾಗ ಹಾಲಿನ ಸೃಷ್ಟಿ ಜೀವಿಯ ಸಂತಾನ ಬೆಳವಣಿಗೆಗೊ ಸುಗ ಎಂಬುದು ನಮಗೆ ವೇದ್ಯವಾಗುತ್ತದೆ

'ಹಾಳೆ'ಯಲ್ಲಿ ಪವಡಿಸಿ ಕೈಕಾಲಾಡಿಸುವ, ಅಂಬೆಗಾಲಿಕ್ಕಿ ಹರಿದಾಡುವ-ಮಗು ನೋಡಲು ಅದೆಷ್ಟು ಸುಂದರವೋ ಅದಕ್ಕಿಂತಲೂ ಮಿಗಿಲಾದ ಸುಂದರ, ಮನಮೋಹಕ ದೃಶ್ಯ-ಅದು ತಾಯ ಮೊಲೆಯನ್ನುಣ್ಣುತ್ತಿರುವಾಗ! ಮಾನವರಲ್ಲೇ ಆಗಲಿ ಪಶು ಪ್ರಾಣಿಗಳಲ್ಲೇ ಆಗಲಿ ಸಂತೋಷದ ಪರಮಾವಧಿಯಿಂದ ಸ್ತನ್ಯಪಾನ ಗೈಯ್ಯುತ್ತಿರುತ್ತವೆ-ಆ 'ಕಂದ'ಗಳು ಅಂತೆಯೇ ತಾಯಿಯಾದವಳಿಗೂ ಮಗುವಿಗೆ ಮೊಲೆಯುಣಿಸುವುದೆಂದರೆ-ತನ್ನ ಕಂದನು ನಗು ಮುನಿಸನ್ನೆ ತೋರಿಸುತ್ತಾ ತನ್ನ ಸೆರಗನ್ನು ಸೆಳೆಯುತ್ತಿರುವುದನ್ನು ಈಕ್ಷಿಸುವುದಂದರೆ-ಅವಳಿಗದೊಂದು ಮೇರೆ ಮೀರಿದ ಸಂತೋಷ ತಾಯಿ—ಮಗುವಿನ ಬಾಂಧವ್ಯವನ್ನಧಿಕಗೊಳಿಸಲೆಂದೇ ಪರಮಾತ್ಮನಿತ್ತ ಶಕ್ತಿಯಿದು

ಹಾಲಿನ ಸೃಷ್ಟಿ ಈರೀತಿಯಾಗಿದ್ದರೂ, ಇಂದಿನಜನತೆಯ ದೃಷ್ಟಿವಾತ್ರಬೇರೆಯೇ ಆಗಿದೆ ಎಷ್ಟೊ ಬಾಲಕರು ತಾಯ ಮೊಲೆ ಹಾಲು ಸಿಕ್ಕದೆ ಬತಕಲಾಗಿವೆ ಎಂದರೂ ಸಲ್ಲುವುದು ಅದೆಷ್ಟೋ ಹೆಣ್ಣುಗಳ ತರುಣಿಯರು-ಶ್ರೀಮಂತ ಮಹಿಳೆಯರು ಮಗುವು ಮೊಲೆಯುಂಡರೆ ಅದರಿಂದ ತನ್ನ ಅಂಗಸೌಷ್ಠವ ಕಡಿಮೆಯಾಗುವದೋ ಎಂಬ (ಮೂಢ) ಭಾವನೆಯಿಂದ ತಮ್ಮ ಮಕ್ಕಳಿಗೆ ತಮ್ಮ ಸ್ತನ್ಯವನ್ನು ಕೊಡಿಸುತ್ತಿಲ್ಲ. ದೊರತಾಗಿ ಬಾಳಿ ಬಂದಿರುವಾಗಲಿ, ಇಲ್ಲವೇ ಕೃತಕ ಮೊಲೆ(ಬಟ್ಟಿಗಳ ಮೂಲಕ)ಗಳಿಂದ ಅಕಳ ಹಾಲನ್ನಾಗಲಿ ಕೊಡುತ್ತಾರೆ ಹಾ, ವಿಧಿಯೇ! ತನ್ನ ಎದೆಯಲ್ಲಿ ಚಿಮ್ಮುವ ಹಾಲಿನ ಸಂಗ್ರಹವಿದ್ದೂ ಮಗುವ ಕೃತಕ ಪೈಪಿನಿಂದ ಪ್ರಾಣಿಯ ಹಾಲನ್ನು ಹೀರ ಬೇಕಾಯಿತೇ?

ಈ ರೀತಿ ಮಾಡುವುದರಿಂದ ಒಂದಲ್ಲ ಎರಡಲ್ಲ ಹಲವಾರು ತೊಂದರೆಗಳಿವೆ ಮಗುವಿನ ದೇಹ ಬೆಳವಣಿಗೆಗೆ ಅವಶ್ಯಕವಾದ ಕೆಲವು ಪೋಷಣಾಂಶಗಳು ಹಾಗೂ ರೋಗ ನಿರೋಧಕ ಶಕ್ತಿಗಳು ತಾಯ ಎದೆ ಹಾಲಿನಲ್ಲಿವೆ ಇತರರ 'ಮೊಲೆ ಹಾಲು' ದನದ ಹಾಲು ಕುಡಿಯುವುದರಿಂದ ಅಂತಹ ಗುಣಗಳು ಅದಕ್ಕೆ ಸಿಕ್ಕಲಾರದು 'ಮೊಲೆ ಹಾಲಿ'ಲ್ಲದ ಮಕ್ಕಳು ನಿರ್ಬಲರಾಗಿ ರೋಗ ಗ್ರಸ್ಥರಾಗಿಯೂ, ಕರಿಯಾಗಿ 'ಮೊಲೆ ಹಾಲಿ'ನ ಪೂರ್ತಿಕೆಯಾಗುವ ಮಕ್ಕಳು ಗುಂಡಗೆ ಚೆಂಡಿನಂತೆ ಸೀರೋಗಿಗಳಾಗಿಯೂ ಇರುವುದೇ ಅದಕ್ಕೆ ನಿದರ್ಶನ ಪ್ರಾಣಿಗಳಲ್ಲೂ ಅಂತೆಯೇ. ತಾಯಿ ಅಕಾಲ ಮರಣಕ್ಕೆ ತುತ್ತಾಗಿ ಅಥವಾ ಇನ್ನಿತರ ಕಾರಣಗಳಿಂದ ಕರುವಿಗೆ ತಾಯ ಹಾಲು ದೊರೆಯದಿದ್ದಲ್ಲಿ ಆ ಕರುವು ಬದುಕುವುದೇ ಕಡಮೆ ಬದ ಕಿದರೂ ನಿರ್ಬಲವಾಗಿರುತ್ತದೆ

ಮೊಲೆಯುಣಿಸುವುದರಿಂದ ಕುಚಗಳಲ್ಲಿ ಸರಿಯಾಗಿ ಹಾಲಿನ ಪೂರೈಕೆಯಾಗಿ ಶರೀರದ ಅಂಗಸೌಷ್ಠವ ಹೆಚ್ಚುವುದೇ ಹೊರತು ಕುಂದುವದಿಲ್ಲ ಅದೊಂದು ಮೂಢ ಭಾವನೆ ತನ್ನ ಮಗುವಿಗೆ ಹಾಲಿನ ಪೂರೈಕೆಗಾಗಿಯೇ ಪ್ರಕೃತಿ ಸ್ತನಗಳನ್ನು ನಿರ್ಮಿಸಿದುದಾಗಿದೆ ಹಾಲುಣ್ಣಿಸುವುದನ್ನು ಬಿಟ್ಟರೆ ಕ್ರಮೇಣ ಸ್ತನ್ಯವಾತ್ಸಲ್ಯವೂ ಕಡಮೆಯಾಗಿ ಮಗುವಿಗೂ ತಾಯ ನೈಜ್ಯಪ್ರೇಮದ ಅರಿವು ಕುಂಠಿತವಾಗಬಲ್ಲುದು ಇದರಿಂದ ತಾಯಿ ಮಕ್ಕಳ ನಿಕಟ ಸಂಬಂಧವೇ ಕಡಿಮೆಯಾಗುವುದು ಮಾತ್ರವಲ್ಲ ಮಗುವಿನ 'ಆಡ್ಡಾಬಾಗೆ ತಾಯಿ ಪ್ರೋತ್ಸಾಹವಿತ್ತಂತಾಗುವುದು ಆದ್ದರಿಂದ ಸಮ್ಯ ತಾಯಿಂದ ಮಕ್ಕಳಿಗೆ ಮೊಲೆಯುಣ್ಣಿಸುವುದೆಂದರೆ ಪುತ್ರ ಕಾರ್ಯವೆಂದು ತಿಳಿದು, ಉತ್ತಮ ಜನಾಂಗದ ನಿರ್ಮಾಣಕ್ಕೆ ಕಾರಣರಾಗಬೇಕಾದುದು ಅಗತ್ಯ

ಇದು ಮಕ್ಕಳ ಕುರಿತಾಗಿಯಾಯಿತು ಹಿರಿಯರ ಕುರಿತೂ ಹೇಳುವುದಿದ್ದರೆ, ಹಾಲೆಂಬ ದು ಬಾಲ್ಯದಲ್ಲಿ ಕುಡಿಯ ತಕ್ಕುದೇ ಹೊರತು ಹರೆಯದಲ್ಲಲ್ಲ ಪ್ರಕೃತಿಯ ಗೂಢ ಸಂಕೇತಿಗಾಗಿಯೇ ಆವುಗಳಲ್ಲೂ ಹಾಲನ್ನು ಸೃಷ್ಟಿಸಿದೆಯೇ ಹೊರತು ಮಾನವನಿಗಾಗಿಯಲ್ಲ ಜೇನು ನೊಣಗಳು ತಮ್ಮ ಆಹಾರವಾಗಿ ಸಂಗ್ರಹಿಸಿದ ಜೇನನ್ನು ನಾವು ಕ್ರೂರ ರೀತಿಯಿಂದ ಅಪಹರಿಸುವುದು ಅದೆಂತು ಸಲ್ಲದ ಕಾರ್ಯವೋ ಅಂತೆಯೇ ಮೊಲೆ ತಿನ್ನಲೆಂದು ಬಾಯಿ ಹಾಕುತ್ತಿರುವ ಆ ಕರುವನ್ನು ಹಿಡಿದೆಳೆದು ಗೂಟಕ್ಕೆ ಬಿಗಿದು ಹಾಲನ್ನು ಕರೆಯುತ್ತಿರುವುದೂ ಅಷ್ಟೇ ಪಾಪದ ಕೆಲಸ ಮಾತ್ರವಲ್ಲ ಅವುಗಳ ಬೆಳವಣಿಗೆಗೆ ನಾವು ಅಡ್ಡಿ ತಂದಂತೆಯೇ ಸರಿ!

ಹಾಲಿನ್ನ ಪೌಷ್ಟಿಕಾಂಶವಿರಬಹುದು, ಆದರೆ ಅದರಿಂದ ನಾವು ಪುಷ್ಟಿಯಾಗುವೆವು ಎನ್ನುವುದು ತಪ್ಪು ಅದೇಕೆಂದರೆ, ಸಾಕಷ್ಟು ಹಾಲು, ಬೆಣ್ಣೆ, ತುಪ್ಪ, ಮಜ್ಜಿಗೆ ಮೆಲ್ಲುತ್ತಿದ್ದ ಒರ್ವ ಶ್ರೀಮಂತ ವ್ಯಕ್ತಿಗೂ, ಅದನ್ನೊಂದನ್ನೂ ಸೇವಿಸದೆ ಇರುವ ಇನ್ನೋರ್ವ ಹಳ್ಳಿಯ ರೈತನಿಗೂ ಪುಷ್ಟಿಯಲ್ಲಿ ಶಕ್ತಿಯಲ್ಲಿ ತಾರತಮ್ಯಾಂತರ ವಿದೆ. ಎಂದರೆ ಹಾಲು ತುಪ್ಪ ತಿಂದರೆ ಶಕ್ತಿ ಬರುವುದಿಲ್ಲ ತಿನ್ನುವುದು ಸಾದಾ ಆಹಾರವೇ ಸಾಕು, ಆದರೆ ಚೆನ್ನಾಗಿ ಕಾಯಕಷ್ಟ ಮಾಡಬೇಕು ಹಾಗಿದ್ದರೆ ಶರೀರ ಬಲವೂ ಸಾಮರ್ಥ್ಯವೂ ಬರುವುದು ಹಾಲೇ ಆಹಾರವಾಗಿರುವ ಚಿಕ್ಕವ ಗುವೊಂದು ಕೆಲವು ಕಾರಣಗಳಿಂದ ತಾಯಿಯ ಎದೆಹಾಲು ಪಡೆಯುವ ಪುಣ್ಯ ಪಡೆಯದಿದ್ದಲ್ಲಿ—ಅದವ ಅದು ಕಡಮೆಯಾಗಿದ್ದಲ್ಲಿ- ಮಾತ್ರ ಕುಡಿಯುವುದೇ ಹೊರತು ಇತರರು ಮಿತಿಮೀರಿ ಹಾಲನ್ನು ಕುಡಿಯುವದು ತಪ್ಪು.

ಹಾಲಿನ ಶಕ್ತಿ ಸರಿಯಾಗಿ ಸಿಕ್ಕಬೇಕಿದ್ದರೆ ಅದಕ್ಕೆ ನೀರು ಸೇರಕೂಡದು ಅಂದರೆ ಮಾತ್ರ ಅದು ಇಂಜೆಕ್ಷನಿನಂತೆ ಒಡನೆಯೇ ಶರೀರಕ್ಕೆ ಒಗ್ಗುವುದು ಆ ರೀತಿ ಪ್ರಕೃತಿ ರಚಿಸಲೂ ರಚಿಸಿದೆ. ಮಗು ತಾಯಿಯ ಸ್ತನ್ಯವನ್ನು ಬಾಯಿಯಿಂದ 'ಚೀಪು'ವಾಗ ಅಲ್ಲಿ ನೀರಿ ಸಂಪರ್ಕವಾಗಲು ಎಡೆಯೇ ಇಲ್ಲ ಅಂತೆಯೇ ಅದು ಮಗುವಿಗೆ ಪಾಣಾಮಕಾರಿಯಾಗಿದೆ ಶ್ರೀಕೃಷ್ಣನು ಅಕಳ ಮೊಲೆಗೆ ಬಾಯಿ ಹಾಕಿದ ತುಂಟತನದ ಕಥೆ ನಾವು ಕೇಳಿದ್ದೇವೆ ಅದು ಈ ತತ್ವವನ್ನು ಇನ್ನಷ್ಟೂ ಬಲಪಡಿಸುತ್ತದೆ ಶ್ರೀ ಕೃಷ್ಣನು ತಾಯಿಯ ಸ್ತನ್ಯಪಾನ ಮಾಡಲು ಅಸಮರ್ಥನಾಗಿದ್ದ ಅವನ ತಾಯಿ ದೇವಕಿ ಸೆರೆಮನೆಯಲ್ಲಿದ್ದಳು ಆದ್ದರಿಂದಲೇ ಆತ ಅಕಳ ಹಾಲು ಹೀರಿದುದ ಅವನಿಗೆ ಹಾಲಿಂದರೆ ಪ್ರೀತಿಯಾಗಲು ಕಾರಣವೂ ಇದೇ ಇರಬಹುದು

ಅಮೃತವಾದರೂ ಹೆಚ್ಚು ಸವಿದರೆ ವಿಷವಾಗುವುದಂತೆ ಅಂತೆಯೇ ಹಾಲನ್ನು ಅಮೃತವೆಂದು ನಾವು ಹೆಚ್ಚು ಹೀರಬಾರದು ಎಂದನ್ನ ಅಮೃತದಂತೆಯೇ ಮಿತಪ್ರಮಾಣದಲ್ಲಿ ಕುಡಿಯಬೇಕು ಮಿತಿಮೀರಿ ಕುಡಿಯ ವ ನವ್ಯ ಅಭ್ಯಾಸದಿಂದಲೇ ಹಾಲಿನ ಕೂಳ್ಳೆಕೆಯು ದೊಡ್ಡ ಪ್ರಶ್ನೆಯಾಗಿ ಒಂದೆಡೆಯಿಂದ ಇನ್ನೊಂದೆಡೆಗೆ "ಪುಡಿ"ಯ ರೂಪದಿಂದ ವರ್ಗಾವಣೆಕೊಂಡಬೇಕಾಗಿ ಬಂದಿದೆ

—ಕೀ ವ ಕೇಶವ, ದೇಲಂಪಾಡಿ

Approved by the Text Book Committee of Madras for non detailed study in higher Forms (vide Page 7, Fort St George Gazette, Part I—B dated 4—5 1950)

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬಿದುಕು ಬಂಗಾರ

(ಬರೆದವರು- ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ V ನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಸುಂದರವಾಗಿ ಪಡೆದಿದೆ

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ ರೂ ೧ ೫೫

ಪ್ರತಿಗಳಿಗೆ ಬರೆಯಿರಿ

ನವಯುಗ ಪ್ರೆಸ್, ಉಡುಪಿ.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O P 18/57.

1 ಚಣ್ಣಮ್ಮ ಹೆಂಗ್ಸು ಮುತ್ತಯ್ಯನ ವಿಧವೆ —ಅರ್ಜಿದಾರರು

2 ಮೈನರ ಭವಾನಿ, 3 ಮೈನರ ವೆಂಕಮ್ಮ, 4 ಮೈನರ ಮಹಾಬಲ, 5 ಮೈನರ ದೇವಿ, 6 ಮೈನರ ಅಕ್ಕಣ-1ನೇ ಅರ್ಜಿದಾರರ ಮಕ್ಕಳು ಕ್ಷೇಮಚಿಂತಕಳು ತಾಯಿ1ನೇ ಅರ್ಜಿದಾರಳು.

ಕುಂದಾಪುರ ತಾಲ್ಕು ಬಡಾಕೆರ ಗ್ರಾಮದ ಜ್ಯೂಸರಬೆಟ್ಟು ಪೋಸ್ಟು ನಾವುಂದ

ಎದ್ರಿ ಇಲ್ಲ

1ನೇ ಅರ್ಜಿದಾರಳ ಗಂಡ 2ನೇ ಲಂಗ್ಯಾತಿನ ಅರ್ಜಿದಾರರ ತಂದೆ ಹಾಲೀ ಮೃತಪಟ್ಟಿರುವ ಮುತ್ತಯ್ಯ ಎಂಬವರಿಗೆ ದಿ ಬೊಂಬೇ ಲೈಫ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ಇದರ ಪೋಲಿಸಿ ನಂಬ್ರ 31900ರ ಬಾಬ್ತು ಬರತಕ್ಕ ಅಮ್ಮಜು ಮತ್ತು ದ ಕ ಜಿಲ್ಲಾ ಬೋರ್ಡಿನಿಂದ ಬರತಕ್ಕ ಸಂಬಳದ ಬಾಬ್ತು ಹಣ ಸಹಾ ವಸೂಲುಮಾಡುವರೆ ಅರ್ಜಿದಾರರು ಹಕ್ಕುದಾರರೆಂತಲೂ ಆ ಕುರಿತು 1ನೇ ಅರ್ಜಿದಾರಳ ಹೆಸರಿಗೆ ವಾರಿಸುಸರ್ಟಿಫಿಕೇಟು ಕೊಡಿಸಬೇಕೆಂತಲೂ ವಗೈರೆ ಕಾಗ್ಸ ಪಾಕ್ಸ ಮಾಡಿದ ಮೇಲಿನ ಅರ್ಜಿಯು ತಾರೀಕು 15 6 1957ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತೆಗೆದುಕೊಳ್ಳಲಾಗಿದೆ ಆ ಕುರಿತು ಯಾರಿದಾರೂ ಅಕ್ಷೇಪವುಳ್ಳವರು ಸದ್ರಿ ದಿನದ ಹೆಗಲು 11 ಗಂಟೆಗೆ ಹಾಜರಾಗಿ ಜಾಬ್ತೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ಯೆಕ್ಸಪಾರ್ಟಿಯಾಗಿ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕ್ಮುಂಪ್ರಕಾರ ತಿಳಿಸಿಯಿದೆ.

V Srinivasa Shetty,
Advocate for Petitioners

ತಾ 4 6.1957 ಕುಂದಾಪುರ

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

NAVAYUGA

Popular Kannada Weekly

Founder.—

A B SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೩	೧೩-೬-೧೯೫೭	೪೦

ಪ್ರಾಥಮಿಕ ಶಿಕ್ಷಕರ ಕಷ್ಟ

ನಮ್ಮ ಈ ಸಂಚಿಕೆಯ ಬೇರೊಂದೆಡೆಯಲ್ಲಿ ಜಿಲ್ಲೆಯ ಪ್ರಾಥಮಿಕ ಶಿಕ್ಷಕರಲ್ಲಿ ಒಂದು ವರ್ಗದವರಿಗೆ ಬಂದಿರುವ ಅಪತ್ಕಾಲದ ಬಣ್ಣನೆ ಮಾಡುವ ಲೇಖನ ಪ್ರಕಟಿಸಿರುವುದನ್ನು ವಾಚಕರು ಗಮನಿಸಿರಬಹುದು. ಜಿಲ್ಲೆಯ ವಿಧ್ಯಾಧಿಕಾರಿಗಳು ಒಂದು ಆಜ್ಞೆಯನ್ನು ಹೊರಡಿಸಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿ ೧-೬-೧೯೫೬ನೇ ತಾರೀಕಿನ ಬಳಿಕ ಸೇರಿದವರನ್ನು ಸರಾಸರಿ ಹಾಜರಿಯು ಮೂವತ್ತರನ್ನು ಇಲ್ಲವಾದರೆ ಕೆಲಸದಿಂದ ವಜಾಮಾಡಿಸಬೇಕೆಂದೂ ಹಾಗಲ್ಲದಿದ್ದರೆ ಸರಕಾರಿ ಸಹಾಯಧನವು ದೊರೆಯಲಾರದೆಂದೂ ಸೂಚಿಸಿ ಅನ್ಯಾಯ ಮಾಡಿರುತ್ತಾರೆಂಬುದೇ ಆ ಲೇಖನದ ಸಾರ. ನಾವಾದರೂ ಇದೇ ಅಭಿಪ್ರಾಯವನ್ನು ಅನುಮೋದಿಸುತ್ತೇವೆ ಅಧ್ಯಾಪಕ ವರ್ಗದವರು ನಮ್ಮ ಜಿಲ್ಲೆಯಲ್ಲಿ ಇಷ್ಟರ ವರೆಗೆ ತೋರಿಸುತ್ತಾ ಬಂದಿರುವ ಸಹನೆಯು ಆಶ್ಚರ್ಯಕರವಾದುದಾಗಿರುತ್ತದೆ ಕ್ರಮನಿಯಮಗಳ ಹೊರೆಯು ದಿನದಿಂದ ದಿನಕ್ಕೆ ಭಾರವಾಗುತ್ತಾ ಬರುತ್ತಿದ್ದರೂ ಸಿಗುವ ವೇತನವು ಹಾಸ್ಯಾಸ್ಪದವೆನಿಸುವಷ್ಟು ಅಲ್ಪವಾಗಿದ್ದರೂ ಅಧ್ಯಾಪಕರು—ಸಾಮಾನ್ಯ ಕೂಲಿಕಾರರಿಗಿಂತ ಮೇಲಿನ ಮಟ್ಟದ ಬುದ್ಧಿಜೀವಿಗಳಾದ ದೆಸೆಯಿಂದಲೇ ಎಂದು ಕಾಣುತ್ತದೆ— ಶಾಂತ ವಿಧಾನದಿಂದ ಲೇ ತಮ್ಮ ಹಾಲಹವಾಲೆಗಳನ್ನು ಅಧಿಕಾರಿವರ್ಗದ ಮುಂದೆ ಮಂಡಿಸಿ, ಪರಿಹಾರವನ್ನು ಬೇಡುತ್ತಾ ಬಂದಿದ್ದಾರೆ— ನಿಜವಾಗಿ ಯಾವ ಪರಿಹಾರವು ಸಿಗದಿದ್ದಾಗಲೂ ಪರಿಹಾರದ ಆಶೆಯನ್ನು ಬಿಡದೆ ತುಂಬ ತಾಳ್ಮೆಯನ್ನು ಪ್ರದರ್ಶಿಸಿದ್ದಾರೆ, ಎನ್ನುವುದರಲ್ಲಿ ಪ್ರತಿಮಾತಿರಲಾರದು. ಜನಸಾಮಾನ್ಯರಿಗಿಂತ ಮೇಲಿನ ಮನೋಮಟ್ಟವನ್ನು ಹೊಂದಿರುವ ಈ ಅಧ್ಯಾಪಕ ವರ್ಗದವರನ್ನು ಇನ್ನೂ ಇನ್ನೂ ನೋಯಿಸುವುದು ಸರಕಾರಕ್ಕೆ ಭೂಷಣಪ್ರಾಯವಾದುದಲ್ಲ ಈಚೆಗೆ ನಾವು ಬರೆದೊಂದು ಅಗ್ರಲೇಖದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರ ವೇತನವನ್ನು ಹೆಚ್ಚಿಸುವ ಕುರಿತು ಸಹಾನುಭೂತಿಯ ಮಾತುಗಳನ್ನು ಆಡಿದ್ದುಂಟು: ಸರಕಾರವು ಈ ವಿಷಯದಲ್ಲಿ ಯಾವುದೇ ಪ್ರೋತ್ಸಾಹದಾಯಕ ಹೆಜ್ಜೆಯನ್ನಿಟ್ಟಿರುವಂತೆ ಕಂಡುಬರುತ್ತಿಲ್ಲ ಸುತ್ತಮುತ್ತಲಿನ ಎಲ್ಲ ಕಡೆಯ ಅಧ್ಯಾಪಕರೂ ಹೆಚ್ಚಿನ ಸಂಬಳವನ್ನು ಪಡೆಯುತ್ತಿರುವಾಗ, ಸ್ವತಃ ಮೈಸೂರು ಸರಕಾರದ ಶಾಲೆಗಳವರು ವೃದ್ಧಿಸಿದ ವೇತನಕ್ಕೆ ಭಾಗಿಗಳಾಗಿರುವಾಗ, ಈ ಜಿಲ್ಲೆಯ ಸರಕಾರೇತರ ಶಾಲೆಗಳ ಅಧ್ಯಾಪಕರನ್ನು ಮಾತ್ರ ವಂಚಿಸುವುದು ಸರಕಾರಕ್ಕೆ ಶೋಭೆ ತರುವ ವಿಷಯವಲ್ಲ. ಅದೇ ರೀತಿ, ಶಿಕ್ಷಣ ಸಮೀಕರಣ ನಡೆದು ಸಮಗ್ರ ಮೈಸೂರಿನಲ್ಲಿ ಏಕರೂಪದ ಶಿಕ್ಷಣ ಕ್ರಮ ಜಾರಿಗೆ ಬರುವ ತನಕ, ಈಗಿನ ಕ್ರಮನಿಯಮಗಳಲ್ಲಿ ಬದಲಾವಣೆಯನ್ನು ಮಾಡಕೂಗುವುದು— ಅದೂ ಸಹ ಅಧ್ಯಾಪಕರಲ್ಲಿಯೇ ಅನೇಕರ ಹೆಟ್ಟಿಗೆ ಸೆಟ್ಟು ಕೊಡುವ ರೀತಿಯಲ್ಲಿ —ಸಮಂಜಸವಾದ ಹೆಜ್ಜೆಯಲ್ಲ ಸರಾಸರಿ ಹಾಜರಿಯನ್ನು ಗಣನೀಯವಾಗಿ ಏರಿಸುವುದು ಹೇಗೆ ಎಂಬುದನ್ನಾದರೂ ಸರಕಾರಿ ಅಧಿಕಾರಿಗಳು ಗಮನಿಸಿದಂತಿಲ್ಲ ನಮ್ಮ ಜಿಲ್ಲೆಯಲ್ಲಿ ಶಿಕ್ಷಣ ಮಟ್ಟವು ಉಳಿದ ಕಡೆಗಳಿಗಿಂತ ಹೆಚ್ಚು ಕೃಷ್ಟಿಕರವಾದ ಹಂತದಲ್ಲಿದೆ ಎಂಬುದು ಎಲ್ಲರಿಗೂ ಗೊತ್ತಿರಬಹುದಾದ ವಿಷಯ ಇಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುವ ಪ್ರಾಯದ ಬಾಲಕ, ಬಾಲಿಕೆಯರಲ್ಲಿ ಎಲ್ಲೊ ಅಲ್ಲಲ್ಲಿ ಇಷ್ಟಿಷ್ಟು ಮಂದಿ ಮಾತ್ರ ಶಾಲೆಯ ಹೊರಗಿದ್ದಾರೆ. ಅಂಥವರನ್ನು ಸಹ ಏಕೋಪಾಧ್ಯಾಯ ಶಾಲೆಗಳ ವರ್ತುಲದೊಳಕ್ಕೆ ತರುವ ಸಾಹಸಕಾರ್ಯವೀಗ ಒಂದೆರಡು ವರ್ಷಗಳಿಂದ ನಡೆದಿರುತ್ತದೆ. ಹೀಗಾಗಿ ಶಾಲೆಗಳು ಇರುವಕಡೆಗಳಲ್ಲಿ ಸರಾಸರಿ ಹಾಜರಿಯನ್ನು ಹೆಚ್ಚಿಸುವುದು ಭಗೀರಥ ಪ್ರಯತ್ನ ಮಾಡಿದ ಬಳಿಕವೂ ಫಲಬರಲಾರದ ಕೆಲಸವೆಂದು ಸಾಮಾನ್ಯವಾಗಿ ಎಲ್ಲೆಡೆಯ ಅಧ್ಯಾಪಕರೂ ಅಭಿಪ್ರಾಯಪಡುತ್ತಾರೆ. ಆದುದರಿಂದ ವಿದ್ಯಾಧಿಕಾರಿಗಳು ಏಕೆ ಇಂದ ಆಜ್ಞೆ ಹೊರಡಿಸಿದರೋ ಗೊತ್ತಾಗುವುದಿಲ್ಲ "ಅಧ್ಯಾಪಕರ ಸಹಾಯೆಯನ್ನು ಕಡಿಮೆ ಮಾಡಿ ಸರಕಾರಿ ಖಜಾನೆಯ ಹಣವನ್ನು ಉಳಿಸುವುದು ಇವರ ಉದ್ದೇಶವಿದ್ದರೆ, ನಾವೊಂದು ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ—ಅದೇನೆಂದರೆ, ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರು ವಿದ್ಯಾರ್ಥಿಯ ಕಡೆಗೆ ಎಷ್ಟೆಷ್ಟು ಹೆಚ್ಚಾಗಿ ವೈಯಕ್ತಿಕ ಗಮನವನ್ನು ಕೊಡುತ್ತಿರೋ, ಅಷ್ಟಷ್ಟು ಆವಿದ್ಯಾರ್ಥಿಗೆ ಪ್ರಯೋಜನವಾಗುತ್ತದೆ ಒಬ್ಬ ಅಧ್ಯಾಪಕನು ಲಕ್ಷ್ಯವನ್ನು ಸೂರೈಸಬೇಕಾದ ವಿದ್ಯಾರ್ಥಿಗಳ ಸಂಖ್ಯೆಯು ಎಷ್ಟು ಕಡಿಮೆಯಾಯಿತೋ ಅಷ್ಟು ಮಟ್ಟಿಗೆ ವಿದ್ಯಾರ್ಥಿಗಳಿಗೆ ಲಾಭವೆಂದು ಇದರ ಅರ್ಥ ಇದನ್ನು ಹೆತ್ತವರು ಗಮನಿಸಬೇಕು—ಮತ್ತು ಸರಕಾರದ ಮೇಲೆ ಒತ್ತಾಯವನ್ನು ಹೇರಿ, ಅಧ್ಯಾಪಕರು, ನೂರಾರು ಕುರಿಗಳನ್ನು ಒಂದೇ ಮಂದೆಯಲ್ಲಿ ಮೇಯಿಸುವ ಕುರುಬನಂತಾಗದೆ, ಹೆತ್ತ ತಾಯ್ತಂದೆಯರ ಪ್ರೇಮ ವಾತ್ಸಲ್ಯದಲ್ಲಿರುವಂತೆ ಅಷ್ಟೇ ಅಶಕ್ತಿಯಿಂದ ವಿದ್ಯಾರ್ಥಿಗಳ ಗುಣ ಶೀಲ ನಡತೆಗಳ ಪರಿಮಾರ್ಜನೆಗೈಯಲು ಸಾಧ್ಯವಾಗುವಂತೆ, ಅವರ ವಶಕ್ಕೆ ಒಪ್ಪಿಸಲಾಗುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಅದಷ್ಟು ಕೆಳಮಟ್ಟದಲ್ಲಿ ಡಬೇಕಾಗಿ ಸೂಚಿಸಲು ಮುಂದಾಗಬೇಕು ಎಂದು ನಮಗೆ ತೋರುತ್ತದೆ. ಮೂವತ್ತು—ನಲ್ವತ್ತು ಸಿಮಿಪಗಳ ಅವಧಿಯಲ್ಲಿ ಪಾಠವನ್ನು ಮಾತ್ರ ಮಾಡುವುದಲ್ಲದೆ, ಜೊತೆಯಲ್ಲೆ ೨೦ ಮಂದಿ ಬಾಲಕ, ಬಾಲಿಕೆಯರ ಗುಣ ನಡತೆಗಳನ್ನೂ ತಿದ್ದುವ ಹಾಗು ಪಾರದ ಸಾರವನ್ನು ಅವರು ಚೆನ್ನಾಗಿ ಗ್ರಹಿಸುವಂತೆ ಮಾಡುವ ಹೊಣೆಗಾರಿಕೆಯನ್ನು ನಿರ್ವಹಿಸುವುದು ಅಧ್ಯಾಪಕರನ್ನು ಇಷ್ಟರವರೆಗೆ ಎದರಿಸುತ್ತಿದ್ದ ಸಮಸ್ಯೆ ಈಗ ಇಷ್ಟತ್ತರ ಬದಲಿಗೆ, ಮೂವತ್ತು ವಿದ್ಯಾರ್ಥಿಗಳ ಹೊಣೆಯನ್ನು ಹೊರಬೇಕೆಂದರೆ ಹೇಗಾದೀತು? ಅಧ್ಯಾಪಕರು ಎಷ್ಟರವಟ್ಟಿಗೆ ಈ ಹುಡುಗ ಹುಡುಗಿಯರ ಕಡೆಗೆ ಗಮನಹರಿಸಲು ಅವಕಾಶಪಡೆದಾರು? ಅಂಥ ಶಿಕ್ಷಣಕ್ಕೆ ಶಿಕ್ಷಣ ಎಂಬ ಪವಿತ್ರ ಶಬ್ದವಾದರೂ ಹೇಗೆ ಒಪ್ಪೀತು? ಎಲ್ಲಕ್ಕಿಂತ ಮೇಲಾಗಿ, ಶಕ್ತಿದ ಜಾಸನಿನಿಂದ ಸೇರಿದ ಅಧ್ಯಾಪಕರಲ್ಲಿರನ್ನು ಅತಿರಿಕ್ತರ (ಸರ್‌ಪ್ಲಸ್) ಶ್ರೇಣಿಗೆ ಸೇರಿಸುವುದೇ ಪ್ರಾಪ್ತ್ಯವಲ್ಲವೆ? ಹಾಗೆ ಸೇರಿದವರಲ್ಲಿ ಎಷ್ಟೊ ಮಂದಿ ಹಳಬರ ಬದಲಿಗೆ ಬಂದವರಿರಬಹುದು ಎಷ್ಟೊ ಮಂದಿ ಕೆಲಸ ದೊರೆತ ಆನಂದದಲ್ಲಿ ಇನ್ನೂ ಇದ್ದಿರಬಹುದು ಇವರಿಗೆ ಕೆಲಸ ಹೋಗುವ ಚಿಂತೆಯನ್ನು ತಂದೊಡ್ಡುವುದ ಚಂದವೆ? ನಿರುದ್ಯೋಗ ನಿವಾರಣೆಗಾಗಿ ಸರಕಾರದವರು ಪರಿಶ್ರಮವನ್ನು ಪಡುತ್ತಿರುವಾಗ ಇನ್ನೊಂದೆಡೆ ಕೆಲಸದಲ್ಲಿದ್ದವರು ಮನೆಗೆ ಹೋಗಬೇಕಾಗಿ ಬರುವಂದ ಪರಿಸ್ಥಿತಿಯನ್ನು ನ್ಯಾಯವಾದ ಯಾವ ಕಾರಣವೂ ಇಲ್ಲದೆ ಸೃಷ್ಟಿಸುವುದು ಸೂಕ್ತವೇ? ಹೀಗೆಲ್ಲ ಅಧ್ಯಾಪಕರ್ಕೇಳ ವಂತಾಗಿರುವುದು ನಿಜಕ್ಕೂ ಶೋಚನೀಯ. ವಿಧ್ಯಾಧಿಕಾರಿಗಳ ಆಜ್ಞೆ ಏನೇ ಹೇಳಲಿ— ರಾಜ್ಯದ ವಿದ್ಯಾಂಗ ಸಚಿವರೂ ಮುಖ್ಯ ಮಂತ್ರಿಗಳೂ ಈ ವಿಷಯದಲ್ಲಿ ಸ್ವತಃ ಪ್ರವೇಶಿಸಿ, ಜಿಲ್ಲೆಯ ಅಧ್ಯಾಪಕರ ರಕ್ಷಣೆಗೆ ಧಾವಿಸಿ ಬರಬೇಕೆಂದು ನಾವು ಆಗ್ರಹಪೂರ್ವಕವಾಗಿ ಸೂಚಿಸಲಿಚ್ಛಿಸುತ್ತೇವೆ ಅಧ್ಯಾಪಕರ ವಿಷಯದಲ್ಲಿ ಇನ್ನೂ ಕಣ್ಣುಮುಚ್ಚಾಲೆಯಾಟವನ್ನೆ ನಡೆಸುತ್ತಿರುವುದ ಎಷ್ಟಕ್ಕೂ ಸಲ್ಲದು.

ಸಂಕ್ಷಿಪ್ತ ಸುದ್ದಿಗಳು

ಆಹಾರ ಧಾನ್ಯಗಳ ಬೆಲೆಯನ್ನು

ತಗ್ಗಿಸಲು ಕೇಂದ್ರ ಸರಕಾರವು ಪ್ರಾದೇಶಿಕ ನಿರ್ಬಂಧವನ್ನು ಹೇರುವುದು. ಬೇಂಕುಗಳು ಕೊಡುವ ಮುಂಗಡ ಹಣದ ಮೇಲೆ ಮಿತಿಹಾಕುವುದು ಮತ್ತು ಸಂಗ್ರಾಹಕನು ಹಿಂದಿನ ಮೂರು ತಿಂಗಳ ಸರಾಸರಿ ಬೆಲೆಗೆ ಸರಕಾರಕ್ಕೆ ಮಾರುವಂತೆ ಪತ್ತಾಯ ಹಾಕುವುದು, ಅಧಿಕ ಆಯಾತ ಮಾಡುವುದು, ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆಯುವುದು ಮೊದಲಾದ ಕ್ರಮಗಳನ್ನು ಕೈಕೊಳ್ಳಲಿದೆಯಲ್ಲದೆ ಮತ್ತೆ ನಿಯಂತ್ರಣವನ್ನು ತರುವ ಯೋಜನೆಯಲಿಲ್ಲವೆಂದು ಮದ್ರಾಸಿನಲ್ಲಿ ಆಹಾರ ಮಂತ್ರಿಗಳು ತಿಳಿಸಿದ್ದಾರೆ.

ಕೇರಳದ ಮುಂಗಡ ಪತ್ರವು

ಇದೀಗ ಪ್ರಕಟಗೊಂಡು ಶಾಸನ ಸಭೆಯಲ್ಲಿ ಚರ್ಚಿಸಲ್ಪಡುತ್ತಿದೆ ಇದರಲ್ಲಿ ಎರಡು ಕೋಟಿ ರೂಪಾಯಿಗಳ ಕೊರತೆ ತುಂಬಿಕೊಂಡು ಏಳು ಲಕ್ಷ ರೂ. ಗಳ ಉಳಿಕೆಯನ್ನು ತೋರಿಸಲಾಗಿದೆ ಒಕ್ಕಲತನದ ಮೇಲೆ ಕರವನ್ನು ಕೆಲವು ಸರ್‌ಚಾರ್ಜುಗಳನ್ನೂ ಹಾಕಲಾಗಿದೆ ಕಮ್ಯೂನಿಸ್ಟ ಸರಕಾರದ ಪ್ರಥಮ ಮುಂಗಡ ಪತ್ರವೇ ಹೊಸತನವಿಲ್ಲದೆ ಹಳೆಯ ತತ್ವಗಳನ್ನಾದರೂ ಜಾಣತನದಿಂದ ಬಳಸದೆ ಮಂಡಿಸಿದೆ ಎಂದೆ ಎಂದಿದೆ. ಈ ಮುಂಗಡಪತ್ರದ ಕೆಲವೊಂದು ಅಂಕಿ ಸಂಖ್ಯೆಗಳು ನಿಶ್ಚಿತ ದಿನಕ್ಕಿಂತ ಮೊದಲಾಗಿ ಪ್ರಕಟಿಸಿದ ಕೌಮುದಿ ಪತ್ರಿಕೆಯ ಮೇಲೆ ಖಟ್ಲೆ ಹೊರಿಸಿರುವರಲ್ಲದೆ, ಗೌಪ್ಯ ಸ್ಫೋಟಕ್ಕವಕಾಶವಿತ್ತರೆಂಬ ಕಾರಣದಿಂದ ಇಬ್ಬರು ಮುದ್ರಣಾಲಯದ ಕೆಲಸಗಾರರನ್ನೂ ಕೆಲಸದಿಂದ ಅಮಾನತುಗೊಳಿಸಲಾಗಿದೆ.

ಬರೆಬಳಿ ವಿದ್ಯುದ್ಯೋಜನೆಯನ್ನು

ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಕೊಳ್ಳಬೇಕೆಂದು ಮೈಸೂರ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಮತ್ತು ಕೇರಳದ ಮುಖ್ಯಮಂತ್ರಿ ನಂಬೂದರಿ ಪಾದರು ರಾಷ್ಟ್ರೀಯ ಅಭಿವೃದ್ಧಿ ಮಂಡಲದಲ್ಲಿ ಪತ್ತಾಯಿಸಿದರೆಂದು ಸುದ್ದಿಯಿದೆ. ಹಾಗೆಯೇ ತಲ್ಲಚೇರಿ, ಕೊಡಗು, ಮೈಸೂರ ರೈಲ್ವೇದಾರಿಯನ್ನೂ ಈ ಯೋಜನೆಯಲ್ಲಿಯೇ ಸೇರಿಸಲು ಕೇಳಿಕೊಂಡಿದ್ದಾರೆ. ಈ ಎರಡು ಯೋಜನೆಗಳಿಂದ ಮಲೆನಾಡಿನ ಅಭಿವೃದ್ಧಿಯಾಗುವುದೆಂಬ ನಿರೀಕ್ಷೆಯಿದೆ.

ಇನ್‌ಫ್ಲುಯೆಂಝಾ ಹಾವಳಿಯು

ಇದೀಗ ಭಾರತದ ಹಲವಾರು ನಗರಗಳಲ್ಲಿರುವ ಹತ್ತಾರಿಲೆ ಅಲ್ಲದೆ ಕೆಲವೊಂದು ಮರಣಗಳೂ ವರದಿಯಾಗುತ್ತಿವೆ. ಈ ರೋಗವನ್ನು ತಡೆಗಟ್ಟುವ ಪ್ರತಿಬಂಧಕ ಲಸಿಕೆಯನ್ನು ಆಸ್ಟ್ರೇಲಿಯದ ವಿಜ್ಞಾನಿಗಳು ಕಂಡ ಹಿಡಿದಿದ್ದು ಅದು ಶೀಘ್ರದಲ್ಲಿಯೇ ಪ್ರಯೋಗಕ್ಕೆ ಬರುವ ನಿರೀಕ್ಷೆಯಿದೆ ಭಾರತದಲ್ಲಿ ಮಾತ್ರವಲ್ಲದೆ ಜಪಾನ, ಸಿಂಗಾಪುರ, ಫಿಲಿಪೈನ್ ಮೊದಲಾದೆಡೆಗಳಲ್ಲಿ ಈ ರೋಗದಿಂದ ನರಳುತ್ತಿರುವವರ ಸಂಖ್ಯೆಯು ಅತ್ಯಧಿಕವಾಗಿದೆ.

ಅಕ್ಕಲಕೋಟೆ ತಾಲೂಕನ್ನು

ಮುಂಬಯಿ ಸರಕಾರವು ಒಡೆಯುವ ಒಳಸಂಚನ್ನು ಮಾಡುತ್ತಿದೆಯೆಂದು ತಿಳಿದು ಸೊಲ್ಲಾಪುರದಲ್ಲಿ ಸಂಯುಕ್ತ ಕರ್ನಾಟಕ ಸಮಿತಿಯ ವಿಶೇಷ ಸಭೆಯು ತನ್ನ ಪ್ರಬಲ ನಿಷೇಧವನ್ನು ಪ್ರದರ್ಶಿಸಿತು ಸೊಲ್ಲಾಪುರವನ್ನೊಳಗೊಂಡ ಅಕ್ಕಲಕೋಟೆ ಮತ್ತು ದಕ್ಷಿಣ ಸೋಲಾಪುರ ತಾಲೂಕುಗಳು ಕರ್ನಾಟಕಕ್ಕೆ ಸೇರಬೇಕೆಂದು ಈ ಸಮಿತಿಯು ಒತ್ತಾಯ ಪಡಿಸಿತು

ಸಾಮ್ರಾಜ್ಯವಾದಿಗಳ ಪ್ರತಿಮೆಗಳನು

ಸಾರ್ವಜನಿಕ ಸ್ಥಳಗಳಿಂದ ಕಿತ್ತು ಹಾಕುವ ಯೋಜನೆಯನ್ನು ಭಾರತ ಸರಕಾ

Navayuga Enterprise Ltd., Udipi.

NOTICE

The register of members and share transfer books of the Company will remain closed from 25th June to 15th July 1957 (both days inclusive)

(By order of the Board)

Office of the Company, PALUKOTE, UDIPI. Date 27—5—1957

K. Honnayya Shetty, *Managing Director.*

ರವು ಸರ್ಯಾಲೋಚಿಸಿತ್ತಿದೆ. ೧೮೫೭ರಿಂದ ಜನರಲ್ ಬೇಲರರ ಪ್ರತಿಮೆಯನ್ನು ಬೇರೆಕಡೆಗೆ ಸಾಗಿಸಲಾಗಿದೆ. ಸರಕಾರದ ಈ ಯೋಜನೆಯನ್ನು ಅಭಿನಂದಿಸುತ್ತಾ ಡಾ ರಾಮ ಮನೋಹರ ಲೋಹಿಯರವರು ಕಲಕತ್ತಾ, ಡಿಲ್ಲಿ ಮದ್ರಾಸ, ಮುಂಬಯಿ ಕಾನಪುರ ಮೊದಲಾದೆಡೆಯ ಪ್ರತಿಮೆಗಳನ್ನೂ ಬೇಗನೆ ಬೇರೆಡೆಗೆ ಕೊಂಡೊಯ್ಯಬೇಕೆಂದೂ ವಸ್ತು ಸಂಗ್ರಹಾಲಯಗಳಲ್ಲಿ ಅವನ್ನಿರಿಸಬಹುದೆಂದೂ ಅಭಿಪ್ರಾಯಪಟ್ಟರು.

ಮೈಸೂರು ವಿಧಾನ ಸಭೆಯ

ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಶ್ರೀ ಎಸ್. ಆರ್. ಕಂಠಿಯವರು ಸರ್ವಾನುಮತದಿಂದ ಮರುಆಯ್ಕೆಗೊಂಡರು. ಇವರ ಹೆಸರನ್ನು ಜನಾಬ್ ಅಯ್ಯದ್ ಈಸರು ಸೂಚಿಸಿ ಶ್ರೀ ವೀರೇಂದ್ರಪಾಟೀಲರು ಅನುಮೋದಿಸಿದರು. ಅನ್ಯ ನಾಮನಿರ್ದೇಶವಾಗದುದರಿಂದ ಅವಿರೋಧ ಆಯ್ಕೆ ನಡೆಯಿತು ವಿಧಾನ ಸಭಾಧ್ಯಕ್ಷನಲ್ಲಿಂಬೇಕಾದ ಧೈರ್ಯ, ನಿಷ್ಪಕ್ಷಪಾತ, ಸಂಯಮ ತೀವ್ರ ಗ್ರಹಣಶಕ್ತಿ ಮತ್ತು ಶೀಘ್ರ ನಿರ್ಧಾರವೆಂಬ ಐದು ಗುಣಗಳನ್ನು ಎತ್ತಿ ಹಿಡಿಯುವ ಭಾಷಣವೊಂದನ್ನು ಶ್ರೀ ಕಂಠಿಯವರತ್ತರು

ಸಾಹುಕಾರ ಚೆನ್ನಯ್ಯನವರು

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ತನ್ನ ಪ್ರತಿಸ್ಪರ್ಧಿ ಶ್ರೀ ಎಂ ವಿ. ರಾಮರಾಯರನ್ನು ೮೭ ಅಗಾ ಮತಗಳಿಂದ ಸೋಲಿಸಿ ಆರಿಸಿಬಂದರು. ಹಿಂದಿನ ಅಧ್ಯಕ್ಷರಾಗಿದ್ದ ಶ್ರೀ ಬಿ ವೆಂಕಟಪ್ಪನವರು ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಸೇರಿಕೊಂಡಿದ್ದು ರಾಜಿನಾಮೆಯನ್ನಿತ್ತಿರುವುದರಿಂದ ಈ ಸ್ಥಾನವು ತೆರವಾಯಿತು. ಶ್ರೀ ವೆಂಕಟಪ್ಪನವರ ರಾಜಿನಾಮೆಯು ಈ ಮೊದಲೇ ಸ್ವೀಕಾರವಾಗಿದೆ

ಕ್ರಿಸ್‌ಮಸ್ ದ್ವೀಪಗಳನ್ನು

ಬ್ರಿಟನ್ನು ಆಸ್ಟ್ರೇಲಿಯಾಕ್ಕೆ ಒಪ್ಪಿಸುವನ್ನು ಮಾಡಿದ್ದು ಅದನ್ನು ಸಿಂಗಾಪುರದ ಜನತಾಕ್ರಿಯಾಪಕ್ಷ ಮತ್ತು ಲಿಬರಲ್ ಸೋಶಿಯಲಿಸ್ಟ್ ಪಕ್ಷಗಳ ಮುಖಂಡರು ವಿರೋಧಿಸಿದರು. ಈ ದ್ವೀಪವು ಇದುವರೆಗೆ ಸಿಂಗಾಪುರದ ಆಡಳಿತಕ್ಕೆಂದೆ ಫಾಸ್ಫೇಟುಗಳ ಉತ್ಪಾದನೆಯು ಇಲ್ಲಿ ಆಗುವುದರಿಂದ ಈ ದ್ವೀಪಕ್ಕೆ ಅಧಿಕ ಪ್ರಾಧಾನ್ಯ ಬಂದಿದೆ ಇದು ಜಲಜನಕ ಬಾಂಬು ಪ್ರಯೋಗ ಮಾಡುವ ದ್ವೀಪವಾಗಿದೆ ಅದೇ ಹೆಸರಿನ ಇನ್ನೊಂದು ನಡುಗುಡ್ಡೆಯಾಗಿದೆ.

ಜಾಗತಿಕ ಶಾಂತಿ ಮಂಡಳದ

ಅಧಿವೇಶನವು ಕೊಲಂಬೋ ನಗರದಲ್ಲಿ ದಿನಾಂಕ ೧೦ರಂದು ಆರಂಭವಾಯಿತು ಈ ಸಮ್ಮೇಳನವು ಒಂದು. ವಾರದ ವರೆಗೆ ನಡೆಯಲಿರುವುದು. ವಿಶ್ವದಲ್ಲಿ ಶಾಶ್ವತ ಶಾಂತಿಯನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಅಣ್ವಸ್ತ್ರಗಳ ಸ್ಫೋಟ ಪ್ರಯೋಗಗಳನ್ನು ನಿಲ್ಲಿಸಿಬಿಡಬೇಕೆಂದು ಈ ಸಮ್ಮೇಳನದ ಮೊದಲ ದಿನದಲ್ಲಿ ಪ್ರತಿಪಾದಿತವಾಯಿತು. ಇದರಲ್ಲಿ ಮೆಕ್ಸಿಕೊ, ಜಪಾನ, ಭಾರತ, ಕೆನಡಾ, ಫ್ರಾನ್ಸ್ ಮೊದಲಾದ ೩೮ ದೇಶಗಳ ಪ್ರತಿನಿಧಿಗಳು ಭಾಗವಹಿಸುತಿದ್ದಾರೆ

ಜೋರ್ಡಾನದ ಅರಸ ಹುಸೇನರು

ಅಮ್ಮಾನಿನಲ್ಲಿರುವ ಈಜಿಪ್ಟದ ರಾಯಭಾರಿ ಕಚೇರಿಯ ವಿಲಿಟರೆ ಅಧಿಕಾರಿಯ ಮತ್ತು ಬೆರೂತಲೇಮಿನಲ್ಲಿರುವ ಈಜಿಪ್ಟದ ಪ್ರತಿನಿಧಿಗಳಿಬ್ಬರನ್ನೂ ಜೋರ್ಡಾನನ್ನು ಬಿಟ್ಟು ಹೋಗಬೇಕೆಂದು ಆಜ್ಞಾಪಿಸಿರುವರು ಜೋರ್ಡಾನದ ಒಬ್ಬ ಪ್ರಜೆಯನ್ನು ಅಲ್ಲಿನ ಕೆಲವೊಂದು ಪ್ರಸಿದ್ಧ ವ್ಯಕ್ತಿಗಳ ಕೂಲೆಮಾಡುವಂತೆ ಪ್ರಚೋದಿಸಿದರೆಂಬ ಆರೋಪವನ್ನು ಈಜಿಪ್ಟದ ಅಧಿಕಾರಿಗಳ ಮೇಲೆ ಹೊರಿಸಿ ಈ ರೀತಿಯ ಆಜ್ಞೆಯನ್ನು ವಿಧಿಸಲಾಗಿದೆ ಈಜಿಪ್ಟ ಸಹ ಜೋರ್ಡಾನಕ್ಕೆ ತನ್ನ ರಾಯಭಾರಿಯನ್ನು ಹಿಂಕರೆಸಿಕೊಳ್ಳಲು ಸೂಚಿಸಿ, ತಮ್ಮ ಮೇಲೆ ಹೊರಿಸಿದ ಅಪವಾದವು ಕೇವಲ ಸಿಕೂರಿಮಾತ್ರವೆಂದುಸುರಿದೆ.

ಗೋಮಾಂತಕ ತಂಡವೊಂದು

ಭಾರತದ ಪ್ರಧಾನಿ ಶ್ರೀ ನೆಹರೂರವರನ್ನು ಭೇಟ್ಟಿಮಾಡಿ ಗೋವೆಯ ನಿವಾಸಿಗಳ ಕುರಿತಾಗಿ ಚರ್ಚಿಸಿದರು ತತ್ಪರಿಣಾಮವಾಗಿ ನೆಹರೂರವರು ಪ್ರದೇಶ ನಿರ್ಬಂಧವನ್ನು ಸಡಿಲಿಸಲು ಮತ್ತು ತನ್ನ ಮುಂದಿನ ವಿದೇಶ ಸಂಚಾರದಲ್ಲಿ ಅಲ್ಲಿನ ಕೈದಿಗಳ ಪರಿಸ್ಥಿತಿಗಳನ್ನು ಸುಧಾರಿಸಲು ಪ್ರಯತ್ನಿಸುವರಾಗಿಯೂ ತಿಳಿದು ಬಂದಿದೆ. ಅಂತೆ ಮೂಲಕ ಹಣರವಾನೆ ಮಾಡುವ ಸೌಕರ್ಯವನ್ನೊದಗಿಸಿದರೂ, ವಾಣಿಜ್ಯ ಸಂಬಂಧದ ಮೇಲಿನ ನಿರ್ಬಂಧವು ಹಾಗೆಇಳಿಯುವುದು ಶ್ರೀ ನೆಹರೂ ಶಾಂತಯುತವಾಗಿ ಯೇ ಗೋವೆಯ ವಿಮೋಚನೆಯಾಗಬೇಕೆಂಬ ಭಾರತ ಸರಕಾರದ ನೀತಿಯನ್ನು ಗೋಮಾಂತಕರಿಗೆ ವಿವರಿಸಿದರು.

ಉಡುಪಿ

ಮಂತ್ರಿ ಶ್ರೀ ಆರ್. ಎಮ್. ಪಾಟೀಲರು—

ಮೈಸೂರು ರಾಜ್ಯದ ಆರೋಗ್ಯ ಮಂತ್ರಿ ಶ್ರೀ ಆರ್. ಎಮ್. ಪಾಟೀಲರು ತಾ. ೩ರಂದು ಮಧ್ಯಾಹ್ನ ಮಣಿಪಾಲಕ್ಕೆ ಬಂದಾಗ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಶ್ರೀ ಬಾಳ್ಕಟ್ಟೆ ಬೀಡು ಕೃಷ್ಣಯ್ಯ ಹೆಗ್ಡೆ, ಉಡುಪಿ ಮುನಿಸಿಪಲ್ ಚೆರ್‌ಮೆನ್ ಶ್ರೀ ಕೆ. ಕೆ ಪೈ, ಎಕೆಡೆಮಿ ಆಫ್. ಜನರಲ್ ಎಡ್ಯುಕೇಶನ ರಿಜಿಸ್ಟ್ರಾರ್ ಡಾ ಟಿ ಮಾಧವ ಪೈ, ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಡೀನ್, ಮೊದಲಾದವರು ಸ್ವಾಗತಿಸಿದರು. ಸಂತರ ಕಾಲೇಜು ಹಾಲಿನಲ್ಲಿ ಭೋಜನಸತ್ಕಾರ ಸಮಾರಂಭದಲ್ಲಿ ಭಾಗವಹಿಸಿದ್ದರು ಡಾ ಟಿ ಮಾಧವ ಪೈಗಳು ಮಂತ್ರಿಗಳನ್ನು ಸ್ವಾಗತಿಸುತ್ತಾ, ಎಕೆಡೆಮಿಯ ಕಾರ್ಯಕಲಾಪಗಳನ್ನು ವಿವರಿಸಿ ಜನಸ್ಪಂದನೆಯನ್ನು ಗಳಿಸಿದ ಪೆಡಿಕಲ್ ಕಾಲೇಜಿಗೆ ಬೇಕಾಗುವ ಸಹಾಯ ಸವಲತ್ತುಗಳನ್ನು ನೀಡಬೇಕಾಗಿ ಕೇಳಿಕೊಂಡರು

ಬಳಿಕ ಉಡುಪಿ ಮುನಿಸಿಪಲ್ ಚೆರ್‌ಮೆನ್ ಶ್ರೀ ಕೆ ಕೆ ಪೈಗಳು ನಗರದ ಕ್ಷೇಮಚಿಂತನಾ ದೃಷ್ಟಿಯಿಂದ ಚಿಕ್ಕ ಮನವಿಯೊಂದನ್ನು ಮಂತ್ರಿಗಳಿಗೆ ಒಪ್ಪಿಸಿದರು ಅನೇಕಾಲು ರೋಗ ಪ್ರತಿಬಂಧಕ ಯೋಜನೆಯಲ್ಲಿ ಉಡುಪಿಯನ್ನು ಸೇರಿಸಿಕೊಳ್ಳಬೇಕೆನ್ನುವ, ಸೂಳೆ ಕಾಟ ವಿರೋಧ ಕಾರ್ಯಕ್ಕಾಗಿ ಸರಕಾರದ ಸಹಾಯ ಸಿಕ್ಕಬೇಕೆನ್ನುವ, ಪೆಡ್ಡಿ ಸೀರಿನ ಸರಬರಾಯಿ ಭೂಗತ ಚರಂಡಿ ಯೋಜನೆಯನ್ನು ಉಡುಪಿಯಲ್ಲೂ ಕಾರ್ಯಗತಗೊಳಿಸಬೇಕೆನ್ನುವ, ಹಿರಿಗೆ ಮತ್ತು ಶಿರುಪಾಲನಾ ಕೇಂದ್ರಸಂಸ್ಥೆ UNICEF ಯ ಅಂಗವಾಗಿ ತೆರೆಯಬೇಕೆನ್ನುವ ಇತ್ಯಾದಿ ಬೇಡಿಕೆಗಳು ಮನವಿಯಲ್ಲಿ ಸೂಚಿಸಿಲ್ಪಟ್ಟಿದ್ದುವು

ಮಂತ್ರಿಗಳು ಉತ್ತರಿಸುತ್ತಾ, ಹುಬ್ಬಳ್ಳಿಯಲ್ಲಿ ಸರಕಾರವು ತೆರೆಯಲಿರುವ ಮೆಡಿಕಲ್ ಕಾಲೇಜಿಗೆ ಬೇಕಾಗುವ ಅನುಭವನನ್ನು ಪಡೆಯಲು ತಾನು ಈ ಜಿಲ್ಲೆಗೆ ಭೇಟಿಯಿತ್ತುದಾಗಿಯೂ, ಡಾ. ಟಿ. ಮಾಧವ ಪೈ ಮತ್ತು ಜೊಂಬಾಯಿಯ ಡಾ ಬಾಳಿಗರ ಆಶೀರ್ವಾದ ಪಡೆದು ತಾನು ಹಿಡಿದ ಕಾರ್ಯ ಮುಂದರಿಸುತ್ತಿದ್ದೇನೆಂದರು ಕಸ್ತೂರ್‌ಬಾ ಮೆಡಿಕಲ್ ಕಾಲೇಜು ಇನ್ನೂ ಉನ್ನತಮಟ್ಟಕ್ಕೆ ಬರಲೆಂದು ಶ್ರೀ ದೇವರನ್ನು ಪ್ರಾರ್ಥಿಸಿದರೆಲ್ಲವೆ, ಕಾಲೇಜಿಗೆ ತಕ್ಕ ಕಾಲದಲ್ಲಿ ತಕ್ಕ ಸಹಾಯ ಕೊಡಿಸುವ ಅಶ್ವಾಸನೆಯನ್ನಿತ್ತರು. ನಗರಸಭೆಯ ಬೇಡಿಕೆಗಳ ಕುರಿತು ತಾನು ಪರಿಶೀಲಿಸಿ ಸಾಧ್ಯವಿದ್ದದನ್ನು ಸಹಾನುಭೂತಿಯಿಂದ ಕಾರ್ಯಗತಗೊಳಿಸಲು ಯತ್ನಿಸುವೆನೆಂದರು.

ಮಂತ್ರಿಗಳು ಮಣಿಪಾಲದಿಂದ ಉಡುಪಿಗೆ ಆಗಮಿಸಿ ಶ್ರೀ ಕೃಷ್ಣಮಠಕ್ಕೆ ಸಂದರ್ಶನವಿತ್ತು ಪರ್ಯಾಯ ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರಿಂದ ಫಲಮಂತ್ರಾಕ್ಷತೆ, ಆಶೀರ್ವಾದಗಳನ್ನು ಪಡೆದು ಬಳಿಕ ಸ್ಥಳೀಯ ಸರಕಾರಿ ಆಸ್ಪತ್ರೆಯನ್ನು ಸಂದರ್ಶಿಸಿದರು ಮೆಡಿಕಲ್ ಆಫೀಸರ್ ಡಾ ಬಿ ಆರ್ ಕಾರ್ನಾಡರವರು ಆಸ್ಪತ್ರೆಯ ಕೆಲವೊಂದು ಕೊರತೆಗಳನ್ನು ಮಂತ್ರಿಗಳ ಗಮನಕ್ಕೆ ತಂದರು ಆಸ್ಪತ್ರೆಯ ಮಂಚಗಳನ್ನು ಏರಿಸುವಿಕೆ, ಹೆರಿಗೆ ವಿಭಾಗಕ್ಕೆ ಇಲೆಕ್ಟ್ರಿಕ್ ದೀಪಗಳ ಸೌಕರ್ಯವನ್ನು ಒದಗಿಸುವಿಕೆ ಇತ್ಯಾದಿ ಡಾಕ್ಟರರ ಸಿಬಂಧಿಯ ಕೊರತೆಕ್ಕೆ, ಎಕ್ಸ್‌ರೇ ಇತ್ಯಾದಿ ವ್ಯವಸ್ಥೆಗಳಾಗಬೇಕೆಂದು ಸೂಚಿಸಿದರು

ಮೆಡಿಕಲ್ ಕಾಲೇಜುಗಳನ್ನು ಹೆಚ್ಚಿಸುವ ಕುರಿತು ಡಾ ಪೈಗಳ ಯೋಜನೆ

ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನಿನ ರಿಜಿಸ್ಟ್ರಾರ್ ಡಾ ಟಿ ಮಾಧವ ಪೈಗಳು ತಾ ೩ರಲ್ಲಿ ಸತ್ರಿಕಾಗೋಷ್ಠಿಯನ್ನೇರ್ಪಡಿಸಿ, ವೈದ್ಯಕೀಯದರ್ಜೆಯ ಉಚ್ಚಶಿಕ್ಷಣ ಸಂಸ್ಥೆಗಳಿಗೆ ಸಮರ್ಪಕ ಪ್ರಾಧ್ಯಾಪಕರುಗಳನ್ನು ಹೇಗೆ ತಯಾರಿಸಬಹುದೆಂಬುದನ್ನು ವಿವರಿಸಿದರು

ಡಾ. ಪೈಗಳು ಪ್ರಾರಂಭದಲ್ಲಿ ಉಡುಪಿಯ ಎಮ್ ಜಿ ಎಮ್ ಕಾಲೇಜಿನಲ್ಲಿ ಬಿ. ಕಾಂ ಮುಕ್ತು ಬಿ ಎಸ್ ಸಿ ತರಗತಿಗಳನ್ನು ತೆರೆಯುವರೆ ಕರ್ನಾಟಕ ವಿಶ್ವವಿದ್ಯಾಲಯದವರು ತೋರಿದ ವಿರೋಧ ಮನೋಸ್ಥಿತಿಯನ್ನು ಕೊಂಡಾಡಿದರು ತಜ್ಞ ಪ್ರಾಧ್ಯಾಪಕರನ್ನು ನಿರ್ಮಿಸಲು ಸಾಧ್ಯವಿದೆ ಈಗ ತಕ್ಕ ದೇಶದಲ್ಲಿ ಸಾಧಾರಣ ಎರಡೂವರೆ ಸಾವಿರ ಸಮರ್ಥ ಡಾಕ್ಟರರಿರುವರು ಇದರ ಸದುಪಯೋಗವನ್ನು ಪಡೆಕೊಂಡರೆ ಎಲ್ಲವೂ ಸುಗಮವಾಗುವುದು ಎಂ ಬಿ ಬಿ ಎಸ್ ಡಿಗ್ರಿ ಪಡೆದ ಕೆಲವು ಮಂದಿಯನ್ನು ಆರಿಸಿ ಅವರಿಗೆ ಒಂದೆರಡು ವರ್ಷ ಅವಧಿಯ ವಿಶೇಷ ಶಿಕ್ಷಣದ ವ್ಯವಸ್ಥೆಮಾಡಬೇಕು ಶಿಕ್ಷಣ ಅವಧಿಯಲ್ಲಿ ಅವರಿಗೆ ತಿಂಗಳೊಂದರ ಮುನ್ನೂರು ರೂಪಾಯಿಗಳ ವೇತನ ಕೊಡಬೇಕು ವರ್ಷಂಪ್ರತಿಯೂ ಇಪ್ಪತ್ತು ಮೂವತ್ತು ಮೆಡಿಕಲ್ ಕಾಲೇಜುಗಳನ್ನು ತೆರೆದು ವಿಶೇಷ ಶಿಕ್ಷಣ ಪಡೆದವರನ್ನು ನೇಮಿಸಬೇಕು ಅಗತ್ಯತೆ ತಜ್ಞ ಪ್ರಾಧ್ಯಾಪಕರ ಅಭಾವ ಹೋಗುವುದು ಎಂದು ಹೇಳಿದರು

ಸರಕಾರಕ್ಕೆ ಹಣದ ಕೊರತೆ ಇದ್ದರೆ ವಿದ್ಯಾರ್ಥಿಗಳಿಂದ ಹಣ ಪಡೆದು ಹೊಸ ಮೆಡಿಕಲ್ ಕಾಲೇಜುಗಳನ್ನು ತೆರೆಯಬಹುದು, ಸರಕಾರವು ಮೆಡಿಕಲ್ ವಿದ್ಯಾರ್ಥಿಗಳಿಗಾಗಿ ತಲಾ ಸುಮಾರು ಹತ್ತೆರಡಾವರೆ ಸಾವಿರ ರೂಪಾಯಿ ವೆಚ್ಚಮಾಡುತ್ತಿದೆ, ತೆರಿಗೆಯ ಧನವನ್ನು ಶ್ರೀಮಂತರ ಮಕ್ಕಳಿಗಾಗಿ ಸರಕಾರವೇಕೆ ವ್ಯಯಿಸಬೇಕೆಂದು ಬಡ ವಿದ್ಯಾರ್ಥಿಗಳಿಗೆ ಈಗಾಗಲೇ ತೆರೆದ ಕಾಲೇಜುಗಳಿಗೆ ಇವನ್ನೆಲ್ಲಾ ನನ್ನು ಸರಕಾರ ಪರ್ಯಾಲೋಚಿಸಿ ಸೂಕ್ತ ಕಾರ್ಯಕ್ರಮ ಕೈಕೊಳ್ಳುವಂತಾಗಬೇಕೆಂದರು

ಕುಂದಾಪುರ, ಮೂಲ್ಕಿ, ಕಾರ್ಕಳ, ಮತ್ತೂರುಗಳಲ್ಲಿ ಕಾಲೇಜುಗಳನ್ನು ತೆರೆಯುವ ವಿಷಯವನ್ನು ವಿವರಿಸುತ್ತಾ, ಎಕೆಡೆಮಿ ಕಡೆಯಿಂದ ಹೊನ್ನಾವರದಲ್ಲಿಯೂ ಕಾಲೇಜುಗಳನ್ನು ಸ್ಥಾಪಿಸುವ ಸಾಧ್ಯಾಸಾಧ್ಯತೆಯನ್ನು ವಿಮರ್ಶಿಸಬೇಕಾಗಿ ಹೊನ್ನಾವರ ಸಿವಿಲ್ ಜಡ್ಜರಾದ ಶ್ರೀ ವಿ ಕೃಷ್ಣಪ್ಪ ಸೆಟ್ಟಿರಿಂದಲೂ ಪತ್ರಬಂದಿರುತ್ತದೆ ಇದು ಎತ್ತಿ ಹೇಳತಕ್ಕ ವಿಷಯವೆಂದರು

ಇನ್‌ಫ್ಲುಯೆಂಜಾ ಕುರಿತು ಭಾಷಣ

ಮುನಿಸಿಪಲ್ ಹೆಲ್ತ್ ಆಫೀಸರ್ ಡಾ ವಿ ಎಲ್. ಪಂಡಿತರಿಂದ ತಾ. ೩ರಲ್ಲು ಸ್ಥಳೀಯ ಸರಕಾರಿ ಆಸ್ಪತ್ರೆಯಲ್ಲಿ ಜರಗಿಸಲಾದ ಸಭೆಯಲ್ಲಿ ಡಾ! ಪಂಡಿತರೂ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಡಾ! ಕೃಷ್ಣರಾವ್ ಮತ್ತು ಡಾ! ಕೆ ಮೋಹನ ದಾಸ ಪೈಗಳು ಮತ್ತು ಇನ್‌ಫ್ಲುಯೆಂಜಾ ರೋಗದ ಆಗುಹೋಗುಗಳು, ಅವುಗಳನ್ನು ತಡೆಗಟ್ಟುವ ರೀತಿ ನೀತಿಗಳನ್ನು ವಿವರಿಸಿ ಭಾಷಣವಿತ್ತರು ಡಾ ವಿ ಜಿ ಆಚಾರ್ಯರು ವಾತಾವಾಡುತ್ತಾ ಇನ್‌ಫ್ಲುಯೆಂಜಾ ಕುರಿತು ಜರುಗಾಬರಿಗೊಳ್ಳುವ ಆವಶ್ಯಕತೆಯಿಲ್ಲವೆಂದೂ ಹೇಳಿದರು ಸಭಾಧ್ಯಕ್ಷತೆಯನ್ನು ವಹಿಸಿದ ಡಾ! ಟಿ ಮಾಧವ ಪೈಗಳು ಭಾಷಣಕಾರರ ಅಭಿಪ್ರಾಯಗಳನ್ನು ಸಮರ್ಥಿಸಿದರಲ್ಲದೆ, ಅವರ ಸೋದರಿಕೆ ಹಾಗೂ ತಜ್ಞತೆಯ ವಿಷಕ್ಕೆ ಸ್ಥಳೀಯ ಡಾಕ್ಟರರ ಸಲಹೆಗಳನ್ನು ಜನತೆ ಪಡೆಯಬೇಕೆಂದು ಹೇಳಿದರು.

ಉಡುಪಿ ಬೋರ್ಡು ಹೈಸ್ಕೂಲಿನಿಂದ

ಕಳೆದ ಎಸ್. ಎಸ್ ಎಲ್. ಸಿ. ಪರೀಕ್ಷೆಗೆ ಕುಳಿತ ೮೬ ವಿದ್ಯಾರ್ಥಿಗಳಲ್ಲಿ ೭೩ ಮಂದಿ ಪಾಸಾಗಿದ್ದು ಶೇಕಡಾ ೮೫ರಷ್ಟು ಫಲಿತಾಂಶ ಬಂದಿರುವುದು ಅಭಿನಂದನೀಯ

ಸ್ಥಳೀಯ ಬೋರ್ಡು ಹೈಸ್ಕೂಲಿನಿಂದ ಶ್ರೀ ಟಿ ವಾಂಕಟ್ರಾಯರು ಅಳಿಯೂರು ಬೋರ್ಡು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿಯೂ, ಶ್ರೀಗಳಾದ ಸಿ ಸೀತಾರಾಮಯ್ಯನವರು ಕಾರ್ಕಳ ಬೋರ್ಡು ಹೈಸ್ಕೂಲಿನಲ್ಲಿ, ಕೆ ಸದಾಶಿವ ಶ್ಯಾನುಬಾಗರು ಕುಂದಾಪುರ ಬೋರ್ಡು ಹೈಸ್ಕೂಲಿನಲ್ಲಿ, ಕೆ ಎಲ್ ಎನ್. ಮಲ್ಲರು ಹೆಬ್ರಿ ನೋರ್ಡು ಹೈಸ್ಕೂಲಿಗು ನಿರ್ಗಾಯಿಸಲ್ಪಟ್ಟ ನಿಮಿತ್ತ ಅವರೆಲ್ಲರಿಗೂ ಬೀಳ್ಕೊಡುವ ಸಮಾರಂಭವು ಇದೇ ತಾ ೩ರಲ್ಲು ಹೈಸ್ಕೂಲಲ್ಲಿ ಜರಗಿತು.

ಉಡುಪಿ ತಾಲೂಕು ಪಾಸಗಿ ಮತ್ತು ಬೋರ್ಡು-

ಪ್ರಾಥಮಿಕ ಶಾಲಾ ಶಿಕ್ಷಕರ ಯೂನಿಯನ್ನುಗಳ ಸಂಯುಕ್ತ ಸಭೆಯೊಂದು ತಾ ೨ರಲ್ಲು ಶ್ರೀ ಬಿ ಸುಬ್ಬಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ತಾಲೂಕಿನ ಎರಡೂ ಯೂನಿಯನ್ನುಗಳನ್ನು ಜೋಡಿಸಿ ಒಂದೇ ಯೂನಿಯನ್ ರಚಿಸಬೇಕಾಗಿ ನಿರ್ಣಯಿಸಲಾಯಿತು ತಾ. 16-6-56 ರಂದರ ಸೇರಿದ ಶಿಕ್ಷಕರನ್ನು ಸರ್ಕಾರ ಹಾಜರಾಯಿ ಹೆಚ್ಚಳದ ಕಾರಣಕ್ಕಾಗಿ ಕೆಲಸದಿಂದ ನಿವೃತ್ತಿಗೊಳಿಸಬೇಕಾಗಿ ಅಧಿಕಾರಿಗಳು ಹೊರಡಿಸಿದ ಆಜ್ಞೆಯ ಕುರಿತು ವಿಷಾದ ಸೂಚಿಸಿ, ಈ ಆಜ್ಞೆಯನ್ನು ಶೀಘ್ರವೇ ರದ್ದುಗೊಳಿಸಬೇಕಾಗಿಯೂ, ಹಾಗೆ ನಿವೃತ್ತರಾದ ಅಧ್ಯಾಪಕರನ್ನು ಪುನಃ ಕೆಲಸಕ್ಕೆ ನೇಮಿಸಿಕೊಳ್ಳಬೇಕೆಂತಲೂ ಕೇಳಿಕೊಳ್ಳುವರೆ ಜಿಲ್ಲಾ ವಿದ್ಯಾಧಿಕಾರಿಗಳನ್ನು ಬೇಟಿಯಾಗಲು ಒಂದು ಆಯೋಗವನ್ನು ನೇಮಿಸಿ ಅವರು ಇದೇ ತಾ. 17ರಲ್ಲು ವಿದ್ಯಾಧಿಕಾರಿಗಳನ್ನು ಕಂಡುಬರಲಾಗಿಯೂ ನಿರ್ಣಯಿಸಲಾಯಿತು ಶ್ರೀ ದಾಂತಿಯವರು ಧನ್ಯವಾದ ವಿತ್ತರು

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹಿರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಚಿಲ್ಲರೆ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್

ಮಕ್ಕಳ ಮಗ್ಗಿಪುಸ್ತಕ

(ನಯೇ ಪೈಸೆ ಕೋಷ್ಟಕ ಸಹಿತ)

ಬೆಲೆ 1ಕ್ಕೆ	0	1	0
100ಕ್ಕೆ	4	0	0
250ಕ್ಕೆ	9	0	0
500ಕ್ಕೆ	17	0	0

ನವಯುಗ ಪ್ರೆಸ್, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಮಕ್ಕಳ ಮಹಾತ್ಮಾ ಗಾಂಧಿ-

(ಸಚಿತ್ರ ಜೀವನ ಚರಿತ್ರೆ) ಬರೆದವರು: ಶ್ರೀಗಳಾದ ನಾರಾಯಣ ಶರ್ಮ ಮತ್ತು ಶ್ರೀ ಹೊಯ್ಸಳರು. ಪ್ರಕಾಶಕರು: ಸಾಹಿತ್ಯ ಭಂಡಾರ ಮಿಟ್ಟಳ್ಳಿ ಸುಟ ೭೨. ಬೆಲೆ: 0_12_0 ಅಥವಾ 75 ಸ. ಪೈ. (ಐದನೆಯ ಮುದ್ರಣ).

ಚಿಕ್ಕ ಮಕ್ಕಳಿಗೂ ಹೊಸತಾಗಿ ಓದು ಕಲಿತ ವಯಸ್ಕರಿಗೂ ಅನುಕೂಲವಾಗುವಂತೆ ಚಿಕ್ಕ ವಾಕ್ಯಗಳಿಂದ, ಅದಷ್ಟು ಸುಲಭ ಶೈಲಿಯಿಂದ ಮತ್ತು ದೊಡ್ಡ ಅಚ್ಚುಗಳಿಂದ ಮುದ್ರಿಸಿ ಪ್ರಕಟಿಸಿದ ಈ ಪುಸ್ತಕ ನುಡಿತಾಯ ಸೇವೆಯೂ ಹೌದು; ನಾಡ ಸೇವೆಯೂ ಹೌದು. ನಮ್ಮ ಮುಂದಿನ ಜನಾಂಗವಾದ ಇಂದಿನ ಮಕ್ಕಳು ಅವಶ್ಯವಾಗಿ ಹಿಡಲೇಬೇಕಾದ ಉತ್ತಮ ಶಿಶುಸಾಹಿತ್ಯವೂ ಹೌದು.

ಗಾಂಧಿಯವರ ಹಿರಿಯರಾದ ಅವರ ಅಜ್ಜ ಉತ್ತಮಚಂದ ಗಾಂಧಿಯವರಿಂದ ಆರಂಭಿಸಿ, "ಹಾ ರಾಮ್" ಎಂದು ಕೊನೆಯ ಉದ್ಗಾರವೆಳೆಯುವ ವರೆಗಿನ ಜೀವನ ಚರಿತ್ರೆಯನ್ನೂ, 'ಮಕ್ಕಳ ಮೇಲಿನ ಮಮತೆ', 'ಗಾಂಧೀ ದಂಪತಿಗಳು,' 'ಮಾಡು ಇಲ್ಲವೆ ಸಾಡಿ' ಎಂಬ ಗಾಂಧೀ ವೈಶಿಷ್ಟ್ಯಗಳನ್ನೂ ಕೂಡಿದಷ್ಟು ಚಿಕ್ಕ ಅಧ್ಯಾಯಗಳಿಂದಲೂ, ಕನ್ನಡದ ಸ್ವಯಸ್ವಾಕ್ಷರ ಸಹಿಯೇ ಮೊದಲಾದ ೧೪ ಚಿತ್ರಗಳಿಂದಲೂ ಪುಸ್ತಕವು ಸುಂದರವಾಗಿದೆ. ಮುದ್ರಣವು ಮುದ್ದಾಗಿದೆ. ಶ್ರೀ ಹೊಯ್ಸಳರು ಬರೆದ ಶಿಶುಸಾಹಿತ್ಯವೆಂದಮೇಲೆ ಭಾಷೆಯ ಕುರಿತು ಉತ್ತಮವಿದೆಯೆಂದು ಹೇಳಿದರೆ ಅದು ಚರ್ವಿತ ಚರ್ವಣವಾಗುವುದು.

ಗಾಂಧೀಜಿಯ ಕುರಿತು ದೊಡ್ಡ ದೊಡ್ಡ ಪುಸ್ತಕಗಳನ್ನೋದುತ್ತಾ ಹೋದಂತೆ, ಅಥವಾ ಬೇರೆ ಬೇರೆ ಗ್ರಂಥಕರ್ತರು ಬರೆದ ಗಾಂಧೀಜಿಯ ಜೀವನ ಚಿತ್ರಗಳನ್ನು ಕಾಣುತ್ತಾ ಹೋದಂತೆ ಏನೋ ಒಂದು ವಿಧವಾಗಿದ ಮನಸ್ಸು ಈ ಚಿಕ್ಕ ಪುಸ್ತಕದಿಂದ ಎಲ್ಲವನ್ನೂ ಮರೆತು, ರಾಷ್ಟ್ರಪಿತನ ಕುರಿತು ಪೂಜ್ಯಭಾವನೆ ತಾಳಲು ಸಹಕಾರಿಯಾಗುತ್ತದೆ. ಅಷ್ಟು ಚಾಣಕ್ಷತೆಯಿಂದ ಶ್ರದ್ಧೆಯಿಂದ ವಿಷಯವನ್ನು ಅಳವಡಿಸಿಕೊಂಡಿದ್ದಾರೆ.

ಬಾಲಕ ಗಾಂಧೀಜಿಯು ಹರಿಶ್ಚಂದ್ರನನ್ನು ಓದಿದಂತೆ ನಮ್ಮ ಕಂದಗಳು ಮಕ್ಕಳ ಮಹಾತ್ಮಾ ಗಾಂಧೀಯನ್ನು ಓದಬೇಕು. ನಮ್ಮ ಶಾಲೆಗಳಲ್ಲಿ, ವಾಚನಾಲಯಗಳಲ್ಲಿ ಈ ಪುಸ್ತಕದ ಕೆಲವು ಪ್ರತಿಗಳನ್ನಾದರೂ ಒದಗಿಸುವ ಏರ್ಪಾಡನ್ನು ಹೆಣವ್ವಳ್ಳ ಗಾಂಧೀ ಭಕ್ತರಾಗಲಿ, ಗಾಂಧೀ, ಕಸ್ತೂರ್ಬಾ ಇತ್ಯಾದಿ ನಿಧಿಗಳ ಅಧಿಕಾರಿಗಳಾಗಲೀ ಮಾಡುವುದು ಅವಶ್ಯಕ.

ಹೂವು ಚೆಲ್ಲಿದ ಹಾದಿಯಲ್ಲಿ-

(ಉದಯ ಯೌವನದ ಸ್ಮೃತಿ ಸಂಚಯ) ಕವಿ: ಕೆ. ವಿ. ಸುಬ್ಬಣ್ಣ. ಪ್ರಕಾಶಕರು: ಅಕ್ಷರ ಪ್ರಕಾಶನ, ಸಾಗರ-ಶಿವಮೊಗ್ಗ, ಸುಟ ೬೬ ಬೆಲೆ ಒಂದೂವರೆ ರೂಪಾಯಿ.

ಈ ಕವನ ಸಂಚಯವನ್ನು ಕವಿ ಕೆ. ವಿ. ಸುಬ್ಬಣ್ಣನವರೇ ಉದಯಯೌವನದ ಸ್ಮೃತಿ ಸಂಚಯವೆಂದು ಕರೆದಿದ್ದಾರೆ.

ಭಾವುಕತೆಯಿಂದ ತಾರುಣ್ಯದ ಆನಂದದಿಂದ ಮತ್ತು ಪ್ರಾಣದಿಂದ ಕತೆಯೊಂದರಿಂದ ರಸ ಪಡೆದು, ಸುಸ್ತಿಪಡೆದು ಕವಿತೆಗಳಾಗಿ ಹರಿದ್ದ ಕವಿಯು ಹಿಡಿದಿದಲೆತ್ತಿಸಿದ ಕೆಲವು ಮಿಂಚುಗಳು ಕಾವ್ಯಾನುಭವನ್ನು ಸ್ಪೃಷ್ಟಿಯರಿಗೆ ಉಂಟುಮಾಡಲು ತಕ್ಕವಾಗಿವೆ. ಈ ಸಂಕಲನದಲ್ಲಿ "ಹೂವು ಚೆಲ್ಲಿದ ಹಾದಿಯಲ್ಲಿ"ಯೇ ಮೊದಲಾದ ೨೪ ಕವನಗಳಿವೆ.

"ಹೊಗನಸಿನ ಬಿಸುಸುಯ್ಲಿನ
ಚಿತ್ರಪಾಲಿ ಮೂಡುತಿರಲು!
ನಿಲುವೆ ಪ್ರೇಕ್ಷಕನೊಲು .."

ಎಂಬ ಭಾವಗರ್ಭಿತವೆನ್ನುವ ಪಂಕ್ತಿಗಳೂ, "ಹಿಂದಿನಿಂದಲೆ ಬಂದು ಕಣ್ಣಗೊತ್ತಿದ ಕೈಯಿದೆನ್ನ ಮುದ್ದಿನಸಲ್ಲದಿನ್ನಾರವು" ಎಂಬ ಪ್ರೇಮಿ ಗೀತೆಗಳೂ ಕವಿಹೃದಯಕ್ಕೆ ಆನಂದಕೊಡುವಂತಿವೆ.

ಮಂಗಳೂರು

ಶೀತಜ್ವರ ಪ್ರತಿಬಂಧಕಸಿದ್ಧತೆ— ಮಂಗಳೂರಲ್ಲಿ ಶೀತಜ್ವರದ ಬಾಧೆ ಕಾಣಿಸಿಕೊಂಡುದಾದರೆ, ಯಾವ ರೀತಿಯಲ್ಲಿ ಎದುರಿಸಬೇಕು. ಮತ್ತು ಅದರ ಹಾವಳಿಯನ್ನು ತಡೆಗಟ್ಟಲು ಯಾವ ರೀತಿಯ ಮುಂಜಾಗ್ರತೆ ಕೈಕೊಳ್ಳಬೇಕು ಇತ್ಯಾದಿ ವಿಷಯಗಳು ತಾ. 30ರಲ್ಲು ಜಿಲ್ಲಾ ಮೆಡಿಕಲ್ ಅಫೀಸರರಿಂದ ಕರೆಯಲಾಗಿದ್ದ ಸಭೆಯಲ್ಲಿ ಚರ್ಚಿಸಲ್ಪಟ್ಟವು. ಶೀತ ಜ್ವರವು ಅತಿ ಉನ್ನತ ಮಟ್ಟದ ಸಾಂಕ್ರಾಮಿಕ ರೋಗಗಳಲ್ಲೊಂದಾಗಿದೆ. ಅದರ ಲಕ್ಷಣವೇನೆಂದರೆ-ಅಕಸ್ಮಾತ್ತಾ ಒಬ್ಬನಲ್ಲಿ ವಿಪರೀತ ಶೀತವು ಕಾಣಿಸಿಕೊಳ್ಳುವುದರೊಂದಿಗೆ, ಮೈಯರೆಲ್ಲಾ ಸಹಿಸಲಾರದ ನೊವು ಹಾಗೂ ಜ್ವರ ತರೆಯತ್ತುವುದು ಇವುಗಳು ಸೌಮ್ಯವಾಗಿರುವುದೂ ಉಂಟು ಅಥವಾ ವಿಶೇಷ ತೀವ್ರ ಮಟ್ಟದ್ದಾಗಿರುವುದೂ ಉಂಟು. ರೋಗಿಗೇಡಿತನಾದವನಿಗೆ ಯೋಗ್ಯ ಚಿಕಿತ್ಸೆ ಹಾಗೂ ತಕ್ಕ ವಿಶ್ರಾಂತಿಗಳನ್ನು ಒದಗಿಸಿಕೊಡುವುದರಿಂದ ರೋಗದ ನುಟ್ಟವನ್ನು ಹತೋಟಿಗೆ ತರಬಹುದು. ಮತ್ತು ಇದರ ಸಾಂಕ್ರಾಮಿಕತೆಯನ್ನು ಕೂಡಾ ತಡೆಹಿಡಿಯಬಹುದು. ಶೀತಜ್ವರವೆಂದರೆ ಸಂಶಯ ಬಂದೊಡನೆಯೇ ಡಾಕ್ಟರರನ್ನು ಕಂಡು ತಕ್ಕ ಚಿಕಿತ್ಸೆ ಮಾಡಿಕೊಳ್ಳಬಹುದಾಗಿದೆ. ಸರಕಾರಿ ಆಸ್ಪತ್ರೆಗಳ ಸಹಾಯವನ್ನು ಪಡೆಗೊಳ್ಳಬಹುದು.

ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಶಿಂಹನವರಿಗೆ ಐ. ಎ. ಎಸ್ ಪದವಿ ಮೈಸೂರು ರಾಜ್ಯಸರಕಾರದ ಐದನ ಅಧಿಕಾರಿಗಳನ್ನು ಭಾರತ ಸರಕಾರವು ಐ ಎ ಎಸ್ ಪದವಿಗೆ ಏರಿಸಿಯದೆ. ಈ ಐದು ಮಂದಿಯಲ್ಲಿ ದ. ಕ. ಜಿಲ್ಲಾ ಕಲೆಕ್ಟರ್ ಶ್ರೀ ಎಚ್ ನರಶಿಂಹ, ಅವರೊಬ್ಬರು.

ಸ್ಟೀಲ್ ರೋಲಿಂಗ್ ಮಿಲ್— ದ್ವಿತೀಯ ಯೋಜನೆಯ ಅಂಗವಾಗಿ ಮಂಗಳೂರಲ್ಲಿ ಖಾಸಗಿ ಸಂಸ್ಥೆಯಿಂದ ಸ್ಟೀಲ್ ರೋಲಿಂಗ್ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗುವುದೆಂದು ಮೈಸೂರು ಸರಕಾರ ಪ್ರಕಟಿಸಿಯದೆ.

ನಿಧನ— ಮಂಗಳೂರಿನ ರಾವಬಹದೂರ್ ಡಾ. ಎಂ. ಕೇಶವ ಪೈಗಳವರ ಪತ್ನಿ ಶ್ರೀಮತಿ ಸರಸ್ವತಿ ಬಾಯಿಯವರು ತಾ ೩ ರಂದು ರಾತ್ರಿ ತಮ್ಮ 71ನೆ ವಯಸ್ಸಿನಲ್ಲಿ ನಿಧನರಾದರು. ದಿವಂಗತರಮಕ್ಕಳಲ್ಲೊಬ್ಬರಾದ ಶ್ರೀ ಎಮ್ ಪಿ ಪೈಗಳು ಈಗ ಆಂಧ್ರ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗಳಾಗಿರುವರು

ಉದಯೋನ್ಮುಖವಾಗಿ ಸಾಗುತ್ತಿರುವ ಕವಿಗೆ ನಮ್ಮ ಶುಭಾಶಯಗಳು. ಪುಸ್ತಕದ ಮುದ್ರಣಚಿತ್ರ, ಹೊದಿಕೆ, ಕಾಗದ, ಮುದ್ರಣ ಚೆನ್ನಾಗಿವೆ.

- ದಾಂತಿ.

ನರದಿ

ಕರ್ನಾಟಕ ಫ್ರೀನ್ಸ್ಟಿಟ್ ಹ್ಯಾಸ್ಕೂಲ್ ಬೊಂಬಾಯಿ ಇದರ 33ನೆ ವರ್ಷದ ನರದಿಯು ನಮ್ಮ ಕೈ ಸೇರಿದೆ. ದ. ಕ. ಜಿಲ್ಲೆಯಿಂದ ಉದ್ಯೋಗಕ್ಕಾಗಿ ಬೊಂಬಾಯಿಗೆ ಹೋದ ಕನ್ನಡಿಗರ ಪೈಕಿ ಕೆಲವು ಸಮಾಜ ಸೇವಾ ಕೆಲಸಗಾರರು 1934ರಲ್ಲಿ ವಿದ್ಯಾದಾಯಿನಿ ಫ್ರೀನ್ಸ್ಟಿಟ್ ಸ್ಕೂಲನ್ನು ಸ್ಥಾಪಿಸಿ 1933ರಲ್ಲು ಕರ್ನಾಟಕ ಫ್ರೀನ್ಸ್ಟಿಟ್ ಸ್ಕೂಲ್ ಎಂಬ ನಾಮಧೇಯದಿಂದ ವಿದ್ಯಾ ಪ್ರಚಾರ ಮಾಡಿದರು. 1943ರಲ್ಲು ಬಂಟರ ಯಾನೆ ನಾಡವರ ಸಂಘವು ಈ ಶಾಲೆಯ ಆಡಳಿತವನ್ನು ವಹಿಸಿಕೊಂಡು ತನ್ನ ವ್ಯಾಪಕತ್ವವನ್ನು ವಿಸ್ತರಿಸಿ ಹೈಸ್ಕೂಲನ್ನಾಗಿ ಮಾಡಲು ಶಕ್ತಿಯುತವಾಯಿತು. ಅಲ್ಲದೆ ಅಂದಿನಿಂದ ಇವರ ರಾತ್ರಿ ಶಾಲೆಗಳನ್ನು ತೆರೆದು ಬಡ ಕನ್ನಡಿಗರಿಗೆ ವಿದ್ಯಾದಾನವನ್ನೂಡುತ್ತಿರುವುದು ಸಂತೋಷದ ಸಂಗತಿಯಾಗಿದೆ. ಬಂಟರಯಾನೆ ನಾಡವರ ಸಂಘವು ವಿದ್ಯಾದೇಗುಲದಲ್ಲಿ ಇನ್ನೂ ತನ್ನ ಸೇವೆಯನ್ನು ಸಲ್ಲಿಸುವಂತೆ ಶ್ರೀ ಶಾರದಾ ಸರಸ್ವತಿಯು ಅನುಗ್ರಹಿಸಲೆಂದು ಪ್ರಾರ್ಥಿಸುವೆವು.

ಎಲ್ಲೆಲ್ಲಿ ಏನೇನು?

ಪುತ್ತೂರು— ಮೈಸೂರು ಸರಕಾರದ ಆರೋಗ್ಯಮಂತ್ರಿ ಶ್ರೀ ಆರ್.ಎಮ್. ಪಾಟೀಲರು ತಾ. 4ರಂದು ಅಪರಾಹ್ನ ಸಂಪಾಜೆಯಿಂದ ಪುತ್ತೂರಿಗೆ ಆಗಮಿಸಿದರು. ಶ್ರೀ ಕೆ. ವಿ. ಗೌಡ, ಎಮ್. ಎಲ್ ಎ, ಮೊದಲಾದವರು ಸ್ವಾಗತಿಸಿತ್ತರು. ಪುತ್ತೂರು ಸರ್ವಲ್ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಎ. ಭೀಮ ಭಟ್ಟರು ಏರ್ಪಡಿಸಿದ ಉಪಹಾರವನ್ನು ಸ್ವೀಕರಿಸಿ ಶಾರದಾಮಣಿ ಅನಾಥಾಲಯಕ್ಕೆ ಸಂದರ್ಶನವಿತ್ತರು. ಪುತ್ತೂರು ಕೊಯಿಯ ಸಹಾಯಧನವಿತ್ತರು ನಂತರ ಸ್ಥಳೀಯ ಆಸ್ಪತ್ರೆಯನ್ನು ಸಂದರ್ಶಿಸಿ ಅಲ್ಲಿಯ ಆವಶ್ಯಕತೆಗಳ ಮಾಹಿತಿ ಪಡೆಕೊಂಡರು ಪುತ್ತೂರು ತಾಲೂಕಿನ ಆರೋಗ್ಯದ ಅವಶ್ಯಕತೆ ಕುರಿತು ಶ್ರೀ ಭೀಮ ಭಟ್ಟರು ಮಂತ್ರಿಗಳಿಗೆ ಮನವಿಯನ್ನೊಪ್ಪಿಸಿದರು

ಭೂಸುಧಾರಣಾ ಸಮಿತಿಗೆ ಪುತ್ತೂರು ತಾಲೂಕು ಭೂಮ್ಯಾಲಿಕರ ಕರವಾಗಿ ಮನವಿಯೊಂದು ಅರ್ಪಿಸಲಾಯಿತು ಮನವಿಯಲ್ಲಿ ಸೂಚಿಸಲಾದ ಮುಖ್ಯಾಂಶಗಳಾವುವೆಂದರೆ- ಈಗಿನ ಕಲುಷಿತ ವಾತಾವರಣದಲ್ಲಿ ಭೂಸುಧಾರಣೆಯ ಹೆಸರಿನಿಂದ ಕೈಕೊಳ್ಳಬಹುದಾದ ಶಾಸನಗಳು ಅನಾದಿ ಕಾಲದಿಂದಲೂ ಭೂಮ್ಯಾಲಿಕರು ಹೊಂದಿಕೊಂಡು ಬಂದ ಭೂಮಿಯ ಮೇಲಣ ಹಕ್ಕು ಸಂಬಂಧಗಳಿಗೆ ಬಾಧಕ ಬಾರದ ರೀತಿಯಲ್ಲಿಯೇ ಕೈಕೊಳ್ಳತ್ತುದ್ದಾಗಿಯೂ, ರಾಜ್ಯ ಘಟನೆಯಲ್ಲಿ ಇದು ಇರಿಸಲ್ಪಟ್ಟ ಮೂಲಭೂತ ಹಕ್ಕುಗಳಿಗೆ ವಿರೋಧವಾಗದಂತೆಯೂ ನೋಡಿಕೊಳ್ಳುವುದು. ಭೂಮಿಯ ಹಿಡುವಳಿಯ ಮಿತಿ ಅಥವಾ ಸ್ವಂತ ಸಾಗುವಳಿಯ ಮಿತಿಯನ್ನು ಒಂದು ಕುಟುಂಬಕ್ಕೆ ಇಂತಿಷ್ಟು ಭೂಮಿ ಎಂಬುದಾಗಿ ನಿರ್ಣಯಿಸುವ ಸಂದರ್ಭದಲ್ಲಿ ಅಂಥ ಕುಟುಂಬಗಳ ಕಳವು ಮತ್ತು ಜನಸಂಖ್ಯೆಯನ್ನು ಎಣಿಸಿ ಹಿಡುವಳಿಯ ಮಿತಿಯನ್ನು ನಿರ್ಣಯಿಸತಕ್ಕದು ಮತ್ತು ಜನಸಂಖ್ಯೆ ಪ್ರಕಾರ ಸಾರ್ವಸ್ವ ನಂಜ ತರಗತಿಯ ಭೂಮಿಯನ್ನು ಸ್ವಂತ ಸಾಗುವಳಿಗೆ ಸಿಕ್ಕುವಂತೆಯೂ ಯೋಗ್ಯ ವ್ಯವಸ್ಥೆ ಮಾಡುವುದು ಅತ್ಯಾವಶ್ಯಕವಾಗಿದೆ ಇದೇ ಮೈಸೂರು ಸಂಸ್ಥಾನಕ್ಕೆ ಒಂದೇ ನಮೂನೆಯ ಶಾಸನವನ್ನು ತರಲಿಕ್ಕೆ ನ್ಯಾಯಾಣುವುದಿಲ್ಲ ಭೂಮಿಯ ಸ್ಥಿತಿಗತಿ, ಉತ್ಪತ್ತಿ, ಉತ್ಪಾದನೆಯ ಕ್ರಮ, ಗೇಣಿ ಪದ್ಧತಿ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಾಗಿರುತ್ತವೆ. ನ್ಯಾಯವಾದ ಗೇಣಿಯ ಮಿತಿಯು ಕನಿಷ್ಠ ಪಕ್ಷ ಉತ್ಪಾದನೆಯ ಸೇಕಡಾ 50ರಷ್ಟುಧಿಕಗೆ ಸಿಕ್ಕತಕ್ಕದ್ದು ನ್ಯಾಯಸಮ್ಮತ ಅದರೆ ಈ ಗೇಣಿ ದರವು ಭಾಗ್ಯಾಳು ಹಿಡುವಳಿದಾರರಿಗೆ ಅಸ್ವಯಿಕ ತಕ್ಕದ್ದಲ್ಲ.

ಕಾಸರಗೋಡು— ಸ್ಥಳೀಯ ಕರ್ನಾಟಕ ಪ್ರಾಂತೀಕರಣ ಸಮಿತಿಯ ಸಭೆಯು ಇದೇ ತಾ. 1 ರಲ್ಲು ಶ್ರೀ ಬಿ. ಎಸ್. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಸೇರಿತು. ಕಾಸರಗೋಡು ತಾಲೂಕಿನ್ನು ಮೈಸೂರು ರಾಜ್ಯದಲ್ಲಿ ಸೇರಿಸುವ ಕುರಿತು ಮೈಸೂರು ಕೇರಳ ಮತ್ತು ಕೇಂದ್ರ ಸರಕಾರದ ವರಿಷ್ಠರನ್ನು ಒತ್ತಾಯಪಡಿಸಲು ಶ್ರೀಗಳಾದ ಕೆ. ಆರ್. ಕಾರಂತ, ಎಮ್ ಉಮೇಶ ರಾವ್, ಎಮ್ ಎಲ್. ಎ; ಕಳ್ಳಿಗೆ ಮಹಾಬಲ ಭಂಡಾರಿ, ಬಿ ಎಸ್. ಕಕ್ಕಿಲ್ಲಾಯ ಮತ್ತು ಟಿ ನಾರಾಯಣ ಭಟ್ಟರಿರುವ ಶಿಷ್ಟಮಂಡಳವನ್ನು ನೇಮಿಸಲಾಯಿತು.

ಹಂಗಾರಕಟ್ಟೆ— ಸ್ಥಳೀಯ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. 2ರಂದು ಶ್ರೀ ಬಿ. ವೆಂಕಟಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಕೆ ಶಿವರಾಮ ಕಾರಂತರು 'ಪ್ರಜಾಪ್ರಭುತ್ವ ಮತ್ತು ನಾಗರಿಕರ ಕರ್ತವ್ಯ' ಎಂಬ ವಿಷಯದ ಮೇಲೆ ಮನಮೀಯ ಭಾಷಣವಿತ್ತರು.

ಕಟಪಾಡಿ— ಸ್ಥಳೀಯ ಭುವನೇಂದ್ರ ಪ್ರೌಢಶಾಲಾ ಸಂಸ್ಥೆಯ ಕಟ್ಟಡದಲ್ಲಿ ಸೇರಿಗೆ 0—7—4 ಬೆಲೆಯಲ್ಲಿ ಆಕ್ಟ್ ವಿತರಣೆ ಮಾಡುವ ಆರಂಭೋತ್ಸವವನ್ನು ತಾ. 4ರಲ್ಲಿ ಉಡುಪಿ ಮುನಿಸಿಪಲ್ ಚೆರಮೆನ್ ಶ್ರೀ ಕೆ. ಕೆ. ಪೈಗಳು ನೆರವೇರಿಸಿದರು.

ಶಾಕರ್ಕಳೆ— ಮೈಸೂರು ರಾಜ್ಯದ ಸರ್ವ ವೈದ್ಯ ಮತ್ತು ಜಾನಪದರು ಸಂಗೋಷನ ಇಲಾಖೆಯ ಪ್ರಧಾನ ಅಧಿಕಾರಿಗಳಾದ ಡಾ. ಕೆ. ಎಸ್. ಸೆಟ್ಟರು ತಾ. 5ರಲ್ಲು ಸಂಜೆ ಕಾರ್ಕಳಕ್ಕೆ ಬಂದಾಗ ಅವರಿಗೆ ಡಾ ಅಡ್ಯಂತಾಯರ ಚಿಕಿತ್ಸಾಲಯದಲ್ಲಿ ಸ್ವಾಗತವೀಯಲಾಯಿತು. ಕಾರ್ಕಳದ ಪಶುವೈದ್ಯಾಲಯ ಕಟ್ಟಡವನ್ನು ಈಗ ವೈದ್ಯಾಲಯವಿರುವ ಪೇಟೆಯ ಸಮೀಪದ ಸರಕಾರಿ ಸುರಕ್ಷಿತ ಸ್ಥಳದಲ್ಲಿಕಟ್ಟಸಬೇಕು. ಜಿಲ್ಲೆಯ ಬತ್ತಿದ ಅಳಕ ಸಾಕಣೆ ಸರಕಾರ ಸಂಘಾದವರು ದುರ್ಗಗ್ರಾಮದಲ್ಲಿ ಕಾದಿಟ್ಟ ಪ್ರದೇಶಗಳಲ್ಲಿ ತೆರೆಯುವ ಕೇಂದ್ರಕ್ಕೆ ಸರಕಾರದ ಸಹಾಯ ದೊರೆಯಬೇಕೆಂಬ ಕೋರಿಕೆಗಳನ್ನು ಡಾ. ಸೆಟ್ಟಿ ಮುಂದಿಟ್ಟರು. ಊರ ಪ್ರಮುಖರು ಸೂಚಿಸಿದ ಕೇಂದ್ರ ಸ್ಥಳದಲ್ಲಿಯೇ ಪಶುವೈದ್ಯಾಲಯದ ಕಟ್ಟಡವಾಗುವುದು ಇತರ ವಿಷಯಗಳಲ್ಲಿ ಸಾಧ್ಯವಿದ್ದ ಸಹಾಯ ಕೊಡುವ ಪ್ರಯತ್ನ ನಡೆಸುವೆನೆಂದು ಆಶ್ವಾಸನೆಯಿತ್ತರು.

ಮಣಿಪಾಲ— ಸ್ಥಳೀಯ ಹಂಜಿನ ಕಾರ್ಖಾನೆಯ ಮಾಜಿ ಮೆನೇಜರ್ ಶ್ರೀ ಪ್ರಸಾದ ಜಿ. ಜತ್ತನ್ನರು ಕಳದ ತಾ. 31ರಲ್ಲು ಹರಿಶೋಕವಾಗಿಗಳಾದ ಪ್ರಯುಕ್ತ ಸಂತಾಪ ಸೂಚಿಸುವ ಸಭೆಯು ಡಾ ಟಿ ಎಸ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಬಿ ಶ್ಯಾಮರಾಯ ಸೆಟ್ಟಿ, ಎಸ್. ಕೆ. ಕುಡ್ವ, ಪಾಪುಲ್ ಮೇಸ್ಟ್ರಿ ಮೊದಲಾದವರು ದಿವಂಗತರ ಕುರಿತು ಗುಣಗಾನನಾಡಿದರು ಬ್ಯಾಂಕಿಲ ಮತ್ತು ನೌಕರರೊಳಗೆ ಯಾವ ರೀತಿಯ ಸಂಬಂಧವಿರಬೇಕೆಂಬುದಕ್ಕೆ ದಿ. ಜತ್ತನ್ನರು ಸಾಕ್ಷಿ ಎಂದು ಮುಂತಾಗಿ ಡಾ. ಪೈಗಳು ಹೇಳಿದರು.

ಕುಂದಾಪುರ— ಮೈಸೂರು ರಾಜ್ಯದ ಭೂಸುಧಾರಣಾ ಸಮಿತಿಯು ತಾ. 2ರಲ್ಲು ಕುಂದಾಪುರದಲ್ಲಿ ಮೊಕ್ಕಾಂ ಮಾಡಿದಾಗ ದ. ಕ ಜಿಲ್ಲೆಯ ಪ್ರ. ಸೋ. ಕಳ್ಳ ಮತ್ತು ಜಿಲ್ಲಾ ಹಿಂದ್ ಕೆಸಾನ್ ಪಂಚಾಯತಿನ ಕಡೆಯಿಂದ ಮನವಿಯೊಂದನ್ನು ಅರ್ಪಿಸಲಾಯಿತು. ವಕ್ಕಲು ರಕ್ಷಣಾ ಕಾನೂನಿನಿಂದ ವಕ್ಕಲುಗಳಿಗೆ ಪ್ರಯೋಜನ ಸಿಕ್ಕ ಬೇಕಾದರೆ ಭೂಹಿಡುವಳಿಯ ಖಾನೇಸುಮಾರಿ ಪ್ರಥಮತ ತೆಗೆಯಬೇಕು. ಗೇಣಿ ಬಾಕಿಯಾದ್ದಲ್ಲಿ ವಕ್ಕಲೆಬ್ಬಿಸಲು ಅವಕಾಶ ದೊರೆಯ ಕೊಡದು. ಬಾಕಿಯಾದ ಗೇಣಿ ಹಣವನ್ನು ಸಾಮಾನ್ಯ ಸಾಲಗಳಂತೆ ಭಾವಿಸಿ ವಸೂಲು ಮಾಡಬೇಕು. ಧನಿಗಳು ಒಕ್ಕಲುಗಳಿಗೆ ಗೇಣಿ ಪಾವತಿ ರಶೀದಿ ಕೊಡದಿದ್ದಲ್ಲಿ ಅಂತಹ ವರ್ತನೆಯನ್ನು ಕ್ರಿಮಿನಲ್ ಕತ್ತೀರು ಎಂದು ಪರಿಗಣಿಸಿ ದಂಡತನೆ ವಿಧಿಸಬೇಕು. ಸ್ವಂತ ಸಾಗುವಳಿ ಮಾಡಲಿಚ್ಛಿಸುವ ಭೂಮ್ಯಾಲಿಕರಿಗೆ ಮೂರು ವರ್ಷಗಳ ಅವಧಿಯನ್ನು ಕೊಟ್ಟು ನಂತರ ಉಳುವವನೇ ಧನಿಯಾಗಬೇಕು. ಗೇಣಿ ನಿಯಮಗಳನ್ನು ಆಚರಣೆಗೆ ತರುವ ಆಡಳಿತ ವ್ಯವಸ್ಥೆ ಬಗ್ಗೆ ಭೂಸುಧಾರಣಾ ಇಲಾಖೆಯನ್ನು ಸ್ಥಾಪಿಸಿ, ಅದರ ಮೂಲಕ ಎರಡೂ ಕಡೆಗಳಿಂದ ಸಮಾನ ಸಂಖ್ಯೆಯಲ್ಲಿ ಪ್ರತಿನಿಧಿಗಳನ್ನು ಸೇರಿಸಬೇಕು ಎಂಬ ವಿಷಯದ ಸಲಹೆಗಳು ಮನವಿಯಲ್ಲಿ ಸೂಚಿಸಲ್ಪಟ್ಟಿದ್ದವು

ಅಲೆವೂರು ಇಂಡಾಲ್ ರೆಡ್‌ಕ್ರಾಸ್ ಸಂಸ್ಥೆಯವರು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯವರಿಗೆ ದಾನವಾಗಿ ಕಳುಹಿಸಿದಂತೆ ಉಡುಪಿ ಶಾಖೆಯವರು ಸ್ಥಳೀಯ ಸಮಾಜ ವಿಕಾಸ ಕೇಂದ್ರಕ್ಕೆ ಕಳುಹಿಸಿದ ಬಿಜಾರ್‌ರೆವನ್ನು ಸ್ಥಳೀಯ ಸುಬ್ರಹ್ಮಣ್ಯ ಹಾ| ಎ| ಶಾಲೆಯ ಮತ್ತು ಮೂಡು ಅಲೆವೂರು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಶ್ರೀಮತಿ ಪ್ರೇಮಾ, ಎ. ಪೈಯವರ ಸಲಹೆ ಮೇರೆಗೆ ಹಂಚಲಾಯಿತು.

ಕೊಯಮುತ್ತೂರು— ಸ್ಥಳೀಯ ಕರ್ನಾಟಕ ಸಂಘದ ತ್ರೈಮಾಸಿಕೋತ್ಸವವು ತಾ 2ರಂದು ಸಂಜೆ ಉಜ್ಜೈನಿಯಲ್ಲಿ ಜರಗಿತು ಶ್ರೀಮತಿ ರಮಾದೇವಿಯವರ ಸಂಗೀತವಾದ ನಂತರ ಶ್ರೀ ರಾಜಯ್ಯಂಗಾರರು ಕಾಲೋಚಿತ ಭಾಷಣವಿತ್ತರು. ಶ್ರೀ ಬಿ. ಉಮೇಶರಾಯರು ಧನ್ಯವಾದಗಳನ್ನಿತ್ತರು.

ಆಹಾರದ ಸಮಸ್ಯೆ

(೧೦ನೇ ಪುಟದಿಂದ)

ಗಳಾಗಿಯೇ ಇರಬೇಕಾದ ಪರಿಸ್ಥಿತಿ ಬಂದಿದೆ ಎಂದು ಅಧಿಕಾರಿ ವಲಯಗಳು ಹೇಳುತ್ತಿವೆ ಇದಕ್ಕೆಲ್ಲಾ ಕಾರಣ, ಸರಕಾರದ ಕಾರ್ಯಕಲಾಪದಲ್ಲಿ ಒದಗುವ "ವಿಳಂಬ"ನೇ ನಮ್ಮ ಅಧಿಕಾರಿಗಳು ಬಾಯಿ ಹಾರಿಸುವುದರಲ್ಲಿ ಪ್ರವೀಣರುವಸ್ತುಕಾರ್ಯತೀಲತೆಯಲ್ಲಿಲ್ಲ ಅಲ್ಲಿ ಉಂಟಾಗುವುದು ಸಾವಕಾಶ ಇದನ್ನು ವೈಸ್‌ರಾಯ ಮುಖ್ಯ ಮಂತ್ರಿ ಮಾನ್ಯ ನಿಜಲಿಂಗಪ್ಪನವರೂ ಕಂಡುಕೊಂಡಿದ್ದಾರೆ. ಆದರೆ ಯಾವ ವಿಧಾನದಿಂದ ಜಾಗ್ರತರಾಗಿಸುವರೆಂಬುದಿನ್ನೂ ತಿಳಿಯಬೇಕಾಗಿದೆ.

ದೇಶ ಕ್ಷಾಮಡಾಮರಗಳು ಸ್ವಾಭಾವಿಕವೇ. ಅವನ್ನು ಒಂದಲ್ಲ ಒಂದು ದಿನ ಕೊನೆಗಾಣಿಸಲೇ ಬೇಕು. ನಮಗೆ ಬೇಕಾದ ಪ್ರಮಾಣದಲ್ಲಿ ನಾವೇ ಆಹಾರವನ್ನು ಬೆಳೆಸಿ ಸ್ವಾವಲಂಬಿಗಳಾಗ ಬೇಕು, ಜನನ ನಿಯಂತ್ರಣದಿಂದ ಬೆಳೆಯುವ ಜನಸಂಖ್ಯೆಗೊಂದು ತಡೆಹಾಕಬೇಕು; ಆದಷ್ಟು ಕಡಿಮೆ ಆಹಾರವನ್ನೇ ಸೇವಿಸಬೇಕು, ಹೆಚ್ಚೆಚ್ಚು ಭೂಮಿಯಲ್ಲಿ ಆಹಾರ ಧಾನ್ಯಗಳನ್ನು ಬೆಳೆಸಬೇಕು. ನವೀನ ವಿಧಾನದ ಕೃಷಿ ಪದ್ಧತಿಯಿಂದ ಅಲ್ಪ ಭೂಮಿಯಲ್ಲಿ ಅಧಿಕ ಬೆಳೆ ಬೆಳೆಯಬೇಕು –ಇತ್ಯಾದಿ ಉಪದೇಶಗಳು ನಮಗೆ ಧಾರಾಳವಾಗಿ ದೊರೆಯುತ್ತವೆ ಆದರೆ, ಆಚರಣೆಗೆ ತರುವುದು ಉಪದೇಶಿಸುವಷ್ಟು ಸುಲಭ ಸಾಧ್ಯವಲ್ಲ ಯಾರೋ ಒಬ್ಬನು 'ಪ್ರಪಂಚದಲ್ಲಿ ಧಾರಾಳವಾಗಿ ಸಿಗುವ ದಾವುದು' ಎಂದು ಕೇಳಿದ ಪ್ರಶ್ನೆಗೆ "ಉಪದೇಶ" ಎಂಬ ಉತ್ತರ ಬಂತಂ ! ನಮಗಿಂದು ದೊರೆಯುವುದೂ ಅದೇ.

ಎಳ್ಳಿಗರು ಸರಕಾರದ, 'ತಜ್ಞರ ಉಪದೇಶಕ್ಕೆ ಕಿವಿಗೊಡಬಹುದು ; ಆದರೆ ಅತಹಾಗೆ ಮಾಡುತ್ತಾನೆಯೇ? ಊರಿಗೆ ಬಂದ ಮಾರಿಯು ನಮ್ಮನ್ನು ಮುಟ್ಟಬಾರದೆಂದರಾಗುತ್ತದೆಯೆ? ಎಲ್ಲರಿಗೂ ಕ್ರಯವಾಗಿದೆ, ಎಲ್ಲದಕ್ಕೂ ಏರುತ್ತಿದೆ. ಆತನಿಗೂ ಅಷ್ಟೇ ಬಂದ್ದು ಬಂತು. ಆದದ್ದು ಆಯಿತು, ಆ ಉಪದೇಶಗಳನ್ನು ಅನುಸರಿಸುವುದು ಕಷ್ಟವೇ ಧನದ ಅಭಾವ–ಅರಾಶ್ರಯ ಇವೇ ಅದರ ಮೂಲ

ಸರಕಾರ ಕೇವಲ ಸೌಲಭ್ಯಗಳನ್ನು ಒದಗಿಸಿದರೆ ಸಾಲದು. ಅದರ ಉಪಯೋಗವನ್ನು ಮಾಡಿಕೊಳ್ಳಲು ಜನರು ಮುಂದೆ ಬಂದಿಲ್ಲವೆಂದು ದೂರಿದರೆ ಪ್ರಯೋಜನವಿಲ್ಲ. ದಿಲ್ಲಿಯಲ್ಲೋ ಬೆಂಗಳೂರಲ್ಲೋ ಕುಳಿತು ಸರಕಾರ ಒಂದು ಕಾನೂನನ್ನು ಮಾಡಿದರೆ, ನಗರ ಅಥವಾ ಪಟ್ಟಣಗಳಲ್ಲಿ ವಾಸಿಸುವ ಕೆಲವೊಂದು ವಿದ್ಯಾವಂತರನ್ನು ಬಿಟ್ಟರೆ, ಆ ಕಾನೂನಿನ ವಿಚಾರ ಯಾರಿಗೆ ತಿಳಿದಿದೆ? ನಮ್ಮ ಬೇಸಾಯಗಾರರಲ್ಲಿ ಹಳ್ಳಿವಾಸಿಗಳಲ್ಲಿ ಅನಕ್ಷರಸ್ಥರೇ ಅಧಿಕ. ಅವರಿಗೆ ಸರಕಾರದ ಯೋಜನೆಯನ್ನು ತಿಳಿಸುವವರು ಯಾರು? ಆಧುನಿಕ ವಿಧಾನಗಳಿಂದ ಜನಗೂಡಿ ದೇಶಕ್ಕೂ ಕ್ಷೇಮಸುಭಿಕ್ಷೆಯಾಗಿ ಪಡೆದುಕೊಳ್ಳುವರು? ಕಳ್ಳರು ಅಕ್ಷರಸ್ಥರೆಂದರೆ, ಸಾಮಾನ್ಯ ಮತ್ತವನ ಕಲಿತ ತಿಳಿವಳಿಕೆಗಳು ಮಾತ್ರ ಜನರ ತಮ್ಮ ಲಾಭದ ದೃಷ್ಟಿ ಎನ್ನಲ್ಲದೆ ಒಕ್ಕಲಿನ ಇತರ ರೈತನ ಅಭಿವೃದ್ಧಿಯನ್ನು ದೇಶದ ಚಿಂತೆ ಯಾರಿಗೆ? ಹೀಗಾಗಿದ್ದಲ್ಲಿ ಸರಕಾರ ಯಾವ ಯೋಜನೆ ಮಾಡಿದರೇನು ಬಂತು?

ಸರಕಾರ ಇದನ್ನು ಗಮನಿಸಬೇಕು. ದೇಶದ ಬೆನ್ನು ಮೂಳೆಯಾದ ರೈತನಲ್ಲಿ ಸ್ವಯಂಸ್ಫೂರ್ತಿಯು ಹುಟ್ಟುವಂತೆ ಆತನಿಗೆ ನವಚೇತನಶಕ್ತಿಯ ಸ್ಫೂರ್ತಿಯ ಬೇಕು. ಸರಕಾರದ ನವೀನ ಸುಧಾರಣಾ ಯೋಜನೆಗಳು ಆತನಿಗೂ ತಿಳಿಯುವಂತೆ ಮಾಡಿ, ಅಂತಹ ಯೋಜನೆಗಳು ರೈತನ ಉದ್ಧಾರಕ್ಕೆ ಹೇತುವಾಗುವಂತೆ ಜತೆಗೂಡಿಸುವ ಕಷ್ಟತಮವಾದ ಹೊಣೆಗಾರಿಕೆಯನ್ನು ಅದು ವಹಿಸಿಕೊಳ್ಳಬೇಕು ತಾನು ಗೇಯುವ ಭೂಮಿಯಲ್ಲಿ ರೈತನಿಗೆ ಅಭಿಮಾನ ಹುಟ್ಟುವಂತೆ, ತನ್ನ ದುಡಿತಕ್ಕೆ, ತಾನು ಮಾಡುವ ಪೆಟ್ಟಿಕ್ಕೆ ತಕ್ಕ ಪ್ರತಿಫಲ ಸಿಗುವಂತೆ ಯೋಜನೆಯನ್ನು ಸರಕಾರ ಮಾಡಲಿ ಹಾಗೆ ಮಾಡಿ ಉತ್ತಮ ಬೆಳೆ ಬೆಳೆಯಲು ಯೋಗ್ಯ ಪ್ರೋತ್ಸಾಹನೀಡಲಿ ಇಮ್ಮಿನುದಾರ ಬಿಗಿ ಹಿಡಿತದಿಂದ ಮುಕ್ತರಾಗಲು ನೆರವು ಈಯಲಿ. ಹಾಗಾದಲ್ಲಿ ಆಹಾರದ ಅಭಾವವೂ ದೂರವಾಗುವುದು; ಯೋಜನೆಯ ಗುರಿಯೂ ಮುಟ್ಟುವುದು; ದೇಶದ ಅಭಿವೃದ್ಧಿಯೂ ಆಗುವುದು ಜೀವನಮಟ್ಟವೂ ಸುಧಾರಿಸುವುದು. ಅದು ಹೊರತು ಕಾಗದದ ಹಾಳೆಗಳಲ್ಲಿ ಮಾತ್ರ ಸೌಲಭ್ಯಗಳು ದೂರೆತರೆ ಪ್ರಯೋಜನವಿಲ್ಲ ಪ್ರತ್ಯೇಕ ರೈತನಿಗೂ ಅದರ ಜ್ಞಾನವುಂಟಾಗುವಂತೆ ಮಾಡುವುದು ಅಧ್ಯಕರ್ತವ್ಯ

ಇವೆಲ್ಲವನ್ನೂ ನೋಡುವಾಗ ಇದೊಂದು ಒಗಟಾಗಿಯೇ ಪರಿಣಮಿಸುತ್ತದೆ "ಮದುವೆಯಾಗದೆ ಹುಟ್ಟು ಬಿಡದು, ಹುಟ್ಟು ಬಿಡದೆ ಮದುವೆಯಾಗದು" ಎಂಗಾದೆಯ ಮಾತಿನಂತೆ ಅಭಿವೃದ್ಧಿ ಯೋಜನೆಗಳೂ ರೈತರಿಗೆ ಜ್ಞಾನವೊಡಗೆ ತಕ್ಕ ವಿದ್ಯಾಭ್ಯಾಸವೂ ಪ್ರಚಾರ ಕಾರ್ಯವೂ ಏಕ ಕಾಲದಲ್ಲಿ ಆರಂಭಿಸಬೇಕಾಗಿದೆ. ಇದು ಸಾಧ್ಯವೇ?

ಏನನ್ನೋ ಹುಡುಕುತಿದ್ದ ಒಬ್ಬನನ್ನು ಕುರಿತು ಮತ್ತೊಬ್ಬ ಆತನು ಏದೇನನ್ನು ಅರಸುತಿದ್ದಾನೆಂತ ಕೇಳಿದನಂತೆ ಅರಸುವಾತ 'ನನ್ನ ಕನ್ನಡಕ ಎಲ್ಲಿಯೋ ಇಟ್ಟಿದ್ದೆ. ಅದನ್ನು ಅರಸುತ್ತಾ ಇದ್ದೇನೆ. ಆದರೆ, ಅದಿಲ್ಲದೆ ಕನ್ನಡಕವು ದೃಷ್ಟಿಗೋಚರವಾಗುವುದೇ ಇಲ್ಲ" ಎಂದನಂತೆ! ನಮ್ಮ ಸರಕಾರದ ಕಥೆಯೂ ಈಗ ಇಂತಹುದೇ ಆಗಿದೆ ಏನು ಮಾಡುವುದೆಂಬುದೇ ತಿಳಿಯುವುದಿಲ್ಲ. ಮುಕ್ತ ಮಾರ್ಗವೇ ತೋರತ್ತಿಲ್ಲ ಈ ಬಿಕ್ಕಟ್ಟನ್ನು ಸೈಗೆ ಬುದ್ಧಿವಂತ ರಾಜಕಾರಣಿಗಳು ತಕ್ಕ ಮದ್ದರೆಯಲಿ.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
Ceylon RUBBER STAMP CO.
BALMATTA ROAD, MANGALORE.

'ಮೋಸಾಡದ ಭಾಗ್ಯಲಕ್ಷ್ಮಿ'

(ಬಲಗಡೆಯ ಚಿತ್ರ)

ಇತ್ತೀಚೆಗೆ ಉಡುಪಿಯಲ್ಲಿ ಕುಂದಾಪುರ ಗಿರಿಜಾ ಹಾಗೂ ಶಾಲಾ ವಿದ್ಯಾರ್ಥಿನಿಯರು ಜನಮೆಚ್ಚುವ ರೀತಿಯಲ್ಲಿ ಜಯಶೀಲವಾಗಿ ಅಭಿನಯಿಸಿದ 'ಮೋಸಾಡದ ಭಾಗ್ಯಲಕ್ಷ್ಮಿ' ನಾಟಕದ ಕಥಾನಾಯಕ ಮೀರಾ ಪಾತ್ರದಲ್ಲಿ

* *

ಅದೇ ಶಾಲೆಯ ಅಧ್ಯಾಪಕ ಶ್ರೀ ಕುರ್ಕಾಲು ಭುಜಂಗ ಶೆಟ್ಟರು ಸ್ವತಃ ಬರೆದು ನಿರ್ದೇಶಿಸಿದ ಈ ನಾಟಕಾಭಿನಯದ ಕುರಿತು ಉಡುಪಿ ಕಾಸ್ಮೊಪಾಲಿಟನ್ ಪ್ರಚಾರಕ ಶ್ರೀ ಉಲ್ಲಾಕಿನಯವರು ಪೆಟ್ಟಿಗೆ ಸೂಚಿಸಿ ಬರೆದ ಸತ್ವದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ

(ಸಂ. ನ)

ನಿನ್ನೆ ರಾತ್ರಿ ಉಡುಪಿಯ ವರದೇಂದ್ರ ಕಲಾಮಂದಿರದಲ್ಲಿ ನಮ್ಮ ಶಾಲಾ ದಾಲಕ ಬಾಲಕಿಯರು ಅಭಿನಯಿಸಿದ 'ಮೋಸಾಡದ ಭಾಗ್ಯಲಕ್ಷ್ಮಿ' ನಾಟಕವನ್ನು ಕಂಡು, ಅತೀವ ಆನಂದವಾಯ್ತು.

ನಾಟಕದ ಉಡಯತರು ಪ್ರಥಮಾಧಿಗಂದನೆಗೆ ಅರ್ಹರು ಭಕ್ತಿರಸವೇ ಪ್ರಾಧಾನ್ಯತೆಯನ್ನೊಳಗೊಂಡ ಈ ನಾಟಕದಲ್ಲಿ ಹಾಸ್ಯ ಶೃಂಗಾರ, ಅಸೂಯೆ, ತಿರಸ್ಕಾರ, ದ್ವೇಷ ಇತ್ಯಾದಿ ಮನೋಭಾವನೆಗಳನ್ನು ಹಿತಮಿತವಾಗಿ ಅಳವಡಿಸಿಕೊಂಡಿರುವದೂ, ವೀರ, ರೌದ್ರ ರಸಗಳನ್ನು ಅಲ್ಲಲ್ಲಿ ಸೇರಿಸಿಕೊಂಡಿರುವುದೂ ಭಕ್ತಿಯ ವಿಕಾಸಕ್ಕೆ ಮೆರುಗು ಕೊಟ್ಟಂತಾಗಿದೆ ಹಾಡುಗಳಿಗೆ ಜೋಡಿಸಿದ ರಾಗಗಳೂ ಅಷ್ಟೇ ಸಂದರ್ಭೋಚಿತವಾಗಿದೆ.

ಪಾತ್ರಧಾರಿಗಳ ಅಭಿನಯವನ್ನು ಕುರಿತು ಹೇಳುವದಾದರೆ, ಮೀರೆಯ ಪಾತ್ರದಲ್ಲಿ ಅಭಿನಯಿಸಿದ ಬಾಲಕಿಯ ಮುಗ್ಧ ಭಾವಪೂರ್ಣ ಶಾನ, ಸಹಜಾಭಿನಯ, ಮಂಜುಳ ಕಂಠ,–ಇವಲ್ಲಾ ಪ್ರೇಕ್ಷಕರುಗಳನ್ನು ತನ್ನೆಡೆಗೆ ಆಕರ್ಷಿಸಿಕೊಳ್ಳುವಷ್ಟು ಸನ್ನಿವೇಶದಲ್ಲಿ ತಲ್ಲೀನಗೊಳಿಸುವಷ್ಟು ಸ್ವಾಭಾವಿಕವಾಗಿದೆ ಎಲ್ಲಿಯೂ ನೀರಸತೆಗೆ ಒಳಗಾಗಿಲ್ಲದೆ ಅತಿರೇಕಾಭಿನಯ (over acting)ಕ್ಕೆ ಎಡೆಕೊಟ್ಟಿಲ್ಲ ಸಾಕಷ್ಟು ಪ್ರಸಂಗಾವಧಾನವಿರುವುದೂ ಇದೆ ಉಡಾಪರೆಗಾಗಿ ನಾಟಕದ ಮುಖ್ಯ ಹೀರೋ ಅಥವಾ ನೇತ್ರಿಯ ಅಭಾವರೂಕತೆಯಿಂದ, ಪೀಠಿಕೆಯ ರಂಗಮಂಟಪದಲ್ಲಿ ಸ್ಥಾಪಿಸಲ್ಪಟ್ಟಿದ್ದ ಕೃಷ್ಣನ ಮೂರ್ತಿಯು ಉರುಳಿ ಕೆಳಗೆ ಬಿದ್ದುಬಿಟ್ಟಿತು ಎಲ್ಲರೂ ಕೈತಾಲಿಗೆಸುವ ಪ್ರಸಂಗ, ಭಾವಪೂರ್ಣವೆನಿಸಿಹೋಗುವ ಸಂದರ್ಭ ಅದರೆ, ಅಷ್ಟರಲ್ಲೇ ಆ ಬಲಕಿಯು (ಮೀರೆ) ಯಾವದೇ ಭಾವ ವಿಕಾರವನ್ನು ತಾಳದೆ, ತುಂಬಾ ಪ್ರಸಂಗಾವಧಾನದಿಂದ, ಏನೂ ಆಗಿಲ್ಲವೆಂಬಂತೆ ಕೆಳಗೆ ಬಿದ್ದ ಮೂರ್ತಿಯನ್ನೆತ್ತಿಕೊಂಡು ಪುನಃ ರಂಗಮಂಟಪದಲ್ಲಿ ಸ್ಥಾಪಿಸಿ, ಸನ್ನಿವೇಶವನ್ನು ಚಾತುರ್ಯದಿಂದ ಸುಧಾರಿಸಿಕೊಂಡು ಹೋದದ್ದು ಬಂದಿತವಾಗಿಯೂ ಈ ಬಾಲಕಿಗೆ ಅಭಿನಯ ಕಲೆಯಲ್ಲಿ ಉಜ್ವಲ ಭವಿಷ್ಯವಿದೆ ಆಕೆಯ ಭಾವತಲ್ಲೀನತೆಯೂ ಅದ್ಭುತವಾದುದು

ಸಮಂಜಸ ಪಾತ್ರಗಳಲ್ಲಿ ವಿಕ್ರಮ ಪಾತ್ರಧಾರಿಯ ಭಾವಪ್ರದರ್ಶನವೂ ಉತ್ತಮವಾಗಿದೆ ಆಕೆಯ ನಿಲುವು ಮತ್ತು ಭಂಗಿಗಳು ಸಂಗ್ರಹಯೋಗ್ಯವಾದಭಾವಚಿತ್ರಗಳನ್ನು ತೆಗೆಯುವಷ್ಟು ಆಕರ್ಷಕವಾಗಿವೆ. ಆಕೆಯ ಕೊನೆಯವಾದ, ಮೀರೆಯ ಸಮಾಧಿಯಲ್ಲಿ ತಲೆಬಿಚ್ಚಿ ಕೊಂಡು ಶೋಕಿಸುತ್ತಿರುವ ಸನ್ನಿವೇಶವು ಎಷ್ಟು ಸಹಜವಾಗಿತ್ತೆಂದರೆ, ಆಕೆ ಮಾತ್ರ ಕಂಬನಿಮಿಡಿಯುತ್ತಿದ್ದುದಲ್ಲದೆ ಪ್ರೇಕ್ಷಕರೆಲ್ಲರ ಕಣ್ಣುಗಳೂ ಒದ್ದೆಯಾಗಿದ್ದುವು

ವಿಕ್ರಮನ ತಂಗಿ ಪಾತ್ರವೂ ಅಷ್ಟೇ ಸಮಾಧಾನವುಂದಿಂದ ಕೂಡಿದೆ ದ್ವೇಷಾಸೂಯೆಯ ಪ್ರತಿಮೂರ್ತಿಯಾಗಿದ್ದವಳು, ಮೀರಾಭಕ್ತೆಯಾಗಿ ಪರಿವರ್ತನೆಗೊಳ್ಳುವಾಗ, ತನ್ನ ಭಾವಬಂಗಿಗಳನ್ನೂ ತಕ್ಕಂತೆ ಅಳವಡಿಸಿಕೊಳ್ಳುವುದು ಅಷ್ಟು ಸುಲಭವಲ್ಲ ಆದರೆ, ಆ ಬಾಲಕಿಯು ಅಲ್ಲೂ ಯಶಸ್ವಿಯಾಗಿದ್ದಾಳೆ

ಮೀರೆಯ ಸಖಿ (ಸಖಿಯರು) ಯ ಪಾತ್ರವು ಆಕೆಯ ವಿಶ್ವಲ್ಲಭ ನಗು, ಮಧುರ ಮಾತುಗಳಿಂದ, ಸಹಜಾಭಿನಯದಿಂದ ಸರ್ವಾಂಗ ಸುಂದರವಾದ ಪೋಷಕಪಾತ್ರವಾಗಿದೆ ರಾಜಾಧಿಕಾರಿ ಗಂಭೀರ್ಯ, ಸಹಜಶ್ರೇಷ್ಠ ದುಃಖ, ಕ್ರೋಧ ಯಾವತ್ತೂ ಸಂದರ್ಭಗಳ ಅಭಿನಯವೂ ರಾಜ ರೀತಿಗೆ ಒಪ್ಪುವಂತಹದ್ದಿದೆ ಈ ದೃಷ್ಟಿಯಿಂದ ಹೇಳುವುದಾದರೆ, ಆ ಬಾಲಕಿಯು ತನ್ನ ಪಾತ್ರವನ್ನು ಬೆನ್ನಾಗಿಯೇ ನಿರ್ವಹಿಸಿದ್ದಾಳೆನ್ನಬೇಕು.

ನಾಟಕದ ಹಿಮ್ಮೇಳವನ್ನು ಸಂಭ್ರಮದಾತಣದೊಳಗಿನ ಮಜಿಗೆ ಉಪ್ಪಿನಕಾಯಿಯಂತೆ ನಾಟಕದ ರೋಚಕತೆ, ಭವ್ಯತೆಗೆ ಪೂರಕವಾಗಿದ್ದಿತು. ಅದರಲ್ಲೂ ಹೇಳಬೆದ, ಭಕ್ತಿಯ ಅತಿರೇಕದ ಸನ್ನಿವೇಶಗಳಲ್ಲಿ ಹಿನ್ನೆಲೆಯಾಗಿ, ಮೊದ್ದ ಕೊಳಲಿನಿಂದ ಹೊರಟ ಸಂಯೋಜಿತರಾಗ ಪ್ರೇಕ್ಷಕರ ಹೃದಯಕ್ಕೇ ಮಾಟ್ಟುವಂತಿತ್ತು.

ಒಟ್ಟಾರೆ ಹೇಳುವುದಾದರೆ, ನಾಟಕವು ಸ್ವಾರಂಭದಿಂದ ಕೊನೆಯವರೆಗೂ ಪ್ರೇಕ್ಷಕರಲ್ಲಿ ಯಾವದೇ ರೀತಿಯಿಂದ ಬೇಸರವನ್ನು ತಾರದೆ ಸಾಗಿತ್ತು ಸಮಯವು ಒಂದು ಗಂಟೆ ದಾಟಿದೊಡನೆ ಅದು ಯಾರೊಬ್ಬರ ಗಮನಕ್ಕೆ ಬರಲಿಲ್ಲವೆಂಬುದು ನಾಟಕದ ಯಶಸ್ವಿತೆಯನ್ನು ಸಾರುತ್ತಿದೆ ನಿಮ್ಮ ಮಕ್ಕಳು ಈ ನಾಟಕವನ್ನು ಎಲ್ಲಿಯೂ ಆಭಿನಯಿಸಿದರೂ ಜಯ ಬೀರಿಯನ್ನು ಬಾರಿಸಿಕೊಂಡೇ ಬರುವರೆಂಬುದಕ್ಕೆ ಇಂದು ಜನರ ಬಾಯಲ್ಲಿ ಕೇಳಬರುತ್ತಿರುವ ಪ್ರಶಂಸೊದ್ಗಾರಗಳೇ ಸಾಕ್ಷ್ಯವನ್ನು ಕೊಡಬಲ್ಲವು

ಉಡುಪಿ 26-5-57

ಕುಮಾರಿ ಶಾಂತಾ ಬಾಯಿ
ಶ್ರೀ ಕುರ್ಕಾಲು ಗಣಪಯ್ಯ ಶೆಟ್ಟರ
೧೧ ವರ್ಷದ ಮೊಮ್ಮಗಳು)

ಬೆಂಗಳೂರು

ಅಖಿಲಭಾರತ ಆಯುರ್ವೇದ ಪರಿಷತ್ತು— ಇದೇ ತಾ. 12ರಿಂದ 17ರ ತನಕ ಬೆಂಗಳೂರಿನ ಯಾಮವಾಣಿ ನಗರದಲ್ಲಿ ಜರುಗುವುದು ಪರಿಷತ್ತಿನ ಅಂಗವಾಗಿ ವಸ್ತುಪ್ರದರ್ಶನವೂ ನಡೆಯಲಿದೆ.

ಮೈಸೂರು— ಸ್ಥಳೀಯ ಮೋಡರ್ನ್ ಕಿಫೆ ಮಾಸಪ್ರಕಾರದಲ್ಲಿ ಶ್ರೀ ಕೆ ಸೀತಾರಾಮರಾಯರು ಮಾಸಪ್ರಕಾಶದ ಶ್ರೀರಾಮ ಮಂದಿರದಲ್ಲಿ ತಾ. 6 ಮತ್ತು 7 ರಲ್ಲು ಶ್ರೀ ರಾಮಶಟ್ಟಾಭಿಷೇಕ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು. ಪೂಜಾ, ನಾರಾಯಣ, ಅನ್ನಸಂತರ್ಪಣೆಗಳಾದುವಲ್ಲದೆ ಅಸ್ಥಾನ ವಿದ್ವಾನ್ ಸಂಗೀತರತ್ನ ಶ್ರೀ ಟಿ. ಚಾಣಯ್ಯನವರ ಸಿತೀಲು ವಾದನವು ಸಕ್ಷ ಸಾಮ್ರಾಜ್ಯದಿಂದ ನಡೆಯಿತು. ಶ್ರೀ ಸೀತಾರಾಮರಾಯರ ಮಕ್ಕಳಾದ ಕುಮಾರಿ ಗೀತಾ ಮತ್ತು ಕುಮಾರ ವಿಜಯನವರ ಭರತನಾಟ್ಯ ಪ್ರದರ್ಶನವಾಯಿತು. ಶ್ರೀ ಸೀತಾರಾಮರಾಯರು, ಸಹೋದರರು, ಮಕ್ಕಳು ಕೂಡಿ ಭಜನೆ ಕಾರ್ಯಕ್ರಮವಾಯಿತು. ನಂತರ ರಾಮ್ ಬಾಬ್ದೊರ್ ಶ್ರೀ ರಾಮಸ್ವಾಮಿಯವರ ಕಾರೋಚಿತಭಾಷಣವಾಯಿತು ಶ್ರೀ ಬಿ ಎಸ್ ಸುಬ್ಬರಾಯರು ಧನ್ಯವಾದಗಳನ್ನಿತ್ತರು ಎರಡನೆ ದಿವಸ ಬತಬಳ್ಳರಿಗೆ ಅನ್ನದಾನವಾಯಿತು ಸಂಜೆ ಶ್ರೀ ರಾಮಚಂದ್ರನು ಸ್ವಾಮಿ ಉತ್ಸವಮೂರ್ತಿಗಳ ಮೆರವಣಿಗೆ ತೆಗೆಯಲಾಯಿತು ನಂತರ ಮಂಗಳಾರತಿ ಕಾಲದಲ್ಲಿ ಶ್ರೀ ಎಚ್. ಎಸ್. ರಾಘವೇಂದ್ರಾಚಾರ್ಯರ ಉಪನ್ಯಾಸವಾಯಿತು ಶ್ರೀ ವಾಸುದೇವಾಚಾರ್ಯರು ವಂದನೆಗಳನ್ನಿತ್ತರು

ಆಧ್ಯಾತ್ಮಿಕ ಜೀವನ

(೨ನೇ ಪುಟದಿಂದ)

ವಾಸಿಗಳ ಆತ್ಮಗಳನ್ನು ಪ್ರಬುದ್ಧಗೊಳಿಸುವುದಕ್ಕಾಗಿ ಆ ಸಮಯದಲ್ಲಿ ಅವರು ಜನಜಾಗರಣ, ಜನನೇತೃತ್ವ, ಸಮಾಜ ತಂತ್ರವಾದ ಮೊದಲಾದ ವಿಷಯಗಳಲ್ಲಿ ಗಂಭೀರ ಲೇಖನಗಳನ್ನು ಬರೆಯುತಿದ್ದರು. ಆ ಕಾಲದಲ್ಲಿ ವಿದೇಶೀ ಸರಕಾರದೊಡನೆ ಅವೇದನೆ-ನಿವೇದನಗಳನ್ನು ಮಾಡುವ ನೀತಿಯನ್ನು ಭಾರತದ ಕಾಂಗ್ರೆಸ್ ಇಟ್ಟುಕೊಂಡಿತ್ತು. ಶ್ರೀ ಅರವಿಂದರೂ ಈ ತರದ ನೀತಿಗಳನ್ನೇ ಸಮಾಲೋಚಿಸುತಿದ್ದವರಂದ ದೇಶವಾಸಿಗಳ ಹೃದಯವು ಈ ಲೇಖನಗಳಿಂದ ಆಂದೋಲಿತವಾದುವು. ವಂಗ ಭಂಗ ಚಳವಳಿಯು ತೂರ್ಯನಾದುವು. ವಿಪ್ಲವವನ್ನು ಘೋಷಿಸಿತು. ಶ್ರೀ ಅರವಿಂದರು ಆ ಆಂದೋಲನದ ನೇತೃತ್ವ ವಹಿಸಲು ಅವತೀರ್ಣರಾದರು. 'ವಂದೇ ಮಾತರಂ' ಎಂದು ಘೋಷಿಸುತ್ತಾ ಶ್ರೀ ಅರವಿಂದರು ಸ್ವದೇಶೀ ಆಂದೋಲನದ ಮುಂದಾಳುತನದ ಗುರುತರ ಭಾರವನ್ನು ಧರಿಸಿದರು. ಅವರ ವಾರ್ತಾಚರರಾಗಿ ಲೋಕಮಾನ್ಯತಿಲಕ, ಲಾಲಾಲಜಪತರಾಯ್, ಮತ್ತು ವಿಪಿನಚಂದ್ರ ಪಾಲರಿದ್ದರು. ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನೊದಗಿಸುವುದೇ ಅವರ ಮುಖ್ಯೋದ್ದೇಶವಾಗಿತ್ತು. ಆವೇದನ ನಿವೇದನ ಸಂಘವನ್ನನುಸರಿಸಿದ ಕಾಂಗ್ರೆಸ್ ದಳ ಮತ್ತು ಶ್ರೀ ಅರವಿಂದರ ಚರಮ ಪಂಥಿದಳದ ನಡುವೆ ಪ್ರಚಂಡ ಸಂಘರ್ಷಕ್ಕೆ ಮೊದಲಾಯಿತು. ಒಂದೆಡೆ ವಿರೋಧೀ ಕಾಂಗ್ರೆಸ್-ಇನ್ನೊಂದೆಡೆ ಬ್ರಿಟಿಷ ಶಾಸಕರ ಪಂಚಂಡಕ್ರೋಧ! ಇವೆರಡರ ನಡುವೆ ಶ್ರೀ ಅರವಿಂದರು ಧೀರ, ಸ್ಥಿರ, ಶಾಂತ, ಸಮಾಹಿತ ಭಾವದಿಂದ ತಮ್ಮ ಕರ್ತವ್ಯಪಾಲನೆಯಲ್ಲಿಯೇ ತತ್ಪರರಾಗಿದ್ದರು. ಅವರ ಸಾಧನೆಯ ಸಿದ್ಧಿಯ ಪ್ರಥಮ ಜ್ಯೋತಿಯುದಿಸಿತು. ದೇಶದಲ್ಲಿ ನವಯುಗ, ನವಜೀವನದ ಭಾವಧಾರೆಯು ಪ್ರಚಂಡ ವೇಗದಿಂದ ಪ್ರವಹಿಸತೊಡಗಿತು. ದೇಶವಾಸಿಗಳು ದಾಸ ಮನೋಭಾವದಿಂದ ಮುಕ್ತರಾಗಿ ಭಾರತಮಾತೆಯ ಸೇವೆಯಲ್ಲಿಯೇ ತಮ್ಮ ಉತ್ಸರ್ಗವನ್ನು ಸಂಪಾದಿಸುವ ಪ್ರೇರಣೆಯಿಂದ ಉನ್ಮತ್ತರಾದರು. ಶ್ರೀ ಅರವಿಂದರ ನಿಭೃತ, ನೀರವ ಸಾಧನೆಯ ಬೀಜವು ಅಂಕುರಿಸಿ ಪಲ್ಲವಿಸತೊಡಗಿತು. ಬ್ರಿಟಿಷ ರಾಜ್ಯದ ಭಿತ್ತಿಗಳನ್ನು ವಿಪ್ಲವ ವಿಕ್ರೋಶವು ಒಡೆದು ದೇಶದ ಮೂಲೆ ಮೂಲೆಗಳಲ್ಲಿಯೂ ಪ್ರತಿಧ್ವನಿಸಿತು. ಕ್ರೋಧಾಂಧ ಬ್ರಿಟಿಷ ಶಾಸಕರು ಶ್ರೀ ಅರವಿಂದರನ್ನೂ ಅವರ ಕೆಲವು ಸಹಚಾರಿಗಳನ್ನೂ ಕಾರಾರುದ್ಧರನ್ನಾಗಿ ಮಾಡಿದರು.

ಕಾರಾಗೃಹದ ನಿರ್ಜನ ನಿಸ್ತಬ್ದತೆಯು ಶ್ರೀ ಅರವಿಂದರಿಗೆ ವರದಾನ ಸದೃಶವಾಯಿತು. ಅವರ ಅಂತರಾಕಾಶವು ಒಂದು ಉಜ್ವಲ ಜ್ಯೋತಿಯಿಂದ ಉದ್ಭಾಸಿತವಾಯಿತು. ವಿಶ್ವಾತ್ಮ ವಾಸುದೇವನ ಪ್ರತ್ಯಕ್ಷ ಉಪಲಬ್ಧಿಯು ಅವರಿಗೆ ಪ್ರಾಪ್ತಿಸಿತು. ಕುರುಕ್ಷೇತ್ರ ರಣರಂಗದಲ್ಲಿ ಅರ್ಜುನನಿಗೆ ಭಗವಾನ್ ಶ್ರೀ ಕೃಷ್ಣನು ತನ್ನ ವಿಶ್ವರೂಪದರ್ಶನವನ್ನಿತ್ತಂತೆ ಪರಮಾತ್ಮ ವಾಸುದೇವನು ಅರವಿಂದರಿಗೆ ಕಾರಾಗೃಹದಲ್ಲಿ ತನ್ನನ್ನು ತೋರಿಸಿದನು. ಸರ್ವಭೂತ ಸರ್ವಸ್ಯಾಪಿ ವಾಸುದೇವನ ವಿಶ್ವರೂಪದ ಪ್ರತ್ಯಕ್ಷಾನುಭವದಿಂದ ಅವರಿಗೆ ಸರ್ವ ಮಾನವರಲ್ಲಿಯೂ ವಾಸುದೇವನು ದೃಷ್ಟಿಗೋಚರನಾಗತೊಡಗಿದನು. ವಾಸುದೇವನ ಮಧುರ, ಶ್ಯಾಮಸುಂದರ, ವೇಣುಧಾರಿ, ಆನಂದಮಯರೂಪವು ಶ್ರೀ ಅರವಿಂದರ ನೇತ್ರಸಮ್ಮುಖದಲ್ಲಿ ಅಹೋರಾತ್ರಿ ನಿರಾಜಮಾನವಾಗಲಾರಂಭಿಸಿತು. ಚಿರನವೀನ, ಚಿರಸುಂದರ, ಚಿರಮೋಹನ ನಾರಾಯಣನ ವಿಶ್ವತೋಮುಖವಿಸಾಮ್ರಾಜ್ಯದ ಪ್ರತ್ಯಕ್ಷಾನುಭೂತಿಯಿಂದ ಯೋಗಿರಾಜ ಶ್ರೀ ಅರವಿಂದರ ಯೋಗಸಾಧನೆಯು ಸಫಲವಾಯಿತು. ಈ ಅನುಭೂತಿಯಿಂದ ಅವರಲ್ಲಿ ಮಾನವ ಪ್ರೇಮ ಮತ್ತು ಜನಸಾಧಾರಣರ ಕಡೆಗೆ ಅಪಾರ ಸ್ನೇಹಭಾವವು ಪ್ರಸ್ಫುರಿತವಾಯಿತು. ಯೋಗೇಶ್ವರರಾದನಂತರವೂ ಅವರು ಜನಜೀವನ, ಜನಕಲ್ಯಾಣ ಮತ್ತು ತನ್ನ ಯೋಗಸಾಧನೆಯಿಂದ ದೂರಸರಿಯಲಿಲ್ಲ. ಕಾರಾಗಾರದಲ್ಲಿ ವಾಸುದೇವನ ವಿಶ್ವರೂಪದರ್ಶನಾನಂತರ ಅವರು ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯಾಂಶಗ್ರಹಣವನ್ನು ಮಾಡದೆ ನಿರ್ವಿಕಾರರಾಗಿಳಿದರು. ಆ ಸಮಯದಲ್ಲಿ ದೇಶವಾಸಿಗಳನ್ನು ಪೂರ್ಣರೂಸದಲ್ಲಿ ಆಧ್ಯಾತ್ಮಿಕ ಉತ್ಕರ್ಷ ಮತ್ತು ದಿವ್ಯಜೀವನಗಳತ್ತ ಉದ್ಬುದ್ಧರನ್ನಾಗಿಸುವುದೇ ಅವರ ಏಕಮಾತ್ರ ಧ್ಯೇಯವಾಗುಳಿಯಿತು.

ಬ್ರಿಟಿಷರ ದನುನೀಯತೆಯುಂದಾಗಿ ದೇಶದ ರಾಜನೈತಿಕ ಪರಿಸ್ಥಿತಿಯು ಉತ್ಪೀಡಿತವಾಗಿದ್ದಾಗ, ದೇಶದ ಮುಖಂಡರು ಕಾರಾಗೃಹ ಇಲ್ಲವೇ ಅಂಡಮಾನದ ವಾಸವನ್ನು ಪಡೆದಾಗ, ಶ್ರೀ ಅರವಿಂದರೂ ದೂರದ ಪಾಂಡಿಚೆರಿಯಲ್ಲಿ ತನ್ನ ವಾಸ್ತವ್ಯವನ್ನು ಮಾಡಿದರು. ದೇಶವಾಸಿಗಳು ವಿಸ್ಮಿತರಾದರು. ಶ್ರೀ ಅರವಿಂದರ ರಾಜನೀತಿವರ್ಜನವು ಒಂದು ರಹಸ್ಯವಾಗಿಯೇ ತೋರಿತು. ಒಂದು ದಿನ ಯಾವ ಅಂತರಿಕ ಪ್ರೇರಣೆಯಿಂದ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಉತ್ಸುಂಠರಾಗಿ ಧಾವಿಸಿದ್ದರೋ ಅದೇ ಅಂತರಿಕ ಪ್ರೇರಣೆಯಿಂದ ಇಂದು ಶ್ರೀ ಅರವಿಂದರು ರಾಜಕೀಯ ಸನ್ಯಾಸವನ್ನವಲಂಬಿಸಲು ಪಾಂಡಿಚೇರಿಯನ್ನುಪ್ರವೇಶಿಸಿದರು. ಅವರ ಸಾಧನೆ ಹಾಗೂ ಕಾರ್ಯಪ್ರಣಾಲಿಗಳು ನೀರವತೆಯ ಆವರಣದಿಂದ ಆಚ್ಛಾದಿತವಾಗಿದ್ದುವು. ಅಲ್ಲಿ ಸಹಾ ದೇಶಬಂಧು ಚಿತ್ತರಂಜನದಾಸರು ರಾಜಕೀಯ ಸಹಾಯವನ್ನು ಯಾಚಿಸಿದರು. ಆದರೆ, ಶ್ರೀ ಅರವಿಂದರು ಅದನ್ನೊಪ್ಪಲು ನಿರಾಕರಿಸಿದರು.

ಪಾಂಡಿಚೆರಿಯಲ್ಲಿನ ಶ್ರೀ ಅರವಿಂದರ ಆಶ್ರಮವು ದಿವ್ಯ ಯೋಗಸಾಧನೆಯ ಕೇಂದ್ರವಾಯಿತು. ಕರ್ಮಯೋಗವೇ ಯೋಗಿವರ ಅರವಿಂದರ ಯೋಗಗಳಲ್ಲಿನ ವೈಶಿಷ್ಟ್ಯ. ಈ ಕರ್ಮಯೋಗಕ್ಕೆ ಅವರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯ ರೂಪವನ್ನಿತ್ತಿದ್ದರು. ಯೋಗವೇ ಕರ್ಮ; ಮತ್ತು ಲೋಕಸಂಗ್ರಹಾತ್ಮಕ ಕರ್ಮವೇ ಯೋಗ. ಪರಮ ಜ್ಞಾನ ಅಥವಾ ಭಕ್ತಿಯು ಯೋಗಾಶ್ರಿತ ಕರ್ಮದ ಮೂಲಧಾರೆ-ಎಂದು ಶ್ರೀ ಅರವಿಂದರು ತಿಳಿದಿದ್ದರು. ಆಧ್ಯಾತ್ಮಿಕ ಯೋಗದೊಡನೆ ಮರ್ತ್ಯ ಜೀವನದ-ಜೀವನದ ವಿಭಿನ್ನಧಾರೆ, ಸಮಸ್ಯೆ ಮತ್ತು ಆವರ್ತನ-ವಿವರ್ತನದ ಬಲವಾದ ಸಂಬಂಧವೇ ಶ್ರೀ ಅರವಿಂದರ ಯೋಗಾಶ್ರಮ ಜೀವನದ ವಿಭಿನ್ನ ಕರ್ಮಪದ್ಧತಿಯ ಸಾರ್ಥಕ ಪರಿಭಾಷೆಯಾಗಿದೆ. ಈ ಆಶ್ರಮ ಜೀವನದಲ್ಲಿ ಶೃಂಖಲೆ, ಸ್ವತಂತ್ರತೆಯ, ವ್ಯಷ್ಟಿಗತ ಅಥವಾ ಸಮಷ್ಟಿಗತ ಜೀವನದ ವೈಜಿಕ್ಯ ಮತ್ತು ಐಕ್ಯದ ಅನೂಚ್ಯ ಸಮನ್ವಯವಿದೆ. ವ್ಯಕ್ತಿ ಸ್ವಾತಂತ್ರ್ಯವನ್ನು ಸುರಕ್ಷಿತವಾಗಿರಿಸಿ ಸಮಷ್ಟಿಗತ ಜೀವನದ ಆದರ್ಶವು ಯಾವುದೆಂಬುದು ಈ ಆಶ್ರಮ ಜೀವನದಿಂದ ತಿಳಿಯುತ್ತದೆ. ಸಂಘವಾಗಿದ್ದರೂ, ಯಾವುದೇ ಗತಾನುಗತಿಕ ಪ್ರಚಾರ ಸಂಘವಿದಲ್ಲ; ಯಾವುದೇ ವಿಶೇಷ ಧರ್ಮದ ಪ್ರಚಾರವು ಆಶ್ರಮದ ಉದ್ದೇಶವಲ್ಲ. ಸಾಧಾರಣ ಮಾನವರನ್ನು ಸ್ವಧರ್ಮದಲ್ಲಿ ಪ್ರವಿಶ್ವಸ್ತರನ್ನಾಗಿ ಮಾಡಿ ದಿವ್ಯ ಜೀವನದಲ್ಲಿ ಉನ್ನತಿಯನ್ನುಂಟುಮಾಡುವುದು, ಮರ್ತ್ಯಮನುಷ್ಯಕೆಯ ಈ ತನು ದೀಪದಲ್ಲಿ ದಿವ್ಯ ಜ್ಯೋತಿಯನ್ನು ಪ್ರಜ್ವಲಿಸುವುದು, ಅಮ್ಮಂತರಾಳದಲ್ಲಿ ಅಡಗಿರುವ ದಿವ್ಯಾತ್ಮ ಪೂರ್ಣೋತ್ಕರ್ಷವನ್ನು ಪಡೆಯುವಂತೆ ಮಾಡುವುದು ಶ್ರೀ ಅರವಿಂದರ ಯೋಗೋಪದೇಶದ ವೈಶಿಷ್ಟ್ಯ. ಶಾಸ್ತ್ರಾಧಾರದಿಂದ ಯೋಗಸಾಧನೆಯು ಸುಗಮವಾಗುವುದಿಲ್ಲ. ಯೋಗಸಾಧನೆಯು ಏಕಮಾತ್ರ ಸಾಧನವು ಮನುಷ್ಯ ಜೀವನ. ಆದುದರಿಂದ ಈ ಆಶ್ರಮದಲ್ಲಿ ಜ್ಞಾನಿ, ಅಜ್ಞಾನಿ ಎಲ್ಲವ್ಯಕ್ತಿಗಳಿಗೂ ತಮ್ಮ ಜೀವನ ವಿಕಾಸದಲ್ಲಿ ಸಹಾಯಕೊಡಲಾಗುವುದು; ಮಾರ್ಗದರ್ಶನ ಮಾಡಲಾಗುವುದು. ಅಲ್ಲಿ ಪಂಡಿತ, ಮೂರ್ಖ, ಅಸಾಧಾರಣ ಸಾಧಾರಣರೆಲ್ಲರಿಗೂ ಆತ್ಮಿಕ ವಿಕಾಸದ ಪೂರ್ಣಸ್ವಾತಂತ್ರ್ಯವಿದೆ ಆಶ್ರಮದ ಪ್ರತಿ ಮುಹೂರ್ತದ ಜೀವನವೂ ಆನಂದಮಯವಾಗಿದೆ.

ಶ್ರೀ ಅರವಿಂದರ ವೈಶಿಷ್ಟ್ಯಗಳಲ್ಲಿ ಅವರ ಯೋಗವು ಆಶ್ರಮದಲ್ಲಿಯೇ ಸೀಮಿತವಾಗಿರದಿರುವುದು ಒಂದು. ಆಶ್ರಮದ ಬಾಹಿರದೇಶದಲ್ಲಿ, ವಿಶ್ವದ ಬಹುತರ ಮಾನವ ಸಮಾಜದೊಡನೆ ಅವರ ಯೋಗ ಸಂಬಂಧವಿದೆ. ವಿಶ್ವಸಾಮ್ಯ, ವಿಶ್ವಮೈತ್ರಿ, ವಿಶ್ವಶಾಂತಿಗಳೇ ಶ್ರೀ ಅರವಿಂದರ ಮೂಲೋದ್ದೇಶವಾಗಿತ್ತು. ಪಾಂಡಿಚೆರಿಯ ನೀರವತಾಪೂರ್ಣ ಆಶ್ರಮದಲ್ಲಿದ್ದುಕೊಂಡೇ ಅವರು ಭಾರತದ ಮುಕ್ತಿಸಂಗ್ರಾಮವನ್ನವಲೋಕಿಸುತಿದ್ದರು. ಶ್ರೀ ಅರವಿಂದರು ಭಾರತವೆಂದು ಸ್ವತಂತ್ರವಾಗುವುದೆಂದು ಭವಿಷ್ಯನುಡಿದಿದ್ದರು. ಆಗೋಸ್ತು ೧೫ ಭಾರತದ ಸ್ವಾತಂತ್ರ್ಯದಿನವೂ ಹೌದು; ಅರವಿಂದರ ಹುಟ್ಟುದಿನವೂ ಹೌದು. ಆ ದಿನ ಶ್ರೀ ಅರವಿಂದರು ತಮ್ಮ ಮನೋಭಿಲಾಷೆಯು ಪೂರ್ತಿಯಾದುದರಿಂದ ಪ್ರಸನ್ನರಾಗಿದ್ದರು.

ಭಾರತದ ಇತಿಹಾಸದಲ್ಲಿ ಆಗಾಗ ಮಹಾತ್ಮರು ಅವತರಿಸುವುದು ಕಂಡುಬರುವುದು. ಸಾಮಾನ್ಯ ಮಾನವನ ನಡುವೆಯೇ ಇದ್ದುಕೊಂಡು, ತನ್ನ ಅಸಾಮಾನ್ಯ ಪ್ರತಿಭೆ, ಶಕ್ತಿ, ಜ್ಞಾನಗಳಿಂದ ಜನರನ್ನು ಎತ್ತರಿಸುವ ಸಲುವಾಗಿ ತಮ್ಮ ಜೀವನಮಾನವನ್ನೇ ಮುಡುಪಾಗಿಡುವ ಇಂತಹ ಅವತಾರ ಪುರುಷರ ಧ್ಯೇಯ ಒಂದೇ ಮಾರ್ಗಗಳು ಮಾತ್ರ ಬೇರೆ ಬೇರೆ. ಶ್ರೀ ಅರವಿಂದರಿಗೆ ಯೋಗ ಸಾಧನೆ, ಆಧ್ಯಾತ್ಮಿಕ ಮನೋನೃತ್ತಿಯು ಹೆಚ್ಚಾಗಿ ರುಚಿಸಿತು. ಅದರಿಂದ, ಜಗತ್ತಿನ ರಾಷ್ಟ್ರಗಳ ದೃಷ್ಟಿಯನ್ನು ತನ್ನೆಡೆಗೆ ಆಕರ್ಷಿಸಿ ಯೋಗೀಶ್ವರನೆನಿಸಿ, ತನ್ನ ಮಾತೃದೇಶಕ್ಕೆ ಕೀರ್ತಿಯನ್ನು ತಂದು ಆಚಂದ್ರಾರ್ಕ ಚಿರಸ್ಥಾಯಿಯಾಗಿ, ಭಾರತೀಯರ ಮನಸ್ಸಿನಲ್ಲಿ ಉಳಿದರು ಅವರು ತನ್ನ ಜೀವನವು ಪರಮಮಾನವನೆನಿಸಿದ ದಿನಗಳನ್ನು ಕಳೆದ ಆಶ್ರಮವು ಇನ್ನೂ ಪಾಂಡಿಚೆರಿಯಲ್ಲಿ ಯೋಗಸಾಧನೆಯ ಆಗರವಾಗಿ ಉಳಿದಿದೆ.

(ಸ-ಧಾರ)

—ಎಸ್ ಗೋಪೀಚಂದ ರಾವ್,
ಉಡುಪಿ.

ನಿಕಾಂತದಲ್ಲಿ ಓದುವಂತಹುದು
ಕೋಕ ಶಾಸ್ತ್ರ

ನೀವು ಎಂದೂ ಓದದಂತಹ ಚಿತ್ರೀಕರಣ ಪುಸ್ತಕ. ಅನೇಕ ಆಶ್ಚರ್ಯಕರವಾದ ಫೋಟೋಗಳುಂಟು.

ಬೆಡ್‌ರೂಂ ಫೋಟೋಸ್

ಅತ್ಯುತ್ತಮ ಭಂಗಿಯಲ್ಲಿ ನೀವು ಹುಡುಗಿಯರ ಫೋಟೋವನ್ನು ನೋಡಿ ಆನಂದಿಸಬೇಕೆಂದಿದ್ದರೆ ಇಂದೇ ಒಂದು ಸೆಟ್‌ಗೆ ಇಂದೇ ಬರೆಯಿರಿ. ಎರಡಕ್ಕೆ ಒಟ್ಟು ಬೆಲೆ ರೂ. 6/-

Correspondence in English only.

H. H. STORES (N. U.)
P. B. 51 MEERUT (U. P.)

ಕುಮಾರಿ ಬಿಳ್ಳಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ.ಪಿ ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!

P. DEVEE & Co. (N. J.) CALCUTTA—40

ಸ್ವಾಕಿಸ್ತರು: ಷಾ ಕಂಪೆನಿ, ಮಂಗಳೂರು—1.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK, LTD. MULKI

ವಿಶ್ವಶಾಂತಿ

ವಸಾಹತುವಾದ ಮತ್ತು ಉಳಿದ 'ಇಸಂ'ಗಳನ್ನು ಕಸದ ಬುಟ್ಟಿಗೆಸೆಯಿರಿ!

ವಸಾಹತು ವಾದವು ಯುದ್ಧಾಣುಗಳನ್ನು ಕೊಂಡೊಯ್ಯುವ ಮೂಲ ಸಾಧನವಾಗಿದೆ. ವಸಾಹತುಗಳನ್ನು ಸಂಪಾದಿಸುವರೆ ಮತ್ತು ಅವನ್ನು ತನ್ನ ಅಂಕಿತದಲ್ಲಿಟ್ಟು ಕೊಳ್ಳುವರೆ ಯುದ್ಧಗಳನ್ನು ಮಾಡಲೇ ಬೇಕಾಗುತ್ತದೆ. ಹಾಗೇ ಪ್ರತಿಯೊಂದು ಫಿನ ರಾಷ್ಟ್ರವು ಅದನ್ನು ಕೈಕೊಂಡಿದೆಯೆಂದು ಗತ ಚರಿತ್ರೆಯನ್ನು ಅವಲೋಕಿಸಿದಲ್ಲಿ ಪ್ರತಿ ಯೋಚನೆಗೂ ಮನನವಾಗದಿರದು. ಸಾಮ್ರಾಜ್ಯ ಶಕ್ತಿ (Imperialist Powers)ಗಳೊಡನೆ ವಸಾಹತುಗಾರರು ಒಂದಲ್ಲ. ಹಲವು ಬಾರಿ ಜಗಳಗಳನ್ನೆಸಗಲೇ ಬೇಕಾಗುತ್ತದೆ. ಈಗಿನ ಕಾಲದಲ್ಲಿ ವಸಾಹತುಗಳ ಶಕ್ತಿಯನ್ನು ಕುಗ್ಗಿಸಲು.—ಯಾ ತಾತ್ಕಾಲಿಕವಾಗಿ ತಡೆಹಿಡಿಯಲು ಈ ಯುದ್ಧಗಳು ಸಹಾಯಕವಾಗಿವೆ

ದ್ವಿತೀಯ ಮಹಾ ಯುದ್ಧಾನಂತರ ವಸಾಹತುಗಾರರಿಗೆ ಕೊಟ್ಟ ವಚನದ ಪ್ರಕಾರ ಅವರು ಸಂಪೂರ್ಣ ಸ್ವತಂತ್ರ್ಯದ ಕರಡು ಪ್ರತಿಯನ್ನು ಮುಂದಿಟ್ಟರು. ಈ ಕೇಳಿಕೆಗಳಿಗೆ ಸಾಮ್ರಾಜ್ಯವಾದಿಗಳು ಕೊಟ್ಟ ಉತ್ತರ—ಕೋವಿ, ಗುಂಡು, ಸಿಡಿಮದ್ದುಗಳು. ತತ್ಪರಿಣಾಮವಾಗಿ ಕಳೆದ ಹನ್ನೊಂದು ವರ್ಷಗಳಿಂದ ವಸಾಹತುವಾದಿಗಳು ಚಿಕ್ಕ ಮತ್ತು ನಿರ್ಬಲ ರಾಷ್ಟ್ರಗಳ ವಿರುದ್ಧ ಸೈನಿಕ ತರಬೇತಿ ಮತ್ತು ಶಿಕ್ಷಣ ಕೊಡುವುದರಲ್ಲಿ ನಿರತರಾಗಿದ್ದಾರೆ.

ಈ ಕಾಲಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯವಾದಿಗಳ ನೀತಿಯನ್ನು ಮುಖ್ಯವಾಗಿ ಬರ್ಮಾ, ಮಲಯಾ, ಕೊರಿಯಾ, ಕೆನ್ಯಗಳಲ್ಲಿ ಎಡಬಿಡದೆ ಸಾಗುತ್ತಿರುವ ಜಗಳಗಳಿಂದ ಗುರುತಿಸಲಾಗಿದೆ. ಫ್ರಾನ್ಸಿನ ಅಳಿವು ಶಕ್ತಿಗಳು ತನ್ನುಂದ ತಾವಾಗಿ ಇಂಡೋ ಚೀನ, ಮೆಡಗಾಸ್ಕರ್, ಕೊರಿಯ ಮತ್ತು ಉತ್ತರ ಆಫ್ರಿಕಗಳಲ್ಲಿನ ಯುದ್ಧಗಳಲ್ಲಿ ಅಪಯಶಸ್ಸನ್ನು ಗಳಿಸಿವೆ. ಕಳೆದ ವರ್ಷ ಆಂಗ್ಲ ಫ್ರೆಂಚ್-ಇಸ್ರೇಲಿ ಶಕ್ತಿಗಳ ಪತ್ತು ಐಗುಪ್ತದ ಶಕ್ತಿಗಳ ರೇಂಕಾರವನ್ನು ಪ್ರಪಂಚವು ಕಣ್ಣಾರೆಯಿ ನೋಡಿದೆ ಪ್ರಪಂಚದಲ್ಲಿ ೧೦ಕ್ಕೂ ಗಳೊಳಗಿನ ಚಿಕ್ಕ ಜಗಳಗಳನ್ನು ಶಾಂತ ರೀತಿಯಿಂದ ತೀರ್ಮಾನಿಸಿ, ಜಗತ್ತಿಗೆ ಶಾಂತಿ ಸಂದೇಶವನ್ನು ಬೀರುತ್ತಿರುವ ಸಂಯುಕ್ತ ರಾಷ್ಟ್ರ ಸಂಘವು ಜನಾಂಗ ಸಂಘದ ದಾರಿಯನ್ನು ಹಿಡಿಯದಿದ್ದರೆ ಸಾಕು!

ವಸಾಹತುಗಾರರ ಸ್ವಾತಂತ್ರ್ಯಾಂದೋಲನವನ್ನು ದಬಾಯಿಸಲು ರಾಜ ಶಕ್ತಿಗಳಿಂದ ಅಧಿಕ ಪ್ರಮಾಣದಲ್ಲಿ ಧನ ವ್ಯಯವಾಗುತ್ತಿವೆ. ಅಧಿಕೃತ ವಲಯಗಳಿಂದ ತಿಳಿದ ವೇರೆಗೆ ಇಂಡೋ ಚೀನದಲ್ಲಿ ನಡೆದ 'ಕೂಲಸು ಯುದ್ಧ' (Dirty war) ದಿಂದಾಗಿ ಫ್ರಾನ್ಸಿಗೆ ೩೦೦,೦೦೦,೦೦೦,೦೦೦ ಫ್ರಾಂಕುಗಳು ವ್ಯಯವಾಗಿವೆ ಲಿಬ್ಯದಲ್ಲಿ ನಡೆದ ಯುದ್ಧಕ್ಕಾಗಿ ೧೯೫೬ರಲ್ಲಿ ಫ್ರಾನ್ಸಿಗೆ ೫೦೦,೦೦೦,೦೦೦,೦೦೦ ಫ್ರಾಂಕುಗಳಷ್ಟು ಖರ್ಚಾಗಿದೆ ಐಗುಪ್ತದಲ್ಲಿ ಕಸ್ತಕ್ಷೇಪ ಮಾಡಿದುದರ ಪರಿಣಾಮವಾಗಿ ಪ್ರತಿದಿನಕ್ಕೆ ಪ್ರಂಚರು ೧,೦೦೦,೦೦೦,೦೦೦ ಫ್ರಾಂಕ್ ಗಳಷ್ಟು ವ್ಯಯಿಸಿರುತ್ತಾರೆ ಮಲಯದಲ್ಲಿ ನಡೆದ ಅಸ್ಟ ವಾರ್ಷಿಕ ಯುದ್ಧದಲ್ಲಿ ಬ್ರಿಟನು ೪೦೦,೦೦೦,೦೦೦ ಪೌಂಡು ಸ್ಟರ್ಲಿಂಗ್‌ಗಳಷ್ಟು ಖರ್ಚು ಮಾಡಿದೆ. ಐಗುಪ್ತದ ಮುತ್ತಿಗೆಗೆ ಬ್ರಿಟನು ಕಡಿಮೆ ಪಕ್ಷ ೧೦೦,೦೦೦,೦೦೦ ಪೌಂಡ್ ಸ್ಟರ್ಲಿಂಗ್‌ಗಳನ್ನು ಸುರಿದಿದೆಯೆಂದು ತಿಂದಾಜು ಮಾಡಲಾಗಿದೆ. ಈ ರೀತಿಯ ಯುದ್ಧಗಳಿಂದಾಗಿ ಅದ ಜನಹಾನಿ ಎಷ್ಟೆಂದು ಗಣಿಸುವುದು ಅಗಸದ ಚುಕ್ಕೆ ತಾರೆಗಳನ್ನು ಲೆಕ್ಕಿಸಿದಂತೆಯೇ ಸರಿ!

ಆರ್ಥಿಕ ಮತ್ತು ಭೌತಿಕ ನಾಶಗಳನ್ನು ಪ್ರಾಣ ಹಾನಿಯೊಂದಿಗೆ ಹೋಲಿಸುವುದು ಅಸಾಧ್ಯ. ಕಿರಿಯ ೧೨ ಸಾವಿರದಷ್ಟು ಜನರು ಐಗುಪ್ತದ ವಿರುದ್ಧ ನಡೆದ ದಬ್ಬಾಳಿಕೆಯಲ್ಲಿ ಮೋರ್ಚ್ ಸಯಿನ್ ಎಂಬೊಂದು ಪ್ರದೇಶದಲ್ಲಿಯೇ ಕೊಲ್ಲಲ್ಪಟ್ಟಿದ್ದರೆಂದು ಇಂದಾಜುಮಾಡಲಾಗಿದೆ ಅಲ್ಜೀರಿಯದ ಯುದ್ಧದಲ್ಲಿ ಎರಡು ವರ್ಷಗಳೊಳಗಾಗಿ ೪೮,೦೦೦ ಮಂದಿ ಎರಬರು ಹತರಾಗಿದ್ದಾರೆ

ಪಾಶ್ಚಾತ್ಯ ರಾಜಕಾರಣಿಗಳು ಆಗಾಗ್ಗೆ ಅಲ್ಲಲ್ಲಿ "ಆಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳಿಗೆ ಸಹಾಯ" ಎಂದು ಕೂಗುತ್ತಿರುವ ಧ್ವನಿ ಕೇಳಿಬರುತ್ತಿದೆ ಇದೇ ಏನು ವಸಾಹತುಗಳೊಡನೆ ಹೋರಾಡಲು ಕೊಡುತ್ತಿರುವ ಸಹಾಯ!—ರಾಷ್ಟ್ರದ ಅಭಿವೃದ್ಧಿಗೋಸ್ಕರ ಕೊಟ್ಟ ಆರ್ಥಿಕ ಸಹಾಯ! ಇದೇ ಏನು, ಪ್ರಪಂಚದ ಶಾಂತಿಯ ದ್ಯೋತಕ!! ಇದೇ ಏನು, ಸಮಾನತೆಯ ತತ್ವ! ! ಆಂಗ್ಲರು ಫ್ರೆಂಚರು ಕೂಡಿ ಐಗುಪ್ತ ಯುದ್ಧಕ್ಕೆ ವ್ಯಯಿಸಿದ ಹಣವು, ಸೈಲ್ ಸದಿ ಕಟ್ಟಲು ಯೋಜಿಸಿದ ಆಸ್ವಾನ್ ಅಣೆಕಟ್ಟಿಗೆ, ಮರುಭೂಮಿಯ ಮಿಲಿಯಗಟ್ಲೆ ಎಕ್ರೆ ಭೂಮಿಗಳನ್ನು ಸಾಗುವಳಿಗೆ ತಂದು, ಕೈಗಾರಿಕಾಭಿವೃದ್ಧಿ ಸೈಯ್ಯುವ ಅಣೆಕಟ್ಟಿಗೆ ಖರ್ಚುಮಾಡುವ ಹಣದ ಹಲವು ಪಾಲು ಹೆಚ್ಚು ಮೃದು ಮಧುರ ಮಾತುಗಳಿಂದ ದುಃಖಿತರಗಳನ್ನು ಯಾವ ಗಲೂ ಅಡಗಿಸಲಾಗುತ್ತದೆ. ಇದರಿಂದ ತಿಳಿಯುವುದೇನೆಂದರೆ ಪಾಶ್ಚಾತ್ಯ ಶಕ್ತಿಗಳು ಕೊಡುವ ಸಹಾಯ ಬೇರೆ "ಮಿಲಿಟರಿ ಸಹಾಯ"-ಇದನ್ನು ಪಡೆದ ರಾಷ್ಟ್ರಗಳು ಸಹಾಯವಿತ್ತವರ ಕೈಗೂಂಬೆಯಾಗಿ, ಅವರ ಆಕ್ರಮಣಕಾರೀ ವಿದೇಶ ನೀತಿಗೆ ಸುಟಿಕೊಡುವಂಥವುಗಳಾಗಿರಬೇಕು.

ವಿದೇಶೀ ಸಹಾಯವು ರಕ್ತಪಿಪಾಸೆಯಿಂದ ಕೂಡಿದುದಾಗಿದೆ ಇದು ಆ ದೇಶದ ಆರ್ಥಿಕೋನ್ನತಿಗಾಗಲೀ, ಜನಜೀವನ ಸುಟ್ಟದ ಏರಿಕೆಗಾಗಲೀ ಪ್ರಯತ್ನಿಸುತ್ತಿಲ್ಲವೆಂದು ತಿಳಿಯಬಹುದು. ಈಗೆ ಹೇಳಿದುದರಿಂದಾಗಿ ವಿದೇಶೀ ಸಹಾಯವು ಬರೇ ಇದೊಂದು ಉದ್ದೇಶದಿಂದ ಕೂಡಿದೆಯೆಂದಂತಾಗದು ದೇಶದ ಆರ್ಥಿಕೋನ್ನತಿಯ ಮೇಲ್ಮೈ ಜೀವನಮಟ್ಟದ ಸುಧಾರಣೆ ಯೂಲೋಪ್ದೇಶಗಳಾದರೂ, ಜಾತಿ ಸ್ವಾತಂತ್ರ್ಯಕ್ಕೆ ಅಮೇರಿಕ ಕೊಡುತ್ತಿರುವ ಮಿಲಿಟರಿ ಸಹಾಯ, ಭಾರತದ ವಿರುದ್ಧವೆ ಉಪಯೋಗಿಸಿದ ಪರವಾಗಿ ಡಲೆಸ್-ಕುಂಗಾರ ಗೋವದ ಜಂಟಿ ಹೇಳಿಕೆ ಇವುಗಳಿಂದ ಅವೇರಿಕಕ್ಕೆ ರಕ್ತಪಿಪಾಸೆಯಿದೆಯೆಂಬುದು ವೇದ್ಯವಾಗದಿರದು. ಇವರ ಮಧ್ಯ ಪ್ರಾಚ್ಯದ ಸಹಾಯವು ಅನ್ಯಾಕ್ರಮಣ ಪಡುವ 'ರಣರಂಗ' ಸ್ಥಾಪಿಸುವ ಉದ್ದೇಶವುಳ್ಳದ್ದು. ತತ್ಪರಿಣಾಮವಾಗಿ ಹಚ್ಚಿನ ಸಾಮ್ರಾಜ್ಯ ರಾಷ್ಟ್ರಗಳನ್ನು 'ವಸಾಹತು'ಗಳಾಗಿ ಪರಿವರ್ತಿಸಿ, ಗುಲಾಮಗಿರಿಯಲ್ಲಿಡುವಂತೆ ಪ್ರಯತ್ನಿಸುವುದಾದ್ದಾಗಿದೆ.

'ವಸಾಹತು ಪ್ರಪಂಚ'- ಅಂದರೆ ೩/೫ ಅಂಶ ವಸಾಹತು ರಾಷ್ಟ್ರಗಳಿರುವ ಪ್ರಪಂಚವು ಈಗ ಸಡಿಲಗೆಗೆಳುತ್ತಾ ಇದೆ. ಪ್ರಪಂಚದ ಅರ್ಧ ಜನಸಂಖ್ಯೆ ಅಂದರೆ ೧೮೦೦ ಮಿಲಿಯನ್ ಈಗಾಗಲೆ ಸರ್ವತಂತ್ರ ಸ್ವತಂತ್ರವಾಗಿದೆ ವಸಾಹತು ಸಂಪತ್ತಿನ್ನು ಹರಿದು ಭವ್ಯ ಚಾರಿತ್ರ್ಯವನ್ನುಳ್ಳ ರಾಷ್ಟ್ರಗಳು ತಲೆಯೆತ್ತಿ ತಮ್ಮದೇ ಆದ ಮಾದರಿಯಲ್ಲಿ ಮುಂದರಿಯುತ್ತಿವೆ. ಈ ಲೂ ಅಸ್ವಿತ್ವದಲ್ಲಿರುವ ವಸಾಹತುವಾದ ಉಳಿದ್ರವಕಾಲಿಯಾಗಿದೆ ರಾಂತಿಸಾಧನೆಯ ತತ್ವಕ್ಕೆ ಎಷ್ಟು ಯೋಗ್ಯವಾಗಿದೆ ಇಲ್ಲಿ ಇಂಡೋನೇಶ್ಯದ ಅಧ್ಯಕ್ಷ ಸೊಕಾರ್ನೋರ ಮಾತನ್ನು ಗಮನಕ್ಕೆ ತರಬೇಕಾಗಿದೆ 'ಎಂದಿನವರೆಗೆ ಫೇಸಿಸಂ, ಸೈಜೆಲಿಸ, ಗುಲಾಮತನ ಮತ್ತಿತರ 'ಇಸಂ'ಗಳೂ ವಸಾಹತುವಾದಗಳೂ ಗತ ಚರಿತೆಯ ಕಸದ ಬುಟ್ಟಿಯೊಳಗೆ ಬೀಳುವುದಿಲ್ಲವೋ, ಅಂದಿನ ವರೆಗೆ ಪ್ರಪಂಚದ್ದು ಶಾಶ್ವತ ಶಾಂತಿ ಮತ್ತು ಭದ್ರತೆ ಎಂಬುದು ನೆಲಸಲಾರದು."

(ಸಾರಾಂಶ)

ವ್ಯಾ ಸಖಾರಾಮರಾವ್,
ಬಸ್ರೂರು

ನಮ್ಮ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನೂ ವಿಜ್ಞಾನವನ್ನೂ ಸಮರಸವಾಗಿ ಬೆಳೆಯಿಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉತ್ಕೃಷ್ಟ ಗ್ರಂಥ ಬರೆದವರು ಡಾಕ್ಟರ ಜೇಮ್ಸ್ ಬಿ ಕೊನೆಂಟ್ ಅನುವಾದಕ ಯು ಲಕ್ಷ್ಮೀನಾರಾಯಣಾಚಾರ್ಯ. ಪುಟ: ೧೪೦ ಬೆಲೆ ಒಂದೂವರೆ ರುಪಾಯಿ.

ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ ಮಾಡಿರದ ಅಪರಾಧಗಳಿಗಾಗಿ ಸಿಕಾಂತನಾಸಕ್ತಿ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಾತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸರಿಯಾಳು ಹಂತಕರು ಕರೆದೊಯ್ಯುವವರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯ ಕನ್ನಡವನ್ನು ಅನುವಾದಿಸಿದವರು ಕು ಶ್ರೀಹರಿದಾಸ ಭಟ್ಟರು. ಪುಟ ೩೦೮ ಬೆಲೆ ಎರಡೂವರೆ ರುಪಾಯಿ,

ಶಿಕ್ಷಣದ ಧ್ಯೇಯಗಳು

ಪ್ರಪಂಚದ ಅತ್ಯಂತ ಮೇಧಾವಿ ತತ್ವಜ್ಞಾನಿ ಆಲ್ಬರ್ಟ್ ಸಾರ್ಥ್ ವೈಟ್‌ಹೆಡ್ ಅವರ ಮಹತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ ಅನುವಾದಕರು ಕೆ ಬಿ ರಾಮಕೃಷ್ಣರಾಯ ಮತ್ತು ಯು ಲಕ್ಷ್ಮೀನಾರಾಯಣಾಚಾರ್ಯ ಪುಟ ೨೫೦ ಬೆಲೆ ೨ ೨೫ ರುಪಾಯಿ

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ ಪ್ರಜಾತಂತ್ರಾತ್ಮಕ ಸರ್ಕಾರ ಸದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ವಿಕಾಸವು ಹೇಗೆಂಬುದನ್ನು ನಿರ್ಣಯಿಸುವ ಅಪೂರ್ವ ಗ್ರಂಥ ಅನುವಾದಕ ಕು ಶ್ರೀ ಹರಿದಾಸ ಭಟ್ಟ ಪುಟ ೨೦೦ ಬೆಲೆ ೨ರುಪಾಯಿ.

ಹಿರೋಶಿಮಾದಿಂದ ಜಿನೇವಾ

'ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಫಲಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಬತ್ತು ಪುಟದ ಸುತ್ತಳತೆಯಲ್ಲಿ ಬಹು ವಿಶದವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರಯುತವಾಗಿ ಮನಸಿಲಾಗಿಸಿ ಬರೆದವರು ಯು ರಾಘವೇಂದ್ರಾಚಾರ್ಯ. ಪುಟ ೧೦ ಬೆಲೆ ಒಂದೂವರೆ ರುಪಾಯಿ

ಏತಿಯದ ಸಂಪತ್ತು

ಏತಿಯಿಂದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿಕಸನ, ಒಂದು ಸ್ವತಂತ್ರ ರಚನೆ. ಬರೆದವರು ಕು ಶ್ರೀ ಹರಿದಾಸ ಭಟ್ಟ ಸಿ ಸೀತಾರಾಮಯ್ಯ ನವರ ಮುನ್ನುಡಿ ಇದೆ ಪುಟ ೧೫೦ ಬೆಲೆ ಎರಡು ರುಪಾಯಿ.

ಘಂಟೆಮಾರಾ

ಇಗ್ನೇಶಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ ಫಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅದನ್ನು ವಿರೋಧಿಸಿ ನಿಂತ ಸ್ಫೂರ್ತಿಯಂಗಳ ಕಥೆ ಅನುವಾದಕರು: ಕು ಶ್ರೀ ಹರಿದಾಸ ಭಟ್ಟ ಪುಟ: ೨೦೦. ಬೆಲೆ ಎರಡು ರುಪಾಯಿ.

ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ.

ಅಭಿವೃದ್ಧಿ ಯೋಜನೆ

(೩ನೇ ಪುಟದಿಂದ)

ಕಲ್ಕತ್ತ ಮತ್ತು ಬೊಂಬಾಯಿಗಳ ನಡುವಿನ ಪ್ರಧಾನ ರೇಲ್ವೆದಾರಿಯಲ್ಲಿ ಕಲ್ಕತ್ತದಿಂದ ೨೭೫ ಮೈಲುಗಳ ಅಂತರದಲ್ಲಿ ರೂರ್ಕೇಲಾ ಇದೆ. ಭಿಲೈಯು ಅದೇ ದಾರಿಯಲ್ಲಿ ಇನ್ನೂ ಪಶ್ಚಿಮದಲ್ಲಿದ್ದು, ನಾಗಪುರದಿಂದ ೧೫೬ ಮೈಲಿ ದೂರದಲ್ಲಿದೆ. ಕಲ್ಕತ್ತಾ ದೆಹಲಿಯ ಪ್ರಧಾನ ರೇಲ್ವೆ ದಾರಿಯಲ್ಲಿ ಕಲ್ಕತ್ತದಿಂದ ೧೧೦ ಮೈಲು ದೂರದಲ್ಲಿ ದುರ್ಗಾಪುರವಿದೆ. ಬೃಹದಾಕಾರದ ಈ ನವೀನ ಉಕ್ಕಿನ ಕೈಗಾರಿಕಾ ಸ್ಥಳಗಳನ್ನು ಆರಿಸುವಲ್ಲಿ ಗಣ್ಯವಾದ ಆರ್ಥಿಕಾನುಕೂಲತೆಯನ್ನವಲಂಬಿಸಲಾಗಿದೆ. ಈ ಸ್ಥಳಗಳು ಕಾರಖಾನೆಗೆ ಅತ್ಯಗತ್ಯವಿರುವ ಕಚ್ಚಾ ಮಾಲುಗಳ ಅವಾಸಸ್ಥಾನಕ್ಕೆ ಬಹಳ ಸಮೀಪವಾಗಿದ್ದು ಉತ್ಪಾದನೆಯ ವಿನಿಯೋಗ ನಿಧಾನಗಳಿಂದ ಅನತಿದೂರದಲ್ಲಿವೆ. ರೂರ್ಕೇಲಾದಿಂದ ೫೦ ಮೈಲುಗಳ ದೂರದಲ್ಲಿ ತಾಲ್ಚಿಯ ಕಬ್ಬಿಣದ ನಿಧಾನಗಳಿವೆ. ಹಾಗೆಯೇ ಅಯಸ್ಸಿನಧಾನದ ದಲ್ಲೈ-ರಾಜ್ ಹೇರಾ ಪಹಾರದಿಂದ ೯೦ ಮೈಲುಗಳ ದೂರದಲ್ಲಿ ಭಿಲೈ ಇದೆ. ಮಧ್ಯಪ್ರದೇಶದ ಕೋರ್ಬ ಇದ್ದಲಗಣಿಗಳಿಂದ ಭಿಲೈಯು ವಿಶೇಷ ದೂರದಲ್ಲಿಲ್ಲ. ಬಂಗಾಳದ ಇದ್ದಲ ಗಣಿಗಳ ಮಧ್ಯದಲ್ಲಿಯೇ ದುರ್ಗಾಪುರವಿದೆ. ಈ ಮೂರು ಸ್ಥಳಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಬೇಕಾಗುವ ನೀರಿನ ಸೌಕರ್ಯವಿದೆ. ದುರ್ಗಾಪುರವು ತನಗೆ ಬೇಕಾಗುವ ನೀರನ್ನು ದಾಮೋದರ ನದಿಯಿಂದ ಪಡೆಯುತ್ತದೆ. ಶಂಖ್ ಎಂಬ ಹೊಳೆಗೆ ಅಣೆಕಟ್ಟನ್ನು ಕಟ್ಟಿ ರೂರ್ಕೇಲಕ್ಕೆ ನೀರನ್ನೊದಗಿಸಬೇಕಾಗಿದೆ. ತಂಡೂಲಾ ಕಾಲುವೆಯು ಭಿಲೈ ನಗರಕ್ಕೆ ಸಾಕಷ್ಟು ನೀರಿನ ಪೂರೈಕೆಯನ್ನು ಮಾಡುತ್ತದೆ.

ಹೀಗೆ ಆರ್ಥಿಕ ಮತ್ತು ತಾಂತ್ರಿಕ ಕಾರಣಗಳ ದೆಸೆಯಿಂದ ಆರಿಸಲ್ಪಟ್ಟ ರೂರ್ಕೇಲಾ ಮತ್ತು ಭಿಲೈಗಳು ಆರ್ಥಿಕ ದೃಷ್ಟಿಯಿಂದ ಹಿಂದುಳಿದ ಪ್ರದೇಶಗಳಾಗಿದ್ದು ಆ ಪ್ರದೇಶದ ಜನಜೀವನದ ಅಭಿವೃದ್ಧಿಗೂ ಇದೀಗ ನೆರವೇಯುತ್ತಿವೆ. ಅಲ್ಲದೆ, ಈ ನಗರಗಳು ದಿನೇ ದಿನೇ ಬೆಳೆಯುತ್ತಾ ಬರುತ್ತಿವೆ. ಅಲ್ಲಿ ಜನಸಂಖ್ಯೆಯು ಹೆಚ್ಚುತ್ತಾ ಬಂದು ಒಂದು ಕಾಲದಲ್ಲಿ ವಿರಳ ಜನಸಂಖ್ಯೆಯ ಪ್ರದೇಶವಾದ ಈ ಭಾಗಗಳು ಇದೀಗ ದಟ್ಟಜನ ಸಾಂದ್ರತೆಯಿಂದ ಕೂಡಿಕೊಂಡಿವೆ.

ಉಕ್ಕಿನ ಉತ್ಪಾದನೆಯ ಕೆಲವೊಂದು ಅಂಕೆಸಂಖ್ಯೆಗಳನ್ನವಲೋಕಿಸಿದರೆ, ಆಗ ಉಕ್ಕಿನ ಪ್ರಮುಖತೆ, ರಾಷ್ಟ್ರ ಪುನರ್ನಿರ್ಮಾಣ ಕಾರ್ಯದಲ್ಲಿ ಉಕ್ಕು ವಹಿಸುವ ಪಾತ್ರಗಳು ತಿಳಿದು ಉಕ್ಕಿನಕಡೆಗೆ ವಿಶೇಷ ಆಸಕ್ತಿಯನ್ನು ಉಂಟುಮಾಡಬಹುದು

ಉಕ್ಕಿನ ಕಾರಖಾನೆಗಳ ನಿರ್ಮಾಣಕ್ಕಾಗಿ ಉಪಯೋಗಿಸಿದ ಒಟ್ಟು ಬಂಡವಾಳವು ೪೦೦ ಕೋಟಿಗೂ ಮಿಕ್ಕಿದೆ. ಪ್ರತ್ಯೇಕ ಕಾರಖಾನೆಗೂ ೩೦ ಲಕ್ಷ ಟನ್‌ಗಳಷ್ಟು ಕಬ್ಬಿಣದ ಅದುರು, ೫ ಲಕ್ಷ ಟನ್ ಸುಣ್ಣದ ಕಲ್ಲು, ಒಂದೂವರೆ ಲಕ್ಷ ಟನ್ ಮೆಂಗನೀಸ್ ಮತ್ತು ೧೬ ಲಕ್ಷ ಟನ್ ಕಲ್ಲಿದ್ದಲು ಬೇಕಾಗುತ್ತವೆ. ಪ್ರತಿಯೊಂದು ಕಾರಖಾನೆಗೂ ಸುಮಾರು ೬೦ರಿಂದ ೭೦ ಲಕ್ಷ ಟನ್‌ಗಳಷ್ಟು ಕಚ್ಚಾ ವಸ್ತುಗಳ ಉಪಯೋಗವಾಗುವುದು. ಪ್ರತ್ಯೇಕ ಕಾರಖಾನೆಗೆ ಪ್ರತಿದಿನ ೭೫೦ ಲಕ್ಷ ಗೆಲನುಗಳಷ್ಟು ನೀರು ಬೇಕಾಗುವುದು. ಮೂರು ಕಾರಖಾನೆಗಳಿಗೆ ಸುಮಾರು ೧೫೦ ವಿಶೇಷ ಅನುಭವವಿರುವ ಇಂಜಿನಿಯರರೂ ೨,೦೦೦ಕ್ಕೂ ಮಿಕ್ಕಿದ ಜೂನಿಯರ್ ಇಂಜಿನಿಯರರೂ, ೧,೬೦೦೦ ತರಬೇತಿ ಪಡೆದ ತಾಂತ್ರಿಕಜ್ಞರೂ ೬,೫೦೦ ಬುದ್ಧಿವಂತ ಕರ್ಮಚಾರಿಗಳೂ, ಬೇಕಾಗುತ್ತಾರೆ.

ದೇಶದ ವಿಶ್ವವಿದ್ಯಾಲಯಗಳಿಂದ ಹೊರಬೀಳುವ ಪದವೀಧರ ಇಂಜಿನಿಯರರ ಮತ್ತು ಕೆಲಸದಲ್ಲಿ ನುರಿತ ಇಂಜಿನಿಯರರ ತರಬೇತಿಯು ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಭಾರತ ಸರಕಾರವು ಬೇರೆ ಬೇರೆ ದೇಶ ಮತ್ತು ಸಂಸ್ಥೆಗಳೊಡನೆ ಕೆಲವೊಂದು ವ್ಯವಸ್ಥೆಯನ್ನು ಮಾಡಿಕೊಂಡಿದೆ. ಇಂತಹ ಒಪ್ಪಂದಗಳ ಮೇರೆಗೆ ಪದವೀಧರ ಇಂಜಿನಿಯರರನ್ನು ನೋವಿಯೆಟ್ ರಶ್ಯ, ಪಶ್ಚಿಮ ಜರ್ಮನಿ ಮತ್ತು ಸಂಯುಕ್ತ ರಾಜ್ಯಗಳಿಗೆ ಉಕ್ಕಿನ ಉತ್ಪಾದನೆಯಲ್ಲಿ ವಿಶೇಷ ರೀತಿಯ ತರಬೇತಿಯನ್ನು ಪಡೆಯುವ ಸಲುವಾಗಿ ಕಳಿಸಲಾಗುತ್ತಿದೆ. ಅಮೇರಿಕನ್ ಉಕ್ಕಿನ ಕರ್ಮಶಾಲೆಯಲ್ಲಿ ತರಬೇತಿಯನ್ನು ಫೋರ್ಡ್ ಫೌಂಡೇಶನಿನನ್ವಯವಾಗಿ ಪಡೆಯಲು ಅಮೇರಿಕದ ಸಂಯುಕ್ತ ರಾಷ್ಟ್ರಗಳಿಗೂ ಕೆಲವೊಂದು ಪದವೀಧರ ಇಂಜಿನಿಯರರನ್ನು ಕಳುಹಿಸುತ್ತಲಿದೆ. ವಿಶೇಷ ತಾಂತ್ರಿಕಜ್ಞ ಹಾಗೂ ಕೆಲಮಟ್ಟದ ಕರ್ಮಚಾರಿಗಳ ತರಬೇತಿಗಾಗಿ ದೇಶದೊಳಗಿನ ಇಂಜಿನಿಯರಿಂಗ್ ಕರ್ಮಶಾಲೆ ಮತ್ತು ಕಾರಖಾನೆಗಳೊಡನೆ ತಕ್ಕ ಏರ್ಪಾಡುಗಳನ್ನು ಮಾಡಲಾಗುತ್ತಿದೆ. ಮೂಲ ಲೋಹಕಗಳ ಶೋಧಕರ ಅಭಾವವನ್ನು ನೀಗಿಸಿಕೊಳ್ಳುವುದಕ್ಕಾಗಿ ಒಂದು ವರ್ಷದ ವಿಶೇಷ ವಿಭಾಗವನ್ನು ದೇಶದ ದೊಡ್ಡ ಇಂಜಿನಿಯರಿಂಗ್ ಸಂಸ್ಥೆಗಳಲ್ಲಿ ತೆರೆಯಬೇಕಾಗಿದೆ.

ರೂರ್ಕೇಲಾ ಮತ್ತು ಭಿಲೈಯ ಉಕ್ಕಿನ ಕಾರಖಾನೆಗಳು ಸಾಮಾನ್ಯವಾಗಿ ೧೯೫೮ನೆಯ ಕೊನೆಯೊಳಗೆ ಉತ್ಪಾದನೆಯನ್ನು ಪ್ರಾರಂಭಿಸುವ ನಿರೀಕ್ಷೆಯಿದೆ. ಇದು ತನ್ನ ತಾಂಬುಗತಿಯನ್ನು ೧೯೫೯ರ ಅಂತ್ಯದೊಳಗೆ ಹೊಂದಬಹುದು. ದುರ್ಗಾಪುರದ ಕರ್ಮಶಾಲೆಯು ೧೯೫೯ರ ಕೊನೆಯೊಳಗೆ ಕೆಲಸಕ್ಕೆ ಪ್ರಾರಂಭಿಸಿ, ತನ್ನ ಪರಿಪೂರ್ಣ ಶಕ್ತಿಯನ್ನು ಒಂದು ವರ್ಷದ ನಂತರ ಪ್ರದರ್ಶಿಸಬಹುದು. ಉತ್ಪಾದನಾ ಕಾರ್ಯಕ್ರಮವು ಎಲ್ಲ ವಿಧ ಮತ್ತು ವಿಭಾಗಗಳಲ್ಲೂ ಉಕ್ಕು ಹರಿದು ಹೋಗುವಂತೆ ಈ ನಿಯೋಜಿತ ಕಾರಖಾನೆಗಳಲ್ಲಿ ತಯಾರಿಸಲ್ಪಟ್ಟಿದೆ. ರೂರ್ಕೇಲಾದ ಕಾರಖಾನೆಯು ಕೇವಲ ತಟ್ಟೆ ಮತ್ತು ತಗಡುಗಳಂತಹವುಗಳನ್ನೇ ಉತ್ಪಾದಿಸುವುದು. ಭಿಲೈ ಕಾರಖಾನೆಯು ಭಾರವಾದ ರೈಲು, ಭವನ ನಿರ್ಮಾಣ ಸಾಮಗ್ರಿ ಮೊದಲಾದುವುಗಳನ್ನೂ ದುರ್ಗಾಪುರದ ಕಾರಖಾನೆಯು ಮಧ್ಯಮ ವರ್ಗದ ಕಟ್ಟಿದ ಸಾಮಾಗ್ರಿಗಳು, ಚಕ್ರಗಳು, ಟಯರ್‌ಗಳು, ಅಕ್ಷಗಳು, ರೈಲ್ವೇ ಕಂಬಿಗಳ ಕೆಳಗಿರುವ ಸರಳ ತುಂಡು ಮೊದಲಾದುವುಗಳನ್ನು ಉತ್ಪಾದಿಸುತ್ತದೆ. ಬೆಳೆಯುತ್ತಿರುವ ಔದ್ಯೋಗಿಕ ಪ್ರಗತಿ ಗತ್ಯಗತ್ಯವಿರುವ ಉಕ್ಕಿನ ಸಾಮಾನು ಸರಂಜಾಮುಗಳನ್ನೂ ಇದು ಒದಗಿಸುತ್ತದೆ

ಇನ್ನು ಉಕ್ಕಿನ ಕಾರಖಾನೆಗಳಿಂದ ದೇಶಕ್ಕೆ ಒದಗುವ ಲಾಭವನ್ನು ಕುರಿತು ಎರಡು ಮಾತುಗಳನ್ನು ಹೇಳಬಹುದು. ಈ ಮೂರು ಹೊಸದಾಗಿ ಸ್ಥಾಪಿಸುವ ಕಾರಖಾನೆಗಳಲ್ಲಿ ಉತ್ಪಾದಿಸಲಾಗುವ ಉಕ್ಕಿನ ಮತ್ತು ಹಂದಿ ಕಬ್ಬಿಣದ ಮಾರಾಟದಿಂದ ಪ್ರತಿಯೊಂದು ಕಾರಖಾನೆಗೆ ಪಾಲಿಗೆಬರುವ ನಿವ್ವಳಮಾರುವ ಬೆಲೆಯು ಸುಮಾರು ೪೦ ಕೋಟಿ ರೂಪಾಯಿಗಳು. ಪ್ರತಿವರ್ಷವೂ ೧೫೦ ಕೋಟಿಗಳಷ್ಟು ವೆಚ್ಚವಾಗುತ್ತಿರುವ ವಿನಿಮಯ ನಾಣ್ಯಗಳನ್ನು ನಾವು ಈ ಕಾರಖಾನೆಗಳ ಆದಾಯದಿಂದಾಗಿ ಉಳಿಸಿಕೊಳ್ಳಬಹುದು. ಭಾರತದಲ್ಲಿ ತಯಾರಾದ ಉಕ್ಕಿಗಿಂತ ಪೀಡೆಗಳಿಂದ ಆಮದು ಮಾಡಿಕೊಳ್ಳುವ ಉಕ್ಕಿನ ಬೆಲೆಯು ಅಧಿಕತರವಾಗಿದೆ. ಈ ಉಳಿತಾಯದ ಮೊಬಲಗಿನಿಂದ ಪ್ರತಿ ಐದು ವರ್ಷಗಳಲ್ಲಿ ೧೦ ಲಕ್ಷ ಟನ್ ಉಕ್ಕಿನ ಉತ್ಪಾದನೆಯನ್ನು ಮಾಡಬಲ್ಲ ಎರಡು ಕಾರಖಾನೆಗಳನ್ನು ತೆರೆಯಬಹುದು.

ಭಾರತವು ಅಧಿಕ ಉತ್ಪತ್ತಿಯ ಮೂಲ ಯೋಜನೆಯೊಂದಿಗೆ ನಿರುದ್ಯೋಗ ಸಮಸ್ಯೆಯನ್ನೂ ಪರಿಹರಿಸುವ ಧ್ಯೇಯವನ್ನಿಟ್ಟುಕೊಂಡಿದೆ. ಈ ಗುರಿಯು ಈ ಉಕ್ಕಿನ ಕೈಗಾರಿಕಾ ಕೇಂದ್ರಗಳಿಂದ ಅಡೆಪ್ಪು ಪೂರಯಿಸಬಹುದೆಂದು ಸಂಶಯಪಡಬಹುದು. ನಿಜವಾಗಿಯೂ ಈ ಉಕ್ಕಿನ ಯೋಜನೆಯಿಂದ ಸುಮಾರು ೫೫,೦೦೦ ಜನರಿಗೆ ಮಾತ್ರ ಉದ್ಯೋಗ ದೊರೆಯುವುದೆಂದು ಅಂದಾಜುಮಾಡಲಾಗಿದೆ. ಈ ಯೋಜನೆಗೆ ವೆಚ್ಚವಾಗುವ ಬಂಡವಾಳವನ್ನೂ, ಉದ್ಯೋಗಾವಕಾಶಗಳನ್ನೂ ತುಲನೆಮಾಡಿನೋಡಿದರೆ ಹೊಸ ಉದ್ಯೋಗಗಳೇನೂ ಗಣನೀಯ ಸಂಖ್ಯೆಯಲ್ಲವೆಂದು ಹೇಳಬಹುದು. ಆದರೆ, ಈ ರೀತಿಯಲ್ಲಿ ನೋಡುವುದು ಮಾತ್ರ ಸರಿಯಾದುದಲ್ಲ. ಈ ಬಂಡವಾಳದಿಂದ ಕಟ್ಟಲ್ಪಡುವ ಉಕ್ಕಿನ ಕಾರಖಾನೆಗಳಲ್ಲಿ ತಯಾರಾಗುವ ವಿವಿಧ ವಸ್ತುಗಳು ದೇಶದ ನಾನಾ ಅಭಿವೃದ್ಧಿಯೋಜನೆಗಳಲ್ಲಿ ಉಪಯೋಗವಾಗುವುದು. ಹಾಗಾಗಿ ನಾನಾ ವಿಧದ ಕೈಗಾರಿಕೆಗಳಲ್ಲಿ, ದೇಶದ ಸುನಾರಣೆಯ ಕಾರ್ಯಕ್ರಮಗಳಲ್ಲಿ ಜನರಿಗೆ ಅನೇಕಾನೇಕ ಉದ್ಯೋಗಾವಕಾಶಗಳು ದೊರೆಯುತ್ತವೆ. ಔದ್ಯೋಗಿಕ ಅಭಿವೃದ್ಧಿಯ, ಯೋಜನೆಗಳಲ್ಲಿ ಪ್ರಮುಖ ಪಾತ್ರ ವಹಿಸುವ ಈ ಉಕ್ಕಿನಿಂದ ಗಿ ನಿರುದ್ಯೋಗ ಸಮಸ್ಯೆಗೂ ಕೆಲವೊಂದು ಪರಿಹಾರಗಳು ದೊರೆಯುತ್ತವೆ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇವರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:00.

ಪುಸ್ತಕದ ಬೆಲೆಯೊಂದಿಗೆ ನಾಲ್ಕಾಣೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

Edited, Printed & Published by K H. Shetty, at the Navayuga press. Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೬ VOL. 36

20—6—1957

ಸಂಚಿಕೆ ೪೧ NO. 41

ಆಡಳಿತ ಮಿತವ್ಯಯ

ಅನಾವ್ಯಯವನ್ನು ತಡೆಹಿಡಿದು ಜನತೆಯ ವಿಶ್ವಾಸವನ್ನು ಸಂಪಾದಿಸಬೇಕು

ದೇಶದ ಜನರ ಪರವಾಗಿ ಅವರಿಂದಲೇ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ದೇಶದ ಆಡಳಿತೆಯು ನಡೆಸಲ್ಪಡುವುದೇ ಪ್ರಜಾಪ್ರಭುತ್ವ ರಾಜ್ಯಭಾರ ಪದ್ಧತಿ ಭಾರತವು ಬ್ರಿಟಿಷರಿಂದ ರಾಜಕೀಯ ಸ್ವರಾಜ್ಯವನ್ನು ಪಡೆದುಕೊಂಡ ಮೇಲೆ ನಮ್ಮ ರಾಜಕೀಯ ಮುಂದಾಳುಗಳು ಭಾರತಕ್ಕೆ ಪ್ರಜಾಪ್ರಭುತ್ವರೀತಿಯ ರಾಜ್ಯಭಾರವೇ ಉತ್ತಮವೆಂದು ಮನಗಂಡು ಲೋಕತಂತ್ರಾತ್ಮಕ ಘಟನೆಯೊಂದನ್ನು ಸ್ವೀಕರಿಸಿದರು. ದೇಶವಾಸಿಯಾದ ಪ್ರತ್ಯೇಕ ಪ್ರಜೆಗೂ ನ್ಯಾಯವಾದ ಕೆಲವೊಂದು ಅಧಿಕಾರವನ್ನಿತ್ತು ಪ್ರತಿಯೊಬ್ಬರ ಉನ್ನತಿಯನ್ನೇ ಅಭ್ಯುದಯವನ್ನೇ ಕಲ್ಯಾಣವನ್ನೇ ಹಾರ್ಲಿಸುವ ಕಲ್ಯಾಣಕಾರೀ ರಾಷ್ಟ್ರದ ರಚನೆಯ ಧ್ಯೇಯವನ್ನು ಅಂದಿನಿಂದ ಭಾರತವು ಇಟ್ಟುಕೊಂಡಿತು. ದೇಶದ ಅಭಿವೃದ್ಧಿ ಕಾರ್ಯಕ್ರಮಗಳನ್ನು ದೇಶದ ಪ್ರಜಾಜನರ ಹಿತಕ್ಕಾಗಿ ಅವರ ಅನುಕೂಲ್ಯಕ್ಕನುಗುಣವಾಗಿ ಕೈಗೊಳ್ಳಲು ಪ್ರಾರಂಭಿಸಿತು. ಅಲ್ಲದೆ, ಈ ಮೇರೆಗೆ ಸಮಾಜದ ಉದ್ಧಾರವನ್ನು ಮಾಡಲು ಬಹಳ ಸಮಯವು ಬೇಕಾಗಬಹುದೆಂಬ ಶಂಕೆಯಿಂದ, ಸರಕಾರೀ ಪಕ್ಷವಾದ ಕಾಂಗ್ರೆಸ್ಸು ತನ್ನ ಆವಡಿ ಅಧಿವೇಶನದಲ್ಲಿ ಸಮಾಜವಾದದ ತತ್ವವನ್ನು ಸ್ವೀಕರಿಸಿ ಇದರ ಬುನಾದಿಯಲ್ಲಿ ಕಲ್ಯಾಣ ರಾಷ್ಟ್ರದ ಪುನಾರಚನೆಯನ್ನು ಮಾಡಲು ಸನ್ನದ್ಧವಾಯಿತು

ಪ್ರಜೆಗಳ ಅಭಿಪ್ರಾಯದಂತೆ ರಾಜಕಾರಣವಿರುವುದು ಪ್ರಜಾಪ್ರಭುತ್ವದ ಒಂದು ತತ್ವ. ಯಾರೊಬ್ಬನ ಜುಲುಮೆಯಾಗಲೀ ಪ್ರಭಾವವಾಗಲೀ ಅಲ್ಲಿ ಮುಖ್ಯವಲ್ಲ. ಪ್ರಜೆಗಳಿಂದ ಆರಿಸಿಬಂದ ಬಹುಮತ ಪಡೆದ ಪಕ್ಷವು ಸರಕಾರವನ್ನು ಸ್ಥಾಪಿಸುವ ಹೊಣೆಗಾರಿಕೆಯನ್ನು ಹೊರುವುದು ಆ ಪಕ್ಷವು ತನ್ನ ಧ್ಯೇಯ ಧೋರಣೆಗಳಿಗನುಗುಣವಾಗಿ ತನ್ನ ಕಾಲಾವಧಿಯಲ್ಲಿ ರಾಜ್ಯಭಾರವನ್ನು ನಿರ್ವಹಿಸುವುದು ಪಕ್ಷ ಪದ್ಧತಿಯ ಆಡಳಿತದಲ್ಲಿ ವಿರೋಧಿ ಪಕ್ಷಗಳ ಪ್ರಭಾವ ಬೀಳುವುದು ಅಪರೂಪ.

ಭಾರತದಲ್ಲಿ ದ್ವಿತೀಯ ಮತದಾನ ಸಮಾರಂಭಗಳು ಪೂರ್ತಿಗೊಂಡಾಗ ಕಾಂಗ್ರೆಸ್ಸು ಪಕ್ಷ ಬಹುಮತವನ್ನು ಪಡೆದು ಕೇಂದ್ರೀಯ ಸರಕಾರವನ್ನು ಸ್ಥಾಪಿಸಿತು ಅರ್ಧ ಮಂತ್ರಿಗಳು ಪ್ರಜಲಿತ ವರ್ಷದ ಮುಂಗಡ ಪತ್ರವನ್ನು ಸಂಸತ್ತಿನೆದುರು ಮಂಡಿಸಿದರು ರಾಷ್ಟ್ರದ ಅಭಿವೃದ್ಧಿ ಯೋಜನೆಯ ಸಲುವಾಗಿ ಕೊರತೆಯನ್ನು ಹೊಸ ಕರಗಳಿಂದ ತುಂಬಿಸುವ ಯೋಜನೆಯನ್ನು ಬಹಿರಂಗ ಪಡಿಸಿದರು ಈ ಕರಬಾರವು ಅಪ್ರತಿಮ ಹೊರೆಯಾಗಿದೆ ಎಂಬ ದೂರುಗಳು ಕೇಂದ್ರ ಪ್ರತಿಪಕ್ಷಗಳಿಂದ ಮಾತ್ರವಲ್ಲ, ಸರಕಾರೀ ಪಕ್ಷದ ಕೆಲ ಸದಸ್ಯರಿಂದಲೇ ಕೇಳಿಬಂತು ಈ ಕರ ಭಾರವನ್ನು ಕಡಿಮೆ ಮಾಡಲು ಆಡಳಿತೆ ವೆಚ್ಚವನ್ನು ಕೆಳಗಿಳಿಸುವುದೇ ಪ್ರಮುಖ ಉಪಾಯವಾಗಿ ಕಂಡು, ಆಡಳಿತೆಯ ಕಡೆಗೆ ಎಲ್ಲರ ದೃಷ್ಟಿಯೂ ಹರಿಯ ತೊಡಗಿತು.

ಭಾರತದಂತಹ ಬಡರಾಷ್ಟ್ರದಲ್ಲಿ ಅತ್ಯುಚ್ಚಮಟ್ಟದ ಅಧಿಕಾರಿಯ ಸಂಬಳವೆಷ್ಟಿರಬೇಕು ಎಂಬುದೇ ಒಂದು ಪ್ರಶ್ನೆ ಸರಕಾರಿ ಉದ್ಯೋಗಸ್ಥರ ವೇತನದಲ್ಲಿ ಹೆಚ್ಚಳವಾಗಬೇಕು ಎಂದು ದೇಶದ ಎಲ್ಲ ಪಕ್ಷ ಸಂಗಡಗಳೂ ಹೇಳುತ್ತವೆ ಅಂಚೆ ಇಲಾಖೆ, ರೈಲ್ವೆ ಇಲಾಖೆ, ಜೀವವಿಮಾ ಇಲಾಖೆಯ ನೌಕರರು, ಶಿಕ್ಷಕರು ಹೀಗೆ ಎಲ್ಲ ವಿಭಾಗದವರು ಸಾಮಾನ್ಯ ಮಟ್ಟದ ಸರಳ ಜೀವನವನ್ನು ನಡೆಸಲು ಅವರಿಗೆ ದೊರೆಯುವ ಸಂಬಳದಲ್ಲಿ ನಿರ್ವಹಿಸಲಾಗುವುದು ಅಗತ್ಯವೆಂದು ಬೇಕಷ್ಟು ಮನವಿಗಳು ನಮ್ಮ ಮಂತ್ರಿಗಳಿಗೆ ಸಲ್ಲುತ್ತವೆ. ಹಾಗೆ ಸಲ್ಲಿಸಲ್ಪಟ್ಟ ಕೆಲವೊಂದು ಮನವಿಗಳಿಗೆ ಯೋಗ್ಯ ಪುರಸ್ಕಾರವೂ ದೊರೆತಿದೆ. ಸರಕಾರದ ಆಡಳಿತೆ ವೆಚ್ಚದಲ್ಲಿ ಇಂತಹ ವಿಭಾಗಗಳಲ್ಲಿ ವ್ಯಯವಾಗುತ್ತಿರುವ ಮೊಬಲಗೇನೂ ಕಡಮೆಯದಲ್ಲ ಈ ವೆಚ್ಚವನ್ನು ತಗ್ಗಿಸುವುದು ಸಾಧ್ಯವೆ? ನೌಕರರ ಸಂಖ್ಯೆಯನ್ನು ಕಡಮೆ ಮಾಡಿಕೊಂಡರೆ ಕೆಲಸವು ಸುಸೂತ್ರವಾಗಿ ಸಾಗುವುದೆಂತು? ಅಥವಾ ಮುಂದೊಡಗಿ ಬರುವ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವ ಬಗೆಯಾದರೂ ಯಾವುದು?

ಆದುದರಿಂದ ಇವೆಲ್ಲ ಸಾಧ್ಯವಾಗದ ಆಲೋಚನೆಗಳು. ಆದರೂ ಅನಾವ್ಯಯವಾಗುವ ಹಣವನ್ನು ಮಾತ್ರ ಉಳಿಸುವುದು ಸಾಧ್ಯವಿದೆ. ಇಂತಹ ಅನಾವ್ಯಯಗಳಲ್ಲಿ ಕೇಂದ್ರ ಹಾಗೂ ರಾಜ್ಯ ಮಂತ್ರಿಗಳ ಸಂಚಾರದ ಕಾರ್ಯಕ್ರಮಗಳಿಗಾಗಿ ವೆಚ್ಚವಾಗುವ ಮೊಬಲಗು ಸೇರಿದೆ. ಒಂದು ಕಾಲದಲ್ಲಿ ವಿದೇಶೀಯ ಸತ್ತೆಯ ಕಾಲದಲ್ಲಿ ಮಂತ್ರಿಗಳ ಸಂಚಾರವು ಅಪರೂಪವಾಗಿದ್ದಾಗ, ಅವರಿಗೆ ರಾಜಮನ್ನಣೆ ಮೊರೆಯ ತಿತ್ತಂತೆ ಆದರೆ, ನಮ್ಮ ಜನಸಾಮಾನ್ಯರ ಸರಕಾರದ ಸ್ಥಾಪನಾನಂತರ ನಮ್ಮ ಮಂತ್ರಿಗಳು ರಾಜ್ಯದ ವಿವಿಧ ನಗರಗಳನ್ನು ಸಂದರ್ಶಿಸಿ, ಅಲ್ಲಿನ ಜನರ ಸುಖ ದುಃಖಗಳನ್ನು ವಿಚಾರಿಸಿ, ಅಭಿವೃದ್ಧಿಯನ್ನುಂಟುಮಾಡುವ ಯೋಜನೆಯನ್ನು ಕೈಗೊಳ್ಳಲು ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಸರಾಂಬರಿಸಲು ಆಗಾಗ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಳ್ಳುವ ಪದ್ಧತಿ ಬಂತು. ಮಂತ್ರಿವರ್ಯರ ಈ ಸಂದರ್ಶನಕಾಲದಲ್ಲಿ ಅವರನ್ನು ಹಲವಾರು ಕಾರ್ಯಕ್ರಮಗಳು ತಾನು ತಾನೆಂದು ಕಾದಿರುತ್ತವೆ. ಶಾಲೆ ಹಾಗೂ ಕಟ್ಟಡಗಳ ಉದ್ಘಾಟನೆ, ಶಾಲಾದಿನದ ಸಭೆಯ ಅಧ್ಯಕ್ಷಸ್ಥಾನ, ಅಡಿಗಲ್ಲು ಹಾಕುವುದು, ಸಂಕ ತೆರೆಯುವುದು, ವಿದ್ಯುದ್ದೀಪಗಳನ್ನು ಬೆಳಗಿಸುವುದು ಇವೇ ಮೊದಲಾದುವನ್ನು ಮಾಡುವುದರಲ್ಲಿಯೇ ಅವರ ದಿನಗಳು ವೆಚ್ಚವಾಗುತ್ತವೆಯೇ ಹೊರತಾಗಿ, ಜನತೆಯ ಸುಖದುಃಖದತ್ತ ಅವರ ದೃಷ್ಟಿಹರಿಯುವುದು ಅಪರೂಪವೇ ಆಗಿದೆ. ಮಾನ್ಯ ಮಂತ್ರಿಗಳು ಪೇಟೆಪಟ್ಟಣಗಳಲ್ಲಿ ಸಂದರ್ಶನವೀಯುವರೇ ಹೊರತಾಗಿ ಒಂದು ಮೈಲು ಒಳನಾಡಿನ ಹಳ್ಳಿಗರ ಯೋಗಕ್ಷೇಮವನ್ನು ವಿಚಾರಿಸುವುದಿಲ್ಲ. ಭಾರತದಂತಹ ಹಳ್ಳಿಗರ ದೇಶದಲ್ಲಿ ರಾಷ್ಟ್ರದ ಆಧಾರಸ್ತಂಭವಾದ ರೈತನೊಬ್ಬನ ಮುಖವನ್ನೂ ನೋಡದೆ, ಅಲ್ಲಿಯ ಪರಿಸ್ಥಿತಿಯನ್ನರಿಯುವ ನಮ್ಮ ಪ್ರತಿಭಾಶಾಲಿ ಮಂತ್ರಿಗಳತ್ತ ಸಾಮಾನ್ಯ ಜನರ ದೃಷ್ಟಿ ಕರಿಯಬೇಕಾದರೆ ಇಷ್ಟು ಸಮಯ ಬೇಕಾಯಿತು! ಇನ್ನತ್ತ ಗಮನವೀಯದೆ ನಿಸ್ಪೃಹರಂತೆ ಇದ್ದುಬಿಟ್ಟರೆ, ಮುಂದಿನ ಪರಿಸ್ಥಿತಿ ಬಹಳಷ್ಟು ಕೆಡುವುದೆಂಬ ತಿಳುವಳಿಕೆ ನಮ್ಮ ಸರಕಾರಕ್ಕೂ ಬಂತು

ಕೇಂದ್ರ ಸರಕಾರವು ಈ ವಿಧಾನದಲ್ಲಿ ರಾಜ್ಯಸರಕಾರಗಳಿಗೆ ಮಾದರಿಯನ್ನು ತೋರಿಸಿಕೊಟ್ಟಿದೆ ಭಾರತದ ಅತ್ಯುಚ್ಚ ಪದದಲ್ಲಿರುವ ರಾಷ್ಟ್ರಾಧ್ಯಕ್ಷರು ಹಿಂದೆಯೇ ಸ್ವೇಚ್ಛೆಯಿಂದ ತನ್ನ ಸಂಬಳದಲ್ಲಿ ಸ್ವಲ್ಪಾಂಶವನ್ನು ಬಿಟ್ಟಿದ್ದಾರೆ. ರಾಜ್ಯಗಳ ರಾಜ್ಯಪಾಲರೂ ಈ ರೀತಿ ಮಾಡುವ ನಿರೀಕ್ಷೆಯಿದೆ—ಆದರೆ, ಇದರಿಂದ ದೊಡ್ಡ ಮೊತ್ತವೇನೂ ಕೂಡಿಬರುವ ಲಕ್ಷಣವಿಲ್ಲ. ಆದರೂ ಉಳಿದವರಿಗೆ ಮಾರ್ಗದರ್ಶನವೆಂದು ಮಾತ್ರ ಇದನ್ನು ಉಲ್ಲೇಖಿಸಬಹುದು. ರಾಷ್ಟ್ರದ ಅಭಿವೃದ್ಧಿಗಾಗಿ ದೇಶದ ಪ್ರತ್ಯೇಕ ಪ್ರಜೆಯೂ ತನುಮನಧನಗಳಿಂದ ನೆರವೀಯುವುದು ಅಗತ್ಯವಿದೆ ಕೋಟ್ಯಂತರ ಅಧಿಕ ಸಂಬಳವಿರುವವರು ಈ ರೀತಿಯ ಅಲ್ಪಮಟ್ಟದ ತ್ಯಾಗವನ್ನು ಮಾಡಲು ಮುಂದಾದರೆ ಮಾತ್ರ ಇದರ ಫಲವು ದೊರೆಯಬಹುದು.

ಇತ್ತೀಚೆಗೆ ನಡೆದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಮಂತ್ರಿಗಳ ಸಂಬಳದ ಕುರಿತು ತುಂಬಿನ ಬಿಸಿ ಚರ್ಚೆ

(ಇನೇ ಪುಟ ನೋಡಿರಿ)

ANNOUNCEMENT

BRANCHES

of the Bank

will be opened shortly,

at

MYSORE and BANGALORE

THE VIJAYA BANK, LTD.

H. O. MANGALORE - 3.

Estd: 1931

ಭಕ್ತಿಯೋಗ

ಪರಮಾತ್ಮನನ್ನು ಆತನ ಸದ್ಭಕ್ತಿಯಿಂದಲೇ ಸಂತುಷ್ಟಗೊಳಿಸಬಹುದು.

ಶ್ರೀಮದ್ಭಗವದ್ಗೀತೆಯ ಮಹಿಮೆಯು ಅಪಾರವಾಗಿದೆ. ಇದು ಪರಮಾತ್ಮನ ದಿವ್ಯವಾಣಿಯಾಗಿದೆ. ರಚಯಿತರು ಸ್ವಯಂ ಭಗವಾನ್ ವೇದವ್ಯಾಸರು. ಸರ್ವ ವಿಘ್ನವಿನಾಶಕ ಶ್ರೀಗಣೇಶನೇ ಲೇಖಕನು. ಎಲ್ಲಾ ಸಂಪ್ರದಾಯಗಳ ಪ್ರಮುಖ ಆಚಾರ್ಯರು ಇದರ ಮೇಲೆ ಭಾಷ್ಯಗಳನ್ನು ಬರೆದಿದ್ದಾರೆ. ಇದರ ಮೇಲೆ ಅನೇಕ ಮಹಾಪುರುಷರು ಟೀಕೆಗಳನ್ನು ಬರೆದಿದ್ದಾರೆ. ದಿಗ್ವಿಜಯಿಗಳು ಪಂಡಿತೋತ್ತಮರು ಅದರ ವಿಷಯದಲ್ಲಿ ಭಾವವನ್ನು ವ್ಯಕ್ತಗೊಳಿಸಿದ್ದಾರೆ. ಇಷ್ಟೇ ಅಲ್ಲದೆ, ಹಿಂದೂ ಧರ್ಮದವರಲ್ಲದ ಅನೇಕ ವಿದೇಶೀ ಗ್ರಂಥಕರ್ತರು ಗೀತೆಯನ್ನು ತುಂಬಾ ಹೊಗಳಿದ್ದಾರೆ. ಸಾಧಾರಣ ಜಗತ್ತಿನ ಸರ್ವ ಭಾಷೆಗಳಲ್ಲಿ ಗೀತೆಯ ಭಾಷಾಂತರವಾಗಿದೆ. ಭೂಮಂಡಲದ ಇತರ ಯಾವ ಗ್ರಂಥಗಳಿಗೂ ದೊರಕದ ಮಾನ ಸನ್ಮಾನಗಳು ಗೀತೆಗೆ ದೊರಕಿವೆ. ಇದರಲ್ಲಿರುವ ಅಲೌಕಿಕ ಶಕ್ತಿಯಿಂದ ಯಾವ ವಿದ್ವಾಂಸರು. ಗೀತೆಯನ್ನೊಮ್ಮೆ ಓದಿದರೋ, ಅವರೆಲ್ಲರೂ ಘಂಟಾ ಘೋಷವಾಗಿ ಅದರ ಮಹಿಮೆಯನ್ನು ಹೊಗಳಿದರು ಅಂತಹ ಪರಮ ಪವಿತ್ರ ಗ್ರಂಥಂತ್ಯದ ವಿಷಯದಲ್ಲಿ ಬರೆಯಲು ನನ್ನಂತಹ ಅಲ್ಪಜ್ಞನ ಲೇಖನಿಯು ಎಷ್ಟು ಸಮರ್ಥವಾದೀತು? ಈ ಬಾಲ ಚಪಲತೆಯನ್ನು ಕ್ಷಮಿಸಬೇಕೆಂದು ವಿಜ್ಞಾಪನೆ.

ಗೀತೆಯು ಕರ್ಮ, ಭಕ್ತಿ, ಜ್ಞಾನಗಳ ತ್ರಿವೇಣೀ ಸಂಗಮವಾಗಿದೆ ಅದರ ಪ್ರತಿಯೊಂದು ಪದದಲ್ಲಿಯೂ ಅಲೌಕಿಕ ಅರ್ಥವು ತುಂಬಿದೆ. ಈ ಭಗವನ್ಮಯ ಗ್ರಂಥವನ್ನು ಯಾರು ಯಾವ ದೃಷ್ಟಿಯಿಂದ ನೋಡುವರೋ, ಅವರಿಗೆ ಅದೇರೀತಿ ದೃಷ್ಟಿಗೋಚರವಾಗುವುದು. ಕರ್ಮಪ್ರಧಾನ ಸಾಧನೆಯ ಮನಸ್ಕರಿಗೆ ಇದು ಕರ್ಮಪ್ರಧಾನ ಗ್ರಂಥವೆಂದೇ ತಿಳಿಯುವುದು. ಇದರಲ್ಲಿ ಅದಿಯಿಂದ ಅಂತ್ಯದವರೆಗೂ ಕರ್ತವ್ಯ ಕರ್ಮವನ್ನು ಮಾಡುವ ವಿಷಯವು ಒತ್ತಿ ಹೇಳಲ್ಪಟ್ಟಿದೆ. ಎಲ್ಲಿಯಾದರೂ ಭಕ್ತಿ, ಜ್ಞಾನಗಳ ವರ್ಣನೆ ಬಂದಿದ್ದರೆ ಅದು ಗೌಣ ಹಾಗೂ ಕರ್ಮದ ಪೋಷಕವಾಗಿದೆ. ಮಾತೃವಲ್ಲ ಇದೇ ಯುಕ್ತಿ ಯುಕ್ತವಾಗಿದೆ. ಯಾಕೆಂದರೆ ಯುದ್ಧರಂಗದಲ್ಲಿ ಕರ್ಮಶೀಲ ಅರ್ಜುನ ಹಾಗೂ ಶ್ರೀಕೃಷ್ಣರಿಂದ ಕರ್ಮದ ವಿವೇಚನೆಯೇ ಪ್ರಾಸಂಗಿಕವೆಂದು ತಿಳಿಯುವುದು.

ಭಕ್ತಿಯ ಪೂಜ್ಯತಮ ಆಚಾರ್ಯರ ಹೇಳಿಕೆಯಂತೆ ಗೀತೆಯಲ್ಲಿ ಕೇವಲ ಭಕ್ತಿಯ ವರ್ಣನೆ ಮಾತ್ರ ತುಂಬಿದೆ. ಕರ್ಮ, ಜ್ಞಾನಗಳು ಭಕ್ತಿಗೆ ಸಹಾಯಕವಾಗಿದೆ. ಗ್ರಂಥದ ಆದಿ ಅಂತ್ಯವನ್ನು ನೋಡಿದರೆ ಈ ಮಾತಿಗೆ ಪುಷ್ಟಿ ದೊರಕುವುದು. ಎರಡನೆ ಅಧ್ಯಾಯದ ಎಳನೇ ಶ್ಲೋಕದಲ್ಲಿ ಅರ್ಜುನನು ಶಿಷ್ಯ ಭಾವದಿಂದ ಪರಮಾತ್ಮನಿಗೆ ಪ್ರಪನ್ನೆ (ಶರಣಾಗತ) ನಾಗಿ ಆವನ ಶ್ರೇಯಸ್ಸಿಗೆ ಪ್ರಾರ್ಥಿಸಿದಾಗ, ಪರಮಾತ್ಮನು ಅವನ ಶಂಕೆಗಳನ್ನು ಸಮಾಧಾನಪಡಿಸಿ, ಅಂತ್ಯದಲ್ಲಿ ಸರ್ವ ಗುಹ್ಯತಮ ಉಪದೇಶವನ್ನು ಕೊಡುತ್ತಾ ಹೀಗೆ ಹೇಳಿದ್ದಾನೆ "ನೀನು ನನಗೆ ಏಕಮಾತ್ರ ಶರಣುಬಾ, ನಾನು ಸರ್ವ ಪಾಪಗಳಿಂದ ಮುಕ್ತಿಗೊಳಿಸುವೆನು, ಶೋಕಿಸಬೇಡ" (೧೮೬೬) ಇದರಿಂದ ಈ ಗ್ರಂಥದ ಭಕ್ತಿ ಪ್ರಧಾನವೆಂದು ಸಿದ್ಧವಾಗುವುದು.

ಇದೇರೀತಿ ಅದ್ವೈತ ಸಿದ್ಧಾಂತದ ಆದರಣೀಯ ಆಚಾರ್ಯರು ಇದರಲ್ಲಿ ಸಿದ್ಧಾಂತರೂಪವಾಗಿ ಕೇವಲ ಜ್ಞಾನದ ವಿವೇಚನೆಯೇ ತುಂಬಿದೆ. ಕರ್ಮ, ಭಕ್ತಿಯ ವರ್ಣನೆಯ ಮಲ ಮತ್ತು ವಿಕ್ಷೇಪ ರೂಪದ ಅಂತಃಕರಣದ ದೋಷಗಳನ್ನು ದೂರಮಾಡಿ ಜ್ಞಾನದ ಅಧಿಕಾರಿಯನ್ನಾಗಿ ಮಾಡಲು ಸಹಾಯಕವಾಗಿದೆ ಎನ್ನುವರು ಇದು ಯುಕ್ತಿ ಸಂಗತವೂ, ಶಾಸ್ತ್ರಸಮ್ಮತವೂ ಆಗಿದೆ. ಪರಮಾತ್ಮನು ಉಪದೇಶದ ಆರಂಭವನ್ನೂ ಜ್ಞಾನದಿಂದಲೇ ಮಾಡಿದ್ದಾನೆ. (ಗೀತಾ ೨ ೧೧). ಜ್ಞಾನದ ಮಹಿಮೆಯೂ ವಿಶೇಷವಾಗಿ ಹೇಳಲ್ಪಟ್ಟಿದೆ – "ನಹಿಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೆ" (೪ ೩೮)

ಇಂತಹ ಸರ್ವತೋಭದ್ರ ಅಲೌಕಿಕ ಶ್ರೀಮದ್ಭಗವದ್ಗೀತೆಯ ವಾಸ್ತವಿಕ ಆಶಯವನ್ನು ಪರಮಾತ್ಮನೇ ಬಲ್ಲನು. ಆದರೆ ಗೀತೆಯನ್ನು ನಿಷ್ಪಕ್ಷಪಾತದಿಂದ ವಿಚಾರ ಮಾಡಿದರೆ ಇದರಲ್ಲಿ ಕರ್ಮ, ಭಕ್ತಿ, ಜ್ಞಾನಗಳು ಸರಿಸಮಾನವಾಗಿ, ಪೂರ್ಣವಾಗಿ ಹಾಸು ಹೊಕ್ಕಾಗಿವೆ ಗೀತೆಯ ಅಧ್ಯಯನವನ್ನು ಮಾಡುವ ಜಿಜ್ಞಾಸು, ತತ್ವಾಲೋಚಕ ವಿದ್ವಾಂಸರು ಅದನ್ನು ತಮ್ಮ ಅಭಿಪ್ರಾಯಕ್ಕೆ ಸೂಕ್ತವಾದಿಸಿ ಆ ದೃಷ್ಟಿಯಿಂದ ನೋಡಬಾರದು. ಗೀತೆಯ ಅರ್ಥವನ್ನು ತಮಗೆ ಬೇಕಾದಂತೆ ತಿರುಗಿಸಿಕೊಳ್ಳಬಾರದು. ತಾವೇ ಗೀತೆಯ ಅನುವರ್ತಿಗಳಾಗಿ, ಅದರ ಮೂಲ ಶ್ಲೋಕ, ಭಾವಗಳನ್ನು ಮನನ ಮಾಡಬೇಕು. ಗೀತೆಯಲ್ಲಿ ಒಡೆದಂತೆ, ಅದರ ಅನುಸಾರವಾಗಿ ಸಾಧನಾತ್ಮಕ ವಿಚಾರವನ್ನು ಮಾಡಿ, ಪರಮಾತ್ಮ ಸ್ವರೂಪವನ್ನು ತಿಳಿಯಲು ಪ್ರಯತ್ನಿಸಬೇಕು. ಅದರ ಭಾವಗಳನ್ನು ತಿಳಿಯಲು ಶ್ರೀಕೃಷ್ಣನಿಗೆ ಅನನ್ಯ ಶರಣರಾಗಿ, "ಪರಮಾತ್ಮನು ತನ್ನ ದಿವ್ಯ ವಾಣಿಯ ಯಥಾರ್ಥ ಭಾವವನ್ನು ನನಗೆ ಸೂಚಿಸುವನು" ಎಂಬ ದೃಢ ವಿಶ್ವಾಸವನ್ನು ತಳೆದರೆ ನಿಜವಾಗಿಯೂ ಅದನ್ನು ತಿಳಿಯಲು ಶಕ್ತರಾಗಬಹುದು.

ಯುದ್ಧಾರಂಭ ಸಮಯದಲ್ಲಿ ಸ್ವಜನ ಬಾಂಧವರ ನಾಶದ ಶಂಕೆಯಿಂದ ವ್ಯಾಕುಲನಾಗಿ, ಅರ್ಜುನನು ಪರಮಾತ್ಮನಿಗೆ ಶರಣುಹೋಗಿ, ಅವನಿಂದ, ಶ್ರೇಯ-ಲೌಕಿಕ ಉನ್ನತಿಯನ್ನಲ್ಲ, ಆಪಿತು ತನ್ನ ನಿಶ್ಚಿತ ಶ್ರೇಯ-ಕಲ್ಯಾಣದ ಮಾರ್ಗವನ್ನು ಕೇಳಿದನು "ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿತನ್ಮೇ" (೨-೭) "ತದೇಕಂ ವದ ನಿಶ್ಚಿತ್ಯಮೇನ ಶ್ರೇಯೋಹಮಾಪ್ನುಯಾಮ್" (೩ ೨) "ಯಚ್ಛ್ರೇಯ ಏತದೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್" (೫-೧). ಆಗ ಪರಮಾತ್ಮನು ಸಂಪೂರ್ಣ ವೇದ ಉಪನಿಷದಾದಿಗಳಲ್ಲಿ ಹೇಳಲ್ಪಟ್ಟ ಸಮಸ್ತ ಕಲ್ಯಾಣಮಯ ಸಾಧನೆಗಳ ಸಾರವನ್ನು ಗೀತೆಯ ರೂಪದಲ್ಲಿ ಹೇಳುವನು. ನಿಜವಾಗಿ ನೋಡಿದರೆ ಪರಮಾತ್ಮನ ದಿವ್ಯ ವಾಣಿಯೇ ವೇದಾದಿಗಳ ಸಾರವಾಗಿದೆ. ಅದೂ ವೇದ-ಶಾಸ್ತ್ರಗಳ ಅದರಕ್ಕಾಗಿಯೇ ಶ್ರೀಕೃಷ್ಣನು ಅವುಗಳ ಪ್ರಮಾಣವನ್ನು ಕೊಟ್ಟಿದ್ದಾನೆ. (೧೩-೪). ಪರಮಾತ್ಮನು ಶಾಸ್ತ್ರೋಕ್ತ ಸಾಧನಗಳಲ್ಲಿ ಯಾವುದರ ಅಭಾವವಿದೆಯೋ, ಅದನ್ನು ಪೂರ್ಣಗೊಳಿಸಿ, ಪರಸ್ಪರ ವಿರೋಧವೆಂದು ಪ್ರತೀತವಾಗುವುದನ್ನು ನಿರಾಕರಣೆ ಮಾಡಿ, ಮತ್ತು ಆ ಸಿದ್ಧಾಂತಗಳನ್ನು ಪರಿಮಾರ್ಜನೆ ಮಾಡಿ ಕೆಲವೇ ಶಬ್ದಗಳಲ್ಲಿ ವಿಸ್ತಾರಪೂರ್ವಕವಾಗಿ ಅವನ್ನು ತಿಳಿಸಿದನು. ಒಂದೇ ವಿಷಯವನ್ನು ಅನೇಕ ವಿಧಾನಗಳಿಂದ ತಿಳಿಸಿದರೂ ವಿರುದ್ಧ ದೋಷವಿಲ್ಲದುದೂ, ಸ್ವಲ್ಪ ಶಬ್ದಗಳಲ್ಲಿ ಕೇಳಿದರೂ ಅಭಾವವಿಲ್ಲದುದೂ ಅದರ ವಿಶೇಷತೆಯಾಗಿದೆ. ಕೆಲವೆಡೆಗಳಲ್ಲಿ ಶ್ಲೋಕಾರ್ಥಗಳ ಪುನರುಕ್ತಿಯು ಬಂದರೂ, ಅವು ಸಹೇತುಕವಾಗಿವೆ, ವಿಚಾರಮಾಡಿ ನೋಡಿದರೆ ಅಲ್ಲಿ ತುಂಬಾ ವಿಲಕ್ಷಣತೆ ಇರುವುದು ಕಂಡುಬರುವುದು.

ಕಲ್ಯಾಣಕಾರೀ ಶಾಸ್ತ್ರ, ಸಂಪ್ರದಾಯಗಳ ಆಚಾರ್ಯರ ಸಿದ್ಧಾಂತಗಳಲ್ಲಿ ಅನೇಕ ಮತಭೇದಗಳಿವೆ ಅದ್ವೈತ, ದ್ವೈತ, ದ್ವೈತಾದ್ವೈತ, ವಿಶಿಷ್ಟಾದ್ವೈತ, ಶುದ್ಧಾದ್ವೈತ–ಇತ್ಯಾದಿ. ಇವೆಲ್ಲದರ ಅಂತರ್ಭಾವವನ್ನು ಅದ್ವೈತ ಹಾಗೂ ದ್ವೈತಗಳಲ್ಲಿಯೇ ಮಾಡಬಹುದು. ಇವರಡರ ವರ್ಣನೆಯನ್ನೇ ಪರಮಾತ್ಮನು ಸಾಂಖ್ಯ ಮತ್ತು ಯೋಗನಿಷ್ಠಾ ಎಂಬ ಹೆಸರಿನಿಂದ ವರ್ಣಿಸಿದ್ದಾನೆ. ಇವನ್ನೇ ಅಭೇದ, ಮತ್ತು ಭೇದ ಮಾರ್ಗಗಳೆಂದೂ ಹೇಳುವರು. ಸಾಂಖ್ಯಯೋಗದಲ್ಲಿ ಆತ್ಮ, ಪರಮಾತ್ಮರ ಭೇದವನ್ನು ತಿಳಿದು ಸಾಧನೆ ಮಾಡುವರು ಅದು ಈ ಲೇಖದ ವಿಷಯವಲ್ಲದ್ದರಿಂದ ಅದನ್ನು ಬಿಟ್ಟು ಯೋಗನಿಷ್ಠೆಯನ್ನೇ ತಿಳಿಯುವ. ಭಕ್ತಿಯು ಭಕ್ತಿಯು ಯೋಗನಿಷ್ಠೆಯ ಅಂತರ್ಗತವಾಗಿದೆ. ಭಗವದಾಜ್ಞೆಯಂತೆ ಫಲ, ಆಸಕ್ತಿಗಳನ್ನು ತ್ಯಾಗಮಾಡಿ ಕರ್ತವ್ಯ ಕರ್ಮಗಳ ಆಚರಣೆಯೇ ಯೋಗನಿಷ್ಠೆ.

ಇದರಲ್ಲಿ ಮೂರು ಪ್ರಕಾರಗಳಿವೆ. (೧) ಕರ್ಮಪ್ರಧಾನ (೨) ಭಕ್ತಿಮಿಶ್ರಿತ (೩) ಭಕ್ತಿಪ್ರಧಾನ. ಈ ಮೂರರಲ್ಲಿ ಭಕ್ತಿಪ್ರಧಾನ ಕರ್ಮನಿಷ್ಠೆಯನ್ನೇ ಪರಮಾತ್ಮನು ಅತಿಶಯವಾಗಿ ಪ್ರಶಂಸಿಸಿದ್ದಾನೆ. ಅಲ್ಲದೆ ಸ್ಪಷ್ಟ ಶಬ್ದಗಳಲ್ಲಿ "ಎಲ್ಲ ಪ್ರಕಾರದ ಯೋಗಿಗಳಲ್ಲಿಯೂ, ಮದ್ಗತಚಿತ್ತನಾಗಿ ಶ್ರದ್ಧಾಪೂರ್ವಕ ನನ್ನನ್ನು ಭಜಿಸುವನೇ ಸರ್ವಶ್ರೇಷ್ಠನು" (೬-೪೭) ಎಂದು ಘೋಷಿಸಿದ್ದಾನೆ.

ಗೀತೆಯಲ್ಲಿ ಪರಮಾತ್ಮನು ವ್ಯವಹಾರದಲ್ಲಿ ಪರಮಾರ್ಥ ಸಿದ್ಧಿರೂಪ ವಿಲಕ್ಷಣ ಕಲೆಯನ್ನು ತೋರಿಸಿ ಕೊಟ್ಟಿದ್ದನೆ, ಇದರಿಂದ ವರ್ಣ, ಆಶ್ರಮಗಳ ಭೇದವಿಲ್ಲದೆ ಪ್ರತಿಯೋರ್ವ ವ್ಯಕ್ತಿಯೂ ಪರಮಾತ್ಮನಿಗೆ ಶರಣು ಹೋಗಿ ಶೀಘ್ರಾತಿಶೀಘ್ರ, ಸುಗಮತಾ ಪೂರ್ವಕ ಅವನನ್ನು ಪಡೆಯಬಹುದು. ಈ ಶರಣಾಗತಿಯನ್ನೇ ಭಗವದ್ಭಕ್ತಿ, ಭಗವದಾಶ್ರಯ ಆದಿ ಶಬ್ದಗಳಲ್ಲಿ ವರ್ಣಿಸಿದ್ದಾನೆ. ಕೆಲವೆಡೆಗಳಲ್ಲಿ ಶರಣಾಗತಿಯನ್ನು ಭಕ್ತಿಗೂ (೧೯-೩೨,೩೩ ೩೪), ಕೆಲವೆಡೆಗಳಲ್ಲಿ ಭಕ್ತಿಯನ್ನು ಶರಣಾಗತಿಗೂ (೧೧-೫೪, ೫೫) ಹೋಲಿಸಿಕೊಂಡಿದ್ದಾನೆ. ಇದರಿಂದ ಶರಣಾಗತಿ ಹಾಗೂ ಭಕ್ತಿಗಳಲ್ಲಿ ಅಂತರವಿಲ್ಲೆಂದು ತಿಳಿಯಬಹುದು.

ಸಂಪೂರ್ಣ ಗೀತೆಯನ್ನು ಆರಾರು ಅಧ್ಯಾಯಗಳ ಮೂರು ಷಟ್ಕಗಳಲ್ಲಿ ವಿಭಾಗಿಸಬಹುದು. ಮೊದಲಿನ ಆರು ಅಧ್ಯಾಯಗಳಲ್ಲಿ ಕರ್ಮದ, ಮಧ್ಯದ ಆರು ಅಧ್ಯಾಯಗಳಲ್ಲಿ ಉಪಾಸನೆಯ, ಕೊನೆಯ ಆರು ಅಧ್ಯಾಯಗಳಲ್ಲಿ ಜ್ಞಾನದ ವರ್ಣನೆಯು ಮಾಡಲ್ಪಟ್ಟಿದೆ. ಮೊದಲನೇ ಷಟ್ಕದಲ್ಲಿ ಮಾಡಿದಷ್ಟು ವಿಸ್ತಾರ ಪೂರ್ವಕ ಕರ್ಮ ಕಾಂಡದ ವರ್ಣನೆಯು ಉಳಿದೆರಡು ಷಟ್ಕಗಳಲ್ಲಿಲ್ಲ. ಅಂತೇ ಎರಡನೇ ಷಟ್ಕದ್ದಷ್ಟು ಉಪಾಸನೆಯ, ವರ್ಣನೆಯೂ ಮೂರನೇಷಟ್ಕದಲ್ಲಿದ್ದಷ್ಟು ಜ್ಞಾನದ ವರ್ಣನೆಯೂ, ಉಳಿದ ಷಟ್ಕಗಳಲ್ಲಿಲ್ಲ. ಇದರಿಂದ ಮೊದಲನೇ ಷಟ್ಕವನ್ನು ಕರ್ಮ ಕಾಂಡಪರ, ಎರಡನೇದನ್ನು ಉಪಾಸನಾ ಕಾಂಡಪರ, ಮೂರನೇದನ್ನು ಜ್ಞಾನ ಕಾಂಡಪರವೆಂದು ಹೇಳಬಹುದು. ಆದರೆ ಎರಡನೇ ಷಟ್ಕದಲ್ಲಿ- ಎಳರಿಂದ ಹನ್ನೆರಡನೇ ಅಧ್ಯಾಯದ ವರೆಗೆ—ಪರಮಾತ್ಮನು ಅತ್ಯಂತ ವಿಲಕ್ಷಣತೆಯಿಂದ ಭಕ್ತಿಯ ವರ್ಣನೆ ಮಾಡಿದ್ದಾನೆ. ಜ್ಞಾನ, ಕರ್ಮಗಳ ವಿವರಣೆ ಚಿಷ್ಟೊಂದು ಸಂವಿಶ್ರ

(೧೧ನೇ ಪುಟ ನೋಡಿರಿ)

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮಾ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ

ZANDU ದಾಮೋದರ & ಕೊ,
ಮದ್ರಾಸ್—3.

ಭಾರತೀಯ ಸಂಸ್ಕೃತಿ

ಏಶಿಯದ ವಿಶಾಲ ಪ್ರದೇಶದಲ್ಲಿ ಸಾಂಸ್ಕೃತಿಕ ಐಕ್ಯವನ್ನು ಸ್ಥಾಪಿಸಿದೆ!

ಜಗತ್ತಿನ ಪ್ರಾಚೀನತಮ ಸಂಸ್ಕೃತಿಗಳಲ್ಲಿ ಭಾರತೀಯ ಸಂಸ್ಕೃತಿಯೂ ಒಂದಾಗಿದೆ. ಇತರ ಸಂಸ್ಕೃತಿಗಳಿಂದ ಭಿನ್ನವಾದ ಒಂದು ವೈಶಿಷ್ಟ್ಯ ನಮ್ಮ ಸಂಸ್ಕೃತಿಯಲ್ಲಿದೆ. ಏಶಿಯಾ ಖಂಡದ ಕಲವಾರು ಭಾಗಗಳನ್ನು ನಾಗರಿಕತನ್ನಾಗಿ ಮಾಡಿದ ಘನಸ್ತಿಕೆ ನಮ್ಮ ಭಾರತೀಯ ಸಭ್ಯತೆಯದು ಯುರೋಪ್ ಭೂಭಾಗವನ್ನು ಸಾಂಸ್ಕೃತಿಕ ಹಾಗೂ ನಾಗರಿಕ ಚಟುವಟಿಕೆಯಿಂದ ಕೂಡಿರುವಂತೆ ಮಾಡಿದ ರೋಮ್ ಮತ್ತು ಯೂನಾನ್‌ಗಳಂತಯೇ ಭಾರತವೂ ಏಶಿಯಾದಲ್ಲಿ ತನ್ನ ಸಂಸ್ಕೃತಿಯಿಂದ ಜನರನ್ನು ಎತ್ತರಿಸಿದೆ. ಆದರೆ ದೌರ್ಭಾಗ್ಯವಶದಿಂದ ಇತಿಹಾಸದ ಪುಟಗಳಲ್ಲಿ ರೋಮನ್ ಮತ್ತು ಯೂನಾನ್ ಸಂಸ್ಕೃತಿಗಳ ವಿಮರ್ಶೆ ತುಂಬಿದ್ದರೂ ಏಶಿಯದ ಬಹ್ವಂಶದಲ್ಲಿ ಸಭ್ಯತೆಯನ್ನು ಹರಡಿದ ಭಾರತೀಯ ಸಂಸ್ಕೃತಿಯ ವಿಚಾರವಾಗಿ ಅಖಂಡ ಇತಿಹಾಸವೂ ಮೌನವ್ರತವನ್ನು ತಾಳಿದೆ. ಇದು ಮಹದಾಶ್ಚರ್ಯಕರ ವಿಷಯವಲ್ಲವೇನು?

ಹಿಮಾಲಯದ ಹಿಮಾಚ್ಛಾದಿತ ಉತ್ತರ ಕ್ಷೇತ್ರ ಮತ್ತು ಹಿಂದೂ ಮಹಾಸಾಗರದ ಉತ್ತಾಲ ತರಂಗಗಳು ಭಾರತೀಯ ಬೋಧಕರನ್ನು ತಡೆಹಿಡಿಯುವ ಕಾರ್ಯದಲ್ಲಿ ಅಸಮರ್ಥವಾಗಿಯೇ ಉಳಿದುವು. ಭಾರತಕ್ಕೆ ಪರರಾಷ್ಟ್ರಗಳೊಂದಿಗೆ ಬೆರೆಯದೆ, ಕೇವಲ ಏಕಾಂತವಾಗಿಯೇ ಉಳಿಯಲಿಲ್ಲ. ಸಮಾದಿಷ್ಟ ಬಂಗಾಳವು ಜಗತ್ತಿನ ಇತರ ದೇಶಗಳೊಡನೆ ಯಾವ ಸಂಬಂಧವನ್ನೂ ಇಟ್ಟುಕೊಂಡಿಲ್ಲವೆಂಬ ನಂಬಿಗೆಯು ಸರಿ ಧಾರವಾಯಿತೆಂದು ನವೀನ ಶೋಧನೆಗಳು ಸಿದ್ಧಮಾಡಿ ಕೊಟ್ಟಿವೆ.

ವಾಸ್ತವಿಕ ದೃಷ್ಟಿಯಿಂದ ನೋಡುವುದಾದರೆ, ಅತ್ಯಂತ ಪ್ರಾಚೀನ ಕಾಲದಿಂದಲೂ ನೆಲ ಮತ್ತು ಜಲ ಮಾರ್ಗಗಳ ಮೂಲಕ ಸಾಂಕೇತಿಕ ಭಾರತೀಯರು ಆಗಿನ ಕಾಲದಲ್ಲಿ ಜ್ಞಾತವಾಗಿದ್ದ ಜಗತ್ತಿನ ಎಲ್ಲ ಮೂಲೆ ಮೂಲೆಯಲ್ಲಿಯೂ ಸಂಬಂಧವನ್ನು ಇಟ್ಟುಕೊಂಡಿದ್ದರು. ಬೆಬಿಲೋನಿಯಾ, ಅಸೀರಿಯಾ ಮತ್ತು ಭೂಮಧ್ಯ ಸಾಗರದ ಸಮೀಪದ ಪ್ರಾಚೀನ ರಾಜ್ಯಗಳೊಂದಿಗೆ ಭಾರತೀಯ ವ್ಯಾಪಾರಿಕ ಸಂಬಂಧವಿತ್ತು ಎಂಬುದು ಸಾಹಿತ್ಯಿಕ ಮತ್ತು ಪುರಾತತ್ವಗಳ ಸಾಕ್ಷಿಯಿಂದ ದೃಢಪಡಿಸುತ್ತದೆ. ರೋಮ್ ಸಾಮ್ರಾಜ್ಯದೊಂದಿಗೂ ಪ್ರಾಚೀನ ಭಾರತವು ವ್ಯಾಪಾರವನ್ನು ಮಾಡಿಕೊಂಡಿತ್ತೆಂಬುದ ಸಹ ಈಗ ತಿಳಿದುಬಂದಿದೆ. ಭಾರತದ ವಿಭಿನ್ನ ಭಾಗಗಳಲ್ಲಿ ರೋಮನ್ ಸಾಮ್ರಾಜ್ಯದ ಸುವರ್ಣ ಮುದ್ರೆಗಳು ದೊರಕಿವೆ. ಭಾರತೀಯ ವಿಲಾಸತೆಯ ವಸ್ತುಗಳಿಗೆ ಒದಲಾಗಿ ಚಿನ್ನದ ಮುದ್ರೆಗಳು ಕೋಟಿಗಟ್ಟಲೆಯಲ್ಲಿ ರೋಮನ್ ಸಾಮ್ರಾಜ್ಯದಿಂದ ದೊರೆಯುತಿದ್ದುವೆಂಬ ಪ್ಲಿನಿಯ ಅರ್ತನಾದವು ಕೇವಲ ಅಕ್ರೋಶವಲ್ಲವೆಂದು ತಿಳಿದಿದೆ.

ದಿನಗಳೆದಂತೆ ಭಾರತೀಯ ಸಂಬಂಧವು ಪಾಶ್ಚಾತ್ಯ ರಾಷ್ಟ್ರಗಳೊಂದಿಗೆ ಬೆಳೆಯುತ್ತಾ ಬಂದಿತು. ಆ ಮೇಲೆ ಕಾಲಕ್ರಮೇಣ ಭಾರತೀಯ ಸಂಸ್ಕೃತಿಯೂ ಆ ದೇಶಗಳಲ್ಲಿ ಪಸರಿಸತೊಡಗಿತು. ಭಾರತೀಯ ದರ್ಶನಿಕರು ಹಾಗೂ ತತ್ವವೇತ್ತರು ಯೂನಾನ್‌ನಲ್ಲಿ ಭಾರತೀಯ ಸಂಸ್ಕೃತಿಯ ಪ್ರಚಾರಕಾರ್ಯವನ್ನು ಮಾಡುತಿದ್ದರು. ಪೈಥಾಗೋರನ ತತ್ವಜ್ಞಾನವು ಭಾರತೀಯ ತತ್ವಜ್ಞಾನದಿಂದ ಪ್ರಭಾವಿತವಾಗಿತ್ತು. ಅಲ್ಲದೆ ಪ್ರಾರಂಭಿಕ ನಾಸ್ತಿಕ ಕ್ರಿಶ್ಚಿಯನ್ ಹಾಗೂ ಇವರಿಗೆಗಳು ಸಹ ಭಾರತೀಯ ತತ್ವಜ್ಞಾನದಿಂದ ಪ್ರಭಾವಿತವಾಗಿವೆ. ಅಶೋಕ ಮಹಾರಾಜನಿಂದ ಕಳಿಹಿಸಲ್ಪಟ್ಟ ಧರ್ಮಪ್ರಚಾರಕರು ಯುರೋಪ್ ಮತ್ತು ಆಫ್ರಿಕಾ ಭೂಭಾಗಗಳಿಗೂ ಹೋಗಿ ತಮ್ಮ ಪ್ರಚಾರಕಾರ್ಯದಲ್ಲಿ ತಲ್ಲೀನರಾಗಿದ್ದರು. ಆಲೆಗ್ಸಾಂಡ್ರಿಯವು ಆ ಕಾಲದಲ್ಲಿ ಭಾರತೀಯ ಸಂಸ್ಕೃತಿ ಮತ್ತು ಸಭ್ಯತಾ ಪ್ರಚಾರದ ದೊಡ್ಡ ಕೇಂದ್ರವಾಗಿತ್ತೆಂಬುದು ಸಂದೇಹಾತೀತವಾಗಿದೆ. ಕ್ರೈಸ್ತ ಪಾದ್ರಿಗಳು ಭಗವಾನ್ ಬುದ್ಧನನ್ನು ಒಬ್ಬ ಸಂತ ಹಾಗೂ ಭಕ್ತನೆಂದೆ ಮಾನಿಸಿದ್ದರು. ಈ ಧರ್ಮದ ಅನೇಕ ಸಿದ್ಧಾಂತ ಒನಂತವಿದಿ ಮತ್ತು ಸಂಸ್ಕಾರಗಳ ಬಕ್ಷಂಶವು ಬೌದ್ಧರಿಂದ ಸ್ವೀಕರಿಸಲ್ಪಟ್ಟಿದೆ ಎಂದೂಹಿಸಲು ತಕ್ಕ ಆಧಾರವಿದೆ.

ಕೇವಲ ಬೌದ್ಧಧರ್ಮಮಾತ್ರವಾರತದ ಸೀಮೆಯನ್ನು ದಾಟಿ ಪ್ರಚಾರವಾಗಿತ್ತೆಂದು ಅರ್ಥವಲ್ಲ. ಕ್ರಿ. ಶ. ಮೂರ ಶತಮಾನಗಳ ಪೂರ್ವದಲ್ಲಿ ಹಿಂದೂ ಮತವೂ ಆರ್ಮೀನಿಯಾದಲ್ಲಿ ಹರಡಿತ್ತು. ಭಾರತ ಮತ್ತು ಆರ್ಮೀನಿಯಾಗಳ ನಡುವಣ ಸಂಬಂಧ ವಿಚಾರದ ಕಲವೊಂದು ಆಧಾರಗಳು ಇವೀಗ ಕೆಲದಿನಗಳ ಹಿಂದೆ ಬಳಕೆಗೆ ಬಂದುವು. ಭಾರತದ ಕೆಲವು ರಾಜರ ಹೆಸರುಗಳ ಉಲ್ಲೇಖವಿರುವ, ಆರ್ಥಿಕ ಸಂಬಂಧವಲ್ಲದೆ, ಎರಡಕ್ಕೆ ಕೆಲವೊಂದ ವಸ್ತುಗಳೂ ಇದ್ದವು ಎಂಬುದಕ್ಕೆ ಆಧಾರಭೂತವಾದ ಕೆಲವು ಹಸ್ತಪ್ರತಿಗಳ ಈ ದೇಶಗಳ ನಡುವೆ ಪ್ರಾಚೀನ ಕಾಲದಿಂದಲೂ ವ್ಯವಹಾರವು ಒಳಕೆಯಾಗಿತ್ತೆಂಬದನ್ನು ದೃಢಪಡಿಸುತ್ತದೆ. ಈ ವಿಚಾರದಲ್ಲಿ ಇನ್ನೂ ಸಂಶೋಧನೆಗಳು ನಡೆದರೆ, ಮತ್ತೂ ಹೆಚ್ಚಿನ ವಿವರಗಳು ದೊರೆಯುವುದು ಸಾಧ್ಯ. ಸೋವಿಯೆಟ್ ರಶ್ಯಾದವರು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳತಿದ್ದಾರೆ.

ರೆಬನಾನಿನ ಸಮೀಪದಲ್ಲಿಯೇ ಕೃಷ್ಣ ಮಂದಿರವೊಂದಿತ್ತು. ಆ ಮಂದಿರದಲ್ಲಿ ಶ್ರೀಕೃಷ್ಣನ ದೊಡ್ಡ ವಿಗ್ರಹವೊಂದು ವಿರಾಜಿಸ ತಿತ್ತು. ಈ ದೇಗುಲವನ್ನು ಹಾಳುಗಡವರು ಕ್ರಿಶ್ಚಿಯನ್ನರು ಬಂದರು. ಆದರೆ ಅಸಾಧಾರಣ ಸಾಮರ್ಥ್ಯದಿಂದ ಅಲ್ಲಿನ ಹಿಂದೂ ಜನರು ಅದರ ರಕ್ಷಣೆಯನ್ನು ಮಾಡಿದರು. ಈ ಯುದ್ಧದ ರೋಮಾಂಚಕಾರಿ ವರ್ಣನೆಯು ಈಗಲೂ ಉಪಲಬ್ಧವಾಗಿದೆ. ಇಸ್ಲಾಮಿ ಜನರು ಒರುವುದಕ್ಕೆ ಮೊದಲು ಪಶ್ಚಿಮ ಏಶಿಯಾದ ಧರ್ಮವು ಹಿಂದೂ ಆಗಿತ್ತ. ವಿಶ್ವದ ಈ ಭೂಭಾಗದಲ್ಲಿ ಹಿಂದೂ ಧರ್ಮದ ಪತಾಕೆಯು ಎತ್ತರದಲ್ಲಿ ಹಾರಾಡುತ್ತಾ ಇತ್ತು.

ಇನ್ನಿತರ ವಿಧಾನಗಳಿಂದಲೂ ಪಶ್ಚಿಮ ದೇಶಗಳಲ್ಲಿ ಭಾರತದ ಪ್ರಭಾವವು ಬಿದ್ದಿರುವುದು ಇವುಗಳಲ್ಲಿ ಕಲೆ ಹಾಗೂ ವಿಜ್ಞಾನ ಕ್ಷೇತ್ರಗಳಲ್ಲಿ ಭಾರತದ ಕೊಡುಗೆಯು ಗುರುತರವು ಮತ್ತು ಗಣಿತ ಶಾಸ್ತ್ರದಲ್ಲಿ ದಶಮಾಂಶ ಪದ್ಧತಿಯು ಬಹಳ ಮಹತ್ವವಾದುದು. ಔತಿಕ ವಿಜ್ಞಾನದ ಭಿತ್ತಿಯೇ ಇದು. ದಶಮಾಂಶ ಪದ್ಧತಿಯನ್ನು ದೂರವಿರಿಸಿದರೆ ಗಣಿತದಲ್ಲಿ ಪ್ರಗತಿಯೂ ಆಗುವುದ ಅಸಾಧ್ಯ. ಇಂತಹ ಅತ್ಯಮೂಲ್ಯವಾದ ದಶಮಲದ ಇಲ್ಲವೇ ದಶಮಾನ ಪ್ರಣಾಲಿಯು ವಿಶ್ವಕ್ಕೆ ಭಾರತೀಯ ಕೊಡುಗೆಯಾಗಿದೆ. ಇದರಿಂದಾಗಿ, ಪಾಶ್ಚಾತ್ಯ ರಾಷ್ಟ್ರಗಳ ಭಾರತದ ಋಣಿಗಳಾಗಿವೆ. ಕೇವಲ ವಿಜ್ಞಾನ ಮಾತ್ರವಲ್ಲ. ಯುರೋಪಿನ ಸಾಮಾನ್ಯ ಸಾಹಿತ್ಯವೂ ಭಾರತೀಯ ಸಾಹಿತ್ಯದಿಂದ ಪ್ರಭಾವಿತವಾಗಿದ "ಪಂಚತಂತ್ರ"ದ ಅನೇಕ ದೆವ್ವ ಪ್ರಾಯಣ ಯುರೋಪಿನ ಎಲ್ಲಬಾಷೆಗಳಲ್ಲಿಯೂ ಪ್ರಕಟವಾಗಿವೆ. ಅಂತರಿಕ್ಷ ವಿದ್ಯೆ ಮತ್ತು ಜ್ಯೋತಿಷ ಶಾಸ್ತ್ರಗಳಲ್ಲಿ ಇತ್ತೀಚಿನ ಕೆಲ ಸಂಶೋಧನೆಗಳ ನಡುವೆ ಸಾಕಷ್ಟು ಸಾಮ್ಯವಿದೆ. ಈ ಪ್ರಧಾನಗಳು ನಡೆದಿವೆ. ಯೂರೋಪು ಮತ್ತು ಆಫ್ರಿಕಾಗಳಿಗಿಂತಲೂ ಪಶ್ಚಿಮ ಏಶಿಯಾದಲ್ಲಿ ಭಾರತದ ಪ್ರಭಾವ ಅಧಿಕ ಪ್ರಮಾಣದಲ್ಲಿ ಬಿದ್ದಿದೆ. ನಾಮಿಷ್ಯ ಹಾಗೂ ನಿಷ್ಟತ್ವಗಳಿಂದ ಇದನ್ನು ಸ್ವಾಭಾವಿಕವನ್ನಾಗಿ ಕರೆಯಬಹುದು. ಚಿಕಿತ್ಸಾ ಶಾಸ್ತ್ರ ಮತ್ತು ಇತ್ಯ ವಿಜ್ಞಾನಗಳಿಗಾಗಿ ಇರಾನವು ಭಾರತದ ಋಣಿಯಾಗಿದೆ. ಸುಮಾರು ರಾಜ ನೌಶೀರವಾನ ಕಾಲದಲ್ಲಿ ಎಂದರೆ ಕ್ರಿ. ಶ. ಐನೆ ಶತಮಾನದ ಮಧ್ಯಕಾಲದ್ದ ಬಾರಜಾಯೇಹ್ ಎಂಬವನು ಭಾರತೀಯ ವೈದ್ಯಶಾಸ್ತ್ರ ಮತ್ತುಳಿದ ವಿಜ್ಞಾನಗಳಲ್ಲಿ ಪಾಂಡಿತ್ಯಪ್ರಾಪ್ತ ಮತ್ತು ನಿಷ್ಣಾತನಾಗಲು ಭಾರತಕ್ಕೆ ಬಂದನೆಂದು ಇತಿಹಾಸದಲ್ಲಿ ತಕ್ಕ ದಾಖಲೆಯಿದೆ.

ಒಂದು ಕಾಲದಲ್ಲಿ ಪಾಶ್ಚಾತ್ಯ ಜಗತ್ತು ಭಾರತೀಯ ಸಂಸ್ಕೃತಿಯಿಂದ ಪ್ರಭಾವಿತವಾಗಿತ್ತು ಎಂಬುದು ತಿಳಿದು ಬರುತ್ತದೆ. ಆದರೆ ಮುಂದೆ ಪಾಶ್ಚಾತ್ಯ ಸಂಸ್ಕೃತಿಯ ಬದಲೇ ಭಾರತೀಯ ಸಂಸ್ಕೃತಿಯು ಅಧಿಕ ತರದಲ್ಲಿ ಪ್ರಭಾವಿತವಾಯಿ ನ್ನಬಹುದೆ. ಈ ವಿಚಾರಗಳು ಖೋಧನೆ ಹಾಗೂ ಚೀನೀ ಸಾಹಿತ್ಯಗಳಿಂದ ಸುಸ್ಪಷ್ಟವಾಗುತ್ತದೆ. ಮಧ್ಯ ಏಶಿಯಾದಲ್ಲಿ ಸುಮಾರು ಕ್ರಿ. ಶ. ಏಳನೆ ಶತಮಾನದವರಗೆ ಭಾರತೀಯ ಸಂಸ್ಕೃತಿಯು ವ್ಯಾಪ್ತವಾಗಿತ್ತೆಂದು ಇತಿಹಾಸವು ತಿಳಿಸುತ್ತದೆ. ತಕಲಾಯಕನ್ ಮರುಭೂಮಿಯಲ್ಲಿ ಮಳಲನ್ನು ೩೦ ಅಡಿಗಳಷ್ಟು ಅಗದ ಗ, ಅಲ್ಲಿ ಅಡಗಿದ್ದ ಪ್ರಾಚೀನ ಪಟ್ಟಣ ಮತ್ತು ಅನೇಕ ಹಾಳುಬಿದ್ದ ಅವಶೇಷಗಳು ದೃಷ್ಟಿಗೋಚರ ಮಾಡುವ ಅವುಗಳಲ್ಲಿ ವಿಶ್ವಜ್ಞಾನದ ವಿಸ್ತೃತ ಸಾಮಗ್ರಿಗಳು ದೊರೆತಿವೆ. ಮಂದಿರ ಮೂರ್ತಿ, ಮುದ್ರೆ, ಚಿತ್ರ, ಶಿಲಾಲೇಖ, ಗೃಹೋಪಯೋಗಿ ಪಾತ್ರೆಗಳು ಮತ್ತಿತರ ಉಪಕರಣಗಳು ಒಂದು ನವೀನ ಶಕ್ಯವನ್ನು ನಮ್ಮ ಮುಂದಿರಿಸಿವೆ.

ಈ ಭೂಭಾಗದಲ್ಲಿ ಭಾರತೀಯರು ಅಧಿಕಸಂಖ್ಯೆಯಲ್ಲಿ ಬಂದು ವಾಸಿಸಿದ್ದರು. ಇಲ್ಲಿ ಭಾರತೀಯರ ವಂಶಜರುಗಳು ಏಕ ಪ್ರಕಾರವಾಗಿ ಏರುತ್ತಾ ಹೋದುವು. ಇಷ್ಟೇ ಅಲ್ಲದೆ, ಕಲವೊಂದು ಚಿಕ್ಕ ದೊಡ್ಡ ಭಾರತೀಯ ರಾಜ್ಯಗಳು ಉದಯವಾದುವು. ಇವು ಕಾಶ್ಮೀರದಿಂದ ಚೀನದ ಪ್ರಸಿದ್ಧ ಒಲವಾದ ಕೂಟಿಯ ಗೋಡೆಗಳ ತನಕವೂ ವಿಸ್ತಾರಗೊಂಡಿದ್ದುವು. ಭಾರತೀಯರು ಇಲ್ಲಿ ತಮ್ಮ ಶಾಶ್ವತ ಪ್ರಭುತ್ವವನ್ನು ಸ್ಥಾಪಿಸಿದರಲ್ಲದೆ ತಮ್ಮ ಕಲೆ, ಧರ್ಮ, ಭಾಷೆ, ಲಿಪಿ ಮತ್ತು ರಾಜ್ಯ ವ್ಯವಸ್ಥಾ ಕ್ರಮಗ

(೧೦ನೇ ಪುಟ ನೋಡಿರಿ)

ಸಮಯ ಇನ್ನೂ ಮಿಂಚಿಹೋಗಿಲ್ಲ

ಜೀವನದಲ್ಲಿ ಒಂದು ರೀತಿಯ ವ್ಯವಸ್ಥೆಯಿರಬೇಕಾದರೆ ಆಪತ್ಕಾಲದಲ್ಲಿ ಸಹಾಯ ಕೈದಗುವ ಒಂದು ಆಸ್ಪದ ಸಂಗ್ರಹದ ಯೋಜನೆಯನ್ನು ಚಿತ್ಕಂದಿನಿಂದಲೇ ಆರಂಭಿಸಬೇಕೆಂಬುದು ಸಹಜವೇ. ಆದರೆ ಕಾಲ ಕಳೆದು ಹೋಯಿತೆಂದು ಕಣ್ಣೀರು ಕರೆಯುತ್ತಾ ಕುಳಿತುಕೊಳ್ಳುವುದಕ್ಕಿಂತ ಇಂದಿನಿಂದಲೇ ಸ್ವಲ್ಪ ಸ್ವಲ್ಪ ಹಣವನ್ನಾದರೂ ಉಳಿತಾಯ ಮಾಡಲು ಯತ್ನಿಸುವುದೇ ಮುಖ್ಯ. ಸಮಯವಿನ್ನೂ ಮಿಂಚಿಹೋಗಿಲ್ಲ. ಹಲವಾರು ಆಕರ್ಷಕ ಮತ್ತು ಸುಲಭಸಾಧ್ಯವಾದ ಉಳಿತಾಯದ ಯೋಜನೆಗಳಿಗೆ-

ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಚಾರಿಸಿರಿ

96 ಶಾಖೆಗಳು

ರೂ **10.64** ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ

ಇವುಗಳಿಂದ ನಮ್ಮವರು ಜನರ ಆರ್ಥಿಕ ಆವಶ್ಯಕತೆಗಳಲ್ಲಿ ಸಹಕರಿಸಬಲ್ಲ

ಶೆಡ್ಯೂಲ್ಡ್ ಬೇಂಕು

ಟಿ ಎ ಪೈ, ಬಿ ಕಾಂ (ಬೊಂಬಾಯಿ), ಎಫ್ ಆರ್ ಇ ಎಸ್ (ಲಂಡನ್), ಎ ಐ ಬಿ, ಜನರಲ್ ಮೆನೇಜರ್

ಡಾ ಟಿ ಎಂ ಎ ಪೈ, ಎಂ ಬಿ, ಬಿ ಎಸ್, ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate, Ltd.,

Head Office UDIPI· S India

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ

ಎಲ್ಲಾತರದ ಸಿದಿಕ ಮತ್ತು ನೋವುಗಳಿಗೆ



50 ವರ್ಷ ಪ್ರಾಯದ

ಮಾರ್ಟಿನ್ ಡಾಕ್ಟರ್

ಅಮೃತಾಂಜನವಿಲ್ಲದೆ ಮನೆಯಿರಬಾರದು

ಹಿಂದುಳಿದ ಜನಾಂಗ

ಅನಾಗರಿಕ ಅಸಂಸ್ಕೃತ ಆದಿವಾಸಿಗಳನ್ನು ಉದ್ಧರಿಸಬೇಕು

ಕಳೆದ ಜನಗಣನೆಗನುಸಾರವಾಗಿ ಭಾರತದ ಗುಡ್ಡ ಮತ್ತು ಕಾಡುಗಳಲ್ಲಿ ವಾಸಿಸುತ್ತಿರುವ, ಆದಿವಾಸಿಗಳೆಂದು ಹೆಸರಾದ ಸುಮಾರು ೨ ಕೋಟಿಯಷ್ಟು ಹಿಂದುಳಿದ ಜನರಿರುವರು. 'ಆದಿವಾಸಿ' ಎಂಬ ಅವರ ಹೆಸರನ್ನು ಸೂಚಿಸುವ ಶಬ್ದವೇ ಅವರ ನಾಗರಿಕತೆ, ಸಂಸ್ಕೃತಿ ಹಾಗೂ ಜೀವನ ಕ್ರಮಗಳನ್ನು ಸ್ಪಷ್ಟಪಡಿಸುವುದು.

ಅವರು ಕೆಲವೊಮ್ಮೆ ಸಣ್ಣ ಗುಂಪುಗಳಾಗಿಯೂ ಬೇರೆ ಕೆಲವೊಮ್ಮೆ ದೊಡ್ಡ ಪಂಗಡಗಳಾಗಿಯೂ ವಾಸಿಸುವರು. ಭಾರತದ ಉತ್ತರ, ಈಶಾನ್ಯ ಪ್ರದೇಶದ ಪರ್ವತ ಕಣಿವೆಗಳಲ್ಲಿ ಹಾಗೂ ಅರಣ್ಯಗಳಲ್ಲಿ ವಾಸಿಸುವ ಮತ್ತು ಪೂರ್ವ ಗಡಿನಾಡು ಪ್ರದೇಶದಲ್ಲಿನ ಗುಡ್ಡಕಾಡುಗಳಲ್ಲಿ ಬದುಕುತ್ತಿರುವ ಆದಿವಾಸಿಗಳಿದ್ದಾರೆ. ಅಲ್ಲದೆ, ಮಧ್ಯಭಾರತದಲ್ಲಿ ದಖ್ಖಣ ಪೀಠಭೂಮಿ ಹಾಗೂ ಗಂಗಾಸಿಂಧೂ ಬಯಲನ್ನು ವಿಭಾಗಿಸುವ ಗುಡ್ಡಪ್ರದೇಶದಲ್ಲಿ, ಭಾರತದ ನೈರುತ್ಯ ಪಾರ್ಶ್ವದಲ್ಲಿ ಘಟ್ಟಗಳ ಬೆಟ್ಟ ಪ್ರದೇಶಗಳಲ್ಲಿಯೂ ಇದೇ ಜಾತಿಯ ಹಿಂದುಳಿದ ಜನರಿರುತ್ತಾರೆ. ಈ ಎಲ್ಲರನ್ನೂ ಕುಲನೆ ಮಾಡಿದರೆ, ಅವರಲ್ಲಿ ಸಂಸ್ಕೃಯವಿಷಯದಲ್ಲಿ ಸಾಮಾನ್ಯ ಹೋಲಿಕೆಗಳು ಕಂಡು ಬಂದರೂ, ಸಭ್ಯತೆ ಹಾಗೂ ಭಾಷಾ ವಿಷಯದಲ್ಲಿ ಮಾತ್ರ ಜಗಜ್ಜಾಂತರವಿದೆ

ಪಶ್ಚಿಮ ಘಟ್ಟಗಳ ದಕ್ಷಿಣ ಕೊನೆಯಲ್ಲಿ ವೈನಾಡಿನಿಂದ ಕನ್ಯಾ ಕುಮಾರಿಯ ವರೆಗಿನ ಭಾಗದಲ್ಲಿ ಕೆಲವೊಂದು ಹಳೆಕಾಲದ ಜನರು ವಾಸಿಸುತ್ತಿದ್ದಾರೆ. ಅವರು ಬಯಲು ಭೂಮಿಯ ನಾಗರಿಕ ಹಾಗೂ ಸಂಧಾರಿತ ಜನಾಂಗಕ್ಕಿಂತ ಪ್ರತ್ಯೇಕವಾಗಿ, ಅವರೊಡನೆ ಯಾವ ತರದ ಸಂಬಂಧವನ್ನೂ ಇಟ್ಟುಕೊಳ್ಳದೆ ಬಾಳಬೇಕಾದ ಪರಿಸ್ಥಿತಿ ಇದೆ. ಇದಕ್ಕೇನು ಕಾರಣವೆಂಬುದು ಇತಿಹಾಸದಲ್ಲಿಯೂ ಅಜ್ಞಾತವಾಗಿದೆ.

ಭಾರತದ ಈಶಾನ್ಯ ಭಾಗದ ಚಿಂಚಸ್ ನಿಂದ ಹಿಡಿದು, ಗಾರೊ ರಾಜಮಹಲ್ ಬೆಟ್ಟಗಳನ್ನು ದಾಟಿ, ಸಿಂಧೂ ಗಂಗಾ ವೈದಾನುಗಳನ್ನೂ ದಕ್ಷಿಣದ ಕೃಷ್ಣಾ ನದಿಯನ್ನೂ ಒಂದುಗೂಡಿಸುವ ಗುಡ್ಡಗಳಲ್ಲಿ ಅನೇಕ ಜಾತಿಯ ಹಿಂದುಳಿದವರಿದ್ದಾರೆ. ಲೆಷ್ಟ, ಅಂಎಯ, ಗಾರೋ, ನಾಗಾ ಚಕ್ಮ ಮೊದಲಾದ ವಂಶಸ್ಥರು ಈ ಭಾಗದಲ್ಲಿ ವಾಸಿಸುತ್ತಾರೆ. ಮಧ್ಯಪ್ರದೇಶದಲ್ಲಿ ಸುಮಾರು ೩೫ ಲಕ್ಷದಷ್ಟು ಸಂತಾಲರಿದ್ದಾರೆ. ಪೂರ್ವ ಘಟ್ಟ ಮತ್ತು ಒಡಿಸ್ಸಾದ ಬೆಟ್ಟಗಳ ಮುಂಡರು, ಜೋಟ ನಾಗಮುರದ ಭಿರೋರರು, ವಿಂಧ್ಯ ಪ್ರದೇಶದ ಭಿಲ್ಲರು, ಸಾತ್ಪುರ ಬೆಟ್ಟಗಳ ಬೈಗರು ಸಹಾ ಇದೇ ಜಾತಿಗೆ ಸೇರಿದವರು. ಇವರಲ್ಲಿ ಒಂದೊಂದು ಪ್ರದೇಶದ ಜನರಿಗೆ ಒಂದೊಂದು ಹೆಸರಿದೆ. ಎಲ್ಲ ಆದಿವಾಸಿಗಳಿಗಿಂತಲೂ ಬಸ್ತಾರದ ಮುರಿಯರು, ಅಭುಜಮಾರಿನ ಮರಿಯರು, ಇಂದ್ರಾವತಿ ಕಣಿವೆಯ ಮರಿಯರು ಅಲ್ಪ ಪ್ರಮಾಣದ ಕೃಷಿಯನ್ನು ಮಾಡಿಕೊಂಡಿದ್ದು ಸ್ವಲ್ಪ ಮಟ್ಟಿನ ಸುಧಾರಣೆಯನ್ನು ಮಾಡಿಕೊಂಡಿರುವರು.

ದಕ್ಷಿಣ ಕನ್ನಡದಿಂದ ಪ್ರಾರಂಭವಾಗುವ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಕೊರಗ, ಯುರುವ, ಇರುಲರಿಂದ ಮೊದಲಾಗಿ ವೈನಾಡಿನ ಪನಿಯನ್ ಮತ್ತು ಕುರುಂಬರನ್ನು ಹಾಡು ತಿರುವಾಂಕೂರು ಕೊಚ್ಚಿಗಳನ್ನು ದಾಟಿ ಕನ್ಯಾಕುಮಾರಿಯ ವರೆಗೂ ಇದೇ ವರ್ಗದ ಜನರು ವಾಸಿಸುತ್ತಾರೆ. ಇವರಲ್ಲದೆ ನೀಲಗಿರಿಯ ಪ್ರದೇಶದಲ್ಲಿ ತೊದ, ಬಡಗ ಮತ್ತು ಕೋಟ ಎಂಬವರು ಇದ್ದಾರೆ. ಇವರಲ್ಲಿ ತೊದರು ಕೃಷಿಗಳಿದ್ದರೂ, ಉಳಿದ ಸಹಸ್ರಾರು ಆದಿವಾಸಿಗಳು ಬೇಟೆ ಮತ್ತು ಫಲಸಂಚಯಗಳಿಂದಲೇ ತಮ್ಮ ಜೀವನವನ್ನು ಸಾಗಿಸುತಿದ್ದಾರೆ. ಗಡ್ಡೆ ಮೂಲಗಳಿಂದಲೇ ಅವರು ಜೀವಿಸುವರು. ಜೇನನ್ನು ಕುಡಿಯುವರು; ಹಕ್ಕಿಗಳನ್ನು ಬೇಟೆಯಾಡುವರು. ಶಿಲಾಯುಗದ ಜನರಂತೆ ಕಲ್ಲಿಗೆ ಕಲ್ಲನ್ನು ತಿಕ್ಕಿಯೇ ಅವರು ಬೆಂಕಿಯನ್ನು ಹೆಚ್ಚುವರು. ಅವರ ಮೈ ಬಟ್ಟೆಯೂ ಸಾಮಾನ್ಯವಾಗಿ ಎಲೆ ಅಥವಾ ಹುಲ್ಲುಗಳಿಂದ ರಚಿಸಲ್ಪಟ್ಟಿದ್ದು.

ಈಶಾನ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ನಾಗರು ಈ ಸಂಸ್ಕೃತಿಯವರಾಗಿಲ್ಲ. ರಂಗಫ್ಲನ್, ಕೋನ ವಂಶ ಮೊದಲಾದ ವಂಶಸ್ಥರು ಈ ಭಾಗದಲ್ಲಿದ್ದಾರೆ. ಇವರಲ್ಲದೆ ನಾಗಾಬೆಟ್ಟಗಳ ದಕ್ಷಿಣ ಪ್ರದೇಶದಲ್ಲಿ ಮಣಿಪುರ ಮತ್ತು ತ್ರಿಪುರಗಳಲ್ಲಿ ಹಾಯುವ ಬೆಟ್ಟಗಳಲ್ಲಿಯೂ ಚಿತ್ತಗೊಂಗ್ ಬೆಟ್ಟಗಳಲ್ಲಿಯೂ ಕುಕಿ, ಲುಶೈ ಮೊದಲಾದ ಅನೇಕ ವಂಶದವರಿದ್ದಾರೆ. ಇವರು ಬೇರೆ ಬೇರೆ ವಂಶದವರಾಗಿದ್ದರೂ, ಅವರ ನಡವಳಿಕೆ ಮತ್ತು ಸಂಸ್ಕೃತಿಗಳು ಏಕರೂಪವಾಗಿವೆ. ಸಿಕ್ಕಿಂ ಮತ್ತು ಡಾರ್ಜಲಿಂಗಿನ ಉತ್ತರ ಪ್ರದೇಶದಲ್ಲಿ ಲಪ್ಚ ಎಂಬ ಹೆಸರಿನ ಅಲ್ಪ ಪ್ರಮಾಣದಲ್ಲಿ ಮುಂದುವರಿದ ಜನಾಂಗದವರಿದ್ದಾರೆ. ಮಣಿಪುರ ಮತ್ತು ನಾಗಗುಡ್ಡಗಳಲ್ಲಿನ ಹಾಗೂ ಪಶ್ಚಿಮ ಪ್ರದೇಶದ ಭಾಗಗಳ ಜನರು ಕೃಷಿಯನ್ನು ಮಾಡಿಕೊಂಡಿದ್ದಾರೆ.

ಈ ವಂಶಗಳಲ್ಲಿ ಕೆಲವು ವಂಶಸ್ಥರು ತುಂಬ ಸಂಘಟಿತ ಜನಾಂಗದವರಾಗಿದ್ದಾರೆ. ಈ ಜನಾಂಗದ ಯುವಜನರಿಗೆ ವಂಶದ ಕಟ್ಟಳೆಗಳು ನೃತ್ಯ, ಪದ್ಯಗಳು ಕಲಿಸಲ್ಪಡುತ್ತವೆ. ಈಶಾನ್ಯ ಪ್ರದೇಶದ ಜನಾಂಗಗಳವರು ನೇಯ್ಗೆಯ ಕೆಲಸವನ್ನು ಮಾಡುತಿದ್ದಾರೆ. ಅವರು ಹತ್ತಿ, ಅಕ್ಕಿ ಮತ್ತು ಜೋಳಗಳನ್ನು ಬೆಳೆಸುತ್ತಾರೆ. ಇಷ್ಟಿದ್ದರೂ ಅವರು ಕ್ರೂರಿಗಳಾಗಿದ್ದು, ಅದರಿಂದಾಗಿ ಯುದ್ಧಕಲೆಯಲ್ಲಿಯೇ ಬಹಳ ತಜ್ಞೇನರಾಗುವರು.

ಕೆಲವೊಂದು ಶತಮಾನಗಳಿಂದಲೂ ಈ ಕಾಡು ಜನಾಂಗವು ಸರಕಾರದಿಂದ ಗಮನಿಸಲ್ಪಟ್ಟಿರಲಿಲ್ಲ. ಜನರು ತಮ್ಮ ಗುಡ್ಡಕಾಡುಗಳಲ್ಲಿ ಸ್ವೆಚ್ಛೆಯಿಂದ ನಾಗರಿಕರ ಸೋಂಕಿಲ್ಲದೆಯೇ ಬಾಳುತ್ತಿದ್ದರು. ಬ್ರಿಟಿಷ ಸರಕಾರವು ಈ ಜನಾಂಗಗಳತ್ತ ಅನಾಸ್ಥೆಯನ್ನೆ ತೋರಿಸುತ್ತಿದ್ದರು ಅವರನ್ನು ತಮ್ಮ ಉಪದೇಶಗಳ ಮೂಲಕ ಮತಾಂತರ ಮಾಡುವ ಮಿಶನರಿಗಳ ಕೈಯಲ್ಲಿ ಈಯಲಾಯಿತು. ಆದರೂ ಈ ಮಿಸನರಿಗಳ ಪ್ರಭಾವ ದಡಿಯಲ್ಲಿ ಬಂದಿರುವ ಹಿಂದುಳಿದ ಜನರ ಸಂಖ್ಯೆಯೇನೂ ಹೆಚ್ಚಿನದಾಗಿಲ್ಲ.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿಯೇ ನಮ್ಮ ವಿದ್ಯಾವಂತ ಧುರೀಣರ ದೃಷ್ಟಿಯು ಈ ಸ್ವದೇಶ ವಾಸಿಗಳತ್ತ ತೊರಳಿತು. ಆದರೂ ೧೯೨೦ಕ್ಕೆ ಮೊದಲು ಈ ಆದಿವಾಸಿಗಳ ಮತ್ತು ಇತರ ಹಿಂದುಳಿದ ಜನಾಂಗಗಳವರತ್ತ ರಾಷ್ಟ್ರೀಯ ಪ್ರಮುಖತೆಯು ತಲೆದೋರಲಿಲ್ಲ. ರಾಷ್ಟ್ರದ ಪುನಾರಚನೆಯ ಈ ಕಾಲದಲ್ಲಿ ಮಾತ್ರ ೪ ೨ ಕೋಟಿಯಷ್ಟು ಜನರನ್ನು ನಿರ್ಲಕ್ಷ್ಯರಾಗಿ ಕಾಣುವಂತಿಲ್ಲ. ಆದುದರಿಂದಲೇ ಭಾರತದ ರಾಜ್ಯ ಘಟನೆ ಮತ್ತು ಪಂಚವಾರ್ಷಿಕ ಯೋಜನೆಗಳು ಈ ಜನರಿಗೆ ಕೆಲವೊಂದು ಅನುಕೂಲವನ್ನೊದಗಿಸಿಕೊಟ್ಟಿವೆ.

ರಾಷ್ಟ್ರದಭಿವೃದ್ಧಿಯನ್ನು ಕೈಗೊಳ್ಳುವಾಗ, ಈ ಜನರ ನಾಗರಿಕತೆಯನ್ನು ಸುಧಾರಿಸುವುದು ಅಗತ್ಯ. ಇವರು ಹಲವಾರು ವಂಶಗಳಿಗೆ ಸೇರಿದ್ದು ಅನೇಕ ಭಾಷೆಯನ್ನು ಮಾತಾಡುತಿದ್ದರೆ. ಬೇರೆ ಬೇರೆ ಸಾಂಸ್ಕೃತಿಕ ವಂಗಡಗಳಿಗೆ ಸೇರಿದವರಾಗಿದ್ದಾರೆ. ಒಂದೇ ಭಾಗದ ಒಂದೊಂದು ವಂಶಗಳವರ ಆಚಾರ ವಿಚಾರಗಳೂ ಆಹಾರ ವಿಹಾರಗಳೂ ಬೇರೆಬೇರೆಯಾಗಿವೆ. ಅವರ ಸಂಘಟನೆಯೂ ವ್ಯತ್ಯಾಸವಾಗಿದೆ ಆರ್ಥಿಕ ಬೆಳವಣಿಗೆಯಲ್ಲಿಯೂ ಅಂತರವಿದೆ. ಕೆಲವರು ಕಾಡುಗಳಲ್ಲಿ ಸಂಚರಿಸುತ್ತಾ ಬೇಟೆಯಾಡಿ ಹಣ್ಣುಗಳನ್ನು ಸಂಗ್ರಹಿಸಿ ಅವನ್ನು ತಿಂದುಕೊಂಡು ಬೇವಿಸುತಿದ್ದರೆ, ಇನ್ನುಕೆಲವರು ಕೃಷಿಯನ್ನು ಮಾಡಿಕೊಂಡು ಬದುಕು ಸಾಗಿಸುತ್ತಾರೆ. ಅವರ ಕೊರತೆಯೆಂದರೆ ಕೇವಲ ಬಡತನ ಮತ್ತು ಹಿಂದುಳಿದಿರುವಿಕೆ ಮಾತ್ರ ಇದೀಗ ತಮ್ಮ ಸುತ್ತಲಿನ ಜನರು ನಾಗರಿಕರಾಗುತ್ತಿರುವುದು ಅವರ ಗಮನಕ್ಕೆ ಬಂದಿದೆ. ಇವರನ್ನು ಕೃಷಿ ಮತ್ತು ಗುಡಿಕೈಗಾರಿಕೆಗಳಿಂದ ರಾಷ್ಟ್ರದ ಇತರ ಜನಾಂಗಳ ಸರಿಸಾಟಿಗೆ ತರುವುದು ಸಾಧ್ಯ.

ಈ ವರ್ಗಗಳ ಎಲ್ಲ ಜನರೂ ನಾಗರಿಕರಾಗಿಲ್ಲ—ಏಕೆ, ನಾಗರಿಕತೆಯ ಸೋಂಕು ಕೂಡ ಅವರಿಗೆ ಅಂಟಿಲ್ಲ. ಅಂಡಮಾನ ದ್ವೀಪ ಹಾಗೂ ತಿರುವಾಂಕೂರು ಕೊಚ್ಚಿಗಳ ಜನರು ತಮ್ಮ ಪೂರ್ವಜರು ಜೀವಿಸುತಿದ್ದ ಅನಾಗರಿಕ ವಿಧಾನದಲ್ಲಿಯೇ ಇಂದಿಗೂ ಇದ್ದಾರೆ. ಆದಿವಾಸಿಗಳೊಡನೆ ಸಂಬಂಧವಿಟ್ಟುಕೊಂಡ ವ್ಯಾಪಾರಿಗಳು ಅವರನ್ನು ಬಡ್ಡಿ ಬಾಡಿಗೆ ಮೊದಲಾದುವುಗಳ ಕಟ್ಟಿಗೆ ಬೀಳಿಸಿ ಲಾಭ ಸಡೆಯುತ್ತಾರೆ. ಆದುದರಿಂದ, ಹಿಂದುಳಿದ ಜನಾಂಗಗಳ ಅಭಿವೃದ್ಧಿಗಾಗಿ ವ್ಯಾಪಾರಿಗಳ ಕಪಿ ಮುಷ್ಟಿಯಿಂದ ಅವರನ್ನು ಬಿಡಿಸುವುದು ಅತ್ಯಗತ್ಯವಾದುದು.

ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಮಾಡಿದ ವೆಚ್ಚದ ನೊಬಲಗು, ಆ ಪ್ರದೇಶಗಳಲ್ಲಿ ತೆರೆದ ಆಸ್ಪತ್ರೆ ಅಥವಾ ಶಾಲೆಗಳ ಸಂಖ್ಯೆಗಳು ಅಲ್ಲಿ ಕೈಗೊಳ್ಳಲಾದ ಅಭಿವೃದ್ಧಿ ಯೋಜನೆಯ ಸಾಮಾನ್ಯ ಚಿತ್ರವನ್ನು ಕೊಡುತ್ತವೆ. ಈ ಜನಾಂಗಗಳವರನ್ನು ಇನ್ನು ಸಹ ನಿರ್ಲಕ್ಷದಿಂದಲೇ ನೋಡಲಾಗುತ್ತದೆ. ಪ್ರಾರಂಭಿಕ ಕಾಲದ ಜನರ ಕಾಲದವರೆಂಬ ಭಾವನೆ ನಮ್ಮಲ್ಲಿ ಮನೆಮಾಡಿದೆ. ಅನಾಗರಿಕರು, ಅಸ್ಪೃಶ್ಯರು ಎಂಬ ಕಲ್ಪನೆ ನಮ್ಮಲ್ಲಿದೆ ಶತಮಾನಗಳ ವರೆಗೆ ನಾಗರಿಗತೆಯ ಸೋಂಕಿಲ್ಲದೆ, ನಾಗರಿಕ ಜನಾಂಗಗಳೊಡನೆ ವ್ಯವಹಾರವಿಲ್ಲದಿರುವುದರಿಂದಲೂ, ವನ್ಯ ಮೃಗಗಳೊಡನೆಯೇ ಹೋರಾಡಿ ತಮ್ಮ ಜೀವನವನ್ನು ಕಳೆಯಬೇಕಾಗಿದ್ದುದರಿಂದಲೂ ಅವರು ಕ್ರೂರಿಗಳೆಂದು ನಮಗೆ ತೋರುತ್ತಾರೆ. ಲಕ್ಷ್ಯಪೂರ್ವಕವಾಗಿ ಒಂದು ನಿಶ್ಚಿತ ಕ್ರಮದಿಂದ ಅವರೆಲ್ಲರನ್ನೂ ಮುಂದೆ ತರುವುದು ಸಾಧ್ಯ. ದೇಶದ ಜನಸಂಖ್ಯೆಯಲ್ಲಿ ಇಪ್ಪತ್ತರಲ್ಲೊಂದು ಅಂಶದಷ್ಟು ಜನರ ಅಭಿವೃದ್ಧಿಯನ್ನು ಮಾಡುವುದು ಜನತಾ ಸರಕಾರದ ಕರ್ತವ್ಯ. ಅಂತಹದನ್ನೂ ತಮ್ಮ ದೇಶದವನೆಂದು, ತಮ್ಮಂತೆಯೇ ದೇಶದ ಪ್ರಜೆಯೆಂದು ತಿಳಿದು, ಅವರನ್ನು ಯೋಗ್ಯ ದೃಷ್ಟಿಯಿಂದ ಕಾಣುವುದು ನಾಗರಿಕನ ಕರ್ತವ್ಯ. ಹಾಗಾದಾಗಲೇ— ಜನ ಸರಕಾರಿಗಳು ಏಕಮುಖವಾದಾಗಲೇ ಈ ಕಂಡುಜನರ ಧೈರ್ಯ ಉತ್ಸಾಹಗಳ ಪ್ರಯೋಜನವು ದೇಶಕ್ಕೆ—ದೇಶದ ಆರ್ಥಿಕ ಪರಿಸ್ಥಿತಿಗೆ— ಪ್ರಯೋಜನಕಾರಿಯಾಗಬಹುದು.

ಆದುದರಿಂದ, ನಾಗರಿಕ ಜನಾಂಗವರು ಸಂಧಾರಿತರೆಂದು ಹೇಳಿಸಿಕೊಳ್ಳುವವ್ಯಕ್ತಿಗಳುಮುಂದೆ ಒಂದುಸರಕಾರವು ಈ ಆದಿವಾಸಿಗಳ ಅಭಿವೃದ್ಧಿಗೆ ಕೈಗೊಳ್ಳುವಕಾರ್ಯಕಲಾಪಗಳನ್ನು ನೆರವೇರಿಸಬೇಕು. ಸರಕಾರವಾದರೂ ರಾಷ್ಟ್ರದ ಸಾಮಾನ್ಯ ಪ್ರಜೆಗಳಂತೆಯೇ ಈ ಅನಾಗರಿಕ, ಅಸಂಸ್ಕೃತ ಜನಾಂಗಗಳ ಜನಪಿಲ್ಲರ ಉದ್ಧಾರಕ್ಕಾಗಿ ಪ್ರಯತ್ನಿಸಬೇಕು.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೦] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಸ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. ೩—೮—೦
ಸಣ್ಣ ಬಾಟ್ಲಿಗೆ ರೂ. ೭—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,
ಪಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧.

ನಮ್ಮ ವಿಧಾನಸಭೆಯಲ್ಲಿ

೧. ರಾಜ್ಯಪಾಲರ ಭಾಷಣ.

ದ್ವಿತೀಯ ಸಾರ್ವತ್ರಿಕ ಚುನಾವಣಾನಂತರದ ಮೈಸೂರಿನ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸಂಯುಕ್ತಾಧಿವೇಶನವು ಮೊನ್ನೆ ೧೧ನೆ ದಿನಾಂಕದಂದು ಪ್ರಥಮಬಾರಿಗೆ ಸೇರಿತ್ತು. ಮೈಸೂರ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರು ಇಂಗ್ಲಿಷಿನಲ್ಲಿ ಪ್ರಾರಂಭ ಭಾಷಣವನ್ನು ಮಾಡತ್ತ ಸರಕಾರವು ಕೈಗೊಂಡ, ಕೈಗೊಳ್ಳತ್ತಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕಲಾಪಗಳನ್ನೂ ಸರಕಾರೀ ಧೋರಣವನ್ನೂ ಸಂಕ್ಷೇಪವಲ್ಲಿ ಸದಸ್ಯರಿಗೆ ಪರಿಚಯಮಾಡಿಕೊಟ್ಟರು. ಭಾರತದ ಕೇಂದ್ರೀಯ ಸರಕಾರವು ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಜಯಶೀಲವಾಗಿಸಲು ದೃಢನಿರ್ಧಾರ ಗೈದಂತೆ ನಾವಾದರೂ, ಆಯೋಜನೆಯನ್ನು ಯಶಸ್ವಿಯಾಗಿಸಲ ನಮ್ಮ ಹಾರ್ದಿಕ ಸಹಕಾರವನ್ನು ನೀಡುವ ಆವಶ್ಯಕತೆಗಳನ್ನು ರಾಜ್ಯಪಾಲರು ವ್ಯಕ್ತಪಡಿಸಿದರು.

ಮೈಸೂರ ರಾಜ್ಯದಲ್ಲಿ ಇದೀಗ ಏಕವಿಧಾನದ ಕಾಯಿದೆ ಕಾನೂನುಗಳು, ಭೂ ಕಂದಾಯ ತೆರಿಗೆ ಶಿಕ್ಷಣ ಪದ್ಧತಿ ಮೊದಲಾದವು ಇವೆ. ಇವೆಲ್ಲವನ್ನೂ ಏಕರೂಪಕ್ಕೆ ತರುವುದ ಅಗತ್ಯವನ್ನು ಪರಿಶೀಲಿಸಿ, ಸಿದ್ಧಾಂತವಾಗಿಯೂ ಒಂದು ದೃಷ್ಟಿಕೋಣದಿಂದ ತಂಟೆಕ್ಕೆದೆ ಅವಸರದಿಂದಲ್ಲ ಸರಕಾರವಾದರೂ ಈ ಕಡೆಗೆ ವಿಶೇಷ ಗಮನವನ್ನು ಬಿರಿದೆ ಶಕ್ಯವಾದಷ್ಟು ಬೇಗನೇ ಆದಷ್ಟ ಸದ್ಧತಿಯ ಏಕರೂಪತೆಯನ್ನು ಸಾಧಿಸುವುದೆಂದು ರಾಜ್ಯಪಾಲರು ತಿಳಿಸಿದರು.

ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಹಾಗೂ ಉಳಿದೆಡೆ ಸಾಧಾರಣವಾಗಿ ತಲೆಯೆತ್ತಿದ ಆಹಾರದ ಸಮಸ್ಯೆಗಳನ್ನು ಸುಧಾರಿಸಲು ಸರಕಾರವು ಕೈಗೊಂಡಿರುವ ವ್ಯವಸ್ಥೆಗಳನ್ನ ರಾಜ್ಯಪಾಲರು ತಿಳಿಸಿದರು. ಬೆಳಗಾಂ, ವಿಜಾಪುರ, ಧಾರವಾಡ, ರಾಯಚೂರು, ಕಲಬರ್ಗಿ ಜಿಲ್ಲೆಗಳಲ್ಲಿ ಸರಕಾರವು ಒನರಿಗೆ ವಿಶೇಷ ರೀತಿಯ ಸಹಾಯವೀಯುವ ವ್ಯವಸ್ಥೆಗಳನ್ನು ಕೈಕೊಂಡಿದೆ ಕಂದಾಯ ವಸೂಲಿಗೆ ತಾತ್ಕಾಲಿಕ ತಡೆಯನ್ನು ಹಾಕಲಾಗಿದ ರಾಜ್ಯದ ನಾನಾ ಮೂಲೆಗಳಲ್ಲಿ ಒಟ್ಟು ೬೫೫ ನ್ಯಾಯಬೆಲೆಯ ಅಂಗಡಿಗಳನ್ನೆ ಮುಂದಿನ ಉಪಯೋಗಕ್ಕಾಗಿ ಸುಮಾರು ೧೨ ಸಾವಿರ ಟನ್ನುಗಳಷ್ಟು ಆಹಾರ ಧಾನ್ಯಗಳು ಹೊರಗಿಂದ ಬರಬೇಕಾಗಿದ್ದು ಕೇಂದ್ರ ಸರಕಾರದೊಡನೆ ಲಿದನ್ನು ಒದಗಿಸಲು ಕೇಳಿಕೊಳ್ಳಲಾಗಿದೆ

ಹೊಲಗೇರಿಗಳನ್ನ ಸುಧಾರಿಸ ವದ, ಬೆಂಗಳೂರು ನಗರ ಮತ್ತು ರಾಜ್ಯದ ಉತ್ತರ ಭಾಗದ ನಗರಗಳೊಳಗೆ ಸಂಪರ್ಕ ಬೆಳೆಸಲು ತಕ್ಕ ಸಾರ್ಗಗಳನ್ನು ರಚಿಸುವುದು ಸರಾ ರಾಜ್ಯಪಾಲರ ಭಾಷಣದಲ್ಲಿ ಸೂಚಿಸಲಾಗಿದ್ದು ಅವು ಅತಂತ ವಿಶ್ವಕವಿ ನರೆಗೆ ರಾಜ್ಯಗಳ ಕಾಲೇಜುಗಳು ಮತ್ತು ಪಂಪಯಿಗಳ ಇಂಜಿನಿಯರಿಂಗ್, ಮೆಡಿಕಲ್ ಮತ್ತು ಪಟೆರಿನರಿ ಕಾಲೇಜುಗಳಲ್ಲಿ ಮೈಸೂರಿನ ವಿದ್ಯಾರ್ಥಿಗಳಿಗೆ ಕೆಲವೊಂದು ಸ್ಥಳಗಳನ್ನ ಕಾಯ್ದಿರಿಸಿಕೊಂಡಿದ್ದು ಸ್ತುತ್ಯವಿಚಾರವಿದೆ ರಾಜ್ಯಪಾಲರ ಮೈಸೂರಿನಲ್ಲೇ ಈ ತರದ ಕಾಲೇಜುಗಳನ್ನು ತೆರೆಯಬೇಕಾದುದನ್ನು ಸೂಚಿಸಿದ್ದಾರೆ ದಾಂಡೇಲಿ ನಗರವು ಗಣ್ಯ ಕೈಗಾರಿಕಾ ಸ್ಥಾನವಾಗಲಿರುವುದರಿಂದ ಅದನ್ನ ಅಭಿವೃದ್ಧಿಗೊಳಿಸುವ ಯೋಜನೆ ಸ್ವಾಗತಾರ್ಹವಾಗಿದೆ

ರಾಜ್ಯಪಾಲರು ತಮ್ಮ ಭಾಷಣದಲ್ಲಿ ರಾಜ್ಯದ ಆವಶ್ಯಕತೆಗಳನ್ನು ವಾಸ್ತವಿಕವಾಗಿ ಪ್ರಸ್ತಾಪಿಸಿ, ಸರಕಾರವು ಅವನ್ನು ನೀಗಿಸಲು ಕೈಗೊಂಡ ಕಾರ್ಯಕ್ರಮಗಳನ್ನ ಸಂಕ್ಷೇಪದಲ್ಲಿ ವಿವರಿಸಿದ್ದರೆ ಇವುಗಳಲ್ಲಿ ಅನಿರೀಕ್ಷಿತ ತದವಾ ಅಪರಿಚಿತ ವಿಷಯಗಳೇನೂ ಇಲ್ಲ ವಿವಿಧ ರಾಜ್ಯಭಾರ ಪದ್ಧತಿಗೆ ಒಳಪಟ್ಟಿದ್ದ ಈ ಕನ್ನಡದ ತುಣುಕಗಳು ಇದೀಗ ಒಂದೇ ಆಡಳಿತಕ್ಕೆ ಗುರಿಯಾಗಿ ಕೂಡಿಕೊಂಡು ಬೆಳೆಯುವುದು ಅಷ್ಟೇನೂ ಸಂಭವವಲ್ಲ ರಾಜ್ಯದಲ್ಲಿ ಏಕರೂಪತೆಯ ಶಿಕ್ಷಣ ಕರಸದ್ಧತಿ ಭೂ ಪದ್ಧತಿ, ಕಾನೂನುಗಳು ಬರಬೇಕಾದರೆ ಕಲವು ಸಮಯ ಕಳೆದುಹೋಗಬೇಕಾಗಬಹುದು ಈಗಿನ ಸರಕಾರದ ಕರ್ತವ್ಯ ಇವನ್ನು ಏಕರೀತಿಗೆ ತರುವುದ್ದೂ, ದ್ವಿತೀಯ ಯೋಜನೆಯನ್ನು ಯಾವ ವಿಭಾಗದಲ್ಲೂ ಕುಂದಿಲ್ಲದಂತೆ ದಕ್ಷತೆಯಿಂದ ಕಾರ್ಯರೂಪಕ್ಕೆ ತರುವುದು. ಈ ಕಾರ್ಯವನ್ನು ಮೈಸೂರ ಸರಕಾರವು ಮಾಡಲು ಸನ್ನದ್ಧವಾಗಿದೆಯೆಂದು ರಾಜ್ಯಪಾಲರು ಜನತೆಗೆ ತಿಳಿಸಿ, ಸರಕಾರದೊಂದಿಗೆ ತನುಮನ ಧನಗಳಿಂದ ಸಹಕರಿಸುವ ತ್ಯಾಗ ಸೇವೆಗಳಿಂದ ಸರಕಾರವು ಜನತೆಯ ಕರ್ತವ್ಯ ಭಾರವನ್ನು ಯಾಚಿಸಿದ್ದಾರೆ

೨. ಮುಂಗಡ ಪತ್ರ

ಮೈಸೂರ ರಾಜ್ಯದ ಸಚಿವರಲ್ಲಿ ಹಣಕಾಸು ಮಂತ್ರಿ ಶ್ರೀ ಟಿ ಮರಿಯಪ್ಪನವರು ೧೯೫೭ ಸಾಲಿನ ಸುಧಾರಿತ ಮುಂಗಡ ಪತ್ರವನ್ನು ಮಂಡಿಸಿದರು ಇದರಲ್ಲಿ ಸುಮಾರು ೯೯ ಕೋಟಿ ರೂಪಾಯಿಯಷ್ಟು ಕೊರತೆಯು ಕಂಡು ಬಂದಿದೆ ಆದರೆ ಅರ್ಥ ಮಂತ್ರಿಯವರ ಯಾವುದೊಂದು ಹೊಸ ಕರಗಳನ್ನು ಹೊರಿಸದೆ ಅಲ್ಲಿಂದ್ದಂತೆ ಆಯವ್ಯಯಗಳನ್ನು ಹೊಂದಿಸಿಕೊಳ್ಳುವ ಯೋಜನೆಯಂತೆ ಸಂತೋಷವನ್ನುಂಟು ಮಾಡಿದಯೆನ್ನಬಹುದು ಮುಂಗಡ ಪತ್ರವನ್ನು ಸಭೆಯ ಮುಂದಿಡತ್ತ ಮಾನ್ಯ ಮಂತ್ರಿವರ್ಯರು ನವ ವ್ಯಾಸೂರು ರಾಜ್ಯದ ಹಣಕಾಸಿನ ಪರಿಸ್ಥಿತಿಯು ಸುದೃಢವಾಗಿರುವುದರಿಂದ ಯಾವುದೇ ಸಿರಾಸೆಗೆ ಕಾರಣವಿರುವುದಿಲ್ಲವೆಂದು ಹೇಳಿದರು ರಾಜ್ಯದಲ್ಲಿ ಕೈಗೊಳ್ಳಬೇಕೆಂದಿದ್ದ ಅಭಿವೃದ್ಧಿಯೋಜನೆಗಳಲ್ಲಿ ಒಂದನ್ನೂ ಬಿಡದೆ ಎಲ್ಲವನ್ನೂ ಕಾರ್ಯಗತ ಮಾಡುವ ದೃಢ ನಿರ್ಧಾರವನ್ನು ಸರಕಾರವು ಮಾಡಿರುವುದರಿಂದ, ರಾಜ್ಯದ ನಾಗರಿಕರು ತ್ಯಾಗ ಮತ್ತು ಪ್ರತಿಜ್ಞೆಗಳಿಂದ ನಡೆದುಕೊಳ್ಳುವ ಆವಶ್ಯಕತೆಯನ್ನು ವಿವರಿಸಿದರು ದ್ವಿತೀಯ ಪಂಚವರ್ಷಿಕ ಯೋಜನೆಯನ್ನಯ ಮೈಸೂರ ರಾಜ್ಯದಲ್ಲಿ ಕೈಗೊಳ್ಳಬೇಕಾದ ಯೋಜನೆಗಳಿಗಾಗಿ ೮೩೦ ಲಕ್ಷ ರೂ ಮತ್ತು ಸರಕಾರದ ಹಿಂದಿನ ಸಾಲಗಳನ್ನು ತೀರಿಸಲು ೨೦೮ ಲಕ್ಷ ರೂಗಳನ್ನು ಪ್ರತ್ಯೇಕಿಸಿ ಇಡಬೇಕೆಂದು ಬಂದುದರಿಂದಲೇ ರಾಜ್ಯದಲ್ಲಿ ಕೊರತೆಯ ಮುಂಗಡಪತ್ರವು ಮುಂದೆ ಬಂದಿದೆ ಎಂದು ಹಣಕಾಸಿನ ಮಂತ್ರಿಗಳು ರಾಜ್ಯದ ಆರ್ಥಿಕ ಭದ್ರತೆಯನ್ನ ಸಮರ್ಥಿಸಿರುವರು

ರಾಜ್ಯದಲ್ಲಿನ ವಿವಿಧ ಮಾರಾಟ ತೆರಿಗೆ, ಮೋಟಾರು ವಾಹನ ತೆರಿಗೆ, ಸ್ಟಾಂಪ್ ಡ್ಯೂಟಿ, ಒಕ್ಕಲುತನ ವರಮಾನ ತೆರಿಗೆ ಮೊದಲಾದುವುಗಳ ಸಮೀಕರಣದಿಂದ ೩ ಕೋಟಿ ರೂಗಳ ಲಾಭವುಂಟಾಗಲಿದ ಉಳಿದ ಕೊರತೆಯ ಧನವನ್ನ ನಗರಿ ಹಣ ಬರುವ ವಿಧ ನದಿಂದ ತದನಾ ಸರಕಾರೀ ಸಾಲಗಳಿಂದ ತುಂಬಿಸಲಾಗುವುದು ಕೇಂದ್ರದಿಂದಲೂ ಈ ರಾಜ್ಯಕ್ಕೆ ಹಚ್ಚಿನ ಸಹಾಯ ಹೊರಗುವ ನಿರೀಕ್ಷೆ ಇದೆ ಸರಕಾರವು ಹೊಸ ರಾಜ್ಯದ ಸ್ಥಾಪನೆಯೊಂದಿಗೆ ಸರಕಾರೀ ನೌಕರರ ಸಂಬಳ, ಭೂ ಸಾಗುವಳಿ ಕಾಯಿದೆ ಶಿಕ್ಷಣ, ಪಂಚವರ್ಷಿಕ ಯೋಜನೆ, ಆಹಾರ ಉತ್ಪಾದನೆ, ದುರ್ಭಿಕ್ಷ ಪರಿಹಾರ ಮೊದಲಾದ ಮಸ್ಯೆಗಳನ್ನು ಎದುರಿಸಬೇಕಾಗಿ ಬಂದರೂ, ಸರಕಾರದ ಆರ್ಥಿಕ ಪರಿಸ್ಥಿತಿಯು ಸ್ಥಿತಿವಂತವಾಗಿದೆ

ರಾಜ್ಯದ ಆದಾಯವು ಒಟ್ಟು ೦೦೨ ಲಕ್ಷ ರೂಪಾಯಿಗಳಿದೂ ವೆಚ್ಚವು ೦೦೨ ಲಕ್ಷಗಳಾಗಿದ್ದು ಕೊರತೆಯ ೯೯ ಲಕ್ಷ ರೂಪಾಯಿಗಳಷ್ಟಾಗುವುದೆಂದ ಮುಂಗಡಪತ್ರದಲ್ಲಿ ಸೂಚಿಸಲಾಗಿದೆ ರಾಜ್ಯದ ಒಟ್ಟು ವೆಚ್ಚದ ೫ ನೂರಕ್ಕೆ ೫೦ಷ್ಟ ಮತ್ತು ಆದಾಯದ ೯ ನೂರಕ್ಕೆ ೭೦ರಷ್ಟು ಹಣವನ್ನು ಅಭಿವೃದ್ಧಿ ಕಾರ್ಯಗಳಲ್ಲಿ ವೆಚ್ಚ ಮಾಡಲಾಗುವುದು ಪಂಚವರ್ಷಿಕ ಯೋಜನೆಗೆ ಸಂಬಂಧವಿಲ್ಲದ ವೆಚ್ಚಗಳನ್ನು ಕಡಿಮೆ ಮಾಡಲಾಗಿದ್ದು ಸಾಧ್ಯವಾದಷ್ಟು ಮಿತವ್ಯಯವನ್ನು ತವಲಂಬಿಸಲು ಪ್ರಯತ್ನಿಸಲಾಗಿರುವುದನ್ನು ಮಂತ್ರಿಗಳು ತಿಳಿಸಿದರು ಪಂಚವರ್ಷಿಕ ಯೋಜನೆಯಲ್ಲಿ ಶಾಲಾಕಟ್ಟಿಡಗಳು, ಆಸ್ಪತ್ರೆಗಳು, ರಸ್ತೆ ಸಾರಿಗೆಗಳು, ತುಂಗಭದ್ರಾ ಯೋಜನೆ, ಭದ್ರಾ ಯೋಜನೆ, ಅಂಬಳಿಗಳ ಯೋಜನೆ, ಘಟಪ್ರಭಾ ಯೋಜನೆ, ಹೊನ್ನೆಮರಡ, ತುಂಗಾ ಮತ್ತು ಭದ್ರಾಗಳ ವಿದ್ಯುದ್ಯೋಜನೆಗಳನ್ನು ಕೈಗೊಳ್ಳಲಾಗುವುದು ಸರಕಾರದ ಒಡೆತನದಲ್ಲಿರುವ ಭದ್ರಾವತಿ ಕಾರಖಾನೆ, ಪೋರ್ಸಲೇನ ಕಾರಖಾನೆ, ಸಾಬೂನು ಕಾರಖಾನೆ ಮೊದಲಾದುವುಗಳಿಗೆ ೩೬೬ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು.

ರಾಜ್ಯದ ಒಟ್ಟು ವೆಚ್ಚದಲ್ಲಿ ನೂರೈವತ್ತೆಂಟರಷ್ಟನ್ನು ಸರಕಾರವು ಶಿಕ್ಷಣಕ್ಕಾಗಿ ವೆಚ್ಚ ಮಾಡುತ್ತಿದೆ ಕನ್ನಡ ವಿಶ್ವ ಕೋಶದ ರಚನೆಗಾಗಿ ೧೭೫ ಲಕ್ಷ ರೂಗಳನ್ನ ವೆಚ್ಚ ಮಾಡಲು ನಿರ್ಧರಿಸಿದೆ

ಭಟಕಳ ಮತ್ತು ಸವದತ್ತಿಗಳಲ್ಲಿ ಕುಟೀರ ಆಸ್ಪತ್ರೆಗಳನ್ನು ತೆರೆಯುವುದಲ್ಲದೆ, ಕುಚ್ಚಲ್ಲಿಯಲ್ಲೊಂದು ವೈದ್ಯಕೀಯ ಕಾಲೇಜನ್ನು ತೆರೆಯುವ ಯೋಜನೆಯಿದ್ದು ಈ ಬಗ್ಗೆ ಕೇಂದ್ರದಿಂದ ಸಹಾಯವನ್ನು ಯಾಚಿಸಲಾಗಿದೆ ದಮ್ಮ ಜಲಾಶಯ ಮತ್ತು ಹರಿ ನೀರಾವರಿಯೋಜನೆಗಳನ್ನೂ ಮಂಜೂರುಮಾಡಿದ್ದು ರಾಮನಹಳ್ಳಿ ಕಳಸಕೊಪ್ಪ ಅರಿಶಿಂಕರ ಮತ್ತ ಕೊಳಚಿಯೋಜನೆಗಳು ಸಂಪೂರ್ಣ ವಾಗಿಯುತ್ತ ಬಂದಿವೆ ಕೃಷ್ಣಾ ಮೇಲ್ದಂಡೆಯ ಯೋಜನೆಯ ಬಗ್ಗೆ ಪರಿಶೀಲನೆಯನ್ನು ನಡೆಸಿದ್ದು ಮಲಪ್ರಭಾ ನೀರಾವರಿ ಯೋಜನೆಯ ವಿವರಗಳನ್ನು ಕೇಂದ್ರ ಸರಕಾರಕ್ಕೆ ಪೂರೈಸಲಾಗಿದೆ,

ಉತ್ತರಕರ್ನಾಟಕದಲ್ಲಿ ವ್ಯವಹಾರಕ್ಕೆ ಅತ್ಯಗತ್ಯವಿರುವ ಕೆಲವೊಂದು ರಸ್ತೆಗಳ ನಿರ್ಮಾಣಕ್ಕೆ ಪ್ರಾಧ್ಯಾನವನ್ನೀಯಲಾಗಿದೆ ಘಾನಾಪುರದ ಬಳಿ ಮಲಪ್ರಭಾ ನದಿಗೂ, ಬಳ್ಳಾರಿ ಜಿಲ್ಲೆಯ ಸಿಂಗುಪ್ಪಾದ ಬಳಿ ತುಂಗಭದ್ರಾ ನದಿಗೂ ಸೇತುವೆಯನ್ನು ಕಟ್ಟಿಸಲಾಗುವುದು. ಪತ್ತಿಮ ಕರ್ನಾಟಕದ ಹೆದ್ದಾರಿ ನಿರ್ಮಾಣಕ್ಕಾಗಿ ೩೦೧ ಲಕ್ಷ ರೂಪಾಯಿಗಳನ್ನು ತೆಗೆದಿಡಲಾಗಿದೆ ರಕ್ಕಸಕೊಪ್ಪ, ಶಾಹಾಬಾದ ಚಿತ್ರಾಪುರ, ಗಂಗಾವತಿ, ಕೊಪ್ಪಳ ಮತ್ತು ಸೋವ ವಾರವೇಟ ಮೊದಲಾದೆಡೆಗಳಿಗೆ ನೀರಿನ ಯೋಜನೆಯನ್ನು ಮಂಜೂರು ಮಾಡಲಾಗಿದೆ

ರಾಜ್ಯದಲ್ಲಿ ಪಂಚವರ್ಷಿಕ ಯೋಜನೆಯ ಅಭಿವೃದ್ಧಿ ಯೋಜನೆಗಳು ತೀವ್ರಗತಿಯಿಂದ ಮುಂದುವರಿಯುವುದ ಶುಭ ಸೂಚನೆಯೇ ಆಗಿದೆ ಈ ವರ್ಷದ ಮುಂಗಡಪತ್ರವು ಕೊರತೆಯದ್ದೂ, ಆಶಾದಾಯಕವಾಗಿದ್ದು, ವಿಶಾಲ ಮೈಸೂರಿನ ಆರ್ಥಿಕ ಪರಿಸ್ಥಿತಿಯು ತುಂಬ ಚಿತ್ರವಾಗಿದ ಎಂದು ಹೇಳಬಹುದು

The Academy of General Education,
MANIPAL.

Notice is hereby given to all classes of members — Life Members, Fellows Associate Members and Ordinary Members — that the Annual General Body Meeting of the Academy will be held at 9 A M on the 30th of June, 1957, at the 'Academy House at Manipal

AGENDA

1 Consideration of the previous year s accounts
2 Election of Members to the Supreme Governing Body
3 Appointment of Auditors for the current year
4 Any other matter to be considered with the permission of the Chair

Sd/- T M A Pai
Registrar

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc No 466 N/50 dave 2-12-1950 of the Directors of public Instruction Madras

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೩	೨೦-೬-'೫೬	೪೧

ಮಿತವ್ಯಯದ ತಪಸ್ಸು

ಕೇಂದ್ರ ಸರಕಾರದ ಮಂತ್ರಿಗಳೆಲ್ಲರೂ ತಮ್ಮ ಸಂಬಳದಲ್ಲಿ ಶೇಕಡಾ ಹತ್ತರಷ್ಟು ಕಡಿತವನ್ನು ಸ್ವೇಚ್ಛೇಯಿಂದ ಮಾಡಿಕೊಳ್ಳುವರೆಂಬ ನಿರ್ಧಾರವನ್ನು ಈ ವಾರ ಪ್ರಕಟಿಸಲಾಗಿದೆ. ಇದನ್ನು ಮಿತವ್ಯಯದ ತಪಸ್ಸಿನ ಒಂದು ಅಂಗವೆಂದು ಭಾವಿಸಿ, ಅದಕ್ಕೆ ಸಾಕಷ್ಟು ಹೆಚ್ಚು ಪ್ರಸಿದ್ಧಿಯನ್ನು ಕೊಡಲಾಗಿದೆ. ಮಂತ್ರಿಗಳ ಸಂಬಳವು ಹೀಗೆ ಕಡಿಮೆಯಾದುದರಿಂದ ರಾಷ್ಟ್ರಕ್ಕೆ ಎಷ್ಟು ಉಳಿತಾಯವಾದೀತೆಂದು ಲೆಕ್ಕಹಾಕಿದಾಗ ಮಾತ್ರ ಎಂಟು ಲಕ್ಷ ರೂಪಾಯಿಗಳೂ ಸಿಗುವುದಿಲ್ಲವೆಂಬ ಸತ್ಯ ಗೋಚರಿಸುತ್ತದೆ. ಆದಾಗ್ಯೂ ಈ ಕಡಿತವನ್ನು ಅನಾವಶ್ಯಕವಾದದೆಂದು ಭಾವಿಸಲಾಗಿಲ್ಲ. ಏಕೆಂದರೆ ಇಂದು ಜನತೆಯ ಮನೋಭಾವವನ್ನು ರಾಜಕೀಯ ಪಕ್ಷಗಳಲ್ಲಿ ಕೆಲವು ಅನಾವಶ್ಯಕವಾಗಿ ಮಂತ್ರಿಗಳ ಸಂಬಳದ ವಿಷಯವನ್ನೆತ್ತಿ ಕೆಡಿಸಿಬಿಟ್ಟಿವೆ. ಮಂತ್ರಿಗಳ ಬೊಕ್ಕಸವನ್ನು ಬೆಳೆಸುವ ಸಲುವಾಗಿ ಅವರಿಗೆ ಧಾರಾಳವಾದ ಸಂಬಳವನ್ನು ಕೊಡಲಾಗುತ್ತಿದೆ ಎಂದು ದೂರುವುದೇ ಇಂದು ಪರಿಪಾಟಿವಾಗಿದೆಯಲ್ಲದೆ, ಮಂತ್ರಿಗಳಿಗೆ ಅಷ್ಟು ಸಂಬಳವನ್ನು ಕೊಡುವ ಅಗತ್ಯ ನಿಜವಾಗಿಯೂ ಇತ್ತೆ? ಎಂಬುದನ್ನು ವಿಮರ್ಶಿಸುವ ಗೊಡವೆಗೆ ಹೋದವರಿಲ್ಲ. ಕಾಂಗ್ರೆಸು ೫೫ ವರ್ಷಗಳ ಹಿಂದೆ ಯಾರೂ ತಿಂಗಳೊಂದಕ್ಕೆ ೫೦೦ ರೂಪಾಯಿಗಳಿಗಿಂತ ಹೆಚ್ಚಿನ ವೇತನ ಇರಬಾರದು ಎಂದು ಒಂದು ನಿರ್ಣಯವನ್ನು ಸ್ವೀಕರಿಸಿತ್ತು. ನಿಜ. ಆದರೆ ಇಂದೂ ಅದೇ ೫೦೦ ರೂಪಾಯಿಯ ಮಾನದಂಡವನ್ನು ಉಪಯೋಗಿಸಿ, ಕಾಂಗ್ರೆಸು ತನ್ನ ನಿರ್ಣಯವನ್ನೇ ಧಿಕ್ಕರಿಸಿ ನಡೆಯುತ್ತಿದೆ ಎಂದು ಪ್ರತಿಪಕ್ಷಗಳು ಟೀಕಿಸುತ್ತಿರುವುದು ನ್ಯಾಯವಲ್ಲ. ಏಕೆಂದರೆ, ಅಂದಿನ ಒಂದು ರೂಪಾಯಿಗೆ ಇಂದಿನ ಐದು ರೂಪಾಯಿ ಸಹಸಮವಲ್ಲ ಎಂಬುದನ್ನು ಬೆಲೆ ಏರಿಕೆಯು ತೋರಿಸಿಕೊಟ್ಟಿದೆ. ಅದರಲ್ಲೂ ಭಾರತದರಾಜಧಾನಿಯಾದ ಹೊಸ ದೆಹಲಿಯಜೀವನವೆಚ್ಚವು ಜಗತ್ತಿನಲ್ಲಿಯೇ ಅತಿ ಹೆಚ್ಚು ಎಂಬುದನ್ನು ಸಂಯುಕ್ತರಾಷ್ಟ್ರದ ಆಶ್ರಯದಲ್ಲಿ ನಡೆಸಿದ ಸರ್ವೆಯೊಂದು ಇತ್ತೀಚೆಗೆ ತೋರಿಸಿ ಕೊಟ್ಟಿದೆ. ಇವೆಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಆಲೋಚಿಸಿದ್ದಾದರೆ ಮಂತ್ರಿಗಳ ಸಂಬಳಕ್ಕಾಗಿ ಅಸೂಯೆ ಪಡುವಂತಹುದೇನೂ ಇರುವುದಿಲ್ಲ. ಆದರೆ, ರಾಜಕೀಯ ಗುಂಪುಗಳ ಬಾಯಿಯಿಂದ ಉಳಿದು ಮಂತ್ರಿಗಳಾದವರು ಇನ್ನು ಮುಂದೆ ಬಾಳ ಬೇಕಾದರೆ ಅತ್ಯಲ್ಪ ಸಂಬಳವನ್ನು ಪಡೆದೇ ಕಷ್ಟದಿಂದ ದಿನ ದೂಡಬೇಕಾದ ಪರಿಸ್ಥಿತಿ ಬರುವುದು ನಿಶ್ಚಯ. ನಾವು ಬಡವರು; ನಮ್ಮ ದೇಶವೂ ಬಡತನದಿಂದ ಬಳಲುತ್ತದೆ—ಹಾಗಿರುವಾಗ ಮಂತ್ರಿಗಳಿಗೇಕೆ ಇಷ್ಟು ಸಂಬಳ? ಎಂದು ಕೇಳುವ ಜನ ಸಮುದಾಯವನ್ನು ಇದಿರಿಸ ಬೇಕಾದ ಶಕ್ತಿ ಬರಲಿಕ್ಕಾಗಿ ಇಂಥ ಕಡಿತವನ್ನೇ ಆಶ್ರಯಿಸುವ ಅಗತ್ಯ ಬೀಳುತ್ತದೆ. ಇದು ಮಂತ್ರಿಗಳನ್ನು ಆರ್ಥಿಕ ಸಂಕಷ್ಟಕ್ಕೆ ಬೀಳಿಸುವ ಸಂಭವ ಇಲ್ಲದಿಲ್ಲ— ಆದಾಗ್ಯೂ ಜನತೆಯ ಇಚ್ಛೆಯನ್ನು ನೆರವೇರಿಸುವ ತಪಸ್ಸಿನ ಕ್ರಮ ಇದೆನ್ನಬಹುದು ಅದೂ ಅಲ್ಲದೆ, ಮಂತ್ರಿಗಳೇ ಸಂಬಳ ಕಡಿತ ಮಾಡಿಕೊಂಡುದನ್ನು ಕಂಡ ಬಳಿಕ ಅವರ ಅನುಯಾಯಿಗಳ ಕೈಕೆಳಗಿನ ಅಧಿಕಾರಿ ವರ್ಗದವರೂ ತಂತಮ್ಮ ಸಂಬಳವನ್ನು ಕಡಿಮೆ ಮಾಡಿಕೊಳ್ಳಬಹುದು. ಇದನ್ನು ನೋಡಿ ಉಳಿದ ಅಧ್ಯರೂ ಕಡಿಮೆ ಹಣವನ್ನು ಸ್ವೀಕರಿಸಲು ಮುಂದಾಗಬಹುದು— ಹೀಗೆ ಇದೊಂದು ಈ ಕಾಲದ ಭ್ಯಾಶನ್ನಿನ ರೂಪದಲ್ಲಿ ಸಾರ್ವತ್ರಿಕವನ್ನಣಿಯನ್ನು ಪದೆದರೂ ಪಡೆದೀತು— ಹಾಗೆ ಧಾರಾಳವಾದ ಉಳಿತಾಯವಾದೀತು ಎಂದು ಈ ಕಡಿತದಕ್ರಮದ ಮಾನಸಿಕ ಪರಿಣಾಮದ ಪಯೋಲೋಚಕರು ಹೇಳುವುದುಂಟು. ಆದರೆ ನಮಗೆ ಈ ಕಡಿತವು ಸಾಂಕ್ರಾಮಿಕ ರೂಪದಲ್ಲಿ ಹೆಬ್ಬುವ ಲಕ್ಷಣವೇನೂ ತೋರುವುದಿಲ್ಲ —ಅಪಾರವಾದ ಸಹನಾಪಾತೀತವಾದ ಒತ್ತಾಯವಲ್ಲದಿದ್ದಲ್ಲಿ ಸಂಬಳ ಕಡಿತದಂಥ ವಿಧಾನದಿಂದ ವಿತ್ತವ್ಯಯ ಸಾಧಿಸಲು ಯಾರೂ ಮುಂದಾಗಲಿಕ್ಕಿಲ್ಲವೆಂದೇ ನಮ್ಮ ಅಭಿಪ್ರಾಯ ಉಳಿತಾಯವೇ ಆಗಬೇಕೆಂದಿದ್ದರೆ ಅದನ್ನು ಆಡಳಿತೆಯ ಬೇರೆ ರಂಗದಲ್ಲಿ ತೋರಿಸಲು ಸಾಧ್ಯವಿದೆ. ಉದಾಹರಣೆಗಾಗಿ ರಾಷ್ಟ್ರದಲ್ಲಿ ಜರಗುತ್ತಿರುವ ನೂರಾರು ಅಭಿವೃದ್ಧಿ ಯೋಜನೆಗಳಲ್ಲಿ ಇಂದು ೫೦% ಹಣ ಪೋಲಾಗಿ ಹೋಗುತ್ತಿದೆ; ಒಂದು ವರ್ಷದಲ್ಲಿ ಮುಗಿಸಬಹುದಾದ ಕೆಲಸಕ್ಕೆ ಎರಡು ವರ್ಷ ತಗಲುವುದಲ್ಲದೆ ಒಂದು ಕೋಟಿ ರೂಪಾಯಿ ವೆಚ್ಚ ಬಂದಿತೆಂದು ಅಂದಾಜು ಹಾಕಿ ಪ್ರಾರಂಭಿಸಿದ ಯೋಜನೆಯು ನಾಲ್ಕು ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುತ್ತದೆ ಎಂದರೆ ತ್ವಪ್ಪಾಗಲಾರದು ನಿಜವಾದ ಮಿತವ್ಯಯದ ತಪಸ್ಸು ಈ ಕ್ಷೇತ್ರದಲ್ಲಿ ನಡೆಯಬೇಕಲ್ಲದೆ ಬೇರೆಡೆ ಅದರ ಪ್ರಯೋಗ ಮಾಡಹೋಗುವುದು ಅಗತ್ಯವಾಗಿಲ್ಲ. ಈಗಿನ ಯೋಜನೆಗಳಂದರೆ ಕಾಸ ಕೊಟ್ಟು ಕಡವನ್ನು ಕಾಟಿ ಹೋಗುವ ರೀತಿಯವು ಹಳ್ಳಿಗಳಲ್ಲಿ ರಸ್ತೆಗಳ ರಿಪೇರಿಗಾಗಿ ಐದು ಸಾವಿರ ರೂಪಾಯಿ ವ್ಯಯಿಸಲಾಯಿತೆನ್ನೋಣ— ಮರು ವರ್ಷ ಅಲ್ಲಿ ಕೆಸರು ತುಂಬಿರುತ್ತದೆ; ಮಾರನೇ ವರ್ಷ ಗುಡ್ಡವ ನಡುವೆ ಹಾಯುಹೋಗಿರುವ ಆ ರಸ್ತೆಯಲ್ಲಿ ಹುಲ್ಲು ಬೆಳೆದಿರುತ್ತದೆ! ಎಂದರೆ ಗುಡ್ಡವನ್ನು ಗುಡ್ಡವಾಗಿಯೇ ಇಡಲಾರದ ಚಪಲಕ್ಕೆ ನಾವು ೫೦೦೦ ರೂಪಾಯಿಗಳನ್ನು ವ್ಯಯಿಸಿದೆವೆಂದೇ ಲೆಕ್ಕ! ಇಂಥ "ಸುಧಾರಣೆ"ಗಳಿಂದ ಜನಕ್ಕೂ ಲಾಭವಿಲ್ಲ; ರಾಷ್ಟ್ರಕ್ಕೂ ಉಳಿಗಾಲವಿಲ್ಲ. ಇದಕ್ಕಾಗಿಯೇ ಮಿತವ್ಯಯ ಮಾಡಿರೆಂದು ಉಪದೇಶಿಸುವುದಕ್ಕೂ ಅರ್ಥವಿಲ್ಲ!

ಪ್ರಾಥಮಿಕ ಶಿಕ್ಷಕರ ಕಷ್ಟ ಪರಿಹಾರ(?)

ನಮ್ಮ ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿದಂತೆ ನಮ್ಮ ಜಿಲ್ಲೆಯಲ್ಲಿ ತಾ. 1-6-56 ರಿಂದ ಕೆಲಸಕ್ಕೆ ಸೇರಿದ ಪ್ರಾಥಮಿಕ ಶಿಕ್ಷಕರನ್ನು ನಿವೃತ್ತಿಗೊಳಿಸುವ ಆಜ್ಞೆಯನ್ನು ಜಿಲ್ಲಾ ವಿದ್ಯಾಧಿಕಾರಿಗಳು ಉಡುಪಿ ತಾಲೂಕು ಪ್ರಾಥಮಿಕ ಶಿಕ್ಷಕಯೂನಿಯನಿನ ನಿಯೋಗದವರ ಕೇಳಿಕೆಗನುಸಾರವಾಗಿ ತಡೆಹಿಡಿದಿರುವರೆಂದು ತಿಳಿದು ಬರುತ್ತದೆ. ತಾ. 31-10-56 ರಂದು ಸರ್ವಿಸಿನಲ್ಲಿರುವ ಶಿಕ್ಷಕರನ್ನು ನಿವೃತ್ತಿಗೊಳಿಸಲಾಗದೆಂದೂ, ಹಾಗೆ ನಿವೃತ್ತಿಗೊಳಿಸಲ್ಪಟ್ಟವರನ್ನು ಸಾಧ್ಯವಿದ್ದಷ್ಟು ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದೂ, ಅವರ ಗೈರುಹಾಜರಿಯ ಸಂದ್ಯಾವಧಿಯನ್ನು ವಿನಾಯತಿಗೊಳಿಸುವುದಾಗಿಯೂ ಎಲ್ಲಾ ಪರೀಕ್ಷಾಕರ್ತರಿಗೂ ಈ ರೀತಿಯಾಗಿ ತಿಳಿಸುವುದಾಗಿಯೂ ಜಿಲ್ಲಾ ವಿದ್ಯಾಧಿಕಾರಿಗಳು ಶಿಕ್ಷಕ ನಿಯೋಗದವರಿಗೆ ತಿಳಿಸಿರುವರೆಂದು ವರದಿಯಾಗಿದೆ. ಆದರೆ ಈ ತಡೆ ಆಜ್ಞೆಯು ಮೈಸೂರಿನ ವಿದ್ಯಾಂಗದ ಡೈರೆಕ್ಟರರ ಅನುಮತಿಗೊಳಪಟ್ಟಿರುವುದರಿಂದ ಮಾನ್ಯ ಡೈರೆಕ್ಟರರು ಈ ಕುರಿತು ಶೀಘ್ರವಾಗಿ ಆಜ್ಞೆಯನ್ನು ಕೊಡಬೇಕಾಗಿದೆ.

ಜಿಲ್ಲಾ ವಿದ್ಯಾಧಿಕಾರಿಗಳು ಶಿಕ್ಷಕರ ಮೇಲಣ ಅಭಿಮಾನದಿಂದಲೂ, ಸಾರ್ವಜನಿಕರ ಕೇಳಿಕೆಗೆ ಮತ್ತು ಪತ್ರಿಕಾ ಅಭಿಪ್ರಾಯಗಳಿಗೆ ಮಾನ್ಯತೆಯಿತ್ತು ತಕ್ಷಣದಾದಷ್ಟು ಸಕಾರವನ್ನು ಮಾಡಿದ್ದಾರೆ ಇದು ಸಂತೋಷದ ಸಂಗತಿ. ಹಾಗೆಯೇ ಮೈಸೂರಿನ ವಿದ್ಯಾಂಗದ ಡೈರೆಕ್ಟರರು ಈ ಕುರಿತು ಅನುಕೂಲ ಆಜ್ಞೆಯನ್ನು ಕೂಡಲೇ ಹೊರಡಿಸಬೇಕಾಗಿದೆ. ನಮ್ಮ ಜಿಲ್ಲೆಯ ಶಾಸನ ಸಭಾ ಸದಸ್ಯರೆಲ್ಲರೂ ಒಂದಾಗಿ ಜಿಲ್ಲೆಯ ಸುಮಾರು ಸಾವಿರ ಪ್ರಾಥಮಿಕ ಶಿಕ್ಷಕರ ರಕ್ಷಣೆಗೋಸ್ಕರ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿದೆ ಶ್ರೀ ಟಿ. ಎ ವೈಯವರು ಶಿಕ್ಷಕರ ಪ್ರಾತಿನಿಧ್ಯವನ್ನು ವಹಿಸಿ ಈ ಕುರಿತು ವರಿಷ್ಠ ಅಧಿಕಾರಿಗಳೊಡನೆ ವಿಚಾರ ವಿನಿಮಯ ಮಾಡಿ ಡೈರೆಕ್ಟರರಿಂದ ಜಿಲ್ಲಾ ವಿದ್ಯಾಧಿಕಾರಿಗಳ ತಡೆ ಆಜ್ಞೆಗೆ ಒಪ್ಪಿಗೆ ಕೊಡುವಂತೆ ಯತ್ನಿಸಲು ಬೆಂಗಳೂರಿಗೆ ತೆರಳಿಯತ್ತಾರಾಗಿ ಕೇಳಿದ್ದೇವೆ.

ಈಗಿನ ಪರಿಸ್ಥಿತಿಯಲ್ಲಿ ನಮ್ಮ ಜಿಲ್ಲೆಯ ಶಾಸನ ಸಭಾ ಸದಸ್ಯರು ಮೈಸೂರಿನ ವಿದ್ಯಾಂಗದ ವರಿಷ್ಠ ಅಧಿಕಾರಿಗಳೊಡನೆಯೂ ಮುಖ್ಯ ಮಂತ್ರಿಗಳೊಡನೆಯೂ, ವಿದ್ಯಾ ಮಂತ್ರಿಗಳೊಡನೆಯೂ ವಿಚಾರ ವಿನಿಮಯ ಮಾಡಿ ಶಿಕ್ಷಕರ ನಿವೃತ್ತಿ ಯಾಗದಂತೆ ನೋಡುವುದೊಂದೇ ಪರಿಣಾಮಕಾರಿಯಾದ ದಾರಿಯೆಂದು ತಿಳಿಯುತ್ತೇವೆ. ಸುಮಾರು ಸಾವಿರ ಪ್ರಾಥಮಿಕ ಶಿಕ್ಷಕರ ರಕ್ಷಣೆಗೆ ಜಿಲ್ಲಾ ಶಾಸನ ಸಭಾ ಸದಸ್ಯರು ಶೀಘ್ರವೇ ಪ್ರಯತ್ನಿಸಬೇಕೆಂದು ಮಗದೊಮ್ಮೆ ನಾವವರನು ವಿನಂತಿಸುತ್ತೇವೆ. ಕಳೆದ ಬಾರಿಯ ಸಂಪಾದಕೀಯದಲ್ಲಿ ನಾವು ಒಡಿದ ಅಭಿಪ್ರಾಯಗಳಿಗೆ ಜಿಲ್ಲಾ ವಿದ್ಯಾಧಿಕಾರಿಗಳು ಗಮನಹರಿಸಿ ಶಿಕ್ಷಕ ವರ್ಗಕ್ಕೆ ಸಹಾಯ ಮಾಡಿದಂತೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ, ವಿದ್ಯಾ ಮಂತ್ರಿಗಳೂ ನಮ್ಮ ಜಿಲ್ಲೆಯ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರೂ ಶಾಸನ ಸಭಾ ಸದಸ್ಯರೂ ಜಿಲ್ಲಾ ವಿದ್ಯಾಧಿಕಾರಿಗಳ ಆಜ್ಞೆ ಒಪ್ಪಿಗೆ ಸಿಗುವಂತೆ ಮಾಡಬೇಕೆಂದು ನಾವು ಅಶಿಸುತ್ತೇವೆ.

ಉಡುಪಿ

ಲಾ ಕಾಲೇಜು ಕಾರ್ಯಾರಂಭ

ಸಮಾರಂಭ: ಕಳೆದ ಮೇ ತಿಂಗಳ ತಾ. 11ರಲ್ಲು ಮೈಸೂರು ಸರಕಾರದ ಕಾರ್ಮಿಕ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರಿಂದ ಉದ್ಘಾಟಿಸಲ್ಪಟ್ಟ ಉಡುಪಿ ಲಾ ಕಾಲೇಜಿನ ಕಾರ್ಯಾರಂಭ ಸಮಾರಂಭವು ಇದೇ ತಾ. 16 ರಲ್ಲು ಬೆಳಿಗ್ಗೆ ಲಾ ಕಾಲೇಜಿನಲ್ಲಿ ಜರಗಿತು. ಆರಂಭದಲ್ಲಿ ಎರಡುಮಿನಿಟುಗಳ ಮೌನ ಪ್ರಾರ್ಥನೆಯಾಯಿತು ಎಳೆಡೆಮಿ ಆಫ್ ಜನರಲ್ ಎಡ್ಯುಕೇಶನಿನ ರಿಜಿಸ್ಟ್ರಾರ್ ಡಾ. ಟಿ. ಮಾಧವ ಪೈಗಳು ಎಳೆಡೆಮಿಯ ನೇತೃತ್ವದಲ್ಲಿ ಈ ಲಾ ಕಾಲೇಜನ್ನು ತೆರೆಯಲು ಈ ತನಕ ಸಾಧ್ಯವಾಗದಿರಲು ಕಾರಣಗಳೇನೆಂಬುದನ್ನು ವಿವರಿಸಿ ನಮ್ಮ ಮೈಸೂರು ರಾಜ್ಯದ ಸರಕಾರದಿಂದ ಅದೇಗೆ ಸಾಧ್ಯವಾಯಿತೆಂಬುದನ್ನು ಚರ್ಚಿಸಿದರು. ಈಗಿನ ಯುಗದಲ್ಲಿ ಜನರು ಕಾನೂನುಗಳನ್ನು ತಿಳಿದಿರಬೇಕಾಗಿರುವುದರಿಂದಲೂ ಕಾಲೇಜುಗಳು ಅಗತ್ಯವಿವೆ ಎಂದರಲ್ಲದೆ, ವ್ಯಾಪಾರೀ ಸಂಘ ಸಂಸ್ಥೆಗಳ ಸಮರ್ಥ ಆಡಳಿತೆಗೆ ಲಾ ಡಿಗ್ರಿ ಪಡೆದ ಪದವೀಧರರ ಅವಶ್ಯಕತೆಯು ಇದೆ ಎಂದು ಹೇಳಿದರು. ಪ್ರಿನ್ಸಿಪಾಲ್ ಶ್ರೀ. ಬಿ. ಎಲ್. ಎಸ್ ರೈಗಳು ಧನ್ಯವಾದಗಳನ್ನರ್ಪಿಸುತ್ತಾ ಎಳೆಡೆಮಿ ಕಾರ್ಯಾರಂಭದ, ಅದುಸಾಧಿಸಿದ ಅಸಾಮಾನ್ಯ ಕಾರ್ಯ ಡಾ| ಟಿ ಎಮ್ ಎ ಪೈಗಳ ಸಂಪೂರ್ಣ ಗಂಡಸ್ತನವನ್ನು ಕೊಂಡಾಡಿ, ಇತರ ಪ್ರಾಧ್ಯಾಪಕರ ಪರಿಚಯಮಾಡಿದರು, ಮಣಿಪಾಲ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ. ಬಿ. ಶ್ಯಾಮರಾಯ ಸೆಟ್ಟರು ಮಾತನಾಡುತ್ತಾ, ರಿಜಿಸ್ಟ್ರಾರ್ ಡಾ| ಪೈಗಳು ಮಾಡಿದ ಕಾರ್ಯಗಳನ್ನು ಪ್ರಶಂಸಿಸಿ, ಹೊಸತಾಗಿ ಸ್ಥಾಪನೆಯಾದ ಈ ಲಾ ಕಾಲೇಜು ಯಶಸ್ವಿಯಾಗಲೆಂದೂ, ಪ್ರಿನ್ಸಿಪಾಲ್ ಶ್ರೀ ರೈಗಳೂ ಇತರ ಪ್ರಾಧ್ಯಾಪಕರೂ ಈ ಬಗ್ಗೆ ಸಂಪೂರ್ಣ ದುಡಿಯುವಂತಾಗಲೆಂದೂ ಹಾರೈಸಿದರು.

ಮಣಿಪಾಲದಲ್ಲಿ ಎಂಜಿನಿಯರಿಂಗ್ ಕಾಲೇಜು—ಪ್ರಾರಂಭ ಸಮಾರಂಭವು ತಾ. 18ರಂದು ಹೂವರ್ಷ್ನ ಜರಗಿತು. ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಂದ ಕಳೆದ ತಿಂಗಳ ತಾ 11 ರಲ್ಲು ಉದ್ಘಾಟಿಸಲ್ಪಟ್ಟ ಈ ಕಾಲೇಜಿನ ಕುರಿತು ಎಳೆಡೆಮಿ ರಿಜಿಸ್ಟ್ರಾರ್ ಡಾ. ಟಿ. ಎಮ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಠೇವಣಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?

ಹಾಗಿದ್ದಲ್ಲಿ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬೇಂಕಿನ ಶಾಖೆಯಲ್ಲಿ ವಿಚಾರಿಸಿರಿ. "ಕೊರ್ಪೊರೇಶನ್" ಬೇಂಕು ಎಲ್ಲಾ ತರದ ಠೇವಣಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿಯದೆ. ಅಲ್ಲದೆ ಠೇವಣಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ಶರತ್ತುಗಳನ್ನೂ ಬದಲಾಯಿಸಿಯದೆ.

51 ವರುಷಗಳ ಪರಿಪಕ್ವ ಬೇಂಕಿಂಗ್ ಅನುಭವ!

7,00,00,000 ರೂಪಾಯಿಗಳಿಗೂ ಮೀರಿದ ಒಟ್ಟು ವಹಿವಾಟು!

THE CANARA BANKING CORPORATION LIMITED

ಉಳಿತಾಯ ನಿಧಿ

ವೆಚ್ಚವನ್ನು ಕಡಿಮೆ ಮಾಡಿ ಉಳಿಕೆಯನ್ನು ಹೆಚ್ಚಿಸಿರಿ!

ಮೈಸೂರಿನ ರಾಜ್ಯಪಾಲರಾದ, ಶ್ರೀ ಜಯಚಾಮರಾಜ ಒಡೆಯರ್‌ರವರು ತಾ ೧೫ರಂದು ರಾತ್ರಿ ಆಕಾಶವಾಣಿ, ಬೆಂಗಳೂರು ಕ್ಷೇತ್ರದಿಂದ "ರಾಷ್ಟ್ರೀಯ ಉಳಿತಾಯ ಪಕ್ಷ"ದ ಉದ್ಘಾಟನೆಯನ್ನು ನೆರವೇರಿಸುತ್ತ ಹೀಗೆಂದರು:-

"ಹಲವು ಮುಂದುವರಿದ ರಾಷ್ಟ್ರಗಳಲ್ಲಿ, ವರ್ಷದಲ್ಲಿ ಹಲವು ವಿಶಿಷ್ಟ ಮಾದಗಳನು, ಆರೋಗ್ಯವಾದ, ಮಕ್ಕಳವಾದ, ವನಮಹೋತ್ಸವ ಮುಂತಾದ ಸಾಮಾಜಿಕ ಅಥವಾ ಆರ್ಥಿಕ ಪ್ರಾಧಾನ್ಯವುಳ್ಳ ನಿರ್ದಿಷ್ಟ ಕೆಲಸಗಳಿಗಾಗಿ ಆಚರಣೆ ಮಾಡುತ್ತದೆ. ಈಗ ಸಾಂಮಾನ್ಯವಾಗಿ ರೂಢಿಯಲ್ಲಿದೆ ವಿಶಿಷ್ಟ ರಾಷ್ಟ್ರ ನಿರ್ಮಾಣ ಚಟುವಟಿಕೆಯ ಪ್ರಾಮುಖ್ಯವನ್ನು ಜನತೆಯ ಗಮನಕ್ಕೆ ತರುವುದೇ ಇದರ ಉದ್ದೇಶವಾಗಿದೆ

"ಇಂದು ನಾವು ರಾಷ್ಟ್ರೀಯ ಉಳಿತಾಯ ಪಕ್ಷವನ್ನು ಉದ್ಘಾಟಿಸುತ್ತಿದ್ದೇವೆ ರಾಷ್ಟ್ರೀಯ ಉಳಿತಾಯದ ಪ್ರಾಮುಖ್ಯ ಹಾಗೂ ವಿಶಿಷ್ಟತೆಯನ್ನು ಕುರಿತು ಮಾತನಾಡಲು ನಾನು ಉದ್ದೇಶಪಡುತ್ತೇನೆ.

ಮೊದಲು ರಾಷ್ಟ್ರೀಯ ಉಳಿತಾಯ ವೆಂದರೇನು? ಎಂಬುದನ್ನು ತಿಳಿಯೋಣ ಒಂದು ರಾಷ್ಟ್ರವು ತನ್ನ ಪ್ರಚಲಿತ ವರ್ತಮಾನದಲ್ಲಿ ತನ್ನ ಪ್ರಚಲಿತ ಖರ್ಚು ವೆಚ್ಚಗಳನ್ನು ನಿರ್ವಹಿಸಿದನಂತರ, ಉಳಿಸುವ ಹಣವು ರಾಷ್ಟ್ರೀಯ ಉಳಿತಾಯವೆನಿಸುವುದು ರಾಷ್ಟ್ರೀಯ ಉಳಿತಾಯದ ವಿವರಣೆಯು ಸರಳವೂ ಸ್ಪಷ್ಟವೂ ಆಗಿರುವುದು ಆದರೆ, ಈ ಮಾತಿಗೆ ಇನ್ನೂ ಹೆಚ್ಚಿನ ಮಹತ್ವವಿರುವುದು ಜನತೆಯು, ರಾಷ್ಟ್ರೀಯ ಉಳಿತಾಯ ಚಳುವಳಿಯಲ್ಲಿ ಹೃದ್ಪೂರ್ವಕವಾಗಿ ಹಾಗೂ ಪರಿಣಾಮಕಾರಿಯಾಗಿ ಸಹಕಾರವನ್ನು ನೀಡಬೇಕಾದರೆ, ಈ ರಾಷ್ಟ್ರೀಯ ಉಳಿತಾಯದ ಪ್ರಾಮುಖ್ಯವನ್ನು ಪೂರ್ಣವಾಗಿ ಅರಿತುಕೊಳ್ಳಬೇಕು

"ನಮ್ಮದು ಸುಖೀರಾಜ್ಯ, ನಾವು ಗಳಿಸುವ ರಾಜಕೀಯ ಸ್ವಾತಂತ್ರ್ಯವು ಅಂತಹ ಭವ್ಯ ಸ್ಥಾಪನೆಗೆ ಹಾದಿಯಾಗಿರುವುದು ಸ್ವಾತಂತ್ರ್ಯವು ಸಂಭ್ರಮ ಪಡಬೇಕಾದಂತಹ ಕಲ್ಪನೆಯೇನಲ್ಲ ಸ್ವಾತಂತ್ರ್ಯವೆಂದರೆ, ಸಾಮಾನ್ಯ ಮಾನವನಿಗೆ, ಅವನ ಜೀವನದಲ್ಲಿ ಇದುವರೆಗೂ ಇಲ್ಲದಿದ್ದ ಒಂದು ಭಾವನೆಯನ್ನು ಒದಗಿಸುವುದೆಂದು ತಿಳಿಯಬೇಕು ನಮ್ಮ ಗಣರಾಜ್ಯ (ರಿಪಬ್ಲಿಕ್)ವು ಇನ್ನೂ ಶೈಶವಾವಸ್ಥೆಯಲ್ಲಿದೆ ಆರ್ಥಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಅದು ಇನ್ನೂ ಅನೇಕ ಹೋರಾಟಗಳನ್ನು ನಡೆಸಬೇಕಾಗಿದೆ ಅ ಗಳ ಹೊರತು ನಮ್ಮ ರಾಜಕೀಯ ಸ್ವಾತಂತ್ರ್ಯವು ಅಧ ವಿಫಲವಾಗುವುದು ಈ ದೇಶದ ಜನತೆ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮುಂದಿರುವ ಕೆಲಸ ಮಹತ್ತರವಾದುದು

ನಮ್ಮ ದೇಶದಲ್ಲಿ ಲಕ್ಷಾಂತರ ಜನರು, ಉಪವಾಸ ಬಡಿಯಲ್ಲಿ ಜೀವನ ಸಾಗಿಸುತ್ತಿರುವರು, ರೋಗಗಳು ಅವುಗಳಲ್ಲಿ ಕೆಲವು ಮಂಕಾಂತರವಾದುವು, ಜನತೆಯನ್ನು ಕಾಡುತ್ತವೆ ಜನತೆಯಲ್ಲಿ ಗಮನಾರ್ಹವಾದ ಪ್ರಮಾಣದಲ್ಲಿ ನಿರಕ್ಷರತೆಯೂ ಇರುವುದು ನಮ್ಮ ಕೈಗಾರಿಕೆಗಳು ಇನ್ನೂ ಶೈಶವಾವಸ್ಥೆಯಲ್ಲಿವೆ. ಶತಮಾನಗಳ ಕಾಲದಿಂದಲೂ ಇರುವ ಬಡತನ, ಕೊರತೆ, ಕೀಳಿನುಟ್ಟಿದ ಜೀವನ, ನಿರುದ್ಯೋಗ ಗ್ರಾಮಾಂತರ ಪ್ರದೇಶಗಳಲ್ಲಿ ಅರ್ಧೋದ್ಯೋಗ, ಅಜ್ಞಾನ, ಇವುಗಳನ್ನೆಲ್ಲ ನಾವು ಎದುರಿಸಬೇಕಾಗಿದೆ. ಈ ಸಮಸ್ಯೆಗಳನ್ನಲ್ಲಾ ತೊಡೆದು ಹಾಕಲು ನಾವು ಈಗ ಆರ್ಥಿಕ ಕಾರ್ಯರಂಗದಲ್ಲಿ ನಮ್ಮ ಹೋರಾಟವನ್ನೂ ನಡೆಸುತ್ತಿದ್ದೇವೆ ನಾವು ವಿಶ್ಲೇಷಣಾದೃಷ್ಟಿಯಿಂದ ನೋಡಿದಲ್ಲಿ, ನಮ್ಮ ಉದ್ದೇಶ ಹಾಗೂ ಗುರಿ ತುಂಬಾ ಸಂಕುಚಿತವು ನಮ್ಮ ಶಕ್ತಿಯನ್ನು ಎಲ್ಲಾ ವಿಧದಿಂದಲೂ ಹೆಚ್ಚಿಸಿಕೊಳ್ಳಲು, ನಮ್ಮ ಜನತೆಯ ಜೀವನದ ಮಟ್ಟವನ್ನು ಉತ್ತಮಪಡಿಸಲು,- ಅವರಿಗೆ ಉತ್ತಮ ಆಹಾರ ವಸ್ತ್ರ, ವಸತಿ ಹಾಗೂ ಉತ್ತಮ ಆರೋಗ್ಯ ಮತ್ತು ಶಿಕ್ಷಣವನ್ನು ನೀಡಲು- ನಾವು ನಮ್ಮ ಎಲ್ಲಾ ಸಾಮಾಜಿಕ ಸೇವಾಕಾರ್ಯಗಳನ್ನು ವಿಸ್ತರಿಸುವುದು ಅಗತ್ಯ ಹಲವು ಅಭಿವೃದ್ಧಿ ಕಾರ್ಯಗಳಿಗೆ- ನೀರಾವರಿ, ವಿದ್ಯುಚ್ಛಕ್ತಿ, ಆಕ್ಯಾಯಕ್ತವಾದ ವಸ್ತುಗಳನ್ನು, ಬಟ್ಟೆ ಹಾಗೂ ಆಹಾರ ವಸ್ತುಗಳನ್ನು ತಯಾರಿಸುವ ಕಲವು ಕೈಗಾರಿಕಾ ಸಂಸ್ಥೆಗಳ ಅಗತ್ಯವೂ ಇರುವುದು ಈ ಎಲ್ಲಾ ಕೆಲಸಗಳಿಗೂ ಅಧಿಕ ಪ್ರಮಾಣದಲ್ಲಿ ಬಂಡವಾಳವು ಬೇಕಾಗುವುದು

"ಕಲವು ದಿನಗಳ ಹಿಂದೆ ನಮ್ಮ ಪ್ರಧಾನ ಮಂತ್ರಿಗಳು ಹೇಳಿದಂತೆ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಯುದ್ಧ ಸಮಯದ ಆರ್ಥಿಕ ವ್ಯವಸ್ಥೆಯಂತೆ ಏರ್ಪಡಿಸಿಕೊಳ್ಳಬೇಕಾದ ರಾಷ್ಟ್ರೀಯ ಜರೂರತೆ ಸಂದರ್ಭ ಬಂದಿದೆ ನಮ್ಮ ಕಾರ್ಖಾನೆಗಳಲ್ಲಿ, ನಮ್ಮ ಗಣಿಗಳಲ್ಲಿ, ನಮ್ಮ ಭೂಮಿಕಾಣಿಗಳಲ್ಲಿ ಹೆಚ್ಚಿನ ಉತ್ಪಾದನೆಯನ್ನು ಸಾಧಿಸುವುದರಿಂದ ನಾವು ನಮ್ಮ ಹೋರಾಟದಲ್ಲಿ ಗೆಲ್ಲಬೇಕಾಗಿದೆ ಈ ಹೋರಾಟಕ್ಕೆ ಅಗತ್ಯವಾದ ಮದ್ದುಗುಂಡನ್ನು ಎಲ್ಲಾ ರೀತಿಯ ಉಳಿತಾಯ ವಿಧಾನಗಳಿಂದಲೂ ಪೂರೈಸಬೇಕಾಗಿದೆ. ಏಕೆಂದರೆ ಬದ್ಧಿವಂತಿಕೆಯಿಂದ ಉಳಿತಾಯದಲ್ಲಿ ತೊಡಗಿಸಿದ ಹಣವು ಬಂಡವಾಳವಾಗಿ ರೂಪುಗೊಳ್ಳುವುದು ಆದರಿಂದ, ನಾನು ಮೇಲೆ ಹೇಳಿದ ಉತ್ತಮ ಜೀವನ ಮಟ್ಟವನ್ನು ಒದಗಿಸುವ ಸಮಾಜ ರಾಜ್ಯದ ಸ್ಥಾಪನೆಗಾಗಿ ಕೈಗೊಳ್ಳುವ ನಮ್ಮ ಯೋಜನೆಗಳು ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ನಾವು ಒದಗಿಸಬಹುದು ನಮ್ಮ ರಾಜ್ಯದಲ್ಲಿ ನಾವು ನೀರಾವರಿಗಾಗಿ ಬೃಹತ್ ಪ್ರಮಾಣದ ಯೋಜನೆಗಳನ್ನು ಹೊಂದಿದ್ದೇವೆ ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಹೆಚ್ಚಿಸಿ ಅದನ್ನು ನಮ್ಮ ಗ್ರಾಮಗಳಿಗೆ ಪೂರೈಸಲು ನಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಬೇಕಾದ ಯೋಜನೆಗಳನ್ನು ನಾವು ಹೊಂದಿದ್ದೇವೆ"

ಹಿಂದಿನ ಕಾಲದಲ್ಲಿ ನಮಗೆ ಬಂಡವಾಳವು ವಿವಿಧ ಮೂಲಗಳಿಂದ ಒದಗುತ್ತಿತ್ತು ಮೊದಲನೆಯದಾಗಿ, ಭಾರತಕ್ಕೆ ಪರದೇಶಗಳಿಂದ ಸಂತತವಾಗಿ ಬಂಡವಾಳವು ಒದಗುತ್ತಿತ್ತು ಎಂಡನೆಯದಾಗಿ ಆ ದಾಯದ ವಿತರಣೆಯ ವಿಧಾನವು ಇಂದಿಗಿಂತ ಅಂದು ವಿಭಿನ್ನವಾಗಿತ್ತು ಈಗ ನಮಗೆ ರಾಷ್ಟ್ರೀಯ ಆದಾಯವು ವಿಶಾಲವಾದ ತಳಹಾಯದ ಮೇಲೆ ಹಂಚಿಕೆಯಾಗಿದೆ ನಮ್ಮ ರಾಷ್ಟ್ರೀಯ ಯೋಜನೆಗಳಿಗೆ ಅಗತ್ಯವಾಗುವ ಭಾರಿ ಭಂಡವಾಳವನ್ನು ಪಡೆಯುವ ಬಗ್ಗೆ ನಾವು ಕೆಲವೇ ಧನಿಕರ ಬೆಂಬಲವನ್ನು ನೆಚ್ಚಿಕೊಂಡಿರುವಂತಿಲ್ಲ ಈಗ ನಾವು ಇಡೀ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯನ್ನೂ ಭಿನ್ನಯಿಸಿಕೊಳ್ಳಬೇಕಾಗಿದೆ. ಈ ಪ್ರಜಾರಾಜ್ಯದ ಎಲ್ಲಾ ಪ್ರಜೆಗಳಲ್ಲಿಯೂ ಅದರಲ್ಲಿಯೂ ವಿಶೇಷವಾಗಿ ಮೈಸೂರು ರಾಜ್ಯದ ಪ್ರಜೆಗಳಲ್ಲಿ ಈ ಮನವಿಯನ್ನು ಮಾಡಿಕೊಳ್ಳಲಾಗಿದೆ ಏಕೆಂದರೆ, ಇಡೀ ರಾಷ್ಟ್ರವೇ ಹೆಚ್ಚುಹೆಚ್ಚಾಗಿ ಹಣ ಉಳಿಸಬೇಕಾಗಿದೆ ವಚ್ಚವನ್ನು ಕಡಿಮೆ ಮಾಡಬೇಕಾಗಿದೆ, ನಮ್ಮ ಭವಿಷ್ಯವನ್ನು ಸುಭದ್ರವಾದ ತಳಹದಿಯ ಮೇಲೆ ನಿರ್ಮಿಸುವ ದೃಷ್ಟಿಯಿಂದ ಉಳಿತಾಯವಾದ ಹಣವನ್ನು ವಿನಿಯೋಗಿಸಬೇಕಾಗಿದೆ.

"ದ್ವಿತೀಯ ಯೋಜನಾವಧಿಯಲ್ಲಿ 500 ಕೋಟಿ ರೂಗಳನ್ನು ಅಥವಾ ವರ್ಷಗಂಡಿ ಕೋಟಿ ರೂಗಳನ್ನು ರಾಷ್ಟ್ರೀಯ ಉಳಿತಾಯ ಪ್ರಕಾರ ಉಳಿಸಬೇಕೆಂಬ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಅಂದರೆ ಪ್ರತಿ ತಿಂಗಳಿಗೆ ತಲಾ ಒಬ್ಬ ವ್ಯಕ್ತಿಯು ನಾಲ್ಕಾಣೆಗಳನ್ನು ಉಳಿಸಬೇಕಾಗುವುದು. ಆದರೆ ಈ ಅಲ್ಪ ಹಣವನ್ನು ಕೂಡಿಉಳಿಸಲು ಸಾಧ್ಯವಿಲ್ಲದಂತಹ ಲಕ್ಷಾಂತರ ಜನರಿರುವರು ಆದಷ್ಟು ಹಣವನ್ನು ಉಳಿಸಲು ಸಾಧ್ಯವಿರುವಂತಹ ಹಾಗೂ ಉಳಿಸಿದ ಹಣವನ್ನು ಭೂಮಿಯಲ್ಲಿ ಕೂತಿಡದೆ ಅಥವಾ ಆಭರಣಾದಿಗಳ ರೂಪದಲ್ಲಿ ಸಂಗ್ರಹಿಸಿಡದೆ ನಮ್ಮ ರಾಷ್ಟ್ರೀಯ ಸರ್ಕಾರಕ್ಕೆ ಸಾಲದ ರೂಪದಲ್ಲಿ ಕೊಡಲು ಸಾಧ್ಯವಿರುವಂತಹವರಿಗೆ ಈ ಮನವಿಯು ಸಂಬಂಧಿಸುವುದು."

"ನೀವು ಉಳಿಸಿದ ಹಣವನ್ನು ರಾಷ್ಟ್ರೀಯ ಹಣ ಉಳಿತಾಯದಲ್ಲಿ ವಿನಿಯೋಗಿಸಿಸುವುದರಿಂದ ನೀವು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಪಾಲು ಪಡೆಯುವುದಲ್ಲದೆ, ಬಾಗವಹಿಸಿದಂತಾಗುವುದು. ಸಂತೃಪ್ತ ಹಾಗೂ ಉಜ್ಜ್ವಲಾಯ ಸ್ಥಿತಿಯಲ್ಲಿರುವ ಭಾರತವು ತನ್ನ ಎಲ್ಲಾ ಪ್ರಜೆಗಳ ಜೀವನ ಮಟ್ಟವನ್ನೂ ಉತ್ತಮ ಪಡಿಸುವುದು

"ಈ ರಾಜ್ಯದ ಪ್ರತಿಯೊಬ್ಬ ಪ್ರಜೆಯೂ ತನ್ನ ಸಾಮರ್ಥ್ಯವೆ, ಸಹಕಾರ ಹಾಗೂ ತನ್ನ ಪಾಲಿನ ಹಣವನ್ನು ನೀಡಿ ಹಣ ಉಳಿತಾಯ ಪಕ್ಷವನ್ನು ಯಶಸ್ವಿಯಾಗುವಂತೆ ಮಾಡುವುದು ಜೊತೆಗೆ ಮುಂದಿನ ಜನಾಂಗಕ್ಕೆ ಸ್ಫೂರ್ತಿದಾಯಕವಾಗುವಂತೆ ಮಾಡಬೇಕೆಂದು ನಾನು ಪ್ರತಿಯೊಬ್ಬ ಪ್ರಜೆಯಲ್ಲಿಯೂ ಮನವಿಮಾಡುತ್ತಿದ್ದೇನೆ ಪ್ರತಿಯೊಂದು ಕುಟುಂಬವೂ, ಪ್ರತಿ ದಿನವೂ ರಾಷ್ಟ್ರೀಯ ಹಣ ಉಳಿತಾಯ ದಿನವನ್ನು ಆಚರಿಸಲಿ"

ಎ ಪೈಗಳು ಮಾತನಾಡುತ್ತಾ ಪಂಚವಾರ್ಷಿಕ ಯೋಜನೆಗಳ ಯಶಸ್ಸಿಗೆ ಎಂಜಿನಿಯರುಗಳ ಅವಶ್ಯಕತೆಯಿದೆ ಎಂಬುದನ್ನು ವಿವರಿಸಿದರು ಕಂತೇಜಿನ ಜೇಫ್ ಎಡ್ಮಿನಿಸ್ಟ್ರೇಟಿವ್ ಆಫೀಸರ್ ಶ್ರೀ ಎಮ್ ಎಸ್ ಕಾಮತರೂ ಮಾತನಾಡಿದರು

ಪ್ರಥಮ ಸ್ವಾತಂತ್ರ್ಯ ಸಮರದ ಶತಮಾನೋತ್ಸವವನ್ನು— ಹೇಗೆ ಆಚರಿಸಬೇಕೆಂಬ ದನ್ನು ಚರ್ಚಿಸಿ ಕಾರ್ಯಕ್ರಮವನ್ನು ರೂಪಿಸುವ ಬಗ್ಗೆ ಉಡುಪಿ ತಹಸೀಲ್ದಾರ್ ಕೆ ಮಂಜಪ್ಪಯ್ಯ ಬ್ಯಾರಿಯವರು ತಾಲೂಕು ಆಫೀಸಿನಲ್ಲಿ ತಾ ೧೪ರಂದು ಸಭೆಯೊಂದನ್ನು ಕರೆದಿದ್ದರು. ಈ ಸಭೆಯಲ್ಲಿ ತಾತ್ಕಾಲಿಕ ಕಾರ್ಯಕ್ರಮವನ್ನು ನಿರ್ಣಯಿಸಲಾಯಿತಲ್ಲದೆ ಸಮಿತಿಯೊಂದನ್ನು ರಚಿಸಲಾಯಿತು ಜಿಲ್ಲಾ ಸಮಿತಿಗೆ ಶ್ರೀ ಕೆ ಕೆ ಪೈಗಳನ್ನು ಆಯ್ಕೆಮಾಡಲಾಯಿತು

ನೋಟೀಸು

ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರರ ಕೋರ್ಟಿನಲ್ಲಿ

O P No 198/1957

ಉಡುಪಿ ಶ್ರೀ ಶ್ರೀರೂರು ಮಠದ ಶ್ರೀ ಕಲ ಜೇಶರ ಭಂಡಾರದ ಅಧಿಪತಿಗಳು ಶ್ರೀಮದ್ ಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರು —ಅರ್ಜಿದಾರರು

ಮತ್ತು

ಶ್ಯಾಮ ಶೆಟ್ಟಿ - ಎದ್ರಿ

ಇವರೊಳಗೆ

ಶ್ಯಾಮ ಶೆಟ್ಟಿ, ಶಿದ್ದ ಶೆಟ್ಟಿ ಅಳಿಯನು, ಕೂಸು ಸೆಡ್ತಿಯರ ಮಗ, ಉಡುಪಿ ತಾಲೂಕು ಬೆಳ್ಳರಪಾಡಿ ಗ್ರಾಮದ ಮೀಲ್ಮನೆಯಲ್ಲಿ ಪಾಲಿ ಇರುವವ —ಎದ್ರಿ

ಸದ್ರಿ ಅರ್ಜಿಯು ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಅರ್ಜದಾರರು ಆಸ್ತಿ ಸ್ವಾಧೀನತೆ ಬಗ್ಗೆ ಎದ್ರಿಯ ಮೇಲೆ ದಾವೆ ಹೂಡಿದ ಮೇಲ್ಮಂಡ ಅರ್ಜಿಯು ಎದ್ರಿಯ ಸಾಜರಾತಿ ಬಗ್ಗೆ ತಾ 25-6-1957ಕ್ಕೆ ಪಂಗಳೂರ ಮೊಕ್ಕಾಮಿನಲ್ಲಿ ಇದೋಣಾಗಿದೆ ಎದ್ರಿಯು ತಾ 26-6 1957ನೇ ದಿನ ಬೆಳಗ್ಗೆ ಗಂಟೆ 11ಕ್ಕೆ ಮೇಲ್ಮಂಡ ಕೋರ್ಟು ಮುಂದೆ ಮಂಗಳೂರು ಮೊಕ್ಕಾಮಿನಲ್ಲಿ ಹಾಜರಾದಿದ್ದರೆ ಅತನ ಗೈರು ಹಾಜರಿಯಲ್ಲಿ ಸದ್ರಿ ಅರ್ಜಿಯು ತೀರ್ಮಾನಿಸಲ್ಪಡುವುದು

ಕೋರ್ಟು ಹುಕುಂ ಪ್ರಕಾರ)

K Varadaraya Pai

Advocate for Petitioner

ಉಡುಪಿ, ದಿ. 18 6-1957

ಶ್ರೀ ಕೆ ಕೆ ಸೆಟ್ಟರಯ್ಯರವರು ದಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳೂ ಎಮ್ ಎಲ್ ಸಿಗಳಾದ ಶ್ರೀ ಕೆ ಕೆ ಸೆಟ್ಟರು ಮೈಸೂರು ವಿಧಾನ ಸಭೆಯ ಉಪಾಧ್ಯಕ್ಷರಾಗಿ ಆಯ್ಕೆ ಹೊಂದಿದ್ದಾರೆ

ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರರ ಕೋರ್ಟಿನಲ್ಲಿ

O. P No 441/1957

A J ಫೆರ್ನಾಂಡಿಸ್ —ಅರ್ಜಿದಾರ

ಮತ್ತು

1. ಪೀಟರ್ ರುಜಾರಿ ಡಾಲ್ಫಿದ 2 ಸಾವೇರ ಡಾಲ್ಫಿದ — ಎದ್ರಿರು

2 ಸಾವೇರ ಡಾಲ್ಫಿದ ಜೂಜೆ ಪಿಂಟಾತ್ಮಿದಿ ಮಗ ಉಪ್ಪಿ ತಾಲ್ಲೂಕ ಕಚ್ಚೂರು ಗ್ರಾಮ, ಇವರಿಗೆ,

ಅರ್ಜದಾರನು ಆಸ್ತಿ ಸ್ವಾಧೀನ ಕೇಳಿ ದಾವೆಯು ಹೂಡಿದ ಮೇಲಿನ ಅರ್ಜಿಯು 1ನೇ ಎದ್ರಿಯು ನೋಟೀಸಿನ ಬಗ್ಗೆ 6 7 1957ಕ್ಕೆ ಇದೋಣಾಗಿದೆ 2ನೇ ಎದ್ರಿಯು ಸದ್ರಿ ತಾ 6-7-1957ಕ್ಕೆ ಸೂರ್ಯಾಸ್ತ ಘಂಟೆ 10ಕ್ಕೆ ಮೇಲ್ಮಂಡ ಕೋರ್ಟು ಮುಂದೆ ಉಪ್ಪಿ ನೆಕ್ಕಾಂಸಲ್ಲಿ ಸದ್ರಿ ಅರ್ಜಿಯಲ್ಲಿ ಹಾಜರಾಗಿ ಮನವಿಮಾಡಿಕೊಳ್ಳುವರೆ ತಪ್ಪಿದಲ್ಲಿ ನಿಮ್ಮ ಗೈರ ಹಾಜ್ರಿಯಿಂದ ಸದ್ರಿ ಅರ್ಜಿ ತೀರ್ಮಾನಿಸಲ್ಪಡುವುದು.

(By order of the court)

A J. Fernandes,

Petitioner

ಎಲ್ಲಿಲ್ಲಿ ಏನೇನು?

ಶಂಕರನಾರಾಯಣ — ಇಲ್ಲಿಯ ಬೋರ್ಡು ಹೈಸ್ಕೂಲಿನ ಶ್ರೀ ಎಸ್. ಸುಕ್ರಪ್ಪ ಗೌಡರು ಬೇಣೂರು ಬೋರ್ಡು ಹೈಸ್ಕೂಲಿಗೂ, ಶ್ರೀ ಎಸ್. ಸದಾಶಿವ ಸೆಟ್ಟರು ಕೋಟೇಶ್ವರ ಬೋರ್ಡು ಹೈಸ್ಕೂಲಿಗೂ ವರ್ಗಾಯಿಸಲ್ಪಟ್ಟು ನಿಮಿತ್ತ ಅವರಿಗೆ ತಾ. 4ರಂದು ವಿದಾಯಸತ್ಕಾರವೀಯಲಾಯಿತು. ಶ್ರೀ ಜಿ. ಎಸ್. ಆಚಾರ್ಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಬೆಳ್ಮಣ್ಣು — ಮೈಸೂರು ಸರಕಾರವು ಅನುಮತಿಕೊಟ್ಟು ಹೋರಿಗೆ ಡಿ. ಕೆ. ಜಿಲ್ಲಾ ಬೋರ್ಡಿನ ಕಡೆಯಿಂದ ಬೆಳ್ಮಣ್ಣಿನಲ್ಲಿ ಇದೇ ತಿಂಗಳ ತಾ 26ಕ್ಕೆ ಹೈಸ್ಕೂಲು ಹಂಗಾಮಿಯಾಗಿ ಆಲ್ಲಿಯ 'ಸಮಾಜ ಮಂದಿರ' ದಲ್ಲಿ ತೆರೆಯುವ ಪೂರ್ವಸಿದ್ಧತೆಗಳು ಭರದಿಂದ ಸಾಗುತ್ತಿವೆ. ಈ ತನಕ ಊರಿನ ಸಹಪೇಯರಿಂದ ರೂ 4400/- ಹೈಸ್ಕೂಲು ಬಗ್ಗೆ ದಿವೋಜಿಟ್ ಮಾಡಲಾಗಿದೆ. ಇನ್ನೂ ಪಣವನ್ನು ಸಂಗ್ರಹಿಸುವರೆ ಹೈಸ್ಕೂಲು ಕಮಿಟಿಯವರು ಕಾರ್ಯಾಸಕ್ತರಾಗಿದ್ದಾರೆ. ಕಮಿಟಿಯಲ್ಲಿ ಡಾ. ಕೆ. ಕೆ. ಹೆಗ್ಡೆ, ಎಮ್. ಎಲ್. ಎ, (ಅಧ್ಯಕ್ಷ), ಶ್ರೀಗಳಾದ ಎಮ್. ವೆಂಕಟ್ರಾವ್ ಪಟೇಲ್ ಮತ್ತು ಬೋಳ ರಾಜು ಸೆಟ್ಟಿ, (ಉಪಾಧ್ಯಕ್ಷರು), ಡಾ. ಕೊಡ್ಕಲ್ ವೆಂಕಟ್ರಾವ್, (ಪ್ರಧಾನಕಾರ್ಯದರ್ಶಿ), ಡಾ. ಎಸ್. ಎಮ್. ಜಗನ್ನಾಥ ಸೆಟ್ಟಿ ಮತ್ತು ಶ್ರೀ ಬಿ ವೆಂಕಟರಾವ್ (ಸಹಕಾರ್ಯದರ್ಶಿಗಳು) ಮತ್ತು ಶ್ರೀ ಬಿ. ಸುಬ್ಬರಾಯ ಭಟ್ (ಖಜಾನ್ಚಿ) ಅಧಿಕಾರಿವರ್ಗದಲ್ಲಿರುತ್ತಾರೆ.

ಪಡುಬಿದ್ರೆ — ಸ್ಥಳೀಯ ಅಧ್ಯಾಪಕ ಸಂಘದ ಮಾಸಿಕ ಸಭೆಯು ತಾ. 8ರಂದು ನಡ್ಪಾಲು ಬೀಡಿನಕೆರೆ ಶಾಲಾ ಹೆಡ್ಮಾಸ್ಟರ್ ಶ್ರೀ ಸಿ ಎನ್ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸಿ. ಶಿವಣ್ಣ ಹೆಗ್ಡೆಯವರು ಪಿನೋಬಾರವರ ಭೂದಾನದ ವಿಷಯ ಭಾಷಣವಿತ್ತರು ಬಳಿಕ ಶ್ರೀ ಸಿ. ಸದಾನಂದ ಸೆಟ್ಟರು 'ಹೆಚ್ಚು ವಿದ್ಯಾರ್ಥಿಗಳನ್ನು ದಾಖಲು ಮಾಡುವ ಪ್ರಚಾರಕಾರ್ಯ ಹೇಗೆ' ಎಂಬ ವಿಷಯವನ್ನೆತ್ತಿ ಮಾತನಾಡಿದರು. ಶ್ರೀ ಎಮ್. ಎಮ್. ಪ್ರಭುಗಳೂ ತನ್ನ ಅನುಭವವನ್ನು ವಿವರಿಸಿದರು.

ಧಾರವಾಡ— ಸ್ಥಳೀಯ ವನಿತಾ ಸೇವಾಸಮಾಜದ ಸರ್ವ ಸಾಧಾರಣ ಮಂದಲದ ತ್ರೈಮಾಸಿಕ ಸಭೆಯು ಇದೇ ತಾ 27ನೇ ಗುರುವಾರ ಸಂಜೆ ಐದು ತಾಸಿಗೆ ಜರಗಲಿರುವುದು ಮಂಡಲದ ಅಧ್ಯಕ್ಷ, ಉಪಾಧ್ಯಕ್ಷ, ಕೋಶಾಧ್ಯಕ್ಷರ ಆಯ್ಕೆ ಮೊದಲಾದ ಕಾರ್ಯಕ್ರಮಗಳು ನಡೆಯುವುವು.

ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ.

ಗೌಡ ಸಾರಸ್ವತ ಸಮಾಜದ ವಿದ್ಯಾರ್ಥಿಗಳಿಗ್ಗೆ ಸಮಾಜ ನಿಧಿಯಿಂದ ಸಹಾಯ ಅಪೇಕ್ಷಿಸುವ ಹೆತ್ತವರು ಅಮಾಯ ವಿಭಾಗದ ಟ್ರೈಕ್ಷನ್ ಕಮಿಟಿಯ ಸಚಿವರ ಮೂಲಕ ತಾರೀಕು 8—7—1957ರಂದು ಜರಗಲಿರುವ ಟ್ರೈಕ್ಷನ್ ಕಮಿಟಿಯ ಸಭೆಗೆ ಮುಂಚಿತವಾಗಿ ಕೈಸೇರುವಂತೆ ಅರ್ಜಿ ಸಲ್ಲಿಸಬಹುದೆಂದು ಡಾ. ಟಿ. ಮಾಧವ ಸೈಗಳು ತಿಳಿಸುತ್ತಾರೆ.

ದ. ಕ ಜಿಲ್ಲಾ ಬೋರ್ಡು ಅಧ್ಯಕ್ಷರಾಗಿ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಒಮ್ಮತದ ಆಯ್ಕೆ— ದ. ಕ. ಜಿಲ್ಲಾ ಬೋರ್ಡಿನ ವಿಶೇಷ ಸಭೆಯೊಂದು ತಾ. 17 ರಂದು ಬೋರ್ಡಿನ ಉಪಾಧ್ಯಕ್ಷ ಶ್ರೀ ಬಿ. ಆರ್. ಕಕ್ಕೇರರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಕೆ. ಕೆ. ಹೆಗ್ಡೆ, ಎಮ್. ಎಲ್. ಎ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಒಮ್ಮತದಿಂದ ಆರಿಸಲ್ಪಟ್ಟರು. ಶ್ರೀ ಬಿ. ಎಸ್. ಭಾಸ್ಕರ ರೈಗಳು ಶ್ರೀ ಹೆಗ್ಡೆಯವರ ಹೆಸರನ್ನು ಸೂಚಿಸಿದರು ಶ್ರೀ ಎನ್. ಎಸ್. ಪರಮೇಶ್ವರಯ್ಯನವರು ಅನುಮೋದಿಸಿದರು. ಇತರ ಹೆಸರುಗಳಾವುವೂ ಬಾರದಿದ್ದುದರಿಂದ ಶ್ರೀ ಬಿ ಮಂಜಯ್ಯ ಹೆಗ್ಡೆಯವರು ಒಮ್ಮತದ ಆಯ್ಕೆ ಹೊಂದಿದರೆಂದು ಜ್ಞಾಪಿಸಿರುಮಾಡಲಾಯಿತು.

ಡಾ. ಕೆ. ಕೆ. ಹೆಗ್ಡೆ, ಎಮ್. ಎಲ್. ಎ. ಶ್ರೀ ಬಿ ಆರ್ ಕಕ್ಕೇರರು, ಎಮ್ ಎಲ್. ಎ, ಡಾ. ಕೆ. ನಾಗಪ್ಪ ಅಳ್ವ, ಎಮ್. ಎಲ್. ಎ, ಶ್ರೀಗಳಾದ ಎಮ್. ಎಸ್. ಪರಮೇಶ್ವರಯ್ಯ, ಎ ಕೃಷ್ಣ ಸೆಟ್ಟಿ, ಬಿ. ಎಸ್ ಭಾಸ್ಕರ ರೈ, ಡಿ. ಸಾಮ್ರಾಜ್ಯ, ಎಮ್. ಎಮ್. ಹೆಗ್ಡೆ, ಜಾ! ಯು. ಕೃಷ್ಣ, ಡಾ. ಮಾದೇಶಯ್ಯ, ಮತ್ತು ಬೋರ್ಡಿನ ಕಾರ್ಯದರ್ಶಿ ಶ್ರೀ ಕೆ. ಸಂಜೀವ ಸೆಟ್ಟರು ಸೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದರು ಜಿಲ್ಲೆಯ ಏಳಿಗೆಗಾಗಿ, ಸರಕಾರ ಮತ್ತು ಸಾರ್ವಜನಿಕರ ಸಹಾಯದಿಂದ ತನ್ನಿಂದ ಸಾಧ್ಯವಾದಷ್ಟು ಪ್ರಯತ್ನಿಸುವೆನೆಂಬುದಾಗಿ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಹೇಳಿದರು.

ವಾರ್ಷಿಕ ಸಮ್ಮೇಳನ— ಅ ಭಾ ಅಂಚೆ ಇಲಾಖೆಯ ಮೂರನೆ ತರಗತಿಯ ನೌಕರರ ಯೂನಿಯನ್ನಿನ ದಕ್ಷಿಣ ಕನ್ನಡ ಡಿವಿಜನಲ್ ಶಾಖೆಯ ಮೂರನೇ ವಾರ್ಷಿಕ ಸಮ್ಮೇಳನವು ತಾ 16ರಂದು ಸಂಜೆ ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಬಿ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ. ಆರ್. ಆಚಾರ್, ಎಮ್ ಪಿ. ಅವರು ಸಮ್ಮೇಳನವನ್ನು ಉದ್ಘಾಟಿಸುತ್ತಾ. ಕೇಳಿಕೆಗಳನ್ನು ಸೂಕ್ತರೀತಿಯಲ್ಲಿ ಸರಕಾರದ ಗಮನಕ್ಕೆ ತಂದಲ್ಲಿ ಅವನ್ನು ಸರಕಾರವು ಸಹಾನುಭೂತಿಯಿಂದ ಪರ್ಯಾಲೋಚಿಸಬಹುದೆಂದರು. ಶಾಖಾ ಕಾರ್ಯದರ್ಶಿ ಶ್ರೀ ಕೆ. ಪಿ ಆಚಾರ್ಯರು ವರದಿಯನ್ನೋದಿದರು. ಜಿಲ್ಲಾ ಸುಪರಿಂಟೆಂಡೆಂಟ್ ಶ್ರೀ ಎಮ್. ಎ. ಸಲಾಮರು ಹಿತವಚನಗಳನ್ನಿತ್ತರು. ಆ ಮೇಲೆ ಶ್ರೀಗಳಾದ ಎಮ್. ವೆಂಕಟರಾವ್, ಎಂ. ಎಲ್. ಎ ವೆಂಕಟರಾಮನ್ ಮತ್ತು ಕೆ.ಪಿ ಆಚಾರ್ಯರು ಅಂಚೆ ನೌಕರರ ಕೇಳಿಕೆಗಳ ಕುರಿತು ವಿವರಣೆಗಳನ್ನಿತ್ತರು ಅಂಚೆ ಮತ್ತು ತಂತಿ ನೌಕರರ ರಾಷ್ಟ್ರೀಯ ಫೆಡರೇಶನು ಶಿಫಾರಸು ಮಾಡಿದ ಕೇಳಿಕೆಗಳಿಗೆ ಮತ್ತು ಮೈಸೂರು ಪ್ರಾಂತಕ್ಕೆ ಪ್ರತ್ಯೇಕ ಪೋಸ್ಟಲ್ ಸರ್ಕಲ್ ರಚಿಸಬೇಕೆಂಬ ಸೂಚನೆಗೆ ಬೆಂಬಲವೀಯುವ ನಿರ್ಣಯಗಳಾದುವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಅಂಚೆ ನೌಕರರು ತಮ್ಮ ಕೇಳಿಕೆಗಳನ್ನು ಪ್ರಥಮತ ಸಾರ್ವಜನಿಕರಿಗೆ ಮಂಡಿಸುವಾಗ, ನಂತರ ಸರಕಾರದ ಮುಂದಿಡುವುದು ಯುಕ್ತವೆಂದು ಹೇಳಿದರು.

1957-58ರ ಸಾಲಿಗೆ ಶ್ರೀಗಳಾದ ಬಿ. ಗಂಗಾಧರ ದಾಸ್ (ಅಧ್ಯಕ್ಷ), ಎಮ್. ವೆಂಕಟ್ರಾವ್ ಮತು ಕೆ. ದತ್ತ ಭಟ್ (ಉಪಾಧ್ಯಕ್ಷರು), ಕೆ. ಪಿ ಆಚಾರ್(ಕಾರ್ಯದರ್ಶಿ) ಎಮ್. ಜಿ. ರೋಜೊ, ಎಮ್. ಜಿ. ರಾವ್ ಮತ್ತು ವಿ ಎಸ್. ಹೊಳ್ಳ (ಸಹಾಯಕ ಕಾರ್ಯದರ್ಶಿಗಳು, ಕೆ. ನಾರೋಜರಾವ್ (ಸಂಘಟಕ ಕಾರ್ಯದರ್ಶಿ). ಕೆ. ಆರ್. ಸೆಟ್ಟಿ (ಖಜಾನ್ಚಿ), ಬಿ ಕೆ. ರಾಘವರಾವ್ (ಸಹಾಯಕ ಖಜಾನ್ಚಿ) ಮತ್ತು ಎಮ್. ಬಿ. ಹೆಗ್ಡೆ (ಆಡಿಟರ್) ಅಧಿಕಾರಿಗಳಾಗಿ ಆರಿಸಲ್ಪಟ್ಟರು.

ದ ಕ. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ವರ್ಕಿಂಗ್ ಕಮಿಟಿ ಸಭೆಯು ತಾ 16ರಲ್ಲಿ ಶ್ರೀ ಸಿಂಪ್ಸನ್ ಸೋನ್ಸರ ಅಧ್ಯಕ್ಷತೆಯಲ್ಲಿ ಜರಗಿ ಇದೇ ತಿಂಗಳ ತಾ. 26 ರಂದು ಜಿಲ್ಲೆಯಲ್ಲೆಲ್ಲಾ ಬೆಲೆ ಏರಿಕೆ ಮತ್ತು ತೆರಿಗೆ ವಿರೋಧ ದಿನ ಆಚರಿಸಿ, ಸಭೆ-ಮೆರವಣಿಗೆಗಳನ್ನು ನಡೆಸಬೇಕೆಂದು ಜಿಲ್ಲೆಯ ಎಲ್ಲಾ ಟ್ರೇಡ್ ಯೂನಿಯನ್ನುಗಳಿಗೆ ಕರೆ ಕೊಡಲಾಯಿತು.

ಕೇಂದ್ರ ಸರಕಾರದ ಮೊಸ ಕೇಗೆಗಳನ್ನು ಎರೋಧಿಸುವ ಅಕ್ಕಿ ವಾಸ್ತಾನು ಇರುವದರಿಂದ ಸ್ವಾಧೀನಪಡಿಸಿಕೊಂಡು ಕದಿಯ ಬೆಲೆಯ ಅಕ್ಕಿ ಅಂಗಡಿಗಳನ್ನು ಅಲ್ಲಿಲ್ಲಿ ತೆರೆದು ಜನರಿಗೆ ಅಕ್ಕಿ ಒದಗಿಸುವ ವ್ಯವಸ್ಥೆ ಮಾಡ ವಂತೆ ಸರಕಾರವನ್ನು ಒತ್ತಾಯಿಸುವುದು ಅಗೋಸ್ತು ತಾ. 15 ಮತ್ತು 16ರಂದು ಎಲ್ಲಾ ಮಜೂರರಿಗೆ ಸಂಬಳ ಸಹಿತ ರಜೆ ಕೊಡಬೇಕೆಂದು ಮಾಲಕರನ್ನು ಸರಕಾರವನ್ನು ಕೇಳಿಕೊಳ್ಳುವ ಇತ್ಯಾದಿ ಶ್ರೀ ಬಿ. ವಿ ಕಕ್ಕಿಲ್ಲಾಯರ ನಿರ್ಣಯಗಳು ಕೆಲವೊಂದು ತಿದ್ದುಪಡಿಗಳೊಂದಿಗೆ ಮಂಜೂರಾದುವು.

ಕಡಿಯಾಳಿ—ಸ್ಥಳೀಯ ಹಾ| ಎ| ಶಾರೆಯಿಂದ ಕಳೆದ ೩. ಎಸ್ ಎಲ್. ಸಿ. ಪರೀಕ್ಷೆಗೆ ಕುಳಿತ 43 ಮಂದಿ ವಿದ್ಯಾರ್ಥಿಗಳಲ್ಲಿ 41 ಮಂದಿ ಪಾಸಾಗಿದ್ದು ಸೇಕಡಾ 95/- ಫಲಿತಾಂಶದ ಕೀರ್ತಿಯನ್ನು ತಂದಿರುವರು.

ನಿಸರ್ಗವು ಮನುಷ್ಯನಿಗೆ ಎಂತಹ ಸಮೃದ್ಧಿಗಳನ್ನು ಕೊಟ್ಟಿದ್ದರೂ ಮಾನವ ಸಮಾಜದಲ್ಲಿ ಅಸಮಾನತೆ ಮಣ, ಕಷ್ಟ, ಮತ್ಸರ ಇವೇ ನೆಲೆಗೊಂಡಿವೆ. ಬಂಧುಭಾವವು ಇನ್ನೆಂದು ಉದಯ ಹೊಂದುವದೋ!

ಮಕ್ಕಳ ಮಗ್ಗಿಪುಸ್ತಕ

(ನಯೋ ಪೈಸೆ ಕೋಷ್ಟಕ ಸಹಿತ)

ಬೆಲೆ 1ಕ್ಕೆ	0	1	0
100ಕ್ಕೆ	4	0	0
250ಕ್ಕೆ	9	0	0
500ಕ್ಕೆ	17	0	0

ನವಯುಗ ಪ್ರೆಸ್, ಉಡುಪಿ.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc No 406-N/50 ತಾ 13-12-50ನೇ ಪ್ರೊಸಿಡಿಂಗ್ಸಿನಂತೆ ಸುತ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಸುತ್ತೋಲೆ ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನತಿಸಿಕೊಳ್ಳಲಾಗಿದೆ.

ಮೆನೇಜರ್.

ಏಕಾಂತದಲ್ಲಿ ಓದುವಂತಹುದು

ಕೋಕ ಶಾಸ್ತ್ರ

ನೀವು ಎಂದೂ ಓದದಂತಹ ಪರಿಶೀಕರಣ ಪುಸ್ತಕ. ಅನೇಕ ಆಶ್ಚರ್ಯಕರವಾದ ಫೋಟೋಗಳುಂಟು.

ಬೆಡ್‌ರೂಂ ಫೋಟೋಸ್

ಅತ್ಯುತ್ತಮ ಭಂಗಿಯಲ್ಲಿ ನೀವು ಹುಡುಗಿಯರ ಫೋಟೋವನ್ನು ನೋಡಿ ಆನಂದಿಸಬೇಕೆಂದಿದ್ದರೆ ಜರ ಒಂದು ಕೆಟ್‌ಗೆ ಇಂದೇ ಬರೆಯಿರಿ. ಎರಡಕ್ಕೆ ಒಟ್ಟು ಬೆಲೆ ರೂ. 6/-

Correspondence in English only

H. H. STORES (N. U.)

P. B. 51 MEERUT (U. P.)

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:00.

ಪುಸ್ತಕದ ಬೆಲೆಯೊಂದಿಗೆ ನಾಲ್ಕಾಣೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ನಮ್ಮ ಪುಸ್ತಕಗಳು ಈ ಕೆಳಗಿನವರಲ್ಲಿಯೂ ದೊರೆಯುತ್ತವೆ.—

1) ಸ್ಕೂಲ್ ಬುಕ್ ಕಂಪೆನಿ, ಗಾಂಧೀವಿದಿ, ಮಂಗಳೂರು.-1.

2) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಪಿತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ)

ನಸ್ಸೇರ ಪ್ರತಾಪ-

(ಯು ಯನ್ ಒ ವಿಜಯ)

ಯಕ್ಷಗಾನ ಪ್ರಸಂಗ ಬರೆದವರು — ಕಾರ್ಕಳ ರಾಮಚಂದ್ರ ಉಡುಪ, ಬಿ ಎ ಬಿ ಟಿ, ಬೋರ್ಡು ಹೈಸ್ಕೂಲ್, ಕೋಟೇಶ್ವರ ಪ್ರಕಾಶಕರು. ಕೆ ವಿ ಕಾಳಿಂಗ ಉಡ್ಪ ಪ್ರೋ ಹನುಮಾನ್ ಬುಕ್ ಸ್ಟೋರ್ಸ್ ಸಾಲಿಗ್ರಾಮ (ದ ಕ) ಪುಟ ೨೧ ಬೆಲೆ 0.4 0

ಸಂಯೋಜ್ ಕಾಲುಸೆಯ ವಾಸ್ತ್ರೀಕರಣದ ಗೊಂದಲವನ್ನು ಯಕ್ಷಗಾನ ರೂಪದಲ್ಲಿ ಆರ್ಥಸಹಿತ ಬರೆದು ಪ್ರಕಟಿಸಿದ್ದಾರೆ ರೇಖಕರು ಮುನ್ನುಡಿಯಲ್ಲಿ ಹೇಳುವಂತೆ ಶ್ರೀಗಳಾದ ರಾಮ ಗೀತಗಳ, ಕಾಂತಪ್ಪ ಮಾಸ್ತರರು ಇದರ ಕರಡು ಪ್ರತಿಯನ್ನು ಕಂಡು ತಿದ್ದಿ ನೆಚ್ಚಿಗೆಸೂಚಿಸಿದ್ದಾರೆಂಬುದು ಕೃತಿಯನ್ನು ಕಂಡಾಗ ಹೌದೆಂದು ಭಾಸವಾಗುತ್ತದೆ ಯೋಚಿಸಿ, ವಿಮರ್ಶಿಸಿ ಪ್ರಕಟಿಸಿದ ಕೃತಿಯಿದೆಂದೇ ಅಭಿಪ್ರಾಯವಾಗುತ್ತಿದೆ.

ಅರ್ಥವಿವರಣೆಯಲ್ಲಿ "ಮಾನನ್ನು ಕಟ್ಟಿಕೊಂಡ ಗುಬ್ಬಚ್ಚಿಯು ಗುಡಿಯೊಳ್ ತನ್ನವೆಂದಿತಂತೆ" ಎಂಬ ಅರ್ಥಾಲಂಕಾರವೂ ಶಬ್ದಾಲಂಕಾರವೂ ಔಚಿತ್ಯಪೂರ್ಣವೂ ಇರುವ ನುಡಿಮುತ್ತುಗಳು ಬಹಳ ಉತ್ತಮವಾಗಿವೆ

"ಯುಕ್ತರಾಷ್ಟ್ರ ಸಂಘದೊಳಗೆ ಯುಕ್ತಿಯಿಂದ ಹೊಣಿ ಕೊಟ್ಟೆನೆಗೆ ಮುಕ್ತರಾಗಿ ಶಕ್ತಿಗಿಂತ ಯುಕ್ತಿ ಶ್ರೇಷ್ಠವೂ" ಇತ್ಯಾದಿ ಪದ್ಯಗಳೂ ಚೆನ್ನಾಗಿವೆ

ಬಾಲಾ ಸರ್ಕಾಂತಿ, ಇತ್ಯಾದಿ ಉತ್ಸಾಹದ ಉತ್ಸವಗಳಲ್ಲಿ ಯಶಸ್ವಿಯಾಗಿ ರಂಗಭೂಮಿಗೆ ತರಬಹುದಾದ ಉತ್ತಮ ಕೃತಿಯಿದು ಇದರ ಉಸಯೋಗನನ್ನು ಚೆನ್ನಾಗಿ ಮಾಡಿಕೊಂಡರೆ ಚರಿತ್ರೆಯ ಅಧ್ಯಯನವೂ, ಕಲೋಪಾಸನೆಯೂ, ಮನೋರಂಜನೆಯೂ ಏಕಕಾಲದಲ್ಲಿ ಸಾಧಿಸಿದಂತಾಗುವುದು ಶ್ರೀ ಉಡುಪರು ಇನ್ನೂ ಇಂತಹ ಅನೇಕ ಕೃತಿಗಳನ್ನು ರಚಿಸುವಂತೆ ಶ್ರೀ ಶಾರದೆ-ಲಕ್ಷ್ಮಿಯರು ಅನುಗ್ರಹಿಸಲಿ.

ಶಾಂತಿ.

20—6—1957 ಕ್ಕೆ ಪ್ರಕಟವಾಗುವುದು!

ಶ್ರೀ| ವಾ.ಸರಾಯ ಬಲ್ಲಾಳರ ಕೃತಿ

ಕಾಡು ಮಲ್ಲಿಗೆ

ಬೆಳಕಾಗದ

ಸುಮಾರು 160 ಪುಟಗಳು ಬೆಲೆ 1 25

ಪ್ರಕಾಶಕರು

ಸ್ಟೂಡೆಂಟ್ಸ್ ಬುಕ್ ಡಿಪೋ

6-E, ಸೀತಾ ಸ್ಟ್ರೀಟ್, ಕೋಟೆ

ಮುಂಬಯಿ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು

ಮಂಗಳೂರು

ದ. ಕ ಜಿಲ್ಲಾ ಅಧ್ಯಾಪಕಸಂಘದ ಶಿಷ್ಟಮಂಡಳಿಯು ಶ್ರೀಗಳಾದವಸ್. ಮುಕುಂದ ರಾವ್, ಪಿ. ಎಸ್ ವೆಂಕಟಕೃಷ್ಣರಾವ್, ಬಿ ವೆಂಕಟ್ರಾವ್, ಕೆ. ದಾಸಸ್ವಾಮಿ, ಕೆ. ಶ್ರೀನಿವಾಸ ಬೋಳಾರ್, ಎ ನಾರಾಯಣ ಹೆಗ್ಡೆ, ಜೆ. ವಾಮನ ಬೆಟ್ಟಿ ಮತ್ತು ಪಿ ಕೆ. ನಾರಾಯಣರಿರುವ ದ ಕ ಜಿಲ್ಲಾ ಅಧ್ಯಾಪಕ ಸಂಘದ ಶಿಷ್ಟಮಂಡಳಿಯು ತಾ 10ರಲ್ಲು ಬೆಂಗಳೂರಿಗೆ ತೆರಳಿ, ಈ ಜಿಲ್ಲೆಯ ಶಾಸನ ಸಭಾಸದಸ್ಯರನ್ನು ಕಂಡು, ಅಧ್ಯಾಪಕವೃಂದದ ಕೆಲವು ಕೇಳಿಕೆಗಳನ್ನು ಶಾಸನಸಭೆಯ ಮುಂದಿಟ್ಟು ಅವುಗಳನ್ನು ಕಾರ್ಯಗತಗೊಳಿಸಬೇಕಾಗಿ ವಿನಂತಿಸಿದರು

ಮೈಸೂರು ಸರಕಾರದ ಹೊಸ ನೇತನ ಮಟ್ಟದ ಪ್ರಕಾರ ಸಿಗುವ ಸೌಲಭ್ಯಗಳನ್ನು ಈ ಜಿಲ್ಲೆಯ ಬೋರ್ಡು ಮತ್ತು ಖಾಸಗಿ ಶಾಲೆಗಳ ಅಧ್ಯಾಪಕರಿಗೂ ದೊರೆಯುವಂತೆ ಪ್ರಯತ್ನಿಸಬೇಕು ಬಿಡದೇ ರಾಜ್ಯದ ವಿವಿಧ ಭಾಗಗಳ ಅಧ್ಯಾಪಕರ ವೇತನ ಮಟ್ಟದಲ್ಲಿ ಇರುವ ವ್ಯತ್ಯಾಸವನ್ನು ಹೋಗಲಾಡಿಸಬೇಕು. ಜಿಲ್ಲಾ ಶಾಸನ ಸಭಾಸದಸ್ಯರು ಶಕ್ಯವಿದ್ದಷ್ಟು ಪ್ರಯತ್ನಿಸುವೆವೆಂದರು

ಮೀನುಗಾರರ ಶಿಷ್ಟಮಂಡಳಿ: ಮಹಾ ಮೈಸೂರು ಮೀನುಗಾರರ ಪರಿಸ್ಥಿತಿಯಲ್ಲಿ ಪಾಸಾದ ನಿರ್ಣಯಗಳನ್ನು ಸರಕಾರವು ಕಾರ್ಯಗತಗೊಳಿಸಬೇಕೆಂದು ಮೈಸೂರು ರಾಜ್ಯದ ಕೃಷಿ ಹಾಗೂ ಮೀನುಗಾರಿಕೆಯ ಮಂತ್ರಿ ಶ್ರೀ ಎಚ್ ಎಸ್, ರುದ್ರಪ್ಪನವರನ್ನು ತಾ 11ರಲ್ಲು ಡಾ ಎಸ್, ಚಿಂಚಾರವರ ನಾಯಕತ್ವದಲ್ಲಿ ಬೆಂಗಳೂರಿಗೆ ತೆರಳಿ ಮಂಡಳಿಯು ಭೇಟಿಮಾಡಿತು ಕಾರ್ಮಿಕ ಮಂತ್ರಿ ಶ್ರೀ ಬೈಕಂಪಾಡಿ ಬಾಳಿಗರನ್ನು ಮುಖ್ಯಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರನ್ನು ಶಿಷ್ಟಮಂಡಳಿಯು ಕಂಡು ಬೇಡಿಕೆಗಳನ್ನು ಮುಂದಿಟ್ಟು ಮಂತ್ರಿಗಳೆಲ್ಲರೂ ಸಹಾನುಭೂತಿಯನ್ನು ತೋರಿಸಿ, ಪರಿಸ್ಥಿತಿಗೆ ಗೊತ್ತುವಳಿಗಳನ್ನು ಮೀನುಗಾರರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮಾರ್ಗದರ್ಶನವಾಗಿಟ್ಟುಕೊಳ್ಳುವುದೆಂದರು ಮುಖ್ಯಮಂತ್ರಿಗಳನ್ನು ಭೇಟಿಮಾಡುವ ಕಾಲಕ್ಕೆ ಶ್ರೀ ಕೆ. ಕೆ ಸೆಟ್ಟಿ ಎಮ್ ಎಲ್. ಸಿ ಅವರು ಹಾಜರಿದ್ದರು.

ಭಾರತ ಸರಕಾರದ ಬಡುಮಾನ- ಭಾರತ ಸರಕಾರದವರು ಕಳದ ವರ್ಷ ೧೨ವ್ಯಾಪ್ತಿಗಳು, ಎಂಬ ವಿಷಯದ ಮೇರೆ ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ ಪ್ರಬಂಧ ಸ್ಪರ್ಧೆಯಲ್ಲಿ ಮಂಗಳೂರು ಮಿಶನ್ ಹೈಸ್ಕೂಲಿನ ಕುಮಾರಿ ವ್ರಮಲತಾ ಪೆಗ್ಡೆಯವರಿಗೂ, ಸಾಲ್ಕ ಬೋರ್ಡುಹೈಸ್ಕೂಲಿನ ವಿದ್ಯಾರ್ಥಿ ಶ್ರೀ ಜಿಪಾನಂದ ಕೊಳಂಬೆಯವರಿಗೂ ಬಹುಮಾನಗಳು ದೊರೆತಿರುವುದೆನ್ನಲಾಗಿದೆ

ಪ್ರಾಥಮಿಕ ಶಿಕ್ಷಕರನ್ನು ನಿವೃತ್ತಿಗೊಳಿಸುವ ಯೋಜನೆಯ ರದ್ದತಿ- ಉಡುಪಿ ತಾಲೂಕಿನ ಪ್ರಾಥಮಿಕ ಶಿಕ್ಷಕರ ಯೂನಿಯನ್ನಿನ ನಿರ್ಣಯವು ತಾ. 15 ರಂದು ದ ಕ ಜಿಲ್ಲಾ ವಿದ್ಯಾಧಿಕಾರಿಗಳನ್ನು ಅವರ ಕಛೇರಿಯಲ್ಲಿ ಭೇಟಿಮಾಡಿ ತಾ 1.6.56ರ ನಂತರ ಸರ್ವಿಸಿಗೆ ಸೇರಿಸಿದ ಶಿಕ್ಷಕರನ್ನು ಸರಾಸರಿ ಹಾಜರಿಯ ಹೆಸ್ತಳದ ನೆವನದಿಂದ ನಿವೃತ್ತಿಗೊಳಿಸಬಾರದೆಂದು ವಿನಂತಿಮಾಡಿಕೊಂಡಿದೆ

ತಾ 31—10—56ರಲ್ಲು ಸರ್ವಿಸಿನಲ್ಲಿದ್ದ ಶಿಕ್ಷಕರನ್ನು (ರಜೆಯ ಒಪಲಿಯವರನ್ನು ಹೊರತು) ಹಿಂದಿನ ಅಂದರೆ ತಾ 31.5.56 ರಲ್ಲಿ ಜ್ಞಾನಿಯಲ್ಲಿರುವ ಕೃಷಿ ಸಿಬಂಧನೆಗಳ ಪ್ರಕಾರ ವಿದ್ಯಾಖಾತೆ ಡೈರೆಕ್ಟರರ ಅನುಮತಿಗೊಳಪಟ್ಟು ಈಗ ಸರ್ವಿಸಿನಲ್ಲಿರಗೊಡಿಸಬಹುದೆಂದೂ, ಅಂತಹ ಶಿಕ್ಷಕರಲ್ಲಿಯವರನ್ನಾದರೂ ಹೊಸ ನಿಯಮದಂತೆ ಬಿಡುಗಡೆಗೆ ಳಿಸಿದ್ದಲ್ಲಿ ಅವರನ್ನು ಮನೆ ಕೆಲಸಕ್ಕೆ ಸೇರಿಸಬೇಡಬಾಗಿಯೂ ಅವರ ಈ ಸಮ್ಯಾಧಿಯನ್ನೆ ರುಜುಪಡಿಸುವುದು ವಿನಾಮತಿಗೊಳಿಸಲುಹುದಾಗಿಯೂ ಈ ಕುರಿತು ಡಿಪ್ಯುಟಿಇನ್ಸ್‌ಪೆಕ್ಟರರಿಗೆ ಕೂಡಲೇ ಹುಕುಂ ಕೊಡುವುದಾಗಿಯೂ ನಿರ್ಣಯಿಸಲಾಗಿದೆ ಎಂದು ಜಿಲ್ಲಾ ವಿದ್ಯಾಧಿಕಾರಿಗಳು ನಿರೋಗದವರಿಗೆ ಈ ಸಂದರ್ಶದಲ್ಲಿ ತಿಳಿಸಿದರಂತೆ ಉಡುಪಿ ತಾಲೂಕು ಪ್ರಾಥಮಿಕ ಶಿಕ್ಷಕರ ಯೂನಿಯನ್ ಕಾರ್ಯದರ್ಶಿ ಶ್ರೀ ಎಫ್ ಡಾಕಿಯವರು ತಿಳಿಸುತ್ತಾರೆ



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರನ್ನು ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ

ಅತ್ಯುತ್ತಮ ಔಷಧಿ ಬೆಲೆ ರೂ. 5/ ದೀರ್ಘಕಾಲದ ಬಾಧೆಗೆ ರೂ 8/-

(ವಿ ಪಿ ಸ್ವತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ವರು ಷಾ ಕಂಪೆನಿ, ಮಂಗಳೂರು—1.

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5 1955)

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಸಂಶೆಯಿಂದ ಸ್ವೀಕರಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ V ನೇ ಫಾರ್ಮುಗಳಿಗೆ ಉಪಯುಕ್ತ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯಿಂದ ಸಂಪೂರ್ಣ ಶಿಫಾರಸು ಪಡೆದಿದೆ

ಸಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಅರಿಸಲ್ಪಟ್ಟಿದೆ

ಪುಟಗಳು ೧೫೦ ಬೆಲೆ ರೂ ೧.೨೫

ಪ್ರತಿಗಳಿಗೆ ಬರೆಯಿರಿ

ನವಯುಗ ಪ್ರೆಸ್, ಉಡುಪಿ.

ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರು ಕಳದ ಮಾರ್ಚಿಯಲ್ಲಿ ಜರಗಿದ ಮದ್ರಾಸು ವಿಶ್ವವಿದ್ಯಾಲಯದ ಕನ್ನಡ ಎಂ ಎ ಡಿಗ್ರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರೆಂದು ತಿಳಿದುಬರುತ್ತದೆ.

ದ ಕ ಜಿಲ್ಲಾ ವಾಣಿಜ್ಯ ನೌಕರರ ಸಮ್ಮೇಳನವು ತಾ 16ರಲ್ಲು ಮಂಗಳೂರು ನಗರ ಸಭಾಪತಿ ಶ್ರೀ ಕೆ ಸೂರ್ಯನಾರಾಯಣಆಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ ಜಿ ಕಾರಂತರು ಸಮ್ಮೇಳನವನ್ನು ಉದ್ಘಾಟಿಸಿದರು ಸಂಘದ ಅಧ್ಯಕ್ಷ ಶ್ರೀ ಪಿ ಎಮ್. ನಾರಾಯಣ ಮೂರ್ತಿಯವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ವಿ ಅನಂತ ಐಗಳ್ ಅವರು ಸಂದೇಶ ಕನ್ನೋದಿದರು ಶ್ರೀಗಳಾದ ಕೆ ಆರ್ ಆಚಾರ್, ಎಮ್. ಸಿ, ಬಿ ಮೋಸೆಸರಾವ್, ಬಿ ಎಮ್. ಇದಿನಬ್ಬ, ಎ ಗ್ ಮಧ್ವರಾಜ್ ಮೊದಲಾದವರು ಕಾರ್ಮಿಕರ ಹಿತಗಳ ನ್ನಾಡಿದರು ವಾಣಿಜ್ಯ ನೌಕರರಿಗೆ ನ್ಯಾಯವಾದ ವೇತನ ಮತ್ತು ಭಡ್ತಿ ಕ್ರಮ, ಬೋನಸ್ ಮತ್ತು ಪ್ರೊವಿಡೆಂಟ್ ಫಂಡ್ ಸೌಕರ್ಯ ಇತ್ಯಾದಿ ಕುರಿತು ನಿರ್ಣಯಗಳಾಯಿತು ಬಳಿಕ ಹೊಸ ವರ್ಷಕ್ಕೆ ಕಾರ್ಯಕಾರೀ ಸಮಿತಿಯ ಸದಸ್ಯರ ಚುನಾವಣೆ ನಡೆಯಿತು

ಉಡುಪಿ ಡಿ ಮುನ್. ಕೋರ್ಟಿನಲ್ಲಿ

ಕ್ರಮಸಂಖ್ಯೆ 67/1957

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡ್ಪಿ-ಕಡೆಯಿಂದ ರಿಕವರಿ ಆಫೀಸರ್ ಎಮ್ ಎಸ್ ಭಂಡಾರಿ — ಸಾದಿ

ಮತ್ತು

ಕೆ ಕಾಂತಪ್ಪ ಕೂಡಾ — ಪ್ರತಿವಾದಿರು ಇವರೊಳಗೆ

2ನೇ ಪ್ರತಿವಾದಿಯು ಕೆ ಕೇಶವ ಕೆ. ಅಮಿನ್ ಕೆ ಕಾಂತಪ್ಪನವರ ಮಗ ಉಡ್ಪಿ ತಾಲೂಕು ಉಳಿಯಾರಗೋಳಿ ಗ್ರಾಮದ ಕೆ ಮಂಜಾಲು-ಇವರಿಗೆ

1 ನೇ ಪ್ರತಿವಾದಿಯು ವಾದಿ ಬ್ಯಾಂಕಿನ್ಕೆ ತಾರೀಕು 12—2—1950 ರಲ್ಲಿ ರೂ 2000/-ಕ್ಕೂ ತಾರೀಕು 27 7 56 ರಲ್ಲಿ ರೂ 3500/-ಕ್ಕೂ ಬರೆಕೊಟ್ಟ 2 ಡಿಮಾಂಡ್ ನೋಟುಗಳ ಬಾಬ್ತು 1ನೇ ಪ್ರತಿವಾದಿಯಿಂದ ಮತ್ತು 1ನೇ ಪ್ರತಿವಾದಿಯು ಬೇಂಕಿಗೆ ಜವಾಬ್ದಾರಿ ಮಾಡಿಕೊಟ್ಟ ಸ್ತ್ರೀಯಸ್ತ್ರೀಯರ ಮಾರಾಟದಿಂದ ಮತ್ತು ಗ್ಯಾರಂಟಿ ಪತ್ರ ಬರೆಕೊಟ್ಟ 3ನೇ ಪ್ರತಿವಾದಿಯಿಂದ ಕೂಡಾ ವಾದಿ ಬೇಂಕಿಗೆಬರ್ತ್ಕ ಅಸಲುಬಡ್ಡಿ ಕೂಡಾ ರೂಪಾಯಿ 1956—9—7ಕ್ಕೆ ವಾದಿಯ ಪ್ರತಿವಾದಿದ ಮೇಲೆ ವಾದಿದ ಸದರಿ ವಾಯಿದೆ ತಾರೀಕು 2 7—1957 ಕ್ಕೆ ತನ್ನ ಬಗ್ಗೆ ಇತೋಣಾಗಿದೆ ಆ ದಿನ್ನ ಸದರಿ 2ನೇ ಪ್ರತಿವಾದಿಯು ಲ್ಕಾ ಯಾ ಅಕ್ಕಿಲರ ಮುಖಾಂತ್ರ ಕೋರ್ಟಿಗೆ ಹಾಜ್ರಾಗಿ ಉದಾಹರಿಸದೆಯೆ ಅತನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದೆಂದು ಈ ಮೂಲಕ ಸದರಿ 2ನೇ ಪ್ರತಿವಾದಿಗೆ ತಿಳಿಯಪಡಿಸಲಾಗಿದೆ.

M Damoder Kamath,
Advocate for Plff.

ಉಡುಪಿ ತಾರೀಕು 17—6 1957

ಮೂಲ್ಕಿ ಬೇಂಕ್ ಲಿಮಿಟೆಡ್,

ಮೂಲ್ಕಿ.

ಸಲ್ಕಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರೆಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು.

ನಿರಿಖು	ವೇವಣಾತಿ.
24 ತಿಂಗಳಿಗೆ	4%
12 ,,	3½%
6 ,,	3¼%
3 ,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK, LTD. MULKI

ಭಾರತೀಯ ಸಂಸ್ಕೃತಿ

(೩ನೇ ಪುಟದಿಂದ)

ಳನ್ನೂ ತಮ್ಮೊಂದಿಗೆ ತಂದರು ತಮ್ಮ ವಿಶಾಲ ಸಾಮ್ರಾಜ್ಯದಲ್ಲಿ ಇವುಗಳ ಪ್ರಸಾರ ಹಾಗೂ ಪ್ರಚಾರವನ್ನು ಮಾಡಿದರು. ಈ ವಿಸ್ತೃತ ಪ್ರದೇಶದಲ್ಲಿ ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಯ ಕೆಲವೋದು ಪ್ರಚಾರ ಕೇಂದ್ರಗಳು ಉದಯವಾದುವು. ಇವುಗಳಿಂದ ಜ್ಞಾನ ಮತ್ತು ವಿಜ್ಞಾನವು ಪ್ರಕಾಶವು ನಾಲ್ಕೂ ದಿಕ್ಕುಗಳಿಗೆ ಹರಡುತಿತ್ತು. ಈ ಕೇಂದ್ರಗಳಲ್ಲಿ ಕಾಶ್‌ಗರ್, ಯಾರ್ಕಂಡ್, ಖೋತಾನ್, ನೀಯಾ, ಮೀರಾನ್ ಮೊದಲಾದುವು ಮುಖ್ಯವಾದುವುಗಳು. ಆ ಪ್ರದೇಶದ ಭೂಮಿಯನ್ನು ಅಗೆಯುವಾಗ, ಬೌದ್ಧ ಮೂರ್ತಿಗಳು, ಮಾನಸ್ತಂಭಗಳು, ತಿಜರಗಳು, ವಂದಿರಗಳು, ಸಮಾಧಿಗಳು ಬಹುಸಂಖ್ಯೆಯಲ್ಲಿ ದೊರೆತಿವೆ. ಇವೆಲ್ಲವೂ ಭಾರತೀಯ ಶೈಲಿ ಮತ್ತು ಪದ್ಧತಿಗಳಲ್ಲಿ ರಚಿಸಲ್ಪಟ್ಟಿರುವುವು. ಇಲ್ಲಿ ದೊರೆತಿರುವ ಸಂಸ್ಕೃತ ಮತ್ತು ಪ್ರಾಕೃತ ಭಾಷಾ ಪುಸ್ತಕಗಳಿಂದ ಅಲ್ಲಿನ ಪ್ರಮುಖ ಧರ್ಮವು ಬೌದ್ಧವಾಗಿತ್ತೆಂದು ಹೇಳಬಹುದು. ಈ ಪುಸ್ತಕಗಳು ಭಾರತೀಯ ವರ್ಣಮಾಲೆಯಲ್ಲಿ ಬರೆಯಲ್ಪಟ್ಟಿವೆ. ಇದರಿಂದ ಭಾರತೀಯರು ತಮ್ಮ ಧರ್ಮದೊಂದಿಗೆ ತಮ್ಮ ಭಾಷೆ, ಮತ್ತು ಲಿಪಿಗಳನ್ನೂ, ಕಲೆಯನ್ನೂ ಈ ಪ್ರದೇಶಕ್ಕೆ ಒಯ್ದಿದ್ದರೆಂದು ನಿಶ್ಚಿಯವಾಗಿ ತಿಳಿಯಬಹುದು ಹಿಲೆಗಿರಿಗಳು, ಕಾಷ್ಠ ಖಂಡಗಳು, ಚರ್ಮ, ರೇಶ್ಮೆ ಮತ್ತು ಕಂಚಿನಗಳಲ್ಲಿ ಭಾರತೀಯ ಭಾಷೆ ಮತ್ತು ಲಿಪಿಗಳಲ್ಲಿ ಈ ಗ್ರಂಥಗಳಿವೆ. ಇವುಗಳಲ್ಲಿ ದೊರೆಯುವ ಅನೇಕ ಲೇಖಕರ ಹೆಸರುಗಳು ವಿಶುದ್ಧ ರೂಪದಿಂದ ಭಾರತೀಯವಾಗಿವೆ. ಚರ, ದೂತ ಮೊದಲಾದ ಭಾರತೀಯ ಪದವಿಗಳ ಹೆಸರುಗಳೂ ದೊರೆಯುತ್ತವೆ ಈ ಎಲ್ಲ ಲೇಖಗಳು ಕ್ರಿ. ಶ. ನಾಲ್ಕನೆ ಶತಮಾನಕ್ಕೆ ಮೊದಲಿನವೆಂದು ತಿಳಿಯುತ್ತದೆ. ಇದರಿಂದ ತಾರಿಂ ಬೇಸಿನ್‌ನ ಕೊರೆಯಿಂದ ಹಿಡಿದು ಚೀನಾದ ಹೊಸ್ತಿಲವರೆಗೆ ಹರಡಿರುವ ವಿಶಾಲ ಪ್ರದೇಶದ ರಾಜನೈತಿಕ ಶಕ್ತಿ ಮತ್ತು ಸತ್ಕೆಯು ಭಾರತೀಯರ ಅಧಿಕಾರದಲ್ಲಿತ್ತು ಎಂದು ಪ್ರಕಟಗೊಳ್ಳುತ್ತದೆ.

ಖೋತಾನದ ವಿಷಯದಲ್ಲಿ ತಿಬೇಟೀ ಮತ್ತು ಬೌದ್ಧಾನಾಹಿತ್ಯಗಳಲ್ಲಿ ಒಂದು ಪರಂಪರಾಗತ ಕಥೆಯೊಂದಿದೆ. ಅದರಂತೆ ಅಶೋಕನ ಮಗ ಕುಣಾಲನು ಈ ಪ್ರದೇಶದಲ್ಲಿ ರಾಜನಾಗಿ ಆಳಿದನು ಮೌರ್ಯ ಸಾಮ್ರಾಜ್ಯ ಕಾಲದಲ್ಲಿ ಕುಣಾಲನು ತಕ್ಷಶಿಲೆಯಲ್ಲಿದ್ದನು. ವಿಮಾತಾಯ ಪದ್ಮಂಕ್ರದಿಂದ ಕುಣಾಲನ ನಯನಗಳನ್ನು ಕೀಳಲಾಯಿತು. ಆಮೇಲೆ ಕುಣಾಲನ ಜನಯಾಯಿಗಳು ಖೋತಾನಕ್ಕೆ ಹೋದರು. ಅವರು ಅಲ್ಲಿ ಒಂದು ನವೀನ ರಾಜ್ಯವನ್ನು ಸಂಸ್ಥಾಪಿಸಿ ಕುಣಾಲನನ್ನು ಅಲ್ಲಿನ ರಾಜನನ್ನಾಗಿ ಮಾಡಿದರು ಕುಣಾಲನು ಖೋತಾನಿನ ಪ್ರಥಮ ರಾಜನಳುದೋ ಅಲ್ಲವೋ ಎಂಬುದು ಅಸಂಧಿಗ್ಧವಾದರೂ, ಅಲ್ಲಿನ ರಾಜವಂಶದವರು ಭಾರತೀಯರಾಗಿದ್ದು ತಮ್ಮೊಂದಿಗೆ ಭಾರತೀಯ ಸಂಸ್ಕೃತಿ ಹಾಗೂ ಸಭ್ಯತೆಗಳನ್ನು ತಂದರೆಂದು ತಿಬೇಟಿನ ಇತಿಹಾಸ ಮತ್ತು ಭೂಶೋಧನೆಗಳಿಂದ ವ್ಯಕ್ತವಾಗುವುದು. ಕೆಲವು ಶತಮಾನಗಳವರೆಗೆ ಖೋತಾನವು ಬೌದ್ಧಧರ್ಮದ ದೊಡ್ಡ ಕೇಂದ್ರವಾಗಿ ಉಳಿಯಿತು ಫಾಹಿಯಾನ ಮತ್ತು ಹ್ಯೂಯೆನ್ ತ್ಸಾಂಗರಂಬ ಚೀನೀ ಯಾತ್ರಿಕರ ಯಾತ್ರಾ ವೃತ್ತಾಂತಗಳಲ್ಲಿ ಇದ್ದವ ರಥ ಯಾತ್ರೆಯ ವಿಸ್ತಾರವಾದ ವರ್ಣನೆಯು ಕಂಡ ಬರುವುದು. ಗೋಮತಿವಿಹಾರವೆಂಬ ಹೆಸರಿನಲ್ಲಿ ಈ ರಾಜ್ಯದ ಕೀರ್ತಿಯು ದೂರದೇಶಗಳಲ್ಲಿ ಹರಡಿತು ಭಾರತೀಯ ವಿದ್ವಾಂಸರನೇಕರು ಇಲ್ಲಿಗೆ ಬಂದುಹೋಗುತಿದ್ದರು. ಭಾರತಕ್ಕೆ ಸಂದರ್ಶನವೀಯಲುಸಾಧ್ಯವಾದ ಚೀನೀ ಯಾತ್ರಿಕರು ಖೋತಾನಕ್ಕೆ ಬಂದು ತಮ್ಮ ಮನೀಷೆಯನ್ನು ಪೂರಯಿಸಿಕೊಳ್ಳುತಿದ್ದರು. ಅಕ್ಕಯೇ ವಿದ್ಯಾಧ್ಯಯನವನ್ನು ಮಾಡುವವರೂ ಆ ಕಾಲದಲ್ಲಿದ್ದರು

ಮರುಭೂಮಿಯ ಉತ್ತರದಲ್ಲಿ ಕೂಚೀ ಎಂಬ ಹೆಸರಿನ ಭಾರತೀಯ ಮಹತ್ವಪೂರ್ಣ ರಾಜ್ಯವಿತ್ತು. ಸುವರ್ಣಪುಷ್ಪ, ಹರದೇವ, ಸುವರ್ಣದೇವ ಮೊದಲಾದ ಅವರ ಪ್ರಾಚೀನ ಶಾಸಕರ ನಾಮಧೇಯಗಳು ದೊರೆಯುತ್ತವೆ. ಇಲ್ಲಿ ದೊರೆಯುವ ಗ್ರಂಥ ಮತ್ತು ಪುಸ್ತಕಗಳಿಂದ ಇಲ್ಲಿ ಸಂಸ್ಕೃತವು ಕಲಿಸಲ್ಪಡುತಿದ್ದಿತೆಂದು ತಿಳಿಯುತ್ತದೆ. ಕಾತ್ರಂತ್ರ ವ್ಯಾಕರಣ ಸಿದ್ಧತಿಯಲ್ಲಿ ಇಲ್ಲಿನ ಪ್ರಾರ್ಯಕ್ರಮವು ಸಾಗುತಿತ್ತು. ಜ್ಯೋತಿಷ, ಖಗೋಳ, ಆಯುರ್ವೇದ ಶಾಸ್ತ್ರಗ್ರಂಥಗಳೂ ಭಾರತೀಯರಪದ್ಧತಿಯಂತೆ ಇಲ್ಲಿಯವಿಗೆ ಚೀನೀ ಗ್ರಂಥಾನುಸಾರವಾಗಿ ಕೂಚೀ ಜನರು ವಾದ್ಯ ಸಂಗೀತದಲ್ಲಿ ಪ್ರವೀಣರಾಗಿದ್ದರು ಚೀನೀಯರು ಈ ಶಾಸ್ತ್ರಗಳನ್ನು ಭಾರತೀಯರಿಂದ ಕಲಿತರು. ಭಾರತದ ಅನೇಕ ಸಂಗೀತಜ್ಞರು ಅಲ್ಲಿ ವಾಸಿಸುತಿದ್ದರು. ಇವರಲ್ಲಿ ಅನುವಂಶಿಕವಾಗಿ ಸಂಗೀತಕಾರರೆನಿಸಿದ "ತ್ಸಾ" ಎಂಬ ವಂಶದ ಉಲ್ಲೇಖವಿದೆ. ಇವರು ಒಂದು ಬಾರಿ ಕೇಳಿದ ಮಾತ್ರಕ್ಕೆ ಅ ವೇಕ್ಷಿತ ಸ್ವರವನ್ನು ಹೊರಡಿಸುವ ವ್ಯಾವೀಣ್ಯದಲ್ಲಿ ಕುಶಲರಾಗಿದ್ದರು ಚೀನೀ ಸಾಮ್ರಾಟರ ಆಸ್ಥಾನದಲ್ಲಿ ಇವರಿಗೆ ಹೆಚ್ಚು ಸನ್ಮಾನವು ದೊರೆಯುತಿತ್ತು

ಸಂಗೀತದಂತೆಯೇ ಬೇರೆ ಕೆಲವು ಜ್ಞಾನವಿಜ್ಞಾನದ ಅನೇಕ ಶಾಖೆಗಳು ಅಲ್ಲಿ ವಿಕಸಿತವಾದುವು. ಚಿಕಿತ್ಸಾ ವಿಷಯಕ ಗ್ರಂಥಗಳು ಇಲ್ಲಿ ದೊರೆಯುತ್ತವೆ. ಈ ಗ್ರಂಥಗಳು ಗುಪ್ತಲಿಪಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟಿವೆ ಅದರಿಂದ ಇವುಗಳ ಸಂಸ್ಕೃತ ಭಾಷೆಯು ಶುದ್ಧವಾಗಿರುವುದಿಲ್ಲ.

ಈ ಸಂದರ್ಭದಲ್ಲಿ ಕಿಯಾನ್ ಸಾನ್, ಪರ್ವತಗಳಲ್ಲಿ ದೊರೆತ ೧೦೦೦ ಬೌದ್ಧ ಗುಹೆಗಳ ಉಲ್ಲೇಖವನ್ನೂ ಮಾಡಬಹುದು. ಈ ಗಹ್ವರಗಳಲ್ಲಿ ಭಿತ್ತಿ ಚಿತ್ರಗಳಿವೆ. ಇಲ್ಲಿ ಸಂಸ್ಕೃತದಲ್ಲಿ ಬರೆಯಲ್ಪಟ್ಟ ಪುಸ್ತಕಗಳ ಪಾಂಡುಲಿಪಿಗಳು ದೊರೆಯುತ್ತವೆ.

ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಗಳ ವಾಶ್ಚಾತ್ಯ ಮತ್ತು ಔತ್ತರೇಯ ವಿಸ್ತಾರವನ್ನೂ ಪೌರ್ವಾತ್ಯ ಮತ್ತು ಸುದೂರ ಪೌರ್ವಾತ್ಯದೇಶಗಳಲ್ಲಿನ ಹಬ್ಬಗೆಯನ್ನೂ ಒಂದರೊಡನೊಂದನ್ನು ಹೋಲಿಸಿ ನೋಡಿದರೆ, ಭಾರತವು ಕೇವಲ ಸಂಸ್ಕೃತಿ ಹಾಗೂ ನಾಗರಿಕತೆಗಳನ್ನು ಮಾತ್ರ ಆ ದೇಶದಲ್ಲಿ ಹರಡಿರುವುದಲ್ಲ, ಒದಲು ಸಾಂಸ್ಕೃತಿಕ ಐಕ್ಯವನ್ನೂ ಪ್ರಸಾರಮಾಡಿದೆ ಎಂದು ತಿಳಿದು ಬರುವುದು ಈ ಐಕ್ಯವು ವಿದೇಶೀಯ ಆಕ್ರಮಣಗಳ ನಂತರ ಸಹ ಅಭೇದ್ಯವಾಗಿ ಉಳಿದುಕೊಂಡಿದೆ. ಏಶಿಯಾದ ಪಶ್ಚಿಮ, ಮತ್ತು ಉತ್ತರ ಪೂರ್ವ ದೇಶಗಳಲ್ಲಿ ತಾನು ಹುಟ್ಟಿಸಿದ ಸಾಂಸ್ಕೃತಿಕ ಏಕತೆಯನ್ನು ಇನ್ನೂ ಬೆಕೆಸಿಕೊಳ್ಳುವುದು ಭಾರತದ ಕರ್ತವ್ಯ. ಬಾಹ್ಯಂಗ ಸಂಪತ್ತಿನ ಮೂಲಕವಾಗಿ ಆಫ್ರೇಶ್ಯದ ವಿವಿಧ ರಾಜ್ಯಗಳ ಒಗ್ಗಟನ್ನು ಭಾರತವು ಬಲಪಡಿಸಿದೆ. ಇಂದು ಭಾರತವು ಈ ಸಾಂಸ್ಕೃತಿಕ ಏಕತೆಯನ್ನು ಇನ್ನೂ ಸ್ವರ್ಧಮಾನವಾಗಿಸುವುದು ಅಗತ್ಯ.

(ಸಾಧಾರ)

— ಎಸ್. ಗೋಪೀಚಂದ ರಾವ್,
ಉಡುಪಿ.

ಪ್ರಕಟಣೆ

ಇದರಿಂದ ಎಲ್ಲಾ ಜನರಿಗೂ ತಿಳಿಯಪಡಿಸುವುದೇನೆಂದರೆ

ಉಡುಪಿ ತಾಲೂಕು ಕುಂಜಾರು ಗ್ರಾಮದ ಇರೆಂದಾಡಿ ನಾಗಪ್ಪಯ್ಯನವರ ಮಗ ಸುಮಾರು 75 ವರ್ಷಪ್ರಾಯದ ಮಿಕ್ಕಿದ ರಾಮಚಂದ್ರಯ್ಯ ಎಂಬವರು ಸುಮಾರು 2 ವರ್ಷಗಳ ಲಾಗಾಯ್ತು ಪಕ್ಷವಾತದ ಕಾಯಿಲೆಯಿಂದ ಬುದ್ಧಿ ಸ್ವಾಧೀನವಿಲ್ಲದವರಾಗಿ ತಲೆ ಸರಿಯಿಲ್ಲದೆ ಈ ವರೆಗೂ ಕಠಿಣ ಕೈಲೆಯಲ್ಲಿರುತ್ತಾರೆ ಅವರ ಹೆಸರಿನಲ್ಲಿ ಸುಮಾರು ಸ್ವಂತದ ಸೊತ್ತುಗಳಿರುತ್ತವೆ. ಅದನ್ನು ಅಪಹರಿಸುವ ದುರಾಲೋಚನೆಯಿಂದ ಯಾರೋ ನಮ್ಮ ಕುಟುಂಬದೊಳಗೇನೆ ಕೇವು ಕೈ ಮೊಹರುಗಳನ್ನು ತೆಗೆದು ಇಟ್ಟುಕೊಂಡಿದ್ದಾರಾಗಿ ನಾನು ಇತ್ತೀಚೆಗೆ ತಿಳಿಯುತ್ತೇನೆ. ಆ ಕೈ ಮೊಹರುಗಳ ಆಧಾರದಿಂದ ತಯಾರಿಸಿದ ಯಾವತ್ತು ಕೃತಕ ರಿಕಾರ್ಡುಗಳು ನಮ್ಮ ಇದೀ ಕುಟುಂಬಕ್ಕೆ ಬಾಧಿಸತಕ್ಕವುಗಳಲ್ಲ — ಸಾತ್ರನಲ್ಲದೆ ಸಂಘವಾಗತಕ್ಕವುಗಳೂ ಅಲ್ಲ ಎಂಬ ಸಂಗತಿಯನ್ನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸಿರುತ್ತೇನೆ.

ಸದ್ರಿಯವರ ಮಗ ರಘುನಾಥರಾಯನ ರುಜು

ತಾ 12-6-1957.

ಓದುಗರೊಡನೆ ಎರಡು ಮಾತು

ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಈಗ ೧೭೫ ವರ್ಷಗಳಿಂದ ನಡೆಯುತ್ತಿರುವ ಪ್ರಜಾತಂತ್ರದ ಮಹಾಪ್ರಯೋಗವು ಇತರ ಎಮ್ಮೋ ದೇಶಗಳಿಗೆ ನಿದರ್ಶನ, ಸ್ಫೂರ್ತಿ. ಹೀಗಿರುವಾಗ ಅದರ್ಶವೆಂದು ನಾವು ನಮ್ಮ ನಮ್ಮ ದೇಶಗಳಲ್ಲಿ ಒಪ್ಪಿಕೊಂಡಿರುವ ಪಾದ, ರಾಜಕೀಯ ಪದ್ಧತಿ ಮತ್ತು ಜೀವನ ಮಾರ್ಗವಲ್ಲಿರುವ ಹುಳುಕುಗಳನ್ನು, ಅಮ ಟ್ಟಲ್ಲಿ ಶಾಹಿ ಮತ್ತು ಸಾಮ್ಯವಾದಿ ಅಧಿಕಾರಶಾಹಿಯ ಅನಂತರದ ಪ್ರಸಂಚದಲ್ಲಿ ಇದಿರಿಸಬೇಕಾದ ದುಷ್ಟ ಶಕ್ತಿಗಳ ಸೆಸೆಯಿಂದ ಪರಿಣತವಾದ ಅಗೆಯನ್ನು, ಬದಲಾವಣೆಯಾಗುತ್ತಿರುವ ಸನ್ನಿವೇಶದಲ್ಲಿ ಅದರ ಆಂತರಿಕ ದೌರ್ಬಲ್ಯವನ್ನು ಬಹಳ ವಿವೇಚನಾಪೂರ್ವಕವಾಗಿ ವಿಶ್ಲೇಷಿಸುವ

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ವಿಚಾರವಂತರಿಗೆ ಇದು ಒಂದು ಔತಣ.

ಬರೆದವರು: ಜಾನ್ ಡ್ಯೂಯಿ

ಅನುವಾದಕ: ಕು. ಶಿ. ಹರಿದಾಸ ಭಟ್ಟ

ಪುಟಗಳು: ೮ + ೧೮೮ ಬೆಲೆ ಎರಡು ರುಪಾಯಿ.

ಇಂದೇ ಬರೆಯಿರಿ:

ನವಯುಗ ಎಂಟರ್‌ಪ್ರೈಸ್, ಲಿಮಿಟೆಡ್
ನವಯುಗ ಪ್ರೆಸ್, ಉಡುಪಿ.

ನೋಟೀಸು

ಕುಂದಾಪುರ ಡಿ ಮು. ಕೋರ್ಟನಲ್ಲಿ

R.E.P 222/1957 O S 1/53.

ಜಾನಕಿ ಅಮ್ಮ —ವಾದಿಳು

ಮತ್ತು

ಲಕ್ಷ್ಮೀನಾರಾಯಣ ಐತಾಳ —ಪ್ರತಿವಾದಿ

ಇವರೊಳಗೆ

ಉಡ್ಪಿ ತಾಲ್ಲೂ ಕಾರ್ಕಡ ಗ್ರಾಮದಲ್ಲಿರುವ ಪದ್ಮನಾಭ ಐತಾಳರ ಮಗ ಸದ್ರಿ ಪ್ರತಿವಾದಿ ಲಕ್ಷ್ಮೀನಾರಾಯಣ ಐತಾಳರಿಗೆ ತಿಳಿಯಪಡಿಸುವುದೆಂದರೆ

ಮೇಲ್ಕಂಡ ಸಂಬಾಯತದೋರ್ಡ ಡಿಕ್ರಿ ಮೇಲೆ ವಾದಿಳು ನಿಮ್ಮ ಮೇಲೆ ನಡ್ಸಿದ ಸದ್ರಿ ಅಮ್ಮಜಾರಿಯು ತಾ 3-7-57ಕ್ಕೆ ತನ್ನಗೆ ಇದೋಜಾಗಿಯವೆ. ಸದ್ರಿ ಅಮ್ಮಜ್ಞಾರಿಯಾಕೆ ನಡಿಸಕೂಡದೆಂಂ ಸಬಬು ತೋರಿಸುವದಿದ್ದರೆ ಸದ್ರಿ ದಿನ 11 A M. ಗೆ ಕೋರ್ಟ ಮುಂದೆ ಹಾಜ್ರಾಗಿ ಜ್ಯಾಪೀರುಮಾಡಿಕೊಳ್ಳಬಹುದು.

A. V. N Hebbar
Pleader D. H

ಕುಂದಾಪುರ, ತಾ. 11 6.1957.

ಕುಂದಾಪುರ ಡಿ ಮು. ಕೋರ್ಟನಲ್ಲಿ

S .C. 172/57.

ಸ್ವ. ಮಂಜಯ್ಯ ಸೆಟ್ಟಿ ರಿಶಿವರ ಯದ್ದ ಕೇಟ್ ಳು ಸಾಸರ —ವಾದಿ

ಅನಂತ ಸೆಟ್ಟಿ ಗೋಪಾಡಿ ಶೇಶಪ್ಪ ಅಳಿಯ. ಉಡ್ಪಿ ತಾಲ್ಲೂ ಹಿಲಿಯಾಣ ಗ್ರಾಮ.

—ಪ್ರತಿವಾದಿ

ಸದ್ರಿ ಪ್ರತಿ ವಾದಿಗೆ ತಿಳಿಯಪಡ್ಸಿದ್ದು.

ವಾದಿ ರಿಶಿವರ ಹಕ್ಕಿನ ಪ್ರತಿವಾದಿ ಸ್ವಾಧೀನಯಿರುವ ಸ್ಥಿತಿಗಳಬಾಬ್ತು ಕಳೆದ ವಿಷಯ ಸಂಬಂಧದ ಬಾಬ್ತು ಬಸ ಗೇಣಲಾಕಿ ಅಳ್ಳೇಜು ರೂಪಾಯಿ 151.2.6ನ್ನು ಬರಮಾಡಿಕೊಳ್ಳುವರೇ ವಾದಿ ದಾಖ್ಲು ಮಾಡಿದ ಸದ್ರಿ ದಾವೆ ತಾ. 25.6.1957ಕ್ಕೆ ತನ್ನಗೆಯಿಟ್ಟಿದೆ. ಅ ಕುರಿತು ನಿಮ್ಮ ಉದಾಸರಣೆಯಿದ್ದರೆ ಸದ್ರಿ ದಿನ್ನ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟುಮುಂದೆ ಹಾಜ್ರಾಗಿ ತಿಳಿಸತಕ್ಕದ್ದು.

(Sd) G. Kushala Hegde
Advocate for Plff.

ಮೊಕ್ಕಾಂ ಕುಂದಾಪುರ, ತಾ. 11.6.57.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. — ಸಂ. ನ.

ಭಾರತೀಯ ಸಂಸ್ಕೃತಿ

(೩ನೇ ಪುಟದಿಂದ)

ಳನ್ನೂ ತಮ್ಮೊಂದಿಗೆ ತಂದರು ತಮ್ಮ ವಿಶಾಲ ಸಾಮ್ರಾಜ್ಯದಲ್ಲಿ ಇವುಗಳ ಪ್ರಸಾರ ಹಾಗೂ ಪ್ರಚಾರವನ್ನು ಮಾಡಿದರು. ಈ ವಿಸ್ತೃತ ಪ್ರದೇಶದಲ್ಲಿ ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಯ ಕೆಲವೋದು ಪ್ರಚಾರ ಕೇಂದ್ರಗಳು ಉದಯವಾದುವು. ಇವುಗಳಿಂದ ಜ್ಞಾನ ಮತ್ತು ವಿಜ್ಞಾನವು ಪ್ರಕಾಶವು ನಾಲ್ಕೂ ದಿಕ್ಕುಗಳಿಗೆ ಹರಡುತಿತ್ತು. ಈ ಕೇಂದ್ರಗಳಲ್ಲಿ ಕಾಶ್‌ಗರ್, ಯಾರ್ಕಂಡ್, ಖೋತಾನ್, ನೀಯಾ, ಮೀರಾನ್ ಮೊದಲಾದುವು ಮುಖ್ಯವಾದುವುಗಳು. ಆ ಪ್ರದೇಶದ ಭೂಮಿಯನ್ನು ಆಳಿಯುವಾಗ, ಬೌದ್ಧ ಮೂರ್ತಿಗಳು, ಮಾನಸ್ತಂಭಗಳು, ದೇವರಗಳು, ಮಂದಿರಗಳು, ಸಮಾಧಿಗಳು ಬಹುಸಂಖ್ಯೆಯಲ್ಲಿ ದೊರೆತಿವೆ. ಇವೆಲ್ಲವೂ ಭಾರತೀಯ ಶೈಲಿ ಮತ್ತು ಪದ್ಧತಿಗಳಲ್ಲಿ ರಚಿಸಲ್ಪಟ್ಟಿರುವುವು. ಇಲ್ಲಿ ದೊರೆತಿರುವ ಸಂಸ್ಕೃತ ಮತ್ತು ಪ್ರಾಕೃತ ಭಾಷಾ ಪುಸ್ತಕಗಳಿಂದ ಅಲ್ಲಿನ ಪ್ರಮುಖ ಧರ್ಮವು ಬೌದ್ಧವಾಗಿತ್ತೆಂದು ಹೇಳಬಹುದು. ಈ ಪುಸ್ತಕಗಳು ಭಾರತೀಯ ವರ್ಣಮಾಲೆಯಲ್ಲಿ ಬರೆಯಲ್ಪಟ್ಟಿವೆ. ಇದರಿಂದ ಭಾರತೀಯರು ತಮ್ಮ ಧರ್ಮದೊಂದಿಗೆ ತಮ್ಮ ಭಾಷೆ, ಮತ್ತು ಲಿಪಿಗಳನ್ನೂ, ಕಲೆಯನ್ನೂ ಈ ಪ್ರದೇಶಕ್ಕೆ ಒಯ್ದಿದ್ದರೆಂದು ನಿಶ್ಚಯವಾಗಿ ತಿಳಿಯಬಹುದು. ಚಿಲಿಗರಿಗಳು, ಕಾಷ್ಠ ಖಂಡಗಳು, ಚರ್ಮ, ರೇಶ್ಮೆ ಮತ್ತು ಕಾಗದಗಳಲ್ಲಿ ಭಾರತೀಯ ಭಾಷೆ ಮತ್ತು ಲಿಪಿಗಳಲ್ಲಿ ಈ ಗ್ರಂಥಗಳಿವೆ. ಇವುಗಳಲ್ಲಿ ದೊರೆಯುವ ಅನೇಕ ಲೇಖಕರ ಹೆಸರುಗಳು ವಿಶುದ್ಧ ರೂಪದಿಂದ ಭಾರತೀಯವಾಗಿವೆ. ಚರ, ದೂತ ಮೊದಲಾದ ಭಾರತೀಯ ಪದವಿಗಳ ಹೆಸರುಗಳೂ ದೊರೆಯುತ್ತವೆ. ಈ ಎಲ್ಲ ಲೇಖಗಳು ಕ್ರಿ. ಶ. ನಾಲ್ಕನೆ ಶತಮಾನಕ್ಕೆ ಹೊರಿಸಲಿವೆಂದು ತಿಳಿಯುತ್ತಿದೆ. ಇದರಿಂದ ಶಾರಿಂ ಬೇಸಿನ್‌ನ ಕೆಸರಿಯಿಂದ ಹಿಡಿದು ಚೀನದ ಹೊಸ್ತಿಲವರೆಗೆ ಹರಡಿರುವ ವಿಶಾಲ ಪ್ರದೇಶದ ರಾಜನೈತಿಕ ಶಕ್ತಿ ಮತ್ತು ಸತ್ತೆಯು ಭಾರತೀಯರ ಅಧಿಕಾರದಲ್ಲಿತ್ತು ಎಂದು ಪ್ರಕಟಗೊಳ್ಳುತ್ತದೆ.

ಖೋತಾನದ ವಿಷಯದಲ್ಲಿ ತಿಬೇಟೀ ಮತ್ತು ಬೌದ್ಧ ಸಾಹಿತ್ಯಗಳಲ್ಲಿ ಒಂದು ಪರಂಪರಾಗತ ಕಥೆಯೊಂದಿದೆ. ಅದರಂತೆ ಅಶೋಕನ ಮಗ ಕುಣಾಲನು ಈ ಪ್ರದೇಶದಲ್ಲಿ ರಾಜನಾಗಿ ಆಳಿದನು ಮೌರ್ಯ ಸಾಮ್ರಾಜ್ಯ ಕಾಲದಲ್ಲಿ ಕುಣಾಲನು ತಕ್ಷಶಿಲೆಯಲ್ಲಿದ್ದನು. ವಿಮಾತೆಯ ಷಡ್ಯಂತ್ರದಿಂದ ಕಣಾಲನ ನಯನಗಳನ್ನು ಕೀಳಲಾಯಿತು. ಆಮೇಲೆ ಕುಣಾಲನ ಜನರು ಯಾಯಿಗಳು ಖೋತಾನಕ್ಕೆ ಹೋದರು. ಅವರು ಅಲ್ಲಿ ಒಂದು ನವೀನ ರಾಜ್ಯವನ್ನು ಸಂಸ್ಥಾಪಿಸಿ ಕುಣಾಲನನ್ನು ಅಲ್ಲಿನ ರಾಜನನ್ನಾಗಿ ಮಾಡಿದರು ಕುಣಾಲನು ಖೋತಾನಿನ ಪ್ರಥಮ ರಾಜನಳುಮೋ ಅಲ್ಲವೋ ಎಂಬುದು ಅಸಂಧಿಗ್ಧವಾದರೂ, ಅಲ್ಲಿನ ರಾಜವಂಶದವರು ಭಾರತೀಯರಾಗಿದ್ದು ತಮ್ಮೊಂದಿಗೆ ಭಾರತೀಯ ಸಂಸ್ಕೃತಿ ಹಾಗೂ ಸಭ್ಯತೆಗಳನ್ನು ತಂದರೆಂದು ತಿಬೇಟಿನ ಇತಿಹಾಸ ಮತ್ತು ಭೂಶೋಧನೆಗಳಿಂದ ವ್ಯಕ್ತವಾಗುವುದು. ಕೆಲವು ಶತಮಾನಗಳವರೆಗೆ ಖೋತಾನವು ಬೌದ್ಧಧರ್ಮದ ದೊಡ್ಡ ಕೇಂದ್ರವಾಗಿ ಉಳಿಯಿತು ಫಾಹಿಯಾನ ಮತ್ತು ಹ್ಯೂಎನ್ ತ್ಸಾಂಗರಂಬ ಚೀನೀ ಯಾತ್ರಿಕರ ಯಾತ್ರಾ ವೃತ್ತಾಂತಗಳಲ್ಲಿ ಇಲ್ಲಿನ ರಥ ಯಾತ್ರೆಯ ವಿಸ್ತಾರವಾದ ವರ್ಣನೆಯು ಕಂಡುಬರುವುದು. ಗೋಮತಿವಿಹಾರವೆಂಬ ಹೆಸರಿನಲ್ಲಿ ಈ ರಾಜ್ಯದ ಕೀರ್ತಿಯು ದೂರದೇಶಗಳಲ್ಲಿ ಹರಡಿತು ಭಾರತೀಯ ವಿದ್ವಾಂಸರನೇಕರು ಇಲ್ಲಿಗೆ ಬಂದುಹೋಗುತಿದ್ದರು. ಭಾರತಕ್ಕೆ ಗಂಡಶಾನವೆಯಲಸಾಧ್ಯವಾದ ಚೀನೀ ಯಾತ್ರಿಕರು ತಿಬೇತಾನಕ್ಕೆ ಬಂದು ತಮ್ಮ ಮನೀಷೆಯನ್ನು ಪೂರಯಿಸಿಕೊಳ್ಳುತಿದ್ದರು. ಅಲ್ಲಿಯೇ ವಿದ್ಯಾಧ್ಯಯನವನ್ನು ಮಾಡುವವರೂ ಆ ಕಾಲದಲ್ಲಿದ್ದರು.

ಮರುಭೂಮಿಯ ಉತ್ತರದಲ್ಲಿ ಕೂಚೀ ಎಂಬ ಹೆಸರಿನ ಭಾರತೀಯ ಮಹತ್ವಪೂರ್ಣರಾಜ್ಯವಿತ್ತು. ಸುವರ್ಣದೇವ, ಹರದೇವ, ಸುವರ್ಣದೇವ ಮೊದಲಾದ ಅವರ ಪ್ರಾಚೀನ ಶಾಸಕರ ನಾಮಧೇಯಗಳು ದೊರೆಯುತ್ತವೆ. ಇಲ್ಲಿ ದೊರೆಯುವ ಗ್ರಂಥ ಮತ್ತು ಪುಸ್ತಕಗಳಿಂದ ಇಲ್ಲಿ ಸಂಸ್ಕೃತವು ಕಲಿಸಲ್ಪಡುತಿದ್ದಿತೆಂದು ತಿಳಿಯುತ್ತದೆ. ಕಾತ್ರಂತ್ರ ವ್ಯಾಕರಣ ಪದ್ಧತಿಯಲ್ಲಿ ಇಲ್ಲಿನ ಪ್ರಾರ್ಥಕ್ರಮವು ಸಾಗುತಿತ್ತು. ಜ್ಯೋತಿಷ, ಖಗೋಳ, ಆಯುರ್ವೇದ ಶಾಸ್ತ್ರಗ್ರಂಥಗಳೂ ಭಾರತೀಯರಪದ್ಧತಿಯಂತೆ ಇಲ್ಲಿಯವಿವೆ. ಚೀನೀ ಗ್ರಂಥಾನುಸಾರವಾಗಿ ಕೂಚೀ ಜನರು ವಾದ್ಯ ಸಂಗೀತದಲ್ಲಿ ಪ್ರವೀಣರಾಗಿದ್ದರು ಚೀನೀಯರು ಈ ಶಾಸ್ತ್ರಗಳನ್ನು ಭಾರತೀಯರಿಂದ ಕಲಿತರು. ಭಾರತದ ಅನೇಕ ಸಂಗೀತಜ್ಞರು ಅಲ್ಲಿ ವಾಸಿಸುತಿದ್ದರು. ಇವರಲ್ಲಿ ಅನುವಂಶಿಕವಾಗಿ ಸಂಗೀತಾಚಾರ್ಯರೆನಿಸಿದ "ತಸ್ಸಿ" ಎಂಬ ವಂಶದ ಉಲ್ಲೇಖವಿದೆ. ಇವರು ಒಂದು ಬಾರಿ ಕೇಳಿದ ಮಾತ್ರಕ್ಕೆ ಅವೇಕ್ಷಿತ ಸ್ವರವನ್ನು ಹೊರಡಿಸುವ ಪ್ರಾವೀಣ್ಯದಲ್ಲಿ ಕುಶಲರಾಗಿದ್ದರು ಚೀನೀ ಸಾಮ್ರಾಟರ ಆಸ್ಥಾನದಲ್ಲಿ ಇವರಿಗೆ ಹೆಚ್ಚು ಸನ್ಮಾನವು ದೊರೆಯುತಿತ್ತು.

ಸಂಗೀತದಂತೆಯೇ ಬೇರೆ ಕೆಲವು ಜ್ಞಾನವಿಜ್ಞಾನದ ಅನೇಕ ಶಾಖೆಗಳು ಅಲ್ಲಿ ವಿಕಸಿತವಾದವು. ಚಿಕಿತ್ಸಾ ವಿಷಯಕ ಗ್ರಂಥಗಳು ಇಲ್ಲಿ ದೊರೆಯುತ್ತವೆ. ಈ ಗ್ರಂಥಗಳು ಗುಪ್ತಲಿಪಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಅದರೆ ಇವುಗಳ ಸಂಸ್ಕೃತ ಭಾಷೆಯು ಶುದ್ಧವಾಗಿರುವುದಿಲ್ಲ.

ಈ ಸಂದರ್ಭದಲ್ಲಿ ತಿಯಾನ್ ಸಾನ್, ಪರ್ವತಗಳಲ್ಲಿ ದೊರೆತ ೧೦೦೦ ಬೌದ್ಧ ಗುಹೆಗಳ ಉಲ್ಲೇಖವನ್ನೂ ಮಾಡಬಹುದು. ಈ ಗಹ್ವರಗಳಲ್ಲಿ ಭಿತ್ತಿ ಚಿತ್ರಗಳಿವೆ. ಇಲ್ಲಿ ಸಂಸ್ಕೃತದಲ್ಲಿ ಬರೆಯಲ್ಪಟ್ಟ ಪುಸ್ತಕಗಳ ಪಾಂಡುಲಿಪಿಗಳು ದೊರೆಯುತ್ತವೆ.

ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಗಳ ಪಾಶ್ಚಾತ್ಯ ಮತ್ತು ಔತ್ತರೇಯ ವಿಸ್ತಾರವನ್ನೂ ಪೌರ್ವಾತ್ಯ ಮತ್ತು ಸುದೂರ ಪೌರ್ವಾತ್ಯದೇಶಗಳಲ್ಲಿನ ಹಬ್ಬುಗೆಯನ್ನೂ ಒಂದರೊಡನೊಂದನ್ನು ಹೋಲಿಸಿ ನೋಡಿದರೆ, ಭಾರತವು ಕೇವಲ ಸಂಸ್ಕೃತಿ ಹಾಗೂ ನಾಗರಿಕತೆಗಳನ್ನು ಮಾತ್ರ ಆ ದೇಶದಲ್ಲಿ ಹರಡಿರುವುದಲ್ಲ; ಒದಲು ಸಾಂಸ್ಕೃತಿಕ ಐಕ್ಯವನ್ನೂ ಪ್ರಸಾರಮಾಡಿದೆ ಎಂದು ತಿಳಿದು ಬರುವುದು. ಈ ಐಕ್ಯವು ವಿದೇಶೀಯ ಆಕ್ರಮಣಗಳ ನಂತರ ಸಹ ಅಭೇದ್ಯವಾಗಿ ಉಳಿದುಕೊಂಡಿದೆ. ಏಶಿಯಾದ ಪಶ್ಚಿಮ, ಮತ್ತು ಉತ್ತರ ಪೂರ್ವ ದೇಶಗಳಲ್ಲಿ ತಾನು ಹುಟ್ಟಿಸಿದ ಸಾಂಸ್ಕೃತಿಕ ಏಕತೆಯನ್ನು ಇನ್ನೂ ಬೆಳಸಿಕೊಳ್ಳುವುದು ಭಾರತದ ಕರ್ತವ್ಯ. ಬಾಡುಂಗ ಸಂಪತ್ತಿನ ಮೂಲಕವಾಗಿ ಆಶ್ಚೇಶ್ಯದ ವಿವಿಧ ರಾಜ್ಯಗಳ ಒಗ್ಗಟನ್ನು ಭಾರತವು ಬಲಪಡಿಸಿದೆ. ಇಂದು ಭಾರತವು ಈ ಸಾಂಸ್ಕೃತಿಕ ಏಕತೆಯನ್ನು ಇನ್ನೂ ಪ್ರವರ್ಧಮಾನವಾಗಿಸುವುದು ಅಗತ್ಯ.

(ಸಾಥಾಂ)

— ಎಸ್. ಗೋಪೀಚಂದ ರಾವ್,
ಉಡುಪಿ.

ಓದುಗರೊಡನೆ ಎರಡು ಮಾತು

ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಈಗ ೧೮೫ ವರ್ಷಗಳಿಂದ ನಡೆಯುತ್ತಿರುವ ಪ್ರಜಾತಂತ್ರದ ಮಹಾಪ್ರಯೋಗವು ಇತರ ಎಷ್ಟೋ ದೇಶಗಳಿಗೆ ನಿದರ್ಶನ, ಸ್ಫೂರ್ತಿ ಹೀಗಿರುವಾಗ ಆದರ್ಶವೆಂದು ನಾವು ನಮ್ಮ ನಮ್ಮ ದೇಶಗಳಲ್ಲಿ ಒಪ್ಪಿಕೊಂಡಿರುವ ವಾದ, ರಾಜಕೀಯ ಪದ್ಧತಿ ಮತ್ತು ಜೀವನ ಮಾರ್ಗದಲ್ಲಿರುವ ಹುಳುಕುಗಳನ್ನು, ಅದು ಹಿಟ್ಲರ್‌ಶಾಹಿ ಮತ್ತು ಸಾಮ್ಯವಾದಿ ಅಧಿಕಾರಶಾಹಿಯ ಅನಂತರದ ವ್ಯತಿಂಚದಲ್ಲಿ ಇದಿರಿಸಬೇಕಾದ ದುಷ್ಟ ಶಕ್ತಿಗಳ ದೆಸೆಯಿಂದ ಪರಿಣತವಾದ ಬಗೆಯನ್ನು, ಬದಲಾವಣೆಯಾಗುತ್ತಿರುವ ಸನ್ನಿವೇಶದಲ್ಲಿ ಅದರ ಆಂತರಿಕ ದೌರ್ಬಲ್ಯವನ್ನು ಬಹಳ ವಿವೇಚನಾಪೂರ್ವಕವಾಗಿ ವಿಶ್ಲೇಷಿಸುವ

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ವಿಚಾರವಂತರಿಗೆ ಇದು ಒಂದು ಔತಣ.

ಬರೆದವರು: ಜಾನ್ ಡ್ಯೂಯಿ

ಅನುವಾದಕ: ಕು. ಶಿ. ಹರಿದಾಸ ಭಟ್ಟ

ಪುಟಗಳು: ೮ + ೧೧೮. ಬೆಲೆ: ಎರಡು ರುಪಾಯಿ.

ಇಂದೇ ಬರೆಯಿರಿ:

ನವಯುಗ ಎಂಟರ್‌ಪ್ರೈಸಸ್, ಲಿಮಿಟೆಡ್
ನವಯುಗ ಪ್ರೆಸ್, ಉಡುಪಿ.

ಪ್ರಕಟಣೆ

ಇದರಿಂದ ಎಲ್ಲಾ ಜನರಿಗೂ ತಿಳಿಯಪಡಿಸುವುದೇನೆಂದರೆ

ಉಡುಪಿ ತಾಲೂಕು ಕುಚ್ಚಾರು ಗ್ರಾಮದ ಇರೆಂದಾದಿ ನಾಗಪ್ಪಯ್ಯನವರ ಮಗ ಸುಮಾರು ೭೫ ವರ್ಷಪ್ರಾಯ ಸಿಕ್ಕಿದ ರಾಮಚಂದ್ರಯ್ಯ ಎಂಬವರು ಸುಮಾರು ೨ ವರ್ಷಗಳ ಲಾಗಾಯ್ತು ಪಕ್ಷವಾತದ ಕಾಯಿಲೆಯಿಂದ ಬುದ್ಧಿ ಸ್ವಾಧೀನವಿಲ್ಲದವರಾಗಿ ತಲೆ ಸರಿಯಿಲ್ಲದೆ ಈ ವರೆಗೂ ಕರಿಣ ಕ್ಯಾಲೆಯಲ್ಲಿರುತ್ತಾರೆ ಅವರ ಹೆಸರಿನಲ್ಲಿ ಮುಂಬಾ ಸ್ವಂತದ ಸೊತ್ತುಗಳಿರುತ್ತವೆ. ಅದನ್ನು ಅಪಹರಿಸುವ ದುರಾಲೋಚನೆಯಿಂದ ಯಾರೋ ನಮ್ಮ ಕುಟುಂಬದೊಳಗೇನೆ ಕೇವು ಕೈ ಮೊಹರುಗಳನ್ನು ತೆಗೆದು ಇಟ್ಟುಕೊಂಡಿದ್ದಾರಾಗಿ ನಾನು ಇತ್ತೀಚೆಗೆ ತಿಳಿಯುತ್ತೇನೆ. ಆ ಕೈ ಮೊಹರುಗಳ ಆಧಾರದಿಂದ ತಯಾರಿಸಿದ ಯಾವತ್ತು ಕೃತಕ ರಿಕಾರ್ಡುಗಳು ನಮ್ಮ ಇದೀ ಕುಟುಂಬಕ್ಕೆ ಬಾಧಿಸತಕ್ಕವುಗಳಲ್ಲ — ಮಾತ್ರವಲ್ಲದೆ ಸಂಘವಾಗತಕ್ಕವುಗಳೂ ಅಲ್ಲ ಎಂಬ ಸಂಗತಿಯನ್ನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸಿರುತ್ತೇನೆ.

ಸದ್ರಿಯವರ ಮಗ ರಘುನಾಥರಾಯನ ರುಜು.

ತಾ. 12.6.1957.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. — ಸಂ. ನ

ನೋಟೀಸು

ಕುಂದಾಪುರ ಡಿ ಮು. ಕೋರ್ಟಿನಲ್ಲಿ

R.E.P. 222/1957 O.S 1/53.

ಜಾನಕಿ ಅಮ್ಮ —ವಾದಿಳು

ಮತ್ತು

ಲಕ್ಷ್ಮೀನಾರಾಯಣ ಐತಾಳ —ಪ್ರತಿವಾದಿ

ಇವರೊಳಗೆ

ಉಡ್ಪಿ ತಾಲ್ಲೂ ಕಾರ್ಕಡ ಗ್ರಾಮದಲ್ಲಿರುವ ಪದ್ಮನಾಭ ಐತಾಳರ ಮಗ ಸದ್ರಿ ಪ್ರತಿವಾದಿ ಲಕ್ಷ್ಮೀನಾರಾಯಣ ಐತಾಳರಿಗೆ ತಿಳಿಯಪಡಿಸುವುದು.

ಮೇಲ್ಕಂಡ ಪಂಚಾಯತಿದಾರ್ ಡಿಕ್ರಿ ಮೇಲೆ ವಾದಿಳು ನಿಮ್ಮ ಮೇಲೆ ನಡ್ಸಿದ ಸದ್ರಿ ಅಮ್ಲಜಾರಿಯು ತಾ 3-7-57ಕ್ಕೆ ತಪ್ಪಿಗೆ ಇಡೋಣವಾಗಿಯದೆ. ಸದ್ರಿ ಅಮ್ಲಜಾರಿಯಾಕೆ ನಡಿಸಕೂಡದೆಂದು ಸಬಬು ತೋರಿಸುವದಿದ್ದರೆ ಸದ್ರಿ ದಿನ 11 A M. ಗೆ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಪೀರುಮಾಡಿಕೊಳ್ಳಬಹುದು.

A. V. N Hebbar
Pleader D. H.

ಕುಂದಾಪುರ, ತಾ. 11-6-1957.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S.C. 172/57.

ವೈ. ಮಂಜಯ್ಯ ಶೆಟ್ಟಿ ರಿಶಿವರ ಯಡ್ಡ ಕೇಟ್ ಳು ಪಾಸುರ —ವಾದಿ

ಅನಂತ ಶೆಟ್ಟಿ ಗೋಪಾಡಿ ಬೇಕಿಟ್ಟು ಅಳಿಯ. ಉಡ್ಪಿ ತಾಲ್ಲೂ ಹಿಲಿಯಾಣ ಗ್ರಾಮ.

—ಪ್ರತಿವಾದಿ

ಸದ್ರಿ ಪ್ರತಿವಾದಿಗೆ ತಿಳಿಯಪಡ್ಸಿದ್ದು.

ವಾದಿ ರಿಶಿವರಿ ಪಕ್ಕನ ಪ್ರತಿವಾದಿ ಸ್ವಾಧೀನಯಿರುವ ಸ್ಥಿತಿಗಳಬಾಬ್ತು ಕಳೆದ ವಿಷಯ ಸಂಬಂಧದ ಬಾಬ್ತು ಬಪ ಗೇಣಿಬಾಕಿ ಅಳ್ಳೇಜು ರೂಪಾಯಿ 151.2.6ನ್ನು ಬರಮಾಡಿಕೊಳ್ಳುವರೇ ವಾದಿ ದಾಕ್ಲು ಸೂಚಿಸಿದ ಸದ್ರಿ ದಾವೆ ತಾ. 25.6.1957ಕ್ಕೆ ತಪ್ಪಿಗೆಯಿಟ್ಟಿದೆ. ಕುರಿತು ನಿಮ್ಮ ಉದಾಸರಣೆಯಿದ್ದರೆ ಸದ್ರಿ ದಿನ್ನ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟುಮುಂದೆ ಹಾಜ್ರಾಗಿ ತಿಳಿಸತಕ್ಕದ್ದು.

(Sd) G Kushala Hegde
Advocate for Plff.

ಮೊಕ್ತಾಂ ಕುಂದಾಪುರ, ತಾ. 11-6-57.

ಭಕ್ತಿಯೋಗ

(೨೯ನೇ ಸುಗದಿಂದ)

ವಾಗಿಲ್ಲ ಅದೇ ಮೊದಲನೇ ಷಟ್ಕದಲ್ಲಿ ಕರ್ಮದ ನಿರೂಪಣೆಯಲ್ಲಿ ಜ್ಞಾನ, ಭಕ್ತಿಗಳು ತುಂಬಾ ಮಿಶ್ರವಾಗಿವೆ ಮೂರನೇ ಷಟ್ಕದಲ್ಲಿಯಂತೂ ಹದಿಮೂರು, ಹದಿನಾಲ್ಕನೇ ಅಧ್ಯಾಯಗಳಲ್ಲಿ ಜ್ಞಾನದ, ಹದಿನೈದರಲ್ಲಿ ಭಕ್ತಿಯ, ವರ್ಣನೆ ಮಾಡಿ ಹದಿನಾರರಲ್ಲಿ ದೈವೀ ಆಸುರೀ ಸಂಪತ್ತುಗಳ ಅದ್ಯಾತ್ಮ ಭಕ್ತಿಯ ಅಧಿಕಾರಿ, ಅನಧಿಕಾರಿಗಳ ವರ್ಣನೆಮಾಡಿ, ಹದಿನೇಳರಲ್ಲಿ ಭಕ್ತಿ, ಕರ್ಮ, ಜ್ಞಾನ-ಮೂರರಲ್ಲಿಯೂ ಆವಶ್ಯಕವಾದ ಶ್ರದ್ಧೆಯನ್ನು ವಿವೇಚಿಸಿ, ಹದಿನೆಂಟರಲ್ಲಿ-ಕರ್ಮ, ಭಕ್ತಿ, ಜ್ಞಾನ-ಈ ಮೂರರ ವಿಶುದ್ಧ ವಿವೇಚನೆ ಮಾಡಲ್ಪಟ್ಟಿದೆ ಅಂತ್ಯದಲ್ಲಿ ಗ್ರಂಥದ ಉಪಸಂಹಾರವು ಭಕ್ತಿಯಿಂದಲೇ ಮಾಡಲ್ಪಟ್ಟಿದೆ. ಉಪದೇಶದ ಆರಂಭವೂ ಅರ್ಜುನನು ಶರಣಾಗತನಾದ ಮೇಲೆ ಆರಂಭವಾಗಿದೆ. ಹೀಗೆ ಗೀತೆಯ ಆದಿ-ಮಧ್ಯ-ಅಂತ್ಯಗಳಲ್ಲಿ ಭಕ್ತಿಯ ಪಾವನ ಮಂದಾಕಿನಿಯು ಪ್ರವಾಹಿತವಾಗಿರುವುದು ತಿಳಿದು ಬರುವುದು

ಗೀತೆಯ ಮಧ್ಯದಲ್ಲಿ ಸಾರಭೂತವಾಗಿರುವ ಭಕ್ತಿಯ ವರ್ಣನೆ ಇದ, ಅದರಲ್ಲೂ ಮಧ್ಯದ ೯-೧೧ನೇ ಅಧ್ಯಾಯಗಳಲ್ಲಿ ಅತ್ಯಂತಗೆ ಅಸೀಮ ರಹಸ್ಯದ ವರ್ಣನೆ ಇರುವುದರಿಂದಲೇ ಅವುಗಳಿಗೆ ಕ್ರಮವಾಗಿ "ರಾಜವಿದ್ಯಾರಾಜ ಗುಹ್ಯ ಯೋಗ" ವತ್ತು "ವಿಭೂತಿಯೋಗ" ಎಂಬ ಹೆಸರುಗಳು ಕೂಡಲ್ಪಟ್ಟಿವೆ ಗೀತೆಯಲ್ಲಿ ಎಲ್ಲೆಲ್ಲಾ ಗುಹ್ಯ, ಗುಹ್ಯತರ, ಗುಹ್ಯತಮ, ರಾಜ ಗುಹ್ಯ, ಸರ್ವ ಗುಹ್ಯತಮ, ರಹಸ್ಯ ಇತ್ಯಾದಿ ಶಬ್ದಗಳು ಉಪಯೋಗಿಸಲ್ಪಟ್ಟಿವೆಯೋ ಅಲ್ಲೆಲ್ಲಾ ಸಗುಣ ತತ್ವವೇ ನಿರ್ದೇಶಿಸಲ್ಪಟ್ಟಿದೆ ಯಾಂದರೆ ಸ್ವಯಂ ಪರಮಾತ್ಮನಾದರೂ ಕೂಡಾ ತನ್ನನ್ನು ಮರೆಸಿ ಮಾನವರೂಪದಲ್ಲಿ ಲೀಲೆಯಾಡುವುದು ಗುಪ್ತ ರಹಸ್ಯವಾಗಿದೆ

ದಶಮ ಅಧ್ಯಾಯದಲ್ಲಿ ಪರಮಾತ್ಮನು ತನ್ನ ದಿವ್ಯ ವಿಭೂತಿಗಳನ್ನು ವರ್ಣಿಸಿದ್ದಾನೆ ಇದರಿಂದ ಅದನ್ನು "ವಿಭೂತಿಯೋಗ" ಎಂದು ಹೆಸರಿಸಿದ್ದಾನೆ ಆ ವಿಭೂತಿಗಳು ಸಗುಣ ತತ್ವದವಾಗಿವೆ ೯ನೇ ಅಧ್ಯಾಯದ ಅಂತ್ಯ ಹಾಗೂ ೧೦ನೇ ಅಧ್ಯಾಯದ ಆದಿ-ಇದೇ ಗೀತೆಯ ಮಧ್ಯ ಭಾಗ ಅಥವಾ ಹೃದಯವೆನ್ನಬಹುದು ೯ನೇ ಅಧ್ಯಾಯದ ಆದಿಯಲ್ಲಿ ಸವಿಜ್ಞಾನ ಸಹಿತ ಜ್ಞಾನ ರಹಸ್ಯವನ್ನು ಕೇಳುವ ಪ್ರತಿಜ್ಞೆ ಮಾಡಿ ೮, ೫, ೬ನೇ ಶ್ಲೋಕಗಳಲ್ಲಿ ಉದಾಹರಣೆ ಸಹಿತ ರಾಜ ವಿದ್ಯೆಯ ವರ್ಣನೆ ಮಾಡಿದ್ದಾನೆ ಅದರ ನಂತರ ತನ್ನಿಂದ ಲೋಕದ ಉತ್ಪತ್ತಿ ಪ್ರಲಯಗಳ ಪ್ರಕರಣವನ್ನು ವಿವರಿಸಿ, ಸಾಧಾರಣ ಮಾನವರ ತನ್ನನ್ನು ಮಾನವನೆಂದು ತಿಳಿದು ಅವಜ್ಞೆ ಮಾಡುವುದನ್ನು ತಿಳಿಸಿ (೯ ೧೧) ಮಹಾತ್ಮರು ತನ್ನನ್ನು ಅವಿನಾಶಿ, ಎಂದು ತಿಳಿದು ಅನನ್ಯ ಭಾವದಿಂದ ಭಜಿಸುವುದನ್ನು ಸೂಚಿಸಿದ್ದಾನೆ. (೯ ೧೩)ಅಷ್ಟರೆ ಅಂಧಾ ಭಕ್ತಿಯೋಗ ಕ್ಷೇಮವನ್ನು ತಾನೇ ವಹಿಸುವೆನೆಂದೂ ಹೇಳಿದ್ದಾನೆ. ಶಾಸ್ತ್ರಗಳಲ್ಲಿ ಅನೇಕ ದೇವತೆಗಳ ಪೂಜೆಗೆ ಪ್ರಾಧಾನ್ಯ ಪದ್ಧತಿ, ಮಂತ್ರ, ಸಾಮಗ್ರಿಗಳ ವಿಧಾನವನ್ನು ವರ್ಣಿಸಿದ್ದಾರೆ ಅದೇ ರೀತಿಯಿಂದ ಅರ್ಚಿಸಿದರೂ, ಅತ್ಯಂತ ಹೆಚ್ಚಿನ ಫಲವು ಆ ದೇವತೆಗಳ ಲೋಕ ಪ್ರಾಪ್ತಿಯಲ್ಲದೆ ಇನ್ನೇನೂ ಇಲ್ಲ ಭಗವತ್ಪ್ರಾಪ್ತಿಯಾಗಬೇಕಾದರೆ ಅಂಧಾ ಭಕ್ತಿಯಿಂದಲೇ ಸಾಧ್ಯ (೮ ೧೪) ಪರಮಾತ್ಮನ ಪೂಜೆಗೆ ಅಷ್ಟು, ಮಂತ್ರ, ವಿಧಿ, ವಿಧಾನಗಳ ಅವಶ್ಯಕತೆ ಇಲ್ಲ ಅಲ್ಲಿ ಭಾವನೆಯೇ ಪ್ರಧಾನವಾಗಿದೆ -ಎಷ್ಟು ಸುಗಮತೆ-

"ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ।

ತದಹಂ ಭಕ್ತ್ಯುಪಹೃತ ಮಶ್ನಾಮಿ ಪ್ರಯತಾತ್ಮನಃ ॥ (೯-೨೬)

ಯಾವ ಭಕ್ತನು ನನಗೆ ಭಕ್ತಿಯಿಂದ ಪತ್ರ ಪುಷ್ಪ ಫಲ ಜಲಗಳನ್ನು ಅರ್ಪಿಸುವನೋ, ಅಂತಹ ಶುದ್ಧ ಬುದ್ಧಿ, ನಿಷ್ಕಾಮ ಪ್ರೇಮಿ ಭಕ್ತನು ಪ್ರೇಮ ಪೂರ್ವಕ ಅರ್ಪಿಸಿದ ಪತ್ರ ಪುಷ್ಪಾದಿಗಳನ್ನು ಸಗುಣ ರೂಪದಿಂದ ಪ್ರಕಟವಾಗಿ ಪ್ರೀತಿ ಸಹಿತ ಸ್ವೀಕರಿಸುವೆನು = (ತಿನ್ನುವೆನು)"

ಈ ಶ್ಲೋಕದಲ್ಲಿ ಪರಮಾತ್ಮನು ಪತ್ರ ಪುಷ್ಪಾದಿಗಳೆಂದು ಹೇಳಿ, 'ಭಕ್ತಿ' ಶಬ್ದವನ್ನು ಎರಡು ಬಾರಿ ಪ್ರಯೋಗಿಸಿದ್ದನು ಇದರಿಂದ ನವಗೆ ಪರಮಾತ್ಮನು ತನಗೆ ವಿವಿಧ ಸಾಮಗ್ರಿಗಳ ಅಗತ್ಯವಿಲ್ಲ ಅನಾಯಾಸವಾಗಿ ಭಕ್ತನಿಗೆ ಏನು ದೊರಕುವುದೋ ಅದನ್ನೇ ಭಕ್ತಿಪೂರ್ವಕ ಅರ್ಪಿಸುವುದರಿಂದ ತಾನು ಸಂತುಷ್ಟನಾಗುವನೆಂದು ತಿಳಿಸಿದ್ದಾನೆ ದ್ರೌಪದಿ, ಗಜೇಂದ್ರ, ಶಬರಿ, ರಂತಿದೇವರು ಅರ್ಪಿಸಿದ ಬರೇ ಪತ್ರ, ಪುಷ್ಪ, ಫಲ, ತೋಯಗಳನ್ನು ಪರಮಾತ್ಮನು ಸ್ವೀಕರಿಸುವಲ್ಲಿ ಹೃತ್ಪೂರ್ವಕವಾಗಿರುವ ಅನನ್ಯ ಪ್ರೇಮದಿಂದಲೂ ಅರ್ಪಿಸಿದ್ದೇ ಕಾರಣ ಪರಮಾತ್ಮನು ಪ್ರೇಮದಾಸ್ಯ ವಶೀಭೂತನಾಗಿ ಪತ್ರ, ಪುಷ್ಪಾದಿಗಳನ್ನೂ ಕೂಡಾ ತಿನ್ನುತ್ತಾನೆ 'ಅಶ್ನಾಮಿ" ಅರ್ಥಾತ್ 'ನಾನು ತಿನ್ನುತ್ತೇನೆ ಎಂದೇ ಪರಮಾತ್ಮನು ಹೇಳಿದ್ದಾನೆ ಸ್ವಯಂ ಭಕ್ತವರ ಅರ್ಜುನನಿಗಾಗಿ ಯೇ ಪತ್ರ ಪುಷ್ಪಾದಿಗಳ ಅವಶ್ಯಕತೆಯನ್ನಿಡದೆ-"ಕೌಂತೇಯನೆಂದನು ನೀನು ಸ್ವಾಭಾವಿಕವಾಗಿ ಏನನ್ನು ಆಚರಿಸುವೆಯೋ, ಏನನ್ನು ಭಜಿಸುವೆಯೋ, ಯಾವ ಕೋಮನನ್ನು ಮಾಡುವೆಯೋ, ಯಾವ ದಾನವನ್ನು ಕೊಡುವೆಯೋ ಯಾವ ತಪವನ್ನು ಗೈಯ್ಯುವೆಯೋ ಅವೆಲ್ಲವನ್ನೂ ನನಗರ್ಪಿಸು" (೯-೨೭) "ಈ ಪ್ರಕಾರ ಸರ್ವ ಅರ್ಪಿಸುವುದರಿಂದ ನೀನು ಶುಭ ಶುಭ ಫಲಗಳೆರಡರಿಂದಲೂ ಮುಕ್ತನಾಗಿ ನನ್ನನ್ನು ಹೊಂದುವಿ" (೯-೨೮) ಎಂದು ಹೇಳಿದ್ದಾನೆ

ಇಲ್ಲಿ ಒಂದು ಶಂಕೆ ಬರುವುದು ಸರ್ವ ಸಮರ್ಪಣ ಮಾಡುವವರನ್ನು ಮಾತ್ರವೇ ಪರಮಾತ್ಮನ ಉದ್ಧಾರ ಮಾಡುವನಲ್ಲದೆ ಇತರರನ್ನು ಉದ್ಧರಿಸಲಾರನೆ? ಇದಕ್ಕೆ ಗೀತೆಯಲ್ಲೇ ಉತ್ತರವಿದೆ.

"ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ। ಯೇ ಭಜಂತಿ ತುಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥(೯-೨೯) ಅರ್ಥಾತ್, "ನಾನು ಸರ್ವಭೂತಗಳಲ್ಲಿಯೂ ಸಮಭಾವದಿಂದ ವ್ಯಾಪಿಸಿದ್ದೇನೆ ಯಾರೂ ನನಗೆ ಪ್ರಿಯರೂ, ಅಪ್ರಿಯರೂ ಅಲ್ಲ. ಆದರೆ ಯಾವ ಭಕ್ತರು ನನ್ನನ್ನು ಪ್ರೇಮದಿಂದ ಭಜಿಸುತ್ತಿರೋ, ಅವರು ನನ್ನಲ್ಲಿದ್ದಾರೆ ನಾನೂ ಅವರಲ್ಲಿ ಪ್ರತ್ಯಕ್ಷ ಪ್ರಕಟವಾಗಿದ್ದೇನೆ" ಈ ಶ್ಲೋಕದಲ್ಲಿ ಪರಮಾತ್ಮನು ಪ್ರಾಣಿ ಮಾತ್ರದಲ್ಲಿ ತನ್ನ ಸಮತೆಯನ್ನು ನಿರ್ದೇಶಿಸಿದ್ದಾನೆ ಅಲ್ಲದೆ ಯಾರು ತನ್ನನ್ನು ಸರ್ವಸಮರ್ಪಣ ಭಾವದಿಂದ ಅರ್ಚಿಸುವರೋ ಅವರು ನನಗೆ ಪ್ರಿಯರು ಎಂಬುದನ್ನು ಸೂಚ್ಯವಾಗಿ ತಿಳಿಸಿದ್ದಾನೆ

"ತಸ್ಮಿಂಸ್ತಜ್ಜನೇ ಭೇದಾಭಾವಾತ್।" "ಯತಸ್ತದೀಯಃ" (ನಾರದ ಭಕ್ತಿಸೂತ್ರಗಳು, ೭೩) 'ಯಾರು ನನ್ನನ್ನು ಸ್ವಾಮಿ ಎಂದು ತಿಳಿಯುವರೋ ಅವರ ನ್ನು ನಾನು ಸೇವಕರೆಂದೂ, ನನ್ನನ್ನು ಪಿತನೆಂದು ತಿಳಿಯುವವರನ್ನು ಪುತ್ರರೆಂದೂ, ಪುತ್ರರೆಂದು ತಿಳಿಯುವವರನ್ನ ಪಿತನಂದೂ, ಮಿತ್ರರೆಂದು ತಿಳಿಯುವವರನು ಮಿತ್ರರೆಂದೂ, ಪ್ರಿಯತಮನೆಂದು ತಿಳಿಯುವವರನ್ನು ಪ್ರಿಯತಮನೆಂದೂ, ತಿಳಿಯುವೆನು ಯಾರು ನನಗಾಗಿ ವ್ಯಾಕುಲರಾಗುವರೋ ಅವರಿಗಾಗಿ ನಾನೂ ಅಧೀರನಾಗಿರುವೆನು ಯಾರು ನನ್ನಲ್ಲಿ ಇರುವರೋ ಅವರಲ್ಲಿದ ನಾನೂ ಇರುವೆ, ಯಾರು ಯಾವ ಭಾವದಿಂದ ನನ್ನನ್ನು ಭಜಿಸುವರೋ, ಅವರನ್ನು ಅದೇ ಭಾವದಿಂದ ನಾನೂ ಭಜಿಸುವೆನ ' 'ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್"

(೪ ೧೧)

ಬರೇ ಭಾವದಲ್ಲಿ, ಕ್ರಿಯೆಯಲ್ಲಿ ಕೂಡಾ ತನ್ನೆಡೆಗೆ ಬರಲು ಯಾರು ದಾಪಿಸುವರೋ, ಅವ ಬಳಿಗೆ ತಾನು ಕೂಡಾ ಧಾವಿಸುವೆನು ಎಂದಿದ್ದಾನೆ ಪರಮಾತ್ಮ. ಇಲ್ಲಿ ಧ್ಯಾನಯೋಗ್ಯವಾದ ವಿಷಯವೊಂದಿದೆ ಅಲ್ಪ ಶಕ್ತಿಯುತನಾದ ಮಾನವನು ತನ್ನ ಶಕ್ತಿಗನುಗುಣವಾಗಿ ಕ್ರಿಯೆಯನ್ನು ಮಾಡುವನು ಪರಮಾತ್ಮನೂ ಅನಂತ ಶಕ್ತಿ ಸಂಪನ್ನನಾದುದರಿಂದ ತನ್ನ ಶಕ್ತಿಗನುಸಾರ. ಅರ್ಥಾತ ಅಲ್ಪ ಶಕ್ತಿವಂತನಾದ ಮಾನವ ಜೀವಿಯು ತನ್ನ ಪೂರ್ಣ ಶಕ್ತಿಯಿಂದ ಸ್ವಲ್ಪವಾದರೂ ಮುಂದರಿದ್ದಲ್ಲಿ ಪರಮಾತ್ಮನು ತನ್ನ ಅನಂತ ಶಕ್ತಿಯಿಂದ ಧಾವಿಸಿ ಅವನೆಡೆಗೆ ಬರುವನು ಪರಮಾತ್ಮನ ಪೂರ್ಣ ಶಕ್ತಿಯನ್ನು ತನ್ನೆಡೆಗೆ ಆಕರ್ಷಿಸುವುದೂ—ತನ್ನ ಸಂಪೂರ್ಣ ಶಕ್ತಿಯಿಂದ ಪರಮಾತ್ಮನೆಡೆಗೆ ಹೋಗಲು ಪ್ರಯತ್ನಿಸುವುದೆ. ಭಕ್ತರು ತಮ್ಮ ಭಾವನೆಗಳಿಂದ ನಿರಾಕಾರ, ಸರ್ವವ್ಯಾಪಕ, ನಿರ್ಗುಣ ಪರಮಾತ್ಮನು, ಸಾಕಾರ, ಸಗುಣನಾಗಿ ಪ್ರಕಟವಾಗುವಂತೆ ಮಾಡಬಲ್ಲರು ಪರಮಾತ್ಮನ ಪ್ರಿಯ ಭಕ್ತರು ಎಂದ. ಅವನನ್ನು ಯಾವ ರೂಪದಲ್ಲಿ ನೋಡಲು ಇಚ್ಛಿಸುವರೋ ಆ ರೂಪವನ್ನು ತಾಳಲೇಬೇಕಾಗುವುದು. ಆದ್ದರಿಂದಲೇ ಪರಮಾತ್ಮನು ಹೇಳಿದ್ದಾನೆ" ಯೇಭಜಂತಿತುಮಾಂ ಭಕ್ತ್ಯಾ ಮಯಿತೇ ತೇಷು ಚಾಪ್ಯಹಮ್" (೯-೨೯)

ಪರಮಾತ್ಮನಿಗೆ ತನ್ನ ಭಕ್ತರೆಷ್ಟು ಪ್ರಿಯರೋ, ತನ್ನ ಅಧಾಂಗಿ ಲಕ್ಷ್ಮಿ, ವಾಹನ ಗರುಡ, ತನ್ನ ಸ್ವಂತ ಶರೀರ ಕೂಡಾ ಪ್ರಿಯವಲ್ಲ ಭಾಗವತದಲ್ಲಿ ಪರಮಾತ್ಮನು ಉದ್ಧವನೊಡನೆ ಹೇಳಿದ್ದಾನೆ ಭಕ್ತರಿಗಿಂತ ಪ್ರಿಯರು ತನಗೆ ಯಾರೂ ಇಲ್ಲ ಎಂದ ಒಂದೆಡೆ 'ಬಿಂಧ್ಯಾಂ ಸ್ವಬಾಹುಮಟ ವಃ ಪ್ರತಿಕೂಲ ವೃತ್ತಿಮ್" ತನ್ನ ಬಾಹುವೂ ಭಕ್ತರಿಗೆ ಪ್ರತಿಕೂಲವಾದಲ್ಲಿ ಅದನ್ನು ಕಡಿಯುವೆನು ಎಂದಿದ್ದಾನೆ ಇಲ್ಲಿ ಒಂದು ಸಂಶಯ ಹುಟ್ಟುವುದು ಪರಮಾತ್ಮನ ಆಜ್ಞೆಗೆ ವಿರೋಧವಾಗಿ ನಡೆದು, ಪರಮಾತ್ಮನ ವಿರೋಧ ಕಾರ್ಯ ಮಾಡಿ, ಪರಮಾತ್ಮನ ಸರ್ವದಾ ವಿರೋಧಿಯಾದರೂ, ಅವನನ್ನು ಭಜಿಸಿದರೆ ಪರಮಾತ್ಮನು ಪ್ರಸನ್ನನಾಗುವನೇ? ಇದಕ್ಕೆ ಸಕಾರಾತ್ಮಕ ಉತ್ತರವನ್ನೇ ಕೊಡಬೇಕಾಗುವುದು ಕಂಡಾ

"ಅಪಿ ಚೇತ್ ಸುದುರಾಚಾರೋ
ಭಜತೇಮಾಮನನ್ಯ ಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿಸಃ। (೯ ೩೦)

ಇಲ್ಲಿ ಪರಮಾತ್ಮನು ಸ್ಪಷ್ಟವಾಗಿ ಹೇಳಿದ್ದಾನೆ ದುರಾಚಾರಿಯಾದರೂ ಕೂಡಾ ಅನನ್ಯ ಭಾವದಿಂದ ತನ್ನನ್ನು ಭಜಿಸಿದರೆ ಅವನು ಸಾಧುವೆಂದೇ ಪರಿಗಣಿಸಲ್ಪಡುವನು ಯಾಕೆಂದರೆ ತನ್ನನ್ನು ಭಜಿಸುವುದೇ ಅತೀ ಉತ್ತಮ ಕಾರ್ಯವೆಂದು ಅವನು ತಿಳಿದಿರುವನು ಎಂದಿದ್ದಾನೆ ಆದರೆ ೨೯ನೇ ಅಧ್ಯಾಯದ ೫ನೇ ಶ್ಲೋಕದಲ್ಲಿ ಮೂಢಜನರು, ದುರಾಚಾರಿಗಳೂ ತನ್ನನ್ನು ಭಜಿಸುವುದಿಲ್ಲ ಎಂದಿದ್ದಾನೆ ಅಂದ ಮೇಲೆ ಪರಮ ಪಾಪಿಯು ಮನವು ಪರಮಾತ್ಮನೆಡೆಗೆ ಹರಿಯುವುದಂತು? ಹಾಗಾದರೆ ಪರಮಾತ್ಮನು ಅಲ್ಲಿ "ಚೇತ್" ಎಂಬ ಶಬ್ದದ ಉಪಯೋಗವನ್ನು ಮಾಡಿದ್ದಾನೆ ಪರಮಾತ್ಮನ ನ್ಯಾಯದಲ್ಲಿ ಒಂದು ವಿಲಕ್ಷಣತೆ ಇದೆ ಪರಮಾತ್ಮನು ಹೀಗೆ ಹೇಳಿದ್ದಾನೆ "ದುರಾಚಾರಿಯು ನನ್ನನ್ನು ಭಜಿಸುವುದರಲ್ಲಿ ಆಡಿಇಲ್ಲ ಅದೇ ವಿಷಯ ವಿಷಯ

ಸೀದಿರಿ ಹರ್ಷದಾಯಕ
ಎಸ್.ಆರ್.
ಬೀಡಿಗಳನ್ನು
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.
ಎಸ್.ಆರ್.ಬೀಡಿ ವರ್ಕ್ಸ್, ಉಡುಪಿ. ದ.ಕ.
25 ಬೀಡಿಗಳ ಕಟ್ಟು ೧೧ ಕ
SRBEEDI WORKS

ಉತ್ಥಾನದ ಬಾಗಿಲು ತೆರೆದಿದೆ. ನನ್ನ ಭಕ್ತನ ಪತನವು ಮಾತ್ರ ಎಂದೂ ಆಗದು. "ನಮೇ ಭಕ್ತ ಪ್ರಣಶ್ಯತಿ". ಪರಮಾತ್ಮನು ಸೂಚಿಸಿದ ದಾರಿಯಲ್ಲಿ ನಡೆಯಲು ಯಾರಿಗೂ ತಡೆ ಇಲ್ಲ ಅವನ ಉನ್ನತಿಗೆ ಯಾವ ಬಾಧೆಗಳೂ ಇಲ್ಲ. ಆದರೆ ಪಾಪಿಯು ಪರಮಾತ್ಮನನ್ನು ಅನನ್ಯ ಭಾವದಿಂದ ಏಕೆ ಭಜಿಸುವನು? ಅದಕ್ಕೆ ಈ ಕೆಳಗಿನ ಕಾರಣಗಳನ್ನು ಕೊಡಬಹುದು.

(೧) ಪೂರ್ವ ಜನ್ಮದ ಭಕ್ತಿ ಸಂಸ್ಕಾರದಿಂದ.

(೨) ಭಗವದಭಕ್ತಿಮಯ ವಾಯು ಮಂಡಲದ ಪ್ರಭಾವದಿಂದ.

(೩) ಭಗವದಭಕ್ತರ ಅಲೌಕಿಕ ಅನುಗ್ರಹದಿಂದ.

(೪) ಪರಮಾತ್ಮನ ಕೃಪೆಯಿಂದ.

(೫) ಯಾವುದಾದರೊಂದು, ತನ್ನಿಂದ ನಿವಾರಿಸಲಾಗದಂತಹ ಆಸತ್ತಿನಲ್ಲಿ ಬಿದ್ದು ಭಗವದ್ಭಕ್ತಿಯ ಉದಯವಾಗುವುದು. ಇನ್ನು ಇತರ ಕಾರಣ ವಿಶೇಷಗಳೂ ಇರಬಹುದು. ಇಲ್ಲಿ "ಅನನ್ಯ ಭಾಕ್" ಎಂಬ ಶಬ್ದದ ತಾತ್ಪರ್ಯವೇನು? ಇದರಿಂದ ನಿರಂತರ ಚಿಂತನನೆಂದು ಎಣಿಸಲು ಸಾಧ್ಯವಿಲ್ಲ ಬಹಳ ಸಮಯದಿಂದ ಸಾಧನೆ ಮಾಡುವ ಸಾಧಕರಿಗೂ ನಿರಂತರ ಚಿಂತನೆಯು ಕಠಿಣವಾಗಬಹುದು ಎಂದ ಮೇಲೆ ದುರಾಚಾರಿಗಳ ಪಾಡೇನು? ಅಂದರೆ "ನ ಅನ್ಯಂ ಭಜತೀತಿ ಅನನ್ಯ ಭಾಕ್" ಎನ್ನಬಹುದು. ಪರಮಾತ್ಮನ ಹೊರತು ಇತರರಾರನ್ನೂ ಆಶ್ರಯಿಸದಿರುವುದು, ಒಬ್ಬನನ್ನೆ ಆಶ್ರಯಿಸುವುದು ಒಬ್ಬನನ್ನೇ ಸರ್ವ ಶ್ರೇಷ್ಠನೆಂದು ತಿಳಿಯುವುದು ದುರಾಚಾರಿಗೂ ಸಾಧ್ಯವಷ್ಟೆ.

ಅವನನ್ನು ಸಾಧುವೆಂದು ತಿಳಿಯುವುದೇಕೆ? ಅವನು ತನ್ನ ಏಕಮಾತ್ರ ನಿಶ್ಚಯವನ್ನು ಮಾಡಿದ್ದಾನೆ "ಪ್ರಭೂ ನಾನು ಹೇಗಿದ್ದರೂ, ಏನು ಮಾಡಿದರೂ ನಾನು ನಿನ್ನವನು. ನನ್ನ ಉದ್ಧಾರವು ನನ್ನ ಸಾಧನೆಗಳ ಬಲದಿಂದ ಆಗಲು ಸಾಧ್ಯವಿಲ್ಲ ಅಶರಣ ಶರಣ, ದೀನ ಬಂಧು, ದಯಾಮಯನಾದ ನಿನ್ನ ಕೃಪೆಯಿಂದಲೇ ಸಾಧ್ಯ. ನನ್ನಿಂದ ಏನೆಲ್ಲಾ ನಡೆಯುವುದೋ ಅದು ಪರಮಾತ್ಮನ ಇಚ್ಛೆಯಿಂದಲೇ ನಡೆಯುವುದು ಪಾಪಾತುರನಾದ ನಾನು ಪರಮಾತ್ಮನ ಕೈಗೊಂಬೆಯಾಗಿ ಅವನು ಕುಣಿಸಿದಂತೆ ಕುಣಿಯುವೆನು" ಎಂಬ ದೃಢ ನಿಶ್ಚಯ ಉಳ್ಳವನಾಗಿರುವನು.

ಈ ಕಾರಣದಿಂದಲೇ ಪರಮಾತ್ಮನು- ಅವನು ಶೀಘ್ರದಲ್ಲೇ ಧರ್ಮಾತ್ಮನಾಗುವನೆಂದು ಕೇಳಿರುವನು ಅಲ್ಲದೆ.

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನಮೇ ಭಕ್ತಃ ಪ್ರಣಶ್ಯತಿ ॥ (೯-೩೧).

"ಅವನು ಕ್ಷಿಪ್ರದಲ್ಲೇ ಧರ್ಮಾತ್ಮನಾಗಿ, ಶಾಶ್ವತವಾದ ಶಾಂತಿಯನ್ನನುಭವಿಸುವನು. ಆದ್ದರಿಂದ ಕೌಂತೇಯನೇ ನೀನು, ನನ್ನ ಭಕ್ತನು ಪತನವಾಗುವುದಿಲ್ಲ ಎಂಬುದನ್ನು ನಿಶ್ಚಯವಾಗಿ ತಿಳಿ" ಎಂದಿದ್ದಾನೆ.

ಇನ್ನು ನಿರಂತರ ಇರುವ ಶಾಂತಿ ಯಾವುದು? ಅದನ್ನೇ ಗೀತೆಯಲ್ಲಿ ಪರಮಪದ, ಬ್ರಹ್ಮ ನಿರ್ವಾಣ ನಿರ್ವಾಣಪರಮ ಶಾಂತಿ, ಆತ್ಯಂತಿಕ ಸುಖ ಇತ್ಯಾದಿಹೆಸರುಗಳು ಕೇಳಿವೆ. ಇದೇ ಸರ್ವ ಸಾಧನೆಗಳ ಅಂತಿಮ ಫಲವಾಗಿದೆ. ಇದನ್ನೇ ರಾಷ್ಟ್ರಕಾರರು ಮುಕ್ತಿ ಎಂದಿದ್ದಾರೆ ಅದನ್ನೇ ಪರಮಾತ್ಮನು—

ಯಂ ಲಬ್ಧ್ವಾ ಚಾಪರಂ ಲಾಭಂ
ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ
ಗುರುಣಾಪಿ ವಿಚಾಲ್ಯತೆ ॥ (೬-೨೨)

ಅರ್ಥಾತ್ ಯಾವುದರಲ್ಲಿ ದುಃಖ, ಅಲ್ಪಜ್ಞತೆ, ಅಶಾಂತಿ, ಅಸಹಿಷ್ಣುತೆ, ಇತ್ಯಾದಿಗಳಿಲ್ಲವೋ ಅಂತಹ ಪರಮಶಾಂತಿಮಯ ಅವಸ್ಥೆಯನ್ನು ಪಡೆಯುವನು ಎಂದಿದ್ದಾನೆ. ಆಹಾ! ಪರಮಾತ್ಮನೆಂತಹ ಕೃಪಾ ಸಾಗರನು!

—ಕೆ. ಪುರುಷೋತ್ತಮ ಮುಲ್ಕ,
ಪೆಡೂರು

ಆಡಳಿತ ಮಿತವ್ಯಯ

(೧೯೫೬ ಸುಟದಿಂದ)

ನಡೆಯಿತು. ಮಂತ್ರಿಗಳ ಸಂಬಳವನ್ನು ಇಳಿಸಬೇಕು, ಅವರ ಸರಳ ಜೀವನವನ್ನೇ ಅವಲಂಬಿಸಬೇಕೆಂದು ತೀವ್ರ ಧ್ವನಿಯೆದ್ದಿತು ಪಂಡಿತ ನೆಹರೂ ಎದ್ದು ತನ್ನ ಸಂಬಳದ ವ್ಯಯಗಳ ಪಟ್ಟಿಯನ್ನಿಟ್ಟರೂ ಸಮಾಧಾನವಾಗದೆ ಮತದಾನದಲ್ಲಿ ಕೆಲವೇ ಮತಗಳಿಂದ ಸಂಬಳವನ್ನು ತಗ್ಗಿಸುವ ವಿಚಾರವು ಬಿದ್ದು ಹೋಯಿತು. ಆದರೆ ಮಂತ್ರಿಗಳಿಗೆ ಈಗ ದೊರೆಯುವ ವೇತನವು ಅಧಿಕವೆನ್ನುವ ಕೆಲಮಂದಿಯ ಪ್ರತಿಭಟನೆಯುತಕ್ಕ ಪರಿಣಾಮವನ್ನು ಮಾಡದೆಇರಲಿಲ್ಲ. ಅದಕ್ಕೆ ಇದೀಗ ಕೆಲವೊಂದು ಸುದ್ದಿಗಳು ಪುಷ್ಟಿಕೊಡುತ್ತವೆ.

ಕೇಂದ್ರದಮಂತ್ರಿಮಂಡಳಿಯು ದೀರ್ಘ ಪರ್ಯಾಲೋಚನಾನಂತರ ತಮ್ಮ ವೇತನದಲ್ಲಿ ನೂರಕ್ಕೆ ಹತ್ತರಷ್ಟು ಕಡಿತಕ್ಕೆ ಒಪ್ಪಿದ್ದಾರೆ. ಪ್ರಧಾನಿ ನೆಹರೂರವರು ಈಗಿನ ದೊಡ್ಡ ಮನೆಯನ್ನು ಬಿಟ್ಟು ಸಣ್ಣ ಮನೆಯೊಂದಕ್ಕೆ ಹೋಗಲಿರುವರು. ಕೇಂದ್ರದ ಪ್ರತಿ ಇಲಾಖೆಯಲ್ಲೂ ಅನಾವ್ರಯಗಳಾಗದಂತೆ ಜಾಗ್ರತೆಯಿಂದ ವೆಚ್ಚಮಾಡಲು, ಸಲಹೆಯೊಯಲು ಒಂದೊಂದು ಸಮಿತಿಯ ನೇಮಕವಾಗಿದೆ. ಯಾವ ವಿಭಾಗಕ್ಕೆ ಎಷ್ಟು ವೆಚ್ಚಮಾಡಬಹುದೆಂದು ಸೂಚಿಸುವುದೂ, ಅನಾವಶ್ಯಕ ವೆಚ್ಚಗಳಾಗದಂತೆ ಪಡೆಹಿಡಿಯುವುದೂ ಈ ಸಮಿತಿಗಳ ಕೆಲಸ. ಇವುಗಳ ಪರಿಣಾಮವನ್ನು ಮಾತ್ರ ಇನ್ನು ನೋಡಬೇಕಾಗಿದೆ.

ಈ ವಿಷಯದಿಂದ ಒಂದು ದೃಷ್ಟಿಯನ್ನು ಸೂಚಿಸಬಹುದು ನಮ್ಮ ಜನನಾಯಕರು ಪರಿಸ್ಥಿತಿಯನ್ನರಿತುಕೊಂಡು ಮುನ್ನಡೆಯುತಿದ್ದಾರೆ. ಜನಾಭಿಪ್ರಾಯಕ್ಕೆ ತಲೆತಗ್ಗಿಸಿ ನಡೆಯಲೆತ್ನಿಸುತಿದ್ದಾರೆ. ಇದು ಸಂತೋಷದ ವಿಷಯ. ತಾತ್ವಿಕ ದೃಷ್ಟಿಯಿಂದ ಮಂತ್ರಿಗಳ ವೆಚ್ಚವು ಕಡಿಮೆಯಾದಲ್ಲಿ; ಅವರಿಗೂ ಹೆಂಡತಿ ಮಕ್ಕಳು ಮರಿಗಳಿವೆ. ಅವರ ಸಂಸಾರದ ದಿನವೂ ಮಂತ್ರಿಗಳ ಸಂಬಳದಲ್ಲಿಯೇ ಹೋಗಬೇಕಾಗಬಹುದು ಆದರೆ, ಮಂತ್ರಿಗಳೆನ್ನುವವರು ಜನಸೇವೆಯನ್ನು ಮಾಡುವ ಹುಮ್ಮಸ್ಸಿನಿಂದ. ತನ್ನ ಮತದಾರ ಕ್ಷೇತ್ರಕ್ಕೆ ದೇಶಕ್ಕೆ ತಕ್ಕ ಸೇವೆಯನ್ನು ಸಲ್ಲಿಸುವ ಉತ್ಕಟಾಭಿಲಾಷೆಯಿಂದ ಪ್ರೇರಿತರಾಗಿ ಬಂದಿರುವುದರಿಂದ, ಅಲ್ಲಿ ಮಂತ್ರಿಪಟ್ಟದಲ್ಲಿ ಕುಳಿತು ಮಕ್ಕಳು ಮಂಗಳ ಚಿಂತನೆಯನ್ನು ಮಾಡಹೋದರೆ, ಅವರ ದೇಶಸೇವೆಯ ಆದರ್ಶವೆಲ್ಲುಳಿಯಿತು? ಇದನ್ನು ಕೇಂದ್ರೀಯ ಮಂತ್ರಿಗಳು ಅರಿತು ಸ್ವಲ್ಪ ಮಟ್ಟಿನ ಸೇವಾ ಜೀವನಕ್ಕೆ ಮುಂದಾದರೆ ಎನ್ನಬಹುದು.

ಆದರೆ, ನಮ್ಮ ಇತರ ರಾಜ್ಯ ಸರಕಾರಗಳು ಇಷ್ಟು ದೀರ್ಘಯೋಚನೆಯನ್ನು ಮಾಡಿಲ್ಲ. ಅದರಲ್ಲೂ ನಮ್ಮ ಮೈಸೂರಿನ ರಾಜಕಾರಣವು ಹೊಲಸೆಂದು ಪ್ರಸಿದ್ಧವಾಗಿದೆ. ಇಂದು ಜನಸೇವೆಯನ್ನು ಮಾಡಬೇಕೆನ್ನುವ ಇರಾದೆಯಿಂದ ಅದೆಷ್ಟು ಜನರು ಶಾಸನ ಸಭೆಗೂ ಸಂಸತ್ತಿನ ಸದಸ್ಯನಾಗಲು ಬಯಸುತ್ತಾರೆ ಎನ್ನುವುದೂ ಕಷ್ಟ! ಚುನಾವಣೆಗೆ ನಿಂತಮೇಲೆ ಗೆದ್ದು ಬರುವ, ಗೆದ್ದು ಬಂದ ಮೇಲೆ ಸಾಧ್ಯವಾದರೆ ಮಂತ್ರಿಯಾಗುವ ಆಶೆಯನ್ನೇ ಎಲ್ಲರೂ ಇಟ್ಟುಕೊಂಡಿದ್ದರೆ, ಅದು ಸಾಧ್ಯವೆ? ನಮ್ಮ ಮುಂದಾಳುಗಳೇ ಇಂದು ತಪ್ಪು ಬಾರಿಯಲ್ಲಿ ನಮ್ಮನ್ನು ಕರೆದು ಕೊಂಡು ಹೋಗುತಿದ್ದಾರೆ. ಯಾರನ್ನು ಚುನಾವಣೆಗೆ ನಿಲ್ಲಿಸಿದರೆ ಗೆದ್ದು ಬಂಬಹುದೆಂದು ನೋಡಿಯೇ ಅಂತಹವರನ್ನು ಬಗಲಿಗೆಳೆಯುತ್ತಾರೆ. ಹೀಗೆ ವತ್ತಾಯದ ಕಟ್ಟಿಗೆ ಬಿದ್ದವನಿಂದ ಆತನ ಮತದಾನ ಕ್ಷೇತ್ರಕ್ಕೆ ಅದೇನು ಉಪಕಾರವಾದೀತು? ಸರಕಾರೀ ಪಕ್ಷದ ನಾಯಕನನ್ನು ಆರಿಸುವಾಗಲೂ, ಯಾರನ್ನು ಆರಿಸಿದರೆ ತನಗೆ ತನ್ನವರಿಗೆ ಮಂತ್ರಿಪಟ್ಟ ದೊರೆತೀತು ಎನ್ನುವ ಮುಂದಾಲೋಚನೆ. ನಾಯಕನಿಗೂ ಅದೇ ಚಿಂತೆ: ಯಾರನ್ನಾರಿಸಿಕೊಂಡರೆ ಮುಂದಿನ ಐದು ವರ್ಷ ನಿಶ್ಚಿಂತೆಯಿಂದಿರಬಹುದು? ಜಾತಿಗಳನ್ನು ಹಂಚುವಾಗ ವ್ಯಕ್ತಿಗಳ ಯೋಗ್ಯತೆಗಿಂತ ಸ್ವಲಾಭದ ದೃಷ್ಟಿಯೇ ತನ್ನ ಕೈಯನ್ನು ತೋರಿಸಿಬಿಡುತ್ತದೆ. ಹೀಗೆ "ಅನುಗಾಲವೂ ಚಿಂತೆ" ಎಂಬಂತಿದೆ ನಮ್ಮ ಸರಕಾರದ ಅವಸ್ಥೆ. ಅಧಿಕಾರದಲ್ಲಿರುವಾಗ ತಿಂದದ್ದೇ ಬಂತು, ಸಂಚರಿಸಿದ್ದೇ ಬಂತು ಎನ್ನುವಂತಹ ನಡವಳಿಕೆಯೂ ನಮ್ಮ ಸರಕಾರದ ಒಂದು ದೊಡ್ಡ ಕುಂದೆನಿಸಿದೆ. ಈ ಕಲೆಯನ್ನು ತೊಳೆಯದ ಹೊರತು, ಜನಸಾಮಾನ್ಯರ ಹೃದಯವನ್ನೊಲಿಸಿಕೊಳ್ಳುವುದು ಅಸಾಧ್ಯ. ಮತದಾರರ ಮುನಿಸಿರುವವರೆಗೆ ಧೈರ್ಯದಿಂದ ಒಂದಡಿಯಿಡುವುದೂ ಕಷ್ಟ.

ಆದುದರಿಂದ, ಸರಕಾರವನ್ನು ಸ್ಥಾಪಿಸುವ ಪ್ರಜಾ ಪ್ರತಿನಿಧಿಗಳು ಜನರ ಮನಸ್ಸನ್ನರಿತು ಅದಕ್ಕೆ ಸರಿಯಾಗಿ ಕಾರ್ಯಕ್ಷಮರಾಗಬೇಕು; ತಮ್ಮ ಸ್ಥಾನವನ್ನೇ ಬಲವಾಗಿ ಹಿಡಿದುಕೊಳ್ಳುವ ಇರಾದೆಯನ್ನು ಬಿಟ್ಟುಬಿಡಬೇಕು. ಜನಸೇವೆಯ ನೋಗಿನಲ್ಲಿ ಸ್ವಾರ್ಥಸಾಧಿಸುವ ದುರುದ್ದೇಶವನ್ನು ದೂರವಿರಿಸಬೇಕು. ಜನತೆಯ ಕಲ್ಯಾಣಕ್ಕಾಗಿ, ಅವರ ಸೇವೆಯನ್ನು ಮಾಡುವ ಶಕ್ತಿವಂತನೇ ಬುದ್ಧಿವಂತ. ಇಂತಹ ಚುನಾವಣೆಯಲ್ಲಿ ನಿಂತರೇನೇ ಜನತೆಗೆ ಪ್ರಯೋಜನ ದೊರೆತೀತು. ಇಲ್ಲವಾದರೆ, ಅಡಳಿತದಲ್ಲಿ ಬೇಡಾಗದ ಅನಾವ್ರಯಗಳೇ ಅಧಿಕವಾಗಿ, ಜನತೆಯು ಹೊಟ್ಟೆ ಬಾಯಿ ಕಟ್ಟಿಕೆಡುವ ಕರವು ದುರ್ವ್ಯಯವಾಗಿ, ಕೆಲವೇ ಮಂದಿಯ ಸಾರ್ಥಯಜ್ಞದ ಫಲವಾಗಿ ಅವರ ಕೈಸೇರಬಹುದು.

ಜನತೆಯ ಹಣವನ್ನು ಜನತೆಗಾಗಿ ಸದುಪಯೋಗಮಾಡುವುದು ಜನತಾ ಸರಕಾರದ ಕರ್ತವ್ಯ. ಜನರ ಅಭಿವೃದ್ಧಿಗೆಂದು, ಸಂಜಾರ ಕಾರ್ಯಕ್ರಮಗಳಲ್ಲಿ, ಅಭಿವೃದ್ಧಿ ಯೋಜನೆಯಲ್ಲಿ ನಿರುಪಯೋಗಿ ಯೋಜನೆಗಳಲ್ಲಿ, ದುಂದು ವೆಚ್ಚವನ್ನೂ ಅನಾವ್ರಯವನ್ನೂ ಮಾಡುವುದು ಎಷ್ಟು ಮಾತ್ರಕ್ಕೂ ಸಲ್ಲದು. ಖಾಸಗಿ ಭಂಡವಳಗಾರನು ಸಾಕಷ್ಟು ಪ್ರತಿಫಲ ದೊರೆಯುವುದೆಂದು, ಕಂಡುಬಂದ ಯೋಜನೆಗಳಲ್ಲಿಯೇ ತನ್ನ ಹಣವನ್ನು ತೊಡಗಿಸುವಂತೆ ಸರಕಾರವಾದರೂ ಲಾಭದಾಯಕ ಯೋಜನೆಗಳಲ್ಲಿಯೇ ಜನತೆಯ ಹಣವನ್ನು ವೆಚ್ಚಮಾಡಬೇಕು. ಅಡಳಿತದಲ್ಲಿ ಮಿತವ್ಯಯ ಮಾರ್ಗವನ್ನವಲಂಬಿಸಬೇಕು. ಜನತೆಯಲ್ಲಿ ಈ ಬಗ್ಗೆ ವಿಶ್ವಾಸ ಹುಟ್ಟುವಂತೆ ಆಚರಿಸಬೇಕು. ಹಾಗಾದಲ್ಲಿ ಜನತೆಯೂ ಕರತೆತ್ತ ಬೇಸೆಯನ್ನು ಸ್ವಲ್ಪವಾದರೂ ಮರೆತೀತು. ನಮ್ಮವರು ಇದನ್ನು ಗಮನಿಸುವರೆ?

ಶಿ, ಆತ್ಯಂತಿಕ ಸುಖ ಇತ್ಯಾದಿಹೆಸರುಗಳು ಕೇಳಿವೆ. ಇದೇ ಸರ್ವ ಸಾಧನೆಗಳ ಅಂತಿಮ ಫಲವಾಗಿದೆ. ಇದನ್ನೇ ರಾಷ್ಟ್ರಕಾರರು ಮುಕ್ತಿ ಎಂದಿದ್ದಾರೆ ಅದನ್ನೇ ಪರಮಾತ್ಮನು—

ಯಂ ಲಬ್ಧ್ವಾ ಚಾಪರಂ ಲಾಭಂ
ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ
ಗುರುಣಾಪಿ ವಿಚಾಲ್ಯತೆ ॥ (೬-೨೨)

ಅರ್ಥಾತ್ ಯಾವುದರಲ್ಲಿ ದುಃಖ, ಅಲ್ಪಜ್ಞತೆ, ಅಶಾಂತಿ, ಅಸಹಿಷ್ಣುತೆ, ಇತ್ಯಾದಿಗಳಿಲ್ಲವೋ ಅಂತಹ ಪರಮಶಾಂತಿಮಯ ಅವಸ್ಥೆಯನ್ನು ಪಡೆಯುವನು ಎಂದಿದ್ದಾನೆ. ಆಹಾ! ಪರಮಾತ್ಮನೆಂತಹ ಕೃಪಾ ಸಾಗರನು!

—ಕೆ. ಪುರುಷೋತ್ತಮ ಮುಲ್ಕ,
ಪೆಡೂರು

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಎ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨-೦-೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ಜಯ

ಸಂಪುಟ ೩೬
VOL.36

27—6—1957

ಸಂಚಿಕೆ ೪೨
NO. 42

ಸಮಾಜವಾದ ಸಾಧನೆ

ರಾಷ್ಟ್ರ ಪುನಾರಚನೆಗೆ ಸಂಮತಿ ಸಹಕಾರಗಳೇ ಸರಿಯಾದ ಸಾಧನೆ.

"ನಾವು ಸತ್ತ್ವಾಯ ಮತ್ತು ಬಲಾತ್ಕಾರಗಳ ಮುಖಾಂತರವಾಗಿ ರಶ್ಯದಂತಹ ಪರದೇಶಗಳನ್ನು ಅನುಕರಿಸಿ ಸಮಾಜವಾದವನ್ನು ಸ್ಥಾಪಿಸುವುದು ಸಾಧ್ಯವಿಲ್ಲವಾದುದರಿಂದ ಸಂಮತಿ ಮತ್ತು ಸಹಕಾರಗಳಿಂದಲೇ ಅದನ್ನು ರೂಪಿಸಿಕೊಳ್ಳುವುದು ಅತ್ಯುತ್ತಮ ಮಾರ್ಗ. ಇದನ್ನು ದೂರೀಕರಿಸಿ, ಅಸಾಧ್ಯವಾದ ವಿಧಾನವನ್ನೇ ಅನುಸರಿಸಿದರೆ, ಅದು ಸಮಾಜವಾದವನ್ನು ಸ್ಥಾಪಿಸುವ ಬದಲು ಸಮಾಜದಲ್ಲಿ ಕ್ರಾಂತಿಯ ಮನೋಭಾವನೆಯನ್ನೇ ಹುಟ್ಟಿಸಬಹುದು. ಚರ್ಚೆ ಮತ್ತು ಶಾಸನಗಳ ತಯಾರಿ ಇವುಗಳಲ್ಲಿಯೇ ಅಧಿಕ ಸಮಯ ವ್ಯಯವಾಗುವುದು ನಿಜವಾದರೂ, ಈ ವಿಧಾನದಲ್ಲಿಯೇ ಮುನ್ನಡೆಯುವುದು ತುಂಬ ಉತ್ತಮ ಮತ್ತು ಇದು ಮೂಲ ವಾದಕ್ಕೆ ಬಹಳ ಸಮೀಪವರ್ತಿಯಾದುದೆಂದು ನಾವು ತಿಳಿಯುತ್ತೇನೆ. ಹೀಗೆ ನಿಧಾನವಾಗಿ ಸಮಾಜವಾದದತ್ತ ನಮ್ಮೊಡನೆ ನಮ್ಮ ದೇಶದ ಸ್ರಜೆಗಳೆಲ್ಲರನ್ನೂ ಕರೆದುಕೊಂಡು ಒಂದೊಂದೇ ಹೆಜ್ಜೆಯನ್ನಿಡ ಬೇಕು. ನಮ್ಮ ಜನತೆಯು ತಮ್ಮ ಕುರಿತಾಗಿ ಚಿಂತಿಸುವಂತೆ ಹಾಗೂ ಆತ್ಮವಿಶ್ವಾಸಿಗಳಾಗುವಂತೆ ಮಾಡುವ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇನೆ.

ಜನತೆಯ ಮನಸ್ಸನ್ನು ಹೃದಯವನ್ನೂ ಸಮಾಜವಾದವು ಪ್ರವೇಶಿಸಬೇಕು. ನಾವು ಸಮಾಜವಾದವಶಕ್ತಿಯನ್ನು ತೋರಿಸಿಕೊಡದೆ, ಅನ್ಯರೊಡನೆ ಸಹಕಾರದಿಂದ ನಡೆದುಕೊಂಡು ಪೂರೈಸುವ ಕೆಲಸದ ಪರಿಮಾಣವನ್ನು ಹೆಚ್ಚಿಸದೆ, ಬದಲು, ಪರಪೀಡೆಗೆ ಅವಕಾಶಗಳನ್ನು ಹೊಂಚುಹಾಕುತ್ತಾ ಕುಳಿತರೆ, ಅದು ಎಂದಿಗೂ ಸಮಾಜವಾದವಾಗಲಾರದು.

ಆದುದರಿಂದ, ಈಗ ಜನತೆಯ ಮನಸ್ಸನ್ನು ಪರಿವರ್ತಿಸುವುದು ಎಂತು ಎಂಬುದೇ ಸಮಸ್ಯೆ. ತುರ್ತಿನ ಸ್ಪರ್ಧೆಗಳಿಂದ ನಮ್ಮ ಮನಸ್ಸನ್ನು ಹಿಂದಕ್ಕೆಳೆದುಕೊಂಡು ಸಹಕಾರದ ತತ್ವಗಳಲ್ಲಿ ಅಡಗಿರುವ ಲಾಭದಕಡೆಗೆಹರಿಸಬೇಕು ಇಷ್ಟು ಮಹತ್ವದ ಗುರುತರವಾದ ಬದಲಾವಣೆಯನ್ನು ಜನತೆಯ ಮನಸ್ಸಿನಲ್ಲಿ ಒಮ್ಮೊಂದೊಮ್ಮೆಲೇ ಪ್ರತಿಬಿಂಬಿಸುವುದಸಾಧ್ಯವಾದ ಕಾರ್ಯ. ಇದು ನಮ್ಮ ಮಕ್ಕಳಿಗೆ ತಮ್ಮ ತರಗತಿಗಳಲ್ಲಿ ದೊಡ್ಡ ದೊಡ್ಡ ತತ್ವಗಳು ಕಲಿಸಿಕೊಡಲ್ಪಡುತ್ತವೆ. ಆದರೆ, ಅವು ತಮ್ಮ ಸುತ್ತುಮುತ್ತಲೂ ತುರ್ತಿನ ಸ್ಪರ್ಧೆಯನ್ನು ಕಂಡಾಗ, ಕಲಿಸಿದ ಮಾತುಗಳು ಮರೆತು, ಸ್ಪರ್ಧೆಗಳ ಪರಿಣಾಮವಾಗಿ ಅಳಿಯುದೈಯೊಂದು ನಾತ್ರ ಅವುಗಳ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಉಳಿಯುತ್ತವೆ. ಈ ವಿಧಾನದ ಬರುಸಿನ ಸ್ಪರ್ಧೆಯು ಅಗತ್ಯವಿರುವಷ್ಟು ಸಂಪಾದನೆ ಮಾಡುವ ಬಂಡವಳಶಾಹಿ ಸಮಾಜಗಳಿಗೆ ಅಗತ್ಯವಾಗಬಹುದು. ಅತ್ಯುತ್ತಮ ಶಾಸನದ ಮೂಲಕವಾದರೂ ಸಮಾಜ ವಾದವನ್ನು ತರುತ್ತೇವೆ ಎನ್ನುವುದು ಸಹಕಾರಕ್ಕೆ ಅವಕಾಶವಿಲ್ಲವಾದರೆ, ಕೇವಲ ಒಣಜಂಭ. ಅದು ಎಂದಿಗೂ ಅಸಾಧ್ಯವೇ.

ನಾವು ಮಾನವ ಜೀವಿಗಳೊಡನೆ ವ್ಯವಹರಿಸಬೇಕಲ್ಲದೆ ಕಬ್ಬಿಣ ಅಥವಾ ಉಕ್ಕುಗಳೊಡನೆಯಲ್ಲ. ಈಗ ನಮ್ಮೆದುರು ರಶ್ಯದ ಉದಾಹರಣೆಯಿದೆ. ಅವರು ಉತ್ತಮ ಧ್ಯೇಯಗಳನ್ನಿಟ್ಟುಕೊಂಡ. ತಮ್ಮ ಜನತೆಗೆ ಪ್ರಯೋಜನ ದೊರೆಯುವ ಕಾರ್ಯಗಳಲ್ಲಿ ಶಕ್ತಿ ವಿಂಗಿ ಪ್ರಯತ್ನಿಸಿದರು. ಆದರೆ, ಈ ಗುರಿಯ ಸಾಧನೆಗಾಗಿ ಅವರು ಒತ್ತಾಯ ಮತ್ತು ಬಲಾತ್ಕಾರಗಳನ್ನವಲಂಬಿಸಿದರು. ಉದಾಹರಣೆಗಾಗಿ, ರೈತರು ತಮ್ಮ ಭೂಮಿಯಿಂದ ಪ್ರತ್ಯೇಕವಾಗಲು ಎಂದಿಗೂ ಸಿದ್ಧರಾಗಲಿಲ್ಲ ಆದುದರಿಂದ ಅವರಿಂದ ಭೂಮಿಯನ್ನು ಒತ್ತಾಯದಿಂದಲೋ, ಬಲಾತ್ಕಾರದಿಂದಲೋ ಸೆಳೆದುಕೊಳ್ಳಲಾಯಿತು. ಹೀಗೆ ಕೂಡಿಸಿದ ಜಮೀನನ್ನು ಸಾಮೂಹಿಕವಾಗಿ ವ್ಯವಸ್ಥಿತಗೊಳಿಸಲಾಯಿತು ಈ ರೀತಿಯಲ್ಲಿ ತಯಾರಿಸಿದ ಸಮಷ್ಟಿ ಪದ್ಧತಿಯು ಬಲಾತ್ಕಾರದಿಂದಲೇ ಒದಗಿ ಬಂದುದೆಂದಾಯಿತು. ಪ್ರತ್ಯೇಕ ಕಾಯಿದೆಯಲ್ಲಿಯೂ ಒಂದಲ್ಲ ಒಂದು ವಿಧದ ಒತ್ತಾಯ ಇಲ್ಲವೆ ಬಲಾತ್ಕಾರವಿದೆ ಎಂಬುದು ನಿಜವಾದರೂ ಜನರು ಕಾಲಕ್ರಮೇಣ ಆ ಶಾಸನವನ್ನು ಮನ್ನಿಸಲು ಸಿದ್ಧರಾಗುವುದು ನಿಶ್ಚಯ. ಈ ಸಂದರ್ಭದಲ್ಲಿ ಹಿಂದೂ ಕಾಯಿದೆಯನ್ನುದಾಹರಿಸಬಹುದು. ನಾವು ಕೆಲವೊಂದು ಬದಲಾವಣೆಗಳನ್ನು ಮುಂದಿಟ್ಟೆವು; ಪ್ರತಿಯೊಬ್ಬರೂ ಮುಖ್ಯವೆಂದು ಅವುಗಳೆಲ್ಲವನ್ನೂ ಸ್ವೀಕರಿಸಲಿಲ್ಲ. ಅದನ್ನೊಂದು ಸತ್ತ್ವಾಯವೆನ್ನಬರುವುದಿಲ್ಲ.

ಮಾರ್ಕ್ಸನ ಕಾಲಜ್ಞಾನ ಒಂದು ಶತಮಾನ ನಂತರದ ಈ ಸಮಯದಲ್ಲಿ ಜಗತ್ತಿನಲ್ಲಿ ವೈಶಿಷ್ಟ್ಯಪೂರ್ಣ ಬದಲಾವಣೆಗಳಾಗಿವೆ ಯೆಂಬುದನ್ನು ನಾವು ಅವಶ್ಯಕವಾಗಿ ಗಮನಿಸಬೇಕು. ಆದುದರಿಂದ ನೂರು ವರ್ಷಗಳ ಮೊದಲು ಬರೆದಿದ್ದ ಮಾರ್ಕ್ಸನ ಸಿದ್ಧಾಂತವು ಇಂದು ಸಂಪೂರ್ಣ ನಿರ್ವಿಕಾರ ಸತ್ಯವಾಗಿದೆಯೇ ಎಂದು ತಿಳಿಯಬೇಕಾಗಿದೆ. ನಮ್ಮ ಕಮ್ಯೂನಿಸ್ಟ್ ಗೆಳೆಯರು ಬಾಯಿ ತುಂಬ ಮಾತಾಡುತ್ತಿರೆ. ಅವರ ಆಡುವ ವಿಷಯಗಳಲ್ಲಿ ಕೆಲವೊಂದು ಒಳ್ಳೆಯನೆಂದೆನ್ನುವಂತಿದ್ದರೂ ಹಲವಾರು ವಿಚಾರಗಳಲ್ಲಿ ಅವರು ತಮ್ಮ ಕಣ್ಣು ಮುಚ್ಚಿಕೊಂಡಿದ್ದಾರೆನ್ನಲೇ ಬೇಕಾಗಿದೆ.

ನಾವು ಭಾರತದಲ್ಲಿ ಶ್ರೀಮಂತರೆಲ್ಲರ, ಎಲ್ಲ ಕರ್ಮ ಶಾಲೆಗಳ ಸಂಪತ್ತನ್ನು ತೆಗೆದುಕೊಂಡು, ಅದನ್ನು ಜನರಲ್ಲಿ ಯಾಕೆ ಹಂಚಬಾರದೆಂದು ಕೇಳುವ ಕೆಲಮಂದಿಯಿದ್ದಾರೆ. ಸರಿಯೆ; ನಾವು ಈ ವಿಧಾನಕ್ಕೆ ಅಂಟಿಕೊಂಡರೆ, ನಮ್ಮೊಡನೆ ಸ್ವಲ್ಪ ಹಣ ಸಮ್ಮುದಾಗಿಯೇ ಉಳಿಯಬಹುದು. ಆದರೆ ಇಂತಹ ಕಾರ್ಯಾಚರಣೆಯು ದೇಶದ ಉತ್ಪಾದನಾ ಯೋಜನೆಯನ್ನು ಬೇರು ಸಹಿತ ಕಿತ್ತು ಹಾಲುವುದಲ್ಲದೆ, ಈಗ ನಾವು ತಯಾರಿಸುವ ಸಾಮಾನು ಸರಂಜಾಮುಗಳ ಪ್ರಮಾಣವನ್ನೂ ಕೂಡಲೇ ತಗ್ಗುವಂತೆ ಮಾಡುವುದು ಮಾತ್ರವಲ್ಲ, ಸಂಕಟಮಯದರಿಸ್ಥಿತಿಗೆನಮ್ಮನ್ನು ಮುಟ್ಟಿಸುವುದು; ಕೆಲವೊಮ್ಮೆ ರಾಷ್ಟ್ರದ ದಿವಾಳಿಗೂ ಇದು ಕಾರಣವಾಗಬಲ್ಲುದು. ಏಕೆಂದರೆ. ಜನರಲ್ಲಿ ರಾಶಿಹಾಕಿದ ಸಂಪತ್ತು ಒಂದು ರಾಷ್ಟ್ರದ ಸಂಪತ್ತೆನ್ನಲಾಗದು. ಒಂದು ದೇಶದ ಸಂಪತ್ತೆಂದರೆ, ವರ್ಷಂಪ್ರತಿ ಅಲ್ಲಿ ನಡೆಯುವ ಉತ್ಪಾದನೆಯೊಂದೇ.

ಭಾರತದಲ್ಲಿ ದೊರೆಯುವ ಎಲ್ಲ ಸಂಪತ್ತನ್ನೂ ಕೂಡಿಹಾಕಿ, ಅದನ್ನು ಸಮಾನವಾಗಿ ಹಂಚಿದರೆ, ನಾವು ನಮ್ಮ ಉತ್ಪಾದನಾ ಶಕ್ತಿಯನ್ನು ಬಲಹೀನಗೊಳಿಸಿದಂತಾಗುವುದು. ೧೯೪೭ನೆ ವರ್ಷವನ್ನು ಜ್ಞಾಪಿಸಿಕೊಳ್ಳಿರಿ. ಪಂಜಾಬದಲ್ಲಿದ್ದ ಗದ್ದಲದ ಪರಿಣಾಮವಾಗಿ ನಮ್ಮ ಕೃಷಿಕ ಉತ್ಪಾದನೆಯು ಅಧಿಕಪ್ರಮಾಣದಲ್ಲಿ ಕುಂದಿತು. ಸುಮಾರು ಎರಡು ವರ್ಷಗಳವರೆಗೆ ಅದು ತನ್ನ ಅತ್ಯಂತ ಕೆಳಮಟ್ಟದಲ್ಲಿತ್ತು. ಈ ವರ್ಷಗಳಲ್ಲಿ ನಮ್ಮ ಭೂಮಿಯಿಂದ ಉತ್ಪಾದಿಸುವ ಆಹಾರದಪ್ರಮಾಣಕ್ಕೆ ಧಕ್ಕೆಬರುವ ಅಂಜಿಕೆಯಿಂದ ನಾವು ಯಾವ ಮಹತ್ವದ ಕಾರ್ಯವನ್ನೂ ಕೈಗೊಳ್ಳಲಿಲ್ಲ.

ನಾವು ಸಮಾಜವಾದದ ಮಾತನ್ನಾಡುವಾಗ, ದೇಶದ ಅತ್ಯಧಿಕ ಉತ್ಪಾದನೆಯೆಂದು ಅರ್ಥಮಾಡಿಕೊಳ್ಳಬೇಕು. ಅವುಗಳಲ್ಲಿ ಅತ್ಯಂತ ಪ್ರಮುಖವಾದುದೆಂದರೆ, ಅನ್ನ, ಬಟ್ಟೆ ಮತ್ತು ವಸತಿ ಸೌಕರ್ಯಗಳು. ಪ್ರತಿಯೊಬ್ಬನೂ ತನ್ನ ವಿದ್ಯೆಯನ್ನು ಪಡೆಯಲು ತಕ್ಕ ಏರ್ಪಾಡುಗಳಿರಬೇಕು, ಮತ್ತು ಪ್ರತ್ಯೇಕ ನಾಗರಿಕನ ಆರೋಗ್ಯವೂ ಉತ್ತಮ ರೀತಿಯಲ್ಲಿ ನೋಡಿಕೊಳ್ಳಲ್ಪಡಬೇಕು. ಎಲ್ಲ ಪ್ರಜೆಗಳಿಗೂ ಉದ್ಯೋಗವನ್ನು ಒದಗಿಸಿಕೊಡಬೇಕು.

ಹೀಗೆ ನಾವಿಂದು ಧರ್ಮಸಂಕಟದಲ್ಲಿ ಬಿದ್ದಿದ್ದೇವೆ ಇಂದು ನಮ್ಮ ಉತ್ಪಾದನೆ

(ಒಳಗೆ ಪುಟ ನೋಡಿರಿ)

ANNOUNCEMENT

A BRANCH
of the Bank
will be opened shortly,
at BANGALORE.

Mysore Branch has been opened on 20-6-57.

THE VIJAYA BANK, LTD.
H. O. MANGALORE - 3.

Estd: 1931.

ನಮ್ಮ ಖನಿಜ ಸಂಪತ್ತು

ಲೋಹಗಳ ಮೂಲ-ಧಾತುಗಳು ಭಾರತದಲ್ಲಿ ಅಮಿತವಾಗಿವೆ. ಅವುಗಳ ಪ್ರಯೋಜನವನ್ನು ಸಂಪೂರ್ಣ ಪಡೆಯಲಿದ್ದೇವೆ

ಭಾರತವು ತನ್ನ ರಾಷ್ಟ್ರ ಪುನಾರಚನೆಗಾಗಿ ಕೈಗೊಂಡ ಪಂಚವಾರ್ಷಿಕ ಯೋಜನೆಗಳಲ್ಲಿ ಮೊದಲನೆಯದರಲ್ಲಿ ಕೃಷಿಗೂ ಇದೀಗ ನಡೆಯುತ್ತಿರುವ ದ್ವಿತೀಯ ಯೋಜನೆಯಲ್ಲಿ ಕೈಗಾರಿಕೆಗಳಿಗೂ ವಿಶೇಷ ಮಹತ್ವವನ್ನಿತ್ತಿದೆ. ಇಂದಿನ ಯಂತ್ರ ಯುಗದ ದಿನಗಳಲ್ಲಿ ದೇಶದಲ್ಲಿ ಔದ್ಯೋಗಿಕ ಪ್ರಗತಿಯು ಕಾಣದೆ ಹೋದರೆ, ಆಗ ಪರಾವಲಂಬಿಯಾಗಿಯೇ ಉಳಿಯ ಬೇಕಾಗಿ ಬರಬಹುದು. ಆದುದರಿಂದ ಸ್ವಾವಲಂಬನದ ದಾರಿಯಲ್ಲೊಂದು ಮೈಲುಗಲ್ಲು ಔದ್ಯೋಗಿಕ ಕಾರಖಾನೆಗಳೆನ್ನಬಹುದು. ಎಲ್ಲ ವರ್ಗದ ಕೈಗಾರಿಕೆಯ ಯಂತ್ರಗಳನ್ನು ತಯಾರಿಸಲು ಕಬ್ಬಿಣದ ಅಗತ್ಯವಿದೆ ಕಬ್ಬಿಣದಿಂದಲೇ ಯಂತ್ರ ರಚನೆಯ ಉಕ್ಕನ್ನು ಸಿದ್ಧಪಡಿಸುವುದಾದುದರಿಂದ, ಕಬ್ಬಿಣದ ಅದುರುಗಳು ಒಂದು ದೇಶದಲ್ಲಿ ಸಾಕಷ್ಟಿದ್ದು, ಶಕ್ತಿಗಾಗಿ ಇದ್ದಲು ಸೌಕರ್ಯವಿದ್ದರೆ, ಅಲ್ಲಿ ಯಾಂತ್ರಿಕೋದ್ಯಮವು ಬೆಳೆಯುವುದು ಸಾಧ್ಯ. ಭಾರತದಲ್ಲಿ ಕಬ್ಬಿಣ ಮತ್ತು ಇದ್ದಲುಗಳಲ್ಲದೆ, ಮಿಕ್ಕ ಕೆಲವೊಂದು ಲೋಹಗಳೂ ದೊರೆಯುವುದರಿಂದ, ಇಲ್ಲಿ ಬಲವಾದ ಔದ್ಯೋಗಿಕ ಬೆಳವಣಿಗೆಯಾಗಲು ಅವಕಾಶವಿದೆ. ದೇಶದನಾನಾ ಭಾಗಗಳಲ್ಲಿ ಭೂಮಿತಾಯಿ ಖನಿಜಸಂಪತ್ತನ್ನು ಅಡಗಿಸಿಕೊಂಡಿದ್ದಾಳೆ. ಆದರೆ, ಎಲ್ಲಿ ಯಾವುದು ಮರೆಯಾಗಿದೆಯೆಂಬುದರ ಶೋಧನೆಯಾಗಿ ಅವನ್ನು ಯೋಗ್ಯ ಮಾರ್ಗದಲ್ಲಿ ಸದುಪಯೋಗ ಪಡಿಸಿಕೊಳ್ಳುವ ಗುರುತರವಾದ ಹೊಣೆಗಾರಿಕೆ ದೇಶವಾಸಿಗಳ ತಲೆ ಮೇಲಿದೆ

ಉಕ್ಕನ್ನು ಸಿದ್ಧ ಪಡಿಸುವ ಕಬ್ಬಿಣದ ಅದುರುಗಳ ವಿಷಯದಲ್ಲಿ ಭಾರತದ ಸ್ಥಿತಿಯು ಅತ್ಯಂತ ಸಂತೋಷ ಜನಕವಾಗಿದೆ. ಇದರ ವಿಸ್ತೃತ ನಿಕ್ಷೇಪವು ಬಿಹಾರ, ಒರಿಸ್ಸಾ, ಮಧ್ಯ ಪ್ರದೇಶ, ಮದ್ರಾಸ, ಮೈಸೂರು, ಬೊಂಬಾಯಿ ಮತ್ತು ಆಂಧ್ರ. ರಾಜ್ಯಗಳಲ್ಲಿ ಧಾರಾಳವಾಗಿ ಕಂಡು ಬಂದಿರುತ್ತದೆ. ಇದನ್ನು ಭೂಮಿಯಲ್ಲಿ "ಹೈಮೆಟೈಟ್" ಎಂಬ ರೂಪದಿಂದ ಅಗೆದು ತೆಗೆಯ ಬಹುದು. ಹೀಗೆ ಅಗೆದ ಅದುರಾಣದಲ್ಲಿ ನೂರಕ್ಕೆ ೬೦-೬೫ರಷ್ಟು ಮಾತ್ರ ಕಬ್ಬಿಣವಿರುತ್ತದೆ. ಭಾರತದ ಸ್ಥಿತ್ಯೇಪಗಳಲ್ಲಿ ಹೆಚ್ಚು ಕಡಿಮೆ ೨೧ ಅರಬ ಟನ್ನುಗಳಷ್ಟು ಉಕ್ಕಿನ ಖನಿಜವು ಸುರಕ್ಷಿತವಾಗಿದೆ ಎಂದು ಊಹಿಸಿದ್ದಾರೆ. ತಾತಾ ನಗರ, ಹೀರಾಪುರ, ಕುಲ್ಟೀ ಮತ್ತು ಭದ್ರಾವತಿಗಳಲ್ಲಿ ಕಬ್ಬಿಣ ಮತ್ತು ಉಕ್ಕನ್ನು ನಿರ್ಮಾಣ ಮಾಡುವ ನಾಲ್ಕು ಕಾರಖಾನೆಗಳು ಈಗ ಕಾರ್ಯಗತವಾಗಿದೆ. ಇವುಗಳಲ್ಲಿ ಪ್ರತಿವರ್ಷ ೧೯ ಲಕ್ಷ ಟನ್ ಕಬ್ಬಿಣ ಮತ್ತು ೧೨ ಲಕ್ಷ ಟನ್ ಉಕ್ಕು ತಯಾರಾಗುತ್ತದೆ. ದ್ವಿತೀಯ ಯೋಜನಾಂತ್ಯದಲ್ಲಿಎಂದರೆ ೧೯೬೦-೬೧ರಲ್ಲಿ ಭಾರತವು ೪೫ ಲಕ್ಷ ಟನ್ನುಗಳಷ್ಟು ಉಕ್ಕಿನ ಉತ್ಪಾದನೆಯನ್ನು ಹೆಚ್ಚಿಸುವ ಅಪೇಕ್ಷೆಯನ್ನಿಟ್ಟುಕೊಂಡಿದೆ. ಈ ಗುರಿಯನ್ನು ಮುಟ್ಟುವ ಸಲುವಾಗಿ ದ್ವಿತೀಯ ಯೋಜನಾವಧಿಯಲ್ಲಿ ಒರಿಸ್ಸಾದ ರೂಕೇಲ್ಲಿ, ಮಧ್ಯ ಪ್ರದೇಶದ ಭಿಲೈ, ಮತ್ತು ಪಶ್ಚಿಮ ಬಂಗಾಲದ ದುರ್ಗಾ ಪುರಗಳಲ್ಲಿ ನೂರು ವಿಶಾಲ ಕಾರಖಾನೆಗಳನ್ನು ಕೆರೆಯಲು ತಕ್ಕ ಸನ್ನಾಹಗಳನ್ನು ಮಾಡಲಾಗುತ್ತಿದೆ ಅದಲ್ಲದೆ ಈಗ ಉಕ್ಕನ್ನು ತಯಾರಿಸುತ್ತಿರುವ ನಾಲ್ಕು ಕಾರಖಾನೆಗಳನ್ನು ವಿಸ್ತರಿಸಲೂ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಉಕ್ಕನ್ನು ತಯಾರಿಸುವ ವೆಚ್ಚವು ಪ್ರಪಂಚದ ಇತರ ದೇಶಗಳಿಗಿಂತ ಭಾರತದಲ್ಲಿ ನ್ಯೂನತಮವಾಗಿದೆ. ಲೋಹ ಖನಿಜಗಳ ಮತ್ತಿತರ ಆವಶ್ಯಕ ದ್ರವ್ಯಗಳು ಇಲ್ಲಿ ದೊರೆಯುವುದಂದ ಭಾರತವು ಉಕ್ಕಿನ ಉತ್ಪಾದನೆಯಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆಯುವುದು ಸಾಧ್ಯವಿದೆ.

ಬಿಹಾರದ ಸಿಂಹಭೂಮಿ ಜಿಲ್ಲೆ, ಜಯಪುರದ ಸಮೀಪದ ಪೇತಡೀ ಮತ್ತು ಸಿಂಘಾಣ, ಅಲವರ ಜಿಲ್ಲೆ, ಸಿಕ್ಕಿಂರಾಜ್ಯದ ಭೋಟಾಂಗ್, ಆಂಧ್ರ ರಾಜ್ಯದ ನೆಲ್ಲೂರು, ಗುಂಟೂರು, ಕರ್ನೂಲು ಜಿಲ್ಲೆಗಳು.ಮಧ್ಯ ಪ್ರದೇಶದ ಸ್ಲೀಮನಾಬಾದ, ಮೈಸೂರಿನ ಚಿತ್ರದುರ್ಗ, ಉತ್ತರ ಪ್ರದೇಶದ ಅಲ್ಮೋಡಾ ಮತ್ತು ಗಢವಾಲಗಳಲ್ಲಿ ತಾಂಬ್ರವು ದೊರೆಯುತ್ತದೆ. ಬಿಹಾರ ರಾಜ್ಯದ ಲಂಮೈಲುದ್ದದ ತಾಂಬ್ರಪಟಲಗಳಲ್ಲಿ ಮಾತ್ರ ಉತ್ಪಾದನಾ ಕಾರ್ಯವು ನಡೆಯುತ್ತಾ ಇದೆ. ಈ ಪಟಲದಲ್ಲಿ ಸೇಕಡಾ ಎರಡೂವರೆಯಷ್ಟು ತಾಂಬ್ರವಿರುವ ಸುಮಾರು ೩೪ ಲಕ್ಷ ಟನ್ನುಗಳಷ್ಟು ಖನಿಜವು ಸುರಕ್ಷಿತವಾಗಿದೆ, ೧೯೫೪ರಲ್ಲಿ ಈ ಗನಿಗಳಲ್ಲಿ ೭೧೬ ಟನ್ನು ತಾಂಬ್ರವು ಉತ್ಪಾದಿಸಲ್ಪಟ್ಟಿತು. ರಾಜಸ್ಥಾನದ ಪೇತಡೀ ಹಾಗೂ ದರಿಬಾಗಗಣಿಗಳಿಂದ ಸದ್ಯದಲ್ಲಿಯೇ ಗಮನೀಯ ಪ್ರಮಾಣದಲ್ಲಿ ಕಬ್ಬಿಣವನ್ನು ಉತ್ಪಾದಿಸುವ ಕಾರ್ಯವು ಪ್ರಾರಂಭವಾಗುವುದು. ದ್ವಿತೀಯ ಯೋಜನಾಕಾಲದಲ್ಲಿ ಅನ್ಯ ತಾಂಬ್ರ ಕ್ಷೇತ್ರಗಳ ಉಪಯೋಗವನ್ನೂ ಪಡೆಯಲಾಗುವುದು. ಪ್ರತಿ ವರ್ಷ ಭಾರತಕ್ಕೆ ೩೦,೦೦೦ ಟನ್ ತಾಂಬ್ರವು ಬೇಕಾಗುವುದೆಂದು ಅಂದಾಜು ಮಾಡಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ಈ ಬೇಡಿಕೆಯು ಏರುತ್ತಾ ಹೋಗಿ, ೧೯೬೦-೬೧ರಲ್ಲಿ ಪ್ರತಿವರ್ಷಕ್ಕೆ ೫೫,೦೦೦ ಟನ್ನುಗಳಷ್ಟಾಗಬಹುದೆಂದು ಲೆಕ್ಕಹಾಕಿದ್ದಾರೆ. ವಿದ್ಯುತ್ತನ್ನು ಹಾಯಿಸಲು ಬೇಕಾಗುವ ತಾಂಬ್ರವು ಸದ್ಯ ಭಾರತದಲ್ಲಿ ತಯಾರಾಗುತ್ತಿಲ್ಲ. ಅದನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತೇವೆ. ಕಲಕತ್ತೆಯ ಅಲೀಪುರದಲ್ಲಿ ಪ್ರತಿ ವರ್ಷ ೧೦,೦೦೦ ಟನ್ ವಿದ್ಯುತ್ ತಾಂಬ್ರದ ನಿರ್ಮಾಣವನ್ನು ಮಾಡುವ ಕಾರಖಾನೆಯೊಂದನ್ನು ಕಾರ್ಯಾನ್ವಿತ ಮಾಡುವ ಯೋಜನೆಯನ್ನು ಸರಕಾರವು ಪೂರ್ಣಮಾಡಿದೆ.

ಭಾರತದಲ್ಲಿ ರಾಜಸ್ಥಾನದ ಉದಯಪುರದ ಸಮೀಪವಿರುವ ಜಾವರವೆಂಬಲ್ಲಿ ಮಾತ್ರ ಸತು ಮತ್ತು ಸೀಸಗಳು ದೊರೆಯುತ್ತವೆ. ಇಲ್ಲಿನ ನಿಕ್ಷೇಪಗಳಲ್ಲಿ ಸುಮಾರು ೧೧ ಕೋಟಿ ಟನ್ನು ಖನಿಜವು ಸಂಚಿತವಾಗಿದ್ದು ಇದರಲ್ಲಿ ಸೇಕಡಾ ೩೦ರಿಂದ ೧೨ ರಷ್ಟು ಸೀಸ ಹಾಗು ಸತುಗಳು ಲಭ್ಯವಾಗುತ್ತವೆ. ಸೀಸದ ಪ್ರಮಾಣಕ್ಕಿಂತ ಸತುವಿನ ಪ್ರಮಾಣವು ಅಧಿಕವಾಗಿದೆ. ಸೀಸದ ಸಂಕೇಂದ್ರಿತ ದ್ರವ್ಯದ ಶೋಧನೆಯು ಬಿಹಾರದ ಜರಿಯಾ ಕ್ಷೇತ್ರದ ಟುಂಡೂ ಎಂಬಲ್ಲಿ ನಡೆಯುತ್ತಲಿದೆ. ಇಲ್ಲಿ ಬೆಳ್ಳಿಯೂ ಉಪತ್ಪನ್ನ ರೂಪದಲ್ಲಿ ದೊರೆಯುತ್ತದೆ. ಸತುವು ಮಾತ್ರ ಜಪಾನಕ್ಕೆ ರವಾನ್ನಾಗುವುದು. ಪ್ರತಿ ದಿನ ಸುಮಾರು ೩೦೦ ಟನ್ನುಗಳಷ್ಟು ಸತುವಿದ್ದ ಅದುರುಗಳು ಉತ್ಪಾದಿಸಲ್ಪಡುತ್ತವೆ. ೧೯೬೦ರ ಸುಮಾರಿಗೆ ಈ ಹುಟ್ಟುವಳಿಯು ೧೦೦೦ ಟನ್ನುಗಳಷ್ಟಾಗಬೇಕೆಂದು, ಆ ಬಗ್ಗೆ ಸಾಕಷ್ಟು ಶೋಧನೆಗಳು ನಡೆಯುತ್ತಾ ಇವೆ. ೧೯೫೪ರಲ್ಲಿ ಜಾವರದ ಗನಿಗಳಿಂದ ೧೯೦೦ ಟನ್ ಸೀಸವು ಉತ್ಪಾದನೆಯಾಗಿದ್ದು, ೮೦೦ ಟನ್ನು ಸೀಸ ಮತ್ತು ೩೨,೦೦೦ ಟನ್ ಸತುವು ವಿದೇಶಗಳಿಂದ ಆಯಾತವಾಗಿತ್ತು. ದ್ವಿತೀಯ ಯೋಜನಾವಧಿಯಲ್ಲಿ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುವಂತೆ ಜಾವರದ ನಿಕ್ಷೇಪಗಳ ಸ್ಥಿತಿಯು ಸುಧಾರಣೆಯಾಗುವ ಸಂಭವವಿದೆ. ಅಂಧ್ರ, ಕಾಶ್ಮೀರ, ಮತ್ತು ಉತ್ತರ ಪ್ರದೇಶದ ಅಲ್ಮೋಡಾ ಜಿಲ್ಲೆಗಳಲ್ಲಿ ಸಹಾ ಸಂಶೋಧನೆಗಳು ನಡೆಯುತ್ತಾ ಇವೆ.

ಬಾಕ್ಸೈಯಿಟ್ ಎನ್ನುವುದು ಅಲ್ಯೂಮಿನಿಯಂ ಧಾತುವಿನ ಪ್ರಮುಖ ಅದುರು. ಇದರ ವಿಸ್ತೃತ ನಿಕ್ಷೇಪಗಳು ಬಿಹಾರದ ರಾಂಚೀ ಮತ್ತು ಪಲಾಮ್, ಮಧ್ಯ ಪ್ರದೇಶದ ಜಬ್ಬಲ್‌ಪುರ ಮತ್ತು ಬಾಲಾಘಾಟ್, ಮದ್ರಾಸದ ಸಲೇಮ್ ಮತ್ತು ಬೇಲ್‌ಗಾಂಂ, ಕೊಲ್ಲಾಪುರ ಮತ್ತು ಥಾನಾ ಜಿಲ್ಲೆಗಳಲ್ಲಿ ದೊರೆಯುತ್ತವೆ. ಭಾರತದಲ್ಲಿ ಒಟ್ಟು ೨.೮ ಕೋಟಿಗಳಷ್ಟು ಟನ್ ಬಾಕ್ಸೈಯಿಟು ಉತ್ಪಾದನೆಯಾಗುತ್ತಿದ್ದು ಇದರಲ್ಲಿ ಸೇಕಡಾ ೫೦ಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಅಲ್ಯೂಮಿನಿಯಂ ಸಿದ್ಧವಾಗುತ್ತದೆ. ಭಾರತೀಯ ಅಲ್ಯೂಮಿನಿಯಂ ಕಂಪೆನಿ ಮತ್ತು ಅಲ್ಯೂಮಿನಿಯಂ ಕಾರ್ಪೊರೇಶನ್ ಆಫ್ ಇಂಡಿಯಾ ಎಂಬ ಹೆಸರಿನ ಎರಡು ಸಂಸ್ಥೆಗಳ ಮೂಲಕವಾಗಿ ಅನುಕ್ರಮವಾಗಿ ೫,೦೦೦ ಮತ್ತು ೨೫೦೦ ಟನ್ ಅಲ್ಯೂಮಿನಿಯಮಿನ ನಿರ್ಮಾಣವಾಗುವುದು. ಎರಡನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಹಿರಾಕುಡಿನಲ್ಲಿ ಪ್ರಥಮ ಬಾರಿ ೧೦ ಸಾವಿರ ಮತ್ತು ಮುಂದಕ್ಕೆ ೨೦ ಸಾವಿರ ಟನ್‌ಗಳಷ್ಟು ಪ್ರತಿವರ್ಷ ಉತ್ಪಾದನೆ ಮಾಡುವ ಯೋಜನೆಯನ್ನು ಕೈಗೊಳ್ಳಲಾಗಿದೆ.

ಮ್ಯಾಂಗನೀಸದ ಗನಿಗಳು ಮಧ್ಯ ಪ್ರದೇಶದ ನಾಗಪುರ, ಭಂಡಾರಾ, ಬಾಲಾಘಾಟ್ ಮತ್ತು ಛಿಂದ್‌ವಾಡಾ ಜಿಲ್ಲೆಗಳಲ್ಲಿಯೂ ಒರಿಸ್ಸಾ, ಆಂಧ್ರ, ಮುಂಬಯಿ, ಮೈಸೂರು, ಬಿಹಾರ, ಮಧ್ಯ ಭಾರತ ಮತ್ತು ರಾಜಸ್ಥಾನಗಳಲ್ಲಿಯೂ ಇವೆ. ಮಧ್ಯ ಪ್ರದೇಶದ ಗನಿಗಳಲ್ಲಿ ೮೦೦ ಅಡಿ ಆಳದ ವರೆಗೆ ೧೧ ಕೋಟಿ ಟನ್ ಖನಿಜವು ಸಂಚಿತವಾಗಿದ್ದು. ಇದರಲ್ಲಿ ೫.೫ ಕೋಟಿ ಟನ್ ಕೇವಲ ನಿರ್ಯಾತಕ್ಕೆ ಮಾತ್ರ ಉಪಯುಕ್ತವಾಗಿದೆ. ಉಳಿದವೆಡೆಗಳಲ್ಲಿ ಒಟ್ಟು ೧೨ ಕೋಟಿ ಟನ್‌ಗಳು ದೊರೆಯುತ್ತವೆ. ಮ್ಯಾಂಗನೀಸಿನ ಉತ್ಪಾದನೆಯ ಸೇಕಡಾ ಅಂಶವನ್ನು ನಿರ್ಯಾತ ಮಾಡಲಾಗುತ್ತಿದೆ.

ಬಿಹಾರ, ಒರಿಸ್ಸಾ, ಮದ್ರಾಸ, ಆಂಧ್ರ, ಮೈಸೂರು, ಬೊಂಬಾಯಿ, ಮತ್ತು ಕಾಶ್ಮೀರಗಳಲ್ಲಿ ಕ್ರೋಮೈಟ್ ಹೇರಳವಾಗಿದೆ. ಈ ಖನಿಜ ಸಂಪತ್ತಿನ ಪ್ರಮಾಣ ಸುಮಾರು ೧೩ ಲಕ್ಷ ಟನ್‌ಗಳಷ್ಟು. ನಾವು ಉತ್ಪಾದಿಸುವ ಮೊತ್ತದಲ್ಲಿ ಅರ್ಧಾಂಶದಷ್ಟು ಕ್ರೋಮೈಟನ್ನು ಪರದೇಶಗಳಿಗೆ ರಫ್ತು ಮಾಡುತ್ತೇವೆ ಇಲ್ಮೆನೈಟ್ ಎಂಬ ಖನಿಜದ ಉತ್ಪತ್ತಿಗೆ ಭಾರತಕ್ಕೆ ಪ್ರಪಂಚದಲ್ಲಿ ದ್ವಿತೀಯ ಸ್ಥಾನವು ಲಭಿಸಿದೆ. ಇದು ತಿರುವಾಂಕೂರಿನ ಕರಾವಳಿಯ ಹೊಯಿಗೆಯಲ್ಲಿದ್ದು, ಪ್ರಮಾಣದಲ್ಲಿ ಸುಮಾರು ೩೦,೩೫ ಕೋಟಿ ಟನ್ನುಗಳಷ್ಟಾಗಬಹುದು. ರಾಜಸ್ಥಾನದ ಜೋಧಪುರದ ಸಮೀಪದಲ್ಲಿ ವಿದ್ಯುದ್ದೀಪಗಳಲ್ಲಿ ಬಳಸುವ ಟಂಗ್‌ಸ್ಟನ್ ಎಂಬ ಲೋಹವು ದೊರೆಯುವುದು. ಕೋಲಾರ ಮತ್ತು ಹಟ್ಟಿ ಕ್ಷೇತ್ರಗಳಲ್ಲಿ ಚಿನ್ನದ ಉತ್ಪಾದನೆಯೂ ಆಗುವುದು. ಬಿಹಾರದ ಟುಂಡೂ ಪ್ರದೇಶದಲ್ಲಿ ಸೀಸದ ಶೋಧನೆಯೊಂದಿಗೆ ಬೆಳ್ಳಿಯ ಹುಟ್ಟುವಳಿಯೂ ಆಗುತ್ತದೆ.

* ಅಭ್ರಕದ ಉತ್ಪಾದನೆಯಲ್ಲಿ ಪ್ರಪಂಚದಲ್ಲಿಯೇ ಭಾರತದ ಸ್ಥಾನವು ಅಗ್ರಗಣ್ಯವಾದುದು. ಭಾರತದ ಅಭ್ರಕೋತ್ಪಾದನೆ

(೧೧ನೇ ಪುಟ ನೋಡಿರಿ)

ಸಮಯ ಇನ್ನೂ ಮಿಂಚಿಹೋಗಿಲ್ಲ

ಜೀವನದಲ್ಲಿ ಒಂದು ರೀತಿಯ ವ್ಯವಸ್ಥೆಯಿರಬೇಕಾದರೆ ಆವತ್ಯಾಲದಲ್ಲಿ ಸಹಾಯಕ್ಕೊದಗುವ ಒಂದು ಆಸ್ತಿದ್ದನ ಸಂಗ್ರಹದ ಯೋಜನೆಯನ್ನು ಚಿಕ್ಕಂದಿನಿಂದಲೇ ಆರಂಭಿಸಬೇಕೆಂಬುದು ಸಹಜವೇ ಆದರೆ ಕಾಲ ಕಳೆದು ಹೋಯಿತೆಂದು ಕಣ್ಣೀರು ಕರೆಯುತ್ತಾ ಕುಳಿತುಕೊಳ್ಳುವುದಕ್ಕಿಂತ ಇಂದಿನಿಂದಲೇ ಸ್ವಲ್ಪ ಸ್ವಲ್ಪ ಹಣವನ್ನಾದರೂ ಉಳಿತಾಯಮಾಡಲು ಯತ್ನಿಸುವುದೇ ಮುಖ್ಯ. ಸಮಯವಿನ್ನೂ ಮಿಂಚಿಹೋಗಿಲ್ಲ ಹಲವಾರು ಆಕರ್ಷಕ ಮತ್ತು ಸುಲಭಸಾಧ್ಯವಾದ ಉಳಿತಾಯದ ಯೋಜನೆಗಳಿಗೆ-

ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಚಾರಿಸಿರಿ.

96 ಶಾಖೆಗಳು

ರೂ. 10.64 ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ

ಇವುಗಳಿಂದ ಸಾವಿರಾರು ಜನರ ಆರ್ಥಿಕ ಆವಶ್ಯಕತೆಗಳಲ್ಲಿ ಸಹಕರಿಸಬಲ್ಲ ಶೆಡ್ಯೂಲ್ಡ್ ಬ್ಯಾಂಕು

ಟಿ. ಎ ಪೈ, ಬಿ.ಕಾಂ.(ಬೊಂಬಾಯಿ), ಎಫ್.ಆರ್.ಇ.ಎಸ್ (ಲಂಡನ್), ಎ.ಐ.ಬಿ., ಜನರಲ್ ಮೆನೇಜರ್.

ಡಾ॥ ಟಿ. ಎಂ. ಎ. ಪೈ, ಎಂ.ಬಿ.ಬಿ.ಎಸ್., ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate, Ltd.,

Head Office: UDIPI· S India.

ಸಮಾಜ ದರ್ಶನ

ಸಭ್ಯತೆಯು ಸಮಾಜದ ಪ್ರಾಣಶಕ್ತಿ. ಅದು ಬೆಳೆದರೇನೇ ಸಮಾಜವೂ ದಿವ್ಯ ಭವ್ಯವಾದೀತು!

ಸಮಾಜ ಸುಧಾರಣೆಯ ವಿಷಯವಾಗಿ ಮಾತು ಬಂದಾಗಲೆಲ್ಲಾ 'ಸಮಾಜ ಸುಧಾರಿಸಲಿಲ್ಲ, ಸಮಾಜದಲ್ಲಿ ಯಾವ ಕ್ರಿಯಾಶಕ್ತಿಯೂ ಇಲ್ಲ ವಿಶಿಷ್ಟವಾದ ಎಣಿಸುವಂತಹ ಯಾವ ಗುಣ ಧರ್ಮಗಳೂ ಇಲ್ಲ ಇತ್ಯಾದಿಯಾಗಿ ಸಮಾಜದಲ್ಲಿರುವ ದುರ್ಗುಣಗಳನ್ನೆಲ್ಲಾ ಹೇಳಿ ಕೊನೆಯಲ್ಲಿ ಇವೆಲ್ಲವುಗಳ ಸುಧಾರಣೆಯ ಒಗ್ಗಾಗಿ ಬೇಕುಗಳ ಪಟ್ಟಿಯೊಂದು ನಿಮಾಣವಾಗಿ ಆ ಸಲ್ಲವಿಯಲ್ಲೇ ಮುಕ್ತಾಯವಾಗಿ ಬಿಡುತ್ತದೆ ಇದು ಸತ್ಯವಾದುದೇನೂ ನಿಜ' ಹಲವು ರೀತಿಯಿಂದಲೂ ಸಮಾಜ ಹಿಂದುಳಿದಿದೆ. ಇವುಗಳಲ್ಲಿ ಒಳ್ಳೆಯದನ್ನು ಬಹುದ್ರಯತ್ನದಿಂದ ತುಂಬಿಕೊಳ್ಳಬಹುದು. ಆದರೆ ತುಂಬಿಕೊಳ್ಳಲೂ ಅಸಾಧ್ಯವಾಗಿ ಇದ್ದದ್ದು ಇಂದು ಸಮಾಜದಲ್ಲಿ ನಶಿಸಿ ಹೋಗುತ್ತಿರುವ ಸಭ್ಯತೆ

ಸಭ್ಯತೆ ಇದು ಸಮಾಜದ ಪ್ರಾಣಶಕ್ತಿ. ಇದು ಭವ್ಯವಾಗಿ ಬೆಳೆದಂತೆ ಸಮಾಜವೂ ದಿವ್ಯ ಭವ್ಯವಾಗಿಯೇ ಬೆಳೆಯುವದು ಸಮಾಜದ ಕಟ್ಟುಸಿಟ್ಟುಗಳು, ಶಾಂತಿ ಸುವ್ಯವಸ್ಥೆಗಳು ಮುಂತಾದ ಗುಣ ಧರ್ಮಗಳೆಲ್ಲಾ ಬಿರಕಾಲವೂ ಸಮಾಜದಲ್ಲಿ ಬೆಳೆದು ಬೆಳಗಬೇಕಾದರೆ ವಿಶಾಲವಾದ ಅಕೃತ್ರಿಮವಾದ ಸಭ್ಯತೆ ಸಮಾಜದಲ್ಲಿ ತುಂಬಿರಬೇಕು. ಸಭ್ಯತೆಯೊಂದು ಸಮಾಜದಲ್ಲಿ ಉಳಿದುಕೊಂಡರೆ ಸಮಾಜವನ್ನು ಬೇಕಾದ ಹಾಂಗೆ ರೂಪಿಸಿಕೊಳ್ಳಬಹುದು. ಬೇಕಾದ್ದನ್ನು ಚಿತ್ರಿಸಿಕೊಳ್ಳಬಹುದು.

ಇಂದು ಭೂತಾಕಾರವಾಗಿ ಬೆಳೆದಿರುವ, ಬೆಳೆಯುತ್ತಿರುವ ಅಸಭ್ಯತೆ ಸಮಾಜದ ಸೌಂದರ್ಯವನ್ನೇ ಹಾಳುಮಾಡಿದೆ ಸಮಾಜದ ಕ್ರಿಯೆಯನ್ನೇ ಕುಗ್ಗಿಸಿ ಅದರ ವಿವಿಧ ಅವಯವಗಳನ್ನೂ ನಿಧಿಲಗೊಳಿಸಿದೆ ಎಲ್ಲಿಯೂ ಏಕರೂಪತೆಯಿಲ್ಲ ಭಿನ್ನ ಭಿನ್ನ, ಪ್ರವೃತ್ತಿ ದ್ವೇಷ, ಧೋರಣೆ, ಆಶೆ, ಆಕಾಂಕ್ಷೆಗಳಿಂದ ಸಮಾಜ ಇರಬೇಕಾದ ವೈಶಿಷ್ಟ್ಯ ಇಲ್ಲವಾಗಿದೆ

ಸಭ್ಯ ವೃತ್ತಿಯ ಪತನಕ್ಕೆ ಕಾರಣವಾದುದು ಇಂದಿನ ಸಮಾನತೆಯ ಭಾವನೆ 'ಸಮಾನತೆ'ಯ ಅರ್ಥವನ್ನು ಮರುಯೋಗಸಡಿಸಿಕೊಂಡೇ ಇಷ್ಟು ಅಸಭ್ಯತೆ ಬೆಳೆಯುವಂತಾಯಿತು. ಗುರು ಶಿಷ್ಯರಲ್ಲಿ ಎಂಥ ಪೂಜ್ಯ ಭಾವನೆ ಇರಬೇಕಾಗಿತ್ತೋ ಅಲ್ಲಿಯೂ ಸಮಾನತೆಯ ಭಾವನೆಯ? ಗುರುವಿನ ಮಾತು ಬಿರುಸಾದ ಗ ಇದೂ ಒಂದು ಮಾನಹಾನಿಯೇ? ಈ ವಿಷಯದ ನಿರ್ಣಯಕ್ಕೆ ಹೈಕೋರ್ಟು ತನಕವೂ ಹೋಗುವದಿದೆಯೇ? ನಮ್ಮ ಕಾಲೇಜು ಒಂದರಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಒಂದೇ ಸ್ಥಳದಲ್ಲಿ ಕೂರ ಬಯಸಿದಾಗ ಅಧ್ಯಾಪಕರು ಒಪ್ಪದೆ ಗೊತ್ತು ಮಾಡಿದ ಬೇರೆ ಬೇರೆ ಸ್ಥಳಗಳಲ್ಲೇ ಕೂರಬೇಕೆಂದು ಹೇಳಿದಾಗ ಈ ಹಕ್ಕು ಬಾಧ್ಯತೆಯ ವ್ಯಾಜ್ಯ ಹೈ ಕೋರ್ಟಿನಲ್ಲಿ ದಾಖಲಾಗಿದಯಂತು ನಾವು ಸ್ವಲ್ಪ ದಿನಗಳ ಹಿಂದೆ ಓದಿದ್ದೇವೆ. ಅಂದಾಗ ವಿದ್ಯಾರ್ಥಿಗಳಲ್ಲಿ ಅಧ್ಯಾಪಕರ ಬಗ್ಗೆ ಯಾವ ಭಾವನೆ ತುಂಬಿದೆಯೆಂದು ಊಹಿಸಬೇಕು, ಗುರುಗಳನ್ನು ಯಾವ ದೃಷ್ಟಿಯಿಂದ ಕಾಣುತ್ತಿದ್ದಾರೆಂದು ತಿಳಿಯಬೇಕು!

ವಿದ್ಯಾರ್ಥಿಗಳಿಗಾಗಿ ತಿರಸ್ಕಾರದಿಂದ ಈ ರೀತಿ ಹೇಳುತ್ತಿಲ್ಲ. ಸೂಚನೆ ಮಾತ್ರ ಕೊಡುತ್ತಿದ್ದೇವೆ ಶಿಷ್ಯನಿಗೆ ಗುರುಗಳಲ್ಲಿ ಭಕ್ತಿ, ಗುರುಗಳಿಗೆ ಶಿಷ್ಯನಲ್ಲಿ ಪ್ರೀತಿ, ಈ ಮಧುರ ಭಾಂಧವ್ಯ ಬೆಳೆದರೇನೇ ವಿದ್ಯಾಭ್ಯಾಸವೂ ಬೆಳೆದೀತು ಇಂಥ ವಿದ್ಯಾಬ್ಯಾಸದಿಂದ ವಿದ್ಯಾರ್ಥಿಗಳಲ್ಲಿ ವಿವೇಕ, ಸಭ್ಯತೆ, ಔದಾರ್ಯ, ಕ್ಷಮೆ, ಸಂಯಮನ, ಸಚ್ಚೀಲ, ಮುಂತಾದ ಗುಣಗಳೂ ಮೂಡಿ ವ್ಯಕ್ತಿಯ ಸುಧಾರಣೆಯಿಂದ ಸಮಾಜದ ಸುಧಾರಣೆಯೂ ಆಗಬಲ್ಲದು. ಅದಕ್ಕಾಗಿ ವಿದ್ಯಾರ್ಥಿ ಜೀವನದಲ್ಲೇ ಸಾಕಷ್ಟು ಸುಧಾರಣೆ ಆಗಬೇಕಾದದ್ದು ಅಗತ್ಯವಾಗಿದೆ. ಶಾಲೆ ಕಾಲೇಜುಗಳಲ್ಲಿ ವಿದ್ಯಾರ್ಥಿಯ ಶೀಲ ವೃತ್ತಿಯ ಕಡೆಗೂ ಹೆಚ್ಚು ಗಮನಕೊಡುವ ವ್ಯವಸ್ಥೆಯಾಗಬೇಕು.

ಭಾರತೀಯ ಸಂಸ್ಕೃತಿಯ ಭಂಡಾರದಲ್ಲಿ ಸಭ್ಯತೆಯೊಂದು ಅಮೂಲ್ಯ ವಸ್ತು ಇದರಿಂದಲೇ ಇಲ್ಲಿಯ ಸಂಸ್ಕೃತಿಯ ವಿಶಾಲವಾದ ವಿಚಾರ ಭಾವನೆಗಳಿಗೂ ಆದರ್ಶವಾದ ತತ್ವ ಧೋರಣೆಗಳಿಗೂ ಸಭ್ಯತೆ ಹೆಚ್ಚು ಕಳಸ ತಂದಿತ್ತು. ಇಂಥ ಅಪೂರ್ವವಾದ ಸಭ್ಯತೆಯನ್ನು ನಾವಿಂದು ಕಳೆದುಕೊಳ್ಳುತ್ತಿದ್ದೇವೆ. ಪುರಾತನರ ಆಚಾರ ಸಂಪ್ರದಾಯಗಳಿಂದ ಸುಂದರವಾಗಿದ್ದ ನಮ್ಮಲ್ಲಿಯದನ್ನು ಮರೆಯುತ್ತಿದ್ದೇವೆ

ಉದಾಹರಣೆಗಾಗಿ ಇಂದಿನ ವಿವಾಹದ ರೀತಿಯನ್ನೆ ಆರಿಸಿಕೊಳ್ಳುವಂತಿದೆ. ದಾಂಪತ್ಯ ಜೀವನವನ್ನು ಭದ್ರವಾಗಿಸಬೇಕೆಂದು ನಮ್ಮ ಪ್ರಾಚೀನ ವಿವಾಹದ ರೀತಿಯನ್ನು ಬಿಟ್ಟು ವಯಸ್ಕ ಮತ್ತು ಸ್ವೇಚ್ಛೆಯ ವಿವಾಹಕ್ಕೆ ಹೆಚ್ಚು ಸೌಕರ್ಯಗಳನ್ನು ಒದಗಿಸಿಕೊಡಲಾಯಿತು ಆದರೆ ಇದರೊಡನೆಯೇ ದಾಂಪತ್ಯ ವಿಚ್ಛೇದನ ಕಾನೂನನ್ನು ಬಳಕೆಗೆ ತರಬೇಕಾಯಿತು ಏಕೆಂದರೆ ಗಂಡ ಹೆಂಡಿರ ವ್ಯಾಜ್ಯ ದಿನವೂ ವಿಪರೀತ ಬೆಳೆದು ವಿವಾಹದ ರೀತಿಯನ್ನು ಕಾಮ ತೃಪ್ತಿಗಾಗಿ ಮಾತ್ರವೇ ಒದಗಿಸಿಕೊಳ್ಳಲಾಯಿತೇ ಹೊರತು ಅವರ ಉಜ್ವಲವಾದ ಭವಿಷ್ಯವನ್ನು ಸಿದ್ಧಿಸಿಕೊಳ್ಳಪದಕ್ಕಾಗಿ, ಯಾವ ಗುರುಹಸು ತನ್ನ ಸ್ತ್ರೀಯನ್ನು ಅಗ್ನಿ ಸಾಕ್ಷಿಯಾಗಿ "ಮಮ ಹೃದಯೇ ಹೃದಯಂತೇ ತಿಷ್ಠ ಮಮ ಚಿತ್ತೇ ಚಿತ್ತ ಮಸ್ತುತೇ" ಎಂದ ಹೇಳಿದನೋ ಅಂಥ ಉದಾತ್ತ ದಾಂಪತ್ಯ ಜೀವನಕ್ಕೂ ಇಂದಿನ ರೀತಿಗೂ ಅದೆಷ್ಟು ವಿಷಮತೆ? ಹಾಗಿದ್ದರೂ ನಮ್ಮ ಸಂಪ್ರದಾಯದಲ್ಲಿ ನಮಗೆ ಪ್ರೀತಿ, ಆಕರ್ಷಣ ಹುಟ್ಟುತ್ತಿಲ್ಲ ವಿದೇಶೀಯರ ಸಂಸ್ಕೃತಿ ಸಭ್ಯತೆಯನ್ನೇ ನಾವು ಆಹ್ವಾನಿಸುತ್ತಿದ್ದೇವೆ

ಸಮಾಜದಲ್ಲಿ ಎಲ್ಲಿ ನೋಡಿದರೂ ಅಸಭ್ಯತೆಯೇ ಕಂಡು ಬರುತ್ತಿದೆ. ಯಾರಿಗೂ ಏನೂ ಹೇಳುವಂತಿಲ್ಲ ತಮತಮ ಸ್ಥಾನ-ಮಾನ-ಯೋಗ್ಯತೆಗಳಿಗೆ ಸರಿಯಾಗಿ ನಡೆದುಕೊಳ್ಳುವ ಪರಿವಾರ ತಪ್ಪಿಹೋಗಿ ಮನಸ್ಸೀ ಬಂದಂತೆ ವರ್ತಿಸುವದು ಕಂಡುಬರುತ್ತದೆ ರೈಲ್ವೆ-ಬಸ್ಸುಗಳ ಪ್ರಯಾಣದಲ್ಲಿ ಇದರ ಪ್ರಾತ್ಯಕ್ಷಿತೆಯ ಅನುಭವವಾಗುತ್ತದೆ ಅಸಭ್ಯ ವೃತ್ತಿಗಳ ಪ್ರಭುತ್ವವೇ ಅಲ್ಲಿ ಹೆಚ್ಚು. ಅದರಂತೆ ನಮ್ಮ ಸಮಾಜದ ಎಲ್ಲ ಕಾರ್ಯಕಲಾಪಗಳಲ್ಲೂ ಇಂಥವರೇ ಮುನ್ನುಗ್ಗಿ ಒಂದು ಸಾಮಾಜಿಕ ಚಟುವಟಿಕೆಗಳನ್ನು ಹಚ್ಚಿಸುವವರ ಒದಲು ಕುಗ್ಗಿಸುತ್ತಿದ್ದಾರೆ. ಪ್ರತಿಭಾವಂತರಿಗೆ-ಸಮರ್ಥರಿಗೆ ದೊರಕಬೇಕಾದ ಅಧಿಕಾರ ಆದರಗಳು ಇದರಿಂದ ದೊರಕುತ್ತಿಲ್ಲ. ಅತಿಕ್ಷಿತತೇ ಹೆಚ್ಚಾಗಿ ಸಮಾಜದ ಅಧಿಕಾರದ ಹೊಣೆಯನ್ನು ಆಕ್ರಮಿಸುತ್ತಿರುವಾಗ ಸಮಾಜದ ಅಧಿಕಾರದ ಹೊಣೆಯನ್ನು ಆಕ್ರಮಿಸುತ್ತಿರುವಾಗ ಸಮಾಜ ಸುಧಾರಣೆ ಹೇಗಾಗಬೇಕು?

ತಂದೆ ಮಕ್ಕಳಲ್ಲಿ - ಅಣ್ಣ - ತಮ್ಮಂದಿರರಲ್ಲಿ ಪತಿ ಪತ್ನಿಯರಲ್ಲಿ ಒಡೆಯ-ಸೇವಕರಲ್ಲಿ ಗುರು-ಶಿಷ್ಯರಲ್ಲಿ ಹಿರಿ-ಕಿರಿಯರಲ್ಲಿ ಇರಬೇಕಾದ ಸಂಬಂಧ ತಾರತಮ್ಯತೆಗಳೆಲ್ಲಾ ಮಾಯವಾಗಿ ಯಾವದೋ ಒಂದು ಸ್ವತಂತ್ರ ಭಾವನೆ ಬರಹತ್ತಿದೆ. ಇದಕ್ಕೆ ಕಾನೂನಿನ ಬೆಂಬಲವನ್ನೂ ದೊರಕಿಸಲು ಪ್ರಯತ್ನ ನಡೆಯುತ್ತಿದೆ ಇವರೊಳಗಿನ ತಂಟೆ ದಿನವೂ ಉಂಟು ಯಾರು ಯಾರಿಗೆ ವಿಧೇಯರಾಗಿರಬೇಕಾಗಿತ್ತೋ ಆ ಸಂಬಂಧವನ್ನೂ ತಿರುವು ಮುರುವಾಗಿ ಮಾಡಬೇಕಾಗಿದೆ. ಇದೇ ನಮ್ಮ ಸಭ್ಯತೆ, ಆದರ್ಶವೇ?

ಬೇಕು! ಬೇಕು! ನಮ್ಮ ಸಮಾಜವನ್ನೂ ಜಾಗ್ರತಗೊಳಿಸುವ ವಿಶಾಲವಾದ ಅಕೃತ್ರಿಮವಾದ ಸಭ್ಯತೆ ಬೆಳೆಯಬೇಕು. ಜೀವನದ ಪ್ರಗತಿಗೆ ಬಾಧಕವಾದಂಥ ದಿವ್ಯ ಭವ್ಯ ತತ್ವಗಳನ್ನು ತುಂಬಿಕೊಂಡಂಥ ಸಭ್ಯತೆ ಬೇಕು ಸಾಮಾಜಿಕ ರಂಗವನ್ನೂ ಶಾಂತಿ ಸುವ್ಯವಸ್ಥೆಗಳಿಂದ ಸುಂದರಗೊಳಿಸಿ ರಾಷ್ಟ್ರೀಯ ಮನೋವೃತ್ತಿಯನ್ನು ಸಾಧಿಸುವಂತಹ ಸಭ್ಯತೆ ಬೇಕು.

ಇದೇ ನಮ್ಮ ಸಮಾಜೋನ್ನತಿಗೆ ಬೇಕಾದ ಸಭ್ಯತೆ. ಇದೇ ಹಿತವಾದದ್ದು. ಪ್ರಿಯವಾದದ್ದು! ಪ್ರಗತಿ ಶೀಲವಾದದ್ದು!!

--ವಿಘ್ನೇಶ್ವರ ಶರ್ಮಾ



ಉಡುಪಿ ಡಿ ಮುನ್ಸೇಫ್ ಕೋರ್ಟಿನಲ್ಲಿ

ಕ್ರಮಸಂಖ್ಯೆ 113/1957.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ ಶಾಖೆಯಿಂದ ರಿಕವರಿ ಆಫೀಸರ್ M. S. ಧಂಡಾರಿ —ವಾದಿ

ಮತ್ತು

ಆರ್. ಆರ್. ಕುಂಜೂರು ಕೂಡಾ —ಪ್ರತಿವಾದಿರು

ಇವರೊಳಗೆ

ಸದರಿ 1ನೇ ಪ್ರತಿವಾದಿ ಆರ್. ಆರ್. ಕುಂಜೂರ್ ಕುಂಜೂರು ವ್ಯಾಸ್ರಾಯರ ಮಗ ಶಿವಳ್ಳಿ ಗ್ರಾಮದ ಗುಂಡಿಬೈಲು ಇವರಿಗೆ,

ಪ್ರತಿವಾದಿರು 2ನೇ ಪ್ರತಿವಾದಿಗೆ ಹಕ್ಕಿನ ಪ್ಲೇಂಟಿನಲ್ಲಿ ಕಾಣಿಸಿದ ಸ್ಥಿರಾಸ್ತಿಗಳನ್ನು ವಾದಿ ಬ್ಯಾಂಕಿ ಇಕ್ವಿಟೆಬಲ್ ಮಾರ್ಗೇಜ್ ಮಾಡಿ ವಾದಿ ಬೇಂಕಿನಿಂದ ಪ್ರಾಮಿಸರಿನೋಟುಗಳನ್ನು ಬರಕೊಟ್ಟು ವಾದಿ ಬೇಂಕಿನಿಂದ ಪಡೆದ ಸಾಲದ ಬಾಬ್ತು ಪ್ರತಿವಾದಿರಿಂದ ವಾದಿಗೆ ಬರಬೇಕಾಗಿ ಬಡ್ಡಿ ಕೂಡಾ ರೂಪಾಯಿ 4132 5-0ಕ್ಕೆ ದಾಖಲಾಗಿದೆ ಸದರಿ ವ್ಯಾಜ್ಯವು ತಾರೀಕು 9-7-57ಕ್ಕೆ ತನ್ನ ಬಗ್ಗೆ ಇತ್ಯರ್ಥಗಾಗಿಯನೆ ಆ ದಿನಕ್ಕೆ ಸದ್ರಿ 1ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉಡಪಿ ರಿಸದೆಯಿದ್ದಲ್ಲಿ 1ನೇ ಪ್ರತಿವಾದಿಯ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಯಪಡಿಸೋಣಾಗಿದೆ.

M. Damoder Kamath,
Advocate for Plff.

ಉಡುಪಿ, ತಾ. 21.6.57.

ಮಿತವ್ಯಯ

ದೇಶದ ಪ್ರಗತಿಗೆ "ಮಿತವ್ಯಯ"ವು ಮಾರ್ಗದರ್ಶನಮಾಡಲಿ

ಪ್ರಧಾನಿ ಮಂತ್ರಿ ನೆಹರೂರವರು ದೆಹಲಿಯಿಂದ ತಮ್ಮ ವಿದೇಶ ಪ್ರವಾಸ ಮತ್ತು ಕಾಮನ್‌ವೆಲ್ತ್ ಸಮ್ಮೇಳನಕ್ಕೆ ಹೊರಡುವ ವೇಳೆಯಲ್ಲಿ ಒಂದು ಮಹತ್ವದ ಬದಲಾವಣೆಯನ್ನು ಮಾಡಿ ಹೋಗಿದ್ದಾರೆ. ರಾಜ್ಯ ಸರಕಾರಗಳಿಗೆ ಅವರೊಂದು ಪತ್ರವನ್ನು ಬರೆದ, ಹೊಸ ಕಾರುಗಳನ್ನು ಕೊಳ್ಳಬಾರದೆಂದೂ, ಹಳೆಯ ಕಾರುಗಳಿಂದಲೇ ಸರಕಾರದ ಕೆಲಸಗಳನ್ನು ಸಾಗಿಸಬೇಕೆಂದೂ ಕೆಳಿಕೊಂಡಿರುವರು. ಸರಕಾರದ ಪೆಚ್ಚದಲ್ಲಿ ಅವಶ್ಯಕವಾದುದಕ್ಕಿಂತ ಅನಾವಶ್ಯಕ ಮತ್ತು ವ್ಯರ್ಥ ಖಾತೆಗಳಲ್ಲಿಯೇ ಹೆಚ್ಚು ಪೆಚ್ಚವಾಗುವುದೆಂಬ ದೂರು ಜನತೆಯ ಮನೆ ಮಾತಾಗಿ ಪರಿಣಮಿಸಿ, ಇಂದು ಅದರ ಪ್ರತಿಧ್ವನಿ ಎಲ್ಲೆಡೆಗಳಲ್ಲಿಯೂ ಪ್ರಾಪಿಸಿದೆ. ಇದರಿಂದ ಸರಕಾರವು ಸ್ತಬ್ಧವಾಗಿ ಕುಳಿತರೆ, ಜನತೆಯ ಈ ಕೂಗು ಕೇಳಿಯೂ ಕೇಳದಂತೆ ಮಾಡಿಕೊಂಡರೆ, ಜನರಲ್ಲಿ ಸರಕಾರದ ಬಗೆಗಿರುವ ಅಲ್ಪ ವಿಶ್ವಾಸವೂ ಹಾರಿಹೋಗುವುದು. ಆದುದರಿಂದ, ಜನನಾಯಕರೆಲ್ಲರೂ ಜನತೆಯ ವ್ಯಾಕುಲವನ್ನು ಅರಿತು ಈ ಸಲಹೆಯನ್ನು ಕೇಂದ್ರ ಹಾಗೂ ರಾಜ್ಯಸರಕಾರಗಳಿಗೆ ಮಾಡಿದ್ದಾರೆ.

ಶ್ರೀ ನೆಹರೂ ಸರಕಾರಿ ಪೆಚ್ಚದಲ್ಲಿ ಮಿತವ್ಯಯವನ್ನು ಸಾಧಿಸಬಹುದೆಂದು ತಿಳಿಸಿ, ಹಾಗೆ ಸಾಧಿಸಬಹುದಾದ ಹಲವಾರು ಸೂಚನೆಗಳನ್ನಿತ್ತಿರುವರೆಂದು ಸರದಿಯಾಗಿದೆ. 'ಸರಕಾರ'ವೆಂಬುದು ಬೀದಿ ಬಾಗಿಲು, ಅಲ್ಲಿ ಹೇಳುವವರು, ಕೇಳುವವರು ಯಾರೂ ಇಲ್ಲ. ನಮಗೆ ಬೇಕಾದಂತೆ-ಮನಬಂದಂತೆ ಇರಬಹುದೆಂದಿದ್ದ ಕಾಲವೊಂದಿತ್ತು. ಹಗಲಿಡೀ ಅನಾವಶ್ಯಕವಾಗಿ ದೀಪ ಖಾಕಿ ಅದರಡಿಯಲ್ಲಿ ಕೆಲಸ ಮಾಡುವುದು ಸಹಾ ಅಂತಹ ಸ್ವೇಚ್ಛಾ ವಿಹಾರಗಳಲ್ಲೊಂದು. ಅನೇಕ ಸಣ್ಣಪುಟ್ಟ ಕಾರ್ಯಗಳಲ್ಲಿ ಅಧಿಕ ಪೆಚ್ಚವಾಗುವುದು, ಅಧಿಕಾರಿಗಳ ಪಟ್ಟಂತ್ರಗಳಲ್ಲಿ ಜನಾಪ್ರಯವಾಗುವುದು ಇಂತಹ ಹಲವಾರು ಪ್ರಸಂಗಗಳನ್ನು ಉದಾಹರಿಸಬಹುದು. 'ಸರಕಾರ'ವೆಂದರೆ, ನಮ್ಮ ಮಾವನ ಮನೆ ಎನ್ನುವ ಭಾವನೆ ಅಲ್ಲಿನ ಅಧಿಕಾರಿಗಳಲ್ಲಿ ನೆಲಸಿಕೊಂಡಿದೆ.

ಖಾಸಗಿ ಸಂಸ್ಥೆಗಳಲ್ಲಿ ಇಂತಹ 'ಮಂಗತನ'ಗಳು ನಡೆಯಲಾರವು. ಅಲ್ಲಿನ ಪ್ರತಿಯೊಂದು ಕಾರ್ಯದ ಮೇಲೂ ಮಾಲಕರ ಇಲ್ಲವೆ ಅವರ ಪ್ರತಿನಿಧಿಯ ಮೇಲ್ವಿಚಾರಣೆಯಾಗುವುದು. ಒಂದು ಕಾಗದ ಬರೆಯಲು ಒಂದು 'ಡ್ರಾಫ್ಟ್' ಮಾಡಿ, ಅದು ಸರಿಯಾಗದೆ, ಅದನ್ನು ಹರಿದು, ಎರಡನೆಯದಕ್ಕೆ ಕೈಕೊಟ್ಟಿದ್ದು ಮೇಲ್ವಿಚಾರಕನಗಮನಕ್ಕೆ ಬಂದರೆ, ಉಪದೇಶಕ್ಕೆ ಮೊದಲಾಗುತ್ತದೆ: ಸ್ವಾಮಿ, ಬರೆಯಲು ಸುರು ಮಾಡುವುದಕ್ಕೆ ಮೊದಲು ಸಬ್ಬ ಆಲೋಚನೆಮಾಡಿ, ಹೀಗೇ ಎಲ್ಲರೂ ಮಾಡಿದರೆ ನಾವು ಕಾಗದದ ಕಾರ್ಖಾನೆಯೊಂದನ್ನೂ ತೆರೆಯಬೇಕಾಗಬಹುದು ಅದುದರಿಂದ...." ಆದರೆ, ಸರಕಾರಿ ಕಛೇರಿಗಳಲ್ಲಿ ಒಂದಲ್ಲ ಹತ್ತು ಹರಿದರೂ ಕೇಳುವವರಿಲ್ಲ. ಅಲ್ಲದೆ, ಕಛೇರಿಯ ಕಾಗದವನ್ನೇ ತಮ್ಮ ಸ್ವಂತಕ್ಕೂ ಉಪಯೋಗಕ್ಕೂ ಉಪಯೋಗಿಸುವ ಜನರಿಷ್ಟಿಲ್ಲ! ಇಂತಹ ಪೆಚ್ಚಗಳನ್ನು ಉಳಿಸುವುದು ಸಾಧ್ಯವಿಲ್ಲವೆ? ಸರಕಾರದ ಹಣವೇನು ಆಕಾಶದಿಂದ ಧಾರ್ಮಾರ್ಥ ವರಪ್ರಸಾದದಿಂದ ಸುರಿದುದೆ? ಜನರು ಹಗಲು ರಾತ್ರಿ ದುಡಿದು ತಾವು ಸುರಿಸಿದ ಬೆವರಿನ ಪ್ರತಿಫಲದಲ್ಲಿ ಈಯುವ ಸ್ವಲ್ಪಾಂಶತಾನೆ? ಈ ದುಡಿತದ ಹಣ ಪೋಲು ಹೋಗುವುದನ್ನು ಕಾಣುವಾಗ ಯಾರುತಾನೆ ಸುಮ್ಮನಿದ್ದಾನು?

"ಸರಕಾರಿ ಕಛೇರಿಗಳಲ್ಲಿ ಮತ್ತು ಮನೆಗಳಲ್ಲಿ ವ್ಯರ್ಥವಾಗಿ ಉರಿಸುವ ವಿದ್ಯುಚ್ಛಕ್ತಿಯನ್ನು ಉಳಿಸಲು ತಕ್ಕ ಕ್ರಮ ಕೈಗೊಳ್ಳಬೇಕು; ಪರದೇಶಗಳಿಗೆ ಕಳಿಸುವ ತಂತಿಗಳ ಮೇಲೆ ಕಣ್ಣಿಡಬೇಕು, ಕಾಗದವನ್ನು ಸಹ ಮಿತವ್ಯಯದಿಂದ ಬಳಸಬೇಕು" ಎಂದು ಶ್ರೀ ನೆಹರೂ ರಾಜ್ಯದ ಮುಖ್ಯ ಮಂತ್ರಿಗಳಿಗೆ ಬರೆದಿದ್ದಾರೆ.

"ಸರಕಾರವು ಹೇರುತ್ತಿರುವ ಕರಭಾರದಿಂದ ದೇಶದಜನರಿಗೆ ಎಷ್ಟು ತೊಂದರೆಯಾಗುತ್ತದೆಂದು ಮಂತ್ರಿಗಳುಗಮನಿಸಬೇಕು. ರಾಜಭವನದ ಪೆಚ್ಚವನ್ನು ಜಾಗರೂಕತೆಯಿಂದ ಮಾಡಿಕೊಂಡು ಸಾಕಷ್ಟು ಮಿತವ್ಯಯ ಮಾಡಬೇಕು. ಮಂತ್ರಿಗಳಿಗಾಗಿ ಅಥವಾ ಅಧಿಕಾರಿಗಳಿಗಾಗಿ ಇಲ್ಲವೇ ಇನ್ನಿತರರಿಗಾಗಿ ದೊಡ್ಡ ಬಂಗಲೆಗಳನ್ನು ಕಟ್ಟಿಸಬಾರದು. ವಿದೇಶ ವಿನಿಮಯವನ್ನೂ ಉಳಿಸುವುದು ಅತ್ಯಗತ್ಯವಾದುದರಿಂದ ವಿದೇಶಗಳಿಗೆ ಕಳಿಸುವ ಶಿಷ್ಟ ಮಂಡಳಿಗಳ ಮತ್ತು ವಿದ್ಯಾರ್ಥಿಗಳ ಬಗ್ಗೆ ಸಹ ನಾವು ಮಿತವ್ಯಯದ ದೃಷ್ಟಿಯನ್ನು ಇಟ್ಟುಕೊಳ್ಳಬೇಕು" ಎಂದು ಮುಂತಾಗಿ ಶ್ರೀ ನೆಹರೂ ತಮ್ಮ ಪತ್ರದಲ್ಲಿ ಪ್ರಸ್ತಾಪಿಸಿರುತ್ತಾರೆ. ಮತ್ತು ಇದೇ ತರದ ಸೂಚನೆಗಳನ್ನು ಕೇಂದ್ರ ಸರಕಾರಕ್ಕೂ ಇತ್ತಿದ್ದಾರೆ.

ಪ್ರಧಾನಿಗಳು ಜನತೆಯ ಮೊರೆಯಿಂದ ತಲ್ಲಣಿಸಿ ಹೋಗಿರುವಂತೆ ತೋರುತ್ತದೆ. ಮೊನ್ನೆ ಮೊನ್ನೆ ಸಂಸತ್ತಿನಲ್ಲಿ ಹೊಸ ಕರದ ಸೂಚನೆ ಬಂದಾಗ, ಅದಕ್ಕೆ ಎಲ್ಲ ಮೂಲೆಗಳಿಂದಲೂ ತೋರಿಬಂದ ನಿಷೇಧವು ಸರಿಯಾದ ಪರಿಣಾಮವನ್ನು ಮಾಡಿತು. ದೇಶದ ಜನತೆಯ ಅಂತಸ್ತಿಗನುಗುಣವಾಗಿ, ಸರಕಾರದ ಅಂತಸ್ತು, ಅದರ ಅಧಿಕಾರಿಗಳ ಅಂತಸ್ತು ಇರಬೇಕಾದುದು ನ್ಯಾಯ. ತೆರಿಗೆದಾರ ಕುಪ್ಪೆಯಲ್ಲಿ ಹೊರಳಾಡುತ್ತಿರುವಾಗ, ಆ ತೆರಿಗೆಯನ್ನು ವಸೂಲು ಮಾಡುವ ಅಧಿಕಾರಿಯು ಉಪ್ಪರಿಗೆಯ ಆರಾಮಾಸನದಲ್ಲಿ ಗಾಳಿ ತಿನ್ನುತ್ತಾ ಕೂರುವ ಕಾಲ ಕಳೆದು ಇದೀಗ ಜನತೆಗಾಗಿ ಜನರಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಸರಕಾರದ ರಚನೆಯಾಗಿದೆ. ಪ್ರಜಾಪ್ರಭುತ್ವವೆಂದು ನಾವು ಹೇಳಿಕೊಂಡ ಮಾತ್ರಕ್ಕೆ ಪ್ರಜಾರಾಜ್ಯವಾಗದು; ದೊಡ್ಡ ದೊಡ್ಡ ಯೋಜನೆಗಳನ್ನು ರೂಪಿಸಿದ ಕೂಡಲೇ ದೇಶದ ಪರಿಸ್ಥಿತಿ ಸುಧಾರಿಸಲಾರದು ಜನತೆಯ ಮೇಲೆ ಪ್ರಭುತ್ವವತ್ತಾಯವನ್ನು ಹೇರುವಂತಿದ್ದರೆ, ಅದೇ ತರ ಪ್ರಜಾರಾಜ್ಯ? ನಮ್ಮ ದೇಶದ ಸ್ಥಿತಿ ಕರಭಾರದ ದೆಸೆಯಿಂದ ಆ ಮಟ್ಟಕ್ಕೆ ಬಂದಿದೆ. ನಾವೂ, ನಮ್ಮ ಜನರು ತೆರಿಗೆ ಕೊಡುತ್ತೇನೆ-ಏಕೆ? ಕೊಡಬೇಕೆಂಬ ಇರಾದೆಯಿಂದಲ್ಲ; ಸರಕಾರದ ಅಭಿವೃದ್ಧಿ ಯೋಜನೆಯಿಂದ ದೇಶಕ್ಕೆ ಹಿತವಾಗುವುದು, ಅದಕ್ಕಾಗಿ ನಾವು ತೆರಿಗೆ ತೆರುವೆವು ಎಂಬ ಭಾವನೆ ನಮ್ಮಲ್ಲಿ ಇನ್ನೂ ಹುಟ್ಟಿಲ್ಲ. ಪುರಂದರ ದಾಸರು ತಾನು ವ್ಯಾಪಾರಿಯಾಗಿದ್ದಾಗ, ತನ್ನಲ್ಲಿಗೆ ಬೇಡಬಂದ ಬಡ ಹಾಗುವಸಿಗೆ, ಆತನ ಉಸಟಳವನ್ನು ನೀಗಿಕೊಳ್ಳಲು ದುಗ್ಗಾಣಿ ದಾನ ವೀಯುವ ಮನಸ್ಸು ಮಾಡಿದರಂತೆ ಆದು ಲಿಂಗಳ ಮೇಲೆ! ನಮ್ಮ ಸಂಗತಿಯೂ ಅದರಿಂದ ಬಹಳ ದೂರವಾಗಿಲ್ಲ. ವಸೂಲಗಾರ ಬರುತ್ತಾನೆ ಸಿಕ್ಕಿದ್ದಲ್ಲಿ ಕೇಳುತ್ತಾನೆ-ಆತನ ಉಸಟಳದಿಂದ ಖಾಲಾಗಲು ಕರತೆರುತ್ತೇವೆ—ಅನ್ನ ಆಹಾರವಿಲ್ಲದೆ ಹೊಟ್ಟೆ ಕೇಳುವುದಿಲ್ಲ, ಆ ದಿನದ ಬಗ್ಗೆ ಬೇಕಾದುದಕ್ಕಿಂತ ಕಡಿಮೆಯಾಗಿದೇ ನಾವು ಧಾನ್ಯ ತರುತ್ತೇವೆ-ಇದು ಭಾರತೀಯರ ದಿನ ನಿತ್ಯದ ಸಹವಾಟು.

ಇಂತಹ ಬಡದೇಶದ ಸರಕಾರವು ಅನ್ಯರ ಸರಿಪೆಯಿಲ್ಲದೆ ಜನತಾ ಧನವನ್ನು ಹಾಳು ಮಾಡುವುದು ಸಲ್ಲದು. ವಿಧಾನ ಸೌಧವನ್ನು ಒಂದು ಕಾಲದಲ್ಲಿ ಕಟ್ಟಿಸಲ್ಪ ಅನುಮತಿಯಿತ್ತ ಸದಸ್ಯರೇ ಇನ್ನೊಂದು ಕಾಲದಲ್ಲಿ ಕಟ್ಟಿಸಿದ ಸೌಧವನ್ನು ಹಿಗಳೆಯಲೆಳಸಿದರು. ಕೇಂದ್ರ ಹಾಗೂ ರಾಜ್ಯಸರಕಾರಗಳ ಗಮನವು ಮಿತವ್ಯಯದತ್ತ ಹೊರಳಿದೆ. ಬೆಂಗಳೂರಲ್ಲಿ ಮೈಸೂರ ಮಂತ್ರಿಗಳು ದುಂದು ವೆಚ್ಚ ಮಾಡತ್ತಿಲ್ಲ ಎಂದು ಅರ್ಧ ಮಂತ್ರಿಗಳು ವಿಧಾನ ಸಭೆಯಲ್ಲಿ ಜಾಹೀರ ನಾಡಿದ್ದಾರೆ. "ಮೈಸೂರ ಮಂತ್ರಿಗಳು ತಮ್ಮ ಭತ್ತೆಯನ್ನು ರೂ. ೨೫೦ರಿಂದ ೨೦೦ಕ್ಕೆ ಇಳಿಸಿದ್ದಾರೆ. ಅವರಿಗೆ ಕೊಡುವ ಮೈಲೇಜು ಭತ್ತೆಯನ್ನು ೮ ಆಣೆಗಳಿಂದ ೬ ಆಣೆಗಳಿಗೆ ಇಳಿಸಲಾಗಿದೆ. ಅದರಂತೆ ಯೇ ದೈನಂದಿನ ಭತ್ತೆಯನ್ನು ರೂ. ೨೫ರಿಂದ ರೂ. ೧೦ಕ್ಕೆ ಇಳಿಸಲಾಗಿದೆ. ಮಂತ್ರಿಗಳ ವಾಸಸ್ಥಳದಲ್ಲಿ ವಿದ್ಯುತ್ತಿನ ವೆಚ್ಚವು ನಿಶ್ಚಿತ ಪ್ರಮಾಣಕ್ಕಿಂತ ಅಧಿಕವಾದರೆ, ಅದನ್ನು ಅವರೇ ತೆರಬೇಕಾಗುವುದು. ಸ್ವಾಗತಕ್ಕಾಗಿ ಮಂಟಪ, ಸತ್ಕಾರ ಸಮಾರಂಭಗಳನ್ನು ನಿರಾಕರಿಸಲಾಗಿದೆ. ಮತ್ತು ಕಾಪಲಪದ್ಧತಿಯನ್ನು ಬಿಟ್ಟು ಕೂಡಲಾಗಿದೆ" ಎಂದು ಅವರು ತಾವು ಅವಶ್ಯಕ ಪ್ರಮಾಣದಲ್ಲಿಯೇ ವೆಚ್ಚವನ್ನು ಮಾಡುತ್ತಿದ್ದೇನೆಂಬುದನ್ನು ಸಮರ್ಥಿಸಿಕೊಂಡರು.

ಮಧ್ಯಪ್ರದೇಶ ಸರಕಾರವು ತನ್ನ ಮಂತ್ರಿ ಹಾಗೂ ಉಪಮಂತ್ರಿಗಳ ಸಂಬಳದಲ್ಲಿ ಸೇಕಡಾ ೧೧ರಷ್ಟು ಕಡಿತಮಾಡಿಕೊಂಡಿದ್ದಾನೆ. ತಮ್ಮ ಕಾವಲಿನ ಪೋಲೀಸಪಡೆಯನ್ನು ರದ್ದುಗೊಳಿಸಿ ಸುಮಾರು ೧೫ ಲಕ್ಷ ವಾರ್ಷಿಕ ವೆಚ್ಚವನ್ನುಳಿಸಲು ನಿಶ್ಚಯಿಸಿದ್ದಾರೆ. ಆರ್ಥಿಕ ಮಿತವ್ಯಯವನ್ನು ಸಾಧಿಸುವ ಸಲಹೆಮಾಡಲು ಒಂದು ಸಮಿತಿಯ ನೇಮಕವಾಗುವ ನಿರೀಕ್ಷೆಯಿದೆ

ಪಂಜಾಬದ ರಾಜ್ಯಪಾಲರು ರಾಜಧಾನಿಯಲ್ಲಿ ಸರಕಾರೀ ಕಾರ್ಯಕಲಾಪಗಳಿಗಾಗಿ ಕಟ್ಟಿಸಬೇಕೆಂದಿದ್ದ ಭವನವೊಂದನ್ನು ನಿರ್ಮಿಸಲು ಪೂರ್ವನಿಶ್ಚಯವಾಗಿದ್ದರೂ, ಸದ್ಯ ಆರ್ಥಿಕ ಅಭಾವವಿರುವ ಈ ಸಮಯದಲ್ಲಿ ಕಟ್ಟಬಾರದೆಂದು ತಡೆಯಾಜ್ಞೆ ಇತ್ತಿದ್ದಾರೆ. ಇದೇ ರೀತಿಯಲ್ಲಿ ಇನ್ನೂ ಕೆಲವು ರಾಜ್ಯ ಸರಕಾರಗಳು ಆರ್ಥಿಕ ಮಿತವ್ಯಯವನ್ನು ಸಾಧಿಸಲು ಮನಸ್ಸು ಮಾಡಿ ಮುಂದೆ ಬಂದದು ಒಂದು ಶುಭ ಸೂಚನೆ. ಹೀಗೆಯೇ ಎಲ್ಲಾ ಸರಕಾರಗಳೂ ಮಾಡಿಕೊಂಡು, ಜನತೆಯ ಮೇಲೆ ಸವಾರಿ ಮಾಡದೆ, ಅವರ ಸಂಕಷ್ಟಗಳನ್ನರಿತು ಅದರ ಪರಿಹಾರಕ್ಕೆ ಯತ್ನಿಸುವುದು ತೀರಾ ಅಗತ್ಯ.

ಸರಕಾರದ ಕಾರ್ಯಕಲಾಪಗಳು ನಿರಾಡಂಬರವಾಗಿ ಸರಳವಾಗಿ, ಭಾರತೀಯ ಪದ್ಧತಿಯಲ್ಲಿಯೇ ಮುನ್ನಡೆದಲ್ಲಿ ಸರಕಾರದ ವೆಚ್ಚದಲ್ಲಿಯೂ ಮಿತವ್ಯಯವನ್ನು ಸಾಧಿಸುವುದು ಸಾಧ್ಯ. ಅವಶ್ಯಕ ವೆಚ್ಚಗಳನ್ನು ಜಾಗರೂಕತೆಯಿಂದ ಮಾಡಿ, ಜನತೆಯ ದೃಷ್ಟಿಯನ್ನು ಒಲಿಸಿಕೊಂಡು, ಜನತಾ ಸರಕಾರವಾಗಿ ನಮ್ಮ ಸರಕಾರವು ಬಾಳುವಂತಾಗಲಿ! ಅದೇ ಪ್ರತಿಯೊಬ್ಬ ದೇಶ ಪ್ರೇಮಿಯ ಮನವಾರಯ.

—ಎಸ್. ಗೋಪಿ ಚಂದ ರಾವ್,
ಉಡುಪಿ.

Mahatma Gandhi Memorial College, Udipi.
(Affiliated to Karnatak University.)

* *

The College offers instruction in the following courses.—

I. PRE-UNIVERSITY (One Year Course) in Arts, Science and Commerce.

II. FIRST YEAR OF THE THREE YEAR-DEGREE COURSES: in Arts (B. A.), Science (B. Sc.) and Commerce (B. Com.). (open to those who have passed the Pre-University or the first year course of a recognized College). Candidates may choose either Group A. (Mathematics, Physics and Chemistry) or Group B. (Physics, Chemistry and Biology) in the First year course in SCIENCE. All students have to seek re-admission to the second year of the 3-year courses after passing their first year.

III. TWO YEAR DEGREE COURSES: (Open to those who passed the Intermediate).
(a) B A. Economics Main, History (subsidiary).
(b) B Com. with Co-operation as a special subject.

Apply early for admission. Forms available at the College Office.
Regular work for new admissions will commence from 3rd July, '57.

UDIPI: H. Sunder Rao, M. A.,
24th June, 1957. Principal.

ಜಲಮಾರ್ಗ ಯೋಜನೆ

ಪೂರ್ವದ ಕಲಕತ್ತೆಯನ್ನು ಪಶ್ಚಿಮದ ಮಂಗಳೂರಿಗೆ ಜೋಡಿಸಬಹುದು

ಭಾರತದಲ್ಲಿ ಒಳದೇಶದ ಜಲ ಮಾರ್ಗವು ಸುಮಾರು ೨೭೬೦ ಮೈಲಿಗಳಷ್ಟಿರುತ್ತದೆ. ಇದರಲ್ಲಿ ೩೦೦೦ ಮೈಲು ನದಿಯ ದಿದ್ದು ಉಳಿದುದು ಕಾಲುವೆ ಹಾಗೂ ಮಲಬಾರ ಕರಾವಳಿಯ ಒತ್ತಡ ಪ್ರದೇಶವಾಗಿರುತ್ತದೆ. ನದಿಜಲ ಮಾರ್ಗದ ೩೦೦೦ ಮೈಲುಗಳಲ್ಲಿ ಗಂಗಾ ಮತ್ತು ಬ್ರಹ್ಮಪುತ್ರಾ ನದಿಮಾರ್ಗ ೧೫೨೦ ಮೈಲು ಉದ್ದವಿದ್ದು ಅದರಲ್ಲಿ ದೊಡ್ಡ ಉಗಿಹಡಗುಗಳು ಸಹ ಓಡಾಡುತ್ತವೆ. ಉಳಿದ ಜಲ ಮಾರ್ಗಗಳಲ್ಲಿ ಚಿಕ್ಕ ದೋಣಿಗಳು ಮಾತ್ರ ಹೋಗಬಹುದು. ಸಮುದ್ರ ತೀರದಲ್ಲಿ ಸಮುದ್ರ ಉಕ್ಕೇರಿದಾಗ, ಆಗ ಬಹುದಾದ ಜಲಮಾರ್ಗದ ಉದ್ದಳತೆಯನ್ನು ಇದರಲ್ಲಿ ಸೇರಿಸಿರುವುದಿಲ್ಲ.

ಆದರೆ ರೈಲ್ವೆಗಳು ಪ್ರಾರಂಭವಾದಾಗಿನಿಂದ ಜಲಮಾರ್ಗಗಳು ಅಲಕ್ಷಿಸಲ್ಪಟ್ಟಿದ್ದು ಈಗ ಕೆಲವು ನಿರುಪಯುಕ್ತವಾಗಿರುತ್ತವೆ. ಪುನಃ ಅವುಗಳಲ್ಲಿ ದೋಣಿಗಳು ಚಲಿಸುವಂತಾಗಬೇಕಾದರೆ, ಅವುಗಳನ್ನು ದುರಸ್ತಿ ಮಾಡಿಸಬೇಕಾಗುವುದು. ಈಗ ಗಂಗಾ ಮತ್ತು ಬ್ರಹ್ಮಪುತ್ರಾ ನದಿಯಲ್ಲಿ ಮಾತ್ರ ದೋಣಿಗಳು ಓಡಾಡುತ್ತವೆ. ನರ್ಮದಾ, ಗೋದಾವರಿ, ಕೃಷ್ಣಾ ಮತ್ತು ತಾಪಿ ನದಿಗಳನ್ನು ಗಂಗೆಯಂತೆಯೇ ಜಲಮಾರ್ಗವೆಂದು ಉಪಯೋಗಿಸುವುದು ಸಾಧ್ಯವಿದೆ. ಆದರೆ ಅವುಗಳನ್ನು ಚೆನ್ನಾಗಿ ಪರಿಶೀಲಿಸಿಲ್ಲ. ಕೆಲವೇ ಮೈಲುಗಳಷ್ಟು ಮಾತ್ರ ಜಲಮಾರ್ಗವೆಂದು ಉಪಯೋಗಿಸಲಾಗುತ್ತಿದೆ. ಮಳೆಗಾಲದಲ್ಲಿ ನೀರನ್ನು ಸಂಗ್ರಹಿಸಿ ಬೇಸಗೆಯಲ್ಲಿ ಸಹ ನದಿ ಹರಿಯುವಂತೆ ಮಾಡಿದರೆ ನದಿಗಳನ್ನು ಹೆಚ್ಚೆಚ್ಚು ಸಾರಿಗೆಗೆ ಉಪಯೋಗಿಸಬಹುದು.

ಭಾರತದಲ್ಲಿ ಜಲಮಾರ್ಗ ಹೆಚ್ಚಿಸುವುದಕ್ಕೆ ಬಹಳ ಅನುಕೂಲತೆಯಿರುತ್ತದೆ. ಭಾರತ ಭೂಪ್ರದೇಶದ ಅಭ್ಯಾಸದ ನಂತರ ಪಶ್ಚಿಮ ಹಾಗೂ ಪೂರ್ವ ಕರಾವಳಿ ಜೋಡಿಸುವುದು ಶಕ್ಯವೆಂದು ಕಂಡುಬಂದಿದೆ. ಆ ಕ್ರಮ ಹೀಗಿರುತ್ತದೆ: ನರ್ಮದಾ, ಚಂಬಲ್, ಸೋನಾ, ಹಾಗೂ ಕೇನ ನದಿಗಳಲ್ಲಿ ವಿವಿಧೋದ್ದೇಶದ ಅಣೆಕಟ್ಟುಗಳನ್ನು ಕಟ್ಟಿ, ನರ್ಮದೆಯನ್ನು ಗಂಗೆಗೆ ಜೋಡಿಸಬಹುದು. ಅದೇ ರೀತಿ ವೈನ ಗಂಗೆಯ ಮೂಲಕ ನರ್ಮದೆಯನ್ನು ಗೋದಾವರಿಗೆ ಕೂಡಿಸಬಹುದು. ಹಾಗೆಯೇ ತಾಪಿಯನ್ನು ಗೋದಾವರಿಗೆ ಸೇರಿಸಬಹುದು. ಇದಕ್ಕಾಗಿ ಅಣೆಕಟ್ಟುಗಳನ್ನು ವೇಯರ ಮತ್ತು ಲಾಕಗಳನ್ನು ಕಟ್ಟಬೇಕಾಗಬಹುದು. ಈ ಜಲಮಾರ್ಗಗಳನ್ನು ರಚಿಸಿದರೆ, ಪೂರ್ವಕರಾವಳಿಯನ್ನು ಪಶ್ಚಿಮಕರಾವಳಿಗೆ ಜೋಡಿಸಿದಂತಾಗುತ್ತದೆ.

ಈಗಿರುವ ೨೭೬೦ ಮೈಲುದ್ದದ ಜಲಮಾರ್ಗದಲ್ಲಿ ಬಹುಭಾಗ ಕೆಟ್ಟಿದ್ದು ಅವುಗಳು ಪೂರ್ಣ ದುರಸ್ತಿಯಿಲ್ಲದೆ ಯಾಂತ್ರಿಕ ದೋಣಿಗಳನ್ನು ನಡೆಸುವುದು ಸಾಧ್ಯವಿಲ್ಲ.

ಇದಲ್ಲದೆ ಸಮುದ್ರ ಕರಾವಳಿಗುಂಟ ಕೆಲ ಉಪ್ಪುನೀರಿನ ಕಾಲುವೆಗಳಿರುತ್ತವೆ. ಅವುಗಳಲ್ಲಿ ಪಶ್ಚಿಮ ಬಂಗಾಲದ ಹಿಜಲಿ ಕಾಲುವೆ, ಒಡಿಸಾ ಕರಾವಳಿ ಕಾಲುವೆ, ಆಂಧ್ರ ಪ್ರದೇಶ ಹಾಗೂ ಮದ್ರಾಸದ ಬಕಿಂಗ್ಹಾಮ ಮತ್ತು ವೇದಾರಣ್ಯ ಕಾಲುವೆ ಕೇರಳ ಮತ್ತು ಮೈಸೂರಿನ ಪಶ್ಚಿಮ ಕರಾವಳಿ ಹಾಗೂ ಸಮುದ್ರ ಒತ್ತಡದ ಮಾರ್ಗಗಳು ಮುಖ್ಯವಾದುವುಗಳು. ಈ ಮಾರ್ಗಗಳಲ್ಲಿ ಸಾಕಷ್ಟು ಸರಕು ಸಾರಿಗೆ ನಡೆಯುತ್ತಿದೆ. ಒಡಿಸಾ ಕರಾವಳಿ ಕಾಲುವೆಯೊಂದನ್ನು ಬಿಟ್ಟರೆ, ಉಳಿದುವು ಸುಸ್ಥಿತಿಯಲ್ಲಿವೆ. ಇದಲ್ಲದೆ ಒಡಿಸಾದಲ್ಲಿ ಮಹಾನದಿ ಮತ್ತು ಆಂಧ್ರದ ಗೋದಾವರಿ ಹಾಗೂ ಕೃಷ್ಣಾ ನದಿಯಲ್ಲಿ ಕೆಲವು ನೀರಾವರಿ ಸಾರಿಗೆ ಕಾಲುವೆಗಳಿದ್ದು, ಅವು ಕರಾವಳಿಯ ಕಾಲುವೆಗಳಿಗೆ ಜೋಡಿಸಲ್ಪಟ್ಟಿರುವುವು. ಇವುಗಳ ಮಧ್ಯೆ ಮತ್ತೆ ಕೆಲವು ಕಾಲುವೆಗಳನ್ನು ಆಗೆದು ಕಲಕತ್ತೆಯನ್ನು ಆಟಕ ಮಾರ್ಗವಾಗಿ ಮದ್ರಾಸಕ್ಕೆ ಕೂಡಿಸಬಹುದು. ಹಾಗೆಯೇ ಆ ಕಾಲುವೆಯನ್ನು ಮುನ್ನೂರು ಮೈಲು ಹೆಚ್ಚಿಸಿ ಕನ್ಯಾಕುಮಾರಿ ಭೂಶಿರದ ಪೂರ್ಣವಾಗಿ ಪಶ್ಚಿಮ ಕರಾವಳಿಗೆ ಜೋಡಿಸಬಹುದು. ಅಲ್ಲಿದ್ದ ಈ ಜಲಮಾರ್ಗವನ್ನು ಮಂಗಳೂರದವರೆಗೂ ವಿಸ್ತರಿಸಬಹುದು. ಈ ಕ್ರಮದಲ್ಲಿ ಹಳೆಯ ಕಾಲುವೆಗಳ ಜೀರ್ಣೋದ್ಧಾರ ಮಾಡುವುದೂ ಅವಶ್ಯವಿರುತ್ತದೆ. ಕರಾವಳಿಯ ಈ ಕಾರ್ಯ ಕಾರ್ಯಗತವಾದರೆ ಅದು ಬಂಗಾಳ, ಒಡಿಸಾ, ಆಂಧ್ರ ಮತ್ತು ಮದ್ರಾಸದಲ್ಲಿಯ ಎಲ್ಲ ಪೂರ್ವಾಭಿಮುಖ ನದಿಗಳನ್ನೂ ಪೂರ್ವಕರಾವಳಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮಂಗಳೂರು ವರೆಗಿನ ಎಲ್ಲ ಬಂದರಗಳನ್ನೂ ಕೂಡಿಸುತ್ತವೆ ಇದರಿಂದ ಪಶ್ಚಿಮ ಬಂಗಾಲ, ಒಡಿಸಾ, ಆಂಧ್ರ, ಮದ್ರಾಸ, ಕೇರಳ ಹಾಗು ಮೈಸೂರಿನ ಕೇಂದ್ರಗಳಲ್ಲಿ ಸಂಪರ್ಕ ಹೆಚ್ಚಾಗುವುದು.

ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂಡಲವು ಇದಕ್ಕಾಗಿ ಒಂದು ಮಹಾ ಯೋಜನೆಯನ್ನು ಪರಿಶೀಲನೆಗಾಗಿ ಸಿದ್ಧಪಡಿಸಿರುತ್ತದೆ. ಅವುಗಳಲ್ಲಿ ಈ ಕೆಳಗಿನವು ಮುಖ್ಯವಾಗಿರುತ್ತವೆ–

(೧) ಗಂಗಾನದಿಯ ಕಾಲುವೆಗಳನ್ನು ಪಶ್ಚಿಮಕ್ಕೆ ಹರಿಯುವ ನರ್ಮದಾ ನದಿಗೆ ಕೂಡಿಸುವುದು. ಇದರಿಂದ ಪೂರ್ವ ಮತ್ತು ಪಶ್ಚಿಮ ಕರಾವಳಿಗಳು ಒಂದಾಗುತ್ತವೆ.

(೨) ನರ್ಮದಾ ನದಿಯನ್ನು ಕಾಲುವೆಗಳಿಂದ ಗೋದಾವರಿ ನದಿಗೆ ಸೇರಿಸುವುದು.

(೩) ಗೋದಾವರಿಯನ್ನು ಅದರ ಉಪನದಿಯಾದ ವರ್ಧಾ ನದಿಯ ಮೂಲಕ ತಾಪೀ ನದಿಗೆ ಜೋಡಿಸುವುದು.

(೪) ಗಂಗಾನದಿಯ ಶಾಖೆಗಳಾದ ಸೋನಾ ಹಾಗೂ ಹಿಂದ ಮತ್ತು ಮಹಾನದಿಯ ಶಾಖೆ ಹಸದೋ ಇವುಗಳ ಮೂಲಕ ಗಂಗಾನದಿಯನ್ನು ಒಡಿಸಾದಲ್ಲಿರುವ ಮಹಾನದಿಗೆ ಕೂಡಿಸುವುದು.

(೫) ಕಟಕ, ಮದ್ರಾಸ ಕನ್ಯಾಕುಮಾರಿ ಭೂಶಿರ ಮಾರ್ಗವಾಗಿ ಕಲಕತ್ತೆಯಿಂದ ಮಂಗಳೂರ ವರೆಗೆ ಒಳನಾಡಿನ ಕಾಲುವೆ ರಚನೆ.

ಪೂರ್ವ ಮತ್ತು ಪಶ್ಚಿಮಾಭಿಮುಖ ನದಿಗಳನ್ನು ಜೋಡಿಸುವ ಕುರಿತು ಪ್ರಾರಂಭಿಕ ಪರಿಶೀಲನೆ ನಡೆಸಲು ಕೇಂದ್ರ ನೀರಾವರಿ ಹಾಗೂ ವಿದ್ಯುಚ್ಛಕ್ತಿ ಮಂಡಳವು ೮,೫೦,೦೦೦ ರೂಪಾಯಿ ವೆಚ್ಚದ ಅಂದಾಜನ್ನು ತಯಾರಿಸಿರುತ್ತದೆ. ಇದರಲ್ಲಿ ಕಂಡು ಬರುವ ಅಂಶಗಳು ವ್ಯಾವಹಾರಿಕವೆಂದು ತೋರಿ ಬಂದ ಮೇಲೆ ಉಳಿದ ಅಂಶಗಳನ್ನು ಪರಿಶೀಲನೆಗೆ ತೆಗೆದುಕೊಂಡು ಯೋಜನೆಯನ್ನು ಪೂರ್ಣಗೊಳಿಸಲಾಗುವುದು. ಪ್ರಾಸ್ತಾವಿಕ ಪರಿಶೀಲನೆಯಲ್ಲಿ ಬೇರೆ ಮಾರ್ಗಗಳೂ ಗಮನಕ್ಕೆ ಬರುವ ಸಂಭವವಿರುತ್ತವೆ. ಅಂಥ ವಿಚಾರಗಳನ್ನು ಆ ಮೇಲೆ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

ದಿವಂಗತ ಸರ್. ಆರ್ಥರ ಕಾಟನರು ಇಂಥ ಜಲಮಾರ್ಗಗಳ ಯೋಜನೆಯ ಕನಸೊಂದನ್ನು ಹಿಂದಿನ ಶತಮಾನದಲ್ಲಿಯೇ ಕಂಡಿದ್ದರು. ಅವರು ೧೮೭೪ರಲ್ಲಿ ಚಥ್ಯಾಮದ ಮಿಲಿಟರಿ ಇಂಜಿನಿಯರಿಂಗ ಶಾಲೆಯಲ್ಲಿ ಭಾರತದ ಜಲಮಾರ್ಗಗಳನ್ನು ಕುರಿತು ಮನನೀಯ ಭಾಷಣ ಮಾಡಿದ್ದರು. ಭಾರತವು ಈಗ ಸಿದ್ಧಪಡುತ್ತಿರುವ ಮಹಾ ಯೋಜನೆಯು ಸಹ ಅವರ ಕೆಲ ಸೂಚನೆಗಳನ್ನು ಅನುಸರಿಸಿರುತ್ತದೆ. ನದಿ ಇಂಜಿನಿಯರಿಂಗ ವಿದ್ಯೆಯ ಪ್ರಗತಿಯ ಮೂಲಕ ಎಂಭತ್ತು ವರ್ಷಗಳ ಹಿಂದಿನ ಸೂಚನೆಗಳು ಇಂದು ಹಗುರವಾಗಿ ಕಾಣುತ್ತಿವೆ. ಆದರೆ ಈ ಯೋಜನೆಗಳು ವ್ಯಾವಹಾರಿಕವೆಂದು ಕಂಡುಹಿಡಿಯಲು ದೀರ್ಘ ಪರಿಶೀಲನೆಯ ಅವಶ್ಯವಿದೆ. ಪರಿಶೀಲನೆಗೇ ಬಹಳ ಹಣ ಮತ್ತು ಸಮಯ ವೆಚ್ಚ ಮಾಡಬೇಕಾಗುವುದು.

(ಸಂಯುಕ್ತ ಕರ್ನಾಟಕದಿಂದ)

ರಾಷ್ಟ್ರಾಧ್ಯಕ್ಷರಿಂದ ಈ ವರ್ಷದ ಅತ್ಯುತ್ತಮ ಚಿತ್ರವೆಂದು ಪರಿಗಣಿಸಲ್ಪಟ್ಟು ಬಹುಮಾನವನ್ನು ಪಡೆದ ಬಂಗಾಳಿ ಭಾಷೆಯ ಕಾಬೂಲಿವಾಲಾ ಚಿತ್ರವನ್ನು ನಿರ್ಮಿಸಿದ ಶಂಡವನ್ನು ಈ ಚಿತ್ರದಲ್ಲಿ ಕಾಣಬಹುದು. ನಿರ್ಮಾಪಕ ಶ್ರೀ ಅಸಿತ್ ಚೌಧರಿ, ನಿರ್ದೇಶಕ ಶ್ರೀ ತಪನ್‌ಸಿನ್ಹ, ಬೇಬಿ ತಿನಶು ಟಾಕೂರ್ ಮತ್ತು ಶ್ರೀಮತಿ ಮಂಜೂಷೇ.

5 ಹೆಚ್ಚಿಗೆ ಶಾಖೆಗಳು
ನಿಮ್ಮ ಸೇವೆಗಾಗಿ
ಇತ್ತೀಚೆಗೆ ತೆರೆಯಲ್ಪಟ್ಟಿರುವುವು
ವಾರಂಗಲ್ ಆಂಧ್ರ ರಾಜ್ಯ
ಉಲ್ಹಾಸ್‌ನಗರ್ ಬೊಂಬಾಯಿ ರಾಜ್ಯ
ಶೀಘ್ರದಲ್ಲಿಯೇ ತೆರೆಯಲಾಗುವುವು
ಗುಲ್ಬರ್ಗ ಮೈಸೂರು ರಾಜ್ಯ
ಮಡಕೇರಿ ಮೈಸೂರು ರಾಜ್ಯ
ದಾದರ್ ಬೊಂಬಾಯಿ ನಗರ
ವಿಶ್ವದಾದ್ಯಂತದ ಬ್ಯಾಂಕಿಂಗಿಗೆ
ಕೆನರಾ ಬ್ಯಾಂಕ್ ಲಿಮಿಟೆಡ್
ಸ್ಥಾಪನೆ: 1906

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction Madras.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೨೭-೬-೧೯೫೭	೪೨

ಇದೇಕೆ ಹೀಗೆ?

ಮೈಸೂರು ಸರಕಾರವು ಈಗ ಭೂ ಸಂಬಂಧದ ಶಾಸನಗಳ ರಚನೆಯ ಬಗ್ಗೆ ತಕ್ಕ ಶಿಫಾರಸುಗಳನ್ನು ಮಾಡಲು ಜತ್ತಿ ಸಮಿತಿಯನ್ನು ನೇಮಿಸಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಇಂಥದೊಂದು ಸಮಿತಿಯ ಅಗತ್ಯವಾದರೂ ಏನಿತ್ತೊ ತಿಳಿಯದು. ನಮಗೆ ಈ ಬಗೆಯ ಸಮಿತಿಗಳ ತಿರುಗಾಟವನ್ನು ನೋಡಿ ನೋಡಿ, ಕೇಳಿ ಕೇಳಿ, ಸಾಕಾಗಿದೆ. ಜನಾಭಿಪ್ರಾಯವನ್ನು ತಿಳಿದುಕೊಳ್ಳುವ ಸಲುವಾಗಿ ಈ ಬಗೆಯ ಸಮಿತಿಗಳ ರಚನೆ ಮತ್ತು ಸಂಚಾರ ಅಗತ್ಯವೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ; ಜೊತೆಗೆ ಉದ್ದಿಷ್ಟ ವಿಷಯದ ನಿರ್ವಿಕಾರ ಮಥನ ಮಾಡಿ, ತೀರ ನ್ಯಾಯವಾದ ಸಿಫಾರಸುಗಳನ್ನು ಮಾಡುವುದಕ್ಕೂ ಇಂಥ ಸಮಿತಿಗಳು ಸಹಾಯಕಾರಿ ಎನ್ನುವುದನ್ನು ಕೇಳುತ್ತೇವೆ. ಆದರೆ ಈ ಸಮಿತಿಯವರು ಕಾಣುವ ಜನರೆಷ್ಟು? ಸಂಘಗಳ ಸಂಖ್ಯೆ ಎಷ್ಟು? ಈ ಜನರೂ ಸಂಘಗಳೂ ಭೂ ಸುಧಾರಣೆಯಲ್ಲಿ ಅವಶ್ಯವಾದ ಒಂದು ಪಕ್ಷವೆನಿಸಿದ ಭೂರಹಿತ ಕೆಲಸಗಾರರನ್ನು ಹಾಗೂ ಅದಕ್ಕಿಂತ ಹೆಚ್ಚಾಗಿ ಸಾಗುವಳಿದಾರ ಒಕ್ಕಲುಗಳನ್ನು ಎಷ್ಟರ ಮಟ್ಟಿಗೆ ಪ್ರತಿನಿಧಿಸುತ್ತವೆಂದು ಭಾವಿಸಬಹುದೋ ತಿಳಿಯದು. ಭೂಮಾಲಿಕರಲ್ಲಿ ನೂರಕ್ಕೆ ತೊಂಭತ್ತರಷ್ಟು ಮಂದಿ ಜತ್ತಿ ಸಮಿತಿಯ ಮುಂದೆ ತಮ್ಮ ವಾದವನ್ನು ಮಂಡಿಸಿದ್ದಾರೆಂದು ಲೆಕ್ಕ ಹಾಕಿದರೆ, ಒಕ್ಕಲುಗಳ ವರವಾಗಿ ವಾದವನ್ನು ಮಂಡಿಟ್ಟವರ ಪ್ರಮಾಣವು ನೂರಕ್ಕೆ ಹತ್ತೂ ಇದ್ದಿರಲಾರದು. ಆದುದರಿಂದ ಜತ್ತಿ ಸಮಿತಿಯು ಜನಾಭಿಪ್ರಾಯವನ್ನು ತಿಳಿದುಕೊಳ್ಳಲು ಸಂಚಾರದಿಂದ ಸಮರ್ಥವಾಗಿದೆ ಎಂದು ಭಾವಿಸುವುದಕ್ಕೆ ಎಡೆ ಇಲ್ಲ. ಇನ್ನು ಆದೊಂದೇ ನಿರ್ವಿಕಾರ ತೀರ್ಮಾನಗಳನ್ನು ಕೊಡಬಲ್ಲುದೆಂಬ ಸಂಗತಿಯೂ ಒಪ್ಪುವಂಥದಲ್ಲ-ನಾವು ಈ ಬಗೆಯ ಅನೇಕ ಸಮಿತಿಗಳಲ್ಲಿ ಬಹುಮತದ ತೀರ್ಮಾನವೊಂದು; ಬೇರೆ ಕೆಲವರ ಭಿನ್ನಾಭಿಪ್ರಾಯದ ಟಿಪ್ಪಣಿಗಳ ಧ್ವನಿಯೇ ಬೇರೊಂದು-ಇದ್ದುದನ್ನು ನೋಡಿದ್ದೇವೆ. ಅದಲ್ಲದೆ, ಈ ಸಮಿತಿಯು ಏನೇ ತೀರ್ಮಾನಕ್ಕೆ ಬಂದರೂ ಅದನ್ನು ಮಂತ್ರಿ ಮಂಡಳವು ಪುನಃ ಪರಿಶೀಲಿಸಲೇ ಬೇಕಾಗಿದೆ; ಮತ್ತು ಶಾಸನಾಂಗದ ಮುಂದೆ ತಕ್ಕ ಶಾಸನವನ್ನು ಮಂಡಿಸುವ ಜವಾಬ್ದಾರಿ ಮಂತ್ರಿಮಂಡಳದ್ದೇ ಆಗಿದೆ. ನಮ್ಮ ಮಂತ್ರಿಮಂಡಳಗಳಿಗೆ ನಿರ್ವಿಕಾರ ತೀರ್ಮಾನಗಳನ್ನು ಕೈಗೊಳ್ಳುವ ಶಕ್ತಿ ಇಲ್ಲವೆಂದು ಊಹಿಸುವುದು ಹಿತವಾಗಲಾರದು. ಹೀಗಿರುತ್ತಾ ಜತ್ತಿ ಸಮಿತಿಯಾಗಲೀ ಅಥವಾ ಯಾವುದೇ ಬೇರೆ ಸಮಿತಿಯಾಗಲೀ ತಮ್ಮ ಸಿಫಾರಸನ್ನು ಮಂಡಿಸಿದ ಬಳಿಕವೇ ಮಂತ್ರಿಮಂಡಳವು ಒಂದು ನಿರ್ಧಾರಕ್ಕೆ ಬರಬೇಕಾದ ಅಗತ್ಯವೇನೂ ಕಾಣುವುದಿಲ್ಲ. ಮಂತ್ರಿಮಂಡಳಕ್ಕೆ ಯೋಗ್ಯ ಮಾರ್ಗದರ್ಶನವನ್ನು ಮಾಡುವುದು ಈ ಸಮಿತಿಯ ರಚನೆಯಲ್ಲಿ ಅಡಕವಾಗಿರುವ ಉದ್ದೇಶವಾದರೆ, ಅದೂ ನಾವು ಮೆಚ್ಚಲಾರದ ಒಂದು ನೆಪ. ಏಕೆಂದರೆ ಭೂ ಸುಧಾರಣೆಯ ವಿಷಯದಲ್ಲಿ ರಾಜ್ಯ ಸರಕಾರಗಳು ಯಾವ ಧೋರಣೆಯನ್ನು ಅನುಸರಿಸಬೇಕು ಎಂಬುದಾಗಿ ಎರಡನೇ ಯೋಜನೆಯ ಕರ್ತರು ಬಹಳ ವಿಸ್ತಾರವಾಗಿ ಬರೆದು ಹಾಕಿದ್ದಾರೆ. ಸರಕಾರಗಳ ಧೋರಣೆ ಏನಿರಬೇಕು ಎಂಬ ಬಗ್ಗೆ ಇದಕ್ಕಿಂತ ಸಮಗ್ರವಾದ ದಿಗ್ದರ್ಶನ ಬೇರೆ ಅಗತ್ಯವಿಲ್ಲ. ನಮ್ಮ ಕೋಟ್ಯಾಂತರ ರೂಪಾಯಿ ವೆಚ್ಚದ ಯೋಜನೆಗಳನ್ನು ರಚಿಸುವಾಗ ಯಾರೂ ಜನತೊಡನೆ ವಿಚಾರ ವಿನಿಮಯ ಮಾಡಲು ಸಮಿತಿಗಳನ್ನು ನೇಮಿಸಿ, ಅವನ್ನು ಸಂಚಾರಕ್ಕೆ ಹೊರಡಿಸಿದ ಸುದ್ದಿಯನ್ನು ಕೇಳಿಲ್ಲ. ರಾಷ್ಟ್ರದ ವಿಶ್ವಾಸವನ್ನು ಸಂಪಾದಿಸಿದ ಹಿರಿಯ ಮುತ್ಸದ್ದಿಗಳೇ ಧೋರಣೆಯನ್ನು ರೂಪಿಸುತ್ತಾರೆ; ಕಾರ್ಯಗತಗೊಳಿಸಲಿಕ್ಕೂ ಮುಂದಾಗುತ್ತಾರೆ. ರಾಜ್ಯಮಟ್ಟದಲ್ಲಿರುವ ಪ್ರಭೃತಿಗಳು ಮಾತ್ರ ತಮಗೆ ಬುದ್ಧಿ ಸಾಲದೆಂದೋ ಎಂಬಂತೆ ಬುದ್ಧಿವಂತರ ಸಮಿತಿಗಳ ನೇಮಕಕ್ಕೆ ಕೈ ಹಾಕುತ್ತಾರೆ ಎನ್ನಬೇಕೆ? ಈಗಿನ ಮೈಸೂರು ರಾಜ್ಯದಲ್ಲಿ ಭೂಸಂಬಂಧದ ಕಾಯಿದೆಗಳು ಒಂದೊಂದೆಡೆ ಒಂದೊಂದು ರೀತಿಯಾಗಿರುವುದರಿಂದ ಕ್ರೋಢೀಕರಣದ ಸಮಸ್ಯೆಯನ್ನು ಪರಿಹರಿಸಲು ಈ ಸಮಿತಿ ಬೇಕಾಯಿತೆಂದೂ ಕೆಲವರು ಹೇಳಬಹುದು. ಈ ಕ್ರೋಢೀಕರಣವು-ಅಥವಾ ಮಂತ್ರಿಗಳು ಪದೇ ಪದೇ ಹೇಳುವಂತೆ, ರಾಜ್ಯಕ್ಕೆಲ್ಲ ಅನ್ವಯಿಸುವ ಏಕರೂಪದ ಭೂಸುಧಾರಣಾ ಶಾಸನವು- ಎರಡನೇ ಯೋಜನೆಯ ಕರ್ತರು ರೂಪಿಸಿದ ಚೌಕಟ್ಟನ್ನು ಮೀರಿ ಹೊರಗೆ ವ್ಯಾಪಿಸುವಂತೆ ಮಾಡಬೇಕಾಗಿದ್ದರೆ ಮಾತ್ರ ಒಂದು ಸಮಿತಿ ಅಗತ್ಯವಾಗಬಹುದು. ಚೌಕಟ್ಟನ ಇತಿಮಿತಿಯೊಳಗೆನೇ ಭೂಸಂಬಂಧದ ಶಾಸನವು ಇರುವುದಾದಲ್ಲಿ ಯೋಜನೆಯ ಕರ್ತರು ಹೇಳಿದ ಪ್ರಕಾರ ನಡೆದುಕೊಂಡರೆ ಸಾಕು! ನಮ್ಮ ಮಂತ್ರಿಮಂಡಳವು ಯೋಜನೆಯ ಕರ್ತರ ಇರಾದೆಯನ್ನು ಉಲ್ಲಂಘಿಸಿ ಹೋಗುತ್ತದೆಯೆ? ಹೋಗಲೂ ಬಹುದು. ಏಕೆಂದರೆ, ಯೋಜಕರು ಹೀಗೆ ಮಾಡಿರಿ ಎಂದು ಉಪದೇಶಿಸುತ್ತಾರೆ; ಒತ್ತಾಯಿಸಿ ಧೋರಣೆಯನ್ನು ಕಾರ್ಯರೂಪಕ್ಕಿಳಿಸುವ ಶಕ್ತಿ ಅವರಿಗಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಇಲ್ಲದಿದ್ದರೆ ಮೊದಲನೇ ಯೋಜನೆಯಲ್ಲಿ ಹೇಳಿದ ಪ್ರಕಾರ ಭೂಸಂಬಂಧದ ಶಾಸನಗಳನ್ನು ಎಷ್ಟೋ ರಾಜ್ಯ ಸರಕಾರಗಳು ರೂಪಿಸಲೇ ಇಲ್ಲವೆಂದು ವಿಷಾದದಿಂದ ಐದು ವರ್ಷಗಳ ಬಳಿಕ ಎರಡನೇ ಯೋಜನೆಯ ಕರಡನ್ನು ಬರೆಯುವಾಗ ಯೋಜಕರು ಹೇಳಬೇಕಾದ ಸಂಭವ ಬಂದೊದಗುತ್ತಿರಲಿಲ್ಲ. ತೀರ ಹೊಸತಾದ ವಿಷಯವೊಂದರ ಚರ್ಚೆಗೆ, ಮಂಥನಕ್ಕೆ — ಸಮಿತಿಯೊಂದು ಅಗತ್ಯ ಬೀಳಬಹುದು: ಆದರೆ ಧಾರಾಳವಾಗಿ ಚರ್ಚಿಸಿರುವ, ಚರ್ವಿತಚರ್ವಣವಾಗಿರುವ, ಭೂಸಂಬಂಧದ ಶಾಸನದಂಥ ಒಂದು ವಿಷಯದ ಬಗ್ಗೆ— ಅದನ್ನು ಚರ್ಚೆಯಲ್ಲೆ ಮುಕ್ತಾಯಗೊಳಿಸುವುದು ನಮ್ಮ ನಿಜವಾದ ಇಚ್ಛೆ ಅಥವಾ ಉದ್ದೇಶವಾಗಿರದಿದ್ದಲ್ಲಿ— ಪುನಃ ಪುನಃ ಚರ್ಚಾಸಮಿತಿಗಳನ್ನು ಏರ್ಪಡಿಸುತ್ತಾ ಹೋಗುವುದರಲ್ಲಿ ಅರ್ಥವಿಲ್ಲ ಎಂದೇ ನಮ್ಮ ಅಭಿಪ್ರಾಯ. ಕೇರಳದ ಕಮ್ಯುನಿಸ್ಟರಿಗೆ ಅಧಿಕಾರಕ್ಕೆ ಬಂದ ಎರಡು ತಿಂಗಳೊಳಗೆ ಭೂಸಂಬಂಧದ ಶಾಸನವೊಂದನ್ನು ತಂದು ಮಂಜೂರು ಮಾಡಿಸುವುದು ಸಾಧ್ಯವಾಗಿದ್ದರೆ, ನಮ್ಮ ಕಾಂಗ್ರೆಸು ಮಂತ್ರಿಮಂಡಳಗಳಿಗೆ ಹನ್ನೆರಡು ವರ್ಷಗಳ ಅವಧಿಯೂ ಏಕೆ ಸಾಕಾಗುವುದಿಲ್ಲವೆಂದು ಜನತೆ ಪ್ರಶ್ನಿಸುತ್ತದೆ! ಭೂಸಂಬಂಧದ ಸುಧಾರಣಾ ಶಾಸನಗಳನ್ನು ನಮ್ಮ ಸರಕಾರವೀಗ ರಚಿಸುವುದರಲ್ಲಿ ತೀವ್ರ ಆಸಕ್ತಿ ತೋರಿಸುತ್ತಿದೆ ಎಂಬ ಮಾತಿನ ಬಗ್ಗೆ ಸಾಮಾನ್ಯ ಸಾಗುವಳಿದಾರ ಒಕ್ಕಲು ಕುತ್ಸಿತ ನಗೆಯನ್ನೆ ಬೀರುತ್ತಿದ್ದಾನೆ. ಏಕೆಂದರೆ ಅವನೀಗ "ತೋಳ ಬಂತೋ, ತೋಳ ಬಂತು" ಎಂಬ ಧಾಟಿಯಲ್ಲಿ ಭೂಸಂಬಂಧದ ಶಾಸನಗಳು ಜಾರಿಯಾದವೆಂದು ಹೇಳಿಸಿಕೊಂಡು ಮೋಸಹೋದ ವ್ಯಕ್ತಿ-ಇನ್ನು ನಿಜವಾಗಿ ಶಾಸನಗಳು ರೂಪುಗೊಂಡು ಜ್ಯಾರಿಗೆ ಬಂದರೂ ಆತನು ಅದನ್ನು ನಂಬಲಾರದಷ್ಟು ದೀರ್ಘ ವಿಳಂಬವನ್ನು ಕಾಂಗ್ರೆಸು ಸರಕಾರ ಮಾಡಿರುವುದು ಕಾಂಗ್ರೆಸ್-ರಾದನಮಗೆನೇ ಸಮಾಧಾನ ತಂದಿಲ್ಲ: ಅಭಿವರ್ಧನ ಪಟ್ಟುಕೊಳ್ಳುವಂಥ ವಿಷಯವಂತೂ ಇದೆಲ್ಲವೇ ಅಲ್ಲ.

ದ. ಕ. ಜಿಲ್ಲಾ ಬೋರ್ಡಿನ ನೂತನ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು —

ಇದೇ ತಾ. 17ರಲ್ಲು ದ. ಕ. ಜಿಲ್ಲಾ ಬೋರ್ಡಿನ ನೂತನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಶ್ರೀ. ಬಿ ಮಂಜಯ್ಯ ಹೆಗ್ಡೆಯವರು 1930 ರಲ್ಲಿ ಮಂಗಳೂರಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದ್ದು ಈಗ್ಗೆ ಪ್ರಮುಖ ವಕೀಲರೊಬ್ಬರಾಗಿರುವರು. ಅವರು ಜಿಲ್ಲೆಯ ಯಾವತ್ತೂ ಸಾರ್ವಜನಿಕ ಕೆಲಸಗಳಲ್ಲಿ ಆಸಕ್ತಿ ವಹಿಸುತ್ತಿರುವರು. 1945ರಲ್ಲಿ ಕೋಟೆ ಸರ್ಕಲ್‌ನಿಂದ ಜಿಲ್ಲಾ ಬೋರ್ಡಿಗೆ ಆಯ್ಕೆ ಹೊಂದಿದರು. 1936ರಲ್ಲಿ ಜಿಲ್ಲಾ ಬೋರ್ಡಿನ ಪ್ರತಿನಿಧಿಯಾಗಿ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿಗೆ ಆರಿಸಲ್ಪಟ್ಟರು. 1949ರ ಹೊಸ ಚುನಾವಣೆಯಲ್ಲಿ ಬಸ್ರೂರು ಸರ್ಕಲಿನಿಂದ ಶ್ರೀ ಹೆಗ್ಡೆಯವರು ಜಿಲ್ಲಾ ಬೋರ್ಡಿಗೆ ಸದಸ್ಯರಾಗಿ ಆರಿಸಲ್ಪಟ್ಟಿರುವುದೆ ಬೋರ್ಡಿನ ಅಧ್ಯಕ್ಷರಾಗಿ ಯೂ ಒಮ್ಮತದಿಂದ ಆರಿಸಲ್ಪಟ್ಟು 1953 ರ ತನಕ ಅಧ್ಯಕ್ಷ ಪದವಲ್ಲಿಯೇ ಇದ್ದರು. ಮದ್ರಾಸು ಸ್ಟೇಟಿನ ಜಿಲ್ಲಾ ಬೋರ್ಡುಗಳ ಜೇಂಟಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಆರಿಸಲ್ಪಟ್ಟಿದ್ದರು. 1953ರಲ್ಲು ಮಂಗಳೂರಲ್ಲಿ ಜರಗಿದ ಮದ್ರಾಸ ಪ್ರಾಂತ್ಯದ ಶಿಕ್ಷಣ ಪರಿಷತ್ತಿನ ಸ್ವಾಗತ ಸಮಿತಿಯ ಜೆರ್‌ಮೆನ್‌ರಾಗಿದ್ದರು. 1951ರಲ್ಲು ಪುನಃ ಅವರು ಜಿಲ್ಲಾ ಬೋರ್ಡಿಗೆ ಆರಿಸಲ್ಪಟ್ಟು ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದು ಇದೀಗ ಎರಡನೆ ಬಾರಿ ಬೋರ್ಡಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಶ್ರೀ ಹೆಗ್ಡೆಯವರು ಬ್ಯಾಂಕಿಂಗ್ ಮತ್ತು ಸಹಕಾರಿ ಚಳವಳದಲ್ಲಿಯೂ ಅತ್ಯಾಸಕ್ತಿಯುಳ್ಳವರು. ಇವರು ಆರಂಭದಿಂದಲೂ ವಿಜಯ ಬೇಂಕಿನ ಡೈರೆಕ್ಟರರಾಗಿರುವರಲ್ಲದೆ 16 ವರ್ಷಕ್ಕೆ ಮೇಲ್ಪಟ್ಟ ಅವಧಿಯಲ್ಲಿ ಅದರ ಚೇರ್‌ಮೆನ್‌ರಾಗಿದ್ದರು. ಮಂಗಳೂರು ಕೋಪರೇಟಿವ್ ಸ್ಟೋರ್ಸ್ ಮತ್ತು ದ. ಕ. ಸೆಂಟ್ರಲ್ ಕೋಆಪರೇಟಿವ್ ಸ್ಟೋರ್ಸ್‌ಗಳ ಪ್ರಥಮ ಡೈರೆಕ್ಟರ ಮಂಡಳಿಯಲ್ಲಿದ್ದರು ಅಲ್ಲದೆ ಕೋಪರೇಟಿವ್ ಬಿಲ್ಡಿಂಗ್ ಸೊಸೈಟಿಯ ಪ್ರೆಸಿಡೆಂಟರಾಗಿಯೂ ಇದ್ದರು. ಈಗ ಅವರು ದ. ಕ. ಜಿಲ್ಲಾ ಕೋಪರೇಟಿವ್ ಸೆಂಟ್ರಲ್ ಬೇಂಕಿನ ಡೈರೆಕ್ಟರರಾಗಿರುವರು.

ಶ್ರೀ ಕೆ. ಕೆ. ಸೆಟ್ಟರು— ಮೈಸೂರು ವಿಧಾನ ಸಭೆಯ ಉಪಾಧ್ಯಕ್ಷರಾಗಿ ಆಯ್ಕೆಗೊಂಡಿರುವರೆಂದು ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿರುವುದು ವಿಧಾನ ಸಭಾಸತ್ತಿಗೆ ಉಪಾಧ್ಯಕ್ಷರಾಗಿಎಂದಾಗಬೇಕಾಗಿದೆ (ಸಂ. ನ)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 47/1957.

ರಾಮ ಮಯ್ಯ —ವಾದಿ

ಲಕ್ಷ್ಮೀನಾರಾಯಣ ಮಯ್ಯ ಕೂಡಾ —ಪ್ರತಿವಾದಿರು

ಪ್ರತಿವಾದಿರು 4 ನಾಗಮ್ಮ, ವೆಂಕಟರಮಣ ಮಯ್ಯ ಇಬ್ಬರೆ

5. ವೆಂಕಟ್ರಮಣ ಕಾರಂತ 6. ಮಂಜುನಾಥ ಕಾರಂತ 7 ಶೀನಾರಾಮ ಕಾರಂತ ಅಣ್ಣಪ್ಪಯ್ಯ ಕಾರಂತರ ಮಕ್ಕಳು. ಕುಂದಾಪುರ ತಾಲ್ಲೂ ಉಪ್ಪುಂದಗ್ರಾಮ. ಇವರಿಗೆ,

ವಾದಿಯು ಪ್ರತಿವಾದಿರ ಮೇಲೆ ದಾಖಲುಮಾಡಿದ ಸ್ಥಾಯೀನತೆ ವ ಇಂಜಕ್ಷನ್ ದಾವೆಯು ತಾ. 10.7.1957ಕ್ಕೆ ತನ್ನಿಗೆ ಇಟ್ಟಿರುತ್ತದೆ ಆ ಕಾರಣ ನಿಮ್ಮದೇನಾದ್ರೂ ಅಕ್ಷೇಪವಿದ್ದಲ್ಲಿ ತಾ. 10.7.1957ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಪೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಕಕ್ಷವಾಗಿ ತೀರ್ಮಾನಿಸಲಾದೀತು ಎಂಬಸಂಗ್ತಿ ಕೋರ್ಟು ಹುಕುಂಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗಿಯದೆ.

K. Raghunatha Shenai,
Pleader for Plff.

Coondapoor 23—6—1957.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 31/1957.

1 ಬ್ರಿಟಿಶ್ ಮಿನೇಜರ್, 2. ಪಿಯಾದ ಮಿನೇಜರ್ ಬ್ರಾ. 3. ಟೆರೊನಿತಾ ಮಿನೇಜರ್ ಬ್ರಾ. 4 ಟೆಸಿಕ್ಸ್ ಮಿನೇಜರ್, ಟ್ರೂಸರ್, ಅರ್ಜಿದಾರರು

ಮೇಲಿನ ಅರ್ಜಿಯ 1ನೇ ಅರ್ಜಿದಾರಗಂತ ವ 2ರಿಂದ 4ನೇ ಬರೆಗಿನ ಅರ್ಜಿದಾರರ ತಂದೆ ಈಗ ಮೃತ ಗ್ರೆಗೋರಿ ಮಿನೇಜರ್‌ಗೆ The Firestone Tyre and Rubber Co. of India Private Ltd., ಈ ಕಂಪನಿಯಿಂದ ಬರತಕ್ಕ Gratuity, ಸಂಬಳ ಮತ್ತು ಬೋನಸ್ ಕೂಡಾ ರೂ. 2150.14.0ನ್ನು ವಸೂಲು ಪಡಿಯುವ ಬಗ್ಗೆ ಸರ್ಟಿಫಿಕೇಟು ಕೇಳಿ ದಾಖಲುಮಾಡಿದ ಮೇಲಿನ ಅರ್ಜಿಯು ತಾ. 2.7.57ಕ್ಕೆ ಇಟ್ಟಿದೆ. ಅಕ್ಷೇಪಿಸುವವರು ಸದ್ರಿ ಕೋರ್ಟು ಮುಂದೆ ಮೇಲಿನ ಅರ್ಜಿಯಲ್ಲಿ ತಾ. 2.7.57ನೇ ಪೂರ್ವಾಹ್ನ ಘಂಟೆ 10ಕ್ಕೆ ಹಾಜರಾಗಿ ಜ್ಯಾಪೀರು ಮಾಡಿಕೊಳ್ಳತಕ್ಕದ್ದು

Gratian C. Rego.
Vakil for Petitioners.

Udipi, Dated 24—6—57.

ಸಂಕ್ಷಿಪ್ತ ಸುದ್ದಿಗಳು

ನೆಹರೂ ವಿದೇಶ ಸಂಚಾರ

ಭಾರತದ ಪ್ರಧಾನಿ ನೆಹರೂರವರು ದಿನಾಂಕ ೩೦ರಂದು ಲಂಡನ್ನಿನಲ್ಲಿ ನಡೆಯುಲಿದ್ದ ಕಾಮನ್‌ವೆಲ್ತ್ ರಾಷ್ಟ್ರಗಳ ಅಧಿವೇಶನದಲ್ಲಿ ಭಾಗವಹಿಸಲು ತೆರಳುವಾಗ, ಸಿರಿಯಾ, ನೋರ್ವೆ, ಫಿನ್‌ಲೇಂಡ್ ಸ್ವೀಡನ್ ದೇಶಗಳನ್ನು ಸಂದರ್ಶಿಸಿದರು. ದಮಸ್ಕಸಿನಲ್ಲಿ ಪಾಕಿಸ್ತಾನಿ ರಾಯಭಾರಿ ಕಛೇರಿಯು ಭಾರತದ ಬಗ್ಗೆ ಸಾಕೆಸಿಸುವಷ್ಟು ಅಸಪ್ರಚಾರವನ್ನು ಮಾಡಲು ಹೆಣಿಸಿದ್ದರೂ ಅದು ಯಶಸ್ವಿಯಾಗಲಿಲ್ಲ. ಭಾರತದ ವಿದೇಶ ನೀತಿಯು ಎಲ್ಲ ರಾಷ್ಟ್ರಗಳಿಂದಲೂ ಪ್ರಶಂಸಿಸಲ್ಪಟ್ಟು ಪ್ರಧಾನಿಗಳಿಗೆ ಬೆಚ್ಚಗಿನ ಸ್ವಾಗತವು ದೊರೆಯಿತು.

ಶೀತ ಜ್ವರ

ಭಾರತದ ನಾನಾ ಮೂಲೆಗಳಲ್ಲಿ ಶೀತ ಜ್ವರವು ಹರಡಿದ್ದು ಸಾಮಾಜಿಕ ಚಟುವಟಿಕೆಗಳಿಗೆ ತಡೆ ಹಾಕಿತು ಮೈಸೂರು ಮತ್ತು ಕೇರಳ ರಾಜ್ಯಗಳ ಶಾಸನ ಸಭೆಗಳು ಸದಸ್ಯರನೇಕರು ಜ್ವರೆಯಿಂದ ಹಾಸಿಗೆ ಹಿಡಿದುದರ ಪರಿಣಾಮವಾಗಿ ಮುಂದಿನವರಿದುವು ಮೈಸೂರು ರಾಜ್ಯದಲ್ಲಿ ಶಾಲೆ ಕಾಲೇಜುಗಳು ಮುಚ್ಚಲ್ಪಟ್ಟವೆ ಎಲ್ಲ ಕಡೆಗಳಿಂದಲೂ ಈ ಜ್ವರವು ವಿಶೇಷ ತೊಂದರೆಗಳನ್ನುಂಟುಮಾಡಿತು ಭಾರತದ ಸಾರ್ವಜನಿಕ ಆರೋಗ್ಯವಿಭಾಗದ ಡೈರೆಕ್ಟರ ಜನರಲರು ಸುನಃ ಸ್ಟೆಅತೆಂಟು ವಾರದನಂತರ ಈ ಶೀತಜ್ವರವು ತಲೆದೋರುವ ಸಂಭವವಿದೆಯೆಂದೂ ಆ ಬಗ್ಗೆ ಕತ್ಯ ಮುಂಜಾಗ್ರತೆಗಳನ್ನು ವಹಿಸುವುದು ಸೂಕ್ತವೆಂದೂ ತಿಳಿಸಿರುವರು.

ವಿದೇಶೀ ಸಾಲ

ಭಾರತವು ಸುಮಾರು ೧೧೦ ಕೋಟಿ ಸ್ಟರ್ಲಿಂಗ್ ಸಾಲವನ್ನು ಅಮೆರಿಕಾ ಮತ್ತು ಬ್ರಿಟನುಗಳೊಂದಿಗೆ ಕೇಳಿದೆ ಎಂದು ಲಂಡನ್ನಿನಲ್ಲಿ ದಟ್ಟವಾರ್ತೆ ಕಂಡಿದೆ ಈ ಬಗ್ಗೆ ಭಾರತದ ಅರ್ಥ ಮಂತ್ರಿ ಶ್ರೀ ಟಿ ಟಿ ಕೆ. ಯವರು ಮಾತಾಡುತ್ತಾ ಭಾರತದ ದ್ವಿತೀಯ ಪಂಚವರ್ಷಿಕ ಯೋಜನೆಯ ಬೇಡಿಕೆಗಳನ್ನು ಪೂರೈಸಲು ಅಮೆರಿಕ ಇಲ್ಲವೆ ಬ್ರಿಟನದಿಂದ "ದೊಡ್ಡ" ಸಾಲ ಕೊಡಬೇಕೆಂದು ಕೇಳಿಕೊಂಡಿರುವುದಿಲ್ಲ ಎಂದಿರುವರು. ಪ್ರಧಾನ ಮಂತ್ರಿಗಳು ಸ್ವಾಗತಿಸಿದ್ದ ದೀರ್ಘಾವಧಿಯ ಸಾಲವಲ್ಲದೆ ಬೇರಾವುದರ ಕುರಿತೂ ಭಾರತವು ಔಪಚಾರಿಕವಾಗಿ ಕೇಳಿಕೊಂಡಿರುವುದಿಲ್ಲ ಎಂದವರು ದೃಢಪಡಿಸಿರುವರು

ಕೇಂದ್ರ ಸರಕಾರದ ಸಾಲ

ಭಾರತ ಸರಕಾರವು ಈ ವರ್ಷ ೧೦೦ ಕೋಟಿ ರೂಪಾಯಿಗಳ ಸಾಲವನ್ನು ಎತ್ತಲಿದೆ. ಇದು ಜನವರಿ ಅಂತ್ಯ ಅಥವಾ ಆಗಸ್ಟ್ ಆರಂಭ ಕಾಲದಲ್ಲಿ ಎತ್ತಲು ಪ್ರಾರಂಭವಾಗಬಹುದು ರಾಜ್ಯ ಸರಕಾರಗಳು ಇಚ್ಛೆಪಟ್ಟಲ್ಲಿ ಸಾಲ ತೆಗೆಯಲು ಸ್ವತಂತ್ರವಿರುವುದು ಆದರೂ ಅವು ಚಿಕ್ಕ ಉಳಿತಾಯಗಳಿಂದಲೇ ತಮ್ಮ ಆರ್ಥಿಕ ಆವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕೆಂದು ಶ್ರೀ ಟಿ. ಟಿ. ಕೆ ತಿಳಿಸಿದ್ದಾರೆ

ವಿರೋಧಿ ಪಕ್ಷದ ಮುಖಂಡ

ಮೈಸೂರು ವಿಧಾನ ಸಭೆಯಲ್ಲಿ ಲವಂದಿಯಿದ್ದು, ೪ ಮಂದಿಯನ್ನೊಳಿಸಿಕೊಂಡು ಒಟ್ಟು ಆವಶ್ಯಕ ಸಂಖ್ಯೆಯಷ್ಟು ಸದಸ್ಯರಿರುವ ಪ್ರಜಾಸಮಾಜವಾದಿ ಪಕ್ಷವನ್ನು ವಿರೋಧಿ ಪಕ್ಷವಾಗಿ ಮಾನ್ಯತೆ ಮಾಡಲಾಗಿದೆಯೆಂದು ಅಧ್ಯಕ್ಷ ಶ್ರೀ ಎನ್ ಆರ್ ಕಂಠಿಯವರು ಬಹಿರಂಗ ಪಡಿಸಿದರು. ಶ್ರೀ ಕೆಂಚಪ್ಪನವರು ಪಕ್ಷದ ಧುರೀಣರಾಗಿದ್ದಾರೆ

ಹೊಸ ಅಂಚೆ ಚೀಟಿ

ಭಾರತದ ಪ್ರಥಮ ಸ್ವಾತಂತ್ರ್ಯೋತ್ಸವದ ಶತಾಬ್ದಿಯನ್ನು ಆಚರಿಸುವ ವೇಳೆಗೆ ಭಾರತ ಸರಕಾರದ ಅಂಚೆ ಮತ್ತು ತಂತಿ ಶಾಖೆಯು ಎರಡು ಹೊಸ ಅಂಚೆ ಚೀಟನ್ನು ಹೊರಡಿಸಲಿದೆಯೆಂದು ತಿಳಿದು ಬಂದಿದೆ.

ಹೆಚ್ಚು ಆಹಾರ ಬೆಳೆಯಿರಿ

ಪ್ರಧಾನಿ ನೆಹರೂರವರು ಹೆಚ್ಚು ಬೆಳೆಯನ್ನು ಬೆಳೆಯುವ ಉದ್ದೇಶದಿಂದ 'ಹೆಚ್ಚು ಆಹಾರ ಬೆಳೆಯಿರಿ' ಚಳವಳಿಯನ್ನು ಉತ್ಸಾಹದೊಂದಿಗೆ ಪುನಃ ಎತ್ತಿಕೊಳ್ಳಬೇಕೆಂದು ರಾಜ್ಯ ಸರಕಾರಗಳಿಗೆ ತಿಳಿಸಿದ್ದಾರೆ ಇದನ್ನು ಯಶಸ್ವಿಗೊಳಿಸಲು ಅನೇಕ ಸೂಚನೆಗಳನ್ನೂ ಮಾಡಿದ್ದಾರೆ.

ಆದರ್ಶ ಗ್ರಾಮ ಯೋಜನೆ

ಭಾರತ ಸರಕಾರದ ಯೋಜನೆಯನ್ವಯ ರಾಷ್ಟ್ರೀಯ ವಿಸ್ತರಣ ಕ್ಷೇತ್ರದಲ್ಲಿಯ ಹಿಂದುಳಿದ ಹಳ್ಳಿಯೊಂದನ್ನು ಆದರ್ಶ ಗ್ರಾಮವನ್ನಾಗಿ ಪರಿವರ್ತಿಸಲಾಗುವುದು ಈ ಬಗ್ಗೆ ಅಂಕೋಲೆಯ ಕ್ಷೇತ್ರವನ್ನೂ ಶಿರಸಿ ತಾಲ್ಲೂಕಿನ ಹಳ್ಳಿಯನ್ನು ಆರಿಸಲಾಗಿದೆ ಅಲ್ಲಿನ ಜನಜೀವನ ಎತ್ತರಿಸಲಾಗುವುದಲ್ಲದೆ ಜನರಲ್ಲಿ ಉತ್ತಮ ಜೀವನ, ವ್ಯವಹಾರ ಮತ್ತು ಸ್ವೋತ್ಪಾದಗತಿಯ ಉತ್ಪಾದನ ಪದ್ಧತಿಗಳನ್ನು ಪ್ರಜಾರಗೊಳಿಸುವ ಕ್ರಮವನ್ನು ಕೈಗೊಳ್ಳಲಾಗುವುದು

"ಕಲ್ಯಾಣ ಕಾರಕ"

ಮೈಸೂರು ಪ್ರಾಚ್ಯ ಸಂಶೋಧನ ಸಂಸ್ಥೆಯವರು ಸುಮಾರು ೫೦೦ ವರ್ಷಗಳ ಕೆಳಗೆ ಜೈನ ಪಂಡಿತರಾದ ಸೂಜ್ಯಾಚಾರಿಯವರಿಂದ ಬರೆಯಲ್ಪಟ್ಟ "ಕಲ್ಯಾಣ ಕಾರಕ" ಎಂಬ ಆಯುರ್ವೇದ ಪುಸ್ತಕದ ಹಸ್ತಪ್ರತಿಯೊಂದನ್ನು ದೊರಕಿಸಿದ್ದಾರೆ

ವೇತನದಲ್ಲಿ ಕಡಿತ

ರಾಜ್ಯ ಸಭೆಯ ಸಭಾಪತಿ (ಉಪರಾಷ್ಟ್ರಾಧ್ಯಕ್ಷ) ಶ್ರೀ ಎಸ್. ರಾಧಾಕೃಷ್ಣನ್, ಲೋಕ ಸಭೆಯ ಅಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರ್, ರಾಜ್ಯ ಸಭೆಯ ಉಪಸಭಾಪತಿ ಶ್ರೀ. ಎಸ್. ವಿ. ಕೃಷ್ಣಮೂರ್ತಿರಾವ್ ಮತ್ತು ಲೋಕ ಸಭೆಯ ಉಪಾಧ್ಯಕ್ಷ ಸರದಾರ ಹುಕುಮ ಸಿಂಗರ ತಮ್ಮ ವೇತನದಲ್ಲಿ ನೂರಕ್ಕೆ ಹತ್ತರಷ್ಟು ಕಡಿತ ಮಾಡಿಕೊಳ್ಳಲು ಸ್ವೇಚ್ಛೆಯಿಂದಲೇ ಒಪ್ಪಿಕೊಂಡಿರುತ್ತಾರೆ ಸಂಸತ್ತಿನ ಕೆಲವೊಂದು ಸದಸ್ಯರು ಸಹ ತಮಗೆ ದೊರೆಯುವ ಮಾಸಿಕ ರೂ ೪೦೦ ರಲ್ಲಿ ೪೦ ರೂ ವನ್ನು ಬಿಡಲು ತಮ್ಮ ಒಪ್ಪಿಗೆಯನ್ನು ಸೂಚಿಸಿರುತ್ತಾರೆ ಒಬ್ಬ ಸದಸ್ಯರು ಮತ್ತೂ ಮುಂದೆ ಬಂದು ತಿಂಗಳಿಗೆ ರೂ ೫೦೦ನ್ನು ತ್ಯಾಗ ಮಾಡಲು ಸಿದ್ಧರಾಗಿರುವರು ಎರಡೂ ಸಭೆಗಳ್ತ ವಿಶ್ವಸ್ಥಯವನ್ನು ಕೈಗೊಳ್ಳುವ ಹಲವು ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಕಾಮನ್‌ವೆಲ್ತ್ ಅಧಿವೇಶನ

ಬ್ರಿಟಿಷ್ ಕಾಮನ್‌ವೆಲ್ತ್ ಅಧಿವೇಶನ ನಡೆಯುತ್ತಿದ್ದು ಇದಲ್ಲಿ ಆಸ್ಟ್ರೇಲಿಯಾ, ಕೆನಡಾ, ಘಾನ, ಪಾಕಿಸ್ಥಾನ, ಭಾರತ, ಬ್ರಿಟನ್, ರೊಡೇಷಿಯಾ ಮತ್ತು ನ್ಯಾಸಾಲೇಂಡ್‌ಗಳ ಪ್ರಧಾನಿಗಳೂ, ದಕ್ಷಿಣ ಆಫ್ರಿಕಾ, ನ್ಯೂಜಿಲೇಂಡ್ ಮತ್ತು ಸಿಂಹಳದ ಪ್ರತಿನಿಧಿಗಳೂ ಭಾಗವಹಿಸಲಿರುವರು ಸಯೇಜ್ ಫೆರ್ಮಣಿ ಮತ್ತು ಹಂಗೆರಿಯ ಕ್ರಾಂತಿಗಳ ನಂತರ ಅಂತಾರಾಷ್ಟ್ರೀಯ ವಲಯದಲ್ಲಿ ಎದ್ದು ತೋರುತ್ತಿರುವ ವಿಶೇಷ ಪರಿಸ್ಥಿತಿ, ಮಧ್ಯಪೂರ್ವದ ರಾಜಕೀಯ ಸಮಸ್ಯೆಗಳು, ರಶ್ಯಾ ಮತ್ತು ಕಮ್ಯೂನಿಸ್ಟ್ ಚೀನಗಳ ಇತ್ತೀಚಿನ ನೀತಿ ಧೋರಣೆಗಳು ಅಧಿವೇಶನದಲ್ಲಿ ಚರ್ಚಿಸಲ್ಪಡುವುವು ನಿಶ್ಶಸ್ತ್ರೀಕರಣ, ವಾಣಿಜ್ಯ, ರಕ್ಷಣೆ ಅಣ ಶಸ್ತ್ರ ಸ್ಫೋಟನೆ ಮೊದಲಾದ ಪ್ರಮುಖವಿಷಯಗಳ ಪರೀಕ್ಷೆಯಿದೆ ಪಾಕಿಸ್ತಾನವು ಕೊಲಂಬೋ ಯೋಜನೆಯು ಅಗತ್ಯತೆಯನ್ನು ಪ್ರಾಸ್ತಾವಿಕವಾಗಿ ಮಾತಾಡುವ ಇರಾದೆಯಿಂದಿದೆ ಭಾರತದ ಆಸಕ್ತಿಯು ಮಧ್ಯಪೂರ್ವವಿಚಾರಗಳು, ಅಣುಶಸ್ತ್ರ ಸ್ಫೋಟನೆ ಮತ್ತು ವಾಣಿಜ್ಯಗಳ್ಳನೆಲೆಯೊಂದೆ ಕಾಶ್ಮೀರ ಸಮಸ್ಯೆಯ ಸಭೆಯಲ್ಲಿ ಬರುವ ನಿರೀಕ್ಷೆಯಿಲ್ಲ

ಗುಪ್ತ ಸೈಲುಗಳ ಕಳವು

ಪಾಕಿಸ್ತಾನದ ಪ್ರಥಮ ಪ್ರಧಾನಿ ಮಿ| ಲಿಯಾಖತ್ ಅಲಿಖಾನರ ಕೊಲೆಗೆ ಸಂಬಂಧಿಸಿದ ಸೈಲುಗಳು ಮತ್ತು ದಸ್ತಾವೇಜುಗಳು ಕರಾಚಿಯ ಇನ್ಸ್‌ಪೆಕ್ಟರ್ ಜನರಲ್ ಆಫ ಪೋಲೀಸ್ ಇವರ ನಿವಾಸದಿಂದ ಕಳವಾದುವು ಈ ಮೊದಲು ವಿಶೇಷ ವಿನಿಮಯ ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಸೈಲುಗಳು ಸಹ ಕಳವಾಗಿ ಹೋಗಿದ್ದುವು.

ಭಾರತ—ಪಾಕ ನೀರಂಟಿ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಎದಿದ್ದ ಕಾಲುವೆ ನೀರಿನ ತಂಟೆಯನ್ನು ಪರಿಹರಿಸಲು ಜಾಗತಿಕ ಬೇಂಕಿನ ಶಿಷ್ಟಮಂಡಲದ ಅಧ್ಯಕ್ಷ ಶ್ರೀ ಡಬ್ಲ್ಯೂ ಎ ಬಿ ಇಲಿಫರ ಸಂಧಾನಯತ್ನಗಳು ಅಸಫಲಗೊಳ್ಳುವ ನಿರೀಕ್ಷೆಯೇ ಹೆಚ್ಚು ಶಿಷ್ಟಮಂಡಲವು ಕಂಡು ಹಿಡಿದಿರುವ ಆಹಾರ ಯೋಜನೆಯು ಮುಖ್ಯಾಂಶಗಳನ್ನು ಭಾರತವು ಹಿಂದೆಯೇ ಒಪ್ಪಿಕೊಂಡಿದ್ದರೂ ಪಾಕಿಸ್ತಾನವು ಇನ್ನೂ ತನ್ನ ನಿರ್ಧಾರಕ್ಕೆ ಅಂಟಿಕೊಂಡಿದೆ ಶ್ರೀ ಇಲಿಫರು ಇದೀಗ ಹೊಸ ಸೂಚನೆಯೊಂದನ್ನು (ಬಹಿರಂಗವಾಗಿಲ್ಲ) ಎರಡೂ ಸರಕಾರಗಳಿಗೆತ್ತು ಮಾತಿಂಗಟ್ಟನ್ನಿಗೆ ತೆರಳಿದ್ದಾರೆ

ಹಂಗೆರಿಯ ಕ್ರಾಂತಿ

ಹಂಗೆರಿಯ ದುರ್ಘಟನೆಗಳ ಬಗ್ಗೆ ನಿಜಾರ್ಜಣೆ ನಡೆಸಲು ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಅಧಿಕಾರವಿಲ್ಲ, ಆದರೆ ಸರದಿಯಂತೆ ಸುಳ್ಳಿನ ಕಂತೆಯಾಗಿದೆಯೆಂದು ಹಂಗೆರಿ ಸರಕಾರವು ತಿಳಿಸಿದೆ.

ಉಡುಪಿ

ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ—ಅಲ್ಲಿಯ ೩೩ನೆಯ ತರಗತಿಯ ಕೆಲವು ವಿದ್ಯಾರ್ಥಿಗಳ ಅಸಪೇಕ್ಷಿತ ನಡತೆಯಂದಾಗಿ ಸದ್ರಿ ತರಗತಿಯನ್ನು ತಾ ೨೦ರಿಂದ ಮುಚ್ಚಬೇಕಾಗಿ ಬಂದವಿಚಾರವನ್ನು ತಾ ೨೧ ರಂದು ಸಂಜೆ ಮುಕುಂದ ನಿವಾಸದಲ್ಲಿ ಕರೆಯಲಾಗಿದ್ದ ಪತ್ರಕೋದ್ಯಮಿಗಳ ಸಭೆಯಲ್ಲಿ ಎಕೆಡಮಿ ಆಫ್ ಜನರಲ್ ಎಡ್ಯುಕೇಶನ್ ರಿಜಿಸ್ಟ್ರಾರ್ ಡಾ|| ಟಿ ಎಮ್ ಎ ಪೈಗಳು ವಿಷಾದಪೂರ್ವಕ ತಿಳಿಸಿದರು ವಿದ್ಯಾರ್ಥಿಗಳು ಶಿಸ್ತು ನಿಯಮಗಳಿಗೆ ವಿರುದ್ಧವಾಗಿ ವರ್ತಿಸಿದ ವಿಚಾರವನ್ನು ಅವರ ರಕ್ಷಕರಿಗೆ ತಿಳಿಸಲಾಗಿದೆಯೆಂದೂ ವಿದ್ಯಾರ್ಥಿಗಳ ಗುಣ ನಡತೆಗಳ ಬಗ್ಗೆ ರಕ್ಷಕರಿಂದ ಅಶ್ವಾಸನಾ ಪತ್ರಗಳು ಬರುವ ತನಕ ಕಾಲೇಜು ವರ್ಷ ತೆರೆಯಲಾಗುವುದಿಲ್ಲವೆಂದೂ ಹೇಳಿದರು ೩೦ತಕ ಘಟನೆ ನಡೆದುದಕ್ಕೆ ತಂದಾ ವಿಷಾದ ಪಟ್ಟರು ಈ ಕುರಿತ ಪರೀಕ್ಷೆಗಳು ನಡೆಸಲು ಕರ್ನಾಟಕ ಯೂನಿವರ್ಸಿಟಿಯಿಂದ ಆಯೋಗವೊಂದು ತಾ ೨೫ ರಿಂದು ಬಂದಿರುವುದಾಗಿಯೂ ಕೆಲವೊಂದು ಸಮಸ್ಯೆಗಳು ಬಗೆಹರಿಯಲ್ಪಟ್ಟು ತಾ. ೨೫ರಿಂದಲೇ ಕ್ಲಾಸು ಪ್ರಾರಂಭವಾಗಿದ್ದವೆಂದೂ ತಿಳಿಯಬರುತ್ತದೆ

ಕನ್ನಡ ವಿಶ್ವಕೋಶದ ಸಂಪಾದಕ ಮಂಡಳಿಗೆ ನೇಮಕ—ಉಡುಪಿ ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿನ ಪ್ರಾಧ್ಯಾಪಕ ಶ್ರೀ ಕು ಶಿ ಹರಿದಾಸ ಭಟ್ಟರು, ಮೈಸೂರು ಸರಕಾರವು ತಯಾರಿಸುತ್ತಿರುವ ಕನ್ನಡ ವಿಶ್ವಕೋಶದ ಸಂಪಾದಕ ಮಂಡಲಿಯ ಟೀರ್ವ ಸದಸ್ಯರಾಗಿ ನೇಮಕಗೊಂಡಿರುವ ರೆಂದು ತಿಳಿದು ಬರುತ್ತದೆ.

ಶೀತಜ್ವರ—ನಗರದಲ್ಲಿ ವಿಶೇಷವಾಗಿ ಹರಡಿರುವುದಾಗಿಯೂ ಈ ವರೆಗೆ ಸಾವಿರಾರು ಜನರಿಗೆ ಇದು ತಗಲಿರಬಹುದಾಗಿಯೂ ಅಂದಾಜು ಮಾಡಲಾಗಿದೆ.

ಶಾಲೆಗಳಿಗೆ ರಜಾ—ಉಡುಪಿ ಶಾಸಕಿನ ಕೋಲೇಜು ಶಾಲೆಗಳಿಗೆಲ್ಲ ಶೀತ ಜ್ವರದ ನಿಮಿತ್ತ ತಾ ೨೪ರಿಂದ ಒಂದು ವಾರದ ರಜಾ ಕೊಡಲಾಗಿದೆ

ಕೋರಂ ಇಲ್ಲ—ತಾ ೨೪ರಂದು ಸಂಜೆ ಕರೆಯಲಾಗಿದ್ದ ಉಡುಪಿ ಮುನಿಸಿಪಲ್ ಕೌನ್ಸಿಲು ಸಭೆ ಕೋರಂ ಇಲ್ಲದ ಕಾರಣ ಸಭೆ ಜರಗಲಿಲ್ಲ

ಉಡುಪಿ ತಾಲೂಕು ಖಾಸಗಿಶಾಲಾ ಮೆನೇಜರರ ಸಂಘದ—ಸಭೆಯೊಂದು ಮೋಡರ್ನ್ ಹಾ. ಏ ಶಾಲೆಯಲ್ಲಿ ತಾ ೨೩ರಲ್ಲಿ ಶ್ರೀ ಟಿ ಎ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಕುರ್ಕಾಲು ಗಣಪಯ್ಯ ಸೆಟ್ಟರು ಸ್ವಾಗತಿಸಿ ಸಭೆಯ ಉದ್ದೇಶನನ್ನು ವಿವರಿಸಿದರು ಶ್ರೀ ದಾಂತಿಯವರು ಪ್ರಚಲಿತ ಸಮಸ್ಯೆಯನ್ನು ಶಾಲಾ ಅಧ್ಯಾಪಕರೂ, ಮೆನೇಜರರೂ ಒಕ್ಕಟ್ಟಿನಿಂದ ಬಿಡಿಸಿಕೊಳ್ಳುವಂತಾಗಬೇಕೆಂದರು ಅಧ್ಯಕ್ಷ ಶ್ರೀ ಪೈಗಳು ತಾವು ಇತ್ತೀಚೆಗೆ ಬೆಂಗಳೂರಿನಲ್ಲಿ ವಿದ್ಯಾಧಿಕಾರಿಗಳನ್ನು ಕಂಡು ಈ ಕುರಿತು ವಿಚಾರ ವಿನಿಮಯ ಮಾಡಿದಾಗ ಅವರು ಸಹಾನುಭೂತಿಯನ್ನು ವ್ಯಕ್ತಪಡಿಸಿದರೆಂದೂ ಕೊನೆಗೆ ಹೊಸ ಸೂಚನೆಗಳ ಪ್ರಕಾರ ಕಾನೂನು ರೂಪಗೊಳ್ಳುವ ವರೆಗೆ ತಾ ೩೧ ೫ ೫೭ರಲ್ಲಿ ಜ್ಯಾರಿಯಲ್ಲಿರುವ ಎಲಿಮೆಂಟರಿಸ್ಕೂಲ್ ಕಾನೂನುಗಳೇ ಊರ್ಜಿತವಲ್ಲಿ ಇರುವಂತೆಯೂ ಇಲ್ಲಿಯ ವಿದ್ಯಾರ್ಥಿಗಳಿಗೆ ಕರ್ಸುಲರ್‌ನಂತೆ ಕೆಲಸದಿಂದ ಹಿಂದೆಗೆದ ಪ್ರವೃತ್ತಿಪಡಿಸಿದವರನ್ನು ತಿರುಗಿ ಕೆಲಸಕ್ಕೆ ಸೇರಿಸಬೇಡೆಂಬಿಕೆ ವಂತೆಯೂ ಇತ್ಯಾದಿ ನಿರ್ಣಯಗಳಾದುವು ಕಾರ್ಯ ನಿರ್ವಾಹಕ ಸಮಿತಿಗೆ ಶ್ರೀ ಎಂ ರಾಮಚಂದ್ರ ಹೆಗ್ಡೆಯವರನ್ನು ಸಹಾಯಕ ಕಾರ್ಯದರ್ಶಿಯನ್ನಾಗಿ ಆರಿಸಿದ ಮೇಲೆ ಶ್ರೀ ಕುರ್ಕಾಲು ಗಣಪಯ್ಯ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು

ಸ್ಟೈಡ ಕ. ವಿದ್ಯಾರ್ಥಿಗಳಿಗೆ ಮದ್ರಾಸು ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಇಲ್ಲ—ಹಿಂದಿನಂತೆ ಈ ವರ್ಷವೂ ಮದ್ರಾಸು ಪ್ರಾಂತ್ಯದ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ದಕ್ಷಿಣ ವಿದ್ಯಾರ್ಥಿಗಳಿಗೆ ಸ್ಥಾನಗಳನ್ನು ಕಾಯ್ದಿರಿಸುವ ಕುರಿತು ಪ್ರಯತ್ನಿಸಲು ಮೈಸೂರಿನ ಮಂತ್ರಿ ಶ್ರೀ ಬಿ ವಿ. ಬಾಳಿಗರೂ ಶ್ರೀ ಟಿ ಎ ಪೈಯವರು ಮದ್ರಾಸಿಗೆ ತೆರಳಿ ವಿದ್ಯಾ ಮಂತ್ರಿ ಸುಬ್ರಮಣ್ಯಂ, ಮುಖ್ಯಮಂತ್ರಿ ಕಾಮರಾಜ ನಾಡಾರ್ ಇವರೊಡನೆ ವಿಚಾರಿಸಿತ ತಕ್ಕ ಪ್ರಯತ್ನಗಳ ಮೈಸೂರು ಪ್ರಾಂತ್ಯದಲ್ಲಿ ಮೆಡಿಕಲ್ ಕಾಲೇಜುಗಳಿಲ್ಲದುದರಿಂದ ಮದ್ರಾಸು ಮೆಡಿಕಲ್ ಕಾಲೇಜುಗಳಲ್ಲಿ ಸ್ಥಾನ ಸಿಗುವುದು ಶಕ್ಯವಾಗಲಾರದೆಂದೂ ಇಂಜನಿಯರಿಂಗಾಗಿ ಬೆಳಸ್ಥಾನಗಳು ಸಿಗಬಹುದೆಂದೂ ತಿಳಿದು ಬರುತ್ತದೆ

ಭೂ ಕಾನೂನು

ಮೈಸೂರು ಒಕ್ಕಲು ಭೂಮಿಯ ಕಾನೂನುಗಳ ಕಮಿಟಿಯ ಪ್ರಶ್ನಾವಳಿಯ ಕುರಿತು ಉಡುಪಿ ತಾಲೂಕು ಭೂಮಾಲಿಕರ ಮತ್ತು ಕೃಷಿಕರ ಸಂಘದವರು ತಾ. 1-6-1957ರಂದು ಒಪ್ಪಿಸಿದ ಮನವಿಪತ್ರ.

1. ಒಕ್ಕಲುತನದ ಸ್ಥಿರತೆಯನ್ನು ಸಾಧಿಸಲು ಮತ್ತು ನ್ಯಾಯವಾದ ಗೇಣಿ ಬಗ್ಗೆ ಈಗ ಇರುವ ನಿಬಂಧನೆಯು ಸಾಕಾಗಿರುತ್ತದೆ:– ಒಕ್ಕಲತನವನ್ನು ಸ್ಥಿರವಾಗಿ ಇರಗೊಡಿಸುವ ಮತ್ತು ನ್ಯಾಯವಾದ ಗೇಣಿಯ ಬಗ್ಗೆ ಈ ಜಿಲ್ಲೆಯಲ್ಲಿ ಈಗ ಜ್ಯಾರಿಯಲ್ಲಿರುವ ಕಾನೂನು ಸಾಕಾಗಿರುವುದು; ಅದರ 1910ರ ಮದರಾಸ್ ಬಿಲ್ಡಿಂಗ್ಸ್ (ಲೀಸ್ ಎಂಡ್ ರೆಂಟ್ ಕಂಟ್ರೋಲ್) ಅಕ್ಟಿನಂತೆ, ಇದರ ವಿಚಾರಣೆಯ ಅಧಿಕಾರವನ್ನು ಸಿವಿಲ್ ಕೋರ್ಟ್ ಅಥವಾ ಜುಡಿಶಿಯಲ್ ಆಫೀಸರರಿಗೆ ಕೊಡುವಂತೆ ನಾವು ಸೂಚಿಸುತ್ತೇವೆ.

2. ಗೇಣಿಯ ಮೊತ್ತ:– ಒಕ್ಕಲು ಧಣಿಗೆ ಕೊಡತಕ್ಕ ಗೇಣಿಯ ಮೊತ್ತವನ್ನು ನಿರ್ಣಯಿಸುವಾಗ ಭೂಮಿಯ ಉತ್ಪನ್ನವನ್ನು ಸಾಧ್ಯವಾದ ನ್ಯಾಯರೀತಿಯಲ್ಲಿ **ಭೂಮಿಯ ಉತ್ಪಾದನ ಶಕ್ತಿಗನುಸಾರ** ಗೊತ್ತುಮಾಡಿ, ತೃಪ್ತಿಕರವಾದ ಕ್ರಮ ವ ಸಾಧನವನ್ನು ಕಲ್ಪಿಸುವುದಾದರೆ, ಒಕ್ಕಲು ತರತಕ್ಕ ಗೇಣಿಯನ್ನು ನಿರ್ಣಯಿಸುವಲ್ಲಿ ಈ ಸಂಘಕ್ಕೆ ಆಕ್ಷೇಪವು ಕಂದುಬರುವುದಿಲ್ಲ. ಗೇಣಿಯನ್ನು ಭೂಮಿಯ ಉತ್ಪತ್ತಿಯ ದಾಮಾಶಯದ ಮೇಲೆ ನಿರ್ಣಯಿಸಲೇಕಲ್ಲದೆ, ಬೇರೆ ಬೇರೆ ಜಾತಿಯ ಭೂಮಿಗಳ ತೀರ್ವೆಯ ಉತ್ಪನ್ನದ ಮೇಲಿನ ಏಕರೀತಿಯ ದಾಮಾಶಯದ ಮೇಲೆ ಹೊಂದಿಲ್ಲವಾದ ಕಾರಣ, ತೀರ್ವೆಯ ದಾಮಾಶಯದ ತಳಹದಿಯ ಮೇಲೆ ಗೇಣಿ ಎಣಿಸುವುದು ಉಚಿತವಲ್ಲವೆಂದು ನಾವು ಸಲಹೆಕೊಡುತ್ತೇವೆ. ಈ ಜಿಲ್ಲೆಯ ಭೂಮಾಲಿಕರು ತಮಗೆ ಒಟ್ಟು ಉತ್ಪತ್ತಿಯ ಸೇಕಡಾ 50ರಷ್ಟು ನ್ಯಾಯವಾದ ಗೇಣಿ ಸಿಕ್ಕಬೇಕೆಂದೂ ಕೇಳಿಕೊಳ್ಳುತ್ತಿದ್ದರೂ, ಈಗ ಈ ಜಿಲ್ಲೆಯಲ್ಲಿ ಜ್ಯಾರಿಯಲ್ಲಿರುವ ಮದರಾಸ್ ಸರಕಾರದ 1956ನೇ ಇಸವಿಯ XXIVನೇ ಅಕ್ಟಿನ ಮೇರೆಗೆ ಅದನ್ನು ಒಟ್ಟು ಉತ್ಪತ್ತಿಯ ಸೇಕಡಾ 40ರಂತೆ ನಿರ್ಣಯಿಸಲಾಗಿದೆ. ಯಾವ ಸಂದರ್ಭವಲ್ಲದರೂ ಈ ದಾಮಾಶಯವು ಇದಕ್ಕಿಂತ ಕಡಿಮೆಯೂ ಗಣಿಸಬಹುದು. ಈಗ ಜ್ಯಾರಿಯಲ್ಲಿರುವ ಒಕ್ಕಲತನದ ಕರಾರುಗಳ ಬಾಬಿನಲ್ಲಿ ನ್ಯಾಯವಾದ ಗೇಣಿಯನ್ನು ನಿರ್ಣಯಿಸುವಂತೆ ಅರ್ಜಿಮಾಡುವ ಹಕ್ಕು ಧಣಿಗೂ ಇರುವಂತಾಗಬೇಕು. ಧಣಿಯ ಅಪೇಕ್ಷೆಯಿಂದಾಗಲಿ, ಒಕ್ಕಲಿನ ಅಪೇಕ್ಷೆಯಿಂದಾಗಲಿ, ಹಾಗೆ ತೀರ್ಮಾನಿಸಲ್ಪಟ್ಟ ಗೇಣಿಯನ್ನು ಧಾನ್ಯರೂಪದಲ್ಲಿ ಕೊಡಬೇಕು.

3. ಒಕ್ಕಲುತನದ ಭದ್ರತೆ:– ಗೇಣಿಯನ್ನು ಕ್ರಮದಂತೆ ಮತ್ತು ವ್ಯಾಜ್ಯದೆಗೆ ಸಂದಾಯಮಾಡುವ ಒಕ್ಕಲಿಗೆ ಒಕ್ಕಲುತನದ ಭದ್ರತೆಯನ್ನು ಕೊಡುವ ಬಾಬಿನಲ್ಲಿ ಈ ಸಂಘ ವಿರುದ್ಧವಾಗಿರುವುದಿಲ್ಲ. ಕಾನೂನನ್ನು ಮಾಡದಿರುತ್ತಿದ್ದರೂ ಗೇಣಿಯನ್ನು ಕ್ರಮವಾಗಿ ಕೊಡುತ್ತಿರುವ ಒಕ್ಕಲುಗಳು ಭದ್ರತೆಯನ್ನು ಪಡೆದೇ ಇರುತ್ತಾರೆ. ಒಕ್ಕಲತನದ ಭದ್ರತೆಯ ಬಗ್ಗೆ ಕಾನೂನನ್ನು ಮಾಡುವುದು ಅಗತ್ಯವೆಂದಾದರೆ, ಧನಿಯು ತನ್ನ ಸ್ವಂತ ಉಪಯೋಗ ಮತ್ತು ಸಾಗುವಳ್ಳಿಗೆ ಅಥವಾ ಭೂಮಿಯನ್ನು ಒಕ್ಕಲು ನಷ್ಟ ಯಾ ಅರೂಪಪಡಿಸಿದ ಕಾರಣದಿಂದ ಆ ಭೂಮಿಯನ್ನು ಅತನಿಂದ ತೆಗೆದು ತನಗೆ ಇಟ್ಟುಕೊಳ್ಳಲು ಅರ್ಹನಾಗುವಂತೆ ಉಚಿತವಾದ ನಿಬಂಧನೆ ಇರತಕ್ಕದ್ದು.

4. **ಧನಿಯು ಸ್ವಂತ ಉಪಯೋಗದ ಸಾಗುವಳ್ಳಿ ಬಗ್ಗೆ ಒಕ್ಕಲಿನಿಂದ ಭೂಮಿ ಬಿಡಿಸಿಕೊಳ್ಳುವುದು:–** ಧನಿಗೆ ತನ್ನ ಯಾ ತನ್ನ ಕುಟುಂಬದ ಸ್ವಂತ ಉಪಯೋಗದ ಸಾಗುವಳ್ಳಿ ಬಗ್ಗೆ ಭೂಮಿಯನ್ನು ಬಿಡಿಸಿಕೊಳ್ಳಲು ಹಕ್ಕು ಇರಬೇಕು. ಒಬ್ಬ ವ್ಯಕ್ತಿಗೆ **ಸಾಕಾಗುವಷ್ಟು ಹಿಡುವಳಿ** ಭೂಮಿ ಸಿಕ್ಕುವಂತೆ ಪ್ರತಿಯೊಬ್ಬನಿಗೆ (ನಂಜ ಯಾ ಬಾಗಾಯತು) 10 ಎಕ್ರೆ ಸಾಗುಭೂಮಿ ಸಿಕ್ಕಬೇಕೆಂದು ನಿರ್ಣಯಿಸುವುದು ಉಚಿತವೆಂದು ಸಂಘವು ಅಭಿಪ್ರಾಯಪಡುತ್ತದೆ. ವಿಭಾಗವಾದಲ್ಲಿ ಪ್ರತಿಯೊಬ್ಬನಿಗೂ ಪಾಲು ಸಿಗಬೇಕಾದ ಜಲವು ವ್ಯಕ್ತಿಗಳಿರುವ ಜಂಟಿ ಕುಟುಂಬದ ಬಾಬಿನಲ್ಲಿ ಈ ಹಕ್ಕು ಪ್ರತಿಯೊಬ್ಬ ಪಾಲುದಾರನಿಗೂ ಹೊರೆಯುವಂತಾಗಬೇಕಲ್ಲದೆ, ಬರೇ ಅವಿಭಕ್ತ ಕುಟುಂಬವನ್ನೇ ಒಂದು ಮೊತ್ತವಾಗಿ ಎಣಿಸಕೂಡದು. ಧನಿಯು ಬೇಸಾಯದ ಸಂಪೂರ್ಣ ಜೊಣ ವಹಿಸಿದರೆ ಮತ್ತು ಅಂತಹ ಸಾಗುವಳ್ಳಿಯ ಮೇಲ್ವಿಚಾರವನ್ನು ಅತನು ಸ್ವತಃ ಯಾ ಅತನ ವಿಜಂಟಿನು ಮಾಡಿದರೆ, ಆಗ ಅಂತಹ ಧನಿಯು ಸ್ವಂತ ಸಾಗುವಳ್ಳಿಯ ರಕ್ಷಣೆಯನ್ನು ಪೂರೈಸಿದಂತಾಗುವುದೆಂದು ಈ ಸಂಘವು ಅನುಭೋದಿಸುತ್ತದೆ.

5. **ಕ್ರಯಕ್ಕೆ ಪಡೆಯಲು ಒಕ್ಕಲಿಗೆ ಹಕ್ಕು:–** ಧನಿ ಮತ್ತು ಒಕ್ಕಲುಗಳೊಳಗೆ ಭೂಮಿಯ ಕ್ರಯ–ವಿಕ್ರಯ ಅವರೊಳಗಿನ ಒಪ್ಪಂದ ಯಾ ಕರಾರಿನ ಮೇರೆಗೆ ನಡೆಯುವಂತೆ ಅನುಮತಿಸಬೇಕು; ಯಾವ ಸಂದರ್ಭದಲ್ಲಿಯೂ ಭೂಮಿಯ ಖರೀದಿಯ ಅಂದಿನ ಬಾಜಾರಿನ ಮೌಲ್ಯದ ಮೇಲೆ ಎಣಿಸಲಾಗಬೇಕು, ಮತ್ತು ಮೌಲ್ಯ ನಿಗಂಟಿನಿಂದ ನಗದಾಗಿ ಕೊಡುವಂತಾಗತಕ್ಕದ್ದು. ಕಾನೂನು ಮೇರೆಗೆ ಒಕ್ಕಲಿಗೇ ಖರೀದಿ ಮಾಡುವ ಹಕ್ಕನ್ನು ಕೊಡುವುದರಿಂದ ಧನಿಯ ಹಕ್ಕನ್ನು ಕಸಿದುಕೊಂಡಂತಾಗುವುದು.

6. **ಭೂಮಿಯ ಒಡೆತನದ ಪರಮ ಮಿತಿ:–** ಯಾವುದಾದರೂ ಪರಮ ಮಿತಿಯನ್ನು ಹೊರಿಸುವುದಾದರೆ, ಈಗ ಧನಿಯ ಪರದ ವ ಒಡೆತನದ ಭೂಮಿಯ ಮೇಲೆ ಅಂತಹ ನಿಬಂಧನೆಯು ಅನ್ವಯಿಸಕೂಡದು. ಉಚಿತ ವ ಅಗತ್ಯವೆಂದು ಕಂಡರೆ, ಅದನ್ನು ಇನ್ನು ಮುಂದಿನ ಖರೀದಿಗಳಿಗೆ ಅನ್ವಯಿಸುವಂತೆ ಮಾಡಬಹುದು. ಮುಂದಿನ ಖರೀದಿಗಳಿಗೆ (ನಂಜ ಬಾಗಾಯತು ಕೂಡಿ) 100 ಎಕ್ರೆ ಸಾಗುಭೂಮಿಯ ಪರಮ ಮಿತಿಯನ್ನು ಇರಿಸಬಹುದು. ಈ ಜಿಲ್ಲೆಯಲ್ಲಿ ಮಂಜ ಭೂಮಿಯಲ್ಲಿ ಯಾವ ಬೆಳೆಯೂ ಇಲ್ಲದ ಕಾರಣ ಮಂಜ ಭೂಮಿಯನ್ನು ಎಣಿಕೆಗೆ ತೆಗೆದುಕೊಳ್ಳಲಾಗದು. ಭೂಮಿಯ ಒಡೆತನದ ಪರಮ ಮಿತಿಯು ನಿರ್ಣಯವಾಗುವುದಿದ್ದರೆ, ಈ ಪ್ರಶ್ನೆಯನ್ನು ಆಯದ ಮೇಲೆ ಪರಮ ಮಿತಿಯನ್ನು ಹೊರಿಸುವ, ಸಾಮಾನ್ಯ ಯೋಜನೆಯ ಅಂಗವಾಗಿ ಪರ್ಯಾಲೋಚಿಸುವುದು ಉತ್ತಮವೆಂದು ಸಂಘವು ಸೂಚಿಸುತ್ತದೆ.

7. **ಆಯದ ಸಾಧನಕ್ಕಾಗಿ ಮತ್ತು ಸ್ವತಃ ಬೇಸಾಯಗಾರರಾಗಿರದೆ, ಆಸ್ತಿಯ ಸಂಗ್ರಹ ಮಾಡುವ ಯಾ ಗ್ರಾಮದಲ್ಲಿ ಅಥವಾ ಭೂಮಿಯಲ್ಲಿ ವಾಸ್ತವಿಸದವರು ಒಡೆತನ ಹಡೆಯುವರೆಗೆ ನಿಷೇಧ:–** ಅಂತಹ ಯಾವ ನಿಷೇಧವೂ ಇರಕೂಡದೆಂದೂ ಭೂಮಿಯು ಇತರದವಸ ಯಾ ಸೊತ್ತಿನಂತೆ ಇಚ್ಛಾನುಸಾರ ಕ್ರಯ ವಿಕ್ರಯವಾಗುವಂತೆ ಇರಗೊಡಿಸತಕ್ಕದ್ದೆಂದೂ ಈ ಸಂಘವು ಸೂಚಿಸುತ್ತದೆ. ಇದರಿಂದ ಈ ಮೊದಲು ಬಾಜಾರಿನಲ್ಲಿ ನಿರ್ಬಾಧಿತವಾಗಿ ಆಸ್ತಿಯನ್ನು ಕೊಂಡವರಿಗೆ ನ್ಯಾಯವಾದ ವ್ಯಾಜ್ಯ ಸಿಕ್ಕುವಂತಾಗುವುದು. ಅಂತಹ ನಿಬಂಧನೆಯಿಂದ ಕೃಷಿಸಂಬಂಧವಾದ ಕಡಗಟ್ಟು ಅವ್ಯವಸ್ಥೆಗೆ ಗುರಿಯಾಗುವುದಲ್ಲದೆ, ಒಂದು ನಿರ್ದಿಷ್ಟ ವರ್ಗಕ್ಕೆ ಹಾನಿಯಾಗುವ ಕಾರಣ ಭೇದಕರವಾಗಿ ಪರಿಣಮಿಸುವುದು.

8. **ಸರಕಾರದ ಕಡೆಯಿಂದ ವಶಪಡಿಸಿಕೊಳ್ಳುವುದು, ಆಡಳಿತೆ, ಅಥವಾ ಕಾನೂನು ಮೇರೆಗೆ ಕ್ರಯಕ್ಕೆ ಪಡೆಯುವುದು:–** ಈ ವಿಷಯವು ಪ್ರಕೃತ ಜ್ಯಾರಿಯಲ್ಲಿರುವ ಲೇಂಡ್ ಎಕ್ವಿಸಿಶನ್ ಕಾನೂನು ಮೇರೆಗೆ ನಡೆಯುವಂತೆ ಏರ್ಪಡಬೇಕು. ಈ ಕಾನೂನು ಪ್ರಕಾರ ಸರಕಾರಕ್ಕೆ ಬೇಕಾದಷ್ಟು ಅಧಿಕಾರಗಳಿವೆ.

9. **ಒಂದು ಗ್ರಾಮದಲ್ಲಿ ಆಸ್ತಿಯಿದ್ದರೂ, ಬೇಸಾಯಗಾರರಲ್ಲದ ಅಥವಾ ಗ್ರಾಮದಲ್ಲಿ ವಸತಿ ಇಲ್ಲದವರ ಭೂಮಿಯನ್ನು ಸರಕಾರವು ವಶಪಡಿಸಿಕೊಳ್ಳುವುದು:–** ಹೀಗೆ ವಶಪಡಿಸಿಕೊಳ್ಳುವ ಬಾಬಿನಲ್ಲಿ ಈ ಸಂಘವು ವಿರುದ್ಧವಾಗಿದೆ. ಅಂತಹ ಸಂದರ್ಭಗಳಲ್ಲಿ ಈಗಿನ ಕಾನೂನು ಮೇರೆಗೆ ಈ ಕ್ರಮವು ನಡೆದು, ಪರಿಹಾರ ಪ್ರಸ್ತಾವು ಯಾವಾಗಲೂ ನಗದಾಗಿ ಏಕಗಂಟಿನಿಂದ ದೊರೆಯುವಂತಾಗಬೇಕು.

10. **ಬೇಸಾಯಗಾರರಲ್ಲದವರಿಗೆ ಭೂಮಿಯನ್ನು ಹರಾಧೀನ ಮಾಡುವುದಕ್ಕೆ ನಿಷೇಧ:–** ಅಂತಹ ಯಾವ ನಿಬಂಧನೆಗಳೂ ಹೊರಿಸುವ ಬಾಬಿನಲ್ಲಿ ಈ ಸಂಘವು ವಿರುದ್ಧವಾಗಿದೆ.

11. **ಒಕ್ಕಲುತನದ ಕಾನೂನು ಜ್ಯಾರಿಯ ಅಧಿಕಾರಿಗಳು:–** ಇದೀಗ ಯೋಚಿಸಲ್ಪಟ್ಟಿರುವ ಒಕ್ಕಲುತನದ ಕಾನೂನುಗಳ ಸಂಬಂಧವಾಗಿ ಎಲ್ಲಾ ವಿಚಾರಗಳನ್ನೂ ಸಿವಿಲ್ ಕೋರ್ಟು ಯಾ ಜುಡಿಶಿಯಲ್ ಆಫೀಸರರು ತೀರ್ಮಾನಿಸುವಂತೆ ಏರ್ಪಡಿಸಿ, ಅಪ್ಪೀಲು ವ ರಿವಿಜನುಗಳಿಗೆ ಅವಕಾಶವಿರಬೇಕು. ಒಕ್ಕಲತನದ ಕಾನೂನಿನ ವ್ಯವಹಾರಗಳಲ್ಲಿ ವಕೀಲರು ಭಾಗವಹಿಸಕೂಡದೆಂಬ ಪ್ರತಿಬಂಧಕ ಇರಬಾರದು.

12. **ನಿರ್ದಿಷ್ಟ ಮಿತಿಗಿಂತ ಕಡಿಮೆ ಆಯವಿದ್ದವರಿಗೆ ಈ ಕಾನೂನಿನಿಂದ ವಿನಾಯಿತಿ:–** ನಿರ್ದಿಷ್ಟ ಮಿತಿಗಿಂತ ಕಡಿಮೆಯಾದ ಒಟ್ಟು ಆಯವುಳ್ಳ ಸಣ್ಣ ಭೂಮಾಲಿಕರಿಗೆ ವಿನಾಯಿತಿ ದೊರೆಯಬೇಕು.

ಜಿಲ್ಲಾ ವಿದ್ಯಾಧಿಕಾರಿಗಳ ತಡೆ ಆಜ್ಞೆಗೆ ಮೈಸೂರು ವರಿಷ್ಠ ಅಧಿಕಾರಿಗಳ ಸಮ್ಮತಿ – ಶಿಕ್ಷಕರ ಪರವಾಗಿ ಬೆಂಗಳೂರಿಗೆ ತೆರಳಿ ಜಿಲ್ಲೆಯ ಶಿಕ್ಷಕರನ್ನು ಸರಕಾರಿ ಹಾಜರಿಯ ಹೆಜ್ಜೆಳದ ನೆನಪಿಂದ ನಿವೃತ್ತಿಗೊಳಿಸಲಾಗದೆಂದು ವರಿಷ್ಠ ಅಧಿಕಾರಿಗಳೊಡನೆ ವಿಚಾರ ವಿನಿಮಯ ನಡೆಸಿದ ಶ್ರೀ ಟಿ. ಎ. ಪೈಯವರು ತನ್ನ ಕಾರ್ಯಭಾರವನ್ನು ಯಶಸ್ವಿಯಾಗಿ ಸೂರೈಸಿದ್ದಾರೆ ಯಾವುದೇ ಶಿಕ್ಷಕನನ್ನು ಸರಾಸರಿ ಹಾಜರಿಯ ಹೆಜ್ಜೆಳದ ನೆನಪಿನಿಂದ ನಿವೃತ್ತಿಗೊಳಿಸುವಂತಿಲ್ಲವೆಂದು ವರಿಷ್ಠ ಅಧಿಕಾರಿಗಳು (ಡೈರೆಕ್ಟರ್ ಮತ್ತು ಪಿಯ್ಯಾಂಗದ ಕಾರ್ಯದರ್ಶಿಗಳು) ಶ್ರೀ ಪೈಗೆ ತಿಳಿಸಿದುವರು.

ಅಲ್ಲದೆ ಈ ಜಿಲ್ಲೆಯ ನಿರುದ್ಯೋಗೀ ತರ ಬೇತಾದ ಶಿಕ್ಷಕರ ಸಮಸ್ಯೆಯನ್ನು ಸಹಾನುಭೂತಿಯಿಂದ ಮೈಸೂರು ಸರಕಾರದವರು ಮೈಸೂರು ಪ್ರದೇಶದಲ್ಲಿ ತೆರೆಯುವ ಪೌಢ ಶಾಲೆ ಮತ್ತು ತರಗತಿಗಳಲ್ಲಿ ಇಂತಹ ಶಿಕ್ಷಕರಿಗೆ ಅವಕಾಶವನ್ನು ಕಲ್ಪಿಸಿಕೊಡುವುದಾಗಿಯೂ ಅಂತಹ ಅಪೇಕ್ಷೆಯುಳ್ಳ ಶಿಕ್ಷಕರು ಈ ಕುರಿತು ಅರ್ಜಿಯನ್ನು ಶ್ರೀ ಟಿ. ಎ. ಪೈಯವರ ಮೂಲಕಕಳುಹಿಸಿಕೊಡಬಹುದಾಗಿಯೂ ತಿಳಿಸಿದುತ್ತಾರೆ. ಶಿಕ್ಷಕರ ವೇತನದ ಕುರಿತೂ ಆಕಾಂಕ್ಷೆಯ ಆಶ್ವಾಸನೆಗಳಿವೆ.

ನಮ್ಮ ಬೆಲ್ಲಾ ಬಾಸಗಿ ಮೆನೇಜರರು ಈ ವಿಷಯವನ್ನು ಗಮನಿಸಿ ಶಿಕ್ಷಕರನ್ನು ನಿವೃತ್ತಿಗೊಳಿಸಬಾರದೆಂದೂ ತರಬೇತಾಗಿ ನಿರುದ್ಯೋಗಿಗಳಲ್ಲಿರುವ ಶಿಕ್ಷಕರು ಮೈಸೂರು ಪ್ರದೇಶದಲ್ಲಿ ಉದ್ಯೋಗ ಕೈಗೊಳ್ಳುವ ಕುರಿತು ಅಪೇಕ್ಷೆಸಟ್ಟಲ್ಲಿ ಅರ್ಜಿಗಳನ್ನು ಶ್ರೀ ಟಿ. ಎ. ಪೈ ಅಧ್ಯಕ್ಷ; ಭಾರತ ಸೇವಾ ಸಮಾಜ ಉಡುಪಿ — ಇವರ ಮೂಲಕ ಕಳುಹಿಸಬಹುದಾಗಿಯೂ ಶ್ರೀ. ಯಸ್. ದಾಂತಿಯವರು ತಿಳಿಸುತ್ತಾರೆ.

ದೇಲಂಪಾಡಿ- ಇಲ್ಲಿಯ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ತಾ. 15ರಂದು ರಾತ್ರೆ 'ರಾಜಸೂಯಾದ್ವರ' ಎಂಬ ಪ್ರಸಂಗದ ಯಕ್ಷಗಾನ ತಾಳಮದ್ದಳೆಯು ಶ್ರೀ ಗುತ್ತು ನಾರಾಯಣ ರೈಗಳ ವ್ಯವಸ್ಥಾಪಕತ್ವದಲ್ಲಿ ಶ್ರೀಗಣಪತಿ ಕೀ. ಪ. ಕೇಶವ ನವರ ಹಾಡುಗಾರಿಕೆ, ಗುಡ್ಡಪ್ಪ ಗೌಡ, ಟಿ. ಕೆ. ಸರಪೇಶ್ವರ, ಅಣ್ಣಯ್ಯ ಭಂಡಾರಿ, ಲಕ್ಷ್ಮಣ ಗೌಡ, ಕೆ. ವಿ. ನಾರಾಯಣ ರೈ, ಸುಬ್ಬ ಪಾಟಾಲಿ, ಅಂತಪ್ಪ ಶೆಟ್ಟಿ, ಎಮ್. ಎಸ್ ಗೌಡ, ಬಿ ಎ. ಪಾಟಾಲಿ, ಬಿ ಪಿ ಭಟ್, ಪಿ. ರಾಮ, ಎಮ್. ನಾರಾಯಣ ರೈ ಮತ್ತು ಬಾಬು ರೈಗಳ ಅರ್ಥವಿವರಣೆಯೊಂದಿಗೆ ಯಶಸ್ವಿಯಾಗಿ ಜರಗಿತು. ಶ್ರೀ ರಮಾನಂದ ಬನಾರಿಯವರು ಧನ್ಯವಾದಗಳನ್ನಿತ್ತರು.

ಹೆಗ್ಗುಂಜೆ ಇಲ್ಲಿಯ ಬಿ. ಟಿ. ಹಾ| ಎ ಶಾಲೆಯಿಂದ ಇ. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತ ಎಲ್ಲಾ ವಿದ್ಯಾರ್ಥಿಗಳೂ ಉತ್ತೀರ್ಣರಾಗಿ ಶಾಲೆಗೆ 100%ರಷ್ಟು ಮನ್ನಣೆ ತಂದಿರುವರು.

ಕಟಪಾಡಿ, ಕೋಟೆ— ನಂಜಾರಿ ನಡಿಯನೆ ಶ್ರೀ ಎಸ್. ದಾದು ಪೂಜಾರಿಯವರ ಪುತ್ರಿ ಚಿ| ಸಾ| ರತಿ ಮತ್ತು ಮೂಳೂರು ದೊಸಮನೆ ಶ್ರೀ ಎ. ತಿಮ್ಮಪ್ಪ ಮಾಸ್ಟರರ ಪುತ್ರ ಶ್ರೀ ಟಿ. ಸೋಮಸುಂದರ. ಇವರ ವಿವಾಹವು ತಾ 16ರಲ್ಲಿ ಮೂಳೂರು ಬಿಲ್ಲವ ಸೇವಾ ಸದನದಲ್ಲಿ ವೈಭವದಿಂದ ಜರಗಿತು. ನವದಂಪತಿಗಳಿಗೆ ಶುಭಾಶಯಗಳು.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—0

ನವಯುಗ್ಮುದ್ರಣಾಲಯ, ಉಡುಪಿ

ಸೆಕೆಂಡರಿ ಶಾಲೆಗಳು

ತನ್ನ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N /50 ತಾ. 12-12 50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದೆ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನತಿಸಿಕೊಳ್ಳಲಾಗಿದೆ.

ಮೆನೇಜರ್.

ಕಾರ್ಕಳ ಡಿ. ಮುನ್. ಕೋರ್ಟ್‌ನಲ್ಲಿ

O. P. No. 21/1957

1. ದೇವರಾಜ ಪೂಜಾರಿ, 2. ನಾಥಿರಾಜ ಪೂಜಾರಿ, 3. ಚೆಂದ್ರು ಪೂಜಾರಿ,

—ಅರ್ಜಿದಾರರು.

ಮತ್ತು

ಪಿ. ರತ್ನಮ್ಮ (ಮೈನರ್) ಯಿವಳಿ ಗಾರ್ಡಿಯಾನ ತಂದೆ ಅಂಡಿಯಾನೆ ದೇವರಾಜ ಅರಿಗ.

—ಎದ್ರಿ.

ಸದ್ರಿ ಎದ್ರಿಗೆ ನ, ಯಿತರ ಸಮಸ್ತರಿಗೆ ತಿಳಿಸುವದೇನಂದ್ರೆ:–

ಅರ್ಜಿದಾರರ ದೊಡ್ಡತಂದೆ ಹಾಲಿ ಮೃತ ಪಟ್ಟಿರುವ ಮಂಜಪ್ಪ ಬಂಗರಿಗೆ The Bank of Mangalore Ltd ಇದರ ಸೂ ಡ ಬಿ ಪ್ರೈ ಬ್ರಾಂಚಿನಿಂದ Fixed Deposit ಬಾಬ್ತು ಬರತಕ್ಕ ರೂಪ್ಯಾ 405–0–0ನ್ನು ಪಡೆಯುವರೆ ತಮಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ದಾಕ್ಲು ಮಾಡಿದ ಮೇಲಿನ ಅರ್ಜಿಯು ತಾ 9—7—57ಕ್ಕೆ ನೋಟೀಸಿಗೆ ಯಿಟ್ಟಿದೆ. ಅಕ್ಷೇಪವುಳ್ಳವರು ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟುಮುಂದೆ ಹಾಜ್ರಾಗಿ ಉಜಾಪರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟು ಹುಕ್ಕುಂಸ್ಕ್ರಕಾದತಿಳಿಸಿಯದೆ

K. V. Kamath,
Advocate for Petitioners.

ಕಾರ್ಕಳ 24—6—57.

ಮಂಗಳೂರು

ರೋಟರಿ ಗವರ್ನರ್ ಆಗಮನ— ತಾ. 18ರಂದು ಸಂಜೆ ಜರುಗಿದ ಮಂಗಳೂರು ರೋಟರಿ ಕ್ಲಬ್ಬಿನ ಸಭೆಯಲ್ಲಿ, ರೋಟರಿ ಗವರ್ನರ್ ಡಾ. ವಿ ಎಸ್. ಘಾಟ್ಗೆಯವರು ರೋಟರಿ ತತ್ವಗಳನ್ನು ವಿವರಿಸಿ, ಅದನ್ನು ಪಾಲಿಸುವಂತೆ ಕ್ಲಬ್ಬಿನ ಸದಸ್ಯರನ್ನು ಕೇಳಿಕೊಂಡರು. ಶ್ರೀ ಪಿ ಎಸ್ ಕುಡ್ತರು ಸಭಾಧ್ಯಕ್ಷತೆ ವಹಿಸಿದ್ದು ಗವರ್ನರರನ್ನು ಸ್ವಾಗತಿಸಿದರು ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಕೆ ವಿಶ್ವನಾಥ ಕಾಮತರು ಧನ್ಯವಾದಗಳನ್ನಿತ್ತರು.

ಶ್ರೀ ಪಿ. ಆರ್. ಆರ್. ಪೂಂಜರ ನಿಧನ— ಮಂಗಳೂರಿನ ಪ್ರಸಿದ್ಧ ವಕೀಲರೂ ಸಾಮಾಜಿಕ ಕಾರ್ಯಕರ್ತರೂ ಆದ ಶ್ರೀ ಪಿ. ಆರ್. ರಂಗನಾಥ ಪೂಂಜರು ತಾ 20ರಂದು ಸಂಜೆ ಕೊಡಿಯಾಲಬೈಲಿನಲ್ಲಿರುವ ತಮ್ಮ 'ರಾಮ ಭವನ' ನಿವಾಸದಲ್ಲಿ ತಮ್ಮ 65ನೆ ವರ್ಷ ವಯಸ್ಸಿನಲ್ಲಿ ಪೃಥಿವ್ಯಸ್ತರಾದುದಕ್ಕಾಗಿ ನಿಧನರಾದರೆನ್ನಲು ವಿಷಾದಿಸುತ್ತೇವೆ.

ದಿವಂಗತರು ಜಿಲ್ಲೆಯ ಪ್ರಸಿದ್ಧ ಬಂಟ ಮನೆತನದಲ್ಲಿ ಜನ್ಮತಾಳಿ ಉಚ್ಚ ಶಿಕ್ಷಣ ಪಡೆದು ಮಂಗಳೂರಲ್ಲಿ ವಕೀಲ ವೃತ್ತಿಯನ್ನು ಕೈಗೊಂಡಿದ್ದರು ಕೆಲವು ವರ್ಷ ಪ್ರಿಫೀಶಿಯಲ್ ರಿಸೀವರರಾಗಿಯೂ ಇದ್ದರು ಈಚೆಗೆ ವಕೀಲ ವೃತ್ತಿಯಿಂದ ನಿವೃತ್ತರಾಗಿ ಬಹುಸಾಮಾಜಿಕ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿ ಕೃತಾರ್ಥರಾಗಿದ್ದರು ಕೇರ್ಕೇಟ್ಸ ಪೂಂಜರ ಕಳೇಬರದ ಅಂತಿಮ ಕ್ರಿಯೆಯು ತಾ. 21ರಲ್ಲು ನಡೆಯಿತು.

ಶಾಲೆಗಳಿಗೆ ರಜೆ ಮಂಗಳೂರು ನಗರದಲ್ಲಿ ಶೀತ ಜ್ವರದ ನಿಮಿತ್ತ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ತಾ. 24ರಿಂದ 29ರ ತನಕ ರಜೆ ಕೊಡಲಿದೆ.

ನಗರಸಭೆಯ ವ್ಯವಸ್ಥೆ— ಮುನಿಸಿಪಾಲಿಟಿ ಕಚೆಯಿಂದ ಎಲ್ಲಾ ತರದ ಶೀತಜ್ವರ ರೋಗಿಗಳಿಗೆ ಫರ್ಮಾರ್ಥ ಔಷಧ ವಿತರಣೆ ಮಾಡಲಾಗುತ್ತಿದೆ ಮುನಿಸಿಪಾಲಿಟಿಯ ಐದು ಔಷಧಾಲಯಗಳಲ್ಲೂ ಈ ಕೆಳಗಿನ ಸ್ಥಳಗಳಲ್ಲೂ ದಿನಾಲೂ ಬೆಳಗ್ಗೆ 8ರಿಂದ 11 ಗಂಟೆ ವರೆಗೆ ಔಷಧಿ ಕೊಡಲಾಗುತ್ತಿದೆ 1 ಹಂಪನಕಟ್ಟೆಯ ಮುನಿಸಿಪಲ್ ಹೆರಿಗೆ ಕೇಂದ್ರ 2 ಜಪ್ಪು ಮುನಿಸಿಪಲ್ ಕೇಂದ್ರ 3. ಕದ್ರಿ ರಸ್ತೆಯಲ್ಲಿರುವ ಕದ್ರಿ ಮುನಿಸಿಪಲ್ ಹೆರಿಗೆ ಕೇಂದ್ರ 4. ಕಂಟ್ಲೆಂಡ್ ಪೇಟೆಯ ಮುನಿಸಿಪಲ್ ಹೆರಿಗೆ ಕೇಂದ್ರ 5. ಕಂದತ್ತಪಳ್ಳಿ ಮುನಿಸಿಪಲ್ ಹೆರಿಗೆ ಕೇಂದ್ರ 6. ಪೆರ್ಮನ್ನಿಯಾದ ಸೂಟರ್‌ಪೇಟೆ ಮುನಿಸಿಪಲ್ ಹೆರಿಗೆ ಕೇಂದ್ರ 7. ಕಂಕನಾಡಿ ಮಾರ್ಕೇಟಿನ ಎದುರಿಗಿರುವ ಕಂಕನಾಡಿಯ ಹಳೆ ಮುನಿಸಿಪಲ್ ಹೆರಿಗೆ ಕೇಂದ್ರ.

ಬೇಂಕ್ ಆಫ್ ಮೈಸೂರಿನ ಶಾಖಾರಂಭ ದಿ ಬೇಂಕ್‌ಆಫ್ ಮೈಸೂರು. ಇದರ ಮಂಗಳೂರು ಶಾಖೆಯನ್ನು ತಾ. 22 ರಲ್ಲಿ ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಂದಿಕೇಟಿನ ಜನರಲ್ ಮೆನೇಜರ್ ಶ್ರೀ ಟಿ. ಎ ಪೈಗಳು ಉದ್ಘಾಟಿಸಿ, ಶಾಖೆಗೆ ಶುಭವನ್ನು ಕೋರಿದರು. ಮಂಗಳೂರು ಮುನಿಸಿಪಲ್ ಚೇರ್ ಮೆನ್ ಶ್ರೀ ಕೆ ಸೂರ್ಯನಾರಾಯಣ ಅಡಿಗರು ಸಮಾರಂಭದ ಅಧ್ಯಕ್ಷತೆ ವಹಿಸಿ ಜನತೆಯ ಉಳಿತಾಯ ಪಡೆವ ರಾಷ್ಟ್ರಾಭಿವೃದ್ಧಿ ಕಾರ್ಯಕ್ಕೆ ವಿನಿಯೋಗವಾಗುವಂತಾಗಲಿ ಎಂದು ಆಶಿಸಿದರು.

ಆರಂಭದಲ್ಲಿ ಬೇಂಕಿನ ಜನರಲ್ ಮೆನೇಜರ್ ಶ್ರೀ ಬಿ. ವಿ. ನಾರಾಯಣ ರೆಡ್ಡಿಯವರು ಸ್ವಾಗತ ಭಾಷಣಮಾಡಿ ಮಂಗಳೂರು ಈಗ ಬೆಂಗಳೂರಿನ ಒಂದು ಅಂಗವಾದುದರಿಂದ ಈ ಶಾಖೆಯನ್ನು ತೆರೆಯಲು ಕಾರಣವಾಯಿತೆಂದರು ಈ ಶಾಖೆಯ ಮೆನೇಜರ್ ಶ್ರೀ ವಿ ಆರ್ ಸಾರಂಗಪಾಣಿಯವರು ಧನ್ಯವಾದಗಳನ್ನಿತ್ತರು

ಪುರಜನರ ಸಂಘದ— ಹೊಸ ಕಾರ್ಯಕಾರಿ ಸಮಿತಿಯ ಸಭೆಯು ತಾ. 15ರಲ್ಲು ಸೇರಿ ಶ್ರೀಗಳಾದ ಜಿ ಸೋಮಶೇಖರರಾಯರು ಅಧ್ಯಕ್ಷರಾಗಿಯೂ ಕೆ ನರಸಿಂಹ ಪೈ, ಡಾ ಎಮ್. ಉಮೇಶರಾವ್, ಡಾ ಎ. ಎಚ್. ಕೊಯಿಲೊ, ಎಸ್. ಎಸ್ ಆಳ್ವರು ಉಪಾಧ್ಯಕ್ಷರಾಗಿಯೂ, ದಿ ಮೋಹನರಾಯರು ಕೋಶಾಧಿಕಾರಿಗಳಾಗಿಯೂ, ಎ. ಕೆ ಸೇವಕರು ಕಾರ್ಯದರ್ಶಿಗಳಾಗಿಯೂ, ಕೆ ವಿ ಕಾಮತರು ಉಪಕಾರ್ಯದರ್ಶಿಗಳಾಗಿಯೂ ಅಮೀರ್ ಮೆಸೇರು ಪಬ್ಲಿಕ್ ವರ್ಕ್ಸ್ ಮತ್ತು ಟೌನ್ ಪ್ಲಾನಿಂಗ್ ಕಮಿಟಿ ಚೇರ್‌ಮೆನರಾಗಿಯೂ ಆರಿಸಲ್ಪಟ್ಟರು ಶ್ರೀ ಕೆ ಆರ್. ಆಚಾರ್, ಎಮ್. ಸಿ ಯವರು ಲೋಕಸಭೆಯಲ್ಲಿ ಮಂಗಳೂರು ಹಾಸನ ರೈಲ್ವೆ ಇತ್ಯಾದಿ ಜಿಲ್ಲೆಯ ಅವಶ್ಯಕತೆಗಳ ಕುರಿತು ತಾನು ಮಾಡಿದ ಭಾಷಣವನ್ನು ವಿವರಿಸಿದರು. ಕೇಂದ್ರ ರೈಲ್ವೆಮಂತ್ರಿ ಖಾತೆಯಿಂದ ಮಂಗಳೂರು- ಹಾಸನ ರೈಲ್ವೆಯ ದ್ವಿತೀಯ ಸಂಚಾನಾರ್ಹಕ ಯೋಜನೆಯಲ್ಲಿ ಸೇರಿಸಲ್ಪಡುವ ಸಂಬವನಿಲ್ಲೆಂದು ತಾ 29-5-57 ಕ್ಕೆ ಕಳುಹಿಸಲಾದ ಉತ್ತರವನ್ನು ಪರಿಶೀಲಿಸಿದ ಕ. ಜಿಲ್ಲೆಯ ಹಾಗೂ ಮೈಸೂರು ರಾಜ್ಯದ ಅಭಿವೃದ್ಧಿಗೆ ಈ ರೈಲ್ವೆಯು ಅತೀ ಆವಶ್ಯಕವಾಗಿದ್ದು ಅಲ್ಲಿಗೆ ನಮ್ಮ ಲೋಕ ಸಭೆಯ ಸದಸ್ಯರು ಮುಂತಾದವರು ಪ್ರಯತ್ನಿಸಲೇಕೆನ್ನುವ ಮದ್ರಾಸು- ಮಂಗಳೂರು ಎಕ್ಸ್‌ಪ್ರೆಸ್ ಟ್ರೈನಿನ ಇತ್ತೀಚಿಗಿನ ಸಮಯ ಬದಲಾವಣೆಯಿಂದ ಪ್ರಯಾಣಿಕರಿಗೂ ಪತ್ರ ವ್ಯವಹಾರಕ್ಕೂ ಒದಗಿದ ಅಸಾನುಕೂಲತೆಯನ್ನು ಹೋಗಲಾಡಿಸುವ ಬಗ್ಗೆ ರೈಲ್ವೆ ಅಧಿಕಾರಿಗಳು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು

ದ. ಕ. ಕಾಲೇಜುಗಳ ಪಾರಪಟ್ಟಿ ಮೈಸೂರು ವಿದ್ಯಾ ಮಂತ್ರಿಗಳಿಗೆ ಮನವಿ— ಮಂಗಳೂರಿನ ಶ್ರೀಗಳಾದ ವಿ. ಎಸ್. ಕುಡ್ವ, ಕೆ. ಶ್ರೀನಿವಾಸ ಶೆಣೈ, ಕೆ. ಸೂರ್ಯನಾರಾಯಣ ಅಡಿಗ, ಉಡುಪಿಯ ಶ್ರೀ ಟಿ. ಎ ಪೈ ಮೊದಲಾದವರು ಮನವಿಗೆ ಸಹಿಹಾಕಿರುವರು. ಮನವಿಯ ಪ್ರತಿಗಳನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ಕಾರ್ಮಿಕ ಮಂತ್ರಿ ಶ್ರೀ ಬಿ. ಪೈಕುರಂತ ಜಾಳಗ್ಗ, ಕರ್ನಾಟಕ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರ್, ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ಸ್, ಬೆಂಗಳೂರು, ಇವರೆಲ್ಲರಿಗೂ ಕಳುಹಿಸಲಾಗಿದೆ ಮನವಿಯ ಮುಖ್ಯಾಂಶ ಹೀಗಿದೆ. ದಕ್ಷಿಣ ಕನ್ನಡದ ಎಲ್ಲಾ ಕಾಲೇಜುಗಳನ್ನು ಈ ವರ್ಷದಿಂದ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿಸಲಾಗಿದೆ. ಹೀಗಾಗಿ ಸದ್ಯಕ್ಕೆ ಮದ್ರಾಸು ಪಾರಪಟ್ಟಿಯನ್ನು ಅನುಸರಿಸಬೇಕಾದ ಸೀನಿಯರ್ ಬಿ ಎ ಸೀನಿಯರ್ ಬಿ. ಎಸ್. ಸಿ, ಮತ್ತು ಸೀನಿಯರ್ ಬಿ ಕಾಂ ತರಗತಿಗಳ ಹೊರತು ಇತರ ಎಲ್ಲಾ ತರಗತಿಗಳಿಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಪಾರಪಟ್ಟಿಯೇ ಅನ್ವಯಿಸುವುದು ನ್ಯಾಯೋಚಿತವಾಗಿದೆ ಹೀಗಿದ್ದಾಗ್ಯೂ ಈ ಕಾಲೇಜುಗಳಲ್ಲಿ ಶಿಕ್ಷಣ ಮುಂದುವರಿಸಿಟ್ಟಿರುವ ವಿದ್ಯಾರ್ಥಿಗಳ ಸಂಸ್ಯಗಳು ಒಗ್ಗಿದಂತಾಗಿ ಈ ವರ್ಷ ಮದ್ರಾಸಿನ ಪ್ರಿ ಯೂನಿವರ್ಸಿಟಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಪೂರ್ವ ವರ್ಷದ ಡಿಗ್ರಿ ಕೋರ್ಸಿನ ಪ್ರಥಮ ತರಗತಿಗಳಿಗೆ ಸೇರಲು ಸಾಧ್ಯವಾಗುವುದು. ಮಂಗಳೂರಿನ ಗವರ್ನ್ ಮೆಂಟ್ ಆರ್ಟ್ಸ್ ಕಾಲೇಜಿನಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಪಾರ ಪಟ್ಟಿಯನ್ನು ಸೀನಿಯರ್ ಬಿ. ಎ ಬಿ ಕಾಂಗಳನ್ನು ಹೊರತುಪಡಿಸಿ, ಇತರ ತರಗತಿಗಳಿಗೆ ಈ ವರ್ಷವೇ ಅನ್ವಯಿಸುವ ಇರಾದೆಯಿದೆ. ಈ ವ್ಯವಸ್ಥೆಯು ಅತೋಚಿತವಾಗಿದೆ ಅದರ ಸ್ಥಳೀಯ ಸ್ಟೈಂಟ್ ಎಲೋಸಿಯೇಶನ್ ಕಾಲೇಜಿನವರು ಇದೀಗ ತಮ್ಮ ಎಲ್ಲಾ ತರಗತಿಗಳಿಗೆ ಮದ್ರಾಸು ವಿಶ್ವವಿದ್ಯಾನಿಲಯದ ಪಾರ ಪಟ್ಟಿ ಕ್ರಮವನ್ನೇ ಮುಂದುವರಿಸುವ ಇರಾದೆಯಿಂದಿದ್ದಾರೆ ಈ ಕಾಲೇಜಿನ ಆಡಳಿತಾಧಿಕಾರಿಗಳು ಈ ಸಮಸ್ಯೆಯನ್ನು ಬಗೆಹರಿಸಲು ಅಸಕ್ತಿಯಿದ್ದಂತೆಯೂ ತೋರುತ್ತಲಿಲ್ಲ ಹೀಗಾಗಿ ಪರಿಸ್ಥಿತಿಗೊಂದಲದಲ್ಲಿದೆ. ಕರ್ನಾಟಕ ವಿಶ್ವವಿದ್ಯಾನಿಲಯದವರು ಈ ಕುರಿತು ಒಂದು ಅಂತಿಮ ನಿರ್ಧಾರಕ್ಕೆ ಇನ್ನು ಬರಬೇಕಾಗಿದೆ ಆದುದರಿಂದ ತಾವೀಗ ಸಂಬಂಧಪಟ್ಟ ಅಧಿಕಾರಿಗಳೊಡನೆಯೂ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯದವರೊಡನೆಯೂ ತಮ್ಮ ವರ್ಚಸ್ಸನ್ನು ಉಪಯೋಗಿಸಿ ಈ ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲಿಯೂ ಕರ್ನಾಟಕ ವಿಶ್ವವಿದ್ಯಾನಿಲಯದ ಪಾರಪಟ್ಟಿ ಕ್ರಮವನ್ನೇ ಜಾರಿಗೆ ತರುವಂತೆ ಮಾಡಬೇಕು ಇದು ಸಾಧ್ಯವಾಗದಿದ್ದಲ್ಲಿ ನಿಮ್ಮ ಅಧಿಕಾರ ಕ್ಷೇತ್ರಕ್ಕೊಳಪಟ್ಟಿರುವ ಮಂಗಳೂರಿನ ಸರಕಾರೀ ಆರ್ಟ್ಸ್ ಕಾಲೇಜಿನಲ್ಲಾದರೂ ಈ ವ್ಯವಸ್ಥೆ ಮಾಡುವಂತೆ ನೂಡಬೇಕು. ಈ ವರ್ಷದಿಂದಲೇ ಕರ್ನಾಟಕ ವಿಶ್ವವಿದ್ಯಾನಿಲಯದವರು ಪರೀಕ್ಷೆ ನಡೆಸಿ ತಮ್ಮದೇ ಡಿಗ್ರಿಗಳನ್ನು ಕೊಡಲಿರುವುದರಿಂದ ನಮ್ಮ ಕಾಲೇಜುಗಳಲ್ಲಿ ಮದ್ರಾಸಿನ ಪಾರಪಟ್ಟಿ ಕ್ರಮವನ್ನು ಅನುಸರಿಸುವುದರಲ್ಲಿ ನಿನಗೂ ಅರ್ಥವಿಲ್ಲ ನಮ್ಮ ಕಾಲೇಜುಗಳಲ್ಲೂ ಅದನ್ನು ಬೇಗನೆ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿಸಬೇಕು ಇತರ ಕಾಲೇಜುಗಳ ಪಾರಪಟ್ಟಿ ಕ್ರಮವನ್ನೆ ಅನುಸರಿಸುವುದು ಸೂಕ್ತವೆಂದೆನಿಸುತ್ತದೆ.

ವನಮಹೋತ್ಸವಾಚರಣೆ ಸಮಾರಂಭ

(1-7-57ರಿಂದ 7-7-57ರ ತನಕ)

ಮಹಾಜನರಲ್ಲಿ ವಿನಂತಿ.

ವನಮಹೋತ್ಸವ ಕಾಲವು ಸಮೀಪಿಸಿತು. ಆ ಉತ್ಸವದ ನಿಮಿತ್ತ ಕಾರ್ಯಕ್ರಮಗಳು ಇದೇ ಜುಲ್ಯಾ 1ರಿಂದ 7ರ ವರೆಗೆ ಜರುಗಲಿರುವುವು, ಪಾರ್ಟಿ, ಆಕ್ಟೋಬರ್ ತಿಂಗಳಾಂತ್ಯದ ತನಕ ಗಿಡ ನೆಡುವ ಕಾರ್ಯಕ್ರಮಗಳು ಸಾಗುವುವು. ಕಳದ 7 ವರ್ಷಗಳಿಂದಲ್ಲೂ ಈ ವನಮಹೋತ್ಸವವು ಕ್ರಮಪ್ರಕಾರ ನಡೆದು ಜನತೆಗೆ ತಮ್ಮ ಆರ್ಥಿಕ ಜೀವನದಲ್ಲಿ ತುಲನೆಗಳ ಮಹತ್ವವನ್ನೆಸ್ಟೆಂಬುದನ್ನು ತೋರಿಸಿಕೊಟ್ಟಿದೆ. ಮಹಾಜನರೆಲ್ಲರೂ ಎಂದಿನಂತೆ ಉತ್ಸಾಹದಿಂದ ಗಿಡಮರಗಳನ್ನು ನೆಟ್ಟು ಈ ವರ್ಷದ ವನಮಹೋತ್ಸವ ಸಮಾರಂಭವು ಬಹು ವಿಜೃಂಭಣೆಯಿಂದ ಜರಗಬೇಕೆಂದೇ ನನ್ನ ಕೋರಿಕೆ.

ಯು. ಬಾ. ನರಸಿಂಹ.
ಜಿಲ್ಲಾ ಕಲೆಕ್ಟರ್.

ವಿಕಾಂತದಲ್ಲಿ ಓದುವಂತಹುದು
ಕೋಕ ಶಾಸ್ತ್ರ
ನೀವು ಎಂದೂ ಓದದಂತಹ ಪರೀಕರಣ ಪುಸ್ತಕ. ಅನೇಕ ಆಶ್ಚರ್ಯಕರವಾದ ಫೋಟೋಗಳುಂಟು

ಬೆಡ್‌ರೂಂ ಫೋಟೋಸ್
ಅತ್ಯುತ್ತಮ ಛಾಯಾಗ್ರಹಣದಲ್ಲಿ ನೀವು ಹುಡುಗಿಯರ ಫೋಟೋಗಳನ್ನು ನೋಡಿ ಆನಂದಿಸಬೇಕೆಂದಿದ್ದರೆ ಜರೂರ ಒಂದು ರೆಪ್ಲಿಗೆ ಇಂದೇ ಬರೆಯಿರಿ. ಎರಡಕ್ಕೆ ಒಟ್ಟು ಬೆಲೆ ರೂ. ೦/-

Cortespondence in English only.
H. H STORES (N. U)
P B 51 MEERUT (U. P.)

ಉಡುಪಿ ಡಿ ಮುಂಸೀಫ್ ಕೋರ್ಟ್‌ನಲ್ಲಿ

ಕ್ರಮಸಂಖ್ಯೆ 106/1957.

ಉಡುಪಿ ಶ್ರೀ ಕೃಷ್ಣ ದೇವರು, ಶ್ರೀಮದ್ ವಿಭುಧತೀರ್ಥ ಸ್ವಾಮಿರು —ವಾದಿರು
ಮತ್ತು
T. ಕರುಣಾಕರ ಹೆಗ್ಗಡೆ —ಪ್ರತಿವಾದಿ
ಇವರೊಳಗೆ

ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾರೀಕು 6.7 57ಕ್ಕೆ ಇಟ್ಟಿರುವುದ್ರಿಂದ ಪ್ರತಿವಾದಿಯು ಆಕ್ಷೇಪಿಸಿ ಪೇಳುವುದನ್ನು ಆ ದಿನ ಸದ್ರಿ ಕೋರ್ಟು ನುಂದೆ ಹಾಜರಾಗಿ ಜ್ಞಾಪಿಸಿ ಮಾಡಿಕೊಳ್ಳತಕ್ಕದ್ದು

P. Padmanabha Rao.
Advocate for Plff.

Dated 21—6 —1957

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯ್, ಎಲ್. ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ ಹಿರಿಗ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ ೩—೦—೦ (ಬ ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಕ್ಕಳ ಮಗ್ಗಿಪುಸ್ತಕ

(ನಯೇ ಪೈಸೆ ಕೋಷ್ಟಕ ಸಹಿತ)

ಬೆಲೆ 1ಕ್ಕೆ	0	1	0
100ಕ್ಕೆ	4	0	0
250ಕ್ಕೆ	9	0	0
500ಕ್ಕೆ	17	0	0

ನವಯುಗ ಪ್ರೆಸ್, ಉಡುಪಿ.

ತಿಳಿವಿನ ಹಾದಿ

ಮಾನವ ಜೀವನಕ್ಕೆ ಅಲ್ಪಬುದ್ಧಿ ಜೀವಿಗಳೂ ಮಾರ್ಗದರ್ಶನ ಮಾಡಬಲ್ಲವು.

ನಿತ್ಯವೂ ಶಾಶ್ವತವೂ ಅಲ್ಲದ ಈ ಬ್ರಹ್ಮ ಸೃಷ್ಟಿಯಲ್ಲಿ ಅವೆಷ್ಟೋ ವಿಚಿತ್ರಕರವಾದ ಜೀವಜಂತುಗಳು– ವಿವಿಧ ವಸ್ತುಗಳ ನಿರ್ಮಾಣವಾಗಿದೆ. ಅವುಗಳೆಲ್ಲಾ ಒಂದಲ್ಲ ಒಂದು ವಿಧದಿಂದ ನೇವೆಗೈದೇ ನಾಶವಾಗುವುವು. ಅವೆಲ್ಲರ ಕರ್ತವ್ಯದ ಸ್ಥಾನ ಹಿರಿದಾಗಿದೆ. ಶ್ರೀ ರಾಮಚಂದ್ರನಿಗೆ ಸೇತುವೆಯನ್ನು ಕಟ್ಟುವ ಕೆಲಸದಲ್ಲಿ ಸಹಾಯ ಮಾಡಿದ ಆ ಸಣ್ಣ ಜೀವಿ ಅಳಿಲಿನ ಕೆಲಸ ಹನುಮಂತನಂತಹ ಆಜಾನುಬಾಹುಗಳ ಕಣ್ಣಿಗೆ ಕ್ಷುಲ್ಲಕವಾಗಿ ಕಾಣಬಹುದು. ಆದರೆ ವಿವೇಕಿಯಾದ ಶ್ರೀರಾಮ ಚಂದ್ರನ ದೃಷ್ಟಿಯಲ್ಲಿ ಅದು ಅಲ್ಪ ಸೇವೆಯಲ್ಲ; ಮಹಾಸೇವೆ ವ್ಯಕ್ತಿಯ ದೇಹಬಲಕ್ಕಾಗಲಿ, ಧನದ ಮಹತ್ವಕ್ಕಾಗಲಿ, ಅಹಂಕಾರದ ದರ್ಪಕ್ಕಾಗಲಿ, ಅರೂ ಬೆದರಬೇಕಾಗಿಲ್ಲ. ಅದರೆ, ಒಳ್ಳೆಯ ಗುಣವಂತನಾದರೆ, ಉತ್ತಮ ತತ್ವವನ್ನು ತಿಳಿಯಪಡಿಸುವುದಿದ್ದರೆ– ಚಿಕ್ಕ ಮಗುವಾದರೂ ನಾವು ಮಣಿಯಲೇಬೇಕು. ಬಹು ಚಿಕ್ಕ ಇರುವೆಯೇ ಇದ್ದರೂ ನಾವದರ ಒಳ್ಳೆಯ ಗುಣವನ್ನು ಮೆಚ್ಚಬಹುದು. ವಿವೇಚನಾ ದೃಷ್ಟಿಯಿಂದಿಕ್ಷಿಸಿದರೆ ಯಾಭವೇ ವಸ್ತುವು ನಮ್ಮ ತೆಗಳಿಕೆಗೆ ಅರ್ಹವಾಗಿಲ್ಲ. ಅವುಗಳು ಒಂದಲ್ಲ ಒಂದು ವಿಧದಲ್ಲಿ ಸೇರವಾಗಿಯೇ ಆಗುವುವು. ಮಂಚದ ಕೊರಣೆಯೊಂದು ನಮಗೆ ಮನೆ ಕಟ್ಟಲು ಬೇಕಿದ್ದರೆ ಅದೇ ಮರದ ಸೊಪ್ಪು ಸೌದೆಗಳೂ ನಮಗೆ ಅವಶ್ಯವಿವೆ. ಏಕೆ? ಅದೊಂದು ಹುಲ್ಲು ಕಡ್ಡಿಯಂತಿರುವ ಕೋಲೂ ಒಮ್ಮೆಯೆ ನಮಗೆ ಬೇಕೇಬೇಕಾಗುವುದು ಅಂತೆಯೇ ಮೃಗ ಪಕ್ಷಿಗಳ ಆವಶ್ಯಕತೆಯೂ ನಮಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಬೇಕಾಗುತ್ತದೆ. ಬಲುಸೂಕ್ಷ್ಮವಾಗಿರುವ ಜೀವಾಣುಗಳೇ ನಮ್ಮ ದೇಹರಚನೆಗೆ ಕಾರಣವಾಗಿ ಆ ಜೀವಕಣಗಳಲ್ಲಿ ಅಲ್ಲವೇ ಮಾನವನ ವಿಶೇಷ ಬುದ್ಧಿ ಕುಶಲತೆ, ಮೇಧಾ ಶಕ್ತಿಗಳು ಅಡಕವಾಗಿರುವುದು? ವಾತಾವರಣದಲ್ಲಿ ತುಂಬಿರುವ ಗಾಳಿ ಕೆಲವೊಮ್ಮೆ ಒತ್ತಡಗಳಿಗೊಳಪಟ್ಟು ಬಲವಾಗಿ ಬೀಸಿದಲ್ಲಿ ನಾವದನ್ನು "ಎಂಥಾ ಗಾಳಿಯಪ್ಪ!" ಎನ್ನುತ್ತೇವೆ. ಆದರೆ ಆ "ವಾಯು"ವು ಇಲ್ಲವಾದಲ್ಲಿ ನಾವು ಕ್ಷಣ ಕಾಲವೂ ಜೀವಿಸಲಸಾಧ್ಯ. ಅಂತೆಯೇ ಜಿನ್ನಾದ ಬಿಸಿಲು–ಮಳೆಯನ್ನು ಇದೇನು ರಗಳೆಯೆಂದು ಕಣ್ಣಿನ ಬಣ್ಣವನ್ನು ತಿರುಗಿಸುತ್ತೇವೆ. ಅದೊಮ್ಮೆ ಬಿಸಿಲೇ ಇಡೀ ವರ್ಷ ಬಂದು ಬಿಟ್ಟರೆ– ಅಥವಾ ಮಳೆಯೇ ಸುರಿದು ಬಿಟ್ಟರೆ ನಮ್ಮ ಜೀವನ ನಾವೆ ಚಲಿಸುವುದು ಕಷ್ಟವಾಗುತ್ತದೆ.

ಹೆಜ್ಜಾಗಿ ಒಂದೆರಡು ಮಳೆ ಬಿದ್ದಾಗ ವಿಶೇಷವಾಗಿ ನಮಗೆ ಗೋಚರಿಸುವ ಇರುವೆಗಳ ಸಾಲು 'ಇದೇನು ಕಾಟವಪ್ಪಾ' ಎಂದು ನಮ್ಮಿಂದನಿಸಿಕೊಂಡರೂ ಅವುಗಳ ಜೀವನ ಚಿತ್ರಣವನ್ನು ಮನದಲ್ಲಿಣಿಸಿದರೆ ಅವುಗಳಿಂದ ನಮಗೆ ಸಿಗುವ ಹೆಚ್ಚಿನ ಪ್ರಯೋಜನ ಬುದ್ಧಿಗೆ ಗೋಚರಿಸಬಲ್ಲುದು–ನಮ್ಮಿಂದ ಹೆಚ್ಚು ಬುದ್ಧಿ ಶಕ್ತಿ ಅವಕ್ಕಿನೆಯಂದರೂ ಸಲ್ಲುವುದು ಅವುಗಳ ಜೀವನ ಕ್ರಮವು ವಿಚಿತ್ರವಾಗಿದೆ. ಅದು ನಮಗೆ ಮಾರ್ಗದರ್ಶನವೂ ಆಗಿದೆ. ಅವುಗಳು ಒಂದೆರಡಾಗಿ ಮಾನವನಂತೆ ಜೀವಿಸಲಾರವು. ಸಂಘಜೀವನ ಅವರದು. ಆ ಸಂಘಜೀವನ ಕ್ರಮ ನಮ್ಮನ್ನೂ ಸಂಘಜೀವಿಯಾಗಿರುವಂತೆ ತಿಳಿಸುವುದು. ಅವಕ್ಕೆ ತುಸುವಾದರೂ ಅಲ್ಪ ವೆಂಬುದಿಲ್ಲ. ನಿರಂತರವೂ ಅವು ಭೇದಭಾವವಿಲ್ಲದೆ ದುಡಿಯುವುವು. ಅವುಗಳ ಪ್ರಯಾಣಕ್ರಮ ನೋಡಲು ತುಂಬಾ ಸೊಗಸಾಗಿದೆ. ಸೈಲು ಬಂಡಿಯಂತೆ ಓಡಿ ಕೊರೆಯಾಗಿರುವ ಇರುವೆಗಳ ಸಾಲು ಶಾಲಾ ವಿದ್ಯಾರ್ಥಿಗಳು 'ಪ್ರಭಾತಫೇರಿ' ನಡೆಸುವಂತೆ ತೋರುತ್ತದೆ. ಭತ್ತ, ಜೋಳ ಇತ್ಯಾದಿ ಕಾಳುಗಳನ್ನು–ಇಲ್ಲವೇ ಎರೆಹುಳ ಇತ್ಯಾದಿಗಳನು ಹೆತ್ತಾರು ಇರುವೆಗಳು ಬೆಂಕಟ್ಟಿ ಹೊರುತ್ತಿರುವುದು– ರಾಜಮಹಾರಾಜರುಗಳನ್ನು ಪಲ್ಲಂಕಿಯಲ್ಲಿ ಕೊಂಡೊಯ್ಯುವಂತೆ ಮನೋಹರವಾಗಿ ಕಾಣುತ್ತದೆ. ಇರುವೆಗಳು ಸಾಲು ಕಟ್ಟಿ ನಡೆಯುವಂತೆ ಮೇಲ್ವಿಚಾರಣೆ ನಡೆಸಲೋ ಎಂಬಂತೆ ಸಾಲಿನ ಬದಿಯಲ್ಲೇ ಅಲ್ಲೊಂದು–ಇಲ್ಲೊಂದು ನಡೆಯುತ್ತಿರುವ ದೊಡ್ಡಿಯನೆಗಳು ನಮಗೆ ಹೋಲಿಸಿ ನವರು ಗಸ್ತುತಿರುಗುವುದನ್ನು ಜ್ಞಾಪಿಸುವಂತೆ ಮಾಡುತ್ತವೆ. ಅಷ್ಟೇ ಅಲ್ಲದೆ ಭವಿಷ್ಯತ್ತಿನೆಡೆಗೂ ಇರುವೆಗಳಿಗೆ ಅರಿವಿದೆ ಮಳೆಗಾಲಕ್ಕೆಂದು ಹೇರಳವಾಗಿ ಆಹಾರವನ್ನು ತಮ್ಮ ನಿವಾಸದಲ್ಲಿ ಅವು ಕೂಡಿ ಹಾಕುವುವು ತನ್ನ ಹೊಟ್ಟೆ ಮಾತ್ರ ತುಂಬಿದರೆ ಸಾಕು ಎಂದು ನಮ್ಮಲ್ಲಿರುವಂತೆ ಅವುಗಳಲ್ಲಿರುವುದು ಕಂಡುಬರುವುದಿಲ್ಲ. ಆ ಕುರಿತು ನಾವು ಪರಿಶೀಲಿಸಿದಲ್ಲಿ ತಿಳಿಯಬಹುದು.

ಇರುವೆಯೊಂದೇ ಸುಳಿಯುತ್ತಿರುವುದನ್ನು ಗಮನಿಸಿ, ಅಲ್ಲೊಂದು ಬೆಲ್ಲದ ತುಂಡೋ–ಸಕ್ಕರೆಯೋ ತುಸು ಇಡಿರಿ– ಆ ಇರುವೆಯು ಅತ್ತ ಸುಳಿಯುವುದು. ಆಹಾರದ ರುಚಿಯನ್ನೊಮ್ಮೆ ನೋಡಿ ತೆರಳುವುದು– ಅಲ್ಪ ಸಮಯದಲ್ಲೇ ಇರುವೆಗಳ ಗುಂಪೆ ಆಕ್ಕಡೆ ಬರುತ್ತದೆ ಪ್ರಾರಂಭದಲ್ಲಿ ನೋಡಿದ ಇರುವೆಯೇ ತನ್ನ ಬಳಗವನ್ನು ಕರೆಸಿರಬೇಕು. ಎಂಬಾಗ ಅವುಗಳು ಬಿಚ್ಚವನ್ನುಳ್ಳವುವು. ನಮ್ಮಂತೆ ಕಪಟಗಳಲ್ಲ. 'ಸಾಧಿಸಿದರೆ ಸಬಳ ನುಂಗಬಹುದು' ಎಂದು ಇರುವೆಗಳು ಸಾರುತ್ತವೆ. ಒಂದು ಇರುವೆ ನೆಟ್ಟಗಿರುವ ಕಂಬವೊಂದನ್ನೇರಲು ಪ್ರಾರಂಭಿಸಿತು. ಇನ್ನೇನು ತುದಿ ಸುಟ್ಟಿತೆಂಬಷ್ಟರಲ್ಲಿ ಕಳಕ್ಕುರುಳಿತು ಪಸಃ ಏರಿತು–ಬಿದ್ದಿತು. ಇದೇ ರೀತಿ ನಾಲ್ಕಾರುಸಲ ನಡೆದರೂ ಅದು ತನ್ನ ಪ್ರಯತ್ನ ಬಿಡಲಿಲ್ಲ. ಕಡೆಗೊಮ್ಮೆ ಅದು ಏರಿಯೇ ಬಿಟ್ಟಿತು. ಆಗಲಾದರೂ ಕಾರ್ಯವೇ ಇಲ್ಲ–ಎಂಬ ತತ್ವವನ್ನು ಅವು ಸಾರುತ್ತವೆ. ನಿಮ್ಮ ಮನೆಯ ಮೂಲೆಯಲ್ಲಿ ಮನೆಮಾಡಿರುವ ಜೇಡರ ಹುಳದ ಜೀವನ ಚಿತ್ರವನ್ನೀಕ್ಷಿಸಿ. ಪರಾವಲಂಬಿಯಾಗದೆ, ಅದೇ ಬಲೆ ಹೆಣೆದು ತನ್ನ ಉದರ ಪೋಷಣೆಯನ್ನು ಮಾಡುತ್ತದೆ. ನಾವೊಮ್ಮೆ ಬಲೆ ತೆಗೆದರೂ ಮತ್ತೆ ಕಟ್ಟಿ ತನ್ನ ಕಾರ್ಯ ಮುಂದುವರಿಸುತ್ತದೆ. ಹುತ್ತವೊಂದನ್ನು ಕೆಡವಿರಿ ಮರುಕ್ಷಣದಲ್ಲಿಯೇ ಗೆದ್ದಲು ಹುಳಗಳು ಹೊಸದನ್ನೆ ನಿರ್ಮಿಸುವುವು. ಸೀತೆ ಎಷ್ಟು ಸಲ ಕೆಡವಿದರೂ ಅವು ತಮ್ಮ ಕರ್ತವ್ಯ ಮಾಡಿಯೇ ಮಾಡುತ್ತವೆ. ಇದೇ ರೀತಿ ಜೇನು ನೊಣಗಳೂ ಕೂಡ ಅವುಗಳೂ ಅಸತ್ಯಲೋಕದ ಜೇನನ್ನು ಸಂಗ್ರಹಿಸಿಡುವುವು. ಆದರೆ ನಾವದನ್ನು ಅಪಹರಿಸುತ್ತೇವೆ ಆದರೂ ಅವುಗಳು ತಮ್ಮ ಕೆಲಸವನ್ನು ಸ್ವಲ್ಪವೂ ಆಲಸ್ಯವಿಲ್ಲದೆ ಮಾಡುವುವೆಂದರೆ ಅವಲ್ಲವೇ ನೋಟಿಗೆ!

ಈಗ ತಾನೇ ಹುಟ್ಟಿದ ಜೀವಿಗೆ ಯಾವ ಕೆಲಸವೆಂದು ಯಾರೂ ಹೇಳುವುದಿಲ್ಲ ಆದರೆ ಅವುಗಳು ತಮ್ಮ ತಮ್ಮ ಕರ್ತವ್ಯವನ್ನು ಪಾಲಿಸುತ್ತವೆ. ಎಂದರೆ ಅದು ಪ್ರಕೃತಿ ಪ್ರೇರಣೆ. ಅವುಗಳಿಗೆ ಆಲೋಚನಾ ಶಕ್ತಿಯನ್ನು ಪ್ರಕೃತಿಯಿತ್ತಿಲ್ಲ ಮನುಷ್ಯನಿಗೆ ಹಾಗಲ್ಲ ಎಲ್ಲಾ ಅಂಗಗಳನ್ನೂ ಇತ್ತು ಹೊಡ್ಡಿ ಮೆದುಳು ಶಕ್ತಿಯನ್ನೂ ದಯಪಾಲಿಸಿದೆ. ಅಂದರೆ ಆ ಶಕ್ತಿಯಿಂದ ಒಳಿತು ಕೆಡುಕನ್ನು ಸರಿಂಬರಿಸಿ ಮುಂದುವರಿಯಬೇಕಾಗಿದೆ. ಇರುವೆಗಳೇ ಮೊದಲಾದ ಜಂತುಗಳ ಜೀವನ ಕ್ರಮವನ್ನೀಕ್ಷಿಸಿ, ಅಲ್ಲಿ ತನ್ನ ಮೆದುಳು ಶಕ್ತಿಯನ್ನುಪಯೋಗಿಸಬೇಕು. ಇಂದಿನ ಜನತೆಯನ್ನು ನೋಡಿ ಜೇತನಾ ಶಕ್ತಿಗಳನ್ನೆಲ್ಲಾ ಹಿಂಗೆಂದು ನುಡಿಯುತ್ತಿರುವಂತೆ ಭಾಸವಾಗುತ್ತದೆ . . . "ನಮಗೆ ಮೋಸ ವಂಚನೆಗಳಿಂದ ದೂರ ಸರಿ. ಭವಿಷತ್ತಿನೆಡೆಗೆ ದೃಷ್ಟಿಬೀರು. ದೂರಕ್ಕೆ ಕಣ್ಣೊಂಬೆ ಸರಿಸಿ ನಾಳೆಗಾಗಿ ದುಡಿ. ನಿನ್ನ ಹುಟ್ಟಿನ ವರೆಗು ತಾನೇ ಫಲ ಪಡೆಯುವೆವೆಂದು ಮರಗಿಡಗಳನ್ನು ನೆಟ್ಟಿಲ್ಲ. ಆ ದೃಷ್ಟಿಯಿಟ್ಟಿದ್ದರೆ ನೀನಿಂದು ಮಾವಿನ ಹಣ್ಣು ತಿನ್ನುತ್ತಿರಲಿಲ್ಲ. ಫಲದೆಡೆಗೆ ದೃಷ್ಟಿ ಹರಿಸದೆ ನೀನು ಕರ್ಮವನ್ನು ಮಾಡು. ಅದನ್ನೇ ಗೀತೆಯಲ್ಲಿ ಪಾರ್ಥನಿಗೆ ಶ್ರೀ ಕೃಷ್ಣನೂ ಬೋಧಿಸಿದುದು ತಾನು ಮಾತ್ರ ಬದುಕಿದರೆ ಸಾಕೆಂದು ಎಣಿಸಬೇಡ. ಲೋಕವೇ ತನ್ನ ಮನೆಯೆಂದು ನುನ್ನಜೆ. ಉತ್ಸಾಹದಿಂದ– ಹುಮ್ಮಸ್ಸಿನಿಂದ ದುಡಿ. ಚಿಂತೆಗಡೆ ಗೊಡಬೇಡ. ಸಂತೋಷದಿಂದಿರು. 'ಚಿಂತೆಯೇ ವಯಸ್ಸು-ಸಂತೋಷವೇ ಯೌವನ' ಎಂದು ಕೇಳಿಲ್ಲವೇ? ಅನ್ಯಾಯಕ್ಕೆ ಅಂಜಿ ತಲೆಜಗ್ಗಬೇಡ ನಮ್ಮನ್ನು ನೋಡು—; ನೀನು ನಮ್ಮಿಂದ ಶಕ್ತಿವಂತನಾದರೂ, ನಮ್ಮನ್ನು ಕೊಲ್ಲುವೆಯೆಂದುತಿಳಿದಿದ್ದರೂ, ನೀನು ಉಪಕ್ರಮಾಡಿದ-ಗ ನಾವು ಸುಮ್ಮನಿರಲಾರವು. ಕಚ್ಚಿಯೇ ಕಚ್ಚುವೆವು. ನಮಗೆ ಜೀವ ಭಯವಿಲ್ಲ. ಅಂತಯೂ ನೀನೂ ಕಡಿಯಾಗಬೇಡ. ವಿಚಾರಶೀಲನಾಗು...."

ಅದುದರಿಂದ ಪ್ರಕೃತಿಯಲ್ಲಿರುವ ಯಾವುದೇ ವಸ್ತು ಜೀವಗಳನ್ನು ತಿರಸ್ಕರಿಸದೆ, ಅವುಗಳಿಂದ ನಾವೆಷ್ಟೋ ಕಲಿಯಲಿಕ್ಕಿದೆಯೆಂಬುದನ್ನು ಕಂಡುಕೊಂಡು ನಾವು ನಮ್ಮ ಎಲ್ಲಾ ವಿಚಾರಗಳಲ್ಲೂ ಮುಂದುವರಿಯಬೇಕು. ಯಾರಲ್ಲಿ ಯಾವ ಶಕ್ತಿಯೂ, ಯಾರಿಂದ ಏನಾಗಬಹುದು ಎಂದು ಯೋಚಿಸಲು ಬರುವಂತಿಲ್ಲ. ಎಂಬಾಗ ಯಾವುದನ್ನೂ ತಿರಸ್ಕರಿಸದೆ, ಒಳ್ಳೆಯ ಗುಣಗಳನ್ನು ಆರಿಸಿ ಜೀವನವನ್ನು ಉನ್ನತ್ತೀಕರಿಸುವುದು ಅತ್ಯಗತ್ಯ.

—ಕೇ. ವೆ. ಕೇಶವ, ದೇಲಂಪಾಡಿ.

ಕಾರ್ಕಳ ಡಿ. ಮುನ್ಸೀಫ್ ಕೋರ್ಟಿನಲ್ಲಿ

O. S No. 88/1957.

ಗುಸ್ತಿನ್ ರೊಡ್ರಿಗ್ಸ —ಪಾದಿ

ಮತ್ತು

1. ಟೀಕು ಹೆಂಗ್ಸು, 2. ಅಣ್ಣು ಸ್ಕೊಲಿ, ಪೆಂಕು ಹೆಂಗ್ಸಿನ ಮಕ್ಕಳು ಕಾರ್ಕಳ ತಾಲ್ಲೂಕು ವೇಣೂರು ಗ್ರಾಮದ ಮಾರ್ಗದಮನೆ ಎಂಬಲ್ಲಿರುತ್ತಾರೆ. — ಪ್ರತಿವಾದಿರು

ಇವರೊಳಗೆ

ಈ ಮೂಲಕ ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸೇನೆಂದರೆ—

ವಾದಿಯು ನಿಮ್ಮ ಮೇಲೆ ಮಾಡಿದ ಮೇಲ್ಕಂಡ ದಾವಾ ನಿಮ್ಮ ಹಾಜರಾತಿ ಬಗ್ಗೆ ತಾ. 9—7—57ಕ್ಕೆ ಇಟ್ಟಿದೆ ನೀತ್ರ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ದ್ವಾರಾ ಹಾಜ್ರಾಗಿ ಉಪಸ್ಥಿತಿಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾಮಾಡಿ ನಿಮ್ಮ ಗೈರು ಹಾಜರಿ ಸಮ್ಮಂಬ ಸದ್ರಿ ದಾವಾ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣವಾಗುತ್ತದೆ.

(By order of the court)

N. M. Adyanthaya,
Advocate for PIF.

Karkala 20—6—57.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ ಸಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಖ್ಯಾತಿಕ್ಕರು: ಷಾ ಕಂಪೆನಿ, ಮಂಗಳೂರು—1.

ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರರ ಕೋರ್ಟಿನಲ್ಲಿ

O. P. No. 326/1957.

ಎಸ್. ವೆಂಕಟ್ರಮಣ ಕಾಮತ್ —ಅರ್ಜಿದಾರ

ಮತ್ತು

ಶಂಜೀವ ಸೋಜಾ, ಮಂಗೆಲಾ ಸೋಜರ ಮಗ, ಶಿವಗ್ರಾಮ, ಉಡುಪಿ ತಾಲೂಕು —ಎದ್ರಿ

ಇವರೊಳಗೆ

ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಅರ್ಜಿದಾರರು ಮೇಲೆ ಕಾಣಿಸಿದ ಕೋರ್ಟಿನಲ್ಲಿ ಆಸ್ತಿ ಸ್ವಾಧೀನತೆ ಬಗ್ಗೆ ನಿಮ್ಮ ಮೇಲೆ ಮಾಡಿದ ಅರ್ಜಿಯನ್ನು ತಾ. 6-7-57ರಲ್ಲಿ ನಿಮ್ಮ ಹಾಜರಾತಿಗೆ ಇಟ್ಟಿರುತ್ತದೆ. ಆ ದಿನ ಬೆಳಿಗ್ಗೆ ಘಂಟೆ 11ಕ್ಕೆ ಸದ್ರಿ ಕೋರ್ಟಿನ ಉಡುಪಿ ಸಂಕ್ಯಾಂಣದಲ್ಲಿ ನೀವು ಹಾಜರಾಗತಕ್ಕದ್ದು ತಪ್ಪಿದಲ್ಲಿ ಸದ್ರಿ ಅರ್ಜಿಯನ್ನು ನಿಮ್ಮ ಗೈರು ಹಾಜರಿನ್ನಾ ತೀರ್ಮಾನಿಸಲಾಗುವುದು.

(ಕೋರ್ಟಿನ ಹುಕುಂ ಪ್ರಕಾರ)

P. Ranganath Shenoy,
Advocate For Petitioner.

Udipi, 27—6—57.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ನಮ್ಮ ಖನಿಜ ಸಂಪತ್ತು

(೨ನೇ ಪುಟದಿಂದ)

ಯು ಬಿಹಾರದ ಹಜಾರೀಭಾಗ್ ಜಿಲ್ಲೆ, ಆಂಧ್ರದ ನೆಲ್ಲೂರ್ ಜಿಲ್ಲೆ ಮತ್ತು ರಾಜಸ್ಥಾನದ ಉದಯಪುರ, ಅಜಮೀರ ಮೊದಲಾದೆಡೆಗಳಲ್ಲಿ ಧಾರಾಳವಾಗಿ ದೊರೆಯುತ್ತದೆ. ವಿಹಾರದಲ್ಲಿ ದೊರೆಯುವ ಕೆಂಪು ಅಭ್ರಕವು ಜಗತ್ತಿನಲ್ಲಿಯೇ ಸುವ್ರಸಿದ್ಧವಾದುದು. ನೆಲ್ಲೂರಿನ ಅಭ್ರಕವು ವಿದ್ಯುತ್ತಿನ ಉಪಯೋಗದಲ್ಲಿ ಬಳಸಲು ಅತ್ಯುತ್ತಮವಾದುದು. ಫ್ಲೋಗೋಪೈಟ್ ಎಂಬ ಜಾತಿಯ ಅಭ್ರಕವು ಆಂಧ್ರ ಮತ್ತು ತಿರುವಾಂಕೂರುಗಳಲ್ಲಿ ದೊರೆಯುತ್ತದೆ. ನಾವು ಆಗೆಯುವ ಅಭ್ರಕದಲ್ಲಿ ಬಹ್ವಂಶವು ಪರದೇಶಗಳಿಗೆ ನಿರ್ಯಾತವಾಗುತ್ತದೆ ಆದುದರಿಂದಲೇ ಭಾರತದ ಅಭ್ರಕೋದ್ಯೋಗವು ಸಂಪೂರ್ಣವಾಗಿ ವಿದೇಶೀಯರಲ್ಲಿಯೇ ಅವಲಂಬಿಸಿಕೊಂಡಿದೆ. ದ್ವಿತೀಯ ಯೋಜನೆಯಲ್ಲಿ ವಿದ್ಯುತ್ತಿನ ಬಡಾವಣೆಯಾಗುವುದರೊಡನೆ ಅಭ್ರಕದ ಸದುಪಯೋಗವೂ ಆಗುವುದರಲ್ಲಿ ಸಂದೇಹವಿಲ್ಲ.

ಭಾರತೀಯ ಉದ್ಯೋಗಗಳಲ್ಲಿ ಜಿಪ್ಸಮ್ ಅತ್ಯಂತ ಮಹತ್ವಪೂರ್ಣ ಖನಿಜವಾಗಿದೆ. ಭಾರತದಲ್ಲಿ ಪ್ರಧಾನತಃ ರಾಜಸ್ಥಾನ, ಮದ್ರಾಸ ಮತ್ತು ಸೌರಾಷ್ಟ್ರಗಳಲ್ಲಿ ಈ ಖನಿಜವು ವ್ಯಾಪ್ತಿಸುತ್ತದೆ. ಆಂಧ್ರ, ಹಿಮಾಚಲಪ್ರದೇಶ, ಉತ್ತರ ಪ್ರದೇಶ, ಕಾಶ್ಮೀರ, ಕಚ್ಛ ಹಾಗೂ ಭೂತಾನಗಳಲ್ಲಿಯೂ ಈ ಖನಿಜದ ನಿಕ್ಷೇಪಗಳು ಅಲ್ಪಮಟ್ಟಿಗಿವೆ. ಸುಮಾರು ೧೧೫ ಕೋಟಿ ಟನ್‌ಗಳಷ್ಟು ಖನಿಜವು ಈ ಅದುರುಗಳಲ್ಲಿ ಸಂಚಿತವಾಗಿದೆ. ಸಿಂಧ್ರಿಯಲ್ಲಿ ಗೊಬ್ಬರದ ಕಾರಖಾನೆಯು ಸ್ಥಾಪಿತವಾದಂದಿನಿಂದ ಈ ಜಿಪ್ಸಮ್ ಖನಿಜದ ಮಹತ್ವವು ಅಧಿಕಾಧಿಕವಾಗಿ ಹೆಚ್ಚುತ್ತಾ ಬಂದಿದೆ. ಕಾಗದ, ಸಿಮೆಂಟ್ ಮತ್ತು ರಾಸಾಯನಿಕ ಗೊಬ್ಬರಗಳ ಅಭಿವೃದ್ಧಿಯಾಗುವಾಗ ದ್ವಿತೀಯ ಪಂಚವಾರ್ಷಿಕ ಯೋಜನಾ ಕಾಲದಲ್ಲಿ ಜಿಪ್ಸಮ್‌ನ ಭವಿಷ್ಯವೂ ಉಜ್ವಲವಾಗುವುದು.

ಉಷ್ಣನಿರೋಧಿ ದ್ರವ್ಯಗಳ ನಿರ್ಮಾಣ ಕಾರ್ಯದಲ್ಲಿ ಕಾಮನ್ಸೈಟ್, ಸಿಲೀಮನ್ಸೈಟ್ ಮತ್ತು ಮೆಗ್ನಸೈಟ್‌ಗಳು ತಂತಮ್ಮ ಮಹತ್ವದ ಸ್ಥಾನವನ್ನು ಪಡೆದಿವೆ. ಬಿಹಾರದ ಲಂಜಾಪೂರದ ಕಾಮನ್ಸೈಟ್ ಗಣಿಗಳು ವಿಶ್ವದಲ್ಲಿಯೇ ಅತ್ಯಂತ ಗುರುತರವಾದುದೆಂದು ಹೇಳಲಾಗುತ್ತದೆ. ಇಲ್ಲಿ ೧೦ ಅಡಿ ಆಳದ ವರೆಗೆ ಏಳೂವರೆ ಲಕ್ಷ ಟನ್ ಖನಿಜವು ಸಂಚಿತವಾಗಿದೆ. ಕಾಮನ್ಸೈಟ್‌ನ ನಿಕ್ಷೇಪವು ಆಂಧ್ರ, ಮೈಸೂರು ಮತ್ತು ಬರಿಸ್ಸಗಳಲ್ಲೂ ಇದೆ. ಉತ್ತಮ ಶ್ರೇಣಿಯ ಸಿಲೀಮನ್ಸೈಟ್‌ನ ಅದುರುಗಳು ಅಸಾಮ, ಮಧ್ಯ ಪ್ರದೇಶ ಹಾಗೂ ಮೈಸೂರುಗಳಲ್ಲಿ ಕಂಡು ಬಂದಿವೆ. ಅಸಾಮದ ನಿಕ್ಷೇಪಗಳಲ್ಲಿ ಎರಡೂವರೆ ಲಕ್ಷ ಮತ್ತು ಮಧ್ಯ ಪ್ರದೇಶದ ನಿಧಾನಗಳಲ್ಲಿ ಒಂದು ಲಕ್ಷ ಟನ್‌ಗಳಷ್ಟು ಖನಿಜವು ಸಂಚಿತವಾಗಿದೆ. ಮದ್ರಾಸದ ಸಲೇಮ ಜಿಲ್ಲೆ ಹಾಗೂ ಮೈಸೂರಿನ ಮೈಸೂರ್ ಜಿಲ್ಲೆಯಲ್ಲಿ ೧೦೦ ಅಡಿ ಆಳದ ವರೆಗೆ ಹಂಚಿದ ವಿಸ್ತೃತ ನಿಕ್ಷೇಪಗಳಲ್ಲಿ ಹೆಚ್ಚು ಕಡಮೆ ೧೧ ಕೋಟಿ ಟನ್‌ಗಳಷ್ಟು ಮೆಗ್ನೆಸೈಟ್ ಖನಿಜವು ಕೂಡಿಕೊಂಡಿದೆ, ಸದ್ಯ ನಮ್ಮ ಹುಟ್ಟುವಳಿಯ ಬಹುಭಾಗವು ಪರದೇಶಗಳಿಗೆ ನಿರ್ಯಾತವಾಗುತ್ತಾ ಇದೆ.

ಭಾರತವು ಕಲ್ಲಿದ್ದಲನ್ನು ಆಗೆಯುವುದಲ್ಲಿಯೂ ಹಿಂದೆ ಬಿದ್ದಿಲ್ಲ. ಗೊಂಡಾವನ ಕಲ್ಲಿದ್ದಲು ಉಚ್ಚ ಶ್ರೇಣಿಯದಾಗಿರುವುದರಿಂದ ಕೋಕ್ ನಿರ್ಮಾಣದಲ್ಲಿ ಅದು ಹೆಚ್ಚಾಗಿ ಬಳಕೆಯಾಗುತ್ತದೆ. ಗೊಂಡಾವನ ಕಣಿಯಲ್ಲಿನ ಮಹತ್ವಪೂರ್ಣ ಕಲ್ಲಿದ್ದಲ ಗಣಿಗಳು ಜರಿಯಾ, ಮತ್ತು ರಾಣೀಗಂಜ್‌ಗಳಲ್ಲಿಯೂ ಇವೆ. ಜನ್ಯೋತ್ಪಾದಕ ಕ್ಷೇತ್ರಗಳಲ್ಲಿ ಬೊಕಾರೊ; ಗಿರಿಡೀಹ್, ಕರನ ಪುರ, ವೇಂಚಘಾಟ ಉಮರಿಯಾ, ಸೋಹಾಗಪುರ, ಮೊದಲಾದುವು ಉಲ್ಲೇಖನೀಯವಾಗಿವೆ. ತೃತೀಯ ಜೀವಕಲ್ಪಕಾಲದ ಇದ್ದಲು ಅಸಾಮ, ಕಾಶ್ಮೀರ, ರಾಜಸ್ಥಾನ, ಮದ್ರಾಸ, ಮತ್ತು ಕಚ್ಛಗಳ ನಿಕ್ಷೇಪಗಳಲ್ಲಿ ಸಂಚಿತವಾಗಿರುವುದು. ನಾಲ್ಕಡಿಗಿಂತ ಅಧಿಕ ದಪ್ಪಗಿರುವ ಶಿಲೆಗಳಲ್ಲಿ ಒಂದುಸಾವಿರ ಅಡಿಗಳಷ್ಟು ಆಳದವರೆಗೂ ಉಪಯುಕ್ತವಾದ ಗೊಂಡವನ ಇದ್ದಲು ಸುಮಾರು ೨೦ ಅರಬ ಟನ್‌ಗಳಷ್ಟಿದ್ದು, ಇದರಲ್ಲಿ ಎರಡು ಟನ್‌ಗಳನ್ನು ಕೋಕ್ ನಿರ್ಮಾಣ ಕಾರ್ಯದಲ್ಲಿ ಬಳಸಲು ಸಾಧ್ಯವಿದೆ ಎಂದು ತಿಳಿದು ಬಂದಿದೆ. ತೃತೀಯ ಜೀವಕಲ್ಪದ ಕಲ್ಲಿದ್ದಲು ವತ್ತು ಲಿಗ್ನೈಟ್ ಸುಮಾರು ೪೫ ಅರಬ ಟನ್‌ಗಳಷ್ಟಿದೆಯೆಂದು ಅಂದಾಜ ಮಾಡಿದ್ದಾರೆ. ದ್ವಿತೀಯ ಪಂಚವಾರ್ಷಿಯ ಯೋಜನೆಯಲ್ಲಿ ದೇಶದ ಔದ್ಯೋಗಿಕ ವಿಕಾಸದೊಂದಿಗೆ ಕಲ್ಲಿದ್ದಲ ಉತ್ಪಾದನೆಯೂ ೩೮ ಕೋಟಿ ಟನ್ನುಗಳಿಂದ ೬ ಕೋಟಿ ಟನ್ನುಗಳವರೆಗೆ ಬೆಳೆಯುವ ಸಂಭವವಿದೆ.

ಕಲ್ಲೆಣ್ಣೆಯೂ ಖನಿಜಸಂಪತ್ತುಗಳಲ್ಲಿ ಒಂದು ಮುಖ್ಯ ಸ್ಥಾನವನ್ನು ಆಕ್ರಮಿಸಿದೆ. ಡಿಗಬೋಯಿ ತೈಲಕ್ಷೇತ್ರವು ಭಾರತದ ಏಕ ಮಾತ್ರ ತೈಲ ಕ್ಷೇತ್ರವಾಗಿದೆ. ಇದರಲ್ಲಿ ದೇಶದ ಆವಶ್ಯಕತೆಗಳಲ್ಲಿ ನೂರಕ್ಕೆ ಏಳರಷ್ಟು ಮಾತ್ರ ಪೂರ್ತಿಯಾಗುತ್ತದೆ. ಅದರ ಸಮೀಪದಲ್ಲಿ 'ಡ್ರಿಲಿಂಗ್' ಕಾರ್ಯಗಳ ಅಧಾರದ ಮೇಲೆ ನಹೋರಕಟಿಯಾ ಕ್ಷೇತ್ರದಲ್ಲಿ ಆಶಾಜನಕ ಸಂಗಾಮವು ಕಂಡು ಬಂದಿದೆ. ಇದರ ಫಲಸ್ವರೂಪವಾಗಿ ಪೆಟ್ರೋಲಿಯಮಿನ ಉತ್ಪಾದನೆಯು ೧೯೫೬ರ ಸುಮಾರಿಗೆ ೫೦ ಲಕ್ಷ ಟನ್ನುಗಳಷ್ಟಾಗುವ ನಿರೀಕ್ಷೆಯಿದೆ. ಗಂಗಾ ಮತ್ತು ಬ್ರಹ್ಮಪುತ್ರ ನದಿಗಳ ವೈದ್ವಾನ ಪ್ರದೇಶದಲ್ಲಿ ರಾಜಸ್ಥಾನ ಮತ್ತು ಸಂಜಾಬುಗಳಲ್ಲಿ ಭೂತಾತ್ವಿಕ ಮತ್ತು ಭೂಭೌತಿಕ ಸಂಶೋಧನೆಗಳು ನಡೆಯುತ್ತಾ ಇವೆ. ಪಂಜಾಬದ ಜ್ವಾಲಾಮುಖಿ ಕ್ಷೇತ್ರದಲ್ಲಿ ರುಮೇನಿಯನ್ ಪೈಜ್ಞಾನಿಕರ ಮೇಲ್ವಿಚಾರಣೆಯಲ್ಲಿ ೯,೦೦೦ ಅಡಿಗಳಷ್ಟು ಆಳದ ವರೆಗೆ ತೋಡುವ ಕಾರ್ಯವು ಶೀಘ್ರದಲ್ಲಿಯೇ ಪ್ರಾರಂಭವಾಗಲಿದೆ. ಜ್ವೆರಲ್ಟ್‌ರದಲ್ಲಿ ಫ್ರೆಂಚ ಕಂಪನಿಗಳ ಮುಖಾಂತರ ಭೂಭೌತಿಕ ಸರ್ವೇಕ್ಷಣ ಕಾರ್ಯ ಬಿಹಾರ ವೇಗದಿಂದ ನಡೆಯುತ್ತದೆ. ಕಚ್ಛದ ಸಂಬಾತದ ಸಮೀಪದಲ್ಲಿಯೇ ರಶ್ಯನರ ನೆರವಿನಿಂದ 'ಡ್ರಿಲಿಂಗ್' ಕಾರ್ಯವು ನಡೆಯಲಿದೆ. ಸ್ಟೈನ್‌ಬಕ್ ಕಂಪನಿಯ ಮೂಲಕ ಪಶ್ಚಿಮ ಬಂಗಾಲದ ಸರ್ವೇಕ್ಷಣಕಾರ್ಯವು ಸಮಾಪ್ತಗೊಂಡು ಜನವರಿ ಮಾಸದಲ್ಲಿ ಕಲಕತ್ತೆಯ ಉತ್ತರದಲ್ಲಿ ಕೆಲವೇ ಮೈಲುಗಳ ದೂರದಲ್ಲಿ ಡ್ರಿಲಿಂಗ್‌ನ ಕಾರ್ಯವು ಆರಂಭವಾಗಬಹುದು. ಸ್ಟೆಂಡರ್ ವಾಕ್ಯೂಂ ಹಾಗೂ ಬರ್ಮಾಶೆಲ್ ಕಂಪನಿಗಳ ದ್ವಾರಾನಿಯೋಜಿತವಾಗಿರುವ ಎರಡು ಎಣ್ಣೆ ಶುದ್ಧೀಕರಣದ ಯೋಜನೆಗಳು ಬೊಂಬಾಯಿ ಸಮೀಪದ ಟ್ರಾಂಬೇ ದ್ವೀಪದಲ್ಲಿ ಸ್ಥಾಪನೆಹೊಂದಿ ಮೂರನೆಯದಾದ ಕಾಲ್ಟೆಕ್ಸ್‌ನ ಯೋಜನೆಯು ವಿಶಾಖಪಟ್ಟಣದಲ್ಲಿ ಶೀಘ್ರದಲ್ಲಿಯೇ ಪ್ರಾರಂಭವಾಗಲಿದೆ. ಇದ್ದಲಿನಿಂದ ಪೆಟ್ರೋಲಿಯಮನ್ನು ತಯಾರಿಸುವ ಯೋಜನೆಯೂ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಪೂರ್ತಿಯಾಗುವುದು. ಇದರಿಂದ ೩ ಲಕ್ಷ ಟನ್‌ಗಳಷ್ಟು ಪೆಟ್ರೋಲಿಯಂ ದೊರೆಯಬಹುದು. ಭಾರತದಲ್ಲಿ 'ಪೆಟ್ರೋಲಿಯಂ ಎಂಡ್ ನೇಚರಲ್ ಗೇಸ್' ಆಯೋಗದ ಸ್ಥಾಪನೆಯಾಗಿದೆ. ಯೋಜನೆಗಳೆಲ್ಲ ಪೂರ್ತಿ ಕಾರ್ಯರೂಪಕ್ಕೆ ಬಂದಮೇಲೆ ಭಾರತದಲ್ಲಿ ಪೆಟ್ರೋಲಿಯಮಿನ ಭವಿಷ್ಯವು ಉಜ್ವಲವಾಗುವುದೆಂಬ ನಿರೀಕ್ಷೆಯಿದೆ.

ಪರಮಾಣು ಶಕ್ತಿ ಖನಿಜದ ದೃಷ್ಟಿಯಿಂದ ಭಾರತದ ಸ್ಥಿತಿಯು ಸಾಕಷ್ಟು ಸುದೃಢವಾಗಿದೆ. ಪಿಚಲೈಡ್ ಎಂಬ ಯುರೇನಿಯಂ ಖನಿಜವು ಬಿಹಾರ ಮತ್ತು ರಾಜಸ್ಥಾನಗಳಲ್ಲಿ ದೊರೆಯುತ್ತದೆ. ಪರಮಾಣು ಶಕ್ತಿ ಆಯೋಗದ ಅಂದಾಜಿನಾರ ದೇಶದಲ್ಲಿ ೧೪ ಸಾವಿರ ಟನ್ನುಗಳಷ್ಟು ಯುರೇನಿಯಮಿನ ಉತ್ಪಾದನೆಯಾಗುವ ನಿರೀಕ್ಷೆಯಿದೆ. ಮೊನೆಜಾಯಿಟ್ ಖನಿಜವು ತಿರುವಾಂಕೂರ ಸಮುದ್ರದ ತಟದ ಮಳಲಿನಲ್ಲಿ ದೊರೆಯುತ್ತದೆ. ವಿಶ್ವದ ಈ ಮಹತ್ವ ಪೂರ್ಣ ನಿಕ್ಷೇಪಗಳಲ್ಲಿ ಸುಮಾರು ೧೮೦ ಸಾವಿರ ಟನ್ ಖನಿಜವು ಸಂಚಿತವಾಗಿದೆ. ಬೇರಿಲ್ ಮತ್ತು ಗ್ರೇಫಾಯಿಟ್‌ನ ಉಪಯೋಗವು ಪರಮಾಣು ಶಕ್ತಿ ನಿರ್ಮಾಣದಲ್ಲಿ ಸಹಾಯಕವಾಗುತ್ತವೆ ಬೇರಿಲ್ ಖನಿಜವು ರಾಜಸ್ಥಾನ ಬಿಹಾರ ಮತ್ತು ಆಂಧ್ರಗಳಲ್ಲಿ ವಿಪುಲವಾಗಿ ಸಿಗುತ್ತದೆ.

ಹೀಗೆಭಾರತದ ಖನಿಜ ಸಂಪತ್ತು ಹೇರಳವಾಗಿದೆ. ಅವುಗಳ ಪ್ರಯೋಜನವನ್ನು ಸಾಕಷ್ಟು ಪಡೆಯುವ ಯತ್ನವು ನಡೆಯುತ್ತಿದೆ. ಔದ್ಯೋಗೀಕರಣ ಕಾರ್ಯದಲ್ಲಿ ಈ ಖನಿಜಗಳು ಅತ್ಯಗತ್ಯವಾಗಿದ್ದು, ಅವೂ ಅಭಿವೃದ್ಧಿ ಹೊಂದುವುವು. ಆಗ, ದೇಶದ ಖನಿಜ ಸಂಪತ್ತಿನ ನಿರ್ಧರತೆಯಾಗುವುದು.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಿಖ ಠೇವಣಾತಿ.		
24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK, LTD. MULKI

ಓದುಗರೊಡನೆ ಎರಡು ಮಾತು

ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಈಗ ೧೭೫ ವರ್ಷಗಳಿಂದ ನಡೆಯುತ್ತಿರುವ ಪ್ರಜಾತಂತ್ರದ ಪ್ರಾಯೋಗವು ಇತರ ಎಷ್ಟೋ ದೇಶಗಳಿಗೆ ನಿದರ್ಶನ, ಸ್ಫೂರ್ತಿ. ಹೀಗಿರುವಾಗ ಆದರ್ಶವೆಂದು ನಾವು ನಮ್ಮ ನಮ್ಮ ದೇಶಗಳಲ್ಲಿ ಒಪ್ಪಿಕೊಂಡಿರುವ ವಾದ, ರಾಜಕೀಯ ಪದ್ಧತಿ ಮತ್ತು ಜೀವನ ಮಾರ್ಗದಲ್ಲಿರುವ ಹುಳುಕುಗಳನ್ನು, ಅದು ಸಿಟ್ಲರ್‌ರಾಹಿ ಮತ್ತು ಸಾಮ್ಯವಾದಿ ಅಧಿಕಾರರಾಹಿಯ ಅನಂತರದ ವ್ಯಸಂಚದ್ದು ಇದಿರಿಸಬೇಕಾದ ಮಷ್ಟ ಶಕ್ತಿಗಳ ಕೆಸೆಯಿಂದ ಪರಿಣತವಾದ ಹಗೆಯನ್ನು, ಬದಲಾವಣೆಯಾಗುತ್ತಿರುವ ಸನ್ನಿವೇಶದಲ್ಲಿ ಅದರ ಆಂತರಿಕ ದೌರ್ಬಲ್ಯವನ್ನು ಬಹಳ ವಿವೇಚನಾಪೂರ್ವಕವಾಗಿ ವಿಶ್ಲೇಷಿಸುವ

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ವಿಚಾರವಂತರಿಗೆ ಇದು ಒಂದು ಔತಣ.

ಬರೆದವರು: ಜಾನ್ ಡ್ಯೂಯಿ

ಅನುವಾದಕ: ಕು. ಶಿ. ಹರಿದಾಸ ಭಟ್ಟ

ಪುಟಗಳು: ೮ + ೧೮೮. ಬೆಲೆ: ಎರಡು ರುಪಾಯಿ

ಇಂದೇ ಬರೆಯಿರಿ:

ನವಯುಗ ಎಂಟರ್‌ಪ್ರೈಸ್, ಲಿಮಿಟೆಡ್

ನವಯುಗ ಪ್ರೆಸ್, ಉಡುಪಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 90/1957.

ದಿ. ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ —ವಾದಿ

ಮತ್ತು

ಎಫ್. ಜಿ. ಆಂದ್ರಾದ ಕೂಡಾ —ಪ್ರತಿವಾದಿರು

ಇವರೊಳಗೆ

1ನೇ ಪ್ರತಿವಾದಿ ಎಫ್. ಜಿ. ಆಂದ್ರಾದ ಉಡುಪಿ ಕಸಬಾ ಕಾಡಬೆಟ್ಟು ಇವರಿಗೆ,

ಪ್ರತಿವಾದಿರು ವಾದಿಗೆ ತಾರೀಕು 8-6-55 ರಲ್ಲಿ ರೂಪಾಯಿ 2500/- ಕೈ ಬರೆಕೊಟ್ಟ ಡಿಮಾಂಡ್ ನೋಟಿನ ಅಸಲು, ಬಡ್ಡಿ, ರಿ. ನೋಟೀಸು ಖರ್ಚು ಕೂಡಾ ರೂಪಾಯಿ 2558—4—0 ಕೈ ವಾದಿಯ ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯು ತಾರೀಕು 6-7-57ಕ್ಕೆ ತನಬಿಗೆ ಇಡೋಣಾಗಿಯದೆ. ಆ ದಿವಸ ಸದರಿ 1ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಯಸಿಕೆಯಿದ್ದರೆ ಅತವ ಸ್ವೀರ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನ ಸಲ್ಪಡುವದೆಂದು ಈ ಮೂಲಕ ತಿಳಿಯಪಡಿಸೋಣಾಗಿಯದೆ.

M Damodar Kamath.
Advocate for Plff.

ಉಡುಪಿ, ತಾ. 18—6—1957.

ಸಮಾಜವಾದ ಸಾಧನೆ

(೧೫ನೇ ಪುಟದಿಂದ)

ನಮ್ಮ ಜನರನ್ನು ಉಣ್ಣಿಸಲು ಸಾಕಾಗುವುದಿಲ್ಲ ನಾವು ಸ್ವಲ್ಪ ಅಧಿಕಾಂಶವನ್ನೂ ಉತ್ಪಾದಿಸಿಕೊಳ್ಳದೆ ನಾವೆಂತು ಮುಂದಡಿಯಿಟ್ಟೇವು? ನಾವು ಈ ರುಷ್ಟ ವೃತ್ತದಿಂದ ಹೊರಬರಲೇ ಬೇಕು. ಆದುದರಿಂದ ನಾವು ಇಂದು ಅಧಿಕ ಹೊರೆಯನ್ನು ಹೊರಬೇಕಾಗಿ ಬರದರೂ ಅದು ಅಧಿಕಾಂಶದಲ್ಲಿ ನಮ್ಮ ಮುಂದಿನ ಜೀವಮಾನ ಕಾಲಕ್ಕೆ, ನಮ್ಮ ಮುಂದಿನ ಪೀಳಿಗೆಯ ಕಾಲಕ್ಕೆ ಸಹಾಯವಾಗುವುದೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ಈ ವೃತ್ತದಿಂದ ಪಾರಾಗಲು, ಈ ಆತ್ಮನಿರಸನ ಮತ್ತು ಕಠೋರತೆಯ ಕಾಲದಲ್ಲಿ ಸ್ವಲ್ಪವನ್ನಾದರೂ ಉಳಿಸುವಂತೆ ಮಾಡಲು, ಬದ್ಧಕಂಕಣರಾಗುವುದು ಅತ್ಯಂತಾವಶ್ಯಕವಾಗಿದೆ.

ನಾವು ಪ್ರತಿಯೊಂದಕ್ಕೆ ಸು. ೧೫೫ ಕೋಟಿ ರೂಪಾಯಿ ವೆಚ್ಚದಲ್ಲಿ ಕೆಲಪೊಂದು ದೊಡ್ಡ ಉಕ್ಕಿನ ಕಾರಖಾನೆಗಳನ್ನು ಕಟ್ಟುತ್ತಲಿದ್ದೇವೆ. ತಾತ್ಕಾಲಿಕವಾಗಿ, ಅಂತಹ ಬೃಹತ್ಪರಿಮಾಣದಲ್ಲಿ ತೊಡಗಿಸಿದ ಹಣಕ್ಕೆ ಸಾಕಷ್ಟು ಪ್ರತಿಫಲವು ದೊರೆಯುವುದಿಲ್ಲ. ನಾವು ಬಕ್ರಾನಂಗಾಲ್, ನಾಮೋದರ ಕಣಿವೆ ತುಂಗಭದ್ರಾ ಮೊದಲಾದುವುಗಳಲ್ಲಿ ಕೋಟಿಗಟ್ಟಲೆ ವೆಚ್ಚಮಾಡಿದೆವು. ಆದರೆ, ಅವುಗಳಿಂದ ನಾವು ಯಾವ ಲಾಭವನ್ನೂ ಇದುತನಕ ಪಡೆದಿಲ್ಲ. ಬಕ್ರನಂಗಾಲ್ ಒಂದರಲ್ಲಿಯೇ ಕೂಲಿಗಾರರ ವೇತನ, ಒಡೆದ ವಸ್ತುಗಳ ಕೊಳ್ಳೋಣ ಮೊದಲಾದುವುಗಳಿಗೆ ಪ್ರತಿದಿನ ಎಂಟು ಲಕ್ಷ ರೂಪಾಯಿಗಳು ಬೇಕಾಗುತ್ತವೆ! ರಾಷ್ಟ್ರವು ತೀವ್ರ ಪ್ರತಿಫಲಾಪೇಕ್ಷೆಯಿಲ್ಲದೆ ಈ ಸಂಕಟವನ್ನನುಭವಿಸಲೇಬೇಕು.

ಆದುದರಿಂದ, ಈ ಕ್ಷಣದಲ್ಲಿ ನಮ್ಮ ಸಂಪೂರ್ಣ ಶಕ್ತಿಯು ದೊಡ್ಡ ದೊಡ್ಡ ಅಭಿವೃದ್ಧಿ ಯೋಜನೆಗಳನ್ನು ನಿರ್ಮಿಸುವುದರಲ್ಲಿಯೇ ಕೇಂದ್ರೀಕೃತವಾಗಿದೆ ಯೆಂಬುದನ್ನೂ, ನಾವು ಈಗ, ಅಂತಹ ಸನ್ನಿವೇಶದಲ್ಲಿರುವೆವೆಂಬುದನ್ನೂ ಅವಶ್ಯ ತಿಳಿದುಕೊಳ್ಳಬೇಕು. ಇನ್ನು ಕೆಲವೇ ವರ್ಷಗಳಲ್ಲಿ ನಾವು ಈಗ ವಹಿಸಿ ಈ ಹಿಂದೆ ಬಿತ್ತಿದುದರ ಫಲವನ್ನು ಕೊಯ್ಯುವೆವೆಂಬುದನ್ನು ಜ್ಞಾಪಕದಲ್ಲಿಡಬೇಕು. ಒಮ್ಮೆ ಪ್ರತಿಫಲವು ಪ್ರಾರಂಭವಾಯಿತೆಂದರೆ, ನಮ್ಮ ಸಂಕಷ್ಟಗಳೆಲ್ಲವೂ ಸರಳಗೊಂಡಂತೆ, ಆಗ ನಮ್ಮ ಆಯವು ವ್ಯಯದ ವೆಚ್ಚಕ್ಕಿಂತ ಹೆಚ್ಚಿಗೆಯದಾಗುವುದು. ನಮ್ಮ ರಾಷ್ಟ್ರೀಯ ಆದಾಯವೂ ಹೆಚ್ಚಿ ದೇಶದ ಪ್ರಜೆಗಳೂ ಇದರ ಲಾಭವನ್ನು ಹೊಂದುವರು. ಹೀಗಾದಾಗ, ದೇಶವೂ ಅಭಿವೃದ್ಧಿಯಾಗುವುದು."

ಇದು ಭಾರತದ ಪ್ರಧಾನಿ ಶ್ರೀ ನೆಹರೂರವರು ಇತ್ತೀಚೆಗೆ ದಿಲ್ಲಿಯಲ್ಲಿ ನಡೆದ ಕಾಂಗ್ರೆಸ್ ಮಹಿಳಾ ಶಾಸಕರ ಸಭೆಯಲ್ಲಿ ಮಾಡಿದ ಭಾಷಣದ ಸಾರ. ಅಖಿಲ ಭಾರತ ಕಾಂಗ್ರೆಸ್ ಮುಖಪತ್ರವಾದ "ಇಕನಾಮಿಕ್ ರಿವ್ಯೂ"ನಲ್ಲಿ ಇದು ಪ್ರಥಮ ಬಾರಿಗೆ ಪ್ರಕಟವಾಗಿದೆ. ಒಂದು ರಾಷ್ಟ್ರವನ್ನು ಮನಾರಚಿಸುವುದು ತೀರಾ ಪ್ರಯಾಸದ ಕಾರ್ಯ. ಈ ಸಂದರ್ಭದಲ್ಲಿ ಜನತೆಯ ಕರ್ತವ್ಯವನ್ನು ಪ್ರಧಾನಿಗಳು ತಿಳಿಸಿ, ಒಪ್ಪಿಗೆ ಮತ್ತು ಸಹಕಾರಗಳ ಪ್ರಾಧಾನ್ಯವನ್ನು ಒತ್ತಿ ಹೇಳಿದ್ದಾರೆ. ದೇಶದ ಪರಿಸ್ಥಿತಿಯನ್ನು ಕಾಂಗ್ರೆಸ್ ಸ್ವೀಕರಿಸಿದ ಸಮಾಜವಾದ ಪದ್ಧತಿಯಿಂದ ಮಾತ್ರ ಸುಧಾರಿಸುವುದು ಸಾಧ್ಯವೆಂಬುದನ್ನು ಸಮರ್ಥಿಸಿದ್ದಾರೆ. ನೆಹರೂರವರ ಕೇಳಿಕೆಗಳನ್ನು ಮಾನ್ಯ ಮಾಡಿ, ದೇಶದ ಅಭಿವೃದ್ಧಿ ಯೋಜನೆಗಳಿಗೆ ಬೆಂಬಲ ನೀಡುವುದು ಭಾರತೀಯನ ಕರ್ತವ್ಯ.

ಹೆತ್ತವರ ಕರ್ತವ್ಯ

ಮಕ್ಕಳು ಸದಾಚಾರ ಸಂಪನ್ನರಾಗುವಂತೆ ಜಾಗ್ರತೆ ವಹಿಸಬೇಕು.

ಸದಾಚಾರ ಸಂಪನ್ನರಾದ ಮಕ್ಕಳಿಂದಲೇ ರಾಷ್ಟ್ರದ ಕಲ್ಯಾಣವಾಗುವುದು, ಎಂದಮೇಲೆ ಮಕ್ಕಳಲ್ಲಿ ಸದಾಚಾರವನ್ನು ಸುದೃಢವಾಗಿ ಬೆಳೆಸುವ ಹೆತ್ತವರ ಹೊಣೆಗಾರಿಕೆಯು ಅತ್ಯಂತ ಮಹತ್ವದ್ದು. ಯಾವ ರಾಷ್ಟ್ರದ ಮಕ್ಕಳು ಸದಾಚಾರಿಗಳೂ, ಬಲಿಷ್ಠರೂ, ದೃಢಕಾಯರೂ, ಪರಿಶ್ರಮಿಗಳೂ, ವಿದ್ವಾಂಸರೂ, ಆಗುವರೋ ಆ ರಾಷ್ಟ್ರವು ಆದರ್ಶ ಸುಸಂಪನ್ನ ಸುಸನ್ಮೃದ್ಧ ಮತ್ತು ಸಮುನ್ನತ ರಾಷ್ಟ್ರವೆಂದು ಕೀರ್ತಿಗಳಿಸುವುದು. ಇಂದಿನ ಚಿಕ್ಕ ಮಕ್ಕಳೇ ಮುಂದಿನ ರಾಷ್ಟ್ರದ ಜನಾಂಗವಾಗಿರುವದೆಂಬುದನ್ನು ನಾವು ಮರೆಯಬಾರದು. ಈ ಕರ್ಣಧಾರಿಗಳು ಎಷ್ಟು ಸುಯೋಗ್ಯರಾಗುವರೋ ಅಷ್ಟೇ ಆ ರಾಷ್ಟ್ರವು ಸೌಭಾಗ್ಯಶೀಲವೆನಿಸುವುದು. ಸುಯೋಗ್ಯರಾಗುವ ಬದಲು ಅವರು ಅಯೋಗ್ಯರಾದರೆಂದರೆ ಅಂತಹ ರಾಷ್ಟ್ರದ ಅಧಃಪತನವಾಗುವುದು.

ಚಿಕ್ಕ ಮಕ್ಕಳ ರೂಪದಲ್ಲಿ ನಮಗೆ ಇಂದು ತೋರುವ ಬಾಲಕರಲ್ಲಿ ಅಪರಿಮಿತ ಶಕ್ತಿಯು ಸಂಚಯವಾಗಿದೆ. ವಿಶ್ವವನ್ನೇ ಪರಿವರ್ತಿಸುವ ಅಪೋಘ ಚೈತನ್ಯವು ಇಂದಿನ ಚಿಕ್ಕ ಪೋರರಲ್ಲಿ ಸುಪ್ತವಾಗಿದೆ. ಸಮಯ ಬಂದಾಗ, ಪ್ರಪಂಚವನ್ನೇ ಬದಲಾಯಿಸುವ ಮಿಂಚಿನ ಧಾರೆಯು ಈ ಚಿಕ್ಕ ಕಿಡಿಗಳಿಂದ ಪ್ರವಹಿಸುವುದು.

ಯಾವ ರೀತಿ ಮಕ್ಕಳ ಲಾಲನೆ, ಪಾಲನೆ, ಅಶನವಸನ ಹಾಗೂ, ಶಿಕ್ಷಣದ ಕಡೆಗೆ ಹೆತ್ತವರು ಆಸಕ್ತಿಯನ್ನು ವಹಿಸುವರೋ ಅಷ್ಟೇ ಆಸಕ್ತಿಯನ್ನು ಅವರ ನಡೆನುಡಿಯನ್ನು ರೂಪಿಸುವುದರ ಕಡೆಗೂ ವಹಿಸಬೇಕಾದುದು ಅವರ ಕರ್ತವ್ಯವಾಗಿದೆ. ಕೆಟ್ಟವಾಗಿರದ ಕಡೆಗೆ ಆಕರ್ಷಿತವಾಗುವ ಮಕ್ಕಳನ್ನು ತಕ್ಕ ಸಮಯದಲ್ಲಿ ಸನ್ಮಾರ್ಗಕ್ಕೆ ಹೆಚ್ಚುವ ಕಡೆಗೆ ಹೆತ್ತವರ ವಿವೇಕ ಪ್ರದರ್ಶನವಾಗಬೇಕು. ಚಿಕ್ಕ ಪ್ರಾಯದಲ್ಲಿ ಮೊಳೆತ ಗುಣನಡತೆಗಳೇ ಮಗುವಿನ ಭವಿಷ್ಯವನ್ನು ರೂಪಿಸುವುವು.

ನಮ್ಮ ಪ್ರಾಚೀನ ಸಂಸ್ಕೃತಿ ಹಾಗೂ ಸಭ್ಯತೆಗಳು ಧೂಳಿಡೂಸರವಾಗದಂತೆ, ಸ್ವದೇಶದ ಚರಿತ್ರೆಯ ಕಲಂಕಿತವಾಗದಂತೆ ಮಕ್ಕಳ ಗುಣನಡತೆಗಳನ್ನು ಎಳೆ ಪ್ರಾಯದಲ್ಲೇ ಸುಂದರವಾಗಿ ರೂಪಿಸುವ ಅಮಿತ ಜವಾಬುದಾರಿಕೆ ಹೆತ್ತವರ ಮೇಲಿದೆ. ಅದನ್ನು ಹೆತ್ತವರು ಯಾವ ಕಾಲಕ್ಕೂ ಮರೆಯಬಾರದು. ಇಂದಿನ ನವಯುವಕರಲ್ಲಿ ಚಾರಿತ್ರ್ಯದ ಬದಲು ಹೀನತೆಯೇ ಹೆಚ್ಚಾಗಿ ಕಂಡುಬರುತ್ತದೆ. ಇದರ ಮುಖ್ಯ ಕಾರಣವು ಬಾಲ್ಯ ಕಾಲದ ಅನುಶಾಸನಹೀನತೆ.

ತಮ್ಮ ಮಕ್ಕಳನ್ನು ಯೋಗ್ಯ ಶಿಕ್ಷಣಾಲಯಗಳಿಗೆ ನೇರಿಸಿ ಉಚಿತವಾದ ಶಿಕ್ಷಣವನ್ನು ಅವರಿಗೆ ದೊರೆಯುವಂತೆಸಗುವುದು ಮಾತಾಪಿತೃರ ಆದ್ಯ ಕರ್ತವ್ಯವಾಗಿದೆ. ಇತರ ವಿಷಯಗಳ ಜೊತೆಯಲ್ಲಿ ಸ್ವದೇಶದ ಪ್ರಾಚೀನ ಉಜ್ವಲ ಇತಿಹಾಸ ಹಾಗು ನಮ್ಮ ಪೂರ್ವಜರ ವಿಷಯವಾದ ಸಮುಚಿತ ಜ್ಞಾನವೂ ಪ್ರಾಪ್ತಿಯಾಗುವಂತೆ ಸಿಗಬೇಕು. ಕಾರಣ, ಹೀಗೆ ಮಾಡುವುದರಿಂದಲೇ ಮಕ್ಕಳಿಗೆ ನಮ್ಮ ಪ್ರಾಚೀನ ಸಂಸ್ಕೃತಿ ಹಾಗೂ ಸಭ್ಯತೆಗಳನ್ನು ಸಮ್ಯಕ್‌ರೂಪದಲ್ಲಿ ಅರಿತುಕೊಳ್ಳಲು ಸಾಧ್ಯವಾಗುವುದು.

ಮಕ್ಕಳ ಕಡೆ ಕಠೋರವಾಗಿ ವರ್ತಿಸಿ ಶಿಕ್ಷಣದ ಕಡೆಗೆ ಅವರಿಗೆ ತಾತ್ಸಾರ ಉಂಟಾಗುವಂತೆ ಮಾಡುವ ಸಂಪ್ರದಾಯ ಎಷ್ಟಕ್ಕೂ ಒಳಿತಲ್ಲ. ಆದರೆ ಬದಲು ನಯವಿನಯಗಳಿಂದ ಅವರ ಒಲುಮೆಯನ್ನು ಸಂಪಾದಿಸಿ ಅವರು ಸದಾಚಾರ ಸಂಪನ್ನರಾಗುವಂತೆಸಗಿದರೆ ಅದರಿಂದ ದೊಡ್ಡ ಶ್ರೇಯಸ್ಸು ಸಂಪಾದಿಸಿದಂತಾಗುತ್ತದೆ. ಮಗುವು ಯಾವುದಾದರೊಂದು ಸತ್ಕಾರ್ಯದಲ್ಲಿ ಆಸಕ್ತಿ ತೋರಿಸಿ, ಕ್ರಿಯಾಶೀಲವಾದಾಗ, ಅಪಮಾನ ಇಲ್ಲವೆ ಅನುತ್ಸಾಹ ಬರುವಂತಹ ಯಾವುದೇ ಪ್ರಮೇಯಕ್ಕೆಡೆಗೊಡಬಾರದು.

ಬಾಲಕರ ಕುರಿತು ಹೇಳುವಾಗ "ಆದರ್ಶ" ಶಬ್ದದ ಅರ್ಥವು ಕನ್ನಡಿ ಅಥವಾ ದರ್ಪಣ ಎಂದಾಗುತ್ತದೆ. ನಾವು ಯಾವುದರಲ್ಲಿ ಮುಖವನ್ನು ನೋಡುತ್ತೇವೋ ಅದನ್ನು ಕನ್ನಡಿ ಎಂದು ಕರೆಯುತ್ತೇವೆ. ಮಸುಕಾಗದೆ ಶುಭ್ರವಾಗಿದ್ದರೇನೆ ಕನ್ನಡಿಯಲ್ಲಿ ಮುಖವು ಚೆನ್ನಾಗಿ ಕಾಣಿಸುತ್ತದೆ. ಯಾವುದೇ ರೀತಿಯಲ್ಲಿ ಕನ್ನಡಿಯು ಮಲಿನವಾಯಿತೆಂದರೆ ಮತ್ತೆ ಮುಖದ ಸೌಂದರ್ಯವು ಅಲ್ಲಿ ಸರಿಯಾಗಿ ಕಾಣಿಸುವಂತಿಲ್ಲ ಇದೇ ರೀತಿ ಮಕ್ಕಳನ್ನು ಆದರ್ಶರನ್ನಾಗಿ ಮಾಡಬೇಕಾದರೆ ಅವರ ತನು, ಮನ, ವಚನ ಹಾಗು ಚಾರಿತ್ರ್ಯವು ಶುದ್ಧವಾಗುವಂತೆಸಗುವುದು ಅತ್ಯಾವಶ್ಯಕ. ಇದಕ್ಕಿಂತಲೂ ಮುಖ್ಯವಾಗಿ ನಮ್ಮ ನಿತ್ಯ ಪ್ರಯೋಗದಲ್ಲಿ ಬರುವ ವಸ್ತುಗಳಲ್ಲಿಯೂ ಶುದ್ಧತೆ ಇರುವಂತೆ ಜಾಗ್ರತೆ ವಹಿಸಬೇಕಾದುದೂ ಅತ್ಯಗತ್ಯ. ಮಕ್ಕಳ ನಿವಾಸಸ್ಥಾನ, ಉಡಿಗೆ ತೊಡಿಗೆ, ಓದುವ ಪುಸ್ತಕಗಳು, ಅವರ ಆಟುಪಟಿಕೆಯ ಕ್ಷೇತ್ರಗಳ ವಾತಾವರಣ ಇದು ಸರಿಶುದ್ಧವಾಗಿವೆಯೋ ಎಂಬುದರಕಡೆಗೆ ಹೆತ್ತವರು ವಿಶೇಷ ಧ್ಯಾನ ಇಟ್ಟುಕೊಳ್ಳಬೇಕು.

ಮಾನಸಿಕ ಶುದ್ಧತೆ ಅರ್ಥಾತ್ ಹೃದಯದ ಕೋಮಲತೆ, ಶುದ್ಧತೆ ಹಾಗು ಪವಿತ್ರತೆಯೇ ಮಕ್ಕಳ ಜೀವನವನ್ನು ಆದರ್ಶಮಾಗಿ ರೂಪಿಸುವ ಸಾಧನವಾಗಿದೆ. ಬಾಯಿಯಿಂದ ಹೊರಡುವ ಮಾತುಗಳು ಸತ್ಯ, ವಿನಯಗಳಿಂದ ಕೂಡಿರುವುದೇ ವಚನ ಶುದ್ಧತೆಯಾಗಿದೆ. ಕೆಟ್ಟ ಕೆಲಸಗಳಿಂದ ದೂರವಾಗಿದ್ದು, ಯಾವಾಗಲೂ ಸತ್ಕಾರ್ಯದಲ್ಲಿ ಪ್ರವೃತ್ತರಾಗುವುದೇ ಚಾರಿತ್ರಿಕ ಶುದ್ಧತೆ. ಈ ವಚನಶುದ್ಧತೆ ಮತ್ತು ಚಾರಿತ್ರಿಕ ಶುದ್ಧತೆಗಳು ಬಾಲ್ಯದಿಂದಲೇ ಮಕ್ಕಳಲ್ಲಿ ಬೇರೂರಿರುವುದೆಂದರೆ ಅಂತಹ ಮಕ್ಕಳು ಮುಂದೆ ಆದರ್ಶ ಜನಾಂಗವಾಗಿ, ರಾಷ್ಟ್ರಕ್ಕೆ ಎಲ್ಲಿಗೆ ಸಹಾಯಕರಾಗುವರು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ॥ ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಪಿತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ. ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31

ನವಯುಗ

ಸಂಪುಟ ೩೬ VOL. 36

4—7—1957

ಸಂಚಿಕೆ ೪೩ NO. 43

ಅಣು ಸ್ಫೋಟನ

ಸಸ್ಯಾಹಾರಿ ಭಾರತೀಯರಿಗೆ ಪ್ರಾಯೋಗಿಕ ಸ್ಫೋಟನದ ಹಾನಿಗಳು ಹೆಚ್ಚಾಗಿವೆ!

ಅಖಿಲ ಭಾರತ ಆಕಾಶವಾಣಿಯವರು ಇದೇ ಜೂನ್ ೨೬ರಂದು ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿದ್ದರು. ಪ್ರಾಯೋಗಿಕ ಸ್ವರೂಪದಲ್ಲಿಯೇ ಆಗಲಿ ಅಣ್ವಸ್ತ್ರಗಳನ್ನು ಸ್ಫೋಟನಗೊಳಿಸುವುದರಿಂದುಂಟಾಗುವ ದುಷ್ಪರಿಣಾಮಗಳು ಯಾವ ಬಗೆಯಾಗಿವೆ ಎಂಬುದರ ಮೇಲೆ ನಾಲ್ಕು ಮಂದಿ ಪ್ರಸಿದ್ಧ ವಿಜ್ಞಾನಿಗಳು ತಮ್ಮ ಅಭಿಪ್ರಾಯವನ್ನು ಈ ವಿಚಾರಗೋಷ್ಠಿಯಲ್ಲಿ ಭಾಗ ವಹಿಸುತ್ತಾ ವ್ಯಕ್ತಪಡಿಸಿದರು. ಡಾ. ಕೆ. ಎಸ್. ಕೃಷ್ಣನ್, ಡಾ. ಡಿ. ಎಸ್. ಕೊಠಾರಿ ಮತ್ತು ಡಾ. ಖಾನೋಲ್ಕರ ಇವರು ತಮಗೆ ಕೇಳಲಾದ ಅನೇಕ ಪ್ರಶ್ನೆಗಳನ್ನು ಉತ್ಸಾಹದಿಂದ ಉತ್ತರಿಸಿದರು. ಅಣ್ವಸ್ತ್ರಗಳ ಸ್ಫೋಟನದಿಂದ ಉದ್ಭವಿಸಿದ ಸಮಸ್ಯೆಗಳನ್ನವರು ತಮ್ಮ ಅಗಾಧವಾದ ಪಾಂಡಿತ್ಯದ ಮೂಲಕ ವಿಧವಿಧವಾಗಿ ವಿಶ್ಲೇಷಿಸಿ ಹಾನಿಕಾರಕ ಪರಿಣಾಮಗಳ ಮೇಲೆ ವಿಶೇಷವಾದ ಪ್ರಕಾಶವನ್ನು ಚೆಲ್ಲಿದರು. ಸಸ್ಯಗಳ ಮೇಲೆ ಅಣುಚೂರ್ಣದಿಂದುಂಟಾಗುವ ಪರಿಣಾಮವೇನೆಂಬುದರಿಂದಾರಂಭಿಸಿ ಮನುಷ್ಯ ಶರೀರದ ಮೇಲೆ ಅದು ಮಾಡುವ ವಿಕೃತಕ್ರೀಡೆಗಳ ವರ್ಣನೆಯ ವರೆಗೆ ಈ ಪ್ರಶ್ನೆಗಳು ವ್ಯಾಪಿಸಿದ್ದುವೆಂದು ಹೇಳಬಹುದು. ಮುಖ್ಯವಾಗಿ ಎಶ್ಯದ ಜನ ಸಮುದಾಯದ ಮೇಲೆ ಅಣ್ವಸ್ತ್ರಗಳ ಪ್ರಾಯೋಗಿಕ ಸ್ಫೋಟನದಿಂದಾಗುವ ಹಾನಿಗಳ ಮೇಲೆಯೇ ಗಮನವೀಯಲಾಯಿತೆಂದರೂ ತಪ್ಪಾಗಲಿಕ್ಕಿಲ್ಲ.

ಕಳೆದ ಹನ್ನೆರಡು ವರ್ಷಗಳಿಂದ ಅಮೇರಿಕಾ, ರಶ್ಯಾ ಮತ್ತಿತ್ತೀಚೆಗೆ ಬ್ರಿಟನುಗಳು ಅಣ್ವಸ್ತ್ರ ಪ್ರಯೋಗಗಳನ್ನು ಬಿಡದೆ ನಡೆಸುತ್ತಿರುವುದರ ಪರಿಣಾಮವಾಗಿ ಜಗತ್ತಿನಲ್ಲಿ ಅಣುವಿಸರಣಾ ಕ್ರಿಯೆಯು ಹೆಚ್ಚಿಲ್ಲವೆ? ಎಂಬ ಪ್ರಶ್ನೆಯನ್ನು ಡಾ. ಕೃಷ್ಣನವರಿಗೆ ಕೇಳಿದಾಗ ಅವರು ನಿಶ್ಚಯವಾಗಿಯೂ ಹೆಚ್ಚಿದೆ ಎಂದುತ್ತರಿಸಿದರು. ಅವರ ಅಭಿಪ್ರಾಯದಲ್ಲಿ ನಮ್ಮಲ್ಲಿ ಹೆಚ್ಚಿನವರು ಈ ಗಾಗಲೇ ನಿಸರ್ಗ ಸಹಜವಾದ ಮತ್ತು ಅನಿವಾರ್ಯವಾದ ಅಣು ವಿಸರಣ ಕ್ರಿಯೆಗೆ ಒಳಪಟ್ಟಿದ್ದೇವೆ ಮತ್ತೀಗಾಗಲೇ ನಾವು ಒಂದು ಮಿತಿಯನ್ನು ಮುಟ್ಟಿದ್ದೇವೆ. ಉದಾಹರಣೆಗೆ ನಮ್ಮ ದೇಹದ ಅಂಗಾಂಗಗಳಲ್ಲಿಯೇ ಅಣುವಿಸರಣ ಕ್ರಿಯೆಯುಳ್ಳ ಅಂಗಾರ-ಗಳ ಮುಂತಾದ ಜಾತಿಯ ದ್ರವ್ಯಗಳು ಶೇಖರವಾಗಿವೆ. ಈ ಅಂಗಾರ-ಗಳ ಎಂಬ ದ್ರವ್ಯವು ವಾತಾವರಣದಲ್ಲಿರುವ ಸಾರಜನಕದಿಂದ ವಿಶ್ವವಿಸರಣ ಕ್ರಿಯೆಯ ಪರಿಣಾಮವಾಗಿ ಎಡೆಬಿಡದೆ ಹೆಚ್ಚುತ್ತಿರುತ್ತದೆ. ಸಸ್ಯಗಳು ಅಂಗಾರವನ್ನು ಹೆಚ್ಚಾಗಿ ಉಪಯೋಗಿಸುತ್ತವೆ. ಸಸ್ಯಗಳ ಮೂಲಕವಾಗಿ ನಾವು ಕೂಡಾ ಈ ಅಂಗಾರವನ್ನು ನಮ್ಮ ದೇಹ ಭಾಗಗಳ ಪೋಷಣೆಗಾಗಿ ಪಡೆದುಕೊಳ್ಳುತ್ತೇವೆ. ಹೀಗೆ ಪಡೆದುಕೊಳ್ಳಲಾದ ಅಂಗಾರದಲ್ಲಿ ಹೆಚ್ಚಿನ ಭಾಗವು ದೋಷರಹಿತವಾಗಿದ್ದರೂ ಸಹ ಒಂದು ಸ್ವಲ್ಪ ಭಾಗವು ಅಂಗಾರ-೧ಳರ ಜಾತಿಗೆ ಸೇರಿದ್ದು ನಮಗೆ ಅಪಾಯವನ್ನು ಮಾಡಲು ಸಾಕು. ಆದರೆ, ನಿಸರ್ಗ ಸಹಜವಾದಂತಹ ಈ ಕ್ರಿಯೆಯಿಂದ ಮನುಷ್ಯನು ತಪ್ಪಿಸಿಕೊಳ್ಳುವುದು ಬಹಳ ಕಷ್ಟ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಎದ್ದು ತೋರಬಹುದಾದಂತಹ ಯಾವುದೊಂದು ದುಷ್ಪರಿಣಾಮಗಳಲ್ಲದ ರೀತಿಯಲ್ಲಿ ಅಣುವಿಸರಣ ಕ್ರಿಯೆಯನ್ನು ಒಂದು ನಿರ್ಧಿಷ್ಟ ಮಟ್ಟದ ವರೆಗೆ ಸಹಿಸಿಕೊಳ್ಳಬಹುದು. ಈ ಮಿತಿ ಎಷ್ಟು ಎಂಬುದೇ ಯೋಚಿಸಬೇಕಾದ ವಿಷಯ. ಅಣ್ವಸ್ತ್ರಗಳ ಪ್ರಾಯೋಗಿಕ ಸ್ಫೋಟನಗಳ ಪರಿಣಾಮವಾಗಿ ಅಣುವಿಸರಣ ಕ್ರಿಯೆಯ ವೇಗ ಹೆಚ್ಚುತ್ತಿದೆಯಲ್ಲಾ ಎನ್ನುವುದೇ ಚಿಂತೆ. ಪ್ರಕೃತಿ ಸಹಜವಾದ ಅಣುವಿಸರಣ ಕ್ರಿಯೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವಂತಿಲ್ಲವಾದರೆ, ಅದಕ್ಕಾಗಿ ಯಾರನ್ನೂ ದೂರಲಾಗುವಂತಿಲ್ಲ. ಆದರೆ ಮನುಷ್ಯನೆ ಅಣು ವಿಸರಣ ಕ್ರಿಯೆಯ ವೇಗವನ್ನೆ ಹೆಚ್ಚಿಸುತ್ತಾ ಹೋಗುವನಾದರೆ, ಈ ಅಣುವಿಸರಣ ಕ್ರಿಯೆಯ ಪರಿಣಾಮವನ್ನು ತಡೆದುಕೊಳ್ಳುವಂತಹ ರಕ್ಷಣಾಮಿತಿಯನ್ನು ಮೀರಿ ಅಪಾಯ ಘಟಿಸುವುದಸಂಭವವಲ್ಲ. ಮತ್ತು ಇದೇ ವೇಗದಲ್ಲಿ ಪ್ರಾಯೋಗಿಕ ಸ್ಫೋಟನಗಳು ನಡೆದದ್ದೇ ಆದರೆ, ಆ ಮಿತಿ ಕ್ಷಿಪ್ರದಲ್ಲೇ ಮೀರಿಹೋಗಲೂಸಾಕು. ಅಂತೂ ಮನುಷ್ಯನಲ್ಲಿ ಒಂದು ರಕ್ಷಣಾ ಮಿತಿಯ ವರೆಗೆ ಅಣುವಿಸರಣ ಕ್ರಿಯೆಯನ್ನು ಸಹಿಸಿಕೊಳ್ಳುವ ಶಕ್ತಿಯುಂಟೆಂಬುದು ನಿಜ. ಹಾಗಿಲ್ಲದಿದ್ದರೆ ಕ್ಷ-ಕಿರಣ ಪರೀಕ್ಷೆ ಮತ್ತಿತರ ಅನೇಕ ವಿಧದ ವೈದ್ಯಕೀಯ ಪರೀಕ್ಷೆಗೊಳಪಡುವುದೇ ಅಸಾಧ್ಯವಾಗುತಿತ್ತೆಂದು ಡಾ. ಕೃಷ್ಣನ್ ಅಭಿಪ್ರಾಯಪಟ್ಟರು.

ಡಾ. ಕೊಠಾರಿಯವರು ಏಶ್ಯದ ಜನಸಾಂಗಕ್ಕಾಗುವ ಅಪಾಯವನ್ನು ವಿಶದೀಕರಿಸಿದರು. ಅಣುಚೂರ್ಣದ ಭೀಕರ ಪರಿಣಾಮಗಳ ಮಾಹಿತಿಯನ್ನಾಡುವವರೆಲ್ಲರೂ ತಮ್ಮ ದೃಷ್ಟಿಯಲ್ಲಿ ಮಾರಕ ಪ್ರಮಾಣದಲ್ಲಿ ಉಪಯೋಗಿಸುವಂತಹ ಅಣ್ವಸ್ತ್ರಗಳನ್ನೇ ದೃಷ್ಟಿಯಲ್ಲಿಟ್ಟುಕೊಂಡಿರುತ್ತಾರೆ ಮತ್ತು ಅದಕ್ಕಿಂತ ಸಣ್ಣದಾದ ತೀರಾ ಅಲ್ಪ ಪ್ರಮಾಣದ ಸ್ಫೋಟನಗಳನ್ನಲ್ಲ. ಏಕೆಂದರೆ, ತೀರಾ ಅಲ್ಪ ಪ್ರಮಾಣದ ಸ್ಫೋಟಗಳಿಂದ ಅಥವಾ ನಿಸರ್ಗ ಸಹಜ ಅಣುವಿಸರಣಾ ಕ್ರಿಯೆಯು ಪರಿಣಾಮವಾಗಿಯುಂಟಾಗುವ ಅಣುಚೂರ್ಣ ಹಾಗೂ ಅದರ ದುಷ್ಪರಿಣಾಮಗಳು ಗಣನೀಯವಾದುವಲ್ಲ. ಈ ಅಣುಚೂರ್ಣದಲ್ಲಿ ಸಹ ಸ್ಥಳೀಯ ವ್ಯಾಪ್ತಿಯುಳ್ಳದ್ದು ಮತ್ತು ಭೂಗೋಳದಲ್ಲೆಲ್ಲ ಪಸರಿಸುವಂತಹುದು ಎಂಬೆರಡು ಜಾತಿಯುಂಟು. ನಮಗೆ ನಿಜವಾಗಿ ಭಯವಿರುವುದು ಮತ್ತೆಲ್ಲರೂ ಗಂಭೀರವಾಗಿ ಆಲೋಚಿಸಬೇಕಾದದ್ದು. ಭೂಪ್ರದಕ್ಷಿಣೆಯನ್ನು ಮಾಡುವಂತಹ ಅಣುಚೂರ್ಣದ ದುಷ್ಪರಿಣಾಮ. ಅಣ್ವಸ್ತ್ರಗಳಲ್ಲಿಯೇ ಸ್ಫೋಟನಗೊಳ್ಳಲಿ, ಅವುಗಳಿಂದ ಸ್ಥಳೀಯವಾಗಿಯಷ್ಟೇ ಅಲ್ಲ, ಜಾಗತಿಕ ಸ್ವರೂಪದಲ್ಲಿ ಸಹ ಕೇಳು ಸಂಭವಿಸುತ್ತದೆ. ಅದಕ್ಕಾಗಿಯೇ ಎಲ್ಲರೂ ಅಣ್ವಸ್ತ್ರಗಳ ಪ್ರಾಯೋಗಿಕ ಸ್ಫೋಟನದಿಂದ ತೀರಾ ಚಿಂತಿತರಾಗಿದ್ದಾರೆ ಮತ್ತದು ಬಹಳ ಸ್ವಾಭಾವಿಕವಾದುದೂ ಹೌದು.

ಜಗತ್ತಿನಾದ್ಯಂತ ಹೆಚ್ಚುಗೆಯುಳ್ಳ ಅಣು ಚೂರ್ಣವು ನಾನಾ ಬಗೆಯ ಅಪಾಯಕಾರಿ ದ್ರವ್ಯಗಳಿಂದ ಕೂಡಿರುತ್ತದೆ. ಇವುಗಳೆಲ್ಲ ಭೀಷಣವಾದುದು ಮತ್ತು ಮಾನವ ಜನಾಂಗಕ್ಕೆ ಶತ್ರುಪ್ರಾಯವಾದುದು ಸ್ಟ್ರಾಂಟಿಯಂ-೯೦. ಈ ದ್ರವ್ಯವು ನೋಡಲಿಕ್ಕೆ ಕೇಲ್ಶಿಯಂ ದ್ರವ್ಯವನ್ನೇ ಹೋಲುತ್ತದೆ. ಕೇಲ್ಶಿಯಂ ದ್ರವ್ಯವು ನಮ್ಮ ಎಲುಬುಗಳ ರಚನೆಗೂ ಬೆಳವಣಿಗೆಗೂ ಆಧಾರಭೂತವಾದುದಾಗಿದೆ. ನಾವು ಸೇವಿಸಿದ ಆಹಾರ ವಸ್ತುಗಳಲ್ಲಿರಬಹುದಾದ ಕೇಲ್ಶಿಯಂ ದ್ರವ್ಯವು ಸಹಜವಾಗಿಯೇ ದೇಹದೆಲುಬುಗಳಿಗೆ ರವಾನೆಯಾಗುತ್ತದೆ. ಸ್ಟ್ರಾಂಟಿಯಂ-೯೦ ಸಹ ರಾಸಾಯನಿಕ ವಿಶ್ಲೇಷಣೆಯಲ್ಲಿ ಕೇಲ್ಶಿಯಂ ದ್ರವ್ಯವನ್ನೇ ಹೋಲುವದೆಂದು ಕಂಡುಬಂದಿರುವ ಪ್ರಯುಕ್ತ ಈ ಮಾನವ ಪ್ರಾಣಾಪಹಾರಿ ದ್ರವ್ಯವೂ ನಿರುಪದ್ರವಿ ಕೇಲ್ಶಿಯಂ ದ್ರವ್ಯದಂತೆ ಮಾನವ ದೇಹದೆಲುಬಿನಲ್ಲಿ ಶೇಖರಗೊಳ್ಳುತ್ತದೆ. ಎಷ್ಟರ ಮಟ್ಟಿಗೆ ಮನುಷ್ಯರ ಎಲುಬಿನಲ್ಲಿ ಸ್ಟ್ರಾಂಟಿಯಂ-೯೦ ಶೇಖರಗೊಳ್ಳುವುದು ಹೆಚ್ಚಾಯಿತೋ ಅಷ್ಟರ ಮಟ್ಟಿಗೆ ಅವನಿಗೆ ಅನಾಯುವು ಸಂಭವಿಸಿತೆಂದರ್ಥ.

ಆದರೆ ಈ ಸ್ಟ್ರಾಂಟಿಯಂ—೯೦ ಎಲ್ಲಿದೆಯಲ್ಲಿಯೂ ಒಂದೇ ರೀತಿಯಲ್ಲಿ ಪ್ರವೇಶಿಸುತ್ತದೆನ್ನುವ ಹಾಗಿಲ್ಲ. ಅಣುಚೂರ್ಣವು ಜಗತ್ತಿನೆಲ್ಲಾ ಪ್ರದೇಶಗಳಲ್ಲೂ ಏಕರೀತಿಯಾಗಿ ವ್ಯಾಪಿಸಬಹುದು. ಆದಾಗ್ಯೂ ಕೇಲ್ಶಿಯಂ ದ್ರವ್ಯವನ್ನು ಸಸ್ಯಜನ್ಯ ಆಹಾರಗಳಿಂದ ನೇರವಾಗಿ ಪಡೆಯುವಂತಹ ರಾಷ್ಟ್ರಗಳಿಗೆ ಸ್ಟ್ರಾಂಟಿಯಂ-೯೦ ಮಾಡುವ ಅನಾಹುತ ಅಧಿಕ. ನಾವು ಕೇಲ್ಶಿಯಮನ್ನು ಹಾಲಿನ ಮೂಲಕ ಧಾರಾಳವಾಗಿ ಪಡೆಯಬಹುದು. ಆದರೆ ನಮ್ಮಂ

(ಮುಂದೆ ಪುಟ ನೋಡಿರಿ)

THE VIJAYA BANK, LTD.

Estd: 1931.

—x—

The Mysore Branch of our Bank was opened on 21—6—1957.

A Branch in Bangalore will be opened shortly.

ಸ್ವದೇಶಾಭಿಮಾನ

ರಜಪೂತರಮಣಿ ವ ಹಾರಾಣ ಪ್ರತಾಪಸಿಂಹನ ತೇಜಸ್ವೀ ಜೀವನ

ಭಾರತದಲ್ಲಿ ಮುಸಲ್ಮಾನರ ಪಾದಾಕ್ರಮಣವನ್ನು ವಾಂತಿಭೇದಿಗೆ ಅನೇಕ ಇತಿಹಾಸಕಾರರು ಹೋಲಿಸಿದ್ದಾರೆ. ಅಕಬರ ಬಾದಶಹನ ಕಾಲದಲ್ಲಿ ಈ ಮಹಾ ಮಾರಿಯು ಅಖಂಡದೇಶದಲ್ಲಿ ಹರಡಿಕೊಂಡಿತು. ಅಕಬರನು ಸಾಮ, ದಾನ, ಭೇದ ಮತ್ತು ದಂಡಗಳೆಂಬ ಚತುರುಪಾಯಗಳಿಂದಲೂ ತನ್ನ ಕಾರ್ಯಗಳನ್ನು ನೆರವೇರಿಸುತ್ತ ತನ್ನ ಸಾಮ್ರಾಜ್ಯವನ್ನು ಇಡೀ ಭಾರತದಲ್ಲಿ ಹರಡಿಸಲು ಪ್ರಯತ್ನಿಸಿದನು. ಭಾರತೀಯರನ್ನು ಭಾರತೀಯರ ಉಚ್ಚಾಟನೆಗೆ ಆಹುತಿ ಮಾಡಿಸುವ ಉಪಾಯವನ್ನು ಬ್ರಿಟಿಷ ಸಾಮ್ರಾಜ್ಯ ಸ್ಥಾಪಕನೆನಿಸಿದ ಲಾರ್ಡ ಕ್ಲೈವನು ಮುಸಲ್ಮಾನರಿಂದಲೇ ಕಲಿತನೆನ್ನುತ್ತಾರೆ. ಈ ಪ್ರಯೋಗವನ್ನು ಪ್ರಾಯಃ ಮುಸಲ್ಮಾನರಲ್ಲಿ ಅಕಬರನೇ ಪ್ರಪ್ರಥಮವಾಗಿ ಕೈಗೊಂಡಿರಬೇಕು; ಮತ್ತು ರಾಜಸ್ಥಾನದ ರಜಪೂತ ಸರದಾರನೇ ಅಕಬರನ ಈ ಈ ಷಡ್ಯಂತ್ರಕ್ಕೆ ಗುರಿಯಾದ ಮೊತ್ತಮೊದಲಿನ ಗುರಿಯಾಗಿರಬಹುದು. ತ್ಯಾಗ, ತಪಸ್ಯೆ, ಬಲಿದಾನ ಮತ್ತು ವೀರತೆಗಾಗಿ ಸುಪ್ರಸಿದ್ಧರೆನಿಸಿದ ರಜಪೂತ ವೀರನು ಅಕಬರನ ಈ ಜಾಲಕ್ಕೆ ಕಟ್ಟರೀತಿಯಲ್ಲಿ ಬಿದ್ದುಬಿಟ್ಟುದರಿಂದ ಅವನನ್ನೇ ಮುಂದಿಟ್ಟುಕೊಂಡು ಅಕಬರನು ದಕ್ಷಿಣದ ಬಹುಪ್ರದೇಶದ ವರೆಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ಆದರೂ ವಿಶಾಲ ಸಮುದ್ರದ ನಡುವಿನ ನಡುಗುಡ್ಡೆಯಂತೆ ಇಲ್ಲದೆ ಸುವಿಸ್ತೃತ ಮರುಭೂಮಿ ನಡುವಿನ ಜಲಾಶ್ರಯ ಪ್ರದೇಶದಂತೆ ಕೇವಲ ಮೇವಾಡದ ಒಂದು ಚಿಕ್ಕ ಭಾಗ ಅಕಬರನ ಸ್ವಾಧೀನತೆಗೆ ಬಾರದೆ, ತನ್ನಕೊನೆಯುಸಿರಿರುವ ತನಕ ತನ್ನ ಸ್ವಾಧೀನತೆಗೊಳಪಡಿಸಿಕೊಳ್ಳುವ ಅವನ ಇರಾಧೆಯನ್ನು ನಾಶ ಮಾಡಿತು ಮೇವಾಡದ ಮಹಾರಾಣ ಪ್ರತಾಪನು ಜೀವತುಂಬ ಸಂಕಷ್ಟ ಸಾಗರದಲ್ಲಿ ಮುಳುಗಿದ್ದು ರಾಜಸ್ಥಾನದ ವೀರತೆಯ ಇತಿಹಾಸವನ್ನು ಚಿರಸ್ಮರಣೀಯವನ್ನಾಗಿ ಮಾಡಿಸಿದನು.

ಯೂನಾನ್ ದೇಶದ ಇತಿಹಾಸದಲ್ಲಿ ನೂರಾರು ವರ್ಷಗಳು ಕಳೆದು ಹೋದರೂ, ಥರ್ಮಾಪಲಿಯ ಯುದ್ಧ ಭೂಮಿಯ ನಾಮವನ್ನು ಅಭಿಮಾನ ಪೂರ್ವಕವಾಗಿ ಸ್ಮರಿಸಲಾಗುತ್ತದೆ. ನಮ್ಮ ಭಾರತದ ಇತಿಹಾಸದ ಥರ್ಮಾಪಲಿಯು ಕ್ರಿ. ಶ. ೧೫೭೬ರ ಜುಲಾಯಿ ತಿಂಗಳಲ್ಲಿ ರಜಪೂತರು ಮಹಾರಾಣ ಪ್ರತಾಪನ ನೇತೃತ್ವದಲ್ಲಿ ಅಕಬರನ ಸೇನೆಯೊಂದಿಗೆ ಪ್ರಾಣಾಂತಿಕ ಯುದ್ಧವನ್ನು ಮಾಡಿದ ಹಳದೀ ಘಾಟಿ. ಇಲ್ಲಿ ಸಾವಿರ ವೀರಯೋಧರು ಪರಾಜಿತರಾಗಿ ಹೋದರೂ ಪರಾಧೀನತೆಯನ್ನು ಎಂದಿಗೂ ಸ್ವೀಕರಿಸಲಿಲ್ಲ. ಘೋರತನು ಪರಿಪ್ರತೆ ಮತ್ತು ನಿರಾಶೆಯ ಕಾರ್ಮೋಡಗಳು ಕವಿದರೂ ಅವರು ದೀನತೆಯಂಗೀಕಾರ ಮಾಡಲಿಲ್ಲ. ಸ್ವತಂತ್ರತೆಯಲ್ಲಿ ಬದುಕಿದು ಶಾಂತ ಜೀವನವನ್ನು ಬಾಳುವ ಬದಲು, ಅವರು ಗಿರಿಕಂದರಗಳಲ್ಲಿ ಕಠೋರತೆ, ಅರಣ್ಯಗಳ ಕಂಟಕಾಕೀರ್ಣ ವೃಕ್ಷಗಳ ಭಯಾನಕತೆ, ಮತ್ತು ಅಭಾವಗ್ರಸ್ತ ಜೀವನದ ವಿಷಮತೆಗಳೇ ಅಧಿಕವೆನ್ನುವ ಭಾವನೆಯಿಂದಲೇ ತಮ್ಮ ಪ್ರಾಣಾಂತಿಕವರೆಗೂ ಬದುಕಿದ್ದರು.

ಪ್ರಾತಃಸ್ಮರಣೀಯ ಮಹಾರಾಣಾ ಪ್ರತಾಪನ ಜನ್ಮವು ಕ್ರಿ. ಶ. ೧೫೪೯ನೆ ಮೇ ತಿಂಗಳ ೩೧ನೆ ತಾರೀಕಿನಂದು (ಸಂವತ್ ೧೫೯೬ ಜ್ಯೇಷ್ಠ ಶುಕ್ಲ ೧೩) ಮೇವಾಡದ ಮಹಾರಾಣ ಉದಯಸಿಂಹನ ಮನೆಯಲ್ಲಾಯಿತು ಮಹಾರಾಣಾ ಪ್ರತಾಪನು ಎಲ್ಲರಿಂದಲೂ ದೊಡ್ಡವನು. ತಂದೆಯ ಪ್ರೇಮವು ಎಲ್ಲರಿಗಿಂತಲೂ ಕಿರಿಯ ಮಗನಾದ ಜಗಮಲನ ಮೇಲಿದ್ದು, ಪ್ರತಾಪನ ಬದಲು, ಅತನನ್ನೇ ತನ್ನ ಸಿಂಹಾಸನದ ಉತ್ತರಾಧಿಕಾರಿಯಾಗಿ ಮಾಡಿದ್ದನು. ಪ್ರತಾಪನ ಮಾವ ರಾಜಾ ಸೋಲಂಕಿಗರಾಸಿಗೆ ಇದು ಸಹನೀಯವಾಗಲಿಲ್ಲ. ಅವನು ಉದಯಪುರಕ್ಕೆ ಧಾವಿಸಿ, ಸರದಾರರೊಡನೆ ಪರಾಮರ್ಶಿಸಿ ರಾಜ ಸಿಂಹಾಸನದಲ್ಲಿ ಮಹಾರಾಣಾ ಪ್ರತಾಪನನ್ನು ಅಭಿಷೇಚಿಸಿದನು ಪ್ರಾಚೀನರಾಜಪೂತೀ ಪ್ರಥಾನುಸಾರವಾಗಿ, ರಾಜ್ಯಾಭಿಷೇಕದ ಪ್ರಥಮ ವರ್ಷದಲ್ಲಿ ಮಹಾರಾಣನಿಗೆ ಹಂದಿ ಬೆಟೆಯನ್ನಾಡಿ ತನ್ನ ವೀರತೆಯ ಪರಿಚಯ ಮಾಡಿಸಿಕೊಡಬೇಕಾಗಿ ಬಂತು. ಈ ಶಿಕಾರಿಯಲ್ಲಿ ಮಹಾರಾಣ ಮತ್ತು ತನ್ನ ಕಿರಿಯ ಸಹೋದರ ಶಕ್ತಿಸಿಂಹರ ನಡುವೆ ಕೆಲವೊಂದು ಮಾತುಕತೆ ನಡೆಯಿತೆಂದು ಹೇಳುತ್ತಾರೆ ಅವನೂ ದೊಡ್ಡ ಶೂರ ವೀರ, ಸ್ವಾಭಿಮಾನಿ; ಆದರೆ ಹಠಮಾರಿಯಾಗಿದ್ದ. ಅವನು ಕ್ರೋಧಾವೇಶದಿಂದ ಉದಯಪುರದಿಂದ ಹೊರವಂಟು ಅಕಬರನ ಆಸ್ಥಾನಕ್ಕೆ ತೆರಳಿ ಅಲ್ಲಿ ಆತನಿಗೆ ಶರಣಾದನು. ರಜಪೂತರ ನಡುವಿನ ಈ ಆಂತರಿಕ ಕಲಹವು ಮೇವಾಡದ ಭವಿಷ್ಯಕ್ಕೆ ಕಲಂಕಪ್ರಾಯವೆನಿಸಿತು. ಜೋಧಪುರ, ಅಂಬೇರ, ಬೂಂದೀ ಮತ್ತು ಸಿರೋಹೀ ಆದಿ ರಜಪೂತರು ಈ ಮೊದಲೇ ಅಕಬರನೆದುರಲ್ಲಿ ತಲೆತಗ್ಗಿಸಿದ್ದರು. ಅಖಂಡ ರಾಜಸ್ಥಾನದಲ್ಲಿ ಅಕಬರ ಬಾದಶಹನ ಪ್ರತಾಪತಿಮಿಯು ಅರಳುತಿತ್ತು.

ಮೇವಾಡದ ಅಧಿಕಾಂಶ ಭಾಗದಲ್ಲಿಯೂ ಮುಸ್ಲಿಮರ ಆಡಳಿತೆಯು ಅಧಿಕಾರ ನಡೆಸುತಿತ್ತು. ಚಿತೌಡದ ಸುಪ್ರಸಿದ್ಧ ದುರ್ಗವು ಅವರ ವಶದಲ್ಲಿತ್ತು. ಮಾತ್ರವಲ್ಲದೆ, ಮೇವಾಡದ ಶೇಷಾಂಶಕ್ಕೂ ಅತ್ಯಂತ ಸಂಕಟಾಪನ್ನ ಸ್ಥಿತಿಯುಪ್ಪನ್ನವಾಗಿತ್ತು. ಮಹಾರಾಣಾ ಪ್ರತಾಪನ ಹೃದಯವು ಇವೆಲ್ಲವನ್ನೂ ಕಂಡು ವಿಹ್ವಲಗೊಳ್ಳುತಿತ್ತು. ಅವನು ದಿನರಾತ್ರಿ ಮೇವಾಡದ ಈ ದುರ್ದಶೆಯನ್ನದ್ದರಿಸಲು ಚಿಂತಿಸುತ್ತಲಿದ್ದನು. ಅಂತ್ಯದಲ್ಲಿ ಒಂದು ದಿನ ತನ್ನ ಅನುಚರರಾದ ಸರದಾರರನ್ನು ಒಂದುಗೂಡಿಸಿ ಈ ವಿಷಯದ ಮೇಲೆ ವಿಚಾರ ವಿನಿಮಯವನ್ನು ಮಾಡಿದನು. ಅವರಿಗೆ "ಮೇವಾಡದ ಉದ್ಧಾರವನ್ನು ಮಾಡುವವರೆಗೆ ರಾಜಮಂದಿರವನ್ನು ಪರಿತ್ಯಜಿಸಿ ಅರಣ್ಯಗಳಲ್ಲಿ ವೃಕ್ಷಗಳಡಿಯಲ್ಲಿ ವಾಸಿಸುವೆನು, ಚಿನ್ನ ಬೆಳ್ಳಿಯ ಬಟ್ಟಲಲ್ಲಿ ರಾಜಯೋಗ್ಯ ಭೋಜನವನ್ನುಣ್ಣದೆ, ಕಾಡಿನ ಕಂದಮೂಲಗಳ ಸೇವನೆಯನ್ನು ಮಾಡುವೆನು. ಹಾಸಿಗೆ ಮಂಚಗಳಲ್ಲಿ ಮಲಗದೆ ಹುಲ್ಲು ಎಲೆಗಳ ಮೇಲೆ ಪವಡಿಸುವೆನು" ಎಂಬ ತನ್ನ ದೃಢಸಂಕಲ್ಪವನ್ನು ತಿಳಿಸಿದನು. ಆ ಸರದಾರರೆಲ್ಲರೂ ಏಕ ಕಂಠದಿಂದ ತಮ್ಮ ಅನುಮೋದನೆಯನ್ನಿತ್ತರು. ಅವನ ಸುಖ ದುಃಖಗಳಲ್ಲಿ ಆತನ ಅನುಚರರಾಗಿ ಉಳಿಯುವ ವಿಶ್ವಾಸವನ್ನು ತೋರಿಸಿದರು ಅರವಲೀ ಪರ್ವತಗಳ ಕಮಲಮಿರ ಬೆಟ್ಟಗಳ ದುರ್ಗಮ ಘಾಟಿಯಲ್ಲಿ ವಾಸಿಸುವ ನಿಶ್ಚಯವಾಯಿತು. ಗೋಗುಂಡಾ ಮೊದಲಾದ ಕೋಟೆಗಳ ಜೀರ್ಣೋದ್ಧಾರಕ್ಕೆ ಮೊದಲಾಯಿತು. ಅತ್ಯಂತ ಸಂಕಟಮಯ ಪರಿಸ್ಥಿತಿಯಲ್ಲಿ ದೇಶರಕ್ಷಣೆಗಾಗಿ ಸೈನಿಕರನ್ನು ಸೇರಿಸಿಕೊಳ್ಳುವಂತೆ ರಾಣಾಪ್ರತಾಪನೂ ಮಾಡಿದನು ಇಡೀ ರಾಜ್ಯದಲ್ಲಿ "ಎಲ್ಲ ಸಹೋದರರು ಕಮಲಮಿರಕ್ಕೆ ಬಂದು ಸೇನೆಯಲ್ಲಿ ಸೇರಿಕೊಳ್ಳಬೇಕು, ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಬದ್ಧಕಂಕಣರಾಗಬೇಕು." ಎಂದು ಘೋಷಿಸಲಾಯಿತು. ಕೆಲವೇ ದಿನಗಳಲ್ಲಿ ತಮ್ಮ ಮಾನಮಾನಗಳಿಗಾಗಿ ಪ್ರಾಣವನ್ನೇ ಪಣವಾಗಿಡಬಲ್ಲ ಇಪ್ಪತ್ತೆರಡು ಸಾವಿರ ರಜಪೂತರನ್ನು ಸಬಲ ಸೇನೆಯೊಂದರ ನಿರ್ಮಾಣವಾಯಿತು.

ಈಯೆಲ್ಲಾ ಸಮಾಚಾರಗಳು ದಿಲ್ಲಿಯಲ್ಲಿ ಅಕಬರನ ಕರ್ಣಪಟಲಗಳಲ್ಲಿ ಬಿದ್ದುವು. ಅಕಬರನು ಸೇನಾಪ್ರಯೋಗವನ್ನು ಮಾಡದೆ ಸಾಮ ದಾನ ನೀತಿಯಿಂದಲೇ ಕಾರ್ಯಸಾಧಿಸಬಯಸುತಿದ್ದನು. ಯಾವುದೇ ಪ್ರಕಾರದಿಂದ ಮಹಾರಾಣನನ್ನು ಒಲಿಸಿಕೊಂಡು ಸಂದಿಗ್ಧಿಯಲು ಅಪೇಕ್ಷಿಸುತಿದ್ದನು. ಮಹಾರಾಣನು ತನ್ನ ಆಧಿಪತ್ಯವನ್ನು ಸ್ವೀಕರಿಸಿ ಒಂದು ಬಾರಿ ತನ್ನ ಆಸ್ಥಾನದಲ್ಲಿ ಉಪಸ್ಥಿತನಾಗಬೇಕೆಂಬುದೇ ಅಕಬರನ ಮನದಾಶಯ. ಪರಂತು ಅಕಬರನ ಈ ಪ್ರಸ್ತಾವವು ಮಹಾರಾಣನ ಸಂಮುಖ ಪೂರ್ಣಗೊಳ್ಳುವ ಸಂಭವನೀಯತೆಯಿಲ್ಲ. ಮಹಾರಾಣನು ತೀವ್ರ ಮೇವಾಡವನ್ನು ರಕ್ಷಿಸುವುದು ಮಾತ್ರವಲ್ಲದೆ ಅಖಂಡ ಮೇವಾಡ ಪ್ರಾಂತ್ಯವನ್ನೇ ಅಕಬರನಿಂದ ಮೋಕ್ಷಪಡಿಸಲು ಯತ್ನಿಸುತ್ತಿದ್ದನು ಪರಿಣಾಮವಾಗಿ ಮಹಾರಾಣರ ದಾಳಿ ಮೇವಾಡದ ಮೇಲಾಯಿತು; ಜನತೆಯಲ್ಲಿ ಭಯಾತಂಕ ಸಂಚಾರವಾಯಿತು; ಹೆಳ್ಳಿಗಳು ಲೂಟಿಯಾದುವು; ಗುಡಿಗೆ ಕಳಸಗಳು ನೆಲಸಮಾನವಾದುವು. ಮಹಾರಾಣನು ಅವಸರದಲ್ಲಿ ಯೆವ ಕಾರ್ಯಕ್ಕೆಗೊಳ್ಳಲೂ ಸಿದ್ಧನಾಗಿರಲಿಲ್ಲ; ಅವನ ಈ ಎಲ್ಲಾ ಸಮಾಚಾರವನ್ನು ಕೇಳಿ ದುಃಖಿತನಾಗುತಿದ್ದನು

ಶೋಲಾಪುರದ ವಿಜಯೋತ್ಸವ ತರ ದಿಲ್ಲಿಗೆ ಮರಳುವ ಮೇಳೆ ಮಾನಸಿಂಹನು ಮಹಾರಾಣನನ್ನು ಕಾಣಲು ಆತನ ಹೊಸ ರಾಜಧಾನಿ ಕಮಲಮಿರಕ್ಕೆ ಬಂದನು. ಈ ಮಾನಸಿಂಹನು ಅದೇಷ್ಟೋ ರಜಪೂತ ಸರದಾರ ಹಾಗೂ ರಾಜರನ್ನು ಅಕಬರ ಸತ್ತೆಗೆ ಮಾನಾಪಾಲದಲ್ಲಿ ಸಿಕ್ಕಿಸಿ ಸೇರಿಸಿದ್ದನು. ಈಗ ಮಹಾರಾಣನನ್ನು ಬೇಟಿಯಾಡಲು ಬಂದಿದ್ದನು. ಮಾನಸಿಂಹನು ಆತನಿಗೆ ಕರೆಕಳಿಸಿ ಆತನೊಡನೆ ಭೋಜನ ಮಾಡಲು ಆಗ್ರಹ ಮಾಡಿದನು. ಆದರೆ ಸ್ವಾಭಿಮಾನೀ ಮಹಾರಾಣನು ಶಿರೋಪೇದನೆಯ ವ್ಯಾಜವನ್ನುಸುರಿ ತಪ್ಪಿಸಿಕೊಂಡನು ಇದನ್ನು ಮಾನಸಿಂಹನು ಅಪಮಾನವೆಂದು ತಿಳಿಸಿ, ಅನ್ನಬಿಟ್ಟು ನಾನಾದರೂ ನಿನ್ನ ಒಳ್ಳೆಯುದಕ್ಕೆ ಇಲ್ಲಿ ಬಂದಿದ್ದೆ, ಆದರೆ, ನೀನು ನನ್ನನ್ನು ಅಪಮಾನ ಮಾಡಿದ್ದೀಯಾ? ಇದರ ಸೇಡನ್ನು ತೀರಿಸದೆ ಹೋದರೆ ನಾನು ಮಾನಸಿಂಹನೇ ಅಲ್ಲ "ಎಂದು ಆತ್ಮಾಭಿಮಾನ ತೆಳಿದನ. ಮಹಾರಾಣನಿದನ್ನು ಸ್ವೀಕರಿಸಿದನು. ಶೋಲಾಪುರದ ವಿಜಯೋತ್ಸವದಲ್ಲಾಗಲೀ, ತನ್ನ ಪ್ರಾಂತಿಗೆ ದೊಂತ ಬಹುಮಾನಗಳಲ್ಲಾಗಲೀ ಭಾಗವಹಿಸದೆ ಮಾನಸಿಂಹನು ಮೇವಾಡದ ಧಾಳಿಯನ್ನು ಪ್ರತ್ಯೇಕ್ಷಾಪಿಸಿ ಬಾದಶಹನಕಿವಿಗೂ

(ಗಾನೇ ಪುಟ ನೋಡಿರಿ)

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8, ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಸೆನ್ಸಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯರಿ.

ZANDU ದಾಮೋದರ & ಕೊ, ಮದ್ರಾಸ್—3.



ಅನಾಧು ಕಲ್ಪನೆ

ಆಕ್ರಮಣಕಾರ ಆರ್ಯರು ಆದಿವಾಸಿ ಅನಾರ್ಯರೊಡನೆ ಹೊಂದಿ ಬಾಳಿದರು– ಅದರ ದ್ಯೋತಕ–ಭಾರತ!

ನಮ್ಮ ಸಾಮಾನ್ಯ ಜನರಲ್ಲಿ ಪ್ರಚಲಿತ ಸಮಯದಲ್ಲಿ ಆದಿವಾಸಿಗಳು ಅನಾರ್ಯರೆಂಬ ಭಾವನೆಯು ಮನೆಮಾಡಿದೆ. ಇದು ಸಂಯಾದುದೆ? ಬೆಳೆಯುತ್ತಿರುವ ಜ್ಞಾನ ಸಾಧನಗಳ ಪರಿಸರದಿಂದ ಪರೀಕ್ಷಿಸಿನೋಡಿದರೆ, ಈ ಕಲ್ಪನೆಯು ತೀರಾ ಅಸಾಧು ಎಂದುದೆಂದು ತಿಳಿಯುತ್ತದೆ.

ಅನಾರ್ಯರು ಅಸಭ್ಯರಲ್ಲ. ಭಾರತಕ್ಕೆ ಪರದೇಶದಿಂದ ಬಂದ ಜನರು ಕೆಲವೊಂದು ವಿಚಾರದಲ್ಲಿ ಭಾರತದ ಮೂಲನಿವಾಸಿಗಳಾದ ಅನಾರ್ಯರಿಂದಲೂ ಹಿಂದುಳಿದಿದ್ದರೆಂದರೆ ಆಶ್ಚರ್ಯವಾಗಬಹುದು. ಇಂದು ಹಿಂದು ಜನರು ದೇವತೆಗಳೆಂದು ಪೂಜಿಸುವುದರಲ್ಲಿ ಕೆಲವೊಂದು ಅನಾರ್ಯರ ಕೊಡುಗೆಯಿದೆ. ಹಿಂದುಗಳ ಅವತಾರಿ ಪುರುಷನಾದ ಕೃಷ್ಣ ಪರಮಾತ್ಮನು ಅವರ ಕುರಿ ವರ್ಣದವನು; ದೊಡ್ಡ ದೊಡ್ಡ ವಿದ್ವಾಂಸರು ಆತನು ಅನಾರ್ಯನೆಂದು ನಿಶ್ಚಯಿಸಿದ್ದಾರೆ. ಭಾರತದ ಉಪರಾಷ್ಟ್ರಪತಿಗಳೆಂದು ಗೌರವಿಸಲ್ಪಟ್ಟ ಡಾ ರಾಧಾಕೃಷ್ಣನರು ಈ ವಿಷಯದಲ್ಲಿ ಕೆಲವೊಂದು ಮಾತುಗಳನ್ನು ಬರೆದಿರುವರು.

ವೈದಿಕ ಸಾಹಿತ್ಯದಲ್ಲಿ ಕೃಷ್ಣನೆಂಬ ಹೆಸರುಳ್ಳ ಒಬ್ಬ ಋಷಿಯ ಉಲ್ಲೇಖವಿದೆ. ಅವನು ಅಂಗೀರಸ ಋಷಿಯ ವಂಶಜನೆಂದು ಹೇಳಲಾಗಿದೆ. ಛಾಂದೋಗ್ಯೊಪನಿಷತ್ತಿನಲ್ಲಿ ಕೃಷ್ಣನು ದೇವಕಿಯ ಪುತ್ರನಾಗುತ್ತಾನೆ; ಮತ್ತು ಘೋರ ಅಂಗೀರಸನ ಶಿಷ್ಯನೆಂದು ಕರೆಯಲ್ಪಡುತ್ತಾನೆ. ಋಗ್ವೇದದಲ್ಲಿ ಒಂದೆಡೆ ಕೃಷ್ಣನು ಅನಾರ್ಯನಾಗಿದ್ದು ೧೦ ಸಾವಿರ ಸೈನಿಕರ ಸೇನೆಯೊಂದನ್ನು ಕೂಡಿಕೊಂಡು ಅಂಶುಮತೀತಟದಲ್ಲಿ ಇಂದ್ರನೊಡನೆ ಯುದ್ಧ ಮಾಡುವ ಪ್ರತೀಕ್ಷೆಯಲ್ಲಿದ್ದನೆಂದು ತಿಳಿದು ಬರುತ್ತದೆ. ಪ್ರಸಿದ್ಧ ವಿದ್ವಾಂಸರಾದ ಶ್ರೀ ಆರ್. ಜಿ. ಭಂಡಾರಕರರು 'ಅಭೀರ'ವೆಂದು ಕರೆಯಲ್ಪಡುವ ಒಂದು ವಂಶವಿತ್ತು; ಈ ಜಾತಿಯು ಒಬ್ಬ ಬಾಲಕನನ್ನು ದೇವತೆಯೆಂದು ಪೂಜಿಸುತ್ತಿದ್ದರು. ಈ ವಂಶದವರು ತೀರಾ ಅನಾರ್ಯ ಮತ್ತು ಅಸಭ್ಯರಾಗಿದ್ದರು ಎಂದು ಹೇಳುತ್ತಾರೆ. ಕೃಷ್ಣನು ಗೋಪಿಯರೊಡನೆ ಆಡಿದ ಲೀಲೆಯ ಕಥೆಗಳ ಉದ್ಭವವು ಪ್ರಾಯಃ ಈ ಕಾರಣದಿಂದಾಗಿರಬಹುದು. ಶ್ರೀ ದೇಜರ್ ಮತ್ತು ದತ್ತರ ಅಭಿಪ್ರಾಯದಂತೆ ಪಾಂಡವರೂ ಅನಾರ್ಯರಾಗಿದ್ದರು ಮತ್ತವರಲ್ಲಿ ಸಹೋದರರೊಂದುಗೂಡಿ ಒಬ್ಬ ಸ್ತ್ರೀಯನ್ನು ವಿವಾಹವಾಗುವ ಪದ್ಧತಿಯಿತ್ತು. ಮಹಾಭಾರತದಲ್ಲಿ ಈ ಎಲ್ಲ ವಿಚಾರಗಳನ್ನೂ ಕ್ರೋಢೀಕರಿಸಿ ಶ್ರೀ ಕೃಷ್ಣನ ಕಥೆಯು ಹೆಣೆಯಲ್ಪಟ್ಟಿತೆಂದು ಡಾ. ರಾಧಾಕೃಷ್ಣನರು ಅಭಿಪ್ರಾಯಪಡುತ್ತಾರೆ. ಒರಬರುತ್ತಾ ಶ್ರೀ ಕೃಷ್ಣ ಪರಿಣಾಮವೈಷ್ಣವ ದೇವತೆಯಾದ ರೀತಿಯನ್ನು ಅವರು ವಿವರಿಸಿದ್ದಾರೆ.

ಕೇವಲ ಶ್ರೀಕೃಷ್ಣನ ವಿಚಾರದಿಂದ ಮಾತ್ರವಲ್ಲ; ನಾವು ಅನಾರ್ಯರೆಂದು ಕಡೆಗಣಿಸುವ ಆದಿವಾಸಿಗಳು ನಮ್ಮ ಸಂಸ್ಕೃತಿಗೆ ಅದೆಷ್ಟು ದೇಣಿಗೆಯನ್ನಿತ್ತರೆಂಬುದನ್ನು ನಾವು ನೂರಾರು ವ್ಯಕ್ತಿಗಳ ಚರಿತ್ರೆಯಿಂದ ದೃಢೀಕರಿಸಬಹುದು.

ಸೈನಿಕ ಸಂಘಟನೆ ಮತ್ತು ಭಾಷೆಯ ದೃಷ್ಟಿಯನ್ನು ಳಿದು, ಉಳಿದೆಲ್ಲಾ ವಿಚಾರಗಳಲ್ಲಿ ಭಾರತದಲ್ಲಿ ಅನಾದಿಕಾಲದಿಂದಲೂ ವಾಸವಾಗಿದ್ದವರು ಹೊರಗಣಿಂದ ಬಂದ ಆರ್ಯರಿಗಿಂತಲೂ ತುಂಬ ಸಭ್ಯರಾಗಿದ್ದರು. ಪುರಾಣಗಳಲ್ಲಿ ದೊರೆಯುವ ರಾಕ್ಷಸರು ಮತ್ತು ದೈತ್ಯರ ನಗರ ವ್ಯವಸ್ಥಾದಿಗಳ ವರ್ಣನೆಗಳು ಆ ನಗರಗಳು ಒಳ್ಳೆ ಸುಂದರವಾಗಿರುತಿದ್ದುವೆಂದು ತಿಳಿಸುತ್ತವೆ. ಮಯಸೆಂಬ ರಾಕ್ಷಸನು ಧರ್ಮರಾಯನಿಗೆ ಒಡ್ಡೋಲಗಕೊಡಲು ನಿರ್ಮಿಸಿ ಒಪ್ಪಿಸಿದ ಶಾಲೆಯೊಂದರ ಉಲ್ಲೇಖವು ಮಹಾಭಾರತದಲ್ಲಿದೆ. ಈತನು ಅನಾರ್ಯನಾಗಿದ್ದು ಆರ್ಯಜನಾಂಗಗಳಲ್ಲಿ ಆತನನ್ನು ಸರಿಮಿಗಿಲೆನಿಸುವ ಇಂಜಿನಿಯರರು ಯಾರೂ ಇರಲಿಲ್ಲ. ಅವರ ಜೀವನ ಪದ್ಧತಿಗಳು ಬೇರೆಯಾಗಿದ್ದುವು, ಆದರೂ ಅವರು ದಾರ್ಶನಿಕ ಇಲ್ಲವೆ ಭೌತಿಕದೃಷ್ಟಿಯಿಂದ ಆರ್ಯರಿಂದ ಹಿಂದುಳಿದವರೆಂದು ತಿಳಿಯಲು ಯಾವ ಆಧಾರವೂ ಇರುವುದಿಲ್ಲ.

ಜನ್ಮಸಿದ್ಧಾಂತ ಮತ್ತು ಪರಲೋಕವಾದಗಳು ಹಿಂದೂಜನರ ಕಲ್ಪನೆಗಳಲ್ಲಿ ಅತ್ಯಂತ ಪ್ರಮುಖಸ್ಥಾನವನ್ನಾಕ್ರಮಿಸಿವೆ. ಮತ್ತು ಜಗತ್ತಿನ ಬಹುತೇಕ ದೇಶದ ದರ್ಶನಶಾಸ್ತ್ರಗಳಲ್ಲಿ ಇದರ ಬಗ್ಗೆ ಅಸಕ್ತಿಯು ಕಂಡುಬರುತ್ತದೆ ಈ ಎರಡು ಸಿದ್ಧಾಂತಗಳೂ ಸೂಕ್ಷ್ಮವಾಗಿಯಲ್ಲವಾದರೂ ಮುಖ್ಯವಾಗಿ ಮೇಲೆ ಹೇಳಿದ ಅನಾರ್ಯ ಜನಾಂಗಗಳಿಂದ ಬಂದುವೆಂದು ತಿಳಿದು ಬರುತ್ತದೆ ನಾವು ನೂರಾರು ವರ್ಷ ಕಾಲದಿಂದ ಆದಿವಾಸಿಗಳನ್ನು ಹಿಂದೆಯೇ ಉಳಿಯುವಂತೆ ಮಾಡಿದ್ದರೂ ನಾವು ನಮ್ಮ ಆಚಾರವಿಚಾರಗಳ ಬಹ್ವಂಶದಲ್ಲಿ ಅವರಿಗೆ ಋಣಿಗಳಾಗಿದ್ದೇವೆ ಎಂಬುದು ಜ್ಞಾತವಾಗದಿರದು. ಅವೇರಿಕವು ಕೆಂಪು ಇಂಡಿಯನರ ದೇಶವೆಂದು ಕರೆಯಲ್ಪಡುವಂತೆ ಭಾರತವು ಮೂಲತಃ ಈ ಆದಿವಾಸಿಗಳ ದೇಶವಾಗಿದ್ದಿತೆಂಬುದು ನಿರ್ವಿವಾದದ ಸಂಗತಿ. ಹೀಗಾಗಿ ಹೊರಗಣಿಂದ ಭಾರತಕ್ಕೆ ಬಂದವರು ಆಕ್ರಮಣಕಾರಿ ಜನಾಂಗಕ್ಕೆ ಸೇರಿದವರೆಂದು ಹೇಳಬಹುದು. ಇದರಿಂದ ಯಾರೂ ಗಾಬರಿಗೊಳ್ಳುವ ಆವಶ್ಯಕತೆ ಕಾಣುವುದಿಲ್ಲ. ಏಕೆಂದರೆ, ಇಂದು ಯಾರೊಬ್ಬನೂ ಶುದ್ಧ ಆರ್ಯ ಅಥವಾ ವಿಶುದ್ಧ ಅನಾರ್ಯನಾಗಿ ಗೋಚರಿಸುವುದಿಲ್ಲ.

ಕವೀಂದ್ರರು ತನ್ನೊಂದು ಪ್ರಸಿದ್ಧ ಕವಿತೆಯಲ್ಲಿ ಹೇಳಿದ್ದರು. "ಯಾವ ಹೆಸರಿನಿಂದ ಮಾನವರ ಜನಾಂಗಗಳು ಬಹಳ ವೇಗವಾಗಿ ಎಲ್ಲಿಂದ ಬಂದರು. ಮತ್ತು ಈ ಸಮುದ್ರಕ್ಕೆ ಬಂದು ಸೇರಿದರೆಂದು ಯಾರೂ ತಿಳಿದಿಲ್ಲ; ಇಲ್ಲಿ ಆರ್ಯ, ಅನಾರ್ಯ, ದ್ರಾವಿಡ, ಚೀನ, ಶಕ, ಹೂಣ, ಪಠಾಣ, ಮುಗಲ ಎಲ್ಲರೂ ಒಂದೇ ದೇಹದಲ್ಲಿ ಲೀನರಾಗಿರುವರು" ಎಂದು ಭಾರತವೆಂಬುದೊಂದು ಮಹಾ ಸಮುದ್ರವಾಗಿದೆ; ಇದರಲ್ಲಿ ಆರ್ಯ, ಅನಾರ್ಯ ಮುಗಲ, ಪಠಾಣ ಎಲ್ಲರೂ ತಮ್ಮ ರಕ್ತ ಮತ್ತು ವಿಚಾರಗಳನ್ನಿತ್ತರು ಮತ್ತು ಅವರೊಂದಿಗೆ ಕೂಡಿಕೊಂಡು ಇಂದಿನ ಭಾರತ ಅಥವಾ ಭಾರತ ವಾಸಿಯ ನಿರ್ಮಾಣವಾಯಿತು. ಇದನ್ನೇ ಕಯ್ಯಾರ ಕಿಞ್ಞಣ್ಣ ರೈಗಳು ಕನ್ನಡದಲ್ಲಿ ಹಾಡಿದ್ದಾರೆ.

ಆರ್ಯರೋ ಮೊಗಲೊ ಕ್ರೈಸ್ತರೋ
ತಡೆಯೇನು
ಎಲ್ಲರೂ ಬರಲೆಂದು ಹಾರೈಸಿದೆ
ಜಾತಿಮತ ಬೇಧನದೆ ಬಣ್ಣನುಡಿ
ಬದಲೆನದೆ,
ಭೇದವೆನಿಸದೆ ತಾಯೆ ನೀ ಸಲಹುವೆ ||

ಆರ್ಯರು ಭಾರತದಲ್ಲಿ ತಳವೂರಿ, ಇಲ್ಲಿ ವಾಸಿಸಿದ್ದ ಅನಾರ್ಯರನ್ನು ಪರ್ವತ ಮತ್ತು ಕಾಡು ಪ್ರದೇಶಗಳಿಗೆ ಓಡಿಸಿದರೆ? ಹಾಗೆ ಓಡಿಸಲ್ಪಟ್ಟ ಜನಾರ್ಯರೇ ಇಂದು ಆದಿವಾಸಿಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತಿರುವರೆ? ಎಂಬ ಪ್ರಶ್ನೆಯು ಈಗ ಹುಟ್ಟುವುದು. ಇಲ್ಲ, ಕೇವಲ ಕೆಲವೇ ಮಂದಿ ಅನಾರ್ಯರು ಆರ್ಯರಿಂದ ಭಿನ್ನರಾಗಿ ದೂರಸರಿದರು. ಉಳಿದವರು ಕವೀಂದ್ರ ರವೀಂದ್ರರು ನಿರ್ದೇಶಿಸಿದಂತೆ ಈ ಮಹಾಸಾಗರದಲ್ಲಿ ಲೀನವಾಗಿ ಹೋದರು.

ಆರ್ಯ ಶಬ್ದಸಂಬಂಧದಲ್ಲಿ ಒಂದು ವಿಧದ ತಪ್ಪು ವಿಚಾರವು ಪ್ರಚಲಿತವಾಗಿದೆ. ಅದನ್ನು ಯುನೆಸ್ಕೋ ದ್ವಾರಾ ಪ್ರಕಾಶಿತವಾದ ಪುಸ್ತಕವೊಂದರಲ್ಲಿ ಸರಿಯಾಗಿ ತಿಳಿಸಿದೆ. ಆ ಹೊತ್ತಗೆಯಲ್ಲಿ ಮಿಶಲ್ ಲಾಯಿರಸ್ ಎಂಬವರು ಈ ರೀತಿಯಾಗಿ ಬರೆದಿದ್ದಾರೆ. "ಆರ್ಯ ಜಾತಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಬಹಳ ಗಡಿಬಿಡಿ ಪಡಲಾಗುತ್ತಿದೆ. 'ಆರ್ಯ'ಎಂಬ ಕರಿನ ಜಾತಿಯೊಂದು ಯಾವ ಕಾಲದಲ್ಲಿಯೂ ಇರಲಿಲ್ಲ. ಕ್ರಿಸ್ತ ಪೂರ್ವ ಎರಡನೆ ಸಹಸ್ರಾಬ್ದಿಯಲ್ಲಿ ಕುರ್ಕಿಸ್ಥಾನ ಮತ್ತು ಮಧ್ಯ ರಶ್ಯಾದ ಸ್ಟೆಪ್ಪಿ ಪ್ರದೇಶಗಳಲ್ಲಿ ಕೆಲವೊಂದು ಜಾತೀಯ ಸಮೂಹಗಳಿದ್ದುವು; ಅವರ ಸಾಮಾನ್ಯ ಭಾಷೆಯು ಇಂಡೋ ಯುರೋಪೀಯ ಮತ್ತು ಸಂಸ್ಕೃತವಾಗಿತ್ತು. ಈ ಜನರು ಬಹಳ ವಿಶಾಲ ಭೂಭಾಗದಲ್ಲಿ ಹರಡಿಕೊಂಡರು; ಅ ಪ್ರದೇಶದ ಜನರು ಈ ಜಾತಿಯಿಂದ ಪ್ರಭಾವಿತರಾದರು ಅವರ ಭಾಷೆಯಿಂದಲೇ ಅನೇಕ ಭಾಷೆಗಳು ಕವಲೊಡೆದುವು. ಸಂಸ್ಕೃತ, ಪ್ರಾಚೀನ ಗ್ರೀಕ, ಲೇಟಿನ್ ಮತ್ತು ಯುರೋಪಿನಲ್ಲಿ ಪ್ರಚಲಿತವಾಗಿರುವ ಭಾಷೆಗಳಲ್ಲಿ ಹಲವಾರು ಈ ಮೂಲ ಭಾಷೆಯಿಂದಲೇ ಹುಟ್ಟಿದುವು. ಇದರಿಂದ ಒಂದೇ ಭಾಷೆಯನ್ನಾಡುವ ಜನರು ಒಂದೇ ವಂಶ ಜಾತಿಗೆ ಸೇರಿದವರೆಂದು ತಿಳಿಯುವುದು ತಪ್ಪು; ಏಕೆಂದರೆ, ಒಬ್ಬ ವ್ಯಕ್ತಿಯು ಚೀನಿ ಯಾ ಇಂಗ್ಲಿಷ್, ಅರಬೀ ಯಾ ಇಂಗ್ಲಿಷ್ ಮಾತಾಡುವನೆಂದರೆ, ಅವನು ಯಾವ ವಂಶಜನೆಂದು ನಿರ್ಭರವಾಗಿ ತಿಳಿಯಲಾಗುವುದಿಲ್ಲ ಆದರೆ, ಅವರಾವ ಭಾಷೆಯನ್ನು ಕಲಿತರೆಂಬುದು ಮಾತ್ರ ಸ್ಪಷ್ಟಗೊಳ್ಳುವುದು."

ಭಾರತದ ಪೂರ್ವ ಬಹುತೇಕವಾಗಿ ಇದೇ ರೀತಿಯಾಯಿತು. ಇಂದು ಮುಖ್ಯತಃ ಸಂಸ್ಕೃತ ಮೂಲವಾದ ಭಾಷೆಗಳನ್ನಾಡುವವರು ನಿಶ್ಚಿತರೂಪವಾಗಿ ಆರ್ಯರೇ ಆಗಿದ್ದಾರೆ ಅವನ್ನಾಡದೆಇರುವವರು ಅನಾರ್ಯರೆಂದು ಹೇಳಲಾಗುವುದಿಲ್ಲ. ಆರ್ಯರ ಭಾಷೆಯು ಭಾರತದಲ್ಲಿ ವಿಜಯ ದುಂದುಭಿಯನ್ನು ಮೊಳಗಿಸಿತು. ನಮ್ಮ ಸಂಸ್ಕೃತ ಮೂಲ ಭಾಷೆಗಳಲ್ಲಿ ಅನಾರ್ಯರ ಕೊಡುಗೆಯೂ ಸೇರಿಳವಾಗಿದೆ ವೈದಿಕ ಸಂಸ್ಕೃತ ಭಾಷೆಗಳಲ್ಲಿ ಸಹ ಈ ಅನಾರ್ಯರ ಪ್ರಭಾವವು ಬಿದ್ದೇ ಇದೆ. ಈ ಕಾಲದಲ್ಲಿ ಸಹ ಭಾಷೆಗಳ ಈ ಯುದ್ಧ ಇಲ್ಲವೆ ವಿಜಯ ಯಾತ್ರೆಯು ನಡೆಯುತ್ತಲೇ ಇದೆ- ಅದನ್ನೀಗ ವಿವರಿಸಬೇಕಾದ ಆವಶ್ಯಕತೆಯಿಲ್ಲ.

ಮೇಲೆ ಹೇಳಿದ ವಿವರಗಳನ್ನು ಸರಿಯಾಗಿ ಮಂಥನಮಾಡಿಕೊಂಡರೆ, ನಮಗೆ ಕೆಲವೊಂದು ವಿಚಾರಗಳು ಕೂಲಂಕಷವಾಗಿ ವೇದ್ಯವಾಗುವುವು. ನಮ್ಮ ಸಂಸ್ಕೃತಿ, ನಾಗರಿಕತೆ, ಧರ್ಮವೆಲ್ಲವುಗಳಲ್ಲಿ

(ಮುಂದೇ ಸುಟ ನೋಡಿರಿ)

ಸಮಯ ಇನ್ನೂ ಮಿಂಚಿಹೋಗಿಲ್ಲ

ಜೀವನದಲ್ಲಿ ಒಂದು ರೀತಿಯ ವ್ಯವಸ್ಥೆಯಿರಬೇಕಾದರೆ ಆಪತ್ಕಾಲದಲ್ಲಿ ಸಹಾಯಕ್ಕೊದಗುವ ಒಂದು ಅವದ್ಧನ ಸಂಗ್ರಹದ ಯೋಚನೆಯನ್ನು ಚಿಕ್ಕಂದಿನಿಂದಲೇ ಆರಂಭಿಸಬೇಕೆಂಬುದು ಸಹಜವೇ ಆದರೆ ಕಾಲ ಕಳೆದು ಹೋಯಿತೆಂದು ಕಣ್ಣೀರು ಕರೆಯುತ್ತಾ ಕುಳಿತುಕೊಳ್ಳುವುದಕ್ಕಿಂತ ಇಂದಿನಿಂದಲೇ ಸ್ವಲ್ಪ ಸ್ವಲ್ಪ ಹಣವನ್ನಾದರೂ ಉಳಿತಾಯ ಮಾಡಲು ಯತ್ನಿಸುವುದೇ ಮುಖ್ಯ. ಸಮಯವನ್ನೂ ಮಿಂಚಿಹೋಗಿಲ್ಲ ಹಲವಾರು ಆಕರ್ಷಕ ಮತ್ತು ಸುಲಭಸಾಧ್ಯವಾದ ಉಳಿತಾಯದ ಯೋಜನೆಗಳಿಗೆ-

ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಚಾರಿಸಿರಿ.

96 ಶಾಖೆಗಳು

ರೂ. 10.64 ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ

ಇವುಗಳಿಂದ ಸಾವಿರಾರು ಜನರ ಆರ್ಥಿಕ ಲವಶ್ಯಕತೆಗಳಲ್ಲಿ ಸಹಕರಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕು

ಟಿ. ಎ ಪೈ, ಬಿ ಕಾಂ (ಲೊಂಡಾಯ), ಎಫ್.ಆರ್.ಇ ಎಸ್ (ಲಂಡನ್), ಎ ಎ.ಐ ಬಿ., ಜನರಲ್ ಮೆನೇಜರ್.

ಡಾ. ಟಿ. ಎಂ. ಎ. ಪೈ, ಎಂ. ಬಿ.ಬಿ ಎಸ್., ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate, Ltd.,

Head Office: UDIPI· S India.



ಯೋಜನೆಯ ಪ್ರಗತಿ

ದ್ವಿತೀಯ ಯೋಜನೆಯ ಪ್ರಥಮ ವರ್ಷದ ತೃಪ್ತಿದಾಯಕ ಸಾಧನೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಥಮ ವರ್ಷದ ಪ್ರಗತಿಯ ವಿವರ್ಣೆಯು ಇದೀಗ ಯೋಜನಾ ಆಯೋಗದಿಂದ ಪ್ರಕಟಗೊಂಡಿದೆ. ಇದರಲ್ಲಿ ರಾಷ್ಟ್ರದ ಪ್ರಗತಿಗೆ ೧೯೫೬-೫೭ರ ವರ್ಷದ ಸ್ಥಿತಿಗತಿಗಳು ವಿಶೇಷ ಅನುಕೂಲವಾಗಿರದಿದ್ದರೂ ಕೆಲವೊಂದು ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಗತಿ ಸಾಧನೆ ಮತ್ತು ಒಟ್ಟಿನಲ್ಲಿ ಸಾಮಾನ್ಯ ಪ್ರಗತಿ ಸಾಧನೆಯಾಗಿರುವುದೆಂದು ನಿರೂಪಿಸಲಾಗಿದೆ.

ದೇಶದ ಸಾಮಾನ್ಯ ಆರ್ಥಿಕ ಪರಿಸ್ಥಿತಿಗಳು ಸಾಕಷ್ಟು ಅನುಕೂಲವಾಗಿರಲಿಲ್ಲ. ಇದರಿಂದಾಗಿ ಮತ್ತು ಯೋಜನೆಯ ರಚನೆಯಲ್ಲಾದ ವಿಳಿತತೆಗಳಿಂದಾಗಿ ಯೋಜಿಸಿರುವಷ್ಟು ಪ್ರಗತಿಯನ್ನು ಸಾಧಿಸುವುದು ಅಸಾಧ್ಯವಾಯಿತು. ಪ್ರಥಮ ವರ್ಷದಲ್ಲಿ ಯೋಜನೆಯ ಪರಿಮಾಣವು ೮೦ ಕೋಟಿ ರೂಪಾಯಿಗಳೆಂದು ಕಾಣಿಸಲಾಗಿದ್ದರೂ ರೂ. ೬೯ ಕೋಟಿಗಳ ಕೊರತೆಯು ಬಂದು ಒಟ್ಟು ವೆಚ್ಚದ ಪರಿಷ್ಕೃತ ಅಂದಾಜು ರೂ; ೭೬೧ ಕೋಟಿಗಳಾಗಿದೆ. ಈ ಕೊರತೆಯು ಸಾಮಾಜಿಕ ಸೇವೆಯಲ್ಲಿ ೨೦ ಕೋಟಿ, ಕೃಷಿ, ಸಮಾಜ ಸುಧಾರಣೆಯಲ್ಲಿ ೧೫ ಕೋಟಿ, ಸಾರಿಗೆ ಸಂಪರ್ಕಗಳಲ್ಲಿ ೧೪ ಕೋಟಿ, ಕೈಗಾರಿಕೆ ಮತ್ತು ಗಣಿಗಳಲ್ಲಿ ೧೦ ಕೋಟಿ ರೂಪಾಯಿಗಳಷ್ಟಾಗಿರುತ್ತದೆ. ವೆಚ್ಚದ ರೂ ೭೬೧ ಕೋಟಿ ರೂಪಾಯಿಗಳಲ್ಲಿ ಕೇಂದ್ರ ಸರಕಾರದ ಪಾಲು ೩೯೧ ಕೋಟಿ ಮತ್ತು ರಾಜ್ಯ ಸರಕಾರಗಳ ಪಾಲು ೩೭೦ ಕೋಟಿ ರೂಪಾಯಿಗಳು. ಇಷ್ಟೊಂದು ಹಣವನ್ನು ಶೇಖರಿಸಲು ತಯಾರಿಸಿದ ಯೋಜನೆಯಲ್ಲಿ ರೂ. ೨೭೦.೭ ಕೋಟಿಗಳ ಕೊರತೆಯು ಕಂಡು ಬರುತ್ತದೆ. ವಿವಿಧ ರಾಜ್ಯ ಮತ್ತು ಕೇಂದ್ರ ಸರಕಾರಗಳ ಮೂಲಕ ಒಟ್ಟು ರೂ. ೪೫೬.೨ ಕೋಟಿ ಆದಾಯ ಬರುವುದೆಂದೂ ರೂ. ೬೩.೧ ಕೋಟಿ ವಿದೇಶೀಯ ನೆರವು ದೊರೆಯುವುದೆಂದೂ ಅಂದಾಜು ಮಾಡಿದ್ದಾರೆ. ಸರಕಾರದ ಹಣದಲ್ಲಿ ರೂ. ೩೨೬.೭ ಕೋಟಿ ಕೇಂದ್ರದಿಂದಲೂ, ರೂ. ೧೦೦.೫ ಕೋಟಿ ರಾಜ್ಯ ಸರಕಾರದಿಂದಲೂ ಬರುವುದು.

ವೆಚ್ಚ ವಿಭಾಗದ ಪರಿಷ್ಕೃತ ಅಂದಾಜಿನಂತೆ ಕೃಷಿ ಹಾಗೂ ಸಮಾಜ ಸುಧಾರಣೆಯಲ್ಲಿ ರೂ. ೯೩ಕೋಟಿ, ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ರೂ. ೧೯೯ ಕೋಟಿ, ಕೈಗಾರಿಕೆ ಹಾಗೂ ಗಣಿಕೆಲಸಗಳಿಗೆ ರೂ. ೧೧೧ ಕೋಟಿ, ಸಾರಿಗೆ ಸಂಪರ್ಕಕ್ಕೆ ರೂ. ೧೩೩ ಕೋಟಿ, ಸಮಾಜಸೇವೆಗೆ ರೂ. ೧೨೩ ಕೋಟಿ ಮತ್ತಿತರ ವಿಭಾಗಗಳಿಗೆ ರೂ. ೨೨ ಕೋಟಿಗಳಷ್ಟು ವೆಚ್ಚವಾಗುವುದು.

ಆಹಾರೋತ್ಪಾದನೆಯ ಕಾರ್ಯಕ್ರಮಗಳಿಗೆ ಉತ್ಪಾದನೆಯಲ್ಲಿ ೧೯೫೬-೫೭ರ ವರ್ಷದಲ್ಲಿ ೨೫ ಲಕ್ಷ ಟನ್ನುಗಳಷ್ಟು ಹೆಚ್ಚಳವಾಗುವ ನಿರೀಕ್ಷೆಯಿತ್ತು. ಆದರೆ, ನಿಜವಾದ ಹೆಚ್ಚಳವು ಕೇವಲ ೧೪ ಲಕ್ಷ ಟನ್ನುಗಳಷ್ಟಾಗಬಹುದು. ಹೀಗಾದಲ್ಲಿ ೧೯೫೫-೫೬ರಲ್ಲಿ ಉತ್ಪತ್ತಿಯಾದ ಆಹಾರಧಾನ್ಯಗಳ ಮೊತ್ತ ೬೪ ಲಕ್ಷ ಟನ್ನುಗಳಾಗಿದ್ದು ಅದು ೫೬-೫೭ರಲ್ಲಿ ೬೬ ಲಕ್ಷ ಟನ್ನುಗಳಷ್ಟಾಗಬಹುದು. ಗೋಧಿ ಮತ್ತು ಅಕ್ಕಿಗಳ ಉತ್ಪಾದನೆಯು ೫೫-೫೬ಕ್ಕಿಂತ ಕ್ರಮವಾಗಿ ೩೮ ಲಕ್ಷ ಮತ್ತು ೧೩ ಲಕ್ಷಗಳಷ್ಟು ಹೆಚ್ಚಾಗಿದೆ. ಶುಷ್ಕಧಾನ್ಯಗಳು ಯಾವ ಹೆಚ್ಚಳವನ್ನೂ ಪಡೆದಿಲ್ಲ ಮತ್ತು ದ್ವಿದಳ ಧಾನ್ಯಗಳ ಬೆಳೆಯಲ್ಲಿ ಸುಮಾರು ೩೦ ಲಕ್ಷ ಟನ್ನುಗಳ ಇಳಿತಾಯವು ತೋರಿಬಂದಿದೆ. ವ್ಯಾಪಾರೀ ಬೆಳೆಯ ಉತ್ಪಾದನೆಯು ಕೆಲವೊಂದು ಮಟ್ಟಿಗೆ ಪ್ರಗತಿದಾಯಕವಿದೆ. ಎಣ್ಣೆಕಾಳುಗಳ ಬೆಳೆಯು ೫೫-೫೬ರಲ್ಲಿ ೫೬ ೬೦,೦೦೦ ಟನ್ನುಗಳಷ್ಟಿದ್ದು ಅದು ೫೬-೫೭ರಲ್ಲಿ ೫೮.೯೦,೦೦೦ ಟನ್ನುಗಳಷ್ಟಾಯಿತು. ಹತ್ತಿಯು ೪೮ ಲಕ್ಷ ಬೇಲುಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದ್ದು ಇದು ಹಿಂದಿನ ವರ್ಷದ ಉತ್ಪತ್ತಿಗಿಂತ ೮ ಲಕ್ಷ ಟನ್ನುಗಳಷ್ಟು ಅಧಿಕವಾಗಿದೆ. ಕಬ್ಬಿನ ಬೆಳೆಯು ೬೩ ಲಕ್ಷ ಟನ್ನುಗಳೆಂದು ಲೆಕ್ಕ ಹಾಕಿದ್ದು ಅದು ೫೫-೫೬ರ ಉತ್ಪತ್ತಿಗಿಂತ ೪ ಲಕ್ಷ ಟನ್ನುಗಳಷ್ಟು ಹೆಚ್ಚಿದೆ. ಸೆಣಬು ೪೨.೨೧,೦೦೦ ಟನ್ನುಗಳಿದ್ದು ಇದು ಹಿಂದಿನ ವರ್ಷದಲ್ಲಿ ೪೧.೯೭,೦೦೦ ಲಕ್ಷಗಳಷ್ಟಾಗಿತ್ತು.

೧೯೫೬-೫೭ರಲ್ಲಿ ೨೫ ಎಕ್ರೆ ವಿಸ್ತೀರ್ಣವಿರುವ ಅಧಿಕ ಬೀಜಗಳ ಕ್ಷೇತ್ರಗಳ ರಚನೆಗೆ ಮಂಜೂರಾತಿಯನ್ನಿತ್ತಿದೆ. ೫೬-೫೭ರ ಕೊನೆಯಲ್ಲಿ ಮುಟ್ಟಬೇಕೆಂದಿದ್ದ ೩೦ ಲಕ್ಷ ಎಕರೆಗಳಲ್ಲಿ ೫೬ರ ಕೊನೆಯಲ್ಲಿ ೧೪.೫ ಲಕ್ಷ ಎಕ್ರೆಗಳಷ್ಟು ಜಮೀನನ್ನು ಜಾಪಾನಿ ಕೃಷಿ ವಿಧಾನಕ್ಕೆ ಪರಿವರ್ತಿಸಲಾಗಿದೆ. ೬.೭೫ ಲಕ್ಷ ಟನ್ನು ಅಮೋನಿಯಂ ಸಲ್ಫೇಟು ಮತ್ತು ೧ ಲಕ್ಷ ಟನ್ನು ಸೂಪರ್ ಫೋಸ್ಫೇಟ್‌ಗಳು ೧೯೫೬ರಲ್ಲಿ ತಯಾರಾದುವೆಂದು ಅಂದಾಜು ಮಾಡಲಾಗಿದೆ ೮೫,೦೦೦ ಎಕ್ರೆಗಳಷ್ಟು ಗುಡ್ಡಕಾಡುಗಳ ಭಾಗವನ್ನು ಕೃಷಿಯೋಗ್ಯವನ್ನಾಗಿಸಲಾಗಿದೆ.

ಪ್ರಥಮ ಪಂಚವಾರ್ಷಿಕ ಯೋಜನಾಂತ್ಯದಲ್ಲಿ ಪೂರ್ತಿಗೊಳ್ಳದಿರುವ ರಾಷ್ಟ್ರೀಯ ವಿಸ್ತರಣಾ ಯೋಜನೆಗಳನ್ನು ಮುಂದುವರಿಸುತ್ತಿರುವುದು ಮಾತ್ರವಲ್ಲದೆ ೧೯೫೬-೫೭ರಲ್ಲಿ ೫೦೦ ಹೊಸ ಕ್ಷೇತ್ರಗಳನ್ನು ರಚಿಸಲು ಸೂಚಿಸಲಾಗಿದೆ. ಈ ವರ್ಷ ನಿರ್ದಿಷ್ಟ ಪ್ರಮಾಣದಲ್ಲಿ ಆ ಕೆಲಸಗಳು ಮುಂದುವರಿದುವಲ್ಲದೆ ೪೯,೬೦೦ ಹಳ್ಳಿಗಳನ್ನೂ ೩೨೭ ಲಕ್ಷ ಜನಸಂಖ್ಯೆಯನ್ನೂ ಒಳಗೊಂಡಿರುವ ೪೯೫ ಹೊಸ ಕ್ಷೇತ್ರಗಳನ್ನು ತೆರೆಯಲಾಯಿತು. ಇದಲ್ಲದೆ ೧೮೩ ಲಕ್ಷ ಜನರಿರುವ ೫೫,೭೫೨ ಹಳ್ಳಿಗಳನ್ನು ಒಳಗೊಂಡಿರುವ ೫೫೦ ಕ್ಷೇತ್ರಗಳನ್ನು ಸಮಾಜ ಯೋಜನಾ ವಿಧಾನದಿಂದ, ರಾಷ್ಟ್ರೀಯ ವಿಸ್ತರಣಾ ಯೋಜನೆಗಳಾಗಿ ಪರಿವರ್ತಿಸಲಾಯಿತು.

ದೊಡ್ಡ ಮತ್ತು ಮಧ್ಯಮ ಮಟ್ಟದ ನೀರಾವರಿ ಯೋಜನೆಗಳಿಂದ ೧೯೫೬-೫೭ರಲ್ಲಿ ೧೫ ಲಕ್ಷ ಎಕ್ರೆಗಳಷ್ಟು ಅಧಿಕ ಜಮೀನಿಗೂ, ಸಣ್ಣ ನೀರಾವರಿ ಯೋಜನೆಗಳಿಂದ ೧೬ ಲಕ್ಷ ಎಕ್ರೆಗಳಿಗೂ ನೀರಿನ ಸೌಕರ್ಯವನ್ನು ಒದಗಿಸಲಾಗುವುದೆಂದು ಅಂದಾಜು ಮಾಡಲಾಗಿದೆ. ಸುಮಾರು ೯೦ ದೊಡ್ಡ ಹಾಗೂ ಮಧ್ಯಮ ಮಟ್ಟದ ನೀರಾವರಿ ಯೋಜನೆಗಳು ಈ ವರ್ಷದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಇಂಡೋ ಅಮೇರಿಕನ್ ತಾಂತ್ರಿಕ ಸಹಾಯ ಯೋಜನೆಯಂತೆ ತೋಡಲಾಗುವ ೨೬೫೦ ಕೊಳವೆ ಬಾವಿಗಳ ಕೆಲಸವು ಪೂರ್ತಿಯಾಗಿದ್ದು ಅವು ನೀರಾವರಿಗೆ ಸಿದ್ಧವಾಗಿವೆ. ಇನ್ನು ಕೆಲವೇ ತಿಂಗಳುಗಳಲ್ಲಿ ೧೧೦೦ ಅಧಿಕ ಕೊಳವೆ ಬಾವಿಗಳ ರಚನೆಯೂ ಮುಗಿಯುವ ನಿರೀಕ್ಷೆಯಿದೆ. ಹಿರಾಕುಡ್ ಯೋಜನೆಯು ಪೂರ್ತಿಯಾಗಿದ್ದು ಅದೀಗ ೧,೫೭ ೦೦೦ ಎಕ್ರೆಗಳಿಗೆ. ನೀರಿನ ಸೌಕರ್ಯವನ್ನು ಒದಗಿಸುವುದಲ್ಲದೆ, ೩೪ ಸಾವಿರ ಕಿಲೋವಾಟ್‌ಗಳಷ್ಟು ವಿದ್ಯುತ್ತನ್ನು ಕೊಡುವುದು.

೧೯೫೬-೫೭ರಲ್ಲಿ ೩,೦೮,೫೦೦ ಕಿಲೋವಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಪಡೆಯುವ ಗುರಿಯಿದ್ದು, ಇದೀಗ ರಚಿಸಿದ ಯೋಜನೆಯನ್ವಯ ಸುಮಾರು ೨೬,೦,೦೦೦ ಕಿಲೋವಾಟ್‌ಗಳಷ್ಟು ಉತ್ಪತ್ತಿಯಾಗುತ್ತದೆ. ಈ ವರ್ಷದಲ್ಲಿ ಸುಮಾರು ೨,೦೦೦ ಹಳ್ಳಿ ಹಾಗೂ ಪಟ್ಟಣಗಳಿಗೆ ವಿದ್ಯುತ್ತನ್ನು ಒದಗಿಸುವ ಯೋಜನೆಯಿದ್ದು, ಇದು ಕೈಗೂಡಿದಲ್ಲಿ ವರ್ಷಾಂತ್ಯದಲ್ಲಿ ವಿದ್ಯುತ್ ಒದಗಿಸಿದ ಹಳ್ಳಿ ಹಾಗೂ ಪಟ್ಟಣಗಳ ಸಂಖ್ಯೆಯು ೯,೪೦೦ ಆಗುವುದು.

ಪ್ರಮುಖವಾದ ಸಂಘಟಿತ ಕೈಗಾರಿಕೆಗಳ ಉತ್ಪನ್ನವು ೧೯೫೫ರಲ್ಲಿ ೧೨೨ ಲಕ್ಷ ವಿದ್ದು ೫೬ರಲ್ಲಿ ೧೩೭ ಲಕ್ಷವಾಗಿದೆ. ರೇಡಿಯೋ ರಿಸೀವರುಗಳ ಉತ್ಪಾದನೆಯಲ್ಲಿ ಸೇಕಡಾ ೫೬ರಷ್ಟು ಹೆಚ್ಚಳವಾಗಿದೆ. ಸೈಕಲ್, ಆಟೋಮೊಬೈಲ್ಸ್, ಇಲೆಕ್ಟ್ರಿಕ್ ಮೋಟಾರು, ಟ್ರಾನ್ಸ್‌ಫಾರ್ಮರ್ ಮತ್ತು ವಿದ್ಯುತ್ ಪಂಪುಗಳಲ್ಲಿ ಉಂಟಾದ ಹೆಚ್ಚಳವು ೩೩ರಿಂದ ೫೦ಸೇಕಡಾದಷ್ಟಿರುತ್ತದೆ. ಸಿಮೆಂಟು, ಸಕ್ಕರೆ ಮತ್ತು ಡಿಸೈಲ್ ಇಂಜನ್‌ಗಳ ಕಾರಖಾನೆಗಳಿಂದ ಕೂಡಿದ ಎಂಟು ಕೈಗಾರಿಕೆಗಳು ಸೇಕಡಾ ೧೦ರಿಂದ ೨೫ರಷ್ಟು ಬೆಳೆದಿವೆ. ೧೯೫೫ ೫೬ರಲ್ಲಿ ೪೫೦,೦೦೦ ಟನ್ನುಗಳಷ್ಟಿದ್ದು, ಅದು ಪ್ರಚಲಿತ ವರ್ಷದಲ್ಲಿ ೪೯ ಲಕ್ಷ ಟನ್ನುಗಳಿಗೆ ಏರಿದೆ. ಸಕ್ಕರೆಯ ಉತ್ಪತ್ತಿಯು ೧೬,೫೦,೦೦೦ ಟನ್ನುಗಳಿದ್ದು ಇದು ಹಿಂದಿನವರ್ಷಕ್ಕಿಂತ ೩,೪೦,೦೦೦ ಸಾವಿರ ಟನ್ನುಗಳಷ್ಟು ಹೆಚ್ಚಾಗಿದೆ. ಉಕ್ಕಿನ ಉತ್ಪಾದನೆಯು ೧೩,೧೦,೦೦೦ ಟನ್ನುಗಳಷ್ಟಿದ್ದು ಕಳೆದವರ್ಷಕ್ಕಿಂತ ಸೇಕಡಾ ೪೮ರಷ್ಟು ಅಧಿಕ ಪರಿಮಾಣದಲ್ಲಿದೆ ಚರ್ಮದ ಕೈಗಾರಿಕೆಯಲ್ಲಿಯೂ ಸುಮಾರು ೫೫ ಸೇಕಡಾದಷ್ಟು ಹೆಚ್ಚಳವಾಗಿದೆ. ಚಹದ ಉತ್ಪಾದನೆಯಲ್ಲಾದ ಹೆಚ್ಚಳವು ಆಷ್ಟೊಂದು ಗಣನೀಯವಾಗಿಲ್ಲ.

ಪ್ರಚಲಿತ ವರ್ಷದಲ್ಲಿ ಪೋರ್ಟೇಬಲ್ ಇಲೆಕ್ಟ್ರಿಕ್ ಡ್ರಿಲ್, ಸಲಿಸೈಲಿಕ್ ಆಮ್ಲ ಮೊದಲಾದುವುಗಳು ಪ್ರಪ್ರಥಮವಾಗಿ ತಯಾರಿಸಲ್ಪಟ್ಟುವು. ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ಸಾಕಷ್ಟು ಅಭಿವೃದ್ಧಿಯು ಕಂಡು ಬಂದಿದೆ. ಹೊಗೆ ಇಂಜನು, ಗಾಡಿಗಳು, ಡಿ. ಡಿ. ಟಿ. ಪೆನಿಸಿಲಿನ್, ನ್ಯೂಸ್ ಪ್ರಿಂಟ್, ಕೇಬಲ್ ಮತ್ತು ಯಾಂತ್ರಿಕೋಪಕರಣಗಳು ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯಾಗಿವೆ. ಕಲ್ಲಿದ್ದಲ ಉತ್ಪತ್ತಿಯೂ ೧೨ ಲಕ್ಷ ಟನ್‌ಗಳಷ್ಟು ಹೆಚ್ಚಿದೆ. ಎಣ್ಣೆ ಮತ್ತು ಸ್ವಾಭಾವಿಕ ಅನಿಲಗಳಿಗಾಗಿ ಭೂಶೋಧನೆಗಳು ಜಯಸಲ್ಮರ್, ಪಂಜಾಬ ಮತ್ತು ಕಾಂಬೆಗಳಲ್ಲಿ ಮುನ್ನಡೆಯುತ್ತಲಿವೆ.

ಕೃಷಿಗಗ್ಗದ ಬಟ್ಟೆಗಳು ೧೪ ೭೩೦ ಲಕ್ಷ ಗಜಗಳಷ್ಟು ಸಿದ್ಧವಾಗಿದ್ದು ಇದು ಹಿಂದಿನ ವರ್ಷಕ್ಕಿಂತ ೬೨೦ ಲಕ್ಷ ಗಜಗಳಷ್ಟು ಹೆಚ್ಚಾಗಿದೆ ಪ್ರಚಲಿತ ವರ್ಷದಲ್ಲಿ೧೫,೦೦೦ ವಿದ್ಯುತ್ ಮಗ್ಗಗಳ ಸ್ಥಾಪನೆಯಾಗಲಿದೆ. ಖಾದಿ ಬಟ್ಟೆಯು ಸಹ ಸುಮಾರು ೧೦೦ ಲಕ್ಷ ಚದರ ಗಜಗಳಷ್ಟು ಅಧಿಕವಾಗಿದೆ ೧೯೫೫-೫೬ರಲ್ಲಿ ೭೫ ಸಾವಿರ ಅಂಬರ ಚರಕಗಳನ್ನು ಉಪಯೋಗಿಸಲು ನಿರ್ಧರಿಸಿದ್ದು ಇನ್ನಲ್ಲಿ ೬೦,೦೦೦ ಚರಕಗಳನ್ನು ಪ್ರಚಲಿತ ವರ್ಷದಲ್ಲಿಯೇ ವ್ಯವಹಾರಕ್ಕೆ ತರಲಾಗಿದೆ. ಗುಡಿಕೈಗಾರಿಕೆಗಳ ಅಭಿವೃದ್ಧಿಯೂ ಉತ್ತಮವಾಗಿದ್ದು, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ತಕ್ಕ ಪ್ರೋತ್ಸಾಹವೀಯಲಾಗಿದೆ. ೧೦ ಹೊಸ ಕೈಗಾರಿಕಾ ಕ್ಷೇತ್ರಗಳನ್ನು ಈ ವರ್ಷದಲ್ಲಿ ಪ್ರಾರಂಭಿಸಲಾಗಿದೆ.

ಈ ವರ್ಷದಲ್ಲಿ ೮೭ ಮೈಲುದ್ದದ ಹೊಸ ರೈಲ್ವೆ ದಾರಿಗಳು ಚಲಾವಣೆಗೆ ತೆರೆಯಲಾಗಿದೆ. ವರ್ಷಾಂತ್ಯದಲ್ಲಿ ೫೬೪ ಮೈಲುಗಳ ರೈಲ್ವೆ ರಚನೆಯು ಅಭಿವೃದ್ಧಿ ಪಥದಲ್ಲಿದೆ. ಸುಮಾರು ೭೦೦ ಮೈಲುಗಳ ದಾರಿಯನ್ನು ಇಮ್ಮಡಿಸುವ ಕಾರ್ಯವೂ ತೃಪ್ತಿ

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ. ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೪—೦
ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,
ವಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧.

ದಾಯಕವಾಗಿ ಮುನ್ನಡೆಯುತ್ತಿದೆ. ಮಂಜೂರು ಮಾಡಿದ ೨,೮೦೦ ಮೈಲುದ್ದದ ಹೊಸ ರೈಲ್ವೆ ಹಾದಿಯಲ್ಲಿ ೨,೦೦೦ ಮೈಲುಗಳ ಕಾರ್ಯವೂ ತೀವ್ರ ಗತಿಯಲ್ಲಿ ಮುಂದುವರಿಯುತ್ತಿದೆ. ರೈಲ್ವೇ ಗಾಡಿಗಳ ನಿರ್ಮಾಣವೂ ವರ್ಕ್‌ಶೋಪ್‌ಗಳ ಕೆಲಸವೂ ತೀವ್ರವಾಗಿದೆ- ಉಕ್ಕು ಸಿಮೆಂಟು ಹಾಗೂ ಪಟ್ಟಿ ಮೊದಲಾದ ಆವಶ್ಯಕ ವಸ್ತುಗಳ ಕೊರತೆಯಿಂದಾಗಿ ರೈಲ್ವೆಯಲ್ಲಿ ಕೆಲವೊಂದು ತೊಂದರೆಗಳು ಉದ್ಭವಿಸಿದುವು

ರಾಷ್ಟ್ರೀಯ ಹೈವೇಸ್ ಕಾರ್ಯಕ್ರಮವು ಯಶಸ್ವಿಯಾಗಿದೆ. ಹಡಗ ಹಾಗೂ ವಿಮಾನಗಳಲ್ಲಿ ಸಹ ಕೆಲವೊಂದು ಗಣನೀಯ ಅಭಿವೃದ್ಧಿಯು ಕಂಡುಬಂದಿದೆ.

ಕೇಂದ್ರ ಹಾಗೂ ರಾಜ್ಯಗಳಲ್ಲಿ ತಾಂತ್ರಿಕ ಉದ್ಯೋಗಸ್ಥರ ಆವಶ್ಯಕತೆಗಳನ್ನು ಸಾಮಾನ್ಯ ಮಟ್ಟಿಗೆ ಪೂರೈಸಲಾಗಿದೆ. ತಾಂತ್ರಿಕ ತರಬೇತಿಯನ್ನು ಒದಗಿಸಿಕೊಡುವ ಕಲುವಾಗಿ ಇಂಜಿನಿಯರಿಂಗ್ ಉದ್ಯೋಗಸ್ಥರ ಮಂಡಲಿಗಳನ್ನು ಮಂಜೂರು ಮಾಡಲಾಗಿದೆ. ಮೂರು ಉಕ್ಕಿನ ಕಾರಖಾನೆಗಳಿಗೆ ಬೇಕಾಗುವ ತಾಂತ್ರಿಕಜ್ಞರ ತರಬೇತಿಗೆ ವಿಶೇಷ ರೀತಿಯ ಏರ್ಪಾಡುಗಳನ್ನು ಮಾಡಿರುತ್ತದೆ. ಇತರ ಕ್ಷೇತ್ರಗಳಲ್ಲಿಯೂ ತರಬೇತಿಯೊಯಲು ಅನುಕೂಲತೆಗಳನ್ನು ಒದಗಿಸಲಾಗಿದೆ. ಭಾರತದ ಪ್ರಥಮ ಅಣುವಿನ ಪ್ರತಿಪ್ರವರ್ತನದ ಕಾರಖಾನೆಯ ಸ್ಥಾಪನೆಯು ಈ ವರ್ಷದ ಗಮನೀಯ ವಿಶೇಷಗಳಲ್ಲಿ ಒಂದಾಗಿದೆ ಇದು ತೃಪ್ತಿಕರವಾಗಿ ಕಾರ್ಯಮಾಡುತ್ತಲಿದೆ ರಾಷ್ಟ್ರೀಯ ಅಭಿವೃದ್ಧಿಯ ಉದ್ದೇಶಗಳನ್ನರಿತು ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯಕ್ರಮಗಳಲ್ಲಿ ಯೋಜನಾ ಆಯೋಗಕ್ಕೆ ಸಹಾಯವಾಗಲು ವೈಜ್ಞಾನಿಕರ ಮಂಡಲವೊಂದನ್ನು ಸ್ಥಾಪಿಸಲಾಗಿದೆ- ಈ ಮಂಡಲಿಯ ಪ್ರಥಮ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತಳಿಸಬೇಕಷ್ಟೆ. ೧೯೫೬-೫೭ರಲ್ಲಿ ಕೈಗೊಳ್ಳಲಾದ ಕೈಗಾರಿಕ ಹಾಗೂ ಸಾಮಾಜಿಕ ಸಂಶೋಧನಾ ಕಾರ್ಯಗಳಲ್ಲಿ ಶತ ಸಂಶೋಧನೆಗಳು ಪೂರ್ಣಗೊಂಡಿವೆ. ಎರಡು ವರದಿಗಳು ಪ್ರಕಟವಾಗಿದ್ದು ಎರಡು ಅಚ್ಚಿನಲ್ಲಿವೆ ಸಂಶೋಧನಾ ಕಾರ್ಯಕ್ರಮಗಳ ಸಮಿತಿಯು ದ್ವಿತೀಯ ಯೋಜನೆಯಲ್ಲಿ ಯೋಚಿಸಿದ ಅಭಿವೃದ್ಧಿಯ ಸಮಸ್ಯೆಗಳ ಕುರಿತಾದ ಸಂಶೋಧನೆಗಳ ಕಾರ್ಯವನ್ನು ಕೈಗೊಂಡಿದೆ.

ಒಟ್ಟಿನಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಥಮ ವರ್ಷವು ಕೆಲವೊಂದು ಅನಾನುಕೂಲಗಳಿಂದ ಕೂಡಿದ್ದರೂ, ಪ್ರಗತಿ ಪಥದಲ್ಲಿ ಎಡರು ತೊಡರುಗಳು ಕಾಣಿಸಿಕೊಂಡಿದ್ದರೂ ಸಮಾಧಾನಕರವಾಗಿದೆಯೆಂದು ಹೇಳಬಹುದು ಪ್ರತ್ಯೇಕ ಕ್ಷೇತ್ರಗಳಲ್ಲಿಯೂ ಸಾಕಷ್ಟು ಅಭಿವೃದ್ಧಿಯಾಗಿದ್ದು ಮಂದಿನ ವರ್ಷಗಳಿಗೆ ಅದು ಮಾರ್ಗದರ್ಶನವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ವನ ಮಹೋತ್ಸವ

ಪ್ರಚಲಿತ ಪ್ರಗತಿ ಮತ್ತು ಭವಿಷ್ಯತ್ತಿನ ವಿಶ್ವಾಸಗಳ ಕುರುಹಾಗಿ ಆಚರಿಸಿರಿ!

ವನಮಹೋತ್ಸವ ಸಮಾರೋಹವನ್ನು ವಿವಿಧ ರಾಷ್ಟ್ರಗಳಲ್ಲಿ ವಿವಿಧ ಹೆಸರುಗಳಲ್ಲಿ ಆಚರಿಸಲಾಗುತ್ತಿದೆ. ಜಪಾನಿನಲ್ಲಿ "ವೃಕ್ಷಾರೋಪಣ ಸಪ್ತಾಹ"ವೆಂದೂ, ಇಸ್ರೇಲಿನಲ್ಲಿ "ವೃಕ್ಷಗಳ ವನ ವರ್ಷ"ವೆಂದೂ, ಕೊರಿಯಾದಲ್ಲಿ "ವೃಕ್ಷಾನುರಾಗ ಸಪ್ತಾಹ"ವೆಂದೂ, ಯುಗೋಸ್ಲಾವಿಯಾದಲ್ಲಿ "ಸುನವರ ನಿರ್ಮಾಣ ಸಪ್ತಾಹ"ವೆಂದೂ, ಐಸ್‌ಲ್ಯಾಂಡಿನಲ್ಲಿ "ವಿದ್ಯಾರ್ಥಿಗಳ ವನ ನಿರ್ಮಾಣ ದಿನಾಚರಣೆ"ಯೆಂದೂ ಕರೆಯಲಾಗುವುದು. ಪ್ರಾಚೀನ ಭಾರತದಲ್ಲಿಯೂ ಸಹ ಈ ರೀತಿಯ ಮಹೋತ್ಸವವಾಗುತ್ತಿತ್ತು. ಈ ಪ್ರಾಚೀನ ಪರಂಪರೆಯನ್ನು ಈಗ ಸುನುಜ್ಜೀವನಗೊಳಿಸಲಾಗಿದೆ.

ವೃಕ್ಷಗಳು, ನಮ್ಮ ಮನೆಗಳನ್ನು, ನಮ್ಮ ನಗರಗಳನ್ನು ಹಾಗೂ ನಮ್ಮ ಗ್ರಾಮಗಳನ್ನು ಅಂದಗೊಳಿಸುತ್ತವೆ ನಮ್ಮ ಜಮೀನುಗಳಿಗೆ, ನಮ್ಮ ವನ್ಯ ಜೀವಿಗಳಿಗೆ ನೆರಳು ಕೊಡುತ್ತವೆ ಮನರಂಜನ ಉದ್ಯಾನ ವನ ಮತ್ತು ರಾಷ್ಟ್ರೀಯ ಮೀಸಲು ಕ್ಷೇತ್ರಗಳಲ್ಲಿ ಬೆಳೆಸಿದ ವೃಕ್ಷಗಳು ನಮ್ಮ ದಿನನಿತ್ಯದ ದುಡಿಮೆಯಿಂದ, ಚಿಂತೆಯಿಂದ, ವಿಶ್ರಾಂತಿಯನ್ನೂ ಶಾಂತಿಯನ್ನೂ ನಮಗೆ ಒದಗಿಸುತ್ತವೆ. ವೃಕ್ಷಗಳು ಸೌದೆ, ಮೇವು, ಮರ ಮತ್ತು ಫಲಗಳನ್ನು ನಮಗೀಯುತ್ತವೆ. ಗಾಳಿಗೆ ಶಡೆಯಾಗಿದ್ದು, ಬೇಲಿಯಾಗಿದ್ದು, ವೃಕ್ಷಗಳು ಜಮೀನಿನ ಬೆಳೆಯನ್ನು ಕಾಪಾಡುತ್ತವೆ. ವೃಕ್ಷಗಳು ಹೇರಳವಾಗಿರುವುದು ಅಥವಾ ಇಲ್ಲದಿರುವುದು, ನಮ್ಮ ಸೈಗಾರಿಕಾಭಿವೃದ್ಧಿ, ಸಾಮಾಜಿಕ ಪ್ರಗತಿ ಹಾಗೂ ರಾಷ್ಟ್ರದ ಬಲದ ಮೇಲೆ ನೇರವಾದ ಪ್ರಭಾವವನ್ನು ಬೀರುವುವು.

ಸಂಯುಕ್ತ ರಾಷ್ಟ್ರ ಸಂಸ್ಥೆಯ ಆಹಾರ ಮತ್ತು ಬೇಸಾಯ ಸಮ್ಮೇಳನದ ೬ನೆಯ ಅಧಿವೇಶನವು ವೃಕ್ಷಗಳ ಸರ್ವತೋಮುಖ ಉಪಯುಕ್ತತೆಯನ್ನು ಗ್ರಹಿಸಿ, ಆ ಬಗೆಗೆ ಸಾಮೂಹಿಕ ಪ್ರಜ್ಞೆಯನ್ನು ತರುವುದಕ್ಕಾಗಿ ಸದಸ್ಯ ರಾಷ್ಟ್ರಗಳು ತಮ್ಮ ತಮ್ಮ ರಾಷ್ಟ್ರಗಳ ಸ್ಥಳೀಯ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡು ವರ್ಷದಲ್ಲಿ ಒಂದು ದಿನವನ್ನು ಗೊತ್ತು ಮಾಡಿ, ಪ್ರತಿ ವರ್ಷವೂ ವಿಶ್ವ ವನ ಮಹೋತ್ಸವವನ್ನು ಆಚರಿಸಬೇಕೆಂದು

ಬ್ರಿಟಿಷ ರಾಣಿ ತನಿ ಎಲಿಜಬೆತರು ಡೆನ್ಮಾರ್ಕನ್ನು ಸಂದರ್ಶಿಸಿದ್ದರು. ಚಿತ್ರದಲ್ಲಿ ಡೆನ್ಮಾರ್ಕಿನ ರಾಜ ಫ್ರೆಡರಿಕನೊಂದಿಗೆ ರಾಣಿಯು ಕುಳಿತಿರುವುದನ್ನು ಕಾಣಬಹುದು.

ಶಿಫಾರಸು ಮಾಡಿದೆ

ಸೋವಿಯೆಟ್ ರಷ್ಯಾದಲ್ಲಿ ದ್ವೀಪದ ಹಲಸು (ಬ್ರೆಡ್ ಫ್ರೂಟ್) ಮತ್ತು ಬೆರ್ರಿ ವೃಕ್ಷಗಳನ್ನು ನೆಡುತ್ತಾರೆ. ಇದು ಆಹಾರ ಹಾಗೂ ವೈದ್ಯದ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ, ಜೇನು ಹಾಗೂ ಹಕ್ಕಿಗಳನ್ನು ಸಾಕಲ್ಪಡಿಸಹಾಯಕವಾಗಿರುವುವು. ಈ ಮರಗಳು ಹೂ ಬಿಡುವ ಕಾಲದಲ್ಲಿ ಜೇನು ನೊಣಗಳಿಗೆ ಕುಂಬಾ ಆಕರ್ಷಕವಾಗಿದ್ದು, ಬೇಸಾಯ ಬೆಳೆಗಳಲ್ಲಿಯೂ ಪರಕೀಯ 'ಪರಾಗರೇಣು ಸ್ಪರ್ಶಕ್ಕೆ ಅನುಕೂಲವಾಗಿರುವುವು

ನ್ಯೂಜಿಲಾಂಡ್‌ನಲ್ಲಿ 'ಸ್ಥಳೀಯ ಸಿಲ್ವಾ' ವೃಕ್ಷಗಳನ್ನು ನೆಡುತ್ತಾರೆ ಸ್ನೇಹ ಸೌಹಾರ್ದ ವೃಕ್ಷಗಳು, ಆಹಾರವನ್ನು ಉತ್ಪಾದಿಸುವ ವೃಕ್ಷಗಳು ಹಾಗೂ ಮುಖ್ಯವಾಗಿ ಜೇನು ನೊಣಗಳಿಗೆ ಅನುಕೂಲವಾದ ವೃಕ್ಷಗಳನ್ನು ನೆಟ್ಟು ಬೆಳೆಸುವುದಕ್ಕು ವಿಶೇಷ ಪ್ರಾಮುಖ್ಯವನ್ನು ಇಲ್ಲಿ ನೀಡಲಾಗುವುದು.

ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ, ವನಮಹೋತ್ಸವ ಯೋಜನೆಯಲ್ಲಿ ಎರಡು ಹೊಸ ಅಂಶಗಳನ್ನು ಸೇರಿಸಲಾಗಿದೆ

ಅಲ್ಲಿ ವನ ಮಹೋತ್ಸವ ದಿನವನ್ನು ಶಾಲಾ ಮಹೋತ್ಸವ ವನ್ನಾಗಿ ನಡೆಸಲಾಗುವುದು ಸ್ಮಾರಕ ವೃಕ್ಷಗಳನ್ನು ನೆಟ್ಟು ತೋಪುಗಳನ್ನು ಸೃಷ್ಟಿಸುವ ಪದ್ಧತಿಯನ್ನು ಇಲ್ಲಿ ಅನುಸರಿಸಲಾಗುತ್ತಿದೆ. ಐಸ್‌ಲ್ಯಾಂಡ್‌ನಲ್ಲಿ ವಿದ್ಯಾರ್ಥಿಗಳ ವನನಿರ್ಮಾಣದಿನಾಚರಣೆಯ ಕಾನೂನೇ ಜಾರಿಯಲ್ಲಿರುವುದು. ಈ ಕಾನೂನಿನ ಪ್ರಕಾರ ವರ್ಷದಲ್ಲಿ ಒಂದು ದಿನ ಶಾಲಾ ಅವಧಿಯಲ್ಲಿ, ಅನುಕೂಲ ವಾತಾವರಣವಿದ್ದಾಗ, ಕಡ್ಡಾಯವಾಗಿ ವೃಕ್ಷಗಳನ್ನು ನೆಡಬೇಕಾಗುವುದು. ಬ್ರಿಟನ್ನಿನಲ್ಲಿ ವನ್ಯ ಕಮಿಷನ್ ವನಮಹೋತ್ಸವಕ್ಕಾಗಿ ಸಸಿಗಳನ್ನು ಒದಗಿಸುವುದರ ಜೊತೆಗೆ, ಆಗಿರುವ ವನಗಳಲ್ಲಿ ಸಸಿಗಳನ್ನು ನೆಡುವುದಕ್ಕಾಗಿ ಶಾಲೆಗಳಿಗೆ ಜಾಗಗಳನ್ನು ಹಂಚುವರು ಆ ಶಾಲೆಗಳು ಆ ಜಾಗಗಳಲ್ಲಿ ಸಸಿಗಳನ್ನು ನೆಟ್ಟು ಅವುಗಳ ಪಾಲನೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವುವು ಇಟಲಿಯಲ್ಲಿ ವೃಕ್ಷಗಳ ಬಗೆಗೆ ವಿಶೇಷ ಎಚ್ಚರಿಕೆಯನ್ನು ವಹಿಸಿದ ಬಾಲಕರಿಗೆ ಬಹುಮಾನಗಳನ್ನು ಕೊಡುವರು. ಇತರ ಕ್ಷೇತ್ರಗಳಲ್ಲಿ ಕಳೆದ ವರ್ಷದಲ್ಲಿ ಯಾವ ಪರಿಣಾಮವುಂಟಾಗಿದೆಯೆಂಬುದನ್ನು ತಿಳಿಯಲು ಪ್ರವಾಸಗಳನ್ನೂ ಸಹ ಇಲ್ಲಿ ವ್ಯವಸ್ಥೆಮಾಡಲಾಗುವುದು.

ಭಾರತದಲ್ಲಿ ವನಮಹೋತ್ಸವವನ್ನು ಕೇವಲ ಒಂದು ದಿನ ಅಥವಾ ಒಂದು ಸಪ್ತಾಹದ ಕರ್ತವ್ಯವೆಂದು ಭಾವಿಸಲಾಗುತ್ತಿಲ್ಲ ಪ್ರಚಲಿತ ಪ್ರಗತಿ ಹಾಗೂ ಭವಿಷ್ಯದಲ್ಲಿ ನಂಬಿಕೆಯಿರುವುದರ ಸಂಕೇತವಾಗಿ ಇದನ್ನು ಆಚರಿಸಲಾಗುತ್ತಿದೆ ನೆಟ್ಟ ಸಸಿಗಳ ಪಾಲನೆ-ಪೋಷಣೆಗೆ ಹೆಚ್ಚಿನ ಗಮನವನ್ನು ಇಲ್ಲಿ ಕೊಡಲಾಗುತ್ತಿದೆ. ನಮ್ಮ ಪ್ರಧಾನ ಮಂತ್ರಿಗಳು ತಿಳಿಸಿದಂತೆ, ಮರಗಳನ್ನು ಕಡಿಯುವುದು ಬಹಳ ಸುಲಭ ಆದರೆ, ಒಂದು ಮರವನ್ನು ಹೆಚ್ಚಾಗಿ ಬೆಳೆಯಬೇಕಾದರೆ, ಒಂದು ತಲೆಮಾರು ಬೇಕಾಗುವುದು.

ಭಾರತ ಸರ್ಕಾರದ ಸಹಕಾರ ಶಾಖೆಯ ಮಂತ್ರಿಗಳಾದ ಡಾ. ಪಂಜಾಬ್‌ರಾವ್ ದೇಶಮುಖ್‌ರವರು ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸಿರುವ ಪತ್ರದಲ್ಲಿ, "ಮಾನವನು ಸಂತೃಪ್ತನಾಗಿ ಮಾಡಬಲ್ಲ ಕಲಸಗಳಲ್ಲಿ ವೃಕ್ಷಗಳನ್ನು ನೆಡುವುದೂ ಒಂದು, ಏಕೆಂದರೆ ಅದರಿಂದ ಅವನು ಶ್ರೇಯೋಭಿವೃದ್ಧಿಯ ಸದ್ಭಾವನೆಯನ್ನು ಪಡೆಯುತ್ತಾನೆ. ವೃಕ್ಷವನ್ನು ಪಾಲಿಸಿ-ಪೋಷಿಸಿ ಅದನ್ನು ಸಂತೃಪ್ತನಾಗಿಸಿದಾಗ ಅವನು ಅಧಿಕ ಪ್ರಮಾಣದಲ್ಲಿ ಸದ್ಭಾವನೆಯನ್ನು ತಂದುಕೊಳ್ಳುತ್ತಾನೆ" ಎಂದು ತಿಳಿಸಿರುವರು.

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಸರ್ಚಾರ್ಜ್ ಇಲ್ಲದೆ (ನವಯುಗ ಸಾರಪತ್ರಿಕೆಯ ಖಾತೆಗೆ) ಜಮಾ ಮಾಡಬಹುದು.

ಮೆನೇಜರ್.

ಸ್ಥಾಪನೆ. 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ ಭಾರತ)

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಠೇವಣಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?

ಹಾಗಿದ್ದಲ್ಲಿ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬೇಂಕಿನ ಶಾಖೆಯಲ್ಲಿ ವಿಚಾರಿಸಿರಿ "ಕೊರ್ಪೊರೇಶನ್" ಬೇಂಕು ಎಲ್ಲಾ ತರದ ಠೇವಣಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿಯದೆ. ಅಲ್ಲದೆ ಠೇವಣಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ಶರತ್ತುಗಳನ್ನೂ ಬದಲಾಯಿಸಿಯದೆ.

51 ವರುಷಗಳ ಪರಿಪಕ್ವ ಬೇಂಕಿಂಗ್ ಅನುಭವ!

7,00,00,000 ರೂಪಾಯಿಗಳಿಗೂ ಮೀರಿದ ಒಟ್ಟು ವಹಿವಾಟು!

THE CANARA BANKING CORPORATION LIMITED

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೪-೭-೧೯೫೭	೪೩

ಬೆಲೆಯೇರಿಕೆ

ಭಾರತ ಸರಕಾರವು ಪ್ರಜಾ ಸಮಾಜ ವಾದಿ ಧುರೀಣರೂ ಪ್ರಸಿದ್ಧ ಅರ್ಥಶಾಸ್ತ್ರಜ್ಞರೂ ಬಡವರ ಬಗ್ಗೆ ಹೆಚ್ಚಿನ ಸಹಾನುಭೂತಿಯುಳ್ಳವರೂ ಕೃಷಿಕರ ಮೇಲ್ಮೈಯನ್ನು ಬಯಸುವವರೂ ಆದ ಶ್ರೀ ಅಶೋಕ ಮೆಹತಾರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿ, ಆಹಾರ ಧಾನ್ಯಗಳ ಬೆಲೆ ಏರುತ್ತಿರುವ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಸೂಚಿಸಲು ಆದೇಶಿಸಿದೆ. ಸಮಿತಿಗೆ ಮೂರು ತಿಂಗಳ ಅವಧಿಯನ್ನು ಕೊಡಲಾಗಿದೆ; ಮತ್ತು ಉತ್ಪಾದಕರಿಗೆ ಪ್ರೋತ್ಸಾಹಕರವಾಗಿರುವಂತೆಯೂ ಗ್ರಾಹಕರಿಗೆ ಭಾರವಾಗದಂತೆಯೂ ಆರ್ಥಿಕ ವ್ಯವಸ್ಥೆಯಲ್ಲಿ ಯೋಗ್ಯ ಮಟ್ಟದ್ದೆನಿಸುವಂತೆಯೂ ಬೆಲೆಗಳನ್ನು ಕಾಯ್ದುಕೊಳ್ಳುವ ಬಗ್ಗೆ ಉಪಾಯಗಳನ್ನು ಕಂಡುಹಿಡಿಯಲು ಈ ಅವಧಿಯಲ್ಲಿ ಸಮಿತಿಯು ಪ್ರಯತ್ನಿಸಬೇಕಾಗಿದೆ. ಇತ್ತೀಚೆಯ ವರೆಗೆ ಕೇಂದ್ರ ಸರಕಾರದ ವಕ್ತಾರರೂ ಮಂತ್ರಿಗಳೂ ಬೆಲೆಯೇರಿಕೆಯ ಕಡೆಗೆ ಗಮನವನ್ನು ಸೆಳೆದಾಗಲೆಲ್ಲ ಅದು ತಾತ್ಕಾಲಿಕ ಸ್ವರೂಪದ್ದೆಂದೂ ಸರಕಾರ ಇಷ್ಟರೊಳಗೆಯೇ ತಕ್ಕ ಕ್ರಮಗಳನ್ನು ತೆಗೆದುಕೊಂಡು ಬೆಲೆಗಳು ಇಳಿಯುವಂತೆ ನೋಡಿಕೊಂಡಿದೆ ಎಂದೂ ಹೇಳುತ್ತಾ ಬಂದಿದ್ದರು; ಅಲ್ಲದೆ ಬೆಲೆಗಳು ನಿಜವಾಗಿಯೂ ತಗ್ಗುತ್ತಿವೆ ಎಂಬ ಅಭಿಪ್ರಾಯವನ್ನೂ ಸಹ ವ್ಯಕ್ತಪಡಿಸಿದ್ದ ಸಂದರ್ಭವುಂಟು. ಸರಕಾರದವರು ಕೈಗೊಂಡ ಉಪಾಯಗಳಲ್ಲಿ ತಮ್ಮ ದಾಸ್ತಾನಿನಿಂದ ಅಗ್ಗ ಬೆಲೆಗೆ ಆಹಾರಧಾನ್ಯಗಳನ್ನು ಪೇಟೆಗೆ ತಂದು ಪೂರೈಸಲು ನೋಡಿದ ಕ್ರಮ ಒಂದೆನ್ನಬಹುದು—ಇದರಿಂದ ಮಿತಬೆಲೆಯ ಅಂಗಡಿಗಳ ಮುಂದೆ ಕ್ಯಾಸಿಂತುಕೊಳ್ಳಲು ಶಕ್ತರಾದ ಜನರಿಗೆ ಸ್ವಲ್ಪ ಮಟ್ಟಿನ ಪರಿಹಾರ ಸಿಕ್ಕಿತೇನೊ ನಿಜ; ಆದರೆ ಮುಕ್ತ ಪೇಟೆಯಲ್ಲಿ ಒಂದು ಕಾಸಿನಷ್ಟೂ ಬೆಲೆ ಇಳಿಯಲಿಲ್ಲ. ಅಲ್ಲದೆ ಹೀಗೆ ಮಿತಬೆಲೆಯ ಅಂಗಡಿಗಳನ್ನು ಸಹ ವಿರಳವಾಗಿಯೇ ತೆರೆಯಲಾಯಿತು; ಬಡಜನರಲ್ಲಿ ಎಲ್ಲರಿಗೂ ಇದರ ಸ್ವಯೋಜನ ಸಿಕ್ಕಿತ್ತವ ಹಾಗಿರಲಿಲ್ಲ. ಪರಿಣಾಮವಾಗಿ ೯೯% ಜನರು ಬೆಲೆಯೇರಿಕೆಯ ದೆಸೆಯಿಂದ ಬಳಲುತ್ತಿರಬೇಕಾದ ಪರಿಸ್ಥಿತಿ ತಪ್ಪಲಿಲ್ಲ. ಭಾರತದ ರಿಜರ್ವ ಬೇಂಕು ಆಹಾರದವಸ್ತುಗಳ ಮೇಲೆ ಸಾಲಕೊಡುವ ತನ್ನ ನೀತಿಯನ್ನು ಪರಿಷ್ಕರಿಸಿಕೊಂಡುದು ಸರಕಾರಿ ಮಟ್ಟದಲ್ಲಿ ಬೆಲೆ ನಿಯಂತ್ರಣಕ್ಕೆ ಕೈಗೊಂಡ ಇನ್ನೊಂದು ಉಪಾಯ. ಇದರಿಂದಲೂ ಮುಕ್ತ ಪೇಟೆಯ ದರಗಳ ಮೇಲೆ ವಿಶೇಷ ಪರಿಣಾಮವಾಗಿಲ್ಲ. ದೇಶದಲ್ಲಿ ನಿಜವಾಗಿ ಆಹಾರ ಧಾನ್ಯಗಳ ಕೊರತೆಯುಂಟಾಗಿದೆಯೇ, ಈ ಕಾರಣದಿಂದಾಗಿಯೇ ಬೆಲೆಗಳು ಏರಿಕೊಂಡಿದೆಯೆ? ಎಂದರೆ, ಸರಕಾರದ ಅಂಕಿ ಸಂಖ್ಯಾ ವಿಭಾಗ ಅದನ್ನು ಅಲ್ಲಗಳೆಯುತ್ತದೆ. ೧೯೪೬-೪೭ರಿಂದ ೧೯೫೦-೫೨ನೇ ಇಸವಿಗಳಲ್ಲಿ ಪ್ರತಿ ವರ್ಷ ಆಹಾರ ಧಾನ್ಯಗಳ ಸರಾಸರಿ ಉತ್ಪಾದನೆಯು ೫೮೮ ಲಕ್ಷ ಟನ್ನುಗಳಷ್ಟಾಗಿದ್ದರೆ ೧೯೫೧-೫೨ರಿಂದ ೧೯೫೬-೫೭ನೇ ಇಸವಿಗಳಲ್ಲಿ ಪ್ರತಿ ವರ್ಷದ ಸರಾಸರಿಯು ೬೪೯ ಲಕ್ಷ ಟನ್ನುಗಳಿಗೆ ಏರಿರುವುದು ಅಂಕೆ ಸಂಖ್ಯೆಗಳಿಂದ ತಿಳಿದು ಬರುತ್ತದೆ. ಮೊದಲನೇ ಪಂಚವಾರ್ಷಿಕ ಯೋಜನೆಯ ಗುರಿಯಾಗಿ ೬೦೫ ಲಕ್ಷ ಟನ್ನುಗಳಷ್ಟು ಮಾತ್ರ ಆಹಾರೋತ್ಪಾದನೆಯನ್ನು ಇಟ್ಟುಕೊಳ್ಳಲಾಗಿತ್ತು ಎಂಬುದಿಲ್ಲಿ ಗಮನಿಸಬೇಕಾದ ಅಂಶ—ಹೀಗೆ ಗುರಿಗಿಂತಲೂ ಸರಾಸರಿ ೪೦ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಹೆಚ್ಚು ಬೆಳೆಸಿಕೊಂಡರೂ ಬೆಲೆ ಏರಿಕೆಯನ್ನು ತಪ್ಪಿಸುವುದು ಸಾಧ್ಯವಾಗಿಲ್ಲವೆಂದರೆ ಆಶ್ಚರ್ಯ. ಇದರಿಂದ ಅನುಮೇಯಿಸಬಹುದಾದ ಸಂಗತಿಗಳು ಎರಡು- ಒಂದನೆಯದಾಗಿ ಈ ಅಂಕೆ ಸಂಖ್ಯೆಗಳೇ ಸುಳ್ಳು; ಅಥವಾ ಅವು ವಿಶ್ವಾಸಾರ್ಹವಲ್ಲ. ಇವೆಲ್ಲವೂ ಸ್ಥೂಲ ಅಂದಾಜಿನ ಮೇಲೆ ಸಂಗ್ರಹಿಸಿದವುಗಳಾದ ಕಾರಣ ಅವುಗಳು ವಾಸ್ತವಿಕ ಸ್ಥಿತಿಯನ್ನು ಪ್ರಕಟಪಡಿಸುವುದಿಲ್ಲ. ಈ ತೀರ್ಮಾನವನ್ನು ಸರಕಾರದವರು ಸಹ ಅನೇಕ ವೇಳೆ ಒಪ್ಪಿಕೊಳ್ಳಬೇಕಾಗಿ ಬಂದಿದೆ ಆದಾಗ್ಯೂ ಮೊದಲನೇ ಯೋಜನೆಯಲ್ಲಿ ಹಲವಾರು ನೀರಾವರಿ ಕಾರ್ಯಕ್ರಮಗಳನ್ನು ಹೊಸತಾಗಿ ಕೈಗೊಂಡು ಕೃಷಿ ಭೂಮಿಯ ಕ್ಷೇತ್ರವನ್ನು ವಿಸ್ತರಿಸಿರುವುದರಿಂದ ಆಹಾರೋತ್ಪಾದನೆಯಲ್ಲಿ ಹಿಂದಿಗಿಂತ ಹೆಚ್ಚಳವಾಗಿರಲಿಕ್ಕೇ ಬೇಕು ಎಂದು ಭಾವಿಸಿದರೆ ತಪ್ಪೇನಿಲ್ಲ. ಬಹುಶಃ ಈ ಹೆಚ್ಚಳವು ತಿನ್ನುವ ಹೆಚ್ಚಿನ ಬಾಯಿಗಳ ಪ್ರಮಾಣಕ್ಕೆ ಅನುಗುಣವಾಗಿಲ್ಲದ ದೆಸೆಯಿಂದ ಬೆಲೆಗಳು ಏರಿರಲೂ ಸಾಕು; ಅಥವಾ ಯೋಜನೆಯ ಕಾಲದಲ್ಲಿ ಕೊರತೆ ಧನ ವಿನಿಯೋಗ ಪದ್ಧತಿಯನ್ನು ಅನುಸರಿಸಿದ ಪ್ರಯುಕ್ತ ನೋಟುಗಳ ಪ್ರಸಾರ ಹೆಚ್ಚಿ, ಅವುಗಳ ಬೆಲೆಯು ತಗ್ಗಿ, ದವಸಧಾನ್ಯಗಳ ಬೆಲೆ ಹೆಚ್ಚಿಕೊಂಡಂತೆ ತೋರಿರಲೂ ಸಾಕು ಆದರೆ ಇವೆರಡೂ ಸಂಭವಗಳನ್ನು ಸರಕಾರ ನಿರೀಕ್ಷಿಸಿರಲಿಲ್ಲವೆಂದು ಹೇಳುವುದಕ್ಕಾಗದು. ಅರ್ಥಕಳಿವರು ಯೋಜನೆಯು ಈ ಬಗೆಯ ದುಷ್ಪರಿಣಾಮಗಳಿಗೆ ಎಡೆ ಕೊಡಬಾರದೆಂದು ಕಣ್ಣಿಗೆ ಎಣ್ಣೆಯನ್ನು ಹಾಕಿಕೊಂಡು ಜಾಗರೂಕತೆಯಿಂದ ಸ್ಥಿತಿಗತಿಗಳ ಸಮಾಲೋಚನೆ ನಡೆಸುತ್ತಿದ್ದರು. ಹಾಗಿದ್ದರೂ ಬೆಲೆಗಳು ಏರುತ್ತಿರುವುದರ ರಹಸ್ಯವೇನು? ನಮ್ಮ ಆಹಾರ ಧಾನ್ಯಗಳ ಅಮದು ಈಚೆಗೆ ಕೆಲವು ವರ್ಷಗಳಿಂದ ಕಡಿಮೆಯಾಗುತ್ತಾ ಬಂದಿದೆ—ದೇಶದೊಳಗಿನ ಉತ್ಪಾದನೆಯು ಹೆಚ್ಚಾಗಿದ್ದರೂ ಜನಸಂಖ್ಯೆಯು ಹೆಚ್ಚುತ್ತಿರುವ ವೇಗದೊಡನೆ ಅದು ಪೈಪೋಟಿಗೆ ನಿಲ್ಲುವ ಮಟ್ಟದಲ್ಲಿಲ್ಲವೆಂದು ಭಾವಿಸಿದರೆ, ಆಗ ಸಹಜವಾಗಿಯೇ ಅಮದಿನ ಪ್ರಮಾಣ ತಗ್ಗಿಕೊಂಡ ದೆಸೆಯಿಂದ ಆಹಾರಾ ಭಾವ ಉಂಟಾಗಿದೆ ಎಂದೂ ಪರಿಣಾಮವಾಗಿ ಬೆಲೆಯೇರಿಕೆಯಾಗಿದೆ ಎಂದೂ ಭಾವಿಸಲು ಎಡೆಯಾಗುತ್ತದೆ. ನಿಜವಾಗಿ ಹೀಗಿಲ್ಲದಿದ್ದರೂ ನಮ್ಮ ದೇಶದಿಂದ ಬೇರೆ ಕಡೆಗೆ, ಉದಾಹರಣೆಗೆ ಗೋವೆ ಮತ್ತು ಪಾಕಿಸ್ತಾನಗಳಿಗೆ, ಗಟ್ಟಿಸಿಂದ ಸರಕಾರದ ಗಮನಕ್ಕೆ ಬಾರದಂತೆ ಆಹಾರ ಧಾನ್ಯಗಳ ನಿರ್ಯಾತವಾಗುತ್ತಿದ್ದರೆ ಅದರಿಂದಾಗಿ ದೇಶದೊಳಗೆ ಬೆಲೆ ಏರಿಕೊಳ್ಳುವುದು ಸಹಜ. ಲಾಭದಾಸೆಗೆ ಗುರಿಯಾದ ವ್ಯಾಪಾರಿಗಳು ಈ ಬಗೆಯ ಕಳ್ಳ ವ್ಯಾಪಾರವನ್ನು ಭಾರಿ ಪ್ರಮಾಣದಲ್ಲಿ ಕೊಡಗಿಸಿರುವರೆಂದು ಎಲ್ಲೆಲ್ಲೂ ಪಿಸು ಮಾತನಾಡಲಾಗುತ್ತದೆ. ಒಂದು ವೇಳೆ ಇವರು ನಿರ್ಯಾತ ವ್ಯಾಪಾರದಲ್ಲಿ ನಿರತರಾಗಿಲ್ಲವೆಂದೇ ಕಟ್ಟಿಕೊಂಡರೂ, ಸಂಗ್ರಹ ಪ್ರವೃತ್ತಿಯ ವ್ಯಾಪಾರಿಗಳಲ್ಲಿ ಮೂಡಿಕೊಂಡು ಅವರೇ ತಾವಾಗಿ ಲಾಭದಾಸೆಗೆ ಬೆಲೆ ಏರಿಸುತ್ತಾ ಹೋಗುತ್ತಿದ್ದರೆ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ನಮ್ಮ ದೃಷ್ಟಿಯಲ್ಲಿಯಂತೂ ಆಹಾರ ಧಾನ್ಯಗಳ ಸಂಗ್ರಹವುಳ್ಳವರು- ಅವರು ದೊಡ್ಡ ರೈತರೇ ಇರಲಿ, ವ್ಯಾಪಾರಿಗಳೇ ಇರಲಿ— ಲಾಭದಾಸೆಗೆ ಬಿದ್ದಿರುವುದರ ದೆಸೆಯಿಂದಲೇ ಬೇಕಂದೇ ಬೆಲೆ ಏರಿಕೆಯ ಹವ್ಯಾಸದಲ್ಲಿ ಬಿದ್ದಿರುವರೆಂದು ತೋರುತ್ತದೆ. ಅಶೋಕ ಮೆಹತಾರ ಸಮಿತಿಯು ಇವೆಲ್ಲ ವಿಷಯಗಳನ್ನು ಪರ್ಯಾಲೋಚಿಸಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ- ಅದು ಕೊಡುವ ತೀರ್ಮಾನವು ವ್ಯಾಪಾರಿಕವಾದುದಾಗಿರಬೇಕಲ್ಲದೆ, ನಿಯಂತ್ರಣ ಕಾಲದ ದಿನಗಳ ಪುನರಾವರ್ತನೆಗೆ ಎಡೆ ಕೊಡಬಾರದು ಎಂಬುದೂ ಮುಖ್ಯವಾದ ವಿಷಯ. ಬಡವರಿಗೆ ತಾಪ್ರಸವಾಗದಂತೆ ಮುಕ್ತ ಪೇಟೆಯಲ್ಲಿ ಆಹಾರ ದವಸಗಳ ವ್ಯಾಪಾರ ನಡೆಯುವಂತೆ ನೋಡುವ ಬಗೆಯನ್ನು ಸಮಿತಿ ಕಂಡುಹಿಡಿದರೆ ಮಾತ್ರ ಅದರ ನೇಮಕ ಸಾರ್ಥಕವಾದೀತು.

ಸಂಕ್ಷಿಪ್ತ ಸುದ್ದಿಗಳು

ಹುಬ್ಬಳ್ಳಿಗೆ ವೈದ್ಯಕೀಯ ಕಾಲೇಜು

ಮೈಸೂರು ಸರಕಾರವು ಸ್ಥಾಪಿಸಲಿರುವ ಹುಬ್ಬಳ್ಳಿಯ ವೈದ್ಯಕೀಯ ಕಾಲೇಜಿಗೆ ಅವಶ್ಯಕ ನೆರವೀಯುವುದಕ್ಕೆ ಕೇಂದ್ರ ಸರಕಾರವು ಒಪ್ಪಿರುತ್ತದೆ ಎಂದು ರಾಜ್ಯ ಸರಕಾರಗಳ ಆರೋಗ್ಯಮಂತ್ರಿಗಳ ಪರಿಷತ್ತಿನಲ್ಲಿ ಕೇಂದ್ರ ಆರೋಗ್ಯಸಚಿವ ಶ್ರೀ ದ. ಪ. ಕರಮರಕರು ತಿಳಿಸಿದರು. ಮೈಸೂರ ಆರೋಗ್ಯವಂತ್ರಿ ಶ್ರೀ ಆರ್. ಎಂ. ಪಾಟೀಲರು ಈ ಕಾಲೇಜಿನ ಅವಶ್ಯಕತೆಯನ್ನು ಪರಿಷತ್ತಿನಲ್ಲಿ ಆಗ್ರಹಪೂರ್ವಕವಾಗಿ ಪ್ರತಿಪಾದಿಸಿದರು. ಸಾಧ್ಯವಾದರೆ, ಈ ಹೊಸ ಕಾಲೇಜು ಇದೇ ವರ್ಷದಿಂದ ತೆರೆಯಲ್ಪಡುವುದು. ಕರ್ಣಾಟಕ ವಿಶ್ವವಿದ್ಯಾನಿಲಯವು ಇದಕ್ಕೆ ಮನ್ನಣೆಯೊಯುವ ನಿರೀಕ್ಷೆಯಿದೆ.

ಉಪಕುಲಪತಿಗಳು

ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಶ್ರೀ ಕು. ವೆಂ. ಪುಟ್ಟಪ್ಪನವರೂ, ಕರ್ಣಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಶ್ರೀ ಡಿ. ಸಿ. ಪಾವಟೆಯವರೂ ಪುನಃ ಆಯಾ ವಿಶ್ವವಿದ್ಯಾಲಯಗಳ ಉಪಕುಲಪತಿಗಳಾಗಿ ಆಯ್ಕೆಗೊಂಡಿದ್ದಾರೆ.

ಅರಸರ ಕುಟುಂಬದ ಭತ್ತೆ

ಹಿಂದಿನ ಅರಸರ ವಂಶಸ್ಥರವರಿಗೆ ಕೊಡಲಾಗುತ್ತಿರುವ ಭತ್ತೆಯನ್ನು ದೊಡ್ಡ ಪ್ರಮಾಣದಲ್ಲಿ ತಗ್ಗಿಸಲು ಒಡಿಸ್ಸಾ ಸರಕಾರವು ನಿರ್ಧರಿಸಿದೆ. ರಾಜ ಮಾತೆಯರು ವಿಧವೆಯರಾಗಿದ್ದರೆ ಅವರಿಗೆ ಸಿಗುವ ಪರಮಾವಧಿ ಭತ್ತೆಯು ರೂ. ೫೦೦ ಇರುವುದು. ಇತರರಿಗೆ ೧೯೪೮ರಿಂದ ದೊರೆಯುತ್ತಿದ್ದ ಭತ್ತೆಯನ್ನು ೧೯೫೭ ಜುಲೈ ೧ರಿಂದ ನಿಲ್ಲಿಸಲಾಗುವುದು. ಭಾರತ ಸರಕಾರಕ್ಕೆ ತಿಳಿಸಿ ಈ ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿ ಮುಖ್ಯ ಮಂತ್ರಿ ಶ್ರೀ. ಹರೇ ಕೃಷ್ಣ ಮೆಹತಾಬರು ಹೇಳಿದರು. ನರೇಂದ್ರರ ವರ್ಷಾಸನವು ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟದ್ದು, ಅದನ್ನು ಅವರೇ ಕಡಿಮೆಮಾಡಬೇಕಾಗಿದೆ.

ವಿದೇಶೀಯ ಅವಶೇಷಗಳು

ಭಾರತದಲ್ಲಿ ವಿದೇಶೀಯರ ಆಳಿಕೆಯ ಕುರುಹುಗಳಾಗಿರುವ ಮೂರ್ತಿ ಮುಂತಾದುವುಗಳನ್ನು ಸಾರ್ವಜನಿಕ ಸ್ಥಳಗಳಿಂದ ಕೂಡಲೇ ಕಿತ್ತು ಹಾಕಿ ಅವನ್ನು ಎಲ್ಲಿಯಾದರೂ ಉತ್ತಮ ರೀತಿಯಲ್ಲಿ ಇರಿಸುವ ನಿರ್ಧಾರವನ್ನು ಉತ್ತರ ಪ್ರದೇಶ ಸರಕಾರವು ಮಾಡಿದೆ. ಲಖನೌವಲ್ಲಿ ಕಟ್ಟಿಸುತ್ತಿರುವ ಹೊಸ ನಮ್ಮ ಸಂಗ್ರಹಾಲಯದಲ್ಲಿ ಇವನ್ನು ಇರಿಸುವ ಕುರಿತು ಪರಿಶೀಲನೆ ನಡೆಯುತ್ತದೆ.

ಸರಕಾರಿ ಧೋರಣೆಯ ವಿಮರ್ಶೆ

ಸದ್ಯದ ಸರಕಾರದ ಧೋರಣೆಗಳ ಕುರಿತು ಕ್ರೈಸ್ತಿಯನ್ ಬಾಂಧವರು ನಿರ್ವಿಕಾರ ಮನಸ್ಸಿನಿಂದ ನಿರ್ಣಯಕ್ಕೆ ಬರಬೇಕು. ಚಾರಿತ್ರಿಕವಾಗಿಯೂ ಸಾಂಪ್ರದಾಯಿಕವಾಗಿಯೂ ಭಾರತವು ಧರ್ಮ ಸಹಿಷ್ಣುತೆಯನ್ನು ಹೊಂದಿದೆ. ಕ್ರೈಸ್ತಿಯನ್ನರು ತಮ್ಮ ಭವಿತವ್ಯವನ್ನು ಚಿಂತಿಸದೆ ಬಹುಮತ ಸಮಾಜವನ್ನರ್ಥಮಾಡಿಕೊಂಡು ನಡೆಯಬೇಕೆಂದು ಕೇಂದ್ರ ಗೃಹಶಾಖೆಯ ಉಪಮಂತ್ರಿ ಶ್ರೀಮತಿ ವಾಯಲೆಟ್ ಆಳ್ವರು ಬೆಂಗಳೂರಲ್ಲಿ ಕ್ರೈಸ್ತಿಯನ್ನರನ್ನು ಉದ್ದೇಶಿಸಿ ಹೇಳಿದರು.

ಕೇರಳ ಭೂಶಾಸನ ಮಸೂದೆ

ಒಕ್ಕಲುತನದ ನಿರ್ಣಯ, ನ್ಯಾಯಗೇಣಿಗಳಿಗೆ ಸಂಬಂಧಿಸಿದ ಕೇರಳದ ಭೂಶಾಸನ ಮಸೂದೆಯ ಕರಡೊಂದು ಸಿದ್ಧವಾಗಿದ್ದು ಅದಕ್ಕೆ ಅಂತಿಮ ಅಕಾರ ಸ್ವರೂಪಗಳನ್ನು ಇಷ್ಟರಲ್ಲಿಯೇ ಕೊಡಲಾಗಿದೆ. ಅದನ್ನು ಜುಲೈ ೧ರಿಂದು ಸೇರಲಿರುವ ವಿಧಾನ ಸಭೆಯಲ್ಲಿ ಮಂಡಿಸಲಾಗುವುದೆಂದು ತಿಳಿದುಬಂದಿದೆ. ಭೂಹಿಡುವಳಿಯ ಕುರಿತಾದ ಒಂದು ಪರಿಮಿತಿಯನ್ನು ನಿಶ್ಚಯಿಸುವ ಮಸೂದೆಯು ಇನ್ನೂ ಸಂಪೂರ್ಣವಾಗಿಲ್ಲ.

ಅಹಿಂಸಾತ್ಮಕ ಚಳವಳಿ

ಪಾಕಿಸ್ತಾನದಿಂದ ಅಕ್ರಮಿಸಲ್ಪಟ್ಟ ಕಾಶ್ಮೀರದ ಭಾಗಗಳನ್ನು ವಿಮೋಚನೆಗೊಳಿಸುವ ಸಲುವಾಗಿ ಒಂದು ಅಹಿಂಸಾತ್ಮಕ ಚಳವಳಿವನ್ನು ಪ್ರಾರಂಭಿಸಲು ಒಂದು ಲಕ್ಷ ಭಾರತೀಯಮುಸ್ಲಿಮರನ್ನು ಸಂಘಟಿಸಲು ಪಾಟ್ನಾದ ಭಾರತೀಯ ಮುಸ್ಲಿಂ ಯುವಕ ಕಾಶ್ಮೀರ ಫ್ರಂಟ್ ನಿರ್ಧರಿಸಿದೆ. ಭಾರತೀಯ ಮುಸ್ಲಿಮರು ತಮ್ಮ ರಾಜಕೀಯ ಸಂಬಂಧವೇನೇ ಇದ್ದರೂ ಕಾಶ್ಮೀರವು ತಮ್ಮದೆನ್ನುವ ಪಾಕಿಸ್ತಾನ

ದ ವಾಡವನ್ನು ಪ್ರತಿಭಟಿಸಲು ಏಕತೆಯಿಂದಿರುವರೆಂಬುದನ್ನು ಜಗತ್ತಿಗೆ ಇದರಿಂದ ವಿಶದಪಡಿಸಲು ಈ ಫ್ರಂಟನ ರಚನೆಯಾಗಿದೆ.

ಅಲ್ಪ ಉಳಿತಾಯಯೋಜನೆ

ರಾಜಸ್ತಾನ ಸರಕಾರವು ೧೯೫೭–೫೮ ರಲ್ಲಿ ಅಲ್ಪ ಉಳಿತಾಯ ಯೋಜನೆಗಳಿಂದ ೫ ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಗುರಿಯನ್ನಿಟ್ಟುಕೊಂಡಿದೆ. ೫೬–೫೭ರಲ್ಲಿ ಹೀಗೆ ಸಂಗ್ರಹಿಸಿದ ಮೊಬಲಗು ೨೨ ಲಕ್ಷ ರೂಪಾಯಿಗಳು.

ಶೀತಜ್ವರ ಪ್ರತಿಬಂಧಕ ದಾರು

ಇತ್ತೀಚೆಗೆ ವಿಶಿಯಾದಲ್ಲಿ ಹರಡಿ ಭಾರತದ ಮೂಲೆ ಮೂಲೆಗಳಲ್ಲೂ ಹಾವಳಿ ಮಾಡಿದ ಸಾಂಕ್ರಾಮಿಕ ರೋಗ ಶೀತಜ್ವರಕ್ಕೆ ಪ್ರತಿಬಂಧಕವಾದ ದಾರು ಈ ತಿಂಗಳ ಮಧ್ಯಾವಧಿಯಲ್ಲಿ ಭಾರತಕ್ಕೆ ಬರುವ ನಿರೀಕ್ಷೆಯಿದೆಯೆಂದು ಕೇಂದ್ರ ಆರೋಗ್ಯ ಮಂತ್ರಿ ಶ್ರೀ ದ ಸ. ಕರಮಸೂರರು ತಿಳಿಸಿದ್ದಾರೆ.

ಕಾಲುವೇ ನೀರತಂಟೆ

ಭಾರತ ಪಾಕಿಸ್ತಾನಗಳ ನಡುವೆ ಎದ್ದಿರುವ ಸಿಂಧೂ ನದಿ ನೀರ ವಿವಾದ ಸಂಬಂಧದಲ್ಲಿ ಜಾಗತಿಕ ಬೇಂಕಿನ ಉಪಾಧ್ಯಕ್ಷರು ಇತ್ತೀಚೆಗೆ ಸೂಚಿಸಿದ ವಿಧಾನವನ್ನು ಪಾಕಿಸ್ತಾನವು ತಿರಸ್ಕರಿಸಿದೆ. ಪಾಕಿಸ್ತಾನವು ಈ ಅಂಶವನ್ನು ಸಪ್ಟಂಬರ ತಿಂಗಳ ಒಳಗೆ ಒಪ್ಪಿಕೊಳ್ಳದೆ ಹೋದರೆ ಆ ಮೇಲೆ ಭಾರತವು ತನಗೆ ಸಂಕಂಡಂತೆ ವರ್ತಿಸುವುದೆಂದು ತಿಳಿದು ಬಂದಿದೆ. ಪಶ್ಚಿಮ ಪಾಕಿಸ್ತಾನದಲ್ಲಿ ಜಲಾಶಯದ ನಿರ್ಮಾಣಕ್ಕಾಗಿ ಭಾರತವೇ ಖರ್ಚಿಗೆ ಕೊಡಬೇಕೆಂದು ಪಾಕಿಸ್ತಾನದ ಆಗ್ರಹವಿದ್ದು, ಈ ಮೊಬಲಗು ಸುಮಾರು ೧೩೧ ಮಿಲಿಯ ಡಾಲರುಗಳಾಗುವುದು ಅದರೆ, ಭಾರತವು ೧೯೫೪ರಲ್ಲಿ ಜಾಗತಿಕ ಬೇಂಕಿನ ನಿರ್ಣಯವನ್ನು ಮೊದಲೇ ಒಪ್ಪಿದ್ದು ಇಂದೂ ಅದನ್ನೇ ಪ್ರತಿಪಾದಿಸುತ್ತದೆ

ಕಾಶ್ಮೀರ ಸಮಸ್ಯೆಯಲ್ಲಿ ನಿಮನೆಯೇಷ

ಭದ್ರತಾ ಮಂಡಲವು ಕಾಶ್ಮೀರ ಸಮಸ್ಯೆಯಲ್ಲಿ ನೆಬ್ಬೊಂದು, ತುಂಡೆರಡು ಎಂಬಂತೆ ಕಾರ್ಯನೆಸಗಬೇಕು; ಇಲ್ಲವಾದರೆ, ಇದ್ದಸ್ಥಿತಿಯನ್ನೆತ್ತಿಕೊಂಡು ಸುಮ್ಮನಾಗಬೇಕು ಎಂಬ ಕಾಲವೀಗ ಸನ್ನಿಹಿತವಾಗಿರುವುದಾಗಿ ಅಮೆರಿಕದ ಇಂಡಿಯಾ ಲೀಗಿನ ಅಧ್ಯಕ್ಷ ಶ್ರೀ ಜೆ. ಜೆ ಸಿಂಗರಾಡಿದ್ದಾರೆ. ಈ ಬಿನ್ನಹವನ್ನವರು ಅಮೆರಿಕದ ಕಾಂಗ್ರೆಸ್ಸಿನ ಸದಸ್ಯರಲ್ಲಿ ಪ್ರಮುಖರಿಗೂ ಸಂರಾ ಸಂಘದ ಅನೇಕ ಶಿಷ್ಟಮಂಡಲಗಳಿಗೂ, ಮುಖ್ಯ ಪತ್ರಿಕಾಕರ್ತರಿಗೂ ಕಳಿಸಿದ್ದಾರೆ.

ವರ್ಣಭೇದನೀತಿಯ ಖಂಡನೆ

ಜಗತ್ತಿನ ಎಲ್ಲೆಡೆಗಳಲ್ಲಿಯೂ ಬಿಳಿಯ ಜನಾಂಗಗಳ ಅಳಿಕೆಯ ದಿನಗಳು ಮುಕ್ತಾಯಗೊಂಡು ಇನ್ನುಮುಂದೆ ಕ್ರೈತೇತರರ ಅಳಿಕೆ ಮತ್ತು ವರ್ಚಸ್ಸುಗಳು ಊರ್ಜಿತಾವಸ್ಥೆಗೆ ಬರುತ್ತಿರುವ ಮಾನವ ಜನಾಂಗದ ಮಹಾ ಸಮಸ್ಯೆಯ ಪ್ರತ್ಯಕ್ಷ ಪ್ರತೀಕವೇ ದಕ್ಷಿಣ ಆಫ್ರಿಕೆಯಲ್ಲಿನ ವರ್ಣಬಿಕ್ಕಟ್ಟು ಎಂಬುದಾಗಿ ಜೊಹಾನ್ಸಬರ್ಗದ ಬಿಷಪರಾದ ರೈಟ್‌ರೆವರೆಂಡ್ ಆ್ಯಂಬ್ರೋಜ್‌ರೀವ್ಸರು ಅಭಿಪ್ರಾಯಪಟ್ಟರು.

ಸೈಜೀರಿಯಕ್ಕೆ ಸ್ವಾತಂತ್ರ್ಯ

ತನ್ನ ವಸಾಹತುಗಳಲ್ಲಿ ತೀರಾ ದೊಡ್ಡದಾಗಿರುವ ಸೈಜೀರಿಯಕ್ಕೆ ಬ್ರಿಟನು ೧೯೫೭ರ ಸುಮಾರಿಗೆ ಸ್ವಾತಂತ್ರ್ಯವೀಯಲು ಒಪ್ಪಿರುತ್ತದೆ. ಬ್ರಿಟಿಷ್ ಮತ್ತು ಸೈಜೀರಿಯಗಳ ಶಿಷ್ಟ ಮಂಡಲಗಳಲ್ಲಿ ನಡೆಯುತಿದ್ದ ಮಾತುಕತೆಗಳ ನಂತರ, ಅಖಿಲ ಸೈಜೀರಿಯದ ಚುನಾವಣಾನಂತರ ರಚಿಸಲಿರುವ ಫೆಡರಲ್ ಪಾರ್ಲಿಮೆಂಟು ೧೯೫೭ರಲ್ಲಿ ಸಭೆ ಸೇರಿದ ನಂತರ, ಸ್ವಾತಂತ್ರ್ಯವೀಯುವ ದಿನವನ್ನು ನಿರ್ಧರಿಸಲಾಗುವುದು

ಅಮೇರಿಕೆಯ ವಿಮಾನ ರಾಣ್ಯಗಳು

ಜಾಪಾನದಲ್ಲಿ ಅಮೇರಿಕದ ಸೇನಾ ವಿಭಾಗಗಳ ಅಧೀನವಿರುವ ನಾಲ್ಕು ವಿಮಾನ ರಾಣ್ಯಗಳನ್ನು ಇಲ್ಲವೆ ಅವುಗಳಲ್ಲಿ ಕೆಲವನ್ನು ಜುಲೈ ತಿಂಗಳಲ್ಲಿ ಜಪಾನಿ ಸರಕಾರಕ್ಕೆ ಒಪ್ಪಿಸಲಾಗುವುದೆಂದು ತಿಳಿದು ಬಂದಿದೆ.

ಹಂಗೇರಿ ಪ್ರಶ್ನೆ

ಯುಕ್ತರಾಷ್ಟ್ರಸಂಘದಲ್ಲಿ ಅಮೆರಿಕದ ಕಾಯಂ ಪ್ರತಿನಿಧಿಗಳಾದ ಶ್ರೀ ಕೆನ್ರಿ ಕೆಬಟ್‌ಲೋಜ್‌ರು ಹಂಗೇರಿಯ ಪ್ರಶ್ನೆಯನ್ನು ಪುನರಾಲೋಚಿಸಲು ಆದಷ್ಟು ಬೇಗನೇ ಜನರಲ್ ಎಸೆಂಬ್ಲಿಯ ಸಭೆ ಕರೆಯಲು ವಿನಂತಿಸಿದ್ದಾರೆ.

ಅರಬರಾಷ್ಟ್ರ ಮತ್ತು ಇಸ್ರೇಲ್

ಇಸ್ರೇಲಿ ಪ್ರಧಾನಿಗಳು ಅರಬರಾಷ್ಟ್ರಗಳೊಂದಿಗೆ ಶಾಂತಿಯ ಮಾತುಕತೆಗಳನ್ನಾಡಲು ತಾವುಸಿದ್ಧವಿರುವುದಾಗಿ ಸಾರಿದ್ದಾರೆ ತಮ್ಮ ಸಮಯದಲ್ಲಿ ಶಾಂತಿ ಸ್ಥಾಪನೆ ಸಾಧ್ಯವಿದ್ದು, ಅದು ಕೈಗೂಡಬಹುದೆಂದವರು ಅಭಿಪ್ರಾಯಪಟ್ಟಿದ್ದಾರೆ

ಡಕದ ವಿದ್ಯಾರ್ಥಿಗಳಿಗೆ ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಡಲಾಗುವುದಿಲ್ಲವೆಂದು ಮದ್ರಾಸು ಸರಕಾರವು ನಿರ್ಣಯಿಸಿದ್ದರೂ ಕೊನೆಗೆ ಕೇಂದ್ರ ಸರಕಾರದ ಸಾಧ್ಯತೆಯಿಂದ 11 ಸೀಟು ಸಿಗುವ ವ್ಯವಸ್ಥೆಯಾಗಿದೆ

ಉಡುಪಿ

ಉಡುಪಿಯಲ್ಲಿ ಪುನಃ ನಿರೋಧ ಕಾರ್ಯಕ್ರಮ- ಪ್ಲೂ ಜ್ವರದಿಂದ ಉಡುಪಿಯಲ್ಲಿ ಹಲವರಿಗೆ ಸಾಗಿದ್ದು ಅದನ್ನು ತಡೆಗಟ್ಟುವ ಕಾರ್ಯದಲ್ಲಿ ಸ್ಥಳೀಯ ವೈದ್ಯರೂ ಡಾಕ್ಟರರೂ ಸಹಕರಿಸುತ್ತಿರುವರು ಪರ್ಯಾಯ ಅದಮಾರು ಮಠದ ಶ್ರೀ ಸಿದ್ಧಾದೇಶ ತೀರ್ಥಪಾದಂಗಳವರ ಔದಾರ್ಯದಿಂದ ಶೀತಜ್ವರ ಪೀಡಿತರಿಗೆ ಕೆಲಸಮಯ ಧರ್ಮಾರ್ಥ ಔಷಧಿಯನ್ನು ಕೊಡಿಸುವ ವ್ಯವಸ್ಥೆಯ ಸದುಪಯೋಗವನ್ನು ನೂರಾರು ಜನರು ಪಡೆದಿದ್ದರು

ಇನ್ನಾಮುಂದೆ ತೀ ಶೀತಜ್ವರವು ಮನುಷ್ಯ ತಲೆದೋರಿದರೆ ಅವರ ಪ್ರಕೋಷ್ಠದ ಮೇಲೆ ಕವಾಗಿ ಸಲವರ ಸ್ವಾಣಹಾನಿ ಮಾಡಲೂ ಸಾಧ್ಯವಿದೆ ಅದುದರಿಂದ ನಗರ ಸಭೆಯ ಕಡೆಯಿಂದ ಈಗಾಗಲೇ ಮಂಜುಂಗ್ರತೆ ಕೈಗೊಳ್ಳುವುದು ಅತ್ಯಾವಶ್ಯಕವಿದೆ ಸಾಕಷ್ಟು ಔಷಧಿಯನ್ನು ಸಂಗ್ರಹಿಸಿ ದೀನದಲಿತ ಜನರಿಗೆ ಕೊಡಬೇಕಾಗಿದೆ ನಗರಸಭೆಯಲ್ಲಿ ಸಾಕಷ್ಟು ಹಣವಿಲ್ಲದಿರುವುದರಿಂದ ಊರಿನ ದಯಾಳುಗಳು ಉದಾರಪಸ್ತದಿಂದ ಧನಸಹಾಯವನ್ನೀಯಬೇಕಾಗಿ ನಗರ ಸಭಾಪತಿ ಶ್ರೀ ಕೆ. ಕೆ ಪೈ ಮತ್ತು ನಗರಾರೋಗ್ಯಾಧಿಕಾರಿ ಶ್ರೀ ಪಿ ಎಲ್ ಪಂಡಿತರ ವಿನಂತಿ ಪತ್ರ ಹೊರಟಿರುವುದು. ನಗರದ ಉದಾರಿಗಳು ಈ ಪುಣ್ಯಕಾರ್ಯಕ್ಕೆ ನೆರವೀಯಬೇಕಾಗಿದೆ. ಹಣವನ್ನು ನಗರಸಭಾಧಿಕಾರಿಗಳಿಗೆ ಕಳುಹಿಸಿಬಹುದು.

ಎನ್. ಸಿ ಸಿ ದಳದ ಉದ್ಘಾಟನೆ-- ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನ ಎನ್ ಸಿ. ಸಿ ದಳದ ಉದ್ಘಾಟನೆಯನ್ನು ಕಳೆದ ತಾ. 25ರಲ್ಲು ಡಿಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಶ್ರೀ ಕೆ ಬಾಲಕೃಷ್ಣ ಅವರು ನೆರವೇರಿಸಿದರು ಡಾ| ಎಸ್ ಆರ್ ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು, ದಳದವರಿಂದ ಮಾರ್ಚ್‌ಫಾಸ್ಟ್ ಕಾರ್ಯಕ್ರಮವಾದ ನಂತರ ಶಾಲಾ ಹೆಡ್ಮಾಸ್ಟರ್ ಶ್ರೀ ಎ ಜೋಶುವಾ ಅವರಿಂದ ಸ್ವಾಗತ ಭಾಷಣವಾಯಿತು ಉದ್ಘಾಟಕರು ಎನ್. ಸಿ. ಸಿ ದಳದ ಗೊತ್ತುಗುರಿಗಳನ್ನು ವಿವರಿಸಿ, ಎನ್ ಸಿ. ಸಿ ಆಫೀಸರ್ ಶ್ರೀ ಪಿ ಡಿ. ಕುಂಡರ ಅವರಿಗೆ ಬೇಜ್‌ಗಳನ್ನು ವಿತರಣೆ ಮಾಡಿದರು. ಅಧ್ಯಕ್ಷರ ಸಮಯೋಚಿತ ಭಾಷಣವಾಗಿ ವಂದನಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ನೂತನ ಗೃಹ ಪ್ರವೇಶ— ಶ್ರೀ ಎಮ್ ಎಸ್ ಉಡುಪಿಕರರ ಮೂಡನಡಂಬೂರದಲ್ಲಿ ಹೊಸತಾಗಿ ಕಟ್ಟಿಸಿದ ಗೃಹದ ಪ್ರವೇಶೋತ್ಸವವು ಕಳೆದ ತಾ 21 ರಲ್ಲು ಧಾರ್ಮಿಕರೀತ್ಯಾ ನಡೆಯಿತು ಮರುದಿನ ಸತ್ಯಾರ್ಥ ಸಮಾರಂಭ ನಡೆಯಿತು

ಎಕೆಡಮಿ ಆಫ್ ಗಾನರಲ್ ಎಜ್ಯುಕೇಶನ್— ಇದರ ಮಹಾಸಭೆಯು ತಾ. 30ರಲ್ಲಿ ಮಣಿಪಾಲದಲ್ಲಿ ಶ್ರೀ. ಬಿ ಎಲ್. ಎನ್ ರೈಗಳ ಅಧ್ಯಕ್ಷತೆಯಲ್ಲಿ ನೆರವೆರಿತು ರಿಜಿಸ್ಟ್ರಾರ್ ಡಾ. ಟಿ ಎಂ ಎ ಪೈಗಳು ಸಂಘದ ಹಾಗೂ ಸಂಸ್ಥೆಯ ನಡೆಸಿಕೊಂಡು ಬರುತ್ತಿರುವ ಸಂಸ್ಥೆಗಳ ಪ್ರಗತಿಕರ ವರದಿಯನ್ನು ಸಭೆಯ ಮುಂದಿಟ್ಟರು ಶ್ರೀ ಟಿ ಎ ಪೈಗಳು ವಿದ್ಯಾರ್ಥಿಗಳಿಗೆ ಇನ್ನು ಹೆಚ್ಚಿನ ಸಾಲ ರೂಪದ ವಿದ್ಯಾರ್ಥಿವೇತನ ಕೊಡಬೇಕಾಗಿ ಸೂಚಿಸಿದರು ಹೊಸವರ್ಷಕ್ಕೆ ಸುಪ್ರೀಂ ಗೆಸ್ಟಿಂಗ್ ಬೋಡಿಯು ಆಯ್ಕೆ ನಡೆಯಿತು.

ಯೂನಿಯನ್ ಮಹಾಸಭೆ ಉಡುಪಿ ಕೋಆಪರೇಟಿವ್ ಯೂನಿಯನ್ನಿನ ಮಹಾಸಭೆಯು ಕಳೆದ ತಾ 30 ರಲ್ಲು ಶ್ರೀ ಪಿ. ಸಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರ್ಷಕ್ಕೆ ಶ್ರೀಗಳಾದ ಪಿ ವಿ ಆಚಾರ್ಯ (ಅಧ್ಯಕ್ಷ), ಪಿ ವಿಠಲ ಶೆಟ್ಟಿ (ಕಾರ್ಯದರ್ಶಿ), ಕೆ ಗಣಪಯ್ಯ ಶೆಟ್ಟಿ, ಪಿ ಶಂಕರಕೃಷ್ಣ ರಾವ್, ಎಸ್ ಅಣ್ಣಯ್ಯ ಹೆಗ್ಡೆ, ಬಿ. ಸಿ ಮಾಧವ ರಾವ್ ಮತ್ತು ಎಲ್ ಎಮ್ ಜೇಸಾರವರು ಡೈರೆಕ್ಟರರಾಗಿ ಆಯ್ಕೆಯಾದರು

ಮುಲ್ಕಿ— ಸ್ಥಳೀಯ ಯೂನಿಯನ್ ಕ್ಲಬ್ಬಿನ 12ನೇ ವಾರ್ಷಿಕೋತ್ಸವವು ದಿವಂಗತ ಡಾ ಬೋಳ ಶ್ಯಾಮರಾಯರ ಜನ್ಮದಿನಾಚರಣೆಯಂದು ತಾ 16–6–57ರಲ್ಲು ಶ್ರೀ ಯಂ. ಆರ್ ಯಡಪಾಡಿರ ಅಧ್ಯಕ್ಷತೆಯಲ್ಲಿ ಜರಗಿತು ಡಾ| ಸಂಜೀವನಾಥರು ದಿವಂಗತರ ಸಂಕ್ಷಿಪ್ತ ಜೀವನವೃತ್ತದ ವಾಚನ ಮಾಡಿದರು ಸದಸ್ಯವಾಚನ ಇತ್ಯಾದಿ ಆದ ಮೇಲೆ ಕ್ಲಬ್ಬಿನ ಕಟ್ಟಡವನ್ನು ರೂ. 20ರ ಪ್ರತಿಫಲ ಸಹಿತ ಮರುದಿನ ಇತ್ಯಾದಿ ಸಮಾರಂಭಗಳಿಗೆ ಸಾಯಂಕಾಲ ಗಂಟೆ 4ರಿಂದ 8ರ ನಡೆಗೆ ಬಿಟ್ಟು ಉಳಿದ ಸಮಯದಲ್ಲಿ ಬಿಟ್ಟುಕೊಡಬಹುದೆಂದು ನಿರ್ಣಯಿಸಲಾಯಿತು. ಲಘು ಉಪಾಹಾರ ಆದಮೇಲೆ ಶ್ರೀ ಜಿ. ಎಸ್. ಮುಲ್ಕಿಯವರು ವಂದನಾರ್ಪಣೆ ಮಾಡಿದರು.

1957–58ನೇ ವರ್ಷಕ್ಕೆ ಶ್ರೀ ಯಂ. ಆರ್. ಯಡ್ ಪಾಡಿ ಅಧ್ಯಕ್ಷರು, ಶ್ರೀ ಎಸ್ ಆರ್ ಕಲ್ಯಾಣಪುರ ಉಪಾಧ್ಯಕ್ಷರು, ಶ್ರೀ ಯಂ ಉಮೇಶರಾವ್– ಕೋಶಾಧಿಕಾರಿ, ಶ್ರೀ ಜಿ ಎಸ್ ಮುಲ್ಕಿ– ಕಾರ್ಯದರ್ಶಿ, ಶ್ರೀ ಯಂ ಎಸ್. ರಾಮ– ಉಪಕಾರ್ಯದರ್ಶಿ, ಶ್ರೀ ಪಿ. ರಾಮಚಂದ್ರ ಆಚಾರ್– ಸ್ಪೋರ್ಟ್ಸ್ ಸೆಕ್ರೆಟರಿ ಆಗಿ ಸರ್ವಾನುಮತದಿಂದ ಆರಿಸಲ್ಪಟ್ಟಿರುವರು

ಉಪ್ಪಿನಂಗಡಿ— ಕಳೆದ ತಾ 30ರಲು ಉಪ್ಪಿನಂಗಡಿಯಲ್ಲಿ ಹೊಸತಾಗಿ ಕಟ್ಟಿಸಿದ ಹೈಸ್ಕೂಲು ಕಟ್ಟಡವನ್ನು ಜಿಲ್ಲಾ ಕಲೆಕ್ಟರರು ಶ್ರೀ ಎಚ್. ನರಸಿಂಹನವರು ಉದ್ಘಾಟಿಸಿದರು. ಶ್ರೀ ಕೆ ಆರ್. ಆಚಾರ್, ಎಮ್ ಪಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು

ಶ್ರೀ. ಕೆ ವೇಣು ಗೋಪಾಲ ನಾಯ್ಕರು ಸ್ವಾಗತ ಭಾಷಣ ಮಾಡಿದ ಬಳಿಕ, ವರದಿ ಹಾಗು ಸಂದೇಶ ವಾಚನಗಳಾದುವು ಜಿಲ್ಲಾ ಕಲೆಕ್ಟರರು VI ಫಾರ್ಮನ್ನು ಉದ್ಘಾಟಿಸಿದ ನಂತರ ಜಿಲ್ಲಾ ವಿದ್ಯಾಧಿಕಾರಿಗಳ ಭಾಷಣವಾಯಿತು. ಬಳಿಕ ಡಾ. ಯು ಪಿ. ಮಲ್ಯರು ಗಾಂಧಿಜೀಯವರ ಭಾವ ಚಿತ್ರವನ್ನು ಜಿಲ್ಲಾ ಲೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ರಾಜೇಂದ್ರ ಪ್ರಸಾದರ ಜಾವ ಚಿತ್ರವನ್ನೂ, ಶ್ರೀ ಎ ಶಂಕರ ಆಳ್ವರು ಪಂಡಿತ ನೆಹರೂರವರ ಭಾವಚಿತ್ರವನ್ನೂ, ನಯಂಪಳ್ಳಿ ಸಹೋದರರ (ಹೈಸ್ಕೂಲು ಕಟ್ಟಡಕ್ಕೆ ಭೂದಾನ ಮಾಡಿದವರು) ಭಾವಚಿತ್ರವನ್ನು ಮಂಗಳೂರು ನಗರ ಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರೂ ಅನಾವರಣ ಮಾಡಿದರು ಹೈಸ್ಕೂಲಿಗೆ ಶುಭವನ್ನು ಕೋರಿ ಶ್ರೀಗಳಾದ ಸುಬ್ಬಯ್ಯ ನಾಯ್ಕ, ಎಮ್. ಎಲ್ ಎ ತಿಮ್ಮಪ್ಪ ಶೆಟ್ಟಿ, ಬಿ ಟಿ ಆರಿಗ ಡಿ ಎಮ್ ಇದಿನಬ್ಬ, ನೋಣಪ್ಪ ಗೌಡ, ನಾರಾಯಣ ರಾವ್ ಮೊದಲಾದವರು ಮಾತಾಡಿದರು

ಬೆಳ್ತಂಗಡಿ–ಬೆಳ್ತಂಗಡಿಯಲ್ಲಿ ಹೊಸತಾಗಿ ತೆರೆಯಲ್ಪಟ್ಟ ಜಿಲ್ಲಾ ಬೋರ್ಡು ಹೈಸ್ಕೂಲಿನ ತರಗತಿಯನ್ನು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಬಿ ಎಮ್ ಕುಮಟಾಯವರು ಉದ್ಘಾಟಿಸಿದರು ಮಹಾತ್ಮಾಜೀ ಸಭಾ ಭವನದಲ್ಲಿ ಜರಗಿದ ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಆರ್ ಆಚಾರ್, ಎಮ್ ಪಿ ಯವರು ವಹಿಸಿದ್ದರು ಬೆಳ್ತಂಗಡಿ ವಿದ್ಯಾಭಿವೃದ್ಧಿ ಯೋಜನಾ ಸಂಘದ ಉಪಾಧ್ಯಕ್ಷ ಶ್ರೀ ಎನ್ ಕೆ ಭಟೆಯವರು ಸ್ವಾಗತ ಮಾತುಗಳನ್ನಾಡಿದರು ಸಮಾರಂಭಕ್ಕೆ ಶುಭವನ್ನು ಕೋರಿ ಶ್ರೀಗಳಾದ ಮೈಸೂರು ಮಂತ್ರಿ ಬಿ ವೈಕುಂಠ ಬಿಳಿಗ, ಜಿಲ್ಲಾ ಬೋರ್ಡು ಅಧ್ಯಕ್ಷ ದಿ ಮಂಜಯ್ಯ ಹೆಗ್ಡೆ, ಡಾ ಕೆ ಕೆ ಹೆಗ್ಡೆ, ಎಮ್. ಎಲ್. ಎ, ಡಾ ಟಿ ಮಾಧವ ಪೈ, ಟಿ ಎ. ಪೈ, ಪಿ ಎಸ್ ತಿಮ್ಮಪ್ಪ ಶೆಟ್ಟಿ ಮೊದಲಾದವರು ಕಳುಹಿಸಿದ ಸಂದೇಶಗಳನ್ನು ಶ್ರೀ ಕೆ. ಆರ್ ರಾಯರು ಓದಿದರು

ವಿದ್ಯಾಭಿವೃದ್ಧಿ ಯೋಜನಾ ಸಂಘದ ಕಾರ್ಯದರ್ಶಿ ಶ್ರೀ ಬ್ರಹ್ಮಯ್ಯ ಮುಲ್ಕಿ, ಶ್ರೀಗಳಾದ ಕೆ ಪಿ ಕುಮಾರಯ್ಯ ಹೆಗ್ಡೆ, ಬಿ. ಕೆ. ಮೋಹನರಾವ್, ಆರ್. ಎನ್. ಭಿಡೆ, ಬಿ. ಎನ್ ಭಟ್, ಶಾಲಾ ಹೆಡ್ಮಾಸ್ಟರ್ ಎಮ್. ರಾಮಭಟ್, ಎಸ್ ಎನ್. ರಾವ್ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು.

ಕುಮಾರಿ ಬಿಳ್ಳಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/ ದೀರ್ಘಕಾಲದ ಬಾಧೆಗೆ ರೂ 8/-

(ಏ ಪಿ ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ಟರು ಸ್ವಾ ಕಂಪೆನಿ, ಮಂಗಳೂರು—1.

ಹೊಸಕೆರೆ ಚಿದಂಬರಯ್ಯನವರ

ಭಗವದ್ಗೀತೆಯ

ಸಮೂಲ ಭಾಷಾಂತರ

ಪೊಕೆಟ್ ಎಡಿಷನ್.

ಸುಮಾರು 450 ಪುಟಗಳು

ಕ್ರಯ 0—12—0

ಸಮಯುಗ ಪ್ರೆಸ್, ಉಡುಪಿ.

ಎಲ್ಲೆಲ್ಲಿ ಏನೇನು?

ಬೆಳ್ಳಾರೆ—ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ತಾ ೨೫ರಂದು ರಾತ್ರಿ ಕಳ್ಳರು ಮುಗ್ಗಿ ದೇವರ ಚಿನ್ನಾಭರಣ, ಕಾಣಿಕೆ ಡಬ್ಬಿಯನ್ನು ಕಳವು ಮಾಡಿರುವರೆಂದು ವರದಿಯಾಗಿದೆ ಈಚೆಗೆ ಕೆಲವು ದಿವಸಗಳ ಹಿಂದೆ ಬೆಳ್ಳಾರೆ ಸಮೀಪ ಅಯ್ಯನಕಟ್ಟೆ ಎಂಬಲ್ಲಿ ರಾತ್ರಿ ಸುಮಾರು 10 ಗಂಟೆಯ ಕಾಲಕ್ಕೆ ಆ ದಾರಿಯಾಗಿ ಹೋಗುತ್ತಿದ್ದ ಶ್ರೀ ವಾರಣಾಶಿ ಗಣಪಯ್ಯ ಎಂಬವರಿಂದ ಬಲಾತ್ಕಾರವಾಗಿ ಸುಮಾರು ನಾಲ್ಕು ನೂರು ರೂಪಾಯಿಗಳಿದ್ದ ಪಾಕೇಟನ್ನು ಕೊಂಡು ಹೋಗಿರುವರೆನ್ನಲಾಗಿದೆ.

ಬಸ್ರೂರು—ಇಲ್ಲಿಯ ಕೋಸರೇಟಿವ್ ಬೇಂಕಿನ ವಾರ್ಷಿಕ ಮಹಾ ಸಭೆಯಲ್ಲಿ ಶ್ರೀ. ಬಿ. ಶಂಕರರಾಯರು ಸೂಚನೆಯಂತೆ ಬಸ್ರೂರಲ್ಲಿ ಹೈಸ್ಕೂಲನ್ನು ಸ್ಥಾಪಿಸುವ ನಿಧಿಗೆ ಪ್ರಥಮ ಕಂತಾಗಿ ಸಂಘದ ಸದಸ್ಯರ ಬೋನಸ್ಸು ಹಣ ಅಂದಾಜು ರೂಪಾಯಿ 500ನ್ನು ಕೊಡುವುದಾಗಿ ನಿರ್ಣಯಿಸಲಾಯಿತು. ಈ ಸಂಘದ ಅಧ್ಯಕ್ಷ ಹಾಗೂ ಬಸ್ರೂರು ಪಂಚಾಯತ ಬೋರ್ಡಿನ ಅಧ್ಯಕ್ಷ ಶ್ರೀ ಬಿ ವೀರರಾಜೇಂದ್ರ ಹೆಗ್ಡೆಯವರು ಈ ಕಾರ್ಯದ ಮುಖಂಡತ್ವವನ್ನು ವಹಿಸಿಕೊಳ್ಳುವಂತೆ ಅವರನ್ನು ವಿನಂತಿಸಲಾಯಿತು. ಗ್ರಾಮ ಪಟೇಲ್ ಶ್ರೀ. ಬಿ. ತೇಜಪ್ಪ ಶೆಟ್ಟರು ಹೈಸ್ಕೂಲನ್ನು ಜಿಲ್ಲಾ ಬೋರ್ಡಿನ ಸಹಕಾರ ಪಡೆದು ಸ್ಥಾಪಿಸಬಹುದೆಂದು ಸೂಚಿಸಿದರು.

ಬೆಳ್ಳಣ್ಣು— ಬೆಳ್ಳಣ್ಣಲ್ಲಿ ಬೋರ್ಡು ಹೈಸ್ಕೂಲನ್ನು ತಾ. 26ರಲ್ಲಿ ಆಲಿಯ ಸಮಾಜ ಮಂದಿರದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಫಲಿಸಮಾರು ಮಠದ ಶ್ರೀ ರಘುವಲ್ಲಭ ತೀರ್ಥ ಸ್ವಾಮಿಗಳವರು ಉದ್ಘಾಟಿಸಿ ಶುಭಾಶೀರ್ವಾದಗಳನ್ನಿತ್ತರು. ಸಮಾರಂಭದ ಅಧ್ಯಕ್ಷತೆ ವಹಿಸಿದ ಬೆಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹಸನವರು ಶಾಲಾಭಿವೃದ್ಧಿಯನ್ನು ಬಯಸಿ ಊರವರ ಸಹಾಯ ಸಹಕಾರವನ್ನು ಅಪೇಕ್ಷಿಸಿದರು.

ವಿದ್ಯಾವರ್ಧಕ ಸಂಘದ ಗೌ। ಕಾರ್ಯದರ್ಶಿ ಡಾ। ಕೊಡ್ಮಲ್ ವೆಂಕಟ್ರಾಯರು ಸ್ವಾಗತಭಾಷಣ ಮಾಡಿ ಹೈಸ್ಕೂಲು ಸಫಲತೆಗಾಗಿ ಗ್ರಾಮಸ್ಥರ ನೆರವನ್ನು ಬಯಸಿದರು. ಶ್ರೀ ಬಿ. ಎಸ್ ಭಾಸ್ಕರ ರೈಗಳು ಈ ಹೊಸ ಶಾಲೆಗೆ ಆಗಬೇಕಾದ ಸಲಕರಣೆಗಳು ಜಿಲ್ಲಾ ಬೋರ್ಡಿನಲ್ಲಿ ಶಾಲೆಯ ಬಗ್ಗೆ ಇಡಬೇಕಾದ ಹಣ ಇತ್ಯಾದಿ ಬಗ್ಗೆ ಊರವರು ಮನವನ್ನು ಸಂಗ್ರಹಿಸಬೇಕಾಗಿದೆ ಎಂದರು. ಸಮಾರಂಭಕ್ಕೆ ಯಶಸ್ಸನ್ನು ಕೋರಿ ಶ್ರೀಗಳಾದ ಬಿ. ಮಂಜಯ್ಯ ಹೆಗ್ಡೆ ಟಿ ಎ. ವೈ ಡಾ। ಕೆ. ಕೆ. ಹೆಗ್ಡೆ ಮೊದಲಾದವರಿಂದ ಬಂದ ಸಂದೇಶಗಳನ್ನು ಓದಲಾಯಿತು. ಶ್ರೀ ಎಸ್ ನಾರಾಯಣ ಶೆಟ್ಟರು ಧನ್ಯವಾದಗಳನ್ನಿತ್ತರು.

ಕುಕ್ಕಾಲು— ಸ್ಥಳೀಯ ಸಹಕಾರ ಸಂಘದ ಮಹಾಸಭೆಯು ಸಂಘದ ಅಧ್ಯಕ್ಷ ಶ್ರೀ ಕೆ ಗಣಪಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಕಳೆದ ತಾ 27ರಲ್ಲು ಅಪರಾಹ್ನ ಜರಗಿತು ಸಭೆಗೆ ದ. ಕ. ಜಿಲ್ಲಾ ಸಹಕಾರ ಸಂಘಗಳ ಅಸಿಸ್ಟಾಂಟ್ ರಿಜಿಸ್ಟ್ರಾರ್ ಶ್ರೀ ಕೆ. ಕಾಳಪ್ಪ ಶೆಟ್ಟರು ದಯಮಾಡಿಸಿದ್ದರು ಅರಂಭದಲ್ಲಿ ಮಹಾಸಭೆಯಲ್ಲಿದ್ದತಕ್ಕ ಸರ್ವಸಾಮಾನ್ಯ ನಿರ್ಣಯಗಳು ಮಂಜೂರು ಮಾಡಲ್ಪಟ್ಟವು. ಮುಂದಿನ ವರ್ಷಕ್ಕೆ ಶ್ರೀಗಳಾದ ಕೆ. ಗಣಪಯ್ಯ ಶೆಟ್ಟಿ, ಕೆ. ಕಿಟ್ಟಪ್ಪ ಶೆಟ್ಟಿ, ಬಿ. ದೇವಾನಾಯ್, ಕೆ. ರಾಮಕೃಷ್ಣ ಭಟ್, ಕಿಟ್ಟಣ್ಣ ಶೆಟ್ಟಿ, ಲಿಂಗಪ್ಪ ಶೆಟ್ಟಿ ಮತ್ತು ಮೋರ್ಸಲ್ ಸೋಲೋಸಾ ರವರು ಆಡಳಿತ ಮಂಡಳಿಯ ಸದಸ್ಯರಾಗಿ ಸರ್ವ ಸಮ್ಮತದಿಂದ ಆರಿಸಲ್ಪಟ್ಟರು ನಂತರ ಅಸಿಸ್ಟಾಂಟ್ ರಿಜಿಸ್ಟ್ರಾರರು ಮಾತನಾಡುತ್ತಾ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರಿ ಸಂಘಗಳ ಅಭ್ಯುದಯದ ಹೊಣೆಗಾರಿಕೆಯನ್ನು ವಿವರಿಸಿದ್ದಲ್ಲದೆ ಸರಕಾರದಿಂದ ದೊರೆಯುವ ಸೌಲಭ್ಯಗಳನ್ನು ತಿಳಿಸಿದರು. ಗ್ರಾಮಸ್ಥರು ಈ ಯೋಜನೆಯ ಸಫಲತೆಗಾಗಿ ದುಡಿಯಬೇಕೆಂದರು. ಧನ್ಯವಾದಗಳಾಗಿ ಸಭಾಂತ್ಯವಾಯಿತು.

ಬಾಳಿಲ— ಸ್ಥಳೀಯ ವಿದ್ಯಾ ಬೋಧಿನೀ ಎಮಿಡೆಂಟ್ ಶಾಲೆಯನ್ನು ಹಾಯರ್ ಎಲಿಮೆಂಟರಿಯಾಗಿ ಆತನ ಕ್ಷೇತ್ರನ್ನು ಉದ್ಘಾಟಿಸುವ ಸಮಾರಂಭವು ಕಳೆದ ತಾ. 23ರಲ್ಲು ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ. ಪಿ. ಎಸ್. ತಿಮ್ಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ. ಮೊಂಟಿಸುಬ್ಬಾರಾಯರು ಸ್ವಾಗತಿಸಿ ಹಾಯರ್ ಎಲಿಮೆಂಟರಿ ವಿದ್ಯಾಭ್ಯಾಸವು ಈ ಕೇಂದ್ರದ ಮಕ್ಕಳಿಗೆ ದೊರೆಯುವಂತೆ ಪ್ರಯತ್ನಿಸಿದವರ ಉಪಕಾರ ಸ್ಮರಣೆ ಮಾಡಿದರು ಶ್ರೀಗಳಾದ ವಿ. ಆನಂದ ಶಂಕರ ರಾವ್, ಸೀತಣ್ಣ ಶೆಟ್ಟಿ, ಮಂಜಪ್ಪ ಶೈ ಎಳಿಯಣ್ಣ ಶೈ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು, ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಹಳ್ಳಿಗಳ ಉದ್ಧಾರಕ್ಕೆ ಹಳ್ಳಿಗರೇ ಮುಂದಾಗಿ ಸರಕಾರಿ ಸರಕಾರಕ್ಕೆ ನೆರವು ನೀಡಬೇಕೆಂದರು ಹಳ್ಳಿಗರು ಮಿತವ್ಯಯವನ್ನು ಸಾಧಿಸಿ ಉಳಿತಾಯವನ್ನು ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ವಿನಂತಿಸಿದರು ವಂದನೆಗಳಾಗಿ ಸಭಾಂತ್ಯವಾಯಿತು.

ಬೊಂಬಾಯಿ

ದೇವಾಡಿಗ ಸುಧಾರಕ ಸಂಘದ ಮಹಾಸಭೆಯು— ಕಳೆದ ತಾ ೩೩ರಲ್ಲು ಸಂಘದ ಕಾರ್ಯಾಲಯದಲ್ಲಿ ಶ್ರೀ ಬಿ ಕೆ. ಶ್ರೀಯಾನರ ಅಧ್ಯಕ್ಷತೆಯಲ್ಲಿ ಜರಗಿತು.

ಪರಿಚಯ ಭಾಷಣ, ಬೆಳ್ಳಿಸಪ್ತಾಹಗಳ ಮುಂದುವರಿತಿಗಳಾದ ನಂತರ ಶ್ರೀಗಳಾದ ಸಿ ರಾಮಣ್ಣ ಮೈಲಿ, ಎಸ್. ಶ್ರೀನಿವಾಸ, ಸಿ ಇ ದೇವಾಡಿಗ, ಸಂಜೀವಸ್, ಮೋಸಪ್ಪ ಎ. ದೇವಾಡಿಗ, ಎಸ್ ಎಸ್. ದೇವಾಡಿಗ, ಎಸ್. ವೆಂಕಟ್ರಾಯ, ಯು. ಎಸ್. ಅನಂತ, ಎ. ಟಿ. ದೇವಾಡಿಗ, ಕೆ. ಭುಜಂಗದರ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಸಮಾಜ ಬಂಧುಗಳು ಒಕ್ಕಟ್ಟಾಗಿದ್ದುಕೊಂಡು ಸಂಘದ ಧ್ಯೇಯಗಳನ್ನು ಸಾಧಿಸಬೇಕೆಂದು ಅಪೇಕ್ಷಿಸಿದರು. ಧನ್ಯವಾದಾರ್ಪಣೆ, ಲಘು ಉಪಹಾರದಿಂದ ಕಾರ್ಯಕ್ರಮಗಳೊಡನೆ ಸಭೆ ಮುಕ್ತಾಯವಾಯಿತು.

ಇನ್ನೂ ಚಂದಾಹಣವನ್ನು

ಕಳುಹಿಸದವರು ದಯಮಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ. ಅಂತೂ ಸಕಾಲದಲ್ಲಿ ಚಂದಾ ಹಣವಸೂಲಾಗದಿದ್ದರೆ ನಾವು ಆನಿವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಪಡೆಕೊಳ್ಳುವಂತೆ ವಿಜ್ಞಾಪಿಸುತ್ತೇವೆ.

ಮೆನೇಜರ್, ನವಯುಗ



ಭಾರತದ "ಹಡಗು ಸಂಚಾರ"ದ ಕೆಲವೊಂದು ದೃಶ್ಯಗಳು

ಚಿತ್ರ ೧. ವಿಶಾಖ ಪಟ್ಟಣದ ನೌಕಾ ನಿರ್ಮಾಣ ಕೇಂದ್ರದ ಯೋಜನಾ ಹಾಗೂ ಸಮೀಕ್ಷಾ ಭಾಗವನ್ನು ಚಿತ್ರವು ತೋರಿಸುವುದು. ನೆಲದ ಮೇಲೆ ಹಡಗುಗಳ ನಕ್ಷೆಗಳನ್ನು ರೇಖಿಸಲಾಗಿದೆ.

ಚಿತ್ರ ೨ ಇತ್ತೀಚೆಗೆ ನಿರ್ಮಿಸಲಾದ ಕಾಂಡ್ಲಾ ಬಂದರಿನಲ್ಲಿ ಸರಕುಗಳನ್ನು ಇಳಿಸುವ ಕಟ್ಟೆಯ ದೃಶ್ಯವೊಂದನ್ನು ಚಿತ್ರದಲ್ಲಿ ಕಾಣಬಹುದು.

ಚಿತ್ರ ೩. ದೋಣಿಗಳು ಮಲಬಾರಿನ ಜಲಮಾರ್ಗಗಳೊಂದರಲ್ಲಿ ಸಾಗಿಸುತ್ತಿರುವುದನ್ನು ಚಿತ್ರವು ತೋರಿಸುವುದು.

ಚಿತ್ರ ೪. ನೌಕಾದಳದ ಶಿಕ್ಷಣಾರ್ಥಿಗಳ ತಂಡವೊಂದು 'ಚಫಾನ್' ತರಬೇತಿ ನೌಕೆಯಲ್ಲಿ ಶಿಕ್ಷಕರೊಬ್ಬರೊಂದಿಗೆ ಇರುವುದನ್ನು ಚಿತ್ರದಲ್ಲಿ ಕಾಣಬಹುದು.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ)

ವೆರೆಸ್ಟ್ ವೀರ—

(ತೇನಸಿಂಗನ ಆತ್ಮಕತೆ) ಬರೆದವರು: ತೇನಸಿಂಗ್ ಮತ್ತು ಉಲ್ಮನ್ ವಿಷ್ಣಿಷಿದವರು: ಕೂಡಲಿ ಚಿದಂಬರಂ ಮತ್ತು ಜನಾರ್ದನ ಗುರ್ಕಾರ್. ಪ್ರಕಾಶಕರು. ಕಾನ್ಸಾಲಯ ಪ್ರೈಸರು ಪುಟ 331 ಬೆಲೆ: ಸಾದಾ ಪ್ರತಿ 5-0-0. ಕ್ಯಾಲಿಕೋ 7 8-0.

ಪ್ರಪಂಚದ ಸೆತ್ತಿಯೆನಿಸಿದ ಶಿಖರ (ಗೌರೀ ಶಂಕರ) ವನ್ನೇರಿದ್ದನ್ನು ಆರೋಹಣ ಮಾಡಿ, ವಿಜಯ ಪತಾಕೆಯನ್ನು ಹರಡಿದ ಸರ್ವಾವೀರ ತೇನಸಿಂಗನ ಆತ್ಮಕತೆಯೆಂದು ಸಾಹಸ ಮತ್ತು ವೀರ ಕೃತ್ಯಗಳ ಘಟನಾವಳಿ, ಬಾಲ್ಯದಾರಭ್ಯ "ವೆರೆಸ್ಟ್ ವೀರನ" ತನಕದ ಜೀವನ ಕಥೆಯನ್ನು ಅನುಭವ ಅಭ್ಯಾಸದ ಜೊತೆಗೂಡಿ ಓದುಗರಿಗೆ ಉಣಬಡಿಸಿದ ರಸ ಗಟ್ಟಿ.

ಹಿಮಾಲಯದಿಂದ ಇಂದು ದಿನದ ಸ್ಯೂಣಿವರೆಗೆ ಸೋಲು ಮುಂಬುವೆಂಬ ಹಳ್ಳಿಯಲ್ಲಿ ಹರ್ಷ ಕುಟುಂಬದಿಂದ ಈ ವೀರ ಹುಟ್ಟಿ ಬಂದನು. "ಹಿಂ ಮಣೇ ಪದ್ಮೇ ಹುಂ" ಮಂತ್ರ ಪ್ರೇಮಿ ಬೌದ್ಧ ಮತೀಯ. ವೆರೆಸ್ಟನ್ನು "ಜೋಮೊಲುಂಗ್ಮಾ" ಎಂದು ಹೆಸರಿನಿಂದ ಪವಿತ್ರ ಭಾವನೆಯಿಂದ ಕಾಯುತ್ತಿದ್ದ ಆರೋಹಿಗಳಿಗೆ ಹೊರಯಾಳಾಗಿ ಜೀವನವಾರಂಭಿಸಿದ ಸರ್ವತ್ರ ತುದಿಯಲ್ಲಿ ಉಸಿರಾಡಿದ ಅನುಕೂಲಕ್ಕಾಗಿ ಪ್ರಕೃತದತ್ತವಾಗಿ ಪಡೆದ ದೇಹದಾನಿ, ಅವನಿಗೆ ಮೂರು ಶ್ವಾಸಕೋಶಗಳಿವೆಯೆಂದೇ ಹೇಳುತ್ತಿದ್ದಾರೆ ಅದು ಬಾರಿ ಜೋಮೊಲುಂಗ್ಮಾದ ಸೆತ್ತಿಯ ಮೇಲೆ ನಿಲ್ಲಲು ಹೊಗಾಗಿ ಬಳಸಿದ ಬಾರಿ ಹಿಮೀರಿಯೊಡನೆ ಜಯ ಪಡೆದ ಅತನ ಜೀವನ ಚರಿತ್ರೆ, ಸೋಲು ಜಯ, ಬಡತನ, ಭಾಗ್ಯಗಳ ಪವಿತ್ರಾನುಭವ ಅಧ್ಯಾಲಿಯರಿ

ನನ್ನ ತರುಣ ಜಯಂಗ ತೇನಸಿಂಗನ ಆತ್ಮಕತೆಯಿಂದ ತಿಳಿದುಕೊಳ್ಳಬಹುದು ಬಯಸುವೆನೆ. ಸರ್ವ ವಿಷಯಗಳಲ್ಲೂ ಈ ಗ್ರಂಥ ಸಂಗ್ರಹಿಸಲು ಯೋಗ್ಯವಾಗಿದೆ. —ಶಾಂತಿ.

In The Court Of The District Munsif Of Mangalore

O. S. No. 525/1955.

Between,
Ramakke Hengsu and others
—Plaintiffs

and

Sadashiva Punja and others
—Defendants

To
Supplemental defendants 2 to 4
2nd deft. Kantha Kottari 3rd deft. Krishna Kottati 4th deft. Jathanna Kottari--Children of Devamma, nephew of Maindappa Bhandary.

All residing in Debbeli of Harekala village, Mangalore Taluk, P. O. Harekala.

Please take notice that the above suit filed by the plaintiffs for the reliefs claimed in the plaint is posted to 15—7—1957. You are hereby requested to appear on that day either in person or through a Lawyer, failing which the suit will be proceeded in your absence.

(By order of Court)

B. L. N. Rai.
Advocate for Plaintiffs.

Mangalore, 26—6—1957.

ಮಂಗಳೂರು

ವಾರ್ಷಿಕ ಮಹಾ ಸಭೆ – ಮಂಗಳೂರು ದೈವಜ್ಞ ಬ್ರಾಹ್ಮಣ ಸಂಘದ 23ನೇ ವಾರ್ಷಿಕ ಮಹಾ ಸಭೆಯು ಕಳದ ತಾ. 28ರಲ್ಲು ಬೇ! ಮಾ! ಜಟ್ಟಯ್ಯ ಅನಂತ ಭಟ್ಟ ಗೋಕರ್ಣ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎನ್. ಎನ್. ಶೇಟರು ಸ್ವಾಗತಭಾಷಣಮಾಡಿದರು ಕಾರ್ಯದರ್ಶಿ ಶ್ರೀ ಎಸ್. ಎಲ್ ಶೇಟರು ಗತವರುಷದ ವರದಿಯನ್ನೋದಿದರು ಕೋಶಾಧಿಕಾರಿ ಶ್ರೀ ಕೆ. ಕೆ. ಆರ್. ಶೇಟರು ಲೆಖ್ಖಪತ್ರಗಳನ್ನು ಸಭೆಯ ಮುಂದಿರಿಸಿದರು.

ಹೊಸವರ್ಷಕ್ಕೆ ಶ್ರೀ ಎಸ್. ಎಸ್. ಶೇಟರು ಅಧ್ಯಕ್ಷರಾಗಿಯೂ, ಶ್ರೀ ಎಸ್. ಮಹಾಬಲ ಶೇಟರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್. ಲಕ್ಷ್ಮೀನಾರಾಯಣ ಶೇಟರು ಕಾರ್ಯದರ್ಶಿಗಳಾಗಿಯೂ, ಶ್ರೀ ಎಸ್ ಸಂಜೀವ ಶೇಟರು ಜತೆಕಾರ್ಯದರ್ಶಿಗಳಾಗಿಯೂ ಶ್ರೀ ಎಸ್. ಎಲ್. ಶೇಟರು ಕೋಶಾಧಿಕಾರಿಗಳಾಗಿಯೂ ಮತ್ತು ಏಳು ಮಂದಿಯು ಕಾರ್ಯಕಾರೀ ಸಮಿತಿಗೆ ಆರಿಸಲ್ಪಟ್ಟರು.

ನಿಧನ—ಸ್ಥಳೀಯ ಬಿ. ಇ. ಎಮ್. ಹೈಸ್ಕೂಲಿನ ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಎಸ್. ಎ ಫಟಾರ್‌ಡೊರವರು ತಾ 26ರಲ್ಲು ತಮ್ಮ ಸ್ವಂತ ಗೃಹದಲ್ಲಿ ನಿಧನಹೊಂದಿದರು. ದಿವಂಗತರು 35 ವರ್ಷಗಳವರೆಗೆ ಬಿ. ಇ. ಎಮ್ ಹೈಸ್ಕೂಲಿನ ಪ್ರಾಧ್ಯಾಪಕರಾಗಿದ್ದು ಸೆಕೆಂಡರಿ ಶಾಲಾ ಪ್ರಾಧ್ಯಾಪಕರ ಎಸೋಸಿಯೇಶನ್ನಿನ ಪ್ರಥಮ ಅಧ್ಯಕ್ಷರಾಗಿದ್ದರು.

ದ. ಕ. ಕಾಲೇಜುಗಳಿಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಪಾರಿತೋಷಕ— ಕರ್ನಾಟಕ ಯೂನಿವರ್ಸಿಟಿಯವರು ತಾ 22ರಲ್ಲು ಧಾರವಾಡದಲ್ಲಿ ತಮ್ಮ ಕಾರ್ಯಾಲಯದಲ್ಲಿ ಕರೆದ ಸಭೆಯಲ್ಲಿ, ದಕ್ಷಿಣ ಕನ್ನಡದ ಕಾಲೇಜುಗಳಲ್ಲಿ ಪ್ರಿಯುನಿವರ್ಸಿಟಿ ಮೂರು ವರ್ಷದ ಡಿಗ್ರಿ ಕೋರ್ಸುಗಳ ಪ್ರಥಮ ವರ್ಷಕ್ಕೆ ಕರ್ನಾಟಕ ವಿಶ್ವವಿದ್ಯಾನಿಲಯದ ಪಾರಿತೋಷಕ ಕೊಡುವುದನ್ನು ಅನುಸರಿಸಬೇಕೆಂದು ನಿರ್ಧರಿಸಲಾಗಿದೆ.

ಮೂರು ವರ್ಷದ ಡಿಗ್ರಿ ಕೋರ್ಸಿನ ಪ್ರಥಮ ವರ್ಷದ ಅಂತ್ಯದಲ್ಲಿ ಯೂನಿವರ್ಸಿಟಿ ಪರೀಕ್ಷೆ ನಡೆಸಿ, ಇದರಲ್ಲಿ ಉತ್ತೀರ್ಣರಾದವರು ಅವರು ತೆಗೆದುಕೊಂಡ ವಿಷಯಗಳಿಗನುಗುಣವಾಗಿ ಪ್ರೊ ಫೆಶನಲ್ (ವೃತ್ತಿಪರ) ಕೋರ್ಸುಗಳಿಗೆ ಸೇರಲು ಅರ್ಹತೆ ಪಡೆಯುತ್ತಾರೆ ಈಗಿರುವ 2 ವರ್ಷಗಳ ಜೂನಿಯರ್, ಸೀನಿಯರ್.ಬಿ. ಎ., ಬಿ ಎಸ್. ಸಿ ಮತ್ತು ಬಿ. ಕಾಂ ಕೋರ್ಸುಗಳಿಗೆ ಮುಂದಿನ ಎರಡು ವರ್ಷಗಳವರೆಗೆ ಈಗಿನ ಮಾದ್ರಾಸಿನ ವಿಶ್ವವಿದ್ಯಾಲಯದ ಪಾಠಪಟ್ಟಿಯನ್ನೇ ಮುಂದುವರಿಸಲಾಗುವುದು. ಈಗಿನ ಎರಡು ವರ್ಷದ ಬಿ ಎ, ಬಿ. ಎಸ್. ಸಿ ಮತ್ತು ಬಿ ಕಾಂ. ಡಿಗ್ರಿಗಳ ಜೂನಿಯರ್ ತರಗತಿಗಳಿಗೆ ಸೇರುವವರೆಗೆ ಹಾಗೂ ಸೀನಿಯರ್ ತರಗತಿಯವರಿಗೆ ಮಾತ್ರ ಮಾದ್ರಾಸಿನ ಪಾಠಪಟ್ಟಿ ಅನ್ವಯಿಸುವುದು.

ಜಿಲ್ಲೆಯಲ್ಲಿ ನಾಲ್ಕು ಹೊಸ ಹೈಸ್ಕೂಲುಗಳು ಬೆಳ್ತಂಗಡಿ, ಉಪ್ಪಿನಂಗಡಿ, ಬೆಳ್ಳಾರ್ಣು ಬೋರ್ಡರ್ ಮಾಧ್ಯಮಿಕ ಶಾಲೆಗಳನ್ನು ಮತ್ತು ನಾವೂರ ಸರಕಾರೀ ಫಿರೋಜಸ್ ಮಾಧ್ಯಮಿಕ ಶಾಲೆಯನ್ನು ಹೈಸ್ಕೂಲಾಗಿ ಮಾಡಲು ಮೈಸೂರು ಸರಕಾರವು ಅನುಮತಿ ಕೊಟ್ಟಿರುವುದು ಈ ಶಾಲೆಗಳಲ್ಲಿ ಹೈಸ್ಕೂಲು ತರಗತಿಗಳು ಈ ಶಿಕ್ಷಣ ವರ್ಷದಲ್ಲಿ ಪ್ರಾರಂಭಿಸಲಾಗುವುವು.

ಪೂಜ್ಯ ವಿನೋಬಾಜಿಯವರು ದ ಕ ಜಿಲ್ಲೆಗೆ ಸಪ್ಟಂಬರ ತಿಂಗಳ ಪ್ರಥಮ ವಾರದಲ್ಲಿ ಸಂದರ್ಶನವೀಯುವಾಗ ನಾವು ಮಾಡಬೇಕಾದ ಕಾರ್ಯಕ್ರಮವನ್ನು ಪರ್ಯಾಲೋಚಿಸಲು ತಾ. 27ರಲ್ಲು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಯು. ಪಿ. ಮಲ್ಯರ ವ್ಯವಸ್ಥಾಪಕತ್ವದಲ್ಲಿ ಶ್ರೀ ಕೆ ಆರ್. ಆಚಾರ್. ಎಮ್. ಪಿ ಅವರ ಅಧ್ಯಕ್ಷತೆಯಲ್ಲಿ ಸರ್ವಜನಿಕ ಸಭೆಯೊಂದು ಜರಗಿತು. ಶ್ರೀ ಯು. ಎಸ್ ರಾಮಚಂದ್ರ ರಾಯರು ಮಾತನಾಡುತ್ತಾ ವಿನೋಬಾಜಿಯವರ ಆಗಮನಕ್ಕೆ ತಕ್ಕ ವಾತಾವರಣ ಕಲ್ಪಿಸಬೇಕೆಂದರು. ಅವರು ಈ ಜಿಲ್ಲೆಗೆ ಬರುವ ಸಂಭವವಿದ್ದೆವೆಂದು ಶ್ರೀ ಕೆ. ಕೆ. ಸಿಟ್ಟರು ತನ್ನ ಅನುಭವವನ್ನು ಹೇಳಿದರು

ಹೊಸ ತೆರಿಗೆಗಳ ಪ್ರತಿಭಟನೆ – ದ. ಕ ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲು ಮತ್ತು ಕಮ್ಯುನಿಸ್ಟ್ ಪಾರ್ಟಿಯ ಸಂಯುಕ್ತ ಆಶ್ರಯದಲ್ಲಿ ಕಳದ ತಾ 26ರಲ್ಲು ಶ್ರೀ ಬಿ ಲಿಂಗಪ್ಪ ಸುವರ್ಣರ ಅಧ್ಯಕ್ಷತೆಯಲ್ಲಿ ಗೆಣಸತಿ ಹೈಸ್ಕೂಲಲ್ಲಿ ಸಭೆಯೊಂದು ಜರಗಿತು. ಶ್ರೀ ಕೆ ಮೋನಪ್ಪ ಸೆಟ್ಟರ ಸ್ವಾಗತ ಭಾಷಣಾನಂತರ ಶ್ರೀಗಳಾದ ಎ. ಬಿ ಕಕ್ಕಿಲ್ಲಾಯ, ಎ ಶಾಂತಾರಾಮ ಪೈ, ಬಿ. ನಾರಾಯಣ, ಎ. ಕೆ ನಾರಾಯಣ ಮೊದಲಾದವರು ಆಹಾರ ಪದಾರ್ಥಗಳ ಬೆಲೆ ಏರಿಕೆಯನ್ನು ವಿರೋಧಿಸಿಯೂ, ಕೇಂದ್ರ ಸರಕಾರವು ಹೊಸ ತಾಗಿ ಹೋರಿಸಿರುವ ತೆರಿಗೆಗಳನ್ನು ಕೂಡಲೇ ಹಿಂತೆಗೆಯಬೇಕೆಂಬೂ ಭಾಷಣಿಸಿತ್ತರು. ಮುನಸಿಪಾಲಿಟಿ, ಪಂಚಾಯತ ಮತ್ತು ಗ್ರಾಮ ಪ್ರದೇಶಗಳಲ್ಲಿ ಕಡಿಮೆ ಬೆಲೆಯ ಅಂಗಡಿಗಳನ್ನು ತೆರೆಯಬೇಕೆನ್ನುವ, ಮಂಗಳೂರಿನ ಅಕ್ಕಿ ದಾಸ್ತಾನು ಮಾಡುವ ಗೋದಾಮು ಸ್ಥಾಪಿಸಬೇಕೆನ್ನುವ, ಹೊಸ ತೆರಿಗೆಗಳನ್ನು ಹಿಂತೆಗೆಯುವಂತೆ ಕೇಂದ್ರ ಸರಕಾರವನ್ನು ಒತ್ತಾಯಪಡಿಸುವ ನಿರ್ಣಯಗಳಾದುವು ಶ್ರೀ ಎಚ್ ಉಮಾನಾಥ ನಾಯ್ಕರು ಧನ್ಯವಾದಗಳನ್ನಿತ್ತರು.

ನಗರ ಸಭೆಯು—ತಾ 28ರಲ್ಲು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು ಆರಂಭದಲ್ಲಿ ನಗರ ಸಭೆಯ ಮಾಜಿ ಕೌನ್ಸಿಲರ್ ಮತ್ತು ಮಂಗಳೂರು ಟೌನ್ ಪಾಲ್ ಟ್ರಸ್ಟಿನ ಅಧ್ಯಕ್ಷರೂ ಆಗಿದ್ದ ಶ್ರೀ ಪಿ. ಆರ್. ರೆಂಗನಾಥ ಸೂಂಜರ ನಿಧನದ ಬಗ್ಗೆ ಸಂತಾಪ ಸೂಚಿಸಿ, ಎರಡು ನಿಮಿಷಗಳ ಮೌನವನ್ನು ಆಚರಿಸಿತ್ತು. ಕೆಲ ನಿಮಿಷ ಸಭೆ ಮುಂದಕ್ಕೆ ಹಾಯಿತು.

ಸಭಾಧ್ಯಕ್ಷರು, ನಗರದಲ್ಲಿ ಸೊಂಕಿದ ಶೀತ ಜ್ವರದ ವಿವರಗಳನ್ನು ತಿಳಿಸಿ, ಮುನಸಿಪಾಲಿಟಿಯ ಔಷಧಾಲಯಗಳಲ್ಲಿ ಧಾರ್ಮಾರ್ಥ ಮದ್ದು ಕೊಡುವ ಏರ್ಪಾಡು ಮಾಡಲಾಗಿದೆ ಎಂದರು. ಮೈಸೂರು ಸರಕಾರವು ಸ್ಥಳೀಯ ಅಸ್ಪತ್ರೆಗಳಿಗೆ 1,50,000 ಮತ್ತು ಮುನಸಿಪಾಲಿಟಿಗೆ 58.000 ಸಲ್ಫರ್ ಮಾತ್ರೆಗಳನ್ನು ಕಳುಹಿಸಿದೆ ಎಂದು ತಿಳಿಸಿದರು. ನಗರದಲ್ಲಿ ಟೈಫಾಯಿಡ್ ಜ್ವರವು ಹಬ್ಬದಂತೆ ವಿದ್ಯಾರ್ಥಿಗಳಿಗೆ ಹಂಚುವುದಕ್ಕಾಗಿ 10 000 ಸಿ ಸಿ ಟೈಫಾಯಿಡ್ ಪ್ರತಿಬಂಧಕ ಔಷಧ ಕುಡಿಸಿದ ಮಾಡಲು 1200 ರೂಪಾಯಿ ಮಂಜೂರು ಮಾಡಲಾಯಿತು. ಕ್ರಿ ಮುನಸಿಪಲ್ ಶಾಲೆ ಮತ್ತು ವಿದ್ಯಾಬೋಧಿನಿ ಶಾಲೆಗಳ ಸಂಯೋಜನೆಗೆ ನಗರ ಸಭೆಯ ಒಪ್ಪಿಗೆ ದೊರೆಯಿತು.

ಸೈಂಟ್ ಅನ್ಸ್ ತರಬೇತಿ ಕಾಲೇಜಿನಲ್ಲಿ ವಿಸ್ತೃತ ಸೇವಾವಿಭಾಗವನ್ನೂ ತೆರೆಯಲು ಮೈಸೂರು ಸರಕಾರದ ಅನುಮತಿ ಕೊಟ್ಟದ್ದು ಈ ವಿಭಾಗವು ಇದೇ ತಾ 16ರಂದು ಕಾಲೇಜಿನ ಪ್ರಿನ್ಸಿಪಾಲರ ಸಂಚಾಲಕತ್ವದಲ್ಲಿ ಆರಂಭಗೊಂಡಿತು

(ಫೋರ್ಡ್ ಫೌಂಡೇಶನ್‌ನವರ ಸಹಾಯದಿಂದ ನಡೆಯುತ್ತಿರುವ ಕೇಂದ್ರ ಸರಕಾರದ ವಿದ್ಯಾಇಲಾಖೆಯ ಆಧೀನದ ಆಲ್ ಇಂಡಿಯಾ ಕೌನ್ಸಿಲ್ ಫಾರ್ ಸೆಕೆಂಡರೀ ಎಜ್ಯುಕೇಶನ್ ಎಂಬ ಸಂಸ್ಥೆಯ ಆಶ್ರಯದಲ್ಲಿ ಈ ವಿಸ್ತೃತ ಸೇವಾ ಯೋಜನೆಯು ರೂಪುಗೊಂಡಿದ್ದು, ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಭಾರತದ 24 ತರಬೇತಿ ಕಾಲೇಜುಗಳಲ್ಲಿ ಈ ವಿಭಾಗವನ್ನು ತೆರೆಯಲಾಗಿದೆ. ದ್ವಿತೀಯ ಯೋಜನೆಯಲ್ಲಿ ಇದೀಗ 10 ಕಾಲೇಜುಗಳಲ್ಲಿ ಈ ವಿಭಾಗವನ್ನು ತೆರೆಯಲಾಗಿದೆ.

ಸಾಂಕ್ರಾಮಿಕ ರೋಗ

ಇನ್‌ಫ್ಲುಯೆಂಜಾದ ಕಾರಣ ಮತ್ತು ಇದನ್ನು ತಡೆಯಲು ಜನತೆ ಮಾಡಬೇಕಾದ ಕರ್ತವ್ಯ.

ಇನ್‌ಫ್ಲುಯೆಂಜಾ ಕಾಯಿಲೆಯು ಒಂದು ಸಾಂಕ್ರಾಮಿಕ ರೋಗ. ಸಾಧಾರಣವಾಗಿ ಬರುವ ಶೀತ, ಕೆಮ್ಮುಲು, ಗಂಟಲು ನೋವು ಈ ಕಾಯಿಲೆಯನ್ನು ಹೋಲುತ್ತದೆ. ಇದು ಬಹು ಬೇಗನೆ ಊರಿಂದೊರಿಗೆ, ಪಟ್ಟಣದಿಂದ ಪಟ್ಟಣಕ್ಕೆ ಮತ್ತು ದೇಶದಿಂದ ದೇಶಕ್ಕೆ ಹರಡುತ್ತದೆ.

ಇನ್‌ಫ್ಲುಯೆಂಜಾ ಬರಲು ಕಾರಣಗಳಾವುವು? "ಇನ್‌ಫ್ಲುಯೆಂಜಾ ವಯರಸ್" ಎಂಬ ಅತೀ ಸೂಕ್ಷ್ಮವಾದ ಕ್ರಿಮಿಯೇ ಇದಕ್ಕೆ ಕಾರಣ ಇದನ್ನು ಪರೀಕ್ಷಿಸಲು ಸಾಧಾರಣ ಸೂಕ್ಷ್ಮದರ್ಶಕದಲ್ಲಿ ಸಾಧ್ಯವಿಲ್ಲ ಇದಕ್ಕೆ ಪ್ರತ್ಯೇಕವಿದ್ದ ಸೂಕ್ಷ್ಮದರ್ಶಕದ ಅವಶ್ಯಕತೆಯಿದೆ. ಶಾಸ್ತ್ರಜ್ಞರು ಈ ಕಾಯಿಲೆಯು ಹರಡುವ ಕ್ರಿಮಿಗಳಲ್ಲಿ ಹಲವು ವಿಧಗಳಿವೆಯೆಂದು ಕಂಡುಹಿಡಿದ್ದಾರೆ.

ಅಂಟುವುದು ಹೇಗೆ? ೧. ಸೀನುವಾಗ, ಕೆಮ್ಮುವಾಗ, ನಗುವಾಗ ಅಥವಾ ಗಟ್ಟಿಯಾಗಿ ಮಾತನಾಡುವಾಗ ಎಂಜಲಿನಲ್ಲಿ ಅತೀ ಸೂಕ್ಷ್ಮವಾದ ಅಣುಗಳ ಮೂಲಕ ಕಾಯಿಲೆಯ ಕ್ರಿಮಿಗಳು ಹೊರಬರೆಯುತ್ತವೆ. ೨ ಒಬ್ಬ ರೋಗಿಯು ಉಪಯೋಗಿಸಿದ ಬಟ್ಟೆಬರೆಗಳನ್ನೂ ಗ್ಲಾಸು ಬಟ್ಟಲುಗಳನ್ನೂ ಉಪಯೋಗಿಸುವದರಿಂದ ಅದು ಹಬ್ಬುತ್ತದೆ.

ಮೂಲ ಚಿನ್ಹೆಗಳಾವುವು? ಮೊದಲನೆಯದಾಗಿ ನೆಗಡಿ, ತಡೆಯಲಸಾಧ್ಯವಾದ ತಲೆನೋವು' ಗಂಟಲು ನೋವು, ಸರ್ವಾಂಗ ನೋವು, ಕೆಮ್ಮುಲು ಮತ್ತು ೧೦೨ ಡಿಗ್ರಿಯಿಂದ ೧೦೪ ಡಿಗ್ರಿ ವರೆಗೆ ಜ್ವರ. ಸಾಧಾರಣವಾಗಿ ಸಮಯಕ್ಕೆ ಸರಿಯಾದ ಚಿಕಿತ್ಸೆ ತೆಗೆದುಕೊಂಡರೆ ಮೂರು ದಿನಗಳಲ್ಲಿಯೇ ಜ್ವರ ಬಿಡುವದು.

ಇದರಿಂದ ಬರುವ ಅಪಾಯಗಳು ಸಮಯಕ್ಕೆ ಸರಿಯಾಗಿ ಚಿಕಿತ್ಸೆ ತೆಗೆಸುಕೊಳ್ಳದಿದ್ದರೆ ಕೋವೆ ಕಾಯಿಲೆ (ಬ್ರೋನಿಯೂ-ಬ್ರೈಂಕೈಟೀಸ್) ಕಿವಿ ನೋವುಬರಿಕೆ ಇವೇ ಮೊದಲಾದ ಕಾಯಿಲೆಗಳು ಹೆಚ್ಚಾಗುತ್ತವೆ.

ಈ ಕಾಯಿಲೆಯವರು ಮಾಡಬೇಕಾದ ಕರ್ತವ್ಯಗಳು ೧. ಮೇಲೆ ಹೇಳಿದ ಚಿಹ್ನೆಗಳನ್ನು ಕಂಡೊಡನೆಯೇ ಹಾಸಿಗೆ ಹಿಡಿಯಬೇಕು. ಸಾಧ್ಯವಿದ್ದಷ್ಟು ಮಟ್ಟಿಗೆ ಒಳ್ಳೆಯ ಗಾಳಿ ಇರುವ ಬೇರೆ ಕೋಣೆಯಲ್ಲಿರತಕ್ಕದ್ದು ೨ ಆರೋಗ್ಯ ಯಾ ವೈದ್ಯ ಇಲಾಖೆಗೆ ತಿಳಿಸತಕ್ಕದ್ದು. ೩. ಆಸ್ಪತ್ರೆಗೆ ಸೇರಿಸುವ ಏರ್ಪಾಡಾಗಲೀ ಒಬ್ಬ ವೈದ್ಯರನ್ನು ಕರೆತರುವ ಏರ್ಪಾಡಾಗಲೀ ಮಾಡಬೇಕು ೪ ಸೀನುವಾಗಲೂ, ಕೆಮ್ಮುವಾಗಲೂ, ಮೂಗು ಮತ್ತು ಬಾಯಿಮೇಲೆಗೆ ಕರವಸ್ತ್ರವನ್ನು ಮುಚ್ಚಿಕೊಳ್ಳಬೇಕು. ೫. ರಸ್ತೆಯಲ್ಲಾಗಲೀ ನೆಲದ ಮೇಲಾಗಲೀ ಉಗುಳಬಾರದು ೬. ವೈದ್ಯರು ತಿಳಿಸುವ ವರೆಗೆ ಕೋಣೆ ಬಿಟ್ಟು ಯಾ ಮನೆ ಬಿಟ್ಟು ಹೋಗಬಾರದು

ಕುಟುಂಬದವರು ಮಾಡಬೇಕಾದ ಕರ್ತವ್ಯಗಳು.

(೧) ಸಾಧ್ಯವಾದಷ್ಟು ಮಟ್ಟಿಗೆ ರೋಗಿಯನ್ನು ಬೇರ್ಪಡಿಸಬೇಕು; (೨) ಕೋಣೆಯಲ್ಲಾಗಲು ಕಿಟಕಿಗಳನ್ನು ತೆರೆದಿಡಬೇಕು (೩) ಅದಷ್ಟು ಮನೆಯಲ್ಲಿ ಒಬ್ಬನೇ ರೋಗಿಯ ಕಡೆ ನಗಿಸಿಡಬೇಕು. (೪) ರೋಗಿಯು ಕೆಮ್ಮುವಾಗ ಮತ್ತು ಸೀನುವಾಗ ತಪ್ಪಿಸಲು ಕರವಸ್ತ್ರವನ್ನು ಮೂಗಿಗೂ, ಬಾಯಿಗೂ ಮುಚ್ಚಿಕೊಳ್ಳಬೇಕು, (೫) ರೋಗಿಯನ್ನು ಉಪಚರಿಸಿ ಮತ್ತು ಅವನ ಬಟ್ಟೆಬರೆಗಳನ್ನು ಮುಟ್ಟಿದ ನಂತರ ಕೈಗಳನ್ನು ಬಿಸಿನೀರು ಮತ್ತು ಸಾಬೂನಿನಿಂದ ಚೆನ್ನಾಗಿ ತೊಳೆಯಬೇಕು (೬) ರೋಗಿಯ ಮೈಲಿಗೆ ಬಟ್ಟೆ ಮತ್ತು ಗ್ಲಾಸು ಬಟ್ಟಲುಗಳನ್ನು ಬಿಸಿನೀರಿನಲ್ಲಿ ಕುದಿಸಬೇಕು (೭) ರೋಗಿಗೆ ಪ್ರತ್ಯೇಕವಾದ ಗ್ಲಾಸು ಬಟ್ಟಲುಗಳನ್ನು ಇಡಬೇಕು. (೮) ಮನೆ ಮಕ್ಕಳಿಗೆ ಶೀತ ನೆಗಡಿಯೂದರೆ ಶಾಲೆಗೆ ಕಳುಹಿಸಬೇಡಿ. ಇದರಿಂದ ಬೇರೆ ಮಕ್ಕಳಿಗೆ ಹರಡುತ್ತದೆ.

ಈ ಕಾಯಿಲೆಯನ್ನು ತಡೆಯಲು ಜನತೆಯು ಮಾಡಬೇಕಾದ ಕರ್ತವ್ಯ.

(೧) ಸೀನುವ ಮತ್ತು ಕೆಮ್ಮುವವರಿಂದ ದೂರವಿರಬೇಕು. (೨) ರೋಗಿಯು ಕೋಣೆಯಿಂದ ದೂರವಿರಬೇಕು (೩ ಜನಸ್ತೋಮಗಳಿಂದ ದೂರವಿರಬೇಕು. (೪) ಬೀದಿ ಹಾದಿಗಳಲ್ಲಿ ಉಗುಳಬಾರದು (೫) ಇತರರ ಉಡುವಸ್ತ್ರ, ಟವಲುಗಳನ್ನು ಉಪಯೋಗಿಸಬಾರದು (೬) ನಿತ್ಯಕ್ರಿಯೆ, ಪೌಷ್ಟಿಕರವಾದ ಆಹಾರ, ಸಾಕಾದಷ್ಟು ನಿದ್ರೆ, ಮತ್ತು ವಿರಾಮ, ಶುದ್ಧವಾದ ಗಾಳಿ ಮೊದಲಾದ ಆರೋಗ್ಯ ನಿಯಮಗಳನ್ನು ಅನುಸರಿಸಬೇಕು ಈ ರೀತಿ ಮಾಡಿದರೆ ಶರೀರ ಪ್ರಕೃತಿ ಒಳ್ಳೆಯದಾಗಿ ಕಾಯಿಲೆಯನ್ನು ತಡೆಯುವ ಶಕ್ತಿ ಉಂಟಾಗುತ್ತದೆ

ಸುತ್ತೂರು ಡಿ. ಮು ಕೋರ್ಟನಲ್ಲಿ

O P. 35/57.

ವಿಮಲಾ ಬ್ಯಾಂಕೂಡಾ —ಅರ್ಜಿದಾರರು
ಶಿವಣ್ಣ ನ್ಯಾಯಕ ಕೂಡಾ —ಎದ್ರಿರು

ಮೇಲ್ತೋರುವ ವ್ಯವಹಾರಣೆಯಲ್ಲಿ ಮೃತ ರಂಗಸ್ವ ನ್ಯಾಯರ ಬಾಬ್ತು The All India General Insurance Co. Ltd Bombay (ಈಗ Life Insurance Corporation of India) ದ ಪೋಲಿಸಿ ನಂಬ್ರ 34191ರ ಪ್ರಕಾರ ಬಹಾ ಐದೇಜು ವಸೂಲು ಮಾಡುವರೆ 1ನೇ ಅರ್ಜಿದಾರಳಿ ಹೆಸರಿಗೆ ಸರ್ಟಿಫಿಕೇಟು ಕೊಡಿಸಬೇಕೆಂತ ನಮ್ಮೆರಿ ಮಾಡಿದ ಅರ್ಜಿಯು ತಾ. 10—7—57ಕ್ಕೆ ಈ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುವದ್ರಿಂದ ಅಕ್ಷೇಪವಿದ್ದವರು ಆ ದಿನ್ನ ಬೆಳಿಗ್ಗೆ 11ಗಂಟೆಗೆ ಈ ಕೋರ್ಟು ಮುಂದೆ ಹಾಜ್ರಾಗಿ ಉದಹರಿಸದಿದ್ದರೆ ಕೋರ್ಟನವರಿಗೆ ಯುಕ್ತಕಂದಂತೆ ತೀರ್ಮಾನಿಸಲಾಗುವುದು.

(By order of the court)

Sripathi Rao B.
Advocate for Petitioner.

ಸುತ್ತೂರು, 15—6—57.

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳಿ ರಾಮಸ್ವಾಮಿ ಅಯ್ಯಂಗಾರರ ರಕ್ಷಣೆಯಲ್ಲಿ

ಟ್ರೇಡ್ ಮಾರ್ಕ್

ಸಂ! A.R ಅಯ್ಯಂಗಾರ್

ಸಂತಾನ ಸಿಂದೂರ (ಸ್ತ್ರೀಯರಿಗೆ. ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ; ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುತ್ಸಾಹ ಶಮನಮಾಡಿ, ಸ್ವಪ್ನ ಮತ್ತು ಶೀಘ್ರಸ್ಖಲನಗಳನ್ನ ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಗೆ, ನಪುಂಸಕತೆಯನ್ನು ನಾಮಾವಶೇಷಗೊಳಿಸುತ್ತವೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಜಾಗಿಯೆಯ ವಿವರಗಳನ್ನು ಬರೆದು 1 ಆಣೆ (25 N P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ಯಾಟಲಾಗ್ ರವಾನೆ

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ, (ನ ಯು.)
628, "ಸಂತಾನ ಸಿಂದೂರ ಸದನ", ಚಾಮರಾಜ ರೋಡ್ ಮೈಸೂರು-1 (S I

ಮಕ್ಕಳ ಮಗ್ಗಿಪುಸ್ತಕ

(ನಯೀ ಪೈಸೆ ಕೋಷ್ಟಕ ಸಹಿತ)

ಬೆಲೆ 1ಕ್ಕೆ	0	1	0
100ಕ್ಕೆ	4	0	0
250ಕ್ಕೆ	9	0	0
500ಕ್ಕೆ	17	0	0

ನವಯುಗ ಪ್ರೆಸ್, ಉಡುಪಿ.

ಸಮಾಜದ ಉನ್ನತಿಕೆ

ವಿದ್ಯಾವಂತರು ತಮ್ಮಲ್ಲಿ ಜಗಳಕಾಯದೆ ಮಾರ್ಗದರ್ಶನಮಾಡಲಿ

ಇಬ್ಬರು ವಿದ್ಯಾವಂತರು ಏನೋ ಚಿಕ್ಕ ಕಾರಣಕ್ಕಾಗಿ ಹತ್ತಾರು ಜನಗಳು ಸೇರುವೆಡೆ ನಿಂತಿದ್ದು ಒಬ್ಬರನ್ನೊಬ್ಬರು ಹೀನಾಯವಾಗಿ ಮಾತನಾಡುತಿದ್ದರು. ಕೇಳುತ್ತಿದ್ದ ಜನರಾದರೋ ಅವರಿಬ್ಬರೊಳಗಿನ ಅಶಾಂತತೆಯನ್ನು ಇನ್ನೂಕೆಣಕುವಂತೆ ಕಣ್ಣುಬಿಟ್ಟು ನೋಡುತಿದ್ದರು. ಹತ್ತಾರು ನಿಮಿಷಗಳ ಅವಿಶ್ರಾಂತ ಮಾತುಗಾರಿಕೆಯಾದ ಬಳಿಕ ಜಗಳವಾಡುತಿದ್ದ ಇಬ್ಬರು ಎರಡೆಡೆಗೆ ಹೋದರು ಕೂಡಿದ ಜನ ಚದರಿದರು.

ಇದು ಸಾಮಾನ್ಯವಾದೊಂದು ದೃಶ್ಯ. ದಿನನಿತ್ಯ ಎಂಬಂತೆ ನೂರಾರು ಪಟ್ಟಣಗಳಲ್ಲು, ಹಳ್ಳಿಗಳಲ್ಲು, ಮನೆಮನೆಗಳಲ್ಲಿ ಕಾಣಬರಬಲ್ಲ ನೈಜ ಚಿತ್ರ. ಇದು ಏಕೆ ಹೀಗೆ? ಇದನ್ನು ಯಾವ ಬಗೆಯಾಗಿ ಹೋಗಲಾಡಿಸಬಹುದು-ಎಂದು ಯಾರೂ ಯೋಚಿಸುವಂತಿಲ್ಲ. ಜಗಳದ ನಡುವೆ ಮೂರನೆಯವನೊಬ್ಬ ಬಂದುಸೇರಿ, ಮಾತಿನ ಕಾವನ್ನು ಇಳಿಸಲು, ಶ್ರಮಿಸುತ್ತಾನೇನೋ ನಿಜ. ಆದರೆ ಅದಕ್ಕೂ ಸ್ವಪ್ರತಿಷ್ಠೆಯ ಸೋಗಿದೆ. ಇಪ್ಪತ್ತನೆಯ ಶತಮಾನದಲ್ಲಿ, ಮಾನವತೆಯು ಇದಿಷ್ಟು ಪ್ರಗತಿಪರ ಭಾವನೆಗಳನ್ನು ತಾಳಿರುವಾಗ, ಮನುಷ್ಯನ ಮನಸ್ಸನ್ನು ತಿಳಿಯಲು ನೂರಾರು ಹಾದಿಗಳಿರುವಾಗ-ಈ ಬಗೆಯ ಜಗಳಗಳು ಸಾಮಾಜಿಕ ಆರೋಗ್ಯ ದೃಷ್ಟಿಯಿಂದ ಅಶುಭಚಿಯಾದುವುಗಳು.

ಒಬ್ಬರನ್ನೊಬ್ಬರು ತಿಳಿಯಲಾರದೆ ಇಂತಹ ಅನಾಹುತಗಳು ಜರಗುತ್ತವೆ ಎಂದು ಅಭಿಪ್ರಾಯ ಪಡುವುದು ಸರ್ವಕಾಲೀನ ಸತ್ಯವಾಗಲಾರದು. ಒಬ್ಬರನ್ನೊಬ್ಬರು ತಿಳಿದ ಬಳಿಕವೂ ತಮ್ಮ ಮೇಲ್ಮೆಕೆಗೆಂದು ಸೆಣಸಾಡುವ ಮನೋವೃತ್ತಿಯಿಂದ ಈ ಬಗೆಯ ಜಗಳಗಳು ಹುಟ್ಟಬಹುದು. ಆತ್ಮಪ್ರತಿಷ್ಠೆ ಕೆಲವೊಮ್ಮೆ ವ್ಯಕ್ತಿಯ ಶಾಂತ ಮನೋಸ್ಥಿತಿಯನ್ನು ಹಾಳು ಮಾಡಬಲ್ಲುದು ಎಂಬುದಕ್ಕೆ ಹಲವಾರು ನಿದರ್ಶನಗಳಿವೆ.

ಮಾನವ ಜೀವನದ ಬೆಳವಣಿಗೆಯ ಇತಿಹಾಸವನ್ನು ನೋಡಿದರೆ ಇಂತಹ ಜಗಳಗಳನ್ನು ಬಳಸಿದ್ದು ಕಾಣಬಹುದು. ಮೊದಮೊದಲು ಈ ಬಗೆಯ ಜಗಳಗಳ ಅವಶ್ಯಕತೆ ಜನರಿಗೆ ಇದ್ದಿರಲಿಲ್ಲ. ಸೌಹಾರ್ದದಿಂದ, ಪ್ರೀತಿ ಅನ್ಯೋನ್ಯತೆಯಿಂದ, ಹೆದರಿಕೆಯ ಮನೋವೃತ್ತಿಯಿಂದ-ಅವರು ಒಬ್ಬರನ್ನೊಬ್ಬರು ಕೂಡಿಕೊಂಡಿದ್ದರು. ಅಂದು ಹೊಟ್ಟೆಯ ಪ್ರಶ್ನೆ, ಆತ್ಮಪ್ರತಿಷ್ಠೆಯ ಪ್ರಶ್ನೆ ಇಂದಿನಂತಹ ಗಡಸು ವಿಕೆಯನ್ನು ತಾಳಿರಲಿಲ್ಲ. ಪ್ರತಿ ಸ್ಪರ್ಧೆಯ ದೃಷ್ಟಿಯಾಗಲೀ, ತಾನೇ ಮೇಲೆಂಬ ಮನೋವೃತ್ತಿಯಾಗಲೀ, ಅವರ ಎಳೆ ಮನಸ್ಸಿಗೆ ಅಷ್ಟು ಬಂದಿರಲಿಲ್ಲ. ಇಂದಾದರೋ ಹಾಗಲ್ಲ ಎಲ್ಲರ ಮನಸ್ಸಿನಲ್ಲೂ ಒಂದೇ ಉಬ್ಬಾವಿಕೆ: ತಾನೇ ಮೇಲು ಎಂಬ ಭಾವನೆ. ತಾನು, ತನ್ನಂತಿರುವ ಇನ್ನೊಬ್ಬನಿಂದ ಹೇಗೆ ಮೇಲು, ಏಕೆ ಮೇಲು-ಎಂದು ಯೋಚಿಸಲು ಅವಕಾಶವೇ ಇಲ್ಲವೆಂದಾಗಿದೆ. ಒಂದು ರೀತಿಯ ಒಣ ಜಂಭ ಸಾಮಾನ್ಯರಲ್ಲಿ ಮನೆಮಾಡಿಕೊಂಡಿರುವುದೇ ಇಂತಹ ಜಗಳಗಳಿಗೆ ಕಾರಣ.

ಸಮಾಜದಲ್ಲಿ ನೂರಾರು ಬಗೆಯ ವ್ಯಕ್ತಿಗಳಿರುತ್ತಾರೆ. ಒಬ್ಬೊಬ್ಬರ ಮನೋಸ್ಥಿತಿ-ಆಸೆ-ಪ್ರೇಮಗಳಿಗೆ ಒಂದೊಂದು ಮೊಗವಿರುತ್ತದೆ. ಅವುಗಳೆಲ್ಲದರ ಪರಿಪೂರ್ಣ ಚಿತ್ರದರ್ಶನ ಅಸಾಧ್ಯ. ಒಬ್ಬಾತ ಹಲವಾರು ವಿಚಾರಗಳಲ್ಲಿ ಉಳಿದವರಿಗಿಂತ ಕೀಳಾಗಿರಬಹುದು-ಅಥವಾ ಹಿಂದಿರಬಹುದು. ಹಾಗೆಂದೊಡನೆ ಆತನಲ್ಲಿ ಯಾವೊಂದು ಹುರುಳಿಲ್ಲ ಎಂದು ಎಣಿಸುವುದಾಗಲೀ, ಆತ ಸಾಮಾಜಿಕ ದೃಷ್ಟಿಯಿಂದ ಸಿರುಸಯೋಗಿ ಎಂದು ಭಾವಿಸುವುದಾಗಲೀ ಅಸಾಧುವಾದುದು ಎಂತಹ ಮೊದ್ದು ಜೀವಿಗಾದರೂ ತನ್ನ ಜೀವದ ಮೇಲೆ, ತನ್ನ ಕಾರ್ಯಗಳ ಮೇಲೆ ಗೌರವ ಇರುತ್ತದೆ. ವ್ಯಕ್ತಿಯ ಈ ಬಗೆಯ ಅಭಿಮಾನವನ್ನು ಕೆಣಕುವುದು ಹಿತವಲ್ಲ. ಆಕಸ್ಮಾತ್ ಆತ ತನ್ನ ಶಕ್ತಿಯನ್ನು ಪ್ರದರ್ಶಿಸಲಿ ಎಂಬ ದೃಷ್ಟಿಯಿಂದ ಆತನನ್ನು ಹತ್ತು ಜನರೆದುರಿಗೆ ಎಳೆದು, ಆತನಲ್ಲಿರುವ ನಿಶಕ್ತ ಗುಣಗಳನ್ನು ಕೂರತರುವುದರಲ್ಲಿ ಅರ್ಥವಿಲ್ಲ. ಎಲ್ಲರೂ ಬುದ್ಧಿವಂತರು, ತಿಳಿದವರು, ಪ್ರಜ್ಞರು ಎಂದಾಗಿರುತಿದ್ದರೆ, ಲೋಕಕ್ಕೆ ನಾಯಕನ ಅವಶ್ಯಕತೆ ಇರುತಿದ್ದಿಲ್ಲ. ನಾಯಕನಿರುತ್ತಾನೆ-ಎಂದೊಡನೆ ವ್ಯಕ್ತಿಗತ ಅಭಿಪ್ರಾಯಗಳಿಗೆ ಬೆಲೆಕೊಟ್ಟದೆ ಇರುವುದೂ ಅಪಾಯಕರ.

ಜಗಳಗಂಟತನ ಮನುಷ್ಯನಲ್ಲಿರಬೇಕಾದ ಗುಣವಲ್ಲ ಅದೂ, ಇಂದಿನವರಾದ ನಾವು ಜಗಳ ಬೆಳೆಸಿಕೊಂಡು ನಮ್ಮವರನ್ನು ನೋಯಿಸುವುದು ಮಾತ್ರವಲ್ಲದೆ ನಾವಾಗಿ ಸೋತುಕೊಳ್ಳುವುದು ತಿಳಿಗೇಡಿತನವೆಂದೇ ಹೇಳಬೇಕು. ಇಂದಿನವರಾದ ನಮಗೆ ನಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಸರಳವಾಗಿ ಹೇಳಿಕೊಳ್ಳಬಲ್ಲಂತಹ ಭಾಷೆಯ ಪರಿಚಯವಿದೆ. ಹಾಗಿದ್ದೂ ನಾವು ಅನಾಗರಿಕರಂತೆ ಅಭಿಪ್ರಾಯದ ತಿಳುವಳಿಕೆಯಲ್ಲಿ ಹಿಂದುಳಿದು, ಬೇಕು ಬೇಡದ ಪ್ರಶ್ನೆಯನ್ನು ಮರೆಕುಬಿಟ್ಟು, ಅವಸ್ಥೆ ವರ್ತನೆಯಲ್ಲಿ ಮುಂದರಿಯುವುದು ತೀರ ಅವಮಾನಕರ. ರಾಜಕೀಯ ಜೀವನ ವ್ಯಕ್ತಿಗತ ಜೀವನದಲ್ಲಿ ಬಹಳಷ್ಟು ಬದಲಾವಣೆಗಳನ್ನು ತಂದಿರುವ ಈ ಸಮಯ. ಪ್ರತಿಯೊಬ್ಬ ವ್ಯಕ್ತಿಗೂ ಅವನವನ ಅಭಿಪ್ರಾಯ ಪ್ರಕಟನೆಯ ಸ್ವಾತಂತ್ರ್ಯ ಇರುವಾಗ, ಇಂತಹ ಅಭಿಪ್ರಾಯ ಪ್ರಕಟನೆಯನ್ನು ತಾಳ್ಮೆಯಿಂದ ಕೇಳುವಂತಹ ಸ್ವಾತಂತ್ರ್ಯ ನಮ್ಮಲ್ಲಿ ಇಲ್ಲವೆಂದಾದರೆ, ನಮ್ಮ ರಾಜಕೀಯ ಸ್ವಾತಂತ್ರ್ಯಕ್ಕೆ ಏನು ಬೆಲೆ ಬಂದೀತು?

ಮನಸ್ಸು ಬೇರೆಯವರ ಮಾತುಗಳಿಂದ ನೋಯುವಂತಹ ಸಂದರ್ಭಗಳು ಹಲವಾರಿವೆ. ವ್ಯಕ್ತಿಯ ಜೀವನದ ನೋವಿನ ಕ್ಷಣಗಳನ್ನು ಮಾತ್ರ ಎಣಿಕೆ ಹಾಕಿದರೆ, ಆತನ ಜೀವನದಲ್ಲಿ ಸುಖದ ಕಲ್ಪನೆ ಕೂಡಾ ಬರಲಾರದು. ಹತ್ತು ಬಾರಿ ನೋವುಗೊಂಡರೂ ಎರಡು ಬಾರಿ ಸುಖ ಕಾಣುವ ಪ್ರಬಲ ಹಂಬಲ ಮನುಷ್ಯನಲ್ಲಿರುವುದೇ ಆತನ ಜೀವನದ ಸುಖನುಯತೆಗೆ ಕಾರಣವಾಗಿರಬಹುದು. ಬೇರೊಬ್ಬ ವ್ಯಕ್ತಿಗಾಗಿ ನಮ್ಮಲ್ಲಿ ಮೂಡಬಹುದಾದ ಅಸಹನತೆಯನ್ನು ನಾವು ಆದಷ್ಟು ಬದಿಗೊತ್ತಲು ಪ್ರಯತ್ನಿಸಬೇಕು. ನೂರು ಜನಕ್ಕೆ ನಾವಿರ ಬಾರಿ ನಾವು ಹೇಳುತ್ತಿರುವ "ತಾಳ್ಮೆ" ಎಂಬ ಶಬ್ದವನ್ನು ನಮಗೆ ನಾವು ಒಂದು ಬಾರಿ ಮನಃಪೂರ್ವಕವಾಗಿ ಹೇಳಿಕೊಳ್ಳುವುದರಲ್ಲಿ ಹಿತವಿದೆ-ಮಾನವತೆ ಇದೆ. ಜಗತ್ತು ಇಂದು ಅಶಾಂತಮಯ ವಾತಾವರಣವನ್ನು ಹೊಕ್ಕಿರುತ್ತದೆ. ಇಂತಹ ಸಮಯ ನಮ್ಮ ನಮ್ಮೊಳಗಿನ ತಿಕ್ಕಾಟವನ್ನು ನಾವು ಅಳಿಸಿ ಬಿಡಲು ಯತ್ನಿಸಬೇಕೇ ಹೊರತಾಗಿ, ಬೆಳೆಸಲು ಪ್ರಯತ್ನಿಸಬಾರದು. ಹಾಗೆ ಬೆಳೆಸಿದರೆ ಸಾಮಾಜಿಕ ಹಾನಿ ನಿಶ್ಚಯ.

ವಿದ್ಯಾವಂತರು ಇಂತಹ ಕಾರ್ಯಗಳಿಂದ ಹಿಂದುಳಿಯಬೇಕು. ತನ್ನ ಎದುರಿನಲ್ಲಿಯೊಡನೆ ಯಾವ ರೀತಿಯ ಭಿನ್ನಾಭಿಪ್ರಾಯ ಬಂದರೂ, ಅದನ್ನು ಸಹನೆಯಿಂದ ತೂಗಿ ನೋಡಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅಭ್ಯಾಸ ಬೆಳೆಯಬೇಕು. ಒಮ್ಮಿಂದೊಮ್ಮೆ ಈ ರೀತಿಯ "ಗೀತೆ ಮನೋಭಾವ" ಜನರಲ್ಲಿ ನಮ್ಮ ಕುರಿತಾಗಿ ಹೇಡಿ ಎಂಬ ಭಾವನೆಯನ್ನು ಹುಟ್ಟಿಸಬಹುದು. ಆದರೆ ಇಂತಹ ಹೇಡಿತನಕ್ಕೆ ನಾವು ಬಾಗುವುದರಲ್ಲಿ ಏನೂ ನಾಚಿಗೆ ಇಲ್ಲ. ಜಗಳವಾಡಿ ನಮ್ಮ ಬಾಳನ್ನು ದಿನನಿತ್ಯ ತೊಳಲಾಟದಲ್ಲಿ ತೊಡಗಿಸಿಕೊಂಡು ನರಳುವುದಕ್ಕಿಂತ-ಸುಮ್ಮಗಿದ್ದು ನಮ್ಮ ಮನೋಶಾಂತಿ ಮತ್ತು ಸಹನೆಯ ಪರಿಚಯವನ್ನು ನಾವಾಗಿ ಮಾಡಿಕೊಳ್ಳುವುದು ಸುಲಭ ಮತ್ತು ಹಿತವಾದುದು.

—"ನಾಗೇಶ".

ಅಸಾಧು ಕಲ್ಪನೆ

(೩ನೇ ಪುಟದಿಂದ)

ಯೂ ಆರ್ಯರ ಮತ್ತು ಅನಾರ್ಯರ ಕೊಡುಗೆ ಇವೆ. ಕೆಲವೊಂದು ಕ್ಷೇತ್ರಗಳಲ್ಲಿ ಅನಾರ್ಯರ ದೇಣಿಗೆಯೇ ವಿಶೇಷವಾಗಿವೆ. ನಾಗರಿಕತೆಯಲ್ಲಿ ಮುಂದುವರಿದ ಜನಾಂಗದವರು ತಮ್ಮ ಹಿಂದುಳಿದ ಸಹೋದರರೊಡನೆ, ಮುಖ್ಯವಾಗಿ ಆದಿವಾಸಿಗಳೊಡನೆ ಅದನ್ನು ಹಂಚಿ ಭೋಗಿಸುವುದು ಅಗತ್ಯ. ಆದಿವಾಸಿಗಳ ರೂಪದಲ್ಲಿ ನಮ್ಮವರಲ್ಲಿ ಕೆಲವೊಂದು ಜನರು ಹಿಂದುಳಿದಿರುವುದು ನಮಗೇ ಒಂದು ಕಲಂಕ. ಈ ದೇಶವು ನಮ್ಮದು ಎಷ್ಟರ ಮಟ್ಟಿಗೋ ಅಷ್ಟೇ ಅವರದೂ ಆಗಿದೆ. ಅವರ ಸಂಸ್ಕೃತಿಯನ್ನು ಉಳಿಸುವುದು ನಮ್ಮ ಕರ್ತವ್ಯವಾದರೂ, ಅವರನ್ನು ಪಶು ಸಂಗ್ರಹಾಲಯದಲ್ಲಿಡುವಂತಿಡುವುದು, ಹಿಂದುಳಿಯುವಂತೆಯೇ ಕಾಣುವುದು ಶುದ್ಧ ಅನ್ಯಾಯ. ಆದುದರಿಂದ ನಾವೆಲ್ಲರೂ ಆದಿವಾಸಿಗಳ ಮತ್ತು ಹಿಂದುಳಿದವರ ಉನ್ನತಿಯನ್ನು ಸಾಧಿಸುವುದು ನಮ್ಮ ಪ್ರಮುಖ ಕರ್ತವ್ಯವೆಂದು ತಿಳಿದು ಅದಕ್ಕಾಗಿ ಕಾರ್ಯಶೀಲರಾಗಬೇಕು.

SR
ಸೇವನೆಯು ಏನಂದಕ್ಕೆ
ಅತ್ಯುತ್ತಮವಾದುದನ್ನೇ ಪಡಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಮತ್ತು
ಬೊಂಬ್ಯಾ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ.
S.R. Beedi Works, UDIPI, S.K.

ಕುಂದಾಪುರ ಡಿ. ಮು. ಕೋರ್ಟನಲ್ಲಿ

O P. 22/1957.

1. ಲಕ್ಷ್ಮಿ ಅಮ್ಮ, 2. ಅಕ್ಕಾಣಿ ಅಮ್ಮ, 3. ಯಜ್ಞನಾರಾಯಣ ಶೋಮಯಾಜಿ, 4. ಮ್ಯಾನರ ರಾಮಸ್ವಾಮಿ

— ಅರ್ಜಿದಾರರು

ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಉಡುಪಿ ತಾಲೂಕು ಕಾರ್ಕಳ ಸೀತಾರಾಮ ಉಪಾಧ್ಯರು ತಾರೀಕು 13-4-57 ರಲ್ಲು ಸದ್ರಿ ಕಾರ್ಕಳ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆ ಸದ್ರಿ ಸೀತಾರಾಮ ಉಪಾಧ್ಯರು ತಮ್ಮ ಜೀವಿತಕಾಲದಲ್ಲಿ ತಾರೀಕು 8-4-57 ರಲ್ಲು ಒಂದು ವೀಲುನಾಮೆ ಬರೆದಿಟ್ಟು ಅವರ ಬಾಬ್ತು ಕೆನರಾ ಬೇಂಕ್ ಲಿಮಿಟೆಡ್ ಇವರ ಬೆಂಗಳೂರು ಬ್ರಾಂಚಿನಲ್ಲಿ S. B. account No 334 ನೆಗೆ ಡಿಪೋಜಿಟನಲ್ಲಿರುವ ಅಳ್ಳೇಜಿನ ಪೈಕಿ ರೂ. 2000-0-0 ಕ್ಕೆ ನೆ ಅರ್ಜಿದಾರಳಿಗೂ ರೂ 500-0-0 ಕ್ಕೆ 2ನೇ ಅರ್ಜಿದಾರಳಿಗೂ ಮಿಕ್ಕ ಪೂರಾ ಹಣಕ್ಕೆ 3ನೆ ಅರ್ಜಿದಾರನಿಗೂ ಸದ್ರಿ ವೀಲಿನಲ್ಲಿ ಹಕ್ಕು ಸ್ಥಾಪಿಸಿರುತ್ತಾರೆ. ಸದ್ರಿ ವೀಲುನಾಮೆಯ ಆಧಾರದ ಮೇಲೆ ಸದ್ರಿ ಹಣವನ್ನು ಪಡೆಯುವಬಗ್ಗೆ ಅರ್ಜಿದಾರರು ತಮಗೆ ಪರಿಸಿ ಸರ್ಟಿಫಿಕೇಟು ಕೊಡಿಸಬೇಕಾಗಿ ದಾವಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 24-7-57 ಕ್ಕೆ ತಸ್ಕೀಗೆ ಇಟ್ಟಿರುವದ್ರಿಂದ ಈ ವಿಷಯದಲ್ಲಿ ಯಾರದ್ದಾದರೂ ಆಕ್ಷೇಪಣೆಯಿದ್ದಲ್ಲಿ ಸದ್ರಿ ತಾರೀಕಿನ ದಿವಸ ಜಗಲು 11 ಗಂಟೆಗೆ ಮೇಲ್ಕಂಡ ಕೋರ್ಟನಲ್ಲಿ ಹಾಜ್ರಾಗಿ ಜ್ಞಾಪೀಸಮಾಡಿಕೊಳ್ಳತಕ್ಕದ್ದು.

M. Ananthaya,
Advocate for Petitioners.

ತಾ. 26-6-1957 ಸೊಕ್ಕಾಂ ಕುಂದಾಪುರ.

ಸ್ವದೇಶಾಭಿಮಾನ

(೨ನೇ ಪುಟದಿಂದ)

ದಿದನು. ಅಕಬರನಿಗೂ ಇದೇ ಬೇಕಾಗಿತ್ತು. ಎರಡು ಲಕ್ಷ ಸೈನಿಕರ ಪಡೆಗೆ ಮೇವಾಡದ ಆಕ್ರಮಣ ಮಾಡಲು ಆದೇಶವಿತ್ತರೆಂದು ಕೆಲವರೆನ್ನುತ್ತಾರೆ ತನ್ನ ಮಗ ಸಲೀಮನ ಸೇನಾಧಿಪತ್ಯದಲ್ಲಿ ಮಾನಸಿಂಹ ಮತ್ತು ಶಕ್ತಿಸಿಂಹರೊಡನೆ ಸೇನೆ ಮುನ್ನಡೆಯಿಟ್ಟಿತು. ಕಮಲಮೀರವು ಉದಯಸುವುದಿಂದ ನಲ್ವತ್ತು ಮೈಲು ದೂರವಿತ್ತು. ಅದನ್ನು ಸೇರಲು ಕೇವಲ ಎರಡು ವಾರ್ತೆಗಳು ಮಾತ್ರವಿದ್ದುವು. ದಾರಿಯಲ್ಲಿ ಹಳದೀ ಘಾಟಿಯ ಮೈದಾನವಿತ್ತು. ಮೊಗಲ ಸೇನೆ ಅಲ್ಲಿ ಬೀಡು ಬಿಟ್ಟಿತು. ಮಹಾರಾಣನೂ ತನ್ನ ೨೨ ಸಾವಿರ ಸೈನಿಕರನ್ನು ಈ ಸಂಕಟವೆದುರಿಸಲು ಮೊದಲೇ ಸಿದ್ಧಪಡಿಸಿದ್ದನು. ಮೊಗಲರು ತೋಪಿನ ಮಳೆಕರೆಸಿದರು. ಒಂದೆಡೆ ಎರಡು ಲಕ್ಷ! ಇನ್ನೊಂದೆಡೆ ೨೨ ಸಾವಿರ! ಆದರೂ ರಜಪೂತರು ವೀರತೆ, ಧೀರತೆ, ಸಾಹಸ ಮತ್ತು ವಿಶ್ವಾಸದಿಂದ ಕಾದಿದುದರಿಂದಲೇ ಹಳದೀ ಘಾಟಿಯ ಘೋರ ಸಂಗ್ರಾಮ ಇತಿಹಾಸ ಪ್ರಸಿದ್ಧವಾಗಿದೆ. ಮಹಾರಾಣನು ಸಲೀಮನ ಮೇಲೆ ಬಿದ್ದನು. ಮೊಗಲ ಸೈನಿಕರು ಅತನ ನೆರವಿಗೆ ಬಂದರು. ಆದರೂ ರಜಪೂತರು ಸಲೀಮನ ಮೇಲೆ ದಾಳಿ ಮಾಡಿದರು ಸಲೀಮನ ಸಾರಥಿ ಮತ್ತು ಅನೆಗಳು ಘಾತಿತವಾದುವು. ಅನೆಯು ಸಲೀಮನನ್ನು ಎತ್ತಿಕೊಂಡು ದೂರ ಓಡಿತು ಆಗ ಮುಸಲ್ಮಾನರು ಮಹಾರಾಣನನ್ನು ಮುತ್ತಿದರು ಅವನು ಮೂರು ಬಾರಿ ಮೃತ್ಯುವಿನಿಂದ ಪಾರಾಗಿ ಹೆಣ್ಣು ಕತ್ತರಿಸುವಂತೆ ಅರಿಸೇನೆಯನ್ನು ಕೊಂದನು. ಪ್ರತಿಕ್ಷಣವೂ ಲಕ್ಷ ಜೀವ ಮನವು ಸಂಕಟಮಯವಾಗುತ್ತಾಬಂತು ಸಮೀಪದಲ್ಲಿ ಸರದಾರ ಮಾನಸಿಂಹನು ಈ ಭೀಷಣ ದೃಶ್ಯವನ್ನು ಕಂಡು ರಕ್ಷಸೇನೆಯನ್ನು ಸೀಳುತ್ತಾ ಮಹಾರಾಣನ ಸಮೀಪಕ್ಕೆ ಬಂದನು ರಾಜನ ಛತ್ರವನ್ನು ತನ್ನ ಕಲೆಯ ಮೇಲಿಟ್ಟುಕೊಂಡು, ಅದ್ದಾರಿಯಾಗಿ ಮುಂದೊತ್ತಿ, ಸ್ವಾಮಿಗಾಗಿ ತನ್ನ ಪ್ರಾಣದೊಡನೆ ಆಟವಾಡಿದನು.

ಮಹಾರಾಣನಿಗೆ ಏಳು ಗಾಯಗಳಾದುವು. ರಣದಲ್ಲಿ ಜೆಂಡನಂತೆ ನೆತ್ತರು ಸುರಿಯುತ್ತಿತ್ತು. ಪರಿಸ್ಥಿತಿಯು ಅತ್ಯಂತ ವಿಷಮವಾಗಿರುವುದನ್ನು ಕಂಡು ರಣರಂಗದಿಂದ ಹೊರಬೀಳುವುದೇ ಶ್ರೇಯಸ್ಕರವೆಂದು ಮನಗಂಡನು. ಅವನೊಂದೆಡೆಗೆ ಕುದುರೆಯನ್ನು ಓಡಿಸಿದನು. ಈಶ್ವರುಪೊಗಲರು. ಹಿಂಬಾಲಿಸಿದರು. ಮಹಾರಾಣನ ಪರಾಕ್ರಮ ಹಾಗೂ ಸ್ಥಿರತೆಯಿಂದ ತಮ್ಮ ಶಕ್ತಿಸಿಂಹನ ಹೃದಯ ಬದಲಾಯಿತು. ಸಹೋದರರನ್ನು ಪರಿತ್ಯಜಿಸಿ ಶತ್ರುಗಳೊಡನೆ ಸೇರಿಕೊಂಡುದಕ್ಕೆ ಅವನ ಆತ್ಮವು ಅವನಿಗೆ ಧಿಕ್ಕಾರ ಎಂದಿತು; ಪ್ರಾಯಶ್ಚಿತ್ತದ ಭಾವನೆಯಿಂದ ಪ್ರೇರಿತನಾಗಿ ಅವನು ಸರದಾರರ ಹಿಂದೆ ಓಡಿದನು. ಮಹಾರಾಣನು ಒಂದು ನದಿಯ ದಂಡೆಯಲ್ಲಿದನು, ಮೊಗಲ ಸೈನಿಕರೂ ಅಲ್ಲಿ ಕಾಣಿಸಿಕೊಂಡರು. ಆದರೆ, ಶಕ್ತಿಸಿಂಹನು ಅವರನ್ನು ಸಂಹರಿಸಿದನು. ಮಹಾರಾಣನು ತನ್ನನ್ನು ಹಿಂಬಾಲಿಸಿಕೊಂಡು ಬಂದನೆಂದು ಅಶಂಕೆಯಾಗಿ ಸರ್ವಾಂಗ ಕ್ರೋಧಿತನಾದನು. ಪರಂತು ಸತ್ಯಸಂಗತಿಯು ತಿಳಿದನಂತರ, ರಾಣನು ಗದ್ದದಗೊಂಡನು. ರಾಣನ ಕುದುರೆಯು ಸತ್ತುದರಿಂದ ಶಕ್ತಿಸಿಂಹನಾತನನ್ನು ತನ್ನ ಅಶ್ವದಲ್ಲಿ ಕೂರಿಸಿಕೊಂಡು ಹೋದನು

ತನ್ನ ನಾಲ್ಕು ದಿಸೆಗಳಲ್ಲಿ ಆಡುತಿದ್ದ ಮೃತ್ಯುಮುಖದಿಂದ ತಪ್ಪಿಸಿ ಮಹಾರಾಣನು ದೂರವೋಡಿದ್ದನು; ಆದರೂ ಆತನ ಸಂಕಟಗಳಂತ್ಯಗೊಳ್ಳಲಿಲ್ಲ ಅವನ ಶೇಷ ಜೀವನ ಕಾಲದಲ್ಲಿ ಪಡಬೇಕಾಗಿ ಬಂದ ಕಷ್ಟಗಳು, ವಿಪತ್ತುಗಳು ಕಲ್ಪನ್ನೂ ಕರಗಿಸುವ ಶಕ್ತಿಯುಳ್ಳವುಗಳು. ಮುಸಲ್ಮಾನ ಸೈನ್ಯವು ೧೪ ಸಾವಿರ ವೀರ ರಜಪೂತರ ಸೇನೆಯನ್ನು ನಾಶಮಾಡಿತ್ತು. ಆದರೆ, ಅವರಿಗೂ ತಮ್ಮ ಸೈನಿಕರಲ್ಲಿ ೫೦ ಸಾವಿರವನ್ನು ಹಳದೀ ಘಾಟಿಗೆ ಬಲಿದಾನವೀಯಬೇಕಾಗಿ ಬಂತು. ರಜಪುತಾನದ ಇತಿಹಾಸದಲ್ಲಿ ಇದೊಂದು ಭಯಾನಕ ಸಂಗ್ರಾಮವಾಯಿತು. ಮಹಾರಾಣನು ಘೋರಾರಣ್ಯದಲ್ಲಿ ವಾಸಿಸುವ ನಿಶ್ಚಯ ಮಾಡಿದನು. ದಿನಕ್ಕೊಂದೆಡೆಯಲ್ಲಿದ್ದು ಬಾಳನ್ನು ಸಾಗಿಸುವ ನಿರ್ಧಾರಕ್ಕೆ ಬಂದನು. ಆ ಸಮದಲ್ಲಿ ಭಿಕ್ಷುರ ಸ್ವಾಮಿ ಭಕ್ತಿಯ ಪರಿಚಯವಾಯಿತು. ಮುಸಲ್ಮಾನರೂ ಘಾಯಿಯಂತೆ ಅವನನ್ನು ಹಿಂಬಾಲಿಸುತ್ತಿದ್ದರು.

ಅಕಬರನು ದಿಲ್ಲಿಯಿಂದ ಹೊಸ ಸೇನೆಯನ್ನು ಕಳಿಸಿದನು. ಮಹಾರಾಣನನ್ನು ಕೈಹಿಡುವಾದುವ ಮುಸಲ್ಮಾನರ ಇರಾಧೆಯು ಈಡೇರಲಿಲ್ಲ. ಬಿಲ್ಲನು ಮರದ ಎಲೆಯ ಮರೆಯಲ್ಲಿ, ಮೊಟರಿಗಳೆಡೆಯಲ್ಲಿ, ಪೊದರುಗಳಲ್ಲಿ ಅಡಗಿದ್ದು ರಾಣಾನನ್ನು ರಕ್ಷಿಸುವ ಹೊರೆ ಹೊತ್ತರು. ಒಂದುದಿನ ರಾಣನ ಮಗಳು ರೊಟ್ಟಿ ತಿನ್ನುತಿದ್ದಾಗ ಕಾಡುಬೆಕ್ಕು ಅದನ್ನೆತ್ತಿಹೋಯಿತು. ಮಗುವಿನ ಕರುಣಾ ಪೂರ್ಣ ರೋದನವನ್ನು ಕೇಳಿ ಮಹಾರಾಣನ ಹೃದಯ ಕರಗಿಹೋಯಿತು. ಆತನನ್ನು ಮೃತ್ಯುವೂ ವಶಪಡಿಸಿಕೊಳ್ಳಲು ಅಂಜಿತ್ತು; ಆದರೆ ಮಗಳ ಆಕ್ರಂದನಕ್ಕೆ ರಾಣನು ಸೋತನು. ಸಾಮ್ರಾಟ ಅಕಬರನಿಗೆ ಶರಣು ಹೋಗುವ ನಿರ್ಧಾರವಾಯಿತು. ಕೆಲವೊಂದು ಇತಿಹಾಸಕಾರರು ಈ ಘಟನೆಯು, ಅಬುಲ್ ಫಜಲನ ಸ್ವಕಪೋಲಕಲ್ಪಿತವೆನ್ನುತ್ತಾರೆ.

ಅಕಬರನಿಗೆ ರಾಣಾನ ಪತ್ರವನ್ನು ಓದಿ ಆದ ಸಂತೋಷಕ್ಕೆ ಪಾರವೇ ಇರಲಿಲ್ಲ. ಹನ್ನೆರಡು ಲಕ್ಷ ಪ್ರಬಲ ಸೇನೆಯಿಂದ ನಡೆಯದ ಕಾರ್ಯವು ಇದೀಗ ಅನಾಯಾಸವಾಗಿ ಈಡೇರುವ ಸುದಿನವನ್ನಿದಿರುನೋಡುತಿದ್ದ. ಅಕಬರನ ಅಸ್ಥಾನದವನ್ನದ ಬಿಕಾನೀರನ ಮಹಾರಾಜನ ಸಹೋದರ ಪೃಥ್ವೀಸಿಂಹನಿಗೆ ಇದು ಸರಿಬರಲಿಲ್ಲ. ಅವನು ರಜಪೂತ ಮಾನಮರ್ಯಾದೆಯು ಸಂಪೂರ್ಣ ಮಾಯವಾಗಬಾರದೆಂದು ಮಹಾರಾಣನಿಗೊಂದು ಪತ್ರಬರೆದನು ಆ ಪತ್ರವನ್ನು ಕಂಡು ರಾಣನು ಅಕಬರನಿಗೆ ಆತ್ಮಸಮರ್ಪಣ ಮಾಡುವ ತನ್ನ ನಿಶ್ಚಯವನ್ನು ಬದಲಿಸಿದನು ಆದರೂ, ಅರಾವಲಿಬೆಟ್ಟಗಳು ಸುರಕ್ಷಿತವಲ್ಲವೆಂದು ತಿಳಿದು ಸಿಂಧೂನದಿಯ ಕಿನಾರೆಯಲ್ಲಿ ಅರಣ್ಯವಾಸಿಯಾಗಲು ಮನದಂದನು.

ಅವನು ಮೇವಾಡವನ್ನು ತ್ಯಜಿಸಿ ಸಿಂಧುವಿನತ್ತ ನಡೆಯ ತಿದ್ದನು. ಮೇವಾಡದ ಪುರಾತನ ಪ್ರಧಾನ ಮಂತ್ರಿ ಭಾಮಾಶಾಹನು ಅವನ ಸೇವೆಯಲ್ಲಿ ಉಪಸ್ಥಿತನಿದ್ದನು. ತನ್ನ ಸಕಲೈಶ್ವರ್ಯವನ್ನು ರಾಣನ ಮುಂದಿಟ್ಟು ಮೇವಾಡದ ಸ್ವಾತಂತ್ರ್ಯಕ್ಕಾಗಿ ಇನ್ನೊಂದು ಪ್ರಯತ್ನ ಮಾಡುವಂತೆ ಕೇಳಿಕೊಂಡನು. ಅಲ್ಲಿ ೨೫ ಸಾವಿರ ಸೈನಿಕರನ್ನು ೧೧ ವರ್ಷಗಳ ಕಾಲ ಸಾಕಲು ಸಾಕಾಗುವಷ್ಟು ಧನ ವಿತ್ತಂತೆ! ಪುನಃ ಸೈನ್ಯ ಸಂಗ್ರಹಕ್ಕೆ ಮೊದಲಾಯಿತು ಮಹಾರಾಣನು ನಿರಾಶನಾಗಿ ಮೇವಾಡವನ್ನು ಬಿಟ್ಟು ಓಡಿದ್ದನೆಂದು ಮುಸಲ್ಮಾನರು ತಿಳಿದಿದ್ದರು. ಆದುದರಿಂದ ಅವರಲ್ಲಿ ಯಾವ ಸಂದೇಹಕ್ಕೂ ಆಸ್ಪದವಿರಲಿಲ್ಲ. ಆ ಸಂದರ್ಭದಲ್ಲಿ ಆಶ್ಚರ್ಯಕರವಾಗಿ ಮಹಾರಾಣನವನ್ನು ಆಕ್ರಮಿಸಿ ಅಜಮೀರ ಮತ್ತು ಕಮಲಮೀರದ ಕೋಟೆಗಳನ್ನು ವಶಪಡಿಸಿಕೊಂಡನು. ಅಂತ್ಯದಲ್ಲಿ ೩೨ ಕೋಟೆಗಳು ರಜಪೂತರ ಸ್ವಾಧೀನಕ್ಕೆ ಬಂದುವು.

ಅದರೆ ತಮ್ಮ ಎಯಾಸ್ವಪ್ನವು ಸತ್ಯವಾಗುವುದನ್ನು ಕಾಣುವುದವರಿಗಸಾಧ್ಯವಾಯಿತು ಚಿತ್ತೂರನ್ನು ಆಕ್ರಮಿಸುವ ಸಿದ್ಧತೆ ನಡೆಯಲಿತ್ತು; ಆಗ, ಮಹಾ ಬೇನೆಯೊಂದು ಕಾಣಿಸಿಕೊಂಡ, ರಾಣನ ತೇಜಸ್ವೀ ಜೀವನದ ಅಂತ್ಯವಾಯಿತು. ರಜಪೂತರ ಕಲ್ಪನಾ ಸಾಮ್ರಾಜ್ಯವು ಸ್ವೈರವಾಗಿ ವಿಸರ್ಜಿಸಲ್ಪಟ್ಟಿತು. ಸ್ವದೇಶಾಭಿಮಾನಿಯ ಸಾಕಾರ ಮೂರ್ತಿಯು ಮುಂದಿನ ಘಟನೆಯಲ್ಲಿ ಅನ್ಯ ರಾಜ್ಯಗಳ ಸಂಪೂರ್ಣ ಸ್ವಾಧೀನತೆಗೆ ಆಸ್ಪದ ಕೊಡಲಿತು.

(ಸಾಧ್ಯಂ)

—ಎಸ್. ಗೋಪಿಚಂದ ರಾವ್,
ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹೆಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು

		ಸಿರಿಯ ರೇವಣಾತಿ.
24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK, LTD. MULKI

ನಮ್ಮ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನು ವಿಜ್ಞಾನವನ್ನೂ ಸಮರಸವಾಗಿ ಬೆಳೆಯಿಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉದ್ಗ್ರಂಥ ಬರೆದವರು. ಜಾಕ್ಸರ ಜೇಮ್ಸ್ ಬಿ ಕೊನೇಂಟ್ ಅನುವಾದಕರು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೧೪೦ ಬೆಲೆ: ರೂ. ೧.೫೦

ನಡುಹಗಲಿನ ಕಗ್ಗತ್ತಲೆ

ಇದೊಂದು ರಶಿಯನ್ ರೋಮಾಂಚಕ ಕಾದಂಬರಿ ನಾಡಿದರೆ ಅಪರಾಧ ನೆಗಳಾಗಿ ವಿಕಾಂತವಾಸಕ್ಕೆ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಾತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸೆರೆಯಾಳು ಸಂತಕರು ಕರೆದೊಯ್ಯುವ ಸರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ. ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯ ಕನ್ನಡವನ್ನು ಅನುವಾದಿಸಿದವರು ಕು. ಶಿ. ಹರಿದಾಸ ಭಟ್ಟರು. ಪುಟ: ೨೦೬ ಬೆಲೆ ರೂ ೨.೫೦.

ಶಿಕ್ಷಣದ ಧ್ಯೇಯಗಳು

ಪ್ರಸಿದ್ಧ ಅತ್ಯಂತ ಮೇಧಾವಿ ತತ್ತ್ವಜ್ಞಾನಿ ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಅವರ ಮಹತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ ಅನುವಾದಕರು: ಕೆ. ಬಿ ರಾಮಕೃಷ್ಣರಾಯ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ ಪುಟ: ೨೫೦. ಬೆಲೆ ರೂ ೨.೫೫

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ. ಪ್ರಜಾತಂತ್ರಾತ್ಮಕ ಸರ್ಕಾರ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ನಿಕಾಸವು ಹೇಗೆಂಬುದನ್ನು ವಿಮರ್ಶಿಸುವ ಅಪೂರ್ವ ಗ್ರಂಥ. ಅನುವಾದಕ: ಕು. ಶಿ. ಹರಿದಾಸ ಭಟ್ಟ. ಪುಟ. ೨೫೦. ಬೆಲೆ: ರೂ. ೨

ಹಿರೋಶಿಮಾದಿಂದ ಜಿನೇವಾ

ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಕಳಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಭತ್ತು ಪುಟದ ಪುಸ್ತಕದಲ್ಲಿ ಬರುವ ವಿವರವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರಯುತವಾಗಿ ವರ್ಣಿಸಲಾಗಿದೆ. ಬರೆದವರು: ಯು. ರಾಘವೇಂದ್ರಾಚಾರ್ಯ. ಪುಟ: ೯೦. ಬೆಲೆ. ರೂ. ೧.೫೦

ನಿತಿಯದ ಸಂಪತ್ತು

ಏಶಿಯದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿಮರ್ಶೆ, ಒಂದು ಸ್ವತಂತ್ರ ರಚನೆ. ಬರೆದವರು: ಕು. ಶಿ. ಹರಿದಾಸ ಭಟ್ಟ ವಿ. ಸೀತಾರಾಮಯ್ಯ ನವರ ಮುನ್ನುಡಿ ಇದೆ. ಪುಟ. ೧೫೦. ಬೆಲೆ: ರೂ. ೨.

ಘಂಟೆಮಾರಾ

ಇಟ್ಟಣಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ ಫಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅವನ್ನು ವಿರೋಧಿಸಿ ನಿಂತ ಹೃದಯಂಗಮ ಕಥೆ ಅನುವಾದಕರು: ಕು. ಶಿ. ಹರಿದಾಸ ಭಟ್ಟ. ಪುಟ: ೨೦೦. ಬೆಲೆ. ರೂ. ೨.

ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ.
(ನವಯುಗ ಪ್ರೆಸ್)

ಅಣು ಸ್ಫೋಟನ

(೧ನೇ ಪುಟದಿಂದ)

ತಹ ಒಡದೇಶದಲ್ಲಿ ಹಾಲೇ ವಿರಳವಾಗಿರುವುದರಿಂದ ಜನಸಾಮಾನ್ಯರು ಹಾಲಿನ ಮೂಲಕ ತಮ್ಮ ದೇಹ ಪೋಷಣೆಗೋಸುಗ ಕಾಲ್ಶಿಯಮನ್ನು ಒದಗಿಸಿಕೊಳ್ಳುವುದಸಾಧ್ಯವಾದ ಕಾರ್ಯ. ಆದುದರಿಂದ ಅನಿವಾರ್ಯವಾಗಿ ಸಸ್ಯಾಹಾರದ ಮೂಲಕವಾಗಿಯೇ ಕೇಲ್ಶಿಯಮನ್ನು ನಷ್ಟಮಾಡಬೇಕಾಗುತ್ತದೆ. ಆಗ ತಾನಾಗಿಯೇ ಸ್ಟ್ರೋಂಟಿಯಂ-೯೦ ಕೇಲ್ಶಿಯಮಿನ ಜೊತೆಗೆ ಶರೀರವನ್ನು ಸೇರಿ ಅಲ್ಲಿ ವೈಕುಲ್ಯವನ್ನುಂಟುಮಾಡುತ್ತದೆ. ಅಮೆರಿಕಾ, ರಶ್ಯಾ, ಬ್ರಿಟನ್ ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜನರೆಲ್ಲರೂ ತಮಗೆ ಅಗತ್ಯವಿರುವ ಕೇಲ್ಶಿಯಮಿನ ಐದರಲ್ಲಿ ನಾಲ್ಕು ಅಂಶವನ್ನು ಹಾಲಿನಿಂದಲೇ ಪಡೆಯುತ್ತಾರೆ. ಆದುದರಿಂದ ಸಸ್ಯಾಹಾರವನ್ನೇ ಅವಲಂಬಿಸಿರುವ ಪ್ರದೇಶಗಳಲ್ಲಿ ಹಾಲನ್ನು ನಂಬಿರುವ ಪ್ರದೇಶಗಳಿಗಿಂತ ಹತ್ತರಷ್ಟು ದುಷ್ಪರಿಣಾಮವು ಅಣ್ವಸ್ತ್ರಗಳ ಸ್ಫೋಟನದ ಫಲವಾಗಿ ಉಂಟಾಗಬಹುದು. ಹಾಲು ಸೇವಿಸುವ ಕಡೆಗಳಲ್ಲಿ ಹಾಲಿಗೂ ಮನುಷ್ಯನಿಗೂ ಮಧ್ಯದಲ್ಲಿ ದನವೆಂಬ ಅಡ್ಡಗೋಡೆಯಿದ್ದು ಅದು ಅಣುಚೂರ್ಣದ ದುಷ್ಪರಿಣಾಮಗಳಿದ್ದರೆ, ಅದಕ್ಕೆ ತಾನೇ ಬಲಿಯಾಗಿ ಮನುಷ್ಯನನ್ನು ರಕ್ಷಿಸುತ್ತದೆ. ಹಾಲಿನ ಉತ್ಪಾದನೆಯಲ್ಲಿ ಇಲ್ಲವೋ ಅಲ್ಲೆಲ್ಲಾ ಸ್ಟ್ರಾಂಟಿಯಂ-೯೦ ತನ್ನ ಹಾವಳಿಯನ್ನು ನಡೆಸಿಯೇ ತೀರುತ್ತದೆ.

ಡಾ. ಬಾನೋಳ್ಳರು ಮಾತಾಡುತ್ತ ಅಣ್ವಸ್ತ್ರಗಳ ಪ್ರಾಯೋಗಿಕ ಸ್ಫೋಟನಗಳು ನಿರಂತರವಾಗಿ ಮುಂದುವರಿದದ್ದೇ ಆದರೆ, ಜಗತ್ತಿನ ಪ್ರಜಾಸಂಖ್ಯೆಯ ಮೇಲೆ ವಿಪರೀತ ಪರಿಣಾಮಗಳನ್ನು ಮಾಡುವುದು ತಪ್ಪದೆಂದರು. ಸ್ಥಳೀಯ ಸ್ಫೋಟನಗಳಿಂದ ಕೂಡಲೇ ನಾಶವಾಗುವ ಗುಂಪೊಂದು ದೊಡ್ಡ ಪ್ರಮಾಣದ ಅಣ್ವಸ್ತ್ರಗಳ ಸ್ಫೋಟನದ ಪರಿಣಾಮವಾಗಿ ಜಗತ್ತಿನಲ್ಲೆಲ್ಲಾ ಪಸರಿಸುವ ಅಣುಚೂರ್ಣದ ದೆಸೆಯಿಂದ ಹಾವಳಿಗೊಳ್ಳುವ ಗುಂಪು ಇನ್ನೊಂದು. ಅಣುಚೂರ್ಣದ ಜಗದ್ವ್ಯಾಪಕತ್ವವು ಗಾಳಿಯ ವೇಗ, ಸಾಂದ್ರತೆ ಮಳೆ ಮತ್ತಿತರ ಹವಾಗುಣ ಸಂಬಂಧಿ ವಿಷಯಗಳನ್ನು ಹೊಂದಿಕೊಂಡಿದೆ. ಆದುದರಿಂದ ಅಣುಚೂರ್ಣವು ಜಗತ್ತಿನ ಒಂದೊಂದೆಡೆಯಲ್ಲಿ ಒಂದೊಂದು ಪ್ರಮಾಣದಲ್ಲಿ ಬೀಳಬಹುದು. ಬುದ್ಧಿವಂತರೊಬ್ಬರ ಲೆಖ್ಖದ ಪ್ರಕಾರ ಇಷ್ಟರವತೆಗೆ ನಡೆಸಲಾದ ಅಣ್ವಸ್ತ್ರ ಪ್ರಾಯೋಗಿಕ ಸ್ಫೋಟನಗಳ ಪರಿಣಾಮವಾಗಿ ೧೦ ಲಕ್ಷ ಜನರಿಗೆ ಲ್ಯುಕೇಮಿಯಾ ಮತ್ತಿತರ ವ್ರಣರೋಗಗಳೂ ಬೇರೆ ಸುಮಾರು ೨ ಲಕ್ಷ ಮಕ್ಕಳಲ್ಲಿ ಬುದ್ಧಿ ವೈಕಲ್ಯವೂ ಮುಂದಿನೊಂದು ತಲೆಮಾರಿನಲ್ಲುಂಟಾಗಬಹುದು. ಇನ್ನೂ ಒಂದು ಬಗೆಯ ಅಪಾಯವಿದ್ದು ಅದು ತಲೆಮಾರುಗಳ ವರೆಗೆ ಕಾದುಕುಳಿತುಕೊಳ್ಳದೆ ತಕ್ಷಣ ಅಪಾಯವನ್ನು ತಂದೊಡ್ಡುತ್ತದೆ. ಅದೇನೆಂದರೆ ಸ್ಟ್ರೋಂಟಿಯಂ-೯೦ ಎಲುಬುಗಳಲ್ಲಿ ಸೇರಿದೆಡೆಗಳಲ್ಲಿ ಏಳುವ ವ್ರಣ ಎಲುಬಿನ ಆರ್ಬುದ ರೋಗ, ಅಥವಾ ಎಲುಬಿನ ಕ್ಯಾನ್ಸರ್ ಎಂದು ಕರೆಯಲ್ಪಡುತ್ತದೆ. ಹಾಲಿನ ಮೂಲಕ ಸಹ ಸ್ಟ್ರೋಂಟಿಯಂ-೯೦ ಮನುಷ್ಯ ದೇಹವನ್ನು ಪ್ರವೇಶಿಸುವುದಶಕ್ಯವಲ್ಲವಾದುದರಿಂದ ಹಾಲನ್ನು ಸೇವಿಸುವ ಮಕ್ಕಳಿಗೆ ಸಹ ಗಂಡಾಂತರ ಪ್ರಾಪ್ತವಾಗಬಹುದು. ಮುಖ್ಯವಾಗಿ ಅವರಲ್ಲಿ ಲ್ಯುಕೇಮಿಯಾ ರೋಗ ಕಾಣಿಸಿಕೊಳ್ಳಬಹುದು ಇದರರ್ಥವೇನೆಂದರೆ, ಯುರೋಪು ಮತ್ತು ಪೆರಿಕಾಗಳ ದೇಶಗಳು, ಏಶ್ಯಾ ರಾಷ್ಟ್ರಗಳಷ್ಟಲ್ಲವಾದರೂ ಅದರ ಹತ್ತರಲ್ಲೊಂದು ಪಾಲಾದರೂ ಅಪಾಯಕ್ಕೆ ಗುರಿಯಾಗುತ್ತವೆ. ಏಶ್ಯಾ ದೇಶಗಳು ಅದರಲ್ಲೂ ಸಸ್ಯಾಹಾರಿ ರಾಷ್ಟ್ರವಾದ ಭಾರತಕ್ಕೆ ಈ ಅಪಾಯವು ವಿಶೇಷವಾಗಿ ತಗಲುವುದು ಆಶ್ಚರ್ಯವಲ್ಲ; ಮತ್ತು ಅಂತಹ ದಿನಗಳೂ ಬಹಳ ದೂರವಿಲ್ಲ.

ಶಾಂತಿ ಸಮ್ಮೇಳನ

ವಿಶ್ವಶಾಂತಿಯನ್ನುಳಿಸಲೇ ಬೇಕು- ಜಗತ್ತಿಗೆ ಕೊಲಂಬೋ ಅಧಿವೇಶನದ ಕಳಕಳಿಯ ಕರೆ

- ಬೀಜಾಣು ಪರೀಕ್ಷಾ ಪ್ರಯೋಗಗಳನ್ನು ಮುಂದುವರಿಸುವುದರಿಂದ ಉದ್ಭವಿಸುವ ಅಪಾಯಗಳ ಬಗ್ಗೆ ಪ್ರಸಿದ್ಧರಾದ ಗಣ್ಯ ವಿಜ್ಞಾನಿಗಳು ಪ್ರಪಂಚವನ್ನು ಎಚ್ಚರಿಸಿದ್ದಾರೆ- ಸರಕಾರಗಳೂ, ಶಾಸನ ಸಭೆಗಳೂ, ಅನೇಕ ದೇಶಗಳಲ್ಲಿರುವ ಬಗೆಬಗೆಯ ಮಹಾ ಸಂಘಟನೆಗಳೂ, ಮತ್ತು ನೈತಿಕ, ಧಾರ್ಮಿಕ ನಾಯಕರೂ, ಈ ಪರೀಕ್ಷಾ ಪ್ರಯೋಗಗಳ ಕೊನೆಗಾಣಿಸುವಿಕೆಯನ್ನ ಬೇಡಿದ್ದಾರೆ.

"ವಿಶ್ವಶಾಂತಿ ಸಮಿತಿಯು, ಬೀಜಾಣು ಪರೀಕ್ಷಾ ಪ್ರಯೋಗ ವಿರಾಮದ ಸಲುವಾಗಿ ಪ್ರಪಂಚ ವ್ಯಾಪ್ತಿಯ ಚಳವಳಿಯನ್ನು ಈಗಾಗಲೇ ಪ್ರಾರಂಭಿಸಿದ್ದು, ಜನಾಭಿಪ್ರಾಯದ ಈ ಮಹಾ ಚಳವಳಿಯಲ್ಲಿ, ಎಲ್ಲಾ ಶಾಂತಿ ಶಕ್ತಿಗಳ ಮತ್ತು ಎಲ್ಲಾ ಜನತೆಗಳ ಸಮಾನ ದೃಢಸಂಕಲ್ಪದ, ಪ್ರವರ್ಧಮಾನವಾಗುತ್ತಿರುವ ಅಭಿವ್ಯಕ್ತಿಯನ್ನು ಕಾಣುತ್ತದೆ.

"ಪ್ರಸಂಜಾಭಿಪ್ರಾಯದ ಈ ಶಕ್ತಿಯುತ ಅಭಿವ್ಯಕ್ತಿಗಳದ್ದೂ ಕೂಡ, ಪರೀಕ್ಷಾ ಪ್ರಯೋಗ ಸ್ಫೋಟನಗಳು ಇನ್ನೂ ವಾಯು, ನೆಲ ಮತ್ತು ಜಲಗಳನ್ನು ಕಲುಷಿತಗೊಳಿಸುತ್ತಲೇ ಮುಂದುವರಿಯುತ್ತಿವೆ ಮತ್ತು ಎಲ್ಲ ಮಾನವ ಕೋಟಿಯ ಭವಿಷ್ಯತ್ತಿಗೆ ಪ್ರಮಾದಕರವಾಗಿ ಮುಂದುವರಿಯುತ್ತಿವೆ. ಅವು ಈಗ ಮುಂದುವರಿಯುತ್ತಿರುವ ಶಸ್ತ್ರಾಸ್ತ್ರಗಳ ಸ್ಪೈಪೋಟಿಯ ಉನ್ನತ ದೆಸೆಯ ಪ್ರದರ್ಶನವಾಗಿವೆ ಮತ್ತು ಒಂದು ಪರಮಾಣು ಯುದ್ಧದ ಅಂತಿಮ ಭಯೋತ್ಪಾತದಲ್ಲಿ ಮಾತ್ರವೇ ಅದು ಪರಿಣಾಮತಃ ಕೊನೆಗಾಣಬಲ್ಲುದು.

"ಸಂಬಂಧಪಟ್ಟ ಸರಕಾರಗಳು ತಕ್ಷಣವೇ ಎಲ್ಲಾ ಪರೀಕ್ಷಾ ಸ್ಫೋಟನೆಗಳ ಬಗ್ಗೆಯೂ ಕಾರ್ಯವಿರಾಮವನ್ನು ಪ್ರಕಟಿಸಬೇಕು ಮತ್ತು ಇಂತಹ ಎಲ್ಲಾ ಪ್ರಯೋಗ ಪರೀಕ್ಷೆಗಳ ಬಹಿಷ್ಕಾರವನ್ನು ಕುರಿತು ಒಂದು ಒಡಬಂಬಡಿಕೆಯನ್ನು ಮಾಡಿಕೊಳ್ಳಲು ಸಂಧಾನಗಳ ಗತಿವೃದ್ಧಿ ಮಾಡಬೇಕು-ಎಂಬುದಾಗಿ ನಾವು ಒತ್ತಾಯದ ಬೇಡಿಕೆಯನ್ನು ಮಂಡಿಸುತ್ತೇವೆ.

"ಪರೀಕ್ಷಾ ಪ್ರಯೋಗಗಳನ್ನು ಸೀಮಿತಗೊಳಿಸುವುದಕ್ಕಾಗಿಯೂ ಅಥವ ದಾಖಲೆಪಡಿಸುವುದಕ್ಕಾಗಿಯೂ ಮಾಡಲ್ಪಡುವ ಪ್ರಸ್ತಾಪಗಳು ಪ್ರಯೋಗ ಪರೀಕ್ಷೆಗಳ ಕೊನೆಗಾಣಿಸುವಿಕೆಗೆ ಹಾದಿ ತೆಗೆಯುವುದಿಲ್ಲವಾದ-ದರಿಂದ, ಈ ಸಮಸ್ಯೆಗೆ ಯಾವ ಪರಿಹಾರವನ್ನು ನೀಡವು.

"ಇದಕ್ಕೆ ವ್ಯತಿರಿಕ್ತವಾಗಿ ಪರೀಕ್ಷಾ ಪ್ರಯೋಗಗಳನ್ನು ನಿಲ್ಲಿಸಲು ಮಾಡಿಕೊಳ್ಳುವ ಒಡಂಬಡಿಕೆಯು ಭರವಸೆಯನ್ನು ಮಾಡಿಸುವುದು ಉದ್ರಿಕ್ತತೆಯನ್ನು ತಗ್ಗಿಸಿ, ಅಂತರ ರಾಷ್ಟ್ರೀಯ ಪರಿಸ್ಥಿತಿಯನ್ನು ಸುಧಾರಿಸುವುದು ಮತ್ತು ತನ್ಮೂಲಕ ಉಭಯತಃ, ಸಾಮುದಾಯಿಕವಿನಾಶದ ಈ ಅಮಾನುಷಿಕ ಅಸ್ತ್ರಗಳ ಸಂಪೂರ್ಣ ನಿಷೇಧದ ಸಲುವಾಗಿಯೂ ಮತ್ತು ಸಾಧಾರಣ (ಸಾರ್ವತ್ರಿಕ) ನಿರಾಯುಧೀಕರಣದ ಸಲುವಾಗಿಯೂ,— ಮಾರ್ಗವನ್ನು ತೆರೆದಿಡುವುದು.

ಮನುಷ್ಯನಿಗೆ ಪವಿತ್ರವಾದುದೆಂದು ಹೇಳಲಾಗುವ ಎಲ್ಲದರ ಹೆಸರಿನಲ್ಲಿಯೂ- ಇಂತಹ ಪರೀಕ್ಷಾ ಪ್ರಯೋಗಗಳನ್ನು ತಕ್ಷಣವೇ ಕೊನೆಗಾಣಿಸುವುದಕ್ಕೆ ಅನುಕೂಲವಾದ ಕಾರ್ಯಾಚರಣೆಯನ್ನು ಮಾಡಬೇಕೆಂದು ಪ್ರಪಂಚದ ಎಲ್ಲ ಸರಕಾರಗಳಿಗೂ ನಾವು ಮನವಿ ಮಾಡಿಕೊಳ್ಳುತ್ತೇವೆ."

ಲೆಕ್ಕವಿಲ್ಲದಷ್ಟು ದಶಲಕ್ಷ ಗಟ್ಟಲೆ ಸ್ತ್ರೀ-ಪುರುಷರು ಹೆಚ್ಚು ಹೆಚ್ಚಾಗಿ ಗಾಬರಿಗೊಂಡು ಭವಿಷ್ಯತ್ತಿನ ಕಡೆಗೆ ನೋಡುತ್ತಿದ್ದಾರೆ. ಮಾನವ ಕೋಟಿಯು ಯಾವ ಮಾರ್ಗವನ್ನು ಅನುಸರಿಸುತ್ತದೆ? ಎಲ್ಲ ದೇಶಗಳಲ್ಲಿಯೂ ಉನ್ನತಾಧಿಕಾರದ ಮೇಲಿರುವ ವಿಜ್ಞಾನಿಗಳು, ನಾಗರಿಕರಾಗಿ ತಮ್ಮ ಜವಾಬುದಾರಿಯನ್ನು ಮನಗಂಡು,-ಬೀಜಾಣು ಅಸ್ತ್ರ ಪರೀಕ್ಷಾ ಪ್ರಯೋಗಗಳು ಮುಂದುವರಿಯುತ್ತಿದ್ದರೆ ಇಂದಿನ ಮತ್ತು ಮುಂದಿನ ತಲೆಮಾರುಗಳನ್ನು ಭೀತಿಗೀಡು ಮಾಡುವ, ಲೆಕ್ಕವಿಲ್ಲದಷ್ಟು ದುರ್ಭಾಗ್ಯಗಳ ಕುರಿತು ಮಾನವಾಳಿಗೆ ಎಚ್ಚರಿಕೆಯ ನ್ನಿತ್ತಿದ್ದಾರೆ. ಈ ಪರೀಕ್ಷಾ ಪ್ರಯೋಗಗಳು ನಿಲ್ಲಬೇಕೆಂದು ಮಾನವ ಕೋಟಿಯ ಅಂತಶ್ಸಾಕ್ಷಿಯು ಬೇಡಿಕೆಯನ್ನು ಮಂಡಿಸುತ್ತದೆ. ಮಾನವ ಕೋಟಿಯ ಭವಿತವ್ಯದ ಸಲುವಾಗಿ ಚಿಂತಿಸುವವರೆಲ್ಲರ ಅಂತರಾತ್ಮದ ಮೇಲೆಯೂ, ಈ ಉದ್ದೇಶ ಸಾಧನೆಯ ಸಲುವಾಗಿ ಸಮಾನ ಪ್ರಯತ್ನದಲ್ಲಿ ಒಂದುಗೂಡಬೇಕಾದ, ಹೊಣೆಗಾರಿಕೆಯಿದೆ.

"ಎಲ್ಲ ಸಂಸ್ಥೆಗಳೊಡನೆಯೂ, ಚಳವಳಿಗಳೊಡನೆಯೂ, ಸಂಘಟನೆಗಳೊಡನೆಯೂ, ಸಂಘಗಳೊಡನೆಯೂ, ತಂಡಗಳೊಡನೆಯೂ ಮತ್ತು ವ್ಯಕ್ತಿಗಳೊಡನೆಯೂ,— ಪರಮಾಣು ಪರೀಕ್ಷಾ ಪ್ರಯೋಗ ಪರೀಕ್ಷೆಗಳನ್ನು ಕೊನೆಗಾಣಿಸಲು ಕೆಲಸಮಾಡುತ್ತಿರುವ ಈ ಎಲ್ಲ ಸಂಸ್ಥೆ-ವ್ಯಕ್ತಿಗಳೊಡನೆಯೂ ಕೂಡ- ತಕ್ಷಣವೇ ಸಂಪರ್ಕಗಳನ್ನು ಸ್ಥಾಪಿಸಲು ವಿಶ್ವಶಾಂತಿ ಸಮಿತಿಯು ಸಿದ್ಧವಾಗಿದೆ. ಕೆಲಸದ ವಿಧಾನಗಳಲ್ಲಿಯೂ, ಮಾರ್ಗಗಳಲ್ಲಿಯೂ ಮತ್ತು ರೂಪಗಳಲ್ಲಿಯೂ ಇರುವ ವ್ಯತ್ಯಾಸಗಳಾಗಲೀ, ಅಂತಾರಾಷ್ಟ್ರೀಯ ಘಟನೆಗಳ ಬಗ್ಗೆ ದೃಷ್ಟಿಸ್ಪೇಷದ ಅಥವಾ ವಿಮರ್ಶಾತ್ಮಕ ನಿರ್ಣಯದ ಭಿನ್ನ ವ್ಯತ್ಯಾಸಗಳಾಗಲೀ, ಈ ಸಮಾನ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಸಹಕಾರಕ್ಕೆ ಅಡ್ಡಿಯನ್ನುಂಟುಮಾಡಬಾರದು.

"ಮಾನವತೆಯನ್ನು ಸುರಕ್ಷಿತವಾಗಿ ಕಾಪಾಡುವ ಉನ್ನತ ಕರ್ತವ್ಯಕ್ಕೆ ಈ ಅಪತ್ಸಮಯದಲ್ಲಿ ತಮ್ಮ ಸೇವೆಯನ್ನು ಮೀಸಲಾಗಿಡುವವರನ್ನು ಮುಂಬರುವ ತಲೆಮಾರುಗಳವರು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳುವರು"

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂಗ ಬರೆದಿರುವ—
ವಿ॥ ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಪಿತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

Edited, Printed & Published by A. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೬ VOL.36 | 11—7—1957 | ಸಂಚಿಕೆ ೪೪ NO. 44

ಜನತೆಯ ಕಾಂಗ್ರೆಸ್ಸು

ಚೈತನ್ಯಶೀಲ ಆದರ್ಶ ಪವಿತ್ರ ನಿಸ್ವಾರ್ಥ ಸಂಸ್ಥೆಯಾಗಿ ಕಾಂಗ್ರೆಸ್ಸು ಬಾಳಿ ಬೆಳಗಲಿ.

ಕಳೆದ ಮಹಾ ಚುನಾವಣೆಯಲ್ಲಿ ಬಹುಮತಗಳಿಸಿ ಭಾರತದ ಹದಿಮೂರು ಪ್ರಾಂತಗಳಲ್ಲಿ ಕಾಂಗ್ರೆಸ್ ಸರಕಾರಗಳು ಸ್ಥಾಪಿತವಾಗಿವೆ. ಕೇಂದ್ರದಲ್ಲಿಯೂ ಕಾಂಗ್ರೆಸ್ಸೇ ಅಧಿಕಾರಾರೂಢವಾದ ವಿಷಯ ನಮಗೆಲ್ಲರಿಗೂ ತಿಳಿದದ್ದೇ. ಗಾಂಧಿಜಿ ಹಾಗೂ ಕಳೆದ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಒಲಾಬಲಗಳನ್ನು ತುಲನೆ ಮಾಡಿದಲ್ಲಿ, ಮೊನ್ನೆಯ ಚುನಾವಣೆಯಲ್ಲಿ ಕಾಂಗ್ರೆಸ್ಸು ಕೆಲಮಟ್ಟಿಗೆ ಶಕ್ತಿಗುಂದಿದೆಯೆಂಬುದು ಎಲ್ಲರೂ ಒಪ್ಪತಕ್ಕ ವಿಷಯ ಈ ಪರಾಭವಕ್ಕೆ ಮೂಲ ಕಾರಣ ಎಲ್ಲರಿಗೂ ತಿಳಿದದ್ದೇ—ಕಾಂಗ್ರೆಸ್ಸಿನಲ್ಲಿರುವ ಒಳ ಜಗಳ, ಒಡಕು, ಸ್ವಾರ್ಥಪರತೆ ಅಧಿಕಾರ ಲಾಲಸೆ. ಕೆಲಮಟ್ಟಿಗೆ ಇದನ್ನೊಪ್ಪಲೇ ಬೇಕಾಗಿದೆ. ರಾಷ್ಟ್ರದ ಬಂಧನದ ಬಿಡುಗಡೆಗೆ ಕಾರಣವಾದ ಕಾಂಗ್ರೆಸ್ಸು ಇಂತಹ ತಪ್ಪು ಹಾದಿಯನ್ನು ತುಳಿಯಬಾರದಿತ್ತು—ಹಲವರು ಹೇಳುವ ಹಿತವಾದ. ಇದನ್ನೊಪ್ಪುವ. ಆದರೂ ಅದನ್ನು ಮೀರಿ ಕೆಲವರು ಕಾಂಗ್ರೆಸ್ಸಿಗರು ತಪ್ಪು ವರ್ತನೆಗಿಳಿದಿದ್ದಾರೆ ಅದುದಾಯಿತು, ಮುಂಚೆ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ ಇನ್ನು ಮುಂದೆ ಕಾಂಗ್ರೆಸ್ ಸಂಸ್ಥೆ ಶಕ್ತಿಯುತವಾಗಿ ಮುಂದಿನ ಚುನಾವಣೆಯಲ್ಲಿ ಇಂದಿಗಿಂತಲೂ ಹೆಚ್ಚಿನ ವಿಜಯ ಗಳಿಸಿ ಅರಿಸಿ ಬರುವಂತೆ ಪ್ರಯತ್ನಿಸಿ ಯಶಸ್ವಿಯಾಗಬೇಕೆಂಬುದೇ ನಮ್ಮ ಆಕಾಂಕ್ಷೆ

"ಚುನಾವಣೆಯ ಮೊದಲು ಹಳ್ಳಿಗಳೆಡೆಗೆ ಕಣ್ಣೆತ್ತಿ ನೋಡದ ಕಾಂಗ್ರೆಸ್ಸಿಗರು ಚುನಾವಣೆ ಬಂದೊಡನೆಯೇ ಕಾರುಗಳಲ್ಲೋ, ಇನ್ನಿತರ ವಾಹನಗಳಲ್ಲೋ ಹಿಂಡುಹಿಂಡಾಗಿ ಹಳ್ಳಿಗಳಿಗೆ "ಮತ ಬೇಡಲು ಬರುತ್ತಾರೆ ಮತ ಸಿಕ್ಕಿ ಅರಿಸಿ ಹೋದ ಮೇಲೆ ಹಳ್ಳಿಯವರ ಸುಖ ದುಃಖಗಳ ಗೊಡವೆಯೇ ಅವರಿಗಿರುವುದಿಲ್ಲ"ವೆಂದು ಕೆಲವರು ದೂರಿದ್ದಾರೆ ಇದನ್ನೂ ಒಪ್ಪುವ "ಕಾಂಗ್ರೆಸು ಇಂದು ಶ್ರೀಮಂತರ ಸಂಸ್ಥೆಯಾಗಿ ಮೆರೆಯುತ್ತಿದೆ. ಬಡವರಿಗೆ ಅದರಲ್ಲಿ ಪ್ರವೇಶವಿಲ್ಲ"—ಇನ್ನೊಬ್ಬರ ಆರೋಪ. ಇದೂ ಕೆಲ ಮಟ್ಟಿಗೆ ಅಹುದ "ಕಾಂಗ್ರೆಸ್ಸಿನಲ್ಲಿಂದು ಅಧಿಕಾರ ಲಾಲಸಿ ವ್ಯಕ್ತಿಗಳ, ಸ್ವಾರ್ಥಿಗಳ ಉಪಟಳ ಜಾಸ್ತಿಯಾಗಿದೆ"—ಇನ್ನೊಂದು ಅಪಾನಸೆ ಇದಕ್ಕೂ ನಮ್ಮ ಒಪ್ಪಿಗೆ "ಜನಸೇವೆಯ ಸೋಗಿನಲ್ಲಿ ಸರಕಾರ ಹಣ ದೋಚುತ್ತಿದೆ"ಯೆಂದು ಇನ್ನೂ ಹಲವರು ದೂರಿದ್ದಾರೆ ಅದರೆ ಇದು ಮಾತ್ರ ಒಮ್ಮೆಲೇ ಒಪ್ಪಿ ಬಿಡತಕ್ಕ ವಿಷಯವಲ್ಲ ಇದರಲ್ಲಿ ವಿಚಾರಣೀಯವಾದ ಅಂಶವಿದೆ. ಅದನ್ನು ಮುಂದೆ ವಿಚಾರಿಸುವ.

ಅದಂತಿರಲಿ, ತಮ್ಮ ಒಳಜಗಳವನ್ನೂ ವೈಮನಸ್ಯವನ್ನೂ ಒತ್ತಟ್ಟಿಗಿರಿಸಿ, ಈಗ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಲು ಯತ್ನಿಸುವುದು ನಿಷ್ಠಾವಂತ ಕಾಂಗ್ರೆಸ್ಸಿಗರ ಆದ್ಯ ಕರ್ತವ್ಯ ಮೊದಲು, ಕಾಂಗ್ರೆಸ್ಸು ಸ್ಥಾಪಿತವಾದುದು ಯಾವ ಉದ್ದೇಶದಿಂದ ಎಂದು ತಿಳಿದುಕೊಳ್ಳುವ ಪರಕೀಯರ ಆಡಳಿತೆಯಲ್ಲಿ ಬೇಸತ್ತ ಭರತವಾತೆಯನ್ನು ಸ್ವತಂತ್ರಗೊಳಿಸಲೋಸುಗ, ಭರತ ಖಂಡದ ಜನತೆಗೆ ಯೋಗ್ಯ ಮಾರ್ಗದರ್ಶನ ಮಾಡುವ ಉದ್ದೇಶದಿಂದ, ದೇಶೋದ್ಧಾರದ ಗುರಿಯನ್ನಿರಿಸಿಕೊಂಡು ನಿಸ್ವಾರ್ಥತೆಯಿಂದ ತನ್ನಿಂದಾದಷ್ಟು ಶ್ರಮಿಸಲು ಈ ಸಂಸ್ಥೆ ಸ್ಥಾಪಿತವಾದದ್ದು, ಇಂತಹ ಮಹೋದ್ದೇಶಗಳನ್ನಿರಿಸಿಕೊಂಡು ಸ್ಥಾಪನೆಗೊಂಡಿದ ಪವಿತ್ರ ಕಾಂಗ್ರೆಸ್ ಸಂಸ್ಥೆಯನ್ನು ಕೆಲವೇ ಅಧಿಕಾರಲಾಲಸಿ ವ್ಯಕ್ತಿಗಳ ಪ್ರಭಾವಕ್ಕೊಳಪಡಿಸುವುದು ಎಷ್ಟಕ್ಕೂ ನಿಹಿತವಾಗಲಾರದು

ಕಾಂಗ್ರೆಸ್ಸಿನ ಸ್ಥಾಪನೆಗೆ ಹಾಗೂ ಅದರ ವೃದ್ಧಿಗೆ ಕಾರಣರಾದ ವ್ಯಕ್ತಿಗಳನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಈ ಸಂಸ್ಥೆಯ ಸ್ಥಾಪಕರು ಮಿ। ಎಲ್ಲನ್ ಹ್ಯೂಮರು ಆಂಗ್ಲ ಮಹನೀಯರಾಗಿದ್ದರೂ ತಮ್ಮವರ ದುರಾಚಾರಗಳನ್ನು ಅವರಿಂದ ಸಹಿಸಲಾಗಲಿಲ್ಲ ಭಾರತದ ದುಸ್ಥಿತಿಯನ್ನು ಕಂಡು ಮರುಗಿ, ನಿಸ್ವಾರ್ಥ ಮನೋಭಾವದಿಂದ ದಡಿಯಬಲ್ಲ ಸಂಸ್ಥೆಯನ್ನು ಸ್ಥಾಪಿಸಲೆತ್ನಿಸಿ ತನ್ನ ಕಾರ್ಯಸಾಧನೆಯಲ್ಲಿ ಯಶಸ್ವಿಯಾದರು ಹೀಗೆ ಕಾಂಗ್ರೆಸ್ ಸಂಸ್ಥೆಯ ಸ್ಥಾಪನೆಗೆ ಕಾರಣವಾದುದಾದರೂ ಅವರ ನಿಸ್ವಾರ್ಥತೆ

ಆ ವೇಳೆ ಗೋಖಲೆ, ಮೇಧಾ, ನೌರೋಜಿ ಮುಂತಾದವರು ತವ ಪ್ರಾಬಲ್ಯ ಧೋರಣೆಯಿಂದ ಅಧಿಕಾರ ವಾಹಿಯಾಗಿದ್ದ ಪರಕೀಯ ಸಾಮ್ರಾಜ್ಯವಾಹಿ ಸರಕಾರದ ಮೊಗವನ್ನು ಜನತೆಯೆಡೆಗೆ ತಿರುಗಿಸಿ, ಅವರ ಕಷ್ಟನಷ್ಟಗಳನ್ನರಿಯಲೆಂದೇ ಪ್ರಯತ್ನಪಟ್ಟರು ಇವರೆಲ್ಲವೂ ಭಾರತದ ಸ್ವಾತಂತ್ರ್ಯಾರ್ಥವಾಗಿಯೇ ತಮ್ಮ ಜೀವಿತದ ಕೊನೆಯುಸಿರಿನ ತನಕ ಸ್ವಾರ್ಥರಹಿತರಾಗಿ ಹೋರಾಡಿದವರು ಇಂದ ಆದರ್ಶ ಪುರುಷರ ಉದಾತ್ತ ಮೇಲ್ಪಂಕ್ತಿ ಕಾಂಗ್ರೆಸ್ ಸಂಸ್ಥೆಗಿದೆ ಮುಂದೆ ತಿಲಕರಂತೂ ಕಾಂಗ್ರೆಸ್ ಸಂಸ್ಥೆಯನ್ನು ತನ್ನ ಪ್ರಭಾವೀ ವರ್ಚಸ್ಸಿನಗೊಳಪಡಿಸಿಕೊಂಡು ಕಾಂಗ್ರೆಸ್ಸನ್ನು ಆದರ್ಶ ಸಂಸ್ಥೆಯಾಗಿ ಮಾರ್ಪಡಿಸುವ ಮಹೋದ್ಯೋಗದಲ್ಲಿ ತೊಡಗಿದ್ದರು ತಮ್ಮ ಅಸಾಮಾನ್ಯ ವ್ಯಕ್ತಿತ್ವದಿಂದ ಪರಕೀಯ ಸರಕಾರದ್ದು ಎದೆ ಝಲ್ಲೆನಿಸುವಂತೆ ಮಾಡಿದರು. ತಿಲಕರಲಾಲ ನೆಹರೂ, ದೇಶಬಂಧು ದಾಸರೂ, ರಾಜಾಜಿಯವರೂ ಕಾಂಗ್ರೆಸ್ಸಿನ ಪ್ರಭಾವಕ್ಕೊಳಗಾಗಿ ಆ ಸಂಸ್ಥೆಯನ್ನು ಸೇರಿ, ತಮಗೆ ಅಪಾರ ಧನವನ್ನು ಸುರಿಯುತ್ತಿದ್ದ ವಕೀಲಿಯನ್ನೇ ತೊರೆದು ಬಡತನವನ್ನಪ್ಪಿ ಸ್ವಾತಂತ್ರ್ಯಕ್ಕಾಗಿ ಹೆಣಗಾಡಿದರು. ದೇಶ ಪ್ರೇಮಿ "ಪಂಜಾಬದ ಕೇಸರಿ" ಲಾಲಾ ಲಜಪತರಾಯ್‌ರವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಮುಂಬಂಡರಾಗಿ, ರಾಷ್ಟ್ರಕ್ಕಾಗಿ ಆತ್ಮಾರ್ಪಣೆ ಮಾಡಲು ಹಿಂಜರಿಯಲಿಲ್ಲ! ಅವರಂತಹ ಮಹಾನುಭಾವರ ಶುಭಾಶೀರ್ವಾದವು ಸದಾ ಕಾಂಗ್ರೆಸ್ಸಿನ ಮೇಲೆ ಇದ್ದೇ ಇದೆ ಸರಕಾರದ ನೌಕರನಾಗಿ ಕೆಲಸ ಮಾಡೆನೆಂದು ಪ್ರತಿಜ್ಞೆ ಗೈದು ತನ್ನ ಘನ ಪದವಿಯನ್ನೇ ತೊರೆದ ವೀರ ನೇತಾಜಿ ಸುಭಾಸರಿಂದು ಅಗ್ರಗಣ್ಯ ದೇಶಪ್ರೇಮಿಗಳ ಸಾಲಿನಲ್ಲಿ ರಾರಾಜಿಸುತ್ತಿದ್ದಾರೆ ಭಾರತದ ಸ್ವಾತಂತ್ರ್ಯವನ್ನು ಕಣ್ಣಾರೆ ಕಂಡ ಪೂಜ್ಯಸಿತ. ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ಸಿನ ಮುಖಾಂತರವೇ ಭಾರತದ ಸ್ವಾತಂತ್ರ್ಯಕ್ಕೆ ಕಾರಣರಾದರು ಜವಾಹರಲಾಲ ರಾಜೇಂದ್ರ ಪ್ರಸಾದ್, ಸರದಾರ್ ಪಟೇಲರಂತಹ ಕರ್ತೃತ್ವಶಾಲೀ ಮಹನೀಯರು ಕಾಂಗ್ರೆಸ್ಸಿಗರಿಗೆ ಆದರ್ಶಪ್ರಾಯರಾದರು, ಕಾಂಗ್ರೆಸ್ಸಿನ ಉತ್ಕರ್ಷವೂ ಇವರಂತಹ ನಿಸ್ವಾರ್ಥಿಗಳಿಂದಲೇ ಆಯಿತು ಇಂದಿಗೂ ನೆಹರೂರವರು ಕಾಂಗ್ರೆಸ್ಸಿಗರಿಗೆ ಜನತಾ ಸಂಪರ್ಕದ ಬಗ್ಗೆ, ಜನಸೇವೆಯ ಬಗ್ಗೆ ತುಂಬಾ ಬೋಧಿಸುವುದು ಪತ್ರಿಕೆಗಳನ್ನೋದುವವರಿಗೆ ತಿಳಿಯದ ವಿಷಯವೇನಲ್ಲ.

ಮೇಲೆ ಹೇಳಲ್ಪಟ್ಟ ಮಹಾಪುರುಷರ ಆದರ್ಶ ಮೇಲ್ಪಂಕ್ತಿಯಿಂದಲೇ ಕಾಂಗ್ರೆಸ್ಸು ಇಂದಿನ ತನಕ ಉಳಿಯಿತೆಂದರೆ ತಪ್ಪೆನಿಸದು ಆದರೆ ಹಾಕಿಕೊಟ್ಟ ದಾರಿಯಲ್ಲೇ ಕಾಂಗ್ರೆಸ್ಸಿಗರು ಮುನ್ನಡೆದರೆ ಹಿಂದಿನಂತೆ ಇಂದಿಗೂ ಇನ್ನೂ ಮುಂದಕ್ಕೂ ಬಲಗೊಂಡಿದ ಕಾಂಗ್ರೆಸ್ಸು ಚೇತನಯುಕ್ತವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಮುನ್ನಡೆಯುತ್ತಿರುವಾಗ ಕಾಂಗ್ರೆಸ್ಸಿಗರ ಮನೋಭಾವವು ನಿಸ್ವಾರ್ಥತೆಯೆಡೆಗೂ ಜನಸೇವೆಯಡೆಗೂ ಒಲಿದಿರಲಿ!

ಕಾಂಗ್ರೆಸ್ಸಿಗರು ಆಗಾಗ ಹಳ್ಳಿಗಳೆಡೆಗೆ ಹೋಗಿ ಜನರೊಡನೆ ಬೆರೆತು, ಅವರ ಸುಖ ಕಷ್ಟಗಳಲ್ಲಿ ಭಾಗಿಯಾಗಿ ಅವರ ಸಂಕಟ ಸರಿಹಾರಕ್ಕೆ ತಮ್ಮಿಂದಾದಷ್ಟು ದುಡಿಯುವುದು ಅವಶ್ಯ. ಅಲ್ಲದೇ ಹಳ್ಳಿಗಳಲ್ಲಿ ತಮ್ಮ ಪವಿತ್ರ ತತ್ವಗಳನ್ನು ಬಿತ್ತರಿಸಿ ಹಳ್ಳಿಗರ ವನಸ್ಸನ್ನು ಈ ಧ್ಯೇಯಗಳೆಡೆಗೆ ಸೆಳೆದುಕೊಳ್ಳಬೇಕು. ಹಳ್ಳಿಗರು ಸದಾ ಉತ್ಸಾಹಿಗಳು, ಆದರೆ ತುಂಬಾ ಸಮಯ ಅವರಿಗೆ ಬಿಡುವಿರುತ್ತದೆ. ಅಂಥವರಿಗೆ ಬಾಸೂ ಮಾಡಿ ತೋರಿಸಿದ ನೂಲುವಿಕೆ

(ಉಳಿದ ಸುದ್ದಿ ನೋಡಿರಿ)

THE VIJAYA BANK, LTD.
Estd. 1931.
—x—
The Mysore Branch of our Bank was opened on 21—6—1957.
A Branch in Bangalore will be opened shortly.

ಇಸ್ಲಾಮೀ ಶಾಸನ

ಇಸ್ಲಾಮೀ ಆಳಿಕೆಯಲ್ಲಿ ಭಾರತೀಯ ವಿದ್ಯೆಗಳು ಅಳಿದು ಹೋಗಲಿಲ್ಲ— ಬದಲು ಬೆಳೆದು ಬಂದುವು!

ಮುಸಲ್ಮಾನ ಶಾಸಕರ ವಿದ್ಯಾಪ್ರೇಮವು ಪ್ರಸಿದ್ಧವಾಗಿತ್ತು. ಅವರು ವಿದ್ಯಾಭಿವೃದ್ಧಿಯ ಕಾರ್ಯದಲ್ಲಿ ತಮ್ಮ ಪೂರ್ವಜರಾದ ಹಿಂದೂ ರಾಜರ ಉದಾಹರಣೆಯನ್ನು ಸಫಲತಾ ಪೂರ್ವಕವಾಗಿ ಸ್ವೀಕರಿಸಿಕೊಂಡರು. ಪ್ರಾರಂಭ ಕಾಲದಲ್ಲಿ ವಿದ್ಯಾಪ್ರಚಾರದಲ್ಲಿ ಕೆಲವು ಧನಾಢ್ಯ ವ್ಯಕ್ತಿಗಳು ಹಾಗೂ ವಿದ್ವಾಂಸರು ಇವರ ಕೈವಾಡವು ವಿಶೇಷವಾಗಿತ್ತು. ವಿದ್ಯಾಪ್ರಚಾರದ ಕೇಂದ್ರವು ಮಸೀದಿಯಾಗಿದ್ದು, ಅಲ್ಲಿನ ಗುರುಗಳು ಶಿಷ್ಯಾಮ ಭಾವದಿಂದ ವಿದ್ಯಾರ್ಥಿಗಳಿಗೆ ಓದುಬರಹವನ್ನು ಕಲಿಸುತಿದ್ದರು. ಆ ವಾಠ ಶಾಲೆಗಳನ್ನು ಮಕತಬ್ ಎಂದು ಕರೆಯುತಿದ್ದರು. ಮಕತಬ್ ಎಂದರೆ ಬರೆಯುವ ಸ್ಥಾನವೆಂದರ್ಥ. ಇದೇ ರೀತಿಯಲ್ಲಿ ಮದ್ರಸಾ ಎಂಬ ಪದವೂ ಅರಬ್ಬಿ ಭಾಷೆಯ ದರ್ಸ್‌ಧಾತುವಿನಿಂದ ನಿಷ್ಪನ್ನವಾಯಿತು. ಮದ್ರಸಾ ಎಂದರೆ ವ್ಯಾಖ್ಯಾನ ಮಾಡುವ ಸ್ಥಳ. ಮಸೀದಿಗಳ ಮೂಲವಿಗಳು ಅಖಾಂದ ಪಂಡಿತರಾಗಿದ್ದು ಅವರು ವಿದ್ಯಾಜ್ಞಾನವೀಯುವುದನ್ನು ಪುಣ್ಯಕರವಾದ ಕಾರ್ಯವೆಂದು ತಿಳಿಯುತಿದ್ದರು ವಿಶೇಷವಾಗಿ ಈ ಮಕತಬ್‌ಗಳಲ್ಲಿ ಕುರಾನ್ ಎಂಬ ಮುಸ್ಲಿಮರ ಧರ್ಮಗ್ರಂಥದ ಪಾಠವು ನಡೆಯುತಿತ್ತು. ಅದನ್ನು ವಿದ್ಯಾರ್ಥಿಗಳು ಜೆನ್ನಾಗಿ ಕಲಿಯುತಿದ್ದರು. ಅವರ ದೈನಂದಿನ ಪ್ರಾರ್ಥನಾ ಕಾರ್ಯಕ್ರಮದಲ್ಲಿ ಅದು ಉಪಯೋಗವಾಗುತಿತ್ತು.

ಪ್ರಾರಂಭಿಕ ಶಿಕ್ಷಣವನ್ನು ಪೂರಯಿಸಿದಮೇಲೆ ಮಕತಬಗಳಲ್ಲಿ ಉಚ್ಚ ಶಿಕ್ಷಣವು ಈಯಲ್ಪಡುತಿತ್ತು. ವ್ಯಾಕರಣ ಗ್ರಂಥಗಳು ವಿಧಿವತ್ತಾಗಿ ಕಲಿಸಲ್ಪಡುತಿದ್ದುವಲ್ಲದೆ, ನ್ಯಾಯ, ಅಲಂಕಾರ ಮತ್ತು ಧರ್ಮಶಾಸ್ತ್ರಗಳಂತಹ ವಿಷಯಗಳು ಸಹ ಅದರಲ್ಲಿ ಸೇರಿಕೊಳ್ಳುತಿದ್ದುವು. ಭೂಗೋಳ ವಿಷಯವೂ ದೂರವಾಗಿರಲಿಲ್ಲ. ಜ್ಯಾಮಿತಿ ಹಾಗೂ ಜ್ಯೋತಿಷ ಶಾಸ್ತ್ರಗಳ ಅಭ್ಯಾಸವೂ ನಡೆಯುತಿತ್ತು. ಲಾಹೋರ, ಮುಲ್ತಾನ್, ದೆಹಲಿ, ಅಜಮೀರ, ಅಲಹಾಬಾದ, ಲಖನವು, ಮುರ್ಶಿದಾಬಾದ, ಬಿಜಾಪುರ ಮೊದಲಾದ ಸುಪ್ರಸಿದ್ಧ ಶಿಕ್ಷಣ ಕೇಂದ್ರಗಳಲ್ಲಿ ಜ್ಞಾನಪಿಪಾಸಾಯುಕ್ತರಾದ ವಿದ್ಯಾರ್ಥಿಗಳು ಕೆಲವು ವರ್ಷದ ವರೆಗೆ ಇದ್ದು ವಿದ್ಯಾಭ್ಯಾಸ ಹಾಗೂ ಪಾಂಡಿತ್ಯವನ್ನು ಸಂಪಾದಿಸುತಿದ್ದರು ಈ ವಿದ್ಯಾಲಯಗಳಲ್ಲಿ ಲೇಖನ ಕಲೆಯತ್ತ ವಿಶೇಷ ಗಮನವೀಯುತ್ತಿರಬೆ ಮಾಪಿಕ ಶಿಕ್ಷಣವೇ ಅಧಿಕ ಪ್ರಮಾಣದಲ್ಲಿ ಪ್ರಚಾರಕ್ಕೆ ಬಂದಿತ್ತು. ಗೋರಿ ಮಹಮ್ಮದನು ಅಜಮೀರವಲ್ಲಿ ಇಸ್ಲಾಮೀ ಧರ್ಮಶಾಸ್ತ್ರದ ಅಧ್ಯಯನಕ್ಕಾಗಿ ಮಸೀದಿ ಮತ್ತು ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿದನೆಂದು ಇತಿಹಾಸವಿದೆ.

ಗುಲಾಮಿ ವಂಶದ ಕುತಬುದ್ದೀನನು ಮಸೀದಿ ಮತ್ತು ಮಕತಬ್‌ಗಳ ಅಡಿಗಲ್ಲನ್ನು ಹಾಕಿದನು. ಅಲ್ಲದೆ ಅವುಗಳಿಗೆ ತಕ್ಕ ಆರ್ಥಿಕ ಸಹಾಯವನ್ನು ಕೊಡಲು ಉಪಕ್ರಮಿಸಿದನು. ಅವನ ಉತ್ತರಾಧಿಕಾರಿಗಳು ಸಹ ವಿದ್ಯಾಸಂಬಂಧದ ಈ ಸರಂಪರೆಯನ್ನು ಲಕ್ಷ್ಯತಾ ಪೂರ್ವಕವಾಗಿ ಮುನ್ನಡೆಸಿದರು. ತೊಗಲಕ ವಂಶದ ಅರಸರು ಶಿಕ್ಷಣ ಸಂಬಂಧದಲ್ಲಿ, ಅದರ ಪ್ರಚಾರ ಕಾರ್ಯದಲ್ಲಿ ಅಧಿಕ ಅಭಿರುಚಿಯನ್ನು ಪ್ರದರ್ಶಿಸಿದರು. ಹೀಗೆ ವಿದ್ಯಾಪ್ರೇಮಿಗಳಾದ ಈ ವಂಶದರಸುಗಳಲ್ಲಿ ಫಿರೋಜಶಹನ ನಾಮವು ಉಲ್ಲೇಖನೀಯವಾಗಿದೆ. ಅತನು ತನ್ನ ರಾಜ್ಯಭಾರದ ಕಾಲದಲ್ಲಿ ತನ್ನ ಭವನದ ಸಮೀಪದಲ್ಲಿಯೇ ಒಂದು ಮಹಾ ವಿದ್ಯಾಲಯವನ್ನು ಕಟ್ಟಿಸಿದನು. ವಿದ್ಯಾರ್ಥಿಗಳು ಹಾಗೂ ಯಾತ್ರಿಕರಿಗಾಗಿ ವಿದ್ಯಾರ್ಥಿ ಗೃಹ ಮತ್ತು ಅತಿಥಿ ಗೃಹಗಳನ್ನು ನಿರ್ಮಿಸಿದನು. ಅವರ ಭೋಜನದ ವ್ಯವಸ್ಥೆಯೂ ಸರಕಾರದ ಕಡೆಯಿಂದ ಮಾಡಲ್ಪಟ್ಟಿತ್ತು. ಇಲ್ಲಿನ ಅಧ್ಯಾಪಕರು ದೇಶದ ಸಂಮಾನಿತ ವ್ಯಕ್ತಿಗಳಾಗಿದ್ದರು. ಹಿಂದೂ ಜನರ ಗುರುಕುಲಗಳಲ್ಲಿ ಗುರುಶಿಷ್ಯರ ಸಂಬಂಧದಲ್ಲಿ ಅನಿವಾರ್ಯವಾಗಿರಬೇಕಾದ ಸಂಪರ್ಕವು ಇಲ್ಲಿನ ಗುರು ಶಿಷ್ಯರಲ್ಲಿಯೂ ಇತ್ತು. ಅದರ ಪರಿಣಾಮವು ಉತ್ತಮವಾಗಿತ್ತು. ಕುಂಟೆ ಶೈಮೂರನು ತನ್ನ ಆಸ್ಥಾನ ಆಕ್ರಮಣಕಾಲದಲ್ಲಿ ಈ ವಿದ್ಯಾಲಯವನ್ನು ಸಮಾಪ್ತಮಾಡಿದನು ಸಿಕಂದರ ಲೋಡಿ ಎಂಬವನ ಕಾಲದಲ್ಲಿ ದೇಶದ ಹಿಂದು ಜನರು ಸಹಜ ಫಾರಸೀ ಭಾಷೆಯ ಅಧ್ಯಯನವು ತಮಗೆ ಹಿತಕರವಾಗಿರುವುದೆಂದು ತಿಳಿದುಕೊಂಡರು. ರಾಜ್ಯಭಾಷೆಯಾದ ಫಾರಸೀಯಲ್ಲಿ ಪಾಂಡಿತ್ಯವನ್ನು ಪಡೆದವರಿಗೆ ಸರಕಾರೀ ನೌಕರಿಗಳು ವಿಶೇಷವಾಗಿ ದೊರೆಯುತಿದ್ದುವು. ಮುಸ್ಲಿಮ ಶಾಸಕರೂ ದೇಶೀಯ ಭಾಷೆಗಳ ಅಭ್ಯಾಸವನ್ನು ಮಾಡಿದರು. ತಮ್ಮ ರಾಜ್ಯ ಸಂಘಟನೆಗಾಗಿ ಹಿಂದೀ ಭಾಷಾ ಸಾಹಿತ್ಯಕ್ಕೆ ಪ್ರೋತ್ಸಾಹವೀಯುತ ತೊಡಗಿದರು. ಫಾರಸೀ ಮತ್ತು ಹಿಂದೀ ಭಾಷೆಗಳ ಸಂಮೇಲದಿಂದ ಉರ್ದೂ ಎಂಬ ಹೊಸ ಭಾಷೆಯ ಉತ್ಪನ್ನವಾಯಿತು. 'ಉರ್ದೂ' ವಿನ ಮೂಲವು ಟರ್ಕೀ ಭಾಷೆಯದಾಗಿದ್ದು ಸೈನ್ಯದ ಬೀಡಿನ ಡೇರೆ ಎಂದಿದರರ್ಥ. ಮುಸ್ಲಿಮ ಸಾಮ್ರಾಟರು ತಮ್ಮ ಆಡಳಿತೆಯ ವಿಚಾರಗಳಲ್ಲಿ ಮಾತಾಡುವ ಭಾಷೆಯದಾಗಿತ್ತು. ಈ ಶಾಸಕರಲ್ಲಿ ಸಾಮ್ರಾಟ ಅಕಬರನ ಹೆಸರು ಉದಾಹರಣೀಯವಾಗಿದೆ. ಅವನು ಅತ್ಯಂತ ವಿದ್ಯಾಪ್ರೇಮಿಯಾಗಿದ್ದನಲ್ಲದೆ ತನ್ನ ಆಸ್ಥಾನದಲ್ಲಿ ಬಾಕಷ್ಟು ವಿದ್ವಾಂಸರಿಗೆ ಆಶ್ರಯವನ್ನು ಇತ್ತನು. ರಾಮಾಯಣ, ಮಹಾ ಭಾರತ, ಅಥರ್ವೇದ, ಲೀಲಾವತೀ ಮೊದಲಾದ ಪ್ರಕೃಷ್ಟ ಸಂಸ್ಕೃತ ಗ್ರಂಥಗಳ ಫಾರಸೀ ಅನುವಾದವು ಸರಕಾರದ ಕಡೆಯಿಂದ ಸಿದ್ಧವಾದುವು. ಕರಮಂತ್ರಿ ಶ್ರೀ ಟೋಡರಮಲ್ಲನು ಸರಕಾರಿ ಲೆಕ್ಕಪತ್ರಗಳಿಗೆ ಫಾರಸೀ ಭಾಷೆಯ ರೂಪವನ್ನಿತ್ತನು. ಶ್ರೀ ಅಬುಲ್‌ಫಜಲನು "ಆಯಿನೇ ಅಕಬರಿ" ಎಂಬ ತನ್ನ ಗ್ರಂಥದಲ್ಲಿ ಅಕಬರನ ವಿದ್ಯಾಸಂಬಂಧಿ ಆಸಕ್ತಿಯ ಪರಿಚಯವಿತ್ತಿರುವನು.

"ಪ್ರತ್ಯೇಕ ದೇಶದಲ್ಲಿಯೂ ಕುಡುಗರಿಗೆ ಕೆಲವು ವರ್ಷಗಳವರೆಗೆ ಶಾಲೆಗಳಲ್ಲಿ ವರ್ಣಮಾಲೆಯ ಜ್ಞಾನವನ್ನು ಒದಗಿಸಲಾಗುತ್ತದೆ. ಜೀವನದ ಹೆಚ್ಚಿನ ಭಾಗವು ಪುಸ್ತಕ ಓದುವುದರಲ್ಲಿಯೇ ಕಳೆಯುತ್ತದೆ. ಸಾಮ್ರಾಟ ಅಕಬರನ ಅವೇಕ್ಷೆಯು ಎಲ್ಲಕ್ಕಿಂತ ಮೊದಲು ಬರೆವಣಿಗೆಯನ್ನು ಕಲಿಯಬೇಕೆಂಬುದು. ಇದರಿಂದ ಶಿಶುಗಳು ವರ್ಣಮಾಲೆಯನ್ನು ಒಳ್ಳೆಯ ರೀತಿಯಲ್ಲಿ ಪರಿಚಯ ಮಾಡಿಕೊಳ್ಳುವುದು ಸಾಧ್ಯ ಈ ಶಿಕ್ಷಣವು ಒಂದು ವಾರದವರೆಗೆ ನಡೆಯಬೇಕು. ಆ ಮೇಲೆ ಗದ್ಯ ಹಾಗೂ ಪದ್ಯಗಳನ್ನು ಕಂಠಪಾಠಮಾಡಿಸುವುದು. ಕಂಠಸ್ಥ ಪಾಠಗಳಲ್ಲಿ ಈಶ್ವರ ಇಚ್ಛೆನೆ ಸದಾಚಾರಸಂಬಂಧಿ ಶ್ಲೋಕಗಳಿರಬೇಕು. ಅಧ್ಯಾಪಕನು ಪಠಿಸುವುದನ್ನು ಕಿವಿಗೊಟ್ಟು ಮುಂದಿನ ಸೋಪಾನವನ್ನು ಹಾಕಿಕೊಡಬೇಕು. ಪ್ರತಿ ದಿನವೂ ಪೂರ್ಣ ಇಲ್ಲವೇ ಅರ್ಧ ಶ್ಲೋಕವನ್ನು ಬರೆಯಬೇಕು. ಸಂಕ್ಷೇಪದಲ್ಲಿ, ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳಿಗೆ ವರ್ಣಪರಿಚಯ, ಶಬ್ದಾರ್ಥ, ಶ್ಲೋಕಾರ್ಥ, ಶ್ಲೋಕ ಮತ್ತು ಪೂರ್ವ ಪಾಠಗಳ ಸಂಪೂರ್ಣ ಜ್ಞಾನವನ್ನೊದಗಿಸಿಕೊಡಬೇಕು. ಇಂತಹ ಪ್ರಕ್ರಿಯೆಯು ಒಂದು ತಿಂಗಳವರೆಗೆ ನಡೆಯುತಿಂದರೆ ಅದರ ಪರಿಣಾಮವು ಸಫಲವಾಗುವುದು. ಶಾಲೆಗಳಲ್ಲಿ ಭಾಷಾ ಜ್ಞಾನದೊಡನೆ ಗಣಿತ, ಜ್ಯಾಮಿತಿ, ಸರಕಾರಿ ಶಾಸನದ ವಿಷಯವಾಗಿ ಮತ್ತು ಇತಿಹಾಸಾದಿ ವಿಷಯಗಳೂ ಕಲಿಸಲ್ಪಡಬೇಕು. ಇವುಗಳೆಹೊರತಾದರೆ ವರ್ತಮಾನ ಕಾಲದ ಆವಶ್ಯಕತೆಗಳಿಂದ ಶಿಕ್ಷಣವು ದೂರವಾಗಬಹುದು. ಈ ಆದೇಶದಿಂದ ಶಿಕ್ಷಣದ ನಕ್ಷೆಯೇ ಬದಲಾಯಿತು. ಕನ್ನಡ ವರ್ಷ ವ್ಯಾಕರಣ ಶಾಸ್ತ್ರವನ್ನೇ ಕಲಿಯುತಿದ್ದ ವಿದ್ಯಾರ್ಥಿಗೆ ನ್ಯಾಯ, ವೇದಾಂತ, ಯೋಗ ಮೊದಲಾದ ವಿಷಯವನ್ನೂ ಅಭ್ಯಾಸಮಾಡಬೇಕಾಗಿ ಬಂತು."

ಸಾಮ್ರಾಟ ಅಕಬರನ ಆದೇಶ ಪತ್ರವು ಶಿಕ್ಷಣದ ಕ್ಷೇತ್ರದಲ್ಲಿ ಒಂದು ಹೊಸ ಹೆಜ್ಜೆಯಾಗಿತ್ತು. ರೂಢಿಯಲ್ಲಿ ಮುಳುಗಿ ಹೋಗಿದ್ದ ಪ್ರಾಚೀನ ಪ್ರಣಾಲಿಯನ್ನು ಮೇಲೆ ಎತ್ತಿಹಿಡಿಯಲಾಯಿತು. ಶಿಕ್ಷಣ ಮತ್ತು ವ್ಯಾವಹಾರಿಕತೆಗಳು ಒಂದರೊಡನೊಂದು ಮುನ್ನಡೆದುವು ಅಕಬರನ ಮಗ ಸೆಲೀಮನು ತನ್ನ ಕಾಲದಲ್ಲಿ ರಾಜ್ಯದಲ್ಲಿ ಯಾರಾದರೂ ನಿಸ್ಸಂತಾನರಾಗಿ ಮಡಿದರೆ, ಆಂಧವರ ಸೊತ್ತುಗಳನ್ನು ಸರಕಾರವು ತೆಗೆದುಕೊಂಡು, ಇಂತಹ ಶಿಕ್ಷಣ ಕಾರ್ಯದಲ್ಲಿ ವಿನಿಯೋಗಿಸಬೇಕೆಂಬ ಆಜ್ಞೆಯನ್ನು ಹೊರಡಿಸಿದನು. ಇದರಿಂದಾಗಿ ಶಿಕ್ಷಣ ಸಂಬಂಧಿ ಶಾಲೆಗಳೂ ವಿದ್ಯಾಲಯಗಳೂ ಬೆಳೆಯತೊಡಗಿದುವು. ಶಹಾಜಹಾನನು ಜುಮ್ಮಾಮಸೀದಿಯ ಸಮೀಪದಲ್ಲಿಯೇ ಒಂದು ದೊಡ್ಡ ಕಾಲೇಜನ್ನು ತೆರೆದನು.

ಔರಂಗಜೇಬನು ತನ್ನ ಕುಕೃತ್ಯಗಳಿಂದ ದೇಶದ ಪ್ರಗತಿಗೆ ಕೊಡಲಿಯೇಟನ್ನಿತ್ತನು. ಮುಂದಿರಗಳೊಡನೆ ಪಾಠಶಾಲೆಗಳನ್ನೂ ಕಾಶಿಯಲ್ಲಿ ಓದುವ ಮತ್ತು ಪೂಜೆಯ ಸ್ಥಾನಗಳನ್ನೂ ಸಮಾಪ್ತವಾಗಿಸುವ ಪ್ರಯತ್ನಗಳನ್ನು ಮಾಡಿದನು. ಮುಸಲ್ಮಾನರ ಶಾಲೆಗಳನ್ನು ಬೆಳೆಸಲು ಸಹಾಯವನ್ನಿತ್ತನು. ಮುಸಲ್ಮಾನರಲ್ಲಿ ಹಿಂದುಳಿದಿದ್ದ ಜಾತಿಗಳಿಗೆ ವಿಶೇಷ ರೂಪದಲ್ಲಿ ಪ್ರೋತ್ಸಾಹವಿತ್ತನು. ಸಿಯಾಲಕೋಟೆಯ ಈ ಕಾಲದಲ್ಲಿ ದೊಡ್ಡ ಶಿಕ್ಷಾ ಕೇಂದ್ರವಾಗಿತ್ತು. ಔರಂಗಜೇಬನು ಸಿಂಹಾಸನವನ್ನೇರಿದ ನಂತರ ತನ್ನ ಅಧ್ಯಾಪಕರನ್ನು ಕರೆದು ಅವರಿಗೊಂದು ಪ್ರವಚನವನ್ನಿತ್ತನು ಅದರಿಂದ ಅರಸನ ವಿದ್ಯಾಸಂಬಂಧಿ ವಿಚಾರವು ಪ್ರಕಟಿಕೊಳ್ಳುತ್ತದೆ:

"ಮುಲ್ಲಾ ಸಾಹೇಬರೆ, ನಾನು ನಿಮ್ಮನ್ನು ಪ್ರಸನ್ನರಾಗಿ ಮಾಡಲೇನು ಮಾಡಬಹುದು? ನಾನು ತಮಗೆ ನನ್ನ ರಾಜ್ಯದಲ್ಲೊಂದು ದೊಡ್ಡ ಸ್ಥಾನವೀಯಲು ಅಸಮರ್ಥನಾಗಿದ್ದೇನೆ. ತಾವು ನನಗಿತ್ತಿರುವ ಶಿಕ್ಷಣವು ಉತ್ತಮ ಮಟ್ಟದ್ದಾಗಿದೆಯೆ? ಫಿರಂಗಿ ರಾಜ್ಯವು ಒಂದು ಭಂಡಾರಕ್ಕೆ ಸಮಾನವೆಂದು ನನಗೆ ಹೇಳಿದ್ದಿರಿ. ಯುರೋಪಿನ ಅನ್ಯರಾಜ್ಯಗಳು ನಾಮ ಮಾತ್ರದವುಗಳಾಗಿವೆ. ಹಿಂದುಸ್ತಾನದ ರಾಜರ ಹೆಸರನ್ನು ತೆಗೆದುಕೊಳ್ಳುವುದರಿಂದಲೇ ಚೀನ, ಸಯಾಮ ಮೊದಲಾದ ರಾಜ್ಯಗಳು ನಡುಗುತ್ತವೆ. ನನಗೆ ಭಿನ್ನಭಿನ್ನ ದೇಶಗಳ ಯುದ್ಧ ಕ್ರಮ, ದೇಶಗಳ ಆವಾಸ ವಿಧಾನ, ಧರ್ಮ, ರಾಜ್ಯಭಾರಕ್ರಮ ಮೊದಲಾದ ವಿವಿಧಾಂಗಗಳ ಪರಿಚಯವನ್ನು ಮಾಡಿಕೊಡಬೇಕಾಗಿತ್ತಲ್ಲವೆ? ಆ ದೇಶ

(೧೧ನೇ ಪುಟ ನೋಡಿರಿ)

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?
ಮನೆ-ಮದ್ದು
HOME REMEDIES
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸರ್ವೋದಯ ಶಕ್ತಿ

ಕಾಯದೆಗಳಿಂದ ಅಸಾಧ್ಯವೆನಿಸುವ ಕಾರ್ಯವು ಸರ್ವೋದಯ ತತ್ವಗಳಿಂದ ಆಗುವುದು ಸಾಧ್ಯ

ಪ್ರಶ್ನೆ—ಸರ್ವೋದಯ ಆಂದೋಲನವು ದೇಶದ ಕಾಯದೆಗಳಲ್ಲಿ ಇಷ್ಟ ಪರಿವರ್ತನವನ್ನು ಹೇಗೆ ಸಾಧಿಸಬಲ್ಲದು?

ವಿನೋಬಾ—ಸರ್ವೋದಯ ತತ್ವಾನುಯಾಯಿಗಳು ಚುನಾವಣೆಗೆ ನಿಲ್ಲುವುದಿಲ್ಲ ಎಂದರೆ ನೈತಿಕ ನೆಲೆಯಲ್ಲಿ ಕೆಲವರು ಮತದಾನ ಮಾಡಲು ಸಹ ಹೋಗುವುದಿಲ್ಲ. ಹೀಗಿದ್ದು ನಾವು ದೇಶದ ಕಾಯದೆಗಳಲ್ಲಿ ಹೀಗೆ ಪರಿವರ್ತನೆಯನ್ನು ಸಾಧಿಸಬಲ್ಲೆವು ಎಂಬ ಪ್ರಶ್ನೆ ಏಳುವುದೇನೋ ಸಹಜ. ಆದರೆ ಗಿಡದಮೇಲೆ ಕೂತುಕೊಂಡು ಗಿಡವನ್ನು ಕಡಿಯಹಾಕುವುದು ಶಕ್ಯವಿಲ್ಲ. ಕಾಯದೆಯ ಜಂಜಾಟದಲ್ಲಿ ಸಿಲುಕಿ ಕಾಯದೆಯಲ್ಲಿ ಆಮೂಲಾಗ್ರ ಪರಿವರ್ತನೆ ಮಾಡುವುದು ಶಕ್ಯವಿಲ್ಲ. ಆದುದರಿಂದಲೇ ಸರ್ವೋದಯದ ಜನರು ಕಾಯದೆಯ ಜಾಲದಿಂದ ದೂರ ಉಳಿದುಕೊಳ್ಳುತ್ತಾರೆ. ಹೀಗೆ ಮಾಡುವುದರಿಂದಲೇ ಅವರು ಕಾಯದೆಯಲ್ಲಿ ಇಷ್ಟ ಪರಿವರ್ತನವನ್ನುಂಟುಮಾಡಲು ಸಮರ್ಥರಾಗುತ್ತಾರೆ. ಪ್ರಜಾರಾಜ್ಯದಲ್ಲಿ ಜನತೆಯೆ ಸ್ವಾಮಿಯಾಗಿರುವುದು. ಶಾಸನಸಭೆಗೆ ಆರಿಸಿ ಹೋದವರು ಈ ಜನತೆಯ ನೌಕರರು ನಾವು ಸರ್ವೋದಯದವರು, ಸ್ವಾಮಿಯನ್ನು ಅರ್ಥಾತ್ ಜನತೆಯನ್ನು ಆರಾಧಿಸುತ್ತೇವೆ. ಜನತೆಯ ವಿಚಾರದಲ್ಲಿ ಇಷ್ಟ ಪರಿವರ್ತನ ಮಾಡುತ್ತೇವೆ ನಮಗೆ ನೌಕರರ ಮರ್ಜಿಕಾಯುವ ಅವಶ್ಯಕತೆಯಿಲ್ಲ ಸ್ವಾಮಿಯ ಇಚ್ಛೆಯಂತೆ ನೌಕರರು ಕೆಲಸಮಾಡಬೇಕಾಗುವುದು. ಜನತಾರಾಜ್ಯದಲ್ಲಿ ಜನಾಭಿಪ್ರಾಯದಂತೆ ರಾಜ್ಯಕರ್ತರು ಕಾಯದೆಗಳನ್ನೂ ತಿದ್ದಬೇಕಾಗುವುದು. ಈಗ ಗ್ರಾಮದಾನಗಳು ಸಿಗಹತ್ತಿವೆ ಅವು ಇನ್ನೂ ಸಾಕಷ್ಟು ವ್ಯಾಪಕವಾಗಿಲ್ಲ, ಆದರೂ ಎರಡೂವರೆ ಸಾವಿರ ಗ್ರಾಮದಾನಗಳು ಸಿಕ್ಕಿವೆ. ಇವೇನೂ ಕಡಿಮೆಯಲ್ಲ. ಈಗ ಸಮಾಜ ವಿಕಾಸ ಯೋಜನೆಯ ವಾನ್ಯ ಮಂತ್ರಿಯವರು ನನ್ನ ಕಡೆಗೆ ನನ್ನ ಪಾದಯಾತ್ರೆ ನಡೆದಲ್ಲಿ ಬರುತ್ತಾರೆ, ನನ್ನ ಸಲಹೆಯನ್ನು ಕೇಳುತ್ತಾರೆ ಗ್ರಾಮದಾನವಾದ ಹಳ್ಳಿಗಳಿಗೆ ಯಾವ ರೀತಿಯ ಸಹಾಯ ಸಲ್ಲಿಸಬಹುದೆಂದು ನನ್ನನ್ನು ಕೇಳುತ್ತಾರೆ—ನಾನು ಅವರ ಕಡೆ ಹೋಗುವ ಪ್ರಸಂಗವೇ ಬರಲಿಲ್ಲ. ಅವರಿಗೆ ಈಗ ನನ್ನ ಸೂಚನೆಯಂತೆ ತಮ್ಮ ಯೋಜನೆಗಳಲ್ಲಿ ಅವಶ್ಯವಿದ್ದ ತಿದ್ದುಪಡಿ ಮಾಡುವುದು ಕ್ರಮಪ್ರಾಪ್ತವಾಗಿದೆ. ಏಕೆಂದರೆ, ಜನತೆಯ ದೃಷ್ಟಿಯಲ್ಲಿಯೇ ಪರಿವರ್ತನೆಯಾಗಿದೆ. ಜನಮಾನಸವೇ ಬದಲಾಗಿದೆ

ಸರಕಾರದ ಮೇಲೆ ಪರಿಣಾಮವನ್ನುಂಟು ಮಾಡಬೇಕಾದರೆ ಪಾರ್ಲಿಮೆಂಟಿನಲ್ಲಿ ನಾವು ಹೋಗಬೇಕೆಂದು ಎಷ್ಟೋ ಜನರ ಅಭಿಪ್ರಾಯ ಏದೆ. ಪಾರ್ಲಿಮೆಂಟಿನ ಸದಸ್ಯನಾಗುವುದೆಂದರೆ, ಒಂದು ರೀತಿಯಿಂದ ಶೈದಿಯಾದಂತೆಯೇ ಸರಿ ಹೆಚ್ಚೆಂದರೆ, ಅದೊಂದು ಕಿಂಚಿತ್ ಪರಿಣಾಮಕಾರಿ ಮಾರ್ಗ, ಆಮೋಘವಾದ ದಾರಿಯೆಂದರೆ ದೇಶದಲ್ಲಿ ಜನ ಆಂದೋಲನವನ್ನುಂಟುಮಾಡಿ, ಜನಶಕ್ತಿಯನ್ನು ಜಾಗೃತಗೊಳಿಸುವುದೇ ಇರುತ್ತದೆ. ಅದರ ಪರಿಣಾಮವು ಸರಕಾರದ ಮೇಲೆ ಆಗಬೇಕುವುದು ಸಾಂಕಾಂಶ, ಸರ್ವೋದಯದ ನಮ್ಮ ನೀತಿಯಲ್ಲಿ ಕಾಯದೆ ಕಾನೂನುಗಳನ್ನು ಬದಲಿಸುವ ಅಮೋಘ ಶಕ್ತಿಯಿದೆ

ಪ್ರಶ್ನೆ — ಕಾನೂನಿನಲ್ಲಿ ಪರಿವರ್ತನೆ ಮಾಡದೆ ಸಮಾಜ ಸುಧಾರಣೆ ಮಾಡುವುದು ಶಕ್ಯವೆ?

ವಿನೋಬಾ— ಜನರ ರೂಢಿಯ ಹೇಗೆ ಕೇವಲ ವಿಪರೀತ ದಿಸೆಯಲ್ಲಿ ವಿಚಾರ ಮಾಡುತ್ತಿದೆಂಬುದನ್ನು ನೋಡಿ ನಿಜಕ್ಕೂ ಆಶ್ಚರ್ಯವಾಗುತ್ತದೆ ಕಾಯದೆಯಲ್ಲಿ ಬದಲಾವಣೆಗಳಿಗೆ ಸಮಾಜದಲ್ಲಿ ಪರಿವರ್ತನೆಯಾಗಬಲ್ಲುದೆಂದು ಅವರು ತಿಳಿದುಕೊಳ್ಳುತ್ತಾರೆ ಕ್ಷಣ ಹೊತ್ತು ವಿಚಾರಮಾಡಿರಿ. ಇದುವರೆಗೆ ಎಷ್ಟು ರಾಜ ಮಹಾರಾಜರಾಗಿ ಹೋದರು? ಅವರು ತಮ್ಮ ತಮ್ಮ ಕಾಲದಲ್ಲಿ ಅನೇಕ ಕಾಯದೆಗಳನ್ನು ಮಾಡಿದರು. ಆದರೆ ಜನತೆಯ ಮೇಲೆ ಇಂದು ಆ ಕಾಯದೆಗಳು ಯಾವುದೇ ಪರಿಣಾಮವಿಲ್ಲ ಜನತೆಯು ತನ್ನ ವಿಚಾರದಂತೆ ಕೆಲಸ ಮಾಡುತ್ತದೆ ಹೊರತು ಆ ಅರಸು, ಇನ್ನೂ ಆ ಸರಕಾರ ಮಾಡಿದ ಕಾಯದೆಯ ಪರಿಣಾಮದಿಂದಲ್ಲ. ನಿಮ್ಮ ಪ್ರತ್ಯಕ್ಷ ಜೀವನವನ್ನು ನೋಡಿರಿ, ತಾಯಂದಿರು ಕೂಸುಗಳಿಗೆ ಹಾಲುಣಿಸುತ್ತಾರೆ. ಅದು ಯಾವ ಕಾಯದೆಯ ಮೂಲಕ? ನಮ್ಮ ದೇಶದಲ್ಲಿ ಕೋಟಿಗಟ್ಟಲೆ ಜನರು ಸ್ನಾನ ಮಾಡದೆ ಉಣ್ಣುವುದಿಲ್ಲ. ಅದು ಯಾವದೊಂದು ಕಾಯದೆಯ ಭೀತಿಯಿಂದಲೆ? ಅಲ್ಲ ಸಮಾಜದೊಳಗೆ ಬಹಳಷ್ಟು ಜನರು ಕಳವುಮಾಡುವುದಿಲ್ಲ, ಅದೇನು ಕಾಯದೆಯ ಮೂಲಕ ಕಳವನ್ನು ಮಾಡದಿರುವುದೋ? ಇಲ್ಲ, ಅದರ ಅಂತಃಕರಣದಲ್ಲಿ ಒಂದು ಧರ್ಮಬಾವನೆಯ ದೃಢಮೂಲವಾಗಿದೆ ಆದುದರಿಂದ ಅವರು ಕಳವು ಮಾಡುವುದಿಲ್ಲ.

ಅನೇಕ ವರ್ಷಗಳ ಸಂಸ್ಕಾರಗಳ ಮೂಲಕ ಸಮಾಜದಲ್ಲಿ ಒಂದು ವಿವೇಕ ಶಕ್ತಿಯುಂಟಾಗುತ್ತದೆ. ಸಮಾಜವು ಸರಿಯಾದ ದಾರಿಯಲ್ಲಿ ನಡೆಯುತ್ತಿರಲು, ಈ ಅದರ ವಿವೇಕ ಶಕ್ತಿಯೇ ಕಾರಣ. ಒಂದಾನೊಂದು ಕಾಲದಲ್ಲಿ ಜನರು ಮೂರು ನಾಲ್ಕು ಹೆಂಡಂದಿರನ್ನು ಲಗ್ನವಾಗುತ್ತಿದ್ದರು. ಹೆಚ್ಚು ಹೆಂಡಂದಿರುವುದು ಒಂದು ಗೌರವದ ಮಾತಾಗಿತ್ತು. ಆದರೆ ಈ ನಮ್ಮ ಕಾಲದಲ್ಲಿ ಒಬ್ಬರಿಗಿಂತ ಹೆಚ್ಚು ಹೆಂಡರನ್ನು ಲಗ್ನವಾಗುವುದರಲ್ಲಿ ಯಾವ ಗೌರವವಿದೆಂದೆನಿಸುವುದಿಲ್ಲ ರಾಮಾಯಣದಲ್ಲಿ ದಶರಥನಿಗೆ ಮೂವರು ಹೆಂಡಂದಿರಿದ್ದರೆಂಬುದನ್ನೂ ಗ್ರಹಿಸೊಬ್ಬರೂ ಒಪ್ಪುತ್ತಾರೆ. ಆದರೆ, ಯಾರೊಬ್ಬರೂ ಈಗಿನ ಕಾಲದಲ್ಲಿ ದಶರಥನ ಅನುಕರಣ ಮಾಡಲಿಚ್ಛಿಸುವುದಿಲ್ಲ ಜನರ ವಿವೇಕ ಶಕ್ತಿಯು ಈ ಮಾತು ಸರಿಯಲ್ಲವೆಂದೆಣಿಸಕತ್ತಿದೆ ಅನುಭವವು ಹೆಚ್ಚಿದಂತೆ, ಸಮಾಜದ ನೀತಿ ವಿಚಾರದಲ್ಲಿಯೂ ಪರಿವರ್ತನೆ ಯಾಗುತ್ತದೆ. ಸರ್ವೋದಯವು ಜನರ ವಿವೇಕ ಶಕ್ತಿಯನ್ನು, ಅವರ ಧರ್ಮಬಾವನೆಯನ್ನು ರೂಪಿಸುತ್ತದೆ. ಇಂದು ಕಳವು ಕಾಯದೆಯಲ್ಲಿ ಅಪರಾಧವೆಂದು ಎಣಿಸಲಾಗುತ್ತದೆ ಅದರೆ ಸಂಗ್ರಹಮಾಡುವುದೆ ಇಂದು ಕಾಯದೆಯಿಂದ ಅಪರಾಧವಲ್ಲ ಆದರೆ, ಸಂಗ್ರಹದ ವೈಯಕ್ತಿಕ ಬಿಚಿಕನನ್ನು ಇಂದು ಕಾಯದೆಯಿಂದನಮ್ಮನ್ನೆಚಪಡೆದಿದೆ. ಸರ್ವೋದಯವಾದರೋ, ಹೇಗೆ ಕಳವು ಅಪರಾಧವೋ ಹಾಗೆಯೇ ಸಂಗ್ರಹವು ಕೂಡ ಅಪರಾಧವೆಂದು ಸೂಚಿಸುತ್ತದೆ.

ಒಬ್ಬನು ಹಚ್ಚಿನ ಸಂಗ್ರಹ ಮಾಡುವುದರಿಂದಲೇ ಇನ್ನೊಬ್ಬನಿಗೆ ಕಳವಿನ ಪ್ರೇರಣೆಯಾಗುತ್ತದೆ. ಈಗ ಕಾಯದೆಯು ಸಂಗ್ರಹವನ್ನು ಗುನ್ಹೆಯೆಂದೆನಿಸುವುದಿಲ್ಲ ಆದರೆ ಇನ್ನು ಕೆಲವೇ ಸಮಯದಲ್ಲಿ ಸಂಗ್ರಹವು ಸಹ ಅಪರಾಧವೆಂದು ಕಾಯದೆಯಾಗುವುದು ಏಕೆಂದರೆ, ಕ್ರಮೇಣ ಸಮಾಜದ ವಿವೇಕ ಬುದ್ಧಿಯಲ್ಲಿ ಈ ದಿಶೆಯಲ್ಲಿ ಪರಿವರ್ತನೆಯಾಗುವುದು ವಸ್ತುತ ಸರ್ವೋದಯ ತತ್ವಾನುಯಾಯಿ ಸಮಾಜದ ಈ ವಿವೇಕ ಬುದ್ಧಿಯನ್ನು ರೂಪಿಸುವ ಕಾರ್ಯ ಮಾಡುತ್ತಿರುವರು. ಹತ್ತು ವರ್ಷಗಳ ಹಿಂದೆ ಜನರು ತಮಗೆ ಹೆಚ್ಚು ಭೂಮಿ ಯಿದೆಯೆಂದು ಹೇಳಿಕೊಳ್ಳುವುದರಲ್ಲಿ ಗೌರವವೆಣಿಸುತ್ತಿದ್ದರು ಈಗ ಯಾರೊಬ್ಬರನ್ನು ಕೇಳಿದರೆ ತಾನೇನೂ ದೊಡ್ಡ ಜಮೀನದಾರನಲ್ಲವೆಂದು ಹೇಳುವರು. ೩೦೦ ಎಕರೆ ಆವರ ಹತ್ತಿರವಿದ್ದರೆ ತಮ್ಮ ಹತ್ತಿರ ನೂರೇ ಎಕರೆ ಇದೆಯೆಂದು ಹೇಳುವರು. ಏಕೆಂದರೆ, ಈಗ ಹಚ್ಚಿಗೆ ಭೂಮಿ ಕಟ್ಟಿಗೆ ಆಸ್ತಿಯಿದೆಯೆಂದು ಹೇಳುವುದರಲ್ಲಿ ಗೌರವವುಳಿದಿಲ್ಲ. ಈ ವಿಚಾರ ಪರಿವರ್ತನೆಯು ಸರ್ವೋದಯದ ಸತತ ಪ್ರಚಾರದಿಂದಂಟಾಗಿದೆ ಈ ರೀತಿ ಕಾಯದೆಯಲ್ಲಿ ಮಹತ್ವದ ಪರಿವರ್ತನೆಯನ್ನು ಸಾಧಿಸುವ ಅಮೋಘ ಶಕ್ತಿಯು ಸರ್ವೋದಯದಲ್ಲಿದೆ.

ಪ್ರಶ್ನೆ—ಕೇರಳದಲ್ಲಿ ಕಾಸ್ತ್ರಾಯ ವಿಸರಕಾರವಿದೆ. ಅದು ಭೂಮಿಯ ಸಮಸ್ಯೆಯನ್ನು ಬಗೆಹರಿಸಲು ಯತ್ನಿಸುತ್ತದೆ. ನೀವು ಸದ ಅದೇ ಕಾರ್ಯಮಾಡ ತ್ತೀರುವಿರಿ ನಿಮ್ಮ ಮತ್ತು ಅವರ ಯೋಜನೆಗಳ ಏನು ಅಂತರವಿದೆ?

ವಿನೋಬಾ ಅಂತರವಿಷ್ಟೆ; ಅವರು ವಿಚಾರ ಮಾಡಹತ್ತಿದ್ದಾರೆ ವಿನೋಬಾ ಪ್ರತ್ಯಕ್ಷ ಮಾಡಹತ್ತಿದ್ದಾನೆ. ಇದೇ ಅಂತರ. ನಾನು ಒರಿಸ್ಸಾದಲ್ಲಿ ಸಂಚರಿಸುತಿದ್ದಾಗ ಆಂಧ್ರದ ಕಮ್ಯುನಿಸ್ಟ್ ಪಕ್ಷವು ತಾನು ಅಧಿಕಾರಕ್ಕೆ ಬಂದರೆ ಇಷ್ಟು ಎಕರೆಗಳಿಗಿಂತ ಹೆಚ್ಚು ಭೂಮಿ ಯಾರ ಹತ್ತಿರವೂ ಇರಕೂಡದೆಂದು ಕಾನೂನು ಮಾಡುವುದೆಂದು ಹೇಳುತಿದ್ದಿತು. ಈ ರೀತಿ ವ್ಯಕ್ತಿಯಕಡೆಗಿರಬಹುದಾದ ಭೂಮಿಯ ಪರಮಾವಧಿಯನ್ನು ನಿರ್ಧರಿಸುವುದಕ್ಕೆ ಸೀಲಿಂಗ ಎಂದು ಹೇಳುತ್ತಾರೆ ಆದರೆ ವಿಚಾರಮಾಡಿರಿ. ಗೋದಾವರಿ ಮತ್ತು ಕೃಷ್ಣಾನದಿಗಳ ದಂಡೆಯ ಮೇಲಿರುವ ಭೂಮಿಯ ವಿಷಯದಲ್ಲಿ ಇಷ್ಟು ಎಕರೆಯ ಸೀಲಿಂಗ ನಿರ್ಧರಿಸಿದರೆ ಭೂಮಿ ಹೀನರಿಗೆ ಭೂಮಿ ಯೆಲ್ಲಿಂದ ಸಿಗಬೇಕು? ಅರ್ಥಾತ್ ಹೀಗೆ ಕೇವಲ ತಮ್ಮ ನಿಸ್ವರು ಬಡ ಭೂಮಿ ಹೀನರನ್ನೇ ದುರ್ಲಕ್ಷಿಸಿದರೆಂದು ಹೇಳಬೇಕಾಗುತ್ತದೆ ಅವರು ತಮ್ಮ ನಿಶ್ಚಿತ ಧ್ಯೇಯವನ್ನೆ ಬಿಟ್ಟುಕೊಟ್ಟಂತಾಗುವುದಿಲ್ಲವೆ? ನಿಜವಾಗಿ ವಿಚಾರಮಾಡಿದರೆ, ಈ ಕಮ್ಯುನಿಸ್ಟ್ ಪಕ್ಷವು ತನ್ನ ಕೈಯಲ್ಲಿ ಅಧಿಕಾರಬಂದರೆ, ಭೂಮಿಯೆಂಬ ತನವನ್ನೇ ನಷ್ಟಮಾಡುವೆವೆಂದು ಹೇಳಬೇಕಿತ್ತು ಅದರಿಂದ ಇಷ್ಟು ಎಕರೆ ಇಟ್ಟುಕೊಳ್ಳುವುದು ಅವರಿಗೆ ವ್ಯವಹಾರಿಕ ರಕ್ಷಣೆ ಕೊಟ್ಟಿದ್ದಿಲ್ಲ ತಾವು ವ್ಯವಹಾರಜ್ಞರು ವಿನೋಬಾ ಅವಶ್ಯವಾದಿ ಎಂದವರೆಣಿಸುತ್ತಾರೆ. ಆದುದರಿಂದ ಅವರು ಮೂಲಭೂತ ತತ್ವವನ್ನು ಆಚರಣೆಯಲ್ಲಿ ತರುವ ನೋಪಚಾರವನ್ನು ಮಾಡಲು ಹಿಂಜರಿದು. ಚರ್ಚೆಯಲ್ಲಿ ಅವರು ಭೂಮಿ ಯೊಡೆತನ ನಷ್ಟವಾಗಬೇಕೆಂಬ ಮಾತನ್ನು ತಿರಸ್ಕರಿಸಿ

(೧೦ನೇ ಪುಟ್ಟಿನೆಣಿಕೆ)

ಸಮಯ ಇನ್ನೂ ಮಿಂಚಿಹೋಗಿಲ್ಲ

ಜೀವನದಲ್ಲಿ ಒಂದು ರೀತಿಯ ವ್ಯವಸ್ಥೆಯಿರಬೇಕಾದರೆ ಆಪತ್ಕಾಲದಲ್ಲಿ ಸಹಾಯಕ್ಕೊದಗುವ ಒಂದು ಆಪದ್ಧನ ಸಂಗ್ರಹದ ಯೋಜನೆಯನ್ನು ಚಿಕ್ಕಂದಿನಿಂದಲೇ ಆರಂಭಿಸಬೇಕೆಂಬುದು ಸಹಜವೇ. ಆದರೆ ಕಾಲ ಕಳೆದು ಹೋಯಿತೆಂದು ಕಣ್ಣೀರು ಕರೆಯುತ್ತಾ ಕುಳಿತುಕೊಳ್ಳುವುದಕ್ಕಿಂತ ಇಂದಿನಿಂದಲೇ ಸ್ವಲ್ಪ ಸ್ವಲ್ಪ ಹಣವನ್ನಾದರೂ ಉಳಿತಾಯಮಾಡಲು ಯತ್ನಿಸುವುದೇ ಮುಖ್ಯ ಸಮಯವಿನ್ನೂ ಮಿಂಚಿಹೋಗಿಲ್ಲ

ಹಲವಾರು ಆಕರ್ಷಕ ಮತ್ತು ಸುಲಭಸಾಧ್ಯವಾದ ಉಳಿತಾಯದ ಯೋಜನೆಗಳಿಗೆ—

ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಚಾರಿಸಿರಿ

96 ಶಾಖೆಗಳು

ರೂ 10.64 ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ

ಇವುಗಳಿಂದ ಸಾವಿರಾರು ಜನರ ಲಧಿಕ ಅವಶ್ಯಕತೆಗಳಲ್ಲಿ ಸಹಕರಿಸಿದ್ದು

ಶೆಡ್ಯೂಲ್ಡ್ ಬೇಂಕು

ಟಿ ಎ ಪೈ, ಬಿ.ಕಾಂ (ಲಂಡನ್), ಎಸ್ ಆರ್ ಇ ಎಸ್ (ಲಂಡನ್), ಎ ಇ ಐ ಬಿ., ಜನರಲ್ ಮೆನೇಜರ್.

ಡಾ. ಟಿ ಎಂ. ಎ ಪೈ, ಎಂ ಬಿ ಬಿ ಎಸ್, ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate, Ltd.,

Head Office. UDIPI· S India.



ಜೀವನದ ಸಫಲತೆ

ಸೇವಾದೃಷ್ಟಿಯಿಂದ ದೇಶಸೇವೆಗೆ ಜನರು ಮುನ್ನುಗ್ಗಿಬರಬೇಕು

"ಹಾಗೆಂದರೇನು? ಈ ಭೂಮಿ ನಿನ್ನದೇ? ನೀನೇನು ದುಡಿಯುತ್ತಿಯೇನು? ಅವರೆಲ್ಲನೇ ಗೆಯ್ಯುವವರು? ನೀನು ಬರಿಯ ಜಗನ್ಮಾತೆಯ ಮೇಸ್ತ್ರಿ! ಅವರೆಲ್ಲ ಆಕೆಯ ಒಕ್ಕಲು. ಆಕೆಯ ಹಣವನ್ನು ಆಕೆಯ ಮಕ್ಕಳ ಕ್ಷೇಮಕ್ಕಾಗಿ ವ್ಯಯ ಮಾಡಲೇ ಬೇಕು. ಅವರೆಲ್ಲ ದಿನನಿತ್ಯ ದುಡಿದರೂ ಉಣಲು, ಉಡಲು ಕಷ್ಟ ಪಡುವುದನ್ನು ಕಾಣಲಿಲ್ಲವೇ?" ಎಂಬೀ ಮಾತನ್ನು ಒಬ್ಬ ಜಮೀನುದಾರನ, ತನ್ನ ಒಕ್ಕಲುಗಳಿಂದ ಕಂದಾಯ ವಸೂಲು ಮಾಡಹೋದ ಸಂದರ್ಭದಲ್ಲಿ ಪೂಜ್ಯ ರಾಮಕೃಷ್ಣ ಪರಮಹಂಸರು ನುಡಿದರು.

ಇದು ವಿನೋಬ ಭಾವೆಯವರ ವಚನವೆಂದರೆ ಯಾರಿಗೂ ಆಶ್ಚರ್ಯವಾಗದು. ಆದರೆ ಪರಮಹಂಸರು ಈ ರೀತಿ ನುಡಿದಿರುವರೇ? ಎಂದು ಆಲೋಚಿಸುವ ಸಂದರ್ಭ ಬರಬಹುದು. ದರಿದ್ರರನ್ನೂ ದುಃಖಿಗಳನ್ನೂ ಕಂಡರೆ ರಾಮಕೃಷ್ಣರಿಗೆ ಸಂತಾಪ ಮಿತಿಮೀರುತಿತ್ತು. ದುಃಖಾರ್ತರಾದವರ ಸೇವೆಯೇ ದೇವರ ಸೇವೆ ಎಂದು ಬಗೆಯುತಿದ್ದರು. ನಿರ್ವಿಕಲ್ಪ ಸಮಾಧಿಯಲ್ಲಿ ಜಗತ್ತು ಮಿಥ್ಯೆಯೆಂದು ತಿಳಿದಿದ್ದರೂ ಅವರು ಕೋಟಿ ಕೋಟಿ ಮಾನವ ಜೀವಿಗಳ ಕಷ್ಟಗಳನ್ನು ಕಣ್ಣುಮುಚ್ಚಿ ನೋಡುತ್ತಿರಲಿಲ್ಲ. ಜ್ಞಾನ ಜ್ಯೋತಿಯಿಂದ ಅಂಧರಾಗಲಿಲ್ಲ.

ಒಂದು ಸಲ ಅವರು ತನ್ನ ಶ್ರೀಮಂತ ಮಿತ್ರನೊಬ್ಬನೊಡನೆ ಭಯಾನಕ ಕಾಸ್ಸಿಪು ತೋಟದ ಸ್ಥಳಕ್ಕೆ ಬಂದರು. ಹಸಿವಿನಿಂದ ಸೊರಗಿ ಕೊರಗಿ ನರಳಿ, ಉಡಲು ಬಟ್ಟೆಯಿಲ್ಲದೆ ಬತ್ತಲೆಯಾಗಿ ಬಯಲಿನಲ್ಲಿ ಬಿದ್ದು ಸಾಯುತ್ತಲಿದ್ದ ಜನರ ತಡಂ ಒಂದನ್ನೀಕ್ಷಿಸಿ ಅವರೆಲ್ಲರಿಗೂ ಉಣ್ಣಲಿತ್ತು, ಉಡಲು ಬಟ್ಟೆಕೊಡಬೇಕೆಂದು ಮಿತ್ರನೊಡನೆ ಪ್ರಾರ್ಥಿಸಿದರು. ಆಗ ಅವರ ಆ ಶ್ರೀಮಂತ ಮಿತ್ರನು "ಲೋಕದ ಮೇಲಿರುವ ದರಿದ್ರರಿಗೆಲ್ಲ ಹೊಟ್ಟೆ ಬಟ್ಟೆಗೆ ಕೊಡಲು ನನ್ನಲ್ಲಿ ಹಣವಿಲ್ಲ" ಎಂದನು. ಪರಮಹಂಸರು "ಹಾಗಾದರೆ, ನಾನು ನಿನ್ನೊಡನೆ ಬರುವುದಿಲ್ಲ. ಇವರೊಂದಿಗೆ ಇರುತ್ತೇನೆ" ಎಂದು ಹೇಳಿ ನರಳುತ್ತಿರುವ ಜನರೊಡನೆಗೂಡಿ ತಾವು ಕೂಡಾ ಅಳಹತ್ತಿದರು. ಆಗ ಅವರ ಶ್ರೀಮಂತ ಮಿತ್ರನು ಮನಸ್ಸುಕರಗಿ ಪರಮಹಂಸರ ಇಚ್ಛೆಯನ್ನು ನೆರವೇರಿಸಿದನು.

ಶ್ರೀರಾಮಕೃಷ್ಣರು ಕೆಲವು ಜ್ಞಾನ ಪಾಷಂಡಿಗಳಂತೆ ಶುಷ್ಕ ಹೃದಯರಾಗಿರಲಿಲ್ಲ. ದುಃಖಿಗಳನ್ನು ಕಂಡರೆ ದುಃಖಿಸುತಿದ್ದರು. ಅಳುವವರೊಡನೆ ಅಳುತ್ತಿದ್ದರು. ಅವರಿಗೆ ಜೀವವೇ ಶಿವವಾಗಿತ್ತು.

"ಉಪಕಾರ ಮಾಡುತ್ತೇನೆ, ಸಹಾಯ ಮಾಡುತ್ತೇನೆ, ಕಾಪಾಡುತ್ತೇನೆ, ಎಂದು ಹೆಮ್ಮೆಪಡುವುದು ಈಶ್ವರ ನಿಂದೆಗೆ ಸಮನಾದುದು. ಆದುದರಿಂದ ಸೇವೆಮಾಡುತ್ತೇನೆ ಎಂದು ನಮ್ರಭಾವದಿಂದ ಕೆಲಸ ಮಾಡಬೇಕು" ಎಂದು ಅವರು ಭೋಧಿಸುತಿದ್ದರು. ಇಂದು ಕೂಡಾ ಈ ಸೇವಾದೃಷ್ಟಿಯಿಂದ ಕೆಲಸ ಮಾಡಿದರೆ ಮಾತ್ರ ಜನರೆಲ್ಲರೂ ಶಾಂತಿಯನ್ನು ಕಾಣಬಹುದು. ಪೂಜ್ಯ ವಿನೋಬರವರು ಪರಮಹಂಸರಿಂದಲೇ ತತ್ವಮಾರ್ಗದರ್ಶನವನ್ನು ಪಡೆದಿದ್ದಿರಬಹುದು.

ಸರ್ವ ಧರ್ಮ ಸರ್ವ ಮತ ಸಾಧನೆಗಳಲ್ಲಿ ವಿನೋಬಾ ಸಿದ್ಧಿಕೊಂಡಿ ಸರ್ವ ಧರ್ಮ ಸಮನ್ವಯಾಚಾರ್ಯರಾದರು. ಎಲ್ಲಾ ಮತಗಳೂ ಒಂದೇ ಸತ್ಯದೆಡೆಗೆ ಹೋಗುವ ಬೇರೆ ಬೇರೆ ಹಾದಿಗಳೆಂಬುದನ್ನು ಅವರು ತೋರಿಸಿಕೊಟ್ಟರು. ಯಾವನು ಕೃಷ್ಣನೋ ಅವನೇ ಶಿವನು; ಅದೇ ಕಾಳಿ, ಆದಿಶಕ್ತಿ; ಅತನೇ ಯೇಸು, ಅತನೇ 'ಅಲ್ಲಾ'—ಒಬ್ಬ ರಾಮನಿಗೆ ಬೇರೆ ಬೇರೆ ನಾಮಗಳು. ಯಾವ ನಾಮದ ದಾರಿಯಿಂದ ಹೋದರೂ ಸತ್ಯದೆಡೆಗೆ ಹೋಗಬಹುದು ಎಂದು ತೋರಿಸಿದರು. ಸರೋವರಕ್ಕೆ ಪಿವಿಧ ಘಟ್ಟಗಳಿವೆಯಷ್ಟೆ? ಒಂದು ಘಟ್ಟದಲ್ಲಿ ಒಬ್ಬನು ಕಲಶದಲ್ಲಿ ನೀರು ತೆಗೆದು ಅದನ್ನು 'ಜಲ' ಎಂದು ಕರೆಯುತ್ತಾನೆ. ಇನ್ನೊಬ್ಬನು ಪಕಾಲಿಯಲ್ಲಿ ನೀರು ತೆಗೆದು 'ಪಾನಿ' ಎನ್ನುತ್ತಾನೆ. ಇನ್ನೊಬ್ಬನು 'ವಾಟರ್' ಎನ್ನುವನು. ಹೀಗಿರಲು ನೀರು, 'ಜಲ'ವಲ್ಲ 'ಪಾನಿ' ಎಂದಾಗಲಿ ಅಥವಾ 'ಪಾನಿ' 'ಜಲ'ವಲ್ಲ 'ವಾಟರ್' ಎಂದಾಗಲಿ ಹೇಳಲು ಸಾಧ್ಯವಿದೆಯೇ? ಬೇರೆ ಬೇರೆ ಹಸರುಗಳಿದ್ದ ಮಾತ್ರಕ್ಕೆ ವಸ್ತು ಬೇರೆಯಾಗುತ್ತದೆಯೇ? ಇದು ಎಷ್ಟೊಂದು ಸತ್ಯ? ಇದನ್ನು ತಿಳಿದರೆ ಧರ್ಮದ ವಿಷಯದಲ್ಲಿ ಕಚ್ಚಾಟ ವಿದೆಯೇ?

ನಮ್ಮ ಜಾತ್ಯಾತೀತ ರಾಷ್ಟ್ರದಲ್ಲಿ ಜಾತ್ಯಾತೀತ ಸಮಾಜವನ್ನು ರಚಿಸಲು ಹೆಣಗುವ ವಿನೋಬ ಭಾವೆಯವರು ಕೇರಳದ ಕಾಲಡಿಯಿಂದಲ್ಲಿ ಅಖಿಲ ಭಾರತ ಸರ್ವೋದಯ ಸಮ್ಮೇಲನವನ್ನು ಉದ್ಘಾಟಿಸಿದರು. ಇದುವರೆಗೆ ಭೂದಾನ ಚಳವಳಿ'ವಾಗಿದ್ದರೆ ಇನ್ನು ಮುಂದೆ "ಗ್ರಾಮದಾನ ಚಳವಳಿ" ಆಗಬೇಕೆಂದು ನಿರ್ಧಾರವಾಯಿತು. ಅವರು ಸದ್ದಿಲ್ಲದ ಈ ಭೂಸಮಸ್ಯೆಯ ಕ್ರಾಂತಿಯಲ್ಲಿ ಯಶಸ್ವಿಯಾದರೆ ಪರಮಹಂಸರ ಉದ್ದೇಶ ಕೈಗೂಡುವುದರಲ್ಲಿ ಸಂದೇಹವಿಲ್ಲ. ಸರ್ವ ರಾಜಕೀಯ ಪಕ್ಷಗಳೂ ಈ ವಿಷಯದ ಮಟ್ಟಿಗೆ ಸಹಕರಿಸುವುದನ್ನು ಗಮನಿಸುವಾ

ಜನತೆಯ ಕಾಂಗ್ರೆಸ್ಸು

(೧ನೇ ಪುಟದಿಂದ)

ಯನ್ನು ಕಲಿಬೇಕು. ಇದರಿಂದ ವಿರಾಮ ಕಾಲದ ಸದುಪಯೋಗವಾದಂತಾಗುವುದಲ್ಲದೇ ಜನರು ತಮ್ಮ ಹೊಟ್ಟೆ ಬಟ್ಟೆಗಳಿಗೆ ಸ್ವಾವಲಂಬಿಗಳಾಗುವ ಮಾರ್ಗವೂ ಹೊಳೆಯುವುದು.

ಯಾವುದೊಂದುಕಾರ್ಯಸಾಧನೆಯಾಗಬೇಕಾದಲ್ಲಿಯೂನಿಸ್ವಾರ್ಥತೆಯಿಗೆ ಮೆಬೇಕು. ಇಲ್ಲದಿದ್ದರೆ ಆ ಸಾಧನೆ ವ್ಯರ್ಥ. ನಿಸ್ವಾರ್ಥತೆಯೊಂದಿಗೆ ಫಲಾಪೇಕ್ಷೆಯೂ ಇರಬಾರದು. ಇವೆರಡು ಕಾರ್ಯಸಾಧನೆಯೆಂಬ ರಥದ ಗಾಲಿಗಳು. ಇವನ್ನೆಂದು ಕಾಂಗ್ರೆಸ್ಸಿಗರು ತಮ್ಮ ಬಾಳಿನಲ್ಲಿ ಆಚರಣೆಗೆ ತಂದಬೇಕು. ಅಧಿಕಾರವೆಂಬುದು ಮನುಷ್ಯನಿಗೆ ತನ್ನ ಸ್ಥಿತಿಯ ಅರಿವನ್ನು ಮರೆಯುವ ಸಾಧನ! ಅಧಿಕಾರ ಲಾಲಸೆಯಿಂದ, ಅಧಿಕಾರ ಸಂಪಾದನೆಗಾಗಿ ಯಾವ ಕಾರ್ಯವನ್ನೆಸಗಲಿಕ್ಕೂ ಮನುಷ್ಯ ಹಿಂಜರಿಯಲಾರ. ಆದಕಾರಣ ಅಧಿಕಾರ ಲಾಲಸಿಗಳಾದ, ಕಾಂಗ್ರೆಸ್ಸಿಗೆ ಕೇತುಪ್ರಾಯರಾಗಿರುವ ಕಾಂಗ್ರೆಸ್ಸಿಗರು ತಮ್ಮ ಇದೊಂದು ದೊಡ್ಡ ದುರ್ಗುಣವನ್ನು ವರ್ಜಿಸುವುದೊಳಿತು.

ಹಿಂದೊಮ್ಮೆ ಹೇಳಿದಂತೆ, ಚುನಾವಣಾ ಭಾಷಣದಲ್ಲಿ 'ಪ್ರತಿಪಕ್ಷೀಯಂನೇಕರು, "ಕಾಂಗ್ರೆಸ್ ಸರಕಾರ ಜನಸೇವೆಯ ಸೋಗಿನಲ್ಲಿ ಹಣ ದೋಚುತ್ತಿದೆ. ಆ ಹಣವನ್ನೇ ಉಪಯೋಗಿಸಿ, ಮಾರ್ಗ, ಸೇತುವೆ, ಸಂಕಗಳನ್ನು ಕಟ್ಟಿಸಿ, ತಾವು ಮಾಡಿದ ಮಹತ್ಕಾರ್ಯಗಳ ಕುರಿತು ಉನ್ದುದ್ದ ಭಾಷಣ ಮಾಡುತ್ತಾರೆ"ಂದು ದೂರಿದ್ದರು. ಇಲ್ಲಿ ವಿಚಾರಣೀಯವಾದ ಅಂಶವೊಂದಿದೆ. ಅದೇನೆಂದರೆ ಅಧೀಕಾರಾರೂಢವಾಗಿರುವುದು ಕಾಂಗ್ರೆಸ್ ಸರಕಾರವಾದರೂ, ಜನತೆಯ ಬೆಂಬಲದಿಂದ ಆರಿಸಲ್ಪಟ್ಟ ಪ್ರಜೆಗಳದ್ದೇ ಆದ **ಜನತಾ ಸರಕಾರ.** ಅದಕ್ಕೆ ಬೇರೆಡೆಗಳಿಂದ ಹಣ ನಸೂಲುಮಾಡುವ ಹಕ್ಕಿಲ್ಲ; ಪ್ರಜೆಗಳು ಕೊಟ್ಟ ತೆರಿಗೆಯೇ ಸರಕಾರಕ್ಕೆ ಬರುವ ಆಯ. ಇದಲ್ಲದೇ ಬೇರೆಲ್ಲಿಂದಲೂ ಅದು ಧನಾರ್ಜನೆಮಾಡುವುದಸಾಧ್ಯ. ಅಂದಮೇಲೆ ತಮ್ಮ ಉದ್ಧಾರಕ್ಕೆ ಪ್ರಜೆಗಳು ತಾವೇ ಸರಕಾರಕ್ಕೆ ತೆರಿಗೆ ತೆರಬೇಕೆಂಬುದು ಇಲ್ಲಿ ಗಮನೀಯವಾದ ಅಂಶ. ಕೆಲವೆಡೆಗಳಲ್ಲಿ ಕಾಂಗ್ರೆಸ್ ಸರಕಾರಗಳ ಸಚಿವರು ತಮ್ಮ ವೇತನದ ಕೆಲವಂಶಗಳನ್ನು ಕಡಿಮೆ ಮಾಡಿಕೊಂಡಿದ್ದಾರೆ ಆದುದರಿಂದ ಇದೊಂದು ವಿಷಯದ ಮಟ್ಟಿಗೆ ಪ್ರತಿಪಕ್ಷೀಯರ ಅಭಿಪ್ರಾಯ ನಮಗೆ ಸಮ್ಮತವಾಗಲಾರದು.

ಇಂದು ಒಳ ಜಗಳ ಕಾಂಗ್ರೆಸ್ಸಿನ ಅವನತಿಗೆ ಬಹುಮಟ್ಟಿಗೆ ಕಾರಣವಾಗಿದೆಯೆಂದರೂ ಸರಿಯೇ! ಪರಸ್ಪರ ಸಹಕಾರವಿಲ್ಲದೇ ಯಾವೊಂದು ಕೆಲಸವೂ ಸಾಗದೆಂಬುದು ಅನುಭವಸಿದ್ಧ ವಾಣಿ. ಹಿಂದೆ ಸ್ವಾತಂತ್ರ್ಯದ ಹೋರಾಟದ ಕಾಲದಲ್ಲೂ ಕಾಂಗ್ರೆಸ್ಸಿಗರು ಐಕ್ಯದಿಂದ, ಜನತೆಯ ಸಹಕಾರ ಪಡೆದು ಪರಕೀಯ ಸರಕಾರವನ್ನಿದಿರಿಸಿದುದರಿಂದಲೇ ಭಾರತವಿಂದು ಸ್ವತಂತ್ರವಾಗಿದೆ. ಅಂದಿನಂತೆ ಕಾಂಗ್ರೆಸ್ಸಿಗರು ಇಂದು ಕೂಡ ಒಳಜಗಳಗಳನ್ನು ಮರೆತು ಅಧಿಕಾರಕ್ಕಾಗಿ ಹೋರಾಡದೆ, ನಿಸ್ವಾರ್ಥದೃಷ್ಟಿಯಿಂದ ಜನ ಸೇವೆಗೈದಲ್ಲಿ ಕಾಂಗ್ರೆಸ್ಸಿಗೆ ಭವ್ಯವಾದ ಭವಿಷ್ಯ ಕಾದಿದೆಯೆಂಬುದು ನಿಸ್ಸಂದೇಹ. ಕಾಂಗ್ರೆಸ್ಸು ಜನಪ್ರೀತವಾಗಿ, ಬಡವರ ಬಂಧುವಾಗಿ ಮೆರೆಯುವುದರಲ್ಲಿ ಅನುಮಾನವಿಲ್ಲ. ಕಳೆದ ಚುನಾವಣೆಯಲ್ಲಿ ಕೆಲಪೆಡೆಗಳಲ್ಲಿ ಕಾಂಗ್ರೆಸ್ಸಿನ ಪ್ರತಿಪಕ್ಷಗಳು ಅದರ (ಕಾಂಗ್ರೆಸ್ಸಿನ) ದುರ್ಬಲತೆಯನ್ನು ತಮ್ಮ ವಿಜಯಕ್ಕಾಗಿ ಜೆನ್ನಾಗಿ ಉಪಯೋಗಿಸಿಕೊಂಡಿವೆ. ಆದರೆ ಇನ್ನುಮುಂದೆ ಕಾಂಗ್ರೆಸ್ಸು ಹಾಗೆ ಅವಕಾಶವನ್ನೀಯಬಾರದೆಂಬ ನಮ್ಮ ಆಕಾಂಕ್ಷೆ. ಮುಂದಿನ ಚುನಾವಣೆಯ ಕಾಲದಲ್ಲಿ ಕಾಂಗ್ರೆಸ್ಸು ಜನತೆಯ ನೆಚ್ಚಿನ ಪಕ್ಷವಾಗಿ ಶಕ್ತಿಯುತವಾಗಬೇಕು. ತನ್ಮೂಲಕ ದೇಶದ ಆಗ್ರಸ್ಥಾನದಲ್ಲಿದ್ದುಕೊಂಡು, ಸರಕಾರವನ್ನು ಅಕ್ಯತ್ತಮವಾಗಿ ನಡೆಸಿಕೊಂಡು, ಸಮಾಜವಾದೀ ಮಾದರಿಯ ಸಮಾಜ ರಚನೆ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ಪ್ರಚಾರಿ, ಸುಂಕಮುನ ನಿಷೇಧ-ಮುಂತಾದ ಧ್ಯೇಯಗಳನ್ನು ಸಾಧಿಸಿ ಭಾರತದಲ್ಲಿ ರಾಮರಾಜ್ಯದ ಸ್ಥಾಪನೆಮಾಡಬೇಕು. ಭಾರತವನ್ನು ಜಗತ್ತಿನಲ್ಲಿ ಆದರ್ಶ ಪ್ರಜಾಪ್ರಭುತ್ವ ವಾದೀರಾಷ್ಟ್ರವೆಂದು ಕೊಂಡಾಡುವಂತೆ ಮಾಡಬೇಕು. ಇದೇ ನಮ್ಮೆಲ್ಲರ ಆಕಾಂಕ್ಷೆ. ಈ ಆಕಾಂಕ್ಷೆಯು ಈಡೇರುವಂತೆಯೂ, ಕಾಂಗ್ರೆಸ್ಸು ಶಕ್ತಿಯುತ ಸಂಸ್ಥೆಯಾಗಿ ಚಿರಾಯುವಾಗಿ ಮೆರೆಯಲೆಂದು ಪರಮಾತ್ಮನಲ್ಲಿ ಪ್ರಾರ್ಥನೆ, ಹಾಗೆಯೇ ನಾವು ಕಾಂಗ್ರೆಸ್ಸಿನ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿ ಸಹಕರಿಸುವಾ!

ಜೈಹಿಂದ್!

—ಎಮ್. ರಘುನಂದನ ರಾವ್,
ಹಲ್ಲೂರು.

ಸೂಚನೆ

"ನವಯುಗ"ದ ಲೇಖಕ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಖರ್ಚೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.

ಟ್ರೇಡ್ ಮಾರ್ಕ್



ಸಂ|| A. R. ಅಯ್ಯರ್

100 ವರ್ಷಗಳ ಖ್ಯಾತಿಗಳಿಸಿದ ಸಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಕೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, **ನಪುಂಸಕತೆಯನ್ನು** ನಿವಾರಿಸಿಕೊಳ್ಳುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ಯಾಟಲಾಗ್ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನ. ಯು.)

698, "ಸಂತಾನ ಸಿಂದೂರ ಸದನ", ಚಾಮರಾಜ ತೋಟ, ಮೈಸೂರು-1 (S.I

ಸೂಚನೆ

"ನವಯುಗ"ದ ಸಂಬಂಧ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಖರ್ಚೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.

ಸಹರಾಷ್ಟ್ರ ಸಮ್ಮೇಳನ

ಸೌಹಾರ್ದ ವಾತಾವರಣದಲ್ಲಿ ಯಶಸ್ವೀ ಮುಕ್ತಾಯ— ವಿಚಾರ ವಿನಿಮಯವೇ ಹಿತಸಾಧನೆಗೆ ದಾರಿ.

ಜೂನ್ ತಿಂಗಳ ೨೬ನೆ ದಿನಾಂಕದಂದು ಪ್ರಾರಂಭವಾದ ಬ್ರಿಟಿಷ ಸಹರಾಷ್ಟ್ರ ಪ್ರಧಾನಿಗಳ ಸಮ್ಮೇಳನವು ಕೆಲವೊಂದು ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ ಸುಯೇಜ್ ಕಾಲುವೆಯ ಬಿಕ್ಕಟ್ಟು, ಹಂಗೇರಿಯ ಗಲಭೆ ಮತ್ತು ಇಸ್ರಾಯೆಲ್-ಈಜಿಪ್ಟ್‌ಗಳ ಘರ್ಷಣೆ ಇತ್ಯಾದಿ ಪ್ರಮುಖ ಘಟನೆಗಳ ನಂತರ, ಒಂದು ಸೇರಿದ ಪ್ರಧಾನಿಗಳು ಮುಖ್ಯತಃ ವಿಶ್ವಶಾಂತಿಯ ಕುರಿತಾಗಿ ಅಸಕ್ತಿಯನ್ನು ವಹಿಸಿದ್ದರೆಂದರೆ ತಪ್ಪಾಗಲಾರದು ದಕ್ಷಿಣ ಆಫ್ರಿಕದ ಪ್ರತಿನಿಧಿಗಳಾಗಿ ಸಮ್ಮೇಳನದಲ್ಲಿ ಭಾಗವಹಿಸಿದ ಮಂತ್ರಿ ಇರಿಕ್ ಎಂ. ಲೊವೊರವರ ಮಾತಿನಲ್ಲಿ ಹೇಳುವುದಾದರೆ, ಈ ಸಮ್ಮೇಳನದಲ್ಲಿ ಈ ಮೊದಲಿನ ಸಮ್ಮೇಳನಗಳಿಗಿಂತ ಅಭಿಪ್ರಾಯ ಹಾಗೂ ದೃಷ್ಟಿಗಳ ವಿನಿಮಯವು ಸ್ಪಷ್ಟವಾಗಿ ನಡೆಯಿತು ಹತ್ತು ಸಹರಾಷ್ಟ್ರಗಳಿರುವಾಗ ಅವುಗಳ ಧೋರಣೆಗಳಲ್ಲಿ ಭಿನ್ನಾಭಿಪ್ರಾಯವಿರುವುದು ಸಹಜವಾಗಿದ್ದರೂ, ಈ ಭಿನ್ನಾಭಿಪ್ರಾಯಗಳು ಸುಸ್ಪಷ್ಟವಾಗಿಯೇ ಮಂಡಿಸಲ್ಪಟ್ಟವು ಇದರಿಂದಾಗಿ ಈ ಸಹರಾಷ್ಟ್ರಗಳು ಸ್ಪಷ್ಟಾಭಿಪ್ರಾಯ ವಿನಿಮಯದಿಂದಾಗುವ ಲಾಭವನ್ನು ಗಮನಿಸಿದರು.

ದಶಸಹರಾಷ್ಟ್ರ ಪ್ರಧಾನಿಗಳ ಪರಿಷತ್ತು ೨೬ನೆ ದಿನಾಂಕದಂದು ಕೊನೆಗೊಂಡಿತು. ಘಾನವು ಸ್ವಾತಂತ್ರ್ಯವನ್ನು ಪಡೆದು ಸಹರಾಷ್ಟ್ರವಾಗಿದ್ದುಕೊಂಡು ಈ ಸಮ್ಮೇಳನದಲ್ಲಿ ಪ್ರಪ್ರಥಮವಾಗಿ ಭಾಗವಹಿಸಿತು ಉಳಿದ ಸಹರಾಷ್ಟ್ರಗಳ ಪ್ರಧಾನಿಗಳು ಘಾನವನ್ನು ಸಹರಾಷ್ಟ್ರದ ಸಂಪೂರ್ಣ ಸದಸ್ಯ ರಾಷ್ಟ್ರವನ್ನಾಗಿ ಸ್ವಾಗತಿಸಿದರು

ತಮ್ಮ ಚರ್ಚೆಯ ಸಮಯದಲ್ಲಿ ಎಲ್ಲ ಪ್ರಧಾನಿಗಳೂ ತಮ್ಮೆಲ್ಲ ರಾಷ್ಟ್ರಗಳಿಗೂ ಸಾಮಾನ್ಯವೆನಿಸಿದ ಪ್ರಮುಖ ಅಂತಾರಾಷ್ಟ್ರೀಯ ಪ್ರಶ್ನೆಗಳನ್ನು ಪರಿಶೀಲಿಸಿದರು ಸ್ವಚ್ಛಂದ ಸ್ವತಂತ್ರ ರಾಷ್ಟ್ರಗಳಲ್ಲಿ ಕೆಲವೊಂದು ಭಿನ್ನ ದೃಷ್ಟಿ ಮತ್ತು ಭಿನ್ನಾಭಿಪ್ರಾಯಗಳಿರುವುದು ಸ್ವಾಭಾವಿಕ ಆದರೆ, ಈ ರಾಷ್ಟ್ರಗಳ ಸಮ್ಮೇಳನವು ಮುನ್ನಡೆಯಲ್ಲಿ ವಿಶಾಲ ಸಮಾನತೆ ಮತ್ತು ಉದ್ದೇಶಗಳನ್ನಿಟ್ಟುಕೊಂಡು ಮುಂದುವರಿಯಿತು ತಮ್ಮ ಸ್ವತಂತ್ರಾಭಿಪ್ರಾಯಗಳನ್ನು ಮಂಡಿಸಿ, ಸಹರಾಷ್ಟ್ರಗಳ ಅಭಿಪ್ರಾಯವನ್ನು ಗ್ರಹಿಸಿಕೊಂಡು ಅವುಗಳ ದೃಷ್ಟಿಯನ್ನೂ ತಿಳಿದು, ತನ್ನ ಹಿತದೊಂದಿಗೆ ಸಹರಾಷ್ಟ್ರಗಳ ಹಿತವನ್ನೂ ಇಟ್ಟುಮುನ್ನಡೆಯಲು ಈ ಸಮ್ಮೇಳನವು ಮಾರ್ಗದರ್ಶನಮಾಡಿತು

ಎಲ್ಲ ಸಹರಾಷ್ಟ್ರಗಳ ಪ್ರಪ್ರಥಮೋದ್ದೇಶವು ವಿಶ್ವಶಾಂತಿ ಮತ್ತು ಹಿತ್ರತೆ ರಾಷ್ಟ್ರಗಳೊಂದಿಗೆ ಪರಸ್ಪರ ಸಹಕಾರ ಮತ್ತು ಸೌಹಾರ್ದದಿಂದಲೆ ಇದು ಸಾಧ್ಯವೆಂದು ಎಲ್ಲ ಪ್ರಧಾನಿಗಳೂ ಅಭಿಪ್ರಾಯಪಟ್ಟರು. ರಾಷ್ಟ್ರಗಳೊಂದಿಗೆ ಸಹಕಾರ ತತ್ವವನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಲೆಂದೇ ಯುಕ್ತ ರಾಷ್ಟ್ರಸಂಘವಿದೆ ಆದರೆ, ಈ ಸಂಘವು ತನ್ನ ಉದ್ದೇಶವನ್ನು ಸಾಧಿಸುವಲ್ಲಿ ಅಸಮರ್ಥ ಮತ್ತು ಅಶಕ್ತವಾಗಿರುವುದನ್ನು ಸಮ್ಮೇಳನವು ಗಮನಿಸಿತು. ಯುಕ್ತರಾಷ್ಟ್ರಸಂಘದ ತಾಂತ್ರಿಕ ಪಟನಲ್ಲಿ ಕೂಡಿತವಾದ ತತ್ವಗಳನ್ವಯಮಾಗಿ ವಿಶ್ವವಿಡೀ ಶಾಂತಿ, ನ್ಯಾಯ ಮತ್ತು ಸಕಾರಣವನ್ನು ರಕ್ಷಿಸಿಕೊಳ್ಳುವ ಸಲುವಾಗಿ ಅದನ್ನು ಭದ್ರಪಡಿಸಲು ಮತ್ತು ಸುದಾರಿಸಲು ಕ್ರಮಬದ್ಧ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅಗತ್ಯವೆಂದು ತಿಳಿದರು.

ತಮ್ಮ ಹಿಂದಿನ ಸಮ್ಮೇಳನದಿಂದ ಇಂದಿನ ವರೆಗೆ ನಡೆದ ಅಭಿವೃದ್ಧಿಗಳ ಕುರಿತಾಗಿ ಚರ್ಚಿಸುವ ವೇಳೆಯಲ್ಲಿ, ಸಹರಾಷ್ಟ್ರ ಮಂತ್ರಿಗಳು ಹಂಗೇರಿಯ ಅನ್ಯಾಯದ ಬಗ್ಗೆ ವಿಶೇಷವಾಗಿ ಹಂಬಲಿಸಿದರು ಯುಕ್ತರಾಷ್ಟ್ರ ಸಂಘದ ಸಾಮಾನ್ಯ ಸಭೆಯ ಅದು ನೇಮಿಸಿದ ವಿಶೇಷ ಸಮಿತಿಯು ಈ ವಿಷಯದಲ್ಲಿ ಒಪ್ಪಿಸಿದ ವರದಿಯ ಕುರಿತಾಗಿ, ಅಭಿಪ್ರಾಯಗಳನ್ನು ಪ್ರಕಟಿಸಲು ಯುಕ್ತ ರಾಷ್ಟ್ರ ಸಂಘಕ್ಕೆ ಅವಕಾಶವನ್ನೊದಗಿಸುವುದೆಂಬುದನ್ನು ಗಮನಿಸಿದರ

ನಿಶ್ಶಸ್ತ್ರೀಕರಣದ ಅಭಿವೃದ್ಧಿ ಪಥದ ಕುರಿತಾಗಿ ತಮ್ಮ ಈ ಅಧಿವೇಶನದಲ್ಲಿ ಸಹರಾಷ್ಟ್ರ ಮಂತ್ರಿಗಳು ವಿಮರ್ಶಿಸಿದರು. ನಿಶ್ಶಸ್ತ್ರೀಕರಣದ ಪ್ರಥಮ ಹೆಜ್ಜೆಯಾಗಿ ಜುಲೈ ತಿಂಗಳು ನಿಶ್ಶಸ್ತ್ರೀಕರಣ ಉಪಸಮಿತಿಯಲ್ಲಿ ಅಮೇರಿಕದ ಸಂಯುಕ್ತ ರಾಜ್ಯಗಳು, ಬ್ರಿಟನ್, ಕೆನಡಾ ಮತ್ತು ಫ್ರಾನ್ಸುಗಳ ಪರವಾಗಿತ್ತ ಕೂಡಿನೆಗಳನ್ನು ಗಮನಿಸಿದರು ಸಂಯಮ ವತ್ತು ಬಿರುಸುತನಗಳನ್ನು ಕಡಿಮೆ ಮಾಡಿಕೊಳ್ಳುವುದರಿಂದಲೇ ವಿಶ್ವದ ರಾಷ್ಟ್ರಗಳಲ್ಲಿ ನಿಶ್ಶಸ್ತ್ರೀಕರಣ ವಿಷಯದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದು ಸಾಧ್ಯವೆಂದು ಮನಗಾಣಿಸಿದರು.

ಮಧ್ಯಪೂರ್ವದ ಅಂತಾರಾಷ್ಟ್ರೀಯ ಸಂಸ್ಯೆಗಳನ್ನು ಸಹ ರಾಷ್ಟ್ರಮಂತ್ರಿಗಳು ಚರ್ಚಿಸಿದರು ಅರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯೇ ಮಧ್ಯಪೂರ್ವದಲ್ಲಿ ಸ್ಥಿಮಿತ ಪರಿಸ್ಥಿತಿಯನ್ನು ಸೃಷ್ಟಿಸಲು ಸಾಧನವೆಂದವರು ಒಪ್ಪಿದರು. ಅರಬ ರಾಜ್ಯ ಮತ್ತು ಇಸ್ರಾಯೆಲ್‌ಗಳ ನಡುವಣ ಬಿರುಕು, ಅರಬ ನಿರಾಶ್ರಿತರು, ಮತ್ತು ಸುಯೇಜ್ ಕಾಲುವೆ ಸಂಬಂಧದಲ್ಲಿ ನಿರ್ಣಯಕ್ಕೆ ಬಾರದ ಸವ ಸ್ಯೆಗಳ ಕುರಿತಾಗಿ ತೀವ್ರ ಕಾರ್ಯಕ್ರಮ ಕೈಗೂಳ್ಳುವ ಅವಶ್ಯಕತೆಯಿರುವುದನ್ನು ಒಪ್ಪಿದರು ಈ ಎಲ್ಲ ವಿಚಾರಗಳೂ ಸೌಹಾರ್ದ ಬಾವನೆಯಿಂದ ಚರ್ಚೆಹರಿಯಬೇಕೆಂದು ತಿಳಿದರು ದೂರ ಪ್ರಾಚ್ಯ ಮತ್ತು ಆಗ್ನೇಯ ಏಶ್ಯಾದ ರಾಷ್ಟ್ರಗಳಲ್ಲಿ ಬಿರುಕುಗಳನ್ನು ಕೋಗಲಾಡಿಸಿ, ಶಾಂತಿಸ್ಥಾಪನೆ, ಸ್ಥಿರತೆ ಮತ್ತು ರಾಜಕೀಯ ಸ್ವಾತಂತ್ರ್ಯಗಳನ್ನು ಕಾಪಾಡುವತ್ತ ಸಂಬಂಧಪಟ್ಟ ಸಹರಾಷ್ಟ್ರ ಸರಕಾರಗಳ ಗಮನವನ್ನು ಸೆಳೆಯಿತು

ಈ ಪ್ರದೇಶದ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಜೀವನ ಮಟ್ಟದ ಹೆಚ್ಚಳ, ಮತ್ತು ಬೆಳೆಯುತ್ತಿರುವ ಆರ್ಥಿಕಾಭಿವೃದ್ಧಿಗಳಿಗಾಗಿ ಕೊಲಂಬೊ ಯೋಜನೆಯನ್ನಯ ಮಾಡಿದ ವರ್ಷದ ಸಹಾಯಗಳನ್ನು ಸ್ವಾಗತಿಸಿದರು ಅರ್ಥಿಕ ಪ್ರಶ್ನೆಯ ಸಾಮಾನ್ಯ ಚರ್ಚೆಯಲ್ಲಿ ಸಹರಾಷ್ಟ್ರ ಮಂತ್ರಿಗಳು ತಮ್ಮ ದೇಶಗಳಲ್ಲಿ ಈಗ ನಡೆಯುತ್ತಿರುವ ಬೃಹದಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಸ್ತಾವಿಸಿ, ತಮ್ಮ ವಿಶೇಷ ಗಮನವನ್ನು ಇತ್ತರು, ಈ ಕಾರ್ಯಕ್ರಮಗಳು ಅಧಿಕ ಮಟ್ಟದ ಆಂತರಿಕ ಉಳಿತಾಯವನ್ನು ಬಯಸುತ್ತವೆ ಮತ್ತು ಈ ಉಳಿತಾಯವು ಸಿದ್ಧಾನವಾಗಿ ಆಂತರಿಕ ವಿದಾನಗಳಿಂದಲೆ ಪಡೆಯಬಕ್ಕುದಾಗಿದೆ ಆದರೂ ಇತರ ದೇಶಗಳ ಒಂಡವಾಳವನ್ನು ಉಪಯೋಗಿಸುವ ಸದವಕಾಶಗಳನ್ನೂ ಒದಗಿಸುತ್ತದೆ

ಸಹರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯಲ್ಲಿ ಬ್ರಿಟನು ತನ್ನ ಇದು ವರೆಗಿನ ಪ್ರಮುಖ ಪಾತ್ರವನ್ನು ಹಾಗೆಯೇ ಉಳಿಸಿಕೊಳ್ಳುವುದಲ್ಲದೆ, ಇತರ ಸದಸ್ಯ ರಾಷ್ಟ್ರಗಳಿಂದಲೂ ಗಮನೀಯ ವೃದ್ಧಿಯಿಂದ ಸಹಾಯವು ದೊರೆಯುವುದು ಇನ್ನು ಮುಂದಕ್ಕೂ ಒಂಡವಾಳವನ್ನೊದಗಿಸುವ ವಿಚಾರದಲ್ಲಿ ಯೋಗ್ಯ ಶರ್ತ್ತಗಳ ಮೇಲೆ ಇತರ ವಿಧಾನಗಳಿಂದಲೂ ಹಣವನ್ನೊದಗಿಸಲು ಉತ್ತೇಜನವೀಯುವುದು ಅಗತ್ಯವಾಗಿದೆ

ತಮ್ಮ ಹಿಂದಿನ ಸಮ್ಮೇಳನಾನಂತರದ ವ್ಯಾಪಾರ ಮತ್ತು ಪಾವತಿಯತ್ತ ಸಹ, ಸಹರಾಷ್ಟ್ರ ಮಂತ್ರಿಗಳು ದೃಷ್ಟಿ ಹರಿಸಿ ಅಲ್ಲಿ ನಡೆದ ಅಭಿವೃದ್ಧಿಯನ್ನು ಗಮನಿಸಿದರು ಈ ಸಂದರ್ಭದಲ್ಲಿ ಯುರೋಪಿಗಾಗಿ ಔದ್ಯೋಗಿಕ ನಿರಾತಂಕ ವ್ಯಾಪಾರವನ್ನು ವ್ಯವಹಾರಕ್ಕೆ ತಯವ ಸೂಚನೆಯನ್ನೂ ಚರ್ಚಿಸಿದರು ಈ ವಿಷಯದಲ್ಲಿ ಸಹರಾಷ್ಟ್ರಗಳಲ್ಲಿ ಕೆಲವೊಂದರ ಮೇಲೆ ಮಾಡಬಹುದಾದ ಪರಿಣಾಮಗಳ ಕುರಿತು ವಿಚಾರ ವಿನಿಮಯವನ್ನು ಮಾಡಿಕೊಳ್ಳುವ ಉದ್ದೇಶದಿಂದ ಮುಂದಿನ ವಾರ ಲಂಡನ್ನಿನಲ್ಲಿ ಸಹರಾಷ್ಟ್ರಗಳ ಅಧಿಕಾರಿಗಳು ಪರಿಶೀಲನೆ ನಡೆಸಬೇಕೆಂದು ಮಂತ್ರಿಗಳಿಷ್ಟರೂ ಒಪ್ಪಿದರು ಅಂತಾರಾಷ್ಟ್ರೀಯ ಬೇಂಕಿನ ಇಂಟರ್ ನ್ಯಾಶನಲ್ ಮೊನೆಟರಿ ಫಂಡನ ವಾರ್ಷಿಕಾಧಿವೇಶನವು ಅದರ ಪುನಾರಚನೆ ಮತ್ತು ಅಭಿವೃದ್ಧಿಯ ಕುರಿತು ಚರ್ಚಿಸಲು ಸಪ್ಟಂಬರ ತಿಂಗಳಲ್ಲಿ ವಾಶಿಂಗ್‌ಟನ್ನಿನಲ್ಲಿ ನಡೆಯುವುದೆಂದೂ ಮಾನ್ಯ ಮಂತ್ರಿವರ್ಯರೆಲ್ಲರೂ ತಿಳಿದುಕೊಂಡರು.

ಈ ಅಧಿವೇಶನವು ಸಹರಾಷ್ಟ್ರಗಳ ಆರ್ಥಿಕ ಮಂತ್ರಿವರ್ಯರ ಸಭೆಯಿಂದ ಪ್ರಾರಂಭವಾಗಬೇಕು ಕೆನಡದ ಪ್ರಧಾನಿಗಳು ಈ ಮಂತ್ರಿಗಳ ಸಭೆಯನ್ನು ಈ ವರ್ಷ ತನ್ನ ದೇಶದ ರಾಜಧಾನಿಯಾದ ಒಟ್ಟಾವ ಲ್ಲಿ ನಡೆಯಿಸಬೇಕೆಂದು ಆಮಂತ್ರಣ ವಿತ್ತರು. ಕಳೆದ ೩೦ ವರ್ಷಗಳಿಂದಲೂ ಕೆಲಸಮಾಡುತ್ತಾಬಂದ ಸಹರಾಷ್ಟ್ರ ಆರ್ಥಿಕ ಸಮಿತಿಯ ಕಾರ್ಯದಕ್ಷತೆಯನ್ನು ಪ್ರಶಂಸಮಾಡಿದರು ಈ ಸಮಿತಿಯು ಸಹರಾಷ್ಟ್ರಗಳ ಆರ್ಥಿಕ ಆಕರಗಳ ಕಡೆಗೆ, ಅವಕಾಶಗಳ ವಿಸ್ತಾರಣೆಗೆ ಸಂಬಂಧಪಟ್ಟ ಸರಕಾರಗಳ ಗಮನವನ್ನೆಳೆಯುವ ವಿಷಯವಾಗಿ ಪರಿಶೀಲಿಸಲು ಮತ್ತು ಸಲಹೆಯೀಯಲು ಎಲ್ಲ ರಾಷ್ಟ್ರಗಳಿಗೂ ಆಮಂತ್ರಿಸಲ್ಪಡಬೇಕೆಂಬುದನ್ನು ಒಪ್ಪಿದರು

ಅಣುಶಕ್ತಿಯನ್ನು ಶಾಂತಿ ಕಾರ್ಯಗಳಿಗಾಗಿ ಉಪಯೋಗಿಸುವ ಬಗ್ಗೆ ಸಹರಾಷ್ಟ್ರಗಳ ನಡುವೆ ಯಿರುವ ಸಹಕಾರದ ಅಭಿವೃದ್ಧಿಯನ್ನು ಕುರಿತು ವಿಮರ್ಶಿಸಿದರು ತಮ್ಮ ರಾಷ್ಟ್ರಗಳ ಶಾಂತಿಯುಕ್ತ ಅಣುವೃದ್ಧಿ ಕಾರ್ಯಗಳಿಗೆ ಅಣುಶಕ್ತಿಯು ಮಾಡಬಹುದಾದ ಸಹಾಯದ ಪ್ರಮಾಣತೆಯು ಬೆಳೆಯುತ್ತಿರುವುದನ್ನು ಎಲ್ಲ

(ಅನೇ ಸುಟಿ ನೋಡಿರಿ)

ವಿಯೆಟ್‌ನಾಮಿನ ಅಧ್ಯಕ್ಷ ನ್ಗೋ ದಿನ್‌ಡೀಮರು ಇತ್ತೀಚೆಗೆ ಅಮೇರಿಕದ ಸಂಯುಕ್ತ ರಾಜ್ಯವನ್ನು ಸಂದರ್ಶಿಸಿದ ವೇಳೆಯಲ್ಲಿ ಅಲ್ಲಿನ ಅಧ್ಯಕ್ಷ ಐಸೆನ್‌ಹೋವರರು ರಾಜ್ಯಾಂಗ ಕಾರ್ಯದರ್ಶಿ ಡಲ್ಲೆಸರೊಂದಿಗೆ ಸ್ವಾಗತಿಸುತ್ತಿದ್ದಾರೆ

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc No 466 N/50 date 2-12-1950 of the Director of public Instruction Madras

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೧೧-೭-೧೯೫೭	೪೪

ರಶ್ಯದ ಸ್ಥಾನಚ್ಯುತರು

ಮೊನ್ನೆಯಿಂದ ಬಂದಿರುವ ವರದಿಗಳು ರಶ್ಯದ ರಾಜಕಾರಣದಲ್ಲಿ ಎಲ್ಲವೂ ಸರಿಯಾಗಿಲ್ಲ ಎಂಬುದನ್ನು ಚೆನ್ನಾಗಿ ಸ್ಪಷ್ಟಗೊಳಿಸುತ್ತವೆ. ಅಲ್ಲಿಯ ವರಿಷ್ಠ ಅಧಿಕಾರಿಗಳ ಮಂಡಳದಿಂದ ನಾಲ್ವರು ಪ್ರಸಿದ್ಧ ವ್ಯಕ್ತಿಗಳನ್ನು ಈ ವಾರ ಹೊರದೂಡಲಾಯಿತು; ಮತ್ತು ಹಾಗೆ ಹೊರದೂಡುವಾಗ ರಶ್ಯದ ಸರಕಾರಿ ಧೋರಣೆಗೆ ಆತಂಕವೊಡ್ಡಿದವರೆಂದೂ ಸರಕಾರವನ್ನು ತಮ್ಮ ಕೈಗೆ ತೆಗೆದುಕೊಳ್ಳುವಂತಹ ಹೀನ ಕಾರ್ಯವನ್ನೆಸಗಿದವರೆಂದೂ ಅವರನ್ನು ಜರೆಯಲಾಯಿತು. ದೇವರದಯೆಯಿಂದ ಅರೋಪಗಳನ್ನು ಹೇರಿ ಈ ಪ್ರಸಿದ್ಧ ಪುರುಷರನ್ನು ಅಧಿಕಾರದಿಂದ ದೂಡುವಷ್ಟಕ್ಕೆ ಈ ಪ್ರಕರಣ ನಿಂತಿದೆ- ರಶ್ಯದ ನಿಜವಾದ ಸಂಪ್ರದಾಯವನ್ನೆ ಅನುಸರಿಸುವುದಾದರೆ ಗುಂಡಿನೇಟಿಗೆ ಈ ಮಹಾನುಭಾವರು ಬಲಿಯಾಗಬೇಕು! ಹಾಗೆ ಅವರನ್ನು ಗುಂಡಿನ ಬಾಯಿಗೆ ಬಲಿಗೊಟ್ಟು ವಾರ್ತೆಯೇನೂ ಬಂದಿಲ್ಲ. ಆದಾಗ್ಯೂ ಈ ಮಾಜಿ ಧುರೀಣರು ಈಗ ಎಲ್ಲಿದ್ದಾರೆಂದು ತಿಳಿದಿಲ್ಲವೆಂಬ ಸುದ್ದಿಯೊಂದುಂಟು. ಅದೇನೇ ಇರಲಿ, ಅವರನ್ನು ಜೀವಸಹಿತ ಬಿಟ್ಟಿದ್ದಾರೆಂದೇ ನಂಬೋಣ! ರಶ್ಯದಲ್ಲಿ ಹೀಗೇಕೆ ಸ್ಥಿತ್ಯಂತರಗಳಾಗುತ್ತವೆ? ಹೊರದಬ್ಬಲಾದ ಪ್ರಮುಖರು ವಸ್ತ್ರಾ ಕಮ್ಯುನಿಸ್ಟರೆಂದು ಹೆಸರಾದವರಾಗಿದ್ದಾರೆ- ಉಪಾಹಾರಕ್ಕೆ, ಮೆಲೆಂಕಾಫರು ಸ್ಟಾಲಿನ್ನರ ಮಾಣದ ಬಳಿಕ ಸುಮಾರು ಎರಡು ವರ್ಷಗಳ ವರೆಗೆ ಪ್ರಧಾನಿಪಟ್ಟದಲ್ಲಿದ್ದ ವ್ಯಕ್ತಿ; ಆಗ ಅವರು ರಶ್ಯದ ಧೋರಣೆಯನ್ನು ಅದಷ್ಟು ಮಟ್ಟಗೆ ತಿದ್ದಲು ಪ್ರಯತ್ನಿಸಿದರು. ಸ್ಟಾಲಿನ್ನರ ಉಕ್ಕಿನಮುಷ್ಟಿ ಬಿಗಿಯಾದ ರಾಜ್ಯಸೂತ್ರಗಳನ್ನು ತಮ್ಮವೇ ಸಡಿಲಿಸಿ, ರಶ್ಯದ ಸರಕಾರ ಪಾಶ್ಚಾತ್ಯಭಾವದಲ್ಲಿ ಹೆಚ್ಚಿನ ಮಿದ ತನ್ನೆಯೂ ಅಂತರಾಷ್ಟ್ರೀಯ ರಂಗದಲ್ಲಿ ಹೆಚ್ಚಿನ ಸೌಹಾರ್ದ ಪೂರ್ಣವಾಗಬೇಕೆಂದು ಸಂಕಲ್ಪಿಸಿ ಅದಕ್ಕೆ ತಕ್ಕ ಹಾಗೆ ನಡೆಯಲು ಸ್ವಾಮಾಣಿಕವಾಗಿ ಪ್ರಯತ್ನಿಸಿದ ವ್ಯಕ್ತಿ ಮೆಲೆಂಕಾಫರು. ಅವರಿನ್ನೂ ಇನ್ನತ್ತರ ಹೊಸ್ತಿಲನ್ನು ದಾಟಿಲ್ಲ ಎಂದ ಮೇಲೆ ಮುದುಕರನ್ನು ಹೊರದೂಡಿ ಬಿಸಿ ನೆತ್ತರನ್ನು ತುಂಬಿಸುತ್ತಿದ್ದೇವೆ ಎಂದೆನ್ನುವಂತಿಲ್ಲ. ಮೆಲೆಂಕಾಫರು ಈಗ ತಪ್ಪು ಧೋರಣೆಯನ್ನು ಅನುಸರಿಸುತ್ತಿದ್ದಾರೆಂದು ಅರೋಪಿಸುವವರು ನ್ಯಾಯು ಪಕ್ಷಪಾತಿಗಳೆಂದು ಹೇಳುವಂತಿಲ್ಲ. ಇದೇ ಮಾತನ್ನು ಶ್ರೀಮೋವರ ವಿಷಯದಲ್ಲೂ ಹೇಳಬಹುದು. ಅವರು ಕಮ್ಯೂನಿಸ್ಟರ ಧೋರಣೆ ಧೋರಣೆಗಳನ್ನು ಅಧಿಕೃತವಾಗಿ ಪ್ರತಿ ಬಿಂಬಿಸುವ ಮುಖಪತ್ರವೆನ್ನಲಾದ "ಪ್ರಾವ್ದಾ"ದ ಸಂಪಾದಕರಾಗಿದ್ದರು— ಈ ಪುಣ್ಯಾತ್ಮನೇ ಈಗಿನ ಸರಕಾರಿ ಧೋರಣೆಗೆ ಅಡ್ಡಗಾಲನ್ನು ಹಾಕುತ್ತಿದ್ದಾನೆಂದರೆ ಕಮ್ಯೂನಿಸ್ಟರ ಧೋರಣೆಯಾದರೂ ಏನೆಂಬ ಸಂಶಯ ತಾನಾಗಿಯೇ ಏಳುತ್ತದೆ. ಇವರು ಸಹ ಇನ್ನೂ ತರುಣರೇ ಆಗಿದ್ದಾರೆ. ಅಲ್ಲದೆ, ರಶ್ಯದ ಸ್ನೇಹಿತರ ಬಳಗವನ್ನು ವಿಸ್ತರಿಸುವುದಕ್ಕಾಗಿ ಈಜಿಪ್ಟ ಮತ್ತಿತರ ದೇಶಗಳಿಗೆ ತಾನು ವಿದೇಶಸಂತ್ರಿಯಾಗಿದ್ದ ಕಾಲದಲ್ಲಿ ಖುದ್ದಾಗಿ ಭೇಟಿಕೊಟ್ಟು ಹೆಚ್ಚಿನ ಪ್ರಯತ್ನವನ್ನು ಮಾಡಿದವರಾಗಿದ್ದಾರೆ. ಅವರಿಗೂ ಸಹ ಬಂದ ಗತಿ ಇದು. ಇನ್ನು ಮೊಲೋಟೋಫರಂತೂ ಸ್ಟಾಲಿನ್ನರ ಬಲಗೈಯಂತಿದ್ದವರು ಅಲ್ಲದೆ ಅನೇಕ ವರ್ಷಗಳ ಕಾಲ ರಶ್ಯದ ವಿದೇಶ ಧೋರಣೆಯ ಸೂತ್ರಧಾರರಾಗಿದ್ದರು. ಅವರು ಮುದುಕ ನಿಜ; ಆದರೆ ನಿಜವಾದ ಕಮ್ಯುನಿಸ್ಟನೆಂದರೆ ತಪ್ಪಲ್ಲ ಅಂತೂ ಹಳೆಯ ಹುಲಿಯಾದ ಅವರ ಮೇಲೆ ಈಗ ಭಾರಿ ಗಂಭೀರವಾದ ಅರೋಪಗಳನ್ನು ಹೇರಲಾಗಿದೆ. ಹಿಂದೆ ಸ್ಟಾಲಿನ್ನರ ಕೂಟದಲ್ಲಿದ್ದ ಬೆರಿಯಾರಿಗೆ ತೋಸಿನ ಬಾಯಿಗೆ ಎದೆ ಕೊಡಬೇಕಾದ ಪ್ರಸಂಗ ಬಂದಿತು ಈಗ ಮೊಲೊಟೋಫರ ಮೇಲೆ ಹಾಕಲಾದ ಅರೋಪಗಳು ಇಷ್ಟೇ ಗಂಭೀರವಾಗಿವೆ. ಮೊದಲೇ ಹೇಳಿದಂತೆ ಅವರನ್ನು ಜೀವಸಹಿತ ಬಿಟ್ಟದ್ದೇ ದೊಡ್ಡದು ನಾಲ್ಕನೆಯವರಾದ ಲಾಗನೋವಿಚರು ಯುಕ್ರೈನಿನ ಕ್ರುಶೇಫರಿಗೆ ಕಮ್ಯುನಿಸ್ಟನೆಂಬ ದೀಕ್ಷೆ ಕೊಟ್ಟ ಗುರು- ಈಗ ಆ ಶಿಷ್ಯನೇ ಈ ಗುರುವಿಗೆ ತಿರುಮಂತ್ರ ಹೇಳಿದ್ದಾನೆ! ನೀನು ಪಕ್ಕಾ ಕಮ್ಯುನಿಸ್ಟನಲ್ಲವೆಂದು ಹಳೆಯ ಗುರುವಿಗೆ ಲಾಗನೋವಿಚರಿಗೆ ಈಗ ಕಮ್ಯುನಿಸ್ಟ ಪಕ್ಷದ ಕಾರ್ಯದರ್ಶಿಯಾಗಿರುವ ಕ್ರುಶೇಫರು ಹೇಳುತ್ತಿದ್ದಾರೆ ಎಂಥಾರು ಯಾರನ್ನು ನಂಬಬೇಕು? ಅಂತೂ ಒಂದು ಮಾತು ಸತ್ಯ. ಕ್ರುಶೇಫರ ಕೈ ಈಗ ಗಟ್ಟಿಯಾಗಿದೆ; ಉಳಿದವರು ಅಧಿಕಾರಕ್ಕೆ ಬಹಳವಾಗಿ ಅಂಟಿಕೊಳ್ಳತಿದ್ದಾರೆ; ಮತ್ತು ತಮಗೆ ಒಲ್ಲದವರನ್ನು ಗಂಭೀರತರ ಅರೋಪಗಳಿಗೆ ಗುರಿಮಾಡಿ ಹೊರದಬ್ಬುವ ತಂತ್ರವನ್ನೆ ಅವರು ಅನುಸರಿಸುತ್ತಿದ್ದಾರೆ. ಇದು ರಶ್ಯವನ್ನು ಕ್ರಾಂತಿಕಾಲದ ಅಸಾಮಾನ್ಯ ಪರಿಸ್ಥಿತಿಯಿಂದ ಸಾಮಾನ್ಯ ಸ್ಥಿತಿಗೆ ಕೊಂಡೊಯ್ಯುವ ಕೆಜ್ಜೆಯಾಗಿದೆ ಎಂದೂಹಿಸುವವರು ಕೆಲವರಿದ್ದಾರೆ— ನೆಹರುಗಳೂ ಅಂಥವರಲ್ಲಿ ಒಬ್ಬರು. ಆದರೆ ಸರ್ವಾಧಿಕಾರಿ ರಾಷ್ಟ್ರದ ಎಲ್ಲ ಲಕ್ಷಣಗಳೊಡನೆ ಈ ಪ್ರಸಿದ್ಧರನ್ನು ಹೊರಹಾಕಲಾಗಿದೆ. ಅರೋಪಗಳ ವಿವರಣೆ ಏನೆಂದು ತಿಳಿದಿಲ್ಲ. ಅರೋಪಗಳು ಮಾತ್ರ ಕೇಳಬರುತ್ತವೆ. ಭಾರತದಲ್ಲಿ ಹಾಗೆಂದಾದರೂ ಅದೇತೆಂ ನನ್ನು ಪ್ರಜಾಪ್ರಭುತ್ವದಲ್ಲಿ ಅರೋಪಿಗೂ ತನ್ನ ರಕ್ಷಣೆಯವರಾಗಿ ವಾದಿಸುವ ಮತ್ತು ತನ್ನ ನಿಲವನ್ನು ಸ್ಪಷ್ಟಪಡಿಸುವ ಅವಕಾಶವಿದೆ; ಸ್ವಾತಂತ್ರ್ಯವಿದೆ. ರಶ್ಯದಲ್ಲಿ ಅದಿದ್ದಂತೆ ಕಂಡು ಬರಲಿಲ್ಲ ಅಲ್ಲಿ ಉಕ್ಕಿನ ಪರದೆ ಇದೆ—ಎನ್ನುವುದರ ಗುಟ್ಟು ಇದೇ! ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಲ್ಲಿ ಕಲ್ಲು ಬಿದ್ದಿದೆ ಎನ್ನುವ ಮಾತಿಗಾದರೂ ಇಂಥ ಘಟನೆಗಳೇ ಅವಕಾಶ ಮಾಡಿಕೊಡುತ್ತವೆ.

ಸಂಕ್ಷಿಪ್ತ ಸುದ್ದಿಗಳು

ಹೊಸ ಆಹಾರ ಯೋಜನೆ

ಮೈಸೂರು ರಾಜ್ಯದಲ್ಲಿ ೧೯೫೭-೫೮ ರಲ್ಲಿ ಅಧಿಕ ಆಹಾರ ಬೆಳೆಯುವ ಕಾರ್ಯಕ್ರಮವಂತೆ ೩೩ ಹೊಸ ಆಹಾರ ಯೋಜನೆಗಳನ್ನು ಕೇಂದ್ರ ಸರಕಾರವು ಮಂಜೂರು ಮಾಡಿದೆ ಕಂಪೋಸ್ಟ್, ಗೊಬ್ಬರ ಮತ್ತು ಉತ್ತಮ ಬೀಜಗಳ ಪೂರೈಕೆ, ನೀರಾವರಿ ಸೌಕರ್ಯಗಳನ್ನೊದಗಿಸುವುದು, ವಿದ್ಯುತ್ ಹಾಗೂ ಡಿಸೆಲ್ ಪಂಪುಗಳನ್ನು ಒದಗಿಸುವುದು, ಮತ್ಸ್ಯಪಾಲನೆಯ ಅಭಿವೃದ್ಧಿ, ಸಸ್ಯಗಳ ರಕ್ಷಣೆ, ಭೂಸಾಗುವಳಿ ಮುಂತಾದವು ಈ ಯೋಜನೆಗಳಲ್ಲಿ ಒಡಕವಾಗಿವೆ. ಈ ಯೋಜನೆಗಳಿಗಾಗಿ ಕೇಂದ್ರ ಸರಕಾರವು ಸುಮಾರು ೯೦ ಲಕ್ಷ ರೂಪಾಯಿಗಳ ಸಾಲವನ್ನೂ ೮ ಲಕ್ಷ ರೂಪಾಯಿಗಳ ಸಹಾಯವನ್ನೂ ಒದಗಿಸಿರುವುದು.

ಕರ್ನಾಟಕ ಮೆಡಿಕಲ್ ಕಾಲೇಜ್

ಮೈಸೂರು ಸರಕಾರದವರು ಹುಬ್ಬಳ್ಳಿಯಲ್ಲಿ ತೆರೆಯುವುದೆಂದಿದ್ದ ವೈದ್ಯಕೀಯ ಕಾಲೇಜನ್ನು ಈ ವರ್ಷದಿಂದಲೇ ತೆರೆಯಲು ನಿರ್ಧರಿಸಿರುತ್ತದೆ ಇದೇ ಆಗಸ್ಟ್ ತಿಂಗಳನ ಕೊನೆಯ ವಾರದಲ್ಲಿ ಇದರ ಕಾರ್ಯಕ್ರಮವನ್ನು ಪ್ರಾರಂಭಿಸುವುದೆಂದು ವಿಶ್ವಸನೀಯವಾಗಿ ತಿಳಿದು ಬಂದಿದೆ. ಈ ಹೊಸ ಕಾಲೇಜಿನ ಕುರಿತಾದ ವಿವರಗಳನ್ನೊಳಗೊಂಡ ಸರಕಾರಿ ಪ್ರಕಟಣೆಯೊಂದು ಈ ವಾರಾಂತ್ಯದಲ್ಲಿ ಹೊರ ಬರುವ ನಿರೀಕ್ಷೆಯಿದೆ.

ಮೈಸೂರಿನಲ್ಲಿ ಮಿತವ್ಯಯ

ಭಾರತದ ಇತರ ರಾಜ್ಯಗಳಂತೆಯೇ ಮೈಸೂರು ರಾಜ್ಯದಲ್ಲೂ ಅಡಳಿತದ ವೆಚ್ಚದಲ್ಲಿ ಮಿತವ್ಯಯವನ್ನು ಸಾಧಿಸುವ ಯೋಜನೆಯು ಕಂಡು ಬರುತ್ತಿದೆ. ಇದಕ್ಕಾಗಿ ಸರಕಾರವು ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಲಿದೆ. ಈ ಮಿತವ್ಯಯಾಡಳಿತೆಯಲ್ಲಿ ಯಾವನೊಬ್ಬ ಸರಕಾರಿ ಕಲಸಗಾರನನ್ನೂ ಸರಕಾರವು ಮನೆಗೆ ಕಳಿಸುವುದಿಲ್ಲವಾದರೂ ಇನ್ನು ಮುಂದಿನ ನೇಮಕದಲ್ಲಿ ಮಾತ್ರ ಈ ವಿಶೇಷಾಧಿಕಾರಿಯು ಸಲಹೆ ಹಾಗೂ ಸೂಚನೆಗಳನ್ನೀಯಬಹುದೆಂದೂ ತಿಳಿಯುತ್ತದೆ.

ಅಧ್ಯಾಪಕರಿಗೆ ಸಮಾನ ವೇತನ

ಜಿಲ್ಲಾ ಮತ್ತು ಲೋಕಲ್ ಬೋರ್ಡ್ ಶಾಲೆಗಳಲ್ಲಿ ಮತ್ತು ಸರಕಾರದ ನೆರವನ್ನು ಪಡೆಯುವ ಶಾಲೆಗಳಲ್ಲಿ ಸಹ ಅಧ್ಯಾಪಕರಿಗೆ ಮೈಸೂರು ಸರಕಾರೀ ಪ್ರಮಾಣದಲ್ಲಿ ವೇತನವನ್ನೀಯುವ ಕುರಿತು ಕೀವ್ರ ಕಾರ್ಯಕ್ರಮಗಳನ್ನು ಸರಕಾರವು ಕೈಗೊಳ್ಳಲಿರುವುದು. ಈ ಶಾಲೆಗಳ ಶಿಕ್ಷಕರ ಪರಿಸ್ಥಿತಿಯನ್ನು ವಿಚಾರಿಸಿ, ಈ ಬಗ್ಗೆ ಸರಕಾರಕ್ಕೆ ಸಲಹೆಯೊಂದು ಎರಡು ಸಮಿತಿಗಳನ್ನು ಅದು ನೇಮಿಸಿರುತ್ತದೆ.

ಪಶ್ಚಿಮ ಆಫ್ರಿಕಾಳಿ ಮಾರ್ಗ

ಮುಂಬಯಿಯಿಂದ ಕನ್ಯಾಕುಮಾರಿಯವರೆಗೆ ರಚಿಸಲಿರುವ ಪಶ್ಚಿಮ ಕರಾವಳಿ ರಾಷ್ಟ್ರೀಯ ಹೆದ್ದಾರಿಯ ಕಾರ್ಯವನ್ನು ಕೈಗೊಳ್ಳಲು ಕೇಂದ್ರ ಸರಕಾರವು ತನ್ನ ಕೊನೆಯ ಒಪ್ಪಿಗೆಯನ್ನಿತ್ತಿದೆ. ರಸ್ತೆಯ ರಚನೆಗೆ ಮೊದಲೇ ಸಂಮತಿಯಿತ್ತಿದ್ದರು. ಅಡ್ಡ ಹೊಳೆಗಳ ಸಂಕಗಳ ನಿರ್ಮಾಣಕ್ಕೆ ಒಪ್ಪಿಗೆ ಇದೀಗಷ್ಟೆ ದೊರೆತಿದೆ. ಹೀಗಾಗಿ ದ್ವಿತೀಯ ಯೋಜನಾಂತ್ಯದಲ್ಲಿ ಈ ರಾಷ್ಟ್ರೀಯ ಹೆದ್ದಾರಿಯು ಸಂಪೂರ್ಣವಾಗುವ ನಿರೀಕ್ಷೆಯಿದೆ.

ಪ್ರಧಾನಿಯವರ ವಿದೇಶ ಸಂಚಾರ

ಭಾರತದ ಪ್ರಧಾನಿ ಶ್ರೀ ಜವಾಹರಲಾಲ ನೆಹರೂರವರು ಸಯಂಕ್ಷ್ಯ ಸಮ್ಮೇಳನದಲ್ಲಿ ಭಾಗವಹಿಸಿ, ಲಂಡನ್ನದಲ್ಲಿನ ತನ್ನ ಕಾರ್ಯಕ್ರಮಗಳನ್ನು ಪೂರೈಸಿ ಜರ್ಮನ್ ಸರಕಾರದ ಆಮಂತ್ರಣವನ್ನು ಸ್ವೀಕರಿಸಿ ಎರಡು ದಿನಗಳ ಸಂದರ್ಶನ ನಿತ್ತರು. ಮುಂದೆ ಅವರು ಇಟ್ಯಲೀ ಮತ್ತು ಸ್ವಿಟ್ಜರ್‌ಲ್ಯಾಂಡ್‌ಗಳಿಗೆ ಭೇಟ್ಟಿಯನ್ನಿತ್ತು ಈ ತಿಂಗಳ ೧೫ನೆ ತಾರೀಕಿಗೆ ಭಾರತಕ್ಕೆ ಹಿಂದಿರುಗುವರು.

ಸಂಸತ್ತಿನ ಅಧಿವೇಶನ

ಭಾರತದ ಲೋಕಸಭೆಯ ಎರಡನೆ ಅಧಿವೇಶನವು ಜುಲೈ ೧೫ನೆ ದಿನಾಂಕದಂದು ಪ್ರಾರಂಭವಾಗಲಿದೆ ಈ ಸಭೆಯಲ್ಲಿ ಮುಂಗಡ ಪತ್ರದ ವಿಷಯವಲ್ಲದೆ ಸುಮಾರು ೨೫ ಸರಕಾರೀ ವಿಧೇಯಕಗಳು ಚರ್ಚೆಗೆ ಮುಂದೆ ಬರಲಿವೆ ಈ ವಿಧೇಯಕಗಳಲ್ಲಿ ವಿದೇಶವಿನಿಮಯ ನಿಯಂತ್ರಣ (ತಿದ್ದುಪಡಿ) ವಿಧೇಯಕವೂ ಒಂದಾಗಿದೆ.

ಪಾಕಿಸ್ತಾನದಲ್ಲಿ ನವೀನ ಪಕ್ಷ

ಪಾಕಿಸ್ತಾನಿ ಪ್ರಧಾನಿ ಸುಹ್ರವರ್ದಿಯವರೊಂದಿಗೆ ಭಿನ್ನಾಭಿಪ್ರಾಯದಿಂದ ಸರಕಾರ ಪಕ್ಷದ ಅಧ್ಯಕ್ಷಸ್ಥಾನದಿಂದ ಹೊರಬಂದ ಮೌಲಾನಾ ಭಶಾನಿಯವರು ಹೊಸ ರಾಜಕೀಯ ಪಕ್ಷವೊಂದನ್ನು ಕಟ್ಟುವ ನಿರ್ಧಾರಕ್ಕೆ ಬಂದಿದ್ದಾರೆ. ಈ ಉದ್ದೇಶದ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಲು ಪಾಕಿಸ್ತಾನದ ಸರ್ವಪಕ್ಷೀಯ ಮಹಾಸಭೆಯೊಂದನ್ನು ಡಾ ಕ್ಯಾಬದಲ್ಲಿ ದಿನಾಂಕ ೬ ಳಂದು ಕರೆದಿದ್ದಾರೆ ಪಾಕಿಸ್ತಾನದ ಎಡಪಕ್ಷಗಳ ಧುರೀಣರೆಲ್ಲರೂ ಈ ಮಹಾಸಭೆಯಲ್ಲಿ ಭಾಗವಹಿಸುವರೆಂದು ತಿಳಿದುಬಂದಿದೆ.

ಕಾಲುವೆ ನೀರಿನ ತಂಟೆ

ಭಾರತ ಪಾಕಿಸ್ತಾನಗಳ ನಡುವೆ ಎದ್ದಿರುವ ಪಂಜಾಬ ಕಾಲುವೆ ನೀರ ತಂಟೆಯನ್ನು ಜಾಗತಿಕ ನ್ಯಾಯಾಲಕ್ಕೆ ಒಯ್ಯಲು ಪಾಕಿಸ್ತಾನ ಸರಕಾರವು ಸಿದ್ಧವಾಗಿದ್ದರೂ ಭಾರತವು ಅದಕ್ಕೆ ಹಿಂದೆಯೂ ಸಿದ್ಧವಿದ್ದಿಲ್ಲ. ಮತ್ತು ಇಂದೂ ತಯಾರಾಗಿಲ್ಲವೆಂದು ಅಧಿಕೃತ ಪ್ರಕಟಣೆ ಹೊರಬರುತ್ತದೆ.

ಮಂತ್ರಿ ಮಂಡಳದ ರಾಜಿನಾಮೆ

ನೇಪಾಳ ರಾಜ್ಯದಲ್ಲಿ ಏಕ ರೂಪತೆಯನ್ನು ಸಾಧಿಸಲು ಮಂತ್ರಿ ಮಂಡಳವನ್ನು ಸುನಾರಣೆಗೊಳಿಸಲು ಕೊಡಗಬೇಕು; ಇಲ್ಲವೆ ತನ್ನ ಮಂತ್ರಿ ಮಂಡಳದ ರಾಜಿನಾಮೆಯನ್ನು ಸ್ವೀಕರಿಸಬೇಕು ಎಂಬುದಾಗಿ ಪ್ರಧಾನಿ ಟಂಕಾ ಪ್ರಸಾದ ಆಚಾರ್ಯರು ನೇಪಾಳದ ಅರಸು ಮಹೇಂದ್ರರಿಗೆ ತಿಳಿಸಿದ್ದಾರೆ ಅರಸರು ರಾಜಿನಾಮೆಯ ವಿಚಾರವಾಗುವ ತನಕ ಅಧಿಕಾರದಲ್ಲಿರಲು ಪ್ರಧಾನಿ ಆಚಾರ್ಯರನ್ನು ಕೇಳಿಕೊಂಡಿದ್ದಾರೆ

ಧುರೀಣರಿಗೆ ಅರ್ಥ ಚಂದ್ರ

ಸೋವಿಯೆಟ್ ರಶ್ಯದ ಕಮ್ಯೂನಿಸ್ಟ ಪಕ್ಷದ ಉಚ್ಚ ಸಮಿತಿಯಿಂದ ಧುರೀಣರಿಂದ ಶ್ರೀ ಮೆಲೊಂಕೋವ್, ಮೊಲ

ಟೋವ್, ಕಾನನೋವಿಚ್ ಮತ್ತು ಶೆಪಿಲೋವ್ ಇವರನ್ನು ಹೊರದೂಡಲಾಗಿದೆ. ಅಲ್ಲದೆ ಇವರ ಮಂತ್ರಿಪದವಿಯನ್ನೂ ತೆಗೆದು ಹಾಕಲಾಗಿದೆ. ಸೋವಿಯೆಟ್ ಸರಕಾರವು ನಡೆಸುತಿದ್ದ ವಿಶ್ವಶಾಂತಿಯ ಮುನ್ನಡೆಗೆ ಆತಂಕವನ್ನೊಡ್ಡಿ, ಪಕ್ಷದ ಏಕತೆಯನ್ನು ಮುರಿದು ಅದನ್ನು ಅಡ್ಡದಾರಿಗೆಳೆಯುವ ತಪ್ಪನ್ನು ಇವರ ಮೇಲೆ ಹೊರಿಸಲಾಗಿದೆ. ಈ ಉಚ್ಚಾಟನೆಯಿಂದ ಅಮೇರಿಕೆಯು ಸ್ವಲ್ಪ ನೆಮ್ಮದಿಯನ್ನು ಪಡೆದಿರುವಂತೆ ತೋರುತ್ತದೆ.

ಜಲಜನಕ ಬಾಂಬಿನ ನಿರ್ಮಾಣ

ನಿರ್ದುಷ್ಟ ಜಲಜನಕ ಬಾಂಬನ್ನು ತಾನು ತಯಾರಿಸಿದನಂತರ ರಶ್ಯಾಕ್ಕೆ ಆ ವಿಧಾನವನ್ನು ಕೇಳಿಕೊಡಲು ಅಮೇರಿಕೆಯ ಹಿರಿಯ ವಿಜ್ಞಾನಿಗಳು ಅನುಕೂಲರಾಗಿದ್ದಾರೆಂದು ಅಧ್ಯಕ್ಷ ಐಸೆನಹಾವರರು ತಿಳಿಸಿದರು. ಈ ಬಾಂಬು ರಚನೆಯಲ್ಲಿ ಬ್ರಿಟನ ಸಹ ಪ್ರಗತಿಯನ್ನು ಸೂಚಿಸುತ್ತಿದೆಯಾದರೂ ಹೆಚ್ಚಿನ ವಿವರಗಳನ್ನು ತಿಳಿಸಲು ಇಷ್ಟವಿಲ್ಲವೆಂದು ಬ್ರಿಟಿಷ್ ಪ್ರಧಾನಿ ಮ್ಯಾಕಮಿಲನರು ಕಾಮನ್ಸ್ ಸಭೆಯಲ್ಲಿ ನುಡಿದಿದ್ದಾರೆ.

ಕಾಶ್ಮೀರ ಸಮಸ್ಯೆಯ ಪರಿಹಾರ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಎದ್ದಿರುವ ಕಾಶ್ಮೀರ ವಿವಾದವು ಬರುವ ವರ್ಷದೊಳಗೆ ತೀರ್ಮಾನಗೊಳ್ಳುವುದೆಂದು ಕಾಶ್ಮೀರ ಸಂಬಂಧದಲ್ಲಿ ಪಾಕಿಸ್ತಾನ್ ಸರಕಾರದ ಸಲಹೆಗಾರ ದಿನ್ ಮಹಮ್ಮದರು ಭವಿಷ್ಯ ನುಡಿದಿದ್ದಾರೆ. ತಮ್ಮ ಈ ಭವಿಷ್ಯವಾಣಿಗೆ ಇರುವ ಆಧಾರಗಳಾವುವೆಂಬುದನ್ನವರು ತಿಳಿಸದಿದ್ದರೂ ಪಾಕಿಸ್ತಾನದ ಪ್ರಚಲಿತ ಸರಕಾರಕ್ಕೆ ಈ ವಿಷಯದಲ್ಲಿರುವ ಆಸಕ್ತಿಯೇ ಮೂಲ ಕಾರಣವೆಂದು ಅಭಿಪ್ರಾಯ ಪಟ್ಟಿದ್ದಾರೆ. ಕಾಶ್ಮೀರ ಸಂಬಂಧದ ಯಾರಿಂಗ್ ವರದಿಯು ಭದ್ರತಾ ಮಂಡಳದ ಸಪ್ಟೆಂಬರ್ ಅಧಿವೇಶನದಲ್ಲಿ ಚರ್ಚೆಗೆ ಬರುವುದೆಂದೂ ಅವರು ನುಡಿದಿದ್ದಾರೆ. ಕಾಶ್ಮೀರದಲ್ಲಿ ಇತ್ತೀಚೆಗೆ ನಡೆದ ಸ್ಫೋಟನಗಳನ್ನು ಪ್ರಸ್ತಾಪಿಸಿ ಭಾರತವು ಅಲ್ಲಿ ಎಬ್ಬಿಸಿರುವ ಭಯೋತ್ಪಾದನೆಯೇ ಈ ಸ್ಫೋಟಗಳಿಗೆ ಮುಖ್ಯ ಕಾರಣ ಅಥವಾ ಪಾಕಿಸ್ತಾನದ ಮೇಲೆ ಅಪವಾದ ಹೊರಿಸಲು ಭಾರತವೇ ಈ ಸ್ಫೋಟಗಳನ್ನೆಬ್ಬಿಸಿರಲೂ ಬಹುದು ಎಂದೂ ಶಂಕಿಸಿದರು.

ಉಡುಪಿ

ಕಟ್ಟಿಗೆ ಮುಹೂರ್ತ— ಶ್ರೀ ಕೃಷ್ಣ ಮಠದ ಮುಂದಿನ ಪರ್ಯಾಯ ರಥೋತ್ಸವಕ್ಕೆ ಲಿಯನ ಶ್ರೀ ಕೃಷ್ಣಾಪುರ ಮಠದ ವಿದ್ಯಾಲಕ್ಷ್ಮೀತೀರ್ಥ ಸ್ವಾಮಿಗಳವರ ಪರ್ಯಾಯ ಮಹೋತ್ಸವದ ಪೂರ್ವ ಸಿದ್ಧತೆಗಳಲ್ಲೊಂದಾದ 'ಕಟ್ಟಿಗೆ ಮುಹೂರ್ತ' ಸಮಾರಂಭವು ತಾ ೩ನೇ ಗುರುವಾರ ಜರ್ನೊಂದು ತಾಸಿಗೆ ಸುಲಗ್ನತಾ ಮುಹೂರ್ತದಲ್ಲಿ ಯಶಸ್ವಿಯಾಗಿ ಜರಗಿತು.

ಗುರುಗಳ ಆರಾಧನೆ ಪರ್ಯಾಯ ಅಧಿಮಠದ ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರು ತಮ್ಮ ಗುರುಗಳ ಆರಾಧನೆಯನ್ನು ತಾ ೨೦ರಲ್ಲು ಶ್ರೀ ಕೃಷ್ಣ ಸನ್ನಿಧಿಯಲ್ಲಿ ಅನ್ನದಾನಾದಿಗಳಿಂದ ವೈಭವಕೆಯಿಂದ ನೆರವೇರಿಸಿದರು.

ಮುದ್ರಾಧಾರಣ ಸಮಾರಂಭ— ಶ್ರೀ ಕೃಷ್ಣ ಮಠದಲ್ಲಿ ಮಾಧ್ವ ಮುದ್ರಾಧಾರಣ ಸಮಾರಂಭವು ತಾ ೩ರಲ್ಲು ಅಪರಾಹ್ನ ಸಾಂಗವಾಯಿತು.

ವಸ್ತ್ರ, ಪುಸ್ತಕ ವಿತರಣೆ— ಸ್ಥಳೀಯ ಮೋಡರ್ನ್ ಹಾಲ್ ಎ ಶಾಲೆಯಲ್ಲಿ ಆ ಶಾಲೆಯ ಬಡ ಮಕ್ಕಳಿಗೆ ವಸ್ತ್ರ ಹಾಗೂ ಪುಸ್ತಕಗಳನ್ನು ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಸೂರ್ಯನ ರಂಗಣ್ಣರಾಯರು ತಾ ೬ ರಲ್ಲು ವಿತರಣೆ ಮಾಡಿದರು. ಶ್ರೀ ಟಿ ಎ ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಶಾಲಾ ಟ್ರಸ್ಟಿನ ಕಾರ್ಯದರ್ಶಿ ಶ್ರೀ ಎ ಜೆ ಆಳ್ವರವರು ಸ್ವಾಗತ ಮಾತುಗಳನ್ನಾಡಿದರು. ಶಾಲಾ ಮೆನೇಜರ್ ಶ್ರೀ ಜಗನ್ನಾಥ ನಾಯ್ಕರು ವರದಿವಾಚನ ಮಾಡಿದರು. ಅಧ್ಯಕ್ಷರ ಸಮಯೋಚಿತ ಭಾಷಣವಾದ ಬಳಿಕ ಶಾಲಾ ಹೆಡ್ಮಾಸ್ಟರ್ ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಧನ್ಯವಾದಗಳನ್ನಿತ್ತರು.

ಹೊಟೇಲು ಮಾಲಕರ ಸಭೆ— ಉಡುಪಿ ನಗರದ ಹೊಟೇಲು ಮಾಲಕರ ಸಭೆಯು ಮಹಾತ್ಮಾಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ನಗರ ಸಭಾಪತಿ ಶ್ರೀ ಕೆ ಪೈಗಳ ಅಧ್ಯಕ್ಷತೆಯಲ್ಲಿ ತಾ ೬ ರಲ್ಲಿ ಸೇರಿತು. ಮುನಿಸಿಪಲ್ ಹೆಲ್ತ್ ಆಫೀಸರ್ ಡಾ ಎಲ್ ಪಿ ಪಂಡಿತ್ ಮತ್ತು ಸಭಾಧ್ಯಕ್ಷರು ಹೊಟೇಲುಗಳನ್ನು ಹೊಕ್ಕಟವಾಗಿರುವಿಕೆ, ಸ್ವಚ್ಛತೆಯಿಂದ ತೀರ್ಥ ಕಯಾರಿಸುವಿಕೆ ಇತ್ಯಾದಿ ವಿಷಯಗಳನ್ನೆತ್ತಿ ಮಾತನಾಡಿ, ಹೊಟೇಲ್ ಮಾಲಕರು ಆ ಬಗ್ಗೆ ಶ್ರಮಿಸಬೇಕೆಂದರು. ಶ್ರೀಗಳಾದ ಡಾ ಪಿ ಜಿ ಆಚಾರ್, ಗೋಪಾಲ ಪ್ರಭು, ಎಚ್ ವೆಂಕಟೇಶ ನಾಯಕ್, ಯು ಎಲ್ ಕಿಣಿ, ಎಚ್ ಗರೀಂಬ ಬಟ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ನಗರದಲ್ಲಿ ಪ್ರಥಮ ನೆರ್ಜಿಯ ಹೊಟೇಲಿಗೆ ರೋಲಿಂಗ್ ಕಪ್ಪು ಕೊಡಲಾಗುವುದೆಂದು ಸಭಾಧ್ಯಕ್ಷರು ಜಾಹೀರು ನುಡಿದರು.

ವನಮಹೋತ್ಸವ— ರಾಜಾಸ್ಥಳೀಯಲ್ಲಿ ತಾ ೨೧ರಲ್ಲು ವನಮಹೋತ್ಸವವು ಶ್ರೀ ಯು. ಎಸ್ ನಾಯಕ್, ಎಲ್ ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಸೂರ್ಯನಾರಾಯಣ ರಾವ್, ಸಬ್ ಕಲೆಕ್ಟರ್, ಎಸ್ ಪಿ ನಾಯಕ್, ಸಬ್ ರಿಜಿಸ್ಟ್ರಾರ್, ಎ ಜೆ ಆಳ್ವ, ಟಿ ವೆಂಕಟ್ರಾಯಪ್ಪ, ರೈಮಂಡ್ ಮಾರ್ಟಿಸ್ ಮೊದಲಾದವರು ವನಮಹೋತ್ಸವದ ಮಹತ್ವದ ಕುರಿತು ಮಾತನಾಡಿದರು. ಅಧ್ಯಕ್ಷರು ಗೇರು ಬೀಜ ವ್ಯವಸಾಯದ ಅವಶ್ಯಕತೆಯ ಕುರಿತು ಭಾಷಣಮಾಡಿದರು. ತಹಶೀಲ್ದಾರ್ ಶ್ರೀ ಮಹಮ್ಮದ್ ಬ್ಯಾರಿಗೆರು ಧನ್ಯವಾದಗಳನ್ನಿತ್ತರು.

ಮುನಿಸಿಪಲ್ ಕೌನ್ಸಿಲು ಸಭೆಯು ತಾ ೩ರಲ್ಲು ಸಂಜೆ ಚೀಫ್‌ಮೆನ್ ಶ್ರೀ ಕೆ ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಬಿಲ್ ಕಲೆಕ್ಟರರಿಗೆ ಸ್ವಂತ ಸ್ಥಳಗಳು ಇಲ್ಲದ್ದು, ಅವರಿಗೆ ಜಿಲ್ಲಾ ಕಿಂಗಳಿಂದ ಮುಂದಿನ ಮಾರ್ಚ್ ತಿಂಗಳ ಕೆ ಮಾಹಿ ಯಾನರು ಶಾಯಿ ನಾಂಕ್ಕರಂತೆ ಸ್ಟೀಲ್ ಪೆಟ್ಟಿ ಕೊಡಬೇಕೆಂದು ನಿರ್ಣಯವಾಯಿತು. ಮುನಿಸಿಪಲ್ ಕ್ವಾರ್ಟರ್ಸ್‌ಗಳಿಗೆ ಲೂವರ್ ಎಲಿಮೆಂಟರಿ ಶಾಲಾ ಸುತ್ತಳಿಗೆ ಧರ್ಮಾರ್ಥ ಜಾಲಿನ ಮಾಡಿಕೊಡಲು ಕೌನ್ಸಿಲಿನ ಅನುಮತಿ ಕೊಡಲಾಯಿತು. ಬಡವರಿಗೆ ಇನ್‌ಫ್ಲುಯೆಂಜಾ ಮದ್ದನ್ನು ಪುಕ್ಕಟೆಯಾಗಿ ಕೊಡಲು ಹೆಲ್ತ್ ಆಫೀಸರರಿಗೆ ಸೂಚನೆ ಮೇರೆಗೆ ರೂ ೨೦೦ ಬೆಲೆಯ ಔಷಧಿ ತರಿಸಲು ನಿರ್ಧಾರವಾಯಿತು.

ಶೋಚನೀಯ ನಿಧನ— ಉಡುಪಿ ರೋಮನ್ ಕೆಥೋಲಿಕ್ ಇಗರ್ಜಿಯ ರಿಫಾ ಎ ಸಿಕೇರಿ ಅವರು ತಾ ೩ರಂದು ಸಂಜೆ ಕಲ್ಯಾಣಪುರ ಹೊಳೆಯಲ್ಲಿ ಸರಿಯಾಗಿ ಅಮತಿಯಾದರೆನ್ನಲು ವಿಷಾದವೆನಿಸುತ್ತದೆ. ಗಾಳಿಗೆ ಹೊಡೆತಕ್ಕೆ ಕೈಯಲ್ಲಿದ್ದ ಕೆಂಪೆ ನೀರಿಗೆ ಬಿಳಲು ಅದನ್ನು ಹಿಕ್ಕುವಾಗ ನೀರಿಗೆ ಬಿದ್ದರನ್ನಲಾಗಿದೆ. ಸುತರೀರಿಗೆ ಬ ಧೂರದ ವರೆಗೂ ದೊರೆತಿರುವುದಿಲ್ಲ. ದೋಣಿಯಲ್ಲಿದ್ದ ಇತರರು ಸುರಕ್ಷಿತವಾಗಿ ದಡವನ್ನು ಸೇರಿದರೆಂದು ತಿಳಿದು ಬರುತ್ತದೆ.

ಖಾಸಗಿ ಶಾಲ ಮೆನೇಜರರ ಸಂಘದ ಸಭೆಯು— ತಾ ೧೭ರಂದು ಮೋಡರ್ನ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಟಿ ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಥಮದಲ್ಲಿ ಶ್ರೀ ಎಚ್ ರಾಮಚಂದ್ರ ಹೆಗ್ಡೆಯವರು ನಿರ್ವಾಹಕ ವಾಚನವಾದ ವರೆಗೆ ಶ್ರೀ ಕೆ ಜಗನ್ನಾಥ ನಾಯಕರು ಗತ ವರ್ಷದ ಲೆಕ್ಕಪತ್ರಗಳನ್ನೊಪ್ಪಿಸಿದರು. ನಂತರ ಶ್ರೀ ಟಿ ಎ ಪೈ ಅಧ್ಯಕ್ಷ, ಶ್ರೀ ಎಚ್ ರಾಮಚಂದ್ರ ಹೆಗ್ಡೆ ಮತ್ತು ಶ್ರೀ ಕುರ್ತಾಲು ಗಣಪಯ್ಯ ಸೆಟ್ಟರು ಕಾರ್ಯದರ್ಶಿಗಳು, ಶ್ರೀ ಪಾಲಿಯನ್ ಡಿಸೋಜ ಮತ್ತು ಶ್ರೀ ಶ್ರೀನಿವಾಸ ಪಿತ್ತಂತಾಯರು ಉಪಾಧ್ಯಕ್ಷರು, ಶ್ರೀ ಕೆ ಜಗನ್ನಾಥ ನಾಯಕರ್ ಕೋಶ ಧಿಕಾರಿ, ಶ್ರೀಗಳಾದ ಎಚ್ ಅಣ್ಣಯ್ಯ ಹೆಗ್ಡೆ, ಅಂಗರ ಮಾಸ್ತರ್, ಎನ್ನಾಡಿ ಸುಬ್ಬಣ್ಣ ಹೆಗ್ಡೆ ಅರವೂರು ಅಚ್ಚಣ್ಣ ಶೆಟ್ಟಿ ನಾರಾಯಣ ಪಯ್ಯ, ಕೇಶವ ಕಡೆ, ಮತ್ತು ಕೇಶವ ಕಲ್ಯಾರನ್ನೊಳಗೊಂಡ ಸಮಿತಿಯನ್ನು ಮುಂದಿನ ವರ್ಷಕ್ಕೆ ಆರಿಸಲಾಯಿತು. ಅಧ್ಯಕ್ಷ ಶ್ರೀ ಟಿ ಎ ಪೈಗಳು ದಿ. ಸಿ ಎ ಮೈಸೂರು ಮತ್ತು ದಿವ್ಯ ಟಿ ಡಿ ಪಿ ಐ ಯವರನ್ನು ಕುರಿತು, 10—6—57ರ ಜಿಲ್ಲಾ ವಿದ್ಯಾಧಿಕಾರಿಗಳ ಸರಾಸರಿ ಹಾಜರಿಯಿಂದ ತೆಗೆದು ಹಾಕುವ ಸರ್ಕುಲರಿನ ಕುರಿತು ವಿಚಾರವಿನಿಮಯ ಮಾಡಬೇಕೆನ್ನುವ ನಿರ್ಣಯದೊಂದಿಗೆ ಸಭೆಯು ಮುಕ್ತಾಯವಾಯಿತು. ಕುರ್ತಾಲು ಗಣಪಯ್ಯ ಸೆಟ್ಟರು ಧನ್ಯವಾದಸಮರ್ಪಿಸಿದರು.

ನೇಪಾಳದ ರಾಜಧಾನಿ ಖಟಮಂಡುವಿನ ಸಹಾಯಕ ಆರೋಗ್ಯಾಧಿಕಾರಿಗಳ ತರಬೇತಿ ಶಾಲೆಯ ಪ್ರಿನ್ಸಿಪಲ್ರಾದ ಡಾ ಎಂ ಆರ್ ಪಾಂಡೆಯವರು ಲಂಡನಿನ ಆರೋಗ್ಯ ವಿಜ್ಞಾನ ಮತ್ತು ಉಷ್ಣವಲಯದ ಔಷಧಿಗಳ ಶಾಲೆಯಲ್ಲಿ ಕೊಲಂಬೋ ಯೋಜನೆಯನ್ವಯ ಕಲಿಯುತಿದ್ದಾರೆ.

NAVAYUGA INDEPENDENCE DAY SPECIAL

FIFTEENTH AUGUST every year is being observed all over India as a great National Festival To synchronise with this happy rejoicing, NAVAYUGA, the Popular and Leading Kannada Weekly of the District, as in previous years, intends bringing out the INDEPENDENCE DAY SPECIAL on 15—8—1957 replete with special articles etc , worthy of the name

Taking into account the steady growing popularity and high esteem and also the ever expanding circulation of Navayuga and the auspicious occasion the Special comes out, it is needless to emphasise the obvious scope of the Navayuga Independence Day Special as the best medium of advertisement May we therefore earnestly request you to favour us with your esteemed advertisement so as to reach us on or before 5—8—1957.

ADVERTISEMENT RATES:

Full Page	...	Rs 100/-
Half Page	..	Rs 50/-
Quarter Pege	.	Rs 30/-

Cover Pages . Special rates (on application)

MECHANICAL DATA

Paper Size		15 × 10'
Size of type page	...	13 × 8"

ADVT MANAGER
NAVAYUGA, UDIPI

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಸಹರಾಷ್ಟ್ರ ಸಮ್ಮೇಳನ

(೫ನೇ ಪುಟದಿಂದ)

ಮಂತ್ರಿಗಳೂ ಚಿಂತಿಸಿಕೊಂಡರು. ಅಲ್ಲದೆ, ಜಗತ್ತಿನ ಇತರ ದೇಶಗಳಲ್ಲಿ ಸಹ ಈ ಶಕ್ತಿಯಿಂದಾದ ಶಾಂತ ಕಾರ್ಯಗಳನ್ನು ಪರಿಶೀಲಿಸಿ, ಸಹರಾಷ್ಟ್ರಗಳು ಈ ವಿಷಯದಲ್ಲಿ ಒಂದನ್ನೊಂದು ಕೂಡಿಕೊಂಡು ಕಾರ್ಯಶೀಲರಾಗುವುದರ ಬೆಲೆಯನ್ನು ಕಂಡುಕೊಂಡರು. ಈ ಉದ್ದೇಶಕ್ಕಾಗಿ ಸಹರಾಷ್ಟ್ರಗಳಲ್ಲಿನ ಅಣುತಜ್ಞರ ಪ್ರಾಸ್ತಾವಿಕ ಸಭೆಯೊಂದನ್ನು ೧೯೫೮ರಲ್ಲಿ ಗ್ರೇಟಬ್ರಿಟನಿನಲ್ಲಿ ಒಂದುಗೂಡಿಸುವ ನಿರ್ಧಾರಕ್ಕೆ ಬಂದರು.

ಮಲಯವು ಕೆಲಸಮಯದಲ್ಲಿಯೇ ಸ್ವಾತಂತ್ರ್ಯವನ್ನು ಪಡೆಯಲಿರುವುದೆಂಬುದನ್ನು ಸಹರಾಷ್ಟ್ರಗಳ ಮಂತ್ರಿಗಳು ಗಮನಿಸಿದರು. ಈ ಘೆಡರೇಶನಿಗೆ ತಮ್ಮ ಹೃತ್ಪೂರ್ವಕ ಶುಭಾಕಾಂಕ್ಷೆಯನ್ನು ಅದರ ಭವಿಷ್ಯಕ್ಕಾಗಿ ವ್ಯಕ್ತಪಡಿಸಿದರು. ಅಗತ್ಯವುಳ್ಳ ಘಟನಾತ್ಮಕ ಕಾರ್ಯಕ್ರಮಗಳು ಮುಗಿದೊಡನೆಯೇ ಸಹರಾಷ್ಟ್ರದ ಸದಸ್ಯ ರಾಷ್ಟ್ರವಾಗಿ ಸ್ವತಂತ್ರ ಮಲಯಾವು ಆಗಮಿಸಬೇಕೆಂದು ಆಶಿಸಿದರು.

ಈ ಸಮ್ಮೇಳನವು ಸಂಪೂರ್ಣ ಸೌಹಾರ್ದಮಯ ವಾತಾವರಣದಲ್ಲಿಯೇ ಮುಗಿಯಿತೆನ್ನಬಹುದು. ತಮಗೆ ಅಗತ್ಯವಿರುವ ವಿಚಾರಗಳನ್ನಷ್ಟೇ ಈ ಸಮ್ಮೇಳನವು ಚರ್ಚಿಸಿತು. ಐಸನ್‌ಹೋವರರ ಮಧ್ಯಪೂರ್ವ ನಿಲುಮೆ ಮತ್ತು ರಶ್ಯಾದಿಂದ ಹಂಗೇರಿಯ ಆಕ್ರಮಣಗಳ ಕುರಿತಾದ ವಿಷಯಗಳಿಗೆ ಭಾರತದ ಪ್ರಬಲ ವಿರೋಧವಿದ್ದುದರ ದೆಸೆಯಿಂದ ಅವು ಕೊನೆಯ ಪ್ರಕಟನೆಯಿಂದ ಹಿಂತೆಗೆಯಲ್ಪಟ್ಟಿದ್ದುವು. ಈ ವಿಚಾರಗಳು ಅಧಿವೇಶನದ ಮೂಲಕ್ಕೆ ಸಂಬಂಧಿಸಿದುವಲ್ಲವೆಂಬುದೇ ಭಾರತದ ವಾದವಾಗಿತ್ತು.

ಭಾರತಕ್ಕೆ ಬ್ರಿಟನದಿಂದ ಸ್ಟರ್ಲಿಂಗ್‌ಗಳ ಸಾಲ, ಕಾಶ್ಮೀರ ಸಮಸ್ಯೆ, ಹಾಗೂ ಪಂಜಾಬ ಕಾಲುವೆ ನೀರ ತಂಟೆ ಮೊದಲಾದ ವಿಷಯಗಳ ಕುರಿತು ಈ ಸಮ್ಮೇಳನದ ಹೊರಗೆ ಬ್ರಿಟಿಷ ಪ್ರಧಾನಿಗಳೊಂದಿಗೆ ಖಾಸಗಿ ಮಾತುಕತೆಗಳು ನಡೆದುವೆಂದು ವರದಿಯಾಗಿದೆ. ಘಾನದ ಪ್ರಧಾನಿಗಳೂ ಭಾರತದತ್ತ ವಿಶೇಷ ಲಕ್ಷ್ಯವನ್ನಿತ್ತು ಭಾರತವನ್ನು ಸಂದರ್ಶಿಸುವ ತನ್ನ ಬಯಕೆಯನ್ನೂ ವ್ಯಕ್ತಗೊಳಿಸಿದರು.

ಒಟ್ಟಿನಲ್ಲಿ ಈ ಸಮ್ಮೇಳನವು ನಡೆಯಬೇಕಾಗಿದ್ದಂತೆಯೇ ನಡೆಯಿತು. ಸಹರಾಷ್ಟ್ರಗಳಲ್ಲಿ ವಿಚಾರವಿನಿಮಯ, ಸಹಕಾರ, ಸೌಹಾರ್ದಗಳು ಬೆಳೆದಂತೆ ಅವುಗಳ ಜಭಿವೃದ್ಧಿಯೂ ಹೆಚ್ಚುವುದರಿಂದ, ಯಶಸ್ವಿಯಾಗಿಯೇ ಮುಕ್ತಾಯಗೊಂಡಿತೆಂದು ಹೇಳಬಹುದು.

ಇನ್ನೂ ಚಂದಾಹಣವನ್ನು

ಕಳುಹಿಸಿದವರು ದಯಮಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ. ಅಂತೂ ಸಕಾಲದಲ್ಲಿ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಯನ್ನಾದರೂ ಪಡೆಕೊಳ್ಳುವಂತೆ ವಿಜ್ಞಾಪಿಸುತ್ತೇವೆ.

ಮೆನೇಜರ್, ನವಯುಗ



ಅಮೇರಿಕದ ಸಂಯುಕ್ತ ರಾಜ್ಯಗಳ ಮೂರನೆಯ ಅಧ್ಯಕ್ಷ ಶ್ರೀ ಥೋಮಸ್ ಜಫರ್ಸನರ ಸ್ಮಾರಕವದು. ಇದನ್ನು ವಾಶಿಂಗಟನ್ನಿನಲ್ಲಿರುವ ಶ್ವೇತ ಭವನಕ್ಕೆಭಿಮುಖವಾಗಿ ಕಟ್ಟಿಸಲಾಗಿದೆ. ಶ್ರೀ ಥೋಮಸರು ಅಮೇರಿಕನರ ಸ್ವಾತಂತ್ರ್ಯ ಘೋಷಣೆಯನ್ನುವ ಪುಸ್ತಕವನ್ನೂ ಬರೆದು, ಅಮೇರಿಕನರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು.

ದ. ಕ. ಜಿಲ್ಲಾ ಬೋರ್ಡಿನ ಎಲಿಮೆಂಟರಿ ಶಾಲಾಧ್ಯಾಪಕರ ಸಂಬಳ ಬಟ್ವಾಡೆ ತಡವಾದುದರ ಕುರಿತು ಅಧ್ಯಕ್ಷರ ಸ್ಪಷ್ಟೀಕರಣ

ಕಳೆದ ಮೇ ಮತ್ತು ಜೂನ್ ತಿಂಗಳ ಸಂಬಳವನ್ನು ಬೋರ್ಡಿನ ಎಲಿಮೆಂಟರಿ ಶಾಲಾಧ್ಯಾಪಕರಿಗೆ ಬಟ್ವಾಡೆಯಾಗದಿದ್ದ ಬಗ್ಗೆ ಅಧ್ಯಾಪಕರಿಂದ ಪದೇ ಪದೇ ಪತ್ರಗಳು ಬಂದುದಲ್ಲದೆ ಗರದಿಮಜಲು ಶಿಕ್ಷಕರಿಂದ ಉಪವಾಸ ವ್ರತದ ತಂತಿ ಕೂಡಾ ಬಂದಿತ್ತು. ಆದರೆ ತಾನು ಜಿಲ್ಲಾ ಬೋರ್ಡಿನ ಅಧ್ಯಕ್ಷ ಪದವನ್ನು ಸ್ವೀಕರಿಸಿದ ತಾ. 17-6-57ರಲ್ಲಿ ಬೋರ್ಡಿನ ಎಲಿಮೆಂಟರಿ ಎಡ್ಯುಕೇಶನ್ ಫಂಡಿನಲ್ಲಿ ಹಣವಿದ್ದಿಲ್ಲ. ಜನರಲ್ ಫಂಡಿನಿಂದ ರೂಪಾಯಿ 1,16,500 ಎಡ್ಯುಕೇಶನ್ ಫಂಡಿಗೆ ವರ್ಗಾಯಿಸಿ ಎಪ್ರಿಲ್ ತಿಂಗಳ ಸಂಬಳ ಬಟ್ವಾಡೆ ಮಾಡಲಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಮಹಾ ಮೈಸೂರಿನ ವಿದ್ಯಾ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರವೊಂದನ್ನು ಬರೆದು ಮಹಾ ಮೈಸೂರು ರಾಜ್ಯ ಸರಕಾರವು ಈ ತನಕ ಕೊಡುತಿದ್ದ ಎಪ್ರಿಲ್-ಮೇ ತಿಂಗಳುಗಳ ಗ್ರಾಂಟು ಮೈಸೂರು ಸರಕಾರದಿಂದ ಇನ್ನು ಬರದಿಲ್ಲವಾದುದರಿಂದ ಈ ಸಲಿಸ ಎಂಟು ಲಕ್ಷ ರೂಪಾಯಿಗಳು ಬೋರ್ಡಿಗೆ ದೊರೆಯದೆ ಹೋದರೆ ಅಡಚಿತ ನಡೆಸುವುದು ಕಷ್ಟಸಾಧ್ಯವೆಂದು ತಿಳಿಸಿದೆನು. ಉತ್ತರವೇ ಬಾರದಿದ್ದುದರಿಂದ ಮಂಗಳೂರು ಎಸ್. ಎಲ್. ಎ. ಗಳಿಗೂ ಮಜೂರ ಮಂತ್ರಿ ಶ್ರೀ ಬಿ. ವಿ. ಬಾಳಿಗರಿಗೂ ಬರೆಕೊಂಡೆನು. ಕಟ್ಟಿಕಡೆಗೆ ಇದೇ ತಾ. 6 ರಲ್ಲಿ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಸ್ಪೆಶಲ್ ತಂತಿ ಬಿಟ್ಟು ಪರಿಸ್ಥಿತಿ ತಿಳಿಸಿದೆನು. ಒಂದೂ ಕಾಲು ಲಕ್ಷ ಜಿಲ್ಲಾರಿ ರೂಪಾಯಿ ಸೆಕ್ಷನ್ ಮಾಡಲಾಗಿದೆ ಎಂದು ತಂತಿ ಬಂತು. ಆದರೆ ಎಕೌಂಟಿಂಟ್ ಜನರಲ್ಲರಿಂದ ಪತ್ರ ಬಾರದೆ ಹಣವನ್ನು ಪಡೆಯಲು ಸಾಧ್ಯವಿಲ್ಲ. ಈ ವಾರದಲ್ಲಿ ಇನ್ನು ಮೂರುಲಕ್ಷ ರೂಪಾಯಿ ಅಡ್ವಾನ್ಸ್ ಗ್ರಾಂಟ್ ಬರುವ ನೀರಿಕ್ಷೆಯಿದೆ ಎಕೌಂಟಂಟ್ ಜನರಲ್ಲರಿಂದ ಹುಕ್ಕುಂ ಬಂದೊಡನೆ ಉಪಾಧ್ಯಾಯರಿಗೆ ಸಂಬಳ ಬಟ್ವಾಡೆ ಮಾಡಲಾಗುವುದು.

ಜಿಲ್ಲಾ ಬೋರ್ಡಿಗೆ ಮೇಲೆ ಹೇಳಿದ ಹಣ

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಮಹಿಳಾ ಸಾಹಿತ್ಯ! ನವೀನ ಪುಸ್ತಕ!

ಕುಮಾರಿ ಪಿ. ಯಶೋದಾ ಅವರು ಬರೆದ

ಬಾಳಿನ ಬೆಳಕಿ

ಬಾಳಿನ ಸೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ. ಶ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!

ಬೆಲೆ ,—12—0. (0—14—0 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಬಹುದು.)

ನವಭಾರತ ಪುಸ್ತಕ ಭಂಡಾರ, ಉಡುಪಿ.

ಎಲ್ಲೆಲ್ಲಿ ಏನೇನು?

ಡಾ| ಎನ್. ಎಮ್. ಅಡ್ಯಂತಾಯರ ನಿಧನ ದ. ಕ. ಜಿಲ್ಲೆಯ ಬಂಟ ಸಮಾಜದ ನಾಯಕರಲ್ಲೊಬ್ಬರೂ ಕಾರ್ಕಳದ ಜನಪ್ರೀತ ವೈದ್ಯರೂ ಸಾರ್ವಜನಿಕ ಸೇವಾನಿರತರೂ ಆಗಿದ್ದ ಡಾ| ಸಿಟ್ಟಿಗುಳ್ತು ಮಹಾಬಲ ಅಡ್ಯಂತಾಯರು ಇದೇ ತಾ. 5ರಂದು ರಾತ್ರಿ ತಮ್ಮ 60ನೇ ವಯಸ್ಸಿನಲ್ಲಿ ಸ್ವಂತ ನಿವಾಸದಲ್ಲಿ ನಿಧನಹೊಂದಿದರು. ದಿವಂಗತರು ದ. ಕ. ಜಿಲ್ಲಾ ಬೋರ್ಡು ಸದಸ್ಯರೂ, ಕಾರ್ಕಳ ಟೌನ್ ಕೊಪರೇಟಿವ್ ಬೇಂಕಿನ ಅಧ್ಯಕ್ಷರೂ, ವಿಜಯಾ ಬೇಂಕಿನ ಸ್ಥಾಪನಾ ಡೈರೆಕ್ಟರರಲ್ಲೊಬ್ಬರೂ ಆಗಿದ್ದು ಜನಹಿತ ಸೇವೆ ಸಲ್ಲಿಸಿದ್ದರು. ದಿವಂಗತರು ಕೆಲವು ಸಮಯದಿಂದ ಹೃದಯರೋಗ ಪೀಡಿತರಾಗಿದ್ದರು. ದಿವಂಗತರ ಧರ್ಮಪತ್ನಿ ಮೂಲ್ಕಿ ಕೃಷ್ಣಿಬಾಯಿ, ಮಕ್ಕಳಾದ ಶ್ರೀ ದಯಾನಂದ ಅಡ್ಯಂತಾಯ, ಶ್ರೀ ರಾಮ ಮೋಹನ ಅಡ್ಯಂತಾಯ ಡಾ| ದಿವಾಕರ ಅಡ್ಯಂತಾಯ, ಶ್ರೀಮತಿ ಹೇರಾಬಾಯಿ, ಮತ್ತು ಶ್ರೀ ಸುಧಾಕರ ಅಡ್ಯಂತಾಯ ಮತ್ತು ಇತರ ಬಂಧು ಬಳಗದವರ ಅಪಾರ ದುಃಖದಲ್ಲಿ ಸಹಾನುಭಾವವನ್ನು ವ್ಯಕ್ತಪಡಿಸಿ ಕೀರ್ತಿಶೇಷರ ಆತ್ಮಕ್ಕೆ ಚಿರಶಾಂತಿ ಕೋರುವೆವು.

ಬ್ರಹ್ಮಾವರ— ಸ್ಥಳೀಯ ಬೋರ್ಡು ಶಾಲೆಯಲ್ಲಿ 30 ವರ್ಷಗಳಿಗೂ ಮಿಕ್ಕಿ ಅಧ್ಯಾಪಕಿಯಾಗಿ ಕೆಲಸ ಮಾಡಿದ ಶ್ರೀಮತಿ ಕೃಷ್ಣಾಬಾಯಿ ಯೆಂಬವರು ನಿವೃತ್ತಿ ಹೊಂದಿದ ಕಾರಣ ತಾ. 4 ರಲ್ಲಿ ಅವರಿಗೊಂದು ಸತ್ಕಾರಕೂಟವನ್ನು ಇಲ್ಲಿಯ ನಾಗರಿಕರು ಮತ್ತು ಹಳೇ ವಿದ್ಯಾರ್ಥಿಗಳು ಏರ್ಪಡಿಸಿದ್ದರು. ಈ ಭವ್ಯ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ. ಸರ್ವೋತ್ತಮ ಶೈ, ಬಿ. ಎ. ಬಿ. ಟಿ. ಇವರು ವಹಿಸಿದ್ದರು. ಡಾ| ಕೆ. ನಾರಾಯಣ ಶೈ, ಶ್ರೀಗಳಾದ ಬಿ. ಪದ್ಮನಾಭ ಭಟ್ಟ, ಕೆ ಎಸ್. ವಾರಂಬಳ್ಳಿ ಇವರೆಲ್ಲರೂ ಭಾಷಣಮಾಡಿದರು. ಅಧ್ಯಕ್ಷೀಯ ಭಾಷಣಾನಂತರ ನಾಗರಿಕರ ಪರವಾಗಿ ಶ್ರೀಮತಿಯವರಿಗೆ ಬೆಳ್ಳಿಯ ಬಟ್ಟಲೊಂದನ್ನು ಅರ್ಪಿಸಲಾಯಿತು. ಅಂತ್ಯದಲ್ಲಿ ಶ್ರೀ ಬಿ. ಪದ್ಮನಾಭ ಭಟ್ಟರು ಧನ್ಯವಾದ ವನ್ನಿತ್ತರು.

ಉಪ್ಪೂರು— ಸಂಜ್ಯಾತ್ ಬೋರ್ಡಿನ ವತಿಯಿಂದ ತಾ. 6ರಲ್ಲಿ ಉಡುಪಿ ರೇಂಜ್ ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಕೆ. ನಾರಾಯಣ ಇವರ ಅಧ್ಯಕ್ಷತೆಯಲ್ಲಿ ವನಮಹೋತ್ಸವ ದಿನಾಚರಣೆಯನ್ನು ಆಚರಿಸಲಾಯಿತು. ಬೇರೆ ಬೇರೆ ಜಾತಿಯ ಬಹುವು ಸಸಿಗಳನ್ನು ನೆಟ್ಟ ನಂತರ, ಶ್ರೀ ಎನ್ ಕಾಳು ಸೆಟ್ಟರೂ ಅಧ್ಯಕ್ಷರೂ ಇವರ ಉದ್ದೇಶ ಮತ್ತು ಪ್ರಯೋಜನವನ್ನು ವಿವರಿಸಿದರು. ಪಂಚಾಯತ ಪ್ರೆಸಿಡೆಂಟ್ ಶ್ರೀ ಯು. ಕೆ. ಶೇಷಪ್ಪಯ್ಯ ಕುಕ್ಕಿಲ್ಲಾಯರು ಧನ್ಯವಾದವಿತ್ತರು.

ಕೊಲ್ಲೂರು ಸ್ಥಳೀಯ ಗ್ರಾಮ ಸೇವಾ ಸಂಘದ ಮಹಾಸಭೆಯು ತಾ. 5ರಲ್ಲಿ ಶ್ರೀ ಮೂಕಾಂಬಿಕಾ ದೇವಸ್ಥಾನದ ಮಂದಾಭಿಕಾರಿ ಶ್ರೀ ಬಿ. ಎನ್. ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ವರದಿವಾಚನವಾದ ಬಳಿಕ ಸಂಘದ ಅಧ್ಯಕ್ಷಸ್ಥಾನಕ್ಕೆ ಶ್ರೀ ಎಮ್. ಮಂಜುನಾಥ ಭಟ್ಟರೂ, ಕಾರ್ಯದರ್ಶಿ ಸ್ಥಾನಕ್ಕೆ ಶ್ರೀ ಕೆ. ಎಸ್. ಎಸ್ ಆಡಿಗರೂ ರಾಜೀನಾಮೆ ಕೊಟ್ಟುದುದನ್ನು ಸ್ವೀಕರಿಸಲಾಯಿತು ಶ್ರೀಗಳಾದ ಕೆ. ನರಸಿಂಹ ಆಡಿಗ ಮತ್ತು ಎಸ್. ನಾಗರಾಜಯ್ಯರವರು ಅನುಕ್ರಮವಾಗಿ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ದೊರೆಕಿಸಲು ನೆರವಾದ ಮಂತ್ರಿ ಶ್ರೀ ಬಿ. ವಿ. ಬಾಳಿಗ ಮೊದಲಾದ ಹಿತಚಿಂತಕರಿಗೂ ಸ್ಮಾರಕ ಸರಕಾರಕ್ಕೂ ನಾನು ತುಂಬಾ ಋಣಿಯಾಗಿದ್ದೇನೆ. (ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೇರು ದೊರೆಕಿಸಿದ ಪತ್ರಿಕಾ ಪ್ರಕಟಣೆಯ ಸಾರಾಂಶವಿದು.)

ಮಂಗಳೂರು

ದ ಕ. ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣದ ವಿಸ್ತರಣಾ ಯೋಜನೆ— ದ. ಕ. ಜಿಲ್ಲಾ ಬೋರ್ಡಿನವರು 1957-58 ನೇ ವರ್ಷದಲ್ಲಿ ಶಾಲೆಯಿಲ್ಲದ ಈ ಕೆಳಗಿನ ಕೇಂದ್ರಗಳಲ್ಲಿ 15 ಹೊಸ ಎಲಿಮೆಂಟರಿ ಶಾಲೆಗಳನ್ನು ತೆರೆಯಲು ನಿರ್ಧರಿಸುತ್ತಾರೆ

ಉಡುಪಿ ತಾಲೂಕು.— ಸುತ್ತೂರು ಗ್ರಾಮದ ಸುಬ್ರಹ್ಮಣ್ಯ ಗುಡ್ಡೆ, ಅಂಡಾರು ಗ್ರಾಮದ ಮುತ್ತೂರು.

ಕಾರ್ಕಳ ತಾಲೂಕು ಕಡಂದಲೆ ಗ್ರಾಮದ ಬರೆಬೆಟ್ಟು.

ಬೆಳ್ತಂಗಡಿ ತಾಲೂಕು—ನಿಡ್ಲೆಯ ಬಳಿಯ ಕಳಂಜ ಗ್ರಾಮದ ಪತ್ತೆ

ಪುತ್ತೂರು ತಾಲೂಕು— ಕುಮ್ಮಾರು ಗ್ರಾಮದ ಕುಮ್ಮಾರು; ವೀರ ಕಂಭ ಗ್ರಾಮದ ವೀರ ಕಂಭ ಕಸಬಾ ಕರೋಪಾಡಿ ಗ್ರಾಮದ ಮುಗುಳಿ; ಅಮರ ಮುಡ್ನೂರು ಗ್ರಾಮದ ದೊಡ್ಡತೋಟ, ಅನಡ್ಕ; ಸಳಿಯಡ್ಕ; ನೇರ್ಲ

ಕುಂದಾಪುರ ತಾಲೂಕು— ಹಸ್ಕೆ ತ್ತೂರು ಕೊಂಡಾಳಿ, ತಾರಿಬೇರು, ಕಂಚಿಕೊಡ್ಲು

ಇದಲ್ಲದೆ ಈಗಿರುವ ಈ ಕೆಳಗೆ ಸೂಚಿಸಿದ ಬೋರ್ಡು ಎಲಿಮೆಂಟರಿ ಶಾಲೆಗಳಲ್ಲಿ 6ನೇ ತರಗತಿಯನ್ನು ತೆರೆದು ಈ ಶಾಲೆಗಳನ್ನು ಹಾಯರ್ ಎಲಿಮೆಂಟರಿ ಶಾಲೆಗಳಾಗಿ ಪರಿವರ್ತಿಸುವ ಯೋಜನೆಯಿದೆ

ಕುಂದಾಪುರ ತಾಲೂಕು. ಗಂಗೊಳ್ಳಿ, ವಡೇರಹೋಬಳಿ, ಸಿದ್ದಾಪುರ, ಗಂಗೊಳ್ಳಿ ಹಿಂದೂಸ್ಥಾನಿ, ಬೋರ್ಡು ಎಲಿಮೆಂಟರಿ ಶಾಲೆಗಳು

ಉಡುಪಿ ತಾಲೂಕು ಮೂಡುಗಿಳಿಯಾರ್, ಕೋಟ್ಟ, ಚಿತ್ರಪಾಡಿ, ಬೊಮ್ಮರಬೆಟ್ಟು, ಒಡಾಸಡಿಯೂರು, ಅವರ್ಸೆ, ಹಿಲಿಯಾಣ, ಹೇಗೂರು, ಕೈಪಂಜಾಲ್, ಸಂದಿಕೂರು, ಕುಕ್ಕೆಹಳ್ಳಿ.

ಕಾರ್ಕಳ ತಾಲೂಕು -- ದರೆಗುಡ್ಡೆ, ಕಲ್ಯಾ, ನೆಲ್ಲಿಕಾರ್, ಕಲ್ಲಮುಡ್ಕೂರು, ಬಡಗಕಾರಂದೂರು, ಕುಕ್ಕುಜೆ, ಬಜಗೋಳಿ, ದುರ್ಗಾತೆಲ್ಲಾರ್.

ಮಂಗಳೂರು ತಾಲೂಕು ತಣ್ಣೀರು ಭಾವಿಜನರಲ್, ಮಾನಂಪಾಡಿ, ಬೊಳ್ಳಾರು, ಚಿತ್ರಾಪು, ತೋಕೂರು ಜೋಗಟ್ಟೆ, ಇನ್ನ.

ಬೆಳ್ತಂಗಡಿ ತಾಲೂಕು— ಬೋರ್ಡು ಬುನಾದಿ ಶಾಲೆ, ಕೈಲ್ಲ,ಬೋರ್ಡು ಎಲಿಮೆಂಟರಿ ಕಾಲಿ ಸಬರಬೈಲು, ಕೆಯ್ಯೂರು.

ಪುತ್ತೂರು ತಾಲೂಕು— ಅರಂತೋಡು, ಬಾಣಗಳ, ಕೊಯ್ಯೂರು.

ಮೇಲಿನ ಶಾಲೆಗಳಲ್ಲಿ 6ನೇ ದರ್ಜೆಗಳನ್ನು ತೆರೆಯಲು ಸಿದ್ಧವಿದ್ದೇವೆ ಸರಕಾರದವರು ಅಪ್ಪಣೆಯೊಯುವ ಸಂಭವನೀಯವಿದೆ. ಈ ಮೇಲಿನ ಕೇಂದ್ರಗಳಲ್ಲಿ ಕೆಲವು ಕೇಂದ್ರಗಳಲ್ಲಿ ಅಲ್ಲಿನ ಜನರು ಶಾಲೆಗೆ ಬೇಕಾದ ಕಟ್ಟಡ ಇತ್ಯಾದಿಯನ್ನು ಒದಗಿಸಲು ಮುಂದೆ ಬರಬೇಕಾಗುವುದೆಂದೂ, ಕೆಲವು ಕೇಂದ್ರಗಳಲ್ಲಿ ಸ್ಥಳೀಯರಿಂದ ಈ ತನಕ ಯಾವ ರೀತಿಯ ಸಹಕಾರದ ಸೂಚನೆಗಳೂ ಬಂದಿಲ್ಲವೆಂದೂ, ಆದುದರಿಂದ ಮೇಲಿನ ಕೇಂದ್ರಗಳಲ್ಲಿ ಶಾಲೆಗಳು ತೆರೆಯಲ್ಪಡುವಂತೆ ಸ್ಥಳೀಯ ಜನರು ಅಗತ್ಯವಿದ್ದ ಸಹಕಾರ ಸಹಾಯ ನೀಡಿ ಪ್ರಾಥಮಿಕ ಶಿಕ್ಷಣ ಯೋಜನೆಯ ವಿಸ್ತರಣಾ ಯೋಜನೆಯು ಯಶಸ್ವಿಯಾಗುವಂತೆ ಮಾಡಬೇಕೆಂದೂ ದ. ಕ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ ಮಂಜಯ್ಯ ಸೆಟ್ಟಿಯವರು ವಿನಂತಿಸುತ್ತಾರೆ

ದ ಕ ಜಿಲ್ಲಾ ಬೋರ್ಡಿನ ಅಡಳಿತವಲ್ಲಿರುವ— 9 ಲೋಕಲ್ ಫಂಡ್ ಆಸ್ಪತ್ರೆಗಳಲ್ಲೂ 26 ಗ್ರಾಮ ವೈದ್ಯಾಲಯಗಳಲ್ಲೂ 'ಪ್ಲೂ' ಚೇನಿಯಿಂದ ನರಳುವ ಬಡವರಿಗೆ ಧನಾರ್ಥಕ ಔಷಧಿಯನ್ನು ಕೊಡುವರೆಗೆ ಜಿಲ್ಲಾ ಬೋರ್ಡಿನ ಕಡೆಯಿಂದ ವ್ಯವಸ್ಥೆ ಮಾಡಲಾಗಿದೆ. ದ ಕ. ಜಿಲ್ಲಾ ಮೆಡಿಕಲ್ ಆಫೀಸರರ ಅನುಮತಿ ಪಡೆದು ಒಂದೊಂದು ನೂರು ರೂಪಾಯಿ ಬೆಲೆಯ ಔಷಧಿಗಳನ್ನು ಪಡೆಕೊಳ್ಳಲು ಆಸ್ಪತ್ರೆ ಮತ್ತು ವೈದ್ಯಾಲಯಗಳ ವೈದ್ಯಕೀಯ ಅಧಿಕಾರಿಗಳಿಗೆ ಆದೇಶವೀಯಲಾಗಿದೆ ಜಿಲ್ಲಾ ಬೋರ್ಡಿನ ಈ ಕಾರ್ಯಕ್ರಮದಿಂದ ಗ್ರಾಮಾಂತರಗಳಲ್ಲಿ ಶೀತ ಜ್ವರ ಪೀಡಿತರಿಗೆ ತಕ್ಕ ವೈದ್ಯಕೀಯ ಲಾಭ ದೊರೆಯಲು ಅನುಕೂಲವಾಗಿದೆ.

ಜಿಲ್ಲಾ ವಿದ್ಯಾಧಿಕಾರಿಗಳ ಪರ್ಸನಲ್ ಅಸಿಸ್ಟಾಂಟ್— ದ ಕ ಜಿಲ್ಲಾ ವಿದ್ಯಾಧಿಕಾರಿಗಳ ಪರ್ಸನಲ್ ಅಸಿಸ್ಟಾಂಟರಾಗಿ ಈಗ ಮಂಗಳೂರು ಸರಕಾರಿ ಬೇಸಿಕ್ ಟ್ರೈನಿಂಗ್ ಶಾಲೆಯ ಹೆಡ್ಮಾಸ್ಟರ್ ಶ್ರೀ ಕೆ ಸಿ. ಸೂರ್ಯನಾರಾಯಣ ರಾಯರನ್ನು ನೇಮಿಸಲಾಗಿದೆ ಟ್ರೈನಿಂಗ್ ಶಾಲಾ ಅಧ್ಯಾಪಕರೂ ವಿದ್ಯಾರ್ಥಿಗಳೂ ಶ್ರೀ ರಾಯರಿಗೆ ವಿದಾಯಸತ್ಕಾರವಿತ್ತು ಗೌರವಿಸಿದರು.

ಕಾಂಗ್ರೆಸ್ ಮಹಿಳಾ ವಿಭಾಗದ ಸಭೆಯು— ತಾ. 24 ರಂದು ಸಂಜೆ ಕಾಂಗ್ರೆಸ್ ಕಚೇರಿಯಲ್ಲಿ ಮಿಸ್ ಜೂಲಿಯಸ್ ಸಜರತ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮಹಿಳಾ ವಿಭಾಗದ ಸಂಚಾಲಕಿ ಶ್ರೀಮತಿ ಕಲ್ಯಾಣಿ ಡಿ ಶೆಟ್ಟರು ಸಭೆ ಕರೆದದ್ದರ ಉದ್ದೇಶವನ್ನು ತಿಳಿಸಿದರು ಇದೇ ತಾ 14 ರಂದು ಸಂಜೆ 5 ತಾಸಿಗೆ ಕಾಂಗ್ರೆಸ್ ಕಚೇರಿಯಲ್ಲಿ ಮಹಿಳಾ ವಿಭಾಗದ ಮಹಾಸಭೆಯನ್ನು ಕರೆಯಬೇಕೆಂದು ನಿರ್ಧಾರವಾಯಿತು. ಹೆಚ್ಚು ಮಂದಿ ಸದಸ್ಯರನ್ನು ಸೇರಿಸಬೇಕೆಂದೂ ತೀರ್ಮಾನವಾಯಿತು.

ವನಮಹೋತ್ಸವ— ತಾ 6ರಂದು ಬೆಳಿಗ್ಗೆ ತಾಲೂಕು ಕಚೇರಿಯಲ್ಲಿ ವನಮಹೋತ್ಸವವು ಜಿಲ್ಲಾ ಕಲೆಕ್ಟರ್ ಶ್ರೀ ಎಚ್ ನರಸಿಂಹನವರ ಅಧ್ಯಕ್ಷತೆಯಲ್ಲಿ ಜರಗಿತು ಬೇಸಿಂಟ್ ಬಾಲಿಕಾ ವಿದ್ಯಾಕಾರಿಯ ವಿದ್ಯಾರ್ಥಿನಿಯರಿಂದ ಪ್ರಾರ್ಥನಾ ಕ್ರಮವಾದ ಬಳಿಕ ಜಿಲ್ಲಾ ಕಲೆಕ್ಟರ್ ಮೊದಲಾದ ಅಧಿಕಾರಿಗಳೂ ಶ್ರೀ ಬಿ. ಆರ್ ಕಕೇರೆ, ಎಮ್ ಎಲ್ ಎ ಮುಂತಾದವರೂ ಗಿಡಗಳನ್ನು ನೆಟ್ಟರು. ನಂತರ ಶ್ರೀಗಳಾದ ಡಿ ಮೋಹನರಾವ್, ಪಿ ಕೆ. ನಾರಾಯಣ. ಕೆ ಮುದ್ದಣ್ಣ ಶೆಟ್ಟಿ, ಕೆ ಸಂಜೀವ ಶೆಟ್ಟಿ ಮೊದಲಾದವರು ಕಾತೋಚಿತ ಮಾತುಗಳನ್ನಾಡಿದರು ಈ ಸಂದರ್ಭದಲ್ಲಿ ಬೀಜ, ಸಸಿಗಳ ಸ್ವದರ್ಶನವೂ ಇತ್ತು ಅಧ್ಯಕ್ಷ ಕಲೆಕ್ಟರರು ಮಾತನಾಡುತ್ತಾ, ದ. ಕ. ಜಿಲ್ಲೆಯಲ್ಲಿ ಈಗ 20,000ಟನ್ ಗೇರು ಬೀಜ ಉತ್ಪತ್ತಿಯಾಗುತ್ತಿದೆ ನಮಗೆ ಇನ್ನೂ 40,000 ಟನ್ ಗೇರುಬೀಜ ಬೇಕಾಗಿದೆ. ಇದಕ್ಕೆ ಒಂದು ಲಕ್ಷ ಎಕ್ರೆ ಸ್ಥಳಬೇಕು. ಒಂದು ಎಕ್ರೆ ಸ್ಥಳದಲ್ಲಿ ಗೇರು ಬೀಜ ಕೃಷಿಯಿಂದ ರೂಪಾಯಿ 300-400 ಸಂಪಾದಿಸಬಹುದು ಜನರ ಆದಾಯ ಹೆಚ್ಚಿಸಲು ಇದೊಂದು ಸುಲಭ ಉಪಾಯವೆಂದೂ ಹೇಳಿದರು ಸಸಿ ನೆಡುವಿಕೆಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟ ಒಂದು ಗ್ರಾಮಕ್ಕೆ ರೂ 100 ಮತ್ತು ಎಂಡಸೆಯವರಿಗೆ ರೂ 50 ಬಹುಮಾನ ಕೊಡಲು ಸರಕಾರದಿಂದ ಹಣ್ಣು ಬಂದಿರುವುದು. ಆಕ್ಟೋಬರ್ ತಿಂಗಳಲ್ಲಿ ಈ ಲೆಕ್ಕ ತೆಗೆಯಲಾಗುವುದು ದ ಕ ಜಿಲ್ಲೆಗೆ ಈ ಬಾರಿ ಸಾರಿ ತೋಸಕ ದೊರೆಯುವಂತೆ ಸಾರ್ವಜನಿಕರು ಸಹಕರಿಸಬೇಕೆಂದೂ ಕಲೆಕ್ಟರರು ವಿನಂತಿ ಮಾಡಿದರು. ತಹಶಿಲ್ದಾರ್ ಶ್ರೀ ಎಮ್ ಶ್ರೀನಿವಾಸ ರಾಯರು ಧನ್ಯವಾದವಿತ್ತರು

ಸರಕಾರಿ ವಸ್ತು ಪ್ರದರ್ಶನಾಲಯ— ಕರ್ನಲ್ ಪಿ ಆರ್. ಇರಾಣಿಕಾರ್ ರವರು ಉದಾರ ದಾನವಾಗಿ ಕೊಟ್ಟ ಮಂಗಳೂರಿನ ಜಿಲ್ಲೆಯಲ್ಲಿರುವ ಶ್ರೀಮಂತಿಕೆ ಭವನದಲ್ಲಿ ಸಾರ್ವಜನಿಕರ ಉಪಯೋಗಾರ್ಥವಾಗಿ ಸರಕಾರದವರು ಒಂದು ಪ್ರಾದೇಶಿಕ ವಸ್ತು ಸಂಗ್ರಹಾಲಯ ಮತ್ತು ಕಲಾಮಂಟಪವನ್ನು ಸ್ಥಾಪಿಸಲು ನಿರ್ಧರಿಸಿದ್ದು ಅ ಬಗ್ಗೆ ವಸ್ತು ಸಂಗ್ರಹಾಲಯ ಸಲಹಾಸಮಿತಿ, ಮಂಗಳೂರು ಎಂಬ ಸಮಿತಿಯನ್ನು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ ದ ಕ ಜಿಲ್ಲೆಯ ಹಲವು ಸಂಸ್ಥೆಗಳಲ್ಲಿಯೂ ಮುಖ್ಯೋಪಯೋಗಿಗಳಲ್ಲಿಯೂ ಐತಿಹಾಸಿಕ ಪುರಾತನ ಅಥವಾ ಕಲಾಸೌಂದರ್ಯಕ್ಕೆ ಸಂಬಂಧಪಟ್ಟ ಅಮೂರ್ಯ ವಸ್ತು ಸಂಗ್ರಹಗಳಿವೆ ಎಂದು ತಿಳಿದುಬಂದಿದ್ದು ಅಂತದ ಅಮೂರ್ಯ ವಸ್ತುಗಳನ್ನು ಈ ವಸ್ತು ಸಂಗ್ರಹಾಲಯಕ್ಕೆ ದಾನವಾಗಿ ಕೊಡುವಂತೆ ವಿನಂತಿಸುವ ನಿರ್ಣಯವನ್ನು ಈ ಕುರಿತು ಪತ್ರವ್ಯವಹಾರಗಳನ್ನು ಜಿಲ್ಲಾ ಕಲೆಕ್ಟರ್ ಮತ್ತು ಅಧ್ಯಕ್ಷ ವಸ್ತು ಸಂಗ್ರಹಾಲಯ ಸಮಿತಿ, ಶ್ರೀಮಂತಿಕೆ ಭವನ, ಮಂಗಳೂರು ಇವರುಗಳಿಗೆ ಮಾಡಬಹುದು

ಇನ್‌ಫ್ಲೂಯೆಂಜಾ ಜ್ವರಕ್ಕೆ ಕೆಲವು ಅನುಭವಿಕ ಔಷಧಿಗಳು

೧ ರೋಗದ ಲಕ್ಷಣ ತೋರಿದ ಕೂಡಲೆ ಗಿತೊರೆ ಕರಿಮೆಣಸಿನ ಕಾಳನ್ನು ಪುಡಿಮಾಡಿ ಲಂ ತೊರೆ ನೀರಿನಲ್ಲಿ ೬೦ ತೊರೆ ಉಳಿಯುವಂತೆ ಬತ್ತಿಸಿ ಕಷಾಯ ಮಾಡಿ ಮೂರು ಪಾಲು ಮಾಡಿ ಕುಡಿಯಬೇಕು ೩.೪ ದಿವಸ ಹೀಗೆ ಗುಣ ಕಾಣುವ ವರೆಗೆ ಕುಡಿಯಬೇಕು.

೨. ಅಕ್ಕಿ ಅಥವಾ ಗೋದಿಯನ್ನು ಹುರಿದು ಗಂಜಿಮಾಡಿ ಉಣ್ಣಬೇಕು ಸ್ವಲ್ಪ ಉಪ್ಪು, ಜೀರಿಗೆ ತುಪ್ಪ, ಶುಂಠಿ ಹಾಗೂ ನಿಂಬೆರಸ ಪಥ್ಯಕರ.

೩ ಹಾಲು, ಮಜ್ಜಿಗೆ, ತುಪ್ಪ, ಎಣ್ಣೆ ಹಾಗೂ ಜಹಾ, ಕಾಫಿ, ಬೆಲ್ಲ, ಸಕ್ಕರೆ ಇವು ಅಪಥ್ಯಕರವಾಗಿದ್ದರಿಂದ ಸೇವಿಸಬಾರದು

೪. ಕುಟುಂಬದಲ್ಲಿ ಒಬ್ಬರಿಗೆ ರೋಗ ಸುರವಾದ ಕೂಡಲೇ ಉಳಿದವರೂ ಮೇಲಿನ ಪ್ರಮಾಣದಂತೆ ಕಷಾಯ ತೆಗೆದುಕೊಳ್ಳಬೇಕು. ಆಂದರೆ ರೋಗ ತಗಲುವುದಿಲ್ಲ. ತಗಲಿದರೂ ಸೌಮ್ಯಸ್ವರೂಪದ್ದಿರುವುದು.

—ಶಿಲಾರೆ ಗಣೇಶ ಹೆಗಡೆ
ಸಿದ್ದಾಪುರ.

ಜ್ವರ ಪ್ರಾರಂಭವಾದೊಡನೆ ಅಮೃತಬಳ್ಳಿ, ತುಲಸಿಪತ್ರ, ಬಿಲ್ವಪತ್ರ, ಶುಂಠಿ, ಹಿಪ್ಲಿ, ಮೆಣಸು, ಲವಂಗ, ಇವುಗಳನ್ನು ಪ್ರತಿಯೊಂದು ಕಾಲು ತೊರೆ ಪ್ರಮಾಣ ಸೇರಿಸಿ, ಜಜ್ಜಿ ಒಂದು ಕಪ್ಪು ನೀರು ಹಾಕಿ ಒಂದು ಗಂಟೆ ಕುಡಿಯುವ ವರೆಗೆ ಕುದಿಸಿ, ಸೋಸಿ ದಿನಕ್ಕೆ ೩-೪ಸಾರಿ ಕುಡಿಯಬೇಕು ಮಲಬದ್ಧತೆ ಇದ್ದರೆ ಒಂದು ಸಲ ಮಾತ್ರ ೧ ತೊರೆ ನೆಲ ಆವರಿ (ಸೋನಾಮುಖಿ) ಯನ್ನು ಕಷಾಯದಲ್ಲಿ ಸೇರಿಸಲಬಹುದು.

ಜ್ವರದ ಆರಂಭದಲ್ಲಿ ಆಹಾರವನ್ನು ಕೊಡದಿರ ತಕ್ಕದೇ ಒಳ್ಳೇದು. ಕುದಿಸಿದ ಬಿಸಿನೀರನ್ನು ಧಾರಾಳವಾಗಿ ಕುಡಿಯಲಿಕ್ಕೆ ಕೊಡಬಹುದು. ದ್ರವಾಹಾರ ಕಾಫಿ ಗ್ಲುಕೋಜ ನೀರು, ಭತ್ತದರಸು ನೀರು ಹವಿಜವ ಕಷಾಯ ಕೊಡಬಹುದು.

—ಕರ್ಮವೀರದಿಂದ

ಈ ರೋಗಕ್ಕೆ ಕನ್ನಡದಲ್ಲಿ ಸುಪ್ಪನ್ನ ಬೇನೆ ಎನ್ನುತ್ತಾರೆ. ಇದಕ್ಕೆ ಕೆಳಗಿನ ಚಿಕಿತ್ಸೋಪಚಾರ ಮಾಡಿರಿ. ೪ ಪ್ರಕಾರದ ಅಜವಾನಗಳು, ಪಂಚಲವಣಗಳು, ದಾಲಚೀನಿ, ಮೆಣಸಿನ ಕಾಳುಗಳು, ಈ ಸಾಮಾನುಗಳನ್ನು ಸಮಪ್ರಮಾಣದಲ್ಲಿ ಕೂಡಿಸಿ, ಪುಡಿಮಾಡಿ ಕಣ್ಣಾನುಕ್ಕಳಿಗೆ ೨ಅಣಿ, ದೊಡ್ಡವರಿಗೆ ಅರ್ಧ ತೊರೆಯಷ್ಟು ಬಿಸಿ ನೀರಿನಲ್ಲಿ ಕೂಡಿಸಿ ಕೊಡಬೇಕು ಇದರಿಂದ ಸಂಪೂರ್ಣ ಗುಣವಾಗುವುದು.

—ದಾ ಕುಮಾರ ಹುಬ್ಬಳ್ಳಿ

ಊರಲ್ಲಿ ಇನ್‌ಫ್ಲೂಯೆಂಜಾ ಹಬ್ಬಿದಾಗ ಆರ್ಸೆನಿಕ್ ಆಲ್ಬಂ ೩೦೦ (ಹೋಮಿಯೋಪತಿ) ಎಂಬ ಔಷಧದ ೪ ಗುಳಿಗೆಗಳನ್ನು (ಚಿಕ್ಕ ಗುಳಿಗೆ ಇದ್ದರೆ ೮, ಪ್ರತಿದಿನ ಬೆಳಿಗ್ಗೆ ನಿರೋಧಕ ಔಷಧವನ್ನಾಗಿ ಉಪಯೋಗಿಸಬಹುದು. ನಿಮಗಿನ ಭಯ ಕಡಿಮೆಯಾಗ ಏ ವರೆಗೆ ಪ್ರತಿದಿನವೂ ತೆಗೆದುಕೊಂಡರೆ ಮಿಂತಿತ ರೋಗ ಸ್ಪರ್ಶವಾಗುವದಿಲ್ಲ

ಆದರೆ ಆಕಸ್ಮಾತ್ ಸಂಸರ್ಗವಾಗಿದೆಯೆಂದು ತಿಳಿದು ಬಂದರೆ, ಅಂದರೆ ನೆಗಡಿ ಜ್ವರ, ತಲೆ ಸಿಡಿತ, ಮೈ ಕೈ ನೋವು ಮೈರೆ ಲಕ್ಷಣಗಳು ಕಂಡು ಬಂದರೆ— ಮೊದಲನೇ ದಿನ ಆರ್ಸೆನಿಕ್ ಆಲ್ಬಂ ೨೦೦ರ ೪ ಗುಳಿಗೆಗಳನ್ನು ನಿನಕ್ಕೆ ಮೂರು ಸಲ ಮತ್ತು ಮರುದಿನ ಇನ್‌ಫ್ಲುಯೆಂಜಿನಮ್ ೩೦ (ಇದು ಒಂದು ಹೋಮಿಯೋಪಥಿಕ್ ಪೆಸ್ಟೀಸ್) ಇದರ ನಾಲ್ಕು ಗುಳಿಗೆಗಳನ್ನು ಬೆಳಿಗ್ಗೆ, ರಾತ್ರಿ ಹೀಗೆ ೨ ಸಲ ತೆಗೆದುಕೊಳ್ಳುವದು ಈ ಎರಡೂ ಔಷಧಗಳನ್ನು ಹೀಗೆ ದಿನ ಬಿಟ್ಟು ದಿನ ರೋಗ ಲಕ್ಷಣಗಳು ಕಡಿಮೆಯಾಗುವ ವರೆಗೆ ತೆಗೆದುಕೊಳ್ಳಬಹುದು ಸಾಧಾರಣವಾದ ರೋಗವಾದಲ್ಲಿ ಅದಿವಸಗಳಲ್ಲಿಇದರ ಗುಣ ಕಂಡುಬರುತ್ತದೆ ಜ್ವರ ವಗೈರೆ ಇದು ಗುಣ ಕಂಡರೂ ಆರ್ಸೆನಿಕ್ ಆಲ್ಬಂ ೩೦೦ನ್ನು ಮಾತ್ರ ಇನ್ನೂ ಒಂದು ವಾರದ ವರೆಗೆ ಬೆಳಿಗ್ಗೆ ಮತ್ತು ರಾತ್ರಿ ದಿನಕ್ಕೆ ೨ ಸಲ ತೆಗೆದುಕೊಳ್ಳಬಹುದು ಈ ಚಿಕಿತ್ಸೆ ನಡೆದಾಗ ಕಾಫಿ ಅಥವಾ ಎಲೋಪಥಿಕ್ ಔಷಧಗಳನ್ನು ಸರ್ವಥಾ ತೆಗೆದುಕೊಳ್ಳಕೂಡದು

ಶಿಬಾಡೆ ಕುಮುಟಾ

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5 ..1955)

ಬಂಗಾರದಂತಹ ಮಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಒಗೆಯ ಗ್ರಂಥ

ಬಿದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ. ರೂ. ೧ : ೨೫

ಪ್ರತಿಗಳಿಗೆ ಬರೆಯಿರಿ.

ನವಯುಗ ಪ್ರೆಸ್, ಉಡುಪಿ.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಯಸುವುದು Roc No 466-N /50 ತಾ 12-12 50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದೆ ಯಾವ ಕೂಡ ಸೆಕೆಂಡರಿಶಾಲೆಗಳವರು ನವಯುಗಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರಸ್ತಾವಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ

ಮೆನೇಜರ್.

ಸರ್ವೋದಯ ಶಕ್ತಿ

(೩ನೇ ಪುಟದಿಂದ)

ದ್ದರು. ಆದರೆ, ಪ್ರತ್ಯಕ್ಷ ಕಾರ್ಯದ ಪ್ರಸಂಗ ಬಂದಾಗ ಇಪ್ಪತ್ತು ಎಕರೆ ಪರಮಾವಧಿ ಜಮೀನು ವ್ಯಕ್ತಿಯಕಡೆ ಇರಗೊಡಬೇಕೆಂದು ಹೇಳುತಿದ್ದರು. ಸಮಾಜವಾದಿ ಮುಂದಾಳುಗಳಾದ ಶ್ರೀ ಪಟ್ಟಾಭಿರಾಮಯ್ಯನವರು ಅಧಿಕಾರದಲ್ಲಿದ್ದಾಗ, ೧೫ ಎಕ್ರೆಯ ಸೀಲಿಂಗ ಮಾಡುವ ವಿಚಾರದಲ್ಲಿದ್ದರು ಆದರೆ ಈ ಪ್ರಕಾರ ಮಾಡುತ್ತಿರುವಾಗಲೇ ಅವರ ಸರಕಾರ ಉರುಳಿ ಬಿತ್ತು; ಇದಲಿ ಆಂಧ್ರದಲ್ಲಿ ಕೇರಳಕ್ಕಿಂತ ಎರಡು ಪಟ್ಟು ಭೂಮಿಯಿದೆ. ಹೀಗಿರುವಾಗ ಕೇರಳದಲ್ಲಿ ಹದಿನೈದು ಎಕರೆಯ ಸೀಲಿಂಗು ನಿರ್ಧರಿಸುವುದರಿಂದ ಬಡ ಭೂಮಿಹೀನರಿಗೆ ಏನು ಸಿಗಬೇಕು?

ಈ ಪ್ರಕಾರ ಇವರೆಲ್ಲರೂ ಸೀಲಿಂಗ ಮಾಡುವ ವಿಚಾರದಲ್ಲಿ ತೊಡಕಿಕೊಂಡು ಬಿದ್ದಿರುವರು. ನಾನು ಹೇಳುವುದೆಂದರೆ, ಹೀಗೆ ಸೀಲಿಂಗ ಮಾಡುವ ವಿಚಾರವೇಕೆ? ಕೇಶನ್‌ಮಾಡಿ ಬಿಡಿರಿ. ಎಲ್ಲರಿಗೂ ಸಮನಾಗಿ ಭೂಮಿ ಸಿಗಲಿ. ೫ ಎಕರೆಯಿಂದ ಕುಟುಂಬ ನಿರ್ವಾಹವಾಗುತಿದ್ದರೆ ಕೆಲವರ ಕೈಯಲ್ಲಿ ಅದರ ನಾಲ್ಕು ಪಟ್ಟು ಮೂರು ಪಟ್ಟು ಇಡಗೊಡುವುದು ಯಾವ ನ್ಯಾಯ? ಸರ್ವೋದಯವು ಇಂತಹ ವಿಚಾರವನ್ನು ಮನ್ನಿಸುವುದಿಲ್ಲ. ಕುಟುಂಬದಲ್ಲಿ ಯಾವ ನ್ಯಾಯ ವೊ ಅದೇ ನ್ಯಾಯವು ಸಮಾಜದಲ್ಲಿ ನಡೆಯಲಿ ಎಂದು ಸರ್ವೋದಯವು ಕೇಳುತ್ತದೆ. ಮನೆಯಲ್ಲಿ ಏಳು ಮಂದಿಯಿದ್ದು ಐದು ಮಂದಿಗೆ ಸಾಲುವಷ್ಟು ಅನ್ನವಿದ್ದರೆ ಐದು ಮಂದಿ ಉಂಡು ಒಬ್ಬರನ್ನು ಉಪವಾಸಗೆಡುವುದಿಲ್ಲ. ಎಲ್ಲರೂ ಹಂಚಿಕೊಂಡು ಉಣ್ಣುತ್ತಾರೆ. ಹತ್ತು ಹೆಚ್ಚಿಗೆ ಅನ್ನ ಹೇಗೆ ದೊರಕಬೇಕೆಂಬ ಪ್ರಯತ್ನಕ್ಕೆ ಎಲ್ಲರೂ ಹತ್ತುತ್ತಾರೆ. ಕುಟುಂಬದಲ್ಲಿ ಒಂದು ನ್ಯಾಯ, ಕುಟುಂಬದ ಹೊರಗೆ ಬೇರೆ ನ್ಯಾಯ ಇದು ಏಕೆ?

ಪ್ರಾರಂಭದಲ್ಲಿ ನಾನು ಭೂಮಿಯ ಕೆಲವೊಂದಂಶವನ್ನು ಜನರಿಂದ ಕೇಳಿದ್ದೆ. ಆಗ 'ಭೂಮಿಯ ಭಿಕ್ಷೆ ಬೇಡ ಹತ್ತಿದ್ದಾರೆ ವಿನೋಬಾ" ಎಂದು ಸಾಮ್ಯವಾದಿಗಳು ತನ್ನನ್ನು ಟೀಕೆಮಾಡುತಿದ್ದರು ಬಾಲಕರಿಗೆ "ಆ, ಆ, ಇ, ಈ ಕಲಿಸಹತ್ತಿದ್ದಾರೆ ಅವರಿಗೆ ಸಾಹಿತ್ಯ ಓದಲು ಏಕೆ ಹಚ್ಚುವುದಿಲ್ಲ?" ಎಂದು ಟೀಕೆ ಮಾಡುವಂತಿದೆ ಇದು ಅಕ್ಷರ ಜ್ಞಾನ ಒಮ್ಮೆಯಾದರೆ ಸಾಹಿತ್ಯ ಓದುವ ಸವಿಯು ಕ್ರಮವಾಗಿ ಬಂದೇ ಬರಬೇಕು ಈ ಸೊದಲು ಜನರಲ್ಲಿ ತನ್ನ ಸಂಗ್ರಹವನ್ನು ಹೆಚ್ಚಿಸುವ, ಬೇರೆಯವರ ಭೂಮಿಯನ್ನು ಎತ್ತಿಹಾಕುವ ವಿಚಾರವೇ ಪ್ರಬಲವಾಗಿತ್ತು. ಅವರ ಈ ವಿಚಾರದ ದಿಶೆಯನ್ನೇ ಬದಲಿಸಬೇಕಿತ್ತು. ಆದ್ದರಿಂದ ಮೊದಲು ಸ್ವಲ್ಪ ದಾನ ಮಾಡಿರಿ ಎಂದು ಕೇಳಿದೆ. ನಂತರ ಅದರಲ್ಲೊಂದು ಪಾಲು ದಾನ ಕೇಳಹತ್ತಿದೆ. ಆದರೆ, ಹೀಗೆ ಭೂಮಿಯ ಒಂದಂಶವನ್ನು ದಾನ ಬೇಡುವಾಗ ಸಹ ಭೂಮಿಯ ಒಡೆತನವು ತಪ್ಪು ವಿಚಾರವೆಂದು ಅಯೋಗ್ಯ ಮಾತೆಂದು ನಾನು ಘೋಷಿಸುತ್ತಲೇ ಇದ್ದೆ. ಹವೆ, ನೀರು, ಬೆಳಕಿನಂತೆ ಭೂಮಿಯು ಎಲ್ಲರದೂ ಇದೆಯೆಂ



ಕಳೆದ ಒಂದು ವರಳೆದಲ್ಲಿ ವಿಮಾನ ಸಾರಿಗೆಯು ದೇಶದ ಸಾರಿಗೆ ಹಾಗೂ ಸಂಪರ್ಕ ಪದ್ಧತಿಯಲ್ಲಿ ಹೆಚ್ಚು ಹೆಚ್ಚಾಗಿ ಪ್ರಮುಖ ಪಾತ್ರ ವಹಿಸುತ್ತದೆ ಭಾರತ ಸರಕಾರದ ವಿಮಾನಯಾನ ಶಾಖೆಯ ಪತೋಟಿಯಲ್ಲಿ ೧೧ ವಿಮಾನ ನಿಲ್ದಾಣಗಳಿದ್ದು ಈ ವರ್ಷದ ಕೊನೆಯೊಳಗೆ ಇನ್ನೂ ೧೩ ನಿಲ್ದಾಣಗಳು ಪೂರ್ಣವಾಗಿರುವುವು. ಚಿತ್ರದಲ್ಲಿ ಈ ಕುರಿತಾದ ಕೆಲವೊಂದು ನೋಟಗಳನ್ನು ನೋಡಬಹುದು

ಚಿತ್ರ ೧. ದಿಲ್ಲಿಯ ವೆಲ್ಲಿಂಗ್‌ಡನ್ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ವಿಮಾನವನ್ನು ಮಾನಯೋಗ್ಯವನ್ನಾಗಿ ಮಾಡುತ್ತಿರುವುದು.
ಚಿತ್ರ ೨ ಗೌಹಾಟಿಯ ದಿಕ್ಕನ್ನು ನಿರ್ಧರಿಸಲು ವಿಮಾನ ನಿಲ್ದಾಣದಲ್ಲಿ ಆಕಾಶಬುಟ್ಟಿಯೊಂದನ್ನು ಹಾರಿಸುತ್ತಿರುವುದು
ಚಿತ್ರ ೩ ದಿಲ್ಲಿಯಲ್ಲಿ ಗ್ಲೈಡಿಂಗ್ ಕ್ಲಬ್‌ನಲ್ಲಿ ಇಬ್ಬರು ಕುಳಿತುಕೊಳ್ಳಬಹುದಾದ 'ಗ್ಲೈಡರ್' ಬಾಲಕನು ತರಬೇತಿ ಪಡೆಯುತ್ತಿರುವುದು
ಚಿತ್ರ ೪. ಏರ್ ಇಂಡಿಯಾ ಇಂಟರ್‌ನ್ಯಾಶನಲ್ ಸಂಸ್ಥೆಯವರ ನಾಲ್ಕು ಯಂತ್ರಗಳಿರುವ ರಜಪೂತ ರಾಣಿ ವಿಮಾನವು ಪ್ರದರ್ಶನಾರ್ಥವಾಗಿ ಹಾರಲು ಸನ್ನದ್ಧವಾಗಿರುವುದು.

ದುದನ್ನು ನಾನು ಮೊದಲಿಂದ ಹೇಳುತ್ತಾ ಬಂದಿದ್ದೆ. ಆದರೆ, ಕೇಳುವಾಗ ಕೆಲವೊಂದು ಅಂಶವನ್ನೇ ಕೇಳುತಿದ್ದೆ ಅಸ್ಪರಿಂದಲೇ ನಂತರ ಪ್ರಸ್ತಾಪಗಾಯಿತಿದ್ದೆ ಹೀಗೆ ಮಾಡುತ್ತ ಮಾಡುತ್ತ ಕ್ರಮೇಣ ಭೂಮಿಯ ಒಡೆತನವನ್ನು ನಷ್ಟಪಡಿಸುವ ಮಟ್ಟಿಗೆ ನನ್ನ ಈಗ ಪ್ರತ್ಯಕ್ಷ ಬಂದು ಮುಟ್ಟಿರುವೆವು.

ಕೇರಳದ ಸೌಮ್ಯವಾದಿ ಸರಕಾರವು ಭೂಮಿಯ ವೈಯಕ್ತಿಕ ಒಡೆತನವನ್ನು ನಷ್ಟಪಡಿಸುವ ವಿಚಾರವನ್ನು ಮಾಡುತ್ತಿದ್ದರೆ ಮತ್ತು ಜನತೆಯು ಸಹ ಇದನ್ನು ಮನ್ನಿಸುತಿದ್ದರೆ ಎಂ. ಪಕ್ಷಭೇದಗಳೂ ನಷ್ಟವಾಗುವುವು ಮೊನ್ನೆ ಮೊನ್ನೆ ಪಂಡಿತ ನೆಹರೂ ಅವರು 'ಗ್ರಾಮದಾನ"ವು ಒಂದು ಉತ್ತಮ ವಿಚಾರವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಆದರೆ, ಗ್ರಾಮದಾನವಾದ ಹಳ್ಳಿಯಲ್ಲಿ ಭೂಮಿಯನ್ನು ಪುನಃ ಕುಟುಂಬಗಳಲ್ಲಿ ಹಂಚಿ ಹಾಕದೆ ಭೂಮಿಯ ಸಹಕಾರೀ ಒಕ್ಕಲತನ ನಡೆಯಬೇಕೆಂದು ಅವರು ಅಭಿಪ್ರಾಯಪಟ್ಟರು. ಈ ವಿಷಯದಲ್ಲಿ ನನ್ನದು ಯಾವುದೇ ಆಗ್ರಹವಿಲ್ಲ. ಗ್ರಾಮದಾನವಾದನಂತರ ಏನುಮಾಡಬೇಕೆಂಬುದನ್ನು ಹಿಂದಿನಿಂದ ವಿಚಾರ ಮಾಡಲ ಬಂದೀತು ಆದರೆ, ಭೂಮಿಯ ಒಡೆತನ ಗ್ರಾಮಕ್ಕೆ ಸೇರತಕ್ಕದ್ದೆಂಬ ಮಾತನ್ನು ನೆಹರೂರವರು ಮೆಚ್ಚಿದ್ದಾರೆ ಅವರು ಕಾಂಗ್ರೆಸದ ಮುಂದಾಳು ಅವರ ಮೆಚ್ಚಿಗೆಯೆಂದರೆ ಕಾಂಗ್ರೆಸಿನ ಮೆಚ್ಚಿಗೆ. ಸಮಾಜವಾದಿಗಳು, ಸೌಮ್ಯವಾದಿಗಳೂ ಈ ಮಾತನ್ನು ಮೊದಲೇ ಒಪ್ಪಿರುವರು. ಕೇರಳದೊಳಗೆ ಕ್ರೈಸ್ತ ಧರ್ಮಾನುಯಾಯಿಗಳು ಸಹ ಗ್ರಾಮದಾನ ವಿಚಾರಕ್ಕೆ ತಮ್ಮ ಒಪ್ಪಿಗೆಯನ್ನು ಜಾಹೀರಪಡಿಸಿರುವರು. ಎಷ್ಟೋ ಬಿಷಪ್ಪರು (ಕ್ರಿಸ್ತಿ ಧರ್ಮಗುರುಗಳು) ತನ್ನಕಡೆಗೆ ಬಂದು ಭೂದಾನ ಗ್ರಾಮದಾನ ಕಾರ್ಯವು ಯೇಸುಕ್ರಿಸ್ತನ ಉಪದೇಶಕ್ಕನುಗುಣವಾಗಿದೆಯೆಂದು ತಮ್ಮ ಶುಭೇಚ್ಛೆಯನ್ನು ಈ ಕಾರ್ಯಕ್ಕೆ ವ್ಯಕ್ತಮಾಡಿದರು ಈ ಪ್ರಕಾರ ಧರ್ಮಸಂಸ್ಥೆಗಳೂ ಅರ್ಥಕಾರಣಿಗಳಾ ರಾಜಕೀಯ ಪಕ್ಷಗಳೂ ವಿನೋಬಾನ ಸರ್ವೋದಯ ಅನುಯಾಯಿಗಳೂ ಹೀಗೆ ಈ ನಾಲ್ವರೂ ಈ ಮಾತನ್ನು ಒಪ್ಪಿಕೊಂಡಿದ್ದಾರೆ. ಇಂಥ ಸಂದರ್ಭದಲ್ಲಿ ನೀವು ಸದ ಈ ವಿಚಾರವನ್ನು ಸಿಂಪಡಿಸಿದರೆ ನಾನು ಈ ಯಾತ್ರೆ ನಡೆಸುವ ಕಾರಣವೇ ಉಳಿಯಲಾರದು, ಈ ಪ್ರಶ್ನೆಯು ತ್ವರಿತದಲ್ಲಿ ಒಗೆ ಹರಿಯುವುದು. ಕಮ್ಯೂನಿಷ್ಟ ಸರಕಾರವು ಏನು ವಿಚಾರ ಮಾಡುತ್ತಿದೆಯೆಂಬ ಪ್ರಶ್ನೆಯೂ ಉರುವುದಿಲ್ಲ. ಒಡೆತನವನ್ನು ನಷ್ಟಗೊಳಿಸುವ ಪ್ರಶ್ನೆಯನ್ನು ಯಾವ ಸರಕಾರವೂ ಬಗೆಹರಿಸಲಾರದು. ಅದು ಸೌಮ್ಯವಾದೀ ಸರಕಾರವಾಗಲಿ, ಇಲ್ಲವೆ ಬೇರೆ ಯಾವುದೇ ಸರಕಾರವಿರಲಿ, ಅದು ಎಲ್ಲರ ಸಹಕಾರದಿಂದ ಸಾಧಿಸಬೇಕಾದ ಮಾತು. ನಾವೆಲ್ಲರೂ ಇಚ್ಛಿಸಬ್ಬಾಗಲೇ ಇದು ಸಾಧಿಸುವುದು ಕಾಯದೆಯ ಏನು ಮಾಡಬಲ್ಲದು? ಜನತೆಯ ವಿಚಾರದಂತೆ ಒಂದು ಸುಧಾರಣೆಯಾದ ಮೇಲೆ ಅದನ್ನು ಮೊಹದು ತಂಕಪ್ರಯತ್ನೇ ಕಾಯದೆಯ ಕೆಲಸ ಇದಕ್ಕಿಂತ ಹೆಚ್ಚಿನ ಶಕ್ತಿ ಕಾಯದೆಗಿಲ್ಲ

— ಶ್ರೀ ನಾಗುಕ.

(ಸಂಯುಕ್ತ ಕರ್ನಾಟಕದಿಂದ)

ಕುಮಾರಿ ಜಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಡೆಗೆ ರೂ 8/-
(ವಿ ಪಿ ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಥಾಪಕರು. ಷಾ ಕಂಪೆನಿ, ಮಂಗಳೂರು—1.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಇಸ್ಲಾಮೀ ಶಾಸನ

(೨ನೇ ಪುಟದಿಂದ)

ಗಳ ಉತ್ಪಾದನೆ, ವಿಕಾಸ ಮತ್ತು ಪತನಗಳ ವಿವರಣೆಗಳ ಇತಿಹಾಸಗಳನ್ನು ತನಗೆ ಕಲಿಸಬೇಕಾಗಿತ್ತು. ನನಗೆ ಪೂರ್ವಜರ ಹೆಸರು, ವಂಶಾವಳಿಯ ಹೆಸರುಗಳನ್ನೂ ನೀವು ಕಲಿಸಲಿಲ್ಲ. ಅವರ ಅಸಾಧಾರಣ ಪೌರುಷ ಮತ್ತು ಸ್ಮರಣೀಯ ವಿಜಯಗಳ ಇತಿಹಾಸಗಳನ್ನು ನನ್ನಿಂದ ಅಡಗಿಸಿಟ್ಟಿರುವಿರಿ. ರಾಜ ಕುಮಾರನಿಗೆ ಯಾವ ಯಾವ ವಿದ್ಯೆಗಳನ್ನು ಕಲಿಸಬೇಕೆಂಬುದನ್ನು ತಾವು ಮರೆತಿರುವಿರಿ. ತಾವು ನನ್ನ ಸ್ವಾಧ್ಯಾಯದ ಅಮೂಲ್ಯ ಸಮಯವನ್ನು ವಾಗಜಾಲ-ಪೂರ್ಣ ವ್ಯಾಕರಣ, ಕೋಶ ಮೊದಲಾದುವುಗಳನ್ನು ಹಂಟಿ.ವುದರಲ್ಲಿಯೇ ವ್ಯರ್ಥವಾಗಿ ಹಾಳು ಮಾಡಿದಿರಿ. ಬಾಲ್ಯಕಾಲದಲ್ಲಿಯೇ ಸ್ಮರಣ ಶಕ್ತಿಯು ಪಕ್ವವಾಗಿರುವುದೆಂಬ ಸತ್ಯಸ್ಥಿತಿಯನ್ನು ತಿಳಿದಿಲ್ಲವೆ? ಈ ಅವಸ್ಥೆಯಲ್ಲಿ ವಿದ್ಯೆಯ ಅಮೂಲ್ಯ ನಿಧಿಯನ್ನು ಸಂಪಾದಿಸಿ ಇಟ್ಟುಕೊಳ್ಳಬಹುದು ನಾವು ನಮ್ಮ ನಮಾಜು, ಕಾನಾನು ಮತ್ತು ವಿಜ್ಞಾನದ ತತ್ವಗಳನ್ನು ಅರಬ್ಬೀ ಭಾಷೆಯ ಮಾಧ್ಯಮದಲ್ಲಿ ಕಲಿಯಬಲ್ಲೆನೆ? ಆ ಅಭಿಪ್ರಾಯಗಳನ್ನು ನಮ್ಮ ಮಾತೃಭಾಷೆಯ ಮುಖಾಂತರ ಪ್ರಕಟಿಸಲು ಅಸಮರ್ಥರಾಗಿದ್ದೇವೆಯೆ? ನೀವು ನನ್ನ ತಂದೆ ಶಹಜಹಾನರೊಡನೆ ನನಗೆ ದೈವಶಾಸ್ತ್ರವನ್ನು ಕಲಿಸುತಿದ್ದೇನೆಂದು ಹೇಳಿದಿರಿ ಜೀವನದಲ್ಲಿ ಯಾವುದೊಂದು ಅಭಿಪ್ರಾಯವೂ ಇಲ್ಲದ ವಿದ್ಯೆಯನ್ನು ಕಲಿಸಿ ನನ್ನ ಶಕ್ತಿಯನ್ನು ವ್ಯರ್ಥವಾಗಿ ನಷ್ಟಗೊಳಿಸಿದಿರಿ. ನನ್ನ ಜೀವನದ ಅಮೂಲ್ಯ ವರ್ಷಗಳನ್ನು ತಾವು ಮೂರ್ಖತಾಪೂರ್ಣ ಪ್ರಯೋಗಗಳಲ್ಲಿ ಖರ್ಚುಮಾಡಿದಿರಿ. ಏನಂದ ದುರ್ನುಡಿಯಂತೆ ಆಶ್ರಯವಾಗಲೀ ಫಲವಾಗಲೀ ದೊರೆಯದಂತೆ ಗೈದಿರಿ. ನೀವು ನನಗೆ ಅಜ್ಞಾನದ ಗಹನಕೂಪದಲ್ಲಿ ಮುಳುಗೇಳಲು ಕಲಿಸಿದಿರಿ. ನನ್ನ ಬುದ್ಧಿಯು ಪರಿಪಕ್ವವಾಗಿ ವಿಶ್ವದ ಸಮಸ್ಯೆಗಳನ್ನು ನಿಜರೂಪದಲ್ಲಿ ತಿಳಿಯುವಂತಹ, ಮಾನವನ ಪ್ರಕೃತಿಯನ್ನು ಅರಿಯುವಂತಹ ಮತ್ತು ನೈತಿಕ ತತ್ವಗಳ ಸಮಸ್ಯೆಗಳನ್ನು ಪರಿಹರಿಸುವಂತಹ ವಿದ್ಯೆಯನ್ನಿತ್ತಿದ್ದರೆ, ಅದರಿಂದಷ್ಟು ಉಪಯೋಗವಾಗುತಿತ್ತು! ನೀವು ನನಗೆ ಇಂತಹ ವಿದ್ಯೆಯನ್ನು ಕಲಿಸುತಿದ್ದಿದ್ದರೆ, ಅಲೆಕ್ಸಾಂಡರನಿಂದ ಅಹಕನಾದ ಅರಿಸ್ಟೋಟಲನಿಗಿಂತಲೂ ಅಧಿಕ ಸಂಮಾನವನ್ನು ಮಾಡುತಿದ್ದೆ. ನಿಮಗೆ ರಾಜ ಮತ್ತು ಪ್ರಜೆಗಳ ಕರ್ತವ್ಯವೆನೆಂಬತ್ತ ಪ್ರಕಾರ ಬೀರಲಾಗಲಿಲ್ಲವೆ? ನಾನು ಸಿಂಹಾಸನತ್ಯಾಗಿ ನನ್ನ ಸಹೋದರರೊಡನೆ ಕತ್ತಿಯಿಂದ ಹೊಡೆದಾಡುವೆನೆಂದು ನಿಮ್ಮ ಬುದ್ಧಿಗೆ ಹೊಳೆಯಲೇ ಇಲ್ಲವೆ? ಹಿಂದೂಸ್ತಾನದ ರಾಜವಂಶದಲ್ಲಿ ಈ ತೆರದ ಘಟನೆಗಳು ಸಂಭವನೀಯವಾಗಿವೆ. ನಗರವನ್ನು ಯಾವ ವಿಧಾನದಿಂದ ಮುತ್ತಿಗೆ ಹಾಕಬೇಕೆಂದು ನನಗೆಂದಾದರೂ ತಾವು ಕಲಿಸಿಕೊಟ್ಟಿದ್ದೀರಾ? ನಿಮ್ಮಿಂದಲೂ ಅಧಿಕ ಬುದ್ಧಿಮತ್ತೆಯು ನನ್ನಲ್ಲಿದ್ದು, ಅದು ಹೆಜ್ಜೆ ಹೆಜ್ಜೆಯಲ್ಲಿಯೂ ನನಗೆ ಮಾರ್ಗದರ್ಶನವನ್ನು ಮಾಡುತ್ತಾ ಇದ್ದುದು ನನ್ನ ಸೌಭಾಗ್ಯವೆಂದೆನ್ನಬೇಕು. ಇಷ್ಟಂದ ಹೊರಟು ಹೋಗಿ ನಿಮ್ಮ ಹಳ್ಳಿಯಲ್ಲಿ ವಿಶ್ರಾಂತಿ ಪಡೆಯಿರಿ. ನನ್ನ ಜೀವಮಾನ ವಿಡಿ ನಿಮ್ಮ ಮುಖವನ್ನು ನನಗೆ ತೋರಿಸಬೇಡಿರಿ."

ಅವರಂಗಜೇಬನ ಮರಣಾನಂತರ ಮುಸ್ಲಿಮ ಶಿಕ್ಷಣಕ್ಕೆ ಬಹಳ ಆತಂಕ ಬಂದಿತು. ವಿದ್ಯಾಪ್ರೇಮಿ ಶ್ರೇಷ್ಠಿಗಳ ಆಶ್ರಯ ದಲ್ಲಿ ಹಿಂದುಗಳಲ್ಲಿ ಶಿಕ್ಷಣವು ನುನ್ನಡೆಯಿಡುತ್ತಿತ್ತು. ಶಿಕ್ಷಣವು ಮನೆ ಮನೆಗಳಲ್ಲಿ ಆಯಲ್ಪಡುತಿತ್ತು. ಮತ್ತು ಕೇವಲ ರಾಜಕೀಯ ಹಾಗೂ ಶ್ರೀಮಂತ ಪರಿವಾರದವರಿಗೆ ಮಾತ್ರವೊರೆಯುವ ಸಂಭವವಿತ್ತು. ಹಿಂದಿನ ಕಾಲದಲ್ಲಿಯೂ ಶಾಲೆ ಕಾಲೇಜುಗಳಲ್ಲಿ ದೊರೆಯುತಿದ್ದ ಶಿಕ್ಷಣವು ಅವ್ಯವಹಾರಿಕ ಹಾಗೂ ನಿರುಪಯೋಗಿಯಾಗಿತ್ತೆಂದು ಅವರಂಗಜೇಬನ ಮಾತುಗಳಿಂದ ವ್ಯಕ್ತವಾಗುವುದು. ಆ ಯಾಕಾಲದಲ್ಲಿ ಸಮಯಕ್ಕೆ ಸರಿಯಾದ ಹೊಂದಿಕೆಯುಳ್ಳ ವಿದ್ಯಾರ್ಥಿಗಳಿಗೆ ತಮ್ಮ ಮುಂದಿನ ಜೀವನಕಾಲದಲ್ಲಿ ಒಂದಲ್ಲ ಒಂದು ವಿಧಾನದಿಂದ ಉಪಯುಕ್ತವಾಗುವ, ವ್ಯಾವಹಾರಿಕ ರೀತಿಯ ಶಿಕ್ಷಣವನ್ನೇ ಕೊಡುವುದು ಅತ್ಯಂತಾವಶ್ಯಕವಾದುದು.

ನಮ್ಮ ಇಂದಿನ ವಿದ್ಯಾಲಯಗಳಲ್ಲಿ ದೊರೆಯುತ್ತಿರುವ ಶಿಕ್ಷಣವೂ ಹಿಂದಿನ ಕಾಲದಕ್ಕಿಂತ ವ್ಯತಿರಿಕ್ತವಾಗಿಲ್ಲ ಅದನ್ನು ಸುಧಾರಿಸುವ ಕಾರ್ಯಕ್ರಮವು ತೀವ್ರವಾದಷ್ಟು ಜನತೆಗೆ ಕ್ಷೇಮ ವ್ಯಾವಹಾರಿಕ ಶಿಕ್ಷಣವೇ ಉಪಯುಕ್ತವಾದುದ. ಅದನ್ನು ಒದಗಿಸಲು, ಸರಕಾರ, ಜನರು ಮುಂದೆ ಬರಬೇಕು.

ಮುಸಲ್ಮಾನರು ಕೇವಲ ತಮ್ಮ ಶಾಸ್ತ್ರಗ್ರಂಥಗಳಿಗೆ ಮಾತ್ರ ಸ್ರೋತ್ಸಾಹವೀಯದೆ, ರಾಜ್ಯದಲ್ಲಿನ ಇತರ ಜಾತಿಯವರಿಗೂ ವಿದ್ಯಾ ಸೌಕರ್ಯವನ್ನು ಒದಗಿಸುತಿದ್ದರು. ಹಿಂದೂ ಮುಸಲ್ಮಾನರೆಂಬ ಬೇಧಭಾವನೆಯನ್ನಿಟ್ಟುಕೊಳ್ಳದೆ ಕರ್ತರನ್ನೂ ಸಮದೃಷ್ಟಿಯಿಂದ ನೋಡಿಕೊಳ್ಳುವ ರಾಜ್ಯಭಾರ ಪದ್ಧತಿಯು ಪ್ರಚಲಿತವಾದಂತೆ, ಹಿಂದೂ ಶಾಸ್ತ್ರಗ್ರಂಥಗಳ ಅಧ್ಯಯನಕ್ಕೂ ಸಾಕಷ್ಟು ಪ್ರೋತ್ಸಾಹವು ದೊರೆಯ ಹತ್ತಿತು. ಕಾಶಿಯು ಅನಾದಿ ಕಾಲದಿಂದಲೂ ಹಿಂದೂಜನರ ಪವಿತ್ರ ತೀರ್ಥಸ್ಥಳವಾಗಿದ್ದು ಸಂಸ್ಕೃತ ಭಾಷೆಯಲ್ಲಿ ಸ್ವತಂತ್ರ ಪಂಡಿತರನ್ನು ತಯಾರಿಸುವ ದೊಡ್ಡ ಕೇಂದ್ರವಾಗಿತ್ತು. ಅದು ಕೆಲ ಸಮಯದಲ್ಲಿ ಅಪಖ್ಯಾತವನ್ನು ಪಡೆದರೂ ಉದಾರಿ ಮೊಗಲರ ಕಾಲದಲ್ಲಿ ಪುನಃ ತಲೆಯೆತ್ತಿತು; ತನ್ನ ಪ್ರಾರಂಭದ ಘನತೆಯನ್ನುಳಿಸಿಕೊಂಡಿತು. ಇದೇ ರೀತಿಯಲ್ಲಿ ಅಲ್ಲಲ್ಲಿ ಹಿಂದೂ ವಿದ್ಯಾಲಯಗಳೂ ಬೆಳೆದು ಬಂದು, ಶಿಕ್ಷಣವು ಎಲ್ಲ ವರ್ಗಗಳಲ್ಲೂ ಪರಿಡಿತ:.

ಒಂದು ಕಾಲದಲ್ಲಿ ಬ್ರಾಹ್ಮಣ ವೈಶ ಹಾಗೂ ಕ್ಷತ್ರಿಯರಿಗೆ ಮಾತ್ರ ಮೀಸಲಾಗಿದ್ದ ಓದುಬರಹದ ಶಿಕ್ಷಣವು ಮಿಗ್ಗವರಲ್ಲಿ ಪ್ರಚಾರವಾಗಲು ಬ್ರಿಟಿಷರೇ ಕಾರಣರೆಂದು ಕೆಲವರ ಅಭಿಪ್ರಾಯ. ಅದರೆ, ಸರಿಯಾಗಿ ನೋಡಿದರೆ, ಇದು ತಪ್ಪು ಕಲ್ಪನೆ. ಬ್ರಿಟಿಷರಿಗಿಂತ ಹಿಂದೆ ಭಾರತದಲ್ಲಿ ತಳವೂರಿದ್ದ ಮುಸಲ್ಮಾನ ಅರಸರೂ ಈ ಕಡೆಗೆ ವಿಶೇಷವಾಗಿಯಲ್ಲದಾದರೂ ಕೊಂಡ ಮಟ್ಟನ ಲಕ್ಷ್ಯವನ್ನು ಹರಿಸಿದ್ದರು. ಈ ಮುಸಲ್ಮಾನರು ತಮ್ಮ ಹಿಂದೆ ರಾಜ್ಯವಾಳಿದ್ದ ಹಿಂದೂ ಅರಸರನ್ನೇ ಅನುಸರಿಸಿ, ಪರಂಪರಾ ಪ್ರಾಪ್ತವಾಗಿ ಭಾರತೀಯ ಅರಸರಿಗೆ ಬಂದಿರುವ ವಿದ್ಯಾಪ್ರೇಮವನ್ನು ಪ್ರದರ್ಶಿಸಿದರು. ಇದರಿಂದ ಬಾರತದ ಶಿಕ್ಷಣವು ಸ್ಫೂರ್ತಿಯನ್ನು ಪಡೆದು ಬೆಳೆದು ಬಂದಿತು "ವಿದ್ಯಾದಾನಂ ಮಹಾದಾನಂ", "ವಿದ್ಯಾ ವಿದಾತಿ ವಿನಯಂ" ಎಂಬಿತ್ಯಾದಿ ನುಡಿ ಮುತ್ತುಗಳು ಭಾರತದ ಜನರಲ್ಲಿ ವಿದ್ಯೆಯ ಕಡೆಗಿರುವ ಅಭಿರುಚಿಯನ್ನು ಅಭಿವ್ಯಕ್ತಗೊಳಿಸುತ್ತದೆ.

(ಸಾಧಾರ)

—ಎಸ್. ಗೋಪೀಚಂದ ರಾವ್,
ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸ್ಥಿರಾಯ ಠೇವಣಾತಿ.		
24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK, LTD. MULKI

ಓದಲೇ ಬೇಕಾದ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಮಾನವನನ್ನೂ ವಿಜ್ಞಾನವನ್ನೂ ಸಮರಸವಾಗಿ ಬೆಳೆಯಿಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉತ್ಕೃಷ್ಟ ಗ್ರಂಥ ಬರೆದವರು. ಡಾಕ್ಟರ್ ಜೇಮ್ಸ್ ಬಿ. ಕೊನೆಂಟ್ ಅನುವಾದಕ. ಯು. ಲಕ್ಷ್ಮೀನಾರಾಯಣಾಚಾರ್ಯ ಪುಟ: ೧೪೦. ಬೆಲೆ: ರೂ. ೧.೫೦

ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ ಮಾಡಿರದ ಅಪರಾಧಗಳಿಗಾಗಿ ನಿಕಾಂತಬಾಸಕ್ಕೆ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಾತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸೆರೆಯಾಳು ಹಂತಕರು ಕರೆದೊಯ್ಯುವವರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ. ಪ್ರಖ್ಯಾತ ಲೇಖಕ ಅರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯ ಕನ್ನಡವನ್ನು ಅನುವಾದಿಸಿದವರು ಕು. ಶಿ. ಹರಿದಾಸ ಭಟ್ಟರು. ಪುಟ: ೩೦೮ ಬೆಲೆ. ರೂ ೨.೫೦.

ಶಿಕ್ಷಣದ ಧ್ಯೇಯಗಳು

ಪ್ರಪಂಚದ ಅತ್ಯಂತ ಮೇಧಾವಿ ತತ್ತ್ವಜ್ಞಾನಿ ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಅವರ ಮಹತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ ಅನುವಾದಕರು: ಕೆ. ಬಿ. ರಾಮಕೃಷ್ಣರಾವು ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೨೫೦. ಬೆಲೆ: ರೂ ೨.೨೫

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ. ಪ್ರಜಾತಂತ್ರಾತ್ಮಕ ಸರ್ಕಾರಿ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ವಿಕಾಸವು ಹೇಗೆಂಬುದನ್ನು ವಿವರಿಸುವ ಅಪೂರ್ವ ಗ್ರಂಥ. ಅನುವಾದಕ: ಕು. ಶಿ. ಹರಿದಾಸ ಭಟ್ಟ. ಪುಟ: ೨೫೦. ಬೆಲೆ: ರೂ. ೨.

ಹಿರೋಶಿಮಾದಿಂದ ಜಿನೇವಾ

'ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಫಲಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಭತ್ತು ಪುಟದ ಪುಸ್ತಕದಲ್ಲಿ ಬಹು ವಿವರವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರಯುತವಾಗಿ ವರ್ಣಿಸಲಾಗಿದೆ ಬರೆದವರು: ಯು. ರಾಘವೇಂದ್ರಾಚಾರ್ಯ. ಪುಟ: ೯೦. ಬೆಲೆ: ರೂ. ೧.೫೦

ಏತಿಯದ ಸಂಪತ್ತು

ಏತಿಯದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿವೇಚನೆ, ಒಂದು ಸ್ವತಂತ್ರ ರಚನೆ. ಬರೆದವರು. ಕು. ಶಿ. ಹರಿದಾಸ ಭಟ್ಟ ವಿ. ಸೀತಾರಾಮಯ್ಯ ನವರ ಮುನ್ನುಡಿ ಇದೆ. ಪುಟ: ೧೫೦. ಬೆಲೆ: ರೂ. ೨.

ಘಂಟೆಮೂರಾ

ಇಗ್ನೇಜಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ. ಫಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅದನ್ನು ವಿರೋಧಿಸಿ ನಿಂತ ಹೃದಯಂಗಮ ಕಥೆ. ಅನುವಾದಕರು: ಕು. ಶಿ. ಹರಿದಾಸ ಭಟ್ಟ. ಪುಟ: ೨೦೦. ಬೆಲೆ. ರೂ. ೨.

1. ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O S 82/56 R. E P 631/56.

C. A ತಿಂಮಪ್ಪಯ್ಯ ಕೂಡಾ Petrs.

ಸಂಕು ಪೂಜಾರಿ ಕೂಡಾ—ಎದ್ರಿರು.

ಸಂಕು ಪೂಜಾರಿ ಅಂಗರ ಪೂಜಾರಿ ಅಳಿಯ ಧರ್ಮಸ್ಥಳ ಗ್ರಾಮ— 4. ಚಿನ್ನಮ್ಮ-ಅಂಗರ ಪೂಜಾರಿ ಸೊಸೆ—ನರಿಮೊಗರು ಗ್ರಾಮ— 5. ಮಂಜುನಾಥ ಪೂಜಾರಿ ಚಿನ್ನಮ್ಮನ ಮಗ ನರಿಮೊಗರು ಗ್ರಾಮ (1-4-5 ನೆ ಎದ್ರಿರಿಗೆ)

ಎದ್ರಿರಿಂದ ಬಜ ಅಯೇಜಿಗೆ ಎದ್ರಿರ ಸ್ಥಿರ ಆಸ್ತಿ ಜಪ್ತಾಗಿ ಯೇಲಂ ಇಸ್ತಿಹಾರಿ ಹಾಜ್ರುಪಡಿಸಿದ್ರಿಂದ ಆ ಇಸ್ತಿಹಾರಿನ ಯೇಲಮಿನ ಪರತ್ತುಗಳನ್ನು ನಿರ್ಣಯಿಸಲಿಕ್ಕೂ, ಯೇಲಂ ಸಮಯ ಅರ್ಜಿದಾರರ ಕಡೆಯಿಂದ ದೆಕಾಸ್ತಿಗೆ ಇಟ್ಟುವರೆ ಪರ್ಮಿಶನು ಕೊಡಿಸಬೇಕಾಗಿ ಕೂಡಾ ಇದೇ ತಾ. 17—7—57ಕ್ಕೆ ನೋಟೀಸು ವ್ಯಾವೆಯಾಗಿರುತ್ತದೆ. ಎದ್ರಿರು ಆ ವ್ಯಾವೆಗೆ ತಮ್ಮ ಆಕ್ಷೇಪಗಳೇನಾದರೊ ಯೇಳುವದಿದ್ದರೆ ಆ ವ್ಯಾವೆ ದಿನ 11ಘಂಟೆಗೆ ಈ ಕೋರ್ಟಿನಮುಂದೆ ಹಾಜ್ರಾಗಿ ಹೇಳಿಕೊಳ್ಳತಕ್ಕದ್ದು ಇದಕ್ಕೆ ತಪ್ಪಿದರೆ ಎದ್ರಿರನ್ನು ತಿಳಾಯ ಎಂತ ಮಾಡಿ ಮುಂದಿನ ತನ್ನಿಯಂದ ಸ್ವಾಹರಣೆ ಮುಂದರಿಸಲಾದೀತು ಎಂತ ಈ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

(sd) M. Sadashiva Rao
B. A. B.L.
Pleader for petitioners.

ತಾ. 30.6.1957. ಪುತ್ತೂರು S. K.

ಆಹಾರ ಸ್ವಾವಲಂಬನ

ಅಧಿಕ ಆಹಾರೋತ್ಪಾದನೆಯ ಸುಲಭ ಮಾರ್ಗ— ಸಾಕಷ್ಟು ಹಸುರು ಗೊಬ್ಬರದ ತೀವ್ರ ಉಪಯೋಗ.

ಪೂರ್ವ ವಲಯದಲ್ಲಿ ೧೯೫೫-೫೬ರ ವರ್ಷದಲ್ಲಿ ಭತ್ತ ಬೆಳೆಯುವ ಪ್ರದೇಶದ ವಿಸ್ತೀರ್ಣವು ೩೬.೧ ಲಕ್ಷ ಎಕ್ರೆಗಳಾಗಿದ್ದು, ಉತ್ಪತ್ತಿಯು ೧೦೭.೩ ಲಕ್ಷ ಟನ್ನುಗಳಾಗಿದ್ದುವು. ಎಂದರೆ, ಒಂದು ಎಕ್ರೆಯಲ್ಲಿ ಬೆಳೆದ ಸರಾಸರಿ ಅಕ್ಕಿಯು ೬೫೬ ರಾತಲುಗಳೆಂದಾಯಿತು. ಈ ಬೆಳೆಯಾದರೂ ಮುಖ್ಯವಾಗಿ ಪ್ರಕೃತಿಯ ಉದಾರತೆಯಿಂದಲೇ ದೊರೆಯುವುದು. ಪ್ರಚಲಿತ ಸಮಯದಲ್ಲಿ ಗೊಬ್ಬರ ಮತ್ತು ಸುಧಾರಿತ ಬೀಜಗಳನ್ನು ತೀರ ವಿರಳವಾಗಿಯೇ ಬಳಸಲಾಗುತ್ತದೆ. ಸುಮಾರು ೩೪೦ ಲಕ್ಷ ಎಕ್ರೆಗಳಷ್ಟು ಭೂಮಿಗೆ ಹಸುರು ಗೊಬ್ಬರವನ್ನು ಉಪಯೋಗಿಸಬಹುದಾಗಿದ್ದರೂ ಈಗ ಕೇವಲ ಒಂದು ಲಕ್ಷ ಎಕ್ರೆಗಳಿಗೂ ಕಡಮೆಯಷ್ಟು ಜಮೀನಿಗೆ ಈ ಹಸುರು ಗೊಬ್ಬರವನ್ನು ಹಾಕಲಾಗುತ್ತದೆ. ಭತ್ತದ ಬೆಳೆಯೊಂದಕ್ಕೆ ಸುಮಾರು ೧೨ ಲಕ್ಷ ಟನ್ನು ಅಮೋನಿಯಂ ಸಲ್ಫೇಟನ್ನು ಹಾಕಬಹುದಾದರೂ ಅರ್ಧ ಲಕ್ಷ ಟನ್ನುಗಳಷ್ಟನ್ನು ಮಾತ್ರ ಭತ್ತದ ಬೆಳೆಯಲ್ಲಿ ಉಪಯೋಗಿಸಲಾಗುವುದು. ಕೃಷಿ ಇಲಾಖೆಯು ಭತ್ತದ ಬೆಳೆಯ ಒಟ್ಟು ವಿಸ್ತೀರ್ಣದಲ್ಲಿ ಸೇಕಡಾ ೭೫ರಷ್ಟು ಭೂಭಾಗಕ್ಕೆ ಉತ್ತಮ ಮಟ್ಟದ ಬೀಜವನ್ನು ಬಳಸಲನುಕೂಲತೆಗಳನ್ನು ಕಲ್ಪಿಸಿದ್ದರೂ ಈ ವರ್ಷದಲ್ಲಿ ಅದು ಕೇವಲ ೫ರಿಂದ ೨೦ ಸೇಕಡಾದಷ್ಟು ಮಾತ್ರ ಪ್ರಚಾರಕ್ಕೆ ಬಂದಿದೆ

ಭಾರತದ ಇತರ ಪ್ರದೇಶಗಳಲ್ಲಿರುವಂತೆ ಈ ಪ್ರದೇಶದಲ್ಲಾದರೂ ಭೂಮಿಯಲ್ಲಿ ಸಹಜವಾಗಿರುವ ನೈಟ್ರೋಜನ್ನಿನ ಕೊರತೆಯೇ ಕೃಷಿಯ ವ್ಯವಸಾಯದಲ್ಲಿ ಪೂರ್ವ ವಲಯಕ್ಕೆ ಒಂದು ತೊಂದರೆಯಾಗಿದೆ. ಈ ಕೊರತೆಯನ್ನು ರೈತನಿಗೆ ಹೆಚ್ಚು ಹೆಚ್ಚಾಗದ ರೀತಿಯಲ್ಲಿ ಮತ್ತು ಈಗಿನ ಸದ್ಧತಿಯಲ್ಲಿ ದೊಡ್ಡ ಬದಲಾವಣೆಯಾಗದಂತೆ ಹೋಗಲಾಡಿಸದೆ ಹೋದರೆ, ಧಾನ್ಯದ ಬೆಳೆಯಲ್ಲಿ ಯಾವುದೇ ಒಂದು ಪ್ರಗತಿಯು ಕಂಡು ಬರುವುದು ಅಸಾಧ್ಯ.

ಹೀಗಿರುವುದರಿಂದ ದಕ್ಷಿಣದ ರಾಜ್ಯಗಳ ಭತ್ತ ಬೆಳೆಯುವ ಪ್ರದೇಶಗಳಲ್ಲಿ ತೃಪ್ತಿಕರ ಪರಿಣಾಮವನ್ನುಂಟು ಮಾಡಿರುವ ವ್ಯವಸಾಯ ವಿಧಾನವನ್ನು ಮುಂದಿನ ಎರಡು ಇಲ್ಲವೇ ಮೂರು ವರ್ಷಗಳಲ್ಲಿ ಪೂರ್ವ ವಲಯದಲ್ಲಿಯೂ ಕೈಗೊಂಡರೆ, ಮಾತ್ರ ಬೆಳೆಯಲ್ಲಿ ಮುಂದಡಿಯಿಡುವುದು ಸಾಧ್ಯ. ಭತ್ತದ ಬೆಳೆಯು ಮುಖ್ಯವಾಗಿ ಹಸುರು ಗೊಬ್ಬರವನ್ನವಲಂಬಿಸಿದೆ. ಸುಮಾರು ೪೦ರಿಂದ ೬ ಸಾವಿರಾತಲುಗಳಷ್ಟು ಹಸುರುಗೊಬ್ಬರವನ್ನು ಒಂದು ಎಕ್ರೆಗೆ ಬಳಸುವುದರಿಂದ, ಈಗ ಬೆಳೆಯುವ ಉತ್ಪಾದನೆಯನ್ನು ೨೦ರಿಂದ ೪೦ ಸೇಕಡಾದಷ್ಟು ಪ್ರಥಮ ವರ್ಷದಲ್ಲಿಯೇ ಹೆಚ್ಚಿಸಬಹುದು. ಕಾಲಕ್ರಮೇಣ ಇದೇ ರೀತಿಯನ್ನು ಕೈಗೊಂಡಲ್ಲಿ ಸರಾಸರಿ ಒಂದು ಎಕ್ರೆ ಜಮೀನಿನಲ್ಲಿ ೨,೫೦೦ ರಾತಲು ಭತ್ತವನ್ನು ಬೆಳೆಸುವುದು ಕಷ್ಟದ ಸಂಗತಿಯಲ್ಲ. ಅಲ್ಲದೆ, ಹಸುರು ಗೊಬ್ಬರವನ್ನು ಇತರ ಫಲೋತ್ಪಾದಕಗಳೊಂದಿಗೆ ಸೇರಿಸುವುದರಿಂದ ಇನ್ನೂ ಹೆಚ್ಚಿನ ಉತ್ಪತ್ತಿಯನ್ನು ಪಡೆಯುವುದು ಸಾಧ್ಯ.

ಪೂರ್ವ ವಲಯದ ಭತ್ತ ಬೆಳೆಯುವ ಪ್ರದೇಶದ ಸರಾಸರಿ ಮಳೆಯು ೪೦ರಿಂದ ೬೦ ಇಂಚುಗಳಷ್ಟಾಗಿದೆ. ಭತ್ತದ ಬೆಳೆಯ ಕಾಲದಲ್ಲಿಯೇ ಈ ವೃಷ್ಟಿಯು ಬೀಳುವುದು. ಆದುದರಿಂದ ಹಸುರು ಮತ್ತಿತರ ರಾಸಾಯನಿಕ ಗೊಬ್ಬರಗಳನ್ನು ಎತ್ತರದಲ್ಲಿ ೫.೨ ಸುಮಾರು ೨೦ ಲಕ್ಷ ಎಕ್ರೆಗಳನ್ನುಳಿದ ಗದ್ದೆಗಳಿಗೆ ಧಾರಾಳವಾಗಿ ಉಪಯೋಗಿಸಬಹುದು.

ಸಾಮಾನ್ಯ ಬೆಳೆಗೆ ದುಷ್ಪರಿಣಾಮವಾಗದಂತೆ ನಾವು ಹಸುರು ಗೊಬ್ಬರಗಳನ್ನು ಅತ್ಯಧಿಕ ಪ್ರಮಾಣದಲ್ಲಿ ತಯಾರಿಸಬೇಕಾಗಿದ್ದರೆ; ಈ ಗೊಬ್ಬರದ ಬೀಜಗಳನ್ನು ಅಧಿಕವಾಗಿ ಸಿದ್ಧಪಡಿಸಬೇಕು. ದಕ್ಷಿಣದ ರಾಜ್ಯಗಳಲ್ಲಿ ಮಾಡುವಂತೆ ಇಲ್ಲಿಯೂ ಗದ್ದೆಗಳ ಅಂಚುಗಳಲ್ಲಿ ಅಥವಾ ಧರೆಗಳಲ್ಲಿ ಸಲ್ಬೇನಿಯಾ ಜಾತಿಯ ಗಿಡಗಳನ್ನು ಬೆಳೆಸಿ, ಹಸುರುಗೊಬ್ಬರದ ಪ್ರಮಾಣವನ್ನು ಹೆಚ್ಚಿಸಬೇಕು. ಪಶ್ಚಿಮ ಗೋದಾವರಿ ಜಿಲ್ಲೆಯ ನರಸಪುರ ಎಂಬಲ್ಲಿ ಕಂಡುಬಂದ ಅನುಭವಗಳಿಂದ ಜುಲೈ ತಿಂಗಳಲ್ಲಿ ಗದ್ದೆಗಳ ಅಂಚಿನಲ್ಲಿ ಈ ಗೊಬ್ಬರದ ಬೀಜವನ್ನು ಬಿತ್ತುವುದರಿಂದ, ನವಂಬರ ತಿಂಗಳ ವೇಳೆಗೆ ಸುಮಾರು ೧೫೦ ರಾತಲು ಗೊಬ್ಬರದ ಉತ್ಪತ್ತಿಯಾಗುತ್ತದೆಂದು ತಿಳಿದು ಬಂದಿದೆ. ಹೀಗೆ ಮಾಡಲು ಒಂದು ಎಕ್ರೆ ಭೂಮಿಗೆ ಕೇವಲ ೨ ಔನ್ಸುಗಳಷ್ಟು ಬೀಜ ಸಾಕು. ಈ ಗಿಡಗಳಲ್ಲಿನ ಬೀಜಗಳನ್ನು ಒಟ್ಟುಗೂಡಿಸಿ ಏಪ್ರಿಲ್ ಇಲ್ಲವೇ ಮೇ ತಿಂಗಳಲ್ಲಿ ಪ್ರಾರಂಭಿಕ ಮಳೆಯು ಸುರಿದೊಡನೆ ಒಂದು ಎಕ್ರೆಗೆ ೨೦ರಿಂದ ೩೦ ರಾತಲುಗಳಷ್ಟು ಬಿತ್ತಬೇಕು. ಹೀಗೆ ಬಿತ್ತಿದ ಬೀಜದಿಂದ ಪುಟ್ಟಿದ ಗಿಡಗಳನ್ನು ಜುಲೈ ತಿಂಗಳ ಉತ್ತರಾರ್ಧದ ಸಮಯದಲ್ಲಿ ಭತ್ತದ ಬೆಳೆಗೆ ಉಳುವುದಕ್ಕೆ ಒಂದು ವಾರ ಮೊದಲು ಉತ್ತುಬಿಡಬೇಕು. ಕೇವಲ ಒಂದಾಣೆ ಬೆಲೆಬಾಳುವ ಬೀಜಗಳಿಂದ ಪ್ರತಿಯೊಂದು ಎಕ್ರೆಯಲ್ಲಿಯೂ ಸುಮಾರು ೫ ಎಕ್ರೆಗಳಷ್ಟು ಜಮೀನಿಗೆ ಸಾಕಾಗುವಷ್ಟು ಗೊಬ್ಬರವನ್ನು ತಯಾರಿಸಬಹುದು. ಭತ್ತದ ಸಸಿಯನ್ನು ನೆಡುವುದಕ್ಕೆ ಮೊದಲೇ ಬೇಸಿಗೆ ಅಥವಾ ಪ್ರಾರಂಭಿಕ ಮೊನ್ಸೂನ್ ಮಳೆಯ ಸಹಾಯದಿಂದ ಈ ಗಿಡಗಳನ್ನು ಬೆಳೆಸಬಹುದು. ಗದ್ದೆಯನ್ನು ಈ ಉದ್ದೇಶಕ್ಕಾಗಿ ಉಳಬೇಕಾದ ಆವಶ್ಯಕತೆಯಿರುವುದಿಲ್ಲ.

ಭತ್ತದ ಗದ್ದೆಗಳಲ್ಲಿ ಕೆಸರಿನಲ್ಲಿ ಧ್ಯಾನ್ಚ ಎಂಬ ಗೊಬ್ಬರದ ಗಿಡಗಳು ಉತ್ತಮ ರೀತಿಯಲ್ಲಿ ಬೆಳೆಯುತ್ತವೆ. ಈ ಗಿಡಗಳು ಅನಾವೃಷ್ಟಿಯನ್ನೂ ತಡೆಯುತ್ತವೆ. ವಿಂಗಳಾದ ಮರಳಿನಲ್ಲಿಯೂ ಇವು ಬೆಳೆಯಬಲ್ಲುವು. ಗೊಬ್ಬರದ ಗಿಡಗಳು ತೀವ್ರ ಗತಿಯಲ್ಲಿ ಬೆಳೆಯಬೇಕಾದರೆ ಧ್ಯಾನ್ಚ ಗಿಡಗಳ ಬೀಜವನ್ನು ಬಿತ್ತಬಹುದು. ಏಕೆಂದರೆ, ಈ ಗಿಡಗಳು ೬ರಿಂದ ೧೦ ವಾರಗಳೊಳಗೆ ಚೆನ್ನಾಗಿ ಬೆಳೆಯುವುವು. ಬೆಳೆಯಲು ಅವಕಾಶವು ಧಾರಾಳವಿರುವಲ್ಲಿ ಸಲ್ಬೇನಿಯಾ ಸ್ಪೆಸಿಯೋಸ ಗಿಡಗಳನ್ನೇ ಬಳಸುವುದು ಶ್ರೇಯಸ್ಕರ. ಪೂರ್ವವಲಯದ ವ್ಯವಸಾಯ ಇಲಾಖೆಗಳಲ್ಲಿ ಈಗ ಒಟ್ಟು ೧೦,೦೦೦ ಮಣಗಳಷ್ಟು ಧ್ಯಾನ್ಚ ಬೀಜಗಳಿವೆ. ಇದರಲ್ಲಿ ೨,೦೦೦ ಮಣದಷ್ಟು ೨ ಔನ್ಸುಗಳ ಪೊಟ್ಟಣಗಳಲ್ಲಿ ದೊರೆಯುವುದು. ಇದರಿಂದ ಮುಂದಿನ ವರ್ಷದಲ್ಲಿ ೧೨ ಲಕ್ಷ ಎಕ್ರೆಗಳಷ್ಟು ಜಮೀನಿನಲ್ಲಿ ಈ ಗಿಡಗಳ ಉಪಯೋಗವನ್ನು ಮಾಡಿಕೊಳ್ಳಬಹುದು. ಮುಂದಿನ ವರ್ಷಕ್ಕಾಗಿ ಧ್ಯಾನ್ಚ ಗಿಡಗಳ ಬೀಜಗಳನ್ನು ತಯಾರಿಸಿಟ್ಟುಕೊಳ್ಳಲು ಈ ವರ್ಷದ ಜುಲೈ ತಿಂಗಳೊಳಗೆ ೩ ಲಕ್ಷ ಪೊಟ್ಟಣಗಳನ್ನು ಪೂರ್ವವಲಯದ ರಾಜ್ಯಗಳು ಕಂಚುವುದು ಅಗತ್ಯ. ೧೨ ಲಕ್ಷ ಪೊಟ್ಟಣಗಳು ೨೦ರಿಂದ ೧೯೨೦ ಲಕ್ಷ ರಾತಲುಗಳಷ್ಟು ಬೀಜಗಳನ್ನು ಕೊಡುವುವು. ಮತ್ತು ಈ ಬೀಜವು ೩೦ರಿಂದ ೪೦ ಲಕ್ಷ ಎಕ್ರೆಗಳಷ್ಟು ಭೂಮಿಗೆ ಹಸುರು ಗೊಬ್ಬರವನ್ನು ಒದಗಿಸಲು ಸಾಕಾಗುವುದು. ಪ್ರತಿ ಎಕ್ರೆಯಲ್ಲಿ ಬೆಳೆದ ಬೀಜದಿಲ್ಲಿ ೪ ರಾತಲುಗಳನ್ನು ಮುಂದಿನ ಉಪಯೋಗಕ್ಕಾಗಿ ತೆಗೆದಿರಿಸಿದರೆ, ೩೭೦ ಲಕ್ಷ ಎಕ್ರೆಗಳಿಗೆ ಬೇಕಾಗುವಷ್ಟು ಬೀಜವು ಉಳಿಯುವುದು. ಈ ಬೀಜವು ೧೯೫೮ರ ಅಂತ್ಯದೊಳಗೆ ಸುಮಾರು ೧,೦೦೦ ಲಕ್ಷ ಎಕ್ರೆಗಳ ಜಮೀನಿಗೂ ಸಾಕಾಗುವಷ್ಟು ಹಸುರು ಗೊಬ್ಬರವನ್ನು ಒದಗಿಸುವುದು.

ಈ ಗಿಡಗಳ ಬೆಳವಣಿಗೆಯು ಅತ್ಯಾಶ್ಚರ್ಯಕರವಾಗಿದ್ದು, ನಾವೀ ಸರಳ ಹಾಗೂ ಮೆಚ್ಚವಿಲ್ಲದ ವಿಧಾನವನ್ನನುಸರಿಸಿದರೆ, ಇಡೀ ವಲಯಕ್ಕೆ ಬೇಕಾಗುವ ಹಸುರು ಗೊಬ್ಬರದ ಬೀಜಗಳನ್ನು ೧೯೫೮ರೊಳಗೆ ಸಿದ್ಧಪಡಿಸಿಕೊಳ್ಳಬಹುದು. ಪ್ರತಿ ರೈತನೂ ಅನ್ಯರ ನೆರವನ್ನು ಹಾರೈಸದೆ ತನಗೆ ಬೇಕಾದಷ್ಟು ಬೀಜಗಳನ್ನು ತಯಾರಿಸಿಕೊಳ್ಳುವುದು ಸಾಧ್ಯ.

ಭಾರತೀಯ ಕೃಷಿಕರಲ್ಲಿ ಅನೇಕರು ಹಸುರುಗೊಬ್ಬರದಿಂದಾಗುವ ಲಾಭವನ್ನು ತಿಳಿದಿದ್ದಾರೆ. ಆದರೆ, ಬೆಳೆಗೆ ಹಾನಿಯೊದಗದಂತೆ ಈ ಗೊಬ್ಬರ ಸಸಿಗಳನ್ನು ತಯಾರಿಸಿಕೊಳ್ಳುವ ವಿಚಾರದಲ್ಲಿ ಸಾಕಷ್ಟು ಗಮನ ಹರಿಯದಿರುವುದರಿಂದ, ಅವುಗಳ ಉಪಯೋಗವು ಸಾಕಷ್ಟು ಬೆಳೆದಿಲ್ಲ. ಆದರೆ, ಪ್ರತ್ಯೇಕ ರೈತನೂ ತನಗೆ ಬೇಕಾಗುವಷ್ಟು ಗಿಡಗಳನ್ನು ಬೆಳೆಗೆ ಯಾವ ರೀತಿಯಿಂದಲೂ ತೊಂದರೆಯಾಗದಂತೆ, ಸುಲಭವೆಚ್ಚದಲ್ಲಿ ಬೆಳೆಯಿಸುವುದು ಸಾಧ್ಯವೆಂದು ಮತ್ತು ಭತ್ತದ ಬೆಳೆಗೆ ೪೦೦೦ರಿಂದ ೬,೦೦೦ ರಾತಲುಗಳಷ್ಟೇ ಹಸುರು ಗೊಬ್ಬರವು ಸಾಕಾಗುವುದೆಂದು ತಿಳಿದುಕೊಂಡರೆ, ಪರಿಸ್ಥಿತಿಯು ಸಂಪೂರ್ಣ ಬದಲಾಗುವುದು. ಈ ತರದ ಕ್ರಮವನ್ನು ಕೆಲವೆಡೆ ಕೈಗೊಂಡಿದ್ದಾರೆ. ಆದರೆ ಅದು ಸಾಲದು. ದೇಶದ ಎಲ್ಲ ರೈತರೂ ಈ ಮಾರ್ಗವನ್ನನುಸರಿಸಿದರೆ, ಭಾರತವು ಇನ್ನು ಎರಡು ಇಲ್ಲವೆ ಮೂರು ವರ್ಷಗಳೊಳಗೆ ಅಕ್ಕಿಯಲ್ಲಿ ಉಳಿತಾಯದ ರಾಷ್ಟ್ರವಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ, ನನ್ನ ರೈತರೆಲ್ಲರೂ ಇದನ್ನು ಗಮನಿಸಿ, ದೇಶದ ಆಹಾರೋತ್ಪಾದನೆಯಲ್ಲಿ ಸ್ವಚ್ಛಳವಾಗುವಂತೆ ಪರಿಶ್ರಮಿಸುವುದು ಅಗತ್ಯ.

ಯೋಜನಾ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಹೊಸಕೆರೆ
ಚಿದಂಬರಯ್ಯನವರ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೊಕೆಟ್ ಎಡಿಷನ್.
ಸುಮಾರು 450 ಪುಟಗಳು
ಕ್ರಯ 0—12—0
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ಸಮಯ

ಸಂಪುಟ ೩೬
VOL.36

18—7—1957

ಸಂಚಿಕೆ ೪೫
NO. 45

ಜನತಾ ಸಂಪರ್ಕ

ಸರಕಾರಿ ಅಧಿಕಾರಿಗಳು ಜನಸಮುದಾಯದ ಮೇಲೆ ಸವಾರಿಮಾಡದೆ ಅವರ ವಿಶ್ವಸ್ಥರಂತೆ ವರ್ತಿಸಲಿ!

ಗೃಹಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರು ಮದ್ರಾಸಿನಲ್ಲಿ ಇಂಡಿ



ಯನ್ ಆಫೀಸರ್ಸ್ ಎಸೋಸಿಯೇಶನಿನ ಸದಸ್ಯರನ್ನುದ್ದೇಶಿಸಿ ಮಾತಾಡುತ್ತಾ ಅಧಿಕಾರಿ ಮತ್ತು ಜನತೆಯ ನಡುವೆ ಇರಬೇಕಾದ ಸಂಬಂಧವನ್ನು ತಿಳಿಸಿ ಹೇಳಿದರು ಸರಕಾರ ಮತ್ತು ದೇಶದ ಜನತೆಗಳಿಗೆ ಸಂಪರ್ಕವಿರುವುದು ಅಗತ್ಯವಾಗಿದ್ದು ಸರಕಾರದ ನೌಕರರೇ ಈ ಸಂಬಂಧವನ್ನು ಇಟ್ಟುಕೊಳ್ಳತಕ್ಕವರು ಒಂದುವೇಳೆ ಒಬ್ಬ ಸರಕಾರಿ ನೌಕರನು ಜನತೆಯೊಡನೆ ಏಕಭಾವದಿಂದ ವರ್ತಿಸಲು ತಪ್ಪಿದರೆ, ಅಂಥವನು ಅದೆಷ್ಟು ಯೋಗ್ಯಬುದ್ಧಿವಂತನಾಗಿದ್ದರೂ, ಸರಕಾರಿ ನೌಕರಿಯಲ್ಲಿರಲು ಅಯೋಗ್ಯನಾಗುತ್ತಾನೆ ಪ್ರತ್ಯೇಕ ಸರಕಾರಿ ನೌಕರನೂ ಸತ್ಯಸಂಧನಾಗಿ, ವಿಶ್ವಾಸಯುಕ್ತನಾಗಿ, ತನ್ನ ಯೋಗ್ಯತೆಯ ಪರಮಾವಧಿಗನುಗುಣವಾಗಿ ದುಡಿದಿದನಾದರೆ, ಅದರಿಂದ ದೇಶದ ಪ್ರತಿಫಲವು ಅಧಿಕಗೊಂಡು, ನೌಕರರ ವೇತನವೂ ಹೆಚ್ಚುವುದು

ನಮ್ಮ ದೇಶದಲ್ಲಿ ಸರಕಾರಿ ಸೇವೆಯು ಕೆಲವೊಂದು ಪರಂಪರೆಗಳನ್ನು ಗಳಿಸಿಕೊಂಡಿತ್ತು ಉಕ್ಕಿನ ಚೌಕಟ್ಟೆಂದು ಕರೆಯಲಾದ ಐ. ಸಿ. ಎಸ್." ಎಂಬುದು ಆಗಿನ ಕಾಲದ ವಿದೇಶೀಯರ ಆಳಿಕೆಗೆ ಭಕ್ತಿಯನ್ನು ಪ್ರದರ್ಶನ ಮಾಡುವಂಥದಾಗಿತ್ತು. ಆದರೆ, ಈ ಐ. ಸಿ. ಎಸ್. [ಎಂಬುದು ಭಾರತೀಯರೂ ಅಲ್ಲ, ಸಿವಿಲೂ ಅಲ್ಲ, ಇಲ್ಲವೇ ಸೇವೆಯೂ ಆಗದಿರಲಿಲ್ಲ ಇದರಲ್ಲಿ ಈ ದೇಶದ ಒಡೆಯರೆಂದು ಕರೆದುಕೊಳ್ಳುವಂತಹ ಜನರಿದ್ದರೆ; ಜನತೆಯ ಸಂಕಷ್ಟಗಳನ್ನು ಬಗೆಹರಿಸುವತ್ತ ಗಮನವನ್ನೀಯದೆ, ಅವರ ಸ್ಥಿತಿಗತಿಗಳನ್ನು ಲಕ್ಷಿಸದೆ ಆಕಾಶದೆಡೆಗೇನೋಡುತ್ತಾ ನಡೆಯುವ ವಿದೇಶೀಯ ಹೊಗಳು ಭಟ್ಟರ ತಂಡವಾಗಿತ್ತು ಮಾನವತಾಭಾವದಿಂದ ಈ ಸೇವಾವರ್ಗದವರು ಪ್ರತಿದಿನವೂ ಸ್ವಲ್ಪಸ್ವಲ್ಪವಾಗಿ ದೂರ ಹೋಗುತ್ತಾ ಬರುತಿದ್ದರು. ಸ್ವಾತಂತ್ರ್ಯ ಪ್ರಾಪ್ತಿಯಾದೊಡನೆ ಈ ಪರಿಸ್ಥಿತಿಯು ಸಂಪೂರ್ಣ ಬದಲಾಯಿತು ಇಂಡಿಯನ್ ಸರ್ವಿಸ್‌ನಲ್ಲಿದ್ದ ಬ್ರಿಟಿಷ ಜನರು ಭಾರತವನ್ನು ಅಗಲಿದರು ಈಗ, ದೇಶದ ಸಮಸ್ತ ಹೊಣೆಗಾರಿಕೆಯೂ ಈ ಸೇವಕರ ತಲೆಯ ಮೇಲಿದೆ ಸಾಂಕುಶ, ನಿರಂಕುಶ ಇಲ್ಲವೇ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದರೂ, ಸಾಮ್ಯವಾದಿಗಳದ್ದಿರಲಿ, ಸಾಮ್ಯವಾದದವರಿದ್ದಿರಲಿ ಇಲ್ಲವೇ ಯಾವುದೇ ಒಂದು ವಿದದ ಸರಕಾರವಿರಲಿ, ತನ್ನ ನೌಕರರ ಸೇವೆಯಿಂದಲೇ ನಡೆಯಬಲ್ಲುದು. ಸರಕಾರದ ಕಾರ್ಯಗಳ ಜವಾಬುದಾರಿಯನ್ನು ಹೊರಳಕ್ಕವರು ಅದರ ನೌಕರರು ಈ ನೌಕರರು ಸಮರ್ಥರೂ, ಸತ್ಯಸಂಧರೂ, ನಿಷ್ಪಕ್ಷಪಾತಿಗಳೂ ಆಗಿದ್ದರೆ, ಆಗ ಸರಕಾರದ ಪ್ರತ್ಯೇಕ ಧ್ಯೇಯ ಧೋರಣೆಗಳೂ ಯಶಸ್ವಿಯಾಗಿ ಫಲಪ್ರದವಾಗುವುವು ಭಾರತದ ಸರಕಾರಿ ನೌಕರರು ಸಾಮಾನ್ಯವಾಗಿ ಕೃತಜ್ಞತೆಗೆ ಅರ್ಹರು. ಉಚ್ಚವಾದ ಸೇವೆಯನ್ನು ಸೀಡುತ್ತಿರುವವರೆಲ್ಲಿಯೂ ಒಂದು ನ್ಯಾಯವಾದ ಸಾರಳ್ಯ, ಭಾವಶುದ್ಧಿಯು ಇಂದು ನೆಲೆಮಾಡಿದೆ. ಇದನ್ನು ಸರಕಾರಕ್ಕೆ ಸೇವೆಸಲ್ಲಿಸುವ ಪ್ರತಿಯೊಬ್ಬನೂ ಪೂರ್ಣ ಮನಸ್ಸಿನಿಂದ ಗಮನಿಸಿ, ಸರಕಾರದ ಉದ್ದೇಶಗಳನ್ನು ಸಂಪೂರ್ಣವಾಗಿ ಸಾಧಿಸಿಕೊಳ್ಳಲು ಹವಣಿಸಬೇಕು

ನಮ್ಮ ದೇಶದಲ್ಲಿ ನಮಗೆ ಎಲ್ಲವುಗಳಿಂದ ಮುಖ್ಯವಾಗಿ ಒಂದು ಬೇಕಾಗಿದೆ ಸರಕಾರೀ ನೌಕರರು ದೇಶದ ಸ್ಥಿತಿಗತಿಗಳ ನೈಜ ರೂಪಗೂ ಸತ್ಯಸ್ಥಿತಿಯನ್ನರಿತುಕೊಳ್ಳಬೇಕು ಮತ್ತು ಜನತೆಯೇ ದೇಶದ ಅಧಿಕಾರಿಯೆಂಬುದನ್ನು ಮರೆಯದೆ ಕಾರ್ಯಶೀಲರಾಗಬೇಕು

ಆಡಳಿತದ ಅಧಿಕಾರಿಗಳು ಸಮರ್ಥರಾದ ಪಾತ್ರಕ್ಕೆ ಮುಗಿಯಲಿಲ್ಲ, ಆ ಸಮರ್ಥತೆಯನ್ನು ಸರಕಾರಿ ನೌಕರರು ಜನತೆಗೆ ತೋರಿಸಿಕೊಡಬೇಕು ಆಗ, ಜನತೆಯಲ್ಲಿ ಸರಕಾರದ ನೌಕರರ ಬಗ್ಗೆ ಉತ್ತಮ ಭಾವನೆಯು ಅಭ್ಯುತ್ಥಾನವಾದುದು ಇದಕ್ಕಾಗಿ ಜನತಾ ಸಂಪರ್ಕವು ತೀರಾ ಅಗತ್ಯವಾದುದು ಆದರೆ, ಈ ಬಗೆಯ ಭಾವನೆಯು ಎಲ್ಲ ಸರಕಾರೀ ನೌಕರರಲ್ಲಿ ಇಂದು ಇದೆ ಎನ್ನುವ ಧೈರ್ಯ ಯಾರಿಗಿದೆ? ಒಬ್ಬ ನೌಕರನು ನಿಜವಾಗಿ ಸಮರ್ಥನಾಗಿರಬಹುದು ಆದರೆ, ತಾನು ಯಾರಿಗೆ ಸೇವೆಯನ್ನು ಸಲ್ಲಿಸುತ್ತಿದ್ದಾನೊ ಅಂತಹ ಜನತೆಯನ್ನು ನಡುವೆ ನ್ಯಾಯವಾದ, ಯೋಗ್ಯವಾದ ಮತ್ತು ಅಗತ್ಯವಿರಬೇಕಾದ ಸಂಬಂಧವನ್ನಾತ ನಿಟ್ಟುಕೊಳ್ಳದೆ ಹೋದರೆ ಅವನ ಸಾಮರ್ಥ್ಯವು ಸದುಪಯೋಗವಾಗುವುದೆ? ಆದುದರಿಂದ ನೌಕರನು ದೇಶದ ಸಾಮಾನ್ಯ ಪ್ರಜೆಗಳನ್ನು ಮರೆಯಬಾರದು. ತನ್ನ ಕರ್ತವ್ಯಪಾಲನೆಗೆ ಚ್ಯುತಿಯನ್ನು ತಂದುಕೊಳ್ಳಬಾರದು. ಇದಕ್ಕೆ ತಪ್ಪಿದ ನೌಕರನಿಂದ ದೇಶವು ಯಾವ ಲಾಭವನ್ನೂ ಪಡೆಯಲಾರದು

• ಭಾರತೀಯರು ಗೃಹಕರ್ಮಗಳಿಂದ ಮಾನಸವಾಗಿ ನೊಂದಿರುತ್ತಾರೆ ಹಾಗೆ ನೊಂದವರ ಕಂಬನಿಯನ್ನು ಒರಸುವುದಕ್ಕಿಂತ ಬೇರೆ ಅಮೂಲ್ಯ ಕರ್ಮ ಬೇರೆಯಿಲ್ಲ ಜನತೆಯ ಸೇವಕರೆನಿಸಿದ ಸರಕಾರಿ ನೌಕರರು ಅವರನ್ನು. ಅವರ ಜೀವನವನ್ನು ಉತ್ತಮವಾಗಿ, ಮಾಡಲು ಹವಣಿಸುವುದಾದರೆ, ಅದಕ್ಕಿಂತ ಪ್ರತ್ಯೇಕವಾದುದನ್ನು ಯಾರೂ ಅಪೇಕ್ಷಿಸಲಾರರು ಇಂದು ಬೇಕಾದುದು ಆ ರೀತಿಯ ಸೇವಾ ಭಾವನೆ ಬುದ್ಧಿ ಮತ್ತು ಹೃದಯ ಇವೆರಡೂ ಒಂದೇ ರೀತಿಯಲ್ಲಿ ಕೆಲಸ ಮಾಡಿದರೆ, ಅದರಲ್ಲಿ ಒಬ್ಬ ಸರಕಾರಿ ನೌಕರನು ಜಯಶೀಲನಾದರೆ, ಆತನ ಜೀವನವು ಸಾರ್ಥಕವಾಯಿತು, ಜನತೆಗೂ ಆತನು ನಿಜವಾದ ಸೇವೆಯನ್ನು ಸಲ್ಲಿಸಿದಂತಾಯಿತು

ಸರಕಾರಿ ನೌಕರರಲ್ಲಿ ಮುಷ್ಕರ ಹೂಡುವ ದುರಭ್ಯಾಸವೊಂದು ಈಗೀಗ ಬೆಳೆದುಬಂದಿದೆ ಇವರು ತಮ್ಮನ್ನು ಇಷ್ಟು ಕೆಳಮಟ್ಟಕ್ಕೆ ಇಳಿಸಿಕೊಳ್ಳುವುದು ತರವಲ್ಲ. ನಮ್ಮ ಎಲ್ಲ ಸರಕಾರಿ ನೌಕರರು ಸತ್ಯಸಂಧತೆಯಿಂದ, ವಿಶ್ವಾಸದಿಂದ ಮತ್ತು ತನ್ನ ಸಾಮರ್ಥ್ಯದ ಪರಾಕಾಷ್ಠೆಯಿಂದ ಕೆಲಸ ಮಾಡಿದರೆ, ಅವರ ವೇತನವೂ ಹೆಚ್ಚುವುದು ಏಕೆಂದರೆ, ಇಂದು ಕಚ್ಚಿನ ನೌಕರರು ತಮ್ಮ ಯೋಗ್ಯತೆಯನ್ನು ಬಿಚ್ಚಿಟ್ಟುಕೊಂಡು ಅದಕ್ಕೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಪ್ರಯತ್ನಿಸಿದರೆ ಪರಿಣಾಮದಲ್ಲಿಯೂ ಗುಣದಲ್ಲಿಯೂ ಅತ್ಯುತ್ಕೃಷ್ಟವಾದ ಕೆಲಸವನ್ನು ಮಾಡುವ ಶಕ್ತಿವಂತರು ತಮ್ಮ ಹೃದಯವನ್ನೇ ವಂಚಿಸಿ ಅಲಸಿಗಳಂತೆ ವರ್ತಿಸುತಿದ್ದಾರೆ. ಈ ಅಲಸ್ಯವನ್ನು ಪರಿತ್ಯಜಿಸಿ ದೇಶಕ್ಕೆ ಸೇವೆಯನ್ನು ಸಲ್ಲಿಸುವರಾದರೆ, ಆಗ ಅವರೇಕೆ ಉತ್ತಮ ಪ್ರತಿಫಲವನ್ನು ಪಡೆಯಲಾರರು? ಸರಕಾರಿ ಕಛೇರಿಗಳಲ್ಲಿ ಉಪಯೋಗಿಸುವ ಸಾಧನ ಸಾಮಗ್ರಿಗಳಲ್ಲಿ ಅನಾವ್ಯಯವಾಗುತ್ತಿರುವುದು ಸರ್ವಸಾಮಾನ್ಯವಾದುದು. ದೇಶದಾದ್ಯಂತ ಮಿತವ್ಯಯದ ಚಳುವಳಿಯು ಒಂದಲ್ಲ ಒಂದು ರೂಪದಿಂದ ಪ್ರಚಾರವಾಗುತ್ತಿರುವ ಈ ಕಾಲದಲ್ಲಿ ಸರಕಾರೀ ಅಧಿಕಾರಿಗಳು ತಮ್ಮ ಕಛೇರಿಗಳಲ್ಲಿ ಪೋಲು ಹೋಗುತ್ತಿರುವುದನ್ನು ಗಮನಿಸಿಯೂ ಕುರುಡರಂತೆ ವರ್ತಿಸದಿದ್ದರೆ, ಅದರಿಂದ ದೇಶಕ್ಕೆ ಒಳ್ಳೆ ದೊಡ್ಡ

(೧೨ನೇ ಪುಟ ನೋಡಿರಿ)

ಹೊಸ ಸುದ್ದಿ

ಸೇವಿಂಗ್ಸ್ ಬೇಂಕ್ ಡಿಪೊಸಿಟನ ಬಡ್ಡಿ ದರವನ್ನು 2½%ಗೆ ಹೆಚ್ಚಿಸಲಾಗಿದೆ ವಾರಕ್ಕೆ ಒಂದಾವರ್ತಿಗಿಂತ ಮಿಕ್ಕಿ ಖಾತೆಯಿಂದ ಹಣ ತೆಗೆಯಲು ಈಗ ಯಾವೊಂದೂ ಆತಂಕವಿಲ್ಲ

ಕಾಯಂ ಠೇವಣಾತಿ ಬಡ್ಡಿ ದರವನ್ನು ಏರಿಸಲಾಗಿದೆ ತಾ 1-7-1957 ರಿಂದ ಏರಿಸಿದ ಬಡ್ಡಿಯಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬೇಂಕ್ ಲಿಮಿಟೆಡ್

(ವಿ ಸೂ ಬೆಂಗಳೂರು ನಗರದಲ್ಲಿ ಬೇಂಕಿನ ಹೊಸ ಶಾಖೆಯನ್ನು ಬೇಗನೇ ತೆರೆಯೋಣಾಗುವುದು.)

ಸಹಕಾರೀ ವ್ಯವಸಾಯ

ಭಾರತೀಯರ ತೀವ್ರ ಗಮನ ಇತ್ತ ಹರಿಯಬೇಕು-- ಆಹಾರ ಸ್ವಾವಲಂಬನಕ್ಕೆ ಏಕ ಮಾತ್ರ ಉಪಾಯ.

ಭಾರತದ ಹಳ್ಳಿಗಳ ಆರ್ಥಿಕಾಭಿವೃದ್ಧಿಗಿರುವ ಒಂದೇ ಒಂದು ಆತಂಕವೆಂದರೆ ಸಹಕಾರ ಭಾವನೆಯ ಅಭಾವ. ಆದರೆ, ಪ್ರಚಲಿತ ಸ್ಥಿತಿಗತಿಗಳಲ್ಲಿ ಸಹಕಾರವು ಪ್ರತಿಯೊಂದು ಗುರಿಯ ಸಾಧನೆಗೂ ಮೂಲವಾಗಿ ಪರಿಣಮಿಸಿದೆ.

ಭಾರತದ ಜನಕೋಟಿಯು ತನ್ನ ಮುಖ್ಯ ವೃತ್ತಿಯೆನಿಸಿದ ಕೃಷಿಯನ್ನು ಸುಧಾರಿಸಿಕೊಂಡರೆ ಮಾತ್ರ, ತಮ್ಮ ಸ್ಥಿತಿಗತಿಯನ್ನೂ ಸುಧಾರಿಸಿಕೊಂಡಂತಾಗುವುದು. ಭಾರತದಲ್ಲಿನ ಕೃಷಿ ಪದ್ಧತಿಯು ಬಹಳ ಹಿಂದುಳಿದಿದೆ. ಸಾಕಷ್ಟು ಮುಂದುವರಿದ ಪಶ್ಚಿಮ ರಾಷ್ಟ್ರಗಳ ಉತ್ಪನ್ನದೊಡನೆ ಹೋಲಿಸಿನೋಡಿದರೆ, ನಮ್ಮ ದೇಶದಲ್ಲಿ ಒಂದು ಎಕ್ರೆ ಭೂಮಿಯಲ್ಲಿ ಬೆಳೆಯುವ ಬೆಳೆಯು ತೀರಾ ಅಲ್ಪವೆಂದು ತಿಳಿಯಬಹುದು. ಪಾಶ್ಚಾತ್ಯ ರಾಷ್ಟ್ರಗಳ ಮಟ್ಟವನ್ನು ನಾವು ಕೃಷಿ ವಿಭಾಗದಲ್ಲಿ ಮುಟ್ಟಬೇಕಾದರೆ, ನಾವು ಅಧಿಕ ಕಾಯಕಷ್ಟ ಮಾಡಬೇಕು; ಮತ್ತು ಕೃಷಿ ಪದ್ಧತಿಯಲ್ಲಿ ನವೀನ ವಿಧಾನಗಳನ್ನು ಬಳಸಿಕೊಳ್ಳಲು ಹಿಂದೆಮುಂದೆ ನೋಡದೆ ಮುಂದಾಗಬೇಕು.

ಹೆಚ್ಚಿನ ಪಾಶ್ಚಾತ್ಯರಾಷ್ಟ್ರಗಳಲ್ಲಿ ವ್ಯವಸಾಯವು ಯಂತ್ರಗಳ ಮುಖಾಂತರವೇ ನಡೆಯುತ್ತಿದೆ ಆಧರೆ, ನಮ್ಮ ಭಾರತದಲ್ಲಿ ಈ ತೆರನ್ನು ಹಲವಾರು ಕಾರಣಗಳಿಂದ ಅಸಾಧ್ಯವಾಗಿ ಪರಿಣಮಿಸಿದೆ. ನಮ್ಮ ಜನಕೋಟಿಯನ್ನು ಉದ್ಧರಿಸುವ ಮನೋಭಾವನೆಯಿಂದ ದೂರವಿದ್ದ ಪರದೇಶೀಯರ ಅಂಕೆಯಲ್ಲಿ ನಾವಿದ್ದುಕೊಂಡು; ನಮ್ಮ ಭೂಮಾಲಿಕರ ಹಿಡುವಳಿಯು ತೀರ್ತ್ಯಲ್ಪ ಪ್ರಮಾಣದಿದ್ದು, ಅದು ಮತ್ತಷ್ಟು ವಿಭಾಗವಾಗಿ ಹಂಚಿ ಹೋದುದೆರಡು; ಮತ್ತು ನಮ್ಮ ರೈತರು ಅಧಿಕ ಬಂಡವಳವು ಬೇಕಾಗುವ ಯಾಂತ್ರಿಕೋಪಕರಣಗಳನ್ನು ಕೊಂಡುಕೊಳ್ಳಲು ದನಹೀನರಾದುದು ಮೂರು.—ಇವು ಮುಖ್ಯ ಕಾರಣಗಳೆನ್ನಬಹುದು.

ಇಂದು ಯೋಜಕರು ಭಾರತದಲ್ಲಿ ರೈತರ ನಡುವೆ ಸಹಕಾರವಿಲ್ಲದೆ ಹೋದರೆ, ವ್ಯವಸಾಯವು ಪ್ರಗತಿ ಹೊಂದಲಾರದು ಎಂದು ಅಭಿಪ್ರಾಯ ಪಡುತ್ತಾರೆ. ಇದರಿಂದಾಗಿ ಬೇಸಾಯ ಕ್ರಮದಲ್ಲಿಯೂ ಸಹಕಾರ ಪದ್ಧತಿಯು ಅಚಲವಾಗಿ ಬರಬೇಕೆಂಬುದು ಸ್ವತಃ ಸಿದ್ಧವಾಯಿತು

"ಸಹಕಾರೀ ವ್ಯವಸಾಯ" ಎಂಬುದನ್ನು ಎರಡು ವಿಧಾನಗಳಿಂದ ಬಳಸಿಕೊಳ್ಳುವುದು ಸಾಧ್ಯ. ಮೊದಲನೆಯ ಮಾರ್ಗದಲ್ಲಿ ರೈತರು ತಮ್ಮ ಹಿಡುವಳಿಯನ್ನು ಪ್ರತ್ಯೇಕವಾಗಿಟ್ಟುಕೊಂಡು, ಅದರಲ್ಲಿ ದುಡಿದು ಉತ್ಪತ್ತಿಯನ್ನು ಬೇರೆ ಬೇರೆ ಆಗಿಯೇ ಇಟ್ಟುಕೊಳ್ಳುವುದಾದರೂ, ಉತ್ಪತ್ತಿಯನ್ನು ಮಾರುವುದು, ಬೀಜ, ಗೊಬ್ಬರ ಮುಂತಾದ ಸಾಧನ ಸಾಮಗ್ರಿಗಳನ್ನು ಕೊಂಡುಕೊಳ್ಳುವುದು, ನೀರಾವರಿಗೆ ತಕ್ಕಯುವುದು ಮೊದಲಾದ ಸಂದರ್ಭಗಳಲ್ಲಿ ಎಲ್ಲರೂ ಒಂದಾಗಿ ಒಂದೇ ಸಂಸ್ಥೆಯೆಂಬಂತೆ ಸಹಕಾರದಿಂದ ನಡೆದುಕೊಳ್ಳುವುದು ಅಗತ್ಯ. ರೈತ್ಯದೇಶವನ್ನುಳಿದ ಯುರೋಪುಖಂಡದಲ್ಲಿ ಈ ವಿಧಾನವು ವ್ಯವಹಾರಕ್ಕೆ ಬಂದು ಅತ್ಯುತ್ತಮ ರೀತಿಯಲ್ಲಿ ಜಯಶೀಲವಾಗಿರುವುದು.

ಎರಡನೆಯ ವಿಧಾನವೆಂದರೆ, ರೈತರು ತಂತಮ್ಮ ಗದ್ದೆಗಳನ್ನು ಏಕಭಾಗಿಸಿಕೊಳ್ಳಲು ಹಾಕಿದ ಅಂಚುಗಳನ್ನು ಕಿತ್ತು ವಿಶಾಲವಾಗಿ ಗದ್ದೆಯನ್ನೊಂದು ಮಾಡುವುದು, ತಮ್ಮಿಂದಲೇ ಆರಿಸಲ್ಪಟ್ಟ ಸಮಿತಿಯೊಂದರ ಆದೇಶದಂತೆ ಕೆಲಸ ಮಾಡುವುದು. ಈ ಪದ್ಧತಿಯಲ್ಲಿ ಪ್ರತ್ಯೇಕ ಹಿಡುವಳಿಯಿರುವುದು ಸಾಧ್ಯವಿಲ್ಲ.

ಈಗ, ಮೇಲೆ ಸೂಚಿಸಲಾದ ಎರಡು ಮಾರ್ಗಗಳಲ್ಲಿ ಭಾರತ ದೇಶದಲ್ಲಿ ಯಾವುದನ್ನು ಅನ್ವಯಿಸಬೇಕೆಂಬುದು ಪ್ರಶ್ನೆಯಾಗಿ ಉದ್ಭವಿಸುತ್ತದೆ. ಇವೆರಡರಲ್ಲಿಯೂ ತಮ್ಮದೇ ಆದ ಹಿತ ಭಾಗೆಗಳಿರುತ್ತವೆ ಈ ಪ್ರಶ್ನೆಗೆ ಉತ್ತರವೆಂದರೆ, ನಮ್ಮ ದೇಶದ ವ್ಯವಸಾಯಾಭಿವೃದ್ಧಿಗೆ ಸಹಕಾರೀ ವ್ಯವಸಾಯ ಪದ್ಧತಿಯೇ ಸರಿಹಾರ ಆಯಾ ಭಾಗದ ಪರಿಸ್ಥಿತಿಗಳಿಗನುಗುಣವಾಗಿ ಎರಡು ವಿಧಾನಗಳಲ್ಲಿ ಯಾವುದಾದರೊಂದನ್ನು ಅನ್ವಯಿಸಿಕೊಂಡರೆ ಸರಿ. ಎನ್ನುವುದು.

ಇವುಗಳಲ್ಲಿ ಯಾವುದೇ ಮಾರ್ಗವನ್ನು ಅನುಸರಿಸಿದರೂ, ಅದು ಸ್ವೇಚ್ಛೆಯಿಂದಲೇ ಆಗಬೇಕಾದುದು ಈ ಪದ್ಧತಿಯ ಸಾಫಲ್ಯವನ್ನು ಸೇರುವುದು ಇಲ್ಲ, ಹಾಗೆಯೇ ಇದ್ದು ಬಿಡುವುದು. ಈ ಹೆಕ್ಕಳ ಪ್ರತಿ ರೈತನಿಗೂ ಇರಬೇಕು. ಇದೇ ರೀತಿಯಲ್ಲಿ ಸಹಕಾರೀ ಸಂಸ್ಥೆಯು ಒಬ್ಬ ವ್ಯಕ್ತಿಯನ್ನು ಸಂಘದ ಸದಸ್ಯನನ್ನಾಗಿ ಸ್ವೀಕರಿಸಲು ಇಲ್ಲ, ನಿರಾಕರಿಸಲು ಸ್ವತಂತ್ರವಿರುವುದು.

ಸಹಕಾರಿ ಪದ್ಧತಿಯಲ್ಲಿ ಹಿಡುವಳಿಯ ಮೇಲಿನ ಸ್ವಾಮಿತ್ವವನ್ನು ಹಿಡುವಳಿದಾರನು ಉಳಿಸಿಕೊಳ್ಳುವನು ಒಂದು ವೇಳೆ ಒಬ್ಬ ಸದಸ್ಯನು ಸಹಕಾರಿ ಸಂಘದ ಸಂಬಂಧವನ್ನು ಕಡಿದುಕೊಳ್ಳಬಯಸುವನಾದರೆ, ಆವನಿಗೆ ತನ್ನ ಒಡೆತನವಲ್ಲದಿರುವ ಭೂಮಿ ಅಥವಾ ಅದರ ಬದಲಿಗೆ ತಕ್ಕ ಪರಿಹಾರವು ದೊರೆಯುವುದು.

ಸಹಕಾರಿ ವ್ಯವಸಾಯ ಪದ್ಧತಿಯು ರೈತರಿಗೆ ಎರಡು ವಿಧದ ಆದಾಯವನ್ನೊದಗಿಸುವುದು ಅವರು ಮಾಡುವ ದೈನಂದಿನ ಕೆಲಸಕ್ಕನುಗುಣವಾಗಿ ವೇತನವು ದೊರೆಯುವುದಲ್ಲದೆ, ಕ್ಷೇತ್ರದ ಒಟ್ಟು ಆದಾಯದಲ್ಲಿಯೂ ಒಂದು ಪಾಲನ್ನು ಪಡೆಯುವರು. ಈ ಪಾಲು ವೈಯಕ್ತಿಕ ಹಿಡುವಳಿಯ ಪರಿಮಾಣವನ್ನನುಸರಿಸಿರುವುದು. ಅಥವಾ ಉತ್ಪತ್ತಿಯಲ್ಲಿ ವ್ಯವಸಾಯ ಬೆಜ್ಜ ಹಾಗೂ ಕಾಯ್ದುಡುಪ ನಿಧಿ ಇತ್ಯಾದಿಗಳನ್ನು ಕಳೆದುಳಿದುದನ್ನು ಸದಸ್ಯರೊಳಗೆ ಹಂಚಬಹುದು.

ಕ್ಷೇತ್ರದ ಉತ್ಪತ್ತಿಯನ್ನು ಸಾಮೂಹಿಕವಾಗಿ ಮಾರುವುದರಿಂದ ರೈತರಿಗೆ ದೊರೆಯುವ ಲಾಭವು ಅಧಿಕವಾಗುವುದು. ಅವರು ಧಾನ್ಯಗಳನ್ನೊಂದು ರಕ್ಷಣಾಲಯದಲ್ಲಿಟ್ಟು, ಅದರ ಮೇಲೆ ಸಾಲವನ್ನು ಪಡೆದುಕೊಳ್ಳಬಹುದು.

ಸಹಕಾರಿ ವ್ಯವಸಾಯ ಪದ್ಧತಿಯಲ್ಲಿ ಹಿಡುವಳಿಗಳೆಲ್ಲವೂ ಒಂದು ಸೇರಿರಬೇಕು. ಇದು ರೈತರನ್ನು ಪರಸ್ಪರ ಸೌಹಾರ್ದತೆಯನ್ನು ಕಡಿಮೆ ಗೊಳಿಸುವುದಲ್ಲದೆ, ಕಲಹವನ್ನೂ ಉಳಿಸುವುದು. ಇನ್ನು ಬಹಳ ಸುಲಭರೀತಿಯಲ್ಲಿ ನೀರಿನ ಸೌಕರ್ಯವನ್ನೂ ಒದಗಿಸಿಕೊಳ್ಳಲು ಅನುಕೂಲ ಮಾಡಿಕೊಡುವುದು. ನಮ್ಮ ರೈತರು ಮಾತ್ರ ಈ ವಿಧಾನದ ಬಗ್ಗೆ ವಿಶ್ವಾಸವನ್ನು ಪ್ರದರ್ಶಿಸಿ ಸಹಕಾರ ತತ್ವಗಳಲ್ಲಿ ಹೊಂದಿಕೊಂಡು ಬಾಳಲು ಮುಂದೆ ಬರಬೇಕು.

ಪ್ರಗತಿ ಪಥ

ಭಾರತದ ಅಮೂಲ್ಯ ಆಸ್ತಿ-- ಹಿಂದುಸ್ತಾನ ಕೇಬಲ್ಸ್‌ನ ಗಣನೀಯ ಮುನ್ನಡೆ.

ಭಾರತೀಯ ಅಂಚೆ ಮತ್ತು ತಂತಿ ಇಲಾಖೆಯ ಬೇಡಿಕೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ನಾನಾ ವಿಧದ ಟೆಲಿಫೋನ್ ಕೇಬಲ್‌ಗಳನ್ನು ತಯಾರಿಸುವ ಸಲುವಾಗಿ ೧೯೫೨ರಲ್ಲಿ ಹಿಂದುಸ್ತಾನ್ ಕೇಬಲ್ಸ್ ಎಂಬುದೊಂದು ಲಿಮಿಟೆಡ್ ಕಂಪೆನಿಯ ಸ್ಥಾಪನೆಯಾಯಿತು ಈ ಕಂಪೆನಿಯು ೧೯೫೫ ಸೆಪ್ಟಂಬರ ೧೯ನೇ ತಾರೀಕಿನಿಂದ ವರ್ಷವೊಂದಕ್ಕೆ ೪೭೦ ಮೈಲುದ್ದದ ಕೇಬಲ್‌ಗಳನ್ನು ತಯಾರಿಸುವ ಪ್ರಮಾಣದಲ್ಲಿ ತನ್ನ ಕಾರ್ಯಕ್ಕೆ ಮೊದಲು ಮಾಡಿತು. ಪ್ರಥಮದ ಅರು ತಿಂಗಳ ಉತ್ಪಾದನೆಯು ಕೇವಲ ೧೧೦ ಮೈಲು ಕೇಬಲ್‌ಗಳು. ೧೯೫೫-೫೬ರಲ್ಲಿ ಈ ಕಾರ್ಖಾನೆ ೨೮೫ ಮೈಲು ಕೇಬಲ್ಸ್‌ನ್ನು ತಯಾರಿಸಿತು. ೧೯೫೬-೫೭ರಲ್ಲಿ ೫೫೦ ಮೈಲುಗಳನ್ನು ಉತ್ಪಾದನೆ ಮಾಡುವ ಉದ್ದೇಶವಿದ್ದಿದ್ದರೂ ಉತ್ಪಾದನೆಯು ೫೯೨ ಮೈಲುಗಳಿಗೆ ಕೆಟ್ಟಿದೆ. ಹೀಗೆ ಈ ಕಂಪೆನಿಯ ಪ್ರಾರಂಭದಿಂದ ಇದು ವರೆಗೆ ಒಂದು ಸಾವಿರ ಮೈಲುಗಳಿಗೂ ಮಿಕ್ಕಿ ಕೇಬಲ್‌ನ್ನು ಸಿದ್ಧಪಡಿಸಿದೆ. ಇನ್ನೂ ಅಧಿಕ ಪ್ರಮಾಣದಲ್ಲಿ ಕೈಗಾರಿಕೆಯನ್ನು ಮುಂದುವರಿಸುವ ಯೋಜನೆಗಳು ಕೈಗೆಳ್ಳಲ್ಪಟ್ಟಿದ್ದು ಇದು ೧೯೫೭ರಲ್ಲಿ ಕಾರ್ಯಾರಂಭಕ್ಕೆ ಬರಬಹುದು.

ಇನ್ನು ಮುಂದೆ ಅಂಚೆ ಮತ್ತು ತಂತಿ ಇಲಾಖೆಯು ವರ್ಷಂಪ್ರತಿ ೮೦೦ ಮೈಲುದ್ದದ ಕೇಬಲ್‌ಗಳನ್ನು ಬೇಡಬಹುದು. ಈಗ ಕಾರ್ಖಾನೆಯಲ್ಲಿ "ಸಿಂಗಲ್ಸ್" ಪದ್ಧತಿಯಿದೆ. ಹೆಚ್ಚಿನ ಬೇಡಿಕೆಗಳನ್ನು ಮನ್ನಿಸಲು ಕಂಪೆನಿಯು "ಡಬಲ್ ಶಿಫ್ಟ್" (ಎರಡು ಸಲ ಸರ್ತಿಯಂತೆ ಕೆಲಸಮಾಡುವುದು) ಪದ್ಧತಿಯನ್ನು ಪ್ರಚಲಿತಗೊಳಿಸುವ ನಿರೀಕ್ಷೆಯಿದೆ. ಹೀಗೆ ಮಾಡಿದಲ್ಲಿ ಕಂಪೆನಿಯು ವರ್ಷವೊಂದಕ್ಕೆ ೧,೦೦೦ ಮೈಲುಗಳಕೇಬಲನ್ನು ಸಿದ್ಧಪಡಿಸಲು ಶಕ್ತವಾಗುವುದು. ಆಗ ನಮ್ಮ ಬೇಡಿಕೆಗಿಂತ ಅಧಿಕ ಪ್ರಮಾಣದ ಕೇಬಲ್‌ಗಳನ್ನು ರಫ್ತು ಮಾಡಲೂ ಬಹುದು.

ದ್ವಿತೀಯ ಸಂಚಾರಾತ್ಮಕ ಯೋಜನೆಯಲ್ಲಿ ಭಾರತೀಯ ಅಂಚೆ ಮತ್ತು ತಂತಿ ಇಲಾಖೆಯು ಭಾರತದ ದೊಡ್ಡ ನಗರಗಳೆಲ್ಲವನ್ನೂ ಭೂಗತ ದೂರದ ಟೆಲಿಫೋನ್ ಸೌಕರ್ಯಗಳಿಂದ ಜೋಡಿಸುವ ನಿಶ್ಚಯವನ್ನು ಮಾಡಿರುತ್ತದೆ. ಆದುದರಿಂದ ಈ ಕಾರ್ಖಾನೆಯನ್ನು ವರ್ಷವೊಂದಕ್ಕೆ ೩೦೦ ಮೈಲುದ್ದದ ಈ ಉದ್ದೇಶಕ್ಕೆ ಬೇಕಾದ ತಂತಿಗಳನ್ನು ತಯಾರಿಸುವಂತೆ ಸಜ್ಜುಮಾಡಲಾಗುತ್ತಿದೆ. ಈಕೊ-ಆಕ್ಸಿಲ್ ತಂತಿಗಳನ್ನು ತಯಾರಿಸುವ ಕಲೆ, ಆರ್ಥಿಕ ಮತ್ತಿತರ ಪ್ರಮುಖ ವಿಷಯಗಳನ್ನು ಮನನ ಮಾಡುವುದಕ್ಕಾಗಿ ಈ ಕಂಪೆನಿಯ ಮೆನೇಜಿಂಗ್ ಡೈರೆಕ್ಟರು ಯುರೋಪಿನ ಹಲವಾರು ದೇಶಗಳನ್ನು ಸಂದರ್ಶಿಸಿದರು ಪ್ರಪ್ರಥಮವಾಗಿ ಸಂಪಾದಿಸಿದ ಜ್ಞಾನದಿಂದ, ಕಂಪೆನಿಯ ತಾಂತ್ರಿಕ ಸಲಹೆಗಾರರಾದ ಲಂಡನಿನ ಸ್ಟಾಂಡರ್ಡ್ ಟೆಲಿಫೋನ್ಸ್ ಮತ್ತು ಕೇಬಲ್ಸ್, ಲಿಮಿಟೆಡ್ ಇವರ ಸಲಹೆಯನ್ನು ಪಡೆದು ಮಿತವ್ಯಯದಿಂದ ಮತ್ತು ಈಗಿನ ನವೀನ ರೀತಿಯ ಕೊ ಆಕ್ಸಿಲ್ ಕೇಬಲ್ ಯೋಜನೆಯು ತಯಾರಿಸಲ್ಪಡುತ್ತಿದೆ. ಈ ಉದ್ದೇಶಕ್ಕಾಗಿ ದ್ವಿತೀಯ ಯೋಜನೆಯಲ್ಲಿ ೫೦ ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ.

ಟೆಲಿಫೋನ್ ಕೇಬಲ್‌ಗಳ ರಚನೆಗೆ ಬೇಕಾಗುವ ಒಂದು ವಿಧದ ಕಾಗದವನ್ನು ಇದು ವರೆಗೆ ಪರದೇಶಗಳಿಂದ ತರಿಸಿಕೊಳ್ಳಲಾಗುತಿತ್ತು. ಈಗ ಇದರಲ್ಲಿಯೂ ಸ್ವಾವಲಂಬನೆಯನ್ನು ಒದಗಿಸಲು ಮುಂದಡಿಯಿಡುತ್ತಿದೆ. ಈ ವಿಷಯವನ್ನು ಕಂಪೆನಿಯು ತಮಗೆ ಒಟ್ಟನ್ನುಗಳಷ್ಟು ಇಂತಹ ಕಾಗದವನ್ನು ತಯಾರಿಸಿ ಒದಗಿಸಿದ ಶ್ರೀ ಗೋಪಾಲ ಪೇಪರ

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು ಬುದ್ಧಿ ಜೀವಿಗಳಿಗೆ ತುಂಬ ಸ್ತ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,

ದ್ರಾವಿಡ ಸಂಸ್ಕೃತಿ

ಸಿಂಧೂ ಮತ್ತು ಸೌಬರ್ಕತಿ ಕಂದರಗಳ ನೇರ ಸಂಪರ್ಕ! ಲೋಥಲ್ ನಗರದಲ್ಲಿ ಕುತೂಹಲಜನಕ ಶೋಧ!

ಸೌರಾಷ್ಟ್ರ ರಾಜ್ಯದ ಅಹ್ಮದಾಬಾದ್ ಜಿಲ್ಲೆಯ ಧೋಲ್ಕ ತಾಲೂಕಿನ ಸಾರಸ್ ವಲಾ ಗ್ರಾಮದ ಲೋಥಲ್‌ನಲ್ಲಿ ನಡೆಸಿದ ಭೂ ಶೋಧನೆಗಳ ಫಲವಾಗಿ ಹರಪ್ಪಾ ಮತ್ತು ಮೊಹೆಂಜೊದಾರೋಗಳಲ್ಲಿ ದೊರೆತ ವಸ್ತುಗಳಂತಹ ವಸ್ತುಗಳು ಪ್ರಾಪ್ತಿಯಾಗಿದೆ

೧೯೫೫ರಲ್ಲಿ ಹಳೆಕಾಲದ ದಿಬ್ಬವೊಂದು ಪತ್ತೆಯಾಯಿತು. ಈ ದಿಬ್ಬವು ಚರಿತ್ರಕಾರರು ಮತ್ತು ಪ್ರಾಚೀನ ವಸ್ತು ಶೋಧಕರಲ್ಲಿ ಹೆಚ್ಚು ಕುತೂಹಲ ಕೆರಳಿಸಿದೆ. ಏಕೆಂದರೆ ಈ ನಿವೇಶನವು ಹರಪ್ಪಾ ನಾಗರಿಕತೆಯ ಎರ್ಲೆಗಳನ್ನು ಕ್ಯಾಂಬೇ ಕೊಲ್ಲಿಯ ವರ�ೀಗೆ ದಕ್ಷಿಣದಲ್ಲಿ ವಿಸ್ತರಿಸುವುದು ಕೇಂದ್ರ ಪ್ರಾಚೀನ ವಸ್ತು ಸಂಶೋಧನಾ ಶಾಖೆಯವರು ೧೯೫೬ರ ಜನವರಿ ತಿಂಗಳಿಂದಲೂ ಈ ನಿವೇಶನದಲ್ಲಿ ಭೂ ಶೋಧನಾ ಕಾರ್ಯವನ್ನು ಕೈಗೊಂಡಿರುವರು ಭಾರತೀಯ ಇತಿಹಾಸದ ಹೆಚ್ಚಿನ ಸಂಶೋಧನೆಗಾಗಿ ಈ ನಿವೇಶನದ ಪ್ರಾಮುಖ್ಯವನ್ನು ಪರಿಗಣಿಸಿ ಮುಂದಿನ ವರ್ಷವೂ ಈ ಭೂ ಶೋಧನಾ ಕಾರ್ಯವನ್ನು ಮುಂದುವರಿಸಲಾಗುವುದು.

ಭೂ ಶೋಧನೆಯ ಕಾಲದಲ್ಲಿ ದೊರೆತ ಉಪಕರಣಗಳು, ಆಯುಧಗಳು ಆಭರಣಗಳು, ಕಲಾವಸ್ತುಗಳುಗೃಹೋಪಯೋಗಿ ವಸ್ತುಗಳು ಹರಪ್ಪಾದಲ್ಲಿ ದೊರೆತ ವಸ್ತುಗಳನ್ನು ಹೋಲುವುವು ಈ ವಸ್ತುಗಳು ಲೋಥಲ್ ಊರಿನ್ಯಾಯ ಸ್ಥಿತಿಯಲ್ಲಿತ್ತೆಂಬುದನ್ನು ಸೂಚಿಸುತ್ತವೆ

ಮುದ್ರಿಕೆಗಳು ಮತ್ತು ಮೊಹರುಗಳ ಮೇಲೆ ಏಕ ಶೃಂಗಿ, ವೃಷಭ, ಮೇಕೆ, ಆನೆ, ಮತ್ತು ಕೋಣಗಳಂತಹ ಪ್ರಾಣಿಗಳ ಪ್ರಾಧಾನ್ಯತಾದ ಪ್ರತಿಬಿಂಬಗಳಿವೆ ವೃಷಭ, ನಾಯಿ, ಖಡ್ಗಮೃಗ ಮತ್ತು ವರಾಹಗಳಂತಹ ಪ್ರಾಣಿಗಳ ಗಟ್ಟಿಮಣ್ಣಿನ ವಿಗ್ರಹಗಳು ಸಹ ದೊರೆತಿವೆ ಇವುಗಳು ಪ್ರಾಣಿವರ್ಗದ ಬಗ್ಗೆ ಆಗಿನ ಕಾಲದ ನಿಕಟ ಅಧ್ಯಯನವನ್ನು ತೋರಿಸುತ್ತವೆ.

ಕಂಠಹಾರಕ್ಕೆ ಬಳಸುತ್ತಿದ್ದ ಚಿನ್ನದ ಮಣಿಗಳು ಸಾಳುವೆ ಕಾಳಿನಷ್ಟು ಸಣ್ಣಗಿದ್ದು ಆಂದಿನ ಕಾಲದಲ್ಲಿ ಸೂಕ್ಷ್ಮ ಉಪಕರಣಗಳು ಒಳಕೆಯಲ್ಲಿದ್ದವೆಂಬುದನ್ನು ತೋರಿಸುತ್ತವೆ. ಮಣ್ಣಿನ ಪಾತ್ರೆಗಳ ಮೇಲೆ ಚಿತ್ರಿಸಿರುವ ವರ್ಣಚಿತ್ರಗಳು ಅತ್ಯಾಕರ್ಷಕವಾಗಿವೆ. ಈ ಪಾತ್ರೆಗಳ ಮೇಲೆ



ಬ್ರಿಟನಿನ ಹೆಲಿಕಾಪ್ಟರದ ಚಿತ್ರವಿದು ರಕ್ಷಣೆ, ವೃವಹಾರ, ಮೊದಲಾದುವುಗಳಲ್ಲಿ ಇದರ ಉಪಯೋಗವಾಗುವುದು. ಇದು ಬ್ರಿಟನಿನ ಮೊತ್ತಮೊದಲಿನ ಗ್ಯಾಸಿನಿಂದ ಚಲಿಸುವ ಹೆಲಿಕ್ಯಾಪ್ಟರವಾಗಿದ್ದು ವೆಸ್ಟ್‌ಲೇಂಡ್ ವೆಸೆಕ್ಸ್ ಎಂಬ ಹೆಸರುಳ್ಳದು

ಅಲಂಕಾರಕ್ಕಾಗಿ ಚಿತ್ರಿಸಿರುವ ನವಿಲು ಲತೆ ತಾಳೆಮರ ಮತ್ತು ಅರಳಿಎಲೆಗಳ ವರ್ಣಚಿತ್ರಗಳೂ ಹರಪ್ಪಾದಲ್ಲಿ ದೊರೆತ ವರ್ಣಚಿತ್ರಗಳನ್ನು ಸ್ಮರಣೆಗೆ ತರುವುವು ಲೋಥಲ್ ಜನರ ಕಲ್ಪನಾತ್ಮಕ ಕಲೆಯು ಸರ್ವೋತ್ಕೃಷ್ಟವಾದುದೆಂದು ಹೇಳಬಹುದಾಗಿದೆ

ನಾಯಿಯೊಂದರ ಹಾಗೂ ನರ್ತಕಿಯೋರ್ವಳ ಸುಂದರವಾದ ತಾಮ್ರದ ವಿಗ್ರಹಗಳು ಲೋಹವನ್ನು ಎರಕ ಹೊಯ್ಯುವ ಕಲೆಯ ಉದಾಹರಣೆಗಳು ಗಿವೆ ಲೋಥಲ್ ಜನರು ತಾಮ್ರ ಮತ್ತು ಕಂಚಿನ ಕೊಡಲಿಗಳು, ಸೂಜಿಗಳು ಮತ್ತು ಕತ್ತಿಗಳನ್ನು ಉಪಕರಣಗಳು ಹಾಗೂ ಆಯುಧಗಳನ್ನಾಗಿ ಬಳಸುತ್ತಿದ್ದರು ಅಲ್ಲದೆ ದಂತ ಹಾಗೂ ಮೂಳೆಯ ಸೂಜಿಗಳನ್ನೂ, ಕಲ್ಲಿನ ಅಲಗುಗಳನ್ನೂ ಕವಣೆ ಹೊಡೆಯುವುದಕ್ಕಾಗಿ ಗಟ್ಟಿಮಣ್ಣಿನ ಚೆಂಡುಗಳನ್ನನ್ನೂ ಬಳಸುತ್ತಿದ್ದರು.

ಲೋಥಲ್ ಜನರು ವಾಣಿಜ್ಯೋದ್ಯಮಿಗಳಾಗಿದ್ದು ಸಿಂಧೂ ಕಣಿವೆಯ ನಗರಗಳೊಂದಿಗೆ ವ್ಯಾಪಾರ ನಡೆಸುತ್ತಿದ್ದರು ಲೋಥಲ್‌ನಲ್ಲಿ ದೊರೆತ ತೂಕದ ಕಲ್ಲುಗಳು ಹರಪ್ಪಾ ಮತ್ತು ಮೊಹೆಂಜೊದಾರೋಗಳಲ್ಲಿ ದೊರೆತ ತೂಕದ ಕಲ್ಲುಗಳಿಗೆ ಅನುರೂಪವಾಗಿವೆ

ಭೂಶೋಧನೆಯ ಕಾಲದಲ್ಲಿ ವ್ಯಕ್ತಪಡಿಸಿದ ಕಟ್ಟಡಗಳು ಲೋಥಲ್ ನಿವಾಸಿಗಳು ಸೈರ್ಮಲ್ಯದ ಬಗ್ಗೆ ಹೊಂದಿದ್ದ ಅರಿವನ್ನು ವ್ಯಕ್ತಪಡಿಸುತ್ತವೆ ಇಲ್ಲಿನ ನಿವಾಸಿಗಳಿಗೆ ನಗರ ಯೋಜನೆಯ ಬಗ್ಗೆ ಪರಿಪೂರ್ಣವಾದ ಜ್ಞಾನವಿತ್ತು. ಮನೆಗಳನ್ನು ನೇರವಾಗಿ ಕಟ್ಟಲಾಗುತ್ತಿತ್ತು ಮನೆಗಳಲ್ಲಿ ನೆಲಕ್ಕೆ ಇಟ್ಟಿಗೆ, ಗೂಡಿನಲ್ಲಿ ಸಟ್ಟಿ ಅಥವಾ ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆಗಳನ್ನು ಹಾಸಲಾಗುತ್ತಿತ್ತು ಪ್ರತಿಯೊಂದು ಮನೆಯಲ್ಲಿಯೂ ಸ್ನಾನ ಗೃಹ ವಿರುತ್ತಿತ್ತು ಜೊತೆಗೆ ಚರಂಡಿಗಳಿರುತ್ತಿದ್ದವು. ಕೊಚ್ಚೆ ನೀರನ್ನು ಸಾಗಿಸುವುದಕ್ಕಾಗಿ ಇದ್ದ ಸಾರ್ವಜನಿಕ ಚರಂಡಿಗಳು ದೊಡ್ಡ ದೊಡ್ಡ ಹಳ್ಳಗಳನ್ನು ಹೊಂದಿದ್ದವು, ಈ ಹಳ್ಳಗಳಲ್ಲಿ ಕೊಚ್ಚೆ ನೀರು ಹೀರುತ್ತಿತ್ತು ಈ ದೊಡ್ಡ ಚರಂಡಿಗಳಿಗೆ ಖಾಸಗಿ ಮನೆಗಳಿಂದ ಸಣ್ಣ ಸಣ್ಣ ಚರಂಡಿಗಳನ್ನು ಜೋಡಿಸಲಾಗುತ್ತಿತ್ತು.

ಲೋಥಲ್‌ಗೆ ಭೋಗಾವೂ ಹಾಗೂ ಸೌಬರ್ಮತಿ ನದಿಗಳ ಪ್ರವಾಹ ಭಯವಿತ್ತು ಮನೆಗಳು ಮುಳುಗಿ ಹೋಗದಂತೆ ಮಾಡುವುದಕ್ಕಾಗಿ ಜನರು ಒಣಗಿದ ಇಟ್ಟಿಗೆಗಳಿಂದ ಬೃಹದಾಕಾರದ ವೇದಿಕೆಗಳನ್ನು ಕಟ್ಟಿ ಆ ವೇದಿಕೆಗಳ ಮೇಲೆ ಮನೆಗಳನ್ನು ಕಟ್ಟುತ್ತಿದ್ದರು ಅಂತಹ ಎರಡು ದೊಡ್ಡ ವೇದಿಕೆಗಳ ಮಧ್ಯೆ ಜೇಡಿ ಮಣ್ಣನ್ನು ತುಂಬಿ ಭೂಮಿಯ ಮಟ್ಟವನ್ನು ಹೆಚ್ಚಿಸುತ್ತಿದ್ದರು

ವಿವಿಧ ಕಾಲಗಳಿಗೆ ಸಂಬಂಧಿಸಿದ ಹಲವಾರು ವೇದಿಕೆಗಳನ್ನು ಪ್ರಕಾಶಕ್ಕೆ ತರಲಾಗಿದೆ ಒಂದು ವೇದಿಕೆಯ ಮೇಲೆ ೧೫ ಗಟ್ಟಿಯಾದ ಪೆನಾಕೃತಿಯ 'ಬ್ಲಾಕ್'ಗಳಿವೆ ಇವುಗಳಲ್ಲಿ ೧೨ ಬ್ಲಾಕ್‌ಗಳಿಗೆ ಯಾವ ರೀತಿಯ ಆವಾಯವೂ ತಟ್ಟಿಲ್ಲ. ಬ್ಲಾಕ್‌ಗಳ ಮಧ್ಯದಲ್ಲಿರುವ ಕಾಲುವೆಯ ಉತ್ತರ ಭಾಗದಲ್ಲಿ ಚರಂಡಿಯಿರುವುದು

ಸಿಂಧೂ ಲಿಪಿಯ ಸುಮಾರು ೨೫ ಗಟ್ಟಿಮಣ್ಣಿನ ಮುದ್ರಿಕೆಗಳು ಹಾಗೂ ಪ್ರಾಣಿ ವಿಗ್ರಹಗಳನ್ನು ಕಳೆದ ವರ್ಷ ಈ ಕಾಲುವೆಗಳಲ್ಲಿ ಪತ್ತೆಹಚ್ಚಲಾಯಿತು. ವೇದಿಕೆಗಳೇ ಅಲ್ಲದೆ ಈ ವರ್ಷ ಹಲವಾರು ಚರಂಡಿಗಳನ್ನೂ ಸುಟ್ಟ ಇಟ್ಟಿಗೆಯ ಮನೆಗಳನ್ನೂ ಪತ್ತೆಹಚ್ಚಲಾಯಿತು. ಆಯತಾಕಾರದ ಇಟ್ಟಿಗೆಯ ಕಟ್ಟಡಗಳಲ್ಲಿ ಪ್ರಾಣಿ ಅವಶೇಷಗಳು, ಮಣಿಗಳು ಮತ್ತು ಗಟ್ಟಿಮಣ್ಣಿನ ಬಳೆಗಳು ದೊರೆತಿವೆ ಇವುಗಳ ನಿಜವಾದ ಹೆಸರನ್ನಿನ್ನೂ ನಿರ್ಧರಿಸಿಲ್ಲ

ಲೋಥಲ್‌ನ ಕುಂಭಕಲೆಯು ಮಹತ್ವಪೂರಿತವಾಗಿದೆ. ಕಪ್ಪು ಮತ್ತು ಕೆಂಪು ಬಣ್ಣದ ಪಾತ್ರೆಗಳು, ವರ್ಣರಂಜಿತ ಹಾಗೂ ಸಾದಾ ರೀತಿಯಲ್ಲಿ ದೊರೆತಿವೆ ಇವು ಸಿಂಧೂ ಕಣಿವೆಯ ಮೊಹರುಗಳು ಮತ್ತು ಹರಪ್ಪಾದ ಮಣ್ಣಿನ ಪಾತ್ರೆಗಳನ್ನು ಹೋಲುತ್ತವೆ ಮಧ್ಯ ಭಾರತ ಹಾಗೂ ದಖ್ಖನ್‌ಗಳಲ್ಲಿ ಬಳಸಲಾಗುತ್ತಿದ್ದ ಪಾತ್ರೆಗಳನ್ನು ಸುಡುವ ತಂತ್ರ ವಿಧಾನಗಳನ್ನು ಲೋಥಲ್‌ನಲ್ಲಿ ಕೂಡಾ ಬಳಸುತ್ತಿದ್ದುದೂ ಈ ಪಾತ್ರೆಗಳಿಂದ ವ್ಯಕ್ತಪಡುತ್ತದೆ ಹರಪ್ಪಾ ನಾಗರಿಕತೆ ಹಾಗೂ ಕ್ರಿ ಪೂ ೧೦೦೦ದ ಸಂಸ್ಕೃತಿಗಳ ನಡುವ ಈಗ ನೇರವಾದ ಸಂಪರ್ಕವನ್ನು ಸ್ಥಾಪಿಸಬಹುದಾಗಿದೆ

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ. ನ

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ ಭಾರತ)

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಠೇವಣಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?

ಹಾಗಿದ್ದಲ್ಲಿ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬೇಂಕಿನ ಶಾಖೆಯಲ್ಲಿ ವಿಚಾರಿಸಿ "ಕೊರ್ಪೊರೇಶನ್" ಬೇಂಕು ಎಲ್ಲಾ ಕರೆದ ಠೇವಣಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿಯದೆ ಅಲ್ಲದೆ ಠೇವಣಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ಶರ್ತಗಳನ್ನೂ ಬದಲಾಯಿಸಿಯದೆ

51 ವರುಷಗಳ ಪರಿಪಕ್ವ ಬೇಂಕಿಂಗ್ ಅನುಭವ!

7,00,00,000 ರೂಪಾಯಿಗಳಿಗೂ ಮೀರಿದ ಒಟ್ಟು ವಹಿವಾಟು!

THE CANARA BANKING CORPORATION LIMITED

ರಾಮತೀರ್ಥ ಬ್ರಾಹ್ಮೀ ತೈಲ

ಸ್ಟಿಕ್ಕಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧

ಗ್ರಾಮಾಭಿವೃದ್ಧಿ

ಸಮಾಜ ವಿಕಾಸ ಯೋಜನೆಗಳ ಅಭಿವೃದ್ಧಿ-ಯೋಜನಾ ವಿಸ್ತರಣೆಗೆ ತೀವ್ರ ಕಾರ್ಯಕ್ರಮಗಳು

ಕಳೆದ ಎಪ್ರಿಲ್ ಮಾಸದಲ್ಲಿ ಮುಸ್ಸೋರಿಯಲ್ಲಿ ಆರನೆಯ ಬಾರಿಗೆ ದೇಶದ ಅಭಿವೃದ್ಧಿ ಕಮಿಶನರರ ಸಮ್ಮೇಳನವು ನಡೆದಿತ್ತು. ಈ ಸಮ್ಮೇಳನದಲ್ಲಿ ಸಮಾಜಾಭಿವೃದ್ಧಿ ಮಂತ್ರಿ ಶಾಖೆಯು ತಾನು ಪ್ರಕಟಿಸಿದ ನೂತನ ಧ್ಯೇಯ ಧೋರಣೆಯಂತೆ, ಸಮಾಜಾಭಿವೃದ್ಧಿ ಕಾರ್ಯಕ್ರಮಗಳನ್ನು ಕೃಷಿಯ ಉತ್ಪಾದನೆಯ ಅವಶ್ಯಕತೆಗಳನ್ನು ಪೂರೈಸುವಂತೆ ಕ್ರಮೇಣ ವರ್ಧಿಸುವ ವ್ಯವಸ್ಥೆಯನ್ನು ಮಾಡಿತು. ಈ ಕುರಿತಾಗಿ ನೀರಾವರಿ, ಸಹಕಾರ, ವ್ಯವಸಾಯದಲ್ಲಿ ಸಂಶೋಧನೆ, ಹೆಚ್ಚಿನ ವಿದ್ಯೆ ಮತ್ತು ಸಮಾಜಾಭಿವೃದ್ಧಿಯ ತರಬೇತಿ ಮೊದಲಾದುವುಗಳಲ್ಲಿ ಕೆಲವೊಂದು ಹೆಜ್ಜೆಗಳನ್ನು ಮುಂಬಿಟ್ಟಿದೆ. ಸಮಾಜಾಭಿವೃದ್ಧಿ ಯೋಜನಾ ಕ್ಷೇತ್ರದೊಳಗೆ ಕೂಡಿಕೊಂಡಿರುವ ಹಳ್ಳಿಗಳೆಲ್ಲವುಗಳಲ್ಲಿಯೂ ಸಮಾನ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಜೀವಿಯಿಸಿರಲಿಲ್ಲ. ಇಂತಹ ಹಳ್ಳಿಗಳಲ್ಲಿ ಸ್ಥಳೀಯ ಕೆಲಸಗಳನ್ನು ಕೈಯಿಂದಲೇ ಮಾಡುವುದಕ್ಕೆ ತಕ್ಕ ಸೌಕರ್ಯಗಳನ್ನು ಒದಗಿಸುವತ್ತ ವಿಶೇಷ ಗಮನವನ್ನೀಯಬೇಕಾಗಿದೆ.

ಬೇರೆ ಬೇರೆ ರಾಜ್ಯಗಳಲ್ಲಿ ಬೃಹತ್, ಮಧ್ಯಮ ಹಾಗೂ ಸಣ್ಣ ಪ್ರಮಾಣದ ನೀರಾವರೀ ಯೋಜನೆಗಳನ್ನು ಸಮಮಟ್ಟಕ್ಕೆ ತರುವ ಸಲುವಾಗಿ ಪ್ರತಿಯೊಂದು ಯೋಜನೆಗೆ ಅಧವಾ ಸಮಸ್ಥಾನಕ್ಕೆ ಒಬ್ಬೊಬ್ಬ ಹಿರಿಯ ನೀರಾವರೀ ಇಂಜಿನಿಯರರನ್ನಾದರೂ ಒದಗಿಸುವ ಪ್ರಯತ್ನವನ್ನು ಮಾಡಿದ್ದಾರೆ. ಈ ರೀತಿಯಲ್ಲಿ ಸಮಾನವಿಟ್ಟಕ್ಕೆ ಬಂದಿರುವ ಯೋಜನೆಗಳು ಮುಖ್ಯವಾಗಿ ನದೀಕಣಿವೆಯ ಪ್ರದೇಶಗಳಲ್ಲಿ, ನಿತ್ಯವ್ಯಯದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ನೀರಿನ ಉಪಯೋಗವನ್ನು ಒದಗಿಸಲು ಸುಭದ್ರವಿವೆ. ಮುಖ್ಯವಾಗಿ, ಆಂಧ್ರ ಪ್ರದೇಶದ ಗೋದಾವರೀ ಜಿಲ್ಲೆಯಲ್ಲಿ ಸಹಕಾರಿಗಳ ಮೂಲಕ ನೀರಾವರೀ [ಯೋಜನೆಗಳನ್ನು ಕೈಗೊಂಡಿರುವುದು ಸತ್ಯಾ ನೀರಾವರೀ ಯೋಜನೆಗಳಲ್ಲಿ ಕೈಮಾಡಿದ ಅತ್ಯಮೂಲ್ಯವೆನಿಸಿದ ಪ್ರಗತಿಕಾರ್ಯವಾಗಿದೆ. ಗುಜರಾತು ಮತ್ತು ಪಂಜಾಬ ರಾಜ್ಯಗಳಲ್ಲಿ ಸಹ ನೀರೆತ್ತುವಿಕೆಗೆ ಮತ್ತು ಕೊಳವೆ ಬಾವಿಗಳ ನೀರಾವರಿಯೋಜನೆಗೆ ಸಹಕಾರೀ ಸಂಘಗಳನ್ನು ಸ್ಥಾಪಿಸಲಾಗಿದೆ. ಈ ಸಂಘಗಳ ಪ್ರಗತಿಯು ಗಣನಾರ್ಹವಾಗಿರುವುದು.

ಹೊಸತಾಗಿ ಕಟ್ಟಿಸಲಾದ ನದೀಕಣಿವೆ ಯೋಜನೆಯ ಪ್ರದೇಶಗಳಲ್ಲಿ ಮತ್ತು ಈ ಹಿಂದೆಯೇ ಸಂಗ್ರಹಿಸಲ್ಪಟ್ಟ ನೀರು ಸಂಪೂರ್ಣವಾಗಿ ಉಪಯೋಗಿಸಲ್ಪಡದ ಸ್ಥಳಗಳಲ್ಲಿ ಸಣ್ಣ ನೀರಾವರೀ ಯೋಜನೆಗಳು ನೀರಾವರಿಯ ಅಭಿವೃದ್ಧಿ ಕಾರ್ಯದಲ್ಲಿ ಕುಂಬ ಸಹಾಯ ನೀಡಿರುತ್ತವೆ. ಸಮಾಜಾಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನಾ ಕ್ಷೇತ್ರಗಳೊಳಗೆ ಅಂತರವಾದ ಪ್ರದೇಶಗಳಲ್ಲಿ, ೧೯೫೨ನೇ ದಶಂಬರದ ಕೊನೆಯ ವರೆಗೆ ಒಟ್ಟು ೩೧೯ ಲಕ್ಷ ಎಕ್ರೆಗಳಷ್ಟು ಭೂಮಿಗೆ ಹೊಸತಾಗಿ ನೀರಾವರೀ ಸೌಕರ್ಯವನ್ನು ಒದಗಿಸಲಾಗಿರುವುದು. ಈ ಉದ್ದೇಶಕ್ಕಾಗಿ ಮುಂಗಡ ಪತ್ರದಲ್ಲಿ ತೆಗೆದಿಟ್ಟ ಮೊಬಲಗಿನಲ್ಲಿ ಒಟ್ಟು ೮೮೮ ಕೋಟಿ ರೂಪಾಯಿಗಳಷ್ಟು ವ್ಯಯವಾಗಿದೆ.

ಸಣ್ಣ ನೀರಾವರೀ ಯೋಜನೆಗಳಿಗೆ ಅವಕಾಶವು ಸೀಮಿತವಾಗಿದ್ದ ಪ್ರದೇಶಗಳಲ್ಲಿ ಪ್ರತಿಬಂಧಕ ನಿಧಿಗಳನ್ನು ತೆಗೆದುಕೊಳ್ಳಲು ನಿರ್ಧರಿಸಲಾಗಿರುವುದು. ಈ ಯೋಜನೆಗಳಿಗೆ ಅವಕಾಶವು ಧಾರಾಳವಾಗಿರುವ, ಮತ್ತಂತಹವುಗಳು ಅತ್ಯಗತ್ಯವಾದ ಎಡೆಗಳಲ್ಲಿ "ಕಚ್ಚು ಆಹಾರ ಬೆಳೆಯಿರಿ" ಚಳುವಳಿಯ ನಿಧಿಯನ್ನು ಉಪಯೋಗಿಸಿಕೊಳ್ಳಬಹುದು.

ಆರನೆಯ ಅಭಿವೃದ್ಧಿ ಕಮಿಶನರರ ಸಮ್ಮೇಳನದಲ್ಲಿ ನೀರಾವರೀ ನಿಧಿಯಲ್ಲಿ ಸೇರಿಕಡಾ ಐವತ್ತನ್ನು ಬಾವಿ, ಪಂಪು ಸೆಟ್ಟು ನೆಳ್ಳಿ ಬಾವಿ ಮೊದಲಾದ ಖಾಸಗಿ ನೀರಾವರೀ ಕೆಲಸಗಳನ್ನು ಪ್ರೋತ್ಸಾಹಿಸುವುದಕ್ಕಾಗಿಯೂ, ಸೇಕಡಾ ಇಪ್ಪತ್ತೈದನ್ನು ಸಣ್ಣ ಕೆರೆಗಳನ್ನು ರಿಪೇರಿ ಮಾಡುವುದಕ್ಕಾಗಿಯೂ ಮತ್ತಳಿದುದನ್ನು ರಾಜ್ಯಗಳ ಮೇಲ್ವಿಚಾರಣೆಯಲ್ಲಿ ನಡೆಯುವ ಕಾಮಗಾರಿಗಳಿಗೂ ವೆಚ್ಚಮಾಡಬೇಕೆಂದು ನಿರ್ಧರಿಸಲಾಯಿತು.

ಸಮಾಜ ವಿಕಾಸ ಯೋಜನೆಯು ಪ್ರಾರಂಭವಾದ ಅಕ್ಟೋಬರ ೧೯೫೨ರಿಂದ ೧೯೫೩ರ ದಶಂಬರ ಕೊನೆಯ ದಿನದ ವರೆಗೆ ಸಮಾಜ ವಿಕಾಸ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಕ್ಷೇತ್ರದೊಳಗೆ ೪೯,೦೦೦ ಹೊಸ ಸಹಕಾರೀ ಸಂಘಗಳನ್ನು ಸ್ಥಾಪಿಸಲಾಯಿತು. ಆ ದಿನಕ್ಕೆ ಮೊದಲು ದೇಶದ ನಾನಾಭಾಗಗಳಲ್ಲಿ ಸ್ಥಾಪಿಸಲಾಗಿದ್ದ ಸಹಕಾರೀ ಸಂಘಗಳ ಸಂಖ್ಯೆಯನ್ನು ಗಮನಿಸಿದರೆ, ಈ ಹೊಸ ಸಂಘಗಳ ಸಂಖ್ಯೆಯು ತೀವ್ರ ಪ್ರಗತಿಪರವಾಗಿರುವುದು. ಈ ಸಂಘಗಳ ಸದಸ್ಯರ ಸಂಖ್ಯೆಯು ಕಳೆದರ್ಧ ಶತಮಾನದಲ್ಲಿದ್ದ ೪೭.೭ ಲಕ್ಷಗಳಿಂದ ೩೬ ಲಕ್ಷ ಹೆಚ್ಚಾಯಿತು.

ಈ ವರ್ಷದಲ್ಲಿ ೫೦೦ ಸಹಕಾರೀ ವ್ಯವಸಾಯ ಸಂಘಗಳನ್ನು ಸಮಾಜ ವಿಕಾಸ ಮತ್ತು ರಾಷ್ಟ್ರೀಯ ವಿಸ್ತರಣಾ ಪ್ರದೇಶಗಳಲ್ಲಿ ಪ್ರಾರಂಭಿಸುವ ನಿರ್ಧಾರವನ್ನು ಮಾಡಲಾಗಿರುವುದು. ರಾಜ್ಯ ಸರಕಾರಗಳು ಸಣ್ಣ ಸಹಕಾರಿ ಸಂಘಗಳನ್ನು ಸಂಪೂರ್ಣವಾಗಿ ಉಪಯೋಗಿಸಿ, ಮತ್ತು ಹೊಸ ಸಂಘಗಳನ್ನು ಸ್ಥಾಪಿಸಿ ಈ ಪ್ರದೇಶಗಳಲ್ಲಿ ಸಹಕಾರೀ ಚಳುವಳಿಯು ಬಲಿಯುವಂತೆ, ಶಕ್ತಿಯುತವಾಗುವಂತೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಲಿದ್ದಾರೆ. ಇದರಿಂದ ಈ ಯೋಜನಾ ಪ್ರದೇಶಗಳಲ್ಲಿ ಸಹಕಾರಿ ಸಂಘಗಳು ಅಧಿಕ ಪ್ರಮಾಣದಲ್ಲಿ ಸ್ಥಾಪಿತವಾಗಿ ಅಧಿಕ ಪ್ರಮಾಣದಲ್ಲಿ ಜನಸೇವೆಗೆ ತೊಡಗುವುವು.

ಭಾರತದ ರಿಸರ್ವ್ ಬ್ಯಾಂಕು ಯೋಜನಾ ಆಯೋಗ, ಆಹಾರ ಮತ್ತು ವ್ಯವಸಾಯಿಕ, ಅರ್ಥ ಮತ್ತು ಸಮಾಜ ವಿಕಾಸ ಮಂತ್ರಿ ಶಾಖೆಗಳೊಂದಿಗೆ ಸಮಾಲೋಚನೆಯನ್ನು ನಡೆಯಿಸಿ ವ್ಯಾವಸಾಯಿಕ ಸಾಲಗಳ ರೂಪದಲ್ಲಿ [೪೦ ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಈಯಲು ಒಪ್ಪಿರುತ್ತದೆ. ಇದರಿಂದಾಗಿ ಸಹಕಾರಿ ಸಾಲದ ಮೊಬಲಗು ೧೦ ಕೋಟಿ ರೂಪಾಯಿಗಳನ್ನು ಮುಟ್ಟುತ್ತದೆ

ಈ ಸಮ್ಮೇಳನವು ಈಗ ನಡೆಯುತ್ತಿರುವ ದ್ವಿತೀಯ ಪಂಚವರ್ಷಿಕ ಯೋಜನೆಯು ಕೊನೆಗೊಳ್ಳುವುದಕ್ಕೆ ಮೊದಲು ಭಾರತದ ಎಲ್ಲ ಹಳ್ಳಿಗಳೂ ಸಹಕಾರಿ ಭರವಸೆಯನ್ನಾಗಲೀ ವಿವಿಧೋದ್ದೇಶಗಳ ಸಂಘಗಳ ಭರವಸೆಯನ್ನಾಗಲೀ ಪಡೆಯಬೇಕು ಮತ್ತು ಪ್ರತಿಯೊಂದು ಯೋಜನಾ ಕ್ಷೇತ್ರದಲ್ಲಿ ಕಡಿಮೆಯೆಂದರೆ, ಒಂದಾದರೂ ಸಹಕಾರಿ ವ್ಯವಸಾಯ ಸಂಘ ಮತ್ತೊಂದು ಸಹಕಾರಿ ಸಾರಾಟ ಸಂಘವಿರಬೇಕೆಂಬುದನ್ನು ಸಿದ್ಧಾರ ಸು ಮಾಡಿರುತ್ತದೆ.

ರೈತನನ್ನು ಅಧೋಗತಿಗಿಳಿಸುತ್ತಿರುವ ಸಮಸ್ಯೆಗಳನ್ನು ಒಗೆಹರಿಸಲು ದ್ವಿಮುಖ ವಿಧಾನದಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದ ಸಂಶೋಧನೆಗಳು ನಡೆಯಬೇಕು: ಒಂದೆಡೆಯಲ್ಲಿ ಕೇಂದ್ರ ವಿಸ್ತರಣಾ ಸಮೂಹ ಮತ್ತು ಕ್ಷೇತ್ರಾಭಿವೃದ್ಧಿ ಕೇಂದ್ರಗಳೂ, ಇನ್ನೊಂದೆಡೆಯಲ್ಲಿ ರೈತನೂ ಈ ಕಾರ್ಯವನ್ನು ಮುಂದೆತ್ತುತ್ತಿರಬೇಕು. ಈ ನಿರ್ಧಾರವು ಆಹಾರ ಮತ್ತು ವ್ಯವಸಾಯ ಹಾಗೂ ಸಮಾಜ ವಿಕಾಸ ಮಂತ್ರಿಗಳ ಸಮಿತಿಯಲ್ಲಿ ಕೈಗೊಳ್ಳಲ್ಪಟ್ಟಿದೆ.

ಕ್ಷೇತ್ರಾಭಿವೃದ್ಧಿಯ ಅಧಿಕಾರಿಗಳು ಸಂಶೋಧನೆಯ ಕಾರ್ಯ ಮಾಡುವವರಿಗೆ ಪ್ರಚಾರವಾಗುತ್ತಿರುವ ನೂತನ ವಿಧಾನಗಳತ್ತ ರೈತರ ಪ್ರತಿಕ್ರಿಯೆಯೇನೆಂಬುದನ್ನು ತಿಳಿಸಬೇಕು; ಮತ್ತು ವ್ಯಾವಸಾಯಿಕ ಪಾಠಶಾಲೆ ಮೊದಲಾದುವುಗಳಿಗೆ ರೈತರನ್ನು ಆಮಂತ್ರಿಸಬೇಕು ಎಂಬ ನಿರ್ಣಯಕ್ಕೆ ಆ ಸಮಿತಿಯು ಒಂದಿತು. ಇಷ್ಟೇ ಅಲ್ಲದೆ, ರೈತರು ತಮ್ಮ ಭೂಮಿಯಲ್ಲಿ ಹೊಸ ವಿಧಾನಗಳನ್ನು ಅನುಸರಿಸುವುದಕ್ಕೆ ಮೊದಲು, ಆ ವಿಧಾನದ ಗುಣಾಗುಣಗಳನ್ನು ಪರೀಕ್ಷಿಸುವಂತೆ ಅವಕಾಶವನ್ನು ಕಲ್ಪಿಸಿ ಕೊಡುವಸಲುವಾಗಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಹೊಸದಾಗಿ ಸಂಶೋಧಿತವಾಗುವ ವ್ಯವಸಾಯ ಪದ್ಧತಿಯಲ್ಲಿ ಸಾಕಷ್ಟು ಪ್ರಯೋಗಗಳನ್ನು ಮಾಡಿಸಲು ತಕ್ಕ ಪ್ರೋತ್ಸಾಹವೀಯಬೇಕು. ಈಗ ವ್ಯವಸಾಯದ ಸಹಕಾರಿ ಸಂಘಗಳು ಹಿಂದೆಯಿಟ್ಟ ರಾಜ್ಯಗಳಲ್ಲಿ ಇನ್ನುಮುಂದಕ್ಕೆ ಕೇಂದ್ರ ಮತ್ತು ರಾಜ್ಯಗಳ ವ್ಯವಸಾಯ ಇಲಾಖೆಯು ಹೆಚ್ಚು ಹೆಚ್ಚಾಗಿ ಗಮನವೀಯಬೇಕು; ಮತ್ತು ಅಧಿಕಸಂಖ್ಯೆಯಲ್ಲಿ ವ್ಯಾವಸಾಯಿಕ ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕು.

ಸಮಾಜವಿಕಾಸ ವಿಭಾಗದ ಮಂತ್ರಿ ಶಾಖೆಯು ಸಮಾಜವಿಕಾಸದ ಉಚ್ಚ ಅಭ್ಯಾಸನನ್ನು ಮಾಡಲು, ವಿಶ್ವವಿದ್ಯಾಲಯ, ಕಾಲೇಜು ಮತ್ತಿತರ ಸಂಘ ಸಂಸ್ಥೆಗಳನ್ನು ಉತ್ತೇಜಿಸುವ ಕಾರ್ಯವನ್ನು ಪರ್ಯಾಲೋಚಿಸುತ್ತಿದೆ. ಪ್ರಕೃತ, ಸೂಚಿಸಲಾದ ವಿಧಾನದಲ್ಲಿ, ಅವುಗಳ ಅಧಿಕಾರಿಗಳನ್ನು ಅರ್ಥಶಾಸ್ತ್ರ ಮತ್ತು ವಿದ್ಯಾ ವಿಷಯಗಳ ವಿದ್ಯಾರ್ಥಿಗಳ ಪಾಠ್ಯಕ್ರಮದಲ್ಲಿ ಈ ಸಮಾಜ ವಿಕಾಸವನ್ನೂ ಸೇರಿಸಿಕೊಂಡು, ಈ ಬಗ್ಗೆ ಒಂದು ಸಣ್ಣ "ಪರಿಪಾಠ"ವನ್ನು ಸೇರಿಸಬೇಕೆಂಬುದಾಗಿ ವತ್ತಾಯಿಸಲಾಗುತ್ತದೆ. ಸಮಾಜ ವಿಕಾಸ ಕ್ಷೇತ್ರಗಳಲ್ಲಿ, ಈ "ಪರಿಪಾಠ"ದ ಅಧ್ಯಾಪಕ ಮತ್ತು ವಿದ್ಯಾರ್ಥಿಗಳಿಗೆ ಅಭ್ಯಾಸ ಮತ್ತು ಸಂಶೋಧನೆಗಳ ಕಾರ್ಯಗಳಿಗೆ ಯೋಗ್ಯ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ವಿಶ್ವವಿದ್ಯಾಲಯದ ವಿದ್ಯಾರ್ಥಿ ಮತ್ತು ಅಧ್ಯಾಪಕರಿಗೆ ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿ "ತಿಳ್ಳತ್ತ"ವನ್ನು ಕಾಯಪಾಲಿಸುವ ಯೋಜನೆಯನ್ನು ಇನ್ನು ಮುಂದಕ್ಕೂ ಮುಂದುವರಿಸಲಾಗುವುದು. ಈ ಯೋಜನೆಯಲ್ಲಿ ಈ ವರ್ಷ ೨,೦೦೦ ಮಂದಿ ವಿದ್ಯಾರ್ಥಿ ಮತ್ತು ಅಧ್ಯಾಪಕರು ಭಾಗವಹಿಸಿದ್ದಾರೆ; ಇಲ್ಲವೆ ಭಾಗವಹಿಸಲಿದ್ದಾರೆ.

ಕ್ಷೇತ್ರಾಭಿವೃದ್ಧಿ ಅಧಿಕಾರಿಗಳನ್ನೂ ಸಮಾಜ ವಿದ್ಯಾ ವ್ಯವಸ್ಥಾಪಕರನ್ನೂ ತರಬೇತಿಗೊಳಿಸುವ ಅನುಕೂಲತೆಗಳು ಮುಂದುವರಿಸುವ ಯೋಜನೆಯಲ್ಲಿವೆ. ಈಗ, ನಿಲೊಖೇರಿ, ಹೈದರಾಬಾದ ಮತ್ತು ರಾಂಚಿಗಳಲ್ಲಿರುವ ಒಟ್ಟು ಮೂರು ತರಬೇತಿ ಕೇಂದ್ರಗಳಿನ್ನಲ್ಲದೆ, ನಾಲ್ಕನೆಯ ದೊಂದನ್ನೂ ಹೊಸತಾಗಿ ಈ ವರ್ಷ ತೆರೆಯುವ ಆಲೋಚನೆಯಿದೆ. ಪ್ರಾಯಃ ಈ ಕೇಂದ್ರವನ್ನು ಉತ್ತರ ಪ್ರದೇಶದಲ್ಲಿ ಪ್ರಾರಂಭಿಸಲಾಗುವುದು. ಸಮಾಜ ವಿದ್ಯಾ ವ್ಯವಸ್ಥಾಪಕರ ತರಬೇತಿ ಕೇಂದ್ರವನ್ನು ೯ರಿಂದ ೧೨ಕ್ಕೇ ಸಲಗುವುದಲ್ಲದೆ ನೂತನ ಕೇಂದ್ರತ್ರಯವನ್ನು ಕೊಯಮುತ್ತೂರು, ಕೊಲ್ಕಾಪುರ ಮತ್ತು ಇಂದೋರುಗಳಲ್ಲಿ ಸಂಸ್ಥಾಪಿಸುವ ನಿರೀಕ್ಷೆಯಿದೆ.

ಸ್ನೇಹಿತರೆ,

ಹಲ್ಲುಗಳು ನಮಗೆ ಮುಖ್ಯವಾದ ಅಂಗಗಳು. ಅವುಗಳನ್ನು ನಾವು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು ಇದು ಹೇಗೆ ಸಾಧ್ಯವೆಂಬುದನ್ನು ಇಲ್ಲಿ ವಿವರಿಸಿದೆ.

1. ಆಹಾರ ಪದಾರ್ಥಗಳನ್ನು ಸೇವಿಸುವುದಕ್ಕೆ ಮುಂಚೆಯೂ ಸೇವಿಸಿದ ನಂತರವೂ ಹಲ್ಲುಗಳನ್ನು ಚೆನ್ನಾಗಿ ಉಜ್ಜಿ ತೊಳೆಯಿರಿ.

2. ಸಾಧ್ಯವಾದಷ್ಟು ಸಿಹಿ ಪದಾರ್ಥಗಳ ಸೇವನೆಯನ್ನು ಕಡಿಮೆ ಮಾಡಿ.

3. ನಿಮ್ಮ ದಂತ ವೈದ್ಯರು ಉಪಯೋಗಿಸುವ ಹಲ್ಲು ಪುಡಿ, ಬ್ರಷ್ ಪೇಸ್ಟ್ ಇತ್ಯಾದಿಗಳನ್ನೆ ನೀವೂ ಉಪಯೋಗಿಸಿ. ಇಲ್ಲದಿದ್ದಲ್ಲಿ ಚೆನ್ನಾಗಿ ಶುದ್ಧಪಡಿಸಿದ ಬೇವಿನ ಕಡ್ಡಿಯಿಂದ ಹಲ್ಲನ್ನು ಶುಚಿಪಡಿಸಿ.

4. ಆರು ತಿಂಗಳಿಗೊಮ್ಮೆ ನಿಮ್ಮ ಹಲ್ಲುಗಳನ್ನು ದಂತವೈದ್ಯರಿಂದ ಪರೀಕ್ಷಿಸಿಕೊಳ್ಳಿ.

5. ನಿಮ್ಮ ಮಕ್ಕಳ ಹಲ್ಲುಗಳನ್ನು 3, 7, 10, ಮತ್ತು 13ನೇ ವರ್ಷ ವಯಸ್ಸಿನಲ್ಲಿ ತಪ್ಪದೆ ವೈದ್ಯರಿಂದ ಪರೀಕ್ಷಿಸಿ ಅವಶ್ಯವಿದ್ದರೆ ಚಿಕಿತ್ಸೆ ಮಾಡಿಸಿ.

6. ನಿಮ್ಮ ಆಹಾರವು ಹಲ್ಲುಗಳ ಬೆಳವಣಿಗೆಗೆ ಸಹಾಯವಾಗುವಂತಹ ಸುಣ್ಣದ ಅಂಶಗಳಿಂದ ಕೂಡಿರುವುದೆ ಎಂಬುದನ್ನು ಪರೀಕ್ಷಿಸಿ. (ಈ ಅಂಶವು ಹಾಲು, ಮೀನು, ಮೀನೆಣ್ಣೆ ಯಕೃತ್, ಮೊಟ್ಟೆ ಇವುಗಳಲ್ಲಿ ಅಧಿಕವಾಗಿದೆ)

ಆರೋಗ್ಯಾಧಿಕಾರಿ, ಉಡುಪಿ.

ಈ ಸ್ಥಳ — **ಕೆನರಾ ಬ್ಯಾಂಕ್ ಲಿಮಿಟೆಡ್** — ಇವರ ಉದಾರ ದಾನ

ಹೆಚ್ಚು ಆಹಾರದ ಬೆಳೆ

ಮೈಸೂರು ರಾಜ್ಯದಲ್ಲಿ ೨೩ ಹಂಚಿಕೆಗಳು-- ಕೇಂದ್ರದಿಂದ ಈ ಬಗ್ಗೆ ಅಧಿಕ ಸಹಾಯ.

ಮೈಸೂರು ರಾಜ್ಯದ, ೧೯೫೭-೫೮ ರ, ಹೆಚ್ಚು ಆಹಾರ ಬೆಳೆಯುವ ಕಾರ್ಯಕ್ರಮದ ಪ್ರಕಾರ, ೨೩ ಹಂಚಿಕೆಗಳನ್ನು ಭಾರತ ಸರ್ಕಾರದವರು ಮಂಜೂರು ಮಾಡಿರುವರು.

ಅವುಗಳಲ್ಲಿ ಎರಡು ಕಾರ್ಯಕ್ರಮಗಳು ತೀವ್ರವಾದ ಬೇಸಾಯ ವಿಧಾನಕ್ಕೆ-ಕಂಪೋಸ್ಟ್ ಗೊಬ್ಬರ ಮತ್ತು ಉತ್ತಮ ಬೀಜದ ಧಾನ್ಯಗಳನ್ನು ಕಂಚುವುದಕ್ಕೆ ಸಂಬಂಧಪಡುತ್ತವೆ. ಈ ಕಾರ್ಯಕ್ರಮಗಳಿಂದ ಸುಮಾರು ೩,೪೦,೨೬೦ ಎಕರೆಗಳಷ್ಟು ಭೂಮಿಗೆ ಪ್ರಯೋಜನ ದೊರೆಕುವುದು. ೨೨,೫೬೫ ಟನ್ನುಗಳಷ್ಟು ಹೆಚ್ಚು ಆಹಾರ ಧಾನ್ಯಗಳ ಉತ್ಪಾದನೆಯಾಗುವುದೆಂದು ಅಂದಾಜುಮಾಡಲಾಗಿದೆ.

ಮೈಸೂರು ರಾಜ್ಯ ಸರ್ಕಾರದವರು ೯೮,೦೦೦ ಮಣಗಳಷ್ಟು ಉತ್ತಮ ಬೀಜದ ಧಾನ್ಯಗಳನ್ನೂ, ೫,೯೮೬ ಟನ್ನುಗಳಷ್ಟು ಸೂಪರ್ ಫಾಸ್ಫೇಟ್ ಗೊಬ್ಬರವನ್ನೂ, ೫೦೦ ಟನ್ನುಗಳಷ್ಟು ಮೂಳೆಯ ಗೊಬ್ಬರವನ್ನೂ, ಈ ವರ್ಷ ರೈತರಿಗೆ ಹಂಚುವರು. ಇದರ ಜೊತೆಗೆ, ಈ ಅವಧಿಯಲ್ಲಿ ೧,೦೧,೩೦೦ ಟನ್ನುಗಳಷ್ಟು 'ಕಂಪೋಸ್ಟ್' ಗೊಬ್ಬರವನ್ನು ಉತ್ಪಾದಿಸಿ ಹಂಚುವರು.

ಈ ಹಂಚಿಕೆಗಳಿಗಾಗಿ ಕೇಂದ್ರ ಸರ್ಕಾರದವರು ೩೦೧೬ ಲಕ್ಷ ರೂಗಳನ್ನು ಮಂಜೂರು ಮಾಡಿರುವರು.

೪೦ ಸಾಮುದಾಯಕ ಯೋಜನಾ ಕೇಂದ್ರ ಮತ್ತು ರಾಷ್ಟ್ರೀಯ ವಿಸ್ತರಣ ಸೇವಾ ಕೇಂದ್ರಗಳಲ್ಲಿ ಸ್ಥಳೀಯ ಗೊಬ್ಬರದ ತಯಾರಿಕೆಯನ್ನು ಉತ್ತಮಪಡಿಸುವುದಕ್ಕೂ ಈ ಕಾರ್ಯಕ್ರಮದಲ್ಲಿ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ರಾಬಿ ಬೆಳೆಯ ಕಾಲದಲ್ಲಿ ಮತ್ತೆ ೪೦ ಕೇಂದ್ರಗಳಲ್ಲಿ ಸ್ಥಳೀಯ ಗೊಬ್ಬರದ ತಯಾರಿಕೆಯನ್ನು ಉತ್ತಮಪಡಿಸಲು ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುವುದು. 'ಕಂಪೋಸ್ಟ್' ಗೊಬ್ಬರದ ತಯಾರಿಕೆಯಲ್ಲಿಯೂ ರೈತರಿಗೆ ತರಬೇತಿಯನ್ನು ನೀಡಲಾಗುವುದು. ಈ ಹಂಚಿಕೆಗಳಿಗೆ ಕೇಂದ್ರಸರ್ಕಾರದವರು ೨೧೧೪ ಲಕ್ಷ ರೂಗಳನ್ನು ಮಂಜೂರು ಮಾಡಿರುವರು.

ಇತರ ಕಾರ್ಯಕ್ರಮಗಳು, ನೀರಾವರಿ ಭಾವಿಗಳನ್ನು ತೋಡುವಿಕೆ, ಪರ್ಶಿಯನ್ ಭಾವಿಗಳಿಗೆ ವಿದ್ಯುಚ್ಛಕ್ತಿ ಮತ್ತು ಡೀಸೆಲ್ ಪಂಪುಗಳನ್ನು ಒದಗಿಸುವುದು, ಮತ್ಸ್ಯಪಾಲನೆಯ ಅಭಿವೃದ್ಧಿ, ಸಸ್ಯಗಳ ರಕ್ಷಣೆ ಮತ್ತು ಭೂ ಸಾಗುವಳಿ ಇತ್ಯಾದಿಗಳಿಗೆ ಸಂಬಂಧಪಡುತ್ತವೆ.

ಕೇಂದ್ರ ಸರ್ಕಾರದವರಿಂದ ಈ ಕಾರ್ಯಗಳಿಗಾಗಿ ೯೨೮೩ ಲಕ್ಷ ರೂ. ಗಳ ಸಹಾಯ ದೊರೆಯುವುದು. ಅದರಲ್ಲಿ ೯೦ ಲಕ್ಷ ರೂ. ಗಳು ಸಾಲದರೂಪದಲ್ಲಿಯೂ ೨೯೩ ಲಕ್ಷ ರೂ ಗಳು ಸಹಾಯ ಧನದ ರೂಪದಲ್ಲಿಯೂ ಇರುವುವು.

ನೀರಾವರಿ ನಡೆಸುವ ಪಂಪುಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯನ್ನು ವಿಸ್ತರಿಸುವ ಕಾರ್ಯಕ್ರಮಕ್ಕಾಗಿ ೩೮ ಲಕ್ಷ ರೂ. ಗಳನ್ನು ಮಂಜೂರು ಮಾಡಲಾಗಿದೆ. ಬೇಸಾಯಗಾರರಿಗೆ ೨೫ ವಿದ್ಯುಚ್ಛಕ್ತಿ ಮತ್ತು ಡೀಸೆಲ್ ಪಂಪುಗಳನ್ನೂ, ಪರ್ಶಿಯನ್ ಚಕ್ರಗಳನ್ನೂ ಕಂತಿಗಳ ರೂಪದಲ್ಲಿ ಕೊಡಲು ರಾಜ್ಯ ಸರ್ಕಾರದವರಿಗೆ ೪.೪೦ ಲಕ್ಷ ರೂ ಗಳ ಸಾಲವನ್ನು ಒದಗಿಸಲಾಗಿದೆ ೧೧೦೮ ನೀರಾವರಿ ಬಾವಿಗಳ ರಚನೆಯು ನುತ್ತೊಂದು ಕಾರ್ಯಕ್ರಮಕ್ಕಾಗಿ ೩ ೩೦ ಲಕ್ಷ ರೂ ಗಳ ಸಾಲವನ್ನು ನೀಡಲಾಗಿದೆ. ಸಣ್ಣ ಸಣ್ಣ ಕೆರೆಕುಂಟೆಗಳ ದುರಸ್ತಿಗಾಗಿ ೧೦೩೬ ಲಕ್ಷ ರೂ. ಗಳ ಸಾಲವನ್ನೂ ಒದಗಿಸಲಾಗಿದೆ, ಈ ಯೋಜನೆಗಳಿಂದ ೧೧,೦೦೦ ಎಕರೆಗಳಷ್ಟು ಭೂ ಮಿಯು ಸಾಗುವಳಿಗೊಳಪಟ್ಟು ೩೧೬೩ ಟನ್ನುಗಳಷ್ಟು ಅಧಿಕ ಆಹಾರವು ಉತ್ಪನ್ನವಾಗುವುದು.

ಈ ಕಾರ್ಯಕ್ರಮದಲ್ಲಿ ಸೇರಿರುವ ಮತ್ಸ್ಯ ಪಾಲನೆ ಮತ್ತು ಅಭಿವೃದ್ಧಿಗೆ ೩ ೮೯ ಲಕ್ಷ ರೂ. ಗಳ ಸಾಲವನ್ನೂ, ೧.೫೪ ಲಕ್ಷ ರೂ. ಗಳ ಸಹಾಯ ಧನವನ್ನೂ ಮಂಜೂರು ಮಾಡಲಾಗಿದೆ.

ಸಾಗುವಳಿಯ ಕ್ಷೇತ್ರವನ್ನು ವಿಸ್ತಾರಗೊಳಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರದವರು, ಬಂಜರು ಭೂಮಿಯನ್ನು ಸಾಗುವಳಿಗೆ ಒಳಪಡಿಸುವ ಬೇಸಾಯಗಾರರಿಗೆ ಅವರು ಮಾಡುವ ವೆಚ್ಚದಲ್ಲಿ ನೂರಕ್ಕೆ ೫೦ ರಷ್ಟನ್ನು ಸಹಾಯ ಧನವನ್ನಾಗಿ ಕೊಡಲು ಉದ್ದೇಶಪಟ್ಟಿರುವರು. ಈ ಪ್ರಕಾರ ೬೦೦ ಎಕರೆಗಳು ಸಾಗುವಳಿಗೊಳಪಡುವುದೆಂದು ಅಂದಾಜು ಮಾಡಲಾಗಿದೆ ಅದಕ್ಕಾಗಿ ೧೪,೦೦೦ ರೂ. ಗಳ ಸಹಾಯ ಧನವನ್ನು ಮಂಜೂರು ಮಾಡಲಾಗಿದೆ

ಸಸ್ಯರೋಗ ಕೀಟನಾಶಕಗಳನ್ನು ಕಡಿಮೆ ದರದಲ್ಲಿ ರೈತರಿಗೆ ಹಂಚುವ ಸಲುವಾಗಿ ಮೈಸೂರು ರಾಜ್ಯ ಸರ್ಕಾರಕ್ಕೆ ೫೦,೦೦೦ ರೂ. ಗಳ ಸಹಾಯ ಧನವನ್ನು ಮಂಜೂರು ಮಾಡಲಾಗಿದೆ ಸುಮಾರು ೫೦,೦೦೦ ಎಕರೆಗಳಷ್ಟು ಭೂಮಿಗೆ ಈ ಕೀಟನಾಶಕಗಳ ಪ್ರಯೋಜನ ದೊರೆತು, ಅದರ ಪರಿಣಾಮವಾಗಿ ೧೧,೦೦೦ ಟನ್ನುಗಳಷ್ಟು ಆಹಾರ ಧಾನ್ಯಗಳು ಹಾಳಾಗದಂತೆ ಉಳಿದುಕೊಳ್ಳುವುದೆಂದು ಅಂದಾಜು ಮಾಡಲಾಗಿದೆ.

ನಿತ್ಯೋಪಯೋಗಿ ನೀರು

ಶಾರೀರಿಕ ಯಾತನೆಗಳು ನೀರ ಚಿಕಿತ್ಸೆಯಿಂದ ಗುಣಮುಖವಾಗುತ್ತವೆ!

ನೀರು ಸ್ವಾಭಾವಿಕವಾದ ಮತ್ತು ಫಲಕಾರಿಯಾದ ಚಿಕಿತ್ಸಕ ವಸ್ತುವೂ ಬಹುಪುರಾತನ ಕಾಲದಿಂದಲೂ ಒಳಕೆಯಲ್ಲಿದ್ದ ಅನೇಕ ವೈದ್ಯಕ್ರಿಯೆಗಳಲ್ಲಿ ಸಾಧಕವಾಗಿವೆ. ತಣ್ಣೀರು, ಬಿಸಿನೀರು, ಸುರಿಯುವ ನೀರು ಪ್ರಾಕ್ಷಿಪ್ತ, ಅಭ್ಯಂಜನ ಮೊದಲಾದ ವಿವಿಧರೀತಿಯ ಸ್ನಾನಗಳು ಆದಿಯಿಂದಲೂ ಪೂರ್ವಿಕರ ರೂಢಿಯಲ್ಲಿತ್ತು ಎಂಬ ಅಂಶವು ತಿಳಿದ ವಿಷಯವೇ ಆಗಿದೆ. ಭೂಗರ್ಭ ಸಂಶೋಧಕರು ಸರ್ವಫಲಕರಣೆಗಳಿಂದ ಕೂಡಿದ ಪರಿಪೂರ್ಣವಾದ ಪೂರ್ವಕಾಲದ ಜಲ ಚಿಕಿತ್ಸಾ ಸ್ಥಾಪನೆಗಳನ್ನು ಬೆಳಕಿಗೆ ತಂದಿರುತ್ತಾರೆ ಪ್ರಾಚೀನವಾದ ಈ ಜಲ ಚಿಕಿತ್ಸಾ ಕ್ರಮದ ಅಭ್ಯಾಸಕ್ಕಾಗಿ ಈ ನವೀನ ಕಾಲದಲ್ಲಿ ನೂತನ ಉಪಕರಣಗಳೂ ಮತ್ತು ವಿಧಾನಗಳೂ ಬಳಕೆಗೆ ಬಂದಿವೆ. ಆದರೂ ಕೆಲವು ಪ್ರಾಚೀನವೂ ಸುರಿತದ್ದೂ ಆದ ಕ್ರಮಗಳು ಕುಟುಂಬದ ಉಪಯೋಗಕ್ಕೆ ಅತ್ಯತ್ತಮವಾಗಿದೆ. ಯಾಕೆಂದರೆ ಇವುಗಳು ಫಲಕಾರಿಯಾಗುವಂತೆ ಇವುಗಳ ಸರಳತೆಯೂ ಮತ್ತು ಅತಿ ಕೇವಲ ಅಲ್ಪ ವಸ್ತುಗಳು ಅವಶ್ಯವಾಗಿರುವುದೇ ಕಾರಣವಾಗಿದೆ. ವಿವಿಧ ಪ್ರಮಾಣದಲ್ಲಿ ಉಷ್ಣಾಂಶವನ್ನು ಹೊಂದಿದ ಜಲವನ್ನು ವಿವಿಧ ರೀತಿಯಿಂದ ಚರ್ಮಕ್ಕಾಗಲಿ, ಸರ್ವಾಂಗ ಸ್ನಾನಕ್ಕಾಗಲಿ, ಯಾವುದಾದರೊಂದು ಅಂಗಸ್ಥಳಕ್ಕಾಗಲಿ ಪ್ರಯೋಗಿಸಿಕೊಳ್ಳುವುದರಿಂದ ರಕ್ತಪರಿಚಲನೆ, ನರಗಳು ಜೀತನಗೊಳ್ಳುವಿಕೆ, ಜೀರ್ಣ ರಸೋತ್ಪತ್ತಿ, ಮಾಂಸಖಂಡಗಳ ಸಂಕೋಚನ ವಿಕಾಸಗಳಿಗೆ ಸಂಭವಿಸಿದ ಅನೇಕ ಬದಲಾವಣೆಗಳು ತಕ್ಷಣದಲ್ಲೇ ಉಂಟಾಗುವುವು

ವಿವಿಧ ಜಲ ವಿಧಿಗಳಿಂದ ಪ್ರಾಣಧಾರಣೆಗೆ ಅವಶ್ಯಕವಾದ ಕಾರ್ಯಗಳನೇಕವನ್ನು ಪರಿಣಾಮಕಾರಿಯಾಗುವ ರೀತಿಯಲ್ಲಿ ಉತ್ತೇಜನಗೊಳಿಸಬಹುದು, ಚೇತನಗೊಳಿಸಿಕೊಳ್ಳಬಹುದು. ಉದ್ವೇಗಗೊಳಿಸಬಹುದು, ನಿಧಾನಗೊಳಿಸಬಹುದು.

ನೀರಿನ ಉಪಯೋಗದಿಂದ ನಡೆಸಬಹುದಾದ ಕೆಲವು ಚಿಕಿತ್ಸಾ ಕ್ರಮದ ಜ್ಞಾನದಿಂದ ಬಹಳಮಟ್ಟಿನ ಯಾತನೆಯನ್ನು ನಿವಾರಿಸಬಹುದಲ್ಲದೆ ಅಲ್ಪವಾಗಿ ತೋರಿದರೂ ಪ್ರಮಾದಕರಗಳಾದ ಅನೇಕ ವ್ಯಾಧಿಗಳನ್ನು ತಡೆಗಟ್ಟಬಹುದು. ಇಂಥಾ ಯಾವ ಉಪಾಯವೂ ಇಲ್ಲದೆ ಮನೆಯಲ್ಲೇ ನಡೆಸಬಹುದಾದ ಚಿಕಿತ್ಸೆಗಳು ಬೇರಾವುವೂ ಇಲ್ಲವೆಂದರೂ ಅತಿಶಯೋಕ್ತಿಯಾಗಲಾರದು.

ಅಂಗಾಂಗವೆಲ್ಲವೂ ಆರೋಗ್ಯಸ್ಥಿತಿಯಲ್ಲಿರಬೇಕಾದರೆ ಪಂಶುದ್ಧ ರಕ್ತಚಲನೆಯೂ ಸಾತಿರಿಕ್ತಗಳಿಲ್ಲದ ಪರಿಚಲನೆಯು ಅವಶ್ಯಕ. ರಕ್ತಪರಿಚಲನೆಗೆ ಅಡ್ಡಿಯುಂಟಾದರೆ ರಕ್ತವೇ ಮಲಿನವಾಗುತ್ತದೆ. ಉದಾಹರಣೆಗಾಗಿ ಒಂದು ಬೆರಳನ್ನು ಒಂದು ಕಟ್ಟಿನಿಂದ ಬಿಗಿಯಾಗಿ ಬಂಧಿಸಿ (ಕಟ್ಟಿ) ರಕ್ತ ಚಲನೆಗೆ ಅಡ್ಡಿಪಡಿಸಿದರೆ ಒಡನೆಯೇ ಬೆರಳು ನೀಲವರ್ಣವನ್ನು ತಾಳುವುದು ಇದರಿಂದ ಆ ಪ್ರದೇಶದ ರಕ್ತವು ಮಾಲಿನ್ಯವನ್ನು ಹೊಂದಿರುವುದು ವ್ಯಕ್ತವಾಗುತ್ತದೆ.

ನಮ್ಮ ಶರೀರದ ಸಾಮಾನ್ಯ ರಚನೆಯಲ್ಲಿ ಆಹಾರಕ್ಕಿಂತಲೂ ನೀರಿಗೇ ಹೆಚ್ಚಿನ ಪ್ರಾಮುಖ್ಯತೆಯಿದೆ. ನೀರಿನಿಂದ ಅನೇಕ ಸ್ವಾಭಾವಿಕವೂ ಸುಲಭ ಸಾಧ್ಯವೂ ಆದ ಚಿಕಿತ್ಸೆಗಳನ್ನು ನಡೆಸಬಹುದಾದುದರಿಂದ ನೀರಿಗೆ ಪ್ರಾಮುಖ್ಯ ದೊರೆತಿದೆ ನೀರನ್ನು ಸಾಮಾನ್ಯ ಪಾನೆ ರೀತಿಯಿಂದಲೂ ವೈದ್ಯ ರೀತಿಯಿಂದಲೂ ಬಳಸಬಹುದಾದ ವಿಧಿಗಳನ್ನು ತಿಳಿಯಬೇಕು. ಸಾಮಾನ್ಯ ವ್ಯಕ್ತಿಯ ನೂರಂಬತ್ತು ಪೌಂಡುಗಳ ದೇಹದ ಒಟ್ಟು ತೂಕದಲ್ಲಿ ನೂರ ಏಳು ಪೌಂಡುಗಳಷ್ಟು ನೀರಿನ ಭಾಗವಾಗಿರುತ್ತದೆ ಉಳಿದ ಕೇವಲ ಸಲಕತ್ತ ಮೂರು ಪೌಂಡುಗಳಲ್ಲಿ ಸಸಾರ ಜನಕ ವಸ್ತುಗಳು, ಮೇದಸ್ಸು, ಖನಿಜ, ಲೋಹ ಸಂಬಂಧವಾದ ವಸ್ತುಗಳು, ಇತರ ವಸ್ತುಗಳು ಸೇರಿಕೊಂಡಿವೆ.

ಬಿಸಿ ನೀರಿನಿಂದ ಶಾಖ ಕೊಡುವುದು, ಸುಖೋಷ್ಣವಾದ ನೀರಿನಲ್ಲಿ ಪಾದಸ್ನಾನ, ಶಾಖ ಬಂಧನ ಕ್ರಿಯೆ, ಉಣ್ಣೆಯ ಕೂದಿಕೆಗಳಿಂದ ಉಪಚರಣೆ, ತೇವದ ಬಟ್ಟೆಯಿಂದ ಉಪಚರಣೆ, ಸಿಟ್ಟೆಬಾತ್ (ಸ್ನಾನ), ಹವೆಯ ಅಥವಾ ನೀರಾವಿಯ ಸ್ನಾನ, ಲಡಿಗೆ ಉಪ್ಪಿನಿಂದ ವೈಬ್ರೆಜ್ಜಿ ಸ್ನಾನ, ಮುಂತಾದುವು ಈಗ ಬಳಕೆಯಲ್ಲಿರುವ ಫಲಕಾರಿಯಾದ ನೀರಿನ ಚಿಕಿತ್ಸೆಗಳು.

(ಆಧಾರದಿಂದ)

—"ಭಾಗ್ಯ ಲಕ್ಷ್ಮಿ".

ಸಿಂಡಿಕೇಟ್ ಬೇಂಕನ್ನೇ ಜನರು ಏಕೆ ಆರಿಸುತ್ತಾರೆ?

- 31 ವರ್ಷಗಳ ಸೇವೆಯಲ್ಲಿ 11 ಕೋಟಿಗೂ ಮಿಕ್ಕಿದ ಬಂಡವಾಳ
- ಪ್ರಾಮುಖ್ಯ ಕೇಂದ್ರಗಳಲ್ಲಿ 96 ಶಾಖೆಗಳು
- ಕರ್ನಾಟಕದಲ್ಲೇ 59 ಶಾಖೆಗಳು
- ಹಳ್ಳಿ-ಹಳ್ಳಿಗಳಲ್ಲೂ ಬೇಂಕಿಂಗ್ ಸೌಕರ್ಯಗಳು
- ಸ್ಪಿಗ್ಮ್, ಕ್ಯುಮುಲೇಟಿವ್ ಸಂತಹ ಆಕರ್ಷಕ ಯೋಜನೆಗಳು
- ವಿದ್ಯಾರ್ಥಿಗಳಿಗೆ ವಿಶೇಷ ಅನುಕೂಲತೆಗಳು
- ಉತ್ತಮ ಆಡಳಿತ ಮತ್ತು ನೌಕರ ವರ್ಗ
- ಯೋಗ್ಯ ಭದ್ರತೆ, ಪ್ರಮಾಣಿಕತೆ ಮತ್ತು ಕ್ಲಿಷ್ಟತೆಯ ವ್ಯವಹಾರ

ಸಿಂಡಿಕೇಟು ಜನಪ್ರಿಯವಾದ ಬೇಂಕು

ಡಾ॥ ಟಿ. ಎಂ. ಎ. ಪೈ, ಮೆನೇಜಿಂಗ್ ಡೈರೆಕ್ಟರ್.

ಟಿ. ಎ. ಪೈ, ಜನರಲ್ ಮೆನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ.

The Canara Industrial & Banking Syndicate, Ltd.,

UDIPI.

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಸರ್ಚಾರ್ಜ್ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಖಾತೆ ಮಾಡಬಹುದು.

ಮೆನೇಜರ್.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೧೮-೭-೧೯೫೭	೪೫

ಎರಡನೇ ನೌಕಾಂಗಣ

ರಾಜ್ಯದ ಮಜೂರ ಮಂತ್ರಿಗಳಾದ ಶ್ರೀ ಬಿ. ವೈಕುಂಠ ಬಾಳಿಗರು ಹುಬ್ಬಳ್ಳಿಯಲ್ಲಿ ಮಾತನಾಡುತ್ತಾ ಭಾರತ ಸರಕಾರವು ರಚಿಸಬೇಕೆಂದಿರುವ ಎರಡನೇ ನೌಕಾಂಗಣವನ್ನು ಮೈಸೂರು ರಾಜ್ಯದ ಕಾರವಾರದಲ್ಲಿ ನೆಲೆಗೊಳಿಸಬೇಕೆಂದು ಸಕಾರಣವಾಗಿ ವಿವರಿಸಿದರಲ್ಲದೆ, ಆ ಬಗ್ಗೆ ಪ್ರಜಾಭಿಪ್ರಾಯವು ರೂಪುಗೊಂಡು ಕೇಂದ್ರ ಸರಕಾರದ ಮೇಲೆ ತಕ್ಕ ಪ್ರಭಾವವು ಬೀರಲ್ಪಡುವಂತಾಗಬೇಕೆಂದು ಸಹ ಆಶಿಸಿದರು. ಭಾರತಕ್ಕೆ ಸದ್ಯಕ್ಕೆ ಪೂರ್ವ ಕರಾವಳಿಯ ವಿಶಾಖಪಟ್ಟಣದಲ್ಲೊಂದು ನೌಕಾಂಗಣವಿದೆ-ಎಂದರೆ ಈ ನೌಕಾಂಗಣವನ್ನು ಪಡೆದ ತ್ರೀಯ-ಸ್ಸು ಆಂಧ್ರ ಪ್ರದೇಶಕ್ಕೆ ಸಲ್ಲುತ್ತದೆ. ಎರಡನೇ ನೌಕಾಂಗಣದ ರಚನೆಗಾಗಿ ಹಲವಾರು ಹೆಸರುಗಳು ಕೇಳಿಬರುತ್ತಿದ್ದು ಅವುಗಳಲ್ಲಿ ಫೇಂಖಾಲೀಪ, ಬಂಗಾಳಾ, ಪರದೀಪ ಮತ್ತು ಚಿಲ್ಕ (ಒಡಿಸ), ಆಂಧ್ರ ಪ್ರದೇಶದ ನೆಲ್ಲೂರಿನ ತೀರದ ಹಳ್ಳಿಯೊಂದು, ಮದ್ರಾಸಿನ ಸೇತುಸಮುದ್ರ, ಕೇರಳದ ಕೊಚ್ಚಿ, ಮುಂಬಯಿಯ ಕಾಂಡ್ಲ, ಕರ್ನಾಟಕದ ಭಟ್ಕಳ ಮತ್ತು ಕಾರವಾರಗಳು ಮುಖ್ಯ ಸ್ಥಳಗಳಾಗಿವೆ. ಇಂಗ್ಲೆಂಡಿನಿಂದ ಇದೇ ೧೧ನೇ ತಾರೀಕಿನಂದು ಹೊಸ ದೆಹಲಿಗೆ ಆಗಮಿಸಿರುವ ಪರೀಕ್ಷಾ ಮಂಡಳವು ಇವೆಲ್ಲ ಕೇಂದ್ರಗಳನ್ನು ಮೂರು ವಾರಗಳ ಅವಧಿಯಲ್ಲಿ ಸಂದರ್ಶಿಸಿ ತನ್ನ ಪ್ರಾಸ್ತಾವಿಕ ಶಿಫಾರಸುಗಳನ್ನು ಒಪ್ಪಿಸಲಿಕ್ಕಿದೆ. ಈ ಸಮಿತಿಯು ಸಿಫಾರಸನ್ನು ಪರ್ಯಾಲೋಚಿಸಿ, ಮುಂದಿನ ಕ್ರಮಗಳನ್ನು ತಜ್ಞರ ಮುಖ್ಯ ಮಂಡಳವು ತೆಗೆದುಕೊಳ್ಳಲಿಕ್ಕಿದೆ. ಮುಂದಿನದಿನ ಸದಸ್ಯರ ಕಾರ್ಯಕ್ರಮ ಪಟ್ಟಿಯಂತೆ ಇದೇ ೧೯ರಂದು ಅವರು ಕರ್ನಾಟಕದ ಮಂಗಳೂರು ಬಂದರವನ್ನು ಸಂದರ್ಶಿಸುವರು; ಮಾರುದಿನ ಭಟ್ಕಳವನ್ನೂ ತಾ. ೨೧ರಂದು ಕಾರವಾರವನ್ನೂ ಪರಿಶೀಲಿಸಿ ಮುಂದೆ ಸಾಗುವರು. ಕೊಲೊಂಬೋ ಯೋಜನೆಯ ಪ್ರಕಾರ ಬ್ರಿಟನಿನ ಸಹಕಾರದಿಂದ ರಚಿಸಲಾಗುವ ಈ ನೌಕಾ ನಿರ್ಮಾಣ ಕೇಂದ್ರವನ್ನು ಕರ್ನಾಟಕದಲ್ಲಿಯೇ ಏಕೆ ರಚಿಸಬೇಕು ಎಂಬ ಬಗ್ಗೆ ಸಾಕಷ್ಟು ವಿವರಗಳನ್ನು ಕಲೆಹಾಕಲಾಗಿದೆ: ತಾತ್ವಿಕವಾಗಿ ಹೇಳುವುದಾದರೆ ಪೂರ್ವಕರಾವಳಿಯಲ್ಲಿ ಈಗಾಗಲೇ ಒಂದು ನೌಕಾಂಗಣವಿರುವುದರಿಂದ ಎರಡನೇ ನೌಕಾಂಗಣವು ಪಡುಗಡಲು ತೀರದಲ್ಲಿರುವುದು ಅಪೇಕ್ಷಣೀಯ. ಪಡುಗಡಲ ತೀರದಲ್ಲಿ ಕಾರವಾರಕ್ಕೆ ಮುಖ್ಯ ಪ್ರತಿಸ್ಪರ್ಧಿಯಾಗಿರುವುದು ಕೊಚ್ಚಿ-ಕೇರಳ ಸರಕಾರವು ತನ್ನ ರಾಜ್ಯದಲ್ಲಿ ಹಬ್ಬಿರುವ ನಿರುದ್ಯೋಗ ನಿವಾರಣೆಯ ದೃಷ್ಟಿಯಿಂದ ಆದರೂ ಕೊಚ್ಚಿಯಲ್ಲಿಯೇ ಎರಡನೇ ನೌಕಾಂಗಣವನ್ನು ನೆಲೆಗೊಳಿಸಬೇಕೆಂದು ಒತ್ತಾಯಿಸುತ್ತಲಿದೆ. ಆದರೆ ಮೈಸೂರು ಸರಕಾರದ ಕೇಳಿಕೆಯು ಹೆಚ್ಚು ನ್ಯಾಯಪೂರ್ಣವಾದುದಾಗಿದೆ. ನಿರುದ್ಯೋಗ ನಿವಾರಣೆಗೆ ನೌಕಾಂಗಣವು ಕೆಲಮಟ್ಟಿಗೆ ಸಹಾಯಮಾಡುವುದು ಸುಳ್ಳಲ್ಲ. ಆದರೆ ನಿರುದ್ಯೋಗವು ಕೇರಳರಾಜ್ಯಕ್ಕೆ ಮಾತ್ರ ಸೀಮಿತವಾದ ಸಮಸ್ಯೆಯಾಗಿರದೆ, ಸಾರ್ವತ್ರಿಕ ಸ್ವರೂಪದ ಪ್ರಶ್ನೆಯಾಗಿದ್ದು, ಕರ್ನಾಟಕವು ಇದಕ್ಕೆ ಅಪವಾದವಲ್ಲ. ಇಲ್ಲಿ ಕೂಲಿಕಾರರು ಎಷ್ಟು ಬೇಕಾದರೂ ಕೆಲಸಕ್ಕೆ ಸಿಗುತ್ತಾರೆ. ಇನ್ನು ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯ ದೃಷ್ಟಿಯಿಂದ ಅವಲೋಕಿಸಿದ್ದಾದರೆ, ಕಾರವಾರದಷ್ಟು ಹಿಂದುಳಿದ ಸ್ಥಳವನ್ನು ನಾನೆಲ್ಲಿಯೂ ಕಾಣಲಾರೆವು. ಕೊಚ್ಚಿಯು ಈಗಾಗಲೇ ಮಹಾ ಬಂದರವಾಗಿ ಹೆಸರು ಪಡೆದಿದೆ. ಮುಂಬಯಿ ರಾಜ್ಯದ ಕಾಂಡ್ಲವೂ ಪ್ರಬುದ್ಧ ಬಂದರವಾಗಿದೆ. ಈ ಬಂದರು ಸ್ಥಳಗಳಲ್ಲಿ ವ್ಯಾಪಾರ ವಹಿವಾಟಿನ ಗದ್ದಲ ವಿಶೇಷವಾಗಿರುವುದರಿಂದ ನೌಕಾಂಗಣದರಚನೆಯ ಸಲುವಾಗಿ ಕರ್ನಾಟಕದ ಬಂದರು ಸ್ಥಳಗಳನ್ನೆ ಪರಿಶೀಲಿಸುವುದು ಸೂಕ್ತ. ಈ ದೃಷ್ಟಿಯಿಂದ ನೋಡುವುದಾದರೂ ಕಾರವಾರ ಅಥವಾ ಭಟ್ಕಳಗಳೆ ಯೋಗ್ಯತೆಗಣನೀಯವಾದುದಾಗಿದೆ. ಅಲ್ಲಿ ಸದ್ಯಕ್ಕೆ ವಿಮಾನಗಾರಿಕೆಯಲ್ಲದೆ ಬೇರೇನೂ ಗದ್ದಲವಿಲ್ಲ—ಈ ವಿಮಾನಗಾರಿಕೆ ಯಾದರೂ ದಕ್ಷಿಣ ಕನ್ನಡ ಜಿಲ್ಲೆಯಷ್ಟಿದ್ದಷ್ಟು ಭರಾಟೆಯದಲ್ಲ. ನೌಕಾಂಗಣಕ್ಕೆ ಒಳ್ಳೆಯ ಬಂದರ ಬೇಕೆನ್ನುವುದು ಸತ್ಯ. ಕಾರವಾರವು ಮಲ್ಪೆಗಿಂತಲೂ ಹೆಚ್ಚು ಭದ್ರವಾದ ಮತ್ತು ಅದಕ್ಕಿಂತಲೂ ಉತ್ತಮವಾಗಿ ಪ್ರಕೃತಿದೇವಿಯು ಸಿದ್ಧಗೊಳಿಸಿದ ಬಂದರವೆಂಬುದನ್ನು ನಿರ್ವಿವಾದವಾಗಿ ಒಪ್ಪಿಕೊಳ್ಳಲಾಗಿದೆ ಸಮೀಪದ ಗೋವೆಯಲ್ಲದಿದ್ದರೆ, ಅದು ಇಷ್ಟರಲ್ಲೆ ಪ್ರಬುದ್ಧ ಬಂದರವಾಗಿ ರೂಪುಗೊಳ್ಳುತ್ತಿತ್ತೆಂಬುದು ಸ್ಪಷ್ಟ. ಗೋವೆಯ ದೆಸೆಯಿಂದ ಕಾರವಾರಕ್ಕೆ ಸಿಗುವ ಸ್ಥಾನಮಾನ ಸಿಕ್ಕದೆ, ಮಲ್ಪೆಯನ್ನು ಉದಾರದೃಷ್ಟಿಯಿಂದ ನೋಡುವವರಿಲ್ಲದೆ, ಈಗ ಮಂಗಳೂರನ್ನು ಪ್ರಬುದ್ಧ ಬಂದರವಲ್ಲ ಸರ್ವಋತು ಬಂದರವಾಗಿ ಮಾಡಲು ಪಣಿಯ ಹತ್ತಿರ ಖಡಕವಾಸ್ಸಾದಲ್ಲಿ ಇಂಜಿನಿಯರುಗಳು ಪ್ರಯೋಗಶಾಲೆಯೊಳಗೆ ಕಸ್ತಿಮಾಡುತ್ತಿದ್ದಾರೆ; ಅಂತೂ ಕನ್ನಡನಾಡಿನ ದೌರ್ಭಾಗ್ಯವಿದು. ಇರಲಿ—ನೌಕಾಂಗಣ ಘಟನೆಯು ವಿಷಯದಲ್ಲಾದರೂ ದಕ್ಷಿಣ ಕನ್ನಡದವರು ಮುಖ್ಯವಾಗಿ ಮಂಗಳೂರಿನವರು ಮೇಲಾಟವಾಡದೆ, ಭಟ್ಕಳ ಅಥವಾ ಕಾರವಾರಗಳಿಗೆ ಛಾನ್ಸನ್ನು ಬಿಟ್ಟುಕೊಡುವುದು ಉಚಿತವೆಂದು ತೋರುತ್ತದೆ

ಕಾರವಾರದಲ್ಲಿ ಭಾರತದ ನೌಕಾಪಡೆಯ ಕೇಂದ್ರವನ್ನು ಸ್ಥಾಪಿಸಬೇಕೆಂಬ ಸೂಚನೆಯೊಂದು ಮುಖಂಡರ ಬಾಯಿಂದ ಬಂದುದುಂಟು— ಈ ಉದ್ದೇಶದ ಮಟ್ಟಿಗೆ ಭಟ್ಕಳಕ್ಕಿಂತ ಕಾರವಾರವೇ ಶ್ರೇಷ್ಠವಾದುದೆಂಬುದು ನಿಜ. ಆದರೆ ನೌಕಾಂಗಣ ರಚನೆಯ ವಿಷಯವೀಗ ಪರಿಶೀಲನೆಯಲ್ಲಿರುವುದರಿಂದ ನೌಕಾಪಡೆಯ ಖಾಣ್ಯವಾಗಿ ಕಾರವಾರವನ್ನು ರೂಪಿಸುವ ಹಳೆಯ ಸೂಚನೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಬಂದ ಸಂದರ್ಭವನ್ನು ಕಾರವಾರವು ಕಳೆದುಕೊಳ್ಳಬೇಕಾಗಿಲ್ಲ. ಹಡಗಗಳ ರಚನೆಗೆ ಏನೆಲ್ಲ ಬೇಕೊ ಅವೆಲ್ಲ ಕಾರವಾರದಲ್ಲಿ ಲಭ್ಯವಿವೆ ಎನ್ನಬಹುದು. ದಕ್ಷಿಣ ಕನ್ನಡಕ್ಕಿಂತಲೂ ಉತ್ತರ ಕನ್ನಡ ಜಿಲ್ಲೆಯೇ ಅರಣ್ಯ ಸಂಪತ್ತಿಗೆ ಪ್ರಸಿದ್ಧವಾಗಿದೆ. ದಾಂಡೇಲಿ, ಯಲ್ಲಾಪುರಗಳಂಥ ಕೇಂದ್ರಗಳು ಅರಣ್ಯದ ಮೋಪು, ಕಟ್ಟಿಗೆಗಳ ವ್ಯಾಪಾರಕ್ಕೆ ವಿಖ್ಯಾತವಾಗಿವೆ. ಜಲಶಕ್ತಿಯನ್ನು ಉಪಯೋಗಿಸಿ ಧಾರಾಳವಾಗಿ ವಿದ್ಯುತ್ತನ್ನು ಕಾರವಾರವು ಪಡೆಯಲಿಕ್ಕಿದೆ. ಗೆರುಸೊಪ್ಪೆಯ ಜೋಗದಲ್ಲಿರುವ ಈಗಿನ ಕೇಂದ್ರದಿಂದಲ್ಲದೆ, ಶರಾವತಿ ಯೋಜನೆಯ ಪರಿಣಾಮವಾಗಿಯೂ ವಿದ್ಯುಚ್ಛಕ್ತಿ ಪೂರೈಕೆಯು ಎಷ್ಟು ಬೇಕಾದರೆ ಅಷ್ಟು ಆಗಬಲ್ಲುದು. ಹಡಗ ರಚನೆಗೆ ಬೇಕಾದ ಮರಮಟ್ಟುಗಳಲ್ಲದೆ ಉಕ್ಕು ಸಹ ನಮ್ಮ ರಾಜ್ಯದಲ್ಲಿ ಉತ್ಪಾದನೆ ಹೊಂದುತ್ತದೆ. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯು ಈಗ ವಿಸ್ತರಣೆಗೊಳ್ಳುತ್ತಿದೆ; ಇದನ್ನು ಎಷ್ಟು ವಿಸ್ತರಿಸಿದರೂ ವಿಸ್ತರಿಸಬಹುದಾದಷ್ಟು ಖನಿಜ ಸಂಪತ್ತು ನಮ್ಮಲ್ಲಿದೆ. ಕಾರ್ಖಾನೆಯನ್ನು ನೆಲೆಗೊಳಿಸುವ ಸಲುವಾಗಿ ಬೇಕಾದ ಭೂಮಿಗೆ ಹೆಚ್ಚಿಗೆ ಕ್ರಯ ಕೊಡಬೇಕಾದ ಪರಿಸ್ಥಿತಿ ನಮ್ಮಲ್ಲಿಲ್ಲ. ಕೊಚ್ಚಿಯಂಥ ಸ್ಥಳಗಳು ಈಗಾಗಲೇ ಪ್ರಮುಖ ವ್ಯಾಪಾರ ಕೇಂದ್ರಗಳಾಗಿರುವದೆಸೆಯಿಂದ ಅಲ್ಲಿ ತುಸು ಜಾಗದ ಬೇಕಾದರೂ ರಾಶಿ ರಾಶಿಯಾಗಿ ಹಣ ಸುರುವಬೇಕಾಗಿ ಬರಬಹುದು. ಕಾರವಾರದಲ್ಲಾದರೆ ಹಾಗೆ ಹಣವನ್ನು ವ್ಯಯಿಸುವ ಅಗತ್ಯವೇ ಬಾರದು. ಸಾರಿಗೆ ಸಂಬಂಧದ ದೃಷ್ಟಿಯಿಂದಲೂ ಕಾರವಾರದ ಬೇಡಿಕೆ ಸಮರ್ಥನೀಯವಿದೆ— ಏಕೆಂದರೆ ಮರದ ತೊಲೆಗಳನ್ನು ನಿರಾಯಾಸವಾಗಿ ಸಾಗಿಸಿಕೊಂಡು ಬರಬಹುದಾದ ಜಲಮಾರ್ಗಗಳು ಈ ಪಗರಕ್ಕೆ ಇವೆ. ಉಕ್ಕಿನ ಸರಂಜಾಮು ಸಹಕರಣ ಸಮಸ್ಯೆವೆನಿಸಲಾರದು. ಅಂತೂ ಎಲ್ಲ ದೃಷ್ಟಿಯಿಂದಲೂ ಈ ಕರ್ನಾಟಕದ ಬೇಡಿಕೆಯನ್ನು ತೀವ್ರವಾಗಿ ಪರ್ಯಾಲೋಚಿಸದೆ ಇರಲಾಗುವುದಿಲ್ಲ. ಭಾರತ ಸರಕಾರವು ನಿಜವಾಗಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡಿರುವುದಾದರೆ, ಕಾರವಾರದಲ್ಲಿ ನೌಕಾಂಗಣ ರಚನೆಗೆ ಅದು ಮುಂದಾಗಲೇ ಬೇಕು. ತಜ್ಞರ ಸಮಿತಿಯಾದರೂ ಕಾರವಾರಕ್ಕಿರುವ ಅನುಕೂಲತೆಗಳನ್ನು ಮರೆಯಲಿಕ್ಕಿಲ್ಲವೆಂದು ನಂಬುತ್ತೇವೆ

ಸಂಕ್ಷಿಪ್ತ ಸುದ್ದಿಗಳು

ಹೈಕೋರ್ಟಿನ ನ್ಯಾಯಮೂರ್ತಿಗಳು

ಕೇಂದ್ರ ಸರಕಾರವು ರಾಜ್ಯಸರಕಾರದ ಸಿಫಾರಸಿನ ಮೇರೆಗೆ ಶ್ರೀ ಸೋಮನಾಥ ಅಯ್ಯರ್ ಮತ್ತು ಶ್ರೀ ಎಸ್. ಎಸ್. ಮಳೀಮಠ ಇವರನ್ನು ಮೈಸೂರು ಹೈಕೋರ್ಟಿನ ನ್ಯಾಯಾಧೀಶರನ್ನಾಗಿ ನೇಮಿಸಿದೆ. ಈ ಈರ್ವರು ಹೊಸ ನ್ಯಾಯಮೂರ್ತಿಗಳು ಇದೇ ತಿಂಗಳ ೧೧ನೆ ತಾರೀಕಿನಂದು ತಂಮ ಅಧಿಕಾರವನ್ನು ಸ್ವೀಕರಿಸಿಕೊಂಡರು.

ಮೈಸೂರಿನ ಖಾಸಗಿ ಶಾಲೆಗಳು

ಮೈಸೂರು ರಾಜ್ಯದ ಹಣಕಾಸಿನ ಪರಿಸ್ಥಿತಿಯು ಆಷ್ಟೊಂದು ಸಮಾಧಾನಕರವಾಗಿಲ್ಲದಿರುವುದರಿಂದ ಸರಕಾರವು ಖಾಸಗಿ ಶಾಲೆಗಳನ್ನು ವಹಿಸಿಕೊಳ್ಳಲು ಸಿದ್ಧವಾಗಿಲ್ಲ. ಸದ್ಯ ಶಿಕ್ಷಣ ವಿಭಾಗಕ್ಕೆ ೧೨ ಕೋಟಿ ರೂಪಾಯಿಗಳನ್ನು ವೆಚ್ಚಮಾಡುತ್ತಿದ್ದು, ಈ ಪರಿಮಾಣಕ್ಕೆ ತಲೂ ಹೆಚ್ಚು ವೆಚ್ಚಮಾಡುವುದು ಅಸಾಧ್ಯವೆಂದು ಅರ್ಥ ಮಂತ್ರಿ ಶ್ರೀ ಟಿ ಮರಿಯಪ್ಪನವರು ಮಂಗಳವಾರದ ಚರ್ಚೆವೇಳೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಹಡಗು ನಿರ್ಮಾಣ ಕೇಂದ್ರ

ಭಾರತದಲ್ಲಿ ಪ್ರಕೃತ ಆಂಧ್ರ ಪ್ರದೇಶದ ನಿರಾಖ ಪಟ್ಟಣದಲ್ಲಿ ಒಂದು ಹಡಗು ಕಟ್ಟುವ ಕೇಂದ್ರವಿದೆ. ಮೈಸೂರು ರಾಜ್ಯದ ಕರಾವಳಿಯಲ್ಲಿ ಇನ್ನೊಂದು ಇಂತಹ ರಚನಾ ಕೇಂದ್ರವನ್ನು ತೆರೆಯುವ ಆಲೋಚನೆಯಿದೆ. ಈ ಬಗ್ಗೆ ವಿದೇಶಿ ತಜ್ಞರ ಪರಿಶೀಲನಾ ಸಮಿತಿಯು ತಾ. ೧೯ರಂದು ಮಂಗಳೂರನ್ನು, ೨೦ರಂದು ಭಟ್ಕಳವನ್ನು ೨೧ಕ್ಕೆ ಕಾರವಾರವನ್ನು ಸಂದರ್ಶಿಸುವರು. ಮೈಸೂರಿನ ಮಜೂರ ಮಂತ್ರಿ ಶ್ರೀ ಬಾಳಿಗರು ಕಾರವಾರದಲ್ಲಿ ಹಡಗ ನಿರ್ಮಾಣ ಕೇಂದ್ರಕ್ಕೆ ಅಗತ್ಯ ಬೇಕಾದ ಮಂ, ಉಕ್ಕು, ವಿದ್ಯುಚ್ಛಕ್ತಿ ಮತ್ತು ಸಾರಿಗೆ ಅನುಕೂಲತೆಗಳೆಲ್ಲವೂ ಇರುವುದರಿಂದ ಇದೇ ಅತ್ಯುತ್ತಮ ಸ್ಥಳವೆಂದು ಅಭಿಪ್ರಾಯಪಟ್ಟಿದ್ದಾರೆ.

ನೂತನ ಮುಖ್ಯ ನ್ಯಾಯಾಧೀಶರು

ಮೈಸೂರಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಆರ್. ವೆಂಕಟ್ರಾಮಯ್ಯನವರು ತಮ್ಮ ಸೇವೆಯಿಂದ ನಿವೃತ್ತರಾಗಿರುವುದರಿಂದ ಅವರ ಸ್ಥಾನಕ್ಕೆ ಈಗ ಕಲ್ಕತ್ತ ಹೈಕೋರ್ಟಿನ ನ್ಯಾಯಾಧೀಶ ಸುಬೋಧ ದಾಸ್ ಗುಪ್ತರನ್ನು ನೇಮಿಸಲಾಗಿದೆ. ನಿಯೋಜಿತ ನ್ಯಾಯಾಧೀಶರು ಅಧಿಕಾರ ಸ್ವೀಕಾರ ಮಾಡುವ ತನಕ ಶ್ರೀ. ನಿಟ್ಟೂರು ಶ್ರೀನಿವಾಸ ರಾವ್ ಅವರು ಪ್ರಧಾನ ನ್ಯಾಯಾಧೀಶರಾಗಿ ಅಧಿಕಾರ ವಹಿಸಿರುತ್ತಾರೆ.

ರೈತರಿಗೆ ಟ್ರಾಕ್ಟರುಗಳು

ಪ್ರಚಲಿತ ಆರ್ಥಿಕ ವರ್ಷದಲ್ಲಿ ಮೈಸೂರು ರಾಜ್ಯದ ರೈತರಿಗೆ ಹೊಸ ಟ್ರಾಕ್ಟರಗಳನ್ನು ಬಾಡಿಗೆಯ ಮೇಲೆ ಒದಗಿಸಲು ಸರಕಾರವು ಯೋಜನೆಯೊಂದನ್ನು ಮಾಡಿ

ವಿಶೇಷ ಸಂಚಿಕೆ

ತಾ. 15-8-1957ಕ್ಕೆ

ನವಯುಗವು

ವಾಡಿಕೆಯಂತೆ

ಸ್ವಾತಂತ್ರ್ಯ ದಿನೋತ್ಸವ

ಸಂಚಿಕೆಯನ್ನು

ಕರ್ನಾಟಕ ಪ್ರಸಿದ್ಧ ಬರಹಗಾರರ ವಿಶೇಷ ಲೇಖನ, ಕವನಗಳೊಂದಿಗೆ ವಿಶೇಷ ರೀತಿಯಲ್ಲಿ ಪ್ರಕಟಿಸಲಿದೆ.

ಜಾಹಿರಾತುದಾರರು

ತಮ್ಮ ಜಾಹೀರಾತುಗಳನ್ನು

ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ದೆ. ಇದರ ಪ್ರಯೋಜನವನ್ನು ಪಡೆಯಲಿಚ್ಛಿಸ ವವರು ಮೈಸೂರು ಸರಕಾರದ ಆಹಾರೋತ್ಪಾದನೆಯ ಕಮಿಶನರಿಗೆ ನಿಶ್ಚಿತ ಅರ್ಜಿಗಳನ್ನು ಆವರಿಂದಲೇ ಪಡೆದು ಮನವಿಮಾಡಿಕೊಳ್ಳಬಹುದು.

ಗ್ರಾಮದಾನ ಚಳುವಳಿ

ಗ್ರಾಮದಾನ ಚಳುವಳಿಗೆ ಸರ್ವಸಪ್ಲೇಯ ಬೆಂಬಲವನ್ನು ಹೆಚ್ಚಿಸುವ ಸಲುವಾಗಿ ಸಪ್ಟೆಂಬರ ಮಾಸದ ಮೂರನೆ ವಾರದಲ್ಲಿ ಸರ್ವಸೇವಾ ಸಂಘವು ಮೈಸೂರು ನಗರದಲ್ಲೊಂದು ರಾಷ್ಟ್ರದ ವಿವಿಧ ರಾಜಕೀಯ ಪಕ್ಷಗಳ ನಾಯಕರ ಸಮ್ಮೇಳನವನ್ನು ಜರಗಿಸಲಿದೆ. ಆಚಾರ್ಯ ವಿನೋಬಾ ಭಾವೆ ಈ ಸಮ್ಮೇಳನದ ಅಧ್ಯಕ್ಷರಾಗಲಿರುವರು. ಪಂಡಿತ ನೆಹರೂ ಮತ್ತು ಉಪಾಧ್ಯಕ್ಷ ಪ್ರಸಾದವರೂಗೂ ಸಮ್ಮೇಳನದ ಆಮಂತ್ರಣ ಹೋಗುವುದು.

ಒಂದೇ ಸಮಾಜವಾದಿ ಪಕ್ಷ

ಶ್ರೀ ಜಯಪ್ರಕಾಶ ನಾರಾಯಣ ಮತ್ತು ಡಾ. ರಾಮಮನೋಹರ ಲೋಹಿಯಾರವರು ಒಂದೇ ಸಮಾಜವಾದಿ ಪಕ್ಷವನ್ನು ರಚಿಸುವ ಕುರಿತು ಪರ್ಯಾಲೋಚನೆಯನ್ನು ನಡೆಸಿದರು ಶ್ರೀ ಜಯಪ್ರಕಾಶರು ಈ ಪಕ್ಷದಲ್ಲಿ ಐಚಿತವಾಗಿ ಸೇರಿಕೊಳ್ಳುವುದಿಲ್ಲವೆಂದೂ ಪ್ರಸವಾ ಪಕ್ಷದವರಿಗೆ ರಾಮ ಮನೋಹರರ ಅಭಿಪ್ರಾಯಗಳನ್ನು ತಿಳಿಸುವಷ್ಟರ ವಷ್ಟಿನ ಕಾರ್ಯವನ್ನು ಕೈಕೊಳ್ಳುವರೆಂದೂ ತಿಳಿದು ಬರುತ್ತದೆ.

ಶಿಕ್ಷಣ ಮಸೂದೆಯ ಪ್ರತಿಭಟನೆ

ಕೇರಳ ಶಾಸನ ಸಭೆಯ ಮುಂದಿರುವ ಶಿಕ್ಷಣ ಸಂಬಂಧದ ಮಸೂದೆಯೊಂದು ತೀವ್ರ ವಿರೋಧ ಪ್ರವೃತ್ತಿಗೆ ಅಪ್ಪದಪೊದಗಿದೆ. ಮಸೂದೆಯಲ್ಲಡಕವಾಗಿರುವ ಶಿಕ್ಷಣ ಸುಧಾರಣಾ ಶಾಸನಗಳ ಬಗ್ಗೆ ನಾಗರಿಕರು, ರಾಜಕೀಯ ಧುರೀಣರು ಬಲವಾದ ಪ್ರತಿಭಟನೆಯನ್ನು ವ್ಯಕ್ತಪಡಿಸುತಿದ್ದಾರೆ ಈ ಹೊಸ ಮಸೂದೆಯಿಂ ಬ ರೋಮನ್ ಕಥೋಲಿಕ ಜನಾಂಗದವರು ತುಂಬ ಕೊಚ್ಚಿಗೆದ್ದಿರುವರೆಂದು ವರದಿಯಾಗಿದೆ.

ವೇಷಧಾರಿ ಸಂಸತ್ ಸದಸ್ಯ

ತಾರೀಕು ೧೫ರಂದು ಭಾರತೀಯ ಸಂಸತ್ತಿನ ಮಳೆಗಾಲದ ಅಧಿವೇಶನದ ದಿನ ಒಬ್ಬನು ತಾನು ಪಶ್ಚಿಮ ಬಂಗಾಳದಿಂದ ಆರಿಸಲ್ಪಟ್ಟ ಬೀರೇಂದ್ರ ಕುಮಾರ ಮಜುಂದಾರನೆಂದು ಸುಳ್ಳು ಹೇಳಿ ಪ್ರತಿಜ್ಞಾವಿಧಿಯನ್ನು ಪೂರೈಸಿದನು. ಆದರೆ, ಪರೀಕ್ಷಾನಂತರದಲ್ಲಿ ಆ ಹೆಸರಿನ ವ್ಯಕ್ತಿಯು ಆರಿಸಲ್ಪಡಲಿಲ್ಲವೆಂದು ತಿಳಿದುಬಂದು, ಆತನ ಬುದ್ಧಿಸ್ವಾಸ್ಥ್ಯವನ್ನು ಪರೀಕ್ಷಿಸಲು ಮೆಡಿಕಲ್ ಬೋರ್ಡ್‌ಗೆ ಒಪ್ಪಿಸಲಾಯಿತು. ಹಾಗೆಯೇ ಸೂಕ್ತ ಕ್ರಮ ಕೈಗೊಳ್ಳಲು ಸಭಾಧ್ಯಕ್ಷರಿಗೆ ಅಧಿಕಾರವೀಯಲಾಯಿತು.

ಶೀತಜ್ವರದ ದಾಳಿ

ಇನ್ನು ಕೆಲವೇ ವಾರಗಳಲ್ಲಿ, ಏಶಿಯದ ಅನೇಕ ರಾಷ್ಟ್ರಗಳಲ್ಲಿ ಹರಡಿದ ಸಾಂಕ್ರಾಮಿಕ ಶೀತಜ್ವರವನ್ನು ಪ್ರತಿಭಟಿಸಲು ನೆರವಾಗುವುದೆಂದು ನಂಬಿ, ಪ್ರಚಾರದಲ್ಲಿ ಬರುವುದೆಂದು ನಿರೀಕ್ಷಿಸಲಾಗಿದ್ದ ದಾಳಿ ಪರಿಣಾಮಕಾರಿಯಾಗಲು, ಅದನ್ನು ಚುಚ್ಚಿದ ನಂತರ ಎರಡು ತಿಂಗಳುಗಳಷ್ಟು ಕಾಲವನ್ನು ಕೊಳ್ಳುವುದೆಂದು ತಿಳಿದು ಬಂದಿದೆ ಆದುದರಿಂದ ಸದ್ಯವೇ ಮರುಕೊಳಸಲಿರುವುದೆಂದು ತಿಳಿದುಬಂದಿರುವ ಶೀತಜ್ವರವು ಈ ದಾಳಿನಿಂದೇನೂ ಪರಿಹಾರವಾಗ ವ ಭರವಸೆಯಿಲ್ಲವೆಂದು ಮುಂಬಯಿಯ ಸುಪ್ರಸಿದ್ಧ ಚಿಕಿತ್ಸಕರಾದ ಡಾ| ಆರ್. ಬಿ. ಬಿಲ್ಮೋರಿಯಾ ಅಭಿಪ್ರಾಯ ಪಟ್ಟಿದ್ದಾರೆ.

ಭಾರತದ ರೈಲ್ವೆ ಅಭಿವೃದ್ಧಿ

ಭಾರತದ ರೈಲ್ವೆ ದಾರಿಗಳನ್ನು ಅಧುನಿಕ ರೀತಿಗೆ ವಾಸ್ತಾಪಿಸಲು ಮತ್ತಷ್ಟರ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸಹಕರಿಸಲು ಭಾರತಕ್ಕೆ ವಿವಿಧ ಕರೆನ್ಸಿಗಳಲ್ಲಿ ೯೦೦ ಲಕ್ಷ ಡೋಲರ್‌ಗಳ ಸಾಲವನ್ನೀಯಲು ಜಾಗತಿಕ ಬೇಂಕು ಒಪ್ಪಿರುತ್ತದೆ. ಈ ಸಾಲದ ಅವಧಿಯು ೧೫ ವರ್ಷವಿದ್ದು ಒಟ್ಟು ಸೇಕಡಾ ೫.೬೫ ದರದಲ್ಲಿ ಬಡ್ಡಿಯನ್ನು ತೆರಬೇಕಾಗುವುದು.

ಮತದಾನ ಪದ್ಧತಿಯಲ್ಲಿ ವ್ಯತ್ಯಾಸ

ಭಾರತದಲ್ಲಿ ಮುಂದಿನ ಚುನಾವಣೆಯಿಂದ ಗುರುತು ಹಾಕುವ ಮತದಾನ ಪದ್ಧತಿಯು ವ್ಯವಹಾರದಲ್ಲಿ ಬರುವುದು ಇದು ಮಿತವ್ಯಯದಲ್ಲಿ ಸಾಗುವುದಲ್ಲದೆ, ಮತ ಪೆಟ್ಟಿಗೆಗಳನ್ನೊಡೆಯುವ, ಮತಪತ್ರಗಳನ್ನು ಬದಲಾಯಿಸುವ ಮೊದಲಾದ ಅನಾನುಕೂಲತೆಗಳನ್ನೂ ತಡೆಯುವುದು. ತೀವ್ರ ಮತದಾನವಾಗಲೂ ಇದು ನೆರವಾಗುವುದು.

ಪಶ್ಚಿಮ ಪಾಕಿಸ್ತಾನದಲ್ಲಿ

ಕಳೆದ ಮಾರ್ಚಿ ತಿಂಗಳಲ್ಲಿ ಪತನಗೊಂಡ ಖಾನ್ ಸಾಹೇಬರ ಮಂತ್ರಿಮಂಡಳದ ನಂತರ ಪಶ್ಚಿಮ ಪಾಕಿಸ್ತಾನದಲ್ಲಿ ಆಧ್ಯಕ್ಷಾಳಿಕೆಯು ನಡೆಯುತ್ತಲಿದೆ. ಈಗ, ಪಾಕಿಸ್ತಾನದ ಗವರ್ನರರು ಕೇಂದ್ರಕ್ಕೆ ತನ್ನ ಪ್ರಾಂತದಲ್ಲಿ ಪಾರ್ಲಿಮೆಂಟರಿ ಸರಕಾರವನ್ನು ರಚಿಸಬಹುದೆಂದು ಸೂಚಿಸಿದಂತೆ ಕೇಂದ್ರವು ಅದಕ್ಕೆ ಸಮ್ಮತಿಯಿತ್ತಿದೆ ಆದರೂ ಪ್ರಾಂತದ ರಿಪಬ್ಲಿಕನ್ ಪಕ್ಷ ಮುಸ್ಲಿಂ ಲೀಗ್ ಪಕ್ಷಗಳು ತಂತಮ್ಮ ಪಕ್ಷಗಳಿಗೆ ಅಧಿಕ ಬೆಂಬಲವಿರುವುದೆಂದು ವಾದಿಸುತ್ತಿವೆ. ಗವರ್ನರ್ ಮಿ|| ಗುರ್ಮಾನಿಯವರು ರಿಪಬ್ಲಿಕನ್ ನಾಯಕ ಸರ್ದಾರ್ ಅಬ್ದುರ್ ರಶೀದರನ್ನು ಸರಕಾರ ರಚಿಸುವಂತೆ ಕೇಳಿಕೊಳ್ಳುವ ನಿರೀಕ್ಷೆಯಿದೆ.

ನೇಪಾಳದಲ್ಲಿ ಹೊಸ ಸರಕಾರ?

ನೇಪಾಳದ ಪ್ರಧಾನಿ ಶ್ರೀ ಟಂಕಾ ಪ್ರಸಾದ ಆಚಾರ್ಯರು ಇತ್ತ ತಮ್ಮ ಮಂತ್ರಿಮಂಡಳದ ರಾಜನಾಮೆಯನ್ನು ಅರಸು ಮಹೇಂದ್ರರು ಸ್ವೀಕರಿಸಿದ್ದಾರೆ. ಹಾಗೆಯೇ ಡೆಮೊಕ್ರೆಟಿಕ್ ಫ್ರಂಟಿನ ನಾಯಕರಾದ ಡಾ. ಕೆ ಐ ಸಿಂಘರನ್ನು ಸಮ್ಮಿಶ್ರ ಸರಕಾರ ರಚಿಸುವಂತೆ ಆಮಂತ್ರಿಸಿದ್ದಾರೆ. ಈ ಮಂತ್ರಿಮಂಡಳವು ಸ್ಥಾಪನೆಗೊಳ್ಳುವವರೆಗೆ ಅರಸು ಮಹೇಂದ್ರರೇ ನೇರವಾದ ಆಳಿಕೆಯನ್ನು ಆರಂಭಿಸಿರುವರೆಂದು ಜಾಹೀರುನಾಮೆಯು ಹೊರಟಿರುತ್ತದೆ.

ಕಾಶ್ಮೀರದಲ್ಲಿ ಬಂಧನೆ—

ಕಳೆದ ತಿಂಗಳ ಕೊನೆಯ ವಾರದಲ್ಲಿ ಜಮ್ಮೂ ಮತ್ತು ಕಾಶ್ಮೀರದಲ್ಲಿ ನಡೆದ ಸ್ಫೋಟಗಳ ಕುರಿತಾಗಿ ಶೋಧನೆಗಳನ್ನು ನಡೆಸಿ, ಅದರಲ್ಲಿ ಸೇರಿವೆಯೆಂದು ನಂಬಲಾದ ಮೂರು ತಂಡಗಳ ಸದಸ್ಯರನ್ನು ಪೋಲೀಸರು ಬಂಧಿಸಿರುವರು. ಇವರಲ್ಲಿ ಪಾಕಿಸ್ತಾನದಿಂದ ವಿಧ್ವಂಸಕ ಚಟುವಟಿಕೆಗಳಿಗೆ ಪ್ರೇರಣೆ ಕೊಡುವುದಕ್ಕಾಗಿ ಬಂದಿರುವವನೊಬ್ಬನಲ್ಲದೆ ಆತನ ಏಜಂಟರು ಸಹಾ ಇದ್ದಾರೆ.

"ಭಾರತೀಯ'ದ ಬಹಿಷ್ಕಾರ

ಪಾಕಿಸ್ತಾನವು ಭಾರತದ ಮೇಲೆ ತನಗಿರುವ ಸಿಟ್ಟನ್ನು ಇದೀಗ ಇನ್ನೊಂದು ವಿಧಾನದಿಂದ ಮರೆಯಲೆತ್ನಿಸುವಂತಿದೆ ಭಾರತದ ಹೈಕಮಿಶನರ್‌ರಿಂದ ಬಹುಮಾನ ಸ್ವೀಕರಿಸಬಾರದು; ಖಾಸಗಿ ಪ್ರದರ್ಶನಗಳಿಗಾಗಿ ಭಾರತೀಯ ಚಲಚ್ಚಿತ್ರವನ್ನು ಪಡೆಯಬಾರದು ಭಾರತದ ಹೈಕಮಿಶನರರು ಏರ್ಪಡಿಸುವ ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸಬಾರದು ಮೊದಲಾಗಿ ಕೆಲವೊಂದು ಆಜ್ಞೆಗಳು ಹೊರಡುವ ಸಿದ್ಧತೆಯಲ್ಲಿವೆಯೆಂದು ವರದಿಯಾಗಿದೆ.

ಮಲಯಕ್ಕೆ ರಾಜ್ಯಘಟನೆ

ಮಲಯಾ ವಿಧಾನಸಭೆಯು ದೇಶದ ಘಟನೆಯ ಕರಡನ್ನು ಅವಿರೋಧವಾಗಿ ಸ್ವೀಕರಿಸಿಕೊಂಡಿದೆ. ಬರುವ ಆಗಸ್ಟ್ ೩೧ರಂದು ಅದು ಸ್ವತಂತ್ರ ರಾಷ್ಟ್ರವಾಗಲಿರುವುದು.

ಕಾಶ್ಮೀರದ ಮುಖ್ಯಮಂತ್ರಿ

ಕಾಶ್ಮೀರದಲ್ಲಿ ಸಾರ್ವತ್ರಿಕ ಚುನಾವಣೆಗಳು ಮುಗಿದು, ಬಹುಮತ ಪಕ್ಷವಾದ ರಾಷ್ಟ್ರೀಯ ಕಾಂಗ್ರೆಸಿನ ನಾಯಕರಾಗಿ ಬಕ್ಷಿಗುಲಾಂ ಮಹಮ್ಮದರು ಪುನಃ ಆರಿಸಿಬಂದಿದ್ದಾರೆ. ಅವರು ಏಳು ಸದಸ್ಯರ ಹೊಸ ಮಂತ್ರಿಮಂಡಳವನ್ನು ಕೆಲವೇ ದಿನಗಳಲ್ಲಿ ಘೋಷಿಸುವವರಿದ್ದಾರೆ.

ಜತ್ತಿ ಸಮಿತಿಯ ವರದಿ

ಭೂಸುಧಾರಣೆಯ ಕುರಿತು ವರದಿಯೊಪ್ಪಿಸಲು ನೇಮಿಸಲಾದ ಮೈಸೂರಿನ ಜತ್ತಿ ಸಮಿತಿಯ ಸಂಚಾರ ಕಾರ್ಯಕ್ರಮವು ಮುಕ್ತಾಯವಾಗುತ್ತಾ ಬಂದಿದ್ದು; ಮುಂದಿನ ವಾರ ವರದಿಯನ್ನು ಸಿದ್ಧಮಾಡುವುದು. ಆಗಸ್ಟ್ ದ್ವಿತೀಯ ವಾರದಲ್ಲಿ ಸರಕಾರಕ್ಕೆ ತನ್ನ ವರದಿಯನ್ನೊಪ್ಪಿಸುವುದೆಂದು ತಿಳಿದು ಬಂದಿದೆ.

ಉಡುಪಿ

ವನಮಹೋತ್ಸವ — ಸ್ಥಳೀಯ ಬುನಾದಿ ತರಬೇತಿ ಶಾಲೆಯಲ್ಲಿ ತಾ. 5 ರಲ್ಲು ಉಡುಪಿ ಲಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ಪಿ. ಸರ್ವೋತ್ತಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಎಗ್ರಿಕಲ್ಚರಲ್ ಡಿಪೋನ ಸೈಪ್ರಿಟರ್ ಶ್ರೀ ಬಿ. ವೆಂಕಟ್ರಾಯ ಪೈ ಮೊದಲಾದವರು ಕಾಲೋಚಿತ ಭಾಷಣವಿತ್ತರು

ಉಡುಪಿ ಕಥೋಲಿಕ್ ಇಗರ್ಜಿಯ ರೆ| ಫಾ| ಎ. ಸಿಕೇರಾ, ಅವರ ಮೃತ ಶರೀರವು ಸಾಲಿಗ್ರಾಮ ಸಾಸ್ತಾನ ಕಡಲ ತೀರದಲ್ಲಿ ತಾ. 11ರಂದು ದೊರೆತು ಅಂತಿಮ ಕ್ರಿಯೆಯು ಸಾಸ್ತಾನ ಇಗರ್ಜಿಯಲ್ಲಿಯೇ ನಡೆಯಿತು

ಗೃಹ ಪ್ರವೇಶೋತ್ಸವ—ಶ್ರೀ ನಿಟ್ಟೂರು ಚಲುವಯ್ಯ ಸೆಟ್ಟರು ಗುಂಡಿಬೈಲಲ್ಲಿ ನೂತನವಾಗಿ ಕಟ್ಟಿಸಿದ ಗೃಹಪ್ರವೇಶೋತ್ಸವವು ತಾ 14ರಂದು ರಾತ್ರಿ ಸಭಿಯುಕ್ತವಾಗಿ ಜರಗಿತು. ಮರುದಿವಸ, ತಾ. 15ರಂದು ಸಂಜೆ ಸತ್ಯಾರ ಕೂಟವು ಬಯಲು ವಿಸ್ತೃಂಭಣೆಯಿಂದ ನಡೆಯಿತು.

ಕಸ್ತೂರ್ಬಾ ಮೆಡಿಕಲ್ ಕಾಲೇಜು— ಮೈಸೂರು ಸರಕಾರವು ಕರ್ನಾಟಕ ವಿಶ್ವವಿದ್ಯಾಲಯಕ್ಕೂ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೂ ಇರುವ ಆಡಳಿತ ಜೋಡಣೆಯನ್ನು ಮೊದಲನೆಯ, ಎರಡನೆಯ ಮತ್ತು ಮೂರನೆಯ ಎಂ. ಬಿ. ಬಿ. ಎಸ್ ಶಿಕ್ಷಣವನ್ನು ಕೊಡುವುದಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯ ಶಾಸನದ ಪ್ರಕಾರ 1957ನೇ ಇಸವಿ ಜೂನ್ ತಿಂಗಳಿಂದ ಮತ್ತೆ ಮೂರು ವರ್ಷಗಳ ವರೆಗೆ ಮುಂದುವರಿಸಲು ಸಂಜೂರಿಯನ್ನು ಕೊಟ್ಟಿದೆ.

SOUTH KANARA DISTRICT BOARD

Applications are invited for the post of Rural Medical Practitioners Applicants should possess any one of the following Qualifications viz,

(1) M B, B S (2) L M.P (3) G C I M. (4) L. A M. S. (5) L. I M with or without House Surgeoncy (6) "A" or B" Class Practitioners or Vaidya Praveenas of Tharanath Ayurveda Vidyapeeth

Applications should reach the District Board Office, Mangalore before 30 -7—1957 with a treasury receipt or money order for Rs. 2/- being the registration fee.

Selected candidates will receive subsidy of Rs 65/- per month besides medicine worth Rs. 1000/- in the case of dispensaries or modern medicine and Rs. 800/- in the case of dispensaries of Ayurvedic medicine Retired Medical Officers may also apply.

S Kanara Dt Board Office, Mangalore, D 12—7—1957

B. MANJAYA HEGDE, President.

ಉಡ್ಪಿ ಡಿ. ಮು. ಕೋರ್ಟನಲ್ಲಿ

R. I A. 766/1957

O. S No 366/1956

K ರಾಮಾಳ್ಳಪ್ಪ ಗುಂಡು ನಾಯ್ಕ —ವಾದಿ

ಮತ್ತು

ನಾರಾಯಣ ಯಾನೆ ನಾಗಪ್ಪ ಶೆಟ್ಟಿ ಕೂಡಾ —ಪ್ರತಿವಾದಿರು.

ಇವರೊಳಗೆ

ಉಡ್ಪಿ ತಾಲ್ಲುಕ ನಂಬ್ರ ೦೭ನೇ ಹೇರೂರು ಗ್ರಾಮದಲ್ಲಿರುವ ಮಹಾಲಿಂಗ ಶೆಟ್ರ ಆಳಿಯ 1ನೇ ಪ್ರತಿವಾದಿ ನಾರಾಯಣ ಯಾನೆ ನಾಗಪ್ಪ ಶೆಟ್ಟಿ ಮತ್ತು ಹಾವಂಜೆ ಗ್ರಾಮದ ಕಂಬಳಿ ಶೆಟ್ಟಿಯಲ್ಲಿರುವ ಸೋಮಯ್ಯ ಶೆಟ್ರ ಆಳಿಯ 3ನೇ ಪ್ರತಿವಾದಿ ಜನಾರ್ದನ ಶೆಟ್ರಿಗೆ ಕೂಡಾ ತಿಳಿಯಪಡಿಸುವುದು.

ತಾರೀಕು 11 8 1957ರಲ್ಲಿ ಕೊಡೋಣದ ಪ್ರಿಲಿಮಿನರಿ ಡಿಕ್ರಿಯ ಪೂರಾ ಅಮಲ್ಜಾವಣೆ ಬಗ್ಗೆ ಸದ್ರಿ ಡಿಕ್ರಿಯಿಂದ ಕಾಣುವ ಸ್ಥಿರಾಸ್ತಿಗಳ ಮಾರಾಟದ ಬಗ್ಗೆ ಪ್ರೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿಯು ಟಾಕ್ಸ್ ಮಾಡಿದ ಮೇರಿನ ಅರ್ಜಿಯು ತಾ 31-7-57 ಕ್ಕೆ ಇಟ್ಟಿರುತ್ತದೆ. 1, 3ನೇ ಪ್ರತಿವಾದಿರ ಅಕ್ಷೇಪಗಳಿದ್ದರೆ ಸದ್ರಿ ದಿವ್ಸ ಹಗಲು ಗಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಅವರು ಹಾಜ್ರಾಗಿ ಜ್ಞಾಪಿಸುಮಾಡಿಕೊಳ್ಳಬೇಕ್ಕೆ ತಪ್ಪಿದ್ರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

B Vasudeva Rao,
counsel for Plff

Udipi, 12—7—57.

ಎಲ್ಲೆಲ್ಲಿ ಏನೇನು?

ನಿಂಜೂರು—ಇಲ್ಲಿಯ ಶ್ರೀ ರಾಮಾ ಎಲಿಮೆಂಟರಿ ಶಾಲೆಯನ್ನು ಹಾಯ್ ಎ ಶಾಲೆಯಾಗಿ ಪರಿವರ್ತಿಸಲಾಗಿದ್ದು, ಅದರ ಆರನೆ ತರಗತಿಯನ್ನು ಕಾರ್ಕಳದ ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎ ರಮ್ಮಾನ್, ಅವರ ಅಧ್ಯಕ್ಷತೆಯಲ್ಲಿ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಯು ಕೃಷ್ಣರಾಯರು ಉದ್ಘಾಟಿಸಿದರು ಶಾಲಾ ಮೆನೇಜರ್ ಶ್ರೀ ಎನ್ ಸಂಜೀವ ಶೆಟ್ಟರು ಸ್ವಾಗತಮಾತುಗಳನ್ನಾಡಿದರು ಕಣಂಜಾರು ಇಗರ್ಜಿ ಪಾದ್ರಿಗಳಾದ ಶ್ರೀ ಫಾ ಮಿನೇಜಸ್‌ರವರು ಕಾಲೋಚಿತಮಾತುಗಳನ್ನಾಡಿದರು

ಬಸ್ರೂರು—ಪ್ರಾರಂಭಿಕ ಹಣ ಸಮೇತ ದ ಕ ಜಿಲ್ಲಾ ಬೋರ್ಡಿಗೆ ಮಾಡಿಕೊಂಡ ಅರ್ಜಿಯನ್ನು ಮನ್ನಿಸಿ ಜಿಲ್ಲಾ ಬೋರ್ಡಿನವರು ಬಸ್ರೂರಲ್ಲಿ ಹೈಸ್ಕೂಲ್ ನ್ನು ತೆರೆಯುವುದಕ್ಕೆ ತಮ್ಮ ಸಮ್ಮತಿಯನ್ನಿತ್ತಿರುವರಾಗಿ ಹೇಳಲಾಗಿದೆ

ನಾವುಂದ ಸ್ಥಳೀಯ ಫಿಶರೀಸ್ ಹೈಸ್ಕೂಲಿನ ಉದ್ಘಾಟನೆಯನ್ನು ತಾ ೪ ರಂದು ಶ್ರೀ ಪೈ ಮಂಜಯ್ಯ ಸೆಟ್ಟಿ ಎಮ್. ಎಲ್ ಎ ಅವರು ನೆರವೇರಿಸಿದರು ಸಮಾರಂಭದ ಅಧ್ಯಕ್ಷತೆಯನ್ನು ಕುಂದಾಪುರ ಆರ್ ಡಿ. ಒ ಶ್ರೀ ಸೂರ್ಯನಾರಾಯಣ ರಾಯರು ವಹಿಸಿದ್ದರು ಶಾಲಾ ಹೆಡ್ಮಾಸ್ಟರ್ ಶ್ರೀ ಶ್ರೀಧರ ಪುಥ್ಯಸ್ತರು ಸ್ವಾಗತ ಭಾಷಣ ಮಾಡಿದರು ಶ್ರೀಯುತರಾದ ಎಚ್ ಗಣಪತಿ ಕೆದಿಲಾಯ ಸಂಜೀವ ರಿಎಸ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು ಶ್ರೀ ನಾರಾಯಣ ಶ್ಯಾನುಭಾಗ್‌ರು ಧನ್ಯವಾದಗಳನ್ನಿತ್ತರು

ಹುತ್ತೂರು— ಮೈಸೂರು ಸರಕಾರದ ಕಾನೂನಗಾರಿಕೆ ಮಂತ್ರಿ ಶ್ರೀ ಎಚ್. ಕೆ ವೀರಣ್ಣ ಗೌಡರು ತಾ ೧೯ರಂದು ಹುತ್ತೂರಿಗೆ ಆಗಮಿಸಿದರು ದೇವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಪಿ ಎಸ್ ತಿಮ್ಮಪ್ಪ ಸೆಟ್ಟಿ ಮೊದಲಾದವರು ಮಂತ್ರಿಗಳಿಗೆ ಸ್ವಾಗತ ನೀಡಿದರು

ಶ್ರೀ ಕೆ ವಿ ಗೌಡ, ಎಮ್ ಎಲ್ ಎ ಅವರು ಮಂತ್ರಿಗಳಿಗೆ ಅತಿಥಿಗಳ ಪರಿಚಯ ಮಾಡಿಕೊಟ್ಟರು ಸರ್ಕಾರ್ ಕಾಂಗ್ರೆಸ್ ಕಮಿಟಿ ಪರವಾಗಿ ಕಾರ್ಯದರ್ಶಿ ಶ್ರೀ ಎ ಭೀಮಭಟ್ಟರು ಹುತ್ತೂರು, ಪಿಟ್ಲಿ, ಉಪ್ಪಿನಂಗಡಿಗಳಿಗೆ ಅದಷ್ಟು ಬೇಗನೇ ವಿದ್ಯುಚ್ಛಕ್ತಿ ಒದಗಿಸಬೇಕೆಂದೂ, ಮುಡ್ನೂರು (ಕಾವು) ಕೊಡಂಗಾರು, ಕಾಡುಮಠ, ಗೌರಿ, ಪಂಜ, ಪಡೆಕಲ್ಲು, ಕುಮಾರಧಾರ ಮತ್ತು ನೇತ್ರಾವತಿ (ಉಪ್ಪಿನಂಗಡಿ) ನದಿಗಳಿಗೆ ಸೇತುವೆಗಳ ರಚನೆಯಾಗಬೇಕೆಂದೂ, ಕಬಕ-ಪಿಟ್ಲಿ-ಕಲ್ಲಡ್ಕ-ಆಡ್ಯನಡ್ಕ ಮಾರ್ಗಗಳಿಗೆ ಬೇಗನೆ ಡಾಮರು ಹಾಕಿಸಬೇಕೆಂದೂ, ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ಸರಿಯಾಗಿ ಸಂಬಳ ಬಟ್ಟಾಡೆಯಾಗಬೇಕೆಂದೂ, ಅಲಡ್ಕ, ಬ್ರಹ್ಮರ ಕುಟೀಲುಗಳಲ್ಲಿ ನೆರೆಯಿಂದ ಸಾಮಾನ ಸಂಚಾರಕ್ಕೆ ತೊಡಕಾಗುವುದರಿಂದ ಅಲ್ಲಿ ಮಾರ್ಗ ಏರಿಸಬೇಕೆಂದೂ ಇತ್ಯಾದಿ ವಿಚಾರಗಳನ್ನೊಳಗೊಂಡ ಮನವಿಯೊಪ್ಪಿಸಿದರು ಈ ವಿಚಾರಗಳನ್ನು ಸಂಬಂಧಪಟ್ಟ ಕಾಖೆಗಳ ಗಮನಕ್ಕೆ ತರುವುದಾಗಿ ಮಂತ್ರಿಗಳು ಉತ್ತರವಿತ್ತರು

ಕಿದಿಯೂರು—ಸ್ಥಳೀಯ ಹಾಯ್ ಎ ಶಾಲೆಯಲ್ಲಿ ತಾ ೬ರಂದು ಶಾಲಾ ಹೆಡ್ಮಾಸ್ಟರ್ ಶ್ರೀ ಕೆ ಪಿ ಭಟ್ಟರ ಅಧ್ಯಕ್ಷತೆಯಲ್ಲಿ ವನಮಹೋತ್ಸವ ಆಚರಿಸಲಾಯಿತು ಶ್ರೀಗಳಾದ ಕೆ ಕೆ ತಂತ್ರಿ, ಎಚ್ ವಿ ಗಿರಿ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು ಗೇರು, ಮಾವು ಇತ್ಯಾದಿ ಸಸಿಗಳನ್ನು ನೆಡಲಾಯಿತು

ಕೊಡವೂರು— ಇಲ್ಲಿಯ ಬೋರ್ಡ್ ಹಾಯ್ ಎ ಶಾಲಾ ಕಟ್ಟಡದ ನೊಸಾ ಬ್ಲೋಕನ್ನು ತಾ ೧೨ರಂದು ಸಂಜೆ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಉದ್ಘಾಟಿಸಿದರು ಶ್ರೀ ಟಿ ಎ ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಪಂಡಿತ ಯು ಬಿ. ಆಚಾರ್ಯರು ಸ್ವಾಗತಭಾಷಣ ಮಾಡಿದರು, ಹೆಡ್ಮಾಸ್ಟರ್ ಶ್ರೀ ಎಚ್ ಎ ಪಿ. ಕೆದ್ಲಾಯರು ಶಾಲಾ ವರದಿಯನ್ನೋದಿದರು ಪೈಸಾರ ಕಾಸ್ಟಿಂಗ್‌ನ ಉಪಾಧ್ಯಕ್ಷ ಶ್ರೀ ಕೆ ಕೆ ಸೆಟ್ಟಿ, ಶ್ರೀ ಕೆ ಶಂಕರನಾರಾಯಣ ಉಪಾಧ್ಯಾಯರು ಭಾಷಣಮಾಡಿದರು ಅಧ್ಯಕ್ಷರು ಸಮಯೋಚಿತ ಭಾಷಣಮಾಡಿದ ಬಳಿಕ ಶ್ರೀ ಶಂಕರನಾರಾಯಣ ರಾಯರು ಧನ್ಯವಾದಗಳನ್ನಿತ್ತರು ಶಾಲಾ ಮಕ್ಕಳಿಗೆ ಸಿಹಿ ತಿಂಡಿ ಪಂಚೋಪಾಯಾಗಿ ಸಮಾರಂಭ ಕೊನೆಗೊಂಡಿತು



ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ದೇಶದಲ್ಲಿ ಕೈಗಾರಿಕೆಗಳಿಗೆಂದು ದೊಡ್ಡ ಸ್ಥಾನವಿದೆ ಭಾರತವು ಸ್ವತಂತ್ರ ಪ್ರಾಪ್ತಿಯನ್ನು ಸಾಧಿಸಿಕೊಳ್ಳಲು ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿತ್ತಿದೆ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಸ್ತುತ ವಿಭಾಗಗಳಿಗೆ ಮಹತ್ವವನ್ನಿತ್ತಿದ್ದರೂ ದ್ವಿತೀಯ ಯೋಜನೆಯಲ್ಲಿ ಸರಕಾರೀ ಕಾರ್ಯಕ್ಷೇತ್ರದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯಗಳ ಅಭಿವೃದ್ಧಿಗೆ ಅಧಿಕ ಪ್ರಾಧಾನ್ಯ ದೊರೆತಿದೆ. ಚಿತ್ರದಲ್ಲಿ ಭಾರತೀಯ ಕೈಗಾರಿಕೆಗಳಿಗೆ ಸಂಬಂಧಿಸಿದ ನಾಲ್ಕು ದೃಶ್ಯಗಳನ್ನು ಕಾಣಬಹುದು.

ಚಿತ್ರ ೧. ಜಮ್‌ಶೆಡ್‌ಪುರದಲ್ಲಿನ 'ಟಿಸ್ಕೋ' ಕಾರಖಾನೆಯ ದೂರದ ನೋಟವೊಂದು

ಚಿತ್ರ ೨ ರಾಸಾಯನಿಕ ಲೋಕ ಕಾರ್ಯದ ಪ್ರಯೋಗವೊಂದರ ದೃಶ್ಯ

ಚಿತ್ರ ೩ ಭಾರತದ ಪ್ರಸಿದ್ಧ ಬಿ ಉದ್ದಿಮೆಯಾದ ಪತ್ತಿ ಗಿರಣಿಗಳಲ್ಲಿ ಕೊಯಮುತ್ತೂರಿನ ನೂಲುವ ವಿಭಾಗದ ಅದ್ಭುತ ನೋಟ

ಚಿತ್ರ ೪. ಬೆಂಗಳೂರಲ್ಲಿ ನೂತನವಾಗಿ ನಿರ್ಮಿಸಲಾದ 'ಭಾರತ್ ಇಲೆಕ್ಟ್ರಾನಿಕ್ಸ್' ಕಾರಖಾನೆಯಲ್ಲಿ ರೇಡಿಯೋ ಸೆಟ್ ಒಂದನ್ನು ಜೋಡಿಸುತ್ತಿರುವುದು

ರಾಷ್ಟ್ರಧ್ವಜ

ಕೆಲವು ಜನರು ಮತ್ತು ವ್ಯಾಪಾರಿ ಸಂಸ್ಥೆಗಳು ಅಚ್ಚು ಮಾಡಿದ ಕಾಗದದ ಚಿಕ್ಕ ರಾಷ್ಟ್ರ ಧ್ವಜಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಂಚುತ್ತ ಸಾರ್ವಜನಿಕರಿಂದ ಹಣವನ್ನು ಎತ್ತುತ್ತಿರುವ ಉದಾಹರಣೆಗಳು ಸರಕಾರದ ಗಮನಕ್ಕೆ ಬಂದಿವೆ ಇದರಿಂದ ರಾಷ್ಟ್ರ ಧ್ವಜದ ಘನತೆಗೆ ಕುಂದು ಬರಬಹುದಾಗಿದೆ ರಾಷ್ಟ್ರ ಧ್ವಜವು ರಾಷ್ಟ್ರದ ಪ್ರತೀಕವಾಗಿದ್ದು, ಎಂಥ ಪ್ರಸಂಗ ಬಂದರೂ ಇದರ ಘನತೆಯನ್ನು ಕಾಪಾಡಬೇಕು ಮೇರ ಜೇಬಿನ ವ್ಯಾಪಾರದಲ್ಲಿ ತೊಡಗಿಸುವ ವ್ಯಕ್ತಿಗಳಾಗಲಿ ಅಥವಾ ಸಂಸ್ಥೆಗಳಾಗಲಿ ಇದನ್ನು ಮನಗಂಡು ತಮ್ಮ ವ್ಯಾಪಾರವನ್ನು ನಿಲ್ಲಿಸಬೇಕೆಂದು ಮೈಸೂರು ಸರಕಾರವು ಕೇಳಿಕೊಳ್ಳುತ್ತದೆ ರಾಷ್ಟ್ರ ಧ್ವಜವನ್ನು ಯಾವುದೇ ವ್ಯಾಪಾರ, ವಾಣಿಜ್ಯ ಅಥವಾ ಲಾಭದ ಉದ್ದೇಶಕ್ಕಾಗಿ ಬಳಸಲಾಗದು, ಹಾಗೆ ಮಾಡಿದರೆ ಅದರ ಘನತೆಯು ಕುಡಮೆಯಾಗುತ್ತದೆ

ರಾಷ್ಟ್ರ ಧ್ವಜವನ್ನು ಗೌರವಿಸುವುದೆಂದರೆ ಅದರ ಮಾನವನ್ನು ರಕ್ಷಿಸುವುದೇ ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆಯೆಂಬುದನ್ನು ಸರಕಾರವು ಮನಃ ಹೇಳುವ ಅಗತ್ಯವಿಲ್ಲ ಸಾರ್ವಜನಿಕರು ರಾಷ್ಟ್ರ ಧ್ವಜದ ಪ್ರತಿಷ್ಠೆಗೆ ಕುಂದು ಬರುವಂಥ ಯಾವ ಕೃತಿಗಳಿಗೂ ಎಡೆಗೊಡಬಾರದು ಈ ಸಂಬಂಧದಲ್ಲಿ ರಾಷ್ಟ್ರ ಧ್ವಜವನ್ನು ಉಪಯೋಗಿಸುವ ಬಗ್ಗೆ ಸಾಮಾನ್ಯವಾಗಿ ಈ ಕೆಳಗಿನ ನಿಯಮಗಳನ್ನು ಅನುಸರಿಸಬೇಕು.

೧) ವ್ಯಾಪಾರ, ವಾಣಿಜ್ಯ ಅಥವಾ ಲಾಭದ ಉದ್ದೇಶಕ್ಕಾಗಿ ರಾಷ್ಟ್ರ ಧ್ವಜವನ್ನು ಉಪಯೋಗಿಸಬಾರದು

೨) ಅದನ್ನು ಬಡ ಮೇಲುಮಾಡಿ ಹಾರಿಸಬಾರದು

೩) ಅದನ್ನು ಬಾಡಿಗೆಯ ಮೇಲಿನ ಕುರ್ಚಿ ಅಥವಾ ಅಸನಗಳಿಗಿತ್ತ ತಗ್ಗಾದ ಮಟ್ಟದಲ್ಲಿ ರಾಷ್ಟ್ರಧ್ವಜವನ್ನು ಪ್ರದರ್ಶಿಸಕೂಡದು

೪) ಧ್ವಜವನ್ನು ಕಿತ್ತದ ಕಡೆ ಬಿಸಾಡುವುದರಿಂದ ಅದು ಕಾಲ್ತುಳಿಗೆ ಸುಲಿಯಲ್ಪಡುವಂತೆ ಮಾಡಬಾರದು,

೫) ಹರಿದು ಹೋದ ಅಥವಾ ಸಣ್ಣ ಮಾಸಿದ ಧ್ವಜವನ್ನು ಹಾಗೆಸಬಾರದು,

೬) ಯಾವತ್ತೂ ಮಂಗಲ ಕಾರ್ಯಗಳಲ್ಲಿ ಧ್ವಜವು ಕಂಬದ ಸುಟ್ಟ ತುದಿಗೆ ಇಟ್ಟರು ಹಾಗೆ ಅದನ್ನು ಹಿರಿಸಬಾರದು.

ರಾಷ್ಟ್ರಧ್ವಜದ ಪ್ರತಿಷ್ಠೆ ಮತ್ತು ಗೌರವಗಳನ್ನು ಕಾಯುವಲ್ಲಿ ಜನತೆ ಸರಕಾರವು ಅಧಿಕ ಪ್ರಮಾಣದಲ್ಲಿ ದೊಯುವುದೆಂದು ಸರಕಾರದ್ದು ವಿಶ್ವಸನೆ

ಜಿಲ್ಲಾ ಹಿರಿಯ ಪತ್ರಿಕೋದ್ಯಮಿ ಶ್ರೀ ಕೆ ಕೃಷ್ಣರಾಯರ ನಿಧನ

ಮಂಗಳೂರು ಸಮಾಚಾರ ಪತ್ರಿಕೆಯ ಸಹ ಮಾಲಿಕ ಸಂಪಾದಕರೂ, ಹಿರಿಯ ಪತ್ರಿಕೋದ್ಯಮಿಗಳೂ ರಾಜಕೀಯ ಹಾಗೂ ಸಾರ್ವಜನಿಕ ಸೇವಾ ಸಕ್ತರೂ ಆದ ಶ್ರೀ ಕೆ. ಕೃಷ್ಣರಾಯರು ತಾ ೧೫ರಂದು ಅಪರಾಹ್ನ 12 15 ತಾಸಿಗೆ ಬೋಳಾರದಲ್ಲಿರುವ ತಮ್ಮ ಸ್ವಂತ ನಿವಾಸದಲ್ಲಿ ನಿಧನ ಹೊಂದಿದರೆಂಬುದು ವಿಷಾದಿಸತ್ತೇವೆ

ದಿವಂಗತರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಿ ಎ ಡಿಗ್ರಿ ಪಡೆದು ನ್ಯಾಯಶಾಸ್ತ್ರ ಅಭ್ಯಾಸಮಾಡಲು ತಿರುವನಂತಪುರಕ್ಕೆ ಹೋಗಿ, ಲಾ ಪದವಿ ಸಂಪಾದಿಸಿಕೊಳ್ಳಲು ಅಸಮರ್ಥರಾಗಿ ಹಿಂತಿರುಗಿದರು ಬಳಿಕ ಪತ್ರಿಕೋದ್ಯಮವನ್ನು ಕೈಕೊಂಡು ಮಂಗಳೂರಿನ ರಾಷ್ಟ್ರಬಂಧು ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಸೇರಿದರು ಮದ್ರಾಸಿನ "ಎಂಟಿ ಸಿಸ್ಟಿಕ್" ಹಾಗೂ ಮಂಗಳೂರಿನ ಸರ್ವೋದಯ ಪತ್ರಿಕೆಗಳ ಸಂಪಾದಕ ಮಂಡಳಿಯಲ್ಲಿಯೂ ಸ್ವಲ್ಪ ಕಾಲ ವಿದ್ದರು ಮದ್ರಾಸಿನ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಮಂಗಳೂರು ಪ್ರತಿನಿಧಿಯಾಗಿಯೂ ಕೆಲಸ ಮಾಡಿದ್ದರು ಕೆಲಸಮಯ ಪೆರ್ಡಾಲ ಸನಜೀವನ ಹೈಸ್ಕೂಲಲ್ಲಿ ಅಧ್ಯಾಪಕರಾಗಿಯೂ ಇದ್ದರು 1952ನೆ ಸಾಲಿನಿಂದ ನವಭಾರತದಲ್ಲಿ ಸಹಾಯಕ ಸಂಪಾದಕರಾಗಿದ್ದು ಈಚೆಗೆ ಕೆಲವು ತಿಂಗಳುಗಳಿಂದ ಅನಾರೋಗ್ಯದ ನಿಮಿತ್ತ ಮಂಗಳೂರು ವೆನ್ ಲೋಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಅದರೆ ಎರಡು ಮೂರು ದಿವಸಗಳಿಂದ ಅವರ ಸ್ಥಿತಿ ವಿಷಮತೆಗೆ ಒಂದು ಆಸ್ಪತ್ರೆಯಿಂದ ಮನೆಯನ್ನು ಸೇರಿ ಅಲ್ಲಿಯೇ ನಿಧನರಾದರು.

ಕೀರ್ತಿಶೇಷರ ಪರಿಣೀತ ಪತ್ನಿ, ಸಹೋದರ ಶ್ರೀ ಪಿಡ್ಲರ್ ವೆಂಕಟ ನಾಯ್ಕ್ ಮೊದಲಾದವರ ಅಗಲಿಕೆ ಮುಖದಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸಿ, ದಿವಂಗತರ ಆತ್ಮಕ್ಕೆ ಚಿರಶಾಂತಿ ಕೋರುವೆವು

ಮಕ್ಕಳ ಮಗ್ಗಿಪುಸ್ತಕ

(ನಂ. ೧ ಪೈಸೆ ಕೊಟ್ಟ ಪ್ರತಿಕ ಸಹಿತ)

100ಕ್ಕೆ 4 0 0

ಗುಣಿ 1ಕ್ಕೆ 0 1 0

ನವಯುಗ ಪ್ರೆಸ್ಸು ಉಡುಪಿ

ಮಂಗಳೂರು

ಭಾರತ ಸ್ವಾತಂತ್ರ್ಯ ಸಂಗ್ರಾಮದ ಶತ ಸಾಂವತ್ಸರಿಕೋತ್ಸವ ಆಚರಣೆ ಕುರಿತು ಜಿಲ್ಲಾ ಕಲೆಕ್ಟರರ ವಿನಂತಿ.

ಅಖಿಲ ಭಾರತದಲ್ಲಿ ಮುಂಬರುವ ಆಗೋಸ್ತು ತಾ. 15 ನೆತ್ತು 16 ರಲ್ಲು ಮೇಲ್ಕಂಡ ಉತ್ಸವ ಆಚರಣೆ ಬಗ್ಗೆ ಪೂರ್ವಸಿದ್ಧತೆಗಳಾಗುತ್ತಿರುವಂತೆ ದ. ಕ. ಜಿಲ್ಲೆಯಲ್ಲಿಯೂ ಸಕ್ಷಮತೆಗ ಸಮಿತಿಯೊಂದು ಉತ್ಸವ ಆಚರಣೆ ಬಗ್ಗೆ ರಚಿಸಲಾಗಿದೆ ಮಂಗಳೂರಲ್ಲಿ ಧ್ವಜ ವಂದನೆ, ಪ್ರಭಾತಫೇರಿ, ಪಂದ್ಯಾಟಗಳು, ಸಭೆಗಳು, ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚೋಣ, ಬಡವರಿಗೆ ಅನ್ನದಾನ ಕಾರ್ಯಕ್ರಮಗಳಿವೆಯಲ್ಲದೆ ಸಿಂಬ್ರಲ್ ಮೈದಾನದಲ್ಲಿ ಯಕ್ಷಗಾನ, ನಾಟಕ, ಕವಾಯತ್ತು, ನೃತ್ಯ, ಕುಸ್ತಿ ಇತ್ಯಾದಿ ಮನರಂಜನೆ ಕಾರ್ಯಕ್ರಮಗಳಿರುವುವು ಜನರು ತಂತಮ್ಮ ಮನೆಬಾಗಿಲುಗಳನ್ನು ತಳಿರು ತೋರಣಗಳಿಂದಲೂ, ವ್ಯಾಪಾರಸ್ಥರು ತಂತಮ್ಮ ಅಂಗಡಿಗಳನ್ನು ವಿದ್ಯುದ್ದೀಪಗಳಿಂದ ಮೊದಲಾದುವುಗಳಿಂದ ಅಲಂಕರಿಸಬೇಕಾಗಿ ಕಲೆಕ್ಟರರ ವಿನಂತಿಯಿದೆ.

ಉದ್ಘಾಟನೆ— ಸ್ಥಳೀಯ ಗಣಪತಿ ಹೈಸ್ಕೂಲಿನ ಸಾಹಿತ್ಯ ಸಂಘದ ಉದ್ಘಾಟನೆಯನ್ನು ತಾ. 10ರಂದು ಸ್ಟೆಂಟ್ ಅಗ್ನೀಸ್ ಹೈಸ್ಕೂಲಿನ ಕನ್ನಡಪಂಡಿತ ಶ್ರೀ ನಾರಾಯಣ ಭಟ್ಟರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಪಂಜಿಮೊರಂಗ ರಾಯರು ವಹಿಸಿದ್ದರು

ವಿದಾಯ ಸತ್ಕಾರ – ಕೆನರಾ ಬೇಂಕಿನ ಮಂಗಳೂರು ಬಂದರ ಶಾಖೆಯ ಮೆನೇಜರ್ ಶ್ರೀ ಎ. ಗೋಪಾಲ ಕಾಮತರು ಬೆಂಗಳೂರಿನ ಅಡಳಿತ ಕಚೇರಿಗೆ ವರ್ಗಾಯಿಸಲ್ಪಟ್ಟಿದ್ದರಿಂದ ಅವರಿಗೆ ಮಂಗಳೂರಿನ ಸುಪಾರಿ ವ್ಯಾಪಾರಿಗಳು ತಾ 13 ರಂದು ವಿದಾಯ ಸತ್ಕಾರವಿತ್ತು ಗೌರವಿಸಿದರು ಸಮಾರಂಭವು ಕೇರ್ಕಿ ಸಾಹಿಲಿನಲ್ಲಿ ನಡೆಯಿತು ಶ್ರೀ ಯು. ನಾರಾಯಣ ಮಲ್ಯರು ಸುಮಾರು ಅತಿಥಿಗೆ ಹಾರ ಅರ್ಪಿಸಿ, ಬೆಳ್ಳಿಯ ಅಶೋಕಸ್ತಂಭವೊಂದನ್ನು ಒಪ್ಪಿಸಿದರು. ಶ್ರೀ ರತಿಕಲಾಲ್ ನಾಥಲಾಲರು ಮಾನಪತ್ರವನ್ನರ್ಪಿಸಿದರು ಶ್ರೀಗಳಾದಿಯು. ರಾಮಕೃಷ್ಣ ಮಲ್ಯ, ಪಿ ಲಕ್ಷ್ಮೀನಾರಾಯಣರಾವ್, ಟಿ. ಅಣ್ಣಪ್ಪ ನಾಯಕ್, ಎಸ್. ದೇವರಾಯ ಕಾಮತ್ ಮತ್ತು ಬಿ. ವಾಮನ ಶೆಣೈಯವರು ಶ್ರೀ ಕಾಮತರಿಗೆ ಶುಭಕೋರಿ ಭಾಷಣಗಳನ್ನಿತ್ತರು ಶ್ರೀ ಯು. ರಮೇಶ ಮಲ್ಯರು ಧನ್ಯವಾದಗಳನ್ನಿತ್ತರು

ಬೆಹಲಿಯ ಆಕಾಶವಾಣಿ ಕೇಂದ್ರದಿಂದ—ಇದೇ ತಾ 20ರಂದು ರಾತ್ರಿ 9½ ಗಂಟೆಯಿಂದ 11ರ ತನಕ ಪ್ರಸಾರವಾಗಲಿರುವ ರಾಷ್ಟ್ರೀಯ ಕಾರ್ಯಕ್ರಮದ ಅಂಗವಾಗಿ ಧರ್ಮಸ್ಥಳದಲ್ಲಿ ಯಕ್ಷಗಾನ ಮಂಡಳಿಯ ಕಲಾವಿದರು ಶ್ರೀಗಳಾದ ಕಾರ್ಯ ವಿಠಲ ಶಾಸ್ತ್ರಿ, ಕೆ. ರಾಮಚಂದ್ರರಾವ್ (ಬಣ್ಣದ), ಮಾಲಿಂಗ, ಪಿ. ನಾರಾಯಣ ಭಟ್ಟ, ಎಸ್ ಬೀಮ ಭಟ್ಟ, ಕೆ.ಪ್ರಕಾಶ್ ಮುಂತಾದವರು ಶ್ರೀ ಪಿ. ಗೋಪಾಲ ಕೃಷ್ಣರ ನಿರ್ದೇಶನದಲ್ಲಿ ಯಕ್ಷಗಾನ ಕಾರ್ಯಕ್ರಮ ನಡೆಸಲಿದ್ದಾರೆ, ಏಕಕಾಲದಲ್ಲಿ ಪ್ರಾದೇಶಿಕವೂ ಪ್ರಸಾರವೂ ಆಗಲಿರುವ ಈ ಕಾರ್ಯಕ್ರಮದಲ್ಲಿ ಶ್ರೀಗಳಾದ ಎನ್. ಡಿ ಮಂಡೆಚ್ಚ, ನೆಡ್ಲೆ ನರಸಿಂಹ ಭಟ್ಟ ಸಿ. ಕೃಷ್ಣಯ್ಯ ಬಲ್ಲಾಳ್ ಮೊದಲಾದವರು ಹಿಮ್ಮೇಳದ ಹೊಣೆಗಾರಿಕೆ ವಹಿಸುವರು.

ಹೊಸಮರ ಸೇತುವೆ ಉದ್ಘಾಟನೆ— ಪುತ್ತೂರು ತಾಲೂಕಿನ ಹೊಸಮರದಲ್ಲಿ ಗುಂಡಿಯ ನದಿಗೆ ರೊಜಾಯಿ ಮೂರು ಲಕ್ಷದ ಇಪ್ಪತ್ತು ಸಾವಿರ ವೆಚ್ಚದಿಂದ ರಚಿಸಲಾದ ಸೇತುವೆಯನ್ನು ತಾ. 9ರಲ್ಲು ಬೆಳಿಗ್ಗೆ ಸಾರ್ವಜನಿಕ ಕಾಮಗಾರಿ ಮಂತ್ರಿ ಶ್ರೀ ಎಚ್ ಕೆ. ವೀರಣ್ಣಗೌಡರು ಉದ್ಘಾಟಿಸಿದರು ಶ್ರಿ ಕೆ ವೆಂಕಟ್ರಮಣ ಗೌಡ, ಎಸ್ ಎಲ್. ಎ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ದ. ಕ ಜಿಲ್ಲಾ ಸರ್ಕಲಿನ ಸೂಪರಿಂಟೆಂಡಿಗ್ ಇಂಜಿನಿಯರರು ಸ್ವಾಗತ ಭಾಷಣ ಮಾಡಿದರು. ಜಿಲ್ಲಾ ಕಲೆಕ್ಟರ್ ಶ್ರೀ ಎಚ್ ನರಸಿಂಹ ಮತ್ತು ಶ್ರೀ ಕೆ. ಆರ್ ಆಚಾರ್ ಎಸ್. ಪಿ. ಅವರೂ ಉಪಸ್ಥಿತರಿದ್ದರು. ಆ ದಿನ ವಿಪರೀತ ಮಳೆಯಾದುದರಿಂದ ಸೇತುವೆಯ ಮೂರಡಿ ನೀರಲ್ಲಿ ಮುಳುಗಿತ್ತು. "ಮಳೆಗಾಲದಲ್ಲಿ ನಿಮ್ಮಲ್ಲಿಗೆ ಬಂದು ನಿಮ್ಮ ಸಂಕಷ್ಟಗಳನ್ನು ಸ್ವತಃ ನೋಡುವಂತಾಗಿದೆ ಹಣದ ಕೊರತೆಯನ್ನು ಮುಂದೆತ್ತಿ, ಜನೋಪಯೋಗಿ ಕಾರ್ಯಗಳನ್ನು ಹಿಂದೆ ಹಾಕುವಂತಿಲ್ಲವೆಂದು ಮಂತ್ರಿಗಳು ಉದ್ಘಾಟನಾ ಭಾಷಣದಲ್ಲಿ ಹೇಳಿದರು. ಅಂದೇ ಮಧ್ಯಾಹ್ನ ಬೆಳ್ತಂಗಡಿಯಲ್ಲಿ ಹೊಸ ಸೇತುವೆಯ ಉದ್ಘಾಟನೆಯೂ ಮಂತ್ರಿಗಳಿಂದ ಆಗಬೇಕಾಗಿದ್ದರೂ, ನೆರೆಯಿಂದಾಗಿ ಅ ಕಡೆ ಹೋಗಲಾಗಲಿಲ್ಲ.

ವಿವಾಹ ಸಮಾರಂಭ— ಮಂಗಳೂರು ವಿಜಯ ಬೇಂಕಿನ ಕಾರ್ಯದರ್ಶಿಯರಾದ ಶ್ರೀ ಬಜಾಲ್ ಮಹಾಬಲ ಸೆಟ್ಟರ ಪುತ್ರಿ ಸೌ! ಪ್ರೇಮಲತಾ ಮತ್ತು ಪಟ್ಣ ಮೊಗರು ಶ್ರೀ ಲಕ್ಷ್ಮಣ್ಣ ಸೆಟ್ಟರ ಪುತ್ರ ಶ್ರೀ ಜಯರಾಮ —ಇವರ ವಿವಾಹ ಮಹೋತ್ಸವವು ತಾ. 12 ರಲ್ಲು ಪೂರ್ವಾಹ್ನ ಮಂಗಳೂರು ಜ್ಯೋತಿ ಟಾಕೀಸಿನಲ್ಲಿ ಬಹು. ವಿಜೃಂಭಣೆಯಿಂದ ಜರಗಿತು

ಬೊಂಬಾಯಿಯಲ್ಲಿ ಮೈಸೂರು ಮಂತ್ರಿ ಬಾಳಿಗರು—ಮೈಸೂರು ರಾಜ್ಯದ ಮಜರಾಯಿ ಮತ್ತು ಕಾನೂನು ಮಂತ್ರಿ ಶ್ರೀ ಬಿ ವೈಕುಂಠ ಬಾಳಿಗರಿಗೆ ತಾ. 9ರಂದು ಮುಂಬಯಿಯ ಕೆನರಾ ಬೇಂಕಾ ಅಧಿಕಾರಿಗಳು ಮಾತಂಗದಲ್ಲಿರುವ ಮೈಸೂರು ಎಸೋಸಿಯೇಶನ್ ಭವನದಲ್ಲಿ ಸತ್ಕಾರವಿತ್ತು ಗೌರವಿಸಿದರು

ಆರಂಭದಲ್ಲಿ ಬೇಂಕಿನ ಜಿಲ್ಲಾ ಮೆನೇಜರ್ ಶ್ರೀ ಸಿ. ವಿಶ್ವನಾಥ ಶಾಮರಾಯ ಮಂತ್ರಿಗಳನ್ನು ಸ್ವಾಗತಿಸಿದರು ಶ್ರೀ ಬಿ ನಾರಾಯಣ ಸ್ವಾಮಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ನಗರದ ಪ್ರಮುಖ ಕನ್ನಡಿಗರಾದ ಶ್ರೀ ಆರ್ ವಿ ಎಂಕಟೇಶ ಮತ್ತು ಶ್ರೀ ಕೆ. ಎನ್ ಗ್ಯಾತೊಂಡೆಯವರು ಮುಖ್ಯ ಅತಿಥಿಯ ಸೇವಾ ತತ್ಪರತೆಯನ್ನು ಕೊಂಡಾಡಿ ಭಾಷಣವಿತ್ತರು ಶ್ರೀ ಬಾಳಿಗರು ಮಾತನಾಡುತ್ತಾ, ಮೈಸೂರು ರಾಜ್ಯದಲ್ಲಿ ನಿಯೋಜಿತ ಪಡೆಯ ನಿರ್ಮಾಣ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ತಮ್ಮ ಸರಕಾರವು ರಾಜ್ಯದ ಬಲವಾದ ಬೇಡಿಕೆಗಳನ್ನು ಕೇಂದ್ರ ಸರಕಾರದ ಗಮನಕ್ಕೆ ತರುತ್ತಿದೆ ಎಂದರು. ರಾಜ್ಯದ ಅಭಿವೃದ್ಧಿಗಾಗಿ ಕನ್ನಡಿಗರೆಲ್ಲರೂ ಸಹಕರಿಸಬೇಕೆಂದು ಶ್ರೀ ಬಾಳಿಗರು ವಿನಂತಿಸಿದರು.

ಶಿರುಗುಪ್ಪಾ (ಬಳ್ಳಾರಿ)— ಬಳ್ಳಾರಿ ಜಿಲ್ಲಾ ಶಿರುಗುಪ್ಪಾ ಗ್ರಾಮದಲ್ಲಿ ಶಿರುಗುಪ್ಪ ಕ್ಷಿಣಿಕ್ ಎಂಬ ಹೊಸ ಖಾಸಗಿ ವೈದ್ಯಾಲಯವನ್ನು ತಾ 8ರಲ್ಲು ಡಾ ಆರ್ ಜಿ. ದಾತಾರ್ರ್ ಅವರು ಉದ್ಘಾಟಿಸಿದರು ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಟಿ. ಸುಬ್ರಹ್ಮಣ್ಯಂ, ಎಸ್. ಪಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಶ್ರೀ ಆರ್. ವಿ ದೇಸಾಯಿಯವರು ಸ್ವಾಗತಮಾಡುತ್ತಿದ್ದರು. ಡಾ. ಬಿ. ಆರ್ ಆಚಾರ್ಯ ಮೊದಲಾದವರು ಹೊಸ ಸಂಸ್ಥೆಗೆ ಶ್ರೇಯಸ್ಸನ್ನು ಬಯಸಿ ಮಾತನಾಡಿದರು ಸಭಾಧ್ಯಕ್ಷರು ಮಾತನಾಡುತ್ತಾ, ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಗ್ರಾಮವು ಕೈಗಾರಿಕಾ ಮತ್ತು ವ್ಯವಸಾಯ ದೃಷ್ಟಿಯಲ್ಲಿ ಬೆಳೆದು ಬರುವ ಸಂಭವವಿರುವುದರಿಂದ ಈ ಹೊಸ ವೈದ್ಯಾಲಯವು ತೆರೆಯಲ್ಪಟ್ಟಿದುದು ಸಂತೋಷಕರವೆಂದರು ಅಲ್ಲದೆ ವೈದ್ಯಾಲಯದ ಡಾ. ಕೃಷ್ಣಪ್ಪಯ್ಯನವರಿಗೆ ಶ್ರೇಯಸ್ಸನ್ನು ಕೋರಿದರು

ಮೈಸೂರು ರಾಜ್ಯದಲ್ಲಿ ಪಶು ಸಂವರ್ಧನೆ ಕಾರ್ಯದ ಅಭಿವೃದ್ಧಿ ಅಧಿಕಾರಿಗಳ ಪರಿಷತ್ತಿನಲ್ಲಿ ಮಂತ್ರಿ ಶ್ರೀ ರುದ್ರಪ್ಪನವರ ಭಾಷಣ

ಮೈಸೂರಿನ ಒಕ್ಕಲತನ ಮತ್ತು ಅರಣ್ಯಗಳ ಇಲಾಖೆಯ ಮಂತ್ರಿಗಳಾದ ಶ್ರೀ ಎಚ್. ಎಸ್. ರುದ್ರಪ್ಪನವರು ಪಶು ಸಂವರ್ಧನೆ ಇಲಾಖೆಯ ವಿವಿಧ ಚಟುವಟಿಕೆಗಳನ್ನು ಮಲೆನಾಡು, ಗೆದ್ದೆನಾಡು ಮತ್ತು ಮೈದಾನು ಪ್ರದೇಶಗಳಿಗೆ ಸಕ್ಷಮವಾದ ದೃಷ್ಟಿಯಿಂದ ರಾಜ್ಯದ ಭಾಗೋಲಿಕವಾಗಿ ಭಿನ್ನ ಭಿನ್ನವಿರುವ ಈ ಭಾಗಗಳಿಗಾಗಿ ಯಥೋಚಿತ ಯೋಜನೆಗಳನ್ನು ರೂಪಿಸುವುದು ಅಗತ್ಯವಿದೆಯೆಂದು ಹೇಳಿದರು.

ಮಂತ್ರಿಗಳು ಬೆಂಗಳೂರಿನಲ್ಲಿ ಗುರುವಾರ ದಿನಾಂಕ ೧೧ರಿಂದ ಜರಗುತ್ತಿದ್ದ ಪಶು ಸಂವರ್ಧನೆ ಇಲಾಖೆಯ ಅಧಿಕಾರಿಗಳ ಪರಿಷತ್ತನ್ನು ಉದ್ಘಾಟಿಸುತ್ತ ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಮೇವಿನ ಸಮಸ್ಯೆಯ ಸಂಬಂಧದಲ್ಲಿ ಅಧಿಕಾರಿಗಳ ಲಕ್ಷ್ಯವನ್ನು ಸೆಳೆದು ಹೆಚ್ಚು ಮೇವನ್ನು ಬೆಳೆಯಲು ಯೋಗ್ಯ ಕ್ರಮಗಳನ್ನು ಕೈಕೊಳ್ಳಬೇಕೆಂದೂ ಮತ್ತು ಅರಣ್ಯದಲ್ಲಿ ಬೆಳೆದ ಹುಲ್ಲಿನ ಸಂಗ್ರಹದ ವ್ಯವಸ್ಥೆ ಮಾಡಬೇಕೆಂದೂ ಭಿನ್ನವಿಸಿದರು

ಇದುವರೆಗೆ ದುರ್ಲಕ್ಷಿಸಲ್ಪಟ್ಟ ಕುರಿ ಸಂಗೋಪನಾ ಕೆಲಸದ ಕಡೆಗೆ ಹೊಸ ಮೈಸೂರು ರಾಜ್ಯದಲ್ಲಿ ಹೆಚ್ಚಿನ ಲಕ್ಷ್ಯವನ್ನು ಕೊಡಬೇಕೆಂದು ಮಂತ್ರಿಗಳು ಹೇಳಿದರು ದನಕರುಗಳ ಫಾರ್ಮುಗಳು ಅವರಲ್ಲೂ ವಿಶೇಷವಾಗಿ ಅಮೃತ ಮಹಲ್ ತಳಿಯ ಫಾರ್ಮುಗಳನ್ನು ಪುನರ್ಘಟಿಸಬೇಕೆಂದೂ ಅವುಗಳನ್ನು ಇಂದಿಗಿಂತ ಹೆಚ್ಚು ಲಾಭದಾಯಕವಾಗಿ ನಡೆಸಬೇಕೆಂದೂ ತಿಳಿಸಿದರು. ಕೃತ್ರಿಮ ಗರ್ಭಧಾರಣೆ ಕೇಂದ್ರಗಳ ಕೆಲಸದ ಪ್ರಗತಿಯನ್ನು ತ್ವರಿತಗೊಳಿಸಬೇಕು ಮತ್ತು ಈ ಯೋಜನೆಯ ಸಾಫಲ್ಯದ ಬಗ್ಗೆ ಪ್ರಚಾರಮಾಡಿ ಹಳ್ಳಿಗರ ಮನವೊಲಿಸಿ ಅವರ ಸಹಕಾರವನ್ನು ಪಡೆಯಬೇಕು ಎಂದು ಅಧಿಕಾರಿಗಳನ್ನು ಕೇಳಿಕೊಂಡರು. ದನಗಳ ತಳಿ ಸುಧಾರಣೆಗಾಗಿ ಸರಕಾರವು ಈ ವರ್ಷ ಹಳ್ಳಿಗಳಲ್ಲಿ ಇಂಥ ಬೀಜದ ಹೋರಿಗಳನ್ನು ಪಂಚಬೇಕೆಂದಿದೆಯೆಂದು ಮಂತ್ರಿಗಳು ಅರುಹಿದರು

ಪ್ರಾರಂಭದಲ್ಲಿ ಮಂತ್ರಿಗಳನ್ನು ಸ್ವಾಗತಿಸುತ್ತ ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಇಲಾಖೆಯ ಡೈರೆಕ್ಟರರಾದ ಡಾ. ಕೆ ಎಸ್ ಚೆಟ್ಟಿಯವರು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿಯ ಇಲಾಖೆಯ ಸಂಘಟನೆಯನ್ನು ಸ್ಥಾಪಿಸಿಕೊಟ್ಟಿರುವ ಹೈದರಾಬಾದು ಮತ್ತು ಮುಂಬಯಿಕರ್ನಾಟಕ ಭಾಗಗಳಲ್ಲಿ ಮತ್ತು ದಕ್ಷಿಣ ಕನ್ನಡದಲ್ಲಿ ಪಶುವೈದ್ಯಕೀಯ ಸಂಸ್ಥೆಗಳ ಸಂಖ್ಯೆಯನ್ನು ಹೆಚ್ಚಿಸುವ ಮತ್ತು ಈಗ ಇದ್ದ ಸಂಸ್ಥೆಗಳಲ್ಲಿ ಒಳ್ಳೆಯ ಸಾಧನ ಸಲಕರಣೆ ಮತ್ತು ನುರಿತ ಸಿಬ್ಬಂದಿಯನ್ನು ಒದಗಿಸುವ ಆವಶ್ಯಕತೆಯನ್ನು ಒತ್ತಿ ಹೇಳುತ್ತ ಡಾ. ಚೆಟ್ಟಿಯವರು ಬೇಸಿಯಿಂದ ಬಳಲುವ ದನಕರುಗಳಿಗೆ ಉಪಚಾರಕ್ಕೆ ಪ್ರವರ್ಧಿಸ್ಪೇ ಇಲಾಖೆಯು ತೃಪ್ತಿ ಪಡದೆ ಪಶು ಸಂಪತ್ತಿನ ಸುಧಾರಣೆಯತ್ತ ಹೆಚ್ಚಿನ ಗಮನ ನೀಡಬೇಕಾಗಿದೆಯೆಂದು ನುಡಿದರು. ರಾಜ್ಯದಲ್ಲಿ ಒಂದು ಪಶುವೈದ್ಯಕೀಯ ಆಲೇಜನ್ನು ಸ್ಥಾಪಿಸಬೇಕೆಂದೂ ಅವರು ಕೇಳಿಕೊಂಡರು.

ಹಳೆಯ ಆರಾಧನಾ ಕಚೇರಿಯಲ್ಲಿ ನಡೆದಿರುವ ಈ ಸಮ್ಮೇಳನಕ್ಕೆ ಪಶುವೈದ್ಯಕೀಯ ಇಲಾಖೆಯ ೪೫ ಅಧಿಕಾರಿಗಳು ಉಪಸ್ಥಿತರಾಗಿದ್ದರು. ಗೃಹ, ಅರಣ್ಯ ಮತ್ತು ವ್ಯವಸಾಯ ಇಲಾಖೆಗಳ ಕಾರ್ಯದರ್ಶಿ ಶ್ರೀ ಆರ್. ಜಿ. ಕೆಬೆಲೊ ಅವರೂ ಉದ್ಘಾಟನಾ ಅಧಿವೇಶನದಲ್ಲಿ ಹಾಜರಿದ್ದರು.

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನಗಳು

ಟ್ರೇಡ್ ಮಾರ್ಕ್



ಸಂತಾನ ಸಿಂದೂರ (ಸ್ತ್ರೀಯರಿಗೆ ಪ್ಯಾಕೆಟ್) | ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಪ್ರಸಿದ್ಧ ಬಹುಸ್ಥೈರ್ಯ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ

"ಮದನ ವಿಲಾಸ" ಗುಳಿಗೆಗಳು ಅತ್ಯುತ್ಕೃಷ್ಟ ಶಕ್ತಿವರ್ಧಕ, ಸ್ವಪ್ನ ಮತ್ತು ಶೀಘ್ರ ಸ್ಖಲನ-ಅನ್ನತತೆಗಳನ್ನು, ಪ್ರಮೇಹಾಣುಗಳನ್ನು

ಸಂ|| A R ಅಯ್ಯರ್ ವೃದ್ಧಿಸಿ, ಸಪುಂಸಕತೆಯನ್ನು ನಾಶಮಾಡಲೇಸೆಗೊಳಿಸುತ್ತದೆ

ದಂಪತಿಗಳಾಗಿ 16-16 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ. ರೋಗಿಯ ವಯಸ್ಸು ಮತ್ತು ಬಾಯಿಯಲ್ಲಿ ವಿವರಗಳನ್ನು ಬರೆದು 4 ಆಣೆ (25 N P) ಸ್ಟಾಂಪು ಕಳಿಸಿರಿ ಸಲಹೆಯೊಡನೆ ಕ್ಯಾಟಲಾಗ್ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ. (ನ ಯು)

628, "ಸಂತಾನ ಸಿಂದೂರ ಸದನ", ಚಾಮರಾಜ ರೋಡ್ ಮೈಸೂರು-1 (S.I

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ

ಅಣು ಶಕ್ತಿಯ ಸಹಿತ ವಿವೇಚನಾ ಗ್ರಂಥ

ಹಿರೋಶಿಮಾದಿಂದ ಜಿನೇವ

ಬರೆದವರು:

ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ ಎ, ನವದೆಹಲಿ ಮುನ್ಸುಂಸಿಕಾರರು ಶ್ರೀ. ಶಿವರಾಮ ಕಾರಂತರು.

ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ

ಉತ್ತಮ ಕಾಗದ. ಬೆಲೆ. ರೂ ೧—೮—೦.

ನವಯುಗ ಪ್ರೆಸ್, ಉಡುಪಿ

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಬೆಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು

ನಿರಖು ರೇವಣಾತಿ.		
3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

PHONE 203 ESTD 1926

FOUNDATION STONE

Engraved MARBLE TABLETS (GOLD FILLED & LEAD FILLED)

Crown RUBBER STAMP CO. RAI MATTA ROAD, MANGALORE.

ಸರ್ವೋದಯ ಕ್ಷೇತ್ರ

ಅಂದು ಹಿಂದುಳಿದ ಹಳ್ಳಿಗಳು ಹೊಸ ಹುಮ್ಮಸದಿಂದ ಇಂದು ನಲಿಯುತ್ತಿವೆ!

ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಸರ್ವೋದಯ ಧ್ಯೇಯವನ್ನು ಕೃತಿಗಿಳಿಸಿ ಹಳ್ಳಿಗಳ ಜನಜೀವನದಲ್ಲಿ ವಿಚಾರ ಹಾಗೂ ಕ್ರಾಂತಿಯನ್ನು ಸಾಧಿಸಿ, ಗಾಂಧೀಜಿಯವರ ಕನಸನ್ನು ನನಸನ್ನಾಗಿಸುವ ಉಚ್ಚ ಉದ್ದೇಶದಿಂದ ರಾಜ್ಯ ಸರಕಾರವು ೧೯೫೪ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ವೋದಯ ಯೋಜನೆಯನ್ನು ಪ್ರಾರಂಭಿಸಿತು. ಇದರ ಕಾರ್ಯಕ್ಷೇತ್ರವಾಗಿ ಅಂಕೋಲಾ ತಾಲೂಕಿನ ೪೦ ಹಿಂದುಳಿದಹಳ್ಳಿಗಳನ್ನು ಆರಿಸಲಾಯಿತು.

ಜನತೆಯ ಸಕ್ರಿಯ ಸಹಕಾರ, ಅಧಿಕಾರಿಗಳ ಹಾರ್ದಿಕ ಸಹಾನುಭೂತಿ, ಗಾಂಧಿ ತತ್ವದಲ್ಲಿ ಅಚಲ ಶ್ರದ್ಧೆಯುಳ್ಳ ಕಾರ್ಯಕರ್ತರ ಸತತ ಶ್ರಮದ ಫಲವಾಗಿ ಈಗ ಸರ್ವೋದಯ ಹಳ್ಳಿಗಳಲ್ಲಿ ನವಚೇತನ ಕಂಡುಬರುತ್ತಿದೆ.

ಸರ್ವೋದಯದ ಶಿಕ್ಷಣ ಕ್ಷೇತ್ರದಲ್ಲಿ ಗಾಂಧೀಜಿಯವರ ಮೂಲೋದ್ಯೋಗ ಶಿಕ್ಷಣಕ್ಕೆ ಪ್ರಾಧಾನ್ಯ ಇದೆ. ಈ ದೃಷ್ಟಿಯಿಂದ ಸರ್ವೋದಯ ಸಂಚಾಲಕರು ನಾಲ್ಕು ಪ್ರಾಥಮಿಕ ಶಾಲೆಗಳನ್ನು ತಮ್ಮ ಅಧೀನದಲ್ಲಿ ತೆಗೆದುಕೊಂಡು ಅಲ್ಲಿ ಜೀವನ ಶಿಕ್ಷಣವನ್ನು ಪ್ರಾರಂಭಿಸಿದರು ಜೀವನ ಶಿಕ್ಷಣ ಶಾಲೆಗಳಲ್ಲಿ ಒಕ್ಕಲತನವನ್ನು ಮುಖ್ಯ ಮೂಲೋದ್ಯೋಗವನ್ನಾಗಿಯೂ, ನೂಲುವದನ್ನು ಸಹಾಯಕ ಮೂಲೋದ್ಯೋಗವನ್ನಾಗಿಯೂ ಆರಿಸಿಕೊಳ್ಳಲಾಯಿತು. ಈ ಉಪಕ್ರಮವನ್ನು ಪ್ರಾರಂಭಿಸಿದಾಗ ನಾಲ್ಕರಲ್ಲಿ ಒಂದು ಶಾಲೆಯು ಮಾತ್ರ ಪೂರ್ಣ ಪ್ರಾಥಮಿಕ ಶಾಲೆಯಾಗಿತ್ತು. ಈಗ ನಾಲ್ಕು ಪೂರ್ಣ ಪ್ರಾಥಮಿಕ ಶಾಲೆಗಳಾಗಿ ವಿಕಾಸಗೊಂಡಿವೆ. ವಿದ್ಯಾರ್ಥಿಗಳ ಸಂಖ್ಯೆಯೂ ಬಹಳಷ್ಟು ಹೆಚ್ಚಿದೆ.

ಈ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ೩೪ ಕೋಣೆಗಳುಳ್ಳ ೧೪ ಶಾಲಾ ಕಟ್ಟಡಗಳು. ಜನತೆಯ ಶ್ರಮದಿಂದ ನಿರ್ಮಿತವಾಗಿವೆ. ಬಾಲಕರ ವಿಕಾಸ ಮತ್ತು ಹಿತಸಾಧನೆಯನ್ನು ನೋಡಿಕೊಳ್ಳುವದಕ್ಕಾಗಿ ಎರಡು 'ಬಾಲವಾಡಿ'ಗಳನ್ನು ಕಸ್ತೂರ್ಬಾ ವಿದ್ಯಾಲಯದಲ್ಲಿ ತರಬೇತಿಯನ್ನು ಪಡೆದ ಸೇವಿಕೆಯರ ನೇತೃತ್ವದಲ್ಲಿ ನಡೆಸಲಾಯಿತು.

ವ್ಯಾಪಕ ಲೋಕ ಶಿಕ್ಷಣದ ಅಂಗವಾಗಿ ಪ್ರೌಢ ಶಿಕ್ಷಣ ವರ್ಗಗಳನ್ನು ನಡೆಸಿದ್ದಕ್ಕಾಗಿ ಪ್ರಾಥರಿಗೆ ಹಿತಕರ ಸಾಹಿತ್ಯವನ್ನು ಒದಗಿಸುವುದಕ್ಕೆ ಎರಡುವರೆ ಸಾವಿರ ಪುಸ್ತಕಗಳುಳ್ಳ ಒಂದು ಸಂಚಾರಿ ಗ್ರಂಥಾಲಯವನ್ನೂ ಏರ್ಪಡಿಸಲಾಗಿದೆ. ಸಾವಿರಾರು ಹಳ್ಳಿಗರು ಇದರ ಲಾಭವನ್ನು ಪಡೆಯುತ್ತಿರುವರು.

ಗ್ರಾಮೋದ್ಯೋಗಗಳಲ್ಲಿ ಖಾದಿ ಉತ್ಪತ್ತಿಗೆ ಮಹತ್ವದ ಸ್ಥಾನ ಕೊಡಲಾಗಿದೆ. ಸ್ವಾವಲಂಬನೆದ ದೃಷ್ಟಿಯಿಂದ ೩೫ ಅಂಬರ ಚರಕಾಗಳನ್ನು ಪೂರೈಸಲಾಗಿದೆ. ೩ ಕುಟುಂಬಗಳಿಗೆ ಅಂಬರ ಚರಕಾದ ತರಬೇತಿಯನ್ನು ಕೊಡಲಾಗಿದೆ. ಐದು



ಅಣು ಬಾಂಬು ಜಲಜನಕ ಬಾಂಬುಗಳ ಹಾನಿಯನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ, ಅನುಭವಿಸುತ್ತಿದ್ದೇವೆ. ವಿಚಿತ್ರ ಶಕ್ತಿಯುಕ್ತವೆನಿಸಿದ ಅಣುವಿನಿಂದ ತನಗೆ ಹಾನಿಯನ್ನಾಗಲೀ ಲಾಭವನ್ನಾಗಲೀ ಮಾನವನೇ ಮಾಡಿಕೊಳ್ಳಬಹುದು. ವಿಶ್ವದ ನಾಶಕ್ಕೆ ಒಂದೆಡೆಯಲ್ಲಿ ಅಣುಶಕ್ತಿಯನ್ನು ಉಪಯೋಗಿಸುತ್ತಿರುವ ಪೇಳೆಯಲ್ಲಿಯೇ ಮತ್ತೊಂದೆಡೆಯಲ್ಲಿ ಲೋಕೋಪಕಾರಕ್ಕಾಗಿ ಅದನ್ನು ಬಳಸಲಾಗುತ್ತಿದೆ. ಚಿತ್ರದಲ್ಲಿ ಅಣುಶಕ್ತಿಯಿಂದ ಚಲಿಸುವ ಜಲಾಂತರ್ಗಾಮಿಯೊಂದನ್ನು ಕಾಣಬಹುದು. ಇದನ್ನು ಅಮೇರಿಕದ ಸಂಯುಕ್ತ ರಾಷ್ಟ್ರದಲ್ಲಿ ನಿರ್ಮಿಸಲಾಗಿದೆ.

ಜನರಿಗೆ ಖಾದಿ ನೇಯ್ಗೆಯ ಶಿಕ್ಷಣವನ್ನು ಕೊಟ್ಟು ಐದು ಕೈಮಗ್ಗಗಳನ್ನು ಅಲ್ಲಲ್ಲಿಟ್ಟು, ಖಾದಿ ನೇಯಲಾಗುತ್ತದೆ. ೩೦೦ ಜನರು ಸಾದಾ ಚರಕದ ಮೇಲೆ ನೂಲುತ್ತಾರೆ.

ಸುಮಾರು ೩೦೦ ಹೆಳ್ಳಯ ಬಾಲಿಕೆಯರಿಗೆ ಕೈಹೊಲಿಗೆಯನ್ನು ಕಲಿಸಲಾಯಿತು. ೨೫ ಜನರಿಗೆ ಹೊಲಿಗೆ ಯಂತ್ರದ ಮೇಲೆ ಹೊಲಿಯಲು ಕಲಿಸಲಾಯಿತು ಹಲವಾರು ಜನರಿಗೆ ಸುಧಾರಿಸಿದ ರೀತಿಯ ಕತ್ತದ ಉದ್ಯೋಗವನ್ನು ಕಲ್ಪಿಸಿ ಕೊಡಲಾಗಿದೆ.

ಸರ್ವೋದಯ ಕ್ಷೇತ್ರದಲ್ಲಿ ೪೫೫ ಕುಟುಂಬಗಳು ಜೇನು ಸಾಕುವುದನ್ನು ಉಪವ್ಯವಸಾಯವನ್ನಾಗಿ ಕೈಕೊಂಡಿವೆ ಇದರಿಂದ ಅವರಿಗೆ ವರ್ಷಂಪ್ರತಿ ಮೂರು ಸಾವಿರ ರೂಪಾಯಿಗಳ ಉತ್ಪನ್ನ ಬರುತ್ತದೆ. ಪ್ರತಿಯೊಂದು ಮನೆಯಲ್ಲಿಯೂ ಎಂಬಂತೆ ಕೈಯಿಂದ ಒತ್ತ ಕುಟ್ಟುವ ಉದ್ಯೋಗ ನಡೆಯುತ್ತಿದೆ.

ಜನರು ಆರೋಗ್ಯದ ನಿಯಮಗಳನ್ನು ತಿಳಿದು ನಡೆಯುವಂತೆಯೂ ಅಪ್ಪಿ ತಪ್ಪಿ ರೋಗ ಬಂದರೆ ಸುಲಭ ಹಾಗೂ ನೈಸರ್ಗಿಕ ಉಪಾಯಗಳಿಂದ ಗುಣಪಡಿಸುವಂತೆಯೂ ಜನತೆಗೆ ಬೋಧನೆ ಕೊಡಲಾಗುತ್ತದೆ ಇದರಲ್ಲಿ ನಿಸರ್ಗ ಚಿಕಿತ್ಸೆಗೇ ಪ್ರಾಧಾನ್ಯ. ಇಲ್ಲಿಯ ನಿಸರ್ಗ ಚಿಕಿತ್ಸಾ ಕೇಂದ್ರವು ಕಳೆದ ಮೂರು ವರುಷಗಳಲ್ಲಿ ೩೦೦ ರೋಗಿಗಳನ್ನು ಗುಣಪಡಿಸಿದೆ. ಕಲವಾರು ಜನರಿಗೆ ನಿಸರ್ಗ ಚಿಕಿತ್ಸೆಯಲ್ಲಿ ತರಬೇತಿಯನ್ನೂ ಕೊಡುತ್ತದೆ.

ಮೂವರು ಸುರಿತ ದಾಯಿಯವರು ವರ್ಷಂಪ್ರತಿ ಸರಾಸರಿ ೩,೦೦೦ ರೋಗಿಗಳನ್ನು ಉಪಚರಿಸುತ್ತಾರೆ ೧೫೦೧೫೦ ಬಾಣಂತಿಯರಿಗೆ ಹೆರಿಗೆಯಲ್ಲಿ ಸಹಾಯ ಸ್ಮರುವರು ಹರಿಜನ ಕೇರಿ ಹಾಗು ಹಿಂದುಳಿದ ಹಳ್ಳಿಗಳಲ್ಲಿ ೨೨ ಬಾವಿಗಳನ್ನು ರಚಿಸಿ ಕುಡಿಯುವ ನೀರಿನ ಸೌಕರ್ಯ ಒದಗಿಸಲಾಗಿದೆ.

ಈ ವರೆಗೆ ೨೦ ಮೈಲುದ್ದದ ೨೯ ರಸ್ತೆಗಳನ್ನು ಒಳನಾಡಿನಲ್ಲಿ ರಚಿಸಲಾಗಿದ್ದು ಇವುಗಳಿಂದಾಗಿ ೩೭ ಹಳ್ಳಿಗಳಲ್ಲಿ ಅಂತರ್ಸಾರಿಗೆಯು ಶಕ್ಯವಾಗಿದೆ. ಇದಕ್ಕೆ ತಗಲಿದ ೯೫,೦೦೦ ರೂಪಾಯಿಗಳಲ್ಲಿ ಜನತೆಯು ೪೫,೦೦೦ ರೂಪಾಯಿಗಳನ್ನು ವಂತಿಗೆ, ಶ್ರಮದಾನಗಳಿಂದ ಸೂರೈಸಿದೆ.

ಒಕ್ಕಲುತನಕ್ಕೆ ನೀರಿನ ಸೌಕರ್ಯವನ್ನು ಒದಗಿಸಲು ೬೮ ಕೆರೆಗಳನ್ನು ದುರಸ್ತಿ ಮಾಡಲಾಯಿತು. ೧೨ ಬಂಧಾರಾಗಳನ್ನು ೭ ಕಾಲುವೆಗಳನ್ನು ಕಟ್ಟಲಾಗಿದೆ. ಇವುಗಳಿಂದಾಗಿ ಸುಮಾರು ೮೦೦ ಎಕರೆ ಭೂಮಿಗೆ ನೀರಿನ ಆಸರೆ ದೊರೆತಿದೆ.

ಗೋಪ್ರಗಳ ತಳಿ ಸುಧಾರಿಸಲು ೩ ಜನಾರಿ ಬೀಜದ ಯೋರಿಗಳನ್ನು ಇಡಲಾಗಿದೆ. ಮೊರಳ್ಳಿಯಲ್ಲಿಯ ಗೋ ಸಂವರ್ಧನ ಸಂಘವು ದನಗಳ ಪೀಳಿಗೆ ಸುಧಾರಿಸಲು ಪ್ರಯೋಗ ನಡೆಸುತ್ತದೆ.

ಪ್ರತಿವರುಷ ಹಿಚಕಡದಲ್ಲಿ ಒಕ್ಕಲು ಕನ ಮತ್ತು ಗ್ರಾಮೋದ್ಯೋಗಗಳ ಪ್ರದರ್ಶನ ನಡೆಸಲಾಗುತ್ತದೆ.

ಜನರು ಜಪಾನಿ ಪದ್ಧತಿಯಿಂದ ಒತ್ತ ಬೆಳೆಸುತ್ತಿದ್ದಾರೆ. ಪಾಲಪೂತ್ರಗಳಿಂದ ಗೊಬ್ಬರವನ್ನು ತಯಾರಿಸುತ್ತಾರೆ. ಕಂಪೋಸ್ಟ ಗೊಬ್ಬರವನ್ನು ಒದಗಿಸಿಕೊಳ್ಳುವಲ್ಲಿ ಅಸ್ಥೆ ವಹಿಸಿದ್ದಾರೆ ವನಮಹೋತ್ಸವದಲ್ಲಿ ಸಾವಿರಾರು ಹಣ್ಣಿನ ಗಿಡಗಳನು ಪ್ರತಿವರುಷವೂ ನೆಡಲಾಗುತ್ತಿದೆ.

ಕಟ್ಟಿಗೆಯ ಉದ್ಯೋಗದಲ್ಲಿ ಮಧ್ಯಸ್ಥರನ್ನು ಇಲ್ಲದಂತೆ ಮಾಡುವ ಉದ್ದೇಶದಿಂದ ಈ ವರೆಗೆ ೬ ಅರಣ್ಯ ಕೂಲಿಕಾರರ ಸಹಕಾರಿ ಸಂಘಗಳು ಸರ್ವೋದಯ ಸಂಚಾಲಕರಿಂದ ಪುರಸ್ಕೃತವಾಗಿವೆ. ಇದಲ್ಲದೆ ಭತ್ತ ಕುಟ್ಟುವವರ ಸಹಕಾರಿ ಸಂಘಗಳು, ವಿವಿಧೋದ್ದೇಶ ಸಹಕಾರಿ ಸಂಘಗಳು, ಮನೆಕಟ್ಟುವ ಸಹಕಾರಿ ಸಂಘಗಳು ಗ್ರಾಮ ಪಂಚಾಯಿತಿಗಳನ್ನು ಸಂಘಟಿಸಲಾಗಿದ್ದು, ಇವೆಲ್ಲವೂ ಪ್ರಗತಿಪಥದಲ್ಲಿ ಮುನ್ನಡೆದಿವೆ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ 8/- (ವಿ.ಪಿ.ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ಟರು ಷಾ ಕಂಪೆನಿ, ಮಂಗಳೂರು—1.

ಪ್ರಗತಿ ಪಥ

(೨ನೇ ಪುಟದಿಂದ)

ಮಿಲ್ಸ್ ಜಗದ್ರಿ ಸಂಬಾಬ ಇವರೊಡನೆ ಪರ್ಯಾಲೋಚಿಸುತ್ತಿದೆ. ಅವರು ಒದಗಿಸಿದ ಕಾಗದವು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಲ್ಪಟ್ಟು ಜಯಶೀಲವಾಯಿತು. ಈಗ ಈ ಕಾಗದದ ಉತ್ಪಾದನೆಯನ್ನು ಮುಂದುವರಿಸಲು ಪ್ರಯತ್ನಪಡಲಾಗುತ್ತಿದೆ.

೧೯೫೬-೫೭ರಲ್ಲಿ ಕೆಲಸಗಾರರಿಗಾಗಿ ೮೬ ವಸತಿ ಗೃಹಗಳನ್ನು ಹೊಸದಾಗಿ ಕಟ್ಟಿಸಲಾಯಿತಲ್ಲದೆ, ಕೆಲವು ವಸತಿ ಗೃಹಗಳ ರಚನೆಯಾಗುತ್ತಿದೆ. ಸುಸಜ್ಜಿತ, ನವೀನ ಪದ್ಧತಿಯ ಔಷಧಾಲಯವೊಂದನ್ನು ನಿರ್ಮಿಸಿ ಕೆಲಸಗಾರರಿಗೆ ವೈದ್ಯಕೀಯ ಸೌಕರ್ಯಗಳನ್ನು ಒದಗಿಸಲಾಗಿದೆ. ಒಂದು ಕೇಂಟೀನು ಸಹ ಕೂಲಿಗಾರರ ಸಲುವಾಗಿ ಇರುತ್ತದೆ.

೧೯೫೬ರ ಮಾರ್ಚಿ ತಿಂಗಳ ಲೆಕ್ಕಪತ್ರಗಳಂತೆ, ಈ ಕಂಪೆನಿಯ ಆದಾಯವು ೧೪,೧೩,೬೮೨ ರೂಪಾಯಿಗಳಾಗಿದ್ದು ವ್ಯಯವು ೮,೦೦೭, ೧೩ ರೂಪಾಯಿಗಳೆತ್ತು. ಹೀಗಾಗಿ ಒಟ್ಟು ರೂ ೬ ೦೬,೫೯೯ ಏನ್ ಲಾಭವು ದೊರಕಿತ್ತು.

ಪ್ರಗತಿ ಪಥದಲ್ಲಿ ಸಾಗುತ್ತಿರುವ ಭಾರತದ ಅಮೂಲ್ಯ ಆಸ್ತಿಗಳಲ್ಲಿ ಈ ಹಿಂದೂಸ್ತಾನ್ ಕೇಬಲ್ಸ್ ಸಹ ಒಂದು. ಇದು ಪರದೇಶಗಳಿಗೆ ಸುರಿಯುವ ಹಲವು ವಿನಿಮಯ ನಾಣ್ಯವನ್ನು ನಮಗಾಗಿ ಉಳಿಸಿ, ಆರ್ಥಿಕ ಮಿತವ್ಯಯದೊಂದಿಗೆ ನಮ್ಮ ಅಂಚೆ ಮತ್ತು ತಂತಿ ಇಲಾಖೆಯ ಅವಶ್ಯಕತೆಗಳನ್ನು ತ್ವರಿತಗತಿಯಿಂದ ಪೂರೈಸಿ ಕೊಡುತ್ತದೆ. ಇಂತಹ ಹಲವಾರು ಕಂಪೆನಿಗಳು ಭಾರತಕ್ಕೆ ಇಂದು ಬೇಕಾಗಿವೆ

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಪ್ರಾಥಮಿಕ ಶಿಕ್ಷಣ

ಹಿಂದುಳಿದ ವರ್ಗಗಳಲ್ಲಿ ಶಿಕ್ಷಣಾಸಕ್ತಿ ಹೆಚ್ಚಬೇಕು— ಅಧ್ಯಾಪಕರ ಸ್ಥಿತಿಯನ್ನು ಉತ್ತಮವಾಗಿರಿಸಬೇಕು.

ನಮ್ಮ ಕೇಂದ್ರ ಸರಕಾರದ ಶಿಕ್ಷಣ ಶಾಖೆಯು, ರಾಜ್ಯ ಘಟನೆಯಲ್ಲಿ ನಿರೂಪಿಸಿದಂತೆ, ೧೯೬೦ರೊಳಗೆ ದೇಶದಲ್ಲಿನ ೬–೧೪ ವರ್ಷದ ಮಕ್ಕಳಿಗೆ ಒತ್ತಾಯದ ಪ್ರಾಥಮಿಕ ಶಿಕ್ಷಣ ಕೊಡಿಸಲು ಅವಶ್ಯವುಳ್ಳ ಕಾರ್ಯಕ್ರಮ ಕೈಗೊಳ್ಳುವರೆ ಒಂದು ಪ್ರಾತಿನಿಧಿಕ ಶಿಕ್ಷಣ ತಜ್ಞರ ಮಂಡಲವನ್ನು ಇದೇ ಜುಲ್ಯಾ ೧೧ರಿಂದ ನೇಮಿಸಲು ನಿರ್ಣಯಿಸಿರುವುದು ಸ್ತುತ್ಯವೇ ಸರಿ ಇನ್ನು ಈ ಮಂಡಲಕ್ಕೆ ತನಗೊಪ್ಪಿಸಿದ ಕಾರ್ಯವನ್ನು ಯಶಸ್ವಿಗೊಳಿಸಲು ಇರುವ ಅಧಿಕಾರದ, ಹಣದ ವ್ಯವಸ್ಥೆ, ಮಂಡಲದ ಕಾರ್ಯ ವಿಧಾನ ಇತ್ಯಾದಿಗಳ ಕುರಿತು ನಾವಿನ್ನೂ ತಿಳಿಯಬೇಕಷ್ಟೆ.

ಪ್ರಾಥಮಿಕ ಶಿಕ್ಷಣವು ಮುಂದಿನ ಎಲ್ಲಾ ಉಚ್ಚ ಶಿಕ್ಷಣಗಳ ನೆಲಗಟ್ಟು; ಮಾತ್ರವಲ್ಲ ನಮ್ಮ ರಾಷ್ಟ್ರವು ಸಂಸ್ಕೃತಿಹಾಗೂ ಸ್ವಾವಲಂಬಿಯಾಗಲು ರಾಷ್ಟ್ರದಲ್ಲಿನ ಬಹುಸಂಖ್ಯಾಕರು ಪ್ರಾಥಮಿಕ ಶಿಕ್ಷಣವನ್ನಾದರೂ ಪಡೆಯದಿದ್ದರೆ ಅಸಾಧ್ಯ. ಈ ವಿಚಾರದ ಪೂರ್ಣ ಜ್ಞಾನವಿದ್ದೂ ನಮ್ಮ ಮಂದಾಳುಗಳು ಸ್ವರಾಜ್ಯ ಸಿಕ್ಕಿದ ಮೇಲೂ ಈ ವಿಚಾರದ ಕಡೆಗೆ ಸಾಕಷ್ಟು ಲಕ್ಷ್ಯ ಕೊಡದಿರುವುದು ವಿಷಾದಕರ. ಈಗಲಾದರೂ ನೇಮಿಸಿರುವ ಈ ಪ್ರಾಥಮಿಕ ಶಿಕ್ಷಣ ಮಂಡಲದಲ್ಲಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ ಉತ್ಸಾಹ ಸೂರ್ಯಕಾಂತದಿಂದ ಅನುಭವ ಪಡೆದಿರುವ ಅಧಿಕಾರಿಗಳಿಗೆ ಹಾಗೂ ಶಿಕ್ಷಣ ತಜ್ಞರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡುವುದು ಅತ್ಯವಶ್ಯ. ಸದ್ಯದ ಪ್ರಾಥಮಿಕ ಶಿಕ್ಷಣ ಸಿಂಹಾವಲೋಕನ ಮಾಡುವುದ ಸಹ ಈ ಮಂಡಲದ ಮುಖ್ಯ ಕೆಲಸ. ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಸರಕಾರಿಯಾ ಜನತೆಯು ಇಚ್ಛಿಸಿದಷ್ಟು ಪ್ರಗತಿ ಹೊಂದದಿರಲು ಕೆಲವು ಮುಖ್ಯ ಕಾರಣಗಳಿವೆ.

ಮುಂದಿನ ಜನಾಂಗವನ್ನು ತಿದ್ದಿರೂಪಿಸುವ ಪವಿತ್ರ ಜವಾಬ್ದಾರಿಯು ಶಿಕ್ಷಕನದ್ದಾಗಿದೆ ಆದರೆ ಈ ಮಹತ್ವದ ಕಾರ್ಯವನ್ನು ನಿರ್ವಹಿಸುವ ಶಿಕ್ಷಕರು ಇಂದು ಅರ್ಧಿಕವಾಗಿ ಕೆಳಮಟ್ಟದಲ್ಲಿದ್ದುದರಿಂದ ತೀರಾ ಅತೃಪ್ತಿಯಲ್ಲಿದ್ದಾರೆ. ಯುದ್ಧಪೂರ್ವಕ್ಕಿಂತ ಅವರ ವೇತನ ಪ್ರಮಾಣವು ಶುಟ್ಟಿ ಭತ್ತಿ ಸೇರಿ ಮೂರು ಪಾಲಷ್ಟು ಹೆಚ್ಚಿದ್ದರೆ ಅವರಿಗೆ ಅತ್ಯವಶ್ಯವಾದ ಜೀವನಾವಶ್ಯಕ ಸಾಮಗ್ರಿಗಳ ಬೆಲೆಯು ೬–೭ ಪಾಲಷ್ಟು ಏರಿವೆ ಇನ್ನು ಪ್ರಾಥಮಿಕ ಶಾಲೆಗಳಾದರೋ ಅನೇಕ ವಿಧವುಗಳು. ಅವುಗಳಲ್ಲಿ ಕೆಲಸ ಮಾಡುವ ಶಿಕ್ಷಕರ ಶಿಕ್ಷಣ ಮಟ್ಟವು ಸಮಾನ ವಯೋಮಾನದಾದರೂ ವೇತನ ಪ್ರಮಾಣದಲ್ಲಿ ತುಂಬಾ ವ್ಯತ್ಯಾಸ, ಹೀಗಾಗಿ ಶಿಕ್ಷಕ ವರ್ಗದಲ್ಲಿ ಅಸಂತುಷ್ಟಿ ಕ್ಷೋಭೆಗಳು ಕಡಿಮೆ ಇಂತಹ ಶಿಕ್ಷಕ ವರ್ಗದಿಂದ ಪ್ರಾಥಮಿಕ ಶಿಕ್ಷಣದಲ್ಲಿ ಯೋಗ್ಯ ಪ್ರಗತಿಯನ್ನು ಅಪೇಕ್ಷಿ[illegible]

೧೯೪೭ರಲ್ಲಿಯೇ ದ. ಕನ್ನಡ ಜಿಲ್ಲೆಯಲ್ಲಿ ಮನ್ರಾಸು ಸರಕಾರವು ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಕೆಲವು ಕ್ಷೇತ್ರಗಳಲ್ಲಿ ಜ್ಯಾರಿಗೆ ತಂದು, ಡಂಗುರದ ಮೂಲಕವಾಗಿ ಅದರ ನಿಯಮಗಳನ್ನು ಜನರಿಗೆ ತಿಳಿಸಿತು. ಶಾಲೆಗೆ ಮಕ್ಕಳನ್ನು ಕ್ರಮವಾಗಿ ಕಳಿಸದಿದ್ದರೆ ಜುಲ್ಮಾನೆಯನ್ನೂ ಜ್ಯಾರಿ ಪಡಿಸಿತು. ಅವಶ್ಯವಿರುವಲ್ಲೆಲ್ಲಾ ಹೊಸ ಶಾಲೆಗಳನ್ನು ತೆರೆದು ೧೯೪–೫೬ರ ವರೆಗೆ ಅವಶ್ಯವಿರುವಷ್ಟು ಅಧ್ಯಾಪಕರನ್ನೂ ತರಬೇತಿ ಗೊಳಿಸಿ ನೇಮಿಸಿತು. ಪ್ರಾರಂಭದಲ್ಲಿ ಹತ್ತವರು ಜುಲ್ಮಾನೆಯ ಹೆದರಿಕೆಯಿಂದ ಮಕ್ಕಳನ್ನು ಶಾಲೆಗೆ ಕಳಿಸಿದರು ಶಾಲೆಗಳು ತುಂಬಿಹೋದವು. ಆದರೆ ಜುಲ್ಮಾನೆ ವಿಧಿಸುವುದೇ ಅಪರೂಪವಾಗುತ್ತಾ ಬಂದಂತೆ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯೂ ಇಳಿಯುತ್ತಾ ಇದೆ.

ನಮ್ಮ ಪ್ರಾಂತ್ಯದಲ್ಲಿ ಮುಂದಿರುವ ವರ್ಗದವರು ಇದಿಗೂ ಯೋಗ್ಯ ಪ್ರಮಾಣದಲ್ಲಿ ಶಾಲೆಗೆ ಮಕ್ಕಳನ್ನು ಕಳಿಸುತ್ತಿದ್ದಾರೆ ಆದರೆ ಬಹುಸಂಖ್ಯಾಕರಾದ ಹಿಂದುಳಿದ ವರ್ಗದವರು ಒತ್ತಾಯ ಶಿಕ್ಷಣ ಜ್ಯಾರಿಯಲ್ಲಿರುವ ಕ್ಷೇತ್ರಗಳಲ್ಲಿಯೂ ಕೂಡಾ ಸೇ ೧೦ ಹೆಣ್ಣು ಮಕ್ಕಳನ್ನೂ ಸೇ. ೫೦ರಷ್ಟು ಗಂಡುಮಕ್ಕಳನ್ನೂ ಇಂದು ಶಾಲೆಗೆ ಕಳಿಸುತ್ತಿಲ್ಲ ಮಾತ್ರವಲ್ಲ ಶಾಲೆಗೆ ಸೇರಿಸಿದ ಮಕ್ಕಳಲ್ಲಿಯೂ ಶೇ ೧೦ ದರ್ಜೆ ಶಿಕ್ಷಣ ಮುಗಿಸಿ ಹೋಗುವವರು ಅತ್ಯಲ್ಪ. ಇಂತಹ ಹಿಂದುಳಿದ ವರ್ಗದವರ ಮಕ್ಕಳನ್ನು ಒತ್ತಾಯ ಶಿಕ್ಷಣಕ್ಕೊಳಪಡಿಸುವಂತೆ ಸರಕಾರವು ಅಧ್ಯಾಪಕರನ್ನು ಒತ್ತಾಯಿಸುತ್ತಿದೆ ಆದರೆ ಸಾಕಷ್ಟು ಅಧಿಕಾರವೂ, ಇಲ್ಲದೆ ಅರ್ಧಿಕ ದುಸ್ಥಿತಿಯಲ್ಲಿರುವ ಅಧ್ಯಾಪಕರ ಒತ್ತಾಯವು ಅರಣ್ಯರೋದನವಾಗುತ್ತಿದೆ ಈ ಬಗ್ಗೆ ಸರಕಾರದ ಆಜ್ಞೆಯಂತೆ ನೇಮಕವಾದ ಶಾಲಾ ಸಮಿತಿಗಳು ಬಹುತೇಕ ನಿರ್ಜೀವಸ್ಥಿತಿಯಲ್ಲಿವೆ.*

ಹಾಗಾದರೆ ಹತ್ತವರು ಯಾಕೆ ಅಲಕ್ಷ ಮಾಡುತ್ತಾರೆ ಇದಕ್ಕೆ ಉತ್ತರ ಹೀಗಿದೆ. (೧) ಪರಂಪರೆಯಿಂದ ವಿದ್ಯಾಭ್ಯಾಸ ಇಷ್ಟೆಯದೆ ಆಜ್ಞಾನದಲ್ಲಿರುವ ಹಿಂದುಳಿದ ವರ್ಗದವರಿಗೆ ವಿದ್ಯೆಯ ಮಹತ್ವ ಸಾಕಷ್ಟು ತಿಳಿದಿಲ್ಲ. (೨) ಈ ವರ್ಗದವರು ಹೆಚ್ಚಾಗಿ ಹಳ್ಳಿಗಳಲ್ಲಿ ವಾಸಿಸುತ್ತಿದ್ದು ಕೃಷಿಕೂಲಿಕಾರರೂ ಚಾಲಗೇಣಿ ಒಕ್ಕಲುಗಳೂ ಆಗಿದ್ದುದರಿಂದ ಅರ್ಧಿಕ ಅವನತಿಯಿಂದಾಗಿ ಹೊಟ್ಟೆಬಟ್ಟೆಯ ಪ್ರಶ್ನೆಯಲ್ಲಿಯೇ ಇವರು ಮುಳುಗಿರುತ್ತಾರೆ ೬–೧೪ ವರ್ಷಗಳಾಗುತ್ತಲೇ ಮಕ್ಕಳು ಇವರಲ್ಲಿ ಕೂಲಿಗಾರರಿಗೆ ಮಕ್ಕಳಾಡಿಸಲು ಮತ್ತು ಮನೆ ಕಾಯಲು, ಗೇಣಿ ಸಾಗುವಳಿದಾರರಿಗೆ ಪೈರು ಕಾಯುವುದು, ದನಕರುಗಳನ್ನು ನೋಡಿಕೊಳ್ಳುವುದು ಮೊದಲಾದ ಸಣ್ಣ ಸಣ್ಣ ಕೆಲಸಗಳಿಗೆ ಅವಶ್ಯ ಬೀಳುತ್ತಾರೆ (೩) ಹಿಂದೂ ಸಮಾಜದಲ್ಲಿನ ಜಾತಿಭೇದದಿಂದಾಗಿ ಹಳ್ಳಿಯ ಸಾಮಾಜಿಕ ಸಮಾರಂಭಗಳಲ್ಲಿ ಇವರಿಗೆ ಮೇಲ್ಜಾತಿಯವರೊಂದಿಗೆ ಸಮಾನ ಹಾಗೂ ನೇರವಾದ ಸಂಪರ್ಕ ದೊರೆಯದ ಕಾರಣ, ಬಡವರೂ ಕೆಳಜಾತಿಯವರೂ ಆದ ನಮಗೇಕೆ ಓದುಬರಹ ಎಂಬ ಮಾನಸಿಕ ದೌರ್ಬಲ್ಯವು ಇಂದಿಗೂ ಈ ವರ್ಗಗಳ ಬಹುಸಂಖ್ಯಾಕರಲ್ಲಿವೆ (೪) ಪಾನ ನಿಷೇಧ ಕಾನೂನು ಈಗ ನಮ್ಮ ದೇಶದ ಬಹುತೇಕ ಸ್ಥಳಗಳಲ್ಲಿ ಜ್ಯಾರಿಯಲ್ಲಿದ್ದರೂ. ಪರಂಪರಾಗತವಾದ ಈ ದುರ್ವ್ಯಸನಕ್ಕೆ ಈ ಹಿಂದುಳಿದ ವರ್ಗಗಳ ಬಹುತೇಕ ಗಂಡಸರು ಬಲಿಯಾಗಿದ್ದಾರೆ, ಮಾತ್ರವಲ್ಲ ಕೆಲವರು ಕಳ್ಳಾಟಿಕೆಯಿಂದ ಮದ್ಯ ಸರಾಯಿ ವರ್ಗಗಳ ತಯಾರಿಸುವ ವೃತ್ತಿಯನ್ನು ಸಹ ಮಾಡುತ್ತಲಿದ್ದು ನೈತಿಕ ಹಾಗೂ ಬೌದ್ಧಿಕವಾಗಿ ಈ ಜನರು ಕೆಳಮಟ್ಟದಲ್ಲಿದ್ದಾರೆ. (೫) ಈ ವರ್ಗಗಳಲ್ಲಿ ವಿದ್ಯಾವಂತರು ದವರೂ, ಅರ್ಧಿಕ ಸ್ಥಿತಿಯಲ್ಲಿ ಚೆನ್ನಾಗಿ ಇದ್ದವರೂ, ಹೆಚ್ಚಾಗಿ ತಮ್ಮ ವರ್ಗದ ಬಡವರ ಹಾಗೂ ಅವಿದ್ಯಾವಂತರ ಏಳಿಗೆಗಾಗಿ ಶ್ರಮಿಸುವುದು ತೀರ ಕಡಿಮೆ ಮಾತ್ರವಲ್ಲ ಸ್ವಜಾತಿಯ ಬಡವರೊಡನೆ ಬೆರೆಯಲೂ ಹೆದರುತ್ತಾರೆ. (೬) ಹಿಂದೂ ಸಮಾಜದಲ್ಲಿ ಈ ಕೆಳವರ್ಗದ ಬಡ ಜನತೆಯ ಮೇಲೆ ತಮ್ಮ ನೈತಿಕ ಹಾಗೂ ಧಾರ್ಮಿಕ ಪ್ರಭಾವ ಬೀರಿ, ಅರ್ಧಿಕ ನೆರವನ್ನು ಸ್ವಲ್ಪ ನೀಡಿ ಮಾರ್ಗದರ್ಶನ ಮಾಡುವಂತಹ ಯೋಗ್ಯರ ಅಭಾವವಿದೆ ೭. ಹೆಚ್ಚಾಗಿ ಹಳ್ಳಿಗಳಲ್ಲಿ ವಾಸಿಸುವ ಈ ವರ್ಗದವರಿಗೆ ಸಲಹೆ, ಸಹಕಾರ ನೀಡಿ ಇವರ ಮಕ್ಕಳನ್ನು ಶಿಕ್ಷಣಕ್ಕೊಳಪಡಿಸುವ ಸಂಘಗಳೂ ಇಲ್ಲದೆನ್ನುವಷ್ಟು ಕಡಿಮೆ ಇವೆ

ಈ ವರ್ಗಗಳಲ್ಲಿ ಶಿಕ್ಷಣದ ಕಡೆಗೆ ಆಸಕ್ತಿಯನ್ನು ಹುಟ್ಟಿಸಲು ಕೆಲವೊಂದು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

೧. ಆವಶ್ಯಕ ವಾತಾವರಣವನ್ನುಂಟುಮಾಡುವ ಪ್ರಚಾರವು ಅಗತ್ಯವಾಗಿದೆ ಸಮಾಜವಿಕಾಸಯೋಜನಾ ಕ್ಷೇತ್ರಗಳಲ್ಲಿ ಉಪಯೋಗಿಸುತ್ತಿರುವ ಪ್ರಚಾರ ಸಾಧನಗಳಲ್ಲಿ ಶಕ್ಯವಿದ್ದಷ್ಟು ಸಾಧನಗಳನ್ನು ಇದಕ್ಕಾಗಿ ಉಪಯೋಗಿಸುವುದರೊಡನೆ ಆ ಸಂಪ್ರದಾಯದ ಪ್ರೌಢ ಶಾಲೆಗಳ ಸಹಾಯ ಪಡೆಯಬಹುದು.

೨. ಆಯಾ ಸ್ಥಳದ ಪಂಚಾಯತ್ ಬೋರ್ಡು, ಶಾಲಾ ಸಮಿತಿ, ಅಧ್ಯಾಪಕ ವೃಂದ ಇತ್ಯಗಳಿಂದ ಒಂದು ಸಮಿತಿಯನ್ನು ರಚಿಸಿ ಆ ಸಮಿತಿಯ ಮೂಲಕ ತೀರ ಬಡವರ ಮಕ್ಕಳಿಗೆ ಅವಶ್ಯವುಳ್ಳ ಸ್ಲೇಟು ಪುಸ್ತಕ, ಬಟ್ಟೆ ಮಧ್ಯಾಹ್ನ ಉಪಾಹಾರದ ವ್ಯವಸ್ಥೆ ಮಾಡುವುದು. ಇದಕ್ಕೆ ಅರ್ಧಿಕ ನೆರವನ್ನು ಗ್ರಾಮದಲ್ಲಿ ಹಣ ಮತ್ತು ಸುಗ್ಗಿಯ ಸಮಯ ಕಾಳಿನ ರೂಪದಲ್ಲಿ ಒಂದಂಶವನ್ನು ಸಡೆಯಬೇಕು ಮತ್ತೊಂದು ಅಂಶ ಸರಕಾರವು ನೀಡಬೇಕು.

೩. ಈ ಹಿಂದೆ ಜ್ಯಾರಿಗೆ ತಂದ ಒತ್ತಾಯ ಶಿಕ್ಷಣ ಕಾಯಿದೆಯಲ್ಲಿ ಅವಶ್ಯವಿರುವ ಬದಲಾವಣೆ ಮಾಡಿ ಅದನ್ನು ಸ್ವಲ್ಪ ನಿರ್ಧಾರಕ್ಷಿಣ್ಯವಾಗಿ ಜ್ಯಾರಿಗೆ ತರಬೇಕಲ್ಲದೆ ಅದು ಹಿಂದಿನಂತೆ ಕಾಗದದ ಕಾಯಿದೆಯಾಗಬಾರದು

೪ ಈಗಿನಂತೆ ಶಿಕ್ಷಕ ವರ್ಗವನ್ನು ಅಸಂತೋಷದಲ್ಲಿಡದೆ, ಅವರ ಅರ್ಧಿಕ ಸ್ಥಿತಿಯನ್ನು ಸುಧಾರಿಸಿ ಅವರು ಉತ್ಸಾಹಪೂರ್ವಕ ಮಡಿಯುವಂತೆ ಮಾಡುವುದು ಅವಶ್ಯ ಈರುವಂತೆ ಒಂದು ಮಟ್ಟದ ಶಿಕ್ಷಣ ಪಡೆದ ಅಧ್ಯಾಪಕರಲ್ಲಿನ ವೇತನ ವ್ಯತ್ಯಾಸವನ್ನು ತೆಗೆದು ಹಾಕಿ ಸಮಾನ ಮಟ್ಟಕ್ಕೆ ತರಬೇಕು

೫ ಎಲ್ಲಾ ವಿಧದ ಪ್ರಾಥಮಿಕ ಶಾಲೆಗಳು ಸರಕಾರದ ನೇರವಾದ ನಿಯಂತ್ರಣಕ್ಕೊಳಪಡುವಂತೆ ಒಂದು ಪ್ರಾಥಮಿಕ ಶಿಕ್ಷಣ ಬೋರ್ಡನ್ನು ರಚಿಸಿ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ಅದಕ್ಕೆ ಒಪ್ಪಿಸುವುದು ಸಾಧ್ಯವಿದ್ದಲ್ಲೆಲ್ಲಾ ಶಿಕ್ಷಣದಲ್ಲಿ ಆಸಕ್ತಿಯುಳ್ಳವರ ಸಲಹಾ ಸಮಿತಿಗಳನ್ನು ಏರ್ಪಡಿಸುವುದು.

ಮೇಲಿನ ಸೂಚನೆಗಳನ್ನು ಜ್ಯಾರಿಗೆ ತಂದರೂ ವರ್ಷಕ್ಕೊಮ್ಮೆ ಶಿಕ್ಷಣ ತಜ್ಞರ ಚರ್ಚಾ ಸಭೆಗಳನ್ನು ಜರಗಿಸಿ ಶಿಕ್ಷಣ ಪ್ರಗತಿಯನ್ನು ವಿಮರ್ಶಿಸಿ ಸೂಕ್ತ ಬದಲಾವಣೆಗಳನ್ನು ಮಾಡುವ ಅಧಿಕಾರವು ಪ್ರಾಥಮಿಕ ಶಿಕ್ಷಣ ಮಂಡಲಗಳಿಗಿರಬೇಕು.

ವ. ವಿಟ್ಟಲ ಶೆಟ್ಟಿ,
ನ್ಯೂ ಬಡಾಕೆರೆ.

SR
ಸೇವನೆಯ ಆನಂದಕ್ಕೆ
ಅತ್ಯುತ್ತಮವಾದುದನ್ನೇ ಪಡಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಮತ್ತು
ಬ್ರೊಂಬ್ಯಾ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ.
S.R.Beedi Works, UDIPI, S.K.

ನೋವುಗಳ ಅತ್ಯುತ್ತಮ ಸಂಹಾರಿ

ಅಮೃತಾಂಜನ

ಜನಪದ ಕಲೆ

ಹಿಂದುಳಿದ ಜನಪದದ ಪ್ರಾಚೀನ ಕಲೆಗಳಿಗೆ ಹೊಸ ಮೆರಗನ್ನಿತ್ತು ಅವನ್ನು ಉಳಿಸಬೇಕು.

ಭಾರತದಲ್ಲಿ ಇಂದು ಇತಿಹಾಸದ ಅಳವನ್ನು ಶೋಧಿಸಿ, ಅದರಲ್ಲಿ ಪರಂಪರಾಪ್ರಾಪ್ತವಾಗಿ ಬಂದಿರುವ ಸಾಂಪ್ರದಾಯಗಳನ್ನು ಹೊಸರಕ್ತ, ನವಚೇತನಗಳನ್ನಿತ್ತು ಪುನಃ ಪ್ರಚಾರಕ್ಕೆ ತರುವ, ಅವುಗಳ ಪುನಾರಚನೆಗಾಗಿ, ಸಂಸ್ಕೃತಿಯನ್ನುಳಿಸುವ ಸಲುವಾಗಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುವ ಬಯಕೆಯು ಇದೆ.

ಈ ದೃಷ್ಟಿಯಿಂದ ಭಾರತದಲ್ಲಿ ಅನಾದಿ ಕಾಲದಿಂದಲೂ ವಾಸಿಸಿಕೊಂಡಿದ್ದು ಸುಧಾರಣೆಯ ಗಂದಗಾಳಿ ಸಹ ಬಡಿಯದೆ ಇರುವ, ಜನರ ನೇರವಾದ ಸಂಪರ್ಕದಿಂದ ದೂರವಿರುವ ಆದಿವಾಸಿಗಳ ಕಲೆಗಳನ್ನು, ಅವರ ಸಾಂಪ್ರದಾಯವನ್ನು, ಅವರ ನಡೆವಳಿಕೆಗಳನ್ನು ಗಮನಿಸಿದರೆ, ಜನತಾ ಸಂಪರ್ಕಾಭಾವವೇ ಅವನ್ನೀಸ್ಥಿತಿಗೆ ತಂದು ಮುಟ್ಟಿಸಿತೆನ್ನಬಹುದು. ಆದಿವಾಸಿಗಳ ಕಲೆಗಳನ್ನು ಒಂದೋ, ಈಗಿನ ಕಾಲಕ್ಕೆ ತಕ್ಕಂತೆ ಸುಧಾರಣೆ ಗೊಳಿಸಿ ನಮ್ಮ ಮುಂದಿನ ಪರಂಪರೆಗಳಿಗೆ ಉಳಿಸಿಕೊಡಬೇಕು; ಇಲ್ಲವೆ ನಾಗರಿಕತೆಯ ಕಪಿಮುಷ್ಟಿಯ ಪ್ರಹಾರದಿಂದ ಜರ್ಜರಿತವಾಗಿ ನಾಶವಾಗಗೊಡಬೇಕು.

ತಮ್ಮ ವಾಸಸ್ಥಾನಗಳಾದ ಗುಡ್ಡಕಾಡುಗಳ ಮೇರೆಯಲ್ಲಿ ಪ್ರಯಾಸಕರವಾದ ಜೀವನವನ್ನು ಬದುಕಿಕೊಂಡೇ ಈ ಆದಿವಾಸಿಗಳು ತಮ್ಮ ಗಾಯನ ಹಾಗೂ ನೃತ್ಯ ಮತ್ತು ನೂಲುವುದು, ಬಣ್ಣ ಬಳೆಯುವುದು, ಕೆತ್ತುವುದು ಮೊದಲಾದ ತಮ್ಮ ರಕ್ತಗತ ಕಲೆಗಳನ್ನು ತಮ್ಮದೇ ಆದ ರೀತಿಯಲ್ಲಿ ಬೆಳೆಸುತ್ತಾ ಬಂದರು. ಅವುಗಳಲ್ಲಿ ಯಾವುದೇ ಒಂದು ಕಲೆಯೂ ಈಗಿನ ಸುಧಾರಿತ ನಾಗರಿಕರಿಗೆ ರುಚಿಸಲಾರದು; ಏಕೆಂದರೆ, ಅವರಲ್ಲಿ ಕಲೆಗಳಲ್ಲಿಯೂ ನಾಜೂಕು ಕಡಿಮೆ, ಒರಟನ ಪ್ರಭಾವ ಅಧಿಕವಿದೆ. ಆದರೂ, ಅವರ ಕಲೆಗಳನ್ನು ತಕ್ಕ ಮೈ ತ್ರಾಹವಿತ್ತು ಸುಧಾರಿಸುವುದು ಸಾಧ್ಯ ಮತ್ತು ಅಪೇಕ್ಷಣೀಯ.

ಮಹಾತ್ಮಾ ಗಾಂಧಿಯವರೊಮ್ಮೆ ಈ ಆದಿವಾಸಿಗಳನ್ನು "ಲಾಲಸಾರಹಿತ ದೇವರ ಮಕ್ಕಳು" ಎಂದು ಸಂಭೋದಿಸಿದ್ದರು. ಅವರ ನೃತ್ಯ ಮತ್ತಿತರ ಕಲೆಗಳು ಅತ್ಯ ಸಂತೋಷದ ಕುರುಹುಗಳಾಗಿ ಪ್ರದರ್ಶನಕ್ಕೆ ಬರುತ್ತಿವೆ. ಮತ್ತವರ ಪದ್ಯಗಳು ಮಾನವ ಸ್ವಭಾವದ ಮೂಲ ಸ್ಥಾನದಿಂದ ಚಿಮ್ಮುತ್ತವೆ ಅವರ ಈ ಕಲೆಯೂ ಒಂದು ನಿಜವಾದ ಕಲೆ. ಏಕೆಂದರೆ, ಪ್ರತ್ಯೇಕ ಕಲೆಯು ಕಲೆಯ ಮೂಲೋದ್ದೇಶವಾದ ಆತ್ಮತೃಪ್ತಿಯನ್ನು ಅವುಗಳು ಒದಗಿಸುತ್ತದೆ

ಅಸ್ಸಾಮ ಮತ್ತು ಈಶಾನ್ಯ ಪ್ರದೇಶದಲ್ಲಿನ ಆದಿ ವಾಸಿಗಳಲ್ಲಿ ಅನೇಕ ಪ್ರಕಾರದ ನೃತ್ಯಗಳಿವೆ. ನಾಗಾ ಜನರು ವಿಚಿತ್ರವಾದ ತಮ್ಮ ನೃತ್ಯವನ್ನು ಬೆಳೆಸಿಕೊಂಡಿದ್ದಾರೆ. ಇವರ "ರಣನೃತ್ಯ"ವೆನ್ನುವುದು ಶುದ್ಧತೆಯಲ್ಲಿದ್ದು ಸ್ವಿ ಶೇಷವಾಗಿದೆ. ತಲೆಯಲ್ಲಿ ಕೊಂಬಿನಿಂದ ತಯಾರಾದ ಶಿರೋಭೂಷಣವನ್ನು ನವಿಲು ಗರಿಗಳೊಂದಿಗೆ ಧರಿಸಿ, ಕುತ್ತಿಗೆಯಲ್ಲಿ ಕಲ್ಲು ಮತ್ತು ಕೊಂಬುಗಳಿಂದ ಸಿದ್ಧಪಡಿಸಿದ ಕಂಠಹಾರವನ್ನು ಹಾಕಿಕೊಂಡು ತೋಳುಗಳಿಗೆ ಪ್ರಕಾಶಯುಕ್ತವಾದ ತೋಳಬಂದಿಗಳನ್ನು ಕಟ್ಟಿಕೊಂಡು ಈ ನಾಗನೃತ್ಯಗಾರರು ಒಂದು ಅದ್ಭುತ ನೋಟವನ್ನು ನೀಡುತ್ತಾರೆ. ಈ ನಾಗಜನರು ಕೇವಲ ಅನಾಗರಿಕರೆಂದು ನಿರ್ಲಕ್ಷಿಸತಕ್ಕವರಲ್ಲ. ಅವರು ಬಟ್ಟೆಬರೆಗಳನ್ನು ನೇಯುವುದರಲ್ಲಿಯೂ ಬಹಳ ಜಾಣತನವನ್ನು ಪಡೆದಿದ್ದರು. ತಾವು ನೇಯ್ದ ವಸ್ತ್ರಗಳಲ್ಲಿ ಅತ್ಯುಚ್ಚ ಮಟ್ಟದ ಕಸೂತಿಗಳನ್ನೂ ಒರೆಯುತ್ತಿದ್ದರೆಂದರೆ, ಆಶ್ಚರ್ಯವಲ್ಲದೆ ಮತ್ತೇನು.?

ಬಿಹಾರದ ಸಂತಾಲರೆಂಬ ಜಾತಿಯವರು ತುಂಬು ಕಲಾಗಾರರಾಗಿದ್ದಾರೆ ಹುಟ್ಟು ಕಲಾವಿದರೆನ್ನುವುದಿಲ್ಲವೇ, ಆ ಪಂಗಡಕ್ಕೆ ಸೇರಿದ ಸಂತಾನವಿದು. ಪಂಗಡಗಳಾಗಿಯೇ ಇವರು ಬದುಕ ತಿದ್ದರು. ಇವರ 'ಗೊಲ್ಲರ ನೃತ್ಯ'ವು ಬಲು ಸೊಗಸು. ಈ ನೃತ್ಯವು ನೀಲಿಯನ್ನು ಹೆಕ್ಕುವುದನ್ನು ಮತ್ತು ಧಾನ್ಯಗಳನ್ನು ಕೊಯ್ಯುವುದನ್ನು ಪ್ರತಿನಿಧೀಕರಿಸುತ್ತದೆ. ಇವರ ಕೆಲವೊಂದು ನೃತ್ಯಗಳಲ್ಲಿ ಸುಂದರವಾದ ವೇಷಗಳನ್ನು ಹಾಕುತ್ತಾರೆ. ಇವುಗಳು ಭಾರತೀಯ ಜನಪದ ನರ್ತನಗಳಲ್ಲಿ ಶುಭ್ರಸಿದ್ಧ ಎಂದುವೆಂದು ಪ್ರಖ್ಯಾತಿಯಿದೆ. ಈ ವೇಷ ಕಟ್ಟುವ ಕಲೆಯು ಬಹಳ ಸೂಕ್ಷ್ಮವಾಗಿದ್ದು, ಅತೀವ ಪ್ರೌಢಿಯನ್ನು ಅಪೇಕ್ಷಿಸುತ್ತದೆ. ಇದರಲ್ಲಿ ಉಪಯೋಗಿಸಲಾಗುವ ಅತ್ಯುತ್ತಮ ವರ್ಗದ ಬಣ್ಣಗಳು ಚಿತ್ರವಿಚಿತ್ರವಾಗಿ ಕಂಡು ನೃತ್ಯವನ್ನು ಅದ್ಭುತತಮವನ್ನಾಗಿಸಬಲ್ಲುವು.

ಮಧ್ಯಭಾರತದಲ್ಲಿ ನೆಲಸುತ್ತಿರುವ ಭಿಲ್ಲರಲ್ಲಿಯೂ ತಮ್ಮದೇ ಆದ ಅನೇಕ ನೃತ್ಯಕ್ರಮಗಳಿವೆ. ಇವು ಅವರು ಒಂದು ಕಾಲದಲ್ಲಿ ಕಾಡುಮೇಡವನ್ನು ನಡೆಸುತಿದ್ದ ಇತಿಹಾಸವನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತವೆ. ಈ ನೃತ್ಯಗಳಲ್ಲಿ ಗಂಡಸರು ಮಾತ್ರವಲ್ಲದೆ ಹೆಂಗಸರು ಸಹ ಭಾಗವಹಿಸುವ 'ಘೂಮಾರ್' ಎಂಬುದೂ, 'ಗರ್' ಎಂಬ ಹೋಳಿ ಹಬ್ಬವೂ ಬಹಳ ಹೆಸರುವಾಸಿಯಾದುವು. ಮದುವೆ ಇತ್ಯಾದಿ ವಿಶೇಷ ಉತ್ಸವದ ವೇಳೆಯಲ್ಲಿ, ಈ ಜನಾಂಗದವರು 'ಘುಮ್ರಾ' ಎಂಬವಿಶೇಷ ರೀತಿಯ ನೃತ್ಯವನ್ನೂ ಮಾಡ ತ್ತಾರೆ.

ವಿದ್ಯಾ ಪ್ರದೇಶದ ಗುಡ್ಡ ಪ್ರದೇಶದಲ್ಲಿ ವಾಸಿಸುತ್ತಿರುವ ಗೊಂಡರು ಬಲದಲ್ಲಿ ಶೂರರು. ಇವರ ನರ್ತನಗಳೆಲ್ಲವುಗಳಲ್ಲಿಯೂ ರಕ್ತಗುಣವು ತನ್ನ ಪ್ರಭಾವವನ್ನು ತೋರಿಸುತ್ತದೆ ಪ್ರೇಮ ಗೀತೆಗಳಲ್ಲದೆ ಸಾಮಾಜಿಕ ಪಲ್ಲವಿಗಳನ್ನೂ ಇವರು ತಮ್ಮ ನೃತ್ಯಗಳಿಗೆ ಹಿನ್ನೆಲೆಯಾಗಿ ಉಪಯೋಗಿಸುತ್ತಾರೆ. ಪದ್ಯಗಳನ್ನು ಹಾಡುತ್ತಾ ಮಾಡುವ ಇವರ ನರ್ತನವು ಹೃದಯಹಾರಿಯಾಗಿದೆ.

ಅಸ್ಸಾಮನ್ನು ಬಿಟ್ಟರೆ ಜನಪದ ನೃತ್ಯಗಳಿಗೆ ಒರಿಸ್ಸಾವು ಆಶ್ರಯಸ್ಥಾನವೆಂದರೂ ತಪ್ಪಲ್ಲ. ಇಲ್ಲಿ ವಾಸಿಸುತ್ತಿರುವ ಸೋರಿಯಾ, ಗದಬ, ಜಂಗ, ಕೊಂಡ, ಮುರಿಯಾ ಮುಂತಾದ ಪ್ರತಿಯೊಂದು ಜಾತಿಗಳವರಲ್ಲಿಯೂ ತಮ್ಮದೇ ಆದ ಕೆಲವು ವಿಶಿಷ್ಟ ಪದ್ಧತಿಯ ನೃತ್ಯಗಳಿವೆ. ಬಿಳಿ ಮೈಗೆ ಕೊಂಬನ್ನು ಶಿರೋ ಭೂಷಣವನ್ನಾಗಿಟ್ಟುಕೊಳ್ಳುವ ಮುರಿಯರ ನೃತ್ಯವೊಂದೆ. ಅಖಿಲ ಭಾರತದಲ್ಲಿಯೇ ರಾಮಣೀಯಕವೆಂಬ ಖ್ಯಾತಿಯನ್ನು ಪಡೆದಿದೆ. ಮಧ್ಯ ಪ್ರದೇಶದ ಬಲ್ಲರು ಮತ್ತು ಬಂಜಾರರ ನೃತ್ಯವೂ ಇದೇ ರೀತಿಯಿದ್ದು ಕೆಲವೊಮ್ಮೆ ವೀರರಸಪ್ರಧಾನವಾದ ಹಾಡುಗಳಿಂದಲೂ ಕೂಡಿಕೊಂಡಿರುತ್ತದೆ. ಈ ತೆರದ ನೃತ್ಯವನ್ನು ನೋಡಿದ ಎಂತಹ ಭೀರುವಾದರೂ ಒಂದುಗಳಿಗೆ ವೀರಾವೇಶದಿಂದ ರಕ್ತ ಬಿಸಿಯೇರಿದವನಾಗುತ್ತಾನೆ! ಕಸೂತಿ ಕೆಲಸದಲ್ಲಿಯೂ ಈ ಜನಾಂಗದವರು ಹಿಂದುಳಿದವರಲ್ಲ, ವಿವಾಹದ ವೇಳೆಯಲ್ಲಿ ವಧುವು ಧರಿಸುವ ಉಡಿಗೆ ತೊಡಿಗೆಗಳೆಲ್ಲವೂ ಸಂಪೂರ್ಣ ಕಸೂತಿಯಿಂದ ಕೂಡಿದುದೇ ಆಗಿರುತ್ತವೆ.

ದಕ್ಷಣದ ಪ್ರದೇಶದಲ್ಲಿನ ಆದಿವಾಸಿಗಳ ನೃತ್ಯಗಳು ನಾನಾ ತೆರನಾಗಿವೆ. ಇವೆಲ್ಲವೂ ಕೃಷಿಗೆ ಸಂಬಂಧಪಟ್ಟ ಕೊಯ್ಲು, ನಟ್ಟ ಹಾಗೂ ಬಿತ್ತನೆ ಮೊದಲಾದುವುಗಳಿಗೆ ಸಂಬಂಧಪಟ್ಟವುಗಳಾಗಿವೆ. ಕೊರಗರ ನೃತ್ಯವು ಸಹ ಅವರ ಅನಾದಿ ಸಮಯದ ಇತಿಹಾಸದ ದ್ಯೋತಕವಾಗಿಯೇ ಉಳಿದಿದೆ. ಆದರೆ ಆ ಇತಿಹಾಸವಮಾತ್ರ ಕಾಲಗರ್ಭದಲ್ಲಡಗಿದೆ.

ಹೀಗೆ ಹಿಂದುಳಿದ ಜನಾಂಗಗಳೆಂದು ಇಂದು ಕರೆಯಲ್ಪಡುವ ಜನರು ಉತ್ತಮ ಕಲಾವಿದರಿದ್ದಾರೆ. ಅವರ ಕಲಾಪ್ರೇಮವು ಎಲ್ಲ ವೇಳೆಯಲ್ಲಿಯೂ ಪ್ರದರ್ಶನಕ್ಕೆ ಬರುವುದಿಲ್ಲ ಆತ್ಮವು ತುಂಬು ಸಂತಸಗೊಂಡಾಗ ಮಾತ್ರ ಇವು ಕಾಣಿಸಿಕೊಂಡು ಸಂತೋಷದ ತೊರೆಯು ಉಕ್ಕಿ ಹರಿದಂತೆ ಗೋಚರವಾಗುವುದು. ಭಾರತದಲ್ಲಿ ಈ ತೆರದ ಜನಪದ ನೃತ್ಯಗಳಿಗೆ ತುಟ್ಟಿಯಿಲ್ಲ; ಆದರೆ, ಅವುಗಳನ್ನು ಸರಿಯಾದ ಕ್ರಮದಲ್ಲಿ ಅಭಿವೃದ್ಧಿ ಮಾಡುವವರ ಕೊರತೆ ಮಾತ್ರವಿದೆ.

ಮಾನವನ ಅಭಿಪ್ರಾಯವನ್ನು ಪ್ರಕಟಗೊಳಿಸುವ ಪ್ರಧಾನ ಸಾಧನಗಳಲ್ಲಿ ಅಭಿನಯವೂ ಒಂದು. ನರ್ತನ ಇಲ್ಲದೆ ನೃತ್ಯ ಅಥವಾ ನಾಟ್ಯ ಇದು ಅಭಿನಯ ಯುಕ್ತವಾದುದು. ಈ ನೃತ್ಯವು ನರ್ತನಗಾರನ ಅಭಿಪ್ರಾಯ ವನ್ನು ವ್ಯಕ್ತಗೊಳಿಸುವುದು. ಆದರೆ, ಈ ಆದಿವಾಸಿಗಳೊಡನೆ ಶತಮಾನಗಳಷ್ಟು ಕಾಲ ಸಂಪರ್ಕವನ್ನು ಕಡಿದುಕೊಂಡು ಬಾಳಿದ ನಾಗರಿಕ ಜನಾಂಗಗಳಿಗೆ ಒಂದು ಕಾಲದಲ್ಲಿ ತಮ್ಮದೇ ಆಗಿದ್ದ ನೃತ್ಯಗಳ ಪರಿಚಯವೇ ಇಲ್ಲ; ಅರ್ಥವಂತೂ ಇಲ್ಲವೇ ಇಲ್ಲ; ಕೊನೆಗೆ ಹೆಸರು ಸಹಾ ತಿಳಿದಿಲ್ಲವೆಂಬುದು ಲಾಂಛನಾಸ್ಪದವಾದುದು.

ಜನಪದ ನೃತ್ಯಗಳ ಬಗ್ಗೆ ನಾವು ಹೆಚ್ಚು ತಿಳಿದುಕೊಳ್ಳಬೇಕಾಗುವುದು ಅಗತ್ಯ ಅವು ಕೆಲವೊಮ್ಮೆ ಉತ್ತಮ ಮಟ್ಟದ ಮನರಂಜನೆಗೆ ಹೇತುವಾಗಬಲ್ಲುವು. ಆದುದರಿಂದ ಈ ಆದಿ ವಾಸಿಗಳ ಆದಿ ಕಲೆಯನ್ನು ಉಳಿಸಿ, ಅವನ್ನು ಪ್ರೋತ್ಸಾಹಿಸಿ, ಪ್ರಚಾರವನಾಡುವುದು ಜನತೆಯ ಕರ್ತವ್ಯ. ಜನತೆಗಾಗಿರುವ ಜನತಾ ಸರಕಾರದ ಮುಖ್ಯ ಕೆಲಸ. ಪ್ರಾಚೀನ ಇತಿಹಾಸದ ಅವಶೇಷಗಳನ್ನು ಕಣ್ಣಿನಲ್ಲಿ ಎಣ್ಣೆ ಸುರಿದುಕೊಂಡು ರಕ್ಷಿಸುವಂತೆ ಈ ಪ್ರಾಚೀನ ತರಗತಿಯ ಕಲೆಗಳನ್ನೂ ಕಾಪಾಡುವುದು ಭಾರತೀಯರೆಲ್ಲರ ಕರ್ತವ್ಯ.

(ಸಾಧಾರ)

—ಎಸ್. ಗೋಪೀಚಂದರಾವ್,
ಉಡುಪಿ.

ಜನತಾ ಸಂಪರ್ಕ

(೧ನೇ ಪುಟದಿಂದ)

ಸೇವೆಯನ್ನು ಸಲ್ಲಿಸದಂತಾಗುತ್ತದೆ. ತಮ್ಮ ಕರ್ತವ್ಯ ಪಾಲನೆಯಲ್ಲಿ ಅದೂ ಒಂದೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು

ಸ್ವತಂತ್ರ ದೇಶದಲ್ಲಿ ಜನತೆಯೇ ಪ್ರಭು. ಈ ಜನತೆಯ ವಿಶ್ವಾಸವನ್ನು ಯಾವ ಸರಕಾರವಾದರೂ ಸಡೆದುಕೊಳ್ಳಬೇಕಾಗುತ್ತದೆ. ಅಂತಹ ಜನತೆಯನ್ನು ವಂಚಿಸಿ ಲಂಚಗೊಳಿತನವನ್ನು ಅನುಸರಿಸಿದ ಸರಕಾರಿ ನೌಕರರನ್ನೂ ಆ ನೌಕರರ ಅಧಿಕಾರಿಗಳನ್ನೂ ಶಿಕ್ಷಿಸುವುದು ನ್ಯಾಯವಾದುದು. ಏಕೆಂದರೆ, ಅವರೆಲ್ಲರೂ ತಮ್ಮ ನ್ಯಾಯವಾದ ಕರ್ತವ್ಯಪಾಲನೆಗೆ ಚ್ಯುತಿಯನ್ನೊಡ್ಡಿರುತ್ತಾರೆ. ಸ್ವತಂತ್ರ ದೇಶದಲ್ಲಿ ರಬೇಕಾದ ನಿಷ್ಪಕ್ಷಪಾತವಾದ ಆಡಳಿತೆಯನ್ನು ಕಲಂಕಗೊಳಿಸುತ್ತಾರೆ. ತಮ್ಮ ಕರ್ತವ್ಯವನ್ನು ಮಾಡುವ ಸಲುವಾಗಿ ಜನತೆಯನ್ನು ವಂಚಿಸಿ, ಅವರಿಂದ ಹಣ ತೆಗೆದುಕೊಳ್ಳುವುದಕ್ಕಿಂತ ಸಾಪಕರಕೃತ್ಯವು ಸರಕಾರಿ ನೌಕರರಲ್ಲಿ ಬೇರಾವುದೂ ಇಲ್ಲ. ಈ ಲಂಚವನ್ನು ಸ್ವೀಕರಿಸುವುದು ನೌಕರರ ಮಹಾಪರಾಧದಂತೆಯೇ ತಮ್ಮ ಕಾರ್ಯಗಳನ್ನು ಮಾಡಿಸಿಕೊಳ್ಳಲು ನೌಕರರಿಗೆ ಲಂಚವನ್ನುಣಿಸುವುದೂ ಜನತೆಯ ಶತಾಪರಾಧ. ಇದರಿಂದ ಜನತೆ ಹಾಗೂ ಜನತಾಸೇವಕರೆನಿಸಿದ ಸರಕಾರಿ ಕರ್ಮಚಾರಿಗಳು ಇದರಿಂದ ದೂರವಿರಬೇಕು; ಪ್ರಜಾಪ್ರಭುತ್ವಕ್ಕೆ ಅಂಟಿಕೊಂಡಿರುವ ಕಲಂಕವನ್ನು ತೊಳೆದು ಆದರ್ಶ ಆಡಳಿತೆಗೆ ನೆರವಾಗಬೇಕು.

ಅಧಿಕಾರಿಗಳು ಜನತೆಯ ಮೇಲೆ ಸವಾರಿ ಮಾಡುವ ದೂರುಗಳು ಅಲ್ಲಲ್ಲಿ ಕೇಳಿಬರುತ್ತಿವೆ. ಜನತೆಯ ನ್ಯಾಯವಾದ ದೂರುಗಳನ್ನು ಗಮನಿಸದಿರುವುದೂ ಈ ಲಂಚದ ಪ್ರಭಾವದಿಂದಿರಬಹುದು. ಹೀಗೆ ಮಾಡುವುದರಿಂದ ಅಧಿಕಾರಿಗಳು ಜನತೆಯಿಂದ- ನಾವು ಸೇವೆ ಸಲ್ಲಿಸುತ್ತಿರುವ ಜನಸಮುದಾಯದಿಂದ-ದೂರ ಸೆಟೆದುನಿಲ್ಲುವರು. ಇದರಿಂದ ತಮಗೂ, ಸರಕಾರಕ್ಕೂ ಕೆಟ್ಟ ಹೆಸರನ್ನು ತಂದುಕೊಳ್ಳುವರು. ಹೀಗಾಗಬಾರದು. ಸರಕಾರವಿರುವುದು ಜನತೆಗಾಗಿ. ಜನತೆಯನ್ನು ರಕ್ಷಿಸುವುದು, ನ್ಯಾಯವನ್ನೊದಗಿಸುವುದು ಸುಂಕ, ತೆರಿಗೆ ವಸೂಲು ಮಾಡುವಷ್ಟೇ ಮುಖ್ಯವಾದ ಕರ್ತವ್ಯಗಳು. ಅವನ್ನು ಒದಗಿಸಲು ತಪ್ಪಿದಲ್ಲಿ ಸರಕಾರದಲ್ಲಿ ಯಾರಿಗೆ ವಿಶ್ವಾಸ ಮೂಡೀತು? ತಪ್ಪಿದ ಸರಕಾರವಿರುವುದಾದರೂ ಏಕೆ?

ಆದುದರಿಂದ, ಸರಕಾರೀ ನೌಕರರು ಜನತೆಯ ಮೇಲೆ ಪ್ರಭುತ್ವವನ್ನು ನಡೆಸದೆ ಅವರ ಸೇವಕರಂತೆ ನಡೆದುಕೊಂಡು ತಮ್ಮ ಕರ್ತವ್ಯವನ್ನು ಯೋಗ್ಯರೀತಿಯಲ್ಲಿ ಪಾಲಿಸಿಕೊಂಡರೆ, ವಿಶಾಲ ಜನಸಮುದಾಯದ ವಿಶ್ವಾಸವನ್ನು ಸಂಪಾದಿಸುವರು; ಸರಕಾರದ ಮುಖ್ಯ ಕರ್ತವ್ಯವನ್ನು ಪಾಲಿಸುವುದರಲ್ಲಿ ತಪ್ಪದೆ 'ಜನತಾ ಸರಕಾರ' ಎಂಬ ಹೆಸರಿನ ಅನ್ವರ್ಥತೆಯನ್ನು ಕಾಪಾಡಿಕೊಳ್ಳುವರು. ನಮ್ಮ ಸರಕಾರಿ ಅಧಿಕಾರಿ ಹಾಗೂ ಅಧಿಕ ಶ್ರೇಣಿಯ ನೌಕರರು ಇದನ್ನು ಗಮನಿಸಿ ಸರಕಾರೀ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಯಿಸುವುದರಲ್ಲಿ ನೆರವಾಗಬೇಕು.

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೬ ಸಂಚಿಕೆ ೪೬
VOL.36 25—7—1957 NO. 46

ಮರಗಳ ಮಹತ್ವ

ಮರಗಳಿಂದ ನೀರು ನೀರಿನಿಂದ ಅನ್ನ ಅನ್ನದಿಂದ ಜೀವನ— ಹೀಗಿದೆ ಶೃಂಖಲಾಬಂಧನ!

ನಮ್ಮ ಅರಣ್ಯ ಸಂಪತ್ತು ದಿನೇದಿನೇ ಖಿಲಗೊಳ್ಳುತ್ತಿರುವುದಕ್ಕೆ ನಮ್ಮ ಜನರಲ್ಲಿ ವೃಕ್ಷಗಳ ಮೇಲಿರುವ ಗೌರವವು ಮಾಯವಾಗುತ್ತಾ ಬಂದುದೇ ಕಾರಣವನ್ನಲಾಗುವುದಿಲ್ಲ ದೇಶದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ಮಾನವರ, ಅವರ ನೇಗಿಲು, ದನಕರುಗಳು, ಆಡುಕುರಿಗಳು, ಸ್ವಭಾವಿಕವಾಗಿ ಅರಣ್ಯ ಸಂಪತ್ತನ್ನು ಕೊಳ್ಳೆಹೊಡೆಯಬೇಕಾದ ಸಂದರ್ಭ ಬಂತು ತಮ್ಮ ಸಮೀಪದಲ್ಲಿನ ಮರಮಟ್ಟುಗಳನ್ನು ಕಡಿದ ನಂತರ, ಅವರಿಗೆ ಗದ್ದೆಗಳಿಗೆ ಹಾಕಬೇಕಾದ ಗೊಬ್ಬರದ ಅಭಾವವು ಕಂಡುಬಂದು, ಉತ್ಪತ್ತಿ ಕಡಮೆಯಾಗಿ, ಇದಕ್ಕೆ ಪರಿಹಾರವನ್ನು ಯೋಚಿಸಬೇಕಾದ ಪ್ರಮೇಯ ಬಂತು ಈ ಎಲ್ಲ ಘಟನೆಗಳು ಒಂದೆರಡು ನೂರು ವರ್ಷಗಳಿಂದ ನಡೆಯುತ್ತ ಬಂದುದಲ್ಲ, ಸವಿರಾರು ವರ್ಷಗಳಿಂದಲೂ ಅಲ್ಪಸ್ವಲ್ಪ ಪ್ರಮಾಣದಲ್ಲಿ ಕಾರ್ಯರೂಪದಲ್ಲಿ ಬಂದು ಕ್ರಮೇಣ ಅರಣ್ಯಗಳ ಬಳಿಗೆ ಜನರು ಹೋಗಬೇಕಾಗಿ ಒಂತು. ಉರುವಲು, ಸೌದೆ, ಮರಮಟ್ಟು, ಸೊಪ್ಪು, ಹುಲ್ಲು ಎಲ್ಲವಕ್ಕೂ ಈ ಅರಣ್ಯಗಳೇ ಆಸರೆಯಾಗಿದ್ದುವು ಆದುದರಿಂದ ಪ್ರಕೃತಿಯು ಮಾನವಕಲ್ಯಾಣಕ್ಕಾಗಿ ಕಾದಿರಿಸಿದ ಈ ವನನಿಧಿಯು ಕರಗುತ್ತಾ ಬಂತು.

ಹಲವಾರು ರಾಜ್ಯಗಳ ಗ್ರಾಮೀಣ ಪ್ರದೇಶಗಳು ಸಹ ಇಂದು ಮರಮಟ್ಟುಗಳಿಲ್ಲದೆ ಬೋಳುಗುಡ್ಡೆಯಂತೆ ಗೋಚರವಾಗುತ್ತವೆ. ಈ ಭೂಭಾಗವನ್ನು ನೋಡುವಾಗ ಚೀನ ದೇಶದ ಫಲವತ್ತಾದ ಕೆಂಪು ಮಣ್ಣಿನಿಂದ, ಸಾರವು ಮಾಯವಾಗಿ ಈ ಪ್ರದೇಶದಲ್ಲಿ ಬರಿಯ ಮಣ್ಣು ಶೇಖರವಾಗಿದೆಯೆ? ಎನ್ನುವ ಸಂದೇಹ ಮೂಡುತ್ತದೆ. ಇವೆಲ್ಲವನ್ನೂ ನೀಗಿಸಲು ಇಂದು ಬೇಕಾಗಿರುವುದು ವೃಕ್ಷಗಳನ್ನು ನೆಡುವತ್ತ ನಮ್ಮ ದೇಶವಾಸಿಗಳ ತೀವ್ರ ಗಮನವು ಹರಿಯುವುದು; ಮತ್ತು ರಾಷ್ಟ್ರೀಯ ಪ್ರಮಾಣದಲ್ಲಿ ಮರಗಳನ್ನು ಪುನಃ ಸ್ಥಾಪಿಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು.

ವನಮಹೋತ್ಸವ ಸಪ್ತಾಹವು ಭಾರತದಲ್ಲಿ ಪ್ರಪ್ರಥಮವಾಗಿ ೧೯೫೭ರಲ್ಲಿ ದಿಲ್ಲಿ ರಾಜ್ಯದಲ್ಲಿ ಆಚರಿಸಲ್ಪಟ್ಟಿತ. ಅಂದು ಈ ಉತ್ಸವದಲ್ಲಿ ಸಹಭಾಗಿಗಳಾಗಿದ್ದ ಭಾರತದ ಪ್ರಧಾನಿ ನೆಹರೂರವರು ಮರಗಳನ್ನು ಕಡಿಯುವ ಸಂಬಂಧವಾಗಿ ಒಂದು ಕಾನೂನಿರಬೇಕು. ಒಬ್ಬನು ಒಂದು ಹಳೆಯ ಮರವನ್ನು ಕಡಿದನಾದರೆ, ಇನ್ನೊಂದು ಎಳೆಯ ಮರವನ್ನು ನೆಟ್ಟು, ನಷ್ಟವನ್ನು ಭರ್ತಿಮಾಡಿಕೊಡಬೇಕೆಂದು ನುಡಿದಿದ್ದರ. 'ಮರಮಟ್ಟುಗಳನ್ನು ಬೆಳೆಸುವುದು ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರದ ಜೀವಳೆ'' ಎಂದವರು ಉದ್ಗರಿಸಿದ್ದರು.

ಈ ಸಂಬಂಧದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರು ತನ್ನ ಪ್ರಾರ್ಥನಾ ಭಾಷಣವೊಂದರಲ್ಲಿ ಪ್ರಸ್ತಾಪಿಸುತ್ತಾ, ''ಈ ಸಮಾರಂಭವು ವಿನೋದಕ್ಕಾಗಿಯಾಗಲೀ, ಶ್ರೀಮಂತಿಕೆಯ ಪ್ರದರ್ಶನವೆಂಬಾಗಲೀ ನಡೆಸಲ್ಪಡುವುದಲ್ಲ, ಬದಲು ತಮ್ಮನ್ನೆಸ್ಕರಿಸಿ ಉಳಿದ ಜನರೂ ತಮ್ಮಂತೆಯೇ ವನಮಹೋತ್ಸವವನ್ನೇರ್ಪಡಿಸಿ ರಾಷ್ಟ್ರಕಲ್ಯಾಣ ಕಾರ್ಯದಲ್ಲಿ ಸಹಯೋಗಿಗಳಾಗಬೇಕು ನುತ್ತು ಭಾರತದ ವರ್ಷಾದ ಸಂಪತ್ತನ್ನು ಬೆಳೆಸಬಹುದು ಎಂಬ ಅಪೇಕ್ಷೆಯಿಂದ'' ಎಂದು ನುಡಿದಿದ್ದಾರೆ

ವೃಕ್ಷಗಳ ಕಡೆಗೆ ವಿಶೇಷ ಗಮನವನ್ನಿತ್ತು, ರಾಷ್ಟ್ರದ ತುಂಬ ಬರಿದಾದ ಸ್ಥಳಗಳನ್ನು ಹೊಸ ಮರಗಳಿಂದ ತುಂಬಿಸುವುದೇ ಈ ವನಮಹೋತ್ಸವದ ಉದ್ದೇಶ ಈ ಉದ್ದೇಶವು ಸಾಗಷ್ಟ ಸೂರೈಸುತ್ತಾ ಒಂದಿದೆ ಎನ್ನಬಹುದು ದೇಶದ ಎಲ್ಲರಾಜ್ಯಗಳೂ ಈ ಉತ್ಸವನ್ನು ಆಚರಿಸಿ, ಅದಕ್ಕೊಂದು ರಾಷ್ಟ್ರೀಯ ಸ್ವರೂಪವನ್ನಿತ್ತಿದ್ದಾರೆ ಅಲ್ಲದೆ, ಊರೂರಲ್ಲಿರವ ನಿಡ ಬೆಳೆಸುವ ಕೇಂದ್ರಗಳಲ್ಲಿಯೂ ಹಲವಾರು ವಿಧದ ಗಿಡಗಳಿದ್ದು ಅವನ್ನು ನೆಡುವತ್ತ ಜನರ ಮನವನ್ನಾಕರ್ಷಿಸುತ್ತವೆ.

ರಾಷ್ಟ್ರೀಯ ಸ್ವರೂಪವನ್ನಿತ್ತು ಈ ಉತ್ಸವವನ್ನು ಆಚರಿಸುವಂತೆ ಮಾಡಿದ ಕೀರ್ತಿ ಶ್ರೀ ಕೆ ಎಂ. ಮುನ್ಷಿಯವರಿಗೆ ಸಲ್ಲಕ್ಕದ್ದು. ಅವರು ೧೯೫೦ರಲ್ಲಿ ಭಾರತ ಸರಕಾರದ ಆಹಾರ ಮತ್ತು ವ್ಯವಸಾಯ ಮಂತ್ರಿಗಳಾಗಿದ್ದಾಗ, ಅರಣ್ಯಸಂಪತ್ತಿನ ಬೆಳವಣಿಗೆಯ ಅವಶ್ಯಕತೆ ಹಾಗೂ ತತ್ವಗಳನ್ನು ಮಂದಟ್ಟುಮಾಡಿದರು ರಾಷ್ಟ್ರೀಯ ವನಮಹೋತ್ಸವ ಚಳುವಳಿಯನ್ನು ದೇಶದ ವಿವಿಧ ಮೂಲೆಗಳಲ್ಲಿ ಪ್ರಚಾರವಾಡಿ, ನಮ್ಮ ದೂರ್ವಿಕರು ಅರಣ್ಯ ಮತ್ತು ವೃಕ್ಷಗಳ ಕಡೆಗೆ ಎಂಥ ಗೌರವವನ್ನಿಟ್ಟಿದ್ದರೆಂಬುದನ್ನು ಭಾರತೀಯರಿಗಮನಕ್ಕೆ ತಂದರು

''ವನಗಳು ಪ್ರತಿದೇಶದ ಸಾಮಾನ್ಯ ಆರ್ಥಿಕ ಪರಿಸ್ಥಿತಿಯಲ್ಲಿ ನ್ಯಾಯವಾದ ಸ್ಥಾನವನ್ನು ಪಡೆದಿವೆ ಅರಣ್ಯಗಳು ಕೇವಲ ಕೃಷಿಯ ಕೂಲಿಯಾಳುಗಳಲ್ಲ ಮುಂದೆ ಬೆಳೆದು ಬರುತ್ತಿರುವ ಕೋಟ್ಯಂತರ ಜೀವಿಗಳಿಗೆ ರಕ್ಷಣಾಧಾರವಾದುವು ಈ ಕಾಡುಗಳು' ಏಕೆಂದರೆ, ಮರಗಳಿಂದ, ನೀರು, ನೀರಿನಿಂದ ಆಹಾರ, ಆಹಾರದಿಂದ ಜೀವನ!'' ಎಂದು ಅಂದು ಶ್ರೀ ಮುನಶಿಯವರು ಭಾರತದ ಜನತೆಗೆ ಉಪದೇಶಿಸಿದ್ದರು.

ಒದರಿಂದಾಗಿ ವನಮಹೋತ್ಸವವು ಸರ್ವರಿಂದಲೂ ಸ್ವಾಗತಿಸಲ್ಪಟ್ಟು ಅದು ರಾಷ್ಟ್ರೀಯ ಮಹತ್ವವನ್ನು ಪಡೆಯಿತು. ೧೯೫೦ರಲ್ಲಿ ಪ್ರಥಮ ಬಾರಿಗೇ ಅನೇಕ ಲಕ್ಷಗಟ್ಟಲೆಯಲ್ಲಿ ಮರಗಳನ್ನು ನೆಡಲಾಯಿತು ಈ ಮರಗಳ ಬಾಳಿಕೆಯ ವಿಷಯವನ್ನು ದೂರವಿರಿಸಿದರೆ, ವೃಕ್ಷಾಭಿಮಾನವು ಭಾರತೀಯರ ಧಮನಿಗಳನ್ನು ತುಂಬ ತೊಡಗಿತೆನ್ನಬಹುದು ಇದು ಮುಂದೆಯು ವೃಕ್ಷನೆಡುವ ಮನೋಭಾವನೆಯು ಬೆಳೆಯಲು ಎಡೆ ಮಾಡಿಕೊಟ್ಟಿತು ಪಟ್ಟಣಗಳಲ್ಲಿ ಮಾತ್ರವಲ್ಲದೆ ಹಳ್ಳಿಗಳಲ್ಲೂ ಇದು ಹರಡಿತು. ಮರಗಳಿಂದ ಹೆಚ್ಚು ಧಾನ್ಯ, ಹೆಚ್ಚು ಬದುಕುವ ಸೌಲಭ್ಯ, ಉತ್ತಮ ದನಕುರಿಗಳು ಮತ್ತು ಅಂದವಾದ ಹಳ್ಳಿಗಳು ಎಂಬ ಭಾವನೆಯನ್ನು ಅವರಲ್ಲಿ ಹುಟ್ಟಿಸಲಾಯಿತು

ವನಮಹೋತ್ಸವವೆಂಬುದು ಒಂದು ದಿನ ಮಜಾಮಾಡಿ ಮರುದಿನ ಮರೆತುಬಿಡುವ ಧಾರ್ಮಿಕ ಉತ್ಸವಗಳಂತೆ ಕೇವಲ ಉತ್ಸವವಲ್ಲ, ಅದೊಂದು ಶ್ಯಾಮಲ ಭೂಮಿಯಾತ್ರೆಯ ಕುರುಹು ಮಾತ್ರ ಒಂದು ಮರವನ್ನು ನೆಡುವುದೆಂದರೆ, ಅದರಂತಹ ಸಹಸ್ರ ಸಂಖ್ಯೆಯ ವೃಕ್ಷಗಳಿಗೆ ಆಹಾರವನ್ನೊದಗಿಸಿ, ಮಾನವರಿಂದಾಗಲೀ ಮೃಗಗಳಿಂದಾಗಲೀ ಹಾನಿಯಾಗದಂತೆ ಕಾಪಾಡುವ ದೀಕ್ಷೆಯನ್ನು ತೆಗೆದುಕೊಳ್ಳುವುದು

ವನಮಹೋತ್ಸವದ ಕುರಿತಾಗಿ ಜನತೆಗೆ ಇನ್ನೂ ತಿಳಿಸಲ್ಪಡಬೇಕಾದ ಕೆಲವೊಂದು ವಿಷಯಗಳಿವೆ ಜನ ಸಾಮಾನ್ಯರಿಗೆ ಈ ಬಗ್ಗೆ ಹೊಸತಾಗಿ ತಿಳಿದು ಬರುವ ಎಲ್ಲ ತಿಳುವಳಿಕೆಗಳನ್ನೂ ಈಯಬೇಕು ಈ ಅರಣ್ಯಗಳು ಒಂದು ಕಾಲದಲ್ಲಿ ಆರ್ಯ ನಾಗರಿಕತೆಯ ಬೀಜಗಳಾಗಿದ್ದು ನಮ್ಮ ಭೂಮಿಯನ್ನೂ ಜನರನ್ನೂ ಆಶ್ರಯಿಸಿ ಬಾಳಿಸಿದುವೆಂಬುದನ್ನು ಅವರಿಗೆ ತಿಳಿಸಬೇಕು ಮರಗಳನ್ನು ನೆಡುವಾಗ ವಹಿಸಿದ ಅನಾಸ್ಥೆಯಿಂದಾಗಿ ಗದ್ದೆಯಂಚುಗಳಲ್ಲಿ ಅವು ಬೆಳೆದು ಗದ್ದೆಗೆ ನೆರಳನ್ನುಂಟುಮಾಡಿ, ಬೆಳೆಯಬಹುದಾದ ಬೆಳೆಗೆ ಹಾನಿಯನ್ನುಂಟುಮಾಡುವ ವಸ್ತುಸ್ಥಿತಿಯನ್ನು ತಿಳಿಸಿ, ಅವುಗಳನ್ನು ಊರುವುದೂ ಒಂದು ಕಲೆಯೆಂಬುದರ ಜ್ಞಾನವನ್ನು ಒದಗಿಸಿ, ಯೋಗ್ಯ ಇಂಬುಗಳಲ್ಲಿ ಯೋಗ್ಯ ರೀತಿಯಲ್ಲಿಯೇ ಸಸಿಗಳನ್ನು ನೆಡುವುದರ ಮಹತ್ವವನ್ನು ಜನರಿಗೆ ತಿಳಿಹೇಳಬೇಕು. ಎರೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವಲ್ಲಿ, ಸುಡುತ್ತಿರುವ ಸೂರ್ಯನಿಂದ ರಕ್ಷಿಸುವಲ್ಲಿ, ಒಣ

(ಮುಂದೆ ಸುಟ ನೋಡಿರಿ)

ಹೊಸ ಸುದ್ದಿ

ಸೇವಿಂಗ್ಸ್ ಬೇಂಕ್ ಡಿಪೋಸಿಟಿನ ಬಡ್ಡಿ ದರವನ್ನು 2½%ಗೆ ಹೆಚ್ಚಿಸಲಾಗಿದೆ ವಾರಕ್ಕೆ ಒಂದಾವರ್ತಿಗಿಂತ ಮಿಕ್ಕಿಲ ತೆಯಿಂದ ಹಣ ತೆಗೆಯಲು ಈಗ ಯಾವೊಂದೂ ಆತಂಕವಿಲ್ಲ

ಕಾಯಂ ಠೇವಣಾತಿ ಬಡ್ಡಿ ದರವನ್ನು ಏರಿಸಲಾಗಿದೆ ತಾ 1-7-1957ರಿಂದ ಏರಿಸಿದ ಬಡ್ಡಿಯಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ

ದಿ ವಿಜಯ ಬೇಂಕ್ ಲಿಮಿಟೆಡ್

(ವಿ. ಸೂ ಬೆಂಗಳೂರು ನಗರದಲ್ಲಿ ಬೇಂಕಿನ ಹೊಸ ಶಾಖೆಯನ್ನು ಬೇಗನೇ ತೆರೆಯೋಣಾಗುವುದು)

ನಿರುದ್ಯೋಗ ಸಮಸ್ಯೆ

ನಿರುದ್ಯೋಗ ನಿವಾರಣೆಗೆ ಸರ್ಕಾರಕ್ಕೆ ಸೂಕ್ತ ಸಲಹೆ– ಭಾರತೀಯ 'ಸ್ವಯಂಸೇವಕ ಸೇನೆಯನ್ನು ತೆರೆಯಿರಿ!

ಜಗತ್ತಿನ ರಾಜನೈತಿಕ ಮತ್ತು ಸಾಮಾಜಿಕ ವಿಕಾಸದಲ್ಲಿ ಭಾರತದ ಎರಡು ಅತ್ಯಮೂಲ್ಯ ಕೊಡುಗೆಗಳಿವೆ. ಇವುಗಳಲ್ಲಿ ಒಂದನ್ನು ಮಹಾತ್ಮಾ ಗಾಂಧೀಯವರು ನಮ್ಮೆಲ್ಲರ ಸಂಮುಖದಲ್ಲಿಯೇ ಪ್ರಯೋಗಕ್ಕೆ ತಂದು ಜಯಶೀಲರಾದರು. ಅವರು ಭಾರತದಂತಹ ಪ್ರಾಚೀನ ಇತಿಹಾಸಸಹಿತವಾದ ದೇಶವು ಒಂದೇ ಒಂದು ತೊಟ್ಟು ರಕ್ತವನ್ನು ಹರಿಯಿಸದೆ ವಿದೇಶೀಯರ ಕ್ರೂರ ಶಾಸನವನ್ನು ಅಹಿಂಸಾತ್ಮಕವಾಗಿ ಖಂಡಿಸಿ, ಆದರಲ್ಲಿ ಫಲಪ್ರದಂತಾಗಿ ಜಗತ್ತಿನ ಎಲ್ಲ ಜನರೂ ಕಣ್ಣಲ್ಲಿ ಎಣ್ಣೆ ಸುರಿದುಕೊಂಡು ನೋಡುವಂತೆ ಮಾಡಿದರು. ಅಷ್ಟೇ ಅಲ್ಲದೆ, ಸಂಪಾದಿಸಿದ ಸ್ವಾತಂತ್ರ್ಯವನ್ನಾದರೂ ಯೋಗ್ಯರೀತಿಯಲ್ಲಿ ರಕ್ಷಿಸಿಕೊಳ್ಳುವ ಹೊಣೆಗಾರಿಕೆಯನ್ನು ನಿರ್ವಹಿಸುವುದರೊಂದಿಗೆ, ತನ್ನ ಸುತ್ತಮುತ್ತಲಿನ ದೇಶಗಳಲ್ಲೂ ಸ್ವಾತಂತ್ರ್ಯದ ಗುಡಿ ಹಾರಬೇಕು ಎಂಬ ತತ್ವವನ್ನು ಭಾರತವು ಮಾನ್ಯಮಾಡಿ, ಈ ವಿಷಯದಲ್ಲಿ ಎಲ್ಲ ಪಾರತಂತ್ರ್ಯದಲ್ಲಿ ನರಳುತ್ತಿರುವ ರಾಷ್ಟ್ರಗಳಿಗೆ, ಸ್ವಾತಂತ್ರ್ಯಪ್ರೇಮಿ ದೇಶಗಳಿಗೆ ಮಾರ್ಗದರ್ಶಕವಾಗಿ ನಿಂತಿದೆ ಎಂದರೆ ಅತಿಶಯೋಕ್ತಿಯಲ್ಲ.

ಎರಡನೆಯದಾಗಿ ನಾವು ನಮ್ಮ ಪ್ರಧಾನಿಗಳನ್ನು ಮುಂದಿಟ್ಟುಕೊಂಡು ಲಕ್ಷಾಂತರ ಜನರ ಹತ್ಯಮಾಡದೆ, ಕೋಟ್ಯಂತರ ಜನರನ್ನು ಅಪಹರಿಸದೆ, ಪ್ರಜಾತಂತ್ರದ ಮೂಲಕವಾಗಿಯೇ ವ್ಯಕ್ತಿ ಸ್ವಾತಂತ್ರ್ಯವನ್ನುಳಿಸಿಕೊಂಡೇ ದೇಶದಲ್ಲಿ ಸಮಾಜವಾದದ ಸ್ಥಾಪನೆಗಾಗಿ ಭಗೀರಥ ಪ್ರಯತ್ನವನ್ನು ಮಾಡುತ್ತಿದ್ದೇವೆ; ಅದರಲ್ಲಿ ನಿಧಾನವಾಗಿ ಜಯಶೀಲರಾಗುತಿದ್ದೇವೆ. ನಾವು ನಮ್ಮ ಯೋಜನೆಗಳ ಮೂಲಕ ಸಮಾಜವಾದದ ಕಡೆಗೆ ಶೀಘ್ರವಾಗಿ ಓಡುತಿದ್ದೇವೆ. ಈ ಯೋಜನೆಗಳಿಂದ ಭಾರತೀಯರ ಸ್ಥಿತಿಗತಿಗಳು ಉತ್ತಮವಾಗುವುದರಲ್ಲಿ ಸಂದೇಹವಿಲ್ಲ.

ಈ ಯೋಜನೆಗಳ ಸಾಫಲ್ಯದ ದಾರಿಯಲ್ಲಿ ಎರಡು ದೊಡ್ಡ ಆತಂಕಗಳಿವೆ. ನಮ್ಮ ದೇಶವು ಬಹಳ ಬಡ ಮತ್ತು ಹಿಂದುಳಿದ ರಾಷ್ಟ್ರವಾಗಿದೆ ಮಾಗೂ ನಮ್ಮ ಜನರಲ್ಲಿ ರಾಷ್ಟ್ರೀಯ ಭಾವನೆಯ ಅಭಾವವು ಧಾರಾಳವಾಗಿದೆ ಆದುದರಿಂದ ನಮ್ಮವರು ತಾತ್ಕಾಲಿಕ ಲಾಭದಲ್ಲಿಯೇ ತಲ್ಲೀನರಾಗಿರುವರಲ್ಲದೆ, ಮುಂದಿನ ದಿನಗಳ ಆಲೋಚನೆಯನ್ನು ಮಾಡುತ್ತಿಲ್ಲ.

ಭಾರತೀಯರ ಬಡತನವನ್ನು ಒಂದೇ ಉದಾಹರಣೆಯಿಂದ ಸ್ಪಷ್ಟಪಡಿಸಿ ಬಿಡಬಹುದು. ದ್ವಿತೀಯ ಪಂಚವಾರ್ಷಿಕ ಯೋಜನೆಗಾಗಿ ಭಾರತವು ರೂ. ೪೮೦೦ ಕೋಟಿ ವ್ಯಯಿಸುವುದೆಂದು ಗೊತ್ತಾಗಿದೆ. ಬ್ರಿಟನಿನ ಜನರು ಪ್ರತಿವರ್ಷವೂ ರೂ. ೩೨೩೪ ಕೋಟಿಗಳನ್ನು ಸಿಗರೇಟು, ಶರಾಬುಗಳಿಗಾಗಿ ವ್ಯಯಿಸುತ್ತಾರೆ! ಅಮೇರಿಕವು ಒಂದು ವರ್ಷದಲ್ಲಿ ತನ್ನ ಆಯುಧ ಸಾಮಗ್ರಿಗಳಿಗೆ ಭಾರತದ ೧೫೫ ವರ್ಷಗಳ ಒಟ್ಟು ಆದಾಯದಷ್ಟು ಹಣವನ್ನು ವೆಚ್ಚಮಾಡುತ್ತದೆ! ಹಾಗಿರುವಾಗ ನಮ್ಮ ದೇಶದ ಪುನರ್ನಿರ್ಮಾಣವೆಂದರೆ, ಬಹಳ ಕಷ್ಟಸಾಧ್ಯವಾದುದು. ಒಂದು ವರ್ಷಕ್ಕೆ ರೂ. ೩೫೦ಯಷ್ಟು ಆದಕ್ಕಿಂತ ಹೆಚ್ಚು ಸಂಪಾದಿಸುವ ಭಾರತೀಯರ ಸಂಖ್ಯೆ ಕೇವಲ ಐದು ಲಕ್ಷಮಾತ್ರವೆಂದಿದ್ದಾಗ ಭಾರತೀಯರ ಉದ್ಧಾರವೆಂಬುದು ದೊಡ್ಡ ಸಮಸ್ಯೆ!

ವಿಶ್ವದಲ್ಲಿ ಪ್ರೇಮ ಮತ್ತು ಭಯಗಳು ಮಾನವನನ್ನು ಕಾರ್ಯಪ್ರೇರಿತನನ್ನಾಗಿಸುವ ಪ್ರೇರಕ ಶಕ್ತಿಗಳಾಗಿವೆ. ರಶ್ಯ, ಚೀನಗಳಂತಹ ದೇಶಗಳಲ್ಲಿ ಒಂದೇ ಪಕ್ಷದ ಅಧಿಕಾರವಿದ್ದು ಆ ಪಕ್ಷದ ಕಾರ್ಯಕಲಾಪಗಳು ಕೆಲವೇ ಮಂದಿ ನಾಯಕರ ಕೈಯಿಂದ ನಡೆಯುತಿದ್ದು ಭಯದಿಂದ ಕಾರ್ಯವನ್ನು ಪ್ರೇರೇಪಿಸಲಾಗುತ್ತದೆ. ಆ ದೇಶಗಳ ಪ್ರತಿ ಪ್ರಜೆಗೂ ತಾನು ಸರಕಾರದ ಯೋಜನೆಯನ್ನು ವಿರೋಧಿಸಿದ್ದಾದರೆ ಇಲ್ಲವೇ, ಸಂಪೂರ್ಣ ಸಹಯೋಗ ನೀಡದೆ ಹೋದರೆ, ಮೃತ್ಯುವಿನೊಡನೆ ಸರಸಾಟವಾಡಿದಂತೆಯೆಂದು ತಿಳಿದಿದೆ. ಆದುದರಿಂದ, ಇಂತಹ ಸರಕಾರಿ ಯೋಜನೆಗಳಲ್ಲಿ ಶ್ರದ್ಧೆಯಿರಲಿ, ಇಲ್ಲವೆ ಶ್ರದ್ಧಾಭಾವವಿರಲಿ, ವ್ಯಕ್ತಿಯು ತನ್ನ ಪ್ರಾಣಭಯದಿಂದಾಗಿ ಈ ಸರಕಾರಗಳ ಯೋಜನೆಯನ್ನು ಸಫಲವಾಗಿಸಲು ತನ್ನ ಪಾಲಿನ ಕರ್ತವ್ಯವನ್ನು ಮಾಡಲೇ ಬೇಕು ಆದರೆ, ಭಾರತದಲ್ಲಿ ಸಂವಿಧಾನವು ಪ್ರತ್ಯೇಕ ವ್ಯಕ್ತಿಗೂ ಮೌಲಿಕ ಅಧಿಕಾರವಿತ್ತಿದೆ ಜನತೆಯು ದಾನ ಮಾಡಿದ ಮತಾನುಸಾರವಾಗಿ ಸರಕಾರವು ನಡೆಯುತ್ತಿದೆ. ಆದುದರಿಂದ ಇಲ್ಲಿ ಭಯವು ಕಾರ್ಯವನ್ನು ಮಾಡಿಸುವುದು. ಅಸಾಧ್ಯ. ದೇಶಪ್ರೇಮವೇ ದೇಶನಿರ್ಮಾಣದ ಆದಿಶಕ್ತಿಯಾಗಿದೆ.

ರಾಷ್ಟ್ರೀಯತಾ ಭಾವನೆಯು ಪರಿಪಕ್ವಗೊಳ್ಳುವ ಅವಕಾಶಗಳು ಭಾರತೀಯರಿಗೆ ದೊರೆಯಲಿಲ್ಲ. ಹುಳಿಂತಾಗಿ ಹೋಗಿದ್ದ ವಿಶಾಲ ಭಾರತವು ಕೆಲವೊಮ್ಮೆ ಮಾತ್ರ ಒಂದು ಛತ್ರಿಛತ್ರದಲ್ಲಿ ಒಂದು ಗೂಡುತಿತ್ತು. ಈ ಕಾರಣದಿಂದಾಗಿ ಸ್ವಾತೀಯ ದೇಶಪ್ರೇಮವು ಭಾರತೀಯರ ರಕ್ತಗತವಾಗಿದೆ ಇದೇ ಇಂದು ಪ್ರಾಂತೀಯತೆಯ ರೂಪದಲ್ಲಿ ಪ್ರದರ್ಶನಕ್ಕೆ ಬರುತ್ತಿದೆ. ಭಾರತವು ಭೌಗೋಲಿಕವಾಗಿ, ಸಾಂಸ್ಕೃತಿಕವಾಗಿ ಒಂದೇ ಆಗಿದ್ದರೂ ರಾಜನೈತಿಕವಾಗಿ ಒಂದೇ ಆಗಿರಲಿಲ್ಲ. ಶುದ್ಧ ದೇಶವ್ಯಾಪಿ ರಾಷ್ಟ್ರೀಯತೆಯು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಜನ್ಮದಾರಭ್ಯವಾಗಿ ಕುಟ್ಟಿ ಬೆಳೆದುಬಂದಿದೆ.

ಇಂದು ಭಾರತೀಯರ ಗಮನವು ಎಲ್ಲಕ್ಕಿಂತ ಮೊದಲು ಹರಿಯುವುದು ತಮ್ಮ ಮತ್ತು ತಮ್ಮ ಪರಿವಾರದತ್ತ. ಎರಡನೆಯದಾಗಿ ತಮ್ಮ ಗ್ರಾಮ ಜಿಲ್ಲೆಯ ಕಡೆಗೆ; ಆಮೇಲೆ ಪ್ರದೇಶ ಹಾಗೂ ಧರ್ಮದೆಡೆಗೆ; ಮತ್ತು ಕೊನೆಯದಾಗಿ ದೇಶದ ಕಡೆಗೆ. ನಮ್ಮ ಈ ಭಾವನೆಯು ಪರಿವರ್ತನೆಗೊಳ್ಳದೆ ಹೋದರೆ, ದೇಶದ ಪುನರ್ನಿರ್ಮಾಣವು ಗುರುತ್ವಾಧ್ಯವಾಗುವುದಲ್ಲದೆ. ನಮಗೆ ಒದಗಿದ ಸ್ವಾತಂತ್ರ್ಯವನ್ನುಳಿಸಿಕೊಳ್ಳುವುದೂ ಕಷ್ಟವಾಗುವುದು. ಹಾಗಾಗುವಾಗ ಸಮಾಜವಾದದ ಕಲ್ಯಾಣ ರಾಷ್ಟ್ರವನ್ನು ಕಟ್ಟುವ ನಮ್ಮ ಯೋಜನೆಯು ಕನಸಾಗಿಯೇ ಉಳಿಯುವುದು. ಆದುದರಿಂದ ನಾವು ಒಂದು ಬಲವಂತ ರಾಷ್ಟ್ರದ ರೂಪದಲ್ಲಿ ಜೀವಿಸಲಿಚ್ಛಿಸುವುದಾದರೆ, ದೇಶವಾಸಿಗಳಲ್ಲಿ ದೇಶಪ್ರೇಮದ ಭಾವನೆಯು ತೀವ್ರವಾಗಿ ಹುಟ್ಟಬೇಕು ಈ ವಿಶಾಲ ಮನೋಭಾವನೆಯು ದೇಶದ ಅಕ್ಷರಾಭ್ಯಾಸಿಗಳುಳ್ಳವರು ದೇಶಪ್ರೇಮ ಮತ್ತು ರಾಷ್ಟ್ರೀಯತೆಯ ಗುರಿಯನ್ನು ದೇಶದ ಮೂಲೆ ಮೂಲೆಗಳಲ್ಲಿ ಹರಡುವಂತೆ ಮಾಡುವ ವರೆಗೆ, ದೇಶವಾಸಿಗಳಲ್ಲಿ ಪರಿಣಾಮ ಮಾಡಲಾರದು. ಇದಕ್ಕಾಗಿ ಓದು ಬರಹವಿರುವ ಉತ್ಸಾಹಿ ಭಾರತೀಯ ತರುಣರು ಮುಂದೆ ಬರುವುದು ಆವಶ್ಯಕ.

ಮಹಾತ್ಮಾ ಗಾಂಧಿಯವರು ಭಾರತವನ್ನೆಚ್ಚರಿಸುವ ಕಾರ್ಯವನ್ನು ಪ್ರಾರಂಭಗೆಯ್ದಾಗ ದೇಶದ ಪರಿಸ್ಥಿತಿಯಾವರೀತಿಯಲ್ಲಿತ್ತೆಂಬುದನ್ನು ಅವರ ನೇತೃತ್ವದಲ್ಲಿ ಕೆಲಸ ಮಾಡುವ ಸೌಭಾಗ್ಯವನ್ನು ಪಡೆದಿರುವ ಜನರಿಂದ ಮರೆಯಾಗಿಲ್ಲ. ಜನತೆಯಲ್ಲಿ ನಿರಾಶೆ, ಅವಿಶ್ವಾಸ, ಮತ್ತು ಭೀರುತನಗಳ ಕಾರ್ಮೋಡಗಳು ಹರಡಿದ್ದುವು. ವಿದೇಶೀಯರ ಬೂಟುಗಾಲಿನೊದೆತವನ್ನು ಮರೆತು ಸ್ವಾತಂತ್ರ್ಯ ಶಿಖರದ ತುತ್ತತುದಿಯಲ್ಲಿ ನಾವು ಏರಿಯೆವು ಎಂಬ ಕಲ್ಪನೆಯು ಸಹಾ ಜನರಲ್ಲಿರಲಿಲ್ಲ. ಆದರೆ, ಮಹಾತ್ಮಾ ಗಾಂಧಿಯವರ ಮುಂದಾಳುತನದಲ್ಲಿ ಸಹಸ್ರ ಸಂಖ್ಯಾತ ಸ್ವಯಂಸೇವಕರು ಶಾಲೆ ಕಾಲೇಜುಗಳಿಂದ ಹೊರಬಂದು ಭಾರತ ಮಾತೆಯ ಬಂಧನಾ ಶೃಂಖಲೆಯನ್ನು ಕಡಿದೊಗೆಯಲು ಸನ್ನದ್ಧರಾಗಿ 'ಭಾರತಮಾತಾಕೀ ಜಯ್' ಎಂದು ಕೂಗು ಭಾರತದ ಮೂಲೆ ಮೂಲೆಗಳಲ್ಲೂ ಪ್ರತಿಧ್ವನಿಸಿತು. ಅವರು ಗಾಂಧೀ ಸಂದೇಶವನ್ನು ರೈತರಗುಡಿಸಲು ಮತ್ತು ಮಜೂರರ ಜೋಪಡಿಗಳಿಗೆ ಮುಟ್ಟಿಸಿದರು. ಹಸಿವೆ, ಸೃಷ್ಟಿ ಮತ್ತು ಕಠಿಣತೆಯನ್ನು ಗಮನಿಸದೆ ಅಖಂಡ ದೇಶದಲ್ಲಿ ಸ್ವಾತಂತ್ರ್ಯದ ಕಹಳೆಯನ್ನೂದಿದರು. ಇದರ ಪ್ರಭಾವದಿಂದ ಸರಿಯಲ್ಲಿ ಜ್ಞಾನ ಬಂತು, ಹೃದಯದಲ್ಲಿ ಉತ್ಸಾಹ ಹುಟ್ಟಿತು, ಮುಖದಲ್ಲಿ ಆಶಾಜ್ಯೋತಿಯು ಪ್ರಕಾಶಿಸಿತು, ದೇಶವು ಬಹುಕಾಲದ ರೋಗದಿಂದ ಎದ್ದುನಿಂತಿತು. ಅದು ಇತಿಹಾಸದಲ್ಲಿ ಒಂದು ಬೃಹತ್ ಮತ್ತು ಅನುಪಮ ಕ್ರಾಂತಿಗೆ ಜನ್ಮನಿತ್ತಿತು; ಇದರ ಫಲಸ್ವರೂಪವಾಗಿ ಇಂದು ಭಾರತ ವರ್ಷವು ಜಗತ್ತಿನೆದುರು ತನ್ನ ತಲೆಯನ್ನೆತ್ತಿಕೊಂಡಿದೆ. ಭಾರತದ ಸ್ವಾತಂತ್ರ್ಯಪ್ರಾಪ್ತಿಯ ಯಶಸ್ಸಿನಲ್ಲಿ ಈ ಸ್ವಯಂಸೇವಕರ ಪಾತ್ರವೂ ಬಹುದೊಡ್ಡದು.

ಆದರೆ, ಇಂದು ಈ ಸ್ವಯಂಸೇವಕರಲ್ಲಿರುವರೇ? ಅವರ ಉತ್ಸಾಹ, ತ್ಯಾಗ ಮತ್ತು ಬಲಿದಾನವು ಸನ್ನೊಡನಿದೆಯೆ? ನಮ್ಮ ಯೋಜನೆಗಳ ಬಗ್ಗೆ ಅವರ ಭಾವನೆಯು ಉತ್ತಮವಾಗಿದೆಯೆ? ಸಮಾಜವಾದದ ಸಿದ್ಧಾಂತವನ್ನು ದೇಶದ ಎಲ್ಲ ಮೂಲೆಗಳಲ್ಲೂ ಹರಡಲು ಅವರು ಸಿದ್ಧರಿರುವರೆ? ಇಲ್ಲ; ಇಂದವರು ಘೋರನಿರಾಶಾಂಧಕಾರದಲ್ಲಿ ಸಿಲುಕಿದವರಂತೆ ತೋರುತ್ತಾರೆ! ನಿರುದ್ಯೋಗ ಪೆಡಂಭೂತವು ಅವರನ್ನು ಅವರ ಭವಿಷ್ಯವನ್ನು ಕತ್ತಲೆಯ ಕೋಣೆಯಲ್ಲಿ ಕೊಡವಿದೆ! ನಮಗಾಗಿ ಒಂದು ನೇರ ಮಾರ್ಗವನ್ನವರು ಕಂಡುಕೊಳ್ಳಲು ಅಶಕ್ತರಾಗಿರುವರು ಒಂದೇ ಒಂದು ನೌಕರಿಯನ್ನು ಬೇಡಿಕೊಂಡು ತಿರುಗುತ್ತಾರೆ; ಬರೈಯಿಂದ ಮರಳುತ್ತಾರೆ. ದೇಶದ ಸ್ವಯಂಸೇವಕರು ಈ ರೀತಿ ಅಲೆಯುತ್ತಿರುವಾಗ ಅವರ ಸುಧಾರಣೆಯಾಗುವುದಾದರೂ ಎಂತು?

ಇತ್ತೀಚೆಗೆ ಭಾರತದ ಅರ್ಥಮಂತ್ರಿ ಟಿ. ಟಿ. ಕೆ ಯವರು ಕೇರಳದ ಸಾಮ್ಯವಾದಿ ಸರಕಾರವು ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿದರೆ, ತಾನೂ ಸಾಮ್ಯವಾದಿಯಾಗುವುದಾಗಿ ಹೇಳಿದರು.. ಕೇ

(೧೧ನೇ ಪುಟ ನೋಡಿರಿ)

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಎಂ.ಎಸ್

ಮಕ್ಕಳಿಗೆ, ಹೆಂಗಸರಿಗೆ, ಗರ್ಭಿಣಿಯರಿಗೆ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಮಲೆನಾಡ ಮುನ್ನಡೆ

ಶರಾವತಿ ಕಣಿವೆಯಲ್ಲಿ ವಿದ್ಯುದ್ಯೋಜನಾ ಕಾರ್ಯಾರಂಭ— ಮಲೆನಾಡಿನ ಅಭಿವೃದ್ಧಿಗೆ ಒಂದು ಮಹಾಸಾಧನ.

ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಭಾರತದಲ್ಲಿ ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯವು ಮತ್ತೆ ೧೦ ಲಕ್ಷ ಕಿಲೋವ್ಯಾಟ್‌ಗಳಷ್ಟು ಹೆಚ್ಚಿತು; ಇದರಿಂದ ಭಾರತದಲ್ಲಿ ಸಾರ್ವಜನಿಕ ಉಪಯೋಗೀ ಸಂಸ್ಥೆಗಳು ಉಪಯೋಗಿಸುತ್ತಿದ್ದ ವಿದ್ಯುಚ್ಛಕ್ತಿಯ ಸಾಮರ್ಥ್ಯವು ೨೭ ಲಕ್ಷ ಕಿಲೋವ್ಯಾಟ್‌ಗಳನ್ನು ಮುಟ್ಟಿತು. ಒಂದು ದೇಶದ ಶ್ರೇಯೋಭಿವೃದ್ಧಿಯು ಬಹುವಾಗಿ, ಆ ದೇಶದಲ್ಲಿ ಯಥೇಚ್ಛವಾದ ವಿದ್ಯುಚ್ಛಕ್ತಿ ಸರಬರಾಯಿಯನ್ನೇ ಅವಲಂಬಿಸಿರುವುದೆಂಬ ಅಂಶವನ್ನು ಭಾರತವು ಅಂಗೀಕರಿಸಿ, ದ್ವಿತೀಯ ಯೋಜನೆಯ ಅವಧಿಯಲ್ಲಿ ವಿದ್ಯುಚ್ಛಕ್ತಿ ಉತ್ಪಾದನಾಸಾಮರ್ಥ್ಯವನ್ನು ಹೆಚ್ಚಿಸಲು ಇನ್ನೂ ಮಹತ್ತರವಾದ ಕಾರ್ಯಕ್ರಮವನ್ನು ಕೈಗೊಂಡಿತು. ಕಳೆದ ೮ ವರ್ಷಗಳಲ್ಲಿ, ಭಾರತದಲ್ಲಿ, ವಿದ್ಯುಚ್ಛಕ್ತಿಯ ಪ್ರತಿವ್ಯಕ್ತಿ ಉತ್ಪಾದನಾ ಪ್ರಮಾಣವು ದ್ವಿಗುಣಗೊಂಡಿದೆ ಕೈಗಾರಿಕಾ ಕ್ಷೇತ್ರದಲ್ಲಿ ಮುಂದುವರಿದ ಯಾವುದೇ ರಾಷ್ಟ್ರದೊಂದಿಗೆ ಈ ಪ್ರಮಾಣವು ಹೋಲಿಕೆಯಲ್ಲಿ ನಿಲ್ಲುತ್ತದೆ. ಆದಾಗ್ಯೂ, ಈಗ ತೆಗೆದುಕೊಂಡಿರುವ ಪ್ರತಿವ್ಯಕ್ತಿ ಉತ್ಪಾದನಾ ಪ್ರಮಾಣವು ೨೫ ಅದನ್ನು ಕೈಗೊಂಡಿರುವ ಅಭಿವೃದ್ಧಿ ಕಾರ್ಯಕ್ರಮದ ಪ್ರಮಾಣಕ್ಕೆ ಹೋಲಿಸಿದರೆ, ತೀರಾ ಕೆಳಗಿರುವುದೆಂದು ವೇದ್ಯವಾಗುತ್ತದೆ. ಈ ಸಂಬಂಧದಲ್ಲಿ ದೊಡ್ಡ ಅಂತರವನ್ನೆ ಅದಿನ್ನೂ ಕೂಡಿಸಬೇಕಾಗಿದೆ. ಇದನ್ನರಿತು ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ವಿದ್ಯುಚ್ಛಕ್ತಿ ಉತ್ಪಾದನಾ ಯೋಜನೆಗಳಿಗಾಗಿ ೪೨೭ ಕೋಟಿ ರೂಗಳನ್ನು ತೆಗೆದಿಡಲಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ೨೬೦ ಕೋಟಿ ರೂಗಳನ್ನು ವಿದ್ಯುಚ್ಛಕ್ತಿ ಉತ್ಪಾದನಾ ಯೋಜನೆಗಳಿಗಾಗಿ ತೆಗದಿರಿಸಲಾಗಿತ್ತು ೪೨೭ ಕೋಟಿ ರೂಗಳಲ್ಲಿ ಸುಮಾರು ೧೭೦ ಕೋಟಿ ರೂಗಳನ್ನು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಅರಂಭವಾದ ಯೋಜನಾ ಕಾರ್ಯಗಳನ್ನು ಮುಂದುವರಿಸಲು ಕೊಡಲಾಗುವುದು ಉಳಿದ ೨೫೭ ಕೋಟಿ ರೂಗಳನ್ನು ಹೊಸ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುವುದು.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲಾಗುವ ಕೊಳ ಜಲಜನಿತ–ವಿದ್ಯುಚ್ಛಕ್ತಿ ಉತ್ಪಾದನಾ ಯೋಜನೆಗಳಲ್ಲಿ, ಮೈಸೂರು ರಾಜ್ಯದ ಶರಾವತಿ ಕಣಿವೆ ಯೋಜನೆಗೆ ಉಜ್ವಲ ಭವಿಷ್ಯವಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೮೯,೧೦೦ ಕಿಲೋವ್ಯಾಟ್‌ಗಳ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಎರಡು ವಿಭಾಗಗಳನ್ನು ಮಾತ್ರ ನಿರ್ಮಿಸಲಾಗುವುದು. ಈ ಯೋಜನೆಯ ಅಂತಿಮ ಗುರಿಯು ೧,೨೦,೦೦೦ ಕಿಲೋವ್ಯಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ವಿಭಾಗವನ್ನು ನಿರ್ಮಿಸುವುದೇ ಆಗಿದೆ. ಮಲೆನಾಡಿನ ಹೃದಯದಲ್ಲಿರುವ ವಿಶ್ವವಿಖ್ಯಾತ ಜೋಗದ ಜಲಪಾತದಲ್ಲಿರುವ ಮಹಾತ್ಮಾ ಗಾಂಧಿ ಹೈಡ್ರೊ ಎಲೆಕ್ಟ್ರಿಕ್—ವರ್ಕ್ಸ್‌ನಲ್ಲಿ ಈಗಾಗಲೇ ೧,೨೦,೦೦೦ ಕಿಲೋವ್ಯಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಪಡೆಯಲಾಗುತ್ತಿದೆ ಈಗ ನಿರ್ಮಿಸಲಿರುವ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರವು, ಜೋಗದ ಜಲಪಾತವಿಂದ ಸುಮಾರು ೧೦ ಮೈಲಿಗಳಷ್ಟು ದೂರದಲ್ಲಿರುವುದು. ಶರಾವತಿ ಕಣಿವೆ ಯೋಜನೆಯು ಮೂರ್ಣಗೊಂಡಿಲ್ಲ, ಒಟ್ಟು ೧೦ ಲಕ್ಷ ಕಿಲೋವ್ಯಾಟ್‌ಗಳಷ್ಟು ವಿದ್ಯುಚ್ಛಕ್ತಿಯು ಉತ್ಪಾದನೆಯಾಗುವುದು ಅಂದರೆ ವಿಸ್ತೃತ ಮೈಸೂರಿನಲ್ಲಿನ ಅಂದಾಜು ಮಾಡಲಾದ ಒಟ್ಟು ವಿದ್ಯುಚ್ಛಕ್ತಿಸಾಮರ್ಥ್ಯದಲ್ಲಿ ಮೂರನೆಯ ಒಂದು ಭಾಗ ಇಲ್ಲಿ ಉತ್ಪತ್ತಿಯಾಗುವುದು. ಈ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಬೇಡಿಕೆಯು, ಯಾವತ್ತೂ ವಿದ್ಯುಚ್ಛಕ್ತಿಯ ಉತ್ಪಾದನೆಯ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿರುವುದು. ಕಳೆದ ಕೆಲವು ವರ್ಷಗಳಲ್ಲಿ ಈ ಪರಿಸ್ಥಿತಿ ಬಿಕ್ಕಟ್ಟಿಗೆಯಾಗಿದೆ ಅದರ ಪರಿಣಾಮವಾಗಿ, ಹೊನ್ನಮಂಡು ಯೋಜನೆಯೆಂದು ಕರೆಯುವ ಈ ಯೋಜನೆಯನ್ನು ಮೈಸೂರು ರಾಜ್ಯ ಸರ್ಕಾರದವರು, ಕೇಂದ್ರ ಸರ್ಕಾರದವರ ಅನುಮತಿ ಪಡೆದು ಕೈಗೊಂಡರು. ಈ ಯೋಜನೆಯ ಬಹುಶಃ, ಭಾರತದಲ್ಲಿ ಇದು ವರೆಗೂ ಕೈಗೊಂಡ ಯೋಜನೆಗಳಲ್ಲೆಲ್ಲಾ ತುಂಬಾ ಉತ್ತಮವಾದುದು.

ಈ ಯೋಜನೆಯು ಪ್ರಕಾರ, (ಶಿವಮೊಗ್ಗಾ ಜಿಲ್ಲೆಯ) ಲಿಂಗನಮಕ್ಕಿಯ ಬಳಿ, ಶರಾವತಿ ನದಿಗೆ ಅಣೆಕಟ್ಟನ್ನು ಕಟ್ಟಿ, ೧೭೮,೦೨೦ ಘನ ಅಡಿಗಳಷ್ಟು ಒಟ್ಟು ಸಾಮರ್ಥ್ಯವುಳ್ಳ ಮುಖ್ಯ ಜಲಾಶಯವನ್ನು ನಿರ್ಮಿಸಲಾಗುವುದು.

ಲಿಂಗನಮಕ್ಕಿಯಲ್ಲಿರುವ ಅಣೆಕಟ್ಟು ನದಿಯ ಪಾತ್ರದಿಂದ ೧೭೮ ಅಡಿಗಳಷ್ಟು ಎತ್ತರವಾಗಿರುವುದು, ಮೇಲ್ಭಾಗದಲ್ಲಿ ೫ ದಂಡ ಉದ್ದವು ೬೮೫ ಅಡಿಗಳಷ್ಟಿರುವುದು ಈ ಅಣೆಕಟ್ಟನ್ನು ಕಲ್ಲು ಮತ್ತು ಮಣ್ಣುಗಾರೆಯಿಂದ ನಿರ್ಮಿಸಲಾಗುವುದು; ಸಿಮೆಂಟನ್ನು ಉಪಯೋಗಿಸುವುದಿಲ್ಲ. ಹೆಚ್ಚಾದರೆ ನೀರು ಹರಿದು ಹೋಗುವುದಕ್ಕೆ, ನದಿಯ ಮಧ್ಯ ಭಾಗದಲ್ಲಿ ೫೬೦ ಅಡಿಗಳಷ್ಟು ಅಗಲದ ಅವಕಾಶವನ್ನು ನಿರ್ಮಿಸಲಾಗಿದೆ. ಪ್ರವಾಹ ಹೆಚ್ಚಾಗಿ ಬಂದ ಕಾಲದಲ್ಲಿ ೨೩೦,೦೦೦ ಕ್ಯೂಸೆಕ್ಸ್‌ಗಳಷ್ಟು ನೀರು ಇದರಲ್ಲಿ ಹಾದು ಹೋಗಬಹುದು. ನದಿಯ ಪಾತ್ರದ ಎಡ ಭಾಗದಲ್ಲಿ ಕಾಲುವೆ ಮತ್ತು 'ಟರ್‌ಬೈನ್' ತೂಬುಗಳು ಇರುವುವು. ಈ ಅಣೆಕಟ್ಟನ್ನು ಹಲವು ಪಟ್ಟಿಗಳಲ್ಲಿ ನೀರಿನ ಬೇಡಿಕೆ ಹಾಗೂ ವಿದ್ಯುಚ್ಛಕ್ತಿಯ ಬೇಡಿಕೆಗೆ ಅನುಸಾರವಾಗಿ ನಿರ್ಮಿಸಲಾಗುವುದು.

ಈ ಅಣೆಕಟ್ಟನ್ನು ಪೂರ್ಣಗೊಳಿಸಿದನಂತರ, ನದಿಯ ಎಡಗಡೆಗೆ ಅಣೆಕಟ್ಟಿನ ಕೆಳಭಾಗದಲ್ಲಿ ವಿದ್ಯುಚ್ಛಕ್ತಿ ಉತ್ಪಾದನಾ ಗೃಹವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಆದರೆ ವಿದ್ಯುಚ್ಛಕ್ತಿ ಉತ್ಪಾದನಾ ವಿಭಾಗಕ್ಕೆ ಅಗತ್ಯವಾದ ನೀರನ್ನು ಜಲಾಶಯದಿಂದ ಒದಗಿಸಲು ಅಗತ್ಯವಾದ ತೂಬುಗಳನ್ನು ಮತ್ತು 'ಪೆನ್‌ಸ್ಟಾಕ್' ಗಳನ್ನು ಅಣೆಕಟ್ಟಿನೊಳಗೆ. ಈಗ ರಚಿಸಲಾಗುವುದು. ಈ ಅಣೆಕಟ್ಟೆಯ ನಿರ್ಮಾಣವು ಪೂರ್ಣಗೊಂಡಾಗ ಇಲ್ಲಿ ೪೦,೦೦೦ ಕಿಲೋವ್ಯಾಟ್‌ಗಳಷ್ಟು ಹೆಚ್ಚು ವಿದ್ಯುಚ್ಛಕ್ತಿಯು ಉತ್ಪಾದನೆಯಾಗುವುದು. ಈ ಕೆಲಸವನ್ನು ಸ್ವಲ್ಪ ಕಾಲದ ನಂತರ ಕೈಗೊಳ್ಳಲಾಗುವುದು.

ಮುಖ್ಯ ಜಲಾಶಯದಿಂದ ನೀರು, ಮುಖ್ಯ ಅಣೆಕಟ್ಟಿಗೆ ಎಡ ಭಾಗದಲ್ಲಿರುವ ಎರಡು ಅಂತರಗತ-ತೂಬುಗಳ ಮೂಲಕ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಕ್ಕೆ ಹೋಗುವ ಕಾಲುವೆಗೆ ಬರುವುದು. ಸುಮಾರು ೨೫ ಮೈಲುಗಳಷ್ಟು ದೂರದ ನಂತರ ಈ ಕಾಲುವೆಯು ೩,೯೨೦ ಅಡಿಗಳಷ್ಟು ಉದ್ದದ ಸುರಂಗದ ಮೂಲಕ ಹಾದು ಹೋಗುವುದು.

ಈ ಸುರಂಗವನ್ನು ಹಾದು ಬಂದ ಬಳಿಕ ನೀರು ತಲಕಳಲೆ ಹೊಳೆಯನ್ನು ಸೇರುವುದು. ಸಮತೂಕವನ್ನು ಕಾಯಾಡುವ ಜಲಾಶಯವನ್ನು ನಿರ್ಮಿಸುವುದಕ್ಕಾಗಿ ಅಲ್ಲೊಂದು ಸಹಾಯಕ ಅಣೆಕಟ್ಟನ್ನು ನಿರ್ಮಿಸಲಾಗುವುದು ಈ ಜಲಾಶಯದಿಂದ, ನೀರು ೩,೧೦೦ ಅಡಿಗಳಷ್ಟು ಉದ್ದದ ಪೇಡಸ ಬೈಲುಸುರಂಗ ಮಾರ್ಗದ ಮೂಲಕ ಎದುರಿನ ನಿಲ್ದಾಣಕ್ಕೆ ಹೋಗುವುದು. ತಲಕಳಲೆ ಹೊಳೆಯ ನೀರನ್ನೂ ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ಉಪಯೋಗಿಸಿಕೊಳ್ಳಲಾಗುವುದು.

ಈ ಎದುರ ನೀರ್ದಾಣವು 'ಪೆನ್‌ಸ್ಟಾಕ್' ಗಳಲ್ಲಿ ನೀರಿನ ಒತ್ತಡದಿಂದಾಗಿ ಹೆಚ್ಚುವ ಒತ್ತಡವನ್ನು ತಡೆಯುವ ಕೆರೆಯಾಗಿಯೂ ಕೆಲಸಮಾಡುವುದು. ಈ ಎದುರ ನೀರ್ದಾಣದಲ್ಲಿ ೧೧ ಪೆನ್‌ಸ್ಟಾಕ್‌ಗಳು ಆರಂಭಗೊಳ್ಳುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಈಗ ವಿದ್ಯುಚ್ಛಕ್ತಿ ಬೇಡಿಕೆಯನ್ನು ಪೂರೈಸಲು ೮೯,೦೦೦ ಕಿಲೋವ್ಯಾಟ್‌ಗಳಷ್ಟು ಸಾಮರ್ಥ್ಯದ ಎರಡು ವಿಭಾಗಗಳನ್ನ ಮಾತ್ರ ನಿರ್ಮಿಸುವುದಂದು, ಎರಡು "ಪೆನ್‌ಸ್ಟಾಕ್"ಗಳನ್ನು ಮಾತ್ರ ಎದುರ ನೀರ್ದಾಣದಿಂದ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳ ನಡುವೆ ಹಾಕಲಾಗುವುದು. ಮುಂದೆ ವಿದ್ಯುಚ್ಛಕ್ತಿಯ ಬೇಡಿಕೆ ಹೆಚ್ಚಿದಂತೆ, ಹೆಚ್ಚು ವಿದ್ಯುತ್ಸಾಧಕ ಯಂತ್ರಗಳನ್ನೂ 'ಪೆನ್‌ಸ್ಟಾಕ್' ಗಳನ್ನೂ ಹಾಕಲಾಗುವುದು. 'ಪೆನ್‌ಸ್ಟಾಕ್' ಕೊಳಾಯಿಗಳು ೮ ಅಡಿ ವ್ಯಾಸವುಳ್ಳವು. ಈ ಕೊಳಾಯಿಗಳಲ್ಲಿ ನೀರಿನ ವೇಗವು ಸೆಕೆಂಡಿಗೆ ೧೭ ಅಡಿಗಳಷ್ಟಿರುವುದು. ಈಎರಡು 'ಪೆನ್‌ಸ್ಟಾಕ್' ಗಳ ಉಕ್ಕಿನ ಪ್ರಮಾಣವು ೫,೯೦೦ ಟನ್ನುಗಳು. ಈಗ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರವನ್ನು ಭೂಮ್ಯಂತರ್ಗತದಲ್ಲಿ ಸ್ಥಾಪಿಸುವ ಬಗೆಗೆ ಸಮೀಕ್ಷೆಗಳನ್ನು ನಡೆಸಲಾಗುತ್ತಿದೆ ಇಂತಹ ಸ್ಥಾಪನೆಯು ಸಾಧ್ಯವಾದರೆ, ನೀರಿನ ನಿರ್ಮಾಪನ ಪದ್ಧತಿಯನ್ನು ಸೂಕ್ತ ರೀತಿಯಲ್ಲಿ ಮಾರ್ಪಾಡು ಮಾಡಲು ಉದ್ದೇಶಿಸಲಾಗಿದೆ.

ಪ್ರತಿಯೊಂದು 'ಪೆನ್‌ಸ್ಟಾಕ್' ಒಂದು 'ಟರ್ ಬೈನ್'ಗೆ ನೀರನ್ನೊದಗಿಸುವುದು. ಅದು ೧,೨೮,೦೦೦ ಬಿ. ಎಚ್. ಪಿ ಗಳಷ್ಟನ್ನು ಉತ್ಪಾದಿಸುವುದು ಪ್ರತಿಯೊಂದು 'ಟರ್‌ಬೈನ್'ಗೂ ಒಂದು ಉತ್ಪಾದಕ ಯಂತ್ರವಿದ್ದು ಅದು ೮,೧೦೦ ಕಿಲೋವ್ಯಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು. ಈ ರೀತಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಯು ಮಧ್ಯಮ 'ವೋಲ್ಟೇಜ್'ನಲ್ಲಿರುವುದು. ಅದನ್ನು ಸಾಗಿಸುವ ಯಂತ್ರಗಳ ಸಹಾಯದಿಂದ ೨,೩೦,೦೦೦ ವೋಲ್ಟ್‌ಗಳಿಗೆ ಹೆಚ್ಚಿಸಲಾಗುವುದು.

ಸಾಗಾಟದ ಮಾರ್ಗಗಳಲ್ಲಿ ಈ ವಿದ್ಯುಚ್ಛಕ್ತಿಯನ್ನು ತಿವಿಯಾಗ್ಗಿ ಹಾಗೂ ಬೆಂಗಳೂರಿಗೆ ಸಾಗಿಸಲಾಗುವುದು. ೨,೩೦,೦೦೦ ವೋಲ್ಟ್‌ಗಳಷ್ಟಿರುವ ವಿದ್ಯುಚ್ಛಕ್ತಿಯನ್ನು ಇಲ್ಲಿ ಮನೆ ತಗ್ಗಿಸಿ ಈಗಿರುವ, ಮಹಾತ್ಮಾ ಗಾಂಧಿ ಹೈಡ್ರೊ ಎಲೆಕ್ಟ್ರಿಕ್ ಮತ್ತು ಪಿಂಚಾ ಪವರ್ ಸ್ಟೇಷನ್‌ಗಳಿಂದ ಉತ್ಪಾದನೆಯಾದ ವಿದ್ಯುಚ್ಛಕ್ತಿಯು ಇರುವ 'ವೋಲ್ಟ್'ಗಳ ಮಟ್ಟಕ್ಕೆ ತಂದು ಬಳಕೆಗೆ ಸರಬರಾಯಿ ಮಾಡಲಾಗುವುದು

ಈ ಯೋಜನೆಯ ಮೊದಲನೆಯ ಪಟ್ಟದಲ್ಲಿ ಎರಡು ವಿಭಾಗಗಳಿರುವುವು. ಅವುಗಳ ಸಾಮರ್ಥ್ಯ ೧,೭೮೦೦ ಕಿಲೋವ್ಯಾಟ್‌ಗಳು. ಅವಕ್ಕೆ ಸಮಾನ ೨೫೮ ಲಕ್ಷ ರೂಗಳು ಹಿಡಿಯುವುವು ಈ ಯೋಜನೆಯನ್ನು ಪೂರ್ಣಗೊಳಿಸುವುದಿಂದ ಮೈಸೂರು ರಾಜ್ಯದ ಹಾಗೂ ಸುತ್ತಮುತ್ತಿನ ಪ್ರದೇಶಗಳಲ್ಲಿರುವ ವಿದ್ಯುಚ್ಛಕ್ತಿ ಅಭಾವವು ಕೊನೆಗೊಳ್ಳುವುದಲ್ಲದೆ, ಈ ರಾಜ್ಯದ ಮಲೆನಾ

(ಗಂಟೆ ಮುಟ ಮುಂದಿರ)

ಸಿಂಡಿಕೇಟ್ ಬೇಂಕನ್ನೇ ಜನರು ಏಕೆ ಆರಿಸುತ್ತಾರೆ?

- 31 ವರ್ಷಗಳ ಸೇವೆಯಲ್ಲಿ 11 ಕೋಟಿಗೂ ಮಿಕ್ಕಿದ ಬಂಡವಾಳ
- ಪ್ರಾಮುಖ್ಯ ಕೇಂದ್ರಗಳಲ್ಲಿ 96 ಶಾಖೆಗಳು
- ಕರ್ನಾಟಕದಲ್ಲೇ 59 ಶಾಖೆಗಳು
- ಹಳ್ಳಿ-ಹಳ್ಳಿಗಳಲ್ಲೂ ಬೇಂಕಿಂಗ್ ಸೌಕರ್ಯಗಳು
- ಸಿಗ್ಮಿ, ಕ್ಯುಮುಲೇಟಿವ್‌ಸಾಂತಹ ಆಕರ್ಷಕ ಯೋಜನೆಗಳು
- ವಿದ್ಯಾರ್ಥಿಗಳಿಗೆ ವಿಶೇಷ ಅನುಕೂಲತೆಗಳು
- ಉತ್ತಮ ಆದಳಿತ ಮತ್ತು ನೌಕರ ವರ್ಗ
- ಯೋಗ್ಯ ಭದ್ರತೆ, ಪ್ರಮಾಣಿಕತೆ ಮತ್ತು ಕ್ಲಿಷ್ಟತೆಯ ವ್ಯವಹಾರ

ಸಿಂಡಿಕೇಟು ಜನಪ್ರಿಯವಾದ ಬೇಂಕು

ಡಾ: ಟಿ ಎಂ ಎ ಪೈ, ಮೆನೇಜಿಂಗ್ ಡೈರೆಕ್ಟರ್.
ಟಿ. ಎ. ಪೈ, ಜನರಲ್ ಮೆನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ.

The Canara Industrial & Banking Syndicate, Ltd.,
UDIPI.

ಮುಕ್ತಿ ಮಾರ್ಗ

ಪೂಜೆ ಪುರಸ್ಕಾರಗಳು ದೇವರನ್ನೊಲಿಸಲಾರವು– ಸದಾಚಾರ ಸತ್ಕರ್ಮಗಳೇ ಜೀವನ್ಮುಕ್ತಿಯ ಸುಮಾರ್ಗ.

ಅನಿರೀಕ್ಷಿತವಾಗಿ, ಅಪ್ರತ್ಯಕ್ಷವಾಗಿ, ಅನಿವಾರ್ಯವಾಗಿ ಪ್ರಕೃತಿಯಲ್ಲಿ ಋತುಭೇದ, ಕಾಲಭೇದಕ್ಕನುಸಾರಿ ಬದಲಾಗುತ್ತಿರುವ ವಿವಿಧ ಸೃಷ್ಟಿಯ ವಿಚಿತ್ರ ವ್ಯಾಪಾರವನ್ನು ಕಂಡು ಈ ಜಗತ್ತಿನಲ್ಲಿ ಅದಾವುದೋ ಒಂದು ಅಗೋಚರವಾದ ಮಹತ್ ಶಕ್ತಿಯೊಂದಿದೆ ಎಂಬುದನ್ನು ಮಾನವನು ಕಂಡುಕೊಂಡ. ವಿಜ್ಞಾನಿಯಾದ ಮಾನವನ ಬುದ್ಧಿಶಕ್ತಿಗೆ ನಿಲುಕದ ಕಾರ್ಯವನ್ನು ಅದೊಂದು ಕಾಣದ ಕೈ ಮಾಡುತ್ತಿದೆ ಎಂಬುದನ್ನು ತಿಳಿದು ಅತ ವಿಸ್ಮಯನಾಗುತ್ತಾನೆ. ಜೀವಿಗಳ ಹುಟ್ಟು, ಸಾವು; ಮಳೆ, ಬೆಳೆ; ಕಾಲ ಕಾಲದಲ್ಲಿ ಮರಗಿಡಗಳು ಹೂ ಬಿಡುತ್ತಾ ಫಲ ಕೊಡುತ್ತವೆ. ಪ್ರಾಣಿ ಪಕ್ಷಿಗಳೂ ತಮ್ಮ ಜೀವನವನ್ನೂ ಯಾಂತ್ರಿಕವಾಗಿ ನಡೆಸುತ್ತವೆ. ಪ್ರಕೃತಿಯ ಅನುಕೂಲ, ಪ್ರತಿಕೂಲ ಸ್ಥಿತಿ, ಗತಿ ಇವನ್ನೆಲ್ಲಾ ಕಂಡು ಯಾರಾದರೂ ಬೆಚ್ಚಿ ಬೆರಗಾಗಲೇಬೇಕು. ತನ್ನ ಬುದ್ಧಿಮಾನಕ್ಕೆ ಮಿಡುಕದ ಅನಂತವಾದೊಂದು ಅದ್ಭುತಶಕ್ತಿ ಈ ಜಗತ್ತಿನಲ್ಲಿ ಇದೆ ಎಂದಾಗ ಮಾನವನು ಆ ಶಕ್ತಿಗೆ ಶರಣುಹೋಗಲೇ ಬೇಕಾಯ್ತು. ಪ್ರಪಂಚದ ಉನ್ನತಿ ಹಾಗೂ ಅವನತಿಗೆ ಮೂಲಭೂತವಾದ ಪ್ರಬಲಶಕ್ತಿಯೇ ಪರಮಾತ್ಮನೆಂಬ ನಂಬಿಕೆ ಅವನಲ್ಲಿ ಉಂಟಾಯಿತು. ತನ್ನ ಸೃಷ್ಟಿಯಲ್ಲಿ ಭಗವಂತನು ಹೊಂದಿಕೊಂಡಿರುವುದರಿಂದಲೇ ಈ ಎಲ್ಲಾ ಬದಲಾವಣೆಯಾಗಲು ಸಾಧ್ಯ ಎಂದಾಗ ಪ್ರಕೃತಿಯು ಪರಮಾತ್ಮನ ಪ್ರತಿರೂಪ ಎಂದರೂ ಅತಿಶಯವಲ್ಲ! ನಮ್ಮನ್ನು ರಕ್ಷಿಸುವ ಹಾಗೂ ಶಿಕ್ಷಿಸುವ ಪ್ರಭಾವಿ ಶಕ್ತಿಯ ಅಂಕೆಯಲ್ಲಿ ನಾವಿರುವಾಗ ಅದಕ್ಕೆ ಕಲೆತಗ್ಗಿನಲೇಬೇಕು. ಆ ಶಕ್ತಿಯನ್ನು ನಾವು ಸೂಜಿಸಲೇಬೇಕು. ಅವನ್ನು ಗೌರವಾದರಗಳಿಂದ ಕಾಣಲೇಬೇಕು. ಇದೇ ಭಕ್ತಿ! ಶಿಕ್ಷೆ ರಕ್ಷೆಗೆ ಅಧಿಕಾರಿಯಾದವನಲ್ಲಿ ಪೂಜ್ಯಭಾವವನ್ನಿಟ್ಟುಕೊಳ್ಳುವುದೇ ಭಕ್ತಿ! ನಮಗಿಂತ ಪ್ರಬಲಂಗಾದವರ ಕೈವಾಡದ ಪ್ರಭಾವವು ನಮಗೆ ಮಾರಕವಾಗದಂತೆ ಅವರನ್ನು ಗೌರವಿಸುತ್ತೇವೆ, ಅದೊಂದು ಭಕ್ತಿ. ನಮಗಿಂತ ಮಿಕ್ಕವರಿಂದ ಯಾವೊಂದೂ ತೊಂದರೆಯಾಗಬಾರದೆಂದು ಅವರನ್ನು ಮನ್ನಿಸಿ ಮರ್ಯಾದಿಸುವುದು, ಭಯಭೀತಿಯಿಂದ ಬಾಗುವುದು, ಇಲ್ಲಿಯೂ ಭಕ್ತಿಯ ಭಾವವಿದೆ; ಎಂಬುದು ಸ್ಪಷ್ಟ.

ಜಗದ್ರಕ್ಷಕನೊಬ್ಬ ಇರುವನೆಂದು ತಿಳಿದಾಕ್ಷಣ ಸರ್ವರೂ ಆತನನ್ನು ಭಕ್ತಿಭಾವದಿಂದ ಪೂಜಿಸುವುದು ಸ್ವಾಭಾವಿಕವಾಯ್ತು. ತನ್ನ ರಕ್ಷೆಗಾಗಿ-ಅಂದರೆ ತನ್ನ ಸುಖಕ್ಕಾಗಿ ಆತನನ್ನು ಒಲಿಸಿಕೊಳ್ಳುವ ಉಪಾಯದಿಂದ ಪೂಜಿಸುವುದೂ ತನ್ನ ಶಿಕ್ಷೆಯನ್ನು ಕ್ಷಮಿಸುವಂತೆ ಆತನ ಮರೆ ಹೊಕ್ಕು ಮೊರೆಯಿಡುವುದೂ ಸಹಜವಾದೊಂದು ಸಂಪ್ರದಾಯವಾಯ್ತು! ಯಾರಿಗೆ ನಾವು ಭಯಭೀತಿಯಿಂದ ಮಣಿದು, ಯಾರನ್ನು ಪೂಜಾರ್ಹರೆಂದು ತಿಳಿದು, ಅವರನ್ನು ಪ್ರೇಮಾದರಭಾವದಿಂದ ಕಾಣುವೆವೋ ಅದೇ ಅವರಲ್ಲಿ ನಮಗಿರುವ ಭಕ್ತಿ!

ಮಾನವನು ವಿಷಯ ಸುಖಭೋಗಲೋಲುಪನಾಗಿ ಲೌಕಿಕ ಜೀವನದಲ್ಲಿ ಅನಿವಾರ್ಯವಾಗಿ, ಅನಪೇಕ್ಷಿತವಾಗಿ ಒದಗಬಹುದಾದ ಕಷ್ಟ ಪರಂಪರೆಗಳನ್ನು ಹೋಗಲಾಡಿಸಲು ಅಧೀರನಾಗಿ, ಅನಾಥನಾಗಿ ಜಗತ್ಪಾಲಕನಾದ ಪರಮಾತ್ಮನ ಆಶ್ರಯವನ್ನಪೇಕ್ಷಿಸುತ್ತಾನೆ. ಜೀವನದ ಸುಸಾಧನೆಗೆ ಆತನ ಕರುಣೆಯೇ ಮೂಲವೆಂದಾಗ ಅವನನ್ನು ಮೆಚ್ಚಿಸುವುದೊಂದು ಕರ್ತವ್ಯ ಆದು ಜೀವನ ಧರ್ಮ ಕೂಡ; ಪರಮಾತ್ಮನ ಪ್ರೀತಿ, ಕರುಣೆಯನ್ನುಳಿಸಿಕೊಳ್ಳುವಾತನೇ ಒಬ್ಬ ಭಕ್ತ. ಸರ್ವಾಂತರ್ಯಾಮಿಯಾದ ಆತನ ಭಯ ಉಳ್ಳವನೇ ನಿಜವಾದ ಭಕ್ತ, ಚಂಚಲ ಚಿತ್ತನಾದ ಮನುಜ ಇಂದ್ರಿಯ ಚಪಲತೆಗೆ ಅಧೀನನಾಗಿ, 'ತಾನು ತನ್ನ'ದೆಂಬ ಅಹಂಕಾರ ಮಮಕಾರಗಳಿಂದ ಉನ್ಮತ್ತನಾಗಿ ಜೀವನದಲ್ಲಿ ಅದೆಷ್ಟೋ ದುಷ್ಕರ್ಮಗಳನ್ನು ಮಾಡುತ್ತಿರುವನು. ಜ್ಞಾನಾಂಧನಾದ ತಾನು ಮಾಡುತ್ತಿರುವ ಅನ್ಯಾಯ, ಅಕೃತ್ಯಗಳನ್ನೆಲ್ಲ ಅಗೋಚರನಾಗಿ ಪರಮಾತ್ಮನು ಕಾಣುತ್ತಿರುವನೆಂದು ಆತನಲ್ಲಿ ತನ್ನ ತಪ್ಪಿಗೆತಕ್ಕ ಶಿಕ್ಷೆ ವಿಧಿಸಲಿದೆ ಎಂದು ತಿಳಿದಿದ್ದರೂ ಆತ ತಪ್ಪುಮಾಡುತ್ತಲೇ ಇರುತ್ತಾನೆ. ಮುಂದೆ, ಮಾಡಿದ ತಪ್ಪನ್ನು ಪರಮಾತ್ಮನಿದಿರು ತೋಡಿಕೊಳ್ಳುತ್ತಾನೆ. ಕೃಪಾಯಾಚಕನಾಗಿ ದೈವ ದೇವರ ಗುಡಿಯ ಎದುರು ಹೊರಳಾಡುತ್ತಾನೆ. ಅದಕ್ಕಾಗಿ ಪೂಜೆ, ಉತ್ಸವ, ಪರಕೆ, ಕಾಣಿಕೆ ಇವೆಲ್ಲಾ. ದೇವನಿಗೆ ಸಲ್ಲುತ್ತವೆ! ಇವೆಲ್ಲ ಶಕ್ಯ ಭಕ್ತಿಯಿಂದ ತನ್ನ ಪಾಪವನ್ನು ಸರಿಹರಿಸಿಕೊಳ್ಳಬಹುದೆ ಎಂಬುದನ್ನು ಆತ ತಿಳಿಯಬಲಾರ! ಬರೇ ಹರಕೆ ಕಣ್ಣುಕಾಯಿಗಳಿಂದಲೇ ದೇವರನ್ನು ಮೆಚ್ಚಿಸಲು ಸಾಧ್ಯವೆಂದಾದರೆ ಈ ಜಗತ್ತಿನಲ್ಲಿ 'ಪಾಪ'ಗಳೆನ್ನುವವರೇ ಇಲ್ಲ. ಮೋಸ ವಂಚನೆಯಿಂದ ಸುಲಿದು, ಬಡ ಜನತೆಯನ್ನು ಶೋಷಣೆಮಾಡಿದ, ಧನಧಾನ್ಯಗಳಿಂದ ದೇವರನ್ನು ಅರ್ಚಿಸಿ, ಹರಕೆ ಕಾಣಿಕೆ ಕೊಟ್ಟು, ಕೈಬಿಟ್ಟು ದಾನವಿತ್ತಾಕ್ಷಣ ತನ್ನ ಪಾಪವನ್ನು ಪರಿಹರಿಸಿಕೊಂಡಂತಾಗಲಾರದು!

ಸ್ವಭಾವಿತವಾಗಿ ತ್ರಿಕರಣಪೂರ್ವಕವಾಗಿ ಸತ್ಯ ನಿಷ್ಠೆಯಿಂದ ಕೂಡಿರುವ ಭಕ್ತಿಯಿಂದಲೇ ಪರಮಾತ್ಮನನ್ನು ಮೆಚ್ಚಿಸಲು ಸಾಧ್ಯ. ಕ್ಷಣಿಕವಾದ ವಿಷಯ ಸುಖದಲ್ಲಿ ಆಶ್ರಿತನಾಗಿ ಮನಹೋಗುವಾತನು ಈ ಸತ್ಯ ಸಂಗತಿಯನ್ನು ತಿಳಿಯಲಾರ! ಆತ್ಮಸಂಯಮಿಯಾಗಿ ಯಾವಾತನು ತನ್ನ ಇಂದ್ರಿಯಗಳನ್ನೂ ಅಂಕೆಯಲ್ಲಿಟ್ಟುಕೊಂಡು ಸತ್ಯಮಾರ್ಗೈಯವಾದಿಯಾಗಿ ತನ್ನಾತ್ಮವನ್ನು ಪರಮಾತ್ಮನಲ್ಲಿ ನೆಲೆಗೊಳಿಸುವನೋ ಆತನ ಭಕ್ತಿಯೇ ಮುಕ್ತಿಗೆ ಸಾಧನವಾಗಿದೆ! ಅಂದೇ ಅವನು ಜೀವನದಿಂದ ಬಿಡುಗಡೆಯಾಗುವನು. ತನ್ನ ತಪ್ಪನ್ನು ತಾನು ತಿಳಿದು ಮುಂದೆ ಅಂತಾಗದಂತೆ ಯತ್ನಿಸಿ ಪರಮಾತ್ಮನೇ ಸಕಲಕಾರ್ಯಕಾರಣನಾಗಿರುವನೆಂದು ತಿಳಿದು ಕರ್ತವ್ಯದಕ್ಷನಾಗಿರುವಾತನೇ ನಿಜವಾದ ನಿರಜ್ಞ. ಆತನೇ ಈ ಸಂಸಾರ ಬಂಧದಿಂದ ಮುಕ್ತನಾಗುವ ಸರ್ವಜ್ಞ!

ಧ್ಯೇಯವಾದಿಯಾದ ಮಾನವನು ಜೀವನದ ಪ್ರಗತಿಕಾಂಕ್ಷೆಯಾಗಿದ್ದು ಕ್ಷಣಭಂಗುರವಾದ ಇಹಸುಖವನ್ನು ಇಚ್ಛಿಸಿ ವಿವೇಕವನ್ನು ಕಳೆಕೊಳ್ಳಬಾರದು. ವಿವೇಚನಾ ಶಕ್ತಿಯುಳ್ಳ ಮಾನವನು ಸದಾ ವಿಚಾರಶೀಲನಾಗಿದ್ದು ಬುದ್ಧಿಯನ್ನು ತಿದ್ದಿ, ಅದನ್ನು ವೃದ್ಧಿಪಡಿಸಿಕೊಂಡಲ್ಲಿ ನಿಶ್ಚಯವಾಗಿಯೂ ಶ್ರೇಯಸ್ಸನ್ನು ಪಡೆಯುತ್ತಾನೆ. ಜೀವ ಕೋಟಿಗಳಲ್ಲಿ ಸರ್ವಶ್ರೇಷ್ಠವೂ ಸರ್ವ ಮಾನ್ಯವೂ ಆದ ಮಾನವ ಜೀವನವು ಪೂರ್ವಾರ್ಜಿತ ಪುಣ್ಯದಿಂದಾಗಿ ಲಭ್ಯವಾದುದು. ಪ್ರಾಯಃ ಇದೊಂದು ಕೊನೆಯ ಸತ್ವ ಪರೀಕ್ಷೆಗೆಂದೇ ಮನುಷ್ಯ ಜನ್ಮವಿತ್ತು ಪರಮಾತ್ಮನು ಸೃಷ್ಟಿಸಿರುವನೋ ಎಂದು ತಿಳಿಯಬೇಡಿಯುಂಟು. ಯಾಕೆಂದರೆ ಈ ಧರೆಯಲ್ಲಿ ಧರ್ಮವು ಗ್ಲಾನಿಯಾದಾಗ ತಾನು ಧರ್ಮರಕ್ಷೆಗಾಗಿಯೂ, ಸತ್ಯದ ಸ್ಥಿರನಾಥಾಪನೆಗಾಗಿಯೂ ದುಷ್ಟನಿಗ್ರಹ ಶಿಷ್ಟ ಪಾಲನೆಗಾಗಿಯೂ ಯುಗ ಯುಗದಲ್ಲಿ ಅವಿರ್ಭವಿಸುವೆನೆಂದು ಶ್ರೀ ಪರಮಾತ್ಮನು ಗೀತೆಯಲ್ಲಿ ಹೇಳಿರುವನು. ಹೀಗೆನ್ನುವಾಗ ಮಾನವ ಬಾಳಿನಲ್ಲೇ ಧರ್ಮದಾಚಾರವನ್ನನುಸರಿಸಿಕೊಂಡು ಶ್ರೇಷ್ಠತಮ ಜೀವನ ನಡೆಸಲು ಸಾಧ್ಯವಿದೆ ಎಂಬುದು ಸ್ಪಷ್ಟವಾಯಿತು. ಸತ್ಯ ಶಾಂತಿಯಿಂದಲೇ ಬಾಳನ್ನು ಬೆಳಗಿಸಲೂ ಸಾಧ್ಯ. ಇದರ ದೃಢನಂಬಿಕೆಗೆ ಅನೇಕ ಮಹಾ ಪುರುಷರ ಜೀವನ ಕೃತುವೇ ನಮಗೊಂದು ಆದರ್ಶ. ವಿಶೇಷತಃ ಮಾನವನಲ್ಲಿ ಪ್ರತಿಯೊಂದು ಜೀವಿಗಳಿಗಿಂತಲೂ ವಿವಿಧ ರೀತಿಯ ವಿಶಿಷ್ಟ ಗುಣಗಳು ಇವೆ ಎಂದಾಗ ಆತನಿಗೆ ಅ ಬುದ್ಧಿಶಕ್ತಿಯನ್ನಿತ್ತ ಶಕ್ತಿಯಾದರೂ ಅವನ ಅಗ್ನಿ ಪರೀಕ್ಷೆಗೆಂದೇ ಎಂಬುದು ದೃಢವಾಗುತ್ತದೆ.

ಹೀಗೆಂದಾಗ ಮನುಷ್ಯಜೀವನದಪವಿತ್ರತೆಯನ್ನುಳಿಸಿಕೊಂಡು ಬದುಕಲು ಸಾಧ್ಯವಿದೆ ಎಂದಾಯಿತು; ಇದಕ್ಕೆ ಭಕ್ತಿಯೇ ಸುಲಭವೂ, ಮೂಲವೂ ಆದ ಸಾಧನ. ಭಕ್ತಿಯೇ ಮುಕ್ತಿಗೆ ಮೂಲವೆಂದು ನಂಬಿ ನಡೆಯುವಾತನು ಜೀವನದಲ್ಲಿ ಮಾನವ ಮಾರ್ಗವನ್ನೆಂದೂ ಅನುಸರಿಸಲಾರ! ದ್ವೇಶಾಸೂಯೆ ಮುಂತಾದ ದುರ್ಗುಣಗಳನ್ನು ದೂರಮಾಡಿ ಸದ್ಬುದ್ಧಿಯಿಂದ ಸತ್ಕರ್ಮನಿರತನಾಗಿ ಜೀವನ್ಮುಕ್ತನಾಗಲು ಶ್ರಮಿಸುತ್ತಾನೆ. ಈ ಭವದ ಬಂಧನದಿಂದ ಬಿಡುಗಡೆಯಾಗಬೇಕೆಂದು ಅಪೇಕ್ಷಿಸುವವರು ಚಂಚಲವಾದ ಮನಸ್ಸನ್ನು ಅಭ್ಯಾಸಬಲದಿಂದ ತನ್ನ ಅಂಕೆಯಲ್ಲಿಟ್ಟುಕೊಂಡು ಏಕನಿಷ್ಠೆಯಿಂದ ಪರಮಾತ್ಮನ ಗುರುತಾದ ಯಾವುದಾದರೊಂದು ವಿಗ್ರಹದಲ್ಲಿ ಸ್ಥಿರವಾಗಿ ನಿಲ್ಲುವಂತೆ ಯತ್ನಿಸಬೇಕು. ತನ್ನ ದೈಹಿಕ ಸುಖ ಸಾಧನೆಗಾಗಿ ದಿನನಿತ್ಯ ತಾನು ಗೈಯುತ್ತಿರುವ ದುಷ್ಕೃತ್ಯ, ದುಃಶೀಲಗಳನ್ನೆಲ್ಲ ಪರಮಾತ್ಮನು ಅಗೋಚರನಾಗಿ ಈಕ್ಷಿಸುತ್ತಿರುವನು; ತನ್ನ ತಪ್ಪಿಗೆ ತಕ್ಕ ಶಿಕ್ಷೆಯನ್ನು ವಿಧಿಸುವ ಅಧಿಕಾರಿಯೊಬ್ಬನಿರುವನು, ಎಂಬೀ ಭಾವ ಉಳ್ಳವನು ಪಾಪಕೃತ್ಯಗಳನ್ನೆಸಗಲು ಹಿಂಜರಿಯುವನು. ಅಂತೆಂದೇ, 'ದೇವರ ಭಯವೇ ಜ್ಞಾನದ ಆರಂಭ'ವೆಂಬೀ ವೇದ ವಾಕ್ಯವು ಹುಟ್ಟಿಕೊಂಡಿತು. ಭಕ್ತಿ ಮಾಡಬೇಕೆಂದಿದ್ದಾಗ, ಗುಡಿ, ಮಠಗಳಿದ್ದೆಡೆ ಹೋಗಿಯೇ ದೇವರನ್ನು ಪೂಜಿಸಬೇಕೆಂಬುದೇನೂ ಇಲ್ಲ. ಅನಂತವ್ಯಾಪಿಯಾದ ನಿಜಗದ್ವಂದ್ಯಗೆ ನಿಶ್ಚಿತವಾದೊಂದು ವಾಸಸ್ಥಾನವೆಂಬುದಿಲ್ಲ; ಸದಾ ಕಾಲವೂ ಕರುಣಾಮಯನ ಕಲ್ಯಾಣ ಗುಣಗಳನ್ನು ತಾನು ಮನನಮಾಡುತ್ತಿರಬೇಕು. ತನ್ನ ಕೆಲಸ ಕಾರ್ಯಗಳನ್ನು ಬಿಟ್ಟು ದೇವಸ್ಥಾನಗಳಿಗೆ ಹೋಗಿ ಅಲ್ಲಿ ದೇವರಿಗೆ ಹರಕೆ, ಹಣ್ಣುಕಾಯಿಗಳನ್ನರ್ಪಿಸಿ ಪೂಜಿಸಿಯೇ ಪರಮಾತ್ಮನನ್ನೊಲಿಸಬೇಕಾದುದಿಲ್ಲ. ಧರ್ಮಾನುಯಾಯಿಯಾಗಿ, ಸತ್ಯಸಂಧನಾಗಿ, ಪರರಿಗೆ ಸಹಕಾರಿಯಾಗಿ, ಕರ್ತವ್ಯದಕ್ಷನಾಗಿ ನಿರಂತರವೂ ದೇವರನ್ನು ಕುರಿತು ಚಿಂತಿಸುತ್ತಾ ಇದ್ದರೆ ಮೋಕ್ಷವು ಸುಲಭ ಲಭ್ಯ! ಒಂದು ಬಾರಿ ಮಾನವನು ಯಾವುದೇ ರೀತಿಯಿಂದಲಾದರೂ ಈ ಭಕ್ತಿಮಾರ್ಗವನ್ನನುಸರಿಸಿ ಮುನ್ನಡೆದ ನೆಂದಾದರೆ ಪುನರ್ಜನ್ಮ ಕಾರಣವಾದ ವಾಸನೆಗಳು ನಶಿಸಿ ಮೋಕ್ಷವನ್ನು ಹೊಂದುವನು!

ಹಲವು ಯೋಗ ಸಾಧನಗಳಿಗಿಂತ ಈ ಭಕ್ತಿಯೋಗವು ಆಚರಣೆಗೆ ಸುಲಭವಾಗಿರುವುದು ಜೀವನದ ಸುಖಭೋಗಗಳಿಗಾಗಿ ಅತಿ ಆತುರಾರದಿಂದ ಇಲ್ಲದ ದನ್ನು ಇಚ್ಛಿಸದಿರುವ ನಿಷ್ಕಾಮ ಕರ್ಮ, ದುಷ್ಕರ್ಮಕ್ಕೆ ಸಹಕಾರವಾದ ಧನ, ಧಾನ್ಯ, ಸಂಪತ್ತುಗಳಲ್ಲಿರುವ ನಿರಾಸಕ್ತಿ, ಸರ್ವ ಜೀವರ ಜೀವಿತದುಸಿರಾಗಿರುವ ಸರ್ವೇಶನಲ್ಲಿ ದೃಢ ನಂಬಿಕೆ, ತನ್ನಂತೆ ಇತರರ ಕಷ್ಟನಷ್ಟಗಳ ಒಂದಿಗೆ ಹೊಂದಿಕೊಂಡಿರುವ ಸಹಕಾರ ಶೀಲ, ನಿಷ್ಪೃಹತೆ; 'ತಾನು ತನ್ನದೆಂಬ' ಅಹಂಭಾವವನ್ನು ಅಳಿಸಿ, ಇಂದಿನ ಕಷ್ಟದಲ್ಲಿ ಕುಗ್ಗಿ ಮುಂದಿನ ಸುಖಕ್ಕಾಗಿ ಹಿಗ್ಗದೆ 'ಬಂದುದೆಲ್ಲವೂ ಬರಲಿ ಗೋವಿಂದನ ದಯೆ ಒಂದೆ ಇರಲೆಂದು' ನಂಬಿ ನಡೆವಾತನೆ ಸಿದ್ಧಮರುಷರು? ಆತನೇ ಮೋಕ್ಷಗಾಮಿಯು! ಅವನೇ ಜೀವನ್ಮುಕ್ತನು. ಸರ್ವ ಶಾಶ್ವತವೆಂಬ ಸಂಗತಿ ಈ ಜಗತ್ತಿನಲ್ಲಿಲ್ಲ, ಎಲ್ಲ ವಿಷಯಗಳೂ ಇಷ್ಟರವಾದವುಗಳೆಂಬುದನ್ನು, ಕಂಡುಕೊಂಡಾತನ ಬಾಳು ಬೆಳಗುವುದರಲ್ಲಿ ಸಂದೇಹವೇನೂ ಇಲ್ಲ. ಭಕ್ತವತ್ಸಲನೂ, ಭಕ್ತಾಧೀನನೂ ಆದ ಭಗವಂತನು, 'ನನ್ನನ್ನು ಕುರಿತು ಭಕ್ತರು ಚಿಂತಿಸುತ್ತಿರುವಂತೆ ನಾನೂ ಅವನನ್ನು

(ಕೆಳಗೆ ಮುಂದೆ ನೋಡಿರಿ)

ಕುಮಾರಿ ಬಿಳ್ಳಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಮಿಸ್ವರು: ಪಾ ಕಂಪೆನಿ, ಮಂಗಳೂರು—1.

ಕೆಂಪು ಕೇರಳ

ರಾಜ್ಯಸೂತ್ರ ಪ್ರಾಪ್ತಿಗೋಸ್ಕರ ಪ್ರಜಾಪ್ರಭುತ್ವಕ್ಕೆಹುರಸ್ಕಾರ-ಅನಂತರ ಸರ್ವಾಧಿಕಾರ!

ಕಾಂಗ್ರೆಸ್ ಸರಕಾರಗಳು ದೇಶದ ಪ್ರಗತಿಗಾಗಿ ನಡೆಸುವ ವ್ಯಾಪಾರಿಕ ಪ್ರಯತ್ನಗಳೆಲ್ಲವನ್ನೂ ಯಶ್ವಾತದ್ವಾ ಟೀಕಿಸಿ ತಾವೇ ಪ್ರಜಾಪ್ರಭುತ್ವದ ಕೈವಾರಿಗಳೆಂದೂ ಜನತೆಯ ಹಿತಚಿಂತಕರೆಂದೂ ಹೇಳಿಕೊಳ್ಳುತಿದ್ದ ಕಮ್ಯೂನಿಸ್ಟರು ಹೇಗೋ ಏನೋ ಕೇರಳದಲ್ಲಿ ಅಧಿಕಾರಗ್ರಹಣಯೋಗವನ್ನು ಕಂಡರು! ವಿರೋಧಿಪಕ್ಷದ ವೇಷದಲ್ಲಿದ್ದಾಗ ಆವೇಶದಿಂದ ಸಿಕ್ಕಾಬಟ್ಟೆ ಮಾತಾಡಿದ ಈ ಮೇಧಾವಿಗಳು ಕೇರಳದಲ್ಲಿ ತಾವೇ ಆಳುವ ಪಕ್ಷವಾಗಿ ಹೊಣೆ ಹೊತ್ತಿದ್ದು ಕಾಂಗ್ರೆಸ್ ಸರಕಾರದ ಆಡಳಿತದಲ್ಲಿರುವಷ್ಟು ಶಾಂತಿ ನೆಮ್ಮದಿಗಳನ್ನು ಕೂಡಾ ಪ್ರಜೆಗಳಿಗೆ ನೀಡಲು ಸಮರ್ಥರಾಗಿದ್ದಾರೆ ಎಂಬ ಕಟು ಸತ್ಯ ಈಗೀಗ ಪ್ರಕಟವಾಗುತ್ತಾ ಬರುತ್ತಿರುವುದು ವಿಚಾರಾರ್ಹವಾಗಿದೆ.

ಅದರ್ಶವು ಹೆಚ್ಚಾಗಿ ವ್ಯವಹಾರದಲ್ಲಿ ಸಾಧ್ಯವಾಗದೆ ಹೋಗುವುದಿದೆ. ಆದರೂ ಒಂದು ಉನ್ನತ ಆದರ್ಶವಿರಬೇಕಾದುದು ಸಹಜವೆ. ಆದರೆ, ಕಮ್ಯೂನಿಸ್ಟರು ಮಾಸ್ಕೋದ ಮಾಯಾವಾದದ ಮೊಂಡು ಆದರ್ಶವನ್ನು ಮೆಚ್ಚಿದವರು! ಆ ಹುಚ್ಚಾಟ ವ್ಯವಹಾರದಲ್ಲಿ ತೊಡಕುಗಳನ್ನು ಅಶಾಂತಿಯನ್ನು ಉಂಟುಮಾಡಿದರೆ ಆಶ್ಚರ್ಯಪಡಬೇಕಾದುದೇನೂ ಇರುವುದಿಲ್ಲ. ಕಮ್ಯೂನಿಸ್ಟರು ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇಲ್ಲದವರೆಂದೂ, ಶ್ರಮಿಕ ವರ್ಗದ ಹಿತಚಿಂತನೆಯ ನೆಲೆಯಲ್ಲಿ ಸರ್ವಾಧಿಕಾರೀ ಆಡಳಿತವನ್ನು ನಡೆಸುವವರೆಂದೂ, ಮಾನವನ ವ್ಯಕ್ತಿಗತ ವಿಕಾಸಕ್ಕೆ ಅವರೆಂದಿಗೂ ಅವಕಾಶವೀಯುವುದಿಲ್ಲವೆಂದೂ ವಿವೇಕಿಗಳಾದವರಿಗೆ ತಿಳಿದೇ ಇದೆ. ಈ ಮಾತನ್ನು ಅತಿಶಯೋಕ್ತಿಯೆಂದು ಭಾವಿಸಬೇಕಾಗಿಲ್ಲ. ಚೀನಾದ ಮಾವೋರವರು ಈಚೆಗೆ ಸಾರಿರುವ ಪ್ರವಚನ ಪೊಂದರಲ್ಲಿ ಇವನ್ನೇ ಗರ್ವ ಗೌರವಗಳಿಂದ ಪ್ರತಿಪಾದಿಸಿದ್ದಾರೆ. ಅದರೆ ನಾಗರಿಕರು ಯಾರೂ ಮೆಚ್ಚದ ಈ ಅಸಸಿದ್ಧಾಂತಗಳೇ ಬದುಕಿನ ನೀತಿ ಸೂತ್ರಗಳೆಂದು ಭೂಮಿಸಿದ ದುರ್ದೈವಿಗಳು ದೇವರನ್ನು ಮರೆತೂ ಸ್ವರ್ಗವನ್ನು, ಧರ್ಮವನ್ನು ಹೊರತೂ ಸುಖೀ ಸಮಾಜವನ್ನು ಕಟ್ಟುವ ಕನಸು ಕಂಡು ಈ ೨೦ನೆ ಶತಮಾನದಲ್ಲಿ ಬಹಳಷ್ಟು ಹಾನಿಯನ್ನು, ಕೋಲಾಹಲವನ್ನು ಮಾಡುತ್ತಲಿದ್ದಾರೆ. ಕೇರಳದ ಸೋದರರು ಕ್ಷಣಕಾಲ ಮೈಮರೆತುದರಿಂದ ಈ ಕನಸಿಗರೇ ಅಧಿಕಾರ ಸೂತ್ರಗಳನ್ನು ಧರಿಸುವಂಥ ಪ್ರಮಾದವು ಸಂಘಟಿಸಿ ಹೋಯಿತು.

ಆದರೆ ಪಂಡಿತ ನೆಹರೂರವರು ಹೇಳಿರುವಂತೆ ಇದು, ಭಾರತೀಯರು ಈ ಶತಮಾನಕ್ಕೆ ಅನರ್ಹವೆನಿಸುವ ಕಶ್ಮಲವಾದುದಕ್ಕೆ ಮನಸೋತಿದ್ದುದೆಂದು ಇದರ ಅರ್ಥವಲ್ಲ. ಕಾಂಗ್ರೆಸ್ಸಿನ ವಿಷಯದಲ್ಲಿ ತಮಗಿರುವ ಅತೃಪ್ತಿಯನ್ನು ತೋರಿದರೆಂದಿಷ್ಟೇ ಇದರ ಅರ್ಥ. ಲಂಡನ್ನಿನ ಮೆಂಚೆಸ್ಟರ ಗಾರ್ಡಿಯನ್ ಪತ್ರಿಕೆಯೇನೋ ಕೇರಳದಲ್ಲಿ ಕತ್ತಿ ಕೊಡಲಿಗಳ ಬದಲು ಮತಪತ್ರಗಳ ಮೂಲಕ ಅಧಿಕಾರ ಪೀಠವನ್ನು ಆಕ್ರಮಿಸಿದ ಕಮ್ಯೂನಿಸ್ಟರ ಕುರಿತು ಗಾಬರಿಗೊಂಡಿದ್ದರೂ ಕಮ್ಯೂನಿಸ್ಟರು ತಮ್ಮ ತಪ್ಪುಗಳಿಂದಲೆ ಜನತೆಯ ಅಪ್ರೀತಿಯನ್ನು ಸಂಪಾದಿಸಿ ಪರಾಭವವನ್ನು, ಅನಾದರವನ್ನು ಹೊಂದುವುದರಲ್ಲಿ ಅನುಮಾನವಿಲ್ಲ.

ಇದರ ಲಕ್ಷಣ ಈಗಾಗಲೆ ಕಾಣುತ್ತಾ ಇದೆ. ಅವರು ಸಹಜೀವನದ ಶಾಂತಿ ಪಾಠವನ್ನು ಬಾಯಿಮಟ್ಟಿಗೆ ಸಾರಿದರೂ ಅವರ ಹೃದಯಕ್ಕೂ ಸಹಜೀವನ ತತ್ವಕ್ಕೂ ಸಂಬಂಧವೇ ಇರುವುದಿಲ್ಲ. ಅವರು ಇನ್ನೊಬ್ಬರ ಅಭಿಮಾನ, ಅಭಿಪ್ರಾಯಗಳಿಗೆ ಚಿಕ್ಕಾಸು ಬೆಲೆಯನ್ನು ಕೊಡುವುದಿಲ್ಲ. ತಮ್ಮದೇ ಸರಿಯೆಂಬ ಸರ್ವಾಧಿಕಾರೀ ಬುದ್ಧಿಯನ್ನು ಅವರು ಈಗಾಗಲೇ ತೋರಿಸ ತೊಡಗಿರುವುದಲ್ಲದೆ ತಮ್ಮ ಮಾರ್ಗವನ್ನು ವಿರೋಧಿಸುವವರು ಜನತಾ ಶತ್ರುಗಳೆಂದು ಆರೋಪಿಸತೊಡಗಿದ್ದಾರೆ. ಯುವಕರನ್ನು ಉದ್ರೇಕಿಸುವ ಅಪಾಯಕರ ಪ್ರವೃತ್ತಿಗೆ ಯಾರೂ ಇಳಿಯ ಕೂಡದೆಂಬ ಎಚ್ಚರಿಕೆಯನ್ನು ನೀಡಿ ಬಿಟ್ಟಿದ್ದಾರೆ. ಕಾಂಗ್ರೆಸ್ಸಿಗರು ರಾಜ್ಯಭಾರ ನಡೆಸುವಾಗ ಪ್ರತಿದಿನವೆಂಬಂತೆ ಗಲಭೆಯೆಬ್ಬಿಸಿ ಒಂದು ದಿನವೂ ಸುಮ್ಮಗೆ ಕುಳಿತಿರಲಾಗದ ಈ ಧೂರ್ತರು ಈಗ ತಮ್ಮ ಆಡಳಿತ ನೀತಿಯ ವಿಷಯದಲ್ಲಿ ಸ್ವಾಭಾವಿಕವಾಗಿಯೆ ಇರಬಹುದಾದ ಭಿನ್ನಾಭಿಪ್ರಾಯ ಪಡುವವರ ವಿಷಯದಲ್ಲಿ ಅಗೌರವ ಭಾವನೆಯನ್ನು ಪ್ರದರ್ಶಿಸುತ್ತಿರುವುದು ಪರಮಾಶ್ಚರ್ಯವಾಗಿದೆ! ಕಮ್ಯೂನಿಸ್ಟರ ಸ್ವರ್ಗದಲ್ಲಿ ದೊರಕಬಹುದಾದ ಸ್ವಾತಂತ್ರ್ಯ ಈ ಬಗೆಯದಾಗಿದೆಯೆಂಬುದು ಇನ್ನೊಮ್ಮೆ ಸ್ಪಷ್ಟವಾದಂತಾಯಿತು

ಭೂಮಿ ರಹಿತರಿಗೆ ಭೂಮಿ ಹಂಚುವುದೇ ಮೊದಲಾದ ಆಕರ್ಷಕ ಘೋಷಣೆಗಳ ಶಷ್ಯಾಡಂಭರದ ಡೊಂಬರಾಟ ನಡೆಸಿ ತಮ್ಮ ಸರ್ವಾಧಿಕಾರೀ ನೀತಿಯನ್ನು ಚಲಾಯಿಸುವ ಚಪಲತೆಗೆ ಈಗ ಪ್ರಾರಂಭವಾಗಿದೆ. ಶಿಕ್ಷಣ ಸುಧಾರಣೆಯ ಮುಖಾಂತರವೇ ಮೊದಲಾದ ವಿಚಾರಗಳಿಂದ ಅವರು ಜನಾಭಿಪ್ರಾಯವನ್ನು ಗಾಳಿಗೆ ತೂರಿ ತಮ್ಮದನ್ನೇ ಎಲ್ಲರ ಮೇಲೂ ಒತ್ತಾಯದಿಂದಾಗಲೀ ಗದರಿಕೆಯಿಂದಾಗಲೀ ಹೇರಲು ತೊಡಗಿದ್ದಾರೆ ನ್ಯಾಯವಾದ ಕ್ಷೇತ್ರ, ಶಿಕ್ಷಣ ಕ್ಷೇತ್ರ ಮೊದಲಾದುವು ಪವಿತ್ರವಾಗಿರಬೇಕಲ್ಲದೆ ರಾಜಕೀಯ ದುರ್ಬೋಧೆಗಳ ಕಲುಷಿತ ಕೇಂದ್ರಗಳಾಗಬಾರದು. ಆದರೆ, ಕಮ್ಯೂನಿಸ್ಟರು ಮೊದಲು ಕುಲಗೆಡಿಸುವುದು ವಿದ್ಯಾಕ್ಷೇತ್ರವನ್ನೇ. "ಬೇವರ ಭಯವೇ ಅಜ್ಞಾನದ ಆರಂಭ" ಎಂದು ಚೀನಾದಲ್ಲಿ ಮಕ್ಕಳಿಗೆ ಕಲಿಸಿದಂತೆ ಕಲಿಸಲು ಯಾವ ನಾಗರಿಕ ಸರಕಾರಕ್ಕೂ ಸಾಧ್ಯವಿಲ್ಲ. ಆದರೆ, ಕಮ್ಯೂನಿಸ್ಟರ ರಾಜ್ಯದಲ್ಲಿ ಇಂಥ ಕ್ರಮಗಳಿಗೇ ಪ್ರಥಮ ಪ್ರಾಶಸ್ತ್ಯ. ವಿರೋಧಿಸಲು ಯಾರಿಗೂ ಹಕ್ಕಿರುವುದಿಲ್ಲ. ವಿರೋಧಿಸಲು ಪ್ರಯತ್ನ ಮಾಡಿದರೆ, ಹಂಗೇರಿಯ ಲಕ್ಷಾಂತರ ಮಂದಿ ಸ್ವಾತಂತ್ರ್ಯ ವೀರರ ಗತಿಯನ್ನೇ ಅನುಭವಿಸಬೇಕಾಗುವುದು!

ಕೇರಳದ ಜನತೆಯ ಪಾಡು ಈಗ ಹೀಗೇ ಆಗಿದೆ. ಕಮ್ಯೂನಿಸ್ಟೇತರರು ತಮ್ಮ ಅಭಿಪ್ರಾಯಗಳನ್ನು ಪ್ರಚಾರಮಾಡಲೂ ತಕ್ಕ ಧೈರ್ಯದ ವಾತಾವರಣವಿಲ್ಲ. ಕಮ್ಯೂನಿಸ್ಟ್ ಕಾರ್ಯಕರ್ತರೂ ತಾವೇ ಸರಕಾರಿಗಳಂತೆ ವರ್ತಿಸುವುದೂ ಇದೆ. ಧನಿಗಳಿಗೆ ಪಾಲಕರಿಗೆ ಅವರೇ ಹೋಗಿ ಬೆದರಿಸುವುದೂ ಇದೆ. ಈ ಅತ್ಯಾಚಾರಗಳ ವಿರುದ್ಧ ಪೋಲೀಸರಿಗಾದರೂ ದೂರು ಕೊಡೋಣ; ನ್ಯಾಯವನ್ನು ಸಂಪಾದಿಸೋಣ ಎಂದರೆ ಅಲ್ಲೀಗ ಪೋಲೀಸ್ ಪಡೆಯೂ ನಿರ್ವೀರ್ಯವಾಗಿದೆ! ಕೊಲೆಗಾರರೇ ಮೊದಲಾದ ನೂರಾರು ಅಪರಾಧಿಗಳ ಕುರಿತು ಸರಕಾರದವರು ಹಸ್ತಕ್ಷೇಪ ಮಾಡಿ ಕೇಸುಗಳನ್ನು ತೆಗೆಯಿಸಿ ಹಾಕಿದ್ದಾರೆ. ಅನ್ಯಾಯಗಾರರಿಗೆ 'ಸರಕಾರ ನಮ್ಮ ಬೆಂಬಲಕ್ಕಿದೆ' ಎಂಬ ಭರವಸೆ ಬಂದಂತಿದೆ. ನಾಗರಿಕರಿಗೆ ನ್ಯಾಯವಾದ ಶಾಂತಿ-ಸುರಕ್ಷಿತತೆಗಳ ಭದ್ರತೆಯೇ ಇಲ್ಲವಾಗಿದೆ. ಸಭ್ಯರಾದ ನಾಗರಿಕರ ಬೊಬ್ಬೆಗಳಿಗೆ ಬೆಲೆಯೂ ಇಲ್ಲವಾಗಿದೆ. ಇಲ್ಲಿ ಈ ಮಾತುಗಳನ್ನೆಲ್ಲ ಅತಿರಂಜಿಸಿ ಹೇಳಿಲ್ಲ. ಕಾಂಗ್ರೆಸ್ ಪ್ರಧಾನಕಾರ್ಯದರ್ಶಿಗಳಾದ ಶ್ರೀಮನ್ನಾರಾಯಣವವರು ಕಾಂಗ್ರೆಸ್ ಅಧ್ಯಕ್ಷರಿಗೆ ಕೇರಳದ ಸ್ಥಿತಿಗತಿಗಳ ಕುರಿತು ಒಪ್ಪಿಸಿರುವ ವರದಿಯಲ್ಲಿ ಈ ಅಂಶವನ್ನೇ ಹೇಳಿದ್ದಾರೆ. ಆ ವರದಿಯ ಮುಖ್ಯಾಂಗ ಹೀಗಿದೆ: "ಕೊಲೆಅವಾಂತರ ಸಹಿತ ಅನೇಕ ಅಪರಾಧಗಳಿಗೆ ಒಳಗಾದವರ ಕುರಿತು ಪೋಲೀಸು ನ್ಯಾಯಾಲಯಗಳಲ್ಲಿ ಹೂಡಿರುವ ಮೊಕದ್ದಮೆಗಳನ್ನು ಕೇರಳದ ಕಮ್ಯೂನಿಸ್ಟ್ ಸರಕಾರವು ವಾಪಾಸು ತೆಗೆದುಕೊಂಡದ್ದು ಶೋಚನೀಯವಾಗಿದೆ. ಶ್ರಮಿಕರ ಮೇಲೆ ಪೋಲೀಸರು ಕೈಮಾಡಕೂಡದೆಂದು ಕೇರಳದ ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ಹೇಳಿದ್ದರಿಂದಲೇ ಹುರುಪುಗೊಂಡ ಅನೇಕ ಶ್ರಮಿಕ ಸಂಘಗಳು ಕಾರಖಾನೆ ಮತ್ತಿತರ ಸಂಸ್ಥೆಗಳ ಮಾಲಕರಿಗೆ ಬೆದರಿಕೆ ಹಾಕಲು ತೊಡಗಿವೆ. ಭೂಮಿಹೀನರು ಭೂಮಿಗಳನ್ನು ಜಬರದಸ್ತಿನಿಂದ ಆಕ್ರಮಿಸಿ ಕುಳಿತಿದ್ದಾರೆ. ಪೋಲೀಸ್ ಖಾತೆ ಅಸಹಾಯಕವೂ ನಿರ್ವೀರ್ಯವೂ ಆಗಿದೆ. ಇದರಿಂದ ರಾಜ್ಯದ ಶಾಂತಿ ಭದ್ರತೆಗಳೇ ಶಿಥಿಲವಾಗಿವೆ." ಈ ಮಾತುಗಳನ್ನು ಕೇರಳದ ಜನರೂ ಆನ ವೋದಿಸುತ್ತಾರೆ. ಅಲ್ಲಿಯ ಅನೇಕ ಮುಂದಾಳುಗಳು ಇದೇ ಮಾತನ್ನು ಅನೇಕಬಾರಿ ಹೇಳಿರುವುದನ್ನು ಇಷ್ಟು ಜ್ಞಾಪಿಸಿಕೊಳ್ಳಬಹುದು. ಕೇರಳ ಕಾಂಗ್ರೆಸ್ಸೂ ಈಚೆಗೆ ಒಂದು ಗೊತ್ತುವಳಿಯ ಮೂಲಕವಾಗಿ ಇದನ್ನೇ ಸಾರಿದೆ.

ಒಟ್ಟಾರೆ, ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಲ್ಲದವರನ್ನು ಕೇರಳದ ಸೋದರರು ಅಧಿಕಾರಕ್ಕೇರಿಸಿದರು. ಅವರು ಅಧಿಕಾರದಲ್ಲಿ ಕುಳಿತು ಈಗೀಗ ತಮ್ಮ ನಿಜ ಬಣ್ಣಗಳನ್ನು ತೋರಿಸಲು ಪ್ರಾರಂಭಿಸಿದ್ದಾರೆ. ಇದು ಪ್ರಜಾಪ್ರಭುತ್ವ ಪ್ರೇಮಿಗಳಿಗಲ್ಲಾ ಒಂದು ಪಾಠವಾಗಿದೆಯೆನ್ನಬಹುದು.. ಕೇರಳದಲ್ಲಿ ಪ್ರಾರಂಭವಾದ ಒಂದು ಪ್ರಮಾದವು ಕೇರಳದಲ್ಲೇ ಮುಕ್ತಾಯವೂ ಆಗಬಹುದು!

(ಉಡುಪಿಯಿಂದರೇ ಪ್ರಕಟವಾಗುವ 'ಪ್ರಕಾಶ' ವಾರಪತ್ರಿಕೆಯ ತಾ. ೨ ಜೂನ ಸಂಚಿಕೆಯಲ್ಲಿ ಪ್ರಕಟವಾಗಿರುವ ಈ ಲೇಖನವು ಕೆಂಪು ಕೇರಳದ ಕರಾಳ ಮುಖವನ್ನು ಯಥಾಥವಾಗಿ ಪ್ರತಿಬಿಂಬಿಸುವುದರಿಂದ, ನಮ್ಮ ವಾಚಕರ ಅವಗಾಹನೆಗಾಗಿ ಎತ್ತಿಕೊಟ್ಟಿದ್ದೇವೆ. ಸಂ ನ)

ಗಂಟೆಗಟ್ಟಲೇ ಸಂತೋಷವನ್ನು ಕೊಡುವ ತಾತಾರವರ ಸುವಾಸನೆಯ ಸಾಬೂನು

ಜೈ ಸಾಬೂನಿನ ವೆಲ್ವೆಟ್‌ನಂತಹ ಸ್ನಿಗ್ಧವಾದ ನೊರೆಮತ್ತು ಮೋಹಕ ಪರಿಮಳವು ನೀವು ಇಡೀದಿವಸ ಉತ್ಸಾಹವಂತರಾಗಿ ಸುವಾಸನೆಯನ್ನು ಬೀರುವಂತೆ ಮಾಡುತ್ತದೆ. ಜೈ, ಸಾಮಾನ್ಯಬೆಲೆಯ ಮೇಲ್ತರ. ಗತಿಯ ಸಾಬೂನು. ಅದನ್ನು ಉಪಯೋಗಿಸಿ ನಿಮ್ಮ ಜೀವನವನ್ನು ಆನಂದಮಯಗೊಳಿಸಿರಿ.

ಜೈ

ಟಾಯಿಲೆಟ್ ಸಾಬೂನು



TATA PRODUCT

ಇಂಡಿಯದ ಬಂಡವಾಳದಿಂದ, ಇಂಡಿಯದ ಸಂಡಾಲಳತ್ತದಲ್ಲಿ, ಇಂಡಿಯಾದಲ್ಲಿಯೇ ತಯಾರಾದುದು

ಟಾಟಾ ಆಯಿಲ್ ಮಿಲ್ಸ್ ಕಂಪನಿ ಲಿಮಿಟೆಡ್

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

NAVAYUGA
Popular Kannada Weekly
Founder:—
A. B. SHETTY,
Former Minister for Public Health,
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೬	ಉಡುಪಿ ೨೫-೭-೧೯೫೭	ಸಂಚಿಕೆ ೪೬

ವಿಶ್ವವಿದ್ಯಾನಿಲಯದ ಸಮಸ್ಯೆ

ನಮ್ಮ ಜಿಲ್ಲೆಯ ಹತ್ತು ಮಂದಿ ವಿಧಾನ ಸಭಾ ಸದಸ್ಯರು ನಮ್ಮ ಜಿಲ್ಲೆಯ ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿಸಬೇಕೆಂದು ತಡವಾಗಿಯೆ ಆದರೂ ಬಹಳ ಮುತುವರ್ಜಿಯಿಂದ ಪ್ರಯತ್ನವನ್ನು ನಡೆಸುತ್ತಿರುವರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ನಮ್ಮ ಜಿಲ್ಲೆಯ ವಿದ್ಯಾರ್ಥಿಗಳನ್ನು ಕರ್ನಾಟಕದ ಕಕ್ಷೆಯೊಳಗಿಂದ ಪಾರುಗಾಣಿಸಿ, ಅವರೆಲ್ಲರಿಗೂ ಮೆಡಿಕಲ್ ಇಂಜನಿಯರಿಂಗ್ ಕಾಲೇಜುಗಳಿಗೆ ಅರ್ಹರನ್ನಾಗಿ ಮಾಡುವ ಡಿಗ್ರಿಯನ್ನು ಸಂಪಾದಿಸಿ ಕೊಟ್ಟು 'ನ್ಯಾಯ'ವನ್ನು ಮಾಡಲು ಹೊರಟಿರುವ ಈ ಬುದ್ಧಿವಂತರ ವಾದದಲ್ಲಿರುವ ಹುರುಳನ್ನು ಅರಿತು ಜನತೆ ಇಂಥವರ ಬಗ್ಗೆ ತನ್ನ ಅಭಿಪ್ರಾಯವನ್ನು ಕಟ್ಟಿಕೊಳ್ಳಲು ಅನುಕೂಲವಾಗುವಂತೆ ನಾಲ್ಕು ಮಾತುಗಳನ್ನಿಲ್ಲಿ ಬರೆಯಲಾಗಿದೆ.

ಮೈಸೂರು ವಿಶ್ವವಿದ್ಯಾಲಯದ ಪಾಠಪಟ್ಟಿಯು ನಮ್ಮ ಜಿಲ್ಲೆಯ ಕಾಲೇಜುಗಳು ಇದು ವರೆಗೆ ಅನುಸರಿಸುತ್ತಿದ್ದ ಮದ್ರಾಸು ವಿಶ್ವವಿದ್ಯಾಲಯದ ಪಾಠಪಟ್ಟಿಗೆ ಹೆಚ್ಚು ಹೊಂದಿಕೆಯಾಗಿದೆ ಎನ್ನುವ ವಾದದಲ್ಲಿ ಅರ್ಥವಿಲ್ಲ. ಆಯಾ ವಿಶ್ವವಿದ್ಯಾಲಯಗಳಿಗೆ ಅವು ಅವುಗಳ ವೈಶಿಷ್ಟ್ಯವಿದ್ದೇ ಇದೆ. ಒಂದರಿಂದ ಇನ್ನೊಂದಕ್ಕೆ ಬದಲಾವಣೆ ಹೊಂದುವಾಗ ಅನಿವಾರ್ಯವಾದ ಕೆಲವು ತೊಂದರೆಗಳಿದ್ದೇ ಇರುತ್ತವೆ. ಇವನ್ನು ಕರ್ನಾಟಕ ವಿಶ್ವವಿದ್ಯಾಲಯವು ಬಹಳ ಸಹಾನುಭೂತಿಯಿಂದ ಪರಿಶೀಲಿಸಿ, ಸದೇ ಸದೇ ಇಲ್ಲಿನ ಕಾಲೇಜುಗಳ ವಿದ್ಯಾರ್ಥಿಗಳನ್ನು ತನ್ನ ಬಳಿಗೆ ಕರೆದು, ತನ್ನ ಶಿಷ್ಟ ಮಂಡಲಿಯನ್ನು ಇಲ್ಲಿಗೆ ಕಳಿಸಿ, ಬಹುವಾಟ್ಟಿಗೆ ನಮಗೆ ಅನುಕೂಲವಾಗುವಂತೆ ತನ್ನ ವಾಠ ಕ್ರಮವನ್ನು ತಿದ್ದಿಕೊಂಡಿದೆ; ಅಥವಾ ನಮಗೆಯೇ ಬೇರೊಂದು ಏರ್ಪಾಟ ಮಾಡಿದೆ. ಅಲ್ಲದೆ ಪಾಠಪಟ್ಟಿಯ ವಿನಯ ಎಂ. ಎಲ್. ಎ.ಗಳಿಗಿಂತ ಹೆಚ್ಚಿನ ಮಾಹಿತಿ, ಅನುಭವ ಇರುವ ನಮ್ಮ ಜಿಲ್ಲೆಯ ಕಾಲೇಜಿನ ಪ್ರಿನ್ಸಿಪಾಲರುಗಳು ಕೆಲವು ತಿಂಗಳುಗಳ ಹಿಂದೆ ಒಮ್ಮತದಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಲು ನಿರ್ಣಯಿಸಿದುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು ಆ ಮೇಲೆ ಮೇ ೯ರಿಂದ ಜೂನ್-ಜುಲಾಯಿ ವರೆಗೆ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ನಮ್ಮ ಕಾಲೇಜುಗಳ ನಡುವೆ ನಡೆದ ಪರಿಶೀಲನೆ, ಸಂಗಮದೆಸೆ ವಿಚಾರ ವಿನಿಮಯ ಇವೆಲ್ಲವೂ ಸೌಹಾರ್ದಮಯವಾಗಿ ನಡೆದ ರೀತಿ-ಇವನ್ನು ಗಮನಿಸಬೇಕು. ಇವನ್ನೆಲ್ಲ ರಾಜಕೀಯದ ಅಗ್ನಿಕುಂಡದಲ್ಲಿ ಹೋಮಿಸುವುದು ನ್ಯಾಯೋಚಿತವೆ ಎಂಬುದನ್ನು ನಕ್ಷಿಣ ಕನ್ನಡದ ಈ ಹತ್ತು ಜನಕ್ಕೆಂತಲೂ ಬುದ್ಧಿವಂತರಾದ ವಿಚಾರಶೀಲ ಜನತೆ ಯೋಚಿಸಬೇಕು.

ನಮ್ಮ ಪ್ರತಿನಿಧಿಗಳ ಇನ್ನೊಂದು ವಾದ, ಅಥವಾ ಆ ವಾದದಲ್ಲಿ ಅಡಗಿರುವ ಧ್ವನಿ ಎನ್ನಿ, ಕರ್ನಾಟಕದಲ್ಲೇನೂ ಇಲ್ಲ. ಮೈಸೂರಿಲ್ಲಿ ಆರ್ಟ್ಸ್ ಮುಂತಾದ ಕೋರ್ಸುಗಳಿವೆ ಎಂಬುದಾಗಿ, ಆರ್ಟ್ಸ್ ಎಂಬುದು ಇನ್ನೊಂದೆರಡೇ ವರ್ಷ ಇರುವ ಕೋರ್ಸು, ಅದರ ಆಯುಷ್ಯ ತೀರಿದೆ. ಉಚ್ಚ ಶಿಕ್ಷಣದ ಸುಧಾರಣೆಯ ಸುಂಟರಗಾಳಿಯಲ್ಲಿ ಆರ್ಟ್ಸ್‌ಹಾರಿ ಹೋಗಿ ಡಿಗ್ರಿ ಪಡೆದ ಮೇಲೆ ಎರಡು ವರ್ಷ ಸ್ನಾತಕೋತ್ತರ (Post Graduate) ತರಗತಿಯೇ ದೇಶದಲ್ಲೆಲ್ಲ—ಮೈಸೂರಲ್ಲಿಯೂ ಕೂಡ—ಸಾಮಾನ್ಯವಾಗುವ ಕಾಲ ಬಂದಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಡಿಗ್ರಿಗಳಿಗೆ ಮೈಸೂರು ಸರ್ಕಾರ ಮಲತಾಯಿ ತನವನ್ನೇನೂ ತೋರಿಸುತ್ತಿಲ್ಲ. ತೋರಿಸಬೇಕೆಂದು ನಮ್ಮ ಎಂ. ಎಲ್. ಎ. ಗಳ ಆಶಯವೋ? ಯಾವುದೇ ಸರ್ಕಾರಿ ಕಾಲೇಜಿನಲ್ಲಿ ಪ್ರವೇಶದೊರೆಯಲು ಆಯಾ ರಾಜ್ಯದಲ್ಲಿರುವ ಯಾವ ವಿಶ್ವವಿದ್ಯಾಲಯದ ಡಿಗ್ರಿಗೂ ಮನ್ನಣೆ ಇದೆ. ಅಣ್ಣಾಮಲೆಯ ಇಂಟರ್ಮೀಡಿಯೆಟ್ ವಿದ್ಯಾರ್ಥಿಗಳಿಗೆ ಮದ್ರಾಸಿನಲ್ಲಿ ಸೀಟು ಸಿಗುತ್ತಿರಲಿಲ್ಲವೆ, ಹಾಗೆ. ಸರ್ಕಾರಿ ಕಾಲೇಜಿನಲ್ಲಿ ಸಲೀಸಾಗಿ ಸ್ಥಳ ಸಿಗಲು ಸದ್ಯ ಇರುವ ಅಡಚಣೆಗಳು, ಅವುಗಳ ಬಣ್ಣ, ಬೇರೆ ಎಂಬುದು ಎಲ್ಲರಿಗೂ ಗೊತ್ತು. ಕರ್ನಾಟಕ ವಿಶ್ವವಿದ್ಯಾನಿಲಯವು ಕೂಡ ಸರ್ಕಾರದ ಕೃಪಾಪೋಷಿತವಾದ ಒಂದು ಸಂಸ್ಥೆ—ನಮ್ಮ ಎಂ. ಎಲ್. ಎ. ಗಳು ತಿಳಿದಂತೆ ದಾರಿಯಲ್ಲಿ ಬಿದ್ದ ಅನಾಥ ಶಿಶುವಲ್ಲ. ಅದರ ಪದವೀಧರರಿಗೆ ಸಲ್ಲತಕ್ಕ ಸ್ಥಾನವನ್ನು ಮೈಸೂರು ಸರ್ಕಾರ ಯಾವ ರೀತಿಯಿಂದಲೂ ನಿರಾಕರಿಸುವಂತಿಲ್ಲ. ಈ ಭೇದದ ಎಣಿಕೆ ವಿಧಾನಸಭಾ ಸದಸ್ಯರು ಜನರನ್ನು, ಜನಾಭಿಪ್ರಾಯವನ್ನು ವಂಚಿಸಲು ಮಾಡಿದ ಪ್ರಯತ್ನದ ಒಂದೊಂಗ, ಅಷ್ಟೆ.

ಯಾರೋ ಸ್ವಾರ್ಥಾಭಿಲಾಷಿಗಳು ನಮ್ಮ ಕಾಲೇಜುಗಳನ್ನು ಕರ್ನಾಟಕಕ್ಕೆ ಜೋಡಿಸಲು ಆತುರಪಟ್ಟರೆಂದು ಪ್ರತಿನಿಧಿಗಳ ನಿಯೋಗವು ಒಪ್ಪಿಸಿದ ಮನವಿಯಲ್ಲಿ ನಿರೂಪಿಸಲ್ಪಟ್ಟಿದೆ. ಇದು ನಿರಾಧಾರವಾದ ಆರೋಪ. ಕರ್ನಾಟಕ ವಿಶ್ವವಿದ್ಯಾನಿಲಯವು ಮೈಸೂರಿಗಿಂತ ಹೆಚ್ಚು ಸ್ವತಂತ್ರ ಸ್ವಾಯತ್ತ ಆಡಳಿತವನ್ನುಳ್ಳ ಸಂಸ್ಥೆ ಎಂಬುದಷ್ಟರಿಂದಲೇ ನಮ್ಮ ಜಿಲ್ಲೆಯ ಕಾಲೇಜುಗಳೆ ವಿದ್ಯಾರ್ಥಿಗಳು ಯಾರ ಒತ್ತಾಯವೂ ಇಲ್ಲದೆ, ಕೂಲಂಕಷ ವಿಚಾರದ ತರುವಾಯ ನಿರ್ಣಯಿಸಿದ್ದಾರೆ: ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳಾದರೂ ಯಾವ ಉತಾವಳಿಯೂ ಇಲ್ಲದೆ, ನಿಷ್ಪಕ್ಷಪಾತತನದಿಂದ, ಸರ್ಕಾರದ ಆದೇಶದ ಮೇರೆಗೆ, ತಡವಾಗಿಬಂದ ಆದೇಶವನ್ನು ತುರ್ತಿನಿಂದಲೇ ಪಾಲಿಸಿ ನಮ್ಮ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೇಕು ಬೇಕಾದ ಬದಲಾವಣೆಗಳಿಗೆ ಒಪ್ಪಿ, ನಮ್ಮೊಡನೆ ಸಹಕರಿಸಿ ಉಪಕರಿಸಿದ್ದಾರೆ. ಇಪಕ್ಕೆಲ್ಲ ತಿಲಾಂಜಲಿಕೊಟ್ಟು ಹೊಸದಾಗಿ ಮೈಸೂರಿನ ಕಲಸು ಮೇಲೋಗರದ ರುಚಿಯನ್ನು ನಮ್ಮ ವಿದ್ಯಾರ್ಥಿಗಳು ಉಣ್ಣಬೇಕೆಂದು ಹೇಳುವ ಪ್ರತಿನಿಧಿಗಳ ಮಾತಿಗೆ ಅರ್ಥವಿಲ್ಲ.

ಧಾರವಾಡ ದೂರನೆಂಬ ವಾದದಲ್ಲಿ ಹುರುಳಿಲ್ಲ. ಧಾರವಾಡವು ಉತ್ತರ ಧ್ರುವದ ಸಮೀಪ ಇರುವಂತೆ ನಮ್ಮ ಪ್ರತಿನಿಧಿಗಳಿಗೆ ಕಂಡರೆ ಅದಕ್ಕೆ ಕಾರಣ ಅವರ ಅಜ್ಞಾನವಷ್ಟೆ. ಬಸ್ಸು, ರೈಲು ಎರಡು ಕಡೆಗೂ ಓಡುತ್ತವೆ. ಮೈಸೂರಿನಲ್ಲಿ ನಮಗೆ ಸೆಂಟರಿರಬಹುದು, ಧಾರವಾಡದಲ್ಲಿಯೂ ಬೇಕಾದರೆ ಕಟ್ಟಿಕೊಳ್ಳಲು ಬಂದೀತು. ಅಲ್ಲದೆ ಮದ್ರಾಸು ನಮಗೆ ೬೦೦ ಮೈಲು ದೂರದಲ್ಲಿದ್ದು ನಮ್ಮ ಶಿಕ್ಷಣದ ಮಟ್ಟ ಕೆಳಗಿಳಿದಿತ್ತೆ? ಆಚಾರ್ಯರಿರುವವರು ಪರಸ್ಪರ ವಿಚಾರ ವಿನಿಮಯಕ್ಕೆ ಅವಕಾಶವಿರಲಿಲ್ಲವೆ? ಪರೀಕ್ಷೆ ಮಾಡುವ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕ ಸಂಬಂಧವು ಆಯಾ ಕಾಲೇಜಿನಲ್ಲಿಯೇ ಏರ್ಪಾಟಾಗಬೇಕಾದ್ದು. ವಿಶ್ವವಿದ್ಯಾಲಯವೆಂಬುದು ಕೇವಲ ಆಡಳಿತದ ಅನುಕೂಲಕೇಂದ್ರ. ಪರಸ್ಪರ ಸಂಪರ್ಕ ಬೇಕೆಂದು ಎನಿಸಿದಾಗ ಅದು ಮೈಸೂರಲ್ಲಿ ಎಷ್ಟು ಅಗತ್ಯವೋ, ಸಾಧ್ಯವೋ, ಅಷ್ಟು ಧಾರವಾಡದಲ್ಲಿಯೂ ಸಾಧ್ಯ.

ನಮ್ಮ ಜಿಲ್ಲೆಯಲ್ಲಿರುವ ಮೆಡಿಕಲ್ ಕಾಲೇಜಿಗೆ ದುಡ್ಡು ಕೊಡಬೇಕು ಅದು ದಂಡ ಅದು ನಮಗೆ ಪ್ರಯೋಜನವಿಲ್ಲವೆಂದು ದೂರಿಡಲು ನಮ್ಮ ಪ್ರತಿನಿಧಿಗಳು ಈ ಸಂದರ್ಭವನ್ನು ಸಯೋಗಿಸಬೇಕಾಗಿರಲಿಲ್ಲ. ತಮಗೆ ದೊರೆತ ಅಧಿಕಾರವನ್ನು ಬೇರೆ ಸಂದರ್ಭದಲ್ಲಿ ಪ್ರಯೋಗ ಮಾಡುವುದು ಸಾಧುವಾದ ಮಾರ್ಗ. ತಾಂತ್ರಿಕ ಶಿಕ್ಷಣವು ಧರ್ಮಾರ್ಥ ಬರುವುದಿಲ್ಲವೆಂದು ಎಂ. ಎಲ್. ಎ ಗಳು ತಿಳಿದಿರಬೇಕು. ಸರ್ಕಾರ ಜನರಿಂದ ತೆರಿಗೆ ವಸೂಲುಮಾಡಿದ ಧನದಿಂದ ನೂರಕ್ಕೆ ಒಬ್ಬ ಮಕ್ಕಳಿಗೆ ಮೆಡಿಕಲ್ ಇಂಜನಿಯರಿಂಗ್ ಶಿಕ್ಷಣಕೊಡಲು ಸಾವಿರಕಟ್ಟಲೆ ಹಣ ವಿನಿಯೋಗಿಸಬೇಕು. ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಗದೆ ಉಳಿದ ೯೯ ಮಂದಿ ನಮಗೆ ಈ ಮೆಡಿಕಲ್ ಕಾಲೇಜಿನಿಂದ ಪ್ರಯೋಜನವಿಲ್ಲ ಎನ್ನಬಹುದೆ?

ನಮ್ಮ ಮುಖ್ಯ ಮಂತ್ರಿಗಳು ಮೇ ೬ರಂದು ನಮ್ಮ ಜಿಲ್ಲೆಯ ಕಾಲೇಜುಗಳನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಸಿರುವ ವಿಚಾರವನ್ನು ಉಡುಪಿಯಲ್ಲಿ ಪ್ರಕಟಗೊಳಿಸಿದರು. ಅಲ್ಲಿಂದ ಜುಲಾಯಿಗಳ ವರೆಗೆ ನಮ್ಮ ಅಧಿಕೃತ ಪ್ರತಿನಿಧಿಗಳು ನಿದ್ರೆ ಹೋಗಿದ್ದರೆ? ಎಂದು ಜನತೆ ಅವರಿಂದ ತಿಳಿಯಲು ಅಪೇಕ್ಷಿಸುತ್ತಿದೆ. ಈಗಾಗಲೇ ಕರ್ನಾಟಕದ ಶಿಕ್ಷಣ ನಮ್ಮ ಕಾಲೇಜುಗಳಲ್ಲಿ ಆರಂಭವಾಗಿದೆ. ಈ ಒಂದು ಬದಲಾವಣೆಯಲ್ಲದೆ, ಇನ್ನೊಮ್ಮೆ ಮೈಸೂರ ವಿಶ್ವವಿದ್ಯಾಲಯದ ಪಾಠಪಟ್ಟಿ ನೋಡುವ ಅನಾವಶ್ಯಕ ಪ್ರಸಂಗವು ಕಾಲೇಜುಗಳನ್ನು ನಡೆಸುವವರಿಗೆ ಬರತಕ್ಕದ್ದು ನ್ಯಾಯವೆ? ಯಾವ ಮಾತನ್ನು ಯಾವಾಗ ಆಡಬೇಕೆಂಬುದನ್ನು ತಿಳಿಯದೆ ನಾವು ಜನತಾ ಪ್ರತಿನಿಧಿಗಳು ಬೇಕಾದ್ದನ್ನು ಬೇಕಾದಾಗ ಹೇಳುತ್ತೇವೆ ಎನ್ನುವುದು ಯಾರಿಗೂ ಶೋಭಿಸದು.

ಕಾಲೇಜುಗಳ ಶಿಕ್ಷಣದ ದೃಷ್ಟಿಯಿಂದ, ನ್ಯಾಯವಾದ ದೃಷ್ಟಿಯಿಂದ ಹೇಳುವುದಾದರೆ ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ನಮ್ಮ ಈ ವರೆಗಿನ ಮದ್ರಾಸ್ ಸಂಪ್ರದಾಯಕ್ಕೆ ಹೊಂದಿಕೊಂಡಿದೆ, ಪಾಠಪಟ್ಟಿಯನ್ನು ಇನ್ನೊಂದು ವರ್ಷದೊಳಗೆ ನಮಗೆ ಬೇಕಾದಂತೆ ಬದಲಾವಣೆ ಮಾಡಿಕೊಳ್ಳುವ ಶುಭಸಂಧಿಯೂ ಒದಗಿದೆ ಎಂಬುದನ್ನು ನಾವು ಮರೆಯಬಾರದು. ಎರಡನೆಯದಾಗಿ ನಮಗೂ ಕರ್ನಾಟಕಕ್ಕೂ ಏರ್ಪಟ್ಟಿರುವ ಸಂಬಂಧವು ಎಲ್ಲರಿಗೂ ಹಿತಕರವಾಗಿ ಪರಿಣಮಿಸುವ ರೀತಿಯಲ್ಲಿ ನಮ್ಮ ರಾಜಕೀಯ ಪ್ರತಿನಿಧಿಗಳು ಪ್ರಯತ್ನಶೀಲರಾಗುವುದು ನ್ಯಾಯೋಚಿತ. ಅಲ್ಲದೆ ಯಾವುದೆ ಕಾಲ್ಪನಿಕ ಭೀತಿ, ಭ್ರಮೆ, ಪೂರ್ವಗ್ರಹ, ಆಸೆಗಳನ್ನು ಕಟ್ಟಿಕೊಂಡು ಹಾಲಿಗೆ ಹುಳಿ ಹಿಂಡುವ ಕೆಲಸವನ್ನು ಮಾಡಬಾರದಾಗಿ ನಾವು ವಿನಂತಿಸುವೆವು.

— —

ಸಂಕ್ಷಿಪ್ತ ಸುದ್ದಿಗಳು

ಹೊಸ ಕರಗಳ ವಿಧೇಯಕ

೧೯೫೭-೫೮ರ ಮುಂಗಡ ಪತ್ರದಲ್ಲಿ ನಮೂದಿಸಲ್ಪಟ್ಟಂತೆ ವಿಶಾಲ ಮೈಸೂರಿನ ಎಲ್ಲ ಭಾಗಗಳಲ್ಲೂ ಏಕರೀತಿಯ ಮಾರಾಟ ಮತ್ತು ಒಕ್ಕಲತನ ಆದಾಯಕರಗಳನ್ನು ವ್ಯವಹಾರದಲ್ಲಿ ತರಲು ತಯಾರಿಸಿದ ಎರಡು ವಿಧೇಯಕಗಳೂ ಪರಿಶೀಲನಾ ಸಮಿತಿಗೆ ಒಪ್ಪಿಸಲ್ಪಟ್ಟಿದ್ದುವು. ಈ ಪರಿಶೀಲನಾ ಸಮಿತಿಗಳಿಗೆ ಈಯಲಾಗಿದ್ದ ಅವಧಿಯನ್ನು ಬೆಳೆಸಲಾಗಿದ್ದು ಸದ್ಯದ ಶಾಸನಸಭಾಧಿವೇಶನದೊಳಗಾಗಿ ಈ ಸಮಿತಿಗಳು ತಮ್ಮ ವರದಿಗಳನ್ನು ಒಪ್ಪಿಸಬಹುದಾದ ನಿರೀಕ್ಷೆಯಿದೆ.

ಜತ್ತಿ ಸಮಿತಿಯ ವರದಿ

ವಿಶಾಲ ಮೈಸೂರಿನ ಭೂ ಸಮಸ್ಯೆಯನ್ನು ಅಧ್ಯಯನಮಾಡಿ, ಆ ಬಗ್ಗೆ ಸರಕಾರಕ್ಕೆ ಯೋಗ್ಯ ಸಲಹೆನೀಡಲು ನೇಮಿಸಲಾಗಿದ್ದ ಜತ್ತಿ ಸಮಿತಿಯು ಸಂಬಂಧಿಸಿದ ವರದಿಯನ್ನು ಒಪ್ಪಿಸಲು ಇನ್ನೂ ಎರಡು ತಿಂಗಳು ಹೆಚ್ಚು ಅವಧಿಯನ್ನೀಯಲಾಗಿದೆ. ಸದ್ಯದ ವರ್ತಮಾನಗಳಂತೆ ಈ ಸಮಿತಿಯು ಸಪ್ಟಂಬರ ತಿಂಗಳ ಎರಡನೆ ವಾರದಲ್ಲಿ ತನ್ನ ವರದಿಯನ್ನು ಒಪ್ಪಿಸಬಹುದು.

ಮೈಸೂರಿನಲ್ಲಿ ಉಳಿತಾಯ ಯೋಜನೆ

ಕೇಂದ್ರ ಸರಕಾರದ ಸಲಹೆಯಂತೆ ಮೈಸೂರು ಸರಕಾರವು ಈ ವರ್ಷ ಸಾರ್ವಜನಿಕ ಸಾಲವನ್ನು ಎತ್ತುವುದಿಲ್ಲ. ಬದಲು ಚಿಕ್ಕ ಉಳಿತಾಯ ಯೋಜನೆಗಳ ಮೂಲಕವಾಗಿಯೇ ಸುಮಾರು ಐದು ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಯೋಚನೆಯನ್ನು ಮಾಡಿದೆ ಎಂ ಎಂದು ರಾಜ್ಯ ಅರ್ಥಮಂತ್ರಿ ಶ್ರೀ ಟಿ. ಮರಿಯಪ್ಪನವರು ತಿಳಿಸಿದ್ದಾರೆ.

ಮೈ. ಪ್ರಾ. ಕಾಂಗ್ರೆಸ್ ಕಾರ್ಯದರ್ಶಿ

ವಿಶಾಲ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ ಸಾಹುಕಾರ ಚೆನ್ನಯ್ಯನವರು ರಾಜೀನಾಮೆನ್ನೊರಿನ ಶಾಸನ ಸಭಾಸದಸ್ಯರಾದ ಶ್ರೀ ಕೆ. ಎಫ್. ಪಾಟೀಲರನ್ನು ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಆರಿಸಿಕೊಂಡಿದ್ದಾರೆ.

ಮೈಸೂರಿಗೆ ನೌಕಾಂಗಣ

ಭಾರತ ಸರಕಾರವು ದ್ವಿತೀಯ ನೌ

ನೌಕಾಂಗಣವೊಂದನ್ನು ಕಟ್ಟುವಯೋಜನೆಯಲ್ಲಿದ್ದು, ಆ ಬಗ್ಗೆ ಬ್ರಿಟಿಷ ಪರಿಶೀಲನಾ ತಜ್ಞರ ತಂಡವೊಂದು ಭಾರತಕ್ಕೆ ಬಂದಿರುತ್ತದೆ ಈ ತಂಡವು ಮೈಸೂರು ಕರಾವಳಿಯ ಕಾರವಾರ ಮತ್ತು ಭಟಕಳಗಳನ್ನು ಸಂದರ್ಶಿಸಿದರು. ಕಾರವಾರದಲ್ಲಿ ಈ ತಂಡದ ದುರೀಣರಾದ ಶ್ರೀ ಮಿಲ್ಲರ ವರು ಮಾತಾಡುತ್ತಾ ಇಲ್ಲಿ ಧಾರಾಳ ಜಲಸಂಪತ್ತು ಮತ್ತು ಭೂ ಸಂಪತ್ತು ಇರುವುದೆಂದು ಅಭಿಪ್ರಾಯ ಪಟ್ಟರುವರು. ಪರಿಶೀಲನೆಯು ೨೩ನೆ ದಿನಾಂಕ ಪ್ರಾರಂಭವಾಗಿರುತ್ತದೆ.

ದ. ಕ. ಜಿಲ್ಲೆಯ ಕಾಲೇಜುಗಳು

ದ. ಕ. ಜಿಲ್ಲೆಯ ಸಂಸ್ಕೃತ ಕಾಲೇಜುಗಳ ಪೊರತು ಉಳಿದ ಕಾಲೇಜುಗಳು ಈ ವಿದ್ಯಾವರ್ಷದಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಸಲ್ಪಟ್ಟಿದ್ದು, ದ. ಕ. ಜಿಲ್ಲೆಯ ಶಾಸನ ಸಭಾಸದಸ್ಯರ ನಿಯೋಗವೊಂದು ಈ ಕಾಲೇಜುಗಳು ಮೈಸೂರು ವಿಶ್ವವಿದ್ಯಾಲಯಕ್ಕೆ ಜೋಡಿಸಲ್ಪಡಬೇಕೆಂಬ ಮನವಿಯನ್ನು ಮುಖ್ಯಮಂತ್ರಿಗಳಿಗೆ ಅರ್ಪಿಸಿದೆ. ಇದಕ್ಕೆ ಕೆಲವೊಂದು ಕಾರಣಗಳನ್ನು ಕೊಟ್ಟಿರುವುದಲ್ಲದೆ, ಕಸ್ತೂರ್ಬಾ ಕಾಲೇಜಿನಿಂದ ದ. ಕ. ಜಿಲ್ಲೆಯವರಿಗೆ ಯಾವ ಪ್ರಯೋಜನವೂ ದೊರೆಯಲಾಗದೆಯೆಂದೂ ಈ ಮನವಿಯಲ್ಲಿ ದೂರಲಾಗಿದೆ ಸಂಸ್ಕೃತ ಕಾಲೇಜುಗಳು ಪ್ರಾಯಃ ಮದ್ರಾಸ್ ವಿಶ್ವವಿದ್ಯಾಲಯದಲ್ಲೇ ಉಳಿದುಕೊಳ್ಳುವುವು.

ತಾಂತ್ರಿಕ ಶಿಕ್ಷಣ ಸಾಕಲ್ಯ

ರಾಜ್ಯ ಪುನರ್ಘಟನಾ ಕಾಯಿದೆಯನ್ವಯ ಮೈಸೂರಿಗೆ ವಿಲೀನ ಹೊಂದಿದ ಇತರ ರಾಜ್ಯಗಳ ಭಾಗಗಳಿಗೆ ಜನಸಂಖ್ಯೆಯ ದೃಷ್ಟಿಯಲ್ಲಿ ಮದ್ರಾಸ, ಹಾಗೂ ಆಂಧ್ರ ಪ್ರದೇಶದ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ಕಾಯ್ದಿಡಬೇಕಾದಷ್ಟು ಸ್ಥಳಗಳನ್ನು ಕಾಯ್ದಿಡದೆ ಈ ಭಾಗಗಳಿಗೆ ಮಾಡಿದ ಅನ್ಯಾಯವನ್ನು ಮುಖ್ಯ ಮಂತ್ರಿಗಳು ಮದ್ರಾಸ, ಆಂಧ್ರ ಮತ್ತು ಕೇಂದ್ರ ಸರಕಾರಗಳೊಂದಿಗೆ ಚರ್ಚಿಸಲಿರುವರೆಂದು ಗೊತ್ತಾಗಿದೆ. ಮೈಸೂರು ವಿಶ್ವವಿದ್ಯಾನಿಲಯವೂ ವಿಲೀನ ಹೊಂದಿದ ಭಾಗಗಳಲ್ಲಿನ ವಿದ್ಯಾರ್ಥಿಗಳ ಪ್ರವೇಶ ಅರ್ಜಿಗಳನ್ನು ತಿರಸ್ಕರಿಸಿರುವುದೆಂದು ತಿಳಿದು ಬಂದಿದೆ.

ಕೇರಳದಲ್ಲಿ ಶಿಕ್ಷಣ ಮಸೂದೆ

ಶಾಲೆಗಳನ್ನು ತಕ್ಕ ಪರಿಹಾರವನ್ನಿತ್ತು ಸರಕಾರಕ್ಕೆ ವಹಿಸಿಕೊಳ್ಳಲು, ಉಪಾಧ್ಯಾಯರನ್ನು ನೇಮಿಸಲು ಮೊದಲಾಗಿ ಹಲವಾರು ಅಧಿಕಾರವೀಯುವ ಕೇರಳದ ಶಿಕ್ಷಣ ಮಸೂದೆಯನ್ನು ಮೂರು ವಾರಗಳೊಳಗೆ ವರದಿಯಿಯಬೇಕೆಂಬ ಕರ್ತದ ಮೇಲೆ ಪರಿಶೀಲನಾಸಮಿತಿಗೆ ಒಪ್ಪಿಸಲಾಯಿತು. ಈ ಮಸೂದೆಯು ಅಲ್ಲಿಯ ಜನರಿಂದ ವಿರೋಧಿಸಲ್ಪಡುವುದನ್ನು ಗಮನಿಸಿ ಕೇರಳದ ಕಮ್ಯೂನಿಷ್ಟ್ ಸರಕಾರವು ಯಾವುದೇ ಉದ್ರೇಕಿಸುವ ವರ್ತನೆಗಳಿಂದ ದೂರವಿರಬೇಕೆಂದು ಜನತೆಯನ್ನು ಎಚ್ಚರಿಸಿದೆ.

ಪಾಕಿಸ್ತಾನ ಸಂಬಂಧ

ಭಾರತ ಮತ್ತು ಪಾಕಿಸ್ತಾನಗಳ ಸಂಬಂಧವು ದಿನೇದಿನೇ ಬಿಗಡಾಯಿಸುತ್ತಿದೆ. ಕಾಶ್ಮೀರ ಸಂಬಂಧದಲ್ಲಿ ಪಾಕಿಸ್ತಾನವು ಆತ್ಯಪ್ತನಾಗಿದ್ದು ಎಂದು ಎಂಥ ಸಂದರ್ಭವನ್ನು ಒದಗಿಸುವುದೆಂದು ಸಂಬುವುದು ಅಸಾಧ್ಯವಾದುದರಿಂದ, ಅಂಥಹ ಸಂದರ್ಭದಲ್ಲಿ ಧೈರ್ಯದಿಂದ ಎದುರಿಸಲು ಭಾರತವು ಸದಾಕಾಲವೂ ಬದ್ಧಕಂಕಣವಾಗಿರಬೇಕಾದ ಪರಿಸ್ಥಿತಿ ಬಂದಿರುತ್ತದೆ ಎಂದು ಶ್ರೀ ನೆಹರೂ ತನ್ನ ವಿಶೇಷ ಸಂಚಾರದಿಂದ ಮಂಳಿದ ವೇಳೆ ಅಭಿಪ್ರಾಯಪಟ್ಟಿದ್ದಾರೆ.

ಈಜಿಪ್ಟಿನಲ್ಲಿ ಪಾರ್ಲಿಮೆಂಟ್

ಈಜಿಪ್ಟದಲ್ಲಿ ೧೯೫೨ರ ಕ್ರಾಂತಿ ನಡೆದು ಹಳೆಯ ವಿಧಾನ ಮಂಡಳವು ನಾಶವಾದನಂತರ, ಇದೀಗ ಸ್ವೀಕರಿಸಿಕೊಂಡ ಹೊಸ ಘಟನೆಗನುಗುಣವಾಗಿ ಸರ್ವತ್ರಿಕ ಚುನಾವಣೆಗಳು ನುಗಿದು, ಪಾರ್ಲಿಮೆಂಟಿನ ಪ್ರಪ್ರಥಮ ಅಧಿವೇಶನವು ೨೨ರಂದು ಆರಂಭವಾಯಿತು. ಇದರಲ್ಲಿ ಇಬ್ಬರು ಮಹಿಳಾಸದಸ್ಯರೂ ಇದ್ದಾರೆ ಅಧ್ಯಕ್ಷರು ತನಗಿರುವ ಅಧಿಕಾರದಿಂದ ಇನ್ನು ಮಂತ್ರಿಮಂಡಳವನ್ನು ಆರಿಸಲಿರುವರು.

ಜೀವವುಳಿಸಲು ಭಾರತಕ್ಕೆ ಕರೆ

ಹಂಗೇರಿಯ ಕ್ರಾಂತಿಯಲ್ಲಿ ಅಪರಾಧಿಗಳೆಂದು ನಿಶ್ಚಯಿಸಲಾದ ಏಳು ಮಂದಿಗೆ ಮರಣದಂಡನೆಯನ್ನು ಈಯಲಾಗಿದೆ. ಆಸ್ಟ್ರೇಲಿಯದ ಫೆಡರಲ್ ವಿರೋಧಿ ಪಕ್ಷದ ತಾತ್ಕಾಲಿಕ ಧುರೀಣರಾದ ಅರ್ಥರ್ ಕಾಮವೆಲ್ಲರು ಭಾರತದ ಪ್ರಧಾನ ಮಂತ್ರಿ ಜವಾಹರಲಾಲ ನೆಹರೂರವರಿಗೆ ಅವಾದಿತರ ಜೀವವನ್ನುಳಿಸಲು ಪ್ರಯತ್ನಿಸಬೇಕಾಗಿ ಕೇಳಿಕೊಂಡಿದ್ದಾರೆ. ಈ ಒಜನರು ಅವಾದನೆಯ ವಿರುದ್ಧ ಮಾಡಿದ ಮನವಿಗಳನ್ನು ನ್ಯಾಯಾಲಯವು ತಿರಸ್ಕರಿಸಿದೆ.

ಹೊಸ ರಾಜಕೀಯ ಪಕ್ಷ

ಪಾಕಿಸ್ತಾನದಲ್ಲಿ ಮೌಲಾನಾ ಭಶಾನಿಯವರು ಜುಲೈ ೨೫ ರಂದು ಹೊಸ ರಾಜಕೀಯ ಪಕ್ಷವೊಂದನ್ನು ರಚಿಸಲು ಸರ್ವಪಕ್ಷ ಸಮ್ಮೇಳನವನ್ನು ಢಾಕಾದಲ್ಲಿ ಕರೆದಿರುವರು. ಈ ಹೊಸ ಪಕ್ಷ ಹೆಸರಿನ ಬಗ್ಗೆ ಚರ್ಚೆ ನಡೆದಿದ್ದು ಇದನ್ನು ಅಖಿಲಾಮಿ ರಾಷ್ಟ್ರೀಯ ಪಕ್ಷವೆಂಬುದಾಗಿ ಕರೆಯಲು ನಿರ್ಧರಿಸಲಾಗಿದೆ. ಈ ಪಕ್ಷವು ಯಾವುದೇ ಸೈನಿಕ ಒಪ್ಪಂದಗಳನ್ನು ವಿರೋಧಿಸುವುದೆಂದೂ ತಿಳಿದುಬಂದಿದೆ.

ದಶಮಾಂಶ ಪದ್ಧತಿ

ನಾಣ್ಯಗಳಲ್ಲಿ ದಶಮಾಂಶ ಪದ್ಧತಿಯು ಕಳೆದ ಎಪ್ರಿಲ್ ೧ನೆ ತಾರೀಕಿನಿಂದ ಭಾರತದಲ್ಲಿ ಪ್ರಚಾರವಾಗಿದೆಯಷ್ಟೆ ಅದರಂತೆಯೇ, ಇದೀಗ ಮುಂದಿನ ಎಪ್ರಿಲ್ ೧ನೆ ದಿನಾಂಕದಿಂದ ತೂಕ ಹಾಗೂ ಅಳತೆಗಳಲ್ಲಿಯೂ ದಶಮಾಂಶ ಪದ್ಧತಿಯನ್ನು ವ್ಯವಹಾರಕ್ಕೆ ತರುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ಪ್ರತಿನಿಧಿ ಸಭೆಯಲ್ಲಿ ಅನುಕೂಲಾಭಿಪ್ರಾಯ ದೊರೆತಿದೆ. ತೂಕ ಮತ್ತು ಅಳತೆಯ ಜ್ಯಾರಿ ಸಂಬಂಧದ ಅಧಿಕಾರವು ಇದೀಗ ರಾಜ್ಯ ಸರಕಾರಗಳ ಅಧಿಕಾರಗಳ ಪಟ್ಟಿಯಲ್ಲಿದ್ದು; ಅದನ್ನು ಕೇಂದ್ರ ಸರಕಾರದಧಿಕಾರಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳುವ ಸಲುವಾಗಿ ರಾಜ್ಯ ಘಟನೆಯಲ್ಲಿ ಆವಶ್ಯಕ ತಿದ್ದುಪಡಿಯನ್ನು ಮಾಡುವುದಕ್ಕೂ ಈ ಸಭೆಯು ಸಂಮತಿಯನ್ನಿತ್ತಿತು.

ಉಡುಪಿ

ನಗರಸಭೆಯು—ತಾ. 18ರಂದು ಸಂಜೆ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಅರಂಭದಲ್ಲಿ ನಗರದ ರಸ್ತೆಗಳ ದುರಸ್ತಿ ಇತ್ಯಾದಿ ಬಗ್ಗೆ ಅಂದಾಜು ಹಣ ಸೆಂಕ್ಷನ್ ಸೂಡುವ ಕುರಿತು ಚರ್ಚೆನಡೆದು ಕೊನೆಗೆ ಕೆಲವೊಂದು ತಿದ್ದುಪಡಿಗಳಿಂದ ಮಂಜೂರು ಮಾಡಲಾಯಿತು. ಮುನಿಸಿಪಲ್ ಮಹಾತ್ಮಾಗಾಂಧಿ ಬೇಸಿಕ್ ಶಾಲೆಯಲ್ಲಿ ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿಯವರು ಕ್ಲಾಸುಗಳನ್ನು ನಡೆಸುವ ಬಗ್ಗೆ ಮಾಡಿದ ಅರ್ಜಿ ಕುರಿತು ತುಂಬಾ ಚರ್ಚೆನಡೆಯಿತು. ಕೊನೆಯ ತೀರ್ಮಾನವನ್ನು ಮುಂದಿನ ಸಭೆಗೆ ಬಾಕಿಯಿಡಲಾಯಿತು. ಉಡುಪಿಯಲ್ಲಿ ಸರ್ಕೊರ್ಟು ಸ್ಥಾಪಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಮತ್ತು ನಗರದಲ್ಲಿ ಇನ್ನು ಹೆಚ್ಚಿಗೆ ಅರು ಅಕ್ಕಿ ಡಿಪೋಗಳನ್ನು ತೆರೆಯುವಂತೆ ಜಿಲ್ಲಾ ಕಲೆಕ್ಟರರನ್ನು ವಿನಂತಿಸಬೇಕೆನ್ನುವ ಶ್ರೀ ಸೀತಾರಾಮ ಕಾಮತರ ನಿರ್ಣಯಗಳು ಪಾಸಾದುವು.

ಶಾಲಾ ಮುಖಂಡರ ಚುನಾವಣೆ—ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಶಾಲಾ ನಾಯಕರಾಗಿ ಶ್ರೀ ವಿಜಯ ಗೋಪಾಲರೂ, ಉಪನಾಯಕರಾಗಿ ಶ್ರೀ ಎನ್. ನಾರಾಯಣ ಬಲ್ಲಾಳರೂ ಅಧಿಕ ಮತಗಳನ್ನು ಪಡೆದು ಆರಿಸಿಬಂದಿರುವರು.

ಎಮ್ ಜಿ ಎಮ್ ಕಾಲೇಜಿನಲ್ಲಿ ಪ್ರಿ ಮೆಡಿಕಲ್ ಕೋರ್ಸು—ಸ್ಥಳೀಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಪ್ರಿ ಮೆಡಿಕಲ್ ಕೋರ್ಸನ್ನು ಆರಂಭಿಸಲು ನಿರ್ಧರಿಸಲಾಗಿದೆ ಈ ಕೋರ್ಸಿಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳು ಎಮ್. ಜಿ. ಎಮ್ ಕಾಲೇಜಿನ ಪ್ರಿನ್ಸಿಪಾಲರಿಗಾಗಲೀ ಅಥವಾ ಕಾಲೇಜನ್ನು ನಡೆಸುವ ಎಕಾಡಮಿ ಆಫ್ ಜನರಲ್ ಎಜ್ಯುಕೇಶನ್, ಮಣಿಪಾಲ, ದ. ಕನ್ನಡ ಇದರ ರಿಜಿಸ್ಟ್ರಾರರಿಗಾಗಲೀ ಅರ್ಜಿಗಳನ್ನು ಕಳುಹಿಸಬೇಕಾಗಿದೆ ಎಂದು ಮೈಸೂರಿನ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್, ಅವರು ಜಿಲ್ಲಾ ಮೆಡಿಕಲ್ ಆಫೀಸರರಿಗೆ ತಿಳಿಸಿರುವರೆಂದು ತಿಳಿದುಬರುತ್ತದೆ. ಅದರ ಈ ಕುರಿತು ಹೆಚ್ಚಿನ ವಿವರಗಳಾಗಲೀ ಯಾವುದೇ ನಿರ್ಧಾರಗಳಾಗಲೀ ತಿಳಿದುಬಂದಿಲ್ಲ.

ಆಗಮನ— ಸಾರ್ವಜನಿಕ ಆರೋಗ್ಯ ಖಾತೆಯ ಮುಖ್ಯಾಧಿಕಾರಿ ಡಾ ಯಸ್. ಶೇಷಗಿರಿ ರಾಯರು ತಾ. 22ರಲ್ಲಿ ಇಲ್ಲಿಗೆ ಸಂದರ್ಶಿಸಿ, ನಗರಸಭಾಧ್ಯಕ್ಷ ಶ್ರೀ ಕೆ. ಕೆ. ಪೈ ಹೆಲ್ತ್ ಆಫೀಸರ್ ಡಾ. ವಿ. ಎಲ್. ಪಂಡಿತ್ ಇವರೊಡನೆ ನಗರಾಂಗೋಗೈದ ಕುರಿತು ವಿಚಾರ ವಿನಿಮಯ ಮಾಡಿದರು ಉಡುಪಿಯಲ್ಲಿ ಪೆಟ್ರೋಲ್ ಯುನಿಟನ್ನು ತೆರೆಯುವ ಮತ್ತು ಅನಿಕಾಲ ರೋಗ ನಿರೋಧ ಯೋಜನೆಯನ್ನು ಇಲ್ಲಿಗೂ ವಿಸ್ತರಿಸುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇಲ್ಲಿಯ ಸರಕಾರಿ ಆಸ್ಪತ್ರೆಯನ್ನು ಸಂದರ್ಶಿಸಿ ಬಳಿಕ ಮಲ್ಪೆಗೆ ತೆರಳಿ ಅಲ್ಲಿಂದ ಹಿಂತಿರುಗಿದರು. ಇವರೊಡನೆ ಜಿಲ್ಲಾ ಮೆಡಿಕಲ್ ಆಫೀಸರ್ ಡಾ. ಎ. ತಿಮ್ಮಯ್ಯನವರೂ, ಹೆಲ್ತ್ ಆಫೀಸರ್ ಡಾ. ಮಾದೇಶಯ್ಯನವರೂ ಆಗಮಿಸಿದ್ದರು.

ಯಕ್ಷಗಾನ ಕಾರ್ಯಕಲಾಪವು—ತಾ. 20ರಲ್ಲಿ ಸ್ಥಳೀಯ ಯಕ್ಷಗಾನ ಕಲಾ ಮಂಡಲದಲ್ಲಿ ನಗರ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿ ಹಲವರ ಭಾಷಣಗಳಾದುವು.

ವರ್ಗಾವರ್ಗಿ—ಸ್ಥಳೀಯ ಪೋಲೀಸ್ ಸರ್ಕಲ್ ಇನ್ಸ್ಪೆಕ್ಟರ್ ಶ್ರೀ ಎಂ ಡಿ. ಸುವರ್ಣರು ಮೈಸೂರು ಸಿಟಿಗೂ, ಮೈಸೂರಿನ ಶ್ರೀ ಎಚ್. ಎನ್. ಎ. ಗೌಡರು ಇಲ್ಲಿಗೂ ವರ್ಗಾಯಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ.

ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದ ಭಜನೆ ಸಪ್ತಾಹವು—ತಾ. 31-7-57ರಿಂದ ತಾ. 7-8-57ರ ತನಕ ಜರಗಲಿರುವುದೆಂದೂ; ಸರ್ವರೂ ಬಂದು ಸಹಕರಿಸಬೇಕೆಂದೂ ಆಡಳಿತೆ ಮೊಕ್ತೇಸರ್ ಡಾ. ರಾಘವೇಂದ್ರ ನಾಯಕರು ಅಪೇಕ್ಷಿಸುತ್ತಾರೆ.

ಮಂದಾರ್ತಿ-ಸ್ಥಳೀಯ ಶ್ರೀ ಮಹಾಲಿಂಗ ಸ್ವಾಮಿ ವರಸಿದ್ಧಿ ದೇವಸ್ಥಾನಕ್ಕೆ ಇದೇ ತಾ. 23ರಂದು ಉಡುಪಿ ಡಿವಿಜನ್ ಡಿಸ್ಟ್ರಿಕ್ಟ್ ಸೇವಕರಾದ ಶ್ರೀ ಡಿ. ಬಿ. ಅಂತಯ್ಯ ಸೆಟ್ಟಿರ ನೇತೃತ್ವದಲ್ಲಿ ಹರಿಜನರು ಪ್ರವೇಶಮಾಡಿ, ದೇವರಿಗೆ ಪರಕೆ, ಕಾಣಿಕೆ ಸಮರ್ಪಿಸಿದರು. ಅರ್ಚಕರು ಶ್ರೀ ಮುಡಿಗಂಧ ಪ್ರಸಾದ ಪಂಚಿದರು. ಬಳಿಕ ಶ್ರೀ ಅಂತಯ್ಯ ಸೆಟ್ಟಿರವರು ಮಾನವ ಸಮಾಜದಲ್ಲಿ ಸ್ವಲ್ಪಸ್ಪೃಶ್ಯತೆಯ ಭೇದವು ಅಳಿಯದೆ ದೇಶಕ್ಕೂ ಜನಕ್ಕೂ, ಸುಖ ಶಾಂತಿಯಿಲ್ಲ ಎಂದು ಮುಂತಾಗಿ ಭಾಷಣ ಮಾಡಿದರು.

ವಿಶೇಷ ಸಂಚಿಕೆ
ತಾ. 15-8-1957ಕ್ಕೆ
ನವಯುಗವು
ವಾಡಿಕೆಯಂತೆ
ಸ್ವಾತಂತ್ರ್ಯ ದಿನೋತ್ಸವ
ಸಂಚಿಕೆಯನ್ನು
ಪ್ರಕಟಿಸಲಿದೆ.
ಜಾಹೀರಾತುದಾರರು
ತಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

NAVAYUGA INDEPENDENCE DAY SPECIAL

FIFTEENTH AUGUST every year is being observed all over India as a great National Festival. To synchronise with this happy rejoicing, NAVAYUGA, the Popular and Leading Kannada Weekly of the District, as in previous years, intends bringing out the INDEPENDENCE DAY SPECIAL on 15—8—1957 replete with special articles etc., worthy of the name.

Taking into account the steady growing popularity and high esteem and also the ever expanding circulation of Navayuga and the auspicious occasion the Special comes out, it is needless to emphasise the obvious scope of the Navayuga Independence Day Special as the best medium of advertisement. May we therefore earnestly request you to favour us with your esteemed advertisement so as to reach us on or before 5—8—1957.

ADVT. MANAGER.
NAVAYUGA, UDIPI.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಜನತಾ ವಿಜ್ಞಾನ: ಭಾಗ 1–ಭೂಮಿ ಮತ್ತು ಜಗತ್ತು:– ಬರೆದವರು: ಯು. ರಾಘವೇಂದ್ರ ಆಚಾರ್ಯ, ಎಂ. ಎ., ಬಿ. ಎ. ಯಸ್. ಡಿಲ್ಲಿ. ಪ್ರಕಾಶಕರು: ಯು. ಅನಂತಕೃಷ್ಣ ಆಚಾರ್ಯ, 'ಗೀತಾ ನಿಲಯಂ' ಉಡುಪಿ. ಪುಟ 44 ಬೆಲೆ 12 ಆಣೆ. ಈ ಪುಸ್ತಕಕ್ಕೆ ಕೇಂದ್ರ ಸರಕಾರದ ಪ್ರಥಮ ಬಹುಮಾನ ದೊರೆಕಿದೆ.

ವಯಸ್ಸರ ಶಿಕ್ಷಣ ಸಾಹಿತ್ಯದ ಕ್ರಮಗಳಿಗೆ ಅನುಸಾರವಾಗಿ ಬರೆಯಲ್ಪಟ್ಟ ಈ ಪುಸ್ತಕದಲ್ಲಿ ಭೂಮಿ, ಗ್ರಹಗಳು, ನಕ್ಷತ್ರಗಳು, ಜೀವದ ನಿಕಾಸ, ನಾಗರಿಕತೆಯ ಬೆಳವಣಿಗೆಯೆಂಬ ವಿಷಯಗಳನ್ನು ಸುಲಭ ಶೈಲಿಯಲ್ಲಿ ವಿವರಿಸಿದ್ದಾರೆ. ಯು. ಜಿ ಯಂ. ಕಾಲೇಜಿನ ಪ್ರಾಧ್ಯಾಪಕ ಶ್ರೀ ಕೆ. ಬಿ. ರಾಮಕೃಷ್ಣ ರಾಯರು ಉತ್ತಮ ಚಿತ್ರಗಳನ್ನು ಬಿಡಿಸಿಕೊಟ್ಟಿದ್ದಾರೆ.

ಚೊಕ್ಕವಾದ ಚಿಕ್ಕ ವಾಕ್ಯಗಳಿಂದಲೂ "ನುಣ್ಣನ ನಾಡಿನಲ್ಲಿ ಜನರು ಹಳ್ಳಿ ಹಳ್ಳಿಗಳಲ್ಲಿ ವಾಸಿಸುವಂತೆ ಈ ನಕ್ಷತ್ರಗಳೂ ಆಕಾಶದಲ್ಲಿ ಗುಂಪು ಗುಂಪಾಗಿ ಸೇರಿಕೊಂಡಿವೆ" ಎಂಬ ಜನಸಾಮಾನ್ಯರಿಗೆ ಅರ್ಥವಾಗುವ ಉದಾಹರಣೆಗಳಿಂದಲೂ, ದೊಡ್ಡ ಅಕ್ಷರಗಳಿಂದಲೂ, ಉತ್ತಮ ಕಾಗದಗಳಿಂದಲೂ, ತಕ್ಕ ಚಿತ್ರಗಳಿಂದಲೂ ಓದುಗರಿಗೆ ಮನಸೊಗುವ ರೀತಿಯಲ್ಲಿ ವಿಷಯವನ್ನು ನುಂಡಿಸಿದ್ದಾರೆ.

ವಾಚನಾಲಯಗಳಲ್ಲಿ ಸಂಗ್ರಹಿಸಲಿಕ್ಕೂ ವಯಸ್ಕರ ಶಿಕ್ಷಣ ಕಾರ್ಯನಿಲ್ಲಿ ಉಪಯೋಗಿಸಲಿಕ್ಕೂ, ಶಾಲೆಗಳಲ್ಲಿ ಮೌನ ಓದು, ಉಪಪಠ್ಯ ಪಾಠೇತರ ಓದುಗಳಿಗೆ ಉಪಯೋಗಿಸಲಿಕ್ಕೂ ಈ ಪುಸ್ತಕವು ಅನುಕೂಲವಾಗಿದೆ.

ಹಿರಿಯ ವೈಜ್ಞಾನಿಕರಲ್ಲೊಬ್ಬರಾದ ಶ್ರೀ ಆಚಾರ್ಯರು ಸಾಹಿತ್ಯ ಸೇವೆ ಅವರಲ್ಲೂ ಶಿಶು ಸಾಹಿತ್ಯ ಮತ್ತು ವಯಸ್ಕರ ಸಾಹಿತ್ಯಗಳ ಕಡೆಗೆ ಗಮನ ಪರಿಸುತ್ತಿರುವುದ, ಕನ್ನಡದಲ್ಲಿ ಇಂತಹ ಪುಸ್ತಕಗಳು ಪ್ರಕಟವಾಗುತ್ತಿರುವುದು ನಾಡಿನ ಪುಣ್ಯ. ಮುನ್ನುಡಿಯಲ್ಲಿ ಸೂಚಿಸಿದಂತೆ ಇಂತಹ ಇನ್ನೂ ಅನೇಕ ಕೃತಿಗಳು ಇವರಿಂದ ಮತ್ತೆ ಬರಲಿ ಎಂದು ಆಶಿಸುತ್ತೇವೆ.

ಪುರಂದರ ದಾಸರ ಕೀರ್ತನೆಗಳು: ಕೀರ್ತನ ಕಲ್ಪತರು—ಗೊಂಚಲು ೧. ಪ್ರಕಾಶಕರು ಉಡುಪಿ ಪ. ಅ. ಉಪಾಧ್ಯಾಯ. ಉಪಾಧ್ಯಾಯ ಪ್ರಕಟನಾಲಯ—ಬೆಂಗಳೂರು. ಪುಟ 120 ಬೆಲೆ ೧-೦-೦.

ಪುರಂದರ ದಾಸರ ಕೀರ್ತನೆಗಳು ಕನ್ನಡ ಸಾಹಿತ್ಯದಲ್ಲಿಯೂ, ಧರ್ಮ ತತ್ವ ಬೋಧನೆಯಲ್ಲಿಯೂ, ಭಕ್ತಿ ಭಾವ ಪ್ರಚೋದನೆಯಲ್ಲಿಯೂ ನಿತ್ಯನೂತನವಾಗಿ ಮೆರೆಯುವ ರತ್ನಗಳು. ಈ ಕೀರ್ತನೆಗಳಲ್ಲಿ ಸಾಹಿತ್ಯವುಂಟು ಸಂಗೀತವುಂಟು ಜನಸಾಮಾನ್ಯರು ಜಾತಿ ಪಂಗಡಗಳ ಭೇದವಿಲ್ಲದೆ ಹಾಡಿ ಸಲಿಯುವ ಪರಮಾತ್ಮನನ್ನೊಲಿಸುವ ಸಾಧನಗಳಾಗಿ ಈ ಕೀರ್ತನೆಗಳು ಮೆರೆಯುತ್ತಿವೆ. ಕತ್ತಲಾದೊಡನೆ ದೀಪಹಚ್ಚಿ ಕೀರ್ತನೆಗಳನ್ನು ಹಾಡಿ ಇಹದಲ್ಲಿ ಅನಂದವನ್ನೂ ಪರದಲ್ಲಿ ದಿವ್ಯ ಪದವನ್ನೂ ಪಡೆವ ಅನುಕೂಲತೆಯಲ್ಲಿ ಇದೆ. ಇಂತ ಸುಲ

ಎಲ್ಲೆಲ್ಲಿ ಏನೇನು?

ಸುಬ್ರಹ್ಮಣ್ಯ— ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ತೆಂಕು ಪಾಳಿಯ ಕಟ್ಟಡವನ್ನು ಸಾಧಾರಣ ರೂ. 36,000 ವೆಚ್ಚದಿಂದ ದೇವಸ್ಥಾನದಿಂದ ಜೀರ್ಣೋದ್ಧಾರಮಾಡಿಸಿ ಮಹಾಸಂಪ್ರೋಕ್ಷಣೆಯನ್ನು ತಾ. 15ರಂದು ನೆರವೇರಿಸಿ ಕಾಲಶ್ಶೇರವ ದೇವರನ್ನು ಈ ಕಟ್ಟಡದಲ್ಲಿ ಪ್ರತಿಷ್ಠೆ ಮಾಡಲಾಯಿತು.

ಮಂಜೇಶ್ವರ— ಸ್ಥಳೀಯ ಮಹಿಳೆಯರ ಸಭೆಯೊಂದು ಜರಗಿ 'ವನಿತಾವೃಂದ ಮಂಜೇಶ್ವರ' ಎಂಬ ಮಹಿಳಾ ಸಮಾಜವು ರೂಪುಗೊಂಡಿತು. ವೃಂದದ ಕಾರ್ಯಕಾರೀ ಸಮಿತಿಗೆ ಶ್ರೀಮತಿ ಕುಮುದಿನಿ ಎನ್. ಮಂಜೇಶ್ವರ್, ಅವರು ಅಧ್ಯಕ್ಷೆಯಾಗಿಯೂ, ಕುಮಾರಿ ವಸಂತಿ ಮಂಜೇಶ್ವರರು ಕಾರ್ಯದರ್ಶಿಣಿಯಾಗಿಯೂ ಕುಮಾರಿ ಉತ್ತಮೂಭಗತ್ ಕೋಶಾಧಿಕಾರಿಣಿಯಾಗಿಯೂ ಆರಿಸಲ್ಪಟ್ಟರು. ಮಹಿಳೆಯರಿಗೆ ಕಳಕೂತಿ, ಹೊಲಿಗೆ, ಚಿತ್ರಕಲೆ, ಹಿಂದಿ ಇತ್ಯಾದಿ ಕಲಿಸಲಾಗುವುದು.

ತಾ. 14ರಂದು ಮಂಜೇಶ್ವರ ರಿಕ್ರಿಯೇಶನ್ ಕ್ಲಬ್ಬಿನವರು ಇಲ್ಲಿಂದ ಐದುಕಲೆಗೆ ವರ್ಗವಾದ ಆಸಿಸ್ಟಾಂಟ್ ಸ್ಟೇಶನ್ ಮಾಸ್ಟರ್ ಶ್ರೀ ಡಿ. ತಮ್ಮಯ್ಯನವರಿಗೆ ಸತ್ಕಾರ ಕೂಟವಿತ್ತು ಗೌರವಿಸಿದರು. ಶ್ರೀ ಬಿ. ವಿಟ್ಟಪ್ಪ ಶೆಟ್ಟಿಯವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ವಾಸುದೇವ ನಾಯಕ್, ಡಾ. ಎಸ್. ಎಸ್. ರಾವ್ ಮೊದಲಾದವರ ಭಾಷಣಾನಂತರ ಶ್ರೀ ಪಿ. ರಾಮಚಂದ್ರರಾಯರು ಧನ್ಯವಾದಗಳನ್ನಿತ್ತರು.

ಮೆಣಸಾಲ— ಸ್ಥಳೀಯ ಹೈಸ್ಕೂಲಿನ ವಿದ್ಯಾರ್ಥಿ ನಾಯಕರಾಗಿ ಶ್ರೀ ಎ. ಸತೀಶ ಪೆಡ್ಡೆಯವರೂ ಉಪನಾಯಕರಾಗಿ ಶ್ರೀ ಎಚ್. ಕೃಷ್ಣಮೂರ್ತಿ ತಂತ್ರಿಗಳೂ, ಅಧ್ಯಕ್ಷರಾಗಿ ಶ್ರೀ ಬಿ. ಶಿವಾನಂದ ಪೈಗೂ ಆರಿಸಲ್ಪಟ್ಟಿರುತ್ತಾರೆ.

ಮಂದಾರ್ತಿ— ಸ್ಥಳೀಯ ಶ್ರೀ ಗಣೇಶ ವಾಚನಾಲಯದ ಪ್ರಥಮ ವಾರ್ಷಿಕೋತ್ಸವವು ತಾ. 20ರಂದು ಶ್ರೀ ಕೆ. ಮರಿ ಉಡುಪರ ಅಧ್ಯಕ್ಷತೆಯಲ್ಲಿ ಡಿ. ಪಿ. ಎಲಿಮೆಂಟರಿ ಶಾಲೆಯಲ್ಲಿ ಜರುಗಿತು. ಮೌನ ಪ್ರಾರ್ಥನೆಯಾದ ಬಳಿಕ ಕಾರ್ಯದರ್ಶಿಯರು ವರದಿಯನ್ನೋದಿದರು. ಶ್ರೀ ಎಚ್. ಶ್ರೀನಿವಾಸ ಸೆಟ್ಟರು 'ವಾಚನಾಲಯದ ಮಹತ್ವ'ದ ಕುರಿತು ಭಾಷಣಗೈತ್ತರು. ನಂತರ ಹೊಸ ವರ್ಷದ ಕಾರ್ಯನಿರ್ವಾಹಕ ಸಮಿತಿ ರಚಿಸಲ್ಪಟ್ಟು ಶ್ರೀಗಳಾದ ಬಿ. ಉಮೇಶ ರಾವ್, ಎ. ಪದ್ಮನಾಭ ಉಡುಪ, ಮತ್ತು ಡಿ. ಚಂದ್ರಶೇಖರ ರಾಯರು ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಶ್ರೀ ಎ. ವಿ. ಉಡುಪರು ಧನ್ಯವಾದಗಳನ್ನಿತ್ತರು.

ಕೊಲ್ಲೂರು— ಮುಸ್ಲೂರು ಎಸ್ಟೇಟಿನಿಂದ ತಪ್ಪಿಸಿಕೊಂಡು ಹಲವು ದಿನಗಳವರೆಗೆ ಇಲ್ಲಿನ ಆಸುಪಾಸು ಹಳ್ಳಿಗಳಲ್ಲಿ ತಂಟೆಕೊಡುತ್ತಲಿದ್ದ ಆನೆಯೊಂದನ್ನು ಕಾಲೂರು ಅಧಿಕಾರಿಗಳ ಮತ್ತು ಇತರ ಮಹನೀಯರ ಪ್ರಯತ್ನದಿಂದ ತಾ. 11ರಲ್ಲು ಕೊಲ್ಲೂರು ದೇವಸ್ಥಾನದಲ್ಲಿ ಹಿಡಿಯಲಾಯಿತು

ಅಜ್ರಿ— ಕುಂದಾಪುರ ತಾಲೂಕು ಅಜ್ರಿ ದೊಡ್ಡ ಮನೆ ನಾಗೈ ಸಟ್ಟರು ಇಂದೇ ತಾ. 9 ರಂದು ರಾತ್ರಿ ತಮ್ಮ 96ನೇ ವಯಸ್ಸಿನಲ್ಲಿ ದೈವಾಧೀನರಾದರು. ದಿವಂಗತರು ಧರ್ಮಾನಿಷ್ಠರೂ, ಸತ್ಯಸಂಧರೂ ಆಗಿದ್ದರು. ಇವರಿಗೆ ಮೂವರು ಗಂಡು ಮಕ್ಕಳು ಮತ್ತು ನಾಲ್ಕು ಹೆಣ್ಣುಮಕ್ಕಳಿರುವರು.

ಬೆಂಗಳೂರು

ಮಂಗಳೂರು–ಮಂಜಪೆ ಬಂದರುಗಳ ಅಭಿವೃದ್ಧಿ ಕುರಿತು ಶ್ರೀ ಬಾಳಿಗರ ಹೇಳಿಕೆ– ಬೆಂಗಳೂರಿಲ್ಲಿ ನಡೆಯುತ್ತಿರುವ ರಾಜ್ಯವಿಧಾನ ಸಭೆಯಲ್ಲಿ ಕಾನೂನು ಹಾಗೂ ಮಜೂರ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರು ಮಾತನಾಡುತ್ತಾ, ಮಂಗಳೂರನ್ನು ಸರ್ವಾಯತ್ತ ಬಂದರನ್ನಾಗಿಯೂ ಮಂಜಪೆಯನ್ನು ಪ್ರಬುದ್ಧ ಬಂದರನ್ನಾಗಿಯೂ ಅಭಿವೃದ್ಧಿಪಡಿಸುವ ಹೆಜ್ಜೆಗಳನ್ನಿಡಲಾಗುತ್ತದೆ ಎಂದು ಹೇಳಿದರು.

ಡಾ. ಕೆ. ನಾಗಪ್ಪ ಆಳ್ವರ ಪ್ರಶ್ನೆಯೊಂದಕ್ಕೆ ಉತ್ತರವೀಯುತ್ತಾ ಮಂಗಳೂರು ಬಂದರಿನಲ್ಲಿ ಬರೆಹೋಗುವ ಸಾಮಗ್ರಿಗಳನ್ನು ಕೂಡಿಡಲು ಸ್ಥಳಾಭಾವವಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೆಂದೂ, ಬಂದರಿನಲ್ಲಿ ಹೆಚ್ಚಿಗೆ ಅನುಕೂಲತೆಯನ್ನು ಕಲ್ಪಿಸಿಕೊಡಲು ಸರಕಾರವು ಸಾಧ್ಯವಿದ್ದ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿಯೂ ಶ್ರೀ ಬಾಳಿಗರು ಹೇಳಿದರು. ಕೇಂದ್ರ ಸರಕಾರದ ನಿರ್ದೇಶನಾನುಸಾರವಾಗಿ ಮಂಗಳೂರು 'ಲಗೂನ್' ಮಾದರಿಯ ಬಂದರವಾಗಿ ಮೂರ್ತಿಗೊಳ್ಳುವ ಸಾಧ್ಯತೆಯನ್ನು ಅಂಡುಹಿಡಿಯಲು ಮೂಲೆಯ ಸಂಶೋಧನಾ ಕೇಂದ್ರದಲ್ಲಿ ಮಾದರಿ ಸರೋವರ್ಗಾರ್ಥ ಪ್ರಯೋಗಗಳು ನಡೆದಿವೆಯೆಂದೂ ಶ್ರೀ ಬಾಳಿಗರು ತಿಳಿಸಿದರು. ಮಂಜಪೆಯನ್ನು ಪ್ರಬುದ್ಧ ಬಂದರವಾಗಿ ಅಭಿವೃದ್ಧಿಪಡಿಸುವ ಕುರಿತು ರಾಜ್ಯಸರಕಾರವು ಕೇಂದ್ರ ಸರಕಾರವನ್ನು ಕೇಳಿಕೊಂಡಿದ್ದಿತು. ಇದ್ದ ಪ್ರಶ್ನೆಯೂಗ ಭಾರತ ಸರಕಾರವ ಪರಿಶೀಲನೆಯಲ್ಲಿದೆ ಎಂದೂ ಅವರು ಹೇಳಿದರು ಮೈಸೂರು ರಾಜ್ಯದಲ್ಲಿ ಹಡಗ ರಚನಾ ಕೇಂದ್ರ ನಿರ್ಮಿಸುವಂತೆ ರಾಜ್ಯಸರಕಾರವು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತಿದೆಯಾಗಿಯೂ ಸಚಿವರು ನುಡಿದರು.

ಸಾಂಸ್ಕೃತಿಕ ಸಂಸ್ಥೆಗಳಿಗೆ ಸಂಗೀತ ನಾಟಕ ಅಕ್ಯಾಡೆಮಿಯ ಧನ ಸಹಾಯ– ಹೊಸದಿಲ್ಲಿಯ ಸಂಗೀತ ನಾಟಕ ಅಕ್ಯಾಡೆಮಿಯು ತನ್ನ ಸುಸ್ಥಿತಿ ಪಡೆದ ವಿವಿಧ ಸಾಂಸ್ಕೃತಿಕ ಸಂಸ್ಥೆಗಳು ಧನ ಸಹಾಯದ ಸಲುವಾಗಿ ತನಗೆ ಅರ್ಜಿಗಳನ್ನು ಕಳುಹಿಸಬೇಕೆಂದು ಬಿನ್ನವಿಸುತ್ತದೆ. ಈ ಅರ್ಜಿಗಳನ್ನು ಹೊಸದಿಲ್ಲಿಯ ಅಕ್ಯಾಡೆಮಿ ಕಾರ್ಯಾಲಯಕ್ಕೆ ರಾಜ್ಯ ಅಕ್ಯಾಡೆಮಿಗಳ ಮೂಲಕ ತಾ. 31-3-57 ರೊಳಗಾಗಿ ಕಳುಹಿಸಬೇಕು. ಅರ್ಜಿಯ ಪ್ರತಿಯೊಂದನ್ನು ಮುಂಚಿತವಾಗಿ ಹೊಸದಿಲ್ಲಿ ಅಕ್ಯಾಡೆಮಿ ಕಾರ್ಯಾಲಯಕ್ಕೆ ನೇರವಾಗಿ ಕಳುಹಿಸಬಹುದು. ಮನ್ನಣೆ ಪಡೆಯದ ಸಂಸ್ಥೆಗಳು ನಿಯಮಾವಳಿ ಪ್ರಕಾರ ಮನ್ನಣೆ ಪಡೆಯಲು ಹೊಸದಿಲ್ಲಿ ಅಕ್ಯಾಡೆಮಿಗೆ ಅರ್ಜಿಗಳನ್ನು ಕಳುಹಿಸಬೇಕು. ಧನ ಸಹಾಯಕ್ಕಾಗಿ ಅರ್ಜಿಯ ನಮೂನೆಗಳನ್ನು ಮತ್ತು ಮನ್ನಣೆಯ ನಿಯಮ ನಿಬಂಧನೆಗಳ ಪ್ರತಿಗಳನ್ನು ಹೊಸದಿಲ್ಲಿ ಅಕ್ಯಾಡೆಮಿ ಕಾರ್ಯಾಲಯದಿಂದ ಪಡೆಯಬಹುದು ಎಂದು ಮೈಸೂರು ಸರಕಾರದ ವಾರ್ತಾ ಇಲಾಖೆಯು ಪತ್ರಿಕಾ ಪ್ರಕಟಣೆ ಹೊರಡಿಸಿದೆ.

ಹಾಲಾಡಿ ಜಲಾಶಯ ನಿರ್ಮಾಣ ಪ್ರಸ್ತಾವನೆಯಿಲ್ಲ– ದ. ಕ. ಜಿಲ್ಲೆಯ ಕುಂದಾಪುರ ತಾಲೂಕಿನ ಹಾಲಾಡಿ ಜಲಾಶಯ ಯೋಜನೆಯ ಆರಂಭಿಕ ಪರಿಶೀಲನೆಯು ಪೂರ್ಣವಾಗಿದ್ದು ಇಸ್ತರತನಕ ಅದಕ್ಕಾಗಿ ರೂ 17,290 ವೆಚ್ಚವಾಗಿದೆ. ಅದರಿಂದ ಈ ಯೋಜನೆಯ ಪೂರ್ಣ ವಿವರ ಇನ್ನೂ ತಯಾರಾಗಿಲ್ಲ. ದ್ವಿತೀಯ ಯೋಜನೆಯಲ್ಲಿ ಇವರ ಕೆಲಸ ಆರಂಭಿಸಲಾಗ ಪ್ರದಿಲ್ಲ. ಸದ್ಯ ಇಲಾಖೆಯ ಸುನರ್ ಪರಿಶೀಲನೆಯಲ್ಲಿರುವ ಈ ಯೋಜನೆಯನ್ನು ಮೂರನೆ ಪಂಚವರ್ಷಿಕ ಯೋಜನೆಯಲ್ಲಿ ಸೇರಿಸುವ ಪ್ರಶ್ನೆಯನ್ನು ಪರಿಶೀಲಿಸಲಾಗುವುದು ಎಂದು ಸಾರ್ವಜನಿಕ ಕಾಮಗಾರಿ ಮಂತ್ರಿ ಶ್ರೀ ಎಚ್. ಕೆ. ವೀರಣ್ಣ ಗೌಡರು ಮೈಸೂರು ಶಾಸನ ಸಭೆಯಲ್ಲಿ ಕುಂದಾಪುರದ ಶ್ರೀ ವಿ. ಶ್ರೀನಿವಾಸ ಸೆಟ್ಟರ ಪ್ರಶ್ನೆಯೊಂದಕ್ಕೆ ಉತ್ತರವಿತ್ತರು.

ದ. ಕ. ಜಿಲ್ಲಾ ಬೋರ್ಡು ಸಭೆಯು ಇದೇ ತಾ 31ನೇ ಬುಧವಾರ ಅಪರಾಹ್ನ 2 ಗಂಟೆಗೆ ಬೋರ್ಡಿನ ಸಭಾ ಭವನದಲ್ಲಿ ಜರಗಲಿರುವುದಾಗಿ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ತಿಳಿಸುತ್ತಾರೆ.

ಒಂದು ಹೊಸ ಮಹಾ ಕಾದಂಬರಿ

ನಡುಹಗಲಿನ ಕಗ್ಗತ್ತಲೆ

೩ಂಲ ಪುಟಗಳು ಬೆಲೆ 2·50 ರೂಪಾಯಿ

- ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದ ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.
- ರಶಿಯದ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ನೆತ್ತರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ.
- ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.
- ಪ್ರಖ್ಯಾತ ಲೇಖಕ **ಆರ್ಥರ್ ಕೊಸ್ಲರ್** ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು **ಕು. ಶಿ. ಹರಿದಾಸ ಭಟ್ಟರು.**

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ.

(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)

ಗೋ ವಿಜಯ

(ಗೋವಿನ ಕಥೆ)

ಶ್ರೀ ಮುಮ್ಮಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ. ತಮ್ಮಪ್ಪಟ್ಟೆ ತಾವೇ ಕೆತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹೇಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತ. ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0–8–0

ನವಯುಗ ಪ್ರೆಸ್, ಉಡುಪಿ.

ಮುಕ್ತಿ ಮಾರ್ಗ

(೪ನೇ ಪುಟದಿಂದ)

ಕಾಣಲು ಆತುರ ಪಡುತ್ತೇನೆ' ಎಂದು ಭಕ್ತಾಭಿಮಾನಿಗಳಿಗೆ ವಿಶ್ವಾಸನೀಯ-ವಾಗಿ ಆಶ್ವಾಸನೆಯನ್ನಿತ್ತಿರುವನು. ಭಕ್ತಿಯು ಮುಕ್ತಿಗೆ ಮೂಲ ಸಾಧನವೆಂದು ದಾಸ ಪಂಥವೂ ಸಾರುತ್ತಿದೆ. 'ಯದಿ ಭವತಿ ಮುಕುಂದೇ ಭಕ್ತಿರಾನಂದ ಸಾಂದ್ರಾ"

ವಿಲುಠತಿ ಚರಣಾಬ್ಜೇ ಮೋಕ್ಷ ಸಾಮ್ರಾಜ್ಯ ಲಕ್ಷ್ಮೀಃ|| ಉತ್ಕಟ ಭಕ್ತನ ಚರಣ ದಡಿಯಲ್ಲಿ ಮುಕ್ತಿವನಿತೆಯು ಉರುಳಾಡುತ್ತಿರುವಳು ಎಂದು ಭಕ್ತಿಯ ಹಿರಿ ಶಕ್ತಿಯ ಉಲ್ಲೇಖವಿದೆ. 'ಭಕ್ತಿ ಇಲ್ಲದ ಹೊರತು ಮುಕುತಿ ಇಲ್ಲವು' ಎಂದು ವಿಜಯ ದಾಸರು ಭಕ್ತಿ ಯೋಗದ ಪ್ರಭಾವವನ್ನು ಶಾಸನ ಬದ್ಧವಾಗಿ ಕೇಳಿರುವರು. ನಿಷ್ಕಾಮಕರ್ಮದ ಭಕ್ತಿಯಿಂದ ತಮ್ಮ ಸರ್ವಸ್ವವನ್ನೂ ಪರಮಾತ್ಮನಿಗೆ ಅರ್ಪಣ ಮಾಡಿ ನಾವು ಜೀವನ್ಮುಕ್ತರಾಗೋಣ. ಲೌಕಿಕ ವಿಷಯಗಳ ಬಗ್ಗೆ ವಿರಕ್ತನಾಗಿ ನಾವು ನಿತ್ಯನಿರಂತರ ಈಶ್ವರ ಸುಖದತ್ತ ಸಾಗಲಿಚ್ಛಿಸೋಣ ತಾರ್ಯಕೀಯ ಪಾಪಕೃತ್ಯಗಳನ್ನೆಸಗಿ ಕೇವಲ ಬಾಹ್ಯಾಡಂಬರಗಳಿಂದ ಆಚಾರ, ವ್ರತ, ಹರಕೆ, ಹಣ್ಣುಕಾಯಿ ಇವೆಲ್ಲ ಮಾನವನನ್ನು ಪುಣ್ಯ ಪುರುಷನಾಗಿ ಮಾಡಲಾರವು. ವಿವಿಧ ರೀತಿಯ ಪೂಜೆ ಪುರಸ್ಕಾರಗಳಿಂದಲೇ ದೇವರನ್ನೊಲಿಸಿಕೊಳ್ಳುವೆವೆಂಬುದು ಬರೇ ಅಜ್ಞರ ಮತ! ಸ್ವಭಾವತಃ ವಿರಾಗ್ರತೆ, ನಿಸ್ಪೃಹ, ನಿಯಮ, ಸಂಯಮಗಳಿಂದ ಪರಮಾತ್ಮನ ಅದ್ಭುತ ಲೀಲೆಯಲ್ಲೇ ತನ್ಮಯನಾದವನು ನಿಜವಾದ ಭಕ್ತ. ಆತನೇ ಮುಕ್ತನಾಗಲು ಶಕ್ತ!

(ಸಾಭಾರ)

—ಕಡಂದಲೆ, ಜಯರಾಮ ಶೆಟ್ಟಿ.

ಕುಂದಾಪುರದ ಮು- ಕೋರ್ಟಿನಲ್ಲಿ

O. S 115/1957.

ಮೂಲಕ್ಕೆ ಸಿದ್ರಿ ವಾದಿ

1. ಕೃಷ್ಣರಾಯ ಪುಟ್ಟ

2 ,, ಮಂಜ- ಪ್ರತಿವಾದಿರು

ಸದ್ರಿ 3ನೇ ಪ್ರತಿವಾದಿ ಕೃಷ್ಣರಾಯ ಮಂಜ 1ನೇ ಪ್ರತಿವಾದಿ ಕೃಷ್ಣರಾಯ ಪುಟ್ಟನ ಅಳಿಯ ಕುಂದಾಪುರ ತಾಲ್ಲೂಕು ಗುಲವಾಡಿ ಗ್ರಾಮದ ಕೌಕೂರರಲ್ಲಿರುವವ

. ಸದ್ರಿ 2ನೇ ಪ್ರತಿವಾದಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದ್ರೆ

ಪ್ರತಿವಾದಿರು ತಾ 19-10-1952 ರಲ್ಲು ವಾದಿಗೆ ರುಪ್ಯ 600ಕ್ಕೆ ಬರೆಕೊಟ್ಟ ಡಿಮಾಂಡು ನೋಟಿನ ಹಣ, ಬಡ್ಡಿ ಕೂಡ ಲೈಪೇಜುಗಳನ್ನು ಬರವಾಡಿಕೊಳ್ಳುವ ಬಗ್ಗೆ ಬಾಕ್ಸು ಮಾಡಿದ ಮೇಲಿನ ದಾವೆಯು ತಾರೀಕು 25-7-57ಕ್ಕೆ ತನ್ನಾಗೆ ಯಿಟ್ಟಿರುತ್ತಾರೆ ಆಕುರಿತು ಸದ್ರಿ ಪ್ರತಿವಾದಿಯ ಅಕ್ಕೀಪಯೇನಾದರು ಯಿದ್ದರೆ ಮೇಲಿನ ಕೋರ್ಟುಮುಂದೆ ಆ ತಾರೀಕಿನ ಹಗಲು 11ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ಸದ್ರಿ ಪ್ರತಿವಾದಿಯ ಯಕ್ಸ್‌ಪಾರ್ಟಿಯಿಂದ ದಾವೆಯನ್ನು ತೀರ್ಮಾನಿಸಲಾಗುತ್ತದೆಂದು ಸಂಗ್ತಿ ಕೋರ್ಟು ಸುಕುಂ ಪ್ರಕಾರ ಈ ಮೂಲ್ಕ ತಿಳಿಸಲಾಗುತ್ತದೆ

Soorappa Shetty
Kolkebail
Advocate for Pltf

Coondapoor 16-7 1957.

ವಿಜಯ ಬೇಂಕಿನ ಮೈಸೂರು ಶಾಖೆಯನ್ನು ಮಾನ್ಯ ಸಾರ್ವಜನಿಕ ಕಾಮಗಾರಿ ಮಂತ್ರಿ ಯಶ್ ಕೆ ವೀರಣ್ಣಗೌಡರು ಉದ್ಘಾಟನೆ ಮಾಡುವ ಸಂದರ್ಭದಲ್ಲಿ ತೆಗೆದ ಚಿತ್ರ-

ಎಡದಿಂದ ಬಲಕ್ಕೆ —— 1) ಶ್ರೀ ಕೆ ಸದಾಶಿವ ಹೆಗ್ಡೆ, ಯಮ್ ಎ 2) ಶ್ರೀ ಯಸ್ ಬೆನ್ನಯ್ಯ, ಮೈಸೂರು ಪ್ರದೇಶ ಕಾಂಗ್ರೆಸಿನ ಪ್ರೆಸಿಡೆಂಟ್ 3) ಮಾನ್ಯಮಂತ್ರಿ ಯಶ್. ಕೆ ವೀರಣ್ಣಗೌಡ 4, ಶ್ರೀ ಕೆ ಸುಂದರರಾಮ ಶೆಟ್ಟಿ, ಎಡ್ವೋಕೇಟ್. ಬೇಂಕಿನ ಅಧ್ಯಕ್ಷರು.

ಮಂಗಳೂರು

ಸಹಕಾರಿ ಸಂಘಗಳ ಅಸಿಸ್ಟಾಂಟ್ ರಿಜಿಸ್ಟ್ರಾರ್— ದಕ ಜಿಲ್ಲೆಯ ದಕ್ಷಿಣ ವಲಯದ ಸಹಕಾರಿ ಸಂಘಗಳ ಅಸಿಸ್ಟಾಂಟ್ ರಿಜಿಸ್ಟ್ರಾರರಾಗಿ ಮೈಸೂರಿನ ಶ್ರೀ ಕೆ ಶಿವಣ್ಣನವರು ತಾ 10 ರಂದು ಅಧಿಕಾರ ವಹಿಸಿದ್ದರು

ಭಾವಚಿತ್ರ ಅನಾವರಣ ಸಮಾರಂಭ— ಮಂಗಳೂರು ಸಹಕಾರಿ ಹಾಲು ಸರಬರಾಯಿ ಸಂಘದ ಅಧ್ಯಕ್ಷ ಶ್ರೀ ಯು ಕಣ್ಣಪ್ಪನವರ ಭಾವಚಿತ್ರವನ್ನು ಸಂಘದ ಆಫೀಸಿನಲ್ಲಿ ತಾ. 14ರಂದು ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಅನಾವರಣಮಾಡಿದರು ಈ ಸಂದರ್ಭದಲ್ಲಿ ಸಂಘದ ಮೆನೇಜರ್ ಶ್ರೀ ಬಿ ಎಲ್ ಕೋಟೆಕಾರರು, ಸಂಘದ ಸದಸ್ಯರೆ ಪರವಾಗಿ ಶ್ರೀ ಕಣ್ಣಪ್ಪನವರಿಗೆ ಮಾನಪತ್ರ ಅರ್ಪಿಸಿದರು ಸಂಘದ ಡೈರೆಕ್ಟರ್ ಶ್ರೀ ಕೆ ಮನಮೋಹನರು ಸ್ವಾಗತಿಸಿದರು. ಸದಿಕರ ಭಾಷಣಾನಂತರ ಕಾರ್ಯದರ್ಶಿ ಶ್ರೀ ಜೆ ಡಬ್ಲ್ಯು ಸಾಲ್ಡಾನರು ಧನ್ಯವಾದಸಿತ್ತರು.

ನಿಧನ - ಕಾಸರಗೋಡು ತಾಲೂಕಿ ಪ್ರಸಿದ್ಧ ಬಂಟ ಮನೆತನವಾದ ಇಚ್ಲಂಪಾಡಿಯ ಯಜಮಾನರಾದ ಶ್ರೀ ಸಣ್ಣ ಕೋಟ್ಟಿ ಶೆಟ್ಟರು ತಾ 19ರಂದು ರಾತ್ರೆ ಕೊಡಿಯಾಲಬೈಲಿನ ತನ್ನ ಪುತ್ರ ರಾಮಯ್ಯ ಆಳ್ವರ ಗೃಹದಲ್ಲಿ ನಿಧನರಾದರು. ಮರಣ ಕಾಲಕ್ಕೆ ಅವರ ವಯಸ್ಸು ಸುಮಾರು 102ಕ್ಕೂ ಮಿಕ್ಕಿತ್ತು ದಿವಂಗತರಿಗೆ ಇವರದ ಸಾಹಿತ್ಯವಲ್ಲಾ ಆಯುವೇದದಲ್ಲೂ ಆಳವಾದ ಜ್ಞಾನವಿತ್ತು.

ವಿದೇಶೀ ತಜ್ಞರ ಸಮಿತಿಯ ಆಗಮನ— ಭಾರತದಲ್ಲಿ ಎರಡನೆ ಪಂಚವರ್ಷ ಕೇಂದ್ರ ರಚನೆಯ ಸರಿತೀಲನೆಗಾಗಿ ಬರಲಿರುವ ಬ್ರಿಟಿಷ ಹಡಗು ನಿರ್ಮಾಣ ನಿಯೋಗದ ಪ್ರಥಮ ಸಂಗಡದ ಸದಸ್ಯರಾದ ಶ್ರೀ ಜೆ ಮಿಟ್ಟ, ಡಾ. ವಿ. ಡಬ್ಲ್ಯು, ಬ್ಯಾಟ್ ಮತ್ತು ಶ್ರೀ ಆರ್ ಎಸ್ ಸಿ ಇಂಗ್ಲಿಸರು, ಭಾರತ ಸರಕಾರದ ಸಂಚಾರ ಸಂಪರ್ಕಾಧಿಕಾರಿ ಶ್ರೀ ಕೆ. ಎನ್. ಕೂಡೇಶಯ್ಯರವರಿಂದೊಡಗೂಡಿ ಎರಡು ಸ್ಪೆಶಲ್ ವಿಮಾನಗಳ ಮೂಲಕ ತಾ. 21ರಷ್ಟು ಬೆಳಿಗ್ಗೆ ಕೊಚ್ಚಿಯಿಂದ ಮಂಗಳೂರಿಗೆ ಆಗಮಿಸಿದರು ಬಜ್ಪೆ ವಿಮಾನ ನಿಲ್ದಾಣದಲ್ಲಿ ಅವರನ್ನು ಪೋರ್ಟ್ ಟ್ರಸ್ಟಿನ ಅಧ್ಯಕ್ಷ ಶ್ರೀ ಎಚ್ ನರಸಿಂಯ, ಉಪಾಧ್ಯಕ್ಷ ವಿ ಎಸ್ ಕುಟ್ಟಾ, ಪೋರ್ಟ್ ಅಸಿಸ್ಟರ್ ಶ್ರೀ ಎಮ್ ಎಲ್ ಅಪ್ಪಾಸಿ, ಜಿಲ್ಲಾ ವೈದ್ಯಕೀಯ ಆಫೀಸರ್ ಡಾ ಎ ತಿಮ್ಮಪ್ಪಯ್ಯ, ಕುಂದಾಪುರ ಆರ್ ಡಿ ಓ ಶ್ರೀ ಕೆ ಸೂರ್ಯನಾರಾಯಣ ಭಾಗ ಮೊದಲಾದವರು ಸ್ವಾಗತಿಸಿದರು ನಂತರ ಅವರು ಮಂಗಳೂರು ಪೋರ್ಟ್ ಟ್ರಸ್ಟ್ ಕಚೇರಿಗೆ ಭೇಟಿಯಿತ್ತು ಹಡಗು ನಿರ್ಮಾಣ ಕೇಂದ್ರ ರಚನೆಯ ಸಾಧ್ಯಾಸಾಧ್ಯತೆ ಬಗ್ಗೆ ವಿಚಾರವಿನಿಮಯ ನಡೆಸಿದರು ಶ್ರೀಗಳಾದ ಎಮ್ ಎಲ್ ಅಪ್ಪಾಸಿ, ವಿ ಎಸ್ ಕುಟ್ಟಾ ಮತ್ತು ಬಿ ಎಸ್. ಭಾಸ್ಕರ ರೈಗಳು ಹಡಗು ನಿರ್ಮಾಣ ಕೇಂದ್ರ ರಚನೆಗೆ ಬೇಕಾದ ಸವಲತ್ತುಗಳಿರುವುದನ್ನು ವಿವರಿಸಿದರು ಬಳಿಕ ಅಂದರ ಪರಿಶೀಲನೆ ಮಾಡಿದರು ಸಂಜೆ ಬೆಳಗಾವಿಗೆ ಪ್ರಯಾಣ ಬೆಳೆಸಿದರು

ನಗರಸಭೆಯು—ತಾ 15ರಂದು ಸಂಜೆ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು ಅಂದಿನಸಭೆಗೆ ಆಗಮಿಸಿದ ಮೈಸೂರು ರಾಜ್ಯದ ಆರೋಗ್ಯ ಖಾತೆಯ ಡೈರೆಕ್ಟರ್ ಡಾ ವೇಣುಗಿರಿ ರಾಯರು ಮಂಗಳೂರು ನಗರದ ಆರೋಗ್ಯ ಸಮಸ್ಯೆಗಳ ಕುರಿತು ಮಾತನಾಡಿದರು. 'ಅನೇಕ ಕಾಲ ರೋಗವು ಮಂಗಳೂರಿನ ಸಮಸ್ಯೆ ಮಾತ್ರವಲ್ಲ, ಅದು ಪಶ್ಚಿಮ ಕರಾವಳಿಯ ಸಮಸ್ಯೆಯೇ ಆಗಿದೆ. ಕೇಂದ್ರ ಸರಕಾರವು ಇದನ್ನು ನಿವಾರಿಸುವುದಕ್ಕಾಗಿ ಯೋಜನೆಯನ್ನು ಕೈಗೊಂಡಿದೆ ರಾಜ್ಯಸರಕಾರವು ತನ್ನ ಬಲಿನ ಕೆಲಸವನ್ನು ಪೂರೈಸುವುದು, ಎಂದರು ನೀರಿನ ಸರಬರಾಯಿಯ ಕುರಿತು ಮಾತನಾಡುತ್ತಾ, 1958ನ ಮಾರ್ಚಿಯೊಳಗೆ ನೀರಿನ ಪೂರೈಕೆ ಮಾಡುವಂತಾಗುವುದೆಂದರು ನಗರಸಭೆಯು ತಯಾರಿಸಿದ ಭೂಗತ ಚರಂಡಿ ಯೋಜನೆಗಾಗಿ ರಾಜ್ಯಸರಕಾರವು ತನ್ನ ಪಾಲನ್ನು ಕೊಡಬಹುದೆಂದು ಸೂಚಿಸಿದರು ಪಲ್ಲಿಸ್ಟರ್ ಮಾರ್ಕೆಟನಲ್ಲಿ ಶೀತಲೀಕರಣ ಯಂತ್ರ ಏರಿಸಲು ರೂ 10,300 ಮಂಜೂರುಮಾಡಲಾಯಿತು. ಕಂಕನಾಡಿ ಮಾರ್ಕೆಟಿಗಾಗಿ ರಾಜ್ಯ ಸರಕಾರವು ಮಂಜೂರುಮಾಡಿದ ರೂ15,000 ಸಾಲವನ್ನು ಸ್ವೀಕರಿಸಲಾಯಿತು.

ಕೊಯಮುತ್ತೂರು-ತಾ. 7ರಂದು ಉದ್ಘಾಟಿಸಲ್ಪಟ್ಟ ಕೊಯಮುತ್ತೂರು ಕರ್ನಾಟಕ ಸಂಘದ ಮಹಾಸಭೆಯು ಜರಗಿ ಹೊಸಸದಸ್ಯರ್ಕ ಈ ಕೆಳಗಿನವರು ಕಾರ್ಯಕಾರಿ ಸಮಿತಿಗೆ ಆರಿಸಲ್ಪಟ್ಟರು' ಶ್ರೀಗಳಾದ ಎಚ್ ಪಿ. ಕೊಲಾಸೊ (ಅಧ್ಯಕ್ಷ), ಕೆ ಎಸ್. ನಾರಾಯಣ ಭಟ್ಟ ಮತ್ತು ಶ್ರೀಮತಿ ಶಾರದಾ ತಳವಾರ್ (ಉಪಾಧ್ಯಕ್ಷರು), ಹಾ ಸಿ. ವಿ ರಾಮಾಂಜ (ಕಾರ್ಯದರ್ಶಿ), ಸಿ ಬಿ ಎಲ್. ಬಲ್ಲಾಳ್ (ಜತೆ ಕಾರ್ಯದರ್ಶಿ) ಕೆ ಎಮ್ ಎಲ್ ಪೈ (ಕೋಶಾಧಿಕಾರಿ) ಇವರು ಆಯಿ ಆರಿಸಲಾಗಿದ್ದಾರೆ.

Notice

ಉಡುಪಿ ದಿ ಮು ಕೋರ್ಟಿನಲ್ಲಿ

O P No 29/57

ಯು ಲಕ್ಷ್ಮೀನಾರಾಯಣಾಚಾರ್ಯ ಕೂಡ- ಅರ್ಜಿದಾರರು.

ಭಾಮಿನಿಪ್ರಿ ಕೂಡಾ- ಎದ್ರಿರು.

ಯಿವರೊಳಗೆ—

ಸದ್ರಿ ಅರ್ಜಿಯ 3ನೇ ಎದ್ರಿಯ ಜಗನ್ನಾಥ ಶೆಟ್ಟಿ, ದೂಜ ಶೆಟ್ರ ಮಗ ಉಡುಪಿ ತಾಲ್ಲೂಕು ಕುದಿಯಾರುದ ತಂಕರುಬೆಟ್ಟು ಎಂಬಲ್ಲಿ ಯಿವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ

ಮೇಲ್ಕಂಡ ಅರ್ಜಿ ವ್ಯವಹರಣೆಯಲ್ಲಿ ಅರ್ಜಿದಾರರು ತಾ 18-3-1955ನೇ ಬೋಗ್ಯಾದಿ ಈಡು ದಸ್ತಾವೇಜಿನ ಬಾಬ್ತು ರುಪ್ಯಾ 900ನ್ನು ಆದರ 0ಕಸ್ಟೋಡಿಯನ್ಸ್ ಒಗ್ಗೆ ರೂ80- ಕೂಡಾ ರುಪ್ಯಾ 980ನ್ನು ದಿ ಸೋ ಜಿ ಟ್ರ ಮಾಡಿ ಸದ್ರಿ ಭೋಗ್ಯಾದಿ ಮುಲಂಸು ಆಗಿಯುದಾಗಿ ರಿಕಾರ್ಡ್ ಮಾಡಿ ಸದ್ರಿ ಅಸ್ತಿಗಳನ್ನು ಅರ್ಜಿದಾರರ ಬಗ್ಗೆ 3ನೇ ಅರ್ಜಿದಾರರ ವರ ಡೆಲಿವರಿ ಮಾಡಿಸಿಕೊಡಿಸಬೇಕಾಗಿ ಕೇಳಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ 5-8-57ಕ್ಕೆ ನಿಮ್ಮ ಸೋಟೆಸಿಯಬಗ್ಗೆ ಇಟ್ಟಿರುವುದ್ರಿಂದ ನಿಮ್ಮ ಆಕ್ಷೇಪಣೆಯುದ್ದಲ್ಲಿ ಆ ದಿನ್ಸ ನೀವು ಸ್ವತಹಾ ಯ ಪಕೀಲರ ಮುಖಾಂತ್ರ ಹಾಜರಾಗಿ ಜ್ಞಾಪೀಕರ ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ನಂಬ್ರದ ತೀರ್ಮಾನಿಸಲ್ಪಡುವುದು

P. V. Acharya
Vakil for Petitioners.

ಉಡುಪಿ ತಾ. 19-7 1957

ಭಾರತೀಯರ ಆಸ್ತಿ

ಭಾರತದ ಸ್ಟೇಟ್ ಬೇಂಕ್ ರಾಷ್ಟ್ರಪುನಾರಚನೆಗೆ ನೆರವಾಗುತ್ತಿದೆ!

೧೯೫೫ ಜುಲೈ ೧೯ನೆ ತಾರೀಕಿಗೆ ಮೊದಲು ಇಂಪೀರಿಯಲ್ ಬೇಂಕ್ ಆಫ್ ಇಂಡಿಯಾ ಎಂಬ ಹೆಸರಿನ ಬೇಂಕೊಂದು ಭಾರತದಾದ್ಯಂತ ತನ್ನ ಶಾಖೆಗಳನ್ನು ಹರಡಿ ಭಾರತೀಯರಿಗೆ ಅತ್ಯಮೂಲ್ಯ ಬೇಂಕಿಂಗ್ ಸೇವೆಯನ್ನು ಒದಗಿಸುತಿತ್ತು. ಇದು ೧೯-೭-೧೯೫೫ರಂದು ರಾಷ್ಟ್ರೀಕರಿಸಲ್ಪಟ್ಟು ಆ ದಿನದಿಂದ ಸ್ಟೇಟ್ ಬೇಂಕ್ ಆಫ್ ಇಂಡಿಯಾ ಎಂಬ ಹೆಸರನ್ನು ಪಡೆಯಿತು.

ಈ ಬೇಂಕಿನ ಆಡಳಿತವು ಒಂದು ಕೇಂದ್ರಮಂಡಳದ ಅಧೀನವಿದೆ. ಇದರಲ್ಲಿ ರಿಸರ್ವ್ ಬೇಂಕಿನೊಡನೆ ಸಮಾಲೋಚನೆ ನಡೆಯಿಸಿ ಕೇಂದ್ರ ಮಂಡಲಿಯಿಂದ ನೇಮಿಸಲಾದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು; ಶೇರುದಾರರಿಂದ ಚುನಾಯಿತರಾದ ಆರು ಮಂದಿ ಡೈರೆಕ್ಟರರು, ಕೇಂದ್ರ ಸರಕಾರದಿಂದ ನಾಮಕರಣ ಮಾಡಲ್ಪಟ್ಟ ಪ್ರಾದೇಶಿಕ ಹಾಗೂ ಆರ್ಥಿಕ ಆಸಕ್ತಿಯುಳ್ಳ ಸಂಸ್ಥೆಗಳನ್ನು ಪ್ರತಿನಿಧೀಕರಿಸುವ ಒಂದು ಮಂದಿ ಡೈರೆಕ್ಟರರು ಮತ್ತು ಕೇಂದ್ರ ಸರಕಾರ ಮತ್ತು ರಿಸರ್ವ ಬೇಂಕಿನಿಂದ ನಾಮಕರಣ ಮಾಡಲ್ಪಟ್ಟ ಒಬ್ಬೊಬ್ಬ ಡೈರೆಕ್ಟರರಿರುವರು.

ಐದು ವರ್ಷಗಳ ಅವಧಿಯಲ್ಲಿ ಅಥವಾ ಕೇಂದ್ರ ಸರಕಾರವು ನಿಗದಿ ಮಾಡಬಹುದಾದ ಅಂತಹ ಹೆಚ್ಚಿನ ಅವಧಿಯಲ್ಲಿ ಭಾರತದಲ್ಲಿ ೪೦೦ ಶಾಖೆಗಳನ್ನು ತೆರೆಯುವ ಉದ್ದೇಶವನ್ನಿಟ್ಟುಕೊಂಡು, ಈ ಬೇಂಕು ಇದಕ್ಕಾಗಿ ೨೩೪ ಕೇಂದ್ರಗಳ ಒಂದು ಪಟ್ಟಿಯನ್ನು ಸಿದ್ಧಗೊಳಿಸಿದೆ. ೧೯೫೬ ರ ಕೊನೆಯ ವರೆಗೆ ೬೬ ಹೊಸ ಶಾಖೆಗಳನ್ನು ಈ ಬೇಂಕು ತೆರೆದಿದೆ.

ಈ ಬೇಂಕ್ ೨೦ ಕೋಟಿ ರೂಪಾಯಿಗಳ ಅಧಿಕೃತ ಬಂಡವಾಳವನ್ನೂ ೫ ಕೋಟಿ ರೂಪಾಯಿಗಳ ಚಾಲ್ತಿ ಬಂಡವಾಳವನ್ನೂ ಕೂಡಿಕೊಂಡಿದೆ. ಇಂಪೀರಿಯಲ್ ಬೇಂಕು ನಡೆಸುತ್ತಿದ್ದಂತೆಯೇ ಈ ಬೇಂಕು ಸಹ ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯಗಳಿಗೆ ಸಾಲಗಳನ್ನೊದಗಿಸುವ ಸೌಲಭ್ಯಗಳನ್ನು ಮುಂದುವರಿಸುತ್ತಿದೆ.

೧೯೫೫-೫೬ರ ಸೆಪ್ಟೆಂಬರ ಕಾಲದಲ್ಲಿ ೧೮೫.೦ ಕೋಟಿ ರೂಪಾಯಿಗಳಷ್ಟು ಸಾಲವನ್ನೊದಗಿಸಲಾಗಿತ್ತು. ೧೯೫೪-೫೫ ರಲ್ಲಿ ಈ ಮೊಬಲಗು ೧೧೨.೬ ಕೋಟಿ ರೂಪಾಯಿಗಳನ್ನಾಗಿತ್ತು. ಪ್ರಚಲಿತ ೧೯೫೬-೫೭ರ ಸೆಪ್ಟೆಂಬರ ಕಾಲದ ಆವಶ್ಯಕತೆಗಳು ಮತ್ತಷ್ಟು ಹೆಚ್ಚು ಪ್ರಮಾಣದಲ್ಲಿದ್ದವು. ೧೯೫೬ ನವೆಂಬರ ೧೬ರಂದು ಕೆಡ್ಯೂಲ್ ಬೇಂಕುಗಳ ಮುಂಗಡಹಣವು ರೂ. ೩೬೧೫ ಕೋಟಿ ರೂಪಾಯಿಗಳಷ್ಟಿದ್ದುದು, ೧೯೫೫ರ ಫೆಬ್ರವರಿ ೧೫ರಂದು ೮೬೨-೮೨ ಕೋಟಿ ರೂಪಾಯಿಗಳಿಗೆ ಏರಿದೆ.

ಭಾರತದಲ್ಲಿ ಬೇಂಕಿಂಗ್ ಸೌಲಭ್ಯಗಳನ್ನು ದೇಶದ ಎಲ್ಲ ಮೂಲೆಗಳಿಗೂ ಹರಡಿಸಿ, ಉಳಿತಾಯದ ಯೋಜನೆಗೆ ಪ್ರೋತ್ಸಾಹವನ್ನೀಯುವುದು, ದೇಶದ ಬೆನ್ನೆಲುಬಾದ ರೈತರಿಗೆ ಸಾಲದ ಸೌಕರ್ಯವನ್ನೊದಗಿಸಿ, ಅವರನ್ನುದ್ಧರಿಸುವುದು ರಾಷ್ಟ್ರ ಪುನಾರಚನೆಗೆ ಹೆಚ್ಚು ಸಹಾಯವಾಗಬಲ್ಲುದು. ಇದಕ್ಕಾಗಿ ಭಾರತದ ಸಾಮಾನ್ಯ ನಗರಗಳೆಲ್ಲವುಗಳಲ್ಲಿಯೂ ಶಾಖೆಗಳನ್ನು ಪಡೆದ ಪ್ರಬುದ್ಧ ಬೇಂಕನ್ನು ಕೇಂದ್ರ ಸರಕಾರವು ತನ್ನ ವಶಮಾಡಿಕೊಳ್ಳಲು ಹವಣಿಸಿತ್ತು; ಅದರಂತೆಯೇ ರಾಷ್ಟ್ರೀಕರಣಮಾಡಿತು. ದೇಶದ ಎಲ್ಲ ಮುಖ್ಯ ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಇದರ ಶಾಖೆಗಳು ಸ್ಥಾಪಿಸಲ್ಪಟ್ಟು ರಾಷ್ಟ್ರದ ಪ್ರಗತಿಕಾರ್ಯದಲ್ಲಿ ಇದು ಸಲ್ಲಿಸುತ್ತಿರುವ, ಸಲ್ಲಿಸಬೇಕಾದ ಸೇವೆಯು ಅತ್ಯಮೂಲ್ಯವಾಗಿದೆ.

೧೯೫೮ರಲ್ಲಿ, ಸ್ಥಾಪನೆಗೊಂಡ ತಾರುಣ್ಯದಲ್ಲಿಯೇ ಭಾರತದ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಪರಿಷತ್ತು ವಿವಿಧ ಪ್ರಾಯೋಗಿಕ ಸಂಶೋಧನಾ ಕ್ಷೇತ್ರಗಳಿಗೆ ಮೀಸಲಾದ ಪ್ರಯೋಗಮಂದಿರಗಳ ಜಾಲಬಂಧಗಳನ್ನು ಕಲ್ಪಿಸುವ ಉದ್ದೇಶದಿಂದ ಕೂಡಿತ್ತು. ಸ್ವಾತಂತ್ರ್ಯಾನಂತರ, ಇದಕ್ಕೆ ಉತ್ತಮ ವಾತಾವರಣವು ಮೊದಲಿಗೆ ಇಂದು ೧೬ ರಾಷ್ಟ್ರೀಯ ಪ್ರಯೋಗ ಮಂದಿರಗಳು ಭಾರತದಲ್ಲಿ ಸಂಶೋಧನೆಯ ಕಾರ್ಯಗಳಲ್ಲಿ ಆಸಕ್ತವಾಗಿವೆ. ಪ್ರಥಮ ಪಂಚವಾರ್ಷಿಕ ಯೋಜನಾವಧಿಯಲ್ಲಿ ಪ್ರಯೋಗಮಂದಿರಗಳ ನಿರ್ಮಾಣದತ್ತೆಗೆ ಆಸಕ್ತಿಯಿತ್ತಿದ್ದು, ಇದೀಗ ದ್ವಿತೀಯ ಯೋಜನಾಕಾಲದಲ್ಲಿ ಮಂದಿರಗಳಲ್ಲಿನ ಸೌಲಭ್ಯಗಳ ಅಭಿವೃದ್ಧಿ, ರಾಷ್ಟ್ರೀಯ ಅಭಿವೃದ್ಧಿಯ ವಿವಿಧ ಕ್ಷೇತ್ರಗಳಿಗೂ ಈ ಪ್ರಯೋಗ ಮಂದಿರಗಳಿಗೂ ನಿಕಟ ಸಂಬಂಧವನ್ನು ಕಲ್ಪಿಸುವುದನ್ನು ಗುರಿಯಾಗಿಟ್ಟುಕೊಳ್ಳಲಾಗಿದೆ. ವೈಜ್ಞಾನಿಕ ಸಂಶೋಧನೆಯ ಫಲಗಳನ್ನು ಭಾರತದ ಗ್ರಾಮಗಳಿಗೊಯ್ಯುವ ಸಲುವಾಗಿ ೧೯೫೦ರಿಂದ ೧೯೫೨ ವರೆಗೆ ದೇಶದ ವಿವಿಧ ಎಡೆಗಳಲ್ಲಿ ವಿಜ್ಞಾನ ಮಂದಿರಗಳನ್ನು ಸ್ಥಾಪಿಸಲಾಗುವುದು. ಈ ವಿಜ್ಞಾನ ಮಂದಿರಗಳಲ್ಲಿ ವ್ಯವಸಾಯ, ಆರೋಗ್ಯ, ಸ್ವೈರ್ಯ ಮೊದಲಾದ ವಿಚಾರಗಳಲ್ಲಿ ಗ್ರಾಮವಾಸಿಗಳಿಗೆ ವೈಜ್ಞಾನಿಕ ತಿಳುವಳಿಕೆಯನ್ನೀಯಲಾಗುವುದು. ಮೇಲಿನ ಚಿತ್ರದಲ್ಲಿ ಸಂಶೋಧನಾ ವಿಚಾರಗಳಿದ ಐದು ದೃಶ್ಯಗಳನ್ನು ನೋಡಬಹುದು.

ದೃಶ್ಯ ೧. ನವದೆಹಲಿಯಲ್ಲಿನ ರಾಷ್ಟ್ರೀಯ ಭೌತರಾಸ್ತ್ರ ಪ್ರಯೋಗ ಮಂದಿರದ ದೂರದ ನೋಟವೊಂದು

ದೃಶ್ಯ ೨. ಈ ವರ್ಷದ ಜನವರಿಯಲ್ಲಿ ಮುಕ್ತವಾಗಿ ಉದ್ಘಾಟಿತವಾದ ಟ್ರಾಂಬೆಯ ಆಣುಶಕ್ತಿಕೇಂದ್ರದ ಒಂದು ದೃಶ್ಯ.

ದೃಶ್ಯ ೩. ಹೈದರಾಬಾದಿನ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಕೇಂದ್ರದಲ್ಲಿ ಹೊಸತಾಗಿ ಪ್ರತಿಷ್ಠಾಪಿಸಲಾದ ಟೆಟ್ರೆಂಟಾಯಿನ್ ಸಂಶೋಧನಾ ಯಂತ್ರವೊಂದನ್ನು ಸರಿಪಡಿಸುತ್ತಿರುವುದು.

ದೃಶ್ಯ ೪. ಮೈಸೂರಿನ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯ ರಾಸಾಯನಿಕ ಶಾಸ್ತ್ರ ಪ್ರಯೋಗಶಾಲೆಯ ಒಳನೋಟವೊಂದು.

ದೃಶ್ಯ ೫. ಪೂನಾದಲ್ಲಿನ ರಾಷ್ಟ್ರೀಯ ರಾಸಾಯನಿಕ ಪ್ರಯೋಗಮಂದಿರದ ರೇಡಿಯೋ ಆಕ್ಟಿವ್ ಟ್ರೇಸಿಂಗ್ ವಿಭಾಗದ ಅಂತರ್ದೃಶ್ಯವೊಂದು.

ಮಲೆನಾಡ ಮುನ್ನಡೆ

(೩ನೇ ಪುಟದಿಂದ)

ದಿನ ಅಭಿವೃದ್ಧಿಗೂ ಸಹಾಯಕವಾಗುವುದು. ಈ ಕ್ಷೇತ್ರದ ಸಂಪದ್ಯುಕ್ತ ಅರಣ್ಯದ ಪೂರ್ಣ ಪ್ರಯೋಜನವನ್ನು ಮಾನವಕಲ್ಯಾಣಾರ್ಥವಾಗಿ ಪಡೆಯಬಹುದು. ಅಗ್ಗದ ದರದಲ್ಲಿ ವಿದ್ಯುಚ್ಛಕ್ತಿ ವಿಪುಲವಾಗಿ ದೊರೆಯುವುದರಿಂದ, ಹೊಸ ಹೊಸ ಕೈಗಾರಿಕೆಗಳನ್ನು ಆ ಕ್ಷೇತ್ರದಲ್ಲಿ ಸ್ಥಾಪಿಸಬಹುದು. ಈ ಕ್ಷೇತ್ರದಲ್ಲಿ ನೈಸರ್ಗಿಕ ಸಾಧನ ಸಂಪತ್ತೂ ಹೇರಳವಾಗಿರುವುದು. ಇದುವರೆಗೂ ಅಲಕ್ಷ್ಯಕ್ಕೆ ಗುರಿಯಾಗಿದ್ದ ಕಾರವಾರ, ಮಲ್ಪೆಗಳಂತಹ ಬಂದರುಗಳನ್ನು ಪ್ರಮುಖ ಬಂದರುಗಳನ್ನಾಗಿ ಅಭಿವೃದ್ಧಿ ಪಡಿಸಬಹುದು; ಈ ಬಂದರುಗಳೊಂದರಲ್ಲಿ ನೌಕಾಂಗಣವನ್ನೂ ನಿರ್ಮಿಸಬಹುದು.

ಎಚ್. ವಿ. ನಾರಾಯಣ ರಾವ್,
ಶರಾವತಿ ಕಡೆಯ ಯೋಜನೆಯ ಜನರಲ್ ಸುಪರಿಂಟೆಂಡೆಂಟ್.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳಿ ರಾಮಸ್ವಾಮಿ ಅಯ್ಯಂಗಾರವರ ರತ್ನದ್ವಯಗಳು

ಟ್ರೇಡ್ ಮಾರ್ಕ್

ಪಂ|| A. R. ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹುಷ್ಟೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅಶ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, **ಸಪುಂಸಕತೆಯನ್ನು** ನಾಮಾವಶೇಷಗೊಳಿಸುತ್ತವೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ. ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 1 ಆಣೆ (25 N. P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ಯಾಟಲಾಗ್ ರವಾನೆ.

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ, (ನ ಯು)
628, "ಸಂತಾನ ಸಿಂದೂರ ಸದನ", ಚಾಮರಾಜ ರೋಡ್, ಮೈಸೂರು-1 (S.I.

ಮಕ್ಕಳ ಮಗ್ಗಿಪುಸ್ತಕ

(ನಯೀ ಪೈಸೆ ಕೊಟ್ಟಕ ಸಹಿತ)

1 ರಿಂದ 1 0 0
ಬೆಲೆ 1ಕ್ಕೆ 0 1 0

ನವಯುಗ ಪ್ರೆಸ್, ಉಡುಪಿ.

ನಿರುದ್ಯೋಗ ಸಮಸ್ಯೆ

(೨೫ ಪುಟದಿಂದ)

ರಳವ ಮುಖ್ಯಮಂತ್ರಿಯವರು ಪ್ರತ್ಯಾಹ್ವಾನವನ್ನೇ ಕೊಟ್ಟರೆನ್ನಿ ಹೇಗಿದ್ದರೂ ಭಾರತೀಯರ ಈ ಸಮಸ್ಯೆ ಮೂಲಭೂತವಾಗಿದ್ದು ಇದು ಬಗೆಹರಿಯದೆ ನಮ್ಮ ಕ್ರಾಂತಿಯ ಕಾರ್ಯಕ್ರಮಗಳು ಮುನ್ನಡೆಯುವುದಸಾಧ್ಯ. ನಮ್ಮ ಯೋಜನೆಗಳು ಕೆಲಮಟ್ಟಿಗೆ ಮುಂದುವರಿದರೂ ಅವು ಸಂಪೂರ್ಣ ಪ್ರಯೋಜನಕಾರಿಯಾಗದ ಹೋದರೆ ಸಮಾಜವಾದಿ ರಾಷ್ಟ್ರ ನಿರ್ಮಾಣವಾಗುವುದೂ ಅಸಂಭವ. ಮೊದಲೇ ಮಸಕುಮಸಕಾಗಿರುವ ನಮ್ಮ ಯೋಜನಾ ಜ್ಯೋತಿಗಳು ನಂದಿಹೋಗಿ ಕ್ರಾಂತಿಯ ಸ್ಥಾನವನ್ನು ಅರಾಜಕತೆ ಮತ್ತು ಲಂಚಗೂಲಿತನಗಳು ಆಕ್ರಮಿಸುವುವು

ಓದುಬರಹ ಕಲಿತವರ ನಿರುದ್ಯೋಗ ಸಮಸ್ಯೆಯು ನಂಬು ತಿಳಿದುಕೊಂಡಷ್ಟು ಕಠಿಣವಲ್ಲ. ಈ ದಿನಗಳಲ್ಲಿ ವಿದ್ಯಾಪ್ರಸಾರ ಕಾರ್ಯವು ಭರದಿಂದ ನಡೆಯುತಿದ್ದು ನಮ್ಮ ಶಾಲೆ, ಕಾಲೇಜುಗಳಿಂದ ಲಕ್ಷಾಂತರ ಯುವಕರು ಪ್ರತಿವರ್ಷ ಹೊರಬರುತ್ತಿರುವರು. ಲೇಖನಿಯ ಕಾರ್ಯವನ್ನೇ ಇವರೆಲ್ಲರಿಗೂ ಕೊಡುವುದು ಅಸಾಧ್ಯ. ಯಾರು ಈ ತರದ ಕೆಲಸವನ್ನಿತ್ತು ಈ ದೊಡ್ಡ ಸಮಸ್ಯೆಯನ್ನು ಪರಿಹರಿಸಬಹುದೆಂದು ನಂಬಿರುವರೋ ಅಂದವರು ಈ ಸಮಸ್ಯೆಯನ್ನು ಅಭ್ಯಾಸಮಾಡಲೇ ಇಲ್ಲವೆನ್ನಬೇಕು. ಈ ಓದಿದ ನವಯುವಕರನ್ನು ಲೇಖನಿಯ ಕೆಲಸದಿಂದ ತಪ್ಪಿಸಿ ಕೈಯ ಕೆಲಸಗಳಿಗೆ ಹೆಚ್ಚುವಂತೆ ಮಾಡಿದಲ್ಲಿ, ಲೇಖನಿಯ ಕರ್ಮಚಾರಿಗಳಿಷ್ಟೇ ಸಂಖ್ಯೆಯವು ಹೆಚ್ಚುಕರ್ಮಚಾರಿಗಳಿಗೆ ದೊರೆಯುವ ವಾತಾವರಣವನ್ನು ನಿರ್ಮಾಣಮಾಡಿದಲ್ಲಿ, ನಿರುದ್ಯೋಗ ಸಮಸ್ಯೆಯೇ ಉಳಿಯುವುದಿಲ್ಲವನ್ನಬಹುದು. ದೌರ್ಭಾಗ್ಯವಶದಿಂದ, ಕಾಯಕಕಷ್ಟಮಾಡಿ ಜೀವಿಸುವವನ ಮಂಯ್ಯದೆಯ ನಮ್ಮ ದೇಶದಲ್ಲಿ ತೀರಾ ಅಧೋಗತಿಗಿಳಿದಿದೆ. ಕೂಲಿಂಬುವವನನ್ನು ಉಚ್ಚ ಸ್ಥಾನಮಾನವನ್ನು ತ್ತೇವೆ. ಇಂತಹ ಕೊಳಕು ವಾತಾವರಣವು ತಮ್ಮ ಸುತ್ತುವರಿದಿರುವಾಗ, ನಮ್ಮ ವಿದ್ಯಾವಂತ ಯುವಕರು ಅವಿದ್ಯಾವಂತರೊಡನೆ ಗದ್ದೆ, ತೋಟ, ಕಾರಖಾನೆಗಳಲ್ಲಿ ದುಡಿಯಲು ಸಿದ್ಧರಾಗಬೇಕೆಂದು ನುಡಿದರೆ, ಆ ಮಾತು ನಿಷ್ಫಲವಾಗುವುದು ಹೀಗಿರುವುದಕ್ಕಿಂತ ಹೆಸರು ಸಾಯುವುದೇ ಶ್ರೇಯಸ್ಕರವೆಂದವರು ಭಾವಿಸಿದರೆ ತಪ್ಪಿಲ್ಲ. ಗೌರವ ಮತ್ತು ದೇಶಭಕ್ತಿ ಪ್ರಚೋದಕ ಕಾರ್ಯಗಳಿದ್ದರೆ ಅವನ್ನವರು ಆತ್ಮಸಂತೋಷದಿಂದಲೇ ಮಾಡಲು ಮುಂದಬರುತ್ತಾರೆ

ಇದಕ್ಕಾಗಿ ಭಾರತೀಯ ಸ್ವಯಂಸೇವಕ ಸೇನೆಯೊಂದನ್ನು ಸ್ಥಾಪಿಸಿ ಅದರಲ್ಲಿ ಹೈಸ್ಕೂಲ್ ತರಗತಿಯಿಂದ ಎಂ ಎ ತರಗತಿವರೆಗೆ ಪಾಸಾದ ವಿದ್ಯಾರ್ಥಿಗಳಿಗೆ ಅವರವರ ವಿದ್ಯಾಯೋಗ್ಯತಾನುಸಾರ ಪ್ರವೇಶಕೊಡಬೇಕು. ಅದರಲ್ಲಿ ಯಾವ ಕಾರಣದಿಂದಲೂ ಅವಿದ್ಯಾವಂತರಿಗೆ ಎಡೆ ದೊರೆಯಬಾರದು. ಈ ಸೇನೆಯಲ್ಲಿ ಮೂರು ಶ್ರೇಣಿಗಳಿರಬೇಕು. ಪ್ರಥಮ ಶ್ರೇಣಿಯಲ್ಲಿ ಪಧವೀಧರರು, ದ್ವಿತೀಯ ಶ್ರೇಣಿಯಲ್ಲಿ ಇಂಟರ್ ಮೀಡಿಯೆಟ್ ಮತ್ತದರ ಸಮಕಕ್ಷೆಯ ಯೋಗ್ಯತಾವಂತ ವಿದ್ಯಾರ್ಥಿಗಳು ಮತ್ತು ಮೂರನೆಯದರಲ್ಲಿ ಪ್ರೌಢ ಶಾಲೆಯಲ್ಲಿ ತೀರ್ಗಡೆ ಹೊಂದಿದವರನ್ನು ಸೇರಿಸಿಕೊಳ್ಳಬೇಕು. ಪ್ರಥಮ ಶ್ರೇಣಿಯವರಿಗೆ ತಿಂಗಳಿಗೆ ಸುಮಾರು ಒಂದು ನೂರು ರೂಪಾಯಿಗಳ ಪುರಸ್ಕಾರವನ್ನೀಯಬೇಕು, ಹಾಗಯೇ ದ್ವಿತೀಯ ಶ್ರೇಣಿಯವರಿಗೆ ಎಂಭತ್ತು, ತೃತೀಯ ಶ್ರೇಣಿಯವರಿಗೆ ಅರುವತ್ತು ರೂಪಾಯಿಗಳನ್ನು ಕೊಡಬೇಕು. ಇವರೆಲ್ಲರನ್ನೂ ಮಾರ್ಗ, ಅಣೆಕಟ್ಟು, ಕಾರಖಾನೆ ಮೊದಲಾದ ಅರಿಸಿದ ಕಾರ್ಯಗಳಿಗೆ ಕಳುಹಿಸಬೇಕು. ಅವರನ್ನು ಅವರೇ ಅರಿಸಿದ ನಾಯಕರ ಸೇತೃತ್ವದಲ್ಲಿ ಪಂಗಡಗಳಾಗಿ ಬಿಟ್ಟುಬಿಡಬಹುದು. ಉತ್ತಮ ರೀತಿಯಲ್ಲಿ ಕೆಲಸ ಮಾಡುವ ಪಂಗಡಕ್ಕೆ ಧ್ವಜ, ಗುರಾಣಿ ಮೊದಲಾದ ಬಹುಮಾನಗಳನ್ನೂ ಕೊಡಬಹುದು. ತಾವು ರಾಷ್ಟ್ರನಿರ್ಮಾಣದ ಶ್ರೇಷ್ಠ ಕಾರ್ಯದಲ್ಲಿ ತೊಡಗಿರುವರೆಂಬ ಭಾವನೆಯು ಹುಟ್ಟುವಂತೆ ಸಾಮಾಜಿಕ ಉತ್ಸವದ ವೇಳೆ ಅವರಿಗೆ ಯೋಗ್ಯ ಗೌರವವು ಈಯಲ್ಪಡಬೇಕು. ತಮ್ಮ ಕೆಲಸವನ್ನು ಪೂರಯಿಸಿದನಂತರ ಅವರು ತಂತಮ್ಮ ಅಭಿರುಚಿಗನುಸಾರವಾಗಿ ನಾಟಕ, ಆಟ, ಸಾಹಿತ್ಯ ಸಂಬಂಧಿ ಕ್ಲಬ್‌ಗಳಲ್ಲಿ ಭಾಗವಹಿಸಬಹುದು. ಹೀಗೆ ಮಾಡುವುದರಿಂದ ಅವರ ಶಿಕ್ಷಣವೂ ಗುಡ್ಡಹತ್ತುವುದಿಲ್ಲ

ಕೇಂದ್ರ ಹಾಗೂ ರಾಜ್ಯಸರಕಾರಗಳು ಕಡಿಮೆಯೆಂದರೆ ಮೂರು ವರ್ಷವಾದರೂ ಈ ಸೇನೆಯಲ್ಲಿ ಸೇವೆಸಲ್ಲಿಸಿದುವವನಿಗೆ ಸರಕಾರಿ ಕೆಲಸವನ್ನು ಕೊಡಲಾಗದೆಂದು ಕಾನೂನು ಮಾಡಬೇಕು. ಈ ಸೇನೆಯಲ್ಲಿ ಸಂಪೂರ್ಣ ಮೂರು ವರ್ಷ ಕೆಲಸಮಾಡಿದವರನ್ನೇ ಆರಿಸಿ ಸರಕಾರಿ ಕೆಲಸಗಳಿಗೆ ಹಚ್ಚಬೇಕು. ವಯೆ ಇಮಿತಿಯನ್ನೂ ಅವರು ಸೇನೆಯಲ್ಲಿ ಸೇವೆಸಲ್ಲಿಸಿದವರ್ಷಗಳಿಗೆ ವಿನಾಯಿತಿಮಾಡಬೇಕು

ಇದರ ಪರಿಣಾಮವಾಗಿ ಸರಕಾರಿ ಉದ್ಯೋಗಾಭಿಲಾಷಿಗಳಾದ ಶ್ರೀಮಂತರ ಬಡವರ ಮಕ್ಕಳೆಲ್ಲರೂ ಒಂದುಸೇರಿ, ನಾ ಚುಗೆಯನ್ನು ಮರೆತು ಬಿಡುವರ್ತಾರೆ. ಪ್ರಾಚೀನ ಭಾರತದಲ್ಲಿ ರಾಜಕುಮಾರನಾಗಿದ್ದರೂ ಗುರುಕುಲದಲ್ಲಿ ತನ್ನ ಸಹಾಧ್ಯಾಯಿಗಳೊಡನೆ ಕಟ್ಟಿಗೆಯೊಡೆಯುವುದು, ಬಟ್ಟೆ ಒಗೆಯುವುದ, ಭಿಕ್ಷೆ ಬೇಡುವುದು ಮುಂತಾದ ಕೆಲಸಗಳಲ್ಲಿ ಭಾಗವಹಿಸುತಿದ್ದಂತೆ ನಮ್ಮ ಕಾಲದಲ್ಲಿಯೂ ಭೇದಭಾವರಹಿತರಾಗಿ ರಸ್ತೆ ಕಡಿಯಲ್ಲಿ ಕಟ್ಟೆಕಟ್ಟಲಿ, ಕಾರಖಾನೆಗಳಲ್ಲಿ ಕೆಲಸ ಮಾಡಲಿ ಭವನ ನಿರ್ಮಿಸಲಿ ಆಗ ಅವರ ಆತ್ಮವಿಶ್ವಾಸವು ಬೆಳೆದು ಸಮಾಜವಾದವು ಅವರ ಕಣ್ಣೆದುರು ಕಾಣಿಯುತ್ತದೆ. ತಂತಮ್ಮಲ್ಲಿ ಕೃಷ್ಣ—ಸುಧಾಮರ ಸಂಬಂಧವನ್ನು ಏರ್ಪಡಿಸಿಕೊಳ್ಳುವರು. ಶ್ರಮ ಮಾಡುವುದು ಮರ್ಯಾದೆಯ ಕೆಲಸವೆಂದವರು ತಿಳಿದುಕೊಳ್ಳುವರು. ಅವರನ್ನು ನೋಡಿ ಇತರರೂ ಶ್ರಮದಾನದ ಮಹತ್ವವನ್ನರಿಯುವರು. ಈ ಸೇನೆಯಿಂದ ಹೊರಬರುವ ಅಧಿಕಾರಿಯು ಈಗಿನ ಅಧಿಕಾರಿಗಿಂತ ಅಧಿಕ ಉದ್ಯಮಿ, ನಂಬಿಗಸ್ಥ, ಜನ ಹಿತೈಷಿ, ಅನುರಿಸಿತ ಮತ್ತು ಯೋಗ್ಯನೆಂಬುದು ನಿಶ್ಚಯ. ನವಯುವಕರ ಆರೋಗ್ಯದ ಮೇಲೆಯೂ ಇದರ ಪ್ರಭಾವವು ಬೀಳುವುದು. ಕೆಲವೇ ವರ್ಷಗಳಲ್ಲಿ ದೇಶದಲ್ಲಿ ಸಮಾಜವಾದ ಸ್ಥಾಪನೆ ಮಾಡುವ ನಮ್ಮ ಸ್ವಪ್ನವು ನನಸಾಗುವುದು. ಇಂದು ನಮ್ಮ ವಿಶ್ವವಿದ್ಯಾಲಯಗಳಲ್ಲಿ ಕಂಡುಬರುವ ಅನುಶಾಸನ ಹೀನತೆಯೂ ನಾಶವಾಗುವುದು

ಈ ಯೋಜನೆಗೆ ಬೇಕಾದ ಹಣದ ಪ್ರಶ್ನೆಯು ಈಗ ಹುಟ್ಟುತ್ತದೆ. ಆರ್ಥಿಕ ಪರಿಸ್ಥಿತಿಯು ಉತ್ತಮವಿರುವ ವಿದ್ಯಾರ್ಥಿಗಳಿಗೆ ಈ ಸೇನೆಯಲ್ಲಿ ಪ್ರವೇಶವೇಯುವ ಅಗತ್ಯವಿಲ್ಲ. ಸರಕಾರೇತರ ಸಂಸ್ಥಗಳಲ್ಲಿ ಮಿಲ್ಲುಗಳಲ್ಲಿ, ಕಾರಖಾನೆಗಳಲ್ಲಿ ಯಾರಿಗೆ ಕೆಲಸ ದೊರೆಯುವುದೋ, ಅವರನ್ನೂ ಬಿಟ್ಟು ಬಿಡುವಂತೆ ಹೀಗೆ ಮಾಡಿದರೆ ಈ ಸೇನೆಯಲ್ಲಿ ಹತ್ತುಲಕ್ಷ ಜನರು ಸೇರಿಕೊಳ್ಳಬಹುದೆಂದು ಅಂದಾಜುಮಾಡಬಹುದು. ಇವರಲ್ಲಿ ಎರಡು ಮೂರನೆಯ ಗದಷ್ಟು ಹೈಸ್ಕೂಲ್ ಪಾಸಾದವರಾಗುವರು. ಆಗ, ನೈಸಿಕರ ಪುರಸ್ಕಾರ ಮತ್ತು ಕರ್ಚು ಒಬ್ಬನಿಗೆ ಸರಾಸರಿ ರೂ. ೧೦೦ ಕ್ಕಿಂತ ಹೆಚ್ಚುಗಲಾರದು. ಹೀಗೆ ಒಂದು ವರ್ಷದ ಹೆಚ್ಚು ೧೦೦ ಕೋಟಿ ರೂಪಾಯಿಗಳಾಗುತ್ತವೆ. ಅವರು ಮಾಡುವ ಕೆಲಸಗಳು ಸಾಧಾರಣ ಕೂಲಿಗಳಲ್ಲಿ ಸಹ ರೂ ೫೦ಕ್ಕಿಂತ ಕಡಿಮೆಯಲ್ಲಿ ಕೆಲಸವಾಗುವುದಿಲ್ಲ. ಹಾಗಿರುವಾಗ ಈ ಯೋಜನೆಯನ್ನೆಯ ಒಬ್ಬ ವ್ಯಕ್ತಿಗೆ ರೂ ೫೦ ಹೆಚ್ಚು ಬಿದ್ದಂತಾಯಿತು ಎಂದರೆ ಒಂದು ವರ್ಷಕ್ಕೆ ಐದುಕೋಟಿ ರೂಪಾಯಿಗಳು ಇಂದು ನಾವು ನಿಯೋಜಿತ ಕೇಂದ್ರ ಭಾರತ ಸೇವಕ ಸಮಾಜ, ಯುಕ್ ವೆಲ್ ಸೇರ್ ಮತ್ತು ಇತರ ಸಾಮಾಜಿಕ ಕಾರ್ಯಗಳಲ್ಲಿ ಇದಕ್ಕಿಂತ ಹೆಚ್ಚು ವೆಚ್ಚ ಮಾಡುತ್ತೇವೆ. ಈ ಸೇನಾ ಸ್ಥಾಪನಾ ನಂತರ ಇಂತಹ ಹಲವಾರು ಯೋಜನೆಗಳ ಆವಶ್ಯಕತೆಯಿಲ್ಲವಾದುದರಿಂದ, ಸರಕಾರಕ್ಕೆ ಹೊಸ ಹಣದ ಯೋಚನೆಯು ಬರಬೇಕಾಗಿಲ್ಲ. ಸ್ವಲ್ಪ ಹೆಚ್ಚು ಕಡಿಮೆ ಬಂದರೂ ಸುಧಾರಿಸಿಕೊಳ್ಳಲು ಸರಕಾರವು ಸಿದ್ಧವಿರಬೇಕು. ಅವಿದ್ಯಾವಂತರ ನಿರುದ್ಯೋಗ್ಯವು ಇದೀಗ ದೊಡ್ಡ ಪ್ರಶ್ನೆಯಲ್ಲದಿದ್ದರೂ ಈ ಸೇನೆಯಿಂದ ಅದು ಹುಟ್ಟಬಹುದು. ಅವರೂ ವಿದ್ಯೆ ಕಲಿಯದಿರುವ ಯುವತಿಯರು ಸಹಾ ಈ ಯೋಜನೆಯಂತೆ ಯುವಕರಿಂದ ಪ್ರತ್ಯೇಕವಾಗಿಯೇ ಯೋಗ್ಯ ಕೆಲಸಗಳಲ್ಲಿ ಹಚ್ಚಲ್ಪಡಬಹುದು

ಈ ಯೋಜನೆಯಿಂದ ಸರಕಾರಕ್ಕೆ ಇನ್ನೂ ಕೆಲವು ಲಾಭಗಳಿವೆ. ಅವಿದ್ಯಾವಂತರಲ್ಲಿ ನಿರುದ್ಯೋಗ ಸಮಸ್ಯೆಯು ಹುಟ್ಟಿ, ಅವರೂ ಖಡ್ಡಾಯವಾಗಿ ವಿದ್ಯಾವಂತರಾಗುವುದು ಅಗತ್ಯವಾಗುವುದರಿಂದ ನಿರಕ್ಷರತೆಯನ್ನು ತೊಡೆದುಹಾಕಲು, ತನುಕೂಲವಾಗುವುದು. ಸರಕಾರಿ ನೌಕರರು ಸಂಪು ಮಾಡಿದಾಗ, ಸರಕಾರಕ್ಕೆ ಹೆಚ್ಚು ಕಾರ್ಯಕಲಾಪಗಳನ್ನು ತ್ವರಿತಗತಿಯಿಂದ ಪೂರೈಸಬೇಕಾದ ಸಂದರ್ಭ ಬಂದಾಗ, ಹೀಗೆಯೇ ಇನ್ನೂ ಅನೇಕಾನೇಕ ಸಮಯಗಳಲ್ಲಿ ಈ ಸೇನೆಯು ಸರಕಾರಕ್ಕೆ ನೆರವಾಗಬಲ್ಲದು

ಹೀಗೆ ಬಾಧಕವಾದಂತ ತಾಂತವವ ಹುಟ್ಟಿರುವ ನಿರುದ್ಯೋಗ ಸಮಸ್ಯೆಯನ್ನು ಹೆಚ್ಚು ಆಯಾಸವಿಲ್ಲದೆ ಸರ್ವವಿಧ ನಗಳಿಂದಲೇ ಪರಿಹರಿಸುವ ಈ ಮಾರ್ಗವನ್ನು ನಮ್ಮ ಕೇಂದ್ರ ಸರಕಾರವು ಗಮನಿಸಿ ಸೂಕ್ತ ಪರಿಶೀಲನೆಗನ್ನು ನಡೆಸಿ ಇದರ ಸಾಧ್ಯಾಸಾಧ್ಯತೆಗಳನ್ನು ಕಂಡ ಕೊಳ್ಳಬೇಕು. ಇಂತಹ ಸೇನೆಯ ಒಂದು ಕೇಂದ್ರವನ್ನು ತೆರೆದು ಪರೀಕ್ಷಿಸಿ ನೋಡಬೇಕು. ಜಯಪ್ರದವಾದರೆ, ಯೋಜನೆಯನ್ನು ವಿಸ್ತರಿಸಲಿಗೆಳಸಬೆಕು

(ವಿಷ್ಣುಶಂಕರ ದುಬ್ಲಿಕರ ಬರೆದಿರುವ ಆಧಾರದಿಂದ)

—ಎಸ್ ಗೋಪೀಚಂದ ರಾವ್,
ಉಡುಪಿ

ಓದುಗರೊಡನೆ ಎರಡು ಮಾತು

ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಈಗ ೧೫೫ ವರ್ಷಗಳಿಂದ ನಡೆಯುತ್ತಿರುವ ಪ್ರಜಾತಂತ್ರದ ಮಹಾಪ್ರಯೋಗವು ಇತರ ಎಷ್ಟೋ ದೇಶಗಳಿಗೆ ನಿದರ್ಶನ, ಸ್ಫೂರ್ತಿ ಹೀಗಿರುವಾಗ ಅದರ ಹೆಸರೇನೆಂದು ನಾವು ನಮ್ಮ ನಮ್ಮ ದೇಶಗಳಲ್ಲಿ ಒಪ್ಪಿಕೊಂಡಿರುವ ವಾದ, ರಾಜಕೀಯ ಪದ್ಧತಿ ಮತ್ತು ಜೀವನ ಮಾರ್ಗದಲ್ಲಿರುವ ಹೊಳುಕುಗಳನ್ನು, ಅದು ಹಿಟ್ಲರ್‌ಶಾಹಿ ಮತ್ತು ಸಾಮ್ಯವಾದಿ ಅಧಿಕಾರಶಾಹಿಯ ಅನಂತರದ ಪ್ರಸಂಗದ ಇದಿರಿಸಬೇಕಾದ ಮತ್ತು ಶಕ್ತಿಗಳ ರಸಯಿಂದ ಪರಿಣತವಾದ ಒಗೆಯನ್ನು, ಬದಲಾವಣೆಯಾಗುತ್ತಿರುವ ಸನ್ನಿವೇತದಲ್ಲಿ ಅದರ ಆಂತರಿಕ ಮೌಲ್ಯವನ್ನು ಒಹಳ ವಿವೇಚನಾಪೂರ್ವಕವಾಗಿ ವಿಶ್ಲೇಷಿಸುವ

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ವಿಚಾರವಂತರಿಗೆ ಇದು ಒಂದು ಔತಣ

ಬರೆದವರು ಜಾನ್ ಡ್ಯೂಯಿ

ಅನುವಾದಕ ಕು ಶಿ ಹರಿದಾಸ ಭಟ್ಟ

ಪುಟಗಳು ೮ + ೧೮೮ ಬೆಲೆ ಎರಡು ರುಪಾಯಿ

ಇಂದೇ ಬರೆಯಿರಿ

ನವಯುಗ ಎಂಟರ್‌ಪ್ರೈಸ್, ಲಿಮಿಟೆಡ್
ನವಯುಗ ಪ್ರೆಸ್, ಉಡುಪಿ

ನೋಟೀಸು

ಕುಂದಾಪುರ ಡಿ ಡಿ ಕೋರ್ಟನಲ್ಲಿ
O P No 25/57

ಜಗನ್ನಾಥ ಹೆಗ್ಡೆ ಅರ್ಜಿದಾರ
ಮತ್ತ
ಸಂಜೀವ ಹೆಗ್ಡೆ ಎದ್ರಿ

ಮೇಲ್ಕಂಡ ಅರ್ಜಿಯಲ್ಲಿ ಎದ್ರಿಯು ಅರ್ಜಿಗೆ ಕಾರಣವಾದ ಆಸ್ತಿಯು ತನ್ನ ಸ್ವಾಧೀನ ಇಲ್ಲದಿಂತ ಸಾಧಿಸುತ್ತಾರೆ ಸದ್ರಿ ಆಸ್ತಿ ಸ್ವಾಧೀನ ಯಾರ ವಶವಾದರೂ ಇರುವುದಾದರೆ ಅವರು ತಾ ೫.೮ ೫೭ ಕ್ಕೆ ಮೇಲಿನ ಕೋರ್ಟನ ಉದ್ದಿಷ್ಟಕೇಂಪಿನಲ್ಲಿ ಹಾಜರಾಗಿ ಜಾಬೀರು ಮಾಡತಕ್ಕದ್ದು.

(By order of the court)

Y Dumanna Hegde
Advocate for Petitioner

UDIPI 19 7 57

ಮರಗಳ ಮಹತ್ವ

(೧೯೫೬ ಪುಟದಿಂದ)

ಗಾಳಿಯು ಬೀಸಾಟವನ್ನು ತಡೆಯುವುದರಲ್ಲಿ ಈ ಅರಣ್ಯಗಳು ಯಾವ ಮಹತ್ವದ ಪಾತ್ರವನ್ನು ವಹಿಸುತ್ತವೆಯೆಂಬುದನ್ನು ಪ್ರಚಾರ ಮಾಡಬೇಕು. ಮಾನವನ ಜೀವನಾಧಾರವಸ್ತುಗಳಲ್ಲಿ ಒಂದಾದ ನೀರನ್ನು ಒದಗಿಸುವ ಮಳೆರಾಯನು ಈ ಅರಣ್ಯಗಳ ತಂಗಾಳಿಯಿಂದ ರೋಮಾಂಚಿತನಾಗಿ ತನ್ನ ನಿಧಿಯನ್ನು ಸುರಿಸುತ್ತಿರುವಾಗ, ಮರಗಿಡಗಳಿಲ್ಲದೆ ಹೋದರೆ, ಹಯನು ಭೂಮಿ ಬೆಂಗಾಡಾಗುವುದರಲ್ಲಿ ಸಂದೇಹವಿಲ್ಲವೆಂಬ ಸತ್ಯಸಂಗತಿಯನ್ನು ಜನಪದದ ಮನಸ್ಸಿನಲ್ಲಿ ಚೆನ್ನಾಗಿ ನಾಟುವಂತೆ ತಿಳಿಸಿ ಹೇಳಬೇಕು.

ದೇಶದ ಕೋನೆ ಕೋನೆಗಳಲ್ಲಿ ನಾನಾ ವಿಧದ ಸಸ್ಯಜಾತಿಯ ಗಿಡಗಳನ್ನು ಒದಗಿಸಲು ಅನುಕೂಲವಾಗುವಂತೆ ಅತ್ಯಧಿಕ ಸಂಖ್ಯೆಯಲ್ಲಿ ಗಿಡಗಳನ್ನು ಬೆಳೆಯಿಸುವ ಕೇಂದ್ರಗಳು ಸ್ಥಾಪನೆಗೊಳ್ಳಬೇಕು ಗುಣದಲ್ಲಿಯೂ ಪರಿಮಾಣದಲ್ಲಿಯೂ ಹಿರಿದಾದುವುಗಳನ್ನು ಬೆಳೆಯಿಸಲು ಹೆಚ್ಚು ಪ್ರೋತ್ಸಾಹವನ್ನು ನೀಡಬೇಕು. ಇಂತಹ ಕೇಂದ್ರಗಳಲ್ಲಿ ಸಸ್ಯಗಳ ಬೆಳವಣಿಗೆಯ ಕುರಿತು ರೈತರಿಗೆ ವಿಶೇಷ ತಿಳುವಳಿಕೆಯನ್ನೂ ನೀಡುವ ಪರಿವಾರವನ್ನಿಟ್ಟುಕೊಂಡಿರಬೇಕು.

ಗಿಡಗಳನ್ನು ನೆಡುವ, ನೆಟ್ಟ ಗಿಡಗಳನ್ನು ಬೆಳೆಯಿಸುವ ವಿಚಾರದಲ್ಲಿ ಯೋಗ್ಯ ಮಾರ್ಗದರ್ಶನವು ಅಗತ್ಯ. ಈ ಮಾರ್ಗದರ್ಶನವು ಸದಾಕಾಲ ಬೇಕಾಗಿದ್ದರೂ ಪ್ರಾರಂಭಿಕ ವೇಳೆಯಲ್ಲಿ ಆವಶ್ಯಕವಾದುದು ಈ ಅಮೂಲ್ಯವಾದ ಸಲಹೆಗಳನ್ನು ಗ್ರಾಮಸ್ಥರಿಗೆ ಇತರ ಸ್ವಯಂ ಸೇವಕರೊಡನೆ ಸಮಾಜಾಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಮುಖಾಂತರವಾಗಿ ಕೊಡಬಹುದು. ಸಸಿಗಳನ್ನು ನಾಟುವುದನ್ನು ಉತ್ತೇಜಿಸುವ ಸಲುವಾಗಿ ಈಗಾಗಲೇ ಗುರಾಣಿ, ಲೋಟಾ, ಸನದು, ಹಾಗೂ ಯೋಗ್ಯತಾ ಪತ್ರಗಳನ್ನು ಕೊಡಲಾಗುತ್ತಿದೆ. ಇವು ರಾಷ್ಟ್ರೀಯ ಮಟ್ಟಕ್ಕೆ ಸೇರಿದ್ದಾಯಿತು. ಆದುದರಿಂದ ರಾಜ್ಯ ಇಲ್ಲವೇ ಅದಕ್ಕಿಂತಲೂ ಸಣ್ಣ ಪ್ರದೇಶಗಳ ಮಟ್ಟದಲ್ಲಿ ಇಂತಹ ಉತ್ತೇಜನವನ್ನೀಯುವುದರಿಂದ, ಅಧಿಕ ಸಂಖ್ಯೆಯಲ್ಲಿ ಗಿಡಗಳು ನೆಡಲ್ಪಡುವುವಲ್ಲದೆ ಬೆಳೆದು ಬರುವುವು.

ವನಮಹೋತ್ಸವವನ್ನು ಜನಪ್ರಿಯ ಮಾಡಿಸುವ ಗುರುತರ ಕಾರ್ಯವನ್ನು ಎಲ್ಲರೂ ಮಾಡಬಹುದು. ಈ ಸಮಾರಂಭಗಳಲ್ಲಿ ಮಕ್ಕಳು ಭಾಗವಹಿಸುವುದರಿಂದ ನಮ್ಮ ಮುಂದಿನ ಪೀಳಿಗೆಯವರು ಸಹಜ ಉತ್ತಮ ರೀತಿಯ ವೃಕ್ಷಪ್ರೇಮಿಗಳಾಗುವರು. ಈ ಉದ್ದೇಶಕ್ಕಾಗಿ, ಎಲ್ಲ ಶಾಲೆಗಳಲ್ಲಿಯೂ ಮರನೆಡುವ ವಿಚಾರವಾದ ವಿಶೇಷ "ಪರಿಪಾಠ"ವನ್ನಿಟ್ಟುಕೊಳ್ಳುವುದು ಒಳ್ಳೆಯದು. ವಿದ್ಯಾರ್ಥಿಗಳೂ ಅಧ್ಯಾಪಕರೂ ಸ್ವಹಸ್ತಗಳಿಂದಲೇ ಗಿಡಗಳನ್ನು ನೆಟ್ಟು ಶ್ರಮದ ಮರ್ಯಾದೆಯನ್ನು ಎಲ್ಲರಲ್ಲಿಯೂ ಹಂಡಿಸುತ್ತಾರೆ. ಎಲ್ಲ ಶಾಲೆಗಳಿಗೂ ಗುದ್ದಲಿ, ಹಾರೆ, ಅಗತ್ಯ ಬಿದ್ದರೆ, ನೀರಾವರಿ ಸೌಕರ್ಯಗಳನ್ನೂ ಧರ್ಮಾರ್ಥವಾಗಿ ಒದಗಿಸಿಕೊಡಬೇಕು.

ಹಳ್ಳಿಗಳಲ್ಲಿ ಇಂದು ಒಂದೊಂದು ಗಿಡವನ್ನು ನೆಟ್ಟು ಪ್ರಯೋಜನವಿಲ್ಲ. ಹಲವಾರನ್ನು ಹಚ್ಚಿ, ಒಂದು ಚಿಕ್ಕ ತೋಪನ್ನು ತಯಾರಿಸಬೇಕು. ಈ ತೋಪುಗಳು ಬೆಳೆದು ಬಂದ ಮೇಲೆ, ಉರುವಲಿಗೆ ಬಣ ಸೌದೆಯನ್ನೂ ಗದ್ದೆಗಳಿಗೆ ಗೊಬ್ಬರವನ್ನೂ ಗ್ರಾಮಕ್ಕೆ ಗಾಳಿ-ಬೆಳಕನ್ನೂ ನೋಡಲು ಸಂತಸವನ್ನೂ ಒದಗಿಸುವುದು. ಹೀಗೆ ನೆಡಬೇಕಾದ ಮರಗಳಲ್ಲಿ ಮೋಪಿಗೆ ಬೇಕಾದ ನೀಮ್, ಬಕೈನ, ಶೀಶನ್, ಬೀಟೆ ಮೊದಲಾದುವುಗಳನ್ನಲ್ಲದೆ, ಸಪಾಯಿ, ಲಿಂಬೆ, ಕಿತ್ತಳೆ, ಮಾವು ಮೊದಲಾದ ಹಣ್ಣುಗಳ ಗಿಡಗಳನ್ನೂ ನೆಡಬೇಕು.

ಉತ್ತರ ಆಫ್ರಿಕದ ತುನಿ ಎಂಬಲ್ಲಿ ವೃಕ್ಷ ಪ್ರೇಮಿಗಳನ್ನೂ, ಮರ ನೆಡುವುದನ್ನು ಪ್ರೋತ್ಸಾಹಿಸುವವರನ್ನೂ ಒಂದುಗೂಡಿಸುವ ಸಂಘವಿದೆ. ಅಲ್ಲಿನ ಶಾಲಾ ಮಕ್ಕಳಿಗೆ ಆರಿಸಿದ ಗಿಡಗಳ ಬೀಜಗಳನ್ನು ಹಂಚಲಾಗುವುದಂತೆ. ನಿಶ್ಚಿತ ವಾರದಲ್ಲಿ ಈ ಬೀಜಗಳು ಬಿತ್ತಲ್ಪಡುವುವು. ನಾವು ಸಹ ಇದೇ ರೀತಿಯ ಸಂಘಗಳನ್ನು ಸ್ಥಾಪಿಸಿಕೊಳ್ಳಬೇಕು ಮತ್ತು ಯೋಗ್ಯರೀತಿಯಲ್ಲಿ ಕಾರ್ಯಶೀಲರಾಗಬೇಕು. ಈ ವನ ಪ್ರೇಮ ಸಂದೇಶವನ್ನು ಸರಕಾರದ ರಾಷ್ಟ್ರೀಯ ವಿಸ್ತರಣಾ ಯೋಜನಾದಿಗಳು ಅತ್ಯುತ್ತಮ ರೀತಿಯಲ್ಲಿ ಹರಡುವುದು ಸಾಧ್ಯ.

ಈಗೀಗ ಪ್ರತಿವರ್ಷವೂ ಅಧಿಕತರರೀತಿಯಲ್ಲಿ ಈ ವನ ಮಹೋತ್ಸವವನ್ನು ಆಚರಿಸಲಾಗುವುದು. ಇದೇ ಭಾವನೆಯು ಜನತೆಯಲ್ಲಿ ಇನ್ನೂ ಬೆಳೆಯುತ್ತಾ ಬಂದರೆ, ಭಾರತದ ಮೂಲೆ ಮೂಲೆಯಲ್ಲಿಯೂ ಅರಣ್ಯ ಸಂಪತ್ತಿನ ಸಾಕ್ಷಾತ್ಕಾರವು ಒಂದಲ್ಲ ಒಂದು ರೀತಿಯಿಂದ ಆಗುವುದು. ಅಲ್ಲದೆ ತಮ್ಮ ಮುಂದಿನ ಪೀಳಿಗೆಯವರಿಗೆ ಗಿನೆ ಶತಮಾನದ ಕವಿಯೊಬ್ಬನ ಈ ಸಂದೇಶವನ್ನು ತಿಳಿಸಲು ಸಮರ್ಥರಾಗುವರು.

ನಾರವೊಂದವಾರು ನೆಡುವನೊ ಅವನು
ಪರಮಾತ್ಮ ಸೇವಕನೆ ನಿಜಕು;
ತನಗಿಂತ ಮುಂಬರುವ ಪೀಳಿಗೆಗೆ
ಸನುಸುತದಿ ಪಯಿಯ ಬೀರುವನು;
(ತನಗೆ ಉಪಕಾರವನು ಗೆಯ್ದಿರುವ
ಮನುಜನವ ಗೋಚರಿಸದೊಡೇನು?)
ಅಪ್ಯಕ್ತ ವದನವನು ಸ್ಮರಿಸಿ ತಾನ್
ಸುಪ್ಯಕ್ತವಾಗಿ ಹರಸುವರು॥

— —

ಜನಮತ

ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.

ಸಂ. ನ.

ಕಾಂಗ್ರೆಸ್ಸಿನ ಸಂಘಟನೆ

ಕಾಂಗ್ರೆಸಿನ ಭದ್ರಕ್ಷೇತ್ರವಾದ ಉಡುಪಿ ಮತಕ್ಷೇತ್ರದಲ್ಲಿ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಅಸಂತೃಪ್ತಿತ ಸೋಲಿಗೆ ಈಡಾದ ಮೇಲಾ ಕಾಂಗ್ರೆಸಿನ ಸೂತ್ರಧಾರಿಗಳು ಆತ್ಮ ನಿರೀಕ್ಷಣೆ ಮಾಡಿಕೊಳ್ಳುವ ಲಕ್ಷಣ ಕಾಣದಿರುವುದನ್ನು ಕಾಣುವಾಗ ಆಶ್ಚರ್ಯಕ್ಕಿಂತ ಹೆಚ್ಚಿಗೆ ವಿಷಾದವೇ ಕಾಣುತ್ತಿದೆ. ಕಾಂಗ್ರೆಸಿನೊಳಗೆ ಸೇರಿಕೊಂಡ ಕೆಲವೊಂದು ಪ್ರತಿಗಾಮಿ ಗೋಮುಖ ವ್ಯಾಘ್ರಗಳೇ ಕಳೆದ ಚುನಾವಣೆಯಲ್ಲಿ ಕಾಂಗ್ರೆಸಿನ ಸೋಲನ್ನು ತರಲು ಕಾರಣವೆಂಬುದು ಸತ್ಯ ಸತ್ಯ. ಅದರೊಂದಿಗೆ ವೈಯಕ್ತಿಕ ಸ್ವಾರ್ಥ, ಹಣದ ಪ್ರಲೋಭನೆ, ಪಟಾಲಾಂತನ ಹಾಗೂ ಕೆಲವೊಂದು ಸ್ಥಳೀಯ ದ್ವೇಷಾಸೂಯೆಗಳೂ ಈ ಸೋಲಿಗೆ ಬಹುಮಟ್ಟಿನ ಕಾರಣವನ್ನೊದಗಿಸಿವೆ. ಈ ಎಲ್ಲ ಹಳೆಯ ರಾಡಿಯನ್ನು ಪುನಃ-ಪುನಃ ಕೆದಕುವುದಕ್ಕಿಂತ ಕಾಂಗ್ರೆಸಿನ ಶುದ್ಧೀಕರಣಕ್ಕಾಗಿ ಪಣತೊಟ್ಟು, ಕಾಂಗ್ರೆಸಿನ ಪ್ರಬಲ ಸಂಘಟನೆಗೆ ಕಾರ್ಯೋನ್ಮುಖವಾಗುವ ಅವಶ್ಯಕತೆಯಿದೆ.

ಕಾಂಗ್ರೆಸಿನ ಉದಾಸೀನ ಮನೋಭಾವದ ಲಾಭವನ್ನು ವಿರೋಧಿಪಕ್ಷಗಳು ಇಂದು ಬಹುವಿಧ ರೀತಿಯಲ್ಲಿ ಉಪಯೋಗಿಸಿಕೊಳ್ಳತೊಡಗಿದೆ. ಉಡುಪಿಯ ಪ್ರತಿಭಾಗದಲ್ಲೂ ಪಕ್ಷಾತೀತ ಪಕ್ಷಗಳ ಮುಸುಕಿನೊಳಗೆ ಕಮ್ಯುನಿಸ್ಟ್ ಸಂಘಟನೆ ನಡೆಯುತ್ತಿದ್ದು, ಮುಂದಿನ ಸ್ಥಳೀಯ ಚುನಾವಣೆಗೆ ಈಗಿಂದೀಗಲೇ ಬಿರುಸಿನ ಪ್ರಚಾರ ನಡೆಯುತ್ತಿದೆ. ಕೇವಲ 'ಪಕ್ಷಾತೀತ' ಎಂಬ ಗೋಮುಖ ಧರಿಸುವುದು ಕಾಂಗ್ರೆಸಿನ ಗೋಮುಖ ವ್ಯಾಘ್ರಗಳ ಮುಖ ಉಳಿಸುವುದಕ್ಕಾಗಿಯೇ ಹೊರತು ಈ ಹೊಸ ಸಂಘಗಳು ಕಮ್ಯುನಿಸ್ಟ್ ಪ್ರೇರಿತವಾದವುಗಳೇ ಆಗಿವೆ. ಮುಂದಿನ ನಗರಸಭೆಯ ಚುನಾವಣೆಯ ವೇಳೆಗೆ ಕಮ್ಯುನಿಸ್ಟರು ಕೆಲವೊಂದು ಅತೃಪ್ತ ಕಾಂಗ್ರೆಸ್ ಹಾಗೂ ಅತೃಪ್ತ ಶ್ರೀ ನಾಯಕರ ಹಿಂಬಾಲಕರನ್ನು ಸೇರಿಸಿ, ಮೂರನೇ ಪಂಗಡ ಕಟ್ಟಲು ಯತ್ನಿಸುವರೆಂಬ ವದಂತಿ ಇದೆ. ಇದಕ್ಕೆ ಬಲವಾದ ಒಮ್ಮೇಳವೂ ಬಿದಗೊಡುವುದೆಂಬ ವರ್ತಮಾನವೂ ಇದೆ.

ಈ ವಿಷಯ ಸನ್ನಿವೇಶವನ್ನು ಕಾಂಗ್ರೆಸಿಗರು ನಿರ್ಲಕ್ಷ್ಯ ಭಾವದಿಂದ ನೋಡುತ್ತ ಕುಳಿತಿರುವುದಾದರೆ ಕಾಂಗ್ರೆಸಿನ ಧವಲ ಕೀರ್ತಿಗೆ ಮಂದಿತ ಕಲಂಕ ತಾಗುವುದು. ಕಾಂಗ್ರೆಸಿಗರು ಇನ್ನಾದರೂ ಎಚ್ಚೆತ್ತಾಗಿ ಸಂಘಟನಾತ್ಮಕ ಕಾರ್ಯಕ್ಕೆ ಮುಂದಾಗಬೇಕು. ಕಾಂಗ್ರೆಸಿನೊಳಗೆ ಸೇರಿಕೊಂಡು ಅದರ ಶಕ್ತಿ, ಪ್ರಾಸಗೊಳಿಸಿದ ಕೀಟಗಳನ್ನು ನಿರ್ದಾಕ್ಷಿಣ್ಯವಾಗಿ ಕಿತ್ತೊಗೆಯಬೇಕು. ಆತ್ಮ ನಂಬಿಕೆ, ಅನೈಕ್ಯತೆ ಹಾಗೂ ದಾಕ್ಷಿಣ್ಯ ಮನೋಭಾವದಿಂದಲೇ ಸಂಸ್ಥೆಯು ಶಿಥಿಲತೆಯ ಕಡೆ ಸಾಗಿದೆ.

ಕಾಂಗ್ರೆಸಿಗರು ಜನ ನಿಯಂತ್ರಣದಿಚ್ಛೆತ್ತು, ಪ್ರತಿಯೊಬ್ಬ ಸ್ವಾಮಾಣಿಕ ಕಾಂಗ್ರೆಸಿಗನೂ ಸಂಘಟನಾ ಯೋಧನಾಗಿ ನಿಷ್ಕಲ್ಮಷ ರೀತಿಯಿಂದ ಮುಂದಡಿ ಇಡಬೇಕು. ಕಾಂಗ್ರೆಸಿನ ಪ್ರಚಾರವು ಸತ್ಯದ ನೆಲೆಗಟ್ಟಿನಲ್ಲೇ ಸಾಗಿಸುವುದಾದರೂ ಜನ ಆಕರ್ಷಿತರಾಗುತ್ತಾರೆ. ಕಾಂಗ್ರೆಸಿನ ಸಾಧನೆ ಅಷ್ಟು ಉನ್ನತದ್ದಿದೆ; ಅಷ್ಟು ಸತ್ವಶಾಲಿಯದ್ದಿದೆ; ಅಷ್ಟು ಸಾಮರ್ಥ್ಯಪೂರ್ಣದ್ದೂ ಆಗಿದೆ. ಅದನ್ನು ಯೋಗ್ಯ ರೀತಿಯಲ್ಲಿ ಜನಮತದನ್ನು ಮುಟ್ಟಿಸುವ ಪ್ರತಿಭಾವಂತರ ಹಾಗೂ ನಿಷ್ಪಳಂಕ ಸ್ವಯಂಸೇವಕರ ಅವಶ್ಯಕತೆಯಿದೆ. ಅದಕ್ಕಾಗಿ ಕಾಂಗ್ರೆಸ್ ಸ್ವಯಂಸೇವಕ ದಳದ ನಿರ್ಮಾಣವಾಗಬೇಕು. ಅದು ಸಂಪೂರ್ಣ ಶಿಸ್ತುಬದ್ಧ ಸಂಸ್ಥೆಯಾಗಿ, ಕ್ರಿಯಾಶೀಲ ಸಂಘಟನೆಯಾಗಿ ರೂಪುಗೊಳ್ಳಬೇಕು. ಅದರ ಸೂತ್ರಧಾರಣೆಯನ್ನು ಇಂದು ಉಡುಪಿಯ ನಿಷ್ಠಾವಂತ ಹಾಗೂ ಸಾಮರ್ಥ್ಯಪೂರ್ಣ ಕಾಂಗ್ರೆಸಿಗರಾದ ಶ್ರೀ ಕೆ. ಕೆ. ಪೈ, ಶ್ರೀ ಎ ಜೆ. ಆಲ್ಸೆ ಹಾಗೂ ಶ್ರೀ ಸಿ. ಕೀನ ಶೆಟ್ಟಿ—ಇವರು ವಹಿಸಬೇಕು. ಈ ತ್ರಿಮೂರ್ತಿ ಸಮಿತಿಯ ಅಧೀನದಲ್ಲಿ ಕಾಂಗ್ರೆಸ್ ಸಂಘಟನೆಯು ಶಿಸ್ತುಬದ್ಧವಾಗಿ ನಡೆದರೆ ಕಾಂಗ್ರೆಸಿನ ಪುನರುಜ್ಜೀವನ ಸಾಧ್ಯವಿದೆ. ಕಾಂಗ್ರೆಸ್ ವಿರೋಧಿ ಪಕ್ಷಗಳ ಯಾವ ಕುಟಿಲ ಕಾರ್ಯ ಸಾಧನೆಯೂ ಫಲಕಾರಿಯಾಗುವಂತಿಲ್ಲ ಅದರೆ ಈ ಕಾರ್ಯ ವಿಳಂಬವಾಗದ ರೀತಿಯಲ್ಲಿ ನಡೆಯ ಬೇಕಾದ್ದೆ ಮುಖ್ಯವಾಗಿದೆ

"ಕಾಂಗ್ರೆಸ್ ಅಭಿಮಾನಿ."

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:00.

ಪುಸ್ತಕದ ಬೆಲೆಯೊಂದಿಗೆ ನಾಲ್ಕಾಣೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ನಮ್ಮ ಪುಸ್ತಕಗಳು ಈ ಕೆಳಗಿನವರಲ್ಲಿಯೂ ದೊರೆಯುತ್ತವೆ:—

1) ಸ್ಕೂಲ್ ಬುಕ್ ಕಂಪೆನಿ, ರಥಬೀದಿ, ಮಂಗಳೂರು-1.

2) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಪೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೬ VOL.36

1—8—1957

ಸಂಚಿಕೆ ೪೭ NO. 47

ಬುನಾದಿ ಶಿಕ್ಷಣ

ಬುನಾದಿ ಶಿಕ್ಷಿತರು ತಂತಮ್ಮ ಗ್ರಾಮಕ್ಕೆ ಮರಳಿ ಜೀರ್ಣಜನತೆಯನ್ನು ಜೀವಂತವಾಗಿಸಬೇಕು.

ಭಾರತದ ಉಪರಾಷ್ಟ್ರಪತಿಗಳಾದ ಡಾ ರಾಧಾಕೃಷ್ಣನರು ಇತ್ತೀಚೆಗೆ ಕೊಯಮುತ್ತೂರಿನ ಶ್ರೀ ರಾಮಕೃಷ್ಣ ವಿದ್ಯಾಲಯದಲ್ಲಿ ಉಚ್ಚ ವಿದ್ಯಾ ವಿಭಾಗವನ್ನು ಉದ್ಘಾಟಿಸಿದ ಸಮಯದಲ್ಲಿ ಭಾರತದ ವಿದ್ಯಾ ಸಂಬಂಧದ ಕೆಲವೊಂದು ಅವಶ್ಯಕತೆಗಳನ್ನು ವಿವರಿಸಿದರು. ಗ್ರಾಮೀಣ ವಿದ್ಯಾಲಯಗಳಲ್ಲಿ ವ್ಯವಸಾಯ ವಿಜ್ಞಾನ, ಗ್ರಾಮೀಣ ಆರೋಗ್ಯ, ಮತ್ತು ತಾಂತ್ರಿಕ ವಿಷಯಗಳನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಹಳ್ಳಿಗಳಿಗೆ ನವೀನ ಭಾವನೆಗಳನ್ನು ಕೊಂಡೊಯ್ದು, ಹಳ್ಳಿಗರಲ್ಲಿನ ಅಂಜಿಕೆಯನ್ನು, ಮಾಧೆಯನ್ನು, ಮಂದತ್ವವನ್ನು ಓಡಿಸಿ ಅವರಲ್ಲಿ ಹೊಸ ಹುಮ್ಮಸ್ಸು, ವಿಶ್ವಾಸ ಹುಟ್ಟುವಂತೆ ಮಾಡಿ, ವಿಶಾಲ ಪ್ರಸಿದ್ಧ ರಾಷ್ಟ್ರದ ನಾಗರಿಕರಾಗಿರಲು ಅವರು ಹೆಮ್ಮೆಪಡುವಂತೆ ಮಾಡಬೇಕೆಂದು ಕರೆ ಕೊಟ್ಟರು

ಭಾರತದಲ್ಲಿ ಕೊಡಲಂಗುತ್ತಿರುವ ಉಚ್ಚ ಶಿಕ್ಷಣದಲ್ಲಿ ದೊಡ್ಡದೊಂದು ದೋಷವು ಅಡಕವಾಗಿದೆ ನಮಗಿಂದು ಬೇಕಾದುದು ದಯ, ಭಕ್ತಿ, ಸೇವೆ ಮತ್ತು ತ್ಯಾಗಗಳು. ಇವು ಭಾರತದಲ್ಲೆಲ್ಲ ತಮ್ಮ ಪ್ರಭಾವವನ್ನು ಬೀರಬೇಕಾಗಿದೆ ಭಾರತದ ಜನಸಂಖ್ಯೆಯ ಮಂಕಾಲು ಅಂಶಕ್ಕಿಂತಲೂ ಹೆಚ್ಚಿನವರು ಕೇವಲ ಹಳ್ಳಿಗಳಲ್ಲಿಯೇ ವಾಸವಾಗಿರುತ್ತಾರೆ ಅವರಿಗೆ ಈ ವಿಷಯವನ್ನು ತಿಳಿಸಿ ಹೇಳುವುದು ಅಗತ್ಯವಾಗಿದೆ. ಆದರೆ ಇವನ್ನು ತಿಳಿದ ವಿದ್ಯಾವಂತರಿಗೂ ಹಳ್ಳಿಗೂ ಹಲವು ಮೈಲುಗಳ ಅಂತರವಿರುವುದೇ ಈ ದೊಡ್ಡ ತೊಂದರೆ. ನಾಗರಿಕ ಮತ್ತು ಗ್ರಾಮೀಣ ಜನತೆಯ ನಡುವೆ ಈಗಿನ ವಿದ್ಯಾಭ್ಯಾಸ ಕ್ರಮವು ಬೃಹದಾಕಾರದ ಪ್ರಕಾರವನ್ನು ನಿರ್ಮಿಸಿದೆ. ಇವರಿಬ್ಬರ ನಡುವೆ ಸಂಕನ್ನು ಸಂಬಂಧವನ್ನು ಬೆಳೆಸುವಲ್ಲಿ ಬುನಾದಿ ಶಿಕ್ಷಣವು ನೆರವಾಗಬಹುದು, ದೂರದ ನದಿಗಳನ್ನು ಒಂದುಗೂಡಿಸಬಹುದು.

ಭಾರತವು ಇಂದು ಸ್ವತಂತ್ರವಾಗಿದೆ. ಈಗ, ಭಾರತೀಯ ಘಟನೆಯಲ್ಲಿ ನಮೂದಿಸಿದಂತೆ ನಮ್ಮ ಜನರಿಗಾಗಿ ಉತ್ತಮ, ಪರಿಶುದ್ಧ ಸತ್ಯನಿಷ್ಠ ಹಾಗೂ ಸಮರ್ಥ ಸರಕಾರನನ್ನು ರಚಿಸಿಕೊಡುವುದು ಅಗತ್ಯವಾಗಿದೆ ನಮಗೆ ಇಂದು ವೈಯಕ್ತಿಕ ಸ್ವಾತಂತ್ರ್ಯ, ಆರ್ಥಿಕನ್ಯಾಯ, ಸಮಾನಾವಕಾಶ ಮತ್ತು ಸಮಾಜದ ಐಕ್ಯಗಳು ಕೇವಲ ಭಾವನೆಗಳಲ್ಲಿ ಮಾತ್ರವಲ್ಲ, ನಮ್ಮ ದಿನ ನಿತ್ಯದ ಜೀವನದಲ್ಲಿ ವ್ಯವಹಾರ ಯೋಗ್ಯವಾಗಿ ದೊರೆಯಬೇಕು ಈ ಭಾವನೆಗಳನ್ನು ಜನತೆಯು ಸ್ವೀಕರಿಸಿಕೊಳ್ಳುವಂತೆ ಮಾಡುವ ಮುಖ್ಯ ಸಾಧನವೆಂದರೆ ವಿದ್ಯೆ ಮಾತ್ರ ನಮ್ಮ ರಾಷ್ಟ್ರ ಘಟನೆಯ ಮಾರ್ಗ ದರ್ಶನದಂತೆ, ನಾವು ಇಂದು ಧರ್ಮಾರ್ಥ ವಿದ್ಯೆ, ಖಡ್ಡಾಯ ಶಿಕ್ಷಣ ಮೊದಲಾದ ಧ್ಯೇಯ ಧೋರಣೆಗಳನ್ನು ಅಂಟಿಸಿ ಕೊಂಡಿದ್ದೇವೆ. ಇದು ದೇಶದ ಪ್ರಗತಿ ಕಾರ್ಯದಲ್ಲಿ ಬಹಳ ಮುಖ್ಯವಾದ ಹೆಜ್ಜೆ ಈ ಉಚ್ಚ ಧ್ಯೇಯಗಳನ್ನು ಕಾರ್ಯರೂಪಕ್ಕೆ ತಂದು ಸಫಲವಾಗಿಸುವಲ್ಲಿ ಖಾಸಗಿ ವಿಭಾಗವೂ ಸರಕಾರದೊಂದಿಗೆ ಸಹಕರಿಸುವುದು ಅಗತ್ಯ

ದೇಶದ ಸುತ್ತ ಸುತ್ತಿದರೆ, ದೇಶವು ನಾಗರಿಕ ಮತ್ತು ಗ್ರಾಮೀಣವೆಂದು ಇಬ್ಬಾಗವಾಗಿ ಒಡೆದುದನ್ನು ಗಮನಿಸಬಹುದು ಡಿಸ್ರೇಲಿ ಎಂಬವನು ಇಂಗ್ಲೆಂಡಿನಲ್ಲಿ ಶ್ರೀಮಂತ ಮತ್ತು ದರಿದ್ರ ಎಂಬ ಎರಡೇ ಪಂಗಡಗಳಿರುವುವೆಂದು ಹೇಳಿದ್ದನು. ಆದರೆ, ನಮ್ಮ ದೇಶದಲ್ಲಿ ಯಾದರೋ ಈ ಉಲ್ಬಣವ ವಿಡ್ಡಿಯೇ ದೇಶದ ಸೇಕಡಾ ಎಂಬತ್ತರಷ್ಟು ಗ್ರಾಮೀಣ ಜನತೆಯಿಂದ ಉಳಿದವರನ್ನು ನಾಗರಿಕರೆಂದು ಸೆಟೆದು ದೂರ ನಿಲ್ಲಿಸಿದೆ! ಹಳ್ಳಿಗರು ಸಹ ನಗರದ ಜನತೆಗೆ ಸಮೀಪ ಬರುವಂತೆ ಮಾಡುವುದು ಅಗತ್ಯ ವ್ಯಾವಸಾಯಿಕ ಪದವೀಧರರಲ್ಲಿಯೂ ಸೇಕಡಾ ೯೦ರಷ್ಟು ಜನರು ಸರಕಾರಿ ಉದ್ಯೋಗಗಳನ್ನೇ ಬಯಸುತಿದ್ದಾರೆ. ಹಾಗಿರುವಾಗ, ಅವರು ಪಡೆದಿರುವ ವ್ಯಾವಸಾಯಿಕ ವಿಜ್ಞಾನದ ತಿಳುವಳಿಕೆ ಮತ್ತವರು ಅರಗಿಸಿಕೊಂಡಿರುವ ತಾಂತ್ರಿಕ ಕುಶಲತೆಗಳು ಗ್ರಾಮೀಣ ಜನತೆಯ ಉದ್ಧಾರಕ್ಕೆ ನೆರವಾಗುವುದಾದರೂ ಹೇಗೆ? ಹಳ್ಳಿಗಳ ಅತ್ಯುಚ್ಚ ಸಾಮರ್ಥ್ಯವನ್ನು ಹಳ್ಳಿಗಳಿಂದ ನಗರಗಳಿಗೆ ಓಡಿಸಿದ್ದಾಗಿದೆ, ಆದರೆ ನಗರಗಳ ಅತ್ಯುತ್ತಮ ಪ್ರತಿಭೆಯನ್ನು ಮಾತ್ರ ಹಳ್ಳಿಗಳಿಗೆ ಒದಗಿಸಲಾಗಲಿಲ್ಲ ಇದರ ಪರಿಣಾಮವಾಗಿ, ಗ್ರಾಮಗಳಿಂದು ಶಕ್ತಿಹೀನವಾಗಿ ಜೀರ್ಣವಾಗಿ, ಯಾವುದೇ ನಿಧಿದ ನಾಯಕತ್ವದ ಅಭಾವದಿಂದ ಒಡೆದು ಹೋಗಿವೆ ಹಳ್ಳಿಗಳ ಪರಿಸ್ಥಿತಿ ಮುತೀರಾ ಕೆಟ್ಟುಹೋಗಿದ್ದು, ವಿಶ್ವವಿದ್ಯಾಲಯ ಸಮಿತಿಯು ಅದನ್ನೇ ತನ್ನ ಸಂಶೋಧನೆ ಸಮಯದಲ್ಲಿ ಕಂಡುಕೊಂಡಿತ್ತು. ಪಶ್ಚಿಮದ ರಾಷ್ಟ್ರಗಳಲ್ಲಿ ಈ ಪರಿಸ್ಥಿತಿಯಿಲ್ಲದಿದ್ದು, ಅಲ್ಲಿ ಎಲ್ಲ ವಿಭಾಗಗಳ ಜನರೂ ಆಧುನಿಕ ಸಮಾಜ ರಚನೆಯಿಂದ ತೃಪ್ತರಾಗಿದ್ದಾರೆ

ಸರಕಾರವು, ವಿದ್ಯಾರ್ಥಿಗಳು ಹೊಂಬಂದಿರುವ ಹೊರವಲಯದ ಹಳ್ಳಿಗರೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಳ್ಳುವಂತೆ ಮಾಡುವ ಸದುದ್ದೇಶದಿಂದ, ಬುನಾದಿ ಶಿಕ್ಷಣವನ್ನು ಪ್ರಯೋಗಕ್ಕೆ ತರುತ್ತಿದೆ. ಗ್ರಾಮೀಣ ವಿದ್ಯಾಲಯಗಳು ಸಹ ಅ ಜಾವನೆಯನ್ನು ಅಭಿವೃದ್ಧಿಗೆ ತರುವಂಥವುಗಳು ಆದರೆ, ಒಂದು ವಿಷಯ ಮಾತ್ರ ಅಗತ್ಯ ಜ್ಞಾಪಕದಲ್ಲಿರಬೇಕು ಗ್ರಾಮೀಣ ಕ್ಷೇತ್ರದಲ್ಲಿ ಕೊಡುವ ವಿದ್ಯೆಯು ಮಟ್ಟವು ನಾಗರಿಕ ವಿಶ್ವವಿದ್ಯಾಲಯಗಳಲ್ಲಿನದಕ್ಕಿಂತ ಕೀಳು ಮಟ್ಟದಲ್ಲಿರಬಾರದು ಗ್ರಾಮೀಣ ವಿದ್ಯಾಲಯಗಳು ತಮ್ಮ ಅಮೂಲ್ಯ ತತ್ವವಾದ ಉದ್ಯೋಗ ಶೀಲತೆಯನ್ನು ರಕ್ಷಿಸಿಕೊಂಡಿರುವಂತೆಯೇ ವಿದ್ಯೆಯನ್ನು ಆದಷ್ಟು ಶಿಥಿಲ, ಸರಳವಾಗಿ ಮಾರ್ಪಡಿಸುವುದು ಅಗತ್ಯ ಉಚ್ಚ ವರ್ಗದಿಂದ ಕೆಳವರ್ಗದ ವರೆಗೂ ಔದ್ಯೋಗಿಕ ಗೌರವವನ್ನು ಮಾನ್ಯ ಮಾಡುವುದೂ ಅಗತ್ಯ

ಭಾರತವು ನೂರಾರು ಸಂವತ್ಸರಗಳಿಂದ ಪಾರತಂತ್ರ್ಯದ ಸಂಕಲೆಗಳಿಂದ ಬಿಗಿಯಲ್ಪಟ್ಟಿತು ಇದರಿಂದಾಗಿ ಭಾರತೀಯ ಸಮಾಜ ಬಂಧನದ ಬಿಗಿತವು ಸಡಿಲಾಗುತ್ತಾ ಬಂದು ಇಂದು ಸಂಪೂರ್ಣ ಜೀರ್ಣವಾಗಿ ಹೋಗಿದೆ ಆದರೆ, ಇದಕ್ಕಾಗಿ ನಾವು ಇನ್ನು ಪರರನ್ನು ದೋಷಲಾರೆವು. ಬೇರೆಯವರು ನಮ್ಮ ಸಮಾಜದ ಐಕ್ಯವನ್ನು ಒಡೆಯುವರೆಂದು ಆರೋಪಿಸಲಾರೆವು ಇಂದು ನಾವೇ ನಮ್ಮನ್ನು ಪಾಲು ಮಾಡುತಿದ್ದೇವೆ ನಮ್ಮಲ್ಲಿ ಒಂದಾಗಿ ಬಾಳುವ, ಒಂದಾಗಿ ಕೂಡಿಕೊಂಡಿರುವ ಒಂದಾಗಿ ಕೆಲಸಮಾಡುವ ವಿಶಾಲ ಭಾವನೆಯ ಅಭಾವವೇ ಕಂಡುಬರುತ್ತಿದೆ ಆದುದರಿಂದ ನಮ್ಮ ಮುಂದಿರುವ ಪ್ರಮುಖ ಕರ್ತವ್ಯವು ಒಂದೇ ಒಂದ ನಾವು ಜಾತಿ, ವರ್ಗ, ಮತ, ಧರ್ಮಗಳ ಹೆಸರಿನಲ್ಲಿಯಾಗಲೀ ಭಾಷೆ ಅಥವಾ ರಾಜ್ಯದ ನಾಮಧ್ಯೇಯದಲ್ಲಾಗಲೀ, ಭೇದಭಾವನೆಗಳನ್ನು ಕಟ್ಟಿಕೊಳ್ಳದೆ, ಈ ಸಂಕುಚಿತ ಮನೋವೃತ್ತಿಗಳಿಂದ ದೂರ ನಿದ್ದು, ನಮ್ಮವರ ಮೇಲೆ, ಸುಪ್ರಸಿದ್ಧ ಭಾರತೀಯ ಎಂಬ ವಿಶಾಲ ದೃಷ್ಟಿಯನ್ನು ಬೀರಬೇಕು ನಾವಿಂದು ಸ್ವತಂತ್ರರಾಗಿದ್ದೇವೆ, ಬಲಕ್ಷಯವಾದ ಒಂದು ದೇಶವು ಮಾನವತೆಗೆ ಯಾವ ಕಾಣಿಕೆಯನ್ನೂ ಸಲ್ಲಿಸಲು ಅಸಮರ್ಥವಾಗಿದೆ ಎಂಬುದನ್ನು ಧ್ಯಾನದಲ್ಲಿ ಇಟ್ಟುಕೊಳ್ಳಬೇಕು ಎಚ್ಚತ್ತಿರುವ ಭಾರತ, ಸ್ವತಂತ್ರವಾದ ಭಾರತವು ಬೃಹತ್ ಹೆಜ್ಜೆಗಳನ್ನಿಡಲು ಸಮರ್ಥವಾಗಿದೆ, ಮಾನವತೆಯ ವಿಕಾಸಕ್ಕೆ, ಮಾನವನ ಕಲ್ಯಾಣಕ್ಕೆ ಅತಿ ಸುಂದರವಾದ ದೇಣಿಗೆಯನ್ನೀಯಲು ಅದು ಯೋಗ್ಯತೆಯನ್ನು, ಶಕ್ತಿಯನ್ನು ಪಡೆದಿದೆ ಎಂಬ ಸತ್ಯ ಸಂಗತಿಯನ್ನು ನಿತ್ಯವೂ ನೆನೆಯುತ್ತಿರಬೇಕು.

ಭಾರತವಿಂದ ಔದ್ಯೋಗೀಕರಣದತ್ತ ಧಾವಿಸುತ್ತಿದೆ ಆದರೆ, ವ್ಯವಸಾಯದ ಆರ್ಥಿಕ ವ್ಯವಸ್ಥೆಯು ಶಾಶ್ವತ ಚೆನ್ನಾಗಿ

(೧೨ನೇ ಪುಟ ನೋಡಿರಿ)

ಹೊಸ ಸುದ್ದಿ

ಸೇವಿಂಗ್ಸ್ ಬೇಂಕ್ ಡಿಪೋಸಿಟಿನ ಬಡ್ಡಿ ದರವನ್ನು 2½%ಗೆ ಹೆಚ್ಚಿಸಲಾಗಿದೆ ವಾರಕ್ಕೆ ಒಂದಾವರ್ತಿಗಿಂತ ಮಿಕ್ಕಿ ಖಾತೆಯಿಂದ ಹಣ ತೆಗೆಯಲು ಈಗ ಯಾವೊಂದೂ ಆತಂಕವಿಲ್ಲ

ಕಾಯಂ ಠೇವಣಾತಿ ಬಡ್ಡಿ ದರವನ್ನು ಏರಿಸಲಾಗಿದೆ ತಾ 1-7-1957ರಿಂದ ಏರಿಸಿದ ಬಡ್ಡಿಯಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ಇಯುಮಾಡಿ ವಿಚಾರಿಸಿರಿ

ದಿ ವಿಜಯ ಬೇಂಕ್ ಲಿಮಿಟೆಡ್

(ವಿ ಸೂ ಬೆಂಗಳೂರು ನಗರದಲ್ಲಿ ಬೇಂಕಿನ ಹೊಸ ಶಾಖೆಯನ್ನು ಬೇಗನೇ ತೆರೆಯೋಣಾಗುವುದು)

ಭಾರತ ಕಲಾನಿಧಿ

ಜಯಪುರದ ಕೇಂದ್ರ ವಸ್ತು ಸಂಗ್ರಹಾಲಯದಲ್ಲಿ ಅತ್ಯಮೂಲ್ಯ ವಸ್ತುಗಳು ಸಂಗ್ರಹಿಸಲ್ಪಟ್ಟಿವೆ.

ಜಯಪುರದಲ್ಲಿರುವ ಕೇಂದ್ರ ವಸ್ತು ಸಂಗ್ರಹಾಲಯದ ನಿರ್ಮಾಣವನ್ನು ಮಹಾರಾಜ ರಾಮಸಿಂಹಜಿಯವರ ಕಾಲದಲ್ಲಿ ೧೮೭೭ರಲ್ಲಿ ಪ್ರಾರಂಭಿಸಿ ಹತ್ತು ವರ್ಷಗಳಲ್ಲಿ ಮುಗಿಸಲಾಯಿತು. ೧೮೮೭ರ ಫೆಬ್ರುವರಿ ತಿಂಗಳಲ್ಲಿ ಈ ವಸ್ತು ಸಂಗ್ರಹಾಲಯವನ್ನು ವಿಧ್ಯುಕ್ತವಾಗಿ ಉದ್ಘಾಟಿಸಲಾಯಿತು.

ಈ ಸಂಗ್ರಹಾಲಯದ ಭವನವನ್ನು ಭಾರತ-ಪರ್ಶಿಯನ್ ಶೈಲಿಯಲ್ಲಿ ರೂಪಿಸಲಾಗಿದೆ. ಈ ಭವನವನ್ನು ಎತ್ತರವಾದ ಮೇಲುಪಾಯದ ಮೇಲೆ ಕಟ್ಟಲಾಗಿದೆ. ವಿಶಾಲವಾದ ಸೋಪಾನಗಳನ್ನೇರಿ ವಸ್ತು ಸಂಗ್ರಹಾಲಯದೊಳಕ್ಕೆ ಹೋಗಬೇಕಾಗುವುದು. ಈ ಭವನದ ನಿರ್ಮಾಣಕ್ಕೆ ಅಗತ್ಯವಾದ ಮರಳುಗಲ್ಲನ್ನು ಸುತ್ತಮುತ್ತಲು ಇರುವ ಗುಡ್ಡಗಳಿಂದ ಪಡೆಯಲಾಯಿತು. ಕಂಬಗಳು, ಜಾಳಂಧರ ಮತ್ತು ನೆಲಗಳಿಗೆ ರಾಜಾಸ್ಥಾನದ ವಿವಿಧ ಭಾಗಗಳಲ್ಲಿ ದೊರೆಯುವ ವಿವಿಧ ಬಣ್ಣಗಳ ಅಮೃತಶಿಲೆಯನ್ನು ಹೇರಳ ಪ್ರಮಾಣದಲ್ಲಿ ಉಪಯೋಗಿಸಲಾಗಿದೆ. ಈ ರಾಜ್ಯದಲ್ಲಿ ನೂರಾರು ವರ್ಷಗಳಿಂದ ನೆಲೆಸಿರುವ ಕುಶಲ ಕೆಲಸಗಾರರು ವಸ್ತು ಸಂಗ್ರಹಾಲಯ ಭವನದ ದ್ವಾರಗಳು ಮತ್ತು ಕಿಟಕಿಗಳನ್ನು ಅವು ಮರದ್ದಾಗಲಿ ಅಥವಾ ಲೋಹದ್ದಾಗಲಿ ಅತ್ಯಂತ ಸುಂದರವಾದ ರೀತಿಯಲ್ಲಿ ಕೆತ್ತಿರುವರು. ಜಯಪುರದಲ್ಲಿ ಅತ್ಯಂತ ಪ್ರಸಿದ್ಧವಾದ ಕಲಾ ಉದ್ಯಮವೆಂದರೆ ಶಿಲಾ ನಕಾಶೆಯ ಕೆಲಸ. ಜಯಪುರದಲ್ಲಿರುವ ವಸ್ತು ಸಂಗ್ರಹಾಲಯದ ಭವನದ ನಕಾಶೆಯೇ ಒಂದು ಅತ್ಯಂತ ಉತ್ಕೃಷ್ಟವಾದ ನಮೂನೆಯಾಗಿದೆ.

ದರ್ಶಕರು ವಸ್ತು ಸಂಗ್ರಹಾಲಯದ ಭವನವನ್ನು ದೊಡ್ಡದಾದ ಹಜಾರದ ಮೂಲಕ ಪ್ರವೇಶಿಸುತ್ತಾರೆ ಈ ಮುಂಗೋಣೆಯಿಂದ ಮುಖ್ಯ ಹಜಾರವನ್ನು ಪ್ರವೇಶಿಸಬಹುದು. ಈ ಮುಖ್ಯ ಹಜಾರದಲ್ಲಿ ಉತ್ಕೃಷ್ಟವಾದ ರತ್ನಗಂಬಳಿಗಳನ್ನು ಸಂಗ್ರಹಿಸಿಡಲಾಗಿದೆ. ಇಲ್ಲಿರುವ ಉಲ್ಲೇಖನೀಯವಾದ ರತ್ನಗಂಬಳಿಗಳಲ್ಲಿ ಪರ್ಷಿಯಾದಿಂದ ತರಲಾದ ರತ್ನಗಂಬಳಿಯೂ ಒಂದು. ಮೊಗಲ್ ಚಿತ್ರವರ್ತಿ ಅಕ್ಬರನ ಆಳ್ವಿಕೆಯಲ್ಲಿ ಕಾಬೂಲಿನಲ್ಲಿ ಕೆಲವು ತಾಲ ರಾಜ್ಯವಾಳುತ್ತಿದ್ದ ಜಯಪುರದ ಮಹಾರಾಜಾ ಮಾನ್‌ಸಿಂಗನು ಹೇರಾತ್‌ನಿಂದ ಈ ರತ್ನಗಂಬಳಿಯನ್ನು ತಂದನೆಂದು ಹೇಳಲಾಗಿದೆ. ಮೊಗಸಾಲೆಯೊಂದು ಈ ಕೋಣೆಯನ್ನು ಮುಖ್ಯ ವಸ್ತು ಸಂಗ್ರಹಾಲಯದಿಂದ ಬೇರ್ಪಡಿಸುತ್ತದೆ. ಈ ಮೊಗಸಾಲೆಯ ಇಕ್ಕೆಡೆಗಳಲ್ಲಿಯೂ ಆಂಗಳಗಳಿರುವುವು. ಈ ಅಂಗಳಗಳ ಮಧ್ಯಭಾಗದಲ್ಲಿ ಕಾರಂಜಿಗಳಿವೆ ಸುತ್ತಲೂ ಕಂಬದ ಸಾಲುಗಳಿವೆ.

ಹಜಾರದ ಸುತ್ತಲೂ ಇರುವ ವರಾಂಡಗಳಲ್ಲಿ ಮತ್ತು ಮುಖ್ಯ ವಸ್ತು ಸಂಗ್ರಹಾಲಯದಲ್ಲಿ ಭಿತ್ತಿ ಚಿತ್ರಗಳಿವೆ. ಇವು ಸ್ಥಳೀಯ ಹಾಗೂ ವಿದೇಶೀ ಕಲಾ ಪ್ರತಿಭೆಯ ಮಾದರಿಗಳಾಗಿವೆ. ಹೊರ ಕೋಣೆಯಲ್ಲಿ ೧೫೦೦ರಿಂದಲೂ ಜಯಪುರ ಸಂಸ್ಥಾನವನ್ನು ಆಳಿದ ಮುಖ್ಯ ಅರಸರ ಪೂರ್ಣಾಕಾರದ ಭಾವಚಿತ್ರಗಳಿವೆ. ಉಳಿದ ಭಿತ್ತಿ ಚಿತ್ರಗಳು ಈಜಿಪ್ಟ್, ಆಸ್ಸಿರಿಯಾ, ಚೀನಾ, ಜಪಾನ್ ಮುಂತಾದ ರಾಷ್ಟ್ರಗಳ ಕಲಾ ಪ್ರತಿಭೆಯ ಮಾದರಿಗಳಾಗಿವೆ. ಇಂದಿನ ಭಾರತೀಯ ಕಲಾ ಶೈಲಿಗಳ ಮೇಲೆ ವಿವಿಧ ದೇಶಗಳ ಕಲಾ ಶೈಲಿಗಳು ಬೀರಿರುವ ಪ್ರಭಾವವನ್ನು ಪರಿಚಯ ಮಾಡಿಕೊಡುವುದೇ ಈ ಭಿತ್ತಿ ಚಿತ್ರಗಳ ಉದ್ದೇಶವಾಗಿದೆ.

ಮುಖ್ಯ ಹಜಾರದ ಹಿಂಭಾಗದಲ್ಲಿರುವ ಮೊಗಸಾಲೆಯ ಗೋಡೆಗಳ ಮೇಲೆ ರಜ್ಯನಾವಾದ ಅರು ಚಿತ್ರಗಳ ಪ್ರತಿಗಳನ್ನು ಚಿತ್ರಿಸಲಾಗಿವೆ. ಅಕ್ಬರನು ತನ್ನ ಕಾಲದ ಸರ್ವೋತ್ತಮ ಕಲಾವಿದರಿಂದ ಬರೆಯಿಸಿದ ವರ್ಣಚಿತ್ರಗಳ ಪ್ರತಿಗಳನ್ನು ಹಿಂದಿನ ಜಯಪುರ ಸಂಸ್ಥಾನದ ಕಲಾವಿದರು ಚಿತ್ರಿಸಿರುವರು. ಆದರೆ ಮೊಗಲ್ ಕಲಾಕಾರರು ರಚಿಸಿರುವ ಚಿತ್ರಗಳನ್ನೊಳಗೊಂಡ ಮೂಲಪುಸ್ತಕವು ಜಯಪುರದ ಮಾಜಿ ಅರಸರ ವಶದಲ್ಲಿದೆ.

ಪೂರ್ವ ದಿಕ್ಕಿನಲ್ಲಿ ಅಂಗಳದ ಸುತ್ತಲೂ ಇರುವ ವರಾಂಡಾಗಳಲ್ಲಿ ಅಂಬರ್, ದೇವಯಾನಿ ಸಾಂಭರ್, ಪೇಷಾವರ್, ಮತ್ತು ಬನಾರಸಗಳ ಶಿಲಾಮೂರ್ತಿಗಳಿವೆ. ಸಾಂಭರದ ರಾಸಲೀಲೆ ಮತ್ತು ವಿಷ್ಣು ಹಾಗೂ ನಟರಾಜ ಶಿಲಾ ಮೂರ್ತಿಗಳು ಅತ್ಯಂತ ಸುಂದರವಾಗಿವೆ ಭಾರ್ತ್ಸುವಿನ ಜೈನ ಮೂರ್ತಿಕಲೆಯ ಉಚ್ಚಮಾದರ ನಮೂನೆಗಳನ್ನು ಇಲ್ಲಿ ಕಾಣಬಹುದಾಗಿದೆ.

ವಸ್ತು ಸಂಗ್ರಹಾಲಯದ ಮುಖ್ಯ ವಿಭಾಗದ ನೆಲ ಅಂತಸ್ತಿನಲ್ಲಿ ಔದ್ಯೋಗಿಕ ಕಲಾ ವಸ್ತುಗಳು ಮತ್ತು ವಿದೇಶೀ ಕಲಾ ವಸ್ತುಗಳನ್ನು ಕಾಣಬಹುದು. ಮೇಲಂತಸ್ತಿನಲ್ಲಿ ಶಿಲ್ಪಗಳು, ವರ್ಣಚಿತ್ರಗಳು, ವಿಜ್ಞಾನ ಹಾಗೂ ವಸ್ತ್ರ ವಿಭಾಗಗಳಿವೆ.

ದರ್ಶಕರಿಗೆ ವಸ್ತು ಸಂಗ್ರಹಾಲಯದ ಪ್ರತಿ ವಿಭಾಗದಲ್ಲಿಯೂ ನೋಡತಕ್ಕ ಆಕರ್ಷಕ ವಸ್ತುಗಳು ಹೇರಳವಾಗಿವೆ. ಲೋಹ ವಿಭಾಗದಲ್ಲಿ ರಜ್ಯನಾಮದ ರಾಮಾಯಣದ ದೃಶ್ಯಗಳನ್ನು ನಿರೂಪಿಸುವ ಹಿತ್ತಾಳೆಯ ಅಲಂಕಾರ ಫಲಕಗಳು ಮುಂತಾದವನ್ನು ಪ್ರದರ್ಶಿಸಲಾಗಿವೆ. ಜಯಪುರ ಮತ್ತು ಪ್ರತಾಪ್‌ಗಡಗಳ 'ಎನಾಮಲ್' ವಸ್ತುಗಳು ವಾಸ್ತವವಾಗಿಯೂ ದರ್ಶನಯೋಗ್ಯವಾಗಿವೆ. ನೇಪಾಳದಲ್ಲಿ ವ್ಯಾಪ್ತವಾದ, ಟಿಬೆಟ್ಟಿನ ಆಭರಣಗಳಿಂದ ಅಲಂಕೃತವಾದ ಭಗವಾನ್ ಬುದ್ಧನ ಪ್ರತಿಮೆಯು ನಿಜವಾಗಿಯೂ ಆಕರ್ಷಕವಾಗಿದೆ. ಕಲಾ ನೈಪುಣ್ಯದಿಂದ ಕೂಡಿರುವ ಪರ್ಷಿಯಾದ ದೀಪ ಸ್ತಂಭಗಳು ಮುಂತಾದ ವಸ್ತುಗಳು ಉಲ್ಲೇಖಾರ್ಹವಾಗಿವೆ. ಉತ್ತರ ಹಾಗೂ ದಕ್ಷಿಣ ಭಾರತ ದೇವಾಲಯಗಳಲ್ಲಿ ಬಳಸುವ ವಿವಿಧ ವಾದರಿಯ ದೀಪಸ್ತಂಭಗಳನ್ನು ಲೋಹ ವಿಭಾಗದಲ್ಲಿ ವೀಕ್ಷಿಸಬಹುದಾಗಿದೆ. ಜಯಪುರ, ಕಾಶ್ಮೀರ, ಬರ್ಮಾ ಹಾಗೂ ಥಾಕ್ಕಾಗಳಲ್ಲಿ ತಯಾರಾದ ಬೆಳ್ಳಿ ಪಾತ್ರೆಗಳು, ವಸ್ತುಗಳು ಮುಂತಾದವನ್ನು ಲೋಹ ವಿಭಾಗದಲ್ಲಿ ಪ್ರದರ್ಶಿಸಲಾಗಿವೆ.

ದಂತದ ವಸ್ತುಗಳು

ಅನ್ಯ ವಿಭಾಗಗಳಲ್ಲಿ ಪ್ರದರ್ಶಿಸಿರುವ ಉಲ್ಲೇಖನೀಯ ವಸ್ತುಗಳಲ್ಲಿ ಬಿಕಾನೀರ್‌ನಲ್ಲಿ ಒಂಟೆಯ ಚರ್ಮದಲ್ಲಿ ತಯಾರಿಸಲ್ಪಟ್ಟಿರುವ ಸುಂದರವಾದ ವಸ್ತುಗಳು ಭರತಪುರ ಮತ್ತು ಉದಯಪುರಗಳಲ್ಲಿ ತಯಾರಿಸಲ್ಪಟ್ಟ ದಂತದ ಸುಂದರವಾದ ವಸ್ತುಗಳೂ ಸೇರಿವೆ. ಅಂಬಿಕಾದೇವಿಯ ದಂತದ ಪ್ರತಿಮೆಯು ಅತಿ ಸುಂದರವಾಗಿರುವುದು. ಈ ಸುಂದರವಾದ ಕಲಾಕೃತಿಯು ಜಯಪುರದಲ್ಲಿ ಮಾಡಲ್ಪಟ್ಟಿದೆ. ಗಂಧದ ಮರದಲ್ಲಿ ಕೆತ್ತಲ್ಪಟ್ಟಿರುವ ಪೆಟ್ಟಿಗೆಗಳು ಅತಿ ಸುಂದರವಾಗಿವೆ. ಈ ವಿಭಾಗದ್ದು ಕಾಶ್ಮೀರದಲ್ಲಿ ಮಾಡಲ್ಪಟ್ಟ ಮರದ ಹಾಗೂ ಪೇಪರ್ ಮಾಷಿಯ ಸುಂದರವಾದ ವಸ್ತುಗಳನ್ನು ಪ್ರದರ್ಶಿಸಲಾಗಿದೆ. ಬರ್ಮಾ, ಸೂರತ್ ಹಾಗೂ ಜಯಪುರಗಳಲ್ಲಿ ಮಾಡಲ್ಪಟ್ಟ ಅರಗಿನ ಆಟದ ಸಾಮಾನುಗಳನ್ನು ಕೂಡ ಪ್ರದರ್ಶಿಸಲಾಗಿದೆ.

ವಸ್ತು ಸಂಗ್ರಹಾಲಯದ ಕುಂಭ ಕಲಾ ವಿಭಾಗದಲ್ಲಿ ಹಂಗೇರಿ, ಡೆನ್ಮಾರ್ಕ್ ಜಪಾನ್ ವಸ್ತು ಇಂಗ್ಲೆಂಡ್‌ಗಳಲ್ಲಿ ಮಾಡಲ್ಪಟ್ಟಿರುವ ಮಣ್ಣಿನ ಪಾತ್ರೆಗಳು, ವಸ್ತುಗಳು, ಪಾತ್ರೆ ನಿರ್ಮಾಣ ಕಲೆಯನ್ನು ಪರಿಚಯ ಮಾಡಿಸಿ ಕೊಡುವುವು. ಬಿಕಾನೀರ್ ಮತ್ತು ಜಯಪುರಗಳ ಮಣ್ಣಿನ ಪಾತ್ರೆಗಳನ್ನೂ ಪ್ರದರ್ಶಿಸಲಾಗಿವೆ. ವಿದೇಶೀ ವಿಭಾಗದಲ್ಲಿ ೨೦೦೮ ವರ್ಷಗಳಿಗೂ ಹಿಂದಿನ 'ಮಮ್ಮಿ' ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿ ರಕ್ಷಿಸಿ ಇಟ್ಟಿರುವ ಶಿಲೆಗಳ ಮತ್ತು ಮುದ್ರಿಕೆಗಳ ಅಚ್ಚು ಪ್ರದರ್ಶಿಸಲಾಗಿವೆ. ಇವು ಅಪೂರ್ವ ರೀತಿಯ ಕಲಾ ಸಂಗ್ರಹಣೆಯಾಗಿವೆ.

ವಸ್ತು ಸಂಗ್ರಹಾಲಯದ ಶಸ್ತ್ರ ವಿಭಾಗದಲ್ಲಿ ಜಪಾನ್ ಮತ್ತು ಭಾರತ ದೇಶಗಳಿಗೆ ಸೇರಿದ ಬಾಣುಗಳು, ಮುಂತಾದ ವಸ್ತು ಪ್ರದರ್ಶಿಸಲಾಗಿವೆ. ಅಲಗಿನ ಮೇಲೆ ಅರಬ್ಬಿ ಲಿಪಿಯ ಶಾಸನಗಳನ್ನೊಳಗೊಂಡ ಖಡ್ಗಗಳನ್ನು ಕೂಡ ಪ್ರದರ್ಶಿಸಲಾಗಿವೆ.

ಮಧ್ಯದಲ್ಲಿರುವ ಮೂರು ಹಜಾರಗಳಲ್ಲಿ ರಾಜಾಸ್ಥಾನದ ಹಾಗೂ ಹೊರಗಿನ ವರ್ಣಚಿತ್ರಗಳನ್ನು ಪ್ರದರ್ಶಿಸಲಾಗಿವೆ. ಮೊದಲನೆಯ ಹಜಾರದಲ್ಲಿ ರಾಜಾಸ್ಥಾನದ ಉತ್ಕೃಷ್ಟ ಕಲಾಕಾರಕ ಅಪೂರ್ಣ ಕಲಾಕೃತಿಗಳಿರುವುವು ಎರಡನೆಯ ಹಜಾರದಲ್ಲಿ ರಾಜಸ್ಥಾನ, ಕಾಂಗ್ರಾ, ಬಶೋಲಿ, ತಂಜಾವೂರು, ತಿರುಚಿನಾಪಳ್ಳಿ ಮತ್ತು ಚೀನಾಗಳಿಗೆ ಸೇರಿದ ಚಿತ್ರಗಳಿವೆ. ಮೂರನೆಯ ಹಜಾರದಲ್ಲಿ, ಜಯಪುರ ಶೈಲಿಯ ರಾಗಂಗಾಣಿಯ ಚಿತ್ರಗಳು, ಜೋಧಪುರ ಶೈಲಿಯ ಬಾರಹಮಾಸ ಚಿತ್ರಗಳು ಮತ್ತು ಉದಯಪುರ, ನಾಥದ್ವಾರಾ, ಕಿಶನಗಡ ಹಾಗೂ ಬಿಕಾನೀರ್ ಶೈಲಿಗಳ ಚಿತ್ರಗಳೂ ಇವೆ.

ಬಾಲ ವಿಭಾಗದಲ್ಲಿ ಬರ್ಮಾ ಹಾಗೂ ಜಪಾನ್‌ಗಳ ಬೊಂಬೆಗಳನ್ನೂ, ಲಖನೌ ಮಥುರಾ, ಜಯಪುರ ಮತ್ತು ಆಫ್ರಿಕಾಗಳ ಆಟದ ವಸ್ತುಗಳನ್ನು ಪ್ರದರ್ಶಿಸಲಾಗಿವೆ.

ಮಕ್ಕಳ ಜ್ಞಾನಾಭಿವೃದ್ಧಿಗೆ ಸಂಬಂಧಿಸಿದ ವಿಭಾಗವೊಂದಿರುವುದು. ಇಲ್ಲಿ ಸಸ್ಯಶಾಸ್ತ್ರ ಹಾಗೂ ಪ್ರಾಣಿಶಾಸ್ತ್ರಗಳಿಗೆ ಸಂಬಂಧಿಸಿದ ಸಾಮಾನ್ಯ ವಸ್ತುಗಳನ್ನು ಪ್ರದರ್ಶಿಸಲಾಗಿವೆ ಭಾರತದ ಇತಿಹಾಸ ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ವಸ್ತುಗಳನ್ನೂ ಪ್ರದರ್ಶಿಸಲಾಗಿವೆ ಮೇಲ್ತರಗತಿಗಳಲ್ಲಿ ವಿದ್ಯಾಭ್ಯಾಸಮಾಡುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಭಿನ್ನ ವಿಷಯಗಳ ಜ್ಞಾನವರ್ಧಕ ವಸ್ತುಗಳನ್ನು ಈ ವಿಭಾಗದಲ್ಲಿ ಪ್ರದರ್ಶಿಸಲಾಗಿವೆ.

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ರ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಸೆನ್ಸಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕಿಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ವಿಶ್ವವಿದ್ಯಾನಿಲಯ ಸಮಸ್ಯೆ

ನಮ್ಮ ಜಿಲ್ಲೆಗೆ ಯಾವ ವಿಶ್ವವಿದ್ಯಾನಿಲಯ? 'ರಾಷ್ಟ್ರಮತ'ದಅಗ್ರಲೇಖ

ದಕ್ಷಿಣ ಕನ್ನಡದ ಪ್ರೌಢ ಶಿಕ್ಷಣಾಲಯಗಳನ್ನು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿಸಿದುದು ಸರಿಯಲ್ಲ; ಮೈಸೂರು ವಿಶ್ವವಿದ್ಯಾನಿಲಯಕ್ಕೆ ಜೋಡಿಸಬೇಕಿತ್ತು; ಇನ್ನಾದರೂ ಸರಕಾರವು ಈ ಸಂಯೋಜನೆಯನ್ನು ವ್ಯತ್ಯಾಸಪಡಿಸಬೇಕೆಂದು, ಇಲ್ಲಿಯ ಒಂಭತ್ತು ಮಂದಿ ವಿಧಾನ ಸಭಾಸದಸ್ಯರು ಸರಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ ಈ ವಿಷಯವಾಗಿ ಆವಯಿಂದಲೂ ತುಂಬ ಮತಭೇದಗಳಿದ್ದುವು. ಇದಕ್ಕೆ ರಾಜಕೀಯದ ಬಣ್ಣ ಕೊಡುವ ಪ್ರಯತ್ನವು ನಡೆದಿದೆ ಈ ಬಾರಿ ನಮ್ಮ ಪ್ರತಿನಿಧಿಗಳು ಮಾಡಿಕೊಂಡ ಮನವಿಗೆ ಈ ಬಣ್ಣ ಬೀಳಲಿಲ್ಲ- ಎಂದು ಧೈರ್ಯವಾಗಿ ಹೇಳಬರುವುದಿಲ್ಲ ಈ ಶ್ರೀಯುತರು ವಿಚಾರ ರಹಿತವಾಗಿ ಇಂಥ ಅಭಿಪ್ರಾಯವನ್ನು ಕೊಟ್ಟುದೆಂದು ನಮ್ಮ ಅಭಿಪ್ರಾಯವಲ್ಲ ವಿಚಾರದ ದಾರಿ ತಪ್ಪಿಹೋಗಲಿಲ್ಲವೆ? ಎಂದು ನಮ್ಮ ಭಯ. ಇಲ್ಲಿಯ ಪ್ರೌಢ ವಿದ್ಯಾಲಯಗಳ ಭವಿಷ್ಯ ಮೊನ್ನೆಯ ವರಗೆ ತಕ್ಕಡಿಯಲ್ಲಿ ನೇತಾಡ ತ್ತಾ ಇತ್ತು ಈ ಮಹನೀಯರು ಪ್ರತಿನಿಧಿ ಸ್ಥಾನವನ್ನೇರಿ ಕೆಲ ತಿಂಗಳ ಮೆಗೆ ನಿಷ್ಕರ್ಷೆಯಾಗಿರಲಿಲ್ಲ ಸರಕಾರದವರು ವಿದ್ಯಾ ಸಂಸ್ಥೆಗಳ ಚಾಲಕರನ್ನು ಕರೆದು ಕೇಳಿ ಕೊನೆಯ ನಿರ್ಧಾರವನ್ನು ಮಾಡಿದ್ದಾರಲ್ಲದೆ ಸಿರಂಕುಶ ಬುದ್ಧಿಯಿಂದಲ್ಲ. ವಿದ್ಯಾ ಸಂಸ್ಥೆಗಳ ಚಾಲಕರು ನಿರ್ಣಯಗಳು ಇಂಥ ವಿಷಯಗಳಲ್ಲಿ ಪೆಚ್ಚಾಗಿ ನಿರ್ವಿಕಲ್ಪವಾಗಿರುತ್ತವೆ ಕರ್ನಾಟಕ ವಿಶ್ವವಿದ್ಯಾನಿಲಯದ ಸ್ವತಂತ್ರ ವಾತಾವರಣ ನಮ್ಮ ಜಿಲ್ಲೆಯ ವಿದ್ಯಾ ಸಂಸ್ಥೆಗಳಿಗೆ ಹಿತಕರವಾಗಬಹುದೆಂದು ಅವರ ಭಾವನೆಯಿತ್ತು. ಅಬಿವರ್ಧಿಷ್ಣುವಾದ ತರುಣ ವಿದ್ಯಾನಿಲಯವು- ತೆರೆ ಮನಸ್ಸಿನಿಂದ ಮುನ್ನಡೆದು ಹೋಗುವಷ್ಟು ಬೆಳೆದ ಸಂಸ್ಥೆ ಹೋಗಲಿಲ್ಲವೆಂಬುದು ಖಂಡಿತವಾಗಿಯೇ ಇದೆ. ಮೈಸೂರಿನ ಶಿಕ್ಷಣ ಕ್ರಮವು ನಮ್ಮದನ್ನು ಹೆಚ್ಚುಕಡಿಮೆ ಹೋಲುವುದಾಗಿದೆ ಎನ್ನುವ ಮಾತು ನಿಜ ಆದರೆ ಪ್ರಕೃತದ ವ್ಯತ್ಯಸ್ತ ಪರಿಸ್ಥಿತಿಯಲ್ಲಿ ಮಕ್ಕಳಿಗೆ ವಿಷಯಜ್ಞಾನ ಹೆಚ್ಚಾಗಬೇಕಾದುದು ಅವಶ್ಯ ವಿದ್ಯಾಸು- ಮೈಸೂರುಗಳಲ್ಲಿ ಭಾಷಾ ಪಾಂಡಿತ್ಯಕ್ಕೆ ಹೆಚ್ಚು ಗಮನ ಕೊಡಲಾಗಿದೆ ಕರ್ನಾಟಕ ವಿಶ್ವವಿದ್ಯಾನಿಲಯವು ವಿಷಯಜ್ಞಾನಕ್ಕೆ ಪ್ರಾಧಾನ್ಯ ಕೊಟ್ಟಿದ ಅದರಿ ಭಾಷಾ ಪಾಂಡಿತ್ಯದ ಮೂಲವನ್ನೇನೂ ಕೆತ್ತುವಂತಿಲ್ಲ. ಅದರಲ್ಲಿಯೂ ವಿಶೇಷ ವಿದ್ವತ್ತೆಯನ್ನು-ಭಾಷಾವಿದ್ವತ್ತೆಯನ್ನು ಏಚ್ಚಿಕವಾಗಿ ಪಡೆಯುವುದಕ್ಕೆ ಅವಕಾಶವಿರುವುದರಿಂದ, ಅಭ್ಯಾಸ ಕ್ರಮವು ದೋಷಪೂರಿತವಾಗಿದೆ ಎನ್ನಬರುವುದಿಲ್ಲ. ಅದರಲ್ಲಿರುವ ಕೆಲವು ಗ್ರಾಹ್ಯಾಂಶಗಳನ್ನು ಮೈಸೂರು ಸ್ವೀಕರಿಸಬಹುದು, ಎನ್ನುವಂತಿಲ್ಲ. ವಿದ್ಯಾಲಯ ಪ್ರವೇಶದಲ್ಲಿ ಜಾತಿಭೇದಕ್ಕೆ ಎಡೆಗೊಡಬಾರದು, ಯೋಗ್ಯತೆಗೆ ಪುರಸ್ಕಾರ ದೊರೆಯಬೇಕು; ಎನ್ನುವ ಕರ್ನಾಟಕ ವಿಶ್ವವಿದ್ಯಾನಿಲಯದ ತತ್ವವನ್ನು ಸಹ ಯಾರೂ ಅಲ್ಲಗಳೆಯುವ ಹಾಗಿಲ್ಲ

ನಮ್ಮ ಜಿಲ್ಲೆಯ ಒಂಭತ್ತು ಮಂದಿ ತಮ್ಮ ಮನವಿಯಲ್ಲಿ ಉಭಯ ಸಂಸ್ಥೆಗಳ ಕೊಳಗಿರುವ ಭೇದಗಳನ್ನು ಒತ್ತಿ ಕೇಳಿದ್ದಾರೆ. (೧) ಔದ್ಯೋಗಿಕ ಶಿಕ್ಷಣಕ್ಕೆ ಕೆಚ್ಚಿನ ಅಪ್ಪದವಿಲ್ಲದಿರುವುದು (೨) ಕರ್ನಾಟಕ ವಿಶ್ವವಿದ್ಯಾನಿಲಯದ ಅಶ್ರಯದಲ್ಲಿ ಮೆಡಿಕಲ್ ಕಾಲೇಜು ಇಲ್ಲದಿರುವುದು-ಎನ್ನುವ ಕಾರಣಗಳು ಸತ್ಯವಾಗಿದ್ದರೂ ಪ್ರಬಲವಾಗಿ ತೋರುವುದಿಲ್ಲ. ಏಕೆಂದರೆ, ಏಕರಾಜ್ಯ ಬಾರತಕ್ಕೆ ಒಳಪಟ್ಟ ಎರಡು ವಿಶ್ವವಿದ್ಯಾನಿಲಯಗಳಲ್ಲಿ ಏಕ ಪ್ರಮಾಣದ ವಿದ್ಯಾಭ್ಯಾಸಾನುಕೂಲತೆ ಇಲ್ಲವಲ್ಲಿ ಒಂದು ತ್ಯಾಜ್ಯ ಒಂದು ಗ್ರಾಹ್ಯ ಎನ್ನುವ ಅಭಿಪ್ರಾಯವು ಭ್ರಾಂತಿ ಮೂಲವಾದುದು. ಈ ಎರಡು ಪ್ರದೇಶಗಳು ಹಿಂದುಸ್ಥಾನ ಪಾಕಿಸ್ಥಾನಗಳಂತೆ ಭಿನ್ನ ರಾಷ್ಟ್ರಗಳಾಗಿ ಒಂದರ ಪ್ರಜೆಗಳಿಗೆ ಇನ್ನೊಂದರ ಅಪ್ಪದವಿಲ್ಲ-ಎನ್ನುವಂತಹ ತೀವ್ರ ಭೇದಗಳು ಇವೆ ಅಥವಾ ಇರಬಹುದು ಎಂಬ ಭೀತಿಯನ್ನು ದ್ವನಿ ಮೂಲಕ ಪ್ರಕಟಿಸಿದುದು ಸರಿಯಲ್ಲ ಇದಕ್ಕೆ ಆದಾರವಿಲ್ಲ ಇದ್ದರೆ ಅದನ್ನು ನಿವಾರಿಸಬೇಕೆಂದು ಈ ಮಹನೀಯರು ಹೇಳಬೇಕಾಗಿತ್ತು ಅಲ್ಲದೆ ಸರಕಾರವು ಒಂದು ಬಗೆಯ ನೀತಿ ನಿಷ್ಕರ್ಷೆಯನ್ನು ವಿಚಾರ ಪೂರ್ವಕವಾಗಿ ಮಾಡಿರುವಾಗ-ಸಬಲ ಕಾರಣಗಳಾವುವೂ ಇಲ್ಲದೆ, ಅದನ್ನು ಬದಲಾಯಿಸಬೇಕೆನ್ನುವುದರಲ್ಲಿ ಔಚಿತ್ಯ ಏನೂ ಇಲ್ಲ ಹೊಸ ಆಂದ್ರದಲ್ಲಿಯೂ ಇದೇ ಸ್ಥಿತಿ ಇದೆ ಒಂದು ವಿಶ್ವವಿದ್ಯಾನಿಲಯವು ಇನ್ನೊಂದಕ್ಕೆ ಪೂರಕವಾಗಿದೆ ಒಂದನ್ನು ಬಿಟ್ಟು ಇನ್ನೊಂದನ್ನು ಸೇರಬೇಕೆಂದು ಯಾವ ಆಂಧ್ರನೂ ಹೇಳುವುದಿಲ್ಲ. ಅಥವಾ ಒಂದರ ವಿದ್ಯಾರ್ಥಿ ಇನ್ನೊಂದರಿಂದ ಬಾಹಿರನು ಎನ್ನುವ ಏಕಾಂಗತೆಯೂ ಅಲ್ಲಿ ಇಲ್ಲ ಎರಡುವಿಶ್ವವಿದ್ಯಾನಿಲಯಗಳಲ್ಲಿಯೂ ಏಕ ಪ್ರಕಾರವಾಗಿ ವೃದ್ಧಿ ವಿಕಾಸಗಳನ್ನು ಸಾಧಿಸಬೇಕೆಂದು ಕೇಳುವುದರ ಬದಲು, ತತ್ಕಾಲಕ್ಕೆ ಯಾವುದರಲ್ಲಿ ಅಧಿಕಾನುಕೂಲತೆಗಳಿವೆಯೋ ಅಲ್ಲಿಗೆ ಸುಳುಕೊಳ್ಳೋಣ ಎನ್ನುವ ಅಲ್ಪ ಮನೋಭಾವನೆ ಎಂದಿಗೂ ಯುಕ್ತವಲ್ಲ ಇಷ್ಟೆಲ್ಲ ಮನವಿ ಮಾಡುವವರಿಗೆ ಒಂದು ವಿಷಯ ಮರೆತಂತೆ ತೋರುತ್ತದೆ ಆದ ವ್ಯವಸ್ಥೆಯನ್ನು ಬದಲಾಯಿಸಿ ಮತ್ತೊಂದೆ ನಮ್ಮ ವಿದ್ಯಾ ಸಂಸ್ಥೆಗಳನ್ನು ಅಡಿಮೇಲು ಮಾಡುವುದರ ಬದಲು ಬರಿಯ ಒಂದು ನಿರೂಪ ಹೊರಡಿಸಿ, ಮೈಸೂರು ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ-ಕನ್ನಡದ ಎಲ್ಲ ಮಕ್ಕಳಿಗೂ ಸಮಾನಾವಕಾಶ ದೊರೆಕಿಸುವ ಸಾಮರ್ಥ್ಯ ಸರಕ ರಕ್ಕಿದೆ ಈ ಅಧಿಕಾರವನ್ನು ಪ್ರಯೋಗಿಸಬಹುದೆಂದು ಒತ್ತಾಯಿಸುವುದು. ಯುಕ್ತವೂ ಆಗಿದೆ ಹಾಗೆ ಮಾಡದೆ ಭಿನ್ನತೆಯನ್ನು ಹೆಚ್ಚಿಸಿ, ರಾಜಕೀಯ ಕುತಂತ್ರಗಳನ್ನು ಎಬ್ಬಿಸಬಹುದಾದ ಆ ವ್ಯಾಪಾರಕ್ಕೆ ನಮ್ಮ ಪ್ರತಿನಿಧಿಗಳು ಇಳಿದಿದ್ದಾರೆ ಎನ್ನುವುದು ವಿಷಾದಾಸ್ಪದ ತಮ್ಮ ಬೇಡಿಕೆಗೆ ಜಿಲ್ಲೆಯಲ್ಲಿ ಏಕಕಂಠತೆಯ ಸಮರ್ಥನೆ ಇದೆ-ಎಂದವರು ಭಾವಿಸಿದ್ದಾರೆ ಇದು ತಪ್ಪು

(ಮೈಸೂರಿನ ಮುಖ್ಯಮಂತ್ರಿಗೊಪ್ಪಿಸಿದ ಮನವಿಗೆ ನಮ್ಮ ಎಂ ಎಲ್ ಎ ಗಳಾದ ಕೆ. ವೆಂಕಟ್ರಮಣ ಗೌಡ, ಮಂಜಪ್ಪ ಉಳ್ಳಾಲ, ಎ ಆರ್ ಕಕ್ಕೇರಿ, ಗಣಪತಿ ರಾವ್ ಪಂಡಿತ್, ಎಫ್ ಎಕ್ಸ್ ಡಿ ಪಿಂಟೊ, ಯು ಎಸ್ ನಾಯಕ್, ಬಿ ಜನಾರ್ದನ ದಾಸ ಸೆಟ್ಟಿ, ಡಾ ಕೆ ಕೆ ಹೆಗ್ಡೆ, ಡಾ ಕೆ ನಾಗಪ್ಪ ಆಳ್ವ, ವಿ ಶ್ರೀನಿವಾಸ ಶೆಟ್ಟಿ. ಇವರು ಸಹಿ ಮಾಡಿದ್ದಾರೆ ಸಂ ನ)

ಸಿಂಡಿಕೇಟ್ ಬೇಂಕನ್ನೇ ಜನರು ಏಕೆ ಆರಿಸುತ್ತಾರೆ?

- 31 ವರ್ಷಗಳ ಸೇವೆಯಲ್ಲಿ 11 ಕೋಟಿಗೂ ಮಿಕ್ಕಿದ ಒಂಡವಾಳ
- ಪ್ರಾಂತ್ಯಮ್ಯ ಕೇಂದ್ರಗಳಲ್ಲಿ 96 ಶಾಖೆಗಳು
- ಕರ್ನಾಟಕದಲ್ಲೇ 59 ಶಾಖೆಗಳು
- ಹಳ್ಳಿ-ಹಳ್ಳಿಗಳಲ್ಲೂ ಬೇಂಕಿಂಗ್ ಸೌಕರ್ಯಗಳು
- ಪಿಗ್ಮಿ, ಕ್ಯಮಲೇಟಿವ್‌ನಂತಹ ಆಕರ್ಷಕ ಯೋಜನೆಗಳು
- ವಿದ್ಯಾರ್ಥಿಗಳಿಗೆ ವಿಶೇಷ ಅನುಕೂಲತೆಗಳು
- ಉತ್ತಮ ಆಡಳಿತ ಮತ್ತು ನೌಕರ ವರ್ಗ
- ಯೋಗ್ಯ ಭದ್ರತೆ, ಪ್ರಮಾಣಿಕತೆ ಮತ್ತು ಕ್ಲಿಷ್ಟತೆಯ ವ್ಯವಹಾರ

ಸಿಂಡಿಕೇಟು ಜನಪ್ರಿಯವಾದ ಬೇಂಕು

ಡಾ। ಟಿ ಎಂ ಎ ಪೈ, ಮೆನೇಜಿಂಗ್ ಡೈರೆಕ್ಟರ್ — ಟಿ ಎ. ಪೈ, ಜನರಲ್ ಮೆನೇಜರ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ.

The Canara Industrial & Banking Syndicate, Ltd., UDIPI.

ಹೀಗಿದೆ ಪ್ರಪಂಚ

ಈಟೋಪಿ ನಿಮಗಾಗುತ್ತದೆಯೆ? ಹಾಗಿದ್ದರೆ ಇಟ್ಟುಕೊಳ್ಳಿರಿ.

"ಆರಾತೀಯ ಕವೀಶ್ವರರಾರುಂ ಮುನ್ನಾರ್ತರಿಲ್ಲ-ವಾಗ್ದೇವಿಯ ಭಂಡಾರದ ಮುದ್ರೆಯನ್ನೊಡೆದಂ- ಸಾರಸ್ವತಮೆನಿಸಕವಿತೆಯೊಳ್ ಕವಿರನ್ನಂ"- ನಾನು ಪಂಡಿತರ ಮನೆಯನ್ನು ಹೊಗುವಾಗ ಪಂಡಿತರು ಗಟ್ಟಿಯಾಗಿ ಓದುತಿದ್ದರು

"ನಮಸ್ಕಾರ ಪಂಡಿತರೆ, ಏನನ್ನು ಓದುತಿದ್ದೀರಿ?

"ಓಹೋ ರಾಮರಾಯರು, ನಮಸ್ಕಾರ ಸ್ವಾಮಿ ಕುಳಿತುಕೊಳ್ಳಿರಿ ಇದು ರನ್ನನ ಗದಾಯುದ್ಧ ಸ್ವಾಮಿ ರನ್ನ ಅಂದರೆ ಕನ್ನಡ ಕವಿಗಳಲ್ಲಿ ಒಂದು ಅಪ್ರತಿಮ ರತ್ನ ಕನ್ನಡ ವಾಗ್ಮಯದ ಒಂದು ಅದ್ವಿತೀಯ ಜ್ಯೋತಿ. ಇಂದಿನ ಕವಿಗಳೆಲ್ಲ ಇವನ ಮುಸುರೆ ತಿಕ್ಕಲು ಕೂಡಾ ಯೋಗ್ಯರಲ್ಲ ಕವಿತೆ ಒಂದರೆ ಸುಮ್ಮನಾಗುತ್ತದೆಯೆ? ಶೀಲಿ, ಭಾವನೆ, ರಸ . . .

ಅನ್ನುವಷ್ಟರಲ್ಲಿ ನಮ್ಮ ಪರಿಚಿತರಾದ ದಂತವೈದ್ಯರೂ ಬಂದರು

'ಬನ್ನಿ ಶಾಸ್ತ್ರಿಗಳೇ - ಹೌದು, ನಿಮ್ಮನ್ನು ಕಂಡಾಗ, ಈಗ ನೆನಪು ಒಂತು, ಮೊನ್ನೆ 'ನವಯುಗ'ದಲ್ಲಿ ನೀವು ಬರೆದ ಲೇಖನವನ್ನು ಓದಿ ನೋಡಿದೆ. ಅಹಹ! ನಿಮ್ಮ ಅಸಾಧಾರಣ ಪಾಂಡಿತ್ಯಕ್ಕೆ ಏನೆನ್ನಬೇಕು? ಅಲ್ಲಯ್ಯಾ, ನೀವು ಎಲ್ಲಾ ರೋಗಗಳಿಗೂ ಹಲ್ಲಿನ ಅಜಾಗರೂಕತೆಯೆ ಕಾರಣವೆಂದರೆ ಅಲ್ಲ, ನಾವು ವೈದ್ಯರೆಲ್ಲಾ ಏನು ಮಾಡುವುದು, ಮತ್ತೆ ಬೆರಣಿ ತಟ್ಟುವುದೊ?- ಏನು ಕೊಲಸು ಬರೆಯುತ್ತೀರಿ ನೀನೆಲ್ಲಾ ಆಯುರ್ವೇದಾಚಾರ್ಯರಾದ ಚರಕ ಶುಶ್ರುತರಿಗಿಂತಲೂ ಘನ ಪಂಡಿತರಾಗಿ ಬಿಟ್ಟಿರಲ್ಲ?

ದಂತವೈದ್ಯರ ಮುಖ ಸಪ್ಪೆಯಾಗುತ್ತಾ ಬಂತು

'ಅಲ್ಲ ರಾಮರಾಯರೇ, ಎನಾಟಮಿ ಏನೂ, ಅಂತ ತಿಳಿಯದವರು, ರೋಗ ನಿಧಾನವನ್ನರಿಯದವರು, ಇವರೆಲ್ಲಾ ಕಲಕತ್ತೆಗೊ, ಬೊಂಬಾಯಿಗೊ ಓಹೋಗಿ ನಾಲ್ಕಾರು ತಿಂಗಳು ಯಾರೋ ದಂತವೈದ್ಯರಲ್ಲಿದ್ದು ಬಂದಬಂದವರಿಗೆಲ್ಲಾ ಸರ್ವಾಂಗನೇಟ ನೀರು ಕುಡಿಸಿದ ಒಡನೆಯೇ ಘನವೈದ್ಯರು ತಾವು ಸರ್ವಜ್ಞರು ತಾವೆಂದು ಲೈಸನ ಬಾಯಲಿಟ್ಟೇನ ತೊಡಗಿಬಿಟ್ಟರೆ, ನಾವೆಲ್ಲಾ ನಮ್ಮ ಇಡೀ ಆಯುಷ್ಯನ್ನೇ ಈ ವೃತ್ತಿಯಲ್ಲಿ ಸವೆಸಿದವರು ಇವರ ಹುಟ್ಟಿಗೆ ಹೀಗೆಯೇ ಅನ್ನಬೇಕಲ್ಲವೆ? ನೀವೇ ಹೇಳಿರಿ."

ದಂತವೈದ್ಯರು ಕುಳಿತಲ್ಲಿಂದ ಎದ್ದರು ಎದ್ದವರು 'ನಮಸ್ಕಾರ' ಎಂದು ಎಂದು ಹೊರಟೇಬಿಟ್ಟರು

ಅಷ್ಟರಲ್ಲಿ ಪಂಡಿತರ ಪತ್ನಿ ಕೂಡಾಗೆ ಬಂದರು.

'ಏನಮ್ಮಾ, ಸುಖವೆ?" ಎಂದೆ.

"ರಾಮರಾಯರು! ಏನು ಮನೆಯಲ್ಲಿ ಎಲ್ಲಾ ಕ್ಷೇಮವಾನೆ? ನಮ್ಮವರಿಗೆ ಮಾತು ಅಡಲು ಕುಳಿತರೆ ಬೇರೊಂದು ಗೊಡವೆಯೂ ಇಲ್ಲ- ಕಾಫಿ ತರುತ್ತೇನೆ" ಎಂದು ಒಳಗೆ ಹೋದರು.

ಕೆಲವು ವರುಷಗಳ ಹಿಂದಿನ ಮಾತದು

ಂ ಂ ಂ

ಪಂಡಿತರು, ಅಂದರೆ ನಮ್ಮ ದೂರದ ಸಂಬಂಧಿಕರು. ಗಣಪಯ್ಯ ಎಂತ ಅವರ ಹೆಸರು. ನಾವು ಅವನ್ನು ಪಂಡಿತರೆಂದು ಕರೆಯುವುದು ಗಣಪಯ್ಯನವರಿಗೆ ತಿಳಿಯದ ವಿದ್ಯೆಯಿಲ್ಲ ಅವರು ಮಾಡದ ಕೆಲಸವಿಲ್ಲ ಅವರು ಕನ್ನಡ ಪಂಡಿತರು ದೊಡ್ಡ ಕವಿಗಳು. ಅವರೇ ಒಮ್ಮೆ ಹೇಳಿದಂತೆ ಯಾರೋ ದೊಡ್ಡ ವಿದ್ವಾಂಸರು ಅವರ ಹೆಸರು ಕೂಡಾ ಹೇಳಿದ್ದರು. ಪಂಡಿತರ ಕವಿತೆಗೆ ಮರುಳಾಗಿ ಹೇಳಿಬಿಟ್ಟಿದ್ದರಂತೆ "ಪಂಡಿತರೆ ನಿಮ್ಮಂಥವರು ಇನ್ನೂ ಹತ್ತು ಮಂದಿ ನಮ್ಮ ಈ ಕನ್ನಡ ನಾಡಿನಲ್ಲಿ ಜನ್ಮನೆತ್ತಿದ್ದರೆ ಕನ್ನಡ ಸಾಹಿತ್ಯದ ಸ್ಥಿತಿಯೇ ಬೇರೆಯಾಗುತ್ತಿತ್ತು ನಿಮ್ಮಂಥ ಕವಿಗೆ 'ಬಸವ ನೆಂಕೊಂದನೀವೊಡೆ ರವಿಗೆ ಸೊಡರ ಕೋರ್ಪಂತಕ್ತುಂ' ಎಂದು ಸ್ಫೂರ್ತಿಯಿಂದ ಅಂದುಬಿಟ್ಟಿದ್ದರಂತೆ. ಮತ್ತೆ ಪಂಡಿತರು ಮಹಾ ಸಂಸ್ಕೃತ ವಿದ್ವಾಂಸರು. ಎಲ್ಲಕ್ಕೂ ಮೇ

(೧೦ನೇ ಪುಟ ನೋಡಿರಿ)

ಸುಪ್ತ ಚೇತನ

ಮಾನವ ಸಮಾಜವನ್ನು ಪ್ರಗತಿಯತ್ತ ಮುನ್ನಡೆಸುವ ಶಕ್ತಿ ಮನಶ್ಶಾಸ್ತ್ರಕ್ಕಿದೆ!

ಮನಶ್ಶಾಸ್ತ್ರವು ಮನಸ್ಸಿನ ಸ್ವರೂಪದ ವಿಷಯದಲ್ಲಿ ಅನೇಕ ಶೋಧನೆಗಳನ್ನು ಮಾಡಿದೆ. ೧೯ನೇ ಶತಮಾನದ ವರೆಗೆ ಮನಸ್ಸು ಯೋಚಿಸುವ ನಡೆದ ಸಂಗತಿಗಳನ್ನು ನೆನಪು ಮಾಡುವ, ಕಲ್ಪನೆ, ನಿಶ್ಚಯಗಳನ್ನು ಮಾಡುವ ಸಾಧನವೆಂದು ಮಾತ್ರ ಭಾವಿಸಲ್ಪಡುತ್ತಿತ್ತು. ಆದರೆ ೨೦ನೇ ಶತಮಾನದಲ್ಲಿ ನಡೆದ ವೈಜ್ಞಾನಿಕ ವಿಚಾರ ಶೀಲತೆಯು ಮನಸ್ಸಿನ ನಿಜರೂಪವನ್ನು ದೊರಗೆಡಹುವುದರಲ್ಲಿ ತುಂಬಾ ಪ್ರಗತಿಯನ್ನು ಪಡೆಯಿತು ಡಾ. ಸಿಗ್ಮಂಡ್ ಫ್ರಾಯ್ಡ್ ಎಂಬವನು ಮನಸ್ಸನ್ನು ನೀರಿನಲ್ಲಿ ತೇಲುವ ಮಂಜುಗಡ್ಡೆಯಂತೆ ಸ್ವಲ್ಪ ಅಂಶ ಮಾತ್ರ ಮೇಲೆ ಕಾಣುವುದು. ಅದಕ್ಕಿಂತಲೂ ಹೆಚ್ಚಿನ ಭಾಗವು ನಮ್ಮ ಊಹೆಗೆ ನಿಲುಕದೆ ಇದೆ ಎಂದು ಶೋಧಿಸಿದರು, ಇದನ್ನು 'ಅಂತರ್ಮನ' ಅಥವಾ 'ಸುಪ್ತಚೇತನ' ಎನ್ನುವರು. ಇದು ಒಂದು ಸಂಗ್ರಹಾಲಯದಂತಿದೆ.

ಬಾಹ್ಯ ಹಾಗೂ ಅಂತರ್ಮನಗಳಿಗೆ ನಿಕಟ ಸಂಬಂಧವಿದೆ. ಆದರೂ ಬಾಹ್ಯ ಮನವು ನಮ್ಮ ಅಂಕೆಯೊಳಗಿದ್ದರೂ ಅಂತರ್ಮನವು ಸ್ವೇಚ್ಛಾಚಾರಿಯಾಗಿದೆ. ಇದನ್ನು ನಿಯಂತ್ರಿಸಬಲ್ಲವನೇ ಯೋಗಿಯಾಗಲರ್ಹನು ನಾವು ನಿದ್ರಿಸಿರುವಾಗ ಬಾಹ್ಯ ಮನವು ಕ್ರಿಯಾಹೀನವಾದರೂ ಅಂತರ್ಮನವು ಕ್ರಿಯಾಶಾಲಿಯಾಗಿರುವುದು. ಅದು ಸ್ವಪ್ನಗಳನ್ನು ಉಂಟುಮಾಡುವುದು. ಕನಸಿನಲ್ಲಿ ನಡೆಯುವ ಕ್ರಿಯೆಗಳ ಮೇಲೆ ನಮ್ಮ ಹಿಡಿತವು ಎಳ್ಳಷ್ಟೂ ಇಲ್ಲ. ಮನಸ್ಸು ವಿಚಾರ ಹೀನವಾಗಿರುವುದಿಲ್ಲ. ಒಂದಲ್ಲ ಒಂದು ವಿಚಾರವು ಮನಸ್ಸಿನಲ್ಲಿ ನಡೆಯುತ್ತಲೇ ಇರುವುದು. ಆದರೂ ಹಲವೊಮ್ಮೆ ಅನಿರೀಕ್ಷಿತ ವಿಚಾರಗಳು ನಮ್ಮ ಮನಸ್ಸಿನಲ್ಲಿ ಬರುವುದು ಈ ಅಂತರ್ಮನದಿಂದ. ಕೆಲವೊಮ್ಮೆ ನಾವು ಆಚರಿಸುವ ಕ್ರಿಯೆಗಳಿಗೆ ಕಾರಣ ಕೊಡಲು ಅಸಾಧ್ಯವಾಗುವುದು. ಈ ಕ್ರಿಯೆಗಳು ಅಂತರ್ಮನದ ಪ್ರೇರಣೆಯಿಂದಾಗುತ್ತವೆ.

ಮರವೆ ಮತ್ತು ನೆನಪು. ನಮ್ಮ ಜೀವನದಲ್ಲಿ ನಡೆದ ಅಪ್ರಿಯ ಘಟನೆಗಳು ಬಾಹ್ಯ ಮನದಿಂದ ಮಾಯವಾದರೂ ಅಂತರ್ಮನದಲ್ಲಿ ಸಂಗ್ರಹವಾಗುವುವು. ಒಮ್ಮೆ ಅಂತರ್ಮನದಲ್ಲಿ ನೆಲೆಯಾದ ವಿಚಾರಗಳು ಪುನಃ ಹೊರಗೆ ಬಾರದಿರುವುದೇ ಮರವೆ. ಅಂತೆಯೇ ನೆನಪೂ ಕೂಡಾ ಅಂತರ್ಮನದ ದೇಣಿಗೆಯಾಗಿದೆ. ಇದರಿಂದ ವಿಷಯಗಳ ಜೋಡಣೆಗೆ ತುಂಬಾ ಸಹಾಯವಾಗುವುದು.

ಈ ಸುಪ್ತಚೇತನವನ್ನೂ ಎರಡು ವಿಭಾಗಗಳಾಗಿ ವಿಂಗಡಿಸಿದ್ದಾರೆ. ಅವು ಪ್ರಸುಪ್ತ ಮನ ಮತ್ತು ಪ್ರತಿಹಾರಮನ ಪ್ರಸುಪ್ತಮನವು ಸರ್ವಶಕ್ತಿಗಳ ಕೇಂದ್ರ ಮತ್ತು ಎಲ್ಲಾ ಅನುಭವಗಳ ಸಂಚಯ ಗ್ರಹವಾಗಿದೆ. ಮನುಷ್ಯನ ಜೀವನ ಶಕ್ತಿಯು ಈ ಭಾಗದಿಂದಲೇ ಸಿಗುವುದು. ಆರೋಗ್ಯವೂ ಅನಾರೋಗ್ಯವೂ ಇದರ ಅನುಕೂಲತೆ ಮತ್ತು ಪ್ರತಿಕೂಲತೆಗಳನ್ನು ಹೊಂದಿಕೊಂಡಿದೆ. ಇದು ಯಾವಾಗಲೂ ಪ್ರಕಾಶಕ್ಕೆ ಬರಲು ಬಯಸುತ್ತದೆ. ಇದು ಯೋಗ್ಯ ರೀತಿಯಲ್ಲಿ ಪ್ರಕಾಶಗೊಂಡ ಮಾನವನು ಅತಿ ಮಾನವನಾಗಬಹುದು. ಇದು ಬಾಹ್ಯಮನದ ಮೂಲಕವೇ ಪ್ರಕಾಶಕ್ಕೆ ಬರಬೇಕು.

ಅಂತರ್ಮನದ ಎರಡನೇ ಭಾಗವು ನೈತಿಕವಾಗಿದೆ. ಇದು ಆದರ್ಶವಾಗಿಯದೆ. ಮನುಷ್ಯನ ಅಹಂಕಾರಕ್ಕೆ ಇದೇ ಕಾರಣವಾಗಿದೆ. ಬಾಹ್ಯ ಮನಕ್ಕೂ ಪ್ರಸುಪ್ತ ಮನಕ್ಕೂ ನಡುವೆ ಇದ್ದು ಇದು ಪ್ರಸುಪ್ತ ಮನದ ಪ್ರಕಾಶನಕ್ಕೆ ತಡೆಮಾಡುವುದು. ಇದು ಉಚಿತ ಮತ್ತು ಅನುಚಿತಗಳ ಕಲ್ಪನೆಮಾಡಿ, ಅನುಚಿತ, ಅನೈತಿಕ ಅಪ್ರಿಯ ವಿಷಯಗಳನ್ನು ಪ್ರಕಾಶಕ್ಕೆ ಬಾರದಂತೆ ತಡೆಗಟ್ಟುವುದು ಇದರ ಕೆಲಸ. ಶಿಕ್ಷಣದಿಂದ ಇದರ ವಿಕಾಸ ಸಾಧ್ಯ. ಮನುಷ್ಯನು ಯಾವ ರೀತಿಯ ಶಿಕ್ಷಣವನ್ನು ಹೊಂದುತ್ತಾನೋ ಆ ರೀತಿಯಲ್ಲಿ ಈ ಮನಸ್ಸು ಮಾರ್ಪಾಟಾಗುವುದು.

ನಮ್ಮ ಬಾಹ್ಯಮನವು ಶಿಕ್ಷಣದ ಕಾರಣದಿಂದ ಬುದ್ಧಿವಂತಿಕೆಯಿಂದ ಕೂಡಿರುವುದು. ಚಿಕ್ಕ ಮಕ್ಕಳ ಬಾಹ್ಯಮನಕ್ಕೂ ಅಂತರ್ಮನಕ್ಕೂ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಆದರೆ ಅವರು ಬೆಳೆದಂತೆ ಶಿಕ್ಷಣ ಪಡೆದು, ಅನುಭವದಿಂದ ತರ್ಕಶೀಲವಾಗುವುದು. ಅಂತರ್ಮನವು ಈ ರೀತಿಯ ಶಿಕ್ಷಣಗಳಿಗೆ ಒಳಪಡದು, ಅದು ಯಾವಾಗಲೂ ನಿರ್ಮಲವಾಗಿರುವುದು. ಪ್ರತಿಯೊಂದು ವಿಷಯವನ್ನೂ ವಿಚಾರಿಸದೇ ನಂಬುವುದು. ನಾವು ಒಬ್ಬ 2–3 ವರ್ಷದ ಮಗುವಿಗೆ "ನಿನ್ನ ಕಿವಿ ಕಾಗೆ ಕಚ್ಚಿಕೊಂಡು ಹೋಯಿತು" ಎಂದಾಗ ಅವನು ಕಿವಿ ಇದೆಯೋ ಇಲ್ಲವೋ ಎಂದು ನೋಡದೆ ಅಳಲು ಪ್ರಾರಂಭಿಸುವನು.

ಅಂತರ್ಮನದಲ್ಲಿ ಅಸತ್ಯಕ್ಕೆ ಎಡೆ ಇರುವುದಿಲ್ಲ. ಚಿಕ್ಕ ಮಕ್ಕಳಿಗೆ ಸುಳ್ಳಾಡಲು ಗೊತ್ತೇ ಇಲ್ಲ. ಬೆಳೆದಂತೆ ಅವರು ತಮ್ಮ 'ಪ್ರತಿಹಾರ' ಮನಕ್ಕೆ ದೊರೆತ ಶಿಕ್ಷಣದಿಂದ ಸುಳ್ಳಾಡಲು ಕಲಿಯುವರು. ಅಂತರ್ಮನವು ಪ್ರೀತಿಯನ್ನು ಬಯಸುತ್ತದೆ. ಈ ಪ್ರೀತಿಯು ಹಲವು ರೀತಿಗಳಲ್ಲಿ ಹಂಚಿ ಹೋಗುವುದು. ಮಾತೃಪ್ರೇಮ, ಭ್ರಾತೃಪ್ರೇಮ, ಪತಿಪತ್ನಿಯರ ಪ್ರೀತಿ, ವಿಶ್ವ ಪ್ರೇಮ ಮುಂತಾದ ಭಾವನೆಗಳು ಈ ಮನದಲ್ಲಿ ಉಗಮಿಸುವವು.

ಸುಪ್ತಚೇತನವು ಶಕ್ತಿಯುತವಾಗಿದೆ. ಜ್ಞಾತ ಕ್ರಿಯೆಗಳು ಬಾಹ್ಯಮನದ ಅಧೀನದಲ್ಲಿದ್ದಂತೆ ಅಜ್ಞಾತ ಕ್ರಿಯೆಗಳು ಈ ಮನದ ಅಧೀನದಲ್ಲಿವೆ. ದೇಹದ ನಿಯಂತ್ರಣೆ, ಶ್ವಾಸೋಚ್ಛ್ವಾಸ, ಹೃದಯ ಕ್ರಿಯೆ, ಜೀರ್ಣಕ್ರಿಯೆ. ಕಶ್ಮಲ ವಿಸರ್ಜನೆಗಳು ಅಂತರ್ಮನದ ಕೆಲಸಗಳು. ಒಂದು ವಿಷಯವು ತರ್ಕಬದ್ಧವಾಗಿ ಎಷ್ಟೇ ಅಸಂಭವವಿದ್ದರೂ, ಅಂತರ್ಮನವು ಅದನ್ನು ನಿಜವೆಂದೇ ನಂಬುವುದು. ಅಂತೇ ಒಂದು ರೋಗವು ಎಷ್ಟು ಭಯಂಕರವಿದ್ದರೂ ಅಂತರ್ಮನವು ರೋಗ ನಿವಾರಣೆಯಾಗುವುದೆಂದು ತಿಳಿದರೆ ಖಂಡಿತವಾಗಿ ರೋಗ ನಿವಾರಣೆಯಾಗುವುದು. ಇದೇ ಆಧಾರದ ಮೇಲೆ, ಆತ್ಮ ನಿರ್ದೇಶ (Auto suggestion), ಸಂಮೋಹನ (Hypnotism)ಗಳಿಂದ ರೋಗ, ಯಾ, ಇತರ ಭಯಂಕರ ಚಟಗಳನ್ನು ನಿರ್ಮೂಲ ಮಾಡುವರು. ಬುದ್ಧಿಶಕ್ತಿಯನ್ನು ತೀಕ್ಷ್ಣಗೊಳಿಸಲೂ ಇದರಿಂದ ಸಾಧ್ಯವಿದೆ. ಚಿಕ್ಕ ಮಕ್ಕಳು ಮಲಗಿದಾಗ 'ನಿರ್ದೇಶ ಚಿಕಿತ್ಸಾ ವಿಧಾನ'ದಿಂದ ನಮಗೆ ಬೇಕಾದಂತೆ ಅವರನ್ನು ಅನುಗೊಳಿಸಲು ಸಾಧ್ಯವಿದೆ

ಒಮ್ಮೊಮ್ಮೆ ನಾವು ಯಾವುದಾದರೊಂದು ಸಮಸ್ಯೆಯನ್ನು ದೀರ್ಘ ಕಾಲ ಆಲೋಚಿಸಿ ಪರಿಹಾರ ಸಿಗದೆ ಮರೆತು ಬಿಡುತ್ತೇವೆ. ಆದರೆ ಕಕ್ಕನೆ ಅದರ ಉತ್ತರ ಹೊಳೆಯುತ್ತದೆ. ಇದು ಅಂತರ್ಮನದ ಕೆಲಸ, ಮಹಾಸಾಹಿತಿಗಳು ತಮ್ಮ ಅಂತರ್ಮನದ ಸಹಾಯದಿಂದ ಬರೆದ ಸಾಹಿತ್ಯವು ಚಿರಸ್ಥಾಯಿಯಾಗಬಲ್ಲದು. ಇಲ್ಲವಾದರೆ ಅದು ಕ್ಷಣಿಕ ಮನರಂಜನೆಯನ್ನು ಮಾತ್ರ ಒದಗಿಸಬಲ್ಲದು. ಎಚ್. ಜಿ ವೆಲ್ಸರ ಸಾಯನ್ಸ್ ಒಫ್ ಲೈಫ್, ಶೇವ್ ಒಫ್ ದಿ ಥಿಂಗ್ಸ್ ಟು ಕಮ್, ವಾಲ್ಮೀಕಿ ರಾಮಾಯಣ, ವ್ಯಾಸರ ಮಹಾಭಾರತ ಇತ್ಯಾದಿ ಉದ್ಗ್ರಂಥಗಳು ಚಿರಕಾಲ ಇರಬಲ್ಲವು.

ಮನಸ್ಸಿನ ವಿವಿಧ ಮುಖಗಳ ಪರಿಚಯ ಮಾಡಿಕೊಡುವ ಮನಶ್ಶಾಸ್ತ್ರದ ಸಹಾಯದಿಂದ ಸಮಾಜವು ಅಧಃಪತನಕ್ಕೆ ಹೋಗುವುದನ್ನು ತಪ್ಪಿಸಬಹುದು. ಕ್ರೌರ್ಯ, ಹಿಂಸೆ ಅಶಾಂತಿ ತುಂಬಿದ ಇಂದಿನ ಜಗತ್ತಿಗೆ ಶಾಂತಿ ಸಂದೇಶವನ್ನು ನೀಡಿ ಮಾನವ ಸಮಾಜವು ಪ್ರಗತಿಪಥದಲ್ಲಿ ಮುನ್ನಡೆಯುವಂತೆ ಮಾಡುವ ಅಮಿತ ಶಕ್ತಿಯು ಮನಶ್ಶಾಸ್ತ್ರಕ್ಕಿದೆ. ಆ ದಿಶೆಯಲ್ಲಿ ಪ್ರಯತ್ನಗಳಾಗಬೇಕಷ್ಟೆ.

ಕೆ. ಪುರುಷೋತ್ತಮ ಮುಲ್ಯ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮೂಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ರಾಮತೀರ್ಥ ಬ್ರಾಹ್ಮೀ ತೈಲ



ಪೈಕ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಯತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧.

ನೋಟೀಸು

ಉಡುಪಿ ತಾಲೂಕು ನಂಬ್ರ 33ನೇ ಶೀರೂರು ಗ್ರಾಮದ ಪೈಲ್ ಮನೆ ಅಕ್ಕಮ್ಮ ಸೆಡ್ತಿಯರ ಮಗಳು ಕೊರಾತಿಯಾನ ವೆಂಕಮ್ಮ ಸೆಡ್ತಿಯು ಸರ್ವರಿಗೂ ಈ ಮೂಲಕ ತಿಳಿಸುವುದೇನೆಂದರೆ

ನನಗೆ ಕಣ್ಣು ಕಾಣದೆ ಹಲವು ವರ್ಷಗಳಿಂದ ಶೀರೂರಿನಲ್ಲಿರುವ ನನ್ನ ಮಗಳು ಮಂಜಮ್ಮ ಸೆಡ್ತಿ ಬಟ್ಟಗೆ ಜೀವಿಸಿಕೊಂಡಿದ್ದೆ. ಒಂದು ತಿಂಗಳ ಹಿಂದೆ ನನ್ನ ಮಗಳ ಗಂಡ ಕೆ. ಸಂಜೀವ ಸೂಡನು ನನಗೆ ಔಷಧಿ ಮಾಡುವ ನೆವನದಿಂದ ಬ್ರಹ್ಮಾವರಕ್ಕೆ ಕರೆಕೊಂಡು ಹೋಗಿ ನನ್ನ ಸ್ವಂತ ಆಸ್ತಿಯಲ್ಲಿ ಗಂಡು ಮಕ್ಕಳಿಗೆ ಇಚ್ಛಾನುಸಾರವಲ್ಲದ ದೋಗಲಾವತೆಂಬು ನೆವನ ಹೇಳಿ ತಾ. 23 6.57ರಲ್ಲಿ ನನ್ನಿಂದ ಏನೇನೋ ರಿಕಾರ್ಡು ರಿಜಿಸ್ಟ್ರಿಮಾಡಿಸಿ ಸಾಮ್ಯ ಕರಕೊಂಡುಬಂದು ಶೀರೂರಿನಲ್ಲಿ ಬಿಟ್ಟಿದ್ದಾರೆ. ತಾ. 18 7.57ರ ನವಭಾರತದಲ್ಲಿ ಪ್ರಕಟಿಸಿದಂತೆ ತಾ. 10 7.57ರಲ್ಲಿ ನನ್ನ ಮಗಳು ನರ್ಸಮ್ಮ ಸೆಡ್ತಿ, ಮ, ಅವಳ ಮಕ್ಕಳು ರಕ್ಷಾರಾಮ ಭಂಡಾರಿ ನಾಗಯ್ಯ ಸೆಟ್ಟಿ, ಸರಸ್ವತಿ ಸೆಡ್ತಿ ಸದ್ರಿ ನರ್ಸಮ್ಮ ಸೆಡ್ತಿ ಗಂಡ ಮಹಾಬಲ ಭಂಡಾರಿಯಾಗಿರಲೇ ಯಾರೊಬ್ಬರೂ ಸುಕಲಾಯಿಸಿ ಅವರ ಮನೆಗೆ ಕರಕೊಂಡುಹೋಗದ್ದಾಗಲೀ ನನ್ನ ಹೆಟ್ಟೆಟ್ಟು ಮೊರು ತೆಗೆದದ್ದಾಗಲೀ ಇರುವದಿಲ್ಲ ನನ್ನ ಗಂಡು ಮಕ್ಕಳು ಈ ತನಕ ನನಗಾವರೀತಿಯಿಂದವಿರೋಧವಾಗಿ ವರ್ತಿಸಿದ್ದಿಲ್ಲ ನಮ್ಮ ಕುಟುಂಬದೊಳಗೆ ತಾ. 6.6.1954ರಲ್ಲು ಆದ ಹಿಸೆ ಪಟ್ಟಿಪ್ರಕಾರ ನನ್ನ ಮೂರು ಹೆಣ್ಣುಮಕ್ಕಳಿಂದ ಬರತಕ್ಕ ಅಕ್ಕಿಯನ್ನು ಪಡಕೊಂಡು ಅಯಾಯ ವರ್ಷ ಕ್ರಮವಾದ ರಶೀದಿ ಕೊಟ್ಟಿದ್ದೇನೆ. ಅಲ್ಲದೆ ನನ್ನ ಸ್ವಂತಕ್ಕಯದ ಹಕ್ಕಿನ ಎಲ್ಲಾ ಸ್ಥಳಿಗಳನ್ನು ನನ್ನ ಹಿರೇ ಮಗನು ನರ್ಸಮ್ಮ ಸೆಡ್ತಿಗೆ ಈ ಹಿಂದೆ ಚಾಲಗೇಣಿಗೆ ಕೊಟ್ಟು ಅವಳಿಂದ ವರ್ಷಂಪ್ರತಿ ಬರತಕ್ಕ ಕೊಳಲ್ಸು ಅಕ್ಕಿ ಮುಡಿ 5ನ್ನು ಪಡಕೊಂಡು ಅಯಾಯ ವರ್ಷ ಕ್ರಮವಾದ ರಶೀದಿ ಕೊಟ್ಟಿರುತ್ತೇನೆ. ಸದ್ರಿ ನನ್ನ ಮಗಳ ಗಂಡ ಕೆ. ಸಂಜೀವ ಸೂಡನು ನನ್ನ ಬಾಕಿ ಹಿಜನ ಮಕ್ಕಳಿಗೆ ಸೋಸಮಾಡುವ ದುರಭಿಲಾಸೆಯಿಂದ ಮಾಡ್ಸಿಕೊಂಡಿರುವ ಟ್ರಸ್ಟ್ ಡೀಡ್ ವಗೈರೆ ಯಾವುದೂ ನಿಂಧ. ಆಗತಕ್ಕದ್ದಲ್ಲ ಸದ್ರಿ ನವಭಾರತದಲ್ಲಿ ಕಾಣಿಸಿದ ನನ್ನ ಹೆಸರಿನ ನೋಟೀಸು ಯಾರೋ ವಿರೋಧಿಗಳು ಸುಳ್ಳು ಹೆಟ್ಟೆಟ್ಟು ಕಾಗದ ಬರೆದಿದ ಅದರಲ್ಲಿರುವ ಎಲ್ಲಾ ಸಂಗತಿಗಳು ಸುಳ್ಳು ನೋಟೀಸು

|| ● ಈ ಎರಡು ಗೆರೆ ನ. ಎಡಕ್ಕೆ ಹೆಟ್ಟೆಟ್ಟನ ಸುರ್ತು ಸದ್ರಿ ಕೊರಾತಿಯಾನ ವೆಂಕಮ್ಮ ಸೆಡ್ತಿ ರುಜು.

ಕಾಲುವೆ ನೀರ ತಂಟೆ

ಪಾಕಿಸ್ಥಾನದ ಮೊಂಡುತನಕ್ಕೆ ಭಾರತವೆಂದಿಗೂ ಬಗ್ಗದು

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಎದ್ದಿರುವ ಸಿಂಧೂ ನದಿಯ ಹಾಗೂ ಅದರ ಉಪನದಿಗಳ ನೀರಿನ ಉಪಯೋಗದ ಕುರಿತಾದ ವಿವಾದವನ್ನು ಯೋಗ್ಯ ವಿಧಾನದಲ್ಲಿ ತೀರ್ಮಾನಿಸಿ ಎರಡು ರಾಷ್ಟ್ರಗಳೊಳಗಿನ ಮನಸ್ಥಾಪವನ್ನು ಹೋಗಲಾಡಿಸುವ ಸಲುವಾಗಿ ಜಾಗತಿಕ ಬೇಂಕು ೧೯೫೪ರಲ್ಲಿ ಒಂದು ನಿರ್ಧಾರಕ್ಕೆ ಬಂದಿತ್ತು. ಆದರೆ ಆ ವಿವಾದವು ಕೊನೆಗೊಳ್ಳದೆ ಮತ್ತಷ್ಟು ಹೆಚ್ಚುತ್ತ ಬಂದುದರಿಂದ, ಪಾಕಿಸ್ತಾನವು ಆ ನಿರ್ಧಾರಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸದಿದ್ದುದರಿಂದ, ಜಾಗತಿಕ ಬೇಂಕಿನ ಉಪಾಧ್ಯಕ್ಷರಾದ ಶ್ರೀ ಡಬ್ಲ್ಯೂ ಎ ಬಿ ಇಲಿಫರವರು ಕಳೆದ ತಿಂಗಳಲ್ಲಿ ಈ ಎರಡು ರಾಷ್ಟ್ರಗಳ ನಡುವೆ ಓಡಾಡಿ, ತಾನು ವಾಶಿಂಗ್‌ಟನ್ನಿಗೆ ಹೊರಡುವಾಗ, ಎರಡು ಸರಕಾರಗಳಿಗೂ ವಿವಾದವನ್ನು ಕೊನೆಗೊಳಿಸುವಲ್ಲಿ ಕೆಲವೊಂದು ಕಾಸ ಸೂಚನೆಗಳನ್ನಿತ್ತು, ಅವಕ್ಕೆ ಒಂದು ತಿಂಗಳೊಳಗಾಗಿ ತಂತಮ್ಮ ಸರಕಾರಗಳ ಅಭಿಪ್ರಾಯವನ್ನು ವ್ಯಕ್ತಪಡಿಸಲು ಕೇಳಿಕೊಂಡಿರುವರು ಹೀಗೆ ಇತ್ತಿರುವ ಅವಧಿಯು ಈ ತಿಂಗಳ ತಿಳನೆ ತಾರೀಕಿಗೆ ಮುಗಿಯುವುದರಿಂದ ಇಕ್ಕಡೆಯ ಸರಕಾರದ ಪ್ರಧಾನಿಗಳು ಶ್ರೀ ಇಲಿಫರನ್ನು ಕಾಣಲು ತಮ್ಮ ಸರಕಾರದ ಉತ್ತರದೊಂದಿಗೆ ವಾಶಿಂಗಟನ್ನಿಗೆ ಪ್ರಯಾಣದ ದಾರಿಯಲ್ಲಿದ್ದಾರೆ

ಮೊನ್ನೆ ಈ ಸುಲಾದ ಹೊಸ ಸೂಚನೆಗಳೆಲ್ಲವೂ ೧೯೫೪ರ ಮೂಲ ಸೂಚನೆಯ ವ್ಯವಲಂಬಿಸಿಯೇ ಇದೆ ಎಂದು ತಿಳಿದು ಬರುತ್ತದೆ ಆದರೆ, ಅದಾವ ವಿಧಾನವನ್ನು ಶ್ರೀ ಇಲಿಫರು ಸೂಚಿಸಿರುವರೆಂಬುದು ಇನ್ನೂ ಬಹಿರಂಗವಾಗಿಲ್ಲ. ಆದರೂ ಇವುಗಳು ಹಿಂದಿನವುಗಳನ್ನು ಅಧರಿಸಿ, ಎರಡು ರಾಷ್ಟ್ರಗಳನ್ನೂ ಸಂಧಾನದತ್ತ ಕರೆದೊಯ್ಯುವಂತಾಗಿ ದಿಂಬಹುದೆಂದು ನಂಬಲಾಗಿದೆ

ಭಾರತ ಸರಕಾರದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಶಾಖೆಯ ಜತೆ ಕಾರ್ಯದರ್ಶಿಗಳಾದ ಶ್ರೀ ಎನ್. ಡಿ ಗುಲಾಟಿಯವರು ಈ ವಿವಾದ ಸಂಬಂಧ, ಜಾಗತಿಕ ಬೇಂಕಿಗೆ ಹೋಗಲಿರುವ ಭಾರತೀಯ ಮಂಡಳದ ನಾಯಕರಾಗಿದ್ದಾರೆ ಇವರು ದಿನಾಂಕ ೨೧ರಂದು ವಾಶಿಂಗಟನ್ನಿಗೆ ಹೊರಟಿರುವರು

ಭಾರತವು ಜಾಗತಿಕ ಬೇಂಕಿನ ೧೯೫೪ರ ಸೂಚನೆಗಳನ್ನು ಈ ಮೊನ

ಮತ್ಸ್ಯ ಪಾಲನೆ

ದೇಶದ ಉದ್ದಿಮೆಗಳಲ್ಲಿ ಮೀನಿನ ವ್ಯವಸಾಯಕ್ಕೆ ಮಹತ್ವದ ಸ್ಥಾನವಿದೆ

ಭಾರತದಲ್ಲಿ ಇತ್ತೀಚೆಗೆ ಒಳನಾಡಿನ ಮತ್ಸ್ಯಪಾಲನೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ತೀವ್ರ ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರಾಯಶಃ ರಾಷ್ಟ್ರದ ಎಲ್ಲ ರಾಜ್ಯಗಳಲ್ಲಿಯೂ ಮತ್ಸ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಕೃತ ದೇಶದ ನಾನಾ ಭಾಗಗಳಲ್ಲಿ ಒಟ್ಟು ೧೯ ಮತ್ಸ್ಯ ಸಂಶೋಧನಾಕೇಂದ್ರಗಳ ಭರದಿಂದ ತಮ್ಮ ಕಾರ್ಯಕಲಾಪಗಳನ್ನು ಮುನ್ನಡೆಸುತ್ತಿವೆ ಈ ಸಂಶೋಧನಾ ಕೇಂದ್ರಗಳಲ್ಲಿ ಕಂಡುಹಿಡಿಯಲಾದಂತೆ ಭಾರತದಲ್ಲಿ ದೊರೆಯುವ ವಿವಿಧ ಜಾತಿಗೆ ಸೇರಿದ ಮೀನುಗಳನ್ನು ಕೆರೆ ಕುಂಟೆಗಳಲ್ಲಿ ಬೆಳೆಯಿಸುವುದೂ ಸಾಧ್ಯವಾಗಿದೆ.

ಭಾರತದ ಮೂರು ಸುತ್ತಿನ ವಿಶಾಲ ಸಮುದ್ರಗಳಿಂದ ಅಧಿಕ ಪ್ರಮಾಣದಲ್ಲಿ ಮೀನು ಹಿಡಿಯುವ ಕಾರ್ಯಕ್ರಮವನ್ನು ಕೈಗೊಳ್ಳಲು ತಕ್ಕಷ್ಟು ಪ್ರಯತ್ನವನ್ನು ಮಾಡಲಾಗುತ್ತಿದೆ ಕರಾವಳಿಯಲ್ಲಿ ಹೆಚ್ಚಿನ ವಟ್ಟದಲ್ಲಿ ಮೀನು ಹಿಡಿಯಲಾಗುತ್ತದೆ ಮೀನು ಹಿಡಿಯಲು ಉಪಯೋಗಿಸುವ ದೋಣಿಗಳನ್ನು ಯಂತ್ರಗಳಿಂದ ಸಜ್ಜುಗೊಳಿಸಿ, ಹಿಡಿಯಲಾಗುವ ಮೀನುಗಳ ಸಂಖ್ಯೆಯನ್ನು ಏರಿಸುವ ಬಗ್ಗೆ ಯೋಗ್ಯ ಕ್ರಮಗಳನ್ನು ಆಚರಣೆಯಲ್ಲಿ ತರಲಾಗುತ್ತಿದೆ

೧೯ಸಲವಲ್ಲಿ ಸ್ಥಾಪಿಸಲ್ಪಟ್ಟ ಪ್ರಾಯೋಗಿಕ ಕೇಂದ್ರವು ಕರಾವಳಿ ಪ್ರದೇಶಗಳಲ್ಲಿ ಮೀನುಗಳನ್ನು ಹಿಡಿಯುವ ಬಗ್ಗೆ, ತೀವ್ರ ರೀತಿಯ ಪರಿಶೋಧನಾ ಕಾರ್ಯವನ್ನು ಪೂರ್ಣಗೊಳಿಸಿದೆ. ಅಲ್ಲದೆ ಮೀನುಗಳು ಹೇರಳವಾಗಿ ದೊರೆಯುವ ಪ್ರದೇಶಗಳನ್ನು ಸಹ ಗುರುತಿಸಿರುತ್ತದೆ. ಭಾರತೀಯ ಸ್ಥಿತಿಗತಿಗಳಿಗನುಗುಣವಾಗಿ ಉಪಯೋಗಿಸಬೇಕಾದ ದೋಣಿಗಳು, ಯಂತ್ರಗಳ ನೆರವಿನಿಂದ ಮೀನುಗಳನ್ನು ಹಿಡಿಯುವ ವಿಧಾನಗಳಲ್ಲಿ ಭಾರತೀಯರಿಗೆ ತಕ್ಕ ತರಬೇತಿಯನ್ನು ಈಯುವುದು ಮೊದಲಾದ ಕಾರ್ಯಗಳಲ್ಲಿ ಈ ಸಂಶೋಧನಾ ಕೇಂದ್ರವು ಸಂಪೂರ್ಣ ಯಶಸ್ವಿಯಾಗಿದೆಯೆಂದು ಹೇಳಬಹುದು.

ಮೀನುಗಳು ಮಾಂಸಾಹಾರಿಗಳಿಗೆ ಅತ್ಯುತ್ತಮ ಆಹಾರ ವಸ್ತುವಾಗಿರುತ್ತವೆ ಒಂದು ಸಂಖ್ಯಾಕ ಭಾರತೀಯರಿಗೆ ಅಗತ್ಯವಾದ ಪ್ರಾಣಿ ಸಂಬಂಧಿ ಸಾರಜನಕ್ಯವನ್ನು ಒದಗಿಸುವ ವಿಷಯದಲ್ಲಿ ಮತ್ಸ್ಯಪಾಲನೆಯು ಪರಿಪಾಲನೆಗೆ ಸಮವಾಗಿದೆ ಎಂದರೂ ಎನ್ನಬಹುದು. ಪೌಷ್ಟಿಕ ಆಹಾರ ಸಂಬಂಧವಾದ ಸಲಹಾ ಸಮಿತಿಯ ವರದಿಯು ನವೆಂಬರದಲಿದ ಪ್ರಕಾರ ಭಾರತೀಯರಿಗೆ ಕಡಿಮೆಯೆಂದರೆ ೪೦ ಲಕ್ಷ ಟನ್ನುಗಳಷ್ಟು ಮೀನಿನ ಅವಶ್ಯಕತೆಯಿರುವುದು. ಆದರೆ ಈಗ ಕೇವಲ ೧೨ ಲಕ್ಷ ಟನ್ನಿಗಿಂತಲೂ ಕಡಿಮೆ ಪ್ರಮಾಣದ ಮೀನಿನ ಉತ್ಪಾದನೆಯು ಭಾರತದಲ್ಲಿ ಆಗುತ್ತಿದೆ.

ಭಾರತೀಯ ಉದ್ದಿಮೆಗಳಲ್ಲಿ ಮೀನಿನ ವ್ಯವಸಾಯವೂ ಒಂದು ಮಹತ್ವ ಸ್ಥಾನವನ್ನು ಆಕ್ರಮಿಸಿದೆ. ಕರಾವಳಿಯಲ್ಲಿನ ಪ್ರತಿಯೊಂದು ಗ್ರಾಮ ಯಾ ಊರಿನಲ್ಲಿಯೂ ಅಯಾಯಾ ಸುಟ್ಟದಲ್ಲಿ ಮೀನನ್ನು ಸಮುದ್ರದಿಂದ ಹಿಡಿಯುತ್ತಾರೆ ನದಿ, ಕೆರೆ, ಕೊಳ್ಳಗಳಂತಹ ಒಳ ಪ್ರದೇಶಗಳಲ್ಲಿ ಸಹ ಮೀನು ಹಿಡಿಯುವುದ ನಡೆಯುತ್ತಿರುತ್ತದೆ

ಪ್ರಥಮ ಪಂಚವರ್ಷಿಕ ಯೋಜನಾವಧಿಯಲ್ಲಿ ಮತ್ಸ್ಯಪಾಲನೆಯ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಸುಮಾರು ೫ ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. ದ್ವಿತೀಯ ಯೋಜನೆಯಲ್ಲೂ ಇದಕ್ಕಾಗಿ ಸಾಕಷ್ಟು ಹಣವನ್ನು ದೊರಕಿಸಲಾಗುತ್ತದೆ ಭಾರತದಲ್ಲಿ ಈ ಮತ್ಸ್ಯಪಾಲನೆಯ ಉದ್ಯಮವನ್ನು ಯೋಗ್ಯರೀತಿಯಿಂದ ಮುಂದುವರಿಸಿದಲ್ಲಿ ಜಗತ್ತಿನಲ್ಲಿಯೇ ಅಗ್ರಗಣ್ಯ ಸ್ಥಾನವನ್ನು ಪಡೆಯುವುದು ಸಾಧ್ಯ ಆದಿನವು ಬೇಗನೇ ಬರಬಹುದೆಂದು ನಿರೀಕ್ಷಿಸೋಣ

ADVERTISE IN
NAVAYUGA SPECIAL

ಬ್ರಿಟಿಷ ಕಾಮನ್‌ವೆಲ್ತ್ ಮತ್ತು ಸಮಾಜಗಳ ಪ್ರತಿನಿಧಿಗಳು ಇಂಡಿಯನ್ಸ್‌ಲ್ಲೊಂದು ಪಾರ್ಲಿಮೆಂಟರಿ ಕ್ರಮವನ್ನಭ್ಯಾಸ ಮಾಡಿದರು ಚಿತ್ರದಲ್ಲಿ ಈ ಪ್ರತಿನಿಧಿಗಳಲ್ಲಿ ಕೆಲವರನ್ನು ಕಾಣಬಹುದು ಎಡದಿಂದ ಬಲಕ್ಕೆ— ಜೆ ಡಿ ಪ್ರಾಸ್ಟೂಮೋ (ಪಾರ್ಲಿಮೆಂಟರಿ ಅಂಡರ್ ಸೆಕ್ರೆಟರಿ), ಎಸ್ ಎಂ ಇ ಹಸನ್ ಡೈಟ್ (ಸೂರಾನ್), ಎ ಎಸ್ ಅಸಮುದು (ಉತ್ತರ ಸೈಪ್ರಿಯರು), ಟಿ. ಎಸ್. ಡ್ಯೂಕ್ (ಟ್ರಿನಿಡಾಡ್), ಎಚ್ ಎಸ್. ಇಸ್ಮಾಯೆಲ್ (ಪಾಕಿಸ್ತಾನ), ಎಂ ಪಿ ಪೆರೆರಾ (ಎಂ ಪಿ ಮಲಯ)

ಸ್ಥಾಪನೆ. 1906] [ಪ್ರಧಾನ ಕಾರ್ಯಾಲಯ ಉಡುಪಿ (ದ ಭಾರತ)

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ರೇವಣಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?

ಹಾಗಿದ್ದಲ್ಲಿ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬೇಂಕಿನ ಶಾಖೆಯಲ್ಲಿ ವಿಚಾರಿಸಿರಿ "ಕೊರ್ಪೊರೇಶನ್" ಬೇಂಕು ಎಲ್ಲಾ ತರದ ಸೇವಣಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿಯದೆ ಅಲ್ಲದೆ ರೇವಣಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ಶರ್ತಗಳನ್ನೂ ಬದಲಾಯಿಸಿಯದೆ.

51 ವರುಷಗಳ ಪರಿಪಕ್ವ ಬೇಂಕಿಂಗ್ ಅನುಭವ!

7,00,00,000 ರೂಪಾಯಿಗಳಿಗೂ ಮೀರಿದ ಒಟ್ಟು ವಹಿವಾಟು!

THE CANARA BANKING CORPORATION LIMITED

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೧-೮-೫೭	೪೭

ಅಸಂಬದ್ಧ ಪ್ರಲಾಪ

ನೆರೆಯ ರಾಷ್ಟ್ರವಾದ ಪಾಕಿಸ್ತಾನದೊಳಗೆ ಸ್ನೇಹ ಸಂಪರ್ಕವನ್ನು ಸ್ಥಾಪಿಸಿಕೊಂಡು ನೆಮ್ಮದಿಯಿಂದ ಬಾಳಬೇಕೆಂಬ ಭಾರತದ ಇಚ್ಛೆಯ ಫಲಕಾರಿಯಾಗುವ ಲಕ್ಷಣಗಳೇನೂ ಕಾಣಿಸುತ್ತಿಲ್ಲ; ಬದಲಿಗೆ ಪಾಕಿಸ್ತಾನಿ ಧುರೀಣರು ಭಾರತದೊಡನೆ ಆ ರಾಷ್ಟ್ರದ ಸಂಬಂಧವು ಎಷ್ಟು ಕೆಡಲು ಸಾಧ್ಯವೋ ಅಷ್ಟು ವಿಷಮಗೊಳ್ಳುವಂತೆ ಕೆಲವು ಕಾರ್ಯಕಗಳನ್ನು ನಡೆಸಿದ್ದಾರೆ. ಕಾಶ್ಮೀರ ಸಮಸ್ಯೆ ಮತ್ತು ಕಾಲುವೆ ನೀರಿನ ತಂಟೆ ಎಂಬವೆರಡು ವಿವಾದಗಳನ್ನು ಅವುಗಳ ನ್ಯಾಯವಾದ ನೆಲೆಯಿಂದ ವಿಚಾರಿಸದೆ ಸಂಪೂರ್ಣ ವಿರೂಪಗೊಳಿಸಿ ಅಸ್ಪಷ್ಟ ಹಾಗೂ ಅಸಹ್ಯವಾದ ಚಿತ್ರವನ್ನು ಪಾಶ್ಚಾತ್ಯ ರಾಷ್ಟ್ರಗಳ ಜನರ ಎದುರು ರೇಖಿಸಿ, ಭಾರತದ ನಿಲುಮೆಯೇ ನಿಶ್ಚಯವಾಗಿಯೂ ಅನ್ಯಾಯದ್ದೆಂದೂ ಸತ್ಯಕ್ಕೆ ಚ್ಯುತಿ ತರುವಂತಹುದೆಂದೂ ಪಾಕಿಸ್ತಾನದ ಜನತೆಗೆ ಭೀತಿಯನ್ನೂ ಆ ರಾಷ್ಟ್ರಕ್ಕೆ ಗಂಡಾಂತರವನ್ನೂ ತರುವಂತಹುದೆಂದೂ ಅಭಿಪ್ರಾಯಸಡುವಂತೆ ಅಪಪ್ರಚಾರ ನಡೆದಿರುತ್ತದೆ. ಈ ಅಪಪ್ರಚಾರದ ಮುಖ್ಯ ಸೂತ್ರಧಾರತ್ವವನ್ನು ಪಾಕಿಸ್ತಾನಿ ಪ್ರಧಾನಿಗಳೇ ವಹಿಸಿಕೊಂಡಿದ್ದಾರೆ. ಅಲ್ಲಿ ಈಗ ಪ್ರಧಾನಿಗಳಾಗಿರುವ ಶ್ರೀಯುತ ಸುಹ್ರವರ್ದಿಯವರು ಸುಳ್ಳುಮಾತಿನ ವೈಖರಿಯಲ್ಲಿ ತಮ್ಮ ಪೂರ್ವಜರನ್ನು ಮೀರಿಸಿದ್ದಾರೆಂದು ಹೇಳಿದರೆ, ಅದೇನೂ ಅತ್ಯುಕ್ತಿಯಾಗಲಾರದು. ಸತ್ಯವನ್ನು ಮರೆಮಾಚುವುದರಲ್ಲಿ ಅವರ ಮನಸ್ಸಾಕ್ಷಿಗೆ ಯಾವುದೇ ನೋವಾಗುತ್ತಿರುವಂತೆ ಕಾಣುವುದಿಲ್ಲ. ಕಾಶ್ಮೀರದಲ್ಲಿ ಭಾರತವೇ ಆಕ್ರಮಣ ನಡೆಸಿದೆ; ಪಾಕಿಸ್ತಾನವು ಈ ಆಕ್ರಮಣವನ್ನು ತಡೆಗಟ್ಟಲು ಸೈನ್ಯವನ್ನು ಕಳುಹಿಸಿತು—ಎನ್ನುತ್ತಾರೆ ಶ್ರೀ ಸುಹ್ರವರ್ದಿ. ಇದರ ಮೇಲಿಂದ ಪಾಕಿಸ್ತಾನವು ಆಕ್ರಮಣ ರಾಷ್ಟ್ರವಲ್ಲ ಎನ್ನುವುದು ಸುಸ್ಪಷ್ಟವಾಗುವುದೆಂದವರ ಅಂಬೋಣ. ಆದರೆ, ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕರ ಮಂಡಳವು ಏನು ಅಭಿಪ್ರಾಯಪಟ್ಟಿತು? ಪಾಕಿಸ್ತಾನವೇ ಕಾಶ್ಮೀರದಲ್ಲಿ ಪ್ರಥಮವಾಗಿ ಆಕ್ರಮಣ ನಡೆಸಿತೆಂದು ಈ ಮಂಡಳವು ತನ್ನ ವರದಿಯಲ್ಲಿ ಹೇಳಿರುವುದು ಎಲ್ಲರಿಗೂ ಗೊತ್ತಿದ್ದ ವಿಷಯ. ಅದರ ಸುದ್ದಿಯೆತ್ತದೇ ಭಾರತದ ಸೈನ್ಯ ಕಾಶ್ಮೀರವನ್ನು ಸಂಪೂರ್ಣವಾಗಿ ಆಕ್ರಮಿಸಿಸುವುದಕ್ಕೋಸ್ಕರ ಮುಂದೊತ್ತಿ ಬರುತ್ತಿರುವಾಗ ಕಾಶ್ಮೀರಿಗಳ ಸಲುವಾಗಿ ಪಾಕಿಸ್ತಾನಿ ಸೈನ್ಯ ಅಲ್ಲಿಗೆ ಧಾವಿಸಿ ಭಾರತಕ್ಕೆ ಸುಳ್ಳನ್ನು ಸುಹ್ರವರ್ದಿಗಳಂತಹ ಹೊಣೆಗಾರ ವ್ಯಕ್ತಿಗಳು ತಮ್ಮ ಜವಾಬ್ದಾರಿಯೇನನ್ನೂ ಅರಿಯಕೊಳ್ಳದೆ ಆಡುತಿದ್ದಾರೆಂದರೆ, ಪಾಕಿಸ್ತಾನೀ ಧುರೀಣತ್ವದ ಬೆಲೆ ಎಷ್ಟೆಂಬುದನ್ನು ಪ್ರತ್ಯೇಕ ಹೇಳ ಬೇಕಾಗಿಲ್ಲ. ಇದೇ ಮಾತನ್ನು ಕಾಲುವೆ ನೀರಿನ ತಂಟೆ ವಿಷಯದಲ್ಲೂ ಹೇಳಬಹುದು. ಸುಹ್ರವರ್ದಿಯವರೆನ್ನುತ್ತಾರೆ-"ನೋಡಿ, ಭಾರತ ಸರಕಾರದ ವರ್ತನೆಯೆಷ್ಟು ಕ್ರೂರ? ಪಾಕಿಸ್ತಾನಕ್ಕೆ ಹೋಗುವ ಕಾಲುವೆ ನೀರನ್ನು ಭಾರತವು ತಡೆ ಹಿಡಿದು ಪಾಕಿಸ್ತಾನವು ಮರುಭೂಮಿಯಾಗುವಂತೆ ಮಾಡುತ್ತಿದೆ. ಪಾಕಿಸ್ತಾನವು ಬೆಂಗಾಡಾಗಿ ಅಲ್ಲಿನ ಜನರು ಕಸಿವು ಬಾಯಾರಿಕೆಗಳಿಂದ ಬಳಲಿ ಸಾಯುವಂತೆ ಮಾಡುವುದೇ ಭಾರತ ಸರಕಾರದ ದುರುದ್ದೇಶ". ಸುಹ್ರವರ್ದಿಯವರು ಇನ್ನೂ ಇಂತಹ ಹಲವಾರು ಸುಳ್ಳು ಸಂಗತಿಗಳನ್ನು ಬಣ್ಣಹಚ್ಚಿ ಹೇಳಲು ಸ್ವತಂತ್ರರಿದ್ದಾರೆ. ಯಾರು ತಾನೇ ಅವರನ್ನು ತಡೆಗಟ್ಟಬಲ್ಲರು? ಆದರೆ ತಮ್ಮ ಮನಸ್ಸಾಕ್ಷಿಗೆ ತಾವೇ ಪ್ರಶ್ನೆ ಹಾಕಿಕೊಂಡರೆ ಮತ್ತು ವಿಷಯವನ್ನು ಅದರ ಸರಿಯಾದ ನೆಲೆಯಿಂದ ಅವಲೋಕಿಸುವುದಾದರೆ ತಮ್ಮ ಅಸಂಬದ್ಧ ಪ್ರಲಾಪಕ್ಕಾಗಿ ನೊಂದುಕೊಳ್ಳುವ ಪ್ರಸಂಗ ಅವರಿಗೆ ಬಾರದಿರದು. ಏಕೆಂದರೆ, ಜಾಗತಿಕ ಬೇಂಕಿನ ಮಧ್ಯಸ್ಥಿಕೆಗಾರರೇ ಒಪ್ಪಿಕೊಂದಿರುವಂತೆ, ಸಿಂಧೂ ಕಣಿವೆಯ ಜಲರಾಶಿಯಲ್ಲಿ ಭಾರತದ ಪಾಲಿಗೆ ಬಂದಿರುವುದು ೨೦ ಸೇಕಡಾ ಮಾತ್ರ. ಬಾಕಿ ಎಂಭತ್ತು ಸೇಕಡಾ ನೀರು ಪಾಕಿಸ್ತಾನದ ಭೂಭಾಗದಲ್ಲಿಯೇ ಪ್ರವಹಿಸುತ್ತಿದೆ. ಭಾರತ ಆ ವಿಷಯದಲ್ಲಿ ಯಾವುದೇ ತರಹದ ಕೆರುಕುಳವನ್ನೂ ಕೊಡುವಂತಹ ಸ್ಥಿತಿಯಲ್ಲಿಲ್ಲ. ಭಾರತದ ಪಾಲಿನ ಇಪ್ಪತ್ತು ಸೇಕಡಾ ನೀರಿನಲ್ಲಿ ಪಾಕಿಸ್ತಾನದ ಪಾಲಿಗೆ ಸಲ್ಲಬೇಕೆನ್ನುವಂತಹ ಅಂಶವು ಹತ್ತು ಸೇಕಡಾ ಸಹ ಇಲ್ಲ. ಅದೂ ಅಲ್ಲದೆ ಪಾಕಿಸ್ತಾನವು ಕಳೆದ ಮೂರು ವರ್ಷಗಳಲ್ಲಿ ಅನೇಕ ನೀರಾವರೀ ಕೆಲಸಗಳನ್ನು ಕೈಗೊಂಡಿದ್ದು ನೀರಿನಿಂದಾಗಿ ಭಾರತದ ಮೇಲಿನ ಅವಲಂಬನೆ ಒಟ್ಟು ನೀರಿನ ಮೇಲಿನ ೫ ಸೇಕಡಾ ಸಹ ಇಲ್ಲವೆನ್ನುವ ಪರಿಸ್ಥಿತಿಯನ್ನುಂಟುಮಾಡಿದೆ. ಸತ್ಯವು ಹೀಗಿರುವಾಗ, ಅಂದರೆ, ಸಿಂಧೂನದಿಯ ನೀರಿನಲ್ಲಿ ೯೫ ಸೇಕಡಾ ಭಾಗವು ಪಾಕಿಸ್ತಾನದ ಉಪಯೋಗಕ್ಕೆ ಸಿಗುತ್ತಿರುವಾಗ ಭಾರತವು ಪಾಕಿಸ್ತಾನವನ್ನು ಒಣ ಭೂಮಿಯನ್ನಾಗಿ ಮಾಡಲು ಹವಣಿಸುತ್ತಿದೆ ಮತ್ತು ಅಲ್ಲಿಯ ಜನರು ಕ್ಷುದಾತೃಷೆಗಳಿಂದ ಮೃತ್ಯುವನ್ನಪ್ಪುವಂತೆ ಪೈಶಾಚಿಕ ಅಕೃತ್ಯಗಳಲ್ಲಿ ತೊಡಗಿದೆ ಎನ್ನುವ ಸುಹ್ರವರ್ದಿಯವರ ಮಾತು ಎಷ್ಟು ಅತಿರಂಜಿತವಾದುದು? ಪಾಕಿಸ್ತಾನಿ ಪ್ರಧಾನಿಗಳು ತಮ್ಮ ಅಮೆರಿಕಾ ಸಂಚಾರವನ್ನು ಮೇಲಿನ ಮಾದರಿಯ ಅಸಂಬದ್ಧ ಹಾಗೂ ಅಸತ್ಯ ಉಪನ್ಯಾಸಗಳನ್ನು ಕೊಡಲಿಕ್ಕಾಗಿ ಉಪಯೋಗಿಸಿಕೊಂಡಿದ್ದಾರೆ. ಕೇವಲ ಭಾರತದ ಬಗ್ಗೆಯಷ್ಟೇ ಅವರು ಹೀಗೆ ನಾಲಿಗೆ ಸಡಿಲುಬಿಟ್ಟು ಮಾತಾಡಿದ್ದಾರೇನೆಂದಲ್ಲ. ಚೀನಾ, ಜೈನಾ, ಅಫಗಾನಿಸ್ತಾನ, ಇಂಡೋನೇಶ್ಯಾ, ಸಿರಿಯಾ ಇನ್ನೂ ಎಷ್ಟೋ ರಾಷ್ಟ್ರಗಳು ಸುಹ್ರವರ್ದಿಯವರ ಮುಕ್ತಾಫಲಗಳಿಂದ ಕ್ರುದ್ಧಗೊಂಡು ಆಕ್ಷೇಪಾನೆಗೆ ಪ್ರತಿಭಟನೆಯನ್ನು ಕಳಿಸಿವೆ ಎಂದು ತಿಳಿದು ಬಂದಿರುತ್ತದೆ. ಸ್ವತಃ ಪಾಕಿಸ್ತಾನದಲ್ಲಿಯೇ ಸುಹ್ರವರ್ದಿಯವರ ಬಗ್ಗೆ ಕೆಲ ಧುರೀಣರು ಜಿಗುಪ್ಸೆಯ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ; ಅಲ್ಲದೆ ಸಾರ್ವಭೌಮಾಧಿಕಾರ ಸಂಪನ್ನ ರಾಷ್ಟ್ರವಾದ ಪಾಕಿಸ್ತಾನವನ್ನು ಅಮೇರಿಕೆಯ ಹಿಂಬಾಲಕ ಹಾಗೂ ಅವಲಂಬಕ ರಾಷ್ಟ್ರಗಳಲ್ಲಿ ಅಗ್ರಗಣ್ಯವೆಂದು ಅಮೆರಿಕದ ಜನರು ಭಾವಿಸುವಂತೆ ಮಾಡಿದುದಕ್ಕಾಗಿ ಬೇಸರವನ್ನು ಬಹಿರಂಗವಾಗಿ ಪ್ರಕಟಿಸಿದ್ದಾರೆ. ಸುಹ್ರವರ್ದಿಯವರು ಲಂಗುಲಗಾಮಿಲ್ಲದೆ ಮಾತಾಡುವ ಭರದಲ್ಲಿ ಅಮೇರಿಕದ ವಿದೇಶ ಮಂತ್ರಿಯ ವಕಾಲತ್ತನ್ನು ವಹಿಸಿಕೊಂಡಂತೆಯೂ ಕೆಲವೊಮ್ಮೆ ತೋರಿದ್ದುಂಟು. ಆದರೆ, ಅಮೇರಿಕದ ಸರಕಾರವು ಇವರಿಗೆ ಕೊಟ್ಟ ಗೌರವವೇನು? ಅತ್ಯುಯ ಪತ್ರಿಕೆಗಳು ಇವರ ಬಗ್ಗೆ ವ್ಯಕ್ತಪಡಿಸಿದ ಆದರವೆಷ್ಟು? ಭಾರತದ ಪ್ರಧಾನಿ ನೆಹರೂ ಅಮೇರಿಕದಲ್ಲಿ ನಾಲ್ಕೈದು ದಿನಗಳಷ್ಟೇ ಸಂಚಾರ ಕಾರ್ಯಕ್ರಮವನ್ನಿಟ್ಟು ಕೊಂಡಿದ್ದಾಗಲೂ ಅಲ್ಲಿನ ಪತ್ರಿಕೆಗಳು ದೊಡ್ಡ ಶಿರೋನಾಮೆಗಳ ಮೂಲಕ ಗೌರವಾರ್ಹವಾದ ಮಾತುಗಳನ್ನು ಬರೆದಿವೆ. ಸ್ವತಃ ಅಧ್ಯಕ್ಷ ಐಸನ್ ಹೋವರೇ ಮೂರು ದಿನಗಳಕಾಲ ನೆಹರೂರವರನ್ನು ತಮ್ಮ ಖಾಸಗಿ ಅತಿಥಿಯಾಗಿರಿಸಿಕೊಂಡು ಬಹಳ ಗಂಭೀರವಾದ ಪರ್ಯಾಲೋಚನೆಗಳನ್ನು ನಡೆಸಿದರು. ನೆಹರೂರವರು ಅಲ್ಲಿಂದ ಕೆನಡಕ್ಕೆ ಸಹ ತಮ್ಮ ಕಾರ್ಯಕ್ರಮದಂತೆ ಭೇಟಿಕೊಟ್ಟರು. ಆದರೆ, ಸುಹ್ರವರ್ದಿಯವರು ಹದಿನೈದು ದಿನಗಳಕಾಲ ನ್ಯೂಯಾರ್ಕದಿಂದ ಸಾನ್ ಫ್ರಾನ್ಸಿಸ್ಕೋದ ವರೆಗೆ ಸಂಚರಿಸಿದರೂ ಬಾಯಿಗೆ ಬಂದಂತೆ ಮಾತಾಡಿದರೂ ಪತ್ರಿಕೆಯಿಂದ ಹೊಗಳಲ್ಪಡಲಿಲ್ಲ. ಐಸೆನ್ ಹೋವರರು ಅವರೊಡನೆ ಮೂರು ತಾಸಾಗುಗಳ ತನಕವೂ ಮಾತುಕತೆ ನಡೆಸಲಿಲ್ಲ ಕೆನಡಕ್ಕೆ ಹೋಗುವ ಕಾರ್ಯಕ್ರಮವನ್ನು ಸುಹ್ರವರ್ದಿಯವರೇ ಅಮೆರಿಕದ ಒಣ ಅದರದಿಂದ ಬೇಸರಗೊಟ್ಟರೋ ಎಂಬಂತೆ ತಾವಾಗಿಯೇ ಬದ್ದುಪಡಿಸಿಕೊಂಡರು. ಅಮೇರಿಕವು ಭಾರತಕ್ಕೆ ಸಹಾಯ ಮಾಡಕೂಡದು ಎಂಬವರ ಪ್ರಯತ್ನವು ನಿಷ್ಫಲವಾಯಿತು. ಪಾಕಿಸ್ತಾನಕ್ಕೆ ಹೆಚ್ಚಿನ ಸೈನ್ಯ ಸಲಕರಣೆಗಳ ಸೂರೈಕೆಯಾಗಬೇಕು ಎನ್ನುವ ಅವರ ಹಂಬಲ ಹುಸಿಯಾಯಿತು. ಮೂರು ವರ್ಷಗಳ ಬಳಿಗೆ ಪಾಕಿಸ್ತಾನಕ್ಕೆ ಅಮೇರಿಕದಿಂದ ದೊಡ್ಡ ಪರಿಮಾಣದಲ್ಲಿ ಆಹಾರ ಧಾನ್ಯಗಳ ಸೂರೈಕೆಯಾಗಬೇಕೆಂಬ ಅವರ ವಿಚಾರವು ಮೆಚ್ಚಿಗೆ ಗಳಿಸಿಲ್ಲ. ಎಲ್ಲ ಬಿಟ್ಟು ಅಧ್ಯಕ್ಷ ಐಸನ್ ಹೋವರರು ಕಾಶ್ಮೀರ ವಿಚಾರದಲ್ಲಿ ಪಾಕಿಸ್ತಾನಕ್ಕೆ ಬೆಂಬಲ ಕೊಡುವ ಭರವಸೆಯತ್ತರೇ ಎಂಬ ಪ್ರಶ್ನೆಗೆ ನೇರ ಉತ್ತರ ಕೊಡುವ ಸ್ಥಿತಿಯಲ್ಲೂ ಅವರು ಉಳಿದಿಲ್ಲ. ನ್ಯಾಯ ಪಕ್ಷಪಾತಿಯಾದ ರಾಷ್ಟ್ರವಾಗಿ ಅಮೇರಿಕವು ಪಾಕಿಸ್ತಾನದ ಪಾಲಿನ ನ್ಯಾಯವನ್ನು ಕಂಡು ಅದನ್ನು ಬೆಂಬಲಿಸೀತು ಎಂಬ ಆಸೆ ಮಾತ್ರ ಅವರದು. ಒಬ್ಬ ರಾಜಕೀಯ ಧುರೀಣನ ಪಾಲಿಗೆ ಇದು ಸೋಲಲ್ಲದಿದ್ದರೆ, ಇದೇ ಮುಖಭಂಗವಲ್ಲವಾದರೆ ಬೇರೆಯೇನು ಎಂದು ಜನರೇ ಆಲೋಚಿಸಲಿ.

ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣ ಸಂಸ್ಥೆಗಳು.

(ಶ್ರೀ ಶಿವರಾಮ ಕಾರಂತರಿಂದ)

ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣ ಸಂಸ್ಥೆಗಳನ್ನು ತಿರುಗಿ ಮೈಸೂರು ವಿದ್ಯಾನಿಲಯಕ್ಕೆ ಸೇರಿಸುವ ಮತ್ತೊಂದು ಚಳವಳಿ ನೋಡಿದರೆ, ನನ್ನ ಮುಖಂಡರಿಗೆ, ರಕ್ಷಕರಿ, ವಿದ್ಯಾರ್ಥಿಗಳ ಯಾವ ಬಂತಿಯೂ ಇದ್ದಂತೆ ಕಾಣಿಸದು. ಈ ವಿಷಯದಲ್ಲಿ ಊರಲ್ಲಿ ಯಾವ ವಿದ್ಯಾರ್ಥಿ ಶಾಲಕರನ್ನೂ ಕೇಳದೆ ಸಭೆ ಕರೆಯದೆ, ತಮ್ಮ ರಾಜಕೀಯಕ್ಕೆ ತಕ್ಕಂತೆ ಇಲ್ಲಿನ ಸಂಸ್ಥೆಗಳನ್ನು ಕುಣಿಸುವದು ನೋವೃತ್ತಿ-ಇವರ ಪ್ರಾತಿನಿಧ್ಯಕ್ಕೆ ಗೌರವ ತರಲಾರದು. ಈ ವಿಷಯವಾಗಿ ಇಲ್ಲಿನ ಕಾಲೇಜುಗಳು ಒಂದು ನಿರ್ಧಾರಕ್ಕೆ ಬಂದು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೇರಿದ್ದಾಯಿತು. ಇನ್ನು ಮಂಗನಂತೆ ನೆಟ್ಟಿ ಗಿಡಗಳನ್ನು ಕಿತ್ತು ಕಿತ್ತು ನೋಡಬೇಕಾಗಿಲ್ಲ. ಮತ್ತೊಂದು ಬದಲಾವಣೆಯಿಂದ ತೊಂದರೆ ಹೊರತು ಉಪಯೋಗವಾಗಲಾರದು.

ಈ ಮನಸ್ಸು ಏತಕ್ಕೆ? ಕರ್ನಾಟಕದ ವಿಶ್ವವಿದ್ಯಾಲಯಕ್ಕಿರುವ ಅಲ್ಪಸ್ವಲ್ಪ ಸ್ವಾಯತ್ತತೆಯನ್ನು ಸಹಿಸಲಾರೆವೆಂದೇ! ಅಥವಾ ಮತ್ತೊಂದು ವಿಶ್ವವಿದ್ಯಾಲಯ 'ಹಳೆಯ' ದೆಂದೆ!? ಈ ಹಳೆಯ ವಿಶ್ವವಿದ್ಯಾಲಯದ ಬಗ್ಗೆ ಶ್ರೀ ವೇಶಮುಖರು ಅವರಿಗೆ ಡಾಕ್ಟರೇಟ್ ಕೊಟ್ಟ ದಿವಸ ಏನು ಹೇಳಿದ್ದರೆಂದು ವಿಚಾರಿಸಿ ತಿಳಿಯಿರಿ. ಸ್ವಾಯ ಬೆಚ್ಚಾದರೆ ಒಂದು ರೀತಿಯ ಜಡ ಪ್ರವೃತ್ತಿಯು ಬರುತ್ತದೆ.

ಸ್ವಾಯತ್ತ: ನಮ್ಮವರು-ಇತ್ತೀಚೆಗೆ ಮೈಸೂರು ವಿಶ್ವ ವಿದ್ಯಾನಿಲಯ (?) ಹೊರಡಿಸಿದ ನೋಟೀಸಿನಿಂದ ಗಾಬರಿಯಾದರೇ! ಮೈಸೂರು ವಿಶ್ವವಿದ್ಯಾನಿಲಯದ ಶಾಸ್ತ್ರೀಯ ಶಾಲಾ ಕೊಲೇಜುಗಳಲ್ಲಿ, ಕರ್ನಾಟಕದವರಿಗೆ (ಅದರಲ್ಲಿಯೂ ದಕ್ಷಿಣ ಕನ್ನಡದವರಿಗೆ ಸ್ಥಳ ಸಿಗದು) ಎಂದುದನ್ನು ಕಂಡು ಬೆದರಿದರೇ! ಕರ್ನಾಟಕ ಪ್ರಾಂತದ ಯಾವದೂ ತಕ್ಕ ಯೋಗ್ಯತೆಯಿರುವಲ್ಲಿ ಸರಕಾರಿ ಕಾಲೇಜುಗಳಲ್ಲಿ ಅವರು ಸ್ಥಳ ನಿರಾಕರಿಸಲಾರರು. ನಿರಾಕರಿಸುವುದು ಘಟನೆ ಕೊಟ್ಟ ಅಧಿಕಾರಕ್ಕೆ ವಿರುದ್ಧ. ಮೈಸೂರು ವಿಶ್ವವಿದ್ಯಾನಿಲಯದ ಮೇಲೆ ತಿಳಿಸಿದ ನೋಟೀಸನ್ನು ಕಾಯದೆಯಿಂದ ಇದಿರಿಸುವ ಪ್ರಸಂಗ ಬಂದರೂ ನಾವು ಇದಿರಿಸಬೇಕೇ ಹೊರತು—ನಮ್ಮ ನಮ್ಮ ರಾಜಕೀಯಕ್ಕಾಗಿ, ದಕ್ಷಿಣ ಕನ್ನಡ ಜಿಲ್ಲೆಯ ನಮ್ಮ ಪ್ರತಿನಿಧಿಗಳು ಧಾರಾಳವಾಗಿ ಪಗಡೆ ಆಡದಿರಲಿ! ಇನಗಳ ಹೆಕ್ಕನ್ನು ಹೊಸ ಮೈಸೂರು ಅಡಳಿತವು ಇನ್ನು merged areas, ಎಂದು ತಿಳಿಯುವ ಗೊಡ್ಡು ಭಾವನೆಗಳನ್ನು ತಾರತಮ್ಯ ಬುದ್ಧಿಯನ್ನು ಗೆದ್ದು ಕಾಯುವುದು ಪ್ರತಿನಿಧಿಗಳ ಹೊಣೆ.

ಸಾರ್ವಜನಿಕವಾಗಿ-ಸುಂಗಳೂರು ಉಡುಪಿಗಳಲ್ಲಾದರೂ ರಕ್ಷಕರನ್ನು, ವಿದ್ಯಾ ಸಂಸ್ಥೆಯ ಅಡಳಿತಗಾರರನ್ನು ಕರೆದು ಚರ್ಚಿಸಿ, ಇಂಥ ಬದಲಾವಣೆಗಳಿಗೆ ಕೆಲವು ವರ್ಷಗಳ ಮೇಲೆ ಕೈ ಹಾಕಬಹುದು ಎಂದು ವಿನಂತಿ ಮಾಡಿ ಹೇಳುತ್ತೇನೆ.

ಇದೀಗ ಪ್ರಕಟವಾಗಿದೆ—

ಪ್ರಖ್ಯಾತ ಕಾದಂಬರಿಕಾರರಾದ ಶ್ರೀ| ವ್ಯಾಸರಾಯ ಬಲ್ಲಾಳರ ಕೃತಿ ಉತ್ಕೃಷ್ಟ ಕಥಾಸಂಕಲನ

ಕಾಡು ಮಲ್ಲಿಗೆ

ಬಿಳಿ ಕಾಗದ

ಸುಮಾರು 160 ಪುಟಗಳು. ಬೆಲೆ 1-25

ಪ್ರಕಾಶಕರು:

ಸ್ಟೂಡೆಂಟ್ಸ್ ಬುಕ್ ಡಿಪೋ

6-E, ಸೀತಾ ಸ್ಟ್ರೀಟ್, ಕೋಟೆ

ಮುಂಬಯಿ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು

ಸಂಕ್ಷಿಪ್ತ ಸುದ್ದಿಗಳು

ಸಹಕಾರಿ ವ್ಯವಸಾಯ

ಸಹಕಾರೀ ಪದ್ಧತಿಯ ವ್ಯವಸಾಯ ವಿಧಾನವನ್ನು ಮೈಸೂರು ರಾಜ್ಯದಲ್ಲಿ ವ್ಯವಹಾರದಲ್ಲಿ ತರಲು ಸರಕಾರವು ನಿರ್ಧರಿಸಿದ್ದು ಈ ಬಗ್ಗೆ ಯೋಜನೆಯೊಂದನ್ನು ರಚಿಸಿದ್ದೆವೆಂದು ಹೇಳಿದೆ. ಅಲ್ಲದೆ, ಅದನ್ನು ಕಾರ್ಯಗತಗೊಳಿಸುವ ವ್ಯವಸ್ಥೆಯನ್ನೂ ಮಾಡಲಾಗಿದೆ. ಈ ಯೋಜನೆಯು ಕೇವಲ ಸರಕಾರೀ ಅಧಿಕಾರಿಗಳಿಂದ ಕಾರ್ಯಗತವಾಗುವುದಸಾಧ್ಯವೆಂದು ಭಾವಿಸಿ ಸರಕಾರವು ಈ ತತ್ವದಲ್ಲಿ ವಿಶ್ವಾಸವುಳ್ಳ ಮತ್ತು ಅನುಭವ ಹಾಗೂ ಉತ್ಸಾಹವಿರುವ ಖಾಸಗಿ ವ್ಯಕ್ತಿಗಳ ಸಹಕಾರವನ್ನು ಪಡೆಯಲು ರಾಜ್ಯ ಸರಕಾರವು ನಿರ್ಧರಿಸಿದೆ.

ಭಾವೆಯವರು ಕರ್ನಾಟಕಕ್ಕೆ

ಭೂದಾನಯಜ್ಞದಲ್ಲಿ ತಲ್ಲೀನರಾಗಿರುವ ಆಚಾರ್ಯ ವಿನೋಬಾ ಭಾವೆಯವರು ತಮ್ಮ ಕರ್ನಾಟಕದ ಸಂಚಾರವನ್ನು ಈ ತಿಂಗಳ ೨೪ರಂದು ಪ್ರಾರಂಭಿಸಲಿರುವರು ತಮ್ಮ ಕೇರಳ ಸಂಚಾರವನ್ನು ಮುಗಿಸಿ ೨೪ರಂದು ಉಲ್ಲಾಳಕ್ಕೂ ಅನಂತರ ಕೊಡಗಿನ ಸಂಚಾರವನ್ನು ಮುಗಿಸಿ ಸೆಪ್ಟಂಬರ ೨೦ರಂದು ಮೈಸೂರಿಗೂ ಆಗಮಿಸಲಿರುವರು.

ವಿಧಾನ ಪರಿಷತ್ತಿನ ಸದಸ್ಯ ಸಂಖ್ಯೆ

ರಾಜ್ಯಗಳಲ್ಲಿನ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ವಿಧೇಯಕವೊಂದು ಲೋಕಸಭೆಯಲ್ಲಿ ಮಂಡಿಸಲ್ಪಟ್ಟಿದೆ ಇದರನ್ವಯ ಮೈಸೂರು ವಿಧಾನಪರಿಷತ್ತಿನಲ್ಲಿ ಇರುವ ಸದಸ್ಯರ ಸಂಖ್ಯೆಯನ್ನು ೬೩ಕ್ಕೆ ಏರಿಸಲಾಗುವುದು. ಈಗ ಈ ಪರಿಷತ್ತಿನಲ್ಲಿ ೫೨ ಸದಸ್ಯರಿರುವರು. ಮೈಸೂರು ವಿಧಾನ ಸಭೆಯು ಈ ಸಂಖ್ಯೆಯನ್ನು ೧೯೫೬ ಏರಿಸುವಂತೆ ಕೇಳಿಕೊಂಡಿತ್ತು. ಹೊಸ ವಿಧೇಯಕದಂತೆ, ೬೩ ಸದಸ್ಯತ್ವವನ್ನು ಈ ಕೆಳಗಿನಂತೆ ಹಂಚಲಾಗಿದೆ. ವಿಧಾನ ಸಭೆಯು ಆರಿಸಬೇಕಾದ ಸ್ಥಳಗಳು: ೨೧, ಸ್ಥಾನಿಕ ಸಂಸ್ಥೆಗಳು ಆರಿಸಬೇಕಾದ ಸ್ಥಳಗಳು. ೨೧; ಶಿಕ್ಷಕರು ಆರಿಸಬೇಕಾದ ಸ್ಥಳಗಳು. ೬; ಪದವೀಧರರು ಆರಿಸುವ ಸ್ಥಳಗಳು ೬; ರಾಜ್ಯಸಾಲರು ನಾಮಕರಣ ಮಾಡಬೇಕಾದ ಸ್ಥಳಗಳು ೯.

ಕಾರವಾರದಲ್ಲಿ ನೌಕಾಂಗಣ (?)

ಭಾರತದಲ್ಲಿ ದ್ವಿತೀಯ ನೌಕಾಂಗಣವನ್ನು ಸ್ಥಾಪಿಸಲು ಸ್ಥಳ ಪರಿಶೀಲನೆಯ ಬಗ್ಗೆ ಬಂದಿರುವ ಬ್ರಿಟಿಷ ತಜ್ಞರು ಕಾರವಾರವು ನೌಕಾಂಗಣವಾಗಲು ಅನುಕೂಲಾಭಿಪ್ರಾಯದವರಾಗಿರುವರೆಂದು ತಿಳಿದು ಬರುತ್ತದೆ ಈ ತಜ್ಞರ ಸಮಿತಿಯು ಮೈಸೂರಿನ ಮಂಗಳೂರು, ಭಟಕಳಗಳನ್ನೂ ಪರಿಶೀಲಿಸಿರುತ್ತದೆ.

ಪಾಕಿಸ್ತಾನಕ್ಕೆ ಪ್ರತಿಭಟನೆ

ಪಾಕ್ ಪ್ರಧಾನಿ ಶ್ರೀ ಎಚ್ ಎಸ್. ಸುಹ್ರವರ್ದಿಯವರು ಅಮೇರಿಕೆಯಲ್ಲಿ ಮಾಡಿದ ಭಾಷಣಗಳ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಭಾರತ, ರಷಿಯ, ಚೀನ, ಅಫಗಾನಿಸ್ತಾನ, ಸಿರಿಯಾ ಮತ್ತು ಇಂಡೋನೇಶಿಯಾಗಳು ಪಾಕಿಸ್ತಾನಕ್ಕೆ ಪತ್ರ ಬರೆದಿವೆಯೆಂದು ತಿಳಿದು ಬಂದಿದೆ. ಪಾಕ ಪ್ರಧಾನಿಯವರು ಈ ರಾಷ್ಟ್ರಗಳಿಗೆ ತಮ್ಮ ಭಾಷಣದ ವೇಳೆಯಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಅಪರಾಧ ಮಾಡಿದ ದೂರುಗಳು ಹೋಗಿವೆ

ಅಣು ಸ್ಫೋಟ ನಿಲ್ಲಿಸಿರಿ

ಅಣ್ವಸ್ತ್ರಗಳ ಪ್ರಾಯೋಗಿಕ ಸ್ಫೋಟನಗಳನ್ನು ನಿಲ್ಲಿಸಬೇಕೆಂದು ಜಗತ್ತಿನ ಜನತೆಯೆಲ್ಲವೂ ಏಕಕಂಠದಿಂದ ಕೇಳಿಕೊಳ್ಳುತ್ತಿದ್ದರೂ ಸಂ ರಾ. ಸಂಘದ ನಿಶಸ್ತ್ರೀಕರಣ ಸಮಿತಿಯಲ್ಲಿ ಯಾವ ಒಡಂಬಡಿಕೆಯೂ ಆಗದಿರುವುದಕ್ಕೆ ವಿಶಾದವನ್ನು ಸೂಚಿಸಿ, ಬೇಗನೆ ಸಂಬಂಧಪಟ್ಟ ರಾಷ್ಟ್ರಗಳನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳಬೇಕೆಂದು ಅಣ್ವಸ್ತ್ರ ವಿರೋಧಿ ಸರಿಪತ್ರ ಕೊಟ್ಟಿದ್ದಿಲ್ಲಿಯಲ್ಲಿ ನಡೆದ ೬೯ನೆ ಸಭೆಯೊಂದರಲ್ಲಿ ಪ್ರಾರ್ಥಿಸಿದೆ

ಕಿಡ್ವಾಯಿ ಸ್ಮಾರಕ ಬಹುಮಾನ

ಭಾರತೀಯ ಕೃಷಿ ಸಂಶೋಧನಾ ಮಂಡಲವು ಈ ವರ್ಷದಿಂದ ಪ್ರತಿ ವರ್ಷವೂ ಕೃಷಿಯಿಂಗದಲ್ಲಿ ಅದ್ವಿತೀಯ ಸಂಶೋಧನೆಗಳಿಗಾಗಿ ೧೧ ಬಹುಮಾನಗಳನ್ನು ಕೊಡಲು ನಿರ್ಧರಿಸಿದೆ ಪ್ರತಿಯೊಂದು ೫ ಸಾವಿರ ರೂಪಾಯಿ ಬೆಲೆಯಿರುವ ಬಹುಮಾನವಾಗಿದ್ದು ಅವಕ್ಕೆ "ರಫಿ ಅಹಮದ ಕಿಡ್ವಾಯಿ ಸ್ಮಾರಕ ಕೃಷಿ ಸಂಶೋಧನಾ ಬಹುಮಾನ"ವೆಂದು ಹೆಸರಿಡಲಾಗಿದೆ. ಬಂಗಾಳದ ಪಸಕ, ಇಲ್ಲವೆ ರೋಗ ಅಥವಾ ಉಭಯ ರೂಪಗಳಲ್ಲಿ ಈ ಬಹುಮಾನಗಳು ಕೃಷಿ, ಕೃಷಿ ಎಂಜಿನಿಯರಿಂಗ, ಕೃಷಿ ರಸಾಯನ, ಕೃಷಿ ಸಸ್ಯ, ಕೃಷಿ ಪ್ರಾಣಿ, ಉದ್ಯಾನ ಪ್ರಾಣಿ ಗರ್ಭ ಪ್ರಾಣಿ ಆಹಾರ ಪ್ರಾಣಿ ರೋಗ ಶಾಸ್ತ್ರಗಳಿಗೂ ಹಾಲಿನ ಕೇಂದ್ರ ಮತ್ತು ಕೃಷಿ ಹಾಗೂ ಪಶು ಸಂಗೋಪನ ಅರ್ಥಶಾಸ್ತ್ರ ಮತ್ತು ಅಂಕಿ ಸಂಖ್ಯಾ ಶಾಸ್ತ್ರಗಳಿಗೂ ಕೊಡಲಾಗುವುವು.

ಸಾಧು ಸನ್ಯಾಸಿಗಳ ವಿಧೇಯಕ

ಸಾಧು ಸನ್ಯಾಸಿಗಳ ನೆಲೆವೀಡಾದ ಭಾರತದಲ್ಲಿ ಸಾಧು ಸನ್ಯಾಸಿಗಳನ್ನು ಅಂಕಿತದಲ್ಲಿಟ್ಟುಕೊಳ್ಳುವ ವಿಧೇಯಕವೊಂದು ಚರ್ಚೆಗೆ ಬರಲಿದೆ. ದೇಶದಲ್ಲಿ ಕಪಟಿ ಸಾಧು ಸನ್ಯಾಸಿಗಳ ಸಂಖ್ಯೆಯನ್ನೂ ಅವರ ಸಮಾಜ ಕಂಟಕ ಚಟುವಟಿಕೆಗಳನ್ನೂ ತಡೆಗಟ್ಟುವ ಸಲುವಾಗಿ ಶ್ರೀ ರಾಧಾಮನಿಯರು ಈ ವಿಧೇಯಕವನ್ನು ಸಂಸತ್ತಿನೆದುರು ತಂದಿದ್ದಾರೆ ಇದರನ್ವಯ ದೀಕ್ಷೆಗೊಂಡ ಪ್ರತ್ಯೇಕ ಸಾಧುಸಂತನೂ ತನ್ನ ಸಂಪೂರ್ಣ ವಿವರವನ್ನು ಸಂಬಂಧಪಟ್ಟ ಕಛೇರಿಯಲ್ಲಿ ನೋಂದಾಯಿಸಬೇಕಾಗಿದೆ. ಹೀಗೆ ಮಾಡದೆ ಸಾಧುಗಳಂದು ಘೋಷಿಸಿಕೊಳ್ಳುವವರಿಗೆ ತಕ್ಕ ಶಾಸ್ತಿಯೂ ಆಗಲಿದೆ.

ಸಂಸು ಹೂಡಬೇಡಿರಿ

ಹಿಂದ ರಾಷ್ಟ್ರೀಯ ರಾಜದೂತ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಆರ್. ವಾಸವಡಾವರು ಇಂದಿನ ಸಮಾಜದಲ್ಲಿ ಸಂಸನ್ನು ಹೂಡುವುದರಿಂದ ಕೆಲಸಗಾರರು, ಸರಕಾರ ಹಾಗೂ ಜನತೆ ಈ ಮೂವರಿಗೂ ಗಂಡಾಂತರ ಪೊಸಗುವುದರಿಂದ, ಈ ಮೊದಲೇ ನಿಶ್ಚಯಿಸಿದಂತೆ ಅಂಚೆ ತಂತಿ ನೌಕರರು ಆಗಸ್ಟ್ ೮ರಿಂದ ಸಂಸನ್ನು ಪ್ರಾರಂಭಿಸಬಾರದೆಂದು ಕೇಳಿಕೊಳ್ಳುವಂತೆ ಅವರ ಧುರೀಣರನ್ನು ಕೇಳಿ ವಿಸಿಕೊಂಡಿದ್ದಾರೆ.

ಆಜಾದ ಕಾಶ್ಮೀರದ ವಿನೋಚನೆ

ಆಜಾದ ಕಾಶ್ಮೀರದಲ್ಲಿಯ ಮುಸಲ್ಮಾನರನ್ನು ಪಾಕಿಸ್ತಾನದ ಕಪಿ ಮುಷ್ಟಿಯಿಂದ ವಿಮೋಚನೆಗೊಳಿಸುವುದು ಮತ್ತು ಭಾರತೀಯ ಮುಸಲ್ಮಾನರು ಕಾಶ್ಮೀರದ ಮೇಲೆ ಪಾಕಿಸ್ತಾನವು ಹೇಳುವ ಹಕ್ಕನ್ನು ಏಕ ಮೂಲವಾಗಿ ವಿರೋಧಿಸುವರೆಂಬುದನ್ನು ಜಗತ್ತಿಗೆ ತೋರಿಸಿ ಕೊಡುವುದೇ ಉದ್ದೇಶವಾಗಿರುವ ಭಾರತೀಯ ಮುಸ್ಲಿಂ ಯುವಕರ ಕಾಶ್ಮೀರ ರಂಗವು ಆಗಸ್ಟ್ ತಿಂಗಳಲ್ಲಿ ದಿಲ್ಲಿಯಲ್ಲಿ ಸಭೆಸೇರಿ ತಾನು ಕೈಗೊಳ್ಳುವ ಕಾರ್ಯಕ್ರಮವನ್ನು ಕೊನೆಯದಾಗಿ ನಿರ್ಧರಿಸಿ, ಒಂದು ವರ್ಷದ ಒಳಗೆ ಒಂದು ಲಕ್ಷ ಸ್ವಯಂ ಸೇವಕರನ್ನು ಒಟ್ಟು ಕೂಡಿಸುವ ತಮ್ಮ ನಿರ್ಧಾರವನ್ನು ಪ್ರಕಟಿಸಿದ್ದಾರೆ.

ಭಾರತ ಸರಕಾರದ ಸಾಲ

ಭಾರತ ಸರಕಾರವು ಒಟ್ಟು ೧೧೦ ಕೋಟಿ ರೂಪಾಯಿಗಳನ್ನು ಕೂಡಿಸುವ ಬಗ್ಗೆ ಎರಡು ಸಾಲಗಳನ್ನು ಏಕಕಾಲದಲ್ಲಿ ಎತ್ತುವುದೆಂದು ನಿರ್ಧರಿಸಿದೆ ಇದರಲ್ಲಿ ಮೊದಲನೆಯದು ರಾಷ್ಟ್ರೀಯ ಯೋಜನಾ ಬಾಂಡುಗಳ ರೂಪದ್ದು ೩॥ ಸೇಕಡಾ ಬಡ್ಡಿ ಕೊಡಲಾಗುವುದು ಇದನ್ನು ೧೯೬೭ರಲ್ಲಿ ತಿರುಗಿ ಮುಟ್ಟಿಸಲಾಗುವುದು. ಎರಡನೆಯದು ೪ ಸೇಕಡಾ ಬಡ್ಡಿಯದ್ದು ಅದನ್ನು ೧೯೭೨ರ ಅವಧಿಯದಿರುತ್ತದೆ. ಈ ಸಾಲಗಳಿಗಾಗಿ ಹೆಣವನ್ನು ಇದೇ ಆಗಸ್ಟ್ ೫ರಿಂದ ಮೂರು ದಿನಗಳವರೆಗೆ ಸ್ವೀಕರಿಸಲಾಗುವುದು.

ಉಡುಪಿ

ಪ್ರಾರಂಭೋತ್ಸವ-ದಿನಕರ್ ರಾಯ್

ದೇಶಾದ್ಯಂತ ಮತ್ತು ರಾಷ್ಟ್ರಪಂಡಿತ ಕೃಷ್ಣ ಭಟ್, ಕಮಿಶನರ್ ವಿಜಯಟ್ಸ್, ಉಡುಪಿ ಅವರು ತಾ. ೨೨ರಂದು ಬೆಳಗ್ಗೆ 'ಶ್ರೀಕೃಷ್ಣ ಎಂಡ್ ಕೋ, ಫಸ್ಟ್ ಫ್ಲೋರ್, ಶ್ರೀ ಕೃಷ್ಣಾ ಜೂಯಲರಿ ಮಾರ್ಟ್', ಹೊಸ ಸಂಸ್ಥೆಯನ್ನು ತಿಂಗಳಬೀಟಿಯಲ್ಲಿ ಪ್ರಾರಂಭಿಸಿರುವರು.

ಮಕ್ಕಳ ಲೋಕಸಭೆ-ಸ್ಥಳೀಯ ಮೋದರ್ ಹಾ! ಎ ಶಾಲೆಯ ಮಕ್ಕಳ ಲೋಕ ಸಭೆಯನ್ನು ತಾ ೨೭ರಲ್ಲು ಶ್ರೀ ಕು ಶಿ. ದರಿವಾಸ ಭಟ್ಟರು ಉದ್ಘಾಟಿಸಿದರು ಶ್ರೀ ಎ ಜಿ ಅಲ್ಸೆಯವರು ಕಾಲೋಚಿತವಾದ ಮಾತುಗಳನ್ನಾಡಿದರು

ದೇವಾಡಿಗ ಸಮಾಜ ಸುಧಾರಕ ಸಂಘ

ಉಡುಪಿ ದೇವಾಡಿಗ ಸಮಾಜ ಸುಧಾರಕ ಸಂಘದ ಮಹಾ ಸಭೆಯು ತಾ ೨೫ ರಂದು ಸಂಜೆ ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಅಧ್ಯಕ್ಷರು ಸಭೆಯ ಮುಂದಿನ ಇತರ ಕಾರ್ಯಕ್ರಮದ ಬಗ್ಗೆ ಹೊರಟುಹೋದುದರಿಂದ ಶ್ರೀ ಎ ಜಿ ಅಲ್ಸೆಯವರು ಅವರ ಸ್ಥಾನವನ್ನು ವಹಿಸಿ ಸಭಾಕಾರ್ಯವನ್ನು ಮುಗಿಸಿದರು ಶ್ರೀಗಳಾದ ದಾಸ ಸೇರಿಗಾರ, ಬನ್ನಂಜೆ ರಾಮಾಚಾರ್ಯ, ಜಯಾನಂದ ದೇವಾಡಿಗ, ಬಾಬು ಡಿ ದೇವಾಡಿಗ ಮೊದಲಾದವರು ಕಾಲೋಚಿತಮಾತುಗಳನ್ನಾಡಿದ ಬಳಿಕ ಹೊಸ ವರ್ಷಕ್ಕೆ ೧೯ ಮಂದಿ ಸದಸ್ಯರಿರುವ ಕಾರ್ಯವಾಹೀ ಸಮಿತಿ ರಚಿಸಲಾಯಿತು

ಮುನಿಸಿಪಲ್ ಕೌನ್ಸಿಲು ಸಭೆಯು--ತಾ ೨೨ರಂದು ಸಂಜೆ ಟೌನ್‌ಹಾಲ್‌ನಲ್ಲಿ ಶ್ರೀ ಕೆ ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಉರಂಭದಲ್ಲಿ ಒಂದು ಗಂಟೆಕಾಲ ಪ್ರಶ್ನೋತ್ತರಗಳಾದವು ಮುನಿಸಿಪಲ್ ಶಾಲೆಗಳ ಮಕ್ಕಳ ಆರೋಗ್ಯವನ್ನು ಪರೀಕ್ಷಿಸಿ ಅವರ ರಕ್ಷಣೆಗಾಗಿ ಆರೋಗ್ಯ ಫಲಿತಾಂಶವನ್ನು ತಿಳಿಸಲು ಬೇಕಾಗುವ ಕಾರ್ಯಗಳ ಬಗ್ಗೆ ರೂ ೧೯೦- ಖರ್ಚು ಸೆಕ್ಷನ್ ಮಾಡಲಾಯಿತು ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿಯವರು ಮುನಿಸಿಪಲ್ ಮಹಾತ್ಮಾಗಾಂಧಿ ಬೇಸಿಕ್ ಶಾಲೆಯಲ್ಲಿ ಹಿಂದೀ ಕ್ಲಾಸುಗಳನ್ನು ನಡೆಸಲು ಮಾಡಿದ ಅರ್ಜಿ ಕುರಿತು ಒಂದು ಗಂಟೆಗೂ ಜಾಸ್ತಿ ಸಮಯ ಚರ್ಚೆಯಾಯಿತು ಹಿಂದೀ ಶಿಕ್ಷಣವನ್ನು ಧರ್ಮಾರ್ಥವಾಗಿ ಕೊಡಬೇಕು. ಶಾಲಾ ಸಾಮಗ್ರಿಗಳ ಭದ್ರತೆ ಬಗ್ಗೆ ಹೊಣೆಗಾರಿಕೆ ಬಾಂಡು ಕೊಡಬೇಕು ಎಂಬ ಶರತ್ತಿಗಳನ್ನು ಹಾಕಿ ಶಾಲಾ ಕಟ್ಟಡ ಉಪಯೋಗಿಸಲು ಅನುಮತಿ ಕೊಡಲಾಯಿತು. ಮುನಿಸಿಪಲ್ ಬೇಡಗಳಿಗೆ ಒಂದೊಂದು ಜತೆ ಟ್ರೆಸ್ ಕೊಡಲು ರೂಪಾಯಿ ೩೨೦, ಮುನಿಸಿಪಲ್ ಬಸ್ ಸ್ಟೇಂಡ್ ಬಸ್ಸು ನಿಲ್ಲುವ ಕಟ್ಟಡದ ದುರಸ್ತಿ ಬಗ್ಗೆ ರೂಪಾಯಿ ೩೮೦, ಬ್ರಿಡ್ಜ ಮಂಜೂರಾಯಿತು ಮುನಿಸಿಪಲ್ ಕ್ಷೇತ್ರದ ಸರಕಾರಿ ಬಾಲಿಜಾಗದ ಟೇಕ್ಸ್ ಮೊಬಲಗನ್ನು ಕೊಡುವ ಕುರಿತು ಈ ತಿಂಗಳಾಂತ್ಯದೊಳಗೆ ಉತ್ತರ ಬಾರದಿದ್ದರೆ ವಸೂಲಿ ಬಗ್ಗೆ ಮುಂದಿನ ಕ್ರಮ ಕೈಕೊಳ್ಳಬೇಕಾದೀತೆಂಬುದನ್ನು ಮೈಸೂರು ಸರಕಾರದ ಗಮನಕ್ಕೆ ತರಲು ಕಮಿಶನರರನ್ನು ಕೇಳಿಕೊಳ್ಳಲಾಯಿತು

ತಾಲೂಕು ಖಾಸಗಿ ಪ್ರಾಥಮಿಕ ಶಿಕ್ಷಕರ ಯೂನಿಯನ್ನಿನ ಕಾರ್ಯಕಾರೀ ಸಮಿತಿ ಸಭೆಯು--ತಾ. ೨೫ ರಂದು ಶ್ರೀ ಎಸ್. ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು ಅಖಿಲ ಮೈಸೂರಿಗೆ ಏಕರೂಪದ ಪ್ರಾಥಮಿಕ ಶಿಕ್ಷಣ ನಿಬಂಧನೆಗಳು ಸಿದ್ಧವಾಗುವ ವರೆಗೆ ಹಳೆಯ ಕ್ರಮ ನಿಬಂಧನೆಗಳನ್ನು ಅಂಗೀಕರಿಸಬೇಕೆಂದೂ, ಶಿಕ್ಷಕ-ವಿದ್ಯಾರ್ಥಿಯ ದಾಖಲಾತಿಯು 1 20 ಎಂದೇ ಪರಿಗಣಿಸಬೇಕೆಂದೂ ಅಜ್ಞೆಯಿತ್ತ ಮೈಸೂರು ವಿದ್ಯಾಂಗದ ಡೈರೆಕ್ಟರರನ್ನೂ ಸರಿಷ್ಠ ಅಧಿಕಾರಿಗಳನ್ನೂ ಅಭಿನಂದಿಸಲಾಯಿತು. ಈ ಅಜ್ಞೆ ಬರುವಂತೆ ಸಹಕರಿಸಿದಪತ್ರಿಕಾ ಸಂಪಾದಕರನ್ನೂ ಶ್ರೀ ಟಿ ಎ. ಪೈಗಳನ್ನೂ ಶಾಸನ ಸಭಾ ಸದಸ್ಯರನ್ನೂ ಅಭಿನಂದಿಸಲಾಯಿತು. ಮೈಸೂರು ಸರಕಾರದ ಸರಕಾರೀ ಶಿಕ್ಷಕರ ಕ್ರಮದಲ್ಲೇ ಸಂಬಳವನ್ನು ಕೊಡಬೇಕೆಂದು ಸಂತಿಸುವ, ಶಿಕ್ಷಣ ಕ್ರಮ ಪರಿಶೀಲನಾ ಸಮಿತಿಗೆ ಈ ಯೂನಿಯನ್ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುವ, ಉಡುಪಿ ತಾಲೂಕು ಶಿಕ್ಷಕರಿಗೆ ಬುನಾದಿ ರಿಪ್ರೆಶರ್ ಕೋರ್ಸಿಗೆ ಉಡುಪಿ ತರಬೇತಿ ಶಾಲೆಯಲ್ಲಿಯೇ ಅನುಕೂಲತೆ ಮಾಡಬೇಕೆನ್ನುವ, ಶಿಕ್ಷಕರಿಗೆ ಖಾಸಗಿಯಾಗಿ ಯೂನಿಯನ್ಸಿಟಿ ಪರೀಕ್ಷೆಗೆ ಹಾಜರಾಗಲು ಮುದ್ರಾಸು ಸರಕಾರದಲ್ಲಿದ್ದ ಸೌಲಭ್ಯವನ್ನು ಮೈಸೂರಲ್ಲಿಯೂ ಊರ್ಜಿತವಿರಿಸಬೇಕೆನ್ನುವ ಠರಾವುಗಳಾದುವು

ಸೂಡಾ—ಕಳೆದ ತಾ ೨೮ರಂದು ಶಿರ್ವ ಸಂಜಾಯತಿ ಬೋರ್ಡು ಅಧ್ಯಕ್ಷ ಶ್ರೀ ಎಸ್. ಎ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ, ಸದ್ಯವೇ ನಿವೃತ್ತಿಹೊಂದಿರುವ ಕಾರ್ಯಕ್ಷ ರಿಂಜಿನ ಹಿರಿಯ ಪರೀಕ್ಷಾಧಿಕಾರಿ ಶ್ರೀ ಯು ಕೃಷ್ಣಾಚಾರ್ ಅವರನ್ನು ಬೀಳ್ಕೊಡುವ ಸಮಾರಂಭ ಜರಗಿತು ಶ್ರೀ ಕೆ ತಾಂಪಣ್ಣ ಸೆಟ್ಟರು ಸ್ವಾಗತ ಭಾಷಣ ಮಾಡಿದರು ಶ್ರೀಗಳಾದ ಕೆ. ವಾಮಾಂಡೆ ಶೆಟ್ಟಿ, ಕಮಲಾಕ್ಷ ಶೆಣೈ, ಮೊದಲಾದವರು ಮುಖ್ಯ ಅತಿಥಿಗಳ ಗುಣಗಾನ ಮಾಡಿದರು

ಬ್ರಹ್ಮಾವರ—ಚಾಂತಾರು ಅಂಗಡಿ ಬೆಟ್ಟು ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ತಾ ೩೩ರಲ್ಲು ಹೆತ್ತವರ ಕೂಟದ ಸಭೆಯು ಶ್ರೀ ಪಾಂಡೇಶ್ವರ ಮೊಕ್ತೇಸರರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಬಿ. ಭಾಸ್ಕರ ಸೆಟ್ಟರು ಕಾವ್ಯ ವಾಚನ ಮಾಡಿದರು ಶ್ರೀಗಳಾದ ಸಿ ಆನಂದ ಪೂಜಾರಿ, ಎಸ್. ನಾಗೇಶ ನಾಯಕ್, ಎಸ್. ಲಕ್ಷ್ಮಿನಾರಾಯಣ ಕಾಮತ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶಾಲಾ ಮಕ್ಕಳಿಗೆ ಸ್ಲೇಟು ಪುಸ್ತಕಗಳನ್ನು ಅಧ್ಯಕ್ಷರು ಹಂಚಿದ ಬಳಿಕ ಮುಖ್ಯೋಪಾಧ್ಯಾಯ ಶ್ರೀ ಬಿ. ರಾಮಕೃಷ್ಣ ಅಡಿಗರು ಧನ್ಯವಾದಗಳನ್ನಿತ್ತರು.

ಪೆರಂಪಳ್ಳಿ—ತಾ ೨೦ರಂದು ರಾತ್ರಿ ಶ್ರೀ ಪಿ. ಎನ್. ರಾಮಚಾಯರ ನಿವಾಸದಲ್ಲಿ ಮಂದಾರ್ತಿ ಯಕ್ಷಗಾನ ಕಂಪನಿಯವರಿಂದ 'ಕೃಷ್ಣ ಸಂಧಾನ ಮತ್ತು ಕರ್ಣಾರ್ಜುನ ಕಾಳಗ'ವೆಂಬ ಕಥಾಭಾಗ ಶ್ರೀಗಳಾದ ಹಾಲಾಡಿ ರಾಮ, ಗೊಲ್ಲ ಮಾಸ್ಟರ್, ಗೋವಿಂದ ಮಾಸ್ಟರ್, ಹಾಲಾಡಿ ನಾರಾಯಣರೇ ಮೊದಲಾದ ಪ್ರಸಿದ್ಧ ಅರ್ಥದಾರಿಗಳ ಕೂಡುವಿಕೆ ಮತ್ತು ಶ್ರೀ ಶೇಷಗಿರಿ ಭಾಗವತರ ಭಾಗವತಿಕೆ, ಶ್ರೀ ಗೋಪಾಲಸಾನರ ಮೃದಂಗವಾದನದೊಂದಿಗೆ ಯಶಸ್ವಿಯಾಗಿ ನಡೆಯಿತು.

ಚಿಕ್ಕ ಉಳಿತಾಯ ಯೋಜನೆ

ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರ ಬಿನ್ನಹ

ಮೈಸೂರು ರಾಜ್ಯದಲ್ಲಿ ಚಿಕ್ಕ ಉಳಿತಾಯ ಯೋಜನೆಯ ಮುಖಾಂತರ ಪ್ರಚಲಿತ ವರ್ಷದಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ಶೇಖರಿಸುವ ಗುರಿಯನ್ನಿಟ್ಟುಕೊಳ್ಳಲಾಗಿದೆಯೆಂದೂ ಬರುವ ಏಳೆಂಟು ತಿಂಗಳುಗಳಲ್ಲಿಯೇ ಈ ಹಣ ಸಂಗ್ರಹವಾಗಬೇಕಾಗಿರುವುದರಿಂದ ಜನತೆ ಉದಾರ ಹಸ್ತದಿಂದ ಉಳಿತಾಯ ಯೋಜನೆಗೆ ಹಣ ಸಲ್ಲಿಸಿ ಯೋಜನೆಯನ್ನು ಯಶಸ್ವಿಯಾಗಿಸಬೇಕೆಂದೂ ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಬಿನ್ನವಿಸಿಕೊಂಡಿದ್ದಾರೆ. ಅವರ ಬಿನ್ನಹದ ಪೂರ್ತಿ ಪಾಠ ಇಂತಿದೆ:-

"ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ದೇಶದಾದ್ಯಂತ ಸಾರ್ವಜನಿಕ ವಿಭಾಗದಲ್ಲಿ ಸುಮಾರು ೪,೮೦೦ ಕೋಟಿ ರೂಪಾಯಿವೆಚ್ಚವಾಗಲಿದೆಯೆಂಬುದನ್ನು ನೀವೆಲ್ಲ ಬಲ್ಲಿರಿ. ಇದರಲ್ಲಿ ಮೈಸೂರು ರಾಜ್ಯದ ಪಾಲು ಸುಮಾರು ೧೧೫ ಕೋಟಿ ರೂಪಾಯಿಗಳಿದ್ದು ಈ ಹಣವನ್ನು ನೀರಾವರಿ, ವಿದ್ಯುಚ್ಛಕ್ತಿ ಯೋಜನೆಗಳು, ಉದ್ದಿಮೆಗಳು, ಇತ್ಯಾದಿಗಳಿಗೆ ವೆಚ್ಚಮಾಡಲಾಗುವುದಲ್ಲದೆ ಶಿಕ್ಷಣ, ಆರೋಗ್ಯ, ನೀರಿನ ಪೂರೈಕೆ ಮುಂತಾದ ಸಮಾಜ ಸೇವಾ ಯೋಜನೆಗಳಿಗೂ ಇದರಲ್ಲಿ ಸಾಕಷ್ಟು ಹಣ ಕಾದಿರಿಸಲ್ಪಟ್ಟಿದೆ. ಯೋಜನೆಗಾಗಿ ಇಷ್ಟು ಹಣವನ್ನು ಒದಗಿಸಲು ವಿದೇಶಿ ಸಹಾಯ, ಕರಾಕರಣೆ, ಮತ್ತು ಸಾಲ ಇವೇ ಸಾಧನಗಳಾಗಿದ್ದು ಕರಾಕರಣೆ ಮತ್ತು ಸಾಲ ಎತ್ತುವಿಕೆಯ ಅವಕಾಶಗಳು ತೀರ ಮಯರ್ಾದಿತವಾಗಿವೆಯೆಂಬುದನ್ನು ನಾನು ಒತ್ತಿಹೇಳಬೇಕಾಗಿಲ್ಲ. ವಿದೇಶಿ ಸಹಾಯವು ಕೂಡ ತೀರ ಅನಿಶ್ಚಿತವಿದೆ. ಆದರೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಮುಂದುವರಿಯಬೇಕೆಂದು ನಾವೆಲ್ಲರೂ ನಿರ್ಧರಿಸಿದ್ದೇವೆ. ನಿಶ್ಚಿತ ಗುರಿಯನ್ನು ಮುಟ್ಟುವಲ್ಲಿ ನಾವೆಲ್ಲ ಸಹಕರಿಸಿ ನಮ್ಮಿಂದಾದಷ್ಟು ನೆರವು ನೀಡಿದರೆ ಎಂಥ ಅಡ್ಡಿ ಆತಂಕಗಳಿದ್ದರೂ ನಾವು ಯಶಸ್ವಿಯಾಗಬಲ್ಲೆವು.

ಪ್ರಮುಖ ಸಾಧನ

"ಯೋಜನೆಗೆ ಹಣ ಒದಗಿಸುವ ಪ್ರಮುಖ ಸಾಧನಗಳಲ್ಲಿ ಚಿಕ್ಕ ಉಳಿತಾಯಗಳ ಯೋಜನೆಯೂ ಒಂದು. ಸಮಾಜದ ಪ್ರತಿಯೊಬ್ಬನು ಇದರಲ್ಲಿ ಭಾಗವಹಿಸಬಲ್ಲನು. ಯೋಜನೆಯ ಅವಧಿಯಲ್ಲಿ ಈ ಸಾಧನದಿಂದ ೫೦೦ ಕೋಟಿ ರೂಪಾಯಿಗಳನ್ನು ಸಂಗ್ರಹಿಸಬೇಕೆಂಬ ಗುರಿಯಿದ್ದು ಈ ಕಾರ್ಯದಲ್ಲಿ ನಮ್ಮ ರಾಜ್ಯವೂ ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ. ರಾಷ್ಟ್ರೀಯ ಯೋಜನೆಯಲ್ಲಿ ಉಳಿತಾಯಗಳ ಯೋಜನೆಗೆ ಮಹತ್ವದ ಸ್ಥಾನವನ್ನು ಕೊಡಲಾಗಿದೆ. ಈ ಉಳಿತಾಯ ಯೋಜನೆಯಿಂದ ಕುಟುಂಬಕ್ಕೆ ಸರ್ವಾವಧಿ ಲಾಭವನ್ನು ನೀಡುವಂತೆ ಹಣವನ್ನು ತೊಡಗಿಸುವ ಉತ್ತಮ ಅವಕಾಶವು ಸಿಕ್ಕಿದೆ. ಜೊತೆಗೆ ಸಮಾಜದ ಪ್ರತಿಯೊಂದು ವ್ಯಕ್ತಿ ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ನೇರವಾಗಿ ಭಾಗವಹಿಸಿದಂತಾಗುತ್ತದೆ. ನಮ್ಮ ರಾಜ್ಯವು ಚಿಕ್ಕ ಉಳಿತಾಯಗಳ ಯೋಜನೆಯ ಅನುಸಾರ ಈ ವರ್ಷ ಸುಮಾರು ನಾಲ್ಕು ಕೋಟಿ ರೂಪಾಯಿಗಳನ್ನು ಕೂಡಿಸುವ ಗುರಿಯನ್ನು ಇಟ್ಟುಕೊಂಡಿದೆ. ಈ ಹಣವನ್ನು ನಾವು ಈ ಏಳೆಂಟು ತಿಂಗಳುಗಳಲ್ಲಿ ಕೂಡಿಸಬೇಕಾಗಿದೆ. ಸರಕಾರವು ರಾಷ್ಟ್ರೀಯ ಉಳಿತಾಯ ಯೋಜನೆಯ ಸಂಬಂಧದಲ್ಲಿ ಹಲವಾರು ಆಜ್ಞೆಗಳನ್ನು ಹೊರಡಿಸಿದೆ. ರಾಜ್ಯದ ಪ್ರತಿಯೊಂದು ಕಚೇರಿ ವತ್ತು ಕೈಗಾರಿಕೆಗಳಲ್ಲಿ ಕೆಲಸಮಾಡುವ ನೌಕರರಿಂದ ಹಣವನ್ನು ಕೂಡಿಸಲು ಸುಲಭವಾಗಬೇಕೆಂಬ ಉದ್ದೇಶದಿಂದ ಈ ರಾಜ್ಯದಲ್ಲಿ ಜೂನ್, ೧೯೫೭ರಲ್ಲಿ ಆಂತರಿಕ ಏಜನ್ಸಿ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಸಾರ್ವಜನಿಕರಿಂದ ಹಣವನ್ನು ಕೂಡಿಸುವ ಸಂಬಂಧದಲ್ಲಿ ನಾವು ಆಜ್ಞೆಗಳನ್ನು ಹೊರಡಿಸಿದ್ದರೂ ಉಳಿತಾಯ ಚಳವಳಿಗೆ ಸಾಕಷ್ಟು ಬೆಂಬಲ ಸಿಕ್ಕಿಲ್ಲ.

ಚಿಕ್ಕ ಉಳಿತಾಯ ಯೋಜನೆಯ ಅನುಸಾರ ರಾಜ್ಯದ ಗುರಿಯನ್ನು ಸಾಧಿಸುವುದಕ್ಕಾಗಿ ಸರಕಾರವು ಈ ಚಳವಳಿಯನ್ನು ಬಲಪಡಿಸಬೇಕೆಂದಿದೆ. ಜನರನ್ನು ಕೇಳುವುದಕ್ಕಿಂತ ಮೊದಲು, ಕಡ್ಡಾಯದ ಉಳಿತಾಯವನ್ನು ಮಾಡಲು ಮನಸ್ಸುಮಾಡಬೇಕೆಂದು ಎಲ್ಲ ಮಂತ್ರಿಗಳು, ಶಾಸನ ಸಭಾಸದಸ್ಯರು ಮತ್ತು ಸರಕಾರಿ ನೌಕರರನ್ನು ನಾನು ಭಿನ್ನವಿಸಿಕೊಳ್ಳುತ್ತೇನೆ. ನಿರ್ದಿಷ್ಟ ಅವಧಿಯ ನಂತರ ಶೇಕಡಾ ೫ ಅಥವಾ ಬಡ್ಡಿ ಬರುವ ಹನ್ನೆರಡು ವರ್ಷದ ರಾಷ್ಟ್ರೀಯ ಯೋಜನಾ ಪ್ರಮಾಣ ಪತ್ರಗಳನ್ನು ಕೊಂಡು ನಮ್ಮ ಗುರಿ ಸಾಧಿಸುವಂತೆ ಸಾರ್ವಜನಿಕರಿಗೆ ಮಾರ್ಗದರ್ಶಕರಾಗಬೇಕೆಂದು ನಾನು ಮಂತ್ರಿಗಳನ್ನು ಮತ್ತು ಸರಕಾರಿ ನೌಕರರನ್ನು ಆಗ್ರಹದಿಂದ ಬಿನ್ನವಿಸುತ್ತೇನೆ. ಕನಿಷ್ಠ ಈ ಕೆಳಗಿನಂತಾದರೂ ಪ್ರತಿ ತಿಂಗಳು ತಾವು ಸಹಾಯಮಾಡಬೇಕೆಂದು ಕೋರುತ್ತೇನೆ:-

	ಪ್ರತಿ ತಿಂಗಳು
ಮಂತ್ರಿಗಳು	೧೦೦ರೂ.
ಉಪ ಮಂತ್ರಿಗಳು	೫೦ ,,
ಶಾಸನ ಸಭಾಸದಸ್ಯರು	೧೦ ,,
೮೦೦ ರೂ ಮತ್ತು ಅದಕ್ಕಿಂತ ಹೆಚ್ಚು ಸಂಬಳ ಪಡೆಯುವ ಅಧಿಕಾರಿಗಳು	೩೦ ,,
೫೦೦ ರೂ ಯಿಂದ ೮೦೦ ರೂ ಸಂಬಳ ಪಡೆಯವರು	೧೫ ,,
೩೦೦ ರೂ ಯಿಂದ ೫೦೦ ರೂ	೧೦ ,,
೧೦೦ರೂ ಯಿಂದ ೩೦೦ ರೂ	೫ ,,
೫೦ ರೂ ಯಿಂದ ೧೦೦ ರೂ	೨ ,,
೫೦ ರೂ ಗಿಂತ ಕಡಮೆ	೧ ,,

ಜನ ಸಾಮಾನ್ಯರೂ ಮತ್ತು ರಾಜ್ಯದ ಖಾಸಗಿ ಸಂಸ್ಥೆಗಳಲ್ಲಿ ಕೆಲಸಮಾಡುವ ಎಲ್ಲ ನೌಕರರೂ ಚಿಕ್ಕ ಉಳಿತಾಯಗಳ ಯೋಜನೆಗೆ ಉದಾರವಾಗಿ ಸಹಾಯ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ಪಂಚವಾರ್ಷಿಕ ಯೋಜನೆಯ ಯಶಸ್ವಿಗೆ ನಾವೆಲ್ಲರೂ ಸಹಾಯ ಮಾಡಬಹುದಾದ ಮಾರ್ಗವು ಇದೊಂದೇ ಆಗಿದೆ. ರಾಷ್ಟ್ರ ನಿರ್ಮಾಣಕ್ಕಾಗಿ ಈ ಲಾಭದಾಯಕ ವಿನಿಯೋಗದಲ್ಲಿ ಹಣ ನ್ನು ತೊಡಗಿಸಿ ನನ್ನ ಕುಟುಂಬಗಳ ಸೌಖ್ಯವನ್ನು ಸಾಧಿಸುವ ಮಾರ್ಗವು ಇದೇ ಅಹುದು."



ಜಗತ್ತಿನ ಅತ್ಯಂತ ಪ್ರಾಚೀನವಾದ ವಿದ್ಯಾಸಂಸ್ಥೆಯು ೧೫೦ ವರ್ಷಗಳ ಹಿಂದೆ ಸ್ಥಾಪನೆಯಾದ ಅಲ್ ಅಜಾರದಲ್ಲಿನ ಈಜಿಪ್ಶಿಯನ್ ವಿದ್ಯಾಲಯವಾಗಿದೆ.

ಮೋಸ್ಕೋವಿನ ಲುಬಿಯಾಂಕ ಜೈಲು ಜಗತ್ತಿನ ಎಲ್ಲಕ್ಕಿಂತ ದೊಡ್ಡ ಸೆರೆಮನೆಯಾಗಿದೆ. ಪ್ರತಿವಾರ ಇಲ್ಲಿ ೮,೦೦೦ ಕೈದಿಗಳ ವ್ಯವಹಾರ ನಡೆಯುತ್ತದೆ.

ಜಾನ್‌ಬಾರ್ಡನ "ಸಮೊರಮ ಅನ್ ದಿ ಮಿಸಿಸಿಪಿ" ಎಂಬ ಚಿತ್ರವು ಬಣ್ಣ ಬಳಿದ ಚಿತ್ರಗಳಲ್ಲಿ ಜಗತ್ತಿನಲ್ಲಿಯೇ ಹಿರಿದಾಗಿದೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಎಂ. ಎಸ್

ಮಕ್ಕಳು, ಹೆಂಗಸರು, ಗರ್ಭಿಣಿಯರು, ಇತರ ಎಲ್ಲಾ. ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಾಶ್ಮೀರದ ಮಂತ್ರಿಮಂಡಳ

ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜ್ಯ ಘಟನೆಗನುಸಾರವಾಗಿ ಸಾರ್ವತ್ರಿಕ ಚುನಾವಣೆಗಳು ಮುಗಿದಿದ್ದು ಸರಕಾರೀ ಪಕ್ಷವಾದ ರಾಷ್ಟ್ರೀಯ ಪಕ್ಷವು ಬಹುಮತವನ್ನು ಪಡೆದಿದೆ. ಈ ಪಕ್ಷದ ನಾಯಕರಾಗಿ ಪ್ರಧಾನಿ ಬಕ್ಷಿ ಗುಲಾಂ ಮಹಮ್ಮದರು ಜುಲೈ ೧೫ರಂದು ಒಮ್ಮತದಿಂದ ಆರಿಸಲ್ಪಟ್ಟಿದ್ದರು. ಜನಾಬ ಬಕ್ಷಿಯವರು ತಮ್ಮ ನೂತನ ಮಂತ್ರಿಮಂಡಳದ ಸದಸ್ಯರನ್ನು ಆರಿಸಿ ಖಾತೆಗಳನ್ನು ಹಂಚಿರುವರು. ಇನ್ನೂ ಒಬ್ಬ ಮಂತ್ರಿಯನ್ನು ನೇಮಿಸಲಿದ್ದು ಅವರ ಹೆಸರನ್ನು ಇಷ್ಟರಲ್ಲೇ ತಿಳಿಸಲಿದ್ದಾರೆ. ಉಪ ಮಂತ್ರಿಗಳನ್ನೂ ಸೇರಿಸಿಕೊಳ್ಳುವ ನಿರೀಕ್ಷೆಯಿದೆ ಮಂತ್ರಿಗಳ ಖಾತೆಗಳು ಈ ರೀತಿಯಾಗಿವೆ.

೧. ಬಕ್ಷಿ ಗುಲಾಂ ಮಹಮ್ಮದ (ಮುಖ್ಯಮಂತ್ರಿ) ಯೋಜನೆ, ಅರ್ಥ, ಸಾಮಾನ್ಯಾಡಳಿತೆ, ನಾಗಾಟ, ಕಾಯದೆ ವ್ಯವಸ್ಥೆ, ಪೋಲೀಸು, ವಾರ್ತೆ, ಮತ್ತು ಪರಿಶಿಷ್ಟ ಜಾತಿ-ವರ್ಗ.

೨. ಶಾಮಲಾಲ ಸರಾಫ—ಆರೋಗ್ಯ, ಶಿಕ್ಷಣ ಮತ್ತು ಸೆರೆಮನೆ

೩. ವಿನಾಯಾಕ ಮಹಾಜನ-ಕಾಯದೆ ಕಂದಾಯ, ನ್ಯಾಯ, ಶಾಸನ, ಭೂಕಂದಾಯ, ಪರಿಹಾರ ಮತ್ತು ಪುನರ್ನಿರ್ವೇಶನ

೪. ಮೀರಗುಲಾಂ ಮಹಮ್ಮದ ರಾಜಪುರಿ—ಉದ್ದಿಮೆ, ವಾಣಿಜ್ಯ, ಕಾರ್ಮಿಕ, ಮತ್ತು ಅರಣ್ಯ-ಉದ್ದಿಮೆ.

೫. ಕೊತವಾಲ ಚುನಿಲಾಲ-ಅಭಿವೃದ್ಧಿ, ನೀರಾವರಿ, ವಿದ್ಯುಚ್ಛಕ್ತಿ, ವಸತಿ ಮತ್ತು ನೀರಿನ ಪೂರೈಕೆ.

೬. ಶಮಸುದ್ದೀನ—ಸ್ಥಾನಿಕ ಸ್ವರಾಜ್ಯ ಮತ್ತು ಸಮಾಜ ವಿಕಾಸಯೋಜನೆ.

ಹೊಸತಾಗಿ ಸೇರಿಸಲ್ಪಡುವ ಮಂತ್ರಿಗಳಿಗೆ ಆಹಾರ ಮತ್ತು ಒಕ್ಕಲತನ ಖಾತೆಗಳು ಕೊಡಲ್ಪಡುವುವು. ಅದು ತನಕ ಮುಖ್ಯಮಂತ್ರಿಯವರೇ ಅವನ್ನು ನೋಡಿಕೊಳ್ಳುವರು.

ಗುಲಾಮನಬಿ ಸೋಗಾನಿ, ಅಬ್ದುಲ್ ಗಾನಿ ಪಿರಂಜಿ, ಅಮರನಾಥ, ಶರ್ಮ, ಭಗತ ಛಾಜೂರಾಮ, ಸರದಾರ ಹರಬನ್ಸ ಸಿಂಗ ಇಜಾದ ಮತ್ತು ಕುಷಾಕ ಬಕುಲ ಇವರು ಸ್ಟೇಟ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವರು.

ಮಂಗಳೂರು

17 ಹೊಸ ವಿದ್ಯಾರ್ಥಿಗಳಿಗೆ ಸಾಲ ರೂಪದ ಶಿಷ್ಯವೇತನ—ಚಾಲ್ತಿ ಶಿಕ್ಷಣ ವರುಷದಲ್ಲಿ 17 ಹೊಸ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ಮುಂದರಿಸಲು ರೂಪಾಯಿ 10, 450ನ್ನು ಸಾಲ ರೂಪದ ಶಿಷ್ಯವೇತನವಾಗಿ ಕೊಡಲು ದಿ ಕೆನರಾ ಬೇಂಕ್ ಜುಬಿಲಿ ವಿದ್ಯಾನಿಧಿಯ ಆಡಳಿತೆ ಮಂಡಳಿಯು ವ್ಯವಸ್ಥೆಗೊಳಿಸುತ್ತಿದೆ ಕಳದ ವರುಷ ಇಂತಹ ಶಿಷ್ಯವೇತನವನ್ನು ಪಡೆದವರಿಗೂ ಚಾಲ್ತಿ ವರುಷದಲ್ಲಿ ಶಿಷ್ಯವೇತನವನ್ನು ಹೊಸತಾಗಿ ಮಾಡಿಕೊಡಲಾಗಿದೆ. ಅಂತೂ ಈ ಯೋಜನೆಯ ಲಾಭವನ್ನು 31 ವಿದ್ಯಾರ್ಥಿಗಳು ಪಡೆದುಂತಾಗಿದೆ.

ರಾಜ್ಯವಾರು ಹೊಸ ಶಿಷ್ಯವೇತನ ಪಡೆಯಲು ಚುನಾಯಿಸಲ್ಪಟ್ಟವರ ಸಂಖ್ಯೆ:—

ಆಂಧ್ರ ರಾಜ್ಯ 3, ಕೇರಳ ರಾಜ್ಯ 2, ಬೊಂಬಾಯಿ ರಾಜ್ಯ 3, ಮದ್ರಾಸುರಾಜ್ಯ 3, ಮೈಸೂರು ರಾಜ್ಯ 7.

ತೈಲಚಿತ್ರ ಅನಾವರಣ— ಪ್ರಕೃತ ಬರೋಡದಲ್ಲಿರುವ ಮಂಗಳೂರಿನ ಶ್ರೀ ವರದರಾಯ ಅಣ್ಣಪ್ಪ ಮಲ್ಯರ ಸುಮಾರು ರೂಪಾಯಿ 375 ಖರ್ಚಿದಿಂದ ತಯಾರಿಸಿ ದಾನವಾಗಿ ನೀಡಿದರೆ ಕಳುಹಿಸಿದ ಶ್ರೀ ಕಾಶೀ ಮಠಾಧೀಶ ಶ್ರೀ ಸುಧೀಂದ್ರತೀರ್ಥ ಸ್ವಾಮಿಗಳವರ ತೈಲಚಿತ್ರವನ್ನು ಶ್ರೀ ವರದರಾಯ ಅಣ್ಣಪ್ಪ ಮಲ್ಯರ ತಂದೆ ಶ್ರೀ ಕನ್ಯಾನೂರು ಅಣ್ಣಪ್ಪ ಶ್ರೀನಿವಾಸ ಮಲ್ಯರು ತಾ 17ರಂದು ಮಧ್ಯಾಹ್ನ ಪೂಜಾ ಸಮಯದಲ್ಲಿ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಒಪ್ಪಿಸಿದರು

ನಗರ ಸಭೆಯು—ತಾ 26ರಂದು ಸಂಜೆ ಸಭಾಪತಿ ಶ್ರೀ ಕೆ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಸೇರಿ ಆಗೋಸ್ತು ತಾ 25ರಂದು ಮಂಗಳೂರಿಗೆ ಆಗಮಿಸಲಿರುವ ಶ್ರೀ ವಿನೋಬಾ ಭಾವೆಯವರಿಗೆ ಪೌರಸಭಾ ಕಡೆಯಿಂದ ಮಾನಪತ್ರ ಮೀಯಬೇಕೆನ್ನುವ ಶ್ರೀ ಎನ್. ಆರ್ ಕಿಣಿಯರ ನಿರ್ಣಯ ಸ್ವೀಕೃತವಾಯಿತು ಸ್ವಾತಂತ್ರ್ಯ ಶತಾಬ್ದಿಯ ಸ್ಮಾರಕವಾಗಿ ಮಂಗಳೂರಲ್ಲಿ ಒಂದು ಗಿಡಿಯಾರ ನೋಟಿಸುರವನ್ನು ರಚಿಸುವ ಸಿಬಾರಿಯಾಗಿ ಪರಿಶೀಲಿಸಲು ಶ್ರೀಗಳಾದ ಕೆ ಸೂರ್ಯನಾರಾಯಣ ಅಡಿಗ, ಸಿರಿಲ ಗೋನ್ಸಾಲ್ವಿಸ್, ಎಮ್ ಆರ್ ಕಿಣಿ, ಬಿ. ಎಸ್ ಭಾಸ್ಕರ ರೈ, ಜೆ. ಬಿ ಮಣಾಯಿ, ಡಾ ಎಮ್ ಸಿ ಶಾಸ್ತ್ರಿ, ಮತ್ತು ಶ್ರೀಮತಿ ಕಲ್ಯಾಣಿ ಡಿ ಸೆಟ್ಟಿಯವರಿಂದ ಸಮಿತಿಯೊಂದುರಚಿಸಲುಂಯಿತು

ಮಂಗಳೂರು ಚರಂಡಿ ಯೋಜನೆಗಾಗಿ ಪೌರಸಭೆಯು ಕೊಡಬೇಕಾದ ರೂ 17,000 ರಲ್ಲಿ ರೂ 17,000ನ್ನು ಸರಕಾರಕ್ಕೆ ಕೊಡಬೇಕೆಂದಾಯಿತು. ದ್ವಿತೀಯಪಂಚವರ್ಷಿಕ ಯೋಜನೆಗಾಗಿ ಪಾರಭೆಯು ಸರಕಾರದೊಡನೆ ರೂ 25,06,372 ಸಹಾಯಧನವಾಗಿ ಮತ್ತು ರೂ 6,06,000 ಸಾಲವಾಗಿ ಕೊಡಬೇಕೆಂದು ಕೇಳಿಕೊಂಡಿದೆ ಎಂದೂ ಯೋಜನೆಯ ಕಾರ್ಯಗಳ ಪಟ್ಟಿಯನ್ನು ಸರಕಾರಕ್ಕೆ ಕಳುಹಿಸಲಾಗಿದೆಯೆಂದೂ ಅಧ್ಯಕ್ಷರು ತಿಳಿಸಿದರು ನಗರದ ಸುಮಾರೂಪ ಯೋಜನೆಗಳಿಗೆ ಮತ್ತು ಸುಂದರವಾದ ತೋಟಿಕೆ ನಗರಸಭೆಯು ಒಂದೊಂದುಬಗೆಯ ಬಗುನಾನೀಯಬೇಕೆಂದು ಸೂಚಿಸಿದರು ನಗರದಲ್ಲಿ ಎರಡು ನೋರಿಗೆಗಳನ್ನು ಕಟ್ಟಲು ರೂ 1200 ಮತ್ತು ರೂ 900 ಮಂಜೂರುಮಾಡಲಾಯಿತು.

ದುಃಖ ಸೂಚಕ ಸಭೆ—ಶ್ರೀ ಮಂಜುನಾಥ ಕೃಷ್ಣಾಚಾರಿತ ಯಕ್ಷಗಾನ ಕಲಾವರ್ಧಕ ಸಂಘದ ಆಶ್ರಯದಲ್ಲಿ ಶ್ರೀ ಕೆ ಕೃಷ್ಣ ರಾಯರ ನಿಧನದ ಕುರಿತು ಕಾರ್ಯದರ್ಶಿ ಶ್ರೀ ರಾಂಕರನಾರಾಯಣ ಅಡಿಗರು ದುಃಖಸೂಚಕ ನಿರ್ಣಯವನ್ನು ಮಂಡಿಸಿ ಸಂತಾಪಸೂಚಿಸಿ ಅವರ ಜೀವನದ ಪರಿಚಯ ಮಾಡಿದರು

ಸಿ. ಎಚ್ ಡಿ ಪದವಿ—ಮಂಗಳೂರು ಸರಕಾರೀ ತರಬೇತಿ ಕಾಲೇಜಿನಲ್ಲಿ ಮನಃಶಾಸ್ತ್ರ ಮತ್ತು ಶಿಕ್ಷಣ ವಿಭಾಗದ ಪ್ರಾಧ್ಯಾಪಕರಾದ ಡಾ ಕೆ ಸಾಂಡುರಂಗ ನಾಯಕರಿಗೆ, ಅವರು ಮೂಲ ಶಿಕ್ಷಣದ ಮಾನಸಿಕ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು ನಡೆಸಿದ ಸಂಶೋಧನಾ ಕಾರ್ಯಕ್ಕಾಗಿ ಮದ್ರಾಸು ವಿಶ್ವವಿದ್ಯಾಲಯದವರು ಸಿ ಎಚ್. ಡಿ ಪದವಿಯನ್ನಿತ್ತು ಗೌರವಿಸಿದ್ದಾರೆ

ಸ್ವಾತಂತ್ರ್ಯ ಸಂಗ್ರಾಮ ಶತಾಬ್ದಿ ಸ್ಮಾರಕ ಸ್ಪರ್ಧೆ—ಒಂದು ಜಿಲ್ಲಾ ಅಬೆರಣ ಸಮಿತಿಯವರಿಂದ ಏರ್ಪಡಿಸಲಾಗಿದೆ ತಾ. 13ರಿಂದ 16 ತನಕ ಸ್ಪರ್ಧೆಗಳು ಪೊಲಿಸ್ ಪರೇಡ್ ಮೈದಾನದಲ್ಲಿ ನಂದಸರಿಗೂ ಹುಡುಗರಿಗೂ, ಸಿರಾ ಪ್ರಾಸ್ತುಲ ವಟ್ಟಾರದಲ್ಲಿ ಹೆಂಗಸರಿಗೂ ಹುಡುಗಿಯರಿಗೂ ನಡೆಯುವುವು ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಂತಮ್ಮ ಶಾಲಾ ಮುಖ್ಯೋಪಾಧ್ಯಾಯ, ಮುಖ್ಯೋಪಾಧ್ಯಾಯಿನಿ ಮೂಲಕ ಪ್ರವೇಶ ಪತ್ರಗಳನ್ನು ತಾ. 5ರೊಳಗೆ ಶ್ರೀ ಬಿ. ಎಸ್ ಭಾಸ್ಕರ ರೈ, ಎಡ್ವೋಕೇಟ್ ಹಂಪನಕಟ್ಟೆ ಮಂಗಳೂರು-1, ಅವರ ವಿಳಾಸಕ್ಕೆ ಕಳುಹಿಸಬೇಕು ಹೆಚ್ಚಿನ ಮಾಹಿತಿಯನ್ನು ಅವರಿಂದ ಪಡೆಯಬಹುದು.



ಆರೋಗ್ಯದ ದೃಷ್ಟಿಯಿಂದ ನೋಡಿದರೆ, ಭಾರತವು ಬಹಳ ಹಿಂದುಳಿದ ರಾಷ್ಟ್ರವಾಗಿರುವುದು ಇದಕ್ಕೆ ಹಲವಾರು ಕಾರಣಗಳಿರುವುದು ನಮ್ಮವರಲ್ಲಿ ಸಾರಕ್ಕೆ ಎಂಥತ್ತಕ್ಕೂ ಮಿಕ್ಕಿದ ಜನರು ಗ್ರಾಮಗಳಲ್ಲಿಯೇ ವಾಸಿಸಿಕೊಂಡಿದ್ದಾರೆ ಉಳಿದ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸುವಂತೆಯೇ ಭಾರತವು ಭಾರತೀಯರು ಆರೋಗ್ಯದ ಕಡೆಗೂ ತನ್ನ ಗಮನವನ್ನು ವಿಶೇಷ ರೀತಿಯಿಂದ ಹರಿಸಿದೆ. ರೋಗವು ಬಂದ ಮೇಲೆ ಚಿಕಿತ್ಸೆ ಮಾಡುವುದಕ್ಕಿಂತ ಭಾರದಂತೆ ತಡೆಯುವುದು ಯುಕ್ತವಾಗಿದ್ದು ಸರಕಾರವು ಈ ಬಗ್ಗೆ ಯೋಗ್ಯ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದೆ. ಶುದ್ಧ ನೀರಿನ ಸೂಚ್ಯಕೆ, ಪೈರ್ಮಲ್ಯ, ಮಲೇರಿಯಾ, ಕ್ಷಯ, ಮತ್ತು ಕುಷ್ಠ ಮೊದಲಾದ ರೋಗಗಳ ಹತೋಟಿ, ತಾಯಂದಿರ ಮತ್ತು ಮಕ್ಕಳ ಆರೋಗ್ಯ, ಜನನ ನಿಯಂತ್ರಣ, ಹಾಗೂ ಕುಟುಂಬ ಯೋಜನೆ, ಆರೋಗ್ಯ ಸಿಬ್ಬಂದಿಯ ತರಬೇತಿ ಮತ್ತು ವೈದ್ಯಕೀಯ ಸಂಶೋಧನೆಗಳ ತತ್ವಗಳ ಅನುಷ್ಠಾನವೇಲಾಗಿದೆ ಈ ಚಿತ್ರದಲ್ಲಿ 'ಆರೋಗ್ಯ' ಸಂಬಂಧದ ಕೆಲವು ನೋಟಗಳನ್ನು ವೀಕ್ಷಿಸಬಹುದು

ಚಿತ್ರ ೧ ವೈದ್ಯ ವಿದ್ಯಾರ್ಥಿಯೊಬ್ಬರು ಪ್ರಯೋಗ ಶಾಲೆಯಲ್ಲಿ ಕಾರ್ಯನಿರತರಾಗಿದ್ದಾರೆ

ಚಿತ್ರ ೨ ಶ್ರೀಪುರದ ಆಗರ್ತಲಾ ಸರಕಾರಿ ಆಸ್ಪತ್ರೆಯಲ್ಲಿ ನರ್ಸ್‌ಗಳ ತರಬೇತಿಯ ತರಗತಿ

ಚಿತ್ರ ೩ ದಪಲಿಯ ಸಮೀಪದ ಗ್ರಾಮವೊಂದರಲ್ಲಿ ಮಲೇರಿಯಾ ಸಂಸ್ಥೆಯ ತಂಡವೊಂದು ಮಲೇರಿಯಾ ನಿರೋಧ ಕಾರ್ಯಾಚರಣೆಯಲ್ಲಿ ಮಗ್ನವಾಗಿದೆ

ಚಿತ್ರ ೪ ಸಣ್ಣದೊಂದೂರಿನಲ್ಲಿ ಸರಕಾರಿ ಚಿಕಿತ್ಸಾಲಯದಲ್ಲಿ ಚಟುವಟಿಕೆಯಿಂದ ಚಿಕಿತ್ಸೆ ನಡೆಯುತ್ತಿದೆ.

ಚಿತ್ರ ೫. ಅದಿನಾಗಲೆ ಗ್ರಾಮವೊಂದರಲ್ಲಿ ತಾಯಂದಿರು ಮತ್ತು ಮಕ್ಕಳಿಗಾಗಿ ತೆರೆಯಲಾದ ಸರಕಾರಿ ಆರೋಗ್ಯ ಕೇಂದ್ರವಲ್ಲಿ ಮಗುವೊಂದನ್ನು ತೂಕಮಾಡುತ್ತಿದ್ದಾರೆ.

ಪುತ್ತೂರು ಡಿ ಮುನ್ಸೀಫ್ ಕೋರ್ಟಿನಲ್ಲಿ O P 48/57.

ಬಾರಿತ್ರಾದೇವಿ- ಗುಮ್ಮಣ್ಣ ಕಡಂಬರ ವಿಧವೆ ಪರಂಗಾಡಿ ಗ್ರಾಮದ ಪಡಂಗಾಡಿ ಮನೆಯಲ್ಲಿ —ಅರ್ಜಿದಾರಳು

ಸದ್ರಿ ಮೇಲಿನ ವ್ಯವಹಾರಕ್ಕೆಯಲ್ಲಿ ಅರ್ಜಿಯಲ್ಲಿ ತೋರುವ ಆಭರಣಗಳು, ಚಿನ್ನಾಭರಣಗಳು ಸಗೈರೆಗಳನು ಅರ್ಜಿದಾರಳು ಹೊಂದಿಕೊಳ್ಳುವಂತೆ ವಾರೀಸು ಸರ್ಟಿಫಿಕೇಟು (Succession certificate) ಅರ್ಜಿದಾರಳ ಹೆಸರಿಗೆ ಕೊಡಿಸಬೇಕೆಂಗಿ ಬರಕೊಂಡ ಅರ್ಜಿಯ ನೋಟೀಸಿನ ತನಿಕೆ ತಾರೀಕು 9-6-57ಕ್ಕೆ ಇಟ್ಟಿರುತ್ತದೆ

ಆದ್ದರಿಂದ ಈ ಕುರಿತು ಸಂಬಂಧ ಪಟ್ಟವರ ಅಕ್ಷೇಪಗಳಿದ್ದರೆ ಈ ಕೋರ್ಟಿನ ಮುಂದೆ ಸದ್ರಿ ತಾರೀಕಿನ ದಿನ 11 ಗಂಟೆಗೆ ತಪ್ಪದೆ ಅಕ್ಷೇಪ ಹೇಳತಕ್ಕವರಿದ್ದರೆ ಬರೆಯ ಮೂಲಕ ಹೇಳಿಕೊಳ್ಳತಕ್ಕದ್ದು ಇದಕ್ಕೆ ತಪ್ಪಿದ್ರೆ ಶಿವ್ವಾ ಎಂತ ಕಾಡಿ ಮುಂದಿನ ತನ್ನಿಯಿಂದ ತೀರ್ಮಾನಿಸಲಾದೀತು ಎಂತ ಈ ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಮಾಡ್ಸಿಯದೆ.

P A Ariga
Advocate for Petitioners

ಪುತ್ತೂರು ತಾರೀಕು 25 7-57.

ಗೇಣಿ ಸಂಬಂಧ ವಿವಾದಗಳಿಗೆ ತಡೆಯಾಜ್ಞೆ

—ದ. ಕ ಜಿಲ್ಲೆಯ ನ್ಯಾಯಾಲಯಗಳಲ್ಲಿರುವ ಮದ್ರಾಸು ನ್ಯಾಯಗೇಣಿ ಮಸೂದೆಯ ಸಂಬಂದದಲ್ಲಿ ಧನಿ-ವಕ್ಕಲುಗಳ ಲೂಡನೆ ಉಂಟಾದ ವಿವಾದವನ್ನು ತಡೆಪಿಡಿಯಲು ಮೈಸೂರು ಸರಕಾರ ಆಜ್ಞೆಯನ್ನೀಯಲು ನಿರ್ಧರಿಸಿದೆಯೆಂಗಿ ತಿಳಿದುಬರುತ್ತದೆ ಮದ್ರಾಸು ನ್ಯಾಯಗೇಣಿ ಕಾನೂನಿನ ಮೇರೆಗೆ ಗೇಣಿಯನ್ನು ನಿಗದಿಪಡಿಸಲು ಆಗತ್ಯವಿಳ್ಳ ನಿಯಮಾವಳಿಗಳನ್ನು ಕೂಡತೇ ಪ್ರಕಟಿಸ ಪುದಾಗಿಯೂ ಹೇಳಲಾಗಿದೆ ಸಂಬಂಧಪಟ್ಟ ತಾಲೂಕುಗಳಲ್ಲಿ, ಗೇಣಿಯನ್ನು ನಿರ್ಣಯಿಸುವರೆ, ಆಯಾಯ ತಾಲೂಕು ತಹಶೀಲ್ದಾರರನ್ನು ಗೇಣಿ ಕೋರ್ಟಿನ ಅಧಿಕಾರಿಗಳೆಂಗಿ ನೇಮಿಸಿ, ಅಜ್ಞೆ ಹೊರಟಿರುವುದಾಗಿಯೂ ತಿಳಿದುಬರುತ್ತದೆ

ಮಿಶ್ರ ಉಕ್ಕು ತಯಾರಿಸುವ ಕಾರ್ಖಾನೆ

— ಮೋಟಾರು ವಾಹನಗಳಿಗೆ ಬೇಕಾದ ಸ್ಪ್ರಿಂಗುಗಳನ್ನು ತಯಾರಿಸಲು ಬೇಕಾದ ವಿಶೇಷ ರೀತಿಯ ಮಿಶ್ರ ಉಕ್ಕನ್ನು ಉತ್ಪಾದಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸುವ ಯೋಜನೆಯನ್ನು ಜಿಲ್ಲೆಯ ಪ್ರಮುಖ ಕೈಗಾರಿಕೋದ್ಯಮಿ ಶ್ರೀ ವಿ ಎಸ್. ಕುಡ್ವರು ಕೈಗೊಂಡಿದುವರು ಈ ಯೋಜನೆಯ ಸಫಲತೆಗೆ ಸರಕಾರದ ಸಹಾನುಭೂತಿ ದೊರೆಯಬೇಕಾದುದೂ ಅವಶ್ಯಕವೆಂದವರು ಅಭಿಪ್ರಾಯ ಸೂಚಿಸಿರುವರು ಈ ಕಾರ್ಖಾನೆಗೆ ಸ್ಥಾಪನೆಗೆ ರೂಪಾಯಿ ಮೂವತ್ತು ಲಕ್ಷ ಆಗತ್ಯವಿದೆ. ಅದು ಸ್ಥಾಪನೆಯಾದರೆ ವರ್ಷವೊಂದಕ್ಕೆ ಅರುವತ್ತು ಲಕ್ಷ ರೂಪಾಯಿ ಮೌಲ್ಯದ ಉಕ್ಕನ್ನು ತಯಾರಿಸುವರೆ ಸಾಧ್ಯವಾಗುವುದು ಇದರಿಂದ ಸಾಕಷ್ಟು ವಿದೇಶವಿನಿಯಮವೂ ಉಳಿಯುವುದೆಂದುಕೊಡಾ ಅವರು ಹೇಳಿದರು ಬೊಂಬಾಯಿಯ ರಾಮ್‌ಲಾಲ್ ಪಾಟ್ಸ್‌ರವರು ಶ್ರೀ ವಿ ಎಸ್ ಕುಡ್ವ, ಅವರ ಪುತ್ರ ಶ್ರೀ ಎಸ್ ವಿ. ಕುಡ್ವರ ಗೌರವಾರ್ಥವಾಗಿ ಏರ್ಪಡಿಸಲಾದ ಸತ್ಕಾರಕೂಟದಲ್ಲಿ ಶ್ರೀ ಕುಡ್ವರು ಮೇಲೆ ಹೇಳಿದ ವಿಚಾರಗಳನ್ನು ಬಹಿರಂಗಪಡಿಸಿದರು.

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಲಿ ರಾಮಸ್ವಾಮಿ ಅಯ್ಯರ್‌ರವರ ರತ್ನತ್ರಯಗಳು

ಟ್ರೇಡ್ ಮಾರ್ಕ್

ಸಂತಾನ ಸಿಂದೂರ (ಸ್ತ್ರೀಯರಿಗೆ ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ, ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುತ್ಕೃಷ್ಟ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ಪಂ|| A.R. ಅಯ್ಯರ್ ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷಗೊಳಿಸುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ ರೋಗಿಯ ವಯಸ್ಸು ಮತ್ತು ಬಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N P) ಸ್ಟಾಂಪು ಕಳಿಸಿರಿ ಸಲಹೆಯೊಡನೆ ಕ್ಯಾಟಲಾಗ್ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ, (ನೆ ಯು)

628, "ಸಂತಾನ ಸಿಂದೂರ ಸದನ", ಚಾಮರಾಜ ರೋಡ್ ಮೈಸೂರು-1 (S.I

ಹೀಗಿದೆ ಪ್ರಪಂಚ

(೩ನೇ ಪುಟದಿಂದ)

ಲಾಗಿ ನಮ್ಮ ನಾಡಿನ ಜಾನಪದ ಕಲೆಯಾದ ಯಕ್ಷಗಾನವು ಅವರ ಪ್ರೇಮದ ಸಾಕುಮಗು. ಪಂಡಿತರು ಯಕ್ಷಗಾನ ಕಲಾಕೋವಿದರು. ಬಹು ಪ್ರಸಿದ್ಧ ಅರ್ಥದಾರಿಗಳು. ಈಗಲೂ ನೆನಪಿಗೆ ಬರುತ್ತಿದೆ. ಕುಪ್ಪೆ ಪದವಿನಲ್ಲಿ ಜರಗಿದ ಯಕ್ಷಗಾನ ತಾಳಮದ್ದಳೆಯಲ್ಲಿ ಇವರು ಹೇಳಿದ ಅರ್ಥ ಈಗಲೂ ನೆನಪಿಗೆ ಬರುತ್ತಿದೆ. ಅರ್ಜುನನು ಕಟ್ಟಿದ ಸೇತುವೆಯನ್ನು ಹನುಮಂತನು ಮೂರು ಸಲವೂ ಮುರಿದು ಹಾಕಿದ್ದಾನೆ. ಇನ್ನು ಅರ್ಜುನನು ಪ್ರತಿಜ್ಞೆಪ್ರಕಾರ ಅಗ್ನಿ ಕುಂಡಕ್ಕೆ ಹಾರಿ ಆತ್ಮಸಮರ್ಪಣೆ ಮಾಡಲೇ ಬೇಕು. ಆಗ ಕೃಷ್ಣನು ವೃದ್ಧ ಬ್ರಾಹ್ಮಣವೇಷಧಾರಿಯಾಗಿ ಬರುತ್ತಾನೆ. ಪಂಡಿತರು ವೃದ್ಧಬ್ರಾಹ್ಮಣ ಕೃಷ್ಣನು ಪಂಚಾಯ್ತಿಕೆ ಮಾಡುತ್ತಾನೆ. ನಿಮ್ಮ ಈ ತರದ ಕಾರ್ಯಕಲಾಪಗಳಿಗೆ ಸಾಕ್ಷಿಯಿಲ್ಲ. ಇನ್ನೊಮ್ಮೆ ಅರ್ಜುನ ನೀನು ಸೇತುವೆಯನ್ನು ಕಟ್ಟು ಅದನ್ನು ಇವನು ಮುರಿಯಲ್ಲಿ ಎಂದು ಪಂಡಿತರು ಅನ್ನುತ್ತಾರೆ. ಬಹುಪ್ರಸಿದ್ಧ ಅರ್ಥದಾರಿಗಳು ಪಂಡಿತರು ಇವರನ್ನು ನೋಲಿಸಲೇ ಬೇಕು ಎಂದು ಹಟಕ್ಕೆ ಬಿದ್ದ ಮತ್ತಿಬ್ಬರು ಅರ್ಜುನ ಮತ್ತು ಹನುಮ-ಇವರ ಪಂಚಾಯ್ತಿಕೆಗೆ ಎಷ್ಟುಮಾತ್ರಕ್ಕೂ ಒಪ್ಪಲಾರರು. ಸುಮಾರು ಒಂದು ಘಂಟೆಯ ವರೆಗೆ ಪಂಡಿತರು ಸಾವಧಾನದಿಂದ ಹೀಗೆಯೇ ಹೇಳಿದರು ಅದರೂ ಮತ್ತಿಬ್ಬರೂ ಒಡಂಬಡಲಾರರು. ಬಹಳ ಕುತೂಹಲದಿಂದ ನಾವು ಸಭಿಕರು ಕೇಳುತಿದ್ದೆವು. ಕಡೆಗೆ ಪಂಡಿತರು ಹೇಳಿದರು "ಏನೋದ್ದ ಮಂಗಾಣದ ಅರ್ಜುನ ಮತ್ತು ಹನುಮಂತರು ನನ್ನ ಮಾತಿಗೆ ಮನ್ನಣೆಯಿತ್ತು ಹಾಗೆಯೇ ವರ್ತಿಸಿದ್ದರು. ಕುಪ್ಪೆಪದವಿನ ಅರ್ಜುನ ಮತ್ತು ಹನುಮಂತರಾದ ನೀವು ಕೇಳದಿದ್ದರೆ ನಾನೇನು ಮಾಡಲಿ. ಬೇಕಾದರೆ ಬೆಂಕಿ ಉರಿಸುತ್ತೇನೆ. ಅರ್ಜುನ ಅದಕ್ಕೆ ಹಾರಿ ಸಾಯ." "ಅಂದರು ಸಭಿಕರು ಮನಮೆಚ್ಚಿ ಕರತಾಡನ ಮಾಡಿದರು. ಸಂಡಿತರ ವಾಕ್ಚಾತುರ್ಯ ಅಂದರೆ ಹಾಗೆ.ಅವರಿಗೆ ಕಲಿಸಬೇಕಾಗಿತ್ತು 'ಇಂಗ್ಲಿಷ್ ವಕಾಲತಿಗೆ ಕಳುಹಿಸಬೇಕಿತ್ತು ಅಂದರೆ ನೋರ್ಟನು ಕೂಡ ಹೆದರಬೇಕಿತ್ತು.' ಇಂತಹ ಅದ್ವಿತೀಯ ಪಂಡಿತರು ನಮ್ಮ ಗಣಪಯ್ಯನವರು ಅಗಸರ ಕಸಬೂ ಅವರಿಗೆ ತಿಳಿದಿತ್ತು ಅಗಸನ ಕೆಲಸಕ್ಕೂ ಹಿಂಜರಿಯುತ್ತಿದ್ದಿಲ್ಲ. ಅವರು ಪರಿಚಯಮಾಡಿಕೊಳ್ಳದ ಜನರಿಲ್ಲ-ಗಂಧಜೆಯಂರಿಗೆ ತಲೆಗೆ ಹಾಕಿಕೊಳ್ಳಲು 'ಹಿಮಾಸಾಗರ' ತೈಲ ಸಪ್ಲೈ ಮಾಡುವುದು ಇವರೇ ಅಂತೆ. ಅಷ್ಟು ಘನವಂತರು ಗಣಪಯ್ಯನವರು.

ಂ ಂ ಂ

ನಾನು ಹೋದಂದು ರಾತ್ರಿ ಊಟ ಮಾಡುವಾಗ ನಮ್ಮ ಸಬ್ ಕೋರ್ಟಿನ ದಾವೆಯ ವಿಚಾರವಾಗಿ ಮಾತಬಂತು ನಮ್ಮ ಕುಟುಂಬದೊಳಗಿನ ವ್ಯಾಜ್ಯವೊಂದು ಮೂರು ನಾಲ್ಕು ವರ್ಷಗಳಿಂದ ಸಬ್ ಕೋರ್ಟಿನಲ್ಲಿ ನಡೆದಿತ್ತು. ಮಂಗಳೂರಿಗೆ ಆ ವ್ಯಾಜ್ಯದ ಸಂಬಂಧವಾಗಿ ಬಂದರೆ ಪಂಡಿತರಲ್ಲಿ ಉಳಕೊಳ್ಳುವ ಪದ್ಧತಿ ಅಂದು ರಾತ್ರಿ ಹೀಗೆಯೇ ಅವರ ಸುದ್ದಿ ಮಾತನಾಡುತ್ತಾ ಇರುವಾಗ ಪಂಡಿತರು ಕೇಳಿದರು.

"ರಾಮಯ ರಾಯರೇ ಹೇಗೆ ಈಗಿನ ಜಡ್ಜರು? ಜನಸ್ವಲೂ ಉ ಉ ಉಪ ಹಾಗೆ ನೋಡಿ. ಏನಾದರೂ ಪ್ರಯತ್ನಪಟ್ಟರೆ ಆಗ ಬಹುದೆಂತ ಕಾಣುತ್ತದೆ. ಮತ್ತೆ ಯಾರಯ್ಯಾ ಸಾಯುವುದು ಈ ಕೋರ್ಟು ಕಛೇರಿಗಳ ಮೆಟ್ಟಲು ಶುಳದ.? ನಮ್ಮಂಥ ಸತ್ಯದ ಜನರಿಗೆ ಹೇಳಿದ್ದಲ್ಲಯ್ಯಾ ವ್ಯಾಜ್ಯ ಸಾಜ್ಯ ಏನನ್ನುವಿರಿ?"

ಒಡನೆಯೇ ನನಗೂ ಆಶೆಯಾಯಿತು. ಸಾಕು ಸಾಕಾಗಿ ಹೋಗಿದೆ ಸೇದೆಗಳಿಗೂ ಸಲಾಮು ಹೊಡೆದು. ಒಮ್ಮೆ ಮುಗಿದರೆ ಸಾಕೆಂದು ಇದ್ದವನಿಗೆ ಇದೊಂದು ಆಶೆಯುತ್ಪನ್ನವಾಯಿತು. 'ಕಡವರವನೆಡವಿದ ಕಡುಬಡವನಂತೆ' ಎಂದಿದೆಯಲ್ಲಾ ಹಾಗೆ

"ಹಾಗೆ ಏನಾದರೂ ಮಾಡಿದರೆ ಉತ್ತಮವೇ ಆಯಿತೆನ್ನಿ ಆದರೆ ಬಹು ಕಷ್ಟದ ಕೆಲಸ." ನಾನಂದೆ.

'ಕಷ್ಟ! ಎಂಥಾ ಕಷ್ಟ ಅದರ ಗೊಡವೆ ನಿಮಗೇನೂ ಬೇಡ ನಾನು ನೋಡಿಕೊಳ್ಳುತ್ತೇನೆ. ನೋಡಿ ಜಡ್ಜರು ಇರುವುದು ನಮ್ಮ ಪಡಿಯಾಲ ಲಕ್ಷ್ಮಿ ಅಮ್ಮನವರ ಬಂಗಲೆಯಲ್ಲಿ ಅವರವರಿಗೆ ಬಹಳ ಸ್ನೇಹಾಚಾರ ಲಕ್ಷ್ಮಿ ಅಮ್ಮನವರನ್ನು ಹಿಡಿದರೆ ನಮ್ಮ ಕೆಲಸ ಆಯಿತು ಅಂದುಕೊಳ್ಳಬಹುದು. ನಮ್ಮೊಳಗೇನೆ ಇಂಲಿವೊನ್ನೆ ನೋಡಿ ಒಂದು ವ್ಯಾಜ್ಯದಲ್ಲಿ ಹೀಗೆಯೆ ಸ್ವಲ್ಪ ಕೆಲಸ ಮಾಡಿತು. ರೂ. 500 ವಜ್ಜವಾಯಿತೆನ್ನಿ. ಅದರೇನಯ್ಯಾ - ಜಡ್ಜನೆಂಟು ಕೂಡ ನಮ್ಮ ವಖೀಲರೇ ಬರೆದದ್ದು ನಿಮಗೆ ಸಮ್ಮತಿಯಂಟೊ ಹೇಳಿ ಹಾಯಕಷ್ಟ ಪೂರ್ಣನನ್ನದ. ಹಣ ಮಾತ್ರ ಸ್ವಲ್ಪ ವೆಚ್ಚಮಾಡಬೇಕಾದೀತು." ಪಂಡಿತರಂದರು. ಆಗ ಅವರ ಹೆಂಡತಿಯೂ ಕೂಡ.

"ಹೌದು ರಾಮರಾಯರೆ' ಲಕ್ಷ್ಮಿ ಅಮ್ಮನ ಕೂಡೆ ಬೇಕಾದರೆ ನಾನೂ ಮಾತನಾಡುತ್ತೇನೆ. ಸುಲಭದಲ್ಲಿ ಆಗುವ ಕಾರ್ಯ ಯಾಕೆ ಉದಾಸೀನ ಮಾಡಬೇಕು?" ಎಂದು ಅಂದರು.

"ನಾಳೆ ವಖೀಲರೊಡನೆ ಹೇಳಿ ಒಂದು ವಾಯಿದೆ ತೆಗೆದ ಕೊಳ್ಳಿರಿ ನಾಳೆಯೇ ಮಾತನಾಡುವ ನಾನೂ ಇವಳೂ ಕೋಗಿ ಮೊದಲು ಲಕ್ಷ್ಮಿ ಅಮ್ಮನನ್ನು ಕಂಡು ಮಾತನಾಡುತ್ತೇನೆ" ಪಂಡಿತರಂದರು.

"ಆಗಲಿ ನಾಳೆ ಹಣ ಬೇಕಾದರೆ ಸ್ವಲ್ಪ ಕೊಡುವ ಅದರೆ ಬಹಳ ಗಟ್ಟಿಸಲ್ಲಿ ಮಾತ್ರ ನಮ್ಮ ಕೆಲಸವಾಗಬೇಕು" ನಾನಂದೆ.

ಮರುದಿನ ಬೆಳಗ್ಗೆ ವಖೀಲರಲ್ಲಿಗೆ ಕೋಗಿ ವಾಯಿದೆ ಕೇಳುವಂತೆ ಹೇಳಿದೆ. ಅನಂತರ ವಾಯಿದೆಯೂ ಸಿಕ್ಕಿತು. ನೂರು ರೂಪಾಯಿ. ಪಂಡಿತರಲ್ಲಿ ಕೊಟ್ಟು ಅಂದು ಸಾಯಂಕಾಲ ಊರಿಗೆ ಹೊರಟೆ. ಮನೆಗೆ ಬಂದು ತಮ್ಮನೊಡನೆ ಇದರ ವಿಚಾರವನ್ನೆತ್ತಲಿಲ್ಲ.

ದಿನವೊಂದರ ಮೇಲೆ ಪಂಡಿತರ ಪತ್ರವೊಂದು ಬಂದಿತು. "ನಾವು ಮುಖತಃ ಮಾತನಾಡಿದಂತೆ ಲಕ್ಷ್ಮಿ ಅಮ್ಮನೊಡನೆ ಮಾತನಾಡಿದ್ದೇನೆ. ನಮ್ಮ ಕೆಲಸ ಪಂಡಿತ ಆಗುತ್ತದೆ. ರೂಪ್ಯಾ 500 ಬೇಕು ನಾಳೆ ಬರುತ್ತೇನೆ" ಎಂದು ಬರೆದಿದ್ದರು. ನನ್ನ ತಮ್ಮನು ಈ ಕಾಗದವನ್ನು ಓದಿ ನೋಡಿ ಇದು ಎಂತಹ 'ವಿಲೆವಾರಿ' ಎಂದು ಕೇಳಿದನು. ಎಲ್ಲ ವಿಚಾರಗಳನ್ನು ಅವನಿಗೆ ತಿಳಿಸಿದೆ.

"ಅಯ್ಯೊ ಹುಚ್ಚೆ? ಜಡ್ಜರನ್ನು ತಿರುಗಿಸುವುದೆಂದರೆ ಅದೇನು ನಿಮ್ಮ ತಲೆ ತಿರುಗಿಸಿದ ಹಾಗೆಂದು ಎಣಿಸಿದಿರಾ? ಏನೋದೂ ವಿಚಾರ ಸಚಾರವಿಲ್ಲದೆ ಬಂದೆ ಮರುಳಾದೆಯಲ್ಲ ಮಹಾರಾಯ? ನಾಳೆ ನೀನು ಪುನಹ ಮಂಗಳೂರಿಗೆ ಹೋಗಲೇಬೇಕು. ಆಗ ಪಂಡಿತರು ಇಲ್ಲಿಗೆ ಬರುತ್ತಾರೆ. ನೀನು ಹೋಗಿ ಲಕ್ಷ್ಮಿ ಅಮ್ಮನನ್ನು ಕಂಡು ವಿಚಾರಿಸಿ ಬಾ. ಮತ್ತೆ ಎಲ್ಲಾ ನೋಡುವ" ಎಂದೆ.

ಹಾಗೆ ಮರುದಿನ ಪ್ರಾತಃಕಾಲ ಪುನಹ ಮಂಗಳೂರಿಗೆ ಹೊರಟೆ. ವಾಣಿಮಂಗಳೂರಿನಲ್ಲಿ ಮಂಗಳೂರು ಕಡೆಯಿಂದ ಬರುವ ಬಸ್ಸಿನಲ್ಲಿ ಪಂಡಿತರಿದ್ದರು ನಾನು ಕಂಡೂ ಕಾಣದವನಂತೆ ಸುಮ್ಮಗೆ ಬಸ್ಸಿನಲ್ಲಿಯೇ ಕುಳಿತೆ.

ಮಂಗಳೂರಿಗೆ ತಲುಪಿದೊಡನೆಯೇ ಪಡಿಯಾಲ ಲಕ್ಷ್ಮಿ ಅಮ್ಮನವರ ಮನೆಗೇನೇ ಹೋದೆ. ನಮ್ಮಿಬ್ಬರಿಗೂ ಪರಿಚಯವಿರಲಿಲ್ಲ. ಆದರೂ ಹೋಗಿ ಮಾತನಾಡಿಸಿದೆ.

"ಏನುಬಂದಿರಿ ನಿಮ್ಮ ಪರಿಚಯವಾಗಲಿತ್ತುವಲ್ಲ" ಎಂದು ನಮ್ಮಲ್ಲಿಗೆ ಲಕ್ಷ್ಮಿ ಅಮ್ಮನವರು ಮಾತನಾಡಿಸಿದರು.

"ನನಗೆ ಸುತ್ತೂರಲ್ಲಿ. ರಾಮರಾಯ ನೆಂದು ಹೆಸರು. ನಿಮ್ಮೊಡನೆ ಒಂದು ವಿಚಾರ ಕೇಳಲು ಬಂದೆ. ಪಂಡಿತ ಗಣಪಯ್ಯನವರು ನಿನ್ನೆ ಇಲ್ಲಿಗೆ ಬಂದಿದ್ದರೆ? ಎಂದು ಕೇಳಿದೆ.

ವಿಶಾಸ ಹೆಂಗಸಿಗೆ ಅರ್ಥವಾಗದಂತೆ ತೋರಲಿಲ್ಲ

"ಯಾರು ಗಣಪಯ್ಯ ನನಗೆ ಅವರ ಪರಿಚಯವೇ ಇಲ್ಲವಲ್ಲ ಯಾರೂ ಆ ಹೆಸರಿನವರೆ ಇಲ್ಲಿಗೆ ಬರಲಿಲ್ಲ" ಅಂದರು.

ನನಗೆ ಮಾತು ಬಾರದಾಯಿತು. ಸಿಟ್ಟಿನಿಂದ ನನ್ನ ತಮ್ಮನು ಹೇಳಿದ್ದು ನಿಜವಾಯಿತು.

"ಅಷ್ಟೆ ವಿಚಾರಿಸಿಕೊಂಡು ಹೋಗುವ ಎಂದು ಬಂದೆ. ನಮಸ್ತೆ ಹೋಗಿಬರುತ್ತೇನೆ" ಎಂದು ಹೊರಟೆ. ಆ ಹೆಂಗಸಿಗೆ ಆಶ್ಚರ್ಯವಾಗಿರಲೇಬೇಕು. ಈ ತರದ ವರ್ತನೆಯನ್ನು ಕಂಡು.

ಅಬ್ಬ ಪಂಡಿತರ ಪಾಂಡಿತ್ಯವೆ. ನೂರು ರೂಪಾಯಿಗೆ ನಾಮವಾಯಿತಲ್ಲ. ಇಷ್ಟು ಸುಲಭದಲ್ಲಿ ನನ್ನನ್ನು ನಂಗನಾಗಿ ಮಾಡಿಬಿಟ್ಟರಲ್ಲಾ, ಎಂದು ವಿಚಾರಮಾಡುತ್ತಾ, ಬ್ರಹ್ಮ ಬರೆದಲ್ಲಿ ಬಡಕೊಳ್ಳುತ್ತಾ ಮರುಬಸ್ಸಿನಲ್ಲೇ ಊರಿಗೆ ಹೊರಟೆ. ಮನೆ ಸೇರುವಾಗ ಪಂಡಿತರು ಹಾಯಾಗಿ ಅಲ್ಲಿಯೇ ಇದ್ದರು.

"ರಾಮರಾಯರು ಎಲ್ಲಿಗೆ ಹೋಗಿದ್ದೀರಯ್ಯ ನಿಮ್ಮನ್ನು ಕಾದು ಕಾದುಸಾಕಾಗಿ ಹೋಯ್ತು. ನನ್ನ ಪತ್ರ ಸಿಕ್ಕಿದೆಯಲ್ಲ" ಎಂದು ಪಂಡಿತರಂದರು.

ನನಗೆ ಕೋಪದಿಂದ ತಲೆನೋಯುತ್ತಿತ್ತು. ಆದರೂ ತಡೆದುಕೊಂಡೇ ಗಡುಸಿನಿಂದಲೇ ಹೇಳಿದೆ.

"ಕ್ಷಮಿಸಿರಿ ಪಂಡಿತರೆ, ನಿಮಗೆ ಬಹಳ ತ್ರಾಸಕೊಟ್ಟೆ. ನಾನೇ ರೂಪಾಯಿ ತೆಗೆದುಕೊಂಡು ನಿಮ್ಮನ್ನು ಕಾಣಲು ಮಂಗಳೂರಿಗೆ ಹೊರಟೆ ಅಲ್ಲಿ ಹೋಗುವಾಗ ನೀವಿರಲಿಲ್ಲ. ಹಾಗೆಯೇ ಪಡಿಯಾಲಕ್ಕೆ ಹೋಗಿ ಲಕ್ಷ್ಮಿ ಅಮ್ಮನನ್ನು ಕಂಡು ಮಾತನಾಡಿ ಇತ್ತ ಬಂದೆ. ನಮಗಾಗಿ ಬಹಳ ಶ್ರಮಪಟ್ಟಿರಿ ಸ್ವಾಮಿ.

ಪಂಡಿತರು ಮೌನ. ಮರುದಿನ ಎದ್ದು "ಬರುತ್ತೇನೆ ಸ್ವಾಮಿ", ಎಂದು ಹೊರಟೆ ಬಿಟ್ಟರು. ಎರಡು ಮೂರು ದಿವಸಗಳ ನಂತರ 50 ರೂಪಾಯಿ ಕಳುಹಿಸಿ ಉಳಿದುದನ್ನು ಸ್ವಲ್ಪ ದಿವಸಗಳಲ್ಲಿ ಕಳುಹಿಸಿ ಕೊಡುತ್ತೇನೆಂದೂ ತಿಳಿಸಿದರು.

ನನ್ನ ತಮ್ಮ ಹೇಳಿದ "ಹೇಗಿದೆ? ಜಡ್ಜರನ್ನು ತಿರುಗಿಸುವ ಕಾರ್ಯಕ್ರಮ. ಇವರ ಉದ್ಯೋಗವೇ ಇದು. ನೀನು ಎಂತಹ ಮಂಗನಾಗಿಸಿಟ್ಟ."

ಆಗ ನನಗೆ ಮನಸ್ಸು ನೆನಪಾಯಿತು. ಪಂಡಿತರು ಓದುತಿದ್ದ ಕವಿ ರತ್ನನ ಪದ್ಯ ರತ್ನನು ವಾಗ್ದೇವಿಯ ಭಂಡಾರದ ಮುದ್ರೆಯನ್ನೊಡೆದಂ ಸಾರಸ್ವತ ಮೆನಿಪ ಕವಿತೆಯೊಳಂತೆ. ಪಂಡಿತರು ಶ್ರೀ ದೇವಿಯ ಭಂಡಾರದ ಮುದ್ರೆಯನೊಡೆದರ್ ಸಾರಸ್ವತ-ಹ-ಮೆನಿಪ ಕವಿತೆಯೊಳ್.

ಓದುಗರೆ ಈ ಟೋಪಿ ನಿಮಗಾಗುತ್ತದೆಯೆ? ಹಾಗಾದರೆ ಇಟ್ಟುಕೊಳ್ಳಿರಿ.

ಕೆ. ನಾರಾಯಣ ರೈ, ಬಿ. ಎ. ಬಿ ಎಲ್.
ಎಡಿಶನಲ್ ಪಬ್ಲಿಕ್ ಪ್ರೊಸಿಕ್ಯೂಟರ್,
ಮಂಗಳೂರು.





ಹೋರಾಟದ ಇತಿಹಾಸ

ಪ್ರಥಮ ಭಾರತೀಯ ಸ್ವಾತಂತ್ರ್ಯಸಮರೇತಿಹಾಸವು ಮೈನವಿರೇಳಿಸುವುದು!

ಲೋಕದ ಪ್ರತಿಯೊಂದು ಜೀವಿಯೂ ಅಪೇಕ್ಷಿಸುವುದು ಸ್ವಾತಂತ್ರ್ಯವನ್ನು ಅ ಪಾರ ಹಾನಿ ಗೊಳಗಾದರೂ, ತಮ್ಮ ಸ್ವಾತಂತ್ರ್ಯದ ಹೋರಾಟವನ್ನು ಉದ್ದೇಶ ಸಫಲವಾಗುವತನಕ ಅನೇಕರಾಷ್ಟ್ರಗಳು ಮುಂದುವರಿಸಿದುದೇ ಇದಕ್ಕೆ ಯೋಗ್ಯ ನಿದರ್ಶನ. ಕೆಲವು ರಾಷ್ಟ್ರಗಳು ಹಿಂಸಾತ್ಮಕ ಹೋರಾಟಗಳಿಂದ ಸ್ವಾತಂತ್ರ್ಯವನ್ನು ಸಾಧಿಸಿದರೆ, ಇನ್ನು ಕೆಲವು ಅಹಿಂಸಾತ್ಮಕ ಕ್ರಾಂತಿಯಿಂದಲೇ ಸ್ವಾತಂತ್ರ್ಯಾರ್ಜನೆ ಮಾಡಿವೆ. ಇನ್ನೂ ಕೆಲವು ಸಶಸ್ತ್ರ ಸಂಗ್ರಾಮ ಹಾಗೂ ಅಹಿಂಸಾತ್ಮಕ ಹೋರಾಟಗಳಿಂದ ತಮ್ಮ ತಾಯ್ನಾಡಿನ ಬಂಧ ವಿಮೋಚನೆ ಮಾಡಿವೆ ಭರತಖಂಡ ಮೂರನೆಯ ಸಾಲಿಗೆ ಸೇರಿದ ರಾಷ್ಟ್ರವೆನ್ನಬಹುದು. ಕಾರಣ ನಮ್ಮ ನಾಡಿನ ಸ್ವಾತಂತ್ರ್ಯಕ್ಕೆ ೧೮೫೭ರ ಕ್ರಾಂತಿಯೂ, ಕಾಂಗ್ರೆಸ್ಸಿನ ಅಹಿಂಸಾತ್ಮಕ ಯುದ್ಧವೂ ಸಹಕಾರಿಯಾದುವು ೧೮೫೭ರ ಸಶಸ್ತ್ರ ಸಂಗ್ರಾಮದ ಶತಾಬ್ದಿ ಈ ವರ್ಷ ಆಚರಿಸಲ್ಪಡುತ್ತದೆ ಭಾರತದ ಸ್ವಾತಂತ್ರ್ಯೇತಿಹಾಸದಲ್ಲಿ ರಕ್ತರಂಜಿತವಾದ ಈ ಮಹಾ ಸಂಗ್ರಾಮದಲ್ಲಿ ಹಿಂದೀಯರು ಪರಾಭವ ಹೊಂದಿದರೂ ಆಂಗ್ಲ ಸಾಮ್ರಾಜ್ಯ ಶಾಹಿಯ ಎದೆ ತತ್ತರಿಸದಿರಲಿಲ್ಲ.

ನಮ್ಮವರಿಗೆ ಸ್ವಾತಂತ್ರ್ಯಾಭಿಲಾಷೆಯುಂಟಾದುದೆಲ್ಲಿ ಎಂಬ ವಿಷಯದ ಸಿಂಹಾವಲೋಕನ ಈ ಸಂದರ್ಭದಲ್ಲಿ ಅವಶ್ಯವೆನಿಸಿದಲು ಮಹಮ್ಮದೀಯರ ಅಭಿಯೋಗದಿಂದ ಹಾಗೂ ಅವರ ಸಾಮ್ರಾಜ್ಯ ಸ್ಥಾಪನೆಯಿಂದ ಭಾರತದ ಪ್ರಜೆಗಳಿಗಾದ ಕಷ್ಟ ನಷ್ಟ ಅಷ್ಟಿಷ್ಟಲ್ಲ. ಮೇವಾರದ ರಾಣಾ ಪ್ರತಾಪನು ಭಾರತೀಯ ಸ್ವಾತಂತ್ರ್ಯ ಮೂರ್ತಿಯಾಗಿ ಮುಘಲರನ್ನು ಇದಿರಿಸಿದನು. ಔರಂಗ ಜೇಬನ ರಾಜ್ಯಭಾರ ಕಾಲದಲ್ಲಿಂತೂ ಮಹಮ್ಮದೀಯರ ದಬ್ಬಾಳಿಕೆ ಮೇರೆಮೀರಿತು. ಆಗ ಶಿವಾಜಿಯು ಸ್ವರಾಜ್ಯಕ್ಕಾಗಿ ಹೋರಾಡಿದನು ಮುಂದೆ ಸುಮಾರು ಒಂದು ಶತಮಾನದನಂತರ ಟಿಪ್ಪು ಸುಲ್ತಾನ ಉದಯವಾಯಿತು. ಟಿಪ್ಪುವು ಹಿಂದುಗಳನ್ನು ದ್ವೇಷಿಸುತ್ತಿದ್ದನೆಂದೂ, ಅನ್ಯಮತ ಸಹಿಷ್ಣುಗಳಿ ಅವನಲ್ಲಿ ಲಿಲ್ಲವೆಂದೂ ಕೆಲವರು ಇತಿಹಾಸಕಾರರು ನೂರಿದ್ದಾರೆ. ಆದರೆ ಟಿಪ್ಪು ಸುಲ್ತಾನನು ಪ್ರಜಾಪ್ರಿಯ ರಾಜನಾಗಿದ್ದನೆಂದು ಆಧಾರಸಹಿತ ಖಚಿತಪಡಿಸಬಹುದು. ಆದೇನೇ ಇರಲಿ, ಸ್ವಾತಂತ್ರ್ಯವನ್ನುಳಿಸಿಕೊಳ್ಳಲೋಸುಗ ಅವನು ಆಂಗ್ಲರ ವಿರುದ್ಧ ಕಾದಾಡಿದನೆಂಬುದು ಸರ್ವ ವಿದಿತ ವಿಷಯ. ವಂಚನೆಯಿಂದ ಅವನ ಕೊಲೆ ನಡೆಯಿತೆಂಬುದನ್ನೂ ಹಲವರು ಬಲ್ಲರು. ಪ್ರತಿಯೊಂದು ವಿಧಗಳಿಂದಲೂ ಭಾರತೀಯರ ಈ ಬಿಡುಗಡೆಯ ಹೋರಾಟವನ್ನು ಕ್ರೂರ ರೀತಿಯಿಂದ ತಡೆಗಟ್ಟಲಾಯಿತು ೧೮೫೭ರ ಪ್ಲಾಸೀ ಯುದ್ಧವಂತೂ ಭಾರತದಲ್ಲಿ ಆಂಗ್ಲರಿಗೆ ಸಾಮ್ರಾಜ್ಯ ಸ್ಥಾಪನೆಗೆ ಅನುವು ಮಾಡಿಕೊಟ್ಟಿತು ಇದಕ್ಕೆ ಕಾರಣವೇ ಹಿಂದೀಯರಲ್ಲಿದ್ದ ಬ್ರಿಟ್ಟು ಒಕ್ಕಟ್ಟಿಲ್ಲದಿದ್ದುದರಿಂದಲೇ ಭಾರತದ ಮೇಲೆ ಪರಕೀಯರ ದುರಾಕ್ರಮಣ ಸಫಲವಾದುದು. ಒಂದಲ್ಲಿ ಒಂದು ವಿಧದಿಂದ ಈಸ್ಟ್ ಇಂಡಿಯಾ ಕಂಪೆನಿಯ ಗವರ್ನರ್ ಜನರಲರು ತಮ್ಮ ಕುತಂತ್ರ ಜಾಲವನ್ನೊಡ್ಡಿ ಅಲ್ಲಲ್ಲಿನ ಅರಸರನ್ನೂ ಪ್ರಜೆಗಳನ್ನೂ ಸಿಕ್ಕಬೀಳುವಂತೆ ಮಾಡುತ್ತಿದ್ದರು

ಕಂಪೆನಿಯ ಗವರ್ನರ್ ಜನರಲನಾಗಿದ್ದ ಮಾರ್ಕ್ವಿಸ್ ಒಫ್ ವೆಲ್ಲೆಸ್ಲೀಯು ಸೈನ್ಯ ಸಹಾಯಕ ಮೈತ್ರಿ ಪದ್ಧತಿಯಿಂದ ಟೋನ್‌ಸ್ಲೆ ಸಿಂಧ್ಯ, ಗಾಯಕವಾಡ್ ಮೊದಲಾದ ದೇಶೀಯ ರಾಜರನ್ನು ತನ್ನ ಬಲೆಯಲ್ಲಿ ಸಿಕ್ಕಿಸಿಕೊಂಡನು. ಹೋಳ್ಕರ್ ಮಾತ್ರ ಇದರಿಂದ ತಪ್ಪಿಕೊಂಡು ಆಂಗ್ಲರಿಗೆ ಅಪಾರ ನಷ್ಟವನ್ನುಂಟುಮಾಡಿದನು

ವೆಲ್ಲೆಸ್ಲಿಯ ನಂತರ ಬಂದ-ಸಾಮ್ರಾಜ್ಯ ವಿಸ್ತರಣಾ ಕಾರ್ಯವನ್ನು ಕೈಗೊಂಡ-ಗವರ್ನರ್ ಜನರಲರಲ್ಲಿ ಮಾರ್ಕ್ವಿಸ್ ಒಫ್ ಡಾಲಹೌಸಿಯು ಮುಖ್ಯನು. ಇವನೇ ಪರಾವರ್ತನ ನೀತಿಸೂತ್ರವನ್ನು ಶಾಸನವನ್ನಾಗಿ ಮಾಡಿದನು ಇದರನ್ವಯ ದೇಶೀಯ ರಾಜರಲ್ಲಿ ದತ್ತಸ್ವೀಕಾರವು ತಡೆಯಲ್ಪಟ್ಟು, ಪುತ್ರ ಸಂತತಿ ಹೀನರಾಗಿ ಮೃತರಾದ ರಾಜರ ರಾಜ್ಯಗಳು ಆಂಗ್ಲ ಸಾಮ್ರಾಜ್ಯಕ್ಕೆ ಸೇರುವಂತಾದುವು ಉತ್ತರಾಧಿಕಾರಿಗಳಿಲ್ಲದೇ ಸತಾರರಾಜ್ಯವೂ ನಾಗಪುರವೂ, ಅಯೋಧ್ಯೆ, ನರಗುಂದ, ಕಿತ್ತೂರುಗಳು ಆಂಗ್ಲ ಸಾಮ್ರಾಜ್ಯದಲ್ಲಿ ಸಿಲೀನ ಹೊಂದಿದುವು ಝಾನ್ಸಿ ರಾಣಿ ಲಕ್ಷ್ಮೀಬಾಯಿಗೆ ದತ್ತ ಸ್ವೀಕಾರಕ್ಕೆ [ಸರ್ಕಾರ ದೊರೆಯಿತು. ಮರಾಟ ಪೇಶವೆ ಬಾಜೀರಾಯನ ದತ್ತ ಪುತ್ರನಾದ ನಾನಾ ಸಾಹೇಬನಿಗೂ ಕೊಡಲ್ಪಡುತ್ತಿದ್ದ ವರ್ಷಾಶನವೂ ನಿಲ್ಲಿಸಲ್ಪಟ್ಟಿತು ನಾನಾ ಸಾಹೇಬನು ನ್ಯಾಯಕ್ಕಾಗಿ ಇಂಗ್ಲಂಡಿಗೆ ತನ್ನ ಪ್ರತಿನಿಧಿಯನ್ನು ಕಳುಹಿಸಿದರೂ, ಅವನಿಗೆ ಜಯ ದೊರೆಯಲಿಲ್ಲ. ಇದರಿಂದ ದೇಶೀಯ ರಾಜರಲ್ಲಿ ಅತೃಪ್ತಿಯುಂಟಾಯಿತಲ್ಲದೇ ದಂಗೆಯೇಳುವ ನಿರ್ಧಾರವೂ ಅಂಕುರಿಸಿತು ಗುಪ್ತ ಸಂಘಟನೆಯೂ ಆರಂಭವಾಯಿತು

ಭಾರತದಲ್ಲಿ ಕ್ರಿಸ್ತೀ ಧರ್ಮ ಪ್ರಚಾರದಿನೇದಿನೇ ಹೆಚ್ಚಿದ ದರಿಂದ ಸನಾತನಿಗಳು ಕಳವಳಗೊಂಡರು ಧಾರ್ಮಿಕ ಜಾಗೃತಿಯೂ ಉಂಟಾಯಿತು- ಇದೂ ಕ್ರಾಂತಿಯ ಪ್ರೇರೇಪಕ ಶಕ್ತಿಯಾಯಿತು ೧۷۷۷ ಸ್ವಾತಂತ್ರ್ಯ ಯುದ್ಧಕ್ಕೆ ಕಾರಣವಾದ ಇನ್ನೊಂದು ವಿಷಯವೆಂದರೆ ಆಂಗ್ಲ ಸೈನ್ಯದಲ್ಲಿದ್ದ ಹಿಂದೀಯರ ಅಸಂತುಷ್ಟಿ ಸೈನ್ಯದಲ್ಲಿದ್ದ ಹಿಂದೀಯ ರೊಡನೆ ಸೇನಾಧಿಕಾರಿಗಳು ಕೀಳು ನುಟ್ಟದಲ್ಲಿ ವರ್ತಿಸುತ್ತಿದ್ದರು ದನ ಹಾಗೂ ಹಂದಿಯ ಕೊಬ್ಬು ಸವರಿದ ತುಪಾಕಿಗಳನ್ನು ಪಯೋಗಿಸುವಂತೆ ಅವರ ಮೇಲೆ ಬಲಾತ್ಕಾರ ನಡೆಯುತ್ತಿತ್ತು. ಈ ಅಪಮಾನವನ್ನು ಸ್ವಾಭಿಮಾನಿಗಳಾದ ಹಿಂದೀ(ಹಿಂದೂ-ಮಹಮ್ಮದೀಯರು) ಸಿಪಾಯಿಗಳು ಸಹಿಸದಾದರು ಆಂಗ್ಲರ ವಿರುದ್ಧ ದಂಗೆಯೇಳುವಂತೆ ಸಿಪಾಯಿಗಳೂ ನಿಶ್ಚಯಿಸಿದರು.

೧೮೫೭ರ ಮಾರ್ಚ್ ತಿಂಗಳಂದು ಮೇಲೆ ಹೇಳಿದ ರೀತಿಯಲ್ಲಿ ಬರಕಪುರದ ಸಿಪಾಯಿಗಳ ಮೇಲೆ ಜುಲುಮೆ ನಡೆಯಿತು ಮಂಗಲಪಾಂಡೆಯೆಂಬ ತರುಣನು ಕ್ರೋಧಗೊಂಡು ಗುಂಡು ತುಂಬಿದ ತುಪಾಕಿಯನ್ನು ಹಿಡಿದುಕೊಂಡು ದಂಗೆಯೇಳುವಂತೆ ಹಿಂದೀ ಸಿಪಾಯಿಗಳಿಗೆ ಆದೇಶವಿತ್ತನು. ಅವನ ಗರ್ಜನೆಯಿಂದ ಕುಪಿತನಾದ ಸೈನ್ಯಧಿಕಾರಿ ಹೂಸನ್‌ಖಾಂಡೆಯ ಬಳಿಗೆ ಬರುವಷ್ಟರಲ್ಲಿ ಪಾಂಡೆಯ ಗುಂಡಿಗೆ ಅವನು ಆಹುತಿಯಾದನು. ಆ ಮೇಲೆ ಬಾವ್ಟನು ಬಂದಾಗ ಅವನನ್ನೂ ಗುಂಡಿನಿಂದ ಪಾಂಡೆಯು ಕೆಡವಿದನು ಮೇಜರ್ ವ್ಹಿಟ್ಲಿಸನನು ಬಂದಾಗ ಪಾಂಡೆಯು ಆತ್ಮಹತ್ಯೆಗೆತ್ನಿಸಿ ವಿಫಲನಾದನು. ಅವನನ್ನು ಗಲ್ಲಿಗೇರಿಸಿತು ನಿರ್ದಯಿ ಸರಕಾರ!

ಈ ಘಟನೆಯಿಂದ ಸಿಪಾಯಿಗಳು ರೊಚ್ಚಿಗೆದ್ದರು- ಕೂಡಲೇ ಗುಪ್ತ ಸಂಘಟನಗಾರಂಬವಾಯಿತು ದಲದ ಹಿಂದೀ ಅಧಿಕಾರಿಯೋರ್ವನಿಗೆ ಕ್ರಾಂತಿ ದೂತನೋರ್ವನು ಕೊಡಾವರೆಯನ್ನು ತಂದು ಕೊಡುತ್ತಿದ್ದನು ಅದು ದಲದ ಹಿಂದೀ ಸಿಪಾಯಿಗಳ ಕೈಸೇರಿ, ಪುನಃ ಅದೇ ಕ್ರಾಂತಿದೂತನ ಕೈಗೆ ಬರುತ್ತಿತ್ತು. ಹಿಂದೂ ಮಹಮ್ಮದೀಯರೆಂಬ ಭೇದಭಾವವಿಲ್ಲದೇ ಸಕಲರೂ ಗುಪ್ತ ಸಂಘಟಿತರಾದರು ೧೮೫೭ರ ಮೇ ೧೦ನೇ ದಿನಾಂಕವು ಕ್ರಾಂತಿದಿನವೆಂದು ನಿರ್ಧಾರವಾಯಿತು

ಆದರೆ, ೧೮೫೭ ಮೇ ೧೦ರಂದೇ ಕ್ರಾಂತಿ ಆರಂಭವಾಯಿತು. ಹಲವರು ಆಂಗ್ಲರು ಹಿಂದೀ ಸಿಪಾಯಿಯರಿಂದ ಹತರಾದರು ಮೇ ೧೧ರಂದು ದಿಲ್ಲಿ ಸ್ವತಂತ್ರವಾಯಿತು ಕೊನೆಯ ಮುಘಲ್ ಬಾದಷಹ ಬಹದ್ದೂರ್ ಷಹನೂ ಕ್ರಾಂತಿಕಾರರೊಂದಿಗೆ ಸೇರಿದನು ಆದರೆ, ನಾಭಾ, ಪತಿಯಾಳ ಮೊದಲಾದ ರಾಜರೂ, ಸಿಖ್ಖರೂ ಆಂಗ್ಲರೊಂದಿಗೆ ಸಹಕರಿಸಿ, ದೇಶದ್ರೋಹ ಬಗೆದರು ಇವರ ಬೆಂಬಲದಿಂದ ಆಂಗ್ಲ ಸೇನೆ ಬಲಸ್ಥವಾಗಿ ದಂಗೆಯನ್ನಣಗಿಸಲು ಸಮರ್ಥವೆನಿಸಿತು

ಇತ್ತ ನಾನಾ ಸಾಹೇಬನೂ ಅಜಿಮುದ್ದೀನ ಹಾಗೂ ತಾತ್ಯಾಟೋಪಿ ಮೊದಲಾದ ವೀರರ ಸಹಕಾರದಿಂದ ಕಾನಪುರ, ಬರೇಲಿ, ಅಲಹಾಬಾದ್, ಬನಾರಸ ಮೊದಲಾದುವುಗಳನ್ನು ಆಂಗ್ಲರ ಹಿಡಿತದಿಂದ ಸ್ವತಂತ್ರಗೊಳಿಸಿದನು ಆಂಗ್ಲರು ಇದರಿಂದ ಬೆದರಿ ತಮ್ಮ ಹಂಡಿರು ಮಕ್ಕಳನ್ನು ನಾನಾ ಸಾಹೇಬನ ವಶಕ್ಕೊಪ್ಪಿಸಿದರು ಇದರಿಂದ ನಾನಾ ಸಾಹೇಬನಿಗೆ ಪತ್ತಸ್ಟು ಅನುಕೂಲವಾಯಿತು

ಝಾನ್ಸಿಯ ರಾಣಿ ಲಕ್ಷ್ಮೀಬಾಯಿಯು ಆಂಗ್ಲರ ವಿರುದ್ಧ ಕಾದಾಡಲು ಪೂರ್ವಭಾವಿಯಾಗಿಯೇ ನಿರ್ಧರಿಸಿದ್ದಳು. ಗೋಪಾಲ ಪುರ ಎಂಬಲ್ಲಿ ನಡೆದ ಯುದ್ಧದಲ್ಲಿ ಅಕ್ರಮವಾಗಿ ಸೈನಿಕನೋರ್ವನು ಅವಳನ್ನುರಿದನು ರಾಣಿ ಕೊನೆಯುಸಿರನ್ನೆಳೆದು ಅಮರಳಾದಳು. ಕೊನೆಯ ಯುದ್ಧ ಪ್ರವೀಣನಾಗಿದ್ದ ತಾತ್ಯಾಟೋಪಿಯು ಆಂಗ್ಲರನ್ನು ತುಂಬಾ ಗಾಬರಿಗೀಡುಮಾಡಿದನು! ಆಂಗ್ಲರು ಅವನಿಗೆ ಬಹಳವಾಗಿ ಹೆದರಲಾರಂಭಿಸಿದರು. ಎಂಭತ್ತು ವರ್ಷಗಳ ವೃದ್ಧನಾಗಿದ್ದರೂ, ತನ್ನ ಪರಾಕ್ರಮವನ್ನು ಮೆರೆದು ಬಿಹಾರವನ್ನು ರಾಣಾ ಕುಮಾರಸಿಂಹನು ಸ್ವತಂತ್ರಗೂಳಿಸಿದನು. ಆದರೆ, ಮುಂದೆ ದೇಶ ದ್ರೋಹಿಗಳ ಬೆಂಬಲದಿಂದ ಆಂಗ್ಲರು ಕೈಬಿಟ್ಟ ಪ್ರದೇಶಗಳನ್ನು ಪುನಃ ಸಂಪಾದಿಸಿದರು.

ದಿಲ್ಲಿಯು ಪುನಃ ಆಂಗ್ಲರ ಕೈ ಸೇರಿತು ಕ್ಯಾಪ್ಟನ್ ಹಡ್ಸನ್ ಎಂಬವನು ಮುಘಲ್ ಬಾದಷಹನ ಎಲ್ಲ ಪುತ್ರರನ್ನೂ ಕೊಂದು ಅವರ ರುಂಡಗಳನ್ನು ತಟ್ಟೆಯೊಂದರಲ್ಲಿರಿಸಿ ವಸ್ತ್ರವನ್ನು ಮುಚ್ಚಿ ಸಮ್ರಾಟನೆದುರಿಗೆ ತಂದು "ಕಂಪೆನಿ ಎಮ್ಮೋ ವರ್ಷಗಳಿಂದ ತಮಗೆ ಕಾಣಿಕೆ ಕೊಟ್ಟಿರಲಿಲ್ಲ ಈ ದಿನ ತಮ್ಮ ಸಮ್ಮುಖದಲ್ಲಿ ಇದನ್ನಿಡಲಾಗಿದೆ"ಯೆಂದು ಗಳಹಿದನಂತೆ!

ಕೊಟಿಯುದ್ದದಲ್ಲಿನ ತನ್ನ ನೈಪುಣ್ಯದಿಂದ ತಾತ್ಯಾಟೋಪಿ ಆಂಗ್ಲ ಸೇನಾಧಿಕಾರಿಗಳನ್ನು ಬೆದರಿಸಿದ್ದನ ಆದುದರಿಂದ ತವರ ಕಣ್ಣು ತಾತ್ಯಾಟೋಪಿಯ ಮೇಲೆಯೇ ಸದಾ ಇರುತ್ತಿತ್ತು ಅವರು ತಾತ್ಯಾಟೋಪಿಯನ್ನು ಹಿಂಬಾಲಿಸತೊಡಗಿದರು ಆಗ ದಂಗೆಯು ಒಲತ್ವಾದದಿಂದ ತಡೆಗಟ್ಟಲ್ಪಟ್ಟಿತ್ತು ನಾನಾ ಸಾಹೇಬನು ಹಿಂದಿರಿದಿದ್ದನು ಎಲ್ಲೆಲ್ಲೂ ನಿರಾಶೆಯ ಕತ್ತಲು ಕವಿದಿತ್ತು ಸರದಾರ ಮಾನಸಿಂಗನೆಂಬ ವಿಶ್ವಾಸಘಾತಕಿ ಹಿಂದೀ ಸರದಾರನೋರ್ವನು ತಾತ್ಯಾಟೋಪಿಯನ್ನು ಆಂಗ್ಲರಿಗೆ ಹಿಡಿದುಕೊಟ್ಟನು. ೧೮೫೭ ಎಪ್ರಿಲ್ ೭ರಂದು ತಾತ್ಯಾಟೋಪಿಯನ್ನು ಗಲ್ಲಿಗೇರಿಸಲಾಯಿತು!

ಹೀಗೆ ಆಂಗ್ಲರು "ಸಿಪಾಯಿದಂಗೆ" ಯೆಂದು ಕರೆದು ಭಾರತೀಯರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವನ್ನು ಹತ್ತಿಕ್ಕಿದರು ಆಂಗ್ಲ ಸೇನೆಯಲ್ಲಿ ಹಿಂದೀ ಸೈನಿಕರು ಒಂದು ನೂರ ಇಪ್ಪತ್ತೈದು ಸಾವಿರ ಮಂದಿಯಿದ್ದರೆಂತೆ ಸಕಾಲದಲ್ಲಿ ಇವರು ಯುದ್ಧ ಹೊಡಿದುದಾದರೆ, ಹೆತ್ತು ಬ್ರಿಟನುಗಳು ಸತ ಇವರೊಡನೆ ಕಾದಾಡಿ ಜಯಿಸುವ ಅಸೆಯನ್ನು ತೊರೆದು ಇರಬೇಕಿತ್ತು ಎಂದು ಇತಿಹಾಸಕಾರರು ಹೇಳಿರುವರು. ೧೮೫೭ರಲ್ಲಿ ನಡೆದ ಈ ಕ್ರಾಂತಿಯ ಶತಾಬ್ದಿಯು ಈ ವರ್ಷ ಭಾರತದಲ್ಲಿ ಅಚರಿಸಲ್ಪಡುತ್ತದೆ ಈ ಸಮರದಲ್ಲಿ ಅತ್ಯಬಲವಾನ ಗೈದು ಅಮರರಾದ ವೀರ ಹುತಾತ್ಮರನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸಲಾಗುತ್ತದೆ ಅವರ ಅತುಲ ದೇಶಪ್ರೇಮವು ಭಾರತೀಯರಿಗೆ ರಾಷ್ಟ್ರಭಕ್ತಿಯಲ್ಲಿ ಸ್ಫೂರ್ತಿಯನ್ನೀಯಲೆಂದು ಪರಮಾತ್ಮನೊಡನೆ ಪ್ರಾರ್ಥನೆ

—ಎಮ್. ರಘುನಂದನ ರಾವ್, ಹಲ್ಲಾರು

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ 8/- (ವಿ ಪಿ ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾತಿಸ್ವರ ಷಾ ಕಂಪೆನಿ, ಮಂಗಳೂರು—1.

ಬುನಾದಿ ಶಿಕ್ಷಣ

(೧೯೫ ಪುಟದಿಂದ)

ರದೆ ಹೋದರೆ, ಯಾವುದೇ ಔದ್ಯೋಗೀಕರಣವು ಮುನ್ನಡೆಯುವುದು ಸಾಧ್ಯವಿಲ್ಲ. ಔದ್ಯೋಗಿಕವಿರಲಿ, ಸಾಮಾಜಿಕವಿರಲಿ, ಎಲ್ಲ ಕ್ಷೇತ್ರಗಳ ಅಭಿವೃದ್ಧಿಯು ಕೀಲಿಕೈಯು ವ್ಯಾವಸಾಯಿಕ ಉತ್ಪನ್ನದ ಹೆಚ್ಚಳದಲ್ಲಿ ತೂಕೊಂಡಿದೆ. ಇದರತ್ತ ನಮ್ಮ ವಿದ್ಯಾವಂತರ ಗಮನವು ಕೆರಿಯದೆ ಹೋದರೆ, ನಮ್ಮ ಉನ್ನತಿಯು ತೀರಾ ದೂರದ ನಕ್ಷತ್ರವೇ ಸರಿ.

ಭಾರತೀಯ ರೈತನು ತನ್ನ ಒಂದು ಎಕ್ರೆ ಭೂಮಿಯಲ್ಲಿ ಬೆಳೆಯುವ ಉತ್ಪನ್ನವನ್ನೂ ಅನ್ಯಾದ ಇತರ ಕೆಲದೇಶದವರು ಬೆಳೆಸುವುದನ್ನೂ ಹೋಲಿಸುವಾಗ ಅಭಿಮಾನಿ ಭಾರತೀಯನಿಗೆ ನಾಚಿಗೆಯೆನಿಸದಿರದು. ಭಾರತೀಯನ ಉತ್ಪನ್ನ ಬಹಳ ಕಡಿಮೆಯಾಗಿದ್ದು ಅತ್ಯಂತ ಹೀನಾವಸ್ಥೆಯಲ್ಲಿದೆ. ಅಮೆರಿಕದ ಸಂಯುಕ್ತ ರಾಜ್ಯಗಳ ಕಥೆ ಬಹಳ ಕುತೂಹಲಜನಕವೆನಿಸಬಹುದು. ಅಲ್ಲಿನ ಜನಸಂಖ್ಯೆಯಲ್ಲಿ ನೂರಕ್ಕೆ ಹತ್ತರಷ್ಟು ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ. ಒಂದು ಆಶ್ಚರ್ಯದ ಸಂಗತಿಯೆಂದರೆ, ಅಷ್ಟೇ ಜನರು ತಮ್ಮ ದೇಶದ ಎಲ್ಲ ಪ್ರಜೆಗಳಿಗೂ ಸಾಕಷ್ಟು ಆಹಾರ ಧಾನ್ಯಗಳನ್ನು ಬೆಳೆಸುವುದಲ್ಲದೆ, ಇತರ ದೇಶಗಳಿಗೂ ಧಾರಾಳ ಪ್ರಮಾಣದಲ್ಲಿ ರಪ್ತುಮಾಡುವುದಕ್ಕೂ ಸರ್ವಸಮರ್ಥರಾಗಿದ್ದಾರೆ! ನಮ್ಮ ಭಾರತದಲ್ಲಿ ನೂರಕ್ಕೆ ಎಪ್ಪತ್ತಕ್ಕೂ ಮಿಕ್ಕಿದವರು ವ್ಯವಸಾಯದ ಕೆಲಸವನ್ನೇ ಮಾಡುತ್ತಿದ್ದಾರೆ; ಅಧಿಕಪ್ರಮಾಣದಲ್ಲಿ ಜಮೀನಿದೆ; ಅಷ್ಟೇ ಅಲ್ಲದೆ, ವ್ಯವಸಾಯವೆನ್ನುವುದು ಶತಶತಮಾನಗಳಿಂದಲೂ ಪರಂಪರಾಪ್ರಾಪ್ತವಾಗಿ ನಮ್ಮವರಿಗೆ ಬಂದಿರುವ ಅನೋಘ ಕಲೆ! ಹೀಗಿದ್ದರೂ ನಾವು ಅಮೇರಿಕದಿಂದಲೂ, ಬರ್ಮಾದಿಂದಲೂ, ನಮಗೆ ಉಣ್ಣಲು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿದ್ದೇವೆ! ಈ ಅಹಾರಕ್ಕಾಗಿಯೇ ಕೋಟ್ಯಂತರ ರೂಪಾಯಿಗಳನ್ನು ಪರದೇಶಗಳಿಗೆ ಸುರಿಯುತ್ತೇವೆ. ಭಾರತೀಯ ಪ್ರಥಮ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ವ್ಯವಸಾಯ ಉತ್ಪನ್ನಗಳು ನಮ್ಮ ಗುರಿಗನುಗುಣವಾಗಿ ಬೆಳೆಯದಿರುವುದರಿಂದಲೇ ನಾವಿಂದು ಗಂಡಾಂತರದ ಪರಿಸ್ಥಿತಿಯಲ್ಲಿದ್ದೇವೆ. ಆದುದರಿಂದ, ವ್ಯಾವಸಾಯಿಕ ಉತ್ಪನ್ನದ ಹೆಚ್ಚಳವೇ ಬಹಳ ಮುಖ್ಯವಾದ ಮತ್ತು ಸಂಜೀವಿಂಗ ಸದೃಶವಾದ ಭಾರತೀಯ ಆವಶ್ಯಕತೆಯೆಂಬುದನ್ನು ಅರಿತುಕೊಳ್ಳಬೇಕು.

ಇಂತಹ ದೇಶವು ಅತ್ಯಗತ್ಯವಾಗಿ ಹೆಚ್ಚಿಸಬೇಕಾದ ವ್ಯಾವಸಾಯಿಕ ಉತ್ಪನ್ನವನ್ನು ಸಾಧಿಸಿಕೊಳ್ಳಲು ಮಾರ್ಗವೇನು? ವಿದ್ಯಾವಂತ, ವ್ಯಾವಸಾಯಿಕ ಪದವೀಧರರು ನಾಗರಿಕ ಉದ್ಯೋಗವನ್ನೇ ಬಯಸುವುದು ತಪ್ಪು. ಅವರು ತಾವು ಕಲಿತ ವಿದ್ಯೆಯಿಂದ, ತಮ್ಮ ತಾಂತ್ರಿಕ, ವ್ಯಾವಸಾಯಿಕ ಕೌಶಲದಿಂದ, ದೇಶದ ಪ್ರಗತಿಗೆ ನೆರವನ್ನು ನೀಡುವ ಸಲುವಾಗಿ, ಇಬ್ಭಾಗವಾಗಿ ಹೋದ ಜನತೆಯನ್ನು ಸಂಬಂಧ ಕಲ್ಪಿಸಿ ಒಂದಾಗಿ ಮಾಡುವುದಕ್ಕಾಗಿ ತಾವು ಬಂದ ತಮ್ಮ ಹಳ್ಳಿಗೆ ಮರಳಬೇಕು; ಇದು ಅವರ ಕರ್ತವ್ಯ. ಹೀಗಾದಲ್ಲಿ ಭಾರತದ ಸರ್ವಾಂಗೀಣ ಅಭಿವೃದ್ಧಿಯು ಕನ್ನಡಿಯೊಳಗಿನ ಗಂಟಲ್ಲ; ಕೈಹಿಡಿಯೊಳಗಿದ್ದ ನೆಲ್ಲಿಕಾಯಿ! ಗ್ರಾಮೀಣ ವಿದ್ಯಾಲಯಗಳು ಹಾಗೂ ಬುನಾದಿ ಶಿಕ್ಷಣ ಶಾಲೆಗಳು ತಮ್ಮ ವಿದ್ಯಾರ್ಥಿಗಳಲ್ಲಿ ಈ ಎಗ್ಗೆ ಅಭಿರುಚಿ ಹುಟ್ಟುವಂತೆ, ಅವರ ಮನಸ್ಸು ಅತ್ತಗಡೆ ಒಲಿಯುವಂತೆ ಮಾಡಬೇಕು.

ಜೈ ಹಿಂದ್!

ನಮ್ಮ ಪಶುಸಂಪತ್ತು

ಭಾರತದಲ್ಲಿ ಪಶುಗಳು ಧಾರಾಳವಾಗಿವೆ—ಆದರೆ ಅತಿಹೆಚ್ಚಿನ ಪಶುಗಳಿಗೆ ಸಾಕಷ್ಟು ಮೇವುಸಿಗುವುದಿಲ್ಲ!

ಭಾರತದ ಸಂಪತ್ತು ಬಹು ಮುಖವಾದುದು. ಆರ್ಥಿಕ ಸಂಪತ್ತು ಬಹಳ ಹೀನಸ್ಥಿತಿಯಲ್ಲಿದ್ದರೂ ಉಳಿದ ಕೆಲವೊಂದು ಸಂಪತ್ತುಗಳು ನಮ್ಮಲ್ಲಿ ಧಾರಾಳವಾಗಿವೆ ಜನಸಂಪತ್ತು ಹಾಗೂ ಪಶು ಸಂಪತ್ತುಗಳು ಇಂತಹ ಅಮೂಲ್ಯ ನಿಧಿಗಳಲ್ಲಿ ಪ್ರಥಮ ದರ್ಜೆಗೆ ಸೇರಿದ್ದಾಗಿವೆ. ವಿಶ್ವದ ಜನಸಂಖ್ಯೆಯಲ್ಲಿ ಆರಲ್ಲೊಬ್ಬ ಭಾರತೀಯನೆಂದರೆ, ಅದೇ ನಮಗೆ ಅಭಿಮಾನವಲ್ಲವೆ?

ಜಗತ್ತಿನಲ್ಲಿ ದನಕರು ಆಡುಕುರಿ ಮೊದಲಾದ ಹಾಲು ಕರೆಯಲ್ಪಡುವ ಪಶುಗಳು ಕೇರಳವಾಗಿವೆ; ಅಲ್ಲದೆ, ಭಾರತದಲ್ಲಿಯೂ ಇವು ಅಧಿಕ ಸಂಖ್ಯೆಯಲ್ಲಿವೆ. ಈ ವಿಷಯದಲ್ಲಿ, ಪ್ರಥಮ ಸ್ಥಾನವು ಭಾರತಕ್ಕೆ, ದ್ವಿತೀಯ ಸ್ಥಾನವು ಅಮೆರಿಕಕ್ಕೆ ಹಾಗೂ ತೃತೀಯ ಸ್ಥಾನವು ರಶ್ಯಾಕ್ಕೆ ದೊರೆಯುವುದು. ದ್ವಿತೀಯ ಯುದ್ಧಾನಂತರ ಬದುಕಿ ಉಳಿದ ಪಶುಗಳ ಸಂಖ್ಯೆಯನ್ನು ೭,೧೮೦ ಲಕ್ಷಗಳೆಂದು ಒಬ್ಬ ಪ್ರಸಿದ್ಧ ಅಂಕೆಸಂಖ್ಯೆಗಳ ತಜ್ಞರು ಊಹಿಸಿ ಹೇಳಿದ್ದಾರೆ. ಅದರಲ್ಲಿ ಸೇಕಡಾ ೧೯ ಎಂದರೆ, ಸುಮಾರು ೧೩.೫ ಕೋಟಿ ಪಶುಗಳು ಭಾರತದಲ್ಲಿವೆ. ಜನಸಂಖ್ಯೆಯನ್ನೂ ಪಶು ಸಂಖ್ಯೆಯನ್ನೂ ಹೋಲಿಸಿದರೆ, ಪ್ರತಿ ಮೂವರು ಭಾರತೀಯರಿಗೆ ಒಂದು ಪಶುವಿನಂತಾಯಿತು! ಇದೇನು ಕಡಿಮೆಯೆ?

ಈ ಪಶುಗಳ ಹಾಲನ್ನು, ಹಾಲಿನ ಉತ್ಪನ್ನವನ್ನು ಸರಿಯಾಗಿ ಭಾರತೀಯರು ಬಳಸಿಕೊಂಡರೆ, ದೃಢಕಾಯರಾಗದೆ ಏನು? ಆದರೆ, ಪ್ರಜಾ ಜನರು ದುರ್ಬಲರಾಗಿದ್ದಾರೆ, ನಮ್ಮ ದನಕರುಗಳೂ ಬಡವಾಗಿದ್ದಾವೆ; ಅವು ಸರಿಯಾಗಿ ತಕ್ಕಷ್ಟು ಪ್ರಮಾಣದಲ್ಲಿ ಹಾಲು ಕೊಡುವುದಿಲ್ಲ!

ಭಾರತದ ಉತ್ತಮ ತಳಿಯ ಒಂದು ಹಸು ಅಥವಾ ಎಮ್ಮೆಯು ಒಂದುಬಾರಿಗೆ ಸುಮಾರು ೧,೫೦೦ ರಾತಲುಗಳಷ್ಟು ಹಾಲು, ಇಲ್ಲವೇ ಅದರ ಉತ್ಪನ್ನವನ್ನು ಒದಗಿಸಬಲ್ಲುದು. ಇದು ನಮಗೆ ಹೆಚ್ಚೆಂದು ತೋರಬಹುದು; ಆದರೆ, ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನೋಡಿದರೆ ಅವರು ಒಂದು ಬಾರಿಗೆ ೩,೦೦೦ ರಿಂದ ೪,೦೦೦ ರಾತಲುಗಳಷ್ಟನ್ನು ಪಡೆಯುತ್ತಾರೆ, ಎಂದರೆ ನಮ್ಮದರ ಎರಡರಷ್ಟರಿಂದ ಮೂರರಷ್ಟು. ಇದೇನು ವಿಚಿತ್ರ!

ಭಾರತ ಪಶು ಸಂಪತ್ತು ಧಾರಾಳವಾಗಿರುವುದೇ ಇದಕ್ಕೊಂದು ದೊಡ್ಡ ಕಾರಣ. ಇಲ್ಲಿ ದೊರೆಯಬಹುದಾದ ಮೇವಿಗಿಂತ ನಮ್ಮ ಪಶುಸಂಪತ್ತಿನ ಪ್ರಮಾಣವು ಹೆಚ್ಚಾಗಿದ್ದರೆ ಪಶುಗಳಿಗೆ ಸರಿಯಾದ ಮೇವು ಸಾಕಷ್ಟು ದೊರೆಯಲಾರದೆ ಹೋದರೆ, ಅವು ಉಪವಾಸ ಬಿದ್ದರೆ, ಅನೇನು ಮಾನವನಿಗೆ ಕೊಟ್ಟಾವು?

ಭಾರತದಲ್ಲಿ ಏರಿದ ಜನಸಂಖ್ಯೆಗನುಗುಣವಾಗಿ, ಆಹಾರೋತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಪಶುಗಳ ಮೇವಿಗಾಗಿದ್ದ ಹುಲ್ಲುಗಾವಲುಗಳ ವಿಸ್ತೀರ್ಣವನ್ನು ಕಡಿಮೆ ಮಾಡಲಾಯಿತು. ಇದರಿಂದ ಅನೇಕ ಪಶುಗಳಿಗೆ ಕಡಿಮೆ ಪ್ರಮಾಣದಲ್ಲಿ ಮೇವು ದೊರೆತು, ಹಾಲಿನ ಉತ್ಪನ್ನವು ಇಳಿಯಿತು. ಈ ವಿಷಮ ಪರಿಸ್ಥಿತಿಯನ್ನು ನಿವಾರಿಸಲು ಮಿಶ್ರ ಬೇಸಾಯದ ವಿಧಾನವನ್ನು ಬಳಸಬೇಕೆಂಬುದಾಗಿ ಸಲಹೆ ಮಾಡಲಾಗಿದೆ. ಈಗ ರೈತರಿಗಿರುವ ಜಮೀನಿನಲ್ಲಿಯೇ ಹೆಚ್ಚಾಗಿ ಮೇವನ್ನು ಬೆಳೆಸುವಂತೆ ಮಾಡಬೇಕಾದ ಸಂದರ್ಭ ಇದೀಗ ಬಂದಿದೆ. ಅದಕ್ಕಾಗಿ ಪ್ರಯತ್ನ ಮಾಡಲಾಗುತ್ತಿದೆ.

ರಾಷ್ಟ್ರದ ನಾನಾ ಭಾಗಗಳಲ್ಲಿ ಒಟ್ಟು ೫೫ ಬಗೆಯ ಉತ್ತಮ ಪಶುಗಳ ತಳಿಗಳಿವೆ. ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯವರು ಈ ತಳಿಗಳ ಸುಧಾರಣಾ ಸಂಬಂಧದ ರಾಷ್ಟ್ರವ್ಯಾಪಕ ನೀತಿಯೊಂದನ್ನು ಕೈಗೊಂಡಿರುವರು.

ಪ್ರಥಮ ಪಂಚವಾರ್ಷಿಕ ಯೋಜನೆಯ ಆರಂಭವಾದ ವೇಳೆಯಲ್ಲಿ ಭಾರತದ ಒಟ್ಟು ಹಾಲಿನ ವಾರ್ಷಿಕ ಉತ್ಪನ್ನವು ೧೫೦ ಲಕ್ಷ ಟನ್ನುಗಳೆಂದು ಅಂದಾಜು ಮಾಡಲಾಗಿತ್ತು. ಇದರಲ್ಲಿ ನೂರಕ್ಕೆ ೩೮ ರಷ್ಟು ಪಾಲು ಹಾಲಿನ ರೂಪದಲ್ಲಿ ಉಪಯೋಗವಾಗುತ್ತದೆ. ಸೇಕಡಾ ೪೨ ರಷ್ಟು ತುಪ್ಪದ ರೂಪದಲ್ಲಿಯೂ, ಉಳಿದುದು ಬೆಣ್ಣೆ, ಮೊಸರು ಮೊದಲಾದ ವಸ್ತುಗಳ ರೂಪದಲ್ಲಿಯೂ ಉಪಯೋಗಿಸಲ್ಪಡುವುದೆಂದು ಅಂದಾಜು ಹಾಕಿದ್ದಾರೆ.

ಪಶುಗಳಿಂದ ಅಧಿಕ ಲಾಭವನ್ನು ಮಾಡಿಕೊಳ್ಳುವ ಇರಾದೆಯಿಂದ ಸರಕಾರವು ಪಂಚವಾರ್ಷಿಕ ಯೋಜನೆಗಳಲ್ಲಿ ಪಶುಸಂಪತ್ತಿನ ಅಭಿವೃದ್ಧಿ ಕಾರ್ಯಗಳಿಗಾಗಿ ಸಾಕಷ್ಟು ಪ್ರೋತ್ಸಾಹ ಕೊಡುತ್ತಿದೆ. ರಾಜ್ಯಸರಕಾರಗಳು ಪಶ್ವಭಿವೃದ್ಧಿ ಕಾರ್ಯಕ್ರಮಗಳನ್ನು ಆರಿಸಿದ ಕ್ಷೇತ್ರಗಳಲ್ಲಿ ಮುಖ್ಯ ಯೋಜನೆಗಳ ಮುಖಾಂತರವಾಗಿ ಕೈಗೊಳ್ಳುತ್ತಿವೆ. ಮೊದಲನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ೬೦೦ ಮುಖ್ಯ ಗ್ರಾಮಗಳು ಮತ್ತು ೧೫೦ ಕೃತಕ ಗರ್ಭದಾನ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಇದೀಗ ದ್ವಿತೀಯ ಯೋಜನಾವಧಿಯಲ್ಲಿ ೧,೨೫೮ ಮುಖ್ಯ ಗ್ರಾಮಗಳು, ೨೪೫ ಕೃತಕ-ಗರ್ಭದಾನ ಕೇಂದ್ರಗಳು ಮತ್ತು ೨೫೮ ವಿಸ್ತರಣಾ ಕೇಂದ್ರಗಳನ್ನೂ ಸ್ಥಾಪಿಸುವ ಉದ್ದೇಶಗಳನ್ನು ಇಟ್ಟುಕೊಳ್ಳಲಾಗಿದೆ.

ಈ ಯೋಜನೆಯನ್ವಯ ಸುಮಾರು ೨೨,೦೦೦ ಸುಧಾರಿಸಿದ ಬೀಜದ ಹೋರಿಗಳು, ೪೫,೦೦೦ ಸುಧಾರಿಸಿದ ಎತ್ತುಗಳು ಮತ್ತು ಒಂದು ಲಕ್ಷ ಸುಧಾರಿಸಿದ ಪಶುಗಳನ್ನು ಪಡೆಯುವ ಉದ್ದೇಶವನ್ನು ಸರಕಾರವಿಟ್ಟುಕೊಂಡಿದೆ.

ಭಾರತೀಯರೆಲ್ಲರ ಪೂಜನೀಯ ಪ್ರೇಮ ಮೂರ್ತಿಯೆನಿಸಿದ ಪಶು ಸಂಪತ್ತು ನಿಜವಾಗಿಯೂ ಪರಿಪೋಷಿಸಲ್ಪಡುವುದು ಅಗತ್ಯವಿದೆ. ಅವಕ್ಕೆ ಹೊಟ್ಟೆ ತುಂಬಾ ಆಹಾರ ದೊರೆತು, ಅವುಗಳು ತ್ಯಾಗ ಬುದ್ಧಿಯಿಂದೀಯುವ ಹಾಲಿನಿಂದ ಭಾರತೀಯನೂ ತನ್ನ ಅಭಿವೃದ್ಧಿಯನ್ನು ಮಾಡಿಕೊಳ್ಳಲು ಸಮರ್ಥನಾಗುವ ಕಾಲವನ್ನೇ ಇದಿರು ನೋಡಿದರೆ, ಆಶ್ಚರ್ಯ ಪಡಬೇಕಾಗಿಲ್ಲ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಪೋರ್ಟ್, ಬೊಂಬಾಯಿ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೬ ಸಂಚಿಕೆ ೪೮
VOL.36 8—8—1957 NO. 48

ಗ್ರಾಮದಾನ ಚಳುವಳಿ

ಸಾಮೂಹಿಕ ಬೇಸಾಯ ಕ್ರಮದ ಸ್ಥಾಪನೆಗೆ ಪ್ರಥಮ ಸೋಪಾನ!

ತರಬೇತಿ ಹೊಂದಿದ ಮತ್ತು ಅನುಭವಿಕ ಭಾರತೀಯ ನಿರೀಕ್ಷಕರ ತಂಡವೊಂದು ಒಂದು ವರ್ಷದ ಪೂರ್ವದಲ್ಲಿ "ಸಹಕಾರಿ ವ್ಯವಸಾಯ"ದ ಕುರಿತು ಅಭ್ಯಾಸಮಾಡುವ ಸಲುವಾಗಿ ಚೀನಾ ದೇಶಕ್ಕೆ ತೆರಳಿತ್ತು. ವ್ಯವಸಾಯ ವಿಧಾನದಲ್ಲಿ ಸಹಕಾರಿ ತತ್ವವನ್ನನುಸರಿಸುವುದೆಂದರೆ, ನಿಜವಾಗಿಯೂ ಹಳ್ಳಿಗಳಲ್ಲಿ ಒಂದಾಗಿ ಬಾಳುವ, ಮನೋಭಾವನೆಯನ್ನು ರೂಪಿಸುವ ಕ್ರಮ. ಒಂದು ಕಾಲದಲ್ಲಿ ಭಾರತೀಯರಿಗೆ ಚಿರಪರಿಚಿತವಾದುದನ್ನೇ ಚೀನೀಯರು ಈಗ ವಿಮರ್ಶಿಸುತಿದ್ದಾರೆ ಆದರೆ, ಅದೊಂದು ಹೊಸ ಕ್ರಮವೆನ್ನಬಹುದಾದ ರೀತಿಯಲ್ಲಿ ಅವರು ಮುನ್ನಡೆಯುತಿದ್ದಾರೆ ಈ ಸಂಗಡದ ಮುಖಂಡರು ಭಾರತೀಯ ಒಕ್ಕಲುತನದ ಅಭ್ಯಾಸವನ್ನು ಮಾಡಿದ್ದ ಶ್ರೀ ಆರ್ ಕೆ ಪಟೇಲರಾಗಿದ್ದರು.

ನಿರೀಕ್ಷಕರ ತಂಡವು ಬಂದರು ಹಾಗೂ ನಗರಗಳನ್ನು ದೂರವಿರಿಸಿ ಗ್ರಾಮೀಣ ಪ್ರದೇಶಗಳಿಗೆ ಹೋದಾಗ, ಅಲ್ಲಿನ ಹಿಂದುಳಿದ ಹಳ್ಳಿಗಳು ಅಭಿವೃದ್ಧಿ ಪಥದತ್ತ ಸಾಗುತ್ತಿರುವುದು ಗೋಚರಕ್ಕೆ ಬಂತು ಈ ಸಾದನೆಯ ಕೀಲಿಕೈಯೆಂದರೆ ಸಹಕಾರಿ ವ್ಯವಸಾಯ ಪದ್ಧತಿ. ಚೀನೀಯ ಸಹಕಾರಿ ಸಂಘಗಳು ಸಾಂಘಿಕವಾಗಿ, ಜಯಶೀಲವಾಗಿ ಕಾರ್ಯಪ್ರವೃತ್ತವಾಗಿದ್ದು ಮುಂಬರುವ ವರ್ಷಗಳಲ್ಲಿ ತೀವ್ರ ಅಭಿವೃದ್ಧಿಹೊಂದುವಂತಹ ಪರಿಸ್ಥಿತಿಗಳನ್ನು ನಿರ್ಮಿಸಲಾಗಿತ್ತು.

ಗ್ರಾಮೀಣ ಆರ್ಥಿಕ ಸ್ಥಿತಿಯನ್ನು ರೂಪಿಸುವ ಹಲವಾರು ವಿಧದ ಸಹಕಾರಿ ಸಂಘಗಳು ಇರುತ್ತವೆ ಚೀನಾದಲ್ಲಿ ಉತ್ಪಾದಕರ್ಸಹಕಾರ ಸಂಘ ಇಲ್ಲದೆ ವ್ಯವಸಾಯ ಸಹಕಾರಿಸಂಘವೆಂದು ಕರೆಯಲ್ಪಡುವುದು ಬಹಳ ಯಶಸ್ವಿಯಾಗಿದೆ ಈ ವಿಷಯದಲ್ಲಿ ಭಾರತದಲ್ಲಿ ಭಿನ್ನಾಭಿಪ್ರಾಯವಿದೆ ಈ ಸಂಘಗಳಲ್ಲಿ ಒಂದು ಸಹಕಾರಿ ಕ್ಷೇತ್ರದಲ್ಲಿ ಇಂತಿಷ್ಟೇ ಭೂಮಿಯಾಗಲೀ, ಸದಸ್ಯರಾಗಲೀ ಇರಲೇಬೇಕೆಂಬ ನಿಯಮವಿರುವುದಿಲ್ಲ ಸಾಮಾನ್ಯವಾಗಿ ಒಂದು ಕ್ಷೇತ್ರದಲ್ಲಿ ನೂರಿಂದ ಇನ್ನೂರರವರೆಗಿನ ಕುಟುಂಬಗಳದ್ದು; ಅಷ್ಟೇ ಎಕ್ರೆ ಜಮೀನು ಇರುವುದು ಇವರೆಲ್ಲರೂ ತಮ್ಮ ಸ್ವಂತ ಹೊಲವೆಂಬಂತೆ ಒಂದಾಗಿ ಉಳುತ್ತಾರೆ, ನೆಡುತ್ತಾರೆ, ಕೊಯ್ಯುತ್ತಾರೆ, ಬೆಳೆಯು ಕೈಗೆ ಬಂದಾಗ ಅವನ್ನು ತಮ್ಮೊಳಗೆ ಹಂಚಿಕೊಳ್ಳುತ್ತಾರೆ ಕುಟುಂಬವು ತನ್ನ ಜಮೀನಿನ ದಾಮಾಶಯದಲ್ಲಿ ಇಲ್ಲವೇ ದುಡಿತದ ದಾಮಾಶಯದಲ್ಲಿ ಅಥವಾ ಎರಡರ ಪ್ರಮಾಣದಲ್ಲೂ ಪ್ರತಿಫಲವನ್ನು ಪಡೆಯುತ್ತದೆ. ಕುಟುಂಬಗಳ ಆವಶ್ಯಕತೆಗಳೆಲ್ಲವೂ ಸಹಕಾರಿ ಸಂಘದಿಂದ ಪ್ರತ್ಯಕ್ಷವಾಗಿಯೂಗಲೀ ಪರೋಕ್ಷವಾಗಿಯಾಗಲೀ ಪೂರೈಸಲ್ಪಡುತ್ತದೆ ಶಾಲಾ ಸಂಬಳವನ್ನು ತುಂಬಿಸಲು, ವೈದ್ಯಕೀಯ ವೆಚ್ಚಕ್ಕಾಗಿ, ಮದುವೆ ಇಲ್ಲವೆ ಅಂತಿಮ ಸಂಸ್ಕಾರಗಳಿಗಾಗಿ ಸಾಲವೀಯುವ ಸೌಲಭ್ಯಗಳು ಸಹ ಈ ಸಂಘಗಳಲ್ಲಿ ಇರುತ್ತವೆ.

ಹಳ್ಳಿಗಳ ಮಟ್ಟದಲ್ಲಿ ಸಹಕಾರಿ ಸಂಘಗಳು ವಹಿಸುವ ಮುಖಂಡತನವು ಹೃದಯಹಾರಿಯಾಗಿದೆ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸುವತ್ತ ತನ್ನ ಸದಸ್ಯರಲ್ಲಿ ಉತ್ಸಾಹಪೂರ್ಣ ಸಕ್ರಿಯಾತ್ಮಕ ಮನೋಭಾವನೆಯನ್ನು ಈ ಸಂಘಗಳು ಹೆಚ್ಚಿಸಿವೆ. ಸಾಮಾಜಿಕ ಬದಲಾವಣೆಯ ರಂಗದಲ್ಲಿ ಹಳ್ಳಿಯ ರೈತರನ್ನು ನಿಜವಾದ ನಾಯಕರನ್ನಾಗಿ ಪರಿವರ್ತಿಸಿದ ಕೀರ್ತಿಯನ್ನು ಈ ಸಂಘಗಳು ಪಡೆದಿವೆ

ಈ ವಿಷಯಗಳು ಭಾರತಕ್ಕೆ ಅಪರಿಚಿತವಲ್ಲ ನೂರಾರು ವರ್ಷಗಳವರೆಗೆ ದೇಶದ ಹೆಚ್ಚಿನ ಭಾಗಗಳಲ್ಲಿ ಹಳ್ಳಿಯ ಜಮೀನೆಲ್ಲಾ ಆ ಹಳ್ಳಿಗರ್ತ್ತರ ಸಾಮಾನ್ಯ ಆಸ್ತಿ ಎಂಬಂತೆ ಉಪಯೋಗಿಸಲ್ಪಡುತಿತ್ತು ಹಳ್ಳಿಗರಿಂದಲೇ ಆರಿಸಲ್ಪಡುವ ಪಂಚಾಯತರಿಂದ ಈ ಭೂಮಿಯ ಮೇಲ್ವಿಚಾರಣೆಯು ಯೋಗ್ಯ ರೀತಿಯಲ್ಲಿ ನಡೆಯುತ್ತಿತ್ತು. ಈ ಪದ್ಧತಿಯು ಇತ್ತೀಚೆಗೆ ಬದಲಾವಣೆ ಹೊಂದಿ, ಭೂಮಿಯು ವೈಯಕ್ತಿಕ ಅಂಕೆಗೊಳಪಟ್ಟಿತು ಆದರೂ ಅಲ್ಲಲ್ಲಿ ಕೆಲವೊಂದು ಎಡೆಗಳಲ್ಲಿ ಸದಸ್ಯರೆಲ್ಲರಿಂದಲೂ ಭೋಗಿಸಲ್ಪಡುವ ಸಹಕಾರಿ ಕ್ಷೇತ್ರಗಳಿರುತ್ತವೆ ಆಚಾರ್ಯ ವಿನೋಬಾಭಾವೆಯವರ ಭೂದಾನ ಚಳುವಳಿಗೆ ದಾನವಾಗಿತ್ತ ಭೂಮಿಯಲ್ಲಿಯೂ ವೈಯಕ್ತಿಕ ಅಧಿಕಾರವು ತಪ್ಪಿಹೋಗಿದೆ ಈ ಎಲ್ಲ ಕ್ಷೇತ್ರಗಳಲ್ಲಿಯೂ ತಂತಮ್ಮದೇ ಆದ ಆರ್ಥಿಕ ಯೋಜನೆಗಳಿದ್ದು, ಅವು ಪ್ರಜಾಭಿಪ್ರಾಯದಂತೆಯೇ ಮುಂದುವರಿಯುತ್ತಿವೆ. ಪ್ರಾಚೀನ ಸುಭಾಸ ಸಾಮುದಾಯಿಕ ಸಹಕಾರಿಣೀ ಸಂಘ ಮತ್ತು ಬರೋಡಾದ ರಸುಲಬಾದ ಸಹಕಾರಿ ವ್ಯವಸಾಯ ಸಂಘಗಳಲ್ಲಿ ಇದೇ ಮಾದರಿಯ ಕ್ರಮಗಳು ಕೈಗೊಳ್ಳಲ್ಪಟ್ಟಿವೆ ಅಡಳಿತ ಸಮಿತಿಯ ವಿವರವಾದ ಯೋಜನೆಗಳನ್ನು ಸಿದ್ಧಪಡಿಸುತ್ತವೆ, ಇವನ್ನು ಮೇಲ್ವಿಚಾರಕನು ಕಾರ್ಯರೂಪಕ್ಕೆ ತರುತ್ತಾನೆ ಪ್ರತಿ ಶುಕ್ರವಾರದಿನ ಈತನು ಸಂಘದ ಸದಸ್ಯರಿಗೆ ಮುಂದಿನವಾರಕ್ಕೆ ಕೂಡಲಿರುವ ಕೆಲಸಗಳ ವಿವರವನ್ನು ಜಾಹೀರುಮಾಡುತ್ತಾನೆ ಮರುದಿನ ಮುಂಜಾನೆ ತನ್ನ ಪಾಲಿಗೆ ಬಂದ ಕಾರ್ಯವನ್ನು ಮಾಡಲು ಸಂಘದ ಸದಸ್ಯರು ತೆರಳುತ್ತಾರೆ

ಮರಿಜಿಲ್ಲೆಯ ಸುಲಿಯ ಎಂಬಲ್ಲಿಯೂ ಸಾಮೂಹಿಕ ವ್ಯವಸಾಯದ ಸಹಕಾರಿ ಸಂಘವಿದೆ ಇಲ್ಲಿ ಎಲ್ಲ ಸದಸ್ಯರೂ ಒಂದೇ ಕ್ರಮದಲ್ಲಿ ಜೀವಿಸುತ್ತಾರೆ ಪ್ರತಿ ದಿನ ಸಂಜೆ ಇವರೆಲ್ಲರೂ ಒಂದು ಸೇರಿ ಯೋಜನೆಗಳನ್ನೂ ದೈನಿಕ ವ್ಯವಸಾಯದ ಕಾರ್ಯವನ್ನೂ ಚರ್ಚಿಸುತ್ತಾರೆ ಪಂಚಾಯತಿಗೆ ಎಲ್ಲ ಅಧಿಕಾರವಿದ್ದರೂ ಎಲ್ಲಾ ಸದಸ್ಯರೊಡನೆಯೂ ವಿಚಾರವಿನಿಮಯವು ನಡೆಯುತ್ತದೆ. ಇದೇ ರೀತಿಯಲ್ಲಿ ಝಾನ್ಸಿ ಜಿಲ್ಲೆಯ ಜಾನ್ಸಿವಾರಮತ್ತು ಟಾಲಗಳ ಸಹಕಾರಿ ಸಂಘಗಳಲ್ಲಿಯೂ ಕೆಲಸವು ನಡೆಯುತ್ತದೆ

ಭಾರತ ಮತ್ತು ಚೀನಾ ಎರಡೂ ಲೋಕದ ವಿಶಾಲ ದೇಶಗಳು, ಅಧಿಕ ಜನ ಸಾಂದ್ರತೆಯ ರಾಷ್ಟ್ರಗಳು ಇವೆರಡರ ನಡುವೆ ಸಾಮೂಹಿಕ ವ್ಯವಸಾಯದ ಕ್ಷೇತ್ರದಲ್ಲಿರುವ ಮುಖ್ಯ ಭಿನ್ನತೆಯೆಂದರೆ, ಸಂಘಗಳ ಸಂಖ್ಯೆಯಲ್ಲಿ ಮಾತ್ರ ಭಾರತದಲ್ಲಿ ಒಟ್ಟು ಸುಮಾರು ೧೮೦೦೦ ಸಾಮೂಹಿಕ ವ್ಯವಸಾಯ ಕ್ಷೇತ್ರಗಳಿದ್ದರೆ, ಚೀನಾದಲ್ಲಿ ಕಳೆದ ವರ್ಷ ಈ ಸಮಯದಲ್ಲಿ ೧೦ ಲಕ್ಷಕ್ಕೂ ಮಿಕ್ಕಿದ ಕ್ಷೇತ್ರಗಳಿದ್ದುವು. ಅಲ್ಲಿ ಈ ಕ್ಷೇತ್ರಗಳಿಗೆ ಗ್ರಾಮೀಣ ಪ್ರದೇಶದ ಸರಾಸರಿ ೧೦ ರಷ್ಟು ಕುಟುಂಬಗಳು ಹೊಂದಿಕೊಂಡಿವೆ. ಈ ಅಂಕಿಸಂಖ್ಯೆಗಳು ಈಗ ಮತ್ತೂ ಹೆಚ್ಚಾಗಿರಬಹುದು.

ಸಾಮೂಹಿಕವ್ಯವಸಾಯಸಂಘದ ಆಡಳಿತಾಧಿಕಾರಿ ವರ್ಗದವರೂ ಇತರ ಸದಸ್ಯರಂತೆಯೇ ಉತ್ಪನ್ನದಲ್ಲಿ ಸಮ ಪಾಲುಗಾರರಾಗಿರುತ್ತಾರೆ ಅಧಿಕಾರಿಗಳೆಂದು ಅವರಿಗೆ ಹೆಚ್ಚಿನ ಪ್ರತಿಫಲ ಕೊಡಲಾಗುವುದಿಲ್ಲ ಅವರು ಸದಸ್ಯರಲ್ಲಿ ಉತ್ಸಾಹವನ್ನು ಹುಟ್ಟಿಸಿ, ಸಹಕಾರಿ ವ್ಯವಸಾಯದಲ್ಲಿ ವಿಶ್ವಾಸವನ್ನು ಬೆಳೆಸಿಕೊಂಡು, ತಮ್ಮ ಉತ್ಪನ್ನವನ್ನು ಹೆಚ್ಚಿಸುವಂತೆ ಮಾಡುತ್ತಾರೆ ಒಂದು ಕ್ಷೇತ್ರದಲ್ಲಿ ಒಟ್ಟು ಉತ್ಪನ್ನದ ೧ ಶೇಕಡಾಕ್ಕಿಂತ ಹೆಚ್ಚಾಗಿ ಆಡಳಿತಾಧಿಕಾರಿಗಳು ಕಣ್ಣಿಟ್ಟು ಕಾಯ್ದು ನೋಡಿಕೊಳ್ಳುತ್ತಾರೆ ಹೀಗೆ ಮಾಡುವುದರಿಂದ ಒಂದು ಸಂಘದ ಅಧಿಕಾರಿ ಮತ್ತು ಅಧೀನರ್ತರರಲ್ಲಿ ಆರ್ಥಿಕ ವಿಷಯದ ಸಮಾನತೆಯು ಕಂಡು ಬರುತ್ತದೆ. ಅಧಿಕಾರಿಗಳೂ ಸದಸ್ಯರ ಮೇಲೆ ಸವಾರಿ ಮಾಡುವ ಅವಕಾಶವು ಒದಗದೆ, ಎಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರೆಂಬ ವಿಶಾಲ ಮನೋಭಾವನೆಯು ಬೆಳೆಯಲು ಅನುಕೂಲವಾಗುತ್ತದೆ.

ಭಾರತದಲ್ಲಿ ಎಲ್ಲಕ್ಕಿಂತ ದೊಡ್ಡ, ತಲೆತಿನ್ನುವ ಸಮಸ್ಯೆಯೆಂದರೆ ಭೂಸಾಧಾರಣೆ. ಸ್ವಂತ ಆಸ್ತಿವಂತರ ಸಂಖ್ಯೆಯು ವಿರಳವಾಗಿರುವುದಲ್ಲದೆ, ಒಬ್ಬನಿಗೆ ಸೇರಿದ ಆಸ್ತಿಯಾದರೂ ಒಂದೇ ಕಡೆಯಲ್ಲಿರುವುದಿಲ್ಲ.

(ಇನೇ ಪುಟ ನೋಡಿರಿ)

ಹೊಸ ಸುದ್ದಿ

ಸೇವಿಂಗ್ಸ್ ಬೇಂಕ್ ಡಿಪೋಸಿಟಿನ ಬಡ್ಡಿ ದರವನ್ನು 2½%ಗೆ ಹೆಚ್ಚಿಸಲಾಗಿದೆ ವಾರಕ್ಕೆ ಒಂದಾವರ್ತಿಗಿಂತ ಮಿಕ್ಕಿದ ತೆಯಿಂದ ಹಣ ತೆಗೆಯಲು ಈಗ ಯಾವೊಂದೂ ಆತಂಕವಿಲ್ಲ

ಕಾಯಂ ಠೇವಣಾತಿ ಬಡ್ಡಿ ದರವನ್ನು ಏರಿಸಲಾಗಿದೆ. ತಾ 1-7-1957ರಿಂದ ಏರಿಸಿದ ಬಡ್ಡಿಯಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ

ದಿ ವಿಜಯ ಬೇಂಕ್ ಲಿಮಿಟೆಡ್

(ವಿ ಸೂ. ಬೆಂಗಳೂರು ನಗರದಲ್ಲಿ ಬೇಂಕಿನ ಹೊಸ ಶಾಖೆಯನ್ನು ಬೇಗನೇ ತೆರೆಯೋಣಾಗುವುದು)

ಗಂಧದ ವ್ಯವಸಾಯ

ಲಕ್ಷಗಟ್ಟಲೆ ಸಂಪಾದಿಸುವ ವನ್ಯವೃಕ್ಷ ವ್ಯವಸಾಯವು ಇತಿಹಾಸದ ಆರಂಭದಿಂದ ತಲೆಯೆತ್ತಿ ನಿಂತಿದೆ!

ಭಾರತವು ವಿಶಾಲ ದೇಶವಾಗಿದ್ದು, ಇದರಲ್ಲಿ ಸುಮಾರು ನಾಲ್ಕನೆಯ ಒಂದು ಭಾಗದಷ್ಟು ಭೂಮಿಯನ್ನು ನೈಸರ್ಗಿಕ ಅರಣ್ಯಗಳು ಆಕ್ರಮಿಸಿವೆ. ಈ ಕಾಡುಗಳನ್ನು ಒಂದಲ್ಲ ಒಂದು ಕಾರಣದಿಂದ ಕಡಿಯುವ ಪ್ರವೃತ್ತಿಯು ನಮ್ಮ ಜನರಲ್ಲಿ ಬೆಳೆದಿದ್ದು, ಒಂದು ಕಾಲದಲ್ಲಿದ್ದ ಅರಣ್ಯ ಭಾಗಗಳ ಬಹು ಭಾಗವು ಇಂದು ನಗರಗಳಾಗಿ ಪರಿವರ್ತನೆಯಾಗಿವೆ. ಹೆಚ್ಚುತ್ತಿರುವ ಜನಸಂಖ್ಯೆಗನುಸಾರವಾಗಿ, ವಸತಿ ಸೌಕರ್ಯವು ಅಧಿಕವಾಗ ಬೇಕಾದುದು ಆವಶ್ಯಕವೇ. ಆದರೂ ಅರಣ್ಯಗಳನ್ನೆಲಾ ನಾಶಮಾಡುತ್ತಾ ಬಂದರೆ, ಜನಜೀವನವೇ ಒಂದು ಸಮಸ್ಯೆಯಾಗುವುದು. ವಿಸ್ತೃತ ಭೂಭಾಗದಲ್ಲಿ, ದುರ್ಗಮವಾದ ಘೋರ್ಣಿಸುತ್ತಿರುವ, ಕ್ರೂರ ಮೃಗ ಜಂತುಗಳಿಗೆ ಆವಾಸ ಸ್ಥಾನಗಳೆನಿಸಿದ ಅರಣ್ಯಗಳು ಮಾನವನಿಗೆ ಅಂಜಿಕೆಯನ್ನು ಹುಟ್ಟಿಸಿದರೂ ಅದು ಆತನ ಸಂಪತ್ತನ್ನು ಹೆಚ್ಚಿಸುತ್ತದೆ. ದೇಶದ ಜನರ ಜೀವನ ಮಟ್ಟವನ್ನು ಎತ್ತರಿಸುವಲ್ಲಿ, ಈ ನಿರುಪಯೋಗಿಗಳೆಂದು ಭಾವಿಸಲಾದ ದಟ್ಟ ಕಾಡುಗಳು ತಮ್ಮ ಪಾಲಿನ ಕರ್ತವ್ಯವನ್ನು ಮಾಡುತ್ತಲೇ ಇರುತ್ತವೆ. ಅವುಗಳನ್ನು ತನ್ನ ಲಾಭಕ್ಕಾಗಿ ಬಳಸಿಕೊಳ್ಳುವುದು ಮಾತ್ರ ಮಾನವ ಜೀವಿಗೆ ಸೇರಿದುದು.

ಭಾರತೀಯ ಕಾಡುಗಳ ಸಹಸ್ರಾರು ಬೆಲೆ ಬಾಳುವ ಉತ್ಪನ್ನಗಳಲ್ಲಿ, ಹೆಚ್ಚಾಗಿ ದಕ್ಷಿಣ ಭಾರತದ ಅರಣ್ಯಗಳಲ್ಲಿ ದೊರೆಯುವ ಗಂಧದ ಮರಗಳು ಬಹಳ ಅಮೂಲ್ಯವಾದುವು. ಈ ಗಂಧದ ಮರಗಳಿಂದಾಗಿ ಹಲವಾರು ಕೈಗಾರಿಕೆಗಳು ಹುಟ್ಟಿಕೊಂಡಿದ್ದು, ಅವುಗಳಲ್ಲಿ ಸುಗಂಧ ಎಣ್ಣೆ ತಯಾರಿಯು ಮಹತ್ವದ್ದಾಗಿದೆ.

ಪ್ರಾಚೀನ ಕಾಲದಿಂದಲೂ—ಭಾರತೀಯ ಇತಿಹಾಸವು ಆರಂಭವಾದುದಕ್ಕಿಂತಲೂ ಹಿಂದೆಯೇ—ಭಾರತವು ಸುಗಂಧ ಮರಗಳ ನೆಲೆವನೆಯಾಗಿತ್ತು. ಹಿಂದೂ ಜನರ ಎಲ್ಲ ಧಾರ್ಮಿಕ ಗ್ರಂಥಗಳಲ್ಲಿಯೂ ಈ ಕುರಿತಾದ ಉಲ್ಲೇಖಗಳು ಬಹಳಷ್ಟು ದೊರೆಯುತ್ತವೆ. ಶಾಂತ ಸಾಗರದ ದ್ವೀಪಗಳಲ್ಲಿಯೂ ಈ ಜಾತಿಯ ವೃಕ್ಷಗಳಿವೆಯೆಂದು ಇತ್ತೀಚೆಗೆ, ಎಂದರೆ, ಕ್ರಿ. ಶ. ೧೮ನೆಯ ಶತಮಾನದ ಮಧ್ಯ ಕಾಲದಲ್ಲಿ ಕಂಡು ಹಿಡಿಯಲ್ಪಟ್ಟಿತು. ಈ ಶೋಧನೆಯ ನಂತರ, ಆ ಮರಗಳನ್ನು ಸ್ವಾಧೀನಪಡಿಸಿಕೊಳ್ಳುವ ಹೇರಾಸೆಯಿಂದ ಯುರೋಪು ಭೂಖಂಡದ ಎಲ್ಲ ದೇಶಗಳ ಜನರೂ ತಾವು ಮುಂದೆ ತಾವು ಮುಂದೆ ಎಂದು ಮೇಲಾಡಿದರು. ಪ್ರಖ್ಯಾತವಾದ ಕ್ಲೋಂಡಿಕೆ ಗೋಲ್ಡ್ ರಶ್ ಎಂಬ ಜಾತಿಯ ಮರಗಳಲ್ಲದೆ ಅವುಗಳಿಂದ ಭಿನ್ನವಾದ ರಶ್ ಎಂಬ ವಿಧದ ಗಂಧದ ಮರಗಳೂ ದೊರೆತುವು ಆದರೆ, ಜನಗಳ ಮೇಲಾಟವು ಹೋರಾಟವಾಗಿ ಪರಿಣಮಿಸಿತು ಸಾವಿರಾರು ಜನರು ಪ್ರಾಣವನ್ನು ಕಳೆದುಕೊಂಡರು. ಈ ಗಂಧದ ಕೈಗಾರಿಕೆಯು ಬಹಳ ಭಯಂಕರವಾದುದೆಂದು ತಿಳಿದು ಬಂತು. ಕಡಿದ ಪ್ರತಿಯೊಂದು ಗಂಧದ ಮರವೂ ಒಬ್ಬೊಬ್ಬ ಮನುಷ್ಯನ ಪ್ರಾಣವನ್ನು ತೆಗೆದು ಕೊಂಡಿತು.

ಈ ಅಮೂಲ್ಯ ಸುಗಂಧ ವೃಕ್ಷವನ್ನು ಉಪಯೋಗಿಸಿ ಕೊಳ್ಳುವ ಸರಳ ಸುಲಭ ಉಪಾಯವು ಪ್ರಾಚೀನ ಭಾರತೀಯರಿಗೆ ಗೊತ್ತಿತ್ತು. ಆ ಕಾಲದ ಕೆತ್ತನೆಗಾರರು ಗಂಧದ ಒಂದು ತುಂಡನ್ನು ಅತ್ಯುತ್ತಮ ಕೆತ್ತನೆಯಾಗಿ ಪರಿವರ್ತಿಸುವ ಕೌಶಲವನ್ನು ಸಂಪಾದಿಸಿದ್ದರು. ಯಾವುದೋ ಒಂದು ಕುರುಡು ವಿಧಾನದಿಂದ ಭಾರತೀಯರು ಈ ಮರದಿಂದ ಎಣ್ಣೆಯನ್ನು ಸಹ ತೆಗೆಯುತಿದ್ದರು.

ಜಗತ್ತಿಗೆ ಬೇಕಾಗುವ ಗಂಧದ ಮರವನ್ನು ಇಂದು ಮೈಸೂರು ಮತ್ತು ಕೇರಳ ರಾಜ್ಯಗಳು ಕಳುಹಿಸುತ್ತವೆ. ಕೇವಲ ಮೈಸೂರಿನಲ್ಲಿಯೇ ಇದರ ಈ ಉತ್ಪತ್ತಿಯು ೨,೫೦೦ರಿಂದ ೩,೦೦೦ ಟನ್ನುಗಳಷ್ಟು ಇದೆ. ಒಂದು ಟನ್ನು ಗಂಧದ ಮೋಪು ಸುಮಾರು ರೂ. ೪,೦೦೦ ಬೆಲೆ ಬಾಳುವುದು. ಈ ಎರಡು ರಾಜ್ಯಗಳು ಗಂಧದ ಗುತ್ತಿಗೇಯನ್ನೇ ಪಡೆದಿವೆಯೆಂದರೂ ತಪ್ಪಾಗಲಾರದು. ಮೈಸೂರಿನಲ್ಲಿ ಅರಸನಾಗಿದ್ದ ಹೈದರಾಲಿಯ ಸರಕಾರದ ಈ ಗುತ್ತಿಗೆಯನ್ನು ಈಸ್ಟ್ ಇಂಡಿಯಾ ಕಂಪೆನಿಯು ತಮ್ಮ ಹಲವಾರು ಒಪ್ಪಂದಗಳಲ್ಲೊಂದರಲ್ಲಿ ಮಾನ್ಯ ಮಾಡಿದುದು ಕಂಡು ಬರುತ್ತದೆ. ಅಂದಿನಿಂದ ಈ ಗುತ್ತಿಗೆಗೆ ಇತಿಹಾಸದ ಹಿನ್ನೆಲೆಯು ದೊರೆಯುತ್ತದೆ.

೧೯೧೬ನೆ ವರ್ಷದ ವರೆಗೆ ವೈಜ್ಞಾನಿಕ ವಿಧಾನಗಳಿಂದ ಸುಗಂಧ ಎಣ್ಣೆಯನ್ನು ಸಿದ್ಧಪಡಿಸುವ ಜಗತ್ತಿನ ರಾಷ್ಟ್ರವು ಜರ್ಮನಿಯೊಂದೇ ಆಗಿತ್ತು. ಅದಕ್ಕೆ ಅತ್ಯಗತ್ಯವಾದ ಗಂಧದ ಮೋಪು ಭಾರತದಿಂದ ರವಾನಿಸಲ್ಪಡಬೇಕಾಗಿತ್ತು. ಆದರೆ, ೧೯೧೪-೧೮ರಲ್ಲಿ ಸಂಭವಿಸಿದ ಪ್ರಥಮ ಜಾಗತಿಕ ಸಮರವು ಭಾರತ ಮತ್ತು ಜರ್ಮನಿಗಳ ನಿಕಟ ಸಂಪರ್ಕವನ್ನು ಕತ್ತರಿಸಿತು. ಇದರಿಂದಾಗಿ ಜರ್ಮನಿಯಲ್ಲಿ ಲಾಭದಾಯಕವಾಗಿದ್ದ ಸುಗಂಧ ಎಣ್ಣೆ ತಯಾರಿಕೆಯ ಕಾರಖಾನೆಗಳು ಮುಚ್ಚಬೇಕಾದ ಪ್ರಸಂಗವೊದಗಿತು.

ಜರ್ಮನಿಯ ಕ್ಲಿಮಾರುಕಟ್ಟೆಯು ಸ್ಥಗಿತಗೊಂಡ ಪರಿಸ್ಥಿತಿಯು ಮೈಸೂರು ಸರಕಾರವನ್ನು ನಿದ್ದೆಯಿಂದ ಹೊಡೆದೆಬ್ಬಿಸಿತು. ನಿರಾಯಾಸವಾಗಿ ಸಂಪಾದಿಸುತಿದ್ದ ಮರದ ತುಂಡುಗಳ ಸದುಪಯೋಗ ಮಾಡಿಕೊಳ್ಳುವತ್ತ—ಅದಕ್ಕಾಗಿ ತನ್ನಲ್ಲಿಯೇ ಒಂದು ಗಂಧದ ಕಾರಖಾನೆಯನ್ನು ಸ್ಥಾಪಿಸುವತ್ತ—ಸರಕಾರದ ಗಮನವು ಕೆಲಸ ತೊಡಗಿತು. ಇದರಿಂದ ೧೯೧೬ರಲ್ಲಿ ನವೀನ ಪದ್ಧತಿಯಲ್ಲಿ ಕಾರ್ಯವೆಸಗುವ ಕಾರಖಾನೆಯೊಂದು ನಿರ್ಮಾಣಗೊಂಡಿತು. ಸ್ಥಾಪನೆಗೊಂಡ ಕೆಲವೇ ದಶಕಗಳಲ್ಲಿ ಈ ಕಾರಖಾನೆಯು ಬೆಳೆದು ಬಂದು ಮೈಸೂರು ರಾಜ್ಯದಿಂದ ಮಾರುಕಟ್ಟೆಗೆ ಸಾಕಷ್ಟು ಎಣ್ಣೆ ಬರತೊಡಗಿತು. ಕೇರಳದಲ್ಲಿಯೂ ಇಂಥದೇ ಒಂದು ಗಂಧದ ಕಾರಖಾನೆಯಿರುವುದು.

(೧೧ನೇ ಪುಟ ನೋಡಿರಿ)

ಭಾರತವು ವಿಶಾಲ ದೇಶವಾದುದರಿಂದ ವಿವಿಧ ವರ್ಗದ ಪ್ರಾಕೃತಿಕ ಸಂಪತ್ತಿನಿಂದ ಕೂಡಿದೆ. ವೈಜ್ಞಾನಿಕ ಕ್ಷೇತ್ರದಲ್ಲಿ ಮುಂದುವರಿಯುವಾಗ, ನಮಗಾಗಿ ನಮ್ಮ ಭೂಮಿತಾಯಿ ಶೇಖರಿಸಿಟ್ಟಿರುವ ನೈಸರ್ಗಿಕ ಸಂಪತ್ತನ್ನೂ ಯೋಗ್ಯ ರೀತಿಯಿಂದ ಬಳಸಿಕೊಳ್ಳುವುದು ದೇಶದ ಅಭಿವೃದ್ಧಿಯಲ್ಲಿ ಮಹತ್ವದ್ದಾಗಿದೆ. ಮೇಲಿನ ಚಿತ್ರದಲ್ಲಿ ಪ್ರಾಕೃತಿಕ ಸಂಪತ್ತನ್ನು ಉಪಯೋಗಿಸುವಲ್ಲಿ ಸಾಧಿಸಲಾಗುತ್ತಿರುವ ಕಾರ್ಯಕ್ರಮಗಳ ನಾಲ್ಕು ದೃಶ್ಯಗಳನ್ನು ಕಾಣಬಹುದು.

ಚಿತ್ರ ೧. ನೈವೇಲಿಯ ವಿವಿಧೋದ್ದೇಶ ಕಾರಖಾನೆಯ ದೃಶ್ಯ.
ಚಿತ್ರ ೨. ಭೌಗೋಳಿಕ ವಿಜ್ಞಾನಿಯೊಬ್ಬರು ತನ್ನ ಕಾರ್ಯದಲ್ಲಿಯೇ ತಲ್ಲೀನನಾಗಿದ್ದಾರೆ.
ಚಿತ್ರ ೩. ಜ್ವಾಲಾಮುಖಿಯಲ್ಲಿ ಎಣ್ಣೆಗಾಗಿ ತೂತು ತೆಗೆಯುವ ಕಾರ್ಯವು ಅವ್ಯಾಹತವಾಗಿ ನಡೆಯುತ್ತಿದೆ.
ಚಿತ್ರ ೪. ಗಣಿಯ ಮುಖದಲ್ಲಿ ಗಣಿ ಕೂಲಿಗಾರರು ನಡೆಯುತ್ತಿದ್ದಾರೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?
ಮನೆ-ಮದ್ದು
HOME REMEDIES
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಎ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಸುಧಾರಣೆಯ ಸೋಗು

ಅಂಧಾನುಕರಣೆಯಿಂದ ಸಮಾಜಕ್ಕೆ ಘಾತ!--ಹಿಂದಿನ ಸಾಂಪ್ರದಾಯಗಳನ್ನು ಇಂದಿಗೆ ಹೊಂದಿಸಿಕೊಳ್ಳಿರಿ.

ಬಾಲ್ಯಾವಸ್ಥೆಯಲ್ಲಿ ತಂದೆ ತಾಯಿಗಳೂ, ಯೌವನದಲ್ಲಿ ಪತಿಯೂ, ವೃದ್ಧಾಪ್ಯವು ಬಂದ ಮೇಲೆ ತನ್ನ ಕುಮಾರರೂ ಸ್ತ್ರೀಗೆ ರಕ್ಷಕರಾಗಿರುವರೆಂದು ಮನುಮಹಾರಾಯರು ತಮ್ಮ ಧರ್ಮ ಶಾಸ್ತ್ರದ ಬಾಯಿಯಿಂದ ಹೇಳಿದ್ದಾರೆ ಮನು ಧರ್ಮ ಶಾಸ್ತ್ರವು ಹಿಂದುಗಳಿಗೆ ಆದರ್ಶವಾದ ಪ್ರಮಾಣ ಶಾಸ್ತ್ರವೆಂಬುದಕ್ಕೇನೂ ಸಂದೇಹವಿಲ್ಲ. ಆದಕ್ಕೆ ಎಲ್ಲರೂ ತಲೆಬಾಗುತ್ತಾರೆ ನಿಜ ಮನುಮಹನೀಯರು ಈ ಧರ್ಮ ಶಾಸ್ತ್ರವನ್ನು ಬರೆದು ಸಾವಿರಾರು ವರ್ಷಗಳಾಗಿ ಹೋಗಿವೆ. ಇಷ್ಟು ವರ್ಷಗಳಾದರೂ ಅದು ಅಮರ ಶಾಸ್ತ್ರವಾಗಿದೆ ಹಲವು ಸಮುದಾಯಗಳಲ್ಲಿ ಈಗಲೂ ಇನ್ನೂ ಆಚರಣೀಯವಾಗಿರುವುದರಿಂದ ಅದು ಎಂದೆಂದಿಗೂ ಉಪಯೋಗವಾದ ಶಾಸ್ತ್ರ ಗ್ರಂಥ. ಮನುವಿನ ಮುಂದಾಲೋಚನೆಗೆ ನಿಜವಾಗಿಯೂ ತಲೆವಾಗಲೇಬೇಕು.

ಕಾಲವು ಪ್ರಗತಿ ಪಥದಲ್ಲಿ ಸಾಗುತ್ತ ವಿಜ್ಞಾನವು ಮುಂದುವರಿಯುತ್ತ ಹೋದಂತೆ ಮನುಷ್ಯರ ರೀತಿನೀತಿಗಳಲ್ಲಿ ವ್ಯತ್ಯಾಸವು ಬರುವುದು ಸಹಜ. ಸ್ತ್ರೀ ವಿಷಯಕವಾಗಿಯೂ ಮೇಲಿನ ವಾಕ್ಯಗಳು ಅಧಾರತಃ ಸರಿಯಾಗಿ ಕಂಡರೂ ಮೇಲೆ ಮೇಲೆ ಸ್ವಲ್ಪ ಸವರಣೆಗಳನ್ನು ಪಡೆಯಬೇಕಾದುದು ಅನಿವಾರ್ಯವಾಗುತ್ತದೆ. ಅಂದರೆ ಆ ನೀತಿ ಶಾಸ್ತ್ರವನ್ನೇ ಅಡಿಮೇಲು ಮಾಡುವುದಲ್ಲ; ಹೀಗೆ ಅಡಿಮೇಲು ಮಾಡಬೇಕಾದರೆ–ಅಂದರೆ ಎತ್ತಿ ಬಿಸುಡಬೇಕಾದರೆ, ಮನುಷ್ಯರ ಸಹಜ ಸ್ವಭಾವದಲ್ಲಿ ವ್ಯತ್ಯಾಸಬರಬೇಕು. ಹಾಗಿ ಈ ವರೆಗೂ ಆಗಿಲ್ಲ ಉದಾಹರಣೆಗೆ ಸ್ತ್ರೀ ಅಂದಿನಿಂದ ಇಂದಿನ ವರೆಗೂ ಎಲ್ಲರಿಗೂ ಒಂದೇ ವಿಧ. ಹಸಿವೆಯೂ ಆಹಾರ ಸಂಪಾದನೆಯೂ ಹಾಗೆಯೇ ಆದರೆ ಈ ಹಸಿವೆಗೆ ಮಹಾಶಕ್ತಿಯೊಂದಿದೆ. ಇದು ನಾನಾ ಸಮಸ್ಯೆಗಳನ್ನು ಹುಟ್ಟಿಸುವಂಥಾದ್ದು ಸ್ತ್ರೀ ಸಂಪರ್ಕ ಹಸಿವಿಗಿಂತ ಗಹನವಾದುದು. ಇದನ್ನು ಶೃಂಗಾರ ರಸದಿಂದ ಅನುಭವಿಸಲಿಕ್ಕಾಗಿ ಮನುಷ್ಯನು ನಾನಾ ಕಾರ್ಯಗಳನ್ನು ಮಾಡುತ್ತಾನೆ. ಅದರಿಂದ ಆಚಾರ ವ್ಯವಹಾರಗಳಲ್ಲಿ ಬದಲಾವಣೆಯಾಗುತ್ತದೆ. ಇಂತಹ ಬದಲಾವಣೆಯ ದ್ವಂದ್ವಯುದ್ಧವು ಮನು ಮಹಾತ್ಮರ ಕಾಲದಲ್ಲಿಯೂ ಇತ್ತು. ಅದುವೇ ಅವರಿಗೆ ಶಾಸ್ತ್ರ ರಚನೆಗೆ ಪ್ರೇರೇಪಣೆಮಾಡಿತು. ಈಗಲೂ ಅದೇ ಪರಿಸ್ಥಿತಿಯಿದೆ

ಧರ್ಮ ನೀತಿ ಶಾಸ್ತ್ರಗಳಲ್ಲಿ ಪ್ರಮುಖ ಬದಲಾವಣೆಯಾಗಬೇಕಾದಾಗ ಅದನ್ನು ತಪ್ಪಿಸಲು ಸಾಧ್ಯವಿಲ್ಲ. ಆಗಾಗ ಹೊಸ ಶಾಸ್ತ್ರಕರ್ತರು ಹಾಗೆಯೇ ಮಾಡಿದ್ದಾರೆ ಹಾಗೆ ಮಾಡುವಾಗ ನನ್ನ ಹಿಂದೂ ಸಂಸ್ಕೃತಿಗೆ ತಕ್ಕಂತಿರುವ ನೀತಿಯ ಮೂಲಾಧಾರವನ್ನು ಬಿಟ್ಟು ಬಲು ದೂರದ ಮಾರ್ಗಾಡಿಗೆ ಕಾಲುಹಾಕುವುದು ಸರಿಯಲ್ಲ. ಆ ಮಟ್ಟಿಗೆ ಮನುಧರ್ಮ ಶಾಸ್ತ್ರವು ಸಮಾಜವನ್ನು ಕಟ್ಟು ಪಡಿಸಿಕೊಂಡು ಅಮಲಿನಲ್ಲಿದೆ.

ಮನುವಿನ ನೀತಿ ಶಾಸ್ತ್ರವಂತೆ ನಡೆದರೆ ಸ್ತ್ರೀ, ತನ್ನ ವಿಷಯವಾಗಿ ಕಿಂಚಿತ್ತೂ ಯೋಚಿಸಬೇಕಾಗಿಲ್ಲ. ಅವಳನ್ನು ರಕ್ಷಿಸಬೇಕಾದ ಕೊಣೆ ಬೇರೊಂದು ಜೀವಿಗಳಾದುದರಿಂದ ಅವಳಿಗೆ ಏತರ ಚಿಂತೆ? ಅವಳು ಮನೆಯಲ್ಲಿ ನೆನೆದು ಜ್ವರವೋ ಶೀತವೋ ಆಗಿ ಬೇಳೆಬೇಯಲಿಲ್ಲವೆಂಬ ಎಚ್ಚರ ಅವಳ ಗಂಡನಿಗೋ ಮಗನಿಗೋ ಇದ್ದರಾಯಿತು! ಕಾಯಿಲೆ ಬಂದರೆ ಅವರೇ ಕಾಪಾಡಬೇಕು. ಅವಳ ತಲೆಗೆ ಕೊಡೆ ಬಿಡಿಸಿ ಹಿಡಿಯಬೇಕು ಅವಳು ಜೀನುರಾಣಿಯಾಗಿ ಮನೆಯೊಳಗೇ ಇರತಕ್ಕದು. ಅವಳ ಹಸಿವೆಗೂ, ಹರಕು ಸೀರೆಗೂ, ಒಳ್ಳೆ ಚಿಟ್ಟೆಬರೆಗಳಿಗೂ ಪಾಲಕ ಗಂಡು ಜೀವಗಳೇ ಕೊಣೆ. ಹೀಗೆ ಸ್ತ್ರೀಯನ್ನು ಜನ್ಮವೆತ್ತಿದಲು ಮರಣ ಪರ್ಯಂತ ಇನ್ನೊಬ್ಬರೇ ಕಾಪಾಡಬೇಕೆಂಬ ವಿಧಿಯಿದ್ದ ಮೇಲೆ ಅವಳಿಗೇತರ ಚಿಂತೆ? ಮೂಢ ಪ್ರಾಣಿಯಂತೆ ಮಾಡಿತಿಂದು, ತನಗಿಷ್ಟವಿರಲಿ, ಇಷ್ಟವಿರಲಿ, ಹೊತ್ತು ಹೊತ್ತು ಮನೆಯೊಳಗೇ ಕುಳಿತಿದ್ದರೆ ಅವಳ ಕರ್ತವ್ಯ ತೀರಿತು ಇಷ್ಟೊಂದು ಸುಖ ಜೀವನವನ್ನು ಅವಳಿಗೆ ದಯಪಾಲಿಸಿದ ಮೇಲೆ, ಅವಳಿಗೆ ಆಟವೇಕೆ? ಪಾಟವೇಕೆ? ವಿಹಾರವೇಕೆ? ಕಥೆಯೇಕೆ? ಕಾದಂಬರಿಯೇಕೆ? ಸಿನಿಮಾ ನಾಟಕಾದಿಗಳು ಅವಳಿಗೇಕೆ! ಅವುಗಳನ್ನು ನೋಡಿ ಇಂದ್ರಿಯಗಳ ಮೂಲಕ ಆಸ್ವಾದಿಸಲಿಕ್ಕಾದರೂ ಅವಳಿಗೆ ಗೊತ್ತಿಲ್ಲ ಅವಳ ಹುಟ್ಟು ಸಾವುಗಳ ಮಧ್ಯಾವಕಾಶದಲ್ಲಿ ಆ ಬಗೆಯ ಯಾವುದೊಂದಕ್ಕೂ ಅವಳಿಗೆ ಅವಕಾಶವಿಲ್ಲ ಅವಳಿಗದು ನಿಜವಾಗಿಯೂ ಬೇಡವೆ?

ಹಾಗೆ ಅವಳ ಪೂರ್ಣ ಜವಾಬ್ದಾರಿ ಪುರುಷನ ಮೇಲೆ ಬಿದ್ದುದರಿಂದಲೇ ಹೆಣ್ಣು ಮಗು ಹುಟ್ಟಿದಾಗ ಮುಖ ಮುದುಡಿಕೊಳ್ಳುವ ಅಲ್ಪ ಭಾವನೆಯುಂಟಾಯಿತು ಹೋಗಲಿ, ಹುಟ್ಟಿದ ಹೆಣ್ಣುಗಳಿಗಾದರೂ ತಮ್ಮ ಆ ಬಗೆಯ ರಾಣಿಜೀವನವು ಸುಖಪ್ರದವೆನಿಸಿದ್ದರೆ ಅದು ಪ್ರಕೃತಿ ಸಿದ್ಧವಾದ ಜೀವನಕ್ರಮವೆಂದು ಒಪ್ಪಿಕೊಳ್ಳಬಹುದಾಗಿತ್ತು. ಮನುಷ್ಯವರ್ಗಕ್ಕೆ ಹೊಂದಿಕೊಂಡು ನಿಶ್ಚಿಂತೆಯಿಂದ ಬಾಳುವ ಹಸು ಬೆಕ್ಕು ನಾಯಿಗಳಂತೆ ಬಾಳುವವರೆಂದು ಅವರಿಗೂ ಕೇಳಬಹುದಾಗಿತ್ತು. ಆದರೆ ಹೆಂಗಸನ್ನು ಮೃಗವರ್ಗಕ್ಕೆಯಾವ ಋಷಿಮುನಿಗಳೂ ಹೇಳಿದ್ದು ನಮಗೆ ಗೊತ್ತಿಲ್ಲ. ಬದಲಿಗೆ ಅವರು ಮನುಷ್ಯನ ಅರ್ಧಾಂಗನೆಂದೇ ಅಳಿಯದ ಆಣಿಮುತ್ತಿನಂತೆ ಜಡಿದು ಹೇಳಿದ್ದಾರೆ.

ಅರ್ಧಾಂಗವನ್ನು ಜಡವಾಗಿರಗೊಟ್ಟು ಉಳಿದ ಅರ್ಧಾಂಗದಿಂದ ಏನು ತಾನೇ ಮಾಡಲಾದೀತು? ಉಳಿದ ಅರ್ಧಾಂಗ ಕ್ಕಾದರೂ ಪ್ರತ್ಯರ್ಧದೊಂದಿಗೆ ಚಲನವಲನಗಳಲ್ಲಿ ಭಾಗವಹಿಸಬೇಕೆಂದು ಚಪಲವಾಗುವುದಿಲ್ಲವೇ? ಅದೇನೋ ಸ್ವಲ್ಪ ಅಬಲವಾಗಿದ್ದ ಮಾತ್ರಕ್ಕೇ ಕಟ್ಟುಪಾಡಿಗೊಳಗಾಗಿ ಬೇರೆ ಬಿದ್ದಿರಬೇಕೇ?

ತನ್ನ ಜವಾಬುದಾರಿಯಲ್ಲಾ ಪರರ ಕೈಯಲ್ಲಿರುವಾಗ ತನಗೇತರ ಚಿಂತೆ? ಎಂದರೆ ಸರಿಯಲ್ಲ. ಸ್ತ್ರೀಯನ್ನು ಮನುಷ್ಯತ್ವದಲ್ಲಿ ಒಪ್ಪಿಕೊಂಡರೆ ಮನುಷ್ಯರ ಸುಖ ದುಃಖಗಳೆಲ್ಲಾ ಅವಳಿಗೂ ಇರುತ್ತದೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಪುರುಷರಿಗಿರುವಂತೆ ಅಶ ಆಕಾಂಕ್ಷೆಗಳೂ, ಬುದ್ಧಿ ಕುಶಲತೆಗಳೂ, ಮನೋರಸನೆಯೂ ಹೀಗೆ ಮನುಷ್ಯರಿಗಿರುವುವೆಲ್ಲಾ ಅವರಿಗೂ ಇದೆ. ಅವರಿಗೂ ವೈಯಕ್ತಿಕ ಸ್ವಾತಂತ್ರ್ಯತ್ವ ಅಗತ್ಯ ಹಸುಬೆಕ್ಕು ಮೊದಲಾದ ಮೃಗಗಳಿಗೆ ಕೂಡ ನಿದ್ರಾಹಾರಾದಿಗಳಲ್ಲಿ ಸ್ವಾತಂತ್ರ್ಯವಿರುವಾಗ, ಮನುಷ್ಯನ ಒಂದ ಭಾಗಕ್ಕೂ ಸ್ವಾತಂತ್ರ್ಯ ಬೇಡವೆ?

ಜೀವನದ ಜಂಜಾಟರಂಗದಲ್ಲಿ ಭಾಗವಹಿಸಿಕೊಂಡು ಪಡುವ ಆನಂದವನ್ನೆ ಮನುಷ್ಯರು ಬಯಸುತ್ತಾರೆ ಅವರೇನೋ ಆನಂದಾಕಾಂಕ್ಷಿಗಳಾದ್ದರೂ ದುಃಖಗಳೂ ಕಷ್ಟಗಳೂ ಜೀವನರಂಗದಲ್ಲುಂಟು. ಅಟಕ್ಕೆ ತಲೆಚಾಚಿ ಸಮಾಳಿಸಿ ನಾಗಿರುವುದೇ ಬಾಳುವೆ. ಇದನ್ನೆ ಸ್ತ್ರೀಯರಿಗೆ ಅವಕಾಶ ಕೊಡದೆ ಪುರುಷರು ಮಾತ್ರವೇ ಸಾಗಿದರೆ ಅದರಿಂದುಂಟಾಗುವ ಫಲವೂ ಅಪೂರ್ಣವೇ ಸರಿ.

ಸ್ತ್ರೀಯರು ಪುರುಷರ ಅರ್ಧಾಂಗವಾದರೂ ಸ್ವಲ್ಪ ಅಬಲವಾದುದರಿಂದ ಸ್ವತಂತ್ರಿಸಿ ನೀತಿಯ ಎಲ್ಲೆತಪ್ಪಿ ಹಾರಿ ಹೋಗಬಾರದೆಂದೇ ಮನುಮಹನೀಯರು ಹಾಗೆ ನಿರ್ಬಂಧ ಹಾಕಿರಬಹುದು. ಸಮಯ ಸನ್ನಿವೇಶಕ್ಕೆ ತಕ್ಕ ಹಾಗೆ ಸ್ತ್ರೀಗೆ ಕೆಲವು ಹಕ್ಕು ಬಾಧ್ಯತೆಗಳನ್ನು ಅವರು ಕೊಟ್ಟಿದ್ದಾರಾದರೂ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಅದೊಂದು ವಾಕ್ಯವನ್ನೆ ಗಟ್ಟಿ ಹಿಡಿದು ವಾದಿಸುವವರುದ್ದಾರೆ. 'ಬಿಸಿಲಿನಲ್ಲಿ ನಡೆಯಬಾರದು' ಎಂದ ಮಾತ್ರಕ್ಕೆ ಬಿಸಿಲಿಗೆ ತಲೆ ಹಾಕಲೇ ಬಾರದೆಂದು ಅರ್ಥವಲ್ಲವಷ್ಟೆ?

ಕಾಲವು ಬದಲಾವಣೆಯಾಗುತ್ತಾ, ಜ್ಞಾನವಿಜ್ಞಾನಗಳಿಂದ ಪುರುಷ ವರ್ಗವು ಮಾತ್ರವೇ ಮುಂದೆ ಬರಿಯಲು ಸಾಧ್ಯವಿಲ್ಲ. ಅವರಿಗೆ ತಕ್ಕ ನಿಯತಿಯಲ್ಲಿ ಸ್ತ್ರೀಯರೂ ಮುಂದುವರಿಯಲೇಬೇಕು. ಅಪ್ಪ ನೆಟ್ಟ ಮರವೆಂದು ಹೆಳಯ ಕೊಂಬೆಯನ್ನೆ ಹಿಡಿದು ನೇತಾಡುವುದೋ ದೂರದಲ್ಲಿರುವ ಬೇರೆ ಜಾತಿಯ ಮರಕ್ಕೆ ಹಾರುವುದೋ ಎರಡೂ ಒಳ್ಳೆಯದಲ್ಲ ನಮ್ಮ ಹಿಂದೂ ದೇಶದ ವಾತಾವರಣಕ್ಕೆ ಸಂಬಂಧಿಸಿರುವ ಸಂಸ್ಕಾರವನ್ನೆ ನಮ್ಮ ಧರ್ಮ ಶಾಸ್ತ್ರಗಳಲ್ಲಿ ಸಂವರಣೆ ಮಾಡಿಕೊಂಡು ಸಾಗುವುದೇ ಹಿತವಾದೀತಲ್ಲದೆ ಪ್ರತಿಯೊಂದಕ್ಕೂ ಪರದೇಶದವರನ್ನೆ ಅನುಕರಿಸಿ ಕೊಳ್ಳುವುದರಿಂದ ಘಾತುಕ ಫಲವೇ ಉಂಟಾದೀತು.

ನಮ್ಮ ಸ್ವತಂತ್ರ ಭಾರತ ಸರಕಾರವೀಗ ಎಚ್ಚೆತ್ತು ಎಲ್ಲಾ ವಿಭಾಗದವರಿಗೂ ನ್ಯಾಯ ಸಭಾ ಪ್ರವೇಶಕ್ಕೆ ಅವಕಾಶವಿತ್ತಿದೆ ಸ್ತ್ರೀಯರ ವಿಷಯವಾಗಿ ಬಹಳ ಮುಂದಾಲೋಚನೆ ಸಾಗಿದೆ, ಸಾಗತ್ತಿದೆ ಕಾನೂನುಗಳ ಮೂಲಕ ಸ್ತ್ರೀಯರಿಗೆ ವಿಶೇಷ ಹಕ್ಕು ಬಾಧ್ಯತೆಗಳು ಪ್ರಾಪ್ತವಾಗಿವೆ. ಜೀವನದ ನಾನಾ ರಂಗಗಳಲ್ಲಿ ಸ್ತ್ರೀಯರೂ ಪುರುಷರೊಂದಿಗೆ ಸಹೋದರ ಭಾವದಿಂದ ಕೆಲಸ ಮಾಡುತಿದ್ದಾರೆ. ಸ್ತ್ರೀಯರ ಪ್ರತಿಭಾ ವಿಶೇಷಗಳಿಗೆ ಒಳ್ಳೆಯ ಅವಕಾಶವು ಈಗ ಬಂದಿವೆ ಈ ಸಮಯದಲ್ಲಿ ಸ್ತ್ರೀಯರು ತಾವು ಭಾರತ ಸಂಸ್ಕೃತಿಯವರೆಂಬುದನ್ನು ಮರೆಯದೆ ಅದನ್ನು ಕಾಪಾಡಿಕೊಂಡೇ ಮುಂದೆ ಸಾಗಬೇಕು.

—ಎಂ. ರಂಗರಾವ್, ಮಣ್ಣಾಸು.

ಸಿಂಡಿಕೇಟ್ ಬೇಂಕನ್ನೇ ಜನರು ಏಕೆ ಆರಿಸುತ್ತಾರೆ?

- 31 ವರ್ಷಗಳ ಸೇವೆಯಲ್ಲಿ 11 ಕೋಟಿಗೂ ಮಿಕ್ಕಿದ ಬಂಡವಾಳ
- ಪ್ರಾಮುಖ್ಯ ಕೇಂದ್ರಗಳಲ್ಲಿ 96 ಶಾಖೆಗಳು
- ಕರ್ನಾಟಕದಲ್ಲೇ 59 ಶಾಖೆಗಳು
- ಹಳ್ಳಿ-ಹಳ್ಳಿಗಳಲ್ಲೂ ಬೇಂಕಿಂಗ್ ಸೌಕರ್ಯಗಳು
- ಪಿಗ್ಮಿ, ಕ್ಯಾಮಲೇಟಿವ್ ಮುಂತಹ ಆಕರ್ಷಕ ಯೋಜನೆಗಳು
- ವಿದ್ಯಾರ್ಥಿಗಳಿಗೆ ವಿಶೇಷ ಅನುಕೂಲತೆಗಳು
- ಉತ್ತಮ ಅಡಳಿತ ಮತ್ತು ನೌಕರ ವರ್ಗ
- ಯೋಗ್ಯ ಭದ್ರತೆ, ಪ್ರಮಾಣಿಕತೆ ಮತ್ತು ಕ್ಲಿಷ್ಟತೆಯ ವ್ಯವಹಾರ

ಸಿಂಡಿಕೇಟು ಜನಪ್ರಿಯವಾದ ಬೇಂಕು

ಡಾ: ಟಿ ಎಂ ಎ. ಪೈ, ಮೆನೇಜಿಂಗ್ ಡೈರೆಕ್ಟರ್.
ಟಿ. ಎ. ಪೈ, ಜನರಲ್ ಮೆನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ.

The Canara Industrial & Banking Syndicate, Ltd.,
UDIPI.

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರ ಯಾವುದೇ ಶಾಖೆಯಲ್ಲಿ ಯಾವುದೊಂದು ತರದ ಖರ್ಚೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಜಮಾ ಮಾಡಬಹುದು.

ಹಣ ತರುವ ಬೆಳೆ

ಲಕ್ಷ್ಮೀ ಜಾತಿಯ ಹತ್ತಿಯು ಲಾಭದಾಯಕವಾದರೂ ಎಲ್ಲೆಡೆಯೂ ಬೆಳೆಯಲಾರದು

ದಕ್ಷಿಣದ ಸೀಮಭೂಮಿ ಪ್ರದೇಶದಲ್ಲಿ ಲಕ್ಷ್ಮೀ ಎಂಬ ಜಾತಿಯ ಹತ್ತಿಯು ಹುಲುಸಾಗಿ ಬೆಳೆಯುತ್ತದೆ. ಅದನ್ನು ಆರಿಸಿದ ಸ್ಥಳದಲ್ಲಿ ಬಿತ್ತಿದರೆ ಲಾಭದಾಯಕವಾಗಬಲ್ಲುದು. ಲಕ್ಷ್ಮೀ ಎಂಬುದು ಸುಧಾರಿಸಿದ ಅಮೆರಿಕನ್ ಜಾತಿಗೆ ಸೇರಿದ ಒಂದು ಹತ್ತಿಗಿಡ. ಹತ್ತಿಯ ಬೆಳೆಯು ದೇಶಕ್ಕೆ ಹಣ ಸಂಪಾದಿಸುವ ಒಂದು ಯೋಗ್ಯ ಸಾಧನವಾದುದರಿಂದ, ಈ ಬೆಳೆಗೆ ಒಂದು ರಾಷ್ಟ್ರೀಯ ಮಹತ್ವವಿರುತ್ತದೆ.

ಕರ್ನಾಟಕದ ಧಾರವಾಡ ಜಿಲ್ಲೆಯ ಗದಗ ಹಾಗೂ ರೋಣ ತಾಲೂಕುಗಳ ೨೫,೦೦೦ ಎಕ್ರೆಗಳಷ್ಟು ಭೂಮಿಯಲ್ಲಿ ಈ ಲಕ್ಷ್ಮೀ ಎಂಬ ಜಾತಿಯ ಹತ್ತಿಯನ್ನು ಬೆಳೆಸುತ್ತಾರೆ. ಈ ತಾಲೂಕುಗಳಲ್ಲಿ ಸಾನು ಪ್ರದೇಶದ ಹತ್ತಿಬೆಳೆಗೆ ಅನುಕೂಲವಾದ ಭೂಮಿ ಮುಖ್ಯವಾಗಿ ಮಧ್ಯಮ ಎರೆ ಮತ್ತು ಎರೆ ಮಸಾರಿ ತರಗತಿಯದ್ದಾಗಿದೆ. ಅಲ್ಲಿ ಒಟ್ಟು ೨೬.೨೮ ಅಂಗುಲಗಳಷ್ಟು ಮಳೆಯು ಬೀಳುತ್ತದೆ. ಈ ಮಳೆಯಾದರೂ ಅಗಸ್ಟ್ – ಸೆಪ್ಟಂಬರ್ ತಿಂಗಳುಗಳಲ್ಲಿಯೇ ಸುರಿಯುವುದು. ಈ ಭಾಗದಲ್ಲಿ ವಿಲಾಯತಿ ಹತ್ತಿಯನ್ನು ೧೮೮೪ರಿಂದ ಬೆಳೆಸಲು ಪ್ರಾರಂಭಿಸಲಾಯಿತು. ಈ ಜಾತಿಯನ್ನು ಸುಧಾರಿಸಲು ಕೈಗೊಂಡ ಯುಕ್ತ ಕ್ರಮಗಳ ಫಲವಾಗಿ ಗದಗ ಸಂಖ್ಯೆ ೧. ಎಂಬ ಜಾತಿ ಸಿದ್ಧವಾಯಿತು. ಗದಗ ಸಂ. ೧ರಿಂದ ಸಾಮಾನ್ಯ ವಿಲಾಯತಿ ಹತ್ತಿಗಿಂತ ೧೫ಳಳ ರಾತಲುಗಳ ಒಂದು ಮೂಟೆಗೆ ರೂ. ೯೦ ಹೆಚ್ಚಿಗೆ ಬೆಲೆ ದೊರೆಯುವುದು.

ಇದರಿಂದ ಅರಳೆ ಧಾರಣೆ ಹೆಚ್ಚಿದ್ದಲ್ಲದೆ ಹಸನು ಮಾಡುವಲ್ಲಿಯೂ ಹೆಚ್ಚು ಜಿನುಗಾದ ನಂಬರಿನ ನೂಲು ತೆಗೆಯುವುದರಲ್ಲಿಯೂ ಇದು ಲಾಭದಾಯಕವಾಯಿತು. ಆದರೆ ಗದಗ ಸಂಖ್ಯೆ ೧ರ ಜಾತಿಗೆ 'ಕೆಂಪು ಎಲೆಯ ರೋಗವು ಬಹಳವಾಗಿ ಅಂಟುತಿದ್ದು ಅದು ಪಕ್ವವಾಗುವುದಕ್ಕೂ ತಡವಾಗುತಿತ್ತು. ಈ ದೋಷಗಳನ್ನು ತೊಡೆದು ಹಾಕಲು ೧೯೩೦ರಲ್ಲಿ ಗದಗ ಸಂಖ್ಯೆ ೧ ಹಾಗೂ ಸಿ. ಓ. ೨ ಈ ಜಾತಿಗಳ ಸಂಯೋಗ ಮಾಡಿ 'ಕೆಂಪು ಎಲೆ' ರೋಗದ ಪ್ರತಿಬಂಧಕ ಹಾಗೂ ಇತರ ರೀತಿಯಿಂದ ಲಾಭದಾಯಕವಾದ ನವೀನ ಜಾತಿಯೊಂದನ್ನು ಬೇರ್ಪಡಿಸಲಾಯಿತು. ಇದೇ ಲಕ್ಷ್ಮೀ. ಈ ಜಾತಿಯ ಹತ್ತಿಯ ಎಳೆಯು ಹೆಚ್ಚು ಉದ್ದವಾಗಿದ್ದು ಹುಟ್ಟುವಳಿಯೂ ಹೆಚ್ಚಾಗಿ ಬರುತ್ತದೆ. ಇದಲ್ಲದೆ, ಅದು ಬೇಗನೇ ಪಕ್ವವಾಗುತ್ತಿದ್ದು 'ಕೆಂಪು ಎಲೆ' ರೋಗವನ್ನು ಪ್ರತಿಭಟಿಸುತ್ತದೆ. ಒಂದು ಎಕರೆಯಲ್ಲಿ ಗದಗ ಸಂಖ್ಯೆ ೧ ಜಾತಿಯ ಹತ್ತಿಯಿಂದ ರೂ. ೧೫೭ ಬೆಲೆ ಬರುವ ನಿರೀಕ್ಷೆಯಿದ್ದರೆ, ಲಕ್ಷ್ಮೀಯ ಬೆಲೆ ರೂ. ೨೫೦ ಗಳಷ್ಟಿದ್ದಿತು.

ಆದ ಕಾರಣ ಅಮೆರಿಕನ್ ಹತ್ತಿ ಬೆಳೆಯುವ ಧಾರವಾಡ ಜಿಲ್ಲೆಯ ಗದಗ ಹಾಗೂ ರೋಣ ತಾಲೂಕುಗಳ ಕ್ಷೇತ್ರಗಳಲ್ಲಿ ಹೀಗೆ ಉತ್ತಮವೆನಿಸಿದ ಲಕ್ಷ್ಮೀ ಜಾತಿಯ ಹತ್ತಿಯನ್ನು ಬೆಳೆಸುವ ಪದ್ಧತಿಯನ್ನು ವ್ಯವಹಾರಕ್ಕೆ ತರಲಾಯಿತು.

ಅನಂತರ ಹಿಂದಿನ ಮುಂಬಯಿ ರಾಜ್ಯದ ಗಡಿಯಾಚೆಯ ಹೈದರಾಬಾದ ಹಾಗೂ ಮದ್ರಾಸ ರಾಜ್ಯಗಳ ರೈತರ ಪ್ರಯತ್ನದ ಫಲವಾಗಿ ಲಕ್ಷ್ಮೀ ಹತ್ತಿಯನ್ನು ರಾಯಚೂರು, ಬಳ್ಳಾರಿ, ಕಡಪಾ, ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳ ಒಣ ಭಾಗಗಳಲ್ಲಿಯೂ ಬಿತ್ತಲಾಯಿತು. ಹೀಗಾಗಿ ಲಕ್ಷ್ಮೀ ಹತ್ತಿ ಹೆಬ್ಬುಗೆಯು ತುಳು ಅಸ್ತವ್ಯಸ್ತವಾಗಿತ್ತು. ಆಗಿನ ಕಾಲಕ್ಕೆ ಪೇಟೆಯಲ್ಲಿ ಕಚ್ಚು ಬೆಲೆ ಬರುತಿದ್ದುದರಿಂದ, ಲಕ್ಷ್ಮೀ ಹತ್ತಿಯು ಅಕರ್ಷವೆನಿಸಿತ್ತು. ಇತ್ತಕಡೆ ಧಾರವಾಡ-ಬೆಳಗಾವಿ ಜಿಲ್ಲೆಗಳಲ್ಲಿಯೂ ಧಾರವಾಡ-ಕುಮಟಾ ಹತ್ತಿ ಕ್ಷೇತ್ರವನ್ನೂ ಅದು ಆಕ್ರಮಣ ಮಾಡಿತು. ಸದ್ಯ ಅದು ಒಟ್ಟು ೬ ಲಕ್ಷ ಎಕ್ರೆ ಭೂಮಿಯನ್ನು ಆವರಿಸಿದೆ. ಮೂಲದಲ್ಲಿ ಅದಕ್ಕಾಗಿ ಕೇವಲ ಎರಡೂವರೆ ಲಕ್ಷ ಎಕ್ರೆಗಳನ್ನು ಮಾತ್ರ ವಿನಿಯೋಗಿಸಲಾಗಿತ್ತು.

ಧಾರವಾಡ ಅಮೇರಿಕನ್ ಹತ್ತಿಯ ಸುಧಾರಣಾಯೋಜನೆಯ ಕೊನೆಯ ವರದಿಯನ್ನು ಪರಿಶೀಲಿಸಿದ್ದ ಭಾರತೀಯ ಕೇಂದ್ರ ಹತ್ತಿ ಸಮಿತಿಯ ಒಕ್ಕಲುತನದ ವಿಸ್ತರಣಾ ಉಪಸಮಿತಿಯು ಹೀಗೆ ಅಭಿಪ್ರಾಯ ಪಟ್ಟಿದೆ: "ಮೂರೂ ರಾಜ್ಯಗಳಲ್ಲಿ ಲಕ್ಷ್ಮೀ ಹತ್ತಿಯು ಸುಮಾರು ೧೨ ಲಕ್ಷ ಎಕರೆ ಭೂಮಿಯನ್ನು ಆವರಿಸಿದ್ದು ಅದರ ವಿಸ್ತರಣೆಯು ಕೆಲವುಟ್ಟಿಗೆ ಅಸ್ತವ್ಯಸ್ತವಾಗಿದೆ."

ಹಿಂಗಾರು ಹಂಗಾಮಿನಲ್ಲಿ ಮಳೆಯ ಆಧಾರದಿಂದ ಮಧ್ಯಮ ತರಗತಿಯ ಎರೆ ಭೂಮಿಯಲ್ಲಿ ಬೆಳೆಯಲು ಸಿದ್ಧಗೊಳಿಸಿದ ಜಾತಿಯನ್ನು ಮುಂಗಾರು ಹಂಗಾಮಿನಲ್ಲಿ ಹಗುರು ಭೂಮಿಯಲ್ಲಿ ಹಾಗೂ ನೀರಾವರಿ ಕ್ಷೇತ್ರದಲ್ಲಿ ಬೆಳೆಸಲು ಉಪಕ್ರಮಿಸಲಾಗಿತ್ತು.

ಆದರೆ, ಹೀಗೆ ಬೆಳೆಸುವುದರಲ್ಲಿ ಕೆಲವು ಬಲವಾದ ಕುಂದು ಕೊರತೆಗಳು ಪೋರಿ ಬಂದುವು. ಸಾಗುವಳಿದಾರರಿಗೆ ಅನಾವಶ್ಯಕ ಜಾನಿ ಭಾಗದಿರಲೆಂದು ಲಕ್ಷ್ಮೀ ಹತ್ತಿಯನ್ನು ಅದಕ್ಕೆ ವಿಸಲವಾದ ಭೂಮಿ ಹಾಗೂ ಹಂಗಾಮಿನಲ್ಲಿ ಮಾತ್ರ ಬೆಳೆಯುವಂತೆ ನೋಡಿಕೊಳ್ಳಬೇಕೆಂದು ರಾಜ್ಯ ಸರಕಾರಗಳ ಒಕ್ಕಲುತನ ಶಾಖೆಗಳಿಗೆ ಈ ಉಪಸಮಿತಿಯು ಸೂಚಿಸಿತು. ರಾಯಚೂರು, ಬಳ್ಳಾರಿ ಕ್ಷೇತ್ರಗಳು ಈಗ ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿದ್ದು ರಾಜ್ಯದ ಅಧಿಕಾರಿಗಳು ಈ ಭಾಗಗಳಲ್ಲಿ ಸುಧಾರಿಸಿದ ಹತ್ತಿಯ ಹಂಚುವಿಕೆಯ ನವೀನ ಯೋಜನೆಯೊಂದನ್ನು ತಯಾರಿಸುತಿದ್ದಾರೆ. ಅದುದರಿಂದ ಲಕ್ಷ್ಮೀ ಹತ್ತಿಯ ಬದಲು ಆಯಾ ಕ್ಷೇತ್ರಗಳಿಗೆ ಶಿಫಾರಸು ಮಾಡಿದ ಹತ್ತಿಯನ್ನು ಬೆಳೆಯಬೇಕಾದುದು ಅಪೇಕ್ಷಣೀಯ.

ಮುಂಗಾರು ಹಂಗಾಮಿನಲ್ಲಿ ಹಗುರಾದ ಭೂಮಿಗಳಲ್ಲಿ ಹಾಗೂ ನೀರಾವರಿ ಆಶ್ರಯಿಸಿರುವಲ್ಲಿ ಲಕ್ಷ್ಮೀ ಹತ್ತಿಯನ್ನು ಬೆಳೆಸುವುದು ಅನುಕೂಲದಲ್ಲವೆಂದು ಪ್ರಚಾರಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಏಕೆಂದರೆ, ಇದರಿಂದ ಕಾಸಿತಟ್ಟುವುದು. ಹಣದ ಬೆಳೆಯಾದ ಹತ್ತಿಯನ್ನು ಬೆಳೆಸುವಲ್ಲಿ ಜಾಗರೂಕತೆ ವಹಿಸುವುದು ಅಗತ್ಯ.

ಪ್ರವಾಸಿ ಕೇಂದ್ರಗಳು

ಮಾರ್ಗದರ್ಶಕ ಕೇಂದ್ರಗಳ ಸಂಖ್ಯೆ ಹೆಚ್ಚಬೇಕು

ಮನಸ್ಸಿಗೆ ಬೇಸರವಾದಾಗ, ಬಿಡುವಿರುವಾಗ ವಿಹಾರ ಕೂಟಗಳನ್ನು ಕೈಗೊಳ್ಳುವ ಪದ್ಧತಿಯಿದೆ. ಲೋಕದಲ್ಲಿ ಪ್ರವಾಸಿಗಳನ್ನು ಆಕರ್ಷಿಸುವ ದೇಶಗಳಲ್ಲಿ ಭಾರತವು ಸಹ ಒಂದಾಗಿದೆ ಎಂದು ಹೇಳಬಹುದು.

೧೯೫೬ರಲ್ಲಿ ಜಗತ್ತಿನ ಬೇರೆ ಬೇರೆ ದೇಶಗಳಿಂದ ಭಾರತವನ್ನು ಸಂದರ್ಶಿಸಲು ಆಗಮಿಸಿದ ಪ್ರವಾಸಿಗಳ ಸಂಖ್ಯೆಯು ಬಹಳ ಅಧಿಕವಾಗಿದೆ. ವಿಶಾಮ ಅಥವಾ ವಿಹಾರಕ್ಕೋಸ್ಕರ ವಿಸಾ "ಸಿ" ದರ್ಜೆಯ ಮೇಲೆ ಪಾಕಿಸ್ತಾನದಿಂದ ಬಂದ ೨೭,೫೭೭ ಮಂದಿಯಲ್ಲದೆ, ಸುಮಾರು ೭೫,೫೫೦ ಮಂದಿ ಪ್ರವಾಸಿಗರು ನೇರವಾಗಿ ಭಾರತಕ್ಕೆ ಬಂದಿರುವರು. ಈ ಸಂಖ್ಯೆಯು ಬಹಳ ಕಡಿಮೆ ಎಂದು ಕಾಣಬಹುದು, ಆದರೆ ಇದು ಜಪಾನ್ ಅಥವಾ ಈಜಿಪ್ಟ್‌ಗಳಿಗೆ ಬಾಹ್ಯ ರಾಷ್ಟ್ರಗಳಿಂದ ಬಂದ ಪ್ರವಾಸಿಗರ ಸಂಖ್ಯೆಗಿಂತಲೂ ಹೆಚ್ಚಿನದಾಗಿದೆ ಎಂದಾಗ, ಕಡಮೆಯಲ್ಲ ಎಂದು ಗೋಚರವಾದೀತು. ಏಕೆಂದರೆ, ಈಜಿಪ್ಟ್ ಮತ್ತು ಜಪಾನ್‌ಗಳಿಗೆ ಪ್ರತಿ ವರ್ಷವೂ ಅತಿ ಹೆಚ್ಚಿನ ಪ್ರವಾಸಿಗಳು ಬಂದು ಕೋಗುತ್ತಾರೆ ಏನೋ ಏನೋ ಸಾರಿಗೆಯಲ್ಲಿ ಅವುಗಳ ಆದೃಷ್ಟ ಕೆಟ್ಟು ಭಾರತದ ಚೀಟಿ ಮೇಲೆ ಎದ್ದಿತು.

ಹೀಗೆ ಪರದೇಶಗಳಿಂದ ಬರುತ್ತಿರುವ ಪ್ರವಾಸಿಗಳಿಗೆ ಯೋಗ್ಯ ಸೌಕರ್ಯವನ್ನು ಒದಗಿಸಿಕೊಡ ವುದು ಅಗತ್ಯ. ಇದಕ್ಕಾಗಿ ಕೆಲವು ನಗರಗಳಲ್ಲಿ ಹೋಟೇಲುಗಳಲ್ಲಿನ ಸ್ಥಳ ಸೌಕರ್ಯವನ್ನು ಹೆಚ್ಚಿಸಲಾಯಿತು. ದೆಹಲಿಯ ಹೋಟೇಲುಗಳಲ್ಲಿಯೇ ಸುಮಾರು ೮೦೦ ಮಂದಿ ಪ್ರವಾಸಿಗಳಿಗೆ ಹೊಸತಾಗಿ ಬೆಡಾಸೌಕರ್ಯಗಳನ್ನು ಕಲ್ಪಿಸಿಕೊಳ್ಳಲಾಯಿತು.

ಆದರೆ, ದೇಶದ ಇತರೆಡೆಗಳಲ್ಲಿ ಪ್ರವಾಸಿಗಳಿಗೆ ಸಾಕಷ್ಟು ಸೌಕರ್ಯವಿರುವುದಿಲ್ಲ. ಈ ಕೊರತೆಯನ್ನು ನೀಗಿಸಲು ಒಂದೆರಡು ವರ್ಷಗಳಲ್ಲಿಯೇ ಮಿಜುರಕೋಣಾರ್ಕ, ಭುವನೇಶ್ವರ, ಕೋಣಾರ್ಕ, ಔರಂಗಾಬಾದ್, ಮಾಂಡು, ಮಧುರೆ ಮತ್ತು ಉದಯಪುರಗಳಲ್ಲಿ ಮುಖ್ಯ ಪ್ರವಾಸಿಗಳ ಕೇಂದ್ರಗಳಲ್ಲಿ ಈಗಿರುವ ಸ್ಥಳ ಸೌಕರ್ಯದ ಪ್ರಮಾಣವನ್ನು ಹೆಚ್ಚಿಸುವ ನಿರೀಕ್ಷೆಯಿದೆ.

ಭಾರತ ಸರಕಾರದ ಸಾರಿಗೆ ಮಂತ್ರಿಶಾಖೆಯ ಪ್ರವಾಸಿ ವಿಭಾಗದವರು ಕೆಲವು ಹೊಸ ವಿಶ್ರಾಂತಿ ಗೃಹಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳುತಿದ್ದಾರೆ. ಅವುಗಳನ್ನು "ಸೆಮಿ ಹೋಟೆಲ್" ಸಂಸ್ಥೆಗಳ ರೂಪದಲ್ಲಿಯೇ ನಡೆಸುವರು.

ಪ್ರವಾಸಿಗರ ಹೋಟೇಲುಗಳ ವರ್ಗೀಕರಣ ಮತ್ತು ಅವುಗಳಲ್ಲಿನ ದರ ಮುಂತಾದುವುಗಳನ್ನು ನಿರ್ಧರಿಸುವುದಕ್ಕಾಗಿ ಸಮಿತಿಯೊಂದನ್ನು ನೇಮಿಸಲು ಭಾರತ ಸರಕಾರವು ನಿಶ್ಚಯಿಸಿದೆ.

ಪರದೇಶಗಳಿಂದ ಭಾರತಕ್ಕೆ ಬರುವ ಪ್ರವಾಸಿಗಳಿಗೆ ಮಾಹಿತಿಗಳನ್ನು ಸೌಲಭ್ಯವನ್ನೂ ಒದಗಿಸುವುದಕ್ಕಾಗಿ ಇತರ ರಾಷ್ಟ್ರಗಳಲ್ಲಿಯೂ ಪ್ರವಾಸಿಗರ ಕಛೇರಿಯಿರುತ್ತದೆ. ಸದ್ಯ, ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಎರಡು, ಯುರೋಪಿನಲ್ಲಿ ಮೂರು, ಸಿಲೋನಿನಲ್ಲಿ ಒಂದು, ಆಸ್ಟ್ರೇಲಿಯಾದಲ್ಲಿ ಒಂದು ಹೀಗೆ ಒಟ್ಟು ಏಳು ಸಾಗರೋತ್ತರ ಪ್ರವಾಸಿ ಕಛೇರಿಗಳನ್ನು ಭಾರತ ಸರಕಾರವು ನಡೆಯಿಸುತ್ತಿದೆ.

ಭಾರತದಲ್ಲಿಯೂ ಇಂತಹುದೇ ಕಛೇರಿಗಳಿವೆ. ಈಗ ಒಟ್ಟು ಹದಿಮೂರು ಕೇಂದ್ರಗಳಿದ್ದು, ಇನ್ನೆರಡು ಕೇಂದ್ರಗಳು ನಿರ್ಮಾಣದ ಘಟ್ಟದಲ್ಲಿವೆ. ಕೇಂದ್ರಸರಕಾರದ ಈ ಕೇಂದ್ರಗಳಲ್ಲದೆ, ರಾಜ್ಯಸರಕಾರಗಳು ಸ್ಥಾಪಿಸಿದ ಹಲವಾರು ಪ್ರವಾಸೀ ಕೇಂದ್ರಗಳಿವೆ. ಮುಂದಿನ ಎರಡು ಯಾ ಮೂರು ವರ್ಷಗಳಲ್ಲಿ ಇನ್ನೂ ಹೆಚ್ಚಿನ ಪ್ರವಾಸೀ ಕೇಂದ್ರಗಳನ್ನು ನಿರ್ಮಿಸುವ ನಿರೀಕ್ಷೆಯಿದೆ.

ಜಗತ್ತಿನ ಇತರ ದೇಶಗಳಂತೆಯೇ ಭಾರತದಲ್ಲಿಯೂ ರಮಣೀಯ ದೃಶ್ಯಗಳು ಹೆಚ್ಚಾಗಿವೆ. ಇವುಗಳ ರಮಣೀಯತೆಯನ್ನು ಕಣ್ಣಾರೆಕಂಡು ಸಂತೋಷಪಡುವ ಹೀರಾಸೆಯಿಂದ ಭಾರತಕ್ಕಾಗಮಿಸುವ ನಿಸರ್ಗ ಪ್ರೇಮಿಗಳ ಕೊರತೆಯಲ್ಲ. ಅಲ್ಲದೆ, ಹೀಗೆ ಬರುತ್ತಿರುವ ಪ್ರವಾಸಿಗರಿಗೆ ಇನ್ನೂ ಹೆಚ್ಚಿನ ಸೌಲಭ್ಯ, ಸೌಕರ್ಯಗಳನ್ನು ಒದಗಿಸಿಕೊಡುವುದು ಅತ್ಯಗತ್ಯವಾದುದು ಪ್ರವಾಸೀ ಕೇಂದ್ರಗಳನ್ನು ಆಕರ್ಷಕವಾಗಿಡುವುದೂ ಪ್ರಾಮುಖ್ಯವಾದುದು. ವಿದೇಶೀಯ ದೇಶಗಳೊಡನೆ ತುಲನೆ ಮಾಡಿದರೆ, ಭಾರತದಂತಹ ಸುಂದರ

(೧೯೯ ಪುಟ ನೋಡಿರಿ)

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ಪಂ|| A. R. ಅಯ್ಯಂಗಾರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹುಹೈ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷಗೊಳಿಸುತ್ತವೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಬಾಯಿರುಚಿಯ ವಿವರಗಳನ್ನು ಬರೆದು 1 ಆಣೆ (25 N. P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ಯಾಟಲಾಗ್ ರವಾನೆ.

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ., (ನ ಯು.)

628, "ಸಂತಾನ ಸಿಂದೂರ ಸದನ", ಚಾಮರಾಜ ರೋಡ್, ಮೈಸೂರು-1 (S.I.)

ಪಂಚವಾರ್ಷಿಕ ಯೋಜನೆ

ಪ್ರಥಮ ಯೋಜನೆಯು ಆಹಾರದ ಮತ್ತು ಕೈಗಾರಿಕೆಯ ಉತ್ಪಾದನೆಗಳನ್ನು ಹೆಚ್ಚಿಸಲು ನೆರವಾಯಿತು

ಪ್ರಥಮ ಪಂಚವಾರ್ಷಿಕ ಯೋಜನೆಯ ಪ್ರಗತಿಯನ್ನು ಕುರಿತ ಸುದೀರ್ಘ ವರದಿಯೊಂದು ಯೋಜನಾ ಆಯೋಗದವರಿಂದ ಇದೀಗ ಪ್ರಕಟವಾಗಿದೆ ಈ ವರದಿಯು ಪ್ರಥಮ ಪಂಚ ವಾರ್ಷಿಕ ಯೋಜನೆಯ ಸಮಗ್ರವಾದ ಮೌಲ್ಯವನ್ನು ನಿರ್ಧರಿಸುವ ಪ್ರಯತ್ನ ಮಾಡಿದೆ. ಈ ವರದಿಯಲ್ಲಿ ನಮೂದಿಸಿದಂತೆ ಪ್ರಥಮ ಯೋಜನೆಗೆ ಒಟ್ಟು ೨೩೭೮ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲು ನಿರ್ಧರಿಸಿದ್ದರೂ ಅದು ೨೦೧೩ ಕೋಟಿ ರೂಪಾಯಿಗಳಿದಿದೆ

ಈ ಐದು ವರ್ಷಗಳ ಯೋಜನಾವಧಿಯಲ್ಲಿ ರಾಷ್ಟ್ರೀಯ ವರಮಾನವು ನೂರಕ್ಕೆ ೧೭.೫ ಮತ್ತು ಪ್ರತಿವ್ಯಕ್ತಿಯ ವರಮಾನವು ನೂರಕ್ಕೆ ೧೦ ಸರಕ್ಕು ಹೆಚ್ಚಾಗಿದೆ. ಯೋಜನೆಯ ವರದಿಯು ಕೃಷಿ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಗತಿಯು ಕಂಡು ಬಂದಿರುವುದನ್ನು ವಿಶೇಷವಾಗಿ ಸ್ಪಷ್ಟಪಡಿಸಿದೆ.

ಯೋಜನೆಯ ಅವಧಿಯಲ್ಲಿ ಕೃಷಿವಿಭಾಗದಲ್ಲಿ ಗಮನಾರ್ಹವಾದ ಪ್ರಗತಿಯಾಗಿದೆ ೧೯೫೫-೫೬ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ೭೮೮ ಲಕ್ಷ ಟನ್ನುಗಳು, ಅಂದರೆ, ೧೯೪೯-೫೦ರಲ್ಲಿ ಇದ್ದ ಪ್ರಕ್ಕಿಂತ ೧೧೦ ಲಕ್ಷ ಟನ್ನುಗಳಷ್ಟು ಹೆಚ್ಚು. ೧೯೫೫—೫೬ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ೭೮೮ ಲಕ್ಷ ಟನ್ನುಗಳಗೇರಿ ತುತ್ತತುದಿಯನ್ನು ಮುಟ್ಟಿತು ೫೪—೫೫ರಲ್ಲಿ ಉತ್ಪಾದನೆಯು ೬೬೬ ಲಕ್ಷ ಟನ್ನುಗಳಷ್ಟಾಯಿತು. ಹತ್ತಿ ಸೆಣಬು ಮತ್ತು ಎಣ್ಣೆ ಬೀಜಗಳ ಉತ್ಪಾದನೆಯೂ ಹೊಸ ದಾಖಲೆಗಳನ್ನು ಸ್ಥಾಪಿಸಿವೆ.

ಆಹಾರ ಧಾನ್ಯಗಳ ಉತ್ಪಾದನೆಯು ಉತ್ತರ ಪ್ರದೇಶ ಮತ್ತು ಬಿಹಾರಗಳಂತಹ ಹೆಚ್ಚಾಜ್ಯಗಳಲ್ಲಿ ನಿಜವಾಗಿಯೂ ಕೆಳಗಿಳಿದಿತ್ತು ಆದರೆ, ಮಧ್ಯಪ್ರದೇಶ, ಮದರಾಸ್, ಹೈದರಾಬಾದ್ ಮತ್ತು ರಾಜಸ್ಥಾನಗಳಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಾದ ಹೆಚ್ಚುವರಿಯು ಈ ಕೊರತೆಯನ್ನು ಸರಿದೂಗಿಸಿತು ಆಹಾರೋತ್ಪಾದನೆಯಲ್ಲಿ ಸಾಮಾನ್ಯವಾದ ಏರಿಕೆಯು ತೋರಿಬಂದರೂ ಇದರಲ್ಲಿ ಸಕಾಲದಲ್ಲಿ ಮಳೆಯನ್ನೊದಗಿಸಿ ನಿಸರ್ಗವು ಮಹತ್ವಪೂರ್ಣವಾದಪಾತ್ರವನ್ನು ನಿರ್ವಹಿಸಿರುವುದನ್ನು ಮರೆಯುವುದು ಅಸಾಧ್ಯ. ಪ್ರಥಮ ಯೋಜನೆಯ ಅವಧಿಯಲ್ಲಿ ಆಹಾರ ಪದಾರ್ಥಗಳ ಉತ್ಪಾದನೆಯು ಅಭಿವೃದ್ಧಿಗೊಂಡಿದ್ದರೂ ಅಸ್ಥಿರತೆಯು ಪ್ರಸಂಗಗಳು ಇಲ್ಲದಿರಲಿಲ್ಲ. ಕಳೆದ ವರ್ಷಗಳಲ್ಲಿ ಬೇಸಾಯದ ಉತ್ಪಾದನೆಯಲ್ಲಿ ಪಾತ್ರವಹಿಸಿದ್ದ ವಿವಿಧ ಅಂಶಗಳನ್ನು ಕುರಿತು ನಿಖರವಾದ ಅಂದಾಜನ್ನು ಪ್ರತಿಯೊಂದು ರಾಜ್ಯವೂ ಕೈಗೊಳ್ಳಯೋಜನೆಯ ಅನುಭವವು ವ್ಯಕ್ತಪಡಿಸಿದೆ.

ರಾಜ್ಯಗಳ ವ್ಯವಸಾಯ ಇಲಾಖೆಗಳು, ವಿಸ್ತರಣಾ ವಿಭಾಗಗಳು, ಸ್ಥಳೀಯ ಗೊಬ್ಬರದ ಅಭಿವೃದ್ಧಿಯ ಕಡೆಗೆ ಸಾಕಷ್ಟು ಗಮನವೀಯಲಿಲ್ಲವೆನ್ನುವುದು ಈ ಸಮೀಕ್ಷೆಯಿಂದ ತಿಳಿದು ಬಂದಿದೆ. ಉತ್ತಮ ಬೀಜದ ಧಾನ್ಯಗಳನ್ನು ತಯಾರಿಸುವುದು, ಅವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ವೃದ್ಧಿಸಿ ಹಂಚುವುದು—ಈ ಕಾರ್ಯಗಳು ತೃಪ್ತಿಕರವಾಗಿರಲಿಲ್ಲ. ಯೋಜನಾವಧಿಯಲ್ಲಿ ಕೃಷಿ ವಿಭಾಗಕ್ಕೆ ವಾಸ್ತವವಾಗಿ ೨೯೯ ಕೋಟಿ ರೂಪಾಯಿಗಳು ವೆಚ್ಚವಾಗಿವೆ. ಇದರಲ್ಲಿ ಸಾಮುದಾಯಿಕ ಅಭಿವೃದ್ಧಿ ವೆಚ್ಚವೂ ಕೂಡಿದೆ

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿ ಹಾಗೂ ವಿದ್ಯುಚ್ಛಕ್ತಿ ಸಂಬಂಧದ ಅಭಿವೃದ್ಧಿ ಕಾರ್ಯಗಳಿಗಾಗಿ ಒಟ್ಟು ೫೯೯ ಕೋಟಿ ರೂಪಾಯಿಗಳನ್ನು, ಅಂದರೆ ಯೋಜನೆಯ ಒಟ್ಟು ವೆಚ್ಚದಲ್ಲಿ ನೂರಕ್ಕೆ ೯ರಷ್ಟನ್ನು ಒದಗಿಸಲಾಗಿತ್ತು. ಆರಂಭದಲ್ಲಿ ಈ ವಿಭಾಗಕ್ಕೆ ೫೬೧ ಕೋಟಿಗಳನ್ನು ಒದಗಿಸಲಾಗಿತ್ತು. ಯೋಜನೆಯನ್ನು ಆರಂಭಗೊಳಿಸುವ ಮುನ್ನ ಅನೇಕ ಬೃಹತ್ಪ್ರಮಾಣದ ಅಭಿವೃದ್ಧಿ ಕಾರ್ಯಗಳನ್ನು ಆರಂಭಿಸಲಾಗಿತ್ತು. ಯೋಜನಾವಧಿಯಲ್ಲಿ ದೊಡ್ಡ ಹಾಗೂ ಮಧ್ಯಮ ಪ್ರಮಾಣದ ನೀರಾವರಿ ಕಾಮಗಾರಿಗಳಿಂದ ಸುಮಾರು ೬೩ ಲಕ್ಷ ಎಕ್ರೆಗಳಷ್ಟು ಭೂಮಿಯು ನೀರಾವರಿಗೊಳಗಾಯಿತು ಆದರೆ ಮೂಲತಃ ೫೫ ಲಕ್ಷ ಎಕ್ರೆಗಳಷ್ಟು ಭೂಮಿಗೆ ನೀರನ್ನೊದಗಿಸುವ ಗುರಿಯಿತ್ತು. ಸುಮಾರು ೪೦ ಲಕ್ಷ ಎಕ್ರೆಗಳ ಭೂಮಿಯು ಮಾತ್ರ ಈ ನೀರಾವರಿ ಸೌಲಭ್ಯವನ್ನು ಪಡೆದುಕೊಂಡಿತು ಗಣ್ಣಪ್ರಮಾಣದ ನೀರಾವರೀ ಕಾರ್ಯಗಳಿಂದ ೧೦೦ ಲಕ್ಷ ಎಕ್ರೆಗಳಷ್ಟು ಭೂಮಿಯು ನೀರಾವರೀ ಸೌಲಭ್ಯಕ್ಕೊಳಗಾಯಿತು. ವಿದ್ಯುದುತ್ಪಾದನಾ ಸಾಮರ್ಥ್ಯವು ೨೩ ಲಕ್ಷ ಕಿಲೋವಾಟ್‌ಗಳಿದ್ದುದು ೩೪ ಲಕ್ಷ ಕಿಲೋವಾಟ್‌ಗಳಿಗೇರಿದೆ.

ಔದ್ಯೋಗಿಕ ಕ್ಷೇತ್ರದಲ್ಲಿಯೂ ಯೋಗ್ಯಸಾಫಲ್ಯವು ಪ್ರಥಮ ಯೋಜನಾವಧಿಯಲ್ಲಿ ದೊರೆತಿದೆ. ಈ ಸಮಯದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಕಾರಖಾನೆಗಳಲ್ಲಿ ೨೧೩ ಕೋಟಿ ರೂಪಾಯಿಗಳ ಬಂಡವಾಳವನ್ನು ತೊಡಗಿಸಲಾಗಿದೆ. ಅದರಲ್ಲಿ ೬೩೩ ಕೋಟಿ ರೂಪಾಯಿಗಳನ್ನು ಖಾಸಗಿ ಕಾರಖಾನೆಗಳಿಗೆ ಹಾಕಲಾಗಿದೆ. ಬಂಡವಾಳ ರೂಪದ ವಸ್ತುಗಳ ಉತ್ಪಾದನೆಯು ನೂರಕ್ಕೆ ೭೦ರಷ್ಟು ಹೆಚ್ಚಿತು ಮಧ್ಯಮ ವರ್ಗದ ವಸ್ತುಗಳ ಮುಖ್ಯವಾಗಿ ಕೈಗಾರಿಕೆಯ ಕಚ್ಚಾ ಸಾಮಗ್ರಿಗಳ ಉತ್ಪಾದನೆಯು ನೂರಕ್ಕೆ ೩೪ರಷ್ಟು ಏರಿದೆ. ಉಪಭೋಗ್ಯ ವಸ್ತುಗಳ ಉತ್ಪಾದನೆಯಲ್ಲಿಯೂ ನೂರಕ್ಕೆ ೩೪ರಷ್ಟು ಹೆಚ್ಚಳವಾಯಿತು ಒಟ್ಟಿನಲ್ಲಿ ಔದ್ಯೋಗಿಕ ಉತ್ಪಾದನೆಯು ನೂರಕ್ಕೆ ೩೮ರಷ್ಟು ಏರಿಕೆಯಾಗಿದೆ.

೧೯೫೦ ಜಾಗರಲ್ಲಿ ನಿರಣಿಗೆಯಲ್ಲಿ ತಯಾರಾದ ಬಟ್ಟೆ ೩೭೨೦೦ ಲಕ್ಷ ಗಜಗಳು. ೫೫-೫೬ರಲ್ಲಿ ಅದು ೧೫೫೧ ಲಕ್ಷ ಗಜಗಳಿಗೇರಿದೆ.ಎಂದರೆ,ಯೋಜನೆಯಲ್ಲಿಟ್ಟುಕೊಂಡಿದ್ದ ಗುರಿಗಿಂತ ೪,೦೦೦ ಲಕ್ಷ ಗಜಗಳ ಹೆಚ್ಚಳವಾಗಿದೆ. ಕಬ್ಬಿಣ, ಹೊಲಿಯುವ ಯಂತ್ರ, ಕಾಗದ, ಕಾಗದ ಬೋರ್ಡ್, ಮತ್ತು ಬೈಸಿಕಲ್‌ಗಳ ಉತ್ಪಾದನೆಯು ನಿರೀಕ್ಷಿಸಿದ್ದ ಗುರಿಯನ್ನು ಮುಟ್ಟಿವೆ ವಾಸ್ತವವಾಗಿ ಹಲವು ಪ್ರಸಂಗಗಳಲ್ಲಿ ಉತ್ಪಾದನೆಯು ಗುರಿಯನ್ನೂ ದಾಟಿದೆ ಸಿಮೆಂಟಿನ ಉತ್ಪಾದನೆಯು ೫೦-೫೧ರಲ್ಲಿ ೩೬ ಲಕ್ಷ ಟನ್ನುಗಳಾಗಿದ್ದು ೫೫-೫೬ರಲ್ಲಿ ಅದು ೪೬ ಲಕ್ಷ ಟನ್ನುಗಳಗೇರಿತು. ಸಾಮಾನ್ಯ ತಾಂತ್ರಿಕ ಉದ್ಯಮ, ಜಾರಿ ರಾಸಾಯನಿಕ ಉದ್ಯಮಗಳು ಹಾಗೂ ರಾಸಾಯನಿಕ ಪದಾರ್ಥಗಳಲ್ಲಿ ಗಮನಾರ್ಹವಾದ ಹೆಚ್ಚಳವು ಕಂಡುಬಂದಿದೆ. ಕಚ್ಚಾ ಪದಾರ್ಥಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆತುದು, ಇದುವರೆಗೂ ಉಪಯೋಗಿಸಿಕೊಳ್ಳದಿದ್ದ ಸಾಮರ್ಥ್ಯವನ್ನುಪಯೋಗಿಸಿಕೊಂಡುದು ಹೊಸತಾಗಿ ಒಂಡವಾಳವನ್ನು ತೊಡಗಿಸಿದುದು ಇವಲ್ಲಾ ಕೈಗಾರಿಕೆಯ ಉತ್ಪಾದನೆಯಲ್ಲಿ ಸಾಮಾನ್ಯ ಹೆಚ್ಚಳವು ತೋರಿಬರಲು ಕಾರಣಗಳಾದುವು ಹಲವು ಹೊಸ ವಸ್ತುಗಳು—ಟೈಪ್ ರೈಟರ್ ಪೆನಿಸಿಲಿನ್ ಇತ್ಯಾದಿ-ಈ ಸಮಯಾವಧಿಯಲ್ಲಿ ಭಾರತದಲ್ಲಿ ಪ್ರಪ್ರಥಮವಾಗಿ ಸಿದ್ಧವಾದುವು ಪೆಟ್ರೋಲಿಯಂ ಶುದ್ಧೀಕರಣ, ನೌಕಾ ನಿರ್ಮಾಣ,ವಿಮಾನಗಳ ತಯಾರಿ, ರೈಲ್ವೇ ಗಾಡಿಗಳ ಸಿದ್ಧಪಡಿಸುವಿಕೆ, ಪೆನಿಸಿಲಿನ್, ಅಮೋನಿಯಂ ಕ್ಲೋರೈಡ್ ಮತ್ತು ಡಿ. ಡಿ. ಟಿ. ಮೊದಲಾದುವುಗಳು ಈ ಅವಧಿಯಲ್ಲಿಯೇ ಉತ್ಪಾದಿತವಾದುವು.

ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ,ಸಿಂಧ್ರಿಕೃತಕ ಗೊಬ್ಬರದ ಕಾರಖಾನೆ, ಚಿತ್ತರಂಜನ ರೈಲ್ವೆ ಎಂಜಿನ್ ಕಾರಖಾನೆ, ಭಾರತ ಟೆಲಿಫೋನ್ ಕಾರಖಾನೆ ಮತ್ತು ಸಮಗ್ರ ರೈಲುಗಾಡಿ ಕಾರಖಾನೆ ಮೊದಲಾದುವುಗಳಲ್ಲಿ ಪ್ರಗತಿಯು ಸಮರ್ಪಕವಾಗಿತ್ತು. ಕಬ್ಬಿಣ ಮತ್ತು ಉಕ್ಕಿನ ಕಾರಖಾನೆ ಹಾಗೂ ಭಾರಿ ವಿದ್ಯುಚ್ಛಕ್ತಿ ಉಪಕರಣಗಳ ಕಾರಖಾನೆಗಳ ಸ್ಥಾಪನೆಯನ್ನು ಈ ಯೋಜನಾವಧಿಯಲ್ಲಿ ಮಾಡಲಾಗಲಿಲ್ಲ ಮೆಶಿನ್ ಟೂಲ್ ಕಾರಖಾನೆ, ನೇಪಾ ನ್ಯೂಸ್‌ಪ್ರಿಂಟ್ ಕಾರಖಾನೆ, ಬಿಹಾರ ಸೂಪರ್ ಫಾಸ್ಫೇಟ್ ಕಾರಖಾನೆ-ಇವೂ ನಿರ್ಧರಿಸಿದ್ದ ಕಾರ್ಯಕ್ರಮದಲ್ಲಿ ಹಿಂದೆ ಬಿದ್ದಿವೆ.

ಯೋಜನೆಯಲ್ಲಿ ನಿರೂಪಿಸಿರುವ ಉತ್ಪಾದನೆ ಹಾಗೂ ಅಭಿವೃದ್ಧಿ ಕಾರ್ಯಗಳ ಗುರಿಯು, ಸರ್ವಸಾಮಾನ್ಯವಾಗಿ ಮುಟ್ಟಲ್ಪಟ್ಟಿದೆ ಆಗ ಇದ್ದ ಸಾಮರ್ಥ್ಯವನ್ನೇ ಯಶಸ್ವಿಯಾಗಿ ಬಳಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸಲಾಗಿದೆ. ಹಲವು ಉತ್ಪಾದಕ ವಸ್ತುಗಳನ್ನು ತಯಾರಿಸುವ ಕೈಗಾರಿಕೆಗಳಲ್ಲಿ ಯೋಜನೆಯಲ್ಲಿ ನಿರೀಕ್ಷಿಸಲಾಗಿದ್ದ ಉತ್ಪಾದನಾ ಸಾಮರ್ಥ್ಯವನ್ನೂ ಸಾಧಿಸಲಾಗಲಿಲ್ಲ. ಉದಾಹರಣೆಗೆ, ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ, ಅಲ್ಯುಮಿನಿಯಂ ಮತ್ತು ಸಸಾರಜನಕ ಗೊಬ್ಬರಗಳ ಕೈಗಾರಿಕೆಗಳು. ಹಿಂದುಳಿದಿವೆ. ಇದ್ದ ಕಾರಖಾನೆಗಳನ್ನು ಅಧಿಕಗೊಳಿಸುವುದು ಯಾಂತ್ರಿಕೋಪಕರಣಗಳನ್ನು ಬದಲಾಯಿಸುವುದು ಇತ್ಯಾದಿ ಕಾರ್ಯಗಳು ಸಹ ಹಿಂದೆ ಬಿದ್ದಿವೆ.

ಯೋಜನಾವಧಿಯಲ್ಲಿ ರಾಷ್ಟ್ರೀಯ ಗ್ರಾಮ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳ ಮೇಲೆ ಗಮನವನ್ನು ಹರಿಸಲಾಗಿದೆ. ಇವುಗಳನ್ನು ಉತ್ತೇಜಿಸುವುದಕ್ಕಾಗಿ ಅನೇಕ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಸಾಮುದಾಯಿಕ ಅಭಿವೃದ್ಧಿ ಯೋಜನಾ ಕ್ಷೇತ್ರಗಳಲ್ಲಿ ಗ್ರಾಮ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವೀಯಲಾಗಿದೆ

ರೈಲ್ವೆ ವ್ಯವಸ್ಥೆಯು ಸರ್ವಸರ್ಕವಾಗಿ ನಡೆದಿದೆ. ಯೋಜನೆಯಲ್ಲಿ ೧೦೩೮ ರೈಲ್ವೆ ಎಂಜಿನುಗಳು, ೫೬೭೮ ರೈಲು ಗಾಡಿಗಳು ಮತು ೪೯,೩೩೩ ವ್ಯಾಗೀನುಗಳನ್ನು ಪಡೆದುಕೊಳ್ಳುವ ಉದ್ದೇಶವಿತ್ತು. ಆದರೆ, ಐದು ವರ್ಷಗಳ ಅವಧಿಯಲ್ಲಿ ವಾಸ್ತವವಾಗಿ ೧,೫೫೬ ಎಂಜಿನುಗಳು ೪,೭೮೮ ಗಾಡಿಗಳು ಮತ್ತು ೩೧,೨೫೫ ವ್ಯಾಗೀನುಗಳನ್ನು ಪಡೆಯಲಾಗಿದೆ, ೫೦,೫೫೦ರಲ್ಲಿ ೨೩ ಎಂಜಿನುಗಳು ದೇಶದಲ್ಲಿಯೇ ತಯಾರಾಗಿವೆ ಈ ಸಂಖ್ಯೆಯು ೫೫-೫೬ರಲ್ಲಿ ೧೯೯ಕ್ಕೆ ಏರಿದೆ. ರೈಲು ವ್ಯಾಗೀನುಗಳ ತಯಾರಿಕೆಯು ೨,೭೦೦ರಿಂದ ೧೪,೩೧೪ಕ್ಕೆ ಏರಿತು. ಗಾಡಿಗಳ ತಯಾರಿಕೆಯು ೬೭೩ರಿಂದ ೧,೨೫೧ಕ್ಕೆ ಹೆಚ್ಚಿದೆ. ಯುದ್ಧ ಕಾಲದಲ್ಲಿತೆಗೆದು ಹಾಕಿದ್ದ ಸುಮಾರು ೪೫೦ ಮೈಲು ರೈಲು ಮಾರ್ಗಗಳನ್ನು ಪುನಃ ಹಾಕಲಾಯಿತು. ೫೦೦ ಮೈಲು ಹೊಸ ರೈಲು ಮಾರ್ಗವನ್ನು ನಿರ್ಮಿಸಲಾಯಿತು. ೪೬ ಮೈಲು ನ್ಯಾರೋ ಗೇಜ್ ಮಾರ್ಗಗಳನ್ನು ಮೀಟರ್‌ಗೇಜ್ ಮಾರ್ಗವನ್ನಾಗಿ ಪರಿವರ್ತಿಸಲಾಯಿತು. ರಸ್ತೆ ನಿರ್ಮಾಣ ಹಾಗೂ ರಸ್ತೆ ಸಾರಿಗೆ ಕಾರ್ಯಕ್ರಮಗಳನ್ನು ಬಹುಮಟ್ಟಿಗೆ ಪೂರ್ಣವಾಗಿ ಕಾರ್ಯರೂಪಕ್ಕೆ ತರಲಾಯಿತು.

ಯೋಜನೆಯಲ್ಲಿ ವೇಲಾಡಳಿತಕ್ಕಾಗಿ ಮಾಡಿರುವ ವೆಚ್ಚವು ಯೋಜನಾವಧಿಯ ಅಂತ್ಯದ ವೇಳೆಗೆ ನಿರೀಕ್ಷಿಸಲಾದ ಅಧಿಕ ಕಾರ್ಯಕ್ರಮದ ಮಟ್ಟವನ್ನೇಳಿಸಿಕೊಳ್ಳಲು ಮಾತ್ರ ಸಾಕಾಗಿತ್ತು. ಯೋಜನಾವಧಿಯಲ್ಲಿ ಈ ಬಾಬುಗಳ ಮೇಲೆ ಮಾಡಿದ ವೆಚ್ಚವು ಪ್ರಾರಂಭದ ಗುರಿಗಳಿಗೆ ಅನುಗುಣವಾಗಿದ್ದು, ಯೋಜನೆಯಲ್ಲಿ ನಿರೂಪಿಸಲಾದ ಗುರಿಗಳಲ್ಲಿ ನೂರಕ್ಕೆ ೯೦ರಷ್ಟನ್ನು ಸಾಧಿಸಲಾಯಿತು

(ಅನೇ ಪುಟ ನೋಡಿರಿ)

ಪುತ್ತೂರು ಡಿ. ಮುಂ ಕೋರ್ಟನಲ್ಲಿ

O S No 174/ 1957

ಫೇಷಂಮ— ವಾದಿಳು.

ಕುಂಞಾ ಹೆಂಗ್ಸು ಕೂಡಾ—ಪ್ರತಿವಾದಿರು.

೩ನೇ ಪ್ರತಿವಾದಿ-ದೇವಜನ್ನು ಗುತ್ತಿನ ಮನೆ ಶಂಕರ ಗೌಡರ ಮಗಳು. ವ ಕುಂಞಾಂಣ ಗೌಡರ ಹೆಂಡ್ತಿ ಪುತ್ತೂರು ತಾಲ್ಲುಕು ವಿಟ್ಲ ಪಡ್ನೂರು ಗ್ರಾಮ ಯಿಂದಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ವಾದಿಳು ಅರುವಾದು ವಿಮೋಚನೆಯಿಂದ ಆಸ್ತಿ ಸ್ವಾಧೀನತೆ ವಗೈರೆಗೆ ನಿಮ್ಮಮೇಲೆ ಕೂಡಾ ದಾಕ್ಲು ಮಾಡಿದ ಮೇಲ್ಮಂಡ ವ್ಯಾಜ್ಯವು ತಾ 21 S 57ಕ್ಕೆ ಯಿಟ್ಟಿರುವುದರಿಂದ ಆದ್ರೆ ನಿಮ್ಮದೇನೂ ದೇವರು ಅಕ್ಷೇಪಣೆಗಳಿದ್ರೆ ಸದ್ರಿ ದಿನ್ನ ನುಜ್ಜಾರು ಕೋರ್ಟು ಮುಂದೆ ಸ್ವಯ ಸ್ವತಃ ವ ವಕೀಲರ ದ್ವಾರಾ ಹಾಜರಾಗಿ ಉತ್ತರಿಸಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

(Sd) B. Ishwara Bhat.
Advocate for plff

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೬	ಉಡುಪಿ ೮-೮-೧೯೩೭	ಸಂಚಿಕೆ ೪೮

ಅಂಚೆಯವರ ಸಂಪು

ಎಣ್ಣೆ ಜೆಲ್ಲಿದವನೂ ಅತ್ತ, ತೆಂಗಿನ ಕಾಯಿ ಬಿದ್ದವನೂ ಅತ್ತ ಎಂಬ ಹಾಗಾಗಿದೆ, ನಮ್ಮ ಅಂಚೆತಂತಿ ನೌಕರರ ಸಂಪಿನ ಮಾತು. ಸರಕಾರಿ ನೌಕರರಲ್ಲಿ ಹಲವು ವರ್ಗಗಳವರಿಗೆ ಜೀವನ ನಿರ್ವಹಣೆಯು ತೀರಾ ಕಷ್ಟಕರವೆನಿಸುವಷ್ಟು ಕಡಿಮೆ ವೇತನ ಸಿಗುತ್ತದೆ. ಅವರು ಹೆಚ್ಚಿನ ಸಂಬಳಬೇಕು, ಹೆಚ್ಚಿನ ತುಟ್ಟಿಭತ್ತೆಬೇಕು ಮರ್ಯಾದೆಯಿಂದ ಬಾಳಲು ಸರಕಾರ ಅವಕಾಶ ಮಾಡಿಕೊಡಬೇಕು ಎಂದು ಬೇಡಿಕೊಳ್ಳುವುದರಲ್ಲಿ ಅರ್ಥವುಂಟು. ಆದರೆ, ಸರಕಾರಿ ನೌಕರ ವರ್ಗದಲ್ಲಂತೂ ಸರಿಯೆ, ಸಾಮಾನ್ಯತಃ ಜನಜೀವನೋಪಾಯದ ಇತರ ಅಂಗಗಳಲ್ಲಿ ಪರಿಶ್ರಮಪಡುವವರಿಗಂತಿಲೂ ಹೆಚ್ಚು ತೃಪ್ತಿಕರವಾದ ಪ್ರತಿಫಲವನ್ನು ವೇತನಾದಿಗಳ ರೂಪದಲ್ಲಿ ಪಡೆಯುವ ಅಂಚೆತಂತಿ ನೌಕರರೂ ಪ್ರಾರ್ಥನಾ ಪತ್ರಗಳನ್ನು ಸಲ್ಲಿಸುವ ಮಾರ್ಗವನ್ನು ತ್ಯಜಿಸಿ ಸಾರ್ವತ್ರಿಕ ಮುಷ್ಕರದಂತಹ ದಂಡ ಪ್ರಯೋಗ ಕ್ರಮವನ್ನು ಕೈಕೊಳ್ಳಲಿದ್ದಾರೆಂಬ ಸುದ್ದಿ ನಿಜಕ್ಕೂ ಒಂದು ಜೋಕ್ಯ; ಅದೇ ಸಮಯದಲ್ಲಿ ಬಹಳ ಬೇಸರ ಬರಿಸುವ ವಿಷಯವೂ ಹೌದು. ಇದೇ ೮-೮ನೆ ರಾತ್ರಿಯ ಹನ್ನೆರಡು ಘಂಟೆಯ ಬಳಿಕ ಅಂಚೆ ತಂತಿ ನೌಕರರು ಅನಿರ್ಧಿಷ್ಟ ಅವಧಿಯತನಕ ಅಂದರೆ ತಮ್ಮ ಬೇಡಿಕೆಗಳು ಪೂರ್ಣವಾಗುವವರೆಗೆ, ನಿತ್ಯ ಕೆಲಸದಿಂದ ದೂರವಿದ್ದು ಸಂಪುಹೂಡುವ ಸೂಚನೆಯನ್ನು ಕೊಟ್ಟಿದ್ದಾರೆ. ಆಸೇತು ಹಿಮಾಚಲ ಪರ್ಯಂತವಾದೀ ಭಾರತದಲ್ಲಿ ಜನಜೀವನದಲ್ಲಿ ಅತ್ಯಂತ ಮಹತ್ವದ ಹಾಗೂ ಅವಶ್ಯಕ ಪಾತ್ರವನ್ನು ವಹಿಸುವ ಅಂಚೆ ತಂತಿರಂಗದ ಚಟುವಟಿಕೆಗಳೆಲ್ಲವೂ ಒಮ್ಮಿಂದೊಮ್ಮೆಗೆ ನಿಂತು ಹೋಗುತ್ತವೆ; ಎಂದರೆ, ಸಾರ್ವಜನಿಕ ಜೀವನ ಸುರಳಿಸಲಿಗೆ ಪಕ್ಷವಾತವೇ ಬಡಿಯಲಿದೆ ಎಂಬ ಲಕ್ಷಣ. ಉದಾಹರಣೆಗೆ ಸಂಪು ನಡೆಯುತ್ತಿರುವಷ್ಟು ಕಾಲ ಜನರು ಮನಿ ಆರ್ಡರು ಮೂಲಕ ಹಣವನ್ನು ಕಳುಹಿಸಲಾರರು ಹಣ ಕಳುಹಿಸಿಯೇ ಇಲ್ಲವೆಂದ ಮೇಲೆ, ಅದನ್ನು ನಂಬಿ ಕುಳಿತು ಜೀವನ ನಡೆಸುವ ಜನರ ಪಾಡೇನೆಂಬುದನ್ನು ಸುಲಭದಲ್ಲಿಯೇ ಊಹಿಸಿಕೊಳ್ಳಬಹುದು. ನಮ್ಮ ಹಳ್ಳಿಯ ಲಕ್ಷಾಂತರ ಜನರು, ಮುಖ್ಯವಾಗಿ ಸ್ತ್ರೀಯರು ಇಂಥ ಮನಿ ಆರ್ಡರುಗಳ ನಿರೀಕ್ಷೆಯಲ್ಲಿ ಚಾತಕ ಪಕ್ಷಿಯಂತೆ ಕುಳಿತಿರುತ್ತಾರೆಂಬುದು ಅತಿಶಯೋಕ್ತಿಯಲ್ಲ. ಇವರೆಲ್ಲರೂ ಬನ್ನಿ ಬಡುವಂತೆ [illegible] ನೌಕರರ ಸಂಪು ಜನರ ಸಹಾನುಭೂತಿಗೆ ಎರವಾಗುವುದಾದರೆ ಅದರಲ್ಲಿ ವಿಶೇಷವೇನೂ ಇಲ್ಲ. ಅದು ಸಂಪಿನ ವಿಷಯ ಪರಿಣಾಮದ ಚಿತ್ರಣವನ್ನಷ್ಟೇ ಕೊಡುತ್ತದೆ ಗೋವೆಯಲ್ಲಿರುವ ನಮ್ಮ ಬಂಧುಬಾಂಧವರಿಗೆ ಭಾರತದಲ್ಲಿರುವ ಜನರು ಹಣ ಕಳಿಸುವುದು ನಿಂತು ಹೋಗಿ; ಅವರಿಗೆ ಕಷ್ಟವೊದಗದಂತೆ ನೋಡಿಕೊಳ್ಳುವ ಸಲುವಾಗಿ ಕನಿಕರಪಟ್ಟು ಗೋವೆಯ ಪರರಾಷ್ಟ್ರವಾದರೂ ಮತ್ತು ಹೋರ್ಚುಗೀಸರ ನೀತಿಗೆ ನಮ್ಮ ತೀವ್ರ ಖಂಡನೆಯಿದ್ದರೂ ಭಾರತ ಸರಕಾರವು ಮಾನವೀಯತೆಯ ಕೈವಾರಿಯಾಗಿ ಗೋವೆಗೆ ಮನಿಆರ್ಡರುಗಳನ್ನು ಕಳುಹಿಸುವ ಬಗ್ಗೆ ರಿಯಾಯತಿಯನ್ನು ತೋರಿಸಿ ಪುನಃ ಅನುಕೂಲತೆಯೊದಗಿಸಲು ಉದ್ಯುಕ್ತವಾಗಿರುವ ಈ ಕಾಲದಲ್ಲಿ ಅಂಚೆ ತಂತಿ ನೌಕರರ ಸಂಪಿನ ನಿರ್ಣಯ ಎಷ್ಟು ವಿಲಕ್ಷಣವಾಗಿ ತೋರುತ್ತದೆ! ನಮ್ಮವರೇ ನಮಗೆ ಹಗೆಗಳಾಗುವುದು ಹೇಗೆ! ಅದು ಸಹ, ಸಂಪು ಹೂಡಿದ ಕಾಲವಾದರೂ ಎಂಥದು? ೧೫ನೇ ತಾರೀಕಿಗೆ ನಾವು ಸ್ವಾತಂತ್ರ್ಯದ ಹತ್ತನೆಯ ವರ್ಧಂತಿಯನ್ನು ಆಚರಿಸಲಿದ್ದೇವೆ. ೧೬ನೆ ಅಗಸ್ಟಿಗೆ ಸ್ವಾತಂತ್ರ್ಯ ಯುದ್ಧವೆಂದು ಅಭಿಮಾನದಿಂದ ಕರೆಯುವ ಅಸಹಕಾರಿಗಳ ಹೋರಾಟದ ಶತಸಾಂವತ್ಸರಿಕೋತ್ಸವವನ್ನು ವಿಜೃಂಭಣೆಯಿಂದ ಜರಗಿಸಲಿದ್ದೇವೆ. ಹೀಗಿರುತ್ತ ಈ ಕಾಲದಲ್ಲಿ ಸಂಪು ನಡೆಯುವುದಿಂಲಿ, ಸಂಪಿನ ಆಲೋಚನೆ ಮಾಡಿದರೂ ಸಾಕು, ಅದು ಈ ಉತ್ಸವಗಳ ಹಿಂದಿನ ಸಂದೇಶವನ್ನು ಹಾಳುಗೆಡಹುವುದು ನಿಶ್ಚಯ. ಅಂದು ದಾಸ್ಯಮುಕ್ತಿಗಾಗಿ ಸರಕೀಯರ ವಿರುದ್ಧ ಹೋರಾಟ, ಅದರೆಇಂದು ನಮ್ಮವರಿಂದ ನಮ್ಮವರೊಡನೆಯೇ ಹೋರಾಟ! ಕಾಲವಿಪರ್ಯಾಸ ಎಂದರೆ ಇದೇ. ಸಂಪಿನ ನಿರ್ಣಯ ತೀರಾ ಅಕಾಲಿಕವಾದುದೆಂಬುದಕ್ಕೆ ಇಷ್ಟೇ ವಿವರಣೆ ಸಾಕು. ಇನ್ನು ಸಂಪು ಹೂಡಲೇ ಬೇಕೆಂಬಂಥ ಅಗತ್ಯವಾದರೂ ಇದೆಯೇ ಎಂದರೆ, ಸಾರ್ವಜನಿಕ ಅಭಿಪ್ರಾಯವನ್ನು ಪ್ರತಿಬಿಂಬಿಸುವವರಾಗಿ ನಾವು "ಇಲ್ಲ" ಎನ್ನಲೇ ಬೇಕಾಗುತ್ತದೆ. ಅಂಚೆ ತಂತಿ ನೌಕರರು ತಮ್ಮ ವೇತನಗಳನ್ನು, ತಮಗೆ ದೊರಕುತ್ತಿರುವ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳಲು ಅತುರರಿರುವರೆಂಬುದಕ್ಕೇ ಸ್ಪರ ಯಾರೂ ಅಕ್ಷೇಪಿಸುತ್ತಿಲ್ಲ. ಎಷ್ಟು ಸಿಕ್ಕಿದರೂ ಸಾಲದು, ಇನ್ನೂ ಬೇಕು ಎನ್ನುವುದು ಮಾನವನಿಗೆ ಸಹಜವಾದ ಗುಣ. ಆದರೆ, ಅದಕ್ಕಾಗಿ ಸಾರ್ವತ್ರಿಕ ಮುಷ್ಕರದಂತಹ ಗದ್ದಲವನ್ನೆಬ್ಬಿಸುವುದು ನ್ಯಾಯವಾದ ಕ್ರಮವಲ್ಲ; ಅದು ತಾವುಸಿ ಗುಣದ ಪ್ರಭಾವ. ತಮಗೆ ಇನ್ನೂ ಬೇಕು ಎನ್ನುವವರು ತಮ್ಮಷ್ಟೆ ಅರ್ಹತೆ ಯೋಗ್ಯತೆಗಳಿದ್ದ ವ್ಯಕ್ತಿಗಳು ಜೀವನದ ಇತರ ರಂಗಗಳಲ್ಲಿ ಏನು ಸುಖ ಪಡೆಯುತಿದ್ದಾರೆ, ಅದರೆಷ್ಟು ಹೊಟ್ಟೆ ಬಟ್ಟೆಯ ಚಿಂತೆ ಕಟ್ಟಿಕೊಂಡಿದ್ದಾರೆ ಎಂಬುದನ್ನು ಒಮ್ಮೆಯಾದರೂ ಆಲೋಚಿಸಿದ್ದರೆ, ತಮ್ಮ ಸ್ಥಿತಿಗತಿಯ ಬಗ್ಗೆ ತುಂಬ ಸಂತೋಷವನ್ನು ಪಟ್ಟುಕೊಳ್ಳುತಿದ್ದರು ರಾಜ್ಯಸರಕಾರದ ನೌಕರರಿದ್ದಾರೆ, ಖಾಸಗಿ ಸಂಘಸಂಸ್ಥೆಗ [illegible] ಯಲ್ಲಿ ದುಡಿಯುವವರಿದ್ದಾರೆ. ಎಲ್ಲಾ ಬಿಟ್ಟು ಉದಾತ್ತವೆಂದು, ಅತ್ಯಂತ ಗೌರವಾರ್ಹವಾದುದೆಂದು ಕಂಠೋಕ್ತವಾಗಿ ಪ್ರಶಂಸಿಸಲ್ಪಡುತ್ತಿರುವ ಅಧ್ಯಾಪನ ಕಾರ್ಯವನ್ನು ಕೈಗೊಂಡ ಶಿಕ್ಷಕರಿದ್ದಾರೆ. ಇವರೊಡನೆ ತುಲನೆ ಮಾಡಿದಾಗ, ಅಂಚೆ ತಂತಿ ನೌಕರರಿಗೆ ಸ್ವರ್ಗಸುಖ ಸಿಗುತ್ತಿದೆ, ನಮಗೋ ನರಕವಾಸ ಎನ್ನುವ ದುಃಖದ ಮಾತು ಕೇಳಿಬರುತ್ತದೆ. ಇದನ್ನು ಅಂಚೆ ತಂತಿ ನೌಕರರು ಗಮನಿಸಿದ್ದುಂಟೆ? ನಮ್ಮದೇ ಪತ್ರಿಕಾ ಬಂಧುವೊಂದು ಹೇಳಿದಂತೆ" ನಮ್ಮನ್ನುಂಟುಮಾಡಿದ ಪರಮಾತ್ಮ ಎಲ್ಲರಿಗೂ ಒಂದೇ ತರದ ಹೊಟ್ಟೆಯನ್ನು ದಯಪಾಲಿಸಿರುವನೇ ಹೊರತು, ಕೊಟ್ಟಿ ತುಂಬಿಸುವಲ್ಲಿ ಒಂದೇ ವಿಧಾನವನ್ನು ಕಲ್ಪಿಸಿಲ್ಲ. ಇದೇ ಇಂದಿನ ದೊಡ್ಡ ಸಮಸ್ಯೆಯಾಗಿದೆ? ಇದರಿಂದಾಗಿಯೇ ಎಂಬಂತೆ ಹೆಚ್ಚಿನ ಯೋಗ್ಯತೆಯಿದ್ದವರೂ ಇತರ ರಂಗದಲ್ಲಿ ದುಡಿಯುತ್ತಿರುವ ಪಾಪದ ಫಲವಾಗಿ ನಿತ್ಯವೂ ಗೋಳಿನ ಜೀವನವನ್ನು ನಡೆಸುತಿದ್ದಾರೆ. ಅದೇ ಕಾಲದಲ್ಲಿ ಯೋಗ್ಯತೆಯಲ್ಲಿ ಕನಿಷ್ಠರಾದ ಎಷ್ಟೋ ಮಂದಿ ಅಂಚೆ ತಂತಿ ಇಲಾಖೆಯಲ್ಲಿದ್ದುಕೊಂಡು, ಸಾರ್ವಜನಿಕರ ದೃಷ್ಟಿಯಿಂದ ನಮ್ಮದಿಯ ಒದುಕನ್ನು ಬದುಕುತಿದ್ದಾರೆ. ಇದಕ್ಕೆ ಪ್ರಾರಬ್ಧವೆನ್ನಬೇಕೋ, ಗ್ರಹಚಾರವೆನ್ನಬೇಕೋ-ಅದರ ಗೊಡವೆ ನಮಗೆ ಬೇಡ. ನಮ್ಮ ಇಲಾಖೆಗೆ ತುಂಬ ಲಾಭವಿದೆ. ಆದುದರಿಂದ ನಮ್ಮ ಕೇಳಿಕೆಗಳನ್ನು ಮನ್ನಿಸಲು ಸರಕಾರಕ್ಕೇನೂ ತೊಂದರೆಯಿಲ್ಲ; ಮತ್ತು ಅದೇ ನ್ಯಾಯ ಎನ್ನುವ ಮನೋಭಾವವು ಯೋಗ್ಯವಾದುದೆಂದೂ ಹೇಳುವಂತಿಲ್ಲ ಅಂಚೆತಂತಿ ಇಲಾಖೆಯು ಲಾಭಕಾಗಿ ಏಕೆ ದುಡಿಯಬೇಕೋ ನಮಗೆ ತಿಳಿಯದು. ಅದು ಲಾಭಕ್ಕಾಗಿಯೇ ದುಡಿಯಬೇಕಾದ ಸಂಸ್ಥೆಯಾಗಿಲ್ಲವೇ ಎಂಬ ಪ್ರಶ್ನೆಯನ್ನೆತ್ತಿದರೆ, ಕಲ್ಯಾಣ ರಾಷ್ಟ್ರವನ್ನು ಕಟ್ಟಬೇಕೆಂಬ ಸೊಷ್ಟನ ಮುಂದೆ ಏನುನ್ತರ ಬಂದೀತೆಂಬುದನ್ನು ಸುಲಭದಲ್ಲಿ ಊಹಿಸಬಹುದು. ಜನರ ಮುಂದೆ ಈ ಪ್ರಶ್ನೆಯನ್ನು ಮಂಡಿಸಿದ್ದಾದರೆ ಅದೇ ದೊಡ್ಡ ಕೋಲಾಹಲಕ್ಕೆ ನಾಂದಿಯಾದೀತು. ಅಂಚೆತಂತಿ ಇಲಾಖೆ ಇರುವುದು ಜನರ ಸೇವೆಗಾಗಿ ಹೊರತು, ಜನರ ಶೋಷಣೆಗಾಗಿಯಲ್ಲ. ಅದು ಸ್ವಾವಲಂಬಿಯಾಗಿದ್ದರೆ ಸಾಕು, ಲಾಭಕ್ಕೆ ಮನಸ್ಸು ಹಾಕಬಾರದು-ಇದು ಜನರ ಅಪೇಕ್ಷೆ ಅದೂ ಕಲ್ಯಾಣ ರಾಷ್ಟ್ರದಲ್ಲಿ ಹೀಗೆ ಅಪೇಕ್ಷಿಸುವುದು ಸಮಂಜಸವಾಗಿದೆ; ಮತ್ತು, ಸರಕಾರದ ನೀತಿಯಲ್ಲಿ ತಕ್ಕ ಪರಿವರ್ತನೆಯಾಗಬೇಕೆಂದು ನಿರೀಕ್ಷಿಸುತ್ತಿರುವುದು ಸಾಕ್ಷವಾಗಿದೆ ಇತ್ತೀಚೆಗಿನ ವರ್ಷಗಳಲ್ಲಿ ಅಂಚೆತಂತಿ ಇಲಾಖೆಯಿಂದ ತಕ್ಕ ಸೇವೆ ಪಡೆದುಕೊಳ್ಳಬೇಕಾದರೆ, ಜನರು ತೆರಬೇಕಾಗಿರುವ ದುಡ್ಡಿನ ಪ್ರಮಾಣ ಎಷ್ಟು ವೇಗವಾಗಿ ಹೆಚ್ಚಿದೆ ಎಂಬುದರ ವಿವರಣೆ ಈಗ ಅಗತ್ಯವಿಲ್ಲ. ಆಣೆ-ಪೈ ಪದ್ಧತಿಯಿಂದ ನಯೇ ಪೈಸೆ ಪದ್ಧತಿಗೆ ನೆಗೆಯುವಾಗ ಸಹ ಸಾರ್ವಜನಿಕರು ದಂಡವನ್ನೇ ತೆರಬೇಕಾಯಿತು. ಸರಕಾರವು ತಯಾರಿಸಿದ ವಿನಿಮಯಕೋಷ್ಟಕವನ್ನೇ ಮೂಲೆಗೆ ತಳ್ಳಿ ಹೊಸತಾದ ಅರ್ಥಾಂಕ ಏರಿದ ದರಗಳನ್ನೇ ಜಾರಿಗೆ ತರಲಾಯಿತು—ಯಾವುದೋ ಒಂದು ಶಾಸನದ ಆಶ್ರಯದಿಂದ. ಜನರ ಪ್ರಾಮಾಣಿಕವಾದ ಇಚ್ಛೆಯೇನೆಂದು ತಿಳಿಯಬಯಸುವುದಾದರೆ, ಅಂಚೆ ತಂತಿ ದರಗಳು ಎಷ್ಟೋ ತಗ್ಗಬೇಕಾಗಿವೆ ಎಂಬ ನಿರ್ಣಯವೇ ಹೊರಟೀತು ಸಾರ್ವಜನಿಕ ರಂಗದ ಇತರ ವರ್ಗಗಳ ನೌಕರರ ಮಟ್ಟದಲ್ಲಿಯೇ ಅಂಚೆ ನೌಕರರನ್ನೂ ಇಟ್ಟಿದ್ದಾದಲ್ಲಿ ಸಾರ್ವಜನಿಕರ ಉಪರೋಕ್ತ ಅಭಿಪ್ರಾಯವನ್ನು ಮನ್ನಿಸುವುದರಲ್ಲಿ ಸರಕಾರಕ್ಕೆ ಕಷ್ಟವಾಗಿಲಿಕ್ಕಿಲ್ಲ. ಜನರಿಂದು ಬಯಸುತ್ತಿರುವುದು ಅಂಚೆ ತಂತಿ ದರಗಳು ಇಳಿಯಲಿ ಎಂಬುದನ್ನಲ್ಲದೆ ಅಂಚೆ ತಂತಿ ನೌಕರರ ಸಂಬಳ ಹೆಚ್ಚಲಿ ಎಂದಲ್ಲ. ಕಾರಣ ಸ್ಪಷ್ಟವೇ ಇದೆ- ಅಂಚೆ ತಂತಿ ನೌಕರರ ಸಂಬಳ ಸೌಲಭ್ಯಗಳನ್ನು ಇನ್ನೂ ಹೆಚ್ಚಿಸುವುದೆಂದರೆ ಅಂಚೆ ತಂತಿ ದರಗಳನ್ನು ಮತ್ತಷ್ಟು ಏರಿಸಲು ದಾರಿ ತಯಾರಿಸುವುದೆಂದೇ ಅರ್ಥ.

ರಾಷ್ಟ್ರಧ್ವಜದ ದುರುಪಯೋಗದ ಬಗ್ಗೆ ಎಚ್ಚರಿಕೆ- ಕೆಲವು ವ್ಯಕ್ತಿಗಳೂ ಸಂಸ್ಥೆಗಳೂ ವ್ಯಾಪಾರಿ ಲಾಭ ದೃಷ್ಟಿಯಿಂದ ರಾಷ್ಟ್ರಧ್ವಜವನ್ನು ಮಾರುತ್ತಿರುವ ನಿದರ್ಶನಗಳು ಸರಕಾರದ ಅವಗಾಹನೆಗೆಬಂದಿದೆ. ಸಾರ್ವಜನಿಕರು ಅಂತಹ ವ್ಯಾಪಾರೀ ಮನೋವೃತ್ತಿಯುಳ್ಳವರಿಗೆ ಪ್ರೋತ್ಸಾಹಿಸಕೂಡದು. ರಾಷ್ಟ್ರದ ಗೌರವದ ಚಿಹ್ನೆಯಾದ ರಾಷ್ಟ್ರಧ್ವಜದ ಮಹತ್ವೆಯನ್ನು ಅರಿತುಕೂಡು ಕಂಡಾಬಟ್ಟೆ ರೀತಿಯಲ್ಲಿ ಅದನ್ನು ಉಪಯೋಗಿಸುವ ಕ್ರಮವನ್ನು ನಿಲ್ಲಿಸಬೇಕು. ಈ ಕುರಿತು ಜಿಲ್ಲಾ ಕಲೆಕ್ಟರರು ಪ್ರಕಟಣೆಯೊಂದನ್ನು ಹೊರಡಿಸಿ ಸಾರ್ವಜನಿಕರ ಗಮನವನ್ನು ಸೆಳೆದಿರುವರು.

ಕೆನರಾ ಬೇಂಕಿನ ಹೊಸ ಶಾಖೆಗಳು ಕೆನರಾ ಬೇಂಕಿನ ಮಡಿಕೆರೆ ಶಾಖೆಯನ್ನು ಇದೇ ತಾ. ೩ರಂದು ಬೆಳಿಗ್ಗೆ ೧½ ತಾಸಿಗೆ ಮೈಸೂರು ಕೈಗಾರಿಕಾ ಮಂತ್ರಿ ಶ್ರೀ ಸಿ. ಎಮ್. ಸೂಣಚ್ಚನವರು ಉದ್ಘಾಟಿಸಿದರು. ಗುಲ್ಬರ್ಗಾ ಶಾಖೆಯ ಉದ್ಘಾಟನೆಯು ಇದೇ ತಾ. ೨೨ರಂದು ಸಂಜೆ ಗುಲ್ಬರ್ಗಾ ಡಿವಿಜನಲ್ ಕಮಿಷನರ್ ಶ್ರೀ ಜಿ. ಎಸ್. ನಾಗರಾಜರಾಯರಿಂದ ನೆರವೇರಿಸಲ್ಪಡುವುದು.

ಬರುವ ವಾರ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ

ಶ್ರೀಗಳಾದ ಶಿವರಾಮ ಕಾರಂತ, ಕು. ಶಿ. ಹರಿದಾಸ ಭಟ್ಟ, ಜಿ ಆರ್ ಪಾಂಡೇಶ್ವರ, ಗೌರೀಶ ಕಾಯ್ಕಿಣಿ, ಯು. ನಾ. ಉಡುಪ, ವಿಶ್ವೇಶ್ವರ ಶರ್ಮ, ಹೊಯಿಸಳ, ಡಾ. ಕೆ ಕೃಷ್ಣಮೂರ್ತಿ, ಕಯ್ಯಾರ ಕಿಞ್ಞಣ್ಣರೈ, ಸಂಜೀವ ಲಕ್ಷ್ಮೇಶ್ವರ, ಯಸ್. ವೆಂಕಟರಾಜ, ಸೇವನಮಿರಾಜ ಮಲ್ಲಿ, ಎ. ಎಸ್. ರಾಮಕೃಷ್ಣ ಮೊದಲಾದವರ ರೇಖಾಚಿತ್ರಗಳು.

ಬೆಲೆ ಮೂರಾಣೆ (19 ನಯೇ ಪೈಸೆ)

ಚಂದಾದಾರರಲ್ಲಿ ವಿನಂತಿ.

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 36 ನೇ ವರ್ಷವು ಅಂತ್ಯವಾಗಿ ಸಪ್ತಂಬರದಿಂದ 37 ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿ ಇರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಸಂಕ್ಷಿಪ್ತ ಸುದ್ದಿಗಳು

ಜಿಲ್ಲೆಗಳ ಪುನರ್ಘಟನೆ

ಮೈಸೂರು ರಾಜ್ಯದಲ್ಲಿನ ಜಿಲ್ಲೆಗಳನ್ನು ಪುನರ್ಘಟಿಸಿ ಅವುಗಳ ಗಡಿಗಳನ್ನು ಯೋಗ್ಯ ಕಾಲದಲ್ಲಿ ಸರಕಾರವು ಕೈಗೊಳ್ಳುವುದೆಂದು ಮುಖ್ಯಮಂತ್ರಿ ಶ್ರೀನಿಜಲಿಂಗಪ್ಪನವರು ಹೇಳಿದ್ದಾರೆ. ರಾಜ್ಯದಲ್ಲಿನ ಜಿಲ್ಲೆಗಳ ಸಂಖ್ಯೆಯು ಈಗ ಹೆಚ್ಚಾಗಿದೆಯೆಂದೂ, ಅವನ್ನು ಕಡಿಮೆ ಮಾಡುವುದರಿಂದ ಆಡಳಿತ ವೆಚ್ಚವು ಇಳಿಯುವುದೆಂದೂ ಕೆಲಸದಸ್ಯರು ವಿಧಾನ ಸಭೆಯಲ್ಲಿ ಹೇಳಿದರು.

ಭೂದಾನ ಚಳುವಳಿ

ಆಚಾರ್ಯ ವಿನೋಬಾಭಾವೆಯವರು ನಾಲ್ಕು ವರ್ಷಗಳ ಹಿಂದೆ ಪ್ರಾರಂಭಿಸಿದ ಭೂದಾನ ಚಳುವಳಿಗೆ ಈಗ ಸುಮಾರು ೪ ಲಕ್ಷ ಎಕ್ರೆ ಭೂಮಿ ಮತ್ತು ೩ ಸಾವಿರ ಹಳ್ಳಿಗಳು ದಾನವಾಗಿ ದೊರೆತಿವೆಯೆಂದು ಭೂದಾನ ಕಾರ್ಯಕರ್ತ ಶ್ರೀ ಶಂಕರರಾವ ದೇವರು ತಿಳಿಸಿದ್ದಾರೆ. ವಿನೋಬಾರವರು ಈ ತಿಂಗಳಾಂತ್ಯದಲ್ಲಿ ಕರ್ನಾಟಕ ಸಂಚಾರವನ್ನು ಮಾಡಲಿದ್ದಾರೆ.

ಕಾಶ್ಮೀರ ನಮ್ಮದು

"ಕಾಶ್ಮೀರವು ನಮ್ಮದು" ಎಂಬ ಸಂಸ್ಥೆಯೊಂದನ್ನು ಮಧ್ಯರೆಯ ಮುಸ್ಲಿಮರು ಮಾಡಿಕೊಂಡಿದ್ದಾರೆ. ಭಾರತದ ಕಾಶ್ಮೀರ ಧೋರಣೆಕ್ಕೆ ಬೆಂಬಲವೀಯುವುದು ಭಾರತದ ವಿಷಯದಲ್ಲಿ ಕಾಶ್ಮೀರ ಸರಕಾರದ ನಿಲುಮೆಗೆ ಪೂರ್ಣ ಸಹಕಾರ ಬೆಂಬಲ ಕೊಡುವುದೇ ಈ ಸಂಸ್ಥೆಯ ಉದ್ದೇಶವಾಗಿದೆ. ಅಜಾದ ಕಾಶ್ಮೀರದ ಪ್ರದೇಶದಲ್ಲಿ ಪಾಕಿಸ್ತಾನದ ಆಳಕೆಗೆ ಒಳಗಾಗಿರುವ ತಮ್ಮ ಬಾಂಧವರ ವಿಮೋಚನೆಗಾಗಿ ಸಕ್ರಿಯ ಸಹಾಯ ಸಲ್ಲಿಸಲು ಇವರು ಮುಂದಾಗಿದ್ದಾರೆ.

ಕೇರಳದಲ್ಲಿ ಭೂಸುಧಾರಣೆ

ಕೇರಳ ಸರಕಾರವು ಕೇರಳ ಭೂಸುಧಾರಣಾ ವಿಧೇಯಕವೊಂದನ್ನು ತಯಾರಿಸಿದ್ದು, ಅದನ್ನು ಒಪ್ಪಿಗೆಗಾಗಿ ಕೇಂದ್ರ ಸರಕಾರಕ್ಕೆ ಕಳುಹಿಸಿದೆ ಎಂದು ತಿಳಿದಿದೆ. ಈ ವಿಧೇಯಕದಲ್ಲಿ ಭೂಹಿಡುವಳಿಯ ಪರಮಾವಧಿ ಪ್ರಮಾಣ, ಯೋಗ್ಯಲಾವಣೆ ಮೊದಲಾದುವು ಒಳಗೊಂಡಿರುತ್ತವೆ.

ಅಂಚೆ ತಂತಿ ನೌಕರರ ಸಂಘ

ದಿನಾಂಕ ೮ ೯ ರ ನಡು ರಾತ್ರಿಯಂದು ಅಖಿಲ ಭಾರತದಲ್ಲಿ (ಕೇರಳವನ್ನು ಹೊರತುಪಡಿಸಿ) ಅಂಚೆ ತಂತಿ ನೌಕರರು ಸಂಪುಹೂಡುವ ದೃಢ ನಿರ್ಧಾರ ಮಾಡಿದ್ದಾರೆ ಕೇಂದ್ರ ಸರಕಾರವು 'ಅವಶ್ಯಕ ಸೇವೆಗಳನ್ನು ಕಾಪಾಡಿಕೊಳ್ಳುವ ವಿಧೇಯಕ'ವನ್ನು ಲೋಕಸಭೆಯಲ್ಲಿ ಮಂಜೂರುಮಾಡಿಸಿದ. ಈ ಮೂಲಕವಾಗಿ ಸಂಪನ್ನು ತಡೆಯುವ ಪ್ರಯತ್ನವು ನಡೆಯುತ್ತಿದ. ದೇಶದ ಕಾಂಗ್ರೆಸ್ ಧುರೀಣರು ಈ ಸಂಪನ್ನು ಹಿಂತೆಗೆದುಕೊಳ್ಳುವಂತೆ ವಿನಂತಿಸಿದ್ದಾರೆ. ಸರಕಾರವೂ ವೇತನ ಪುನರ್ನಿರ್ಣಯಿಸುವ ಸಮಿತಿಯೊಂದನ್ನು ಘೋಷಿಸಿದೆ. ಅಂಚೆ ತಂತಿ ಮಹಾಸಂಘದ ಅಧ್ಯಕ್ಷ ಶ್ರೀ ದಳವಿಯವರು ತಾತ್ಪೂರ್ತಿಕ ಪರಿಹಾರವೆನ್ನು ಕೊಡುವುದು, ತೆಗೆದುಕೊಳ್ಳುವುದು ಮತ್ತು ಸಂಬಳ ಆಯೋಗದ ಸೂಚನೆ ಪಾಲಿಸುವ ಭರವಸೆ ಕೊಡುವುದು—ಈ ಮೂರು ಶರತ್ತುಗಳಿಗೆ ಸರಕಾರವು ಒಪ್ಪಿದರೆ ತಾವು ಸಂಪನ್ನು ಹಿಂತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಪರಿಣಾಮ ಕಾಣಬೇಕಾಗಿದೆ.

ಆಹಾರ ಧಾನ್ಯಗಳಿಗೆ ಮುಂಗಡ

ರಿಸರ್ವ ಬೇಂಕಿನವರು ಒಂದು ಲಜ್ಜೆಯನ್ನು ಹೊರಡಿಸಿ ಎಲ್ಲ ಶೆಡ್ಯೂಲ್ಡ ಬೇಂಕುಗಳು ಆಹಾರ ಧಾನ್ಯಗಳ ಮೇಲೆ ಈಗ ಕೊಡಲಾಗುತ್ತಿರುವ ಮುಂಗಡವನ್ನು ಕೂಡಲೇ ತಗ್ಗಿಸದೆ ಹೋದರೆ, ಅಯಾ ಬೇಂಕುಗಳ ಮೇಲೆ ಯೋಗ್ಯ ಕ್ರಮವನ್ನು ಕೈಗೊಳ್ಳಲಿರುವುದಾಗಿ ಎಚ್ಚರಿಸಿದೆ. ಈ ಹಿಂದೆ ಹೊರಡಿಸಿದ್ದ ಆದೇಶದಂತೆ ಬೇಂಕುಗಳ ಮುಂಗಡವು ಕಡಿಮೆಯಾಗುವ ಬದಲು, ಹೆಚ್ಚಿರುವುದು ಗಮನಕ್ಕೆ ಬಂದಿದೆ.

೩ ಕಡಿಮೆ ವೆಚ್ಚದಲ್ಲಿ ನ್ಯಾಯದಾನ

ಕಾಲ ವಿಲಂಬನೆಗೆ ಆಸ್ಪದವಿಲ್ಲದಂತೆ ಸಾಧ್ಯವಿದ್ದಷ್ಟು ಕಡಿಮೆ ವೆಚ್ಚದಲ್ಲಿ ಜನರಿಗೆ ನ್ಯಾಯದಾನವು ದೊರೆಯುವಂತೆ ಮಾಡಲು ಸರಕಾರವು ಕಾಯದೆ ಆಯೋಗದ ವರದಿ ಕೈಸೇರಿದೊಡನೆಯೇ ಕೇವ್ವೊಂದು ಕಾಯದೆ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಕಾಯದೆ ಮಂತ್ರಿಗಳು ಲೋಕಸಭೆಯಲ್ಲಿ ಆಶ್ವಾಸನೆ ಇತ್ತಿದ್ದಾರೆ.

ವಿದ್ಯಾರ್ಥಿಗಳ ಮತಪ್ರದರ್ಶನ

ಶಾಲಾ ಸಂಬಳವನ್ನು ಏರಿಸಿದುದನ್ನು ನಿಷೇಧಿಸಿ ಜಯಪುರದ ವಿದ್ಯಾರ್ಥಿಗಳು ಗಳಿಗೆ ಕ್ಷಣವನ್ನೂ ಮೀರಿ ಗೊಂದಲ ಮಾಡಿದುದರಿಂದಾಗಿ ಜಯಪುರದ ಮಹಾರಾಜಾ ಕಾಲೇಜ್ ಮತ್ತು ಆ ಕಾಲೇಜನ ಕಟ್ಟಡದಲ್ಲಿ ನಡೆಯುತ್ತಿರುವ ವಾಣಿಜ್ಯ ಕಾಲೇಜನ್ನೂ ಅನಿರ್ಬಂಧ ಅವಧಿಯ ವರೆಗೆ ಮುಚ್ಚಿ ಬಿಡಲು ರಾಜಸ್ಥಾನ ಸರಕಾರವು ನಿರ್ಧರಿಸಿದೆ

ಪುಸ್ತಕಗಳ ಪಾತ್ರ

ರಾಷ್ಟ್ರೀಯ ಐಕ್ಯವನ್ನು, ಭದ್ರತೆಯನ್ನು ಸಂರಕ್ಷಿಸುವ ಮತ್ತು ಜನಮನವನ್ನು ತಿದ್ದುವಲ್ಲಿ ಪುಸ್ತಕಗಳು ಅಮೂಲ್ಯ ಪಾತ್ರವನ್ನು ವಹಿಸುತ್ತಿವೆಯೆಂದು ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನರು ರಾಷ್ಟ್ರೀಯ ಗ್ರಂಥ ವಿಶ್ವಸ್ಥ ಸಮಿತಿಯನ್ನು ಉದ್ಘಾಟಿಸುವ ಸಂದರ್ಭದಲ್ಲಿ ಹೇಳಿದ್ದಾರೆ

ಸಹರಾಷ್ಟ್ರ ಅರ್ಥಮಂತ್ರಿ ಪರಿಷತ್ತು

ಕಾಮನ್‌ವೆಲ್ತ್ ಅರ್ಥಮಂತ್ರಿಗಳ ಪರಿಷತ್ತು ಕ್ಯೂಬೆಕ್‌ನ ಮೌಂಟ್ ಟ್ರೆಂಟಂಟ್‌ದಲ್ಲಿ ಬರುವ ಸಪ್ಟಂಬರ ೨೮ರಿಂದ ನಾಲ್ಕು ದಿನ ನಡೆಯುವುದೆಂಬ ಕೆಸೆಡಾದ ಪ್ರಧಾನಿ ಜಾನ್‌ಡಿಫೆನ್ ಬೇಕರರು ಪ್ರಕಟಿಸಿದ್ದಾರೆ. ಕಾಮನ್‌ವೆಲ್ತ್ ಪ್ರಧಾನಿ ಪರಿಷತ್ತಿನಲ್ಲಿ ಇಂತಹ ಅರ್ಥಮಂತ್ರಿ ಪರಿಷತ್ತು ಕೆನೆಡದಲ್ಲಿ ನಡೆಯಬೇಕೆಂದು ಪ್ರಧಾನಿಗಳು ಕೇಳಿಕೊಂಡಿದ್ದರು

ಪಾಕಿಸ್ತಾನಕ್ಕೆ ಅಧಿಕ ಸೈನ್ಯ

ಪಾಕಿಸ್ತಾನವು ಪ್ರಕ್ಷುಬ್ಧ ಜಗತ್ತಿನಲ್ಲಿ ವಾಸಿಸುವುದರಿಂದ, ಅದಕ್ಕೆ ಪರರಾಷ್ಟ್ರಗಳನ್ನು ಆಕ್ರಮಿಸುವ ಅಭಿಲಾಷೆಯಿಲ್ಲ ವಾದರೂ ತನ್ನ ಸೇನೆಯನ್ನು ಬಲಪಡಿಸಿಕೊಳ್ಳಬೇಕು ಎಂಬುದಾಗಿ ಅಧ್ಯಕ್ಷ ಇಸ್ಕಂದರ ಮಿರ್ಜಾರು ಅಭಿಪ್ರಾಯಪಟ್ಟಿದ್ದಾರೆ.

ಕಾಶ್ಮೀರ ಪ್ರಶ್ನೆ

ಸುಮಾರು ಸಪ್ಟಂಬರ ತಿಂಗಳಲ್ಲಿ ಸೇರಬಹುದಾದ ಭದ್ರತಾಮಂಡಳದ ಸಭೆಯಲ್ಲಿ ಕಾಶ್ಮೀರ ಪ್ರಶ್ನೆಯ ಬಗ್ಗೆ ಗೊತ್ತುವಳಿಯನ್ನು ಮಂಡಿಸಬಲ್ಲ ರಾಷ್ಟ್ರ ಅಥವಾ ರಾಷ್ಟ್ರಗಳ ಶೋಧನೆಯಲ್ಲಿ ಪಾಕಿಸ್ತಾನವು ತೊಡಗಿದೆ. ಇದಕ್ಕಾಗಿ ಪಾಕಿಸ್ತಾನದ ವಿದೇಶ ಮಂತ್ರಿ ಫಿರೋಜ ಖಾನ ನೂನರು ಈ ತಿಂಗಳ ಮೂರನೆ ವಾರದಲ್ಲಿ ನ್ಯೂಯಾರ್ಕಿಗೆ ತೆರಳಿಲಿರುವರೆಂದು ತಿಳಿದು ಬಂದಿದೆ. ನೇಪಾಳವು ಈ ವಿಷಯದಲ್ಲಿ ಭಾರತಕ್ಕೆ ಸಂಪೂರ್ಣ ಸಹಾಯವು ನೀಡುವುದೆಂದು ನೇಪಾಳ ಪ್ರಧಾನಿಗಳು ಪ್ರತ್ಯಕ್ಷವಾಗಿ ಭರವಸೆಯಿತ್ತಿದ್ದಾರೆ.

ಬುಲ್ಗಾನಿನ್ನರ ಪ್ರಧಾನಿತ್ವಕ್ಕೆ ಚ್ಯುತಿ

ಕಳೆದ ಎರಡೂವರೆ ವರ್ಷಗಳಿಂದ ರಶಿಯದ ಪ್ರಧಾನ ಮಂತ್ರಿಗಳಾಗಿರುವ ಮಾರ್ಶಲ್ ನಿಕೋಲಾಯ್ ಬುಲ್ಗಾನಿನರ ಭವಿತವ್ಯದ ಬಗ್ಗೆ ಹಬ್ಬಿದ ನಾನಾ ಸುದ್ದಿಗಳಿಗೆ ಪುಷ್ಟಿಕೊಡುವ ಘಟನೆಯಿನ್ನೊಂದು ನಡೆದಿದೆ ಪೂರ್ವ ಜರ್ಮನಿಗೆ ತೆರಳಲಿರುವ ರಶಿಯನ್ ಶಿಷ್ಟಮಂಡಲದ ಸದಸ್ಯರ ಹೆಸರುಗಳ ಯಾದಿಯಲ್ಲಿ ಬುಲ್ಗಾನಿನರ ಹೆಸರಿಲ್ಲದುದೇ ಕುತೂಹಲದ ಸಂಗತಿಯಾಗಿದೆ ಕ್ರುಶ್ಚೇವರ ಕೃಪಾಕಟಾಕ್ಷವು ಬಲ್ಗಾನಿನರಿಂದ ವಿಮಕೋಯಾನರ ಮೇಲೆ ಹೊರಳಿದ ವಾರ್ತೆ ಕೇಳಿಬಂದಿದೆ

ಭಾರತಕ್ಕೆ ಮ್ಯಾಕ್ಮಿಲನ್ ಭೇಟಿ

ಮುಂದಿನ ವರ್ಷದ ಆರಂಭದಲ್ಲಿ ಇಂಗ್ಲಂಡಿನ ಪ್ರಧಾನಿ ಹೆರಾಲ್ಡ್ ಮ್ಯಾಕಮಿಲನರು ಆಸ್ಟ್ರೇಲಿಯಾ ಮತ್ತು ನ್ಯೂಜಿಲೇಂಡುಗಳಿಗೆ ಭೇಟಿಕೊಡಲಿರುವರು ಅಲ್ಲಿಗೆ ತೆರಳುವಾಗ ಇಲ್ಲವೆ ಅಲ್ಲಿಂದ ಮರಳುವಾಗ, ಭಾರತಕ್ಕೂ ಭೇಟಿಕೊಡಬೇಕೆಂದು ಬ್ರಿಟಿಷ ಪಾರ್ಲಿಮೆಂಟ್ ಅಭಿಪ್ರಾಯಪಟ್ಟಿದೆ. ಆದರೆ, ಈ ಬಗ್ಗೆ ಅಧಿಕೃತ ಪ್ರಕಟಣೆ ಹೊರಟಿರುವುದಿಲ್ಲ.

ರಾಜಕೀಯ ಕೈದಿಗಳ ಬಿಡುಗಡೆ

ಭಾರತದ ಪ್ರಥಮ ಸ್ವಾತಂತ್ರ್ಯ ಸಮರದ ಶತಸಾಂವತ್ಸರಿಕ ಸಂದರ್ಭದ ಸಮಿತ್ತ ದೇಶದಲ್ಲಿಯ ರಾಜಕೀಯ ಕೈದಿಗಳಿಗೆ ಸಾರ್ವತ್ರಿಕ ಕ್ಷಮಾದಾನ ಮಾಡಿ ಬಿಡುಗಡೆಮಾಡಬೇಕೆಂದು ಭಾರತೀಯ ಕಮ್ಯೂನಿಸ್ಟ ಪಕ್ಷದ ಪಾಲಿಟಬ್ಯೂರೋವು ಕೇಂದ್ರ ಹಾಗೂ ವಿವಿಧ ರಾಜ್ಯ ಸರಕಾರಗಳನ್ನು ಪ್ರಾರ್ಥಿಸಿದೆ

ಅಣು ಶಕ್ತಿಯಿಂದ ವಿದ್ಯುತ್

ಭಾರತದ ಅಣುಶಕ್ತಿ ಆಯೋಗದ ಅಧ್ಯಕ್ಷರಾದ ಡಾ. ಎಚ್ ಜೆ. ಭಾಭಾರವರು ಭಾರತವು ೧೯೬೨ರ ಹೊತ್ತಿಗೆ ಅಣುಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದೆಂದೂ, ಅದನ್ನು ಉತ್ಪಾದಿಸುವ ಯೋಜನೆಗಳು ೫೮ರ ಸುವಾರಿಗೆ ಸಿದ್ಧವಾಗುವುದೆಂದೂ ಹೇಳಿದ್ದಾರೆ. ಈ ಕಾರ್ಯವು ಮುಖ್ಯವಾಗಿ ಹಣವನ್ನು ಅವಲಂಬಿಸಿರುತ್ತದೆ.

ಮಧ್ಯಪೂರ್ವದಲ್ಲಿ

ಸಿರಿಯಾದಲ್ಲಿ ಜೋರ್ಡಾನದ ವಿರುದ್ಧ ನಡೆದ ಪ್ರಚಾರವು ನಿಲ್ಲದಿದ್ದರೆ, ಜೋರ್ಡಾನವು ಸಿರಿಯದ ವಿರುದ್ಧ ದಂಡೋಪಾಯ ಕೈಗೊಳ್ಳುವುದಾಗಿ ಜೋರ್ಡಾನವು ಸಿರಿಯಕ್ಕೆ ಬೆದರಿಕೆ ಹಾಕಿದುದರ ಪರಿಣಾಮವಾಗಿ ಎರಡುಗಳ ನಡುವೆ ತೀರ ಗಂಭೀರವಾದ ಪರಿಸ್ಥಿತಿ ಉಂಟಾಗಿದೆ.

ಉಡುಪಿ

ಹೆತ್ತವರ ಸಂಘ ಸ್ಥಾಪನೆ—ದಿ ಕೆ ನರಸಿಂಹಿಂಗ್ ಕೋಪರೇಶನ್ ಸುವರ್ಣ ಮಹೋತ್ಸವ ಸ್ಮಾರಕ ಎಲಿಮೆಂಟರಿ ಶಾಲೆಯ ಮಕ್ಕಳ ಹೆತ್ತವರ ಸಭೆಯು ಕಳೆದ ತಾ. 28 ರಂದು ಸಂಜೆ ನಗರ ಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಹೆತ್ತವರ ಸಂಘ ಸ್ಥಾಪಿಸಲಾಯಿತು. ಸಂಘದ ಕಾರ್ಯ ನಿರ್ವಾಹಕ ಸಮಿತಿಯಲ್ಲಿ ಶ್ರೀಗಳಾದ ಕೆ. ಗುರುರಾಜ ರಾಯರು ಅಧ್ಯಕ್ಷರಾಗಿಯೂ ಡಾ ಕೆ ಎಲ್. ಐತಾಳರು ಉಪಾಧ್ಯಕ್ಷರಾಗಿಯೂ ಕೆ. ಕೇಶವ ಕಾಮತರು ಕಾರ್ಯದರ್ಶಿಗಳಾಗಿಯೂ ಎ. ತ್ರಿವಿಕ್ರಮ ನಾಯ್ಕರು ಕೋಶಾಧಿಕಾರಿಗಳಾಗಿಯೂ ಇರುವರು.

ಅಗೋಸ್ತು ತಾ 15 ಮತ್ತು 16ದಿ ಸಾಹಚರಣೆ—ಸ್ವಾತಂತ್ರ್ಯ ಸಂಗ್ರಾಮದ ಶತಾಬ್ದಿ ಮಹೋತ್ಸವದ ಸಲುವಾಗಿ ತಾ. 15 ರಂದು ಬೆಳಿಗ್ಗೆ 7 ತಾಸಿಗೆ ನಗರದ ಶಾಲಾ ಕಾಲೇಜುಗಳಿಂದ ಪ್ರಭಾತ ಫೇರಿ ಹೊರಟು ಅಜ್ಜರಕಾಡು ಗಾಂಧಿ ಪ್ರತಿಮಾನಕ್ಕೆ ಬಂದು 8ಗಂಟೆಗೆ ಧ್ವಜ ವಂದನೆ ನಡೆಯುವುದು, 9 ಗಂಟೆಗೆ ಮಕ್ಕಳಿಗೆ ಸಿಹಿತಿಂಡಿ ಹಂಚೋಣ. ಮಧ್ಯಾಹ್ನ 2ರಿಂದ 1½ತಾಸಿನ ಆಟಗಳ ಸ್ಪರ್ಧೆ. 5 ರಿಂದ 5½ತಾಸಿನ ಬೋರ್ಡು ಹ್ಯಾಸ್ಕೀಲು ಸೀಲ್ಸ್ ಹಾಲಿನಲ್ಲಿ ಪ್ರಬಂಧ ಮತ್ತು ಭಾಷಣ ಸ್ಪರ್ಧೆ ಸ್ವಾತಂತ್ರ್ಯ ಸಂಗ್ರಾಮದ ವಿಷಯ ರಂಗ ನಂತರ ಚಿತ್ರ ಪ್ರದರ್ಶನ, ಮರುದಿವಸ ಸಂಜೆ 5½ಗಂಟೆಗೆ ಟೀಲ್ಸ್ ಹಾಲಿನಲ್ಲಿ ಬಹುಮಾನ ವಿತರಣೆ ರಾತ್ರಿ 9½ಗಂಟೆಗೆ ವರದೇಂದ್ರ ಕಲಾ ಮಂದಿರದಲ್ಲಿ ನಾಟಕ ಕಾರ್ಯಕ್ರಮಗಳಾಗುವುದು.

ಮಣಿಪಾಲದಲ್ಲಿ ಇಂಡಿಯನ್ ಮೆಡಿಕಲ್ ಕೌನ್ಸಿಲ ಪ್ರೆಸಿಡೆಂಟರು—ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಪ್ರೆಸಿಡೆಂಟ ಡಾ ಸಿ. ಎಸ್ ಪರೇಲ್, ಮೈಸೂರು ಸರಕಾರದ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಡಾ. ಬಿ. ವೆಂಕಟಿ ಸುಬ್ಬರಾವ್ ಮೊದಲಾದವರು ತಾ 9 ರಂದು ಮಧ್ಯಾಹ್ನ ಮಣಿಪಾಲಕ್ಕೆ ಆಗಮಿಸಿದರು. ಡಾ ಪರೇಲರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಓನ್ಸಪೆಕ್ಷನ್ ನಡೆಸಿದರು.

ಇಂಡಿಯನ್ ಮೆಡಿಕಲ್ ಎಸೋಸಿಯೇಶನ ಉಡುಪಿ ಶಾಖೆಯ ಕಡೆಯಿಂದ ಮುಖ್ಯ ಅತಿಥಿಗಳಿಗೆ ಭೋಜನ ಸತ್ಕಾರ ನಡೆಯಿತು. ಶಾಖೆಯ ಅಧ್ಯಕ್ಷ ಡಾ. ಎಸ್. ಆರ್. ಪೈಗಳು ಸ್ವಾಗತ ಭಾಷಣಗಳನ್ನಾಡುತ್ತು, ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಪೋಸ್ಟ್ ಗ್ರೇಜುಯೇಟ್ ಕೋರ್ಸನ್ನು ತೆರೆಯಲು ಪರವಾನಗೆಯನ್ನು ಬೇಡಿಸಿದರು. ಮುಖ್ಯ ಅತಿಥಿಗಳು ಕೇಳಿಕೆ ಬಗ್ಗೆ ಸಾಧ್ಯಾಸಾಧ್ಯತೆಯನ್ನು ವ್ಯಕ್ತಪಡಿಸಿ. ಈ ಕಾಲೇಜಿನ ಬೆಳವಣಿಗೆಗೆ ಕಾರಣರಾದ ಡಾ ಟಿ ಮಾಧವ ಪೈಗಳ ಸಾಮರ್ಥ್ಯವನ್ನು ಕೊಂಡಾಡಿದರು. ಅಂತ್ಯದಲ್ಲಿ ಡಾ ಟಿ. ಮಾಧವ ಪೈಗಳು ಧನ್ಯವಾದಗಳನ್ನರ್ಪಿಸಿದರು

ನಿಂಜೂರು—ಶ್ರೀ ವಿವೇಕಾನಂದ ಸೇವಾ ಸಂಘದ ವಿಶೇಷ ಸಭೆಯು ಕಳೆದ ತಾ. 27ರಲ್ಲು ಕಾರ್ಕಳ ಟ್ರೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಸಿ ರಮ್ಮಾನ್, ಅವರ ಅಧ್ಯಕ್ಷತೆಯಲ್ಲಿ ಜರಗಿ, ಸರಕಾರದ ನೂತನ ಯೋಜನೆಗಳು ಗುಣವಾಗಿ ಸಂಘದ ವತಿಯಿಂದ ಸಾಧ್ಯವಾದ ಕಾರ್ಯಗಳನ್ನು ತೆರೆಯುವ ಪ್ರಯತ್ನ ಮಾಡಬೇಕೆಂದು ನಿರ್ಣಯಿಸಲಾಯಿತು.

ಮಂಜೇಶ್ವರ—ತಾ. 8ರಂದು ಸ್ಥಳೀಯ ರಿಕ್ರಿಯೇಶನ್ ಕ್ಲಬ್ಬಿನಲ್ಲಿ ಯಕ್ಷಗಾನ ಕಲಾವಿದರ ಸಾರ್ವಜನಿಕ ಸಭೆಯು ಶ್ರೀ ಟಿ. ವಿಟ್ಟಪ್ಪ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಹಲವರ ಕಾಲೋಚಿತ ಭಾಷಣಗಳಾದ ಬಳಿಕ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆದು ಶ್ರೀಗಳಾದ ಎಲ್. ವಿ ಭಕ್ತ (ಅಧ್ಯಕ್ಷ), ಡಾ ಎ ಸುಬ್ಬರಾವ್ (ಉಪಾಧ್ಯಕ್ಷ), ಕೆ. ವಾಸುದೇವ ನಾಯಕ್ (ಕಾರ್ಯದರ್ಶಿ), ಎ ರಾಮಚಂದ್ರಪ್ಪ (ಕೋಶಾಧಿಕಾರಿ), ಟಿ ವಿಟ್ಟಪ್ಪ ಶೆಣೈ, ಎಸ್. ವಿಟ್ಟಲ್ ಪ್ರಭು, ಕೆ ಎಸ್. ಅಡಿಗ, ಬಿ. ಎಸ್. ಎಸ್ ಕಟ್ಟಿ, ಯು. ಎ ಆಚಾರಿ, ಇವರು ಸದಸ್ಯರಾಗಿ ಆರಿಸಲ್ಪಟ್ಟರು.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಗರತಿಯ ಹಾಡು—

(ತ್ರಿಪದೀ ಸಂಗ್ರಹ) ಸಂಗ್ರಾಹಕರು: ಹಲಸಂಗಿಯ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೊದಲಾದ ಗೆಳೆಯರು. ಸಾಗಾಟಗಾರರು: ಸಾಹಿತ್ಯಭಂಡಾರ ಪುಟ್ಟಬೈ. ಪ್ರಕಾಶಕರು: ಶ್ರೀ ವಿನೀತ ರಾಮಚಂದ್ರ ರಾಯರು. ಪುಟ 143 ಬೆಲೆ: 1–50. (ಮೂರನೆಯ ಮುದ್ರಣ)

ದಿವಂಗತ ಸರ್ವ ಶ್ರೀ ಬಿ ಎಂ. ಶ್ರೀಕಂಠಯ್ಯ, ದ. ರಾ ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಂಪಿ ಲಿಂಗಣ್ಣ ಇವರು ಕೃಪಾಪೂರ್ವಕ ಪ್ರಸ್ತಾವನೆ, ಪರಿಚಯ, ಅಶೀರ್ವಾದ, ಅರಿಕೆಗಳನ್ನು ಬರೆದಿದ್ದಾರೆ.

ಕನ್ನಡ ಸಾಹಿತ್ಯದ ಜನಪದ ವಿಭಾಗದಲ್ಲಿ, ಗೃಹಿಣಿಯರು ತಾವೇ ಕಟ್ಟಿ, ಬತ್ತಿಕುಟ್ಟುವಾಗ, ತೊಟ್ಟಿಲು ತೂಗುವಾಗ ಹಾಡುತಿದ್ದ ತ್ರಿಪದೀ ಛಂದಸ್ಸಿನದೆಂದು ಹೇಳಬಹುದಾದ ಹಾಡುಗಳು ಹೇರಳವಾಗಿವೆ. ಈ ಹಾಡುಗಳ ಸಂಗ್ರಹ ಪ್ರಕಾಶನಗಳು ಪ್ರಾಚೀನ ಸಂಸ್ಕೃತಿಯ ಅಭಿಮಾನದಿಂದಲೂ, ಸಾಹಿತ್ಯ ಪ್ರೇಮದಿಂದಲೂ, ರಸಾಸ್ವಾದನೆಯ ಮೋಹದಿಂದಲೂ ಅಲ್ಲಲ್ಲಿ ಆಗುತ್ತಿವೆ. ಹೇಳ ಹೆಸರಿಲ್ಲದ ಅಳಿದು ಹೋಗಬಹುದಾದ ಈ ಪದ ರತ್ನಗಳನ್ನು ಉಳಿಸುವುದು ಎಲ್ಲಾ ದೃಷ್ಟಿಯಿಂದಲೂ ಶ್ಲಾಘನೀಯ.

ಈ ಪುಸ್ತಕವು ಅಂತಹ ಮಾದತಕ್ಕ ಕೆಲಸಗಳಲ್ಲಿ ಒಂದಾಗಿದೆ. ಹಿರಿಯ ಸಾಹಿತಿಗಳ ಆಶೀರ್ವಾದ ಹರಿಕೆಗಳನ್ನು ಪಡೆದಿದೆ. ಪರಂಪರೆ, ಸ್ತುತಿ, ಅತ್ತೆಯ ಮನೆಯ ಕಷ್ಟ ಮೊದಲಾದ ಪ್ರಕರಣಗಳಾಗಿ ವಿಭಾಗಿಸಿ ಪದ್ಯಗಳನ್ನು ಪ್ರಕಟಿಸಿದ್ದಾರೆ. ಕೊನೆಯಲ್ಲಿ ಬಳಕೆ ಮಾತು ಮತ್ತು ಶಬ್ದ ಕೋಶಗಳನ್ನು ಪ್ರಕಟಿಸಿದ್ದಾರೆ.

ಜನಪದ ಸಾಹಿತ್ಯವನ್ನು ಸಪ್ತಯದಯರು ಓದಿ ನಲಿವ ಔಚಿತ್ಯವನ್ನಾಗಲೀ, ಅವುಗಳಲ್ಲಿನ ಸಾಹಿತ್ಯ ನೀತಿಗಳನ್ನಾಗಲೀ ಅವುಗಳನ್ನೋದುವಾಗ ಕೇಳುವಾಗ ಉಂಟಾಗುವ ಕಾವ್ಯಾನಂದವನ್ನಾಗಲೀ ತಿರುಗಿ ಹೇಳಬೇಕೆಂದಿಲ್ಲ. ಈ ಪುಸ್ತಕದಲ್ಲಿ ಉತ್ತಮವಾದ ಜನಪದಗಳು ಸಂಗ್ರಹವಾಗಿವೆಯೆಂದೂ ಪುನರುಕ್ತಿಯಾದ ಬೇಕಾಗಿಲ್ಲ. ನಮ್ಮ ಹೆಣ್ಣು ಮಕ್ಕಳು ಈ ಹಾಡುಗಳನ್ನು ಅಭ್ಯಾಸ ಮಾಡಲಿ, ಇನಿದಾಗಿ, ಹಾಡಲಿ, ಪ್ರತಿ ಕನ್ನಡಿಯ ಗರತಿಯ ಹಾಡುಗಳನ್ನು ತನ್ನ ಕೈಯಲ್ಲಿಟ್ಟುಕೊಳ್ಳಲಿ ಎಂದೇ ಆಶಿಸುತ್ತೇವೆ.

ನವೋದಯ—

ವಿದ್ಯಾದಾಯಿನಿ ಹೈಸ್ಕೂಲ್ ಸುರತ್ಕಲ್ ಇಲ್ಲಿನ ವಿದ್ಯಾರ್ಥಿ ಸಂಸ್ಥೆಯ 1952ನೇ ವರ್ಷದ ಪತ್ರಿಕೆ.

ಈ ಪತ್ರಿಕೆಯಲ್ಲಿ ಹೈಸ್ಕೂಲಿನ ಚಟುವಟಿಕೆಗಳ ಚಿತ್ರಗಳೂ, ಹೈಸ್ಕೂಲಿನ ಹಿತಚಿಂತಕರಾಗಿದ್ದ ದಿವಂಗತ ಡಾ. ಇಡ್ಯ ವೆಂಕಟಯ್ಯರ ಸಂಕ್ಷಿಪ್ತ ಪರಿಚಯವೂ ಕನ್ನಡ, ಇಂಗ್ಲೀಷ್, ಹಿಂದಿಗಳಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಲೇಖನಗಳೂ ಇವೆ. ಯಕ್ಷಗಾನ ವೆಂದರೇನು, ಸೂರ್ಯೋದಯ, ಹರಿದಾಸರ ಸಾಹಿತ್ಯ, ಉನ್ನಾದಿನ ಮೊದಲಾದ ಉತ್ತಮ ಲೇಖನಗಳು, ಕವಿತೆ, ಕತೆಗಳಿಂದ ಕೂಡಿರುತ್ತದೆ. ಮುಖ್ಯೋಪಾಧ್ಯಾಯ ಶ್ರೀ ಯಂ. ಮಾಸುದೇವ ರಾಯರ ಮತ್ತು ಶಾಲಾ ವಿದ್ಯಾರ್ಥಿ ಸಂಸ್ಥೆಯವರ ಈ ಕಾರ್ಯ ಮೆಚ್ಚುವಂತಹದು.

—ಶಾಂತಿ.

ಪಂಚವಾರ್ಷಿಕ ಯೋಜನೆ

(೫ನೇ ಪುಟದಿಂದ)

ಇದೇ ರೀತಿಯಲ್ಲಿ ಸಮಾಜಸೇವಾ ಕಾರ್ಯವೂ ಪ್ರಗತಿಕೊಂಡಿದೆ. ಆರೋಗ್ಯವಿಭಾಗದಲ್ಲಿ ಹೊಸದಾಗಿ ಆಸ್ಪತ್ರೆಗಳು ಚಿಕಿತ್ಸಾಲಯಗಳು, ಆರೋಗ್ಯ ಕೇಂದ್ರಗಳು, ಹೆರಿಗೆ ಹಾಗೂ ಶಿಶು ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದರ ಜೊತೆಗೆ ಯೋಜನಾವಧಿಯಲ್ಲಿ ನೀರಿನ ಪೂರೈಕೆ ಮತ್ತು ನೈರ್ಮಲ್ಯ. ಅಂಟು ರೋಗಗಳ ನಿಯಂತ್ರಣ ತರಬೇತಿ ಸೌಲಭ್ಯಗಳ ವಿಸ್ತರಣೆ ಮುಂತಾದ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು.

ಪ್ರಥಮ ಯೋಜನಾವಧಿಯಲ್ಲಿ ಒಟ್ಟು ೧೩ ಲಕ್ಷ ವಸತಿಗಳನ್ನು ನಗರ ಕ್ಷೇತ್ರಗಳಲ್ಲಿ ನಿರ್ಮಿಸಲಾಗಿದೆ; ಆದರೆ ಗ್ರಾಮಾಂತರ ವಸತಿ ಸಮಸ್ಯೆಯನ್ನು ಸ್ವಲ್ಪವಾದರೂ ಮುಟ್ಟಲಾಗಲಿಲ್ಲ. ಹಿಂದುಳಿದ ವರ್ಗಗಳ ಹಿತರಕ್ಷಣೆ, ಸ್ಥಾನಪಲ್ಲಟರ ಪುನರ್ವಸತಿಗಳಿಗೆ ಸಾಕಷ್ಟು ಮನಸ್ಸು ಹರಿದಿದೆ.

ರಾಜ್ಯಗಳಲ್ಲಿ ಭೂಸುಧಾರಣೆಯ ಕಾರ್ಯಗಳಲ್ಲಿ ಗಮನಾರ್ಹವಾದ ಚಟುವಟಿಕೆಗಳು ನಡೆದಿವೆ. ಮೂಲಭೂತ ಸಮಸ್ಯೆಯೆನಿಸಿದ ಭೂಮಿಯ ಸ್ವಾಮ್ಯವನ್ನು ಬಹುಮಂದಿ ರೈತರು ಒಮ್ಮೆಪಡೆದರೆಂದರೆ, ಮುಂದೆ ಭೂಮಿಯ ವ್ಯವಸ್ಥೆ, ಅದರ ಉತ್ಪಾದನೆಯ ಹೆಚ್ಚಳ, ಸಹಕಾರಿ ಬೇಸಾಯ ವಿಧಾನದ ಪ್ರೋತ್ಸಾಹಗಳು ಸಾಧ್ಯವಾಗುವುವು. ಭೂಸುಧಾರಣಾ ವ್ಯವಸ್ಥೆಯಲ್ಲಿ ಸಮಾಜಸುಧಾರಣೆ ಹಾಗೂ ಆರ್ಥಿಕ ಅಭಿವೃದ್ಧಿಯೂ ಪರೋಕ್ಷವಾಗಿ ವ್ಯವಸ್ಥಿತಗೊಳ್ಳುವುದೆಂದು ಆರಿಯಬೇಕಿದೆ.

ಒಟ್ಟಿನಲ್ಲಿ, ಪ್ರಥಮ ಪಂಚವಾರ್ಷಿಕ ಯೋಜನೆಯೊಂದು ಪರಿಪೂರ್ಣ ಯೋಜನೆಯಾಗಿದ್ದು ಅದು ಸಾಕಷ್ಟು ಜಯಪ್ರದವಾಗಿದೆ. ಸರ್ವತೋಮುಖ ಸಮತೋಲಕದ ಅಭಿವೃದ್ಧಿಯು ಆರಂಭವಾಗಿದ್ದು ಯೋಜನೆಯು ಪ್ರಗತಿ ಪಥದಲ್ಲಿ ಸಾಗುತ್ತಿರುವುದು ರಾಷ್ಟ್ರದ ಹೆಗ್ಗುರುತಾಗಿದೆ. ಮುಖ್ಯವಾಗಿ ಬೇಸಾಯ ಹಾಗೂ ಕೈಗಾರಿಕಾ ಉತ್ಪಾದನೆಗಳಲ್ಲಿ ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿದೆ ಈ ಯೋಜನೆಯನ್ನು ಕಾರ್ಯಗತಮಾಡಿದ ಅನುಭವಗಳಿಂದ, ಇನ್ನು ಮುಂದೆ ಕೈಗೊಳ್ಳಲಾಗುವ ಯೋಜನೆಗಳನ್ನು ಮತ್ತೂ ಜಯಪ್ರದವಾಗಿ ಮಾಡಬಹುದಾದ ಅಸೆಯು ಬೇರೂರುತ್ತದೆ.

ಕಣ್ಣೀರು

ದೇವದಾಸ ಗಾಂಧಿ ಇವರ ಅಕಾಲ ನಿಧನ

ಭಾರತೀಯ ರಾಷ್ಟ್ರಪಿತ ಮಹಾತ್ಮಾ ಗಾಂಧೀಜೀಯವರ ಕಿರಿಯ ಪುತ್ರರೂ ದಿಲ್ಲಿಯ ಹಿಂದುಸ್ತಾನ್ ಟೈಮ್ಸ್ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರೂ ಆಗಿದ್ದ ಶ್ರೀ ದೇವದಾಸ ಗಾಂಧಿಯವರು ದಿನಾಂಕ ೩ರಂದು ಹೃದಯ ವಿಕಾರದ ಆಕಸ್ಮಿಕ ಕಾರಣದಿಂದ ಮುಂಬಯಿಯಲ್ಲಿ ಪರಂಧಾಮವನ್ನೈದಿದರು. ಮರಣ ಕಾಲದಲ್ಲಿ ದಿವಂಗತರ ಪ್ರಾಯವು ೫೬ ಆಗಿತ್ತು. ತಾ. ೨ರಂದು ಸಂಜೆ ೫ ತಾಸುಗಳ ವರೆಗೆ ಉತ್ತಮ ಆರೋಗ್ಯದಿಂದಿದ್ದ ಅವರು ಗೆಳೆಯರೊಬ್ಬರ ಮನೆಗೆ ಚಹಾಪಾನಕ್ಕೆ ತೆರಳಲು ಸಿದ್ಧರಾದಾಗ, ಹೃದಯವಿಕಾರದ ರೋಗ ಗ್ರಸ್ತರಾದರು. ಡಾಕ್ಟರರು ಚಿಕಿತ್ಸೆ ನಡೆಸಿದರೂ ಅದು ಫಲಕಾರಿಯಾಗದೆ, ೩ರಂದು ಮುಂಜಾನೆ ೩.೫ ಗಂಟೆಗೆ ಕೊನೆಯುಸಿರನ್ನು ಬಿಟ್ಟರು.

ಶ್ರೀಯುತರು ಹಿರಿಯ ರಾಜಕಾರಣಿ ಶ್ರೀ ರಾಜಗೋಪಾಲಾಚಾರಿಯವರ ಪುತ್ರಿ ಲಕ್ಷ್ಮಿಯನ್ನು ಮದುವೆಯಾಗಿದ್ದು ಮೂವರು ಗಂಡು ಮಕ್ಕಳೂ ಒಬ್ಬಾಕೆ ಹೆಣ್ಣು ಮಗಳೂ ಇರುವರು.

ಶ್ರೀ ದೇವದಾಸ ಗಾಂಧಿಯವರ ಆಕಸ್ಮಿಕ ನಿಧನದಿಂದ ಭಾರತದ ರಾಜಕೀಯ ಜೀವನ ಹಾಗೂ ಪತ್ರಿಕಾ ಪ್ರಪಂಚಕ್ಕೆ ತುಂಬ ಹಾನಿಯೊದಗಿದೆ. ತಮ್ಮ ತಂದೆಯವರಿಂದಲೇ ಸಾರ್ವಜನಿಕ ಸೇವಾದೀಕ್ಷೆಯನ್ನು ಪಡೆದ ಇವರು ನಾನಾ ವಿಧವಾಗಿ ಸೇವೆ ಸಲ್ಲಿಸಿರುವರು. ಭಾರತದ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದುದಲ್ಲದೆ, ಪತ್ರಿಕಾ ಪ್ರಪಂಚದತ್ತ ಇವರ ಮನಸ್ಸು ನೆಳೆಯುತಿತ್ತು. ತಾವು ಇನ್ನೂ ಎಳೆಯವರಿರುವಾಗಲೇ ಪಂಡಿತ ಮೋತೀಲಾಲರ "ಇಂಡಿಪೆಂಡೆಂಟ್" ಎಂಬ ಪತ್ರಿಕೆಯಲ್ಲಿ ಅನುಭವ ಪಡೆದಿದ್ದರು. ಮುಂದಕ್ಕೆ ಹಿಂದುಸ್ತಾನ ಟಾಯಿಮ್ಸ್ ಪತ್ರಿಕೆ ಮತ್ತದರ ಸಂಗಾತಿ ಪತ್ರಿಕೆಗಳ ಸಂಚಾಲಕರೂ ಆದರು. ಅಖಿಲ ಭಾರತ ಪತ್ರಿಕಾ ಸಂಪಾದಕರ ಸಂಸ್ಥೆಯನದೊಂದಿಗೆ ತಿಕಟವರ್ತಿಯಾಗಿದ್ದರು. ಅಂತೆಯೇ ಭಾರತ ಮತ್ತು ವಿದೇಶ ಪತ್ರಿಕಾ ಸಂಸ್ಥೆ ಹಾಗೂ "ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ" ದೊಂದಿಗೆ ಅವರ ನಿಕಟ ಸಹಭಾಗಿತ್ವವಿತ್ತಲ್ಲದೆ ವಿವಿಧಾವಧಿಗಳಲ್ಲಿ ಈ ಸಂಸ್ಥೆಗಳ ಪ್ರಮುಖ ಅಧಿಕಾರಸ್ಥಾನಗಳಲ್ಲೂ ಇದ್ದರು.

ಪತ್ರಿಕಾ ಸ್ವಾತಂತ್ರ್ಯದ ಹೋರಾಟದಲ್ಲಿ ಯಶಸ್ವಿ ಪಾತ್ರವಹಿಸಿದ ತತ್ವನಿಷ್ಠರಾದ ಶ್ರೀ ದೇವದಾಸರ ಆತ್ಮಕ್ಕೆ ನೆಮ್ಮದಿಯನ್ನು ಕೋರುವುದಲ್ಲದೆ ಅವರ ಕುಟುಂಬ ಮತ್ತು ಸಂಬಂಧಿಕರ ದುಃಖದಲ್ಲಿ "ನವಯುಗ" ಸಹ ಪಾಲಿಯಾಗುವುದು.

ಮಂಗಳೂರು ಪತ್ರಿಕೋದ್ಯಮಿಗಳ ಸಂಘದ ಸಭೆಯು—

ತಾ ೩ರಲ್ಲಿ ಜರಗಿದ ದ. ಕ. ಜಿಲ್ಲೆಯ ಕಾಲೇಜುಗಳನ್ನು ಮೈಸೂರು ಯೂನಿವರ್ಸಿಟಿಗೆ ಸಂಯೋಜಿಸಲ್ಪಡಬೇಕೆನ್ನುವ ಘೋರಣೆಯನ್ನು ವಿರೋಧಿಸಿತಲ್ಲದೆ, ಮೈಸೂರು ಸರಕಾರ ಕೂಡ ಆ ಕುಂತುದುಡುಕಬಾರದೆಂದು ಒತ್ತಾಯಪಡಿಸಿತು. ಶ್ರೀಗಳಾದ ಕೆ. ಕೃಷ್ಣರಾವ್ ಮತ್ತು ದೇವದಾಸ ಗಾಂಧಿಯವರ ನಿಧನದ ಬಗ್ಗೆ ಸಂತಾಪ ಸೂಚಿಸಿ ಅವರ ಆತ್ಮಕ್ಕೆ ಶಾಂತಿ ಕೋರುವ ಇನ್ನೊಂದು ನಿರ್ಣಯವಾಯಿತು.

ದ. ಕ. ಜಿಲ್ಲಾ ಅಭಿವೃದ್ಧಿ ಮತ್ತು ಹಿತಚಿಂತನಾ ಬೋರ್ಡು- ಮೈಸೂರು

ಮುಖ್ಯ ಮಂತ್ರಿಗಳಿಗೆಂದು ತಂತಿಯನ್ನು ಕಳುಹಿಸಿ, ದಕ್ಷಿಣ ಕನ್ನಡ ಜಿಲ್ಲೆಯ ಕಾಲೇಜುಗಳನ್ನು ಮೈಸೂರು ವಿಶ್ವ ವಿದ್ಯಾಲಯಕ್ಕೆ ಸಂಯೋಜಿಸುವ ನಿರ್ಣಯವನ್ನು ಸಾರ್ವಜನಿಕರ ಮತ್ತು ಶಿಕ್ಷಣ ಸಂಸ್ಥೆಗಳ ಅಭಿಪ್ರಾಯ ಪಡೆದು ಆ ವಿಚಾರವನ್ನು ಕೂಲಂಕಷ ಪರಿಶೀಲಿಸುವವರೆಗೆ ತಡೆಹಿಡಿಯಬೇಕೆಂದು ವಿನಂತಿಸಿದೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 206/1957.

The Mutual Benefit Corporation Ltd., Karkala by its Directors R. Vitoba Shenoy and others —ವಾದಿ

ಮತ್ತು

1. M. ವಿಠಲ ಹೆಗ್ಡೆ, M. ನಾರಾಪ್ಪ ಹೆಗ್ಡೆರ ಮಗ. 2 K ಗಣಪತಿ ಶೆಟ್ಟಿ K. ರಾಮಚಂದ್ರ ಶೆಟ್ಟರ ಮಗ. 3. ರಾಮಕೃಷ್ಣ ಹೆಗ್ಡೆ, ನಾರಾಪ್ಪ ಹೆಗ್ಡೆರ ಮಗ —ಪ್ರತಿವಾದಿರು.

ಇವರೊಳಗೆ

ಸದರಿ ದಾವೆಯ 1–2ನೇ ಪ್ರತಿವಾದಿರಿಗೆ

ವಾದಿಗೆ ನಿಮ್ಮಿಂದ ಕೂಡಾ ತಾರೀಕು 26—5—1954ನೇ ಹುಂಡಿ ಬಾಬ್ತು ಬರೆತಕ್ಕ ಅಸಲು ಬಡ್ಡಿ ಹಣಕ್ಕೆ ನಿಮ್ಮ ಮೇಲೆ ವಾದಿರು ದಾಕಲುಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ಮೇಲ್ಕಂಡ ಕೋರ್ಟುಮುಂದೆ ತಾರೀಕು 30–8–1957ನೇ ಬೆಳಗ್ಗೆ 10 ಗಂಟೆಗೆ ಇಟ್ಟಿರುವದರಿಂದ ಸದರಿ ದಾವೆಯ ವಿಚಾರದಲ್ಲಿ ನಿಮ್ಮ ಉದಾಹರಣೆಯು ಇರುವಲ್ಲಿ ನೀವು ಸದರಿ ತಾರೀಕಿನಲ್ಲು ಸ್ವತಃಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರುಮಾಡಿಕೊಳ್ಳಬಹುದಾಗಿಯೂ, ತಪ್ಪಿದಲ್ಲಿ ಸದರಿ ದಾವೆಯು ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಈಮೂಲಕ ನಿಮಗೆ ತಿಳಿಸೋಣಾಗುತ್ತದೆ.

A. N. S. Achar,
Advocate for Plaintiff.
Karkala, Date 4—8—57.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 161/1957.

M. ಧರ್ಮಪಾಲ ಸೆಟ್ಟಿ —ವಾದಿ

ಬೆಟ್ಟೇರಿ ಶಾಂತಿ ರಾಜ ಸೆಟ್ಟಿ ಮಗ ಕಾರ್ಕಳ ತಾಲ್ಲೂಕ ಮೇಣೂರು ಗ್ರಾಮದಲ್ಲಿರುವವ

ಮತ್ತು

1. ಶ್ರೀಮತಿ ಅಮ್ಮಣಿ ಜಯಾವತಿಸೆಟ್ಟಿಯ ಮಗಳು 2. N. ರಮಿತೀರ್ಥ ಸೆಟ್ಟಿ 1ನೆಯವಳ ಮಗ ಕಾರ್ಕಳ ತಾಲ್ಲೂಕ ನೆಲ್ಲಿಕಾರುಗ್ರಾಮದ ನೆಲ್ಲಿಕಾರ ಪೇಟೆ ಹಳೆಮನೆ—ಪ್ರತಿವಾದಿರು.

ಯಿವರೊಳಗೆ

2ನೇ ಪ್ರತಿವಾದಿ N. ರಮಿತೀರ್ಥ ಸೆಟ್ಟಿ ಶ್ರೀಮತಿ ಅಮ್ಮನ ಮಗ ಕಾರ್ಕಳ ತಾಲ್ಲೂ ನೆಲ್ಲಿಕಾರು ಗ್ರಾಮದ ನೆಲ್ಲಿಕಾರು ಪೇಟೆ ಹಳೆಮನೆ ಯಂಬಲ್ಲಿರುವವರಿಗೆ

ವಾದಿಯು, ಆತಗೆ ದಿನಾಂಕ್ ಪ್ರೋಮಿಸರಿ ನೋಟು ಪ್ರಕಾರ ನಿಮ್ಮಿಂದ ಕೂಡಾ ಬರತಕ್ಕ ಅಸಲು ಬಡ್ಡಿ ಹಣಕ್ಕೆ ನಿಮ್ಮ ಮೇಲೆ ಕೂಡಾ ವಾದಿ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 24–8–57ನೇ ಬೆಳಗ್ಗೆ 10 ಗಂಟೆಗೆ ಇಟ್ಟಿರುವದ್ರಿಂದ ಸದರಿ ದಾವೆಯ ವಿಶಯದಲ್ಲಿ ನಿಮ್ಮ ಉದಾಹರಣೆಯು ಇರುವಲ್ಲಿ ನೀವು ಸದ್ರಿ ತಾರೀಕಿನಲ್ಲು ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರುಮಾಡಿಕೊಳ್ಳಬಹುದಾಗಿಯೂ, ತಪ್ಪಿದಲ್ಲಿ ಸದರಿ ದಾವೆಯು ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಈಮೂಲಕ ನಿಮಗೆ ತಿಳಿಸಬಹುದಾಗಿ ಸೋಣಾಗುತ್ತದೆ.

A. N. S. Achar
Advocate for Plaintiff.
Karkala Date 4—8—57.

ಇದೀಗ ಪ್ರಕಟವಾಗಿದೆ—

ಪ್ರಖ್ಯಾತ ಕಾದಂಬರಿಕಾರರಾದ ಶ್ರೀ ವ್ಯಾಸರಾಯ ಬಲ್ಲಾಳರ ಕೃತಿ ಉತ್ಕೃಷ್ಟ ಕಥಾಸಂಕಲನ

ಕಾಡು ಮಲ್ಲಿಗೆ

ಬಿಳಿ ಕಾಗದ

ಸುಮಾರು 160 ಪುಟಗಳು. ಬೆಲೆ: 1·25

ಪ್ರಕಾಶಕರು:

ಸ್ಟೂಡೆಂಟ್ಸ್ ಬುಕ್ ಡಿಪೋ

6-E, ಸೀತಾ ಸ್ಟ್ರೀಟ್, ಕೋಟೆ

ಮುಂಬಯಿ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು

ಮಂಗಳೂರು

ಇಂಡಿಯನ್ ಮೆಡಿಕಲ್ ಕೌನ್ಸಿಲ್ ಅಧ್ಯಕ್ಷರಾದ ಡಾ. ಸಿ ಎಸ್. ಪಟೇಲರು ತಾ. ೩ರಂದು ಬೆಳಗ್ಗೆ ಮಂಗಳೂರಿಗೆ ವಿಮಾನ ಮೂಲಕ ಆಗಮಿಸಿದರು. ಅವರೊಡನೆ ಮುಂಬಯಿಯ ಗ್ರಾಂಟ್ ಮೆಡಿಕಲ್ ಕಾಲೇಜಿನ ಕಟ್ಟಕಡೆಯ ಪ್ರಾಧ್ಯಾಪಕರಾದ ಡಾ. ಖ್ವಾಜಾರವರು ಆಗಮಿಸಿದ್ದರು. ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ರಿಜಿಸ್ಟ್ರಾರ್ ಡಾ. ಟಿ. ಎಸ್. ಎ. ಪೈ, ಮಂಗಳೂರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಜಿ ಡಿ ನೇಲಿಯತ್, ಮೈಸೂರಿನ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಡಾ. ವೆಂಕಟಸುಬ್ಬರಾವ್, ನವದೆಹಲಿಯ ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಕಾರ್ಯದರ್ಶಿ ಡಾ. ಬಿ. ಎಸ್. ರಾಯಣ್ ಝೂಡಾ, ಜಿಲ್ಲಾ ವೈದ್ಯಾಧಿಕಾರಿ ಡಾ ಎ ತಿಮ್ಮಪ್ಪಯ್ಯ, ಮಂಗಳೂರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಡಾ. ಎನ್ ಎಲ್. ಕಲ್ಲೆ, ಶ್ರೀ ಟಿ. ರಮೇಶ ಪೈ, ಶ್ರೀ ದೇವದಾಸ ಚಂದ್ರ ಮೊದಲಾದವರು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಹೋಸ್ಟ್ಲ್ ಗ್ರೇಜುವೇಟ್ ತರಗತಿ ಆರಂಭ—ಹೋಸ್ಟ್ಲ್ ಗ್ರೇಜುವೇಟ್ ವೈದ್ಯಕೀಯ ಶಿಕ್ಷಣ ಎಂಬ ವಿಷಯದ ಮೇಲೆ ವಿಚಾರಗೋಷ್ಠಿಯೊಂದು ತಾ ೪ರಂದು ಕಂಚಿ ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಅಧ್ಯಕ್ಷರಾದ ಡಾ ಸಿ ಎಸ್. ಪಟೇಲರ ಅಧ್ಯಕ್ಷತೆಯಲ್ಲಿ ಜರಗಿತು.

ವಿಚಾರ ಗೋಷ್ಠಿಯ ಕಸ್ತೇಸರರಾದ ಡಾ. ಟಿ ಎಸ್ ಎ ಪೈಗಳು ಪ್ರಾರಂಭ ಭಾಷಣ ಮಾಡುತ್ತಾ, ಈಗ ದೇಶದಲ್ಲಿ ಡಾಕ್ಟರುಗಳ ಅಭಾವವಿದೆಯೆಂಬುದನ್ನು ವಿವರಿಸಿ ದೇಶದ ಅವಶ್ಯಕತೆಯನ್ನು ಪೂರೈಸುವುದಕ್ಕೆ ಬೇಕಾದ ಹೆಚ್ಚಿನ ಡಾಕ್ಟರುಗಳನ್ನು ತರಬೇತಿಗೊಳಿಸಲು ಸರಿಯಾದ ಪ್ರಾಧ್ಯಾಪಕರು ಮುಂದೆ ಬರುವುದಿಲ್ಲವೆಂದು ಹೇಳಿದರು. ಅಂತಹ ಪ್ರಾಧ್ಯಾಪಕರನ್ನು ತರಬೇತಿಗೊಳಿಸಲು ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಕೊನೆಯ ವರ್ಷದ ಪರೀಕ್ಷೆಯನ್ನು ಈ ಸಲ ಮುಗಿಸಿ ಹೊರಗೆ ಬರುವ ವಿದ್ಯಾರ್ಥಿಗಳಿಗೆನುಕೂಲವಾಗುವಂತೆ "ಎನಾಟಮಿ" ವಿಭಾಗದಲ್ಲಿ ಹೋಸ್ಟ್ಲ್ ಗ್ರೇಜುವೇಟ್ ತರಬೇತಿಯನ್ನು ಕೊಡುವ ನಿರ್ಧಾರ ಮಾಡಲಾಗುವುದೆಂದರು. ಡಾ ಆರ್ ಪಿ. ಕೊಪ್ಪಿಕರ್, ಡಾ ಜಿ ಡಿ. ವೆಲಯತ್, ಡಾ ಎಸ್. ಪಿ ಜಾರಿ, ಡಾ. ಡಿ. ಎಸ್ ಪಿ. ದೇವಧರ, ಡಾ. ಎಸ್ ವಿ. ರಮಣಮೂರ್ತಿ, ಡಾ ವಿ. ಈಶ್ವರಯ್ಯ ಮತ್ತು ಡಾ (ಶ್ರೀಮತಿ) ಪಿ ಮರುಮೊತ್ತವು, ಅವರು ಮಾತನಾಡುತ್ತಾ, ಹೋಸ್ಟ್ಲ್ ಗ್ರೇಜುವೇಟ್ ತರಬೇತಿಯ ಅವಶ್ಯಕತೆಯನ್ನು ಒತ್ತಿಹೇಳಿದರು.

ಅಧ್ಯಕ್ಷ ಡಾ ಪಟೇಲರು ಮಾತನಾಡುತ್ತಾ, ಹೋಸ್ಟ್ಲ್ ಗ್ರೇಜುವೇಟರ ಅವಶ್ಯಕತೆ, ಅವರ ಹೊಣೆಗಾರಿಕೆ ಮುಂತಾದ ವಿಷಯಗಳನ್ನು ವಿವರಿಸಿ, ಡಾ ಟಿ. ಎಸ್ ಎ ಪೈಗಳು ಮಾಡುತ್ತಿರುವ ಕಾರ್ಯವನ್ನು ಪ್ರಶಂಸಿಸಿ, ಕಸ್ತೂರ್ಬಾ ಕಾಲೇಜಿನಲ್ಲಿ ತೇರ್ಗಡೆ ಹೊಂದಿದ ಡಾಕ್ಟರರುಗಳ ಪದವಿಗಳಿಗೆ ಮನ್ನಣೆ ಕೊಡುವುದಕ್ಕೆ ಕಷ್ಟವಿಲ್ಲವೆಂದರು. ಡಾ. ಡಿ. ಎಸ್. ಪಿ. ದೇವಧರರು ಧನ್ಯವಾದವಿತ್ತರು.

ಬೀಳ್ಕೊಡುಗೆ—ವಿಜಯ ಬೇಂಕಿನ ಹೊಸ ಶಾಖೆಯೊಂದನ್ನು ಬೆಂಗಳೂರು ನಗರದಲ್ಲಿ ಸದ್ಯದಲ್ಲೇ ತೆರೆಯಲಿರುವುದರಿಂದ ಆ ಶಾಖೆಗೆ ಮೇನೇಜರರಾಗಿ ನೇಮಕಹೊಂದಿ ಬೆಂಗಳೂರಿಗೆ ತೆರಳುವ ಕಾರ್ಕಳ ಶಾಖೆಯ ಮೇನೇಜರಾಗಿದ್ದ ಶ್ರೀ ಕೆ. ಗೋಪಾಲ ಶೆಟ್ಟಿಯನ್ನು ಬೀಳ್ಕೊಡಲು ಅವರ ಸಹೋದ್ಯೋಗಿಗಳು ಕಳದ ತಾ ೨೭ರಲ್ಲಿ ಮಂಗಳೂರಿನ ಪ್ರಧಾನ ಕಚೇರಿಯಲ್ಲಿ ಸಭೆಯನ್ನು ಕೂಟವನ್ನೇರ್ಪಡಿಸಿದರು ಶ್ರೀ ಶೆಟ್ಟರು ಹೊಸ ಶಾಖೆಯನ್ನು ಆರಂಭಿಸಿ ಪೂರ್ಣ ಸಿದ್ಧತೆಗಾಗಿ ಬೆಂಗಳೂರಿಗೆ ಹೋಗಿರುವರು.

ಭೂದಾನ ಸಮಿತಿ ಸಭೆ—ಮಂಗಳೂರಿನ ಭೂದಾನ ಉಪಸಮಿತಿಯ ಸಭೆಯು ಕಳದ ತಾ ೨೨ರಂದು ಡಾ ಯು ಪಿ ಹೆಗ್ಡೆರ ಅಧ್ಯಕ್ಷತೆಯಲ್ಲಿ ನೇರಿತು ಆಚಾರ್ಯ ವಿನೋಬಾಜಿಯವರು ಇದೇ ತಾ ೨೮ಕ್ಕೆ ಮಂಗಳೂರಿಗೆ ಬರುವುದರಿಂದ ಅವರನ್ನು ಸ್ವಾಗತಿಸಿ ಸತ್ಕರಿಸುವುದಕ್ಕಾಗಿ ಒಂದು ಜಿಲ್ಲಾ ಸ್ವಾಗತ ಸಮಿತಿಯನ್ನು ಸ್ಥಾಪಿಸಬೇಕೆಂದು ನಿರ್ಣಯಿಸಲಾಯಿತು. ಶ್ರೀ ಆಚಾರ್ಯ ವಿನೋಬಾಜಿಯವರು ಈ ಜಿಲ್ಲೆಯಲ್ಲಿ ತಂಗುವ ಬೇರೆ ಬೇರೆ ಸ್ಥಳಗಳು ಮತ್ತು ಅವರ ಕಾರ್ಯಕ್ರಮಗಳ ಸಭೆಯೊಂದನ್ನು ಸಮಿತಿಯ ಕಾರ್ಯದರ್ಶಿ ಮತ್ತು ಇತರರು ಕುಮಾರಸಿದ್ದನ್ನು ವಿನೋಬಾಜಿಯವರಿಗೆ ಮುಂದೂರಾತಿ ಒಗ್ಗೆ ಕಳುಹಿಸಿ ಕೊಡುವುದಾಗಿ ನಿಶ್ಚಯಿಸಲಾಯಿತು ಸಾರ್ವಜನಿಕರಿಂದಾಗಿ ಶ್ರೀ ವಿನೋಬಾಜಿಯವರ ಶಾಂತಿಸಂದೇಶ ಜಿಲ್ಲೆಯಲ್ಲಿ ಯಾವುದೇ ದಾನದ ರೂಪದಲ್ಲಿ ಸಹಾಯ ಸಹಕಾರವನ್ನೇಯಲಪೇಕ್ಷಿಸಿದ್ದಲ್ಲಿ ಅಂಥವರು ಅರ್ಜಿಗಳನ್ನು ಈ ಸಮಿತಿಯ ಮೂಲಕವೇ ಮಾಡಿಸಬೇಕಾಗಿ ಸಮಿತಿಯು ವಿನಂತಿಸುತ್ತದೆ

ದ ಕ. ಜಿಲ್ಲಾ ಅಧ್ಯಾಪಕರ ಸಂಘದ—ಕಾರ್ಯಕಾರೀ ಸಮಿತಿ ಸಭೆಯು ಕಳದ ತಾ ೨೪ರಂದು ಶ್ರೀ ಎಸ್. ಮುಕುಂದರಾಯರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಕಾರ್ಯದರ್ಶಿ ಶ್ರೀ ಸಿ ಎಸ್ ನಂಕಟ್ಟೆ ಕೃಷ್ಣರಾಯರು ವರದಿಯನ್ನೋದಿದರು. ಮೊಸ ಸಂಬಳ ಮಟ್ಟದ ವಿಚಾರದಲ್ಲಿ ಆರ್ಬಿಟ್ರೇಶನ್, ಗ್ರಾಂಟ್ ಇನ್ ಎಯಿಡ್ಸ್ ಸರ್ಕಮಿಟಿಯ ವರದಿ ಕೈಕಟ್ಟವಾಗುವ ತನಕ ಕಾಯಬೇಕೆಂದು ತೀರ್ಮಾನವಾಯಿತು ಜಿಲ್ಲಾ ಸಂಘಕ್ಕೆ ಇನ್ನೂ ಸಂಯೋಜಿಸಲ್ಪಡದ ಸಂಘಗಳನ್ನು ಸಂಯೋಜಿಸುವಂತೆ ಮಾಡಿ ಅದನ್ನು ಬಲಪಡಿಸಲು ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ಜಿಲ್ಲಾ ಪ್ರವಾಸ ಕೈಕೊಳ್ಳಬೇಕೆಂದಾಯಿತಲ್ಲದೆ ಕಾರ್ಯಕಾರೀ ಸಮಿತಿಯ ಸಭೆಯನ್ನು ವರ್ಷಕ್ಕೊಮ್ಮೆಯಾದರೂ ಮಂಗಳೂರಿನಂದೆ ಹೊರಗೆ ಜರಗಿಸಬೇಕೆಂದೂ ನಿರ್ಣಯವಾಯಿತು 1957ರ ಶೈಕ್ಷಣಿಕ ಸಮ್ಮೇಳನವನ್ನು ಕಾರ್ಕಳದಲ್ಲಿ ಕರೆಯಲು ತೀರ್ಮಾನವಾಯಿತು ಅಧಿಕೃತ ಉಪಾಧ್ಯಾಯರನ್ನು ಬಾಕಿಗಿಯಾಗಿ ಪರೀಕ್ಷೆಗೆ ಕೂತುಕೊಳ್ಳುವುದಕ್ಕೆ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಬಿಡುವವರೆಗೆ ಮದ್ರಾಸು ವಿಶ್ವವಿದ್ಯಾಲಯವು ದ. ಕ. ಜಿಲ್ಲೆಯ ಉಪಾಧ್ಯಾಯರುಗಳಿಗೆ ಇಷ್ಟರ ತನಕ ಇದ್ದಂತೆ ಈ ಸವಲತ್ತನ್ನು ಮುಂದುವರಿಸುವಂತೆ ಉಪಕುಲಪತಿಗಳನ್ನು ಕೇಳಿಕೊಳ್ಳಬೇಕೆಂದೂ, ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳನ್ನು ಉಪಾಧ್ಯಾಯರುಗಳಿಗೆ ಈ ಸವಲತ್ತನ್ನು ಒದಗಿಸುವಂತೆ ಕೇಳಿಕೊಳ್ಳಬೇಕೆಂದೂ ಗೊತ್ತು ಪಡಿಸಲಾಯಿತು.

ಜಿಲ್ಲಾ ಬೋರ್ಡಿನ ಅವನರದ ಸಭೆಯು—ತಾ 31ರಂದು ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಜರಗಿತು ಜಿಲ್ಲಾ ಬೋರ್ಡಿನ ಪ್ರಾಥಮಿಕ ವಿದ್ಯಾಭ್ಯಾಸ ಫಂಡಿನ ಬಜೆಟನ್ನು ಹಿಂದಿರುಗಿಸಿ ಮೈಸೂರು ಸರಕಾರದ ವಿದ್ಯಾಖಾತೆ ಡೈರೆಕ್ಟರು ಬರೆದ ಪತ್ರ ಪರಿಶೀಲಿಸಲಾಯಿತು ಮದ್ರಾಸು ಸರಕಾರದವರು ಹೊಸಲು ಸರಕಾರಿ ನೌಕರರಿಗೆ ಕೊಡುವ ತುಟ್ಟಿಭತ್ತೆಯನ್ನೇ ಜಿಲ್ಲಾ ಬೋರ್ಡು ನೌಕರರಿಗೂ ಕೊಡುವುದಕ್ಕೆ ಅನುಮತಿಸಿತ್ತಿರುವುದರಿಂದ ಮೈಸೂರು ಸರಕಾರವೂ ಕೂಡ ಈ ರೀತಿಯ ತುಟ್ಟಿಭತ್ತೆಯನ್ನೊಳಗೊಂಡ ಜಿಲ್ಲಾ ಬೋರ್ಡಿನ ಬಜೆಟನ್ನು ಮಂಜೂರುಮಾಡಬೇಕು ಜಿಲ್ಲಾ ಬೋರ್ಡು ಅಧ್ಯಾಪಕರಿಗೆ ಹೊಸ ವೇತನ ಸಟ್ಟಿದನ್ನಯದ ಸಂಬಳದ ಬಗ್ಗೆ ಬೇಕಾದ ಹಣವನ್ನು ಬಜೆಟಿನಲ್ಲಿ ಸೇರಿಸಲು ಅನುಮತಿ ಕೊಡಬೇಕೆಂದೂ, ಅದರ ಹೆಚ್ಚಾದ ಸಂಬಳವನ್ನು ಸರಕಾರದ ಅನುಮತಿ ಪಡೆದ ನಂತರವೇ ಕೊಡಬೇಕುವುದೆಂದೂ ನಿರ್ಧಾರವಾಯಿತು

ಸಾಮಾನ್ಯ ಸಭೆಯು ಕೂಡಾ ಅಂದೇ ಬೋರ್ಡಿನ ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಜರಗಿತು. ಈಗ ಜಿಲ್ಲಾ ಬೋರ್ಡಿನಲ್ಲಿರುವ ಬಿಲ್ ಕಲೆಕ್ಟರರ ಸಂಖ್ಯೆಯನ್ನು 10ರಿಂದ 5ಕ್ಕೆ ಇಳಿಸಬೇಕೆಂದು ನಿರ್ಧಾರವಾದುದರಿಂದ ಕೆಲಸ ಕಳಕೊಂಡ ಬಿಲ್ ಕಲೆಕ್ಟರರಿಗೆ ಬೇರೆ ಉದ್ಯೋಗವನ್ನು ಒದಗಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳಲಾಯಿತು ಕೆಲವೊಂದು ರೂರಲ್ ಮೆಡಿಕಲ್ ಆಫೀಸರರಿಗೆ ಸೇರಿಕಡಾ 50 ರಷ್ಟು ಹೆಚ್ಚಿಗೆ ಸಹಾಯಧನ ಕೊಡುವುದೆಂದು ನಿರ್ಧರಿಸಲಾಯಿತು.

ಜಿಲ್ಲಾ ಬೋರ್ಡಿನ ನೌಕರರಿಗೆ ಮಧ್ಯಕಾಲೀನ ಪರಿಹಾರವಾಗಿ ಅವರ ಈಗಿರುವ ಸಂಬಳದ ಮೇಲೆ ಎಷ್ಟಿನ ತುಟ್ಟಿ ಭತ್ತೆಯನ್ನು ತಾ 1-7-57ರಿಂದ ಕೊಡುವುದಕ್ಕೆ ಬೋರ್ಡಿಗೆ ಅನುಮತಿ ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು ಜಿಲ್ಲಾ ಬೋರ್ಡು ನಡೆಸುತ್ತಿರುವ ಲೋಕಲ್ ಫಂಡ್ ಆಸ್ಪತ್ರೆಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳುವುದಕ್ಕೆ ಬೋರ್ಡಿನ ಅಭ್ಯೇಪಯಾವುದೂ ಇಲ್ಲ. ಆದರೂ ಅದಕ್ಕೆ ಅನಂತರ ಸಹಾಯ ಕೊಡುವುದಕ್ಕೆ ಮಾತ್ರ ಬೋರ್ಡಿಗೆ ಸಾಧ್ಯವಿಲ್ಲವೆಂದು ಮೂಲ್ಕಿ ಲೋಕಲ್ ಫಂಡ್ ಆಸ್ಪತ್ರೆಯನ್ನು ಸರಕಾರ ವಹಿಸಿಕೊಳ್ಳುವ ಸಾಧ್ಯತೆ ಕುರಿತು ನಿರ್ಣಯಿಸಲಾಯಿತು ದ ಕ. ಜಿಲ್ಲಾ ಬೋರ್ಡು ನೌಕರರ (ಸುಪೀರಿಯರ್) ಸಂಘದ ಸಭೆಯಲ್ಲಿ ಮಂಜೂರಾದ ಅವರ ಕೇಳಿಕೆಗಳನ್ನು ಸೂಕ್ತ ಸರಕಾರದ ಸಹಾಯಭೂತಿಯ ಪರಿಶೀಲನೆಗಾಗಿ ಕಳುಹಬೇಕೆಂದಾಯಿತು. ಕುಂದಾಪುರ ಹೈಸ್ಕೂಲಿಗೆ ಒಂದು ಕಲಾಭವನವನ್ನು ಕಟ್ಟಿಸುವರೆ ಬೋರ್ಡಿನ ಸಹಾಯವಾಗಿ ಸರಕಾರದ ಒಪ್ಪಿಗೆಗೊಳಪಟ್ಟು ಒಟ್ಟು ವೆಚ್ಚದ ಸೇಕಡಾ 20 ಕೊಡುವುದೆಂದಾಯಿತು. ಬಸ್ರೂರ್ ರಥ್ಯೂ, ಸಂಜಾಲ ಕಟ್ಟೆಯಲ್ಲಿಯೂ ಹೈಸ್ಕೂಲುಗಳನ್ನು ತೆರೆಯಲು ಜಿಲ್ಲಾ ಬೋರ್ಡಿನ ಒಪ್ಪಿಗೆ ದೊರೆಯಿತು.

ಬಿ ಟಿ ಕಾಲೇಜ್ ಯೂನಿಯನ್ ಉದ್ಘಾಟನೆ—ಸ್ಥಳೀಯ ಸರಕಾರಿ ಟ್ರೈನಿಂಗ್ ಕಾಲೇಜ್ ಯೂನಿಯನ್ನಿನ ಉದ್ಘಾಟನ ಸಮಾರಂಭವು, ಮೈಸೂರು ವಿಭಾಗದ ಡಿಸ್ಟ್ರಿಕ್ಟ್ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಶ್ರೀ ಟಿ ವಾಸುದೇವಯ್ಯನವರಿಂದ ನೆರವೇರಿತು. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಬಿ. ಎಸ್ ಅಂಜನರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಯೂನಿಯನ್ ಅಧ್ಯಕ್ಷ ಶ್ರೀ ಪೈ ಮಹಾಲಿಂಗ ಭಟ್ಟರು ಸ್ವಾಗತ ಮಾತುಗಳನ್ನಾಡಿದರು ಕಾರ್ಯದರ್ಶಿಗಳಾದ ಶ್ರೀ ಎ ಡಿ ಸಿಲ್ವರು ಕುಸ್ಸಾಹಾರವನ್ನರ್ಪಿಸಿದರು. ಪ್ರೊಫೆಸರ್ ಶ್ರೀ ಬಿ. ವಿ ರಮಣನವರು ಧನ್ಯವಾದಗಳನ್ನಿತ್ತರು.

ವಿದಾಯ ಸತ್ಕಾರ—ಶಿಕ್ಷಣರಂಗದಲ್ಲಿ ಹೆಚ್ಚಿನ ತರಬೇತಿಯ ಬಗ್ಗೆ ಅಮೆರಿಕದ ಫುಲ್‌ಬ್ರೈಟ್ ಸ್ಕಾಲರ್ ಶಿಪ್ ಪಡೆದು ಅಮೆರಿಕಕ್ಕೆ ತೆರಳಲಿರುವಸ್ಥಳೀಯ ಬೇಸೆಂಟ್ ಬಾಲಿಕಾ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ರಾಧಾ ಎಲ್ ರಾವ್ ಇವರನ್ನು ಬೀಳ್ಕೊಡಲು ಕಳದ ತಾ ೨೮ನ್ನು ಸತ್ಕಾರ ಕೂಟವೊಂದು ನಗರಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ ಬಾಲಕೃಷ್ಣರಾಯರು ಸ್ವಾಗತ ಭಾಷಣಮಾಡಿದರು ಡಾ ಎನ್. ಎಸ್ ಶಾಸ್ತ್ರಿ ಮತ್ತು ಶ್ರೀ ಶ್ರೀನಿವಾಸ ಉಡುಪರು ಶ್ರೀಮತಿಯವರಿಗೆ ಶುಭ ಪ್ರವಾಸ ಹಾರೈಸಿದರು. ಶ್ರೀ ಯು. ನರಸಿಂಹ ರಾಯರು ಧನ್ಯವಾದಗಳನ್ನಿತ್ತರು.

ಪ್ರವಾಸಿ ಕೇಂದ್ರಗಳು

(ಇನೇ ಪುಟದಿಂದ)

ವಿಶಾಲ ದೇಶದಲ್ಲಿರುವ ಪ್ರವಾಸಿ ಕೇಂದ್ರಗಳು ತೀರಾ ಅತ್ಯಲ್ಪವೆಂಬುದು ತಿಳಿಯದಿರದು. ಆದುದರಿಂದ ನಮ್ಮ ಸರಕಾರವು ಕೇವಲ ವಿದೇಶೀಯರಿಗಾಗಿ ಮಾತ್ರವಲ್ಲದೆ ಸ್ವದೇಶೀಯ ಪ್ರವಾಸಿಗಳಿಗೂ ಯೋಗ್ಯ ಮಾರ್ಗದರ್ಶನವೀಯುವ ಕೇಂದ್ರಗಳನ್ನು ಇನ್ನೂ ಹೆಚ್ಚಾಗಿ ತೆರೆಯಬೇಕು. ಇದರಿಂದ ಜನರಲ್ಲಿನ ಸುಂದರ ದೃಶ್ಯಗಳ ಸವಿಯನ್ನುಂಡು ಸಂತೋಷಿಸುವ ಮನೋವೃತ್ತಿಯನ್ನು ಬೆಳೆಯಬೇಕು; ಕೇಂದ್ರಗಳಲ್ಲಿ ಯೋಗ್ಯ ಸೌಲಭ್ಯ ದೊರೆಯುವ ವ್ಯವಸ್ಥೆಯನ್ನೂ ಮಾಡಬೇಕು.

ಉಡುಪಿ ಡಿ ಮುಕೋರ್ಟಿನಲ್ಲಿ

ಕ್ರ ಸಂಖ್ಯೆ 172/1957.

ಕೆ ಬೇವರಾಜ ಭಟ್ಟ —ವಾದಿ

ಮತ್ತು

ಕೆ. ದೊಡ್ಡಣ್ಣ ಶೆಟ್ಟಿ —ಪ್ರತಿವಾದಿ

ಯವರೊಳಗೆ

ಮೇಲ್ಕಂಡ ಜ್ಯಾಜ್ಯದ ಪ್ರತಿವಾದಿಯಿಂದ ವಾದಿಗೆ ಕಿವಾಯಂದು. ನೋಟಿನ ಅಳವೇಜಿಗೆ ವಾದಿಯ್ವಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿಗೆ ಅಗತ್ಯ ವಾಜ್ಯದ ನೋಟೀಸು ತಾ 22-8-57 ಕ್ಕೆ ಇಟ್ಟಿರುವುದ್ರಿಂದ ಪ್ರತಿವಾದಿಯ ಅಕ್ಷೇಪ ಹೇಳುವದನ್ನು ಆ ದಿನ ಸದ್ರಿ ಕೋರ್ಟುಮುಂದೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕುದು.

P. Padmanabha Rao,
Vakil for Plaintiff

Dated 2—8—57

20 ವರ್ಷ ಗಳಿಂದಲೂ ಪ್ರಸಿದ್ಧ ಇದೆ | ಮಲೇರಿಯಾ | ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮ್ಮುಸರಲ್ಲಿ ಗ್ರೈಸರಲ್ಲಿ ದೊರೆಯುತ್ತದೆ.

ಬಾಟ್ಲಿವಾಲಾ ಎಗ್ಯೂಮಿಕ್‌ಶ್ಚರ್ ಮತ್ತು ಗುಳಿಗೆಗಳು

ಮಾರಾಟ ಮಾಡುವ ಏಜಂಟರು: ಹರ್ಬರ್ಟ್ ಸನ್ಸ್ ಪ್ರೈವೇಟ್ ಲಿಮಿಟೆಡ್, ಒಬ್ಬಾಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ದ ಕ ಸಬೋರ್ಡಿನೇಟ ಜಡ್ಜರ ಕೋರ್ಟಿನಲ್ಲಿ

A S No. 2/1957

ಕೊರಸೊಳು ಶೆಟ್ಟಿ ಕೂಡಾ—ಎಸ್ಟೇಟಾರರು ಮತ್ತು

ಮಾಗ್ಗ ಸ್ಟ್ರಿ ಕೊಸ್ಟ್ರಾಂಟಿಂಪಿರು ಮತ್ತು ಎಸೇ ರೆಸ್ಪೊಂಡೆಂಟರೇನೇ. —

6) ಸುಬ್ಬಯ್ಯ ಶೆಟ್ಟಿ ಅಂಗರ ಯಾನೆ ಚೆನ್ನಮ್ಮ ಶೆಟ್ಟಿಯ ಮಗ

8) ಗೋಪ ಶೆಟ್ಟಿ ಕುಪ್ಪ ಶೆಟ್ಟಿಯ ಮಗ

ಮಂಗ್ಳೂರು ತಾಲ್ಲುಕು ಮುಲ್ಲಡ್ಕ ಗ್ರಾಮದಲ್ಲಿ ವಾಸವರು.

ಎಸ್ಟೇಟಾರು ಕಾರ್ಕಳ ಡಿ. ಮುನ್ಸಿಫ್ ಕೋರ್ಟ R E P. 253/1956ನೇ ಅಮಲ್ದಾರಿಯಲ್ಲಿ ಹುಕುಂ ಮೇಲೆ ಮಾಡಿದ ಸದ್ರಾ ಅಪೀಲನ್ನು 23-8-1957ಕ್ಕೆ ನಿಮ್ಮ ಹಾಜ್ರಾತಿ ಬಗ್ಗೆ ಇಟ್ಟಿರುತ್ತದೆ. ಆ ದಿನ ನೀವು ಸ್ವತಃ ಯಾ ವಕೀಲರ ಮುಖಾಂತ್ರ ಹಾಜ್ರಾಗದಿದ್ದರೆ ನಿಮ್ಮ ವಿರುದ್ಧ ಅಪೀಲು ತೀರ್ಪುಯಾದೀತು ಎಂತ ನಿಮಗೆ ಈ ಮೂಲಕ ತಿಳಿಸೋಣಾಗಿದೆ.

K. S N. Adiga
Advocate for Appellant.
ಮಂಗ್ಳೂರು 2-8-1957.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಅಮಂತಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಧಾನ್ಯಗಳ ಧಾರಣೆ

ಒಕ್ಕಲಿಗರಲ್ಲಿ ಉತ್ಸಾಹ ಆಶಾಜನಕ ಪರಿಸ್ಥಿತಿಯು ಕಾಣಿಸಿಕೊಳ್ಳದೆ ಎಂದಿಗೂ ಧಾರಣೆ ಇಳಿಮುಖವಾಗದು.

ಸ್ವತಂತ್ರ ಭಾರತದ ಜನತಾ ಸರಕಾರಕ್ಕೆ ತಲೆ ಸಿಡಿತವನ್ನುಂಟು ಮಾಡುವ ಸಮಸ್ಯೆಗಳಲ್ಲಿ ಆಹಾರ ವಸ್ತುಗಳ ಬೆಲೆಯೇರಿಕೆಯೂ ಒಂದಾಗಿ ಬಿಟ್ಟಿದೆ. ಈ ಬೆಲೆಯೇರುವಿಕೆಯ ಆ ವಸ್ತುಗಳ ಉತ್ಪಾದಕರಲ್ಲದ ಬರಿಯ ಲಾಭಕೋರರನ್ನು ಳಿದು ಸಾಮಾನ್ಯವಾಗಿ ಇತರ ಎಲ್ಲಾ ಮಂದಿಯ ಕತ್ತು ಹಿಸುಕುವಂತಹದ್ದಾಗಿದೆ–ಸಾಮಾನ್ಯ ಜನತೆಗೆ ಸಂಪೂರ್ಣ ಅಹಿತಕಾರಿಯಾಗಿದೆಯೆನ್ನಲು ಏನೂ ಅಡ್ಡಿಯಿಲ್ಲ. ಇದನ್ನು ಹತೋಟಿಯಲ್ಲಿಡಲ್ಪ ಉಪಾಯಗಳನ್ನು ಕಂಡು ಹಿಡಿಯಲು ಒಂದು ಸಮಿತಿಯ ನೇಮಕವಾಗಿರುವುದಾದರೂ ಅಪೇಕ್ಷಿತ ರೀತಿಯ ಪರಿಣಾಮವನ್ನುಂಟು ಮಾಡುವಂತಹ ಉಪಾಯಗಳು ಕಂಡು ಹಿಡಿಯಲ್ಪಡುವುದೆಂದು ಎಷ್ಟರ ಮಟ್ಟಿಗೆ ನಿರೀಕ್ಷಿಸಬಹುದೋ ಹೇಳುವುದು ಕಷ್ಟ. ಯಾಕೆಂದರೆ, ಈ ಬೆಲೆಯೇರುವಿಕೆಗೆ ಬಹು ಮಟ್ಟಿಗೆ ನಮ್ಮ ಸಮಾಜ ವ್ಯವಸ್ಥೆಯೂ ಅವಕಾಶವಿತ್ತಿರಬಹುದೆಂದು ಹೇಳಲಿಕ್ಕಡೆಯಿದೆ.

ಆಹಾರ ವಸ್ತುಗಳ ಬೆಲೆಯೇರಿದಂತೆ ಅವನ್ನು ಬೆಳೆಸುವವರ ಸ್ಥಿತಿ ಉತ್ತಮಗೊಳ್ಳುವುದೆಂದು ಪ್ರತ್ಯಕ್ಷ ಅನುಭವವಿಲ್ಲದ ಅನೇಕರ ಭಾವನೆಯಿದೆ. ವಾಸ್ತವವಾಗಿ ಹೀಗಿರುತ್ತಿದ್ದರೆ ಅದರಿಂದ ತುಸು ಒಳಿತೂ ಇದೆಯೆನ್ನಬಹುದಿತ್ತು. ಆದರೆ, ಸತ್ಯ ಸಂಗತಿಯು ಹಾಗಿಲ್ಲ- ಬೆಳೆಸುವ ಒಕ್ಕಲುಗಳೂ ಕೂಳ್ಳುವವರೊಟ್ಟಿಗೆ ಕಷ್ಟವನ್ನೇ ಅನುಭವಿಸುತ್ತಾರೆ ಎನ್ನುವದಕ್ಕೆ, ಆಹಾರ ವಸ್ತುಗಳ ಬೆಲೆಯೇರಿದ ಕಾಲದಲ್ಲೇ ಸರಕಾರವು ಕೃಷಿಕರ ಸಾಲಕ್ಕೆ ತಡೆ ಯಾಜ್ಞೆ ಹಾಕುವ ಪರಿಸ್ಥಿತಿ ಬಂದುದೊಂದು ಉತ್ತಮ ಉದಾಹರಣೆ, ಎನ್ನುವಾಗ ನಮ್ಮಲ್ಲಿ ಶೋಷಕ ಶಕ್ತಿಗೆ ಪೋಷಕ ಶಕ್ತಿಯನ್ನು ತಿಂದು ಬೆಳೆಯಯಲು ಧಾರಾಳ ಅವಕಾಶವಿದೆಯೆಂದರೇನೂ ಕಚ್ಚಲ್ಲ. ಉತ್ಪಾದನಾ ಮೂಲಗಳಲ್ಲಿ ದುಡಿಯುವ ವರ್ಗವೊಂದು ಮತ್ತು ಅವುಗಳ ಮ್ಯಾಲಕ ವರ್ಗವಿನ್ನೊಂದು ಆಗಿರುವುದರ ಪರಿಣಾಮವಿದೆಂದು ಬೇರೆ ಹೇಳಬೇಕಾಗಿಲ್ಲ.

ಆಹಾರ ವಸ್ತುಗಳ ಬೆಲೆಯೇರುವಿಕೆಗೆ ಸಾಮಾನ್ಯ ಭೂಮಾಲಕರಿಂದ ಹಿಡಿದು ಅಕ್ಕಿ ಮಿಲ್ಲುಗಳು, ಸಾಹುಕಾರರು, ಲಂಚ ಪಡೆದು ಹೊರಗೆ ಸಾಗಗೊಡುವ ಅಧಿಕಾರಿಗಳ ವರೆಗಿನವರೂ ಕಾರಣಿಗಳಿರಬಹುದೆಂದು ಹೇಳಬೇಕಾಗುತ್ತದೆ. ಹೀಗೆಂದ ಮಾತ್ರಕ್ಕೆ ಇವರನ್ನೇ ದೂರುವುದು ಸರಿಯಾದುದಲ್ಲ. ಅದರಿಂದ ಪ್ರಯೋಜನವೂ ಇಲ್ಲ. ಯಾಕೆಂದರೆ ಕೈಯಲ್ಲಿದ್ದ ವಸ್ತುವನ್ನು ಹೆಚ್ಚಾಗಿ ಆದಷ್ಟು ಹೆಚ್ಚು ಬೆಲೆಗೆ ಮಾರುವ ಆಸೆಯು ಯಾರಿಗೂ ಇಲ್ಲದಿರುವುದಿಲ್ಲ. ಆದರ್ಶವನ್ನು ಹೇಳ ಹೊರಟವರೇ ಆದರೂ ಇದಕ್ಕೆ ಹೊರತಲ್ಲ. ಆದರೆ ಅಸಹಾಯಕರ ಆಸುವನ್ನು ಹಿಂಡುವ ಈ ಲಾಭ ಕೋರತನವನ್ನು ಸಾಮೂಹಿಕವಾಗಿ ತಡೆಗಟ್ಟುವುದು ಸಾಧ್ಯವಾದಲ್ಲಿ, ಅದಕ್ಕೆ ಜೆಂಬಲ ಕೊಡದೆ ಹೋದರೆ ಅವರು ಶುದ್ಧ ಸ್ವಾರ್ಥಿಗಳೆನ್ನುವುದಕ್ಕೆ ಬೇರೆ ನಿದರ್ಶನ ಬೇಡವಾಗುತ್ತದೆ.

ಪ್ರತಿವರ್ಷವೂ ಸರಕಾರವು ಆಯಾ ಕಡೆಯ ಧಾರಣೆಗನುಸಾರವಾಗಿ, ಒಕ್ಕಲುಗಳ ಅನುಕೂಲತೆಗಾಗಿ ಕೆಲವು ವಸ್ತುಗಳಿಗೆ ನ್ಯಾಯಧಾರಣೆಯನ್ನು ನಿಶ್ಚಯಿಸುತ್ತದೆ. ಈ ದರದಂತೆ ಗೇಣಿ ಕೊಡುವುದಕ್ಕೆ ಒಕ್ಕಲುಗಳು ಹಕ್ಕುದಾರರಾದರೂ ಒಡೆತನದ ಪ್ರಭಾವವು ಈ ನ್ಯಾಯವನ್ನು ಮೂಲೆ ಪಾಲು ಮಾಡಿ ಲಾಭದಾಸೆಯನ್ನು ಈಡೇರಿಸಿಕೊಳ್ಳುವಷ್ಟು–ಒಂದೋ ಅಕ್ಕಿಯನ್ನೇ ಅಥವಾ ಪೇಟೆಧಾರಣೆಯನ್ನೇ ಗೇಣಿಯನ್ನಾಗಿ ಪಡೆಯುವಷ್ಟು–ಘಟಿಸಿಸ್ಯಾಗುವುದೇ ಹೆಚ್ಚು. ಸಮಯಕ್ಕೆ ಸರಿಯಾಗಿ ಹಣವನ್ನೊದಗಿಸಿಕೊಳ್ಳಲಾರದ, ಮಾತ್ರವಲ್ಲ ಧನಿಯ ಇಚ್ಛೆಯ ವಿರುದ್ಧ ವರ್ತಿಸುವ ಧೈರ್ಯವಿಲ್ಲದ ಒಕ್ಕಲುಗಳು ಅಕ್ಕಿಯನ್ನೇ ಗೇಣಿಯನ್ನಾಗಿ ಕೊಟ್ಟು ಸುತ್ತೆ ಕೊಂಡುಕೊಳ್ಳುವ ಪರಿಸ್ಥಿತಿಗೀಡಾಗಲೇ ಬೇಕಾಗುತ್ತದೆ. ಈ ಪರಿಸ್ಥಿತಿಯಲ್ಲಿ ಇವರು ತಮ್ಮ ಬೆಳೆಯುವ ಶಕ್ತಿಯನ್ನೂ ಕಳೆಕೊಂಡು ಧಾರಣೆಯ ಮೇಲೆ ಎರಡು ರೀತಿಯ ಪರಿಣಾಮ ವುಂಟಾಗುತ್ತದೆ. ಸಮಾಜದಲ್ಲಿ ಬಹುಮಟ್ಟಿಗೆ ಇತರರಿಗಿಂತ ಮಿತವ್ಯಯಿಗಳಾದ, ದುಡಿಮೆಯಲ್ಲಿ ಇತರರಿಗೆ ಕಡಿಮೆಯಲ್ಲದ ನಮ್ಮ ಒಕ್ಕಲುಗಳಲ್ಲಿ ಗೇಣಿ ಬಾಕಿಯಿಲ್ಲದ–ಸಾಲವಿಲ್ಲದವರು ನೂರಕ್ಕೆ ಹತ್ತು ಮಂದಿ ಒಕ್ಕಲಾರರೆಂಬುದನ್ನು ಗಮನಿಸಿದರೆ, ನಾನು ಬರೆಯುತ್ತಿರುವುದರ ಸತ್ಯತೆಯು ಅರಿವಾಗಬಹುದು. ಹೀಗೆ ಉತ್ಪಾದಕ ಶಕ್ತಿ ಕಳೆಗುಂದುವುದರಿಂದಲೂ ಕೊಳ್ಳುವವರ ಸಂಖ್ಯೆ ಹೆಚ್ಚಾಗುವುದರಿಂದಲೂ ವಸ್ತುಗಳು ಲಾಭಕೋರರ ಕೈಯಲ್ಲಿ ಶೇಖ್ಯತವಾಗುವುದರಿಂದಲೂ ಬೆಲೆ ಯೇರುವಿಕೆಗೆ ಹೆಚ್ಚು ಅವಕಾಶವುಂಟಾಗುತ್ತದೆಂದರೆ ಒಪ್ಪುವಂತೆ ತೋರುತ್ತದೆ.

ಬೆಲೆಯೇರಿಕೆಯಿಲ್ಲದ ಕಾಲದಲ್ಲಿ ಇಂತಹ ಪರಿಸ್ಥಿತಿಗಳೆಲ್ಲ ಇದ್ದಿಲ್ಲವೇ ಎಂಬ ಸಂಶಯವು ನಮಗೆ ತೋರುತ್ತದೆ ಪರಿಸ್ಥಿತಿ ಹಾಗೂ ಜನರ ಮನೋಭಾವನೆ ಕೆಲಮಟ್ಟಿಗೆ ಮೊದಲಿಗಿಂತ ವ್ಯತ್ಯಾಸವಾಗಿರಬಹುದೇ? ಇರಲೂ ಬಹುದು. ಯಾಕೆಂದರೆ ಶುಭವಿಲಾಸ ಆಚಾರ ವಿಚಾರಗಳಲ್ಲಿ ಮಾರ್ಪಾಟನ್ನು ನಾವು ನೋಡುತ್ತೇವೆ. ಅದರಿಂದ ಒಬ್ಬರಿನ್ನೊಬ್ಬರ ಮೇಲೆ ತೋರುವ ರಿಯಾಯತಿ ಕಡಿಮೆಯಾಗಿ, ಧಾರಣೆಯೇರಿಯೇ ತೀರುವುದೆಂಬ ವಿಶ್ವಾಸ ಹೆಚ್ಚಾಗಿ, ಬಾಜಾರದಲ್ಲಿ ಬಿಸಿ ವಾತಾವರಣ ಹುಟ್ಟಿಸುವ ಗಡಿಬಿಡಿಯ ಚುರುಕು ಪ್ರವೃತ್ತಿಯು ಬೆಳೆಯದೆ ಉಳಿದಿರಲಿಕ್ಕಿಲ್ಲ. ಇನ್ನೊಂದೆಡೆ ಅಕ್ಕಿ ಮಿಲ್ಲುಗಳು ಹೆಚ್ಚು ಕೂಲಿಕಾರರ ಹೊಟ್ಟೆಗೆ ಹೆಟ್ಟು ಕೊಟ್ಟು ಕೊಳ್ಳುವವರ ಪರಿಮಾಣವನ್ನು ಹೆಚ್ಚಿಸಿವೆ. ಬೆಳೆಕೈಯಾದ ನಂತರ ಎಷ್ಟು ಬೇಗ ಸಾಧ್ಯವಾಯಿತೋ ಅಷ್ಟು ಬೇಗ ಭೂಮಾಲಕರು, ಸಾಹುಕಾರರ ಹೊರತು ಬೇರೆಲ್ಲಿಯೂ ಅಕ್ಕಿ ದೊರೆಯಲಾರದ ಪರಿಸ್ಥಿತಿ ಬಂದು ಬಿಡುತ್ತದೆ. ಹೀಗೆ ಕೃತಕ ಪರಿಸ್ಥಿತಿಯನ್ನು ನಿರ್ಮಿಸುವುದರಿಂದ ಬೆಲೆಯ ಮೇಲೆ ಪರಿಣಾಮವಾಗದೆ ಇರುವುದಾದರೂ ಹೇಗೆ? ಎಷ್ಟೇ ಹಳ್ಳಿಗಳ ಅಕ್ಕಿಯನ್ನು ಬೇರೆಲ್ಲಗೋ ಒಯ್ದು ಅಲ್ಲಿಗೆ ಮತ್ತೆಲ್ಲಿಂದಲೋ ಬಂದು ಮಾರಾಟವಾಗುವ ಪರಿಸ್ಥಿತಿ ಏಕೆ? ಇಂತಹ ಪರಿಸ್ಥಿತಿ ಮೊದಲು ಕಡಿಮೆಯಾಗುತ್ತು.

ಈ ರೀತಿಯ ಶೋಷಣೆಯಿಂದ ಅಸಹಾಕರನ್ನು ರಕ್ಷಿಸುವವರ್ಯಾರು? ಸಮಯಬಂದಾಗಲೆಲ್ಲ ಬಡವರ ಉದ್ಧಾರಕರು ತಾವೆಂದು ಕೂಗಿಕೊಳ್ಳುವ ಯಾವುದೇ ರಾಜಕೀಯ ಪಕ್ಷದ ಧನಿಗಳಾದರೂ (ಧನಿಕರಾದರೂ) ನ್ಯಾಯ ಧಾರಣೆಯನ್ನು ಮೀರದವರು ವಿರಳವೇ ಸೈ ಇದೇ ನೀತಿಯೊಂದು ಬೆಲೆಯೇರಿಕೆಯ ಪ್ರಚೋದಕವೆಂದರೆ ತಪ್ಪಿಲ್ಲ. ಈ ಪರಿಸ್ಥಿತಿಯನ್ನೆಲ್ಲ ವಿವೇಚಿಸುವಾಗ ಮೂಲ ಉತ್ಪಾದಕರನ್ನು ಈ ಸಾಮ್ರಾಜ್ಯ ಶಾಹಿ ನೀತಿಯಿಂದ ತಪ್ಪಿಸಿ ಅವರನ್ನು ಸ್ವಾವಲಂಭಿಗಳನ್ನಾಗಿ ಮಾಡುವುದರಿಂದ ಬೆಲೆಯೇರಿಕೆಯ ಮೇಲೆ ಕಚ್ಚಿನ ಪರಿಣಾಮವುಂಟಾಗಬಹುದೆಂದು ತೋರುತ್ತದೆ. ಆದರೆ ಇದೇನೂ ಹೊಸತಾಗಿ ಕಂಡುಹಿಡಿಯಬೇಕಾದ ಉಪಾಯವಲ್ಲ. ಆದರೂ ಇವನ್ನು ಸಾಧಿಸಿದ ಮಾತ್ರಕ್ಕೆ ಧಾರಣೆಯನ್ನೊಂದು ಹದದಲ್ಲಿಟ್ಟುಕೊಳ್ಳುವ ಹಿಡಿತ ಬಂದೀತೆಂದು ಭರವಸೆ ಹೊಂದುವುದುಕಷ್ಟ. ಮಾರಾಟಗಾರರೇ ಹೆಚ್ಚಾಗಿ ಅಡಗಿಸಿಡುವವರ ಕಾಟ ಕಡಿಮೆ ಯಾದಾಗ ಧಾರಣೆ ತೀರಾ ಇಳಿದು ಹೋಗಲೂ ಬಹುದು.

ಕೃಷಿಕರು ತಮ್ಮ ಮುಖ್ಯ ಉತ್ಪಾದನೆಯನ್ನು ಸಹಕಾರ ಸಂಘಗಳ ಮೂಲಕ ವಿಕ್ರಯಿಸುವ ಪದ್ಧತಿಯು ಆಚರಣೆಯಲ್ಲಿ ಬಂದುದಾದರೆ ಧಾರಣೆಯನ್ನು ಹದದಲ್ಲಿಟ್ಟುಕೊಳ್ಳುವ ಹಿಡಿತವುಂಟಾಗುವುದರಲ್ಲಿ ಸಂದೇಹವಿರಲಾರದು. ಆದರೆ ಇಂದಿನ ಸ್ಥಿತಿಯಲ್ಲಿ ಅದು ಸಾಧ್ಯವಿರುವಂತೆ ತೋರುವುದೇ ಇಲ್ಲ. ಹೆಚ್ಚಿನ ನಮ್ಮ ಕೃಷಿಕರು ಉತ್ಸಾಹ ಹೀನರಾಗಿರುವುದು ಕಂಡು ಬರುತ್ತದೆ. ಇಂದಿನ ಆಚರಿತವು ಕೂಡ ಅವರಲ್ಲಿ ಭವಿಷ್ಯದ ಕುರಿತು ಆಶಾದಾಯಕವಾದ ಭರವಸೆಯನ್ನುಂಟು ಮಾಡಿಲ್ಲ. ಒಕ್ಕಲಿಗರ ಉದ್ಧಾರಕ್ಕಾಗಿ ಮಾಡಲ್ಪಟ್ಟ ಒಕ್ಕಲು ಹಿತಸಂರಕ್ಷಣೆಯ (ಈಗಿದೆ. ಕನ್ನಡ ಜಿಲ್ಲೆಯಲ್ಲಿ ಜಾರಿಯಲ್ಲಿರುವ) ಪ್ರಯೋಜನ ಹೊಂದಿದ, ಹೊಂದಿದವ ನೀರಿಕ್ಷೆಯಲ್ಲಿರುವ ಒಕ್ಕಲುಗಳನ್ನು ಹೆಳಿಯ ಒಕ್ಕಲಿಗನಾದ ನಾನು ಕಂಡಿಲ್ಲ. ಇನ್ನು ಮೈಸೂರು ಸರಕಾರವೊಂದು ಮಸೂದೆ ತಂದು ಅದರಿಂದ ಪ್ರಯೋಜನ ಹೊಂದುವ ಆಲೆಯನ್ನವರು ಇಟ್ಟುಕೊಂಡಿಲ್ಲ. ಹೀಗೆ ಭಾರತದ ಮುಖ್ಯ ಸಂಪತ್ತಿನ ಉತ್ಪಾದಕರ ನಿರುತ್ಸಾಹ, ನಿರಾಶಾಜನಕ ಪರಿಸ್ಥಿತಿಯಲ್ಲಿ ಧಾರಣೆ ಏರದೆ ಇನ್ನೇನಾದೀತು? ಇದನ್ನು ಗಮನಿಸದೆ ಕೈಗೊಳ್ಳುವ ಉಪಾಯಗಳು ಫಲಕಾರಿಯಾಗುವುದು ಸಾಧ್ಯವೇ?

ಸಮಾಜದ ಮುಖ್ಯ ಸಮಸ್ಯೆಗಳು ಬಗೆಹರಿಸಲ್ಪಟ್ಟಾಗಲೇ ಅವುಗಳಿಗೆ ಸಂಬಂಧಿಸಿದ ಇತರ ಸಮಸ್ಯೆಗಳು ಸಡಿಲುಗೊಳ್ಳುವುವು. ಪರಿಣಾಮಕಾರಿ ಭೂಸುಧಾರಣೆ, ಸಹಕಾರಿ ಪದ್ಧತಿಯ ಆಚರಣೆ, ಅಕ್ಕಿ ಮಿಲ್ಲುಗಳನ್ನು ಕಡಿಮೆ ಮಾಡುವಿಕೆ ಇವೇ ಮೊದಲಾದುವನ್ನು ಸಾಧಿಸುವುದರಿಂದಲೇ ಪರಿಸ್ಥಿತಿಯನ್ನು ಸುಧಾರಿಸಬಹುದು. ಅಕ್ಕಿ ಮಿಲ್ಲುಗಳು ಕಡಿಮೆಯಾಗುವುದರಿಂದ ಕೂಲಿಕಾರರಿಗೆ ಕೂಲಿ ದೊರೆಯುವುದಲ್ಲದೆ ಅವರಲ್ಲಿರುವ ಎಲ್ಲಾ ಭತ್ತ ಅಕ್ಕಿ ಉಳಿಯುವಂತಾಗಿ ದೂರ ದೂರ ಸೇರಿ ಹೋಗುವ-ಜನಸಾಮಾನ್ಯರ ಕಣ್ಣಮುಂದಿನಿಂದ ಮಾಯವಾಗುವಕೆಲಸವೂ ಕಡಿಮೆಯಾಗುವುದು; ಇಷ್ಟೇ ಅಲ್ಲದೆ ಇನ್ನೂ ಹಲವು ಪ್ರಯೋಜನಗಳಿವೆಯೆಂಬುದನ್ನು ಜ್ಞಾಪಿಸಿಕೊಳ್ಳಬೇಕು. ಈ ದಿಸೆಯಲ್ಲಿ ಸರಕಾರವು ಕಾರ್ಯ ಪ್ರವೃತ್ತವಾಗುವುದೆಂದು ಆಶಿಸಬಹುದೇ? ಕೃಷಿಕರ-ಒಕ್ಕಲಿಗರ ನಿರಾಶೆ ದೂರವಾಗಬಹುದೆಂದು ನಂಬಬಹುದೆ?

—ವಿ. ಬಿ. ಅಮ್ಮಾಡಿ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ಎ.ಸಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತನೆ!!

P. DEVEE & Co. (N. J.) CALCUTTA—40.

ಸ್ಥಾಪಕರು: ಸಾ ಕಂಪೆನಿ, ಮಂಗಳೂರು—1.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ಸಮಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N /50 ತಾ. 12-12 50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದೆ ಯಾವತ್ತೂ ಸೆಕೆಂಡರಿಶಾಲೆಗಳವರು ಸಮಯುಗಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

ಗಂಧದ ವ್ಯವಸಾಯ

(೨ನೇ ಪುಟದಿಂದ)

ಮೈಸೂರು ಮತ್ತು ಕೇರಳದ ಹೆಚ್ಚಿನ ಜಿಲ್ಲೆಗಳಲ್ಲಿ ಈ ಗಂಧದ ಮರಗಳು ಭಯಂಕರವಾಗಿ ಬೆಳೆಯುತ್ತವೆ. ಈ ಮರಗಳು ಸುಮಾರು ಹತ್ತು ವರ್ಷಗಳಲ್ಲಿ ಫಲಿತವಾಗಿ ಆಗ, ಅವುಗಳಿಂದ ಎಣ್ಣೆಯನ್ನು ವಿಭಜಿಸಲು ಯೋಗ್ಯವಾಗುತ್ತವೆ. ದಕ್ಷಿಣ ಭಾರತದಲ್ಲಿ ಕೃಷಿಗೆ ತಡೆಯಾಗಿರುವ ಪಿಡುಗಿನಂತಿರುವ "ಲಾಂಟಾನ" ಎಂಬ ಜಾತಿಯ ಭಯಂಕರ ಸಣ್ಣ ಗಿಡವು ಈ ಗಂಧದ ಮರಗಳನ್ನು ಬೆಳೆಸುವಲ್ಲಿ ಉಪಯೋಗಿಸಲ್ಪಡುತ್ತದೆ. ಈ ಲಾಂಟಾನ ಗಿಡಗಳು ಗಂಧದ ಮರಗಳ ದಾಯಿಯಂತಿದ್ದು ಅವುಗಳು ಗಂಧದ ಮರಗಳನ್ನು ಫಲಿತವಾಗುವವರೆಗೆ ಬೆಳೆಸುತ್ತವೆ.

ಗಂಧದ ಮರಗಳು ಎಣ್ಣೆ ತೆಗೆಯಲು ಪರಿಪಕ್ವಸ್ಥಿತಿಗೆ ಬಂದೊಡನೆಯೇ ಅವನ್ನು ಬೇಳಿಸಿ ಮೇಲಿನ ತೊಗಟೆಯನ್ನು ಕೀಳುತ್ತಾರೆ ಉಳಿದ ಅಂಶವು ಕಾಡಿನಲ್ಲಿ ಅಲ್ಲಲ್ಲಿರುವ ಉಗ್ರಾಣಗಳಿಗೆ ಸಾಗಿಸಲ್ಪಡುತ್ತದೆ. ಇಲ್ಲಿ ಈ ಮರದ ದಿಮ್ಮಿಗಳು ಸಿಗಿಯಲ್ಪಟ್ಟು ಸಣ್ಣ ತುಂಡುಗಳಾಗಿಡಲ್ಪಡುತ್ತವೆ. ಮುಂದಕ್ಕೆ ಅರಿಸುವಿಕೆಯು ನಡೆಯುವಾಗ ಅತ್ಯುತ್ತಮ ಭಾಗಗಳನ್ನು ಕೆತ್ತನೆಯ ಕೆಲಸಕ್ಕಾಗಿ ಉಳಿಸಿಕೊಂಡು ಉಳಿದುದನ್ನು ಭಟ್ಟಿ ಇಳಿಸಲು ಕಳುಹಿಸಲಾಗುತ್ತದೆ. ಕಾರಖಾನೆಯಲ್ಲಿ ಈ ತುಂಡುಗಳನ್ನು ಹೊಳುಗಳನ್ನಾಗಿ ಮಾಡಿ ಭಟ್ಟಿ ನಳುವಾದ ಮಡಿಯನ್ನಾಗಿ ಪರಿವರ್ತಿಸುತ್ತಾರೆ. ಈಗ ಸುಗಂಧ ಮರವು ಭಟ್ಟಿ ಇಳಿಸಲ್ಪಡಲು ಯೋಗ್ಯಾವಸ್ಥೆಯನ್ನು ಪಡೆದಂತಾಯಿತು.

ಭಟ್ಟಿಯಿಳಿಸುವ ಕಾರಖಾನೆಯಲ್ಲಿ ದೊಡ್ಡ ಕೊಳವೆಯಾಕಾರದ ಗುಡಾಣವಿದ್ದು ಅದಕ್ಕೆ ಎರಡು ಬಾಯಿಗಳಿರುತ್ತವೆ. ಒಂದು ಬಾಯಿಯಿಂದ ಉಗಿಯು ಒಳ ಹೋಗುವುದು; ಮತ್ತು ಇನ್ನೊಂದರಲ್ಲಿ ಅದು ಹೊರಬರುವುದು ಈ ಕಂಡಿಯಲ್ಲಿ ಗಂಧದ ಪುಡಿಯನ್ನು ಸುರಿದು, ಆತ್ಯಧಿಕ ಒತ್ತಡದಲ್ಲಿ ಉಗಿಯನ್ನು ಬಿಡುತ್ತಾರೆ. ಈ ಉಗಿಯು ಆ ಪುಡಿಯನ್ನು ಹಾದುಹೋಗುವಾಗ, ತನ್ನೊಂದಿಗೆ ಎಣ್ಣೆಯ ಸಾರವನ್ನೂ ಎಳೆದುಕೊಂಡು ಹೋಗುತ್ತದೆ. ಇಂತಹ ಸಾರಯುಕ್ತ ಉಗಿಯನ್ನು ತಂಪಾದ ದೊಡ್ಡ ಘನೀಕರಿಸುವ ಯಂತ್ರಕ್ಕೆ ಕೊಂಡೊಯ್ಯುತ್ತಾರೆ. ಅಲ್ಲಿ, ಎಣ್ಣೆಯು ನೀರಿಗಿಂತ ಹಗುರವಾದುದರಿಂದ ಮೇಲ್ತೆಳದಲ್ಲಿ ತೇಲುತ್ತಿರುತ್ತದೆ. ಆ ಎಣ್ಣೆಯನ್ನು ಪ್ರತ್ಯೇಕಿಸಿ, ವಿಶೇಷ ವೈಜ್ಞಾನಿಕ ಸಾಧನಗಳಿಂದ ಶುದ್ಧಮಾಡಿ ಮಾರುಕಟ್ಟೆಗೆ ಕಳುಹಿಸಲು ಸಿದ್ಧಮಾಡುತ್ತಾರೆ.

ಎಣ್ಣೆಯು ಜಗತ್ತಿನ ಎಲ್ಲೆಡೆಗಳಲ್ಲಿ ಔಷಧಿಗಳ ವ್ಯಾಪಾರದಲ್ಲಿ ಮತ್ತು ಪರಿಮಳಯುಕ್ತ ವಸ್ತುಗಳ ವ್ಯಾಪಾರದಲ್ಲಿ ಹಾಗೂ ಸಾಬೂನುಗಳಲ್ಲಿ ಮಾರಲ್ಪಡುತ್ತದೆ. ಗಂಧದ ಮರದ ಪುಡಿಯು ಭಾರತ, ಮಧ್ಯ ಮತ್ತು ದೂರ ಪ್ರಾಚ್ಯಗಳಲ್ಲಿ ಲೋಭಾನದ ತಯಾರಿಯಲ್ಲಿ ಹೋಗುತ್ತದೆ. ಈ ಮರವು ಬೆಲೆ ಬಾಳುವ ಆಸನಗಳು ಮತ್ತು ಕೆತ್ತನೆಗಳ ತಯಾರಿಗೂ ಉಪಯೋಗಿಸಲ್ಪಡುತ್ತದೆ. ನಾಗರಿಕತೆಯ ಪ್ರಾರಂಭದ ದಿನದಿಂದಲೂ ಗಂಧದ ಮರದ ಕೆತ್ತನೆಯ ಕೆಲಸದಲ್ಲಿ ಭಾರತೀಯರು ನಿಷ್ಣಾತರು ಮೈಸೂರಿನ ಪಶ್ಚಿಮ ಭಾಗದಲ್ಲಿ, ಘಟ್ಟಗಳ ಪೂರ್ವಕ್ಕೆ ಸಾಗರ ಮತ್ತು ಸೊರಬಗಳಲ್ಲಿ ವಾಸಿಸುವ ಗುಡಿಗಾರರು ಎಂಬ ಒಂದು ಜಾತಿಗೆ ಸೇರಿದವರು ಈ ಕೆತ್ತನೆಯ ಕೆಲಸದಲ್ಲಿ ಪಾರಂಪರ್ಯವಾಗಿ ನುರಿತಿರುವವರು. ಸರಕಾರದ ಉತ್ತೇಜನದ ಫಲವಾಗಿ ಈ ಗುಡಿಗಾರರ ಹಸ್ತ ಕುಶಲತೆಯು ಭಾರತದ ಮೂಲೆ ಮೂಲೆಗಳಲ್ಲಿಯೂ ಪ್ರದರ್ಶಿಸಲ್ಪಡುತ್ತಿದೆ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಮೆಚ್ಚುಗೆಯನ್ನು ಪಡೆದಿದೆ. ಇದು, ಈ ಗಂಧದ ಮರದ ಕೆತ್ತನೆಯ ಕೆಲಸವು ಭಾರತೀಯ ಗುಡಿ ಕೈಗಾರಿಕೆಯ ಪರಂಪರೆಯ ಪ್ರತೀಕವಾಗಿ ಪರಿಣಮಿಸಿದೆಯೆಂದು ಹೇಳುವ ಮಟ್ಟಕ್ಕೆ ಇದು ಬಂದು ನಿಂತಿದೆ

ಜಗತ್ತಿನ ಇತರ ಎಲ್ಲ ದೇಶಗಳಿಗಿಂತಲೂ ಅಧಿಕ ಪ್ರಮಾಣದಲ್ಲಿ ಭಾರತವೇ ಗಂಧವನ್ನು ಉಪಯೋಗಿಸುತ್ತದೆ ಭಟ್ಟಿಯಿಳಿಸಿ ತೈಲವನ್ನು ತಯಾರಿಸುವುದು ಮತ್ತು ಕೆತ್ತನೆಯ ಕೆಲಸ ಮಾಡುವುದಲ್ಲದೆ ಹಿಂದೂ ಜನರು ತಮ್ಮ "ಅಂತಿಮ ಸಂಸ್ಕಾರಂ"ಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇದನ್ನು ಉಪಯೋಗಿಸುತ್ತಾರೆ ಭಾರತೀ ದೇವಾಲಯಗಳಲ್ಲಿಯೂ ಹೋಮದ ಕಾರ್ಯದಲ್ಲಿ ಈ ಗಂಧವು ಉಪಯೋಗಿಸಲ್ಪಡುತ್ತದೆ.

ಭಾರತೀಯರಲ್ಲಿ ಆತಿಥಿ, ದೇವರುಗಳಿಗೆ ಷೋಡಷೋಪಚಾರಗಳನ್ನು ಮಾಡುವ ಪದ್ಧತಿಯಿದೆ. ಇವುಗಳಲ್ಲಿ ಗಂಧೋಪಚಾರವೂ ಒಂದು. ಇಂದಿಗೂ ಭಾರತೀಯ ಹಿಂದೂ ದೇವಾಲಯಗಳಲ್ಲಿ, ಶುಭ ಕಾರ್ಯಗಳಲ್ಲಿ ಗಂಧವನ್ನು ಮೈಗೆ ಪೂಸಿಕೊಳ್ಳುವ ಪದ್ಧತಿಯು ಪ್ರಾಚೀನಕಾಲದ ಭಾರತೀಯರು ಗಂಧದ ಉಪಯೋಗವನ್ನು ಮಾಡಿಕೊಳ್ಳುತಿದ್ದರೆಂಬುದಕ್ಕೆ ಸಬಲ ಆಧಾರವಾಗಿದೆ. ಭಾರತೀಯರಿಗೆ ಭಯಂಕರಾಕಾರದಲ್ಲಿ ತೋರಿ ಬರುವ ಬೃಹದಾರಣ್ಯಗಳಲ್ಲಿ ಈ ಪರಿಮಳ, ವೃಷ್ಟಿಗಳಿವೆಯೆಂಬುದನ್ನು ಲಕ್ಷಿಸಬೇಕು ವನದೇವತೆಯ ಪೂಜೆಯ ಅಂತರಾರ್ಥವನ್ನೂ ಇದರಿಂದ ತಿಳಿಯಬೇಕು.

(ಸಾಭಾರ)

—ಎಸ್. ಗೋಪೀಚಂದ ರಾವ್,
ಉಡುಪಿ.

೧೧ನೆಯ "ಕೇಂಬ್ರಿಜ್ ವಾರ"ವೆಂಬ ಉತ್ಸವವು ಈ ವರ್ಷ ಲೀಡ್ಸ್ ನಗರದ ಹತ್ತು ವಿಶ್ವವಿದ್ಯಾಲಯದಲ್ಲಿ ನಡೆಯಲಿದೆ. ಈ ಉತ್ಸವದಲ್ಲಿ ಭಾಗಿಯಾಗಲು ಸದ್ಯದಲ್ಲಿಯೇ ಹೊಲ್ಲೆಂಡಿಗೆ ಹಡಗದ ಮೂಲಕ ರವಾನೆಯಾಗಲಿರುವ ಎರಡು ಅಂತಸ್ತುಗಳಿರುವ ಬ್ರಿಟಿಷ ಬಸ್ಸಿನ ಚಿತ್ರವಿದು ಈ ಬಸ್ಸಿನ ಮೇಲಿನ ಅಂತಸ್ತಿನಲ್ಲಿ ಟೆಲಿವಿಜನ್ ಸ್ಟೂಡಿಯೋವಿರುವುದು ಒಂದು ವೈಶಿಷ್ಟ್ಯವಾಗಿದೆ.

ಓದಲೇ ಬೇಕಾದ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನೂ ವಿಜ್ಞಾನವನ್ನೂ ಸಮರಸವಾಗಿ ಬೆಳೆಯಿಸುವ ಮಾರ್ಗವನ್ನು ಸೂಚಿಸುವ ನಿಬಾರಪೂರ್ಣ ಉದ್ಗ್ರಂಥ. ಬರೆದವರು: ಡಾಕ್ಟರ ಜೇಮ್ಸ್ ಬಿ ಕೊನೇಂಟ್ ಅನುವಾದಕ: ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೧೪೦ ಬೆಲೆ: ರೂ. ೧ ೫೦

ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ. ಮಾಡಿರದ ಅಪರಾಧಗಳಿಗಾಗಿ ಏಕಾಂತವಾಸಕ್ಕೆ ಗುರಿಯಾಗಿ ಅತ್ಯಾಘುನಿಕ ಚಿತ್ರಹಿಂಸೆಯ ನರಕಯಾತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸೆರೆಯಾಳು ಹಂತಕರು ಕರೆದೊಯ್ಯುವವರೆಗೆ ಸೆರೆಮನೆಯ ತನ್ನಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ. ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯ ಕನ್ನಡವನ್ನು ಅನುವಾದಿಸಿದವರು ಕು. ಶಿ. ಹರಿದಾಸ ಭಟ್ಟರು. ಪುಟ: ೩೦೮ ಬೆಲೆ: ರೂ. ೨.೫೦.

ಶಿಕ್ಷಣದ ಧ್ಯೇಯಗಳು

ಪ್ರಖಂಡದ ಆತ್ಮಂತ ಮೇಧಾವಿ ತತ್ತ್ವಜ್ಞಾನಿ ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಅವರ ಮಹತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ ಅನುವಾದಕರು: ಕೆ. ಬಿ. ರಾಮಕೃಷ್ಣರಾಯ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೨೫೦. ಬೆಲೆ: ರೂ ೨.೨೫

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ. ಪ್ರಜಾತಂತ್ರಾತ್ಮಕ ಸರ್ಕಾರ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ವಿಕಾಸವು ಹೇಗೆಂಬುದನ್ನು ವಿಮರ್ಶಿಸುವ ಅಪೂರ್ವ ಗ್ರಂಥ ಅನುವಾದಕ: ಕು ಶಿ. ಹರಿದಾಸ ಭಟ್ಟ. ಪುಟ: ೨೫೦. ಬೆಲೆ: ರೂ. ೨

ಹಿರೋಶಿಮಾದಿಂದ ಜಿನೇವಾ

'ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಪಳಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಭತ್ತು ಪುಟದ ಪುಸ್ತಕದಲ್ಲಿ ಬಹು ವಿವರವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರಯುತವಾಗಿ ಮಂಡಿಸಲಾಗಿದೆ. ಬರೆದವರು: ಯು. ರಾಘವೇಂದ್ರಾಚಾರ್ಯ. ಪುಟ: ೯೦. ಬೆಲೆ. ರೂ ೧ ೫೦

ಏಶಿಯದ ಸಂಪತ್ತು

ಏಶಿಯದ ಆರ್ಥಿಕ ಸಂಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿವೇಚನೆ, ಒಂದು ಸ್ವತಂತ್ರ ರಚನೆ. ಬರೆದವರು: ಕು. ಶಿ. ಹರಿದಾಸ ಭಟ್ಟ ವಿ. ಸೀತಾರಾಮಯ್ಯ ನವರ ಮುನ್ನುಡಿ ಇದೆ. ಪುಟ: ೧೫೦. ಬೆಲೆ. ರೂ. ೨.

ಘಂಟೆಮಾರಾ

ಇಗ್ನೇಶಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ. ಫಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅದನ್ನು ವಿರೋಧಿಸಿ ಬಂತ ಹೃದಯಂಗಮ ಕಥೆ. ಅನುವಾದಕರು: ಕು ಶಿ. ಹರಿದಾಸ ಭಟ್ಟ. ಪುಟ: ೨೦೦. ಬೆಲೆ: ರೂ. ೨.

1. ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ನೋಟೀಸು

ಉಡುಪಿ ಡಿ ಮುನ್ಸ೿ಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 141/1957

ಅಕ್ಕಯ ಯಾನೆ ಮಹಾಲಕ್ಷ್ಮಿ ಅಂಮ
—ವಾದಿಳು.

ಮತ್ತು

ನೂಚಿಸಾಬ್ರಾಯ ಭಟ್ಟ ಕೂಡಾ. ಪ್ರತಿವಾದಿರು ಇವರೊಳಗೆ

2ನೇ ಪ್ರತಿವಾದಿ ವಾಸುದೇವ ಕೊಂಡಂಡ ವಾದಿರಾಜ ಕೊಂಡಂಡರ ಮಗ ಉಡುಪಿ ತಾಲ್ಲೂಕ ನಂಬ್ರ 76ನೇ ಬಡಗಬೆಟ್ಟು ಗ್ರಾಮದ ಬೈಲೂರಿನಲ್ಲಿರುವವನ- ಇವರೆಗೆ.

ಪ್ಲೇಂಟಿನಲ್ಲಿ ಕಾಣಿಸಿದಂತೆ ವಾದಿಳಿಗೆ ದಾವಾ ಆಸ್ತಿಗಳ ಜವಾಬ್ದಾರಿಯಿಂದ ಕೂಡಾ ವಿಜಯ ಸಂಗಡದ ಲಗ್ನಾಕು ಮರ್ಮಾಪಿ ಸಂಗಡಿಂದ ಆಕ್ಷೇರು ವರೆಗೆ ಬರತಕ್ಕ ಅ್ಯಾಜುವ ಬಡ್ಡಿ ವಗೈರೆ ರೂಪ್ಯಾ 551-46 ಕ್ಕೆ ವಾದಿಳು ಮಾಡಿರುವ ಈ ದಾವೆಯು ತಾರೀಕು 20-8-1957ಕ್ಕೆ 2ನೇ ಪ್ರತಿವಾದಿಗೆ ನೋಟೀಸು ಬಗ್ಗೆ ಯಿಟ್ಟಿರುತ್ತದೆ ಸದ್ರಿ ತಾರೀಕು 20 8-1957ನೇ ದಿನಕ ಬೆಳಿಗ್ಗೆ ಒತ್ತು ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ 2ನೇ ಪ್ರತಿವಾದಿಯು ಸ್ವತಹಾ ನ ವಕೀಲರ ಮುಖಾಂತ್ರ ಹಾಜರಾಗಿ ವ್ಯವಹರಿಸಲಿಕ್ಕೆ ತಪ್ಪಿದ್ದೆ ಈ ದಾವೆಯ ನ್ನು ಅತನ ಗೈರುಹಾಜರಿಯಲ್ಲಿ ತೀರ್ಮಾನಿಸಲಾಗುವುದು.

V R. Kidyur
Advocate for plaintiff

ಉಡುಪಿ ತಾರೀಕು 31 ಜುಲ್ಯಾ 1957.

ಗ್ರಾಮದಾನ ಚಳುವಳಿ

(೧ನೇ ಪುಟದಿಂದ)

ಒಬ್ಬ ತಂದೆಗೆ ಹತ್ತು ಎಕ್ರೆ ನಂಜ, ಎಂಟು ಎಕ್ರೆ ಪುಂಜ, ಎರಡು ಎಕ್ರೆ ಭಾಗಾಯತಿದ್ದರೆ, ಅವನ ಐದು ಮಂದಿ ಮಕ್ಕಳು ಪ್ರತಿಯೊಂದು ತರದ ಭೂಮಿಯನ್ನೂ ಸಮಸಾಲ: ಮಾಡಿಕೊಳ್ಳುತ್ತಾರೆ. ಇದೇನೂ ಅನ್ಯಾಯವಾದುದಲ್ಲ; ಆದರೆ, ವ್ಯವಸಾಯದ ಸೌಲಭ್ಯ ಉತ್ಪಾದನೆಯ ಸಂಗತಿಯಲ್ಲಿ ಮಾತ್ರ ವೆಚ್ಚಪ್ರದವಾದುದು ಇಂತಹ ಪರಿಸ್ಥಿತಿಯಲ್ಲಿ ಸಹಕಾರಿ ಕ್ರಮದಿಂದ ಬೇಸಾಯ ಮಾಡುವದರಿಂದ, ಅನಾವಶ್ಯಕವಾದ ದ್ವೇಷ, ವೈಮನಸ್ಸು, ಮಾತ್ಸರ್ಯಾದಿಗಳು ದೂರವಾಗಿ ವ್ಯವಸಾಯ ವಿಧಾನವು ಸುಲಭವಾಗಿ, ವೆಚ್ಚವು ಕಡಿಮೆಯಾಗಿ, ಆದಾಯವು ಹೆಚ್ಚುವುದು; ಈ ಅಧಿಕ ಆದಾಯದ ಲಾಭವು ಒಬ್ಬನ ಪಾಲಿಗೆ ಮಾತ್ರ ದೊರೆಯದೆ ಎಲ್ಲರಿಗೂ ಸಮಾನ ಪ್ರಮಾಣದಲ್ಲಿ ದೊರೆಯುವುದು. ಅಲ್ಲದೆ ವೈಯಕ್ತಿಕ ಹಿಡುವಳಿಯು ನಾಶವೂ ಆಗುವುದು.

ಆಚಾರ್ಯ ವಿನೋಬಾ ಭಾವೆಯವರು ಗ್ರಾಮದಾನ ಚಳುವಳಿಯನ್ನು ಭರದಿಂದ ಮುಂದೊತ್ತುತಿದ್ದಾರೆ. ಭೂಮಿಯು ಪರಮಾತ್ಮನಿಗೆ ಸೇರಿದ್ದು; ನೀರು ಗಾಳಿ, ಸೂರ್ಯ ಮತ್ತು ಆಕಾಶಗಳಂತೆಯೇ ಭೂಮಿಯೂ ಕೂಡಾ ಸಾರ್ವಜನಿಕರ ಆಸ್ತಿ ಪಂಚ ಭೂತಗಳ ಪರಿವಾರಕ್ಕೆ ಸೇರಿದ ನಾಲ್ಕು ಸರ್ವರಿಗೂ ಸಮಾನವಾಗಿದ್ದು, ಅವುಗಳ ಮೇಲೆ ಯಾರ ಅಧಿಕಾರವೂ ನಡೆಯದಿದ್ದು, ಭೂಮಿಯ ಮೇಲೆ ಮಾತ್ರ ಅದೇಕೆ ವೈಯಕ್ತಿಕ ಅಧಿಕಾರವಿರಬೇಕು? ಅದು ಅನ್ಯಾಯವಾದುದೇ ಸರಿ. ಆದುದರಿಂದ ವೈಯಕ್ತಿಕ ಹಿಡುವಳಿಯನ್ನು ನಾಶಮಾಡಿ, ಅದನ್ನು ಸಾರ್ವಜನಿಕರ ಅಧಿಕಾರಕ್ಕೆ ತರುವ ಸದುದ್ದೇಶದಿಂದ ವಿನೋಬಾಜೀ ಊರೂರು ಸುತ್ತುತಿದ್ದಾರೆ: ಜನರಲ್ಲಿ ಭೂಮಿ ದಾನವನ್ನೋ ಗ್ರಾಮ ದಾನವನ್ನೋ ಬೇಡುತ್ತಾರೆ. ತಾವು ಸಂಪಾದಿಸಿದ ಭೂಮಿಯನ್ನು ಆಯಾ ಗ್ರಾಮದ ಭೂರಹಿತರಿಗೆ ಗೇಯ್ದು ತಿನ್ನುವುದಕ್ಕಾಗಿ ಒಪ್ಪಿಸುತ್ತಾರೆ. ಈ ಉಪಕ್ರಮದಿಂದ ವೈಯಕ್ತಿಕ ಹಿಡುವಳಿ ನಾಶವಾದೀತೆ ಎಂದರೆ, ಆಗದೆ ಏನು? ಈ ವಿಧಾನದಿಂದಾಗದೆ ಹೋದರೆ ಮತ್ತಾವ ಕ್ರಮದಿಂದಾಗಬೇಕು?

ಆಗ ನಾವು ಕಾನೂನಿಗೇನೇ ಶರಣಿ ಹೊಡೆಯಬೇಕು. ಸರಕಾರವೊಂದು ಕಾನೂನನ್ನು ಮಾಡಿ, ವೈಯಕ್ತಿಕ ಹಿಡುವಳಿಯನ್ನು ಅಂತ್ಯಗೊಳಿಸಿ, ಸಹಕಾರಿ ಕ್ರಮವನ್ನು ಅನ್ವಯಿಸಬಹುದು. ಆದರೆ, ಕಾನೂನು ಮಾಡಿದಷ್ಟು ಸುಲಭದಲ್ಲಿ ವ್ಯವಹಾರಕ್ಕೆ ತರಲಾಗುವುದಿಲ್ಲ; ಏಕೆಂದರೆ, ಒಂದು ಕೆಲಸವು ಮನಃಪರಿವರ್ತನೆಯಿಂದಾಗುವಷ್ಟು ಸುಲಭವಾಗಿ ಯಾವದರೂ ಸರಳವಾಗಿ, ಸುಲಭವಾಗಿ, ಜುಲುಮೆಯಿಂದ ನಡೆಯಲಾರದು, ಗಲಭೆಗೊಂದಲಗಳೆದ್ದು ದೇಶದಲ್ಲಿ ಹಿಡುವಳಿದಾರರನ್ನು ಎದುರಿಸುವ ಪ್ರಮೇಯಬರಬಹುದು. ಇದರಿಂದ ಸರಕಾರೀ ಕಾಯದೆ ಕೇವಲ ಕಾಗದ ಪತ್ರಗಳಲ್ಲಿ ಮಾತ್ರ ಉಳಿದು ಅಶಾಂತಿ, ಅತೃಪ್ತಿಗಳು ಕಾಣಿಸಿಕೊಳ್ಳಬಹುದು. ಮಧ್ಯವಾನಸಿರೋಧಿದ ಕಾರ್ಯಕ್ರಮವನ್ನು ಪರಿಶೀಲಿಸಿದರೆ. ಇದು ವಿದಿತವಾಗುವುದು ಗಾಂಧೀ ಆದರ್ಶವನ್ನು ಜನತೆಗೆ ತೋರಿಸಿಕೊಡುವುದಕ್ಕಾಗಿ, ಜನತೆಯನ್ನು ಆತ್ಮನಾಶದಿಂದ ಆತ್ಮೋನ್ನತಿಯತ್ತ ಸಾಗಿಸಿ ಅವರ ಜೀವನವನ್ನು ಸುಖಪ್ರದಗೊಳಿಸುವೆವೆಂಬ ಉದಾರ ಭಾವನೆಯಿಂದ, ತಮಗೆ ಇದರಿಂದಾಗುವ ಆದೆಷ್ಟೋ ಕೋಟಿಗಟ್ಟಲೆಯ ನಷ್ಟವನ್ನೂ ಬೇರೆ ವಿಧಾನಗಳಿಂದ ಭರ್ತಿಮಾಡಿಕೊಂಡು ಮಾನನಿರೋಧಕಾನೂನನ್ನು ದೇಶದ ಹಲವಾರು ರಾಜ್ಯಗಳು ವ್ಯವಹಾರದಲ್ಲಿ ತಂದುವು. ಆದರೆ, ಅದರ ಪರಿಣಾಮವೇನಾಯಿತು? ನಷ್ಟ ಭರ್ತಿಗಾಗಿ ಜನತೆಯ ಮೇಲೆ ತೆರಿಗೆ ಬಿತ್ತು, ಮದ್ಯಪಾನಗಳ ಹಾವಳಿ ಹೆಚ್ಚಾಗಿ ಬಹುತೇಕವಾಗಿ ರಾತ್ರೆ ಹೊತ್ತು ಮನೆಯಿಂದ ಹೊರಬರುವುದೇ ಸಜ್ಜನರಿಗೆ ತೊಂದರೆಗೀಡಾಗುವ ಸಂದರ್ಭ ಬಂದಿದೆ. ಇಂತಹ ಕಾಯದೆಯಿಂದ ಪ್ರಯೋಜನವೇನು?

ಕತ್ತಿಯಿಂದ ಮಾಡಲಾಗದೆ ಅದ್ಭುತ ಪವಾಡಗಳನ್ನು ಲೇಖನಿಯಿಂದ ಮಾಡುವುದು ಸಾಧ್ಯವೆಂದು ಬಲ್ಲವರ ಹೇಳಿಕೆ. ಏತದ್ರೀತಿಯಲ್ಲಿಯೇ ಕಾನೂನಿನಿಂದಗೆಲ್ಲಲಾರದನ್ನು ಮನಃಪರಿವರ್ತನೆಯಿಂದ ಜಯಿಸಬಹುದು. ಇಂದು ಸಾಮೂಹಿಕ ವ್ಯವಸಾಯ ಕ್ರಮವನ್ನು ಅಪೇಕ್ಷೆಯಿದ್ದರೆ ಮಾತ್ರ ಜನತೆ ಅನುಸರಿಸಬಹುದು; ಒತ್ತಾಯದಿಂದಲ್ಲ ಹಾಗೆಂದು ಈ ಚಳುವಳಿಯನ್ನು ಮಾತ್ರ ಮುಷ್ಕಡೆಸುತ್ತಲೇ ಇರಬೇಕು. ಇದರಿಂದ ಜನಮನ ಪರಿವರ್ತನೆಯಾಗಿ ಕೆಲವು ವರ್ಷಗಳಲ್ಲಿಯಾದರೂ ಜನತೆಯ ಸ್ವೇಚ್ಛೆಯಿಂದಲೇ ವೈಯಕ್ತಿಕ ಹಿಡುವಳಿ ನಾಶವಾಗಿ "ಭೂಮಿ ಪರಮಾತ್ಮನದ್ದು" ಎಂಬ ಇಂದಿನ ಕಲ್ಪನೆಯು ಭಾರತೀಯರಲ್ಲಿ ಪ್ರತ್ಯಕ್ಷರೂಪದಲ್ಲಿ ತೋರುವುದಂತೂ ನಿಶ್ಚಯ. ಆ ದಿನವನ್ನೇ ನಾವು ಎದುರು ನೋಡೋಣ.

ವಿನೋಬಾಜಿಯವರು ಇದೇ ತಿಂಗಳ ೨೮ನೆ ದಿನಾಂಕದಿಂದ ಕರ್ನಾಟಕದ ಸಂಚಾರವನ್ನು ಆರಂಭಿಸುವರು. ಆ ಸಮಯದಲ್ಲಿ ಅವರಿಗೆ ನಮ್ಮೆಲ್ಲರ ಹೃತ್ಪೂರ್ವಕ ಸಹಕಾರವನ್ನು ಈಯುವ.

ಜೈಹಿಂದ್!

ಈಗಿನ ಕಾಲದ ವಿದ್ಯಾರ್ಥಿಗಳು ಒಂದು ವಸ್ತುವು ಯಾವ ರೀತಿಯಲ್ಲಿ ಕೆಲಸ ಮಾಡುತ್ತದೆಂಬುದನ್ನು ತಿಳಿಯಲು ಆತುರರಾಗಿದ್ದಾರೆ. ಬ್ರಿಟಿಷ ವಸ್ತು ಸಂಗ್ರಹಾಲಯವು ಈ ಸಂಗತಿಯನ್ನು ಕಲಿಯಲು ಒಂದು ಯೋಗ್ಯ ಸ್ಥಾನವಾಗಿದೆ. ಏಕೆಂದರೆ, ನೂರಾರು ವರ್ಷಗಳ ಹಿಂದಿನ ಮಾನವ ಶೋಧಗಳನ್ನು ಇಲ್ಲಿ ಸಂಗ್ರಹಿಸಿದೆಲಾಗಿದೆ. ಈ ಚಿತ್ರದಲ್ಲಿ ವಸ್ತು ಸಂಗ್ರಹಾಲಯಕ್ಕೆ ಹೊಸತಾಗಿ ಸೇರಿಸಿದ ಸಿದ್ಧಿಶ್ಚಕ್ತಿ ಗ್ಯಾಲರಿಯೊಂದರ ಗುಚ್ಚಿಯನ್ನು ಬ್ರಿಟಿಷ ವಿದ್ಯಾಮಂತ್ರಿ ಶ್ರೀ ವಿಶ್ಕೌಂಟ್ ಹೈಲ್‌ಶಮರು ಒತ್ತುವುದನ್ನು ಕಾಣಬಹುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಶಿರ್ವ ಪಂಚಾಯತ್ ಬೋರ್ಡು ಕೋರ್ಟನಲ್ಲಿ

ಸಿವಿಲ್ ವ್ಯಾಜ್ಯ ನಂಬ್ರ 9/57.

ಕೀನ ಸಿಟ್ಟ. ಅಜ್ಜು ಸಿಟ್ಟ ಅಳಿಯ, ಉಡ್ಪಿ ತಾಲೂಕು ಕುತ್ಯಾರು ಕೊಂಡೂರು ಎಂಬಲ್ಲಿರುವನ —ವಾದಿ

1ನೇ ಮೈದಿನ ಬ್ಯಾರಿ, ಭಂಡಾರಿ ಯಾನೆ ಪನ್ಮುದ್ ಬ್ಯಾರಿ ಮಗ, 2ನೇ ಹನ್ಮುದ್ ಬ್ಯಾರಿ 1ನೇ ಪ್ರತಿವಾದಿಯರ ಮಗ, ಉಡ್ಪಿ ತಾಲೂಕು ಶಿರ್ವ ಗ್ರಾಮದ ಗುರಂಜಯೆಂಬಲ್ಲಿರುವನ —ಪ್ರತಿವಾದಿಯರು

ವಾದಿಗೆ ನೀವು ಕೊಡತಕ್ಕ ರೂಪಾಯಿ 71-11-0ನ್ನು ಬರೆಮಾಡಿಕೊಳ್ಳುವರೆ ಈ ಕೋರ್ಟನಲ್ಲಿ ವ್ಯಾಜ್ಯ ವಾಪಾಸುಮಾಡಿರುತ್ತಾರೆ. ಅವನ್ನು ತಪ್ಪಿ ಬಗ್ಗೆ ಇದೇ ಬರುವ ತಾ 19-8-57ನೇ ದಿನ ಅಪರಾಹ್ನ ಘಂಟೆ 3ಕ್ಕೆ ಇಟ್ಟಿರುತ್ತದೆ. ಆದುದರಿಂದ ನೀವು ಆ ದಿವಸ ಈ ಕೋರ್ಟನ ಮುಂದೆ ಸ್ವತ: ಯಾ ವಕೀಲರ ಮುಖಾಂತರ ಹಾಜರಾಗಿ ನಿಮ್ಮ ಅಕ್ಷೇಪವಿದ್ದರೆ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಎಕ್ಸಪಾರ್ಟ ತನ್ನ ನಡೆಸಿ ವ್ಯಾಜ್ಯವನ್ನು ತೀರ್ಮಾನಿಸಲಾದೀತೆಂದು ಈ ಮೂಲಕ ತಿಳಿಯಪಡಿಸೋಣಾಗಿಯದೆ.

S Annayya Hegde,
President.
Panchayat Board, Shirva.
Shirva, Date 5-8-57.

Edited, Printed & Published by K H. Shetty, at the Navayuga press, Udipi S. India

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೫೭

NAVAYUGA INDEPENDENCE DAY SPECIAL 1957

ಬೆಲೆ: ೧೯ ನಯೇಪೈಸೆ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಉಡುಪಿ, ದ. ಕ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಶತಾಬ್ದಿಯ ಸವಿ ಸ್ಮಾರಕದಿಂದ

- **ಮಾತೃಭೂಮಿಯ ದಾಸ್ಯ ವಿಮೋಚನೆಗಾಗಿ ದುಡಿದು ಅಮರರಾದ ತಾತ್ಯಾ ಟೋಪಿ, ಝಾನ್ಸಿ ಲಕ್ಷ್ಮೀ ಬಾಯಿ, ಮೌಲ್ವಿ ಅಹಮದುಲ್ಲಾ, ಕುಮಾರ ಸಿಂಹ ಮೊದಲಾದ ಸಾವಿರಾರು ವೀರ ಭಾರತೀಯರಿಗೆ ಗೌರವಾರ್ಪಣೆ ಮಾಡೋಣ!**
- **ತಮ್ಮ ತನುಮನಧನಗಳ ತ್ಯಾಗದಿಂದ ಭಾರತೀಯರ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಅಭಿವೃದ್ಧಿಗಾಗಿ ಹೋರಾಡಿದ ಗಂಡುಗಲಿಗಳನ್ನು ವಂದಿಸೋಣ!**
- **ಭವ್ಯ ಭಾರತದ ರಚನೆಗೆ ನಮ್ಮ ಕೈಲಾದಷ್ಟು ಸಹಕರಿಸೋಣ!**

ಆರ್ಥಿಕ ಕ್ಷೇತ್ರದಲ್ಲಿ ಸಿಂಡಿಕೇಟು ಬೇಂಕು 96 ಶಾಖೆಗಳಿಂದಲೂ, ರೂ. 11 ಕೋಟಿಗೂ ಮಿಕ್ಕಿದ ಚಲಾವಣಾಸಿಧಿಯಿಂದಲೂ 32 ವರುಷಗಳಿಗೂ ಮಿಕ್ಕಿದ ಅನುಭವದಿಂದಲೂ ನಾಡಿನ ಅಭಿವೃದ್ಧಿಗೆ ಸಹಕರಿಸುವುದು.

ಟಿ. ಎ. ಪೈ,
ಜನರಲ್ ಮೆನೇಜರ್.

ಡಾ। ಟಿ. ಯಂ. ಎ. ಪೈ,
ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Limited.

H. O. UDIPI

ESTD: 1925

ಭವ್ಯ ಮೈಸೂರು ನಿರ್ಮಾಣಕ್ಕಾಗಿ

ಭವಿಷ್ಯದಲ್ಲಿ ಭರವಸೆ ಇಟ್ಟು ವಿಶಾಲ ಮೈಸೂರನ್ನು ಉತ್ತಮವಾಗಿ ರಚಿಸುವ ಬೃಹತ್ ಪ್ರಯತ್ನದಲ್ಲಿ ನಮ್ಮ ಅಲ್ಪ ಸೇವೆಯನ್ನು ಸಲ್ಲಿಸಲು ಸಿದ್ಧರಿದ್ದೇವೆ.

ಡೈರೆಕ್ಟರರ ಮಂಡಳಿ

ಶ್ರೀ ಎ. ದಾಮೋದರ ಶೈ, ಬಿ. ಎ., ಬಿ. ಎಲ್., ಚೆರ್‌ಮೆನ್ ಮತ್ತು ಮೇಲ್ವಿಚಾರ ಡೈರೆಕ್ಟರ್.
ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತ್.
ಶ್ರೀ ಸಿ. ಶ್ರೀನಿವಾಸ ರಾವ್.
ಶ್ರೀ ಎಸ್. ಪುಂಡಲೀಕ ನಾಯಕ್.
ಶ್ರೀ ಕೆ. ಪಿ. ಜೆ ಪ್ರಭು, ಬಿ. ಎ,
ಶ್ರೀ ಕೆ. ಭುಜಂಗ ರಾವ್, ಜೆ. ಪಿ
ಶ್ರೀ ಯು. ಶ್ರೀನಿವಾಸ ಮಲ್ಲಯ್ಯ, ಎಮ್. ಪಿ.
ಶ್ರೀ ಎ. ನಾರಾಯಣ ಶೈ. ಬಿ. ಎ., ಬಿ. ಎಲ್.,

ಮೈಸೂರು ರಾಜ್ಯದಲ್ಲಿಯ ಶಾಖೆಗಳು

ಬೆಂಗಳೂರ.-ಅವೆನ್ಯೂ ರೋಡ್, ಬಸವನಗುಡಿ, ಮಲ್ಲೇಶ್ವರಮ್, ನರಸಿಂಹರಾಜ ರೋಡ್; ಬಂಟ್ವಾಳ; ಬೆಳ್ಗಾಂ; ಚಿಕ್ಕಮಗಳೂರು; ಕುಂದಾಪುರ; ದಾವಣಗೆರೆ; ಧಾರವಾಡ; ಗಂಗೊಳ್ಳಿ; ಹುಬ್ಬಳ್ಳಿ; ಕಾರ್ಕಳ; ಕಾರವಾರ; ಮಂಡ್ಯ; ಮಂಗಳೂರು-ಬಂದರ, ಸಿಟಿ; ಮಡಿಕೇರಿ; ಮೂಲ್ಕಿ; ಮೈಸೂರು; ಪುತ್ತೂರು; ಶಿವಮೊಗ್ಗಾ; ಸಿರ್ಸಿ; ಉಡುಪಿ.

ಇತರ ಪ್ರದೇಶಗಳಲ್ಲಿಯ ಶಾಖೆಗಳು

ಆಂಧ್ರ ಪ್ರದೇಶ: ಹೈದರಾಬಾದ; ನಿಜಾಮಬಾದ; ಸಿಕಂದರಾಬಾದ; ವಾರಂಗಲ್.
ಮುಂಬಯಿ ಸ್ಟೇಟ್: ಅಹಮ್ಮದಾಬಾದ; ಬೊಂಬಾಯಿ-ಬಾಂದ್ರ, ಫೋರ್ಟ್, ಗಿರ್ಗಾಮ್, ಕಾಲ್ಬಾದೇವಿ; ಮಾಂಡ್ವಿ, ಸಿಯಾನ್, ಪೋಲಿ; ಕಲ್ಯಾಣ; ನಾಗಪುರ; ಸೋಲಾಪುರ; ಉಲ್ಲಾಸನಗರ.
ಕೇರಳ ಸ್ಟೇಟ್: ಅಲಪ್ಪೆ; ಕನ್ನಾನೂರು; ಕೊಚ್ಚಿನ್; ಕಾಸರಗೋಡು; ಕೊಯಿಕೋಡೆ; ಪಯ್ಯನೂರು; ಕ್ವಿಲೋನ್
ಮದ್ರಾಸ್ ಸ್ಟೇಟ್: ಕೊಯಮುತ್ತೂರು; ಈರೋಡ; ಮದ್ರಾಸ-ಗೋವಿಂದಪ್ಪ ನ್ಯಾಕ್ ಸ್ಟ್ರೀಟ್, ತಂಬುಚೆಟ್ಟಿ ಸ್ಟ್ರೀಟ್; ಮಧುರೈ; ಸೇಲಮ್; ಟ್ಯೂಟಿಕೋರಿನ್.
ಪಾಕಿಸ್ತಾನ ಶಾಖೆ: ಕರಾಚಿ.

ರಿಜಿಸ್ಟರ್ಡ್ ಆಫೀಸು:
ಮಂಗಳೂರು

ಜನರಲ್ ಮೆನೇಜರರ ಕಚೇರಿ:
ಬೊಂಬಾಯಿ

ಅಡಳಿತ ಕಚೇರಿ:
ಬೆಂಗಳೂರು

ವಿದೇಶಿ ವಿಭಾಗಗಳು:
ಬೊಂಬಾಯಿ ಮತ್ತು ಮದ್ರಾಸು

ವಿಶ್ವಾದ್ಯಂತ ನಮ್ಮ ಪ್ರತಿನಿಧಿಗಳು

ಕೆನರಾ ಬೇಂಕ್ ಲಿಮಿಟೆಡ್

(ಸ್ಥಾಪನೆ: ೧೯೦೬)

ಮೈಸೂರು ರಾಜ್ಯದಲ್ಲಿ ಸ್ಥಾಪಿತವಾದ ಷೆಡ್ಯೂಲ್ಡ್ ಬ್ಯಾಂಕುಗಳಲ್ಲೆಲ್ಲ ಅತ್ಯಂತ ದೊಡ್ಡದಾದುದು.

ಒಟ್ಟು ಸಾಧನ ಸಂಪತ್ತು ೨೦ ಕೋಟಿಗೂ ಮೀರಿದೆ.

ಸೇವಿಂಗ್ಸ್ ಬೇಂಕ್, ನಿರಖು ಮತ್ತು ಚಿಕ್ಕ ವ್ಯಾದೆಯ ಡಿಪೋಜಿಟುಗಳು ಆಕರ್ಷಕ ಬಡ್ಡಿಯಲ್ಲಿ ಸ್ವೀಕರಿಸಲಾಗುವುವು.

ಹೊಸ ಶಾಖೆಗಳು ಶೀಘ್ರದಲ್ಲಿ ತೆರೆಯಲ್ಪಡುವ ಸ್ಥಳಗಳು:
ಮೈಸೂರು ಸ್ಟೇಟ್: ಗುಲ್ಬರ್ಗಾ; ಹಂಪನಕಟ್ಟೆ (ಮಂಗಳೂರು); ತುಮ್ಕೂರು; ಬೆಂಗಳೂರು (ಸಿವಿಲ್ ಏರಿಯಾ).
ಬೊಂಬಾಯಿ ಸ್ಟೇಟ್: ದಾದರ್; ಮಜಗಾಮ್. (ಎರಡೂ ಬೊಂಬಾಯಿ ಸಿಟಿಯಲ್ಲಿ). ಕೇರಳ ಸ್ಟೇಟ್: ವಾಲ್‌ಘಾಟ್.

Vol. 36 15-8-1957 ಸಂಪುಟ ೩೬
No. 49 ಸಂಚಿಕೆ ೪೯

ನವಯುಗ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೫೭

Nayayuga Independence Day Special 1957

ಗಂಡಸರಿರಲಿ, ಹೆಂಗಸರಿರಲಿ, ಇಲ್ಲಿ ಹುಟ್ಟಿದವರಿರಲಿ, ನಾಗರಿಕಾಧಿಕಾರ ಪಡೆದವರಿರಲಿ, ಭಾರತದ ಬಹುಸಂಖ್ಯ ವಯಸ್ಕರಲ್ಲಿ ಯಾರು ಕಾಯಕಕ್ಕೆದ ಮೂಲಕ ಸರಕಾರದ ಸೇವೆ ಮಾಡಿ ತಮ್ಮ ಹೆಸರುಗಳನ್ನು ಮತದಾರರ ಯಾದಿಯಲ್ಲಿ ಸೇರಿಸುವರೋ ಅವರ ಸಂಮತಿಯಿಂದ ನಡೆಸಲಾಗುವ ರಾಜ್ಯಕ್ಕೆ ನಾನು ಸ್ವರಾಜ್ಯ ಎನ್ನುತ್ತೇನೆ. ಸ್ವರಾಜ್ಯವೆಂದರೆ ಸ್ವಕೀಯ ಮನೆ, ಸ್ವಸಾಯನು ಎಂದರ್ಥ. ನಮ್ಮ ಸಂಸ್ಕೃತಿಯ ವೈಶಿಷ್ಟ್ಯವನ್ನು ಕಾಪಾಡುವುದು ನನ್ನ ಮಟ್ಟಿಗೆ ಸ್ವರಾಜ್ಯದ ಉದ್ದೇಶ.

ಮ| ಗಾಂಧೀ.

ಸೇವಾ ಜೀವನವು ವಿನಯಪೂರ್ಣವಾಗಿರಬೇಕು ಇತರರಿಗಾಗಿ ತನ್ನ ಜೀವಿತವನ್ನು ಅರ್ಪಿಸಬಲ್ಲವನಿಗೆ ಒಂದು ಸ್ವಾಸ್ತವನ್ನು ಕಾಯ್ದುಕೊಳ್ಳುವುದಕ್ಕೆ ಸಮಯವಿರಲಾರದು. ಸಿಸ್ಟ್ರಿಯುತೆಯನ್ನು ವಿನಯವೆಂದು ಭಾವಿಸಲಾಗದು. ಮಾನವ ಜಾತಿಯ ಸೇವೆಗಾಗಿ ಸತತವಾದ ಬಹು ಕಷ್ಟಕರ ಪರಿಶ್ರಮವನ್ನು ಮಾಡುವುದೇ ನಿಜವಿನಯ ದೇಶ ಸೇವೆಯೇ ಈಶ ಸೇವೆ ಎನ್ನುವ ಮಾತನ್ನು ನೆನೆದರೆ ನಮ್ಮ ಚಟುವಟಿಕೆಗಳು ದೇವರಸ್ಥೇ ಅಸಂಖ್ಯಾಂತವಾಗಿರಬೇಕು.

ಮ| ಗಾಂಧಿ.

ದಶವರ್ಷಗಳ ಸಿಂಹಾವಲೋಕನ

ಭಾರತೀಯರ ಪಾಲಿಗೆ ಅಶ್ಯಮೂಲ್ಯ ಸಂಪತ್ತೆನಿಸಿದ ಸ್ವಾತಂತ್ರ್ಯವು ದೊರೆತು ಇಂದಿಗೆ ಸರಿಯಾಗಿ ಹತ್ತು ವರ್ಷ ಕಳೆಯಿತು. ಈ ಒಂದು ದಶಕದ ಅವಧಿಯ ನಮ್ಮ ಸ್ವಾತಂತ್ರ್ಯದ ಪ್ರಯೋಜನವನ್ನು, ನಾವು ಪಡೆದ ಪ್ರಗತಿಯನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಅಳೆದು ನಿರ್ಧರಿಸಲು ಧಾರಾಳವೆನಿಸಬಹುದಾದಷ್ಟು ದೀರ್ಘಕಾಲವಲ್ಲದಿದ್ದರೂ ಸಹ ಸಿಂಹಾವಲೋಕನ ದೃಷ್ಟಿಗೆ ಹತ್ತು ವರ್ಷಗಳೆಂದರೆ, ಒಂದು ದೊಡ್ಡ ಮಜಲೇ ಸರಿಯೆನ್ನಬಹುದು. ಮಧ್ಯಮಾನ ಪ್ರತಿಬಂಧದಂತಹ ಒಂದು ಸುಧಾರಣೆ ಅಥವಾ ಹಿಂದೂ ವಿವಾಹಶಾಸನ ಮುಂತಾದ ಸಾಮಾಜಿಕ ಕಾಯಿದೆ ಇತ್ಯಾದಿಗಳ ಪರಿಣಾಮವು ಮನನಮಾಡಿಕೆಯಾಗಬೇಕಾದರೆ, ಒಂದೆರಡು ವರ್ಷಗಳ ನಿರೀಕ್ಷಣೆ ಏನೂ ಸಾಲದು; ಒಂದೆರಡು ತಲೆಮಾರುಗಳಷ್ಟು ಕಾಲವೇ ಇತಿಹಾಸಕಾರ ಕಾದು ಕುಳಿತಿರಬೇಕಾದೀತು. ಅದೇ ರೀತಿಯಲ್ಲಿ ಸ್ವಾತಂತ್ರ್ಯವು ಭಾರತೀಯ ಜನಜೀವನದ ಮೇಲೆ ಬೀರಿದ ಪ್ರಭಾವವು ಎಷ್ಟೆಂಬುದನ್ನು ತಿಳಿಯುವುದಕ್ಕೋಸ್ಕರ ಒಂದರಡು ತಲೆಮಾರುಗಳವರೆಗೆ ನಿರೀಕ್ಷಣೆ ಅವಶ್ಯವೆನಿಸೀತು. ಆದಾಗ್ಯೂ ಬೇಂಕುಗಳ ಲಾಭನಷ್ಟದ ಲೆಕ್ಕವನ್ನು ವರ್ಷ ವರ್ಷವೂ ಕಲೆಹಾಕಿ ಪ್ರಕಟಿಸುವಂತೆ ನಮ್ಮ ಸ್ವಾತಂತ್ರ್ಯ ಸಿದ್ಧಿಯ ಲಾಭಹಾನಿಗಳನ್ನು ಸಹ ಒಳಗೆಲ್ಲಗೆ ಈ ಶುಭ ಸಂದರ್ಭದಲ್ಲಿ ಹೆಚ್ಚಿದರೆ ಅವ್ಯಾಸಂಗಿಕವಾಗಲಿಕ್ಕಿಲ್ಲ; ಬದಲಿಗೆ ಅದು ನಮ್ಮ ಸಾಧನೆಯ ಬಗ್ಗೆ ಅಭಿಮಾನವನ್ನು ಉಂಟುಮಾಡೀತು; ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸೀತು; ಇನ್ನಷ್ಟು ಕಷ್ಟದ ಕೆಲಸಗಳಿಗೆ ನಮ್ಮನ್ನು ಪ್ರೇರಿಸೀತು; ಅದಕ್ಕೆ ತಕ್ಕ ಸ್ಫೂರ್ತಿಯನ್ನೂ ಉತ್ಪೇರಿಸೀತು. ಆದುದರಿಂದ ಮೊದಲಿಗೆ ನಾವು ಹತ್ತುವರ್ಷಗಳ ಹಾಸಿ ಪ್ರಕರಣಗಳನ್ನು ತೆಗೆದುಕೊಳ್ಳೋಣ. ಆಗ ನಮಗೆ ಬಹಳ ಸ್ಪಷ್ಟವಾಗಿ ಕಂಡುಬರುವ ವಿಷಯವೇನೆಂದರೆ, ವ್ಯಕ್ತಿಸ್ವಾತಂತ್ರ್ಯ, ಸಂಘಸ್ವಾತಂತ್ರ್ಯ ಮುಂತಾದ ಮೂಲಭೂತ ಅಧಿಕಾರಗಳ ಮಿತಿಮೀರಿದ ದುರುಪಯೋಗ. ಯಾವ ವಿಷಯದಲ್ಲಿ ಬಾಯಿಯಿತ್ತುವುದು ದೇಶಹಿತಕ್ಕೆ ಸಾಧಕವಲ್ಲವೋ, ಯಾರ ಬಗ್ಗೆ ಲಘುಮಾತಾಡುವುದು ರಾಷ್ಟ್ರದ ನೆಮ್ಮದಿಗೆ ಸುಖಕರವಲ್ಲವೋ ಆ ಬಗ್ಗೆ ಮಾತನಾಡಿಯೇ ತೀರಬೇಕೆಂಬ ಚಪಲವೂ ಹರವೂ ಮೂಲಭೂತಾಧಿಕಾರದ ರಕ್ಷಣೆಯಲ್ಲಿ ಮನೆ ಮಾಡಿಕೊಂಡಿರುವುದು ಅನೇಕನಲ ಗೋಚರಕ್ಕೆ ಬಂದಿದೆ. ಸಾಮಾನ್ಯ ಜನರಷ್ಟೇ ಅಲ್ಲ, ರಾಜಕೀಯ ನಾಯಕರೂ ಅಷ್ಟೇ ಏಕೆ, ಮಂತ್ರಿಮಹೋದಯರೂ ಇದಕ್ಕೆ ಅಪವಾದವಲ್ಲ. ಕಾವ್ಯಧರ್ಮ ಪಾಲನೆಯಲ್ಲಿ "ಧ್ವನಿ"ಗೆ ವಾಸ್ತವ ಚಿತ್ರಣಕ್ಕಿಂತ ಅತಿ ಹೆಚ್ಚಿನ ಬೆಲೆಯುಂಟು. ಇದ್ದುದನ್ನು ಇದ್ದಂತೆ ಹೇಳಿಬಿಡುವುದೇ ಒಂದು ದೊಡ್ಡ ದೊಡ್ಡ ಸ್ತಿಕೆಯೂ ಅಲ್ಲ; ಅದೇ ಒಂದು ಭೂಷಣವೂ ಅಲ್ಲ. ದೇಶ ಗೌರವಕ್ಕೆ, ರಾಷ್ಟ್ರಾಭಿಮಾನಕ್ಕೆ ವಿಷಯ ಗಾಂಭೀರ್ಯಕ್ಕೆ ಚ್ಯುತಿಬಾರದ ರೀತಿಯಲ್ಲಿ ನಮ್ಮ ಎಲ್ಲ ಟೀಕೆಗಳೂ ಪ್ರಕಟವಾಗುವುದು ಲೇಸು; ಹೊರತು ಚುನಾವಣಾ ಕಾಲದಲ್ಲಿ ಅನುಭವಕ್ಕೆ ಬಂದಿರುವಂತೆ ಬಾಯಿ ಸಡಿಲಬಿಟ್ಟು ಏನೇನೋ ಗಳಹುವುದೇ ವಾಕ್ಸ್ವಾತಂತ್ರ್ಯದ ಪ್ರಕಟರೂಪ ಎಂದದ್ದಾದರೆ, ಅದರಿಂದ ಹಾನಿಕಟ್ಟಿಟ್ಟದ್ದು. ಇದೇ ಮಾತು ಸಂಘ ಸ್ವಾತಂತ್ರ್ಯಕ್ಕೂ ಚೆನ್ನಾಗಿ ಅನ್ವಯಿಸುತ್ತದೆ. ನಾಲ್ಕು ಜನ ಹೊಗಳುಭಟ್ಟರಿದ್ದಾರೆ ಎಂಬುದಕ್ಕಾಗಿ ಒಂದು ರಾಜಕೀಯ ಪಕ್ಷದ ಸೃಷ್ಟಿ, ಅಥವಾ ಸಾವಿರಾರು ಸದಸ್ಯರಿಗೆ ಅದೇಶ ಕೊಡಬಲ್ಲ ಸ್ಥಾನದಲ್ಲಿದ್ದೇನೆ ಎಂಬುದಕ್ಕಾಗಿ ಸಂಸದೀಯ ಕಾರ್ಯಾಚರಣೆ ಇವೆಲ್ಲಾ ಸಭ್ಯ ನಡವಳಿಕೆಯ ಲಕ್ಷಣಗಳಲ್ಲ. 'ಕೂತುಂಡರೆ ಕುಡುಕೆ ಹಣಸಾಲದು' ಎಂಬ ಪ್ರತೀತಿ ನಮಗೆ ಬಹಳ ಹಳೆಯದು. ಅದರಿಂದ, ನಾವೇನೂ ಬುದ್ಧಿ ಕಲಿತಹಾಗಿಲ್ಲ. ಕ್ಷಣಕಾಲದ ವಿರಾಮವು ದೇಶದ ಪಾಲಿಗೆ ಎಷ್ಟೋ ಮಾನವ ವರ್ಷಗಳ ಉತ್ಪಾದನಾ ಭಂಗವನ್ನುಂಟುಮಾಡುವುದೆಂಬುದನ್ನು ಮನಗಾಣದಿರಬಾರದು. ಸಾವಿರದ ಇನ್ನೂರು ಜನರಿರುವ ಒಂದು ಆಫೀಸಿನಲ್ಲಿ ಎಲ್ಲರೂ ಕೆಲಸವನ್ನು ಒಂದು ನಿರ್ದಿಷ್ಟ ತಡವಾಗಿ ಪ್ರಾರಂಭಿಸಿದರೆಂದರೆ, ಮೊತ್ತದಲ್ಲಿ ಇಪ್ಪತ್ತು ತಾಸು ಹಾಳಾಯಿತೆಂದೇ ಲೆಕ್ಕ. ಒಬ್ಬ ವ್ಯಕ್ತಿಯ ಕೆಲಸದ ಸಾಮರ್ಥ್ಯದಿಂದ ಅಳೆಯುವುದಾದರೆ, ಮೂರು ಜನರು ಕೆಲಸಕ್ಕೆ ಹಾಜರಾಗಲಿಲ್ಲವೆಂದೇ ಅರ್ಥ. ದೇಶದ ಉತ್ಪಾದನೆಯನ್ನು ಹೆಚ್ಚಿಸುವುದೇ ನಮ್ಮ ಹೆಗ್ಗುರಿಯಾದ ಪ್ರಯುಕ್ತ ಸಂಘ, ಕಾರ್ಯವಿಲಂಬ, ಆಸಡ್ಡೆ ಇತ್ಯಾದಿ ಹಾನಿಕಾರಕ ವಿಧಾನಗಳ ಕಡೆಗೆ ಒಲವಿರುವವರು ತಮ್ಮನ್ನು ತಾವೇ ತೀವ್ರ ಶುಧಾರಿಸಿಕೊಳ್ಳಬೇಕಾದ ಕಾಲವಿದು. ಈ ಎಲ್ಲಾ ದೃಷ್ಟಿಯಿಂದ ವಿಚಾರಿಸಿದಾಗ ನಾವು ಸ್ವಾತಂತ್ರ್ಯದ ನಮ್ಮ ರಾಜ್ಯ ಘಟನೆಯ ದುರ್ಲಾಭವನ್ನು ಮಾಡಿಕೊಂಡಿದ್ದೇವೆ ಎಂಬ ವಿಚಾರವು ಮನವರಿಕೆಯಾಗದಿರದು. ಈ ದುರುಪಯೋಗವು ಇನ್ನಾದರೂ ನಿಲ್ಲಲಿ. ಸ್ವಾತಂತ್ರ್ಯವೆಂದರೆ ಸ್ವೈರವಲ್ಲವೆಂಬ ಜಾಣ್ನುಡಿ ಎಲ್ಲರ ಗಮನದಲ್ಲಿರಲಿ. ಈ ಮಾತಿನೊಡನೆ ನಾವು ಲಾಭದ ವಿಚಾರಗಳ ಕಡೆಗೆ ತಿರುಗೋಣ. ಆಗ ಅಲ್ಲಿ ನಮಗೆ ಸಸ್ಯಶ್ಯಾಮಲವಾದ ಭಾರತವು ಸಂಪೃದ್ಧಿಯ ಪ್ರಗತಿಪಥದಲ್ಲಿ ಸ್ಥಿರವಾದ ಹೆಜ್ಜೆಗಳನ್ನಿಡುತ್ತ ಮುನ್ನಡೆಯುತ್ತಿರುವುದು ಕಂಡುಬರುತ್ತದೆ. ಭಾರತದ ಯಾವ ಮೂಲೆಗೆ ಹೋದರೂ ಹತ್ತು ವರ್ಷಗಳ ಹಿಂದೆಯಿದ್ದುದಕ್ಕಿಂತ ಭಿನ್ನವಾದ ಒಂದು ಚಿತ್ರವೇ ಕಣ್ಣಿಗೆ ಬೀಳುತ್ತದೆ. ಸಮಾಜಕ್ಕೆ ಉಪಯೋಗಕರವಾದ ಏನಾದರೊಂದು ಕೆಲಸವು ಹಳ್ಳಿಯಲ್ಲಿ ನಡೆದಿರುವುದು ಗೋಚರಿಸುತ್ತದೆ. ಅದೊಂದು ಹಳ್ಳಿಯ ಶಾಲೆಯಾಗಿರಬಹುದು; ಅಥವಾ ಹಳೆಯ ಶಾಲೆಗೆ ಕಟ್ಟಿಸಿದ ಹೊಸಕಟ್ಟೋಣವಿರಬಹುದು; ಹೆಚ್ಚಿನ ವಿದ್ಯಾಭ್ಯಾಸದ ಅನುಕೂಲತೆಯ ರೂಪದಲ್ಲಿ ಅದು ಇರಬಹುದು; ಇಲ್ಲವೇ ಹಳ್ಳಿಯ ತೋಡಿಗೊಂದು ಸಂಕ, ಹತ್ತಿರದ ಪೇಟೆಗೊಂದು ಮಾರ್ಗ, ನದಿಗೊಂದು ಒಡ್ಡು, ಏನಿಲ್ಲದಿದ್ದರೆ, ಒಂದು ಶಿಶುರಕ್ಷಣಾಲಯ, ಹೆರಿಗೆ ಮನೆ, ಅಥವಾ ಒಂದು ಆಸ್ಪತ್ರೆ, ಅದೂ ಅಲ್ಲದಿದ್ದರೆ, ಸಂಚಾರಿ ವೈದ್ಯಕೀಯ ಪಥಕ ಅಲ್ಲಲ್ಲಿಯ ಆವಶ್ಯಕತೆಗಳಿಗೆ ಹೊಂದಿಕೊಂಡು ಯಾವುದೂ ಇರಬಹುದು. ಏನಿಲ್ಲದಿದ್ದರೆ, ನಮ್ಮ ರೈತರಿಗೆ ಸುಧಾರಿತ ಬೀಜಗಳ ಉಪಯೋಗದ ಮಾಹಿತಿಯಾದರೂ ದೊರೆತುದು ಕಂಡು ಬಂದೀತು. ಹತ್ತು ವರ್ಷಗಳ ಕಾಲದಲ್ಲಿ ಹಲವು ಹೊಸ ವಿಷಯಗಳ ಅನುಭವ ಅವರಿಗಾಗಿದೆ. ಹೊಸ ವಿಷಯಗಳೆಂದರೆ ಅವರಿಗೆ ಜಿಗುಪ್ಸೆ ಕಂಡುಬರುವುದಿಲ್ಲ. ಇಲ್ಲವೇ ಬ್ರಿಟಿಷರು ಭಾವಿಸಿದಂತೆ ಹೊಸ ವಿಷಯಗಳನ್ನು ತಿಳಿದುಕೊಳ್ಳಲಾರದ ದಡ್ಡರೂ ಅವರಾಗಿಲ್ಲ. ಸ್ವಾತಂತ್ರ್ಯವೂ ಅವರಿಗೆ ಹೆಚ್ಚಿನ ದೈರ್ಯೋತ್ಸಾಹಗಳನ್ನು ಒದಗಿಸಿಕೊಟ್ಟಿದಲ್ಲದೆ, ಅವರಿಗೆ ಸ್ವತಂತ್ರವಾಗಿ ವಿಚಾರಿಸಿ ವಿಮರ್ಶಿಸುವ ಅವಕಾಶ ಮತ್ತು ಶಕ್ತಿಯನ್ನು ನೀಡಿರುತ್ತದೆ. ಅನೇಕ ಚುನಾವಣೆಗಳಲ್ಲಿ ಭಾಗವಹಿಸಿದ ನಮ್ಮವರು ರಾಜಕೀಯಜ್ಞಾನವನ್ನೂ ಸಾಕಷ್ಟು ಪಡೆದಿದ್ದಾರೆ. ತಮ್ಮ ಜೀವನ ಮಟ್ಟವನ್ನು ಎತ್ತರಿಸಿಕೊಂಡರೇನೇ ಮುಕ್ತಿ ಎಂಬ ವಿವೇಕ ಅವರೆಲ್ಲರಲ್ಲಿಯೂ ಮೂಡಿರುವುದಲ್ಲದೆ ಇದಕ್ಕಾಗಿ ಶ್ರಮಿಸಬೇಕೆಂಬ ನಿರ್ಧಾರವೂ ಅವರ ಮನಸ್ಸಿನಲ್ಲಿದೆ. ಸ್ವಹಿತಕ್ಕಾಗಿ, ರಾಷ್ಟ್ರಹಿತಕ್ಕಾಗಿ ಸರಕಾರ ಕೆಲಸಮಾಡಬೇಕು. ಹೆಚ್ಚು ಹೆಚ್ಚು ಉಪಯುಕ್ತ ಕ್ರಮಗಳನ್ನು ಕೈಗೊಂಡಷ್ಟೂ ಕ್ಷೇಮ ಎಂದು ಜನತೆ ಸರಕಾರೀ ಪ್ರತಿನಿಧಿಗಳನ್ನು ನಿತ್ಯವೂ ಒತ್ತಾಯಿಸುತ್ತಿದೆ. ಇದಕ್ಕೆನ್ನುವುದೇ ಜನಜಾಗೃತಿಯೆಂದು. ಸ್ವಾತಂತ್ರ್ಯದ ಉದ್ದೇಶವೂ ಇದೇ. ಜಾಗೃತ ಜನತೆ ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳಬಲ್ಲದು. ಅದಕ್ಕೆಂದೂ ನಾಶವಿಲ್ಲ. ಸ್ವಾತಂತ್ರ್ಯದ ಹತ್ತು ವರ್ಷಗಳ ಮಹತ್ವಾಧಿಕ್ಯ ಏನೆಂದು ಪ್ರಶ್ನಿಸಿದ್ದಾದರೆ, ನಾವು ಧೈರ್ಯದಿಂದ ಎದೆತಟ್ಟಿಗೊಂಡು, ನಮ್ಮ ಜನರು ಎಚ್ಚೆತ್ತಿರುವ ವಿಷಯವನ್ನು ಉತ್ತರರೂಪದಲ್ಲಿ ಪ್ರಸ್ತಾಪಿಸಬಹುದು. ಸಾಹಸ ಕಾರ್ಯಗಳಿಗೆಗೆ ಭಾರತೀಯರು ಹಿಂದುಳಿದಿಲ್ಲ ಎಂಬುದನ್ನು ಪಂಚವಾರ್ಷಿಕ ಯೋಜನೆಗಳು—ಒಂದಲ್ಲ, ಎರಡು- ತೋರಿಸಿಕೊಟ್ಟಿವೆ. ಜನರಿಗೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿದೆ ಎಂಬುದು ಎರಡು ಮಹಾ ಚುನಾವಣೆಗಳಿಂದ ವ್ಯಕ್ತಪಟ್ಟಿದೆ. ಸಮಸ್ಯೆಗಳ ಶಾಂತ ಪರಿಹಾರಕ್ಕೆ ಮನಸ್ಸು ಕೊಡಬೇಕೆಂಬುದೇ ಭಾರತವಾಣಿ ಎನ್ನುವ ವಿಷಯವೂ ಜನಾಭಿಪ್ರಾಯ ಪ್ರಕಟಣೆಯ ನಾನಾ ಪ್ರಕಾರಗಳ ಅವಲೋಕನೆಯಿಂದ ದೃಢಪಟ್ಟಿದೆ. ಹತ್ತು ವರ್ಷಕಳೆಲ್ಲಿ ಭದ್ರವಾದ, ಸಂಪನ್ನವೃದ್ಧವಾದ ಜಾಗೃತಶೀಲವಾದ ರಾಷ್ಟ್ರದ ರಚನೆಗೆ ಅಡಿಗಲ್ಲನ್ನು ಹಾಕಿದ್ದೇವೆ. ಒಂದು ರಾಷ್ಟ್ರ—ಅದೂ ಭಾರತದಂತಹ ಒಂದು ರಾಷ್ಟ್ರ—ಇನ್ನು ಮಾಡಿದ್ದು ಸ್ಪೃಹಣೀಯವಾದ ಆದರದಿಂದ ಕಾಣಲೇ ಬೇಕಾದ ಸಾಧನೆ ಎಂಬುದರಲ್ಲಿ ಪ್ರತಿಮಾತಿಲ್ಲ. ಸ್ವಾತಂತ್ರ್ಯದ ಬಳಿಕ ಭಾರತವು ಸಾಕಷ್ಟು ಮುನ್ನಡೆದಿದ್ದಲ್ಲಿ ಎಂದು ಇನ್ನೂ ಯಾರಾದರೂ ಎನ್ನುವರೆಂದರೆ, ಅವರು ಇಲ್ಲಿಯ ಸ್ಥಿತಿಗತಿಗಳನ್ನು ನೆರೆಯ ರಾಷ್ಟ್ರವಾದ ಪಾಕಿಸ್ತಾನದೊಡನೆ—ಅದೂ ಭಾರತದೊಡನೆಯೇ ಸ್ವತಂತ್ರವಾಯಿತು—ತುಲನೆ ಮಾಡಿ ನೋಡಲಿ.

ಅಹಿಂಸೆ ಮತ್ತು ೧೮೫೭

೧೮೫೭ರಲ್ಲಿ ನಡೆದುದು "ಸಿಪಾಯಿ ದಂಗೆ", ಅದು ಗೊಂದಲವೆಂಬ ಭಾವನೆಯನ್ನು ಅಂದಿನ ಶಾಸಕರು ಇತಿಹಾಸದಲ್ಲಿಯೂ ಆಚರಣೆಯಲ್ಲಿಯೂ ತೋರಿಸಿ ಕೊಟ್ಟರು. ಅಹಿಂಸಾ ಪ್ರೇಮಿಗಳು ಇಂದು ಆ "ಗೊಂದಲ"ವನ್ನು ಅದೇಕೆ ಸ್ಮರಿಸುವರು ಎಂಬುದರ ಸ್ವಲ್ಪ ಕಲ್ಪನೆ ನಮಗಿರಬೇಕು.

ಬರೆದವರು: ಉಡುಪಿ ಶ್ರೀ ನಾರಾಯಣ ಬಲ್ಲಾಳ

ನಾನು ೧೮೫೭ನೇ ಸ್ವಾತಂತ್ರ್ಯ ಯುದ್ಧದ ವಿಚಾರದಲ್ಲಿ ಅಭ್ಯಾಸ ನಡೆಸುತ್ತಿದ್ದಾಗ ನನ್ನ ಮಿತ್ರ ಹೀಗೆ ಪ್ರಶ್ನಿಸಿದ: ನೀವೆಲ್ಲ ಅಹಿಂಸಾ ಸತ್ಯಾಗ್ರಹದ ಅಚಲ ಭಕ್ತರಲ್ಲವೇ? ಸಶಸ್ತ್ರ ಬಂಡಾಯವನ್ನು ವಿರೋಧಿಸುವವರಲ್ಲವೇ? ನೀವಿಂದು ಈ ೧೮೫೭ರ ಬಂಡಾಯವನ್ನು ಯಾವ ರೀತಿ ಪ್ರಶಂಸಿಸುತ್ತೀರಿ? ಎಂದು. ಅವನೊಬ್ಬ ಕಾಮ್ರೇಡ್ ಎಂದಿಟ್ಟುಕೊಳ್ಳಿ. ಈ ಚುಚ್ಚು ನನ್ನನ್ನು ಕೆಣಕಲು ಬಿಟ್ಟ ಬಾಣವಾದರೂ, ಇಂತಹ ಪ್ರಶ್ನೆ ಹಲವಾರು ರಾಷ್ಟ್ರೀಯ ಮನೋಭಾವದ ನನ್ನ ಸೋದರರಿಗೆ ಎದುರಾಗಿರಬಹುದು.

ಪ್ರಶ್ನೆಯ ಕುಹಕವನ್ನು ಬದಿಗಿಟ್ಟರೂ ಮಹಾತ್ಮಾ ಗಾಂಧೀಜೀಯ ಪರಮ ಅನುಯಾಯಿಗಳಾದ ನಾವು ಸಶಸ್ತ್ರ ಬಂಡಾಯದಿಂದ ಸಹಸ್ರಾರು ಜನರ ಪೈಶಾಚಿಕ ಕೊಲೆಗೆ ಕಾರಣವಾದ ಹಿಂಸಾ ಪ್ರಚೋದನೆಯ ಸ್ವಾತಂತ್ರ್ಯ ಯುದ್ಧವನ್ನು ಅದೆಂತು ಆಚರಿಸಬಹುದು?

ಆದರೆ ಇದೊಂದು ವ್ಯಾವಹಾರಿಕ ನೀತಿಯಾಗಿ ನಾವು ತೆಗೆದುಕೊಳ್ಳಬಾರದು. ಪ್ರಥಮ ಸ್ವಾತಂತ್ರ್ಯ ಹೋರಾಟದಲ್ಲಿ ಬಂಡಾಯಗಾರರ ಮೂಲಕ ನಮ್ಮ ಪಾರಂಪರ್ಯ ಸದ್ಗುಣಕ್ಕೆ ಕಲಂಕ ಬರುವಂತಹ ಕಗ್ಗೊಲೆಗಳು, ಚಿತ್ರಹಿಂಸೆಯುಹತ್ಯಾಕಾಂಡ ನಡೆದಿರಬಹುದು. ಆದರೆ ಅದರ ಉದಾತ್ತ ಹನ್ನೆಲೆಯನ್ನೇ ನಾವಿಂದು ಅರ್ಥ ಮಾಡಿಕೊಳ್ಳಬೇಕು ಅವರು ಭಾರತದ ಬಿಡುಗಡೆಯನ್ನೇ ತಮ್ಮ ಗುರಿಯಾಗಿಟ್ಟುಕೊಂಡರು. ಭಾರತೀಯರ ಸ್ವಾತಂತ್ರ್ಯಕ್ಕಾಗಿಯೇ ವೀರ ಬಲಿದಾನ ಮಾಡಿದರು. ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ಎದುರಿಸುವುದು ಕಷ್ಟವೆಂದು ತಿಳಿದೂ ಅದಕ್ಕೆ ಬಲಿಯಾದರು. ಇಂತಹ ಒಂದು ಸ್ಫೂರ್ತಿ, ಈ ಸ್ವಾತಂತ್ರ್ಯ ಕಾಂಕ್ಷೆ, ಈ ಧೀರೋದಾತ್ತ ವರ್ತನೆಯು ಭಾರತದಲ್ಲಿ ರಕ್ತಾಕ್ಷರಗಳಲ್ಲಿ ಬರೆದಿಟ್ಟ ಅಧ್ಯಾಯವಾಗಿದೆ ಈ ಒಂದುತ್ಯಾಗದ ತತ್ವವನ್ನು ನಾವು ಗೌರವಿಸಬೇಕು. ಸರಿಯಾದ ಮಾರ್ಗದರ್ಶನವಿಲ್ಲದೆ ಯಾವುದೇ ಒಂದು ವೈಜ್ಞಾನಿಕ ಬುದ್ಧಿ ಮತ್ತೆ ಇಲ್ಲದೆ, ಹೇಳುವಂತಹ ಸಂಸ್ಕಾರವಿಲ್ಲದೆ ಕೇವಲ ಸ್ವಾತಂತ್ರ್ಯಕ್ಕಾಗಿ ಭಾರತಿಗೆ ತೊಡರಿಸಿದ ಸಂಕಲೆಗಳನ್ನು ಪುಡಿಗಟ್ಟುವುದಕ್ಕಾಗಿ ಸಿಕ್ಕ ಅನುಕೂಲಗಳನ್ನೇ ಬಳಸಿಕೊಂಡು, ತಮ್ಮಲ್ಲಿದ್ದ ಬುದ್ಧಿ ಶಕ್ತಿಯನ್ನೇ ಅರ್ಪಣಮಾಡಿ, ಜೀವನದ ಹೆಂಗು ತೊರೆದು ಹೋರಾಡಿ ಅಜರಾಮರರಾದರು. ಅಂತಹ ಪವಿತ್ರ ಆತ್ಮಗಳ ಉದಾತ್ತತ್ಯೇಯ ೯೦ ವರ್ಷಗಳ ಬಳಿಕ ಸಿದ್ಧಿಸಿದೆ.

ಮದೋನ್ಮತ್ತ ಬ್ರಿಟಿಷ್ ಸಿಂಹದ ಕೇಸರಿ ಹಿಡಿದು ಜಗ್ಗಿದ ಪ್ರಥಮ ತಂಡದ ಅಂದಿನ ಬಲಿದಾನದ ಅಮೃತ ಫಲವನ್ನಿಂದು ನಾವು ಅನುಭೋಗಿಸುತ್ತೇವೆ. ಅವರ ಹೃದಯಾಂತರಾಳದಲ್ಲಿದ್ದ ಆಸೆಯು ಇಂದು ಪೂರೈಸಿ ನಾವು ಸ್ವಾತಂತ್ರ್ಯದುಸಿರು ಬಿಡುತ್ತಿದ್ದೇವೆ. ಯಾರ ತ್ಯಾಗದಫಲವೋ ಯಾರ ಬಲಿದಾನದಸಲವೋ- ಯಾರಚಿತ್ರ ಹಿಂಸೆಯು ಸರಳಾಟದ ಪ್ರತಿಲಫಲವೋ- ಎಂಬಂತೆ ಬಂದ ಈ ಸ್ವಾತಂತ್ರ್ಯದ ಸಂದರ್ಭದಲ್ಲಿ ನಾವು ಅಂತಹ ವೀರರ ಸ್ಮರಣೆ ಮಾಡುವದು ನಮ್ಮ ಕೃತಜ್ಞತೆಯ ಸಂಕೇತವಾಗಿದೆ. ಅವರು ಸ್ವಾತಂತ್ರ್ಯ ಸಹಸಲು ಗಳಿಸಿದ ಮಾರ್ಗ ಸಮ್ಮತವಿಲ್ಲದಿರಬಹುದು; ನೀತಿ ಮತ್ತೆಯ ಆಧಃಪತನ ಕಂಡಿರಬಹುದು; ಅವರು ತಮ್ಮ ಧ್ಯೇಯ ಸಾಧನೆಯಲ್ಲಿ ಅನ್ಯಾಯ ಮಾಡಿರಬಹುದು

ಆನರೆ, ವೈರಿಯು ತನ್ನೆಲ್ಲ ನ್ಯಾಯ, ನೀತಿ, ಸತ್ಯಗಳ ಗೋರಮಾಡಿ ಕೇವಲ ಸ್ವಾರ್ಥ ಸಾಧನೆಯನ್ನೇ ಗುರಿಯಾಗಿಟ್ಟು ಮನೆಗೆ ಉರಿಯಿಡಲು ಬಂದಾಗ ಮಾನವೀಯ ಧರ್ಮಕ್ಕಿಂತಲೂ ಅಭಿಮಾನ, ಗೌರವಗಳೇ ಪ್ರಬಲತೆ ಪಡೆಯುತ್ತವೆ. ತನ್ನ ಜೀವಕ್ಕಿಂತಲೂ ತನ್ನ ವ್ಯಕ್ತಿತ್ವ, ತನ್ನ ದೇಶದ ಅಭಿಮಾನ ಪ್ರಾಧಾನ್ಯ ಪಡೆಯುತ್ತದೆ. ಆಗ ಅವನು ಎಷ್ಟೇ ವಿವೇಕಿ ಇದ್ದರೂ ಕ್ಷಣಿಕವಾಗಿ ಸೇಡಿನ ಜ್ವಾಲೆಯಿಂದ ಪರಿತಪಿಸುತ್ತಾನೆ. ಅಂತಹವನ ವರ್ತನೆ ವಿಘಾತುಕವಿದ್ದರೂ ಕ್ಷಮಾರ್ಹವಾಗಿದೆ. ಪ್ರಾಣಿಹಿಂಸೆ ಮಾಡುವುದು ಪಾಪವೆಂದು ಹುಲಿಯು ಬೆನ್ನಟ್ಟಿ ಬಂದಾಗ ಕೈಯಲ್ಲಿದ್ದ ಕೋವಿಯ ಉಪಯೋಗ ಮಾಡಲು ಹಿಂಜರಿಯುವುದು ಸರಿಯಾದೀತೆ?

ಸುಭಾಷ್ಚಂದ್ರ ಬೋಸರು ಸ್ವಾತಂತ್ರ್ಯ ಚಳವಳಿದಿಂದ ಸ್ವರಾಜ್ಯ ಸಾಧಿಸುವುದಕ್ಕಿಂತಲೂ ಪರರ ಸಹಾಯದಿಂದ ಭಾರತವನ್ನು ಗೆದ್ದುಕೊಳ್ಳಬೇಕೆಂದು ಜಪಾನರ ಸಹಾಯ ಯಾಚಿಸಿದರು. ಇದು ಗಾಂಧೀಜಿ ನೆಹರೂರಂತಹ ರಾಷ್ಟ್ರೀಯ ಮುಖಂಡರಿಗೆ ಸರಿಬೀಳದೆ ವಿರೋಧಿಸಿದರು. ಆದರೆ ನೇತಾಜಿಯವರ ಸೈನ್ಯಾಧಿಕಾರಿಗಳ ವಿಚಾರಣೆ ಕೆಂಪು ಕೋಟೆಯಲ್ಲಿ ನಡೆದಾಗ ಆ ಸೈನ್ಯಾಧಿಕಾರಿಗಳ ಪರವಾಗಿ ವಾದಿಸಿದವರು ಅದೇ ಮುಂದಾಳುಗಳು. ಅವರು ಕ್ರಾಂತಿಕಾರಿಗಳು, ಅಹಿಂಸಾ ವಿರೋಧಿಗಳು ಎಂದು ಮಹಾತ್ಮಾಜಿಯವರು ಅವರನ್ನು ತುಚ್ಛೀಕರಿಸಲಿಲ್ಲ. ಅವರ ಸಹಾಯಕ್ಕೆ ಸಕಾಲದಲ್ಲಿ ಧಾವಿಸಿ ರಕ್ಷಿಸಿದರು. ಹಾಗೆಂದು ಮಹಾತ್ಮಾ ಗಾಂಧೀಜಿ ಅಹಿಂಸಾವಾದಿಗಳಲ್ಲವೆನ್ನಬಹುದೇ?

೧೮೫೭ರ ಕಾಲದಲ್ಲಿ ಮಹಾತ್ಮಾಜಿಯಂತಹ ವಿಭೂತಿ ಪುರುಷನ ಮಾರ್ಗದರ್ಶನವಿದ್ದಿಲ್ಲ. ಅಂದು 'ತಾಡನಂ ಪ್ರತಿತಾಡನಂ' ಎಂಬ ನೀತಿಯೇ ಪ್ರಾಧಾನ್ಯ ಪಡೆದಿತ್ತು. ಅಂತಹ ಸಂದರ್ಭದಲ್ಲೂ ಸ್ವಾತಂತ್ರ್ಯ ಯುದ್ಧದ ನಾಯಕ ವರ್ಗದವರು ವೈರಿಗಳನ್ನು ಯೋಗ್ಯ ರೀತಿಯಲ್ಲಿ ನೋಡಿದ ಉದಾಹರಣೆಯಿದೆ. ಕೆಲವೊಂದು ಪುಂಡರು ನಡೆಸಿದ ಅಮಾನುಷ ಅತ್ಯಾಚಾರಗಳಿಗೆ ಬ್ರಿಟಿಷ್ ಚರಿತ್ರಕಾರರು ರಾಜಕೀಯ ಲೇಪವಿತ್ತರೂ, ಸ್ವಾತಂತ್ರ್ಯ ಯುದ್ಧದ 'ನೇತಾರರು' ಯೋಗ್ಯ ರೀತಿಯಲ್ಲೇ ಹೋರಾಟ ನಡೆಸಿದ್ದರು. ತಾತ್ಯಾಟೋಪಿ, ಝಾನ್ಸೀ ಲಕ್ಷ್ಮಿಬಾಯಿ, ನಾನಾ ಸಾಹೇಬರಂತಹ ವೀರರು ಜಗತ್ತಿನ ಇತಿಹಾಸದಲ್ಲಿ ಹೆಚ್ಚಿಲ್ಲ. ಅವರ ಜೀವನವು ದುರಂತವಾಗಿ ಕೊನೆಗಂಡರೂ ಅವರ ಪ್ರಾಣ ಬಲಿಯು ಸ್ವತಂತ್ರ ಭಾರತಕ್ಕೊಂದು ಭವ್ಯ ಬುನಾದಿಯನ್ನು ಹಾಕಿಕೊಟ್ಟಿದೆ. ಅವರ ಬಲಿದಾನವು ಮುಂದಿನ ಜನಾಂಗಕ್ಕೆ ಸ್ಫೂರ್ತಿಯ ಸೆಲೆಯಾಗಿ ಉಳಿಯುವಂತಾದುದರಿಂದಲೇ ಅನಂತರ ೯೦ ವರ್ಷಗಳ ತನಕವೂ ಬ್ರಿಟಿಷ್ ರಾಜ್ಯಸತ್ತೆಯ ವಿರುದ್ಧ ಹೋರಾಟವೇ ನಡೆಯಿತು ಅವರು ಪ್ರಾರಂಭಿಸಿದ ಹೋರಾಟವನ್ನು ಸಾಗಿಸುವಲ್ಲಿ ಸಹಸ್ರಾರು ಜನರ ಬಲಿದಾನ ಆಮೇಲೂ ನಡೆಯಿತು. ಲಕ್ಷಾವಧಿ ಹೆಂಗಸರು, ಮಕ್ಕಳು ನೂರು ರೀತಿಯ ಚಿತ್ರ ಹಿಂಸೆ ಅನುಭವಿಸಿದರು. ಲಕ್ಷಾಂತರ ಜನರ ಪ್ರಾಣಗಳೇ ಬ್ರಿಟಿಷ್ ಬಯನೆಟ್ಟಿನಿಂದ ರಕ್ತ ಚಿಮ್ಮಿ ನಿರ್ನಾಮವಾದುವು. ಅದೆಲ್ಲಕ್ಕೂ ಕಾರಣ ಈ ಪ್ರಥಮ ಸ್ವಾತಂತ್ರ್ಯ ಹೋರಾಟಕಾರರ ಧೀರೋದಾತ್ತ ಆದರ್ಶವೇ ಆಗಿದೆ. ಅಂತಹ ಪುಣ್ಯ ಜೀವಿಗಳು ನೂರು ವರ್ಷಗಳ ಹಿಂದೆ ತೋರಿಕೊಟ್ಟ ಮಾರ್ಗದಲ್ಲಿ ನಾವು ಮುನ್ನಡೆದು ಅವರ ಸುಪ್ತ ಆಕಾಂಕ್ಷೆ ಈಡೇರಿಸುತ್ತಿದ್ದೇವೆ. ಅವರನ್ನಿಂದು ತುಂಬು ಕೃತಜ್ಞತೆಯಿಂದ-ತುಂಬಿದ ಹೃದಯದ ಗೌರವದಿಂದ ಶ್ರದ್ಧಾಂಜಲಿ ಅರ್ಪಿಸಿ ನೆನೆಯುವುದು ಭಾರತೀಯನ ಕರ್ತವ್ಯ.

೧೮೫೭ ಸ್ವಾತಂತ್ರ್ಯ ಯುದ್ಧದ ಕತೆ ನಮಗೆಲ್ಲ ಚರಿತಾರ್ಥವಾದುದೇ. ಇದು ವ್ಯವಸ್ಥಿತವಾದ ರೀತಿಯಲ್ಲಿ ನಡೆದಿದ್ದರೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಅಂದೇ ನಿರ್ನಾಮವಾಗುತ್ತಿತ್ತು. ಆದರೆ ಅದು ವ್ಯಾಪಕವಾದ ರೀತಿಯಲ್ಲಿ ನಡೆಯಿತು. ಭಾರತೀಯರು ಅನಾಗರಿಕರು, ಪಾಶ್ಯ ಜೀವಿಗಳು, ಗುಲಾಮ ಮನೋವೃತ್ತಿಯವರು, ಅಲ್ಪತೃಪ್ತರು-ಎಂದೆಲ್ಲ ಎಣಿಕೆ ಹಾಕಿದವರಿಗೆ ಯೋಗ್ಯ ಪಾಠಕಲಿಸಿ, ಬ್ರಿಟಿಷರಿಗೆ ಕಣ್ಣು ತೆರಿಯುವಂತೆ ಮಾಡಿತು. ಈ ಸುಪ್ತ ಜ್ವಾಲಾಮುಖಿಯನ್ನು ಕೆಣಕಿದರೆ ತಮ್ಮ ನಿರ್ನಾಮ ನಿಶ್ಚಯವೆಂಬ ನೀತಿಯನ್ನು ಬ್ರಿಟಿಷರಿಗೆ ಹೇಳಿಕೊಟ್ಟಿತು. ಕೇವಲ ದಂಡೋಪಾಯದಿಂದಲೇ ಭಾರತವನ್ನು ನಿರಂಕುಶವಾಗಿ ಆಳಲು ಯತ್ನಿಸಿದವರಿಗೆ ಕಣ್ತೆರೆದು ಮಾನವೀಯ ದೃಷ್ಟಿಯನ್ನು ತೋರಿಕೊಟ್ಟ ಯುದ್ಧವೇ ೧೮೫೭ರ ಸ್ವಾತಂತ್ರ್ಯ ಯುದ್ಧ. ಭಾರತದ ಧೀರೋದಾತ್ತ

(೩ನೇ ಪುಟ ನೋಡಿರಿ)

೧೧ನೇ ಸ್ವಾತಂತ್ರ್ಯ ದಿನೋತ್ಸವದ ಸಂತೋಷ ಸಂದರ್ಭದಲ್ಲಿ ನಮ್ಮ ಹಾರ್ದಿಕ ಶುಭಾಶಯಗಳು.
ನಮ್ಮಲ್ಲಿ
ಅತ್ಯಾಧುನಿಕವೂ ಅತ್ಯಾಕರ್ಷಕವೂ ಆದ
ತರತರದ ಸೊಗಸಾದ ಬಟ್ಟೆಬರೆಗಳು
ಸುಲಭ ದರದಲ್ಲಿ ದೊರೆಯುತ್ತವೆ.
ಗ್ರಾಹಕರ ತೃಪ್ತಿಯೇ ನಮ್ಮ ಧ್ಯೇಯ.
ಒಮ್ಮೆ ಸಂದರ್ಶಿಸಿರಿ!
ಸುಂದರ್ ಕ್ಲೋತ್ ಸ್ಟೋರ್ಸ್
ಚರ್ಚ್ ರೋಡ್ ÷ ÷ ಉಡುಪಿ
SUNDER CLOTH STORES
CHURCH ROAD, UDIPI

ಯಾವತ್ತೂ ನಿತ್ಯೋಪಯೋಗಿ ಸಾಹಿತ್ಯಗಳಿಗೆ—
ಮತ್ತು
ನಿಪುಣ ಕೆಲಸಗಾರರಿಂದ ನಿರ್ಮಲವಾಗಿಯೂ
ರುಚಿಯಾಗಿಯೂ ತಯಾರಿಸಲ್ಪಡುವ
ಟೋಸ್ಟ್, ಬ್ರೆಡ್, ಕೇಕ್, ಬಿಸ್ಕಿಟ್
ಇತ್ಯಾದಿಗಳಿಗೆ ದಯಮಾಡಿ ನಮ್ಮನ್ನು ವಿಚಾರಿಸಿರಿ!
ಗೋವಾ ಸ್ಟೋರ್ಸ್ ಮತ್ತು ಬೇಕರಿ
ಕೆಥೋಲಿಕ್ ಬ್ಯಾಂಕಿನ ಎದುರು, ಉಡುಪಿ.

ಸಮಾಜವಾದಿ ಸ್ವರೂಪದ ಸಿಂಹಮುಖ

ಪ್ರಪಂಚದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿದೆ. ರಾಷ್ಟ್ರ ಘಟನೆಯನ್ನು ಸ್ವತಂತ್ರವಾಗಿ ನಿರ್ಮಿಸಿ, ಸ್ವೀಕರಿಸಿ, ಸಮಾಜವಾದಿ ಸ್ವರೂಪದ ಕಲ್ಯಾಣ ರಾಷ್ಟ್ರವನ್ನು ಸ್ಥಾಪಿಸುವ ಉದ್ದೇಶನನ್ನು ಭಾರತದ ಅಧಿಕಾರೀ ಪಕ್ಷ ಕಾಂಗ್ರೆಸ್ ನಿರ್ಧರಿಸಿ, ಅದರ ಸಾಧನೆಯತ್ತ ಧಾವಿಸುತ್ತಿದೆ ಆದರೆ, ನಮ್ಮ ಸರಕಾರವು ಏನಾಗಿಯೂ ಈ ಗುರಿಯನ್ನು ಸೇರಬೆಳಸುತ್ತಿದೆಯೆ? ಅಥವಾ ಸರಕಾರೀ ಪಕ್ಷದ ಹಿರಿಕಿರಿಯ ನಾಯಕರಿಗೂ ಅವರಿಂದ ಗುಂಡ ಮುಂಡ-ತಂಡಗಳ ಹುದ್ದೆರಗಳಿಗೂ ಅಧಿಕಾರವನ್ನು ಬಿಟ್ಟುಕೊಡುವ ಘಾತಕ ಪ್ರವೃತ್ತಿಯನ್ನು ಬೆಳೆಸುತ್ತಿದೆಯೆ? ಎಂಬುದನ್ನು ಪ್ರತಿಯೊಬ್ಬ ಭಾರತೀಯನೂ ಈ ದಿನ ತಿಳಿದುಕೊಳ್ಳುವುದು ಅಪೇಕ್ಷಣೀಯ.

ಬರೆದವರು: ಶ್ರೀ ಗೌರೀಶ ಕಾಯ್ಕಿಣಿ

ಜುಲೈ ೧೬ನೇ ದಿನ "ಟೈಮ್ಸ್ ಆಫ್ ಇಂಡಿಯಾ"ದ ವಿಶೇಷ ಸುದ್ದಿ ಸಂಸ್ಥೆಯು ದಿಲ್ಲಿಯಿಂದ ಒಂದು ಪತ್ರವನ್ನು ಪ್ರಕಟಿಸಿತು. ಆ ಮೇರೆಗೆ ಭಾರತ ಸರಕಾರವು ಕರ-ಸುಂಕಗಳ ಮತ್ತು ಕೆಲಸಗಾರಿಕೆಯ ಕಾಯಿದೆಗಳ ಅಡಳಿತದ ಕುರಿತು ದೊಡ್ಡ ಮಾರ್ಪಾಟಗಳನ್ನು ಮಾಡಲಿದೆಯೆಂದೂ, ಅದಕ್ಕಾಗಿ ನಮ್ಮ ರಾಜ್ಯ ಘಟನೆಯ ೨೬-೨೨ನೇ ಕಲಮುಗಳನ್ನು ತಿದ್ದುವ ಆಲೋಚನೆ ನಡೆಸಿದೆಯೆಂದೂ ತಿಳಿದುಬರುತ್ತದೆ. ಅಡಳಿತದ ಸೌಕರ್ಯಕ್ಕಾಗಿ ಕಾಯಿದೆಗಳ ತಿದ್ದುಪಡಿ ಅಥವಾ ರದ್ದತಿ ಸಮಯಾನುಸಾರ ಕೈಗೊಳ್ಳುವದು ಯಾವದೇ ಸರಕಾರದ ಕಾರ್ಯಕ್ಷಮತೆಗೆ ಒಪ್ಪಿದ ಸಂಗತಿಯೇ ಸರಿ. ಆದರೆ ನಮ್ಮ ಕೇಂದ್ರ ಸರಕಾರವು ಹೀಗೆ ಪದೇ-ಪದೇ ಈ ಅಧಿಕಾರ ನಿರ್ವಹಣೆಯ ಅನುಕೂಲಕ್ಕಾಗಿ ರಾಜ್ಯ ಘಟನೆಯನ್ನೆ ತಿದ್ದುವ ಪ್ರಯತ್ನಯ ಉಂಟಾಗುವುದು ಎಷ್ಟು ಆಲೋಚನೀಯವೋ ಅಷ್ಟೇ ಶೋಚನೀಯವು.

ರಾಜ್ಯ ಘಟನೆಯ ಕಲಮುಗಳನ್ನು ಸೂತ್ರಧಾರಿಗಳ ಇಚ್ಛಾನುಸಾರವಾಗಿ ಸರಿಪಡಿಸಿಕೊಳ್ಳುವಷ್ಟು ಹಗುರಾದ ಪಗಡೆಯಾಟದ ಕಾಯಿಗಳಾಗತೊಡಗಿದರೆ ಘಟನೆಯ ಗಾಂಭೀರ್ಯವಾಗಲಿ ಗೌರವವಾಗಲಿ ಉಳಿಯುವದೆಂತು? ರಾಜ್ಯ ವ್ಯವಸ್ಥೆಯ ಹಾಗೂ ಅಡಳಿತದ ಸಂಘಟನೆಯ ದೃಢತೆಯೂ ಸ್ಥಿರತೆಯೂ ಬಾಳಿಕೆಯಾಗುವುದೆಂತು? ಆ ಮೂಲಭೂತ ತಾತ್ವಿಕ ಪ್ರಶ್ನೆಯನ್ನು ಬದಿಗಿಟ್ಟರೂ ಸರಕಾರದ ಧೋರಣೆಯು ಒಂದು ವಿಶಿಷ್ಟ ಅನಿಷ್ಟ ನಿಟ್ಟಿನತ್ತ ಹಾಯುತ್ತಿದೆ— ಎಂದು ಎಚ್ಚರಿಕೆಯ ದನಿಯನ್ನು ಎತ್ತಬೇಕಾಗುತ್ತದೆ.

ಏಕೆಂದರೆ ಸರಕಾರದ ಉದ್ದೇಶ ಧೋರಣೆ ಇನ್ನೂ ಸಂದಿಗ್ಧವಾಗಿದೆ. ಪ್ರಾಪ್ತಿಯ ಕರ, ಆಸ್ತಿಯ ಕರ, ಕಸ್ಟಮ್ ಸಂಕ, ಅಬಕಾರಿ ಕರ, ವಿದೇಶಿ ವಿನಿಮಯ ಇತ್ಯಾದಿ ಬಾಬುಗಳಲ್ಲಿ ಎಳಬಹುದಾದವಾದ ವ್ಯಾಜ್ಯಗಳ ನಿರ್ಣಯಗಳಿಗಾಗಿ ಫ್ರೆಂಚ ಸರಕಾರದ ಮಾದರಿಯನ್ನು ಗೀರಿ ಇಲ್ಲಿಯೂ ಬೇರೆ ಬೇರೆ ಸಂಚಾಯತಿ ಮಂಡಳಗಳನ್ನು (Tribunals) ಏರ್ಪಡಿಸುವ ಧೋರಣೆ ಸರಕಾರದ್ದಾಗಿದೆ ಜಗತ್ತಿನಲ್ಲಿಯೇ ಅತ್ಯಂತ ಅಸ್ಥಿರವೆಂದು ಮಾದರಿಯಾದ— ಸಂಸದೀಯ ಪದ್ಧತಿಗಳಿಗೆ ಒಂದರಂತೆ ಸರಕಾರಗಳು ಎದ್ದು ಬೀಳುವ ಫ್ರೆಂಚ ರಾಜ್ಯ ಕಾರಭಾರದ ಮಾದರಿ ಭಾರತಕ್ಕೆ ಏಕೆ ಅನುಕರಣೀಯವೆನಿಸಿತೋ ಆಶ್ಚರ್ಯ ಸಿಂಹಗಳಿಗೇ ಗೊತ್ತು! ನಮ್ಮ ಕನಿಷ್ಠ-ವರಿಷ್ಠ ನ್ಯಾಯಾಲಯಗಳಲ್ಲಿ ಕೆಲಸ ಹೊರೆ ಹೊರೆಯಾಗಿ ಬಿದ್ದಿದೆ ಹಬ್ಬಿನ ನ್ಯಾಯಾಧೀಶರನ್ನು ಸೂರೆಸಿದರೂ ಅವು ಬಗೆಹರಿಸಬೇಕಾದ ಕಾರ್ಯಭಾರ ಸಾಕಷ್ಟು ಸಾಕು-ಸಾಕಾಗಿ ಉಳ್ಳು ಇದೆ. ಆದ್ದರಿಂದ ಹೀಗೆ ಪ್ರತ್ಯೇಕ ನ್ಯಾಯ-ನಿರ್ಣಯ ಮಂಡಳಗಳನ್ನು ಏರ್ಪಡಿಸಬೇಕಾಗಿ ಬಂದಿದೆಯೆಂದುಸರಕಾರದ ಆತ್ಮಸವ ರ್ಥನೆ. ಕರ ತೆರಿಗೆಗಳ ಕ್ಷೇತ್ರದಲ್ಲಿ ಹೇಗೋ ಹಾಗೆಯೇಸರಕಾರಿ ನೌಕರರ ಸಂಬಳ, ಶಿಸ್ತು ಇವುಗಳ ಕುರಿತು ಕೊನೆಯ ನಿರ್ಣಯ ಕ್ಕಾಗಿಯಾ ರಾಜ್ಯಪಾಲರಿಗೆ ನೆರವಾಗಲಿಕ್ಕೆ ಇಂಥ ಸಲಹೆಗಾರ-ಸಮಿತಿಗಳುಂಟಾಗಲಿವೆ. ಮತ್ತು ಇವೆಲ್ಲ ನಿರ್ಣಯ-ಮಂಡಳಗಳ ಮೇಲೆ ಯಾವ ನ್ಯಾಯಾಲಯಕ್ಕೂ 'ಅಪೀಲು' ಇಲ್ಲ. "The jurisdiction of civil and high courts would be completly barred" ಸರಕಾರದ ಈ ಹೊಸ ಧೋರಣೆಯ ಘಾತಕ ಸ್ವರೂಪವು ಈ ಕೊನೆಯ ಮಾತಿನಲ್ಲಿ ಇದೆ.

ಸದ್ಯ ಅಡಳಿತದ ಅಧಿಕಾರಿಗಳಿಗೆಕೆಲಮಟ್ಟಿಗೆ ಕೆಳಮಟ್ಟದ ನಿರ್ಣಯಾಧಿಕಾರ ಇದ್ದೇದೆ ಉದಾಹರಣೆಗೆ ಸಮುದ್ರಸುಂಕದ ಕಾಯಿದೆಯಂತೆ Sea-customs Act ಕಸ್ಟಂ ಕಲೆಕ್ಟರನಿಗೆ, ವ್ಯಾಜ್ಯಕ್ಕೆ ಕಾರಣವಾದ ರಕಮಿನ ವಮೂರ ಪಟ್ಟನನರಿಗೆ ದಂಡ ಹೇರಲು ಅಧಿಕಾರವಿದೆ ಈ ದಂಡ ಕೆಲವು ಲಕ್ಷ ರೂಪಾಯಿಗಳ ವರೆಗೂ ಹೋಗಬಹುದು. ಆದರೆ ರಾಜ್ಯ ಘಟನೆಯ ೨೨೬-೨೨೭ನೇ ಕಲಮಿನ ಬಲದಿಂದ ಸುಪ್ರೀಮ್ ಕೋರ್ಟಗೆ ಈ ಕುರಿತು 'ಅಪೀಲು' ಮಾಡಿಕೊಳ್ಳುವ ಹಕ್ಕು ಆಪಾದಿತರಿಗೆ ಸಲ್ಲುತ್ತದೆ ಇನ್ನೂ ಈ ಅಪೀಲು ಪ್ರಕರಣಗಳಲ್ಲಿ ಅನ್ಯಾಯವಾಗಿ ವಿಪರೀತ ಕಾಲಹರಣ ಹಣದ ನೆಚ್ಚವಾಗುತ್ತದೆ. ಉದಾಹರಣೆಗೆ ಅಲಹಬಾದದ ಒಂದೇ ಹೈಕೋರ್ಟನಲ್ಲಿ ಇಂಥ ೫೦೦ ಪ್ರಕರಣಗಳು ಕೊಳೆಯುತ್ತ ಬಿದ್ದಿವೆ.

ಇದಕ್ಕೆಲ್ಲ ಪರಿಹಾರವೆಂದು ಸರಕಾರ ಹೈಕೋರ್ಟು ಸುಪ್ರೀಂ ಕೋರ್ಟುಗಳ ಅಧಿಕಾರ ಕಕ್ಷೆಯಿಂದಲೇ ಇಂಥ ವ್ಯಾಜ್ಯ ವಿಚಾರಣೆಗಳನ್ನು ಹೊರಪಡಿಸುವ ಹಂಚಿಕೆ (ಹೊಂಚು?) ಮಾಡ ಹತ್ತಿದೆ ಇಂಥ ವಿಚಾರಣೆಗಾಗಿ ಅಡಳಿತದ ಮಟ್ಟದಲ್ಲಿಯೇ ಕೆಲವು ಪ್ರಾದೇಶಿಕ ವಿಷಯ ವಿಚಾರಣಾ ಮಂಡಳಗಳನ್ನು "ಟ್ರಾಯಿಬ್ಯೂನಲ್ಸ್"—ಸ್ಥಾಪಿಸಲಿದೆ. ಕೆಲಸಗಾರರ ಸಂಘ ಸಂಬಳಗಳ ವಿಚಾರವಾಗಿಯೂ ಇದೇ ರೀತಿ ನ್ಯಾಯಾಲಯಗಳಿಂದ ಸ್ವತಂತ್ರವಾದ ವಿಚಾರಣೆಯ ಪದ್ಧತಿ ನಿರ್ಣಯದ ಶೀಘ್ರತೆ ಸಲಭತೆಗಳ ನೆವ ಒಡ್ಡಿ ಕೇಂದ್ರ ಸರಕಾರವು ಸ್ಥಾಪಿಸಬೇಕೆನ್ನುತ್ತದೆ

ಜಗತ್ತಿನಲ್ಲಿ ಎಷ್ಟೋಸಲ ಒಳ್ಳೆಯ ಉದ್ದೇಶಗಳನ್ನಿಟ್ಟುಕೊಂಡು ಕೆಟ್ಟ ಪದ್ಧತಿಗಳೂ ದುಷ್ಟ ಪರಿವಾರಗಳೂ ನೆಲೆಗೊಂಡದ್ದುಂಟು ಉದ್ದೇಶ ಮತ್ತು ಉಪಾಯಗಳಲ್ಲಿ ಸೂಕ್ಷ್ಮವಾದ ವಿವೇಕ ಮಹಾತ್ಮರು ನಮಗೆ ಕಡ್ಡಾಯವಾಗಿ ಕಲಿಸಿದ ಒಂದು ವಸ್ತು, ಪಾರ, ಸಾಧ್ಯದ ಶುದ್ಧತೆಗೆ ಸಾಧನಗಳ ಶುದ್ಧಿಯೂ ಅಷ್ಟೇ ಆಗತ್ಯವೆಂದು ಕಾಂಗ್ರೆಸು-ವಿಶೇಷತಃ ನಮ್ಮ ಪ್ರಧಾನಮಂತ್ರಿ ನೆಹರೂ—ಜಗತ್ತಿಗೇ ಘೋಷಿಸುತ್ತ ಬಂದದ್ದುಂಟು. ಅಂಥಲ್ಲಿ ಈ ಹೊಸ ಹೊಟ ಎಷ್ಟರಮಟ್ಟಿಗೆ ರಾಜ್ಯ ಸತ್ತೆಯ ಶುದ್ಧ ಸ್ವರೂಪವನ್ನು ಕಾಪಾಡಿಕೊಂಡು ಹೋಗಬಲ್ಲದು?—ಇದೊಂದು ವಿವೇಕಿಗಳ ಹಾಗೂ ವಿಚಾರವಂತರ ನಿದ್ದೆಗೆಡಿಸುವ ಕನಸಾಗಿದೆ! ಒಳ್ಳೆಯ ಹೆಸರಿನಲ್ಲಿ ಕೆಡುಕು ಮುಂದುವರಿಯುವಾಗ ಅದರ ಪ್ರತೀಕಾರ ತುಂಬ ಬಿಗಿಯಾಗಿಬಿಡುತ್ತದೆ.

ಕಾರ್ಯಾಂಗದಿಂದ ನ್ಯಾಯಾಂಗವನ್ನು ಬೇರ್ಪಡಿಸುವದು ಲೋಕಸತ್ತೆಯ ಶುದ್ಧತೆಗಾಗಿ ಪ್ರಜಾಪ್ರಭುತ್ವದ ಪ್ರಭಾವಿಯಾದ ಪ್ರತಿಜ್ಞಾಪನೆ ಹಾಗೂ ಪ್ರತಿಸ್ಪೈಗಾಗಿ ಅತ್ಯಗತ್ಯವೆಂದ ನಮ್ಮ ಸರಕಾರ ಒಪ್ಪಿಕೊಂಡಿದೆ. ಅದೇ ಸರಕಾರ ಈ ರೀತಿ ನ್ಯಾಯಾಂಗದ ಕಾರ್ಯಕ್ಷೇತ್ರವನ್ನು ಉತ್ತರೋತ್ತರ ಸಂಕೋಚಗೊಳಿಸುವ ಮತ್ತು ಕಾರ್ಯಾಂಗದ ಕೈಯನ್ನೆ ಬಲಪಡಿಸುವ ಕ್ರಮವನ್ನು ನ್ಯಾಯದಾನದ ಶೀಘ್ರತೆಯ ಮತ್ತು ಸುಲಭತೆಯ ನೆವದಿಂದ ರೂಢಗೊಳಿಸಲು ಹೊರಟಿದ್ದು ವಿಸಂಗತವಿದ್ದಷ್ಟೇ ವಿಪಾರಿಯೂ ಆಗಿದೆ! ಈ ಸಮಸ್ಯೆಯನ್ನು ಕಣ್ಣಗೆಡಿಸುವ ಇನ್ನೂ ಒಂದು ವಿಸಂಗತಿಯೆಂದರೆ, ಕಾಂಗ್ರೆಸ್ಸು ಕೇಂದ್ರದ ಕಮ್ಯುನಿಸ್ಟ ಅಡಳಿತವನ್ನು ಟೀಕಿಸುವಾಗ ಅದರ ಬತ್ತಳಿಕೆಯ ಒಂದು ಬಲಿಷ್ಠವಾದ ಬಾಣವು ಅಲ್ಲಿ ಅಧಿಕಾರೀ ಪಕ್ಷವು ನ್ಯಾಯಾಂಗ ಕೋರ್ಟುಗಳಿಂದ ಅನೇಕ ವ್ಯಾಜ್ಯ—ವ್ಯವಹಾರಗಳಿಗೆ ಪ್ರಕರಣಗಳನ್ನು ಹಿಂದೆಗೆಯಿಸಿ ಉಲ್ಲಲ್ಲಿಯ ಸ್ಥಳೀಕ ಸಂಚಾಯತಿ ಸಮಿತಿಗಳ ನಿರ್ಣಯಕ್ಕೆ ಒಪ್ಪಿಸುವಂತೆ ಮಾಡಿದೆ—ಎಂಬುದವಾಗಿದೆ ಆದರೆ ಕೇಂದ್ರ ಸರಕಾರವೇ ಹೈಕೋರ್ಟ-ಸುಪ್ರೀಮ್ ಕೋರ್ಟುಗಳ ಅಧಿಕಾರ ಕಕ್ಷೆಯಿಂದ ಹೀಗೆ ರಾಷ್ಟ್ರದ ಜೀವಾಳದ ಸಮಸ್ಯೆಗಳ ನ್ಯಾಯ ನಿರ್ಣಯವನ್ನೇ ಹೊರಪಡಿಸಿ ಅನ್ಯಗಳಿಗಾಗಿ ಸಮಾಂತರ ಸಂಸ್ಥೆಗಳ ಏರ್ಪಾಟ ಮಾಡುತ್ತಿದ್ದಾಗ, ಕೇರಳದ ಕಮ್ಯುನಿಸ್ಟ್ ಸರಕಾರದ ಮೇಲೆ ಹೊಡುವ ಟೀಕಾಸ್ತ್ರದ ಮೊನೆಯೇ ನೊಂದವಾಗುತ್ತದೆ "ನೈ

(೨೮ನೇ ಪುಟ ನೋಡಿರಿ)

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿ., ನಂಜನಗೂಡು.

ನಲವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಔಷಧ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ ಮತ್ತು ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ

ಅತ್ಯಾಧುನಿಕ ಕ್ರಮದಲ್ಲಿ ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದಮೇಲೆ

ನಿತ್ಯವೂ ತಯಾರಾಗುತ್ತಲಿವೆ.



—. ಔಷಧ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ —

ಶಾಖೆಗಳು: ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ.

ಸೋಲ್ ಏಜೆಂಟರು. ಕನ್ನಡಸೀಮೆ ಬಿಟ್ಟು (ಟೂತ್‌ಪೌಡರ್ ಮತ್ತು ಔಷಧಗಳಿಗೆ ಮಾತ್ರ)

ಯುನೈಟೆಡ್ ಕನ್ಸರ್ನ್ 54, ಬಂದರು ಬೀದಿ, ಮದ್ರಾಸ್

ಕಾಳಿದಾಸನ ಕಾಲದ ಭಾರತ

ಪುರಾಕವೀನಾಂ ಗಣನಾ ಪ್ರಸಂಗೇ । ಕನಿಷ್ಠಿಕಾಧಿಷ್ಠಿತ ಕಾಳಿದಾಸಾ
ಅದ್ಯಾಪಿ ತತ್ತುಲ್ಯಕವೇರಭಾವಾತ್ । ಅನಾಮಿಕಾ ಸಾರ್ಥವತೀ ಬಭೂವ ॥

ಪ್ರಾಚೀನ ಕವಿಗಳನ್ನು ಗಣಿಸುವ ಸಂದರ್ಭದಲ್ಲಿ ಕಾಳಿದಾಸನ ಹೆಸರು ಮೊದಲು ಸೂಚಿತವಾಯಿತು ಇದರಿಂದ, ಪ್ರಸಿದ್ಧನಾಗಿ ಎಣಿಸುವ ಕಿರಿಬೆರಳು ಅವನಿಗೆ ಮೀಸಲಾಯಿತು. ಮುಂದೆ ಅತನಿಗೆ ಸಮನಾದ ಮತ್ತೊಬ್ಬ ಕವಿಯು ಇಂದಿನ ತನಕ ಜನಿಸದುದರಿಂದ ಉಂಗುರದ ಬೆರಳಿಗೆ "ಅನಾಮಿಕಾ" ಎಂಬಿಟ್ಟ ಹೆಸರು ಸಾರ್ಥಕವಾಯಿತು— ಕ್ರಿ. ಶ. ೨೦ನೇ ಶತಮಾನದಲ್ಲಿ ಬದುಕುತ್ತಿರುವ ನಾವು ನಮ್ಮಸ್ಸು ಸುಧಾರಣೆಯ ಗಾಳಿ ಸೋಂಕಿದವರು ಆದರೂ ಇಲ್ಲಿ; ಪ್ರಾಚೀನ ಭಾರತೀಯರು ಗೊಡ್ಡುಗಳೆಂಬ ದುರ್ಭಾವನೆಗಳಿಂದ ಕೂಡಿದ್ದೇವೆ. ನಮ್ಮವರ ಬಗ್ಗೆ ಅಭಿಮಾನ ಹುಟ್ಟುವ ವರೆಗೆ ದೇಶಪ್ರೇಮವೂ ಕಾಣಿಸಿಕೊಳ್ಳದು. ಕ್ರಿ. ಪೂ. ನೂರು ವರ್ಷಗಳ ಸುಮಾರಿಗೆ ಬಾಳಿದ್ದ ಕಾಳಿದಾಸ ಕವಿಯು ಆ ಕಾಲದ ಜನಚಿತ್ರವನ್ನು ರಮ್ಯವಾಗಿ ತನ್ನ ಕಾವ್ಯಗಳಲ್ಲಿ ಚಿತ್ರಿಸಿದ್ದಾನೆ ಅವನನ್ನು ನೋಡುವಾಗ, ನಾವು ನಾಗರಿಕರೂ, ಅಥವಾ ನಮಗಿಂತ ಪ್ರಾಚೀನ ಭಾರತೀಯರು ಸುಧಾರಿತರೂ ಎಂದು ವೇದ್ಯವಾಗಿ, ನಮ್ಮ ಮನಸ್ಸು ತಿಳಿಗೊಳ್ಳುವುದು.

ಬರೆದವರು: ಯು ನಾ. ಉಡುಪ, ವಿದ್ವಾನ್, ಇರೋಡಿ.

ಭೂಗತಿ ಶಾರದೆಗೆ ಕಾಳಿದಾಸನ ಮೇಲೆ ಏನು ಅಭಿಮಾನವೋ! ಎಷ್ಟು ಪಕ್ಷಪಾತವೋ! ಅವನ ಸಾರಸ್ವತ ಭಂಡಾರವೆಂದರೆ ಏನು ಜೀವವೋ! ಅವನ ಯಃಶ್ಚಂದ್ರಿಕೆಯಲ್ಲಿ ಏನು ಪ್ರಾಣವೋ! ಕಾಳಿದಾಸನು ಭಾರತ ಭೂಮಿಯಿಂದ ಅದೃಶ್ಯನಾಗಿ ಎರಡು ಸಹಸ್ರ ವರ್ಷಗಳು ಕಳೆದಿದ್ದರೂ, ಅವನು ಇಂದೂ ಸಾಹಿತ್ಯ ಜಗತ್ತಿಗೆ ನವೀನನೇ. ಆತ್ಮೀಯನೇ. ಅವನ ಸಾಹಿತ್ಯ ರತ್ನಗಳೆಲ್ಲಾ ಸಾಹಿತಿಗಳಿಗೆ ಪೂಜ್ಯ ಭಗವದ್ಗೀತೆಗಳೇ. ಆದರೆ ಈ ಮಹಾಕವಿಯು ತಾನು ಭಾರತದ ಯಾವ ಪುಣ್ಯ ದಿನಗಳಲ್ಲಿ ಬಾಳಿದ್ದೆ? ಯಾವ ಪ್ರಾತಃ ಸ್ಮರಣೀಯ ಚಕ್ರವರ್ತಿಯು ತನಗೆ ಆಶ್ರಯ ದಾತನಾಗಿದ್ದ?—ಇವೊಂದನ್ನೂ ಹೇಳದೆ ಇದ್ದರೂ ಸಂಶೋಧಕರು ಕೆಲವು ಶತಮಾನಗಳಿಂದ ಇವನಿಗಾಗಿತಮ್ಮಜೀವನವನ್ನೇ ಪಣವಾಗಿಟ್ಟು ಸಂಶೋಧನೆ ನಡೆಸಿ, ಕಾಳಿದಾಸನು ಕ್ರಿ. ಪೂ. ಒಂದನೆಯ ಶತಮಾನದಲ್ಲಿ ರಕಪುರುಷ ವಿಕ್ರಮಾದಿತ್ಯನ ಆಸ್ಥಾನದಲ್ಲಿ ದಿವ್ಯಜ್ಯೋತಿಯಾಗಿ ಬಾಳಿ ಅಳಿದನೆಂದು ನಿರ್ಧರಿಸಿದ್ದಾರೆ. ಆ ಎರಡು ಸಾವಿರ ವರ್ಷಗಳ ಹಿಂದೆ ನಮ್ಮ ಭರತ ಭೂಮಿ ಹೇಗಿತ್ತು? ಅಂದಿನ ಜನಜೀವನ ಹೇಗಿತ್ತು?—ಇದಕ್ಕೆ ಕಾಳಿದಾಸ ಮಹಾಕವಿಯ ಕಾವ್ಯ ನಾಟಕಗಳೇ ಸಾಕಷ್ಟು ಸಾಕ್ಷಿಯನ್ನೊದಗಿಸುತ್ತಿವೆ. ಇವು ಅಂದಿನ ಸಮಗ್ರ ಚಿತ್ರವಾಗಿರದಿದ್ದರೂ, ಆ ಚಿತ್ರಗಳಿಗೆ ಬೇಕಾದ ಪ್ರಮುಖ ಪ್ರಥಮ ರೇಖೆಗಳಾಗದಿರವು.

ಕಾಳಿದಾಸನ ಕಾಲದಲ್ಲಿ ಭಾರತ ದೇಶದಲ್ಲಿ ವಿದ್ಯಾಭ್ಯಾಸವು ಉನ್ನತ ಸ್ಥಿತಿಯಲ್ಲಿತ್ತು. ಆಗ ದಾಸ ದಾಸಿಯರಿಗೂ ಓದು ಬರಹ ತಿಳಿದಿತ್ತು. ಕವಿಶಕ್ತಿಯು ಜನ ಸಾಮಾನ್ಯರಲ್ಲೂ ರೂಢಿಯಾಗಿತ್ತು. ಕುಮಾರಿಯರು ಪ್ರೇಮಪತ್ರವನ್ನು ಕವಿತೆಯಲ್ಲೇ ಬರೆಯುತ್ತಿದ್ದರು. ಆಗ 'ಲಿಪಿಕರಿ'ಯರೆಂಬ ಸ್ತ್ರೀ ಕಾರ್ಯದರ್ಶಿಗಳಿದ್ದರು. ಪಂಡಿತಾ, ಕೌಶಿಕೀ-ಮೊದಲಾದ ಬಿರುದುಗಳನ್ನು ಪಡೆದ ಹಲವು ವಿದುಷಿಯರಿದ್ದರು. ಸ್ತ್ರೀಯರು ನಾಟಕಗಳನ್ನು ಸ್ವತಃ ಬರೆದು ಅಭಿನಯಿಸುತ್ತಿದ್ದರು. ನಾಗರಿಕರ ಮುಂದೆ ಅಂದಿನ ಸ್ತ್ರೀಯರು ಘೋಷಣೆ ಇಲ್ಲದೆ ಅಡ್ಡಾಡುತ್ತಿದ್ದರು. ಉದ್ಯಾನಗಳಲ್ಲಿ ಸ್ತ್ರೀಪುರುಷರು ಜೊತೆಯಲ್ಲಿ ವಿಹರಿಸುವುದು ಆಗ ಅಗೌರವವಾಗಿರಲಿಲ್ಲ. ಸ್ತ್ರೀಯರು ತಪಸ್ವಿನಿಯರಾಗಿ ಬಾಳುತ್ತಿದ್ದಂತೆ, ದೇಹಾಲಂಕಾರಕ್ಕಾಗಿ ಹಲವು ಬಗೆಯ ವಿಲಾಸ ಸಾಮಗ್ರಿಗಳ ಸಂಗ್ರಹದಲ್ಲೂ ಆಸಕ್ತರಾಗಿದ್ದರು. ಆಗಿನ ವಿಲಾಸಿನಿಯರು ಲೋಧ್ರ ಪುಷ್ಪದ ಧೂಳನ್ನು 'ಪೌಡರ್'ನಂತೆ ಉಪಯೋಗಿಸುತ್ತಿದ್ದರು. ಅವರು ತಮ್ಮ ಕೇಶ ಪ್ರಸಂಚವನ್ನು ಧೂಪ ಧೂಮದಿಂದ ಪರಿಮಳಿಸುತ್ತಿದ್ದರು. ಇಂದಿನ ಕೃತಕ ಸುಗಂಧ ದ್ರವ್ಯಗಳ ಬದಲಿಗೆ ಕಸ್ತೂರಿ, ಶ್ರೀಗಂಧ, ಪುನುಗು-ಇವನ್ನೇ ಆ ಸ್ತ್ರೀಯರು ಉಪಯೋಗಿಸುತ್ತಿದ್ದರು. ಶ್ರೀಮಂತ ತರುಣಿಯರು ಶುಕ ಸಾರಿಕೆ ನವಿಲುಗಳನ್ನು ಸಾಕುವ ಪದ್ಧತಿ ಇತ್ತು. ಆಗ ಯವನ ಸ್ತ್ರೀಯರುಹೆ ಚ್ಚಾಗಿ ದಾಸಿಯರಾಗುತ್ತಿದ್ದರು. ಸಹಗಮನವು ರೂಢಿಯಲ್ಲಿ ಅಸ್ತಿತ್ವದಲ್ಲಿತ್ತು. (ರ. ವಂ. ೧೭). ಕುಶನು ಇಂದ್ರನಿಗೆ ಸಹಾಯಮಾಡಲು ಹೋದಾಗ ಯುದ್ಧಭೂಮಿಯಲ್ಲಿ ಮಡಿದನು. ಆಗ ಅವನ ಪತ್ನಿ ಕುಮುದ್ವತಿಯು ಸಹಗಮನವಾದಳು. ಅಂದು ಶವ ದಹನ ಮತ್ತು ದಫನ ಎರಡೂ ರೂಢಿಯಲ್ಲಿತ್ತು. (ರ. ವಂ. ೮) ರಘುವು ಯೋಗ ಸಮಾಧಿಯಿಂದಪರಮಪುರುಷನನ್ನು ಸೇರಲು, ಅವನ ದೇಹವನ್ನು ಯತಿಗಳ ದೇಹದಂತೆ ಹೂಳಿದ್ದರು.

ಸ್ತ್ರೀಯರಿಗೆ ಆಗ ನಾಟ್ಯ ವಿದ್ಯೆಯು ಶಿಕ್ಷಣವು ಅಗೌರವವೆಂದು ಭಾವಿಸಲ್ಪಡದ, ಪ್ರಶಂಸನೀಯವಾದ ವಿದ್ಯೆಯೆಂದೇ ತಿಳಿಯಲ್ಪಟ್ಟಿತ್ತು. ಮಾಲವಿಕಾಗ್ನಿ ಮಿತ್ರದ ಮಾಲವಿಕೆಯು ಗಣದಾಸನೆಂಬ ನಾಟ್ಯಾಚಾರ್ಯನಿಂದ ಚೆನ್ನಾಗಿ ನಾಟ್ಯವಿದ್ಯೆಯಲ್ಲಿ ಶಿಕ್ಷಣ ಹೊಂದಿದ್ದಳು. ಆ ನಾಟಕದ ಎರಡು ಅಂಕಗಳೂ ಈ ನಾಟ್ಯ ವಿಚಾರಗಳಿಂದಲೇ ತುಂಬಿವೆ. ಈ ನಾಟ್ಯವನ್ನು "ಚಾಕ್ಷುಷಕ್ರತು" ವೆಂದು ಕರೆಯುತ್ತಿದ್ದರಲ್ಲದೆ, ಇದರಲ್ಲಿ ಲಾಸ್ಯ ಮತ್ತು ತಾಂಡವ ವೆಂದು ಎರಡು ಭಾಗವಿತ್ತೆಂದೂ ತೋರುತ್ತದೆ. ಆಗ ಭಿನ್ನರುಚಿಯುಳ್ಳ ಜನರಿಗೂ ನಾಟ್ಯವು-ಆನಂದವನ್ನೊದಗಿಸುತ್ತಿತ್ತು (ಮಾಲ. ನಾ. ಅಂ. ೧).

ಹಾಡುವುದು ಮತ್ತು ವಾದ್ಯಬಾರಿಸುವುದರಲ್ಲಿ ಅಂದಿನ ರಾಜರಾಣಿಯರಿಗೆ ಪಾಂಡಿತ್ಯವಿರುತ್ತಿತ್ತು. (ರ. ವಂ. ೮. ೬೭) ಅರಮನೆಯಲ್ಲಿ ರಾಣಿಯರಿಗಾಗಿ ಸಂಗೀತ ಶಾಲೆಗಳಿದ್ದುವು (ಅಭಿ. ಶಾ. ೫) ದುಷ್ಯಂತನು ಏಕಾಂತಗೃಹದಲ್ಲಿದ್ದಾಗ ಸಂಗೀತ ಶಾಲೆಯಿಂದ ಭೈರವರಾಪ ದೇಶದಿಂದ ನಾಯಕ ಸ್ವಭಾವವನ್ನು ದೂಷಿಸುವುದರ ಚಮತ್ಕಾರವು ಅರಸನಿಗೆ ಒಪ್ಪಿಗೆಯಾಗುವುದು. ಆ ಕಾಲದಲ್ಲಿ ಸಂಗೀತಜ್ಞರೂ, ವಾದ್ಯ ಬಾರಿಸುವವರೂ, ನರ್ತಕ ನರ್ತಕಿಯರೂ ಸಾಕಷ್ಟಿದ್ದರು (ಕು. ಸಂ. ೧೧.೫೬). ಅಂದು ಸಂಗೀತ ವಿದ್ಯಾಲಯಗಳಿದ್ದಿರಬಹುದೆನ್ನಲು ಸಾಕಷ್ಟು ಆಧಾರಗಳಿವೆ (ಮಾಲ ನಾ. ೧).

ಕಾಳಿದಾಸನ ಕಾಲದ ಅರಮನೆಗಳಲ್ಲಿ ತಪ್ಪದೆ ಚಿತ್ರಶಾಲೆ ಇರುತ್ತಿತ್ತು. ಅಂದು ಚಿತ್ರಕಲೆ ಉನ್ನತವಾಗಿತ್ತು (ಮಾಲ. ನಾ. ೧). ಸ್ತ್ರೀಯರು ಚಿತ್ರಕಲೆಯಲ್ಲಿ ಪಾರಂಗತರಾಗಿದ್ದರು(ಮೇ. ಸಂ. ೩ ೩೪) ಆಗ ಇತರ ವಿದ್ಯೆಗಳಂತೆ ಚಿತ್ರಕಲೆಯೂ ಸ್ತ್ರೀಯರ ಅಭ್ಯಾಸದ ಸಾಮಾನ್ಯ ವಿಷಯವಾಗಿತ್ತು. ವಾಸವದತ್ತದೇವಿಯು ಇತರ ವಿದ್ಯೆಗಳೊಡನೆ ಚಿತ್ರ ವಿದ್ಯೆಯನ್ನೂ ಕಲಿಯುತ್ತಿದ್ದಳು. (ಕು. ಸಂ. ೫.೫೮) ರಾಜರೂ ಚಿತ್ರಕಲೆಯಲ್ಲಿ ಅಭಿಜ್ಞರಾಗಿದ್ದರು. ಅಭಿಜ್ಞಾನ ಶಾಕುಂತಲದ ದುಷ್ಯಂತನೂ, ರಘುವಂಶದ ಅಗ್ನಿವರ್ಣನೂ, ವಿಕ್ರಮೋರ್ವಶೀಯದ ಪುರೂರವನೂ ಚಿತ್ರಕಲೆಯಲ್ಲಿ ಚೆನ್ನಾಗಿ ಶಿಕ್ಷಣ ಹೊಂದಿದ್ದರು.

ಆ ಕಾಲದಲ್ಲಿ ಪುರುಷರೂ ಚಿನ್ನದ ಬಳೆಗಳನ್ನು ಧರಿಸುತ್ತಿದ್ದರು (ಮೇ. ಸಂ. ೧.೩, ಮಾಲ. ನಾ. ೨) ಜನರಿಗೆ ಶಕುನದಲ್ಲಿ ವಿಶ್ವಾಸವಿತ್ತು. ಸ್ತ್ರೀಯರಿಗೆ ವಾತಿವೃತ್ಯವೇ ಭೂಷಣವಾಗಿತ್ತು. ವಿಲಾಸದಂತೆ ಧರ್ಮವೂ ಪ್ರಗತಿಪಥದಲ್ಲಿತ್ತು. ಅಂದು ಬ್ರಹ್ಮ, ವಿಷ್ಣು, ಶಿವ ಮತ್ತು ಸೂರ್ಯರ ಆರಾಧನೆಗೆ ಪ್ರಾಶಸ್ತ್ಯವಿತ್ತು. (ಮೇ. ಸಂ. ೧೯, ೧೦, ೨೬, ೨೮. ೪೩) ಸ್ತ್ರೀಯರಲ್ಲಿ ಸುದ್ಯಾನದ ಚಟವಿಲ್ಲವೆನ್ನಲು ಸಾಧ್ಯವಿರಲಿಲ್ಲ (ಮಾಲ. ನಾ. ೩).

ಗೋಪೂಜೆಗೆ ಅಂದು ಅತಿ ಪ್ರಾಧಾನ್ಯವಿತ್ತು (ರ. ವಂ. ೨) ದಿಲೀಪನು ನಂದಿನಿಯ ಸೇವೆಯಿಂದಲೇ ವಂಶೋದ್ಧಾರಕನಾದ ರಘು ಮಹಾರಾಜನನ್ನು ಪಡೆದನು. ವಿಶೇಷವಾಗಿ ರಾಜರೆಲ್ಲಾ ಪ್ರಜಾರಂಜಕರಾಗಿಯೇ ಇದ್ದರು. ರಘುವಂಶದ ದಿಲೀಪ, ರಘು, ಅಜ, ದಶರಥ ಮತ್ತು ಶ್ರೀರಾಮ ಮೊದಲಾದವರೆಲ್ಲಾ ಆ ಕಾಲದ ರಾಜರ ಪ್ರತೀಕರಾಗಿಯೇ ಇದ್ದರು. ಇಂತಹ ರಾಜರ ರಾಮರಾಜ್ಯದಲ್ಲೇ ಮಹಾ ಕವಿ ಕಾಳಿದಾಸನ ಋತುಸಂಹಾರದಿಂದ ಅಭಿಜ್ಞಾನ ಶಾಕುಂತಲದವರೆಗಿನ ಸಮಸ್ತ ಕಾವ್ಯನಾಟಕಗಳೂ ಬರೆಯಲ್ಪಟ್ಟವು. ಇಂದಿನ ಯುಗಕ್ಕೂ ಕಾಳಿದಾಸನ ಯುಗಕ್ಕೂ ಜೀವನಮಟ್ಟ-ಶಾಂತಜೀವನಗಳಲ್ಲಿ, ಕೃತಯುಗ ಕಲಿಯುಗಗಳ-ಉತ್ತರ ದಕ್ಷಿಣ ಧ್ರುವಗಳ-ಅಂತರವಿದೆ. ಅಂದು ಲಕ್ಷಾಧೀಶರಿಂದ ಭಿಕ್ಷಾಧೀಶರವರೆಗೆ ಗೇಣುದ್ದದ ಹೊಟ್ಟೆಗಾಗಿ ಕಣ್ಣೀರಿಡಬೇಕಾದಗತ್ಯವಿರಲಿಲ್ಲ. ಇಂದು ಮಧ್ಯವರ್ಗದವರು ಹೊಟ್ಟೆ ಬಟ್ಟೆಗಳ ದಾರಿದ್ರ್ಯದಿಂದ ಹುರುಪಳಿಸಿ ಘಾಳಾಗಿ ಹಾರಿ ಹೋಗದಿರುವುದು ಆಶ್ಚರ್ಯ! ಕಾಲಚಕ್ರದಲ್ಲಿ ಜೀವನದ ಯಾವ ಯಾವ ಅಂತಸ್ತುಗಳೆಲ್ಲಾ ಅಡಗಿವೆಯೊ!

ಆ. ಆಮರ ದಿನಗಳಲ್ಲಿ ಸ್ತ್ರೀಯರ ಪ್ರೌಢ ವಿವಾಹದಲ್ಲೇ ಜನರ ಆಸಕ್ತಿ ಇತ್ತು. ಬ್ರಾಹ್ಮ ಮೊದಲಾದ ವಿವಾಹಗಳಷ್ಟು ಗಾಂಧರ್ವ ವಿವಾಹಕ್ಕೂ ಸ್ವಯಂವರಕ್ಕೂ ತುಂಬಾ ಗೌರವವಿತ್ತು. ಅಸವರ್ಣ ವಿವಾಹವು ಇಲ್ಲವೆನ್ನಲು ಸಾಧ್ಯವಿಲ್ಲ (ಮಾಲ. ನಾ. ೧; ಅಭಿ ಶಾ. ೧). ವಧುವಿನ ತಂದೆಯು ತನ್ನ ಶಕ್ತ್ಯನುಸಾರ ವರದಕ್ಷಿಣೆಯನ್ನು ಕೊಡುವುದಿತ್ತು. ವಧುವಿಗೆ ಸಿಷ್ಟಿತವಾದ ಶುಲ್ಕವಿತ್ತೇ ವಿವಾಹವಾಗಬೇಕಿತ್ತು (ರ. ವಂ. ೧೧) ಜನಕನು ಮಗಳ ಶುಲ್ಕವೆಂದು ಧನುಸ್ಸನ್ನು ಶ್ರೀರಾಮನ ಮುಂದೆ ತರುವನು. ಈಗಿನಂತೆ ಕನ್ಯೆಯನ್ನು ನೋಡುವ ಮೊದಲು ಆಕೆಯ ಭಾವಚಿತ್ರವನ್ನು ತರಿಸುವ ಕ್ರಮವೂ ಇತ್ತು (ರ. ವಂ. ೧೮.೫೩). ಧ್ರುವ ಸಿಂಧುಯ ಮಗನಾದ ಸುದರ್ಶನನ ವಿವಾಹವು ಈ ಕ್ರಮದಲ್ಲೇ ಆಯಿತು.

ಅಂದು ನ್ಯಾಯಾಧೀಶರ್ಮನವು ರಾಜ ಅಥವಾ ಮಂತ್ರಿಯನ್ನು ಹೊಂದಿತ್ತು. ಮಂತ್ರಿಗಳೂ, ಸೇನಾಪತಿಗಳೂ ಹಲವರಿದ್ದರು ಆಗ ನಗರಾಧ್ಯಕ್ಷ, ರಾಷ್ಟ್ರಮುಖ, ರಾಜ್ಯದ ಗಡಿಯ ರಕ್ಷಕನಾದ ಅಂತಪಾಲ-ಇವರೆಲ್ಲಾ ಪ್ರಮುಖ ಸರಕಾರೀ ನೌಕರರು. ಅಧೀನ ರಾಜರಿಗೆ ಆಗ ಸಾಮಂತರೆನ್ನುತ್ತಿದ್ದರು. ಸಮಸ್ತ

(೨೭ನೇ ಪುಟ ನೋಡಿರಿ)

ESTD: 1919 VISIT PHONE NO. 374

K.R.K. SHET DIAMOND MART

JEWELLERS & DIAMOND MERCHANTS

HAMPANKATTA, MANGALORE, S. K.

Prop: K. K. R. SHET. TEL. ADD. BLUEYAGAR

ನಮ್ಮ ಸ್ವಾತಂತ್ರ್ಯಸಾಧನೆಯ ದಿವ್ಯ ಶಕ್ತಿ - ಸತ್ಯಾಗ್ರಹ

— ಭಾರತ ಮಾತಾಕೀ ಜೈ...!
— ವಂದೇ ಮಾತರಂ

ಭಾರತೀಯರಿಗೆ ಸ್ವಾತಂತ್ರ್ಯ ದೊರೆಯುವುದೆಂಬ ಆತ್ಮ ವಿಶ್ವಾಸದಿಂದ ರಾಷ್ಟ್ರಪಿತ ಗಾಂಧೀಜೀ ತಮ್ಮ ನ್ಯಾಯದ ಬೇಡಿಕೆಯನ್ನು ಮನ್ನಿಸುವಂತೆ ಮಾಡಲು ಸತ್ಯಾಗ್ರಹವನ್ನು ಪ್ರಾರಂಭಿಸಿ ಅದರಲ್ಲಿ ಜಯಶೀಲರಾದರು. ಸತ್ಯದ ಆರಾಧನೆಯು ಒಂದು ತಪಸ್ಸು. ಅಂತಹ ತಪೋಬಲವಿದ್ದವನೇ ಸತ್ಯಾಗ್ರಹಿಯಾಗಬಲ್ಲನು. ಈಗಿನ ದಿನಗಳಲ್ಲಿ ಸತ್ಯಾಗ್ರಹದ ಪವಿತ್ರ ನಾಮಕ್ಕೆ ಕಲಂಕವು ತಟ್ಟಿ ಬೀದಿಯ ಬಿಕ್ಷುಕನೂ ಸತ್ಯಾಗ್ರಹ ಮಾಡಲು ಸಿದ್ಧನಾಗಿದ್ದಾನೆ. ನಮ್ಮನ್ನು ಪಾರತಂತ್ರ್ಯದ ಶೃಂಖಲೆಯಿಂದ ಬಿಡಿಸಲು ನೆರವಾದ ಈ "ಸತ್ಯಾಗ್ರಹ"ದ ಹೆಸರಿಗೆ ಹಚ್ಚಲಾಗುವ ಕರಿಯನ್ನು ತೊಳೆದು, ಆ ದಿವ್ಯ ಶಕ್ತಿಯ ಪಾವಿತ್ರ್ಯವನ್ನು ಉಳಿಸುವುದು ಭಾರತೀಯರ ಕರ್ತವ್ಯ

ಬರೆದವರು: ಶ್ರೀ ವಿಘ್ನೇಶ್ವರ ಶರ್ಮಾ ತದ್ದಲಸೆ.

೧೯೩೨ರ ಜಂಗಲ ಸತ್ಯಾಗ್ರಹದ ಒಂದು ಸಂದರ್ಭ. ಅಸಂಖ್ಯಾತ ಜನ ಜಂಗಲ ಕಾಯಿದೆ ಮುರಿದು ಗಂಧದ ತುಂಡುಗಳನ್ನು ತೆಗೆದುಕೊಂಡು ಸರಕಾರೀ ಕಚೇರಿಯ ಮುಂದುಗಡೆ ಮೆರವಣಿಗೆ ತೆಗೆದಿದ್ದರು ಮಕ್ಕಳೂ, ಮುದುಕರೂ, ಸ್ತ್ರೀಯರೂ ಹೀಗೆ ಎಲ್ಲರೂ ಉತ್ಸಾಹದಿಂದ ಹೊರಟ ಸ್ವಾತಂತ್ರ್ಯ ಸಂಗ್ರಾಮದ ಮೆರವಣಿಗೆ ಅದು ಎಲ್ಲರ ಬಾಯಲ್ಲೂ ಅದೇ ಧ್ವನಿ. ಅದೇ ಪವಿತ್ರ ಗೀತೆ.

—ಭಾರತ ಮಾತಾಕೀ ಜೈ....ವಂದೇ ಮಾತರಂ. ಸಾವಿರಾರು ಕಂಠಗಳಿಂದ ಬಂದ ಆ ಧ್ವನಿ ಗಗನ ಭೇದಿಸುವಂತಿತ್ತು. ಕಚೇರಿಯ ಮುಂದೆ ಸಾಗಿದಾಗ ಮೋಲೀಶ ದಳ ಬಂದು ತಡೆಯಿತು ನಿರ್ದಯದಿಂದ ಲಾಠಿ ಚಾರ್ಜು ಮಾಡಲಾಯಿತು. ಗೋಳೀಬಾರು ನಡೆಯಿತು. ಅನೇಕರನ್ನು ಸೆರೆಮನೆಗೆ ನೂಕಲಾಯಿತು. ಮತ್ತನೇಕರನ್ನು ಮನೆ ಬಂದಂತೆ ಧಳಸಲಾಯಿತು. ಸಹಿಸಲಾರದಷ್ಟು ನೋವು ಕೊಡಲಾಯಿತು. ..ಮತ್ತೂ. ..ಏನೇನೂ!

ಇಷ್ಟು ಭಯಾನಕ ಹಿಂಸೆ ನಡೆದರೂ ಯಾರ ಬಾಯಲ್ಲೂ 'ಅಯ್ಯೋ" ಎಂಬ ಚೀತ್ಕಾರವಿರಲಿಲ್ಲ ನೋವು ಎಂಬ ಕಣ್ಣೀರು ಇರಲಿಲ್ಲ ಮರುಕವಿರಲಿಲ್ಲ. ಯಾಕೆ ಬಂದೆ ಎಂಬ ಅಪಸ್ವರವಿರಲಿಲ್ಲ. ಎಲ್ಲರ ಮುಖದಲ್ಲೂ ಸಹನೆ, ತಾಳ್ಮೆ, ಶಾಂತಿ, ಮತ್ತೆ ಉತ್ಸಾಹದಿಂದ ಅದೇ ಧ್ವನಿ.

—ಭಾರತ ಮಾತಾಕೀ ಜೈ...ವಂದೇ ಮಾತರಂ.

ಇದೇ ನಿಜವಾದ ಸತ್ಯಾಗ್ರಹ. ತನ್ನ ನ್ಯಾಯವಾದ ಧ್ಯೇಯ ಸಾಧನೆಗೆ ಅಳುಕದೇ ಬಳುಕದೇ ಹಿಂಜರಿಯದೇ ಮುನ್ನುಗ್ಗುವಂಥ ಧೀರೋದಾತ್ತ ಸ್ವಭಾವ. ಸತ್ಯವನ್ನು ಆಗ್ರಹದಿಂದ ಸಾಕ್ಷಾತ್ಕಾರ ಮಾಡಿಕೊಳ್ಳುವ ಸತ್ಯಾಗ್ರಹದ ವಿಧಾನ

ಭಾರತ ಶತಮಾನಗಳಿಂದ ದಾಸ್ಯ ಶೃಂಖಲೆಯಲ್ಲಿ ಬಂಧಿತವಾಗಿತ್ತು. ಭಾರತದ ಸ್ವಾತಂತ್ರ್ಯ, ಸಂಸ್ಕೃತಿ, ಸಭ್ಯತೆಗಳೆಲ್ಲಾ ವಿದೇಶೀಯ ದಬ್ಬಾಳಿಕೆಗೆ ಒಳಪಟ್ಟಿತ್ತು. ಭಾರತದಲ್ಲಿ ಯಾವುದೂ ಭಾರತಕ್ಕಾಗಿ, ಭಾರತೀಯರಿಗಾಗಿ ಇರಲಿಲ್ಲ ಭಾರತದಲ್ಲಿ ಭಾರತೀಯರು ಗುಲಾಮರು! ಇಂಥ ಅಡಳಿತವನ್ನು ವಿರೋಧಿಸಿ ದೇಶಕ್ಕೆ ಸ್ವಾತಂತ್ರ್ಯ ಬೇಕು, ದೇಶದ ಅಡಳಿತ ದೇಶೀಯರಿಂದಲೇ ನಡಿಯಬೇಕು ಎಂಬುದಕ್ಕಾಗಿ ಕೋರಾಟ ನಡಿಸಲಾಯಿತು. ಈ ಹೋರಾಟದಲ್ಲಿ ಈ ಸತ್ಯಾಗ್ರಹ ನಮ್ಮ ಸ್ವಾತಂತ್ರ್ಯ ಯುದ್ಧದ ಒಂದು ಶಕ್ತಿಯಾಗಿತ್ತು. ದೇಶದ ತುಂಬಾ ಈ ಸಮರ ನಡೆಯಿತು ಎಲ್ಲ ಕಡೆಯಲ್ಲಿಯೂ ಸತ್ಯಾಗ್ರಹ, ಸತ್ಯಾಗ್ರಹ.

ರಕ್ತರಹಿತವಾದ ಈ ಸತ್ಯಾಗ್ರಹದ ಕ್ರಾಂತಿಗೆ ವಿದೇಶೀಯರ ಭೌತಿಕ ಅಸ್ತ್ರ ಶಸ್ತ್ರಗಳು ಪರಾಭವಗೊಳ್ಳಬೇಕಾಯಿತು ತೋಪು, ಮಿಶನ್ನಗನ್ನು, ಬಾಂಬು, ಮಂತಾದುವುಗಳಿಂದ ಸುಸಜ್ಜಿತರಾಷ್ಟ್ರ ಈ ಸತ್ಯಾಗ್ರಹದ ದಿವ್ಯ ಶಕ್ತಿಗೆ ಮಣಿಯಬೇಕಾಯಿತು. ಪರಿಣಾಮವಾಗಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು.

ಇಷ್ಟು ಅಮೋಘವಾದುದು ಸತ್ಯಾಗ್ರಹ. ನ್ಯಾಯವಾದ ಪವಿತ್ರವಾದ ಧ್ಯೇಯ ಸಾಧನೆಯಲ್ಲಿ ಸತ್ಯಾಗ್ರಹ ನಿಜವಾಗಿಯೂ ಸಿದ್ಧಿಯನ್ನು ತರಬಲ್ಲುದು ವಿರೋಧಕ ಶಕ್ತಿ ಎಷ್ಟು ಪ್ರಬಲವಾಗಿದ್ದರೂ ಈ ಸತ್ಯಾಗ್ರಹದ ಮುಂದೆ ಅದು ಕಃ ಪದಾರ್ಥ.

ಆದರೆ ಸತ್ಯಾಗ್ರಹ ಎಲ್ಲ ಕಡೆಗಳಲ್ಲಿಯೂ ಎಲ್ಲದಕ್ಕೂ ಮಾಡುವುದು ಯೋಗ್ಯವಲ್ಲ ಸತ್ಯವಾದುದಕ್ಕೆ ಮಾತ್ರ ಸತ್ಯಾಗ್ರಹದ ಪ್ರಯೋಗ ಪಡೆಯಬೇಕು.

ಸತ್ಯಾಗ್ರಹದ ದೀಕ್ಷೆ ಪಡೆಯುವಾಗಲೂ ಅದಕ್ಕೆ ಬೇಕಾದ ಸಾಕಷ್ಟು ಅರ್ಹತೆ ಅವನಲ್ಲಿರಬೇಕಾಗುತ್ತದೆ. ಅದಿಲ್ಲದೇ ಬೇಕುಬೇಕಾದ್ದಕ್ಕೆಲ್ಲಾ ಸತ್ಯಾಗ್ರಹ ಆರಂಭಿಸಿದರೆ ಅದು ಇವ ಪ್ರಭಾವವನ್ನೂ ಕುಗ್ಗಿಸುತ್ತದೆ. ಉದ್ದೇಶವನ್ನೂ ವಿಫಲಗೊಳಿಸುತ್ತದೆ

ಅಹಿಂಸೆ, ಶಾಂತಿ, ಸೌಹಾರ್ದ, ದಯೆ, ಕರ್ತವ್ಯ, ದಕ್ಷತೆ, ಮುಂತಾದ ಗುಣಗಳು ಸತ್ಯಾಗ್ರಹಿಯಲ್ಲಿ ಇರಬೇಕಾಗುತ್ತದೆ. ದುಃಖ ನೋವುಗಳ ಎಂಥ ಪ್ರಸಂಗ ಬಂದರೂ ಅದರಿಂದ ಹಿಂಜರಿಯದೇ ಇರುವಷ್ಟು ಧೈರ್ಯ, ಸಾಹಸಗಳು ಮೈಗೂಡಿರಬೇಕಾಗುತ್ತದೆ. ಸ್ವಾರ್ಥ, ದುರಭಿಮಾನಕ್ಕಾಗಿ ಸತ್ಯಾಗ್ರಹ ಇರಬಾರದು.

ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟ ಈ ಸತ್ಯಾಗ್ರಹದ ಪ್ರಭಾವದಿಂದ ಅನೇಕರು ದುರಭಿಮಾನಕ್ಕಾಗಿ ಸ್ವಾರ್ಥಕ್ಕಾಗಿ ಈ ಸತ್ಯಾಗ್ರಹವನ್ನು ಆರಂಭಿಸಿದ್ದುಂಟು. ಕೆಲವರು ತಮ್ಮ ಬೇಡಿಕೆಯನ್ನು ಮನ್ನಿಸದಿದ್ದಾಗ ನಾವು ಸತ್ಯಾಗ್ರಹ ಆರಂಭಿಸುತ್ತೇವೆ ಎಂದು ಎಚ್ಚರಿಸಿದ್ದುಂಟು. ಮತ್ತೆ ಕೆಲವರು ತಮ್ಮ ಅಭಿಪ್ರಾಯಕ್ಕೆ ಸಾಮಾಜಿಕವಲ್ಲೋ, ರಾಜಕೀಯದಲ್ಲೋ ಮನ್ನಣೆ ದೊರೆಯದಿದ್ದಾಗ "ನಾನು ಅನ್ನ ಸತ್ಯಾಗ್ರಹ ಆರಂಭಿಸು

(೨ನೇ ಪುಟ ನೋಡಿರಿ)

INDIA'S
MOST DURABLE
& ECONOMICAL
DIESEL TRUCK
& BUS CHASSIS...

TATA-
TATA LOCOMOTIVE & ENGINEERING CO. LTD.
MERCEDES-BENZ DIESEL TRUCKS & BUS CHASSIS
The Arvind Motors (Private) Ltd.,
BALMATTA ROAD :: MANGALORE.

ಮೊದಲು ಹಾರಿದವರು

ಭಾರತದಲ್ಲಿ ಮೊಟ್ಟಮೊದಲಾಗಿ ನಾನೂರು ವರ್ಷಗಳ ಹಿಂದೆ ನಮ್ಮ ಜಂಗಮಯ್ಯನೊಬ್ಬ ಒಂದು ತೆಂಗಿನ ಮರದಿಂದ ಇನ್ನೊಂದು ತೆಂಗಿನ ಮರಕ್ಕೆ–ಗೆರಸಿಗಳನ್ನು ಭುಜಗಳಿಗೆ ಕಟ್ಟಿಕೊಂಡು ಹಾರಿದ್ದನಂತೆ ಆತನು ಜನ್ನಪಟ್ಟಣಬಳಿ ಇದ್ದನಂತೆ. ಆತನ ಮಹಾ ಪ್ರಯತ್ನಕ್ಕೆ ಪುರಸ್ಕಾರವಾಗಿ ದಾಸಯ್ಯನ ಪಾಡಿಕೆಯಂ ಗೋಮಾಳದ ಜಮೀನೆಂಬುದು— ಇನ್ನೂ ದಾಖಲೆಯಲ್ಲಿದೆಯಂತೆ— ಆದರೆದು ಬಹಳ ಹಿಂದಿನ ಕಾಲ— ವಿಜ್ಞಾನಿಗಳಿನ್ನೂ ಮುಂದುವರಿಯದಿದ್ದ ಕಾಲ ಆದ್ದರಿಂದ ಆ ಜನ್ನಪಟ್ಟಣದ ಜಂಗಮಯ್ಯನ ಹಾರುಪಿಕೆ ಮುಂದುವರಿಯಲಿಲ್ಲ. ಈಗಿನ ಕಾಲದ ಕಥೆಯದು ಬುದ್ಧಿವಂತಳಾದ ತಾಯಿ ತೋರಿಸಿಕೊಟ್ಟ ಹಾದಿಯಲ್ಲಿ ನಡೆದ ಮಕ್ಕಳು ಮಾಡಿದ ಮಹಾಕಾರ್ಯ ಜಗತ್ತಿನವರ್ತಲ್ಲಿರ ಕುತೂಹಲವನ್ನು ಕೆರಳಿಸಿದ ಬೃಹತ್ಕಾರ್ಯ— ಅವರೇ ರೈಟ್ ಸಹೋದರರು.

ಬರೆದವರು: ಶ್ರೀ ಹೊಯಿಗೆಳ.

ಅವರ ಅಪ್ಪ ಅವರಿಗೆ ಒಂದು ಗಿರಗಟ್ಟೆ ತಂದುಕೊಟ್ಟರು. ಅದನ್ನು ಆಡಿ ಆಡಿಸಿ ತುಂಬ ಆನಂದಪಟ್ಟರು. ಅಂಥಾದ್ದೇ ಇನ್ನೊಂದನ್ನು ಮಾಡಿ ತಂದೆಗೆ ತೋರಿಸಿದರು. ಅವರೇ ರೈಟ್ ಸಹೋದರರು. ತಂದೆ ಕೊಟ್ಟ ಉತ್ಸಾಹ ತಾಯಿ ತೋರಿಸಿದ ಬುದ್ಧಿವಂತಿಗೆಯ ದಾರಿ ಅಷ್ಟೇ ಸಾಕಾಯಿತು. ಆ ರೈಟ್ ಸಹೋದರರು ಸರಿಯಾದ ಹಾದಿಯಲ್ಲಿ ಹೋಗಿ ಏರೋಪ್ಲೇನ್ ಮಾಡುವ ವಿಧಾನವನ್ನು ಕಂಡುಕೊಳ್ಳುವುದಕ್ಕೆ ಗರ್ಯಾರಲ್ಲಿ ಮೊಟ್ಟ ಮೊದಲನೆ ಸಲ ಆಕಾಶದಲ್ಲಿ ಹಕ್ಕಿಯಂತೆ ಹಾರಿದ ಯಶಸ್ಸು ಅವರಿಗೇ ಸಂದಿತು. ಅದು ಹೇಗೆ?

ಅವರ ತಾಯಿ ಯಾವಾಗಲೂ ತನ್ನ ಮಕ್ಕಳನ್ನು ಸಂಗಡ ವಿರಾಮವಿದ್ದಾಗಲೆಲ್ಲ ಹತ್ತಿರದ ವನಕ್ಕೆ ಕರೆದುಕೊಂಡು ಹೋಗುತ್ತಿದ್ದಳು ಒಂದು ದಿನ ಒಂದು ಹಳ್ಳದ ಬಳಿ ತಿಂಡಿ ತಿನ್ನುತ್ತ ಕುಳಿತಿದ್ದರು. ನೀರ ಹಕ್ಕಿಯೊಂದು ಹಾರಿಬಂದು ಮೀನನ್ನು ಹಿಡಿದುಕೊಂಡು ಹಾರಿ ಹೋಯಿತು. ಕಿರಿಯ ಮಗ ಅದನ್ನೇ ನೋಡುತ್ತ ನಿಂತ. ಹಿರಿಯವನು ತಾಯಿಯನ್ನು ಹೀಗೆ ಕೇಳಿದ–"ಅಮ್ಮ ಆ ಹಕ್ಕಿ ಕೆಳಗೆ ಇಳಿದು ಬಂತು, ಮೀನು ಹಿಡಿದುಕೊಂಡು ಮತ್ತೆ ಮೇಲೆ ಹಾರಿ ಹೋಯಿತಲ್ಲ. ಅದು ಹೇಗೆ?"

ಆಗ ಕಿರಿಯವನು ದನಿಗೂಡಿಸಿದ–"ಎರಡೇ ರೆಕ್ಕೆಯ ಗರಿಗಳಿಂದ ಹಾಗೆ ಹೀಗೆ ಮೇಲೆ ಕೆಳಗೆ ಚಲಿಸುವುದು ಹೇಗೆ ಸಾಧ್ಯ.?"

ಆಗ ಆ ತಾಯಿ ಹೇಳಿದಳು–"ಅದೊಂದೇ ಹಕ್ಕಿಯೇಕೆ ಉಳಿದೆಲ್ಲ ಹಕ್ಕಿಗಳೂ ಹಾಗೇ ಮಾಡುತ್ತವೆ. ನೀವು ಎಲ್ಲಾ ಹಕ್ಕಿಗಳು ಹಾರುವುದನ್ನೂ ನೋಡಬೇಕಪ್ಪ ಆಗ ಅವುಗಳ ರೆಕ್ಕೆಗಳ ಚಲನೆಯ ರೀತಿಯೆಲ್ಲ ತಿಳಿಯುತ್ತದೆ."

ಅಣ್ಣತಮ್ಮಂದಿರಿಬ್ಬರೂ ಒಪ್ಪಿಕೊಂಡರು. ಅಂದಿನಿಂದ ಕಂಡ ಕಂಡ ಹಕ್ಕಿಗಳ ಹಾರಾಟವನ್ನೆಲ್ಲ ಪರೀಕ್ಷಿಸುತ್ತ ಬಂದರು. ರೆಕ್ಕೆಗಳ ಮಾಟ, ಚಲನೆ, ಮುಂತಾದ್ದನ್ನೆಲ್ಲ ನೋಡಿ ಚಿತ್ರಿಸಿಕೊಂಡರು.

ಆಗ ಆರಂಭವಾಯಿತು ಹಾರಾಟದಲ್ಲಿ ಅವರ ಕುತೂಹಲ

ಇಷ್ಟರಲ್ಲಿ ಚಳಿಗಾಲ ಬಂತು. ಎಲ್ಲೆಲ್ಲೂ ನೀರ್ಗಲ್ಲು ರಾಶಿರಾಶಿಯಾಗಿ ಬಿತ್ತು. ಹೊಳೆಗಳೂ ಹಳ್ಳಗಳೂ ಮಂಜಿನ ಮಯವಾದವು. ಹುಡುಗರೆಲ್ಲ ಮಂಜಿನ ಗಾಡಿಗಳನ್ನು ಕೊಂಡುಕೊಂಡು ಅಟ ಆಡಲಾರಂಭಿಸಿದರು.

ಆಗ ಈ ನಮ್ಮ ಇಬ್ಬರೂ ಸಹೋದರರೂ ಮನೆಗೆ ಬಂದು ತಮ್ಮ ತಾಯಿಯನ್ನು ಕೇಳಿಕೊಂಡರು. ಆಕೆ ಹೇಳಿದಳು. ಹೀಗೆ– "ಯಾವ ಕೆಲಸ ಮಾಡಬೇಕಾದರೂ ಮೊದಲಾಗಿ ನಕ್ಷೆ ಮಾಡಿಕೊಂಡು ಅನಂತರ ಆ ಪದಾರ್ಥವನ್ನು ಮಾಡಬೇಕು."

ಆಗ ಅವರಿಬ್ಬರೂ ಅಲ್ಲೇ ಅಡುಗೆ ಮನೆಯಲ್ಲೇ ಕುಳಿತುಕೊಂಡು ಮಂಜಿನ ಗಾಡಿಯ ನಕ್ಷೆ ಮಾಡಿದರು. ಆದರೆ ಇವರು ಮಾಡುವ ಗಾಡಿಯಲ್ಲೊಂದು ಹೊಸ ವಿಚಾರವಿತ್ತು. ಅದೇನೆಂದರೆ– ಈ ಮಂಜಿನ ಗಾಡಿಯನ್ನು ಎತ್ತ ಕಡೆಗೆ ಬೇಕಾದರೂ ತಿರುಗಿಸಬಹುದಾಗಿತ್ತು.

ಅನಂತರ ಅವರ ತಾಯಿಯು ಅವರಿಗೆ ಬೇಕಾದ ಹಲಗೆ, ಮೊಳೆ, ಗರಗಸ, ಸುತ್ತಿಗೆ, ಬೈರಿಗೆ ಮೊದಲಾದ್ದೆಲ್ಲವನ್ನೂ ತೆಗೆದುಕೊಟ್ಟಳು.

ಮಂಜಿನ ಗಾಡಿ ಮುಗಿಯಿತು. ಮಂಜಿನ ಮೈದಾನದಲ್ಲಿ ಆಟಕ್ಕೆ ಬಂದಿದ್ದ ಗಾಡಿಗಳಲ್ಲೆಲ್ಲ ಈ ಸಹೋದರರ ಗಾಡಿಯೇ ಬಹು ಶ್ರೇಷ್ಠವಾಗಿತ್ತು. ಅದನ್ನೊಬ್ಬರು ಕ್ರಯಕ್ಕೆ ತೆಗೆದುಕೊಂಡರು. ಈ ಸಹೋದರರು ಮತ್ತೊಂದನ್ನು ಇನ್ನೂ ಸೊಗಸಾಗಿ ಮಾಡಿಕೊಂಡರು. ಈ ಹೊಸ ಗಾಡಿಯ ವೇಗವನ್ನು ಹೆಚ್ಚುಕಡಿಮೆ ಮಾಡುವುದಲ್ಲದೆ ಯಾವ ಕಡೆಗೆ ಬೇಕಾದರೆ ಆ ಕಡೆಗೆ ತಿರುಗಿಸಬಹುದಾಗಿತ್ತು.

ಅನಂತರ ಗಾಳಿಕಾಲ ಬಂತು. ಹುಡುಗರೆಲ್ಲ ಗಾಳಿ ಪರ ಕಟ್ಟಿದರು. ಇವರೂ ದೊಡ್ಡದೊಂದು ಪರ ಕಟ್ಟಿದರು. ಆ ಪರ ಇವರಿಬ್ಬರನ್ನೇ ಹಾರಿಸಿಕೊಂಡು ಹೋಗಿಬಿಟ್ಟಿತ್ತು.

ಅದಾದ ಮೇಲೆ ಈ ಸಹೋದರರು ಬೈಸಿಕಲ್ ರಿಪೇರಿ ಮಾಡುವುದೊಂದು ವರ್ಕ್‌ಶಾಪ್ ಆರಂಭಿಸಿದರು ಬೈಸಿಕಲ್ಲಿಗೆ ಎಂಜಿನ್ ತಗುಲಿಸಿ ಅದು ಶ್ರಮವಿಲ್ಲದೆ ವೇಗವಾಗಿ ಹೋಗುವಂತಾಯಿತು.

ಹೀಗೆ ಯಾವ ಕೆಲಸ ಮಾಡಿದರೂ ಹೊಸರೀತಿಯಲ್ಲಿ ಮಾಡುತ್ತಿದ್ದರು. ನಕ್ಷೆ ಹಾಕಿ ಯೋಚನೆ ಮಾಡಿ ಚೆನ್ನಾಗಿ ಮಾಡುತ್ತಿದ್ದರಿಂದ ಯಾವ ಪದಾರ್ಥವೂ ಸೊಗಸಾಗಿ ಆಕರ್ಷಣೀಯವಾಗಿರುತ್ತಿತ್ತು.

ಈ ಹೊತ್ತಿಗೆ ಇವರಿಬ್ಬರೂ ಬಲಿಷ್ಠರಾದ ಯುವಕರಾಗಿದ್ದರು. ತಂದೆಯ ಸಂ

(೨೫ನೇ ಪುಟ ನೋಡಿರಿ)

QUALITY in
PRINTING INKS
means many things . . .
- brilliance
- depth of colour
- covering power
- drying capacity
- workability
- fastness to light etc.

in GANGES inks
the emphasis is on QUALITY
used and proved for 30 years

Factories at
HOWRAH — BOMBAY — MADRAS

ಭಾರತದಲ್ಲಿ ಪ್ರಜಾಪ್ರಭುತ್ವದ ಹಿನ್ನೆಲೆ

ಅಂತಶ್ಚಿದ್ರಾಣಿ ಭೊಯಾಂಸಿ ಕಂಟಕಾ
ಲಪತೋ ಬಹಿಃ ।
ಕಥಂ ಕಮಲನಾಲಸ್ಯ ಮಾ ಭೂವನ್
ಭಂಗುರಾ ಗುಣಾಃ ॥

'ಕಮಲಗೆಲ್ಲ ಬಿರುಕುಗಳು, ಹೊರಗೆಲ್ಲ ಮುಳ್ಳುಗಳು! ಕಮಲನಾಳದ ಎಳೆ ಬೇಗ ಕೀಳದೆ ಇದ್ದೀತೆ?' ಎಂಬ ಕವಿಸೂಕ್ತಿ ಸ್ವತಂತ್ರಭಾರತದ ರಾಜ್ಯಸೂತ್ರಕ್ಕೂ ಅಕ್ಷರಶಃ ಅನ್ವಯಿಸುವ ಕಾಲ ಆರಂಭದಲ್ಲಿದ್ದಿತು. ಅಜ್ಞಾನ ಅಂಧಾಚಾರಗಳಲ್ಲಿ ಮುಳುಗಿ ಏಳುತ್ತಿರುವ ಭಾರತ ಭೂಖಂಡದ ಜನತೆಗೆ ಸ್ವಾತಂತ್ರ್ಯ ದೊರೆತರೂ ಸ್ವಪ್ರಭುತ್ವದ ಪ್ರಯೋಗವು ಅಯಶಸ್ವಿಯೇ ಆಗುವುದು ಸಿದ್ಧವೆಂದು ಅನೇಕ ನುರಿತ ರಾಜಕಾರಣಿಗಳು ಭವಿಷ್ಯ ಹೇಳುತ್ತಿದ್ದರು. ಭಾರತವಿನ್ನೂ ಸ್ವಾತಂತ್ರ್ಯಕ್ಕೆ ಅರ್ಹತೆಯನ್ನು ಪಡೆದುಕೊಳ್ಳಲಿಲ್ಲವೆಂದು ಬ್ರಿಟಿಷರು ೧೯೪೪ರ ವರೆಗೂ ಹೇಳುತ್ತಲೇ ಬಂದಿದ್ದರು. ಸ್ವಾತಂತ್ರ್ಯಸಾಧನೆಯ ಸನ್ನಾಹದಲ್ಲಿ ಕಾಂಗ್ರೆಸ್ ಸಂಸ್ಥೆಯು ತೋರಿಸಿದ ಹುರುಪೂ ತ್ಯಾಗಬುದ್ಧಿಯೂ ಅಧಿಕಾರಕಾಲದಲ್ಲಿ ಲುಪ್ತವಾಗಿ ದೇಶಕ್ಷೇಮಕ್ಕಿಂತ ದೇಶಕ್ಕೋಭವೇ ಹೆಚ್ಚುವುದೆಂಬ ಭಯ ಅನೇಕ ಹಿರಿಯರಲ್ಲಿದ್ದಿತು. ಸ್ವತಂತ್ರಭಾರತದ ಮೊದಲನೆಯ ಪಂಚವಾರ್ಷಿಕ ಯೋಜನೆ ಮುಗಿದು ಎರಡನೆಯದು ಆರಂಭವಾಗಿದ್ದರೂ ಈ ಬಗೆಯ ಸಂಶಯ ವಿಕಲ್ಪಗಳು ಇನ್ನೂ ಅಲ್ಲಲ್ಲಿ ಉಳಿದಿರುವುದನ್ನು ಅಲ್ಲಗಳೆಯುವಂತಿಲ್ಲ. ಈ ಸಂದೇಹಗಳು ಹುಟ್ಟಲು ನೆರವಾದ ಪರಿಸ್ಥಿತಿಗಳನ್ನೂ ಅವುಗಳ ಇಂದಿನ ಸ್ವರೂಪವನ್ನೂ ಈ ಸ್ವಾತಂತ್ರ್ಯೋತ್ಸವದ ದಿನ ಪರ್ಯಾಲೋಚಿಸುವುದು ಅಪ್ರಸ್ತುತವಾಗಲಾರದು.

ಈಗ ಹತ್ತು ವರ್ಷಗಳ ಹಿಂದೆ, ಬ್ರಿಟಿಷರು ಭಾರತದ ರಾಜ್ಯಾಧಿಕಾರವನ್ನು ಭಾರತೀಯರಿಗೇ ವಹಿಸಿಕೊಡುವ ಮನಸ್ಸು ಮಾಡಿದಾಗ, ದೇಶದ ಪರಿಸ್ಥಿತಿ ಎಂತಹ ದಿಟ್ಟ ರಾಜಕಾರಣಿಯನ್ನಾದರೂ ದಿಗ್ಭ್ರಮಗೊಳಿಸುವಂತಹುದೇ ಆಗಿದ್ದಿತು. ಡಿಲ್ಲಿಯಲ್ಲಿದ್ದ ಕೇಂದ್ರ ಸರಕಾರವನ್ನು ಹಸ್ತಾಂತರ ಮಾಡಿದ ಮಾತ್ರದಿಂದ ಭಾರತದ ರಾಜಕೀಯ ಸಮಸ್ಯೆಗಳೆಲ್ಲವೂ ಪರಿಹಾರವಾಗುವಂತಿರಲಿಲ್ಲ ಏಕೆಂದರೆ ಇಲ್ಲಿದ್ದ ಆಡಳಿತ ಸಮಸ್ಯೆಗಳು ಒಂದೆರಡಲ್ಲ, ನೂರಾರಾಗಿದ್ದುವು. ಬ್ರಿಟಿಷರ ಅಧೀನದಲ್ಲಿ ಪೂರ್ಣವಾಗಿದ್ದ ಪ್ರಾಂತಗಳಂತೆಯೇ ಹಲವಾರು ಆಶ್ರಿತ ಸಂಸ್ಥಾನಗಳೂ ಇದ್ದುವು. ಈ ರಾಜರ ಸ್ಥಾನಮಾನಗಳನ್ನು ಕುರಿತ ಒಪ್ಪಂದಗಳೂ ವಿಭಿನ್ನವಾಗಿದ್ದುವು. ಭಾರತವೆಲ್ಲವೂ ರಾಜಕೀಯವಾಗಿ ಒಂದಾಗಲು, ಈ ಸಂಸ್ಥಾನಿಕರ ಸಮಸ್ಯೆ ಅಪರಿಹಾರ್ಯವೆನಿಸುವಷ್ಟು ಗಡುಚಾಗಿದ್ದಿತು.

ಇದರಂತೆ ಭಾರತವನ್ನು ಎರಡು ಭಾಗ ಮಾಡಿ ಮುಸಲ್ಮಾನರ ಮನಸ್ಸಂತೋಷಪಡಿಸಿದ್ದಲ್ಲದೆ ರಾಜ್ಯಾಧಿಕಾರದ ಹಸ್ತಾಂತರ ಕಾರ್ಯದಲ್ಲಿ ಮೊದಲನೆಯ ಹೆಜ್ಜೆಯನ್ನೇ ಇಡುವಂತಿರಲಿಲ್ಲ. ಯಾವ ಭಾರತೀಯರಿಗೆ 'ಪ್ರಜಾಪ್ರಭುತ್ವ'ದ ಕುರಿತಾದ ಅನುಭವವು ಬಂದನಂತರ ತಾವು ಭಾರತಕ್ಕೆ ಸ್ವಾತಂತ್ರ್ಯವನ್ನಿತ್ತು ಹೊರಟು ಹೋಗುವುದಾಗಿ ಬ್ರಿಟಿಷರು ಹೇಳುತ್ತಿದ್ದರು. ಅದೇನು ಕಾರಣದಿಂದಲೋ, ಅವರು ಹತ್ತು ವರ್ಷಗಳ ಮೊದಲು, ದೇಶದಲ್ಲಿ ನಾನಾ ಸಮಸ್ಯೆಗಳನ್ನೆಬ್ಬಿಸಿ ಆಡಳಿತ ಯಂತ್ರವನ್ನು ಹಿರಿಯ ರಾಜಕೀಯ ಪಕ್ಷವಾದ ಕಾಂಗ್ರೆಸ್ಸಿಗೆ ಒಪ್ಪಿಸಿ ಹೋದರು. ಕಾಂಗ್ರೆಸ್ಸು ಅಂತಹಿಳ ಸಮಸ್ಯೆಗಳನ್ನು ತಾನು ಪಡೆದಿದ್ದ ಕೆಲವರ್ಷಗಳ ಜಾಣ್ಮೆಯಿಂದ ಜಾಣಕ್ಷತೆಸದಿಂದ ಎದುರಿಸಿ ಮುನ್ನಡೆಯುತ್ತಿದೆ. ಆದರೂ, ಅದು ಕೇವಲ ಆಡಳಿತೆಯನ್ನು ನಡೆಸಿದರೆ ಸಾಲದು; ಜನತೆಗೆ ರಾಜಕೀಯ ಶಿಕ್ಷಣವನ್ನೂ ಕೊಟ್ಟು 'ಪ್ರಜಾಪ್ರಭುತ್ವ'ದ ನಿಜವಾದ ತತ್ವಗಳನ್ನು ಕಲಿಸಿಕೊಡಬೇಕು. ಈ ಗುರುತರ ಹೊಣೆಯನ್ನು ಹೊರಲಾರದೆ ಹೋದರೆ, ಉಳಿದ ರಾಜಕೀಯ ಪಕ್ಷಗಳು ತನ್ನ ಬೇಳೆಯನ್ನು ಬೇಯಿಸಿಕೊಳ್ಳುವುದು ತಪ್ಪದು.

ಬರೆದವರು: ಡಾ. ಕೆ. ಕೃಷ್ಣಮೂರ್ತಿ, ಎಂ. ಎ., ಬಿ. ಟಿ., ಪಿ. ಎಚ್‌ಡಿ.

ಒಪ್ಪಂದವೂ ಅಖಂಡ ಭಾರತದ ಮುಸ್ಲಿಂ ಲೀಗ್ ಮತ್ತು ಇತರ ಪ್ರಮುಖ ರಾಜಕೀಯ ಪಕ್ಷಗಳೊಡನೆ ಸಾಧ್ಯವಾಗುವಂತಿರಲಿಲ್ಲ. ಶಸ್ತ್ರಚಿಕಿತ್ಸೆಯಿಂದಲೂ ವ್ಯಾಧಿ ಪೂರ್ಣವಾಗಿ ಶಮನವಾಗುವ ಬದಲು ಬೇರೊಂದು ಪರಿಯಿಂದ ಹೊರಹೊಮ್ಮುವ ಲಕ್ಷಣಗಳಲ್ಲಿದ್ದೇ ಇದ್ದುವು.

ಇಷ್ಟೇ ಮುಖ್ಯವಾಗಿದ್ದ ಮತ್ತೊಂದು ಮೂಲಭೂತ ಸಮಸ್ಯೆ ಪ್ರಾಂತಗಳ ಪುನರ್ಘಟನೆ ಮತ್ತು ಭಾಷಾವಾರು ರಾಜ್ಯಗಳ ನಿರ್ಮಾಣ ಪ್ರಶ್ನೆಯಾಗಿತ್ತು. ಒಂದು ಕಡೆ ಜನತೆಯಲ್ಲಿ ಉಕ್ಕುತ್ತಿದ್ದ ಪ್ರಾಂತೀಯತೆಯನ್ನೂ ಇನ್ನೊಂದು ಕಡೆ ಅಖಂಡ ರಾಷ್ಟ್ರಾಭ್ಯುದಯದ ದೃಷ್ಟಿಯಿಂದ ಅಗತ್ಯವಾಗಿದ್ದ ರಾಷ್ಟ್ರೀಯತೆಯನ್ನೂ ಪರಸ್ಪರ ಪೋಷಕವಾಗುವಂತೆ ಕೂಡಿಸಿಕೊಂಡ. ಸಾಗುವುದು ಅಸಾಧ್ಯವೆಂಬಂತಿತ್ತು.

ಇವೆಲ್ಲಕ್ಕೂ ಮೂಲವಾಗಿ ಜನತೆಯಲ್ಲಿ ಮನೆಮಾಡಿಕೊಂಡಿದ್ದ ಜಾತೀಯತೆ, ಸಂಕುಚಿತ ದೃಷ್ಟಿ, ಅಧಿಕಾರಲಾಲಸೆ, ಮುಂತಾದುವು, ಸಾರ್ವತ್ರಿಕ ಚುನಾವಣೆಗಳಲ್ಲಿ ಮೇಲೆ ತೇಲುತ್ತಿದ್ದ ದುಷ್ಪ್ರವೃತ್ತಿಗಳೂ ತತ್ಪರಿಣಾಮವಾಗಿ ಆರಿಸಿಬಂದ ಪ್ರತಿನಿಧಿಗಳು ಸ್ವಕಾರ್ಯವನ್ನೇ ದೇಶಸೇವೆಯೆಂದುಕೊಳ್ಳುತ್ತಾ ಸಂಕುಚಿತ ದ್ವೇಷಾಸೂಯೆಗಳಲ್ಲಿಯೇ ಲೀನಂಗಾಗುವ ದುಸ್ಥಿತಿಯೂ, ರಾಜಕೀಯ ಪಕ್ಷಗಳಲ್ಲಿ ವೈಯಕ್ತಿಕ ನಿಂದಾಸ್ತುತಿಗಳೇ ಹೆಚ್ಚಾಗಿ ಜನತೆಯ ಕಲ್ಯಾಣದ ಧ್ಯೇಯವು ದೂರವೇ ನಿಲ್ಲುವ ಪ್ರಸಂಗವೂ ಎಂದಿನಿಂದಲೂ ಇತ್ತೇ ಇತ್ತು. ಸ್ವಾತಂತ್ರ್ಯದ ಉದಯವಾದೊಡನೆ ದೇಶದಲ್ಲೆಲ್ಲ ಪ್ರಮುಖ ರಾಜಕೀಯ ಪಕ್ಷವಾದ ಕಾಂಗ್ರೆಸಿನ ಕಾರ್ಯವಾಯಿತು; ಅದು ಅಧಿಕಾರ ಸ್ಪರ್ಧೆಗೆ ನಿಲ್ಲದೆ ಹೊಸ ರಾಜಕೀಯ ಪಕ್ಷಗಳು ಹುಟ್ಟುವಂತೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಬೇಕೆಂದು ವಾದಿಸಿದವರೂ ಉಂಟು ಹೀಗೆ ಜನತೆ, ಪ್ರತಿನಿಧಿಗಳು, ರಾಜಕೀಯ ಪಕ್ಷಗಳು, ಮತ್ತು ಬ್ರಿಟಿಷರಿಂದ ದತ್ತವಾದ ಆಡಳಿತ ಯಂತ್ರ—ಎಲ್ಲದರಲ್ಲಿಯೂ ಅನೇಕ ವರ್ಗಗಳಿಂದ ಒಟ್ಟುಗೂಡಿಕೊಂಡಿದ್ದ ಕೊಳಯ ಶುದ್ಧೀಕರಣ ಕಾರ್ಯ ಬಹಳ ಕಷ್ಟತಮವಾಗಿತ್ತು.

ಈ ಶುದ್ಧೀಕರಣದ ಜತೆಗೆ ಸ್ವಾತಂತ್ರ್ಯದ ಮುಖ್ಯ ಧ್ಯೇಯವಾದ ರಾಷ್ಟ್ರದ ಸರ್ವಾಂಗೀಣ ಅಭ್ಯುದಯ ಕಾರ್ಯ ಸಾಗಬೇಕಾಗಿದ್ದಿತು. ವಿಶ್ವ ಪರಿಸ್ಥಿತಿಯಾದರೂ ಭಾರತದ ಅಭಿವೃದ್ಧಿಕಾರ್ಯಕ್ಕೆ ಅತ್ಯಗತ್ಯವಾಗಿದ್ದ ಶಾಂತಿಯನ್ನು ಕರುಣಿಸಿದ್ದರೆ ಎಷ್ಟೋ ಉಪಕಾರವಾಗುತ್ತಿತ್ತು. ಆದರೆ ಭಾರತವು ಸ್ವತಂತ್ರವಾದ ದಿವಸದಿಂದ ಇಂದಿನ ವರೆಗೆ ಜಗತ್ತಿನಲ್ಲಿ ಯುದ್ಧ ಪರಿಸ್ಥಿತಿಗಿಂತ ಪರಿಣಾಮದಾರುಣವಾದ ಶೀತಲ ಯುದ್ಧದ ಆವರಣ ಕವಿಯುತ್ತಲೇ ಸಾಗಿದೆ. ನೆರೆಯ ರಾಜ್ಯಗಳಾದ ಪಾಕಿಸ್ತಾನ, ಪೋರ್ಚುಗಾಲ್‌ಗಳಂತೂ ಯಾವಾಗಲೂ ಭಾರತವನ್ನು ಕೆಣಕುತ್ತಲೇ ನಿಂತಿವೆ. ಭಾರತದ ರಕ್ಷಣಾ ವ್ಯವಸ್ಥೆಯೇ ಅಭಿವೃದ್ಧಿಯೋಜನೆಗೆ ಬೇಕಾದ ಪ್ರವ್ಯಗಳನ್ನೆಲ್ಲ ನಂಗುವಂತಾಗಿದೆ.

ಈ ಹಿನ್ನೆಲೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳದೆ ಸ್ವತಂತ್ರ ಭಾರತವು ಈ ಅಲ್ಪಾವಧಿಯಲ್ಲಿ ಏನನ್ನೂ ಸಾಧಿಸಲಿಲ್ಲವೆಂದು ಸುಮ್ಮನೆ ಟೀಕಿಸುವುದರಲ್ಲಿ ಅರ್ಥವಿಲ್ಲ. ಭಾರತಕ್ಕಿದ್ದ ಸಮಸ್ಯೆಗಳ ಪೂರ್ಣ ಪರಿಜ್ಞಾನವನ್ನು ಪಡೆದ ಬ್ರಿಟನ್ ಮುಂತಾದ ಪರರಾಷ್ಟ್ರಗಳೆಲ್ಲವೂ ಭಾರತದ ಪ್ರಗತಿಯನ್ನು ಸಹಾನುಭೂತಿಯಿಂದ ನಿರೀಕ್ಷಿಸುತ್ತಾ ಸಮಾಧಾನವನ್ನು ವ್ಯಕ್ತಪಡಿಸುತ್ತಿವೆ. ಭಾರತದ ವಿದೇಶೀಯ ಧೋರಣೆ ಜಗತ್ತಿನಲ್ಲಿ ಮಾನ್ಯತೆಯನ್ನು ಪಡೆಯುತ್ತಿದೆ. ಸ್ವಲ್ಪ ತಡವಾದರೂ ಗೋವಾ, ಕಾಶ್ಮೀರ ಸಮಸ್ಯೆಗಳು ಶಾಂತಿಯಿಂದಲೇ ಬಗೆಹರಿದೀವೆಂಬ ಆಶೆಗೆ ಎಡೆಯಿಲ್ಲದ್ದಿಲ್ಲ. ಒಳನಾಡಿನ ಸಮಸ್ಯೆಗಳಲ್ಲಿ ಅತಿ ಜಟಿಲವಾಗಿದ್ದವನ್ನೆಲ್ಲ ಸಂಸ್ಥಾನ ವಿಲೀನೀಕರಣ ಪಾಕಿಸ್ತಾನದ ಹಂಚಿಕೆ ಪ್ರಶ್ನೆಗಳು, ಭಾಷಾಪ್ರಾಂತಗಳ ರಚನೆ-ಆಗಲೇ ಬಹುಮಟ್ಟಿಗೆ ನಿವಾರಿಸಲಾಗಿದೆ. ರಾಷ್ಟ್ರದ ಅಭಿವೃದ್ಧಿ ಯೋಜನೆಗಳು ನಿರೀಕ್ಷಿತ ಫಲಗಳನ್ನು ಕೊಡುತ್ತಿರುವುದನ್ನು ನೋಡುತ್ತಿದ್ದೇವೆ. ಒಂದು ನೂರು ವರ್ಷಗಳ ಬ್ರಿಟಿಷರಲ್ಲಿ ಕೈಯಲ್ಲಿಟ್ಟಿದ್ದ ದೊಡ್ಡ ಔದ್ಯೋಗಿಕ ಹಾಗು ಶಿಲ್ಪ ಯೋಜನೆಗಳು ಹತ್ತು ವರ್ಷಗಳಲ್ಲಿಯೇ ಕಾರ್ಯಗತವಾಗಿವೆ. ಜನತೆಯ ಶಿಕ್ಷಣಪ್ರಸಾರ ಭರದಿಂದ ಸಾಗಿದೆ. ಇವೆಲ್ಲವೂ ಭಾರತೀಯರ ಕರ್ತೃತ್ವ ಶಕ್ತಿಗೆ ದೊಡ್ಡ ಸ್ಮಾರಕಗಳು ಭಾರತೀಯರು ಕಮ್ಮೆಪಡಬಹುದಾದಂತಹ ಸಾಧನೆಗಳು.

ಆದರೆ ಜನತೆಯಲ್ಲಿ ಮತ್ತು ಪ್ರತಿನಿಧಿಗಳಲ್ಲಿ ಹೊಣೆಗಾರಿಕೆ ಪೂರ್ಣ ಪ್ರಮಾಣದಲ್ಲಿ ಬೆಳೆಯ ಬೇಕು ಇನ್ನೂ ನಾವು ಬೆನ್ನು ತಟ್ಟಿಕೊಳ್ಳುವಂತಿಲ್ಲ.

MYSORE LAMPS
BEST IN THE MARKET
AWARDED GOLD MEDALS & CUPS AT SEVERAL EXHIBITIONS
The Mysore Lamp Works Ltd.
MALLESHWARAM,
BANGALORE 3.
Telegram: "MYSORELAMP". Telephone: 2026
Agents for Mysore State:
K. S. GOWDER & CO.
No. 48, Subedar Chatram Road,
BANGALORE—2.

ಪ್ರತಿಯೊಬ್ಬರಲ್ಲಿಯೂ ಈ ಹೊಣೆಗಾರಿಕೆ ಆದರ್ಶಪ್ರಮಾಣದಲ್ಲಿದ್ದಿದ್ದರೆ ದೇಶಕಲ್ಯಾಣಕ್ಕೆ ಮೀಸಲಾದ ಎಷ್ಟೋ ಹಣ ಅಪವ್ಯಯವಾಗುವುದು ಅಸಂಭವವೇ ಆಗುತ್ತಿತ್ತು. ಯಾವ ದೇಶದಲ್ಲಿಯೂ ಆದರ್ಶಮಾನವರು ಇರುವುದಿಲ್ಲ. ನಿಜ. ಆದರೆ ನಮ್ಮ ರಾಜಕೀಯ ಜೀವನದ ನೈತಿಕ ಮಟ್ಟ ಬ್ರಿಟನ್ ಮುಂತಾದ ದೇಶಗಳ ರಾಜಕೀಯ ಜೀವನದ ಮಟ್ಟಕ್ಕಿಂತ ಎಷ್ಟೋ ಶಳದಲ್ಲಿದೆಯೆಂಬುದನ್ನು ನಾವು ಮೊದಲು ಮನಗಾಣಬೇಕು. ಭಾರತೀಯರಿಗೆ ಪ್ರಜಾಪ್ರಭುತ್ವ ಸಂಸ್ಥೆಗಳ ಅನುಭವ ಸಾಲದೆಂದು ಬ್ರಿಟಿಷರು ಸಾರಿ ಹೇಳುತ್ತಿದ್ದ ಅಂಶವೇ ಇದು. ಸ್ವಾತಂತ್ರ್ಯವನ್ನು ಸಾಧಿಸಿಯೇ ತೀರಬೇಕೆಂಬ ಛಲದಿಂದ ನಾವು ಹೋರಾಡುವಾಗ ಆ ಮಾತಿಗೆ ಬೆಲೆಯಿಲ್ಲವೆಂದೂ, ಆದೊಂದು ಕುಂಟು ನೆವವೆಂದೂ ನಾವು ಆ ಮಾತನ್ನು ಅನಾದರದಿಂದ ಕಡೆಗಣಿಸುತ್ತಿದ್ದುದು ನಿಜ. ಆದರೆ ಆ ಮಾತನ್ನೇ ಈಗಲೂ ಹೇಳುವುದರಲ್ಲಿ ಅರ್ಥವಿಲ್ಲ. ಈಗ ನಿಜವಾಗಿ ಆತ್ಮಪರೀಕ್ಷೆಯ ಕಾಲ ಬಂದಿದೆ. ಆತ್ಮವಂಚನೆ ಮಾಡಿಕೊಳ್ಳುವುದು ತರವಲ್ಲ.

ಆ ಮಾತಿನಲ್ಲಿರುವ ತಥ್ಯಾಂಶವನ್ನೆಂದು ನಿರ್ವಿಕಾರಬುದ್ಧಿಯಿಂದ ನೋಡೋಣ. ನನ್ನ ಕಣ್ಣಮುಂದೆ ನಿತ್ಯವೂ ನಡೆಯುತ್ತಿರುವ ದೃಶ್ಯಕ್ಕೆ ಕನ್ನಡಿಯೇನೂ ಬೇಕಾಗಿಲ್ಲ. ಅದಿರಲಿ. ನಿಜವಾಗಿಯೂ ನಮಗೆ ಏನೂ ಪ್ರಜಾಪ್ರಭುತ್ವದ ಸ್ವರೂಪಜ್ಞಾನವಿಲ್ಲದಾಗ ಸ್ವಾತಂತ್ರ್ಯ ಅಂತರಿಕ್ಷದಿಂದ ಇಳಿದು ಬಂದಿತೆ? ಎಂದು ಇತಿಹಾಸವನ್ನು ಕೇಳೋಣ. ಹೀಗೆ ಹೇಳುವುದು ಅತಿಶಯೋಕ್ತಿಯೆಂಬುದನ್ನು ಶಾಲೆಯ ಬಾಲಕನೂ ಹೇಳಿಯಾನು! ಇಂದಿಗೆ ನೂರು ವರ್ಷಗಳ ಹಿಂದೆ ಸಿಪಾಯಿಗಳು ಬ್ರಿಟಿಷರ ಮೇಲೆ ದಂಗೆಯೆದ್ದಾಗ ಅವರಿಗೆ ಪ್ರಜಾಪ್ರಭುತ್ವದ ಕಲ್ಪನೆಯಾಗಲಿ, ಅನುಭವವಾಗಲಿ ಇಲ್ಲವೆ ಇದ್ದಿರಬಹುದು. ಆದರೆ ಅಂದಿನಿಂದ ಆಚೆಗೆ ಬ್ರಿಟಿಷರು ಅನುಸರಿಸಿದ ಭಾರತದ ರಾಜ್ಯಧಾರ ಕ್ರಮದಲ್ಲಿ, ಕ್ರಮಕ್ರಮವಾಗಿ ಪ್ರಜಾಪ್ರಭುತ್ವದ ತತ್ತ್ವ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿದ್ದುದನ್ನೇ ಇತಿಹಾಸ ಸಾರಿ ಹೇಳುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಪೂರ್ಣಾನುಭವವನ್ನು ಭಾರತಕ್ಕೆ ಮಾಡಿಕೊಡುವುದೇ ಬ್ರಿಟಿಷ್ ಸರಕಾರದ ಪರಮಲಕ್ಷ್ಯವೆಂದು ಬ್ರಿಟಿಷ್ ಸರಕಾರಯಾವಾಗಲೂ ಕೇಳುತ್ತಲೇ ಸಾಗಿತ್ತು. ಕಾಲಪಕ್ವವಾದೊಡನೆ ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಟ್ಟುಹೋಗುವುದೇ ತನ್ನ ಗುರಿಯೆಂದು ಘೋಷಿಸುತ್ತಿತ್ತು. ಆದರೆ ಇಲ್ಲಿದ್ದ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸದೆ ಬೆಳೆಯುವುದಕ್ಕೇ ಅವ್ಯವಧಾನಿಯುತ್ತಿದ್ದುದರಿಂದ ಭಾರತೀಯರು ಬ್ರಿಟಿಷರ ಸದುದ್ದೇಶದ ವಿಷಯದಲ್ಲಿ ಸಂದೇಹ ಪಡುವಂತಾಯಿತು. ಪುತ್ತೆ ನೂರು ವರ್ಷಗಳು ಉಳಿದರೂ ಸಮಸ್ಯೆಗಳು ಹಾಗೆಯೇ ಉಳಿದು ಭಾರತ ಸ್ವಾತಂತ್ರ್ಯದ ಕಾಲ ಬ್ರಿಟಿಷರ ದೃಷ್ಟಿಯಲ್ಲಿ ಅವಕ್ತವಾಗಿಯೇ ಉಳಿಯಬಹುದೆಂಬ ಶಂಕೆ ನಮ್ಮ ನಾಯಕರಲ್ಲಿ ಮೂಡುವಂತಾಯಿತು. ಆದರೆ ಪ್ರಕೃತದಲ್ಲಿ ಮುಖ್ಯವಾದ ವಿಷಯವೆಂದರೆ ಮಾರ್ಲಿಮಿಂಟೋ ಸುಧಾರಣೆಗಳ ನಂತರ ನಮ್ಮ ಜನತೆಯ ಪ್ರತಿನಿಧಿಗಳಿಗೆ ಸರಕಾರದಲ್ಲಿ ಅಷ್ಟಿಷ್ಟು ಸ್ಥಾನವಿತ್ತು, ಭಾರತಕ್ಕೆ ಪ್ರಜಾಪ್ರಭುತ್ವದ ಪ್ರಥಮ ಪಾತಗಳೆಲ್ಲ ೧೯೩೫ ನಂತರ ೧೯೪೭ರೊಳಗೆ ಹೃದ್ಗತವಾಗಿದ್ದುವು ಎಂಬಂಶ. ೧೯೪೭ರಿಂದಾಚೆಗೆ ಕಾಂಗ್ರೆಸ್ ಪಕ್ಷವೇ ಎಷ್ಟೋ ಪ್ರಾಂತಗಳಲ್ಲಿ ಜವಾಬ್ದಾರೀ ಸರಕಾರದಲ್ಲಿ ಹೆಚ್ಚಿನ ರಾಜ್ಯ ಸೂತ್ರದ ಹೊಣೆಯನ್ನು ನಿರ್ವಹಿಸಿತ್ತು ಎಂಬಂಶ. ಭಾರತ ಜನತೆಗೆ ಪ್ರಜಾಪ್ರಭುತ್ವದ ಬಾಲ್ಯಪಾಠವೇ ಗೊತ್ತಿಲ್ಲವೆಂಬುದು ತಪ್ಪು ಕಲ್ಪನೆ. ಪೂರ್ಣ ಪರಿಜ್ಞಾನ ಇನ್ನೂ ಉಂಟಾಗಿಲ್ಲವೆಂಬುದೂ ನಿಜ. ನಮ್ಮ ರಾಜಕೀಯ ಶಿಕ್ಷಣವನ್ನು ಬ್ರಿಟಿಷರು ಮಾಡಿಕೊಟ್ಟುದು ಸಾಕೆಂದ ಮಾತ್ರಕ್ಕೆ ನಮ್ಮ ನುರಿತ ಗುರುಗಳೂ ಮಾಡುವುದು ಬೇಡವೆಂದರ್ಥವಲ್ಲ. ಇದು ಉಜ್ಜ್ವಲ ಇತಿಹಾಸವನ್ನುಳ್ಳ ಕಾಂಗ್ರೆಸ್ ಸಂಸ್ಥೆಯ ಮೇಲೆಯೇ ಒದಗಿರುವ ಗುರುತರವಾದ ಹೊಣೆ. ಅದು ಅಧಿಕಾರ ನಡೆಸಿದರೆ ಸಾಲದು; ಜನತೆಯನ್ನು ರಾಜಕೀಯ ಜೀವನಕ್ಕೆ ಅರ್ಹರಾಗುವಂತೆಯೂ ಮಾಡಬೇಕು. ಈ ಹೊಣೆಯನ್ನು ಅದು ಹೊರಲು ಹಿಂಜರಿದರೆ, ಉಳಿದ ರಾಜಕೀಯ ಪಕ್ಷಗಳು ಸುಮ್ಮನಿರುವುದಿಲ್ಲ. ತಮಗೆ ಅನುಕೂಲಿಸುವಂತೆ ಜನತೆಯನ್ನೆಳೆದುಕೊಂಡು ಹೋಗುತ್ತವೆ. "ಸತ್ಯಮೇವ ಜಯತೇ"

ಶಾಂತಿ ನೀತಿ - ಹೇಗಿದೆ?

ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.

ಆಟಮಸ್ತ್ರ
ಲೋಕ ಮಂತ್ರ
ಶಾಂತಿನೀತಿ—ಹೇಗಿದೆ?
ಹಿರೋಶಿಮೋ
ನಾಗ ಸಾಕಿ
ಮಣ್ಣುಮುಕ್ಕಿ ಹೋಗಿವೆ! ೧

ಪುಣ್ಯ ಜನನಿ
ಪ್ರೇಮ ಪಯಂ
ಶಿಶುವಿಗೂಡಿಸುತ್ತಿರೆ,—
ತಾಯಿ ಮತ್ತು
ಹಸುಳೆ ಸತ್ತು
ಎಲುಬುಗೂಡಿ ಹೆತ್ತಿರೆ! ೨

ಗಂಡು ಹೆಣ್ಣು
ಎರಡು ಕಣ್ಣು
ಒಲಿದು ಸಲಿದು ನೆರೆದಿರಲ್,-
ಬೆಂಕಿ ಮಳೆಯೆ
ಬಂತು ಹೊಳೆಯೆ
ಕಿಚ್ಚು ಹೊನಲು ಕೊಚ್ಚಿರಲ್! ೩

ಅತ ಮುದುಕ
ಎಂತು ಬದುಕ
ಬೇಕು ಸುರಿನ ಬೆಂಕಿಗೆ?
ಬಾನು ಬಯಲು
ಕಾನು ಕದಲು
ಎಲ್ಲ ಸುಡುವದೊಂದಿಗೆ! ೪

ಪ್ರಳಯಲೀಲೆ
ಜ್ವಲನ ಜ್ವಾಲೆ
ಧಗಿಸಿ ಜಗವನಪ್ಪಿತು;
ವಾಯು ವಿಷಂ
ನೀರು ವಿಷಂ
ಜೀವ ಸತ್ತು ಸುಟ್ಟಿತು! ೫

ಇಂಥ ಹನನ
ಪ್ರಾಣ ಹರಣ
ಲೋಕ ಶಾಂತಿಗೆಂಬರು!
ಪ್ರಜಾವಾಣಿ
ರಾಷ್ಟ್ರವೆನ್ನಿ
ನಂಬುವವರು ಹುಂಬರು. ೬

ಹಿರೋಶಿಮೋ
ನಾಗಸಾಕಿ
ಶಾಂತಿ ಪೂಜೆ ತೊಡಗಿತು;
ಆಟ ವಾಟ
ಕಾಲ ಕೂಟ
ವಿಷ ಸಂಸ್ಕೃತಿ ಧಗಿಸಿತು! ೭

ಮೊನ್ನೆ ಜಪಾನ್
ನಿನ್ನೆ ತುಫಾನ್
ಕೊರಿಯದಲ್ಲಿ ಕೆರಳಿದೆ;
ಮುಂದೆ ಚೀನ
ಹಿಂದೆ ಏನ?
ಏಶ್ಯ ದೇಶ ನಡಳಿದೆ! ೮

ಮರವನೇರಿ
ಕಾಂಡ ಕಡೆಯೆ
ತಡೆಯಬೇಕು-ಹುಚ್ಚರ;
ಸುಟ್ಟ ನಾಡ-
ಪಟ್ಟ ಬೇಡ,
ನಿಲಿಸು ಮಾನುಜ ಮಚ್ಚರ! ೯

ಧನದ ಜನದ
ಮನದ ಮದವು
ಮೇರೆ ಮೀರಿ ಕೆಡುವುದು;
ಜೀವ ಜಗವ
ಸುಟ್ಟು ಸುವಿಷ-
ಬುದ್ಧಿ ಪ್ರಳಯ ತರುವುದು! ೧೦

ರುದ್ರವರದಿ
ರುದ್ರಶಿರದಿ
ಕಯನೆತ್ತಿ ರಕ್ಕಸಂ,
ಬೆನ್ನ ಹತ್ತಿ
ತನ್ನ ನೆತ್ತಿ-
ಗಿಟ್ಟುತಾನೆ ಸುಟ್ಟಿಹಂ! ೧೧

ಶಕ್ತಿ ಗರ್ವ
ಶಾಪ ಸರ್ಪ-
ವಾಗಿ ಕಚ್ಚಿಕೊಂಡಿದೆ
ನೀತಿ ನಲವು
ಪ್ರೀತಿ ಬಲವು
ದಯಾ ಹೃದಯ ಗೆಲಲಿದೆ. ೧೨

ಲೋಕ ಬದುಕಿ
ತಾನು ಬದುಕಿ
ಬಾಳ್ವೆ ನಿತ್ಯ ಬೆಳಗಲಿ;
ಏರಿದವನು
ಜಾರಿರುವನು
ನೋಡಿ ನೆಲೆಯ ನೆಗೆಯಲಿ! ೧೩

ಪ್ರೇಮ ಪಥದಿ
ಸತ್ಯ ರಥದಿ
ಸಾಗಿ ಶಾಂತಿ ಮಂದಿರಂ-
ಸೇರಿ ಸಾಕು;
ತಿಳಿದು ಬೇಕು:
ಜೀವ ಕುಸುಮ ಸುಂದರಂ! ೧೪

ತದಲ್ಲಿ ಮುಖ್ಯವಾದ ವಿಷಯವೆಂದರೆ ಮಾರ್ಲಿಮಿಂಟೋ ಸುಧಾರಣೆಗಳ ನಂತರ ನಮ್ಮ ಜನತೆಯ ಪ್ರತಿನಿಧಿಗಳಿಗೆ ಸರಕಾರದಲ್ಲಿ ಅಷ್ಟಿಷ್ಟು ಸ್ಥಾನವಿತ್ತು, ಭಾರತಕ್ಕೆ ಪ್ರಜಾಪ್ರಭುತ್ವದ ಪ್ರಥಮ ಪಾತಗಳೆಲ್ಲ ೧೯೩೫ ನಂತರ ೧೯೪೭ರೊಳಗೆ ಹೃದ್ಗತವಾಗಿದ್ದುವು ಎಂಬಂಶ. ೧೯೪೭ರಿಂದಾಚೆಗೆ ಕಾಂಗ್ರೆಸ್ ಪಕ್ಷವೇ ಎಷ್ಟೋ ಪ್ರಾಂತಗಳಲ್ಲಿ ಜವಾಬ್ದಾರೀ ಸರಕಾರದಲ್ಲಿ ಹೆಚ್ಚಿನ ರಾಜ್ಯ ಸೂತ್ರದ ಹೊಣೆಯನ್ನು ನಿರ್ವಹಿಸಿತ್ತು ಎಂಬಂಶ. ಭಾರತ ಜನತೆಗೆ ಪ್ರಜಾಪ್ರಭುತ್ವದ ಬಾಲ್ಯಪಾಠವೇ ಗೊತ್ತಿಲ್ಲವೆಂಬುದು ತಪ್ಪು ಕಲ್ಪನೆ. ಪೂರ್ಣ ಪರಿಜ್ಞಾನ ಇನ್ನೂ ಉಂಟಾಗಿಲ್ಲವೆಂಬುದೂ ನಿಜ. ನಮ್ಮ ರಾಜಕೀಯ ಶಿಕ್ಷಣವನ್ನು ಬ್ರಿಟಿಷರು ಮಾಡಿಕೊಟ್ಟುದು ಸಾಕೆಂದ ಮಾತ್ರಕ್ಕೆ ನಮ್ಮ ನುರಿತ ಗುರುಗಳೂ ಮಾಡುವುದು ಬೇಡವೆಂದರ್ಥವಲ್ಲ. ಇದು ಉಜ್ಜ್ವಲ ಇತಿಹಾಸವನ್ನುಳ್ಳ ಕಾಂಗ್ರೆಸ್ ಸಂಸ್ಥೆಯ ಮೇಲೆಯೇ ಒದಗಿರುವ ಗುರುತರವಾದ ಹೊಣೆ. ಅದು ಅಧಿಕಾರ ನಡೆಸಿದರೆ ಸಾಲದು; ಜನತೆಯನ್ನು ರಾಜಕೀಯ ಜೀವನಕ್ಕೆ ಅರ್ಹರಾಗುವಂತೆಯೂ ಮಾಡಬೇಕು. ಈ ಹೊಣೆಯನ್ನು ಅದು ಹೊರಲು ಹಿಂಜರಿದರೆ, ಉಳಿದ ರಾಜಕೀಯ ಪಕ್ಷಗಳು ಸುಮ್ಮನಿರುವುದಿಲ್ಲ. ತಮಗೆ ಅನುಕೂಲಿಸುವಂತೆ ಜನತೆಯನ್ನೆಳೆದುಕೊಂಡು ಹೋಗುತ್ತವೆ. "ಸತ್ಯಮೇವ ಜಯತೇ"

Approved by the Text Book Committee of Madras, for non-detailed study in higher Forms (vide Page 7, Fort St. George Gazette, Part I—B dated 4—5...1955).

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬಿದುಕು ಬಿಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ: ರೂ. ೧ : ೫೫

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ಸ್ವತಂತ್ರ ಭಾರತದಲ್ಲಿ ಭಾರತೀಯರ ಕರ್ತವ್ಯಗಳು

ಭಾರತವು ಸ್ವತಂತ್ರವೇನೋ ಆಯಿತು ಆದು ಹಲವಾರು ಭಾರತೀಯರ ಉತ್ಸಾಹದ ರಕ್ತತರ್ಪಣದ ಪ್ರತಿಫಲ ಸ್ವತಂತ್ರ ದಿನೋತ್ಸವದ ಸಂತೋಷದ ಸಮಯದಲ್ಲಿ ಆದಕ್ಕಾಗಿ ದುಡಿದು, ದುಡಿಯುತ್ತಿರುವ ನಮ್ಮ ಜನನಾಯಕರನ್ನು ಸ್ಮರಿಸದೆ ಹೋದರೆ ಕೃತಘ್ನರಾಗುತ್ತೇವೆ ಅವರನ್ನು ಸೆನೆಯುವುದು ಮಾತ್ರವಲ್ಲದೆ, ಒದಗಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಮಹಾಕಾರ್ಯದಲ್ಲಿ ನಮ್ಮ ಕರ್ತವ್ಯಗಳೇನೆಂಬುದನ್ನೂ ತಿಳಿದುಕೊಂಡು, ಇಂದಿನ ಪವಿತ್ರದಿನದಲ್ಲಿ ದೇಶದ ನಿಜವಾದ ಪ್ರಜೆಗಳಾಗಿ ಬಾಳುವ ದೃಢ ನಿರ್ಧಾರವನ್ನು ಮಾಡೋಣ

ಬರೆದವರು: ಶ್ರೀ ಸಂಜೀವ ಲಕ್ಷ್ಮೀಶ್ವರ, ಬಿ ಎ

ಭಾರತದ ಇತಿಹಾಸದಲ್ಲಿ ಇಂದಿನ ಸ್ವಾತಂತ್ರ್ಯದಿನವು ಅತ್ಯಂತ ಮಹತ್ವದ ದಿನವೆಂದು ಹೇಳಬಹುದು ಇಂದು ಭಾರತವನ್ನು ಭಾರತಂತ್ರ್ಯದ ಸಂಕೋಲೆಯಿಂದ ಬಿಡುಗಡೆ ಮಾಡಲು ಹೋರಾಟ ಪ್ರಾರಂಭಿಸಿ ಒಂದು ನೂರು ವರುಷಗಳಾದವು. ಅದರಂತೆಯೇ ಭಾರತಕ್ಕೆ ಸ್ವಾತಂತ್ರ್ಯ ದೊರೆತು ೧೦ ವರ್ಷಗಳಾದವು. ಹೀಗಾಗಿ ಈ ದ್ವಿಮುಖಕಾರಣಕ್ಕಾಗಿ ಇಂದಿನ ಸ್ವಾತಂತ್ರ್ಯದಿನವು ಪ್ರತಿಒಬ್ಬ ಭಾರತೀಯನ ಜೀವನದಲ್ಲಿ ಮರೆಯಬಾರದಂಥ ಪವಿತ್ರ ದಿನವೆಂದು ಹೇಳಬಹುದು.

ಯಾವದೇ ದೇಶವನ್ನು ಪರತಂತ್ರದಿಂದ ಬಿಡುಗಡೆ ಮಾಡುವದು ಅಂಥ ಸಣ್ಣ ಮಾತಲ್ಲ ಅದಕ್ಕೆ ಅಖಂಡವಾದ ತಪಸ್ಸು, ನಿಷ್ಠೆಯ ಸೇವೆ, ಅವಿರತ ಕೋರಾಟ, ತಮ್ಮ ಜೀವವನ್ನೇ ಪಣಕ್ಕೆ ಹಚ್ಚುವಂಥ ದೇಶಪ್ರೇಮ ಮುಂತಾದವುಗಳು ಅವಶ್ಯ Self sacrifice and unselfishness are the only unfailing guides to freedom and happiness. ಭಾರತದ ಈ ಒಂದು ನೂರು ವರುಷಗಳ ಸ್ವಾತಂತ್ರ್ಯ ಸಮರದಲ್ಲಿ ಲಕ್ಷಾವಧಿ ಜನರು ತಮ್ಮ ಜೀವದ ಕಂಗು ತೊರೆದು ದೇಶದ ಬಂಧ ವಿಮೋಚನೆಗಾಗಿ ದುಡಿದಿದ್ದಾರೆ ಅವರೆಲ್ಲರ ಪರಿಶ್ರಮದ ಫಲವನ್ನು ಇಂದು ನಾವು ಭೋಗಿಸುತ್ತಿದ್ದೇವೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮವು ಯಶಸ್ವಿ ಆಗಲು ಕಲವು ಕಾರಣಗಳಿವೆ ಯಾವದೇ ಹೋರಾಟಕ್ಕೆ ಒಬ್ಬ ಮೇಧಾವಿ ಹಾಗು ದಕ್ಷ ಮುಖಂಡನ ಆವಶ್ಯಕತೆ ಇರುವದು ಭಾರತದ ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನತೆಗೆ ಕಾಲಕಾಲಕ್ಕೆ ಯೋಗ್ಯರಾದ ಮುಖಂಡರು ಮಾರ್ಗದರ್ಶಕರಾಗಿ ದೊರೆತದ್ದು ಒಂದು ಭಾಗ್ಯವೇ ಸರಿ ಅಂದ ಅನೇಕ ಮುಖಂಡರಲ್ಲಿ ದಾದಾಭಾಯಿ ನವರೋಜಿ ಲೋಕಮಾನ್ಯ ತಿಲಕ, ಮಹಾತ್ಮಾಗಾಂಧಿ ಹಾಗು ಪಂಡಿತ ನೆಹರು ಅವರು ಪ್ರಮುಖರು. ಇಂದಿನ ಈ ಶುಭದಿನದಂದು ಈ ಎಲ್ಲ ಭಾರತದ ಸ್ವಾತಂತ್ರ್ಯ ಸೇವೆಯನ್ನು ಸ್ಮರಿಸಿ ಅವರಿಗೆ ಗೌರವ ಕೊಡುವದು ಪ್ರತಿಒಬ್ಬ ಭಾರತೀಯನ ಕರ್ತವ್ಯವೇ ಸರಿ ಅದುದರಿಂದ ಈ ಎಲ್ಲ ಮುಖಂಡರ ನೆನಪು ಮಾಡಿಕೊಟ್ಟು, ಭಾರತೀಯರು ದೊರೆತ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳಲು ಮಾಡಬೇಕಾದ ಕರ್ತವ್ಯಗಳ ಅರಿವು ಮಾಡಿಕೊಡುವದೇ ಈ ಲೇಖನದ ಉದ್ದೇಶ

ಮಹರ್ಷಿ ದಾದಾಭಾಯಿ ನವರೋಜಿಯವರು — ೧೮೨೫ರಲ್ಲಿ ಜನ್ಮತಾಳಿದ ಶ್ರೀ ದಾದಾಭಾಯಿಯವರು ಆಂಗ್ಲಂಕಟಿಲ ನೀತಿಯನ್ನು ಅರಿತುಕೊಂಡು ಭಾರತೀಯರಲ್ಲಿ ಜಾಗೃತಿಯನ್ನುಂಟು ಮಾಡಿದ ಮೊದಲನೆ ಮಹಾಪುರುಷರು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರನ್ನು ಬೆಕ್ಷೆ ಬೇಡಿದರೆ ಲಾಭ ದೊರೆಯುವದು ಅದನ್ನು ದೊರಕಿಸಲು ಇಂಗ್ಲೆಂಡದಲ್ಲಿ ನಡೆದಂತೆ ಆಂದೋಲನವೊಂದೇ ಮಾರ್ಗ ಎಂಬ ಮಂತ್ರವನ್ನು ಜಪಿಸಿ ಜನತೆಯನ್ನು ಎಚ್ಚರಗೊಳಿಸಿದರು Agitation is the life and soul of the whole political social and industrial history of England. ಆಂದೋಲನಕರ ಮೊದಲು ಜನತೆಯಲ್ಲಿ ಒಕ್ಕಟ್ಟು ಅವಶ್ಯ ಅದಕ್ಕಾಗಿ ಅವರು ಜನತೆಗೆ ತಮ್ಮ ಎಲ್ಲ ಭೇದ ಭಾವಗಳನ್ನು ಮರೆತು ದೇಶದ ಸ್ವಾತಂತ್ರ್ಯಕ್ಕಾಗಿ ಸ್ವದೇಶಾಭಿಮಾನದಿಂದ ಹಾಗು ಸ್ವಾರ್ಥ ತ್ಯಾಗದಿಂದ ಹೋರಾಡಲು ಕರೆಕೊಟ್ಟರು ಅವರು ೧೮೮೫ರಲ್ಲಿ ಲಾಹೋರದ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಹೇಳಿದ ಮಾತುಗಳು ಎಂದ ಭಾರತೀಯರಲ್ಲಿಯೂ ದೇಶ ಪ್ರೇಮವನ್ನು ಜಾಗೃತಗೊಳಿಸಿತು 'Let us always remember that we are all children of our mother country Indeed, I have never in any other spirit than that I am an Indian and our duty to my country and all my countrymen Whether I am a Hindu, a Muslim, a Parsia Christian or of any other creed, I am above all an Indian, our country is India, our nationality is Indian" ಹೀಗೆ ಜನತೆಯಲ್ಲಿ ದೇಶಪ್ರೇಮದ ಬೀಜ ಬಿತ್ತಿ ಬ್ರಿಟಿಷ ಸಾಮ್ರಾಜ್ಯಕ್ಕೆ ಮೊದಲಿನ ಗುದ್ದಲಿಯನ್ನು ಹಾಕಿದವರೆಂದರೆ ದಾದಾಭಾಯಿಯವರು ಆದ್ದರಿಂದಲೇ ಇವರಿಗೆ The Grand old man of India ಎಂಬ ಪ್ರೀತಿಯ ಬಿರುದು ಇತ್ತು

ಲೋಕಮಾನ್ಯ ತಿಲಕರು — ೧೮೫೬ರಲ್ಲಿ ಜನಿಸಿದ ಲೋಕ ಮಾನ್ಯರು ದೇಶದ ಬಂಧ ವಿಮೋಚನೆಗಾಗಿತಮ್ಮ ತನುಮನದನಗಳನ್ನು ದಾರಿಎರೆದುಹೋರಾಡಿದರು "We know of no other Indian who has made greater personal sacrifices for his country than Mr. Tilak.' ಇದೊಂದು ಮಾತಿನಿಂದಲೇ ತಿಲಕರ ಸ್ವಾರ್ಥತ್ಯಾಗದ ಕಲ್ಪನೆ ಬರುವದು Home rule is my birth right and I will have it ಎಂಬುದು ಅವರ ಮಂತ್ರವಾಗಿದ್ದಿತು. ಅದನ್ನು ಸಾಧಿಸಲು ಇವರು ತಮ್ಮ ಆಯುಷ್ಯವನ್ನೇ ಮುಡುಪಾಗಿಟ್ಟರು ಇವರು ಹಿರಿಯ ರಾಜಕಾರಣಿಗಳಿದ್ದಂತೆ ದಮನ ಪ್ರವರ್ತಕರೂ ಇದ್ದರು ಇವರು ಪ್ರಾರಂಭಿಸಿದ ಗಣೇಶೋತ್ಸವವು ಮಹಾರಾಷ್ಟ್ರದಲ್ಲಿ ಇಂದಿಗೂ ಉತ್ಸಾಹದಿಂದ ಆಚರಿಸಲ್ಪಡುವದು. ಇವರನ್ನು "ಆರ್ವಾಚೀನ ಭಾರತದ ಜನಕರೆಂದು" Maker of Modern India ಕರೆಯುವದುಂಟು

ಮಹಾತ್ಮಾ ಗಾಂಧೀಜಿಯವರು — ೧೮೬೯ರಲ್ಲಿ ಜನಿಸಿದ ಮೋಹನದಾಸ ಗಾಂಧಿಯವರು ಭಾರತೀಯರಲ್ಲಿದ್ದ ಗಾಢಾಂಧಕಾರವನ್ನು ಕಿತ್ತೊಗೆದು ದೇಶಪ್ರೇಮದ ಕಿಡಿ ಹೊತ್ತಿಸಿದರು. ಅಸಹಕಾರ ಚಳುವಳಿಯ ಮಂತ್ರ ಜಪಿಸಿ ಭಾರತೀಯರ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೊಸ ಸ್ವರೂಪವನ್ನೇ ತಂದುಕೊಟ್ಟರು ಈ ಹೊಸ ಮಂತ್ರವು ಆಂಗ್ಲರನ್ನು ಕೂಡ ದಿಗ್ಭ್ರಾಂತರನ್ನಾಗಿ ಮಾಡಿತು. "ಅಹಿಂಸಾ ಪರೋ ಧರ್ಮಃ" ಎಂಬ ಸಿದ್ಧಾಂತದ ಮೇಲೆ ಸ್ವಾತಂತ್ರ್ಯ ಯುದ್ಧವು ನಡೆಯಬೇಕು ಹಾಗು ಸತ್ಯ, ಅಹಿಂಸೆಗಳಿಂದಲೇ ಭಾರತಕ್ಕೆ ಸ್ವಾತಂತ್ರ್ಯ ದೊರೆಯಬೇಕು ಎಂಬ ಖಚಿತವಾದಿಗಳಾಗಿದ್ದರು ಅಹಿಂಸೆಯಿಂದ ಯಾರಾದರೂ ದೇಶವನ್ನು ಗೆಲ್ಲಬಲ್ಲರೇ ಎಂದು ಇಡೀ ಜಗತ್ತೇ ಇವರನ್ನು ಸಂಶಯ ದೃಷ್ಟಿಯಿಂದ ನೋಡಹತ್ತಿತು. ಆದರೆ ಕೊನೆಗೆ ಸತ್ಯ, ಅಹಿಂಸೆಗಳಿಂದಲೇ ಮಹಾತ್ಮರು ಸ್ವಾತಂತ್ರ್ಯ ದೊರಕಿಸಿ ಇಡೀ ಜಗತ್ತೇ ಕೌತುಕಪಡುವಂತೆ ಮಾಡಿತೋರಿಸಿದರು ಅಂತೇ ಇಂದು ಗಾಂಧೀಜಿಯವರ ಹೆಸರು ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಮಾನ್ಯವಾದ ಮಾತಾಗಿದೆ 'Mahatma Gandhi today stands at the very centre of the world's life with fate of centuries poised with his hands" John Helmes

ಪಂಡಿತ ಜವಾಹರಲಾಲ ನೆಹರೂರವರು — ೧۹۸۹ರಲ್ಲಿ ಜನಿಸಿದ ಜವಾಹರಲಾಲ ನೆಹರುರವರು ಇಂದು ಕೇವಲ ಭಾರತದ ನಾಯಕರಾಗದೇ ಜಾಗತಿಕ ನಾಯಕರಾಗಿದ್ದಾರೆ. ಜಗತ್ತಿನ ಯಾವದೇ ರಾಷ್ಟ್ರದಲ್ಲಿ ಏನೇ ಆದರೂ ಅದು ಜವಾಹರಲಾಲರಿಗೆ ಸಂಬಂಧಿಸಿದ್ದೇ ನ್ಯಾಯಕ್ಕಾಗಿ ಆ ದೇಶವು ನೆಹರೂರವರ ಕಡೆಗೆ ನೋಡುವದು. ವಿಶ್ವಕುಟುಂಬದ ನಾಯಕರಾದ ನೆಹರೂರವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವಿರತವಾಗಿ ಶ್ರ

(೨೫ನೇ ಪುಟ ನೋಡಿರಿ)

37 ವರುಷಗಳ
ಭದ್ರ ಹಾಗೂ ಸಮರ್ಥ
ಬೇಂಕಿಂಗ್ ಸೇವೆ

ಸ್ಥಾಪನೆ 1920

ದಿ
ಪಾಂಗಾಳ ನಾಯಕ್ ಬೇಂಕ್
ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಸೇವಿಂಗ್ಸ್ ಬೇಂಕ್ ಲೆಖ್ಖಗಳು
ರೂಪಾಯಿ 5/- ರಿಂದ ತೆರೆಯಲ್ಪಡುವುವು.
ಸುಲಭದಲ್ಲಿ ಚೆಕ್ ಮೂಲಕ ವಾಪಾಸು ಪಡೆಯುವ
ಸೌಲಭ್ಯ ಬಡ್ಡಿ ಸೇಕಡಾ 2½ಯಂತೆ

ಕರೆ, ಚೆಕ್ಕ ವ್ಯಾದೆ ಮತ್ತು ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುವುವು ಬಡ್ಡಿ ಸೇಕಡಾ 4½ ವರೆಗೆ ದೊಡ್ಡ ಠೇವಣಾತಿಗಳ ಮೇಲೆ ಜಾಸ್ತಿ ಬಡ್ಡಿ ಕೊಡಲಾಗುವುದು

ಶಾಖೆಗಳು

ಹಂಪನಕಟ್ಟೆ-ಮಂಗಳೂರು, ಬಂದರ-ಮಂಗಳೂರು, ಉಡುಪಿ, ಕಟಪಾಡಿ, ಶಂಕರಪುರ, ಹಳೆಯಂಗಡಿ, ಕಿನ್ನಿಗೋಳಿ, ಸುರತ್ಕಲ್, ಕಾಸರಗೋಡು, ಕನ್ನಂಗಾಡ್ ಮತ್ತು ನೀಲೇಶ್ವರ

ಕವಿ: ಶ್ರೀ ಯಸ್. ವೆಂಕಟರಾಜ, ಉಡುಪಿ.

ಕಲ್ಯಾಣರೇಖೆ

[ಗೀತ ನಾಟಕ]

(ದೃಶ್ಯ–ವನಪ್ರದೇಶ)
ಪ್ರವೇಶ—ವನದೇವತೆಯರು.
ಬಂದಿತೋ ವಸಂತ ಮಾಸ
ವಿವಿಧ ಪುಷ್ಪ ಚಯ ಪರಾಗ
ನವ ಪರಿಮಳ ಸುಖೋಲ್ಲಾಸ
ಈ ವಸಂತ ಮಾಸ!
ನಮ್ಮ ಜಾಯಿ ಸೀತೆಗೆ
ವಿಮಲ ಭೂಮಿ ಜಾತೆಗೆ
ಏನಿದಕಟ ವಿಪರ್ಯಾಸ
ತೊಡಗಿದಂತ ವನವಾಸ!
ಸಂತೈಸಲು ಬಂದ ವೇಷ
ಈ ವಸಂತ ಮಾಸ!
ಸಕಲ ಜಗದ ಮಂದಹಾಸ
ಈ ವಸಂತ ಮಾಸ!
ಅಲರ ಹಕ್ಕಿ ದಂಪತಿಗಳೆ
ಹೊಸತು ಹಾಡ ಹಾಡಿರಿ
ಮಲರ ಮುದ್ದು ಮಲ್ಲಿಗೆಗಳೆ
ಜೇನನಿತ್ತು ನೀಡಿರಿ
ನೆಲದ ಸಚ್ಚು ಸಲಿಲುಗಳೆ
ಧಿಮಿ ಧಿಮಿತಕ ಕುಣಿಯಿರಿ
ಸಕಲ ಜೀವ ಜಂತುಗಳೆ
ಕಣ್ಣ ತೆರೆದು ನೋಡಿರಿ!
ನಮ್ಮ ತಾಯಿ ಸೀತೆಗೆ
ವಿಮಲ ಭೂಮಿ ಜಾತೆಗೆ
ಏನಿದಕಟ ವಿಪರ್ಯಾಸ
ತೊಡಗಿದಂತ ವನವಾಸ.
ಜಗನ್ಮಾತೆ ಮಗಳಾಗಿ
ತಳೆದರೂಪ ಮುಂದಿದೆ
ಗಿಣಿಗಿಣಿಗುಲು ಗೆಜ್ಜೆಯಲಿ ವ-
ಸಂತಮಾಸ ಬಂದಿದೆ!
(ಮುಂದೆ ನೋಡಿ ಆಶ್ಚರ್ಯದಿಂದ)
ಅದೋ ನೋಡು ಸ್ವರ್ಣ ಹರಿಣ
ನಲಿದು ನಲಿದು ಬರುತಿದೆ
ನವ ವಿಲಾಸದೊಂದು ಲಾಸ್ಯ
ರೂಪಗೊಂಡು ಬರುತಿದೆ.
ನಮ್ಮ ತಾಯಿ ಸೀತೆಗೆ
ವಿಮಲ ಭೂಮಿ ಜಾತೆಗೆ
ಏನಿದಕಟ ವಿಪರ್ಯಾಸ
ಒದಗಿ ಬಂದ ವನವಾಸ
ಎಂಟುದಿಸೆಗೆ ಬೆದರುನೋಟ
ಮೆಲ್ಲ ಮೆಲ್ಲ ಬರುತಿದೆ
ಏನಿದಮಮ ಸ್ವರ್ಣ ಹರಿಣ
ಗೆಲವು ಕಾಣ್ಕೆ ತರುತಿದೆ!
ಬಂದಳಲ್ಲ ನಮ್ಮ ತಾಯಿ
ಭಾವುಕತೆಯ ಪಣ್ಣುಕಾಯಿ
ಇತ್ತ ಬಂದ ಬೆದರುಗಣ್ಣು
ಅತ್ತ ಕಾಂಬ ಬೆಳುಪುಗಣ್ಣು!
ಬಂದಳೆನೋ ನಮ್ಮ ಸೀತೆ
ಸ್ವರ್ಣ ಹರಿಣದನುಗತೆ!
(ಹೋಗುವರು)

(ಅತ್ತ ಸ್ವರ್ಣ ಮೃಗದ ಬರುವಿಕೆ ಇತ್ತ ಸೀತೆಯ ಪ್ರವೇಶ)
ಸೀತೆ—
ಅಹೋ ಏನು ಚೆಲುವು ಚೆಂದ
ಇದೇ ಹರಿಣ ನಿಲುವಿನಂದ
ಈ ವಸಂತ ಮಧುರಿಮೆಯಲಿ
ಮೂರ್ತಿಗೊಂಡ ತಿವಾನಂದ!
(ಜಿಂಕೆ ಸುತ್ತುತ್ತಿರುವುದನ್ನು ಕಂಡು)
ಮಮ ಚಿಂತೆಯ ಪರಿಹಾರಕೆ
ನೀನಾಗಿಯೆ ಬಂದಿಹೆಯ?
ಕಲ್ಪನೆಯೋ ಸ್ವಪ್ನವಿದೇನ್
ಈ ರೂಪವೆ ನಿಂದಿಹೆಯ?
ಚಪಲಾಕ್ಷದ ಚಾಂಚಲ್ಯವೊ
ಭಯ ಕಲ್ಪಿತ ನಿಟ್ಟುಸಿರೊ?
ಕುಪಿತಾತ್ಮರ ಕೂರಂಬಿನ
ವೈನೋವಿನ ಕಣ್ಣೀರೊ?
ಬನ ಬೆದರಿಕೆ ಬಲುವಾಯಿತೆ
ಕೇಸರಿ ಕಣ್ಮುಸಗಿಹುದು?
ನಿನ ಬಳಗವ ತೊರೆದೀಕಡೆ
ಬಂದಿಹ ಬಾಳ್ಬೆದರಿಹುದೆ?
ಕುಳಿತಿರುವೆನು ಕಾನನದೊಳು
ಮಧುಮಾಸದೊಳೇಕಾಂಕಿ
ಎಲೆ ಹರಿಣವೆ-ಬಾ ಕುಣಿ ಕುಣಿ
ದಾಡುತ ನೀನೆನ್ನ ಸಖಿ!
(ಜಿಂಕೆಯನ್ನು ಹಿಡಿಯಲು ಹತ್ತಿರ ಸರಿದಂತೆ ಅದು ಓಡಿ ಹೋಗುವುದು)

ಸೀತೆ— (ಹತಾಶದಿಂದ)
ಅಹೋ ಏನು ಚೆಲುವು ಚೆಂದ
ನನ್ನ ಬಾಳಿಗೊದಗಲಿಲ್ಲ
ಈ ವಸಂತ ಮಧುರಿಮೆಯಲಿ
ಬರದೆ ಕಾದು ಕುಳಿತೆನಲ್ಲ!
(ರಾಮನು ಪ್ರವೇಶಿಸಿ ಆಶ್ಚರ್ಯದಿಂದ)
ರಾಮ—
ಏನಿದು ಜಾನಕಿ-ಚಂದ್ರಮುಖಿ!
ದುಃಖಾಸ್ಪದಗೊಂಡಿಹ ತನುರೀತಿ
ಬಾಡಿದ ಮುಖ ಕಣ್ಣೀರಿನ ವಸತಿ
ಕಾಡುತಲಿದೆ ಮೈ ನಡುಕದ ಭೀತಿ.
ಏನಾಯಿತು ನಿನ್ನಾಸೆಗೆ ಕೊರತೆ
ದೀನ ಮಾನ ಮಾಲಿನ್ಯದ ಚಿಂತೆ
ಏನಾದರು ಸರಿ ತಂದೇ ತರುವೆ
ನೀನಾಡುವುದೊಂದೇ ತಡ-ಈವೆ
ಸೀತೆ— (ಉತ್ಸಾಹದಿಂದ)
ನಲಿದು ಬಂದುದೊಂದು ಜಿಂಕೆ
ಅದರ ದೇಹ ಸ್ವರ್ಣ ರೇಖೆ
ಅದರ ಕಣ್ಣು ಕುಣಿವ ಮಿಂಚು
ಮದನ ಬಾಣ ಸೆಳೆದ ಸಂಚು!
ಅದರ ಚುರುಕು ಕಾಲ ಕುಣಿತ
ಗಾಳಿಯೊಡನೆ ಸುಳಿವ ಗೀತ
ಅದರ ರೂಪ ನಯನಾಮೃತ
ಅದೇ ನನಗೆ ಬೇಕು ನಾಥ!

ರಾಮ— (ವಿಚಾರವಾಗಿ)
ಏನು ಮಾತಿದು ಸೀತೆ—ಎಲ್ಲಿ ಚಿನ್ನದ ಜಿಂಕೆ ಇದಕಾಗಿ ಮನಸೋತು ಮರುಗುತಿಹುದೆ? ಭೂಲೋಕವಾಳಲಿ ಸ್ವರ್ಣ ಹರಿಣವ ಕಾಂಬ ಕಾತುಕದ ಮಾಯೆಯನು ನಂಬ ಬಹುದೆ? ಮಧು ಮಾಸದೆ ಸಕಲದಲಿ ಹೊಂಬಿಸಿಲ ಹೂಟೆಯಲಿ ಜಗವೆಲ್ಲ ಜಗಜಗಿಸಿ ಕಾಣಲಿಹುದು. ಚದುರೆ! ಸಿನ್ನಾಸರದ ಹೊನ್ನ ಕೊಗರನು ಹೊತ್ತು ಕೈಗಸಕ್ಕೆ ಬಂಗಾರವೆನಿಸಬಹುದು!
ಸೀತೆ— (ಮಾಸಿ ಮುನಿಸಿನಿಂದ)
ನಾಕಂಡ ನಿಚ್ಚಟದ ನೋಟವದು. ನಾನೆನ್ನ ಕಂಗಳನೆ ನಂಬದಿಕೆ ಕಾಲವುಂಟೆ? ಸಾಕು ಬಿಡಿ, ಕಾಡಿನಲಿ ಕೂತ ಜೀವಿಕಕಾಗಿ ಏಕೊ ಬಂದಿಹೆ ನನ್ನ ಭಾಗ್ಯದೊಟೆ!
(ಮುಂದೆ ನೋಡಿ ಉತ್ಸಾಹದಿಂದ)
ಅದೊ ಬಂತು ಆ ಜಂತ! ಕಂತು ಕಾನನದಲ್ಲಿ ತೂರಿರುವ ಚಂದ್ರಿಕೆಯ ಪಟಿಕೆ ಚಂಡು. ಅದೊ ನಿಂತು ನೋಡುತಿದೆ! ಕಣ್ಣಳತೆಯಲಿ ನನ್ನ ಜೀವನನೆ ಸೆಳೆಯುತಿದೆ ಮೋಹಗೊಂಡು. ಈ ಕಾಡಿನಲಿ ಭಯವ ಬೀಡಿನಲಿ ನಾನೇನ ಕೊಳಲುಂಟು ನಿರ್ಗ್ಯಾಡನೆಕೇಳಿಕೊಂಬೆ! ನೀವೆ ಕಾರುಣ್ಯದಲಿ ನನ್ನ ಸಂತಸಕಾಗಿ ಕೊಡುವ ಬಳುವಳಿಗಾಗಿ ಬಂದುದೆಂಬೆ!
ರಾಮ— (ಸೀತೆಯ ಕೈಹಿಡಿದು ಸಮಾಧಾನವಾಗಿ)
ಸೀತೆ ನೋಡದರ ಕಡೆ ನಯದ ನೋಟದ ಹಿಂದೆ ಏನೊ ಕಿತವದ ಸಂಚು ಮಿಂಚುತಿಹುದು. ಭೀತ ಚಂಚಲಗತಿಯ ಹದನಲ್ಲ-ದರ್ಶದಲಿ ನಡೆವ ದೈತ್ಯತೆಯ ಧೃತಿ ಹೊಂಚುತಿಹುದು. ಬೇಡ ಬೇಡಾ ಮಿಗವು ನಾಡುಗರ ಮುದ್ದಾಟನಾಡುಗೊಂಬೆಯದಲ್ಲ ಸಾಧುಶೀಲ. ಕಾಡಿನಲಿ ಕುಣಿ ಕುಣಿವ ದುಷ್ಟ ಶಕ್ತಿಯ. ಮೂಲ ನೋಡದೋ ಶಕ್ಯಪರ ಮೋಹಜಾಲ!
ಸೀತೆ— (ಅಸಮಾಧಾನದಿಂದ)
ಎಂತ ಮಾತಿದು ನಾಥ! ಹೇ ಜಗದ್ವಿಖ್ಯಾತ—ದುಷ್ಟ ಶಕ್ತಿಗೆ ನಾವು ಬೆದರಲುಂಟೆ? ಒಳ್ಳಿತಾದರು ಬೇಕು. ಕೆಡುಕಾದರೂ ನಮ್ಮ ಮಮತೆಯಲಿ ಮಿಂದು ಮಿದುಗೊಳುವ ಮೂಟೆ!
ಈ ಲತಾಕುಂಜದಲಿ ಈ ಕುಸುಮ ರಾಶಿಯಲಿ ಈ ವಸಂತಾಗಮದ ದಿವಸದಲಿ ಈ ಹೊನಲು ಹೊಲ ಬಯಲು ತೀರದಲಿ ಸುಳಿದಾಡಿ ನನ್ನೊಡನೆ ಮುದ್ದಿರಲಿ ಬಾಳುತಿರಲಿ!
ರಾಮ—ಏನ ಹೇಳಲಿ ನಾನು?
ಸೀತೆ—ಹೇಳದಿಹುದೇ ಲೇಸು
ರಾಮ—ತಮ್ಮನಾದರು ಬರಲಿ ತಳುಕು ಸೀತೆ!
ಸೀತೆ—ತಮ್ಮನೇತಕೆ ಬೇಕು?
ರಾಮ—ಏನೊ ಮನಸೊಪ್ಪದಿದೆ!
ಸೀತೆ—ಒಪ್ಪಿತಕೆ ಸಾಲದೇ ನನ್ನ ಮಾತೆ?
(ಕಾಲಿಗೆರಗಿ)
ಸ್ವಾಮಿ ಚಿಂತೆಯುದೇಕೆ? ಈ ಕಿರಿಯ ಬಯಕೆಯಲಿ ಕಳವಳನ ಕಂಡು ನಿಲಬೇಕೆ ನಾನು? ನನ್ನಾಸೆಯಮಂತೆಗೆ ನಿತ್ಯ ನೀರೆನು ಹೊಯ್ದು ಹೂವಕೊಳುವವರು ನೀವಲ್ಲವೇನು?
ರಾಮ ನೆಂದೇ ಜಗತಿ ಹಾಡುತಿದೆ. ಸುಖದುಃಖದಾರಾಮವೆಂದು ಕೊಂಡಾ
(ಎಂನೇ ಪುಟ ನೋಡಿರಿ)

FOR ALL REQUIREMENTS IN:
Paper, Indian or Foreign,
Stationery,
Printing Inks,
Exercise Books,
Typewriters,
Carbon Papers
Etc. Etc. Etc.
SRINIVAS BROTHERS
PAPER MERCHANTS
STATIONERS & BOOK SELLERS,
CAR STREET,
MANGALORE-1.
Post Box No. 130.
Tel: ACTIVE. Phone: 449.

ಅಜ್ಞಾನವೇ ಪರಮ ಸುಖ

ಜ್ಞಾನ ವಿಹೀನತೆಯೇ ವಿಜ್ಞಾನ, ಸುಳ್ಳು ಜ್ಞಾನವೇ ಸುಜ್ಞಾನ ಎಂಬ ಅರ್ಥ ಬರಿದೆಯೆಂದಾಗಲೇ ಜ್ಞಾನ ಪದ ಬಳ ಸುಳ್ಳು ಸುಖ ಎಂಬೆಗ್ಯಾದಿ ಸಮಸ್ಯೆಯಗಳೆಂದಾಗಲೇ ದಿಟ್ಟೂಪಂಗಾಗಬೇಕಾದ ಅವಶ್ಯಕತೆಯಿಲ್ಲ ಸಕೆಂದರೆ ಅವಾವುದನ್ನೂ ತಿಳಿಯದಿರುವುದೇ ಅಜ್ಞಾನ—ಎಂದರೆ, ವಿಚಾರ ಗೊಂದಲಗಳಿಂದ ರಕ್ಷಣೆ; ಇದೇ ಪರಮ ಸುಖ.

ಬರೆದವರು: ಶ್ರೀ ಶಿವರಾಮ ಕಾರಂತ.



ಈ ಮಾತನ್ನು ನಾನು ಪ್ರಥಮ ಬಾರಿಗೆ ಹೇಳುತ್ತಿದ್ದೇನೆಂದು ಯಾರೂ ಗಾಬರಿಯಾಗಬೇಕಾಗಿಲ್ಲ; ಹಾಗಿದ್ದರೆ-ಎಲ್ಲಿಂದ ಈ ಮಾತು ಬಂದಿತ? "ಅಜ್ಞಾನಂ ಪರಮಂ ಸುಖಂ" ಎಂದಿರಬಹುದಾದ ಗೀರ್ವಾಣ ಶ್ಲೋಕದಿಂದಲೇ ಅಥವಾ Ignorance is bliss ಎಂಬ ಇಂಗ್ಲಿಷ್ ಭಾಷೆಯ ನಾಣ್ಣುಡಿಯಿಂದಲೇ? ಇಲ್ಲವೆ ಲೋಕದಲ್ಲಿ ನನಗೆ ತಿಳಿಯದೆ ಇರುವ, ಒಪ್ಪಿಕೊಂಡರೆ ನಿಮಗೂ ತಿಳಿಯದಿರುವ, ಲೋಕದಲ್ಲಿರುವ ಅಸಂಖ್ಯಾತ ಇನ್ನಿತರ ಭಾಷೆಗಳಿಂದಲೇ? ಇಷ್ಟೇ ಪ್ರಶ್ನೆಯನ್ನು ತೆಗೆದುಕೊಂಡರೆ, ಮಟ ಸುಟ ಬರೆಯಬಹುದು; ದಿನ ದಿನ ಮಾತನಾಡಬಹುದು; ಗಂಟೆಗಟ್ಟಲೆ ಓದಬಹುದು ಜ್ಞಾನ ಬೆಳೆಯುವುದೇ ಹೀಗೆ. ಅನನ್ನು ಬೆಳೆಯಿಸುವುದೂ ಹೀಗೆ. ಅವನ್ನು ಹಬ್ಬಿಸುವುದಕ್ಕೆ ಅಥವಾ ಪ್ರಸಾರ ಮಾಡುವುದಕ್ಕೆ ಬಾಸುಲಿಯಂಥ ಸಾಧನವೂ, ಕಾಗದ ಮುದ್ರಣಗಳಂಥ ಸಾಧನಗಳೂ ಬೇಕಾಗುತ್ತವೆ. ಇವನ್ನೆಲ್ಲ ಎಣಿಸಿದರೆ ಬಹು ದೊಡ್ಡ ಏರ್ಪಾಟು ಆಗಲೇ ಬೇಕಾಗುತ್ತದೆ. ಬರಿಯ ಕಾಗದದ ವಿಚಾರ ತೆಗೆದುಕೊಳ್ಳಿ! ಈ "ಜ್ಞಾನ"ವೆಂಬ ಪದಾರ್ಥದ ಒಟಪಾಡೆಗೆ ಅಥವಾ ಅದರಂಥ ಕೆಲಸಕ್ಕೆ ಯುನೈಟೆಡ್ ಸ್ಟೇಟ್ಸ್ ದೇಶದಲ್ಲಿ ತಲಾ ಒಬ್ಬರ ವರ್ಷಕ್ಕೆ ೭೦೦ ರಾತ್ಲು ಕಾಗದ ಖರ್ಚಾಗುತ್ತಿದೆಯಂತೆ, ಕಾಗದದ ಅಭಾವಕ್ಕೆ ಇದೊಂದು ಮುಖ್ಯ ಕಾರಣ. ಪಾರ್ವಾತ್ಯ ದೇಶವಾದ ಭಾರತದಲ್ಲಿ ಇಂಥ ಬಾಯಾರಿಕೆ ಇಲ್ಲ. ನಮ್ಮಲ್ಲಿ ವ್ಯಕ್ತಿಗೆ ಸಂಸಾರಿ ವರ್ಷ ಒಂದರ ೭ ರಾತ್ಲು ಕಾಗದ ಬೇಕಾಗುತ್ತದಂತೆ. ಈಗೊಂದು ಪ್ರಶ್ನೆ ಉದ್ಭೂತವಾಗುತ್ತದೆ — ಕಾಗದವೆಂಬ ಪದಾರ್ಥವನ್ನು ಕಂಡು ಹಿಡಿಯುವ ಮುಂಚೆ, ಲೋಕ ಏನು ಮಾಡಿಕೊಂಡಿತ್ತು? 'ಪೇಪರ್' ಇಂದಿನದು 'ಪೆಪ್ಪೈರಸ್' ಎಂಬುದು ಪುರಾತನ ವಿಗುಪ್ತದವರು ಹುಟ್ಟಿಸಿದ, ಬರೆಯುವ ಅತ್ಯಂತ ಪ್ರಾಥಮಿಕ ಸಾಧನ. ಅದಕ್ಕಿಂತಲೂ ಮುಂಚೆ ಬದುಕಿದ್ದ ಜನರೂ, ಜನಾಂಗಗಳೂ ಜ್ಞಾನಿಗಳೇ? ಅಜ್ಞಾನಿಗಳೇ? ಸುಖಿಗಳೇ? ದುಃಖಿಗಳೇ? ಇದನ್ನು ಯೋಚಿಸಿ!

ಅತಿಯಾಗಿ ಓದಿದ್ದರಿಂದ, ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಜೀರ್ಣಿಸಿಕೊಂಡದ್ದರಿಂದ, ನಮ್ಮ ಸುಖ ಕಿಚ್ಚಾಯಿತು ಎನ್ನುತ್ತೀರಾ? ಮಾತು – ಮಾತು–ಮಾತು; ಬರಿಯ ಮಾತು! ಎಲ್ಲಿ ಕೇಳಿದರೂ ಅದೇನೆ ಅದಕ್ಕಾಗಿಯೇ ನಮ್ಮ ಮಂತ್ರಿಗಳು (ಆ ಮೂಲ ಆಸಾಮಿ ಯಾರೆಂದು ಗೊತ್ತಿಲ್ಲ. ಅದರ ಸಂಶೋಧನೆಗೆ ಹೋದಲ್ಲಿ ತಿರುಗಿ ಮಾತು ಬೇಕಾಗುತ್ತದೆ; ಕಾಗದ ಬೇಕಾಗುತ್ತದೆ) 'ಮೌನಂ ಪಂಡಿತ ಲಕ್ಷಣಂ' ಎಂದು ಹೇಳಿದರು. ಈ ವಿವೇಕವನ್ನು ಹೇಳಿದ ಮಹಾನುಭಾವರ ಸದುದ್ದೇಶವನ್ನು ನಾನು ಒಪ್ಪುತ್ತೇನಾದರೂ, ಸ್ವಲ್ಪ ಮಟ್ಟಿನ ಅಕ್ಷೇಪ ಉಂಟು. ಸುಖ ಪಡೆಯುವುದಕ್ಕೆ 'ಅಜ್ಞಾನಿಯಾಗಿರು' ಎಂದರು ಹಿಂದಿನವರು. ಅದನ್ನೊಪ್ಪಿಕೊಂಡು, ಕೇಳಿದ ಮಾತನ್ನೇ ತಿರುತಿರುಗಿ ಈಗಿನ ನಮ್ಮ ತನಕ, ಸಾವಿರಾರು ಜನರು ಈ ತಿಳುವಳಿಕೆಯನ್ನು ಸಾಗಿಸಿ ಕಂದುಕೊಟ್ಟರು ಯಾವ ತಿಳುವಳಿಕೆಯನ್ನು? ಅಜ್ಞಾನಿ ಯಾಗಿದ್ದರೇನೇ ಸುಖ' ಎಂಬ ತಿಳುವಳಿಕೆಯನ್ನು 'ತಿಳುವಳಿಕೆ' ಎಂಬುದೇನು? ಅದೇ 'ಜ್ಞಾನ' ಇಷ್ಟಿಗೆ ವರ್ಷಗಳಿರೋದದುಟ್ಟಲಿಲ್ಲವೇ? ಹಿಂದಿನಯಾರೊ ಒಬ್ಬ ಪಂಡಿತ ಇಷ್ಟಪಜ್ಞಾನ, ತಾನು ಪಡೆದ ಜ್ಞಾನದಿಂದ ಕಷ್ಟಕ್ಕೊಳಗಾಗಿ, ಆ ಕಷ್ಟ ಇನ್ನೊಬ್ಬರಿಗೆ ಬರಬಾರದೆಂದು, ಮೌನಿಯಾದ. ದುರ್ದೈವಕ್ಕೆ—ಈ ಸಂಗತಿ ನಮಗೆ ತಿಳಿಯಬೇಕಾದುದು ಮಾತಿನಿಂದಲೇ ಅಲ್ಲವೆ? ತಿಳಿಯುವುದೇ ಜ್ಞಾನ. ತಿಳಿಯದಿರುವುದು ಅಜ್ಞಾನ. ತಿಳಿದರೂ ತಿಳಿಯದ ಹಾಗೆ ಇರಬೇಕೆನ್ನುವುದು ಸುಜ್ಞಾನ. ಆಗಲೂ ನಾವು ವಿರೋಧಾಭಾಸಕ್ಕೆ ಬಂದು ಸಿಲ್ಲುತ್ತೇವೆ.

ಮಾತಲ್ಲದೆ, ಕಾಗದ ಉಪಯೋಗಿಲ್ಲದೆ ಇಂಥ ವಿಷಯವನ್ನು ತನ್ನ ಮುಂದೆ ತಿಳಿಯ ಪಡಿಸಬೇಕೆಂಬ ಆಸೆ ನನಗೆ ಬಹಳವಾಗಿದೆ ಬಹಣಿಗೆಯ ದುಬ್ಬಾಳಿ ಒಹಿ ಹಿಂದಿನಿಂದಲೂ ಬಂದುದರಿಂದ, ಈ ರೀತಿಯಿಂದ ಪತ್ರಿಕಾ ಲೇಖನದ ಮೂಲಕ, ಒನ್ದಾಡುತ್ತಿದ್ದೇನೆ ಮುಖ್ಯವಾಗಿ ನಿಮಗೆ ತಿಳಿಸಬೇಕಾದ ವಿಷಯ ಯಾವುದೆಂದರೆ 'ಜ್ಞಾನಿಯಾದವನು ಮಾತನಾಡುವುದಿಲ್ಲ; ಜ್ಞಾನದಿಂದ ಸುಖವಿಲ್ಲ; ಅಜ್ಞಾನವೇ ಸುಖ' ಎಂಬುದು.

ಈಗ ನೋಡೋಣ; ಜ್ಞಾನ ಎಂಬ ಒಂದು ಮಾತಿನ ಬೆನ್ನಿಗೆ, ಕಲಸವಿಲ್ಲದವರು ಸೇರಿ, ಎಷ್ಟು ಇತರ ಶಬ್ದಗಳನ್ನು ಹುಟ್ಟಿಸಿದರು ಎಂದು. ಜ್ಞಾನ–ಸುಜ್ಞಾನ-ವಿಜ್ಞಾನ–ಅಜ್ಞಾನ ಗಟ್ಟಿಯಾಗಿ ಈ ನಾಲ್ಕು ಶಬ್ದಗಳನ್ನಾದರೂ ನಾವು ಚರ್ಚಿಸಬೇಕಾಗುತ್ತದೆ. ಇವುಗಳಲ್ಲಿ ಸುಖ ಕೊಡುವಂಥದು ಯಾವುದು? ದುಃಖ ಯಾವುದು ಎಂಬುದನ್ನು ತಿಳಿಯಬೇಡವೇ?

'ಜ್ಞಾನ' ಎಂದರೆ ತಿಳಿಯತಕ್ಕದ್ದನ್ನು ತಿಳಿದುಕೊಳ್ಳುವಿಕೆ ಯಾವುದೇ ಇರಲಿ–ಆ ತಕ್ಕದ್ದು ಅದರ ಗೊಡವೆಗೆ ಹೋದರೆ ಬಂತು ಆಪತ್ತು. ಮಟ್ಟಿದರೆ ತಿಳಿಯುತ್ತದೆ; ಮೂಸಿದರೆ ತಿಳಿಯುತ್ತದೆ, ನೋಡಿದರೆ ತಿಳಿಯುತ್ತದೆ; ಕೇಳಿದಾಗ ಅದು ಪ್ರತ್ಯತ್ತರ ಕೊಟ್ಟರೆ ಅಗ ಮತ್ತಾ ಹೆಚ್ಚು ತಿಳಿಯುತ್ತದೆ ತಿಳಿದರೆ ಜ್ಞಾನ ಅಂಟೆತೇ! ಜ್ಞಾನವಿದ್ದಲ್ಲಿ ದುಃಖವಿದೆ. ಹಾಗಿದ್ದಮೇಲೆ ಮನುಷ್ಯನಾದವನು ಇಂಥ ದುಃಖಕ್ಕೆ ಎಡೆಮಾಡಿಕೊಳ್ಳುವ 'ಜ್ಞಾನ ಯಾನೆ ತಿಳುವಳಿಕೆಯನ್ನು ಅಂಟಿಸುವ' ಇಂದ್ರಿಯಗಳಿದ್ದೂ ಇಲ್ಲದಂತಿರಬೇಕು. ಕಣ್ಣಿದ್ದೂ ಕಾಣಬಾರದು; ಕಿವಿಯಿದ್ದೂ ಕೇಳಬಾರದು. ನಾಲಿಗೆಯಿದ್ದೂ ಪಲಿಯಬಾರದು. ಕೈಯಿದ್ದೂ ಮುಟ್ಟಬಾರದು. ನಮ್ಮ ಹಿಂದಿನವರು-ಇಂದ್ರಿಯಗಳನ್ನು ಜಯಿಸಬೇಕಂದರಲ್ಲ-ಅದು ಇದಕ್ಕಾಗಿಯೇ. ಹಿಂದಿನ ಅನೇಕಾನೇಕ ಋಷಿಗಳು, ಕಣ್ಣಿಗೆ ಬೇಂಡೇಜ್ ಕಟ್ಟಿಕೊಂಡ, ಕಿವಿ ಹತ್ತಿ ತುಂಬಿಸಿಕೊಂಡು ತಪಸ್ಸುಮಾಡಿದರು. ಅವರು ಗಾಳಿಯ ಪ ನನೆಯನ್ನು ಮೂಸದೆ, ಹೊಟ್ಟೆ ತುಂಬಿಸುವಾಗ ನಾಲಿಗೆಯ ರುಚಿಯನ್ನು ತಿಳಿಯದೆ ಹೇಗೆ ತಮ್ಮ ಕೆಲಸ ಸಾಗಿಸಿದರೆಂಬ ಚಮತ್ಕಾರ ನಮಗೆ ಈಗ ತಿಳಿದಿದೆ. ಬಂದಿಲ್ಲ. ಇಲ್ಲದೆ ಹೋಗಿದ್ದರೆ – ನಾವೆಲ್ಲರೂ ಋಷಿಗಳಾಗುತ್ತಿದ್ದೆವು. ಇಷ್ಟೆಲ್ಲ ಸಾಧನಗಳಿಂದ ಅವರು ಮುಂದುವರಿದು ಹೋದ ಬಳಿಕವೇ ತುತ್ತುದಿಯ ಮಟ್ಟದಲ್ಲಿ ಅವರು 'ಜ್ಞಾನಿಗಳಾದವರು' ಎನ್ನುತ್ತಾರೆ. ಇದು ಹೇಗೆ ಸಾಧ್ಯ? ಯಾವುದು ಅಗಬಾರದಿತ್ತೋ ಅದೇನೆ ಆದದ್ದೆಂತ.? ಇಂಥ ವಿಚಾರದ ಗೊಂದಲ ಬರುತ್ತದೆ. ಗೊಂದಲ ಬಿಡಿಸುವುದು ಎಂದರೆ, ವಿಚಾರ ಮಾಡುವುದು ಎಂದರ್ಥ. ವಿಚಾರದಿಂದ ಕ್ಲೇಶಕ್ಕೆಡೆಯಾಗುತ್ತದೆ; ಕ್ಲೇಶದಿಂದ ದುಃಖ ಪ್ರಾಪ್ತಿ, ಪ್ರಾಯಶ್ಚಿತ್ತ ಈ ಋಷಿಗಳು ಗಳಿಸಿದ ಜ್ಞಾನವೆಂಬದೂ, ಅತೀತವಾದ ಯಾವುದೋ ಒಂದು ಬಗೆಯ ಜ್ಞಾನ ಅಂದರೆ ಅವರಿಗೆ ತಿಳಿಯದ್ದು — ಎಂದು ಅರ್ಥವಾಗುವುದಿಲ್ಲವೇ?

ಅಂದರೆ ಜ್ಞಾನವೆಂಬುದೇ 'ಅ-ಜ್ಞಾನ' ಎಂದಾಯಿತಲ್ಲ! ಇದು ಬೇರೆ ಅದು ಬೇರೆ ಯಾದರೆ, ಜ್ಞಾನ ಅಜ್ಞಾನವೆಂಬ ಎಡು ಪದಗಳನ್ನೇತಕ್ಕೆ ಬಳಸಿದರು? ದ್ವೈತಾದ್ವೈತಗಳ ನಡುವೆ ಇರುವ ಸರಿಯು ಬಹು ತೆಳ್ಳಗಿನದೆಂದು ರಾಮಕೃಷ್ಣ ಪರಮಹಂಸರು ಹೇಳಿದ್ದುಂಟು. ಪ್ರಾಯಶಃ ಜ್ಞಾನ ಮತ್ತು ಅಜ್ಞಾನಗಳ ನಡುವಣ ಪರೆಯು ಅದಕ್ಕಿಂತಲೂತೆಳ್ಳಗಿದ್ದಿರಬೇಕು. ಈ ಪರೆಯೇ ತೆಳ್ಳಗೊ? ಅಜ್ಞಾನವೇ ಜ್ಞಾನವೋ? ಜ್ಞಾನವೇ ಅಜ್ಞಾನವೋ–ಅಂತು ನಿಷ್ಕರ್ಷೆ ಯಾಗುವುದಿಲ್ಲ. ಹೆಚ್ಚು ವಿಚಾರ ಮಾಡಿದರೆ ಮನಸ್ಸಿಗೆ ಶ್ರಮ, ದುಃಖಕ್ಕೆ ಕಾರಣ. ಆದುದರಿಂದ ಇದನ್ನು ಇಲ್ಲಿಗೇ ಬಿಟ್ಟಬಿಡೋಣ.

ಈಗ 'ಸುಜ್ಞಾನ' ಅಂದರೇನು? ಜ್ಞಾನ ಎಂಬ ಪದವೇ ಮುಷ್ಟಿಗೆ ಸಿಕ್ಕಿರುವಾಗ ಸಿಕ್ಕದ ಹಾಗೆ ಓಡುತ್ತದೆ ಎಂದಿರುವಾಗ, ಜ್ಞಾನದ ಹಿಂದೆ "ಸು"ಪದವನ್ನು ಸೇರಿಸುವುದರಲ್ಲಿ ಅರ್ಥವಿದೆಯೇ? ಅದು ದುಃಖಕ್ಕೆ ಕಾರಣವಾದ ವಸ್ತುವಾದರೆ "ಸು" ಆಗುವುದು ಹೇಗೆ? ಇಂಥ ಒಂದು ಪದ ಹುಟ್ಟಿಕೊಂಡುದರಿಂದಲೇ ಲೋಕದಲ್ಲಿ ಅನ್ಯಾಯ ಕಚ್ಚಿತು. ದುಃಖ ಕಾರಕವಾದ ಜ್ಞಾನವನ್ನು 'ಸು' ಎಂದು ಕರೆದುದರಿಂದ, ಅರ್ಥತಃ ಕಲ್ಯಾಣಕಾರಿ ಎಂದು ಕೇಳಿದುದರಿಂದ, ಅನ್ಯರಿಗೆ ದುಃಖಕೊಟ್ಟು ಸುಖಗಳಾಗುವ ತಂತ್ರವು ಲೋಕದಲ್ಲಿ ಉದ್ಭವಿಸಿತು. ಇಂಥ ಜನಗಳು ಕೂಡಿ, ತಮ್ಮ ಕಾರ್ಯ ಸಾಧನೆಗಾಗಿ ಕೃಷ್ಣ ಪರಮಾತ್ಮನ ಬಾಯಿಯಿಂದ "ಸುಖೇ ದುಃಖೇ ಸಮೇಕೃತ್ವಾ . . . . . " ಎಂಬ ಮಾತನ್ನು ಹೇಳಿಸಿಬೇಕು. ಇಂಗ್ಲಿಷಿನಲ್ಲಿ Devils' Advocacy ಎನ್ನುತ್ತಾರೆ-ಅಂಥ ಸಕಾಲತ್ತಿನ ಕತೆಯಾಯಿತು

ಮೇಲಿನದು 'ಸುಜ್ಞಾನ' ಎಂಬ ಪದಕ್ಕೆ ಬರಬಹುದಾದ ಕೆಲವು ಅರ್ಥಗಳಲ್ಲಿ ಒಂದು 'ಅರ್ಥ'ವಾಗಿದೆ 'ಸು' ಎಂಬ ಮಾತಿಗೆ ಸಂಸ್ಕೃತ ಭಾಷೆಯ ರೂಢಿಯಿಂದ ನಾವು ಮಾಡಿದ ಅರ್ಥ ಮೇಲಿನದು. 'ಸು' ಸಂಸ್ಕೃತವೇ ಆಗಬೇಕಿಲ್ಲ 'ಸುಳ್ಳು' ಎಂಬುದರ ಮೊದಲನೆಯ ಅಕ್ಷರವೂ ಅ ಭಾವನೆಯನ್ನು ಕೊಡುವುದಕ್ಕಾಗಿ ಅರಂಭದಲ್ಲಿ ಯಾರಾದರೂ ಹಾಗೆ ಬಳಸಿದ್ದಿರಬಹುದು. ಇರಬಹುದು ಎಂದರೇನು? ಬಳಸಿದರು. ಏಕೆಂದರೆ ಮೊದಲು 'ಸು' ಬಂದುದರಿಂದ, ಮೊದಲು ಕನ್ನಡ ಪದ ಬಂದೆ ಹಾಗಾಯಿತು ಕನ್ನಡ ಸಂಸ್ಕೃತಕ್ಕಿಂತಲೂ ಮೊದಲು ಹುಟ್ಟಿದ್ದೆಂಬುದಕ್ಕೆ ನನಗೆ ಯಾವ ಅನುಮಾನವೂ ಇಲ್ಲ. ನಿಮಗೂ ಇರಲಾರದು (ಅನುಮಾನದಿಂದ ದುಃಖ ಕಚ್ಚುತ್ತದೆ-ಆಧಾರಕ್ಕೆ ಸಮನಾದ ಶ್ಲೋಕ ಹುಡುಕಿ ನೋಡಿ) ಸು–ಎಂಬುದು ಕನ್ನಡದ ಸುಳ್ಳು ಎಂಬುದರ ಸಂಕ್ಷೇಪ ರೂಪ. ಹಾಗಿದ್ದ ಮೇಲೆ ಸುಜ್ಞಾನ ಎಂದರೆ ಸುಳ್ಳು ಜ್ಞಾನ. ಜ್ಞಾನ ಎಂಬುದು ದುಃಖ ತರುವಂಥದು ಅದು ತಾಂದಿದ್ದರೆ ಸುಳ್ಳಾಯಿತು. ಆಗ ಬದುಕಿನಲ್ಲಿ ಸುಖ ಪಡೆಯಬೇಕಾದರೆ, ಜ್ಞಾನವಿಲ್ಲದಿದ್ದರೂ ಚಿಂತೆಯಿಲ್ಲ, ಸುಳ್ಳು ಜ್ಞಾನ ಬೇಕೆಂದೇ ಆಯಿತು. ನಮ್ಮ ಕಲ್ಪನೆಗಳು ವಾಸ್ತವತೆಗೆ ಎಷ್ಟೆಷ್ಟು ವಿರೋಧವಾಗಿರುತ್ತವೋ ಅಷ್ಟೆಷ್ಟು ಸುಳ್ಳು ಹೆಚ್ಚು; ಸುಖವೂ ಹೆಚ್ಚು ಇದು ಒಂದು ಚಿಲ್ಲರೆಯ ವಿಷಯವಂದು ತಿಳಿಯಬೇಡಿ. ಒಂದು ಉದಾಹರಣೆ ನೋಡಿ:

"ನಾನು" ಎಂಬುದಿದೆ. ನಾನು ಇದ್ದೇನೆ. ನಿತ್ಯ ಜೀವನದಲ್ಲಿ ಈ ನಾನು ಹುಟ್ಟುತ್ತದೆ ಸಾಯುತ್ತದೆ ಮೇಲೆ ಹೇಳಿದ ಸು(ಳ್ಳು) ಜ್ಞಾನದಂತೆ, 'ನಾನು' ಸಾಯುವುದಿಲ್ಲ. ನಾನೆಂಬುದೆ ಶ್ರದ್ಧೆ; ನಾನು ನಾನೇ ಎಂದು ತಿಳಿದರೆ, ತುಂಬ ಸುಖ ಸಿಗಲೇಬೇಕು. ನಾನು ಸಾಯುದಿದ್ದ ಮೇಲೆ ಭಯವೇನು? ಇತರರ ಹಂಗೇನು? ಏನೂ ಇಲ್ಲ. ಸಾಯುವ ಭಯದಿಂದಲ್ಲವೇ ನೀವು ನಿಮ್ಮ ಮಕ್ಕಳು-ಮರಿಗಳಿಗೆ ಹಣ ಸಿಗುವಂತೆ ಇನ್ನೂರು ಮಾಡುವುದು? ಹೀಗಿದ್ದರೆ ಇನ್ನೂರು ಮಾಡಬೇಕಿಲ್ಲ ಪ್ರೀಮಿಯಮ್ಮಾಕಟ್ಟಿ ಬೇಕಾಗಿಲ್ಲ. ನಿಮ್ಮ ಏಜಂಟರ ತಗಾದೆಗೆ ಗುರಿಯಾಗ

(ಎಂನೇ ಪುಟ ನೋಡಿರಿ)

ಕಲ್ಯಾಣರೇಖೆ

[ಗೀತ ನಾಟಕ]

ಕವಿ: ಶ್ರೀ ಯಸ್. ವೆಂಕಟರಾಜ,
ಉಡುಪಿ.

* * *

(ದೃಶ್ಯ—ವನಪ್ರದೇಶ)
ಪ್ರವೇಶ—ವನದೇವತೆಯರು.

ಬಂದಿತೋ ವಸಂತ ಮಾಸ
ವಿವಿಧ ಪುಷ್ಪ ಚಯದಮಾಸ
ನವ ಪರಿಮಳ ಸುಖೋಲ್ಲಾಸ
ಈ ವಸಂತ ಮಾಸ!
ನಮ್ಮ ತಾಯಿ ಸೀತೆಗೆ
ವಿಮಲ ಭೂಮಿ ಜಾತೆಗೆ
ವಿನಿದಕಟ ವಿಪರ್ಯಾಸ
ತೊಡಗಿದಂತ ವನವಾಸ!
ಸಂತೈಸಲು ಬಂದ ವೇಷ
ಈ ವಸಂತ ಮಾಸ!
ಸಕಲ ಜಗದ ಮಂದಹಾಸ
ಈ ವಸಂತ ಮಾಸ!
ಅಲರ ಹಕ್ಕಿ ದಂಪತಿಗಳೆ
ಹೊಸತು ಹಾಡ ಹಾಡಿರಿ
ಮಲರ ಮುದ್ದು ಮಲ್ಲಿಗೆಗಳೆ
ಜೇನನಿತ್ತ ನೀಡಿರಿ
ನೆಲದ ನಚ್ಚು ನವಿಲುಗಳೆ
ಧಿಮಿ ಧಿಮಿತಕ ಕುಣಿಯಿರಿ
ಸಕಲ ಜೀವ ಜಂತುಗಳೆ
ಕಣ್ಣ ತೆರೆದು ನೋಡಿರಿ!
ನಮ್ಮ ತಾಯಿ ಸೀತೆಗೆ
ವಿಮಲ ಭೂಮಿ ಜಾತೆಗೆ
ವಿನಿದಕಟ ವಿಪರ್ಯಾಸ
ತೊಡಗಿದಂತ ವನವಾಸ
ಜಗನ್ಮಾತೆ ಮಗಳಿಗಾಗಿ
ತಳೆದರೂಪ ಮುಂದಿದೆ
ಗಿಣಿಗಿಣಿಗುಲು ಗೆಜ್ಜೆಯಲಿ ವ-
ಸಂತಮಾಸ ಬಂದಿದೆ!
(ಮುಂದೆ ನೋಡಿ ಆಶ್ಚರ್ಯದಿಂದ)
ಅದೋ ನೋಡು ಸ್ವರ್ಣ ಹರಿಣ
ನಲಿದು ನಲಿದು ಬರುತಿದೆ
ನವ ವಿಲಾಸದೊಂದು ಲಾಸ್ಯ
ರೂಪಗೊಂಡು ಬರುತಿದೆ.
ನಮ್ಮ ತಾಯಿ ಸೀತೆಗೆ
ವಿಮಲ ಭೂಮಿ ಜಾತೆಗೆ
ವಿನಿದಕಟ ವಿಪರ್ಯಾಸ
ಒದಗಿ ಬಂದ ವನವಾಸ
ಎಂಟುದೆಸೆಗೆ ಬೆದರುನೋಟ
ಮೆಲ್ಲ ಮೆಲ್ಲ ಬರುತಿದೆ
ವಿನಿದಮಮ ಸ್ವರ್ಣ ಹರಿಣ
ಗೆಲವು ಕಾಣ್ಕೆ ತರುತಿದೆ!
ಬಂದಳಲ್ಲಿ ನಮ್ಮ ತಾಯಿ
ಭಾವುಕತೆಯ ಹೆಣ್ಣುಕಾಯಿ
ಇತ್ತ ಬಂದ ಬೆದರುಗಣ್ಣು
ಅತ್ತ ಕಾಂಬ ಚೆಲುವುಗಣ್ಣು!
ಬಂದಳಲ್ಲೋ ನಮ್ಮ ಸೀತೆ
ಸ್ವರ್ಣ ಹರಿಣದನುಗತೆ!
(ಹೋಗುವರು)

(ಅತ್ತ ಸ್ವರ್ಣ ಮೃಗದ ಬರುವಿಕೆ ಇತ್ತ ಸೀತೆಯ ಪ್ರವೇಶ)
ಸೀತೆ—

ಅಹೋ ಏನು ಚೆಲುವು ಚೆಂದ
ಇದೇ ಹರಿಣ ಶಿಶುವಿನಂದ
ಈ ವಸಂತ ಮಧುರಿಮೆಯಲಿ
ಮೂರ್ತಿಗೊಂಡ ಶಿವಾನಂದ!
(ಜಿಂಕೆ ಸುತ್ತುತ್ತಿರುವುದನ್ನು ಕಂಡು)

ಮಮ ಚಿಂತೆಯ ಪರಿಹಾರಕೆ
ನೀನಾಗಿಯೆ ಬಂದಿಹೆಯ?
ಕಲ್ಪನೆಯೋ ಸ್ವಪ್ನವಿದೇನ್
ಈ ರೂಪದೆ ನಿಂದಿಹೆಯ?
ಚಪಲಾಕ್ಷದ ಚಾಂಚಲ್ಯವೊ
ಭಯ ಕಲ್ಪಿತ ನಿಟ್ಟುಸಿರೊ?
ಕುಪಿತಾತ್ಮರ ಕೂರಂಬಿನ
ಮೈನೋವಿನ ಕಣ್ಣೀರೊ?
ಬನ ಬೆದರಿಕೆ ಬಲುವಾಯಿತೆ
ಕೇಸರಿ ಕಣ್ಮುಸಗಿಹುದೆ?
ನಿನ ಬಳಗವ ತೊರೆದೀಕಡೆ
ಬಂದಿಹೆ ಬಾಳ್ಬೆದರಿಹುದೆ?
ಕುಳಿತಿರುವೆನು ಕಾನನದೊಳು
ಮಧುಮಾಸದೊಳೇಕಾಕಿ
ಎಲೆ ಹರಿಣವೆ-ಬಾ ಕುಣಿ ಕುಣಿ
ದಾಡುತ ನೀನೆನ್ನ ಸಖಿ!
(ಜಿಂಕೆಯನ್ನು ಹಿಡಿಯಲು ಹತ್ತಿರ ಸರಿದಂತೆ ಅದು ಓಡಿ ಹೋಗುವುದು)

ಸೀತೆ— (ದುಃಖದಿಂದ)

ಅಹೋ ಏನು ಚೆಲುವು ಚೆಂದ
ನನ್ನ ಬಾಳಿಗೊದಗಲಿಲ್ಲ
ಈ ವಸಂತ ಮಧುರಿಮೆಯಲಿ
ಬರಿದೆ ಕಾದು ಕುಳಿತೆನಲ್ಲ!
(ರಾಮನು ಪ್ರವೇಶಿಸಿ ಆಶ್ಚರ್ಯದಿಂದ)

ರಾಮ –

ವಿನಿದು ಜಾನಕಿ-ಚಂದ್ರಮುಖಿ!
ದುಃಖಾಸ್ಪದಗೊಂಡಿಹ ತನುರೀತಿ
ಬಾಡಿದ ಮುಖ ಕಣ್ಣೀರಿನ ವಸತಿ
ಕಾಡುತಲಿದೆ ಮೈ ನಡುಕದ ಭೀತಿ.
ಏನಾಯಿತು ನಿನ್ನಾಸೆಗೆ ಕೊರತೆ
ದೀನ ಮಾನ ಮಾಲಿನ್ಯದ ಚಿಂತೆ
ಏನಾದರು ಸರಿ ತಂದೇ ತರುವೆ
ನೀನಾಡುವುದೊಂದೇ ತಡ-ಈವೆ
ಸೀತೆ— (ಉತ್ಸಾಹದಿಂದ)

ನಲಿದು ಬಂದುದೊಂದು ಜಿಂಕೆ
ಅದರ ದೇಹ ಸ್ವರ್ಣ ರೇಖೆ
ಅದರ ಕಣ್ಣು ಕುಣಿವ ಮಿಂಚು
ಮದನ ಬಾಣ ಸೆಳೆದ ಸಂಚು!
ಅದರ ಚುರುಕು ಕಾಲ ಕುಣಿತ
ಗಾಳಿಯೊಡನೆ ಸುಳಿವ ಗೀತ
ಅದರ ರೂಪ ನಯನಾಮೃತ
ಅದೇ ನನಗೆ ಬೇಕು ನಾಥ!

ರಾಮ— (ವಿಚಾರವಾಗಿ)

ಏನು ಮಾತಿದು ಸೀತೆ—ಎಲ್ಲಿ ಚಿನ್ನದ ಜಿಂಕೆ ಅದಕಾಗಿ ಮನಸೋತು ಮರುಗುತಿಹುದೆ? ಭೂಲೋಕದಾಳದಲಿ ಸ್ವರ್ಣ ಹರಿಣವ ಕಾಂಬ ಕೌತುಕದ ಮಾಯೆಯನು ನಂಬಬಹುದೆ? ಮಧು ಮಾಸದೆ ಸಕದಲಿ ಹೊಂಬಿಸಲ ಹೂಟೆಯಲಿ ಜಗವೆಲ್ಲ ಜಗಜಗಿಸಿ ಕಾಣಲಿಹುದು. ಚದುರೆ! ನಿನ್ನಾಸರದ ಹೊನ್ನ ಕೊಗರನ ಕೊತ್ತು ಮೃಗಪಕ್ಷಿ ಬಂಗಾರವೆನಿಸಬಹುದು!

ಸೀತೆ— (ಮುನಿಸಿನಿಂದ)

ನಾಕಂಡ ನಿಚ್ಚಟದ ನೋಟವದು. ನಾನೆನ್ನ ಕಂಗಳನೆ ನಂಬದಿಕೆ ಕಾಲವುಂಟೆ? ಸಾಕು ಬಿಡಿ, ಕಾಡಿನಲಿ ಕೂತ ಜೀವಿತಕಾಗಿ ಏಕೊ ಬಂದಿವೆ ನನ್ನ ಭಾಗ್ಯದೊಟೆ!

(ಮುಂದೆ ನೋಡಿ ಉತ್ಸಾಹದಿಂದ)

ಅದೊ ಬಂತು ಅ ಜಂತ! ಕಂತು ಕಾನನದಲ್ಲಿ ತೂರಿರುವ ಚಂದ್ರಿಕೆಯ ಪಟಿಕೆ ಚಂಡು. ಅದೊ ನಿಂತು ನೋಡುತಿದೆ! ಕಣ್ವಳಕೆಯಲಿ ನನ್ನ ಜೀವನನೆ ಸೆಳೆಯುತಿದೆ ಮೋಹಗೊಂಡು. ಈ ಕಾಡಿನಲಿ ಭಯವ ಬೀಡಿನಲಿ ನಾನೇನ ಕೊಳಲುಂಟು ನಿರ್ಮ್ಮಡನೆಕೇಳಿಕೊಂಬ! ನೀವೆ ಕಾರುಣ್ಯದಲಿ ನನ್ನ ಸಂತಸಕಾಗಿ ಕೊಡುವ ಬಳುವಳಿಗಾಗಿ ಬಂದುದೆಂಬೆ!

ರಾಮ— (ಸೀತೆಯ ಕೈಹಿಡಿದು ಸಮಾಧಾನವಾಗಿ)

ಸೀತೆ ನೋಡದರ ಕಡೆ ನಯದ ನೋಟದ ಹಿಂದೆ ಏನೊ ಕಿತವದ ಸಂಚು ಮಿಂಚುತಿಹುದು ಭೀತ ಚಂಚಲಗತಿಯ ಹದನಲ್ಲ-ದರ್ಪದಲಿ ನಡೆವ ದೈತ್ಯತೆಯ ಧೃತಿ ಹೊಂಚುತಿಹುದು. ಬೇಡ ಬೇಡಾ ಮಿಗವು ನಾಡುಗರ ಮುದ್ದಾಟದಾಡುಗೊಂಬೆಯುದಲ್ಲ ಸಾಧುಶೀಲ. ಕಾಡಿನಲಿ ಕುಣಿ ಕುಣಿವ ದಷ್ಟ ಶಕ್ತಿಯ. ಮೂಲ ನೋಡದೋ ರಕ್ಕಸರ ಮೋಹಜಾಲ!

ಸೀತೆ— (ಅಸಮಾಧಾನದಿಂದ)

ಎಂತ ಮಾತಿದು ನಾಥ! ಹೇ ಜಗದ್ವಿಖ್ಯಾತ—ದುಷ್ಟ ಶಕ್ತಿಗೆ ನಾವು ಬೆದರಲುಂಟೆ? ಒಳ್ಳೆತಾದರು ಬೇಕು. ಕೆಡುಕಾದರೂ ನಮ್ಮ ಮಮತೆಯಲಿ ಮಿಂದು ಮಿದುಗೊಳುವ ಮೂಟೆ!

ಈ ಲತಾಕುಂಜದಲಿ ಈ ಕುಸುಮ ರಾಶಿಯಲಿ ಈ ವಸಂತಾಗಮದ ದಿವಸದಲಿ ಈ ಹೊನಲು ಹೊಲ ಬಯಲ ತೀರದಲಿ ಸುಳಿದಾಡಿ ನನ್ನೊಡನೆ ಮುದ್ದಿನಲಿ ಬಾಳುತಿರಲಿ!

ರಾಮ—ಏನ ಹೇಳಲಿ ನಾನು?

ಸೀತೆ—ಹೇಳದಿಹುದೇ ಲೇಸು

ರಾಮ—ತಮ್ಮನಾದರು ಬರಲಿ ತಳುಹು ಸೀತೆ!

ಸೀತೆ—ತಮ್ಮನೇತಕೆ ಬೇಕು?

ರಾಮ—ಏನೊ ಮನಸೊಪ್ಪದಿದೆ!

ಸೀತೆ—ಒಪ್ಪಿತಕೆ ಸಾಲದೇ ನನ್ನ ಮಾತೆ?
(ಕಾಲಿಗೆರಗಿ)

ಸ್ವಾಮಿ ಚಿಂತೆಯೆನೇಕೆ? ಈ ಕಿರಿಯ ಬಯಕೆಯಲಿ ಕಳವಳವ ಕಂಡು ನಿಲಬೇಕೆ ನಾಥ? ನನ್ನಾಸೆಯುಮರತೆಗೆ ನಿತ್ಯ ನೀರನು ಹೊಯ್ದು ಹೂವಕೊಳುವವರು ನೀವಲ್ಲವೇನು?

ರಾಮ ನೆಂದೇ ಜಗತಿ ಹಾಡುತಿದೆ. ಸುಖದುಃಖದಾರಾಮವೆಂದು ಕೊಂಡಾ
(ಮುಂದೆ ಪುಟ ನೋಡಿರಿ)

FOR ALL REQUIREMENTS IN:

Paper, Indian or Foreign,
Stationery,
Printing Inks,
Exercise Books,
Typewriters,
Carbon Papers
Etc. Etc. Etc.

SRINIVAS BROTHERS
PAPER MERCHANTS
STATIONERS & BOOK SELLERS,
CAR STREET,
MANGALORE-1.
Post Box No. 130.

Tel. ACTIVE Phone: 449

ಅಜ್ಞಾನವೇ ಪರಮ ಸುಖ

ಜ್ಞಾನ ವಿಹೀನತೆಯೇ ವಿಜ್ಞಾನ, ಸುಳ್ಳು ಜ್ಞಾನವೇ ಸುಜ್ಞಾನ ಎಂಬ ಅರ್ಥ ವಿವರಣೆಯಿಂದಾಗಲೇ ಜ್ಞಾನ ದ ಬಿ, ಸುಳ್ಳು ಸುಜ್ಞಾನ ಎಂಬ್ಯಾದಿ ಪದಸಮುಚ್ಚಯಗಳಿಂದಾಗಲೀ ದಿಙ್ಮೂಢಗಂಗಬೇಕಾದ ಅವಶ್ಯಕತೆಯಿಲ್ಲ ಏಕೆಂದರೆ ಅವಾವುವನ್ನೂ ತಿಳಿಯದಿರುವುದೇ ಅಜ್ಞಾನ—ಎಂದರೆ, ವಿಚಾರ ಗೊಂದಲಗಳಿಂದ ರಕ್ಷಣೆ, ಇದೇ ಪರಮ ಸುಖ.

ಬರೆದವರು: ಶ್ರೀ ಶಿವರಾಮ ಕಾರಂತ.

ಈ ಮಾತನ್ನು ನಾನು ಪ್ರಥಮ ಬಾರಿಗೆ ಕೇಳುತ್ತಿದ್ದೇನೆಂದು ಯಾರೂ ಗಾಬರಿಯಾಗಬೇಕಾಗಿಲ್ಲ; ಹಾಗಿದ್ದರೆ-ಎಲ್ಲಿಂದ ಈ ಮಾತು ಬಂದಿತ? "ಅಜ್ಞಾನಂ ಪರಮಂ ಸುಖಂ" ಎಂದರಬಹುದಾದ ಗೀರ್ವಾಣ ಶ್ಲೋಕದಿಂದಲೇ ಅಥವಾ Ignorance is bliss ಎಂಬ ಇಂಗ್ಲಿಷ್ ಭಾಷೆಯ ನಾಣ್ಯುಡಿಯಿಂದಲೇ? ಇಲ್ಲವೆ ಲೋಕದಲ್ಲಿ ನನಗೆ ತಿಳಿಯದೆ ಇರುವ, ಒಪ್ಪಿಕೊಂಡರೆ ನಿಮಗೂ ತಿಳಿಯದಿರುವ, ಲೋಕದಲ್ಲಿರುವ ಅಸಂಖ್ಯಾತ ಇನ್ನಿತರ ಭಾಷೆಗಳಿಂದಲೇ? ಇಷ್ಟೇ ಪ್ರಶ್ನೆಯನ್ನು ತೆಗೆದುಕೊಂಡರೆ, ಪುಟ ಪುಟ ಬರೆಯಬಹುದು, ದಿನ ದಿನ ಮಾತನಾಡಬಹುದು; ಗಂಟೆಗಟ್ಟಲೆ ಓದಬಹುದು ಜ್ಞಾನ ಬೆಳೆಯುವುದೇ ಹೀಗೆ ಅದನ್ನು ಬೆಳೆಯಿಸುವುದೂ ಹೀಗೆ. ಅದನ್ನು ಹಬ್ಬಿಸುವುದಕ್ಕೆ ಅಥವಾ ಪ್ರಸಾರ ಮಾಡುವುಕೆಗೆ ಬಾಸುಲಿಯಂಥ ಸಾಧನವೂ, ಕಾಗದ ಮುದ್ರಣಗಳಂಥ ಸಾಧನಗಳೂ ಬೇಕಾಗುತ್ತವೆ. ಇವನ್ನೆಲ್ಲ ಎಣಿಸಿದರೆ ಬಹು ದೊಡ್ಡ ಏರ್ಪಾಟು ಆಗಲೇ ಬೇಕಾಗುತ್ತದೆ. ಬರಿಯ ಕಾಗದದ ವಿಚಾರ ತೆಗೆದುಕೊಳ್ಳಿ! ಈ "ಜ್ಞಾನ"ವೆಂಬ ಪದಾರ್ಥದ ಒಟವಾಡೆಗೆ ಅಥವಾ ಅದರಂಥ ಕೆಲಸಕ್ಕೆ ಯುನೈಟೆಡ್‌ಸ್ಟೇಟ್ಸ್ ದೇಶದಲ್ಲಿ ತಲಾ ಒಂದರ ವರ್ಷಕ್ಕೆ ೭೦೦ ರಾತ್ಲು ಕಾಗದ ಖರ್ಚಾಗುತ್ತಿದೆಯಂತೆ, ಕಾಗದದ ಅಭಾವಕ್ಕೆ ಇದೊಂದು ಮುಖ್ಯ ಕಾರಣ ಪೌರಾತ್ಯ ದೇಶವಾದ ಭಾರತದಲ್ಲಿ ಇಂಥ ಬಾಯಾರಿಕೆ ಇಲ್ಲ. ನಮ್ಮಲ್ಲಿ ವ್ಯಕ್ತಿಗೆ ಸಂವತ್ಸರಿ ವರ್ಷ ಒಂದರ ೭ ರಾತ್ಲು ಕಾಗದ ಬೇಕಾಗುತ್ತದಂತೆ. ಈಗೊಂದು ಪ್ರಶ್ನೆ ಉದ್ಭೂತವಾಗುತ್ತದೆ — ಕಾಗದವೆಂಬ ಪದಾರ್ಥವನ್ನು ಕಂಡು ಹಿಡಿಯುವ ಮುಂಚೆ, ಲೋಕ ಏನು ಮಾಡಿಕೊಂಡಿತ್ತು? 'ಪೇಪರ್' ಇಂದಿನದು 'ಪೆಪೈರಸ್' ಎಂಬುದು ಪುರಾತನ ವಿಗುಪ್ತದವರು ಹುಟ್ಟಿಸಿದ, ಬರೆಯುವ ಅತ್ಯಂತ ಪ್ರಾಥಮಿಕ ಸಾಧನ. ಅದಕ್ಕಿಂತಲೂ ಮುಂಚೆ ಬದುಕಿದ್ದ ಜನರೂ, ಜನಾಂಗಗಳೂ ಜ್ಞಾನಿಗಳೇ? ಅಜ್ಞಾನಿಗಳೇ? ಸುಖಿಗಳೇ? ದುಃಖಿಗಳೇ? ಇದನ್ನು ಯೋಚಿಸಿ!

ಅತಿಯಾಗಿ ಓದಿದ್ದರಿಂದ, ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಜೀರ್ಣಿಸಿಕೊಂಡದ್ದರಿಂದ, ನಮ್ಮ ಸುಖ ಹೆಚ್ಚಾಯಿತು ಎನ್ನುತ್ತೀರಾ? ಮಾತು – ಮಾತು–ಮಾತು; ಬರಿಯ ಮಾತು! ಎಲ್ಲಿ ಕೇಳಿದರೂ ಅದೇನೆ ಅದಕ್ಕಾಗಿಯೇ ನಮ್ಮ ಸುರಾತನರು (ಆ ಮೂಲ ಅಸಾಮಿ ಯಾರೆಂದು ಗೊತ್ತಿಲ್ಲ. ಅದರ ಸಂಶೋಧನೆಗೆ ಹೋದಲ್ಲಿ ತಿರುಗಿ ಮಾತು ಬೇಕಾಗುತ್ತದೆ; ಕಾಗದ ಬೇಕಾಗುತ್ತದೆ) 'ಮೌನಂ ಪಂಡಿತ ಲಕ್ಷಣಂ' ಎಂದು ಹೇಳಿದರು ಈ ನಿವೇಕವನ್ನು ಹೇಳಿದ ಮಹಾನುಭಾವರ ಸದುದ್ದೇಶವನ್ನು ನಾನು ಒಪ್ಪುತ್ತೇನಾದರೂ, ಸ್ವಲ್ಪ ಮಟ್ಟಿನ ಆಕ್ಷೇಪ ಉಂಟು. ಸುಖಪಡೆಯುವುದಕ್ಕೆ 'ಅಜ್ಞಾನಿಯಾಗಿರು' ಎಂದರು ಹಿಂದಿನವರು. ಅದನ್ನೊಪ್ಪಿಕೊಂಡು, ಕೇಳಿದ ಮಾತನ್ನೇ ತಿರುತಿರುಗಿ ಈಗಿನ ನಮ್ಮ ತನಕ, ಸಾವಿರಾರು ಜನರು ಈ ತಿಳುವಳಿಕೆಯನ್ನು ಸಾಗಿಸಿಕೊಂಡು ಕೊಟ್ಟರು ಯಾವ ತಿಳುವಳಿಕೆಯನ್ನು? ಅಜ್ಞಾನಿಯಾಗಿದ್ದರೇನೇ ಸುಖ' ಎಂಬ ತಿಳುವಳಿಕೆಯನ್ನು 'ತಿಳುವಳಿಕೆ' ಎಂಬುದೇನು? ಅದೇ 'ಜ್ಞಾನ' ಇಲ್ಲಿಗೆ ಪರಸ್ಪರವಿರೋಧಹುಟ್ಟಲಿಲ್ಲವೇ? ಹಿಂದಿನಯಾರೋ ಒಬ್ಬ ಪಂಡಿತ ಇಲ್ಲವೆ ಜ್ಞಾನಿ, ತಾನು ಪಡೆದ ಜ್ಞಾನದಿಂದ ಕಷ್ಟಕ್ಕೊಳಗಾಗಿ, ಆ ಕಷ್ಟ ಇನ್ನೊಬ್ಬರಿಗೆ ಬರಬಾರದೆಂದು, ಮೌನಿಯಾದ. ದುರ್ದೈವಕ್ಕೆ—ಈ ಸಂಗತಿ ನಮಗೆ ತಿಳಿಯಬೇಕಾದುದು ಮಾತಿನಿಂದಲೇ ಅಲ್ಲವೆ? ತಿಳಿಯುವುದೇ ಜ್ಞಾನ. ತಿಳಿಯದಿರುವುದು ಅಜ್ಞಾನ. ತಿಳಿದರೂ ತಿಳಿಯದ ಹಾಗೆ ಇರಬೇಕೆನ್ನುವುದು ಸುಜ್ಞಾನ. ಆಗಲೂ ನಾವು ವಿರೋಧಾಭಾಸಕ್ಕೆ ಬಂದು ನಿಲ್ಲುತ್ತೇವೆ.

ಮಾತಲ್ಲದೆ, ಕಾಗದ ಶಾಯಿಗಳಿಲ್ಲದೆ ಇಂಥ ವಿಷಯವನ್ನು ತಮ್ಮ ಮುಂದೆ ತಿಳಿಯ ಪಡಿಸಬೇಕೆಂಬ ಆಸೆ ನನಗೆ ಬಹಳವಾಗಿದೆ ಬರವಣಿಗೆಯ ದುಬ್ಬಾಳಿ ಬಹು ಹಿಂದಿನಿಂದಲೂ ಬಂದುದರಿಂದ, ಈ ರೀತಿಯಿಂದ ಪತ್ರಿಕಾ ಲೇಖನದ ಮೂಲಕ, ಒಬ್ಬಾಡುತ್ತಿದ್ದೇನೆ ಮುಖ್ಯವಾಗಿ ನಿಮಗ ತಿಳಿಸಬೇಕಾದ ವಿಷಯ ಯಾವುದೆಂದರೆ 'ಜ್ಞಾನಿಯಾದವನು ಮಾತನಾಡುವುದಿಲ್ಲ; ಜ್ಞಾನದಿಂದ ಸುಖವಿಲ್ಲ, ಅಜ್ಞಾನವೇ ಸುಖ' ಎಂಬುದು-

ಈಗ ನೋಡೋಣ, ಜ್ಞಾನ ಎಂಬ ಒಂದು ಮಾತಿನ ಬೆನ್ನಿಗೆ, ಕಲಸವಿಲ್ಲದವರು ಸೇರಿ, ಎಷ್ಟು ಇತರ ಶಬ್ದಗಳನ್ನು ಹುಟ್ಟಿಸಿದರು ಎಂದು ಜ್ಞಾನ–ಸುಜ್ಞಾನ ವಿಜ್ಞಾನ–ಅಜ್ಞಾನ ಗಟ್ಟಿಯಾಗಿ ಈ ನಾಲ್ಕು ಶಬ್ದಗಳನ್ನಾದರೂ ನಾವು ಚರ್ಚಿಸಬೇಕಾಗುತ್ತದೆ. ಇವುಗಳಲ್ಲಿ ಸುಖ ಕೊಡುವಂಥದು ಯಾವುದು? ದುಃಖ ಯಾವುದು ಎಂಬುದನ್ನು ತಿಳಿಯಬೇಡವೇ?

'ಜ್ಞಾನ' ಎಂದರೆ ತಿಳಿಯತಕ್ಕದ್ದನ್ನು ತಿಳಿದುಕೊಳ್ಳುವಿಕೆ ಯಾವುದೇ ಇರಲಿ- ಆ ತಕ್ಕದ್ದು ಅದರ ಗೊಡವೆಗೆ ಹೋದರೆ ಬಂತು ಆಪತ್ತು. ಮುಟ್ಟದರೆ ತಿಳಿಯುತ್ತದೆ; ಮೂಸಿದರೆ ತಿಳಿಯುತ್ತದೆ, ನೋಡಿದರೆ ತಿಳಿಯುತ್ತದೆ; ಕೇಳಿದಾಗ ಅದು ಪ್ರತ್ಯುತ್ತರ ಕೊಟ್ಟರೆ ಆಗ ಮತ್ತೂ ಹೆಚ್ಚು ತಿಳಿಯುತ್ತದೆ ತಿಳಿದರೆ ಜ್ಞಾನ ಅಂಟೆತೇ' ಜ್ಞಾನವಿದ್ದಲ್ಲಿ ದುಃಖವಿದೆ. ಹಾಗಿದ್ದಮೇಲೆ ಮನುಷ್ಯನಾದವನು ಇಂಥ ದುಃಖಕ್ಕೆ ಎಡೆಮಾಡಿಕೊಳ್ಳುವ 'ಜ್ಞಾನ ಯಾನಿ ತಿಳುವಳಿಕೆಯನ್ನು ಅಂಟಿಸುವ' ಇಂದ್ರಿಯಗಳಿದ್ದೂ ಇಲ್ಲದಂತಿರಬೇಕು ಕಣ್ಣಿದ್ದೂ ಕಾಣಬಾರದು, ಕಿವಿಯಿದ್ದೂ ಕೇಳಬಾರದು. ನಾಲಿಗೆಯಿದ್ದೂ ಸವಿಯಬಾರದು ಕೈಯಿದ್ದೂ ಮುಟ್ಟಬಾರದು. ನಮ್ಮ ಹಿಂದಿನವರು–ಇಂದ್ರಿಯಗಳನ್ನು ಜಯಿಸಬೇಕಂದರಲ್ಲಿ-ಅದು ಇದಕ್ಕಾಗಿಯೇ. ಹಿಂದಿನ ಅನೇಕಾನೇಕ ಮಹರ್ಷಿಗಳು, ಕಣ್ಣಿಗೆ ಬೇಂಡೇಜ್ ಕಟ್ಟಿಕೊಂಡ, ಕಿವಿ ಹತ್ತಿ ತುಂಬಿಸಿಕೊಂಡು ತಪಸ್ಸುಮಾಡಿದರು. ಅವರು ಗಾಳಿಯ ವಸನೆಯನ್ನು ಮೂಸದೆ, ಹೊಟ್ಟೆ ತುಂಬಿಸುವಾಗ ನಾಲಿಗೆಯ ರುಚಿಯನ್ನು ತಿಳಿಯದೆ ಹೇಗೆ ತಮ್ಮ ಕೆಲಸ ಸಾಗಿಸಿದರೆಂಬ ಚಮತ್ಕಾರ ನನಗೆ ಈಗ ತಿಳಿದಿಲ್ಲ. ಇಲ್ಲದೆ ಹೋಗಿದ್ದರೆ – ನಾವೆಲ್ಲರೂ ಋಷಿಗಳಾಗುತ್ತಿದ್ದೆವು. ಇಷ್ಟೆಲ್ಲ ಸಾಧನಗಳಿಂದ ಅವರು ಮುಂದುವರಿದು ಹೋದ ಬಳಿಕವೇ ತುಕ್ಕುಡಿಯು ಮಟ್ಟದಲ್ಲಿ ಅವರು 'ಜ್ಞಾನಿಗಳಾದ'ರು ಎನ್ನುತ್ತಾರೆ ಇದು ಹೇಗೆ ಸಾಧ್ಯ? ಯಾವುದು ಆಗಬಾರದಿತ್ತೋ ಅದೇನೆ ಆದದ್ದೆಂತ.? ಇಂಥ ವಿಚಾರದ ಗೊಂದಲ ಬರುತ್ತದೆ. ಗೊಂದಲ ಬಿಡಿಸುವುದು ಎಂದರೆ, ವಿಚಾರ ಮಾಡುವುದು ಎಂದರ್ಥ. ವಿಚಾರದಿಂದ ಕ್ಲೇಶಕ್ಕೆಡೆಯಾಗುತ್ತದೆ; ಕ್ಲೇಶದಿಂದ ದುಃಖ ಪ್ರಾಪ್ತಿ ಪ್ರಾಯಶಃ ಈ ಋಷಿಗಳು ಗಳಿಸಿದ ಜ್ಞಾನವೆಂಬದೂ, ಅತೀತವಾದ ಯಾವುದೋ ಒಂದು ಬಗೆಯ ಜ್ಞಾನ ಅಂದರೆ ಅವರಿಗೆ ತಿಳಿಯದ್ದು — ಎಂದು ಅರ್ಥವಾಗುವುದಿಲ್ಲವೇ?

ಅಂದರೆ ಜ್ಞಾನವೆಂಬುದೇ 'ಅ-ಜ್ಞಾನ' ಎಂದಾಯಿತಲ್ಲ! ಇದು ಬೇರೆ ಅದು ಬೇರೆ ಯಾದರೆ, ಜ್ಞಾನ ಅಜ್ಞಾನವೆಂಬ ಎರಡು ಪದಗಳನ್ನೇತಕ್ಕೆ ಬಳಸಿದರು? ದ್ವೈತಾದ್ವೈತಗಳ ನಡುವೆ ಇರುವ ಪರಿಯು ಬಹು ತೆಳ್ಳಗಿನದೆಂದು ರಾಮಕೃಷ್ಣ ಪರಮಹಂಸರು ಹೇಳಿದ್ದುಂಟು. ವ್ಯಾಯಶಃ ಜ್ಞಾನ ಮತ್ತು ಅಜ್ಞಾನಗಳ ನಡುವಣ ಪರೆಯು ಅದಕ್ಕಿಂತಲೂತೆಳ್ಳಗಿದ್ದಿರಬೇಕು. ಈ ಪರೆಯೇ ತೆಳ್ಳಗೊ? ಅಜ್ಞಾನವೇ ಜ್ಞಾನವೋ? ಜ್ಞಾನವೇ ಅಜ್ಞಾನವೋ-ಅಂತ ನಿಶ್ಚಯವೇಯಾಗುವುದಿಲ್ಲ. ಹೆಚ್ಚು ವಿಚಾರ ಮಾಡಿದರೆ ಮನಸ್ಸಿಗೆ ಶ್ರಮ, ದುಃಖಕ್ಕೆ ಕಾರಣ ಅದುದರಿಂದ ಇದನ್ನು ಇಲ್ಲಿಗೇ ಬಿಟ್ಟುಬಿಡೋಣ.

ಈಗ 'ಸುಜ್ಞಾನ' ಅಂದರೇನು? ಜ್ಞಾನ ಎಂಬ ಪದವೇ ಮುಟ್ಟಿಗೆ ಸಿಕ್ಕಿಯೂ ಸಿಕ್ಕದ ಹಾಗೆ ಓಡುತ್ತದೆ ಎಂದಿರುವಾಗ, ಜ್ಞಾನದ ಹಿಂದೆ "ಸು"ಪದವನ್ನು ಸೇರಿಸುವುದರಲ್ಲಿ ಅರ್ಥವಿದೆಯೇ? ಅದು ದುಃಖಕ್ಕೆ ಕಾರಣವಾದ ವಸ್ತುವಾದರೆ "ಸು" ಆಗುವುದು ಹೇಗೆ? ಇಂಥ ಒಂದು ಪದ ಹುಟ್ಟಿಕೊಂಡುದರಿಂದಲೇ ಲೋಕದಲ್ಲಿ ಅನ್ಯಾಯ ಹೆಚ್ಚಿತು. ದುಃಖ ಕಾರಕವಾದ ಜ್ಞಾನವನ್ನು 'ಸು' ಎಂದು ಕರೆದುದರಿಂದ, ಅರ್ಥಾತ್ ಕಲ್ಯಾಣಕಾರಿ ಎಂದು ಕೇಳಿದುದರಿಂದ, ಅನ್ಯರಿಗೆ ದುಃಖಕೊಟ್ಟು ಸುಖಗಳಾಗುವ ತಂಡವು ಲೋಕದಲ್ಲಿ ಉದ್ಭವಿಸಿತು. ಇಂಥ ಜನಗಳು ಕೂಡಿ, ತಮ್ಮ ಕಾರ್ಯ ಸಾಧನೆಗಾಗಿ ಕೃಷ್ಣ ಪರಮಾತ್ಮನ ಬಾಯಿಯಿಂದ "ಸುವೇ ದುಃಖೇ ಸಮೇಕೃತ್ವಾ . . . . . " ಎಂಬ ಮಾತನ್ನು ಹೇಳಿಸಬೇಕು ಇಂಗ್ಲಿಷಿನಲ್ಲಿ Devils' Advocacy ಎನ್ನುತ್ತಾರೆ- ಅಂಥ ವಕಾಲತ್ತಿನ ಕತೆಯಾಯಿತು

ಮೇಲಿನದು 'ಸುಜ್ಞಾನ' ಎಂಬ ಪದಕ್ಕೆ ಬರಬಹುದಾದ ಕೆಲವು ಅರ್ಥಗಳಲ್ಲಿ ಒಂದು 'ಅರ್ಥ'ವಾಗಿದೆ 'ಸು' ಎಂಬ ಮಾತಿಗೆ ಸಂಸ್ಕೃತ ಭಾಷೆಯ ರೂಢಿಯಿಂದ ನಾವು ಮಾಡಿದ ಅರ್ಥ ಮೇಲಿನದು. 'ಸು' ಸಂಸ್ಕೃತದೇ ಆಗಬೇಕಿಲ್ಲ 'ಸುಳ್ಳು' ಎಂಬುದರ ಮೊದಲನೆಯ ಅಕ್ಷರವೂ ಆ ಭಾವನೆಯನ್ನು ಕೊಡುವುದಕ್ಕಾಗಿ ಆರಂಭದಲ್ಲಿ ಯಾರಾದರೂ ಹಾಗೆ ಬಳಸಿದ್ದಿರಬಹುದು. ಇರಬಹುದು ಎಂದರೇನು? ಬಳಸಿದರು. ಏಕೆಂದರೆ ಮೊದಲು 'ಸು' ಬಂದುದರಿಂದ, ಮೊದಲು ಕನ್ನಡ ಪದ ಬಂದ ಹಾಗಾಯಿತು ಕನ್ನಡ ಸಂಸ್ಕೃತಕ್ಕಿಂತಲೂ ಮೊದಲು ಹುಟ್ಟಿದ್ದೆಂಬುದಕ್ಕೆ ನನಗೆ ಯಾವ ಅನುಮಾನವೂ ಇಲ್ಲ. ನಿಮಗೂ ಇರಲಾರದು (ಅನುಮಾನದಿಂದ ದುಃಖ ಹೆಚ್ಚುತ್ತದೆ-ಆಧಾರಕ್ಕೆ ಸಮನಾದ ಶ್ಲೋಕ ಹುಡುಕಿ ನೋಡಿ) ಸು-ಎಂಬುದು ಕನ್ನಡದ ಸುಳ್ಳು ಎಂಬುದರ ಸಂಕ್ಷೇಪ ರೂಪ. ಹಾಗಿದ್ದ ಮೇಲೆ ಸುಜ್ಞಾನ ಎಂದರೆ ಸುಳ್ಳು ಜ್ಞಾನ. ಜ್ಞಾನ ಎಂಬುದು ದುಃಖ ತರುವಂಥದು ಅದು ತಾರದಿದ್ದರೆ ಸುಳ್ಳಾಯಿತು ಆಗಬದುಕಿವಲ್ಲಿ ಸುಖ ಪಡೆಯಬೇಕಾದರೆ, ಜ್ಞಾನವಿಲ್ಲದಿದ್ದರೂ ಚಿಂತೆಯಿಲ್ಲ, ಸುಳ್ಳು ಜ್ಞಾನ ಬೇಕೆಂದೇ ಆಯಿತು ನಮ್ಮ ಕಲ್ಪನೆಗಳು ವಾಸ್ತವತೆಗೆ ಎಷ್ಟೆಷ್ಟು ವಿರೋಧವಾಗಿರುತ್ತವೋ ಅಷ್ಟಷ್ಟು ಸುಳ್ಳೂ ಹೆಚ್ಚು; ಸುಖವೂ ಹೆಚ್ಚು ಇದು ಒಂದು ಚಿಲ್ಲರೆಯ ವಿಷಯವೆಂದು ತಿಳಿಯಬೇಡಿ. ಒಂದು ಉದಾಹರಣೆ ನೋಡಿ.

"ನಾನು" ಎಂಬುದಿದೆ. ನಾನು ಇದ್ದೇನೆ. ನಿತ್ಯ ಜೀವನದಲ್ಲಿ ಈ ನಾನು ಹುಟ್ಟುತ್ತದೆ ಸಾಯುತ್ತದೆ ಮೇಲೆ ಹೇಳಿದ ಸು(ಳ್ಳು) ಜ್ಞಾನವಂತೆ, 'ನಾನು' ಸಾಯುವುದಿಲ್ಲ ನಾನೆಂಬುದ ಶಾಶ್ವತ; ನಾನು ನಾನೇ ಎಂದು ತಿಳಿದರೆ, ತುಂಬ ಸುಖಿಗಳೇಬೇಕು. ನಾನು ಸಾಯುದಿದ್ದ ಮೇಲೆ ಭಯವೇನು? ಇತರರ ಹಂಗೇನು? ಏನೂ ಇಲ್ಲ. ಸಾಯುವ ಭಯದಿಂದಲ್ಲವೇ ನೀವು ನಿಮ್ಮ ಮಕ್ಕಳು-ಮರಿಗಳಿಗೆ ಹಣ ಸಿಗುವಂತೆ ಇನ್ಯಾರು ಮಾಡುವುದು? ಹೀಗಿದ್ದರೆ ಇನ್ಯಾರು ಮಾಡಬೇಕಿಲ್ಲ ಪ್ರೀಮಿಯಮ್ ಕಟ್ಟಿ ಬೇಕಾಗಿಲ್ಲ ವಿಮಾ ಏಜಂಟರ ತಗಾದೆಗೆ ಗುರಿಯಾಗ

(ಮುಂದೇ ಸುಖ ನೋಡಿರಿ)

ವೈಜಯಂತಿ

ಭಾರತಕ್ಕೆ ಸ್ವಾತಂತ್ರ್ಯವೇನೋ ಬಂದಿತು; ಆದರೆ ಭಾರತದ ಪರಿಸ್ಥಿತಿ ಏನು? ಉಂಡುಡುವುದಕ್ಕೆರದ ಅರಸನೋಲಗ! ಇದಕ್ಕಿಂತ ತುಂಬಿದೂರೊಳಗೆ ತಿರಿದುಂಬುವುದೇ ಸಾಕೆನ್ನುವವರೂ ನಮ್ಮಲ್ಲಿದ್ದಾರೆ! ಆದುದರಿಂದ ಸ್ವರಾಜ್ಯ, ಸ್ವಾತಂತ್ರ್ಯ, ಪ್ರಜಾರಾಜ್ಯ-ಇದರ ಸರ್ವಸುಖ ಸಮೃದ್ಧಿಯನ್ನು ದೇಶದ ಸರ್ವ ಪ್ರಜೆಯು ಕೈಗೂಡಿಸಿಕೊಳ್ಳುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ.

ಬರೆದವರು: ಶ್ರೀ ಜಿ. ಆರ್ ಪಾಂಡೇಶ್ವರ.

ಆಚರಿಸುವ ! | ಆಚರಿಸುವ ಸರ್ವಸುಖದ
ಶುಭದಿನಾ—
ಸ್ವರ್ಣಯುಗದ ಹೊಸದಿನಾ ||
ಪರದಾಸ್ಯದ|ಅಪಹಾಸ್ಯದ | ಕಲಿಹೊಲಗಿದ
ಸುಖದಿನಾ-ಸ್ವಾತಂತ್ರ್ಯದ ಸಿರಿದಿನಾ ||
ಜಾತಿಮತದ | ಅಲ್ಪಹಿತದ | ಕೃಪಣ
ತೆಗಿದು
ಕೊನೆದಿನಾ-ಔದಾರ್ಯಕೆ ಹಿರಿದಿನಾ ||
ಭಿನ್ನಭಾವ | ಗಳನು ಮರೆತು |
ಒಂದಾಗುವ
ಶುಭದಿನಾ-ಇದು ಜನತಾಂಗ ಜಯದಿನಾ!||
ಆಚರಿಸುವ ಆಚರಿಸುವ
ಹಳ್ಳಿ, ಪೇಟೆ | ಪಟ್ಟಣಗಳ | ಬೀದಿ ಬೀದಿ
ತೋರಣಾ-
-ಇದೋ, ಧ್ವಜಾರೋಹಣಾ ||
ಮನೆ, ಮಂದಿರ, | ಅತಿಸುಂದರ |
ಅಲಂಕಾರ
ಧಾರಣಾ-ಮಹೋತ್ಸಾಹ ಕಾರಣಾ ||
ದಶ ಶತಮಾ | ನದ ದಾಸ್ಯದ |
ಕತ್ತಲಳಿದ ಈ
ದಿನಾ ! ಸರ್ವಭಯ ನಿವಾರಣಾ ।
ಇದು ಜಯಂತಿ ॥ ವೈಜಯಂತಿ ।
ಭರತಾಂಬೆಯ ಶುಭದಿನಾ-
ಇದು ಜನತಾಂಗ ಜಯದಿನಾ ||

ವಜ್ರ ಬಾಹು: ಕಾಶ್ಮೀರದಿಂದ ಕಾಮರೂಪದ ವರೆಗೆ, ಕೈಲಾಸದಿಂದ ಕನ್ಯಾ ಕುಮಾರಿಯ ವರೆಗೆ, ಭಾರತ ಇಂದು ಒಂದೇ ಘಟಕದ ಬೃಹತ್ ರಾಷ್ಟ್ರವಾಗಿ ನಿಂತಿದೆ. ಕೋಟಿ ಕೋಟಿ ಕಂಠಗಳಿಂದ ಐಕ್ಯಗಾನವು ಹೊರಚಿಮ್ಮುತ್ತಿದೆ-ಸ್ವಭಾಷೆ, ಸ್ವದೇಶಪ್ರೇಮವೆಂಬ ಸಣ್ಣ ಪುಟ್ಟ ಪ್ರಾದೇಶಿಕ ಭಿನ್ನತೆಗಳನ್ನು ಮರೆತ ಭಾರತ ಪ್ರಜೆಗಳ ಐಕ್ಯ ಘೋಷಾ!

(ನೇಪಥ್ಯದಲ್ಲಿ)

ಜೈಹಿಂದ್! ಜೈಹಿಂದ್!! ಹಿಂದೂ,
ಮುಸಲ್ಮಾನ್,
ಕ್ರೈಸ್ತ, ಪಾರ್ಸಿ—ಏಕ್ ಭಾರತ್
ಜನಾಂಗ್ ಜೈ!
ಹಿಂದೀ, ಗುಜರಾತಿ,ಬಂಗಾಳಿ,ತಮಿಳ್
ಮರಾಠಿ, ಕನ್ನಡ, ಕೇರಳ, ತೆಲುಗು-
ಏಕರಾಷ್ಟ್ರಕೇ ಬಹುಗೀತ ಹೋ!!

ಕುಸುಮಾಕರ—ಹತ್ತೇ ಹತ್ತು ವರ್ಷಗಳ ಹಿಂದೆ, ನಾವೆಲ್ಲದ್ದೆವೂ? ಜಗತ್ತಿನ ರಾಷ್ಟ್ರಮಾಲಿಕೆಯಲ್ಲಿ ಭಾರತ ರತ್ನವು ಕಾಣದಾಗಿದ್ದಿತು! "ಮಾಡು, ಇಲ್ಲವೆ ಮಡಿ"! ಎಂಬ ಮಹಾ ಮಂತ್ರೋಚ್ಚಾರಣೆ ಮಾಡಿದ, ಪೂಜ್ಯ ಓ ಬಾಪೂಜಿ! ನಿನ್ನ ಸತ್ಯಾಹಿಂಸೆಗಳ ಪ್ರೇಮವಾಹಿನಿಯಲ್ಲಿ ಗುಲಾಮಗಿರಿಯ ಕರ್ಕಶ ಬಂಧನಗಳೆಲ್ಲ ಕರಗಿ ಹೋದುವು! ನೀನೊಬ್ಬ ಅವತಾರ ಪುರುಷ! ಈ ಶುಭದಿನ ನಿನ್ನ ನಾಮಸ್ಮರಣೆಯಿಂದಲೇ ನಮ್ಮ ಉತ್ಸವಾಚರಣೆ ಪ್ರಾರಂಭವಾಗಲಿ!! ಜೈ ಭಾರತ್! ಜೈ ಬಾಪೂಜಿ, ಜೈ ಗಾಂಧೀಜಿ!

ವಜ್ರಬಾಹು—ಅದೋ, ಕಣ್ತೆರೆದು ನೋಡು! ಸುತ್ತಲೂ ನೋಡು! ಜಪಾನ್, ಚೀನಾ, ಇಂಡೋನೇಶ್ಯಾದಿಂದ, ಇತ್ತ, ಇಜಿಪ್ತ, ಇರಾನ್, ಯುಗೋಸ್ಲಾವಿಯಾ, ರಶಿಯಾದ ವರೆಗೆ- ಭರತರಾಷ್ಟ್ರದ ಭವ್ಯ ಚಿತ್ರವು ಎಲ್ಲರ ಹೃದಯಗಳಲ್ಲಿಯೂ ಮೂಡಿ ನಿಂತಿದೆ!

ಅನಂತಕವಚ—ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಮೇಲೆ ಒಡೆತನ ಮಾಡಬಾರದು! ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಆಂತರಿಕ ವ್ಯವಸ್ಥೆಯಲ್ಲಿ ಕೈಹಾಕಬಾರದು! ಸರ್ವರಾಷ್ಟ್ರಗಳೂ ಪರಸ್ಪರ ಪ್ರೇಮ, ಸಹಕಾರ, ಸೌಭ್ರಾತೃತ್ವದಿಂದ, ಶಾಂತಿದೇವತೆಯ ಮಂಗಲೋತ್ಸವಕ್ಕಾಗಿ ಪಂಚಶೀಲ ವ್ರತಧಾರಿಗಳಾಗಬೇಕು! ಸಹಜೀವನದ ಪ್ರೇಮಧ್ವಜವನ್ನೆತ್ತಿ ಹಿಡಿಯಬೇಕು!!

ತ್ರಿವರ್ಣೆ—ಸಹಜೀವನತತ್ತ್ವವಾಣಿ, ಇದೋ! ನನ್ನೆದೆಯಲ್ಲಿ ಹೀಗೆ ಧ್ವನಿಸುತ್ತಿದೆ— ಸರ್ವಸಮಾಜಗಳೂ ಎಚ್ಚೆತ್ತಿರುವ ಈ ಸುಪ್ರಭಾತದಲ್ಲಿ — ಸರ್ವಕಾಯಕ ವೃತ್ತಿಯವರೂ ಸ್ವಾಭಿಮಾನದಿಂದ ಸುಳಕೆತಾಗಿರುವ ಈ ಜಯಂತಿಯಲ್ಲಿ— ಸರ್ವರೂ ನ್ಯಾಯಧರ್ಮ ಬುದ್ಧಿಯವರಾಗಿ ತಂತಮ್ಮ ಎಳಿಗೆಯ ಹೆದ್ದಾರಿಯಲ್ಲಿ ಮುನ್ನಡೆಯಲಿ! ಸರ್ವೋದಯದ ಈ ಹೊಂಬೆಳಗಿನಲ್ಲಿ, ಎಲ್ಲರ ಹೃದಯಗಳೂ ಮಧುರ ಪ್ರೇಮದ ಮಂಗಲವಾಣಿಯಿಂದ ಪ್ರತಿಧ್ವನಿತವಾಗಲಿ! ದ್ವೇಷಾಸೂಯೆಗಳು ಹೇಳ ಹೆಸರಿಲ್ಲದಂತೆ ಭಾರತವನ್ನೇ ಬಿಟ್ಟು ಹೋಗಲಿ!!

ದಲಿತ—ಮನೆಯಿಲ್ಲದವರಿಗೆ ಮನೆ ದೊರೆಯಲಿ! ಹೊಲ ಇಲ್ಲದವರಿಗೆ ಹೊಲ ಸಿಗಲಿ! ಕೆಲಸವಿಲ್ಲದವರಿಗೆ ಕೆಲಸ ಸಿಗಲಿ! ಸರ್ವರಿಗೂ ಸಂಪತ್ತಿನ ದಾರಿ ದೊರೆಯಲಿ! ಈ ರಾಷ್ಟ್ರದಲ್ಲಿ ಯಾರೊಬ್ಬರೂ ಹರಕು ಬಟ್ಟೆ ತೊಡದಿರಲಿ! ಯಾರೊಬ್ಬರೂ ಅರೆ ಹೊಟ್ಟೆ ಉಣದಿರಲಿ! ಭಾರತದ ಧರ್ಮರಾಜನ ಸತ್ಯವಾಣಿ-ಇದೋ ಕೇಳಿ-

ಅನಂತಕವಚ—"ನನ್ನನ್ನು ಹಿಂಬಾಲಿಸಿ ಬಂದಿರುವ ಈ ನಾಯಿಗೂ ಈ ಸ್ವರ್ಗದಲ್ಲಿ ಪ್ರವೇಶ ಸಿಗಬೇಕು! ಅಲ್ಲಿಯವರೆಗೆ, ದೇವಾ! ನಿನ್ನೀ ಸ್ವರ್ಗರಾಜ್ಯ ನನಗೆ ಬೇಕಾಗಿಲ್ಲ!"

ತ್ರಿವರ್ಣೆ—ಸ್ವರಾಜ್ಯ ಸ್ವಾತಂತ್ರ್ಯ, ಪ್ರಜಾರಾಜ್ಯ ಇದರ ಸರ್ವಸುಖ ಸಮೃದ್ಧಿಯು ಸರ್ವರಿಗೂ ಕೈಗೆ ನಿಲುಕುವಂತಾಗಬೇಕಲ್ಲವೆ! ಇದೋ, ಆ ಶುಭ ಮುಹೂರ್ತ ಸಮೀಪಿಸುತ್ತಿದೆ!

ವ. ಬಾ.—ಅದೋ ಆಲಿಸಿ, ಭಾರತ ರತ್ನದ ದಿವ್ಯ ಸಂದೇಶ.

ಅನಂತಕವಚ—ಅಂಗಾಮ್ ಹಂಗಾಮ್ ಹೈ!-ಸೋಮಾರಿತನಕ್ಕೆ ಧಿಕ್ಕಾರ ನಿರಲಿ!—ದುಡಿಯಿರಿ, ದುಡಿಯಿರಿ, ಸಂಪತ್ತನ್ನು ಕೆಚ್ಚಿಸಿರಿ, ಸರ್ವರೂ ಸುಖಭೋಗ ಪಡೆಯಿರಿ! ಪ್ರತಿಯೊಬ್ಬ ಭಾರತೀಯನೂ ತನ್ನನ್ನು ತಾನೇ ಆಳಿಕೊಳ್ಳುವ ಅರಸಾಗಿ ಬಾಳಲಿ! ನಡೆಯಿರಿ, ಮುನ್ನಡೆಯಿರಿ, ಒಗ್ಗಟ್ಟಿನಿಂದ ಮುಂದಡಿ ಇಡಿರಿ! ಜೈ ಹಿಂದ್!

ದಲಿತ—ಅತಿ ಎತ್ತರವಾದ ಮರದ ಮೇಲೆ, ಹಣ್ಣಿನ ಗೊನೆ ತೂಗಾಡುತ್ತಿದೆ! ಬುಡದಲ್ಲಿ ನಿಂತರೆ ನೆರಳಿಲ್ಲ, ಮೇಲೇರಿ ಹಣ್ಣು ಕೊಯ್ಯಲು ಏರುವ ಶಕ್ತಿಯಿಲ್ಲ! ಓ, ಕಲ್ಪವೃಕ್ಷವೆ! ತುಸುಬಗ್ಗು! ಬುಡದಲ್ಲಿದ್ದವರಿಗೆ ಮೊದಲು ನೆರಳು ಕೊಡು! ಹಸಿದವರಿಗೆ, ನಿನ್ನ ಹಣ್ಣು ಕೈಗೆಸಿಗಲಿ!

ವಜ್ರಬಾಹು—ಅದೋ, ಸಮಾಜ ವಿಕಾಸ ಯೋಜನೆ! ಇದೋ ದ್ವಿತೀಯ ಪಂಚವಾರ್ಷಿಕ ಯೋಜನೆ! ಕಲ್ಪವೃಕ್ಷವು ಹಣ್ಣಿನ ಭಾರದಿಂದ ತುಸು ಬಾಗಿದೆ! ಕೈಚಾಚಿ, ಸವಿಫಲಗಳನ್ನು ಪಡೆಯಬೇಕು.? ಅದೋ, ಕೇಳಿ ಭಾರತ ರತ್ನದ ಮತ್ತೊಂದು ಮಹಾ ಸಂದೇಶ—

ಅನಂತಕವಚ—ನಿಮ್ಮ ಶ್ರಮಸಾಹಸಗಳಿಂದಲೇ ಈ ವೃಕ್ಷ ಎತ್ತರವಾಗಿ ಬೆಳೆದು, ಹಣ್ಣುಗಳಿಂದ ತುಂಬಿ ತುಳುಕಿದೆ! ಏಳಿರಿ, ಎದ್ದು ನಿಲ್ಲಿರಿ, ಇದೋ ನಿಮ್ಮೆದೆಗೇ ಇದು ಬಗ್ಗಿ ನಿಂತಿದೆ!

(ಜನ ಸಮೂಹದ ಘೋಷಣಾ ಧ್ವನಿ ಕರತಾಡನ)

ಕುಸುಮಾ: ಅದೋ, ನಾಗರಿಕರ ಮಹಾ ಮೆರವಣಿಗೆ ಈ ದಾರಿಯಾಗಿಯೇ ಗಾಂಧೀ ಮೈದಾನದತ್ತ ಸಾಗುತ್ತಿದೆ, ಧ್ವಜ ಗೀತೆ—

ನಮ್ಮ ಧ್ವಜ । ನಮ್ಮ ಧ್ವಜ ।
ನಮ್ಮ ರಾಷ್ಟ್ರಕಿದೇ ಧ್ವಜ ।
ಭೀತಿ ಬಿಟ್ಟು. ನೀತಿ ತೊಟ್ಟು,
ನಮ್ಮ ಧ್ವಜದ ಮೇಲೆ ಕಟ್ಟು ।
ಸತ್ಯದ ಸೆಲೆ, ಶಾಂತಿಯ ಕಲೆ,
ನಮ್ಮ ಧ್ವಜದಪಾರ ಬೆಲೆ ।
ಕಡಿದರಷ್ಟೆ, ಮಡಿದರಷ್ಟೆ,
ಧ್ವಜದ ಮಾನ ಉಳಿಸಲಿಷ್ಟೆ,
ನಡೆ, ನಡೆ ಮುನ್ನಡೆ-
ಹಿಂದಡಿ ಇಡಲಿಕ್ಕೆ ಬಿಡೆ ।
ಕೋಟಿ ಕೋಟಿ ಕಂಠಗಾನ-
ಭಾರತೀಯ ಸ್ವಾಭಿಮಾನ-
ಕಟ್ಟ ಕಟ್ಟ ನಾಡಕಟ್ಟ ।
ಲೋಕ ಮತಕೆ ಪಟ್ಟ ಗಟ್ಟ ।
ನಡೆ, ನಡೆ, ಮುನ್ನಡೆ ।
ಹಿಂದಡಿ ಇಡಲಿಕ್ಕೆ ಬಿಡೆ ॥

ವಜ್ರಬಾಹು—ಮೈನವಿರೇಳುತ್ತಿದೆ ವಿಶೇಷ ವೈಭವದಿಂದ ಇಂದಿನ ಜಯಂತಿ, ವೈಜಯಂತಿಯಾಗುತ್ತಿದೆ!

ದಲಿತ.—ನಿಜ, ನಿಜ. ಅದೋ ಅಲ್ಲಿ ನೋಡಿ, ಹಿರಿಯರೊಡನೆ ಕಿರಿಯರು, ಪುರುಷರೊಡನೆ ಸ್ತ್ರೀಯರು, ಬಡವರೊಡನೆ ಸಿರಿವಂತರು, ತಿರುಕರೊಡನೆ ಜಾತರು- ಎಲ್ಲರೂ ಹೆಸರುಮುರಿಂದ ನಲಿದು ಕೆಲೆದು, ಹಾಡುತ್ತ ಬರುತಿದ್ದಾರೆ....

(ಪುನಃ ಸ್ವಜಗೀತ)

ವಜ್ರ.—ಓಹೋ ಹೋ!ವೈಲುದ್ದದ

(೧೯ನೇ ಪುಟ ನೋಡಿರಿ)

ಶ್ರೀ ಮಹಾಭಾರತ ಸಂಹಿತೆ-೧

ಮಹರ್ಷಿ-ವ್ಯಾಸ-ಪ್ರಣೀತವಾದ ಮೂಲ ಸಂಸ್ಕೃತ ಶ್ಲೋಕಗಳು ಕನ್ನಡ ಲಿಪಿಯಲ್ಲಿದ್ದು, ಕನ್ನಡ ಅನುವಾದದಿಂದೊಡಗೂಡಿದ ಈ ಅಪ್ರತಿಮ, ಪ್ರತಿಭಾಕಾರಿ ಗ್ರಂಥವು (II volume of Indological Series) ಬಿಳೇ ಕಾಗದ ಮೇಲಿನ ಉತ್ತಮ ಮುದ್ರಣದಿಂದಲೂ, ಕ್ಯಾಲಿಕೋ ಬೈಂಡಿಂಗದಿಂದಲೂ ಸುಸಜ್ಜಿತವಾಗಿ **ಆಗಸ್ಟ ೧೯೫೭** ರಲ್ಲಿ ಹೊರಬೀಳುವದು. **ಬೆಲೆ: ರೂ. ೫.**

To avoid future disappointment, reserve your copies Now by sending five rupees. Postage Free for advance reservation.

NEW CALICO-BOUND EDITION
OF
"Kannada Rig-veda Samhita I"

With original Vedic Text in Kannada script and authentic translation in Kannada language. Excellent printing. Full calico Binding. Limited number of copies

Price:- Rs. 6/- ● Postage:- 0·81

ಲಕ್ಷ್ಮಣ ಬಾಬಣಿ ಹೈ ಮೆಮೋರಿಯಲ್ ಪಬ್ಲಿಕೇಶನ್ಸ್,
ಘೋಡಕೆ ಬಿಲ್ಡಿಂಗ, ಜಯಚಾಮರಾಜ ನಗರ, ಹುಬ್ಬಳ್ಳಿ.

ಇರು, ಇರಗೊಡು!

ಬರೆದವರು ಗೋರಾ, ಉಡುಪಿ

— ೧ —

ಹಿಂದಿನವರು ಗೆಯ್ದರೆಂದು ನಿಂದು ಸುಮ್ಮನಿರುವೆಯ?
ಇಂದು ನಿನ್ನ ಪಾಲಸೇವೆ ಇಲ್ಲವೆಂದೆ ಬಗೆವೆಯ ?
ಮುಂದ ಬುದ್ಧಿ ಯೆನ್ನದೆಂದು ದೂರಸೆಟೆದು ನಿಲ್ವೆಯ?
ಮುಂದೆಸಾಗಿ ನೀವು, ಬಂದೆ ಹಿಂದೆ ನಾನು ಎಂದೆಯ?

— ೨ —

ಎಳೆಯನೇನು ತಿಳಿಯೆ.ತಾನು ಎಂಬ ಸೋಗು ಏತಕೆ?
ಹಳಬನಿಹೆನು ಅಬಲನೆಂಬ ಗರ್ವಭಾವವೇತಕೆ?
ಅಲಸನೆಂತೆ ಕೂರಿ ತಿಂಬ ಮನೋಭಾವ ತೊರೆಯುರಿ
ಬಳಸಿ ನಲಿದು ತಿರುಗಿ ಬನ್ನಿ ಮುಕ್ತ ಭಾವ ತಳೆಯುರಿ.

— ೩ —

ದರ್ಮಪಂಥವಾದರೇಕೆ ಜಾತಿಮತದ ಭೇದವು?
ಮರ್ಮವರಿತು ನೋಡೆಯೆಲ್ಲ ಭಾರತೀಯ ವಲ್ಲವೆ?
ಕರ್ಮಭೂಮಿ ಭರತಭೂಮಿ ಯೆಲ್ಲ ದಯಾದ್ಧರ್ಮವು
ಒಮ್ಮೆ ರಕ್ತಗತವೆ ಆಗಿ ಒದಗಿತೆಮಗೆ ಸೌಖ್ಯವು.

— ೪ —

ಆದರೇನು ಮುಂದೆ ನಮ್ಮ ಜಾತಿಪಂಥವಾದವು
ಕಾದಲಗಿನಂತೆ ದೇಶ ಜನತೆಯನ್ನು ಉರಿಸಿತು!
ಹದಸವರಸುತಿದ್ದ ಬ್ರಿಟಿಷ ಜನರ ಬೀಳಬೆಂದಿತು!
ಮದನವಾಶವನ್ನು ಹರಡಿ ಜನತೆಯನ್ನು ಸೆಳೆಯಿತು!

— ೫ —

ಹಾಲುಜೇನು ಸುರಿವನಾಡು ಹಾಳುಬಿದ್ದು ಹೋಯಿತು!
ಕಾಲುಮುರಿದ ಕುರುಡನಂತೆ ಪ್ರಗತಿಕೊಂದದಾಯಿತು!
ಹಳಸಲಂತೆ ಬದುಕುತಿರಲು ಸಾಂಧ್ಯೆ ಮುರಿದು ಎದ್ದಿತು
"ಹಾಳುಕೆಳೆಯರನ್ನು ದೂರಮಾಡಿ" ಎಂದು ಹಾಡಿತು!

— ೬ —

ಭಾರತೀಯರ ಧರ್ಮದಿಂದ ಭಾರತೀಯರಕ್ತವು
ಗೋರಿತಮ್ಮನೆಲ್ಲತಿಂಬ ಅನ್ಯರೆಡೆಗೆ ಹರಿಯಿತು.
ದರುಮನಾಶವಪ್ಪುದೆಂಬ ಮೋಹದೊಡನೆ ಬಲಿಯಿತು
ದೂರದೇಶದವರ ಹೊಡೆಯಲೆಂಬ ಇಚ್ಛೆ ಬೆಳೆಯಿತು.

— ೭ —

ಇಂದಿನಿಂದ ನೂರು ವರ್ಷ ಹಿಂದೆನಡೆದ ಕಥೆಯಿದು.
ಬಂದು ಫಟ್ಟಿಯಾಗಿನಿಂದ ಬ್ರಿಟಿಷರನ್ನು ಹೂಡೆಯಿತ!
ಇಂದು ಸ್ವಾತಂತ್ರ್ಯ ಸಮರವೆಂದು ಕರೆವ ಯುದ್ಧವು
ಅಂದಗೆಟ್ಟ ಹರಣ ಹೋಮದಲ್ಲಿ ಅಂತ್ಯವಾಯಿತು!

— ೮ —

ಮಾದರಿಲ್ಲ, ಎನ್ನತೊ ಜೀವ ಹೋಮವಾಗಿ ಹೋಯಿತ.!
ಮೋದದಿಂದ ಭಾರತೀಯ ಮುಕ್ತಿಗಾಗಿ ಹೋರಿತು!
ಕಾದು ವ ಡಿವುದದುವೆ ಕೀರ್ತಿ ಎಂಬ ಮಾತು ಸತ್ಯವು
ಕಾದವೀರ ಮಹಿಳೆ ಪುರುಷರಾದರಿಂದು ಅಮರರು!

— ೯ —

ಮುಂದೆ ನಡೆದ ಸಮರಗಳಲಿ ಅರಸರೋಸಿ ಕೋದರು
ಪಂಡಿಯಂತೆ ಹೆದರಿ ರಾಜ್ಯಸೂತ್ರವನ್ನು ಬಿಟ್ಟರು!
ಬಂದಿತಂದು ನಮ್ಮ ಕರಕೆ ನಮ್ಮ ಸೊರೆವ ಕಾರ್ಯವ;
ಹೊಂದಿಕೊಂಡು ಬಾಳ್ವುದಿದುವೆ ನವ್ಮ ಮನೋ
ದೃಢತೆಯು!

— ೧೦ —

ಒದಗಿ ಬಂದ ನಮ್ಮತಂತ್ರವನು ನಾವು ಉಳಿಸಲು
"ಇದ್ದು", ನಮಗೆ, "ಇರಗೊಡನ್ಯರನ್ನು" ಎಂಬ
ನೀತಿಯು!
ಹೊದ್ದು ಜರಿಸುವಂತೆ, ಭಾರತೀಯುವೆಂಬ ಭಾವನೆ
ಬಿದ್ದು ಹೋಗದಂತೆ ನಡವ ಶಕ್ತಿಕೊಡಲಿ ಬಾರತಿ!

ಸ್ವಾತಂತ್ರ್ಯ ಸಂಭ್ರಮ

೧

ವರುಷವರುಷವು ಬರುವ ಸ್ವಾತಂತ್ರ್ಯ ಶುಭದಿನವ
ಹರುಷದಿಂದಾಚರಿಸಿ ನಲಿದುಯುತಿಹೆವು |
ಹುಟ್ಟು ಹುಟ್ಟದ ತೆರದಿ ಸಂತಸದಿ ಮೈಮರೆತು
ಪಟ್ಟ ಕಷ್ಟಗಳೆಲ್ಲ ಮರೆಯಂತ್ತಲಿಹೆವು ||

೨

ಸ್ವಾತಂತ್ರ್ಯದಡಿಗಲ್ಲನಿಟ್ಟವರ ಸ್ಮರಿಸುವೆವು
ನಮಿಸುವೆವು ನಾಯಕರ ಸಹಚರರ ಸಹಿತ!
ಸ್ವಾತಂತ್ರ್ಯದೊರಕಿಸಲು ದುಡಿದುಡಿದು ಮಡಿದಿರುವ
ವೀರ ಯೋಧರನೆಲ್ಲ ಸ್ಮರಿಸುವೆವು ನಿರತ ||

೩

ನವವು ವರ್ಷಗಳುರುಳಿ, ದಶಮಾಶ್ವರಧವೇರಿ
ಸ್ವಾತಂತ್ರ್ಯ ಸೂರ್ಯನ ನವ ಬೆಳಗುತಿಹನಿಂದು!
ಸಂಭ್ರಮದ ಶುಭದಿನವ ಕೂಡುತಲಿ ನಾವೆಲ್ಲ
ಸ್ವಾತಂತ್ರ್ಯದಿತಿಹಾಸ ಮೆರೆಸುವೆವು ಮುಂದು ||

೪

ಸತ್ಯ ಧರ್ಮದಿ ನಡೆದು ಶಾಂತಿಯನು ಪಾಲಿಸುವ
ನಿತ್ಯ ನೇಮದಿನಿಂದು, ಮುನ್ನಡೆಯುತಿರುವ!
ಹಿಂಸೆಯನು ತ್ಯಜಿಸುತ್ತ ವಂಚನೆಯ ವರ್ಜಿಸುತ
ಲಂಚದಾಸೆಯ ತೊರೆದು ಮುಂದಡಿಯನಿಡುವ ||

೫

ಸ್ವಾತಂತ್ರ್ಯ ಸಫಲತೆಯ ಗುರಿಯತ್ತ ಸಾಗುತಲಿ
ಮಾಡುತಿಹ ತಪ್ಪುಗಳನೊಪ್ಪಿ ತಿದ್ದಿಕೊಳ್ಳುತ
ತಿದ್ದಿಕೊಳ್ಳುತ ನಡೆವ ಸಮೃದ್ಧಿಯುದಿಸುತಲಿ
ಸ್ವಾತಂತ್ರ್ಯ ನಿಜ ಸುಖವದಲ್ಲಿರಗು ಸಿಗಲಿ ||

ಕೆ ಎನ್ ಭಟ್. ಶಿರಾಡಿಸಾಲ್.

ಸ್ವಾತಂತ್ರ್ಯ ಸಂಗ್ರಾಮ ಹೂಡಿ, ಗೆದ್ದಾಯಿತು ಆದರೆ, ಈಗ ದುಂದುಗಾರಿಕೆಯ ಮೇಲೆ ಮಗುದೊಂದು ಸಂಗ್ರಾಮ ಸಾರಲ್ಪಟ್ಟಿದೆ. "ದುಂದುಗಾರಿಕೆಯನ್ನು ಈಗಿನಿಂದಲೇ ನಿಲ್ಲಿಸಿ, ಮಿತವ್ಯಯದ ಸೂಲಕ ಗಳಿಸಿದ ಉಳಿತಾಯ ಗಳನ್ನು ಬೀಂಕುಗಳಲ್ಲಿ ಕೂಡಹಾಕಲಾರಂಭಿಸುವ" ಎಂಬುದೇ ನಮ್ಮ ಈಗಿನ ರಣಘೋಷಣೆಯಾಗಬೇಕು!

ಇದೇ ನಾವಿಂದು ಮಾತೃಭೂಮಿಗೆ ಸಲ್ಲಿಸ ಬೇಕಾದ ಸೇವೆ; ಹಾಗೂ ಸ್ವಾತಂತ್ರ್ಯ ಸಂಗ್ರಾಮ ದಲ್ಲಿ ಪ್ರಾಣಾರ್ಪಣೆ ಮಾಡಿ ವೀರಸ್ವರ್ಗ ಪಡೆದ ಯೋಧರಿಗೆ ಕೊಡಬೇಕಾದ ಕಾಣಿಕೆ !!

ದಿ ಕೆನರಾ ಬೇಂಕಿಂಗ್ ಕೊರ್ಪೋರೇಶನ್ ಲಿ.

(ಸ್ಥಾಪನೆ: 1906)

ಪ್ರಧಾನ ಕಾರ್ಯಾಲಯ:

ಉಡುಪಿ (ದ. ಭಾರತ).

ಕನ್ನಡ ನಾಡಿನಲ್ಲಿಯೇ ಪ್ರಥಮ ಸಲ ಪ್ರಕಟವಾದ ಸಚಿತ್ರ ಬೃಹತ್ ಕೋಶಗಳು!!

ಪ್ರಪಂಚ, ಸಂಯುಕ್ತ ಕರ್ನಾಟಕ, ಭಾರತ ಜ್ಯೋತಿ ಮುಂತಾದ ಪ್ರಮುಖ ಪತ್ರಿಕೆಗಳಿಂದ ಅತ್ಯುಪಯುಕ್ತ, ಹಾಗೂ ಕಿಟೆಲ್ ಕೋಶದ ನಂತರ ಗಾತ್ರದಲ್ಲಿಯೂ, ಶಬ್ದಸಂಗ್ರಹದಲ್ಲಿಯೂ ಶ್ರೇಷ್ಠ ಕೃತಿರತ್ನವೆಂದು ಪ್ರಶಂಶಿಸಲ್ಪಟ್ಟ

ಸಚಿತ್ರ ಕಸ್ತೂರೀ ಕೋಶ (ಕನ್ನಡ-ಕನ್ನಡ)

ಸಂಗಡಿಸಿದವರು ಪಂಡಿತ ಜೆ. ಎ ಕವಲಿ. ೪೦೦೦೦ಕ್ಕೂ ಮಿಕ್ಕ ಶಬ್ದಗಳು. ೨೨॥ ಲಕ್ಷ ವಿವರಣಾ ಶಬ್ದಗಳು. ೩೦೦ಕ್ಕೂ ಮೇಲ್ಪಟ್ಟ ಚಿತ್ರಗಳು. ಕ್ರೌನ ೧/೮ ಪತ್ರದ ೯೪೨ ಪುಟಗಳು ಹೊಳಪಾದ ಬಿಳಿ ಕಾಗದ— ಅಂದವಾದ ಅಚ್ಚು ಕಟ್ಟು ಬೆಲೆ ಕೇವಲ ರೂ ೮-೦೦ (ವ್ಹಿ ಪಿ ಯಿಂದ ರೂ ೯-೦೦) ಇದು ಕನ್ನಡ ಪ್ರಾಚೀನ ಸಾಹಿತ್ಯದ ಪರಿಜ್ಞಾನಕ್ಕೆ ಕನ್ನಡಿಯವಾದ ಕೈಪಿಡಿ, ನವಸಾಹಿತ್ಯ ನಿರ್ಮಾಣ ಪದವಲ್ಲಿ ದಾರಿದೀಪಿಟಿಗೆ ಕನ್ನಡ-ಸಂಸ್ಕೃತ ಶಾಸ್ತ್ರೀಯ ಲಲಿತ ಸಾಹಿತ್ಯ ಕಸ್ತೂರೀ ಕಣಗಳ ಕೋಶ. ಭಾಷೆಯ ಬಲ್ಲೆ-ಬೆಡಗುಗಳಿಗೆ ಬೇಕಿನಿಸುವ ನ್ಯಾಯ-ಸಾಂಕೇತಿಕ ನಮಾಲೋಚನೆಗಳಿಗೆ ಸಂಪತ್ತಿನ ಸಾಧನೆ; ಆಧುನಿಕ ವಿಜ್ಞಾನ ವಿಧಾನ ವಿಷಯಕ ಸಚಿತ್ರ ಶಬ್ದ ಭಾಂಡಾರ!

ಕನ್ನಡದಿಂದ ಹಿಂದೀ ಭಾಷಾ ಅಭ್ಯಾಸಿಗಳಿಗೂ ಹಾಗೂ ಭಾಷಾಂತರಕಾರರಿಗೂ ಅತ್ಯುಪಯುಕ್ತವಾದ

ಸಚಿತ್ರ ಆದರ್ಶ ಕೋಶ (ಕನ್ನಡ-ಹಿಂದೀ)

ಸಂಪಾದಕರು. ಪಂಡಿತ ಜೆ ಡಿ ಮೈಸಾಳೆ ಕ್ರೌನ ೧ ಅಳತೆ ೫೪೦ ಪುಟಗಳು ಹೊಳಪು ಬಿಳಿ ಕಾಗದ ಅಂದವಾದ ಅಚ್ಚು-ಕಟ್ಟು ೨೦೦ಕ್ಕೂ ಮೇಲ್ಪಟ್ಟ ಚಿತ್ರಗಳು ಬೆಲೆ ರೂ ೪ ೫೦ (ವ್ಹಿ ಪಿ ಯಿಂದ ರೂ. ೫ ೬೨)

ಇವಲ್ಲದೆ, ಭಾರದ್ವಾಜರ ಇಂಗ್ಲೀಷ-ಇಂಗ್ಲೀಷ-ಕನ್ನಡ ಜಮ್ ಡಿಕ್ಷನರಿ (ಇಳಿಸಿದ ಬೆಲೆ ರೂ ೩-೦೦) ಹಾಗೂ ಮೈಸಾಳೆಯವರ ಹಿಂದೀ-ಹಿಂದೀ-ಕನ್ನಡರತ್ನ ಕೋಶ ಬೆಲೆ ರೂ ೮-೫೦ ಕನ್ನಡ, ಹಿಂದೀ, ಇಂಗ್ಲೀಷ ಸುಂದರವಾದ ಸಚಿತ್ರ ಅಕ್ಷರವರ್ಣಮಾಲೆಗಳು ಪ್ರತಿಯೊಂದಕ್ಕೆ ಲಲನ ಸೈಸಾ ಮತ್ತು ನವನೈಸೂರು ರಾಜ್ಯದ ಭೂಪಟ ದೆವ್ವಾದ ಬಿಳಿಯ ಕಾರ್ಡಿನ ಮೇಲೆ ಅಷ್ಟವರ್ಣಗಳಲ್ಲಿ ಅಂದವಾಗಿ ಮುದ್ರಿಸಿದೆ ಬೆಲೆ ರೂ ೧ ಇವುಗಳೂ ಮಾರಾಟಕ್ಕೆ ದೊರೆಯುತ್ತವೆ ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಇಂದೇ ಆರ್ಡರ ಬರೆಯಿರಿ. ಎಲ್ಲ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ಪ್ರಕಾಶಕರು:- ರಾಮಾಶ್ರಯ ಬುಕ್ ಡಿಪೊ, ಧಾರವಾಡ.



ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವಕ್ಕೆ ರಾಷ್ಟ್ರಾಧ್ಯಕ್ಷರ ಸಂದೇಶ

ಇಂದಿಗೆ ೧೦೦ ವರ್ಷಗಳ ಹಿಂದೆ ಜನರಲ್ಲಿ ಅಸಂತುಷ್ಟಿ ಮೂಡಿದ ಕಾರಣವಾಗಿ ಭಾರತದಲ್ಲಿ ಬೃಹದಾಕಾರದ ಆಂದೋಲನವೊಂದು ಸಂಘಟಿಸಿತ ಇದರ ಸಂಸ್ಕರೂಪವಾಗಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯ ವಿರುದ್ಧವಾಗಿ ವಿಪ್ಲವವುಂಟಾಯಿತು ಆದರೆ ಆಂದೋಲನವನ್ನು ಯಾವ ಹೆಸರಿನಿಂದ ಕರೆದರೂ ಅದೊಂದು ಕೇವಲ ಸಂಯೋಗಿಕ ಘಟನೆಯಾಗಿರಲಿಲ್ಲ ಭಾರತದ ಜನರು ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯನ್ನು ಸಕಲಒಕ್ಕಭಾವದಿಂದ ಎಂದೆಂದಿಗೂ ಅಗೀಕರಿಸಲಿಲ್ಲ

ಭಾರತೀಯರಲ್ಲಿ ಅಂತ ಕಲಹಗಳ ಪ್ರಾಣಾಮವಾಗಿ ಈಸ್ಟ್ ಇಂಡಿಯಾ ಕಂಪನಿಯು ಕ್ರಮೇಣ ಅನಾಯಾಸವಾಗಿ ರಾಜ್ಯ ಸ್ಥಾಪನೆಮಾಡಿತು ಶೀಘ್ರವೇ ಇದರ ದುಷ್ಪರಿಣಾಮವನ್ನು ಜನರು ಅರಿತುಕೊಂಡರು ಇತ್ಪರಿಣಾಮವಾಗಿ ಕಂಪೆನಿಯು ದೇಶದ ಬಂದ ಭಾಗದಲ್ಲಿ ರಾಜ್ಯ ಆಕ್ರಮಣವನ್ನು ವಿಸ್ತರಿಸ ತ್ತಿದ್ದಂತೆಯೇ ಇನ್ನೊಂದು ಭಾಗದಲ್ಲಿ ಜನರ ಕಂಪೆನಿ ಆಡಳಿತದ ವಿರುದ್ಧ ಒಂದಾಯವೆದ್ದಿರು ೧೭೫೭ರಿಂದ ೧೮೫೭ರವರೆಗಿನಲ್ಲಿ ದೇಶದ ಒಂದಲ್ಲ ಮತ್ತೊಂದು ಭಾಗದಲ್ಲಿ ಭಾರತೀಯರು ಕಂಪೆನಿ ಆಳ್ವಿಕೆಗೆ ವಿರೋಧ ಸೂಚಿಸಿ ಕ್ರಿಯಾತ್ಮಕವಾಗಿ ಪ್ರದರ್ಶನ ನಡೆಸಿಲ್ಲವೆಂದು ಹೇಳುವುದು ಸಲಭ ಸಾಧ್ಯವಲ್ಲ

ಕಂಪೆನಿ ಹಾಗೂ ಅದರ ಅಧಿಕಾರಿಗಳು ಎಲ್ಲ ವ್ಯಾಪಾರವನ್ನು ತನ್ನ ಕೈಯ ಕ್ಷಿಟ್ಟುಕೊಂಡಿದ್ದು ದೇಶೀಯ ವ್ಯಾಪಾರಿಗಳಿಗೆ ವ್ಯವಹಾರ ಸೌಲಭ್ಯಗಳನ್ನು ಕಪ್ಪಿಸಿ ಅವರನ್ನು ಬ್ರಿಟಿಷರ ದಳ್ಳಾಳಿಗಳ ಮಟ್ಟಕ್ಕೆ ಇಳಿಸಿದ್ದರು ದೇಶದ ವಿವಿಧ ಭಾಗಗಳಲ್ಲಿ ವಿವಿಧ ಶಾಸನಗಳನ್ನು ಅನುಸ್ಥಾನಕ್ಕೆ ತಂದ ಅನೇಕರಿಂದ ಜಮೀನುಗಳನ್ನು ವಶಪಡಿಸಿಕೊಂಡರು ಭೂ ಕಂದಾಯ ಪಾವತಿ ಸಾರಿದಿದ್ದಾಗ ಇಡೀ ಜಮೀನನ್ನೆ ಹೊಂದುಮಾಡುವ ಅಧಿಕಾರವನ್ನು ಶಾಸನದ ಮೂಲಕ ಪಡೆದಿದ್ದರು ಹೊಸ ಶಾಸನಗಳು ಮತ್ತು ಹೊಸದಾದ ದಬರಿಯ ಕಾಲಹರಣಕ್ಕೆ ಅವಕಾಶವುಂಟಾಯಿತು ಹಂಗೂ ನ್ಯಾಯ ದೊರಕಿಸಿಕೊಳ್ಳುವುದಕ್ಕೆ ಕಷ್ಟಸಾಧ್ಯವಾದ ನ್ಯಾಯಾಲಯಗಳಿಂದ ಅಸಂಖ್ಯಾತ ಜನರು ಹಾಳಾದರು ಕಂಪೆನಿಯವರು ವಿಧಿಸಿದ ಹೊಸ ತೆರಿಗೆಗಳನ್ನು ನಿರ್ದಯೆಯಿಂದ ಕಟ್ಟಾಯವಾಗಿ ವಸೂಲುಮಾಡಿಲಾಗುತ್ತಿತ್ತು. ಕ್ರಿಶ್ಚಿಯನ್ ಮತ ಪ್ರಚಾರಕರ ಹಸ್ತಕ್ಷೇಪ ತಂತ್ರದಿಂದ ಜನರನ್ನು ದುಬಿಗಳನ್ನಾಗಿಯೂ ಧರ್ಮಾಂತರಕ್ಕನ್ನಾಗಿಯೂ ಮಾಡಿದ್ದರು ಹೊಸ ಶಾಸನಗಳು ಮತ್ತು ಸಂಪ್ರದಾಯಗಳು ಸಿಪಾಯಿ ಮತಾಂತರ ಹೊಂದಿದ್ದಾಗ ಸಹಿ ವ್ಯಕ್ತಿಯೊಬ್ಬನಿಗೆ ಎತ್ತರ್ಜಿತ ಹಂಗೂ ಕುಟುಂಬಕ ಆಸ್ತಿಗಳ ಮೇಲೆ ಇರುವ ಹಕ್ಕನ್ನು ಉಳಿಸಿಕೊಂಡು ಬರುವುದು ಪ್ರಾಣಿ ಸಂಬಂಧವಾದ ಕೂಬ್ಬನ್ನು ಸವರಲಾಗಿದೆ ಎಂದು ಹೇಳಲಾದ ಹೊಸ ರೀತಿಯ ತೋಟಾಗಳನ್ನ ಕಂಡು ಸಿಪಾಯಿಗಳು ಹೆಚ್ಚು ಕಡಿದಿದ್ದು ಈ ಕಾರಣಗಳು ದೇಶೀಯರೆಲ್ಲರನ್ನೂ ಕ್ರಿಶ್ಚಿಯನ್ ಮತಕ್ಕೆ ಮತಾಂತರಗೊಳಿಸಲಾಗುವುದಂದ ಭಾವನೆಗೆ ಅವಕಾಶವಿತ್ತವು ಅಲ್ಲದೆ ಈಸ್ಟ್ ಇಂಡಿಯಾಕಂಪೆನಿಯವರ ಅಕ್ರಮಣ ನೀತಿಯ ಪರಿಣಾಮವಾಗಿ ಹಲವಾರು ಭಾರತೀಯ ಸಂಸ್ಥಾನಗಳು ಕಣ್ಮರೆಯಾಗಿ ಕಂಪೆನಿಯ ಆಡಳಿತ ಕ್ಷೇತ್ರದೊಂದಿಗೆ ವಿಲೀನವಾಗಿದ್ದು ಕೈಗೆ ಸಿಕ್ಕಿದ್ದನ್ನು ದೋಚುವ ವರ್ತಮಾನಿಯರ ಕಾರ್ಯ ನೀತಿ ಹಾಗೂ ಕೊನೆಯದಾಗಿ ಗೃಹ ಮತ್ತು ಅಲ್ಪ ಪ್ರಮಾಣದ ಕೈಗಾರಿಕೆಗಳ ನಿರಾಶೆ ಇವುಗಳು ದೇಶದ ಎಲ್ಲಾ ಭಾಗಗಳಲ್ಲಿಯೂ ಅಸಂತುಷ್ಟ ಪರಿಸ್ಥಿತಿಯ ಉಂಟಾಗಲು ಕಾರಣವಾದುವು ಅಸಂಖ್ಯಾತ ಜನರು ಕಂಪೆನಿಯ ಆಳ್ವಿಕೆಯನ್ನು ಕೊನೆಗಾಣಿಸಬೇಕೆಂದು ತಮ್ಮ ಮನಸ್ಸಿನಲ್ಲಿಯೇ ನಿರ್ಧರಿಸಿಕೊಂಡರು ಕೆಲವರಂತೂ ತಮ್ಮ ಸ್ವಾರ್ಥ ದೃಷ್ಟಿಯಿಂದ ಈ ನಿರ್ಧಾರ ಕೈಗೊಂಡರು. ಮತ್ತೊಂದು ಕಡೆ ಈಸ್ಟ್ ಇಂಡಿಯಾ ಕಂಪೆನಿಯು ಕೆಟ್ಟು ಹೆಚ್ಚಾಗಿ ಬಲಿಷ್ಠವಾಗುತ್ತಾ ಬಂದಿತು ಸಾಮೂಹಿಕ ಹಾಗೂ ಸುವ್ಯವಸ್ಥಿತ ಪ್ರಯತ್ನವಿಲ್ಲದೆ ಕಂಪೆನಿಯನ್ನು ಎದುರಿಸಲು ಸಾಧ್ಯವಾಗುವುದಿಲ್ಲವೆಂಬ ಕಂಪೆನಿಯ ಪ್ರಾಬಲ್ಯವನ್ನು ಕುಗ್ಗಿಸುವುದು ಸ್ಪಷ್ಟಪಟ್ಟಿತು

೧೮೫೭ನೆಯ ಶತಮಾನದ ಉತ್ತರಾರ್ಧ ಹಂಗೂ ೧೯ನೆಯ ಶತಮಾನದ ಪೂರ್ವಾರ್ಧದಲ್ಲಿ ದೇಶದ ವಿವಿಧ ಭಾಗಗಳಲ್ಲಿ ಕಂಪೆನಿಯ ಆಳ್ವಿಕೆಯನ್ನ ಸಮಾಪ್ತಿಗೊಳಿಸಲು ಅಥವಾ ಕನಿಷ್ಠ ಕಂಪೆನಿಯ ಪ್ರಾಬಲ್ಯವನ್ನು ಕುಗ್ಗಿಸಲು ಅನೇಕ ಪ್ರಯತ್ನಗಳು ನಡೆದವು ಅಲ್ಲಿಯ ವರೆಗೆ ಈಸ್ಟ್ ಇಂಡಿಯಾ ಕಂಪೆನಿಯ ವಿರುದ್ಧವಾಗಿ ನಡೆದ ಆಂದೋಲನಗಳಲ್ಲಿ ೧೮೫೭ರ ಸ್ವಾತಂತ್ರ್ಯ ಸಂಗ್ರಾಮವೇ ಅತಿಶಯವಾದುದು ಎಂಬುದು ಸರ್ವಮಾನ್ಯ ವಾಸ್ತವಾಂಶವಾಗಿದೆ ಆದುದರಿಂದ ಅನೇಕ ಇತಿಹಾಸಕಾರರು ಮತ್ತು ಚರಿತ್ರಾಕಾರರು ಈ ಆಂದೋಲನವನ್ನು ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮ ವೆಂದು ಒಪ್ಪಿಸಿದ್ದಾದರೆ ಅದರಲ್ಲಿ ಆಶ್ಚರ್ಯವೇನಿಲ್ಲ

ಈ ಸ್ವಾತಂತ್ರ್ಯ ಸಂಗ್ರಾಮವು ಮೀರತ್‌ನಲ್ಲಿ ಪ್ರಾರಂಭವಾಗಿ ಮುಂದೆ ಇಂದಿನ ಉತ್ತರ ಪ್ರದೇಶ ಬಿಹಾರ ಬಂಗಾಳ ಮತ್ತು ಮಧ್ಯಪ್ರದೇಶ ಹಂಗೂ ಪಂಜಾಬ್‌ಗಳ ಕೆಲವು ಭಾಗಗಳಿಗೂ ಅವರಿಸಿತು ಈ ಆಂದೋಲನದ ಘಟನಾವಳಿಯನ್ನು ಇಲ್ಲಿ ವಿಶದಪಡಿಸುವ ಅಗತ್ಯವೇನಿಲ್ಲ ಈ ಘಟನಾವಳಿಯ ಹಿಂಭಾಗದಲ್ಲಿ ಕಂಪೆನಿ ರಾಜ್ಯದ ಆಕ್ರಮಣಗಳಿಂದ ಗಿ ಜನರಲ್ಲಿ ಆಳಕುಸ್ಪಿ ಭಾವನೆಯು ಮೂಡಿದ್ದನ್ನೂ ಹಾಗೂ ಈ ಆಂದೋಲನದಲ್ಲಿ ಭಾಗವಹಿಸಿದ ಅನೇಕರ ಹೃದಯಗಳಲ್ಲಿ ದೇಶ ಭಕ್ತಿಯನ್ನು ಮೂಡಿದ್ದನ್ನೂ ಒಪ್ಪಬೇಕಾದ ವಿಷಯವೆನಿಸಿ ಜೊತೆಗೆ ಧಾರ್ಮಿಕ ಅತಿರಿಕ್ತತೆಗೆ ಉಂಟಾದ ನೋವು ಕೂಡ ಜನರನ್ನು ಈ ಆಂದೋಲನವನ್ನು ಸೇರುವಂತೆ ಮಾಡಿತು

೧೮೫೭ ಜೂನ್ ೨ ರಂದು ವಿಪ್ಲವವು ವಿದೇಶೀ ದಬ್ಬಾಳಿಕೆಗೆ ವಿರುದ್ಧವಾದ ಪ್ರತಿರೋಧ ಭಾವನೆ ಎಂಬುದು ನಿರ್ವಾದವಾದ ವಿಷಯವಾಗಿದೆ ಈ ವಿಪ್ಲವದ ಪರಿಣಾಮ ಸ್ವರೂಪವಾಗಿ ಅನೇಕ ಜನನಾಯಕರ ಹೆಸರುಗಳಿಗೆ ಪ್ರಕಾಶಕ್ಕೆ ಬಂದವು ಈ ಜನನಾಯಕರು ವಿದೇಶೀ ಆಳ್ವಿಕೆಯನ್ನು ವಿರೋಧಿಸಿದ ದೇಶಭಕ್ತರು ಹಂಗೂ ಸಂಕಷ್ಟ ಪ್ರತೀಕಗಳೆಂಬುದಾಗಿ ಪರಿಗಣಿಸಲ್ಪಟ್ಟರು ಇವರಲ್ಲಿ ತಾತ್ಯಾ ಟೋಪಿ ಅಜೀಮುಲ್ಲಾ ಕುವರ ಸಿಂಹ ಮತ್ತು ಝಾನ್ಸಿಯ ರಾಣಿ ಲಕ್ಷ್ಮಿಬಾಯಿ ಇವರುಗಳ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ ಹಿಂದೂ ಮುಸ್ಲಿಮರ ಸಂಪೂರ್ಣ ಐಕ್ಯ ಮನೋಭಾವವು ಮೂಡಿದ್ದು ಹಾಗೂ ಆಂದೋಲನದ ಸಮಯದಲ್ಲಿ ಕೋಮುವಾರು ಭಾವನೆಯು ಪೂರ್ಣವಾಗಿ ಇಲ್ಲದಿದ್ದದ್ದು, ೧೮೫೭ರ ಘಟನೆಗಳಿಂದ ಉದ್ಭವಿಸುವ ಮಹತ್ವಪೂರ್ಣವಾದ ಮತ್ತೊಂದು ಅಂಶವೆಂದು ಹೇಳಬಹುದು ಕದನವಾರಂಭವಾದ ಕೂಡಲೆ ಬಂಡಾಯಗಾರರು ತಾವು ಸಾಮಾನ್ಯ ಉದ್ದೇಶವನ್ನು ಸಾಧಿಸಬೇಕಾಗಿದೆ ಎಂಬ ಭಾವನೆಯನ್ನು ತಾಳಿದರು ಆಂದೋಲನದ ಸಂದಿಗ್ಧ ಪರಿಸ್ಥಿತಿಗಳಲ್ಲಿ ಕೂಡ ಭಾರತೀಯರಲ್ಲಿ ಸಾಮಾನ್ಯ ಲಕ್ಷ್ಯದ ಸಾಧನೆಯ ಭಾವನೆಯಿದ್ದಿತು ಆಂದೋಲನದ ಈ ಮಹತ್ವಪೂರ್ಣ ಅಂಶವನ್ನು ನೀರೀಕ್ಷಿಸುವಂತಿಲ್ಲ

ನಾವು ಇಂದು ಜನರಲ್ಲಿ ಅಸಂತೋಷಕ್ಕೆ ಕಾರಣವಾದ ಆ ಘಟನೆಗಳ ಕೆಲವನ್ನು ನಿರಪೇಕ್ಷ ಭಾವದಿಂದ ಅವಲೋಕಿಸಿದ್ದಾದರೆ ಅವುಗಳೆಟ್ಟಿನೂ ಅಕ್ಷೇಪಣೀಯವೂ ಅಲ್ಲವೆಂದು ತೋರಬಹುದು ೧೦೦ ವರ್ಷಗಳ ತರುವಾಯ ಆ ವಿಷಯಗಳನ್ನು ನಾವು ಯಾವ ರೀತಿಯಲ್ಲಿ ವಿಚಾರ ಮಾಡತ್ತೇವೆ ಎಂಬುದು ಪ್ರಶ್ನೆಯು ಆ ಸಮಯದಲ್ಲಿ ಜನರ ಮನಸ್ಸಿನ ನೇಲೆ ಆ ಘಟನೆಗಳು ಎತ್ತ ಬದಲಾವಣೆಗಳು ಪ್ರತಿಕೂಲದ ಪ್ರತಿಕ್ರಿಯೆ ಯನ್ನುಂಟು ಮಾಡಿದವೆಂಬ ವಿಷಯವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುವುದು ತವ್ಯಧಿನ ಸಂಗತ್ತು ಧರ್ಮಸ್ವಾತಂತ್ರ್ಯಗಳನ್ನು ಅಪಹರಿಸ ವುದೇ ಅಲ್ಲದೆ ತಮ್ಮನ್ನು ನಿರ್ಮೂಲವಡಿಸ ವುದೂ ಕಂಪೆನಿಯವರ ಉದ್ದೇಶಗಳೆಂದು ಆ ಸಂಯದಲ್ಲಿ ಭಾರತೀಯರು ಭಾವಿಸಿದ್ದರು ಸ್ವಾತಂತ್ರ್ಯ ಪ್ರಾಪ್ತಿ ಹಾಗೂ ಸ್ವಾತಂತ್ರ್ಯ ರಕ್ಷಣೆಗೆ ಅಮಿತ ತ್ಯಾಗ ಅತ್ಯಗತ್ಯವೆಂಬುದನ್ನು ನಾವು ಅರಿಯಬೇಕು

ಈ ದಿನದ ದಿನ ನಾವು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವವನ್ನು ಆಚರಿಸುವ ಸಮಯದಲ್ಲಿ ನಮ ನನ್ನ ದೇಶಬಾಂಧವರಿಗೆಲ್ಲಂಗೂ ಶುಭ ಶುಭಗಳನ್ನು ಕಳುಹಿಸುತ್ತಿದ್ದೇನೆ ಹಾಗೂ ನೂರು ವರ್ಷಗಳ ಹಿಂದೆ ರಾಷ್ಟ್ರವ್ಯಾಪಕ ಪ್ರಾಂತ್ಯವಾಡಿ ಕಷ್ಟಪಟ್ಟು ಸಂಪಾದಿಸಿದ ಸ್ವಾತಂತ್ರ್ಯವನ್ನು ನಾವು ನಿರಂತರವಾಗಿ ಅನುಭವಿಸುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ

ಶಾಸ್ತ್ರಿ ಎಂಡ್ ಕಂಪೆನಿ

ಅನ್ಸಾರಿ ರಸ್ತೆ : ಬಂದರ : ಮಂಗಳೂರು

ದಕ್ಷಿಣ ಕನ್ನಡ ಜಿಲ್ಲೆಯ ಉಪವಿತರಣೆಗಾರರು:
ಮೆಟಲ್ ಇಂಡಸ್ಟ್ರೀಸ್ ಲಿಮಿಟೆಡ್, ಶೋರನೂರು.
ಔರಾ ಇಂಜಿನಿಯರಿಂಗ್ ವರ್ಕ್ಸ್ ಲಿ., ಮದ್ರಾಸು.
ಮೈಸೂರು ಪ್ರಭಾತ ಪಪ್ಪ್ಯೂಮರಿ ವರ್ಕ್ಸ್, ಬೆಂಗಳೂರು.

ಏಜಂಟರು:
ಸುಂದರಮ್ ಇಂಡಸ್ಟ್ರೀಸ್ ಪ್ರೈವೇಟ್ ಲಿ., ಮದ್ರಾಸು.
(ಟಾಯರ್ ರಿಟ್ರೇಡ್ಸ್)

ಬುಕ್ಕಿಂಗ್ ಏಜಂಟರು:
ಸದರ್ನ್ ರೋಡ್‌ವೇಸ್ ಪ್ರೈವೇಟ್ ಲಿ., ಮಧುರೆ.
(ಟಿ ವಿ. ಎಸ್. ಲೋರಿ ಸರ್ವಿಸು)

ಮೈಸೂರು ರಾಜ್ಯದ ಏಕತ್ರ ಹಂಚಿಕೆಗಾರರು:
ಯುನಿವರ್ಸಲ್ ಫೇನ್ಸ್ ಮತ್ತು ಇತರ ತಯಾರಿಕೆಗಳು

ಕೆ. ಬಿ. ಶಾಸ್ತ್ರಿ
ಮೆನೇಜಿಂಗ್ ಪಾರ್ಟನರ್.

S. R. P. LTD.—
ಲೋರಿ ಸರ್ವಿಸ್
"ಮಧುರೆ"

ಮಂಗಳೂರಿನಿಂದ—ಸಕಲೇಶಪುರ—ಹಾಸನ ಮಾರ್ಗವಾಗಿ—ಬೆಂಗಳೂರು, ಮದ್ರಾಸು—ವಿಜಯವಾಡ, ಗುಂಟೂರು, ಅನಂತಪುರ— ಕರ್ನೂಲು, ಮಧುರೆ, ಈರೋಡು—ಕೊಚ್ಚಿನ್—ಎರ್ನಾಕುಲಂ, ಕೊಯಮುತ್ತೂರು ವಗೈರೆ ದಕ್ಷಿಣ ಹಿಂದೂಸ್ಥಾನದ 200ಕ್ಕೂ ಮಿಕ್ಕಿದ ಪ್ರಾಮುಖ್ಯ ಪಟ್ಟಣಗಳಿಗೆ ಸರಕು ಸಾಗಾಟ ಮತ್ತು ತರಿಸುವ ವ್ಯವಸ್ಥೆಯನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಅತ್ಯಂತ ದೊಡ್ಡದಾದ ಸಂಸ್ಥೆಗಳಲ್ಲೊಂದು. ತ್ವರಿತ, ಸುಗಮ ಹಾಗೂ ಭದ್ರ ವ್ಯವಸ್ಥೆ. ಕರಾವಳಿಯಿಂದ ಕರಾವಳಿಗೆ, ರಾಜ್ಯದಿಂದ ರಾಜ್ಯಕ್ಕೆ ಸರಕು ಸಾಗಾಟದ ಏರ್ಪಾಡು.

ಹೆಚ್ಚಿನ ವಿವರಗಳಿಗೆ:
T. V. S. ಲೋರಿ ಬುಕ್ಕಿಂಗ್ ಆಫೀಸ್,
(S. R. P. Ltd.)
ಅನ್ಸಾರಿ ರೋಡ್, ಬಂದರ—ಮಂಗಳೂರು-1.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್ಸ್,
ರಥಬೀದಿ, ಮಂಗಳೂರು.

ಇವರ 1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಿಗಳು

ಧಾತುಪುಷ್ಟಿ ಲೇಹ (ಸುವರ್ಣ, ಸಾಲಾಮಿಶ್ರಿ ಕಲ್ಕದ ಮಿಶ್ರಿತ)
ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಮೂತ್ರದೊಡನೆ ಧಾತು ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಒಳಜ್ವರ, ಅಶಕ್ತತೆ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ ವೀರ್ಯವೃದ್ಧಿಗೊಳಿಸುವುದು ಡಬ್ಬಿ 1ರ ರೂ. 3.50.

ಚ್ಯವನಪ್ರಾಶ ಲೇಹ (ಬಂಗಾರ ಮಿಶ್ರಿತ)
ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಮ್ಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಧಾತುತ್ವ ಉಂಟುಮಾಡುವುದು. ಪೌಂಡು 1ರ ರೂ. 5.50, ½ ಪೌಂಡು ರೂ. 3.00.

ಗರ್ಭ ರಕ್ಷಕ
ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಲಿ ದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3 50.

ಕಸ್ತೂರಿಮಿಶ್ರಣ ದಶಮೂಲ
ಬಾಣಂತಿಯರ ಪ್ರಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನರುದ್ಧೀಪ್ತಿಸಿ, ರಕ್ತ ಧಾತುವು ಅಭಿವೃದ್ಧಿಯಾಗಿ ಶಿಶುವಿಗೂ ಬೇಕಾದಷ್ಟು ಹಾಲು ಸಿಕ್ಕುವಂತೆ ಮಾಡುವುದು 24 ಔನ್ಸ್ ರೂ 5.00, 12 ಔನ್ಸ್ ರೂ 2 75 8ಔನ್ಸ್ ರೂ. 1 75

ಅಶೋಕಾರಿಷ್ಟ ಮತ್ತು ಮಾತ್ರೆ
ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿ ಸೆರಗು, ಸಂತಾನಹೀನತೆ, ರಕ್ತಹೀನತೆ, ಋತುಶೂಲೆ ಮುಂತಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗಣಪಡಿಸುವುದು ಬಾಟ್ಲಿ 1ರ ರೂ. 3.50

ಬಾಲಗ್ರಹ ಗುಟಿಕೆ
ಮಕ್ಕಳ ಚೇಷ್ಟೆ, ಕಫ, ಕೆವ್ವ, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಸಸ್ಮಾರ, ಹೊಲೆಗಾಲು ತಿನ್ನದಿರುವಿಕೆ ಇವುಗಳನ್ನೆಲ್ಲಾ ತೀಪ್ರದಲ್ಲಿಯೇ ಗುಣಪಡಿಸುತ್ತದೆ. ಬಾಟ್ಲಿ 1ರ ರೂ. 0 87

ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ಸಿಗುತ್ತವೆ. ಕೆಟಲಾಗಿಗೆ ಬರೆಯಿರಿ.

ಔಷಧಿಗಳು ಸಿಗುವ ಸ್ಥಳ:- 1) ನ್ಯೂ ಬಾಕುಲ್ಲಾ ಸ್ಟೋರ್ಸ್, ಕೆಮಿಸ್ಟ್ಸ್, 648-A, ಡಿಲ್ಕುಲ್ ರೋಡ್, ಬಾಕುಲ್ಲಾ, ಬೊಂಬ್ಯಾ-27. 2) ಜನರಲ್ ಸ್ಟೋರ್ಸ್, G. I. P. ಮಾಟುಂಗಾ, ಬೊಂಬ್ಯಾ-19. 3) ಯೆ. ಗಣಪತಿ ನ್ಯಾಕ್, ಮರ್ಚಂಟ್, ಕಾಪ್ರಗೋಡು. 4) ಸೈ ಸ್ಟೋರ್ಸ್, ಪುತ್ತೂರು 5) ಶ್ರೀಧರ ಭಟ್ ಬ್ರದರ್ಸ್, ಪುತ್ತೂರು. 6) ಕಾಂತಾವರ ವಾಸುದೇವ ಕಾಮತ್, ಬೆಳ್ತಂಗಡಿ. 7) ಕೆ. ವೆಂಕಟೇಶ ನ್ಯಾಕ್, ಗುರುವಾಯನ ಕೆರೆ. 8) ಹೊಮ್ಯೊಪೆಥಿಕ್ ಡಿಸ್ಪೆನ್ಸರಿ, ಪಂಜ. 9) ಬಿ ಗೋಪಾಲ ಶೆಣೈ, ಬೆಳ್ಳಾರೆ. 10) ಎಚ್. ಗಣಪಯ್ಯ ನರಸಿಂಹ ಕಾಮತ್ ಮರ್ಚೆಂಟ್, ಕುಂದಾಪುರ 11) ಜಯಾ ಫಾರ್ಮೆಸಿ, ಕೆಮಿಸ್ಟ್ಸ್, ಕುಂದಾಪುರ. 12) ಯುನಿವರ್ಸಲ್ ಡ್ರಗ್ ಹೌಸ್ (ಕರ್ನಾಟಕ) ಲಿಮಿಟೆಡ್, ಕೆಮಿಸ್ಟ್ಸ್, ಕುಂದಾಪುರ. 13) ಪ್ರಭು ಫಾರ್ಮೆಸಿ, ಕೆಮಿಸ್ಟ್ಸ್, ಕಾರ್ಕಳ

ವಿಶ್ವವಿದ್ಯಾನಿಲಯಗಳಲ್ಲಿ

ಶಿಕ್ಷಣ ಮತ್ತು ಆಡಳಿತ: ಸಮಸ್ಯಾನಿರೂಪಣ

ಅಧ್ಯಾಪನ ವೃತ್ತಿಯು ಉದಾತ್ತವಾಗಿರುವಂತೆಯೇ ವಿಶ್ವವಿದ್ಯಾಲಯಗಳ ಪಾತ್ರವೂ ಗೌರವಾಸ್ಪದವಾದುದು. ಯೋಗ್ಯತಾವಂತ ವಿದ್ಯಾರ್ಥಿಗಳಿಗೆ ಅವರವರು ಅಧಿರುಚಿಯಿಂದ ಅರಿಸಿಕೊಂಡ ವಿಷಯದಲ್ಲಿ ಸಾಂದಿತ್ಯವನ್ನು ಒದಗಿಸಿಕೊಡುವುದು ಇಂಥ ವಿಶ್ವವಿದ್ಯಾನಿಲಯಗಳ ಕರ್ತವ್ಯ. ಆದರೆ, ಇಂದು ಇವುಗಳು ಆರ್ಥಿಕ ಪರಾವಲಂಬನೆಯಿಂದಾಗಿ, ಅಸ್ವತಂತ್ರವಾಗಿ, ತಮ್ಮ ಪವಿತ್ರ ಧ್ಯೇಯ ಸಾಧನೆಯಲ್ಲಿ ವಿಮುಖವಾಗಿ ಬೇಡವೆಂದರೂ ರಾಜಕಾರಣಕ್ಕೆ ಅಂಟಿಕೊಂಡಿರಬೇಕಾದ ಪರಿಸ್ಥಿತಿ ಬಂದಿದೆ. ರಾಜಕಾರಣಿಗೆ ಶಿಕ್ಷಣವು ಅತ್ಯಗತ್ಯವಾದರೂ ರಾಜಕಾರಣದಿಂದ ವಿಶ್ವವಿದ್ಯಾಲಯಗಳು ಬಹುದೂರವಿದ್ದು, ಸ್ವಯಂಧೋರಣೆಗಳನ್ನು ರೂಪಿಸಿಕೊಳ್ಳಬಲ್ಲ ಸ್ವತಂತ್ರ ಸಂಸ್ಥೆಗಳಾಗಬೇಕು. ಹೊರತು, ಸರಕಾರದ ಕೈವಾಡಿಯಾಗಿ ಉಳಿದರೆ, ದೇಶಕ್ಕೇ ಗಂಡಾಂತರ.

ಬರೆದವರು: ಶ್ರೀ. ಕು. ಶಿ. ಹರಿದಾಸ ಭಟ್ಟ ಎಂ. ಎ,

ನಮ್ಮ ಕಾಲೇಜುಗಳಿಗೆ ಯಾವ ವಿಶ್ವವಿದ್ಯಾನಿಲಯವು ಶರಣೆಂಬ ಗೊಂದಲದ ದೆಸೆಯಿಂದ ನಮ್ಮ ಜಿಲ್ಲೆಯ ಸಾರ್ವಜನಿಕರ ಆಸಕ್ತಿ ಈ ವಿಷಯದಲ್ಲಿ ಕೆರಳಿರುವುದರಿಂದ ಇದುವೆ ಒಳ್ಳೆಯ ಸಂದರ್ಭವೆಂದು ನಾಲ್ಕು ಮಾತು ಬರೆಯಲು ಉದ್ದೇಶಿಸಿರುತ್ತೇನೆ.

ಉದ್ಯಮ ಮತ್ತು ಸಂಸ್ಕೃತಿಯಲ್ಲಿ ಜನರ ಜೀವನದ ಮಟ್ಟವನ್ನು ಎತ್ತರಿಸುವ ಪ್ರಯತ್ನದಲ್ಲಿ ಯಾವ ದೇಶಗಳು ಜಯಶೀಲವಾಗಿರುವುವೋ ಅಂಥ ದೇಶಗಳಲ್ಲಿ ವಿಶ್ವವಿದ್ಯಾನಿಲಯಗಳ ಸ್ಥಾನವು ಅತಿ ಗೌರವಾನ್ವಿತವೆಂದೂ, ಮಹತ್ತ್ವಪೂರ್ಣವೆಂದೂ ಪರಿಗಣಿಸಲ್ಪಡುತ್ತದೆ. ಶಿಕ್ಷಣ, ಸಂಶೋಧನೆ, ಸಾಹಿತ್ಯ ವಿಮರ್ಶೆ, ಸಂಸ್ಕೃತಿಯ ಪುನರುಜ್ಜೀವನ ವಿಜ್ಞಾನದ ಸೃಗತಿ–ಎಲ್ಲಕ್ಕೂ ವಿಶ್ವವಿದ್ಯಾನಿಲಯವು ಕೃಷ್ಟ ಕೇಂದ್ರಸ್ಥಾನ, ದೇಶಾಭಾಧರಿಗೆ ಗರಡಿಮನೆ.

ಭಾರತದಲ್ಲಿಯೂ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗಿ ಇಂದಿಗೆ ನೂರು ವರ್ಷಗಳೆ ಸಂದಿವೆ. ಮದ್ರಾಸು ಮುಂಬಯಿ ಕಲ್ಕತ್ತ ವಿಶ್ವವಿದ್ಯಾನಿಲಯಗಳಿಗೆ ಶತಮಾನೋತ್ಸವವೂ ಮೊನ್ನೆ ನಡೆಯಿತು. ಇಂದು ರಾಷ್ಟ್ರದ ಕಡೆವಾಣವನ್ನು ಹಿಡಿದಿರುವ , ಸಚಿವೋತ್ತಮರೆಲ್ಲರೂ ಔದ್ಯಮಿಕ ರಂಗದ ಮುಂದಾಳುಗಳೂ, ಕಾರ್ಮಿಕ ಕ್ಷೇತ್ರದ ಹಿರಿನಾಯಕರೂ, ರಾಜಕೀಯ ಪಕ್ಷ ಪ್ರತಿ ಪಕ್ಷಗಳ ಗೆಂಡುಗಲಿಗಳೂ ವಿಶ್ವವಿದ್ಯಾನಿಲಯದ ಗರಡಿಯಲ್ಲಿ ಕೆಲ ವರ್ಷಗಳಾದರೂ ಅಂಗಸಾಧನೆ ಬುದ್ಧಿಪರೀಕ್ಷೆ ನಡೆಸಿಕೊಂಡವರಾಗಿದ್ದಾರೆ.

ವಿಶ್ವವಿದ್ಯಾನಿಲಯದ ತರಗತಿಗೆ ಇಂದು ಸೇರುವ ಬಹು ಸಂಖ್ಯೆಯ ತರುಣರಿಗೆ ಈ ನಾಯಕರ ಸ್ಥಾನಮಾನಗಳುಸ್ಫೇರಣೆಯಾಗಿರುವುದನ್ನು ಕೆಲವೊಮ್ಮೆ ಈ ನಾಯಕರೇ ಅರಿಯರು ಹಿಂದಿನ ಕಾಲದಲ್ಲಿ ಪದವೀಧರರ ಸಂಖ್ಯೆ ನೂರಾರಿದ್ದರೆ ಈಗ ಲಕ್ಷಾಂತರವಾಗಿದೆ. ಶಿಕ್ಷಣ ಕ್ಷೇತ್ರ ವಿಸ್ತಾರವಾಗಿದೆ, ವಿದ್ಯಾರ್ಥಿಗಳ ಸಂಖ್ಯೆ ವರ್ಧಿಸಿದೆ, ಅಂತೆಯೆ ವಿಶ್ವವಿದ್ಯಾಲಯಗಳಿಗೆ ನುಗ್ಗುವ ವಿದ್ಯಾರ್ಥಿಗಳ ಪ್ರಮಾಣವೂ ಅತಿಶಯವಾಗಿದೆ. ಆದಕ್ಕೆ ಸರಿಯಾಗಿ ವಿಶ್ವವಿದ್ಯಾನಿಲಯಗಳಲ್ಲಿ ಉಪಾಧ್ಯಾಯರ ಸಂಖ್ಯೆಯೂ ಹೆಚ್ಚಾಗಿದೆ. ಪದವೀಧರರನ್ನು ತಯಾರಿಸುವುದು ಒಟ್ಟಿನಲ್ಲಿ ಸಣ್ಣ ಪ್ರಮಾಣದ ಉದ್ಯೋಗವೇ ಆಗಿದೆ ಎನ್ನಲೂ ಬಹುದು.

ಈ ಶಿಕ್ಷಣವನ್ನು ಹೊಂದಿದವರಿಗೆ ಸಾಕಷ್ಟು ಅವಕಾಶವಿಲ್ಲ ಎಂಬುದರಿಂದಲೂ, ಸ್ವಾತಂತ್ರ್ಯ ದೊರೆತ ಈಚೆಗೆ ಉತ್ತರ ಭಾರತದಲ್ಲಿ ವಿದ್ಯಾರ್ಥಿಗಳ ಹೋರಾಟ ಮೇಲಿಂದಮೇಲೆ ನಡೆದುದರಿಂದಲೂ, ರಾಷ್ಟ್ರದ ಯೋಜನೆ-ಔದ್ಯೋಗೀಕರಣ ಮುಂತಾದ ಸಾಧನೆಗೆ ವಿಶ್ವವಿದ್ಯಾನಿಲಯವು ಸಹಾಯ ಒದಗಿಸಬೇಕಾಗಿ ಬಂದಿರುವುದರಿಂದಲೂ ಪ್ರಜಾತಂತ್ರವನ್ನೊಪ್ಪಿಕೊಂಡ ದೇಶದಲ್ಲಿ ಎಲ್ಲರಿಗೂ ಸಮಾನಾವಕಾಶ ದೊರಕಿಸುವ ಪ್ರಯತ್ನದಲ್ಲಿ ವಿಶ್ವವಿದ್ಯಾನಿಲಯದ ಬಾಗಿಲುಗಳನ್ನು ಅಗಲವಾಗಿ ತೆರೆಯಬೇಕಾಗಿರುವುದರಿಂದಲೂ, ಶಿಕ್ಷಣ ಕ್ಷೇತ್ರದ ಮೂಲಭೂತ ಕ್ರಾಂತಿಗೆ ವಿಶ್ವವಿದ್ಯಾಲಯವು ಆದರ್ಶವನ್ನು ಹಾಕಿಕೊಡಬೇಕೆಂಬುದರಿಂದಲೂ ವಿಶ್ವವಿದ್ಯಾನಿಲಯದ ಕಡೆಗೆ ಎಲ್ಲರೂ ದೃಷ್ಟಿ ಹರಿಯಿಸುವಂತಾಗಿದೆ.

ವಿಶ್ವವಿದ್ಯಾನಿಲಯಗಳು- ಈ ಇವುಗಳಲ್ಲಿ ಕಚ್ಚೆನವು-ವಿದ್ಯಾರ್ಥಿ-ಶಿಕ್ಷಕರ ಸ್ನೇಹ ಸಂಪರ್ಕದ, ಪರಸ್ಪರ ವಿಚಾರವಿನಿಮಯದ ಪುಣ್ಯಸ್ಥಳವಾಗದೆ, ಕೇವಲ ಪರೀಕ್ಷೆ ನಡೆಯಿಸುವ ಒಂದು ಕಚೇರಿಯಾಗಿರುವುದು ಶೋಚನೀಯ. ಹೈಸ್ಕೂಲಿನಲ್ಲಿ ದೇಶಭಾಷೆಯ ಮಾಧ್ಯಮದಲ್ಲಿ ತರಗತಿಗಾಗಿ ವಿಶ್ವವಿದ್ಯಾನಿಲಯದ ಇಂಗ್ಲಿಷ್ ಸೋಪಾನದ ಜಾರುಗಲ್ಲಿನಲ್ಲಿ ಸಾಧನೆಮಾಡಬೇಕಾದದುಷ್ಟ ಪ್ರಸಂಗವು ವಿದ್ಯಾರ್ಥಿಗಳಿಗೆ ಗೊದಗಿರುವುದು ಶೋಚನೀಯ. ಮಾರಪಟ್ಟಿಯ ಬಿಗುಮಾನದಿಂದಲೂ, ಪ್ರವಚನಗಳ ಬಾಹುಲ್ಯದಿಂದಲೂ, ಸಿಗುವ ವರಮಾನದ ಅಲ್ಪತನದಿಂದಲೂ, ಪರೀಕ್ಷೆಯೆಂಬ ಭವಸಾಗರದಿಂದ ವಿದ್ಯಾರ್ಥಿಗಳನ್ನೆ ಆದಷ್ಟು ಹೆಚ್ಚು ಸಂಖ್ಯೆಯಲ್ಲಿ ವಾರು ಮಾಡುವ ಉತ್ತಾವಳಿಯಿಂದಲೂ ಕಾರ್ಯತತ್ಪರವಾಗಿರುವ ವಿಶ್ವವಿದ್ಯಾನಿಲಯದ ಅಧ್ಯಾಪಕವರ್ಗವು ಗುರುಕುಲದ, ವಿಶ್ವವಿದ್ಯಾನಿಲಯದ ಆದರ್ಶವನ್ನು—ಎಲ್ಲ ಶಿಕ್ಷಣದ ಗುರಿಯನ್ನು—ಮರೆತೇ ಬದುಕಬೇಕಾದ್ದು ವಿಷಾದಕರ.

ಜನವಿಗಳಿಂದ ಪ್ರಯೋಜನವಿಲ್ಲದವಿ ಹೊತ್ತವರು ನಿಷ್ಪ್ರಯೋಜಕರು, ಶಿಕ್ಷಣಾಂಗದಲ್ಲಿ ಸದಾಕಾಲ ಬದಲಾವಣೆಗಳಾದರೆನೆ ಪ್ರಗತಿ, ಅದೆಕೆ ಬದಲಾವಣೆಯೆಂಬುದೇ ಪ್ರಗತಿ ಎಂಬ ಅಸಂಪ್ರಾಯವನ್ನು ಪ್ರಚಾರಿಸುವ ನಾಯಕವರ್ಗವೇ ಇನ್ನೊಂದು. ಗಳಿಗೆಯಲ್ಲಿ ನಮ್ಮ ಪ್ರಜಾಪ್ರಭುತ್ವದಲ್ಲಿ ಉಳುವವನೂ ಆಳುವವನಾಗಬೇಕಾದುದರಿಂದ ಅವನಿಗೆ ಅತ್ಯುನ್ನತ ಶಿಕ್ಷಣದ ಅವಕಾಶ ದೊರಕಿಸಬೇಕು ಎಂದೂ, ಹಿಂದುಳಿದವರಿಗೆ ವಿಶೇಷ ಸೌಲಭ್ಯ ಒದಗಿಸಿ ಅವರನ್ನು ಮುಂದಿನ ಸಾಲಿನಲ್ಲಿ ನಿಲ್ಲಿಸಬೇಕು ಎಂದೂ ಹೇಳಿ ಹೊಂದಿಕೆ ಇಲ್ಲದ ಮಾತುಗಳನ್ನು ನುಡಿಯುವುದರಿಂದ ಜನಸಾಮಾನ್ಯರು ವಿವೇಚನೆ ಇಲ್ಲದೆ ವರ್ತಿಸಿದರೆ ಆಶ್ಚರ್ಯವಿಲ್ಲ.

ಭಾರತದ ಪ್ರಾದೇಶಿಕ ಭಾಷೆಗಳನ್ನು ಇಂದಿನ ವೈಜ್ಞಾನಿಕ ಪ್ರಪಂಚದ ಹಿನ್ನೆಲೆಯಲ್ಲಿಟ್ಟು ತುಲನೆಮಾಡದೆ ಕೂಡಲೇ ಅವನ್ನು ವಿಶ್ವವಿದ್ಯಾನಿಲಯದಲ್ಲಿ ಮಾಧ್ಯಮವಾಗಿ ಬಳಸಬೇಕನ್ನುವ ವರ ತಂಡ ಒಂದು, ಹಿಂದಿಯನ್ನು ದೇಶದಾದ್ಯಂತ ಪಸರಿಸಬೇಕೆಂಬ ಹಿಂದೀವಾಲರ ಒಣ ಒಂದು; ಇಂಗ್ಲಿಷಿಲ್ಲದೆ ನಾವು ಉಳಿಯಲಾರೆವೆನ್ನುವ ವನಿಸ್ಸಹಾಯಕತಾಪಂಗಡ ಒಂದು ಈ ನಡುವೆ ಯಾವುದನ್ನು ನಿಶ್ಚಿತವಾಗಿ ನಿರ್ಣಯಿಸದೆ ತ್ರಿಶಂಕನಿನಂತೆ ನೇತಾಡುತ್ತಿರುವ ಎಲ್ಲರನ್ನೂ ಮೆಚ್ಚಿಸುವ ಹುಚ್ಚುತನವೇ ತ್ರೈಕ್ಷಣಿಕಧೋರಣೆಯಾಗಿರುವ ಭಾರತಸರ್ಕಾರದ ವಿದ್ಯಾಂಗ ಖಾತೆಯ ಇರವು ಮತ್ತೊಂದು-ಹೀಗೆ ಹುತ್ತದೊಳಗಿನ ಹುತ್ತ ಹತ್ತು ಹಲವು!

ವಿಶ್ವವಿದ್ಯಾನಿಲಯದ ಶಿಕ್ಷಣ ಕಾಲೇಜಿನ ದ್ವಾರದಲ್ಲಿ ನಿಲ್ಲುವವರೆಲ್ಲರಿಗೂ ಕೊಡತಕ್ಕದ್ದೇ ಅಥವಾ ಕೆಲವರಿಗೆ ಮಾತ್ರವೋ? ಯೋಗ್ಯತಾವಂತರಿಗೆ ಮಾತ್ರವೋ ಅಥವಾ ಯೋಗ್ಯತೆ ಇಲ್ಲದವರಿಗೇ ಮೀಸಲಾಗಿಡತಕ್ಕದ್ದೋ? ಎಂಬ ವಿಷಯದ ತೀರ್ಮಾನವು ರಾಜಕೀಯ ರಂಗಕ್ಕೆ ಸಂಬಂಧಪಟ್ಟದ್ದಾಗಿರುವುದರಿಂದ ಈ ವಿಷಯದಲ್ಲಿ ಯಾರೂ ಏನೂ ಮಾಡಲಾರದ ಅಸಹಾಯ ಪರಿಸ್ಥಿತಿ ಇದೆ. ಒಳ್ಳೆಯ ವೇತನವಿರುವ ಸ್ಥಳಗಳು ಕಡಮೆಯಾಗಿ, ಪದವೀಧರರು ಅಧಿಕರಾಗಿರುವುದರಿಂದಲೂ ಎಲ್ಲರೂ ಆಸೆಯಿಂದ ಮೇಲೊಡ್ಡುವ ವೈದ್ಯ ಮತ್ತು ಇಂಜಿನಿಯರಿಂಗ್ ಮುಂತಾದ ತಾಂತ್ರಿಕ ಸೌಲಭ್ಯಗಳು ಕಡಮೆಯಾಗಿ ಇವಕ್ಕೆ ಹಾತೊರೆಯುವ ಸ್ಪರ್ಧಾಳುಗಳ ಸಂಖ್ಯೆ ಹೆಚ್ಚಾಗಿರುವುದರಿಂದಲೂ ಸ್ಥಳ ಸಿಗದೆ ಹೊರಗೆಯೆ ಉಳಿಯುವ ಹಾಗೂ ತಮಗೆ ಮನಸ್ಸೊಪ್ಪದ ಕೆಲಸ ಮಾಡುವ ತರುಣರ ಸಂಖ್ಯೆ ಅಪಾಯಕಾರಿ ಪ್ರಮಾಣದಲ್ಲಿ ಬೆಳೆಯತ್ತಿರುವುದು-ದೇಶದ ಹಿತದೃಷ್ಟಿಯಿಂದ ಹಾನಿಕರವೆಂಬ ಅಂಶವನ್ನು ಯಾರೂ ಮರೆಯಬಾರದು.

ಸ್ವತಂತ್ರ ಆಡಳಿತವುಳ್ಳ ವಿಶ್ವವಿದ್ಯಾನಿಲಯಗಳು ಕೂಡ ಕೇಂದ್ರ ಸರಕಾರ ನೇಮಿಸಿದ ಗ್ರಾಂಟ್ಸ್ ಆಯೋಗದ ವಶದಲ್ಲಿರುವ ದುಡ್ಡಿನ ಚೀಲಕ್ಕೆ ಕಾದುನಿಲ್ಲಬೇಕಾದ ಅರ್ಥಿಕ ವಿಷಮತೆ ಒಳಗಿರುವುದು ಶಿಕ್ಷಣಸ್ವಾತಂತ್ರ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಈಗಲೂ ನೂರಕ್ಕೆ ಅಱವತ್ತು ವಿದ್ಯಾರ್ಥಿಗಳ ಉಚ್ಚಶಿಕ್ಷಣವು ಅವರ ಸಂಬಳದಿಂದಲೇ ನಡೆಯಿಸಬೇಕಾಗಿದೆಯಂತೆ. ಈ ಬಾಣ-ನ್ನು ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ರಾಷ್ಟ್ರವು ತನ್ನ ಮೇಲೆ ಹೊರಿಸಿಕೊಳ್ಳಲುಸಾಧ್ಯವೆ? ಎಂಬುದೂ ಒಂದು ಸಮಸ್ಯೆ. ಮೈಸೂರು ವಿಶ್ವವಿದ್ಯಾನಿಲಯದಂಥ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಸರಕಾರದ ಹತೋಟಿಯ ವಿಶ್ವವಿದ್ಯಾನಿಲಯದ ಶಿಕ್ಷಣಕ್ಕೆ ಬಂದಣಿಕೆಯಂತೆ ಅಂಟಿಕೊಂಡಿರುವುದು ಪ್ರಗತಿಹೀನತೆಯ ಒಂದು ಸಂಕೇತ.

ಕಷ್ಟಿಲ ಪೂರ್ವಾಪರ ವಿರುದ್ಧ, ಅನ್ಯೋನ್ಯ ಅಂಗತ ಧೋರಣೆಗಳಿಂದ ಗೊಂದಲಕ್ಕೀಡಾಗಿರುವ ವಿಶ್ವವಿದ್ಯಾನಿಲಯದ ಶಿಕ್ಷಣವು ಬೇಗನೇ ಒಂದು ಸ್ಥಿಮಿತಕ್ಕೆ ಬಾರದಿದ್ದರೆ ಔದ್ಯಮಿಕ ರಂಗದ ಪ್ರಗತಿಯು ಮಂದವಾಗಿ, ರಾಷ್ಟ್ರದ ಚಾರಿತ್ರ್ಯವು ಹ್ರಾಸವಾಗಿ, ರಾಷ್ಟ್ರದ ಪುನರುಜ್ಜೀವನವು ಕನಸಿನ ಗಂಟಾಗಿ ಎಂದೆಂದೂ ಉಳಿಯಬಹುದೆಂಬ ಸಂದೇಹ ಇಲ್ಲ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ ಪಿ ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕ್ಸಿಸ್ಟರು: ಹಾ ಕಂಪೆನಿ, ಮಂಗಳೂರು—1.

ವೈಜಯಂತಿ

(೧೪ನೇ ಪುಟದಿಂದ)

ಈ ವೈಜಯಂತಿ ಜನತೆಯ ಮಹಾಸಮುದ್ರದಂತೆ ಕಾಣ-ತ್ತಿದೆಯಲ್ಲಾ! ಅರುಣೋದಯದಿಂದಲೇ ಈ ಲಕ್ಷಾಂತರ ಮಂದಿ ಇಲ್ಲಿ ಬಂದು ಕೂತಂತಿದೆ. ಏನಿದು ಗಂಭೀರಮೌನ! ಎಂತಹ ಅದ್ಭುತವಾದ ಶಿಸ್ತು!! ನವಭಾರತದ ನಿರ್ಮಾಣವಾಗಿರುವುದಕ್ಕೆ ಇದೇ ಸಾಕ್ಷಿ! ಈ ನೋಟ ದೇವತೆಗಳನ್ನು ಅಚ್ಚರಿ ಪಡಿಸೀತು.

ಕುಸು.—ಅದೊ ಧ್ವಜಾರೋಹಣ! ಅದೋ ಧ್ವಜವಂದನ!

ನಮೋ! ನಮೋ! ಧರ್ಮಚಕ್ರ!
ತಿರು ತಿರುಗುವ ಕಾಲಚಕ್ರ!
ನಿನ್ನಡಿಯಲಿ ನಿಂತಿರುವೆವು.
ಕನಸನೆನಿತೊ ಕಣಿಯುತಿಹೆವು!
ದಣಿಯುತಿಹೆವು ತಣಿಯುತಿಹೆವು,
ನಿನ್ನಡಿಗಿದೊ ಮಣಿಯುತಿಹೆವು'
ನೀನು ನಿಂತ ನೆಲವೆ ಸಮತೆ—
ಸ್ವಾತಂತ್ರ್ಯದ ಮಮತೆ!

೧೫—೮—೧೯೫೭ರಂದು ಧಾರವಾಡ ಬಾನುಲಿಯು ಬಿತ್ತರಿಸಿದ ವಿಶೇಷ ಕಾರ್ಯಕ್ರಮ.

ಅಜ್ಞಾನವೇ ಪರಮ ಸುಖ

(೧೩ನೇ ಪುಟದಿಂದ)

ಬೇಕಾಗಿಲ್ಲ ಇನ್ಯಾರಿನ್ನ ರಾಷ್ಟ್ರೀಕರಣಕ್ಕೊಳಗಾಗಿ ಸತ್ತ ಮೇಲೆ ಆ ಹಣ ಇನ್ನು ಯಾವುದಾದರೂ ಕುಂಟು ನೆಪದಿಂದ ಟಿ. ಟಿ. ಕೆ. ಯವರ ಕೈಗೆ ಹೋದೀತೇ ಎಂದೂ ಅಂಜಬೇಕಾಗಿಲ್ಲ.

ನಾನು ಸಾಯದಿದ್ದ ಮೇಲೆ ಯಾತರ ಭೀತಿಯೂ ಇಲ್ಲ. ಯಮನೇ? ನಿಮ್ಮ ಮೇಲೆ ಅವನಿಗೆ ಜ್ಯೂರಿಸ್ ಡಿಕ್ಶನ್ ಬರುವುದಿಲ್ಲ. ವೈರಿಗಳ ಭೀತಿ ನಿಮಗಿಲ್ಲ. ಬೇಕಾದ ರೀತಿಯಿಂದ ಹಣಗಳಿಸಿ, ಉಂಡು, ತಿಂದು, ಸುಖಪಡಬಹುದು—ಇಷ್ಟವಿದ್ದರೆ ಇಸ್ಟವಿಲ್ಲ; ಆಗಲೂ-ಸಾವಿಲ್ಲದ ನನ್ನನ್ನು ಯಾರೂ ಏನೂ ಮಾಡಲಾರರು. ಯಾವ ಕೆಲಸವನ್ನೂ ನೀವು ಇಂದು ಮಾಡಬೇಕಾಗಿ ಇಲ್ಲ. ನಾಳೆ ಮಾಡಬೇಕೆಂತಲೂ ಇಲ್ಲ. ಮೃತ್ಯುಭಯವಿಲ್ಲದ ಮೇಲೆ, ಅವನ್ನೆಲ್ಲ ಎಂದೂ ಮಾಡಬಹುದು. ಯಾವ ಪಂಚವಾರ್ಷಿಕ ಯೋಜನೆಯ ಭಾದೆಯೂ ಆ ನಾನುವಿಗೆ ತಟ್ಟಲಾರದು. ಅವಸರವಿಲ್ಲ, ಕಾರ್ಯಭಾರದ ಓಡಾಟವಿಲ್ಲ ಆದುದರಿಂದ ಚಿಂತೆಯಿಲ್ಲ. 'ನಾಳಿನ' ಚಿಂತೆಯೆಂಬುದು ಆ 'ನಾನು'ವಿಗೆ ಇಲ್ಲವೇ ಇಲ್ಲ. ಸಾಯದಿದ್ದವನಿಗೆ, ಪಾಪ ಪುಣ್ಯದ ಭಯವೂ ಇಲ್ಲ, ಪುನರ್ಜನ್ಮದ ಭೀತಿಯಿಲ್ಲ; ಅಂದರೆ ಅಂಥವನನ್ನು ಕೇಳುವವನಿಲ್ಲ. ಅನೇಕ ದೊಡ್ಡ ಮನುಷ್ಯರ ವರ್ತನೆಗಳಿಗೆ ಈ ಪ್ರಧಾನ ಭಾವನೆಯೇ ಕಾರಣ. ತಾವು ಸಾಯುವುದಿಲ್ಲವೆಂದು ಖಂಡಿತವಾಗಿಯೂ ಅವರಿಗೆ ಗೊತ್ತು. ಅಂಥವರು ದುಡ್ಡು ಮಾಡುತ್ತಲೇ ಇರುತ್ತಾರೆ, ಕೊಳ್ಳೆ ಹೊಡೆಯುತ್ತಲೇ ಇರುತ್ತಾರೆ. ಲಾಭಗಳಿಸುತ್ತಲೇ ಇರುತ್ತಾರೆ - ಏನು ಆಡ್ಡ ಬಂದರೂ, ಅವರು ಚಿಂತಿಸುವುದಿಲ್ಲ.

ಜ್ಞಾನದಿಂದ ದುಃಖ,
ಅಜ್ಞಾನದಿಂದ ಸುಖ,
ಸುಳ್ಳು ಜ್ಞಾನದಿಂದ ಅಥವಾ ಸುಜ್ಞಾನದಿಂದ ಪರಮ ಸುಖ—ಎಂದ ಹಾಗಾಯಿತು.

ಈಗ ನಮ್ಮ ಶಬ್ದಕೋಶದ ನಾಲ್ಕನೆಯ ನಾಣ್ಯವನ್ನು ತೆಗೆಯುವ. ಇದು ವಿಜ್ಞಾನ'. ಇದೇನೆಂಬ ವಿಷಯದಲ್ಲಿ ಮಾತನಾಡಿದ ಪಂಡಿತರು (ಮೌನ ಪಂಡಿತರಲ್ಲ.) ಏಕಾಭಿಪ್ರಾಯ ಕಟ್ಟಿಲ್ಲ. 'ವಿ' ಎಂದರೆ ವಿಹೀನ ಎಂದೂ ಅರ್ಥಮಾಡಿದವರುಂಟು. 'ವಿಶೇಷ' ಎಂದೂ ಅರ್ಥ ಮಾಡಿದವರುಂಟು. ವಿಶೇಷ ಜ್ಞಾನಪಡೆದರೆ, ವಿಶೇಷ ದುಃಖವೆಂದು—ಎಂಥ ಹೆಡ್ಡನಿಗೂ ತಿಳಿದೀತು. ಹಾಗಿದ್ದಲ್ಲಿ ನಿಜವಾಗಿ ಇರಬೇಕಾದ ಅರ್ಥವು 'ವಿಹೀನ' ಜ್ಞಾನವೆಂದು. ಅದಕ್ಕೇನೇ ಇನ್ನೊಂದು ಅರ್ಥ ಏನಿತ್ತಾರವನ್ನು ತಿಳಿಸಿದ್ದಾರೆ. 'ಜ್ಞಾನ ವಿಹೀನ ಪಶುಭಿ: ಸಮಾನ' (ಪ್ರಥಮದಲ್ಲಿದ್ದ ಶ್ಲೋಕ ಇದೇನೇ; ಮುಂದಿನಮುದ್ರಣಗಳಲ್ಲಿ-ಯಾರೋ ಅಪ್ರಬುದ್ಧರು ಮೂಲದಲ್ಲಿದ್ದ 'ಜ್ಞಾನ' ಎಂಬ ಶಬ್ದದ ಬದಲಿಗೆ 'ವಿದ್ಯಾ' ಎಂಬ ಅದೇ ಅರ್ಥ ಸೂಚಕವಾದ ಪದವನ್ನು ಬಳಸಿದರು) ಜ್ಞಾನವಿಲ್ಲದಿದ್ದರೆ ಪಶುವಿಗೆ ಸಮನಂತೆ ಈ ಪಶು ಯಾವುದು? ನಮ್ಮ ಹಿಂದೂಸ್ಥಾನದವರು ಅದನ್ನು 'ಪಶು' ಎಂದು ತೀರ್ಮಾನಿಸಿದ್ದಾರೆ. ಕನ್ನಡ ದೇಶದವರು ಹಾಲು ಕೊಡದ "ಹಸು" ಎಂದು ತಿಳಿದಿದ್ದಾರೆ. (ಸಾಕುವುದು ಬೇಡವಾದುದರಿಂದ)ಅದರೆ ಪ್ರಪಂಚಕ್ಕೆಲ್ಲಾ ಒಪ್ಪುವಂತೆ ನಾವು "ಪಶು"ವಿನ ಅರ್ಥವನ್ನು ಮಾಡಬೇಡವೇ? ದನ ಸಾಕದಂಥ ಚೀನಿಯರು, ದನವಿಲ್ಲದಂಥ ಅರಬ್ಬಿಯರೂ, ದನ ಬದುಕಲಾರದ ತುಂಡ್ರಾ ಮೊದಲಾದ ಅನೇಕ ಪ್ರದೇಶದ ಜನಗಳು-ಏನು ಅರ್ಥ ಮಾಡಬೇಕು? ಅವರ ಜ್ಞಾನವಿಹೀನರು ಯಾವುದ್ಕೆ ಸಮಾನರು? ಪಶು ಎಂದರೆ ಒಂಟಿಯೇ ಹಿಮಸಾರಂಗವೇ? ಕುದುರೆಯೇ-ಎಂಬ ವಿವಿಧಾರ್ಥಕ್ಕೆ ಎಡೆಯಾಗುತ್ತದೆ. 'ಪಶು' ಹಾಗೇನೂ ಅಲ್ಲ. ಪಶುವೆಂದರೆ ಪಶುವೇ. ಪ ಮತ್ತು ಶು. ಶುದ್ಧಪಂಡಿತ ಎಂದು ಅದರ ಅರ್ಥ. ಹಿಂದೆ ವಿವರಿಸಿದಂತೆ ಪಂಡಿತನ ಲಕ್ಷಣವನ್ನು ನೆನೆದಲ್ಲಿ-ಜ್ಞಾನ ವಿಹೀನನೇ ಶು. ಪ- ಅಥವಾ ಪ-ಶ.:

ಈ ಎಲ್ಲ ವ್ಯಾಖ್ಯೆಗಳಿಂದ ಅಜ್ಞಾನದಿಂದ ಬರುವ ಸುಖವೂ ಜ್ಞಾನದಿಂದ ಬರುವ ದುಃಖವೂ ಎಷ್ಟೆಂಬುದನ್ನು ಮನಗಂಡ ಮೇಲೆ, ನಾವೆಲ್ಲರೂ ಸಾಧ್ಯವಾದಷ್ಟು ಮಟ್ಟಿಗೆ ಅಂಥಸುಖಸಾಧನಕ್ಕಾಗಿ ಪ್ರಯತ್ನಿಸಬೇಕೆಂದಾಯಿತು. ಯಾವುದರಲ್ಲೂ ನೂರಕ್ಕೆ ನೂರರಷ್ಟು ಸಿದ್ಧಿಯಾಗುವುದು ಸಾಧ್ಯವಿಲ್ಲ. ಹಾಗಾಗಿ ಪರಮ ಅಜ್ಞಾನಿಯಾಗುವುದೂ ಕಷ್ಟ. ಆ ದಾರಿಯ ಕಡೆಗೆ ಹೋಗುವ ಪ್ರಯತ್ನಬೇಕು. ಜ್ಞಾನವನ್ನು ತೀರ ದೂರಕ್ಕಿರಿಸುವುದು ತುಂಬ ಕಷ್ಟವಾದ ಕೆಲಸ. ಅದೂ ಒಂದು ತಪಸ್ಸೇ. ಆಗುದರಿಂದ ಆ ದಾರಿಯಲ್ಲಿ ನಾವು ಸಾಗುವ ಪ್ರಯತ್ನ ಮಾಡಬೇಕು.

ಸಾಗುವ ಪ್ರಯತ್ನ ಅಂದರೇನು? ನಮ್ಮ ಪೂರ್ವಜರು 'ಸಂಸಾರದಲ್ಲಿ ಇದ್ದು ಇಲ್ಲದಂತಿರಬೇಕು. ನಿರ್ಲಿಪ್ತರಾಗಿರಬೇಕು'. ಎಂದಿದ್ದಾರಲ್ಲ. ಅಂಥ ಪ್ರಯತ್ನವನ್ನು ನಾವು ಮಾಡಬೇಕು. ಈ ವಿಚಾರದಲ್ಲಿ ನನ್ನ ಅನಲ್ಪಮತಿಗೆ ತೋರಿದ ಸಲಹೆಗಳನ್ನು ಇಲ್ಲಿ ಕೊಡಬಯಸುತ್ತೇನೆ ನಮಗೆ-ರೇಡಿಯೋದಂಥ ಸಲಕರಣೆಗಳನ್ನು ಕೇಳುವುದು ಅನಿವಾರ್ಯವಾದರೆ, ನಾವೇ ಅದನ್ನು ಕೊಂಡು, ಕೇಳಬೇಕಾಗಿಲ್ಲ. ಅಚೀಚೆ ಮನೆಯವರು ಅದನ್ನು ಇಟ್ಟೇ ಇರುತ್ತಾರೆ ನಿಮ್ಮ ಊರಿನ ಯಾವತ್ತು ಕೆಲವರ ಪ್ರಯೋಜನಾರ್ಥವಾಗಿ, ಅನೇಕ ಹೋಟೆಲುಗಳೂ ಅದನ್ನು ಇರಿಸುತ್ತವೆ. ಹೀಗೆ ಅವುಗಳಿಂದ ನಿಮಗೆ ಬಾನುಲಿ ಕೇಳಿಸಿದರೂ ಆ ಉಪಕರಣಕ್ಕಾಗಿ ನೀವು ನಂಡ ತೆರದೆ ಕೇಳಬಹುದು. ನಿಜಕ್ಕೂ ನಿಮ್ಮನ್ನೇ ಉದ್ದೇಶಿಸಿದ ಬಾನುಲಿ ಅದಾದರೆ, ಪೂರ್ವಕಾಲದಂತೆ ಇನ್ನು ಪಕ್ಷ, ನಿಮಗೆ ಮಾತ್ರ ಕೇಳಿಸುವ ಅಶರೀರವಾಣಿ' ಆಗ ಬಾರದೆಂದಿಲ್ಲ.

ವಾರ್ತಾ ಪತ್ರಿಕೆಗಳು, ಜ್ಞಾನದುಃಖಕ್ಕೆ ಕಾರಣವಾದ ಗ್ರಂಥಗಳು—ಇವುಗಳ ವಿಚಾರದಲ್ಲಿ ನಿಮ್ಮ ನಡತೆ ಹೇಗಿರಬೇಕೆಂದು ಪರ್ಯಾಲೋಚಿಸುವ. ಈ ವಿಷಯದಲ್ಲಿ ಮೋಕ್ಷಕಾಮಿಗಳಾದ ಭಾರತೀಯರು, ಅಮೇರಿಕದವರಿಗಿಂತ ನೂರು ಪಾಲು ಮಿಗಿಲು. ಅಂದರೆ ತಲಾ ಒಂದರಂತಿಲ್ಲಿ ವ್ಯಯವಾಗುತ್ತಿರುವ ೭೦೦ ರಾತಂ ಕಾಗದವನ್ನು ಸಮನಾಗಿ ೭ ರಾಷ್ಟ್ರಗಳಿಂದ ಭಾಗಿಸಿದರೆಷ್ಟು. ಅಷ್ಟೆಲ್ಲ ಬುದ್ಧಿವಂತರಾಗಿದ್ದೆವು ನಮ್ಮ ಪೂರ್ವಜರು ಅಗ್ನೇಯಾಸ್ತ್ರ, ಎಟಮ್ ಬಾಂಬ್, ಸುಪ್ತಕ ವಿಮಾನ, ಜೆಟ್ ಬಾಂಬರ್ ಇಂಥದನ್ನೆಲ್ಲ ಮಾಡಿದವರು, ಮುದ್ರಣ ಸಾಧನ ಮಾಡಲಾರರು ಎನ್ನುತ್ತೀರಾ? ಅದು ಶುದ್ಧ ತಪ್ಪು ಅಭಿಪ್ರಾಯ. "ವಾಣೀ ಪುಸ್ತಕ ಪಾಣೀ" ಎಂಬುದು ಅವರಿಗೆ ತಿಳಿದ ಮಾತ. ಹಿಂದಿನ ಕಾಲದವರು ಯಾವುದೇ ಗ್ರಂಥದ ಒಂದು ಪ್ರತಿಯನ್ನು ಮಾತ್ರ ಇರಿಸಿಕೊಳ್ಳುತ್ತಿದ್ದರು. ಅದು ಕೈಯ್ಯಲ್ಲೇ ಇರುತ್ತಿತ್ತು ಸರಸ್ವತಿಯೂ ಕೂಡ ಅದನ್ನು ಬಿಡಿಸಿ ಓದುತ್ತಿರಲಿಲ್ಲ. ಅನಿವಾರ್ಯದಿಂದ ಪುಸ್ತಕವೆಂಬ ಪದಾರ್ಥವು ನಮ್ಮಲ್ಲಿ ಇರಲೇಬೇಕಾದರೆ, ಅದನ್ನು ಶಾರದೆಯ ಮುಂದಕ್ಕಿರಿಸಿ, ಪೂಜೆ ಮಾಡಬೇಕೇ ಹೊರತು, ಓದಬಾರದು ಎಂಬುದೇ ಹಿಂದಿನವರ ಅಭಿಪ್ರಾಯವಾಗಿತ್ತು.

ಈಗ ಕಾಲಗತಿಯು ಬದಲಿಸಿದೆ. ಪುಸ್ತಕ ಅಚ್ಚು ಹಾಕುತ್ತಿದ್ದಾರೆ. ಪತ್ರಿಕೆ ಅಚ್ಚು ಹಾಕುತ್ತಿದ್ದಾರೆ. ಕಡ್ಡಾಯ ಶಿಕ್ಷಣ ಬಳಕೆಗೆ ತರುತ್ತಿದ್ದಾರೆ ಆಗ ಧರ್ಮಿಷ್ಟನಾದವನ ಕರ್ತವ್ಯವೇನು? ಬದಲಿಸಿದ ಸಾಮಾಜಿಕ ಪರಿಸ್ಥಿತಿಯಿಂದ ಅವನೂ ಓದಲೇ ಬೇಕಾಗುತ್ತದೆ ಆಗ ಓದಿಯೂ ಪ್ರಯೋಜನವಿಲ್ಲದಂತೆ ವರ್ತಿಸುವುದು ನಮ್ಮ ಕರ್ತವ್ಯ ಅದಷ್ಟು ಮಟ್ಟಿಗೆ—'ಕಾಳಿದಾಸ ಕೇಳಿದ್ದಾನೆ' 'ವೇದಗಳು ಹೀಗೆ ಹೇಳಿವೆ; ಇಲ್ಲ ಹೇಳಿರಬೇಕು.' 'ಅರಿಸ್ಟಾಟಲನ ಅಭಿಪ್ರಾಯ ಇದ.' 'ಪಂಡಿತ ನೆಹರೂಜೀ ಹೀಗೆ ಅಂದಿದ್ದಾರೆ, ಅನ್ನುವುದೇ ಹೊರತು ತನಗೆ ಅವರೆಲ್ಲರ ಪುಸ್ತಕ ಜ್ಞಾನದಿಂದ ಬಾಧೆ ತಟ್ಟದೆ ಎಂದು ಇಷ್ಟಿಷ್ಟು ತೋರಿಸಿಕೊಳ್ಳಕೂಡದು. ನಮ್ಮ ಹಳೆಗಾಲದ ಪಂಡಿತರು, ವಿದ್ವಾಂಸರು - ಇದಕ್ಕೆ ಸರಿಯಾದ ಮಾರ್ಗದರ್ಶನ ಮಾಡಿದ್ದಾರೆ ಯಾವುದೋ ಒಂದು ಪರಿಸ್ಥಿತಿಯಲ್ಲಿ ಅವರು ಓದಲೇಬೇಕಾಯಿತು. ಉದಾಹರಣೆಗಾಗಿ—ಅರಸನ ಆಸ್ಥಾನದಲ್ಲಿ ವಿದ್ವಾಂಸರು ಬೇಕಾಯಿತು ಅಲಂಕಾರಕ್ಕಾಗಿ (ಅಲಂಕಾರ ಎಂಬ ಮಾತನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಿ—ಪ್ರಯೋಜನಕ್ಕಿಲ್ಲ) ಅರಸು ಸಂಬಳ ಕೊಡುತ್ತಾನೆ ಆಗ ಜನರು ಏನು ಮಾಡಬೇಕು? ಓದಿ ವಿದ್ವಾಂಸರಾದರು; ನಿಜ; ಆ ಓದಿನಿಂದ ಅಷ್ಟೇ ನಿರ್ಲಿಪ್ತರೂ ಆದರು; ಅದೂ ಅಷ್ಟೇ ನಿಜ. ಅವರು ಏನೇನು ಹೇಳಿದರೋ ಆ ಮಾತುಗಳನ್ನು ಪರಿಶೀಲಿಸಿದಲ್ಲಿ "ಇಂಥವರು ಹೀಗೆ ಹೇಳಿದರು". "ಇಂಥವರು ಹೀಗೆ ಹೇಳಿದರು" "ಅಮರಕೋಶ ಹೀಗೆ ಹೇಳಿತು," "ಮಮ್ಮಟ ಹೀಗೆ ಹೇಳಿದ" "ವಾಗ್ಭಟ ಹೀಗೆ ಹೇಳಿದ" 'ಶಂಕರರು ಹೀಗೆಂದರು"; 'ಮಾಧ್ವರು ಹಾಗೆಂದರು"—ಹೀಗೆ ಯಾವುದಕ್ಕೂ ಸ್ವಂತ ಹೊಣೆಯನ್ನು ನಿರ್ವಹಿಸದೆಯೇ, ಸುರಾತನರನ್ನು ಉದ್ಧರಿಸಿ, ಉದ್ಧರಿಸಿ, ತಾವು ಜ್ಞಾನದ ಬಾಧೆಯಿಂದ ಪಾರಾದರು.

ಇನತ್ತೋ! ಎಷ್ಟೆಲ್ಲ ಪತ್ರಿಕೆಗಳು! ಎಷ್ಟೆಲ್ಲ ಗ್ರಂಥಗಳು! ಎಂಥೆಲ್ಲ ಹೀಡೆಗಳು! ಇದರಿಂದ ಮಾನವ ತಪ್ಪಿಸಿಕೊಳ್ಳುವುದು—ತುಂಬ ಕಷ್ಟ ಆದರೂ ಪ್ರಯತ್ನಿಸಬೇಡವೇ? ಹೇಗೆ ಪ್ರಯತ್ನಿಸುವುದು? ಪುಸ್ತಕವನ್ನೋದಬೇಕಾಗಿ ಬಂದಲ್ಲಿ ದಯವಿಟ್ಟು 'ಕೊಳ್ಳ' ಬೇಡಿ (ಹೆಚ್ಚಿನ ವಾಸವಿದೆ) ಪತ್ರಿಕೆಯನ್ನೋದಬೇಕಾಗಿ ಬಂದಲ್ಲಿ ಖಂಡಿತಕ್ಕೂ "ಬೆಲೆಕೊಡ" ಬೇಡಿ ಇತರರು "ಸಾಹಿತ್ಯಕ್ಕೆ ಪ್ರೋತ್ಸಾಹ ಕೊಡಿ, ವಿದ್ಯೆಗೆ ಪ್ರೋತ್ಸಾಹ ಕೊಡಿ ಪುಸ್ತಕ ಕೊಳ್ಳದಿದ್ದರೆ ಆಗುತ್ತದೆಯೇ?" ಎಂದು ವಾದಿಸಬಹುದು. ಅಂಥ ಹುರುಳಿಲ್ಲದ ವಾದಕ್ಕೆ ಕಿವಿಗೊಡಬೇಡಿ. ಈ ಪ್ರಪಂಚದಲ್ಲಿ ವರ್ಷವೊಂದಕ್ಕೆ ಎಷ್ಟು ಮಿಲಿಯ, ಏಕಕೋಟಿ ಪುಸ್ತಕಗಳು ಅಚ್ಚಾಗುತಿಲ್ಲಿ! ಶತಕೋಟಿ ಪತ್ರಿಕೆಗಳುಅಚ್ಚಾಗುತ್ತಲಿಲ್ಲ! ನೀವು ಅವನ್ನು ಕೊಂಡರೆ ಎಷ್ಟು ಕೊಂಡೀರಾ? ನಿರ್ವಾಣವಾಗುವುದರಲ್ಲಿ ೦೦೦೦೦೦೧ ರಷ್ಟನ್ನೂ ಕೊಳ್ಳುವುದು ಅಸಾಧ್ಯ ಹೀಗಿರುತ್ತ 'ಕೊಂಡೆ"ವೆಂಬ ಅಪವಾದಕ್ಕೆ ಸಿಲುಕುವಂತೆ ಯಾಕೆ ಕೊಳ್ಳಬೇಕು?

ಈ ಲೇಖನವನ್ನು ಈ ಪತ್ರಿಕೆಯಲ್ಲಿ ಬೆಲೆಕೊಡದೆಯೆ ಓದುತ್ತೀರಿ ಎಂಬ-ವಿಶ್ವಾಸದಿಂದ ಬರೆಯುದಾಗಿದೆ.

---

100 ವರ್ಷಗಳ ಖ್ಯಾತಿಗಳಿಸಿದ ಸಂ|| ಅಂಬಳಿ ರಾಮಸ್ವಾಮಿ ಅಯ್ಯರ್‌ರವರ ರಕ್ಷಣ್ಯದಲ್ಲಿರುವ

ಟ್ರೇಡ್ ಮಾರ್ಕ್

ಸಂ|| A. R. ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ, ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ; ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಗೆ, ಪೌರುಷಕಳೆಯನ್ನು ನಾಮಾವಶೇಷಗೊಳಿಸುತ್ತವೆ

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ. ರೋಗಿಯ ವಯಸ್ಸು ಮತ್ತು ಬಾಯಿಯೆಲ್ಲ ವಿವರಗಳನ್ನು ಬರೆದು 4 ಆಣೆ (25 N P) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ಯಾಟಲಾಗ್ ರವಾನೆ

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ. (ನ ಯು)
628, "ಸಂತಾನ ಸಿಂದೂರ ಸದನ", ಚಾಮರಾಜ ರೋಡ್ ಮೈಸೂರು-1 (S.I.)

ಹೊಸಕೆರೆ
ಚಿದಂಬರಯ್ಯನವರ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೊಕೆಟ್ ಎಡಿಷನ್.
ಸುಮಾರು 450 ಪುಟಗಳು
ಕ್ರಯ 0—12—0
ನವಯುಗ ಪ್ರೆಸ್, ಉಡುಪಿ.

ಕಲ್ಯಾಣ ರೇಖೆ

(೧೨ನೇ ಪುಟದಿಂದ)

ಡುತಿಹುದು! ರಾಮ ರಮಣೀಯಗುಣ ಧಾಮ! ಹೆಗಗರುಳನಲಿ ಹೊತ ಹುಮ್ಮಸ ವಿದನು ಕೊಳರಿ ಕೊಯ್ದು!

ರಾಮ— (ನಿರುಪಾಯವಾಗಿ ಸೀತೆಯನ್ನು ಎತ್ತಿಹಿಡಿದು ಸುತ್ತಲೂ ನೋಡಿ)

ಗರನಟಕೆಹೋದ ಲಕ್ಷ್ಮಣನಿನ್ನು ಬರಲಿಲ್ಲ ಈ ಕಾಡು ಕಾದ ಹೆಬ್ಬಾವಿನಂತೆ! ಏಕೊ ಕಣ್ಣದುರುತಿದೆ. ಬಂದಿಹುದೆ ದುಷ್ಕಾಲ! ಮನಸಿಹುದು ತೂಗು ಮುಯ್ಯಾಲೆಯಂತೆ!

ಈ ಸೀತೆಯನುರೋಧ ಮನಸನಾಕಡೆ ತಬ್ಬ ತಳ್ಳುತಿದೆ. ಹೆಬ್ಬಯಕೆ ಹೊಸೆದ ಹೆಣ್ಣು. ಮಾನಸಂ ಕುದುರುತಿದೆ. ಏನೊ ವಿಶ್ವಸದಲಿ ವಿಶ್ವವೇ ಕೊನೆಮಿಟುಕು ತಿರುವ ಕಣ್ಣು!

(ಸೀತೆಯೊಡನೆ)

ನಲ್ಲೆ ನನ್ನೊಡನಾಡಿ! ಹುಲ್ಲೆಗಂಗಳ ಚೆಲುವೆ ಹುಲ್ಲೆಹಸುಳೆಯ ಮೇಲೆ ಮನ ಸಾಯಿತೆ? ನಿಲ್ಲು. ನಿನ್ನಾಸೆಯನು ಸಲಿಸದಿ ನಿನ್ನೆಂತು (ತಡೆದು) ಆದರೂ ಮನ ಸುಡುಗುತಿಹುದು ಸೀತ!

(ಅನಲ ಸುತ್ತಲೂ ವೃತ್ತಾಕಾರವಾಗಿ ಗೆರೆಯೆಳೆದು)

ರಾಮ—

ಇಲ್ಲೆ ನಿಂತಿರು ಮುಂತೆ ಬಾರದಿರು- ನನ್ನಾಣೆ! ಕಾಮುಕರ ಕೋಟಲೆಯ ಬಲು ಬೆದರಿಕೆ. ಈ ಗೆರೆಯ ದಾಂಟದಿರು. ಮಾನವತಿಯರ ಕಾವ ಇದು ರಾಮ ನಾಮ ಕಲ್ಯಾಣ ರೇಖೆ! ಈ ಕೋಟೆಯಲಿ ದುಷ್ಟ ಶಕ್ತಿ ಕಾಲಿಡದಿಹುದು ಇದು ಪುಣ್ಯ ಶೀಲತೆಯ ಸತ್ವದರಿಕೆ. ಈ ಗೆರೆಯ ದಾಂಟದಿರು ಆರ್ತ ಜನರನು ಕಾವ ಇದು ರಾಮನ ನಾಮ ಕಲ್ಯಾಣ ರೇಖೆ! ಬೆದರದಿರು ಚಪಲಾಕ್ಷಿ ಅರೆಗಳಿಗೆಗಳಲಿ ಜಿಂಕೆ ಬರಲಿಹುದು ನಿನ್ನ ಕೊಂದಾಟಕಾಗಿ. ಬೆದರದಿರು, ಲಕ್ಷ್ಮಣಂ ಬರುವನಕ ದಾಂಟದಿರು ಈ ನಿಯಂತ್ರಿತ ಗಂಡು ಗೆರೆಯ ನೀಗಿ!

(ರಾಮನು ಧನುರ್ಬಾಣಗಳನ್ನು ಹಿಡಿದು ಆ ಕಡೆ ಮೆಲ್ಲ ಮೆಲ್ಲನೆ ಹೋಗುವನು. ಸೀತೆ ಆ ಕಡೆ ಮುಖ ಮಾಡಿ ನಿಂತು ನೋಡುತ್ತಿರುವಳು.)

ರಾವಣ— (ಪ್ರವೇಶಿಸಿ ಅಡಂದರವಾಗಿ)

ನಾನಸುರ ಚಕ್ರವರ್ತಿ
ಧರ್ಮಕರ್ಮ ಸನುವರ್ತಿ-
ವಿರಾಡ್ವಿಶ್ವಪದಾರೂಢ
ಪ್ರಜಾಧರ್ಮದಧಿಕಾರಿ
ವಿಯಚ್ಚರರ ದುರಾಚಾರ
ವಲಂಗೊಳಿಪ ಜಯಭೇರಿ!
ಕುಬೇರಾತ್ತ ಮಹಾವಿತ್ತ
ಸಮಾಕರ್ಷ ಹಿತಕಾರಿ
ಮದೋನ್ಮತ್ತ ಧರಾಧೀಶ
ದುರುದ್ದೇಶ ಸಂಹಾರಿ!
ಅನಾಸಕ್ತ ತಪೋಧರ್ಮ
ನಿರುದ್ಯೋಗದಪಹಾರಿ
ಅಳಂತುಷ್ಟ ಸುರಾಂಗನೆಯ
ರಸಾಧಾರಕೋದ್ಧಾರಿ!
ನಾನಸುರ ಚಕ್ರವರ್ತಿ
ಧರ್ಮ ಕರ್ಮದನುವರ್ತಿ!

(ಮುಂದೆ ಸೀತೆಯನ್ನು ನೋಡಿ ಗಾರವದಿಂದ ತುಸು ಹಿಂದೆ ಸರಿದು)

ಈಕೆ ವೈದೇಹಿ ಭೂಜಾತೆ ನಿಂದಿಹಳಿಲ್ಲಿ ನಿಶ್ಚಲಂ ನೀರವಂ ನಿರ್ವಿಕಾರಂ! ಏನೊ ತತ್ತರಗೊಂಡ ಮನಸಿನೆಡೆಕೆಯ ನೇಣಿ ನನುಸಾರದಭಿಸಾರ್ತಚಿತ್ತಕೋರಂ

ಈ ಪುಣ್ಯ ಭೂಮಿಕೆಯ ಪಾವನೋದಯವಾಗಿ ಕಾಡೆ ಸದ್ವೈಭವದ ಸದನವಾಯ್ತು! ಈ ಧರ್ಮ ವೇದಿಕೆಯನುಳಿದ ಯೋಧ್ಯಾನಗರಿ ಬರಗೊಂಡ ಮಾನವ್ಯ ದಡವಿಯಾಯ್ತು!

ಏನು ಧರ್ಮವಿದೆಂದು ನೋಡಬಯಸಿಹ ನಿಂದು
ಜಗನ್ಮಾತೆಯನ್ನರಿವ ಬಾಲಬುದ್ಧಿ
ಈ ಚರಾಚರ ಜಗದ ಧರ್ಮಕಾರಣಗಳನು
ಕಾವನನ್ನಧಿಕಾರ ಹೃದಯ ಶುದ್ಧಿ!

(ನಸುನಗುತ್ತ)

ಏನು ಹುಚ್ಚಾಟವಿದು! ಹರಿಣ ಶಾಬಕೆ ಸೋಕು ನಾನಿಟ್ಟ ಕಾಮನೆಗೆ ಸರಿಯಾದಳು. ಏನು ನಾಧನನಯದ ಮಾತನೆಲ್ಲೆಯವಿರಿ ತಾನೆ ನಾಟಕಕೆ ನಾಂದಿಯು ಬರೆದಳು!

ನೋಡುವೆನು ಮೈಮರಸಿ ರಾಮಚಂದಿರನನು ಸಿರಿಯಲೂ ನಿಯಮದೀ ಗಂಡುಗೆರೆಯ.ಮಿರಿದರೆ ಸದ್ಧರ್ಮ ಪಾಲನೆಯು ಕತಕಾಗಿ ನೋಯುಬೇಕೇಬೀಕು- ಇರದುಪಾಯ!

(ಅಡಗಿನಿಂತಿರುವನು)

ಸೀತೆ—

ಏನಿದು ಜಿಂಕೆಯ ಬೆನ್ನಟ್ಟಿದನ
ನ್ನಿನಿಯನ ಸದ್ದೇ ಕುಳಿದಿಲ್ಲ
ಏನಿದು ಯೋಜನದಾಕಡೆ ಸಾರಿದ
ಸರಿಯಂತಿದೆ ನೆಲೆ ತಿಳಿದಿಲ್ಲ!

(ಚಿಂತಿಯಿಂದ)

ಏತಕೆ ನುಡಿದೆನು? ಆ ಮರಿ ಜಿಂಕೆಯ
ಘಾತಕವಾಯಿತು ಹದಿಬಯೆಗೆ
ಈ ತನಕವು ಮರು ಮಾತಾಡದ ನ
ನ್ನಾಜ್ಞಾರದ ನಿರ್ಮಲ ನದಿಗೆ!

(ಕಿವಿಗೊಟ್ಟು ಕೇಳುತ್ತ)

ದೂರಕೆ ದೂರಕೆ ಸಾರಿದ ಶಬ್ದಿಯ
ಮಾರ್ದನಿ-ಕೋಪದ ಹುಂಕಾರ
ಸೇರಿತೆ ಕೃ ಕಸವರದಾ ಕಾಮನೆ?—
ಏನಿದು ಧನುಸಿನ ರಂಕಾರ!

(ದೂರದಿಂದ — ಹಾ ಸೀತೆ—ಹಾ ಲಕ್ಷ್ಮಣ ಎಂಬ ಆರ್ತನಾದ ಕೇಳುವುದು. ಸೀತೆ ಬೆಚ್ಚಿ ಬೆದ್ದು)

ಘಾತವಾಯ್ತು ಮಹಾ ಘಾತ!
ಏನಿದಕಟ ದುಃಖ ಸಹಿತ
ದಾರ್ತನಾದ' ವಾಯುಸೀತ
ಆಕ್ರಂದನ! ಹಾ ಸೀತೇ
ಹಾ ಲಕ್ಷ್ಮಣ ಎನುವ ದುಃಖ
ದಾರೋದನ- ಏನಿದಕಟ!
ಕೊರಲ ಹಿಡಿದ ಬಲು ಸಂಕಟ
ಎದೆಯ ಕೊರೆವ ವಜ್ರಕೀಟ
ನಡುಗುತಿಹುದು ಭೂಮಿತಟ
ನಿಲಲಾರೆನೊ ನಾನಕಟ!

(ಉದ್ವೇಗದಿಂದ ಅಲಬುಡಿಸೋಡಿ)

ಅಯ್ಯೊ ಗಂಡು ಗಡಿಯ ರೇಖೆ
ನಾನಿಲ್ಲಿಯೆ ನಿಲಬೇಕೆ?
ಕಾಲತಡೆದು ಹಿಡಿದಿರುವುದು
ಜೀವವಾಚೆ ತೂರಿರುವುದು—
ಏಂಗೈಯಲಿ ಮಹಾನರ್ಥ
ಬಾಳಿರುವುದು ಬರೇ ವ್ಯರ್ಥ
ಅದೇ ಜಿಂಕೆ ಸುಡುವ ಬೆಂಕೆ
ಯಾಯಿತೆನ್ನ ದುರ್ಭಾಗ್ಯಕೆ!
ಹಾ ರಾಮಾ! ನಿಲ್ಲಲಾರೆ
ಅಯ್ಯೊ! ಗೆರೆಯ ದಾಟಲಾರೆ—

(ಹುಚ್ಚಳಂತೆ)

ಸಾಕು ಸಾಕು ಬಾಳ್ಕೆಗಿರದ
ಸೀತೆನಿಯಮದನುರೋಧ
ಕ್ಷಮಿಸೆನ್ನ ಮಹಾಪರಾಧ
ಗತಿಯೊಂದೇ ನಿನ್ನ ಪಾದ! —

(ಕಲ್ಯಾಣ ರೇಖೆಗೆ ನಮಸ್ಕರಿಸಿ ಉದ್ವೇಗದಿಂದ ದಾಟಿ ಮುಂದೆ ಬರುವಳು.)

ರಾವಣ— (ಮುಂದೆ ಬಂದು ಅಡ್ಡ ನಿಂತು ತಡೆದು)

ತಡೆನಿಲ್ಲು ಧರ್ಮಸಂಕಟವಿದನು ತಿಳಿದಿಹೆನು ತಿಳಿದಿಹೆನು ನಿನ್ನ ಮನಸಿನ ಕುದಿಯನು ನಡೆವದಾರಿಯದೊಂದೆ ದೇವರಿಗು ಜೀವರಿಗು ಆದಕಾಗಿ ಧರ್ಮರಕ್ಷಕನು ನಾನು!

ಹತ್ತು ದೆಸೆಯಾಳಕೆಗೆ ಹೊತ್ತತಲೆಯಿಪ್ಪತ್ತು ಕೈ ಕ್ರಿಯಾ ಶೀಲತೆಯ ರಾಜ್ಯ ಭಾರ! ಚಿತ್ತೈಸು ಜಾನಕಿ! ಜಗಜ್ಜೀವಿಗಳನು ಬಿಗಿದಿಟ್ಟ ನಿಷ್ಠುರದ ಧರ್ಮಾಧಿಕಾರಂ!

(ಸೀತೆ ಹೆದರಿ ಹಿಂದೆ ಹಿಂದೆ ಸರಿಯುವಳು)

ರಾವಣ—

ಬೆದರದಿರು ರಾವಣಂ ಪಾಪಚಿದ್ದಾ ಗಣಂ ಬಂದಿರುವನಿದೊ ಧರ್ಮ ದಂಡಧಾರಿ ಅದೊ ಗಂಡುಗೆರೆಮೀರಿ ಬಂದಿರುವೆ. ಸುಖ-ದುಃಖದನುಭವಂ ವಿವಿಧ ಕರ್ಮನು ನಾರಿ!

ಬಾರಮ್ಮ ಮರುಗದಿರು. ನಿನ್ನ ನಿರ್ಮಲ ದೀಪ್ತಿ ಪುಟಗೊಂಡು ಬೆಳಗಲಿದೆ ಸೋದರನಲಿ! ಸದ್ಗಮದ ರೂಪಿತಕೆ ಸಹನೆಯೊಂದೇ ದಾರಿ ಈ ನಾಟಕದ ಭವದ ಮುಳ್ಳಬೇಲಿ!

ಸೀತೆ— (ಸಮಾಧಾನವಾಗಿ)

ಸಹಜವಿದು ಸೋದರನೆ! ಧರ್ಮಮರ್ಮದ ಮಹಿಮೆ ಕೂದಲೆಳೆಯಂತೆ ಕಣ್ಣಕಾಣದಿಹುದು. ಅದೆ ಜೀವಿಜೀವಿಗಳ ವೈಕ್ಲವ್ಯ ಚಿತ್ತದಲಿ ಹುದುಗಿ ಹಾವಸೆಯಂತೆ ಜಾರುತಿಹುದು!

ಏನೊ ಚಿತ್ತಕೆಬಂದ ವಿಭ್ರಮೆಯ ಗಂಟೆನಲಿ ನಾನುರುಳುಬಿದ್ದು ಬಯಲಾಸೆಗೊಂಡೆ. ನಾನೆ ನಿಯಮದ ವೇರೆ ವಿಂರಿ ಹೊರನಡೆದು ನಿನ್ನೀ ಸರ್ವಗಾವಲಿನ ಪರಿಯ ಕಂಡೆ!

ಅದುದಾಯಿತು ಮುಂದೆ ಮೇದಿನಿಯ ಚೆಲುರಂಭೆ ಈ ದಾರಿಯಲಿ ಪಡೆದು ಕೆಡಲು ಸಲ್ಲ! ರಾಮನದನೇ ನಾರಿ ದಾರಿ ತೋರುವನೆಂಬೆ. ಸೋದರನೆ! ಈ ನಿನ್ನ ಬಾಳು ಸಫಲ!

(ಸೀತೆಯನ್ನು ಸುಂದಿಟ್ಟುಕೊಂಡು ರಾವಣನು ತೆರಳುವನು)

ವನದೇವತೆಯರು— (ಸುತ್ತಲೂ ನೋಡಿ)

ಏನಿದಹೋ ಬಿರುಗಾಳಿ
ಸುಗ್ಗಿ ಬರುವ ಮಹಾಗೊಳಿ!
ದೆಸೆಯೆಲ್ಲವು ಧೂಳಿ ಧೂಳಿ
ಸುತ್ತುತಿರುವ ಕೆಂದಾಳಿ!
ಇಂತ ಗಾಳಿಗಾವಳಿಯಲಿ
ಕೇಳುತಿರುವುದಾರ್ಭಟ
ಯಾರೊ ಲೋಕ ಲೋಕಗಳಗು
ಸರ್ವ ಧರ್ಮ ಸಂಕಟ!
ಮಹಾಪುರುಷ ರಾವಣೇಶ
ನಮರ ಕೀರ್ತಿಯುಲ್ಲೇಖ
ಮೊಳಗುತಿಹುದು ವಿಯದ್ವಾಣಿ
ಕೇಳುತಿಹುದು ಮೂಲೋಕ-

(ಆಕಾಶವಾಣಿ ಕೇಳುವುದು)

—"ಆತ್ಮನಃ ಪರಿಶುದ್ಧ್ಯರ್ಥಮಾಗತಾ ಜನಕಾತ್ಮಜಾ ತಸ್ಮಾತ್ ಸರ್ವ ಹಿತಾಯಸ್ಯಾದ ಶೋಕವನ ಸನ್ನಿಧಿ."—

ವನದೇವತೆಯರು— (ಸಂತೋಷದಿಂದ)

ಮಾತಾಯಿಯು ಬರುವ ಹೊತ್ತು
ಸುವ್ವಿ ಸುವ್ವಿ ಹಾಡಿರಿ!
ಓತುಪುಣ್ಯ ಸದನವಾಯ್ತು
ನೋಡಿರಿ ಲಂಕಾಪುರಿ!
ಹೆಣ್ಣುಕಾಯಿ ಹರಕೆ ಹೊರುವ
ಹೂಗೊಂಚಲ ಬಳುವಳಿ
ರಂಗವಲ್ಲಿ ಬರೆದು ತರುವ
ಬಾಗೀನದ ಪಲುವಳಿ
ತಾಯಮುಖ ಕಳೆಯುವಂತೆ
ತಂಬೂರಿಯ ಮೀಟರಿ
ನೋವು ಮರೆಯುವಂತೆ ಹೂವಿ
ನಂಬಾರಿಯ ಕಟ್ಟರಿ!
ರಾಮನಿತ್ತ ಬರುವನಂತೆ
ಕನ್ನಡಿಗರ ದಿಬ್ಬಣ
ಹನುಮಂತನ ಹಾರಾಟದ
ಕುಮ್ಮೈಸಕದ ಕಾವಣ!
ಇಲ್ಲಿ ಶುಕ್ತಿ ಸುಖಸ್ವಾತಿ
ಸೋನೆಗಾಗಿ ಕಾದಿದೆ
ಎಲ್ಲ ಶಕ್ತಿಯುಮಿತ ಭಕ್ತಿ
ಗೊಂಡು ಬಾಗಿ ಬರಲಿದೆ!
ಮತ್ತೆ ಪರೆಯನುಳಿವ ರೀತಿ
ಮುಗಿವುದು ರಾಮಾಯಣ
ಸುತ್ತ ಹರಡಿ ಕಂಪುಗುವುದು
ತೊಡಗಿದ ಸೀತಾಯಣ!
ನಮ್ಮ ತಾಯಿ ಬರುವಳಂತೆ
ಹಾಡಿರೆಲ್ಲ ಸುವ್ವಿ ಸುವಿ
ಧರ್ಮತೋರಿದಾರತಿಯಲಿ
ಬೆಳಗಲಿ ಭಾರತ ಭುವಿ!

— —

ಸ್ವತಂತ್ರ ಜೀವನೋಪಾಯ

(ಬರೆದವರು ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೊರಾಟವನ್ನು ಕಣ್ಣ ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ನಿವರಿಸುವ ಚಿಕ್ಕ ಪುಸ್ತಕ.

"ಸಂವಾದದಲ್ಲೆಲ್ಲ ಪ್ರತಿಯೊಂದು ದೃಶ್ಯದಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ..... ...ಶೈಲಿಯು ಚಲೋದಿದೆ"
—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: 0–4–0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ. ಎಸ್. ವೆಂಕಟರಾಜರ
ಅಮೂಲ್ಯ ಕವಿತಾ ಸಂಗ್ರಹಗಳು

ಕವಿತಾ ಕಾಮಿನಿ.

ಭಾಗ ೧ ಮತ್ತು ೨

ನವಭಾರತ ಪುಸ್ತಕ ಭಂಡಾರ
ಉಡುಪಿ.

ಕಲ್ಯಾಣ ರೇಖೆ

(೧೩ನೇ ಸುಟದಿಂದ)

ಹುತಿಹುದು! ರಾಮ ರಮಣೀಯಗುಣ ಧಾಮ! ಹೆಗಲುಳನಲಿ ಹೂತ ಹುಮ್ಮಸ ವಿದನು ಕೊಳಿರಿ ಕೊಯ್ದು!

ರಾಮ— (ನಿರುಪಾಯವಾಗಿ ಸೀತೆಯನ್ನು ಎತ್ತಿಹಿಡಿದು ಸುತ್ತಲೂ ನೋಡಿ)

ಗರವಟಕೆಹೋದ ಲಕ್ಷ್ಮಣನಿನ್ನು ಬರಲಿಲ್ಲ ಈ ಕಾಡು ಕಾದ ಹೆಬ್ಬಾವಿನಂತೆ! ಏಕೊ ಕಣ್ಣದುರುತಿದೆ. ಬಂದಿಹುದೆ ದುಷ್ಕಾಲ! ಮನಸಿಹುದು ಕೊಗು ಮುಯ್ಯಾಟೆಯಂತೆ!

ಈ ಸೀತೆಯನುರೋಧ ಮನಸನಾಕಡೆ ತಬ್ಬ ತಳ್ಳುತಿದೆ. ಹೆಬ್ಬಯಕೆ ಹೊಸೆದ ಹೆಣ್ಣು. ಮಾನಸಂ ಕುದುರುತಿದೆ. ಏನೊ ವಿಶ್ವಸದಲಿ ವಿಶ್ವವೇ ಕೊನೆಮಿಟುಕು ತಿರುವ ಕಣ್ಣು!

(ಸೀತೆಯೊಡನೆ)

ನಲ್ಲೆ ನನ್ನೊಡನಾಡಿ! ಹುಲ್ಲೆಗಂಗಳ ಚೆಲುವೆ ಹುಲ್ಲೆಹುಸುಳೆಯ ಮೇಲೆ ಮನ ಸಾಯಿತೆ? ನಿಲ್ಲು. ನಿನ್ನಾಸೆಯನು ಫಲಿಸದಿ ಪೆ ನಿನ್ನೆಂತು (ತಡೆದು) ಆದರೂ ಮನ ಸುಡುಗುತಿಹುದು ಸೀತೆ!

(ಅವಳ ಸುತ್ತಲೂ ವೃತ್ತಾಕಾರವಾಗಿ ಗೆರಯೆಳೆದು)

ರಾಮ—

ಇಲ್ಲೆ ನಿಂತಿರು ಮುಂತೆ ಬಾರದಿರು- ನನ್ನಾಣೆ! ಕಾಮುಕರ ಕೋಟಲೆಯು ಬಲು ಬೆದರಿಕೆ. ಈ ಗೆರೆಯ ದಾಂಟದಿರು. ಮಾನವತಿಯರ ಕಾವ ಇದು ರಾಮ ನಾಮ ಕಲ್ಯಾಣ ರೇಖೆ! ಈ ಕೋಟೆಯಲಿ ದುಷ್ಟಶಕ್ತಿ ಕಾಲಿಡದಿಹುದು ಇದು ಪುಣ್ಯ ಶೀಲತೆಯ ಸತ್ವದರಿಕೆ. ಈ ಗೆರೆಯ ದಾಂಟದಿರು ಆರ್ತ ಜನರನು ಕಾವ ಇದು ರಾಮ ನಾಮ ಕಲ್ಯಾಣ ರೇಖೆ! ಬೆದರದಿರು ಚಪಲಾಕ್ಷಿ ಅರೆಗಳಿಗೆಗಿ ಯಲಿ ಜಿಂಕೆ ಬರಲಿಹುದು ನಿನ್ನೆ ಕೊಂಡಾ ಟಕಾಗಿ. ಬೆದರದಿರು, ಲಕ್ಷ್ಮಣಂ ಬರುವ ನಕ ದಾಂಟದಿರು ಈ ನಿಯಂತ್ರಿತ ಗಂಡು ಗೆರೆಯ ನೀಗಿ!

(ರಾಮನು ದನುರ್ಬಾಣಗಳನ್ನು ಹಿಡಿದು ಆ ಕಡೆ ಮೆಲ್ಲ ಮೆಲ್ಲನೆ ಹೋಗುವನು. ಸೀತೆ ಆ ಕಡೆ ಮುಖ ವಾಡಿ ನಿಂತು ನೋಡುತ್ತಿರುವಳು.)

ರಾವಣ— (ಪ್ರವೇಶಿಸಿ ಆಡಂಬರವಾಗಿ)

ನಾನಸುರ ಚಕ್ರವರ್ತಿ
ಧರ್ಮಕರ್ಮ ಸನುವರ್ತಿ-
ವಿರಾಡ್ವಿಶ್ವಪದಾರೂಢ
ಪ್ರಜಾಧರ್ಮದಧಿಕಾರಿ
ವಿಯಚ್ಚರರ ದುರಾಚಾರ
ವಲಂಗೊಳಿಪ ಜಯಭೇರಿ!
ಕುಬೇರಾತ್ತ ಮಹಾವಿತ್ತ
ಸಮಾಕರ್ಷ ಹಿತಕಾರಿ
ಮದೋನ್ಮತ್ತ ಧರಾಧೀಶ
ದುರುದ್ದೇಶ ಸೂಹಾರಿ!
ಅನಾಸಕ್ತ ತಪೋಧರ್ಮ
ನಿರುದ್ಯೋಗಿದಪಹಾರಿ
ಅಳಂತುಷ್ಟ ಸುರಾಂಗನೆಯ
ರಸಾಧಾರಣೋದ್ಧಾರಿ!
ನಾನಸುರ ಚಕ್ರವರ್ತಿ
ಧರ್ಮ ಕರ್ಮದನುವರ್ತಿ!

(ಮುಂದೆ ಸೀತೆಯನ್ನು ನೋಡಿ ಗಾರವ ದಿಂದ ತುಸು ಹಿಂದೆ ಸರಿದು)

ಈಕೆ ವೈದೇಹಿ ಭೂಜಾತೆ ನಿಂದಿಹಳಿಲ್ಲಿ ನಿಶ್ಚಲಂ ನೀರವಂ ನಿರ್ವಿಕಾರಂ! ಏನೊ ತತ್ತರಗೊಂಡ ಮನಸಿನೆಣಿಕೆಯ ನೇಣಿ ನನುಸಾರದಭಿಸಾರ್ಥ ಚಿತ್ತಕೋರಿರಿ

ಈ ಪುಣ್ಯ ಭೂಮಿಕೆಯ ಪಾವನೋ ದಯವಾಗಿ ಕಾಡೆ ಸದ್ವೈಭವದ ಸದನ ವಾಯ್ತು! ಈ ಧರ್ಮ ವೇದಿಕೆಯನುಳಿದ ಯೋಧ್ಯಾನಗರಿ ಬರಗೊಂಡ ಮಾನವ್ಯ ದಡವಿಯಾಯ್ತು!

ಏನು ಧರ್ಮವಿದೆಂದು ನೋಡಬಯಸಿಹೆ ನಿಂದು
ಜಗನ್ಮಾತೆಯನ್ನರಿವ ಬಾಲಬುದ್ಧಿ
ಈ ಚರಾಚರ ಜಗದ ಧರ್ಮಕಾರಣಗಳನು
ಕಾವನನ್ನ ಧಿಕಾರ ಹೃದಯ ಶುದ್ಧಿ!

(ಸಸುನಗತ್ತ)

ಏನು ಹುಚ್ಚಾಟವಿದು! ಹರಿಣ ಶಾಬಕೆ ನೋಕು ನಾನಿಟ್ಟ ಕಾಮನೆಗೆ ಸರಿಯಾ ದಳು. ಏನು ನಾಧನನಯದ ಮಾತಿನೆಲ್ಲೆ ಯುಮಿರಿ ತಾನೆ ನಾಟಕಕೆ ನಾಂದಿಯು ಬರೆದಳು!

ನೋಡುವೆನು ಮೈಮರಸಿ ರಾಮಚಂ ದಿಗನನು ಮಿರುವಳೊ ನಿಯಮದೀ ಗಂಡುಗೆರೆಯ.ಮೀರಿದರೆ ಸದ್ಧರ್ಮ ಪಾಲ ನೆಯ ಕತಕಾಗಿ ನೋಯಬೇಕೇಬೇಕು- ಇರದುಪಾಯ!

(ಅಡಗಿನಿಂತಿರುವನು)

ಸೀತೆ—

ಏನಿದು ಜಿಂಕೆಯ ಬೆನ್ನಟ್ಟಿದನ
ನ್ನಿನಿಯನ ಸದ್ದೇ ಸುಳದಿಲ್ಲ
ಏನಿದು ಯೋಜನದಾಕಡೆ ಸಾರಿದ
ಸರಿಯಂತಿದೆ ನೆಲೆ ತಿಳದಿಲ್ಲ!

(ಚಿಂತೆಯಿಂದ)

ಏತಕೆ ನುಡಿದೆನು? ಆ ಮರಿ ಜಿಂಕೆಯ
ಘಾತಕವಾಯಿತು ಹೆದಿಬಪೆಗೆ
ಈ ತನಕವು ಮರು ಮಾತಾಡದ ನ
ನ್ನಾಚಾರದ ನಿರ್ಮಲ ನದಿಗೆ!

(ಕಿವಿಗೊಟ್ಟು ಕೇಳುತ್ತ)

ದೂರಕೆ ದೂರಕೆ ಸಾರಿದ ಕೆಜ್ಜೆಯ
ಮಾರ್ದನಿ-ಕೋಪದ ಹುಂಕಾರ
ಸೇರಿತೆ ಕೈ ಕಸವರದಾ ಕಾಮನೆ?—
ಏನಿದು ಘೆನುಸಿನ ರಂಕಾರ!

(ದೂರದಿಂದ — ಹಾ ಸೀತೆ—ಹಾ ಲಕ್ಷ್ಮಣ ಎಂಬ ಆರ್ತನಾದ ಕೇಳುವುದು. ಸೀತೆ ಬೆಚ್ಚಿ ಬಿದ್ದು)

ಘಾತವಾಯ್ತು ಮಹಾ ಘಾತ!
ಏನಿದಕಟ ದುಃಖ ಸಹಿತ
ದಾರ್ತನಾದ! ವಾಯುನೀತ
ಆಕ್ರಂದನ! ಆ ಸೀತೇ
ಹಾ ಲಕ್ಷ್ಮಣ ಎನುವ ದುಃಖ
ದಾರೋದನ-ಏನಿದಕಟ!
ಕೊರಲ ಹಿಡಿದ ಬಲು ಸಂಕಟ
ಎದೆಯ ಕೊರೆವ ವಜ್ರಕೀಟ
ನಮುಗುತಿಹುದು ಭೂಮಿತಟ
ನಿಲಲಾರೆನೊ ನಾನಕಟ!

(ಉದ್ವೇಗದಿಂದ ಕಾಲಬುಡಸೋರಿ)

ಅಯ್ಯೊ ಗಂಡು ಗಡಿಯ ರೇಖೆ
ನಾನಿಲ್ಲಿಯೆ ನಿಲಬೇಕೆ?
ಕಾಲತಡೆದು ಹಿಡಿದಿರುವುದು
ಜೀವನಾಚೆ ತೂರಿರುವುದು—
ಏಂಗೈಯಲಿ ಮಹಾನರ್ಧ
ಬಾಳಿರುವುದು ಬರೇ ವ್ಯರ್ಥ
ಅದೇ ಜಿಂಕೆ ಸುಡುವ ಬೆಂಕೆ
ಯಾಯಿತೆನ್ನ ದುರ್ಭಾಗ್ಯಕೆ!
ಹಾ ರಾಮಾ! ನಿಲ್ಲಲಾರೆ
ಅಯ್ಯೊ! ಗೆರೆಯ ದಾಂಟಲಾರೆ—

(ಹುಚ್ಚಳಂತೆ)

ಸಾಕು ಸಾಕು ಬಾಳ್ಕೆಗಿರದ
ನೀತಿನಿಯಮದನುರೋಧ
ಕ್ಷಮಿಸೆನ್ನ ಮಹಾಪರಾಧ
ಗತಿಯೊಂದೇ ನಿನ್ನ ಪಾದ! —

(ಕಲ್ಯಾಣ ರೇಖೆಗೆ ನಮಸ್ಕರಿಸಿ ಉದ್ವೇಗ ದಿಂದ ದಾಟಿ ಮುಂದೆ ಬರುವಳು.)

ರಾವಣ— (ಮುಂದೆ ಬಂದು ಅಡ್ಡ ನಿಂತು ತಡೆದು)

ತಡೆನಿಲ್ಲು ಧರ್ಮನಂಕಟವಿದನು ತಿಳಿದಿಹೆನು ತಿಳಿದಿಹೆನು ನಿನ್ನ ಮನಸಿನ ಕುವಿಯನು ನಡೆವದಾರಿಯದೊಂದೆ ದೇವರಿಗು ಜೀವ ರಿಗು ಅದಕಾಗಿ ಧರ್ಮರಕ್ಷಕನು ನಾನು!

ಹತ್ತು ದೆಸೆಯಾಳಕೆಗೆ ಹೊತ್ತತಲೆ ಯಿಪ್ಪತ್ತು ಕೈ ಕ್ರಿಯಾ ಶೀಲತೆಯ ರಾಜ್ಯ ಭಾರ! ಚಿತ್ತೈಸು ಜಾನಕಿ! ಜಗಜ್ಜೀವಿ ಗಳನು ಬಿಗಿದಿಟ್ಟ ನಿಸ್ಮರದ ಧರ್ಮಾಧಿ ಕಾರಂ!

(ಸೀತೆ ಹೆದರಿ ಹಿಂದೆ ಹಿಂದೆ ಸರಿಯುವಳು)

ರಾವಣ—

ಬೆದರದಿರು ರಾವಣಂ ಪಾಪಚಿದ್ದಾ ಣಂ ಬಂದಿರುವನಿದೊ ಧರ್ಮದಂಡಧಾರಿ ಅದೊ ಗಂಡುಗೆರೆಮೀರಿ ಬಂದಿರುವೆ. ಸುಖದುಃಖವನುಭವಂ ವಿವಿಧ ಕರ್ಮಾನು ಸಾರಿ!

ಬಾರಮ್ಮ ಮರುಗದಿರು. ನಿನ್ನ ನಿರ್ಮಲ ದೀಪ್ತಿ ಪುಟಗೊಂಡು ಬೆಳಗಲಿದೆ ನೋದ ರನಲಿ! ಸದ್ಗಮದ ರೂಪಿತಕೆ ಸಹನೆ ಯೊಂದೇ ದಾರಿ ಈ ನಾಟಕವೆ ಭವದ ಮುಳ್ಳೆಬೇಲಿ!

ಸೀತೆ— (ಸಮಾಧಾನವಾಗಿ)

ಸಹಜವಿದು ನೋದರನೆ! ಧರ್ಮಮರ್ಮ ದ ಮಹಿಮೆ ಕೂದಲೆಳೆಯಂತೆ ಕಣ್ ಕಾಣದಿಹುದು. ಅದೆ ಜೀವಿಜೀವಿಗಳ ವೈಕ್ಲವ್ಯ ಚಿತ್ತದಲಿ ಹುದುಗಿ ಹಾವಸೆ ಯಂತೆ ಜಾರುತಿಹುದು!

ಏನೊ ಚಿತ್ತಕೆಬಂದ ವಿಭ್ರಮೆಯ ಗಂ ಟೆನಲಿ ನಾನುರುಳುಬಿದ್ದು ಬಯಲಾಸೆ ಗೊಂಡೆ. ನಾನೆ ನಿಯಮದ ವೇರೆ ನಿಂದಿ ಹೊರನಡೆದು ನಿನ್ನೀ ಸರ್ವಗಾವಲಿನ ಸರಿ ಯ ಕಂಡೆ!

ಆದುದಾಯಿತು ಮುಂದೆ ಮೇದಿನಿಯ ಚೆಲುರಂಭೆ ಈ ದಾರಿಯಲಿ ಪಡೆದು ಕೆಡಲು ಸಲ್ಲ! ರಾಮನದನೇ ನಾರಿ ದಾರಿ ತೋರುವನೆಂಬೆ. ನೋದರನೆ! ಈ ನಿನ್ನ ಬಾಳು ಸಫಲ!

(ಸೀತೆಯನ್ನು ಮುಂದಿಟ್ಟುಕೊಂಡು ರಾವ ಣನು ತೆರಳುವನು)

ವನದೇವತೆಯರು— (ಸುತ್ತಲೂ ನೋಡಿ)

ಏನಿದಹೋ ಬಿರುಗಾಳಿ
ನುಗ್ಗಿ ಬರುವ ಮಹಾಗೂಳಿ!
ದೆಸೆಯೆಲ್ಲವು ಧೂಳಿ ಧೂಳಿ
ಸುತ್ತುತಿರುವ ಕೆಂದಾಳಿ!
ಇಂತ ಗಾಳಿಗಾವಳಿಯಲಿ
ಕೇಳುತಿರುವುದಾರ್ಭಟ
ಯಾರೊ ಲೋಕ ಲೋಕಗಳಿಗು
ಸರ್ವ ಧರ್ಮ ಸಂಕಟ!
ಮಹಾಸುರುಸ ರಾವಣೇಶ
ನಮರ ಕೇರ್ತಿಯುಲ್ಲೇಖ
ನೊಳಗುತಿಹುದು ವಿಯದ್ವಾಣಿ
ಕೇಳುತಿಹುದು ಮೂಲೋಕ-

(ಆಕಾಶವಾಣಿ ಕೇಳುವುದು)

—"ಆತ್ಮನಃ ಪರಿಶುದ್ಧ್ಯರ್ಥಮಾಗತಾ ಜನಕಾತ್ಮಜಾ ತಸ್ಯಾಃ ಸರ್ವ ಹಿತಾಯಸ್ಮಾದ ಶೋಕವನ ಸ್ಸಾಧ್ವಿಃ"—

ವನದೇವತೆಯರು— (ಸಂತೋಷದಿಂದ)

ಮಾತಾಯಿಯು ಬರುವ ಹೊತ್ತು
ಸುವ್ವಿ ಸುವ್ವಿ ಹಾಡಿರಿ!
ಓಕುಸುಣ್ಯ ಸದನವಾಯ್ತು
ನೋಡಿರಿ ಲಂಕಾಪುರಿ!
ಹೆಣ್ಣುಕಾಯಿ ಕರಕೆ ಹೊರುವ
ಹೊಗೊಂಚಲ ಬಳುವಳಿ
ರಂಗವಲ್ಲಿ ಬರೆದು ತರುವ
ಬಾಗೀನದ ಸಲುವಳಿ
ತಾಯದುಃಖ ಕಳೆಯುವಂತೆ
ತಂಬೂರಿಯ ಮೀಟರಿ
ನೋವು ಮರೆಯುವಂತೆ ಹೂವಿ
ನಂಬಾರಿಯ ಕಟ್ಟರಿ!
ರಾಮನಿತ್ತ ಬರುವನಂತೆ
ಕನ್ನಡಿಗರ ದಿಬ್ಬಣ
ಹನುಮಂತನ ಹಾರಾಟದ
ಕುಮ್ಮೆಸಕದ ಕಾವಣ!
ಇಲ್ಲಿ ಶುದ್ಧಿ ಸುಖಸ್ವಾತಿ
ನೋನೆಗಾಗಿ ಕಾದಿದೆ
ಎಲ್ಲ ಶಕ್ತಿಯುಮಿತ ಭಕ್ತಿ
ಗೊಂಡು ಬಾಗಿ ಬರಲಿದೆ!
ಮತ್ತೆ ಪರಿಯನುಳಿವ ರೀತಿ
ಮುಗಿವುದು ರಾಮಾಯಣ
ಸುತ್ತ ಹರಡಿ ಕಂಪುಗುವುದು
ತೊಡಗಿದ ಸೀತಾಯನ!
ನಮ್ಮ ತಾಯಿ ಬರುವಳಂತೆ
ಹಾಡಿರೆಲ್ಲ ಸುವ್ವಿ ಸುವಿ
ಧರ್ಮತೋರಿದಾರತಿಯಲಿ
ಬೆಳಗಲಿ ಭಾರತ ಭುವಿ!

— ——

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣು ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂವಾದದಲ್ಲೆಲ್ಲ ಪ್ರತಿಯೊಂದು ದೃಶ್ಯದಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ..... ...ಶೈಲಿಯು ಚಲೋದಿದೆ"
—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: 0–4–0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ. ಎಸ್. ವೆಂಕಟರಾಜರ
ಅಮೂಲ್ಯ ಕವಿತಾ ಸಂಗ್ರಹಗಳು

ಕವಿತಾ ಕಾಮಿನಿ.

ಭಾಗ ೧ ಮತ್ತು ೨
ನವಭಾರತ ಪುಸ್ತಕ ಭಂಡಾರ
ಉಡುಪಿ.

ಪಕ್ಷಗಳು ಮತ್ತು ಪ್ರಜೆಗಳು

ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಪಕ್ಷಗಳು ಬೇಕೇ ಬೇಕು ಪ್ರಜೆಯೊಬ್ಬ ಪ್ರಜೆಯೂ ಒಂದಲ್ಲ ಒಂದು ರಾಜಕೀಯ ಪಕ್ಷದ ಬೆಂಬಲಿಗನಾಗಬೇಕಾಗುತ್ತದೆ. ಇವುಗಳಲ್ಲೂ ಎರಡೆರಡು ಗುಂಪುಗಳಿರಬಹುದು. ನಿರ್ಪಾಕ್ಷಿಣ್ಯ ಮನೋವೃತ್ತಿಯಿಂದ ಪಕ್ಷದ ಹುಳುಕುಗಳನ್ನು ಹೊರಗೆ ಹಾಕಿದರೆ ಮಾತ್ರ ಅದು ಬಲಿಷ್ಠ ಬೆಳೆಯಬಹುದು. ಭಾರತದ ರಾಜಕೀಯ ಪಕ್ಷಗಳು ಬ್ರಿಟಿಷ್, ಅಮೇರಿಕಗಳ ಕಡಾಯಿಯ ಪಕ್ಷಗಳಿಂದ ಪಾಠ ಕಲಿತುಕೊಳ್ಳಬೇಕು ಬೇರೆಯಭಿಪ್ರಾಯಗಳು ಜಾಗ್ರತೆಯಿಂದ ಪಕ್ಷಗಳ ಧ್ಯೇಯೋದ್ದೇಶಗಳನ್ನು ರೂಪಿಸುವುದರಲ್ಲಿ ಸಾತ್ರಾ-ರಿಗಳಾಗಬೇಕು.

ಬರೆದವರು: ಶ್ರೀ ಸೇವನಮಿರಾಜ ಮಲ್ಲ.

ಪ್ರಜಾಸತ್ತೆಯಲ್ಲಿ ಪಕ್ಷಗಳ ವಂಶವೃಕ್ಷ ಎಂದೇ ಉಂಟಾಗಿರಲಿ, ಈಗ ಅದು ಶಾಶ್ವತವಾಗಿ ನೆಲೆನಿಂತು ಹೋಗಿದೆಯೆನ್ನಬಹುದು. ಅರೆಸೊತ್ತಿಗೆಯ ಸರ್ಕಾರವಿರುವ ದೇಶಗಳಲ್ಲಿ ಕೂಡಾ ಪಕ್ಷಗಳಿದ್ದೇ ಇವೆ. ಕೆಲವು ಪಕ್ಷಗಳು ಆಯಾ ರಾಜ್ಯಗಳಲ್ಲಿ ನೂರಾರು ವರ್ಷಗಳಿಂದ ಉಳಿದಿವೆ. ಬ್ರಿಟನಿನ ಟೋರಿ ಪಕ್ಷಕ್ಕೆ ಸುಮಾರು ಎರಡು ಶತಮಾನಗಳು ತುಂಬುತ್ತಿವೆ. ಹಾಗೆಯೇ ಅಮೇರಿಕದ ರಿಪಬ್ಲಿಕನ್ ಮತ್ತು ಡೆಮೊಕ್ರಾಟಿಕ್ ಪಕ್ಷಗಳಿಗೂ ನೂರು ವರ್ಷಗಳು ಕಳೆದಿವೆ.

ಪಕ್ಷಗಳಿಲ್ಲದ ಪ್ರಜಾಸತ್ತೆ ಹೀಗೆ ಗ್ರೀಕಿನ ಅಥೆನ್ಸ್ ನಗರದಲ್ಲಿ ಇತ್ತು. ಅಲ್ಲಿಯ ಪ್ರಜೆಗಳೆಲ್ಲ ಚುನಾವಣೆಗಳಲ್ಲಿ ಮಾತ್ರವಲ್ಲ, ಅಧಿಕಾರ ಪದವಿಗಳಲ್ಲೂ ಭಾಗವಹಿಸಬೇಕಾಗುತ್ತಿತ್ತು. ಅದರೆ ಇತ್ತೀಚೆಗೆ ಪಕ್ಷಗಳ ಪ್ರಾಬಲ್ಯ ಹೆಚ್ಚಿ ವೈಯಕ್ತಿಕತೆಗೆ ಸ್ಥಾನವಿಲ್ಲದಂತಾಗಿದೆ. ನಮ್ಮ ಬಾಲ್ಯಾವಸ್ಥೆಯ ಪ್ರಜಾಸತ್ತೆಯಲ್ಲೂ ಪಕ್ಷವಿರಬೇಕಾಗಿ ಸ್ವತಂತ್ರರೆಂದು ಮುಂದೆಬರುವ ರಾಜಕಾರಣಿಗಳ ಭವಿಷ್ಯ ಅಷ್ಟೊಂದು ಆರಾಮಾಯಕವಿಲ್ಲವೆನ್ನಬಹುದು.

ಹೀಗಿರುವಾಗ ಪಕ್ಷ ಮತ್ತು ವ್ಯಕ್ತಿಗಳೊಳಗಣ ಸಂಬಂಧದ ವ್ಯಾಖ್ಯಾನ್ಯ ಹೆಚ್ಚುತ್ತದೆ. ಪಕ್ಷಕ್ಕಾಗಿ ವ್ಯಕ್ತಿಯಿರುವನೇ ವ್ಯಕ್ತಿಗಾಗಿ ಪಕ್ಷವಿರುವುದೇ ಎಂಬ ಸಮಸ್ಯೆಯೂ ಉಂಟಾಗುತ್ತದೆ. ನಮ್ಮ ಅನುದಿನದ ರಾಜಕೀಯ ಜೀವನದಲ್ಲಿ ಪಕ್ಷಗಳ ಪ್ರಭಾವ ಬಹಳ ಗುರುತರವಾಗಿ ತೋರತೊಡಗಿದೆ.

ಪ್ರಚಲಿತ ರಾಜಕೀಯ ವ್ಯವಸ್ಥೆಯಲ್ಲಿ ಪಕ್ಷಗಳು ಅನಿವಾರ್ಯವೂ ಆಗಿವೆ. ಅವುಗಳು ಇಲ್ಲದಿದ್ದರೆ ಸರ್ಕಾರದ ರಚನೆಯಾಗಲು ತುಂಬಾ ತೊಡಕುಗಳುಂಟಾಗುವುವು ಪಕ್ಷಾತೀತ ಸದಸ್ಯರೇ ಎಲ್ಲೆಡೆಯಲ್ಲೂ ಆರಿಸಲ್ಪಟ್ಟರೆ ಬಹುಮತದ ಪ್ರಶ್ನೆಯನ್ನು ನಿರ್ಧರಿಸುವುದು ಅಸಾಧ್ಯ. ಆದ್ದರಿಂದ ಸರ್ವತ್ರವೂ ಅನ್ವಯವಾಗುವ ಸಾಮಾನ್ಯ ಧೋರಣೆಗಳನ್ನು ರಚಿಸಿ ಪಕ್ಷಗಳು ಆವಿರ್ಭವಿಸುತ್ತವೆ ಅವುಗಳ ತತ್ವಪ್ರಣಾಳಿಕೆ ಎಷ್ಟು ಆಕರ್ಷಕವಿದೆಯೋ ಅಷ್ಟೇ ಹೆಚ್ಚು ಮಂದಿ ಅವುಗಳಿಗೆ ಬೆಂಬಲವೀಯುವರು. ಫ್ರಾನ್ಸ್‌ನಲ್ಲಿ ತೌಜಾದಿಸ್ ಎಂಬ ತೆರಿಗೆ ವಿರೋಧಿಗಳ ಪಕ್ಷವೊಂದು ಇರುವುದನ್ನು ನಾವು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬಹುದು. ಹೀಗೆಯೇ ಗೋರಕ್ಷಕರ ಪಕ್ಷ ಭಾಷಾವಾರು ಪ್ರಾಂತ್ಯವಾದಿಗಳ ಪಕ್ಷ ಇತ್ಯಾದಿ ಅನೇಕ ವಿಧದ ಪಕ್ಷಗಳು ನಮ್ಮ ದೇಶದಲ್ಲಿಯೇ ಉಂಟಾಗಿದೆ. ನಾಗರಿಕರು ಪ್ರತಿಯೊಂದು ರಾಜಕೀಯ ಪಕ್ಷದ ಸ್ಥೂಲ ಧ್ಯೇಯಗಳನ್ನು ತಿಳಿದುಕೊಳ್ಳುವುದು ಅತ್ಯವಶ್ಯವಾಗಿದೆ.

ವಿಚಾರಶೀಲರಾದ ಪ್ರಜೆಗಳಲ್ಲಿ ಏಕಾಭಿಪ್ರಾಯವು ಯಾವ ವಿಷಯದಲ್ಲೂ ಇರುವುದಿಲ್ಲವಾದ್ದರಿಂದ ಭಿನ್ನಾಭಿಪ್ರಾಯದ ಸಂಘಗಳು ಉದ್ಭವಿಸುವುದು ಸಹಜವೆನಿಸಿದೆ. ಅದರೆ ವೈಯಕ್ತಿಕ ಅಭಿಪ್ರಾಯದಂತೆ ಇದರಲ್ಲೂ ಅಗಾಧವೆನಿಸಿದ ಗುಂಪುಗಳು ಉಂಟಾಗಿಯೇ ತೀರುತ್ತವೆ ಈ ದೃಷ್ಟಿಯಲ್ಲಿ ನೋಡಿದರೆ ಪಕ್ಷ ಪಕ್ಷಗಳೊಳಗೆ ಸ್ವೇಚ್ಛಾಸೂಯೆಗಳಿರುವುದರಲ್ಲಿ ಆಶ್ಚರ್ಯವೇನೂ ಕಾಣಿಸದು

ಮತದಾನದ ಹಕ್ಕುಳ್ಳ ಪ್ರತಿಯೊಬ್ಬನು ಯಾವುದಾದರೂ ರಾಜಕೀಯ ಪಕ್ಷಕ್ಕೆ ಸೇರಿರದಿದ್ದರೂ ತನದ ಬೆಂಬಲಿಗನಾಗಿ ಇರುವುದು ಅನಿವಾರ್ಯವಾಗಿದೆ. ದೇಶದ ಆಡಳಿತೆ ಒಳ್ಳೆಯದಾಗಬೇಕು, ವೈಯಕ್ತಿಕ ಜೀವನವು ಸೋಲಿನ ಮಟ್ಟಕ್ಕೇರಬೇಕು, ತನ್ನ ಜೀವನದ ಆಶೆ-ಆಕಾಂಕ್ಷೆಗಳಿಗೆ ಹೆಚ್ಚಿನ ಸಂತೃಪ್ತಿ ದೊರೆಯಬೇಕು, ಇತ್ಯಾದಿ ಉದ್ದೇಶಗಳನ್ನು ಪ್ರಜೆಯು ರಾಜಕೀಯ ಪಕ್ಷಗಳಿಂದ ನಿರೀಕ್ಷಿಸುತ್ತಾನೆ. ಅವನ ಆಯ್ಕೆಗೆ ಆಯಾ ಪಕ್ಷಗಳ ಪ್ರಭಾವಶಾಲೀ ಮುಖಂಡರ ವ್ಯಕ್ತಿತ್ವವೂ ಹೆಚ್ಚಿನ ಸಂದರ್ಭಗಳಲ್ಲಿ ಮುಖ್ಯ ಕಾರಣವಾಗಿದೆ.

ದೇಶದಲ್ಲಿ ಪ್ರಜಾಸತ್ತೆ ಬೆಳೆಯಬೇಕು ಎನ್ನುವ ರಾಜಕೀಯ ಪಕ್ಷಗಳ ರಚನೆಯೂ ಪ್ರಜಾಸತ್ತಾತ್ಮಕ ರೂಪದಲ್ಲೇ ಇರುತ್ತದೆ. ಆದರೆ ದೇಶದ ವ್ಯವಹಾರದಲ್ಲಿ ಹೇಗೆ ಒಬ್ಬ ಪ್ರಭಾವಶಾಲೀ ವ್ಯಕ್ತಿಯ ವರ್ಚಸ್ಸು ಹೆಚ್ಚಾಗಿ ಕಾಣಬರುತ್ತದೋ ಹಾಗೆಯೇ ಪಕ್ಷದ ವ್ಯವಹಾರದಲ್ಲಿಯೂ ವ್ಯಕ್ತಿತ್ವಕ್ಕೆ ಮನ್ನಣೆಯಿದ್ದೇ ಇರುತ್ತದೆ. ಪಕ್ಷದೊಳಗೆ ಅನೇಕ ಕೂಟಗಳೂ ಗುಂಪುಗಳೂ ಇರುವುದು ಸಾಮಾನ್ಯವಾಗಿದೆ. ಆ ಕೂಟ ಮತ್ತು ಗುಂಪುಗಳೊಳಗೆ ತುಂಬಾ ಘರ್ಷಣೆಗಳು ನಡೆಯುತ್ತವೆ ಪ್ರತಿಯೊಂದು ಪಕ್ಷದಲ್ಲೂ 'ತೀವ್ರಗಾಮಿ', 'ಮಂದಗಾಮಿ' ಮುಂತಾದ ವಿಭಜನೆಗಳಿದ್ದೇ ಇವೆ.

ಬ್ರಿಟನಿನ ಕೂಲಿಕಾರ ಪಕ್ಷವು ಸರ್ಕಾರ ನಡೆಸುತಿದ್ದಾಗ ಕ್ಲೆಮೆಂಟ್-ಈಗ ಲಾರ್ಡ್-ಅಟ್ಲೆಯವರು ಪ್ರಧಾನಿಗಳಾಗಿದ್ದರು. ಅದು ಉಕ್ಕು ಮಂತ್ರಾಲಯ ಉದ್ಯಮಗಳನ್ನು ರಾಷ್ಟ್ರೀಕರಣ ಮಾಡಿತಲ್ಲದೆ ದೇಶದ ವೈದ್ಯಕೀಯ ಸೇವೆಯನ್ನು ಸರ್ಕಾರವೇ ವಹಿಸಿಕೊಳ್ಳುವಂತೆ ಮಾಡಿತು. ಆಗ ಅದರ ಆರೋಗ್ಯಮಂತ್ರಿಗಳಾಗಿದ್ದ ಅನುರಿನ್ ಬೇವಾನರು ಕೃತಕ ಹಲ್ಲು ಮುಂತಾದುವನ್ನೂ ರೋಗಿಗಳಿಗೆ ಉಚಿತವಾಗಿ ಕೊಡಬೇಕೆಂದು ಸೂಚಿಸಿದರು. ಈ ಸೂಚನೆಗೆ ಮನ್ನಣೆ ದೊರೆಯದಿರಲು ಅವರು ಮಂತ್ರಿಮಂಡಲದಿಂದ ಕೊರಬಂದರು. ಅವರು ಕೂಲಿಕಾರ ಪಕ್ಷಕ್ಕೆ ರಾಜಿನಾಮೆಯನ್ನೀಯಲಿಲ್ಲ. ಅಟ್ಲೆಯವರಿರುವ ತನಕ ಅವರು ಕೂಲಿಕಾರಪಕ್ಷದೊಳಗೇಒಂದುತೀವ್ರಗಾಮಿ ಗುಂಪನ್ನು ಕಟ್ಟಿಕೊಂಡಿದ್ದರು. ಅಟ್ಲೆ ಕೂಲಿಕಾರ ಪಕ್ಷದ ಅಧ್ಯಕ್ಷ ಪದವಿಯನ್ನು ಬಿಟ್ಟುಕೊಟ್ಟು ಹೊರಬಂದ ಬಳಿಕ ಬೇವಾನರು ಕೂಲಿಕಾರ ಪಕ್ಷದ ವಿದೇಶ ನೀತಿಯ ಪ್ರತಿಪಾದಕರಾಗಿ ಪಕ್ಷದ ಕೋಶಾಧಿಕಾರಿ ಪದವಿಯನ್ನು ಸ್ವೀಕರಿಸಿದ್ದಾರೆ. ಅದರಂತೆಯೇ ಟೋರಿ ಪಕ್ಷದಲ್ಲಿ ಸೂಯೆಜ್ ಕಾಲುವೆಯನ್ನು ಬ್ರಿಟಿಷರು ಬಿಟ್ಟು ಕೊಡುವುದರ ವಿರುದ್ಧ ಸೂಯೆಜ್ ಗುಂಪೊಂದು ರಚಿತವಾಗಿದೆ. ಈ ಗುಂಪಿನ ಒತ್ತಡದಿಂದಾಗಿ ಅಂತೋನಿ ಈಡನ್ನರು ಯುದ್ಧಕ್ಕೆಳಿದು ತಮ್ಮ ರಾಜಕೀಯ ಭವಿತವ್ಯವನ್ನೇ ಕಳೆದುಕೊಳ್ಳಬೇಕಾಯಿತು.

ಪಕ್ಷದೊಳಗೆ ಗುಂಪುಗಳನ್ನು ಕಟ್ಟುವುದರ ಜೊತೆಗೆ ಪಕ್ಷದ ಹೊರಗಿನಿಂದಲೂ ವ್ಯಕ್ತಿಗಳೂ ಸಂಸ್ಥೆಗಳು ತಮ್ಮ ಪ್ರಭಾವವನ್ನು ಬೀರಲು ಯತ್ನಿಸುವುದುಂಟು. ಪಕ್ಷದ ಪ್ರಚಾರ ಮತ್ತು ಬೆಳವಣಿಗೆಗಳಿಗಾಗಿ ಅಜ್ಞಾತ ಕಡೆಗಳಿಂದ ಧನ ಸಹಾಯ ಮುಂತಾದುವು ದೊರಕುವುದುದೆ ಕೆಲವು ಪಕ್ಷಗಳು ತಮ್ಮ ಪ್ರಭಾವವನ್ನು ವಿಸ್ತರಿಸಲಿಕ್ಕಾಗಿ ದರೋಡೆಕಾರರ ಕಾರಸ್ತಾನಗಳಿಗೆ ಬೆಂಬಲವನ್ನೀಯುವುದೂ ಇದೆ. ಕೆಲವು ವರ್ಷಗಳಲ್ಲಿ ಅಮೇರಿಕದ ಡೆಮೊಕ್ರಾಟಿಕ್ ಪಕ್ಷವು ಇಂಥ ಕೆಲವು ಸೂತ್ರಧಾರರ ಕೈಗೆ ಸಿಕ್ಕಿ ಟಮ್ಮನ್ನಿ ಹಾಲ್ ರಾಜಕೀಯವೆಂಬ ನಾಣ್ಣುಡಿಯನ್ನುಂಟು ಮಾಡಿತು.

ಪಕ್ಷಗಳು ಕೇವಲ ಒಬ್ಬಿಬ್ಬ ಪ್ರತಿಭಾಶಾಲಿ ವ್ಯಕ್ತಿಗಳ ಅಂಕೆಗೊಳಗಾಗಬಾರದೆಂದಿದ್ದರೆ ಅದಷ್ಟು ಮಂದಿ ವಿಚಾರಶೀಲರು, ಸುಶಿಕ್ಷಿತರು, ಹೊಣೆಗಾರಿಕೆಯುಳ್ಳವರು ಅವುಗಳೊಳಗೆ ಸೇರಿ ಅಸಕ್ತಿ ಸರ್ವಕವಾಗಿ ಅಕ್ರಮಣಗಳನ್ನು ಪ್ರತಿಭಟಿಸಬೇಕು. ಪಕ್ಷಗಳೊಳಗಿನ ಹುಳುಕುಗಳನ್ನು ನಿರ್ದಾಕ್ಷಿಣ್ಯವಾಗಿ ಹೊರಗೆಡಹಬೇಕು. ವೈಯಕ್ತಿಕವಾಗಿ ಎಲ್ಲ ಪ್ರಜೆಗಳ ಮೇಲೂ ಈ ಹೊಣೆಗಾರಿಕೆಯಿದ್ದೇ ಇದೆ. ಏಕೆಂದರೆ ಪಕ್ಷಗಳು ದೇಶವನ್ನು ಆಳುತ್ತವೆ ವಿನಃ ವ್ಯಕ್ತಿಗಳಲ್ಲ ಆದ್ದರಿಂದ ಸರ್ಕಾರದಷ್ಟೆ ಪ್ರಾತಿನಿಧಿಕವಾಗಿ ಪಕ್ಷಗಳು ಇರಬೇಕು. ಎಲ್ಲಿ ಒಂದು ಪಕ್ಷವು ಒಬ್ಬನ ಕೈಯೊಳಗೆ ಅವನ ಸ್ವಾರ್ಥ ಹಿತರಕ್ಷಣೆಯ ಸಾಧನವಾಗುತ್ತದೋ ಅಲ್ಲಿ ಪಕ್ಷವು ಪ್ರಜೆಗಳ ಹಳ್ಳು ಬಾಧ್ಯತೆಗಳಿಗೆ ಕುರಾರ ಪ್ರಾಯವಾಗಿದೆ. ಯಾವ ಪಕ್ಷವಾದರೂ ಸಮರ್ಥವಾಗಿ ಸರ್ವರಿಗೂ ಹಿತಕರವಾಗಿ ಕೆಲಸಮಾಡಬೇಕಾದರೆ ಅದರ ತಳಹದಿ ವಿಶಾಲವಾಗಿರಬೇಕು, ವ್ಯಕ್ತಿ ಪೂಜೆಗೆ ಅದರಲ್ಲಿ ಎಡೆಯಿರಕೂಡದು. ಹಣಕೂಟ್ಟೋ ಉಡುಗೊರೆಗಳನ್ನು ಸಲ್ಲಿಸಿಯೋ ಪಕ್ಷಗಳನ್ನು ವಶಪಡಿಸಲು ಮುಂದೆ ಬರುವ ಸ್ವಾರ್ಥಿಗಳ ಕೈವಾಡಕ್ಕೆ ಅಸ್ಪದ ಕೊಡಕೂಡದು.

ಹೀಗೆ ಪ್ರಜಾಸತ್ತೆಯು ಪರಿಪೂರ್ಣವಾಗಿ ವರ್ಧಿಸುವುದಾಗಬೇಕಾದರೆ ರಾಜಕೀಯ ಪಕ್ಷಗಳ ಉತ್ತಮ ಪರಂಪರೆ ಬೆಳೆಯುವುದು ಅತ್ಯವಶ್ಯ. ಪಕ್ಷಗಳ ಧೋರಣೆಗಳನ್ನು ರೂಪಿಸುವುದರಲ್ಲಿ ಸಾಮಾನ್ಯ ಜನರ ಪಾತ್ರ ಬಹಳ ಮಹತ್ವದ್ದು. ಅತಿರೇಕದ ಸೀಮೆಗೆ ಪಕ್ಷಗಳು ಸಾಲದಂತೆ ನೋಡಿಕೊಳ್ಳಬೇಕಾದ ಹೊಣೆ ಎಲ್ಲ ದೇಶಾಭಿಮಾನಿಗಳ ಮೇಲೂ ಇದೆ.

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

ಹಿರೋಶಿಮಾದಿಂದ ಜಿನೇವ

ಬರೆದವರು:
ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.
ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.

ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ

ಉತ್ತಮ ಕಾಗದ. ಬೆಲೆ: ರೂ. ೧-೮-೦.

ನವಯುಗ ಪ್ರೆಸ್, ಉಡುಪಿ.

ಗೋ ವಿಜಯ
(ಗೋವಿನ ಕಥೆ)

ಶ್ರೀ ಮುಕ್ಕುಸ್ವಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ

60 ಪುಟಗಳು: ಬೆಲೆ 0-8-0.

ನವಯುಗ ಪ್ರೆಸ್, ಉಡುಪಿ.

ಸ್ವಾತಂತ್ರ್ಯ ದಿನ

ಕವಿ: ಶ್ರೀ ಎಸ್. ಎಸ್. ಬಸುಪಟ್ಟದ, ಗುಲೇದಗುಡ್ಡ.

ಆಗಸ್ಟ ೧೫ರೆಡೆ ದೃಷ್ಟಿಸಾಗಿತು ಆಗ
ಕ್ಯಾಲೆಂಡರಿನಲ್ಲಿ—
ಆ ಚಣವೆ,
ಸ್ವಾತಂತ್ರ್ಯ ದಿನೋದಯದ ಸಾರಿ
ಗಂಟೆ ಹೊಡೆಯಿತು ಆರು
ಗಡಿಯಾರದಲ್ಲಿ—
ರಾಷ್ಟ್ರವೀರರ ಪ್ರಾಣ ಬಲಿದಾನವಾ
ಯ್ತಿದಕೆ
ಅಂತು, ಬಂತೊಮ್ಮೆ ಭಾರತಕೆ
ಸ್ವಾತಂತ್ರ್ಯದಿನವು.
ಸ್ವಾತಂತ್ರ್ಯದಿನ ಬಂತು, ಭೂಮಿಯಲಿ
ಹೊಳೆಟ್ಟ ಹಣವು ತಾ ಮೇಲೆದ್ದಂತೆ.

* * *

ಸುತ್ತುಮುತ್ತಿದ್ದ ಜನವೆಲ್ಲ
ತಂದಿಗಾಲ ಮೇಲ್ನಿಂತು
ಅದರ ಬರವಿನ ಬೆಡಗ
ನೋಡಿ ಸಲಿದಿತು ಅಂದು.
ಅದರ ಸೊಬಗನು ಬಿಡದೆ
ಹಾಡಿ ಹರಸಿತು ಅಂದು.
"ಹಾಲು ಜೇನಿನ ಹೊಳೆಯು
ಮಧುರ ಸ್ನೇಹದ ತೊಳೆಯು
ನಮ್ಮದಾಯಿತು ಇಂದು"
ಇಂತೆಂದು
ಜನವೆಲ್ಲ ಕನಸಕಂಡಿತು ಆಗ;
ಮನದಿ ಮಂಡಿಗೆಯನುಂಡಿತು ಹಾಗೆ

* * *

ಅವರಾಜ, ಇವ ಪ್ರಜೆಯು
ಎಂಬ ಈ ರುಜೆಯು
ಕಂಬಿಕಿತ್ತಿತು ಮುಂದೆ
ಸಕಲ ಸಂಸ್ಥಾನಗಳೆಲ್ಲ ವಿಲೀನವಾದಂದೆ
ರಾಜ, ಮಹಾರಾಜರ ಜಬ್ದಸ್ತು
ಅಡಗಿತಂದೆ

"ಭಾರತದಿ ಜನಿಸಿರುವ ಜೀವಕೋಟಿಗಳೆಲ್ಲ
ಒಂದೆ ತಾಯಿಯ ಮಕ್ಕಳೆಲ್ಲ ನಾವು—;
ಎಲ್ಲರೂ ಒಂದೆ ತೆರ, ಮೇಲು-ಕೀಳುಗಳಿಲ್ಲ;
ನಮ್ಮುಸಿರು ಸಮತೆ ಮೇಣ್
ಸ್ವಾತಂತ್ರ್ಯವು."
ಎಂಬ ಹಾಡನು ಹಾಡಿ, ನಲಿದಿತೋ ಜನತೆ
ಬೆಳಕ ಚೆಲ್ಲಿತು ಇಂತು ಹಂಬಲದ ಹಣತೆ.

* * *

ನಮ್ಮದೊಂದೇ ದೇಶ.
ಅದರೂ,
ವಿಧವಿಧದ ಭಾಷೆ!
ವಿಧವಿಧದ ಜನವು!
ಈ ವಿಧವಿಧದ ಭಾಷೆ, ಜನಕೆಲ್ಲಕೂ
ಒಂದೊಂದು ರಾಜ್ಯ.
ಇಂತಿದ್ದರೂಕೂ,
ನಮ್ಮದೊಂದೇ ದೇಶ.
"ವೈವಿಧ್ಯದಲಿ ಏಕತ್ವ; ಏಕತ್ವದಲಿ
ವೈವಿಧ್ಯ."
ಇದು ನಮ್ಮ ಸಂಸ್ಕೃತಿಯ ಜೀವ
ಜೀವಾಳ—

* * *

ಆಗಸ್ಟ ಹದಿನೈದು!
ಸ್ವಾತಂತ್ರ್ಯದಿನ!!
ಮೊಳಗುತಿದೆ ಬ್ಯೂಗಲ್ಲು ಮೇಲಿಂದ
ಮೇಲೆ,
ಹಾರುತಿದೆ ರಾಷ್ಟ್ರ ಧ್ವಜವು
ಕಟ್ಟೇರಿಗಳ ಮೇಲೆ.
ಸಾಗಿತ್ತು ಟಾಂ ರೋಡಿನಲಿ ಮೆರವಣಿಗೆ;
ಓ, ಇದು ಪ್ರಭಾತಫೇರಿ.
ಶಾಲೆ ಮಕ್ಕಳ ತಂಡ,
ಹೋಮಗಾರ್ಡ್ಸ್, ಪೋಲೀಸರ ಮೇಳ!
ಓ, ಅಲ್ಲಿ ಊರಿನ ಮುಖಂಡ,
ಊರ ಪ್ರಮುಖರ ಜೊತೆಗೆ ಕುಲುಕುಲು
ನಗುತ
ನಡುನಡುವೆ ಗುಣುಗುಡುತ
ಸಂತಸದಿ ಸಾಗಿಹನು.
ಇದು ಸ್ವಾತಂತ್ರ್ಯದಿನೋತ್ಸವವು!

* * *

ದಾರಿದ್ರ್ಯ ಶೃಂಖಲೆಗೆ ಶುತ್ತಾಗಿ
ಹಾಡೆಹಗಲಲಿ ಹೌಹಾರಿ ಸುಸ್ತಾಗಿ
ಬಡ ಭಾರತೀಯನು ಅಲ್ಲಿ
ಎಂತೇನೊ ಸಾಗಿಹನು ಬಾಳಹಟ್ಟಿ
ಯಲಿ—
ದುಡಿದುಣ್ಣಬೇಕೆಂದರೂ
ಒಂದಿನಿತು ಮಾಂಸವು ಇಲ್ಲ ಅವನ
ರಟ್ಟೆಯಲಿ.
ನಿತ್ಯವೂ ಇದೆ ಅವನ ರಕ್ತ-ಶೋಷಣೆ.
ಎಂತೇನೋ ಅವನ ಮೋಷಣೆ.!
ಜೋಲು ಮುಖ, ತೆರೆದ ಬಾಯ್;
ಜೊಲ್ಲು ಸುರಿಯುತಿದೆ ಬಾಯ್!
ಕೀಳರಿಟ್ಟಿದೆ ಹಿಂದೆ
ಕಪಿಸೈನ್ಯ
ಬರಿಹೊಟ್ಟೆಯಿಂದೆ.
ಇದು ಅವನ ಪ್ರಭಾತ-ಫೇರಿ!

* * *

ದಾಸ್ಯಶೃಂಖಲೆ ಹರಿದು
ಸ್ವಾತಂತ್ರ್ಯವನು ಪಡೆದು
ಕಳೆದೆವಿಂದಿಗೆ ನಾವು ಹತ್ತುವರುಷ;
ಆದರೂ ಬಡವನಿಗೆ ಇಲ್ಲ ಹರುಷ.
ದಾರಿದ್ರ್ಯ ಶೃಂಖಲೆ ಹರಿದು
ಆರ್ಥಿಕ ವಿಷಮತೆಯು ತರಿದು
ಎಂದು ಬರುವುದು ಏನೋ,
ಆರ್ಥಿಕ-ಸಮಾನತೆಯು!
ಅಂದೆ ನಿಜ ಸ್ವಾತಂತ್ರ್ಯದಿನ;
ಅದುವೆವಗೆ ಕರಿದಿನವು.
ಅದುವೆಮ್ಮ ಭಾಗ್ಯದಿನವು.

ಹನ್ನೊಂದನೆಯ ವರ್ಷದ ಹೊಸ್ತಿಲಲ್ಲಿ

ವರುಷ ಹತ್ತಾಯ್ತು ನೀನೆಮಗೆ ಬಿಡುಗಡೆ ನೀಡಿ—
ಹನ್ನೊಂದು ವರುಷದುಂಬರದಂ ಬಳಿ ನಿಂದು,
ದೇವ ನಿನ್ನುಪಕಾರ ನೆನನೆನದು ಕೊಂಡಾಡಿ,
ನನಗೆ ಮನಗಾಂಬೆರಡು ಮಾತೊರೆವೆನಿಂದು. ೪

ಕಾದೆ ನೀ ಪರರಿಗಾದೆಮ್ಮ ಮನೆಯೆಮಗಿತ್ತು—
ಬಡವರತಿಪಾಡುತ ನೀಗಿಸುವ ಸುದ್ದಿಲ್ಲ;
ಉದ್ದಗಲ ಭಾರತವನೆಮ್ಮ ಮನ್ರೆತನ ಗೆತ್ತು ೩
ಕಾಶ್ಮೀರ-ಗೋವೆ ಉದ್ಧರಿಸ ಳದ್ದಿಲ್ಲ!.. ... ೮

ದೇಶದ ಹೆಸರ ನೆವದಿ ತಮ್ಮ ಜಂಬವ ಮೆರೆಸೆ
ಎನಿತೊ ವಾಚಾಲಕರ ಜಗದ ತಿರುಗಾಟ!
ಅತಿಥಿಗಳೊ, ೫ಡೆಲಿಗೆಶನೊ, ಬರುವ ಹೋಗುವ ಪರಿಸೆ—
ಬೇಕೆ ದೇಶದ ಹುಟ್ಟುವಳಿಗನ್ನ ೭ಮಾಟ?..... ೧೨

ಭವನಗಳೊ, ಸೌಧಗಳೊ, ನಮ್ಮ ಬಡತನದೆಜ್ಜೆ—
ಕಿಲ್ಲದೆಲ ಹಣವ ದೂಳಿಸುವ ಲೆಕ್ಕವೊಳೆವೊ?೯
೧೦ಒಳಕೊರತೆ, ಹೊರಸಾ೭ವಾದಂಬರದ ವೆಚ್ಚ
ವಿನ್ನು ತೆರಿಗೆಗಳೊ! ಶೇಷನಿಗೆ ತಳಮಳವೊ?
. . ..
ಇದನ್ನೆಲ್ಲ ತಿದ್ದಿ ಭಾರತವ ಕಾಯೊಡೆಯಾ,
ಕಾಯು ಭಾರತಕೆ ನೀನಿತ್ತ ಬಿಡುಗಡೆಯಾ!

ಗೋವಿಂದ ಪೈ

೧ ಉಂಬರ = ಹೊಸ್ತಿಲು. ೨ ಅತಿಪಾಡು = ಅತ್ಯಂತ ದೀನ ಸ್ಥಿತಿ. ೩ ಗೆತ್ತು = ಭಾವಿಸಿ. ೪ ಸದ್ದು = ಶಬ್ದ. ೫ ಡೆಲಿಗೆಶನ್ = delegation. ೬ ಪರಿಸೆ = ಜನರ ಗುಂಪು. ೭ ಮಾಟ = ಕೆಡುಕು. ೮ ಎಜ್ಜರು = ಎಜ್ಜರಿಕೆ. ೯ ಒಳವೊ? = ಉಂಟೇ? ೧೦ ಒಳಕೊರತೆ = ಕಣ್ಣುಕಾಣದ ನಷ್ಟ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:00.

ಪುಸ್ತಕದ ಬೆಲೆಯೊಂದಿಗೆ ನಾಲ್ಕಾಣೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ನಮ್ಮ ಪುಸ್ತಕಗಳು ಈ ಕೆಳಗಿನವರಲ್ಲಿಯೂ ದೊರೆಯುತ್ತವೆ:—

1) ಸ್ಕೂಲ್ ಬುಕ್ ಕಂಪೆನಿ, ರಥಬೀದಿ, ಮಂಗಳೂರು.-1.

2) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಸ್ವತಂತ್ರ ಭಾರತದಲ್ಲಿ "ಬೇಕು ಜಪ" ಪರನೆ

ಭಾರತವು ಸ್ವತಂತ್ರರಾಷ್ಟ್ರವೆಂದು ಘೋಷಿಸಲ್ಪಟ್ಟು ವರುಷಗಳು ಹತ್ತುರುಳಿದುವು. ಕಲ್ಯಾಣ ರಾಷ್ಟ್ರವನ್ನು ಕಟ್ಟುವ ಸಮಾಧ್ಯೇಯವನ್ನಿಟ್ಟುಕೊಂಡು ಪಂಚವಾರ್ಷಿಕ ಯೋಜನೆಗಳು ತಯಾರಾಗಿ, ಕಾರ್ಯರೂಪದಲ್ಲಿ ಬರುತ್ತಿವೆ. ಆದರೆ, ವೈಯಕ್ತಿಕ ಇಲ್ಲವೆ ಸಾಮೂಹಿಕ ಸ್ವಾರ್ಥಸಾಧನೆಯನ್ನು ಸಾಧಿಸಿಕೊಳ್ಳುವ "ಬೇಕು ಜಪ" ಇನ್ನೂ ನಿಂತಿಲ್ಲ; ಬದಲು ದಿನೇದಿನೇ ಪ್ರವರ್ಧಮಾನವಾಗುತ್ತಿದೆ. ಈ 'ಬೇಕು ಜಪ'ವು ನಿಲ್ಲದೆ, ರಾಷ್ಟ್ರೀಯ ಅಭಿವೃದ್ಧಿಯು ನಿರಾತಂಕವಾಗಿ ಜರುಗುವುದು ಎಂದಿಗೂ ಸಾಧ್ಯವಿಲ್ಲ. ಭಾರತೀಯರು ಇದನ್ನು ಸ್ಮರಿಸಬೇಕಾಗಿದೆ. ಈ "ಬೇಕು ಜಪ"ವನ್ನು "ಬೇಕು ತಪ"ವನ್ನಾಗಿ ಪರಿವರ್ತಿಸಿಕೊಂಡರೆ, ಎಲ್ಲರ ರಾಷ್ಟ್ರದ ಅನಂತ ಪ್ರಜೆಗಳ ದೃಷ್ಟಿಯಿಂದ ಕ್ಷೇಮ.

ಬರೆದವರು: ಶ್ರೀ ಎ. ಎಸ್. ರಾಮಕೃಷ್ಣ.

'ಬೇಕು ಜಪ' ನೆಂದರೇನು?

ಬೇಕು ಎಂಬ ಭಾವನೆ ಮಾನವನಿಗಾಗಲೀ ಪಶು ಪಕ್ಷಿಗಳಿಗಾಗಲೀ ನಿಸರ್ಗದತ್ತವಾದದ್ದು. ಅದಿಲ್ಲದೆ ಜಗತ್ತು ಮುಂದುವರಿಯುವುದೇ ಸಾಧ್ಯವಿಲ್ಲವೆನೋ! ಏನೋ! ಈ ಬೇಕೆಂಬ ಪ್ರವೃತ್ತಿಯೇ ಎಲ್ಲ ಬಗೆಯ ವಿಕಾಸಗಳ ಮೂಲಬೀಜೇಕು. ಆದುದರಿಂದ ನಿಜವಾಗಿ ಬೇಕಾದುದನ್ನು ಬೇಕು ಎನ್ನುವುದು ಸರಿಯೆ.

ಆದರೆ ನಮ್ಮ 'ಬೇಕು'ಗಳಿಗೂ ಒಂದು ಮಿತಿಯಿದೆ. ಬೇಕಾದುದನ್ನು ಬೇಕು ಎಂದು ಕೇಳುವುದಕ್ಕೂ ಕೂಡ ಒಂದು ನೀತಿಯಿದೆ. ಆ ಮಿತಿ ದಾಟಿದ ಮೇಲೂ, ನಮ್ಮ ನ್ಯಾಯವಾದ ಆವಶ್ಯಕತೆಗಳು ಪೂರೈಸಲ್ಪಟ್ಟ ಮೇಲೂ 'ಬೇಕು ಬೇಕು' ಎಂದು ಮತ್ತೆ ಮತ್ತೆ ಹಾತೊರೆಯುವುದಿದೆಯಲ್ಲ-ಅದೇ ಬೇಕು ಜಪ! ಯಾವ ಶ್ರುತಿ ಪುರಾಣಗಳಲ್ಲಿ ಹೇಳಿರದಿದ್ದರೂ, ಯಾರೊಬ್ಬರೂ ಉಪದೇಶಿಸದಿದ್ದರೂ, ಈ ಜಪ ನಮಗೆಲ್ಲರಿಗೂ ಸುಲಭವಾಗಿ ಅಭ್ಯಾಸವಾಗಿಬಿಟ್ಟಿದೆ.

ಈ 'ಬೇಕು ಜಪ'ದಲ್ಲಿ ತೊಡಗಿದವರಿಗೆ ಎಷ್ಟೋ ಸಲ ಕಿವಿಗೆ 'ಬೇಕು'ಗಳ ಸರಿ ಮೆಟ್ಟೇ ಇರುವುದಿಲ್ಲ. ಇದೇ ಈ ಜಪದ ಅತ್ಯಂತ ಮಾರಕವಾದ ಒಂದು ದುರ್ಲಕ್ಷಣ. ಪ್ರಪಂಚದಲ್ಲಿ ಇಂದು ಕಾಣುವ ಹಲವಾರು ಬಗೆಯ ಕ್ಲೇಶಗಳಿಗೂ ಅಶಾಂತಿಗೂ ಇದು ಒಂದು ಪ್ರಾಮುಖ್ಯ ಕಾರಣ. ಇದನ್ನು ಕಂಡು ಖೇದಗೊಂಡ ನಮ್ಮ ಹಿರಿಯ ಕವಿ "ಬೇಕೆನುತ ಬೊಬ್ಬಿಡುತಲಿಹ ಘಟವಾಸಿದನ, ಏಕೆಂದು ರಚಿಸಿದನೊ ಬೊಮ್ಮ; ಈ ಬೇಕು ಜಪ ಸಾಕೆನಿಪುದೆಂದಿಗೊ" ಎಂದು ಉದ್ಗರಿಸಿದ್ದಾರೆ, ತಮ್ಮ 'ಮಂಕು ತಿಮ್ಮನ ಕಗ್ಗ' ಎಂಬ ಕಾವ್ಯದಲ್ಲಿ.

"ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ! ಉಷ್ಟು ದೊರಕಿದರೆ ಮತ್ತಷ್ಟ ರಾಸೆ" ಎಂಬ ಪುರಂದರ ದಾಸರ ಸೂಕ್ತಿಯಲ್ಲಿಯೂ ಈ ಬೇಕು ಜಪವು ಹುಟ್ಟುವ ಬಗೆ ಸ್ಪಷ್ಟವಾಗುತ್ತದೆ.

ಭಾರತದಲ್ಲಿ 'ಬೇಕು ಜಪ'

ಭಾರತವು ಸ್ವತಂತ್ರ್ಯವಾಗಬೇಕೆಂದು ಜನತೆ ಹಂಬಲಿಸಿದ್ದ ಒಂದು ಬಗೆಯ ತಪ ಅದು ಜಪವಲ್ಲ. ಸ್ವಾತಂತ್ರ್ಯ ಬೇಕು ಬೇಕು ಎಂದು ಘೋಷಿಸಿದರೂ ಅದು 'ಬೇಕು ಜಪ'ವೆನಿಸಲಾರದು. ರಾಷ್ಟ್ರದ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ ಕೈಗೊಂಡಿರುವ ಇಂದಿನ ಪಂಚವಾರ್ಷಿಕ ಯೋಜನೆಗಳೂ ಒಂದು ಬಗೆಯ ತಪವೆಂದೇ ಹೇಳಬಹುದು. ಆದರೆ ಸರ್ವಸ್ವರ ಕಲ್ಯಾಣಕ್ಕಾಗಿ ನಡೆಯುತ್ತಿರುವ ಈ ತಪಸ್ಸಿನ ನಡುವೆ ವೈಯಕ್ತಿಕ ಹಾಗೂ ಗುಂಪು ಗುಂಪಿನ 'ಬೇಕು ಜಪ' ಎಂದಿಲ್ಲದಷ್ಟು ಪ್ರಬಲವಾಗಿ ಕೇಳಿಸ ತೊಡಗಿರುವುದು ರಾಷ್ಟ್ರವನ್ನೆದುರಿಸಿರುವ ದೊಡ್ಡ ಗಂಡಾಂತರವೆನ್ನಬಹುದು. ಏಕೆಂದರೆ ವೈಯಕ್ತಿಕವಾಗಿ ಅಥವಾ ಗುಂಪಿಗಾಗಿ ಬೇಕು ಬೇಕೆಂದು ಬೊಬ್ಬಿಡುವುದು ಮಿತಿಮೀರಿದರೆ ಅದರಿಂದ ರಾಷ್ಟ್ರದ ಪ್ರಗತಿ ಕುಂಠಿತವಾಗುವುದು ಅನಿವಾರ್ಯ. ಮಾತ್ರವಲ್ಲದೆ ನಾನಾ ವಿಧದ ಘರ್ಷಣೆಗಳಿಗೂ ಅದು ಕಾರಣವಾಗುತ್ತದೆ.

ಸ್ವಾರ್ಥದ ಕುರುಡು

ಎಲ್ಲ ಉತ್ಪತ್ತಿಯೂ ತಮಗೇ ಇರಬೇಕೆನ್ನುತ್ತಾರೆ ಧನಸ್ವಾಮಿಗಳು. ಲಾಭದ ಬಕ್ಕಂಬರ ತಮಗೆ ದಕ್ಕಬೇಕೆಂದು ಹುಬ್ಬಿರುತ್ತಾರೆ ಬಂಡವಾಳ ಹಾಕಿದ ಮಾಲಕರು. ತಾವೆಂಥ ಭಾಗ್ಯಶಾಲಿಗಳಾಗಿ ಬದುಕುತ್ತಿದ್ದೇವೆಂಬುದನ್ನು ತಲೆಗೆ ಹಾಕಿಕೊಳ್ಳದೆ ಅವರು ಇನ್ನೂ ಬೇಕು ಎನ್ನುತ್ತಾ 'ಬೇಕು ಜಪ'ದಲ್ಲಿ ತಲ್ಲೀನರಾಗಿ ಸರಕಾರ ತೆರಿಗೆಯ ರೂಪದಲ್ಲಿ ಪಾಲು ಬೇಡುವುದಲ್ಲಾ ಎಂದು ಖತಿಗೊಳ್ಳುತ್ತಿರುವರೇ ಹೊರತು, ತಮ್ಮ ಸುತ್ತಮುತ್ತಲಿನ ಬಹುಸಂಖ್ಯಾಕರಾದ ನಿರ್ಗತಿಕರ ಪರಿಸ್ಥಿತಿಯನ್ನು ಗಣನೆಗೆ ತಂದುಕೊಳ್ಳುವುದಿಲ್ಲ. ಅವರ ಕುರಿತು ತಮಗೆ ಯಾವ ಹೊಣೆಯೂ ಇಲ್ಲ ನೆಂಬಂತೆ ವರ್ತಿಸುತ್ತಾರೆ.

ಇನ್ನು ನಾನಾ ವರ್ಗದ ಸರಕಾರಿ ಹಾಗೂ ಖಾಸಗಿ ನೌಕರರು ಮತ್ತು ಕೆಲವು ಕಾರ್ಮಿಕ ಗುಂಪುಗಳಾದರೂ ಹಾಗೆಯೇ ನಿರಂತರವಾಗಿ ಬೇಕು ಬೇಕೆನ್ನುತ್ತಾ ಬೇಡಿಕೆಗಳನ್ನು ಮುಂದಿಡುತ್ತಾರೆಯೇ ಹೊರತು ತಮ್ಮ ಗುಂಪಿನ ಹೊರಗಿರುವ, ತಮ್ಮಷ್ಟೂ ಉಪಪತ್ತಿಯಿಲ್ಲದವರು ಹೇಗೆ ಬದುಕುತ್ತಿದ್ದಾರೆಂಬುದರ ಕುರಿತು ಯೋಚಿಸುವುದಿಲ್ಲ. ಮಧ್ಯಮ ವರ್ಗದವರಿಗೆ ಸಮಾಜದ ಏಣಿಯ ಮೇಲಿನ ಮೆಟ್ಟಲುಗಳ ಮೇಲೆ ನಿಂತಿರುವವರನ್ನು ಕಂಡು ಬೇಕು ಬೇಕೆನ್ನುವುದು ಅಭ್ಯಾಸವೇ ಹೊರತು ಹಿಂದಿರುಗಿ ನೋಡಿ, ಕೆಳಗಡೆ ಹೀಗಿದೆಯೇ ಎಂದು ಯೋಚಿಸುವ ಅಭ್ಯಾಸವಿಲ್ಲ. ನಾನಾ ಬಗೆಯ ಅಲೋಯನ್ಸ್, ಪ್ರಯಾಣಭತ್ತೆ, ತುಟ್ಟಿಭತ್ತೆ, ರಜೆ ವೈದ್ಯ ಸಹಾಯ, ಪೆನ್ಷನು ಇನ್ನೊಂದು ಮತ್ತೊಂದು ಸಾಲದು ಸಾಲದು ಬೇಕು ಬೇಕು ಎಂದು ಪರದಾಡುತ್ತಿರುವ ನೌಕರನು, ಎಂಟಾಣೆ ಅರವತ್ತಾದರೂ ವಿಶ್ರಾಂತಿಯೇ ಇಲ್ಲದೆ ಮಳೆಯೆನ್ನದೆ ಬಿಸಿಲೆನ್ನದೆ ಕೊಡಲಿ ಹಿಡಿದುಕೊಂಡು 'ಕಟ್ಟಿಗೆ ಒಡೆಯಲಿಕ್ಕುಂಟೆ?' ಎಂದು ಕೇಳುತ್ತ ಹೋಗುವ ಬಡವಾಯಿಯ ಕುರಿತು ಎಂದಾದರೂ ಯೋಚಿಸುವುದಿದೆಯೆ? ಹೀಗೆ ಕೆಲವೊಂದು ಗುಂಪುಗಳು ತಂತಮ್ಮ ಏಳಿಗೆಗಾಗಿ ಬೇಕು ಜಪವನ್ನು ಪರಿಸರ ಪುದರಲ್ಲಿ ತಲ್ಲೀನರಾಗಿರುವಾಗ. ಜೀವನದ ಪ್ರಾಮುಖ್ಯ ಆವಶ್ಯಕತೆಗಳು ಕೂಡ ಪೂರೈಸಲ್ಪಡದೆ, ಅವುಗಳು ಬೇಕು ಎನ್ನುತ್ತಿರುವವರ 'ಜಪ' ಅರಣ್ಯ ರೋದನವಾಗಿ ಉಳಿದಿತು.

ಸಂತೆಯಲ್ಲಿ ಎಣ್ಣೆಯ ಕೊಡವನ್ನು ಕೆಡವಿಕೊಂಡು ಗೋಳಿಡುತ್ತಿರುವನೆನ್ನ ಕಂಡು ತೆಂಗಿನಕಾಯಿ ಕೆಡವಿಕೊಂಡವನೂ ಗೋಳಿಡುವಂತೆ ಹೊಟ್ಟೆ ಬಟ್ಟೆಗಿಲ್ಲದವನೂ ಗೋಳಿಡುವುದು, ತಕ್ಕ ಮಟ್ಟಿಗೆ ಇದ್ದವರೂ ಇನ್ನೂ ಹೆಚ್ಚು ಬೇಕೆಂದು ಗೋಳಿಡುವುದು, ಶ್ರೀಮಂತರು ಎಷ್ಟಿದ್ದರೂ ಸಾಲದಲ್ಲ ಎಂದು ಗೋಳಿಡುವುದು ಎಲ್ಲೆಲ್ಲಿಯೂ ಕಂಡುಬರುತ್ತಿದೆ. ವ್ಯಕ್ತಿ ವ್ಯಕ್ತಿಗಾಗಿ, ಕೆಲವೇ ಗುಂಪುಗಳಿಗಾಗಿ ನಡೆಯುವ ಬೇಕ-ಜಪ ಸ್ವಲ್ಪವಾದರೂ ನಿಧಾನವಾಗದಿದ್ದರೆ ಹತ್ತು ಪಂಚವಾರ್ಷಿಕ ಯೋಜನೆಗಳು ಮುಗಿದರೂ ಇದೊಂದು ಕಲ್ಯಾಣ ರಾಷ್ಟ್ರವೆನಿಸಲಾರದು. ಆ ಜಪದಲ್ಲಿ ತೊಡಗಿರುವವರಿಗಂತೂ ಸಿದ್ಧಿಯೆಂಬುದಿಲ್ಲ. ಏಕೆಂದರೆ "ಎಷ್ಟು ದೊರಕಿದರು ಮತ್ತಷ್ಟು ಬೇಕೆಂಬಾಸೆ" ಅವರದು.

ಪ್ರಾಣಿ ಜೀವನದಿಂದ ಪಾಠ

ಯಾರ ಅವಸ್ಥೆ ಏನೇ ಇರಲಿ; ಸಿಕ್ಕಿದ್ದು ದೋಚಿಕೊಳ್ಳುತ್ತೇನೆ; ಬರಲಿ; ಬರಲಿ; ಇನ್ನಷ್ಟು ಬರಲಿ ಎಂಬ grabbing spirit ನಮ್ಮನ್ನು ಈ ರೀತಿ ಕಾಡುತ್ತಿರುವಾಗ ಪ್ರಾಣಿ ಜೀವನದ ಒಂದು ಘಟನೆಯು ಕಡೆಗೆ ಗಮನಕೊಡಬೇಕೆನಿಸುತ್ತದೆ.

ಸಿಂಹಳದಲ್ಲಿ ಮಳೆಯಿಲ್ಲದೆ ಕೆರೆ ತೊರೆಗಳೆಲ್ಲಾ ಬತ್ತಿ ಹೋದಕಾಲ, ಬಾಯಾರಿದ ಆನೆಯೊಂದು ನೀರು ಹುಡುಕಿಕೊಂಡು ಅಲೆಯುತ್ತಾ ಬತ್ತಿಹೋಗಿದ್ದ ಒಂದು ನದೀಪಾತ್ರಕ್ಕೆ ಬಂತು. ನೀರು ಎಲ್ಲಿ ಸುಲಭವಾಗಿ ದೊರೆಯಬಹುದೆಂದು ಕಂಡುಹಿಡಿಯುವ ಶಕ್ತಿ ಕೆಲವು ಆನೆಗಳಿಗಿದೆಯಂತೆ. ಸರಿ, ಒಂದು ಸ್ಥಳದಲ್ಲಿ ನಿಂತು ಆನೆ ತನ್ನ ಬಲವಾದ ಮುಂಗಾಲುಗಳಿಂದ ಕೆಲವಡಿಗಳಷ್ಟು ಮಣ್ಣನ್ನು ಅಗೆದಾಗ ತಿಳಿನೀರು ಕಾಣಿಸಿಕೊಂಡಿತು ಇನ್ನೇನು ಆನೆ ನೀರನ್ನು ಕುಡಿಯಬೇಕು-ಅಷ್ಟರಲ್ಲಿ ಬಾಯಾರಿ ಬಸವಳಿದು ಹೋಗಿದ್ದ ಒಂದು ಎಮ್ಮೆ ಓಡುತ್ತೋಡುತ್ತ ಬಂದು ಆನೆ ತುಂಬಿದ ಕಣ್ಣುಗಳಿಂದ ಆನೆಯನ್ನು ನೋಡುತ್ತ ನಿಂತಿತು. ತಾನು ಶ್ರಮಪಟ್ಟು ಬರಿಸಿಕೊಂಡ ನೀರಿನಲ್ಲಿ ಪಾಲು ಕೇಳಲು ಬಂದ ಬಡ ಜಂತುವನ್ನು ಈ ಮಹಾ ಪ್ರಾಣಿ ಬಡಿದೋಡಿಸಿಬಿಡಬಹುದಿತ್ತು. ಆದರೆ ಆನೆ ಹಾಗೆ ಮಾಡಲಿಲ್ಲ. ಆ ಕೋಣ ಸ್ತ್ರಿಯಯ ಕರುಣಾಜನಕವಾದ ನೋಟ ಅದರಲ್ಲಿ ಯಾವ ಭಾವವನ್ನು ಮೂಡಿಸಿತೊ! ಆನೆ ಗಂಭೀರವಾಗಿ ಒಂದೆರಡು ಹೆಜ್ಜೆ ಹಿಂದೆ ಸರಿದು ನಿಂತಿತು. ಬಾಯಾರಿ ಸಾಯುತ್ತಿದ್ದ ಎಮ್ಮೆ ತನ್ನ ತೃಷೆಯನ್ನು ಹಿಂಗಿಸಿಕೊಳ್ಳುವುದನ್ನು ನೋಡುತ್ತಿದ್ದು ಅದು ಹೊರಟು ಹೋದ ಮೇಲೆಯೇ ತಾನೂ ಯಥೇಚ್ಛವಾಗಿ ನೀರು ಕುಡಿದು ಹೊರಟು ಹೋದ ನಂತೆ ಗಜರಾಜ. ಮರಗಳ ಮರೆಯಲ್ಲಿ ನಿಂತು ಈ ದೃಶ್ಯವನ್ನು ಕಂಡ ಇಬ್ಬರು ಮಾನವ ಜೀವಿಗಳು ನಿಜವಾಗಿಯೂ ಧನ್ಯರೆನ್ನಬೇಕು.

ಪ್ರಾಣಿ ಪ್ರಪಂಚದಲ್ಲಿ ಕೂಡ 'ಬದುಕು, ಬಾಳಿಗೊಡು' (Live, and let live) ಎಂಬ ತತ್ವ ಆಚರಣೆಗೆ ಬಂದ ಇಂಥ ನಿದರ್ಶನಗಳಿರುವಾಗ rational animals ಎನ್ನಿಸಿಕೊಳ್ಳುವ ನಾವು ಆ ಪ್ರಾಣಿಗಳಷ್ಟಾದರೂ ತ್ಯಾಗ, ಔದಾರ್ಯಗಳನ್ನು ತೋರಿಸಬೇಡವೆ? ನಮ್ಮ 'ಬೇಕುಜಪ'ದ ಪರನೆಯನ್ನು ಸ್ವಲ್ಪ ಮಟ್ಟಿಗಾದರೂ ನಿಯಂತ್ರಿಸಿಕೊಳ್ಳಬೇಡವೆ?

ಓದುಗರೊಡನೆ ಎರಡು ಮಾತು

ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಈಗ ೧೭೫ ವರ್ಷಗಳಿಂದ ನಡೆಯುತ್ತಿರುವ ಪ್ರಜಾತಂತ್ರದ ಮಹಾಪ್ರಯೋಗವು ಇತರ ಎಷ್ಟೋ ದೇಶಗಳಿಗೆ ನಿದರ್ಶನ, ಸ್ಫೂರ್ತಿ. ಹೀಗಿರುವಾಗ ಆದರ್ಶನೆಂದು ನಾವು ನಮ್ಮ ನಮ್ಮ ದೇಶಗಳಲ್ಲಿ ಒಪ್ಪಿಕೊಂಡಿರುವ ವಾದ, ರಾಜಕೀಯ ಪದ್ಧತಿ ಮತ್ತು ಜೀವನ ವಾರ್ಗದಲ್ಲಿರುವ ಹುಳುಕುಗಳನ್ನು, ಅದು ಹಿಟ್ಲರ್‌ಶಾಹಿ ಮತ್ತು ಸಾಮ್ಯವಾದಿ ಅಧಿಕಾರಶಾಹಿಯ ಅನಂತರದ ಪ್ರಪಂಚದಲ್ಲಿ ಇದಿರಿಸಬೇಕಾದ ದುಷ್ಟ ಶಕ್ತಿಗಳ ದೆಸೆಯಿಂದ ಪರಿಣತವಾದ ಬಗೆಯನ್ನು, ಬದಲಾವಣೆಯಾಗುತ್ತಿರುವ ಸನ್ನಿವೇಶದಲ್ಲಿ ಅದರ ಆಂತರಿಕ ಶೌರ್ಯವನ್ನು ಬಹಳ ವಿವೇಚನಾಪೂರ್ವಕವಾಗಿ ವಿಶ್ಲೇಷಿಸುವ

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ವಿಚಾರವಂತರಿಗೆ ಇದು ಒಂದು ಔತಣ.

ಬರೆದವರು: ಜಾನ್ ಡ್ಯೂಯಿ

ಅನುವಾದಕ: ಕು. ಶಿ. ಹರಿದಾಸ ಭಟ್ಟ

ಪುಟಗಳು: ೮ + ೧೮೮. ಬೆಲೆ: ಎರಡು ರುಪಾಯಿ.

ಇಂದೇ ಬರೆಯಿರಿ:

ನವಯುಗ ಎಂಟರ್‌ಪ್ರೈಸಸ್, ಲಿಮಿಟೆಡ್

ನವಯುಗ ಪ್ರೆಸ್, ಉಡುಪಿ.

ಮೊದಲು ಹಾರಿದವರು

(೮ನೇ ಪುಟದಿಂದ)

ಪಾದನೆಗೆ ತಾವೂ ಒಂದಿಷ್ಟು ಕೂಡಿಸಿ ಕೊಡಬೇಕಾಗಿತ್ತು. ಸಂಶೋಧನೆಗೆ ಆರಂಭಿಸಿದರು. ಆಗ ದೈನಿಕ ಪತ್ರಿಕೆಯನ್ನು ಆರಂಭಿಸಿದರು. ಬೈಸಿಕಲ್ ಮತ್ತು ಪತ್ರಿಕೆಗಳಿಂದ ತುಂಬಾ ಲಾಭವಾಯಿತು.

ಆಗ ಹಿಂದೆ ಕಟ್ಟಿದ ಗಾಳಿ ಪರಗಳನ್ನೇ ಕಟ್ಟಿ ಹಾರಿಸಲಾರಂಭಿಸಿದರು. ಆ ಪರಗಳಲ್ಲಿ ಕುಳಿತುಕೊಂಡು ಹಾರುವುದಕ್ಕೂ ಪ್ರಯತ್ನಿಸಿದರು. ಕಡೆಗೆ ಆ ಗಾಳಿಯ ಪರಕ್ಕೆ ಪೆಟ್ರೋಲ್ ಎಂಜಿನ್ ಜೋಡಿಸಿಬಿಟ್ಟರು. ಇಬ್ಬರೂ ಸೇರಿ ಪ್ಲಾನ್ (ಅಂದರೆ) ನಕ್ಷೆ ತಯಾರಿಸಿ ಒಳ್ಳೆಯ ವಿಮಾನವನ್ನೇ ಮಾಡಿದರು. ಅಲ್ಲಿನ ತನಕ ಬೇರೆ ಬೇರೆ ದೇಶಗಳಲ್ಲಿ ವಿಮಾನವನ್ನು ಕಟ್ಟಿದ್ದರೂ ಅವುಗಳಲ್ಲಿ ಕುಳಿತು ಯಾರೂ ಹಾರಿಹೋಗುವ ಧೈರ್ಯ ಮಾಡಿರಲಿಲ್ಲ. ಈ ಸಹೋದರರೆ ಮೊದಲಾಗಿ ವಿಮಾನ ಕಟ್ಟಿ, ಅದರಲ್ಲಿ ಒಬ್ಬೊಬ್ಬರಾಗಿ ಕುಳಿತು ಹಾರಿದರು.

ಇವರು ಹಾರುವ ಪ್ರಯೋಗಗಳನ್ನು ಮಾಡಿದ ಜಾಗಕ್ಕೆ ಕಿಟ್ಟೀ ಹಾಕ್ ಎಂದು ಹೆಸರು. ಕಿಟ್ಟಿ ಹಾಕಿನಲ್ಲಿ ಮೊಟ್ಟ ಮೊದಲಾಗಿ ರೈಟ್ ಸಹೋದರರು ವಿಮಾನ ಕಟ್ಟಿ ಮೊಟ್ಟಮೊದಲಿಗರಾಗಿ ಹಾರಿದರು ಹಕ್ಕಿಗಳಂತೆ! ಆ ದಿನವು ಮಾನವನ ಇತಿಹಾಸದಲ್ಲಿ ಒಂದು ಹೊಸ ಹೆಜ್ಜೆ.

ಆ ವೇಳೆಗಾಗಲೆ ಯುದ್ಧವೊಂದು ಆರಂಭವಾಗಿತ್ತು. ಇಂಗ್ಲೆಂಡು, ಅಮೆರಿಕ ಮತ್ತು ಫ್ರಾನ್ಸ್ ಸರಕಾರಗಳು ಈ ರೀತಿ ಹಾರುವ ಪ್ರಯತ್ನಗಳಿಗೆ ಬೆಂಬಲ ಕೊಟ್ಟರು. ಗಾಳಿಪರವು ಬೆಳೆ ಬೆಳೆದು ವಿಮಾನವಾಯಿತು. ಈ ರೈಟ್ ಸಹೋದರರ ಧೈರ್ಯವು ಇತರ ಉತ್ಸಾಹಿಗಳಿಗೆ ದಾರಿ ಮಾಡಿ ಕೊಟ್ಟಿತು. ಕೊಂಚಕೊಂಚ ದೂರ ಸೀಮಾಯಿಗಳನ್ನು ವಿಮಾನದಲ್ಲಿ ಹಾರಿಸಿ ದೇಶಾಂತರಗಳಿಗೆ ಕಳುಹಿಕೊಟ್ಟರು. ಕಿಟ್ಟಿ ಹಾಕಿನ ವಿಮಾನ ಮಾದರಿಯಲ್ಲದೆ ಬೇರೆ ಬೇರೆ ಬಗೆಯ ವಿಮಾನಗಳನ್ನು ಕಟ್ಟಿದರು. ಪೆಸಫಿಕ್ ಸಾಗರವನ್ನು ವಿಮಾನದಲ್ಲೇ ದಾಟಿದರು. ಮಂಜಿನ ಬೆಟ್ಟಗಳ ಮೇಲೆಲ್ಲ ಹಾರಾಡಿದರು ಅಗಿನ ವಿಮಾನ ಗಂಟೆಗೆ ಹದಿನೈದು ಮೈಲು ಹಾರುತಿತ್ತು. ಈಗಿನ ವಿಮಾನ ಐನೂರು ಮೈಲಿಯಾದರೂ ಹಾರುತ್ತದೆ. ಅಗಿನ ವಿಮಾನಕ್ಕೆ ಮುಂಭಾಗದಲ್ಲಿ ಗಿರುಗಟ್ಟೆಯಿತ್ತು. ಪಕ್ಕಗಳಲ್ಲಿ ರೆಕ್ಕೆಗಳಿದ್ದವು ಮತ್ತು ಹಿಂದುಗಡೆ ಬಾಲವೂ ಇತ್ತು. ಈಗಿನ ವಿಮಾನಕ್ಕೆ ಮುಂಭಾಗದ ಗಿರಗಟ್ಟೆಯಿಲ್ಲದೆಯೂ ಆಕಾಶ ಬಾಣದಂತೆ ಸ್ಯೊಯೆಂದು ಹಾರಬಲ್ಲದು.

ರೈಟ ಸಹೋದರರಂತೆ ಈಗಿನವರೂ ಹಾರುವ ಹಕ್ಕಿಗಳನ್ನು ನೋಡಿ ನೋಡಿ ಹೊಸ ಹೊಸ ವಿಚಾರಗಳನ್ನು ಕಂಡುಕೊಂಡು ವಿಮಾನಗಳನ್ನೂ ಪರಿಷ್ಕರಿಸುತ್ತಾರೆ. ತಮ್ಮ ತಾಯಿ ಕೊಟ್ಟ ಉತ್ತೇಜನದಿಂದ ರೈಟ್ ಸಹೋದರರು ಜಗತ್ತಿಗೊಂದು ಹೊಸ ಯಾನವನ್ನೇ ತಯಾರಿಸಿಕೊಟ್ಟರು ಅವರು. ಮಾನವನಿಗೆ ಮಹೋಪಕಾರ ಮಾಡಿದರು. ರೈಟ್ ಸಹೋದರರು ನಮಗೆ ರೆಕ್ಕೆ ಕೊಟ್ಟವರು

ಸ್ವತಂತ್ರ ಭಾರತದಲ್ಲಿ ಭಾರತೀಯರ ಕರ್ತವ್ಯಗಳು

(೧೧ನೇ ಪುಟದಿಂದ)

ಮಿಸಿ, ಸ್ವಾತಂತ್ರ್ಯ ತಂದುಕೊಟ್ಟನಾಯಕರಲ್ಲಿ ಶ್ರೇಷ್ಠರು. ಇವರ ಬಗ್ಗೆ ಮಹಾತ್ಮಾ ಗಾಂಧಿಯವರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ನೋಡಿದರೆ ಇವರ ವ್ಯಕ್ತಿತ್ವದ ಕಲ್ಪನೆ ಬರುವದು. "In bravery he is not to be surpassed who can conceal him in the love of the country. He is pure as the crystel, he is truthful beyond suspicion. He is a knight sans Peur, sans ve Broache. The nation is safe in his hands." ಮಹಾತ್ಮರ ಅಭಿಪ್ರಾಯದ ಪ್ರತಿ ಒಂದು ಅಂಶವು ನಿಜವಾಗಿದೆ. ಇಂದು ಹಿಂದುಸ್ಥಾನವು ಜವಾಹರರ ಕೈಯಲ್ಲಿ ಭದ್ರವಾಗಿದೆ. ಇಷ್ಟೇಏಕೆ ವಿಶ್ವದ ಶಾಂತಿಯು ಕೂಡ ಇವರಕೈಯಲ್ಲಿ ಭದ್ರವಾಗಿದೆ. ಜಗತ್ತು ಶಾಂತಿಗಾಗಿ ಇಂದು ಈ ಶಾಂತಿಪೂತನ ಕಡೆಗೆ ನೋಡುತ್ತಲಿದೆ. ಇಂಥ ಮೇಧಾವಿಯಾದ ನಾಯಕನನ್ನು ಪಡೆದ ಭಾರತವು ಧನ್ಯವೇ ಸರಿ.

ನಮ್ಮ ಕರ್ತವ್ಯಗಳು– ಸ್ವಾತಂತ್ರ್ಯವೆನೋ ದೊರೆಯಿತು. ಆದರೆ ದೊರೆತ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವದೂ ಗಡುತರ ವಿಷಯವೇ ಸರಿ. ಸ್ವಾತಂತ್ರ್ಯ ಪ್ರಾಪ್ತಿಗಾಗಿ ಎಷ್ಟುಸಿಸ್ವಾರ್ಥತೆಯು ಅವಶ್ಯವೋ ಅಷ್ಟೇ ದೊರೆತ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಅವಶ್ಯ. ಇದನ್ನು ಮನವರಿತು ಭಾರತೀಯರಾದ ನಾವು ನಮ್ಮ ದೇಶಕ್ಕಾಗಿ ನಮ್ಮ ಅಂತಃಕಲಹಗಳನ್ನು ಮರೆತು ಒಕ್ಕಟ್ಟಿನಿಂದ ದುಡಿಯಬೇಕಾಗಿದೆ. ಇಂದಿನ ಸರಕಾರವು ನಮ್ಮದೇ ಇದ್ದು, ನಮ್ಮ ಹಿತಕ್ಕಾಗಿಯೇ ಪರಿಶ್ರಮಿಸುತ್ತಿದೆ ಎಂಬುದನ್ನು ಲಕ್ಷದಲ್ಲಿರಿಸಿ ಅದಕ್ಕೆ ಅವಶ್ಯವಾದ ಸಹಕಾರ ಸಹಾನುಭೂತಿಗಳನ್ನು ತೋರಿಸುವದು ನಮ್ಮ ಆದ್ಯ ಕರ್ತವ್ಯ. ಇಂದು ನಮ್ಮ ಮುಖ್ಯಮಂತ್ರಿ ನೇಹರೂರವರ ನೇತೃತ್ವದಲ್ಲಿ ಭಾರತವು ಮುನ್ನಡೆಯುತ್ತಿದೆ. ಜಗತ್ತಿನ ದೃಷ್ಟಿಯೇ ಇಂದು ಭಾರತದ ಪ್ರಗತಿಯ ಕಡೆಗೆ ತಿರುಗಿದೆ. ಇದನ್ನು ಗಣನೆಗೆ ತಂದು ಭಾರತದ ಸರ್ವತೋಮುಖ ಪ್ರಗತಿಗಾಗಿ ಪ್ರತಿಒಬ್ಬ ಭಾರತೀಯನು ಶ್ರಮಿಸಬೇಕಾಗಿದೆ. ಅದಕ್ಕಾಗಿ ಎದುರಾಗುವ ತೊಂದರೆಗಳನ್ನು ತಾಳ್ಮೆಯಿಂದ ಸಹಿಸಬೇಕಾಗಿದೆ. ಇಂದಿನ ಸ್ವಾತಂತ್ರ್ಯ ದಿನದ ಈ ಶುಭ ಮುಹೂರ್ತದಲ್ಲಿ ನಾವೆಲ್ಲ ನಮ್ಮ ಕರ್ತವ್ಯಗಳನ್ನು ಮಾಡುವೆವು ಎಂಬ ಪ್ರತಿಜ್ಞೆಯನ್ನು ಸ್ವೀಕರಿಸೋಣ. ಅದರಂತೆಯೇ ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಸಂಗ್ರಾಮದಲ್ಲಿ ಜೀವತೆತ್ತಿದ್ದ ಲಕ್ಷಾವಧಿ ಹುತಾತ್ಮರಿಗೆ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸಿ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಪ್ರಾರ್ಥಿಸೋಣ.

ಜೈ ಹಿಂದ.

(ಈ ಲೇಖನ ಬರೆಯಲು ಶ್ರೀಮಾನ್ ಬರ್ಲಿ ಬಂದು ಮಾಧವ ಅವರು ಬರೆದ "ಭಾರತೀಯ ಸ್ವಾತಂತ್ರ್ಯದ ಹೆಜ್ಜೆಗಳು" ಎಂಬ ಪುಸ್ತಕದಿಂದ ಅನೇಕ ವಿಷಯ ಸಂಗ್ರಹ ಮಾಡಿದ್ದಾಗಿದೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು. —ಲೇಖಕ.)

THE MYSORE SUGAR CO.,
LIMITED.
HEAD OFFICE:
SREE JAYACHAMARAJA WADIYAR ROAD,
BANGALORE - 2.
Factory & Distillery:
MANDYA (Mysore State)
Manufacturers of
PURE WHITE CRYSTAL
SUGAR
OTHER PRODUCTS INCLUDE
delicious Golden Syrup and a wide rage of Alcohols- - Absolute, Rectified, Denature and Potable.

ಕೈಮಗ್ಗದ ಬಟ್ಟೆಗಳಿಗೆ ಮನೆಮಾತು
ಪೂರ್ಣಿಮಾ ಸ್ಟೋರ್ಸ್
ಹೆಸರಾಂತ ಪೂರ್ಣಿಮಾ ಸ್ಪೆಶ್ಯಲ್ ಶೀರೆ ತಯಾರಕರು.
ಎಲ್ಲಾ ತರದ ಕೈಮಗ್ಗದ ಬಟ್ಟೆಗಳ ರಖಂ ಮತ್ತು ಚಿಲ್ಲರೆ ಜವುಳಿ ಮಳಿಗೆ.
ಪೊಪ್ಯುಲರ ಕಟ್ಟಡ, ಮಂಗಳೂರು-1.
POORNIMA STORES
Manufacturers, Wholesale & Retail
Handloom Cloth Dealers,
POPULAR BUILDINGS, MANGALORE-1.

ಎಲ್ಲಾ ತರದ ಫೋಟೋ ಮತ್ತು ಆರ್ಟ್ ಕೆಲಸಗಳಿಗೆ ಸಂದರ್ಶಿಸಿರಿ.
ನಾಯಕ್ ಸ್ಟುಡಿಯೋ,
ಲೈಟ್ ಹೌಸ್ ಹಿಲ್ ರೋಡು, ಹಂಪನಕಟ್ಟೆ, ಮಂಗಳೂರು.

ನಮ್ಮ ಸ್ವಾತಂತ್ರ್ಯಸಾಧನೆಯ ದಿವ್ಯ ಶಕ್ತಿ-ಸತ್ಯಾಗ್ರಹ.

(೭ನೇ ಪುಟದಿಂದ)

ತ್ತೀನೆ' ಎಂದು ಹೀಗೆ ಹೆಚ್ಚೆ ಕೆಚ್ಚಿನಿಂದ ಸತ್ಯಾಗ್ರಹದ ಹೆಸರೆತ್ತಿ ಏನೇನೋ ಸಂಪಾದಿಸಿದ್ದುಂಟು ಆದರೆ ಸತ್ಯಾಗ್ರಹದ ದಂಥ ಮಹಾಶಕ್ತಿಯ ಆರಾಧನೆ ಮಹತ್ಕಾರ್ಯಕ್ಕಾಗಿಯೇ ಇರಬೇಕು, ನ್ಯಾಯವೂ ಪವಿತ್ರವೂ ಆದ ಸಾಧನೆಗೇ ಇರಬೇಕು.

ಒಂದು ಸಂಘರ್ಷ ನಮ್ಮೂರ ದೇವಸ್ಥಾನದಲ್ಲಿ ಹರಿಜನ ಪ್ರವೇಶಕ್ಕಾಗಿ ಒಬ್ಬರು ಸತ್ಯಾಗ್ರಹ ಆರಂಭಿಸಿದರು. ಆದರಲ್ಲೂ ಅನ್ನ ಸತ್ಯಾಗ್ರಹ ಕೈಕೊಂಡರು. ವಾರಗಳು ಉರುಳಿದರೂ ಪರಿಸ್ಥಿತಿ ಹದಕ್ಕೆ ಬರಲಿಲ್ಲ ಮತ್ತೆ ಯಾರೂ ಆ ಕಡೆಗೆ ವಿಶೇಷ ಗಮನ ಸಹಾಕೊಡಲಿಲ್ಲ ಸತ್ಯಾಗ್ರಹಿಗೆ ಗಾಬರಿಯಾಯಿತು. ಏನು ಮಾಡಬೇಕೆಂದು ತೋಚದೇ ತನ್ನ ಆಪ್ತನಿಂದ ಪ್ರತಿ ದಿನವೂ ರಾತ್ರೆ ಇಡ್ಲಿ, ಕಾಫಿಗಳನ್ನು ತರಿಸಿಕೊಂಡು ಅದನ್ನು ಇಳಿಸಿ ಅನ್ನ ಸತ್ಯಾಗ್ರಹ ಮುಂದರಿಸಿದ. ಯಾವ ಪತ್ರಿಕೆಯಲ್ಲೂ ಇವನ ಸತ್ಯಾಗ್ರಹದ ಸುದ್ದಿಯೂ ಇರಲಿಲ್ಲ. ಏಮ್ಮೆ ನಾನು ಪತ್ರಿಕಾ ಪ್ರತಿನಿಧಿಯಾಗಿ ಅವನ ಸಂದರ್ಶನಕ್ಕೆ ಹೋದೆ. ಮೂರುವಾರ ಸತ್ಯಾಗ್ರಹ ಕೈಕೊಂಡಿದ್ದರೂ ಮೈ ಬಸವಳಿದಿರಲಿಲ್ಲ. ಇದಕ್ಕೆ ಇಡ್ಲಿ, ಕಾಫಿಗಳ ಪ್ರಭಾವವೇ ಕಾರಣವಾಗಿತ್ತು.

ಇವನ ಕೇಳಿಕೆ ಕೇಳಿದೆ. 'ಸ್ವಾಮೀ, ನನ್ನ ಸತ್ಯಾಗ್ರಹದ ಸುದ್ದಿ ಯಾವ ಪತ್ರಿಕೆಯಲ್ಲಿಯೂ ಬರಲಿಲ್ಲ. ತಾವಾದರೂ ತುಸು ದಪ್ಪಅಕ್ಷರದಲ್ಲಿ ಹಾಕಿಸಿ. ಫೋಟೋ ಕೊಡುತ್ತೇನೆ. ಅದಕ್ಕೆ ಬರುವ ಖರ್ಚು ಸಹಾ ನಾನೇ ಕೊಡುತ್ತೇನೆ.'

ಮಾರನೆಯ ದಿನ ನಮ್ಮ ಪತ್ರಿಕೆಯಲ್ಲಿ ಬಂದಿತು. "....ಊರ ದೇವಸ್ಥಾನದಲ್ಲಿ ನಡೆಯುವದು ಸತ್ಯಾಗ್ರಹವಲ್ಲ. ಇಡ್ಲಿ, ಕಾಫಿಗಳ ಸತ್ಯಾಗ್ರ' ಇದನ್ನೋದಿದ ರಾತ್ರೆಯೇ ಸತ್ಯಾಗ್ರಹಿ ಪಲಾಯನ ಹೇಳಿದ.

ಸತ್ಯಾಗ್ರಹ ಈ ರೀತಿಯ ಮಟ್ಟಕ್ಕೆ ಇಳಿಯಬಾರದು. ಸತ್ಯ ದರ್ಶನಕ್ಕಾಗಿ ನಡೆಯುವ ಆ ಆರಾಧನೆ ಸಾತ್ವಿಕವಾಗಿರಬೇಕು ಶಾಂತಿಯುತವಾಗಿರಬೇಕು. ಅದರ ಯಾವ ನಿಯಮಕ್ಕೂ ಚ್ಯುತಿ ಬಾರದಂತಿರಬೇಕು.

ನಮ್ಮಲ್ಲಿ ಈ ಸತ್ಯಾಗ್ರಹದ ಮೂಲ ಪ್ರಚೋದಕರು ಗಾಂಧೀಜೀ. ದೇಶದ ಸ್ವಾತಂತ್ರ್ಯ ಸಂಪಾದನೆ ಈ ಸತ್ಯಾಗ್ರಹದಿಂದಲೇ ಸಾಧ್ಯ ಎಂದು ನಾಡಿನ ಎಲ್ಲ ಜನಗಳ ನಾಡಿ ನಾಡಿಗಳಲ್ಲಿಯೂ ಇದರ ಸತ್ವವನ್ನು ಜಾಗ್ರತಿಯಾಗುವಂತೆ ಮಾಡಿದರು ತಾವೂ ಸಹ ಮಹರ್ಷಿಗಳ ಉಗ್ರ ತಪಸ್ಸಿನಂತೆ ಈ ಸತ್ಯಾಗ್ರಹವನ್ನು ಆಚರಿಸಿದರು. ಅದರ ಎಲ್ಲ ತತ್ವಗಳನ್ನೂ ಅರಗಿಸಿಕೊಂಡರು.

ಒಬ್ಬ ಸತ್ಯಾಗ್ರಹಿಗೆ ಗಾಂಧೀಜೀ ಹೀಗೆ ಉಪದೇಶವಿತ್ತರು-"ಜನರನ್ನು ಹೆದರಿಸುವದಕ್ಕೆ, ತಥವಾ ಸರಕಾರವನ್ನು ಬಗ್ಗಿಸುವದಕ್ಕೆ ಇಲ್ಲವೇ ಇನ್ನಾವುದೋ ಉದ್ದೇಶಕ್ಕಾಗಿ ಸತ್ಯಾಗ್ರಹ ಮಾಡಬಾರದು. ನಮ್ಮ ನ್ಯಾಯದ ಮೌಲ್ಯವನ್ನು ಗಳಿಸುವದಕ್ಕೆ ಸತ್ಯಾಗ್ರಹ ಮಾಡಬೇಕು. ಸತ್ಯಾಗ್ರಹವೆಂದರೆ ಸತ್ಯದ ಆರಾಧನೆ.

ಸತ್ಯಾಗ್ರಹದ ಸಿದ್ಧ ಋಷಿಯಾದ ಗಾಂಧೀಜೀಯವರು ದೇಶಕ್ಕೆ ಸತ್ಯಾಗ್ರಹದ ಸಂದೇಶ ಕೊಟ್ಟಾಗ ಭಾರತದ ಎಲ್ಲೆಡೆಯಲ್ಲಿಯೂ ಸತ್ಯಾಗ್ರಹ ಅವಿಶ್ರಾಂತವಾಗಿ ನಡೆಯಿತು. ಎಲ್ಲಿ ನೋಡಿದರೂ "ಭಲೇಜಾವ್" ಘೋಷಣೆ ನಡೆಯಿತು. ಅನೇಕ ಸತ್ಯಾಗ್ರಹಿಗಳಲ್ಲಿ ತ್ಯಾಗ, ಸೇವೆ, ಅಹಿಂಸೆ, ತಾಳ್ಮೆ ಮುಂತಾದ ಗುಣಗಳ ಸಂಸ್ಕಾರ ನಡೆಯಿತು. ಕೋಟಿ ಕೋಟಿ ಆತ್ಮಗಳಲ್ಲಿ ಜಾಗ್ರತವಾದ ಈ ಸತ್ಯಾಗ್ರಹ ದೇಶಕ್ಕೆ ಸ್ವಾತಂತ್ರ್ಯ ತಂದಿತು.

೧೯೪೭ರ ಆಗಸ್ಟ ಹದಿನೈದು. ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯ ದಿನ. ಸತ್ಯಾಗ್ರಹದಿಂದ ಸ್ವಾತಂತ್ರ್ಯದ ಸಿದ್ಧಿ ಪಡೆದ ದಿನ. ಅಂದು ಹಿಂದಿನಂತೆಯೇ ಕಚೇರಿಯ ಮುಂದೆ ಜನಸ್ತೋಮ ಸೇರಿತ್ತು. ತ್ರಿವರ್ಣ ಧ್ವಜ ಗಾಳಿಯಲ್ಲಿ ಹಾರುತ್ತಿತ್ತು. ಭಾರತ ಮಾತಾಕೀ ಜೈ.-ವಂದೇ ಮಾತರಂ. ಅದೇ ಕೂಗು. ಅದೇ ಗೀತಿ. ಆದರೆ ಆ ಧ್ವನಿಯಲ್ಲಿ ಅವ್ಯಕ್ತವಾಗಿ ಸತ್ಯಾಗ್ರಹದ ದಿವ್ಯತೇಜಸ್ಸಿತ್ತು. ಓಜಸ್ಸಿತ್ತು

ಮಧುಪರ್ಕ

ಪೂನಾದಲ್ಲಿದ್ದಾಗ ಮಹಾತ್ಮಾಗಾಂಧಿಯವರು ಒಂದು ಸಾಯಂಕಾಲ ಸಂಗಡಿಗರೊಡನೆ ಗಾಳಿ ವಿಹಾರಕ್ಕೆ ಹೊರಟಿದ್ದರು. ಅವರ ಗುಂಪಿನಲ್ಲಿ ಹತ್ತಿಪ್ಪತ್ತು ಜನರಿದ್ದರು. ಅವರಲ್ಲಿ ಮಾನವತೆಯ ಬಗ್ಗೆ ಚರ್ಚೆ ನಡೆದಿತ್ತು.

ರಸ್ತೆಯಲ್ಲಿ ಹಾಗೆ ಹೋಗುತ್ತಿದ್ದಾಗ ರಸ್ತೆಯ ಪಕ್ಕದ ಬೀದಿಯಿಂದ ಒಬ್ಬ ಕುಷ್ಟರೋಗಿಯು ತಡುವುತ್ತಾ ಬರುತ್ತಿದ್ದ. ರಸ್ತೆಯಲ್ಲಿ ಹತ್ತಿಪ್ಪತ್ತು ಜನರು ಬರುತ್ತಿರುವದನ್ನು ಕಂಡು ತನ್ನ ರೋಗ ಪೀಡಿತ ಶರೀರವನ್ನು ಅವರಿಗೆ ಹೇಗೆ ತೋರಿಸಲೀ ಎಂದೆನಿಸಿರಬೇಕು. ಅತನು ರಸ್ತೆಯನ್ನು ದಾಟದೆ ಬಂದ ಹಾದಿಯಲ್ಲಿಯೇ ಹಿಂದಿರುಗಿದನು.

ಆ ಗೊಂದಲದಲ್ಲಿ ಅತನ ಕಾಲುಗಳು ತಡರಿ ಅತನು ಅಲ್ಲೇ ನೆಲದಲ್ಲಿ ಕುಸಿದು ಬಿದ್ದನು. ಅವನು ಬೀಳುವದನ್ನು ಗಾಂಧೀಜಿಯ ಗುಂಪಿನ ಎಲ್ಲರೂ ನೋಡಿದರು ಅವನನ್ನು ಹಿಡಿದೆಬ್ಬಿಸಬೇಕೆಂದು ಕೆಲವರ ಮನದಲ್ಲಿ ಮರುಕವೂ ಹುಟ್ಟಿತು. ಆದರೆ ಅತನು ಮಹಾರೋಗಿ, ಮುಟ್ಟಿಲಾರದಷ್ಟು ಹೇಸಿಕೆಯಿಂದಿದ್ದಾನೆಂಬುದು ಎಲ್ಲರಿಗೂ ಗೊತ್ತಿತ್ತು. ಆದ್ದರಿಂದ ಆ ಗುಂಪಿನ ಹಿಂದಲ್ಲಿ ಎಲ್ಲರೂ ಅತನನ್ನು ನೋಡಿದರೂ ನೋಡದಂತೆ ಮುಂದೆ ಹೋಗಹತ್ತಿದರು.

ಅಷ್ಟರಲ್ಲಿ ಮಹಾತ್ಮಾ ಗಾಂಧಿಯವರು ಆ ರೋಗಿಯ ಕಡೆ ಧಾವಿಸಿದರು. ಅವನನ್ನು ಆಸ್ಥೆಯಿಂದ ಹಿಡಿದೆಬ್ಬಿಸಿದರು. ಅತನ ಗುಡಿಸಲಿನ ದಾರಿ ಕೇಳಿದರು. ರೋಗಿ ಗಾಂಧೀಜಿಯ ಹೆಗಲ ಮೇಲೆ ಕೈಯಿಟ್ಟು ಅದೇ ರಸ್ತೆಯಲ್ಲಿ ನಡೆಯುತಿದ್ದ.

ಮಾನವತೆಯ ಬಗ್ಗೆ ಚರ್ಚೆ ಮಾಡುತಿದ್ದ ಆ ಜನ ದಂಗಾಗಿ ಗಾಂಧೀಜಿಯತ್ತ ನೋಡುತ್ತಿದ್ದರು.

—ಆಧಾರದಿಂದ

ತಂತಿ: "LAXMINIVAS". ಟೆಲಿಫೋನ್: 82.

ಮಂಗಳೂರನ್ನು ಸಂದರ್ಶಿಸಿದಾಗ ನೆನಪಿರಲಿ—

"ಜಯ ಕೆಫೆ--ಲಕ್ಷ್ಮಿನಿವಾಸ್"

ಅತ್ಯಾಧುನಿಕವಾದ ಸಕಲ ಸೌಕರ್ಯಗಳಿಂದೊಡಗೂಡಿದ

ಬೋರ್ಡಿಂಗ್ ಲಾಡ್ಜಿಂಗ್



ಊಟ ಮತ್ತು ವಸತಿಗೃಹ.

ಜನತಾಸೇವೆಯೇ ನಮ್ಮ ಮುಖ್ಯ ಗುರಿ.

FOR ENTIRELY MODERNISED AND SELF CONTAINED ROOMS:-

JAYA CAFE - LAXMI NIVAS

K. S. Rao Road, MANGALORE. (S. K.)

H. O. COIMBATORE. Prop: N. V. BHAT.

ಕಾಳಿದಾಸನ ಕಾಲದ ಭಾರತ

(೬ನೇ ಪುಟದಿಂದ)

ರಾಜರ ಅಧಿರಾಜನೇ ಸಾಮ್ರಾಟ್ ಅಥವಾ ಚಕ್ರವರ್ತಿ. ಆಗ ರಾಜಕುಮಾರರು ಪಾಪಮಾರ್ಗದಿಂದಲೂ ರಾಜ್ಯವನ್ನು ಸಂಪಾದಿಸುತ್ತಿದ್ದರು. (ರ. ವಂ. ೮-೨). ಆಗಿನ ರಾಜರು ಏರುವ ರಥಕ್ಕೆ ಒಂದೊಂದು ಹೆಸರಿಡುತ್ತಿದ್ದರು. ಒಂದಕ್ಕೆ ಸೋಮದತ್ತ (ವಿಕ್ರ. ನಾ. ೧) ಎಂದೂ, ಇನ್ನೊಂದು ರಥಕ್ಕೆ ವಿಜಯ್ವರ (ಕು. ಸಂ. ೧೪-೨) ಎಂದೂ ಹೆಸರಿತ್ತು. ಅಲ್ಲದೆ ಆ ಕಾಲದ ರಾಜರಿಗೆ ಪುರಾಣಕಾಲದಂತೆ ಮತ್ಸ್ಯ (ರ. ವಂ. ೭-೪೮), ಹರಿಣ ಮೊದಲಾದ ಧ್ವಜಗಳಿದ್ದುವು. ಅರಮನೆಗಳಿಗೆ ವಿಶಿಷ್ಟ ಹರ್ಮ್ಯ, ದೇವಚ್ಛನ್ನ, ವೈಜಯಂತ, ಮೇಘಚ್ಛಂದ ಮೊದಲಾದ ಹೆಸರುಗಳಿದ್ದುವು. ಅಂದಿನ ರಾಜಕಾರ್ಯಗಳೆಲ್ಲಾ ವಿಶೇಷವಾಗಿ ಪ್ರಾತಃಕಾಲದಿಂದ ಮಧ್ಯಾಹ್ನದವರೆಗೆ ನಡೆಯುತ್ತಿತ್ತು.

ಆಗ ಬೇಸಾಯವು ಮಳೆಯನ್ನೇ ಹೊಂದಿಕೊಂಡಿರಲಿಲ್ಲಿ. ಬೇಸಾಯಕ್ಕೆ ಕಾಲುವೆಗಳನ್ನು ತೋಡುತ್ತಿದ್ದರು. (ರ. ವಂ. ೧೨. ೩) ದೊಡ್ಡ ದೊಡ್ಡ ನದಿಗಳನ್ನು ಆನೆಗಳ ಬೆನ್ನ ಮೇಲೆ ಹಲಗೆಗಳನ್ನು ಹಾಕಿ ಸೇತುವೆ ನಿರ್ಮಾಣಮಾಡಿ ದಾಟುತ್ತಿದ್ದರು. (ರ. ವ. ೪.೩೮). ರಘು ಮಹಾರಾಜನು ಕವಿಶಾ ನದಿಯನ್ನು ಹೀಗೆಯೇ ದಾಟಿದನಂತೆ!

ಆ ದಿನಗಳಲ್ಲಿ ಕಾಶ್ಮೀರದ ಕುಂಕುಮ ಕೇಸರಿ (ರ. ವಂ ೪ ೬೭), ಕಾಂಭೋಜದ ಅಖರೋಟು (ರ. ವಂ. ೪. ೬೯) ಗಳು ಪ್ರಸಿದ್ಧವಾಗಿದ್ದುವು. ಇವನ್ನು ರಘುವಿನ ದಿಗ್ವಿಜಯದ ಪ್ರಸಂಗದಲ್ಲಿ ಕಾಣಬಹುದು. ರಘುವಿನ ಕುದುರೆಗಳು ಸಿಂಧು ನದಿಯ ತೀರದಲ್ಲಿ ಹೊರಳಾಡಿದಾಗ ಮೈಗೆ ತುಂಬಾ ಕುಂಕುಮಕೇಸರಿ ಅಂಟಿಕೊಂಡಿತಂತೆ! ಇನ್ನು ವೈಸೂರಿನ ಚಂದನ (ರ. ವಂ. ೪.೪೮), ಚೀನಾ ರೇಶ್ಮೆ (ಕು. ಸಂ. ೭ ೩), ಮಲಯ ಪರ್ವತದ ಮೆಣಸು, ಏಲಕ್ಕಿ (ರ. ವಂ. ೪), ತಾಮ್ರಪರ್ಣಿ ಸಮುದ್ರ ಸಂಗಮದಲ್ಲಿದ್ದ ಮುತ್ತು (ರ. ವ. ೪), ಪಾರಸೀಕ (ವನಾಯುಜ) ದೇಶದ ಕುದುರೆ (ರ. ವಂ. ೫. ೭೩)— ಇವು ಆ ಕಾಲದಲ್ಲಿ ಹೆಸರುಪಡೆದಿದ್ದುವು. ಆಗ ಸಿಂಧು ನದಿಯ ಅಚೆ ದಡದಿಂದ ಇಂದಿನ ಬಲುಚಿಸ್ಥಾನ ಮತ್ತು ಅದರ ಉತ್ತರ ಪಶ್ಚಿಮಕ್ಕಿದ್ದ ದೇಶವೆಲ್ಲಾ ಪಾರಸೀಕವೆಂದು ಕರೆಯಲ್ಪಡುತ್ತಿತ್ತು. ಈ ದೇಶಕ್ಕೆ ಹೋಗಲು ಆಗಿನವರು ಭೂಜಲ ಮಾರ್ಗವೆರಡನ್ನೂ ಉಪಯೋಗಿಸುತ್ತಿದ್ದರು. ಜಲಮಾರ್ಗದಲ್ಲಿ ಸಂಚರಿಸಲು ದೊಡ್ಡ ದೊಡ್ಡ ನೌಕೆಗಳಿದ್ದುವು. ರಘುವು ನೌಕಾಶಕ್ತಿಯಿಂದಲೇ ವಂಗ ದೇಶವನ್ನು ಗೆದ್ದನಂತೆ! ಆಗ ನಾವೆಗಳಲ್ಲಿ ಸಮುದ್ರ ವ್ಯಾಪಾರವು ನಡೆಯುತ್ತಿತ್ತು. (ರ. ವಂ. ೧೪.೩೦).

ಆಗ ಜಲವನ್ನು ಒಂದು ಜಾತಿಯ ಹೊಗೆಳಿಂದ ಶೋಧಿಸುತ್ತಿದ್ದರು. (ವಿಕ್ರ. ನಾ. ೨). ಕಾರಂಜಿಗಳ ಪರಿಚಯವು ಅಂದಿನವರಿಗಿತ್ತು. (ರ. ವಂ. ೧೧). ನಗರಗಳಲ್ಲಿ ದೊಡ್ಡ ಶಿವಮೂರ್ತಿಯನ್ನು ನಿರ್ಮಿಸಿ ಅದರ ಕಿರೀಟದಲ್ಲಿ ದೊಡ್ಡ ಬೆಳಕಿಂದನ್ನು ಇಡುತ್ತಿದ್ದರು. ಅದು ಇಡೀ ನಗರವನ್ನು ಪೂರ್ಣಜ್ಯೋತ್ಸ್ನೆಯಂತೆ ರಾತ್ರಿಯೆಲ್ಲಾ ಬೆಳಗುತ್ತಿತ್ತು. (ರ. ವಂ. ೬. ೩೪). ಅಲ್ಲದೆ ಅಗಿನ ಜನರಿಗೆ ಭೂಮಿಯ ನೆರಳು ಚಂದ್ರನ ಮೇಲೆ ಬಿದ್ದು ಚಂದ್ರಗ್ರಹಣವಾಗುವುದೇಂಬ ವಿಚಾರ. ಗೊತ್ತಿತ್ತು. (ಛಾಯಾಹಿಭೂಮೇ ಶಶಿನೋಮಲತ್ವೇನಾರೋಪಿತಾ ಶುದ್ಧಿಮತಃ ಪ್ರಜಾಭಿ:—ರ. ವಂ. ೧೪.೪೦). ಭರತ ಇಳತ್ಕ್ಕೂ ಚಂದ್ರನೇ ಕಾರಣನೆಂಬ ತಿಳಿವಳಿಕೆಯೂ ಅವರಿಗಿತ್ತು (ಮಹೋದಧೇ:.ಪೂರ ಇವೇಂದು ದರ್ಶನಾದ್ಗುರು ಪ್ರಹರ್ಷಃ ಪ್ರವಭೂವನಾತ್ಮನಿ—ರ. ವಂ. ೪.೧೭). ಕುಮಾರ ಸಂಭವದಲ್ಲಿ ಜಾಮಿತ್ರ (Geometry)ದ ವಿಚಾರವಿದೆ (ಕು. ಸಂ. ೭.೧). ಈ ಗಣಿತವು ಯುರೋಪ್ ದೇಶೀಯರಿಗೆ ಗ್ರೀಕರಿಂದ ಲಭ್ಯವಾಯಿತಂತೆ. ಗ್ರೀಕರಿಗೆ ಭಾರತೀಯರಿಂದಲೇ ಗೊತ್ತಾಯಿತು.

ಕಾಳಿದಾಸನಿಗಿಂತಲೂ ಪೂರ್ವದಲ್ಲೇ ಜನ್ಮಾಂತರ ವಿಚಾರ, ಕರ್ಮಫಲ, ಮರಣ, ಮೋಕ್ಷ ಮೊದಲಾದುವುಗಳ ತಿಳುವು ನಮ್ಮವರಿಗಿತ್ತು. ಗಂಗಾ ಯಮುನಾ ನದಿಗಳು ಅಂದೂ ಪುಣ್ಯ ನದಿಗಳೇ ಆಗಿದ್ದುವು. ಆಗಲೂ ಜನರಿಗೆ ಇವು ಸ್ನಾನದಿಂದ ಸದ್ಗತಿಯನ್ನು ಕೊಡಬಲ್ಲವೆಂಬ ನಂಬಿಕೆ ಇತ್ತು. (ರ. ವಂ. ೧೩.೫೮) ಶ್ರೀರಾಮನು ಅಯೋಧ್ಯಾಭಿಮುಖನಾದಾಗ ಈ ಪುಣ್ಯ ನದಿಗಳ ಮಹಿಮೆಯನ್ನು ಸೀತೆಗೆ ವರ್ಣಿಸುತ್ತಾನೆ. ಇಂದಿಗಿಂತ ಆಗ ಅಗ್ನಿಗೆ ಶುಂಬಾಪ್ರಾಶಸ್ತ್ಯವಿತ್ತು. ಅಗ್ನ್ಯಾರಾಧನೆ, ಸೂರ್ಯಾರಾಧನೆಗಳು ದೇಶದಲ್ಲಿ ಸರ್ವತ್ರ ವ್ಯಾಪಿಸಿದ್ದುವು. (ವಿಕ್ರ. ನಾ. ೧.) ವಿಕ್ರಮೊರ್ವಶೀಯದ ಉರ್ವಶಿಯ ಸಖಿ ಚಿತ್ರಲೇಖೆಯು ಸೂರ್ಯೋಪಾಸಕಳು. ಇಂದ್ರನ ದೇವಾಲಯವೂ ಆಗ ಇತ್ತು (ವಿಕ್ರ. ನಾ. ಅಂ. ೨). ಬ್ರಾಹ್ಮಣರು ಶಾಪಾನುಗ್ರಹ ಸಮರ್ಥರಾಗಿದ್ದರು. ಅವರಿಗೆ ಎಲ್ಲಾ ಕಡೆಗಳಲ್ಲಿಯೂ ಗೌರವವಿತ್ತು. (ರ. ವಂ. ೧೧)

ಅಂದಿನ ಜನರು ಪೂರ್ವ ವಯಸ್ಸಿನಲ್ಲಿ ಸಂಸಾರಿಗಳಾಗಿದ್ದು ಹಣ ಸಂಪಾದನೆಗಾಗಿ ದುಡಿಯುತ್ತಿದ್ದರು. ಮುಂದೆ ಮಕ್ಕಳ ಮೇಲೆ ಸಂಸಾರದ ಭಾರತೊರಿಸಿ, ವಿಶ್ರಾಂತಿಕೊಂಡುತ್ತಿದ್ದರು (ವಿಕ್ರ. ನಾ ೩.೧). ಇಂದಿನವರಂತೆ ಉಸಿರಾಟದ ಕೊನೆಯ ಗಳಿಗೆಯವರೆಗೂ ಹಣಕ್ಕಾಗಿ ಗೋಗರೆದು ಕೊಳ್ಳುತ್ತಿರಲಿಲ್ಲ. ಇನ್ನು ಆಗಿನ ಧರ್ಮ ವೃದ್ಧರಿಗೆ ವಯಸ್ಸು ಪ್ರಧಾನವಾಗಿರಲಿಲ್ಲ. ವಯೋವೃದ್ಧರಾದ ಮತ್ತು ಬ್ರಾಹ್ಮಣರಾದ ಋಷಿಗಳು ಬಾಲೆಯಾದ ಮತ್ತು ಕ್ಷತ್ರಿಯ ವಂಶೋದ್ಭವಳಾದ ಉಮಾದೇವಿಯ ದರ್ಶನಾಕಾಂಕ್ಷಿತರಾಗಿ ಬಂದರಂತೆ! ಆಗ ಸಂದೇಹ ಬಂದಾಗಲೆಲ್ಲಾ ಸತ್ಪುರುಷರ ಮನಃಪ್ರವೃತ್ತಿಯೇ ಪ್ರಮಾಣವಾಗಿತ್ತು. (ಅ. ಶಾಕುಂ.) ಅಂದು ಮನಸ್ಸನ್ನು ಕವಡುವ ಸಾಮಗ್ರಿ ಇದ್ದಾಗಲೂ ಮನಸ್ಸನ್ನು ಬಿಗಿಹಿಡಿಯುವ ಧೀರರೇ ಶಕ್ತರೆಂದು ಭಾವಿಸುತ್ತಿದ್ದರು. (ಕು. ಸಂ. ೧) ಅಲ್ಲದೆ ವಿಷಯಕ್ಷವಾದರೂ ತಾನೇ ಬೆಳೆದು ದನ್ನು ಕಡಿಯುವುದು ಸರಿಯಲ್ಲವೆನ್ನುವ ನೀತಿ ರೂಢಿಯಲ್ಲಿತ್ತು. (ಕು. ಸಂ. ೨). ನೆಂಟರೆದುರಿಗೆ ಬಂದಾಗ ಅದುವರೆಗೆ ಶ್ರಮಪಟ್ಟು ಕಡೆದಿದ್ದ ದುಃಖವು ರಭಸದಿಂದ ಉಕ್ಕುವುದು (ಕು. ಸಂ. ೪). ಇದು ಕಾಳಿದಾಸನ ಅನುಭವದ ಮಾತು. ಯಾಚನೆಯು ಅಧಮರಲ್ಲಿ ಸಫಲವಾಗುವುದಕ್ಕಿಂತಲೂ, ಉತ್ತಮನಲ್ಲಿ ನಿಷ್ಫಲವಾಗುವುದೇ ಉತ್ತಮ. (ಮೇ. ಸಂ. ೧.೬). ಅತಿ ತುಚ್ಛನಾದವನು ಕೂಡ ಉಪಕಾರಮಾಡಿದ ಸ್ನೇಹಿತರಿಗೆ ಪ್ರತ್ಯುಪಕಾರ ಮಾಡಲು ಹಿಂಜರಿಯುವುದಿಲ್ಲ. (ಕು. ಸಂ.) ಆ ಕಾಲದಲ್ಲಿ ಕೃತಘ್ನರ ಸಂಖ್ಯೆ ತೀರಾ ಕಡಿಮೆ ಇದ್ದಿರಬೇಕು.

ಕವಿಗಳಿಗೆ ತಮ್ಮ ಕಾಲದ ಜನಜೀವನವನ್ನು ತಮ್ಮ ಕಾವ್ಯಗಳಲ್ಲಿ ಚಿತ್ರಿಸದೆ ಇರಲು ಸಾಧ್ಯವೇ ಇಲ್ಲ. ಈ ತತ್ವದ ಪಂಚಾಂಗದ ಮೇಲೆಯೇ ಈ ಬರಹವು ಬರೆಯಲ್ಪಟ್ಟಿದೆ. ರವಿಕಾಣದುದನ್ನು ಕವಿಕಂಡನೆನ್ನುವುದಿದೆಯಾದರೂ, ಆತನು ರವಿಕಂಡ ವಿಚಾರವನ್ನು ಬಿಟ್ಟಿಲ್ಲ.

ಕಾಳಿದಾಸನ ಆಶ್ರಯದಾತನಾದ ವಿಕ್ರಮಾದಿತ್ಯನು ಶೌರ್ಯಕ್ಕೆ ಸೀಮಾಪುರುಷನಾಗಿದ್ದಂತೆ, ಸಾಹಿತ್ಯಕ್ಕೆ ಕಾಳಿದಾಸನು ಸೀಮಾಪುರುಷನಾಗಿದ್ದಾನೆ ಅವನಿಂದ ಅಮರಕಾವ್ಯ — ನಾಟಕಗಳನ್ನು ಒರೆಸಲು ವಿಕ್ರಮಾದಿತ್ಯನ ರಾಜ್ಯಭಾರವೂ ಒಂದು ಪ್ರಬಲವಾದ ಕಾರಣವಾಗಿತ್ತು. ವಿಕ್ರಮಾದಿತ್ಯನು ಮರ್ತ್ಯಲೋಕವನ್ನು ಸ್ವರ್ಗದೊಡನೆ ಸರಿದೂಗಲು ಪ್ರಯತ್ನ ಪಟ್ಟನು. ಅಂಥಾ ಮಹಾಪುರುಷನ ಆಶ್ರಯವು ಕವಿಗೆ ಸ್ವರ್ಗದ ಕನಸನ್ನುಂಟು ಮಾಡದಿದ್ದೀತೆ? 'ಯಥಾ ರಾಜಾ ತಥಾ ಪ್ರಜಾ.

೦೦ ೦೦ ೦೦

ಈ ಲೇಖನದಲ್ಲಿ ಉಪಯೋಗಿಸಿದ ಸಂಕ್ಷಿಪ್ತ ರೂಪಗಳು

ರ. ವಂ.—ರಘುವಂಶ.
ಮೇ. ಸಂ.—ಮೇಘ ಸಂದೇಶ.
ಮಾಲ. ನಾ.—ಮಾಲವಿಕಾಗ್ನಿ ಮಿತ್ರ.
ಕು. ಸಂ.—ಕುಮಾರ ಸಂಭವ.
ಅಭಿ. ಶಾ. – ಅಭಿಜ್ಞಾನ ಶಾಕುಂತಲಾ.
ವಿಕ್ರ. ನಾ.—ವಿಕ್ರಮೋರ್ವಶೀಯ.

ದೊರೆ

ಪಡಚ್ಮತನಾಗಿ ಪರದೇಶಿಯಾಗಿ
ತರತರದ ಬವಣೆ-ಬವಳಿಯಲಿ ತಿರುಗಿ
ಅದು ಹೇಗೊ ಮರಳಿ ಅರಸುತನ-ಸಿರಿಯ
ಅರಮನೆಯ ಸೊಗವ ಸವಿಯುತಿಹ ದೊರೆಯು
ಮನದ ಮನೆಯಾಗಿಸುದು ಮಸಣದಂತೆ
ಸುಡುತಲಿಯ ಬಯಕೆಗಳ ಚಿತೆಯ ಸಂತೆ.

ಜೊರೆಗೆಲ್ಲ ಇಹುದು ನೂರು ಝಗಝಗವು
ಒಳಗೇನೊ ಕೊಳೆಯು ಉರಿಯ ಭಗಭಗವು
ಏನಲ್ಲ ಇದ್ದರೂನು ಬಾಳಿನಲಿ
ಏನಲ್ಲ ಎಂಬುದಾತ ಗೋಳಿನಲಿ.
ಕೊರಗು ಎಂಬುದರ ಕುಳಿವು ಸಪ ಇಲ್ಲ
ಕೊರತೆ ಎಂಬುದಕೆ ಕೊರತೆಯೇ ಇಲ್ಲ!

ಬೇಡಿದ್ದು ದೊರೆತಿಹುದು ದೊರೆಯ ತಾನಹುದು
ಬೇಡುತಿಹ ಕಣ್ಣು ತಿರುಕನಾಗಿಹುದು.
ಇಂದಿನೀಬದುಕು ಆ ದೊರೆಯ ಪಾಡು
ಕಳೆದರೂ ಕೊರತೆ, ಸಡೆಯೆ ಅದೆ ಹಾಡು.
ಒಡೆಯನಾಗಹುದೆಯೆ ಒಳಗು-ನಾಡಿನಲಿ
ಪಡೆವುದೇನಿಲ್ಲ ಬರಗು ಕಾಡಿನಲಿ.

—ರಸಿಕರಂಗ

ಇದೀಗ ಪ್ರಕಟವಾಗಿದೆ—

ಪ್ರಖ್ಯಾತ ಕಾದಂಬರಿಕಾರರಾದ ಶ್ರೀ! ವ್ಯಾಸರಾಯ ಬಲ್ಲಾಳರ ಕೃತಿ ಉತ್ಕೃಷ್ಟ ಕಥಾಸಂಕಲನ

ಕಾಡು ಮಲ್ಲಿಗೆ

ಬಿಳಿ ಕಾಗದ

ಸುಮಾರು 160 ಪುಟಗಳು. ಬೆಲೆ: 1·25

ಪ್ರಕಾಶಕರು:

ಸ್ಟೂಡೆಂಟ್ಸ್ ಬುಕ್ ಡಿಪೋ
6-E; ಸೀತಾ ಸ್ಟ್ರೀಟ್, ಕೋಟೆ
ಮುಂಬಯಿ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No· 466 N/50 date 2-12-1950 of the Director of public Instruction Madras·

ಕಾಳಿದಾಸನ ಕಾಲದ ಭಾರತ

(೬ನೇ ಪುಟದಿಂದ)

ರಾಜರ ಅಧಿರಾಜನೇ ಸಾಮ್ರಾಟ್ ಅಥವಾ ಚಕ್ರವರ್ತಿ. ಆಗ ರಾಜಕುಮಾರರು ರಾಜಮಾರ್ಗದಿಂದಲೂ ರಾಜ್ಯವನ್ನು ಸಂಪಾದಿಸುತ್ತಿದ್ದರು. (ರ. ವಂ. ೮-೨). ಆಗಿನ ರಾಜರು ನಿರುವ ರಥಕ್ಕೆ ಒಂದೊಂದು ಹೆಸರಿಡುತ್ತಿದ್ದರು. ಒಂದಕ್ಕೆ ಸೋಮದತ್ತ (ವಿಕ್ರ. ನಾ. ೧) ಎಂದೂ, ಇನ್ನೊಂದು ರಥಕ್ಕೆ ವಿಜಿತ್ವರ (ಕು. ಸಂ. ೧೪-೨) ಎಂದೂ ಹೆಸರಿತ್ತು. ಅಲ್ಲದೆ ಆ ಕಾಲದ ರಾಜರಿಗೆ ಪುರಾಣಕಾಲದಂತೆ ಮತ್ಸ್ಯ (ರ. ವಂ. ೭ ೪೦), ಹರಿಣ ಮೊದಲಾದ ಸ್ವಿಜಗಳಿದ್ದವು. ಅರಮನೆಗಳಿಗೆ ಮಣಿಕರ್ಣಿ, ದೇವಚ್ಛಂದ, ವೈಜಯಂತ, ಮೇಘಚ್ಛಂದ ಮೊದಲಾದ ಹೆಸರುಗಳಿದ್ದವು. ಅಂದಿನ ರಾಜಕಾರ್ಯಗಳೆಲ್ಲಾ ವಿಶೇಷವಾಗಿ ಪ್ರಾತಃಕಾಲದಿಂದ ಮಧ್ಯಾಹ್ನದವರೆಗೆ ನಡೆಯುತ್ತಿತ್ತು.

ಆಗ ಬೇಸಾಯವು ಮಳೆಯನ್ನೇ ಹೊಂದಿಕೊಂಡಿರಲಿಲ್ಲ. ಬೇಸಾಯಕ್ಕೆ ಕಾಲುವೆಗಳನ್ನು ತೋಡುತ್ತಿದ್ದರು. (ರ. ವಂ. ೨೨. ೩) ದೊಡ್ಡ ದೊಡ್ಡ ನದಿಗಳನ್ನು ಕಟ್ಟೆಗಳ ಬೆನ್ನ ಮೇಲೆ ಹಲಗೆಗಳನ್ನು ಹಾಕಿ ಸೇತುವೆ ನಿರ್ಮಾಣಮಾಡಿ ದಾಟುತ್ತಿದ್ದರು. (ರ. ವ. ೪.೩೮). ರಘು ಮಹಾರಾಜನು ಕಪಿಶಾ ನದಿಯನ್ನು ಹೀಗೆಯೇ ದಾಟಿದನಂತೆ!

ಆ ದಿನಗಳಲ್ಲಿ ಕಾಶ್ಮೀರದ ಕುಂಕುಮ ಕೇಸರಿ (ರ. ವಂ ೪ ೬೭), ಕಾಂಭೋಜದ ಅಖರೋಟು (ರ. ವಂ. ೪. ೬೯) ಗಳು ಪ್ರಸಿದ್ಧವಾಗಿದ್ದುವು. ಇವನ್ನು ರಘುವಿನ ದಿಗ್ವಿಜಯದ ಪ್ರಸಂಗದಲ್ಲಿ ಕಾಣಬಹುದು. ರಘುವಿನ ಕುದುರೆಗಳು ಸಿಂಧು ನದಿಯ ತೀರದಲ್ಲಿ ಹೊರಳಾಡಿದಾಗ ಮೈಗೆ ತುಂಬಾ ಕುಂಕುಮಕೇಸರಿ ಅಂಟಿಕೊಂಡಿತಂತೆ! ಇನ್ನು ವೈಸೂರಿನ ಚಂದನ (ರ. ವಂ. ೪.೪೮), ಚೀನಾ ರೇಶ್ಮೆ (ಕು. ಸಂ. ೭ ೩), ಮಲಯ ಪರ್ವತದ ಮೆಣಸು, ಏಲಕ್ಕಿ (ರ. ವಂ. ೪), ತಾಮ್ರಪರ್ಣಿ ಸಮುದ್ರ ಸಂಗಮದಲ್ಲಿದ್ದವು. ಮುತ್ತು (ರ. ವ. ೪), ಪಾರಸೀಕ (ವನಾಯುಜ) ದೇಶದ ಕುದುರೆ (ರ. ವಂ. ೫. ೭೩)— ಇವು ಆ ಕಾಲದಲ್ಲಿ ಹೆಸರುಪಡೆದಿದ್ದವು. ಆಗ ಸಿಂಧು ನದಿಯ ಆಚೆ ದಡದಿಂದ ಇಂದಿನ ಬಲುಚಿಸ್ಥಾನ ಮತ್ತು ಅದರ ಉತ್ತರ ಪಶ್ಚಿಮಕ್ಕಿದ್ದ ದೇಶವೆಲ್ಲಾ ಪಾರಸೀಕವೆಂದು ಕರೆಯಲ್ಪಡುತ್ತಿತ್ತು. ಈ ದೇಶಕ್ಕೆ ಹೋಗಲು ಆಗಿನವರು ಭೂಜಲ ಮಾರ್ಗವೆರಡನ್ನೂ ಉಪಯೋಗಿಸುತ್ತಿದ್ದರು. ಜಲಮಾರ್ಗದಲ್ಲಿ ಸಂಚರಿಸಲು ದೊಡ್ಡ ದೊಡ್ಡ ನೌಕೆಗಳಿದ್ದುವು. ರಘುವು ನೌಕಾಶಕ್ತಿಯಿಂದಲೇ ವಂಗ ದೇಶವನ್ನು ಗೆದ್ದನಂತೆ! ಆಗ ನಾವೆಗಳಲ್ಲಿ ಸಮುದ್ರ ವ್ಯಾಪಾರವು ನಡೆಯುತ್ತಿತ್ತು. (ರ. ವಂ. ೧೪.೩೦).

ಆಗ ಜಲವನ್ನು ಒಂದು ಜಾತಿಯ ಹೂಗಳಿಂದ ಶೋಧಿಸುತ್ತಿದ್ದರು. (ವಿಕ್ರ. ನಾ. ೨). ಕಾರಂಜಿಗಳ ಪರಿಚಯವು ಅಂದಿನವರಿಗಿತ್ತು. (ರ. ವಂ. ೧೧) ನಗರಗಳಲ್ಲಿ ದೊಡ್ಡ ಶಿವಮೂರ್ತಿಯನ್ನು ನಿರ್ಮಿಸಿ ಅದರ ಕಿರೀಟದಲ್ಲಿ ದೊಡ್ಡ ಬೆಳಕಿಂದನ್ನು ಇಡುತ್ತಿದ್ದರು. ಅದು ಇಡೀ ನಗರವನ್ನು ಪೂರ್ಣಜ್ಯೋತ್ಸ್ನೆಯಂತೆ ರಾತ್ರಿಯೆಲ್ಲಾ ಬೆಳಗುತ್ತಿತ್ತು. (ರ. ವಂ. ೬. ೬೪). ಅಲ್ಲದೆ ಆಗಿನ ಜನರಿಗೆ ಭೂಮಿಯ ನೆರಳು ಚಂದ್ರನ ಮೇಲೆ ಬಿದ್ದು ಚಂದ್ರಗ್ರಹಣವಾಗುವುದೆಂಬ ವಿಚಾರ ಗೊತ್ತಿತ್ತು. (ಛಾಯಾಹಿಭೂಮೇ ಶಶಿನೋಮಲತ್ವೇನಾರೋಪಿತಾ ಶುದ್ಧಿಮತಃ ಪ್ರಜಾಭಿ—ರ. ವಂ. ೧೪.೪೦) ಭರತ ಖಂಡಕ್ಕೂ ಚಂದ್ರನೇ ಕಾರಣನೆಂಬ ತಿಳಿವಳಿಕೆಯೂ ಅವರಿಗಿತ್ತು (ಮಹೋದಧೇಃ ಪೂರ ಇವೇಂದು ದರ್ಶನಾದ್ಗುರು ಪ್ರಹರ್ಷಃ ಪ್ರವಭೂವನಾತ್ಮನಿ—ರ. ವಂ. ೪.೧೭). ಕುಮಾರ ಸಂಭವದಲ್ಲಿ ಜಾಮಿತ್ರ (Geometry)ದ ವಿಚಾರವಿದೆ (ಕು. ಸಂ. ೭.೧). ಈ ಗಣಿತವು ಯುರೋಪ್ ದೇಶೀಯರಿಗೆ ಗ್ರೀಕರಿಂದ ಲಭ್ಯವಾಯಿತಂತೆ. ಗ್ರೀಕರಿಗೆ ಭಾರತೀಯರಿಂದಲೇ ಗೊತ್ತಾಯಿತು.

ಕಾಳಿದಾಸನಿಗಿಂತಲೂ ಪೂರ್ವದಲ್ಲೇ ಜನ್ಮಾಂತರ ವಿಚಾರ, ಕರ್ಮಫಲ, ಮರಣ, ಮೋಕ್ಷ ಮೊದಲಾದುವುಗಳ ತಿಳುವು ನಮ್ಮವರಿಗಿತ್ತು. ಗಂಗಾ ಯಮುನಾ ನದಿಗಳು ಅಂದೂ ಪುಣ್ಯ ನದಿಗಳೇ ಆಗಿದ್ದುವು. ಆಗಲೂ ಜನರಿಗೆ ಇವು ಸ್ನಾನದಿಂದ ಶುದ್ಧತೆಯನ್ನು ಕೊಡಬಲ್ಲವೆಂಬ ನಂಬಿಕೆ ಇತ್ತು. (ರ. ವಂ. ೧೩.೫೮) ಶ್ರೀರಾಮನು ಅಯೋಧ್ಯಾಭಿಮುಖನಾದಾಗ ಈ ಪುಣ್ಯ ನದಿಗಳ ಮಹಿಮೆಯನ್ನು ಸೀತೆಗೆ ವರ್ಣಿಸುತ್ತಾನೆ. ಇಂದಿಗಿಂತ ಆಗ ಆಗ್ನಿಗೆ ತುಂಬಾ ಪ್ರಾಶಸ್ತ್ಯವಿತ್ತು. ಅಗ್ನ್ಯಾಧಾನ ಸೂರ್ಯಾರಾಧನೆಗಳು ದೇಶದಲ್ಲಿ ಸರ್ವತ್ರ ವ್ಯಾಪಿಸಿದ್ದುವು. (ವಿಕ್ರ. ನಾ. ೧.) ವಿಕ್ರಮೋರ್ವಶೀಯದ ಉರ್ವಶಿಯ ಸಚಿತ್ರ ಲೇಖಿಯು ಸೂರ್ಯೋಪಾಸಕಳು. ಇಂದ್ರನ ದೇವಾಲಯವೂ ಆಗ ಇತ್ತು (ವಿಕ್ರ. ನಾ. ಅಂ. ೨). ಬ್ರಾಹ್ಮಣರು ಶಾಸ್ತ್ರಾನುಗ್ರಹ ಸಮರ್ಥರಾಗಿದ್ದರು. ಅವರಿಗೆ ಎಲ್ಲಾ ಕಡೆಗಳಲ್ಲಿಯೂ ಗೌರವವಿತ್ತು. (ರ. ವಂ. ೧೧)

ಅಂದಿನ ಜನರು ಪೂರ್ವ ವಯಸ್ಸಿನಲ್ಲಿ ಸಂಸಾರಿಗಳಾಗಿದ್ದು ಹಣ ಸಂಪಾದನೆಗಾಗಿ ದುಡಿಯುತ್ತಿದ್ದರು. ಮುಂದೆ ಮಕ್ಕಳ ಮೇಲೆ ಸಂಸಾರದ ಭಾರಹೊರಿಸಿ, ವಿಶ್ರಾಂತಿಕೊಂಡುತ್ತಿದ್ದರು (ವಿಕ್ರ. ನಾ ೩.೧). ಇಂದಿನವರಂತೆ ಉಸಿರಾಟದ ಕೊನೆಯ ಗಳಿಗೆಯವರೆಗೂ ಹಣಕ್ಕಾಗಿ ಗೋಗರೆದು ಕೊಳ್ಳುತ್ತಿರಲಿಲ್ಲ. ಇನ್ನು ಆಗಿನ ಧರ್ಮವೃದ್ಧರಿಗೆ ವಯಸ್ಸು ಪ್ರಧಾನವಾಗಿರಲಿಲ್ಲ. ವಯೋವೃದ್ಧರಾದ ಮತ್ತು ಬ್ರಾಹ್ಮಣರಾದ ಋಷಿಗಳು ಬಾಲೆಯಾದ ಮತ್ತು ಕ್ಷತ್ರಿಯ ವಂಶೋದ್ಭವಳಾದ ಉಮಾದೇವಿಯ ದರ್ಶನಾಕಾಂಕ್ಷಿತರಾಗಿ ಬಂದರಂತೆ! ಆಗ ಸಂದೇಹ ಬಂದಾಗಲೆಲ್ಲಾ ಸತ್ಪುರುಷರ ಮನಃಪ್ರವೃತ್ತಿಯೇ ಪ್ರಮಾಣವಾಗಿತ್ತು. (ಅ. ಶಾಕುಂ.) ಅಂದು ಮನಸ್ಸನ್ನು ಕಾಡುವ ಸಾಮಗ್ರಿ ಇದ್ದಾಗಲೂ ಮನಸ್ಸನ್ನು ಬಿಗಿಹಿಡಿಯುವ ಧೀರರೇ ಶಕ್ತರೆಂದು ಭಾವಿಸುತ್ತಿದ್ದರು. (ಕು. ಸಂ. ೧). ಅಲ್ಲದೆ ವಿಷವೃಕ್ಷವಾದರೂ ತಾನೇ ಬೆಳೆದುದನ್ನು ಕಡಿಯುವುದು ಸರಿಯಲ್ಲವೆನ್ನುವ ನೀತಿ ರೂಢಿಯಲ್ಲಿತ್ತು. (ಕು. ಸಂ. ೨). ನೆಂಟರೆದುರಿಗೆ ಬಂದಾಗ ಅದುವರೆಗೆ ಪ್ರಮಪಟ್ಟು ಕಡೆದಿದ್ದ ದುಃಖವು ರಭಸದಿಂದ ಉಕ್ಕುವುದು (ಕು. ಸಂ. ೪). ಇದು ಕಾಳಿದಾಸನ ಅನುಭವದ ಮಾತು. ಯಾಚನೆಯು ಅಧಮನಲ್ಲಿ ಸಫಲವಾಗುವುದಕ್ಕಿಂತಲೂ, ಉತ್ತಮನಲ್ಲಿ ನಿಷ್ಫಲವಾಗುವುದೇ ಉತ್ತಮ. (ಮೇ. ಸಂ. ೧.೬). ಅತಿ ತುಚ್ಛನಾದವನು ಕೂಡ ಉಪಕಾರಮಾಡಿದ ಸ್ನೇಹಿತರಿಗೆ ಪ್ರತ್ಯುಪಕಾರ ಮಾಡಲು ಹಿಂಜರಿಯುವುದಿಲ್ಲ. (ಕು. ಸಂ.) ಆ ಕಾಲದಲ್ಲಿ ಕೃತಘ್ನರ ಸಂಖ್ಯೆ ತೀರಾ ಕಡಿಮೆ ಇದ್ದಿರಬೇಕು.

ಕವಿಗಳಿಗೆ ತಮ್ಮ ಕಾಲದ ಜನಜೀವನವನ್ನು ತಮ್ಮ ಕಾವ್ಯಗಳಲ್ಲಿ ಚಿತ್ರಿಸದೆ ಇರಲು ಸಾಧ್ಯವೇ ಇಲ್ಲ. ಈ ತತ್ವದ ಪಂಚಾಂಗದ ಮೇಲೆಯೇ ಈ ಬರಹವು ಬರೆಯಲ್ಪಟ್ಟಿದೆ. ರವಿಕಾಣದುದನ್ನು ಕವಿಕಂಡನೆನ್ನುವುದಿದೆಯಾದರೂ, ಆತನು ರವಿಕಂಡ ವಿಚಾರವನ್ನು ಬಿಟ್ಟಿಲ್ಲ.

ಕಾಳಿದಾಸನ ಆಶ್ರಯದಾತನಾದ ವಿಕ್ರಮಾದಿತ್ಯನು ಶೌರ್ಯಕ್ಕೆ ಸೀಮಾಪುರುಷನಾಗಿದ್ದಂತೆ, ಸಾಹಿತ್ಯಕ್ಕೆ ಕಾಳಿದಾಸನು ಸೀಮಾಪುರುಷನಾಗಿದ್ದಾನೆ. ಅವನಿಂದ ಆ ಮರಕಾವ್ಯ — ನಾಟಕಗಳನ್ನು ಒರೆಸಲು ವಿಕ್ರಮಾದಿತ್ಯನ ರಾಜ್ಯಭಾರವೂ ಒಂದು ಪ್ರಬಲವಾದ ಕಾರಣವಾಗಿತ್ತು. ವಿಕ್ರಮಾದಿತ್ಯನು ಮರ್ತ್ಯಲೋಕವನ್ನು ಸ್ವರ್ಗದೊಡನೆ ಸರಿದೂಗಲು ಪ್ರಯತ್ನಪಟ್ಟನು. ಅಂಥಾ ಮಹಾಪುರುಷನ ಆಶ್ರಯವು ಕವಿಗೆ ಸ್ವರ್ಗದ ಕನಸನ್ನುಂಟು ಮಾಡದಿದ್ದೀತೆ? ಯಥಾ ರಾಜಾ ತಥಾ ಪ್ರಜಾ.

೦೦ ೦೦ ೦೦

ಈ ಲೇಖನದಲ್ಲಿ ಉಪಯೋಗಿಸಿದ ಸಂಕ್ಷಿಪ್ತ ರೂಪಗಳು

ರ. ವಂ.—ರಘುವಂಶ.
ಮೇ. ಸಂ—ಮೇಘ ಸಂದೇಶ.
ಮಾಲ. ನಾ.—ಮಾಲವಿಕಾಗ್ನಿ ಮಿತ್ರ.
ಕು. ಸಂ.—ಕುಮಾರ ಸಂಭವ
ಅಭಿ. ಶಾ. — ಅಭಿಜ್ಞಾನ ಶಾಕುಂತಲಾ.
ವಿಕ್ರ. ನಾ.—ವಿಕ್ರಮೋರ್ವಶೀಯ.

ದೊರೆ

ಪರಚಕ್ರಳನಾಗಿ ಪರದೇಶಿಯಾಗಿ
ತರತರದ ಬವಣೆ. ಬವರಿಯಲಿ ತಿರುಗಿ
ಅದು ಹೇಗೊ ಮರೆಳಿ ಅರಸುತನ-ಸಿರಿಯ
ಅರಮನೆಯ ಸೊಗವ ಸವಿಯುತಿಹ ದೊರೆಯ
ಮನದ ಮನೆಯಾಗಿಹುದು ಮಸಣದಂತೆ
ಸುಡುತಲಿಹ ಬಯಕೆಗಳ ಚಿತೆಯ ಸಂತೆ.

ಹೊರೆಗೆಲ್ಲ ಇಹುದು ನೂರು ಝಗಝಗವು
ಒಳಗೇನೊ ಕೊಳೆಯು ಉರಿಯ ಭಗಭಗವು
ಏನೆಲ್ಲ ಇದ್ದರೂನು ಜಾಳಿನಲಿ
ಏನಾಲ್ಲ ಎಂಬನಾತ ಗೋಳಿನಲಿ.
ಕೊರಗು ಎಂಬುದರ ಸುಳಿವು ಸಹ ಇಲ್ಲ
ಕೊರತೆ ಎಂಬುದಕೆ ಕೊರತೆಯೇ ಇಲ್ಲ!

ಬೇಡಿದ್ದು ದೊರೆತಿಹುದು ದೊರೆಯೆ ತಾನಹುದು
ಬೇಡುತಿಹ ಕಣ್ಣು ತಿರುಕನಾಗಿಹುದು.
ಇಂದಿನೀಬದುಕು ಆ ದೊರೆಯ ಪಾಡು
ಕಳೆದರೂ ಕೊರತೆ, ಸವೆಯೆ ಅದ ಹಾಡು
ಒಡೆಯನಾಗುವೆಯೆ ಒಳಗು-ನಾಡಿನಲಿ
ಪಡೆಪುವೆನೆಲ್ಲ ಬರಗು ಕಾಡಿನಲಿ.

—ರಸಿಕರಂಗ

ಇದೀಗ ಪ್ರಕಟವಾಗಿದೆ—

ಪ್ರಖ್ಯಾತ ಕಾದಂಬರಿಕಾರರಾದ ಶ್ರೀ/ ವ್ಯಾಸರಾಯ ಬಲ್ಲಾಳರ ಕೃತಿ ಉತ್ಕೃಷ್ಟ ಕಥಾಸಂಕಲನ

ಕಾಡು ಮಲ್ಲಿಗೆ

ಬೆಲೆ ಕಾಗದ

ಸುಮಾರು 160 ಪುಟಗಳು. ಬೆಲೆ: 1 25

ಪ್ರಕಾಶಕರು:

ಸ್ಟೂಡೆಂಟ್ಸ್ ಬುಕ್ ಡಿಪೋ
6-E, ಸೀತಾ ಸ್ಟ್ರೀಟ್, ಕೋಟೆ
ಮುಂಬಯಿ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಆಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಸ್ವಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕಿಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction Madras.

ಸಮಾಜವಾದಿ ಸ್ವರೂಪದ ಸಿಂಹಮುಖ

(೫ನೇ ಪುಟದಿಂದ)

ದ್ವನೇ ತನ್ನನ್ನು ಮೊದಲು ನಾಸಿಮಾಡಿ ಕೊಳ್ಳಲಿ" ಎಂದು ಹೇಳಬೇಕೆನಿಸುತ್ತದೆ.

ಏಕೆಂದರೆ ನ್ಯಾಯದಾನದಲ್ಲಿ ಶೀಘ್ರತೆ ಸೂಚಿತ ಅವಶ್ಯ ನಿಜ. ಆದರೆ ಅದೊಂದೇ ಕಲ್ಯಾಣ ರಾಜ್ಯದ ಗಮಕವಲ್ಲ. ಕಮ್ಯುನಿಸ್ಟ್ ತತ್ವನೇ ಪ್ರಚಲಿತ ನ್ಯಾಯ ಕೋರ್ಟು-ಕಟ್ಟಳೆಗಳ ಸರಂಜಾಮು ಬಂದುವಾಳಿಗಾರಿಕೆಯ ಅರಿವೆರೆ ವ್ಯವಸ್ಥೆಯಲ್ಲಿ ನಂಬಲಿಕ್ಕಿಲ್ಲ. ಅದು ತನ್ನ ತತ್ವಕ್ಕೆ ಸುಸಂಗತವಾಗಿ ಹೊಸ ನ್ಯಾಯಸನ್ಧತಿಯ ಆರಂಭವಾಡಲು ಮುಡುಕಬಹುದು. ಅದು ಹೇಳಕೇಳಿ ಮೂಲತಃ ಸರ್ವಾಧಿಕಾರಿತ್ವದ ಪಕ್ಷ—ಆ ಸರ್ವಾಧಿಕಾರ ಜನತೆಯ ಸರ ವಾಗಿ ಇರಲಿ. ಶ್ರಮಜೀವಿ ವರ್ಗದ ಸರ ವಾಗಿ ಇರಲಿ.

ಆದರೆ ಕಾಂಗ್ರೆಸ್ಸು ಕೇಂದ್ರದಲ್ಲಿಯೂ ರಾಜ್ಯಗಳಲ್ಲಿಯೂ ಕಲ್ಯಾಣರಾಜ್ಯ (Welfare State) ವೆಂದು ಕಟ್ಟಿದ "ಸಮಾಜವಾದೀ ಸ್ವರೂಪದ" ಗುರಿಯತ್ತ ಪಂಚವಾರ್ಷಿಕ ವಡ್ಡಣಗಳಂದ ಧಾವಿಸುತ್ತಿದ್ದ ಅಡಳಿತ ಪದ್ಧತಿಯೇನು ಸರ್ವಾಧಿಕಾರಿತತ್ವದ್ದಲ್ಲ ಅದು ಸೂರ್ತಿ ಪಾರ್ಲಿಮೆಂಟರಿ ಅಂದರೆ ಸಂಸದೀಯ ಪ್ರಜಾಪ್ರಭುತ್ವದ್ದಾಗಿದೆಯೆಂದು ಗುಡಿಗೋಪುರಗಳಂದಲೂ ಅಡಿಗಡಿಗೆ ಸಾರಲಾಗುತ್ತದೆ. ಇಂದಾಗ್ಯೆ ಈ ಸಮಾಜವಾದಿ ಸ್ವರೂಪದ ಮುಖವೇನೇ ಇರಲಿ, ಅದರ ನಿಜವು ಮಾತ್ರ ಈಗ ಹೊರಗೆ ಬರುತ್ತಿದ್ದುದು ಜನತೆಯ ಕ್ಷೇಮಕ್ಕೆ ಅಲ್ಲವೋ ಎಂಬ ಭಯ ಉಂಟಾಗುತ್ತಿದೆ.

ಈ ಭೆಯ ಕೇವಲ ಈ ಲೇಖಕನಿಗೆ ಮಾತ್ರವಲ್ಲ. ಈಗ ಕೆಲವು ದಿನಗಳ ಹಿಂದೆ ಮುಂಬಯಿಯ "ಪ್ರೊಗ್ರೆಸಿವ್ ಗ್ರೂಪ್" ಎಂಬ ಸಂಸ್ಥೆಯವರು ಇದೇಗ ಅಧಿಕಾರದ ಕವಚ-ಕುಂಡಲಗಳನ್ನು ತೆಗೆದಿಟ್ಟು ಬಂದ ಯುಕ್ತ ಪ್ರದೇಶದ ರಾಜ್ಯಪಾಲರೂ ಕಾಂಗ್ರೆಸ್ಸಿನ ಮೇಲ್ಪಂಕ್ತಿಯ ಒಬ್ಬ ವಜ್ರ ಮುಷ್ಟಿಯ ಅಡಳಿತಗಾರರೂ, ರಾಜನೀತಿ ನಿಪುಣರೂ ಪ್ರತಿಭಾಶಾಲಿಯಾದ ಸಾಹಿತಿಗಳೂ ಆದ ಶ್ರೀ ಕನಯ್ಯಲಾಲ ಮುನ್ಶಿಯವರು ಅಂದು ಭಾಷಣದಲ್ಲಿ ಇದೇ ಭಯ ಸೂಚನೆಯುದನಿ ಎತ್ತಿದರು. "The Indian Democracy in Action" ಎಂಬುದು ಅವರ ವಿಷಯವಾಗಿತ್ತು. ಆದರೆ ಅದರ ಅಂಗವಾಗಿ ಅವರು ಪ್ರತಿಪಾದಿಸಿದ ವಿಚಾರ ಕೇಂದ್ರ ಸರಕಾರವು ಕ್ರಮೇಣ ಪ್ರಜಾಪ್ರಭುತ್ವದಿಂದ ಹಿಂಜರಿಯಹತ್ತಿದೆಯೆ? ಎಂಬ ಭಯ ಶಂಕೆಯದಾಗಿತ್ತು. ಈ ಪ್ರತಿಪಾದನೆಯಲ್ಲಿ ಅವರು ಭಾರತ ಸರಕಾರವು ಪ್ರತ್ಯೇಕ ವ್ಯಾಜ್ಯ-ವಿಚಾರಣಾ ಮಂಡಳಿಗಳನ್ನು ಸ್ಥಾಪಿಸಿ ರಾಜ್ಯದ ನ್ಯಾಯಾಂಗ ಸಂಸ್ಥೆಗಳ ಅಧಿಕಾರ ಕ್ಷೇತ್ರದ ಮೇಲೆ ಪ್ರಬಲವಾದ ಆಕ್ರಮಣ ಮಾಡುತ್ತಿದೆ ಎಂಬುದೊಂದು ಪ್ರಮಾಣವನ್ನು ಶ್ರೀಮನ್ಶೀಜಿಯವರು ಉದಾಹರಿಸಿದರು ಅದೇ ರೀತಿ ಜನತೆಯ ಹಿತದ ಯಾವ ಮಹತ್ವದ ಕಾರ್ಯವೂ ಸರಕಾರದ ಸ್ವೋತ್ಸಾಹ, ಸಹಾಯ ಅಥವಾ ನಿಯಂತ್ರಣವನ್ನು ಬಿಟ್ಟು ನಡೆಯುತ್ತಿಲ್ಲ. ಸರಕಾರವನ್ನು ಒಂದಿಲ್ಲ ಒಂದು ರೀತಿ ಅವಲಂಬಿಸದ ಹೊರತು ಯಾವ ಸಾರ್ವಜನಿಕ ಸೇವೆಯೂ ಸಮರ್ಥವಾಗಿ ನಡೆಯುತ್ತಿಲ್ಲ ಎಂಬ ಸಂಗತಿಯನ್ನು ಈ ನಿವೃತ್ತ ರಾಜ್ಯಪಾಲರು ಎತ್ತಿ ಕಾಣಿಸಿದರು. ಇವಕ್ಕೂ ಮುಂದೆ ಹೋಗಿ ಅವರು, ನಿಜವಾದ ಪ್ರಜಾಪ್ರಭುತ್ವದ ವಾತಾವರಣದಲ್ಲಿ ಸರಕಾರದ ನಿರಪೇಕ್ಷನಾಗಿ ಜನಹಿತದ ಆಂದೋಲನಗಳು ಸ್ವತಂತ್ರವಾಗಿ ನಡೆಯುತ್ತಿರಬೇಕು ಎಂದು ಸೂಚಿಸಿದರು. ಇಷ್ಟೇ ಅಲ್ಲ ನಮ್ಮ ದೇಶದಲ್ಲಿ ಈ ಮಾದರಿಯ ಆಂದೋಲನ ಸಸ್ಯ ಶ್ರೀ ವಿನೋಬಾಜಿಯವರಿಂದ ಆರಂಭವಾಗಿ ಹಬ್ಬುತಿದ್ದ ಭೂದಾನ ಚಳವಳಿಯೊಂದೇ ಎಂದು ಅವರು ಸಾರಿದರು. ಆದರೆ ಇಲ್ಲಿ ಸೋಜಿಗವೆಂದರೆ ವಿನೋಬಾಜಿಯವರು ತತ್ವತಃ ಅರಾಜಕ ಸಮಾಜವಾದಿಗಳು. ಅಂದರೆ ನಮ್ಮ ಜನತೆಯ ಮುಂದೆ ಎರಡೇ ದಾರಿಗಳಂದಾಯಿತು—ಒಂದು ಅರಾಜಕ ಸಮಾಜ ರಚನೆಯ ಮಾರ್ಗ ನಿಕೇಂದ್ರೀಕರಣದ ಮಾರ್ಗ. ಇನ್ನೊಂದುಉತ್ತರೋತ್ತರ ಸರ್ವಾಧಿಕಾರದ ಕೇಂದ್ರೀಕರಣದ ಮಾರ್ಗ! ಆಹಾ, ಎಂಥ ಆಯ್ಕೆ.

ಕೇಂದ್ರವು ಇಚ್ಛೆಯಿಂದಿರಲಿ ಅನಿಚ್ಛೆಯಿಂದಿರಲಿ ಸರ್ವಾಧಿಕಾರದತ್ತ ಸಾಗುತ್ತಿದೆಯೆಂಬ ಭಯ ಸೂಚನೆಯನ್ನು ಅಗ್ರಹದಿಂದ ಅಧಿಕಾರವಾಣಿಯಿಂದ ಸಾರಿದ ಇನ್ನೊಬ್ಬ ಮುತ್ಸದ್ದಿ ಶ್ರೀ ರಾಮಸ್ವಾಮಿ ಮುದಲಿಯಾರ್. ಹೀಗೆ ಮುನ್ಶಿಯಂಥ ಕರ್ಮಠ ಕಾಂಗ್ರೆಸಿಗರೂ ಮುದಲಿಯರ್‌ರಂಥ ಹಳೆಯ ರಾಜನೀತಿಜ್ಞರೂ ಕೂಡಿಯೇ ತಮ್ಮ ತಮ್ಮ ತರ್ಕದಿಂದ ಒಂದೇ ತೀರ್ಮಾನಕ್ಕೆ ಬರುವರೆಂದ ಮೇಲೆ ನಮ್ಮ ಸ್ವರಾಜ್ಯದ ಕೇಲುಎಲ್ಲೋ ತಪ್ಪಿರಬೇಕು!

ಇಂಥ ಸರ್ವಾಧಿಕಾರದ ಆಕ್ರಮಣಕ್ಕೆ ಆಧಾರವೇನು? ಪ್ರಜಂಡ ಬಹುಮತ ಪಕ್ಷದ ಸಂಮಿಶ್ರಸತ್ತಾಲೋಲುಪತೆಯ ಸಂಖ್ಯಾಬಲ. ತಾಲೂಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷನನ್ನು ಜೀಪಿನಲ್ಲಿ ಕೂಡ್ರಿಸಿಕೊಂಡು ಸಮಾಜವಿಕಾಸ ಕಾರ್ಯಕ್ಕಾಗಿ ಓಡಾಡುವ ಮಾಮಲೆದಾರನಿಂದ ಮೊದಲುಗೊಂಡು ಕೇಂದ್ರದ ಸಚಿವಾಲಯದವರೆಗೂ ಅಧಿಕಾರಾರೂಢ ರಾಜಕೀಯ ಪಕ್ಷದ ನಿಕಟವೂ ವಿಕಟವೂ ಆದ ಸಹಚರ್ಯ ಅಡಳಿತದ ಯಂತ್ರಕ್ಕೆ ಒಳ ಹೊರಗಿಂದ ಮಾರಕವಾಗಿ ಪರಿಣಮಿಸುವಂತೆ ಬೆಳೆದಿದೆ. ವಾಲ್ಟರ ಲಿಪ್‌ಮನ್ ಎಂಬ ಅಂತಾರಾಷ್ಟ್ರೀಯ ಖ್ಯಾತಿಯ ರಾಜಕೀಯ ಲೇಖಕರೊಬ್ಬರಿದ್ದಾರೆ. ಅವರ ಇತ್ತೀಚೆಯ "ಪಬ್ಲಿಕ್ ಫಿಲೋಸಫೀ" ಎಂಬ ಪುಸ್ತಕದಲ್ಲಿ ಅವರು ಪ್ರತಿಪಾದಿಸಿದ ಒಂದು ತೀರ್ಮಾನ ಇಲ್ಲಿ ಮಾರ್ಮಿಕವಾಗಿ ಅನ್ವಯಿಸುತ್ತದೆ. ಆಧುನಿಕ ಪ್ರಜಾಪ್ರಭುತ್ವದಲ್ಲಿ ರಾಜ್ಯದ ಕಾರ್ಯಾಂಗವು ಕ್ರಮೇಣ ತನ್ನ ಅಧಿಕಾರವನ್ನು ವಿಧಾನಸಭೆಗಳಿಗೂ, ಆ ಅವಾಧನ್ಯ ಸಭೆಗಳು ಅದನ್ನು ಬಹುಮತ ಪಕ್ಷದ ಹಿರಿಕರಿ ನಾಯಕರಿಗೂ, ಅವರು ಗುಂಡ-ಪುಂಡ-ತಂಡಗಳ ಹುದ್ದೆದಾರಿಗಳಿಗೂ ಬಿಟ್ಟುಕೊಡುವ ಘಾತುಕ ಪ್ರವೃತ್ತಿ ಕೊನೆಗೆ ಪ್ರಜಾಪ್ರಭುತ್ವವನ್ನೆ ಕೊಲ್ಲುತ್ತದೆ.

ಚಿರಸ್ಮರಣೆ

॥೧॥

ವಿಶ್ವ ಸಂಸ್ಕೃತಿಯಲ್ಲಿ ಸ್ವಾತಂತ್ರ್ಯ ಸಮರವಾ—
ಹೊಸ ಚರಿತೆಯಧ್ಯಾಯತೆರೆಯಿತಂದು!
ಸ್ವಾಧಿಮಾನದಿ ದೇಶ ದೇಳಿಗೆಯ ಸಾಧಿಸಲು,
ಹಿರಿಯರೆಲ್ಲರು ಐಕ್ಯ ಮತದಿಮುಡಿದು.

॥೨॥

ಜಾತಿ, ಮತ, ಸಂಘಗಳ ಪರಿಬೇಧದಿಂಪರರಿ-
ಗೆತಿಹಿತವಪಾಯ್ತು—ಆಕ್ರಮಿಸಿ ಸುರಲು!
ಪರಕೀಯ ರಾಜರಾಳ್ವಿಕೆಯಿಂದ ಜನತೆಯದು
ಬಹುತರೆದ ಬವಣೆಯಲಿ ನಲುಗುತಿರಲು;—

॥೩॥

ಸಾವಿರದ ಎಂಟುನೂರೈವತ್ತಏಳನೆಯ—
ಕ್ರಾಂತಿಯದೆ ಸ್ವಾತಂತ್ರ್ಯಕಾಯ್ತುನಾಂದಿ!
ಬಂಧನವಿಮುಕ್ತತೆಯ ಸುಖದ ತರುಳೆಂದರತು
ದೇಶ ರಕ್ಷಗೆ ಮುಡಿದರೆಸಿತೊಸುಂದಿ!

॥೪॥

ಸತ್ಯ, ಶಾಂತಿ, ಅಹಿಂಸೆಗಳೆ ಮಾರಕಾಸ್ತ್ರಗಳು
ಪರಕೀಯರಾಜರಾಕ್ರಮ ಶಮಿಸಿ!
ಮಾತೆ ಭಾರತೀಯ ಬಂಧನದ ಬಿಗುಗಡೆಗಾಗಿ
ತನುವ ತೊರೆದ ಹುತಾತ್ಮರನುಹರಸಿ!

॥೫॥

ಆತ್ಮಶುದ್ಧಿಯ ತಳೆದು, ಐಕ್ಯಮತದಲಿದುಡಿದು
ಸಾಧಿಸಲು ಆಳು, ಅರಸಾಗಬಹುದು!
ದೇಶಸೇವೆಗೆ ತನುವು ಮೀಸಲಾಗಿರುವಗೆ—
ಮೋಕ್ಷ ಶಾಶ್ವತ ಫಲವು ಸಿದ್ಧಿಯಹುದು!

॥೬॥

ತಾಳುಮೆಯ ತಪಗೈದು ಧ್ಯೇಯಸಾಧನೆಗಾಗಿ,
ಮಾನ್ಯತೆಪೊಂದೇನು ಭಲು ಜಯವು ಸಿದ್ಧ!
ಇಂತು ಧರ್ಮವನರತು ದೇಶಸೇವೆಗೆದುಡಿದ—
ವೀರರಿಗೆ ಮುಕ್ತಿಯದೆ-ಸತ್ಯ ಶುದ್ಧ!

॥೭॥

ದಾಸ್ಯ ಶೃಂಖಲೆಯ ಕಡಿದೊಗೆವ ಸಾಧನೆಗಾಗಿ
ಜನ್ಮ ತಳೆದಿಹರೆಲ್ಲ-ಯುಗದ ಸುರರು!
ಕೋಟಿ ಭಾರತ ಜನರ ಕಷ್ಟವಂ ಪರಿಹರಿಸಿ,
ಚಿರಸತ್ಯದಾಧರ್ಮ—ಸ್ಥಾಪಿಸಿದರು!

॥೮॥

ಸ್ವಾತಂತ್ರ್ಯ ಸಮರದಲಿ ಬಯಸಿರಿಯನೊ
ಲಿಸುವೆನೆ;
ಸತ್ಯಾಹಿಂಸೆ, ಜಾಗವೆ ಹರಕೆಯಾಗಿ;
ಬಾಳ ಬೆಳಗಿಸಿ ಬದುಕಬೇಕೆನಿಸುವ ಹಾದಿಯಲಿ
ನಮಗಂದಿನಾ ಸ್ಮರಣೆ-ತಳಿವಿಗಾಗಿ!

॥೯॥

ಜನನಿಧರಣೆಯ ಸೇವೆಗಾಗಿ ಜೀವನ ತೆತ್ತ—
ವೀರ ಕಲಿಗಳನಾದರದಿ ಸ್ಮರಿಸುವ!
ಇಂದು ಸ್ವಾತಂತ್ರ್ಯ ಸಮರದ ಶತಾಬ್ದಿಯ ದಿನವು,
ಸ್ವಾತಂತ್ರ್ಯ ಯೋಧರನು ಗೌರವಿಸುವ!

—ಜಯತಾಮ, ಕಡಂದಲೆ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.		
3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ತಾಜಾ ವಜ್ರಗಳಿಗೆ ಖಾತ್ರಿ ವಜ್ರದಂಗಡಿ

ಎಸ್. ಎಲ್. ಶೇಟ್
ಡಾಯಮಂಡ್ ಹೌಸ್
ಕಾರ್ನಾಡ್ ಸದಾಶಿವ ರಾವ್ ರೋಡ್,
ಮಂಗಳೂರು.

ಚಿನ್ನದ ಯಾವತ್ತೂ ಆಧುನಿಕ ಫೇಶನಿನ ಆಭರಣಗಳಿಗೆ ಹೆಸರಾಂತ ಸುವರ್ಣ ಗೃಹ.

ಬೆಳ್ಳಿ, ಬಂಗಾರದ ತರಹವಾರು ಒಡವೆಗಳು ಯಾವಾಗಲೂ ಇಲ್ಲಿ ದೊರೆಯುತ್ತವೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

Proprietor: **S. L. SHET.**

Tel: GOLDKING.

ದಯಮಾಡಿ ಇಲ್ಲಿ ಗಮನಿಸಿರಿ—

ಉತ್ಕೃಷ್ಟ! ಶ್ರೇಷ್ಠ!! ಖಾತ್ರಿ ಮ್ಹಾಲು!!!

ಮಾನ್ಯ ವ್ಯಾಪಾರಿಸ್ಥರೇ.

ಬ್ಯಾಂಕ್ ಆಫೀಸು, ಮತ್ತು ಕೊಲೇಜು ಮೊದಲಾದ ಸಂಸ್ಥೆಗಳಿಗೆ ದಿನನಿತ್ಯದ ಉಪಯೋಗದ ವಸ್ತು ಪೇಡ್ ಇಂಕ್, ಕಡಿಮೆ ಬೆಲೆಯಲ್ಲಿ ಖಾತ್ರಿ ಮತ್ತು ಉತ್ಕೃಷ್ಟ ಮ್ಹಾಲು

ಪೊಪ್ಯುಲರ್ ಪೇಡ್ ಇಂಕ್

ಆದ್ದರಿಂದ ಇಂದೇ ದಯಮಾಡಿ ಆರ್ಡರು ಕೊಡಿರಿ. ರುಚಿ ಮತ್ತು ಚಿಲ್ಲರೆಯಾಗಿ ಸಿಕ್ಕುತ್ತವೆ ಒಂದು ಔನ್ಸ್ ಬಾಟಲಿಗೆ 0-7-0; 2 ಔನ್ಸ್ ಬಾಟಲಿಗೆ 0-13-0.

ಎಲ್ಲಾ ಕಡೆಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ.

MANUFACTURERS:

POPULAR PRODUCT
VIJAYA LAXMI GARDEN, **MANGALORE-1.**

ನಿಮಗೆ ಗೊತ್ತೆ?

ಉಡ್ಪಿ, ಕುಂದಾಪುರ, ಬ್ರಹ್ಮಾವರ ಕಡೆಯ ಪೆಸೆಂಜರರು ಮುಂಜಾನೆ ಹೊರಟರೆ ಅದೇ ದಿನ ರಾತ್ರಿ 8ಕ್ಕೆ ಬೆಂಗಳೂರಿಗೆ ತಲಪಬಹುದು!

ತಿಳಿಯಿರಿ!

ಈ ಕೆಳಗಿನ ಸರ್ವಿಸುಗಳಲ್ಲಿ ಪೆಸೆಂಜರರು ಪ್ರಯಾಣಿಸಿದರೆ ಆಗುಂಬೆಯಿಂದ ಬೆಳಗ್ಗೆ 9ಕ್ಕೆ ಶಿವಮೊಗ್ಗಾಕ್ಕೆ ಬಿಡುವ ನಮ್ಮ ಸರ್ವಿಸು ಶಿವಮೊಗ್ಗಾಕ್ಕೆ ಅಪರಾಹ್ನ 1.00ಕ್ಕೆ ತಲಪುವುದು. ಶಿವಮೊಗ್ಗಾದಿಂದ ಅಪರಾಹ್ನ 1.30ಕ್ಕೆ ಬಿಡುವ ಗವರ್ನಮೆಂಟು "ತುಂಗಾ ಎಕ್ಸ್ಪ್ರೆಸ್" ಬಸ್ಸಿನಲ್ಲಿ ಪ್ರಯಾಣಿಸಿದರೆ ಅದೇ ದಿನ ರಾತ್ರಿ ಅಜ್ಮಾಸ್ 8ಕ್ಕೆ ಬೆಂಗಳೂರಿಗೆ ತಲಪುವುದು.

5.30 A. M. ಉಡ್ಪಿ—ಪೆರ್ಡೂರು—ಸೋಮೇಶ್ವರ
6.00 A. M. ಭದ್ರಗಿರಿ—ಬ್ರಹ್ಮಾವರ—ಸೋಮೇಶ್ವರ
6.00 A. M. ಕುಂದಾಪುರ—ಹಾಲಾಡಿ—ಸೋಮೇಶ್ವರ

ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನವರಿಂದ ವಿಚಾರ್ಸಿ ತಿಳಕೊಳ್ಳಬಹುದು.

ಶ್ರೀ ಗಜಾನನ ಮೋಟಾರು ಟ್ರಾನ್ಸಪೋರ್ಟು ಕಂಪೆನಿ ಲಿ., ಸಾಗರ, ಶಿವಮೊಗ್ಗಾ ಡಿಸ್ಟ್ರಿಕ್ಟ್.

ಯಾ

ದಿ ಹನುಮಾನ್ ಟ್ರಾನ್ಸಪೋರ್ಟು ಕಂಪೆನಿ ಪ್ರೈವೇಟ್ ಲಿ., ಉಡುಪಿ, ದಕ್ಷಿಣ ಕನ್ನಡಾ.

Sri Ramakrishna Theatre Limited, UDIPI.

ನಿಮ್ಮ ಮನರಂಜನೆಗೆ
ಉತ್ತಮ ಚಿತ್ರಗಳ ಪ್ರದರ್ಶನ!
ವ್ಯಾಪಾರ ಅಭಿವೃದ್ಧಿಗೆ ಸ್ಲೈಡ್ ಮತ್ತು ಪತ್ರಿಕಾ ಜಾಹೀರಾತಿನ ನಿದರ್ಶನ!!!

- "ಪ್ರಕಾಶ"ವಾರಪತ್ರಿಕೆಯ ಮೂಲಕ ವರ್ತಮಾನ ಪ್ರಸಾರ, ಪ್ರಚಲಿತ ವಿಚಾರಗಳ ಮೇಲ ಕ್ಷ-ಕಿರಣ—
- ಮೋಟಾರು, ರೇಡಿಯೋ ಬಿಟ್ರಗಳನ್ನು ಅಕ್ಯುತ್ತಮವಾಗಿ ಚಾರ್ಜ್ ಮಾಡಿಕೊಡುವುದು—
- ಸಭೆ, ಸತ್ಕಾರ ಕೂಟದಲ್ಲಿ ಉಪಯೋಗವಾಗುವ ಧ್ವನಿ ವರ್ಧಕ ಯಂತ್ರವನ್ನು ಒದಗಿಸುವುದು—
- ಮದುವೆ, ಮುಂಜಿಗಳಾಗಲು ಯೋಗ್ಯ ಸನ್ನಾಹ—

ಇವೆಲ್ಲವುಗಳ ವ್ಯವಸ್ಥೆ ಎಲ್ಲಿ?

ಶ್ರೀ ರಾಮಕೃಷ್ಣ ಥಿಯೇಟರ್ ಲಿ.,
ಉಡುಪಿ—ಇಲ್ಲಿ!

ಆಯುರ್ವೇದ ಔಷಧಗಳಿಂದ ತಯಾರು ಮಾಡಿದ

ರಾಮತೀರ್ಥ ಬ್ರಾಹ್ಮೀ ತೈಲ

ಆಯುರ್ವೇದ ಔಷಧ

ಸ್ಪೆಶಲ್ ನಂ! ೧ (ರಿಜಿಸ್ಟರ್ಡ್)

ಪ್ರಖ್ಯಾತ ಡಾಕ್ಟರರು, ವೈದ್ಯರು ವಿದ್ವಾಂಸರು ಮತ್ತು ಅನೇಕ ಸ್ತ್ರೀಪುರುಷರು ಈ ತೈಲದ ಪ್ರಶಂಸೆ ಮಾಡುತ್ತಾರೆ.

ಯಾಕೆಂದರೆ ಈ ತೈಲವು ಅನೇಕ ಬಗೆಯ ಲಾಭನನ್ನು ಕೊಡುತ್ತದೆ.

ಕಿವಿಯಲ್ಲಿ ಹಾಕಿದರೆ ಕಿವಿಯ ನರಗಳು ಸಶಕ್ತವಾಗಿ ಕಿವಿಯ ಕೆಲವು ರೋಗಗಳು ಗುಣವಾಗುತ್ತವೆ. ಶಾಂತವಾದ ನಿದ್ದೆ ಬರುತ್ತದೆ. ತಲೆನೋವು ನಿಲ್ಲುತ್ತದೆ ಮಿದುಳು ಮತ್ತು ಕೂದಲಿಗೆ ಶ್ರೇಷ್ಠ.

ಸೂಚನೆ: ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಕ್ಕಳಿಗೆ ಈ ತೈಲವು ಎಲ್ಲಾ ಋತುಗಳಲ್ಲಿ ಅನುಕೂಲವಿದೆ. ಎಲ್ಲಾ ಕಡೆಗಳಲ್ಲಿ ಸಿಗುತ್ತದೆ. ಇದೇ ಎಣ್ಣೆಯನ್ನೇ ಕೇಳಿರಿ.

ತೈಲದ ಕ್ರಯ ದೊಡ್ಡ ಬಾಟ್ಲಿ ರೂ. ೩-೮-೦. ಸಣ್ಣ ಬಾಟ್ಲಿ ರೂ. ೨-೦-೦

ಪೋಸ್ಟ ಮುಖಾಂತರ ತರಿಸುವವರು ದೊಡ್ಡ ಬಾಟ್ಲಿಗೆ ರೂ. ೫-೦೩-೦ ಸಣ್ಣ ಬಾಟ್ಲಿಗೆ ರೂ. ೩-೧೩-೦ (ಪೇಕಿಂಗ್ ಖರ್ಚು ಮತ್ತು ಅಂಚೆವೆಚ್ಚ ಸೇರಿ) ಮನಿಯಾರ್ಡರಿನಿಂದ ಕಳುಹಿಸಬೇಕು. ವಿ. ಪಿ. ಮಾಡುವದಿಲ್ಲ.

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ಕನ್ನಡ ಬಾಂಧವರಿಗೆ ಸುಸ್ವಾಗತ!

ಕನ್ನಡಿಗರ ಕನಸಾದ 'ಕರ್ನಾಟಕ ಏಕೀಕರಣ'ದ ಈ ಶುಭ ಮುಹೂರ್ತದಲ್ಲಿ 'ವಿಶಾಲ ಮೈಸೂರಿ'ನಲ್ಲಿ ಬಂದು ಸೇರಿರುವ ಕೊಡಗು, ಬೊಂಬಾಯಿ, ಹೈದರಾಬಾದು ಮತ್ತು ಮದರಾಸ್ ಪ್ರಾಂತ್ಯಗಳ ಕನ್ನಡ ಬಾಂಧವರೆಲ್ಲರಿಗೂ ನಮ್ಮ ಆದರಪೂರ್ವಕವಾದ ಸುಸ್ವಾಗತವನ್ನು ಬಯಸುತ್ತೇವೆ.

ವಿಶ್ವವಿಖ್ಯಾತಿಯನ್ನು ಪಡೆದಿರುವ ಕನ್ನಡ ನಾಡಿನ ಅಜಂತ್ರಾರ್ಕವಾದ ಕೀರ್ತಿಗೆ ಕಾರಣರಾಗಿ, ಸತ್ಯ-ಧರ್ಮಗಳ ಅಧಾರದ ಮೇಲೆ 'ರಾಮರಾಜ್ಯ'ವನ್ನು ಸ್ಥಾಪಿಸಿದ ಕೀರ್ತಿ ಕರ್ನಾಟಕ ರತ್ನ, ಸಿಂಹಾಸನಾಧೀಶ್ವರರಾದ ಯದುಕುಲ ದರಸರಿಗೆ ಮಾತ್ರ ಸಲ್ಲುವುದು. ಈ ಕೀರ್ತಿಕಲಶವನ್ನು ಈ ಸಂದರ್ಭದಲ್ಲಿ ಕಿತ್ತೂರಿಗೆ ಯುವ ಪ್ರಯತ್ನವು ನಡೆದಿರುವುದಕ್ಕಾಗಿ ನಾವು ಎಷ್ಟು ವಿಶದಿಸಿದರೂ ಸಾಲದು. ಕನ್ನಡಿಗರು ಏಕೋದರರಂತೆ ಬಾಳಿ, ಬದುಕಿ, ಭವ್ಯ ಭಾರತದ ನಿರ್ಮಾಣ ಕಾರ್ಯದಲ್ಲಿ ಯಶಸ್ವಿಗಳಾಗಬೇಕಾದರೆ, ಈ ಧರ್ಮಸಾಮ್ರಾಜ್ಯದ ಸೌಭಾಗ್ಯ ಸ್ವರೂಪರಾದ ಯದುಕುಲದರಸರ ಮುಂದಾಳುತ್ವದಲ್ಲಿ ಮಾತ್ರವೇ ಇಳ್ಳಬೇಕಾದ್ದನ್ನು ನಾವೂ ಮತ್ತು ನಮ್ಮ ನಾಯಕರೂ ಮನಗಂಡಿದೇವಾಗಿದೆ. ಇಂತಹ ಧರ್ಮ ಸಾಮ್ರಾಜ್ಯವು ಅಚ್ಚಳಿಯದೆ ಮುಂದುವರೆಯುವಂತೆ ಮಾಡುವ ನುಷತ್ಕಾರ್ಯದಲ್ಲಿ ನಾವೆಲ್ಲರೂ ಏಕೀಭವಿಸಿದ ಸಮೃದ್ಧಿಯನ್ನು ಕರ್ನಾಟಕ ಸಾಮ್ರಾಜ್ಯಾಧಿದೇವತೆಯಾದ ಶ್ರೀ ಚಾಮುಂಡೇಶ್ವರಿಯು ನಮ್ಮೆಲ್ಲರಿಗೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಎಂ. ಆರ್. ಸಿ. ಬನಪ್ಪ ಅಂಡ್ ಸನ್ಸ್,

ಸುಪ್ರಸಿದ್ಧವಾದ 'ಕಾಂಗ್ರೆಸ್ ಸ್ಪೆಶಲ್,' 'ಜೆ. ಎಸ್- ಸ್ಪೆಶಲ್' ಮತ್ತು 'ಜೆ. ಎಸ್. ಎಕ್ಸ್ಟ್ರಾ ಸ್ಪೆಶಲ್ ಆಫೀಸರ್ಸ್' ಮಂಗಳೂರು ಬೀಡಿಗಳನ್ನು ತಯಾರಿಸುವವರು ಮತ್ತು

ಮಾಲೀಕರು:

ಜ್ಯೂಬಿಲಿ ಸ್ಟೋರ್ಸ್,
1, ಬಸ್ ಟರ್ಮಿನಸ್— ಮೈಸೂರು.

ಬಿಡುಗಡೆಯ ಹೋರಾಟದ ಮೂವತ್ತೆ ವರ್ಷ

ಉಲ್ಲಾಸದಿಂದ ಯಶಸ್ವಿಯಾಗಿ ಆಚರಿಸೋಣ.

1957ನೆಯ ಆಗೋಸ್ತು ತಿಂಗಳ ತಾ. 15 ಮತ್ತು 16ರಂದು ಇಡಿಯ ದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಶತಮಾನೋತ್ಸವವನ್ನು ಅಪೂರ್ವವಾದ ಉತ್ಸಾಹದಿಂದಲೂ ಅಭಿಮಾನದಿಂದಲೂ ಆಚರಿಸಲಾಗುತ್ತಿದೆ. ಉಡುಪಿ ತಾಲೂಕಿನಲ್ಲೂ ಈ ರಾಷ್ಟ್ರೀಯ ಉತ್ಸವವನ್ನು ಯಶಸ್ವಿಯಾಗಿ ಆಚರಿಸಲು ಸಾರ್ವಜನಿಕರೆಲ್ಲರೂ ಹೃತ್ಪೂರ್ವಕವಾದ ಸಹಾಯವನ್ನೂ ಸಹಕಾರವನ್ನೂ ನೀಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಭಾರತದ ಮೊದಲನೆಯ ಸ್ವಾತಂತ್ರ್ಯ ಹೋರಾಟದ ಈ ಚರಿತ್ರಾರ್ಹ ಘಟನೆಯ ನೆನಪು ಸದಾ ಕಾಲವೂ ಉಳಿಯುವಂತೆ ಉಡುಪಿಯಲ್ಲಿ ಸುಮಾರು 30,000 ಸಾವಿರ ರೂಪಾಯಿಗಳ ವೆಚ್ಚದಲ್ಲೊಂದು ಸ್ಮಾರಕ ಸುಂದರಭವನವನ್ನು ನಿರ್ಮಿಸಬೇಕೆಂದು ಸಂಕಲ್ಪಿಸಿ ನಗರ ಸಭಾಧ್ಯಕ್ಷರ ಹಿತಚಿಂತನೆಯಲ್ಲಿ ಒಂದು ಸಮಿತಿಯೂ ರಚಿಸಲ್ಪಟ್ಟಿದೆ ಅನೇಕ ಸಾರ್ವಜನಿಕ ಕಾರ್ಯಕ್ರಮಗಳಿಗೂ ನಗರ ಸಭೆಯು ಕಾರ್ಯಾಲಯಕ್ಕೂ ಅತ್ಯುಪಯೋಗಕರವಾಗಿರುವ ಈ ಸುಂದರ ಸುಂದರ ಭವನದ ನಿರ್ಮಾಣದ ವೆಚ್ಚದಲ್ಲಿ ಒಂದಂಶವು ನಗರಸಭೆಯಿಂದ ದೊರೆಯಬಹುದೆಂದು ಭರವಸೆಯಿದೆ. ಮಹಾಜನರು ಈ ಸತ್ಕಾರ್ಯದಲ್ಲಿ ಶಕ್ತಿವಿರಿ ಸಹಾಯ ಮಾಡುವ ಔದಾರ್ಯ ತೋರಿಯಾರೆಂದು ನಿರೀಕ್ಷಿಸುತ್ತೇವೆ.

ಇದಲ್ಲದೆ ತಾ. 15 ಮತ್ತು 16ರಲ್ಲಿ ಇದರ ಅಂಗವಾಗಿ ಅಗ್ಗ ದರದಲ್ಲಿ ಆಕ್ಕಿಯನ್ನು ವಿತರಣೆಮಾಡುವ ಕಾರ್ಯಕ್ರಮವೂ ಇದೆ. ಜಾಗೆಯೇ ಕ್ರೀಡಾಸ್ಪರ್ಧೆ, ವಾಕ್‌ಸ್ಪರ್ಧೆ, ಪ್ರಬಂಧಸ್ಪರ್ಧೆಗಳನ್ನೇರ್ಪಡಿಸಿ ವಿಜಯಿಗಳಾದವರಿಗೆ ಪಾರಿತೋಷಕಗಳನ್ನು ಕೊಡುವ ಯೋಜನೆಯಿದೆ. ಜೊತೆಗೆ ಮನರಂಜನೆಯ ಕಾರ್ಯಕ್ರಮಗಳೂ ಇವೆ. ಇವನ್ನೆಲ್ಲ ತಮ್ಮೆಲ್ಲರ ಸಹಕಾರ—ಸಹಾಯಗಳಿಂದ ಅತ್ಯಂತ ಸಂಭ್ರಮದಿಂದ ಆಚರಿಸಬೇಕೆಂದು ಆಸೆಯಿದೆ

ಇದೊಂದು ರಾಷ್ಟ್ರೀಯ ಹಬ್ಬ. ಎಲ್ಲೆಲ್ಲೂ ಹೆಮ್ಮೆ ಹುಮ್ಮಸ್ಸುಗಳು, ಉತ್ಸಾಹ ಉಲ್ಲಾಸಗಳು ತುಂಬಿತುಳುಕಾಡಬೇಕು. ನಮ್ಮ ದೇಶದ ಬಿಡುಗಡೆಯ ಮೊದಲನೆಯ ಹೋರಾಟದಲ್ಲಿ ಭಾಗವಹಿಸಿದ ವೀರಪರಂಪರೆಗೆ ತಕ್ಕ ಗೌರವ ತೋರಿಸಬೇಕು. ಎಲ್ಲರೂ ತಂತಮ್ಮ ಮನೆಮಠ ಅಂಗಡಿ ವರ್ತಕಗಳನ್ನು ದೀಪ—ತೋರಣಗಳಿಂದ ಅಂದವಾಗಿ ಸಿಂಗರಿಸಬೇಕು. ಸಂತೋಷದ ಕಳೆ ಹೊಳೆಯಾಗಿ ಹರಿಯಬೇಕು. ಮತ್ತು ಉತ್ಸವ ಸಮಿತಿಯವರ ಕಾರ್ಯಭಾಗದಲ್ಲಿ ನೆರವಾಗಿ ಉದಾರ ಸಹಾಯವನ್ನಿತ್ತು ಸಹಕರಿಸಬೇಕು.

ಸಹಾಯವನ್ನು ಕೊಡುವ ಮಹಾನೀಯರು ಉತ್ಸವ ಸಮಿತಿಯ ಕೋಶಾಧಿಕಾರಿಗಳಾದ ಡಾ॥ ಪಿ. ಜಿ. ಆಚಾರ್ಯರ ವಶ ಕೊಡಬೇಬೇಕಾಗಿ ಪ್ರಾರ್ಥನೆ.

—ಸ್ವಾತಂತ್ರ್ಯ ಹೋರಾಟದ ಶತಮಾನೋತ್ಸವ ಸಮಿತಿ, ಉಡುಪಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 153/1957

ಕೆ. ಸಿದ್ದಯ್ಯ ಶೆಟ್ಟಿ —ವಾದಿ

ಮತ್ತು

ಕೊಲ್ಲು ಯಾನೆ ಸಂಕಮ್ಮ ಶೆಟ್ತಿ ಕೂಸಾ —ಪ್ರತಿವಾದಿನಿ.

ಯಿದರೊಳಗೆ

ಮೇಲ್ಕಂಡ ವ್ಯಾಜ್ಯವು ವಾದಿಯು ಪಿರ್ಕೇಳಿ ಮಾಡಿದ್ದಾನೆ. ಸದ್ರಿ ವ್ಯಾಜ್ಯದಲ್ಲಿ 2ನೇ ಪ್ರತಿವಾದಿ ಮಹಾಬಲ ಹೆಗ್ಗಡೆ, 3ನೇ ಪ್ರತಿವಾದಿ ಸದಾಶಿವ ಹೆಗ್ಗಡೆ ಕೂಡಾ 2 ಜನರಿಗೆ ಆಗತಕ್ಕೆ ವ್ಯಾಜ್ಯವು ಸೋಲೀಸ. ತಾರೀಕು 17.8.1957ಕ್ಕೆ ಇಟ್ಟಿರುವದ್ದರಿಂದ ಸದ್ರಿ ವ್ಯಾಜ್ಯದಲ್ಲಿ ಸದ್ರಿ ಪ್ರತಿವಾದಿರು ದೇಖುವ ತಮ್ಮ ಅಕ್ಷೇಪವನ್ನು ಆ ದಿನ ಸದ್ರಿ ಕೋರ್ಟುಮುಂದೆ ಹಾಜ್ರಾಗಿ ಜ್ಞಾಪಿಸುವುದಿಕೊಳ್ಳತಕ್ಕದ್ದು.

P. Padmanabha Rao.
Vakil for Plaintiff.

Dated 10—8—57 Udipi.

ಅಹಿಂಸೆ ಮತ್ತು ೧೮೫೭

(೪ನೇ ಪುಟದಿಂದ)

ಶೌರ್ಯ, ಸಾಹಸಗಳನ್ನು ಆಸ್ವಾದಿಸಲೂ ಸ್ವಾತಂತ್ರ್ಯಾಪೇಕ್ಷಿತ ಜನಾಂಗವೊಂದಿದೆ ಎಂಬುದನ್ನು ತೋರಿಕೊಟ್ಟ ಈ ಸ್ವಾತಂತ್ರ್ಯ ಯುದ್ಧವನ್ನು ಜಗತ್ತೇ ಮರೆಯುವಂತಿಲ್ಲ.

ಶತಸಾಂವತ್ಸರಿಕ ಸಂಸ್ಮರಣೆಯ ಈ ಪವಿತ್ರ ದಿನದಲ್ಲಿ ನಮ್ಮ ಹಿರಿಯ ಸೀಳಿಗೆ ಈ ಶೂರ ಜನಾಂಗಕ್ಕೆ ನಾವು ಕೃತಜ್ಞತೆಯಿಂದ ತಲೆ ಬಾಗೋಣ. "ಏನೇ ಬರಲಿ ಒಗ್ಗಟ್ಟಿರಲಿ; ಸ್ವಾತಂತ್ರ್ಯದಿದಿರು ನಮ್ಮ ಪ್ರಾಣವು ಕ್ಷಣಿಕವಾಗಲಿ!" ಎನ್ನುವ ಅವರ ಆದರ್ಶವನ್ನು ಮರೆಯದಿರೋಣ. ಅವರ ಸಾ ತಂತ್ರ್ಯ ಸ್ಫೂರ್ತಿಯೇ ನಮ್ಮಲ್ಲಿ ಜಾಗೃತವಾಗಿ, ಅವರು ನೆನಸಿದ ನಮ್ಮ ಸಮೃದ್ಧಮಯ ಭಾರತವನ್ನು ಕಟ್ಟೋಣ. ಅವರ ವೀರಗಾಥೆಯು ನಮ್ಮ ತಲೆ-ತಲಾಂತರಗಳಲ್ಲೂ ಉನ್ನತಿಯ ದಾರಿ ತೋರಲಿ! ಭಾರತವು ಅಜೇಯವಾಗಲಿ!

ಚಂದಾದಾರರಲ್ಲಿ ವಿನಂತಿ.

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 36 ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 37 ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿ ಇರುವ ಮಹಾನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಸ್ಥಾಪನೆ. 1935.

ಸರ್ವ ವಿಧದ ಇಲೆಕ್ಟ್ರಿಕ್ ಸಾಮಗ್ರಿಗಳಿಗೂ, ಇಲೆಕ್ಟ್ರಿಕ್ ಮೋಟಿರುಗಳಿಗೂ, ನೀರಿನ ಪಂಪು ಸೆಟ್ಟುಗಳಿಗೂ, ನಾಜೂಕಾದ ಫಿಟ್ಟಿಂಗ್ ಕೆಲಸಗಳಿಗೂ, ಧ್ವನಿವಾಹಕ (ಲೌಡ್ ಸ್ಪೀಕರ್) ಯಂತ್ರಕ್ಕೂ ನಮ್ಮನ್ನು ವಿಚಾರಿಸಿರಿ.

ಉಡುಪಿ ಇಲೆಕ್ಟ್ರಿಕ್ ಸ್ಟೋರ್ಸ್

ಚರ್ಚ್ ರೋಡ್, ಉಡುಪಿ.

ಮರದ ಸಕಲ ಒಗೆಯ ಆಕರ್ಷಕ ಕಾಮಗಾರಿಗೆ

ಉಡುಪಿ ಭಾರತ್ ಉಡ್ ಇಂಡಸ್ಟ್ರೀಸ್

ಚರ್ಚ್ ರೋಡ್, ಉಡುಪಿ.

ಇವರನ್ನು ಸಂದರ್ಶಿಸಿರಿ, ಇಲ್ಲವೇ ಪತ್ರವ್ಯವಹಾರ ನಡೆಸಿರಿ.

ಮೈಸೂರು ಟೈಪ್ ಫೌಂಡ್ರಿ,

ಬೆಂಗಳೂರು-2.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ 'ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.
ಇಂದೇ ವಿವರಗಳಿಗೆ ಬರೆಯಿರಿ:—

THE MYSORE TYPE FOUNDRY
Subedar Chatram Road, BANGALORE-2.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖಪಡೆಯಿರಿ!!

ನಿಮ್ಮ ಮೇಲ್ಮೈಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ವೇಳೆವು ಬಳಲವಾಗಿ ಕ್ಷೀಣಿಸಿ ಮೂಳೆ (ಎಲುಬು) ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿ ಬಿದ್ದಿದ್ದು ಹಿಂದೆತೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯ ಇವುಗಳು ಇಲ್ಲದೆ ಹೋದರೂ ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತು ಹೋಗಿದ್ದರೂ, ಮೇಹ, ವ್ಯಾಧಿಗಳೇ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮುಸ್ಕಥ ಚಿಂತಾಮಣಿ ರೇಸ್ಯ" ಸೇವನೆಯಿಂದ ಸಂಪೂರ್ಣ ಸುಖ ದೊರೆಯುವುದು. ಅಲ್ಲದೆ ಆರೋಗ್ಯ ಭಾಗ್ಯವನ್ನೂ ಪಡೆಯಬಹುದು: ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು.

ಪೌಂಡು ಒಂದಕ್ಕೆ ರೂ. 5—0—0

ಮಲೆಯಾಳ ಮೆಡಿಕಲ್ ಹಾಲ್. ತಿರುವನಂತಪುರಂ (TRIVANDRUM)

ಅಪೇಕ್ಷಕರಿಗೆ ಕ್ಯಾಟ್ಲಾಗು ಇನಾಂ.

ಹೊಸ ಮಾದರಿಯ

ಉಷಾ 'USHA'

'ಹೇಂಡ್' ಮತ್ತು 'ಟೈಲರ್ಸ್' ಹೊಲಿಯುವ ಯಂತ್ರಗಳನ್ನೇ ಎಲ್ಲರೂ ಕೇಳುತ್ತಾರೆ

ಏಕೆಂದರೆ

ಈ ಯಂತ್ರಗಳು ಬಹಳ ಉತ್ತಮವಾಗಿವೆ.

ಅಧಿಕೃತ ಮಾರಾಟಗಾರರು:

ದಿ ಇಂಡಿಯನ್ ಒಟೋಮೋಬ್ಯಾಲ್ಸ್,

ಬಸ್ ಸ್ಟೇಂಡ್ ಬಳಿ, ಉಡುಪಿ.

ಇಲ್ಲಿ ಎಲ್ಲಾ ತರದ ಸ್ಪೇರ್ ಪಾರ್ಟುಗಳು ದೊರೆಯುತ್ತವೆ. ಎಲ್ಲಾ ವಿಧದ ರಿಪೇರಿಗಳನ್ನೂ ಇವರು ಮಾಡಿಕೊಡುತ್ತಾರೆ. ಪ್ರತ್ಯಕ್ಷವಾಗಿ ಕಾಣಲಿಚ್ಛಿಸುವವರು ಇವರ 'ಶೋ ರೂಮ್'ಗೆ ಭೇಟಿ ಕೊಡಬಹುದು.

INDEPENDENCE DAY GREETINGS AND GOOD WISHES TO ALL OUR FRIENDS.

15TH AUGUST 1957

We are proud of the tremendous Progress Made by Our Country During the Ten Years of Independence. And on this Happy Occasion We pledge anew For Better and Quicker Service.

CHANDARANA BROTHERS

(ESTABLISHED IN 1935)

Wholesale Department: Mission St., MANGALORE.

Retail Department: Hampankatta, MANGALORE.

ನೀಲಿ ಬೃಂಗಾದಿ ತೈಲ

ಎಲ್ಲ ಹವಾ ಪ್ರದೇಶದಲ್ಲಿಯೂ ಸ್ನಾನಕ್ಕೆ ಅತಿ ಉತ್ತಮವೆಂದು ಹೆಸರುವಾಸಿಯಾದ ತೈಲ. ಇದು ತಲೆ ಕೂದಲಿನ ಬೆಳವಣಿಗೆ ಮತ್ತು ಹೊಳಪನ್ನು ಹೆಚ್ಚಿಸುವುದು.

ತಯಾರಕರು: **ದಿ ಆರ್ಯ ವೈದ್ಯ ಶಾಲಾ** (ಸ್ಥಾಪನೆ: 1902)

ಕೋಟಕ್ಕಲ್ (ಕೊಯಿಕೋಡ್ ಜಿಲ್ಲೆ)

ಶಾಖೆಗಳು: ಕೊಯಿಕೋಡ್ (ಫೋನ್ 155), ತಿರೂರು (ಫೋನ್ 31), ಪಾಲ್ಘಾಟ್ (ಫೋನ್ 104), ಈರೋಡ್ ಮತ್ತು ಎರ್ನಾಕುಲಂ.

ಮಾರಾಟ ಡಿಪೋ: ಪಾಲ್ಘಾಟ್, ವೆಟ್ಟುಕುಳಂ ರಸ್ತೆ.

600ಕ್ಕೂ ಮಿಕ್ಕಿದ ವಿಶಿಷ್ಟ ವರ್ಗದ ಆಯುರ್ವೇದ ಔಷಧಿಗಳು ಶಾಸ್ತ್ರೀಯ ರೀತಿಯಲ್ಲಿ ತಯಾರಿಸಲ್ಪಡುತ್ತವೆ ಮತ್ತು ನಮ್ಮ ಪ್ರಧಾನ ಕಚೇರಿ ಮತ್ತು ಶಾಖೆಗಳಲ್ಲಿ ತಜ್ಞ ಆಯುರ್ವೇದ ಚಿಕಿತ್ಸೆಗಳನ್ನು ಒದಗಿಸಲಾಗುತ್ತದೆ. ನೆವರಕ್ಕಿಝಿ, ಧಾರಾ, ಪಿಝಿಚಿಲ್ ಇತ್ಯಾದಿ ಕೇರಳದ ವಿಶಿಷ್ಟ ಚಿಕಿತ್ಸೆಗಳನ್ನು ಕೋಟಕ್ಕಲ್‌ನಲ್ಲಿರುವ ನಮ್ಮ ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್‌ನಲ್ಲಿ ಮಿತವಾದ ದರದಲ್ಲಿ ಒದಗಿಸಿಕೊಡಲಾಗುತ್ತದೆ.

ಹೆಚ್ಚಿನ ವಿವರಗಳಿಗೆ ದಯವಿಟ್ಟು ಮೆನೇಜಿಂಗ್ ಟ್ರಸ್ಟಿಯವರಿಗೆ ಬರೆಯಿರಿ.

Regd No M. 3615
LICENCE NO. 31
Licensed to Post without Prepayment

ದಿ ನವಯುಗ ಪ್ರಿಂಟಿಂಗ್ ಪ್ರೆಸ್ಸ್ ಲಿಮಿಟೆಡ್

ಸ್ಥಾಪನೆ: 1931.

ಶಾಖೆಗಳು:

ಮೈಸೂರು ರಾಜ್ಯ

ಬೈಂದೂರು	ಕಾರ್ಕಳ	ಸಿಟಿ-ಮಂಗಳೂರು-1
ಬ್ರಹ್ಮಾವರ	ಕಾಪು	ಪುತ್ತೂರು
ಕುಂದಾಪುರ	ಮಂಗಳೂರು-3	ಮಡಿಕೇರಿ
ಉಡುಪಿ	ಮೈಸೂರು	

ವಿ. ಸೂ: ಬೇಂಕಿನ ಬೆಂಗಳೂರು ಶಾಖೆಯನ್ನು ಸದ್ಯದಲ್ಲೇ ತೆರೆಯೋಣಾಗುವುದು.

ಕೇರಳ ರಾಜ್ಯ

ಕಾಸರಗೋಡು ಕಾಞಂಗಾಡು

ಮುಂಬಯಿ ರಾಜ್ಯ

ಪಾರ್ಸಿಬಜಾರ್ ಸ್ಟ್ರೀಟ್, ಫೋರ್ಟ್, ಮುಂಬಾಯಿ-1

ಜಂಟ್ಸ್ ಚಲಾವಣೆ ಖಾತೆ ಬಾಕಿ:-

30-6-1956	30-6-1957
ರೂ. [illegible]/-	ರೂ. [illegible]/-

ತಾ. 1-7-1957 ರಿಂದ ಕಾಯಂ ಠೇವಣಾತಿ ಬಡ್ಡಿ ದರ ಹೆಚ್ಚು ಮಾಡಿ, ಠೇವಣಾತಿ ಸ್ವೀಕರಿಸಲಾಗುವುದು.

ಹಲವು ವಿಶೇಷ ಆಕರ್ಷಕ ಉಳಿತಾಯ ಯೋಜನೆಗಳು ಸಾರ್ವಜನಿಕರ ಸೇವೆಗೆ

ವ್ಯಾಪಾರಸ್ಥರಿಗೆ, ಉದ್ಯಮಗಾರರಿಗೆ ಸಾಲದ ಸೌಕರ್ಯವನ್ನು ಕಾಲವಿಳಂಬವಿಲ್ಲದೆ ಒದಗಿಸಲಾಗುವುದು.

ನಮ್ಮ ಶಾಖೆಗಳಲ್ಲಿ ಒಮ್ಮೆ ವಿಚಾರಿಸಿರಿ

ಕೆ. ಸುಂದರರಾಮ ಶೆಟ್ಟಿ, ಬಿ. ಎ, ಬಿ. ಎಲ್.,

ಎಡ್ವೋಕೇಟ್, ಮಂಗಳೂರು

(ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು)

Edited, Printed & Published by K. H. Shetty at the Navayuga Press, Udipi, S. India.

REGD. NO. M. 3618

LICENCE NO. 31

ನವಯುಗ

ಸಂಪುಟ ೩೬
VOL.36

22—8—1957

ಸಂಚಿಕೆ ೫೦
NO. 50

ಗ್ರಾಮರಾಜ್ಯ ಕನಸು

ಏನೋಬಾರ ಕರ್ನಾಟಕ ಸಂಚಾರದಲ್ಲಿ ಅವರಿಗೆ ಸಹಕಾರ ನೀಡೋಣ

ಒಂದಾನೊಂದು ಕಾಲದಲ್ಲಿ ನಮ್ಮ ದೇಶವು "ಹಾಲುಜೇನು ಸುರಿವ ನಾಡು" ಎಂದೆಂಬ ಅಮೂಲ್ಯ ಕೀರ್ತಿಯನ್ನು ಪಡೆದಿತ್ತು. ಆದರೆ, ಇಂದು ಹಾಲು ಜೇನಿನ ಮಾತಂತೂ ದೂರವಿರಲಿ, ಅದರ ಕುರುಹಾದರೂ ತೋರಿಬರುವುದಿಲ್ಲ. ಅದರ ಬದಲು, ಹಳ್ಳಿ ಹಳ್ಳಿಗಳಲ್ಲಿ, ಮನೆ ಮನೆಗಳಲ್ಲಿ ಬಾಹ್ಯ ಪ್ರದೇಶಗಳಲ್ಲಿ ಸಿದ್ಧವಾದ ಸಾಮಾನು ಸರಂಜಾಮುಗಳು ತುಂಬಿಕೊಂಡಿರುವುದು ಕಂಡುಬರುತ್ತದೆ. ಬಟ್ಟೆ, ಬರೆ, ಎಣ್ಣೆ, ಸಾಬೂನು, ಸಕ್ಕರೆ, ಬೆಲ್ಲ, ಬೀಡಿ ಸಿಗರೇಟು, ಮೆಟ್ಟು ಬೂಟು ಹೀಗೆ ನಮ್ಮ ದಿನನಿತ್ಯೋಪಯೋಗಿ ಒಡವೆಗಳಲ್ಲಿ ಅಧಿಕಾಂಶ ವಸ್ತುಗಳು ಯಂತ್ರಗಳಿಂದ ತಯಾರಿಸಲ್ಪಟ್ಟವು ಇಲ್ಲವೇ, ಪರದೇಶಗಳಿಂದ ಆಮದಾಗಿರುವಂಥವು. ಗ್ರಾಮಗಳಲ್ಲಿ ಯಾವುದೇ ಉದ್ಯೋಗ ಇಲ್ಲವೇ ದಂಧೆಗಳು ನಡೆಸಲ್ಪಡುವುದಿಲ್ಲ, ಇದರಿಂದಾಗಿ ವಿದ್ಯಾವಂತ ಮನುಷ್ಯನು ಅಲ್ಲಿ ಬದುಕಲಿಚ್ಛಿಸುವುದಿಲ್ಲ. ಒಂದು ನಾಲ್ಕಕ್ಷರ ಓದಲು ಬರೆಯಲು ಬಂದಿತೆಂದರೆ, ಕಾಯಕಕ್ಷ್ಟ ಮಾಡಲು ಬಯಸುವುದಿಲ್ಲ, ಮತ್ತು ಪೇಟೆ ಪಟ್ಟಣಗಳಲ್ಲಿ ನೌಕರಿಯನ್ನು ಅರಸುತ್ತಾ ತಿರುಗಾಡತೊಡಗುತ್ತಾನೆ.

ಈ ರೀತಿಯಲ್ಲಿ ಪ್ರತಿ ಮನೆಯಲ್ಲೂ ಅಲಸ್ಯವು ತುಂದಿಲವಾಡುತ್ತಿದೆ. ಉದ್ಯೋಗಾವಕಾಶವಿಲ್ಲದಿರುವುದರಿಂದ, ಕಳ್ಳತನ, ಜೂಜು ಜುಗಾರಿ, ಜಗಳ ಮೊದಲಾದ ಕೆಟ್ಟ ಅಭ್ಯಾಸಗಳು ನಮ್ಮ ಹಳ್ಳಿಗರಲ್ಲಿ ಬಲವಾಗಿ ಬೇರೂರಿದೆ. ಇದೇ ರೀತಿಯಲ್ಲಿ ಇನ್ನೂ ಕೆಲದಿನಗಳವರೆಗೆ ನಮ್ಮ ಹಳ್ಳಿಗಳೂ ಹಳ್ಳಿಗರೂ ಮುಂದುವರಿದರೆ, ನಮ್ಮ ಒಕ್ಕಲುತನ ಮೊದಲಾದ ಮೂಲೋದ್ಯೋಗಗಳು ನಿಜವಾಗಿಯೂ ನಮ್ಮ ಕೈಜಾರಿ ಹೋಗುತ್ತವೆ ಆಗ, ನಾವು ಉಣ್ಣುವ ಪ್ರತಿಯೊಂದು ಕಾಳಿಗೂ ಪರರೆದುರು ಕೈಚಾಚಿಡಬೇಕಾಗುವ ಪರಿಸ್ಥಿತಿ ಯೊದಗುತ್ತಿದೆ.

ಈ ಗಂಡಾಂತರದಿಂದ ಪರಿಸ್ಥಿತಿಯಿಂದ ಬಿಡುಗಡೆ ಹೊಂದುವ ಉಪಾಯವಾದರೂ ಯಾವುದು? ಈ ಅಪಾಯದಿಂದ ದೂರವಿರುವ ಬಯಕೆಯು ನಮಗಿದೆಯೆ? ಹಾಗಾದರೆ ಸೊಂಟಕಟ್ಟಲು ಸಿದ್ಧರಾಗಬೇಕು. ಈ ದುಃಸ್ಥಿತಿಯಿಂದ ದೂರವಿರಲು ಒಂದೇ ಒಂದು ಉಪಾಯವೆಂದರೆ ಮನೆಯ ಉಪಯೋಗಕ್ಕೆ ಬೇಕಾದ ಒಡವೆ ವಸ್ತುಗಳು ಮನೆಯಲ್ಲಿ, ಮತ್ತು ಹಳ್ಳಿಯ ವಸ್ತುಗಳು ಹಳ್ಳಿಗಳಲ್ಲಿಯೇ ಸಿದ್ಧವಾಗಬೇಕು. ತಿನ್ನಲು, ಉಡಲು, ತೊಡಲು, ಮನೆಕಟ್ಟಲು ಮೊದಲಾದ ಅವಶ್ಯಕ ಕಾರ್ಯಗಳಲ್ಲಿ ಉಪಯೋಗಿಸುವ ಸಾಮಾನುಗಳು ಹಳ್ಳಿಯ ಒಳಪ್ರದೇಶದಲ್ಲಿಯೇ ತಯಾರಾಗುವಂತಾಗಲಿ ಅವನ್ನು ಪೇಟೆ ಪಟ್ಟಣಗಳಿಂದಾಗಲೀ, ಪರದೇಶಗಳಿಂದಾಗಲೀ ಆಮದುಮಾಡಿಕೊಳ್ಳದಂತಾಗಬೇಕು ಎಲ್ಲ ವಸ್ತು ಒಡವೆಗಳನ್ನೂ ಆಯಾ ಗ್ರಾಮಸ್ಥರೇ ಮಾಡಬೇಕು. ಇವೆಲ್ಲವೂ ಆಯಾ ಗ್ರಾಮಗಳಲ್ಲಿ ದೊರೆವ ಕಚ್ಚಾ ಮಾಲುಗಳಿಂದಲೇ ತಯಾರಾಗಬೇಕು. ಬೊಂಬಾಯಿ ಅಧಿನಾಗಪುರಗಳಿಂದ ಹತ್ತಿಯನ್ನು ತರಿಸಿ ಅದನ್ನು ಹಳ್ಳಿಯಲ್ಲಿ ನೂಲುವುದು ಕಲಕತ್ತೆಯಿಂದ ಚರ್ಮವನ್ನು ತರಿಸಿ, ಅದಕ್ಕೆ ಹಳ್ಳಿಯಲ್ಲಿ ಬಣ್ಣ ಬಳಿಯುವುದು ನೂಲ ಲಾದುವುದು ನಡೆಯುವುದಕ್ಕಿಂತ, ತವಗೆ ಬೇಕಾದ ಹತ್ತಿಯನ್ನು ತಮ್ಮ ಗ್ರಾಮದಲ್ಲಿಯೇ ಬೆಳೆಯುವಂತಾಗಬೇಕು, ಚರ್ಮವು ಆಯಾ ಗ್ರಾಮದಲ್ಲಿ ಸತ್ತುಹೋಗುವ ಜಾನುವಾರುಗಳಿಂದ ದೊರೆಯುವಂತಾಗಬೇಕು

ಹೀಗೆ ಗ್ರಾಮದ ಅವಶ್ಯಕ ಪದಾರ್ಥಗಳಾದ ಧಾನ್ಯಗಳ, ಎಣ್ಣೆ ಕಾಳುಗಳ, ಹತ್ತಿ, ಕಬ್ಬು ಇತ್ಯಾದಿಗಳು ಹಳ್ಳಿಗಳಲ್ಲಿಯೇ ಬೆಳೆಸಲ್ಪಡಬೇಕು ಅಲ್ಲಿಯೇ ಅವು ಶುದ್ಧೀಕರಿಸಲ್ಪಡಲಿ, ಅಲ್ಲಿಯೇ ಅವುಗಳಿಂದ ಅವಶ್ಯಕ ಒಡವೆಗಳು ಸಿದ್ಧವಾಗಲಿ. ಒಂದೆಡೆಯಲ್ಲಿ ಎಲ್ಲಾ ಪದಾರ್ಥಗಳೂ ದೊರೆಯುವುದು ಅಥವಾ ಬೆಳೆಸುವುದು ಲಾಭದಾಯಕವಾಗದೆ ಹೋಗಬಹುದು ಅಂತಹ ಸಂದರ್ಭಗಳಲ್ಲಿ ಮಾತ್ರ ಅವು ಹೊರಗಣಿಂದ ಬರುವಂತಾಗಬೇಕು ಉದಾಹರಣೆಗೆ ಗುಡ್ಡ ಕಾಡು ಪ್ರದೇಶದಲ್ಲಿ ಕಬ್ಬು ಬೆಳೆಯಲಾರದು, ಬೆಳೆದರೂ ಅದರಿಂದ ನಿರೀಕ್ಷಿತ ಪ್ರಯೋಜನ ದೊರೆಯಲಾರದು ಆದುದರಿಂದ ಅದು ಹೊರಗಣಿಂದ ಬರುವುದು ಅಗತ್ಯ.

ಆದರೆ, ನಮ್ಮ ಇಂದಿನ ಗತಿಯೇನಾಗಿದೆ? ಅಧಿಕ ಲಾಭದ ದೆಸೆಯಿಂದಾಗಿ ಲಾಭದಾಯಕ ಬೆಳೆಗಳನ್ನಷ್ಟೇ ನಾವು ಬೆಳೆಸುತಿದ್ದೇವೆ. ಬೆಲ್ಲ ಯಾ ಸಕ್ಕರೆಗೆ ಕ್ರಯ ಬಂದಿತಂದರೆ, ಎಲ್ಲ ಗದ್ದೆಗಳಿಗೂ ಕಬ್ಬಿನ ಪೈರನ್ನೇ ನಾವು ಶಿವಾರಸು ಮಾಡುತ್ತೇವೆ ತಂಬಾಕಿಗೆ ಬೆಲೆ ಬಂದರೆ, ತಂಬಾಕಿನ ಬೆಳೆಗೆ ಪ್ರಾಧಾನ್ಯವೀಯುತ್ತೇವೆ ತಮ್ಮ ತಮ್ಮ ಗದ್ದೆಗಳಲ್ಲಿ ತಮ್ಮ ಸ್ವೇಚ್ಛೆಯಂತೆ ಬೆಳೆಯನ್ನು ಬೆಳೆಸಲು ಎಲ್ಲರೂ ಸ್ವತಂತ್ರರಿದ್ದಾರೆ ಯಾರೂ ಯಾರನ್ನೂ ತಡೆಯಲಾರರು ಆದರೆ, ಇದರ ಪರಿಣಾಮವು ಕೆಟ್ಟದಾಗಿ ಪರಿಣಮಿಸುವುದು ಹಳ್ಳಿಗೆ ಹಳ್ಳಿಯೇ ದುಃಖದಿಂದ ಬಾಳಬೇಕಾದ ಪ್ರಸಂಗ ಬರುವುದು

ಆದುದರಿಂದ, ನಮ್ಮ ಹಳ್ಳಿಗರ ಮನಸ್ಸು ಕೇವಲ ಲಾಭದಲ್ಲಿ ತಲ್ಲೀನವಾಗಿ ಹೋಗಬಾರದು. ಪ್ರತಿ ಗ್ರಾಮದಲ್ಲೂ ಆಯಾ ಗ್ರಾಮದ ಜನರ ನಿತ್ಯೋಪಯೋಗಕ್ಕೆ ಅತ್ಯಾವಶ್ಯಕವೆನಿಸಿದ ಪದಾರ್ಥಗಳು ತಯಾರಿಸುವತ್ತ ನಮ್ಮ ಹಿಡುವಳಿದಾರರ ಗಮನ ಹರಿಯಬೇಕು ಇವೇ ಅಲ್ಲದೆ ಅಲ್ಪ ಪ್ರಮಾಣದಲ್ಲಿ, ಬಾಹ್ಯ ಪ್ರದೇಶಗಳೊಡನೆಯೂ ಆದಾನ ಪ್ರದಾನಗಳು ನಡೆಯುವಂತೆ, ಅನ್ಯ ಪದಾರ್ಥಗಳನ್ನೂ ಬೆಳೆಸಬಹುದು. ಆದರೆ, ಗ್ರಾಮದಲ್ಲಿನ ಭೂಮಿಯು ಬೇರೆ ಬೇರೆಯವರ ಹಿಡಿತದಲ್ಲಿರುವಾಗ, ಇದು ಸಾಧ್ಯವಾಗುವುದುಂಟೆ? ಆದುದರಿಂದ, ಅಖಂಡ ಗ್ರಾಮವು ಯಾವದಾದರೊಬ್ಬನದಾಗಿರದೆ ಗ್ರಾಮಸ್ಥರೆಲ್ಲರೂ ಅವರ ಒಡೆಯರಾಗಿರಬೇಕು ಅಲ್ಲದೆ, ಅವರೆಲ್ಲರೂ ಸಲಹೆಗಳನ್ನು ಪಾರಸ್ಪರಿಕವಾಗಿ ಪಡೆದು ತಮ್ಮ ತಮ್ಮ ಪಾಲಿನ ಕೆಲಸಗಳನ್ನು ಮಾಡಬೇಕು. ಅಖಂಡ ಗ್ರಾಮವು ಒಂದು ಕುಟುಂಬದಂತೆ ಸೌಜನ್ಯದಿಂದ ಹೊಂದಿಕೊಂಡು ಬಾಳುವಂತಾಗಬೇಕು. ಈ ಲೋಕದ ಭೂಮಿಯು ವೈಯಕ್ತಿಕವಾದುದಲ್ಲ. ಅದು ಪರಮಾತ್ಮನಿಗೆ ಸೇರಿದುದು; ಯಾರೊಬ್ಬರಾದರೂ ಅದರಲ್ಲಿ ಶ್ರಮಿಸಿ, ಹೊಟ್ಟೆ ತುಂಬಿಸಲು ಸ್ವತಂತ್ರರಾಗಿದ್ದಾರೆ

ನಮ್ಮ ಜನರೆಲ್ಲರೂ ಶ್ರಮಪೂರ್ವಕವಾಗಿ ದುಡಿದು, ತಿನ್ನುವರೆಂದಾದರೆ, ನಮ್ಮ ಹಳ್ಳಿಗಳು ಪುನಃ ಹಚ್ಚ ಹಸುರಾಗಿ ಮಾಪಾಡುವುವು. ಆವಶ್ಯಕ ಒಡವೆಗಳೆಲ್ಲವೂ ಹಳ್ಳಿಯಲ್ಲಿಯೇ ದೊರೆಯಲು ಪ್ರಾರಂಭವಾಗುವುವು. ನಮ್ಮ ಮೇಲೆ ಅನ್ಯ ದೇಶ್ಯ ಶಕ್ತಿಯು ಎಂದೂ ಸವಾರಿ ಮಾಡಲಾರದು, ನಮ್ಮ ಯಾವುದೇ ಸಾಮಾನುಗಳು ನಮ್ಮ ಹಣೆ ನೋಯಿಸಲಾರವು ಹಳ್ಳಿಗರಲ್ಲಿ ಏನಾದರೂ ಚಿಕ್ಕ ಸುಟ್ಟ ವ್ಯಾಜ್ಯಗಳು ಜಂಟಾದುವೆಂದರೆ, ಒಂದೇ ಮನೆಯವರಂತೆ ಎಲ್ಲರೂ ಕುಳಿತುಕೊಂಡು ಅದನ್ನು ಯೋಗ್ಯರೀತಿಯಲ್ಲಿ ತೀರ್ವಾಸಿಸಲಿ. ತಮ್ಮ ನಡುವೆ ಎಲ್ಲರಿಂದಲೂ ಪ್ರಾಮಾಣಿಕತಮನೂ ಯೋಗ್ಯನೂ ಆದವನನ್ನು ನಮ್ಮ ಮುಖಂಡನನ್ನಾಗಿ ಗ್ರಾಮಸ್ಥರು ಚುನಾಯಿಸಲಿ. ಆತನನ್ನು ರಾಜ್ಯ ವಿಧಾನಸಭೆಗೋ ಕೇಂದ್ರದ ಸಂಸತ್ತಿಗೋ ತಮ್ಮ ಪ್ರತಿನಿಧಿಯನ್ನಾಗಿ ಮಾಡಿ ಕಳುಹಿಸಲಿ. ಅಲ್ಲಿ ಅವನು ತನ್ನ ಗ್ರಾಮಸ್ಥರ ಹಿತಚಿಂತನೆಯ ಕಾರ್ಯವನ್ನೇ ಮಾಡಲಿ. ಈ ರೀತಿಯಲ್ಲಿ ನಾವು ನಮ್ಮ ಮನೆ ಹಳ್ಳಿ ಮತ್ತು ದೇಶದ ಪರೀರವನ್ನೇ ಬದಲಾಯಿಸಿ ಹೊಸ ಜೀವನವನ್ನು ಹೊಂದುವುದು ಅಪೇಕ್ಷಣೀಯ ಇದನ್ನೇ ಭಾರತದ ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರು ರಾಮರಾಜ್ಯವೆಂದು ಕರೆದಿದ್ದರು ಅದನ್ನೇ ಇಂದು ಸೇವಾಕಾರ್ಯದಲ್ಲಿಯೇ ಮಗ್ನರಾಗಿರುವ ಆಚಾರ್ಯ ವಿನೋಬಾರವರು ಗ್ರಾಮ

(ಮುಂದೆ ಪುಟ ನೋಡಿರಿ)

ಹೊಸ ಸುದ್ದಿ

ಸೇವಿಂಗ್ಸ್ ಬೇಂಕ್ ಡಿಪೋಸಿಟಿನ ಬಡ್ಡಿ ದರವನ್ನು 2½%ಗೆ ಹೆಚ್ಚಿಸಲಾಗಿದೆ ವಾರಕ್ಕೆ ಒಂದಾವರ್ತಿಗಿಂತ ಮಿಕ್ಕಿ ಖಾತೆಯಿಂದ ಹಣ ತೆಗೆಯಲು ಈಗ ಯಾವೊಂದೂ ಆತಂಕವಿಲ್ಲ

ಕಾಯಂ ಠೇವಣಾತಿ ಬಡ್ಡಿ ದರವನ್ನು ಏರಿಸಲಾಗಿದೆ ತಾ. 1-7-1957ರಿಂದ ಏರಿಸಿದ ಬಡ್ಡಿಯಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ

ದಿ ವಿಜಯ ಬೇಂಕ್ ಲಿಮಿಟೆಡ್

(ವಿ. ಸೂ ಬೆಂಗಳೂರು ನಗರದಲ್ಲಿ ಬೇಂಕಿನ ಹೊಸ ಶಾಖೆಯನ್ನು ಬೇಗನೇ ತೆರೆಯೋಣಾಗುವುದು)

ಸ್ವತಂತ್ರತೆ

ಇನ್ನೊಬ್ಬರ ಸ್ವಾತಂತ್ರ್ಯವನ್ನು ಅಪಹರಿಸದೆ ಪವಿತ್ರವಾದ ನಿಮ್ಮ ಸ್ವಾತಂತ್ರ್ಯವನ್ನು ಸಾರ್ಥಕಪಡಿಸಿರಿ

ಭಾರತವು ಸ್ವತಂತ್ರವಾಗಿ ಇಂದಿಗೆ ಹತ್ತು ವರ್ಷಗಳು ಸಂದುಹೋದವು. ನೂರು ವರ್ಷಗಳ ಹಿಂದೆ ಇದೇ ಸ್ವಾತಂತ್ರ್ಯಕ್ಕಾಗಿ ಭಾರತೀಯರು ಪ್ರಥಮ ಸ್ವಾತಂತ್ರ್ಯ ಸಮರವನ್ನು ಹೂಡಿದ್ದರು. ಹಲವಾರು ದೇಶಸೇವಕರು ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಅದು ನೀಗಿದ್ದರು. ಹಲವರ ತ್ಯಾಗದ, ಹಲವರ ಬಲಿದಾನದ ನಂತರ ಹತ್ತು ವರ್ಷಗಳ ಮೊದಲು ಆ ಸ್ವಾತಂತ್ರ್ಯವು ಲಭಿಸಿದೆ. ಈಗ ನಾವು ಸಂಪೂರ್ಣ ಸ್ವತಂತ್ರರು. ಆದರೆ "ಸ್ವಾತಂತ್ರ್ಯ" ಶಬ್ದದ ನಿಜವಾದ ಅರ್ಥ ನಮ್ಮಲ್ಲನೇಕರಿಗೆ ತಿಳಿದಿಲ್ಲ. ಅನೇಕರು 'ಸ್ವಾತಂತ್ರ್ಯಕ್ಕೂ" "ಸ್ವೈರಕ್ಕೆ"ಗೂ ಇರುವ ವ್ಯತ್ಯಾಸವನ್ನು ಅರಿತಿಲ್ಲ. ಒಬ್ಬ ವಿದ್ಯಾರ್ಥಿಯು ಕಲಿಯದಿದ್ದ ಸಂದರ್ಭದಲ್ಲಿ ಅವನ ಶಿಕ್ಷಕನು ಅವನನ್ನು ಶಿಕ್ಷಿಸಿದಾಗ ಆ ವಿದ್ಯಾರ್ಥಿಯು ತನಗೆ ಕಲಿಯದಿರುವ ಸ್ವಾತಂತ್ರ್ಯ ತರ್ಗಲ್ಲೆ? ಎನ್ನುವನು. ಒಬ್ಬ ಸೈಕಲ್ ಸವಾರನು "ಸೈಕಲ್ ರಸ್ತೆಯ ಬಲಗಡೆಯಲ್ಲಿಯೇ ಹೋಗಬೇಕು, "ಹಾರ್ನ್" ಅನ್ನೊಕಡೆ ನಿಲ್ಲಿಸಬೇಕು. ಕತ್ತಲಾಯಿತೆಂದರೆ ದೀಪ ಇಲ್ಲದೆ ಸೈಕಲ್ ಓಡಿಸೋಹಾಗಿಲ್ಲ. ಇಷ್ಟೊಂದು ಹೋಲಿಸರ ಕಾಟ ಇದ್ದೂ "ಸ್ವಾತಂತ್ರ್ಯ?" ಅನ್ನುತ್ತಾರಲ್ಲ ಎನ್ನುವನು. ಇನ್ನೊಬ್ಬ ಕಾಲೇಜು ವಿದ್ಯಾರ್ಥಿಯು "ಸ್ವಾತಂತ್ರ್ಯ ಎಂದ ಮೇಲೂ ಪರೀಕ್ಷೆ ಇಲ್ಲದೆ ಪಾಸು ಮಾಡೋದಿಲ್ಲ. ಫೀಸಿಲ್ಲದೆ ಕ್ಲಾಸಿಗೆ ಸೇರಿಸುವುದಿಲ್ಲ, ಸಿನೆಮಾ, ಹೋಟೇಲು, ಆಟದ ಮೈದಾನ, ಸಿಗರೇಟು ಅಂಗಡಿ, ಇಷ್ಟೆಲ್ಲಾ ತಂಡ-ಇವುಗಳಲ್ಲಿನ ಕಾಜರಿಯನ್ನು "ಕಾಲೇಜು ಹಾಜರಿ" ಎಂದು ಪರಿಗಣಿಸುವುದಿಲ್ಲ. ಹೋಕಿಯಾಗಿ ಬಟ್ಟೆ ಹಾಕುವುದರ ಮೇಲೆ ಮಾರ್ಕ್ಸ್ ಕೊಡುವುದಿಲ್ಲ" ಇದು ಸ್ವಾತಂತ್ರ್ಯವೇ?" ಎನ್ನುವನು.

ಹಾಗಾದರೆ ಸ್ವಾತಂತ್ರ್ಯವೆಂದರೇನು? ಸಂಕಾರದ ಹಲವು ಕಾನೂನುಗಳು ನಮ್ಮ ಸ್ವಾತಂತ್ರ್ಯಕ್ಕೆ ಕಡಿಯಲ್ಲವೇ? ಹೀಗೆ ಅನೇಕ ಪ್ರಶ್ನೆಗಳು ಜನಸಾಮಾನ್ಯರ ಬಾಯಿಯಲ್ಲಿ ಬರುವುದನ್ನು ನಾವು ಕಾಣಬಹುದು. ಅದೂ ಅಲ್ಲದೆ, ಕೊಲೆ, ನರಮೇಧ ಮೊದಲಾದ ಅನ್ಯಾಯಗಳು ನಮ್ಮವಾಗಲೂ, ಸಾಧನ ಸಾಮಗ್ರಿಗಳ ಬೆಲೆ ಏರಿಸಾಗಲೂ "ಇದು ಸ್ವಾತಂತ್ರ್ಯದ ಪ್ರಭಾವ" ಎನ್ನುವ ಜನರನ್ನು ನಾವು ಈಗಲೂ ಕಾಣಬಹುದು. ಇದು ಅವರ ಅಜ್ಞಾನ ಹೊರತು ತಪ್ಪೆಂದು ಪರಿಗಣಿಸಲಾಗುವುದಿಲ್ಲ. ಪವಿತ್ರವಾದ "ಸ್ವಾತಂತ್ರ್ಯ" ಶಬ್ದಕ್ಕೆ ಅಪಾರ್ಥ ಕಲ್ಪಿಸುವಂತೆ ಅವರ ಸರಿಯಾದ ಅರ್ಥ ಯಾಗೂ ಆ ಶಬ್ದ ಪ್ರಯೋಗ ಮಾಡುವ ಸಂದರ್ಭಗಳನ್ನು ತಿಳಿಸುವುದು ತಿಳಿದವರ ಕರ್ತವ್ಯ.

ಸ್ವಾತಂತ್ರ್ಯವು ಹಕ್ಕುಗಳ ಮೂಲ. ಪ್ರತಿಯೊಬ್ಬ ಪ್ರಜೆಗೂ ನಮ್ಮ ರಾಷ್ಟ್ರ ಘಟನೆಯಲ್ಲಿರುವಂತೆ ಅನೇಕ ಮೂಲಭೂತ ಹಕ್ಕುಗಳಿವೆ. ಈ ಮೂಲಭೂತ ಹಕ್ಕುಗಳನ್ನು ಉಪಯೋಗಿಸುವಾಗ ಇತರರಿಗೆ ಯಾವುದೇ ರೀತಿಯ ತೊಂದರೆಯಾಗದೆ ಅಂದರೆ ಇತರರ ಹಕ್ಕುಗಳಿಗೆ ಧಕ್ಕೆ ತಗಲದೆ-ಪ್ರತಿಯೊಬ್ಬ ಪ್ರಜೆಯೂ ತನ್ನ ವೈಯಕ್ತಿಕ ಅಭಿಪ್ರಾಯಗಳನ್ನು ಹೆಚ್ಚಿಸಿ, ಆ ಮೂಲಕ ಜನತೆಯ ಅಭಿವೃದ್ಧಿ ಬಯಸುವುದೇ ನಿಜವಾದ ಸ್ವಾತಂತ್ರ್ಯ. ವಾಹನಗಳು ಚಲಿಸುವಾಗ ತನಗೆ ಸ್ವಾತಂತ್ರ್ಯವಿಯೆಂದು ನಡು ರಸ್ತೆಯಲ್ಲಿ ಸ್ವಾತಂತ್ರ್ಯ ಪ್ರದರ್ಶನ ಮಾಡಿದಾಗ ಅದು ಸ್ವೇಚ್ಛಾಚಾರವಾಯಿತು. ವಾಹನ ನಡಿಸುವವನ ಸ್ವಾತಂತ್ರ್ಯಕ್ಕೆ ಅಡ್ಡಿಯಾಯಿತಷ್ಟೇ? ಇನ್ನೊಬ್ಬನಿಗೆ ಉಪದ್ರವಾಗಿ ತನ್ನ "ಸ್ವಾತಂತ್ರ್ಯ" ಉಪಯೋಗಿಸಲು ಸಾಧ್ಯವಿಲ್ಲ. ಆಗ ಅದು ಅವನ "ಸಾಂತ್ರ್ಯ"ವಲ್ಲ ಅದು ಅವನ ಇಚ್ಛೆ. ಇಚ್ಛೆಗಳು ಹಲವು ಇರಬಹುದು. ಅವನ ಇಚ್ಛೆಯೇ ಸ್ವಾತಂತ್ರ್ಯವಾಗುವುದಿಲ್ಲ

"ಸ್ವಾತಂತ್ರ್ಯ" ಶಬ್ದದ ನೈಜತೆಯನ್ನು ತಿಳಿಯಬೇಕಾದರೆ ನಾವು ವೈಯಕ್ತಿಕ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯವೆಂದರೇನೆಂಬುದನ್ನು ತಿಳಿಯುವುದು ಅವಶ್ಯ.

"ವ್ಯಕ್ತಿ ಸ್ವಾತಂತ್ರ್ಯವೇ ವ್ಯಕ್ತಿತ್ವದ ಮೂಲ" ಎಂದು ಡಾ. ಮೊಂಟೆಸೋರಿ ಎಂಬ ಶಿಕ್ಷಣ ತಜ್ಞರ ಅಭಿಪ್ರಾಯ. ತನ್ನ ಸ್ವಂತ ಜೀವನಕ್ಕೆ ಸಂಬಂಧಪಟ್ಟ ಸ್ವಾತಂತ್ರ್ಯವೇ ವ್ಯಕ್ತಿಸ್ವಾತಂತ್ರ್ಯ. ನಮ್ಮ ಘಟನೆಯಲ್ಲಿರುವ ವಾಕ್ ಸ್ವಾತಂತ್ರ್ಯ, ಸಂಚಾರ ಸ್ವಾತಂತ್ರ್ಯಗಳು ವ್ಯಕ್ತಿಗೆ ಸಂಬಂಧಪಟ್ಟವುಗಳು. ತನ್ನ ಪರಿಶ್ರಮದ ಫಲವನ್ನು ತಾನು ನಿರ್ಭೀತಿಯಿಂದ ಯಾರ ಆತಂಕವೂ ಇಲ್ಲದೆ ಅನುಭವಿಸಲು ಶಕ್ತನಾಗಿರಬೇಕು. ಇಂದಿನ ಪ್ರಜಾಪ್ರಭುತ್ವ ಸರಕಾರದಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಯಾವ ತಡೆಯಿಲ್ಲದಿದ್ದರೂ ಕೆಲವು ಸಂದರ್ಭಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯವು ಅಪಹರಣವಾಗುತ್ತದೆ.

ನಮ್ಮ ಜಾತ್ಯತೀತ ರಾಷ್ಟ್ರದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿದೆ. ಇದು ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟದ್ದಾಗುತ್ತದೆ. ಒಬ್ಬ ಮನುಷ್ಯನಿಗೆ ತನ್ನ ಧರ್ಮದಲ್ಲಿ ಇರಲು, ತ್ಯಜಿಸಲು ಸ್ವಾತಂತ್ರ್ಯವಿದೆ. ಆದರೆ ಇನ್ನೊಬ್ಬರನ್ನು ಅವರ ವ್ಯಕ್ತಿ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿ ಅವರ ಧರ್ಮವನ್ನು ತ್ಯಜಿಸಿ ತನ್ನ ಧರ್ಮವನ್ನು ಅನುಸರಿಸುವಂತೆ ಮಾಡಲು ಸ್ವಾತಂತ್ರ್ಯ ಇಲ್ಲ.

ರಾಜ್ಯದ ಆಡಳಿತೆಯ ಸರ್ವಚಟುವಟಿಕೆಗಳಲ್ಲಿ ಭಾಗವಹಿಸಲು ಅನ್ನದ ದೊರಕುವದೇ ರಾಜಕೀಯ ಸ್ವಾತಂತ್ರ್ಯ. ಒಬ್ಬನು ತನ್ನ ಅಭಿಪ್ರಾಯವನ್ನು ಪ್ರಕಟಿಸಲು ಸ್ವತಂತ್ರನಿರಬೇಕು ರಾಜಕೀಯ ಸ್ವಾತಂತ್ರ್ಯವು ಲಭಿಸಬೇಕಾದರೆ ನಿಜವಾಗಿ ಅವನಿಗೆ ವಿದ್ಯಾಭ್ಯಾಸ ಅಗತ್ಯ. ವಿದ್ಯಾಭ್ಯಾಸವಿಲ್ಲದಿದ್ದರೆ ರಾಜಕೀಯ ಸ್ವಾತಂತ್ರ್ಯ ಇದ್ದರೂ ಇಲ್ಲದಿದ್ದರೂ ಒಂದೆ. ಆದ ದರಿಂದ ವಿದ್ಯಾಭ್ಯಾಸದಲ್ಲಿ ಸಮತೆ ಇರಬೇಕು ಬಡವರಿಗೂ ಶ್ರೀಮಂತರಿಗೂ ಸಮಾನವಾಗಿ ವಿದ್ಯೆ ಸಿಕ್ಕಿಯಲು ಅವ್ಯದವಿರಬೇಕು. ಅಂದರೆ ಎಲ್ಲದಕ್ಕಿಂತ ಮುಖ್ಯವಾದ ಆರ್ಥಿಕ ವಿಚಾರದಲ್ಲಿ ಸ್ವತಂತ್ರನಾದಾಗ ವ್ಯಕ್ತಿ ತನ್ನ ಹಕ್ಕುಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಲು ಸಮರ್ಥನಾಗುವನು. ಹೊಟ್ಟೆ ಬಟ್ಟೆಗಳಿಗೆ ಯಾರಿಗೂ ತೊಂದರೆ ಇಲ್ಲದೆ ಪ್ರತಿ ಒಬ್ಬನೂ ಸ್ವತಂತ್ರನಾದಾಗ ಮಾತ್ರ ನಮಗೆ ನಿಜವಾದ ಸ್ವಾತಂತ್ರ್ಯ ಬಂದೀತು. ಎಂದಿನ ವರೆಗೆ ದೇಶದಲ್ಲಿ ನಿರುದ್ಯೋಗ, ಹೊಟ್ಟೆಗಿಲ್ಲದೆ ಉಪವಾಸ ಬೀಳುವ ಪರಿಸ್ಥಿತಿ ನಿಲ್ಲುವುದೋ ಅಂದಿನ ವರೆಗೆ ಆ ಜನರಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲ. ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಇತರ ಯಾವುದೇ ಸ್ವಾತಂತ್ರ್ಯವಿದ್ದರೂ ಪ್ರಯೋಜನಕ್ಕೆ ಬಾರದು. ಅನ್ನ, ಅರಿವೆ, ಆಶ್ರಯ, ಆರವು ಆರೋಗ್ಯ ಈ ಪಂಚ 'ಅ'ಗಳ ಸ್ವಾತಂತ್ರ್ಯವೇ ನಿಜವಾದ ಸ್ವಾತಂತ್ರ್ಯ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ ಹತ್ತವರ್ಷಗಳು ಕಳೆದರೂ ನಿಜವಾದ ಸ್ವಾತಂತ್ರ್ಯ ಸಿಗಲಿಲ್ಲ. ಎಂದು ಪೂಜ್ಯ ವಿನೋಬ ಭಾವೆಯವರ ಕನಸು ನೆನಸಾಗುವುದೋ ಅಂದು (ಆಗುವುದು ಖಂಡಿತ) ಭಾರತವು ಸ್ವತಂತ್ರವಾಗುವುದು. ಭೂದಾನ ಚಳವಳಿ ವಿವಿಧ ರೀತಿಯ ದಾನಗಳ ಚಳವಳಿವಾಗಿ ಗ್ರಾಮಗಳ ಪುನರ್ನಿರ್ಮಾಣವಾಗಿ ಸರ್ವರಲ್ಲೂ ಒಂದು ರೀತಿಯ ಆರ್ಥಿಕ ಸಮಾನತೆಯಾಗಿ ನಿಜವಾದ ಸ್ವಾತಂತ್ರ್ಯವು ಬೇಗನೆ ಬರುವುದೆಂದೇ ವಿನೋಬಾ ಭಾವೆಯವರ ದೃಢವಾದ ಆತ್ಮವಿಶ್ವಾಸ. ಅವರ ಈ ದೃಢ ನಿರ್ಧಾರವನ್ನು ನೆರವೇರಿಸುವುದರಲ್ಲಿ ಭಾರತೀಯರೆಲ್ಲರ ಕರ್ತವ್ಯವೂ ಆಡಗಿದೆ "ಪ್ರಿಯ ಬಾಂಧವರೆ! ಕರ್ತವ್ಯದ ಕರೆಗೆ 'ಓ' ಎನ್ನಲಾರಿರಾ? ಸೇವಾದೃಷ್ಟಿಯಿಂದ ಮುನ್ನುಗ್ಗಿರಿ. ಆಗ ನಾವೆಲ್ಲರೂ ಸಂಪೂರ್ಣ ಸ್ವತಂತ್ರರಾಗುವೆವು. ನಾವು ಸ್ವತಂತ್ರರಾದಾಗಲೇ ಭಾರತವು "ಸ್ವಾತಂತ್ರ್ಯ" ಪಡೆಯುವುದು.

— ಪಿ. ಎನ್. ರಾಮಚಂದ್ರ ರಾವ್,
ಪಡುಬಿದ್ರೆ.

ರಶ್ಯಾದಲ್ಲಿ ಅಮೇರಿಕದ ರಾಯಭಾರಿ ಚಾರ್ಲ್ಸ್ ಇ. ಬೋಲೆನ್‌ರವರ ಸ್ಥಳದಲ್ಲಿ ಲಿಲಿಲ್ ಇ. ಥಾಮ್ಪಸ್‌ರು ನೇಮಕಗೊಂಡಿದ್ದಾರೆ. ಚಿತ್ರದಲ್ಲಿ ಶ್ರೀ ಥಾಮ್ಪಸ್‌ರನ್ನು ಕಾಣಬಹುದು. ನೋಜಿಗದ ಸಂಗತಿಯೆಂದರೆ ಬೋಲೆನ್ ಮತ್ತು ಥಾಮ್ಪಸ್ ಇವರಿಬ್ಬರೂ ೧೬ನೇ ಆಗಸ್ಟ್‌ತಿಂಗಳಲ್ಲಿಯೇ ಜನಿಸಿದರು. ಇಬ್ಬರೂ ೧೯೫೨ರಲ್ಲಿ ಅಮೇರಿಕೆಯ ವಿದೇಶ ಶಾಖೆಯಲ್ಲಿ ಸೇರಿದರು ಇವರಿಬ್ಬರೂ ರಶ್ಯನ್ ಭಾಷೆಯನ್ನು ನಿರರ್ಗಳವಾಗಿ ಮಾತನಾಡುತ್ತಾರೆ. ಶ್ರೀ ಥಾಮ್ಪಸ್ಸರು ದ್ವಿತೀಯ ಲೋಕ ಯುದ್ಧ ಕಾಲದಲ್ಲಿ ನಾಲ್ಕು ವರ್ಷ ರಶ್ಯ ದೇಶದಲ್ಲಿದ್ದರೂ ೧೯೫೨ರಿಂದ ವಿಯೆನ್ನಾದಲ್ಲಿ ಅಮೇರಿಕೆಯ ರಾಯಭಾರಿಯಾಗಿದ್ದರು.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಪೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ಪಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧.

ನೋಟೀಸು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
R. I. A. 465/1957
O. S. 343/1955.

ಮಗ್ಗುಂಪು-ವಾದಿ, ಅರ್ಜಿದಾರರು.
1. ಚಿನ್ನಪ್ಪ ಗೌಡ, ಪರಮೇಶ್ವರ ಗೌಡರ ಮಗ. 2. ಕಡ್ಯಮ್ಮ ಗೌಡ, ಚಿನ್ನಪ್ಪ ಗೌಡರ ಮಗ. 3. ಚಿನ್ನಪ್ಪ ಗೌಡ, ಕಡ್ಯಮ್ಮ ಗೌಡರ ಮಗ. 4. ಲಿಂಗಪ್ಪ ಗೌಡ ಕಡ್ಯಮ್ಮ ಗೌಡರ ಮಗ—ಮ್ಯಾನರ ಕಾಯಿ ಗೌರಮ್ಮ ಗೌಡಿಯನಾಗಿ, —ಪ್ರತಿವಾದಿಗಳು ಎದ್ರುರು.

ಎಲ್ಲರೂ ಪುತ್ತೂರು ತಾಲ್ಲೂಕು ಪುತ್ತೂರಾದಿ ಗ್ರಾಮದ ರಾಹಿಕಲ್ಲು ಎಂಬಲ್ಲಿರುವರು

ಅರ್ಜಿದಾರರು ಸೈಕಲ್ ರಿಕ್ಷಿ ಬಗ್ಗ ಜಾಹಿರಾತು ಮಾಡಿದ ಅರ್ಜಿಯು R. I. A. 465/57 ದಿ ತಾ. 5-8-1957 ಕ್ಕೆ ಪ್ರತಿವಾದಿರು, ಎದ್ರಿರು ಹಾಜರಾಗಲು ಇಟ್ಟಿರುತ್ತದೆ ಆ ದಿವಸ ನೀವು ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗದಿದ್ದರೆ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of court.
K. R. Chamayya
Advocate for Petitioner.
Puttur 8-8-57

ಹಿತಚಿಂತನೆ

ನಮ್ಮ ರೈಲ್ವೆ ವ್ಯಾಗೀನುಗಳು ಅತಿಹೀನ ಸ್ಥಿತಿಯಲ್ಲಿವೆ!— ಅವುಗಳಲ್ಲಿ ತೀವ್ರವಾದ ಸುಧಾರಣೆಯಾಗಬೇಕು

"ಎಲ್ಲಾ ನಿಯಮಗಳನ್ನೂ ಕಟ್ಟುನಿಟ್ಟಾಗಿ ಅನುಸರಿಸುತಿದ್ದಲ್ಲಿ, ಭಾರತದ ಲ್ಲೀಗ ಕೆಲವೇ ಸಾಮಾನು ಟ್ರೈನುಗಳು ಮಾತ್ರ ಚಲಿಸುತಿದ್ದುವು"

—ಅಖಿಲ ಭಾರತ ಟ್ರೈನು ಪರೀಕ್ಷಕರ ಕಲ್ಯಾಣ ಸಮಿತಿಯ ಉಪಾಧ್ಯಾಕ್ಷ ಶ್ರೀ ವಿಶ್ವನಾಥ ದುಬೆಯವರು ಹೇಳಿದ ಮಾತಿದು. ಅವರು ಇನ್ನೂ ಕೆಲವು ಅಕ್ಷೇಪಗಳನ್ನು ನುಡಿದರಲ್ಲದೆ, ಸಾಮಾನು ಸಾಗಿಸುವ ರೈಲುಗಳಲ್ಲಿ ಸೇಕಡಾ ೧೦ರಷ್ಟೂ ನಿರುಪಯೋಗೀ ಬಂಡಿಗಳೆಂದೂ, ಉತ್ತಮ ಬಂಡಿಗಳ ಅಭಾವದಿಂದ ಚಲಿಸಲ ಸಾಧ್ಯವಾದ ಸ್ಥಿತಿಯಲ್ಲಿದ್ದರೂ ಉಪಾಯವಿಲ್ಲದೆ ಪರೀಕ್ಷರು ಪಾಸುಮಾಡಿರುವರು ಎಂದೂ ಶ್ರೀ ದುಬೆಯವರು ನುಡಿದಿದ್ದಾರೆ.

ನಮ್ಮಲ್ಲಿಯ ಅಡಳಿತೆ ಹೇಗೆ ನಡೆಯುವುದು, ನಮ್ಮವರ ಮನೋಭಾವನೆ ಹೇಗಿದೆ ಎಂಬುದನ್ನು ಇದು ಕನ್ನಡಿಯಂತೆ ಸ್ಪಷ್ಟವಾಗಿ ನಮಗೆ ಕಾಣಿಸಿಕೊಡುತ್ತದೆ. ಪರೀಕ್ಷೆಗೆ ಕುಳಿತ ಹೆಚ್ಚಿನ ವಿದ್ಯಾರ್ಥಿಗಳೂ ಸಂಪರ್ಕವಾದ ಉತ್ತರ ಬರೆಯದಿದ್ದರೂ ಫೈಲಾಗುವವರು ಅಧಿಕವಾಗುತ್ತಿರೆಂಬ ದೃಷ್ಟಿಯಿಂದ ತಿದ್ದವರು ರಿಯಾಯಿತಿ ತೋರಿಸಿ ಹೆಚ್ಚು ಮಂಕೆ ಕೊಟ್ಟು ಸಾಕಷ್ಟು ಮಂದಿಯನ್ನು ಪಾಸುಮಾಡಿದಲ್ಲಿ ಅದು ಹೇಗೆ ನ್ಯಾಯಸಮ್ಮತವಲ್ಲವೋ ಅದರಂತೆ—ಅದಕ್ಕಿಂತಲೂ ಅಧಿಕ ಅಪರಾಧ ಅಪ್ರಯೋಜಕವೆನಿಸಿದ ಬಂಡಿಗಳನ್ನು ಪ್ರಯೋಜಕವೆಂದು ಶಿಫಾರಸುಮಾಡುವುದಾಗಿದೆ. ಯಾಕೆಂದರೆ, ಅವುಗಳು ಮಾನವನ ಜೀವನ ಸುಗಮಕ್ಕಾಗಿರುವ ಯಂತ್ರಗಳು. 'ಕಣ್ಣಾರೆ ಕಂಡರೂ ಪಂಚಾಂಬರಿಸಿ ನೋಡಬೇಕು'—ಎಂಬ ತತ್ವದಂತೆ, ಕೆಟ್ಟಿಲ್ಲವೆಂಬುದು ತಿಳಿದಿದ್ದರೂ ಮತ್ತೊಮ್ಮೆ ಸರಿಯಾದ ಸ್ಥಿತಿಯಲ್ಲಿದೆಯೇ ಎಂದು ನೋಡಬೇಕಾದ ವಸ್ತುಗಳವು. ಬೇರೆ ವಿಮಾನವಿಲ್ಲವೆಂದು ಸರಿಯಾಗಿ ಹಾರಲಾರದುದನ್ನೇ ನಡೆಸಿದರೆ ಅದು ದಿಗಂತದಲ್ಲಿ ಉರಿದುಬಿದ್ದರೆ ಅದಕ್ಕೆ ಹೊಣೆಯಾರು? ನಮ್ಮ ಪ್ರಯಾಣವು ಸುಖಕರವಾಗಿ ಸಾಗಬೇಕು ನಾವು ಗಂಡಾಂತರಗಳಿಗೆ ಒಳಗಾಗಬಾರದು ಎಂಬ ಧ್ಯೇಯವಾದ ಉದ್ದೇಶವಿಟ್ಟು, ಪರೀಕ್ಷಕರನ್ನು ನೇಮಿಸುವುದಲ್ಲವೇ? ಹಾಗಿರುವಲ್ಲಿ ಪರೀಕ್ಷಕರು ತಮ್ಮ ಕೆಲಸವನ್ನು ಸರಿಯಾಗಿ—ಜವಾಬ್ದಾರಿಯಿಂದ ಪೂರೈಸಬೇಡವೇ? ವೈದ್ಯರಲ್ಲಿ ಸಂಪೂರ್ಣ ಭರವಸೆಯಿಟ್ಟಿದ್ದ ರೋಗಿಯ ದೇಹಸ್ಥಿತಿಗಳನ್ನು ಸರಿಯಾಗಿ ಪರೀಕ್ಷಿಸಿ ಔಷಧಿ ಕೊಡುವುದು ಎಷ್ಟು ಮಹತ್ವವೋ ಅಷ್ಟೇ ಮಹತ್ವ ಇಂಥ ಪರೀಕ್ಷಕರಿಗೂ ಇದೆ. ಪರೀಕ್ಷಕರನ್ನು ನೇಮಿಸುವ ಅಗತ್ಯವೂ ಅಷ್ಟೆ.

ಯಾವಾಗ ಸೇಕಡಾ ೧೦ರಷ್ಟು ಬಂಡಿಗಳು ಅಪ್ರಯೋಜಕವೆಂದು ಕಂಡುಬಂದೋ ಆವಾಗಲೇ ಅವುಗಳ ಉಪಯೋಗ ನಿಲ್ಲಿಸುವಂತೆ ಈ ಪರೀಕ್ಷಕರು ವರದಿಯೊಪ್ಪಿಸಬೇಕಿತ್ತು. ಪರೀಕ್ಷಕರಿಗಿರುವ ಕೆಲಸವೇನು? ಪರೀಕ್ಷಿಸಿ, ಒಳ್ಳೆಯದೋ ಕೆಟ್ಟದೋ ಅನ್ನುವುದು. ಹೊರತಾಗಿ ಪೂರೈಕೆಯ ಕಡೆಗೆ ದೃಷ್ಟಿಯಿಡುವ ಅಗತ್ಯವಾದರೂ ಅವರಿಗೇಕೆ? ಇಂಥವುಗಳಲ್ಲೂ ದಾಕ್ಷಿಣ್ಯವೇ? ಹಾಗಿದ್ದರೆ ಪರೀಕ್ಷೆಯೆಂಬುದೊಂದು ಕಣ್ಣು ಮುಚ್ಚಾಲೆಯ ಆಟವೇ? ೯೦ ಹಾಳಾಗಿದ್ದರೂ ಪಾಸುಮಾಡಿದೆವೆನ್ನುವರು, ಯಂತ್ರ ಸಾಮಾಗ್ರಿಗಳ ಉಪಯೋಗದ ಕಡೆಗೆ ಸರಿಯಾಗಿ ನೋಡದೆ, ಆಗಾಗ ಸಮಯಕ್ಕೆ ಸರಿಯಾಗಿ ರಿಪೇರಿ ವಗೈರೆ ಮಾಡದೆ, ತಮ್ಮ ವರದಿಯಲ್ಲಿ, ಸರಿಯಾಗಿ ರಿಪೇರಿ ಎಲ್ಲಾ ಮಾಡುತ್ತಿದೆಯೆಂದು ಯೇಕೆ ಬರೆದಿರಬಾರದು? ಪರೀಕ್ಷಕರೆನ್ನುವ ಹಿರಿಯ ಅಧಿಕಾರಿಗಳೇ ಈ ರೀತಿಯ ಅಸತ್ಯದ ಬುನಾದಿ ಹಾಕುವರೆಂಬಾಗ ಕೆಳ ನೌಕರರೂ ಇದೇ ರೀತಿಯ ಬೇಜವಾಬ್ದಾರಿಯಿಂದ ವರ್ತಿಸಿರಲಾರರೇಕೆ?

ಅಧಿಕ ಸಂಬಳ ಪಡೆಯುವ ಇಚ್ಛೆಯಿಂದ, ಹೊಸ ಹೊಸ ರೈಲ್ವೆ ಬಂಡಿಗಳನ್ನು—ಯಂತ್ರ ಸಾಮಾಗ್ರಿಗಳನ್ನು ಪಡೆಕೊಂಡು ಸ್ವಾರ್ಥ ಸಾಧಿಸಲು ಯೇಕೆ ಈ ರೀತಿಯ ಸಳ್ಳು ಕಾರಣಗಳನ್ನೇ ಕೊಟ್ಟಿರಬಾರದು?

ಕುಂಬಳ ಜ್ಯಾ ಕೊಳೆಯುವುದು ತಿಳಿಯುವುದಿಲ್ಲ. ತಿಳಿದಾಗ ಇಡೀ ಹಾಳಾಗಿರುತ್ತದೆ. ಅಂತೆಯೇ ಇಂದಿನ ಸರಕಾರದ ಕೆಲವು ನೌಕರರ ಆಚರಣೆಯಾಗಿದೆ ಲಂಚಗುಳಿತನ, ಮೋಸಗಾರಿಗೆ, ಕಪಟ ವಂಚನೆ ತುಂಬಿಹೋಗಿ, ಅದು ಸರ್ವಸಾಮಾನ್ಯ ಎಂಬ ಸ್ಥಿತಿಗೆ ಮುಟ್ಟಿದೆ. ಸಂಕ, ಕೆರೆ, ಕಾಲುವೆಗಳಿಗೆ ಸರಕಾರವು ಎಷ್ಟು ಅಂದಾಜು ಹಾಕಿದೆಯೋ ಅದರ ಅರ್ಧಾಂಶ ಹಣವೂ ಖರ್ಚಾಗುವುದಿಲ್ಲ. ಸರಕಾರದ ಯೋಜನೆಯಂತೆ ಭದ್ರತೆಯೂ ಸತ್ಯಸ್ಥಿತಿಯಲ್ಲಿ ಆಗಿರುವುದಿಲ್ಲ. ಯೋಜನೆ, ಕೆಲಸಗಳೆಲ್ಲಾ ಹೆಚ್ಚಿನಂಶವೂ ಕಾಗದದ ಮೇಲೆಯೇ ಸರಿಯಾಗಿರುತ್ತವೆ. ರೈಲ್ವೆ ಡಿಪಾರ್ಟ್‌ಮೆಂಟಿನಲ್ಲಂತೂ ಇಂತಹ ಮೋಸಗಳು ಹೇರಳವಾಗಿ ನಡೆಯುತ್ತವೆ. ಸರಕಾರಕ್ಕೆ ತಿಳಿದಂತೆ, ರೈಲ್ವೆ ಮಾರ್ಗಕ್ಕೆ ಹಾಕುವ ಮರದ ತುಂಡುಗಳು 'ಸಾಗುವಾನಿ', 'ಚಿರಪ್ಪು'ಗಳೇ ಆಗಿದ್ದು ಯೋಗ್ಯ ಸ್ಥಿತಿಯಲ್ಲಿದೆ ಆದರೆ ಇಂದು ಪರೀಕ್ಷೆ ಮಾಡಿದಲ್ಲಿ ಅವುಗಳಲ್ಲಿ ಮುಕ್ಕಾಲು ಪಾಲು 'ಕಾಸರಕನ' ಮರಗಳು! ಆದರೆ ಪುಸ್ತಕದಲ್ಲಿ ಅವುಗಳೇ ಚಿರಪ್ಪು, ಸಾಗುವಾನಿಗಳಾಗಿ ರೂಪುಗೊಳ್ಳುತ್ತವೆ. ಇಂಥ ಉದಾಹರಣೆಗಳೆಷ್ಟೋ ಇವೆ. ಎಲ್ಲಾ ವಿಷಯಗಳಲ್ಲೂ ಲಂಚದ ಕೈವಾಡವಿದ್ದೇ ಇದೆ.

ಕೆಲವು ಸಮಯಗಳಿಗೆ ಮೊದಲು ಸರಕಾರೀ ಬಸ್ಸುಗಳು ಕೇವಲ ನೂರಾರು ರೂಪಾಯಿಗಳಿಗೆ 'ಏಲಂ' ಆಗಿ ಮಾರಾಟವಾದ ಸಂಗತಿ ನಮಗಿನ್ನೂ ಮರೆತಿಲ್ಲ. ಸರಕಾರವೆಂದರೆ ಈ ರೀತಿಯಾಗಲು ಯೇನು ಕಾರಣ? ಇದೇ ರೀತಿ ಎಲ್ಲಾ ವಿಷಯಗಳಲ್ಲೂ ಮಾಡಿದರೆ, ಸರಕಾರವಾದರೂ ಹೇಗೆ ಯಶಸ್ವಿಯಾಗಿ ಅಡಳಿತೆ ಮಾಡಬೇಕು? ಸರಕಾರವೆಂದರೆ ನಾವೇ ಎನ್ನುವ ಭಾವನೆ ಇನ್ನೂ ನಮ್ಮಲ್ಲಿ ಇರುವಂತೆ ತೋರುವುದಿಲ್ಲ. ಅದಾವುದೋ ಇನ್ನೊಂದು ವ್ಯಕ್ತಿಯೆಂಬ ಮನೋಧರ್ಮ ನಮ್ಮಲ್ಲಿದ್ದಂತಿದೆ.

ಶ್ರೀ ವಿಶ್ವನಾಥ ದುಬೆಯವರ ಕಡೆಯನುಡಿ, ನಮಗೇ ನಾಚಿಕೆಯನ್ನುಂಟುಮಾಡುವಂಥದ್ದಾಗಿದೆ. ಅವರೆಂದಿದ್ದಾರೆ-"...ಟ್ರೈನು ಪರೀಕ್ಷಕರ ಕೆಲವು ಉಚ್ಚ ತಾಂತ್ರಿಕ (ಟೆಕ್ನಿಕಲ್) ಮಟ್ಟದಲ್ಲಿದ್ದು, ...ಅವರ ಕೇಳಿಕೆಯನ್ನು ಮನ್ನಿಸದಿದ್ದಲ್ಲಿ ಅಧಿಕಾರಿಗಳಿಗೆ ಅಪ್ರಿಯವಾಗುವಂತಹ ಕಾರ್ಯಾಚರಣೆಗಳನ್ನು ರೈಲ್ವೇ ಸುಪರ್ ವೈಸರು ಕೈಕೊಳ್ಳಬೇಕಾಗಿ ಬರಬಹುದು. ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವ ಮೂಲಕ ಆ ಸಂಚಾರೋಪಕರಣಗಳನ್ನು 'ಹಾಳು' (ಸಿಕ್) ಎಂದು ತಿರಸ್ಕರಿಸುವ ನಿರ್ಧಾರವನ್ನು ಅವರು ಮಾಡಬಹುದು"—ಎಂದು.

ಇದರರ್ಥವೇನು? ಕೇಳಿಕೆಗಳನ್ನು ಮನ್ನಿಸದಿದ್ದರೆ, ರೈಲ್ವೆ ಸಾಮಾಗ್ರಿಗಳು ಉತ್ತಮವೆಂದೂ, ಇಲ್ಲವಾದಲ್ಲಿ ಅಯೋಗ್ಯವೆಂದೂ ಮಾಡಲಾಗುವುದು. ಅಂದರೆ, ಉತ್ತಮವೆಂದು ಮಾಡಬೇಕಿದ್ದರೆ ಕೇಳಿಕೆಗೆ ಮನ್ನಣೆ ಕೊಡುವುದರ ಮೂಲಕ ಕೊಡಬೇಕೆ - ಲಂಚ'-ಅಲ್ಲವೇ?

ನಿಜ ಹೇಳಬೇಕಿದ್ದರೆ, ಬಡ ರೈತರಿಂದ ತೆರಿಗೆ ರೂಪದಲ್ಲಿ ವಸೂಲಾಗುವ ಹೆಚ್ಚಿನ ಹಣವೂ ಈ ರೀತಿ ದುರುಪಯೋಗವಾಗುತ್ತಿದೆ. ಇದನ್ನು ತಿಳಿದೂ ಸರಕಾರ ಯೇಕೆ ಈ ರೀತಿ ಕಣ್ಣು ಹಾಳುಮಾಡುತ್ತಿದೆ?

ಇಂಥ ಹೇಯವರ್ತನೆ ಭಾರತೀಯರಾದ ನಮಗೊಂದು ಕಾಂದು! ವೀರಾದಿ ವೀರರ ಸತ್ಯಸಂಘರ್ಷ ಕೇರ್ತಿಗೆ ಇದು ಕಳಂಕವಲ್ಲದೆ ಮತ್ತೇನು? ನಮ್ಮ ಈ ಅಧೋಗತಿಯ ದಾರಿಯನ್ನು ಇಂತಹ ಘಟನೆಗಳಿಂದಾದರೂ ನಾವು ತಿಳಿದುಕೊಂಡು, ಬಡಬಗ್ಗರ ಮೇಲೆ ಇನ್ನೂ ಕರಿಗೆಮೊರೆದಂತೆ ಮಾಡಬೇಕು. ನಮ್ಮನ್ನು ನಾವೇ ತಿದ್ದಿಕೊಳ್ಳಬೇಕು.

—ಕೀ. ವ. ಕೇಶವ, ದೇಲಂಪಾಡಿ

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ.

3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ದೇಶದ ಪ್ರಗತಿ

ಸ್ವಾತಂತ್ರ್ಯ ದೊರೆತ ಹತ್ತು ವರ್ಷಗಳಲ್ಲಿ ಭಾರತದ ಪ್ರಗತಿ ಅಪ್ರತಿಮವಾಗಿದೆ.

ಮಿತ್ರ ರಾಷ್ಟ್ರದ ತಾಂತ್ರಿಕ ತಜ್ಞರೊಬ್ಬರು, ಭಾರತದಲ್ಲಿ ಅಧ್ಯಯನ ಪ್ರವಾಸ ಮುಗಿಸಿದನಂತರ, 'ನನ್ನ ದೇಶದಿಂದ ಹೊರಡುವ ಮುನ್ನ, ಭಾರಿ ಪ್ರಮಾಣದ ಕೈಗಾರಿಕೆಗಳನ್ನು ನಿರ್ಮಿಸುವಲ್ಲಿ ಭಾರತಕ್ಕಿರುವ ಸಾಮರ್ಥ್ಯದ ಬಗೆಗೆ, ನನಗೆ ತೀವ್ರವಾದ ಶಂಕೆಯಿತ್ತು; ಆದರೆ, ನಾನು ಭಾರತದಲ್ಲಿ ಪ್ರವಾಸ ಕೈಗೊಂಡನಂತರ, ನನ್ನ ಈ ಅಭಿಪ್ರಾಯವನ್ನು ಬದಲಾಯಿಸಬೇಕಾಯಿತು; ಅಷ್ಟೇ ಅಲ್ಲ, ಭಾರತವು ಭಾರಿ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಯ ಹಾದಿಯಲ್ಲಿ ತ್ವರಿತವಾಗಿ ಸಾಗಬಲ್ಲದು, ಸಾಗಬೇಕು ಎಂದು ನಾನು ಭಾವಿಸುತ್ತೇನೆ'– ಎಂದು ಹೇಳಿದರು.

ಸ್ವಾತಂತ್ರ್ಯಾನಂತರದ ಸ್ವಲ್ಪ ದಶಕದಲ್ಲಿ, ಭಾರತದ ಔದ್ಯೋಗಿಕ ಕ್ಷೇತ್ರದಲ್ಲಿ ನಡೆದಿರುವ ಮಹತ್ವಪೂರ್ಣ ಪರಿವರ್ತನೆಯ ಸೂಚಿಯಿದು. ಈ ಪರಿವರ್ತನೆಯ ಹಿನ್ನೆಲೆಯಲ್ಲಿ ಭಾರತದ ಜನತೆ–ತಾಂತ್ರಿಕರು, ಆಡಳಿತಗಾರರು ಮತ್ತು ವ್ಯವಸ್ಥಾಪಕರು–ನಡೆಸಿರುವ ಬೃಹತ್ ಪ್ರಯತ್ನ ಅಡಗಿದೆ.

ಭಾರತದ ಔದ್ಯೋಗಿಕ ಕ್ಷೇತ್ರದಲ್ಲಿ, ಸ್ವಾತಂತ್ರ್ಯಾನಂತರದ ಮೊದಲನೆಯ ದಶಕವನ್ನು ಮಹತ್ವದಾದ ಕಾಲವನ್ನಾಗಿಸಿದ ಅಂಶಗಳಾವುವು? ಈ ಲೇಖನದಲ್ಲಿ ಅವುಗಳಲ್ಲಿ ಮುಖ್ಯವಾದವನ್ನು ಸ್ಥೂಲವಾಗಿ ನಿರೂಪಿಸಲಾಗಿದೆ.

ಇದರಲ್ಲಿ ಎದ್ದು ಕಾಣುವ ಅಂಶವು, ಅಭಿವೃದ್ಧಿಯ ವ್ಯಾಪ್ತಿ ಹಾಗೂ ಪ್ರಮಾಣವೇ ಆಗಿರುವುದು. ದೇಶಕ್ಕೆ ಸ್ವಾತಂತ್ರ್ಯ ಲಭ್ಯವಾದಾಗ, ಗಮನಾರ್ಹವಾದ ಕೈಗಾರಿಕಾಭಿವೃದ್ಧಿ ಆಗಿದ್ದುದು ಬಿಟಿ. ಹತ್ತಿ ಒಟ್ಟೆಯ ಗಿರಣಿಗಳು, ಸೆಣಬಿನ ಗಿರಣಿಗಳು, ಸಕ್ಕರೆ ಹಾಗೂ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಂತಹ ಕೈಗಾರಿಕೆಗಳು ಸ್ಥಾಪನೆಗೊಂಡಿದ್ದವು ಆದರೆ, ಈ ಕೈಗಾರಿಕೆಗಳಲ್ಲಿ ಸಹ ಉತ್ಪಾದನೆಯು ಮಟ್ಟವು, ಬೇಡಿಕೆಯ ಮಟ್ಟಕ್ಕಿಂತ ಕೆಳಗೆ ಇದ್ದಿತು. ಅದರ ಜೊತೆಗೆ, ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪ್ರಮುಖವಾದ ಹಾಗೂ ದೊಡ್ಡದಾದ ಅಂತರಗಳಿದ್ದವು.

ಕೈಗಾರಿಕೋದ್ಯಮಗಳ ತ್ವರಿತವಾದ, ನಿಯೋಜಿತ ಅಭಿವೃದ್ಧಿಯಿಂದ ಕಳೆದ ೧೦ ವರ್ಷಗಳಲ್ಲಿ ಕೈಗಾರಿಕಾ ಉತ್ಪಾದನೆಯು ನೂರಕ್ಕೆ ೬೦ರಷ್ಟು ಹೆಚ್ಚಾಯಿತು.

ಉದಾಹರಣೆಗೆ: ಗಿರಣಿಗಳಲ್ಲಿ ತಯಾರಾದ ಹತ್ತಿ ಒಟ್ಟೆಗಳ ಉತ್ಪಾದನೆಯು ೧೯೪೭ರಲ್ಲಿ ೩೭,೬೦೦ ಲಕ್ಷ ಗಜಗಳಿದ್ದು ೧೯೫೭ರಲ್ಲಿ ೫೫,೦೦೦ ಲಕ್ಷ ಗಜಗಳಿಗೇರಿತು. ಸಕ್ಕರೆಯ ಉತ್ಪಾದನೆಯು ೧೦.೭೫ ಲಕ್ಷ ಟನ್ನುಗಳಿಂದ ೨೦ ಲಕ್ಷ ಟನ್ನುಗಳಿಗೆ ಹೆಚ್ಚಿತು. ವನಸ್ಪತಿ ತೈಲಗಳ ಉತ್ಪಾದನೆಯು ೯೫,೦೦೦ ಟನ್ನುಗಳಿಂದ ೨೫೬,೦೦೦ ಟನ್ನುಗಳಷ್ಟಾಯಿತು. ಬೈಸಿಕಲ್‌ಗಳ ಉತ್ಪಾದನೆಯು ೪೫,೦೦೦ ಇದ್ದುದು ೬.೫,೦೦೦ಕ್ಕೂ ಕೊಲಿಗೆ ಯಂತ್ರಗಳ ತಯಾರಿಕೆಯು ೬,೦೦೦ ದಿಂದ ೧೨,೫೦೦ಕ್ಕೂ ಏರಿತು.

ಇದರ ಜೊತೆಗೆ, ಹೊಸತಾಗಿ ಸ್ಥಾಪನೆಯಾದ, ಪ್ರಮುಖ ಎಂಜಿನಿಯರಿಂಗ್ ಹಾಗೂ ರಾಸಾಯನಿಕ ಕೈಗಾರಿಕೆಗಳಲ್ಲಿಯೂ ಗಮನಾರ್ಹವಾದ ಉತ್ಪಾದನೆಯಾಗಿದೆ. ೧೯೫೬ ರಿಂದೀಚೆಗೆ, ಕೈಗಾರಿಕಾ ಪ್ರಗತಿಯಲ್ಲಿ ಇದೊಂದು ಮಹತ್ವದ ಅಂಶವೆನಿಸುವುದು.

ರೈಲ್ವೆ ಎಂಜಿನ್‌ಗಳನ್ನು ತಯಾರಿಸುವ ಎರಡು ಕಾರ್ಖಾನೆಗಳು—ಒಂದು ಸರ್ಕಾರಿ ಸ್ವಾಮ್ಯದಲ್ಲಿರುವ ಚಿತ್ತರಂಜನ ರೈಲ್ವೆ ಎಂಜಿನ್ ಕಾರ್ಖಾನೆ, ಮತ್ತೊಂದು ಖಾಸಗಿ ಕಾರ್ಯಕ್ಷೇತ್ರದಲ್ಲಿರುವ 'ಟಿಲ್ಕೊ' ಕಾರ್ಖಾನೆ—, ಮೋಟಾರು ಕೈಗಾರಿಕೆ, ಸಿಂಧ್ರಿಯ ಕೃತಕ ಗೊಬ್ಬರ ಕಾರ್ಖಾನೆ, ಆಧುನಿಕ ಶೈಲಿ ಶುದ್ಧೀಕರಣಾಲಯಗಳು, ಉಕ್ಕಿನ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳು, ರೈಲ್ವೆ ವ್ಯಾಗೀನುಗಳನ್ನು ನಿರ್ಮಿಸುವ ಖಾಸಗಿ ಸ್ವಾಮ್ಯದಲ್ಲಿರುವ ಕಾರ್ಖಾನೆಗಳು, ವೆರಾಬೂರಿನಲ್ಲಿರುವ ಸಮಗ್ರ ರೈಲ್ವೆ ಕಾರ್ಖಾನೆ, ಹಿಂದೂಸ್ಥಾನ್ ನೌಕಾ ನಿರ್ಮಾಣ ಕೇಂದ್ರ, ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಕಾರ್ಖಾನೆ, ಕೈಗಾರಿಕೆಗಳಿಗೆ ಬೇಕಾಗುವ ಯಂತ್ರೋಪಕರಣಗಳನ್ನು ತಯಾರಿಸುವ ಕಾರ್ಖಾನೆ, ವಿದ್ಯುಚ್ಛಕ್ತಿ, ಮೋಟಾರು ಹಾಗೂ ಡೈಸಿಲ್ ಎಂಜಿನ್‌ಗಳನ್ನು ತಯಾರಿಸುವ ಅನೇಕ ಕಾರ್ಖಾನೆಗಳು ಮತ್ತು ಮುಖ್ಯ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳು—ಇವೆಲ್ಲ ಈ ಪ್ರಮುಖ ಕೈಗಾರಿಕೋದ್ಯಮಗಳಲ್ಲಿ ಸೇರತ್ತವೆ.

೧೯೫೬ರಲ್ಲಿ ೨೩ ಕೋಟಿ ರೂಗಳಷ್ಟು ಬೆಲೆಯ ಯಂತ್ರೋಪಕರಣಗಳ ಉತ್ಪಾದನೆಯಾಯಿತು. ೧೯೪೭ರಲ್ಲಿ ಈ ಕ್ಷೇತ್ರದಲ್ಲಾಗುತ್ತಿದ್ದ ಉತ್ಪಾದನೆ ಅತ್ಯಲ್ಪ. ಡೈಸೆಲ್ ಎಂಜಿನ್‌ಗಳ ತಯಾರಿಕೆಯು ೧೯೪೭ರಲ್ಲಿ ೭೦೦ ಇದ್ದುದು, ೧೯೫೬ರಲ್ಲಿ ಸುಮಾರು ೧೨,೦೦೦ಕ್ಕೆ ಏರಿದೆ. ವಿದ್ಯುಚ್ಛಕ್ತಿಯಿಂದ ಕೆಲಸಮಾಡುವ ಪಂಪುಗಳ ಉತ್ಪಾದನೆಯು ೬,೦೦೦ದಿಂದ ೪೬,೦೦೦ಕ್ಕೂ, ವಿದ್ಯುಚ್ಛಕ್ತಿ ಮೋಟಾರುಗಳ ಉತ್ಪಾದನೆಯು ೩೮,೦೦೦ ಅಶ್ವಶಕ್ತಿಯಿಂದ ೩,೫೮,೦೦೦ ಅಶ್ವಶಕ್ತಿಗೆ ಮುಟ್ಟಿದೆ.

ರಾಸಾಯನಿಕ ವಸ್ತುಗಳ ಉತ್ಪಾದನೆಯನ್ನು ತೆಗೆದುಕೊಂಡರೆ, ಗಂಧಕಾಮ್ಲದ ಉತ್ಪಾದನೆ ೬,೦೦೦ ಟನ್ನುಗಳಿಂದ ೧೬೫,೦೦೦ ಟನ್ನುಗಳಿಗೇರಿದೆ. ಕಾಸ್ಟಿಕ್ ಸೋಡಾ ಉತ್ಪಾದನೆ ೩,೦೦೦ ಟನ್ನುಗಳಿಂದ ೩೯,೦೦೦ ಟನ್ನುಗಳಿಗೆ ಹೆಚ್ಚಿದೆ. ಸೋಡಾ ಆಷ್ ೧೩,೦೦೦ ಟನ್ನುಗಳಿಂದ ೮೪,೦೦೦ ಟನ್ನುಗಳಿಗೂ, ಅಮೋನಿಯಂ ಸಲ್ಫೇಟ್ ೨೧,೦೦೦ ಟನ್ನುಗಳಿಂದ ೩೩೮,೦೦೦ ಟನ್ನುಗಳಿಗೂ, ಸೂಪರ್ ಫಾಸ್ಫೇಟ್ ೫,೦೦೦ ಟನ್ನುಗಳಿಂದ ೮೧,೦೦೦ ಟನ್ನುಗಳಿಗೂ ಏರಿದೆ.

ಕಲ್ಲಿದ್ದಲು ಮತ್ತು ಉಕ್ಕಿನ ಉತ್ಪಾದನೆಯಲ್ಲಿ ಆಗಿರುವ ಹೆಚ್ಚಳವೂ ಗಮನಾರ್ಹವಾದುದೇ. ೧೯೪೭ರಲ್ಲಿ ೩೦೦ ಲಕ್ಷ ಟನ್ನುಗಳಷ್ಟು ಕಲ್ಲಿದ್ದಲನ್ನು ಗಣಿಗಳಿಂದ ಹೊರತೆಗೆಯಲಾಯಿತು. ೧೯೫೬ರಲ್ಲಿ ೫೯೦ ಲಕ್ಷ ಟನ್ನುಗಳಷ್ಟು ಕಲ್ಲಿದ್ದಲನ್ನು ಗಣಿಗಳಿಂದ ಹೊರತೆಗೆಯಲಾಯಿತು. ಇದೇ ಅವಧಿಯಲ್ಲಿ ಉಕ್ಕಿನ ಉತ್ಪಾದನೆಯು ೮೮ ಲಕ್ಷ ಟನ್ನುಗಳಿಂದ ೧೮.೨ ಲಕ್ಷ ಟನ್ನುಗಳಿಗೆ ಹೆಚ್ಚಿತು. ಸಿಮೆಂಟಿನ ಉತ್ಪಾದನೆ ೧೪ ಲಕ್ಷ ಟನ್ನುಗಳಿಂದ ೪೪ ಲಕ್ಷ ಟನ್ನುಗಳಿಗೆ, ಅಂದರೆ ಸುಮಾರು ನೂರಕ್ಕೆ ೩೫ರಷ್ಟು ಹೆಚ್ಚಿದೆ.

ಈ ಎಂಜಿನಿಯರಿಂಗ್ ಹಾಗೂ ರಾಸಾಯನಿಕ ಕೈಗಾರಿಕೆಗಳನ್ನು ನಿರ್ಮಿಸುವ ವಿಧಾನದಲ್ಲಿ ದೇಶವು ಸಾಧಿಸಿರುವ ಔದ್ಯೋಗಿಕ ತಂತ್ರದ ಪ್ರಗತಿಯನ್ನು ಅಂಕಿ ಸಂಖ್ಯೆಗಳು ಸೂಚಿಸಲಾರವು ಎಂಬುದೊಂದು ಮಹತ್ವದ ವಿಷಯ. ಅಲ್ಲಲ್ಲಿದ್ದ ಕೆಲವು ವಿದೇಶಿ ತಂತ್ರಜ್ಞರನ್ನು ಬಿಟ್ಟರೆ, ಈ ಕೈಗಾರಿಕೆಗಳನ್ನು ಪೂರ್ಣವಾಗಿ ಭಾರತೀಯ ತಾಂತ್ರಿಕರೇ ನಿರ್ಮಿಸಿದರು.

ಈ ಪ್ರಗತಿ, ಹಾಗೂ ಈ ಅಭಿವೃದ್ಧಿ ಕಾರ್ಯದಿಂದ ಉತ್ಪನ್ನವಾದ, ಬಳಕೆ ವಸ್ತುಗಳು ಮತ್ತು ಕೈಗಾರಿಕಾ ಸಲಕರಣೆಗಳ ಬೇಡಿಕೆಯಿಂದ, ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ಮಹತ್ತರವಾದ ಯೋಜನೆಯನ್ನು ರೂಪಿಸುವುದು ಸಾಧ್ಯವಾಗುವುದು; ಮೂರನೆಯ ಯೋಜನೆಯಲ್ಲಿ ಮತ್ತಷ್ಟು ಬೃಹತ್ ಪ್ರಮಾಣದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುವುದು. ಎಂದರೆ, ದ್ವಿತೀಯ ಯೋಜನೆಯಲ್ಲಿ ಉಕ್ಕಿನ ಉತ್ಪಾದನೆಯು ಸುಮಾರು ನಾಲ್ಕರಷ್ಟು ಹೆಚ್ಚುವುದು; ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ೧೫೦ ಲಕ್ಷ ಟನ್ನುಗಳಷ್ಟು ಉಕ್ಕಿನ ಉತ್ಪಾದನಾ ಸಾಮರ್ಥ್ಯವನ್ನು ಸಾಧಿಸುವುದು ಅಸಾಧ್ಯವೆನಿಸದು.

ಕಳೆದ ಹತ್ತು ವರ್ಷಗಳಲ್ಲಿ ಗಳಿಸಿರುವ ಅನುಭವ ಹಾಗೂ ವಿದ್ವತ್ತಿನಿಂದ ಈ ಕೆಳಕಂಡ ಕೈಗಾರಿಕೆಗಳನ್ನು ಆರಂಭಿಸುವುದಕ್ಕೆ ಶಕ್ತಿಯನ್ನು ನೀಡಿದೆ.

(೧) ಉಕ್ಕಿನ ಕಾರ್ಖಾನೆಗಳು, ಭಾರಿ ಪ್ರಮಾಣದ ರಾಸಾಯನಿಕ ವಸ್ತುಗಳ ತಯಾರಿಕಾ ಕಾರ್ಖಾನೆಗಳಿಗೆ ಬೇಕಾಗುವ ಯಂತ್ರಗಳು.

– ಪ್ರಥಮ ವ್ಯಾಜ್ಯಕ್ಕೆ ಬೇಕಾಗುವ ಯಂತ್ರೋಪಕರಣ ಭಾಗಗಳನ್ನು ಪೂರೈಸುವ ಸಲುವಾಗಿ 'ಫೌಂಡ್ರಿ'ಗಳು.

೩. ಗಣಿ ಕೆಲಸಗಳಲ್ಲಿ ಉಪಯುಕ್ತವಾದ ಭಾರಿ ಯಂತ್ರೋಪಕರಣಗಳು.

೪. ಭಾರಿ ಪ್ರಮಾಣದ ಮೆಷಿನ್ ಟೂಲ್ ಕಾರ್ಖಾನೆ.

೫. ಭಾರಿ ಪ್ರಮಾಣದ ಉಕ್ಕಿನ ರಚನೆಗಳ

೬. ಉಮಕ್ಕತಗಡು ಮತ್ತು ವೆಸೆಲ್ ನಿರ್ಮಾಣ ವಿಭಾಗಗಳು.

ಇದೇ ರೀತಿ ರಾಸಾಯನಿಕ ವಸ್ತುಗಳ ತಯಾರಿಕಾ ಕ್ಷೇತ್ರದಲ್ಲಿಯೂ, ವರ್ಣವಸ್ತುಗಳು, ಕೃತಕ ರಬ್ಬರುಗಳ ಬಗೆಗೆ, ಪೂರ್ವಭಾವಿ ತಾಂತ್ರಿಕ ಪಠಿಕೆಗಳೆಗಳಾಗಿವೆ. ಅವೆಷ್ಟು ಬೇಗ ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುವುದು.

ಕೈಗಾರಿಕೆಗಳು ಒಂದೇ ಸಮತೂಕದಲ್ಲಿ ಅಭಿವೃದ್ಧಿಗೊಳ್ಳಲು, ಭಾರತದ ಲಕ್ಷ್ಯಂತರ ಜನತೆಯ ಹಿತರಕ್ಷಣಾ ಗುರಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು, ಗ್ರಾಮ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ ಮಹತ್ವವನ್ನೀಯ

(೧ನೇ ಪುಟ ನೋಡಿರಿ)

ಸಿಂಡಿಕೇಟ್ ಬೇಂಕನ್ನೇ ಜನರು ಏಕೆ ಆರಿಸುತ್ತಾರೆ?

- 31 ವರ್ಷಗಳ ಸೇವೆಯಲ್ಲಿ 11 ಕೋಟಿಗೂ ಮಿಕ್ಕಿದ ಬಂಡವಾಳ
- ಪ್ರಾಮುಖ್ಯ ಕೇಂದ್ರಗಳಲ್ಲಿ 96 ಶಾಖೆಗಳು
- ಕರ್ನಾಟಕದಲ್ಲೇ 59 ಶಾಖೆಗಳು
- ಹಳ್ಳಿ–ಹಳ್ಳಿಗಳಲ್ಲೂ ಬೇಂಕಿಂಗ್ ಸೌಕರ್ಯಗಳು
- ಪಿಗ್ಮಿ, ಕ್ಯುಮುಲೇಟಿವ್‌ನಂತಹ ಆಕರ್ಷಕ ಯೋಜನೆಗಳು
- ವಿದ್ಯಾರ್ಥಿಗಳಿಗೆ ವಿಶೇಷ ಅನುಕೂಲತೆಗಳು
- ಉತ್ತಮ ಆಡಳಿತ ಮತ್ತು ನೌಕರ ವರ್ಗ
- ಯೋಗ್ಯ ಭದ್ರತೆ, ಪ್ರಮಾಣಿಕತೆ ಮತ್ತು ಕ್ಲಿಷ್ಟತೆಯ ವ್ಯವಹಾರ

ಸಿಂಡಿಕೇಟು ಜನಪ್ರಿಯವಾದ ಬೇಂಕು

ಡಾ॥ ಟಿ. ಎಂ. ಎ. ಪೈ, ಮೆನೇಜಿಂಗ್ ಡೈರೆಕ್ಟರ್.

ಟಿ. ಎ. ಪೈ, ಜನರಲ್ ಮೆನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ.

The Canara Industrial & Banking Syndicate, Ltd.,

UDIPI.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No 184/1957

ಬಿ ಕೃಷ್ಣಯ್ಯ–ವಾದಿ.

1. ಕೃಷ್ಣಯ್ಯ ಯಾನೆ ಕೃಷ್ಣ ಮೂರ್ತಿ 2. ರಾಮಾಚಾರ್–ಮಹಾದೇವ ಭಟ್ರ ಮಕ್ಕಳು ಕಾರ್ಕಳ ತಾಲ್ಲೂ ತೆಳಮಿಜಾರು ಗ್ರಾಮದಲ್ಲಿರುವವರು —ಪ್ರತಿವಾದಿರು.

ನೀವು ಮತ್ತು ಸಹೋದರ ಗಿರಿಯಪ್ಪ ಯಾನೆ ಗೋಪಾಲಂದ್ರ ಕೊಡಾ ವಾದಿಗೆ ತಾರೀಕು 12–9–1951ಲ್ಲಿ ರಿಜಿಸ್ಟ್ರಿ ನಿಕ್ರಯ ಪತ್ರ 8000/ಕ್ಕೆ ಬರಕೊಟ್ಟ ತೋರವುದಸ್ತಾವೇಜಿನ ಬಾಬ್ತು 1954, 1955 ಮತ್ತು 1956 ಇಸವಿಗಳ ಸಪ್ತಂಬ್ರ ತಿಂಗಳ ತಾ. 11ಕ್ಕೆ ಬರತಕ್ಕ ಬಡ್ಡಿ ಬಾಬ್ತು ನಿಮಿಂದ ಬರತಕ್ಕ 2/3ನೇ ಅಂಶ ರೂ 742–28 ನ್ನು ಬರೆಸಾಡಿಕೊಳ್ಳುವರೆ ನಿಮ್ಮ ಮೇಲೆ ವಾದಿಯು ದಾಕ್ಲು ಮಾಡಿದ ಸದ್ರಿ ದಾವೆಯು ತಾರೀಕು 30–8–1957ಕ್ಕೆ ನಿಮಗೆ ಅಕ್ಕಿರ ನೋಟೀಸಿಗೆ ಯಿಟ್ಟಿದೆ ಅಕ್ಷೇಪಯದ್ರಿ ಸದ್ರಿ ದಿನ ಬೆಳಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ದಾವ್ರಾಗಿ ಉದಾಹರಣೆ ಕೊಡಬೆಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನವಾಗುವುದು ಎಂತ ಕೋರ್ಟ ಹುಕುಂ ಸರ್ಕಾರ ನಿಮಗೆ ಈ ಮೂಲ್ಯ ತಿಳಿಸೋಣಾಂಯನೆ.

K. V. Kamath
Advocate for plff.

Karkal 11–8–57.

ಅಧಿಕೃತ ಭಾಷೆ

ಇಂಗ್ಲಿಷಿನ ಸ್ಥಾನವನ್ನು ಹಿಂದಿಗೆ ಕೊಡಬೇಕು

ಭಾರತೀಯ ಸಂವಿಧಾನದ ೩೪೩ನೆಯ ನಿಬಂಧನೆಯಲ್ಲಿ ಸೂಚಿತವಾಗಿರುವ ನಿಯಮಗಳಿಗನುಗುಣವಾಗಿ ಭಾರತದ ರಾಷ್ಟ್ರಾಧ್ಯಕ್ಷರು ೧೯೫೫ರ ಜೂನ್ ತಿಂಗಳಲ್ಲಿ ಅಧಿಕೃತ ಭಾಷಾ ಕಮಿಶನೊಂದನ್ನು ದಿವಂಗತ ಶ್ರೀ ಬಿ. ಜಿ. ಖೇರರ ಅಧ್ಯಕ್ಷತೆಯಲ್ಲಿ ನೇಮಿಸಿದ್ದರು ಈ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿದ್ದು, ಅದು ಇದೀಗ ತಾನೇ ಪ್ರಕಟಗೊಂಡಿದೆ.

೧೯೬೫ರಲ್ಲಿ ಅಧಿಕೃತ ಭಾಷೆಯನ್ನಾಗಿ ಹಿಂದಿ ಭಾಷೆಯನ್ನು ಬಳಸುವ ತೀರ್ಮಾನವನ್ನು ಕುರಿತಾಗಿ, ಆ ವಿಷಯದಲ್ಲಿ ಸಾಧ್ಯತೆಯ ನಿಶ್ಚಯವನ್ನು ಈಗ ತಿಳಿಸುವುದು ದುಃಖಸಾಧ್ಯವೆಂದೂ, ಮತ್ತದು ಅನಗತ್ಯವೆಂದೂ ಕಮಿಶನಿನ ವರದಿ ತಿಳಿಸುವುದು. ೧೯೬೦ರಲ್ಲಿ ಈ ಬಗ್ಗೆ ಇನ್ನೊಂದು ಸಮಿತಿಯು ನೇಮಕಗೊಳ್ಳುವುದರಿಂದ, ಈ ವಿಷಯವನ್ನು ಮುಂದಿನ ಸಮಿತಿಯೇ ನಿರ್ಧರಿಸುವುದು ಇಷ್ಟವೆಂದು ಸಮಿತಿಯು ಅಭಿಪ್ರಾಯಪಟ್ಟಿದೆ.

ಕೇಂದ್ರ ಸರಕಾರದ ಅಧಿಕೃತ ಉದ್ದೇಶಗಳಿಗಾಗಿ ಹಿಂದೀ ಭಾಷೆಯನ್ನು ಕ್ರಮೇಣ ಬಳಸುವುದನ್ನು ಕುರಿತು, ಮಧ್ಯಂತರ ಅವಧಿಯಲ್ಲಿ ಈ ಬಗ್ಗೆ ನಡೆಸುವ ಪ್ರಯತ್ನವನ್ನು ಇದು ಅವಲಂಬಿಸಿರುವುದೆಂದು ಸಮಿತಿಯು ತಿಳಿಸಿದೆ. ಪೂರ್ಣ ಪ್ರಜಾಸತ್ತಾತ್ಮಕ ಆಡಳಿತ ಪದ್ಧತಿಯನ್ನು ಅಂಗೀಕರಿಸಿದ ಭಾರತನಲ್ಲಿ ಇಂಗ್ಲಿಷ್ ಭಾರತೀಯ ಜನಸಾಮಾನ್ಯರ ಭಾಷೆಯಾಗಿರುವುದೆಂದು ನಿರೀಕ್ಷಿಸುವುದು ಅಸಾಧುವೆಂದೂ ಈ ಸಮಿತಿ ತಿಳಿಸಿ ಒತ್ತಾಯ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳನ್ನು ಭಾರತೀಯ ಭಾಷೆಗಳಲ್ಲಿ ಮಾತ್ರವೇ ರೂಪಿಸಿಕೊಳ್ಳಬಹುದೆಂದೂ ಅದು ಹೇಳಿದೆ.

ವರದಿಯಲ್ಲಿ ನಿರೂಪಿಸಿರುವಂತೆ ಭಾರತದ ಎಲ್ಲ ರಾಜ್ಯಗಳಲ್ಲಿಯೂ ಹಿಂದಿ ಮತ್ತು ಅಯಾ ರಾಜ್ಯಭಾಷೆ (ಪ್ರಾದೇಶಿಕ) ಗಳನ್ನು ಕಡ್ಡಾಯವಾಗಿಯೂ ಉಳಿದುವನ್ನು ಐಚ್ಛಿಕವಾಗಿಯೂ ಕಲಿಯಬೇಕಾಗುವುದು. ದಾಕ್ಷಿಣಾತ್ಯ ರಾಜ್ಯಗಳವರು ಔತ್ತರೇಯರ ಹಿಂದಿ ಭಾಷೆಯನ್ನು ಕಲಿಯುವಂತೆ ಹಿಂದೀ ಭಾಷಾ ಪ್ರದೇಶಗಳ ಜನರು ದಾಕ್ಷಿಣಾತ್ಯ ಭಾಷೆಗಳಲ್ಲಿ ಯಾವುದಾದರೊಂದನ್ನು ಕಲಿಯಲು ಉತ್ತೇಜನವೀಯಬೇಕು. ಕೇಂದ್ರದ ರೈಲ್ವೆ, ಅಂಚೆ ಮೊದಲಾದ ವಿಭಾಗಗಳಲ್ಲಿ ದ್ವಿಭಾಷಾ (ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳು) ವ್ಯವಹಾರದ ವ್ಯವಸ್ಥೆಯನ್ನು ಒದಗಿಸಬೇಕು. ಉಚ್ಚ ನ್ಯಾಯಾಲಯದ ತೀರ್ಪುಗಳನ್ನು ಹಿಂದಿಯಲ್ಲೇ ಪ್ರಕಟಿಸಬೇಕು. ಆದರೆ, ರಾಜ್ಯಗಳಲ್ಲಿ ಪ್ರಾಂತೀಯ ಭಾಷೆಗಳಿಗೆ ಅವನ್ನು ಪರಿವರ್ತಿಸುವ ವ್ಯವಸ್ಥೆ ಮಾಡಬೇಕು ಎಂದು ಈ ಸಮಿತಿಯು ವರದಿ ಮಾಡಿದೆ.

ಇಂಗ್ಲಿಷ್ ಭಾಷೆಯನ್ನು ವಿದೇಶೀಯ ವ್ಯವಹಾರಕ್ಕಾಗಿ ಮಾತ್ರ ಇಟ್ಟುಕೊಂಡು ಅಂತಃವ್ಯವಹಾರಕ್ಕೆ ಹಿಂದಿ ಭಾಷೆಯನ್ನೇ ಬಳಸುವುದು ಇಷ್ಟ. ಶಿಕ್ಷಣಾಲಯಗಳಲ್ಲಿ ಇಂಗ್ಲಿಷ್ ಕೇವಲ "ಗ್ರಹಿಸಿಕೊಳ್ಳುವ ಭಾಷೆ"ಯನ್ನಾಗಿ ಕಲಿಸಬೇಕು. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮವು ಹಿಂದೀಯೇ ಆಗಬೇಕು; ಆದರೆ, ಹಿಂದೀ ಮಾಧ್ಯಮವನ್ನು ಎಂದಿನಿಂದ ಪ್ರಾರಂಭಿಸಬೇಕು ಎಂದು ನಿರ್ಧರಿಸುವ ಅವಕಾಶವು ರಾಜ್ಯ ಸರಕಾರಗಳಿಗೆ ಕೂಡಿಬ್ಬಡಬೇಕು ಎಂದು ಕಮಿತಿಯು ಸಿಫಾರಸು ಮಾಡಿದೆ ಎಲ್ಲ ವಿಶ್ವವಿದ್ಯಾಲಯಗಳೂ ಹಿಂದೀ ಶಿಕ್ಷಣ ಮಾಧ್ಯಮದಲ್ಲಿ ಪರೀಕ್ಷೆಗಳನ್ನು ನಡೆಸಲು ವ್ಯವಸ್ಥೆಮಾಡಬೇಕೆಂದು ವರದಿಯು ತಿಳಿಸುತ್ತದೆ. ವಿವಿಧ ಭಾಷಾ ಪ್ರದೇಶಗಳಿಂದ ಅಧ್ಯಯನಕ್ಕಾಗಿ ವಿದ್ಯಾರ್ಥಿಗಳು ಬರುವ ವೈಜ್ಞಾನಿಕ ಹಾಗೂ ತಾಂತ್ರಿಕ ಶಿಕ್ಷಣಾಲಯಗಳಲ್ಲಿ ಹಿಂದೀ ಭಾಷೆಯೇ ಸಾಮಾನ್ಯ ಶಿಕ್ಷಣ ಮಾಧ್ಯಮವಾಗಿರಬೇಕು. ಸಂಪೂರ್ಣವಾಗಿ ಒಂದೇ ಭಾಷಾವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಬರುವ ಕಡೆಗಳಲ್ಲಿ ಸಂಬಂಧಪಟ್ಟ ಪ್ರಾದೇಶಿಕ ಭಾಷೆಯು ಶಿಕ್ಷಣ ಮಾಧ್ಯಮವಾಗಿರಬೇಕು ಎಂದು ಆಯೋಗವು ತಿಳಿಸಿದೆ

ಅಂತಾರಾಷ್ಟ್ರೀಯ ರೂಪ ಪಡೆದಿರುವ ಭಾರತೀಯ ಅಂಕೆಗಳ ಜೊತೆಗೆ ದೇವನಾಗರಿ ರೂಪದ ಅಂಕೆಗಳನ್ನು ಬಳಸುವ ವಿಷಯದಲ್ಲಿ ಕಮಿಶನ್ ಶಿಫಾರಸುಗಳನ್ನು ಮಾಡಿಲ್ಲ. ಭಾರತದ ವಿವಿಧ ಪ್ರಾದೇಶಿಕ ಭಾಷೆಗಳ ನಡುವೆ ಅಥವಾ ಭಾಷಾ ಸಾಹಿತ್ಯಗಳ ನಡುವೆ ಹೋಲಿಸುವುದಕ್ಕೆ ಈ ಸಮಿತಿಯು ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿ, ಪ್ರತಿಯೊಂದು ಭಾಷೆಯೂ ತಿನ್ನದೇ ಆದ ಉತ್ತಮತೆಯನ್ನೂ ನ್ಯೂನತೆಯನ್ನೂ ಹೊಂದಿರಬಹುದೆಂದು ಅಭಿಪ್ರಾಯಪಟ್ಟಿದೆ. ಪ್ರತಿ ಭಾಷೆಯೂ ತನ್ನ ಭಾಷಾವರ್ಗದ ಅಭಿವ್ಯಕ್ತಿಯ ವಾಹಕವಾಗಿರಲು ದೇಶದ ಸಮಗ್ರ ಸಾಂಸ್ಕೃತಿಕ ಜೀವನದಲ್ಲಿ ಸಾಮರಸ್ಯವುಳ್ಳ ಹಾಗೂ ಯೋಗ್ಯ ಭಾಗವಾಗಿರಲು ಪ್ರಯತ್ನ ನಡೆಸಬೇಕು. ಭಾರತದ ಏಕತೆಯನ್ನು ಸಾಧಿಸುವ ಸಲುವಾಗಿ ದೇಶದ ಅಧಿಕೃತ ಭಾಷೆಗೆ ಯಥೋಚಿತ ಸ್ಥಾನವನ್ನು ನೀಡಬೇಕು. ಆ ಗುರಿಯ ಸಾಧನೆಗೆ ಅಗತ್ಯವೆನಿಸಿದ ಕ್ರಮಗಳನ್ನು ಅತಿ ಶೀಘ್ರವಾಗಿ ತರಬೇಕೆಂದು ಸಮಿತಿಯು ಕೇಳಿಕೊಂಡಿದೆ.

ಕೇಂದ್ರ ಹಾಗೂ ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯ ನಿರ್ವಹಿಸುವುದಕ್ಕಾಗಿ ಮತ್ತು ಪಾಠ್ಯಪುಸ್ತಕಗಳನ್ನು ಹಾಗೂ ನಿದರ್ಶನ ಗ್ರಂಥಗಳನ್ನು ಸಿದ್ಧಗೊಳಿಸುವುದಕ್ಕಾಗಿ ಮತ್ತು ಉಳಿದ ತತ್ಸಂಬಂಧ ಉದ್ದೇಶಗಳಿಗಾಗಿ ಹೈದರಾಬಾದಿನಲ್ಲಿ ರಾಷ್ಟ್ರೀಯ ಭಾಷಾ ಮಂಡಳವನ್ನು ಸ್ಥಾಪಿಸಬಹುದೆಂದು ಅಧಿಕೃತ ಭಾಷಾ ಆಯೋಗವು ಸೂಚಿಸಿದೆ.

ಭಾರತೀಯ ಭಾಷಾ ಮಾಧ್ಯಮದಲ್ಲಿ ಸುದ್ದಿಗಳನ್ನು ಹೂರಯಿಸುವ ವಿಷಯವು ವಿಚಾರಾರ್ಹವೆಂದೂ, ಸರಕಾರವು ಅದಕ್ಕೆ ಸರ್ವವಿಧದ ಪ್ರೋತ್ಸಾಹ ನೀಡಬೇಕೆಂದೂ ಇದು ಸಿಫಾರಸು ಮಾಡಿದೆ. ಯಾವುದೊಂದು ಸುದ್ದಿ ಸಂಸ್ಥೆಯು ಒಂದಕ್ಕಿಂತ ಹೆಚ್ಚು ಭಾರತೀಯ ಭಾಷಾ ಮಾಧ್ಯಮದಲ್ಲಿ ಸುದ್ದಿ ಪೂರೈಕೆಯ ಏರ್ಪಾಡು ಮಾಡುವುದು ಲಾಭದಾಯಕವೇ ಎಂಬ ವಿಷಯದಲ್ಲಿ ನಿರ್ಧಾರವೀಯುವುದು ಕಠಿಣ. ಭಾರತೀಯ ಸುದ್ದಿ ಸಂಸ್ಥೆಗಳು ಹಿಂದಿಯಲ್ಲಿಯೇ ಸುದ್ದಿ ಪೂರೆಯಿಸುವುದು ಒಳ್ಳೆಯದು; ಏಕೆಂದರೆ, ಇಂಗ್ಲಿಷಿಗಿಂತ ಹಿಂದಿಯಿಂದ ಭಾರತೀಯ ಭಾಷೆಗಳಿಗೆ ಅನುವಾದಕಾರ್ಯ ಮಾಡುವುದು ಸುಕರವಾಗಿದೆ. ಭಾರತೀಯ ಸುದ್ದಿ ಸಂಸ್ಥೆಯೊಂದು ಭಾರತೀಯ ಭಾಷೆಯಲ್ಲಿಯೇ ಸುದ್ದಿಗಳನ್ನು ಪೂರೈಸತೊಡಗಿದರೆ, ಸರಕಾರೀ ಭಾಷೆಯಲ್ಲಿ ಮಾತ್ರವಲ್ಲದೆ ಇನ್ನಿತರ ಭಾಷೆಗಳಲ್ಲಿಯೂ ಏಕರೂಪದ ಶಬ್ದಗಳ ಬಳಕೆಗೆ ಉತ್ಕೃಷ್ಟ ಅವಕಾಶ ದೊರೆಯುವುದು ಎಂದು ಸಮಿತಿಯು ಅಭಿಪ್ರಾಯ ಕಟ್ಟಿದೆ.

"ಟೈಪ್ ರೈಟರ್ ತೀ ಬೋರ್ಡು" ನ್ನು ಅಂತಿಮವಾಗಿ ಸಿದ್ಧಿಗೊಳಿಸುವ ಅಗತ್ಯತೆಯನ್ನೂ, ದೇವನಾಗರಿ ಲಿಪಿ ಸುಧಾರಣೆಯನ್ನೂ ಅಧಿಕೃತವಾಗಿ ಅಂಗೀಕರಿಸುವುದನ್ನು ಆಯೋಗವು ಒತ್ತಿ ಸೂಚಿಸಿದೆ ಅಲ್ಲದೆ, ಎಲ್ಲ ಭಾರತೀಯ ಭಾಷೆಗಳಿಗೂ ದೇವನಾಗರಿ ಲಿಪಿಯನ್ನು ಅನುಸರಿಸುವತ್ತ ಈ ಶೀಘ್ರ ಸಮಿತಿಯು ತನ್ನ ಒಲವನ್ನು ವ್ಯಕ್ತಮಾಡಿದೆ.

ಈ ಸಮಿತಿಯ ಸದಸ್ಯರಾದ ಡಾ. ಸಿ. ಸುಬ್ಬರಾಯನ್ ಮತ್ತು ಡಾ. ಸುನೀತಿ ಕುಮಾರ ಚಟರ್ಜಿಯವರು ಹಿಂದಿಯು ಇಂಗ್ಲಿಷದ ಸ್ಥಾನವನ್ನು ನಡೆವಷ್ಟು ಬಲಿಯದಿರುವುದರಿಂದ, ಇವನ್ನು ಅಧಿಕೃತ ಭಾಷೆಯನ್ನಾಗಿ ಮಾಡುವುದು ಕೇವಲ ಅತುರದಿಂದಿರುವ ಹೆಜ್ಜೆಯೆಂದು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದಾರೆ

ಕಾರ್ಕಳ ಡಿ. ಮು ಕೋರ್ಟಿನಲ್ಲಿ

ಕ್ರಮಸಂಖ್ಯೆ 193/1957.

Mutual Benefit Corporation Ltd Karkala by its Directros R Vitoba Shenoi & Others-

—ವಾದಿರು

ಮತ್ತು

1. R ಸುಂದರ ಶೆಣೈ, ರಂಗ ಶ್ಯಾನುಭಾಗರ ಮಗ.

2. S. ನಾರಾಯಣ ಕಾಮತ್, ಜೇವಣ್ಣ ಕಮ್ತಿರ ಮಗ.

3. A ಸದಾನಂದ ಶೆಣೈ, ಮಂಜುನಾಥ ಶ್ಯಾನುಭಾಗರ ಮಗ.

ಕಾರ್ಕಳ ಕ್ಷೆಟ್ರದಲ್ಲಿರುವವರು.

—ಪ್ರತಿವಾದಿರು

ಸದ್ರಿ ದಾವೆಯ ೨ನೇ ಪ್ರತಿವಾದಿ S. ನಾರಾಯಣ ಕಾಮತ್‌ರವರಿಗೆ ವಾದಿರಿಗೆ ಪ್ರತಿವಾದಿರಿಂದ ಮುಂದಿ ಬಾಬ್ತು ಬರತಕ್ಕ ಅಸಲು ಬಡ್ಡಿ ಅಪೇಜು ವಸೂಲಿ ಬಗ್ಗೆ ವಾದಿರು ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 29—8—57ನೇ ಬೆಳಿಗ್ಗೆ 10 ಗಂಟೆಗೆ ಇಟ್ಟಿರುವದರಿಂದ ಸದರಿ ದಾವೆಯಲ್ಲಿ ನಿಮ್ಮ ಉದಾಸರತೆಯು ಇರುವಲ್ಲಿ ನೀವು ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದಾಗಿಯೂ ತಪ್ಪಿದರೆ ಸದರಿ ದಾವೆಯು ನಿಮ್ಮ ಗೈರೆ ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬದಾಗಿಯೂ ಈ ಮೂಲಕ ನಿಮಗೆ ತಿಳಿಯಪಡಿಸೋಣವಾಗುತ್ತದೆ.

A N. Sitarama Achar,
Advocate for Plff.

Karkala Date 15—8—57

CANARA BANK LTD.

(ESTD 1906)

SAVE

AND

EARN MORE INTEREST ON YOUR MONEY

3% On Thrift Deposits

Upto 2½% On Savings Bank Deposits

Attractive Rates On Short Term & Fixed Deposits

For further details, please call on anyone of our 56 Branches

Correspondents All Over the World | Total Resources Over Rs. 20 Crores

INTEREST RATE IS IMPORTANT.....

WHERE you SAVE is important too!

OUR UDIPI BRANCH AT

Ramakrishna Gundu Nayak's Building,

Post Box No. 37,

THENKAPET, **UDIPI.**

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 158/52-53

of Munsif Sagar

R E P. 1141/1956

K ರಾಮರಾವ್ ಹೊಳ್ಳ —ಅರ್ಜಿದಾರ

K B ಪದ್ಮನಾಭ ಅಜಾರ್ —ಎದ್ರಿ.

ಕುಂದಾಪುರ ತಾಲ್ಲೂಕು ಕೋಟೇಶ್ವರ ಗ್ರಾಮದ ಬಡಾಕೆರೆಯಲ್ಲಿರುವ ಗೋವಿಂದ ಗೋಪರ ಮಗ ಕೆ. ಬಿ. ಪದ್ಮನಾಭ ಅಜಾರ್‌ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಸದ್ರಿ ವ್ಯವಹರಣೆಯಲ್ಲಿ ದಿಕ್ರಿ ಡಿಕ್ರಿ ಬರ ಮಾಡಿಕೊಳ್ಳುವರೆ ಎದ್ರಿಯ ಹಕ್ಕಿನ ಸ್ವಿರಾಸ್ತಿಯನ್ನು ಯೇಲಂ ಮಾಡುವ ಬಗ್ಗೆ ಅರ್ಜಿದಾರನು ದಾಖಲು ಮಾಡಿದ ಯೇಲಂ ಇಸ್ತಿಹಾರನ ಷರತುಗಳನ್ನು ನಿರ್ಣಯಿಸುವ ಬಗ್ಗೆ ತಾರೀಕು 9—9—1957ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಪದೆ ಇಟ್ಟಿರುತ್ತದೆ ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ ಪೂರ್ವದಲು 11 ಗಂಟೆಗೆ ಮೇಲಿನ ಕೋರ್ಟಿನಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಲಾಗಿದೆ.

N. S. Parameshwariah,
Advocate for Petn.

Date 15—8—57 Coondapoor.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೬	೨೨-೮-೧೯೫೭	೫೦

ರಾಷ್ಟ್ರದ ತಪಸ್ಸು

ಭಾರತ ಸರಕಾರದವರು ಈಚೆಗೆ ಒಂದು ಕೋಟಿ ರೂಪಾಯಿಗಳಷ್ಟು ಸಾಲವನ್ನು ಸಾರ್ವಜನಿಕರಿಂದ ಎತ್ತಿದರು. ಈ ಸಾಲಕ್ಕೆ ಜನರು ಬಹಳ ಹೆಚ್ಚಾಗಿ ಮಂತಿಗೆಯನ್ನು ನೀಡಿದರೆಂದು ಹೇಳಬಹುದು. ಈಗ ಕೆಲವು ವರ್ಷಗಳಿಂದ ಜನರಿಂದ ಸಾಲವನ್ನೆತ್ತುವುದು ನಮ್ಮ ಸರಕಾರಗಳ ವ್ಯವಹಾರಗಳಲ್ಲಿ ಒಂದು ಅಂಗವಾಗಿ ಸೇರಿಹೋಗಿದೆ. ಸರಕಾರದ ಕೈಯಿಂದಾಗುವ ವೆಚ್ಚವು ತೀರಾ ಹೆಚ್ಚಿಕೊಂಡು, ತೆರಿಗೆ ಮತ್ತಿತರ ರೂಪದ ಆದಾಯವು ಕಡಿಮೆಯಾಗಿರುವುದೇ ಇದರ ಮುಖ್ಯ ಕಾರಣ ಎಂಬುದು ಸ್ಪಷ್ಟವಿದೆ. ನಮ್ಮ ಅರ್ಥ ಸಚಿವರು ಮಂಡಿಸುವ ಆಯವ್ಯಯದ ಅಂದಾಜುಪಟ್ಟಿಯು ಯಾವಾಗಲೂ ಕೊರತೆಯನ್ನೇ ತೋರಿಸುತ್ತಿರುವುದೂ ಎಲ್ಲರ ಗಮನಕ್ಕೂ ಬಂದಿರಬಹುದಾದ ವಿಷಯ. ಸ್ವಾತಂತ್ರ್ಯೋತ್ತರದಲ್ಲಿ ಸರಕಾರವು ಕಲ್ಯಾಣ ರಾಷ್ಟ್ರವನ್ನು ಕಟ್ಟುವ ಆಶೆಯನ್ನು ಕಟ್ಟಿಕೊಂಡು ಸಾರ್ವಜನಿಕರಿಗೆ ಬಹುಮುಖ ಅನುಕೂಲತೆಗಳನ್ನೊದಗಿಸುವ ಸಾಹಸದ ಕಾರ್ಯಕ್ಕೆ ಕೈ ಹಾಕಿರುವುದರಿಂದ, ಅದರ ಸಾಂಪತ್ತಿಕ ಸ್ಥಿತಿಯು ಸದಾಕಾಲ ಕ್ಷೀಣಾವಸ್ಥೆಯಲ್ಲಿಯೇ ಇರುತ್ತಿದೆ ಎಂದರೂ ತಪ್ಪಾಗಲಾರದು. ಆಯವ್ಯಯಪಟ್ಟಿಗಳಲ್ಲಿ ಕೊರತೆಯನ್ನು ತೋರಿಸುವುದು ಶುಭಕರವಲ್ಲವೆನ್ನುವ ಕೆಲವರೂ ಇದ್ದಾರೆ. ಕೊರತೆಯನ್ನು ತುಂಬುವ ಸಲುವಾಗಿ ಸರಕಾರದವರು ಕೊರಿ ಸಬೇಕೆಂದಿರುವ ಹೊಸ ತೆರಿಗೆಗಳಿಂದ ಭಯಪಟ್ಟವರೇ—ಹೊಸ ತೆರಿಗೆಗಳು ಬೇಡವೆಂದು ಹೇಳುವವರೇ—ಇಂಥವರಲ್ಲಿ ಹೆಚ್ಚು ಆದರೆ, ಹೊಸ ತೆರಿಗೆಗಳನ್ನು ಹೊರಿಸಿಯಾದರೂ ಆಯವ್ಯಯಗಳನ್ನು ಬಾಯಿಗೂಡಿಸದಿದ್ದರೆ, ಸರಕಾರವು ಸಂಕಲ್ಪಿಸಿರುವ ಎಷ್ಟೋ ಸಾರ್ವಜನಿಕೋಪಯೋಗಿ ಕೆಲಸಗಳೂ ನೆರವೇರಲಾರವೆಂಬ ಪ್ರಧಾನಿ ನೆಹರೂ ಸಹ ಆಯವ್ಯಯ ಪಟ್ಟಿಯಲ್ಲಿ ಕೊರತೆಯನ್ನು ತೋರಿಸುವ ಹವ್ಯಾಸವನ್ನು ದೂಷಿಸಿದ್ದುಂಟು. ಆದರೆ, ಇವರ ದೂಷಣೆಗೆ ಹೊಸ ತೆರಿಗೆಗಳು ಕಾರಣವಲ್ಲ; ಹೊಸ ತೆರಿಗೆಗಳನ್ನು ಹೊರಿಸಲು ಮಂತ್ರಿಗಳ ಪ್ರವೃತ್ತಿಯೇ ಕಾರಣ ಎಂದರೆ, ನಮ್ಮ ಪ್ರಧಾನಿಗಳು ಜನರಿಂದಲೇ ಕರಗಳ ರೂಪದಲ್ಲಿ ವಂತಿಗೆಯು ದೊರೆತು ಸಮಾಜಾಭಿವೃದ್ಧಿ ಕಾರ್ಯಗಳಲ್ಲಿ ವಿನಿಯೋಗವಾಗಬೇಕು, ಅದಕ್ಕಾಗಿ ಅಗತ್ಯವಿದ್ದರೆ, ಹೊಸ ತೆರಿಗೆಗಳನ್ನು ಹೊರಿಸಲು ಹಿಂಜರಿಯಬಾರದುಎಂದು ಅಭಿಪ್ರಾಯಪಡುತ್ತಾರೆ. ಅವರ ದೃಷ್ಟಿಯಲ್ಲಿಯತ್ತ ಮಟ್ಟಿಗೆ ಒಂದು ವಿಷಯ: ಏನೆಂದರೆ, ಭಾರತದ ಸರ್ವತೋಮುಖವಾದ ಏಳಿಗೆ. ಅದಕ್ಕಾಗಿ ಸರ್ವತ್ಯಾಗಕ್ಕೂ ಕಠಿಣತಪಸ್ಸಿಗೂ ಜನತೆ ಸಿದ್ಧವಾಗಬೇಕೆಂದವರು ಹೇಳುತ್ತಾರೆ. ಜನಸಾಮಾನ್ಯರ ತಪೋನಿಷ್ಠೆಯು ಸಮಾಜ ಕಲ್ಯಾಣದಲ್ಲಿ ಪ್ರತಿಫಲನ ಹೊಂದಬೇಕೆಂಬುದು ಅವರ ಮಹತ್ವಾಕಾಂಕ್ಷೆ ಎಂದರೂ ಸಲ್ಲುತ್ತದೆ. ಎಲ್ಲರೂ ದ್ವಿತೀಯ ಪಂಚವರ್ಷಿಕ ಯೋಜನೆಯ ಗಾತ್ರ, ವಿಸ್ತಾರ ಹೆಚ್ಚಿದ ಅಂದಾಜುಗಳ ಮೇಲಿಂದ ಇದೊಂದು ಅಸಾಧಾರಣ ಸಾಹಸ-ನಮ್ಮ ಶಕ್ತಿಗೆ ಮೀರಿದ್ದು-ಎಂದು ಹೇಳುತ್ತಿರುವಾಗಲೂ ನೆಹರೂ "ನಾವು ನಡೆಯುತ್ತೇವೆ; ನಡೆಯುವಾಗ ಮುಗ್ಗರಿಸಬಹುದು, ಬೀಳಬಹುದು. ಆದರೆ ಮತ್ತು ಎದ್ದು ನಿಂತು ಮುನ್ನಡೆದೇತೀರುತ್ತೇವೆ" ಎಂಬ ಆಶಾವಾದವನ್ನು ಮೊನ್ನೆಯ ಸ್ವಾತಂತ್ರ್ಯದಿನದಂದು ಸಹ ಸುಸ್ಪಷ್ಟಗೊಳಿಸಿದ್ದಾರೆ. ಈ ಮನೋಭಾವ ಸಾಂಕ್ರಾಮಿಕವಾಗಿ ಹಬ್ಬಿಕೊಂಡದ್ದಾದರೆ, ಸರಕಾರದ ಸಾಲವನ್ನೆತ್ತುವ ಯೋಜನೆಯಾಗಲೀ, ರಾಷ್ಟ್ರೀಯ ಉಳಿತಾಯದ ಚಳವಳಿಯಾಗಲೀ ಮಿತವ್ಯಯದ ಆಂದೋಲನವಾಗಲೀ ಸರಕುಗಳ ಬಳಕೆಯಲ್ಲಿ ಸಂಯಮವಾಗಲೀ ಉತ್ಪಾದನೆಯ ಹೆಚ್ಚಳದಲ್ಲಿ ಉತ್ಸಾಹ ಮತ್ತು ಸಾಫಲ್ಯವಾಗಲೀ ಕೈಗೂಡುವಂತಿಲ್ಲ. ಇದನ್ನೇ ತಪೋನಿಷ್ಠ ಜೀವನವೆನ್ನುವುದು. ಇದೇ ಯೋಜನೆಯ ಬೆಂಗೋಲು. ಭಾರತೀಯರಿಂದ ರಾಷ್ಟ್ರವು ಇಂತಹ ತ್ಯಾಗಮಯ ತಪೋನಿಷ್ಠ ಜೀವನವನ್ನು ಅಪೇಕ್ಷಿಸಿದೆ; ರಾಷ್ಟ್ರೀಯ ಧುರೀಣರೂ ಅಪೇಕ್ಷಿಸಿದ್ದಾರೆ; ಅಷ್ಟೇ ಅಲ್ಲದೆ ವಿದೇಶಗಳಲ್ಲಿರುವ ಶುಭಚಿಂತಕರೂ ಈ ಆಶೆಯನ್ನು ಹೊಂದಿದ್ದಾರೆ. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮಸಾರಾಷ್ಟ್ರಗಳು ಮಾಡುತ್ತಿರುವ ದುಂದು ವೆಚ್ಚ ನಿಲ್ಲಬೇಕೆಂದೂ, ಮುಖ್ಯವಾಗಿ ಅಣ್ವಸ್ತ್ರಗಳ ಸಂಗ್ರಹಕ್ಕಾಗಿ ವಿನಿಯೋಗಿಸುವ ಕೋಟ್ಯಂತರ ಹಣವು ಭಾರತದ ಪಂಚವಾರ್ಷಿಕ ಯೋಜನೆಯಂತಹ ವಿಧಾಯಕ ಕೆಲಸಗಳಿಗೆ ವಿನಿಯೋಗವಾಗಬೇಕೆಂದೂ ಬಯಸಿದ್ದಾರೆ. ಅಣ್ವಸ್ತ್ರಗಳ ತಯಾರಿಕೆಗೆ ಕೈ ಹಿಡಿಯಬಿಟ್ಟು ಖರ್ಚು ಮಾಡುವ ರಾಷ್ಟ್ರಗಳು ಮಾತ್ರ ಈ ಕಲೆಯನ್ನು ಗಮನಿಸುವ ಲಕ್ಷಣವಿಲ್ಲ. ಲೋಕದಲ್ಲಿ ಮನುಷ್ಯನಾದವನಿಗೆ ದುಷ್ಟಬುದ್ಧಿಗೆ ದಾಸನಾಗುವುದು ಎಷ್ಟು ಸುಲಭವೋ ಮತ್ತು ಸಚ್ಚೀಲಗಳನ್ನು ಬೆಳೆಸಿಕೊಳ್ಳುವುದು ಎಷ್ಟು ಕಷ್ಟವೋ ಹಾಗೆಯೇ ಸತ್ಕಾರ್ಯಗಳಿಗೆ ಹಣವು ದೊರೆಯುವುದಕ್ಕಿಂತ ದುಷ್ಕೃತ್ಯಗಳಿಗೆ ಅದು ಧಾರಾಳವಾಗಿ ದೊರೆಯುವುದು ಜೋಡ್ಯವಾದರೂ ಸತ್ಯ ಸಂಗತಿ. ಇಷ್ಟಾದರೆ, ಅಮೇರಿಕಾ, ರಶ್ಯಾ ಬ್ರಿಟನುಗಳಂತಹ ರಾಷ್ಟ್ರಗಳು ಅತ್ಲಾಂತಿಕದ ಮಹಾಸಾಗರದಲ್ಲಿಯೋ, ಸೈಬೀರಿಯಾದಲ್ಲಿಯೋ ಅಣ್ವಸ್ತ್ರಗಳ ಸ್ಫೋಟನಗಳನ್ನು ನಡೆಸಿ ಲೋಕದ ವಾತಾವರಣವನ್ನೇ ವಿಷಮಯವನ್ನಾಗಿಸಿ ಜೀವಹಾನಿಗೆ ಕಾರಣೀಭೂತರೆನಿಸುವ ಬದಲು ಸಮಾಜಾಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿದ್ದಾದರೆ, ಹಿಂದುಳಿದ ದೇಶಗಳು ಹಿಂದುಳಿದವುಗಳಾಗಿ ಉಳಿಯುತ್ತಿರಲಿಲ್ಲ. ಸಂಯುಕ್ತ ರಾಷ್ಟ್ರಸಂಘದಂತಹ ಜಾಗತಿಕ ಸಂಸ್ಥೆಯು ತೀವ್ರವಾಗಿ ಸಯಾಲೋಚಿಸಿ ಕಣವು ಹೋಲಾಗುವುದನ್ನು ನಿಲ್ಲಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಕಾಲವೀಗ ಬಂದಿದೆ. ಆದರೆ, ಆ ಸಂಸ್ಥೆಯ ಸೂತ್ರಧಾರಿಗಳೇ ಕರ್ತವ್ಯಚ್ಯುತರೆಂಬುದು ಮಾತ್ರಾ ನಿರಾಶೆಯ ಲಕ್ಷಣ. ಆದಾಗ್ಯೂ ಲೋಕಾಭಿಪ್ರಾಯಕ್ಕೆ ಮನ್ನಣೆ ಸಿಕ್ಕೀತು ಎಂಬ ಆಶಾವಾದ ನಮ್ಮದು.

ಸಂಕ್ಷಿಪ್ತ ಸುದ್ದಿಗಳು

ಸತ್ಯಮೇವ ಜಯತೇ

ಬೆಂಗಳೂರಿನ ವಿಧಾನ ಸೌಧದ ಮುಂಭಾಗದಲ್ಲಿ ಕೆತ್ತಲಾಗಿದ್ದ "ಸರಕಾರದ ಕೆಲಸವೇ ದೇವರ ಕೆಲಸ" ಎಂಬ ನುಡಿಮುತ್ತನ್ನು ಅಳಿಸಿ, ಅದರ ಸ್ಥಾನದಲ್ಲಿ "ಸತ್ಯಮೇವ ಜಯತೇ" ಎಂಬುದನ್ನು ಕೆತ್ತುವ ಕೆಲಸ ಸಾಗುತ್ತಿದೆ. ಪ್ರಾರಂಭಿಕ ಕೆತ್ತನೆಯ ಬಗ್ಗೆ ವಿಧಾನ ಸಭೆಯಲ್ಲಿ ಈ ಮೊದಲು ನಡೆದ ವಿಪುಲ ಟೀಕೆಗಳ ಪರಿಣಾಮವಾಗಿ ಈ ಹೊಸ ವಾಕ್ಯವು ಕೆತ್ತಲ್ಪಡುತ್ತಿದೆ.

ಭೂದಾನಕ್ಕೆ ಸರ್ವಸ್ವದಾನ

ತುಮಕೂರು ಜಿಲ್ಲೆಯ ಚಿಕ್ಕ ನಾಯಕನ ಹಳ್ಳಿ ತಾಲೂಕಿನ ಅರಳಿಕೆರೆ ಗ್ರಾಮದ ಶ್ರೀ ಎಚ್. ಗಿರಿಂಗಪ್ಪ ಎಂಬವರು ತಮ್ಮ ಹೊಲ, ತೋಟ, ಮನೆ, ದನಕರು ಎಲ್ಲವನ್ನೂ ವಿನೋಬಾಜೀಯವರ ಭೂದಾನ ಯಜ್ಞಕ್ಕೆ ದಾನವಾಗಿ ಇತ್ತಿರುವರು. ಮತ್ತು ತಾವು ಸಹ ಆಚಾರ್ಯಭಾವೆಯವರ ಶಿಷ್ಯರಾಗಿ ನಡೆದುಕೊಳ್ಳುವುದಾಗಿ ಸಾರಿರುವರು.

ಹೆಸರಿಗಾಗಿ ಜರಜಾಟ

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯು ತನ್ನ ನೂತನ ಘಟನೆಯನ್ನು ಸ್ವೀಕರಿಸಲು ತಾ. ೧೮ರಲ್ಲಿ ಒಟ್ಟು ಸೇರಿದಾಗ, ಸಮಿತಿಯ ನಾಮಧೇಯದ ಬಗ್ಗೆ ತರುಸಿನ ಕೊಯ್ದಾಟ ನಡೆಯಿತು. ಮೈಸೂರೋ, ಕರ್ನಾಟಕವೋ ಎಂಬುದನ್ನು ನಿರ್ಣಯಿಸುವುದು ಅಸಾಧ್ಯವಾಗಿ ಮತಕ್ಕೆ ಹಾಕುವ ಪ್ರಸಂಗ ಬಂತು. ಆಗ ಮುಖ್ಯಮಂತ್ರಿ ನಿಜಲಿಂಗಪ್ಪ ಹಾಗೂ ಮಾಜಿ ಮುಖ್ಯಮಂತ್ರಿ ಹನುಮಂತಯ್ಯನವರ ಸೂಚನೆ ಸಲಹೆ ಸಮಾಧಾನಗಳಿಂದಾಗಿ ಸಭೆಯು ಯಾವ ನಿರ್ಧಾರವನ್ನೂ ಮಾಡದೆ ಮುಂದುವರಿಯಿತು.

ದಕ್ಷಿಣ ಕನ್ನಡದ ಕಾಲೇಜುಗಳು

ದಕ್ಷಿಣ ಕನ್ನಡದ ಕಾಲೇಜುಗಳು ಮೈಸೂರು ವಿಶ್ವವಿದ್ಯಾಶಿಲಯಕ್ಕೆ ಸೇರಬೇಕೆಂಬ ಬಗ್ಗೆ ರಾಜ್ಯ ವಿಧಾನಸಭೆಯಲ್ಲಿ ಕುರುಸಿನ ಚರ್ಚೆ ನಡೆಯಿತು. ಆದರೂ, ದ. ಕನ್ನಡ ಜಿಲ್ಲೆಯಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯವಿರುವುದರಿಂದ, ಮುಂದಿನ ಸಭೆಯಲ್ಲಿ ವಿಶ್ವವಿದ್ಯಾಲಯಗಳ ತಿದ್ದುಪಡಿ ವಿಧೇಯಕವನ್ನು ಮಂಡಿಸಲಾಗುವುದು. ಅಂದಿನೊಳಗೆ ಈ ವಿಷಯದಲ್ಲಿ ಏಕಾಭಿಪ್ರಾಯವಾಗಬಹುದು.

ಗಾಂಜಾ ಮಾರಾಟಕ್ಕೆ ಪ್ರತಿಬಂಧ

ಮೈಸೂರು ಸರಕಾರವು ೧೯೫೭-ಜುಲೈ ರಿಂದಲೇ ಗಾಂಜಾ ಮಾರಾಟ, ಬೆಳೆ ಮತ್ತು ಆಯಾತಗಳನ್ನು ಪ್ರತಿಬಂಧಿಸಲಿದ್ದು, ಇದರಿಂದ ಸರಕಾರಕ್ಕೆ ೧೩ ಲಕ್ಷ ರೂಪಾಯಿಗಳ ನಷ್ಟವಾಗುತ್ತದೆ.

ಕೇರಳದ ಶಿಕ್ಷಣ ವಿಧೇಯಕ

ದೇಶದ ನೂಲೆ ಮೂಲೆಗಳಲ್ಲಿಯೂ ವಿರೋಧ ಮನೋಭಾವನೆಯನ್ನು ಸಡೆದುಕೊಂಡಿದ್ದ ಕೇರಳದ ಶಿಕ್ಷಣ ವಿಧೇಯಕದಲ್ಲಿ ಕೆಲವೊಂದು ತಿದ್ದುಪಡಿಗಳನ್ನು ಮಾಡಲು ರಾಜ್ಯ ಸರಕಾರವು ನಿರ್ಧರಿಸಿದೆ. ಶಿಕ್ಷಣ ಸೇವಕದಲ್ಲಿ ಸ್ವಾತಂತ್ರ್ಯ ಧಾರ್ಮಿಕ ಶಿಕ್ಷಣಾಲಯಗಳಲ್ಲಿನ ಧಾರ್ಮಿಕ ಶಿಕ್ಷಣಕ್ಕೆ ವ್ಯತ್ಯಯವಾಗದಂತೆ ನೋಡುವುದು, ಇವೇ ಕೆಲವು ಮುಖ್ಯ ತಿದ್ದುಪಡಿಗಳಾಗಿವೆ. ಮುಖ್ಯಮಂತ್ರಿ ನಂಬೂದರಿಪಾದ ಮತ್ತು ಕೇಂದ್ರ ಗೃಹಮಂತ್ರಿ ಪಂಡಿತ ಪಂತರ ನಡುವೆ ಈ ಬಗ್ಗೆ ನಿರಾಲಮಟ್ಟದ ಪತ್ರವ್ಯವಹಾರಗಳು ನಡೆದಿವೆಯಾದರೂ ಇವು ಬಹಿರಂಗವಾಗಿಲ್ಲ.

ಬ್ರಾಹ್ಮಣರಿಂದ ಬಿಡುಗಡೆ

ನಾನಾ ಚಳವಳಿಗಳನ್ನು ಪ್ರಾರಂಭಿಸಿದ್ದ ದ್ರಾವಿಡ ಕಜಗಂನ ಧುರೀಣ ಶ್ರೀ ರಾಮಸ್ವಾಮಿ ನಾಯ್ಕರು ಮಹಾತ್ಮಾ ಗಾಂಧೀಯವರ ಪಟ, ಪ್ರತಿಮೆಗಳನ್ನು ನಾಶಮಾಡುವ ನೂತನ ಚಳವಳಿವನ್ನು ಕೈಗೊಂಡಿದ್ದಾರೆ. ಬ್ರಾಹ್ಮಣರ ರೋಷಣೆಯಿಂದ ಕಂಗೆಟ್ಟ ತಮಿಳುನಾಡಿನ ಗೌರವ, ಸ್ವಾಭಿಮಾನಗಳನ್ನು ಪುನರುಜ್ಜೀವಿಸುವ ಸಲುವಾಗಿಯೇ ಈ ಕಾರ್ಯಕ್ರಮಗಳನ್ನು ಕೈಕೊಳ್ಳುವರಂತೆ!

ಗ್ರಾಮೀಣ ವಿಶ್ವವಿದ್ಯಾಲಯ

ಉತ್ತರ ಪ್ರದೇಶದ ರುದ್ರಪುರದಲ್ಲಿ ಗ್ರಾಮೀಣ ವಿಶ್ವವಿದ್ಯಾಲಯವೊಂದನ್ನು ಸಂಸ್ಥಾಪಿಸುವ ಯೋಜನೆಯೊಂದನ್ನು ಸರಕಾರವು ಸಿದ್ಧಪಡಿಸಿ ಯೋಜನಾ ಆಯೋಗಕ್ಕೆ ಒಪ್ಪಿಸಿದೆ. ಇದಕ್ಕೆ ಅನುಮತಿ ದೊರೆತಲ್ಲಿ ರಾಜ್ಯ ಸರಕಾರದ ೧,೦೦೦ ಎಕ್ರೆ ಹೊಲದಲ್ಲಿ ಅಮೆರಿಕದ ಲ್ಯಾಂಡ್ ಗ್ರಾಂಟ್ ಇನ್ಸ್ಟಿಟ್ಯೂಶನ್‌ನ ಮಾದರಿಯಲ್ಲಿ ಈ ವಿಶ್ವವಿದ್ಯಾಲಯವು ತೆರೆಯಲ್ಪಡುವುದು ಇದರಲ್ಲಿ ಕೃಷಿ ವಿಜ್ಞಾನಕ್ಕೆ ಅತ್ಯಧಿಕ ಮಹತ್ವವನ್ನೀಯುವುದು.

ಹಿಂದೀ ಸರಕಾರೀ ಭಾಷೆ

ರಾಜ್ಯ ಘಟನೆಯಲ್ಲಿ ನಮೂದಿಸಿದಂತೆ ೧೯೫೭ ರಲ್ಲಿ ಹಿಂದೀ ಭಾಷೆಯನ್ನು ಭಾರತೀಯ ಸರಕಾರೀ ಭಾಷೆಯನ್ನಾಗಿ ಮಾಡಲು ಸರಕಾರವು ತ್ವರಿತಗತಿಯಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ಸರಕಾರೀ ಉದ್ಯೋಗಸ್ಥರಿಗೆ ಹಿಂದೀ ಕಲಿಯುವ ಹಲವಾರು ಕೇಂದ್ರಗಳನ್ನು ತೆರೆಯಲಾಗಿದೆ. ಈ ತೆರದ ತ್ವರಿತ ಮುನ್ನಡೆಯಿಂದ ಸರಕಾರಕ್ಕೆ ಸುಮಾರು ೧೯೫೨ರಲ್ಲಿಯೇ, ಎಂದರೆ ನಿಯೋಜಿತ ವರ್ಷಕ್ಕಿಂತ ಮೂರು ವರ್ಷ ಮೊದಲೇ, ಹಿಂದೀಯನ್ನು ತನ್ನ ಭಾಷೆಯನ್ನಾಗಿ ಸ್ವೀಕರಿಸಲು ಸಾಧ್ಯವಾಗಬಹುದು.

ರಕ್ಷಣೆಗಾಗಿ ಶಸ್ತ್ರಾಸ್ತ್ರಗಳು

ಶಸ್ತ್ರಾಸ್ತ್ರ ಕಾಯಿದೆಯ ಪುನರ್ವಿಮರ್ಶೆಯ ಬಗ್ಗೆ ಕೇಂದ್ರ ಸರಕಾರವು ಒಂದು ವಿಧೇಯಕವನ್ನು ಸಿದ್ಧಪಡಿಸುತ್ತಿದೆ. ಇದರಲ್ಲಿ, ಜನರಿಗೆ ತಮ್ಮ ರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನು ಧರಿಸಲು ಅಪ್ಪಣೆ ಕೊಡುವುದಕ್ಕಾದಿಗೆ ಭದ್ರತೆ-ಕಾಯಿದೆ ಸುವ್ಯವಸ್ಥೆಗ

ಳನ್ನು ಕಾಪಾಡುವಂತೆ ನೋಡಿಕೊಳ್ಳಲಾಗುವುದು.

ಕಾಶ್ಮೀರಕ್ಕೆ ವಿರೋಧೀ ಪಕ್ಷ

ಕಾಶ್ಮೀರದ ಸರಕಾರೀ ಪಕ್ಷದಿಂದ ಹೊರಬಂದಿರುವ ಗ ಲಾಮ ಮಹಮ್ಮದ ಸಾದಿಕ ಮತ್ತು ಡಿ. ಪಿ. ಧಾರಾರವರು ಡಿಲ್ಲಿಗೆ ಆಗಮಿಸಿ, ನೆಹರೂ, ಪಂತ್, ದೇಬಾರ್ ಮೊದಲಾದವರೊಡನೆ ಭೇಟಿಯಾದರು ತಾವು ಕಾಶ್ಮೀರದ ಹಾಗೂ ದೇಶದ ಅಭಿವೃದ್ಧಿಯ ಸಲುವಾಗಿ ಹೊಸ ಪಕ್ಷವೊಂದನ್ನು ಕಟ್ಟಲಿದ್ದು ಆ ಬಗ್ಗೆ ಹಿರಿಯ ಧುರೀಣರ ಆಶೀರ್ವಾದ ಪಡೆಯಲೂ, ತಾವು ಕಾಶ್ಮೀರದ ರಾಷ್ಟ್ರೀಯ ಪರಿಷತ್ತನ್ನು ತ್ಯಜಿಸಿದ ಕಾರಣವು ಜನತೆಗೆ ಸುಗೋಚರವಾಗುವಂತೆ ಮಾಡಲೂ ಈ ರೀತಿ ಭೇಟಿಯಾದರೆಂದು ತಿಳಿದು ಬಂದಿದೆ.

ಪಾಕಿಸ್ತಾನಕ್ಕೆ ನಿರಾಶೆ

ಪಾಕಿಸ್ತಾನವು ಆದಷ್ಟು ಬೇಗನೇ ಭದ್ರತಾ ಮಂಡಳದ ಸಭೆ ಸೇರಿಸಲು ತವಕ ಪಟ್ಟಿದ್ದರೂ ಅದಕ್ಕೆ ತೀವ್ರ ನಿರಾಶೆಯಾಗಿದೆ. ವಿದೇಶ ಮಂತ್ರಿ ಶ್ರೀ ನೂನರು ತನ್ನ ಪ್ರಯಾಣವನ್ನು ಈ ತಿಂಗಳ ಕೊನೆಯವಾರದಿಂದ ಮುಂದಿನ ತಿಂಗಳ ಮಧ್ಯದ ಸಮಯಕ್ಕೆ ಮುಂದೂಡಿದ್ದಾರೆ. ಪಾಕಿಸ್ತಾನದ ಯತ್ನವು ನೀರಮೇಲಣ ಹೋಮವೇ ಆಗಿದೆ.

ವಿಶ್ವಾಂತರ್ಯಾಮಿ ಹಿಡುಗು

ಕೇವಲ ಆಸ್ಯಾಖಂಡದಲ್ಲಿ ಮಾತ್ರ ಹರಡಿದೆಯೆಂದು ತಿಳಿಯಲಾದ ಇನ್‌ಫ್ಲುಯೆಂಜಾ ಜ್ವರವು ಮೆಕ್ಸಿಕೋ, ಬೆಂಗಸೀಕಾ, ನ್ಯೂಜಿಲೇಂಡ್, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಈಜಿಪ್ಟ್ ಹಾಗೂ ಅಮೇರಿಕೆಗಳಲ್ಲೂ ಹರಡುತ್ತಿದೆಯೆಂದೂ, ಯುರೋಪು ಖಂಡ ಮತ್ತು ಉತ್ತರ ಆಫ್ರಿಕಾಗಳಲ್ಲಿ ಅದು ಅಷ್ಟೊಂದು ತೀವ್ರವಾಗಿ ಹರಡಿಲ್ಲವೆಂದೂ ತಿಳಿದುಬಂದಿದೆ.

ಅಣುಬಾಂಬು ಅಪಾಯಕ್ಕೆ ತಡೆ

ಇಂಗ್ಲೆಂಡಿನ ಲಂಕೆಶಯರ್‌ನ ಸಮೀಪದಲ್ಲಿ ಅಣುಬಾಂಬುಗಳ ಹಾವಳಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ತನ್ನ ಸೂವರು ಮಕ್ಕಳನ್ನೂ ಕೊಂದು ತಾವೂ ಆತ್ಮಹತ್ಯೆ ಮಾಡಿಕೊಂಡ ದಂಪತಿಗಳ ವಿಚಿತ್ರ ವಾರ್ತೆಯೊಂದು ಬಂದಿದೆ. ಆ ಮಕ್ಕಳ ತಾಯಿ ತನ್ನ ತಾಯಿಗೆ ಬರೆದ ಒಂದು ಪತ್ರದಲ್ಲಿ ತನ್ನ ಹಾಗೂ ತನ್ನ ಪತಿಯ ಜಂಟಿ ಕೃತ್ಯಗಳನ್ನೂ ಅವಕ್ಕೆ ಕಾರಣವನ್ನೂ ತಿಳಿಸಿ "ನಮ್ಮ ಮಕ್ಕಳಿಗೆ ಅಣುಬಾಂಬಿನಿಂದಾಗುವ ದುರ್ಗತಿಯೊದಗಲು ನಾವು ಬಿಡುವಂತಿಲ್ಲ" ಎಂದು ಬರೆದಿದ್ದಾಳೆ.

ಮಹಿಳೆಯರಿಗೆ ಶಸ್ತ್ರಾಸ್ತ್ರ ಬೇಡ

ಮಹಿಳೆಯರಿಗೆ ಶಸ್ತ್ರಾಸ್ತ್ರಗಳ ಉಪಯೋಗದ ಶಿಕ್ಷಣ ಕೊಡುವುದು ಹಿತವಲ್ಲ; ಏಕೆಂದರೆ, ಪುರುಷರು ಬೇಗನೆ ಸಿಟ್ಟಾಗುವುದರಿಂದ ಅವರನ್ನು ಶಾಂತರೀತಿಯಿಂದ ಸಮಾಧಾನಗೊಳಿಸುವ ಸ್ತ್ರೀಯ ನೈಸರ್ಗಿಕ ಪ್ರವೃತ್ತಿಗೆ ಅದು ಹೊಂದಲಾರದು. ಸ್ತ್ರೀಯರು ನಿರ್ವಿಕಾರ ಆತ್ಮಸಂಯಮಿಗಳಾಗಿ ಶಾಂತಿ ಸೇನೆಯಲ್ಲಿ ಸೇರಿ ತಮ್ಮ ಸತ್ಪ್ರಭಾವಿಕ ಗುಣಗಳ ಉಪಯೋಗವನ್ನು ಮಾಡಬೇಕು.—ಎಂದು ವಿನೋಬಾ ನುಡಿದಿದ್ದಾರೆ

ಉಡುಪಿ

ಉಡುಪಿಯಲ್ಲಿ ಮಂತ್ರಿ ಬಾಳಿಗರು

ಮೈಸೂರು ಸರಕಾರದ ಕಾರ್ಮಿಕ ಹಾಗೂ ನ್ಯಾಯಾಂಗ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರು ತಾ. 18ರಂದು ಶುಕ್ರವಾರ ಸಂಜೆ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ, ಅದರ ಮಾಜಿ ಅಧ್ಯಕ್ಷರು ಶ್ರೀಗಳಾದ ಡಾಣಿ ಅಬ್ದುಲ್ಲಾ ಖಾಸಿಂಸಾಹೇಬ್, ಹಾರಾಡಿ ಕೇಶವ ಶೈ, ಪಂಡಾಡಿ ರಾಮಣ್ಣ ಶೆಟ್ಟಿ ಮತ್ತು ಎಸ್. ಸಿರಲ ಕಾಮತರ ಭಾವಚಿತ್ರಗಳನ್ನು ಅನಾವರಣಮಾಡಿದರು. ಕ್ಲಬ್ಬಿನ ಕೋಶಾಧಿಕಾರಿ ಶ್ರೀ ಟಿ ಎ ಪೈಗಳ ಸ್ವಾಗತ ಭಾಷಣ ಮಾಡುತ್ತಾ, ಉಡುಪಿಯ ಕೀರ್ತಿಗಾರರೇಭೂತರಾದ ಈ ಸುಪುತ್ರಾಯರುಗಳ ಚಿತ್ರಗಳ ಅನಾವರಣವು ಈಗಲಾದರೂ ಆಗಲು ಸಂದರ್ಭವೊದಗಿದುದು ಸಂತೋಷಕರವೆಂದರು. ಕ್ಲಬ್ಬಿನ ಅಧ್ಯಕ್ಷ ಡಾ. ಎಸ್. ಆರ್. ಪೈಗಳು ಮಾಜಿ ಅಧ್ಯಕ್ಷರುಗಳ ಸಾರ್ವಜನಿಕ ಸೇವೆ ಜೀವನದ ಆದರ್ಶಗಳನ್ನು ತಿಳಿಸಿದರು.

ಶ್ರೀಗಳಾದ ಪಿ. ಪಿ. ಶೆಣೈ, ಎಚ್. ವಿ ಪೈ, ಡಾ. ಬಿ ಬಿ ಸೆಟ್ಟಿ ಮತ್ತು ಕೆನರಾ ಬೇಂಕಿಂಗ್ ಕೋಆಪರೇಟಿವ್ ಆನುಕ್ರಮವಾಗಿ ದಾನವಿತ್ತ ಖಾನಚಿತ್ರಗಳನ್ನು ಅನಾವರಣಮಾಡುತ್ತಾ ಧಾರ್ಮಿಕ, ಸಾಂಸ್ಕೃತಿಕ ಬೇಂಕಿಂಗ್ ಉದ್ಯಮಗಳಲ್ಲಿ ಉಡುಪಿಯು ಗಣನೀಯ ಸ್ಥಾನವನ್ನು ಪಡೆದ ವಿಚಾರವನ್ನು ಪ್ರಸ್ತಾಪಿಸಿ, ಕೀರ್ತಿಶೇಷರಾದ ನಾಲ್ವರ ಆದರ್ಶ ಜೀವನದ ಸೆರೆಳ್ಳಿ ಇಂದಿನ ತರುಣರು ಇಡಿಮೆಕೊಂಡು ಬರಬೇಕಾಗಿ ಅಪೇಕ್ಷಿಸಿದರು. ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಎನ್. ವಿ. ಕಾಮತರು ಧನ್ಯವಾದಗಳನ್ನಿತ್ತರು.

ಲಾ ಕಾಲೇಜು ಯೂನಿಯನ್ ಉದ್ಘಾಟನೆ

—ಸಧ್ಯಾಹ್ನದಲ್ಲಿ ಶ್ರೀ ಬಾಳಿಗರು ಸ್ಥಳೀಯ ಲಾ ಕಾಲೇಜಿನ ಯೂನಿಯನ್ನಾ ಉದ್ಘಾಟಿಸಿದರು ಪ್ರಿನ್ಸಿಪಾಲ್ ಶ್ರೀ ಬಿ. ಎಲ್ ಎನ್ ರೈಗಳು ಪರಿಚಯಾತ್ಮಕ ಮಾತುಗಳನ್ನಾಡಿ ಈ ಕಾಲೇಜು "ಪದವಿ" ಯೋಜನೆಯಲ್ಲಿ ನಡೆಯುವುದಾಗಿ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಗಳಲ್ಲಿ ನಿಜ ಹುರುಳಿಲ್ಲವೆಂದು ಸ್ಪಷ್ಟ ಅಭಿಪ್ರಾಯವನ್ನಿತ್ತರು. ಕರ್ನಾಟಕ ವಿಶ್ವವಿದ್ಯಾಲಯದ ನಿಯಮಗಳಿಗೆ ಏನೂ ವ್ಯತ್ಯಾಸ ಬಾರದ ರೀತಿಯಲ್ಲಿಯೇ ಶಿಕ್ಷಣ ಸಂಬಂಧ ವಸೂಲು ಮಾಡುವುದಾಗಿಯೂ ನುಡಿದರು ಯೂನಿಯನ್ ಅಧ್ಯಕ್ಷ ಶ್ರೀ ಕೆ ಗೋಪಿನಾಥರಾಯರು ಸ್ವಾಗತ ಮಾತುಗಳನ್ನಾಡಿದರು

ಮಂತ್ರಿಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ "ಆಕಾಡೆಮಿ ಆಫ್ ಜನರಲ್ ಎಜ್ಯುಕೇಶನ್" ಕೈಕೊಂಡ ಶಿಕ್ಷಣ ರಂಗದ ಕಾರ್ಯಗಳು ಸಮರ್ಥವಾಗಿ ಸಾಗಿದುದಲು ಅದರ ರಿಜಿಸ್ಟ್ರಾರ್ ಡಾ ಟಿ. ಮಾಧವ ಶೈ, ಹಾಗೂ ಅದರ ಸಹೋದ್ಯೋಗಿಗಳ ಸ್ಥಿರ ಹಾಗೂ ದೃಢ ಪ್ರಯತ್ನವೇ ಕಾರಣವೆಂದರು ಈ ಕಾಲೇಜಿನಿಂದ ಹೊರಬರುವ ವಿದ್ಯಾರ್ಥಿಗಳ ಜವಾಬ್ದಾರಿ ವಿಶೇಷ ಇದೆ. ಹಿಂದಿನ ಕಾಲದ ಕಾನೂನು ಕಟ್ಟಳೆಗಳಲ್ಲಿ ಎಷ್ಟೋಬದಲಾವಣೆಗಳಾಗಿವೆ. ಈಗ ಹೊಸತಾದ ಕಾನೂನುಕಟ್ಟಳೆಗಳನ್ನು ಬೆನ್ನಾಗಿ ಅಭ್ಯಾಸಮಾಡಿ ಜನತೆಗೂ ಅವುಗಳನ್ನು ತಿಳಿಯಗೊಡಿಸಿ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಮುಂದಾಗಬೇಕು ಎಂದು ಆಶಿಸಿದರು. ಕಾರ್ಯದರ್ಶಿಗಳು ಧನ್ಯವಾದಗಳನ್ನಿತ್ತ ಬಳಿಕ ರಾಷ್ಟ್ರಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಮಣಿಪಾಲದ ಎಂಜಿನಿಯರಿಂಗ್ ಕಾಲೇಜ್ ಯೂನಿಯನ್ ಉದ್ಘಾಟನೆ

—ತಾ ೧೮ ಸಂಜೆ ಶ್ರೀ ಬಿ. ವೈಕುಂಠ ಬಾಳಿಗರು ಮಣಿಪಾಲಕ್ಕೆ ಆಗಮಿಸಿ ಅಲ್ಲಿಯ ಎಂಜಿನಿಯರಿಂಗ್ ಕಾಲೇಜ್ ಯೂನಿಯನ್ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಈಗ ರಾಷ್ಟ್ರದಲ್ಲಿ ಎಂಜಿನಿಯರುಗಳ ಕೊರತೆಯಿದೆ ಎಂದೂ, ಇದನ್ನು ಕೆಲಸುಟ್ಟಿಗೆ ಪೂರೈಸಲು ಎಕೆಡಮಿಯವರು ಇಲ್ಲಿ ಕಾಲೇಜು ಸ್ಥಾಪಿಸಿದುದು ಸದಂರ್ಭೋಚಿತವೆಂದೂ ಹೇಳಿದರು. ಇಲ್ಲಿ ಕಲಿತು ಹೊರಬೀಳುವ ಎಂಜಿನಿಯರರು ರಾಷ್ಟ್ರದ ಅಭ್ಯುದಯಕ್ಕೆ ನೆರವಾಗುವ ರೀತಿಯಲ್ಲಿ ಜ್ಞಾನವನ್ನು ಸಂಪಾದಿಸಿ ತನ್ನು ಪಾಲಿನ ಸೇವೆಯನ್ನು ಸಲ್ಲಿಸಬೇಕೆಂದು ಹೇಳಿದರು

ಶ್ರೀ ಪಿ. ಎಸ್. ಕುಡ್ವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಎಕಾಡಮಿ ರಿಜಿಸ್ಟ್ರಾರ್ ಡಾ। ಟಿ ಎಸ್. ಎ. ಪೈಗಳು ಸಾಧಿಸಿದ ಕಾರ್ಯಗಳನ್ನು ತಾನು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದೆನೆಂದೂ ಅವು ಈಗ ಹೇಗೆ ಜನಾದರಣೀಯವಾಗಿವೆ ಎಂಬುದನ್ನೂ ವಿವರಿಸಿ ಈ ಕಾಲೇಜಿನ ವಿದ್ಯಾರ್ಥಿಗಳು ಸಮರ್ಥ ಎಂಜಿನಿಯರುಗಳಾಗಬೇಕೆಂದು ಹಾರೈಸಿದರು. ಆರಂಭದಲ್ಲಿ ಪ್ರಿನ್ಸಿಪಾಲ್ ಶ್ರೀ ಬಿ. ಬಿ ಕೃಷ್ಣರಾಯರಿಂದ ಸರಚಿಯ ಭಾಷಣವಾಯಿತು. ಬಳಿಕ ಯೂನಿಯನ್ ಅಧ್ಯಕ್ಷ ಶ್ರೀ ಮೆಥ್ಯೂರವರು ಸ್ವಾಗತ ಮಾತುಗಳನ್ನಾಡಿದರು ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಕೆ. ಎನ್. ಅಯ್ಯರರು ಧನ್ಯವಾದಗಳನ್ನಿತ್ತರು.

ವಾಚನಾಲಯದ ಉದ್ಘಾಟನೆ—

ಅಜ್ಜರಕಾಡಿನಲ್ಲಿಯ ದಿ ಎಮ್. ಪಿ. ಕಾಮತರ ಸ್ಮಾರಕಾರ್ಥವಾಗಿ ಭಾರತ ಸೇವಕ ಸಮಾಜದವತಿಯಿಂದ ಕಟ್ಟಿಸಿದ ಭವನದಲ್ಲಿ ಹೆಂಗಸರು ಮತ್ತು ಮಕ್ಕಳಿಗಾಗಿ ಲೋಕಲ್ ಲೈಬ್ರೆರಿ ಅಥಾರಿಟಿ ಕಡೆಯಿಂದ ನಡೆಸುವ ಗ್ರಂಥಾಲಯದ ವಾಚನಾಲಯದ ಶಾಖೆಯನ್ನು ತಾ 15ರಂದು ಶ್ರೀಮತಿ ಪ್ರೇಮಾ ಪೈಗಳು ಉದ್ಘಾಟಿಸಿದರು ಶ್ರೀಮತಿ ಆರಾ ಕೆ. ಆರ್ ಕೆ. ಭಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಲೋಕಲ್ ಲೈಬ್ರೆರಿ ಅಥಾರಿಟಿಯ ಅಧ್ಯಕ್ಷ ಶ್ರೀ ಎಮ್ ಎಸ್. ಶಿಕಾಂಬರರವರು ಸ್ವಾಗತ ಭಾಷಣಮಾಡಿದರು ನಗರ ಸಭಾಪತಿ ಶ್ರೀ ಕೆ. ಕೆ. ಪೈಗಳು ವಂದನೆಗಳನ್ನಿತ್ತರು.

ಸ್ವಾತಂತ್ರ್ಯೋತ್ಸವ—

ನಿಮಿತ್ತ ತಾ 15ರಂದು ಬೆಳಿಗ್ಗೆ ಶಾಲಾ ಮಕ್ಕಳು ಮೆರವಣಿಗೆ ಗಾಂಧಿ ಮೈದಾನಕ್ಕೆ ಬಂದು ಅಲ್ಲಿ ನಗರಸಭಾಪತಿ ಶ್ರೀ ಕೆ. ಕೆ ಪೈಗಳಿಂದ ಧ್ವಜಾರೋಹಣವಾಯಿತು. ಎಸ್ ಪಿ ಪಿ. ಮತ್ತು ಎ. ಪಿ ಪಿ. ದಳದವರ ಕವಾಯತು ನಡೆಯಿತು. ಶ್ರೀ ಅಧಮಾರು ಸ್ವಾಮಿಗಳವರ ಲೆಕ್ಕದಿಂದ ಮಕ್ಕಳಿಗೆಲ್ಲಾ ಸಿಹಿತಿಂಡಿ ಹಂಚಲಾಯಿತು.

ಸರ್ಕಲ್ ಕಾಂಗ್ರೆಸ್ ಕಮಿಟಿ—

ಕಾರ್ಯನಿರ್ವಾಹಕ ಮಂಡಳಿಯ ಸಭೆಯು ತಾ 11ರಂದು ಸಂಜೆ ಅಧ್ಯಕ್ಷ ಶ್ರೀ ಬಾಳ್ಳಪ್ಪ ಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀ ವೇದವ್ಯಾಸ ಗಾಂಧಿ ಮತ್ತು ಈ ಕಮಿಟಿಯ ಸದಸ್ಯ ಶ್ರೀ ಕೆಳೂರು ಬಚ್ಚಪ್ಪ ಶೆಟ್ಟರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯಗಳಾದುವು ಈ ಸಮಿತಿಯ ನಿಯಂತ್ರಿಯನ್ನು ಮನ್ಸಿ ಉಡುಪಿಯಲ್ಲಿ ಜಾನುವಾರು ಆಸ್ಪತ್ರೆಯನ್ನು ತೆರೆಯಲು ಒಪ್ಪಿದ ಬಗ್ಗೆ ಮೈಸೂರು ಸರಕಾರವನ್ನು ಅಭಿನಂದಿಸುವ ಮತ್ತು ಶ್ರೀ ಪಿ ಶೀನ ಶೆಟ್ಟರನ್ನು ಕಾಂಗ್ರೆಸಿನ ಗೌರವ ಪ್ರಚಾರಕರನ್ನಾಗಿ ನೇಮಿಸುವ ನಿರ್ಣಯಗಳಾದುವು. ಕಾಂಗ್ರೆಸ್ ಸಂಸ್ಥೆಗೆ ಹೆಚ್ಚೆಚ್ಚು ಸಂಖ್ಯೆಯಿಂದ ಸದಸ್ಯರನ್ನು ಕೂಡಿಸಲು ಕಾಂಗ್ರೆಸ್ ಕೆಲಸಗಾರರನ್ನು ವಿನಂತಿಸಲಾಯಿತು.

ಡ. ಕ. ಜಿಲ್ಲೆಯ ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿಸಬೇಕೆಂದು ಜಿಲ್ಲೆಯ ಕೆಲವು ಶಾಸನಸಭಾ ಸದಸ್ಯರು ಮುಖ್ಯ ಮಂತ್ರಿಗಳಿಗೆ ಮಾಡಿದ ಮನವಿಯು ಜನಾಭಿಪ್ರಾಯಕ್ಕೆ ವ್ಯತಿರಿಕ್ತವಾಗಿರುವುದೆಂದೂ, ಈಗಿರುವಂತೆ ಈ ಜಿಲ್ಲೆಯ ಕಾಲೇಜುಗಳು ಕರ್ನಾಟಕ ವಿಶ್ವವಿದ್ಯಾಲಯದೊಡನೆಯೇ ಇರುವುದು ಅಗತ್ಯವೆಂದೂ ಕಮಿಟಿಯ ತೀರ್ಮಾನವಾಯಿತು ಸಭಾಂತ್ಯದಲ್ಲಿ ಶ್ರೀ ಕೆ. ನರಸರಿ ಕಾಮತರು ಧನ್ಯವಾದಗಳನ್ನಿತ್ತರು

ನಗರಸಭೆ—

ಉಡುಪಿ ನಗರ ಸಭೆಯು ತಾ. 12ರಂದು ಸಂಜೆ ಸಭಾಪತಿ ಶ್ರೀ ಕೆ ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರುಗಿತು ನಗರ ಸಭೆಯ ಸದಸ್ಯರು ಕೆಲಸಗಾರರು ತಮ್ಮ ಯೂನಿಯನ್ ಮೂಲಕ ಕಳುಹಿಸಿದ ಬೇಡಿಕೆಗಳ ಕುರಿತು ತುಂಬಾ ಆಚೆ ನಡೆದು ಕೊನೆಗೆ ನಗರಸಭೆಯ ಹಣಕಾಸಿನ ಆಧಾರದ ಮೇಲೆ ವಿಸ್ತರಮಟ್ಟಿಗೆ ಬೇಡಿಕೆಗಳನ್ನು ಈಡೇರಿಸಬಹುದು ಎಂಬುದನ್ನು ನಿರ್ಧರಿಸಲು ಪ್ರತ್ಯೇಕ ಅವಸರದ ಸಭೆ ಕರೆಯಬೇಕೆಂದು ನಿರ್ಣಯವಾಯಿತು.

ಮೈಸೂರು ರಾಜ್ಯಕ್ಕೆ (ಸಂಯುಕ್ತ ಕರ್ನಾಟಕ ರಾಜ್ಯ ಎಂದು ಸರಕಾರಕ್ಕೆ ಶಿಫಾರಸು ಮಾಡಬೇಕೆನ್ನುವ ಶ್ರೀ ಬಿ ವಾಸುದೇವರಾಯರು; ಸಂಸ್ಕೃತ ಕಾಲೇಜು ಎಂದುರುಗಡೆ ನಾಲ್ಕು ರೆಸ್ಟೆ ಕೊಡುವ ಕೇಂದ್ರವನ್ನು ಸಂಸ್ಕೃತ ಕಾಲೇಜು ಚೌಕವೆಂದು ಕರೆಯಬೇಕೆನ್ನುವ ಡಾ ಪಿ. ಜಿ ಆಚಾರ್ಯರ, ಅಜಿಗಳಿಗೆ ಹಣ್ಣುವ ಒಂದು ರೂಪಾಯಿ ಸ್ವಾಂಶುಬದಲು ಸಾಲ್ಯಾಣಿ ಸ್ವಾಂಶು ಮೌಲ್ಯಕ್ಕೆ ತಗ್ಗಿಸಬೇಕೆಂದು ಸರಕಾರವನ್ನು ವಿನಂತಿಸಬೇಕೆನ್ನುವ ಶ್ರೀ ಕೆ. ದೇವೇಂದ್ರ ಶೆಣೈಯವರ; ಇಲೆಕ್ಟ್ರಿಕ್ ಲ್ಯಾಟೆಗಳು ಹಾಳಾದಲ್ಲಿ ಅವನ್ನು 48 ತಾಸುಗಳೊಳಗೆ ದುರಸ್ತಿ ಪಡಿಸುವಂತೆ ಇಲೆಕ್ಟ್ರಿಕ್ ಇಲಾಖೆಯನ್ನು ಕೇಳಿಕೊಳ್ಳಬೇಕೆನ್ನುವ ಶ್ರೀ ಎನ್. ಸೀತಾರಾಮ ಕಾಮತರ ನಿರ್ಣಯಗಳೆಲ್ಲವೂ ಸರ್ವಾನುಮತದಿಂದ ಪಾಸಾದುವು ರಥಬೀದಿಗೆ ಗ್ಲೋಬ್ ಲ್ಯಾಟೆಗಳನ್ನು ಹಾಕಬೇಕಾಗಿ ಅಪೇಕ್ಷಿಸಿ ಅಧಮಾರು ಮಠದ ಶ್ರೀ ವಿಬುಧೇಶ ತೀರ್ಥಸ್ವಾಮಿಗಳವರು ಬರೆದ ಪತ್ರದ ಕುರಿತು ಹೆಚ್ಚಿನ ಮಾಹಿತಿಯನ್ನು ಇಲೆಕ್ಟ್ರಿಕ್ ಇಲಾಖೆಯವರಿಂದ ತರಿಸಿಕೊಳ್ಳಬೇಕೆಂದು ನಿರ್ಣಯವಾಯಿತು.

ಸಂಸ್ಕೃತ ಕಾಲೇಜು ವರ್ಧಂತಿ ಸಮಾರಂಭವು—

ತಾ 13 ಮತ್ತು 18 ರಂದು ಕಾಲೇಜು ಭವನದಲ್ಲಿ ಪರ್ಯಾಯ ಅಧಮಾರು ಮಠದ ಶ್ರೀ ವಿಬುಧೇಶ ತೀರ್ಥಸ್ವಾಮಿಗಳವರ ಮತ್ತು ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥಸ್ವಾಮಿಗಳವರ ಅಧ್ಯಕ್ಷತೆಗಳಲ್ಲಿ ಅನುಕ್ರಮವಾಗಿ ಜರುಗಿತು ಕಾಲೇಜ್ ಪ್ರಿನ್ಸಿಪಾಲ್ ಕಾಲಗಿ ಶೇಷಾಚಾರ್ಯರು ಸ್ವಾಗತಿಸಿ ವರದಿಯನ್ನೋದಿದರು ಕಾಲೇಜು ಹೈಸ್ಕೂಲ್ ಹೆಡ್‌ಮಾಸ್ಟರ್ ಶ್ರೀ ಆನಂತ ಕೃಷ್ಣಾಚಾರ್ಯರು ವಂದನೆಗಳನ್ನಿತ್ತರು.

ANNOUNCEMENT.

OUR
BANGALORE BRANCH
(At Kempegowda Extension)
Phone: 6369
will be declared open by
Justice Sri. H. Hombe Gowda
on 28-8-1957 at 5-30 P. M.
at the Glass House, Lal Bagh, Bangalore
Hon'ble Sri. T. Mariappa
(Minister for Finance)
will preside.

THE VIJAYA BANK, LTD.,
H. O. MANGALORE.

ದ. ಕ. ಜಿಲ್ಲೆಯಲ್ಲಿ ಸ್ವಾತಂತ್ರ್ಯೋತ್ಸವ ಹಾಗೂ ಸ್ವಾತಂತ್ರ್ಯ ಸಂಗ್ರಾಮ ಶತಾಬ್ದಿ ಸಮಾರಂಭಗಳು

ತಾ 15 ನುತ್ತು 16ರಂದು ಸಾಂಗೆನಾಗಿ ಜರಗಿದವು

ಕೊರಂಗ್ರಪಾಡಿ ಬೋರ್ಡು ಶಾಲೆಯಲ್ಲಿ—ಶ್ರೀ ಕೆ. ನಾರಾಯಣ ಸ್ವಾಮಿ ಅಧ್ಯಕ್ಷತೆಯಲ್ಲಿ ನುತ್ತು ಶ್ರೀ ಕೆ. ದೇವಯ್ಯ ಮತ್ತೆಯವರ ಅಧ್ಯಕ್ಷತೆಯಲ್ಲಿ; **ಸುರತ್ಕಲ್-ಮುಕ್ಕ** ಮತ್ತ ಪಟ್ಟಣ ಸೊಗಸೀರ ಧರ್ಮಾರ್ಥ ರಾತ್ರಿ ಶಾಲೆ ನುತ್ತು ಅಗ್ನಿಶಾಲೆ ಹಾ ಎ ಶಾಲೆಯಲ್ಲಿ ಶ್ರೀ ಪಿ. ವಿಠಲ ಕಾಮತರ ಅಧ್ಯಕ್ಷತೆಯಲ್ಲಿ; **ಸೂಡಾ** ಪಂಚಾಯತ ಬೋರ್ಡು ಆಫೀಸಿನಲ್ಲಿ ಪಂಚಾಯತ ಅಧ್ಯಕ್ಷ ಶ್ರೀ ಎಸ್. ಮುದ್ದಣ್ಣ ಹೆಗ್ಗಡೆಯವರಿಂದ ಧ್ವಜಾರೋಹಣವು ಶ್ರೀ ಎಸ್. ಎನ್. ಭಟ್ಟರ ಅಧ್ಯಕ್ಷತೆಯಲ್ಲಿ; **ಕೊಲ್ಲೂರು** ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಪಟೇಲ್ ಶ್ರೀ ಕೆ. ಎಸ್. ಸುಬ್ರಾಯ ಅಡಿಗರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಆನಂದ ಶೇಟರಿಂದ ಧ್ವಜಾರೋಹಣ; **ಅಂಚಾರು** ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಶ್ರೀ ವಿಠಲ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ; ಶ್ರೀ ಎ ಜಗದೀಶ ಹೆಗ್ಗಡೆಯವರಿಂದ ಧ್ವಜಾರೋಹಣ; **ನಿಂಜೂರು** ಶ್ರೀ ವಿವೇಕಾನಂದ ಸೇವಾಸಂಸ್ಥೆ ಪಂಚಾಯತ ಬೋರ್ಡು ನುತ್ತು ಶ್ರೀಧರಾಯ ಹಾ. ಎ. ಶಾಲೆಯಲ್ಲಿ **ತಲ್ಲೂರು** ಬೋರ್ಡು ಹಾ. ಎ. ಶಾಲೆಯಲ್ಲಿ ಶ್ರೀ ಹಾ| ಬೋರ್ಡು ಸೇವಾರವರ ಅಧ್ಯಕ್ಷತೆಯಲ್ಲಿ; ಕುಂದಾಪುರ ಕಾಲೂರು **ಆಲೂರು** ಪಂಚಾಯತ ಶಾರದಾ ಎಲಿಮೆಂಟರಿ ನುತ್ತು ಪಾಣಿ ಎಲಿಮೆಂಟರಿ ಶಾಲೆಗಳಲ್ಲಿ ಪಂಚಾಯತ ಪ್ರೆಸಿಡೆಂಟ್ ಶ್ರೀ ಶ್ರೀನಿವಾಸ ಜೋಯಿಸರ ಅಧ್ಯಕ್ಷತೆಯಲ್ಲಿ; **ಮಂದರ್ತಿ** ಡಿ. ಪಿ. ಶಾಲೆಯಲ್ಲಿ ಶ್ರೀ ಬಿ. ಉಮೇಶರಾಯರ ಅಧ್ಯಕ್ಷತೆಯಲ್ಲಿ; **ಪುತ್ತೂರಲ್ಲಿ** ಪಂಚಾಯತ ಬೋರ್ಡಿನ ಆಶ್ರಯದಲ್ಲಿ ಶ್ರೀ ಎಸ್. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ; **ನೆಡೂರು** ಮಹಾಲಿಂಗೇಶ್ವರ ಶಾಲೆಯಲ್ಲಿ ಬಡವರಿಗೆ ಅನ್ನದಾನ; **ಶೀರೂರು ಕಲ್ಲಾಳ** ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಬೈರಂಪಳ್ಳಿ ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಮಂಗೇಶ ಕಿಣಿಯರ ಅಧ್ಯಕ್ಷತೆಯಲ್ಲಿ; **ಬಡಗ ಬೆಳ್ಳೂರು** ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಎಸ್. ಸಂಜೀವ ಭಂಡಾರಿಗಳ ಅಧ್ಯಕ್ಷತೆಯಲ್ಲಿ; **ಬೈದೆಬೆಟ್ಟು** ಶ್ರೀ ರಾಮಾ ಎಲಿಮೆಂಟರಿ ಶಾಲೆಯಲ್ಲಿ ಹಾ. ಎ. ಎನ್. ಆನಂದರಾಯರ ಅಧ್ಯಕ್ಷತೆಯಲ್ಲಿ; **ಪಡುಬೆಟ್ಟು** ಶ್ರೀ ಸ್ವಾಮಿ ನಿತ್ಯಾನಂದ ಎಯಿಡೆಡ್ ಶಾಲೆಯಲ್ಲಿ ಶ್ರೀ ವಿ. ಗೋವಿಂದ ರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ; **ಕೊಳಂಬೆ** ಶ್ರೀ ಅಂಬಾ ವಿಲಾಸ ಕಿರಿಯ ಬುನಾದಿ ಶಾಲೆಯಲ್ಲಿ ಶ್ರೀ ಕಾಂತಣ್ಣ ಮಾಣ್ಯಾಯವರ ಅಧ್ಯಕ್ಷತೆಯಲ್ಲಿ, **ಹಿರಿಯಡಕ** ಬೋರ್ಡು ಹೈಸ್ಕೂಲಲ್ಲಿ ಶ್ರೀ ಬಿ. ಅರ್. ಬಾಗ್ಲೋಡಿಯವರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ರಮಾನಾಥ ಪೈಗಳಿಂದ ಧ್ವಜಾರೋಹಣ, **ಕನ್ನಿಮೂಲ್ಕಿಯಲ್ಲಿ** ಶ್ರೀ ಕಲಿರಾಜ ಗೋಪಾಲ ಶೆಡ್ಡಿಯವರ ಅಧ್ಯಕ್ಷತೆಯಲ್ಲಿ; **ಮೂಲೂರು** ಉಚ್ಚಿಲ ಬಾಸೆಲ್ ಮಿಶನ್ ಶಾಲಾ ಪೈಡಾನದಲ್ಲಿ ಶ್ರೀ ಎನ್. ಬಿ. ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ; ಕಾರ್ನಾಡು ಸದಾಶಿವರಾವ್ ಸ್ಮಾರಕ ಸೇವಾಶ್ರಮದಲ್ಲಿ ಚಿತ್ರಾಪು ಶಾಲೆಯ ಮುಖ್ಯಾಧ್ಯಾಪಕಿಯ ಹಿರಿತನದಲ್ಲಿ ಸಭೆ, ಭಾಷಣ, ಮಕ್ಕಳಿಗೆ ಸಿಹಿ ತಿಂಡಿ ಹಂಚೋಣ, ವಿನೋದ ಕಾಲಕ್ಷೇಪ ಮೊದಲಾದ ಕಾರ್ಯಕ್ರಮಗಳಾದುವು



೫೩ ವರ್ಷಗಳ ಹಿನಾದಲ್ಲಿ "ಮೇ ಫ್ಲವರ್" ಎಂಬ ಹಡಗೊಂದು ಇಂಗ್ಲೆಂಡಿನ ಪ್ಲಿಮತ್ ಬಂದರದಿಂದ ಪ್ರಸಿದ್ಧವಾಗಿ ಯಾತ್ರಿಕರನ್ನು ಅಮೆರಿಕದ ನ್ಯೂ ಇಂಗ್ಲೆಂಡಿಗೆ ತೆಗೆದುಕೊಂಡು ಹೋಗಿತ್ತು. ಅದರ ಜ್ಞಾಪಕಾರ್ಥವಾಗಿಯೆಂಬಂತೆ ಇದೀಗ ಅಮೆರಿಕದಲ್ಲಿ "ಮೇ ಫ್ಲವರ್ II" ಎಂಬ ಹಡಗವನ್ನು ರಚಿಸಿದ್ದಾರೆ. ಈ ಹಡಗವು ಪ್ಲಿಮತ್ ಬಂದರದಲ್ಲಿ ಆಂಗ್ಲೇಯರಿಂದ ನೈಭಸಪೂರ್ಣವಾಗಿ ಸ್ವಾಗತಿಸಲ್ಪಡುವುದನ್ನು ಚಿತ್ರದಲ್ಲಿ ಕಾಣಬಹುದು.

ಬೆಳ್ಳಾರೆ—ಸ್ಥಳೀಯ ಹೈಸ್ಕೂಲಿನ ಪಾಗ್ಯರ್ಥಿನಿ ಸಭೆಯು ತಾ. 8ರಂದು ಶಾಲಾ ಹೆಡ್ಮಾಸ್ಟರ್ ಶ್ರೀ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಬಿ. ಕಿಟ್ಟಣ್ಣ ರೈಗಳು (ಶ್ರೀ ರಾಮನ ವ್ಯಕ್ತಿತ್ವ)ದ ಕುರಿತು ಭಾಷಣಕರ್ತರು.

ಮೂಲ್ಕಿ—ಕಾರ್ನಾಡು- ಬಿತ್ರಾಪುರ ಯುವಜನ ರೈತ ಸಂಘದ ಆಶ್ರಯದಲ್ಲಿ ತಾ. 11 ರಲ್ಲಿ ಸನಮಹೋತ್ಸವ ಸಪ್ತಾಹವು ಸ್ಥಳೀಯ ನೆಟಿಸರಿ ಡಾಕ್ಟರ್ ಶ್ರೀ ರಾಮಣ್ಣ ಗೌಡರ ಅಧ್ಯಕ್ಷತೆಯಲ್ಲಿ ಸೇವಾಶ್ರಮದ ವಠಾರದಲ್ಲಿ ನಡೆಯಿತು. ಡಾ ಸಂಜೀವನಾಥರು ಸರಿಯಸ್ನೋದಿದರು. ಶ್ರೀಗಳಾದ ಎ ಕ್ಯಾರು ಗೋಪಾಲ ಭಟ್ಟ, ಸೋಮಪ್ಪ ಸುವರ್ಣ, ಜಿ. ಮಹಾಬಲ ಶೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಮಂಗಳೂರಿಗೆ ಮಂತ್ರಿ ಶ್ರೀ ಬಾಳಿಗರ ಆಗಮನ ಮೈಸೂರು ಸರಕಾರದ ಕಾರ್ಮಿಕ ಮತ್ತು ನ್ಯಾಯಾಂಗ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರು ತಾ. 16ರಂದು ಸಂಜೆ ಮಂಗಳೂರಿಗೆ ಆಗಮಿಸಿದರು. ಅವರನ್ನು ಸ್ಥಳದಲ್ಲಿ ಜಿಲ್ಲಾಧಿಕಾರಿಗಳೂ ಇತರರೂ ಸ್ವಾಗತಿಸಿದರು.

ಅಂದೇ ಅವರು, ಶ್ರೀ ಜೈಹಿಂದ್ ನಾಟಕ ಸಭೆಯವರು ಡಾನ್ ಬೊಸ್ಕೋ ಹಾಲಿನಲ್ಲಿ ಪ್ರದರ್ಶಿಸಿದ 'ಅಗೋಸ್ತು 16' ಎಂಬ ನಾಟಕ ಸಮಾರಂಭದ ಅಧ್ಯಕ್ಷತೆ ವಹಿಸಿದರು. ನಾಟಕ ಸಭೆಯ ಅಧ್ಯಕ್ಷ ಡಾ| ಎನ್. ಎಸ್. ಶಾಲೆಯವರಿಂದ ಪರಿಚಯ ಭಾಷಣವಾದ ಬಳಿಕ ಶ್ರೀ ಬೇಲಗಡ್ಡೆ ಅಪ್ಪಯ್ಯನವರು ಸ್ವಾಗತಿಸಿದರು. ಶ್ರೀ ಬಾಳಿಗರು ಅಧ್ಯಕ್ಷಸ್ಥಾನದಿಂದ ಮಾತನಾಡುತ್ತಾ, ದೇಶವು ನಿಜವಾಗಿ ಪ್ರಗತಿ ಪಥದಲ್ಲಿ ಮುಂದುವರಿಯಬೇಕಾದರೆ ದೇಶದ ಜನತೆ ತಮ್ಮಲ್ಲಿರುವ ಚಿಕ್ಕ ಪುಟ್ಟ ಭಿನ್ನಾಭಿಪ್ರಾಯಗಳನ್ನು ಒತ್ತಟ್ಟಿಗಿಟ್ಟು ದೇಶಸೇವೆಗೆ ಸುಂದಾಗಬೇಕು ಎಂದು ಹೇಳಿದರು.

ಮರುದಿವಸ ಅವರು ರುಜಾರಿಯೋ ಹೈಸ್ಕೂಲಿನ ಸಭಾ ಭವನದಲ್ಲಿ ಜರುಗಿದ ಸಭೆಯಲ್ಲಿ ಕರ್ನಾಟಕ ಹಿಣ ಎಂಬ ವ್ಯಾಪಾರಿಸ್ತರ ಸಂಘವನ್ನು ಉದ್ಘಾಟಿಸಿದರು. ಮತ್ಸ್ಯಸ್ಯನಸಾಯದಲ್ಲಿ ಐದು ವರ್ಷಗಳ ಅನುಭವ ಉಳ್ಳವರಿಗೆ ಯಾಂತ್ರಿಕ ಮೀನುಗಾರಿಕೆಯಲ್ಲಿ ತರಬೇತಿ ಕೊಡುವುದಕ್ಕಾಗಿ ಮೈಸೂರು ಸರಕಾರವು ಮುಲ್ಕಿಯಲ್ಲಿ ಸದ್ಯದಲ್ಲೇ ಒಂದು ತರಬೇತಿ ಶೇಂಪ್ರನನ್ನು ತೆರೆಯುವುದು ಎಂದೂ, ತರಬೇತಿ ಕಾಲದಲ್ಲಿ ಕಲಿಯುವವರಿಗೆ ಸ್ವಲ್ಪ ಸಹಾಯ ಧನವನ್ನು ಕೊಡಲಾಗುವುದೆಂದೂ ಶ್ರೀ ಬಾಳಿಗರು ಹೇಳಿದರು.

ಡಾ| ಎನ್. ನರಸಿಂಹ ಮೂರ್ತಿಯವರು—ಇಂಡಿಯಾ ಸರಕಾರದವರು ಅಮೇರಿಕದ ವಿಶ್ವವಿದ್ಯಾಲಯಗಳಲ್ಲಿರುವ ಸಾಮಾನ್ಯ ಶಿಕ್ಷಣ ಪದ್ಧತಿಗಳನ್ನು (General Education Courses) ಪರಿಶೀಲಿಸಿ ವರದಿ ಮಾಡಲು ಕಳುಹಿಸಲ್ಪಟ್ಟ ಶಿಕ್ಷಣ ತಜ್ಞರ ನಿಯೋಗದ ಸದಸ್ಯರಾಗಿ ಕಳೆದ ಫೆಬ್ರವರಿಯಲ್ಲಿ ತೆರಳಿದ್ದ ನಮ್ಮೂರವರೂ ಮುಂಬಯಿ ವಿಶ್ವವಿದ್ಯಾಲಯದ ಸಯನ್ಸ್ ಫ್ಯಾಕಲ್ಟಿಯ ಡೀನರೂ, ರಾಮನಾಥಾಯಣ್ ರುಯಿಯಾ ಕಾಲೇಜಿನ ಪ್ರಿನ್ಸಿಪಾಲರೂ ಆದ ಡಾ| ಎನ್. ನರಸಿಂಹ ಮೂರ್ತಿಯವರು ಅಮೇರಿಕಾ ಸರಕಾರದ ವಿದ್ಯಾ ಕೌನ್ಸಿಲಿನವರು ಏರ್ಪಡಿಸಿದ ಪ್ರವಾಸವನ್ನು ಮುಗಿಸಿಕೊಂಡು ಜುಲೈ 1ರಂದು ಲಂಡನಿಗೆ ಬಂದು ಯುರೋಪಿನ ಹಲವು ಪಟ್ಟಣಗಳ ಪ್ರವಾಸ ಕೈಕೊಂಡು ಕಳೆದ ವಾರ ಮುಂಬಯಿಗೆ ಮರಳಿರುವರು. ಅವರ ಪತ್ನಿಯವರೂ ಲಂಡನಿಗೆ ಹೋಗಿದ್ದು ಅವರೊಡನೆಯೇ ಹಿಂದಿರುಗಿರುವರು. ಡಾ| ಮೂರ್ತಿಯವರು ಉದಾಸಿಯಾ ಸುಪ್ರಸಿದ್ಧ ಸಾಹಿತಿ ದಿವಂಗತ ಕವೇಕಾರು ರಾಜಗೋಪಾಲಕೃಷ್ಣರಾಯರ ಜ್ಯೇಷ್ಠಪುತ್ರರು.

ಬೊಂಬಾಯಿ ರೂಪರೇಲ್ ಕಾಲೇಜಿನ ಕನ್ನಡ ಸಂಘದ ಪಾರ್ಷಿಕೋದ್ಘಾಟನ ಸಮಾರಂಭವು ತಾ. 6ರಲ್ಲು ಮೈಸೂರು ರಾಜ್ಯದ ಮುಖ್ಯ ಮಂತ್ರಿ ಮಾನ್ಯ ಶ್ರೀ. ಎಸ್. ನಿಜಲಿಂಗಪ್ಪನವರಿಂದ ನೆರವೇರಿಸಲ್ಪಟ್ಟಿತು. ಸ್ವಾಗತಾಧ್ಯಕ್ಷರಾದ ಶ್ರೀ ಪತ್ರಾವಳಿಯವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಚಿದಂಬರ ದೀಕ್ಷಿತರು ಸ್ವಾಗತಿಸಿದರು. ಕುಮಾರಿ ಎಸ್. ಇಂದಿರೆಯವರು ಮುಖ್ಯ ಮಂತ್ರಿಗಳಿಗೆ ಪುಷ್ಪಾಹಾರವನ್ನರ್ಪಿಸಿದರು. ಶ್ರೀ ರಮಾನಾಥ ಪಕ್ಕಳರವರು ಧನ್ಯವಾದಗಳನ್ನರ್ಪಿಸಿದ್ದರು.

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಗಳಲ್ಲಿ ಯಾವದೊಂದು ತರದ ಖರ್ಚೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ. ಸಾವತಿ ಮಾಡಬಹುದು.

ಮೆನೇಜರ್.

ಚಂದಾದಾರರಲ್ಲಿ ವಿನಂತಿ.

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 36 ನೇ ವರ್ಷವು ಅಂತ್ಯವಾಗಿ ಸಪ್ತಂಬರದಿಂದ 37 ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿ ಇರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

೨೦ ವರ್ಷಗಳಿಂದಲೂ ಪ್ರಸಿದ್ಧ ಇದೆ. | **ಮಲೇರಿಯಾ** | ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲಿ ಕೆಮಿಸ್ಟರಲ್ಲಿ ಗ್ರೂಸರರಲ್ಲಿ ದೊರೆಯುತ್ತದೆ.

ಬಾಟ್ಲಿವಾಲಾ ಎಗ್ಜೊಮಿಕ್‌ಶ್ಚರ್

ಮತ್ತು ಗುಳಿಗೆಗಳು

ಮಾರಾಟ ಮಾಡುವ ಏಜಂಟರು: **ಹರ್ಬರ್ಟ್‌ಸನ್ಸ್ ಪ್ರೈವೆಟ್ ಲಿಮಿಟೆಡ್,** ಜ್ಯಾಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಠೇವಣಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?

ಹಾಗಿದ್ದಲ್ಲಿ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬೇಂಕಿನ ಶಾಖೆಯಲ್ಲಿ ವಿಚಾರಿಸಿರಿ. "ಕೊರ್ಪೊರೇಶನ್" ಬೇಂಕು ಎಲ್ಲಾ ತರದ ಠೇವಣಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿರುವೆ. ಅಲ್ಲದೆ ಠೇವಣಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ಶರತ್ತುಗಳನ್ನೂ ಬದಲಾಯಿಸಿರುವೆ.

51 ವರುಷಗಳ ಪರಿಪಕ್ವ ಬೇಂಕಿಂಗ್ ಅನುಭವ!

7,00,00,000 ರೂಪಾಯಿಗಳಿಗೂ ಮೀರಿದ ಒಟ್ಟು ವಹಿವಾಟು!

THE CANARA BANKING CORPORATION LIMITED

ದೇಶದ ಪ್ರಗತಿ

(೪ನೇ ಪುಟದಿಂದ)

ಲಾಗಿದೆ. ಹಿಂದಿನಿಂದ ಪ್ರಸಿದ್ಧಿಯಲ್ಲಿರುವ ಕೈಮಗ್ಗ ಕೈಗಾರಿಕೆಯನ್ನು ಆಧುನಿಕಗೊಳಿಸುವ ವಿಷಯಕ್ಕೂ ವಿಶೇಷ ಗಮನ ಕೊಡಲಾಗಿದೆ. ಸ್ವಾತಂತ್ರ್ಯವು ಲಭ್ಯವಾದ ೧೦ ವರ್ಷಗಳಲ್ಲಿ ಕೈಗಾರಿಕಾಭಿವೃದ್ಧಿಯಲ್ಲಿ ಸಾಧಿಸಿರುವ ಪ್ರಗತಿಯಲ್ಲಿ ಈ ಅಂಶಗಳೆಲ್ಲ ಸೇರುತ್ತವೆ.

ವಿಕೇಂದ್ರೀಕೃತ ಕೈಗಾರಿಕಾಭಿವೃದ್ಧಿಗೆ ಉಪಯುಕ್ತ ಉದ್ಯೋಗವನ್ನು ಒದಗಿಸುವುದೂ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಯಲ್ಲಿಯೇ ಅಭಿವೃದ್ಧಿಕ್ಷೇತ್ರದ ವ್ಯಾಪ್ತಿಯನ್ನೂ ಹೆಚ್ಚಿಸುವುದೂ ಈಗ ಸರ್ಕಾರವು ಹಣಕಾಸು, ತಾಂತ್ರಿಕ ಜ್ಞಾನ, ಮಾರುಕಟ್ಟೆ ವ್ಯವಸ್ಥೆ ಇತ್ಯಾದಿಗಳ ನೆರವನ್ನು ಒದಗಿಸುತ್ತಿರುವುದೂ ಔದ್ಯೋಗಿಕ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡುವುದು.

ಉದಾಹರಣೆಗೆ, ಕೈಮಗ್ಗದಲ್ಲಿ ಹಿಂದಿನ ರೀತಿಯಲ್ಲಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸದೆ ಆಗುತ್ತಿದ್ದ ಉತ್ಪಾದನೆಯನ್ನು, ಕೆಲವು ಉಪಯುಕ್ತ ಯಂತ್ರ ಭಾಗಗಳನ್ನು ಸೇರಿಸುವುದರಿಂದಾಗಿದ್ದಿ ಗುಣಗೊಳಿಸಲಾಗಿದೆ. ಹಳೇ ರೀತಿಯ ಚರಕಗಳ ಬದಲು ಅಂಬರ ಚರಕಗಳನ್ನು ಬಳಕೆಗೆ ತರಲಾಗಿದೆ. ಇದೇ ರೀತಿ ಗ್ರಾಮದ ಕುಂಭಕಲೆ, ಗಾಣದಿಂದ ಎಣ್ಣೆಯನ್ನು ತೆಗೆಯುವುದು, ಚರ್ಮಾರ ಕೆಲಸ, ಆಟದ ಸಾಮಾನುಗಳ ತಯಾರಿಕೆ, ಕೆತ್ತನೆ ಕೆಲಸ ಇತ್ಯಾದಿ ಕಸಬುಗಳಲ್ಲಿಯೂ ದಕ್ಷತೆಯನ್ನು ಕುಶಲತೆಯನ್ನು ಹೆಚ್ಚಿಸಿ ಅದರ ಪರಿಣಾಮವಾಗಿ ಉತ್ಪಾದನೆಯ ಪ್ರಮಾಣವನ್ನೂ ವಸ್ತುಗಳ ಗುಣಾಂಶಗಳನ್ನೂ ಹೆಚ್ಚಿಸಲಾಗಿದೆ

ಸ್ವಾತಂತ್ರ್ಯದ ನಂತರ ನಿರೀಕ್ಷಿಸಿದಂತೆ ಸರ್ಕಾರವೂ ಕೈಗಾರಿಕಾಭಿವೃದ್ಧಿ ವಿಧಾನವನ್ನು ತ್ವರೆಗೊಳಿಸುವುದಕ್ಕಾಗಿ ತನ್ನಲ್ಲಿನ ಶಕ್ತಿಯನ್ನು ಸಂತತವಾಗಿ ನೀಡುತ್ತಿದೆ. ಕೈಗಾರಿಕಾ ಸಂಸ್ಥೆಗಳಿಗೆ ಹಣಕಾಸಿನ ಸಹಾಯವನ್ನು ಒದಗಿಸುವುದಕ್ಕಾಗಿ ಸಂಸ್ಥೆಗಳನ್ನು ರಚಿಸಲಾಗಿದೆ ಹಲವು ಪ್ರಮುಖ ಕೈಗಾರಿಕೆಗಳಿಗೆ ಆಧುನೀಕರಣಕ್ಕಾಗಿ ಹಾಗೂ ಪರ್ಸ್ ನ್ಯವಸ್ಥೆಗಾಗಿ ಸಾಲವನ್ನು ಕೊಡಲಾಗಿದೆ.

ಅನೇಕ ಕೈಗಾರಿಕೋದ್ಯಮಗಳಿಗೆ, ಔದ್ಯೋಗಿಕಾತ್ಮಕವಾಗಿ ಮುಂದುವರಿದ ರಾಷ್ಟ್ರಗಳಿಂದ ಆಗುವ ಆಮದುಗಳ ವಿರುದ್ಧ ರಕ್ಷಣೆಯನ್ನೀಯಲಾಗಿದೆ.

ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ಸಾಮಗ್ರಿಗಳು, ತಾಂತ್ರಿಕ ಮಾರ್ಗದರ್ಶನ ಇತ್ಯಾದಿಗಳನ್ನು ಒದಗಿಸುವುದರಲ್ಲಿಯೂ ಸಹಾಯವನ್ನು ನೀಡಲಾಗಿದೆ.

ಈ ಕೈಗಾರಿಕಾಭಿವೃದ್ಧಿಯಲ್ಲಿ ಅನುಸರಿಸಲಾಗುತ್ತಿರುವ ಕೈಗಾರಿಕಾ ಕಾರ್ಯನೀತಿಯ ಬಗ್ಗೆ ಒಂದೆರಡು ಮಾತು. ಈ ಕಾರ್ಯ ನೀತಿಯ ಮುಖ್ಯ ಉದ್ದೇಶವು, ದೊರೆಯಬಹುದುದಾದ-ಮಾನವ ಹಾಗೂ ಸಾಮಗ್ರಿಗಳ-ಸಾಧನ ಸಂಪತ್ತುಗಳನ್ನೆಲ್ಲಾ ಪೂರ್ಣವಾಗಿ ಉಪಯೋಗಿಸಿಕೊಳ್ಳುವುದರ ಮೂಲಕ ಹೆಚ್ಚಿನ ಉತ್ಪಾದನೆಯನ್ನು ಸಾಧಿಸುವುದು. ಭಾರತವು ಸಮಾಜವಾದಿ ಪದ್ಧತಿಯ ಸಮಾಜ ರಚನೆಯ ಧ್ಯೇಯವನ್ನು ಅಂಗೀಕರಿಸುವುದರಿಂದ ಈ ಕಾರ್ಯ ನೀತಿಯನ್ನು ಸಹ ಆ ಧ್ಯೇಯಕ್ಕೆ ಅನುಗುಣವಾಗಿ ರೂಪಿಸಲಾಗಿದೆ. ವಾಸ್ತವವಾಗಿ ಸರ್ಕಾರವು ಮೂಲ ಹಾಗೂ ಪ್ರಮುಖ ಕೈಗಾರಿಕೆಗಳ ನಿರ್ಮಾಣ ಕಾರ್ಯದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಲು ಮುಂದೆ ಬಂದಿದೆ. ಅದೇ ಸಮಯದಲ್ಲಿ ಖಾಸಗಿ ಕಾರ್ಯಕ್ಷೇತ್ರಕ್ಕೂ ಸಹ. ವಿಶಾಲವಾದ ಕ್ಷೇತ್ರವನ್ನು ಅನಿರ್ಬಂಧವಾಗಿ, ಬಿಟ್ಟು ಕೊಡಲಾಗಿದೆ ವ್ಯವಸ್ಥಿತ ಸಂಸ್ಥೆಗಳನ್ನು ವಶಕ್ಕೆ ತೆಗೆದುಕೊಂಡು ಸರ್ಕಾರವು ತನ್ನ ಸಾಧನ ಸಂಪತ್ತುಗಳನ್ನೇನೂ ವ್ಯಯಗೊಳಿಸಿಲ್ಲ

ಮಂಗಳೂರು

ಶ್ರೀಮತಿ ರಾಧಾ ಎಲ್. ರಾಯರ ಅಮೇರಿಕಾ ಪ್ರವಾಸ–ಮಂಗಳೂರಿನ ಜೆಸೆಂಟ್ ಬಾಲಿಕಾ ಪಾಠಶಾಲೆಯ ಮುಖ್ಯಾಧ್ಯಾಪಿಕೆ ಶ್ರೀಮತಿ ಕೆ. ರಾಧಾ ಎಲ್. ರಾಯರು ಶೈಕ್ಷಣಿಕ ಕ್ಷೇತ್ರ ಪರಿಶೀಲನೆ, ಅನುಭವ ಸಂಪಾದನೆಗಳಿಗಾಗಿ ಅಮೇರಿಕ ಪ್ರವಾಸವನ್ನು ಕೈಕೊಳ್ಳುವ ಸಲುವಾಗಿ ತಾ. 14 ರಂದು ಬೊಂಬಾಯಿಗೆ ಪ್ರಯಾಣ ಬೆಳೆಸಿದರು. ಭಾರತದಿಂದ ಅಮೇರಿಕಕ್ಕೆ ಹೋಗಲಿರುವ ೫15ಶಿಲಾಧ್ಯಾಪಕಿಯರಲ್ಲಿ ಶ್ರೀಮತಿಯವರು ಒಬ್ಬರಾಗಿದ್ದಾರೆ. ಈ ಸಂಗಡದವರು ಅಮೇರಿಕಾದಲ್ಲಿ ಶಾಲೆಗಳ ವೀಕ್ಷಣೆ, ವಿದ್ಯಾಭ್ಯಾಸ, ವಿಚಾರ ಗೋಷ್ಠಿಗಳಲ್ಲಿ ಭಾಗವಹಿಸಿ ಶಿಕ್ಷಣ ಕ್ಷೇತ್ರದಲ್ಲಿ ಅಲ್ಲಿನ ರೀತಿ ನೀತಿಗಳನ್ನು ಅರಿತಂಗಳು ಕಾಲ ಅಭ್ಯಾಸ ಮಾಡಲಿರುವರು.

ಸರಕಾರಿ ಕಾಲೇಜ್ ಯೂನಿಯನ್ ಉದ್ಘಾಟನೆ–ಸ್ಥಳೀಯ ಸರ್ಕಾರಿ ಕಾಲೇಜ್ ಯೂನಿಯನ್ ಉದ್ಘಾಟನೆಯನ್ನು ತಾ 18ರಂದು ಪ ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ನೆರವೇರಿಸಿದರು ಕುಮಾರಿ ನಾರಾಯಣಿ ಕಾಮತರಿಂದ ಪ್ರಾರ್ಥನೆಯಾದ ಬಳಿಕ ಯೂನಿಯನ್ ಕಾರ್ಯದರ್ಶಿ ಶ್ರೀ ಎಮ್. ಚಂದ್ರಕಾಂತರಾಯರು ವರದಿಯನ್ನೋದಿದರು ಕಾಲೇಜ್‌ಪ್ರಿನ್ಸಿಪಾಲ್ ಹಾಗೂ ಯೂನಿಯನ್ ಗವರ್ನರ್ ಶ್ರೀ ಸಿ. ಪಿ. ಲೋಬೋರವರು ಸ್ವಾಗತಭಾಷಣಮಾಡಿದರು ಯೂನಿಯನ್ ಅಧ್ಯಕ್ಷ ಶ್ರೀ ಈಶ್ವರ ಭಟ್ಟರು ಧನ್ಯವಾದಗಳನ್ನಿತ್ತರು

ಹೊಸ ಸಂಘ ಸ್ಥಾಪನೆ ಬಣಿಮಿನು ವ್ಯಾಪಾರಿಕ್ಷೇತ್ರ ಸಭೆಯು ತಾ. 11 ರಂದು ಶ್ರೀ ಬಿ ಮೋಹನಪ್ಪ ಶಿಂಗಳಾಂಗರ ಅಧ್ಯಕ್ಷತೆಯಲ್ಲಿ ಜರಗಿ ಎಂ ಕೆನರಾ ಡ್ರಾಫಿಕ್ ಮರ್ಚಂಟ್ಸ್ ಎಸೋಸಿಯೇಶನ್ ಎಂಬ ಹೆಸರಿನಲ್ಲಿ ಹೊಸ ಸಂಘವೊಂದು ಸ್ಥಾಪಿಲ್ಪಟ್ಟಿತು. ಕಾರ್ಯಕಾರಿ ಸಮಿತಿ ರಚಿಸಲಾಯಿತು. ಸಂಘವನ್ನು ರಿಜಿಸ್ಟ್ರಿ ಮಾಡಿ ಬಣಿ ಮಿನನ್ನು ಮಾರಾಟಕಡಿಯಿಂದ ವಿಮುಕ್ತಪಡಿಸಬೇಕೆಂದು ಸರಕಾರಕ್ಕೆ ಮನವಿ ಕಳುಹಿಸಬೇಕೆಂದು ನಿರ್ಣಯವಾಯಿತು

ಉದ್ಯಾನ ಸಂಘದ ಉದ್ಘಾಟನೆ ಸ್ಥಳೀಯ ಗಣಪತಿ ಹೈಸ್ಕೂಲಿನ ಉದ್ಯಾನ ಸಂಘವನ್ನು ಸರಕಾರೀ ಕಲಾ ಶಾಲೆಯ ಶ್ರೀ ಕೆ ಶಾಂತಾರಾಮರಾಯರು ಈಚೆಗೆ ಉದ್ಘಾಟಿಸಿದರು ಶಾಲಾ ಹೆಡ್ಮಾಸ್ಟರ್ ಶ್ರೀ ಎಚ್. ಪಾಂಡುರಂಗ ರಾಯರು ಸಭಾಧ್ಯಕ್ಷತೆ ವಹಿಸಿದ್ದರು.

ಸ್ವಾತಂತ್ರ್ಯೋತ್ಸವ ಹಾಗೂ ಸ್ವಾತಂತ್ರ್ಯ ಸಂಗ್ರಾಮ ಶತಾಬ್ದಿಯುತ್ಸವವು ಮಂಗಳೂರಲ್ಲಿ ವೈಭವದಿಂದ ಜರಗಿತು. ಕೇಂದ್ರ ಮೈದಾನದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಶಿಂಹನವರು ಧ್ವಜಾರೋಹಣ ಮಾಡಿದ ಬಳಿಕ ಪೋಲೀಸ್, ಎನ್. ಸಿ. ಸಿ. ಸ್ಕೌಟ್ಸ್, ಅವರಿಂದ ಪಥಚಲನವಾಯಿತು. ಜಿಲ್ಲಾ ಕಲೆಕ್ಟರರು ಧ್ವಜ ವಂದನೆ ಸ್ವೀಕರಿಸಿದರು ತಾಲೂಕು ಕಚೇರಿಯಲ್ಲಿ ಬಡವರಿಗೆ ಅನ್ನದಾನವಾಯಿತು.

ಸರಕಾರೀ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಶ್ರೀ ವಿ ಲೋಬೊ, ಸರಕಾರಿ ತರಬೇತಿ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಶ್ರೀ ಬಿ. ಎಸ್ ಅಂಚನ್, ಪೋಲೀಸು ಮಹಿಳೆಯರ ಶ್ರೀಯೋಭಿವೃದ್ಧಿ ಕೇಂದ್ರದಲ್ಲಿ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಶ್ರೀ ಇ. ಜೆ ಎಲಿನ್ಯಾ ಸ್ವಾಮಿ ಶ್ರದ್ಧಾನಂದ ಸೇವಾಶ್ರಮದಲ್ಲಿ ಶ್ರೀ ಬಿ ಎಸ್. ಕುಡ್ವಾರವರು ಧ್ವಜಾರೋಹಣ ಮಾಡಿದರು. ಹಲವಾರು ಭಾಷಣಗಳಾದುವು ಸಂಜೆ ಕೇಂದ್ರ ಮೈದಾನದಲ್ಲಿ ಹಲವಾರು ಮನರಂಜನಾ ಕಾರ್ಯಕ್ರಮಗಳಾದುವು. ಕಸ್ತೂರ್ಬಾ ಮೆಡಿಕಲ್ ಕಾಲೇಜ್, ರೋಟರಿ ಕ್ಲಬ್ ಮೊದಲಾದ ಸಂಸ್ಥೆ ಸಂಘಗಳಲ್ಲಿ ಸಭೆ, ಭಾಷಣಗಳಾದುವು.

ಝಾನ್ಸಿ ಲಕ್ಷ್ಮೀ ಬಾಯಿಯ ಚಿತ್ರ ಅನಾವರಣ–ಸ್ಥಳೀಯ ಸೈಂಟ್ ಎಲೋಸಿಯಸ್ ಮತ್ತು ಸರಕಾರಿ ಕಾಲೇಜುಗಳ ವಿದ್ಯಾರ್ಥಿಗಳ ಜಂಟಿ ಸಭೆಯಲ್ಲಿ, ಸರಕಾರಿ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಸಿ. ಪಿ. ಲೋಬೋರವರು ಝಾನ್ಸಿ ಲಕ್ಷ್ಮಿ ಬಾಯಿಯವರ ಚಿತ್ರವನ್ನು ಅನಾವರಣಮಾಡಿದರು. ಶ್ರೀಗಳಾದ ಎಮ್. ಡಿ ಜೋಸೆಫ್, ಶ್ರೀನಿವಾಸರಾವ್ ಮತ್ತು ಸತೀಶರಾಯರು ಸಂದರ್ಭೋಚಿತ ಮಾತುಗಳನ್ನಾಡಿದರು. ಶ್ರೀ ವಿಜಯ ಕೇಶವನ್‌ರವರು ಧನ್ಯವಾದವಿತ್ತರು.

ಅಂಬೆಡ್ಕರ್ ನಗರದ ಉದ್ಘಾಟನೆ–ಶ್ರೀ ನಾರಾಯಣ ಸೇವಾ ಸಂದಳೆಯ ಆಶ್ರಯದಲ್ಲಿ ಸೂಟರ್ ಪೇಟೆಯಲ್ಲಿ ಅಂಬೆಡ್ಕರ್ ನಗರದ ಉದ್ಘಾಟನೆಯು ತಾ. 15ರಂದು ಶ್ರೀ ಎನ್ ಎಂ. ಸುವರ್ಣರು ನೆರವೇರಿಸಿದರು ಶ್ರೀ ಬಿ ಬಿ ಶೆಟ್ಟಿಗಾರ ಸಭಾಧ್ಯಕ್ಷತೆ ವಹಿಸಿದ್ದರು ಮಂದಳೆಯ ಅಧ್ಯಕ್ಷ ಶ್ರೀ ಬಾಬು ಮಾಬೆಗರು ಸ್ವಾಗತಮಾತುಗಳನ್ನಾಡಿದರು ಡಾ ಎಲ್. ಸಿ ಶಾಸ್ತ್ರಿ, ಎಸ್. ಗೋಪಾಲ ಸಾರೆಸ್ಸ ಮೊದಲಾದವರು ಕಾರ್ಯೋಚಿತ ಮಾತುಗಳನ್ನಾಡಿದರು ಕಾರ್ಯದರ್ಶಿ ಶ್ರೀ ಶಿವಂಕರರು ಧನ್ಯವಾದಗಳನ್ನಿತ್ತರು

ಭಾರತೀಯ ಜನಸಂಘ–ಆಶ್ರಯದಲ್ಲಿ ಶ್ರೀ ಪಿ ನಾರಾಯಣ ಕಾಮತರ ಅಧ್ಯಕ್ಷತೆಯಲ್ಲಿ ತಾ. 15ರಂದು ಆಚರಿಸಿ ಭಾರತ ದಿನಾಚರಣೆ ನಡೆಯಿತು

ಕುಂದಾಪುರ ಡಿ ಮುನ್ಸೇಫ್ ಕೋರ್ಟಿನಲ್ಲಿ

O S 172/1957

ಪಾವುಲು ಸೊರೊಂಜಾ —ವಾದಿ
ಜೋಸೆಫ್ ಫರ್ನಾಂಡಿಸ್ —ಪ್ರತಿವಾದಿ

ಲೋರೇಸ್ ಫರ್ನಾಂಡಿಸರ ಮಗ ಕುಂದಾಪುರ ತಾಲ್ಲೂಕ್ ಕೋಟೇಶ್ವರ ಗ್ರಾಮದ ಹಳೆ ಆಳಿವೆ.

ಸದ್ರಿ ಪ್ರತಿವಾದಿಗೆ ಈ ಮೂಲ್ಯ ತಿಳಿಯಪಡಿಸುವುದೇನೆಂದ್ರೆ

ಪ್ರತಿವಾದಿಯು ವಾದಿಯಿಂದ ಸಾಲವಾಗಿ ಪಡೆದ ರುಪ್ಯಾ 1500-0-0 ಕ್ಕೆ ತಾರೀಕು 16-5-1954 ರಲ್ಲು ಬರೆಕೊಟ್ಟ ಡಿಮಾಂಡ್ ನೋಟಿನ ಬಾಬ್ತು ಮಿಕ್ಕ ಬರತಕ್ಕ ಬಾಕಿ ಹಣ, ಬಡ್ಡಿ ರುಪ್ಯಾ 689 12 5 ರ ವಸೂಲು ಬಗ್ಗೆ ದಾಕ್ಲು ಮಾಡಿದ ಮೇಲಿನ ದಾವೆಯು ತಾರೀಕು 26-8-57ಕ್ಕೆ ತನ್ನಿಗೆ ಇಟ್ಟಿದೆ. ಆ ಕುರಿತು ಸದ್ರಿ ಪ್ರತಿವಾದಿಯದೇನಾದ್ರು ಆಕ್ಷೇಪಯಿದ್ರೆ ಆ ತಾರೀಕಿನ ಹಗಲು 11 ಗಂಟೆಗೆ ಮೇಲಿನ ಕೋರ್ಟ್‌ಮುಂದೆ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಯಕ್ಷಪಾರ್ಟಿಯಿಂದ ದಾವೆಯನ್ನು ತೀರ್ಮಾನಿಸಲಾಗುತ್ತದೆಯೆಂಬ ಸಂಗತಿ ಕೋರ್ಟ್ ಹುಕುಂಪ್ರಕಾರ ತಿಳಿಸಲಾಗುತ್ತದೆ.

S S. Kolkebail,
Advocate for Plff

Coondapoor 13-8-1957.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ಡಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ನಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦ (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಪೋರ್ಟ್ ಬೊಂಬಾಯಿ.

ಇದೀಗ ಪ್ರಕಟವಾಗಿದೆ—

ಪ್ರಖ್ಯಾತ ಕಾದಂಬರಿಕಾರರಾದ ಶ್ರೀ| ವ್ಯಾಸರಾಯ ಬಲ್ಲಾಳರ ಉತ್ಕೃಷ್ಟ ಕಥಾಸಂಕಲನ

ಕಾಡು ಮಲ್ಲಿಗೆ

ಬಿಳಿ ಕಾಗದ
ಸುಮಾರು 160 ಪುಟಗಳು. ಬೆಲೆ 1-25

ಪ್ರಕಾಶಕರು
ಸ್ಟೂಡೆಂಟ್ಸ್ ಬುಕ್ ಡಿಪೋ
6-E, ಸೀತಾ ಸ್ಟ್ರೀಟ್, ಕೋಟೆ
ಮುಂಬಯಿ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು

ಅಭಿವೃದ್ಧಿ ಯೋಜನೆ

ಸಾಮುದಾಯಿಕ ಅಭಿವೃದ್ಧಿ ಯೋಜನಾ ಚಟುವಟಿಕೆಯು ಗಮನಾರ್ಹ ಮುನ್ನಡೆ

ಸಾಮುದಾಯಿಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ಸೇವಾಕ್ಷೇತ್ರಗಳು, ಕಳೆದ ನಾಲ್ಕೂವರೆ ವರ್ಷಗಳಂದ, ಬೇಸಾಯ ಉತ್ಪಾದನೆ, ಪಶುಪಾಲನೆ, ಶಿಕ್ಷಣ, ಆರೋಗ್ಯ, ನೈರ್ಮಲ್ಯ ಮತ್ತು ಸಂಪರ್ಕ– ಇವುಗಳಲ್ಲಿ ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿವೆ. ಗ್ರಾಮ ಜೀವನದಲ್ಲಿ ಆದ ಪರಿವರ್ತನೆಯಲ್ಲಿ ಅತ್ಯಂತ ಮುಖ್ಯವಾದ ಅಂಶವೆಂದರೆ, ಗ್ರಾಮವಾಸಿಗಳು, ಅಭಿವೃದ್ಧಿ ಕಾರ್ಯಗಳ ನಿಯೋಜನೆ ಹಾಗೂ ಅನುಷ್ಠಾನದಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಿರುವುದು

ದೇಶವು ಸ್ವಾತಂತ್ರ್ಯವನ್ನು ಪಡೆಯುವ ಮುನ್ನ, ಇಂತಹ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು– ಅವುಗಳನ್ನು ಆರಂಭಿಸಿದ್ದ ಪಕ್ಷದಲ್ಲಿ– ಮೇಲ್ಮಟ್ಟದಿಂದ ಹೇರಲಾಗುತ್ತಿತ್ತು. ಆ ಅಭಿವೃದ್ಧಿ ಕಾರ್ಯಗಳು, ನಿರೀಕ್ಷಿಸಿದ ಕಡೆ ರೂಢಮೂಲವಾಗದೆ, ವಿಫಲಗೊಂಡವು. ೧೯೫೨ರ ಅಕ್ಟೋಬರ್ ೨ರಂದು ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆರಂಭಿಸಿದ ನಂತರ ಅದರ ರೀತಿಯೇ ಬೇರೆಯಾಗಿದೆ. ಈ ಅಭಿವೃದ್ಧಿ ಕಾರ್ಯಕ್ರಮದಲ್ಲಿ ನಿರ್ಬಲರೂ ಸೇರಿಕೊಂಡಿರುವ ಇಡೀ ಜನಸಮುದಾಯದ ಏಳಿಗೆಯನ್ನೇ ಗುರಿಯಾಗಿಟ್ಟುಕೊಳ್ಳಲಾಗಿದೆ. ನಿರ್ಬಲರ ಕಡೆಗೆವಿಶೇಷ ಗಮನವನ್ನೀಯಲಾಗದೆಗ್ರಾಮಾಂತರ ಪ್ರದೇಶದಲ್ಲಿನ ಹೆಚ್ಚುನ್ಯಾಯಕಮ್ಮತವಾದ ಹಾಗೂ ಸಮಗ್ರವಾದಸಮಾಜರಚನೆಯನ್ನು ರೂಪಿಸುವುದೇ ಈ ಅಭಿವೃದ್ಧಿ ಕಾರ್ಯಕ್ರಮದ ಗುರಿಯಾಗಿರುವುದು. ಗ್ರಾಮಾಂತರ ಪ್ರದೇಶದಲ್ಲಿ ಶಾಸನಾತ್ಮಕವಾಗಿ ಹಾಗೂ ಶಾಶ್ವತಿಕ ಶಕ್ತಿದಿಗಳೆರಡರ ಮೇಲೂ ಜನತಾ ಸಂಸ್ಥೆಗಳನ್ನು ರಚಿಸಿ ತಮ್ಮೊಳಕ, ಗ್ರಾಮದ ನಾಯಕತ್ವವನ್ನು, ನವವಿಧಾನದಲ್ಲಿ ವೃದ್ಧಿಗೊಳಿಸುವ ಧ್ಯೇಯವೂ ಈ ಕಾರ್ಯಕ್ರಮಗಳಲ್ಲಿ ಅಡಕವಾಗಿದೆ.

ಈ ಎರಡು ವಿಧವಾದ ಜನತಾ ಸಂಸ್ಥೆಗಳ ಮೂಲಕ ಜನತೆಯು ನಿರ್ವಹಿಸಿದ ಪ್ರಮುಖ ಪಾತ್ರದ ಪರಿಣಾಮವಾಗಿ, ಜನತೆಯು ಪಾಲುಗೊಳ್ಳುವ ಸರಕಾರದ ಕಾರ್ಯಕ್ರಮವಾಗಿ ಆರಂಭವಾದ ಈ ಕಾರ್ಯಕ್ರಮವು ಈಗ ಸರಕಾರದವರು ಪಾಲುಗೊಳ್ಳುವ ಜನತಾ ಕಾರ್ಯಕ್ರಮವಾಗಿ ಬಾರ್ಪಟ್ಟಿದೆ.

ವಾಸ್ತವವಾಗಿ, ಜನತೆಯು ಪಾತ್ರವಹಿಸುವುದನ್ನೇ ಈ ಕಾರ್ಯಕ್ರಮದ ಯಶಸ್ಸಿನ ಅಳತೆಗೋಲನ್ನಾಗಿರಿಸಿಕೊಂಡಿದೆ. ಈ ಜನತೆಯು ಪಾಲಿನಲ್ಲಿ ಕೇವಲ ಭೌತಿಕ ಸಾಧನಗಳಂದ ಮಾತ್ರವಲ್ಲದೆ, ಜನತೆಯು ನೀಡಿದ ಹಣ, ಶ್ರಮ ಹಾಗೂ ಸಾಮಗ್ರಿಗಳನ್ನೂ ಗಣನೆಗೆ ತೆಗೆಂಕೊಳ್ಳಲಾಗುವುದು.

ಈ ಕಾರ್ಯಕ್ರಮವನ್ನು ಆರಂಭಿಸಿದಂದೀಚೆಗೆ, ಸಾಮುದಾಯಿಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ಕ್ಷೇತ್ರಗಳಲ್ಲಿರುವ ಜನರು ನೀಡಿರುವ ಹಣ, ಶ್ರಮ ಮತ್ತು ಸಾಮಗ್ರಿಗಳ ಮೌಲ್ಯ ೩೬.೩೧ ಕೋಟಿ ರೂಗಳ; ಸರಕಾರದವರ ವೆಚ್ಚ ೬೦.೦೪ ಕೋಟಿ ರೂಗಳು. ಆದುದರಿಂದ ಜನತೆಯ ಭಾಗವು, ಸರಕಾರದ ವೆಚ್ಚದಲ್ಲಿ ಸುಮಾರು ನೂರಕ್ಕೆ ೬೦ ರಷ್ಟಾಗುವುದು. ಈ ಕಾರ್ಯಕ್ರಮವು ಭಾರತದಲ್ಲಿರುವ ಒಟ್ಟು ೫,೫೮,೦೬೭ ಗ್ರಾಮಗಳಲ್ಲಿ ಸುಮಾರು ೩,೩೪,೯೧೦ ಗ್ರಾಮಗಳಿಗೆ ವ್ಯಾಪಕವಾಗಿದೆ. ಈಗ ಸುಮಾರು ೧,೩೦೦ ಲಕ್ಷ ಜನರು ಈ ಕಾರ್ಯಕ್ರಮದ ವ್ಯಾಪ್ತಿಗೆ ಒಳಗಾಗುತ್ತಾರೆ.

ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನತೆಯ ಪರವಾಗಿ ಪಂಚಾಯತಿಗಳು ಪ್ರಾಮುಖ್ಯ ಪಾತ್ರವನ್ನು ನಿರ್ವಹಿಸಿವೆ. ಭಾರತದ ಎಲ್ಲಾ ಕಡೆಗಳಲ್ಲಿಯೂ ಹೆಚ್ಚು ಪಂಚಾಯತಿ ಸಂಸ್ಥೆಗಳನ್ನು ರಚಿಸಿ, ಅವುಗಳಿಗೆ ಹೊಸ ಹಣ ಕಾಸಿನ ಸಾಧನ ಸಂಪತ್ತುಗಳನ್ನು ದೊರಕಿಸಿಕೊಟ್ಟು ಬೀ ಪಡಿಸುವ ಕಾರ್ಯಕ್ರಮಗಳನ್ನು ಕೈಗೆ ಳ್ಳುತ್ತಿರುವ ಈ ಸಮಯದಲ್ಲಿಯೇ, ಸಾಮುದಾಯಿಕ ಮತ್ತು ರಾಷ್ಟ್ರೀಯ ವಿಸ್ತರಣ ಸೇವಾ ಕ್ಷೇತ್ರಗಳಲ್ಲಿ ಪಂಚಾಯತಿಗಳ ಸ್ಥಾಪನೆಯ ಕಡೆಗೆ ವಿಶೇಷ ಗಮನವಿತ್ತು, ಅವುಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ, ಸಾಧನ ಸಂಪತ್ತುಗಳನ್ನು ಹೆಚ್ಚಿಸಿಕೊಡಲಾಗುತ್ತಿದೆ.

೧೯೫೭ರ ಅಕ್ಟೋಬರ ತಿಂಗಳಲ್ಲಿ ಈ ಕಾರ್ಯಕ್ರಮವಾರಂಭವಾದಂದಿನಿಂದ, ಕಳೆದ ವರ್ಷದ ಕೊನೆಯ ವರೆಗೆ, ಸಾಮುದಾಯಿಕ ಹಾಗೂ ರಾಷ್ಟ್ರೀಯ ವಿಸ್ತರಣ ಸೇವಾ ಕ್ಷೇತ್ರಗಳಲ್ಲಿ ಹೊಸದಾಗಿ ೩೪,೦೦೦ ಪಂಚಾಯತಿ ಸಂಸ್ಥೆಗಳು ಹಾಗೂ ಇತರ ಶಾಸನಾತ್ಮಕ ಸಂಸ್ಥೆಗಳನ್ನು ರಚಿಸಲಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಪಂಚಾಯತಿಗಳು ೮೩,೦೦೮ ರಿಂದ ೧,೧೧೭ ಕ್ಕೇರಿತ್ತು.

ಅನೇಕ ಪಂಚಾಯತಿಗಳುಶಾಲಾ ಕಟ್ಟಡಗಳರಚನೆಹಾಗೂ ಪಾಲು ನೈರಸ್ತೆಗಳ ಪಕ್ಕದಲ್ಲಿ ನೆಲಗಟ್ಟಿನ ಕಾಲುಹಾದಿಗಳು, ಕೂಡು ರಸ್ತೆಗಳು, ಸಾಮುದಾಯಿಕ ಕೇಂದ್ರಗಳು, ಪಂಚಾಯತಿ ಗೃಹಗಳು ಮತ್ತು ಕುಡಿಯುವ ನೀರಿನ ಬಾವಿ– ಇವುಗಳ ನಿರ್ಮಾಣಕ್ಕೆ ನೇರವಾಗಿ ಕಾರಣೀಭೂತವಾದುವು. ಬೀದಿಯ ದೀಪ, ಗ್ರಾಮದ ನೈರ್ಮಲ್ಯ, ಬಂಜರು ಭೂಮಿಯ ಸಾಗುವಳಿ, ಕೆರೆಗಳು ಮತ್ತು ಮತ್ಸ್ಯ ಪಾಲನಾ ಕೇಂದ್ರಗಳ ನಿರ್ಮಾಣ, ಅರಣ್ಯ ಮತ್ತು ಸಾಮುದಾಯಿಕ ತೋಟ-ಇತ್ಯಾದಿಗಳ ನಿರ್ಮಾಣಕ್ಕೂ ಅವು ಗಮನವಿತ್ತಿವೆ.

ಕಳೆದ ನಾಲ್ಕೂವರೆ ವರ್ಷಗಳಲ್ಲಿ, ಸಾಮುದಾಯಿಕ ಅಭಿವೃದ್ಧಿ ಕ್ಷೇತ್ರಗಳಲ್ಲಿ ೨೨,೦೦೦ ಹೊಸ ಶಾಲೆಗಳನ್ನು ಆರಂಭಿಸಲಾಯಿತು. ಸುಮಾರು ೮,೪-೮ ಸಾಧಾರಣ ಶಾಲೆಗಳನ್ನು ಮೂಲ ಶಿಕ್ಷಣ ಶಾಲೆಗಳಾಗಿ ಪರಿವರ್ತಿಸಲಾಯಿತು. ಅದೇ ಅವಧಿಯಲ್ಲಿ ವಯಸ್ಕ ಶಿಕ್ಷಣ ಕೇಂದ್ರಗಳ ಸಂಖ್ಯೆ ೩೦,೦೦೦ ದಿಂದ ೫೮,೦೦೦ಕ್ಕೆ ಏರಿತು. ಸಾಮುದಾಯಿಕ ಕೇಂದ್ರಗಳ ಸಂಖ್ಯೆ ೬೫,೦೦೦ ದಿಂದ ೧,೩೧೦೦೦ಕ್ಕೆ ಏರಿತು. ಸುಮಾರು ೧,೮೧೯,೦೦೦ ಎಕರೆಗಳಷ್ಟು ಬಂಜರು ಭೂಮಿಯನ್ನು ಸಾಗುವಳಿಗೆ ತರಲಾಯಿತು. ೧,೬೬ ೦೦೦ ಗ್ರಾಮಾಂತರ ಗೃಹಗಳನ್ನೂ, ೯೫,೦೦೦ ಗಜಗಳಷ್ಟು ಒಳ ಚರಂಡಿ ವ್ಯವಸ್ಥೆಯನ್ನೂ ನಿರ್ಮಿಸಲಾಯಿತು. ೬೩,೦೦೦ ಕುಡಿಯುವ ನೀರಿನ ಬಾವಿಗಳನ್ನು ತೋಡಲಾಯಿತು. ೮,೦೧೨ ಮೈಲಿಗಳಷ್ಟು ಪಕ್ಕಾರಸ್ತೆಗಳನ್ನೂ, ೪೬,೦೦೦ ಮೈಲಿಗಳಷ್ಟು ಕಚ್ಚಾ ರಸ್ತೆಗಳನ್ನೂ ನಿರ್ಮಿಸಲಾತು. ಈ ಎಲ್ಲಾ ಕೆಲಸಗಳಲ್ಲಿಯೂ, ಪಂಚಾಯತಿಗಳು ಹಾಗೂ ಇತರ ಸಂಸ್ಥೆಗಳು ಪ್ರಮುಖ ಪಾತ್ರವನ್ನು ನಿರ್ವಹಿಸಿವೆ.

ಶಾಸನಾತ್ಮಕ ಸಂಸ್ಥೆಗಳಲ್ಲಿ, ಪಂಚಾಯತಿಗಳನ್ನು ಬಿಟ್ಟರೆ, ಪ್ರಮುಖ ಸಂಸ್ಥೆಗಳೆಂದರೆ, ಸಹಕಾರ ಸಂಸ್ಥೆಗಳು ಈ ಸಹಕಾರ ಸಂಸ್ಥೆಗಳ ಮೂಲಕ ಅಭಿವೃದ್ಧಿ ಕಾರ್ಯಗಳಲ್ಲಿ ಸಹಕಾರಿ ಪ್ರಯತ್ನವನ್ನು ನಡೆಸುವುದು ಒಂದು ಮುಖ್ಯವಾದ ಅಂಶವೆನಿಸಿದೆ. ಸಹಕಾರಿ ಪ್ರಯತ್ನದಿಂದ ಅನುಕೂಲಪ್ರದವಾದ ಮನೋ ವೈಜ್ಞಾನಿಕ ಪ್ರತಿಕ್ರಿಯೆ ಮೂಡುವುದು. ಆಹಾರ ಉತ್ಪಾದನೆಯಲ್ಲಿ ಹೆಚ್ಚಳ ಹಾಗೂ ಉಪಯುಕ್ತ ಉದ್ಯೋಗಗಳ ಅವಕಾಶವೂ ಸಹ ಇದರಿಂದ ಸಾಧ್ಯವಾಗಿದೆ.

ರಾಷ್ಟ್ರೀಯ ಮಾದರಿ ಸಮೀಕ್ಷೆಯ ಪ್ರಕಾರ, ಸಾಮುದಾಯಿಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ಸೇವಾ ಕ್ಷೇತ್ರಗಳಲ್ಲಿ ಆಹಾರ ಉತ್ಪಾದನೆಯು ನೂರಕ್ಕೆ ೩೦ ರಿಂದ ೨೫ರಷ್ಟು ಹೆಚ್ಚಾಗಿದೆ.

ಸಹಕಾರಿ ನಿಧಾನದಲ್ಲಿ, ಜನತೆಯು ಅನೇಕ ಚಟುವಟಿಕೆಗಳನ್ನು ಕೈಗೊಳ್ಳಲು, (ಸಹಕಾರ ವಿಭಾಗದ) ವಿಸ್ತರಣಾಧಿಕಾರಿಗಳನ್ನು, ಬ್ಲಾಕ್ ಮಟ್ಟದಲ್ಲಿ ನೇಮಿಸಲಾಗಿದೆ. ಇಂತಹ ಅಧಿಕಾರಿಗಳು ತರಬೇತಿಮಾಡಲು ೮ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

೧೯೫೭ರ ಡಿಸೆಂಬರ್ ೩೧ರ ವೇಳೆಗೆ, ಸಾಮುದಾಯಿಕ ಅಭಿವೃದ್ಧಿ ಹಾಗೂ ರಾಷ್ಟ್ರೀಯ ವಿಸ್ತರಣ ಕ್ಷೇತ್ರಗಳಲ್ಲಿ ಹೊಸದಾಗಿ ೪೯,೦೦೦ ಸಹಕಾರ ಸಂಸ್ಥೆಗಳನ್ನುರಚಿಸಲಾಗಿದೆ.ಒಟ್ಟು ೨೫,೭೮,೦೦೦ ಮಂದಿ ಈ ಸಹಕಾರ ಸಂಸ್ಥೆಗಳ ಸದಸ್ಯತ್ವವನ್ನು ಪಡೆದಿರುವರು.

ಗ್ರಾಮಾಂತರ ಕುಶಲಕಲೆ ಮತ್ತು ಕಸಬುಗಳ ಕ್ಷೇತ್ರಗಳಲ್ಲಿಯೂ ಸಹ ೫,೬೪೮ ಪ್ರದರ್ಶನ ಹಾಗೂ ತರಬೇತಿ ಕೇಂದ್ರಗಳನ್ನು ಆರಂಭಿಸಲಾಗಿದೆ. ಸುಮಾರು ೯೨,೦೦೦ ಜನರಿಗೆ ತರಬೇತಿಯನ್ನು ನೀಡಲಾಗಿದೆ. ಸುಮಾರು ೫,೬೮,೦೦೦ ಜನರಿಗೆ ಹೊಸದಾಗಿ, ಪೂರ್ಣ ಶಾಲಾವಧಿಯುಳ್ಳದ ಉದ್ಯೋಗವನ್ನೂ, ೧,೬೨,೦೦೦ ಜನರಿಗೆ ಪೂರ್ಣ ಶಾಲಾವಧಿ ಉದ್ಯೋಗವನ್ನೂ ಒದಗಿಸಲಾಯಿತು. ೧೯೫೭ರ ಕೊನೆಯ ವರೆಗೆ, ಸುಮಾರು ೧೧,೩೭೦,೦೦೦ ಸಂಸಾರಗಳಿಗೆ ಈ ಕಾರ್ಯಕ್ರಮದಿಂದ ಪ್ರಯೋಜನ ದೊರೆಯಿತು.

ಶಾಸನಾತ್ಮಕವಲ್ಲದ ಇತರ ಸಂಸ್ಥೆಗಳೆನಿಸಿದ ವಿಕಾಸ ಮಂಡಲಿಗಳು, ಗ್ರಾಮ ಪಂಚಾಯತ್ತು, ಗ್ರಾಮ ಸಭೆ ಅಥವಾ ಗ್ರಾಮ ಸಂಘ ಮುಂತಾದ ಸಂಸ್ಥೆಗಳು ನಡೆಸಿರುವ ಕಾರ್ಯವೇನು ಸಾಮಾನ್ಯವಲ್ಲ. ಸಾಮುದಾಯಿಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ಕ್ಷೇತ್ರಗಳಲ್ಲಿ ೧೯೫೭ರ ಕೊನೆಯ ವರೆಗೆ, ಈ ರೀತಿಯ ಸುಮಾರು ೪೪,೦೦೦ ಸಂಸ್ಥೆಗಳು ಸ್ಥಾಪನೆಯಾದವು ಈ ಅವಧಿಯಲ್ಲಿಯೇ ಸ್ಥಾಪನೆಯಾದ ಯುವಕ ಸಂಘ, ರೈತರ ಸಂಘ ಹಾಗೂ ಮಹಿಳಾ ಸಮಿತಿಗಳಂತ ಜನತಾಸಂಸ್ಥೆಗಳ ಸಂಖ್ಯೆಯು೧,೩೮,೦೦೦ ಕ್ಕೆ ಮುಟ್ಟಿತ್ತು.

ಕಾರ್ಕಳ ಡಿ. ಮು. ಕೋರ್ಟನಲ್ಲಿ

O. S. 186/1957

ಹಕ್ಕುಹೆಳ್ಳದ್ದು– ವಾದಿಳು.

1. ಚೀಂಕ್ರ ಪೂಜಾರಿ 2. ಮೆಡ್ಡ ಪೂಜಾರಿ – ಪ್ರತಿವಾದಿದು.

1. ಚೀಂಕ್ರ ಪೂಜಾರಿ ಬೆರ್ಮಪೂಜಾರಿ ಅಳಿಯ ಉತ್ತಿ ತಾಲ್ಲು ಶಿರೂರು ಗ್ರಾಮದ ಮೆಟಿಕಲ್ಲು ಎಂಬಲ್ಲಿರುವವ–

1ನೇ ಪ್ರತಿವಾದಿ ಅದ ನಿಮಗೆ ಈ ಮೂಲ್ಕ ತಿಳಿಸುವದೇನಂದ್ರೆ ನೀವ್ ವಾದಿಳ ವಳಗೆ ತಾರೀಕು 4–12–1928ರ ಮೂಲಗೇಣಿ ಚೀಟಿನ ಶರತ್ತು ಪ್ರಕಾರ ಮೂಲಗೇಣಿ ಹಕ್ಕಿನಂದ ಅನುಭವಿಸಿಕೊಂಡಿರುವ ಆಸ್ತಿಗು ಬಾಬ್ತು ಮನೆಯ ಹಕ್ಕು ಮತ್ತು ಮರುಬಾಬ ಸಂಗಡಗಳ ಬಾಬ್ತು ವಾದಿಳಿಗೆ ನಿಮಿಂದ ಬರತಕ್ಕ ಮೂಲಗೇಣಿ ಗೇಣಿಬಡ್ಡಿ ಕೂಡಾ ರೂ 383.10ಕ್ಕೆ ವಾದಿಳು ವಾಕ್ದು ಮಾಡಿದ ಸದ್ರಿ ದಾವೆಯು ತಾ. 30–9–1957ಕ್ಕೆ ಇಟ್ಟಿದೆ. ಅಕ್ಕೇಪಯಿದ್ರೆ ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ತೀರ್ಮಾನವಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲ್ಕ ತಿಳಿಸಿಯದೆ.

K. V. Kamath
Advocate for Plff

Karkal 11-8-57.

---

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಲೆ ರಾಮಸ್ವಾಮಿ ಅಯ್ಯರ್‌ರವರ ರತ್ನಪ್ರಯೋಗಗಳು

ಟ್ರೇಡ್ ಮಾರ್ಕ್

ಪಂ|| A. R. ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, **ಸಪುಂಸಕತೆಯನ್ನು** ಸಾಮಾವಶೇಷಗೊಳಿಸುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದಿದವರೂ "ತಾಯ್ತಂದೆ"ಗಳಾಗಿದ್ದಾರೆ. ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ಯಾಟಲಾಗ್ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ, (ಸ ಯು.)

628, "ಸಂತಾನ ಸಿಂದೂರ ಇದನ", ಚಾಮರಾಜ ರೋಡ್, ಮೈಸೂರು-1 (S.I.)

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಸೇವಾಸಂಘಗಳು

ರಾಜಕಾರಣದಿಂದ ದೂರದ ಸೇವಾಸಂಘಗಳು ದೇಶದ ಪುನಾರಚನೆಯಲ್ಲಿ ಮಹತ್ವದ ಪಾಲುಗೊಳ್ಳುವುವು

ಕಳೆದ ಜೂನ್ ತಿಂಗಳಲ್ಲಿ ಭಾರತ ಸೇವಕ ಸಮಾಜದ ಕೇಂದ್ರ ಮಂತ್ರಿ ಮಂಡಲಿಯ ಅಧ್ಯಕ್ಷರಾದ ಶ್ರೀ ಗುಲ್ಜಾರಿಲಾಲ ನಂದಾ ಅವರು ಭಾರತದಲ್ಲಿ ತಮ್ಮ ಚಟುವಟಿಕೆಗಳನ್ನು ಪ್ರದರ್ಶಿಸುತ್ತಿರುವ ವಿವಿಧ ಸಮಾಜ ಸೇವಾಕಾಂಕ್ಷಿ ಸಂಸ್ಥೆಗಳ ಪ್ರತಿನಿಧಿಗಳ ಸಮ್ಮೇಳನವೊಂದನ್ನು ಕರೆದಿದ್ದರು. ದೇಶದ ಸಕಲ ಸ್ವಯಂ ಸೇವಕ ಸಂಸ್ಥೆಗಳನ್ನೂ ಒಂದೆಡೆಯಲ್ಲಿ ಸಮಾವೇಶಗೊಳಿಸಿ ಸಮೂಹೃತ ರೀತಿಯಲ್ಲಿ ಅವು ನಿರ್ವಹಿಸಬಹುದಾದ ಕಾರ್ಯಕ್ರಮವೊಂದನ್ನು ಸಿದ್ಧಗೊಳಿಸುವುದು ಈ ಸಮ್ಮೇಳನದ ಮೊತ್ತನೊದಲಿನ ಗುರಿಯಾಗಿತ್ತು

ಸ್ವಯಂ ಸೇವಾ ಕಾರ್ಯಕ್ಷೇತ್ರದಲ್ಲಿ ಒಂದು ರೀತಿಯ ಸಮನ್ವಯವಿರುವುದು ಅಗತ್ಯವೆಂದು ಈ ಸಮ್ಮೇಳನದಲ್ಲಿ ಭಾಗವಹಿಸಿದ ಪ್ರತಿನಿಧಿಗಳಿಗೆ ಅನುಭವೇದ್ಯವಾಗಿದೆ. ಮುಂದಿರುವ ಕಾರ್ಯದ ಹೊರೆಗಳನ್ನು ನಿರ್ವಹಿಸುವಬಗ್ಗೆ ಅಸಂಖ್ಯಾತ ಜನರನ್ನು ಸಂಗ್ರಹಿಸುವುದಕ್ಕಾಗಿ ಭಾರಿ ಪ್ರಮಾಣದಲ್ಲಿ ಸ್ವಯಂಸೇವಕ ಸಂಘಟನೆಯನ್ನು ಸಿದ್ಧಗೊಳಿಸಬೇಕಾಗಿದೆ. ವಿವಿಧ ಸ್ವಯಂಸೇವಾಸಂಸ್ಥೆಗಳಲ್ಲಿನಿಕಟಸಂಬಂಧ ಕಲ್ಪಿಸುವ ಬಗ್ಗೆ ಭಾರತ ಸೇವಕ ಸಮಾಜವು ಸಾಮಾನ್ಯ ವೇದಿಕೆಯೊಂದನ್ನು ವ್ಯವಸ್ಥೆಗೊಳಿಸಬಹುದೆಂದು ಆ ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು

ಭಾರತ ಸೇವಕ ಸಮಾಜದ ಪ್ರಕಟನ ಸಮಿತಿಯ ಎಲ್ಲ ಸದಸ್ಯರು ಮತ್ತು ವಿವಿಧ ಸಮಾಜ ಕಲ್ಯಾಣ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಸಮನ್ವಯ ಸಮಿತಿಯೊಂದನ್ನು ರಚಿಸಬೇಕೆಂದು ಸಮ್ಮೇಳನವು ತೀರ್ಮಾನಿಸಿತ್ತು. ಈ ಸಮಿತಿಗೆ ನೂತನ ಸದಸ್ಯರಿಗೂ ಪ್ರವೇಶಾವಕಾಶವಿರುವುದು. ಸಮೂಕೃತ ಕಾರ್ಯದ ಕಾರ್ಯಕ್ರಮವನ್ನು ಈ ಸಮಿತಿಯು ಸಿದ್ಧಪಡಿಸಬೇಕಾಗುವುದು. ಸಮ್ಮೇಳನದಲ್ಲಿ ನಡೆದ ಸಾಮಾನ್ಯ ಪರ್ಯಾಲೋಚನೆಯ ಫಲಸ್ವರೂಪವಾಗಿ, ರಾಷ್ಟ್ರೀಯ ಏಕತಾಪ್ರಜ್ಞೆ, ತೀವ್ರ ಪರಿಹಾರ ಕಾರ್ಯ, ಉತ್ಪಾದನಾ ಸಾಮರ್ಥ್ಯದಲ್ಲಿ ಹೆಚ್ಚಳ, ಅಸ್ಪೃಶ್ಯತಾ ನಿರೋಧನ, ಕಶ್ಮಲ ಪ್ರದೇಶ ನಿರ್ಮೂಲನ, ಮತ್ತು ಆರೋಗ್ಯ ಸುಧಾರಣಾ ಕಾರ್ಯಕ್ರಮ ನಿರ್ದೇಶನ- ಈ ಅಂಶಗಳನ್ನು ಕೂಡಿಕೊಂಡಿರುವ ಸಾಮಾನ್ಯ ಮಟ್ಟದ ಕಾರ್ಯಕ್ರಮಗಳನ್ನು ಅನುಮೋದಿಸಲಾಗಿದೆ.

ಉಪರೋಕ್ತ ಸಮ್ಮೇಳನದಲ್ಲಿ ಕೈಗೊಳ್ಳಲಾದ ನಿರ್ಣಯವು ಜನರನ್ನು ಹೊಡೆದೆಬ್ಬಿಸಿದಂತಾಗಿ ಸಾರ್ವಜನಿಕ ಸೇವಾ ಕ್ಷೇತ್ರಗಳಲ್ಲಿ ಶ್ರದ್ಧೆಯಮಟ್ಟದ ಆಸಕ್ತಿಯ ಕಾಣಿಸಿಕೊಂಡಿದೆ ಇದರೊಡನೆಯೇ ಸಾರ್ವಜನಿಕ ಸಂಘ ಸಂಸ್ಥೆಗಳು ವ್ಯಕ್ತಿಗತ ರೂಪದಲ್ಲಿ ಸಹ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನತೆಯ ಸಹಕಾರವನ್ನು ಪಡೆಯುವಂತೆ ಮಾಡಲು, ಹಾಗೂ ಅವುಗಳಲ್ಲಿ ಐಕ್ಯವನ್ನು ಸ್ಥಾಪಿಸಲು ಪ್ರಯತ್ನಿಸಲಾಗುತ್ತಿದೆ. ಭಾರತ ಸೇವಕ ಸಮಾಜವು ಈ ದಿಸೆಯಲ್ಲಿ ಅನವರತವೂ ಕಾರ್ಯಪ್ರವೃತ್ತವಾಗಿದೆ ಭಾರತದ ಎಲ್ಲ ಮೂಲೆಗಳಲ್ಲಿಯೂ ಈ ಸಾರ್ವಜನಿಕ ಸೇವಾ ಸಂಘದ ಶಾಖೋಪಶಾಖೆಗಳು ಕಾಣಿಸಿಕೊಂಡು ಕೆಲಸಮಾಡುತ್ತಿವೆ ಭಾರತದ ಸಾಧು ಸಮಾಜವು ಸಕಲ ಭಾರತ ಸೇವಕ ಸಮಾಜದೊಂದಿಗೆ ವಿಲೀನಗೊಂಡು ಅನೇಕ ಉಪಯುಕ್ತ ಕೆಲಸಗಳನ್ನು ಕಾರ್ಯರೂಪದಲ್ಲಿ ತರಲು ಪ್ರಾರಂಭಿಸಿದೆ ರಾಮಕೃಷ್ಣ ಮಿಷನ್ ಸಂಸ್ಥೆಯವರು ಸಹ ದೇಶದ ವಿಕಾಸ, ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲುಗೊಂಡಿದ್ದಾರೆ ಭಾರತ ಸ್ಕೌಟು ಮತ್ತು ಗೈಡ್‌ಗಳೂ ಸದಾಕಾಲ ಮತ್ತು ಎಲ್ಲೆಲ್ಲಿಯೂ ನೆರವು ನೀಡಲು ಸಿದ್ಧರಾಗಿರುವರು ಇದೇ ರೀತಿಯಲ್ಲಿ ಇನ್ನೂ ಅನೇಕ ಇಂತಹ ಸಂಸ್ಥೆಗಳು ದೇಶದ ಉನ್ನತಿ ಮತ್ತು ಸಮೃದ್ಧಿಯನ್ನು ಬಯಸಿ, ಅವುಗಳ ಸಾಧನೆಯಲ್ಲಿ ಸೇಚ್ಛಾ ಪೂರ್ವಕವಾಗಿ ಶಕ್ತಿ ಆಸಕ್ತಿಯಿಂದ ದುಡಿಯುತ್ತಿವೆ

ಸರಕಾರದವರೂ ಈ ಸಂಘಟನೆಗಳಿಗೆ ನಿರಂತರವಾಗಿ ಸರಕಾರ ಮತ್ತು ಪ್ರೋತ್ಸಾಹಗಳನ್ನು ನೀಡುತಿದ್ದಾರೆ. ಯೋಜನಾ ಆಯೋಗದವರು ಜನತೆಯ ಸಹಕಾರವನ್ನು ಸಮನ್ವಯಗೊಳಿಸುವುದಕ್ಕಾಗಿ ವಿವಿಧ ಶಾಖೆಗಳ ಪ್ರತಿನಿಧಿಗಳ ಒಂದು ಸಮಿತಿಯನ್ನು ರಚಿಸಿರುವರು ಈ ಸಮಿತಿಯು ಸಾರ್ವಜನಿಕ ಸಂಘಟನೆಗಳಿಗೆ ಸಲಹೆಗಳನ್ನು ನೀಡುವುದು ಯೋಜನೆಯು ಅಂಗೀಕರಿಸಿರುವ ಆ ವಿಧದ ಕಾರ್ಯಕ್ರಮಗಳಿಗಾಗಿ ಅಧಿಕ ಸಹಾಯವನ್ನು ನೀಡುವುದು ಯೋಜನೆಯನ್ನು ಸ್ವೀಕರಿಸುವಲ್ಲಿ ಜನತೆಯ ನೆರವಾದ ಸಹಕಾರವನ್ನೂ ದೊರಕಿಸಿಕೊಳ್ಳುವ ವಿಚಾರವನ್ನೂ ಈ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಂಡಿದ್ದಾರೆ ಯೋಜನೆಯಲ್ಲಿ ಜನತಾ ಸಹಕಾರವು ಅಧಿಕತಮವಾಗಿ ದೊರೆತರೆ, ಸಾಧನೆಯಲ್ಲಿಯೂ ಅದರ ಫಲವು ಅಧಿಕವಾಗಿ ದೊರೆಯುವುದು

ಸ್ವಯಂಸೇವಾ ಯೋಜನೆಗಳಿಗೆ ಸರಕಾರವು ಮಂಜೂರಾತಿಯನ್ನೀಯುವಾಗ ಮುಖ್ಯವಾಗಿ ಕೆಲವೊಂದು ಅಂಶಗಳನ್ನು ನಿರೀಕ್ಷಿಸುತ್ತದೆ. ನೊತ್ತಮೊದಲನೆಯದಾಗಿ ಯೋಜನೆಯಲ್ಲಿ ಅಳವಡಿಸಲಾಗುತ್ತಿರುವ ಗುರಿಯನ್ನು ಸಾಧಿಸಲು ಅಗತ್ಯವೆನಿಸಿದ ಸಾರ್ವಜನಿಕ ಉತ್ಸೇಜನವನ್ನು ಪರಿಣಾಮಕಾರಿಯಾಗಿ ಮಾಡಿಸುವುದು ಎರಡನೆಯದಾಗಿ, ವಿವಿಧ ಮಂತ್ರಿ ಶಾಖೆಗಳ ಕಾರ್ಯಕ್ರಮಗಳಿಗೆ ಪೂರಕವಾಗಿರುವುದು. ಮತ್ತು ಮೂರನೆಯದಾಗಿ, ಈಗಾಗಲೇ ಇರುವ ಸಾರ್ವಜನಿಕ ಸಂಘಟನೆಗಳು ಮಾಡುತ್ತಿರುವ ಕೆಲಸಗಳಿಗೆ ಅಗತ್ಯ ನೆರವನ್ನು ನೀಡುವುದು.

ಸರಕಾರವು ಸಮಾಜಸೇವಾ ಸಂಸ್ಥೆಗಳಿಗೆ ಎಲ್ಲ ವಿಧವಾದ ಸಹಕಾರವನ್ನೂ ಕೊಡುತ್ತಿದೆ. ಜನರ ಸಹಯೋಗದ ಮೇಲೆ ಹಾಗೂ ಜನತಾ ಸಹಯೋಗದ ಮೂಲಾಧಾರದ ಮೇಲೆ ದೇಶದ ಪ್ರಗತಿ ಹಾಗೂ ಸಮೃದ್ಧಿಯು ನಿಂತಿದೆ ಎಂಬುದು ಸುಸ್ಪಷ್ಟವಿದೆ ಯಾವುದೇ ವಿಧದ ರಾಜಕಾರಣದಿಂದ ದೂರವಿದ್ದು, ದೇಶದ ಸಮೃದ್ಧಿ ಮತ್ತು ಪ್ರಗತಿಯನ್ನು ಬಯಸಿ, ಕಾರ್ಯಪ್ರವೃತ್ತವಾಗುವ ಸ್ವಯಂಸೇವಕ ಸಂಸ್ಥಗಳು ನಿಜವಾಗಿಯೂ ದೇಶದ ಉನ್ನತಿಯ ಮಾರ್ಗದಲ್ಲಿ ಮಹತ್ವದ ಸ್ಥಾನವನ್ನು ಗಳಿಸಿವೆ. ಅಂತಹ ಸಂಘ ಸಂಸ್ಥೆಗಳಲ್ಲಿ ಸೇರಿಕೊಂಡು ಶಕ್ತ್ಯನುಸಾರ ರಾಷ್ಟ್ರ ಸುನಾನಿರ್ಮಾಣ ಕಾರ್ಯದಲ್ಲಿ ಸಹಯೋಗಿಗಳಾಗುವುದು ದೇಶಪ್ರೇಮಿಗಳ ಕರ್ತವ್ಯಗಳಲ್ಲಿ ಒಂದಾಗಿದೆ.

ವ್ಯಾಪಾರ ಕೇಂದ್ರಗಳು

ಭಾರತದ ಬಂದರುಗಳು ಸಂಖ್ಯೆಯಲ್ಲಿ ಕಡಿಮೆಯಾದರೂ ಮಟ್ಟದಲ್ಲಿ ಉತ್ತಮವಿವೆ.

ಒಂದು ದೇಶದ ತನ್ನ ದೇಶದ ವಿವಿಧೆಡೆಗಳೊಡನೆ ಹಾಗೆಯೇ ಹೊರ ದೇಶಗಳೊಡನೆ ನೇರವಾದ, ನಿಕಟವಾದ ಸಂಪರ್ಕವನ್ನಿಟ್ಟುಕೊಳ್ಳುವುದು ಇಂದಿನ ನಾಗರಿಕ ಯುಗದಲ್ಲಿ ಅತ್ಯಗತ್ಯವೆನಿಸಿದೆ ಇದಕ್ಕಾಗಿಯೇ ನೆಲ, ಜಲ, ಆಕಾಶಗಳನ್ನು ಭೇದಿಸಿ ಮಾನವನು ಅಖಂಡ ವಿಶ್ವವನ್ನೂ ತನ್ನ ಅಂಕೆಯಲ್ಲಿಟ್ಟುಕೊಳ್ಳಬಹುದಾದ ಕಾಲ ಬರಬರುವುದೆಂಬುದನ್ನು ತೋರಿಸಿಕೊಟ್ಟಿದ್ದಾನೆ. ಒಂದೂರಿನಿಂದ ಇನ್ನೊಂದೂರಿಗೆ ಪ್ರಯಾಣಮಾಡುವುದು, ಸಾಮಾನು ಸರಂಜಾಮುಗಳನ್ನು ಒಯ್ಯುವುದು ಮೊದಲಾದವುಗಳಲ್ಲಿ ನೆಲ ಮತ್ತು ಆಕಾಶ ಮಾರ್ಗಗಳಿಗಿಂತ ಜಲಮಾರ್ಗವೇ ಸುಗಮವೂ ಸುಕರವೂ ಲಾಭದಾಯಕವೂ ಆಗಿದೆ ಇಂತಹ ಜಲಮಾರ್ಗಗಳ ಕೋಣೆಕೆಯಲ್ಲಿ ಬಂದರುಸ್ಥಳಗಳ ಮಹತ್ವವು ಅವರ್ಣನೀಯ. ಒಂದು ದೇಶದ ಅಂದರೆ ರೈತರುಗಳು ಹೆಚ್ಚಾಗಿ ಇಂತಹ ಬಂದರುಗಳ ಮೂಲಕವಾಗಿಯೇ ನಡೆಯುತ್ತವೆ. ಒಂದು ದೇಶದಲ್ಲಿ ಅತ್ಯುತ್ತಮ ಬಂದರುಗಳ ಸಂಖ್ಯೆ ಎಷ್ಟು ಹೆಚ್ಚಿದೆಯೋ, ದೇಶದ ಪ್ರಗತಿಯೂ ಅಷ್ಟೇ ಹೆಚ್ಚು ಎಂಬುದು ತೀರಾ ಸಾಮಾನ್ಯವೆನಿಸಿದ ಮಾತಾಗಿ ಪರಿಣಮಿಸಿದೆ.

ಭಾರತವು ಸಹ ದೇಶದ ಕೆಲವೇ ವಿಶಾಲ ಜನಸಂಪತ್ಸಮೃದ್ಧ ರಾಷ್ಟ್ರಗಳಲ್ಲಿ ಒಂದಾಗಿದೆ. ೧೯೪೭ ಆಗಸ್ಟ್ ತಿಂಗಳಲ್ಲಿ ಅದುವರೆಗಿನ ೧೯೦ ವರ್ಷಗಳ ಕಾಲ ನಮ್ಮನ್ನು ಗುಲಾಮರನ್ನಾಗಿ ಕಂಡ ಬ್ರಿಟಿಷರು ದೇಶವನ್ನು ವಿಭಜಿಸಿ ಸ್ವದೇಶಕ್ಕೆ ಮರಳಿದ ಮೇಲೆ ಭಾರತದ ಪಾಲಿಗೆ ಕೇವಲ ಕಲಕತ್ತೆ, ಬೊಂಬಾಯಿ, ಮದರಾಸು, ಕೊಚ್ಚಿ ಮತ್ತು ವಿಶಾಖಪಟ್ಟಣವೆಂಬ ಐದು ಬಂದರುಗಳು ಉಳಿದುವು.

ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿರುವ ಭಾರತಕ್ಕೆ ತನ್ನ ಉತ್ತಮ ಹಾಗೂ ದೊಡ್ಡ ಬಂದರುಗಳ ಸಂಖ್ಯೆಯನ್ನು ಹೆಚ್ಚಿಸುವುದು ಅಗತ್ಯವೆಂದು ತಿಳಿದು, ೧೯೫೩ರಲ್ಲಿ ಕಾಂಡ್ಲಾದಲ್ಲಿ ಭಾರತದ ಆರನೆಯ ಮಹಾಬಂದರವನ್ನು ಕಟ್ಟಲು ಪ್ರಾರಂಭಿಸಿತು. ಇದರ ಉದ್ಘಾಟನೆಯು ಈ ವರ್ಷದ ಮಾರ್ಚ್ ೩ನೆ ದಿನಾಂಕದಂದು ವಿಧ್ಯುಕ್ತವಾಗಿ ನಡೆಯಿತು.

ಆಮದು ರಫ್ತುಗಳು ಒಂದು ದೇಶದ ವ್ಯಾಪಾರದ ಪ್ರತೀಕವಾಗಿವೆ ಭಾರತದ ಈ ಬಂದರುಗಳಲ್ಲಿಯೂ ಯೋಗ್ಯ ಪ್ರಮಾಣದಲ್ಲಿ ಸಾಮಾನುಗಳ ಸಾಗಾಟ ನಡೆದಿದೆ. ೧೯೫೫-೫೬ರಲ್ಲಿ ಈ ಮುಖ್ಯ ಬಂದರುಗಳ ಮೂಲಕ ಸಮಾರು ೨೫ ಲಕ್ಷ ಟನ್ನುಗಳಷ್ಟು ಪ್ರಮಾಣದ ಸರಕುಗಳ ಸಾಗಾ

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ ಪಿ ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತಿದೆ!!

P. DEVEE & Co. (N. J.) CALCUTTA—40

ಸ್ಥಾಪಕರು ಷಾ ಕಂಪೆನಿ, ಮಂಗಳೂರು—1.



ಟವಾಗಿದೆ ೧೯೫೦ ಜಾರಲ್ಲಿ ಹೀಗೆ ಅದ ಸಾಗಾಣಿಕೆಯು ಕೇವಲ ೧೮೦ ಲಕ್ಷ ಟನ್ನುಗಳಾಗಿತ್ತು

ಇತ್ತೀಚೆಗೆ ಭಾರತಕ್ಕೆ ಇವುಗಳಿಂದ ಆಮದಾದ ವಸ್ತುಗಳಲ್ಲಿ ಬಿಳಿಜ ಎಣ್ಣೆಗಳು, ಯಂತ್ರ ಸಾಮಗ್ರಿಗಳು ಪಗೋಕಟ್ಟಿಣ ವತ್ತು ಉಕ್ಕುಗಳು ಸ್ಥಮುಖ ಸ್ಥಾನವನ್ನು ಪಡೆದರೆ, ರಫ್ತುಗಳಲ್ಲಿ ಅದುರುಗಳು ಪ್ರಪ್ರಥಮ ಸ್ಥಾನವನ್ನು ಪಡೆದಿವೆಯೆನ್ನಬಹುದು

ಭಾರತ ಸರಕಾರವು ಬಂದರುಗಳ ಅಭಿವೃದ್ಧಿಯತ್ತ ವಿಶೇಷ ಗಮನವನ್ನು ಹರಿಸಿದೆ ತನ್ನ ಪ್ರಥಮ ಯೋಜನಾವಧಿಯಲ್ಲಿ ಇವುಗಳಿಗಾಗಿ ೩೩ ಕೋಟಿ ರೂಪಾಯಿಗಳನ್ನು ಒದಗಿಸಿದೆ ಆದರೆ, ಮಂದಕ್ಕೆ ಇದು ಕಡಿಮೆಯೆಂದು ತಿಳಿದುಬಂದುದರಿಂದ, ಬಂದರುಗಳ ಅಭಿವೃದ್ಧಿಗಾಗಿ ಒದಗಿಸಲಾದ ಹಣವು ೧೧೪ ಕೋಟಿ ರೂಪಾಯಿಗಳಿಗೇರಿತು ಹೀಗಿದ್ದರೂ ಬಂದರುಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ವಿಳಂಬವಾದುದರಿಂದ ಪ್ರಥಮ ಯೋಜನಾವಧಿಯಲ್ಲಿ ಅಭಿವೃದ್ಧಿಕಾರ್ಯದಲ್ಲಿ ವೆಚ್ಚವಾದ ಮೊಬಲಗು ಕೇವಲ ೨೭ ಕೋಟಿ ರೂಪಾಯಿಯಾಗಿದೆ

ದ್ವಿತೀಯ ಯೋಜನೆಯ ಅವಧಿಯಲ್ಲಿ ಹೊಸ ನಿರ್ಮಾಣಕಾರ್ಯಗಳ ವಚ್ಚಕ್ಕಾಗಿ ೪೩ ೫ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಪ್ರಥಮ ಯೋಜನೆಯಲ್ಲಿ ಪ್ರಾರಂಭಿಸಲಾಗಿದ್ದು ದ್ವಿತೀಯಯೋಜನೆಗೆ ಮುಂದುವರಿಸಲಾಗಿರುವ ಕೆಲವು ಯೋಜನೆಗಳೂ ಸೇರಿ ಮುಖ್ಯ ಬಂದರುಗಳ ಅಭಿವೃದ್ಧಿಯ ಬಗ್ಗೆ ೭೮ ೫ ಕೋಟಿ ರೂಪಾಯಿಗಳಷ್ಟು ಹಣವು ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ.

ಪ್ರಚಲಿತ ಯೋಜನಾವಧಿಯಲ್ಲಿ ಮುಖ್ಯ ಬಂದರುಗಳ ಕಾರ್ಯದಕ್ಷತೆಯನ್ನು ಅಭಿವೃದ್ಧಿಪಡಿಸಲಾಗುವುದು. ದ್ವಿತೀಯ ಯೋಜನೆಯ ಹೊತ್ತಿಗೆ ಈ ಬಂದರುಗಳಲ್ಲಿ ಸರಕುಗಳ ಆಮದು ಮತ್ತು ರಫ್ತಿನ ಸಾಗಾಣಿಕೆಯ ಸಾಮರ್ಥ್ಯವು ಸುಮಾರು ೪೦ರಷ್ಟಕ್ಕೆ ಮೂವತ್ತರಷ್ಟು ಹೆಚ್ಚಾಗಬಹುದೆಂದು ನಿರೀಕ್ಷೆಯಿದೆ.

ಮುಖ್ಯ ಬಂದರುಗಳನ್ನು ಉತ್ತಮ ಮಟ್ಟಕ್ಕೆ ತರುವುದಲ್ಲದೆ ದೇಶದ ಉದ್ದವಾದ ಕರಾವಳಿಯಲ್ಲಿರುವ ಅನೇಕಾನೇಕ ಸಣ್ಣ ದೊಡ್ಡ ಬಂದರುಗಳನ್ನೂ ಸುಧಾರಿಸುವ ಕಾರ್ಯಕ್ರಮವು ಯೋಜನೆಯಲ್ಲಿ ಅಡಕವಾಗಿದೆ. ಈ ಎಲ್ಲಾ ನಿಯೋಜಿತ ಕಾರ್ಯಕ್ರಮಗಳು ಸಂಪೂರ್ಣಗೊಂಡ ಮೇಲೆ, ಭಾರತ ಮತ್ತಿತರ ವಿದೇಶಗಳೊಳಗೆ ಇನ್ನೂ ಹೆಚ್ಚಿನ ಸಂಪರ್ಕವು ಬೆಳೆದು ವ್ಯಾಪಾರವು ಅಭಿವೃದ್ಧಿಯಾಗಿ, ದೇಶದ ಸಂಪತ್ತೂ ಹೆಚ್ಚುವುದು ಸಾಧ್ಯವಾಗಬಹುದು

ಮಕ್ಕಳ ಮಗ್ಗಿಪುಸ್ತಕ

(ನಯೋ ಪೈಸೆ ಕೋಷ್ಟಕ ಸಹಿತ)

100ಕ್ಕೆ 4 0 0

ಬೆಲೆ 1ಕ್ಕೆ 0 1 0

ನವಯುಗ ಪ್ರೆಸ್, ಉಡುಪಿ



ರಾಜಕುಮಾರ ಪಿಲಿಪರು ಬ್ರಿಟಿಷ ಆಕಾಶವಾಣಿ ಶಿಲಯದಲ್ಲಿ ಅಂತಾರಾಷ್ಟ್ರೀಯ ಭೌಗೋಳಿಕ ವರ್ಷವನ್ನು ಘೋಷಿಸುತ್ತಿದ್ದಾರೆ ಇದು ನಮ್ಮ ತರಮಾರಿಯಲ್ಲಿಯೇ ವೈಶಿಷ್ಟಪೂರ್ಣವಾಗಿದ್ದು, ೧೮ ತಿಂಗಳುಗಳ ವರೆಗೆ ನಡೆಯುವುದು

ಗ್ರಾಮರಾಜ್ಯ ಕನಸು

(೧ನೇ ಪುಟದಿಂದ)

ರಾಜ್ಯವೆಂದು ಕರೆಯುತ್ತಾರೆ ಭೂದಾನ ಚಳವಳದ ರಹಸ್ಯವೆಂದರೆ, ಇದೇ

ಒಂದಷ್ಟು ಭೂಮಿಯನ್ನು ಒಂದುಗೂಡಿಸಿತೆಂದರೆ, ಭೂದಾನಯಜ್ಞದ ಉದ್ದೇಶವು ಪೂರವಾಗಲಿಲ್ಲ ಇದು ಕೇವಲ ಪಂಚಾಗ ಮಾತ್ರ ಮುಂದಿನ ಕಾರ್ಯವೇ ಬಹಳ ಪ್ರಮುಖವೆನಿಸಿದುದು ಭೂಮಿದಾನ ಅಥವಾ ಗ್ರಾಮದಾನ ಚಳುವಳಿಯಿಂದ ಸಂಪಾದಿಸಿದ ಭೂಮಿಯನ್ನು ಹಂಚಬೇಕು ಈ ರೀತಿಯಲ್ಲಿ ಭೂಮಿಯನ್ನು ಒದಗಿಸಿದ ಹಳ್ಳಿಗರಿಗೆ ಕೃಷಿಯ ಸಲಕರಣಗಳನ್ನು ಕೊಡಬೇಕು ಅವರನ್ನು ಭೂಮಿಯಲ್ಲಿ ಬಲವಾಗಿ ನೆಲೆಯೂರುವಂತೆ ಮಾಡಬೇಕು ಭೂಮಿಯು ದೊರೆತ ಹಳ್ಳಿಗಳಲ್ಲಿ ಆಹಾರ, ನೀರು, ಖಾದಿ, ಗುಡಿಕೈಗಾರಿಕೆ, ನವೀನ ಪದ್ಧತಿಯ ವಿದ್ಯಾಭ್ಯಾಸ ಮೊದಲಾದುವುಗಳ ಮುಖಾಂತರವಾಗಿ ಗ್ರಾಮರಾಜ್ಯವನ್ನು ಸ್ಥಾಪಿಸಬೇಕು

ಭೂದಾನ ಇಲ್ಲವೇ ಗ್ರಾಮದಾನದ ಉದ್ದೇಶವು ಭಾರತದಲ್ಲಿ ಗ್ರಾಮರಾಜ್ಯ ಸ್ಥಾಪನೆಯನ್ನು ಮಾಡುವುದು ತಮ್ಮನ್ನು ತಾವೇ ದುಃಖ ಮಹಾಸಾಗರದಿಂದ ರಕ್ಷಿಸಿಕೊಳ್ಳುವಂತೆ ಮಾಡುವುದಾಗಿದೆ. ಇನ್ನೊಬ್ಬರನ್ನು ಅತ್ತಾಯದ ಮೂಲಕವಾಗಲೀ, ಕಾಯದೆ ಕಾನೂನಿನ ಬಲದಿಂದಾಗಲೀ ಪ್ರೇರೇಪಿಸದೆ ಸ್ವಯಂ ಪ್ರೇರಣೆಯಿಂದಲೇ ದೇಶದ ಬಡತನವನ್ನು ದೂರವೋಡಿಸಿ, ಭಾರತವನ್ನು ನಿಜವಾದ ಸಂಪತ್ಸಮೃದ್ಧ ದೇಶವನ್ನಾಗಿಸುವ ಕಾರ್ಯದಲ್ಲಿ ನೇರವಾಗುವಂತೆ ಮಾಡುವುದಾಗಿದೆ.

ಭಾರತದ ಮೂಲಭೂತ ಸಮಸ್ಯೆಗಳಲ್ಲಿ ಭೂಹಿಡುವಳಿಯ ಸಮಸ್ಯೆಯೂ ಒಂದು. ಈ ಸಮಸ್ಯೆಯು ಒಂದು ಬಗೆಹರಿಸಂತಾಗಿದೆ. ನಮ್ಮ ಹಳ್ಳಿಗಳಲ್ಲಿ ದೇಶದ ಜನಸಂಖ್ಯೆಯ ಮುಕ್ಕಾಲು ಪಾಲಿಗೂ ಮಿಕ್ಕಿದ ಜನರು ಬದುಕಿದ್ದು, ಅವರೆಲ್ಲರೂ ಕೃಷಿ ಪದ್ಧತಿಯನ್ನೇ ಅವಲಂಬಿಸಿಕೊಂಡಿದ್ದರು, ಅವರಲ್ಲಿ ೧೦೦ಕ್ಕೆ ೬೫ ಜನರಿಗೆ ಮಾತ್ರ ಸ್ವಂತ ಭೂಮಿಯಿದೆ ೧೮ ಮಂದಿಗೆ ಭೂಮಿಯೇ ಇರುವುದಿಲ್ಲ. ೨೧ ಜನರು ಇತರರ ಹೊಲಗಳಲ್ಲಿ ದುಡಿದು ತಮ್ಮ ಜೀವನವನ್ನು ಸಾಗಿರುತ್ತಾರೆ ಕೇವಲ ಇಬ್ಬರು ಮಾತ್ರ ಹೊಲಗಳನ್ನು ಅಂವಣಿಗೆಕೊಟ್ಟಿರುತ್ತಾರೆ ಭಾರತೀಯರೆಲ್ಲರಿಗೂ ಭಾರತದ ಭೂಮಿಯನ್ನು ಸರಿಸಮಾನವಾಗಿ ಹಂಚಿದರೆ, ಆಗ ಪ್ರತಿಯೊಬ್ಬನಿಗೆ ಕೇವಲ ಎರಡೂವರೆ ಎಕ್ರೆಗಳಷ್ಟು ದೊರೆಯುವುದು ಆದರೆ, ಗುಡ್ಡಕಾಡು ಪರ್ವತ ಪ್ರದೇಶಗಳನ್ನೂ ಹಂಚುವುದು ಸಾಧ್ಯವಾದೀತೆ?

ಇದರಿಂದಾಗಿ ಭೂ ಸಮಸ್ಯೆಯನ್ನು ಬಿಡಿಸುವ ಮಾರ್ಗವು ಗಹನ ಕಂದರಗಳಿಂದ ಪರಿವೇಷ್ಟಿತವಾಗಿದೆ ಇದನ್ನು ಸೂಕ್ತ ವಿಧಾನದಲ್ಲಿ ಬಗಹರಿಸಿದಲ್ಲಿ ವಿಷ ಸರ್ಪನ ಬಾಯಿಯೊಳಗೆ ಹೋಗಿ ಹಿಂದಿರುಗಿದಂತಾಗುವುದು ದೇಶದ ಅಭಿವೃದ್ಧಿ ಪಥದಲ್ಲಿ ಒಂದು ಮುಖ್ಯ ಮೈಲಿಕಲ್ಲನ್ನು ನೆಟ್ಟಂತಾಗುವುದು

ಈ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಗಾಂಧೀಜೀಯವರ ಸಾರ್ವಜನಿಕ ಸೇವೆಯ ಉತ್ತರಾಧಿಕಾರಿಯಾಗಿ, ಸರ್ವೋದಯ ಸಂಘದ ಮುಖಂಡರಾಗಿ ಆಚಾರ್ಯ ವಿನೋಬಾ ಭಾವೆ ಅಹೋರಾತ್ರಿ ದುಡಿಯುತಿದ್ದಾರೆ. "ಎಲ್ಲಾ ಭೂಮಿ ಪರಮಾತ್ಮನದು" ಎಂಬ ಪಲ್ಲವಿಯನ್ನು ಉಚ್ಚರಿಸಿ ಗ್ರಾಮದಾನವನ್ನು ಬೇಡುತಿದ್ದಾರೆ. ತಾವು ಸಂಚರಿಸಿದ ಪ್ರದೇಶಗಳಲ್ಲಿ ಅಪೂರ್ವ ಜಯವನ್ನೂ ಪಡೆದಿದ್ದಾರೆ

'ಗ್ರಾಮದಾನ' ವೊಂದು ಉತ್ತಮ ವಿಚಾರ ಭೂಮಿಯ ಒಡೆತನವು ಗ್ರಾಮಕ್ಕೆ ಸೇರತಕ್ಕದ್ದು" ಎಂದು ಪಂಡಿತ ನೆಹರೂ ಅಭಿಪ್ರಾಯಪಟ್ಟಿದ್ದಾರೆ ಧನಿಗಳು ಗುರುಗಳೂ ರಾಜಕಾರಣಿಗಳೂ ಈ ಚಳವಳಿಗೆ ಬೆಂಬಲ ನೀಡುತಿದ್ದಾರೆ. ಈ ಚಳವಳಿಯ ಪ್ರಚಾರಾರ್ಥವಾಗಿ ಹಾಗೆಯೇ ಗ್ರಾಮದಾನವನ್ನು ಬೇಡಿಕೊಂಡು, ಪೂಜ್ಯ ವಿನೋಬಾ ಇವೇ ಅಳರಂದು ತಮ್ಮ ಕೇರಳ ಸಂಚಾರವನ್ನು ಮುಕ್ತಾಯಗೊಳಿಸಿ ಕರ್ನಾಟಕ ಸಂಚಾರ ಕಾರ್ಯಕ್ರಮವನ್ನು ಕೈಗೊಳ್ಳಲಿರುವರು ಅವರಿಗೆ ನಾವು ಕನ್ನಡಿಗರು, ಹೃತ್ಪೂರ್ವಕವಾಗಿ ಸ್ವಾಗತನೀಡಿ ದೇಶದ ಹಿತವನ್ನು ಸಾಧಿಸುವಲ್ಲಿ ನೆರವಾಗಬೇಕು.

ಆಚಾರ್ಯ ವಿನೋಬಾರವರು ವರ್ತಮಾನ ವಿಶ್ವಮಹತ್ತಮ ಕ್ರಾಂತಿ ಪ್ರವರ್ತಕರು, ಸ್ವಯಂ ಮಹಾತ್ಮರು ಅವರ ತಪಸ್ವಿಜೀವನ, ಸೇವಾ ಭಾವನೆಗಳೆ ದೇಶದ ಜನತೆಯ ಹೃದಯಾಕರ್ಷಿಯಾಗಿವೆ ದೇಶದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ಅವರು ಬದ್ಧ ಕಂಕಣರಾಗಿ, ಗ್ರಾಮ ರಾಜ್ಯದ ಕನಸನ್ನು ಕಾಣುತಿದ್ದಾರೆ ಅವರ ಕನಸನ್ನು ನನಸಾಗಿಸುವುದು ಕೇವಲ ಅವರಿಂದ ಸಾಧ್ಯವಿಲ್ಲ, ವಿಶಾಲ ಭಾರತದ ಒಂದಂತ ಪ್ರಜೆಗಳಿಂದ ಮಾತ್ರ ಸಾಧ್ಯ. ನಮ್ಮ ಶಕ್ತಿ ಮೀರಿ ವಿನೋಬಾರವರ ಕರ್ನಾಟಕ ಸಂಚಾರದಲ್ಲಿ ನೆರವಾಗುವುದು ಕನ್ನಡಿಗರಾದ ನಮ್ಮೆಲ್ಲರ ಕರ್ತವ್ಯ.

ಮಹಾತ್ಮಾ ಗಾಂಧಿಯವರ ಮಾತಿನಂತೆ ನಡೆದು ನಮ್ಮ ದೇಶವು ಸ್ವರಾಜ್ಯವನ್ನು ಪಡೆಯಿತು ಇದೇ ರೀತಿಯಲ್ಲಿ ಆಚಾರ್ಯ ಭಾವೆಯವರ ಈ ಗ್ರಾಮದಾನದ ಪದದಲ್ಲಿ ನಡೆದು ಭಾರತವನ್ನು ಗ್ರಾಮರಾಜ್ಯವನ್ನಾಗಿ ಪರಿವರ್ತಿಸೋಣ.

(ವಿವಿಧ ಮೂಲಗಳಿಂದ)

—ಎಸ್ ಗೋಪಿಚಂದರಾವ್,
ಉಡುಪಿ

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

Edited, Printed & Published by A. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೬
VOL.36

29—8—1957

ಸಂಚಿಕೆ ೫೧
NO. 51

ಮಂಗಳ ಅಣೆಕಟ್ಟು

ಭಾರತವನ್ನು ವಂಚಿಸಲು ಪಾಕಿಸ್ತಾನದ ಕುಹಕೋಪಾಯ! ಮಂಗಳದ ಯೋಜನೆಯು ಅಮಂಗಳಕರವಾಗಿದೆ!

ನೆರೆಹೊರೆಯವರೊಡನೆ ಕೊಂದಿ ಕೊಂಡು ಬಾಳುವುದು ಶ್ರೇಯಸ್ಕರವೆನಿಸಿದಂತೆ ನೆರೆ ರಾಷ್ಟ್ರಗಳೊಡನೆ ಸ್ನೇಹ ವರ್ತನೆಯನ್ನು ತೋರಿಸುವುದೂ ಲಾಭದಾಯಕವಾದುದು. ಆದರೆ, ನಮ್ಮ ನೆರೆ ರಾಷ್ಟ್ರ ಪಾಕಿಸ್ತಾನವೀಗ ಈ ಉತ್ತಮವ ನೋಭಾವನೆಯನ್ನು ದೂರೀಕರಿಸುತ್ತ ಭಾರತದ ವೈರವನ್ನು ಅದೆಷ್ಟು ಗಾಢವಾಗಿ ಸಂಪಾದಿಸುವುದು ಸಾಧ್ಯವೋ ಅಷ್ಟನ್ನೂ ಕೂಡಿಹಾಕಿಕೊಳ್ಳುವ ಒಂದು ಉದ್ಯಮವನ್ನು ಕಾರ್ಯಾಚರಣೆಯಲ್ಲಿ ತಂದಿದೆ ಇದೀಗ ತಾನು ಅಕ್ರಮವಾಗಿ ಆಕ್ರಮಿಸಿದ ಭಾರತದ ಅವಿಭಾಜ್ಯ ಅಂಗವೆನಿಸಿದ ಜಮ್ಮೂ ಕಾಶ್ಮೀರ ರಾಜ್ಯದ ಅಜಾದ ಕಾಶ್ಮೀರವನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳುವ, ಅಲ್ಲಿನ ಜನತೆಯನ್ನು ನಿರಾಶ್ರಿತರನ್ನಾಗಿ ಮಾಡುವ ಇನ್ನೊಂದು ಉದ್ಯಮವನ್ನು ಪಾಕಿಸ್ತಾನದ ಕಿಡಿಗೇಡಿತನಕ್ಕೆ ಕಲಶಪ್ರಾಯವಾಗಿದೆ

೧೯೪೮ರಿಂದಲೂ, ಕಾಶ್ಮೀರದ ಒಂದು ಭಾಗವಾದ ಅಜಾದ ಕಾಶ್ಮೀರವು ಪಾಕಿಸ್ತಾನದ ಆಕ್ರಮಣಕ್ಕೊಳಗಾಗಿದೆ. ಭದ್ರತಾ ಮಂಡಲದಲ್ಲಿ ಈ ಬಗ್ಗೆ ಭಾರತವು ದೂರನ್ನೊಯ್ದು ಕಾಶ್ಮೀರ ಸವ ಸ್ಯೆಯನ್ನು ಪರಿಹರಿಸುವಂತೆ ಅದನ್ನು ಕೇಳಿಕೊಂಡಾಗ, ಅದು ಒಂದು ಗೊತ್ತುವಳಿಯನ್ನು ಸ್ವೀಕರಿಸಿ "ಅಕ್ರಮವಾಗಿ ಪಾಕಿಸ್ತಾನದ ಸೈನಿಕರು ಆಕ್ರಮಿಸಿದ ಜಮ್ಮು ಕಾಶ್ಮೀರ ಪ್ರದೇಶದಿಂದ ಹೊರಟು ಹೋಗಬೇಕು ಜಮ್ಮೂ ಕಾಶ್ಮೀರ ಸರಕಾರವೊಂದೇ ಆ ಪ್ರದೇಶದ ಕಾಯದೆ ಬದ್ಧ ಸರಕಾರವಾಗಿರುವುದು" ಎಂದು ಹೇಳಿದೆ ಹಾಗೆಯೇ ಪರಿಸ್ಥಿತಿಗಳನ್ನು ಹದಗೆಡಿಸುವಂತಹ ಹೇಳಿಕೆಗಳನ್ನು ಹೊರಡಿಸುವ ಮತ್ತು ಯಾವುದೇ ಕೃತಿಯನ್ನು ಕೃತಃ ಇಲ್ಲವೆ ಅನ್ಯರ ಮೂಲಕ ಮಾಡಿಸುವ ಅಥವಾ ಮಾಡಲು ಅನುಮತಿಯೀಯುವ ಮೊದಲಾದುವುಗಳಿಂದ ಉಭಯ ರಾಷ್ಟ್ರಗಳೂ ದೂರವಿರಬೇಕು ಎಂದೂ ಒಂದು ಗೊತ್ತುವಳಿಯನ್ನು ಸ್ವೀಕರಿಸಿದೆ

ಆದರೆ, ಪಾಕಿಸ್ತಾನವು ತನ್ನ ನೆರೆ ರಾಷ್ಟ್ರ ಭಾರತದೊಡನೆ ಮೈತ್ರಿಯನ್ನು ಬಯಸುತ್ತಿರುವಂತೆ ಕಂಡು ಬರುವುದಿಲ್ಲ "ಕಾಶ್ಮೀರವು ತನಗೆ ಬೇಕು"ಎಂಬ ಒಂದೇ ಒಂದು ಲೋಭದಿಂದಾಗಿ ಅದು ಈಚೀಚೆಗೆ ಮಾಡಬಾರದ ಅನ್ಯಾಯಗಳನ್ನು ಮಾಡಿ, ಮೊದಲೇ ಬಗ್ಗಿ ನಡೆಯುತ್ತಿರುವ ಭಾರತಕ್ಕೆ ಮತ್ತೂ ಮತ್ತೂ ಗುದ್ದು ಕೊಡಲು ಹವಣಿಸುತ್ತದೆ ಕಾಶ್ಮೀರದಲ್ಲಿ ಜನಮತ ಸಂಗ್ರಹವಾಗಬೇಕೆಂದು ಕೇಳುವ ಸುಹೃದರ್ಯಿಯವರು ಅಜಾದ ಕಾಶ್ಮೀರದಿಂದ ಅಕ್ರಮವಾಗಿರುವ ತನ್ನ ಸೇನೆಯನ್ನು ಹಿಂದೆ ಕರೆಯಲು ಸಿದ್ಧರಾಗಿಲ್ಲ ಕಾಲುವೇ ನೀರಿನ ವಿವಾದವನ್ನು ರಾಜಿಯಿಂದಲೇ ತೀರ್ಮಾನಿಸಬಯಸುವ ಪಾಕಿಸ್ತಾನಿ ಧುರೀಣರು ಭಾರತದಿಂದ ಅನ್ಯಾಯವಾಗಿ ಧನ ಸೂರೆ ಮಾಡುವ ಇರಾದೆಯಲ್ಲಿರುವಂತೆ ತೋರುತ್ತದೆ. ಇದೀಗ ಅಜಾದ ಕಾಶ್ಮೀರದ ಮಂಗಲವೆಂಬಲ್ಲಿ ಒಂದು ಬೃಹತ್ ಅಣೆಕಟ್ಟನ್ನು ಕಟ್ಟುವ ನಿರ್ಧಾರವನ್ನು ಪಾಕಿಸ್ತಾನ ಸರಕಾರವು ಮಾಡಿ, ಅಖಂಡ ಕಾಶ್ಮೀರವಲ್ಲವಾದರೂ, ಈಗ ತಾನು ಆಕ್ರಮಿಸಿರುವ ಕಾಶ್ಮೀರದ ಒಂದಂಶವನ್ನಾದರೂ ಶಾಶ್ವತವಾಗಿ ತನ್ನ ಅಂಕೆಯಲ್ಲಿಟ್ಟುಕೊಳ್ಳುವದ ರಾಲೋಚನೆಯನ್ನು ಮಾಡಿರುವುದು ಜೋದ್ಯ ಸಂಗತಿಯಾದರೂ ಆಕ್ಷೇಪಣೀಯವೇ ಆಗಿದೆ

ತನಗೆ ಅಜಾದ ಕಾಶ್ಮೀರದ ಯಾವುದೇ ಒಂದು ಅಧಿಕಾರವು ಕಾಯದೆಬದ್ಧವಾಗಿ ಇಲ್ಲವಾದರೂ, ಜಮ್ಮೂ ಕಾಶ್ಮೀರದ ಸರಕಾರವೇ ಈ ಭಾಗದ ಕಾಯದೆಬದ್ಧ ಸರಕಾರವೆಂದು ಭದ್ರತಾ ಸಮಿತಿಯ ಗೊತ್ತುವಳಿಯಲ್ಲಿದ್ದರೂ ಪಾಕಿಸ್ತಾನದ ಬುದ್ಧಿವಂತರು ಈ ರೀತಿಯ ಅಚರಣೆಯನ್ನು ಮಾಡುತ್ತಿರುವುದು ತಮ್ಮ ಮೂಲಕ್ಕೇ ಕೊಡಲೀ ಏಟನ್ನು ಹಾಕಿಕೊಂಡಂತೆ ಭಾರತದೊಡನೆ ಯುದ್ಧ ಮಾಡಿ ಕಾಶ್ಮೀರ ಸಮಸ್ಯೆಯನ್ನು ಇತ್ಯರ್ಥ ಎಂದೆನಿಸುವುದು ಹೆಚ್ಚು ಮಾತೆಂದ, ಭಾರತದೊಡನೆ ಸ್ನೇಹ ವರ್ತನೆಯಿಂದಿರಲು ತಾನು ಬಯಸುತ್ತೇನೆ ಎಂದು ಎಂದ ಸುಹೃದರ್ಯಿಯವರು ಈ ಬಗ್ಗೆ ಎಷ್ಟು ಗಮನವಿತ್ತಿರ ದರೋ ತಿಳಿಯದು ಭಾರತದ ಸ್ನೇಹ ಗಳಿಸುವ ಸುಲಭ ಮಾರ್ಗವಿದೆಂದು ಭ್ರಮೆಗೊಂಡರೆ, ಅಥವಾ ಅಂದು ಅಡುವಾಗ ತಪ್ಪಿ ನುಡಿದರೇ ಎನ್ನುವುದೇ ತಿಳಿಯದಂತಾಗಿದೆ

ಪಾಕಿಸ್ತಾನಕ್ಕೆ ಇಂದು ಬೇಕಾಗಿರುವುದು ನೆರೆರಾಷ್ಟ್ರ ಭಾರತವಲ್ಲ—ಕಾಶ್ಮೀರ, ಅದಕ್ಕಾಗಿ ಬಗ್ದಾದ್ ಸೀಟೋ ಮೊದಲಾದ ಸೈನಿಕ್ಕೊಡಂಬಡಿಕೆಗಳಲ್ಲಿ ಸಿಕ್ಕಿಕೊಂಡಿದೆ ಅಮೇರಿಕಾದೊಡನೆ ಯುದ್ಧ ಸಾಮಗ್ರಿಗಳ ವ್ಯವಹಾರವನ್ನು ಮಾಡಿಕೊಂಡಿದೆ. ಭಾರತದ ಬಗ್ಗೆ ಅಸಹನೆಯು ಅವಿಗೆಯೊಳಗಿನ ಉರಿಯಂತೆ ಮನೆ ಮಾಡಿದೆ ಆದರೆ ಅನ್ಯಾಯವೆಂದು ಅಖಂಡ ಜಗತ್ತೆ ವಾದಿಸಿ, ತೋರಿಕೆಯ ಬೆಂಬಲವನ್ನೂ ತನಗೀಯಲು ನಿರಾಕರಿಸಿರುವಾಗ ತಮ್ಮ ಮನೋವಾಂಛೆಯನ್ನು ಈಡೇರಿಸುವ ಅನ್ಯಮಾರ್ಗವಾದರೂ ಪಾಕಿಸ್ತಾನಕ್ಕೆ ಯಾವುದು?

ಇದಕ್ಕಾಗಿಯೇ ಗಿಲ್ಗಿಟ್ ಜಿಲ್ಲೆಯನ್ನು ಮಾಡಿದಂತೆ ತಾನಾಕ್ರಮಿಸಿಕೊಂಡ ಕಾಶ್ಮೀರದ ಭಾಗವನ್ನು ಸಂಪೂರ್ಣವಾಗಿ ಕಬಳಿಸುವ ಉದ್ದೇಶದಿಂದಲೇ ಈಗ ಮಿರ್ಪುರ ಜಿಲ್ಲೆಯಲ್ಲಿ ಮಂಗಳಾ ಎಂಬಲ್ಲಿ ಅಣೆಕಟ್ಟನ್ನು ಕಟ್ಟುವ ಯೋಜನೆಯೊಂದನ್ನು ಮಾಡಿದೆ. ಕಾಶ್ಮೀರದ ಜನತಾ ಮುಖಂಡರ ಅಭಿಮತದಂತೆ ಈ ಯೋಜನೆಯನ್ನು ಕಾರ್ಯರೂಪದಲ್ಲಿ ತರುವಾಗ, ಮಿರ್ಪುರ ನಗರ, ಮಂಗಲ ಮತ್ತು ಕಲವಾರು ಸುತ್ತು ಮುತ್ತಲಿನ ಹಳ್ಳಿಗಳನ್ನು ನೆಲ ಸಮಮಾಡಿ ಸುಮಾರು ಒಂದು ಲಕ್ಷ ಜನರ ಆಸ್ತಿಪಾಸ್ತಿಗಳನ್ನು ನಾಶಮಾಡ ಬೇಕಾಗುತ್ತದೆ. ಇಂತಹ ಅನಾಚಾರವನ್ನು ಮಾಡುವ ಉದ್ದೇಶವಾದರೂ ಏನು? ತಾನಾಕ್ರಮಿಸಿದ ಪ್ರದೇಶವನ್ನು ತನ್ನ ರಾಜ್ಯದಲ್ಲಿ ವಿಲೀನ ಮಾಡಿಕೊಳ್ಳುವುದು ಮಾತ್ರ

ಪಾಕಿಸ್ತಾನದ ಈ ತರದ ಗಂಭೀರವಾದ ಅಪಕೃತ್ಯವನ್ನು ಕಾಶ್ಮೀರದ ಜನತೆಯು ವಿರೋಧಿಸುತ್ತದೆ. ಅದಕ್ಕೆ ಬೇಕಾದ ಸರ್ವತ್ಯಾಗಕ್ಕೂ ಕಾಶ್ಮೀರಿಗಳು ಇಂದು ಸನ್ನದ್ಧರಾಗಿದ್ದಾರೆ ತನ್ನ ರಾಜ್ಯದ ಒಂದು ಭಾಗದಲ್ಲಿ ಇನ್ನೊಂದು ಸರಕಾರವು ವ್ಯವಹರಿಸುವುದು ಯಾವ ರಾಜ್ಯದ ಪ್ರಜೆಗೂ ಒಪ್ಪಿ ಬರುವ ವಿಷಯವಲ್ಲ. ಎಂತಲೇ ಪಾಕಿಸ್ತಾನವು ಕಾಶ್ಮೀರದಲ್ಲಿ ಕೋಲಾಹಲದ ಬೀಜವೊಂದನ್ನು ಬಿತ್ತಿದಂತಾಗಿದೆ

ಕಾಶ್ಮೀರವಾದರೋ ಭಾರತದ ಅಂಗ ಆದುದರಿಂದ ಕಾಶ್ಮೀರದ ಆಗುಹೋಗುಗಳಲ್ಲಿ ಸ್ವಿಭಾರತಕ್ಕೆ ಆಸಕ್ತಿಯಿದೆ ಪಾಕಿಸ್ತಾನದ ಕಪಟ ಸನ್ನಾಹಿತನವನ್ನು ಭದ್ರತಾಮಂಡಳಕ್ಕೆ ನಿವೇದಿಸಿ ಅ ಬಗ್ಗೆ ತನ್ನ ನಿಷೇಧ ಸೂಚನೆಯನ್ನು ಕೊಟ್ಟಿದೆ. ಪ್ರಧಾನಿ ನೆಹರೂರವರಿಗೆ ಪಾಕಿಸ್ತಾನವನ್ನು ಈ ಅವ್ಯಾವಹಾರಿಕ ಯೋಜನಾ ಪ್ರಾರಂಭದಿಂದ ಭದ್ರತಾಮಂಡಳವು ಪಡೆಯುವುದೆಂಬ ಆಶ್ವಾಸನೆಯನ್ನು ಆನರ ಅಧ್ಯಕ್ಷರಿತ್ತಿರುವರೆಂದು ನಂದಿಯಾಗಿದೆ ಆದರೆ, ಇದುವರೆಗಿನ ಪಾಕಿಸ್ತಾನದ ನಡತೆಯನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ವಿಮರ್ಶಿಸಿದರೆ, ಅದೆಷ್ಟು ಸಂಭವನೀಯವೋ ತಿಳಿಯದು ಕಾಶ್ಮೀರ ನಮ್ಮದೆನ್ನುವ ಭಾರತೀಯರು ಈ ಬಗ್ಗೆ ನಿಷೇಧವನ್ನು ಸೂಚಿಸುವುದು ಅಗತ್ಯವಲ್ಲದೆ, ಪಾಕಿಸ್ತಾನದ ಅಕೃತ್ಯವನ್ನು ತಡೆಗಟ್ಟುವಲ್ಲಿ ಒಂದಾಗಬೇಕು.

ಪಾಕಿಸ್ತಾನದ ಕಾಶ್ಮೀರ ಕಬಳಿಸುವ ಆಶೆಯನ್ನು ನಿರಾಶೆಯಲ್ಲಿ ಅಂತ್ಯಗೊಳಿಸುವಲ್ಲಿ, ಅಜಾದ ಕಾಶ್ಮೀರವನ್ನು ಆಕ್ರಮಿಸಿದ ಪಾಕಿಸ್ತಾನವನ್ನು ಶಾಂತ ವಿಧಾನದಿಂದ ಹಿಮ್ಮೆಟ್ಟಿಸುವಲ್ಲಿ ಭಾರತೀಯರೆಲ್ಲರೂ ತಮ್ಮ ಸೋದರ ಕಾಶ್ಮೀರಿಗಳಿಗೆ ನೆರವಾಗಬೇಕು ಏಕೆಂದರೆ, ಕಾಶ್ಮೀರಕ್ಕೆ ಹಾನಿಯೊದಗಿತೆಂದರೆ, ಭಾರತಕ್ಕೆ ಕಂಟಕ ನಾಟಿದಂತೆಯೇ ಸರಿ. ಮಂಗಲ ಅಣೆಕಟ್ಟು ಅಮಂಗಲದಲ್ಲಿ ಕೊನೆಗೊಳ್ಳದಿರಲಿ

ಎಸ್. ಗೋಪೀಚಂದ ರಾವ್,
ಉಡುಪಿ.

ಹೊಸ ಸುದ್ದಿ

ಸೇವಿಂಗ್ಸ್ ಬೇಂಕ್ ಡಿಪೋಸಿಟಿನ ಬಡ್ಡಿ ದರವನ್ನು 2½%ಗೆ ಹೆಚ್ಚಿಸಲಾಗಿದೆ ವಾರಕ್ಕೆ ಒಂದಾವರ್ತಿಗಿಂತ ಮಿಕ್ಕಿ ಖಾತೆಯಿಂದ ಹಣ ತೆಗೆಯಲು ಈಗ ಯಾವೊಂದೂ ಆತಂಕವಿಲ್ಲ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಏರಿಸಲಾಗಿದೆ ತಾ. 1-7-1957ರಿಂದ ಏರಿಸಿದ ಬಡ್ಡಿಯಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ

ದಿ ವಿಜಯ ಬೇಂಕ್ ಲಿಮಿಟೆಡ್

(ವಿ. ಸೂ ಬೆಂಗಳೂರು ನಗರದಲ್ಲಿ ಬೇಂಕಿನ ಹೊಸ ಶಾಖೆಯನ್ನು 28-8-57ರಲ್ಲಿ ತೆರೆಯಲಾಗಿದೆ.)

ವಾರ್ಷಿಕ ಚಂದಾ: NAVAYUGA WEEKLY [illegible]

ಮಾರಾಟದ ಮಾಧ್ಯಮ

ಬೆಳೆಗೆ ತಕ್ಕ ಬೆಲೆ ಬರಲು ವ್ಯವಸ್ಥಿತ ಮಾರಾಟ ಪದ್ಧತಿ

ಕೃಷಿಕನನ್ನು ಹೆಚ್ಚಿನ ಉತ್ಪಾದನೆಯನ್ನು ಬೆಳೆಸುವಂತೆ ಉತ್ತೇಜನವೀಯ ವಯೋಗ್ಯ ಬೆಲೆಯನ್ನು ದೊರಕಿಸಿಕೊಡುವ ಸಂದರ್ಭದಲ್ಲಿ ವ್ಯವಸ್ಥಿತ ಮಾರಾಟ ಒಂದು ಪ್ರಮುಖ ಸ್ಥಾನವನ್ನು ವಹಿಸುತ್ತದೆ. ಇದರಲ್ಲಿ ಕೃಷಿ ವಸ್ತುಗಳ ಸಂಗ್ರಹ, ವಿಗಂಡನೆ ಮತ್ತು ಹದಗೊಳಿಸುವುದ ಇವುಗಳೂಡನೆ ಮಾರುಕಟ್ಟೆಯ ನಿಯಮಗಳು, ಸಹಕಾರ ವಿಧಾನದ ಮಾರಾಟ ಮತ್ತು ಸಗ್ರಹಾಲಯಗಳ ವ್ಯವಸ್ಥೆಗಳೂ ಸೇರಿರುತ್ತವೆ

ಭಾರತದಲ್ಲಿರುವ ಒಟ್ಟು ೧,೮೦೦ ಪ್ರಮುಖ ಮಾರುಕಟ್ಟೆ ಕೇಂದ್ರಗಳಲ್ಲಿ ೫೨೩ ಕೇಂದ್ರಗಳನ್ನು ಮುಂಬಾಯಿ, ಮಧ್ಯಪ್ರದೇಶ, ಆಂಧ್ರ ಮದರಾಸು, ಮೈಸೂರು, ಪಂಜಾಬು ಮತ್ತು ಒರಿಸ್ಸಾ-ಈ ಏಳು ರಾಜ್ಯಗಳಲ್ಲಿ ಈಗಾಗಲೇ ನಿಯಂತ್ರಣಗೊಳಿಸಲಾಗಿದೆ ದ್ವಿತೀಯ ಯೋಜನೆಯ ಕೊನೆಯ ಹೊತ್ತಿಗೆ ಸುತ್ತೂ ೫೦೦ ಕೇಂದ್ರಗಳನ್ನು ಹೊಸತಾಗಿ ವ್ಯವಸ್ಥೆಗೊಳಿಸಲಾಗುವುದು.

ನಿಯಂತ್ರಿತ ಮಾರುಕಟ್ಟೆಗಳ ಮೇಲ್ವಿಚಾರಣೆಯನ್ನು ಅದಕ್ಕಾಗಿಯೇ ರಚಿತವಾದ ಸಮಿತಿಗಳು ನೋಡಿಕೊಳ್ಳುವುವು ಕೃಷಿ ವಸ್ತುಗಳ ಉತ್ಪಾದಕರು, ವ್ಯಾಪಾರಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಈ ಸಮಿತಿಗಳಲ್ಲಿ ಅಧಿಕ ಸಂಖ್ಯೆಯಲ್ಲಿರುವರು ಅನೇಕ ಪ್ರಸಂಗಗಳಲ್ಲಿ ಈ ಸಮಿತಿಗಳಲ್ಲಿ ಚುನಾಯಿತರಾದ ಅಧ್ಯಕ್ಷರಿರುವರು. ಯೋಗ್ಯ ವ್ಯವಹಾರ ಪದ್ಧತಿಯನ್ನು ತರುವುದು, ಮಾರುಕಟ್ಟೆ ಕೆಲಸಕ್ಕೆ ಅನುಮತಿ ಈಯುವುದು, ನಿರ್ಧಾರವಾದ ಮಾರುಕಟ್ಟೆ ಶುಲ್ಕವನ್ನು ವಸೂಲಿಸುವುದು, ಬಹಿರಂಗವಾಗಿ ಹರಾಜು ಮಾಡುವ ಮೂಲಕ ಮಾರಾಟ ಪದ್ಧತಿಯನ್ನು ಏರ್ಪಡಿಸುವುದು, ಪ್ರಮಾಣೀಕೃತ ತೂಕ ಮತ್ತು ಅಳತೆಯನ್ನು ಅನುಷ್ಠಾನಕ್ಕೆ ತರುವುದು ಇವು ಮಾರುಕಟ್ಟೆ ಸಮಿತಿಗೆ ಸೇರಿದ ಜವಾಬ್ದಾರಿಗಳು. ಮಾರುಕಟ್ಟೆಯ ಜಾಗದ ಮೇಲ್ವಿಚಾರಣೆ, ಗಾಡಿಗಳನ್ನು ನಿಲ್ಲಿಸುವ ಸ್ಥಳದ ಏರ್ಪಾಡು, ರೈತರಿಗೆ ವಿಶ್ರಾಂತಿ ಗೃಹಗಳು, ಉಪಾಹಾರ ಗೃಹಗಳು, ಸಂಗ್ರಹಾಲಯಗಳು ಹಾಗೂ ಕೃಷಿ ಉತ್ಪನ್ನಗಳನ್ನು ಹರಾಜು ಹಾಕುವುದಕ್ಕೆ "ಚಜ್ಪರ"ಗಳನ್ನು ಏರ್ಪಡಿಸುವುದು ಇವೂ ಈ ಸಮಿತಿಯ ಜವಾಬ್ದಾರಿಕೆಗೆ ಸೇರಿದುವು.

ಈ ಕಲಸವನ್ನು ಮತ್ತಷ್ಟು ವಿಕಾಸಗೊಳಿಸುವ ಉದ್ದೇಶದಿಂದ, ಭಾರತ ಸರಕಾರದ ಆಹಾರ ಮತ್ತು ಬೇಸಾಯ ಮಂತ್ರಿಶಾಖೆಯ ಮಾರುಕಟ್ಟೆ ಮತ್ತು ಮೇಲ್ವಿಚಾರಕ ಡೈರೆಕ್ಟರೇಟಿನಲ್ಲಿ ಸಲಹಾ ಸಮಿತಿಯೊಂದನ್ನು ನೇಮಿಸಲಾಗಿದೆ. ರಾಜ್ಯಸರಕಾರಗಳು ಮತ್ತು ಮಾರುಕಟ್ಟೆ ಸಮಿತಿಗಳಿಗೆ ಅವುಗಳ ಸ್ಥಳೀಯ ಸಮಸ್ಯೆಗಳನ್ನು ಗಳಿಸಿದ ಅನುಭವದ ದೃಷ್ಟಿಯಿಂದ ಬಗೆಹರಿಸಲು ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಮಾನತೆಯನ್ನು ಸಂಸ್ಥಾಪಿಸಲು ಸಲಹೆ ನೀಡುವುದೇ ಈ ಸಮಿತಿಯ ಉದ್ದೇಶವಾಗಿದೆ ಅಲ್ಲದೆ, ಉತ್ಪಾದಕ-ಮಾರಾಟಗಾರರು ಕೊಡಬೇಕಾದ ಮಾರುಕಟ್ಟೆ ಶುಲ್ಕವನ್ನು ಕಡಿಮೆಮಾಡಿರುವುದರಿಂದ ರೈತನಿಗೆ ಈಗ ಶನ್ನ ಉತ್ಪಾದನೆಯಲ್ಲಿ ಎಕರೆಯೊಂದಕ್ಕೆ ೨ ರೂಪಾಯಿಗಳಿಂದ ೫ ರೂಪಾಯಿಗಳಷ್ಟು ಹೆಚ್ಚು ಹಣವೂ ದೊರೆಯುತ್ತದೆ.

ವಸ್ತುಗಳ ವಿಂಗಡಣೆಯಿಂದ ಕೊಳ್ಳುವವರಿಗೂ ಮಾರುವವರಿಗೂ ನಡುವೆ ಪರಸ್ಪರ ಸಮಾಧಾನ ಹುಟ್ಟುವುದು ಕೊಳ್ಳುವಾತನಿಗೆ ತನಗೆ ಅಗತ್ಯ ಗುಣಾಂಶದ ವಸ್ತುವೂ ದೊರೆಯುವುದು. ಉತ್ಪಾದಕರಿಗೆ ಅವರ ವಸ್ತುಗಳಿಗನುಗುಣವಾದ ಬೆಲೆಯೂ ದೊರೆಯುವುದು ಭಾರತ ಸರಕಾರದವರು ೧೯೫೭ರಲ್ಲಿ ಬೇಸಾಯ ಉತ್ಪನ್ನ (ವಿಂಗಡಣೆ ಮತ್ತು ಮಾರಾಟ) ಕಾನೂನನ್ನು ಆಚರಣೆಗೆ ತಂದು ವ್ಯಾವಸಾಯಿಕ ಉತ್ಪನ್ನಗಳ ಮಾರಾಟದಲ್ಲಿ ಸಲಹೆ ನೀಡುವ ಅಧಿಕಾರಿಗಳು ಪ್ರಮಾಣೀಕೃತ ನಿಯಮಗಳನ್ನು ರಚಿಸಲು ಅಧಿಕಾರ ನೀಡಿದ್ದರು. ಈ ಕಾನೂನಿನಂತೆ, ವಿಂಗಡಣೆಯು ಸ್ವಯಂಮಾನವಾಗಿರುವುದು. ತುಪ್ಪ, ಆಹಾರಕ್ಕೆ ಬಳಸುವ ಎಣ್ಣೆ, ಮೊಟ್ಟೆ, ಬೆಣ್ಣೆ, ಹತ್ತಿ, ಅಕ್ಕಿ, ಹಣ್ಣು, ಬೆಲ್ಲ ಮತ್ತು ಆಲೂ ಗೆಡ್ಡೆ ಇತ್ಯಾದಿಗಳನ್ನು ಗುಣಾಂಶಕ್ಕನುಗುಣವಾಗಿ ವಿಂಗಡಿಸಲಾಗುವುದು. ಈಗೀಗ ಇಂತಹ ವಿಂಗಡಣೆಗೊಳಗಾದ ವಾಣಿಜ್ಯ ಪದಾರ್ಥಗಳ ಪ್ರಮಾಣವು ಅಧಿಕವಾಗುತ್ತಿದೆ ಈ ವಸ್ತುಗಳನ್ನೆಲ್ಲಾ ದೇಶದ ಒಳ ಬಳಕೆಗಾಗಿ ವಿಂಗಡಿಸಲಾಗುವುದು. ಇನ್ನು ತಂಬಾಕು, ಉಣ್ಣೆ, ಬಿರುಗೂದಲು, ಮಜ್ಜಿಗೆ ಸೊಪ್ಪು ಹಾಗೂ ಗಂಧದೆಣ್ಣೆ ಮೊದಲಾದವನ್ನು ರಫ್ತಿಗೆ ಮುಂಚೆ ಒತ್ತಾಯಪೂರ್ವಕವಾಗಿ ಗುಣಾಂಶಗಳ ಪ್ರಕಾರ ವಿಂಗಡಿಸಲಾಗುವುದು.

ಕಡಲೆಕಾಯಿ, ಭತ್ತ ಮತ್ತು ದ್ವಿದಳ ಧಾನ್ಯಗಳ ಬಗೆಗೆ ಹಳ್ಳಿಗಳಲ್ಲಿಯೇ ಪೂರ್ವಭಾವಿಯಾಗಿ ಹದಗೊಳಿಸಲಾಗುವುದು ಅನುಕಯುಕ್ತ ವಸ್ತುಗಳನ್ನು ಕೈಬಿಡುವುದರಿಂದ, ಸಾಗಾಣಿಕೆಯ ವೆಚ್ಚದಲ್ಲಿ ಉಳಿತಾಯವಾಗುವುದು ರೈತರಿಗೆ ಅವರ ವಿರಾಮ ವೇಳೆಯಲ್ಲಿ ಉದ್ಯೋಗವೂ ದೊರೆಯುವುದು. ಕೃಷಿ ಉತ್ಪನ್ನಗಳನ್ನು ಸರಿಯಾದ ರೀತಿಯಲ್ಲಿ ಶುದ್ಧಮಾಡಿ ಒಣಗಿಸುವುದರಿಂದ ಅವರ ಗುಣಾಂಶವೂ ಹೆಚ್ಚುವುದು, ರೈತರಿಗೆ ಅದರಿಂದ ಉತ್ತಮ ಬೆಲೆಯೂ ಬರುವುದು.

ಭಾರತದಲ್ಲಿ ಬೇಸಾಯಕ್ಕಿರುವ ಭೂಮಿ ಅತ್ಯಲ್ಪ, ಬೇಸಾಯಗಾರರ ಸಂಖ್ಯೆ ಅತ್ಯಧಿಕ- ಆದುದರಿಂದ ಸಹಕಾರಿ ಪದ್ಧತಿಯ ಬೇಸಾಯ ವಿಧಾನವನ್ನು ಅದಷ್ಟು ತ್ವರಿತಗತಿಯಿಂದ ಕೈಗೊಳ್ಳದ ಹೊರತು ಉತ್ಪನ್ನವು ಹೆಚ್ಚುವುದಿಲ್ಲ ಗ್ರಾಮಾಂತರ ಸಾಲ ಸೌಲಭ್ಯದ ಕಡೆಗೆ ರಿಸರ್ವ್ ಬೇಂಕಿ

(೧೧ನೇ ಪುಟ ನೋಡಿರಿ)

೧೯೫೨ ಅಕ್ಟೋಬರದಲ್ಲಿ ಪ್ರಾರಂಭವಾದ ಸಾಮುದಾಯಿಕ ಅಭಿವೃದ್ಧಿ ಯೋಜನೆಯು ಇಂದು ಗ್ರಾಮೀಣ ಪ್ರದೇಶದ ಐದರಲ್ಲೊಂದರಷ್ಟು ಜನಸಂಖ್ಯೆಯ ಭಾಗಕ್ಕೆ ಹಬ್ಬಿದೆ ದ್ವಿತೀಯ ಯೋಜನಾಂತ್ಯದಲ್ಲಿ ಅದು ಎಲ್ಲ ಗ್ರಾಮಗಳಿಗೂ ಹರಡುವುದು. ಸಹಕಾರಿ ಸಂಘ ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹನೆ, ಗೃಹನಿರ್ಮಾಣ, ಸೂಕ್ಷ್ಮರಕ್ಷಣೆ, ಆರೋಗ್ಯ ಮತ್ತು ಅಭಿವೃದ್ಧಿ ಕೇಂದ್ರಸ್ಥಾಪನೆ ಮೊದಲಾದುವುಗಳಲ್ಲಿ ಈ ಯೋಜನೆಯು ಯಶಸ್ವಿಯಾಗಿದೆ ಈ ಕಾರ್ಯಕ್ರಮ ಪ್ರಾರಂಭವಾದಂದಿನಿಂದ ಸುಮಾರು ೭೦,೦೦೦ ಶಾಲೆಗಳನ್ನೂ ೫೧,೦೦೦ ಮೈಲುಗಳ ರಸ್ತೆಯನ್ನೂ ಗ್ರಾಮೀಣ ಪ್ರದೇಶಗಳಲ್ಲಿ ರಚಿಸಿದ ಎಂದರೆ, ಈ ಯೋಜನೆಯ ಮಹತ್ವವನ್ನೂ ಅದು ಮಾಡುತ್ತಿರುವ ಕಾರ್ಯಕಲಾಪಗಳನ್ನೂ ತಿಳಿಯಬಹುದು ಈ ಚಿತ್ರದಲ್ಲಿ 'ಸಾಮುದಾಯಿಕ ಅಭಿವೃದ್ಧಿ ಯೋಜನೆ"ಗೆ ಸಂಬಂಧಿಸಿದ ಐದು ನೋಟಗಳಲ್ಲಿ ನೋಡಿರಿ.

ನೋಟ ೧: ಸುಧಾರಿತ ರೀತಿಯಲ್ಲಿ ಕೃಷಿಯನ್ನು ಮಾಡುತ್ತಿರುವ ದಕ್ಷಿಣದ ಒಂದು ಬತ್ತದ ಗದ್ದೆ.

ನೋಟ ೨: ಪಶ್ಚಿಮ ಉತ್ತರ ಪ್ರದೇಶದ ರಾಷ್ಟ್ರೀಯ ವಿಸ್ತರಣಾಕ್ಷೇತ್ರದ ಸಲಹಾ ಸಮಿತಿಯ ಸಭಾ ಕಾರ್ಯಗಳಲ್ಲಿ ತಲ್ಲೀನವಾಗಿದೆ.

ನೋಟ ೩: ಸಾಮುದಾಯಿಕ ಅಭಿವೃದ್ಧಿಯ ಯೋಜನೆಯನ್ವಯ ದೆಹಲಿಯ ಸಮೀಪದ ಹಳ್ಳಿಯೊಂದರಲ್ಲಿ ರಚಿಸಿದ ಹೊಸ ಮಾರ್ಗ.

ನೋಟ ೪: ಮೈಸೂರಿನ ಹಳ್ಳಿಯೊಂದರ ಸಾಮುದಾಯಿಕ ಅಭಿವೃದ್ಧಿಯೋಜನೆಯ ಆರೋಗ್ಯ ಕೇಂದ್ರದ ಒಳಭಾಗ

ನೋಟ ೫: ಉತ್ತರ ಪ್ರದೇಶದ ಗ್ರಾಮಶಾಲೆಯೊಂದರಲ್ಲಿ ವಿದ್ಯಾರ್ಥಿಗಳು ಓದ ಬರೆಯದಲ್ಲಿ ತಲ್ಲೀನರಾಗಿದ್ದಾರೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ.- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ —

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1
3) ಸ್ಟುಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಗ್ರಾಮೋದ್ಧಾರ

ದೇಶದ ಬಡತನಕ್ಕೆ ಗ್ರಾಮೋದ್ಧಾರವೇ ದಿವ್ಯೌಷಧ– ಕುಟೀರೋದ್ಯೋಗಗಳಿಂದಲೇ ಸಂತಪ್ತ ಗ್ರಾಮಗಳ ಸಂತೃಪ್ತಿ

ಗ್ರಾಮೀಣ ಜನತೆಯ ನಿರುದ್ಯೋಗ ಪ್ರಶ್ನೆಯು ಒಂದು ಭೀಷಣ ರೂಪವನ್ನು ಧಾರಣೆ ಮಾಡಿದೆ. ದೇಶದ ಬಡತನದ ಮೂಲ ಕಾರಣವು ಗ್ರಾಮಸ್ಥರ ನಿರುದ್ಯೋಗವಾಗಿದೆ. ನಮ್ಮ ದೇಶವು ಕೃಷಿ ಪ್ರಧಾನವಾದುದು; ಹೆಚ್ಚಿನ ಜನರು ಗ್ರಾಮಗಳಲ್ಲಿಯೇ ವಾಸಿಸುತ್ತಾರೆ. ಭೂಮಿಯ ಉತ್ಪಾದನೆಯಿಂದಲೇ ಈ ಜನರ ಜೀವನ ನಿರ್ವಾಹವು ನಡೆಯುತ್ತದೆ. ಗ್ರಾಮಗಳಲ್ಲಿ ಭೂ ರಹಿತ ಶ್ರಮಿಕ ವರ್ಗದ ಜನರ ಸಂಖ್ಯೆಯು ದಿನೇ ದಿನೇ ಬೆಳೆಯುತ್ತಿದೆ. ಇನ್ನು ಕೆಲವರಲ್ಲಿ ವರ್ಷವಿಡೀ ನಿರ್ಭರವಾಗಿ ಗದ್ದೆ ಕೆಲಸವನ್ನು ಮಾಡುವಷ್ಟು ಭೂಮಿಯಿರುವುದಿಲ್ಲ; ಇಲ್ಲವೆ, ವರ್ಷದ ಎಲ್ಲಾ ದಿನಗಳಲ್ಲೂ ಕೂಲಿ ದೊರೆಯುವ ಶ್ರಮಿಕ ವರ್ಗದ ಜನರಿಲ್ಲ. ಗದ್ದೆಗಳಲ್ಲಿ ವ್ಯವಸಾಯ ಮಾಡುವುದಷ್ಟೇ ಅವರಿಗೆ ತಿಳಿದಿರುತ್ತದೆ. ಮತ್ತು ಇದರಿಂದಾಗಿ ಅವರ ಆದಾಯವು ಬಹಳ ಕಡಿಮೆಯಾಗುತ್ತದೆ. ಹಳ್ಳಿಗಳಲ್ಲಿ ವಾಸಿಸುತಿದ್ದು ಕೃಷಿಯನ್ನು ಕೈಗೊಳ್ಳದೆ ಇತರ ವಂಧೆಗಳ ಮೂಲಕ ಜೀವಿಸುವರ ಸಂಖ್ಯೆಯೂ ಕಡಿಮೆಯಿಲ್ಲ. ಕೇವಲ ತಮಗೆ ದೊರೆಯುವ ಮಜೂರಿಯಿಂದ ಇವರು ತಮ್ಮ ಕುಟುಂಬ ಪೋಷಣೆಯನ್ನು ಯೋಗ್ಯ ರೀತಿಯಲ್ಲಿ ಮಾಡುವುದೂ ಅಸಂಭವವೆನಿಸುವುದು.

ಗ್ರಾಮಸ್ಥರಲ್ಲಿ ಒಳಗೊಂಡಿರುವ ಸಂಪೂರ್ಣ ನಿರುದ್ಯೋಗಿಗಳು ವರ್ತ್ತು ಕಡಮೆ ಕೆಲಸವಿರುವವರು--ಇವರೊಳಗೆ ಬಹುದೊಡ್ಡ ಅಂತರವಿರುವುದಿಲ್ಲ. ನಮ್ಮ ರೈತರು ವರ್ಷದ ಬಹುದಿನಗಳಲ್ಲಿ ನಿರುದ್ಯೋಗಿಯಾಗಿಯೇ ಇರುತ್ತಾರೆ; ಕೃಷಿ ಕೆಲಸದ ಕಾಲದಲ್ಲಿಯಾದರೂ ಎಡೆಬಿಡದೆ ಕೆಲಸವನ್ನು ಮಾಡುವುದು ಅಸಾಧ್ಯ. ಈ ಕಾರಣದಿಂದ ಅವರಿಗೆ ಬೇರೆಡೆಗೆ ಹೋಗಿ ಅಥವಾ ತಮ್ಮ ಹಳ್ಳಿಯಲ್ಲಿಯೇ ಆಗಲಿ, ಬೇರೆ ಉದ್ಯೋಗವನ್ನು ಕೈಗೊಳ್ಳುವುದು ಅಸಾಧ್ಯವೆನಿಸಿದೆ. ಅವರು ತಮ್ಮ ಬಿಡುಸಮಯವನ್ನು ಗೃಹ ಕೈಗಾರಿಕೆಗಳಲ್ಲಿ ಉಪಯೋಗಿಸಬಹುದು. ಆದರೆ ಅದರ ವ್ಯವಸ್ಥೆಯು ನಮ್ಮ ದೇಶದಲ್ಲಿಲ್ಲ. ಇದರಿಂದಾಗಿ, ನಿರುದ್ಯೋಗಿ ಮತ್ತು ಅರೆ ಉದ್ಯೋಗಿಗಳ ನಡುವೆ ಯಾವ ಹೆಚ್ಚಿನ ಅಂತರವೂ ಇಲ್ಲದೆ ಗ್ರಾಮೀಣ ನಿರುದ್ಯೋಗದ ಸಮಸ್ಯೆಯು ಮತ್ತಷ್ಟು ಜಟಿಲವಾಗುತ್ತದೆ.

ಭಾರತದ ಹಳ್ಳಿಗಳಲ್ಲಿ ಸುಮಾರು ೯ ಕೋಟಿ ಪರಿವಾರಗಳು ವಾಸವಾಗಿವೆ. ನಮ್ಮ ದ್ವಿತೀಯ ಯೋಜನಾವಧಿಯಲ್ಲಿ ೯ ಕೋಟಿ ಜನರಿಗೆ ಗ್ರಾಮೀಣ ಕ್ಷೇತ್ರಗಳಲ್ಲಿ ಕೆಲಸ ದೊರೆಯುವುದೆಂದು ಅಂದಾಜು ಹಾಕಿದ್ದಾರೆ. ಹಳ್ಳಿಗರ ನಿರುದ್ಯೋಗ ಸಮಸ್ಯೆಯ ಮೇಲೆ ಒಂದು ಆಳವಾದ ಪ್ರಭಾವವನ್ನು ಬೀರುತ್ತದೆ. ಇದರಿಂದ ದೇಶದ ಆರ್ಥಿಕ ಸ್ಥಿತಿಯ ಮೇಲೆಯೂ ಪರಿಣಾಮವಾಗುವುದು. ನಮ್ಮ ದೇಶದ ಆರ್ಥಿಕ ಸಂಪತ್ತು, ನೈಭವ, ಕಾರ್ಯಕ್ಷಮತೆ ಎಲ್ಲವೂ ನಮ್ಮ ಗ್ರಾಮ ವಾಸಿಗಳ ಸಂತೋಷ, ರಹನೆ ಸಹನೆಗಳನ್ನು ಹೊಂದಿಕೊಂಡಿದೆ ಗ್ರಾಮ ವಿಕಾಸವಾಗದವರೆಗೆ ದೇಶ ಪ್ರಗತಿಯು ಕನಸಿನ ಗಂಟು

ಗ್ರಾಮೀಣ ವಿಕಾಸದ ಪ್ರಶ್ನೆ ಬಂದಾಗ ನಮ್ಮ ದೃಷ್ಟಿಯು ಮೊತ್ತ ಮೊದಲಿಗೆ ಕೃಷಿಯ ಉತ್ಪನ್ನಗಳತ್ತ ಹೊರಳುತ್ತದೆ. ಭಾರತದ ಭೂಮಿ ಯ ಎಲ್ಲ ದೃಷ್ಟಿಯಿಂದಲೂ ಕೃಷಿಗೆ ಯೋಗ್ಯವಾಗಿದೆ; ಆದರೆ, ನಮ್ಮ ವ್ಯವಸಾಯ ಕ್ರಮವು ಓಬೀರಾಯನ ಕಾಲದ್ದಾಗಿದೆ. ಇದರಿಂದಾಗಿ ಬೇರೆ ದೇಶಗಳ ಉತ್ಪನ್ನದಲ್ಲಿ ಒಂದು ಐದನೆಯ ಸ್ಥಾಂಶವನ್ನು ಮಾತ್ರ ನಾವು ಬೆಳೆಸುತ್ತೇವೆ. ಕೃಷಿ ಉತ್ಪನ್ನವು ಬೆಳೆಯಿತೆಂದರೆ, ಗ್ರಾಮ ವಾಸಿಗಳ ನಿರುದ್ಯೋಗ ಸಮಸ್ಯೆಯೂ ಶೀಘ್ರವಾಗಿ ದೂರವಾಗುವುದು. ನಾವು ವ್ಯವಸಾಯದ ಉತ್ಪನ್ನವನ್ನು ಹೆಚ್ಚಿಸಬೇಕಾದರೆ, ವ್ಯವಸಾಯ ಕ್ರಮವು ವೈಜ್ಞಾನಿಕವಾಗಬೇಕು; ನೀರಾವರಿ ಸೌಕರ್ಯ ಎಲ್ಲರಿಗೂ ದೊರೆಯಬೇಕು, ವಿದ್ಯುತ್ತು ಬಳಕೆಗೆ ಬರಬೇಕು, ನೆರೆ ನಿಯಂತ್ರಣವಾಗಬೇಕು, ಉತ್ತಮ ಬೀಜಮತ್ತು ಗೊಬ್ಬರಗಳು ಪ್ರಯೋಗಕ್ಕೆ ಬರಬೇಕು. ಇದರಿಂದಾಗಿಭಾರತೀಯ ಪ್ರಥಮ ಪಂಚವರ್ಷಿಕಯೋಜನೆಯಲ್ಲಿಕೃಷಿಗೆಪ್ರಾಮುಖ್ಯವೀಯಲಾಯಿತು.

ಕೃಷಿಕ್ಷೇತ್ರದಲ್ಲಿ ನೀರಾವರಿ ಕಾರ್ಯವೂ ಮಹತ್ವದ್ದಾಗಿದೆ. ಬಂಗಾಳ ಮತ್ತು ಬಿಹಾರಗಳ ದಾಮೋದರ ಘಾಟೀ, ಸೂರ್ವ ಸಂಜಾಬಿನ ಬಾಖಡಾನಂಗಲ್, ಬಿಹಾರದ ಕೋಸಿ, ಒರಿಸ್ಸಾದ ಹಿರಾಕುಡ್ ಯೋಜನೆಗಳು ದೊಡ್ಡ ನೀರಾವರಿಗೆ ಸಂಬಂಧಿಸಿದುವು. ಇವುಗಳಿಂದ ಗದ್ದೆಗಳಿಗೆ ನೀರಿನ ಸೌಕರ್ಯ ದೊರೆಯುವುದಲ್ಲದೆ ವಿದ್ಯುತ್ತೂ ಸಿಗುತ್ತದೆ. ಇದರಿಂದ ಗ್ರಾಮಗಳಲ್ಲಿ ವಿದ್ಯುತ್ತನ್ನು ಹರಡಿಸಿ ಗುಡಿಕೈಗಾರಿಕೆಗಳನ್ನು ನಡೆಸುವುದು ಸಾಧ್ಯ. ದೊಡ್ಡ ನೀರಾವರಿ ಯೋಜನೆಗಳಲ್ಲದೆ ನಕ ಕೂಪಗಳು, ಕೆರೆ ಬಾವಿಗಳು ಮೊದಲಾದ ಹಲವಾರು ಯೋಜನೆಗಳು ನಡೆದಿವೆ. ಇವುಗಳೆಲ್ಲವುಗಳಿಂದ ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು ೧೩ ಲಕ್ಷ ಜನರಿಗೆ ಉದ್ಯೋಗಾವಕಾಶ ದೊರೆತಿದೆ.

ಕೃಷಿಯಲ್ಲಿ ಅಪೇಕ್ಷಿತ ಸುಧಾರಣೆಗಳತ್ತ ರೈತರು ತಮ್ಮ ಹೃದಯವನ್ನು ಬದಲಿಸಬೇಕು. ಯಾವ ರೀತಿಯಿಂದ ಆರ್ಥಿಕ ಆಹಾರೋತ್ಪಾದನೆಯಾಗಬಹುದು, ಕೃಷಿ ಉತ್ಪನ್ನವನ್ನು ಹೇಗೆ ಹೆಚ್ಚಿಸಿಕೊಳ್ಳಬಹುದು ಎಂಬುದನ್ನು ಚಿಂತಿಸಬೇಕು. ನಮ್ಮ ರೈತರು ಈಗಿರುವ ವಿಧಾನವನ್ನು ಬಿಟ್ಟುಕೊಟ್ಟು ಕೃಷಿ ಸುಧಾರಣೆ ಮಾಡಲು ಸೊಂಟಕಟ್ಟಿದರೆಂದರೆ ವ್ಯವಸಾಯದಲ್ಲಿ ಉತ್ತಮ, ಆಧುನಿಕ ಕ್ರಮವನ್ನು ಸ್ವೀಕರಿಸಲು ಸುಲಭವಾಗುವುದು.

ನಮ್ಮ ದೇಶದಲ್ಲಿ ಸಹಕಾರೀ ಕ್ರಮದಲ್ಲಿ ವ್ಯವಸಾಯವನ್ನು ಮಾಡುವತ್ತ ವಿಶೇಷ ಗಮನವೀಯಲಾಗುತ್ತಿದೆ. ಈ ಪದ್ಧತಿಯಿಂದ ಅನೇಕಾನೇಕ ಹಳ್ಳಿಗರಿಗೆ ಉದ್ಯೋಗವು ದೊರೆಯುವುದು; ಲಕ್ಷಾಂತರ ಕೃಷಿಕರಿಗೆ ಆರ್ಥಿಕ ಲಾಭವೂ ಆಗುವುದು. ಸಹಕಾರೀ ವ್ಯವಸಾಯ ಪದ್ಧತಿಯನ್ನು ಸ್ವೀಕರಿಸುವುದರಿಂದ ನಮ್ಮ ಚಿಕ್ಕ ಮಟ್ಟ ಕೃಷಿವಲಯಗಳು ಮಾಯವಾಗಿ ದೊಡ್ಡ ಪ್ರಮಾಣದ ಕ್ಷೇತ್ರಗಳು ಉಂಟಾಗುತ್ತವೆ. ಆಗ ಅಂಥವುಗಳಲ್ಲಿ ವೈಜ್ಞಾನಿಕ ವಿಧಾನಗಳನ್ನಾಗಲೀ, ಯಾಂತ್ರಿಕ ಪದ್ಧತಿಯನ್ನಾಗಲೀ ಸುಲಭದಲ್ಲಿ ಬಳಸಬಹುದು. ಆ ಕ್ಷೇತ್ರಗಳಿಗೆ ಉತ್ತಮ ಬೀಜ, ಗೊಬ್ಬರ, ಬಲವಾಲಿ ಎತ್ತು ಮತ್ತಿತರ ಅನೇಕ ಕೃಷಿ ಸಂಬಂಧಿ ಸೌಲಭ್ಯಗಳು ದೊರೆಯುತ್ತವೆ

ನಮ್ಮ ಹಳ್ಳಿಗಳಲ್ಲಿ ಅನ್ನದ ಉತ್ಪಾದನೆಯ ಸ್ವಲ್ಪದೆ ಹೆಣ್ಣು ಹಂಚಲು, ಸಜ್ಜಿ ಇತ್ಯಾದಿಗಳನ್ನೂ ಬೆಳೆಸಬೇಕು ಇದರಿಂದ ಅನೇಕ ನಿರುದ್ಯೋಗಿಗಳಿಗೆ ಉದ್ಯೋಗವು ದೊರೆಯುವುದು. ರೈತರುಗಳನ್ನೂ ಉತ್ತಮ ಸ್ಥಿತಿಯಲ್ಲಿಡಬೇಕು. ಕುರಿ ಆಡು, ಕೋಳಿ ಮೊದಲಾದ ಪ್ರಾಣಿಗಳ ಸಾಕಣೆಯ ವ್ಯವಸ್ಥೆಯನ್ನು ಜೆನ್ನಾಗಿ ಮಾಡಿಕೊಳ್ಳಬೇಕು. ಏಕನ. ಹಂದಿಯುವುದು, ಕೇಶ್ಯೆ ಹುಳಗಳ ಸಾಕುವಿಕೆಯಿಂದಲೂ ನಮ್ಮ ಗ್ರಾಮೀಣ ಸೋದರರಿಗೆ ಹೆಚ್ಚಿನ ಲಾಭವಾಗುವುದು.

ಕೃಷಿಯು ಅತ್ಯುನ್ನತ ಮಟ್ಟವನ್ನು ಏರಿದ ಕ್ಷಣದಲ್ಲಿಯೇ ಹಳ್ಳಿಗಳಲ್ಲಿ ನಿರುದ್ಯೋಗ ಸಮಸ್ಯೆಯು ಮಂಗಮಾಯವಾಗುವುದೆನ್ನುವುದು ತಾತ್ಪರ್ಯದ ಮಾತಾದೀತು. ಭೂ ಸಂಪತ್ತಿನಿಂದಲೇ ಎಲ್ಲ ಕಾರ್ಯಕಲಾಪಗಳೂ ಮುಗಿತಾಯ ಹೊಂದಲಾರವು. ನಮ್ಮ ಗ್ರಾಮೀಣ ನಿರುದ್ಯೋಗ ಮತ್ತು ಬಡತನದ ಮುಖ್ಯ ಕಾರಣವೆಂದರೆ, ದಿನದಿನಕ್ಕೆ ಕೃಷಿಯನ್ನೇ ಅವಲಂಬಿಸಿರುವವರ ಸಂಖ್ಯೆಯು ಬೆಳೆಯುತ್ತಾ ಬರುವುದಾಗಿದೆ ಕೃಷಿಯಲ್ಲಿ ಅದಷ್ಟು ಅಲ್ಪ ಸಂಖ್ಯಾಕ-ಜನರು ನಿರ್ಭರರಾಗಿರಬೇಕು. ಉಳಿದವರಿಂದ, ಉಳಿದ ಹಳ್ಳಿಗರು ಇತರ ಉದ್ಯೋಗಗಳತ್ತ ತಮ್ಮ ಧ್ಯಾನವನ್ನೀಯಬೇಕು.

ನಮ್ಮ ಹಳ್ಳಿಗಳು ಇಂದು ಸ್ವಾವಲಂಬಿಯಾಗಿಲ್ಲ. ಅಲ್ಲಿನ ಜನರು ತಮ್ಮ ದೈನಂದಿನ ಆವಶ್ಯಕತೆಗಳಿಗೆ ಪಟ್ಟಣಿಗರ ಮುಖ ನೋಡಬೇಕಾಗಿ ಬಂದಿದೆ. ಇದರಿಂದಾಗಿ ಹಳ್ಳಿಗಳ ವಿಕಾಸವೇ ಕನಸಿನ ಬತ್ತವಾಗಿ ಪರಿಣಮಿಸಿದೆ. ಹಳ್ಳಿಗಳ ಎಲ್ಲಾ ಉಪಯೋಗಿ ಸಾಮಾನುಗಳು ಹಳ್ಳಿಯಲ್ಲಿಯೇ ತಯಾರಾಗುವ ವ್ಯವಸ್ಥೆಯನ್ನು ಮಾಡುವುದು ಅಪೇಕ್ಷಣೀಯ. ಇದಕ್ಕಾಗಿ ಪ್ರಾಚೀನ ಕಾಲದ ನಮ್ಮ ಗೃಹೋದ್ಯೋಗಗಳನ್ನು ಪುನಃ ಸುಸಂಘಟಿಸುವುದು ಅಗತ್ಯ.

ಪಂಚವಾರ್ಷಿಕ ಯೋಜನೆಯಲ್ಲಿ ಗುಡಿಕೈಗಾರಿಕೆಗಳಿಗೆ ಮಹತ್ವಪೂರ್ಣ ಸ್ಥಾನವು ಈಯಲ್ಪಟ್ಟಿದೆ. ದೊಡ್ಡ ದೊಡ್ಡ ಮಿಲ್ಲುಗಳು, ಕಾರಖಾನೆಗಳು ಇವುಗಳ ಸ್ಥಾಪನೆಯಿಂದ ಕೇವಲ ಕೆಲವೇ ಜನರಿಗೆ ಉದ್ಯೋಗವು ಲಭಿಸಬಹುದು. ಆದರೆ, ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದರಿಂದ, ನಿರುದ್ಯೋಗ ಸಮಸ್ಯೆಯು ಸಂಪೂರ್ಣವಾಗಿ ನಿವಾರವಾಗುವುದು ಸಾಧ್ಯ ಈ ಸಮಯದಲ್ಲಿ ನಮ್ಮ ದೇಶದ ಗೃಹೋದ್ಯೋಗಗಳ ವ್ಯವಸ್ಥೆಯು ಸಂಪೋಷಜನಕವಾಗಿಲ್ಲ. ಅದಕ್ಕೆ ಸರಕಾರದ ಹಾಗೂ ರಾಷ್ಟ್ರದ ಸಹಾಯತೆಯು ಅತ್ಯಂತ ಅವಶ್ಯಕವಾಗಿದೆ. ದೇಶದ ಬಡತನದ ಮೂಲಕಾರಣವು ಹಳ್ಳಿಗರ ನಿರುದ್ಯೋಗವೆಂದು, ಈ ನಿರುದ್ಯೋಗಕ್ಕೆ ಕೃಷಿಯನ್ನೆ ನಂಬಿ ಕುಳಿತ ಅಧಿಕ ಸಂಖ್ಯಾಕ ಹಳ್ಳಿಗರೇ ಕಾರಣವೆಂದೂ ನಾವು ಒಪ್ಪುವುದಾದರೆ, ಆಗ, ಗೃಹೋದ್ಯೋಗಗಳ ಸ್ಥಾನಮಾನಗಳು ಪೇದ್ಯವಾಗುವುವು. ನಾವು ನಮ್ಮ ಆವಶ್ಯಕ ಪದಾರ್ಥಗಳೆಲ್ಲವನ್ನೂ ಗುಡಿಕೈಗಾರಿಕೆಗಳಿಂದಲೇ ತಯಾರಿಸಿಕೊಳ್ಳಬೇಕು ನಾಗರಿಕರೂ ಅಂತಹ ಒಡವೆಗಳನ್ನು ಬಳಸಿಕೊಳ್ಳಬೇಕು. ಇದರಿಂದ ಗುಡಿಕೈಗಾರಿಕಾದಾರರಿಗೆ ಪ್ರೋತ್ಸಾಹನೆಯೂ ದೊರೆತು, ಅವರ ಉತ್ಸಾಹ, ಸಾಹಸಗಳು ಬೆಳೆಯುವುವು.

(೦೦ನೇ ಪುಟ ನೋಡಿರಿ)

ಸಾವಿರಾರು ಜನರು
ಅನುಸರಿಸುತ್ತಿರುವ
ಸುಲಭ ತೇವಣಾತಿ ವಿಧಾನ

ದಿನಕ್ಕೆ
4 ಆಣೆ
25 ನ. ಪೈ
7 ವರುಷಗಳಲ್ಲಿ
ರೂ. 700

ಸಿಗ್ಮಾ

● ಚಿಕ್ಕ ಗಾತ್ರದ ಅಪ್ರಿಕದ ಪಿಗ್ಮಿಯರೊಂದಾಗಿ ಬಹುದೊಡ್ಡ ಕಾಡಾನೆಯನ್ನು ಸಂಪರಿಸಬಲ್ಲರು.
● ದಿನಕ್ಕೆ 25 ನ. ಪೈಸೇಗಳಂತೆ ಪುಡಿ ಕಾಸುಗಳೆಷ್ಟಾಗಿ ಬೇಂಕಿನಲ್ಲಿ ಸಂಗ್ರಸಲಾಗುವ ನಿಧಿಯು ಭವಿಷ್ಯದ ಸಂಕಷ್ಟಗಳನ್ನು ಪಾರು ಮಾಡಬಲ್ಲದು.

ಸಿಂಡಿಕೇಟಿನ 96 ಶಾಖೆಗಳ ಯಾವುದೇ ಉದ್ಯೋಗಸ್ಥನೊಡನೆ ವಿಚಾರಿಸಿರಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್
ಲಿಮಿಟೆಡ್ ಉಡುಪಿ

The Canara Industrial & Banking
Syndicate Ltd. Udipi

ಸೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಭಾಷಾಸಮಸ್ಯೆ

ಭಾಷೆಯ ವಿಷಯದಲ್ಲಿ ಹೊಡೆದಾಡದೆ ಏಕತೆಯನ್ನು ಉಳಿಸಿಕೊಳ್ಳಿರಿ

ಸ್ವಾತಂತ್ರ್ಯಾನಂತರ ಭಾರತದ ಅನೇಕ ಕಠಿಣ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅವುಗಳಲ್ಲಿ ಭಾಷೆಯ ಸಮಸ್ಯೆಯೂ ಒಂದು. ಕಳೆದ ೧೦ ವರ್ಷಗಳಲ್ಲಿ, ಭಾಷಾ ವಿವಾದಗಳಿಗೆಡೆಕೊಟ್ಟಂತಹ ಅನೇಕ ಘಂಟಭರ್ಗಗಳು ಒದಗಿ ಬಂದವು, ಅದರ ಪರಿಣಾಮವಾಗಿ ಜನತೆಯು ಭಾವೋದ್ರೇಕಗೊಂಡಿತು; ರಾಷ್ಟ್ರೀಯ ಐಕ್ಯಕ್ಕೂ ಬಹುತೇಕವಾಗಿ ಧಕ್ಕೆಯುಂಟಾಯಿತು. ಇಂತಹ ಕಠಿಣ ಸಮಸ್ಯೆಯನ್ನು ಸರಿಹರಿಸಲು ಮಹತ್ತರವಾದ ಸಹನೆಯೂ, ಗ್ರಹಣಶಕ್ತಿಯೂ ಅಗತ್ಯವಾಗುತ್ತದೆ. ವಾಸ್ತವವಾಗಿ, ಈ ಸಮಸ್ಯೆಯು ಭಾರತೀಯ ಜನತೆಯ ತಿಳಿವಳಿಕೆ ಮತ್ತು ಕಾರ್ಯನೀತಿ ಜ್ಞಾನವನ್ನು ಸೂಚಿಸ ತ್ತದೆ. ಈ ಸಮಸ್ಯೆಯಲ್ಲಿ ಕಂಡು ಬರುವ ಮನೋವೃತ್ತಿಯನ್ನು ಸೂಕ್ತ ರೀತಿಯಲ್ಲಿ ಗ್ರಹಿಸುವುದು ಅಗತ್ಯವೆನಿಸುವುದು.

ವಿದೇಶೀಯರ ಆಳ್ವಿಕೆಯ ಕಾರಣದಿಂದಾಗಿ, ಭಾರತೀಯ ಭಾಷೆಗಳ ಬೆಳವಣಿಗೆಯು ಒಂದು ಶತಮಾನದ ಕಾಲದಿಂದಲೂ ಹಿಂದೆ ಬಿದ್ದಿದೆ. ರಾಜಕೀಯ ಆಕ್ರಮಣದ ಜೊತೆಗೆ ಸಾಂಸ್ಕೃತಿಕ ಆಕ್ರಮಣವೂ ನಡೆಯಿತು. ಅದರ ಪರಿಣಾಮವಾಗಿ, ಸಂಸ್ಕೃತಿಯ ಪ್ರಬಲ ನಾಹಕಗಳೆನಿಸಿದ್ದ ನಮ್ಮ ಭಾಷೆಗಳನ್ನು ಸಹಜವಾಗಿ ಕೆಳಕ್ಕೆ ತುಳಿಯಲಾಯಿತು. ಶತಮಾನಗಳ ಕಾಲದಿಂದ ಕೆಳಕ್ಕೆ ತುಳಿಯಲ್ಪಟ್ಟಿದ್ದ ಭಾಷೆಗಳನ್ನು ಅಭಿವೃದ್ಧಿಪಡಿಸಬೇಕೆಂಬ ಆಕಾಂಕ್ಷೆ, ಸ್ವಾತಂತ್ರ್ಯಾನಂತರ ಜನತೆಯಲ್ಲಿ ಸಹಜವಾಗಿ ಮೂಡಿತು.

ಜನತೆಯಲ್ಲಿ, ಈಗ, ತಮ್ಮ ತಮ್ಮ ಭಾಷೆಗಳ ಬಗೆಗೆ ಇರುವ ಉತ್ಸಾಹ ಸ್ವಾಭಾವಿಕವಾದುದು. ಅದು ಸಮ್ಮಲ್ಲಿ ಯಾವ ಭೀತಿಯನ್ನಾಗಲಿ ಕುತೂಹಲವನ್ನಾಗಲಿ ಕೆರಳಿಸಬಾರದು. ಜನತೆಯು, ಇತರ ಭಾಷೆಗಳಿಗಿಂತ ತಮ್ಮ ಭಾಷೆಗಳಲ್ಲಿ ಒಲವು ತೋರುವುದು ಸ್ವಾಭಾವಿಕ. ಜನ್ಮತಃ ಅವರಿಗೆ ಮಾತೃಭಾಷೆಯೊಂದಿಗೆ ಪರಿಶ್ರಮವಿರುವುದು. ಜನತೆಗೆ ತಮ್ಮ ಭಾಷೆಯಲ್ಲಿ ಮಾತನಾಡಿದಾಗ ಹೆಚ್ಚಿನ ಭದ್ರತೆಯ ಭಾವನೆ ಉಂಟಾಗುವುದು.

ಆದರೆ, ಜನತೆಯು ಇತರ ಭಾಷೆಗಳ ಮೇಲೆ ಪ್ರಭುತ್ವವನ್ನು ಸ್ಥಾಪಿಸಿಕೊಂಡರೂ, ಅವರಿಗೆ ಮಾತೃಭಾಷೆಯಲ್ಲಿ ದೊರೆಯುವಷ್ಟು ಸಂತೃಪ್ತಿ ಅದರಲ್ಲಿ ದೊರೆಯುವುದಿಲ್ಲ. ಜನತೆಯು ತಮ್ಮ ಮಾತೃಭಾಷೆಯನ್ನೇ ಉಳಿಸಿದಾಗ ಒಂದು ರೀತಿಯ ಆಧ್ಯಾತ್ಮಿಕ ಸಾಧನೆ ಹಾಗೂ ಭಾವನಾತ್ಮಕ ಸಂತೃಪ್ತಿ ದೊರೆಯುವುದು. ಆದುದರಿಂದ ಜನತೆಯು ತಮ್ಮ ಮಾತೃಭಾಷೆಗಳ ಕಡೆಗೆ ಹೆಚ್ಚಿನ ಭಾವನಾತ್ಮಕವಾದ ಒಲವನ್ನು ತೋರುವ ೨. ಇತರರು ತಮ್ಮ ಭಾಷೆಯ ಮೇಲೆ ಯಾವ ರೀತಿಯ ಆಕ್ರಮಣ ಆಥವಾ ತಿರಸ್ಕಾರವನ್ನಾಗಲೀ ತೋರಿದಲ್ಲಿ ಪ್ರಬಲವಾದ ಪ್ರತಿಕ್ರಿಯೆ ಹಾಗೂ ಅಸಮ್ಮತಿಯನ್ನು ಪ್ರದರ್ಶಿಸುವರು.

ನಮ್ಮ ದೇಶದಲ್ಲಿರುವ ಭಾಷಾಸ್ವೇಷವು ಮುಖ್ಯವಾಗಿ ಈ ಮನೋವೃತ್ತಿಯಿಂದ ಕೂಡಿದೆ. ಒಬ್ಬನು ಮಾತೃಭಾಷೆಯ ಸ್ಥಾನವನ್ನು ಮತ್ತೊಬ್ಬರು ಆಕ್ರಮಿಸತೊಡಗಿದಲ್ಲಿ, ಜನತೆಯಲ್ಲಿ ತಮ್ಮ ತಮ್ಮ ಮಾತೃಭಾಷೆಗಳಿಗೆ ಅಂಟಿಕೊಳ್ಳುವ ಪ್ರವೃತ್ತಿ ಮತ್ತೂ ಕಚ್ಚಾಗಿ ಬೆಳೆಯುತ್ತದೆ.

ನಮ್ಮ ದೇಶದಲ್ಲಿ ಅಭಿವೃದ್ಧಿಹೊಂದಿದ ಭಾಷೆಗಳು ಅನೇಕವಿವೆ. ಆದುದರಿಂದ ಸಂಯಮ ಮನೋಭಾವ ಪರಸ್ಪರಭಾಷೆಗಳ ಮಹತ್ವವನ್ನು ಸದ್ಭಾವನೆಯಿಂದ ಗ್ರಹಿಸುವುದು ಮತ್ತು ಮೆಚ್ಚುವುದರಿಂದ ಮಾತ್ರ ಪ್ರತಿಯೊಂದು ಭಾಷೆಯೂ ವಿಕಾಸಗೊಳ್ಳಲು ಅವಕಾಶ ದೊರೆಯುವುದು. ಒಬ್ಬರ ಭಾಷೆಯು ಮತ್ತೊಬ್ಬರ ಭಾಷೆಗಿಂತ ಸರ್ವೋತ್ತಮವಾದುದು ಎಂಬ ಭಾವನೆಯ ಆಧಾರದ ಮೇಲೆ ಭಾಷಾ ಅಸಂಯಮವು ತಲೆದೋರುವುದು. ಒಂದು ಭಾಷೆಯ ಬಗೆಗೆ ಕಪಟ ವರ್ತನೆ ಹಾಗೂ ದಾಷ್ಟ್ಯದಿಂದ ಜನತೆಯಲ್ಲಿ ಅಶಾಂತಿ ಮತ್ತು ದ್ವೇಷದ ಜ್ವಾಲೆ ಹುಟ್ಟುವುದು.

ಸರ್ವಸಾಮಾನ್ಯವಾದ ಭಾಷೆಯ ಬೆಳವಣಿಗೆಗೆ ಪ್ರಾಂತೀಯತೆಯು ಪ್ರಬಲ ಶತ್ರುವೇ ಸರಿ. ಒಮ್ಮೆ ಜನತೆಯು ಬಲವಾದ ಪ್ರಾದೇಶಿಕ ನಿಷ್ಠೆಯನ್ನು ಬೆಳೆಸಿಕೊಂಡಲ್ಲಿ ಅವರು ಭಾಷಾ ಕೋಟೆಕೊತ್ತಳಗಳನ್ನು ನಿರ್ಮಿಸಿಕೊಂಡು, ಇತರ ಭಾಷೆಗಳು ಅದರ ಗಡಿಯನ್ನು ದಾಟಲೂ, ಗಡಿಯ ಬಳಿ ಸುಳಿಯಲೂ ಅಡೆತಡೆಗಳನ್ನುಂಟುಮಾಡುವರು. ಪ್ರಾದೇಶಿಕ ಭಾಷಾ ಪ್ರೇಮವು, ಭಾಷಾಂಧತೆಗೆ ತಿರುಗುವುದು. ಈ ಭಾಷಾಂಧತೆಯು ರಾಷ್ಟ್ರೀಯ ಐಕ್ಯಕ್ಕೆ ದೊಡ್ಡ ಕಂಟಕ ತರುವುದು. ಈ ಕಂಟಕವನ್ನು ಕಿತ್ತೊಗೆಯಲು ನಾವು ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕು.

ವಿವಿಧ ಭಾಷಾ ವರ್ಗಗಳ ನಡುವೆ ಕೃತಕವಾದ ಅಡ್ಡ ಗೋಡೆಗಳನ್ನು ನಿರ್ಮಿಸಿಕೊಳ್ಳುವುದಕ್ಕೆ ಉತ್ತೇಜನವೀಯದೆ ಪ್ರಬಲವಾಗಿ ತಡೆಯಬೇಕು. ಇತರ ಭಾಷೆಗಳನ್ನು ಕಲಿಯಲು ನಿರಾಕರಿಸುವುದು ತಮ್ಮ ಮಾತೃ ಭಾಷೆಯನ್ನು ಕೊಂದಂತೆಯೇ ಎಂಬ ಅಂಶದ ಕಡೆಗೆ ಜನತೆಯಲ್ಲಿ ತಿಳಿವಳಿಕೆಯನ್ನು ಮೂಡಿಸಬೇಕು.

ಭಾಷೆಯ ಸಾಮಾನ್ಯ ಬೆಳವಣಿಗೆಗಾಗಿ ಅದರಲ್ಲಿ ಹೊಸ ಹೊಸ ಶಬ್ದಗಳು ಬಂದು ಕೂಡಬೇಕು. ಅದರಲ್ಲಿ ಹೊಸ ಹೊಸ ವಿಚಾರಗಳನ್ನು ವ್ಯಕ್ತಗೊಳಿಸುವಂತಹ ಕ್ಷಮತೆ ಇರಬೇಕು. ಯಾವ ಭಾಷೆಯೇ ಆಗಲಿ, ಸಾರ್ವತ್ರಿಕ ಜ್ಞಾನವನ್ನು ವ್ಯಕ್ತಗೊಳಿಸುವಷ್ಟು ಸಮೃದ್ಧವಾಗಿರದು. ಆದುದರಿಂದ ಪ್ರತಿಯೊಂದು ಭಾಷೆಯೂ ಶಬ್ದಗಳನ್ನು ಕೊಡಲೂ ಬೇಕು ತೆಗೆದುಕೊಳ್ಳಲೂ ಬೇಕು. ಶಬ್ದಗಳ ವಿನಿಮಯಕ್ಕೆ ಯಾವ ರೀತಿಯ ಯಾವ ಮಿತಿಯೂ ಇರಬಾರದು. ವಾಸ್ತವವಾಗಿ, ವಿವಿಧ ಪ್ರಾದೇಶಿಕ ಭಾಷೆಗಳ ನಡುವೆ ಶಬ್ದಗಳ ವಿನಿಮಯ ಮಾಡಿಕೊಳ್ಳುವುದಕ್ಕೆ ಬೆಂಬಲವೀಯಬೇಕು.

ಭಾಷಾ ಬೆಳವಣಿಗೆಯು ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಇತ್ಯಾದಿ ವಿವಿಧ ಶಕ್ತಿಗಳ ಪರಸ್ಪರ ಪಾತ್ರವನ್ನವಲಂಬಿಸಿರುವುದು. ನಾವೆಲ್ಲರೂ ಶತಮಾನಗಳ ಕಾಲದಿಂದಲೂ ಒಂದೇ ಸಮಾಜವಾಗಿ ಬದುಕಿ ಬಾಳಿದ್ದೇವೆ. ನಮ್ಮ ಹಿತಾಸಕ್ತಿಗಳು ಒಂದೇ ಆಗಿವೆಯೆಂಬುದನ್ನು ನಮ್ಮ ಜನತೆಗೆ ಅರಿವು ಮಾಡಿಕೊಡಬೇಕು. ಸಾಮಾನ್ಯ ಹಿತಾಸಕ್ತಿ ಮತ್ತು ರಾಷ್ಟ್ರೀಯ ನಿಷ್ಠೆಯನ್ನು, ರಾಷ್ಟ್ರೀಯ ಭಾಷೆಯು ತನ್ನ ನಿಜವಾದ ಸ್ಥಾನವನ್ನು ಆಕ್ರಮಿಸುವ ಮುನ್ನ, ಪ್ರಬಲಗೊಳಿಸಬೇಕು. ಈ ರಾಷ್ಟ್ರೀಯ ಭಾಷೆಯು ಪರಸ್ಪರ ಸಾಮಾಜಿಕ ಸಂಪರ್ಕಕ್ಕೆ ಉತ್ತೇಜನವೀಯುತ್ತದೆ; ಆದರೆ, ರಾಷ್ಟ್ರೀಯ ಐಕ್ಯವನ್ನು ಪಾಲಿಸಲು, ಆಳವಾದ ನಿಷ್ಠೆ ಮತ್ತು ಸಾಮಾಜಿಕ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳಬೇಕು.

ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಶಕ್ತಿಗಳನ್ನು, ಸರ್ವಸಾಮಾನ್ಯ ಭಾಷೆಯನ್ನು ಬೆಳೆಸುವುದಕ್ಕಾಗಿ ತೊಡಗಿಸಬೇಕು. ರಾಷ್ಟ್ರೀಯ ಭಾಷೆಯನ್ನು ರೂಪುಗೊಳಿಸುವಲ್ಲಿ ಸಾಹಿತ್ಯವು ಪ್ರಮುಖ ಪಾತ್ರವನ್ನು ನಿರ್ವಹಿಸುವುದು. ತುಲಸಿದಾಸ, ಸೂರದಾಸ ಮತ್ತು ವಿಠಾರಾವರು, ಸರಕಾರವು ತನ್ನ ಅಧಿಕಾರ ಮತ್ತು ಪ್ರಭಾವದ ಮೂಲಕ ಮಾಡುವುದಕ್ಕಿಂತ ಹೆಚ್ಚಿನ ಹಿಂದಿ ಪ್ರಚಾರವನ್ನು ಮಾಡಿರುವರು. ಈ ಮಹಾನ್ ಕವಿಗಳ ಪದ್ಯಗಳು ಭಾಷಾ ಸೀಮೆಗಳನ್ನು ವಿಗಾರಿ ಹೊರಬಂದಿವೆ. ದೇಶದಾದ್ಯಂತ ಅವು ಜನತೆಯ ನೆಚ್ಚುಗೆಯನ್ನು ಸಡೆದಿವೆ.

ರಾಷ್ಟ್ರೀಯ ಭಾಷೆಯ ರಚನೆಯಲ್ಲಿ ಸಾಹಿತ್ಯವು ನೆರವೀಯಬೇಕಿದ್ದರೂ, ಅದು ಸರ್ವಸಾಮಾನ್ಯ ಭಾಷೆಯ ಅಭಿವೃದ್ಧಿಗೆ ಪ್ರಚೋದನೆಯನ್ನೀಯುತ್ತದೆ. ಸಾಹಿತ್ಯದ ಪರೋಕ್ಷ ಸ್ವಭಾವವು ಆಳವೂ ಶಾಶ್ವತವೂ ಆಗಿರುವುದು.

ಸರ್ವ ಸಾಮಾನ್ಯ ಭಾಷೆಯನ್ನು ರೂಪಿಸುವುದರಲ್ಲಿ ಪ್ರಭಾವ ಬೀರಬಲ್ಲ ಮತ್ತೊಂದು ವಿಧಾನವೆಂದರೆ, ರಂಗಮಂಟಪ, ನಾಟಕದ ಕಂಪನಿಗಳು ದೇಶದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಂಚರಿಸುತ್ತಿರುತ್ತವೆ. ಅವು ತಮ್ಮ ಭಾಷೆಗಳನ್ನು ಪದೇ ಪದೇ ಬದಲಾಯಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಅವು ಬಹುಸೀಕ ಮಂದಿಗೆ ಅರ್ಥವಾಗುವಂತಹ ಸಾಮಾನ್ಯ ಭಾಷೆಯನ್ನು ಬಳಸಲು ಪ್ರಯತ್ನಿಸುತ್ತವೆ. ಚಲನಚಿತ್ರವು ಬಂದನಂತರ ರಂಗಮಂಟಪವು ತನ್ನ ಪ್ರಾಮುಖ್ಯವನ್ನು ನೀಗಿಕೊಂಡಿದೆ. ಆದರೆ, ಸಾಮಾನ್ಯ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ರಂಗಮಂಟಪವನ್ನು ಮನರುಜ್ಜೀವನಗೊಳಿಸುವುದು ಒಳ್ಳೆಯದು.

ಭಾಷಾ ಸಮಸ್ಯೆಯನ್ನು ಬಗೆಹರಿಸಲು ನಾವು ಶಿಕ್ಷಣ ಸಂಸ್ಥೆಗಳ ಮೂಲಕವೂ ವಿಶೇಷ ಪ್ರಯತ್ನಮಾಡಬೇಕು. ಮಕ್ಕಳು ಶಾಲೆ ಮಾತನಾಡುವಾಗ ಪ್ರಾದೇಶಿಕ ಭಾಷೆಯ ಜೊತೆಗೆ, ಮತ್ತೊಂದು ಭಾಷೆಯನ್ನು ಕಲಿಯುವಂತೆ ಮಾಡಬೇಕು. ಬಹುಸಂಖ್ಯಾಕರ ಭಾಷೆಯನ್ನು ಅಲ್ಪಸಂಖ್ಯಾಕರು ಕಲಿಯಬೇಕೆಂದು ನಾವು ನಿರೀಕ್ಷೆ ಮಾಡುತ್ತೇವೆ. ನಾವು ಜನತೆಯಲ್ಲಿ ಸೌಹಾರ್ದ ಮತ್ತು ಸಚ್ಚಾವನೆಯನ್ನು ಕಲ್ಪಿಸಬೇಕೆಂದಿದ್ದರೆ, ಇದನ್ನು ಪರಸ್ಪರ ಒಲವಿನ ಆಧಾರದಮೇಲೆ ಮಾಡಬೇಕು.

ಶಾಲೆಗಳಲ್ಲಿ ಅನೇಕ ಭಾಷೆಗಳನ್ನು ಆರಂಭಿಸಿದರೆ, ಪರ್ಯಾಯವು ಅತೀ ಹೆಚ್ಚುವುದೆಂಬ ವಾದ ಬರುವುದು ಐರೋಪ್ಯ ರಾಷ್ಟ್ರಗಳ ಪಾಠಶಾಲೆಗಳಲ್ಲಿ

(೧೫ ಪುಟ ನೋಡಿರಿ)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
O. S. 731/1955.
R. E. P. No 488/1957.
ಅಂಬಾ ಯಾನೆ ರಾಜೀವಿ ಬಾಯಿ—ಪ್ರಾದಿಯರು
ದೇವಿ ಹೆಂಗ್ಸು ಕೂಡಾ —ಪ್ರತಿವಾದಿಯರು
ಪ್ರತಿವಾದಿಗಳು —
1 ದೇವಿ ಹೆಂಗ್ಸು. ಹಳೆಪೈಕ ನಾಗಿ ಹೆಂಗ್ಸಿನ ಮಗಳು, 2 ಲಿಂಗಿ. ದೇವಿ ಹೆಂಗ್ಸಿನ ಮಗಳು, 3 ಮಂಜಯ್ಯ. ಪುಟ್ಟನ ಅಳಿಯ, 4 ಅಕ್ಕಮ್ಮ ಹೆಂಗ್ಸು. ಅಣ್ಣಪ್ಪನ ಸೊಸೆ, ಕುಂದಾಪುರ ತಾಲ್ಲೂಕು ಮರವಂತೆ ಗ್ರಾಮ.
ಇವರಿಗೆ
ಮೇಲ್ಕಂಡ ಡಿಕ್ರಿ ಪ್ರಕಾರ ಬರತಕ್ಕ ಋಣಗಳಬಗ್ಗೆ ಡಿಕ್ರಿಯಿಂದ ಕಾಣುವ ಸ್ಥಿರಾಸ್ತಿಗಳನ್ನು ಯೇಲಂ ನಾಡ-ವರೇ ವಾದಿಳು ಯೇಲಂಯಿಸ್ತಿಹಾರು ದಾಕ್ಲು ಮಾಡಿರುವುದರಿಂದ ಗದ್ರಿಯೇಲಂ ಯಿಸ್ತಿಹಾರಿನ ಕರ್ತ ನಿರ್ಣಯದ ಬಗ್ಗೆ ತಾರೀಕು 18—9—1957 ಕ್ಕೆ ಇರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ಸದ್ರಿ ದಿನಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಞಾಪಿಸಿ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಮೇದು ಶಿಪ್ಪಾಯೇಶಕ್ಕವಾಗಿ ತೀರ್ಮಾನಿಸಲಾದೀತು. ಎಂಬ ಸಂಗ್ತಿ ಕೋರ್ಟು ಹುಕುಂಪ್ರಕಾರ ನಮಗೆ ಈ ಮೂಲಕ ತಿಳಿಸೋಣಾಗುತ್ತದೆ.
K. Raghunatha Shenai,
Pleader for Plff.
Coondapoor 20-8-57.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?
ಮನೆ-ಮದ್ದು
HOME REMEDIES
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿನೋಬಾ ಸಂಚಾರ

ಆಚಾರ್ಯ ವಿನೋಬಾರವರ ಕರ್ನಾಟಕ ಸಂಚಾರ— ನಮ್ಮಲ್ಲಿರುವುದರ ಒಂದು ಅಂಶವನ್ನು ದಾನವೀಯೋಣ.

ಅಖಂಡ ಮೂವತ್ತು ವರ್ಷ ಗಾಂಧೀಜಿಯವರ ಸಂಗಡ ಇದ್ದು ಅವರ ತತ್ವ ಪ್ರಣಾಲಿಯನ್ನು ಮನಗಂಡು, ಅವನ್ನು ತನ್ನ ಜೀವನದಲ್ಲಿ ಸಾಕ್ಷಾತ್ಕರಿಸಿದ ಪೂಜ್ಯ ಶ್ರೀ ಆಚಾರ್ಯ ವಿನೋಬಾಜಿಯವರು, ಇದೀಗ ನಮ್ಮ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ ಮಹಾತ್ಮಾ ಗಾಂಧೀಜಿಯವರ ಕನಸಾಗಿದ್ದ ಗ್ರಾಮ ರಾಜ್ಯ, ರಾಮ ರಾಜ್ಯ, ಸರ್ವೋದಯ ಸಮಾಜವನ್ನು ನಮ್ಮ ದೇಶದಲ್ಲಿ ನೆನಸಾಗಿ ಮಾಡಲು ಶ್ರೀ ವಿನೋಬಾಜಿಯವರು ಪಣತೊಟ್ಟಿದ್ದಾರೆ ಅವರೊಡನೆ ಹಾಗೂ ಆ ಕ್ಷೇತ್ರಗಳಲ್ಲಿ ಸಹಸ್ರಾರು ಅನುಯಾಯಿಗಳು ಅವರ ಮಾರ್ಗದರ್ಶನದಲ್ಲಿ ಪಾದಯಾತ್ರೆ ಮಾಡ ತ್ತಿರುವರು ಭೂಮಿದಾನ, ಸಂಪತ್ತುದಾನ, ಶ್ರಮದಾನ, ಬುದ್ಧಿದಾನ, ಗ್ರಾಮದಾನ, ಇತ್ಯಾದಿ ಸಮಾಜೋಪಯೋಗಿ ವಸ್ತುಗಳನ್ನು ಸಂತೋಷದಿಂದ ಸಮಾಜಕ್ಕೆ ಸಮರ್ಪಿಸುತ್ತಿದ್ದಾರೆ. ಅದರ ಪರಿಣಾಮವಾಗಿ ಇತಿಹಾಸದಲ್ಲಿ ಅಪ್ರತಿಮವಾದ ರೀತಿಯಲ್ಲಿ ನಾಲ್ವತ್ತೆರಡು ಲಕ್ಷ ಎಕ್ರೆ ಭೂಮಿದಾನ, ೩೦೦೦ಕ್ಕೂ ಮಿಕ್ಕಿ ಗ್ರಾಮದಾನಗಳು ಮತ್ತು ಸಂಪತ್ತು ಇತ್ಯಾದಿ ಅನ್ಯದಾನಗಳು ಜನತೆಯಿಂದ ದೊರಕಿತವೆ. ಇದೊಂದು ಅದ್ಭುತವಾದ ಸಮಾಜಕ್ರಾಂತಿಯು. ಅದು ಶಾಂತಿಮಯ, ಎಲ್ಲರಿಗೂ ಅವಿರೋಧವಾದ ಉಪಾಯ. ಹಾಗಾಗದಿದ್ದರೆ ಈಗ ದಿನೇ ದಿನೇ ಈ ವಿಷಯ ಪರಿಸ್ಥಿತಿಗೇರುತ್ತಿರುವ ನಮ್ಮ ಸಾಮಾಜಿಕವ್ಯವಹಾರಗಳು ಸಮಾಜದ ಅಸ್ತಿತ್ವವನ್ನೆ ಕದಲಿಸುವವು!

ನಮ್ಮ ಜಿಲ್ಲೆಯ ಪರಿಸ್ಥಿತಿಯು ಇತರ ಕೆಲವು ಪ್ರಾಂತಗಳ ಸ್ಥಿತಿಗಿಂತ ಭಿನ್ನವಾಗಿರಬಹುದು. ಆದರೆ ಸಕಲರೂ ಒಮ್ಮತದಿಂದ ತಮ್ಮ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ಯತ್ನಿಸಿದರೆ ಅದು ಅಶಕ್ಯವಲ್ಲ. ಹೊಸ ವಾತಾವರಣದಲ್ಲಿ, ಲೋಕದ ಪ್ರಗತಿಯ ಮಾರ್ಗದಲ್ಲಿ ಮುಂದುವರಿಯುತ್ತಿರುವಾಗ, ನಾವೆಲ್ಲರು ಅದಕ್ಕೆ ಸರಿಯಾದ ಪರಿಸ್ಥಿತಿಯನ್ನುಂಟುಮಾಡಲು ಯತ್ನಿಸಬೇಕು ಇದೂವುದೇ ಒಂದು ಚಳವಳ, ಕ್ರಾಂತಿಯನ್ನು ಕಾರ್ಯರೂಪಗೊಳಿಸುವ ಮೊದಲು, ಅದರ ಮರ್ಮ, ಮೂಲವಿಚಾರವನ್ನು ಚೆನ್ನಾಗಿ ಆಲೋಚಿಸಿ ತಿಳಿದುಕೊಳ್ಳಬೇಕು ಸರ್ವೋದಯ ಸಮಾಜ ಭೂದಾನ, ಗ್ರಾಮದಾನ, ಸಂಪತ್ತುದಾನ ಇತ್ಯಾದಿಗಳ ಕುರಿತು, ಕನ್ನಡದಲ್ಲೂ ಇತರ ಭಾಷೆಗಳಲ್ಲೂ ಸಾಕಷ್ಟು ಸಾಹಿತ್ಯವಿದೆ. ವಿದ್ಯಾವಂತರೂ ವಿವೇಕಿಗಳೂ ಆ ಸಾಹಿತ್ಯವನ್ನು ಪರಿಶೀಲಿಸಿ ಇತರ ಜನರಿಗೂ ಅದರ ವಿಚಾರಗಳನ್ನು ತಿಳಿಯಪಡಿಸಬೇಕು ಭೂದಾನ, ಗ್ರಾಮದಾನದ ತತ್ವಗಳನ್ನು ಸರಿಯಾಗಿ ತಿಳಿದು ಜನತೆಗೆ ತಿಳಿಸಿದರೆ ಜನತೆಯು ಅದನ್ನು ನಿರಾಕರಿಸದೆ, ಸಂತೋಷಪೂರ್ವಕವಾಗಿ ಸ್ವೀಕರಿಸುವುದು ಆದುದರಿಂದ ಈ ಜಿಲ್ಲೆಯಲ್ಲೆಲ್ಲ ಸರ್ವೋದಯ, ಭೂದಾನ, ಗ್ರಾಮದಾನ ಇತ್ಯಾದಿಗಳ ಸಾಹಿತ್ಯ ಪ್ರಚಾರವು ಪ್ರತಿಯೊಂದು ಹಳ್ಳಿ ಊರುಗಳಲ್ಲಿ ಮನೆ ಮನೆಗೆ ತಲ್ಪಿಸ ವಂತೆ ನೂರಾರು ಯುವಕರೂ ವಿದ್ಯಾರ್ಥಿಗಳೂ ವಿದ್ಯಾವಂತರೂ ಪ್ರಯತ್ನಿಸಬೇಕು

ಭೂದಾನದ ತತ್ವವು, ದೊಡ್ಡವರು, ಶ್ರೀಮಂತರು, ದೊಡ್ಡ ಜಮೀನುದಾರರು, -ಇವರಿಗೆ ಮಾತ್ರವೇ ಸೀಮಿತವಾಗಿರದೆ, ಸಮಾಜದ ಪ್ರತಿಯೊಬ್ಬನಿಗೂ ಅನ್ವಯಿಸುತ್ತದೆ. ಏಕೆಂದರೆ ಚಿಕ್ಕ ಭೂಮಾಲಿಕರು ಬಹು ಸಂಖ್ಯಾಕರು. ಅವರೇ ತಮ್ಮ ಒಡೆತನದಿಂದ ಸ್ವಲ್ಪವಾದರೂ ತ್ಯಾಗ ಮಾಡಲು ಸಿದ್ಧರಾದರೆಂದರೆ, ದೊಡ್ಡವರೂ ಅವರನ್ನು ಅನುಸರಿಸಿ ತಮ್ಮ ಪಾಲಿನಂಶವನ್ನು ದಾನಮಾಡುವುದು. ಖಂಡಿತ. ಚಿಕ್ಕ ಮಾಲಿಕರಿಂದಲೇ ಭೂದಾನ ಚಳವಳಕ್ಕೆ ಈ ತನಕ ಹೆಚ್ಚಿನ ಶ್ರೇಯಸ್ಸು ಶಕ್ತಿ ದೊರೆತಿದೆ.

ಭೂದಾನವು ಈ ಹೊತ್ತು ವಿಸ್ತೃತವಾಗಿ 'ಗ್ರಾಮದಾನ'ದ ಪರಮಾವಧಿಯನ್ನು ಸೇರಿರ ತ್ತದೆ. 'ಗ್ರಾಮ ದಾನ' ಎಂದರೆ ಗ್ರಾಮದವರೆಲ್ಲ ಒಟ್ಟುಗೂಡಿ ಗ್ರಾಮದ ಭೂಮಿ, ಸಂಪತ್ತು ಇತ್ಯಾದಿಗಳನ್ನೆಲ್ಲ ಸ್ವೀಕರಿಸುವಾಗಿ ಒಂದು ಬೃಹತ್ ಕುಟುಂಬದ ಮಾದರಿಯಲ್ಲಿ ಹಂಚಿಕೊಂಡು, ಪ್ರೇಮದಿಂದ, ನ್ಯಾಯ ನೀತಿಯಿಂದ ಸಹಕಾರದಿಂದ ನಡೆದುಕೊಂಡು ಶಾಂತಿ ಸುಖವನ್ನನುಭವಿಸುವುದು ಅಂಥ ಪರಿಸ್ಥಿತಿಯು, ಈ ಜಿಲ್ಲೆಯ ದೊಡ್ಡ ದೊಡ್ಡ ಕುಟುಂಬಗಳಲ್ಲಿ, ಮುಖ್ಯವಾಗಿ ಅಳಿಯಕಟ್ಟಿನ ಕುಟುಂಬಗಳಲ್ಲಿ ಹಿಂದಿನಿಂದ ಚೆನ್ನಾಗಿ ನಡೆದು ಬರ ತ್ತಿತ್ತು. ಆದರೆ ಇತ್ತೀಚೆಗೆ ಆ ಸ್ಥಿತಿಯು ಕೆಟ್ಟಿದೆ ಅದಕಾರಣ ಅದನ್ನು ಈಗ ಸುಧಾರಿಸಿ ಮೊದಲಿನ ಪ್ರೇಮ, ಸಹಕಾರ, ನ್ಯಾಯದ ಸ್ಥಿತಿಗೆ ತರುವುದೇ ಗ್ರಾಮದಾನವು. ಅದರ ನಾಧ್ಯಾಸಾಧ್ಯತೆಯ ಕುರಿತು ಭಯ, ಸಂದೇಹಪಡಬೇಕೆ? ಅಸಾಧ್ಯವೆಂದನಿಸಿದ ಇತರ ಕಡೆಗಳಲ್ಲಿ ಕೂಡ ಚಮತ್ಕಾರದಂತೆ ಗ್ರಾಮದಾನವು ರಭಸದಿಂದ ಸಾಧ್ಯವಾಗಿದೆ. ಅದ ಕಾರಣ ಕಾರ್ಯಕರ್ತರೂ ಇತರರೂ ಭೂಮಾಲಿಕರೂ ಎಲ್ಲರೂ ಈ ಬಗ್ಗೆ ಪ್ರಯತ್ನಿಸಬೇಕು.

ಭೂದಾನ, ಗ್ರಾಮದಾನಗಳಲ್ಲಿ ಪ್ರಾಪ್ತವಾಗುವ ಭೂಮಿಯನ್ನು ಸದ್ಧಾರಿಸಿ ಊರ್ಜಿತಗೊಳಿಸುವುದಕ್ಕಾಗಿ ಪಣದ ಆವಶ್ಯಕತೆಯಿದೆ. ಅದಕ್ಕಾಗಿ ನಮ್ಮ ಜಿಲ್ಲೆಯಲ್ಲಿ ಸಹಸ್ರಾರು ಜನರು ತಮ್ಮ ಉತ್ಪಾದನೆ, ಹಣ ಇಲ್ಲವೆ ಇನ್ನಾವುದಾದರೂ ಯೋಗ್ಯ ಪರಿಮಾಣದಲ್ಲಿ ಸಂಪತ್ತುದಾನಕ್ಕೆ ಸಮರ್ಪಿಸಬಹುದು.

ಗ್ರಾಮದ ಜನರ ಸಂಘಟಿತ ಶ್ರಮದಿಂದಲೇ ಗ್ರಾಮಗಳು ಅಭಿವೃದ್ಧಿಗೊಳ್ಳುತ್ತವೆ. ಆದಕಾರಣ ಗ್ರಾಮಸ್ವರಾಜ್ಯದ ಕಾರ್ಯಗಳಲ್ಲಿ ಇನ್ನೇನೂ ಸಮರ್ಪಿಸಲಾರರಾದ ಶ್ರಮಿಕ ಬಂಧುಗಳು ಶ್ರಮದಾನ ಮಾಡಬಹುದು. ಪ್ರತಿಯೊಬ್ಬರೂ ಸಮಾಜದ ಅಂಶಗಳಾಗಿರುವ ಕಾರಣ, ತಾವು ಸಮಾಜದಿಂದ ಪಡೆದಿರುವ ಯಾವುದೇ ಅನುಕೂಲತೆ,— ಭೂಮಿ, ಸಂಪತ್ತು ಇತ್ಯಾದಿಗಳ ಋಣದಿಂದ ಮುಕ್ತರಾಗಲು, ಸಮಾಜಕ್ಕೆ ಆಯಾಯ ವಸ್ತುಗಳ ಸ್ವಲ್ಪ ಅಂಶವನ್ನಾದರೂ ಹಿಂದೆ ಕೊಡಬೇಕು. ಹಾಗಾದರೆ ನಮ್ಮ ಜಿಲ್ಲೆಯ ಕಾರ್ಯಕ್ರಮವು ಯಶಸ್ವಿಯೂ ಸಫಲವೂ ಆಗುವುದು

ಮೂವತ್ತಾರು ವರ್ಷಗಳ ಹಿಂದೆ ಸ್ವರ್ಗೀಯ ಬಾಪು,—ಮಹಾತ್ಮಾ ಗಾಂಧೀಜಿಯವರು ತನ್ನ ಸತ್ಯಾಗ್ರಹ ಚಳವಳದ ಮಂತ್ರವನ್ನು ಈ ಜಿಲ್ಲೆಗೆ ದಾನ ಮಾಡಿದಾಗ ಆಡಿಲ್ಲಾ ಅಸಾಧ್ಯ, ಅವ್ಯಾವಹಾರಿಕ ಇತ್ಯಾದಿ ಜನರ ಭಾವನೆಯಿತ್ತು. ಆದರೆ ದಕ್ಷಿಣ ಕನ್ನಡವು ಆ ಮೇಲೆ ರಾಷ್ಟ್ರೀಯ ಸಂಗ್ರಾಮ ಕಾಲದಲ್ಲಿ ಇತರ ಯಾವುದೇ ಜಿಲ್ಲೆಯಿಂದ ಹಿಂದಿರಲಿಲ್ಲ ಇಂದು ಹೊಸ ವೈಶಾಲಿನ ಕೆಲವು ಭಾಗಗಳಲ್ಲೂ ಇತರ ಪ್ರದೇಶಗಳಲ್ಲೂ ಭೂದಾನ, ಗ್ರಾಮದಾನ, ಸಂಪತ್ತಿದಾನವು ದೊಡ್ಡ ರೂಪವನ್ನು ತಾಳಿದೆ. ಹಾಗಾದರೆ ದಕ್ಷಿಣ ಕನ್ನಡ ಜಿಲ್ಲೆಯ ಜನರು ಮಾತ್ರ ಹಾಗಾಗದೆ ಹಿಂದುಳಿವರೆ? ಎಂದಿಗೂ ಇಲ್ಲ. ನಮ್ಮ ಜಿಲ್ಲೆಯಲ್ಲಿ ಸದಾ ಮಹಾನಾಹಸಿಗಳೂ ತ್ಯಾಗಿಗಳೂ ಆಗಿರುವರು ಅವರು ಈಗ ಮುಂದೆ ಬಂದು ಆ ಮಹಾ ಯುಗಪುರುಷ, ಸಂತ ವಿನೋಬಾಜಿಯವರ ಆಶೀರ್ವಾದಗಳಿಗೂ ದೇವರ ಕೃಪೆಗೂ ಪಾತ್ರರಾಗಲಿ.

ವಿ ಸೂ ಶ್ರೀ ವಿನೋಬಾಜಿಯವರ ಹಾದಯಾತ್ರೆಯ ಕಾರ್ಯಕ್ರಮ

ತಾ. ೨೪-೮-೫೭ ಉಬ್ಬಳ್ಳಿ ೨೫, ೨೬ ಮಂಗಳೂರು, ೨೭ ಫರಂಗಿ ಪೇಟೆ, ೨೮. ಪಾಣೆಮಂಗಳೂರು, ೨೯-ಮಾಣಿ, ೩೦ ಸುತ್ತೂರು, ೩೦ ಕುಮ್ರಾ, ೧-೯-೫೭ ಜಾಲ್ಸೂರು, ೨-ಸುಳ, ೩-ಅರಂತೋಡು ೪-ಸಂಪಾಜೆ, ೫-ಕೊಡಗು ಜಿಲ್ಲೆಯ ಪ್ರವೇಶ.

೧೯೫೭ರಲ್ಲಿ ಮೇ 15ರಂದು ದ್ವಿತೀಯ ಪಂಚವಾರ್ಷಿಕ ಯೋಜನೆಯ ಕರಡನ್ನು ಸಂಸತ್ತಿಗೆ ಸಾದರಪಡಿಸಲಾಯಿತು. ಪ್ರಥಮ ಯೋಜನೆಯಲ್ಲಿಯ ಅಭಿವೃದ್ಧಿ ಕ್ರಮಗಳಲ್ಲಾದ ಪ್ರಗತಿಯನ್ನು ರಭಸದಿಂದ ಸಾಗಿಸುವುದೇ ಈ ದ್ವಿತೀಯ ಯೋಜನೆಯ ಉದ್ದೇಶ.

ಚಿತ್ರ ೧ . ಪ್ರಧಾನ ಮಂತ್ರಿ ಪಂಡಿತ ನೆಹರೂರವರು ಯೋಜನಾ ಆಯೋಗದ ಸದಸ್ಯರು ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ದ್ವಿತೀಯ ಯೋಜನೆಯ ಕರಡಿಗೆ ಅಂಕಿತ ಹಾಕುತ್ತಿರುವರು.

ಚಿತ್ರ ೨ ರಾಜಸ್ಥಾನದಲ್ಲಿರುವ ಶ್ರೇಯ ಸುಸ್ಪಷ್ಟ ಕಾರ್ಯಕರ್ತಮೊಬ್ಬ ರಾಷ್ಟ್ರೀಯ ಪುನರುತ್ಥಾನ ಕಾರ್ಯದಲ್ಲಿ ಸೇವೆ ಸಲ್ಲಿಸುತ್ತಿರುವರು.

ಚಿತ್ರ ೩ ಭಾರತದ ಅಣುಶಕ್ತಿ ಆಯೋಗದ ಅಧ್ಯಕ್ಷರಾದ ಡಾ. ಜೆ. ಎಚ್. ಬಾಬಾರವರು ೧೯೫೬ರಲ್ಲಿ ಟ್ರಾಂಬೆಯಲ್ಲಿ ಸ್ಥಾಪಿಸಿದ ಅಣುರಿಯಾಕ್ಟರಿನ ಮಾದರಿಯೊಂದಿಗೆ ನಿಂತಿದ್ದಾರೆ.

ಚಿತ್ರ ೪ ಹಿರಾಕುಡ್ ಅಣೆಕಟ್ಟಿನ ನೋಟ

ಹಸ್ತಪತ್ರಿಕೆಗೆ ಲೇಖನಗಳು ಬೇಕು— ದೇಲಂಪಾಡಿಯ ಯುವಕರಿಂದ ಪ್ರಕಟಿಸಲ್ಪಡುತ್ತಿರುವ "ವನಸುಮ" ಮಾಸಪತ್ರಿಕೆಯು ಅಕ್ಟೋಬರ್ ಎರಡರ ವಿಶೇಷಾಂಕಕ್ಕೆ ಲೇಖನಗಳ ಅಗತ್ಯವಿದೆ ಲೇಖಕರು ಸಹಕರಿಸಬೇಕಾಗಿ ವಿನಂತಿ

"ವನಸುಮ ಪ್ರಕಾಶನ" ದೇಲಂಪಾಡಿ ಕಾಸರಗೋಡು ತಾಲೂಕು—ಈ ವಿಳಾಸಕ್ಕೆ ಕಳುಹಿಸುವುದು.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉದಯ	ಸಂಚಿಕೆ
೩೬	೨೯-೮-೧೯೫೭	೫೧

ಭೂದಾನ

ಆಚಾರ್ಯ ವಿನೋಬಾ ಭಾವೆಯವರು ಈಗ ನಮ್ಮ ಜಿಲ್ಲೆಯಲ್ಲಿ ಪಾದಯಾತ್ರೆಯನ್ನು ಕೈಗೊಂಡಿದ್ದಾರೆ. ಭೂದಾನ ಕೊಡಿರೆಂದು ಕೇಳುತ್ತಾ ನೈತಿಕ ಕ್ರಾಂತಿಗೆ ಅಡಿಪಾಯವನ್ನು ಹಾಕಿದ ಈ ಮಹಾತ್ಮನು ಈಗ ಅನೇಕ ಬಗೆಯ ದಾನಗಳ ಕಲ್ಪನೆಯ ಮೂಲಪುರುಷನೆನಿಸಿದ್ದಾನೆ. ಸಂಪತ್ತಿದಾನ, ಬುದ್ಧಿದಾನ, ವಿದ್ಯಾದಾನ, ಗ್ರಾಮದಾನ, ಜೀವನದಾನ, ಶ್ರಮದಾನ, ಆತ್ಮ ಬಲಿದಾನ ಮುಂತಾದ ಎಷ್ಟೋ ಪದ ಸಮುಚ್ಚಯಗಳನ್ನು ನಾವಿಂದು ಕೇಳುತ್ತಿರುವೆವಾದರೆ ಅದಕ್ಕೆ ಕಾರಣಭೂತರಾದ ಪುಣ್ಯಾತ್ಮ ವಿನೋಬಾರಲ್ಲದೆ ಬೇರೆಯಲ್ಲ. ಅವರು ಕೆಲಸ ಕೈಗೊಂಡಿರುವುದು ನೈತಿಕ ನಿಷ್ಠೆಯ ಬಲದಿಂದ—ಅವರ ಮುಂದಿರುವ ಉದ್ದೇಶವು ಘನವಾದುದಾಗಿದ್ದು ಮಾನವ ಕಲ್ಯಾಣವೆಂದೇ ಅದನ್ನು ಹೆಸರಿಸಬಹುದು. ಪಾದಯಾತ್ರೆಯನ್ನು ಊರಿಂದೂರಿಗೆ ಕೈಗೊಂಡು ತಿರುಗಾಡುತ್ತಾ ಹೋದಲ್ಲೆಲ್ಲ ದೇವರ ಸೊತ್ತಿನಲ್ಲಿ ವ್ಯಾಮೋಹವನ್ನು ಇಟ್ಟುಕೊಳ್ಳುವುದು ಹಿತವಲ್ಲವೆಂದು ಬೋಧಿಸುತ್ತಾ ತಿರುಗುವ ಈ ಸಂತ ಅದ್ಭುತ ಸಾಹಸವನ್ನು ಮಾಡಿ ತೋರಿಸಿದ್ದಾರೆ. ಇಷ್ಟರವರೆಗೆ ಆಜಲಕ್ಷ ಎಕ್ರೆ ಭೂಮಿಯು ಅವರಿಗೆ ದಾನವಾಗಿ ದೊರೆತಿದೆ ಅರುಕೋಟಿ ಎಕ್ರೆ ಭೂಮಿಯನ್ನು ದಾನವಾಗಿ ಪಡೆಯುವ ಸಂಕಲ್ಪ ಅವರದು—ಇದಕ್ಕೆ ಎಷ್ಟು ಸಮಯ ಶಗಲೀತೋ ತಿಳಿಯದು. ಆದರೆ ವಿನೋಬಾ ಭಾವೆ ಮಾತ್ರ ತನ್ನ ಜೀವನವು ಈ ಕಾರ್ಯದಲ್ಲೆ ಅಂತ್ಯವಾಗಲೆಂಬುದೇ ದೇವರಲ್ಲಿ ತಿಳಿಸು ಮಾಡುತ್ತಿರುವ ಪ್ರಾರ್ಥನೆ ಎಂಬ ಮಾತನ್ನು ಮಂಗಳೂರಿನಲ್ಲಿ ಸಹ ಪುನರುಚ್ಚರಿಸಿದರು. ಭೂಮಿಯ ಸಮಸ್ಯೆಯು ಭಾರತದಲ್ಲಿ ಮಿತಮಾವಸ್ಥೆಯನ್ನು ಮುಟ್ಟಿದೆ. ಸರಕಾರವು ತನ್ನದೇ ಆದ ರೀತಿಯಲ್ಲಿ ಭೂ ಸಮಸ್ಯೆಯ ನಿವಾರಣೆಗೆ ಪ್ರಯತ್ನಿಸಾಡುತ್ತಿದೆ. ಆದರೆ ಸ್ವಾತಂತ್ರ್ಯವನ್ನು ಸಂಪಾದಿಸಿ ಹತ್ತು ವರ್ಷಗಳು ಸಂದುವಾದರೂ ಭೂಸಮಸ್ಯೆಯ ಅಂಜನ್ನು ಸಹ ಸವಿಪಡಿಸಲು ಸರಕಾರಕ್ಕೆ ಸಾಧ್ಯವಾಗಿಲ್ಲವೆಂದು ಜನಸಾಮಾನ್ಯರು ಅಭಿಪ್ರಾಯಪಡುತ್ತಾರೆ. ಆಚಾರ್ಯರು ಭೂಸಮಸ್ಯೆಯನ್ನು ಶಾಸನದ ಬಲದಿಂದಲ್ಲ—ನೈತಿಕ ಪ್ರಭಾವದಿಂದ ಬಿಡಿಸುವ ಪ್ರತಿಜ್ಞೆಯನ್ನು ಕೈಗೊಂಡಿದ್ದಾರೆ. ಸರಕಾರದವರು ಭೂಸಮಸ್ಯೆಯನ್ನು ಬಿಡಿಸುತ್ತಾರಾದರೆ ಸಂತೋಷ—ಆದರೆ ನನ್ನ ಮಾರ್ಗ ನನಗೆ ಎನ್ನುತ್ತಾರೆ ಅವರು. ಜನರ ಮುಂದೆ ಅವರು ಇಡುವ ಪ್ರಶ್ನೆಯು ತೀರ ಸರಳವಾದುದಾಗಿದೆ—ನಿಮಗೆ ಐದು ಜನ ಮಕ್ಕಳಿರುವ ಬದಲು ಆರು ಜನರಿದ್ದರೆ ಆ ಆರನೇಯವನಿಗೆ ನೀವು ನಿಮ್ಮ ಆಸ್ತಿಯಲ್ಲಿ ೧/೬ ನೇ ಪಾಲನ್ನು ಕೊಡಲು ತಪ್ಪುತ್ತೀರಾ? ಇಲ್ಲ—ನಾನೇ ಆ ಆರನೇ ಮಗನೆಂದು ತಿಳಿದು ನನಗೆ ದಾನವಾಗಿ ಅದನ್ನು ಕೊಡಿರಿ. ದರಿದ್ರ ನಾರಾಯಣನಿಗೆ ಅದು ಸಲ್ಲುತ್ತದೆ. ಹೀಗೆ ಜನರನ್ನು ಬಹಳ ನೇರವಾಗಿಯೇ ವಿನೋಬಾ ಭಾವೆ ಕೇಳುತ್ತಾರೆ. ಸಂಪತ್ತಿದಾನ ಮತ್ತಿತರ ಎಲ್ಲ ದಾನಗಳನ್ನೂ ಅವರು ಜನರಿಂದ ತರ್ಕ ಮಾಡಿಯುಲ್ಲ. ಅವರ ಹೃದಯ ಪರಿವರ್ತನೆಯನ್ನು ಮಾಡಿ ಪಡೆದಿದ್ದಾರೆ. ನೀರಿನ ಮೇಲೆ ದೋಣಿ ಇದ್ದರೆ ಅದು ದೋಣಿಗೆ ಆಧಾರ; ಮತ್ತು ದೋಣಿಯು ಸಲೀಸಾಗಿ ಸಾಗಲೂ ಅದು ಅನುಕೂಲ. ಆದರೆ ನೀರು ದೋಣಿಯೊಳಗೆ ತುಂಬಿದರೆ, ದೋಣಿಗೆ ತುಂಬ ಕೇಡು; ಅದಕ್ಕೆ ಅಂತ್ಯವೇ ಬಂತು ಅದೇ ಪ್ರಕಾರ ಸಂಪತ್ತು ಹಿತಮಿತವಾಗಿದ್ದರೆ ಜೀವನಕ್ಕೆ ಅನುಕೂಲ; ಅದುವೇ ಸರ್ವಸ್ವವಾಗಿದ್ದರೆ, ಜೀವನವನ್ನು ಸಂಪತ್ತಿನ ಮದನೇ ಆವರಿಸಿದ್ದಾದರೆ ಮನುಷ್ಯತ್ವಕ್ಕೆ ಅಪಾಯವುಂಟು. ಇಂಥ ಸಾಮತಿಗಳಿಂದ ನಾವು ವಿನೋಬಾರ ಕಾರ್ಯ ವಿಧಾನದ ಬಗ್ಗೆ ಕಲ್ಪನೆಯನ್ನು ಮಾಡಿಕೊಳ್ಳಬಹುದು. ಅವರು ಒತ್ತಾಯ ಮಾಡುವುದಿಲ್ಲ; ಯಾವುದೇ ದಾನದಲ್ಲಿ ಒತ್ತಾಯದ ತಿಲಾಂಶವಾದರೂ ಇದೆ ಎಂದು ಅವರಿಗೆ ತಿಳಿದದ್ದಾದರೆ ಆ ದಾನವನ್ನು ಹಿಂತಿರುಗಿಸಲು ಅವರು ಸಿದ್ಧರು. ಸ್ವೇಚ್ಛೆಯಿಂದ ಮತ್ತು ಶ್ರದ್ಧೆಯಿಂದ ದಾನ ನಡೆಯಬೇಕೇ ವಿನಾ ಒತ್ತಾಯ ಮತ್ತು ಬೆದರಿಕೆಗಳಿಗೆ ಇಲ್ಲಿ ಸ್ಥಾನವೇ ಇಲ್ಲ. ಇದನ್ನು ವಿನೋಬಾಭಾವೆ ಹಲವಾರು ಸಲ ಹೇಳಿದ್ದಾರೆ. ಹೀಗೆ ವಿನೋಬಾ ಒತ್ತಾಯವಿಲ್ಲದೆಯೂ ಅವರು ಲಕ್ಷಾಂತರ ಎಕ್ರೆ ಭೂಮಿ ಸಂಪಾದಿಸಲು ಸಮರ್ಥರಾಗಿದ್ದಾರೆ. ಇದು ಕಡಿಮೆಸ್ತಮಾಣದ ಸಾಧನೆಯಲ್ಲ, ವಾಸ್ತವವಾಗಿ ಈ ಸಾಧನೆಯು ಭೌತಿಕತೆಗೆ ಹೆಸರಾದ ಪಾಶ್ಚಾತ್ಯದಲ್ಲಿ ಆಶ್ಚರ್ಯವನ್ನು ಉಂಟು ಮಾಡಿದೆ. ವಿನೋಬಾರ ಸಾಧನೆಯನ್ನು ನಂಬುವುದೇ ಅವರಿಗೆ ಕಷ್ಟವಾಗಿದೆ ಎಂದರೂ ಅತಿಶಯೋಕ್ತಿಯಾಗದು. ಕೆಲವು ನಿರಾಶಾವಾದಿಗಳು ಭೂಮಿಯ ಸಮಸ್ಯೆಯನ್ನು ಈ ವಿಧಾನದಿಂದ ಬಿಡಿಸುವುದಕ್ಕೆ ಹೋದರೆ ಇನ್ನು ಎಷ್ಟು ಶತಮಾನಗಳು ನಮಗೆ, ಬೇಕಾದಾವೊ ಎನ್ನುತ್ತಾರೆ—ಅವರು ಸರಕಾರದ ಮುಖವನ್ನೆ ನೋಡಲಿ ಚಿಂತಿಲ್ಲ. ಆದರೆ ವಿನೋಬಾ ಭಾವೆಯವರು ಜ್ವಾಜಲ್ಯಮಾನವಾಗಿ ಬೆಳಗುತಿರುವ ನೈತಿಕ ನಿಷ್ಠೆಯು ತನ್ನ ಗಾಢವಾದ ಪ್ರಭಾವವನ್ನು ಜನಜೀವನದ ಮೇಲೆ ಬೀರುವುದು ಮಾತ್ರ ನಿಶ್ಚಯ.

ಸಂಕ್ಷಿಪ್ತ ಸುದ್ದಿಗಳು

ನಿವೃತ್ತಿಯ ವಯೋಮಿತಿ

ಮೈಸೂರು ರಾಜ್ಯದಲ್ಲಿ ಅಧ್ಯಾಪಕರ ನಿವೃತ್ತಿಯ ವಯೋಮಿತಿಯನ್ನು ಏಕರೂಪಕ್ಕೆ ತಂದು ಅದನ್ನು ೫೫ ಎಂಬುದಾಗಿ ನಿರ್ಧರಿಸಲಾಗಿದೆ. ಇತರ ಸರಕಾರಿ ಉದ್ಯೋಗಸ್ಥರ ನಿವೃತ್ತಿಪ್ರಾಯವೂ ಇದೇ

ಕಾಲೇಜಿನ ನಾಮಕರಣ

ಹುಬ್ಬಳ್ಳಿಯಲ್ಲಿ ಮುಂದಿನ ತಿಂಗಳಿನಿಂದ ಮೈಸೂರು ರಾಜ್ಯ ಸರಕಾರವು ತೆರೆಯಲಿರುವ ಹೊಸ ವೈದ್ಯಕೀಯ ಕಾಲೇಜಿಗೆ 'ಕರ್ನಾಟಕ ಮೆಡಿಕಲ್ ಕಾಲೇಜ್' ಎಂದು ನಾಮಕರಣ ಮಾಡಲಾಗಿದೆ. ಇದು ಕರ್ನಾಟಕ ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿ ಬರುವುದೆಂದೂ ಸರಕಾರಿ ಪ್ರಕಟಣೆಯೊಂದು ಹೊರಟಿದೆ. ಪ್ರಾರಂಭದಲ್ಲಿ ಕಾಲೇಜಿಗೆ ಅಧಿಕೃತ ನಾಮಧೇಯವಿರಲಿಲ್ಲ. ಈ ಕಾಲೇಜಿನ ೫೦ ಸ್ಥಾನಗಳಿಗೆ ೧೦೦೦ಕ್ಕೂ ಮಿಕ್ಕಿ ಅರ್ಜಿಗಳು ಬಂದಿರುವುದೆಂದು ತಿಳಿದು ಬರುತ್ತದೆ.

ಹೈಕೋರ್ಟಿಗೆ ನ್ಯಾಯಾಧೀಶರು

ಮೈಸೂರ್ ಹೈಕೋರ್ಟಿಗೆ ಶಾಶ್ವತ ನ್ಯಾಯಾಧೀಶರಾಗಿ ಮೈಸೂರ ಸರಕಾರದ ನ್ಯಾಯ ಶಾಖಾ ಕಾರ್ಯದರ್ಶಿಯಾದ ಶ್ರೀ ಎಂ. ಸದಾಶಿವಯ್ಯನವರನ್ನೂ ದಕ್ಷಿಣ ಕನ್ನಡದವರಾದ ಶ್ರೀ ಕೆ. ಸದಾನಂದ ಹೆಗ್ಗಡೆಯವರನ್ನೂ ರಾಷ್ಟ್ರಪತಿಗಳು ನೇಮಿಸಿದ್ದಾರೆ. ಇವರೀರ್ವರೂ ತಾ. ೩೬ ರಂದು ಚೀಫ್ ಜಸ್ಟಿಸರ ಮುಂದೆ ಪ್ರತಿಜ್ಞಾ ಸ್ವೀಕಾರ ಮಾಡಿದರು.

ಮನೆ ವಿದ್ಯುತ್ತಿಗೆ ಕರ

ಸಪ್ಟಂಬರ ೧ನೆ ತಾರೀಕಿನಿಂದ ಮನೆ ಬಳಕೆಯ ವಿದ್ಯುತ್ತಿನ ಮೇಲೆ ಪ್ರತಿ ಯುನಿಟಿಗೆ ಎರಡು ನಯೇ ಪೈಸೆಗಳಷ್ಟು ಮತ್ತು ನೀರಾವರಿ ಪಾಂಪ್ ಉಷ್ಣತೆಗಳ ವಿದ್ಯುತ್ತಿಗೆ ಯೂನಿಟಿಗೆ ಒಂದು ನಯೆ ಪೈಸದಂತೆಯೂ ಕರಗಳನ್ನು ಮೈಸೂರು ಸರಕಾರವು ವಿಧಿಸಿದೆ.

ಕಾಂಗ್ರೆಸಿಗರಿಗೆ ಧೈರ್ಯ ಬರಲಿ!

ಕೇರಳದಲ್ಲಿನ ಕಾಂಗ್ರೆಸಿಗರು ತಮ್ಮ ನಿರಾಶಾ ಮನೋವೃತ್ತಿಯನ್ನು ದೂರವಿರಿಸಿ ರಾಜ್ಯದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಲು ವಿಶ್ವಾಸದಿಂದ ಹಾಗೂ ಉತ್ಸಾಹದಿಂದ ದುಡಿಯಬೇಕು. ಜನತೆಯಲ್ಲಿ ಸೌಹಾರ್ದ ಮತ್ತು ಪ್ರೀತಿಯ ಭಾವನೆಯನ್ನುಂಟುಮಾಡಲು ಕಾಂಗ್ರೆಸಿಗರು ಒಕ್ಕಟ್ಟಿನಿಂದ ಪ್ರಯತ್ನಿಸಬೇಕು ಎಂದು ಕೇಂದ್ರ ಸಂರಕ್ಷಣಾ ಮಂತ್ರಿ ವಿ. ಕೆ. ಕೃಷ್ಣ ಮೆನನರು ಕೇರಳದ ಕಾಂಗ್ರೆಸಿಗರಿಗೆ ಉಪದೇಶಿಸಿದರು.

ಕೇರಳಕ್ಕೆ ವೇತನಾ ಆಯೋಗ

ರಾಜ್ಯ ಸರಕಾರದ ನೌಕರರ ವೇತನ ಪ್ರಮಾಣವನ್ನು ಪರಿಶೀಲಿಸಲು ಕೇರಳ ರಾಜ್ಯ ಸರಕಾರವು ವೇತನಾ ಆಯೋಗವೊಂದನ್ನು ನೇಮಿಸುವುದೆಂದು ಮುಖ್ಯಮಂತ್ರಿ ಶ್ರೀ ನಂಬೂದರಿ ಪಾದರು ರಾಜ್ಯ ವಿಧಾನ ಸಭೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ವಿಸ್ತರಣಾ ಯೋಜನೆ

ಮುಂದಿನ ಅಕ್ಟೋಬರ ತಿಂದು ಮತ್ತೆ ದೇಶದಾದ್ಯಂತ ೫೫೦ ರಾಷ್ಟ್ರೀಯ ವಿಸ್ತರಣಾ ಕೇಂದ್ರಗಳನ್ನು ಪ್ರಾರಂಭಿಸಬೇಕೆಂದು ಕೇಂದ್ರ ಸರಕಾರದ ಪ್ರಕಟಣೆ ಹೊರಟಿದೆ. ಸ್ವಥಮತಃ ಈ ಕೇಂದ್ರಗಳಲ್ಲಿ ವ್ಯಾವಸಾಯಿಕ ಕಾರ್ಯವನ್ನು ಆರಂಭಿಸಬೇಕೆಂದೂ ಈ ಬಗ್ಗೆ ಆಗುವ ವೆಚ್ಚವು ಪ್ರತಿ ಕೇಂದ್ರಕ್ಕೆ ರೂ. ೧೦ ಸಾವಿರಕ್ಕೆ ಮೀರಬಾರದೆಂದೂ ಅದರಲ್ಲಿ ಹೇಳಲಾಗಿದೆ.

ಮಾಧ್ಯಮಿಕ ಶಿಕ್ಷಣ

ಮಾತೃಭಾಷೆ ಇಲ್ಲವೆ ಪ್ರಾದೇಶಿಕ ಭಾಷೆ ಮಾತೃ ಭಾಷೆಗಳ ಸಂಯುಕ್ತ ಅಭ್ಯಾಸ ಕ್ರಮ ಅಥವಾ ಮಾತೃ ಭಾಷೆ, ಪ್ರಾಚೀನ ಭಾಷೆ ಇಲ್ಲವೇ ಪ್ರಾದೇಶಿಕ ಭಾಷೆ ಪ್ರಾಚೀನ ಭಾಷೆಗಳ ಸಂಯುಕ್ತ ಅಭ್ಯಾಸ ಕ್ರಮ; ಇಂಗ್ಲಿಷ್ ಇಲ್ಲವೇ ಆಧುನಿಕ ಪರೋಕ್ಷ ಭಾಷೆ ಮತ್ತು ಹಿಂದೀ (ಹಿಂದಿಯೇತರ ಪ್ರದೇಶಗಳಿಗೆ) ಇಲ್ಲವೇ ಇನ್ನೊಂದು ಆಧುನಿಕ ಭಾಷೆ (ಹಿಂದಿ ಪ್ರದೇಶಗಳಿಗೆ)— ಈ ರೀತಿಯಲ್ಲಿ ಭಾಷೆಗಳನ್ನು ಮಾಧ್ಯಮಿಕ ಶಿಕ್ಷಣದಲ್ಲಿ ಕಲಿಸುವ ಬಗ್ಗೆ ಕೇಂದ್ರ ಶಿಕ್ಷಣ ಸಮಿತಿಯು ಮಾಡಿದ ಸಿಫಾರಸುಗಳನ್ನು ಬಂಗಾಲ, ಆಸಾಮ್, ಜಮ್ಮೂ, ಕಾಶ್ಮೀರ, ಕೇರಳ ಮತ್ತು ಬಿಹಾರ ರಾಜ್ಯಗಳು ಈವರೆಗೆ ಒಪ್ಪಿರುವುದೆಂದು ತಿಳಿದು ಬಂದಿದೆ. ದಿಲ್ಲಿ, ತ್ರಿಪುರಾ, ಲಖದಿವಿ, ಮಿನಿಕಾಯ್ ಅಮಿನದಿವಿ ನಡುಗುಡ್ಡೆಗಳ ಆಡಳಿತಾ ಸಮಿತಿಗಳೂ ಈ ಪದ್ಧತಿಯನ್ನು ಒಪ್ಪುವೆ.

ರಾಜ್ಯ ಸರಕಾರಿ ನೌಕರರು

ಕೇಂದ್ರ ಸರಕಾರವು ನೇಮಿಸಿದ ವೇತನಾ ಆಯೋಗಕ್ಕೆ ರಾಜ್ಯ ಸರಕಾರಗಳ ನೌಕರರ ಪ್ರಶ್ನೆಯನ್ನು ಸಹ ಒಪ್ಪಿಸಬೇಕೆಂದು ಆಂಧ್ರ, ಮದ್ರಾಸ, ಮೈಸೂರು ಹಾಗೂ ಕೇರಳ ಸರಕಾರಗಳ ನಾನ್ ಗಜೆಟೆಡ್ ನೌಕರರ ಸಂಘಗಳ ಶಿಷ್ಟ ಮಂಡಲವೊಂದು ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರಿಗೊಂದು ಮನವಿಯನ್ನರ್ಪಿಸಿದೆ.

ಅಕ್ಕಿಗೆ ಪೂರಕ ಆಹಾರ

ಅಕ್ಕಿಗೆ ಪೂರಕವಾಗಿ ಉಪಯೋಗಿಸಲು ಮೈಸೂರಿನ ಕೇಂದ್ರ ಆಹಾರ ಧಾನ್ಯ ಸಂಶೋಧನಾಲಯವು 'ಪ್ರೊಜಿಯೋಕಾಮಕಾರೊಸಿ' ಎಂಬ ಹೊಸ ಪದಾರ್ಥವೊಂದನ್ನು ಸಿದ್ಧಪಡಿಸಿದೆ.

ವಿನೋಬಾರಿಗೆ ದಾನ

ಆಚಾರ್ಯ ವಿನೋಬಾ ಭಾವೆಯವರು ಕೇರಳದಲ್ಲಿ ಕಳೆದ ನಾಲ್ಕೂವರೆ ತಿಂಗಳಿಂದ ಕೈಕೊಂಡ ಸಂಚಾರದ ಪರಿಣಾಮವಾಗಿ ಅಲ್ಲಿ ೩೦೧ ಹಳ್ಳಿಗಳು ಗ್ರಾಮದಾನವಾಗಿ ದೊರೆತಿದೆ. ಈ ಹಳ್ಳಿಗಳಲ್ಲಿ ೬೫೦೦ ಕುಟುಂಬಗಳಿದ್ದು ೪೫೦೦ ಎಕ್ರೆಗಳಷ್ಟು ಭೂಮಿ ಇರುವುದು. ಇದಲ್ಲದೇ ೫೦ ಸಾವಿರ ರೂಪಾಯಿಗಳನ್ನು ಸಂಪತ್ತಿದಾನವಾಗಿಯೂ ೧೦೦೦ ಎಕ್ರೆ ಭೂಮಿಯನ್ನು ಭೂದಾನವಾಗಿಯೂ ಅವರು ಪಡೆದಿದ್ದಾರೆ.

ಧರ್ಮಾರ್ಥ ಅಂಚೆ

ಕುರುಡರ ಉಪಯೋಗಕ್ಕಾಗಿ ಕಳಿಸುವ ಎಲ್ಲ ಸಾಹಿತ್ಯವನ್ನೂ ಅಂಚೆ ಚೀಟಿ ಹಚ್ಚದೆ ಪುಕ್ಕಟೆಯಾಗಿ ಕಳಿಸಲು ಅವಕಾಶವೀಯಬೇಕೆಂದು ಅಂಚೆ ಮತ್ತು ತಂತಿ ಶಾಖೆಯು ನಿರ್ಧರಿಸುವುದು. ವಿದೇಶಗಳಿಗೆ ಸಹಾ ಇದೇ ಪದ್ಧತಿಯಿಂದ ಕುರುಡರ ಸಾಹಿತ್ಯವನ್ನು ಕಳಿಸಬಹುದು. ರಿಜಿಸ್ಟರ್ಡ್ ಅಥವಾ ಇನ್ಶೂರ್ಡ್ ಪಾರ್ಸೆಲುಗಳಿಗೆ ಈ ಸವಲತ್ತು ಇರುವುದಿಲ್ಲ. ನಮ್ಮ ದೇಶದಲ್ಲಿ ಈಗ ಒಂದು ವರ್ಷಕ್ಕೆ ಸುಮಾರು ೨೫,೦೦೦ ಕುರುಡರ ಸಾಹಿತ್ಯ ಪಾರ್ಸೆಲುಗಳು ಅಂಚೆಮೂ

ಲಕ ಕಳುಹಿಸಲ್ಪಡುತ್ತವೆಯೆಂದು ಅಂದಾಜು ಮಾಡಿದ್ದಾರೆ

ಉದ್ದಿಮೆಗೆ ಆರ್ಥಿಕ ನೆರವು

ಭಾರತ ಸರಕಾರವು ಚಿಕ್ಕ ಉದ್ದಿಮೆಗಳ ಅಭಿವೃದ್ಧಿಗಾಗಿ ಮದ್ರಾಸ, ಕೇರಳ, ಮೈಸೂರು ಮತ್ತು ಆಂಧ್ರ ರಾಜ್ಯಗಳಿಗೆ ಒಟ್ಟು ೨೧೧ ಲಕ್ಷ ರೂಪಾಯಿಗಳನ್ನು ಸಾಲ ಮತ್ತು ಸಹಾಯಧನವೆಂದು ಮಂಜೂರು ಮಾಡಿರುತ್ತದೆ ಈ ಹಣವನ್ನು ಚಿಕ್ಕ ಉದ್ದಿಮೆಗಳ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಉತ್ಪಾದನಾ ಕೇಂದ್ರ, ಸೇವಾಕೇಂದ್ರಗಳನ್ನು ಪ್ರಾರಂಭಿಸಲು, ಸಹಕಾರಿ ಸಂಘಗಳಲ್ಲಿಯ ಕಾರ್ಯಕರ್ತರಿಗೂ ಆರ್ಥಿಕ ನೆರವನ್ನೀಯಲು ಉಪಯೋಗಿಸಲಾಗುವುದು

ಆಹಾರ ಧಾನ್ಯಗಳಿಗೆ ಮುಂಗಡ ಹಣ

ರಿಸರ್ವ ಬೇಂಕಿನ ಗವರ್ನರರಾದ ಶ್ರೀ ಎಚ್ ವಿ. ಆರ್ ಅಯ್ಯಂಗಾರರು ಪ್ರಮುಖ ಬೇಂಕುಗಳ ಪ್ರತಿನಿಧಿಗಳ ಸಭೆಯೊಂದನ್ನು ಕರೆದು ಅದರಲ್ಲಿ ಆಹಾರ ಧಾನ್ಯಗಳ ಮೇಲೆ ಮುಂಗಡ ಹಣವೀಯುವುದನ್ನು ಕಡಿಮೆ ಮಾಡುವ ಅವಶ್ಯಕತೆಗಳನ್ನು ವಿವರಿಸಿದರು ಪ್ರಧಾನಿ ನೆಹರೂರವರು ಆಹಾರ ಧಾನ್ಯಗಳ ಬೆಲೆ ಏರಲು ದೊಡ್ಡ ಪ್ರಮಾಣದಲ್ಲಿ ಮುಂಗಡ ಹಣ ಕೊಡುವುದೇ ಕಾರಣವೆಂದು ತಿಳಿಸಿ ತಮಗೊಂದು ಪತ್ರ ಬಂದಿರುವರೆಂದೂ ಬೇಂಕುಗಳು ಈ ಮುಂಗಡ ಹಣವನ್ನು ಕಡಿಮೆ ಮಾಡದಿದ್ದರೆ, ಸರಕಾರವೇ ಯೋಗ್ಯ ಕ್ರಮ ಕೈಗೊಳ್ಳುವುದೆಂದೂ ಶ್ರೀ ಐಯಂಗಾರರು ಹೇಳಿದರು.

ಮೈಸೂರಿನಲ್ಲಿ ಹಿಂದೀ ಪ್ರಚಾರ

ಹಿಂದಿಯೇತರ ಪ್ರದೇಶಗಳಲ್ಲಿ ಹಿಂದೀ ಭಾಷೆಯ ಪ್ರಚಾರ ಮಾಡುವ ಉದ್ದೇಶದಿಂದ ರಾಜ್ಯ ಸರಕಾರವು ರಾಜ್ಯದಲ್ಲಿಯ ಪ್ರತಿಯೊಂದು ಶಾಲೆಯಲ್ಲಿಯೂ ಓರ್ವ ಹಿಂದಿ ಶಿಕ್ಷಕನಿರುವಂತೆ ಮಾಡುವ ಬಗ್ಗೆ ವಿಚಾರ ನಡೆಸಿದೆ ರಾಜ್ಯದಲ್ಲಿನ ಕೆಲವೊಂದು ಸರಕಾರಿ, ಸ್ಥಳೀಯ ಸಂಸ್ಥೆಯ ಪ್ರೌಢಶಾಲೆಗಳಲ್ಲಿ ಓರ್ವ ಹಿಂದೀ ಅಧ್ಯಾಪಕನನ್ನೂ ಪ್ರೌಢ ಪ್ರಾಥಮಿಕ ಶಾಲೆಗಳಲ್ಲಿ "ಪಂಡಿತ್ ಟ್ಯೂಟರ್" ಶಿಕ್ಷಕನನ್ನು ನೇಮಿಸಲೂ ಆಜ್ಞೆ ಕೊಟ್ಟಿದೆ. ಇದಕ್ಕೆ ಒಂದು ಲಕ್ಷ ರೂಪಾಯಿ ವೆಚ್ಚವಾಗುವುದು

ಭದ್ರತಾ ಮಂಡಳಕ್ಕೆ ದೂರು

ಜಾಗತಿಕ ಬೇಂಕಿನ ಮಧ್ಯಸ್ಥಿಕೆಯಿಂದ ಕಾಲುವೆ ನೀರಿನ ತಂಟೆಯು ಬಗೆಹರಿಯದೆ ಹೋದರೆ ತಾನು ಭದ್ರತಾಮಂಡಲಕ್ಕೆ ಅದನ್ನು ಒಯ್ಯವೆನೆಂದೂ ಅಲ್ಲಿಯೂ ತೃಪ್ತಿಕರವಾದ ಪರಿಹಾರ ದೊರೆಯದೆ ಹೋದಲ್ಲಿ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಗೂ ಈ ತಂಟೆಯನ್ನು ಒಯ್ಯಲಾಗುವುದೆಂದೂ ಪಾಕಿಸ್ತಾನಿ ಪ್ರಧಾನಿ ಶ್ರೀ ಸುಹ್ರವರ್ದಿಯವರು ಒಂದು ಭಾಷಣದಲ್ಲಿ ನುಡಿದರು. ಅಲ್ಲದ ಸಂಘ ಸಂಸ್ಥದ ಸಾಮಾನ್ಯ ಸಭೆಯಲ್ಲಿ ತನಗೆ ಮೂರರಲ್ಲಿ ಎರಡೆಂಬದನ್ನು ಬಹುಮತ ದೊರಯುವ ವಿಶ್ವಾಸವನ್ನೂ ಅವರು ಪ್ರದರ್ಶಿಸಿದ್ದಾರೆ

ಉಪರಾಷ್ಟ್ರಾಧ್ಯಕ್ಷರ ವಿದೇಶ ಯಾತ್ರೆ

ಭಾರತದ ಉಪರಾಷ್ಟ್ರಪತಿಗಳಾದ ಡಾ. ರಾಧಾಕೃಷ್ಣನರು ಮುಂದಿನ ತಿಂಗಳಲ್ಲಿ ಇಂಡೊಚೀನಾ, ಚೀನಾ ಮತ್ತು ಮಂಗೋಲಿಯಾ ಸರಕಾರಗಳ ಆಮಂತ್ರಣದ ಮೇರೆಗೆ ಆ ದೇಶಗಳನ್ನು ಸಂಚರಿಸಲಿರುವರು. ವಿದೇಶ ಖಾತೆಯ ಉಪಕಾರ್ಯದರ್ಶಿ ಶ್ರೀ ಎಸ್. ದೇವಹತಾ ಮತ್ತು ಉಪರಾಷ್ಟ್ರಪತಿಗಳ ಖಾಸಗಿ ಕಾರ್ಯದರ್ಶಿ ಹಾಗೂ ಭಾಷಾಂತರಕಾರರೂ ಅವರೊಡನೆ ಹೋಗಲಿರುವರು

ಬ್ರಿಟಿಷ ಪ್ರಧಾನ ಮಂತ್ರಿ

ಮುಂದಿನ ಜನವರಿ ತಿಂಗಳಲ್ಲಿ ಸಿಂಕಳ, ನ್ಯೂಜಿಲೇಂಡ್, ಆಸ್ಟ್ರೇಲಿಯಾಗಳಿಗೆ ಭೇಟಿಯೀಯುವರೆಂದಿದ್ದ ಬ್ರಿಟಿಷ ಪ್ರಧಾನಿ ಹೆರಾಲ್ಡ್ ಮಕಮಿಲನರು ಭಾರತ, ಪಾಕಿಸ್ತಾನಗಳಿಗೂ ಸಂದರ್ಶನವೀಯುವರೆಂದು ತಿಳಿದ ಒಂದಿದೆ ಜನವರಿಯ ೧೯ ದಿನಾಂಕದಿಂದ ೧೨ನೆ ದಿನಾಂಕದ ವರೆಗೆ ಭಾರತ ಸರಕಾರದ ಆತಿಥಿಗಳಾಗಿ ಅವರು ಭಾರತದಲ್ಲಿ ಉಳಿಯಲಿರುವರು

ಇದೇ ತಿಂಗಳ ೩೧ನೆಯ ದಿನಾಂಕದಂದು "ಮಲಯಾ" ದೇಶವು ಸ್ವತಂತ್ರವಾಗಲಿರುವುದು ಅಂದು ಕುವಾಲ ಲುಂಪುರಿನಲ್ಲಿ ಸೇರಲಿರುವ ಒಂದು ಸಮಾರಂಭದಲ್ಲಿ ಅಡಳಿತ ಸೂತ್ರವನ್ನು ಮಲಯದ ಪ್ರಧಾನ ಮಂತ್ರಿ ಶ್ರೀ ತುಂಕು ಅಬ್ದುಲ ರಹಿಮಾನರಿಗೆ ಬ್ರಿಟಿಷ ಮಹಾರಾಣಿಯವರ ಪ್ರತಿನಿಧಿಯಾಗಿ ಗ್ಲೊಚೆಸ್ಟರಿನ ಡ್ಯೂಕರು ಒಪ್ಪಿಸಲಿರುವರು ಚಿತ್ರದಲ್ಲಿ ಬ್ರಿಟಿಷ ಮಹಾರಾಣಿ ೨ನೆ ಎಲಿಜಬೆತ್ ಮತ್ತು ಅವರ ಪ್ರತಿನಿಧಿಯನ್ನು ಕಾಣಬಹುದು.

ಉಡುಪಿ

ಯುನಿವರ್ಸಿಟಿ ವಾದವಿವಾದ

ಈ ಕುರಿತು ಶ್ರೀ ಟಿ ಎ. ಪೈಗಳು ಲೇಖನವೊಂದನ್ನು ಪ್ರಕಟಿಸಿದ್ದಾರೆ. ಇದು ಸ್ವಲ್ಪ ವಿಳಂಬವಾಗಿ ಕೈಸೇರಿದ್ದರಿಂದಲೂ ಚೌತಿ ರಜೆ ಸಂಬಂಧ ಪತ್ರಿಕೆಯನ್ನು ಮಂಗಳವಾರವೇ ಮುಗಿಸಬೇಕಾಗಿ ಬಂದಿದರಿಂದಲೂ ಇದನ್ನು ಈಬಾರಿ ಪ್ರಕಟಿಸಲಾಗಲಿಲ್ಲ ಬರುವ ವಾರ ಪ್ರಕಟಿಸಲಾಗುವುದು ಸ ನ

ಉಡುಪಿ ಬೋರ್ಡು ಹೈಸ್ಕೂಲಿನ—

ಎನ್ ಸಿ ಸಿ ಮತ್ತು ಎ ಸಿ ಸಿ ದಳದ ಉದ್ಘಾಟನಾ ಸಮಾರಂಭವು ತಾ ೨೩ರಂದು ಸರೇಕಟ್ಟು ಹೆಡ್ಮಾಸ್ಟರ್ ಶ್ರೀ ಬಿ ಅನಂತಕೃಷ್ಣ ಸಾಮಕರು ಸ್ವಾಗತ ಭಾಷಣಮಾಡಿದಮೇಲೆ ಅಧ್ಯಕ್ಷ ಶ್ರೀ ಟಿ ಎ ಪೈಗಳು ಪ್ರಾರಂಭಿಕ ಭಾಷಣಮಾಡಿದರು 2/Lieut ಸಿ ಬಾಕೃಷ್ಣನ್, ಎಂ ಎಸ್ ಸಿ ಯವರು ಉದ್ಘಾಟನಾ ಭಾಷಣಮಾಡಿ ಶಿಸ್ತು, ಶೀಲದ ಅವಶ್ಯಕತೆಯನ್ನು ವಿವರಿಸಿದರು ದಳದ ವಿದ್ಯಾರ್ಥಿಗಳ ಪ್ರಮಾಣ ವಚನವಾದ ಬಳಿಕ ಅಧ್ಯಕ್ಷ ಪೈಗಳು ಮುಂದಿನ ಜನಾಂಗವಾದ ವಿದ್ಯಾರ್ಥಿಗಳ ಹೊಣೆ, ಅವರಲ್ಲಿರಬೇಕಾದ ಗುಣ ಸಂಪತ್ತಿಗಳನ್ನು ವಿವರಿಸಿ ಭಾಷಣಮಾಡಿದರು ಶ್ರೀ ಎ ನಾರಾಯಣಯ್ಯನವರು ಧನ್ಯವಾದಗಳನ್ನಿತ್ತರು

ಮಾನ್ಯ ವಿದ್ಯಾಮಂತ್ರಿಗಳಿಗೆ ಉಡುಪಿ ಪ್ರಾಥಮಿಕ ಶಿಕ್ಷಕರ ಧನ್ಯವಾದ

ತಳ್ಳೆ—ತಾ ೩೧ರಂದು ಉಡುಪಿಗೆ ಸಂದರ್ಶನಕೊಡಲಿರುವ ಮಾನ್ಯ ವಿದ್ಯಾಮಂತ್ರಿಗಳಿಗೆ ಅಂದು ಘಂಟೆ ಅಪರಾಹ್ನ 8—30ಕ್ಕೆ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಪ್ರಾಥಮಿಕ ಶಿಕ್ಷಕರ ಧನ್ಯವಾದಗಳಿಯನ್ನು ಅರ್ಪಿಸಲಿರುವುದಾಗಿಯೂ ಪ್ರಾ ಶಿಕ್ಷಕರ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ಸದಸ್ಯರೂ ಇತರ ಆಸಕ್ತಿಯಿರುವ ಅಧ್ಯಾಪಕರೂ ತಾ ೩೧ರಂದು ಅಪರಾಹ್ನ ಘಂಟೆ 7 30ಕ್ಕೆ ಉಡ್ಪಿ ಪಡಿಯಲ್ ಸ್ಟೇಶನಿನ ಬಳಿ ಬಂದು ಸೇರಬೇಕೆಂದೂ ಉಡ್ಪಿ ತಾಲೂಕು ಖಾಸಗಿ ಪ್ರಾಥಮಿಕ ಶಾಲೆಗಳ ಕಾರ್ಯದರ್ಶಿ ಶ್ರೀ ದಾಂತಿಯವರು ತಿಳಿಸುತ್ತಾರೆ

ವಾರ್ಷಿಕ ದಿನಾಚರಣೆ - ಬೋರ್ಡು ಹೈಸ್ಕೂಲಿನ

ಹಳೆ ವಿದ್ಯಾರ್ಥಿ ಸಂಘದ ವರ್ಧಂತಿಯು ತಾ ೨೩ರಂದು ಶ್ರೀ ರೊಕ್ಕಿ ಫೆರ್ನಾಂಡಿಸರ ಅಧ್ಯಕ್ಷತೆಯಲ್ಲಿ ಬೋರ್ಡು ಹೈಸ್ಕೂಲಿನಲ್ಲಿ ಜರಗಿತು ಹೆಡ್ಮಾಸ್ಟರ್ ಶ್ರೀ ಬಿ ಅನಂತಕೃಷ್ಣ ಸಾಮಕರು ಸ್ವಾಗತಿಸಿದರು ಸಂಘದ ಅತ್ಯಂತ ಹಿರಿಯ ವಿದ್ಯಾರ್ಥಿ ಶ್ರೀ ವಿ ಗಣೇಶ ಸುಂದರ ರಾಯರಿಗೆ ಅತಿಕಿರಿಯ ವಿದ್ಯಾರ್ಥಿ ಶ್ರೀ ಮೋಹನದಾಸ ಬಾಳಿಗಾರ ಗಾರವ ಸಮರ್ಪಿಸಿದರು 35 ಜನ ವಿದ್ಯಾರ್ಥಿ ಜಳಿಗೆ ಉಡುಗೆಯ ಉಡುಗೊರೆ ಕೊಟ್ಟ ಮೇಲೆ ಶ್ರೀಗಳಾದ ಬಿ ಶ್ಯಾಮರಾಯ ಶೆಟ್ಟಿ, ಕೆ ಆರ್ ಕೆ ಭಟ್, ಆರ್ ಆರ್ ಕುಂದಾರ್ಕರ್, ವಕೀಲ ಕೆ ಎಲ್ ಕೆಳಮೊದಲಾದವರು ಸಂದರ್ಭೋಚಿತ ಭಾಷಣವಿತ್ತರು ಕಾರ್ಯದರ್ಶಿ ಶ್ರೀ ಬಿ ಎಸ್ ಲೂವಿಸರು ಧನ್ಯವಾದಗಳನ್ನಿತ್ತರು ವಿವಿಧ ವಿನೋದಾವಳಿ ಮತ್ತು ಭೋಜನದೊಂದಿಗೆ ಸಮಾರಂಭ ಕೊನೆಗೊಂಡಿತು.

ಇದರ ಮೊದಲು ಸಂಘದ ಮಹಾಸಭೆಯು ಶ್ರೀ ಟಿ ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತ್ತು

ತಾಲೂಕು ಹಿಂದಿ ಪ್ರಚಾರ ಸಮಿತಿ ಸಭೆಯು—

ತಾ ೨೧ರಂದು ಶ್ರೀ ಟಿ ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಕಾರ್ಯದರ್ಶಿ ಶ್ರೀ ಮಹಾಬಲ ನಾಯ್ಕರು ಗತಸಭೆಯ ವರದಿಯನ್ನು ಹಿಡಿದರು ಹಿಂದೀ ಕಲಿಯಲಿಕ್ಕೆ ಬರುವವರಿಂದ ಸಂಬಳ ವಸೂಲು ಮಾಡಕೂಡದೆಂದು ತೀರ್ಮಾನಿಸಲಾಯಿತು ಶ್ರೀ ಎ ಜಿ ಅಲ್ಲೆಯವರನ್ನು ಸಮಿತಿಯ ಖಜಾಂಚಿಯಾಗಿ ಆರಿಸಲಾಯಿತು

ಸಭೆ—ಕೇರಳದ ವಿದ್ಯಾ ಮಸೂದೆಗೆ ಬೆಂಬಲ ನೀಡಲು ಕಮ್ಯುನಿಸ್ಟ್ ಪಾರ್ಟಿಯ ಕಡೆಯಿಂದ ಸಭೆಯೊಂದು ತಿರ್ಪ ಗುಡ್ಡೆಯಲ್ಲಿ ತಾ ೨೮ರಂದು ಶ್ರೀ ಜಿ ಕೋಟ್ಯಾನರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಕೆ ದಾಸ ಸೇರಿಗಾರ್, ಕೆ ರಂಗಯ ಸೆಟ್ಟಿಗಾರ್, ಡೇವಿಡ್ ಕರ್ಕಡ ಮೊದಲಾದವರು ಕಾರ್ಯಕರ್ತರ ಮಾತುಗಳನ್ನಾಡಿದರು

ದೈವಜ್ಞ ಬ್ರಾಹ್ಮಣ ಭಜನಾ ಸಂಘದ ವಾರ್ಷಿಕೋತ್ಸವವು

ತಾ ೨೫ ರಂದು ಶ್ರೀ ಟಿ ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಪದ್ಮನಾಭ ಬಂಟ್ ಕ್ಯಾಕರರು ಸ್ವಾಗತವಾಡಿದರು ಶ್ರೀಗಳಾದ ಹಂಡೆ ಶ್ರೀನಿವಾಸದಾಸ್, ಎಸ್ ಎಲ್ ಬಟ್ಟು, ಬಸ್ಸಂಜೆ ದಾಮೋದರ್, ಶೀನ ಸಟ್ಟಿ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು ಶ್ರೀ ಸಂಜೀವ ಶೆಟ್ಟರು ಧನ್ಯವಾದಗಳನ್ನಿತ್ತರು

ನಗರ ಸಭೆಯ ಅವಸರದ ಸಭೆಯು-

ತಾ ೨೧ರಂದು ಸಂಜೆ ಶ್ರೀ ಕೆ ಕೃಷ್ಣ ಅಧ್ಯಕ್ಷತೆಯಲ್ಲಿ ಜರಗಿತು ಮುನಿಸಿಪಲ್ ಕೆಲಸಗಾರರ ಕೆಲಸಕ್ಕೆ ಕಾಯಿಸುವುದು ಸುದೀರ್ಘ ಚರ್ಚೆ ನಡೆಯಿತು. ಕೊನೆಗೆ ಮುಂದಿನ ಸಪ್ತಂಬರ ತಿಂಗಳಿನ ದಸರಾ ದರ ತಿಂಗಳ ಅರೆ ಸಂಬಳ ಕೆಲಸಗಾರರಿಗೆ ತಿಂಗಳಿಗೆ ರೂಪಾಯಿ ಮುವತ್ತರಂತೆ ಸಮಗ್ರ ಪರಿಹಾರವನ್ನು ಸರಕಾರದ ಮಂಜೂರಾತಿ ಗೊಳಪಟ್ಟು ಕೆಲಸಗಾರರು ಒಪ್ಪುವುದಾದರೆ ಕೊಡಬೇಕೆಂದು ನಿರ್ಧರಿಸಲಾಯಿತು

ಕೋರಂಯಿಲ್ಲ-

ತಾ ೧೮ರಂದು ಕರೆಯಲಾಗಿದ್ದ ಉಡುಪಿ ನಗರ ಸಭೆಗೆ ಕೋರಂಯಿಲ್ಲದಿದ್ದುದರಿಂದ ಸಭೆ ಜರಗಲಿಲ್ಲ

ಎಂ ಜಿ ಎಮ್ ಕಾಲೇಜಿನ -

ವಿದ್ಯಾರ್ಥಿ ಯೂನಿಯನ್ನಿನ ಉದ್ಘಾಟನೆಯು ಶ್ರೀ ಕೆ ಬಿ ಕೃಷ್ಣರಾವ್, ಪ್ರಿನ್ಸಿಪಾಲ್ ಇಂಜಿನಿಯರಿಂಗ್ ಕಾಲೇಜು ಇವರಿಂದ ನೆರವೇರಿತು ಪ್ರಿನ್ಸಿಪಾಲರ್ ಸಂದರ್ಶಿಯರು ಸ್ವಾಗತಿಸಿದ ಬಳಿಕ ವಿದ್ಯಾರ್ಥಿ ಅಧ್ಯಕ್ಷ ಶ್ರೀ ವಿನೋದ ಕುಮಾರ ಶೆಟ್ಟರು ವಿದ್ಯಾ ಯೂನಿಯನ್ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚು ಉತ್ಸಾಹದಿಂದ ಭಾಗವಹಿಸುವಿಕೆಯಿಂದು ಪ್ರಾರ್ಥಿಸಿಕೊಂಡರು ಉದ್ಘಾಟಕರು ಗಾಂಧೀಜಿಯ ಅವರ ಪ್ರಚಾರಾಂದ ತುತಿತು ಉಪನ್ಯಾಸವಿತ್ತ ಮೇಲೆ ಕಾರ್ಯದರ್ಶಿಯ ವಿಷಯ ಅಹವಾಲನ್ನು ಪ್ರೊಫೆಸರ್ ಧನ್ಯವಾದ ಸಮರ್ಪಿಸಿದರು.

ಮಂಗಳೂರು

ಕಾರ್ಮಿಕ ಸಚಿವ ಶ್ರೀ ಬಾಳಿಗರು

ಮೈಸೂರು ಸರಕಾರದ ಕಾರ್ಮಿಕ ಸಚಿವ ಶ್ರೀ ಬಿ. ಶ್ಯಾಮಶಂಕರ ಬಾಳಿಗರು ತಾ. 22ರಂದು ಮಂಗಳೂರಿನ ಮೇನೇಜ್‌ಮೆಂಟ್ ಎಸೋಸಿಯೇಶನ್ನಿನ ಸಭೆಯಲ್ಲಿ ಮಾತನಾಡುತ್ತಾ, ದೇಶದಲ್ಲಿ ಉತ್ಪಾದನೆ ಹೆಚ್ಚಾಗಬೇಕಾದರೆ ಕೈಗಾರಿಕೆಗಳಲ್ಲಿ ಮಾಲಿಕ ಮತ್ತು ಮಜೂರರೊಳಗೆ ಸೌಹಾರ್ದತೆ ಬೆಳೆಯಬೇಕಾದುದು ಅತ್ಯಗತ್ಯವಿದೆ ಎಂದರು. ಆಡಳಿತ ಮತ್ತು ಮಜೂರರೊಳಗೆ ಸೌಹಾರ್ದತೆಯನ್ನುಂಟುಮಾಡಿ ದೇಶದ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೋಸ್ಕರ ಕೈಗಾರಿಕೆಗಳಲ್ಲಿ ಕನಿಷ್ಠಪಕ್ಷ ಐದುವರ್ಷಗಳ ಮಟ್ಟಿಗಾದರೂ ಕೈಗಾರಿಕಾ ಶಾಂತಿ ಒಪ್ಪಂದವನ್ನು ತರುವುದಕ್ಕೆ ತನಗೆ ಆತುರವಿದೆ ಎಂದು ಸಭೆ ಹೇಳಿದರು. ಸಭಾಧ್ಯಕ್ಷತೆಯನ್ನು ಶ್ರೀ ಎ. ಪಿ. ಜನಾರ್ಧನ ಪ್ರಭುಗಳು ವಹಿಸಿದ್ದರು. ಕಾರ್ಯದರ್ಶಿ ಶ್ರೀ ಕೆ. ನಿಶ್ಚಲನಾಥ ಕಾಮತರು ಧನ್ಯವಾದಗಳನ್ನರ್ಪಿಸಿದರು.

ವಕೀಲ ಗುಮಾಸ್ತ ಸಂಘದಲ್ಲಿ

ಕಾರ್ಕಳ- ಸ್ಥಳೀಯ ವಕೀಲ ಗುಮಾಸ್ತರ ಸಂಘದವರು ತಾ. 22ರಂದು ಕಾರ್ಮಿಕ ಸಚಿವ ಶ್ರೀ ಬಾಳಿಗರಿಗೆ ಸತ್ಕಾರವಿತ್ತು ಗೌರವಿಸಿದರು. ಸಂಘದ ಅಧ್ಯಕ್ಷ ಶ್ರೀ ಬಿ. ವೆಂಕಟರಾಯರು ಮಾನಪತ್ರವನ್ನರ್ಪಿಸಿದರು. ಜಿಲ್ಲಾ ಸೆಶನ್ಸ್ ಜಡ್ಜರಾದ ಶ್ರೀ ಎಸ್. ರಾಘಾಕೃಷ್ಣಯ್ಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಂತ್ರಿಗಳು ಉತ್ತರವೀಯುತ್ತಾ, ತಮ್ಮ ಜಿಲ್ಲೆಯ ಕೋರ್ಟುಗಳು ಬಹಳ ಉತ್ತಮವಾಗಿ ಕಾರ್ಯವೆಸಗುತ್ತಿವೆಯೆಂದೂ ನ್ಯಾಯಾಧೀಶರುಗಳು ಜನರಲ್ಲಿ ಸದ್ಭಾವನೆಯನ್ನು ಬೆಳೆಸಿಕೊಂಡಿದ್ದಾರೆಂದೂ ಹೇಳಿದರು. ಸುಪ್ರೀಂಕೋರ್ಟಿಗೆ ನಿಶ್ಚಿತ ಭೇಸನ್ನು ಕಾನೂನು ಮೂಲಕ ಏರ್ಪಡಿಸುವಲ್ಲಿ ತನ್ನಿಂದಾಗುವ ಸಹಾಯವನ್ನು ನೀಡುವುದಾಗಿಯೂ ಅವರು ಭರವಸೆ ನೀಡಿತ್ತರು. ಶ್ರೀ ಎಸ್. ಕೇಶವ ನಾಯ್ಕರು ಧನ್ಯವಾದಗಳನ್ನರ್ಪಿಸಿತ್ತರು.

ಸ್ವಾತಂತ್ರ್ಯ ದಿನಾಚರಣೆ ಮತ್ತು ಸ್ವಾತಂತ್ರ್ಯ ಸಮರದ ಶತಾಬ್ದಿ ಉತ್ಸವಗಳು

ಸುರತ್ಕಲ್- ಹ್ಯಾಸ್ಕೂಲಲ್ಲಿ ಶ್ರೀ ಎಸ್. ಪುರುಷೋತ್ತಮ ಕುಡ್ವರ ಅಧ್ಯಕ್ಷತೆಯಲ್ಲಿ, ಹೈಸ್ಕೂಲ್ ಬೋರ್ಡು ಹಾಲ್ ಎಲ್ ಶಾಲೆಯಲ್ಲಿ ಶ್ರೀ ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ; ಪಡುಪಣಂಬೂರು ಸಹ್ಯಾಲು ಬೀಡಿನ ಕೆರೆ ಶಾಲೆಯಲ್ಲಿ ಶ್ರೀ ಯುವರಾಜ ಬಲ್ಲಾಳರ ಅಧ್ಯಕ್ಷತೆಯಲ್ಲಿ; ಸೂಸಯ್ಯಾಳಿ ಶ್ರೀ ಗೋಪಾಲಕೃಷ್ಣ ಎಯಿಡ್ ಪ್ರೈಮರಿ ಶಾಲೆಯಲ್ಲಿ ಶ್ರೀ ಕೆ. ಜಿ. ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ; ಕಿದಿಯೂರು ಎಯಿಡೆಡ್ ಹಾಲ್ ಎ ಶಾಲೆಯ ಶ್ರೀ ಕೆ. ಶಂಕರರಾಯರ ಅಧ್ಯಕ್ಷತೆಯಲ್ಲಿ; ಇವೆಲ್ಲ ಕಾರ್ಯಕ್ರಮಗಳಿಂದ ಯಥಾಸಾಂಗವಾಗಿ ಜರಗಿದವು.

ಸಾಹಸ್ಯ ಸೇವಾಸಂಘ ಮುಂಬಯಿ- ಸಂಘದ ಪದಿನಾರನೇ ವಾರ್ಷಿಕೋತ್ಸವವು ತಾರೀಕು 1—9—57ನೇ ಶನಿವಾರ ಸಂಜೆ ಗಂಟೆ 2.30ಕ್ಕೆ ಸರಿಯಾಗಿ ಸರ್ ಸೀವ್ಹಾ ಪೋಡಿ ಸಭಾಲಯದಲ್ಲಿ ಜರಗಿಸಲಿರುವುದು. ಸರ್ವರಿಗೂ ಈ ಮೂಲಕ ಸುಸ್ವಾಗತ ನೀಡಲಾಯಿತ್ತೇವೆ.

ಕೆಮ್ಮಣ್ಣು— 16-8-57ನೇ ರಾತ್ರಿ ಸ್ವಾತಂತ್ರ್ಯ ಶತಾಬ್ದಿಯ ಅಂಗವಾಗಿ ಕೆಮ್ಮಣ್ಣು ಮಂಡಾಯತ್ ಬೋರ್ಡು ಇದರ ಆಶ್ರಯದಲ್ಲಿ ಶ್ರೀಶ್ರೀನಿವಾಸರಾವ್ ಬಿ. ಎ ಬಿ. ಎಲ್. ಇವರ ಸಭಾಧ್ಯಕ್ಷತೆಯಲ್ಲಿ ಯಕ್ಷಗಾನ ಕಲಾಮಂಡಳಿ (ರಿ) ಉಡುಪಿ ಇದರಿಂದ ಕೂಡಿದ ಕೂಡುವಿಕೆಯಿಂದ ರಾಜಾಯಯೋಗ ಮತ್ತು ಕರ್ಣಾರ್ಜುನ ಕಾಳಗ ಎಂಬ ಯಕ್ಷಗಾನ ಕೂಟವು ಶ್ರೀ. ನಾರಾಯಣ ಶೆಟ್ಟಿಯ ಹಾಡುಗಾರಿಕೆ, ಎಸ್. ಗೋವಿಂದರಾವ್ ಇವರ ಮೃದಂಗವಾದನ, ಪಿ. ಶಾಡಪ್ಪಯ್ಯ, ಪೊಲ್ಕ ದೇವಪ್ಪ ಶೆಟ್ಟಿ, ಕೋಟ ಸುಬ್ರಾಯ, ಸಿ. ಸೀತಾರಾಮ್ ಶೆಟ್ಟಿ, ಎಸ್. ಗಣಪಯ್ಯ ಶೆಟ್ಟಿ, ಶಿಕಾರಿಪುರ ಶ್ರೀನಿವಾಸ ಪಂಡಿತ, ಜನ್ನಾಡಿಯ ಗೋಪಾಲ ಶೆಟ್ಟಿ, ಕೆ. ರಾಮ ಶೆಟ್ಟಿ ಮೊದಲಾದ ಅಭಿನಯಗಳಿಂದ ಜರಗಿತು. ಪಂಚಾಯತ್ ಬೋರ್ಡು ಅಧ್ಯಕ್ಷ ಶ್ರೀ ಉಡುಪರು ಧನ್ಯವಾದ ಸಮರ್ಪಣೆ ಮಾಡಿದರು.

ಕಟಪಾಡಿ- ಶ್ರೀ ಬಿ. ನಾರಾಯಣ ಹೆಗ್ಡೆಯವರು ವರ್ಷಂಪ್ರತಿ ಆಚರಿಸುತ್ತ ಬರುತ್ತಿರುವ ಗೀತಾಪಾರಾಯಣ ಸಪ್ತಾಹ ಮಂಗಳಾಚರಣೆಯು ಶ್ರೀ ಎಸ್. ಎಸ್. ಆನಂತಕೃಷ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ 25 ವರ್ಷಗಳಿಂದ್ದಲೂ ಈ ಗೀತಾಪಾರಾಯಣವನ್ನು ನಡೆಸಿಕೊಂಡು ಬಂದುದರ ನೆನಪಿಗೆ ಶ್ರೀ ಕರ್ಕಿರಾಜ ಎಸ್. ಜಿ. ಶಿಷ್ಯರಾದ ಶ್ರೀ ನಾರಾಯಣ ಹೆಗ್ಡೆಯವರಿಗೆ ಬೆಳ್ಳಿಯ ಶ್ರೀ ಕೃಷ್ಣ ಮೂರ್ತಿಯೊಂದನ್ನು ಉಡುಗೊರೆಯಿತ್ತರು. ಗೀತಾ ವಾಚನ ನಡೆಸುತ್ತಿದ್ದ ಶ್ರೀ ಆಗೋಳಿ ಶಾಮರಾಯರಿಗೆ ಶ್ರೀ ನಾರಾಯಣ ಹೆಗ್ಡೆಯವರು ಬೆಳ್ಳಿಯ ಪದಕವನ್ನು ಅರ್ಪಿಸಿದರು. ಸಭಿಕರಲ್ಲಿ ಶ್ರೀಗಳಾದ ಸಿ. ಬಾಲಕೃಷ್ಣ ನಾಯಕ್, ಕೆ. ವಾಸುದೇವ ಕಾಮತ್, ಮತ್ತು ಕೆ. ಶ್ರೀಧರ ಶಾಸ್ತ್ರಿಗಳು ಮಾತನಾಡಿದರು. ಈ ಸಂಬಂಧ, ಶ್ರೀ ಮಂಗೇಶರಾವ್ ಗೋವಿಕರ್ ಇವರಿಂದ ಜಲತರಂಗ ಸಾದನವೂ, ಶ್ರೀ ಕೆ. ಕೆ. ಪೂಜಾರಿಯವರ ಸಂಗೀತ ಕಾರ್ಯಕ್ರಮವೂ ಇತ್ತು. ಕೊನೆಯಲ್ಲಿ ಶ್ರೀ ಬಿ ಎನ್. ಹೆಗ್ಡೆಯವರು ಆಭಾರ ಮನ್ನಿಸಿದರು.

ಮೂಲ್ಕಿ- ಇದೇ ಸಪ್ಟಂಬರಿದಲ್ಲಿ ಜರ್ಮನಿಯಲ್ಲಿ ನೆಡೆಯಲಿರುವ ಜಾಗತಿಕ ಬ್ಯಾಂಕಿಂಗ್‌ಗಳ ಪರಿಷತ್ತಿನಲ್ಲಿ ಭಾರತದ ಬ್ಯಾಂಕಿಂಗ್‌ಗಳ ಪ್ರತಿನಿಧಿಯಾಗಿ ಹೋಗಲಿರುವ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಸಿನೆಜರ್ ಶ್ರೀ ಟಿ. ಎ. ಸೈಯನವರಿಗೆ ತಾ. 23 ರಂದು ವಿದಾಯ ಕೂಟವೊಂದನ್ನು ಏರ್ಪಡಿಸಲಾಗಿತ್ತು. ಡಾ. ಎಂ. ರಾಯಪ್ಪ ಕಾಮತ್, ಶ್ರೀ ಯು. ಕೇಶವ ರಾವ್, ಶ್ರೀ ಕೆ. ವಿಟ್ಟಲ ಶೆಣೈ, ಡಾ| ಸಂಜೀವನಾಥ ಮೊದಲಾದವರು ಮಾತನಾಡಿ ಶ್ರೀ ಸೈಗಳಿಗೆ ಶುಭ ಕೋರಿದರು.

ಕಡಿ ಶಾಳಿ-ಸ್ಥಳೀಯ ಸಾ ಎ. ಶಾಲೆಯಲ್ಲಿ ಸಂಯುಕ್ತ ತರ್ಕ ಸಭಾ ಉದ್ಘಾಟನಾ ಸಮಾರಂಭ ಮತ್ತು ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವವು ತಾ 14ರಂದು ಶ್ರೀ ಎ. ಜನಾರ್ಧನ ಆಳ್ವರವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಪಿ. ಗುರುರಾಜ ಭಟ್ಟರು ಸ್ವಾಗತಭಾಷಣ ಮಾಡಿದರು. ಬಾಲಕ, ಬಾಲಕಿಯರಿಂದ ಕನ್ನಡ ಹಾಡು, ಹಾಗೂ ಇತರ ಜಟಿಯಟಿಕೆಗಳು ನಡೆದವು, ಭಾಷಣಗಳಾದುವು. ಅಧ್ಯಾಪಕರಲ್ಲಿ ಶ್ರೀ ಎಸ್. ಸದಾಶಿವಾಯರು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಕ್ಕಳು ಶಿಕ್ಷಣವನ್ನು ಬೆಳೆಸಿಕೊಂಡು, ಯೋಗ್ಯ ನಾಗರಿಕರಾಗಿ ಬಾಳುವಂತಾಗಬೇಕಲ್ಲದೆ, ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಲು ಬೆಳೆಸಲು ಉದ್ಯುಕ್ತರಾಗಬೇಕೆಂದರು. ಸಭಾಧ್ಯಕ್ಷದಲ್ಲಿ ಶ್ರೀ ಯಸ್. ಸದಾಶಿವರಾಯರು ಧನ್ಯವಾದ ವಿತ್ತರು. ಲಕ್ಷ್ಮಣಾಸಿ ಲಕ್ಷ್ಮಿಪ್ರಿಯ ಎಂಬ ಅಭಿನಯ ಗೀತೆಯು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಅಭಿನಯಿಸಲ್ಪಟ್ಟಿತು.

ಮೈಸೂರು ಹೈಕೋರ್ಟಿಗೆ ಶ್ರೀ ಕೆ. ಸಣಾನಂದ ಹೆಗ್ಡೆ ಮತ್ತು ಶ್ರೀ ಸದಾಶಿವಯ್ಯನವರು ನ್ಯಾಯಾಧೀಶರಾಗಿ ನೇಮಕ— ಮೈಸೂರು ಸರಕಾರದ ನ್ಯಾಯಶಾಖೆಯ ಕಾರ್ಯದರ್ಶಿಗಳಾದ ಶ್ರೀ ಎಸ್. ಸದಾಶಿವಯ್ಯ ಮತ್ತು ಶ್ರೀ ಕೆ. ಸಣಾನಂದ ಹೆಗ್ಡೆಯವರು ಮೈಸೂರು ಹೈಕೋರ್ಟಿನ ಶಾಶ್ವತ ನ್ಯಾಯಾಧೀಶರನ್ನಾಗಿ ರಾಷ್ಟ್ರಪತಿಗಳು ನೇಮಿಸಿರುವರು. ಶ್ರೀ ಸದಾಶಿವಯ್ಯನವರು ಮೈಸೂರು ಹೈಕೋರ್ಟಿನ ಹಿಂದಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಮುದೇವಯ್ಯನವರ ಹಿರಿಯ ಮಕ್ಕಳಿದ್ದರು. ಅವರು ಸರಕಾರದ ವಿವಿಧ ಶಾಖೆಗಳಲ್ಲಿ ಕೆಲಸ ಮಾಡಿರುವರು.

ಶ್ರೀ ಕೆ. ಸಣಾನಂದ ಹೆಗ್ಡೆಯವರು ವಿ. ಕೆ. ಜಿಲ್ಲೆಯವರಿದ್ದು ಎಸ್ಸೆಸ್ಸೆಲ್ಸಿ, ಬಿ.ಎಲ್, ಪದವೀಧರರಾಗಿ ಕಾರ್ಕಳದಲ್ಲಿ ವಕಾಲತು ಪ್ರಾರಂಭಿಸಿದರು. ನಂತರ ಮಂಗಳೂರಿಗೆ ತೆರಳಿ ಅಲ್ಲಿ ಪ್ರಸಿದ್ಧ ವಕೀಲರಲ್ಲೊಬ್ಬರಾಗಿ ಖ್ಯಾತಿ ಗಳಿಸಿದರು. ಬಳಿಕ ಸರಕಾರೀ ವಕೀಲರಾಗಿ ನೇಮಕಗೊಂಡಿದರು. 1951ನೆ ಸಾಲಿನಲ್ಲಿ ಸಾರ್ವಜನಿಕ ಚುನಾವಣಾ ಕಾಲಕ್ಕೆ ಅವಕ್ಕೆ ರಾಜೀನಾಮೆ ಕೊಟ್ಟು ಪ್ರಸ್ತುತ ಕಾಂಗ್ರೆಸ್ ಕಾರ್ಯಕರ್ತರಾಗಿ ಕೆಲಸಮಾಡಿದರು. ಸಾರ್ವಜನಿಕ ಸೇವೆಯಲ್ಲಿ ಮುಕ್ತಾಸಕ್ತಿಯಿಂದ ಮುಂದುವರಿದು ದುಡಿಯುತ್ತಿದ್ದರು. ರಾಜ್ಯ ಸಭೆಯಲ್ಲಿ ಸದಸ್ಯರಾಗಿದ್ದುಕೊಂಡು ತನ್ನ ಪ್ರತಿಭೆಯನ್ನು ಬೀರುತ್ತಿದ್ದರು. ಕಾಶ್ಮೀರದ ಸಮಸ್ಯೆಯ ಕುರಿತು ಭದ್ರತಾ ಸಮಿತಿಯೊಡನೆ ವಾದಿಸಲು ಹೋದ ಭಾರತದ ನಿಯೋಗದ ಒಬ್ಬ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಶ್ರೀಯುತರು ಸರ್ವ ಸಾಮರ್ಥ್ಯವುಳ್ಳವರೂ ಉತ್ತಮ ವಾಗ್ಮಿಗಳೂ ಆಗಿರುವರು.

ಮಂಗಳೂರಲ್ಲಿ ಆಚಾರ್ಯ ವಿನೋಬಾಜೀಯವರು- ಭೂದಾನ ಚಳವಳಿಯ ಮೂಲ ಪುರುಷರಾದ ಆಚಾರ್ಯ ವಿನೋಬಾ ಭಾವೆಯವರು ತಾ. 24ರಂದು ಬೆಳಿಗ್ಗೆ ತನ್ನ ಕೇರಳ ರಾಜ್ಯ ಪ್ರವಾಸ ಮುಗಿಸಿಕೊಂಡು ಮೈಸೂರು ರಾಜ್ಯದ ದ. ಕ. ಜಿಲ್ಲೆಯ ಗಡಿಪ್ರದೇಶವಾದ ಮಂಗಳೂರು ತಾಲೂಕಿನ ತಲಪಾಡಿ ಹೊಳೆಯನ್ನು, ಸೊಂಟದ ತನಕ ನೀರಿದ್ದರೂ ನಡೆದುಕೊಂಡೇ ದಾಟಿ ತಲಪಾಡಿ ಗ್ರಾಮದಲ್ಲಿ ಪಾದಾರ್ಪಣೆ ಮಾಡಿದರು. ಮೈಸೂರು ರಾಜ್ಯದ ವಿನೋಬಾ ಸ್ವಾಗತ ಸಮಿತಿಯ ಜಿಲ್ಲಾ ವಿನೋಬಾ ಸ್ವಾಗತ ಸಮಿತಿಯ ಪ್ರಮುಖರು, ಅಧಿಕಾರಿಗಳು, ಇತರ ಪ್ರಮುಖರು ಒಟ್ಟು ಕೂಡಿಕೊಂಡು ಕೊಂಬಾವಾಡೆಯಿಂದ ಸುಸ್ವಾಗತಿಸಿದರು. ಮೈಸೂರಿನ ಶ್ರೀ ಎಸ್. ಚೆನ್ನಯ್ಯನವರು ತಮ್ಮ ಸ್ವಾಗತ ಭಾಷಣದಲ್ಲಿ, ಭೂದಾನ, ಸಂಪತ್ತಿದಾನದಿ ಕಾರ್ಯದ ಪ್ರಥಮ ಹಂತವಾಗಿ 24 ಗ್ರಾಮಗಳು ದಾನವಾಗಿ ಬಂದಿವೆ ಎಂದು ಜಾಹೀರು ಪಡಿಸಿದರು. ವಿನೋಬಾಜೀಯವರು ಉತ್ತರಿಸುತ್ತಾ, ಕಳೆದ ಆರೂವರೆ ವರ್ಷಗಳಿಂದ ಬಿಹಾರ್, ಒರಿಸ್ಸಾ, ತೆಲಂಗಾಣ, ತಮಿಳುನಾಡು, ಕೇರಳಗಳಲ್ಲಿ ಈ ಭೂದಾನ ಯಾತ್ರೆ ನಡೆದಿದೆ. ಇದರ ಪ್ರಯೋಜನವೀಗ ಕರ್ನಾಟಕಕ್ಕೆ ಸುಲಭವಾಗಿ ದೊರಕಿದೆ. ಈ ಕಾರ್ಯವನ್ನು ನಿಷ್ಠೆಯಿಂದ ಮುಂದೊತ್ತಬೇಕೆಂದು ಹೇಳಿದರು.

ನಗರ ಸಭೆಯ ಮಾನಪತ್ರ

ಮಂಗಳೂರು ನಗರ ಸಭೆಯ ಪರವಾಗಿ ತಾ. 25ರಂದು ಆಚಾರ್ಯ ಭಾವೆಯವರಿಗೆ ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಮಾನಪತ್ರವನ್ನರ್ಪಿಸಿದರು. ಆಚಾರ್ಯ ಭಾವೆಯವರು ಉತ್ತರವೀಯುತ್ತಾ ತಮ್ಮ ಪ್ರತಿನಿಧಿಗಳನ್ನು ಇಂದಿ ಕಳುಹಿಸಿದೊಡನೆ ತಮ್ಮ ಜವಾಬ್ದಾರಿ ಮುಗಿಯಿತು. ಮುಂದಿನ ಎಲ್ಲಾ ಕಾರ್ಯಗಳನ್ನು ಸರಕಾರವು ಮಾಡುತ್ತದೆಂದು ಸರಕಾರವನ್ನೇ ಅವಲಂಬಿಸಿಕೊಂಡಿದ್ದರೆ, ಜನರು ಅಲಸಿಗರಾಗುವ ಸಂಭವ ಹೆಚ್ಚು. ಆದುದರಿಂದ ಎಂದಿವರೆಗೆ ಜನತೆ ತಮ್ಮ ಕಾರ್ಯವನ್ನು ತಾವೇ ಮಾಡಿಕೊಳ್ಳಲು ಪ್ರವೃತ್ತರಾಗುವುದಿಲ್ಲವೋ ಅಂದಿನ ವರೆಗೆ ದೇಶ ಪ್ರಗತಿಯನ್ನು ಹೊಂದುವುದಿಲ್ಲವೆಂದರು. ದೇಶದ ವಿದ್ಯಾವಿದ್ಯಾಲಯಗಳು, ಕಾಲೇಜುಗಳ ಹೆಚ್ಚಳ ಕುರಿತು ಮಾತನಾಡುತ್ತಾ, ಅವುಗಳಿಂದ ಜನತೆಯಲ್ಲಿ ಜ್ಞಾನ ವೃದ್ಧಿಯಾಗಲಿಲ್ಲ. ಜನರಲ್ಲಿ ಜ್ಞಾನತೃಷೆಯ ಸ್ಫೂರ್ತಿಯುಂಟಾಗಬೇಕು. ಗುರುಶಿಷ್ಯರ ಸಂಬಂಧವು ಸುಗಮವಾಗಿ ಬೆಳೆದು ಬರಬೇಕು. ಶಿಷ್ಯ ಉತ್ತಮಗುಣವುಳ್ಳವನೆಂದು ಮುರಿತಾಗಿ ಉಪದೇಶಿಸಿದರು.

ವ್ಯಾಪಾರಿ, ವಕೀಲ, ಡಾಕ್ಟರ್ ಮೊದಲಾದ ವರ್ಗದವರನ್ನು ಕುರಿತು ಮಾತನಾಡುತ್ತಾ, ವ್ಯಾಪಾರಿಗಳು ಸಮಾಜದ ಒಂದು ಮುಖ್ಯ ಅಂಗವಾಗಿದ್ದಾರೆ. ಬ್ರಾಹ್ಮಣನಲ್ಲಿ ಹೇಗೆ ಬುದ್ಧಿಶಕ್ತಿಯ ಗುಣವಿದೆಯೋ, ಕ್ಷತ್ರಿಯರಲ್ಲಿ ಹೇಗೆ ಶೌರ್ಯವಿದೆಯೋ ಅಂತೆಯೇ ವ್ಯಾಪಾರಿಗಳಿಗೆ ದಾನಗುಣವು ಹಿಂದಿನಿಂದಲೂ ಇದ್ದಂತೆ ಹುದು. ಸತ್ಯ, ಧರ್ಮ ಶಾಸ್ತ್ರಗಳಲ್ಲಿ ಅವರಿಗೆ ಉತ್ತಮ ಸ್ಥಾನವಿದೆ. ಧನವಂತರು ಧನವನ್ನು ದಾನಮಾಡಬೇಕು. ಅದರಿಂದ ಅವರಿಗೂ ಸಮಾಜಕ್ಕೂ ಪ್ರಯೋಜನವಿದೆ ಎಂದು ಸೂಚಿಸಿ ಸಂಪತ್ತಿ ದಾನದ ಮಹತ್ವವನ್ನು ವಿವರಿಸಿದರು.

ಆಚಾರ್ಯ ವಿನೋಬಾರವರೊಡನೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು— ಮೈಸೂರಿನ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ತಾ. 24ರಂದು ಉಳ್ಳಾಳದಲ್ಲಿ ಬೀಡಾರವೂಡಿದ್ದ ಆಚಾರ್ಯ ವಿನೋಬಾ ಭಾವೆಯವರನ್ನು ಭೇಟಿಯಾಗಿ ರಾಜ್ಯದಲ್ಲಿನ ಭೂದಾನ ಕಾರ್ಯದ ಕುರಿತು ವಿಚಾರವಿನಿಮಯ ನಡೆಸಿದರು. ಹಳೆ ಮೈಸೂರು ರಾಜ್ಯದಲ್ಲಿ ಭೂದಾನವಾಗಿ ಸಂಗ್ರಹಿಸಿದ 26,000 ಎಕ್ರೆ ಭೂಮಿಯನ್ನು ಆ ದಾನ ಪತ್ರಿಯುವುದರಲ್ಲಿ ಕಿಂಚಿತ್ತಾದರೂ ಒತ್ತಾಯ ಹೇರಲ್ಪಟ್ಟಿದ್ದರೆ, ದಾನಿಗಳೇನೇ ಅಂತಹ ಭೂಮಿಯನ್ನು ಹಿಂದಕ್ಕೆ ಕೊಡಬೇಕೆಂದು ಮುಖ್ಯ ಮಂತ್ರಿಗಳಿಗೆ ಶ್ರೀ ಭಾವೆಯವರು ಸಲಹೆಯಿತ್ತಿರುವರೆಂದು ತಿಳಿದುಬಂದಿದೆ.

ಅಡಿಶಾರು ಕಾರ್ಕಳ ಸರ್ಕಲಿನ ಎಸ್. ಎಲ್ ಎ.ಯವರಾದ ಡಾ. ಕೆ. ಕೆ. ಪೈಗಳವರು ಸ್ಥಳೀಯ ಪ್ರಮುಖರೊಡನೆ, ಈ ಕೇಂದ್ರದ ಆವಶ್ಯಕತೆಗಳಿಳ್ಳೆಂದಾದ ಹೈಸ್ಕೂಲಿನ ಸಾಧ್ಯತೆಯ ಕುರಿತು, ವಿಚಾರ ವಿನಿಮಯ ಮಾಡಿ, ಸಾರ್ವಜನಿಕರ ಪ್ರಯತ್ನಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿರುವರು.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S. C. 978/55 R E F 95/57

ಪೆಂಕಟಾಚಲಯ್ಯ—ಅರ್ಜಿದಾರ ವಾದಿ ಪ್ರತಿವಾದಿ—ಸಣ್ಣಯ್ಯ ಹೊಳ್ಳ ಲಕ್ಷ್ಮಣ ಹೊಳ್ಳನ ಮಗ ವಡ್ಡರ್ಸೆ ಗ್ರಾಮ

-ಪ್ರತಿವಾದಿ.

ಸದ್ರಿ ಪ್ರತಿವಾದಿಗೆ

ಮೇಲೆ ಹೇಳಿದ ವ್ಯಾಜ್ಯದಲ್ಲಿ ದಿಕ್ರಿ ಹೊಂದಿದ ಅರ್ಜಿದಾರನು ಸ್ತಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಸಿಕ್ರಯದ ಯಿಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸುವ ಬಗ್ಗೆ ತಾ. 17-9-1957ಕ್ಕೆ ತಮ್ಮಗೆ ಇಡಲ್ಪಟ್ಟಿದೆ. ನಿಮ್ಮ ಆಕ್ಷೇಪಗಳಿದ್ದರೆ ಸದ್ರಿ ದಿನ ಬೆಳಿಗ್ಗೆ 11 ಘಂಟೆಗೆ ಕೋರ್ಟು ಮುಂದೆ ಜಾಹೀರು ಮಾಡಿಕೊಳ್ಳತಕ್ಕದ್ದು.

ಕೋರ್ಟು ಯಕುಂ ಪ್ರಕಾರ

A. V. N. Hebbar
B. A. B. L
Vakil for Peter.
Coondapoor 21-8-57.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22. UDIPI, S. K.

ಹೊಟ್ಟೆಯ ಪಾಡಿಗಾಗಿ ದುಡಿತ

ಪ್ರೇಮ ಅಥವಾ ಅಹಿಂಸೆಯ ತಳಹದಿಯಿದ್ದರೇನೆ ಸೇವೆಯನ್ನು ಸಲ್ಲಿಸುವದು ಸಾಧ್ಯವಿದೆ. ನಿಜವಾದ ಪ್ರೇಮವು ಮನಸಾ ಸಾಗರದಂತೆ ಅಪಾರವಾಗಿದ್ದು ಅದು ಒಳಗಿನಿಂದ ಉಕ್ಕೇರುತ್ತ ಕೊರೆಗೆ ಪಸರಿಸುತ್ತದೆ. ಆದರೆ ಎಲ್ಲ ಬಗೆಯ ಮೇರೆಗಳನ್ನು ಮೀರಿ ಇಡಿಯ ಜಗವನ್ನು ಆವರಿಸುತ್ತದೆ. ಹೊಟ್ಟೆಯ ಪಾಡಿನ ದುಡಿತವಿಲ್ಲದೆ ಯಾವ ಸೇವೆಯೂ ಸಾಧ್ಯವಿಲ್ಲ. ಈ ಹೊಟ್ಟೆಯ ಪಾಡಿನ ದುಡಿತಕ್ಕೇ ಗೀತೆಯಲ್ಲಿ ಯಜ್ಞವೆಂದು ಸಂಬೋಧಿಸಿರುವದು ಸೇವೆಗಾಗಿ ದೈಹಿಕ ಶ್ರಮವನ್ನು ವಹಿಸಿದ ನಂತರವೇ ಗಂಡು ಅಥವಾ ಹೆಣ್ಣು ಬಾಳುವ ಬಾಧ್ಯತೆಯನ್ನು ಪಡೆಯುವದು.

ಎಲ್ಲ ನೈಸರ್ಗಿಕ ಹಾಗು ಅವಶ್ಯಕ ಕಾರ್ಯವು ಸುಲಭವಾಗಿರುತ್ತದೆ ಸತತ ಅಭ್ಯಾಸದಿಂದ ಪರಿಪೂರ್ಣತೆ ದೊರೆಯುತ್ತದೆ. ಆದರೆ ಅದಕ್ಕೆ ಪ್ರಚೋದನೆಯೂ ಬೇಕು. ಈ ಪ್ರಚೋದನಾ ಸಾವಧ್ಯನೇ ಸ್ವರಾಜ್ಯ. ಅದುವೇ ಯೋಗ. ಬೇಸರಿಕೆ ಬೇರೂರುವ ಭೀತಿಯೂ ಬೇಡ. ಯಾಕಂದರೆ ಬೇಸರಿಕೆಯೂ ನಿಸರ್ಗಸಿದ್ಧ ಪರಿಣಾಮವೇ. ಬೇಸರಿಲ್ಲದೆ ಮೂಡುವ ನೇಸರನ್ನು ನೋಡಿರಿ. ಆತ ಬೇಸರಿಸಿ ಬೇರೆ ಮನರಂಜನೆಗೆ ಹೊರಟಿರೆ ಜಗತ್ತಿನ ಗತಿ ಯೇನಾಗಬಹುದೋ ಯೋಚಿಸಿರಿ ಆದರೆ ಎತ್ತಿ ಹಿಡಿಯುವ ಬೇಸರಿಕೆಯೂ ಇದೆ, ಕತ್ತು ಹಿಸುಕುವ ಬೇಸರಿಕೆಯೂ ಇದೆ. ಅವಶ್ಯ ಹೋರಿಯ, ಬೇಸರವು ಉತ್ಸಾಹಕರ, ಚೇತನದಾಯಕ. ಕಲಾವಿದ ಕಲೆಗೆ ಬೇಸರಿಯುವದಿಲ್ಲ ನೊಲುವಲ್ಲಿ ನಿಷ್ಣಾತನಾದವನು ದಣಿಯನೆ ಸತತ ಪರಿಶ್ರಮ ವಹಿಸಬಲ್ಲ. ಸೊಲುವ ಕಂಡಿಕೆಯಿಂದ ಹೊರಡುವ ಮೆಲುಗಾನಕ್ಕೆ ಪಳಗಿದ ರೈ ಮಾತ್ರ ತಾಳಹಾಕಬಲ್ಲದು ಹೀಗೆಯೆ ಭಾರತವು ಬೇಸರಿಲ್ಲದೆ ಸ್ವರಾಜ್ಯದ ದಾರಿಯಲ್ಲಿ ದುಡಿದು ದಣಿದಾಗ ನಿತ್ಯ ಸುಖಕ್ಕೆ ಕಾರಣವಾದ ನಿಃಸ್ಸೀಮ ಸುಂದರ ವಸ್ತುವೊಂದನ್ನು ನಿರ್ಮಿಸುವದು ಆದಕಾರಣ ರಾಟೆಯನ್ನು ಬುದ್ಧಿವಂತಿಕೆಯಿಂದ ತಿರುಗಿಸುವಂತಹ ರಾಷ್ಟ್ರೀಯ ಶಿಕ್ಷಣವು ಭಾರತಕ್ಕೆ ಬೇರೊಂದಿಲ್ಲ.

ಹೊಟ್ಟೆಗಾಗಿ ದುಡಿಯುವದು ಒಂದು ಅನುಗ್ರಹವೇ ಸರಿ....ಈ ದುಡಿಮೆ ಒಕ್ಕಲತನಕ್ಕೇ ಸೇರವಾಗಿ ಸಂಬಂಧಿಸಿದೆ...

ಎಲ್ಲರೂ ಕೇವಲ ತಮ್ಮ ಹೊಟ್ಟೆಯ ಪಾಡಿಗಾಗಿಯಷ್ಟೆ ದುಡಿದಲ್ಲಿ ಎಲ್ಲರಿಗೂ ನಾಕಷ್ಟು ಆಹಾರ ಹಾಗು ಪುರುಸತ್ತು ದೊರೆಯಲ್ಲದು. ಆಗ ಮಿತಿ ಮೀರಿದ ಜನಸಂಖ್ಯೆಯ ಕುರಿತು ಯಾರೂ ಕೂಗಿಕೊಳ್ಳಲಾರರು, ಬೇನೆ ಬೇಸರಿಕೆಗಳು ಹುಟ್ಟಲಾರವು, ನಮ್ಮ ಸುತ್ತಲು ಬೀಡು ಬಿಟ್ಟಿರುವ ದುಃಖ ಪರಂಪರೆಯೂ ಪಳಕೆತ್ತಿ ಓಡುವದು.

— ಮಹಾತ್ಮಾ ಗಾಂಧೀ.

ಶೀಲ

ಶೀಲವೆಂಬುದು ಕಣ್ಣಿಗೆ ಕಾಣದ ಅತ್ಮದ ಬೆರಳುಗಳು ಸದಾ ಸೈಯ್ಯುತ್ತಿರುವ ಅಮೂಲ್ಯ ಉದಿಗೆ

○ ○

ಶೀಲ ಮನುಷ್ಯನ ಬಂಡವಾಳ ಹೇಗೋ ಹಾಗೆಯೇ ಆತನ ಅಚ್ಚಳಿಯದ ಸ್ಮಾರಕ.

○ ○

ಎಷ್ಟು ವಿದ್ಯಾವಂತನೆಂದು ಅಳೆದು ಹೇಳುವ ಅಳತೆ ಕೋಲು ಶೀಲ.

○ ○

ಶೀಲವೆಂಬುದು ಅಲುಗದ ಆಧಾರ, ಅದನ್ನು ಹಿಡಿದು ನಂತವನನ್ನು ಜಗತ್ತಿನ ಯಾವ ಶಕ್ತಿಯೂ ಅಲ್ಲಾಡಿಸಲು

○ ○

ಆಶಾಯದಲ್ಲಿ ಧೈರ್ಯ, ಕಷ್ಟದಲ್ಲಿ ತಾಳ್ಮೆ, ಸಿಸ್ಪದಲ್ಲಿ ಸಹನೆ, ತೊಂದರೆಯಲ್ಲಿ ಶಾಂತಿ, ದುಃಖದಲ್ಲಿ ಸಮಾಧಾನವೇ ಶೀಲದ ಲಕ್ಷಣ.

○ ○

ಶೀಲವೆಂಬುದೇ ಉತ್ತುಂಗ ಅಂತಸ್ತಿನ ಪ್ರಾಕೃತಿಕ ಒಲವು.

○ ○

ಶೀಲವು ಪ್ರಗತಿಗೆ ಮೂಲ, ಸಂಪತ್ತಿಗೆ ತಳಹದಿ, ಆನಂದ ಶಾಂತಿಗಳಿಗೆ ರಾಜಮಾರ್ಗ.

○ ○

ಸರ್ವ ಗುಣಗಳಿಗಾದ, ಸರ್ವ ಸೌಂದರ್ಯಾಲಂಕಾರ, ಸರ್ವ ಸಂಕಟು ನಿವಾರ.

○ ○

ಪ್ರಪ್ರಪ್ರ ಜಗತ್ತಿನ ಇತರ ಎಲ್ಲಾ ಕಲ್ಲುಗಳನ್ನು ಕತ್ತರಿಸಬಲ್ಲುದೆ, ಶೀಲ ಇತರ ಎಲ್ಲಾ ಗುಣಗಳನ್ನು ನೊರಿಸುವದು.

○ ○

ಬೇರೆಯವರಲ್ಲಿ ಸದಾ ಇರಬೇಕೆಂದು ಜಗತ್ತು ಬಯಸುವ ಸ್ಪರ್ಧೆ ಇಲ್ಲದ ವ್ಯಕ್ತಿಗತ ಆಸ್ತಿ ಅದು

○ ○

ಶ್ಮಶಾನದಲ್ಲಿ ಶರೀರವನ್ನು ಸುಟ್ಟರೂ ಶರೀರದೊಡನೆ ನಾಶವಾಗದೆ ಜನರೊಡನೆ ಹಿಂದಿರುಗುವ ಒಂದೇ ವಸ್ತು.

○ ○

ಸ್ಥೂಲ, ಪಾರ್ಥಿವ ಶರೀರಧಾರಿಯಾದ ಮಾನವನು ಹೊಂದಬಲ್ಲ ದೈವಿಕ ಯಾ ಆಧ್ಯಾತ್ಮಿಕ ರೂಪ

○ ○

ದೇವರು ಮತ್ತು ದೇವತೆಗಳು ಮಾನವನಲ್ಲಿ ಹುಡುಕುವ ಒಂದೇ ಸಂಪತ್ತು.

ಭಾಷಾಸಮಸ್ಯೆ

(೪ನೇ ಪುಟದಿಂದ)

ಮೂರು ಭಾಷೆಗಳನ್ನು ಕಡ್ಡಾಯವಾಗಿ ಕಲಿಸಲಾಗುತ್ತಿರುವುದರಿಂದ ಈ ವಾದಕ್ಕೆ ಹುರುಳಿಲ್ಲ. ಭಾಷೆಯೊಂದು ಸಾಮಾಜಿಕ ಗುರಿಯ ಸಾಧನವಾಗಿರುವುದು. ಆದುದರಿಂದ ಅದೇ ಅಂತಿಮ ಗುರಿಯಲ್ಲ. ನಿಕಟ ಸಂಬಂಧ ಪಡೆದಿರುವ ನಮ್ಮ ನೆರೆ ಹೊರೆಯ ಭಾಷೆಗಳನ್ನು ಕಲಿತುಕೊಳ್ಳುವುದರಿಂದ ನಮ್ಮ ಸಾಮಾಜಿಕ ವ್ಯವಹಾರಗಳ ಕ್ಷೇತ್ರವನ್ನು ವೃದ್ಧಿಸಿಕೊಳ್ಳಬಹುದಾಗಿದೆ

ಕೂನೆಯ ದಾಗಿ, ನಮ್ಮ ದೇಶದ ವಿಶ್ವವಿದ್ಯಾನಿಲಯಗಳು ಸಂಕುಚಿತ ಪ್ರಾಂತೀಯತೆ ಹಾಗೂ ಪ್ರಾದೇಶಿಕ ಮನೋಭಾವಗಳಿಂದ ದೂರವಾದಲ್ಲಿ ಸರ್ವ ಸಾಮಾನ್ಯ ವ ನೋಭಾವ ಹಾಗೂ ಸರ್ವ ಸಾಮಾನ್ಯ ಭಾಷೆಯೊಂದನ್ನು ಅಭಿವೃದ್ಧಿಪಡಿಸುವ ವಿಷಯದಲ್ಲಿ ಹೆಚ್ಚಿನ ರೀತಿಯಲ್ಲಿ ನೆರವು ನೀಡಬಹುದಾಗಿದೆ ಪೂರ್ವದಲ್ಲಿ ವಿಶ್ವವಿದ್ಯಾನಿಲಯಗಳು ದೇಶದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದನ್ನು ಇತ್ತೀಚೆಗೆ, ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಿರುವ ಪ್ರದೇಶದಲ್ಲಿ ಮಾತ್ರ ಸೇವೆ ಸಲ್ಲಿಸುವ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಕಾರ್ಯ ವ್ಯಾಪ್ತಿಯನ್ನು ಮಿತಗೊಳಿಸುವ ಪ್ರವೃತ್ತಿ ಕಂಡು ಬಂದಿದೆ. ಪ್ರಾದೇಶಿಕ ಭಾಷೆಗಳನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದರ ಮೂಲಕ ಈಚೀಚೆಗೆ ಈ ಪ್ರವೃತ್ತಿಯು ಸುತ್ತಸ್ತು ಬಲಗೊಂಡಿದೆ.

ಶ್ರೀ. ಎ ಎಫ್. ಮೋರ್ಲೆ

ಇವರು ಈಗ ಕಲ್ಕತ್ತದಲ್ಲಿ ಸಂಯುಕ್ತ ರಾಜ್ಯದ ಡಿಪ್ಯುಟಿ ಹೈಕಮಿಶನರಂಗಿದ್ದಾರೆ ಅವರು ಸಿಲೋನಿನ ಹೈಕಮಿಶನರಾಗಿ ಸರ್ ಸಿಸಿಲ್ ಸೈಲ್ಸರ ಸ್ಥಾನದಲ್ಲಿ ನೇಮಕಗೊಂಡಿದ್ದಾರೆ. ಈ ನೇಮಕವು ಈ ವರ್ಷಾಂತ್ಯದಿಂದ ಪರಿಣಾಮಗೊಳ್ಳುವುದು

ಪ್ರಾದೇಶಿಕ ಭಾಷೆಗಳು ಶಿಕ್ಷಣ ಮಾಧ್ಯಮವಾದಲ್ಲಿ ವಿಶ್ವವಿದ್ಯಾನಿಲಯಗಳು ಅಖಿಲ ಭಾರತದ ಲಕ್ಷಣವನ್ನು ಪಡೆಯದೇ ಕೇವಲ ಸ್ಥಳೀಯ ಹಿತಾಸಕ್ತಿಗಳನ್ನು ಮಾತ್ರ ಈಡೇರಿಸುವುವು. ಈ ಕ್ರಮದಿಂದ ವಿಶ್ವವಿದ್ಯಾನಿಲಯಗಳ ಸಂಪರ್ಕವು ಕಡಿದು ಹೋಗಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಹಾಗೂ ಉದ್ಯೋಗದ ವಿಷಯದಲ್ಲಿ ತಮ್ಮ ತಮ್ಮ ರಾಜ್ಯಗಳಲ್ಲಿಯೇ ಇರಬೇಕಾಗುವುದು ಈ ರೀತಿಯಾಗಿ ವಿವಿಧ ಭಾಗಗಳಿಂದ ಬರುವ ವಿದ್ಯಾರ್ಥಿಗಳಿಗೆ ಪರಸ್ಪರ ನಿಕಟ ಸಂಬಂಧವನ್ನು ವೃದ್ಧಿಪಡಿಸಿಕೊಳ್ಳಲು ಇರುವ ಸದವಕಾಶವನ್ನು ತಪ್ಪಿಸಿದಂತಾಗುವುದು.

ಆದುದರಿಂದ ಇಂಗ್ಲಿಷ್ ಭಾಷೆಯ ಸ್ಥಾನದಲ್ಲಿ ಪ್ರಾದೇಶಿಕ ಭಾಷೆಗಳನ್ನು ತರುವ ಬಗ್ಗೆ ಆವಸರ ಮಾಡಕೂಡದು ಹಿಂದಿ ಭಾಷೆಯನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿದ ಮೇಲೆ ಹಾಗೂ ಈ ಭಾಷೆಯು ಇಂಗ್ಲೀಷ್ ಭಾಷೆಯ ಸ್ಥಾನವನ್ನು ಅಕ್ರಮಿಸಿಕೊಳ್ಳಲು. ಸಿದ್ಧವಿರುವಾಗ ವಿಶ್ವವಿದ್ಯಾನಿಲಯ ಪೀಠದಲ್ಲಿ ಹಿಂದಿ ಭಾಷೆಯು ಶಿಕ್ಷಣ ಮಾಧ್ಯಮವು ಗಬೇಕಲ್ಲದೆ, ಪ್ರಾದೇಶಿಕ ಭಾಷೆಯಾಗಕೂಡದು. ವಿಶ್ವವಿದ್ಯಾನಿಲಯಗಳು ನಮ್ಮ ಯುವಕರ ಪಾಂಡಿತ್ಯ, ಅನುಭವ, ಅಶಕ್ತಿ ಮುಂತಾದವುಗಳ ವ್ಯಾಪ್ತಿಯನ್ನು ವಿಶಾಲಗೊಳಿಸಬೇಕಲ್ಲದೆ ಸಂಕುಚಿತಗೊಳಿಸಬಾರದು.

—ಡಾ. ಕೆ. ಎಲ್. ಶ್ರೀಮಾಲಿ,
ಕೇಂದ್ರ ಶಿಕ್ಷಣ ಮಂತ್ರಿಗಳು.

ಓದುಗರೊಡನೆ ಎರಡು ಮಾತು

ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಈಗ ೧೭೫ ವರ್ಷಗಳಿಂದ ನಡೆಯುತ್ತಿರುವ ಪ್ರಜಾತಂತ್ರದ ಮಹಾಪ್ರಯೋಗವು ಇತರ ಎಷ್ಟೋ ದೇಶಗಳಿಗೆ ನಿದರ್ಶನ, ಸ್ಫೂರ್ತಿ. ಹೀಗಿರುವಾಗ ಆದರ್ಶವೆಂದು ನಾವು ನಮ್ಮ ನಮ್ಮ ದೇಶಗಳಲ್ಲಿ ಒಪ್ಪಿಕೊಂಡಿರುವ ವಾದ, ರಾಜಕೀಯ ಪದ್ಧತಿ ಸುತ್ತು ಜೀವನ ಮಾರ್ಗದಲ್ಲಿರುವ ಹುಳುಕುಗಳನ್ನು, ಅದು ಹಿಟ್ಲರ್‌ರಾಟ ಮತ್ತು ಸಾಮ್ಯವಾದಿ ಅಧಿಕಾರಶಾಹಿಯ ಅನಂತರದ ಪ್ರಪಂಚದ, ಇದಿರಿಸಬೇಕಾದ ದುಷ್ಟ ಶಕ್ತಿಗಳ ದಸೆಯಿಂದ ಪರಿಣತವಾದ ಬಗೆಯನ್ನು, ಬದಲಾವಣೆಯಾಗುತ್ತಿರುವ ಸನ್ನಿವೇಶದಲ್ಲಿ ಅದರ ಆಂತರಿಕ ಔಚಿತ್ಯವನ್ನು ಬಹಳ ವಿವೇಚನಾಪೂರ್ವಕವಾಗಿ ವಿಶ್ಲೇಷಿಸುವ

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ವಿಚಾರವಂತರಿಗೆ ಇದು ಒಂದು ಚಿತಣ.

ಬರೆದವರು: ಜಾನ್ ಡ್ಯೂಯಿ

ಅನುವಾದಕ: ಕು. ಶಿ. ಹರಿದಾಸ ಭಟ್ಟ

ಪುಟಗಳು. ೮+೧೮೮. ಬೆಲೆ: ಎರಡು ರುಪಾಯಿ.

ಇಂದೇ ಬರೆಯಿರಿ

ನವಯುಗ ಎಂಟರ್‌ಪ್ರೈಸಸ್, ಲಿಮಿಟೆಡ್
ನವಯುಗ ಪ್ರೆಸ್, ಉಡುಪಿ.

ಹೊಸಕೆರೆ
ಚಿದಂಬರಯ್ಯನವರ

ಭಗವದ್ಗೀತೆಯ

ಸಮೂಲ ಭಾಷಾಂತರ

ಪೊಕೆಟ್ ಎಡಿಷನ್.

ಸುಮಾರು 450 ಪುಟಗಳು

ಕ್ರಯ 0—12—0

ನವಯುಗ ಪ್ರೆಸ್, ಉಡುಪಿ.

ಗ್ರಾಮೋದ್ಧಾರ

(೩ನೇ ಪುಟದಿಂದ)

ನಾವು ಹಸ್ತಕೌಶಲದಿಂದ ವಸ್ತು ಒಡವೆಗಳನ್ನು ತಯಾರಿಸುವಾಗ, ಯಾಂತ್ರಿಕ ಮತ್ತು ಹಾಸ್ತಿಕ ಒಡವೆಗಳಲ್ಲಿನ ಅಂತರವನ್ನು ಹೋಗಲಾಡಿಸಬೇಕು. ಇದಕ್ಕಾಗಿ ನಮ್ಮ ಗುಡಿ ಕೈಗಾರಿಕೆಗಳಿಗೆ ವಿದ್ಯುತ್ತನ್ನೂ ಸಣ್ಣ ಸಣ್ಣ ಯಂತ್ರಗಳನ್ನೂ ಬಳಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ನಮ್ಮ ಹಳ್ಳಿ ಹಳ್ಳಿಗಳಲ್ಲಿ ಅನೇಕ ಪ್ರಕಾರದ ಕುಟೀರೋದ್ಯೋಗಗಳು ಹುಟ್ಟಿಕೊಳ್ಳುವ, ವಿದ್ಯುತ್ ಮತ್ತು ವಿಜ್ಞಾನಗಳ ಪ್ರಯೋಗವು ಅಂತಹ ಉದ್ಯೋಗಗಳಲ್ಲಿ ಆಗಬಹುದಾದ ದಿನವು ಹೆಚ್ಚು ದೂರವಿಲ್ಲ.

ಗ್ರಾಮೀಣ ನಿರುದ್ಯೋಗವನ್ನು ತೊಡೆದು ಹಾಕುವುದರಲ್ಲಿ ಕೃಷಿ ಪದ್ಧತಿಯು ವೈಜ್ಞಾನಿಕವಾಗಿರುವುದೆ. ಮತ್ತು ಸಹಕಾರಿ ವ್ಯವಸಾಯ ಕ್ರಮವನ್ನು ಅನುಸರಿಸುವುದು ಅವಶ್ಯಕವಾಗಿದೆ. ಹಳ್ಳಿಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಾಗಿ ಕಲ್ಪಿಸಿಕೊಡಲು ಅನೇಕ ಪ್ರಕಾರದ ಉದ್ಯೋಗಗಳು ಪ್ರಾರಂಭಿಸಲ್ಪಡಬೇಕು. ಆದರೆ, ಈ ಉದ್ಯೋಗಗಳ ಜನರ, ಸಹಯೋಗವಿಲ್ಲದೆ ಹೋದರೆ ಅಪೂರ್ಣವಾಗಿಯೇ ಉಳಿಯುತ್ತವೆ. ಹಳ್ಳಿಗರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು, ಉತ್ತಮ ಮನೆಯಲ್ಲಿ ವಾಸಿಸಲು, ತಮ್ಮ ಮಕ್ಕಳುಮರಿಗಳ ಭವಿಷ್ಯವನ್ನು ಉತ್ತಮವಾಗಿರಿಸಲು ಬಯಸುವುದಾದಲ್ಲಿ, ಸರಕಾರದ ಯೋಜನೆಗಳೂ ಸಾರ್ಥಕಗೊಳ್ಳುವುವು; ದೇಶದ ಬಡತನವೂ ಮಾಯವಾಗುವುದು.

ಆದುದರಿಂದಲೇ ರಾಷ್ಟ್ರ ಪುನರಾಚನಾ ಕಾರ್ಯಗಳಲ್ಲಿ ಜನತಾ ಸಹಯೋಗಕ್ಕೆ ಒಂದು ಪ್ರಮುಖ ಸ್ಥಾನವಿದೆ. ನಮ್ಮ ಹಳ್ಳಿಗಳಲ್ಲಿ ಈಗ ಸುಮಾರು ೨೮ ಲಕ್ಷ ನಿರುದ್ಯೋಗಿಗಳಿರುವರೆಂದು ಅಂದಾಜು ಮಾಡಿದ್ದಾರೆ. ದ್ವಿತೀಯ ಯೋಜನಾವಧಿಯಲ್ಲಿ ರೂಪಿಸಲಾಗುವ ಉದ್ಯೋಗಾವಕಾಶಗಳ ನಂತರ ಸಹಾ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ನಿರುದ್ಯೋಗಿಗಳಿರುವುದು ಎಂದು ಲೆಕ್ಕ ಹಾಕಿದ್ದಾರೆ. ಆದದರಿಂದು ದೊಡ್ಡದೊಂದು ಪೆಡಂಭೂತದಂತೆ ದೇಶಕುಂಬಾ ವ್ಯಾಪಿಸಿರುವ ನಿರುದ್ಯೋಗಿತೆಯನ್ನು ಹೊಡೆದೋಡಿಸಲು ಎಲ್ಲರೂ ದೃಢ ನಿರ್ಧಾರ ಮಾಡಬೇಕು. ಅದಕ್ಕಾಗಿ ಗುಡಿಕೈಗಾರಿಕೆಗಳನ್ನು ಪ್ರಾರಂಭಿಸಬೇಕು. ಅಲ್ಲಿ ಸಿದ್ಧವಾದ ವಸ್ತುಗಳನ್ನೇ ಅಧಿಕ-ಧಿಕವಾಗಿ ಬಳಸಿಕೊಳ್ಳಬೇಕು. ಅದರಿಂದ ಈ ಕೈಗಾರಿಕೆಗಳೂ ಬೆಳೆದು ಬರುವುದು ಸಾಧ್ಯ. ನಮ್ಮ ಹಳ್ಳಿಗರೂ ಇತರ ಪ್ರಜೆಗಳೂ ಈ ವಿಷಯವನ್ನು ನೆನಸಿಸಲ್ಪಡುವುದು ಅತ್ಯಗತ್ಯ.

ಅಸಭ್ಯ ವರ್ತನೆ

ಶ್ರೀ ರಾಮಸ್ವಾಮಿ ನಾಯ್ಕರರ ಚಿರಸೂತನ ಚಳುವಳಿ— ಮಹಾತ್ಮ ಗಾಂಧೀಜೀಯವರ ಅಕ್ಷಮ್ಯ ಅಪರಾಧಕ್ಕೆ ಶಿಕ್ಷೆ!

ದ್ರಾವಿಡ ಕಳ್ಳಗಂ ಸಂಸ್ಥೆಯ ನಾಯಕ ಸೇಲಂಯಾರ್ ರಾಮಸ್ವಾಮಿ ನಾಯ್ಕರ್‌ರ ಅಕ್ರಮ ವರ್ತನೆಯು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗತೊಡಗಿದೆ. ಹುಚ್ಚುತನದ ಈ ವರ್ತನೆಯನ್ನು ಸಾರ್ವಜನಿಕ ಸ್ಥಳಗಳಲ್ಲಿ ಬಹಿರಂಗವಾಗಿ ತೋರಿಸಲು ಅವರ ಮನಸ್ಸು ಹೇಸದಿರುವುದು ಪರಮಾಶ್ಚರ್ಯವೇ ಸರಿ! ಅವರು ಶ್ರೀರಾಮಚಂದ್ರನ ಕಡು ವೈರಿ, ವಿಘ್ನೇಶನ ಶತ್ರು. ಸಾಧಾರಣವಾಗಿ ರಾಷ್ಟ್ರೀಯ ನಾಯಕರೂ ಈ 'ನತದೃಷ್ಟ' ದೇವತೆಗಳಿಗೆ ಸಾಲಿಗೆ ಸೇರಿದ್ದಾರೆ! ಬ್ರಾಹ್ಮಣರನ್ನು ಕಂಡರೆ ನಾಯ್ಕರರಿಗೆ ಸಹಿಸಲಾಗದು. ದ್ರಾವಿಡರನ್ನು ಅವರು ಪರಸ್ಪರಿಸುತ್ತಾರೆ. ಆರ್ಯರೆಂದರೆ ಅವರ ಕಡು ವೈರಿಗಳು! ದೇವರು, ರಾಷ್ಟ್ರನಾಯಕರಲ್ಲಿ ಯಾತೇತರಹದ ಭೇದಭಾವ? ಯಾಕೆಂತಹ ಅಸೂಯೆ! ಇದೂ ಜಾತೀಯತಾ ಮನೋಭಾವಗಳನ್ನು ಕೆರಳಿಸುವ ಒಂದು ಸಾಧನವೆಂದರೆ ತಪ್ಪಾಗದು. ಇಂತಹ ಜ್ಞಾನಸ್ಥರೂ, ವಯೋವೃದ್ಧರು ಈ ರೀತಿ ದಾರಿತಪ್ಪಿ ನಡೆಯುತ್ತಿರುವುದು ವಿಷಾದನೀಯ. ಸಾಲದುದಕ್ಕೆ ಇವರಿಗೆ ಅನುಯಾಯಿಗಳ ದೊಡ್ಡ ತಂಡವೂ ಇದೆ!

ಕೆಲವು ಸಮಯದ ಹಿಂದೆ ನಾಯ್ಕರರು ಗಣಪತಿ ಹಾಗೂ ಶ್ರೀರಾಮರ ವಿಗ್ರಹಗಳನ್ನು ಭೇದಿಸುವ ಹವ್ಯಾಸಕ್ಕೆ ಬಲಿಬಿದ್ದಿದ್ದರು ರಾಮನ ಹಾಗೂ ವಿಘ್ನೇಶನ ಭಾವಚಿತ್ರಗಳನ್ನು ಬಹಿರಂಗವಾಗಿ ಸುಡಲು ತೊಡಗಿದ್ದರು. ವಿಗ್ರಹ ಭೇದನೆಯಲ್ಲಿ ಇವರು ಘಜನೀ ಮಹಮೂದನನ್ನೂ ಮೀರಿಸಿರಬಹುದೆ? ಅವನಾದರೆ ಮತಾಂಧೀಯನು, ಹಿಂದೂ ಮತೀಯರನ್ನು ದ್ವೇಷಿಸುತ್ತಿದ್ದನು. ಅಲ್ಲದೇ ವಿಗ್ರಹ ಭೇದನೆಯಿಂದ ತನ್ನ ಸೇಡನ್ನೂ, ಧನ ಪಿಪಾಸೆಯನ್ನೂ ತೀರಿಸಿಕೊಳ್ಳುತ್ತಿದ್ದನು. ಆದರೆ ಇವರು ಹಿಂದೂ ಮತೀಯರಾಗಿದ್ದೂ, ಹಿಂದೂ ಮತೀಯರನ್ನು ದ್ವೇಷಿಸುತ್ತಾರೆಂದ ಮೇಲೆ, ಇದಕ್ಕೆ ಹುಚ್ಚುತನವೆನ್ನಬಹುದೇ? ಮತ ಅಸಹಿಷ್ಣುತೆಯೆನ್ನಬೇಕೇ?

ಇವರಂತಹವರನ್ನು ಸರಕಾರವು ಬಹು ಜಾಗ್ರತೆಯಿಂದ ನಡೆಯಿಸಿಕೊಳ್ಳುವುದೊಳಿತು. ಇಲ್ಲದಿದ್ದಲ್ಲಿ ಇವರು ಒಂದಲ್ಲ ಒಂದಿನ ಸಾರ್ವಜನಿಕರಿಗೆ ತೊಂದರೆಯೊಡ್ಡುವ ಕಾರ್ಯಕ್ರಮಗಳನ್ನು ಕೈಗೊಳ್ಳುವರೆಂಬುದು ನಿಶ್ಚಿತ. ಕೆಲಕಾಲದ ಹಿಂದೆ ರಾಷ್ಟ್ರ ಧ್ವಜವನ್ನು ಸುಟ್ಟು ನಾಡಿಗೆ ಅಪಮಾನ ಶರಲೆತ್ತಿಸುವುದಕ್ಕೂ ಇವರು ಹಿಂಜರಿಯಲಿಲ್ಲ. ಇವರಂತಹ ಕೆಲವರು ಜನರಿದ್ದರೆ, ನಮ್ಮ ನಾಡಿನ ಉನ್ನತಿ ಹೇಗಾದೀತು? ಧ್ವಜ ದಹನ ಚಳವಳಿಯಿಂದ, ರಾಷ್ಟ್ರದ ಅವನತಿಯ ಚಿಹ್ನೆಯನ್ನು ಸ್ವಾಗತಿಸಲು ಅವರು ಸಿದ್ಧರಿದ್ದರೆಂದರೆ- ಅವರ ಈ ವರ್ತನೆಗೆ ಏನೆನ್ನಬೇಕೋ ತಿಳಿಯದಾಗಿದೆ. ಒಂದು ಸಂಸ್ಥೆಯ ನಾಯಕರಾಗಿರುವ ಈ ಮಹನೀಯರಿಗೆ, ರಾಜ್ಯಕೀಯ ತಜ್ಞನೆನಿಸಿಕೊಳ್ಳುವ ಇವರಿಗೆ ಇಂತಹ ವಿಷಯಗಳು ತಿಳಿಯದಿರುವುದು ವಿಷಾದನೀಯ.

ನಾಯ್ಕರರು ಬ್ರಾಹ್ಮಣರ ಮೇಲೂ ಒಂದಾನೊಂದು ಕಾಲದಲ್ಲಿ ಗಡೆಯೆತ್ತಿದ್ದರು. ಹೊಟೇಲುಗಳ ಬೋರ್ಡುಗಳಲ್ಲಿರುವ 'ಬ್ರಾಹ್ಮಣ' ಪದಕ್ಕೆ ತಾರು ಬಳಿಯುವ ಕೆಲಸದಲ್ಲಿ ಅವರೂ, ಅವರ ಅನುಯಾಯಿಗಳೂ ತೊಡಗಿದ್ದರು. ಇಂತು ನಾಯ್ಕರರು ದಿನೇ ದಿನೇ ಜನರಿಗೆ ಅಪ್ರಿಯರಾಗುತ್ತಾ ಹೋಗ ತೊಡಗಿದ್ದಾರೆ. ಇವರ ಇಂತಹ ವರ್ತನೆಯು ಎಂದಾದರೂ ನ್ಯಾಯ ಸಮ್ಮತವಾಗಬಹುದೇ?

ಈಗ ಅವರು ರಾಷ್ಟ್ರಪಿತ ಗಾಂಧೀಜೀಯವರ ವಿರುದ್ಧ ದೊಡ್ಡ ಚಳವನ್ನೇ ಹೂಡಿದ್ದಾರೆ. ಗಾಂಧೀಜಿಯವರ ಭಾವಚಿತ್ರಗಳನ್ನು ಸುಡುವ-ಹುಚ್ಚತನದ ಚಳವಳಿಯೊಂದೀಗ ದ್ರಾವಿಡ ಕಳ್ಳಗಂನವರಿಂದ ಪ್ರಾರಂಭವಾಗಿದೆ. ರಶ್ಯದಲ್ಲಿಂದು ಸ್ಟಾಲಿನ್ ಶಾಹಿತ್ವದ ಸಿನ್ಹಾಮಗೊಳ್ಳುತ್ತಿರುವುದರ ಮೂಲಕ ಸ್ಫೂರ್ತಿಯನ್ನು ಪಡೆದ ನಾಯ್ಕರರು ಈಗ ರಾಷ್ಟ್ರಪಿತ ಗಾಂಧೀಜಿಯವರ ಭಾವಚಿತ್ರಗಳನ್ನು ಬಹಿರಂಗವಾಗಿ ಸುಡುವೆನೆಂದಿದ್ದಾರೆ. ಸ್ವಾತಂತ್ರ್ಯದ ಬೀಗದ ಕೈಯನ್ನು ಗಾಂಧೀಜಿಯವರು ಬ್ರಾಹ್ಮಣರಿಗೊಪ್ಪಿಸಿ ವಿಶ್ವಾಸಘಾತಕ ತನವನ್ನು ಪ್ರದರ್ಶಿಸಿದ್ದಾರಂತೆ! ಅಲ್ಲದೇ ಹಿಂದೆ ಆಂಗ್ಲರಾಳ್ವಿಕೆಯಲ್ಲಿದ್ದ ಪಾರತಂತ್ರ್ಯವನ್ನೇ ಈಗಲೂ ನಾಯ್ಕರರು ಅನುಭವಿಸುತ್ತಿದ್ದಾರಂತೆ!

ಆಂದಿನ ಆಂಗ್ಲ ಸರಕಾರದೆದುರು ಇವರು ಇಂತಹ ಅಕ್ರಮವರ್ತನೆಯನ್ನು ತೋರಿಸಿದ್ದರೆ, ಏನಾಗುತಿತ್ತೋ ದೇವರೇ ಬಲ್ಲ! ಇವರು ಗೃಹ ಅಕಾರ್ಯಗಳಿಗೆಲ್ಲಾ ಸರಕಾರ ಶಿಕ್ಷೆ ವಿಧಿಸಿದರೂ ಕೂಡಾ, ಅವರನ್ನೂ ತನ್ನ ಚಳವಳವನ್ನು ನಿಲ್ಲಿಸಲಾರರು! ಇವರ ಮನೋಭಿಪ್ರಾಯಕ್ಕೆ ಅನುಕೂಲವಾಗಿ ಇವರು ಅಲ್ಲಸಲ್ಲದ ಕೆಲಸಗಳನ್ನು ಮಾಡಲು ಇವರಿಗೆ ಸರಕಾರವಾದರೂ ಅವಕಾಶವನ್ನು ಹೇಗೆ ಕೊಟ್ಟೀತು? ಹಾಗೂ ಸ್ವಾತಂತ್ರ್ಯವಿರುವುದಾದರೂ ಹೇಗೆ ಇವರಿಗೆ? ಇದು ಸಿಕ್ಕಿದ ಸ್ವಾತಂತ್ರ್ಯದ ಸದುಪಯೋಗವಲ್ಲ, ದುರುಪಯೋಗ. ಇಂತಹ ಅನ್ಯಾಯದ ವರ್ತನೆಯನ್ನವರು ಎಷ್ಟರ ತನಕ ಆಚರಣೆಗೆ ತರುವರೋ, ಆ ವರೆಗೆ ಅವರಿಗೊಳಿತಾಗನು, ಅವರರಾಷ್ಟ್ರದ ಪ್ರಜೆಗಳಾದ ನಮಗೂ ಈ ಆಚರಣೆ ದೊಡ್ಡ ಕುಂದು, ಜನತೆಯಾದರೂ ಅವರ ಚಳವಳಕ್ಕೆ ಬೆಂಬಲ ನೀಡಬಾರದು. ತನ್ನ ವರ್ತನೆಯ ಬಗ್ಗೆ ಪಶ್ಚಾತ್ತಾಪ ಪಟ್ಟು, ಅವರು ಯೋಗ್ಯ ಮಾರ್ಗಕ್ಕೆ ಬರುವಂತೆ ಭಗವಂತನು ಅವರಿಗೆ ಸದ್ಬುದ್ಧಿಯನ್ನೀಯಲಿ!

—ಎಮ್. ರಘುನಂದನರಾವ್,
ತಲ್ಲೂರು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 39/1957

ಕೆ. ಗುರುರಾಜ ರಾವ್ —ವಾದಿ
ಮತ್ತು
ವಕೀರ ಅಬ್ಬಾಸ ಸಾಹೇಬ ಕೊಡಾ—ಪ್ರತಿವಾದಿರು,
ಯುವರೊಳಗೆ,

ಸೋಲ್ಜಂಡ ವ್ಯಾಜ್ಯದಲ್ಲಿ ಸಪ್ಲಿಮೆಂಟು 6 ನೇ ಪ್ರತಿವಾದಿ M. M. ಅಬ್ದುಲಕಾದರಿಗೆ ಆಗತಕ್ಕ ವ್ಯಾಜ್ಯದ ಸೋಪ್ಪು ತಾರೀಕು 7-9-57ಕ್ಕೆ ಯಿಟ್ಟಿರುವುದರಿಂದ ಸದ್ರಿ ಪ್ರತಿವಾದಿಯು ತನ್ನ ಅಕ್ಷೇಪ ಹೇಳ್ಕುವುದನ್ನು ಆ ದಿನ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಞಾಪಿಸಿ ವಾದಿಕೊಳ್ಳತಕ್ಕದ್ದು.

P. Padmanabha Rao
Vakil for plaintiff

Udipi, Dated 22-8-57.

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳಿ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುತ್ಕೃಷ್ಟ ಶಮನಮಾಡಿ, ಸ್ಪರ್ಮವನ್ನು ಹೆಚ್ಚಿಸಿ, ನಪುಂಸಕತೆಯನ್ನು ನಾಮಾವಶೇಷಗೊಳಿಸುತ್ತದೆ. ವೀರ್ಯಾಣುಗಳನ್ನು ವೃದ್ಧಿಸಿ, ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ. ರೋಗಿಯ ವಯಸ್ಸು ಮತ್ತು ಬಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ಯಾಟಲಾಗ್ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನ. ಯು.)
629, "ಸಂತಾನ ಸಿಂದೂರ ಸದನ", ಚಾಮರಾಜ ರೋಡ್, ಮೈಸೂರು-1 (S.I.)

ನೋಟೀಸು.

ಪೆರ್ಡೂರು ಶ್ರೀ ಅನಂತಪದ್ಮನಾಭ ದೇವರ ಭಂಡಾರದ ಬಾಬ್ತು ತೆಂಗಿನಕಾಯಿ ಮುಡಿ ಸುಮಾರು 55 (ಐವತ್ತೈದು) ಮಾರುವುದಿದೆ. ಈ ಬಗ್ಗೆ ಇದೇ ತಾರೀಕು 1-9-57ನೇ ಆದಿತ್ಯವಾರ ಅಪರಾಹ್ನ ಘಂಟೆ 4ಕ್ಕೆ ಭಂಡಾರದ ಶರ್ತಗಳಿಗೆ ವಳಪಟ್ಟು ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ಏಲಂ ಮಾಡಲಾಗುವುದು. ಆಸೇಕ್ಷಿ ಉಳ್ಳವರು ಸಮಯಕ್ಕೆ ಬಂದು ಏಲಂನಲ್ಲಿ ಭಾಗವಹಿಸಬಹುದು.

K. B. Shetty
Executive officer,
Sri Anantha Padmanabha Temple
Perdoor

ಪೆರ್ಡೂರು, ತಾ. 20-8-1957.

ಗೋ ವಿಜಯ

(ಗೋವಿನ ಕಥೆ)

ಶ್ರೀ ಮುಮ್ಮಿಸ್ವಾಣ ಉಸಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ. ತಮ್ಮಷ್ಟಕ್ಕೆ ತಾವೇ ಕತೆ ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಾದ್ದರೆ ಈ ಪುಸ್ತಕವನ್ನು ಆವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕೀರ್ತನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0

ನವಯುಗ ಪ್ರೆಸ್, ಉಡುಪಿ

ಮಾರಾಟದ ಮಾಧ್ಯಮ

(೨೩ನೇ ಪುಟದಿಂದ)

ನವರು ನೇಮಿಸಿದ್ದ ನಿರ್ದೇಶನ ಸಮಿತಿಯು ಸಹಕಾರಿ ಮಾರುಕಟ್ಟೆ ವ್ಯವಸ್ಥೆಯನ್ನೂ ಸಾಲ ಸೌಲಭ್ಯ ನೀಡುವ ಯೋಜನೆಯನ್ನೂ ಪರಸ್ಪರ ಸಂಬಂಧವಿರುವಂತೆ ಮಾಡಲು ಶಿಫಾರಸು ಮಾಡಿದೆ. ಸಹಕಾರ ಸಂಸ್ಥೆಗಳ ಅಭಿವೃದ್ಧಿಗಾಗಿ ಈಗ ಯಾರಿಸಿರುವ ಕಾರ್ಯಕ್ರಮಗಳಲ್ಲಿ ಪ್ರತಿಯೊಂದು ಮಂಡಿ ಕೇಂದ್ರದಲ್ಲಿಯೂ ೧,೮೦೦ ಮಾರುಕಟ್ಟೆ ಸಂಸ್ಥೆಗಳನ್ನು ರಚಿಸುವ ಕಾರ್ಯಕ್ರಮವೂ ಸೇರಿರುತ್ತದೆ. ದ್ವಿತೀಯ ಪಂಚವರ್ಷಿಕ ಯೋಜನೆಯ ಕೊನೆಯ ವೇಳೆಗೆ ಮಾರುಕಟ್ಟೆಗೆ ಬರುವ ಉತ್ಪನ್ನ ವಸ್ತುಗಳಲ್ಲಿ ನೂರಕ್ಕೆ ೧೦ ರಷ್ಟನ್ನು ನಿರ್ವಹಿಸಲು ಈ ಸಮಿತಿಗಳು ಸಮರ್ಥವಾಗುವುವೆಂದು ಅಂದಾಜು ಮಾಡಿದ್ದಾರೆ.

ಬೇಸಾಯ ಉತ್ಪನ್ನ ಮಸೂದೆ (ಅಭಿವೃದ್ಧಿ ಮತ್ತು ಸಂಗ್ರಹಣೆಯ ಕಾರ್ಪೊರೇಶನ್) ಯನ್ನು ಅಂಗೀಕರಿಸಿರುವುದು ಭಾರತ ಸರಕಾರದವರು ಮಾರುಕಟ್ಟೆಯ ವ್ಯವಸ್ಥೆಯಲ್ಲಿಟ್ಟ ಮತ್ತೊಂದು ಪ್ರಮುಖ ಹೆಜ್ಜೆಯೆನ್ನಬಹುದು. ರಾಷ್ಟ್ರೀಯ ಅಭಿವೃದ್ಧಿ ಸಂಗ್ರಹಾಲಯ ಮಂಡಳ ಮತ್ತು ಕೇಂದ್ರ ಸಂಗ್ರಹಾಲಯ ಕಾರ್ಪೊರೇಶನ್‌ಗಳನ್ನು ರಚಿಸಲು ಈ ಕಾನೂನು ಸಹಾಯ ನೀಡುತ್ತದೆ. ರಾಜ್ಯಗಳಲ್ಲಿ ಇಂತಹ ಸಂಸ್ಥೆಗಳನ್ನು ಸ್ಥಾಪಿಸಬೇಕಾಗುವುದು ದ್ವಿತೀಯ ಯೋಜನೆಯ ವೇಳೆಗೆ ಅಂತಹ ೧೩ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು.

ಕಾರ್ಪೊರೇಶನ್‌ಗಳು ದೇಶದ ನಾನಾ ಭಾಗಗಳಲ್ಲಿ ೧೦೦ ಕೇಂದ್ರ ಹಾಗೂ ೨೫೦ ರಾಜ್ಯ ಸಂಗ್ರಹಾಲಯಗಳನ್ನು ಸ್ಥಾಪಿಸುವ ಹೊಣೆಗಾರಿಕೆಯನ್ನು ಹೊತ್ತಿವೆ ಇದರೊಂದಿಗೆ ಅಗತ್ಯವೆನಿಸಿದ ಸಂಗ್ರಹಾವಕಾಶವನ್ನು ಒದಗಿಸುವುದಲ್ಲದೆ, ಪ್ರಮುಖ ಉತ್ಪಾದಕರಿಗೆ ಅಗತ್ಯವಾದ ಸಾಲದ ಸೌಲಭ್ಯಗಳನ್ನೂ ನೀಡಲು ಇವು ಸಹಾಯ ಮಾಡುವುವು.

ಬೇಸಾಯ ಮಾರ ಕಟ್ಟೆಯಲ್ಲಿ ಪ್ರವೃತ್ತಿಯು ಆರ್ಥಿಕ ಅಭಿವೃದ್ಧಿಯ ಪ್ರಗತಿಗನುಗುಣವಾಗಿ ಬದಲಾಯಿಸುತ್ತಿದೆ. ಬಳಕೆದಾರನ ಹಣದಲ್ಲಿ ಕಟ್ಟನ ಭಾಗವು ಬೇಸಾಯಿಗಾರರಿಗೆ ದೊರೆಯುವಂತೆ ಮಾಡಲು ಪ್ರಯತ್ನಿಸಲಾಗುತ್ತಿದೆ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಿಖು ಠೇವಣಾತಿ.

3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.



ಕಳೆದ ೩೫ ವರ್ಷಗಳಿಂದಲೂ ಪ್ರತಿ ವರ್ಷ ತನ್ನ ಎರಡು ವಾರಗಳ ಸಂಬಳವನ್ನು ರಾಜ್ಯಕ್ಕೆ ಸಾಲವನ್ನಾಗಿ ರಶ್ಯದ ಎಲ್ಲ ನೌಕರರೂ ಕೊಡಬೇಕಾಯಿತು. ಈ ಸಾಲಗಳ ಮರುಪಾವತಿಯು ಮೊನ್ನೆ ಮೊನ್ನೆ ೨೫ ವರ್ಷ ಹಿಂದೆ ಹಾಕಲ್ಪಟ್ಟಿದೆ

೧೦ ಜನರನ್ನು ಎಳೆಯುವ ಒಂಟೆನ್ ಎಂಬ ಬೈಸಿಕಲ್ ಜಗತ್ತಿನಲ್ಲಿಯೇ ಉದ್ದವಾದುದು. ಇದು ೧೯೯೮ರಲ್ಲಿ ತಯಾರಿಸಲ್ಪಟ್ಟಿದ್ದು ೨೫ ಅಡಿ ಉದ್ದ, ೩೦೫ ರಾತಲ ಭಾರವಿದೆ ಘಂಟೆಗೆ ೪೦ ಮೈಲು ಓಡಬಲ್ಲ ವೇಗವಿದಕ್ಕಿದೆ.

ಜಗತ್ತಿನಲ್ಲಿಯೇ ಅತ್ಯಧಿಕ ಅಕ್ಷರಸ್ಥರ ಪ್ರಮಾಣವನ್ನು ಪಡೆದ ಕೀರ್ತಿ ಸ್ವೀಡನ್ನಿಗೆ ಹೋಗುತ್ತದೆ. ಅಲ್ಲಿನ ಸಾವಿರ ಜನರಲ್ಲಿ ಒಬ್ಬನೇ ಮಾತ್ರ ಓದಲು, ಬರೆಯಲು ಅಶಕ್ತನಾಗಿದ್ದಾನೆ.

ವೀರನಾರಿ

ಝಾಂಸಿ ಲಕ್ಷ್ಮೀಬಾಯಿ

ಭಾರತ ಮಾತೆಯ ಉದರದಿ ಜನಿಸಿದ
ವೀರ ರಮಣಿ ಯಾರು ।
ಅವಳೇ ಝಾಂಸಿ ಲಕ್ಷ್ಮೀ ಬಾಯಿ ॥
ಸ್ವಾತಂತ್ರ್ಯದ ಜ್ಯೋತಿಯ ಬೆಳಗಿದ
ನಾರೀ ರತ್ನವು ತಾನಾರು ॥
ಅವಳೇ ಝಾಂಸಿ ಲಕ್ಷ್ಮಿ ಬಾಯಿ ॥ ಪ್ರಲ್ಲ ॥

ಮೋರೋ ಪಂತನ ಮೋಹದ ಕುವರೀ ।
ಕರಗಲಿ ಹಿಡಿದಳು ಕತ್ತಿ ಕರಾರೀ ।
ದೇಶದ ಬಿಡುಗಡೆಗಾಗಿಯೆ ಹುತಿದೂ ।
ಕಾದಿ ಸೇರಿದಳು ಸ್ವರ್ಗವ ಸಡೆದೂ |
ಧೀರತೆ ಸ್ತ್ರೀಯರ, ಉಜ್ವಲ ಶೌರ್ಯವ
ತೋರಿ ಮಾಡಿದರಾರು '
ಅವಳೇ ಝಾಂಸಿ ಲಕ್ಷ್ಮೀ ಬಾಯಿ ॥ ೧ ॥

ಚಿಕ್ಕ ಪ್ರಾಯದಾ ಚೊಕ್ಕ ಗುಣ ಮಣಿ |
ಗಂಗಾಧರನಾ ಪಟ್ಟದ ರಾಣೀ ।
ಝಾಂಸಿಯ ಭಾಗ್ಯಕೆ ಮೇರೆಯೆ ಇಲ್ಲ ।
ತುಂಬಿತು ಹೊಲ ಮನೆ ರಾಜ್ಯವು ಎಲ್ಲ ।
ಲಕ್ಷ್ಮಿ ಸ್ವರೂಪದ ಅನುಪಮಾತೆಯು
ಶುಭಕಾರಿಣಿ ಯಾರು ।
ಅವಳೇ ಝಾಂಸಿ ಲಕ್ಷ್ಮೀ ಬಾಯಿ ॥ ೨ ॥

ಕಾಲದ ಮಹಿಮೆಯ ತಿಳಿದವರಾರು ।
ಝಾಂಸಿಯ ದುರ್ದಶೆ ಅರಿತವರಾರು ।
ಸೆಳೆದನು ಕಾಲನು ಪುತ್ರನ ಹರಣಾ |
ದು ಬದಿ ಜೊಂದಿದ ರಾಜನು ಎರಣಾ ।
ಕಾಲನ ಕೋಪಕೆ ಬಗ್ಗದ ಜಗ್ಗದ
ಶೂರ ರಮಣಿ ಯಾರು ।
ಅವಳೇ ಝಾಂಸಿ ಲಕ್ಷ್ಮೀ ಬಾಯಿ ॥ ೩ ॥

ಆಂಗ್ಲರ ಕುಟಿಲ ನೀತಿಯ ಸಂಚೂ ।
ರಾಣಿಯ ರಾಜ್ಯಕೆ ಪಾತಕ ಹೊಂಚೂ |
ಬಂದನು ಬ್ರಿಟಿಶರ ಸೇನಧಿಕಾರೀ |
ರಾಣಿಯ ಕ್ರೋಧವು ಸಿರಿತು ಭಾರೀ |
ನನ್ನೀ ಝಾಂಸಿಯ ಬಿಡೆಕಂದೆನೆಂದಿರ
ಕ್ರಾಂತಿ ಶೀಲಿಯೂರು |
ಅವಳೇ ಝಾಂಸಿಯ ಲಕ್ಷ್ಮೀಬಾಯಿ । ೪ ॥

ಬ್ರಿಟಿಶರ ದೇಶದಳಿತದ ನೀತೀ ।
ಜನರಲಿ ಬೆಳೆಯಿತು ಒಹುಭಯ ಭೀತೀ |
ನಿದ್ದೆಯಿಂದ ಎಚ್ಚತ್ತಿತು ದೇಶಾ |
ಕೆಡಿದು ಒಗೆಯೆ ಒಂದಾದವಾ ಪಾಶಾ ।
ಕ್ರಾಂತಿಯ ಪಥದನು ತೋರಿ ಕಾದಿದಾ
ಸ್ತ್ರೀ ರತ್ನವು ಯಾರು |
ಅವಳೇ ಝಾಂಸೀ ಲಕ್ಷ್ಮೀ ಬಾಯಿ ॥ ೫ ॥

ಹೋರಾಟದ ಆ ಉಜ್ವಲ ಕಾಲಾ |
ಭಾರತ ಚರಿತೆಯ ಪರ್ವದ ಕಾಲಾ ।
ಸ್ವಾತಂತ್ರ್ಯದ ಮಹಮಂತ್ರವ ಜಪಿಸೀ ।
ಇಹವನು ತೊರೆದರು ಮಾತೆಗೆ ನಮಿಸೀ |
ಪ್ರಾಣಾ, ಪ್ರಾಣಕ್ಕೆ ಪಣವಾಗಿಟ್ಟ
ಗಣದೇವತೆ ಯಾರು |
ಅವಳೇ ಝಾಂಸೀ ಲಕ್ಷ್ಮೀ ಬಾಯಿ ॥ ೬ ॥

ಜೀವದ ಮೇಲಣ ಹಂಗನು ತೊರೆದೂ |
ಸ್ವಾತಂತ್ರ್ಯದಸಿದ್ಧಿಗೆ ನಡುವನು ಬಿಗಿದೂ |
ಇಪ್ಪತ್ತೆರಡರ ಹರೆಯದ ಬಾಲೇ ।
ಸುಪ್ಪತ್ತಿಗೆಯನು ತೊರೆದಳು ಶೀಲೇ ।
ಕತ್ತಿಯ ಹಿಡಿದು, ಕಸಿಯನು ತೊಟ್ಟು
ಕಾದಿ ಮಾಡಿದರಾರು |
ಅವಳೇ ಝಾಂಸೀ ಲಕ್ಷ್ಮೀಬಾಯಿ ॥ ೭ ॥

ಗತಶತವರುಷದ ಈ ಶುಭಕಥನಾ ।
ನಿನ್ನದು ಜರತೆಯ ಪುಣ್ಯ ಪುರಾಣಾ |
ಈವುದು ಜನತೆಗೆ ಬಹುವಿಧ ಸ್ಫೂರ್ತಿ |
ನೀನೇ ಧನ್ಯಳು ಅಮರಳು ಕೀರ್ತೀ ।
ಗಳಿಸಿದ ಭಾಗ್ಯವ, ಉಳಿಸಿ ಬೆಳೆಸುವೆವು
ಎಂದು ನುಡಿದರಾರು ।
ನಾನೇ ನಿನ್ನಯ ವಂಶಜರು ॥ ೮ ॥

—ಸದಾಶಿವ ರಾವ್.

ವಿನೋಬಾರ ಭೂದಾನ ಕ್ರಾಂತಿ:—

(ಲಾವಣಿ)

(ಸುನೋಸುನೋ ಹೈ ದುನಿಯಾವಾಲೂ
ಬಾತೂಜಿಕೇ ಆಮರ್‌ಳಹಾನಾ) ಎಂಬಂತೆ

೧

ಬರುವರು ಬರುವರು ವಿನೋಬ ಭಾವೇ
ನವಕರ್ನಾಟಕ ಸ್ವಾಂತಕ್ಕೇ ।
ವರ ಭೂದಾನದ ಅಳವಳ ಹೊಡುತ ಪವಾಡ
ತೋರ್ಪರು ವಿಶ್ವಕ್ಕೇ || ಪ ||

ದೇಶದ ಬಡವರ ಭೂಮಿಯ ಸಂಕಟ
ಪಾರುಗಾಣಿಸಲು ತೊಡಗಿದರೂ.
ಈಶನ ಸಾಕ್ಷಿಗೆ ನಿಲಿಸುತ ಮನದೊಳು
ಪಾದಯಾತ್ರೆಯನು ಗೈದಿಹರೂ.

೨

ಭೂಮಿಯು ನೀರೂ ಗಾಳಿಯು ಬೆಳಕೂ
ಆಕಾಶವು ಪರಮೇಶನದೂ
ನೇನುದಿ ವಿಶ್ವದ ಜೀವಿಗಳೆಲ್ಲರು ಸರ್ವ
ಸಮತೆಯಲಿ ಭೋಗಿಪುದೂ

೩

ಮಣ್ಣಿಗು ಹೊನ್ನಿಗು ಹೆಣ್ಣಿಗು ಕೂಡಾ
ಒಡೆತನ ಸಲ್ಲದು ಬಂಧವರೇ
ಚಿನ್ನಾಗುತ ನವ ಸಮಾಜ ಕಟ್ಟುವ ಪ್ರೇಮವ
ಒಲವಲಿ ಸಾಜಜನರೇ

೪

ಹರಿಯುವ ಸಲಿಲವು ನಿರ್ಮಲವಿರುವುದು
ಹರಿಯದೆ ತಡೆಯಲು ನಾರುವುದೂ
ಹರಿಸಿರಿ ನಿಮ್ಮಯ ಸಂಪತ್ತಿಲ್ಲವ
ಸಮಾಜಕೆಸಲವರು ನೀವೆಂದೂ

೫

ದೈವವು ಕೊಟ್ಟಿದ ಕೊಳೆಯಲುಬಿಡದಿರಿ
ಹಂಚಿರಿ ಒಂಧುಗಳೊಳಗೆಲ್ಲಾ.
ಅವಿಯು ನುಗಿಲಾಗುತ ಮಳೆ ಸುರಿಯುತ
ನೆಲಜಲ ತುಂಬುತ ಬಳುವಲ್ಲಾ

೬

ನಿದ್ಯೆಯು ಬೇಕೂ ಬುದ್ಧಿಯು ಬೇಕೂ
ಜ್ಞಾನವು ಸಮನಮಗಿರ ಬೇಕೂ
ಶುದ್ಧದ ಚಿತ್ತದಿ ಕರ್ಮವ ಗೈಯುತ ತ್ಯಾಗದ
ಜೀವನ ಬರಬೇಕೂ.

೭

ದೇವನ ಮಕ್ಕಳು ಸರ್ವರು ನಾವೈ ನಮ್ಮೊಳು
ಭೇದವು ಇತಕ್ಕೇ
ಜೀವನ ಸರವುಪಕಾರದಿ ನಡೆಸಲು ಅಲಿಯುವ
ಎನುವರು ದೇಶಕ್ಕೇ

೮

ಅನ್ನದ ಪ್ರಶ್ನೆಯ ನೀಗಲು ಲೋಕವು
ವಿಧವಿಧ ಕಂತ್ರವ ಹೂಡುವುದೂ.
ಮಣ್ಣಿನ ಹಕ್ಕನು ಹಂಚುರ ಬುದ್ಧಿಯ
ಪಡೆಯಲು ಜನತೆಯು ಸುಖಿಸುವುದೂ

೯

ಧರ್ಮವು ಶಾಸ್ತ್ರವು ವೇದ ಪುರಾಣವು
ಸಮಾಜದಾ ಕೈಗನ್ನಡಿಯೂ
ಕರ್ಮವೆ ಸಕ್ರಿಯ ಧರ್ಮವು ಮಾನವ
ದೈಹಿಕ ನೈಜಕ ಸಂಸದವೂ

೧೦

ಅಹಿಂಸೆಯಿಂದಲಿ ಜಗವನು ಗೆಲುವುದು
ಗ್ರಾಮ ಸ್ವರಾಜ್ಯವ ಕಟ್ಟುವುದೂ.
ಮಹಾತ್ಮ ಗಾಂಧಿಯ ಪೇಳಿದ ಸತ್ಯವ
ಕೃತಿಯಲಿ ಗೈಯುತ ನಡೆಯುವುದೂ

ಸಿ ಮುದ್ದು ಶೆಟ್ಟಿ,
ಅಧ್ಯಾಪಕ, ಪಡುಬಿದ್ರಿ.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ

ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ 8/ (ವಿ ಪಿ ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!

P. DEVEE & Co. (N. J.) CALCUTTA-40

ಸ್ವಾಕಿಸ್ವರು ಸಾ ಕಂಪೆನಿ, ಮಂಗಳೂರು—1.

ಒಂದು ರಾಷ್ಟ್ರದ ಇತಿಹಾಸದಲ್ಲಿ ಹತ್ತು ವರ್ಷಗಳ ಕಾಲವು ಅತ್ಯಲ್ಪ. ಇಷ್ಟು ಅಲ್ಪ ಕಾಲದಲ್ಲಿ ಭಾರತವು ಕಲ್ಯಾಣ ರಾಷ್ಟ್ರವನ್ನು ಕಟ್ಟುವ ತನ್ನ ಗುರಿಯ ಕಡೆಗೆ ನಾಕಷ್ಟು ದೂರವನ್ನು ಕ್ರಮಿಸಿದೆ. ಹೀಗೆ ನಡೆದ ಮಾರ್ಗದಲ್ಲಿ ಕೆಲವು ಮೈಲುಗಲ್ಲುಗಳಂತಹ ಕಾರ್ಯವನ್ನು ಭಾರತವು ಸಾಧಿಸಿದೆ.

ಮೊತ್ತಮೊದಲಿನಲ್ಲಿಯೇ ಭಾರತವು ಅನೇಕ ದೆಶಲಕ್ಷ ಪಾಕಿಸ್ತಾನ ನಿರಾಶ್ರಿತರನ್ನು ನೆಲೆಗೊಳಿಸಬೇಕಾಯಿತು ಹಾಗೂ ಕಾಶ್ಮೀರದ ಮೇಲಿನ ಸೈನಿಕ ಆಕ್ರಮಣವನ್ನೆದುರಿಸಬೇಕಾಯಿತು. ಇವೆರಡೂ ಸಾಮಾನ್ಯ ಕಾರ್ಯಗಳಲ್ಲ ರಾಷ್ಟ್ರದ ಭದ್ರತೆಯನ್ನು ಸಾಧಿಸಲು ಭಾರತವು ಹಿಂದಿನ ನೂರಾರು ಸಂಸ್ಥಾನಗಳನ್ನು ಸಮೀಕರಿಸಬೇಕಾಯಿತು ೧೯೫೬ರ ಭಾಷಾನ್ವಯ ರಾಜ್ಯ ಪುನರ್ಘಟನೆಯು ಇದರ ಮುಂದಿನ ಹೆಜ್ಜೆಯಾಗಿದೆ.

ಭಾರತವು ೧೯೫೦ರಲ್ಲಿ ಪ್ರಜಾರಾಜ್ಯವಾಯಿತು ಅನಂತರ ೧೯೫೧ ಹಾಗೂ ೧೯೫೬ರಲ್ಲಿ ಸಾರ್ವತ್ರಿಕ ಮಹಾ ಚುನಾವಣೆಗಳು ಇಡೆದುವು ವಿಶ್ವದ ಮಹಾ ಪ್ರಜಾರಾಜ್ಯಗಳಲ್ಲಿ ಒಂದಾದ ಭಾರತದ ರಾಜಕೀಯ ಉತ್ಕ್ರಾಂತಿಯಲ್ಲಿ ಇವುಗಳು ಮಹತ್ವಭರಿತ ಹೆಜ್ಜೆಗಳಾಗಿವೆ.

ರಾಜಕೀಯ ಸ್ವಾತಂತ್ರ್ಯವು ದೊರಕಿದ ನಂತರ ರಾಷ್ಟ್ರದ ಆರ್ಥಿಕ, ಮತ್ತು ಸಾಮಾಜಿಕ ಔನ್ನತ್ಯವನ್ನು ಸಾಧಿಸುವ ಉದ್ದೇಶದಿಂದ ಪ್ರಥಮ ಹಾಗೂ ದ್ವಿತೀಯ ಪಂಚವಾರ್ಷಿಕ ಯೋಜನೆಗಳನ್ನು ಕೈಕೊಳ್ಳಲಾಯಿತು ಮೊದಲ ಯೋಜನೆಯು ವಿವಿಧೋದ್ದೇಶಗಳ ಯೋಜನೆಗಳಿಗೆ ಉದಾಹರಣೆಗೆ, ಬಾಕಡಾ-ನಂಗಲ್, ಹಿರಾಕುಡ್, ದಾಮೋದರ ಕೊಳ್ಳ ಮೊದಲಾದುವು ಅಡಿಗಲ್ಲನ್ನಿಟ್ಟಿತು ಇವುಗಳು ಇದೀಗ ಹೆಚ್ಚಿನ ಕೃಷಿ ಜನ್ಯ ವಸ್ತುಗಳ ಉತ್ಪಾದನೆ ಮತ್ತು ಔದ್ಯೋಗಿಕ ಪ್ರಗತಿ ಇವುಗಳ ರೂಪದಲ್ಲಿ ಫಲವೀಯಲಾರಂಭಿಸಿವೆ

ಭಾರತವನ್ನು ವ್ಯಾಪಿಸಿದುವರಾಷ್ಟ್ರೀಯ ವಿಸ್ತರಣಾ ಯೋಜನೆಯು ಪ್ರಥಮ ಪಂಚವಾರ್ಷಿಕಯೋಜನೆಯ ಅವಧಿಯಲ್ಲಿ ಪ್ರಾರಂಭವಾಗಿ ಈಗಿನ ದ್ವಿತೀಯ ಯೋಜನಾವಧಿಯಲ್ಲಿ ಭಾರತದ ಇನ್ನಿತರ ಪ್ರದೇಶಗಳನ್ನೂ ವೇಗವಾಗಿ ಆವರಿಸುತ್ತದೆ. ರಾಷ್ಟ್ರೀಯ ಪುನಾರಚನೆ ಹಾಗೂ ಸ್ವಾವಲಂಬನವನ್ನು ಈ ಯೋಜನೆಯಿಂದ ಸಾಧಿಸುವುದು ಸಾಧ್ಯವಾಗಿದೆ.

ವಿಶ್ವದ ಸಮಸ್ಯೆಗಳನ್ನು ಶಾಂತ ವಿಧಾನದಲ್ಲಿ ಸಾಧಿಸಬೇಕೆಂದು ಭಾರತವು ಅನವರತವಾಗಿ ಪ್ರಯತ್ನಿಸಿರುವುದರಿಂದ, ವಿದೇಶಗಳಲ್ಲಿ ಭಾರತದ ಬಗ್ಗೆ ಗೌರವವು ಹೆಚ್ಚುತ್ತಿದೆ ಸಂಯುಕ್ತರಾಷ್ಟ್ರ ಸಂಘದಲ್ಲಿ ಹಾಗೂ ಇತರ ಅಂತಾರಾಷ್ಟ್ರೀಯ ಪರಿಷತ್ತುಗಳಲ್ಲಿ ಭಾರತವು ಹೆಚ್ಚಿನ ಮಹತ್ವದ ಪಾತ್ರವನ್ನು ವಹಿಸುತ್ತಿದೇ ಸಾಗಿದೆ

೧೯೫೦ರಲ್ಲಿಯೇ ಕೋರಿಯಾದಲ್ಲಿ ಶಾಂತತೆಯನ್ನು ಪ್ರತಿಷ್ಠಾಪಿಸುವ ಕಾರ್ಯದಲ್ಲಿ ಭಾರತದ ಸಹಾಯವನ್ನು ಕೋರಲಾಯಿತು ಅಲ್ಪಕಾಲಾನಂತರ ೧೯೫೪ರಲ್ಲಿ ಭಾರತೀಯ ಪ್ರತಿನಿಧಿ ಶ್ರೀ ಹರಿಯ ಪ್ರೇರಣೆಯಿಂದ ಹರಿದಾಸನಾಗಿ ಪ್ರಸಿದ್ಧ ಕ್ಷೇತ್ರಗಳನ್ನು ಸಂಚರಿಸಿ ಅಲ್ಲಲ್ಲಿ ಪವಾಡಗಳನ್ನೇ ಉಂಟುಮಾಡಿದ ಈ ಕಥೆ ಭಕ್ತಜನಾದರಣೀಯವಾದುದು ಜಾತಿಕುಲಗಳ ಭೇದವು ಸಲ್ಲದು ಭಕ್ತಿಯೊಂದೇ ಪ್ರಧಾನವೆಂಬುದಕ್ಕೆ ಕನಕದಾಸರ ಜೀವನವು ಉತ್ತಮ ಉದಾಹರಣೆ ಇಂತಹ ಸತ್ಕಥೆಗಳು ನಮ್ಮ ವಾಚನಾಲಯ, ಪುಸ್ತಕ ಭಂಡಾರಗಳಲ್ಲಿ ತುಂಬಿ ಬರಬೇಕು.

ಭಾರತವನ್ನು ಸಂಯುಕ್ತ ರಾಷ್ಟ್ರ ಸಂಘದ ಅರ್ಥಿಕ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಯ ಒಂಬತ್ತನೆಯ ಸಾಮಾನ್ಯ ಪರಿಷತ್ತಿಗೆ ಮತ್ತು ಬುದ್ಧನ ಪರಿನಿರ್ವಾಣದ ೨೫೦೦ನೇ ವಾರ್ಷಿಕೋತ್ಸವಕ್ಕೆ ವಿಶ್ವದ ನಾನಾ ಕೊನೆಗಳಿಂದ ಆಗಮಿಸಿದ್ದ ಪ್ರತಿನಿಧಿಗಳಿಗೆ ಆತಿಥ್ಯವನ್ನು ನೀಡುವ ಸೌಭಾಗ್ಯವು ಹೋದವರ್ಷ ಭಾರತಕ್ಕೆ ದೊರೆಯಿತು.

ಮೇಲ್ಕಂಡ ಚಿತ್ರದಲ್ಲಿ ಭಾರತ ರಾಜ್ಯ ಘಟನಾ ಸಮಿತಿಯ ಸ್ವಾತಂತ್ರ್ಯ ದಿನೋತ್ಸವದ ಅಧಿವೇಶನವನ್ನು ಕಾಣಬಹುದು ಇತಿಹಾಸ ಪ್ರಸಿದ್ಧವೆನಿಸಿದ ಈ ಅಧಿವೇಶನವು ೧೪ ೮-೧೯೪೭ನೆ ದಿನ ಮಧ್ಯರಾತ್ರಿಯಲ್ಲಿ ಅಧಿಕಾರದ ಹಸ್ತಾಂತರದ ಸಮಾರಂಭವನ್ನು ಆಚರಿಸಲು ಸೇರಿತ್ತು ಕೆಳಗಿನ ಚಿತ್ರವು ೧೫-೭-೪೭ರಂದು ಪಾಟಿಯಾಲಾದಲ್ಲಿ ನೇರಿದ ವಿಶೇಷ ದರಬಾರಾಗಿದೆ ಪಾಟಿಯಾಲಾ ಮತ್ತು ಪೂರ್ವ ಪಂಜಾಬದ ಇತರ ಸಂಸ್ಥಾನಗಳು ಭಾರತದಲ್ಲಿ ವಿಲೀನವಾದ ಬಗ್ಗೆ ಇದನ್ನು ಏರ್ಪಡಿಸಲಾಗಿತ್ತು. ಹಿಂದಿನ ರಾಜರ ನೂರಾರು ಸಂಸ್ಥಾನಗಳು ಭಾರತದಲ್ಲಿ ಸಮೀಕೃತವಾದುದು ಭಾರತವು ರಾಜಕೀಯವಾಗಿ ಒಂದಾಗುವ ಕಾರ್ಯದಲ್ಲಿ ಅತ್ಯಂತ ಮಹತ್ವದ ಅಂಶವಾಗಿದೆ

No 59843/E897

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಟಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಭಕ್ತ ಕನಕ ದಾಸರು—

(ಹರಿದಾಸ ವಿಜಯಮಾಲೆಯ ಮೊದಲನೆಯ ಮೊಗ್ಗೆ) ಬರೆದವರು: ಹಂಡೆ ಶ್ರೀಪಾದ ದಾಸರು, ಪುಟ 56+8, ಬೆಲೆ 0 10-0.

ಕಾಗಿನೆಲೆಯ ಆದಿಕೇಶವಾಂಕಿತವಾಗಿ ಜನಪುನರಂಜನೆ ಗೊಳಿಸುತ್ತಿರುವ ನೂರಾರು ಕೀರ್ತನೆಗಳನ್ನೂ ಬಗಟು ಹಾಡುಗಳನ್ನೂ ರಚಿಸಿ ಪ್ರಸಿದ್ಧರಾಗಿರುವ ಕನಕದಾಸರ ಜೀವನ ಚರಿತ್ರೆಯಿದು. ಶ್ರೀ ಹಂಡೆ ಶ್ರೀಪಾದ ದಾಸರಿಂದ ಯಥೋಚಿತವಾಗಿ ಬರೆಯಲ್ಪಟ್ಟಿದೆ.

ತಿಮ್ಮ ನಾಯಕನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದ ಕುರುಬಜಾತಿಯ ಸರದಾರನು ಇಂದೋಚೀನಾದಲ್ಲಿಯೂ ಇಂತಹ ಕೆಲಸವನ್ನು ಕೈಗೊಳ್ಳಬೇಕಾಯಿತು, ಇತ್ತೀಚಿನ ವಿಷಯವನ್ನು ಉಲ್ಲೇಖಿಸುವುದಾದರೆ ಇಜಿಪ್ಟದ ಘಟನೆಗಳ ಕಡೆಗೆ ಬೊಟ್ಟುಮಾಡಿ ತೋರಿಸಬಹುದು ಅಲ್ಲಿಗೆ ಭಾರತೀಯ ಸೇನೆಗಳು ಶಾಂತಿಯನ್ನು ಸಾಧಿಸುವುದಕ್ಕಾಗಿ ಹೋಗಿ ಸಂಯುಕ್ತ ರಾಷ್ಟ್ರ ಸಂಘದ ದಳಗಳನ್ನು ಕೂಡಿಕೊಂಡುವು.

ದಿಲ್ಲಿಯಲ್ಲಿ ಜರಗಿದ ಸಂಯುಕ್ತ ರಾಷ್ಟ್ರ ಸಂಘದ ಅರ್ಥಿಕ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಯ ಒಂಬತ್ತನೆಯ ಸಾಮಾನ್ಯ ಪರಿಷತ್ತು ಬಹಳ ಯಶಸ್ವಿಯಾದ ಈ ದಂತ ಧಾವನ ಅಥವಾ ಹಲ್ಲುಜ್ಜುವಿಕೆಯೆಂಬ ಗೀತಾ ನಾಟಕವನ್ನು ಲೇಖಕರು ಪ್ರಕಟಿಸಿದ್ದಾರೆ ೧೪ ಪಾತ್ರಗಳಿರುವ ಮತ್ತು ಹಲ್ಲುಜ್ಜುವ ಕುರಿತು ಶಿಕ್ಷಣನ್ವೀಯುವ ಈ ಗೀತಾ ನಾಟಕ ಒಂದು ಹೊಸ ಮಾದರಿಯ ರೂಪಕ ಲೇಖಕರೇ ಹೇಳಿದಂತೆ ಇದು ಇಂಗ್ಲೀಷ್ ಅನುಕರಣೆ ರಾಗದ ವಿವರಗಳಿರುವುದರಿಂದ ಪ್ರಯೋಗಕ್ಕೆ ಅನುಕೂಲವಾಗಿದೆ ಪ್ರಯೋಗದ ಸಫಲತೆಯನ್ನು ಕಂಡೇ ತಿಳಿಯಬೇಕು.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮ

(ಒಂದಾಣೆ ಮಾಲೆ) ಲೇಖಕ: ಎಮ್. ರಘುನಂದನರಾವ್.

ಶ್ರೀ ಕುಪ್ಪಿ ವಾಸುದೇವ ಶೆಣೈಯರೆ ಒಂದಾಣೆ ಮಾಲೆಯ 99ನೇ ಪುಸ್ತಕವಿದು. ಲೇಖಕರು ಸಂಕ್ಷಿಪ್ತವಾಗಿ 1857ರಿಂದ 1947ರ ವರೆಗಿನ ಸ್ವಾತಂತ್ರ್ಯ ಚಳವಳಿಯ ರೂಪರೇಖೆಯನ್ನು ಕೊಟ್ಟಿದ್ದಾರೆ ಸಂಗ್ರಹಣೀಯವಾದ ಒಂದಾಣೆ ಮಾಲೆಯ ಪುಸ್ತಕಗಳಲ್ಲಿ ಇದೂ ಒಂದು. — ದಾಂತಿ.

ಗಾಂಧೀ ಗೀತಾವಳಿ— ರಚಯಿತರು ಮತ್ತು ಪ್ರಕಾಶಕರು ಬಿ. ವಿ. ಬಾಳಿಗಾ, ಬೆಲೆ 0-3-0.

ಮಹಾತ್ಮಾ ಗಾಂಧಿಯವರ ದಿವ್ಯ ತತ್ವಗಳ ಸ್ತೋತ್ರ ರೂಪವಾದ ಅವರ ಅಪರ್ಯ ಗುಣಗಳ ಗಾನರೂಪವಾದ ಕವನ ಸಂಗ್ರಹ.

ಮಕ್ಕಳ ಸಕ್ಕರೆ— ರಚಯಿತರು ಸದಾನಂದ, ಸೂಡ, ಬೆಲೆ0-1 0 ಚಿಕ್ಕ ಮಕ್ಕಳು ಓದಿ ನಲಿಯಬಹುದಾದ ಚಿಕ್ಕ ಚೊಕ್ಕ ಶಿಶು ಗೀತೆಗಳ ಸಂಗ್ರಹ.

UDIPI— ಈ ಮೊದಲು ಉಡುಪಿಯ ಶ್ರೀ ಕೃಷ್ಣಾಪುರ ಸುರದವರು ಕನ್ನಡದಲ್ಲಿ ಪ್ರಕಟಿಸಿದ 'ಉಡುಪಿಯ' ಇಂಗ್ಲಿಷ್ ಅವೃತ್ತಿ. ಇಂಗ್ಲಿಷಿಗೆ ಭಾಷಾಂತರಿಸಿದವರು ಶ್ರೀಯು ಆರ್. ಆಚಾರ್ಯ, ಎಂ. ಎ. ಅವರು ಕನ್ನಡ ಅವೃತ್ತಿಯಂತೆಯೇ ಇದು ಕೂಡ ಸಚಿತ್ರವಾಗಿದ್ದು ಒಳಗೂ ಹೊರಗೂ ಚಿತ್ರಾಕರ್ಷಕವಾಗಿದೆ ಯಾತ್ರಿಕರಿಗೂ ಅತ್ಯನುಕೂಲವಾದ ಉಡುಪಿಯ ಪರಿಚಯ ಗ್ರಂಥವಿದು. ಬೆಲೆ 0—5—0.

Edited, Printed & Published by K. H. Shetty, at the Navayuga press, Udipi S. India

నవంబరు
1957 - 58

		pages
21)	30 - 1 - 1958	30
22)	6 2 - 1958	12
23)	13 - 2 - 1958	12
24)	20 2 - 1958	12
25)	27 - 2 - 1958	12
26)	6 3 - 1958	12
27)	13 - 3 - 1958	12
28)	20 3 - 1958	12
29)	27 - 3 - 1958	12
30)	3 - 4 - 1958	12
31)	10 - 4 - 1958	12
32)	17 - 4 - 1958	12
33)	24 - 4 - 1958	12
34)	1 - 5 - 1958	12
35)	8 - 5 - 1958	12
36)	15 - 5 - 1958	12
37)	22 - 5 - 1958	12
38)	29 - 5 1958	12
39)	5 6 - 1958	16
40)	12 6 1958	
		262

41)	19-6-1958.	12
42)	26-6-1958.	12
43)	3-7-1958.	12
44)	10-7-1958.	12
45)	17-7-1958	12
46)	24-7-1958	12
47)	7-8-1958	12
48)	14-8-1958 -	32 పాత తంత్రి సంపాతి.
49)	21-8-1958	12
50)	28-8-1958.	12
		140

1) 248
2) 262
3) 140
650

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭ VOL. 37

5—9—1957

ಸಂಚಿಕೆ ೧ NO. 1

ನಮ್ಮ ಶುಭಾಶಯಗಳು:

ಮಲಯಾ ಸ್ವಾತಂತ್ರ್ಯ ಪಡೆಯಿತು!

ಕೆಲವು ವರ್ಷ ಪೂರ್ವದಲ್ಲಿ "ಪವಿಯಸ್ತಮಿಸದ ರಾಜ್ಯ" ಎಂಬ ಕೀರ್ತಿಯನ್ನು ಸಂಪಾದಿಸಿ, ಜಗತ್ತಿನ ವಸಾಹತುಗಳಲ್ಲಿ ಹೆಚ್ಚಿನವನ್ನು ತನ್ನ ಅಂಕಿತದಲ್ಲಿ ಇಟ್ಟುಗೊಂಡಿದ್ದ ಬ್ರಿಟಿಷ ಸಾಮ್ರಾಜ್ಯಕ್ಕೆ ದ್ವಿತೀಯ ಲೋಕಯುದ್ಧವು ಅಘಾತಕರವಾಗಿ ಪರಿಣಮಿಸಿತು. ವ್ಯಾಪಾರವನ್ನು ಬಲಪಡಿಸಲು ಕಾಲಿಟ್ಟ ಬ್ರಿಟಿಷರು ಕಾಲಕ್ರಮೇಣ ಭಾರತ, ಬರ್ಮಾ, ಮಲಯಾ ಮೊದಲಾದ ವಿಶಾಲ ರಾಷ್ಟ್ರಗಳಲ್ಲಿ ಬಲವಾಗಿ ಬೇರೂರಿ, ಅಲ್ಲಿ ತಮ್ಮ ಆಡಳಿತೆಯನ್ನು ಭದ್ರಪಡಿಸಿದರು. ಆದರೆ, ದ್ವಿತೀಯ ಲೋಕಯುದ್ಧಾನಂತರ, ಬ್ರಿಟಿಷರಿಗೆ ವಿವೇಕೋದಯವಾದಂತಾಗಿ, ಭಾರತ, ಪಾಕಿಸ್ತಾನ, ಬರ್ಮಾ, ಸಿಂಹಳಗಳಿಗೆ ಸ್ವರಾಜ್ಯವನ್ನಿತ್ತು ತಮ್ಮ ಅಧಿಕಾರ ಸಮಾಪ್ತಿ ಮಾಡಿಕೊಂಡರು. ಅದೇ ಮಾದರಿಯಲ್ಲಿ ಆಫ್ರಿಕದ ಘಾನಾಕ್ಕೂ ಕಳೆದ ಜುಲೈ ತಿಂಗಳಲ್ಲಿ ಸ್ವಾಯತ್ತತೆಯನ್ನಿತ್ತ ಬ್ರಿಟಿಷರು ಮೊನ್ನೆ ಆಗೋಸ್ತು ೩೧ ಹಿಡಿಯುವ ಮಧ್ಯರಾತ್ರಿಯಲ್ಲಿ ಮಲಯಾದ ಫೆಡರೇಶನ್ನಿಗೂ ಸ್ವಾತಂತ್ರ್ಯವನ್ನಿತ್ತು ಅಲ್ಲಿಂದಲೂ ಕಾಲು ಕಿತ್ತರು. ಸ್ವತಂತ್ರ ಮಲಯಾದ ಫೆಡರೇಶನ್ನಿಗೆ ಶುಭವನ್ನು ಕೋರುವುದು ಇಂದು ಪ್ರತ್ಯೇಕ ಸ್ವಾತಂತ್ರ್ಯಪ್ರೇಮಿಯ ಆದ್ಯ ಕರ್ತವ್ಯ.

ಮಲಯಾ ದೇಶವು ಆಗ್ನೇಯ ಏಶಿಯದಲ್ಲಿ ಒಂದು ಮಹತ್ವದ ಸ್ಥಾನವನ್ನು ಪಡೆದಿದೆ. ಜಗತ್ತಿನಲ್ಲಿಯೇ ರಬ್ಬರು ಮತ್ತು ತವರಗಳ ಉತ್ಪಾದನೆಗಾಗಿ ಮಲಯಾವು ಕೀರ್ತಿ ಗಳಿಸಿದೆ. ಒಂದು ಕಾಲದಲ್ಲಿ ಗುಡ್ಡಕಾಡುಗಳಿಂದಲೂ ಗಿಡಮರಗಳಿಂದಲೂ ವನರಾಜಿಯಿಂದಲೂ ಕೂಡಿಕೊಂಡಿದ್ದು ಮಲೆನಾಡಾಗಿದ್ದ ಮಲಯಾವು ಇಂದು ರಬ್ಬರಿನ ತೋಟಗಳಿಂದ ರಾರಾಜಿಸುತ್ತಿದೆ ಈಗಲಾದರೂ ಸುಮಾರು ೫೧ ಸಾವಿರ ಚದರ ಮೈಲಿ ವಿಸ್ತೀರ್ಣದ ಭೂಭಾಗದಲ್ಲಿ ಹೆಚ್ಚಿನಂಶವು ಹೇರಡವಿಗಳಿಂದ ಕೂಡಿದೆ.

ಇಲ್ಲಿನ ಮೂಲನಿವಾಸಿಗಳಲ್ಲದೆ, ಕ್ರಿ. ಶ ೧೧ನೆ ಶತಮಾನದಿಂದ ೧೫ನೆ ಶತಮಾನಗಳ ಕಾಲದಲ್ಲಿ ವ್ಯಾಪಾರಕ್ಕಾಗಿ ಹೋದ ಭಾರತೀಯರು ಮತ್ತು ಚೀನೀಯರು ೧೫ನೆ ಶತಮಾನದಿಂದ ಸುಮಾರು ೨೦೦ ವರ್ಷಗಳ ಕಾಲ ಹೋದ ಮುಸಲ್ಮಾನರಿಂದ ಮತಾಂತರಗೊಂಡವರು ಹಾಗೂ ೧೭ನೆ ಶತಮಾನದಿಂದ ಬ್ರಿಟಿಷರಿಂದ ಪ್ರಭಾವಿತರಾದವರೂ ಇಲ್ಲಿರುವರು. ಮಲಯಾದ ಜನಸಂಖ್ಯೆ ಸುಮಾರು ೬೧ ಲಕ್ಷವಿದ್ದು ಇದರಲ್ಲಿ ೩೦ ಲಕ್ಷ ಮಲಯ ಜನರು. ೨೩ ಲಕ್ಷ ಚೀನೀಯರು, ೭ ಲಕ್ಷ ಭಾರತೀಯರು ಹಾಗೂ ಉಳಿದ ೧ ಲಕ್ಷ ಇತರ ದೇಶೀಯರೂ ಇರುತ್ತಾರೆ

ವ್ಯಾಪಾರಿ ಸಂಸ್ಥೆಯಾಗಿದ್ದ ಪೂರ್ವ ಭಾರತ ಕಂಪೆನಿಯ ಬಳಿಕವಣೆಗಾಗಿ ಬ್ರಿಟಿಷರು ತಮ್ಮ ಪ್ರತಿನಿಧಿಗಳಾಗಿದ್ದ ಡಚ್ಚರೊಡನೆ ಹೋರಾಡಲು ಮಲಯದಲ್ಲಿ ತನ್ನ ವಶದಲ್ಲೊಂದು ಬಂದರವನ್ನು ಇಟ್ಟುಕೊಳ್ಳುವ ಯತ್ನದಲ್ಲಿ ಜಯಶೀಲವಾದರು. ಮೊದಲೆ ಹೊಕ್ಕೊಡನೇ ಶರೀರವನ್ನೇ ತೂರಿಕೊಳ್ಳುವ ಅಭ್ಯಾಸಬಲದಿಂದ ಬ್ರಿಟಿಷರು ಮಲಯಾದ ನಾನಾವಿಭಾಗಗಳ ಸುಲ್ತಾನರನ್ನು ತಮ್ಮ ಅಂಕಿತದಲ್ಲಿ ತಂದುಕೊಂಡರು. ಹೀಗಾಗಿ ಮಲಯಾವು ರಾಜಕೀಯವಾಗಿ ಇತರ ಹಲವಾರು ಏಶ್ಯನ್ ರಾಷ್ಟ್ರಗಳಂತೆಯೇ ಪರರಧೀನವುಳಿಯುವಂತಾಯಿತು.

ಬ್ರಿಟಿಷ ಜನಾಂಗದ ಮೂಲೋದ್ದೇಶ ಏನೇ ಆದರೂ, ತಮ್ಮ ಲಾಭಕ್ಕಾಗಿ ಒಮ್ಮೆ ಹಿಂದುಳಿದಿದ್ದ ಏರುಪೇರಾದ, ದುರ್ಗಮಕಾನನಪೂರಿತವಾದ ಮಲಯಾದಲ್ಲಿ ಸಾರಿಗೆ ಸಂಪರ್ಕಗಳನ್ನು ಅಭಿವೃದ್ಧಿಪಡಿಸಿದರು. ದಕ್ಷಿಣ ಅಮೇರಿಕಿದ ಅಮೆಜನ್ ನದೀದ್ರೋಣದಲ್ಲಿ ಕಾಡಿನಂತೆ ಬೆಳೆಯುತಿದ್ದ ರಬ್ಬರಿನ ಗಿಡಗಳನ್ನು ಇಲ್ಲಿಗೂ ತಂದು ಶಾಸ್ತ್ರೀಯ ವಿಧಾನಗಳಿಂದ ಅದನ್ನು ಬೆಳೆಸಲು ಪ್ರೋತ್ಸಾಹಿಸಿದರು. ಹೀಗಾಗಿ ಇಂದು ಪ್ರಪಂಚಕ್ಕೆ ಬೇಕಾಗುವ ರಬ್ಬರಿನ ಬಹುಭಾಗವೂ ತವರದ ಅರ್ಧ ಅಂಶವೂ ಮಲಯಾದಿಂದ ಪೂರೈಕೆಯಾಗುತ್ತದೆ.

ಇವಲ್ಲದೆ, ಅಕ್ಕಿಯೇ ಮೊದಲಾದ ಆಹಾರ ಧಾನ್ಯಗಳೂ ಮಲಯಾದ ಕೆಲವು ಭಾಗಗಳಲ್ಲಿ ಬೆಳೆಯುತ್ತವೆ. ಕಾಡುಗಳಿಂದ ವನ್ಯ ಉತ್ಪತ್ತಿಗಳೂ ದೊರೆಯುತ್ತವೆ. ಹೀಗಾಗಿ ಆರ್ಥಿಕ ದೃಷ್ಟಿಯಿಂದಲೂ ಬಹಳ ಹಿಂದುಳಿದ ಪ್ರದೇಶವಿದಲ್ಲ.

ಮಲಯಾದ ಫೆಡರೇಶನ್ ಮೊನ್ನೆ ಸ್ವಾತಂತ್ರ್ಯವಾಯಿತು. ಈ ಫೆಡರೇಶನ್ನಿನಲ್ಲಿ ೯ ಜನ ಸುಲ್ತಾನರ ಅಸ್ತಿತ್ವಕ್ಕೆ ಧಕ್ಕೆ ಬಾರದಂತೆ ಪಾರ್ಲಿಮೆಂಟರಿ ವಿಧಾನವನ್ನು ಅನುಸರಿಸಲಾಗುವುದು. ವಿವಿಧ ದೇಶೀಯರು ಇಲ್ಲಿ ವಾಸಿಸಿಕೊಂಡಿದ್ದರೂ ಎಲ್ಲರೂ ಒಕ್ಕಟ್ಟಿನಿಂದ ಸ್ವಾತಂತ್ರ್ಯದ ಬೇಡಿಕೆಯನ್ನು ಆಳುವರೆಸರ ಮುಂದಿಟ್ಟು ಇಂದು ಜಯಶೀಲರೆನಿಸಿದ್ದಾರೆ. ಈ ಸಖ್ಯ ಭಾವ, ಒಕ್ಕಟ್ಟು ಮುಂದೆಯೂ ಉಳಿದು ಬಂದು ಮಲಯದ ಸರ್ವತೋಮುಖ ಅಭಿವೃದ್ಧಿಗೆ ನೆರವಾಗಬೇಕು.

ಮಲಯದಲ್ಲಿ ಕಮ್ಯೂನಿಸ್ಟರ ಹಾವಳಿ ಸಾಕಷ್ಟಿರುತ್ತದೆ ತಮ್ಮ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಅಧಿಪತಿಯನ್ನಾಗಿ ಈ ಹಿಂದೆ ಬ್ರಿಟಿಷರು ಬೆಳೆಸಿಕೊಂಡು ಬಂದ ಜನ ಸುಲ್ತಾನರಲ್ಲಿ ಒಬ್ಬನನ್ನು ೫ ವರ್ಷಗಳಿಗೊಮ್ಮೆ ಆರಿಸಬೇಕಾಗಿ ವಿಧಿಸಲಾಗಿರುತ್ತದೆ. ಇಸ್ಲಾಂ ಧರ್ಮವನ್ನು ರಾಷ್ಟ್ರೀಯ ಧರ್ಮವೆಂದು ಸಾರಲಾಗಿದೆ. ಹಿಂದಿನ ಸುಲ್ತಾನರು ತಂತಮ್ಮ ಸಂಸ್ಥಾನಗಳಲ್ಲಿ ಮುಖ್ಯಸ್ಥರಾಗಿ ಉಳಿಯುವರು. ಈ ರಾಜರ ವಿಚಾರದಲ್ಲಿ ಪ್ರಗತಿ ಪಥಗಾಮಿಗಳ ವಿರೋಧವೂ ಕಂಡು ಬರುತ್ತದೆ

ಪೂರ್ವದಲ್ಲಿ ಕಮ್ಯೂನಿಸ್ಟರ ಹಾವಳಿಯನ್ನು ಹರಡಗೊಡದಂತೆ ಮಾಡುವ ಉದ್ದೇಶದಿಂದ ಬ್ರಿಟಿಷರು ಮಲಯಾ ಸಂಯುಕ್ತ ರಾಜ್ಯಾಂಗಕ್ಕೆ ತುಂಬ ನೆರವನ್ನೀಯುವುದು ನಿಸ್ಸಂಧಿಗ್ಧ. ಆದರೆ, ಆಡಳಿತೆಯ ದೃಷ್ಟಿಯಲ್ಲಿ ಮಾತ್ರ ಮಲಯಾವು ದಕ್ಷತೆಯಿಂದ ಮುಂದ ವರಿಯುವುದು ಅಗತ್ಯ. ಅತ್ತ ಸುಲ್ತಾನರನ್ನೂ ಇತ್ತ ಪ್ರಜೆಗಳನ್ನೂ ಹೊಂದಾಣಿಸಿಕೊಳ್ಳುವ ಗುರುತರ ಜವಾಬ್ದಾರಿಯು ಸ್ವಂತ್ರ ಮಲಯಾದ ಸರ್ಕಾರಕ್ಕೆಂದು ಇದೆ.

ಸ್ವತಂತ್ರ ಮಲಯವು ಭಾರತದಂತೆಯೇ ಬ್ರಿಟಿಷ ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರವಾಗಿ ಉಳಿಯುವುದು. ಈ ಬಗ್ಗೆ ಕೆಲ ತಿಂಗಳ ಹಿಂದೆ ನಡೆದ ಸಹರಾಷ್ಟ್ರಗಳ ಪ್ರಧಾನಿ ಪರಿಷತ್ತು ತನ್ನ ಒಪ್ಪಿಗೆಯ

(೧೨ನೇ ಪುಟ ನೋಡಿರಿ)



ಕಳೆದ ಶನಿವಾರ ದಿನ ನಡೆದ ಮಲಯದ ಸ್ವಾತಂತ್ರ್ಯ ಸಮಾರಂಭಕ್ಕೆ ಬ್ರಿಟಿಷನ ನಿಯೋಗದ ನಾಯಕರಾಗಿ ತೆರಳಿದ್ದ ಲಾರ್ಡ್ ವಿಸ್ಕೌಂಟ್ ಕಿಲ್ಮೋರರು.

ಹೊಸ ಸುದ್ದಿ

ಸೇವಿಂಗ್ಸ್ ಬೇಂಕ್ ಡಿಪೋಸಿಟಿನ ಬಡ್ಡಿ ದರವನ್ನು 2½%ಗೆ ಹೆಚ್ಚಿಸಲಾಗಿದೆ. ವಾರಕ್ಕೆ ಒಂದಾನಾರ್ತಿಗಿಂತ ಮಿಕ್ಕಿ ಖಾತೆಯಿಂದ ಹಣ ತೆಗೆಯಲು ಈಗ ಯಾವೊಂದೂ ಆತಂಕವಿಲ್ಲ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಏರಿಸಲಾಗಿದೆ. ತಾ. 1-7-1957ರಿಂದ ಮಾಸಿದ ಬಡ್ಡಿಯಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬೇಂಕ್ ಲಿಮಿಟೆಡ್

(ವಿ. ಸೂ. ಬೆಂಗಳೂರು ನಗರದಲ್ಲಿ ಬೇಂಕಿನ ಹೊಸ ಶಾಖೆಯನ್ನು 28-8-57ರಲ್ಲಿ ತೆರೆಯಲಾಗಿದೆ.)

ವಿಶ್ವವಿದ್ಯಾನಿಲಯದ ಸಮಸ್ಯೆ–

ವಿವೇಕಕ್ಕೊಂದು ಪ್ರಚೋದನೆ

ಬರೆದವರು: ಶ್ರೀ. ಟಿ. ಎ. ಪೈ, ಎ. ಐ. ಸಿ. ಸಿ. ಸದಸ್ಯರು.

ವಿಶ್ವವಿದ್ಯಾಲಯದ ಕುರಿತು ನಡೆಯುತ್ತಿದ್ದ ವಾದದಿಂದ ನಾನು ದೂರವಿದ್ದೆ. ಇತ್ತೀಚೆಗೆ 'ನವಭಾರತ'ದಲ್ಲಿ ಪ್ರಕಟವಾಗಿದ್ದ ನಮ್ಮ ಶಾಸಕರ ಉತ್ತರವನ್ನು ಕಂಡು ನಾನೀಗ ಸಾರ್ವಜನಿಕರ ಅಭಿಪ್ರಾಯಕ್ಕೆ ಬೆಂಬಲಕೊಡಬೇಕಾಗಿರುವುದು

ದಕ್ಷಿಣ ಕನ್ನಡದ ಕಾಲೇಜುಗಳು ಯಾವ ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲ್ಪಡಬೇಕೆಂಬುದು ನಮ್ಮ ವಿದ್ಯಾಸಂಸ್ಥೆಗಳ ವತ್ತು ಮಕ್ಕಳ ಭವಿಷ್ಯದ ಪ್ರಶ್ನೆಯಾಗಿರುವುದು. ವಿದ್ಯಾಸಂಸ್ಥೆಗಳ ಆಡಳಿತ ವರ್ಗ ಮತ್ತು ಪ್ರಿನ್ಸಿಪಾಲರ ಸಲಹೆಯ ಮೇರೆಗೆ ದಕ್ಷಿಣ ಕನ್ನಡದ ಕಾಲೇಜುಗಳು ಕರ್ಣಾಟಕ ವಿಶ್ವವಿದ್ಯಾಲಯವನ್ನು ಸೇರಲೆಂದು ಮೈಸೂರು ಸರಕಾರ ಆಜ್ಞಾಪಿಸಿತು. ವಿದ್ಯಾಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಿಂದುಂಟಾಗಿದ್ದ ಗೊಂದಲದ ವಾತಾವರಣದಲ್ಲಿ ವಿದ್ಯಾರ್ಥಿಗಳ ಮುಂದಣ ಹಿತದೃಷ್ಟಿಯಲ್ಲಿ ಪತ್ಯಹಾಗೂ ಶಿಕ್ಷಣ ಪದ್ಧತಿಯನ್ನು ರೂಪಿಸಲು ಕಾಲೇಜು ಸಂಚಾಲಕರೂ ಮತ್ತು ಪ್ರಿನ್ಸಿಪಾಲರೂ ನಿಜವಾಗಿಯೂ ಅರ್ಹತೆಯುಳ್ಳವರೇ. ಮದ್ರಾಸು ವಿಶ್ವವಿದ್ಯಾಲಯದವರು ಕಳೆದ ವರುಷ ಪ್ರಿ-ಯುನಿವರ್ಸಿಟಿ ದರ್ಜೆಗಳನ್ನು ತೆರೆದಿದ್ದ ಕಾರಣ, ಮೂರು ವರುಷಗಳ ಡಿಗ್ರಿ ವ್ಯಾಸಂಗ ಕ್ರಮವನ್ನು ಕೂಡಲೆ ಜಾರಿಗೆ ತರುವ ಅವಸರದ ಪ್ರಸಂಗವಿತ್ತು. ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕರ್ನಾಟಕ ವಿಶ್ವವಿದ್ಯಾಲಯದವರು ಮದ್ರಾಸು ಪದ್ಧತಿಯ ಮೊದಲ್ಲೆ ಮುಂದಿನ ಎರಡು ವರುಷಗಳ ತನಕ ಪರೀಕ್ಷೆ ನಡೆಸಲು ಒಪ್ಪಿದರಲ್ಲದೆ ಮಧ್ಯಾಂತರ ಅವಧಿಯಲ್ಲಿ ಅನೇಕ ವಿನಾಯತಿಗಳನ್ನೂ ಕೊಟ್ಟು ಸಹಕರಿಸುವ ಭರವಸೆಕೊಟ್ಟರು. ಈ ಎಲ್ಲ ಪರಿಸ್ಥಿತಿಗಳನ್ನು ಗಮನಿಸಿ, ವಿದ್ಯಾಕ್ಷೇತ್ರದಲ್ಲಿ ನುರಿತ, ಅನುಭವಿಗಳ ಸಲಹೆಯನ್ನು ಮನ್ನಿಸಿ ಮೈಸೂರು ಸರಕಾರ ಈ ರೀತಿ ನಿರ್ಧರಿಸಿತು. ಈ ನಿರ್ಧಾರ ಕೈಗೊಳ್ಳುವಾಗ ಸರಕಾರ ತಮ್ಮನ್ನು ಕೇಳಲಿಲ್ಲವೆಂದು ನಮ್ಮ ಶಾಸಕರು ಆಪಾದನೆ ಹೊರಿಸಿರುವರು. ಅಲ್ಲದೆ ಸರಕಾರಕ್ಕೆ ಸಲಹೆ ಕೊಡಲು ಕಾಲೇಜು ಸಂಚಾಲಕರ ಮತ್ತು ಪ್ರಿನ್ಸಿಪಾಲರ ಅರ್ಹತೆಯನ್ನು ಪ್ರಶ್ನಿಸಿ, ಇದರಲ್ಲಿ ಅವರದ್ದೇನೋ ಸ್ವಾರ್ಥವಿದ್ದಿರಬೇಕೆಂದು ಆರೋಪಿಸಲಾಗಿರುವುದು. ಈ ನಿರ್ಣಯವನ್ನು ಮಾಡುವಾಗ ಕರ್ಣಾಟಕ ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲ್ಪಟ್ಟ ಹೈದರಾಬಾದು ಕರ್ಣಾಟಕದ ರಾಯಚೂರು, ಗುಲ್ಬರ್ಗ ಜಿಲ್ಲೆಗಳ ಶಾಸಕರನ್ನೂ ಮೈಸೂರು ಸರಕಾರ ಕೇಳಿರಲಿಲ್ಲ ಕೇಳುವಷ್ಟು ವ್ಯವಧಾನವೂ ಇರಲಿಲ್ಲ. ವಿದ್ಯಾಸಂಸ್ಥೆಗಳ ಭವಿಷ್ಯ ಮತ್ತು ಮಕ್ಕಳ ಹಿತವಿಚಾರಗಳಲ್ಲಿ ಕಾಲೇಜು ಸಂಚಾಲಕರೂ, ಪ್ರಾಧ್ಯಾಪಕರೂ ನಮ್ಮ ಶಾಸಕರಂತೆಯೇ ನಿಸ್ವಾರ್ಥಿಗಳೆಂದು ಪರಿಗಣಿಸುವ ಘನತೆ ಈ ನಮ್ಮ ಶಾಸಕರಿಗೆ ಬರಲಿಲ್ಲ.

ಸರಕಾರವು ಈ ರೀತಿ ತುರ್ತು ನಿರ್ಣಯವನ್ನು ಕೈಗೊಳ್ಳದೆ ಶಾಸಕರೊಂದಿಗೆ ವಿಚಾರ ವಿನಿಮಯ ಮಾಡುತ್ತ ಕಾಲಹರಣ ಮಾಡಿದ್ದರೆ ವಿದ್ಯಾರ್ಥಿಗಳ ಗತಿ ಏನಾಗುತ್ತಿತ್ತು? ಕಾಂಗ್ರೆಸ್ಸು ಪಕ್ಷದಲ್ಲಿರುವ ತಂಡವಿತಂಡಗಳ ದೆಸೆಯಿಂದ, ವ್ಯಕ್ತಿಗತವಾಗಿ ನಡೆಯುತ್ತಿರುವ ಸಂಧಾನ ಸಂಗ್ರಾಮಗಳಿಂದ ಅನೇಕ ಮುಖ್ಯ ವಿಚಾರಗಳಲ್ಲೂ ಮೈಸೂರು ಸರಕಾರ ನಿರ್ದಿಷ್ಟ ಹೆಜ್ಜೆಗಳನ್ನಿಡಲು ಅಶಕ್ಯವಾಗಿರುವುದನ್ನು ಜ್ಞಾಪಿಸಿಕೊಂಡರೆ ಈ ಪ್ರಶ್ನೆಯೂ ಒಮ್ಮೆಯೇ ಒಮ್ಮತದ ನಿರ್ಧಾರಕ್ಕೆ ಬರುತ್ತಿತ್ತೆಂದು ನಂಬಲು ಸಾಧ್ಯವಿಲ್ಲ. ಇಂದು ಶಾಸಕರು ಈ ಪ್ರಶ್ನೆಯನ್ನು ಮುಂದೊತ್ತಿರುವುದೂ ತಮ್ಮ ಬಲಾಬಲವನ್ನು ಅಳೆಯುಲೆಂದಲ್ಲದೆ ವಿಷಯಪ್ರಜ್ಞೆಯಿಂದಲ್ಲವೆಂದರೆ ತಪ್ಪಾಗದು.

ನಮ್ಮ ಶಾಸಕರು ಮೈಸೂರು ವಿಧಾನ ಸಭೆಯ ಸದಸ್ಯರು. ಇವರು ದಕ್ಷಿಣ ಕನ್ನಡಿಗರನ್ನಷ್ಟೆ ಪ್ರತಿನಿಧೀಕರಿಸುವುದಲ್ಲ. ಮಹಾಮೈಸೂರಿನ ಎರಡು ಕೋಟಿ ಕನ್ನಡಿಗರ ಹಿತವೇ ಇವರ ಮುಖ್ಯ ಧ್ಯೇಯ. ಮೈಸೂರು ಮತ್ತು ಕರ್ಣಾಟಕ ವಿಶ್ವವಿದ್ಯಾಲಯಗಳಿರಡೂ ನಮ್ಮದೆಂದು ಇವರು ಸ್ವೀಕರಿಸಬೇಕಿತ್ತು. ಇವೆರಡರಲ್ಲಿರಬಹುದಾದ ಯಾವುದೇ ನ್ಯೂನತೆಗಳನ್ನು ತಮ್ಮ ನೈತಿಕ ಬಲದಿಂದ ಪರಿಹರಿಸುವೆವೆಂಬ ಅಪೇಕ್ಷೆಯನ್ನು ಇವರು ತೊಡಬೇಕಿತ್ತು. ಈ ಎರಡು ವಿಶ್ವವಿದ್ಯಾಲಯಗಳು ಕನ್ನಡನಾಡಿನ ಜನರನ್ನು ಇಬ್ಭಾಗಗೊಳಿಸಿ ಹೋರಾಟದ ರಣಾಂಗಣಗಳನ್ನಾಗಿ ಬೇರ್ಪಡಿಸದೆ ನಮ್ಮ ಜನರ ಸಾಂಸ್ಕೃತಿಕ ಹಾಗೂ ಭಾವನಾತ್ಮಕ ಸಂಘಟನೆಗೆ ಕಾರಣವಾಗುವಂತೆ ಮಾಡುವ ಜವಾಬ್ದಾರಿ ಇವರದ್ದಾಗಿದೆ.

ಮೈಸೂರು ಸರಕಾರ ಈ ವಿಚಾರದಲ್ಲಿ ನಿರ್ಣಯಕ್ಕೆ ಬರುವ ಮೊದಲು ತಮ್ಮನ್ನು ಕೇಳಬೇಕಿತ್ತೆಂಬುದನ್ನು ಈ ನಮ್ಮ ಶಾಸಕರು ಘಟನಾತ್ಮಕವಾಗಿ ವಾದಿಸುವುದಾದರೆ, ಇವರಲ್ಲಿ ಅನೇಕರು ವಿಶ್ವವಿದ್ಯಾಲಯ ಅಥವಾ ಈ ಪ್ರಶ್ನೆಯಲ್ಲಿ ಆಡಕವಾಗಿರುವ ಕೆಲವೊಂದು ಸರಳ ವಿಷಯಗಳನ್ನು ಪರಿಪೂರ್ಣವಾಗಿ ತಿಳಿದುಕೊಳ್ಳಲು ಪ್ರಯತ್ನಿಸದೆ ತಮ್ಮ ಅಜ್ಞಾನವನ್ನು ಪ್ರಕಟಿಸಿರುವರೆಂದು ನಮ್ರತೆಯಿಂದ ನಾನು ಸೂಚಿಸಬಯಸುತ್ತೇನೆ. ನ್ಯಾಯತೀರ್ಮಾನಕ್ಕೆ ಅವಶ್ಯಕವಾಗಿರುವ ಈ ವಿಷಯಗಳನ್ನು ತಿಳಿಯದೆ ತಮ್ಮ ಅಜ್ಞಾನವನ್ನು ಪ್ರದರ್ಶಿಸಿದ ಇಂಥಾ ಶಾಸಕರ ಸಲಹೆಯನ್ನು ಸರಕಾರ ಮನ್ನಿಸಿದರೆ ನಮ್ಮ ಜಿಲ್ಲೆಗೆ ದೇವರೇ ಗತಿ! ಈ ಮಾತು ನಮ್ಮ ಶಾಸಕರ ಮನಸ್ಸನ್ನು ನೋಯಿಸಬಹುದು. ಆದರೆ ಅವರು ಇಟ್ಟಿರುವ ತಪ್ಪು ಹೆಜ್ಜೆ, ಮತ್ತದರಿಂದುಂಟಾಗಿರುವ ಗೊಂದಲಕ್ಕೆ ಅವರೇ ಅವರನ್ನು ದೂರಿಕೊಳ್ಳಬೇಕು. ನಮ್ಮ ಶಾಸಕರು ಮುಂದಿಟ್ಟಿರುವ ವಾದವನ್ನು ಒಂದೊಂದಾಗಿ ನಾನು ಉತ್ತರಿಸುವೆನು. ಇದರ ಸತ್ಯಾಸತ್ಯತೆಯನ್ನು ಜನತೆಯೇ ನಿರ್ಧರಿಸಲಿ.

1. "ನಿರ್ಧಾರಕ್ಕೆ ಬರುವ ಮೊದಲು ಮೈಸೂರುಸರಕಾರ ನಮ್ಮನ್ನು ಕೇಳಲಿಲ್ಲ"

ನಿರ್ಧಾರವು ಯೋಗ್ಯವಾಗಿದ್ದರೆ, ನಿಮ್ಮನ್ನು ಕೇಳಿದ್ದಿರಲಿ, ಇಲ್ಲದಿರಲಿ—ನಿಮಗೇಕೆ ಅದರ ಗೊಡವೆ? ಸರಕಾರದ ನಿರ್ಣಯವು ತಪ್ಪೆಂದು ಜನತೆಗೆ ನೀವಿನ್ನೂ ಮಂದಟ್ಟುಮಾಡಿಲ್ಲ. ಅಥವಾ ಸರಕಾರ ನಿಮ್ಮನ್ನು ಕೇಳದೆ ನಿರ್ಣಯಮಾಡಿತೆಂಬ ಕಾರಣಕ್ಕಾಗಿ, ಪ್ರತೀಕಾರ ದೃಷ್ಟಿಯಿಂದ ನೀವು ತದ್ವಿರುದ್ಧ ಅಭಿಪ್ರಾಯವನ್ನು ಕಟ್ಟಿಕೊಳ್ಳಲೇಬೇಕೆಂದು ಭಾವಿಸಿದಿರಾ? ನಮ್ಮ ಕಾಲೇಜುಗಳು ಮೈಸೂರು ವಿಶ್ವವಿದ್ಯಾಲಯವನ್ನು ಸೇರಬೇಕೆಂದು ಸರಕಾರ ನಿರ್ಧರಿಸಿದ್ದರೆ, ಇವುಗಳು ಕರ್ಣಾಟಕ ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲ್ಪಡಬೇಕೆಂದು ನೀವು ಚಳುವಳಿ ಹೂಡುತ್ತಿದ್ದಿರಾ?

ಅಥವಾ ನ್ಯಾಯಸಮ್ಮತವಾದ ಮಾರ್ಗವನ್ನು ನೀವು ಅವಲಂಬಿಸುವವರಿದ್ದರೆ, ಸರಕಾರಕ್ಕೆ ಮನವಿಯನ್ನು ಒಪ್ಪಿಸುವ ಮುನ್ನ ಕಾಲೇಜು ಸಂಚಾಲಕರು, ಪ್ರಿನ್ಸಿಪಾಲರನ್ನು ಕೇಳಿದಿರಾ, ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಿದಿರಾ? ಸರಕಾರ ನಿಮ್ಮನ್ನು ಕೇಳಬೇಕಿತ್ತೆನ್ನುವಾಗ, ನೀವು ಜನತಾಭಿಪ್ರಾಯವನ್ನು ಪಡೆಯಬೇಕಿತ್ತೆಂದು ತಿಳಿದರೆ ತಪ್ಪೆ? ನಮ್ಮ ಜಿಲ್ಲೆಯ ವರ್ತಮಾನ ಪತ್ರಿಕೆಗಳು, ಜಿಲ್ಲಾಭಿವೃದ್ಧಿ ಬೋರ್ಡು ಮಂಗಳೂರು ಪತ್ರಿಕೋದ್ಯಮಿಗಳ ಸಂಘ, ಮತ್ತನ್ನಿತರ ಅನೇಕ ಪ್ರಾತಿನಿಧ್ಯ ಸಂಸ್ಥೆಗಳೂ, ಹೊಣೆಯ ರಿತ ಆಡಳಿತವೂ ನಿಮ್ಮ ಈ ಧೋರಣೆಯನ್ನು ಆಕ್ಷೇಪಿಸಿದ್ದರೂ, ನಿಮ್ಮ ಅಭಿಪ್ರಾಯ ಸ್ವಾತಂತ್ರ್ಯದ ಹಕ್ಕನ್ನು ಪ್ರತಿಪಾದಿಸುವ ಲೇಖನವನ್ನು ಪತ್ರಿಕೆಯಲ್ಲಿ ಪ್ರಕಟಿಸುವಾಗ ಈ ಆಕ್ಷೇಪವನ್ನು ಗಣನೆಗೆ ತೆಗದುಕೊಂಡಿದ್ದಿರಾ?

2. "ಔದ್ಯೋಗಿಕ ಶಿಕ್ಷಣಾನುಕೂಲತೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಹೆಚ್ಚಿಗಿರುವುದು. ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹೆಚ್ಚು ಸೀಟು ನಮ್ಮ ಜಿಲ್ಲೆಗೆ ಜನಸಂಖ್ಯೆ ಪರಿಮಾಣದಲ್ಲಿ ಸಿಗುವುವು."

ಮೈಸೂರು ವಿಶ್ವವಿದ್ಯಾಲಯವು ಇತ್ತೀಚೆಗೆ ತನ್ನ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಸೀಟುಗಳನ್ನು ಆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೇನೆ ಹಂಚಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಿರುವುದು. ಸ್ವಾತಂತ್ರ್ಯದ ಹೆಸರಲ್ಲಿ ಈ ನಿರ್ಧಾರವನ್ನು ಮಾಡಲಾಗಿದೆ. ಈ ಶುದ್ಧ ತಪ್ಪಿನ ವಿರುದ್ಧ ಪ್ರತಿಭಟನೆ ಕೊಡುವ ಬದಲು ನಮ್ಮವರು ಶಿರಬಾಗಿರುವುದನ್ನು ಕಂಡರೆ ನನಗಾಶ್ಚರ್ಯವಾಗುವುದು. ಹಳೆ ಮೈಸೂರಿನೊಂದಿಗೆ ಸೀಟುಗಳನ್ನು ಗಿಟ್ಟಿಸಿಕೊಳ್ಳಲು ಇದನ್ನೊಂದು ಯುಕ್ತಿಯಾಗಿ ನೀವು ಪರಿಗಣಿಸುವುದಾದರೆ, ಮುಂಬಯಿ ಮತ್ತು ಹೈದರಾಬಾದು ಕನ್ನಡಿಗರು ಶಾಸಕರ ಮೇಲಿಟ್ಟಿರುವ ವಿಶ್ವಾಸಕ್ಕೆ ಅಪಚಾರವಾಗುವುದಿಲ್ಲವೆ? ಸರಕಾರದ ಸಹಾಯಧನ ಪಡೆಯುತ್ತಿರುವ ಪ್ರಾಂತದ ಎಲ್ಲಾ ಕಾಲೇಜುಗಳ ಸೀಟುಗಳ ಮೇಲೆ ಕನ್ನಡಿಗರಾದವರೆಲ್ಲರಿಗೂ ಹಕ್ಕಿದೆ. ಹೈದರಾಬಾದು ಕರ್ಣಾಟಕವಿರಲಿ, ಮುಂಬಯಿ ಕರ್ಣಾಟಕವಿರಲಿ, ದಕ್ಷಿಣ ಕನ್ನಡವಿರಲಿ ಅಥವಾ ಕಳೇ ಮೈಸೂರೇ ಇರಲಿ—ಈ ಯಾವ ವಿಭಾಗದ ವಿದ್ಯಾರ್ಥಿಯೂ ಈ ಯಾವುದೇ ಕಾಲೇಜಿನ ಸೀಟನ್ನು ಪಡೆಯಲು ಅರ್ಹನು ಈ ಹಕ್ಕನ್ನು ಕಸಿದುಕೊಳ್ಳುವ ಸಂಚು ನಮಗೆ ಸಲ್ಲದು. ಮೈಸೂರು ವಿಶ್ವವಿದ್ಯಾಲಯದ ಈ ಹೆಜ್ಜೆಯ ಪರಿಣಾಮವೇನಾಗಬಹುದೆಂದು ಆಲೋಚಿಸಿರುವಿರಾ? ಇತರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನು ಪ್ರತಿಬಂಧಿಸಿ ಮೈಸೂರು ವಿಶ್ವವಿದ್ಯಾಲಯ ಇಂಥಾ ನಿರ್ಣಯವನ್ನು ಮಾಡಬಲ್ಲುದಾದರೆ, ಮುಂಬಯಿ, ಮದ್ರಾಸು, ಕಲ್ಕತ್ತಾ, ಕರ್ಣಾಟಕ, ಬನಾರಿಸ್ ವಿಶ್ವವಿದ್ಯಾಲಯಗಳೂ ಮೈಸೂ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಲ್ಲವೆಂಬ ಗೊತ್ತುವಳಿಯನ್ನು ಕೈಗೊಳ್ಳಲಾರವೆ? ಆಗ ದಕ್ಷಿಣ ಕನ್ನಡದ ವಿದ್ಯಾರ್ಥಿಗಳ ಗತಿ ಏನು? ಮೈಸೂರಿನಲ್ಲಿ ಸಿಗಬಹುದೆಂಬ ಎಣಿಕೆಯ ಸೀಟುಗಳನ್ನು ಇತರ ಕಡೆಗಳಲ್ಲಿ ನಮ್ಮ ಜಿಲ್ಲೆಯ ವಿದ್ಯಾರ್ಥಿಗಳು ಕಳೆದುಕೊಳ್ಳುವರು. ವಾಸ್ತವಿಕವಾಗಿ, ಮೈಸೂರು ಪ್ರಾಂತದ ವಿಶ್ವವಿದ್ಯಾಲಯಗಳಲ್ಲಿರುವ ನಮ್ಮ ಜಿಲ್ಲೆಯ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಇವರು ಇತರ ವಿಶ್ವವಿದ್ಯಾಲಯಗಳಲ್ಲಿ ಔದ್ಯೋಗಿಕ ಶಿಕ್ಷಣ ಪಡೆಯುತ್ತಿರುವರು. ಇತರ ವಿಶ್ವವಿದ್ಯಾಲಯಗಳು ಈ ರೀತಿ ಪ್ರತೀಕಾರ ಬಗೆದರೆ ಅದರ ಜವಾಬ್ದಾರಿಯನ್ನು ಹೊರಲು ನೀವು ಸಿದ್ಧರಿರುವಿರಾ? ಪ್ರಾಂತದ ಇತರ ವಿದ್ಯಾರ್ಥಿಗಳನ್ನು ತಡೆಗಟ್ಟುವ ಮೈಸೂರು ವಿಶ್ವವಿದ್ಯಾಲಯದ ಈ ಧೋರಣೆಯನ್ನು ಕೊನೆಗೊಳಿಸುವುದು ಮೈಸೂರು ಸರಕಾರದ ಆದ್ಯ ಕರ್ತವ್ಯವಿದೆ. ಸರ್ವಸ್ವಾತಂತ್ರ್ಯದ ಹೆಸರಲ್ಲಿ ಮೈಸೂರು ವಿಶ್ವವಿದ್ಯಾಲಯದ ಧೋರಣೆಯನ್ನು ನೀವು ಬದಲಿಸಲಾರದಂದರೆ, ನಮ್ಮ ಜಿಲ್ಲೆಯ ಕಾಲೇಜುಗಳು ಇಂಥಾದ್ದೇ ವಿಶ್ವವಿದ್ಯಾಲಯವನ್ನು ಸೇರಬೇಕೆಂದು ನೀವು ಯೋಗ್ಯ ವತ್ತಾಯಿಸುವಿರಿ? ಮೈಸೂರು ವಿಶ್ವವಿದ್ಯಾಲಯಕ್ಕಿರುವಂಥ ಸ್ವಾತಂತ್ರ್ಯವು ಕಾಲೇಜುಗಳಿಗೂ ಯಾಕೆ ದೊರಕಬಾರದು? ಸಮಾಜಸಮಾನೀ ರಾಷ್ಟ್ರದಲ್ಲಿ ನಿಯಂತ್ರಣಕ್ಕೆ ನಿಲ ಕದ ಸ್ವಾತಂತ್ರ್ಯವಿಲ್ಲ ಸಮಾನತೆ ಹಾಗೂ ನ್ಯಾಯಕ್ಕೆ ವಿರುದ್ಧವಾದ ಮೈಸೂರು ವಿಶ್ವವಿದ್ಯಾಲ

(೧೦ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಭಾರತದಲ್ಲಿ ಸಂಘೀಕರಿಸಲ್ಪಟ್ಟಿದೆ; ಮಿಂಬರರ ಹೊಣೆ ಮಿತೀಕರಿಸಲ್ಪಟ್ಟಿದೆ)

ಪೋಸ್ಟ್ ಬಾಕ್ಸ್ ನಂಬ್ರ 113] ಹೆಡ್ ಆಫೀಸು: ಮಂಗಳೂರು, ದ. ಭಾರತ. [ಟೆಲಿಫೋನ್ ನಂ. 114

ಶೇವಣಾತಿ ರೂ. 1,02,44,000 ಕ್ಕೂ ಮಿಕ್ಕಿದ.

(ತಾ. 14—8—1957 ರಲ್ಲಿದ್ದಂತೆ)

ಅಲ್ಪಾವಧಿಯ ಮತ್ತು ನಿರಖು ಶೇವಣಾತಿಗಳನ್ನು ಅತ್ಯನುಕೂಲವಾದ ಶರ್ತಗಳ ಮೇಲೆ ಸ್ವೀಕರಿಸಲಾಗುವುದು.

ಹೆಚ್ಚಿನ ವಿವರಗಳನ್ನು ನಮ್ಮ ಕೆಳಗಿನ ಸ್ಥಳೀಯ ಆಫೀಸುಗಳಿಂದ ತಿಳಿಯಬಹುದು:

ಶೇಂಕಪೇಟೆ, ಪೋಸ್ಟ್ ಬಾಕ್ಸ್ ನಂಬ್ರ 18 (ಟೆಲಿಫೋನ್ ನಂಬ್ರ 11) ಉಡುಸಿ

THE KARNATAKA BANK LIMITED

ವಾರದ ಸಣ್ಣ ಕಥೆ

ಬಗ್ಗಿದವನಿಗೊಂದು ಗುದ್ದು

ಕಥೆಗಾರರು: ಎಸ್. ಗೋಪೀಚಂದ ರಾವ್, ಪಿಡ್ಕಾನ್

ನಾಯಿ ಬೊಗಳುತಿತ್ತು. ನಾಬಿಕೂಪದಿಂದ ಶಬ್ದಪ್ರಪಂಚವನ್ನು ಯತ್ನಪೂರ್ವಕವಾಗಿ ಕಂಠನಾಳಕ್ಕೆ ತಂದುಕೊಂಡು ಒಂದೇ ಸವನೆ ನಾಯಿ ಬೊಗಳುತಿತ್ತು. ಬಕ್ ಬವ್ ವ್ ವ್ ವ್ ವ್!! ಸಂತಸದ ಆಡಲಲ್ಲಿ ಉಕ್ಕಿ ಉರುಳುವ ತೆರಗಳಂತೆ ಮನಸ್ಸಿಗಾದ ಆನಂದವನ್ನು ವ್ಯಕ್ತಪಡಿಸುವ ತನ್ನ ಇಂಪಾದ ಧ್ವನಿಯನ್ನು ಬಯಲುಮಾಡುತಿತ್ತು. ಹಾಸನ್ನು ಮೂಸಿ ನೋಡುತಿತ್ತು. ಮನೆಯ ಯಜಮಾನ ಬಂದುದನ್ನು ದೂರದಿಂದಲೇ ಕಂಡು ತನ್ನ ಕೃತಜ್ಞತೆಯನ್ನು ಸಲ್ಲಿಸುವಂತೆ ಬಾಲವನ್ನಲ್ಲಾಡಿಸುತ್ತಾ ನಾಯಿ ಕುಯ್ ಗುಡುತಿತ್ತು. ಹೌದು, ನಾಯಿ ಅವನನ್ನು ಸ್ವಾಗತಿಸುತಿತ್ತು.

ಸುರೇಶ ಅನತಿದೂರದ ಬೆಟ್ಟದ ದಾರಿಯಲ್ಲಿ ನಡೆದು ಬರುತಿದ್ದ. ಸುತ್ತಮುತ್ತ ಬೆಳದ ಕಾಡುಗಿಡಗಳ ನೆಡುವೆ ಕಡಿದು ಮಾಡಿದ, ಕುರುದಾರಿಯಲ್ಲಿ ಹೆಜ್ಜೆ ಹಾಕುತಿದ್ದ. ತಾನು ನಾಲ್ಕು ವರ್ಷಗಳಿಂದ ತಿಳಿನೀರನ್ನಿಕ್ಕಿ ಸಾಕಿದ ತನ್ನ ಬಂಧು ಶ್ವಾನದ ಕರ್ಕಶ ಧ್ವನಿಯೂ ಕೂಡಾ ಅತನಿಗೆ ಸುಶ್ರಾವ್ಯ ಸಂಗೀತದಂತೆ ಕಂಡು ಬರುತ್ತಿತ್ತು. ಗಂಭೀರವಾದ ಮುಖವಾಡವನ್ನು ಹೊದೆದುಕೊಂಡು, ಏನನ್ನೋ ಜಾಸಿಸಿಕೊಂಡು ಬರುತಿದ್ದಂತೆಯೇ ನಾಯಿಯಂತಹ ಕ್ಷುಲ್ಲಕ ಪ್ರಾಣಿಯ ಸ್ವಾಮಿ ಭಕ್ತಿಯನ್ನು ಕಂಡು ಮೆಚ್ಚಿಕೊಂಡ. ನುಡಿದಂತೆ ನಡೆಯದ, ನಡೆದಂತೆ ನುಡಿಯದ ಮಾನವ ಕೋಟಿಯ ನಡುವೆ ಬಾಳಿ ಬದುಕುವುದಕ್ಕಿಂತ, ಇಂತಹ ಬುದ್ಧಿವಂತ ಪ್ರಾಣಿಗಳ ಕೂಟದಲ್ಲಿ ಜೀವಿಸುವುದು ಸುಖಪ್ರದವೆಂದು ಆತನ ಮನಸ್ಸು ತಿಳಿಯಿತು.

ತನ್ನ ಪ್ರತ್ಯಕ್ಷದಲ್ಲಿಯೇ ನಿಜವಾಗಿ ಕೆಲಸಕೊಡುವನೆಂದು ಮಾತುಕೊಟ್ಟ ಒಂದು ಮಹಾನ್ ವ್ಯಕ್ತಿ ಈಗ ತನ್ನಿದಿರಿನಲ್ಲಿಯೇ "ಇಲ್ಲ"ವೆಂದುದು ಜ್ಞಾಪಕಕ್ಕೆ ಬಂದಾಗ, ಹೂಗೆ ತೋರದೆ, ಇನ್ನೇನು ಕಂಡೀತು?

ಸುರೇಶ ಅಂಗಳಕ್ಕೆ ಇಳಿದ. ನಾಯಿಯ ಕೂಗಾಟವನ್ನು ಕೇಳಿ, ತನ್ನ ಮಗ ಬಂದನೆಂದು ತಿಳಿದ ಸುಶೀಲಮ್ಮ ಹೊರಗೆಬಂದು ತಟ್ಟೆಯ ಎಡೆಯಲ್ಲಿ ಕಟ್ಟಿದ ಕಿಟಿಕಿಯಿಂದಲೇ ಆತನ ಗಮನವನ್ನು ಕಂಡು ಕೆಲಸ ಕೈಬಿಟ್ಟತೆಂದು ತಿಳಿದು, ದೀರ್ಘ ಶ್ವಾಸವೊಂದನ್ನು ಬಿಟ್ಟಳು. ಪಡೆದಷ್ಟಲ್ಲದೆ ಹೆಚ್ಚಿನದು ಹೇಗೆ ಬರುವುದೆಂದು ಅವಳು ಸಮಾಧಾನಪಟ್ಟುಕೊಂಡಳು. ಆದರೆ, ತನ್ನ ಹೂಗೂ ಏಕಮಾತ್ರ ಪುತ್ರನ ಮುಂದಿನ ಜೀವನದ ಗಂಭೀರ ಪ್ರಶ್ನೆಯೊಂದು ಬೃಹದಾಕಾರವಾಗಿ ಕಣ್ಣೆದುರು ನಿಂತಾಗ, ನಿಸ್ಸಹಾಯಕಳಾದಾಗ, ವೇದನೆಯನ್ನು ಮುಖವು ಬೇಡವೆಂದರೂ ಪ್ರದರ್ಶಿಸಿತು.

"ಅಮ್ಮಾ" ಸುರೇಶ ಕ್ಷೀಣವಾಣಿಯಿಂದಲೇ ಕರೆದ. ಆದರೆ, ಕಿವಿಗೆ ಬಡೆಯುತಿದ್ದ ನಾಯ ಕರ್ಣಕಠೋರ ಧ್ವನಿಯನ್ನು ಭೇದಿಸಿ ಅದು ಆಕೆಯಲ್ಲಿ ಪರಿಣಾಮ ಮಾಡಲಿಲ್ಲ. ಅದನ್ನು ತಿಳಿದೋ ಏನೋ, ಸುರೇಶ, ನಾಯನ್ನು ಕಾಲಿಂದ ದೊಪ್ಪೆ ಮೆತ್ತಗಾಗಿ ಒದೆದು "ಅಮ್ಮಾ ...." ಎಂದು ಕೂಗಿದ. ನಾಯಿ ತನ್ನ ಸಾದವನ್ನು ಮೆಲ್ಲಗಾಗಿಸಿ "ಕುಯ್ ಕುಯ್" ಎಂದು ಸುರೇಶನನ್ನು ಸುತ್ತತೊಡಗಿತು. ಸುಶೀಲಮ್ಮ ಮಗನ ಕರೆಯನ್ನು ಕೇಳಿ ಹೋದ ಕೆಲಸದ ಫಲವನ್ನು ಮೊದಲೇ ತಿಳಿದುಕೊಂಡಿದ್ದಂತೆ "ಕಾಲುತೊಳೆ, ಊಟಕ್ಕೆ ಬಡಿಸುತ್ತೇನೆ" ಎಂದಳು.

ಸುರೇಶ ಮುಖ ನೆಲ್ಲಿನೆ ಅಂಗಳಕ್ಕಿಳಿದ. ನಾಯಿ ತನ್ನ ಯಥಾಸ್ಥಾನದಲ್ಲಿ ಮಂಡಿಸಿತು. ಕರವಾಡಮುಖ ಪ್ರಶ್ನೆಸನಾಸಂತರ ಜಾವಡಿ-ಹೌದು, ಅದು ಆ ಮನೆಯ ಜಾವಡಿ-ಗೆ ಬಂದ. ಅಂಗಿ ತೆಗೆಯಲು ಕೈಯೆತ್ತಿದಾಗ ಕಂಕುಳದ ಪಕ್ಕದಲ್ಲಿ "ಬರ್ರ್ರ್ರ್" ಎಂದಿತು-ಅಲ್ಲಿ ಮೊದಲೇ ಒಂದು ತೂತು ಬಿದ್ದಿತ್ತು. ಈಗ ಅಂಗಿಯ ತೋಳಿಗೆ ಶಕ್ತಿ ಪ್ರಯೋಗಿಸಿದಾಗ ಅದು ಹಂದುದರಲ್ಲಿ ಆಶ್ಚರ್ಯವೇನು?

ಊಟಕ್ಕೆ ಸನ್ನದ್ಧನಾಗಿ ಸುರೇಶ ಒಳಮನೆಗೆ ಕಾಲಿಕ್ಕಿದ. ತಾಯಿ ದೂಪದೆಲೆಯ ಪತ್ರಾಳಿಯಲ್ಲಿ ಗಂಜಿ ಬಡಿಸಿದ್ದಳು. ನಾಲ್ಕು ಕಾಳು ಉಪ್ಪು ಎಲೆಯ ತುದಿಯಲ್ಲಿ ಹಾಕಿದ್ದಳು. ಸುರೇಶ ಎಲೆಯ ಮುಂದೆ ಕೂತ. ಮೌನವಾಗಿ ಉಣ್ಣುತ್ತಿದ್ದ. ಯಾರೂ ಮಾತಾಡಲಿಲ್ಲ. ತಾಯಿ, ಮಗ ಅವರವರ ಮುಖಭಾವಯಿಂದಲೇ ತಂತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಂತೆ ತೋರುತಿತ್ತು. ಸುರೇಶ ಮೌನವಾಗಿಯೇ ಉಂಡು ಎಮ್ಮೆ ಕೈತೊಳೆದು ಬಂದು ಜಗಲಿಯಲ್ಲಿ ಮಂಡಿಸಿದ. ಸ್ವಲ್ಪ ಸಮಯದ ನಂತರ ತಾಯಿಯೂ, ಉಂಡು ನಾಯಿಗೆ ಉಳಿಸಿದ್ದ ತಿಳಿಯನ್ನು ಎರೆದು, ಮಗನ ಬಳಿ ಬಂದು ಕುಳಿತಳು.

ಮೌನವಾಗಿಯೇ ಅವರು ಕುಳಿತ್ತಿದ್ದರು ಅವರವರ ಭಾವನಾ ಪ್ರಸಂಚದಲ್ಲಿಯೇ ಅವರು ವಿಹರಿಸಿದ್ದರು.

ಸುರೇಶ ಬಾಲಕನಾಗಿದ್ದಾಗಲೇ ತಂದೆ ತೀರಿ ಹೋಗಿದ್ದರು ತಂದೆಯ ಆಸ್ತಿಯಂತಿದ್ದ ಒಂದು ಸಾವಿರ ರೂಪಾಯಿಗಳ ಇನ್ಶೂರೆನ್ಸ್ ಪೋಲಿಸಿಯನ್ನು ಚಿಕ್ಕತಂದೆ ಸ್ವಾಧೀನ ಪಡಿಸಿಕೊಂಡು ಕಂದೆನಯಿಂದ ರೂಪಾಯಿ ಪಡೆದಿದ್ದರು.—ಮಗನ ಅಪ್ರಾಯಸ್ಥನಾದುದರಿಂದ ಆ ರೂಪಾಯಿಯನ್ನು ತನ್ನ ವಶದಲ್ಲಿರಿಸಿಕೊಂಡು ಅದರ ಬಡ್ಡಿಯನ್ನು ಇವರ ಜೀವನ ನೆಚ್ಚಿಕ್ಕಾಗಿ ಕೊಡುತಿದ್ದರು. ಅದೊಂದು ಐವತ್ತು ರೂಪಾಯಿ ಹಾಗೂ ಚಿಕ್ಕಪ್ಪನವರು ಕೊಡುತ್ತಿದ್ದ ಮತ್ತೊಂದು ಐದು ಮುಡಿಯಕ್ಕಿ ಇಷ್ಟಗಳಿಂದ ಜನರು ದಿನಗಳೆದು ಜೀವಿಸುತ್ತಿದ್ದರು. ಬಡತನವೆಂಬುದೇ ಕಷ್ಟ. ಆದರೆ, ಉದರದೇವತೆಗೆ ಬಡತನ, ಸಿರಿತನವೆಂಬುದು ಕಣ್ಣಿಗೆ ಕಾಣದು. ಆದರೂ, ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಳ್ಳುವ ಅಸಾಧಾರಣ ವ್ಯಕ್ತಿ ತಾಯಿಯೊಡನೆ ಸುರೇಶನೂ ಜಾಳಿ ಬೆಳೆದಿದ್ದ-ಬಡತನದ ಒಡನಾಡಿಯಾಗಿ.

ಸುರೇಶನ ತಂದೆ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿ ತಾವು ಬದುಕಿದ ನಲುವತ್ತು ವರ್ಷಗಳಲ್ಲಿ ಅರವತ್ತಿದ್ದ ಪ್ರ ಕಳೆದಿದ್ದರು. ವೃತ್ತಿಶಿಷ್ಯರಲ್ಲಿ ಮಲಗುವುದಕ್ಕೆ ನಂಟು ದಿನ ಮೊದಲು. ಅವರು ಮುಖ್ಯೋಪಾಧ್ಯಾಯರಾಗಿ ಪದಿನಾರು ರೂಪಾಯಿ ಸಂಬಳದ ಕೆಲಸಕ್ಕೆ ಅರಿಸಲ್ಪಟ್ಟಿದ್ದರು ಅದರಿದು ದೈವಿಕವೆಂದೆ ಅದಕ್ಕೆ ಅನುಮತಿ ಗೊದಲಿಲ್ಲ. ನಿನೋಗಿಯಾ ರೂಪದಿಂದ ಅವರಿಸಿ, ಅವರನ್ನು ಕಬಳಿಸಿತು.

ಎಳೆಗುವರ—ಎಂಟೆರೆ ಕೂಸು-ಆಗಿದ್ದ ಸುರೇಶನಿಗೆ ತಂದೆಯ ಸಾವು ಎಂದರೇನೆಂದು ತಿಳಿಯಲಿಲ್ಲ. ತಂದೆಯ ದೇಹದ ಮೇಲೆ ತೆಕ್ಕೆ ಬಿದ್ದು ಅಳುತಿದ್ದ ತಾಯಿಯನ್ನು ಕುರಿತು ಅಂದು ಆತ ಹೇಳಿದ್ದ. "ಏನಾಗಿಲ್ಲ ಬಿದ್ದು ಅಳ ಬೇಡ, ತಂದೆಗೆ ನೋವಾಗುತ್ತದೆ". ಪಾಪ ತಂದೆಯೇ ತಿಳಿಯದೆಯೋ ಅತಿದ ಮಗನ ಬಾಲಿಶ ಮಾತುಗಳಲ್ಲದೆ, ವಾಸ್ತವ ಸಮಾಧಾನಕರವಾದ ಸಾಧನವೂ ಆಕೆಗೆ ಎಟ್ಟಿಲಿಲ್ಲ. ಕುಟುಂಬದವರು ಉತ್ತರ ಕ್ರಿಯೆ ಮಾಡಿದರು. ಚಿಕ್ಕಪ್ಪ ತನ್ನ ಜೀವನಾಧಾರ ಕಾಲದಲ್ಲಿ ಕೈಲಾದ ಸಹಾಯ ನೀಡುತಿದ್ದರು. ಅವರ ಮೇಲ್ವಿಚಾರಣೆಯಲ್ಲೇ ಸುರೇಶ ಬಾಳಿದ.

ತಾಯಿಗೆ ತಂದೆಯಂತೆ ಮಗನೂ ವಿದ್ಯಾಭ್ಯಾಸವನ್ನು ಪಡೆದು ಉದ್ಧಾರ್ಯನಾಗಬೇಕೆಂದು ಆಸೆ. ಆಕೆಯ ಅಭಿಪ್ರಾಯದಂತೆ "ಲೋಕದಲ್ಲಿ ಅತ್ಯುತ್ತಮವಾದ ಕೆಲಸ—ಉದ್ಯೋಗ ಪಡೆದ ಜಾತಿ ಪ್ರಜೆಗಳಲ್ಲಿ ಪರಮೈತ್ಯನ್ನವನ್ನು ತುಂಬಿ, ಭಾವಿ ಜೀವನವನ್ನು ಸುಖ ಪ್ರದವನ್ನಾಗಿ ಮಾಡುವುದು ನಿಜ. ವಿದ್ಯೆಯಿಂದಲೇ ವಿನಯವೂ, ಅದರಿಂದಲೇ ಯಂದಿನವಾಗುತ್ತೋಗುಗಳೂ ಜಾದಿ ಹಿಡಿಯುತ್ತವೆ. ಅಂತಹ ವಿದ್ಯಾದಾನವೇ ಮಹಾದಾನ". ಅದಕ್ಕಾಗಿ, ತನ್ನ ಮಗ ಅಧ್ಯಾಪಕನಾಗಿ, ಮಕ್ಕಳಿಗೆ ಮಾರ್ಗದರ್ಶನ ಮಾಡುವುದನ್ನು ಕಣ್ತುಂಬಿ ಕಂಡು ಸತ್ತೆನೆಂದರೆ, ಅನಂತರ ತಮಗೆ ಸ್ವರ್ಗ ಅದುದರಿಂದ, ಆ ದಿನವನ್ನು—ವರ್ಷಂದಿ ಬರಲಿರುವ ಮಹಾಸುದಿನವನ್ನು ಎಮದು ನೋಡುತ್ತಾ ತಾಯಿ ಜೀವ ಮಗನಿಗಾಗಿ ಆತನ ಅಭ್ಯುದಯವನ್ನು ಬಯಸಿ ಕಾದಿತ್ತು.

ಸುಖಗಳು ಬರುವಾಗ ಒಂದರ ಮೇಲೊಂದು ಬರುವುದಂತೆ ದುಃಖಗಳೂ ಎಂದು ತೋರುತ್ತದೆ. ತಮ್ಮ ಕೆಲಸ ಅಪ್ರಯತ್ನದಲ್ಲಿ, ತಾವು ಮಕ್ಕಳನ್ನು ಕಾಪಾಡಿಕೊಂಡು ಬರುತಿದ್ದ ಚಿಕ್ಕಪ್ಪ ಅಕಸ್ಮಾತ್ತಾಗಿ ತೀರಿ ಕೊಂಡರು. ಅತನ ನಂತರ ಮಾವನ ಮನೆಗೆ ತೆರಳಿತ; ಅದರೊಂದಿಗೆ ಸುರೇಶನದಾಗಿದ್ದ ಹಣವು ಕೂಡಾ.

ಇದರಿಂದಾಗಿ, ಕಡು ಬರುವುದು ನಿಂತಿತು. ಅನ್ನ ಕಾಣದಾಯಿತು. ಮದದ ಪೊಟರೆಯಲ್ಲಿ ಜೆಟ್ಟಗಾಗಿದ್ದ ಪಾರಿವಾಳಗಳು ಮೇಲೆನವಾಗಿ ಸ್ವೀಕರಿಸಬಹುದಾಗಿದ್ದ ವೃಷ್ಟಿ ಬಿದ್ದಂತಾಯಿತು. ತಮ್ಮ ಜೀವನಕ್ಕೆ ಜೀವ ವರ್ಗಾವನ್ನು ಹೇಗಾದರೂ ಮಾಡಿಕೊಳ್ಳುವುದು ಅನಿವಾರ್ಯವಾಗಿ ಕಂಡಾಯಿತು. ಆಗ ಸುರೇಶ ಮೆಟ್ರಿಕ್‌ಗೆ ಕಾಲಿಟ್ಟಿದ್ದ. ಹೆಗಿದ್ದರೂ ಒಂದು ವರ್ಷ. ಅದೊಂದು ಕಳೆದರೆ, ಎಷ್ಟಿ ಯಾದರೊಂದು ಶಾಲೆಯಲ್ಲಿ ಪಾಠಿಯ ಬಹುದು ಎಂಬ ಆಶೆ. ಆ ನೆಲೆಗೆ ಎಂತಾದರೂ ಜೀವನಸಾಧನವನ್ನು ಪಡೆಯಬಹುದು. ಹೌದು. ಆದರೆ, ಅದು ಹೇಗೆ?

ತಾಯಿ ಮಗ ಎರಡು ಹಗಲು ರಾತ್ರಿ ಒಂದುಗೂಡಿ ಆಲೋಚಿಸಿದರು. ತಾಯಿ ಜೀವ ಮಗನ ಅಭ್ಯುದಯಕ್ಕಾಗಿ ಮಾಡ ತ್ತರವಾದ ತ್ಯಾಗಕ್ಕೆ ಸಿದ್ಧವಾಯಿತು. ಊರ ಸಾಹುಕಾರ ಸೂಪ್ಪಪ್ಪನವರಲ್ಲಿ ಅಡಿಗೆ ಕೆಲಸವು ಸಿಕ್ಕಿತು. ಅಲ್ಪ ಊಟ ಸಟ್ಟಿ ಹೋಗಿ ತಿಂಗಳಿಗೆ ಹತ್ತು ರೂಪಾಯಿ ಕೊಡಲು ಒಪ್ಪಿದ್ದರು.

ಹತ್ತು ರೂಪಾಯಿ! ಊಟ ಒಟ್ಟಿ ಕೊಟ್ಟು ಮೇಲೆ ಹತ್ತುರೂಪಾಯಿ! ಸುರೇಶನ ತಂದೆ ಅಷ್ಟು ಕಲಿತು ಪಡೆಯ ತಿದ್ದುದು ಹನ್ನೆರಡು ರೂಪಾಯಿಗಳವೆ ಹಾಗು, ಹತ್ತು ರೂಪಾಯಿಗಳನ್ನು ಕೈಬಿ

(ಇಂನೆ ಮುಂ ನೋಡಿ)

ಸಾವಿರಾರು ಜನರು
ಅನುಸರಿಸುತ್ತಿರುವ
ಸುಲಭ ಠೇವಣಾತಿ ವಿಧಾನ

ದಿನಕ್ಕೆ
4 ಆಣೆ
25 ನ. ಪೈ
7 ವರುಷಗಳಲ್ಲಿ
ರೂ. 700

ಪಿಗ್ಮಿ

- ಚಿಕ್ಕ ಮಾತ್ರದ ಅಸ್ತಿಕದ ಪಿಗ್ಮಿಯೊಂದಾಗಿ ಬಳುವುದ್ದ ಕಾಣಿಸಿಯನ್ನು ಸಂಪಾದಿಸಬಲ್ಲರು.
- ದಿನಕ್ಕೆ ೩ ನ. ಪೈಸೆಗಳಂತೆ ಪುಟ ಕಾಳುಗಳಿಸಿಟ್ಟು ಜೀವಕಿನಲ್ಲಿ ಸಂಗ್ರಹವಾಗುವ ನಿಧಿಯು ಭವಿಷ್ಯದ ಸಂಕಷ್ಟಗಳನ್ನು ಪಾರು ಮಾಡಬಲ್ಲದು.

ಸಿಂಡಿಕೇಟಿನ 96 ಶಾಖೆಗಳ ಯಾವುದೇ ಉದ್ಯೋಗಸ್ಥನೊಡನೆ ವಿಚಾರಿಸಿರಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್
ಲಿಮಿಟೆಡ್ ಉಡುಪಿ

The Canara Industrial & Banking
Syndicate Ltd. Udipi

ನೋವುಗಳ ಅತ್ಯುತ್ತಮ ಸಂಯಾಜಕ



ಅಮೃತಾಂಜನ

ನೆರೆಹೊರೆಯ ವಾದವಿವಾದ

ಭಾರತ-ಪಾಕ್ ಸ್ನೇಹ ಸಂಬಂಧ

ಬರೆದವರು: ಎಸ್. ರಘುನಂದನ ರಾವ್.

ಭಾರತ ಪಾಕಿಸ್ತಾನಗಳ ವೈಮನಸ್ಯ ದಿನೇದಿನೇ ಅತಿರೇಕಕ್ಕೇರುತ್ತಲಿದೆಯಲ್ಲದೇ, ಇಳಿಮುಖವಾಗುವ ಲಕ್ಷಣಗಳು ಕಾಣುತ್ತಿಲ್ಲ. ಏನಾದರೂ ಕೆರುಕುಳಗಳನ್ನು ತಂದೊಡ್ಡಿ ಭಾರತದ 'ಆಕ್ರಾಣ'ವನ್ನು ಜಗತ್ತಿಗೆ ಜಾಹೀರುಪಡಿಸಬೇಕೆಂಬುದು ಪಾಕಿಸ್ತಾನದ ಯತ್ನ. ಇದನ್ನು ಮಾಡಹೊರಟೆ ಆರಂಭದಲ್ಲಿಯೇ ಅದು ತನ್ನ ಅಸಫಲ ಯತ್ನದಲ್ಲಿ ಎಡವಿ ಬೀಳುತ್ತದೆ. ಆದರೂ ಅದಕ್ಕೆ ತನ್ನ ಯತ್ನವನ್ನೇ ಸಾಧಿಸಬೇಕೆಂಬ ಉತ್ಕಟೇಚ್ಛೆ! ಇದಕ್ಕೇನೆನ್ನಬೇಕು, ಹುಚ್ಚುತನವೆಂದೋ, ಹಟವಾದಿತನವೆಂದೋ? ಮೊದಲೇ ವಿಷಮಕ್ಕೇರಿದ ಪಾಕ್-ಭಾರತಗಳ ಸಂಬಂಧವು ಕಾಶ್ಮೀರ ವಿವಾದದಿಂದ ಉಲ್ಬಣಾವಸ್ಥೆಗೇರಿದೆ. ಈ ವಿಷಯವಲ್ಲಿ ಅದು ಭಾರತವನ್ನು ತುಂಬಾ ಬೆದರಿಸಿ ನೋಡಿತು. ಆದರೆ ಈ ಪೊಳ್ಳು ಬೆದರಿಕೆಗೆ ಭಾರತ ಬೆದರಲಿಲ್ಲ, ತನ್ನ ಧೋರಣೆಯನ್ನು ತ್ಯಜಿಸಲಿಲ್ಲ. ಬಹಿರಂಗವಾಗಿ ತಾನೆಲ್ಲಿ ಯಾದರೂ ಭಾರತವನ್ನು ತೊಂದರೆಗೆ ಗುರಿಪಡಿಸಿದಲ್ಲಿ ತಾನೇ ಹಿಂಸೆ ಹಾಗೂ ಅಪವಾದಗಳಗೀಡಾಗಬೇಕೆಂಬ ಭಯದಿಂದ ಪಾಕಿಸ್ತಾನವು ಗುಪ್ತವಾಗಿ ಭಾರತದ ವಿರುದ್ಧ ಅಲ್ಲಸಲ್ಲದ ಕಾರ್ಯಾಚರಣೆಗಳಿಗೆ ಮೊದಲುಮಾಡಿದೆ ಎಷ್ಟು ಎಚ್ಚರಿಸಿದರೂ ಪಾಕ್ ಪ್ರಭೃತಿಗಳಿಗೆ ವಿವೇಕೋದಯವಾಗದಿರುವುದು ತುಂಬಾ ಶೋಚನೀಯ ಸಂಗತಿಯೆನ್ನದೇ ನಿರ್ವಾಹವಿಲ್ಲ.

ಈ ಮೇಲೆ ವಿವರಿಸಿದ ವಿಚಾರಕ್ಕೆ ಉದಾಹರಣೆಯನ್ನೀಯುವುದಾದರೆ, ಅದು ಇತ್ತೀಚೆಗೆ ಕಾಶ್ಮೀರದಲ್ಲಿ ನಡೆಸಿದ ಸ್ಫೋಟನ, ಜನ್ಮ ಮತ್ತು ಕಾಶ್ಮೀರಗಳಲ್ಲಿ ಹಿಂಸಾಕೃತ್ಯಗಳನ್ನಾಚರಿಸಲು ಮಾಜಿ ಮೇಜರ್ ಜನರಲ್ ಅಕ್ಬರ್ ಖಾನರ ಮುಂದಾಳ್ತನದಲ್ಲಿ ಒಂದು ಪಕ್ಷ ಹಾಗೂ ತನ್ಮೂಲಕ ಚಳವಳಿಯೊಂದು ಆರಂಭವಾಗಿದೆ. ಇದಕ್ಕೆ ಸಾಕ್ಷಿಯಾಗಿ ಕೆಲವು ನಿದರ್ಶನಗಳು ದೊರೆತಿವೆಯೆಂಬುದಾಗಿ ಕಳೆದ ಜುಲ್ಫಾ ಕಿಗರಂದು ಪ್ರಧಾನಿ ನೆಹರು ಲೋಕಸಭೆಯಲ್ಲಾಡಿದ್ದರು. ಅಲ್ಲದೇ ಈ ಚಳವಳದ ಅಂಗವಾಗಿ ಪ್ರಚುರಪಡಿಸಲ್ಪಟ್ಟ ಕರಪತ್ರಗಳು ದೊರೆತಿವೆಯೆನ್ನಲಾಗಿದೆ. ಒಂದಲ್ಲೊಂದು ವಿಧದಿಂದ ಭಾರತದ ಅಂತಾರಾಷ್ಟ್ರೀಯ ಕೀರ್ತಿಗೆ ಮಸಿ ಬಳಿಯುವ ದುರ್ಯತ್ನವನ್ನು ಪಾಕಿಸ್ತಾನವೆಸಗುತ್ತಿದೆಯೆಂಬುದಕ್ಕೆದೊಂದು ನಿದರ್ಶನ "ಪಾಕ್ ನಾಯಕರು ನಡೆಸುತ್ತಿರುವ ಈ ಒಳಸಂಚುಗಳು ಕಾಶ್ಮೀರಿಗಳಗೇನೂ ಮಾಡಲಾರವು. ಕಾರಣನಾವು ಸ್ವಯಂ ನಿರ್ಧಾರದಿಂದಲೇ ಮುಂದುವರಿಯುತ್ತಿದ್ದೇವೆ" ಂಬುದಾಗಿ ಶ್ರೀನಗರದಲ್ಲಿ ಶಾಸನ ಸಭೆಗಳ ಜತೆಅಧಿವೇಶನದಲ್ಲಿ ರಾಷ್ಟ್ರೀಯ ಪರಿಷತ್ತಿನ ಸದಸ್ಯ ಶ್ರೀ ಅಬ್ದುಲ್ ಗಾನಿಗೋನಿಯವರು ಜುಲ್ಫಾ ಕಿಗರಂದು ಹೇಳಿದ್ದರು. ಅಲ್ಲದೇ ಭಾರತವು ತನ್ನಿಂದ ಸಾಧ್ಯವಾದ ಸರ್ವ ವಿಧಗಳಿಂದಲೂ ಇಂತಹ ಹಿಂಸಾಕೃತ್ಯಗಳನ್ನು ವಿರೋಧಿಸುವುದೆಂದು ನೆಹರು ಘೋಷಿಸಿದ್ದಾರೆ.

ಪಾಕಿಸ್ತಾನದ ಕುಹಕಯತ್ನಗಳನ್ನು ನ್ಯಾಯವಾದಿಗಳಾದ ರಾಷ್ಟ್ರಗಳೆಂದೂ ಮೆಚ್ಚಲಾರವು. ಹಿಂದಿನ ಪಾಕಿಸ್ತಾನಿ ಗವರ್ನರ್ ಜನರಲ್ ಡಿ| ಶ್ರೀ. ಗುಲಾಮ್ ಮಹಮ್ಮದರಂತಹ ಪಾಕ್ ನೇತಾರರು ಭಾರತದೊಡನಿದ್ದ ತಮ್ಮ ಸ್ನೇಹ ಸಂಬಂಧವನ್ನು ಬಲಪಡಿಸಲೆತ್ನಿಸುತ್ತಿದ್ದರೆ ಇಂದಿನ ಮುಂದಾಳುಗಳು ವೈರ ಕಟ್ಟಿಕೊಳ್ಳಲೆಳಸುತ್ತಿದ್ದಾರೆ. ಭಾರತದ ಅವನತಿಯನ್ನೆಂದು ಕಾಣಲೆಂದು ಆತುರಪಡುತ್ತಿದ್ದಾರೆ. ಯಾಕಿಂತಹ ಅಸಹನೆ? ಭಾರತವು ಅಭಿವೃದ್ಧಿಹೊಂದುತ್ತಿರುವುದನ್ನಿವರಿಗೆ ಕಾಣಲಾಗುವುದಿಲ್ಲವೇ? ಕಾಶ್ಮೀರ ವಿವಾದದಲ್ಲಿ ಪಾಕಿಸ್ತಾನವು ಜಾಗತಿಕ ಸಹಾಯವನ್ನು ಪಡೆಯಲೆತ್ನಿಸುತ್ತಿದೆಯಾದರೂ, ಅದರ ಧೋರಣೆ ಎಂದಿಗೂ ನ್ಯಾಯ ಸಮ್ಮತವಾಗದು. ಒಂದು ವೇಳೆ ವಿಜಯಿಯಾದಲ್ಲಿ ಅದು ತನ್ನ ದುರ್ನೀತಿಯನ್ನೇ ಪ್ರದರ್ಶಿಸಿದಂತಾಗಬಹುದು. ಈ ತಿಂಗಳಲ್ಲಿ ಕಾಶ್ಮೀರ ಪ್ರಶ್ನೆ ಪುನಃ ಚರ್ಚೆಗೆ ಬರುವ ಸಂಭವವಿದೆ. ನಮ್ಮೆರಡು ರಾಷ್ಟ್ರಗಳ ಮಧ್ಯೆ ವೈಮನಸ್ಯಕ್ಕೆ ಕಾರಣವಾದ ಕಾಶ್ಮೀರ ಸಮಸ್ಯೆಯನ್ನು ಇತ್ಯರ್ಥಗೊಳಿಸುವ ಬಗ್ಗೆ ನೇಮಕಕೊಂದಿದ ಶ್ರೀ. ಗುನ್ನಾರ್ ಜಾರಿಂಗರು ತನ್ನ ವರದಿಯಲ್ಲಿ ಪಾಕಿಸ್ತಾನವು ಆಕ್ರಮಣಕಾರಿ ರಾಷ್ಟ್ರವೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ಭಾರತೀಯ ಮುಸ್ಲಿಮರಿಗೆ ಪಾಕಿಸ್ತಾನದ ಸರಕಾರೀ ನೇತೃಗಳ ಕುರುಡು ಧೋರಣೆಯು ಮೆಚ್ಚಿಗೆಯಾಗುವುದಿಲ್ಲ. ಅದರಲ್ಲೂ ಕಾಶ್ಮೀರ ವಿವಾದದಲ್ಲಿ ಭಾರತದ ಮುಸ್ಲಿಮರು ಪಾಕ್ ನೀತಿಗೆ ಬದ್ಧ ವಿರೋಧಿಗಳಾಗಿದ್ದಾರೆ. ಪಾಕಿಸ್ತಾನದಡಿ ಒಡಿತದಲ್ಲಿರುವ ಕಾಶ್ಮೀರದ ವಿಮೋಚನೆಗಾಗಿ ಆರು ತಿಂಗಳ ಕಾಲದಲ್ಲಿ ಒಂದು ಲಕ್ಷ ಸ್ವಯಂಸೇವಕರನ್ನೊಟ್ಟುಕೂಡಿಸಲಾಗುವುದೆಂದು ಭಾರತೀಯ ಮುಸ್ಲಿಮ್ ಯುವಕರಂಗದ ಅಧ್ಯಕ್ಷ ಶ್ರೀ. ಅಬ್ದುಲ್ ಕ್ವಯಾಂ ಅನ್ಸಾರಿಯವರು ಕಳೆದ ಜುಲ್ಫಾ ಕಿಗರಂದು ಘೋಷಿಸಿದ್ದಾರೆ. ಇದರಿಂದಲೇ ತಿಳಿಯುವುದು, ಭಾರತೀಯ ಮುಸ್ಲಿಮರ ದೇಶಪ್ರೇಮ. ಇದೇ ತಿಳಿಸುವುದು ನಮ್ಮ ರಾಷ್ಟ್ರದಲ್ಲಿರುವ ಮುಸ್ಲಿಂ ಬಂಧುಗಳು ನ್ಯಾಯಪರರಾಗಿರುವರೆಂದು. ಭಾರತದಲ್ಲಿ ಸರ್ವರಿಗೆ ಸಮಾನಾಧಿಕಾರವನ್ನಿತ್ತುದರ ಸುಫಲವಿದೆಂದು ಎಲ್ಲರಿಗೂ ತಿಳಿಯದಿರುವುದಿಲ್ಲ.

ಭಾರತೀಯ ಮುಸ್ಲಿಮರು ಭಾರತದ ಕಾಶ್ಮೀರ ಧೋರಣೆಗೆ ಸಂಪೂರ್ಣ ಸಹಾಯಕರಾಗಿರುವರೆಂಬುದನ್ನು ಜಗತ್ತಿಗೆ ವಿದಿತ ಪಡಿಸಲು ರಾಷ್ಟ್ರೀಯ ಬುನಾದಿಯಲ್ಲಿ ಈ ದಲವು ಸಂಘಟಿತವಾಗುವುದು. ಕಾಶ್ಮೀರದ ಮಟ್ಟಿಗೆ ಭಾರತದ ಮುಸ್ಲಿಮರು ಪಾಕ್ ಸರಕಾರಕ್ಕೆ ಸಹಕಾರಿಗಳಾಗಿದ್ದಾರೆಂದು ಬೊಟ್ಟಿಡುವ ಪಾಕಿಸ್ತಾನದವರ ಅಪಪ್ರಚಾರದ ವಿರೋಧ ಸೂಚಕವಾಗಿ ಭಾರತದಲ್ಲಿ ಮತ ಪ್ರದರ್ಶನಗಳನ್ನೇರ್ಪಡಿಸುವುದು ಈ ರಂಗದ ಉದ್ದೇಶಗಳಲ್ಲೊಂದೆಂಬುದಾಗಿ ಶ್ರೀ ಅನ್ಸಾರಿ ನುಡಿದಿದ್ದಾರೆ. ಅವರ ಯೋಜನೆಗಳ ಏರ್ಪಾಡು ಮುಗಿದ ವೇಳೆ ತಮ್ಮ (ಭಾರತೀಯ ಮುಸ್ಲಿಮರ) ಅಭಿಪ್ರಾಯವನ್ನು ಸೂಚಿಸಲು ಯುಕ್ತರಾಷ್ಟ್ರ ಸಂಘಕ್ಕೂ, ವಿದೇಶಗಳಿಗೂ ತಮ್ಮ ಶಿಷ್ಟ ಮಂಡಲಿಗಳನ್ನು ಕಳುಹಿಸುವ ಯೋಜನೆಯನ್ನಿಟ್ಟುಕೊಂಡಿದ್ದಾರೆ, ಶ್ರೀ ಅನ್ಸಾರಿ ಹಾಗೂ ಅವರ ಅನುಯಾಯಿಗಳು.

ಕಾಶ್ಮೀರದಲ್ಲಿ ದಾಳಿ ನಡೆಸಿದುದು ಭಾರತವೇ, ಪಾಕಿಸ್ತಾನವಲ್ಲ-ಎಂದು ಹೆಸಿ ಹಸಿ ಸುಳ್ಳನ್ನಾಡುತ್ತಿದ್ದಾರೆ ಪಾಕ್ ನಾಯಕರು. ಯು ರಾ. ಸಂಘದ ನಿರೀಕ್ಷಕರ ತಂಡವು, ಪಾಕಿಸ್ತಾನವೇ ಕಾಶ್ಮೀರದಲ್ಲಿ ಆಕ್ರಮಣ ನಡೆಸಿದುದೆಂಬುದಾಗಿ ಜಾಹೀರುಗೊಳಿಸಿದೆಯೆಂದ ಮೇಲೆ. ಸುಹ್ರವರ್ದಿಯವರಂಥ ಹೊಣೆಗಾರ ಪಾಕ್ ಧುರೀಣರ ಮಾತು ಎಷ್ಟರ ಮಟ್ಟಿಗೆ ಸತ್ಯ? ಅವರ ಧುರೀಣತ್ವಕ್ಕೆ ನ್ಯಾಯ ಪಕ್ಷಪಾತಿಗಳಾದ ಪಾಕಿಸ್ತಾನಿಗಳು ಬೆಲೆಕೊಡಬಹುದೇ? ಭಾರತಕಾಲ್ಕಾಗಲೀ, ಪಾಕಿಸ್ತಾನಕ್ಕಾಗಲೀ ಕೂಡದೇ ಕಾಶ್ಮೀರವನ್ನು ಪ್ರತ್ಯೇಕವಾಗಿ, ಅದನ್ನು ವಿವಾದಾಸ್ಪದವಾಗಿಸಿ ತೊಲಗಿದ ಆಂಗ್ಲರು ಇಂದೇಕೆ ಕಾಶ್ಮೀರ ಪ್ರಶ್ನೆಯಲ್ಲಿ ಪಾಕಿಸ್ತಾನಕ್ಕೆ ನೆರವು ನೀಡುತ್ತಿದ್ದಾರೆ? ಅವರು ಈ ದೇಶದಿಂದ ಕಾಲ್ದೆಗೆಯುವಾಗ ಅದನ್ನು ಪಾಕಿಸ್ತಾನಕ್ಕೆ ಬಿಟ್ಟು ಹೋಗಿರುವರೇ? ಹಾಗಾದರೆ ಅವರೇಕೆ ಪಾಕಿಸ್ತಾನದ ವಾದವನ್ನು ಜೀಂಬಲಿಸಬೇಕು? ಸುಯೇಜ್ ವಿವಾದದಲ್ಲಿ ಭಾರತವು ನ್ಯಾಯ ಪಕ್ಷಪಾತಿಯಾಯಿತೆಂದೇ?

ಕಾಶ್ಮೀರದೊಂದಿಗೆ ಕಾಲುವೆ ನೀರಿನ ವಿವಾದವೂ ಭಾರತ-ಪಾಕ ಸಂಬಂಧವನ್ನು ವಿಷಮಕ್ಕೇರಿಸಲು ನೆರವಾಗಿದೆ. ಶೀಕರ್ಣಾಜರಷ್ಟು ಸಿಂಧೂ ಜಲವು ಪಾಕಿಸ್ತಾನದ ಉಪಯೋಗಕ್ಕೆ ಬೀಳುತ್ತಿರುವಾಗ, "ಭಾರತವು ಪಾಕಿಸ್ತಾನಕ್ಕೆ ಪ್ರವಹಿಸುವ ನೀರನ್ನು ತಡೆಗಟ್ಟಿ ತನ್ನ ದೇಶದ ಪ್ರಜೆಗಳನ್ನು ಹಸಿವು ಬಾಯಾರಿಕೆಗಳಿಂದ ನರಳಿ ಸಾಯುವಂತೆ ಭಾರತ ಸರಕಾರ ಹಂಚಿಕೆ ಹೂಡುತ್ತಿದೆ"ಯೆಂಬುದಾಗಿ ಪಾಕ್ ಪ್ರಧಾನಿ ಜನಾಬ್ ಹಸನ್ ರಾಹೀದ್ ಸುಹ್ರವರ್ದಿ ಪ್ರಲಾಪಿಸಿದ್ದಾರೆ. ಜಾಗತಿಕ ಬೇಂಕೆನವರು ಕೂಡ ಪಾಕಿಸ್ತಾನದ ವಾದಕ್ಕೆ ವಿರೋಧವಾಗಿದ್ದಾರೆ. ಭಾರತವು ಈ ವಿಷಯದಲ್ಲಿ ಪಾಕಿಸ್ತಾನಕ್ಕಾವತೊಂದರೆಯನ್ನುಂಟು ಮಾಡಲಿಕ್ಕೂ ಅಪೇಕ್ಷಿಸದಿದ್ದರೂ, ಬೇಕೆಂದೇ ಭಾರತದ ಮೇಲೆ ಇಂತಹ ಅಸವಾದನ್ನೇಕೆ ಪಾಕಿಸ್ತಾನ ಹೊರಿಸಬೇಕು? ಅಂದರೆ ಭಾರತದ ಮೇಲೆ ಅಷ್ಟೊಂದು ಮತ್ಸರ, ವೈರ! ಅಬ್ಬಾ! ಅಸೂಯೆಯ ಪ್ರಭಾವವೇ!

(೧೯ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಕೆಂಪು ಕೇರಳದ ಕರಾಳ ಕಾಯದೆ

ಶಿಕ್ಷಣ ವಿಧೇಯಕ

ಬರೆದವರು: ಎಸ್. ಸದಾಶಿವ ರಾವ್.

ಅಧಿಕಾರಕ್ಕೆ ಬಂದ ಅಲ್ಪಾವಧಿಯಲ್ಲಿ ಕೇರಳದ ಕಮ್ಯೂನಿಸ್ಟ್ ಸರಕಾರವು ಹಲವಾರು ಅನಿರೀಕ್ಷಿತ ಸುಧಾರಣೆಗಳನ್ನು ಜಾರಿಗೆ ತಂದು, ಜನರ ಮನ ಒಲಿಸಲು ಯತ್ನಿಸಿತು. ಪರಿಣಾಮವಾಗಿ ಇದೀಗ ಅದು ಜನಸಮುದಾಯದ ಬೆಂಬಲ ಕಳೆದುಕೊಳ್ಳುವ ಸ್ಥಿತಿಗೆ ಬಂದು ಮುಟ್ಟುವಂತಿದೆ. ಅದರಲ್ಲೂ ವಿವಾದಾತ್ಮಕವಾದ ಕೇರಳದ ಶಿಕ್ಷಣ ಮಸೂದೆಯು ಅಖಿಲ ಕೇರಳದಲ್ಲಿ ಮಾತ್ರವಲ್ಲ, ಸಮಗ್ರ ಭಾರತದಲ್ಲಿ ಹಲವರ ಟೀಕೆಗೆ ಒಳಗಾಗಿದೆ. ಖಾಸಗಿ ಸಂಸ್ಥೆಗಳ ಮೇಲೆ ಈ ಮಸೂದೆ ಪ್ರಬಲ ಆಘಾತವನ್ನು ತಂದೊಡ್ಡುವುದು ಮಾತ್ರವಲ್ಲ ಖಾಸಗಿ ಶಾಲೆಗಳ ಪ್ರಗತಿಗೆ ಈ ಮಸೂದೆ ತುಸು ಅಡ್ಡಿಯನ್ನೇ ಉಂಟು ಮಾಡುತ್ತಲಿದೆ.

ಯಾವುದೇ ಕ್ಷೇತ್ರದಲ್ಲಾಗಲೀ, ರಾಷ್ಟ್ರದ ಅಭಿವೃದ್ಧಿಯಾಗಬೇಕಾದರೆ, ಕೇವಲ ಸರಕಾರದ ಪ್ರಯತ್ನ ಒಂದೇ ಸಾಲದು. ಬದಲು ಖಾಸಗಿ ಪ್ರಯತ್ನಗಳ ಪಾತ್ರ ರಾಷ್ಟ್ರದ ಅಭಿವೃದ್ಧಿಯಲ್ಲಿ ಮಹತ್ತರವಾದುದು! ವಿದ್ಯಾ ಸಂಸ್ಥೆಗಳಾಗಿ ಹೆಣಗಾಡುತ್ತಿರುವ ವಿದ್ಯಾಭಿಮಾನಿ ಖಾಸಗಿ ಶಾಲೆಗಳ ಮೆನೇಜರುಗಳಾಗಲೀ, ಸಮಗ್ರ ಭಾರತದಲ್ಲಿ ವಿದ್ಯಾಕ್ಷೇತ್ರದಲ್ಲಿ ಅಗಣಿತ ಸೇವೆ ಸಲ್ಲಿಸಿದ ಮಿಶನರಿ ಹಾಗೂ ಕೆಥೋಲಿಕ್ ಸಂಸ್ಥೆಗಳ ಮಾಲಕರಾಗಲೀ ಇಂತಹ ಮಸೂದೆಯನ್ನು ವಿರೋಧಿಸುವುದು ನ್ಯಾಯೋಚಿತವಾಗಿದೆ. ಕೇರಳದ ಶಿಕ್ಷಣ ಮಸೂದೆಯನ್ನಯ ಬೇಕಾದ ಶಾಲೆಯನ್ನು ಬೇಕಾದಾಗ ಮನ್ಸೂಚನೆ ಕೊಡದೆ ಸರಕಾರವು ವಶಪಡಿಸಿಕೊಳ್ಳಬಹುದೆಂಬ ಕಲಮು ಅನವಶ್ಯಕ ಹಾಗೂ ಅಸಮಂಜಸವಾಗಿದೆ. ಯೋಗ್ಯ ರೀತಿಯಲ್ಲಿ ನಡೆಯುತ್ತಿರುವ ಒಂದು ಶಾಲೆಯನ್ನು ಅದಕ್ಕಾಗಿ ತಮ್ಮ ನೆತ್ರರನ್ನೇ ಸೇರಿಸಿ, ಜೀವನ್ನೇ ಸವೆಯಿಸಿ, ಜೀವನವನ್ನೇ ಮೀಸಲಾಗಿರಿಸಿ ಸ್ಥಾಪಿಸಿ, ಬೆಳೆಸಿ, ಪೋಷಿಸಿಕೊಂಡು ಬಂದ ಒಂದು ವಿದ್ಯಾಕಾರವನ್ನು ಸೂಚನೆಕೊಡದೆ, ಕಾರಣಕೊಡದೆ, ಕರ್ತವ್ಯಚ್ಯುತಿಯನ್ನು ಬೊಟ್ಟುಮಾಡಿ ತೋರಿಸದೆ, ವಶಪಡಿಸಿಕೊಳ್ಳುವುದೆಂದರೆ ಇದು "ರಾಜಾ ದರೋಡೆ" ಹೊರತು ಬೇರೇನಲ್ಲ. ಸರಕಾರದ ಕೈಯಲ್ಲಿ ಅಧಿಕಾರ ವಿದೆ— ಖಾಸಗಿ ಸಂಸ್ಥೆಗಳಿಗೆ ಸರಕಾರವೇ ಧನಸಹಾಯ ನೀಡುತ್ತಿದೆ ಎಂಬ ವಿಷಯಗಳು ತೀರಾ ಸತ್ಯ. ಆದರೆ ಅಂತಹ ಸಂಸ್ಥೆಯ ಕಾರಣಕರ್ತರಾದವರ ಮನನೋಯಿಸಿ, ಅವರ ಸಂಸ್ಥೆಯನ್ನು ಸ್ವಾಧೀನಪಡಿಸಿಕೊಳ್ಳುವುದು ದುಬ್ಬಾಳಿಕೆಯ, ಅಧಿಕಾರದ ದುರುಪಯೋಗದ ಪರಮಾವಧಿ! ಬದಲು ಸರಕಾರವು ತಾನು ಆ ಶಾಲೆಯನ್ನು ಯಾಕೆ ವಶಪಡಿಸಿಕೊಳ್ಳುತ್ತಿರುವುದೆಂಬುದನ್ನು ತಿಳಿಸಿ, ಲೋಪದೋಷಗಳನ್ನು ಮನವರಿಕೆಮಾಡಿಕೊಟ್ಟು ಮನ್ಸೂಚನೆ ಕೊಡಬೇಕಲ್ಲವೆ, ಆ ತಪ್ಪುಗಳನ್ನು ತಿದ್ದಿಕೊಳ್ಳಲು, ಅವಕಾಶ ಕೊಡಬೇಕು. ನಡೆವರೆಡಹುವರಲ್ಲದೆ, ಕುಳಿತವ ಕೆಡಹುವರೆ?' ಎಂಬ ಮಾತನ್ನು ಇಲ್ಲಿ ಸ್ಮರಿಸುವುದೊಳಿತು. ತಪ್ಪನ್ನು ಎಲ್ಲರೂ ಮಾಡುತ್ತಾರೆ. ಸರಕಾರವೂ, ಸರಕಾರದ ಅಧಿಕಾರಿಗಳೂ ಮಾಡ ತ್ತಾರೆ ಅದರೆ ಅಂತಹ ತಪ್ಪನ್ನು ತಿದ್ದಿಕೊಳ್ಳಲು ಅವಕಾಶ ಕೊಡುವುದು ವಿವೇಕಿಯ ಲಕ್ಷಣ! ಕೊಲೆಗಡುಕನನ್ನು ಗಲ್ಲುಶಿಕ್ಷೆಗೆ ಗುರಿಮಾಡುವಾಗಲೂ ಆತನಿಗೆ ತನ್ನ ಪಕ್ಷವನ್ನು ಸಮರ್ಥಿಸಿಕೊಳ್ಳಲು ಅವಕಾಶ ಕೊಡಲಾಗುತ್ತದೆ. ಹಾಗಿರ ವಾಗ ಕೇರಳ ಸರಕಾರವ ಈ ಘೋರಣೆಯಲ್ಲಿ ಬದಲಾವಣೆ ಅತ್ಯಗತ್ಯ!

ಖಾಸಗಿ ಸಂಸ್ಥೆಗಳ ಮೇಲೆ ನಿಯಂತ್ರಣವಿಡಲು ಒಂದು ಸ್ಥಾನಿಕ ಮಂಡಳದ ನೇಮಕವು ಯಾವ ಉದ್ದೇಶಕ್ಕಾಗಿಯೋ ತಿಳಿಯದು! ಖಾಸಗಿ ಸಂಸ್ಥೆಗಳ ಕಾರ್ಯಕಲಾಪಗಳ ಮೇಲ್ವಿಚಾರಣೆಗೆ ಆ ಸಂಸ್ಥೆಯ ಮೆನೇಜರರು ಇದ್ದಾರೆ. ಅವರ ಹಾಗೂ ಮುಖ್ಯೋಪಾಧ್ಯಾಯರ ಸಲಹೆ, ಆದೇಶಗಳ ಮೇರೆಗೆ ಶಿಕ್ಷಕ ವರ್ಗ ದುಡಿಯುವುದು. ಈ ಇಬ್ಬರಿಲ್ಲೂ ಕುಂದು, ಕೊರತೆಗಳಿದೆ ಯೆಂದಾದ ಪಕ್ಷದಲ್ಲಿ, ಮೇಲ್ವಿಚಾರಣೆಗೆ ಸರಕಾರೀ ಅಧಿಕಾರಿಗಳೇ ಇದ್ದಾರೆ. ಅವರು ಶಿಕ್ಷಣ ಮಟ್ಟ, ಆಡಳಿತೆ, ಅಭ್ಯಾಸಕ್ರಮ ಇವುಗಳ ಕುರಿತು ತನಿಖೆ ನಡೆಸಿ, ಸೂಕ್ತ ಸಲಹೆಗಳನ್ನು ಕೊಡುತ್ತಾರೆ ಅಂದಮೇಲೆ ಈ ಸ್ಥಾನಿಕ ಮಂಡಳದ ಅವಶ್ಯಕತೆ ಏನು? ಶಾಲೆಯ ಮೇಲ್ವಿಚಾರಣೆಯನ್ನು ಸ್ಥಾನಿಕ ಮಂಡಳ ವಹಿಸಿಕೊಂಡರೆ ಒಳಿತಿಗಿಂತ ಕೆಡುಕುಗಳೇ ಹೆಚ್ಚು! ಸ್ಥಾನಿಕ ಮಂಡಳದಲ್ಲಿ ಹಲವಾರು ಊರ ಮುಖಂಡರಿರುತ್ತಾರೆ ಆ ಮಂಡಳದ ಸದಸ್ಯರು ಏಕಪಕ್ಷೀಯ ವಾಗಿ ದುಡಿಯುವರೆಂಬುದಕ್ಕೆ ಸರಕಾರ ಭರವಸೆ ತಾಳಲು ಸಾಧ್ಯವಿಲ್ಲ ಆ ಆಡಳಿತೆ ಮಂಡಳಿಯಲ್ಲಿ ಹಲವಾರು ರಾಜಕೀಯ ಪಕ್ಷದ ಹಲವಾರು ಧುರೀಣರಿದ್ದರೆ ಆದರಿಂದ ಶಾಲೆಯಲ್ಲೂ ರಾಜಕೀಯ ಪಕ್ಷಗಳು ತಲೆದೋರುವುವು! ಆ ಸ್ಥಾನಿಕ ಮಂಡಳಿಯ ಸದಸ್ಯರಿಲ್ಲರೂ ತಮ್ಮ ಅಧಿಕಾರ ಬಲಾಯಿಸಲು ಯತ್ನಿಸಿದರೆ ಈ ದೆಸೆಯಲ್ಲಿ ಕಪ್ಪುಕೈಳಗಾಗುವವರು ಶಿಕ್ಷಕರು ಮಾತ್ರ! ಶಿಕ್ಷಣದ ವಿಚಾರ ಮೇಲ್ವಿಚಾರಣೆಗೆ ಶಿಕ್ಷಣ ತಜ್ಞರು ಇರಬೇಕಲ್ಲದೆ ಶಿಕ್ಷಣ ಕ್ಷೇತ್ರದ ಗಂಧಗಾಳಿ ತಿಳಿಯದ ಸ್ಥಾನಿಕ ಮಂಡಳದವರಲ್ಲ! ಹೀಗಿರುವಾಗ ಈ ಮಂಡಳದಿಂದ ಶಾಲೆಯ ಅಭಿವೃದ್ಧಿಯ ಬದಲು ಅವನತಿಯೇ ಆಗುವುದು!

ಶಿಕ್ಷಕರನ್ನು ನೇಮಿಸುವಾಗ ಪಬ್ಲಿಕ್ ಸರ್ವಿಸ್ ಕಮಿಶನಿನವರಿಂದ ತಯಾರಿಸಲ್ಪಟ್ಟ ಜಿಲ್ಲಾವಾರು ಪಟ್ಟಿಯಿಂದಲೇ ಖಾಸಗಿ ಸಂಸ್ಥೆಗಳು ಶಿಕ್ಷಕರನ್ನು ಆರಿಸಬೇಕೆಂದು ಮಸೂದೆ ಹೇಳುತ್ತದೆ. ಇದು ಸ್ವಲ್ಪ ಮಟ್ಟಿಗೆ ಸೌಮ್ಯ ಕ್ರಮವಾಗಿರುವುದು. ಈ ದಿಸೆಯಲ್ಲಿ ಪ್ರ. ಸ. ವಾ. ಪಕ್ಷದ ಶ್ರೀ ತಾನು ಪಿಳ್ಳೆಯವರು ಮಾಡಿದ ಸೂಚನೆಯು ಹಿಂದಿನ ಸೂಚನೆಗಿಂತ ಗಮನಾರ್ಹವಾಗಿರುವುದು. ಜಿಲ್ಲಾವಾರು ಪಟ್ಟಿಗಳಿಗಿಂತ ರಾಜ್ಯವಾರು ಪಟ್ಟಿಯಿಂದ ಆರಿಸುವುದೇ ಉತ್ತಮ. ಕೆಲವು ಸಂದರ್ಭ ಅಪೇಕ್ಷಿತ ಯೋಗ್ಯತೆಯುಳ್ಳ ಅಧ್ಯಾಪಕರು ಆ ಜಿಲ್ಲೆಯ ಪಟ್ಟಿಯಲ್ಲಿಲ್ಲದಿದ್ದರೆ ಇನ್ನೊಂದು ಜಿಲ್ಲೆಯಲ್ಲಿ ಅಂತಹ ಅಧ್ಯಾಪಕರು ಸಿಗಬಹುದಾದರೆ ಅವರನ್ನು ಇನ್ನೊಂದು ಜಿಲ್ಲೆಯಲ್ಲಿ ನೇಮಿಸುವ ಸಾಲಭ್ಯ ಇರಬೇಕಾದುದು ಅಗತ್ಯ! ಇದರಿಂದ ಯಾರಿಗೂ ನಷ್ಟವಿಲ್ಲ.

ಕೇರಳ ಶಿಕ್ಷಣ ಮಸೂದೆಯಲ್ಲಿ ಉತ್ತಮಾಂಶಗಳೂ ಇಲ್ಲವೆಂದಲ್ಲ. ಆದರೆ ಹಲವಾರು ಕಲಮುಗಳು ಉತ್ತಮವಿವೆ. ಖಾಸಗಿ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಶಿಕ್ಷಕರ ಸಂಬಳ ಮತ್ತು ಸೇವಾನಿಯಮಗಳನ್ನು ಅದು ಭದ್ರಪಡಿಸಿ, ಕೆಲಸಗಾರರಿಗೆ ಸಂರಕ್ಷಣೆಯನ್ನೂ ದಯಿಸುತ್ತದೆ. ಇದು ಸ್ವಾಗತಾರ್ಹ ಹಾಗೂ ಅಭಿನಂದನೀಯ! ಖಾಸಗಿ ಶಾಲೆಯ ಅಧ್ಯಾಪಕರುಗಳಿಗೆ ಸರಕಾರವೇ ನೇರವಾಗಿ ಸಂಬಳ ವಿತರಣೆ ಮಾಡುವುದು ನಿಜಕ್ಕೂ ಸ್ತುತ್ಯ. ತರಬೆ ತಾದ ಉಪಾಧ್ಯಾಯರು ಕೆಲಸ ವಿಲ್ಲದೆ ಅಲೆದಾಡುತ್ತಿರುವ ಈ ಸಂದರ್ಭದಲ್ಲಿ ಉಪಾಧ್ಯಾಯರಿಗೆ ಹಲವೆಡೆ ಸಂಪೂರ್ಣ ಸಂಬಳದ ಜವಾಬ್ದಿ ಮೆನೇಜರುಗಳದೇ ಆಗುತ್ತಿಲ್ಲವೆಂಬ ದೂರುಗಳನ್ನು ಕೇಳುತ್ತೇವೆ. ಈ ವ್ಯವಸ್ಥೆಯಿಂದ ಉಪಾಧ್ಯಾಯರಿಗೆ ಸಿಕ್ಕುವ ಸಂಬಳವಾದರೂ ಪೂರ್ಣ ಸಿಕ್ಕುವಂತಾಗುವುದು.

ಅಧ್ಯಾಪಕರ ಸೇವಾನಿಯಮಗಳನ್ನು ಭದ್ರಪಡಿಸುವ ಕಲಮೂ ಈ ಮಸೂದೆಯಲ್ಲಿದೆ. ಹೀಗಾಗಿ ಈಗ ಸರಕಾರೀ ಇಲಾಖೆಯ ಅಧಿಕಾರಿಗಳ ಖಾಲಿಗೆ ಒಂದು ದೊಡ್ಡ ಹೊರೆಯೇ ಆಗಿರುವ. ಮೆನೇಜರ್ ಹಾಗೂ ಉಪಾಧ್ಯಾಯರ ಕಾದಾಟದ ಇತ್ಯರ್ಥ ಮಾಡುವ ಕೆಲಸ ಇನ್ನು ಮುಂದೆ ಇಲ್ಲದಂತಾಗುವುದು. ಈ ರೀತಿಯ ಭಿನ್ನಾಭಿಪ್ರಾಯಗಳು ಶಾಲೆಗಳಲ್ಲಿ ತೋರಿ ಶಿಕ್ಷಣವು ಹಾಳಾದ ಪರಿಸ್ಥಿತಿ ಹಲವು ಶಾಲೆಗಳಲ್ಲಿ ಬಂದೊದಗಿದೆ. ಇನ್ನು ಮುಂದೆ ಇಂತಹ ಪರಿಸ್ಥಿತಿಗಳಿಗೆ ಅವಕಾಶ ದೊರೆಯುವಂತೆ ಇಲ್ಲ. ಇದರಿಂದ ಉಪಾಧ್ಯಾಯರಿಗೆ ಕೆಲಸದ ಭದ್ರತೆ ದೊರಕಿ, ತುಸು ಮನಶ್ಶಾಂತಿ ದೊರಕಬಹುದು.

ಕೆಲವು ಖಾಸಗಿ ಶಾಲೆಗಳಲ್ಲಿ ಅನಾವಶ್ಯಕವಾದ ಫೀಸುಗಳನ್ನು ವಿದ್ಯಾರ್ಥಿಗಳಿಂದ ವಸೂಲುಮಾಡಲಾಗುತ್ತಿದೆ ಎಂಬ ದೂರುಗಳನ್ನು ಕೇಳುತ್ತೇವೆ. ಅದರೆ ಇಂತಹ ದೂರುಗಳು ಎಷ್ಟರಮಟ್ಟಿಗೆ ಸತ್ಯವೋ ಹೇಳಬರುವುದಿಲ್ಲ. ಆದರೂ ಮಸೂದೆಯನ್ವಯ ಸರಕಾರವು ವಿಧಿಸಿದ ನಿಶ್ಚಿತ ಫೀಸುಗಳನ್ನಲ್ಲದೆ ಇನ್ನಾವುದನ್ನೂ ಹೆಚ್ಚಿಗೆ ವಸೂಲು ಮಾಡಬಾರದೆಂದಿರುವುದರಿಂದ ಹಿಂದಿನ್ನದೂರುಗಳಿಗೆ ಇನ್ನು ಅವಕಾಶ ದೊರೆಯಲಾರದು.

ಪರಿಶೀಲಕ ಸಮಿತಿಯು ಸೂಚಿಸಿದ ವಿಷಯಗಳನ್ನು ಈ ಮಸೂದೆಯಲ್ಲಿ ಸೇರಿಸುವದರಿಂದ ಈ ಮಸೂದೆಯ ಬಿಗಿತವು, ತುಸು ಕಡಿಮೆಯಾಗಬಹುದು. ಅಲ್ಪ ಸಂಖ್ಯಾಕರ ಹಕ್ಕುಗಳಿಗೆ ಈ ಕಾಯದೆಯನ್ವಯ ಯಾವದೇ ವ್ಯತ್ಯಯ ಬರುವುದಿಲ್ಲ. ಸರಕಾರೇತರ ಶಾಲೆಯನ್ನು ಅಡಳಿತ ಮಂಡಳದವರು ಒಂದು ಎರ್ಡು ಸೂಚನೆ ಕೊಟ್ಟು ಮುಚ್ಚಬಹುದು, ಸರಕಾರವು ಶಾಲೆಯನ್ನು ವಶಪಡಿಸಿಕೊಳ್ಳುವಾಗ ಧಾರ್ಮಿಕ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿದ್ದ ಆದರ ಜಂಗಮ ಆಸ್ತಿಯನ್ನು ವಶಪಡಿಸಿಕೊಳ್ಳಬಾರದು ಮೊದಲಾದ ಸೂಚನೆಗಳನ್ನು ಕಾರ್ಯಗತಮಾಡುವುದು ಒಳಿತು ಹೀಗೆ ಪರಿಶೀಲಕ ಸಮಿತಿಯವರು ಮುಂದಿಟ್ಟ ಸೂಚನೆಗಳನ್ನು ಯೋಜನೆಯಲ್ಲಿ ಅಳವಡಿಸಿಕೊಂಡರೆ ಆಗ ಕೇರಳದ ಮಸೂದೆ ಸ್ವಾಗತಾರ್ಹವೆನಿಸುವುದು.

ಕೇವಲ ಶಿಕ್ಷಣದ ರಾಷ್ಟ್ರೀಕರಣ ಮಾಡುವ ಭರದಲ್ಲಿ ಶಿಕ್ಷಣ ಕ್ಷೇತ್ರದ ಹಲವಾರು ಕ್ಲಿಷ್ಟ ವಿಷಯಗಳನ್ನು ತಿಳಿಯದೆ ಮಸೂದೆ ತಯಾರಿಸಿದುದು ಶೋಚನೀಯ! ಈ ಮಸೂದೆ ತಯಾರಿಸುವ ವೇಳೆ ರಾಜ್ಯದ ಶಿಕ್ಷಣ ತಜ್ಞರ ಸಲಹೆ ಪಡೆದಿಲ್ಲ ಎಂಬ ಆಕ್ಷೇಪವನ್ನು ಪರಿಶೀಲಕ ಸಮಿತಿಯ ಕಾಂಗ್ರೆಸ್ ಸದಸ್ಯರು ಎತ್ತಿದ್ದಾರೆ. ಹೀಗಿರುವಾಗ ಕೇವಲ ಖಾಸಗಿ ಸಂಸ್ಥೆಗಳನ್ನು ನೆಲಸಮಮಾಡುವುದೇ ಈ ಮಸೂದೆಯ ಘೋರಣೆ ಇದ್ದಂತೆ ತೋರುತ್ತದೆ. ಇದು ಕೂಡದು. ಖಾಸಗಿ ಸಂಸ್ಥೆಗಳಲ್ಲೂ ಸರಕಾರೀ ಸಂಸ್ಥೆಗಳಿಗಿಂತಲೂ ಉತ್ತಮ ರೀತಿಯಲ್ಲಿ ಕಾರ್ಯ ನಡೆಸುವ, ವ್ಯವಸ್ಥಿತ ರೀತಿಯಲ್ಲಿ ಪಡೆಯುವ ಸಂಸ್ಥೆಗಳು ಹೇರಳವಿವೆ. ಹಾಗಿರುವಾಗ ಸರಕಾರವು ಎಲ್ಲಾ ಸಂಸ್ಥೆಗಳನ್ನೂ ಒಂದೇ ದಂಡವಾನದಿಂದ ಆಳಿಯುವುದು ಅಷ್ಟು ಹಿತಕರವೆನಿಸಲಾರದು. ಖಾಸಗಿ ಸಂಸ್ಥೆಗಳ ಆಡಳಿತೆಯಲ್ಲಿ ಲೋಪದೋಷಗಳಿದ್ದ ಸಂಸ್ಥೆಗಳಿರಬಹುದು. ಅಂತಹ ಸಂಸ್ಥೆಗಳಿಗೆ ಮುನ್ಸೂಚನೆ ಕೊಟ್ಟು, ತಪ್ಪನ್ನು ತಿದ್ದಿಕೊಳ್ಳಲು ಅವಕಾಶ ಕೊಟ್ಟು, ಕೊನೆಗೆ ಅಂತಹ ಸಂಸ್ಥೆಗಳನ್ನು ವಶಪಡಿಸಿಕೊಳ್ಳುವುದು ಸೌಮ್ಯವಾರ್ಗ. ಎಲ್ಲ ದೃಷ್ಟಿಯಿಂದಲೂ ಹಿತಕರ. ಆದುದರಿಂದ ಕೇರಳ ಸರಕಾರವು ಪರಿಶೀಲಕ ಸಮಿತಿಯ ಸೂಚನೆಗಳನ್ನು ಅಳವಡಿಸಿಕೊಂಡು, ಮಸೂದೆಯಲ್ಲಿ ತಿದ್ದುಪಡಿ ಮಾಡುವುದು ಸರ್ವ ದೃಷ್ಟಿಯಿಂದಲೂ ಹಿತಕರ ಎಂದು ಹೇಳಿಬಹುದು.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

NAVAYUGA

Popular Kannada Weekly

Founder —

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೫-೯-೧೯೫೭	೧

ಮೆಲುನಡೆ

ಅಖಿಲ ಭಾರತ ಕಾಂಗ್ರೆಸು ಸಮಿತಿಯ ಸಭೆಯು ಹೊಸದೆಹಲಿಯಲ್ಲಿ ಕಳೆದ ವಾರ ಸೇರಿದ್ದಾಗ ಯೋಜನಾ ಸಚಿವರಾದ ಶ್ರೀ ನಂದಾರವರು ಭೂಸುಧಾರಣೆಯ ಬಗ್ಗೆ ಒಂದು ಟಿಪ್ಪಣಿಯನ್ನು ತಯಾರಿಸಿಕೊಟ್ಟರು. ಇದನ್ನು ಓದಿದ ಯಾರಿಗಾದರೂ ಕಾಂಗ್ರೆಸು ಸರಕಾರವು ಭೂಸುಧಾರಣೆಯ ಕಡೆಗೆ ಕೊಡಬೇಕಾದಷ್ಟು ಗಮನವನ್ನು ಅಪೇಕ್ಷಣೀಯವೆನಿಸಿದ ತ್ವರೆಯೊಡನೆ ಕೊಟ್ಟಿಲ್ಲವೆಂದು ಸ್ಪಷ್ಟವಾಗುತ್ತದೆ ಭೂಸುಧಾರಣೆಯು ಅಪರಿಹಾರ್ಯವೆಂದೂ ಅತ್ಯಾವಶ್ಯಕವೆಂದೂ ಉತ್ಪಾದನೆಯನ್ನು ಹೆಚ್ಚಿಸಲಿಕ್ಕೂ ಸಾಮಾಜಿಕ ವಿಷಮತೆಯನ್ನು ನಿವಾರಿಸಲಿಕ್ಕೂ ರಾಷ್ಟ್ರವನ್ನು ಪ್ರಗತಿಪಥದಲ್ಲಿ ಮುಂದೊತ್ತುವುದಕ್ಕೂ ಇದು ತಾರಕವೆಂದೂ ಈ ಸಭೆಯಲ್ಲಿ ಅಭಿಪ್ರಾಯಪಡಲಾಯಿತು ಆದರೆ ಕೇವಲ ಅಭಿಪ್ರಾಯವನ್ನಷ್ಟೆ ವ್ಯಕ್ತಪಡಿಸಿ, ಕಾರ್ಯಭಾಗದ ನಿರ್ವಹಣೆಯ ಪ್ರಶ್ನೆ ಬಂದಾಗ ಆಲಸ್ಯವನ್ನು ತೋರಿಸುವುದೇ ಕಾಂಗ್ರೆಸು ಸದ್ಯದ ಮತ್ತು ಸರಕಾರದ ನಿಲುಮೆಯಾಗಿರುವಂತೆ ಜನತೆಗೆ ತೋರಿದೆ ಶ್ರೀ ನಂದಾರವರ ಟಿಪ್ಪಣಿಯಲ್ಲಿ ಮೂಲ ಭೂತವಾದ ಸಮಸ್ಯೆ ಎಂದು ಭಾವಿಸಲ್ಪಟ್ಟಿರುವ ಭೂ ಸುಧಾರಣೆಯ ವಿಷಯದಲ್ಲಿ ಕಾಂಗ್ರೆಸು ಸರಕಾರಗಳು (ಅಂದರೆ ರಾಜ್ಯ ಸರಕಾರಗಳು) ತಮಗೆ ತೋರಿದಂತೆ ನಡೆದಿರುವುದು ವರ್ಣಿಸಲ್ಪಟ್ಟಿದೆ. ಸುಸಂಬದ್ಧವಾದ, ವ್ಯಾಪಕವಾದ ಮತ್ತು ರಾಷ್ಟ್ರೀಯ ಜೀವನದ ಮೇಲೆ ಏಕಕಾಲದಲ್ಲಿ ಪರಿಣಾಮವನ್ನು ಬೀರಬಲ್ಲ ವೈಜ್ಞಾನಿಕ ಕ್ರಮಗಳನ್ನು ಕೈಗೊಂಡದ್ದೇ ಇಲ್ಲ! ಪರಿಣಾಮವು ಗೊತ್ತಿದ್ದದ್ದೇ—ವೈನಿಧ್ಯದ ಪರಾಕಾಷ್ಠೆ! ಅಂದರೆ ಒಬ್ಬೊಬ್ಬರದೂ, ಒಂದೊಂದು ರಾಜ್ಯಸರಕಾರದ್ದು, ಒಂದೊಂದು ಬಗೆ! ರಾಜ್ಯಸರಕಾರಗಳಲ್ಲಿ ಹೆಚ್ಚಿನವು ಭೂ ಸುಧಾರಣೆಯ ಕ್ರಮವೆಂದು ತಂದಿರುವ ಶಾಸನವು ಯಾವ ದೃಷ್ಟಿಯಿಂದಲೂ ಪರಿಣಾಮಕಾರಿಯಾಗಿಲ್ಲ ಉದಾಹರಣೆಗೆ ಒಕ್ಕಲೆಬ್ಬಿಸಬಾರದೆಂದು ಕೆಲವು ರಾಜ್ಯಸರಕಾರಗಳು ಶಾಸನ ಮಾಡಿವೆ—ಇದನ್ನು ಕಾರ್ಯಗತಗೊಳಿಸುವ ವ್ಯವಸ್ಥೆ ಮಾತ್ರ ಏನೇನೂ ಸಮರ್ಪಕವಾಗಿಲ್ಲ. ಪರಿಣಾಮದಲ್ಲಿ ಶಾಸನವು ಪುಸ್ತಕದ ಬದನೆಕಾಯಿಯಾಗಿದೆಯಷ್ಟೆ. ರೈತರ ಅಥವಾ ನಿಜವಾದ ಸಾಗುವಳಿದಾರರ ಹಿತರಕ್ಷಣೆಯನ್ನು ವಾಸ್ತವವಾಗಿ ಮಾಡುತ್ತಿಲ್ಲ. ಕೇವಲ ಮಾನಸಿಕಸಮಾಧಾನ ಕಾಂಗ್ರೆಸುಸರಕಾರಕ್ಕೆ ಇದರಿಂದ? ಗಬಹುದು; ಆದರೆ ಜನತೆಗೆ ಮಾತ್ರ ಇನ್ನೂ ಸುಖ ಲಭಿಸಿಲ್ಲ. ಇಲ್ಲಿ ಗಮನಿಸಬೇಕಾದ ಮತ್ತೊಂದು ವಿಷಯವೇನೆಂದರೆ ಇಷ್ಟು ಸಣ್ಣ "ಸುಧಾರಣೆ"ಯನ್ನು ಸಹ ಎಲ್ಲ ರಾಜ್ಯ ಸರಕಾರಗಳು ಕೈಗೊಂಡಿಲ್ಲ—ಕೇವಲ ಕೆಲವು ಮಾತ್ರ ಈ ಹೆಜ್ಜೆಯನ್ನಿಟ್ಟವೆ, ರಾಜ್ಯ ಸರಕಾರಗಳಿಗೆ ಯಾವ ಪ್ರಕಾರ ಸುಧಾರಣೆಗಳನ್ನು ಮಾಡುತ್ತಾ ಹೋಗಬೇಕೆಂದು ಹೇಳುವವರಿಲ್ಲವೆ? ನಿಜಕ್ಕೂ ಇದ್ದಾರೆ—ಸ್ವತಃ ಕಾಂಗ್ರೆಸು ಭೂಸುಧಾರಣೆಗೆ ಬದ್ಧವಾಗಿದೆ, ಅಲ್ಲದೆ ಯೋಜನಾ ಆಯೋಗವು ಭೂಸುಧಾರಣೆಗು ಎಲ್ಲ ವಿವರಗಳನ್ನೂ ವರ್ಣಿಸಿರುತ್ತದೆ. ಇಷ್ಟಾಗಿಯೂ ರಾಜ್ಯಸರಕಾರಗಳು ತಮಗೆ ಸೀಡಲಾದ ಮಾರ್ಗದರ್ಶನವನ್ನು ಸ್ವೀಕರಿಸುತ್ತಿಲ್ಲವಾದರೆ ತೋರಿಸಿಕೊಟ್ಟ ದಾರಿಯಲ್ಲಿ ಮುನ್ನಡೆಯತ್ತಿಲ್ಲವಾದರೆ— ಕಾಂಗ್ರೆಸು ರಾಷ್ಟ್ರವನ್ನು ಪ್ರಗತಿಯತ್ತ ವಿಳಂಬವಿಲ್ಲದೆ ಕೊಂಡೊಯ್ಯುವುದೆಂಬ ನಂಬಿಕೆಯನ್ನಿಟ್ಟುಕೊಂಡು ಬಂದಿರುವ ಜನತೆ ಮೋಸಹೋದಂತೆಯೇ ಸರಿತಾನೆ! ಸ್ವಾತಂತ್ರ್ಯ ದೊರೆತು ಹತ್ತು ವರ್ಷಗಳು ಸಂದರೂ ಭೂಸುಧಾರಣೆಯ ಸಾಮಾನ್ಯ ತತ್ವಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದ ಕಾಂಗ್ರೆಸಿನ ಮೇಲೆ ಜನತೆಯ ನಿಷ್ಠೆ ಮತ್ತು ಅಭಿಮಾನಗಳು ಕುಂದುತ್ತಾ ಬಂದಿರುವುದು ಆಶ್ಚರ್ಯವೇನಲ್ಲ ಎಂಬ ಭಾವನೆಯು ನಿಷ್ಠಾವಂತ ಕಾಂಗ್ರೆಸಿಗರಲ್ಲೂ ಮೂಡುವುದಕ್ಕೆ ಪ್ರಾರಂಭವಾಗಿದೆ. ನಂದಾರವರು ಹೇಳುತ್ತಾರೆ— ರಾಜ್ಯ ಸರಕಾರಗಳು ತಾವಿತ್ತ ಆದೇಶದಂತೆ ನಡೆಯುತ್ತಿಲ್ಲ ಎಂದು! ಇದೊಂದು ಜೋಕ್— ಎಂಡನೇ ಯೋಜನೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಸಿದ್ಧಪಡಿಸಲಾಗಿದೆ ಮತ್ತು ಎಲ್ಲ ರಾಜ್ಯಸರಕಾರಗಳೂ ಇದನ್ನು ಒಪ್ಪಿರುತ್ತವೆ ತಾವು ಒಪ್ಪಿದ ಕೆಲಸವನ್ನು ಮಾಡಲು ರಾಜ್ಯ ಸರಕಾರಗಳು ಹಿಂಜರಿಯುತ್ತವಾದರೆ ಅವುಗಳ ಒಪ್ಪಿಗೆಗೆ ಏನು ಬೆಲೆಯೋ ಗೊತ್ತಾಗುವುದಿಲ್ಲ ಗೇಣಿಯು ಒಟ್ಟು ಉತ್ಪಾದನೆಯ ಎದರಲ್ಲಿ ಒಂದಂಶಕ್ಕಿಂತ ಹೆಚ್ಚಾಗಿರದಂತೆ ನೋಡಿಕೊಳ್ಳಲೂ ಒಕ್ಕಲನ್ನು ನೇರವಾಗಿ ಸರಕಾರದ ಸಂಪರ್ಕಕ್ಕೆ ತಂದು ಅತನಿಗೆ ತಕ್ಕ ಭದ್ರತೆ ಸಿಗುವಂತ ಮಾಡಲೂ ಮೂಡಿದ ಶಾಸನವು ಕಾರ್ಯಗತವಾಗುವಂತೆ ಆಡಳಿತ ವಿಧಾನಗಳನ್ನು ಪರಿಷ್ಕರಿಸಲೂ ರಾಷ್ಟ್ರೀಯ ತಳಹದಿಯ ಮೇಲೆ ಏಕಕಾಲದಲ್ಲಿ ಎಲ್ಲ ರಾಜ್ಯ ಸರಕಾರಗಳೂ ಭುಜಕ್ಕೆ ಭುಜಕೊಟ್ಟು ಈ ವಿಷಯದಲ್ಲಿ ಮುನ್ನಡೆಯಲೂ ತಕ್ಕ ಕಾಲವು ಈಗ ಬಂದಿದೆ—ಇನ್ನಾದರೂ ಕಡಮಾಡಲಾಗದು ಎಂದು ನಂದಾರವರು ಪುನಃ ಒತ್ತಾಯಿಸಿದ್ದಾರೆ. ಆದರೆ ಅಖಿಲಭಾರತ ಕಾಂಗ್ರೆಸು ಸಮಿತಿಯು ಭೂ ಸುಧಾರಣೆಯನ್ನು ತ್ವರೆಗೊಳಿಸುವ ಬಗ್ಗೆ ಮತ್ತು ಈ ಸಂಬಂಧದಲ್ಲಿ ಇದಿರಿಸಬೇಕಾದ ಸಮಸ್ಯೆಗಳ ಪರಿಹಾರದ ಬಗ್ಗೆ ಪ್ರಭಾವಿ ಕ್ರಮಗಳನ್ನೇನೂ ಸೂಚಿಸಿದಂತೆ ಕಂಡುಬರಲಿಲ್ಲ. ಇದು ಬೇಸರಬರಿಸುವ ಮಾತು— ಭಾರತದಲ್ಲಿ ಕಮ್ಯುನಿಸ್ಟರು ಕೇರಳದ ರಾಜ್ಯಸೂತ್ರಗಳನ್ನು ತಮ್ಮ ಕೈಗೆ ತೆಗೆದುಕೊಂಡು, ಕಾಂಗ್ರೆಸು ಸರಕಾರವು ಮಾಡಲು ಹಿಂದೆಗೆದ ಸುಧಾರಣೆಗಳನ್ನು ತಾವು ಅತ್ಯಲ್ಪಾವಧಿಯಲ್ಲಿ ಮಾಡಿ ತೋರಿಸುತ್ತಿದ್ದೇವೆಂದು ಹೇಳಿಕೊಳ್ಳುತ್ತಿರುವಾಗ, ರಾಜ್ಯಮಟ್ಟದ ಕಾಂಗ್ರೆಸು ಧುರೀಣರು ಮಾತ್ರ ಏನೂ ಅಗಿಲ್ಲವೆಂಬಂತೆ ಈ ಜ್ವಲಂತ ಪ್ರಶ್ನೆಯತ್ತ ನೋಡುತ್ತಿರುವುದು— ಅಲ್ಲ, ಉಪೇಕ್ಷೆಯನ್ನೆ ವ್ಯಕ್ತಪಡಿಸುತ್ತಿರುವುದು— ಕಾಂಗ್ರೆಸಿನ ಜನಪ್ರಿಯತೆಯನ್ನು ಕಾಯ್ದುಕೊಳ್ಳಲು ಪೋಷಕವಾದ ವಿಷಯವಲ್ಲ. ಕೊಟ್ಟ ಮಾತಿಗೆ ತಪ್ಪಿ ನಡೆಯುವುದು ಸರಿಯಲ್ಲ ಎಂಬ ನೀತಿಬೋಧೆಯ ವಾರವನ್ನು ಜನತೆ ಕಾಂಗ್ರೆಸಿಗೆ ಕಲಿಸುವ ದಿನ ಹತ್ತಿರವಾಗುತ್ತಿದೆ— ಕಾಗ್ರೆಸು ಹಿಂದಿನಿಂದ ಪಶ್ಚಾತ್ತಾಪಪಡುವ ಬದಲು ಈಗಲಾದರೂ ಕಾರ್ಯಪ್ರವೃತ್ತರಾದರೆ ಹಿತಕರ.

ಶುಭಾಶಯಗಳು!

ನಾವು ಈ ಸಂಚಿಕೆಯೊಂದಿಗೆ ಮೂವತ್ತೇಳನೇ ವರ್ಷಕ್ಕೆ ಕಾಲಿಟ್ಟದ್ದೇವೆ ಪತ್ರಿಕೋದ್ಯಮದ ಕಷ್ಟನಿಷ್ಠುರಗಳನ್ನು ಪುನಃ ನಿವೇದಿಸಿ ಒಮಗರ ಕನಿಕರ ಬುದ್ಧಿಯನ್ನು ಜಾಗೃತಗೊಳಿಸಿ ಅವರಿಂದ ನಮಗೆ ಸಿಗಬೇಕಾದ ಸಹಾಯವನ್ನು ತ್ವರೆಯಿಂದ ಪಡೆಯಲು ಇದೊಂದು ಸದವಕಾಶ ಈ ಪ್ರಸಂಗದಲ್ಲಿ ನಾವು ಪ್ರಾರ್ಥಿಸುವುದಿಷ್ಟೇ—ಚಂದಾಹಣ ಬಾಕಿಮಾಡಿಕೊಂಡಿರುವ ಎಲ್ಲರೂ ತಮ್ಮ ಬಾಕಿಯನ್ನು ವಿಳಂಬವಿಲ್ಲದೆ ನಮಗೆ ರವಾನಿಸಿ ನಮ್ಮ ಹೊರೆಯನ್ನು ಭಾರವನ್ನು ಇಳಿಸಬೇಕು. ಪ್ರತಿಯೊಬ್ಬನೂ ತನ್ನ ನೆರೆಯವರಲ್ಲಿ ಒಬ್ಬನನ್ನಾದರೂ ಹೊಸತಾಗಿ ಚಂದಾದಾರನನ್ನಾಗಿ ಸೇರಿಸಿ, ಹಾಗೆ "ನವಯುಗ"ದ ಬಗ್ಗೆ ತನಗಿರುವ ಅಭಿಮಾನವನ್ನು ವ್ಯಕ್ತಪಡಿಸಬೇಕು, ಮತ್ತು ಈ ಪತ್ರಿಕೆಯು ಪುಷ್ಟವಾಗುವಂತೆ ನೋಡಿಕೊಳ್ಳಬೇಕು. ನಾವು ಕಳೆದ ವರ್ಷದಲ್ಲಿ ನವಯುಗದಲ್ಲಿ ಅನೇಕ ಚಿಕ್ಕ ಲೇಖನಗಳನ್ನು ಸ್ವಾರಸ್ಯವಾದ ನೂರಾರು ವಿಷಯಗಳ ಮೇಲೆ ಪ್ರಕಟಿಸಿದ್ದೇವೆ. ಹಿಂದ ನಡೆದುಬಂದ ದಾರಿಗಿಂತ ತುಸು ಬೇರೆ ರೀತಿಯಲ್ಲಿ ಈ ಲೇಖನಗಳನ್ನು ಒದಗಿಸಿಕೊಟ್ಟಿದ್ದೇವೆ ಇದು ಸ್ವಾಗತಾರ್ಹವಾದ ಬದಲಾವಣೆ ಎಂದೂ ಹೆಚ್ಚಿನ ಜನರಿಗೆ ಇದು ಮೆಚ್ಚಿಗೆಯಾಗಿರಬೇಕೆಂದು ಭಾವಿಸಿದ್ದೇವೆ ಪ್ರಸ್ತುತ ವರ್ಷದಲ್ಲಿಯಾದರೂ ಹೀಗೇ ಮುಂದುವರಿಯ ತಮ್ಮೆಲ್ಲರ ಗೌರವಾದರಗಳನ್ನು ಉಳಿಸಿಕೊಂಡು ಹೋಗುವುದೇ ನಮ್ಮ ನಿರ್ಧಾರ ನಮಗೆ ನೆರವಾದ ಎಲ್ಲರಿಗೂ ನಮ್ಮ ಹಾರ್ದಿಕ ಶುಭಾಶಯಗಳು!

ಸಂಕ್ಷಿಪ್ತ ಸುದ್ದಿಗಳು

ಕರ್ನಾಟಕವಲ್ಲ; ಮೈಸೂರು!

ಕನ್ನಡ ಭಾಷಾಪ್ರದೇಶಗಳೆಲ್ಲ ಒಂದಾಗಿ 'ಮೈಸೂರು' ರಾಜ್ಯದ್ದಾವೆ. ಈ ರಾಜ್ಯದ ಕಾಂಗ್ರೆಸ್ ಪ್ರಾದೇಶಿಕ ಸಮಿತಿಗೆ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯೆಂದು ಹೆಸರಿಡಬೇಕೆ, ಇಲ್ಲವೆ ಕರ್ನಾಟಕವೆಂದಿಡಬೇಕೇ ಎಂದು ಪ್ರಾದೇಶಿಕ ಕಾಂ. ಸಮಿತಿಯಲ್ಲಿ ಹೊಯ್ಕಯ್ಯ ಆಗಿತ್ತು ಅಲ್ಲದೆ ಕಾರ್ಯಕಾರಿ ಸಮಿತಿಯಲ್ಲಿ ಯಾವ ನಿರ್ಧಾರವೂ ಇದು ವರೆಗಾಗಿಲ್ಲ ಹೀಗಿರುವಾಗ, ಮೊನ್ನೆ ನಡೆದ ಎ ಐ ಸಿ ಸಿ.ಯ ಈ ಪ್ರಾದೇಶಿಕ ಸಮಿತಿಗೆ ಕರ್ನಾಟಕದ ನಾಮವನ್ನಲ್ಲ; ಮೈಸೂರಿನ ಹೆಸರನ್ನೆ ಕೊಡಬೇಕೆಂದು ತೀರ್ಮಾನಿಸಿ, ಅದರ ಪ್ರಧಾನ ಕಾರ್ಯಾಲಯವು ಬೆಂಗಳೂರಲ್ಲಿಯೇ ಇರಬೇಕೆಂದು ನಿರ್ಧರಿಸಿದೆ.

ಕಾರವಾರಕ್ಕೆ ರೈಲು ಮಾರ್ಗ

ದಾಂಡೇಲಿಯಿಂದ ಕಾರವಾರಕ್ಕೆ ರೈಲುದಾರಿ ಹಾಕುವ ಹಂಚಿಕೆಯೊಂದು ಈಗ ಕೇಂದ್ರ ಸರಕಾರದ ಮುಂದಿದೆ. ಈ ಯೋಜನೆಯ ಅವಶ್ಯಕತೆಯನ್ನು ವಿಷದಪಡಿಸಿ, ಅದನ್ನು ತೀವ್ರವಾಗಿ ಕಾರ್ಯರೂಪಕ್ಕೆ ತರುವಂತೆ ಮಾಡುವ ಉದ್ದೇಶದಿಂದ, ಕಾರವಾರ ನಾಗರಿಕರು ಸಭೆ ಸೇರಿ ಒಂದು ನಿರ್ಣಯವನ್ನು ಕೇಂದ್ರ ಸರಕಾರ, ರೇಲ್ವೆ ಮಂತ್ರಿ, ಕಾಂಗ್ರೆಸ್ ಅಧ್ಯಕ್ಷ ಮತ್ತು ಮೈಸೂರು ರಾಜ್ಯ ಸರಕಾರಗಳಿಗೆ ಕಳುಹಿಸಿದ್ದಾರೆ ಅಲ್ಲದೆ ಈ ಕುರಿತಾಗಿ ಹೆಚ್ಚಿನ ಪ್ರಯತ್ನಗಳನ್ನು ಮಾಡಲು ಜಿಲ್ಲೆಯ ಪ್ರತಿನಿಧಿಯಾಗಿ ಶ್ರೀ ಪಿ. ಎಸ್. ಕಾಮತರನ್ನು ಡಿಲ್ಲಿಗೆ ಕಳಿಸಿದ್ದಾರೆ.

ಕರ್ನಾಟಕ ಮೆಡಿಕಲ್ ಕಾಲೇಜ್

ಹುಬ್ಬಳ್ಳಿಯಲ್ಲಿ ಮೈಸೂರು ಸರಕಾರವು ಹೊಸತಾಗಿ ತೆರೆಯಲಿರುವ ಕರ್ನಾಟಕ ಮೆಡಿಕಲ್ ಕಾಲೇಜನ್ನು ಮೈಸೂರು ಆರ್ಥಮಂತ್ರಿ ಶ್ರೀ ಟಿ ಮರಿಯಪ್ಪನವರು ಅಲ್ಲೇ ತಾರೀಕಿನಂದು ಉದ್ಘಾಟಿಸುವರು ಅಲ್ಲದೆ ಕಾಲೇಜು ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನೆಯನ್ನೂ ಅವರು ನೆರವೇರಿಸುವರು ನವಲಗುಂದ ಗವಿಮಠದ ಶ್ರೀ ಮಲಿಬಸವಲಿಂಗ ಸ್ವಾಮಿಗಳು ಆ ಸಮಾರಂಭವನ್ನು ಆಶೀರ್ವದಿಸಲಿರುವರು.

ಮೈಸೂರಿನ ಚರ್ಮುರಿ, ಅವಲಕ್ಕಿ

ಮುಂಬಯಿ ರಾಜ್ಯವು ಮೈಸೂರಿನಿಂದ ಚರ್ಮುರಿ ಮತ್ತು ಅವಲಕ್ಕಿಗಳನ್ನು ಆಯಾತ ಮಾಡಿಕೊಳ್ಳಲು ನಿರ್ಧರಿಸಿದ್ದು ಈ ಯೋಜನೆಗೆ ಕೇಂದ್ರ ಸರಕಾರವು ತನ್ನ ಅನುಮತಿಯಿತ್ತಿದೆ. ದಕ್ಷಿಣ ಪ್ರದೇಶ ಆಹಾರ ವಲಯ ವಿಂಗಡಣೆಯಿಂದಾಗಿ ಈ ನಿಯಾತವು ನಿಂತು ಹೋಗಿತ್ತು. ಆದರೆ, ಆಯಾತದ ಪ್ರಮಾಣವು ತಿಂಗಳಿಗೆ ೩,೦೦೦ ಟೀಲಗಳಿಗೆ ಮೀರಬಾರದೆಂದು ಕೇಂದ್ರ ಸರಕಾರವು ಆಜ್ಞಾಪಿಸಿದೆ. ಚಿತ್ರದುರ್ಗ, ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಿಂದ ಸಾಕಸ್ಸು ಬಡಕುಟುಂಬಗಳು ಅವಲಕ್ಕಿ ಹಾಗೂ ಚರ್ಮುರಿಗಳನ್ನು ಈ ಮೊದಲು ಪುಣೆ ಹಾಗೂ ಮುಂಬಯಿಗಳಿಗೆ ರವಾನಿಸಿ ಜೀವಿಸುತ್ತಿದ್ದವು

ಗೋಧಿ ನಿರ್ಬಂಧ ರದ್ದಾಯಿತು!

ದಕ್ಷಿಣ ಪ್ರದೇಶದಲ್ಲಿ ಗೋಧಿ ಧಾನ್ಯವನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ವ್ಯಾಪಾರಿಗಳಿಗೆ ಹೂಡಿಸುತ್ತಿದ್ದ ಗೋಧಿಮೇಲಿನ ಎಲ್ಲ ಪ್ರಮಾಣದ ನಿರ್ಬಂಧಗಳನ್ನೂ ಕೇಂದ್ರಸರಕಾರವು ಕಿತ್ತು ಹಾಕಿದೆ ಇನ್ನುಮುಂದೆ ವ್ಯಾಪಾರಿಗಳು ಸರಕಾರಿ ಉಗ್ರಾಣಗಳಿಂದ ಎಷ್ಟೇ ಪ್ರಮಾಣದ ಗೋಧಿಯನ್ನು ಕೊಳ್ಳಬಹುದು.

ಜೇಲಿನಿಂದ ಜೇಲಿಗೆ

"ಕೆರೆಯ ನೀರನು ಕೆರೆಗೆ ಚಿಲ್ಲಿ" ಎಂಬಂತೆ, ಜೇಲಿನಿಂದ ಸ್ವಾತಂತ್ರ್ಯ ಸಮರ ಶತಾಬ್ದಿ ಉತ್ಸವದ ನಿಮಿತ್ತ ಬಿಡುಗಡೆ ಹೊಂದಿದವನೊಬ್ಬನು ಪುನಃ ಅನೇಕ ಕಳವುಗಳನ್ನು ಮಾಡಿದುದರಿಂದ, ವತ್ತೆ ಜೇಲು! ಕಾಣುತಿದ್ದಾನೆ! ಇವನ ಹೆಸರು ಮಹಮ್ಮದ ಅಲಿ ಎಂದಿದ್ದು ಮದನಪಲ್ಲಿಗೆ ಸೇರಿದವನು.

ಸಂಸ್ಕೃತ ಬೇಕು

ದಕ್ಷಿಣ ಭಾರತೀಯರು ಹಿಂದಿಯನ್ನು ಸಂಪೂರ್ಣವಾಗಿ ಸುಲಭವಾಗಿ ಗ್ರಹಿಸಿಕೊಳ್ಳಬೇಕಾದರೆ, ಹಿಂದಿಯು ಸಂಸ್ಕೃತ ಭಾಷೆಯಿಂದ ಉದಾರ ಸಹಾಯವನ್ನು ಹಡೆಯಬೇಕು; ಅನೇಕ ಭಾರತೀಯ ಭಾಷೆಯಾದ ಸಂಸ್ಕೃತವು ದೇಶದ ಅತ್ಯಮೂಲ್ಯ ಆಸ್ತಿಗಳಲ್ಲಿ ಒಂದಾಗಿದೆ. ಅದಕ್ಕೆ ಇಂದು ಕೊಡುವ ಗೌರವಕ್ಕಿಂತಲೂ ಹೆಚ್ಚು ಗೌರವ ಹಾಗೂ ಗಮನಗಳನ್ನೀಯುವುದು ಅಗತ್ಯವಿದೆಯೆಂದು ಕಂದಾಯ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ವರ್ಧಂತಿಯ ಅಧ್ಯಕ್ಷಸ್ಥಾನದಿಂದ ನುಡಿದಿದ್ದಾರೆ.

ಮೈಸೂರಿಗೆ ಸ್ಟೀಲ್ ಫೌಂಡ್ರಿ

೬೦ ಲಕ್ಷ ರೂಪಾಯಿ ವೆಚ್ಚದ ಸ್ಟೀಲ್ ಫೌಂಡ್ರಿಯೊಂದನ್ನು ಮೈಸೂರಿನ ರಾಜಧಾನಿ ಬೆಂಗಳೂರಲ್ಲಿ ಸ್ಥಾಪಿಸುವುದಕ್ಕೆ ಭಾರತ ಸರಕಾರವು ಒಪ್ಪಿಗೆ ಇತ್ತಿದೆ. ದ್ವಿತೀಯ ಯೋಜನಾವಧಿಯಲ್ಲಿ ಒಟ್ಟು ೧೩ ಸ್ಟೀಲ್ ಫೌಂಡ್ರಿಗಳನ್ನು ಸಂಸ್ಥಾಪಿಸಲಾಗುವುದು. ಅವುಗಳಲ್ಲಿ ಇದೂ ಒಂದು.

ರೇಲ್ವೆ ದರದ ಮೇಲಿನ ಕರ

ಅರ್ಥಮಂತ್ರಿಗಳು ರೇಲ್ವೆ ಪ್ರಯಾಣದ ದರದ ಮೇಲೆ ಹೊಸ ಕಂದಾಯವನ್ನು ಹೇರಿದ್ದಾರಷ್ಟೆ? ಅದನ್ನು ಈ ತಿಂಗಳ ೧೫ನೇ ದಿನಾಂಕದಿಂದ ವಸೂಲು ಮಾಡಲಾಗುವುದು. ಈ ಕರದಿಂದ ಬರುವ ಹಣವಲ್ಲಿ ಕೇಂದ್ರಾಧೀನ ಪ್ರದೇಶಗಳಿಗೆ ದೊರೆಯಬಹುದಾದ ಹಣವನ್ನು ಬಿಟ್ಟು ಉಳಿದದನ್ನು ರಾಜ್ಯ ಸರಕಾರಗಳಿಗೆ ದ್ವಿತೀಯ ಯೋಜನೆಯ ಕಾರ್ಯಾಚರಣೆಗಾಗಿ ಹಂಚಿ ಕೊಡಲಾಗುವುದು.

ದಸರಾ ವಸ್ತು ಪ್ರದರ್ಶನ

ಸಪ್ಟಂಬರ ೨೪ರಿಂದ ಮೈಸೂರಲ್ಲಿ ಆರಂಭವಾಗಲಿರುವ ದಸರಾ ವಸ್ತು ಪ್ರದರ್ಶನವನ್ನು ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್ ದೇಬಾರರು ಉದ್ಘಾಟಿಸುವರೆಂದು ತಿಳಿದು ಬರುತ್ತದೆ. ಈ ಪ್ರದರ್ಶನ ಸಮಿತಿಯು ಗೃಹಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪ್ರದರ್ಶನದ ವಿವಿಧ ಯೋಜನೆಗಳನ್ನೂ ಕಾರ್ಯಕ್ರಮಗಳನ್ನೂ ಸಿದ್ಧಪಡಿಸಿದೆ. ಈ ದಸರಾವನ್ನು ಮೈಸೂರು ರಾಜ್ಯದಲ್ಲಿ ರಾಷ್ಟ್ರೀಯ ಹಬ್ಬವಾಗಿ ಆಚರಿಸುವ ನಿರ್ಧಾರವನ್ನು ರಾಜ್ಯ ಸರಕಾರವು ಈ ಮೊದಲೇ ಮಾಡಿರುತ್ತದೆ.

ಮೈಸೂರು ಸರಕಾರದ ಹೊಸ ಸಾಲ

ಪ್ರಚಲಿತ ವರ್ಷದ ಮುಂಗಡ ಪತ್ರದಲ್ಲಿ ಸೂಚಿಸಿದ ಕೊರತೆಯನ್ನು ಅಂಶತಃ ತುಂಬಿಸಿಕೊಳ್ಳಲು ಮೈಸೂರು ಸರಕಾರವು ಮೂರು ಕೋಟಿ ರೂಪಾಯಿಗಳ ಸಾಲವನ್ನು ಸಾರ್ವಜನಿಕರಿಂದ ಎತ್ತಲಿರುವುದು. ಈ ಸಾಲದ ಬಡ್ಡಿಯು ೪.೫ ಸೇಕಡಾ ಇದ್ದು, ಸಪ್ಟೆಂಬರ್ ೧೬ರಿಂದ ಹಣ ಸ್ವೀಕರಿಸಲು ಪ್ರಾರಂಭಿಸಲಾಗುವುದು. ಬಿಡುಗಡೆ ಮೌಲ್ಯವು ಸಾಲಿಯಾನ ೯೯.೭೫. ಇದೇರೀತಿಯಲ್ಲಿ ಬೊಂಬಾಯಿ ಸರಕಾರವೂ ಆರುಕೋಟಿಗಳ ಸಾಲವೆತ್ತಲಿದ್ದು ಅದರ ಬಿಡುಗಡೆ ಮೌಲ್ಯವು ೯೯.೫೦ ಸೇಕಡಾ ವಾಗಿದೆ.

ಫ್ಲೂ ಪಿಡುಗು

ಏಶಿಯಾದಲ್ಲಿ ಇನ್ನೊಂದು ಫ್ಲೂ ಪಿಡುಗು ಪ್ರಾರಂಭವಾಗಿದೆಯೆಂದು ಜಪಾನಿನ ಆರೋಗ್ಯಾಧಿಕಾರಿಗಳು ಎಚ್ಚರಿಸಿದ್ದಾರೆ. ಜಪಾನಿನ ಒಟ್ಟು ಜನರಲ್ಲಿ ಸೇಕಡಾ ೨೦ ರಷ್ಟು ಜನರಿಗೆ ಫ್ಲೂ ತಗಲಿದೆಯೆಂದೂ, ಅಕ್ಟೋಬರ ತಿಂಗಳ ಮಧ್ಯಾವಧಿಯಲ್ಲಿ ಈ ಪಿಡುಗು ಉಲ್ಬಣಾವಸ್ಥೆಗೇರುವುದೆಂದೂ ಅವರು ಕೇಳಿದ್ದಾರೆ.

ಆಕ್ರಮಣಕ್ಕೆ ತಲೆ ಬಾಗೆವು

ಲೋಕ ಸಭೆಯಲ್ಲಿ ವಿದೇಶ ನೀತಿಯ ಬಗ್ಗೆ ಚರ್ಚಾ ವೇಳೆಯಲ್ಲಿ ಪ್ರಧಾನಿ ನೆಹರೂರವರು ಆಕ್ರಮಣವನ್ನು ಶಾಂತಿಯಿಂದ ಸಹಿಸಿಕೊಂಡು ಅದಕ್ಕೆ ತಲೆಬಾಗಬೇಕೆಂದು ಯಾರಾದರೂ ಹೇಳಿದರೆ, ಅಗೌರವಯುತವಾದ ಯಾವುದೇ ರಾಷ್ಟ್ರವು ಅದನ್ನು ಮನ್ನಿಸಲಾರದು ಎಂದು ನುಡಿದರು. ಕಾಶ್ಮೀರ, ಸಂಬಂಧವಲ್ಲಿ ಭದ್ರತಾ ಸಮಿತಿಯು ಭಾರತಕ್ಕೆ ವಿರೋಧವಾದ ಪರ್ಣಯವನ್ನು ಸ್ವೀಕರಿಸಿದರೆ ಅದು ಮೇಲಿನಂತಾಗುವುದು. ಅದನ್ನು ಭಾರತವೆಂದಿಗೂ ಸಹಿಸಿ ಸುಮ್ಮನಿರಲಾರದೆಂದವರು ಸ್ಪಷ್ಟಪಡಿಸಿದ್ದಾರೆ.

ಭಾರತಕ್ಕೆ ೨ನೆ ಕ್ರೂಜರ ಹಡಗು

ಭಾರತದ ಎರಡನೆ ಕ್ರೂಜರ ಹಡಗವಾದ 'ನೈಜೀರಿಯಾ'ವನ್ನು ಬ್ರಿಟಿಷ ನೌಕಾಧಿಕಾರಿಗಳು ಭಾರತಕ್ಕೆ ಒಪ್ಪಿಸಿದ್ದಾರೆ. ಇದನ್ನು ಇಂಗ್ಲೆಂಡಿನ ಭಾರತೀಯ ರಾಯಭಾರಿಯಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಸ್ವೀಕರಿಸಿದರು. ಈ ಹೊಸ ಹಡಗಿಗೆ 'ಮೈಸೂರು' ಎಂದು ಹೆಸರಿಡಲಾಗಿದೆ.

ಮಂಗಳೆದಲ್ಲಿ ಅಮಂಗಳ

ಪಾಕ್ ಆಕ್ರಮಿತ ಕಾಶ್ಮೀರಿ ಭಾಗದಲ್ಲಿ ಮಂಗಳ ಆಣೆಕಟ್ಟನ್ನು ಕಟ್ಟಲು ಪಾಕಿಸ್ತಾನವು ಯೋಜಿಸಿದೆಯಷ್ಟೆ? ಈ ಯೋಜನೆಯನ್ನು ವಿರೋಧಿಸಿ ಮೀರಪುರದ ಸುಮಾರು ೫೦ ಸಾವಿರ ಜನರು ಮೆರವಣಿಗೆ ಪ್ರದರ್ಶನ ನಡೆಸಿದ್ದರು. ಇವರನ್ನು ಚದುರಿಸಲು ಪಾಕ್ ಸೈನಿಕರು ಗೋಳಿಬಾರನ್ನು ಮಾಡಿದುದರಿಂದ ಪರಿಣಾಮವಾಗಿ ೧೧ ಜನರು ಮಡಿದು ಅನೇಕ ಜನರು ಘಾಯಲರಾಗಿದ್ದಾರೆ. ಮಂಗಳ ಆಣೆಕಟ್ಟು ಅಮಂಗಳದಲ್ಲಿ ಕೊನೆಗೊಳ್ಳುವುದೆಂಬುದರ ಮುನ್ಸೂಚನೆ ಇದಾಗಿದೆ.

ಕಾಲುವೆ ನೀರ ತಂಟೆ

ಸಂಧಾನ ವಿಧಾನದಿಂದ ಕಾಲುವೆ ನೀರಿನ ತಂಟೆಯು ನಿವಾರಣೆಯಾಗದೆ ಹೋದರೆ, ತಾವು ಬೇರೆ ದಾರಿಯನ್ನು ನೋಡಿಕೊಳ್ಳಬೇಕಾಗುವುದೆಂದು ಪಾಕಿಸ್ತಾನದ ಅರ್ಥಮಂತ್ರಿ ಅಮಜಾದ ಅಲಿಯವರು ರಾಷ್ಟ್ರೀಯ ವಿಧಾನ ಸಭೆಯಲ್ಲಿ ಹೇಳಿದರು. ಆದರೆ, ತಾವು ಅನುಸರಿಸುವ ಮಾರ್ಗ ವಿಧಾನಗಳು ಯಾವುವೆಂಬುದನ್ನು ಮಾತ್ರ ಅವರು ನಿರ್ದಿಷ್ಟವಾಗಿ ಬಹಿರಂಗಪಡಿಸಲಿಲ್ಲ.

ಉಡುಪಿ

ಮೈಸೂರು ವಿದ್ಯಾಮಂತ್ರಿ ಶ್ರೀ ವಿ. ವೆಂಕಟಪ್ಪನವರು—ಕಳದ ತಾ. 31ರಂದು ಕೂರ್ಮಾಸ್ಥ ವಿದ್ಯಾಖಾತೆಯ ಡೈರೆಕ್ಟರ ಶ್ರೀ ಬಿ ಎಸ್. ಕೃಷ್ಣನ್, ಅವರೊಂದಿಗೆ ಸುಲ್ಪೆ ಫಿಶರೀಸ್ ಹೈಸ್ಕೂಲನ್ನು ಸಂದರ್ಶಿಸಿ ಉಡುಪಿಗೆ ಬಂದು ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲು, ಬೋರ್ಡು ಹೈಸ್ಕೂಲು, ಕಾನ್ವೆಂಟ್ ಹೈಸ್ಕೂಲು, ಮಾನಸಿ ಗರ್ಲ್ ಶಾಲೆ ಹಾ. ಎ. ಕಾಲೆ ಮೊದಲಾದ ಶಿಕ್ಷಣ ಸಂಸ್ಥೆಗಳಿಗೆ ಭೇಟಿಯಿತ್ತರು ಅಪರಾಹ್ನದಲ್ಲಿ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಎಂಜಿನಿಯರಿಂಗ್ ಕಾಲೇಜುಗಳಿಗೂ ಸಂದರ್ಶನವಿತ್ತರು ಬೆಳಗ್ಗೆ ಆಗಮಿಸಿ ಹೊಡೆದೆ ಸ್ಥಳೀಯ ವಿಶೇಷಾನದ ಹರಿಜನ ವಿದ್ಯಾರ್ಥಿ ಭವನವನ್ನು ಸಂದರ್ಶಿಸಿದ್ದರು.

ಎಮ್. ಜಿ. ಎಮ್. ಕಾಲೇಜಿನಲ್ಲಿ

ಸಂಜೆ ಮಂತ್ರಿಗಳು ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ಆಗಮಿಸಿ, ಅಲ್ಲಿಯ ಶ್ರೀ ವಾದಿರಾಜ ವಿದ್ಯಾರ್ಥಿ ಭವನದ ಉದ್ಘಾಟನೆಯನ್ನೂ ಡಾ. ಟಿ ಮಾಧವ ಪೈಗಳ ತೈಲಚಿತ್ರದ ಅನಾವರಣವನ್ನು ನೆರವೇರಿಸುತ್ತಾ, ಡಾ. ಪೈಗಳು ಮಾಜಾನುಭಾವರಿದ್ದು ಶಿಕ್ಷಣ, ಬೇಂಕಿಂಗ್ ಮತ್ತು ಇನ್ಶೂರೆನ್ಸ್ ಕ್ಷೇತ್ರಗಳಲ್ಲಿ ತುಂಬಾ ದುಡಿದಿದ್ದಾರೆ. ಅಂತಹ ವ್ಯಕ್ತಿಗಳು ಈ ಕಾಲೇಜಿನಂತಹ ಯಾರಾಗುವಂತಾಗಬೇಕೆಂದು ಹಾರೈಸುವುದು.

ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಶ್ರೀ ಕೃಷ್ಣನ್ ಅವರು ಮಾತನಾಡುತ್ತಾ ಡಾ. ಪೈಗಳ ಸೇವೆಯನ್ನು ಪ್ರಶಂಸಿಸಿದರು. ಕಾಲೇಜು ವಿದ್ಯಾರ್ಥಿಗಳಾದರೋ ಕಾಲೇಜು ಸ್ಥಾಪಕರಾದ ಡಾ. ಪೈಗಳ ಧ್ಯೇಯವೇನಿದೆ ಎಂಬುದನ್ನು ಮನನ ಮಾಡಿ ಅದಕ್ಕನುಗುಣವಾಗಿ ವರ್ತಿಸಬೇಕೆಂದು ಉಪದೇಶವಿತ್ತರು. ಅಂಥಹದಲ್ಲಿ ಕಾಲೇಜು ಟ್ರಸ್ಟಿನ ಅಧ್ಯಕ್ಷ ಶ್ರೀ ಕೊಟ್ಟಿಕಾರ್ ಪದ್ಮನಾಭ ಪೈಗಳು ಸ್ವಾಗತ ಭಾಷಣಮಾಡಿದರು. ಡಾ. ಎಸ್. ಆರ್ ಪೈಗಳು, ಡಾ. ಟಿ. ಎಮ್ ಎ ಪೈಗಳ ಗುಣಕಥನಮಾಡಿ ಅವರ ತೈಲಚಿತ್ರ ಅನಾವರಣಮಾಡುವಂತೆ ಮಂತ್ರಿಗಳನ್ನು ಕೇಳಿಕೊಂಡರು. ಶ್ರೀ ಟಿ. ಎ. ಪೈಗಳು ಕಾಲೇಜು ಸ್ಥಾಪನಾ ಕಾರ್ಯದಲ್ಲಿ ಎದುರಿಸಬೇಕಾದ ಘಟನೆಗಳನ್ನು ವಿವರಿಸಿ ಅವನ್ನು ಡಾ. ಪೈಗಳು ಹೇಗೆ ಎದುರಿಸಿಕೊಂಡು ತನ್ನ ಕಾರ್ಯ ಸಾಧಿಸಿದರೆಂಬುವನ್ನು ತಿಳಿಸಿದರು ಶ್ರೀ ವಾದಿರಾಜ ನಿಲಯದ ವೆಚ್ಚದಲ್ಲಿ ಅರ್ಧಾಂಶಕ್ಕೂ ಮಿಕ್ಕಿದ ಪಣವನ್ನು ಶ್ರೀ ಸೋದೆ ಸ್ವಾಮಿಗಳವರು ಉದಾರ ಧಾನವಾಗಿ ಕೊಟ್ಟುದುದನ್ನು ಪ್ರಸ್ತಾವಿಸಿ, ಹಾಸ್ಟೆಲು ಬಾಡಿಗೆಯಿಂದ ಸಿಕ್ಕುವ ಹಣವನ್ನು ಕಾಲೇಜಿನ ಬಡ ವಿದ್ಯಾರ್ಥಿಗಳಿಗೆ ಸಹಾಯಧನವಾಗಿ ಕೊಡಲು ಉದ್ದೇಶಿಸಲಾಗುವುದೆಂದು ಜಾಹೀರುಪಡಿಸಿದರು ನಂತರ ಸೋದೆ ಮಠದ ಪಟ್ಟದಧಿಪತಿ ಶ್ರೀ ಶ್ರೀಮತಿ ಅಜಾಯರು ತಮ್ಮ ಸಂಸ್ಥಾನದ ಶ್ರೀ ವಿಶ್ವೋತ್ತಮ ತೀರ್ಥಸ್ವಾಮಿಗಳವರ ಸಂದೇಶವನ್ನು ಓದಿದರು. ಶ್ರೀ ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ ಕುಂದಾಪುರ ಅವರು ಮಾತನಾಡುತ್ತಾ ಡಾ| ಪೈಗಳ ಕಾರ್ಯದಕ್ಷತೆಯನ್ನು ಕೊಂಡಾಡಿದರು.

ಸಭಾಧ್ಯಕ್ಷತೆ ವಹಿಸಿದ್ದ ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಗಡೆ ರು ಡಾ| ಮಾಧವ ಪೈಗಳ ಗುಣಗಾನ ಮಾಡಿ ಅವರ ವ್ಯಕ್ತಿತ್ವ ಅಸಾಧಾರಣವಾದುದೆಂದರು ಹಿಂದೂ ಸ್ವಾಮಿಗಳವರು ಕ್ರಿಶ್ಚಿಯನ್ ಮಿಶನರಿಗಳಂತೆ ವಿದ್ಯಾಕ್ಷೇತ್ರದಲ್ಲಿ ತುಂಬಾ ಸಹಕಾರ ಸಹಾಯ ನೀಡುತ್ತಿರುವರು ಎಂಬುದಕ್ಕೆ ಶ್ರೀ ಸೋದೆ ಸ್ವಾಮಿಗಳವರು ಇಂದು ನಿದರ್ಶನವಾಗಿದ್ದಾರೆ ಎಂದು ಹೇಳಿದರು. ಪ್ರಿನ್ಸಿಪಾಲ್ ಶ್ರೀ ಎಚ್. ಸಂದರರಾಯರು ಧನ್ಯವಾದಗಳನ್ನಿತ್ತರು.

ಮಂತ್ರಿಗಳು ನಂತರ ಶ್ರೀಕೃಷ್ಣಮಠಕ್ಕೆ ಬಂದು ಸ್ವಾಮಿದರ್ಶನಮಾಡಿದರು. ನಂತರ ಕಾಂಗ್ರೆಸ್ ಕೆಲಸಗಾರರನ್ನು ಕಂಡರು. ಬಳಿಕ ಉದಿಯಾವರಕ್ಕೆ ಹೋಗಿ ಶ್ರೀ ಸೋದೆ ಸ್ವಾಮಿಗಳವರ ಅನುಗ್ರಹಕ್ಕೆ ಪಾತ್ರರಾದರು. ರಾತ್ರಿ ಶ್ರೀ ಯು. ಎಸ್. ನಾಯಕ್, ಎಮ್. ಎಲ್. ಎ ಅವರು ಏರ್ಪಡಿಸಿದ ಭೋಜನ ಸತ್ಕಾರಕೂಟದಲ್ಲಿ ಭಾಗವಹಿಸಿದರು. ಮರುದಿವಸ ಬೆಳಗ್ಗೆ ಸಂಸ್ಕೃತ ಕಾಲೇಜನ್ನು ಸಂದರ್ಶಿಸಿ ಕಾಳಕಳ್ಳಕ್ಕೆ ಪ್ರಯಾಣಮಾಡಿದರು

ವಾರ್ಷಿಕ ವರ್ಧಂತಿ ಸಮಾರಂಭ

ಲ್ಯಾಫ್ ಇನ್ಶೂರೆನ್ಸ್ ಕೋಪರೇಟಿವ್ ಉಡುಪಿ ದಿವಿಜನ್ನ ನೌಕರರು ತಾ 1ರಂದು ಬೆಳಗ್ಗೆ ಡಾ| ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಕೋಪರೇಟಿವ್ ವಾರ್ಷಿಕೋತ್ಸವವನ್ನು ಆಚರಿಸಿದರು. ಶ್ರೀ ಎನ್ ಎಸ್. ಪಕಾಳರು ಸ್ವಾಗತಭಾಷಣ ಮಾಡಿದರು. ಶ್ರೀ ಕುಮಾರ ಸ್ವಾಮಿಯವರು ಕೋಪರೇಟಿವ್ ನೌಕರರ ಕೃತಿಗತಿಕುರಿತು ಆತ್ಮ ನಿವೇದನೆ ಮಾಡಿದರು. ಶ್ರೀ ಸುಬ್ಬರಾಯರು ನೌಕರರ ಕಡೆಯಿಂದ ತಮ್ಮ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರಿಗೊಂದು ಮಾನಪತ್ರವಿತ್ತರು. ನೌಕರರು ಸಂಗ್ರಹಿಸಿದ ನಿಧಿಯೊಂದನ್ನು ಎಮ್. ಜಿ. ಎಮ್. ಕಾಲೇಜಿನ ಬಡವಿದ್ಯಾರ್ಥಿಗಳಿಗೆ ವೇತನ ಕೊಡಲು ಎಕೆಡಮಿ ರಿಜಿಸ್ಟ್ರಾರ್ ಡಾ| ಟಿ ಮಾಧವಪೈಗಳ ಪರ ಕೊಡಲಾಯಿತು. ಶ್ರೀಗಳಾದ ಟಿ ಎ ಪೈ ಎಚ್ ಸುಂದರರಾವ್, ಡಾ| ಪಿ ಆರ್ ನಾಯಕ್ ಕೆ ಜನಾರ್ದನ ಪೈ ಮೊದಲಾದವರು ಮಾತನಾಡಿದರು. ದಿವಿಜನಲ್ ಮೆನೇಜರ್ ಶ್ರೀ ಭಟ್ಟರು ಈ ದಿವಿಜನ್ನ ಸಮರ್ಥ ಆಡಳಿತೆಗೆ ಶಿಬಂಧಿಯು ನೆರವಾಗಿ ಸಹಕರಿಸಿದುದನ್ನು ಈ ಸಂತೋಷ ಕಾಲದಲ್ಲಿ ವ್ಯಕ್ತಪಡಿಸಿದರು.

ಲ್ಯಾಬ್ರೆರಿ ಕಟ್ಟಿಡದ ಶಂಕುಸ್ಥಾಪನೆ—ದ ಕ. ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರು ತಾ. 27ರಂದು ಸಂಜೆ ಅಜ್ಜರಕಾಡು ಗಾಂಧಿ ಬಯಲಿನಲ್ಲಿ ಲೋಕಲ್ ಲ್ಯಾಬ್ರೆರಿ ಆಫಾರಿಟಿ ಕಡೆಯಿಂದ ನಿರ್ಮಿಸಲಾಗುವ ಹೊಸ ಲ್ಯಾಬ್ರೆರಿ ಕಟ್ಟಿಡದ ಶಂಕುಸ್ಥಾಪನೆಮಾಡಿದರು. ಜಿಲ್ಲಾ ಲ್ಯಾಬ್ರೆರಿ ಆಫಾರಿಟಿಯ ಚೆರ್‌ಮೆನ್ ಶ್ರೀ ಎಮ್. ಎಸ್. ವಿಠಾಂಬರ ರಾಯರು ಸ್ವಾಗತಿಸಿದರು. ಡಾ. ಪಿ. ವಿ. ವ್ಯಾಸರಾಯರು ಧನ್ಯವಾದಗಳನ್ನಿತ್ತರು.

ಬೋರ್ಡು ಹೈಸ್ಕೂಲಲ್ಲಿ—ನಿವೃತ್ತಿ ಸರಕಾರದ ಪಾರ್ಲಿಮೆಂಟ್ ಅಧಿವೇಶನವನ್ನು ತಾ.1ರಂದು ಅಖಂಡಾಧ್ಯಕ್ಷ ಶ್ರೀ ಕೆ.ಆರ್. ಕೆ. ಭಟ್ಟರೂ ಶಾಲೆಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಅಂದು ರಾತ್ರಿ ಡಾ ಪಿ. ಜಿ. ಆಚಾರ್ಯರೂ ತಾ. 2ರಂದು ಸಂಜೆ ವಿದ್ಯಾರ್ಥಿಗಳ ಅಂತರ್‌ಗೃಹ ಪಂದ್ಯಾಟಗಳನ್ನು ಶ್ರೀ ಯು. ರಬೀಂದ್ರ ನಾಯ್ಕರೂ ಉದ್ಘಾಟಿಸಿದರು.

ಶ್ರೀ ಟಿ. ಎ. ಪೈಗಳಿಗೆ ಸತ್ಕಾರ—ಇದೇ ತಾ. 6ಕ್ಕೆ ಕುರ್ಲಾನಿಗೆ ತೆರಳಲಿರುವ ಸಿಂಡಿಕೇಟ್ ಬೇಂಕಿನ ಜನರಲ್ ಮೆನೇಜರ್ ಶ್ರೀ ಟಿ ಎ. ಪೈಗಳಿಗೆ ಸಿಂಡಿಕೇಟಿನ ಡೈರೆಕ್ಟರರು ಇದೇ ತಾ 3ರಂದು ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸತ್ಕಾರಕೂಟವನ್ನೇರ್ಪಡಿಸಿದ್ದರು. ಡಾ. ಟಿ. ಮಾಧವ ಪೈಗಳು ಸ್ವಾಗತಿಸಿದ ಮೇಲೆ ಶ್ರೀಗಳಾದ ಪಿ ಪದ್ಮನಾಭರಾವ್, ಕೆ. ಆರ್. ಕೆ. ಭಟ್, ಕುರ್ಕಾಲು ಗಣಪಯ್ಯ ಶೆಟ್ಟಿ, ಕೆ. ಕೆ. ಪೈ, ಕೊಟ್ಟಿಕಾರ್ ಪದ್ಮನಾಭ ಪೈ, ಡಾ ಎಸ್. ಆರ್. ಪೈ ಮತ್ತು ಶ್ರೀಮತಿ ಇಂದಿರಾಬಾಯಿ ಮೊದಲಾದವರು ಶ್ರೀ ಟಿ. ಎ. ಪೈಗಳ ಸೇವಾತತ್ಪರತೆಯನ್ನು ಕೊಂಡಾಡಿ, ಸುಖ ಪ್ರಯಾಣವನ್ನು ಹಾರೈಸಿದರು. ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ ಟಿ ಎ. ಪೈಗಳು ಜನತೆಯು ತನ್ನ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸ, ಸಹಕಾರಗಳಿಗಾಗಿ ಧನ್ಯವಾದಗಳನ್ನಿತ್ತರು. ಡಾ ಮಾಧವ ಪೈಗಳು ಅಭಿನಂದನೆಗಳನ್ನುತ್ತಿಯುತ್ತಾ, ಶ್ರೀ ಟಿ. ಎ ಪೈಗಳ ವಿದೇಶಗಮನದಿಂದಾಗುವ ಅನುಭವದ ಪ್ರಯೋಜನವು ಉಡುಪಿಗೂ ದೇಶಕ್ಕೂ ಆಗುವಂತಾಗಲೆಂದು ಹಾರೈಸಿದರು. ತಾ 1ರಲ್ಲಿ ಮೋಡರ್ನ್ ಹಾ. ಎಲಿಮೆಂಟರಿ ಶಾಲೆಯಲ್ಲಿ ಮೆನೇಜರ್ ಶ್ರೀ ಜನನ್ನಾಥಯ್ಯರು ಶ್ರೀ ಟಿ. ಎ. ಪೈಗಳಿಗೆ ಸತ್ಕಾರಕೂಟವನ್ನೇರ್ಪಡಿಸಿದ್ದರು ತಾ. 4ನೇ ಬೆಳಗ್ಗೆ ಸರ್ಕಲ್ ಕಾಂಗ್ರೆಸ್ ಕಮಿಟಿ ಹಾಗೂ ಮುನ್ಸಿಪಲ್ ಕೌನ್ಸಿಲ್ ಕಾಂಗ್ರೆಸ್ ಪಾರ್ಟಿಯವರು ಕಾಂಗ್ರೆಸ್ ಆಫೀಸಿನಲ್ಲಿ ಡಾ| ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಟಿ ಎ. ಪೈಗಳಿಗೆ ಸತ್ಕಾರ ಸಮಾರಂಭವನ್ನೇರ್ಪಡಿಸಿದರು. ಶ್ರೀ ಕೆ. ಕೆ. ಪೈಗಳು ಸ್ವಾಗತಿಸಿಯೂ ಶ್ರೀ ಎ. ಜಿ. ಅಳ್ವಿಯವರು ಸಭಿಕರ ಪರವಾಗಿ ಮಾತನಾಡಿಯೂ ಶ್ರೀ ಪೈಗಳಿಗೆ ಸುಖಪ್ರಯಾಣ ಬಯಸಿದರು. ಅತಿಥಿ ಶ್ರೀ ಸ್ವಾಳ ಅಧ್ಯಕ್ಷರೂ ಮಾತನಾಡಿದ ಬಳಿಕ ಶ್ರೀ ಪಿ. ವಿ. ಆಚಾರ್ಯರು ಧನ್ಯವಾದಗಳನ್ನಿತ್ತರು.

ಮೈಸೂರು ಸರಕಾರವು – ಎತ್ತಲಿರುವ ಸಾಲಕ್ಕೆ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್‌ನವರು 50 ಲಕ್ಷ ಕೆನರಾ ಬೇಂಕಿನವರು 50 ಲಕ್ಷ ಮತ್ತು ಕೆನರಾ ಬ್ಯಾಂಕಿಂಗ್ ಕೋಪರೇಟಿವ್‌ನವರು 80 ಲಕ್ಷ ಹೂಡಿ ತೆರಲಿರುವರೆಂದು ತಿಳಿದು ಬರುತ್ತದೆ.

ಮಂಗಳೂರು

ಭಾರತದ ರಕ್ಷಣಾ ಸಚಿವ ಶ್ರೀ ವಿ. ಕೆ. ಕೃಷ್ಣ ಮೆನೋನರು ತಾ. 26 ರಂದು ಮಧ್ಯಾಹ್ನ ಸ್ಥಳೀಯ ಸರಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ಯಾವ ರೀತಿಯಲ್ಲಿ ಮಂಗಳೂರು ಮೈಸೂರಿನ ಅಂಗವೋ ಅದೇ ರೀತಿಯಲ್ಲಿ ಕಾಶ್ಮೀರವು ಭಾರತದ ಅಂಗವಾಗಿದೆ. ಭಾರತದ ಅವಿಭಾಜ್ಯ ಅಂಗವಾಗಿದ್ದ ಕಾಶ್ಮೀರವನ್ನು ಪಾಕಿಸ್ತಾನವು ಆಕ್ರಮಿಸಿಕೊಂಡರೆ ಪಾಕಿಸ್ತಾನ ಮತ್ತು ಅಜಾದ್ ಕಾಶ್ಮೀರಗಳಂತೆ ಕಾಶ್ಮೀರದಲ್ಲಿ ಪೋಲೀಸ್ ರಾಜ್ಯ ಇಲ್ಲವೆಂದರು. ಗೋವಾ ವಿಷಯದಲ್ಲಿ ಕೂಡಾ ತಟಸ್ಥರಾಗಿರುವುದು ನಮ್ಮ ಧೋರಣೆಯಲ್ಲ, ತನ್ನಷ್ಟಕ್ಕೆ ಅದಕ್ಕೆ ಸ್ವಾತಂತ್ರ್ಯ ಬರಲಿ ಎಂದು ನಾವು ಕುಳಿತುಕೊಂಡಿದ್ದುದಲ್ಲ. ಗೋವೆಯ ಸಹೋದರರಿಗೆ ಸ್ವಾತಂತ್ರ್ಯ ಸಿಗಬೇಕೆಂಬುದೇ ತಮ್ಮ ಆಸೆ ಆಗಿದೆ ಎಂದರು.

ಕಾಲೇಜುಗಳಲ್ಲಿರುವ ವಿದ್ಯಾರ್ಥಿ ಸಂಘಗಳೂ, ತರ್ಕ ಸಭೆಗಳೂ ವಿದ್ಯಾರ್ಥಿಗಳಲ್ಲಿ ಪ್ರಜಾರಾಜ್ಯ ಪದ್ಧತಿಯಲ್ಲಿ ತರಬೇಕಿರುವುದನ್ನು ಕೊಡುವುದಕ್ಕೆ ಸಹಾಯಕವಾಗುತ್ತವೆ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಬೆಳವಣಿಗೆ ಪಾಕ್ಷಾತುರ್ಯಗಳು ಬೆಳೆಯುವಂತೆ ಈ ಸಂಘಗಳು ಸಹಾಯ ಮಾಡುತ್ತವೆ ಎಂದು ಅವರು ಹೇಳಿದರು.

ನಗರಸಭೆಯ ಮಾನಪತ್ರ—ಶ್ರೀ ಮೆನೋನರಿಗೆ ಮಂಗಳೂರು ನಗರ ಸಭೆಯ ಪರವಾಗಿ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಮಾನಪತ್ರ ಅರ್ಪಿಸಿದರು ಕೇಂದ್ರ ಮಂತ್ರಿಗಳು ಉತ್ತರಿಸುತ್ತಾ, ದಕ್ಷಿಣದ ಕಲೆಗಳ ಒಂದು ಸಮ್ಮಿಶ್ರ ಸ್ಥಾನವಾದ ಮಂಗಳೂರಿಗೆ ಬರಲು ಬಹಳ ಸಂತೋಷವಾಗುತ್ತದೆಂದು ಹೇಳಿದರು. ಮುಂದುವರಿಯುತ್ತಾ, ಗ್ರಾಮ ಪಂಚಾಯುತಿಗಳು ಮತ್ತು ನಗರ ಸಭೆಗಳು ರಾಷ್ಟ್ರೀಯ ಚೌಕಟ್ಟನ್ನು ರೂಪಿಸುವ ಪ್ರಯೋಗಶಾಲೆಗಳಾಗಿವೆ ಸ್ಥಳೀಯ ಸಂಸ್ಥೆಗಳು ರಾಷ್ಟ್ರದ ಆದಿಶಿಲೆಗಾರರನ್ನು ತರಬೇತುಮಾಡುವ ಸ್ಥಳಗಳಾಗಿವೆ. ಸ್ಥಳೀಕ ಸಂಸ್ಥೆಗಳು ಈಗ ಮಾಡುವ ಕಾರ್ಯಗಳಿಗಿಂತ ಹೆಚ್ಚಿನ ಕಾರ್ಯಗಳನ್ನು ಮಾಡಬಹುದು ಇಂಗ್ಲೆಂಡಿನಲ್ಲಿ ನಾಗರಿಕ ಸಂಸ್ಥೆಗಳು ಬಹಳ ಕೆಲಸ ಮಾಡುತ್ತಿವೆ. ಅಲ್ಲಿಯ ನಾಗರಿಕ ಸಂಸ್ಥೆಗಳಲ್ಲಿ 13 ವರ್ಷಗಳ ಅನುಭವದಿಂದ ನಾನದನ್ನು ಹೇಳುತ್ತಿದ್ದೇನೆ ಅಲ್ಲಿ ಸರಕಾರೀ ಕಲೆಗಳಲ್ಲಿ ಈ ನಾಗರಿಕ ಸಂಸ್ಥೆಗಳು ಜನರನ್ನು ರೂಪಿಸುತ್ತವೆ. ಎಂದು ಮುಂತಾಗಿ ಹೇಳಿದರು.

ಎನ್. ಸಿ. ಸಿ ಮತ್ತು ಎ. ಸಿ. ಸಿ. ಸದಸ್ಯರನ್ನುದ್ದೇಶಿಸಿ ಶ್ರೀ ಮೆನೋನರು ಮಾತನಾಡುತ್ತಾ, ಎನ್. ಸಿ. ಸಿ. ಮತ್ತು ಎ. ಸಿ. ಸಿ. ಗಳು ಸೈನ್ಯಕ್ಕೆ ಸೈನಿಕರನ್ನು ತಯಾರುಮಾಡುವ ಪೂರ್ವ ಶಿಕ್ಷಣ ಶಾಲೆಗಳಲ್ಲವೆಂದರು. ಅವರ ಮುಖ್ಯ ಧ್ಯೇಯ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಸೇವಾ ಸ್ಪೂರ್ತಿ ನುತ್ತು ಶಿಸ್ತನ್ನು ನಿರ್ಮಾಣ ಮಾಡುವುದೇ ಆಗಿದೆ. ನಮ್ಮ ದೇಶದ ಯುವ ಜನರಲ್ಲಿ ಸಾಮೂಹಿಕ ಕಾರ್ಯ ಸ್ಫೂರ್ತಿಯ ವಾತಾವರಣವನ್ನು ನಿರ್ಮಿಸುವುದಕ್ಕೆ ಇದು ಸಹಾಯಕವಾಗುತ್ತದೆ ಎಂದು ಹೇಳಿದರು.

ಮಂಗಳೂರಲ್ಲಿ ವಿದ್ಯಾ ಮಂತ್ರಿ ಶ್ರೀ ವಿ. ವೆಂಕಟಪ್ಪನವರು—ಮೈಸೂರಿನ ವಿದ್ಯಾ ಮಂತ್ರಿ ಶ್ರೀ ವಿ ವೆಂಕಟಪ್ಪನವರು ಮೈಸೂರಿನ ಡ್ಯಾರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಶ್ರೀ ಬಿ ಎಮ್. ಕೃಷ್ಣನ್ ಅವರೊಂದಿಗೆ ತಾ. 29ರಂದು ಸಂಜೆ ಮಂಗಳೂರಿಗೆ ಆಗಮಿಸಿದರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ| ಯು. ಪಿ. ಮಲ್ಯ ವಿಧಾನ ಪರಿಷತ್ತಿನ ಉಪಾಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ, ಜಿಲ್ಲಾ ಬೋರ್ಡ ಅಧ್ಯಕ್ಷ ಶ್ರೀ ಬಿ, ಮಂಜಯ್ಯ ಹೆಗ್ಡೆ, ವಿಧಾನ ಸಭಾ ಸದಸ್ಯರು, ಕಾಲೇಜು ಅಧಿಕಾರಿಗಳು ಮೊದಲಾದವರು ಸ್ವಾಗತಿಸಿದರು.

ಅಧ್ಯಾಪಕ ಮತ್ತು ವಿದ್ಯಾರ್ಥಿಜ್ಞಾನ—ಕಾಲೇಜು, ಹೈಸ್ಕೂಲಿಗಳಿಗೆ ಸಂದರ್ಶನವಿತ್ತ ಬಳಿಕ ಸೈಂಟ್ ಎಲೋಸಿಯಸ್ ಕಾಲೇಜಿನ ಎಕೆಡೆಮಿ ಹಾಲಿನಲ್ಲಿ ಮಂಗಳೂರಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಜ್ಞರು ಮಂತ್ರಿಗಳನ್ನು ಭೇಟಿಯಾದರು. ಪ. ಕೆ. ಟೀಚರ್ಸ್ ಗಿಲ್ಡಿನ ಸರವಾಗಿ ಶ್ರೀ ಎಸ್. ಮುಕುಂದರಾಯರು ಶಾರೀರಿಕ ಶಿಕ್ಷಣ ಅಧ್ಯಾಪಕರ ಸಂಘದ ಪರವಾಗಿ ಶ್ರೀ ಆಲ್ಕಾಂಡರ್ ಡಿಸೋಜ, ಎಯಿಡೆಡ್ ಶಾಲಾ ಮೆನೇಜರರ ಸಂಘದ ಪರವಾಗಿ ಶ್ರೀ ಫಾ| ಜಿ. ಕೆಸ್ಟಲಿನೋ, ಸೆಕೆಂಡರಿ ಶಾಲಾ ಮುಖ್ಯೋಪಾಧ್ಯಾಯರ ಸಂಘದ ಪರವಾಗಿ ಶ್ರೀ ಎಚ್. ಪಾಂಡುರಂಗರಾವ್ ಮೊದಲಾದವರು ಮಾತನಾಡಿದ ವಿಷಯಗಳ ಕುರಿತು ಡ್ಯಾರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್, ಅವರು ಉತ್ತರಿಸಿದರು. ಮಂತ್ರಿಗಳು ಮಾತನಾಡುತ್ತಾ ದ. ಕನ್ನಡವು ವಿದ್ಯಾಕ್ಷೇತ್ರದಲ್ಲಿ ಬಹಳ ಮುಂದುವರಿದ ಜಿಲ್ಲೆ. ಇಲ್ಲಿಯ ವಿದ್ಯಾರ್ಥಿಗಳ ಶಿಕ್ಷಣ ಸುಟ್ಟ ಯೋಗ್ಯ ರೀತಿಯಲ್ಲಿದೆ. ಇಲ್ಲಿಯ ವಿದ್ಯಾ ಸಂಸ್ಥೆಗಳು ನಿಸ್ವಾರ್ಥತೆಯಿಂದ ಕೆಲಸಮಾಡುತ್ತಿವೆ ಎಂದರು.

ಜಿಲ್ಲಾ ಬೋರ್ಡು ಆಫೀಸಿಗೆ ಸಂದರ್ಶನ—ವಿದ್ಯಾಮಂತ್ರಿಗಳು ದ. ಕ ಜಿಲ್ಲಾ ಬೋರ್ಡಿನ ಕಾರ್ಯಾಲಯಕ್ಕೆ ಸಂದರ್ಶನ ನಿತ್ತಾಗ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ ಉಪಾಧ್ಯಕ್ಷ, ಶ್ರೀ ಬಿ. ಆರ್. ಕಕ್ಕೇರಿ, ಶ್ರೀಗಳಾದ ಕೆ. ಕೆ ಶೆಟ್ಟಿ, ಡಾ ಕೆ. ಕೆ. ಹೆಗ್ಡೆ, ಡಾ. ನಾಗಪ್ಪ ಆಳ್ವ, ಎಫ್. ಎಕ್ಸ್. ಡಿ ಪಿಂಟೊ, ಗಜಾನನ ಪಂಡಿತ ಮೊದಲಾದವರು ಸ್ವಾಗತಿಸಿದರು ನಗರಸಭಾಧ್ಯಕ್ಷ ಶ್ರೀ ಕೆ ಸೂರ್ಯನಾರಾಯಣ ಅಡಿಗ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಯು. ಪಿ. ಮಲ್ಯರೂ ಉಪಸ್ಥಿತರಿದ್ದರು. ಜಿಲ್ಲಾ ಬೋರ್ಡ ಅಧ್ಯಕ್ಷ ಶ್ರೀ ಹೆಗ್ಡೆಯವರು ಸ್ವಾಗತ ಭಾಷಣ ಮಾಡುತ್ತಾ, ಜಿಲ್ಲಾಬೋರ್ಡು ಸೆಕಂಡರಿ ಎಜ್ಯುಕೇಶನ್ ಬಗ್ಗೆ ನಾಲ್ಕುಲಕ್ಷ, ಎಲಿಮೆಂಟರಿ ಶಿಕ್ಷಣಕ್ಕಾಗಿ 10 ಲಕ್ಷಕ್ಕೂ ಮಿಕ್ಕಿದ ಹಣವನ್ನು ವೆಚ್ಚಮಾಡುತ್ತಿದೆ ಸರಕಾರೀ ಗ್ರಾಂಟು ಸಕಾಲದಲ್ಲಿ ಬಾರದೆ ಹೋದರೆ ಅಧ್ಯಾಪಕರ ಸಂಬಳ ಬಟ್ಟಾಡೆ ವಿಳಂಬವಾಗುವುದು ಎಲಿಮೆಂಟರಿ ಶಾಲಾ ಮಾಸ್ತರುಗಳು ಹೊಸ ವೇತನ ಸ್ಕೇಲನ್ನು ಹೊಂದಬೇಡಾಕುತ್ತಿದ್ದಾರೆ ಎಂದು ಹೇಳಿದರು. ವಿದ್ಯಾ ಡ್ಯಾರೆಕ್ಟರರು, ಗ್ರಾಂಟು ಅದಷ್ಟು ಬೇಗ ಸಿಗುವ ವ್ಯವಸ್ಥೆ ಮಾಡಲಾಗ ಬೆದೆಂದರು ಲೋಕಲ್ ಬೋರ್ಡುಗಳ ಮತ್ತು ಖಾಸಗಿ ಸಂಸ್ಥೆಗಳ ಅಧೀನದಲ್ಲಿರುವ ಶಾಲೆಗಳನ್ನು ಆಯಾಯ ಸಂಸ್ಥೆಗಳೇ ನಡೆಸಿಕೊಂಡುಬರುವುದು ಉತ್ತಮವೆಂದು ಮಂತ್ರಿಗಳು ಹೇಳಿದರು. ಅಧ್ಯಕ್ಷ ಹೆಗ್ಡೆಯವರು ಚಹಾವಿತ್ತು ಸತ್ಕರಿಸಿದರು.

ಸಂಗೀತ ಶಾಲೆಯ ಉದ್ಘಾಟನೆ—ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ ಲಲಿತ ಕಲಾ ಮಂದಿರಲಿ ಅಪ್ರಧಾನದಲ್ಲಿ ಶಿಕ್ಷಣ ಸಚಿವ ಶ್ರೀ ವೆಂಕಟಪ್ಪನವರು ತಾ 16ರಂದು ಸಂಜೆ ಸಂಗೀತ ಶಾಲೆಯನ್ನು ಉದ್ಘಾಟಿಸಿದರು ನಗರ ಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸಭಾಧ್ಯಕ್ಷತೆ ವಹಿಸಿದ್ದರು.

ದ. ಕ. ಜಿಲ್ಲೆಗೆ ಹೊಸ ಕಲೆಕ್ಟರ್ ನೇಮಕ—ಸಿಮ್ಲಾದ ಐ. ಎ ಎಸ್. ಸ್ವಾಮಿ ಕಾಲೇಜಿನಲ್ಲಿ ತರಬೇತಿ ಪಡೆಯುತ್ತಿರುವ, ಶ್ರೀ ವೈ. ಸಿ. ಹೊಂಬಾಳಯ್ಯನವರನ್ನು ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರರಾಗಿ ನೇಮಿಸಲಾಗಿದೆ ಈ ತನಕ ಕಲೆಕ್ಟರರಾಗಿದ್ದ ಶ್ರೀ ಎಚ್. ನರಸಿಂಹನವರು ಇದೇ ತಾ 2ರಂದು ನಿವೃತ್ತರಾಗುವುದರಿಂದ ಶ್ರೀ ಹೊಂಬಾಳಯ್ಯನವರು ಅಧಿಕಾರ ಸ್ವೀಕರಿಸುವ ತನಕ ಶ್ರೀ ಎಸ್. ಯು. ಪರಶಂರಾಮ ನಾಯ್ಕರು ಕಲೆಕ್ಟರರ ಚಾರ್ಜನಲ್ಲಿರುವರು.

ವಿದಾಯ ಸತ್ಕಾರ—ತಾ 31ರಂದು ಸಂಜೆ ಸೈಂಟ್ ಎಲೋಸಿಯಸ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ಶ್ರೀ ಸೇಡಿಯಾಪು ಕೃಷ್ಣ ಭಟ್ಟರಿಗೆ ವಿದಾಯ ಸತ್ಕಾರವೀಯಲಾಯಿತು ಕಾಲೇಜ್ ಪ್ರಿನ್ಸಿಪಾಲ್ ರೆ| ಫಾ| ಎ. ಬಿ. ಸಾಲ್ದಾನರು ಸಮಾರಂಭದ ಅಧ್ಯಕ್ಷತೆ ವಹಿಸಿ ಶ್ರೀ ಭಟ್ಟರಿಗೆ ರೇಶ್ಮೆ ಶಾಲು ಉಡುಗೊರೆಯಿತ್ತು ಗೌರವಿಸಿದರು. ಸಂಘದ ಅಧ್ಯಕ್ಷ ಶ್ರೀ ಗೋಪಾಲಕೃಷ್ಣ ಭಟ್ಟರು ಸ್ವಾಗತ ನೀಡಿದರು. ಶ್ರೀಗಳಾದ ಎಮ್. ರಾಮಚಂದ್ರ ವಿರಲ ಸೆಟ್ಟಿ ಮತ್ತು ಸೀತಾರಾಮಾಚಾರ್ಯರು ಕಾರೋಚಿತ ಮಾತುಗಳನ್ನಾಡಿದರು.

ಆಚಾರ್ಯ ವಿನೋಬಾರ ಸಂದೇಶ—ತಾ. 26ರಂದು ಸಂಜೆಯ ಪ್ರಾರ್ಥನಾ ಸಭೆಯಲ್ಲಿ ಆಚಾರ್ಯ ವಿನೋಬಾ ಭಾವೆಯವರು ಕರ್ನಾಟಕದ ಜನತೆಗೆ ಇತ್ತ ಸಂದೇಶದಲ್ಲಿ ಉತ್ತರ ದಕ್ಷಿಣ ಭಾರತದೊಳಗೆ ಸಮನ್ವಯ ಸಾಧಿಸಿದ ನಾಡು ಕರ್ನಾಟಕ. ಸಂಸ್ಕೃತ ಭಾಷೆಯಲ್ಲಿರುವಂತೆಯೇ ಧ್ವನಿಸಂಯೋಜನೆವಿರುವ ಭಾಷೆ ಕನ್ನಡವಾಗಿದ್ದು, ಭಾಷಾ ಸಮನ್ವಯವನ್ನು ಕರ್ನಾಟಕ ಸಾಧಿಸಿದೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತಾದಿ ಧರ್ಮಗಳ ಸಮನ್ವಯವಾದುದು ಕರ್ನಾಟಕದಲ್ಲಿ. ಇದೇ ಕರ್ನಾಟಕದಲ್ಲಿ ಆರ್ಥಿಕ ಸಾಮಾಜಿಕ ಸಮನ್ವಯವೂ ಸಾಧಿಸಲ್ಪಟ್ಟಿದೆ, ಸರ್ವೋದಯ ಸಮಾಜದ ದರ್ಶನವೂ ಇಲ್ಲೇ ಆಗುವುದೆಂಬ ದೃಢ ಆಶಯವಿದೆ ಎಂದು ಹೇಳಿದರು

ಮಾನ್ಯ ವಿದ್ಯಾ ಮಂತ್ರಿ ಮತ್ತು ಡೈರೆಕ್ಟರರಿಗೆ ಉಡುಪಿ ತಾಲೂಕು ಶಿಕ್ಷಕರ ಭಿನ್ನವತ್ತಳೆ ಮತ್ತು ವಿಚಾರ ವಿನಿಮಯ.— ತಾ. 31–8–57ರಂದು ಉಡುಪಿಗೆ ಸಂದರ್ಶನವಿತ್ತ ಮಾನ್ಯ ಮಂತ್ರಿಗಳಿಗೆ ಉಡುಪಿ ಕಾಂಗ್ರೆಸ್ ಕಚೇರಿಯಲ್ಲಿ ಪ್ರಾಥಮಿಕ ಶಿಕ್ಷಕರ ಪರವಾಗಿ ಶ್ರೀ ದಾಂತಿಯವರು ಭಿನ್ನವತ್ತಳೆಯನ್ನರ್ಪಿಸಿದರು. ಮಾನ್ಯ ಮಂತ್ರಿಗಳಿಗೆ ಸಮಯಾವಕಾಶವಿಲ್ಲದುದರಿಂದ ಶಿಕ್ಷಕರ ಕೋಳಿಕೆಗಳನ್ನು ಉತ್ತರಿಸಲಾಗಲಿಲ್ಲ. ಆದರೆ ರಾತ್ರಿ ಸುಂಟೆ 10ಕ್ಕೆ ಒಂಗ್ಲೆಯಲ್ಲಿ ಮಂತ್ರಿಗಳೊಡನೆ ವಿಚಾರವಿನಿಮಯದ ಅವಕಾಶವನ್ನು ಏರ್ಪಡಿಸಲಾಯಿತು ಈ ವಿಚಾರವಿನಿಮಯದ ವೇಳೆ ಶ್ರೀ ಟಿ. ಎ ಪೈಗಳು ಹಾಜರಿದ್ದು ಶಿಕ್ಷಕರ ಕೋಳಿಕೆಗಳನ್ನು ಸಮರ್ಥಿಸಿ ಮಾತನಾಡಿದರು 1. ಶಿಕ್ಷಕರಿಗೆ ಶಿಕ್ಷಣ ಯೋಜನೆ ಕ್ರಮನಿಬಂಧನಾ ರಚನೆಗಳಲ್ಲಿ ಭಾಗವಹಿಸುವ ಅವಕಾಶ ಕೊಡತಕ್ಕದ್ದು. 2 ಎಲ್ಲಾ ಅಡಳಿತೆಯೊಳಗಿನ ಶಿಕ್ಷಕರಿಗೂ ಹೊಸ ದರದ ಸಂಬಳವನ್ನು ಒದಗಿಸುವುದು. 3 ನಿವೃತ್ತಿಸ್ತ್ರಿಯದ ಪುನರಾವಲೋಕನೆ 4. ಸರಕಾರವೇ ಶಿಕ್ಷ ಪುಸ್ತಕಗಳನ್ನು ಪ್ರಕಟಿಸುವುದು 5 ಶಿಕ್ಷಣಕ್ಷೇತ್ರದಲ್ಲಿ ಆಗಾಗ ಬಜೆಟವಣೆಯನ್ನು ಮಾಡಬೆಡುವುದು. 6. ಶಿಕ್ಷಕರಿಗೆ ಮಾಸಗಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳುವ ಸೌಕರ್ಯ. 7. ಉಡುಪಿಯಲ್ಲೊಂದು ಜಿಲ್ಲಾ ವಿದ್ಯಾಧಿಕಾರಿಗಳ ಆಫೀಸನ್ನು ತೆರೆಯುವುದು 8 ಉಡುಪಿ ಪರೀಕ್ಷಾಧಿಕಾರಿಗಳ ಆಫೀಸಿನ ಬಳಿಯಿರುವ ಸಾರ್ವಜನಿಕ ಪಾಯಿಖಾನೆಯನ್ನು ಸ್ಥಳಾಂತರಿಸುವುದು 9. ನಿವೃತ್ತಿ ಶಿಕ್ಷಕರ ಮಕ್ಕಳಿಗೂ ಧರ್ಮಾರ್ಥ S. S. L C. ಪರೀಕ್ಷೆ ಶಿಕ್ಷಣ. 10 ಶಿಕ್ಷಕ ಮೆನೇಜ್‌ಮೆಂಟುಗಳ ವಿವಾದವನ್ನು ಸೌಹಾರ್ದತೆಯಿಂದ ಇತ್ಯರ್ಥಿಸುವುದು. 11 ಬರುವ ವರ್ಷದಿಂದ 3ನೇ ತರಗತಿಯಲ್ಲಿವಾರೆ ಸಾಕಷ್ಟು ಸಮಯ ಮುಂಚಿತವಾಗಿ ತಿಳಿಯಪಡಿಸುವುದು ಇದರಿಂದ ಶಿಕ್ಷಕರ ನಿವೃತ್ತಿಯಾಗದಂತೆ ನೋಡುವುದು. 12 ತರಬೇತಾದ ನಿರುದ್ಯೋಗಿ ಶಿಕ್ಷಕರಿಗೆ ನೌಕರಿಯನ್ನೊದಗಿಸುವುದು 13. ಸಾಕಷ್ಟು ತರಬೇತಿ ಅಧ್ಯಾಪಕರು ಇರುವುದರಿಂದ ಕೆಲವು ತರಬೇತಿ ಶಾಲೆಗಳನ್ನು ಜಿಲ್ಲೆಯಿಂದ ಬೇರೆಡೆಗೆ ವರ್ಗಾಯಿಸುವುದು 14. ಬುನಾದಿ ಮರುತರಬೇತಿಗೆ ಉಡುಪಿ ತರಬೇತಿ ಶಾಲೆಯಲ್ಲಿ ಅವಕಾಶವನ್ನೊದಗಿಸುವುದು ಇತ್ಯಾದಿ ಕೋಳಿಕೆಗಳನ್ನು ಮುಂದಿರಿಸಲಾಗಿತ್ತು. ಎಲ್ಲಾ ಶಿಕ್ಷಕರಿಗೂ ಒಂದೇ ದರದ ಸಂಬಳ ಮತ್ತು ಹೊಸ ಯೋಜನಾ ಸಮಿತಿಗಳಲ್ಲಿ ಶಿಕ್ಷಕರಿಗೆ ಪ್ರಾತಿನಿಧ್ಯದ ಅವಶ್ಯಕತೆಯನ್ನು ಒತ್ತಿ ಹೇಳಲಾಗಿತ್ತು.

ಮಂತ್ರಿಗಳೂ ಡೈರೆಕ್ಟರರೂ ಸುಮಾರು ಒಂದು ತಾಸಿನ ತನಕ ವಿಚಾರ ವಿನಿಮಯ ನಡೆಸಿ, ಶಿಕ್ಷಕ ಯೂನಿಯನುಗಳ ಸಲಹೆಗಳನ್ನು ಸ್ವಾಗತಿಸುವುದಾಗಿ ತಿಳಿಸಿದರಲ್ಲದೆ ಕೇಳಿಕೆಗಳ ಕುರಿತು ಪರ್ಯಾಲೋಚಿಸುವುದಾಗಿ ಆಶ್ವಾಸನೆಯಿತ್ತರು.

ಶ್ರೀ ಕೆದಿಂಜೆ ಪರಾರಿ ಸುಬ್ಬಯ್ಯ ಹೆಗ್ಗಡೆಯವರು ತನ್ನ 60ನೇ ವಯಸ್ಸಿನಲ್ಲಿ ಕಳೆದ ತಾ. 29ರಂದು ತನ್ನ ಅಳಿಯ ಡಾಕ್ಟರ್ ಪಿ. ಜಗನ್ನಾಥ ಶೆಟ್ಟರ ಬೊಂಬಾಯಿ ವಸತಿ ಗೃಹದಲ್ಲಿ ಹೃದ್ರೋಗದಿಂದ ನಿಧನ ಹೊಂದಿದರೆನ್ನಲು ವಿಷಾದಿಸುತ್ತೇವೆ.

ಸುರತ್ಕಲ್—ಇಲ್ಲಿಯ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ಕೆ ಕೃಷ್ಣಯಯರಿಗೆ ಮಂಗಳೂರಿಗೆ ವರ್ಗವಾದ ನಿಮಿತ್ತ ಅವರಿಗೆ ಶುಭ ವಿದಾಯವನ್ನು ಬಯಸಿ ಸತ್ಕಾರಸಭೆ ಸಮಾರಂಭವು ಕಳೆದ ತಾ. 27ರಂದು ಜರಗಿತು. ಶ್ರೀ ಎಸ್. ಆರ್. ಹೆಬ್ಬಾರರು ಸ್ವಾಗತಿಸಿ ಶುಭ ವಿದಾಯವನ್ನು ಹಾರೈಸಿದರು.

ಬೆಂಗಳೂರು

ವಿಜಯಾ ಬೇಂಕ್ ಶಾಖೆಯ ಉದ್ಘಾಟನೆ—ತಾ. 30ರಂದು ಸಂಜೆ ಲಾಲ್‌ಬಾಗ್ ಉದ್ಯಾನದ ಗಾಜಿನ ಮನೆಯಲ್ಲಿ ಮಂಗಳೂರು ವಿಜಯಾ ಬೇಂಕಿನ ಬೆಂಗಳೂರು ಶಾಖೆಯನ್ನು ಮೈಸೂರು ಹೈಕೋರ್ಟಿನ್ಯಾಯಮೂರ್ತಿ ಶ್ರೀ ಎಚ್. ಹೊಂಬೇಗೌಡರು ಉದ್ಘಾಟಿಸಿದರು. ಆರಂಭದಲ್ಲಿ ಬೇಂಕಿನ ಅಧ್ಯಕ್ಷ ಶ್ರೀ ಕೆ. ಸುಂದರರಾಮ ಶೆಟ್ಟರು ಸ್ವಾಗತಭಾಷಣಮಾಡಿ ಬೇಂಕಿನ ಪೂರ್ವಾಪರ ಹಾಸವನ್ನು ತಿಳಿಸಿದರು. ಶ್ರೀ ಪಿ. ಜಯರಾಮ ಶೆಟ್ಟರು ಸಮಾರಂಭಕ್ಕೆ ಬಂದ ಸಂದೇಶಗಳನ್ನು ಓದಿದರು

ಸಮಾರಂಭದ ಅಧ್ಯಕ್ಷತೆ ವಹಿಸಿದ ಮೈಸೂರು ಸರಕಾರದ ಆರ್ಥಿಕ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಮಾತನಾಡುತ್ತಾ, ರಾಷ್ಟ್ರ ಪುನರ್ನಿರ್ಮಾಣಕ್ಕಾಗಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನೊದಗಿಸುವುದಕ್ಕಾಗಿ ಸರಕಾರವು ಸಾರ್ವಜನಿಕರಿಂದ ಸಾಲವನ್ನು ಎತ್ತಬಹುದು. ಅಂತಹ ಸಂದರ್ಭದಲ್ಲಿ ಬೇಂಕ್ ಉದ್ಯಮಿಗಳ ಮತ್ತು ವರ್ತಕ ಪ್ರಮುಖರ ಸಹಕಾರ ದೊರೆಯುವುದೆಂಬ ನಂಬಿಕೆ ಸರಕಾರಕ್ಕಿದೆ ಎಂದರು ಈ ತನಕ ಸರಕಾರಕ್ಕೆ ಹಲವು ವಿಧದಲ್ಲಿ ವಿಪರೀತ ತೆರಿಗೆಗಳನ್ನು ಕೊಡುತ್ತಿದ್ದ ದ. ಕ. ಜಿಲ್ಲೆಯು ಮೈಸೂರಿಗೆ ಸೇರಿದ್ದರಿಂದ ತೆರಿಗೆ ಪ್ರಮಾಣ ಕಡಿಮೆಯಾಗಿ ಲಾಭವಾಗಿದೆ.—ಎಂಬುವಾಗಿ ಅಭಿಪ್ರಾಯಪಟ್ಟು ಆ ಲಾಭಂಶವನ್ನು ರಾಷ್ಟ್ರೀಯ ಉಳಿತಾಯ ಯೋಜನೆಯಲ್ಲಿ ತೊಡಗಿಸಬೇಕೆಂದರು ಶ್ರೀ ಎಸ್. ಎಮ್. ಆಡ್ಯಂತಾಯರು ಧನ್ಯವಾದಗಳನ್ನಿತ್ತರು.

ಪ್ರಕಟಣೆ

ಕಾರ್ಕಳ ತಾಲೂಕು ಶಿವಪುರ ಗ್ರಾಮದ ಎಳ್ಳೋಳಿ ನಡುಮನೆಯಲ್ಲಿರುವ ಉಪ್ಪೂರು ನರಸಾಡಿ ಸುಬ್ಬಮ್ಮ ಸೆಡ್ತಿರ ಮಗಳು ತುಂಗಮ್ಮ ಸೆಡ್ತಿಯು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದೇನೆಂದ್ರೆ ನನ್ನ ಮಗನಾದ ಮುದ್ದಣ್ಣ ಸೆಟ್ಟಿಯು ಸುಮಾರು 6 ತಿಂಗಳು ಹಿಂದೆ ಸುಮಾರು ರೂಪಾಯಿ 3000–0–0 ಮೂರು ಸಾವಿರಕ್ಕೂ ಮಿಕ್ಕಿ ನನ್ನ ಮನೆ ವಾರ್ತಾನೆ ಸೊತ್ತುಗಳನ್ನು ವಿಶ್ವಯಿಸಿ ಹಣವನ್ನು ಹಿಡಿದುಕೊಂಡು ಪರಾರಿಯಾಗಿರುತ್ತಾನೆ. ಸದ್ರಿಯವನನು ಅವನ ಹೆಂಡತಿಯುತಂದೆ ನನ್ನ ಕಾಸ ತಮ್ಮ ಗಣಪಯ್ಯ ಸೆಟ್ಟಿಯು ಪ್ರೇರೇಪಣೆಯಂತೆ ಪರಾರಿಯಾಗುವ ಮುಂಚಿನ ದಿನ ನನ್ನಿಂದ ಕೆಲವು ಹೆಬ್ಬೆಟ್ಟುಗಳನ್ನು ರಕ್ಷಿದಿಯ ಮುಕ್ತಕಕ್ಕೂ, ಕೆಲವು ಕಾಲಿಕಾಗದಕ್ಕೂ ಸುಳ್ಳು ನೆಪಹೇಳಿ ಮನೆಯಲ್ಲಿ ಯಾರೂ ಇಲ್ಲದ ವೇಳೆ ನನ್ನಿಂದ ತೆಗೆದುಕೊಂಡಿರುತ್ತಾನೆ. ಅಂದಿನಿಂದ ಅವನು ನನ್ನ ಮನೆಗೆ ಬರಲಿಲ್ಲ. ಸದ್

ಭಾರತ-ಪಾಕ್ ಸ್ನೇಹ ಸಂಬಂಧ

(೮ನೇ ಪುಟದಿಂದ)

ಸಂಧಾನಕ್ಕಾಗಿ ಬಂದ ಜಾಗತಿಕ ಬೇಂಕಿನ ಉಪಾಧ್ಯಕ್ಷ ಡಾ! ಇಲಿಸ್‌ರು—ಈ ಕುರಿತು ಸಂಧಾನಯತ್ನ ನಡೆಯುತ್ತಿರುವಾಗ ಪಾಕಿಸ್ತಾನ, ಭಾರತಗಳಲ್ಲಿ ಯಾವೊಂದು ರಾಷ್ಟ್ರವು ಈ ವಿಚಾರದಲ್ಲಿ ಪ್ರಚಾರಕ್ಕೆಗೊಳ್ಳಬಾರದಾಗಿ ಒಪ್ಪಂದವನ್ನು ಮಾಡಿಸಿದ್ದರೂ, ಪಾಕ್ ಪ್ರಧಾನಿ ತನ್ನ ಅಮೇರಿಕ ಸಂಚಾರದ ವೇಳೆ ಕಾಲುವೆ ನೀರಿನ ವಿವಾದದ ಕುರಿತು ಭಾರತದ ವಿರುದ್ಧ ಅಪಪ್ರಚಾರ ಕೈಗೊಂಡರು. ಇದರಿಂದಾಗಿ ಬೇಗೆಗೊಂಡ ಭಾರತ ಪಾಕಿಸ್ತಾನಕ್ಕೆ ತನ್ನ ನಿಷೇಧ ಸೂಚಿಸಿದೆ ಭಾರತ ಮಾತ್ರ ನಿಷೇಧ ಸೂಚಿಸಿದಲ್ಲಿ ಅದು ತನ್ನ ಮೇಲಿನ ಅಸಹನೆಯಿಂದ ಹಾಗೆ ಮಾಡಿದ್ದೆಂದು ಪಾಕ್ ಮುಂದಾಳುಗಳು ವಿಲಾಪಿಸುತ್ತಿದ್ದರೇನೋ! ಆದರೆ ಅವರ ಅಧಿಕ ಪ್ರಸಂಗ ಯುಕ್ತವಾದ ಭಾಷಣಗಳು ಭಾರತವು ಮಾತ್ರವಲ್ಲದೇ ಇನ್ನೈದು ರಾಷ್ಟ್ರಗಳ—ರಷ್ಯ, ಚೈನಾ, ಇಂಡೋನೇಶ್ಯ ಸಿರಿಯಾ, ಅಫಘಾನಿಸ್ತಾನ—ನಿಷೇಧವನ್ನು ಗಳಿಸಿವೆ. ಅಂದ ಮೇಲೆ ಪಾಕಿಸ್ತಾನವು ದಿನೇ ದಿನೇ ಜಾಗತಿಕ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿದೆಯೆನ್ನಬಹುದೇ? ಹಿಂದೊಮ್ಮೆ ಭಾರತೀಯ ಪ್ರಧಾನಿಯವರು ಅಮೇರಿಕವನ್ನು ಸಂದರ್ಶಿಸಿದಾಗ ಅಮೇರಿಕದ ವೃತ್ತ ಪತ್ರಗಳು ಅವರನ್ನು ಬಹುವಾಗಿ ಪ್ರಶಂಸಿಸಿದ್ದವು ಅಧ್ಯಕ್ಷ ಡ್ವೈಟ್ ಡೇವಿಡ್ ಐಸೆನ್ ಹೋವರರು ಮೂರು ದಿನಗಳ ಕಾಲ ಅವರನ್ನು ಖಾಸಗಿ ಅತಿಥಿಯಾಗಿರಿಸಿಕೊಂಡು ಬಚ್ಚು ಮನಸ್ಸಿನಿಂದ ಮಾತುಕತೆ ನಡೆಸಿದರು ಆದರೆ ಸುಹ್ರವರ್ದಿ ಅಮೇರಿಕದಲ್ಲಿ ಪಡೆದದ್ದೇನನ್ನು? ಪತ್ರಿಕೆಗಳ ಪ್ರಶಂಸೆಯ ಬದಲು ಕೆಲವು ದೂಷಣೆಗಳನ್ನು! 'ವಾಷಿಂಗ್‌ಟನ್ ಪೋಸ್ಟ್' ನಿಂದ, 'ಮಧ್ಯಸ್ಥಿಕೆಗೆ ಅನರ್ಹ' ನೆಂಬ ಅನ್ವರ್ಥನಾಮವನ್ನು! ಅಧ್ಯಕ್ಷ ಡ್ವೈಟರೊಡನೆ ಅವರಿಗೆ ಮೂರು ತಾಸುಗಳಷ್ಟು ಸಂಭಾಷಣೆ ನಡೆಸುವಷ್ಟು ಅವಕಾಶ ದೊರೆಯಲಿಲ್ಲ! ಅಮೇರಿಕವೆಷ್ಟೇ ಪಾಕಿಸ್ತಾನದ ಸಹಕಾರಿಯಾದರೂ, ಅದು ಹೊರಗಿನ ತೋರಿಕೆಗೆ ಮಾತ್ರ! ಸಾಮ್ಯವಾದದ ನಿರ್ಮೂಲನಕ್ಕಾಗಿ ಮಾತ್ರ ಅದು ಪಾಕ್ ಸಹಕಾರಿಯಾಗಿರಬೇಕಾಯಿತು ಭಾರತದ ಪ್ರಧಾನಿಯ ಜನಪ್ರಿಯತೆ, ಭಾರತೀಯರ ಸದ್ವರ್ತನೆ ಅಮೇರಿಕದ ಅಧ್ಯಕ್ಷರಿಗೆ ತಿಳಿಯದುದೇನೂ ಅಲ್ಲ. ಪ್ರಧಾನಿ ನೆಹರು ಅವ್ಯಕ್ತ ಐಕರ ನೆಚ್ಚಿನ ಗೆಳಯರಲ್ಲೊಬ್ಬರು. ವಸ್ತುಸ್ಥಿತಿ ಹೀಗಿರುವಾಗ ಅಲ್ಲಿಗೆ ಭಾರತದ ವ್ಯಕ್ತಿಯನ್ನು ಕಳೆದುಕೊಳ್ಳಲು ಬಯಸಿಯಾರು? 'ಭಾರತಕ್ಕೆ ಸಹಾಯ ನೀಡಬಾರದೆಂಬ ಪಾಕ್ ಪ್ರಧಾನಿಯ ವಾದಕ್ಕೆ ಐಕರು ನರವು ನೀಡದಿದ್ದುದರ ಕಾರಣ ಇದೇ ಆಗಿದೆ ಪಾಕಿಸ್ತಾನಕ್ಕೆ ಇನ್ನೂ ಹೆಚ್ಚಿನ ಶಸ್ತ್ರ ಸಹಾಯದ ಸಾಧ್ಯತೆ ಯಾಗಬೇಕೆಂದು ಪಾಕ್ ಪ್ರಧಾನಿಯವರಾಡಿದ್ದಕ್ಕೆ ಅಮೇರಿಕದ ಸಹಾಯ ದೆ ತೆಯಲಿಲ್ಲವೇನೋ ಇದರ ಕಾರಣವನ್ನು ಹೀಗೆ ಊಹಿಸಬಹುದು—ಪಾಕಿಸ್ತಾನದ ಆಕ್ರಮಣಕಾರಿ ಪ್ರವೃತ್ತಿಯನ್ನು ಅಮೇರಿಕ ಮೆಚ್ಚುವುದಿಲ್ಲವೆಂದು. ಈ ರೀತಿ ವ್ಯಕ್ತ ಹಾಗೂ ಅವ್ಯಕ್ತವಾದ ಮುಖಭಂಗದಿಂದ ಸುಹ್ರವರ್ದಿ ನೊಂದಂತೆ ಕಾಣುತ್ತದೆ ಆದ್ದರಿಂದ ಕನ್ನಡ್ರವಾಸದ ಮುಂದಿನ ಕಾರ್ಯಕ್ರಮಗಳನ್ನು ರದ್ದುಪಡಿಸಿಕೊಂಡು ಅವರು ತನ್ನ ದೇಶಕ್ಕೆ ಹಿಂತಿರಳಲು ಸಿದ್ಧರಾದರು.

ಹೀಗೆ ಅಮೇರಿಕದಲ್ಲಿ ಪಾಕಿಸ್ತಾನ ಗೌರವ ಹೊಂದಲು ಅಸಮರ್ಥರಾದ ಸುಹ್ರವರ್ದಿಯವರ ಕುರಿತು ಪಾಕ್ ರಾಷ್ಟ್ರೀಯ ಎಸೆಂಬ್ಲಿಯ ಸದಸ್ಯ ಮಿ ಘಝ್ರ್ ರೆಹಮಾನರು, ಸುಹ್ರವರ್ದಿ ಪಾಕ್ ಪ್ರಧಾನಿ ಪದವಿಗೆ ಅಯೋಗ್ಯರೆಂದಿದ್ದಾರೆ ರಾಜಕೀಯ ಸುಂದಾತ್ತನ ಹಾಗೂ ರಾಜತಂತ್ರವಲ್ಲಿ ಅವರು ದಿವಾಳಿಯೇರತನವನ್ನು ಸರ್ವವಿದಿತ ಪಡಿಸಿದ್ದರಿಂದ ಅವರ ಪ್ರಧಾನಿತ್ವಕ್ಕೆ ರಾಜೀನಾಮೆಯನ್ನೀಯಬೇಕೆಂದು ರೆಹಮಾನ್ ಒತ್ತಾಯಪಡಿಸಿದ್ದಾರೆ ಅಮೇರಿಕದಲ್ಲಿ ಪಾಕ್ ಪ್ರಧಾನಿಯಾಡಿದ ಮಾತುಗಳು ನೇಚ್ಛ ಪ್ರವೃತ್ತಿಯವೂ ಅಯೋಗ್ಯವೂ ಆಗಿವೆಯೆಂದಿದ್ದಾರೆ, ಮಿ! ರೆಹಮಾನ್, ಹೀಗೆ ಪಾಕ್ ನಾಯಕರಿಗೆ ಸ್ವದೇಶದಲ್ಲಿಯೇ ಪ್ರಚಂಡ ವಿರೋಧ ಕಂಡುಬರುತ್ತಿದೆ ಒಲ್ಲದೇ ಅವರು ತಮ್ಮ ದೇಶದಲ್ಲಿಯೇ ತಮ್ಮ ಗೌರವವನ್ನು ಜನಪ್ರಿಯತೆಯನ್ನೂ ಕಳೆದುಕೊಳ್ಳುತ್ತಿದ್ದಾರೆ.

ಪಾಕಿಸ್ತಾನದ ಇಂತಹ ಸ್ಥಿತಿಗತಿಗಳಿಂದ ನಾವು ಕಲಿಯಬೇಕಾದ ನೊಂದ ಪಾಠವೆಂದರೆ—ಅನ್ಯಾಯ, ಅಸೂಯೆ. ಅಧಿಕ ಪ್ರಸಂಗತನಗಳಿಗೆ ನ್ಯಾಯಾಯಮಂದಿರದಲ್ಲಿ ನ್ಯಾಯ ದೇವತೆಯ ಸಮ್ಮುಖದಲ್ಲಿ ಸ್ಥಾನವಿಲ್ಲವೆಂದು. ಆದುದರಿಂದ ಭಾರತವು ತನ್ನ ಸ್ಪಷ್ಟ ನಿಲುವಿನಿಂದ, ಪಂಚಶೀಲಗಳ ತತ್ವಮಯಿಯಲ್ಲಿ ಜಾಗತಿಕ, ಅದರಲ್ಲೂ ಮುಖ್ಯವಾಗಿ ಪಾಕಿಸ್ತಾನದ ಸ್ನೇಹ ಬಯಸಿವೆ. ಆದರೆ ಪಾಕಿಸ್ತಾನವಿದಕ್ಕೆ ಸಿದ್ಧವಾಗಿಲ್ಲ. ಹಾಗೂ ಅದು ಸಿದ್ಧವಾಗಿದಿದ್ದಲ್ಲಿ ಭಾರತವೇನೂ ಅದರ ಮೇಲೆ ಬಲಾತ್ಕಾರ ನಡೆಸುವಂತಿಲ್ಲವಾದರೂ ಅದರ (ಪಾಕಿಸ್ತಾನದ) ಮೊಳ್ಳು ಬೆದರಿಕೆಗಳಿಗೆಂದೂ ತಲೆವಾಗುವಂತಿಲ್ಲ. ಭಾರತವು ಮಣಿಯುವುದು ನ್ಯಾಯ, ಶಾಂತಿ, ನಿಸ್ವಾರ್ಥಮಯ ಸ್ನೇಹಗಳಿಗೆ ಪಾತ್ರ, ಅದರಿಂದ ಭಾರತದ ಸ್ನೇಹ ಹಸ್ತವನ್ನು ಸ್ವೀಕರಿಸದೇ, ಅದಕ್ಕೆ ಕೈನೀಡಿ, ಪಾಕಿಸ್ತಾನವು ನಮ್ಮೊಡನೆ ಸಹೋದರ ಪ್ರೇಮದಿಂದಿದ್ದು ವಿಶ್ವ ಶಾಂತಿಯನ್ನು ಸಾಧಿಸುವಲ್ಲಿ ಭಾರತಕ್ಕೆ ನೆರವಾಗಲೆಂಬುದೇ ನಮ್ಮೆಲ್ಲರ ಆಶಯ. ಈ ಆಶಯದ ಈಡೇರಿಕೆಯ ಭರವಸೆಯನ್ನು ನಾವು ಪಾಕಿಸ್ತಾನದಿಂದ ನಿರೀಕ್ಷಿಸಬಹುದೇ?

ಸೋವಿಯೆಟ್ ರಶ್ಯಾದ ಅಧ್ಯಕ್ಷಮಂಡಳದಿಂದ ಪಕ್ಷನಿರೋಧಿಗಳೆಂದು ತಪ್ಪುಹೊರಿಸಿ ಇವರನ್ನು ಅವರವರ ಉನ್ನತ ಪದವಿಯಿಂದ ಕೆಳದಿಸಗಳ ಹಿಂದೆ ಹೊರತಳ್ಳಲಾಗಿದೆ ಮೇಲಿನ ಸಾಲು-(ಎಡಕ್ಕೆ) ಲೇಕರ್ ಕಗನೋವಿಚ್ (ಬಲಕ್ಕೆ) ಜೋರ್ಜಿ ಮಲೆಂಕೋವ್, ಕೆಳಗಿನ ಸಾಲು- (ಎಡಕ್ಕೆ) ಡ್ಮಿತ್ರಿ ಶೆಪಿಲೋವ್ (ಬಲಕ್ಕೆ) ವಿ. ಎಮ್. ಮೊಲೊಟೋವ್.

ಸ್ಥಾಪನೆ. 1906] [ಪ್ರಧಾನ ಕಾರ್ಯಾಲಯ ಉಡುಪಿ (ದ. ಭಾರತ)

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ರೇವಣಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?

ಹಾಗಿದ್ದಲ್ಲಿ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬೇಂಕಿನ ಶಾಖೆಯಲ್ಲಿ ವಿಚಾರಿಸಿರಿ "ಕೊರ್ಪೊರೇಶನ್" ಬೇಂಕು ಎಲ್ಲಾ ತರದ ರೇವಣಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿಯದೆ ಅಲ್ಲದೆ ರೇವಣಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ಶರತ್ತುಗಳನ್ನೂ ಬದಲಾಯಿಸಿಯದೆ

51 ವರುಷಗಳ ಪರಿಪಕ್ವ ಬೇಂಕಿಂಗ್ ಅನುಭವ!

7,00,00,000 ರೂಪಾಯಿಗಳಿಗೂ ಮೀರಿದ ಒಟ್ಟು ವಹಿವಾಟು!

THE CANARA BANKING CORPORATION LIMITED

100 ವರ್ಷಗಳ ಖ್ಯಾತಿಗಳಿಸಿದ ಸಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರವರ ಕುಟುಂಬಗಳು

ಟ್ರೇಡ್ ಮಾರ್ಕ್

ಸಂ| A.R ಅಯ್ಯಂಗಾರ್

ಸಂತಾನ ಸಿಂದೂರ (ಸ್ತ್ರೀಯರಿಗೆ. ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ- ಗುಳಿಗೆ)

ಈ ಭಸ್ಮವು ಬಹುಷ್ಟೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುತ್ಕೃಷ್ಟ ಶಕ್ತಿಮಾದಿ, ಸ್ವಪ್ನಸ್ಖಲನ, ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಶಮಾಡಿ ಪೌರುಷವನ್ನು ಕೊಡುತ್ತದೆ

ದಂಪತಿಗಳಿಗಿ 16-18 ವರ್ಷ ಸಂತಾನವಿಲ್ಲದಿದ್ದರೆ "ತಾಯ್ಮಂದೆ"ಗಳಾಗಿದ್ದಾರೆ ರೋಗಿಯ ವಯಸ್ಸು ಮತ್ತು ಹಾಂಪಿಯ ವಿವರಗಳನ್ನು ಬರೆದು 4 ಆಣೆ (25 N P) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ಯಾಟಲಾಗ್ ರವಾನೆ.

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ. (ನ ಯು)

೨೭೩, "ಸಂತಾನ ಸಿಂದೂರ ಸದನ", ಚಾಮರಾಜ ಪೇಟೆ ಮೈಸೂರು-1 (S I)

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

೩೦ ವರ್ಷಗಳಿಂದಲೂ ಪ್ರಸಿದ್ಧಿ ಇದೆ } **ಮಲೇರಿಯಾ** ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ { ಎಲ್ಲ ಕೆಮಿಸ್ಟರಲ್ಲಿ ಗ್ರೊಸರಿಗಳಲ್ಲಿ ದೊರೆಯುತ್ತವೆ.

ಬಾಟ್ಲಿವಾಲಾ ಎಗ್ಯೂಮಿಕ್‌ಶ್ಚರ

ಮತ್ತು ಗುಳಿಗೆಗಳು

ಮಾರಾಟ ಮಾಡುವ ಏಜಂಟರು: **ಹರ್ಬರ್ಟ್ ಸನ್ಸ್ ಪ್ರೈವೆಟ್ ಲಿಮಿಟೆಡ್,** ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಬಗ್ಗಿದವನಿಗೊಂದು ಗುದ್ದು

(೩ನೇ ಪುಟದಿಂದ)

ಲ್ಲಿ ಹಿಡಿಯದ ಮುಗ್ಧೆಗೆ ಇದೇ ನಾವಿದ ರೂಪಾಯಿ! ತನ್ನ ಮಗನ ಅಭ್ಯುದಯ ಕ್ಕೆ ನೆರವಾಗಲಿರ ವ ಈ ಹತ್ತು ರೂಪಾ ಯಿಯೇ ಲಕ್ಷ ರೂಪಾಯಿ!

ಹತ್ತು ತಿಂಗಳುಗಳು ಕಳೆದುವು. ಸು ರೇಶ ಪರೀಕ್ಷೆಗೆ ಕುಳಿತ. ಉತ್ತಮರೀತಿ ಯಲ್ಲಿ ತೇರ್ಗಡೆಯಾಗುವ ಭರವಸೆಯೂ ಇತ್ತು.

ಒಂದು ದಿನ ತಾಯಿ ಕೆಲಸಕ್ಕೆ ಹೋಗ ಲಿಲ್ಲ. ಕಾರಣ ಸುರೇಶನಿಗೆ ತಿಳಿಯದು. ಮೈಯ್ಯಲ್ಲಿ ಸರಿಯಿಲ್ಲದಿರಬಹುದೆಂದು ವಿ ಚಾರಿಸಿದ ಹಾಗೆಯೇ ಎಂದು ತಿಳಿಯಿತು. ಕಷಾಯಾದಿಗಳನ್ನು ಇಟ್ಟು ಗುಣಮುಖ ವಾದಂತಾಯಿತು. ಆದರೂ, ಆಕೆ ಸಾಹು ಕಾರರ ಮನೆಗೆ ತೆರಳಲಿಲ್ಲ. ಏಕೆ, ಏನು ಎಂಬುದೇ ಸುರೇಶನಿಗೆ ತಿಳಿಯದು. ಏನೋ ನಡೆದಿರಬೇಕು, ಅದೇನು? ಹೆಣ್ಣು ಜೀವ ಗಳಿಗೂ ಸರಿಯಾಗಿ ತಿಳಿಯಲಾರದುದು ಸಣ್ಣ ಗಂಡು ಹುಡುಗನಿಗೆ ಹೇಗೆ ಗೊತ್ತಾ ಗಬೇಕು? ಅಂತೂ ತಾಯಿ ಕೆಲಸ ಬಿಟ್ಟ ಳು. ಇನ್ನು ಉಣ್ಣುವುದು ಏನನ್ನು?

ಕೆಲವು ದಿನಗಳು ಕಳೆದುವು ಸುರೇಶನ ಫಲಿತಾಂಶ ಬರುವುದರಲ್ಲಿತ್ತು. ಆಗಾಗ ಲೇ ತನ್ನ ತಾಯಿಯ ಅಭಿಲಾಷೆಯಂತೆ ಅಧ್ಯಾಪಕನ ಸ್ಥಾನಕ್ಕಾಗಿ ಹಲವರಲ್ಲಿ ವಿ ಚಾರಿಸಿದ್ದ. ಅವರಲ್ಲಿ ಒಬ್ಬರು ಇವನ ಕ ರುಣಾ ಜನಕ ಸ್ಥಿತಿಯನ್ನು ತಿಳಿದು, ಫಲಿ ತಾಂಶ ಬಂದ ನಂತರ ನೋಡುವ ಭರವ ಸೆಯಿತ್ತರು. ಸುರೇಶನಿಗೆ ದೊಡ್ಡ ನಿಧಿ ಯೇ ಸಿಕ್ಕಿದಂತೆ ಭಾಸವಾಯಿತು. ಹಗ ಲು ಸ್ವಪ್ನಗಳನ್ನು ಕಾಣ ತೊಡಗಿದ.

ಒಂದು ಕೆಲಸ ಸಿಗಬೇಕಾದರೆ ಅದೆಷ್ಟು ಪ್ರಯಾಸವೆನ್ನುವುದು ಸುರೇಶನಂತಹ ಎ ಳೆಯನಿಗೆ ಹೇಗೆ ಗೊತ್ತಾಗಬೇಕು? ಬಂ ಡೆಳ್ಳು ಗಳೆಲ್ಲ ಉರುಳಿ ಬೀಳುತ್ತಿರುವಾಗ, ಮರಳದಿನ್ನೆಗಳ ಸಾಡೇನು?

ಸಂತೋಷದ ಸುದ್ದಿಯನ್ನು ತಾಯಿ ಗೂ ತಿಳಿಸಿದ ಬೇನೆಯಿಂದ ಬೆಂದ ತಾ ಯಿಯ ಹೃದಯ ಸ್ವಲ್ಪ ವಿಕಾಸಗೊಂಡಿ ತು. ಹೇಗಾದರೂ ಮಗನಿಗೊಂದು ಕೆಲ ಸ ದೊರಕಿದರೆ.. ದೊರಕಿದರೆ, ತಾನೂ ಮಗನೊಂದಿಗೆ ಸುಖವಾಗಿ ಬಾಳಬಹು ದು; ಮರ್ಯಾದಸ್ಥರಾಗಿ ಬದುಕಬಹುದು.

ಫಲಿತಾಂಶ ಬಂದಿತು ಸುರೇಶ ತೇರ್ಗಡೆ ಹೊಂದಿದ್ದ. ತಾಯಿಗೆ ಸುದ್ದಿ ತಿಳಿದು ಅ ತಿ ಸಂತೋಷವಾಯಿತು. ಈ ಸಂತಸದ ಕಡಲಲ್ಲಿ ತಮ್ಮ ದಾರಿದ್ರ್ಯ ದುಃಖಗಳು ಕೊಚ್ಚಿಹೋಯಿತೆಂದು ತಿಳಿದರು ಮುಂ ದೆ ಬರಲಿರುವುದನ್ನು ಅರಿತವರಾರು?

ಹಿಂದೆ ನೋಡುವೆನೆಂದವರು ಇಂದು "ತರಬೇತಾಗದವರು ಪ್ರಯೋಜನವಿಲ್ಲ ಅದುದರಿಂದ" ಎಂದು ರಾಗವೆಳೆದರು. ಇ ನ್ನೊಬ್ಬರು "ನಾಲ್ಕು ದಿವ ಮೊದಲಾಗಿ ದ್ದರೆ, ನೋಡುತ್ತಿದ್ದೆ" ಎಂದರು. ಎಲ್ಲರೂ ಸಹಾಯ ಮಾಡುವುದರಲ್ಲಿ ತಾವು ನಿಸ್ಸ ಹಾಯಕರೆಂದು ತಿಳಿಸಿ ಸಹಾನುಭೂತಿ ಯನ್ನು ಧಾರಳವಾಗಿ ತೋರಿಸಿದರು.

ಸುರೇಶನಿಗೆ ಈಗ ತಿಳಿಯತೊಡಗಿತು: ಜೀವನವೆಂದರೆ ಏನು? ಎಂದು ಬೋಕದ ಲ್ಲಿ ಬಾಳುವುದೆಂದರೆ ಹುತ್ತದಲ್ಲಿ ಕೈಯಿ ಕ್ಕೆ ಬದುಕಿ ಬಂದವನಂತೆ ಎಂದು ಆತನಿ ಗೆ ಅರಿವಾಯಿತು ಬಾಲಮನಸ್ಸು ಮೊ ದಲೇ ಜರ್ಜರಿತವಾಗಿದ್ದ ಎಳೆ ಬುಗ್ಗೆ ಈಗ ಇನ್ನಷ್ಟು ನೊಂದಿತು. ತಾಯಿ ಹೃದಯ ದ ಅನುಕಂಪವೂ ಇದರೊಂದಿಗೆ ಬೆಸೆಯಿತು.

ಹತ್ತುದಿನ ಸುತ್ತಾಡಿದಾಗ, ಅಧ್ಯಾಪ ಕನ ಕೆಲಸವು ತನಗೆ ಧಕ್ಕುವುದಿಲ್ಲವೆಂದು ತಿಳಿದುಬಂತು. ತನ್ನ ಹಣೆಯಲ್ಲಿ ಆ ಪುಣ್ಯ ಕಾರ್ಯವು ಬರೆದಿಲ್ಲವೆಂದುಕೊಂಡ. ಇ ನ್ನುಳಿದ ಯಾರು ದೊಡ್ಡವರ ಸ್ನೇಹ.... ಹೌದು. ಹಣವಂತರ ಸಹವಾಸ, ಕೊಪ್ಪ ರಿಗೆಯನ್ನು ಕಾಯುತ್ತಿರುವ ಸರ್ಕಗಳ ಸಾಹಚರ್ಯ....ಅದೊಂದೇ ಇನ್ನು ಉಳಿ ದ ಮಾರ್ಗ.

ಮನೆಯಲ್ಲಿ ಅಂಬಲಿಯನ್ನು ಕುಡಿದು ಸುರೇಶ ಎದ್ದು ಸೊರಟೆ ಕೊಂಕು ದಾರಿ ಯನ್ನು ಹಿಡಿದು ಪೇಟೆಯ ಕಡೆಗೆ. ಅಲ್ಲಿ ಹತ್ತಾರು ಕಂಪೆನಿಗಳ ಮೆಟ್ಟಲನ್ನು ತುಳಿ ದೊಂದರಲ್ಲಿ ಮೇನೇಜರರನ್ನು ಕಂಡ. ಅ ವರು ಇವನ ಸ್ಥಿತಿಗತಿಯನ್ನು ಕೇಳಿ ಕೆಲ ಸ ಕೊಡುವುದಾಗಿಯೂ ಒಂದುವಾರ ಬಿಟ್ಟು ಬರುವಂತೆ ತಿಳಿಸಿದರು.

ಸುರೇಶನು ಸಂತೋಷದಿಂದ ಕುಣಿದ. ಕೆಲಸಕೊಡುವ ಭರವಸೆ! ಒಂದುವಾರದ ಲ್ಲಿ! ಕೆಲಸ ಮಾಡಿ ಹೊಟ್ಟೆತುಂಬಿಸುವುದು ತಾನೆ? ಹೇಗಾದರೇನು? ಯಾವುದಾದ ರೂ ಸರಿ, ಕೆಲಸ....ಕೆಲಸ...

ತಾಯಿಗೆ ಸುದ್ದಿಯನ್ನು ತಿಳಿದು ಸ್ವಲ್ಪ ಅಸಮಾಧಾನವಾಯಿತು. ಆದರೆ, ತಮ್ಮ ಪರಿಸ್ಥಿತಿ ಅದಾದರೆ ಅದು ಎಂಬಂತಿತ್ತು. ಆದರೂ ತನ್ನ ಮಗನು ಉಪಾಧ್ಯಾಯ ನಾಗಬೇಕೆಂಬ ಬಯಕೆಯನ್ನು ಸಂಪೂ ರ್ಣ ಬಿಟ್ಟುಗೊಡಲಿಲ್ಲ. "ಮುಂದೆ, ತರ ಬೇತಿಗೆ ಸೇರಲೂ ಬಹುದು" ಎಂದಳು. ಸುರೇಶ ಮಾತಾಡಲಿಲ್ಲ.

ವಾರ ಹೋಯಿತು ಸುರೇಶ ಪೇಟೆಯ ಕಂಪೆನಿಗೆ ತೆರಳಿದ. ಆದರೆ, ಈತನನ್ನು ಕಂಡ ಮೆನೇಜರರು ಬಾರೆನ್ನಲಿಲ್ಲ. "ನೀನು ಮೆಟ್ರಿಕ್ ಓದಿದ್ದಿಯಲ್ಲ!" ಹು ಬ್ಬು ಗಂಟಿಕ್ಕಿ ಕೇಳಿದರು.

"ಹೌದು ಸ್ವಾಮಿ" ಅಭಿಮಾನದಿಂ ದಲೇ ಸುರೇಶ ಉತ್ತರಿಸಿದ.

"ನೋಡು, ನಾವು, ಪದವೀಧರರನ್ನ ಷ್ಟೇ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ"

"ಮತ್ತೆ....."

"ನೀನು ಬಿ. ಎ. ಆಗಿ ಬಾ. ನಿನಗೆ ಖಂಡಿತವಾಗಿಯೂ ನಮ್ಮಲ್ಲಿ ಕೆಲಸ ಕೊ ಡುತ್ತೇನೆ" ಮೆನೇಜರು ನಸು ನಗುತ್ತಲೇ ಹೇಳಿದರು.

ಸುರೇಶನ ಕಲ್ಪನೆ ಆಕಾಶಗೋಪುರ ದಂತೆ ಇಷ್ಟೇಟನ ಮನೆಯಂತಾಯಿತು. ಆತ ಅಂಗಲಾಚಿ ಬೇಡಿದ. "ಸ್ವಾಮಿ, ನಾನು ಬಡವ, ಏನೋ ದುರ್ದೈವದಿಂದ ಇಷ್ಟು ಕಲಿತೆ. ನೀವೆಂದಂತೆ ನಡೆಯು ತ್ತೇನೆ. ನೀವು ಹೇಳಿದ ಹಾಗೆ ಕೇಳುತ್ತೇ ನೆ. ಒಂದು ಕೆಲಸ....."ಏನಾದರೂ ಆಗ ಬಹುದು.... ..."

ಸುರೇಶನ ನಯನಗಳಿಂದ ಅಶ್ರುಧಾರೆ ಸುರಿಯಿತು. ಆದರೆ, ಮೆನೇಜರರು ಒಂದೇ ದನಿಯಲ್ಲಿ "ಇಲ್ಲ, ತೆರಳು" ಎಂದರು.

ಸುರೇಶ ಕಣ್ಣೊರಸಿದ. ಜಗತ್ತಿನ ನಿಜ ವಾದ ಪರಿಚಯ ಅವನಿಗಿಂದಾದಂತಿತ್ತು. ಬಡವರಿಗೆ, ಇಲ್ಲಿ ಸ್ಥಾನವಿಲ್ಲ. ಅವರು ಬ ದುಳಲೆಡೆಯಿಲ್ಲ, ಭೂಮಿ ಶ್ರೀಮಂತರದು, ಹಣ ಶ್ರೀಮಂತರದು. ಅವರು ಕಲ್ಲನ್ನು ಕೊನೆನಿಸಿಯಾರು ಬರೆದನ್ನು ಹಯನು ಮಾಡಿಯಾರು, ಆದರೆ, ಬಡವನೊಬ್ಬನಿಗೆ ಸಹಾಯವನ್ನು ಮಾತ್ರ ನೀಡಲಾರರು- ಕಮ್ಮುವಾದ ಕೈಲಾಗುವ ನೆರವನ್ನೀಯಲಾ ರರು. ನೊಂದವರ ಕಂಬನಿಯನ್ನು ಒರಸಿ ಸಂತೈಸಲಾರರು.....ಇದು ಭೂದೇವಿ ಯ ಸುತ್ತುರ ಇಂದಿನ ಸ್ಥಿತಿಗತಿ!

ಜೋಲು ಮೋರೆಯಿಂದ ಕೂಡಿ ಮನೆ ಗೆ ಹಿಂತಿರುಗಿದ ಸುರೇಶ.

ನಿರ್ದೋಷಿಗಳನ್ನು ದೈವ ಪರೀಕ್ಷಿಸು ವುದಂತೆ. ತಪಸ್ವಿಗಳ ಸ್ಥೈರ್ಯವನ್ನು ದೇವ ತೆಗಳು ಅಳಯುವರಂತೆ ಹಾಗೆಯೇ ದೆ ವ್ವವೂ ಮಾನವನನ್ನು ಅಣಕಿಸುವುದುಂ ಟು. ಬಗ್ಗಿದವನಿಗೊಂದು ಗುದ್ದು ಹೆಚ್ಚಿಂ ಬಂತೆ, ನಾಂದದೀಪಕ್ಕೆ ನೀರೆರೆದಂತೆ ಮೊದಲೇ ನೊಂದು ಬಸವಳಿದ ತಾಯಿ ಮಕ್ಕಳ ಹೃದಯಕ್ಕೆ ಕೊಡಲಿಯೇಟನ್ನು ವಿಧಿ ಹೊಯ್ಯುವುದೆಂದು ಯಾರು ನೆಂಬಿದ್ದರು?

ನಾಯಿ. ಬೊಗಳುತ್ತಲಿತ್ತು. ಮನೆಯ ಸುತ್ತಮುತ್ತ ತೆರಳಿ ಸುತ್ತಿ ನಾಯಿ ಬೊ ಗಳುತ್ತಿತ್ತು. ಹಾದಿಯನ್ನು ಮೂಸಿ ಮೂಸಿ ನೋಡಿ ಮುಖ ವೇಲೆತ್ತಿ ನಾ ಯಿ ಬೊಗಳುತಿತ್ತು. ನಾಲ್ಕು ಹೆಜ್ಜೆ ಹಿಂ ದೆ ಸರಿದು ಮನಃ ಮುಂದೆ ಓಡಿ ಪಕ್ಕಕ್ಕೆ ತಿರುಗಿ ನಾಯಿ ಕೂಗುತ್ತಿತ್ತು. ಮನೆಯ ಯಜಮಾನಾನರು ಮನೆಯಲ್ಲಿಲ್ಲದೆ ಇ ದ್ದುದನ್ನು ತಿಳಿದು ನಾಯಿ ಅಳುವಂತೆ ಆಂತರಾಳದ ಆತನಾದದಿಂದ ಕೂಗು ತ್ತಿತು ತನ್ನನ್ನು ನಾಲ್ಕು ವರ್ಷ ಸಾಕಿ ಸಲಹಿ. ತನ್ನ ತಾಯಿ ಅಣ್ಣಂದಿರಂತಿದ್ದ ವರನ್ನು ಕಾಣದೆ ನಾಯಿ ಅವರನ್ನು ಅರ ಸುತ್ತಿತ್ತು. ತಮ್ಮ ಅಂಬಲಿಯಲ್ಲಿಯೇ ತ ನಗೂ ಒಂದು ಪಾಲನ್ನಿತ್ತು ತನ್ನನ್ನು ಬೆ ಳೆಸಿದ ಅನ್ನದಾತರಿಗೆ ಕೃತಜ್ಞತೆಯನ್ನು ಅರ್ಪಿಸುವಂತೆ ನಾಯಿ ಒದರುತ್ತಿತ್ತು. ದೂರ ಹೋದ ಒಡೆಯನನ್ನು ಕರೆಯು ವಂತೆ ನಾಯಿ ಬೊಗಳುತಿತ್ತು ತನ್ನ ಅಂ ಬಲಿ ಪಾತ್ರಕ್ಕೆ ಅಂಬಲಿ ಬೀಳದೆ ಇರುವು ದನ್ನು ಕಂಡು ಆ ನಾಯಿ ಕೂಗುತಿತ್ತು ಆದರೆ, ಆ ಬಟ್ಟಲು ಮತ್ತೆ ತುಂಬಲಿಲ್ಲ. ನಾಯಿ ಮತ್ತೆ ಅಲ್ಲಿ ಬಾಳಲಿಲ್ಲ. ತಾಯಿ ಮಕ್ಕಳು ಮತ್ತೆ ಈ ನೀಚ ಜಗತ್ತಿಗೆ ಎಂದೂ ಕಾಲಿರಿಸಲಿಲ್ಲ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದು ವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿ ಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಿಖ ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಗೋ ವಿಜಯ
(ಗೋವಿನ ಕಥೆ)

ಶ್ರೀ ಮುಮ್ಮಿಖ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷ ಣಕ್ಕೂ ಅನುಕೂಲವಾದ ಕಥಾಪ್ರಸಂಗ. ತಮ್ಮಸ್ವಪ್ನಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣ ರಾಗಬೇಕೇ? ಹಾಗಿದ್ದರೆ ಈ ಪುಸ್ತಕ ವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಿಗಳು: ಬೆಲೆ 0—8—0

ವಿವೇಕಕ್ಕೊಂದು ಪ್ರಚೋದನೆ

(೨ನೇ ಪುಟದಿಂದ)

ಯದ ಸರ್ವಸ್ವಾತಂತ್ರ್ಯವೂ ಈ ನೀತಿಗೊಂದು ಅಪವಾದವಾಗಿಲಾರದು.

ಇನ್ನು ಮೈಸೂರು ವಿಶ್ವವಿದ್ಯಾಲಯವನ್ನು ಸೇರಿದರೆ 13½ ಲಕ್ಷ ಜನಸಂಖ್ಯೆಯುಳ್ಳ ನಮ್ಮ ಜಿಲ್ಲೆಗೆ ಔದ್ಯೋಗಿಕ ಕಾಲೇಜುಗಳಲ್ಲಿ ಹೆಚ್ಚಿಗೆ ಸೀಟು ಸಿಗುವುದೆಂದು ನೀವು ವಾದಿಸುತ್ತೀರಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಜನಸಂಖ್ಯೆಯ ಪರಿಮಾಣದಲ್ಲಿ ಜಿಲ್ಲೆಜಿಲ್ಲೆಗಳಿಗೆ ಸೀಟುಗಳನ್ನು ಹಂಚುವ ಪದ್ಧತಿ ಇರುವುದಿಲ್ಲವೆಂದು ನಾನು ತಿಳಿಯುತ್ತೇನೆ. ಮೈಸೂರು ವಿಶ್ವವಿದ್ಯಾಲಯವನ್ನು ಸೇರಿದರೆ ನಮ್ಮ ಜಿಲ್ಲೆಗೆ ಇಂತಿಷ್ಟೇ ಸೀಟುಗಳನ್ನು ಕೊಡಲಾಗುವುದೆಂದು ಮೈಸೂರು ವಿಶ್ವವಿದ್ಯಾಲಯದವರು ನಿಮಗೆ ಲಿಖಿತ ಅಶ್ವಾಸನೆ ಕೊಟ್ಟಿರುವರೆ? ಇಲ್ಲವಾದರೆ ನೀವು ಜನತೆಯಲ್ಲಿ ವ್ಯರ್ಥ ತಪ್ಪು ಅಭಿಪ್ರಾಯ ಹುಟ್ಟಿಸುತ್ತಿರುವಿರಿ.

3. "ಮೈಸೂರು ವಿಶ್ವವಿದ್ಯಾಲಯದ ಮೆಡಿಕಲ್ ಕಾಲೇಜುಗಳಲ್ಲಿ 210 ಸೀಟುಗಳಿವೆ. ಕಸ್ತೂರ್ಬಾ ಮೆಡಿಕಲ್ ಕಾಲೇಜನಿಂದ ಪ್ರಯೋಜನವಿಲ್ಲ."

1960ನೇ ಇಸವಿಯ ತನಕ ಬೆಂಗಳೂರು ಮೆಡಿಕಲ್ ಕಾಲೇಜಿನ 50 ಸೀಟುಗಳು ಸಹಾಯಧನ ತೆತ್ತಿರುವ ವಿದ್ಯಾರ್ಥಿಗಳಿಗೆ ವಿಂಗಡಿಸಲ್ಪಟ್ಟಿರುವುದರಿಂದ ಅಸ್ಪೃಶ್ಯರ ತನಕ ಲಭ್ಯವಿರುವ ಒಟ್ಟು ಸೀಟುಗಳು 150 ಮಾತ್ರ. ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಸಹಾಯಧನ ಪಡೆಯುತ್ತಿರುವುದರಿಂದ ಅದು ಅಪ್ರಯೋಜಕವೆನ್ನುತ್ತೀರಿ. ಇಲ್ಲಿ ಸಹಾಯಧನ ಪಡೆಯುತ್ತಿರುವುದೆಷ್ಟೆಂಬುದನ್ನು ತಿಳಿದುಕೊಳ್ಳುವ ಆತುರವೂ ನಿಮಗೆ ಬರಲಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯ ಹೆತ್ತವರಿಂದ ಇಲ್ಲಿ ರೂ. 3000/- ಸಹಾಯ ಪಡೆಯುತ್ತಿರುವುದನ್ನು ರೂ. 5000/- ಎಂದು ಹೇಳಿದ್ದೀರಿ. ಜವಾಬ್ದಾರೀ ಸ್ಥಾನದಲ್ಲಿರುವವರು ವಿಷಯಗಳನ್ನು ಜಿನ್ನಾಗಿ ತಿಳಿದುಕೊಳ್ಳದೆ ದುಡುಕುವುದು ತಪ್ಪು. ಮೈಸೂರು ಪ್ರಾಂತದ ಔದ್ಯೋಗಿಕ ಕಾಲೇಜುಗಳಲ್ಲಿ ಅರ್ಧನಾರ್ವಾರೂ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ತತ್ವದಲ್ಲೇ ಹುಟ್ಟಿಬೆಳೆದವುಗಳು. ಬೆಂಗಳೂರು ಮೆಡಿಕಲ್ ಕಾಲೇಜು, ಬಿ. ಎಂ. ಎಸ್. ಇಂಜಿನಿಯರಿಂಗ್ ಕಾಲೇಜು, ನೇಶನಲ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್—ಇತ್ಯಾದಿ ಸಂಸ್ಥೆಗಳು ಖಾಸಗಿಯಾಗಿ ತೊಡಗಲ್ಪಟ್ಟು ಸಹಾಯಧನ ಕೊಡುವ ವಿದ್ಯಾರ್ಥಿಗಳಿಗೆನೇ ಪ್ರವೇಶಕೊಡುತ್ತ ಬೆಳೆದುವು. ಇತ್ತೀಚೆಗೆ ಸರಕಾರ ಸಹಾಯಧನ ಕೊಡತೊಡಗಿದ ಬಳಿಕ ವಿದ್ಯಾರ್ಥಿಗಳಿಂದ ಸಹಾಯಧನ ಪಡೆಯುವ ಪದ್ಧತಿಯನ್ನು ನಿಲ್ಲಿಸಲಾಯಿತು. ಇಂತಹದೇ ಸಹಾಯ ಸೌಕರ್ಯವನ್ನು ಕಸ್ತೂರ್ಬಾ ಮೆಡಿಕಲ್ ಕಾಲೇಜು, ಮಣಿಪಾಲ ಇಂಜಿನಿಯರಿಂಗ್ ಕಾಲೇಜಿಗೂ ಸರಕಾರ ಕೊಡುವಂತೆ ನೀವು ಪ್ರಯತ್ನಿಸಬಾರದೇಕೆ?

4. "ಕರ್ಣಾಟಕ ವಿಶ್ವವಿದ್ಯಾಲಯವನ್ನು ಸೇರಬೇಕೆಂದು ಕಾಲೇಜು ಪ್ರಿನ್ಸಿಪಾಲರ, ಮತ್ತು ಪ್ರಾಧ್ಯಾಪಕರು ಹೇಳುವುದರಲ್ಲಿ ಸ್ವಾರ್ಥವಿದೆ."

ಈ ಆರೋಪವನ್ನು ನಿಮ್ಮ ಮೇಲೂ ಹೊರಿಸಬಹುದು. ನಮಗಿಗೆ ನಿಮ್ಮಲ್ಲಿರ ದಸ್ಕತ್ತು ಶೇಕರಿಸುವ ಜವಾಬ್ದಾರಿಯನ್ನು ನಿಮ್ಮವರಲ್ಲಿ ಯಾರು ವಹಿಸಿದ್ದರು? ಈ ವಿಚಾರದಲ್ಲಿ ಮುಂದಾಳುಗಳಾಗಿದ್ದವರ್ಯಾರು? ದಯವಾಡಿ ಅವರ ಹೆಸರುಗಳನ್ನು ಪ್ರಕಟಿಸುವಿರಾ ?ಈ ಹೆಸರುಗಳನ್ನು ಕಂಡೊಡನೆ ಸಾರ್ವಜನಿಕರು ಇದರ ಮರ್ಮವೇನೆಂದು ಕೂಡಲೇ ಗ್ರಹಿಸಲು ಶಕ್ತರಾಗುವರು. ಮನವಿಯ ವ್ಯಾಪಕತೆಯನ್ನು ತಿಳಿಯದೆ ನಿಮ್ಮಲ್ಲಿ ಅನೇಕರು ದಸ್ಕತ್ತು ಹಾಕಿರುವರೆಂಬುದರಲ್ಲಿ ನನಗೆ ಸಂಶಯವಿಲ್ಲ. ದಕ್ಷಿಣ ಕನ್ನಡದ ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿಸಬೇಕೆಂಬ ಸೂಚನೆ ಮಾಜಿ ವಿದ್ಯಾಮಂತ್ರಿ ಕಡಿದಾಳ್ ಮಂಜಪ್ಪನವರಿಂದ ಬಂದಿತ್ತು. ಇಂದು ದಸ್ತತು ಸಂಗ್ರಹಿಸಿದ ಮಹನೀಯರು ತಾನೇಕೆ ಈ ಕೆಲಸ ಕೈಗೊಂಡೆನೆಂದು ಸಾರ್ವಜನಿಕರಿಗೆ ವಿವರಿಸುವುದು ಒಳ್ಳೆಯದು. ಜನಾಭಿಪ್ರಾಯ ಸಂಗ್ರಹಿಸಿಯೆ? ಕರ್ಣಾಟಕ ವಿಶ್ವವಿದ್ಯಾಲಯದಲ್ಲಿ ನಾವಿರುವುದರಿಂದ ಒಳಿತೇನೆ, ಕೆಡುಕೇನೆಂಬುದನ್ನು ತಿಳಿಯದೇನೇ ಮೈಸೂರು ವಿಶ್ವವಿದ್ಯಾಲಯಕ್ಕೆ ಧಾವಿಸುವ ಉದ್ದೇಶವೇನಿತ್ತು? ಇವರು ದಸ್ತತನ್ನು ಸಂಗ್ರಹಿಸುತಿದ್ದಾಗ ಮೈಸೂರು ವಿಶ್ವವಿದ್ಯಾಲಯವು ಇತರ ವಿದ್ಯಾರ್ಥಿಗಳನ್ನು ಸಿಬಂಧಿಸುವ ನಿರ್ಣಯ ಮಾಡಿದ್ದಿರಲಿಲ್ಲ. ಮೈಸೂರು ವಿಶ್ವವಿದ್ಯಾಲಯದ ಈ ನಿರ್ಣಯವು ನಮ್ಮ ಜಿಲ್ಲೆಯ ಕಾಲೇಜುಗಳ ಮೇಲೆ ಪ್ರತೀಕಾರ ದೃಷ್ಟಿಯಿಂದ ಹೊಡಲ್ಪಟ್ಟಿತೆಂದು ಬಲ್ಲಿರಾ? ಇಂಥಾ ಅನ್ಯಾಯವನ್ನು ಪ್ರತಿಭಟಿಸುವ ಬದಲು ನಮ್ಮ ಪ್ರಾಧ್ಯಾಪಕರಲ್ಲಿ ಸ್ವಾರ್ಥ ಕಂಡಿರುವಿರಿ. ಕರ್ಣಾಟಕ ವಿಶ್ವವಿದ್ಯಾಲಯವನ್ನು ಸೇರುವುದರಿಂದ ನಮ್ಮ ಪ್ರಾಧ್ಯಾಪಕರಿಗೆ ಸಂಬಳ ಹೆಚ್ಚು ಸಿಗುವುದೆಂಬ ಸ್ವಾರ್ಥದ ಪ್ರಶ್ನೆ ಇಲ್ಲಿಲ್ಲ. ಇಂದು ಯಾವ ಕಾಲೇಜಿನಲ್ಲೂ ಸಂಬಳದ ದರವನ್ನು ಏರಿಸಿರುವುದಿಲ್ಲ. ಸಂಬಳ ಏರಿಸಿದರೆ ಅದು ಸರಕಾರದಿಂದಲೇ ಬರಬೇಕಾಗಿ ವುದು. ಎರಡೂ ವಿಶ್ವವಿದ್ಯಾಲಯಗಳಲ್ಲಿ ಒಂದೇ ರೀತಿಯ ಸಂಬಳಮಟ್ಟವಿರುವಂತೆ ಸರಕಾರ ನೋಡಿಕೊಳ್ಳದೆ? ಸರಕಾರದ ಇಂದಿನ ಕಣಕಾಸಿನ ಮುಗ್ಗಟ್ಟನ್ನು ನೆನಪಿಸಿಕೊಂಡರೆ ಮುಂದಿನ ಹತ್ತು ವರುಷಗಳಲ್ಲಿ ಪ್ರಾಧ್ಯಾಪಕರ ಸಂಬಳ ಹೆಚ್ಚುವ ಸಿರಿಕ್ಷೆಯಿಲ್ಲ. ಈ ಸಾತ್ವಿಕ ಜನರ ಸ್ವಾಮಾಣಿಕ ಸೇವೆಯನ್ನು ಮೆಚ್ಚುವ ಬದಲು ಅವರ ಮೇಲೆ ನಲ್ಲದ ಆರೋಪಗಳನ್ನು ಹೊರಿಸಿದ್ದೀರಿ. ಕರ್ಣಾಟಕ ವಿಶ್ವವಿದ್ಯಾಲಯದ ಸಿಂಡಿಕೇಟಿನಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕಿಂತ ಸುಲಭವಾಗಿ ಪ್ರಿನ್ಸಿಪಾಲರಿಗೆ ಸ್ಥಾನಗಳನ್ನು ಗಳಿಸಲು ಸಾಧ್ಯವಿದೆಯಾದುದರಿಂದ ನಮ್ಮ ಪ್ರಿನ್ಸಿಪಾಲರು ಕರ್ಣಾಟಕ ವಿಶ್ವವಿದ್ಯಾಲಯಕ್ಕೆ ಅನುಕೂಲರಾಗಿರುವರೆಂದು ಹೇಳಲಾಗಿದೆ. ಅಷ್ಟೆ ಕರ್ಣಾಟಕ ವಿಶ್ವವಿದ್ಯಾಲಯದ ಮೇಲೆ ಹತೋಟಿಯನ್ನಿಡಲು ಯಾರೋ ಪ್ರಯತ್ನಿಸುತ್ತಿರುವರೆಂಬ ಕಿವಿಮಾತಿನ ಆರೋಪವೂ ಕೇಳಿಬರುತ್ತಿದೆ. ಈ ವಿಷಯವನ್ನು ಸ್ವಲ್ಪ ವಿಮರ್ಶಿಸುವ ಅಗತ್ಯವಿದೆ. ಕರ್ಣಾಟಕ ವಿಶ್ವವಿದ್ಯಾಲಯದಲ್ಲಿ ಸುಮಾರು 18 ಕಾಲೇಜುಗಳಿವೆ. ದಕ್ಷಿಣ ಕನ್ನಡದಿಂದ 9 ಕಾಲೇಜುಗಳು, ಹೈದರಾಬಾದು ಕರ್ಣಾಟಕದಿಂದ 4 ಕಾಲೇಜುಗಳು ಸೇರಿದಾಗ, ಯಾವುದೇ ಒಂದು ವಿಭಾಗಕ್ಕೆ ವಿಶ್ವವಿದ್ಯಾಲಯದ ಮೇಲೆ ಸಂಪೂರ್ಣ ಹತೋಟಿ ಬರುವುದಿಲ್ಲ. ಆದರೆ ಪ್ರತಿಯೊಂದು ವಿಭಾಗಕ್ಕೂ ವಿಶ್ವವಿದ್ಯಾಲಯವನ್ನು ಯೋಗ್ಯಮಟ್ಟದಲ್ಲಿ ರೂಪಿಸುವ ಪ್ರಧಾನ ಸ್ಥಾನವೇನೋ ಲಭಿಸುವುದು. ಅನುಭವ, ಅರ್ಹತೆಯುಳ್ಳ ಪ್ರಿನ್ಸಿಪಾಲರುಗಳು ವಿಶ್ವವಿದ್ಯಾಲಯವನ್ನು ಬೆಳೆಸುವದರಲ್ಲಿ ಗಣ್ಯಸ್ಥಾನವನ್ನು ಪಡೆಯುವುದು ಒಳ್ಳೆಯದೆ. ನಮ್ಮ ಶಾಸಕರಿಗೆ ಶಾಸಕರಾಗಲು ವಿದ್ಯಾ ಅರ್ಹತೆಯ ನಿರ್ಬಂಧಗಳೇನೂ ಇಲ್ಲವಾದರೂ, ಪ್ರಾಧ್ಯಾಪಕರಾಗಲು ವಿದ್ಯಾಪ್ರವೀಣತೆ ಇಂತಿಷ್ಟೆ ಇರಬೇಕೆಂದು ಅದೃಷ್ಟವಶಾತ್ ನಮ್ಮ ವಿಶ್ವವಿದ್ಯಾಲಯಗಳು ನಿರ್ದೇಶಿಸುತ್ತಿರುವುವು. ಆದುದರಿಂದ ಇಂಥಾ ವಿಷಯಗಳಲ್ಲಿ ಬಲಪರಿಣತಿ ತಿಳಿದುಕೊಳ್ಳುವ ನಮ್ರತೆ ನಮ್ಮ ಶಾಸಕರಿಗೆ ಬರಬೇಕು.

ಅಬರೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಸುಮಾರು 48 ಕಾಲೇಜುಗಳಿವೆ. ದಕ್ಷಿಣ ಕನ್ನಡದಿಂದ ಹೋಗುವ 9 ಕಾಲೇಜುಗಳು ಅಲ್ಪಸಂಖ್ಯೆಯ ಸ್ಥಾನವನ್ನು ಸೇರುವುವು. ವಿಶ್ವವಿದ್ಯಾಲಯದ ಸಿಂಡಿಕೇಟಿನಲ್ಲಿ ನೀವು ಹೇಳುವ ಅಭಿಪ್ರಾಯದಲ್ಲಿ ನಮ್ಮ ಪ್ರಿನ್ಸಿಪಾಲರಿಗೆ ಪ್ರಾತಿನಿಧ್ಯ ಸಿಗುವುದು ಕಷ್ಟ. ಮುಂದೆ ಏನಾದರೂ ನಮಗೆ ಅನ್ಯಾಯವಾದರೆ ಅದನ್ನು ಪರಿಹರಿಸುವ ಅವಕಾಶ ನಮಗಿಲ್ಲ. ಅಲ್ಲದೆ ಮೈಸೂರು ವಿಶ್ವವಿದ್ಯಾಲಯದ ಸರ್ವಸ್ವಾತಂತ್ರ್ಯವನ್ನೂ ನೀವು ಒಪ್ಪಿಕೊಂಡಿರುವಿರಾದುದರಿಂದ ನ್ಯಾಯ ದೊರಕಿಸಿಕೊಡಲು ನಿಮಗೂ ಸಾಧ್ಯವಿಲ್ಲ. ಪರಿಸ್ಥಿತಿ ಹೀಗಿದ್ದೂ ನೀವು ನಮ್ಮ ಕಾಲೇಜುಗಳು ಮೈಸೂರು ವಿಶ್ವವಿದ್ಯಾಲಯವನ್ನು ಸೇರಲಿ ಎನ್ನುತ್ತೀರಿ

5. "ಮೈಸೂರು ವಿಶ್ವವಿದ್ಯಾಲಯದಲ್ಲಿ ಹಿಂದುಳಿದ ವರ್ಗಕ್ಕೆ ಹೆಚ್ಚಿನ ಸ್ಥಾನಗಳಿವೆ."

ಈ ಅಭಿಪ್ರಾಯವೂ ತಪ್ಪು. ಕರ್ಣಾಟಕ ವಿಶ್ವವಿದ್ಯಾಲಯವು ಯೋಗ್ಯತೆಗೆ ಮಹತ್ವ ಕೊಟ್ಟಿರುವುದು. ಅದರೊಂದಿಗೆ ಹಿಂದುಳಿದ ವರ್ಗಗಳಿಗೂ ಒಳ್ಳೇ ಸ್ಥಾನಗಳನ್ನು ಕೊಟ್ಟಿರುವುದು. ನಮ್ಮ ಜನರ ನೇತೃಗಳಿಗೆ ನಮ್ಮ ರಾಷ್ಟ್ರದ ಸಂಪತ್ತೆಂದು ಎಲ್ಲಾ ವಿಶ್ವವಿದ್ಯಾಲಯಗಳೂ ಗಣಿಸಿವೆ. ಇದಕ್ಕೆ ತಕ್ಕ ರೂಪವನ್ನು ಕೊಡುವುದು ಒಂದು ರಾಷ್ಟ್ರೀಯ ಹೊಣೆಗಾರಿಕೆ. ವಿಶ್ವವಿದ್ಯಾಲಯಗಳಿರುವುದೇ ಈ ಹೊಣೆಗಾರಿಕೆಯನ್ನು ನಿರ್ವಹಿಸಲೆಂದು, ಅಂತೆಯೇ ಹಿಂದುಳಿದವರು ನವ್ಯರಾಷ್ಟ್ರದ ವಿಪತ್ತು ಕೂಡಾ ಹೌದು. ಜನಸಂಖ್ಯೆಯ ಹೆಚ್ಚಿನ ಜನರು ಹಿಂದುಳಿದಿರುವಾಗ ಯಾವ ರಾಷ್ಟ್ರವೂ ಪ್ರಗತಿಪಥದಲ್ಲಿ ಮುಂದರಿಯುವುದು. ಅವರೆ ಹಿಂದುಳಿದವರೆಂದರೆ ಆರ್ಥಿಕ ಸ್ಥಿತಿಯಲ್ಲಿ ಹಿಂದುಳಿದವರು, ಆರ್ಥಿಕ ದೃಷ್ಟಿಯಲ್ಲಿ ಸಾಧಾರಣ ಲ್ಪಟ್ಟಿ ಯಾವುದೇ ಜಾತಿಯವರು ತಾವು ಹಿಂದುಳಿದವರೆಂಬ ವರ್ಗೀಕರಣದ ಫಲವಾಗಿ, ನಿಜವಾಗಿ ಹಿಂದುಳಿದ ವರ್ಗದವರ ಸ್ಥಾನಗಳನ್ನು ಆಕ್ರಮಿಸಕೂಡದು. ಹಿಂದುಳಿದ ಜನರ ವರ್ಗೀಕರಣದಂತೆ ಹಿಂದುಳಿದ ಜಿಲ್ಲೆಗಳ ವರ್ಗೀಕರಣವೂ ಆಗಿ, ದಕ್ಷಿಣ ಕನ್ನಡ ವಿದ್ಯೆಯಲ್ಲಿ ಮುಂದುವರಿದ ಜಿಲ್ಲೆ ಎಂಬ ಕಾರಣದಿಂದ ಮೈಸೂರು ವಿಶ್ವವಿದ್ಯಾಲಯದವರು ಮಲೆನಾಡಿನಂಥಾ ಹಿಂದುಳಿದ ವಿಭಾಗಕ್ಕೆ ಹೆಚ್ಚಿನ ಸ್ಥಾನಗಳನ್ನು ಕೊಡುವುದಿಲ್ಲವೆಂದು ಹೇಗೆ ಹೇಳಿಲಿ?

ಮೈಸೂರು ವಿಶ್ವವಿದ್ಯಾಲಯವನ್ನು ಸೇರಿದರೆ ಕೆಲವು ಜಾತಿಯವರಿಗೆ ಹೆಚ್ಚು ಸ್ಥಾನಗಳು ಸಿಗುವುದೆಂಬ ಕಿವಿಮಾತಿನ ಪ್ರಚಾರವೂ ನಡೆಯುತ್ತಿದೆ. ಇದು ಒಂದು ಗಂಡಾಂತರಕಾರೀ ಪ್ರಚಾರ. ಈ ಪ್ರಚಾರವನ್ನು ಮಾಡುತ್ತಿರುವ ಕಾಂಗ್ರೆಸ್ ಶಾಸಕರು ಸಂಸ್ಥೆಯಿಂದ ನಿಷ್ಕಾಸಿಸಲ್ಪಡುವುದೇ ಯೋಗ್ಯ. ಕಾಂಗ್ರೆಸ್ ತತ್ವಕ್ಕನುಗುಣವಾಗಿ ಜಾತ್ಯಾತೀತ, ವರ್ಗಾತೀತ ಸಮಾಜವನ್ನು ಪ್ರತಿನಿಧೀಕರಿಸುವ ಪ್ರತಿನಿಧಿಯು ತನ್ನ ಕುಟುಂಬ, ತನ್ನ ಜಾತಿಯ ದೃಷ್ಟಿಯನ್ನಿಟ್ಟುಕೊಳ್ಳುವುದು ಅಸಮಂಜಸ. ಜಾತ್ಯಧೀನ ಹಿಂದುಳಿದ ಜಾತಿಗೆ ಹೆಚ್ಚಿಗೆ ಸೀಟುಗಳು ಸಿಗಬೇಕೆಂದು ಕೂಗು ಹೇಳುವುದಾದರೆ ಹಿಂದುಳಿದ ವರ್ಗವಾಗಿ ಪರಿಗಣಿಸಲ್ಪಡಬೇಕಾದ ಆ ಜಾತಿ ಜಾತ್ಯವೆಂದು ಸ್ಪಷ್ಟವಾಗಿ ಹೇಳಿದರೆ ಈ ಪ್ರಶ್ನೆಯು ಇಂದೇ ಇತ್ಯರ್ಥವಾಗಿ, ಸಾರ್ವಜನಿಕರಿಗೆ ಸರಿ ತೋರಿಸಬೇಕಾದ ಪ್ರಮಾಣಕತೆ ಇದು.

6 "ಕರ್ಣಾಟಕ ವಿಶ್ವವಿದ್ಯಾಲಯವು ಪಠ್ಯಾನ ಮತ್ತು ಗಣಿತಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡುತ್ತಿದೆಯಲ್ಲವೆ ಇಂದೇಗೆ?"

ಇದೊಂದು ತಪ್ಪು ಅಭಿಪ್ರಾಯ. ಕರ್ಣಾಟಕ ವಿಶ್ವವಿದ್ಯಾಲಯದ ಪ್ರಥಮ ಸ್ಥಾನ ವ್ಯಾಪಕವಿರುವುದೆಂದೆ ಸಂದ್ಯಾಳ, ತೆಲುಗಿನಂತಹ ಭಾಷಾ ಅಲ್ಲಿ ಸಂದ್ಯಾಕರಿಗೆ ಪ್ರಯಾಸ ಪಡಿಸದೆ ಈ ವಿಶ್ವವಿದ್ಯಾಲಯದಲ್ಲಿ ತಮ್ಮ ಸ್ಥಾನಗಳನ್ನು ಪಡಿಯಲಿಕ್ಕೆ ಸಾಧ್ಯವಿದೆ. ಕನ್ನಡ ಸಂಸ್ಕೃತಿಯಲ್ಲಿ ಮೈಸೂರು ವಿಶ್ವವಿದ್ಯಾಲಯದಷ್ಟೆ ಶ್ರದ್ಧೆ ಕರ್ಣಾಟಕ ವಿಶ್ವವಿದ್ಯಾಲಯಕ್ಕಿದೆ. ಕನ್ನಡಕ್ಕೂ ಅತ್ಯೇ ಉನ್ನತ ಸ್ಥಾನವನ್ನು ಕೊಡಲಾಗಿರುವುದು. ಎರಡೂ ವಿಶ್ವವಿದ್ಯಾಲಯಗಳ ಶಾಸನಪಟ್ಟಿಯನ್ನು ಕೈಕ್ಷಿಪ್ತಿಯೂ ಕಾಣದ ನಿಮ್ಮ ಅಭಿಪ್ರಾಯಕ್ಕಿಂತ ಈ ಎಂದು ವಿಶ್ವವಿದ್ಯಾಲಯಗಳ ಪಠ್ಯಗಳ ಯಾವ ವಿದ್ಯಾರ್ಥಿಗಳ ಅಭಿಪ್ರಾಯವೇ ನಮಗೆ ಮುಖ್ಯ. ಮೈಸೂರು ವಿಶ್ವವಿದ್ಯಾಲಯವು ಮುಂಬಯಿ ವಿಶ್ವವಿದ್ಯಾಲಯದ ಕಿರಿಯವಾಗಿರುತ್ತದೆಂದು, ಇಲ್ಲಿನ ಹೆಚ್ಚಿನ ಪ್ರಾಧ್ಯಾನ್ಯ ಕೊಟ್ಟಿರುವುದರಿಂದ ಎಷ್ಟೆಷ್ಟೆ ಜನರು ಉನ್ನತ ಮಟ್ಟದಲ್ಲಿ ಉತ್ತೀರ್ಣರಾಗಿರುವರು ಎನ್ನುತ್ತೀರಿ. ವಿಶ್ವಾನ ಮತ್ತು ಗಣಿತಕ್ಕೆ ಮುಖ್ಯ ಸ್ಥಾನಕೊಟ್ಟು ಮುಂಬಯಿ ವಿಶ್ವವಿದ್ಯಾಲಯವು ಶ್ರೀ ಸಿ. ವಿ. ವೇಂಕಟರಾಮ, ಶ್ರೀ ಸುಬ್ರಾಂಕಶ್ರ, ಶ್ರೀ ಅಂಗೇಗಾಂವಕರಂಥಾದೇ ಮೇಧಾವಿಗಳು ಐ. ಸಿ. ಎಸ್. ಮಾಗೂ ವಿಖ್ಯಾತ ಸ್ಥಾನಾಧಿಪತಿಗಳನ್ನು ದೇಶಕ್ಕೆ ನೀಡಿರಲಿಲ್ಲೇ? ಕರ್ಣಾಟಕ ವಿಶ್ವವಿದ್ಯಾಲಯವು ಮುಂಬಯಿ ವಿಶ್ವವಿದ್ಯಾಲಯದ ಹಿಂದು ಕಾಲಿಯಲ್ಲವೆ? ಅಥವಾ



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ

ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ನಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿಸ್ತುಮ: ಶಾ ಕಂಪೆನಿ, ಮಂಗಳೂರು—1.

ವಿಜ್ಞಾನ ಮತ್ತು ಗಣಿತವು ವಿದ್ಯಾರ್ಥಿಗಳಿಗೆ ಕಲಿಯಲು ಕಷ್ಟವೆಂದು ನಿಮ್ಮ ಸೂಚನೆಯೇ? ಯಾವ ಹೆತ್ತವರೂ ಈ ರೀತಿ ಆಲೋಚಿಸಿರರು. ಮಕ್ಕಳ ಔದ್ಯೋಗಿಕ ಶಿಕ್ಷಣದ ಬಗ್ಗೆ ಅಷ್ಟೊಂದು ಕಳಕಳಿಯನ್ನು ತೋರಿಸಿದ ನೀವು ಔದ್ಯೋಗಿಕ ಶಿಕ್ಷಣಕ್ಕೆ ಅತೀ ಅಗತ್ಯವೆನಿಸಿರುವ ವಿಜ್ಞಾನ ಮತ್ತು ಗಣಿತವನ್ನೇಕೆ ಕಡೆಗಣಿಸುವಿರೆಂದು ನನಗೆ ಅರ್ಥವಾಗುವುದಿಲ್ಲ.

7. "ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ಬೇಕೆಂದು ಮೈಸೂರಿನಲ್ಲಿ ಕಾದುಕುಳಿತ ನೂರಾರು ಹೆತ್ತವರನ್ನು ಕಂಡು ಮನಸ್ಸು ಕಳವಳವಾಯಿತು."

ಈ ರೀತಿ ಕಾಯುತ್ತಿರುವ ಹೆತ್ತವರ ಸಂಖ್ಯೆ ನೀವು ಶಾಸಕರಾದೊಡನೆ ಹೆಚ್ಚಾಯಿತೆಂದು ತಿಳಿಯಬೇಡಿ. ಮದ್ರಾಸಿನಲ್ಲಿದ್ದಾಗ ದಕ್ಷಿಣ ಕನ್ನಡ ಜಿಲ್ಲೆಗೆ ಮೆಡಿಕಲ್ ಕಾಲೇಜಿನಲ್ಲಿ 10 ಸೀಟುಗಳೂ, ಇಂಜಿನಿಯರಿಂಗ್ ಕಾಲೇಜಿನಲ್ಲಿ 15 ಸೀಟುಗಳೂ ದೊರೆಯುತ್ತಿದ್ದುವು. ಅಗಲೂ ಸೀಟಿಗಾಗಿ ಕಾಯುತ್ತಿದ್ದವರ ಸಂಖ್ಯೆ ವಿಪರೀತವೇ ಇತ್ತು. ಈ ಕಾರಣಕ್ಕಾಗಿ ಯಾದರೂ ನೀವು ಇನ್ನೂ ಹೆಚ್ಚಿನ ಸಂಖ್ಯೆಗಳನ್ನು ಸ್ಥಾಪಿಸಲು ಸಹಾಯಕರಾಗಬೇಕಿತ್ತು. ಉತ್ತಮ ಮಾರ್ಕುಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗುವಂತೆ ಪ್ರಯತ್ನಿಸಬೇಕಿತ್ತು. ಯೋಗ್ಯತೆ ಇದ್ದೂ ಪ್ರಭಾವದ ಮೇಲೆ ಇನ್ನೊಬ್ಬ ಅರ್ಹತೆ ಇಲ್ಲದ ವಿದ್ಯಾರ್ಥಿಗೆ ಸೀಟು ಸಿಗುವಾಗ ನಮ್ಮ ಯುವಕರು ಎಂತಹ ಕಹಿಯಾತನೆಯನ್ನು ಅನುಭವಿಸುವರೆಂದೂ ನಾನು ಬಲ್ಲೆ. ಹಿಂದುಳಿದವರಲ್ಲೂ, ಮುಂದೆ ಹೋದವರಲ್ಲೂ! ಶಾಸಕರ ಅಥವಾ ಮಂತ್ರಿಗಳ ಪ್ರಭಾವವಿಲ್ಲದೇನೇ, ಯೋಗ್ಯತೆ ಇರುವ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಕೊಡಲಾಗುವುದೆಂದು ಹೇಳಲು ನೀವು ಸಿದ್ಧರಿರುವಿರಾ? ಅಥವಾ ಈ ಸೀಟುಗಳನ್ನು ನಮ್ಮವರಿಗೆ ಹೇಗೆ ಗಿಟ್ಟಿಸಿಕೊಳ್ಳುವುದೆಂಬ ಸಿದ್ಧತೆಯಲ್ಲಿರುವಿರಾ? ವಿದ್ಯಾರ್ಥಿಗಳನ್ನು ಕಾಲೇಜಿಗೆ ಸೇರಿಸಲು ಕನ್ಯಾಬಾರ್ ಮೆಡಿಕಲ್ ಕಾಲೇಜೂ ಇತರ ಕಾಲೇಜುಗಳೂ ಒಂದೇ ಎಂದು ಹೆತ್ತವರು ತಿಳಿಯುತ್ತಾರೆ. ಏಕೆಂದರೆ ಒಂದಕ್ಕೆ ಸಹಾಯಧನ ಕೊಡಬೇಕಿದ್ದರೆ, ಇನ್ನೊಂದಕ್ಕೆ ಸತ್ರಾಯ ಹೇರುವ ಪ್ರಭಾವೀ ಜನಬೇಕು ಪ್ರಭಾವವೂ ದೂಡ್ಡೂ ಜತೆಜತೆಯಾಗಿ ಹೋಗುತ್ತವೆ. ದುಡ್ಡಿಲ್ಲದೆ ಪ್ರಭಾವವಿರುವುದಿಲ್ಲ. ನಮೂಜವಲ್ಲಿ ಗಣ್ಯರೆನಿಸಿರುವ ನಿಮ್ಮ ಸಂಬಂಧಿಕರು ಎಷ್ಟುಜನ ಕನ್ಯಾಬಾರ್ ಮೆಡಿಕಲ್ ಕಾಲೇಜಿನಲ್ಲಿ ಕಲಿಯುತ್ತಿರುವರು? ಇಂತಹ ವ್ಯರ್ಥ ವಾದಗಳಿಂದ ಪ್ರಯೋಜನವಿಲ್ಲ. ಯೋಗ್ಯತೆ ಇರುವ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗುವಂತೆ ನೀವು ಪ್ರಯತ್ನಿಸಿರಿ.

8 "ಕರ್ಣಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ (Post-graduate) ಶಿಕ್ಷಣ ವ್ಯವಸ್ಥೆ ಇಲ್ಲ"

ಈ ಒಂದು ಮಾತಿನಿಂದ ನಿಮ್ಮ ವಾದವು ನೆಲಸಮವಾಗುವುದು. ಮೈಸೂರು ವಿಶ್ವವಿದ್ಯಾಲಯಕ್ಕಿಂತ ಹೆಚ್ಚಿನ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನಾ ವ್ಯವಸ್ಥೆ ಕರ್ಣಾಟಕ ವಿಶ್ವವಿದ್ಯಾಲಯದಲ್ಲಿ ಇದೆ ಎಂಬುದನ್ನು ನೀವು ಬಲ್ಲಿರಾ? ಎಂ. ಎ., ಎಂ ಎಸ್‌ಸಿ, ಪಿ. ಎಚ್. ಡಿ., ಎಲ್‌ಎಲ್. ಎಮ್ ಮತ್ತು ಕೃಷಿಯಲ್ಲಿ ಸ್ನಾತಕೋತ್ತರ ವ್ಯಾಸಂಗ ವ್ಯವಸ್ಥೆ ಇದ್ದಿದೆ. ಮಾತ್ರವಲ್ಲ, ಈ ವ್ಯಾಸಂಗವನ್ನು ದಕ್ಷಿಣ ಕನ್ನಡದ ಯಾವುದೇ ಕಾಲೇಜು ಆರಂಭಿಸುವಲ್ಲಿ ತಮ್ಮ ಸಹಾನುಭೂತಿ ಇದೆ ಎಂದೂ ಕರ್ಣಾಟಕ ವಿಶ್ವವಿದ್ಯಾಲಯದವರು ಆಶ್ವಾಸನೆ ಕೊಟ್ಟಿರುತ್ತಾರೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲೆ ಉಳಿದರೆ ಪ್ರಯೋಜನವೇನು?

1. ಶೈಕ್ಷಣಿಕ ಸ್ವಾತಂತ್ರ್ಯ, ದಕ್ಷಿಣ ಕನ್ನಡದ ಕಾಲೇಜುಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲು ಸಾಕಷ್ಟು ಭದ್ರತೆ.

2. ವಿಶ್ವವಿದ್ಯಾಲಯದಲ್ಲಿ ರಾಜಕೀಯ ಪ್ರಭಾವ, ಪತ್ರಾಯ, ತಂಡಪಿಂಡಗಳ ಹೋರಾಟವಿಲ್ಲ.

3 ವಿದ್ಯೆಯಲ್ಲಿ ಮುಂದುವರಿದ ಜಿಲ್ಲೆ ಎಂಬ ಕಾರಣದಿಂದ ದಕ್ಷಿಣ ಕನ್ನಡವು ಮರವಸ್ಥಿಗೀಡಾಗದು.

4. ದ. ಕ. ಜಿಲ್ಲಾ ಕಾಲೇಜುಗಳಲ್ಲಿ ಕೂಡಲೆ ಸ್ನಾತಕೋತ್ತರ ವ್ಯಾಸಂಗವನ್ನು ಆರಂಭಿಸಬಹುದು.

5. ಉನ್ನತ ಶಿಕ್ಷಣ ಹಾಗೂ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಾಭಿವೃದ್ಧಿಗೆ ಸಡಿಲ ಕಾಶ.

6. ಜ್ಞಾನತೃಷೆಯನ್ನು ನೀಗಿಸಿಕೊಳ್ಳಲು ಎಲ್ಲರಿಗೂ ಅನುಕೂಲವಾಗುವಂತೆ ಸ್ಥಾಪಕಾಲ ಮತ್ತು ಸಂಜೆಯ ದರ್ಜೆಗಳು

7. ಮದ್ರಾಸು ವಿಶ್ವವಿದ್ಯಾಲಯದ ಪರಂಪರೆಗನುಗುಣವಾದ ಪುರೋಗಾಮಿ ದೃಷ್ಟಿ, ವ್ಯಾಪಕ ಶೈಕ್ಷಣಿಕ ಅವಕಾಶ.

ಮೈಸೂರು ವಿಶ್ವವಿದ್ಯಾಲಯವನ್ನು ಸೇರಿದರೇನಾಗುವುದು?

1 ಕಾಲೇಜು ಪ್ರಿನ್ಸಿಪಾಲರಾಗಲಿ, ನಮ್ಮ ಶಾಸಕರಾಗಲಿ-ವಿಶ್ವವಿದ್ಯಾಲಯದ ಆಡಳಿತೆಯಲ್ಲಿ ಮಾತಿಲ್ಲದ ಶಾಶ್ವತ ಅಲ್ಪ ಸಂಖ್ಯಾಕರಾಗುವರು.

2. ಔದ್ಯೋಗಿಕ ಕಾಲೇಜುಗಳಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗುವುದೆಂಬ ಭಂವಸೆ ಇಲ್ಲ ನಮ್ಮ ಜಿಲ್ಲೆಗೆ ಈ ವಿಷಯದಲ್ಲಿ ಅನ್ಯಾಯವಾದರೆ ಅದನ್ನು ಪರಿಹರಿಸುವ ಶಕ್ತಿ ನಮಗಿಲ್ಲ.

3. ವಿಶ್ವವಿದ್ಯಾಲಯವು ಈಗಾಗಲೇ ಕನ್ನಡ ಭಾಷೆಯ ಸಾಧ್ಯಮವನ್ನು ನಿರ್ಣಯಿಸಿರುವುದು ಇದನ್ನು ಬದಲಾಯಿಸಬಹುದೆಂದು ನೀವು ಹೇಳುತ್ತೀರಿ ಅದರೆ ನಿಮ್ಮ ಮಾತನ್ನು ಅವರು ಕೇಳುವಂತೆ ಮಾಡಲು ಶಕ್ತಿ ಎಲ್ಲಿದೆ?

4. ಕರ್ಣಾಟಕ ವಿಶ್ವವಿದ್ಯಾಲಯವನ್ನು ದಕ್ಷಿಣ ಕನ್ನಡದ ಕಾಲೇಜುಗಳು ಸೇರಿದುದರಿಂದ ಅಲ್ಲಿಯ ವಿದ್ಯಾರ್ಥಿಗಳಿಗೆ ತಡೆಹಾಕಿ ಮೈಸೂರು ವಿಶ್ವವಿದ್ಯಾಲಯವು ತನ್ನ ಸಂಕುಚಿತ ದೃಷ್ಟಿಯನ್ನು ತೋರಿಸಿರುವುದು ಮುಂದೆಯೂ ದಕ್ಷಿಣ ಕನ್ನಡದ ವಿರುದ್ಧ ಇಂತಹ ಸಣ್ಣತನವನ್ನು ತೋರಿಸುವುದಿಲ್ಲವೆಂದು ಹೇಗೆ ನಂಬಲಿ?

ಮೈಸೂರು ವಿಶ್ವವಿದ್ಯಾಲಯದ ಈ ರೀತಿಯ ನಿರ್ಬಂಧಗಳು ಇತರ ವಿಶ್ವವಿದ್ಯಾಲಯಗಳನ್ನೂ ಕೆಣಕಿ ನಮ್ಮ ವಿದ್ಯಾರ್ಥಿಗಳಿಗೆ ಅಲ್ಲಿ ಎಲ್ಲೂ ಪ್ರವೇಶ ಸಿಗದಂತಾಗಬಹುದು.

ನಿಮ್ಮ ಅನ್ಯಪ್ರಭಾವ ನಿಮ್ಮನ್ನು ಜವಾಬ್ದಾರೀ ಸ್ಥಾನದಲ್ಲಿ ಇಟ್ಟಿರುವುದು. ಈ ಸ್ಥಾನವು ಶಾಶ್ವತವಲ್ಲ ನಿಮ್ಮ ಈ ಅವಧಿಯಲ್ಲಿ ಕರ್ಣಾಟಕವನ್ನು ಒಂದುಗೂಡಿಸಲು ಪ್ರಯತ್ನಿಸಬೇಕಲ್ಲದೆ ನಿಮ್ಮ ಮುಂದಾಳುತನದಲ್ಲಿ ತುಂಡರಿಸುವುದಲ್ಲ. ಜನತಾ ಪ್ರತಿನಿಧಿಯಾಗಿ ಜನಾಯಿಸಲ್ಪಟ್ಟೊಡನೆ ನಿನ್ನ ಅಭಿಪ್ರಾಯವೇ ಜನಾಭಿಪ್ರಾಯವಾಗಬೇಕೆಂಬ ಅಹಂಕಾರ ಬೇಡ. ಕಾಂಗ್ರೆಸ್ಸಿಗರಿಗೂ ಜನಾಭಿಪ್ರಾಯಕ್ಕೂ ಬಹುದೊಡ್ಡ ಅಂತರವನ್ನು ತಂದೊಡ್ಡಿರುವುದು. ಜನತೆಯ ಹೃದಯ ಮಿಡಿತದಿಂದ ನೀವೆಷ್ಟು ದೂರ ಇರುವಿರಿ, ನಿಮ್ಮ ನಿರ್ಣಯವೇ ಸರಿಯಾದ್ದು, ಮಿಕ್ಕವರದ್ದು ತಪ್ಪೆಂಬ ಭಾವನೆಯಿಂದ ನಿಮಗೆ ಓಟುಕೊಟ್ಟು ಕಳುಹಿಸಿದ ಜನರು ನಿಮಗೆ ಪ್ರತಿಕೂಲಾಭಿಪ್ರಾಯ ಪ್ರಕಟಿಸುವ ಧೈರ್ಯ ತೋರಿಸಿದರೆ ನೀವೆಷ್ಟು ಹೌಹಾರಿ ಬೀಳುವಿರಿ ಎಂಬುದನ್ನು ನೀವು ವಿಮರ್ಶಿಸಿಕೊಳ್ಳಿರಿ. ಜನತಾಭಿಪ್ರಾಯಕ್ಕೆ ಮಣಿಯುವ ನಮ್ರತೆ ನಿಮ್ಮಲ್ಲಿದ್ದರೆ ಮಾತ್ರ ಪ್ರಜಾಶಕ್ತಿ ಬದುಕೀತು. ನಿಮ್ಮ ಶಕ್ತಿಯನ್ನು ಅಳೆಯಬೇಕೆಂಬ ಇಚ್ಛೆ ಇರುವುದಾದರೆ ನಿಮ್ಮ ಮುಂದಿರುವ ಒಂದೇ ಒಂದು ಮಾರ್ಗವೆಂದರೆ ನಿನ್ನ ಸ್ಥಾನಕ್ಕೆ ರಾಜೀನಾಮೆಕೊಟ್ಟು ಈ ವಿಚಾರದ ಮೇಲೆ ಮನೆ ಮನವಾಸಿಗೆ ನಿಲ್ಲುವುದು. ನಿಮಗಿದು ಮಹತ್ವದ ವಿಷಯವಾಗಿರಲಾರದು ಜನತೆಗೂ ಹಾಗೆಯೇ ಅದರೆ ಈ ಪ್ರಶ್ನೆಯಲ್ಲಿರುವ ಮಹತ್ವವೆಂದರೆ ಜನತಾಭಿಪ್ರಾಯವನ್ನು ನೀವು ಮನ್ನಿಸುವಿರಾ, ಇಲ್ಲವೆ ಎಂಬುದು ಇದಕ್ಕೆ ನೀವು ಉತ್ತರ ಕೊಡಬೇಕಾಗುವುದು. ಕೇರಳದ ಕಮ್ಯೂನಿಸ್ಟ್ ಸರಕಾರವೂ ವಿದ್ಯಾಧೋರಣೆಯನ್ನು ಜನತಾಭಿಪ್ರಾಯಕ್ಕೆ ಸರಿಯಾಗಿ ತಂದಿಸಿಕೊಂಡು ಹೋಗಲು ಇಷ್ಟಪಟ್ಟಿತು— ನೀವು?

ಮೈಸೂರು ವಿಶ್ವವಿದ್ಯಾಲಯವನ್ನು ಸೇರುವುದರಿಂದ ನಮಗೇನು ಪ್ರಯೋಜನವೆಂಬುದನ್ನು ನೀವಿನ್ನೂ ಜನತೆಗೆ ಮಂದಟ್ಟು ಮಾಡಿಲ್ಲ ನಮ್ಮ ಜಿಲ್ಲೆಯ ಕಾಲೇಜುಗಳ ಭವಿಷ್ಯದ ಕುರಿತು ಮೈಸೂರು ವಿಶ್ವವಿದ್ಯಾಲಯದಿಂದ ನಮಗೇನಾದರೂ ಲಿಖಿತ ಭರವಸೆ ಬಂದಿರುವುದೆ? ಅಥವಾ ನೀವು ಅಪೇಕ್ಷಿಸಿದ್ದ ಕಾರಣದಿಂದ ಜಿಲ್ಲೆಯ ಕಾಲೇಜುಗಳು ಈ ಜೂಜಾಟವನ್ನು ಪ್ರವೇಶಿಸಬೇಕೆ?

ನಮ್ಮ ಶಾಸಕರು ಈ ವಿಷಯವನ್ನು ಇಲ್ಲಿಗೇ ಬಿಟ್ಟುಬಿಡುವುದು ವಾಸಿ ಮೈಸೂರು ಮತ್ತು ಕರ್ಣಾಟಕ ವಿಶ್ವವಿದ್ಯಾಲಯಗಳೊಳಗೆ ಭೇದಭಾವನೆಯನ್ನು ಹುಟ್ಟಿಸಲು ನಾವು ಕಾರಣರಾಗುವುದು ಬೇಡ ಏಕೆಂದರೆ ಈ ಎರಡು ವಿಶ್ವವಿದ್ಯಾಲಯಗಳ ಹಿನ್ನೆಲೆಯಲ್ಲಿ ಜನತೆಯ ಭೌಗೋಲಿಕ, ಭಾವನಾತ್ಮಕ ಪ್ರಪಂಚವೂ ಸೇರಿಕೊಂಡಿರುವುದು. ಈ ಎರಡೂ ವಿಶ್ವವಿದ್ಯಾಲಯಗಳು ನಮ್ಮವೆಂಬ ಭಾವನೆಯಿಂದ ಅವುಗಳ ಉನ್ನತಿಗಾಗಿ ನಮ್ಮಿಂದಾದಷ್ಟು ಪ್ರಯತ್ನಿಸುವಾ. ಕನ್ನಡಿಗರ ಪಿಡ್ಕೆ, ಬುದ್ಧಿ ಮನಸ್ಸುಗಳನ್ನು ಈ ವಿಶ್ವವಿದ್ಯಾಲಯಗಳು ಒಂದುಗೂಡಿಸಲಿ. ಈ ಎರಡೂ ವಿಶ್ವವಿದ್ಯಾಲಯಗಳು ಒಂದೇ ರೀತಿಯ ಪಠ್ಯಗಳನ್ನಿಡುವ ಬದಲು ಬೇರೆ ಬೇರೆ ವ್ಯಾಸಂಗ ಸೌಕರ್ಯವನ್ನು ಇಡಗಿಸುವಂತೆ ಸರಕಾರ ಪ್ರಯತ್ನಿಸಲಿ. ಪ್ರಾಂತದ ಕಾಲೇಜುಗಳು ತಮ್ಮ ಇಷ್ಟಕ್ಕೆ ಸರಿಯಾದ ವಿಶ್ವವಿದ್ಯಾಲಯವನ್ನು ಸೇರಲಿ ವಿದ್ಯಾರ್ಥಿಗಳು ತಮಗೆ ಅಭಿರುಚಿಗೆ ಬೇಕಾದ ಕಾಲೇಜನ್ನು ಸೇರಲಿ ಎರಡೂವಿಶ್ವವಿದ್ಯಾಲಯಗಳ ಅಧಿಕಾರ ಕ್ಷೇತ್ರವನ್ನು ದಕ್ಷಿಣ ಕನ್ನಡಕ್ಕೆ ವಿಸ್ತರಿಸುವುದರಿಂದ ಹಾನಿ ಇಲ್ಲ ಶಾಸಕರೆ! ನ್ಯಾಯಕ್ಕೆ ಕಿಸಿಗೊಡಿರಿ ಇದರಿಂದ ನಿಮ್ಮ ಮೇಲೆ ಜನತೆಯ ಗೌರವ ಹೆಚ್ಚುವುದು. ನಿಮ್ಮ ಶಕ್ತಿಯನ್ನು ಕಿಕ್ಕದಲ್ಲಿ ಅಥವಾ ಸರಕಾರದೊಂದಿಗೆಅಳೆಯಬಹುದು, ಅದರೆ ಆ ಶಕ್ತಿಯನ್ನು ಜನತೆಯೊಂದಿಗೆ ಅಳೆಯ ತೊಡಗಿದರೆ ನಿಮಗೇನೇ ಹಾನಿ!

ಮಲಯಾ ಸ್ವಾತಂತ್ರ್ಯ ಪಡೆಯಿತು!

(೧ನೇ ಪುಟದಿಂದ)

ನ್ನೂ ಇತ್ತಿದೆ. ಈ ಸೇವೆಯಿಂದಾಗಿ ಬ್ರಿಟಿಷ ಸಹರಾಷ್ಟ್ರತ್ವದಲ್ಲಿ ಒಟ್ಟು ೧೦ ಸದಸ್ಯ ರಾಷ್ಟ್ರಗಳಿರುವುವು.

ದಿನಾಂಕ ೩೧ರಂದು ಬ್ರಿಟಿಷ ರಾಣಿ ೨ನೆ ಎಲಿಜಬೆತರ ಪ್ರತಿನಿಧಿಗಳಾದ ಗ್ಲೋಚೆಸ್ಟರಿನ ಡ್ಯೂಕರು ಮಲಯ ಸಂಯುಕ್ತ ರಾಜ್ಯದ ಪ್ರಧಾನಿಗಳಾದ ಟಂಕು ಅಬ್ದುಲ ರಹಮಾನರಿಗೆ ಆಡಳಿತದಧಿಕಾರವನ್ನು ಒಪ್ಪಿಸಿರುವರು. ಅಲ್ಲದೆ ರಾಜ್ಯಾಂಗ ನಿಯಮದಂತೆ ನೆಗ್ರಿ ಸೆಂಬಿಲಾನದ ಸುಲ್ತಾನರಾದ ಸರ್ ಅಬ್ದುಲ ರಹಮಾನ ಇಂಬಿಟಂಕು ಮಹಮ್ಮದ (ಪ್ರಧಾನಿಗೂ ಇವರಿಗೂ ನಾಮಸಾದೃಶ್ಯಮಾತ್ರ) ಇವರು ಸ್ವತಂತ್ರ ಮಲಯಾದ ಪ್ರಥಮ ಅಧಿಪತಿಗಳಾಗಿ ಆರಿಸಲ್ಪಟ್ಟಿದ್ದಾರೆ.

ಭಾರತದಂತೆಯೇ ಬ್ರಿಟಿಷ ದಾಸ್ಯ ಶೃಂಖಲೆಯಿಂದ ಮುಕ್ತಿಯನ್ನು ಪಡೆದ ಮಲಯ ದೇಶಸ್ಥರಿಗೆ, ಹಾಗೂ ಸ್ವತಂತ್ರ ಮಲಯಾದ ಅಧಿಪತಿ, ಪ್ರಧಾನಿಗಳಿಗೆ ಮಂಗಳವನ್ನು ಕೋರೋಣ. ಸ್ವತಂತ್ರ ಮಲಯವನ್ನು ಯೋಗ್ಯ ರೀತಿಯಲ್ಲಿ ಮುನ್ನಡೆಸುವ ಶಕ್ತಿಯನ್ನು ಪರಮಾತ್ಮನು ಅನುಗ್ರಹಿಸಲಿ; ಮಲಯಿಗಳೂ ಈ ಬಗ್ಗೆ ಪರಿಶ್ರಮಿಸಲಿ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction Madras.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಹೊಸಕೆರೆ
ಚಿದಂಬರಯ್ಯನವರ

ಭಗವದ್ಗೀತೆಯ

ಸಮೂಲ ಭಾಷಾಂತರ

ಪೊಕೆಟ್ ಎಡಿಷನ್.

ಸುಮಾರು 450 ಪುಟಗಳು.

ಕ್ರಯ 0—12—0

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

12—9—1957

ಸಂಚಿಕೆ ೨
NO. 2

ಮೈಸೂರಲ್ಲಿ ಭೂಸುಧಾರಣೆ—

ಗೇಣಿದಾರರು ಕರ್ತವ್ಯಶೀಲರಾಗಲಿ!

ಮೈಸೂರಿನ ಕಂದಾಯ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ಪತ್ರಿಕಾ ಪ್ರತಿನಿಧಿಗಳೆದುರು ಒಕ್ಕಲುತನದ ಕುರಿತಾದ ಹೇಳಿಕೆಯೊಂದನ್ನು ಇತ್ತೀಚೆಗೆ ಬೆಂಗಳೂರಲ್ಲಿ ಇತ್ತಿರುವರು ಮೈಸೂರು ಸರಕಾರವು ಮೈಸೂರು ರಾಜ್ಯದಲ್ಲಿಯ ಎಲ್ಲ ಒಕ್ಕಲು ತನದ ಗೇಣಿದಾರರ ಹೆಸರು, ಗೇಣಿಚೀಟಿನ ಅವಧಿ, ಪ್ರಕೃತಿ ಗೇಣಿ ಮೊದಲಾದುವನ್ನು ಸಂಗ್ರಹಿಸಿ ಅವೆಲ್ಲವನ್ನೂ ಯೋಗ್ಯ ರೀತಿಯಲ್ಲಿ ನೋಂದಾಯಿಸಿಡುವ ಬಗ್ಗೆ ವಿವರವಾದ ನಿಯಮಗಳನ್ನು ಸಿದ್ಧಪಡಿಸಿದೆ, ಮತ್ತು ನಿಶ್ಚಿತ ರೀತಿಯಲ್ಲಿ ಈ ಎಲ್ಲ ವಿವರಗಳನ್ನು ಇಡಲಾಗುವುದು ಎಂದು ಮಾನ್ಯ ಮಂತ್ರಿವರ್ಯರು ಹೇಳಿದರು

ಇಂತಹ ಕೊಸ ವಿಧಾನದ ಅವಶ್ಯಕತೆಗಳನ್ನು ವಿವರಿಸುತ್ತಾ ಮೈಸೂರು ರಾಜ್ಯದ ಗೇಣಿಚೀಟಿಗಳ ನಂಬಿಕಾರ್ಹ ಮಾದಿಯೊಂದನ್ನಿಟ್ಟುಕೊಳ್ಳುವುದು ಒಂದಲ್ಲ ಹಲವು ದೃಷ್ಟಿಗಳಿಂದ ಪ್ರಾಮುಖ್ಯವಾಗಿದೆ. ಈಗ ವ್ಯವಹಾರದಲ್ಲಿರುವ ಕೆಲವು ಗ್ರಾಮಗಳ ಲೆಕ್ಕ ಪತ್ರಗಳ ನಮೂನೆಯು ಈ ಕೊಸ ನಮೂನೆಯು ಹೆಚ್ಚಿನ ತಿಳುವಳಿಕೆಯನ್ನು ಒದಗಿಸುತ್ತದೆ. ಆದರೆ, ಈ ವಿವರಣೆಗಳನ್ನು ಒಂದು ಸಂಕೀರ್ಣ ರೀತಿಯಲ್ಲಿ ಬಿಡೆಯುವುದಕ್ಕಾಗಿ ಮತ್ತು ಸುಗಮವಾಗಿರಿಸುವುದಕ್ಕಾಗಿ ಸರಕಾರವು 'ಮೈಸೂರು ಲೇಂಡ್ ರೆಕಾರ್ಡ ಆಫ್ ರೈಟ್ಸ್ ಆಕ್ಟ್'ನಲ್ಲಿ ಸೂಚಿತವಾದ ನಿಯಮಗಳಂತೆ ಮೈಸೂರು ಗೇಣಿ ಮತ್ತು ಬೆಳೆಯ ರಿಜಿಸ್ಟ್ರಿಯೊಂದನ್ನು ಇಡಲು ನಿರ್ಧರಿಸಿದೆ. ಈ ರಿಜಿಸ್ಟ್ರಿಯನ್ನು ಯಾವ ರೀತಿಯಲ್ಲಿ ಇಟ್ಟುಕೊಳ್ಳಬೇಕೆಂಬ ಬಗ್ಗೆ ಸಂಪೂರ್ಣ ತಿಳುವಳಿಕೆಯನ್ನೂ ಕ್ರಮ ವಿಧಾನಗಳನ್ನೂ ಈಗಾಗಲೇ ಪ್ರಕಟಿಸಲಾಗಿದೆ. ಸಾಕಷ್ಟು ಸಂಖ್ಯೆಯ ಇಂತಹ ರಿಜಿಸ್ಟ್ರಿಗಳನ್ನು ಕನ್ನಡ ಭಾಷೆಯಲ್ಲಿಯೂ ಮುದ್ರಿಸಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೆ ಪೂರೈಸಲಾಗಿದೆ.

ಗೇಣಿಗೆ ಸಂಬಂಧಪಟ್ಟ ಈ ಎಲ್ಲ ವಿವರಣೆಗಳನ್ನು ಮುಂದಿನ ಅಕ್ಟೋಬರ ತಿಂಗಳೊಳಗೆ ಸಂಪೂರ್ಣವಾಗಿ ಪೂರ್ಣ ಮಾಡಬೇಕೆಂದು ಗ್ರಾಮಾಧಿಕಾರಿಗಳಿಗೆ ಹಾಗೂ ರಾಜ್ಯದ ಕಂದಾಯಮಂತ್ರಿ ಶಾಖೆಯ ಇತರ ಅಧಿಕಾರಿಗಳಿಗೆ ತಕ್ಕ ಆದೇಶವೀಯಲಾಗಿದೆ. ಈ ಕೆಲಸವು ತೀವ್ರವಾಗಿ ಮತ್ತು ಶ್ರದ್ಧೆಯಿಂದ ಮುಗಿಯಬೇಕಾದರೆ, ಜನತೆಯು ಗ್ರಾಮಾಧಿಕಾರಿ ಮತ್ತು ಇತರ ಶಾಖಾಧಿಕಾರಿಗಳಿಗೆ ಸಂಪೂರ್ಣ ಸಹಕಾರವನ್ನೀಯುವದು ಅತ್ಯಗತ್ಯ ಆದುದರಿಂದ, ತಂತಮ್ಮ ಗೇಣಿಚೀಟುಗಳಿಗೆ ಸಂಬಂಧಿಸಿದ ವಿವರಗಳು ಅಧಿಕೃತ ಗೇಣಿ ಮತ್ತು ಬೆಳೆಯ ರಿಜಿಸ್ಟ್ರಿಯಲ್ಲಿ ಯಥಾಯೋಗ್ಯವಾಗಿ ನೋಂದಾಯಿಸಲ್ಪಡುವಂತೆ ಸಾಮಾನ್ಯ ಜನತೆಯು —ಮುಖ್ಯವಾಗಿ 'ಗೇಣಿದಾರರು—ನೋಡಿಕೊಳ್ಳುವಂತೆ ಸರಕಾರವು ವಿನಂತಿಸುತ್ತದೆ ಗ್ರಾಮಾಧಿಕಾರಿಗಳು ತಮ್ಮ ರಿಜಿಸ್ಟ್ರಿಯಲ್ಲಿ ಗೇಣಿದಾರನ ಹೆಸರು, ಗೇಣಿಗೆಕೊಟ್ಟ ಭೂಮಿಯ ವಿಸ್ತೀರ್ಣ, ಗೇಣಿಯ ವಿಧ, ಗೇಣಿಯ ಮೊತ್ತ (ನಗದಿ ಅಥವಾ ಬೆಳೆಯ ಅಂಶ) ೧೯೫೭-೫೮ ಮತ್ತು ಅದರ ಹಿಂದಿನ ನಾಲ್ಕು ವರ್ಷಗಳಿಗೆ ಸಂಬಂಧಿಸಿದುದು) ಇವನ್ನು ಸರಿಯಾಗಿ ಬರೆದುಕೊಳ್ಳಬೇಕು

ಸಂಬಂಧಿಸಿದ ಶಾಖಾಭಾಗರು ತಮ್ಮ ರಿಜಿಸ್ಟ್ರಿಯಲ್ಲಿ ತಮ್ಮ ಗೇಣಿಗೆ ಸಂಬಂಧಿಸಿದ ಸತ್ಯವಾದ ಸಂಪೂರ್ಣ ವಿವರಣೆಯದ ಸರಿಯಾಗಿ ನೋಂದಾಯಿಸುವಂತೆ ರಾಜ್ಯದ ಗೇಣಿದಾರ ಒಕ್ಕಲಿಗರು ನೋಡಿಕೊಳ್ಳಬೇಕು ಈ ಶಾಖಾಭಾಗರನೋಂದಾಣಿಕೆಗಳನ್ನು ಮೇಲಿನ ಅಧಿಕಾರಿಗಳು ಸರಿ ನೋಡುವರು ಸರಿ ನೋಡುವ ಬಗ್ಗೆ ಮೇಲಧಿಕಾರಿಗಳಿಂದ ಮುಂದಕ್ಕೆ, ಗೇಣಿದಾರ ಒಕ್ಕಲಿಗರಿಗೆ ಕರೆ ಬರುವುದು, ಮತ್ತು ಆಗ ಒಕ್ಕಲಿಗರು ಇದ್ದ ನಿಜಸ್ಥಿತಿಯನ್ನು ಮೇಲಧಿಕಾರಿಗಳ ಸಮಮುಖದಲ್ಲಿ ಹೇಳಲು ತಪ್ಪಬಾರದು ಈ ತೆರದಲ್ಲಿ ರಿಜಿಸ್ಟ್ರಿಯಾದ ಮಾಹಿತಿಗಳ ನಿಜ ಪ್ರತಿಗಳನ್ನು ಸಿಹ ಅದಕ್ಕಾಗಿ ನೇಮಿಸಲಾಗುವ ಅಧಿಕಾರಿಯಿಂದ ಕೊಡಿಸಲ್ಪಡಲು ತಕ್ಕ ಏರ್ಪಾಡುಗಳನ್ನು ಮಾಡಲಾಗುವುದು. ಏಕೆಂದರೆ, ಹೀಗೆ ಪ್ರತಿಗಳನ್ನು ಕೊಡುವ ವ್ಯವಸ್ಥೆಯಿಂದ ಗೇಣಿದಾರ ಒಕ್ಕಲುಗಳಿಗೆ ಒಳ್ಳೆಯದಾಗಬಹುದು

ಒಕ್ಕಲುಗಳ ಸಂಪೂರ್ಣ ಗಣನೆ ಮತ್ತು ಗೇಣಿಚೀಟುಗಳ ರಿಜಿಸ್ಟ್ರಿಯನ್ನಿಡುವ ಈಗತಾನೇ ಮುಂದೆತಂದ ವಿಧಾನದ ವಿವರಗಳನ್ನು ವಿವರಿಸುತ್ತಾ ಮಾನ್ಯ ಮಂತ್ರಿಗಳು ಭೂ ಸುಧಾರಣೆಯ ಬಗ್ಗ ವದಿಸಿದಾಗಲು ನೇಮಿಸಿದ ಜತ್ತಿ ಸಮಿತಿಯು ಈ ತಿಂಗಳ ೧೧ನೆಯ ದಿನಾಂಕದೊಳಗೆ ಈಯಬಹುದೆಂದು ಹೇಳಿದರು ಹಳೆಯ ಮೈಸೂರು ರಾಜ್ಯ, ಮತ್ತು ಮದ್ರಾಸು ಹಾಗೂ ಕೊಡಗು ರಾಜ್ಯಗಳಿಂದ ವಿಲೀನಗೊಂಡ ಪ್ರದೇಶಗಳಲ್ಲಿ ಗೇಣಿದಾರರ ಮತ್ತು ಗೇಣಿಚೀಟುಗಳ ರಿಕಾರ್ಡ ಇರುವುದಿಲ್ಲ ಬೊಂಬಾಯಿ ಕರ್ನಾಟಕವತ್ತು ಹೈದರಾಬಾದ ಕರ್ನಾಟ ಪ್ರದೇಶಗಳಲ್ಲಿ 'ಅಧಿಕಾರಗಳ ರಿಕಾರ್ಡು' ಇರುತ್ತದೆ ಆದುದರಿಂದ, ಭೂ ಸುಧಾರಣೆಯ ವಿಚಾರವನ್ನು ಮಾಡುವುದಕ್ಕೆ ಮೊದಲಾಗಿ ಈ ತೆರದ ರಿಜಿಸ್ಟ್ರಿಯೊಂದನ್ನು ತಯಾರಿಸಿಟುಕೊಳ್ಳುವುದು ಅವಶ್ಯಕವಾದುದು ಹಳೆ ಮೈಸೂರಿನಲ್ಲಿದ್ದ "ಮೈಸೂರ್ ಲೇಂಡ್ ರೆಕಾರ್ಡ್ ಆಫ್ ರೈಟ್ಸ್ ಆಕ್ಟ್"ನಲ್ಲಿ ನಮೂದಿಸಲಂಗಿದ್ದ ರೀತಿಯಲ್ಲಿ ಗೇಣಿದಾರರ ಮತ್ತು ಗೇಣಿ ಚೀಟುಗಳ ಬಗ್ಗೆ ವಿವರಗಳನ್ನು ಯುಕ್ತ ವಿಧಾನದಲ್ಲಿ ನೋಂದಾಯಿಸಿಕೊಳ್ಳಲು ಗ್ರಾಮಾಧಿಕಾರಿಗಳಿಗೆ ಮತ್ತು ಮೇಲಾಧಿಕಾರಿಗಳಿಗೆ ತಕ್ಕ ಆದೇಶವನ್ನು ಈಗಾಗಲೇ ಈಯಲಾಗಿದೆ.

ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿರುವ ಮದ್ರಾಸು ಮತ್ತು ಕೊಡಗು ರಾಜ್ಯದ ಭಾಗಗಳಲ್ಲಿಯೂ ಗೇಣಿದಾರರ ವಿವರಣೆಯನ್ನು ಸಂಗ್ರಹಿಸುವುದಕ್ಕಾಗಿ ಒಂದು ಹೊಸ ವಿಧೇಯಕವನ್ನು ತಯಾರಿಸಿ, ಶಾಸನ ಸಭೆಯ ಮುಂದೆ ತಂದು ಆ ಪ್ರದೇಶಗಳಲ್ಲಿ ಬೇಕಾದ ವಿವರಗಳನ್ನು ಸಂಗ್ರಹಿಸಲಾಗುವುದು ಈ ಅವಶ್ಯಕ ವಿಧೇಯಕವನ್ನು ಸಪ್ಟಂಬರ ೧೬ರಂದು ಪ್ರಾರಂಭವಾಕಲಿರುವ ಮೈಸೂರು ಶಾಸನ ಸಭೆಯ ಮುಂದಿನ ಅಧಿವೇಶನದಲ್ಲಿ ತರಲಾಗುವುದು. ಈ ವಿಧೇಯಕವು ವಿಧಾನ ಸಭೆಯಲ್ಲಿ ತಂದು ಒಪ್ಪಿಗೆಯನ್ನು ಪಡೆಯದೆ, ಮೈಸೂರಲ್ಲಿ ವಿಲೀನಗೊಂಡ ಮದ್ರಾಸ್ ಮತ್ತು ಕೊಡಗುಗಳ ಭಾಗಗಳಲ್ಲಿ ಗೇಣಿದಾರರ ಮತ್ತು ಗೇಣಿಚೀಟಿಗಳ ವಿವರಣೆಯನ್ನು ನೋಂದಾಯಿಸುವುದು ಸಾಧ್ಯವಿಲ್ಲ ಈ ಹೊಸ ವಿಧೇಯಕವು ಮದ್ರಾಸು ಮತ್ತು ಕೊಡಗಿನ ಭಾಗಗಳಲ್ಲಿ ವಿವರಗಳನ್ನು ರಿಕಾರ್ಡು ಮಾಡಲು ಅಧಿಕಾರವನ್ನು ಕೊಡುವುದಲ್ಲದೆ, ಹಳೆ ಮೈಸೂರಿನ 'ಲೇಂಡ್ ರೆಕಾರ್ಡ್ ಆಫ್ ರೈಟ್ಸ್ ಆಕ್ಟ್'ಗೂ ಕೆಲವು ತಿದ್ದುಪಡಿಗಳನ್ನು ಮಾಡುವುದು

ಮಾನ್ಯ ಮಂತ್ರಿಗಳು ಸೂಚಿಸಿದ ಕೊಸ ವಿಧೇಯಕವು ದಕ್ಷಿಣ ಕನ್ನಡದಲ್ಲಿ ವಿವರಗಳ ಸಂಗ್ರಹಣಕ್ಕೆ ಅಧಿಕಾರ ವೀಯುವುದು. ಅದು ಒಪ್ಪಿಗೆಯನ್ನು ಪಡೆದ ನಂತರ, ವಿವರಣೆಗಳನ್ನು ಗ್ರಾಮಾಧಿಕಾರಿಗಳು ಸಂಗ್ರಹಿಸಲಿರುವರು. ಆಗ ಅಧಿಕಾರಿಗಳ ದಾಕ್ಷಿಣ್ಯ ಹೆಂಗಸಿಗೊಳಗಾಗದೆ ಅಥವಾ ಧನಿಗಳಿಗೆ ಅಂಜಿ ತಮ್ಮ ಗೇಣಿಚೀಟನ್ನೆ, ಗೇಣಿಯ ಸಂಬಂದವಾದ ಸಂಪೂರ್ಣ ವಿವರಣೆಗಳನ್ನು ಇದ್ದಕ್ಕಿದಂತೆಯೇ ರಿಜಿಸ್ಟ್ರಿಯಲ್ಲಿ ಬರೆಯುವಂತೆ ನೋಡಿಕೊಳ್ಳುವುದು, ಹಾಗೂ ಮೇಲಧಿಕಾರಿಗಳಿಂದ ಸರಿ ನೋಡಲು ಕರೆ ಬಂದಾಗಲೂ ಸತ್ಯಸ್ಥಿತಿಯನ್ನು ಹೇಳುವುದು ಗೇಣಿದಾರ ಕೃಷಿವಲರ ಕರ್ತವ್ಯ ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ಪೂರೈಸಿದರೆಂದೆನೆ, ಅದರಿಂದ ಏನಾದರೂ ಪ್ರಯೋಜನ ದೊರೆಯಬಹುದು, ಇಲ್ಲವಾದರೆ ಹಾನಿಯೆಂಬುದು ಕಟ್ಟಿಟ್ಟ ಗಂಟು. ಆದುದರಿಂದ ನಮ್ಮ ಜಿಲ್ಲೆಯ ರೈತರಿವನ್ನು ಗಮನಿಸಲಿ

ಹೊಸ ಸುದ್ದಿ

ಸೇವಿಂಗ್ಸ್ ಬೇಂಕ್ ಡಿಪೋಸಿಟಿನ ಬಡ್ಡಿ ದರವನ್ನು 2½%ಗೆ ಹೆಚ್ಚಿಸಲಾಗಿದೆ ವಾರಕ್ಕೆ ಒಂದಾವರ್ತಿಗಿಂತ ಮಿಕ್ಕಿ ಖರ್ಚಿಯಂದ ಹಣ ತೆಗೆಯಲು ಈಗ ಯಾವೊಂದೂ ಆತಂಕವಿಲ್ಲ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಏರಿಸಲಾಗಿದೆ. ತಾ. 1-7-1957ರಿಂದ ಏರಿಸಿದ ಬಡ್ಡಿಯಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬೇಂಕ್ ಲಿಮಿಟೆಡ್

(ವಿ. ಸೂ ಬೆಂಗಳೂರು ನಗರದಲ್ಲಿ ಬೇಂಕಿನ ಹೊಸ ಶಾಖೆಯನ್ನು 28-8-57ರಲ್ಲಿ ತೆರೆಯಲಾಗಿದೆ)

ವಾರದ ಸಣ್ಣ ಕಥೆ—

ಎರಡು ಕೆಂಪು ಕೋಳಿಗಳು

ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್.

ತನ್ನ ದೊಡ್ಡ ಕೋಣವೊಂದರ ಸಾವಿನಿಂದ ಆಕಾಶವೇ ಕಳಚಿ ಬಿದ್ದಂತಾಯಿತು. ವಿಶ್ವವೇ ಅಂತ್ಯವಾದಂತೆ ಭಾಸವಾಯಿತು. ಕೋಣವು ನಿಜವಾಗಿಯೂ ಮುದಿಯಾಗಿತ್ತು. ದೀರ್ಘಕಾಲದಿಂದಲೂ ಮುಡಿದುದರ ಮತ್ತು ಮುದಿ ಪ್ರಾಯದ ದೆಸೆಯಿಂದ ಬಳಲಿ ಬೆಂಡಾಗಿ ಕೃಶವಾಗಿ ಹೋಗಿತ್ತು ನಿಜ; ಆದರೆ, ವ್ಯವಸಾಯವು ಪ್ರಾರಂಭವಾಗಲಿರುವ ಸಮಯವನ್ನೇ ಆರಿಸಿಕೊಂಡು ಅದೇಕೆ ಸ್ವರ್ಗಯಾತ್ರೆಯನ್ನು ಕೈಗೊಳ್ಳಬೇಕಿತ್ತು?

ಕಿಟ್ಟನಿಗೆ ಈ ಪ್ರಶ್ನೆಯ ಉತ್ತರವೂ ತಿಳಿದಿತ್ತು. ಕಿಟ್ಟನು ಪಲಾಶ ಮರದಡಿಯಲ್ಲಿ ನಿವಾಸಸ್ಥಾನವನ್ನು ಮಾಡಿಕೊಂಡ ಅದೂ, ತನ್ನ ಗದ್ದೆಯಂಚಿನಲ್ಲಿರುವ ಭೂತವೊಂದನ್ನು ತೃಪ್ತಿಪಡಿಸಲು ಅಸಮರ್ಥನಾಗಿದ್ದನು. ಇದರ ಪರಿಣಾಮವಾಗಿಯೇ ಆತನ ದೊಡ್ಡ ನುರಿತ ಕೋಣವೊಂದು ಮರಣಹೊಂದಿತು. ಪ್ರತಿವರ್ಷವೂ ಪೈರನ್ನು ಕೊಯ್ದು ವೇಳೆಯಲ್ಲಿ ಈ ಭೂತಕ್ಕೆ ಅದರ ಪಾಲಿನದನ್ನು ಅರ್ಪಿಸಿಬಿಡುವುದು ಪದ್ಧತಿ. ಪಲಾಶ ಮರದಡಿಯಲ್ಲಿ ಆ ವೇಳೆಯಲ್ಲಿ ಒಂದು ಕೆಂಪು ಕೋಳಿಯನ್ನಿಡುವುದು ಕಿಟ್ಟನ ತಲೆತಲಾಂತರಗಳಿಂದಲೂ ಅನುಸರಿಸಿಕೊಂಡು ಬಂದ ಸಂಪ್ರದಾಯವಾಗಿತ್ತು. ಈ ಸಾಂಪ್ರದಾಯವು ಮೊನ್ನೆ ಮೊನ್ನೆಯ ವರೆಗೂ ಎಡೆಬಿಡದೆ ಅನುಸರಿಸಿಕೊಂಡು ಬರಲ್ಪಟ್ಟಿದ್ದು ಕಳೆದ ಬಾರಿ ಮಾತ್ರ ಅದಕ್ಕೆ ಧಕ್ಕೆ ತಟ್ಟಿತ್ತು. ತತ್ಪರಿಣಾಮವಾಗಿಯೇ ಈ ಮಹಾಭೂತವು ಕೆಂಪುಕೋಳಿಗೆ ಬದಲಾಗಿ ಹಿರೇಕೋಣವನ್ನು ಆಹುತಿಯಾಗಿ ಪಡೆದುಕೊಂಡಿತ್ತು.

ಕಿಟ್ಟನು ಮಡಿದುಬಿದ್ದ ಕೋಣವನ್ನು ದೂರದಲ್ಲೇ ಹೂಳಿಸಿ, ತಾನು ತನ್ನ ಗದ್ದೆಯ ಸಮೀಪ ತೆರಳಿದನು. ಅದರಂಚಿನಲ್ಲಿ ಬೃಹದಾಕಾರವಾಗಿ ಬೆಳೆದಿದ್ದ ಪಲಾಶ ವೃಕ್ಷದೆದುರು ನಿಂತು ಕರಗಳನ್ನು ಜೋಡಿಸಿ, ಶಿರಸ್ಸನ್ನು ತಗ್ಗಿಸಿ ಪ್ರಾರ್ಥಿಸಿಕೊಂಡ:

"ಓ, ಲೋಕದ ಅನಿಷ್ಟಗಳನ್ನು ದೂರಮಾಡುವ ಭೂತವೇ, ಹಿಂಪಾದದಲ್ಲಿ ನಡೆಯುತ್ತಿರುವ ದೈವ್ವವೇ, ನಿನ್ನ ಈ ಬಡ ಗುಲಾಮನು ತನ್ನ ಕರ್ತವ್ಯಕ್ಕೆ ಚ್ಯುತಿಯನ್ನು ತಂದುಕೊಂಡನು. ನೀನಾದರೂ ಆತನ ದೊಡ್ಡ ಕೋಣವೊಂದನ್ನು ಅಪಹರಿಸಿ, ಆತನ ಕರ್ತವ್ಯಲೋಪಕ್ಕೆ ತಕ್ಕ ಶಾಸ್ತಿಯನ್ನು ಮಾಡಿದೆ. ಶಕ್ತಿಸಂಪನ್ನ ಭೂತವೇ, ನನ್ನ ಪ್ರಾರ್ಥನೆಯನ್ನು ಕೇಳು, ನಾನು ಈ ಹಿಂದೆ ಮಾಡಿದ ಸಕಲ ಮಾಪಗಳನ್ನೂ ಕ್ಷಮಿಸಿಬಿಡು. ನಿನ್ನ ಭದ್ರವಾದ ರಕ್ಷಣೆಯಲ್ಲಿರುವ ಈ ವಿಶಾಲ ಕ್ಷೇತ್ರವನ್ನು ಉಳುವ ವಿಧಾನವನ್ನು ತೋರಿಸಿಕೊಡು. ನನ್ನ ಈ ಗದ್ದೆಯನ್ನು ಹೂಡುವುದಕ್ಕಾಗಿ ಊರ ಭೂಮಾಲಿಕನಿಂದ ಒಂದು ಕೋಣವನ್ನು ಎರವಾಗಿ ಕೊಳ್ಳುವಂತೆ ಅನುಗ್ರಹಿಸು; ಇಷ್ಟವಾದಂತೆ, ಮತ್ತಾರಿಂದಲಾದರೂ ಇನ್ನೊಂದು ಕೋಣವನ್ನು ಕೊಳ್ಳಲು ಸಾಲ ಹುಟ್ಟುವಂತೆ ಆಶೀರ್ವದಿಸು. ಸರ್ವಶಕ್ತಭೂತವೇ, ಇಷ್ಟನ್ನು ಮಾಡು; ಹೀಗೆ ಅನುಗ್ರಹಿಸಿದರೆ, ನಾನು ಚಂದ್ರನಿಗೂ ತೋರದ ಕಗ್ಗತ್ತಲೆಯ ದಿನದಂದು ನಾನು ಕೊಡಲು ತಪ್ಪಿದ ಒಂದಕ್ಕೆ ಬದಲಾಗಿ ಎರಡು ಕೆಂಪು-ಕೋಳಿಗಳನ್ನು ನಿನಗೆ ಉಣಿಸುತ್ತೇನೆ."

ಅಷ್ಟರಲ್ಲಿಯೇ ದೂರದಲ್ಲಿ ಜೀಪ್ ಕಾರೊಂದು ಬರುವುದು ಕಂಡಿತು ಅದರಲ್ಲಿದ್ದವನೊಬ್ಬನು ಸೂರ್ಯನ ಕಿರಣಗಳಿಂದ ರಕ್ಷಿಸಿಕೊಳ್ಳಲು ಟೊಪ್ಪಿಯೊಂದನ್ನೂ ಮೈಯಲ್ಲಿ ಕಾಕಿ ಚಡ್ಡಿ ಹಾಗೂ ಅಂಗಗಳನ್ನೂ ತೊಟ್ಟಿದ್ದನು. ಜೀಪಿನ ಸುತ್ತಲೂ ಕಲೆದಿದ್ದ ಜನರನ್ನು ಕುರಿತು ಕಿಟ್ಟ ಕೇಳಿದನು. "ಅವನು ಜಂಗಲಿ ಸಾಹೇಬನೆ?"

"ಜಂಗಲಿ ಸಾಹೇಬರು ಯಾವಾಗಲೂ ಸೈಕಲಿನಲ್ಲಿಯೇ ಬರುವರು" ಇನ್ನೊಬ್ಬನು ಉತ್ತರಿಸಿದನು.

"ಹಾಗಾದರೆ, ಈತನು ಜಾನುವಾರು ಸಾಹೇಬನೋ ಮಾರ್ಗ ಸಾಹೇಬನೋ ಆಗಿರಬೇಕು."

"ಈ ಹಳ್ಳಿಯ ನನ್ನ ಸೋದರರೇ, ನಾನು ನಿಮ್ಮ ಗದ್ದೆಗಳಲ್ಲಿ ಅಧಿಕ ಆಹಾರವನ್ನು ಬೆಳೆಸುವುದು ಹೇಗೆಂದು ತಿಳಿಸಲು ಬಂದಿದ್ದೇನೆ. ಯೋಗ್ಯ ವಿಧಾನವನ್ನು ಅನುಸರಿಸುವುದರಿಂದ, ನಿಮ್ಮ ಗದ್ದೆಯಲ್ಲಿ ಒಂದಕ್ಕೆ ಎರಡರಷ್ಟು ಬೆಳೆಯಬಹುದೆಂದು ನಿಮಗೆ ತಿಳಿಸಿ ಹೇಳುವ ಸಲುವಾಗಿ ಆಗಮಿಸಿದ್ದೇನೆ" ಜೀಪಿನೊಳಗಿಂದಲೇ ಆ ಮನುಷ್ಯನು ನುಡಿಯ ತೊಡಗಿದನು.

"ಓ, ಈತನೊಬ್ಬ ಕೃಷಿ ಸಾಹೇಬ. ಈತನು ವಿದೇಶಗಳಲ್ಲಿ ಕೇವಲ ಗುಂಡಿಯೊಂಸನ್ನೊತ್ತುವುದರಿಂದ ಮೂವತ್ತು ಗಾಡಿ ತುಂಬ ಗೋದಿಯನ್ನು ಹೇಗೆ ಪಡೆಯುತ್ತಾರೆಂದು ತಿಳಿಸಲು ಬಂದಿದ್ದಾನೆ" ಎಂದು ಗ್ರಾಮಸ್ಥರಂತಿತರು ಹೇಳಿದರು.

ನೆರೆದ ಜನಜಂಗುಳಿ ಪಂಡಿತರ ಮಾತನ್ನು ಕೇಳಿ ದೊಡ್ಡ ಧ್ವನಿಯಿಂದ ನಕ್ಕಿತು ಇದರಿಂದಾಗಿ ಹಳ್ಳಿಯ ಮುಖಂಡನು ಸುಮ್ಮನಿರಲಾರದೆ "ಮೌನವಾಗಿರಿ, ಮೌನವಾಗಿರಿ. ಕೃಷಿ ಸಾಹೇಬರ ಮಾತಿಗೆ ಅಡ್ಡಬರಬೇಡಿ" ಎಂದು ತನ್ನ ಕೈಯೆತ್ತಿ ಜನರನ್ನು ಸಮಾಧಾನ ಮಾಡಬೇಕಾಯಿತು.

"ನೀವು ಏನು ಕೇಳಿದಿರಿ?" ಸಾಹೇಬನು ಪಂಡಿತರನ್ನು ಕೇಳಿದನು. ಆದರೆ, ಪಂಡಿತರು ತಾವು ಯಾವುದೇ ಒಂದು ಮಾತನ್ನೂ ಆಡದಿದ್ದವರಂತೆ ಗಂಭೀರ ಮೋರೆಯನ್ನು ಧರಿಸುತ್ತ ಕುಳಿತರು.

"ನಾನು ಒಂದು ಕೋಣವನ್ನು ಕೊಳ್ಳುವ ಸಲುವಾಗಿ ಸರಕಾರಕ್ಕೆ ಸಾಲಕ್ಕಾಗಿ ಪ್ರಾರ್ಥನಾಪತ್ರವೊಂದನ್ನು ಕಳಿಸಿದ್ದೆ; ಆದರೆ ಗತಿಯೇನಾಯಿತು? ಸರಕಾರವು ಆ ಬಗ್ಗೆ ಏನು ವಿಚಾರಿಸುತ್ತಿದೆಯೆ? ನಾನು ಮೂರು ವಾರಗಳಿಗೆ ಮೊದಲು ನನ್ನ ಕೋಣ ಸತ್ತೊಡನೆಯೇ ಅರ್ಜಿ ಮಾಡಿಕೊಂಡಿದ್ದೆ" ಕಿಟ್ಟ ಅಧಿಕಾರಿಯನ್ನು ಕೇಳಿದನು.

ಇಷ್ಟರಲ್ಲಿಯೇ ಕೂಡಿದ್ದ ಗ್ರಾಮವಾಸಿಗಳಲ್ಲಿ ಧೈರ್ಯಶಾಲಿಯೊಬ್ಬನು ಎದ್ದು ನಿಂತು, "ಜಾಪಾನಿನಲ್ಲಿ ಅವರು ಯಾವ ರೀತಿಯಿಂದ ಭತ್ತನ್ನು ಬೆಳೆಸುತ್ತಾರೆ, ಅಮೆರಿಕೆಯಲ್ಲಿ ಎಲ್ಲ ಒಕ್ಕಲಿಗರೂ ಎರಡು ಮಾಳಿಗೆಯ ಮನೆಯನ್ನು ಹೇಗೆ ಕಟ್ಟಿಸಿಕೊಂಡರು ಅಥವಾ ಇಪ್ಪತ್ತು ಕೋಣಗಳನ್ನು ಅವರು ಹೇಗೆ ಸಂಪಾದಿಸಿದರು ಎಂದು ಮುಂತಾಗಿ ಹರಟೆ ಹೊಡೆಯುವುದರಿಂದ ಏನೂ ಪ್ರಯೋಜನವಾಗದು" ಎಂದು ದಿಟ್ಟತನದಿಂದಲೇ ನುಡಿದನು.

"ಅಮೇರಿಕಾದಲ್ಲಿ ಕೋಣಗಳೇ ಇಲ್ಲ" ಸಾಹೇಬನು ಮುಗುಳ್ನಗುತ್ತಾ ನುಡಿದನು. "ಅವರೊಡನೆ ಯಾಂತ್ರಿಕೋಪಕರಣಗಳಿವೆ. ಮನುಷ್ಯನು ಗೆಯ್ಯುವ ಕೆಲಸಗಳನ್ನು ಮಾಡುವ ಯಂತ್ರಗಳಿವೆ. ಅಂತಹ ಒಂದು ಯಂತ್ರವು ಒಂದು ನೂರು ಕೋಣಗಳು ಮಾಡಬಲ್ಲುದಾದ ಕೆಲಸವನ್ನು ಮಾಡುತ್ತದೆ.....'

"ಒಂದು ಕೋಣವು ಗದ್ದೆಯನ್ನು ಹೂಡುವಂತೆ ಯಾವ ಯಂತ್ರವೂ ಹೂಡಲಾರದು" ಕಿಟ್ಟನು ನಡುವೆ ನಾಲಗೆ ಸಡಿಲು ಬಿಟ್ಟನು.

"ಮೌನ, ಮೌನ!" ಗ್ರಾಮಾಧಿಕಾರಿಯು ತಡೆದನು.

"ಹ್ಹಾ ಹ್ಹಾ" ಸಾಹೇಬನು ಗಟ್ಟಿಯಾಗಿ ನಕ್ಕುಬಿಟ್ಟನು." ಒಂದು ಸಣ್ಣ ಟ್ರಾಕ್ಟರಾದರೂ ಅರು ಜತೆ ಕೋಣಗಳು ಹೂಡುವುದಕ್ಕಿಂತ ಅಳವಾಗಿಯೂ ವೇಗವಾಗಿಯೂ ಹೂಡಬಲ್ಲುದು."

"ಮತ್ತು ಹನ್ನೆರಡು ಕೋಣಗಳು ಕುಡಿಯುವ ನೀರಿಗಿಂತ ಅಧಿಕ ಪ್ರಮಾಣದಲ್ಲಿ ಪೆಟ್ರೋಲೆಣ್ಣೆಯನ್ನು ಕುಡಿಯಬಲ್ಲುದು" ಪಂಡಿತರು ಧ್ವನಿಗೂಡಿಸಿದರು.

"ಮೌನ, ಮೌನ" ಗ್ರಾಮಾಧಿಕಾರಿಯು ಎಚ್ಚರಿಸಿದನು.

ಕೃಷಿ ಸಾಹೇಬನು ತನ್ನ ಟೊಪ್ಪಿಗೆಯನ್ನು ತೆಗೆದು ಹಣೆಯನ್ನು ಒರಸಿಕೊಂಡನು. "ನಿಮ್ಮಂಥಹ ಜನರು– ನಿಮ್ಮಂತಹ ತಿಳಿಗೇಡಿ ಜನರು–ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ದೇಶವನ್ನು ಹಿಂದೆ ಜಗ್ಗುತ್ತಿರುವಿರಿ. ನೀವು ಹೊಸ ವಿಚಾರಗಳಾವುವನ್ನೂ ತಿಳಿಯಬಯಸುವುದಿಲ್ಲ. ಟ್ರಾಕ್ಟರನ್ನು ಕಂಡಿರುವ ಯಾವನೊಬ್ಬನಾದರೂ ಹೀಗೆ...."

"ನಾವು ಹಲವಾರು ಟ್ರಾಕ್ಟರುಗಳನ್ನು ನೋಡಿದ್ದೇನೆ; ಆದರೆ, ಅವುಗಳಲ್ಲಿ ಒಂದಾದರೂ ಈ ವರೆಗೆ ಹೂಡಿರುವುದನ್ನು ಮಾತ್ರ ಕಂಡಿಲ್ಲ" ಹಳ್ಳಿಗರೆಲ್ಲರೂ ನಡುವೆ ಕೂಗಿದರು.

"ಓ, ಹಾಗಾದರೆ, ನೀವು ನಾಳೆಯ ದಿನ ಒಂದು ಸಾಲನ್ನು ಕೋಣಗಳಿಗಿಂತಲೂ ಉತ್ತಮ ರೀತಿಯಲ್ಲಿ ಟ್ರಾಕ್ಟರು ಹೂಡುವುದನ್ನು ಕಾಣುವಿರಂತೆ".

"ಸಾಹೇಬರೇ, ಒಂದು ಸಾಲನ್ನು ಮತ್ತು ಒಂದು ಇಡಿ ಗದ್ದೆಯನ್ನು ಹೂಡುವುದರಲ್ಲಿ ತುಂಬ ಅಂತರವಿದೆ. ಗದ್ದೆಯನ್ನು ಉಳುವಾಗ ಕೊನೆಯ ಒಂದು ಹತ್ತು ಸಾಲು ಬಹಳ ಕಠಿಣ ಕೆಲಸವಾಗಿದೆ"

"ನಾವು ಇಡೀ ಗದ್ದೆಯನ್ನು ಟ್ರಾಕ್ಟರಿನಿಂದ ಹೂಡುತ್ತಾ ಬಂದರೆ, ಎಲ್ಲಾ ಗ್ರಾಮಗಳಿಗೂ ಅದನ್ನು ಹೇಗೆ ತೋರಿಸಬಹುದು? ಒಂದು ವೇಳೆ, ನಾನು ಅದಕ್ಕೆ ಒಪ್ಪಿದರೂ, ಇಡಿ ಗದ್ದೆಯೆಂಬುದೇ ಇಲ್ಲದಿರಲಾರದು; ಎಲ್ಲ ಗದ್ದೆಗಳು ಈಗಾಗಲೇ ಉತ್ತು ಬಿತ್ತಲ್ಪಟ್ಟಿವೆಯಲ್ಲ?"

"ಓ, ಕೃಷಿಸಾಹೇಬರೇ, ಇಲ್ಲಿ ಪಲಾಶ ಮರದಡಿಯಲ್ಲಿರುವ ನನ್ನ ಗದ್ದೆಯು

(ಐನೇ ಪುಟ ನೋಡಿರಿ)

ಓದುಗರೊಡನೆ ಎರಡು ಮಾತು

ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಈಗ ೧೭೫ ವರ್ಷಗಳಿಂದ ನಡೆಯುತ್ತಿರುವ ಪ್ರಜಾತಂತ್ರದ ಮಹಾಪ್ರಯೋಗವು ಇತರ ಎಷ್ಟೋ ದೇಶಗಳಿಗೆ ನಿದರ್ಶನ, ಸ್ಫೂರ್ತಿ. ಹೀಗಿರುವಾಗ ಆದರ್ಶವೆಂದು ನಾವು ನಮ್ಮ ನಮ್ಮ ದೇಶಗಳಲ್ಲಿ ಒಪ್ಪಿಕೊಂಡಿರುವ ವಾದ, ರಾಜಕೀಯ ಪದ್ಧತಿ ಮತ್ತು ಜೀವನ ಮಾರ್ಗದಲ್ಲಿರುವ ಹುಳುಕುಗಳನ್ನು, ಅದು ಹಿಟ್ಲರ್‌ಶಾಹಿ ಮತ್ತು ಸಾಮ್ಯವಾದಿ ಅಧಿಕಾರಶಾಹಿಯ ಅನಂತರದ ಪ್ರಪಂಚದಲ್ಲಿ ಇದಿರಿಸಬೇಕಾದ ದುಷ್ಟ ಶಕ್ತಿಗಳ ದೆಸೆಯಿಂದ ಪರಿಣತವಾದ ಒಗೆಯನ್ನು, ಬದಲಾವಣೆಯಾಗುತ್ತಿರುವ ಸನ್ನಿವೇಶದಲ್ಲಿ ಅದರ ಆಂತರಿಕ ಪೌರ್ಬಲ್ಯವನ್ನು ಬಹಳ ವಿವೇಚನಾಪೂರ್ವಕವಾಗಿ ವಿಶ್ಲೇಷಿಸುವ

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ವಿಚಾರವಂತರಿಗೆ ಇದು ಒಂದು ಔತಣ.

ಬರೆದವರು: **ಜಾನ್ ಡ್ಯೂಯಿ**

ಅನುವಾದಕ: ಕು ಶಿ. ಹರಿದಾಸ ಭಟ್ಟ

ಪುಟಗಳು: ೮ + ೧೧೮. ಬೆಲೆ. ಎರಡು ರುಪಾಯಿ

ಇಂದೇ ಬರೆಯಿರಿ

ನವಯುಗ ಎಂಟರ್‌ಪ್ರೈಸಸ್, ಲಿಮಿಟೆಡ್
ನವಯುಗ ಪ್ರೆಸ್, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ನಿರರ್ಥಕ ನಷ್ಟಕ್ಕೆ ನಿರೋಧ:

ನೆರೆ ನಿಯಂತ್ರಣಕ್ಕೆ ಅಮೂಲ್ಯ ಅಸ್ತಿಭಾರ

ಭಾರತವು ವಿಶಾಲವಾದ, ಗುಡ್ಡಕಾಡುಗಳಿಂದಲೂ ಹಸನು ಭೂಮಿಯಿಂದಲೂ ನದಿನದಗಳಿಂದಲೂ ಕೂಡಿಕೊಂಡಿರುವ ರಾಷ್ಟ್ರವಾಗಿದೆ. ದೊಡ್ಡ ದೊಡ್ಡ ಪರ್ವತ ಶ್ರೇಣಿಗಳಲ್ಲಿ ಅನೇಕ ನದಿಗಳು ಉದ್ಭವಿಸಿ ವಿರಾಟ್ ಸ್ವರೂಪವನ್ನು ಧರಿಸಿ ದೇಶದ ತಗ್ಗು ಭಾಗದಲ್ಲಿ ಸಮೃದ್ಧವಾದ ಬಯಲುಗಳನ್ನು ನಿರ್ಮಿಸಿ ಸಮುದ್ರದೆಡೆಗೆ ಹರಿಯುತ್ತವೆ ಅಷ್ಟಲ್ಲದೆ, ಅಲ್ಲಲ್ಲಿರುವ ಗುಡ್ಡಬೆಟ್ಟಗಳಿಂದಲೂ ಚಿಕ್ಕ ದೊಡ್ಡ ನದಿಗಳು ಹುಟ್ಟಿ ವಿಶಾಲ ಸಾಗರವನ್ನು ಕೂಡುತ್ತವೆ. ತೀರಾ ದೊಡ್ಡ ನದಿಗಳನ್ನು ಬಿಟ್ಟರೆ, ಉಳಿದ ಹೆಚ್ಚಿನ ಸಣ್ಣ ನದಿಗಳು ವರ್ಷದಲ್ಲಿ ಮಳೆಗಾಲದ ಕೆಲವು ತಿಂಗಳುಗಳಲ್ಲಿ ನೀರಿನಿಂದ ತುಂಬಿ ಹರಿಯುತ್ತಿದ್ದರೂ ಬೇಸಗೆಯಲ್ಲಿ ಒಣಗಿ ಹೋಗುತ್ತವೆ. ಹೀಗಿದ್ದರೂ ಚಿಕ್ಕ ನದಿಗಳು ಗುಡ್ಡಗಳಲ್ಲಿ ಹೆಚ್ಚಾಗಿ ಸುರಿಯುವ ನೀರನ್ನು ಹೊತ್ತು ತರುವುದರಿಂದ, ಅವೂ ಬಯಲುಭಾಗದಲ್ಲಿ ನೆರೆಯ ಹಾವಳಿಯನ್ನು ಮಾಡುತ್ತವೆ. ಇವುಗಳ ಉಪದ್ರವಗಳಿಗಿಂತ ದೊಡ್ಡ ನದಿಗಳ ಪ್ರವಾಹವು ಮೇರೆಮೀರಿ, ಕೆಲವೊಮ್ಮೆ ಅಪಾಯ ಮಟ್ಟವನ್ನೂ ಮೀಕ್ಕಿ ಎರಿ ಬಯಲಿನ ಪೈರುಪಚ್ಚೆಗಳಿಗೂ ಮನುಷ್ಯ ಜೀವಿಗಳಿಗೂ ಜಾನುವಾರುಗಳಿಗೂ ಹಾನಿಯನ್ನುಂಟು ಮಾಡುತ್ತವೆ

ಹೀಗೆ ಪ್ರವಾಹಗಳ ಉಪಟಳವು ಹಲವೆಡೆಗೆ ಗಂಡಾಂತರಕಾರಿಯಾಗಿದೆ. ಒಂದು ವರ್ಷದಲ್ಲಿ ಅದೆಷ್ಟೋ ಮನೆಗಳು ಕುಸಿದು ಬೀಳುತ್ತವೆ. ಎಷ್ಟೋ ಪ್ರಾಣಿಗಳೂ ಮನುಷ್ಯರೂ ನೆರೆಯ ನೀರಿನಲ್ಲಿ ಸಿಕ್ಕಿಬಿದ್ದು ನಾಶವಾಗುತ್ತಾರೆ. ಸಾವಿರಾರು ಎಕ್ರೆಗಳಷ್ಟು ಭೂಮಿಯಲ್ಲಿ ನೆಟ್ಟ ಪೈರು ಅಗೆಗಳು ನಿರ್ಮೂಲವಾಗಿ ಹೋಗುತ್ತವೆ. ಕೆಲವೊಮ್ಮೆ ಏರಿದ ನೀರು ಕೆಲವು ವಾರಗಳ ವರೆಗೂ ಇಳಿಯುವುದೇ ಇಲ್ಲ. ಇಂತಹ ಅಪಾಯಕಾರಿ ಪ್ರವಾಹಗಳನ್ನು ಮಾನವನು ಅದೆಷ್ಟು ನಿಯಂತ್ರಣದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದರೂ ಸಾಲದು.

ಕಳೆದ ಆರು ವರ್ಷಗಳ ಕಾಲದಲ್ಲಿ ಭಾರತದಲ್ಲಿ ಇಂತಹ ಪ್ರವಾಹಗಳ ದೆಸೆಯಿಂದಾಗಿ ಸುಮಾರು ಮುನ್ನೂರು ಕೋಟಿ ರೂಪಾಯಿಗಳಷ್ಟು ಹಾನಿ ಸಂಭವಿಸಿದೆ ಎಂದು ಅಂದಾಜು ಹಾಕಿದ್ದಾರೆ. ವಾಸ್ತವಿಕವಾಗಿ ಈ ಮೊತ್ತವು ಮತ್ತೂ ಹೆಚ್ಚಿರುವುದು ಸಂಭವನೀಯ. ಇದರಿಂದಾಗಿ, ಮಾನವರು ಹಾಗೂ ಪ್ರಾಣಿಗಳ ಸಾವುನೋವಿನ ಜೊತೆಗೆ ಸುಮಾರು ೨೭೦ ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ದವಸ ಧಾನ್ಯಗಳು ಹಾಗೂ ಅಸ್ತಿ ಪಾಸ್ತಿಗಳಿಗೆ ನಷ್ಟ ಸಂಭವಿಸಿರುತ್ತದೆ ಅಂಕೆಸಂಖ್ಯೆಗಳಲ್ಲಿ ಇದೇನೂ ದೊಡ್ಡ ಮೊತ್ತವೆನ್ನಲಾಗದಿದ್ದರೂ ಸತ್ಯಸ್ಥಿತಿಯು ತುಂಬ ಚಿಂತನೀಯವಾಗಿದೆ ಈ ಹಾನಿಯು ಮಹತ್ತರದಿದ್ದು ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ದೇಶಕ್ಕೆ ದೊಡ್ಡ ಕಂಟಕ ಪ್ರಾಯವೆನಿಸಿದೆ. ಪ್ರವಾಹಗಳಿಂದ ಅನರ್ಥನಷ್ಟವೇನೂ ಕಡಿಮೆಯಾದಲ್ಲಿ ಭಾರತೀಯ ರೈತ್ಯರು ಆದಾಯವು ಸುಮಾರು ೧೦೦ ಕೋಟಿ ರೂಪಾಯಿಗಳಷ್ಟು ಕೆಚ್ಚಿರುವುದೆಂದು ಅಂಕಸಂಖ್ಯೆಗಳ ತಜ್ಞರು ಲೆಕ್ಕಹಾಕಿದ್ದಾರೆ.

ದೇಶದ ಅಮೂಲ್ಯ ಸೊತ್ತುಗಳಿಗೆ ಹಾನಿಕಾರಕವೆನಿಸಿದ ಇಂತಹ ತುಂಬು ಪ್ರವಾಹಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ನದಿ ದಂಡೆಗಳಲ್ಲಿ ವಾಸವಾಗಿರುವವರ ಹಿತದೃಷ್ಟಿಯಿಂದ ಮಾತ್ರವಲ್ಲ, ಪ್ರತ್ಯೇಕ ದೇಶವಾಸಿಯ ಅಭಿವೃದ್ಧಿಯ ದೃಷ್ಟಿಯಿಂದಲೂ ಇದು ಅತ್ಯಮೂಲ್ಯವಾದುದು. ಏಕೆಂದರೆ. ಭಾರತವು ಒಂದು ಒಕ್ಕೂಟ. ಭಾರತದ ಯಾವುದೇ ಒಂದು ಭಾಗಕ್ಕೆ ಹಾನಿಯೊದಗಿದರೆ ಅದು ಭಾರತದ ಸಮಸ್ತ ಭಾಗಗಳಿಗೂ ಪರಿಣಾಮವನ್ನುಂಟು ಮಾಡುವುದು. ನೆರೆಯು ಬಿಹಾರದಲ್ಲಿಯಾಗಲೀ, ಬಂಗಾಳದಲ್ಲಿಯಾಗಲೀ ಅಥವಾ ಆಂಧ್ರದಲ್ಲೇ ಆಗಲೀ ಹಾನಿಯನ್ನುಂಟು ಮಾಡಿದರೆ, ಅದರಿಂದ ಮೈಸೂರಿಗರಿಗೇನು ಸಂಕಷ್ಟ ಎನ್ನುವ ಕಾಲ ಇದಲ್ಲ. ಅಖಂಡ ಭಾರತದ ಹಿತದೃಷ್ಟಿಯಿಂದ, ನೆರೆಯ ನೀರನ್ನು ಹತೋಟಿಯಲ್ಲಿಟ್ಟು ಕೊಳ್ಳುವುದು, ನದಿಯ ನೀರು ಉಕ್ಕಿ ಹರಿದು ಸುತ್ತುಮುತ್ತಲಿನ ಮನೆ ಮಠಗಳಿಗೆ, ಅಸ್ತಿಪಾಸ್ತಿಗಳಿಗೆ ಜಂಗಮ ಸ್ಥಾವರ ಪ್ರಾಣಿಕೋಟಿಗೆ ಹಾನಿಯೊದಗದಂತೆ ಮಾಡುವುದು ಅತ್ಯಗತ್ಯವೆನಿಸಿದುದು.

ಇಂತಹ ನೆರೆಗಳನ್ನು ನದಿಗೆ ಭದ್ರವಾದ ಬೃಹತ್ ಆಣೆಕಟ್ಟುಗಳನ್ನು ಕಟ್ಟಿ, ನೀರನ್ನು ತಡೆದು ನಿಲ್ಲಿಸಿ, ಅದನ್ನು ಕಾಲುವೆಗಳ ಮುಖಾಂತರ ಒಳನಾಡಿಗೆ ಒಯ್ದು ತಡೆಯಬಹುದು. ನದಿಗಳ ಇಕ್ಕಡೆಗಳಲ್ಲಿ ಬಲವಾದ ದಂಡೆಗಳನ್ನು ಕಟ್ಟಿ ನೀರು ಚುತ್ತುಮುತ್ತಲಿನ ಗದ್ದೆಗಳಿಗೆ ಹರಿಯದಂತೆ ಮಾಡಬಹುದು.

ಭಾರತ ಸರಕಾರವು ದೇಶದಾದ್ಯಂತವೂ ಈ ಪ್ರವಾಹಗಳ ನಿಯಂತ್ರಣಕ್ಕಾಗಿ ಸೂಕ್ತವೆನಿಸಿದ ಕ್ರಮಗಳನ್ನು ಸಿದ್ಧಪಡಿಸುತ್ತಿದೆ. ಕೇಂದ್ರ ಜಲ ಹಾಗೂ ವಿದ್ಯುತ್ ಸಮಿತಿಯಲ್ಲಿ ೧೯೩೪ರಲ್ಲಿ ಪ್ರವಾಹ ನಿಯಂತ್ರಣಕ್ಕಾಗಿ ಪ್ರತ್ಯೇಕ ಶಾಖೆಯನ್ನು ತೆರೆಯಲಾಗಿದೆ. ಪ್ರವಾಹ ನಿಯಂತ್ರಣಕ್ಕಾಗಿ ಈ ಮೊದಲು ೫೧ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದು, ದ್ವಿತೀಯ ಸಂವತ್ಸರಿಕ ಯೋಜನೆಯಲ್ಲಿ ೬೦ ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸಲಾಗಿದೆ.

ನೆರೆಯ ಉಪಟಳದಿಂದ ಪೀಡಿತರಾದವರಿಗೆ ಪರಿಹಾರವನ್ನೊದಗಿಸುವುದೊಂದು ತುಂಬ ಕಠಿಣಕಾರ್ಯವಾಗಿದೆ. ನೆರೆಯ ನೀರಿನಲ್ಲಿ ದೋಣಿಗಳ ಮೂಲಕವಾಗಿ, ಆಕಾಶದಲ್ಲಿ ವಿಮಾನಗಳ ಮೂಲಕವಾಗಿ ಈ ಪೀಡಿತರಿಗೆ ಅನ್ನಾದಿಗಳನ್ನು ಮುಟ್ಟಿಸಲಾಗುತ್ತಿದೆ ಸಾಧ್ಯವಾದಷ್ಟು ಪ್ರಾಣಿಮಾನವರಿಗೆ ರಕ್ಷಣೆಯೊಯಲಾಗುತ್ತದೆ ಆದರೆ ಇವೆಲ್ಲವೂ ತಾತ್ಕಾಲಿಕ ಪರಿಹಾರವಾದಂತಾಯಿತು. ಅಲ್ಲದೆ, ಈ ವಿಧದಿಂದ ಪ್ರಾಣಗಳನ್ನವ್ವೇ ಉಳಿಸಲು ಪ್ರಯತ್ನಿಸಬಹುದಲ್ಲದೆ, ಹಾಳಾಗಿ ಸಮುದ್ರಕ್ಕೆ ಪ್ರವಾಹದೊಂದಿಗೆ ಓತುತ್ತಿರುವ ದವಸ ಧಾನ್ಯಗಳು ಮೊದಲಾದ ಸಾಧನ ಸಂಪತ್ತುಗಳನ್ನು ಉಳಿಸುವುದು ಸಾಹಸದ ಕಾರ್ಯ; ಅಸ್ಥಿರ ಅಸಾಧ್ಯವೆನಿಸಿದ ಕೆಲಸ. ಆದುದರಿಂದ, ಇಂತಹ ಪ್ರವಾಹಗಳನ್ನು ತಡೆಗಟ್ಟಲು ಶಾಶ್ವತವಾದ ಕ್ರಮಗಳನ್ನು ಅನುಸರಿಸುವುದು ಅಪೇಕ್ಷಣೀಯ ಪ್ರವಾಹ ಪೀಡಿತರಿಗೆ ಪರಿಹಾರವೀಯುವ ಕಾರ್ಯವನ್ನು ಸುಗಮವಾಗಿ ನಡೆಸಲು ಅನುಕೂಲವಾಗುವಂತೆ ತುರ್ತಿನ ಪರಿಹಾರ ಸಂಸ್ಥೆಯ ಯೋಜನೆಯೊಂದನ್ನು ಭಾರತ ಸರಕಾರವು ಸಿದ್ಧಪಡಿಸಿದೆ.

ಇಂತಹ ತುರ್ತಿನ ಪರಿಹಾರ ಸಂಸ್ಥೆಯಲ್ಲಿ ಕೇಂದ್ರದಿಂದ ಜಿಲ್ಲಾ ಮಟ್ಟದ ವರೆಗೆ ಕೆಲಸ ಮಾಡುವುದಕ್ಕೋಸ್ಕರವಾಗಿ ಮೂರು ವಿಭಾಗಗಳಿರುತ್ತವೆ. ಕೇಂದ್ರ ಗೃಹಾಡಳಿತ ಮಂತ್ರಿಶಾಖೆಯ ಅಧೀನದಲ್ಲಿ ಈ ಸಂಸ್ಥೆಯು ಕೆಲಸಮಾಡುವುದು. ಸರಕಾರದ ತುರ್ತಿನ ಪರಿಹಾರ ಸಂಬಂಧವಾದ ಕಾರ್ಯನೀತಿಯನ್ನು ಅನುಷ್ಠಾನಕ್ಕೆ ತರುವುದು, ರಾಜ್ಯಗಳ ಪ್ರಯತ್ನಗಳನ್ನು ಸಮನ್ವಯಗೊಳಿಸುವುದು ಮತ್ತು ಪ್ರವಾಹಪೀಡಿತರಿಗೆ ಪರಿಹಾರ ಸೇವೆ ಹಾಗೂ ಸರಬರಾಜುಗಳನ್ನು ಒದಗಿಸುವುದು ಈ ಕೇಂದ್ರ ತುರ್ತಿನ ಪರಿಹಾರ ಸಂಸ್ಥೆಯ ಕಾರ್ಯಗಳಾಗಿವೆ.

ಪ್ರತಿವರ್ಷವೂ ಭಾರತದ ಒಂದಲ್ಲ ಒಂದು ಮೂಲೆಯಲ್ಲಿ ಅತಿವೃಷ್ಟಿಯ ಅನಾಹುತವು ಇದ್ದೇ ಇರುತ್ತದೆ. ದಕ್ಷಿಣ ಭಾರತಕ್ಕಿಂತಲೂ ಉತ್ತರ ಭಾರತದಲ್ಲಿಯೇ ಈ ನದಿಯ ಪ್ರಕೋಪವು ಅಧಿಕತರವಾಗಿದೆಯೆನ್ನಬಹುದು. ಉತ್ತರದಲ್ಲಿ ಜಗತ್ತಿನಲ್ಲಿಯೇ ಅತ್ಯುನ್ನತವೆನಿಸಿದ ಹಿಮಾಲಯಾ ಪರ್ವತ ಶ್ರೇಣಿಗಳಿರುವುದೇ ಇದಕ್ಕೆ ಕಾರಣ. ದಕ್ಷಿಣದಲ್ಲಿಯೂ ನೆರೆಯ ಹಾನಿ ಇಲ್ಲವೆಂದಲ್ಲ. ಇಂತಹ ಹಾನಿಗಳು ಬಂದ ನಂತರ ಪರಿ

(೧೦ನೇ ಪುಟ ನೋಡಿರಿ)



ಅರಳಿದ ಪುಷ್ಪದಂತೆ
ತಾಜಾ ಮತ್ತು ಕಾಂತಿಯುಕ್ತರಾಗಿ ಇರಿ...

ಹಮಾಮ್‌ನ ಹೊಸ ಪರಿಮಳದಿಂದ ಕೂಡಿದೆ.. ಮತ್ತು ದೀರ್ಘಕಾಲ ಒದಗುತ್ತದೆ!

ಹಮಾಮ್
ಮೈ ಸಾಬೂನನ್ನು ಬಳಸಿ

ದಿ ತಾತಾ ಆಯಿಲ್ ಮಿಲ್ಸ್ ಕಂಪನಿ ಲಿಮಿಟೆಡ್
A TATA PRODUCT
ತಾತಾ ತಯಾರಿಕೆ

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ನೀವು ತಪ್ಪು ತಿಳಿದಿದ್ದೀರಿ!

ಕೊಲಂಬಸನು ಅಮೆರಿಕವನ್ನು ಶೋಧಿಸಲಿಲ್ಲ!

ಇದೀಗ ಕೇವಲ ಕೆಲವೇ ಶತಮಾನಗಳಿಂದ ಮಾತ್ರ ಜಗತ್ತಿನ ಜನರ ತಿಳುವಳಿಕೆಗೆ ಬಂದು, ಎಲ್ಲರ ಮನೆಮಾತಾಗುವಂತೆ ಕೀರ್ತಿವೆತ್ತ ಪ್ರಮುಖ ರಾಷ್ಟ್ರಗಳಲ್ಲಿ ಅಮೆರಿಕದ ಸಂಯುಕ್ತ ರಾಷ್ಟ್ರವೂ ಒಂದಾಗಿದೆ ಈ ರಾಷ್ಟ್ರವು ದೊಡ್ಡ ಭೂಭಾಗವಾದ ಅಮೆರಿಕದ ಒಂದು ಅಂಶವಷ್ಟೇ. ಈ ಭೂಖಂಡವು ಪಶ್ಚಿಮಾರ್ಧ ಗೋಲದಲ್ಲಿದ್ದು ಉತ್ತರದಿಂದ ದಕ್ಷಿಣದ ತೀರಾ ಕೊನೆಯ ಭಾಗಗಳವರೆಗೂ ಹಬ್ಬಿದೆ. ಅಲ್ಲದೆ ಮಧ್ಯೆ ಕೇವಲ ಭೂ ಸಂಧಿನಿಂದ ಎರಡು ಪ್ರತ್ಯಪ್ರತ್ಯೇಕ ಭಾಗಗಳು ಕೂಡಿದಂತಿವೆ. ಭೌಗೋಲಿಕ ದೃಷ್ಟಿಯಿಂದ ಉತ್ತರ ಹಾಗೂ ದಕ್ಷಿಣ ಅಮೆರಿಕ ಖಂಡಗಳು ಒಂದನ್ನೊಂದು ಸರಿಯಾಗಿ ಹೋಲುತ್ತವೆ. ಜಗತ್ತಿನ ಜನರಿಗೆ ಈ ವಿಶಾಲ ಭೂಮಿಯ ಪ್ರಪ್ರಥಮ ಪರಿಚಯವನ್ನು ಮಾಡಿಕೊಟ್ಟವನು ಕೊಲಂಬಸನೆಂಬ ನಾವಿಕನೆಂದು ಆತನನ್ನು ವಿಶ್ವವೇ ಇಂದು ಕೊಂಡಾಡುತ್ತಿದೆ. ಆದರೆ, ನಿಜವಾಗಿಯೂ ಅಮೆರಿಕಾ ಭೂ ಖಂಡವನ್ನು ಕಂಡುಹಿಡಿದವನು ಕೊಲಂಬಸನಲ್ಲವೆಂದು ನಿಮಗೆ ತಿಳಿದರೆ, ಆಶ್ಚರ್ಯಚಕಿತರಾಗಬೇಕಾದೀತು.

'ಹಿಂದೂ ಅಮೆರಿಕಾ" ವೆಂಬ ಗ್ರಂಥವನ್ನು ಬರೆದ ಶ್ರೀ ಚಮನ್ ಲಾಲ್ ಮತ್ತು ಕೆಲವು ಹೆಸರಾಂತ ಪಾಶ್ಚಾತ್ಯ ತಜ್ಞರು ಕೊಲಂಬಸನು ಮೊದಲಿಗೆ ಅಮೆರಿಕದ ಶೋಧನೆಯನ್ನು ಮಾಡಿದವನಲ್ಲ; ಭಾರತೀಯನಾದ ಹಿಂದೂ ಧಾರ್ಮಿಕನೊಬ್ಬನೆಂದು ಒಪ್ಪಿದ್ದಾರೆ ಮಧ್ಯ ಅಮೆರಿಕಾ ಮೆಕ್ಸಿಕೊಗಳ ಸಂಸ್ಕೃತಿಗೂ ಭಾರತೀಯ ಸಂಸ್ಕೃತಿಗೂ ಕಂಡುಬರುವ ಸಾಮ್ಯದಿಂದಲೇ ಇದು ಸಿದ್ಧವಾಗುವುದೆಂದು ಕೆಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಪ್ರೊ. ಜಾನ್ ಫ್ರೇಯರರು ಹೇಳುತ್ತಾರೆ.

ಮೆಕ್ಸಿಕೋ, ಯುಕಟಾನ್ ಮತ್ತು ಮಧ್ಯ ಅಮೆರಿಕಾಗಳ ಧಾರ್ಮಿಕ ಕಟ್ಟುಪಟ್ಟಳೆಗಳು, ಅವರ ಶಿಲ್ಪಕಲೆ, ಪಂಚಾಂಗ, ಕಲೆ ಮತ್ತಿತರ ಹಲವಾರು ಸಂಗತಿಗಳನ್ನು ಸ್ಪೆನಿಷರು ಪ್ರಪ್ರಥಮವಾಗಿ ಅಮೆರಿಕವನ್ನು ಕಂಡು ಹಿಡಿದಾಗ ನೋಡಿ ಆಸ್ಯಾದ ನಂಬಿಕೆಗಳು ಹಾಗೂ ಆಸ್ಯದ ನಾಗರಿಕತೆಗಳನ್ನು ಗಮನಿಸಿ ಆಶ್ಚರ್ಯಚಕಿತರಾಗಿದ್ದರು. ನಿಷ್ಪಕ್ಷಪಾತಿ ವೀಕ್ಷಕರು ಈ ಕಾರಣದಿಂದಾಗಿ, ಕ್ರಿಸ್ತಾಬ್ದದ ಆರಂಭ ಕಾಲದಿಂದಲೂ ಆಸ್ಯಾ ಮತ್ತು ಅಮೆರಿಕಗಳ ನಡುವೆ ಸಂಪರ್ಕವಿದ್ದಿತೆಂದು ದೃಢವಾಗಿ ನಂಬಿದ್ದರು.

ಸಾನ್ ಫ್ರಾನ್ಸಿಸ್ಕೋವಿನ ಶ್ರೀ ಎಡ್ವರ್ಡ್ ಸಿ ವಿನಿಂಗ್‌ರವರು ತಮ್ಮದೊಂದು ಹೊತ್ತಗೆಯಲ್ಲಿ ಕ್ರಿಸ್ತಾಬ್ದದ ಪ್ರಾರಂಭಿಕ ಕಾಲದಲ್ಲಿ ಮಧ್ಯ ಅಮೆರಿಕಾದಲ್ಲಿ ಹಾಗೂ ಮೆಕ್ಸಿಕೋವಿನಲ್ಲಿ ಬೌದ್ಧಧರ್ಮ ಮತ್ತು ಭಾರತೀಯ ಸಂಸ್ಕೃತಿಯು ಹರಡಿಕೊಂಡಿತ್ತೆಂಬುದನ್ನು ದೃಢಪಡಿಸಲು ಮೂವತ್ತೈದು ಗಣನೀಯ ಕಾರಣಗಳನ್ನು ಕೊಟ್ಟಿದ್ದಾರೆ. ಅವರ ಅಭಿಪ್ರಾಯದಂತೆ, ಸ್ಪೆನಿಷರು ಅಮೆರಿಕದಲ್ಲಿ ಕಾಲಿಡುವುದಕ್ಕೆ ಬಹುಕಾಲ ಹಿಂದೆಯೇ ಹಿಂದೂ ಮತ್ತು ಬೌದ್ಧಧರ್ಮಗಳು ಅಲ್ಲಿ ಭದ್ರವಾಗಿ ನೆಲೆಯೂರಿದ್ದುವೆಂದು ಸಾಧಿಸುವುದು ಸಾಧ್ಯ.

ಆದರೆ, ಈ ಒಂದು ಆಶ್ಚರ್ಯಕಾರಕ ಸಾಧನೆಗೆ ಭಾರತೀಯ ಲಿಖಿತ ಸಾಧನಗಳು ದೊರೆಯದಿರುವುದು ಒಂದು ದೊಡ್ಡ ಆಘಾತವಾಗಿದೆ. ಕ್ರಿಸ್ತಾಬ್ದದ ಪ್ರಾರಂಭಿಕ ಸಮಯದಲ್ಲಿ ಸಿಂಹಳ, ದಕ್ಷಿಣ ಭಾರತ—ಮುಖ್ಯವಾಗಿ ಕಾಂಚೀಪುರ-ವಧ್ಯ ಮತ್ತು ಉತ್ತರ ಭಾರತೀಯ ಬೌದ್ಧ ಸನ್ಯಾಸಿಗಳು ನೆರೆನಾಡುಗಳಾದ ಚೀನಾ, ಜಾಪಾನ್, ಟಿಬೇಟ್, ಮಂಗೋಲಿಯಾ, ಬರ್ಮಾ ಮೊದಲಾದ ದೇಶಗಳಲ್ಲಿ ಬೌದ್ಧ ಮತವನ್ನು ಪ್ರಚಾರಮಾಡುವುದರಲ್ಲಿ ತಲ್ಲೀನರಾಗಿದ್ದರೆಂದು ನಿಸ್ಸಂದಿಗ್ಧವಾಗಿ ತಿಳಿದುಬಂದಿದೆ.

ಭಾರತವು ಬೌದ್ಧ ಮತದ ತವರೂರಾದರೂ, ಈ ಸಂಬಂಧದಲ್ಲಿ ಅಧಿಕ ಸಂಖ್ಯಾತ ಸಾಹಿತ್ಯ ನಮಲ್ಲಿದ್ದರೂ ಅತ್ಲಾಂಟಿಕ ಮತ್ತು ಶಾಂತ ಸಾಗರಗಳ ಗಡಿಗಳನ್ನು ದಾಟಿ ಬೌದ್ಧಮತ ಪ್ರಚಾರವಾದ ಬಗೆಗೆ ಯಾವ ಖಚಿತತೆಯೂ ನಮ್ಮಲ್ಲಿಲ್ಲ. ಅಥವಾ ಯಾವುದೇ ಭಾರತೀಯ ಸಾಹಿತ್ಯಗಳಲ್ಲಿ ಬೌದ್ಧ ಸನ್ಯಾಸಿಗಳು ಶಾಂತ ಸಾಗರದ ದ್ವೀಪಸ್ತೋಮಗಳನ್ನೂ ಅಮೆರಿಕವನ್ನೂ ಸಂದರ್ಶಿಸಿ ಅಲ್ಲಿ ಬುದ್ಧನ ಸಂದೇಶಗಳನ್ನು ಪ್ರಚಾರ ಮಾಡಿದರೆಂಬ ಸುಳಿವು ಸಹ ದೊರೆಯುವುದಿಲ್ಲ. ಆದರೆ, ಬೌದ್ಧ ಸನ್ಯಾಸಿಗಳು ಕ್ರಿ. ಶ. ೫ನೆಯ ಶತಮಾನದ ಸುಮಾರಿಗೆ ಅಮೆರಿಕವನ್ನು ಶೋಧಿಸಿ, ಅಲ್ಲಿ ತಮ್ಮ ಧರ್ಮವನ್ನು ಪ್ರಚಾರ ಮಾಡಿದ್ದರೆಂದೆಂಬ ಒಂದು ಆಧಾರವು ಚೀನೀಯ ವೃತ್ತೇತಿಹಾಸದಿಂದ ತಿಳಿಯುವುದು ನಮ್ಮ ಸೌಭಾಗ್ಯವೆಂದೇ ಹೇಳಬೇಕು. ಇದಲ್ಲದೆ ಅದೇ ಸಮಯದಲ್ಲಿ ಮಧ್ಯ ಅಮೆರಿಕಾ ಹಾಗೂ ಮೆಕ್ಸಿಕೊ ದೇಶಗಳಲ್ಲಿ ಬೌದ್ಧ ಸಂಘವೊಂದು ಗೆಯ್ದ ಚಟುವಟಿಕೆಗಳನ್ನು ಇಬ್ಬರು ಅಮೆರಿಕದ ಪ್ರಖ್ಯಾತ ತಜ್ಞರೂ ಇಬ್ಬರು ಕೆನೆಡದ ತಜ್ಞರೂ ಬೆಳಕಿಗೆ ತಂದಿದ್ದಾರೆ. ಇವರ ಈ ಹೇಳಿಕೆಯು ಕೇವಲ ಚೀನೀಯ ವೃತ್ತೇತಿಹಾಸವನ್ನು ಅವಲಂಬಿಸಿಕೊಂಡಿರದೆ ಕ್ರಿ ಶ-೫ನೇಯಶತಮಾನದನಂತರ ಮೆಕ್ಸಿಕೋ ಮತ್ತು ಮಧ್ಯ ಅಮೆರಿಕಾಗಳ ಜನರ ಸಾಂಪ್ರದಾಯ, ಧಾರ್ಮಿಕ ವಿಧಿಗಳನ್ನೂ ಹೊಂದಿಕೊಂಡಿದೆ.

ಕೆಲಿಫೋರ್ನಿಯಾದ ಪ್ರೊ. ಜಾನ್ ಫ್ರೇಯರರ ಅಭಿಪ್ರಾಯದಂತೆ ಸುಮಾರು ಕ್ರಿ. ಶ. ೪೫೫ರಲ್ಲಿ ಮಧ್ಯ ಅಮೆರಿಕಾ ಮತ್ತು ಮೆಕ್ಸಿಕೋಗಳಲ್ಲಿ ಬುದ್ಧನ ಸಂದೇಶಗಳನ್ನು ಉಪದೇಶಿಸುವ ಸಲುವಾಗಿ ಮೂಲತಃ ಅಫಘಾನಿಸ್ತಾನದ ಕಾಬೂಲಿನ ನಿವಾಸಿಗಳಾದ ನಾಲ್ವರು ಸಾಧುಗಳೊಂದಿಗೆ ಹ್ಯೂಶೇನ್ ಎಂಬ ಚೀನೀಯ ಸಂನ್ಯಾಸಿಯು ಬಂದನು. ಆದರೆ, ಯಾವುದೋ ಒಂದು ಅಜ್ಞಾತ ಕಾರಣದ ದೆಸೆಯಿಂದಾಗಿ ಈ ಸಂಗಡವು ಎರಡು ವಿಭಾಗಗಳಾಗಿ ಒಡೆದು ಅವು ಪ್ರತಿ ಪ್ರತ್ಯೇಕವಾಗಿ ಮಧ್ಯ ಅಮೆರಿಕದಲ್ಲಿ ಕಾಲಿಟ್ಟವು. ಅವರು ತಮ್ಮೊಂದಿಗೆ ಸುಮಾರು ೪೦ ವರ್ಷಗಳಿಗೆ ಸಾಕಾಗುವಷ್ಟು ಪ್ರಚಾರ ಸಾಮಗ್ರಿಗಳನ್ನು ತಂದಿದ್ದರು. ಈ ಸಂಗಡದ ಮುಖಂಡನಾಗಿದ್ದ ಹ್ಯೂಶೇನನು ಏಕಾಕಿಯಾಗಿ ಪ್ರಯಾಣ ಮಾಡಿದ್ದು, ತಾನು ಹೊರಟ ೪೦ ವರ್ಷಗಳ ನಂತರ ಎಂದರೆ, ಕ್ರಿ. ಶ. ೪೯೫ರಲ್ಲಿ ಚೀನಕ್ಕೆ ಹಿಂದಿರುಗಿ ಬಂದನು. ಈ ಸಂಗಡವು ಕಾಬೂಲಿನಿಂದ ಚೀನಕ್ಕೆ ನೆಲ ಮಾರ್ಗವಾಗಿ ಪ್ರ

(೧೯ನೇ ಪುಟ ನೋಡಿರಿ)

ಶೇಕಡಾ $4\frac{1}{4}$ ಬಡ್ಡಿಯುಳ್ಳ

ಮೈಸೂರು ರಾಜ್ಯದ ಅಭಿವೃದ್ಧಿ ಸಾಲ - 1969

ಸಾಲದ ಮೊಬಲಗು: 300 ಲಕ್ಷ ರೂಪಾಯಿಗಳು.

ಸಾಲದ ಅಸಲು ಬೆಲೆ: 100 ರೂಪಾಯಿಗೆ 98 · 75 ರೂಪಾಯಿ.

ವಾಪಸು ಕೊಡುವ ತಾರೀಖು: 16ನೆಯ ಸೆಪ್ಟೆಂಬರ್ 1969.

ಹಣ ಪಾವತಿ ಮಾಡುವ ಅವಧಿಯು ಮುಂದಾಗಿಯೇ ಮುಗಿದು ಹೋದ ಹೊರತು, 16ನೆಯ ಸೆಪ್ಟೆಂಬರ್ 1957ರಿಂದ 18ನೆಯ ಸೆಪ್ಟೆಂಬರ್ 1957 ವರೆಗೂ (ಸೇರಿ) ಇರುತ್ತದೆ.

ಹಣವನ್ನು ನಗದಾಗಿ ಪಾವತಿ ಮಾಡಬಹುದು; ಇಲ್ಲವೇ 1958ನೆಯ ಇಸವಿಯ ಶೇಕಡ 3ರ ಮೈಸೂರು ಸರ್ಕಾರದ ಸಾಲಪತ್ರಗಳ ಅಡಮಾನ ರೂಪವಾಗಿ ಪಾವತಿ ಮಾಡಬಹುದು.

1958ನೆಯ ಇಸವಿಯ ಶೇಕಡ 3ರ ಮೈಸೂರು ಸರ್ಕಾರದ ಸಾಲ ಪತ್ರಗಳನ್ನು 100 ರೂಪಾಯಿಗಳ ಸಾಲದ ಮುಖ ಬೆಲೆಗೆ 99 . 75 ರೂಪಾಯಿಗಳಂತೆ ಸ್ವೀಕರಿಸಲಾಗುವುದು.

ಪ್ರಕಟಿಸಿದ ಮೊಬಲಗಿಗಿಂತ ಶೇಕಡ 10ರಷ್ಟಿನ ವರೆಗೆ ಹೆಚ್ಚಿನ ಚಂದಾಹಣವನ್ನು ಇಟ್ಟುಕೊಳ್ಳಲು ಸರ್ಕಾರಕ್ಕೆ ಅಧಿಕಾರವಿರುತ್ತದೆ. ಪಾವತಿಯಾದ ಒಟ್ಟು ಮೊಬಲಗು 330 ಲಕ್ಷ ರೂಪಾಯಿಗಳಿಗಿಂತಲೂ ಮೀರಿದ ಪಕ್ಷದಲ್ಲಿ, ನಗದು ಹಣ ಪಾವತಿ ಮಾಡಿರುವವರಿಗೆ ಸಾಲವನ್ನು ಖಂಡಾಂಶವಾಗಿ ಹಂಚಲಾಗುವುದು. ಸಾಲದ ಅರ್ಜಿಯ ಜತೆಗೆ ಅವರು ಕೊಟ್ಟಿರುವ ಮಿಕ್ಕ ಮೊಬಲಗನ್ನು ಬಡ್ಡಿಯಿಲ್ಲದಂತೆ ಅವರಿಗೆ ವಾಪಸು ಕೂಡಲಾಗುವುದು.

ಈ ಸಾಲದ ಮೊಬಲಗನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿರುವ ಅಭಿವೃದ್ಧಿ ಕಾರ್ಯಗಳಿಗಾಗಿ ವಿನಿಯೋಗಿಸಲಾಗುತ್ತದೆ.

ಈ ಸಾಲಕ್ಕೆ ಸಾಲಿಯಾದ ಶೇಕಡ $4\frac{1}{4}$ರಂತೆ 16ನೆಯ ಸೆಪ್ಟೆಂಬರ್, 1957ರಿಂದ ಬಡ್ಡಿ ಕೊಡಲಾಗುತ್ತದೆ.

ಬಡ್ಡಿಯನ್ನು 6 ತಿಂಗಳಿಗೊಂದು ಸಲ 16ನೆಯ ಮಾರ್ಚ ಮತ್ತು 16ನೆಯ ಸೆಪ್ಟೆಂಬರ್ ಈ ದಿನಗಳಲ್ಲಿ ಆದಾಯ ತೆರಿಗೆಯನ್ನು ಕಳೆದು ಪಾವತಿ ಮಾಡಲಾಗುವುದು.

ಸಾಲದ ಅರ್ಜಿಗಳು 100 ರೂಪಾಯಿಗಳಿಗೆ ಅಥವಾ ಅದರ ಗುಣಕ ಪ್ರಮಾಣಗಳಿಗೆ ಅನ್ವಯಿಸುವಂತೆ ಇರಬೇಕು.

ಸಾಲದ ಅರ್ಜಿಗಳನ್ನು ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಸ್ವೀಕರಿಸಲಾಗುವುದು:—

(a) ಬೆಂಗಳೂರು, ಬೊಂಬಾಯಿ, ಕಲ್ಕತ್ತಾ, ಮದ್ರಾಸು ಮತ್ತು ನಿವದೆಹಲಿ ನಗರಗಳಲ್ಲಿರುವ ಇಂಡಿಯಾದ ರಿಸರ್ವ್ ಬ್ಯಾಂಕಿನ ಕಚೇರಿಗಳು

(b) ಬೆಂಗಳೂರು ಬಿಟ್ಟು ಮೈಸೂರು ರಾಜ್ಯದಲ್ಲಿರುವ ಮೈಸೂರು ಬ್ಯಾಂಕಿನ ಶಾಖೆಗಳು.

(c) ಬೆಂಗಳೂರು ಮತ್ತು (b) ಭಾಗದಲ್ಲಿ ಸೂಚಿಸಿರುವ ಪ್ರದೇಶಗಳನ್ನು ಬಿಟ್ಟು, ಮೈಸೂರು ರಾಜ್ಯದಲ್ಲಿರುವ ಇಂಡಿಯಾ ಸ್ಟೇಟ್ ಬ್ಯಾಂಕಿನ ಮತ್ತು ಹೈದರಾಬಾದ್ ಸ್ಟೇಟ್ ಬ್ಯಾಂಕುಗಳ ಶಾಖೆಗಳು.

(d) ಮೇಲೆ ಸೂಚಿಸಿರುವ ಯಾವುದೇ ಬ್ಯಾಂಕಿನ ಶಾಖೆಗಳಿಲ್ಲದ ಇತರ ಮೈಸೂರು ರಾಜ್ಯದ ಪ್ರದೇಶಗಳಲ್ಲಿ ಸರ್ಕಾರಿ ತಾಲ್ಲೂಕು ಟ್ರೆಜರಿಗಳು.

ನಿರುದ್ಯೋಗಕ್ಕೆ ಪರಿಹಾರವೇನು?

ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ

ಭಾರತದ ಕೈಗಾರಿಕಾ ರಚನೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ವಿಶಿಷ್ಟವಾದ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಸಣ್ಣ ಕೈಗಾರಿಕಾ ಸಂಸ್ಥೆಗಳು ಮುಖ್ಯವಾಗಿ ನಗರ ಕ್ಷೇತ್ರಗಳಲ್ಲಿ ಕೇಂದ್ರೀಕೃತವಾಗಿದ್ದು ವಿದ್ಯುಚ್ಛಕ್ತಿ ಮತ್ತು ಯಾಂತ್ರಿಕ ಸಲಕರಣೆಗಳನ್ನು ಬಳಸಿಕೊಳ್ಳುತ್ತವೆ. ಗಾತ್ರ ಮತ್ತು ಕಾರ್ಯಾಚರಣೆಯ ವ್ಯಾಪ್ತಿಯಲ್ಲಿ ಅವು ದೊಡ್ಡ ದೊಡ್ಡ ಕೈಗಾರಿಕಾ ಸಂಸ್ಥೆಗಳಿಗಿಂತ ತೀರಾ ವಿಭಿನ್ನವಾಗಿವೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಘಟನೆ ಹಾಗೂ ಅಭಿವೃದ್ಧಿಗೆ ಮಹತ್ವ ವೀಯಲಾಗಿದೆ. ಪ್ರಥಮ ಯೋಜನಾವಧಿಯಲ್ಲಿ ಈ ಬಗ್ಗೆ ೫.೩ ಕೋಟಿ ರೂಪಾಯಿಗಳ ಹಣವನ್ನು ಒದಗಿಸಲಾಗಿತ್ತು. ದ್ವಿತೀಯ ಯೋಜನಾವಧಿಯಲ್ಲಿ ಈ ಕಾರ್ಯ ಕ್ಷೇತ್ರಕ್ಕಾಗಿ ೫೫ ಕೋಟಿ ರೂಪಾಯಿಗಳ ಹಣವನ್ನು ತೆಗೆದಿರಿಸಲಾಗಿದೆ.

ಸಣ್ಣ ಪ್ರಮಾಣದ ಕೈಗಾರಿಕೆಗಳ ಸುವ್ಯವಸ್ಥೆ ಹಾಗೂ ವಿಸ್ತರಣೆಯಲ್ಲಿ ಕಂಡು ಬಂದಿರುವ ಮುಖ್ಯ ತೊಂದರೆಗಳಲ್ಲಿ ಹಣಕಾಸಿನ ಕೊರತೆಯೂ ಒಂದಾಗಿದೆ. ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರಕಾರದವರು ಕೈಗೊಂಡ ಅತಿ ಮುಖ್ಯ ಕ್ರಮಗಳಲ್ಲಿ ಈಗಿರುವ ಸಂಸ್ಥೆಗಳಿಗೆ ಸುಲಭ ಶರತ್ತುಗಳ ಮೇಲೆ ಸಾಲ ಸೌಲಭ್ಯಗಳನ್ನು ಒದಗಿಸುವುದೂ ಒಂದಾಗಿದೆ. ದ್ವಿತೀಯ ಯೋಜನೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಹಣಕಾಸನ್ನು ಒದಗಿಸುವುದಕ್ಕಾಗಿ ಕೇಂದ್ರವು ರಾಜ್ಯ ಸರಕಾರಗಳಿಗೆ ೩೦ ಕೋಟಿ ರೂಪಾಯಿಗಳ ಹಣವನ್ನು ನೀಡುವ ಭರವಸೆಯನ್ನು ಹೊಂದಿದೆ. ರಾಜ್ಯ ಸರಕಾರಗಳು, ಸಹಕಾರ ಬ್ಯಾಂಕ್‌ಗಳು ಮತ್ತು ಅಂತಹ ಸಂಸ್ಥೆಗಳ ಸಂಪತ್ಸಾಧನಗಳಿಗೆ ಇದು ಪೂರಕವಾಗಿರುವುದು

ಭದ್ರತೆಯ ಶರತ್ತುಗಳನ್ನು ಬಹುಮಟ್ಟಿಗೆ ಶಿಥಿಲಗೊಳಿಸಿ ಸಣ್ಣ ಪಟ್ಟ ಉದ್ಯಮಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸುವ ಪ್ರಾಯೋಗಿಕ ಯೋಜನೆಯೊಂದನ್ನು ಸ್ಟೇಟ್ ಬ್ಯಾಂಕಿನವರು ಇತ್ತೀಚೆಗೆ ಪ್ರಾರಂಭಿಸಿರುವರು. ಸಣ್ಣ ಪಟ್ಟ ಕೈಗಾರಿಕೆಗಳಿಗೆ ಹಣಕಾಸನ್ನು ನೀಡುವ ವಿಚಾರದಲ್ಲಿ ಹೆಚ್ಚಿನ ಪಾತ್ರ ವಹಿಸಲು ಶಕ್ಯವಾಗುವಂತೆ ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು ಮುಂತಾದವನ್ನು ಬಲಪಡಿಸಿ ಅಭಿವೃದ್ಧಿಪಡಿಸಲಾಗುತ್ತಿದೆ. ಸಣ್ಣ ಕೈಗಾರಿಕಾ ಸಂಸ್ಥೆಗಳಿಗೆ ಸಾಲಗಳನ್ನು ನೀಡುವಾಗ ವಿಧಿಸುವ ಶರತ್ತುಗಳನ್ನು ಸರಳಗೊಳಿಸಲಾಗಿದೆ.

ಚತುರರಾದ ತಂತ್ರಜ್ಞರು ಅಥವಾ ವ್ಯವಹಾರ ಸಲಹಾಗಾರರನ್ನು ಪಡೆದುಕೊಳ್ಳುವ ಸ್ಥಿತಿಯಲ್ಲಿಲ್ಲದ ಸಣ್ಣ ಪಟ್ಟ ಕೈಗಾರಿಕೆಗಳಿಗೆ ತಾಂತ್ರಿಕ ಸಹಾಯವನ್ನು ನೀಡುವುದು, ಹಣಕಾಸಿನ ನೆರವನ್ನು ನೀಡುವುದಕ್ಕೇ ಮುಖ್ಯವಾದುದು. ಮುಂಬೈ, ಮದರಾಸು, ಕಲ್ಕತ್ತ ಮತ್ತು ದೆಹಲಿಗಳಲ್ಲಿರುವ ಕೈಗಾರಿಕಾ ವಿಸ್ತರಣಾ ಸೇನೆಯ ನಾಲ್ಕು ಪ್ರಾದೇಶಿಕ ಸಂಸ್ಥೆಗಳು ತಾಂತ್ರಿಕ ವಿಚಾರಗಳಲ್ಲಿ ಸಣ್ಣ ಕೈಗಾರಿಕಾ ಸಂಸ್ಥೆಗಳಿಗೆ ಉಚಿತ ರೀತಿಯಲ್ಲಿ ಸಲಹೆ ನೀಡುತ್ತಿವೆ.

ಮುಂದಿನ ವರ್ಷದವೇಳೆಗೆ ಪ್ರತಿ ರಾಜ್ಯದಲ್ಲಿಯೂ ಒಂದೊಂದು ಮುಖ್ಯ ಸಂಸ್ಥೆಯ ಜೊತೆಗೆ ಹೆಚ್ಚಿನ ಸಂಖ್ಯೆಯ ಸಣ್ಣ ಪಟ್ಟ ವಿಸ್ತರಣಾ ಕೇಂದ್ರಗಳೂ ಸ್ಥಾಪಿತಗೊಳ್ಳುವುವೆಂದು ನಂಬಲಾಗಿದೆ. ಇಂದು ಕೈಗಾರಿಕಾ ವಿಸ್ತರಣಾ ಸೇವಾ ಸಂಸ್ಥೆಗಳು ಅನೇಕ ರೀತಿಯಲ್ಲಿ ಸೇವೆ ಸಲ್ಲಿಸುತ್ತಿವೆ ವಿಶಿಷ್ಟ ಕೈಗಾರಿಕೆಗಳ ಸ್ಥಿತಿಗತಿಗಳ ಬಗ್ಗೆ ಅರ್ಥಿಕ ಸಮೀಕ್ಷೆ ನಡೆಸುವುದು, ಮೋಟಾರು ವಾಹನಗಳಿಗೆ ಜೋಡಿಸಿದ ಜಾಲನೆಯ ಕರ್ಮಶಾಲೆಗಳಲ್ಲಿ ಮತ್ತು ಕೇಂದ್ರಗಳಿಗೆ ಸೇರಿದ ಕರ್ಮಶಾಲೆಗಳಲ್ಲಿ ಸುಧಾರಿಸಿದ ರೀತಿಯ ಯಂತ್ರೋಪಕರಣಗಳ ಉಪಯೋಗದ ಬಗ್ಗೆ ಪ್ರತ್ಯಕ್ಷ ಪ್ರದರ್ಶನಗಳನ್ನು ಏರ್ಪಡಿಸುವುದು ಮುಂತಾದ ರೀತಿಯಲ್ಲಿ ಈ ಕೈಗಾರಿಕಾ ವಿಸ್ತರಣಾ ಸೇವಾ ಸಂಸ್ಥೆಗಳು ಸೇವೆ ಸಲ್ಲಿಸುತ್ತಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗ ಹಾಗೂ ಅಪೂರ್ಣ ಉದ್ಯೋಗವನ್ನು ನಿವಾರಿಸುವ ಬಗ್ಗೆ ನೆರವೀಯುವುದಕ್ಕಾಗಿ ಸಾಮುದಾಯಕ ಅಭಿವೃದ್ಧಿಯೋಜನಾ ಪ್ರದೇಶಗಳಲ್ಲಿ ಸಣ್ಣ ಪ್ರಮಾಣದ ಉತ್ಪಾದನಾ ಹಾಗೂ ಶಂಟೇತಿ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿವೆ.

ಮಾರಾಟದ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಕಾರ್ಪೋರೇಷನ್ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಸಣ್ಣ ಪ್ರಮಾಣದ ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳಿಗೆ ಮಾರಾಟದ ಸೌಲಭ್ಯವನ್ನು ಒದಗಿಸುವುದೇ ಈ ಕಾರ್ಪೋರೇಷನ್ನಿನ ಸ್ಥಾಪನೆಯ ಉದ್ದೇಶವಾಗಿದೆ. ಬಹುಕಾಲದ ವರೆಗೆ ಈ ವಸ್ತುಗಳು ರಾಷ್ಟ್ರೀಯ ಮಾರಾಟಕ್ಕೆ ಮುಟ್ಟಲು ತಕ್ಕ ಸಾಧನವಿಲ್ಲದೆ ಈ ವಸ್ತುಗಳ ಮಾರಾಟವು ಸ್ಥಳೀಯ ಮಾರುಕಟ್ಟೆಗೆ ಮಾತ್ರ ಮಿತಗೊಂಡಿತ್ತು. ಸಮಸ್ಯೆಗಳ ವಿವಿಧ ದೃಷ್ಟಿಕೋನಗಳನ್ನು ಅಧ್ಯಯನ ಮಾಡಿ ಮೋಟಾರ್ ವ್ಯಾನ್‌ಗಳಮೂಲಕ ವಸ್ತುಗಳನ್ನು ತಯಾರಕರಿಂದ ನೇರವಾಗಿ ಬಳಸುವವರಿಗೆ ಹಾಗೂ ಚಿಲ್ಲರೆ ವಾಂಟಗಾರರಿಗೆ ಒಯ್ಯುವ ಯೋಜನೆಯನ್ನು ಸಿದ್ಧಪಡಿಸಲಾಯಿತು.

ಮೋಟಾರ್ ವ್ಯಾನ್‌ಗಳ ಕಾರ್ಯಾಚರಣೆಯು ಇಂದು ಮಾರಾಟದ ಸಂಶೋಧನೆ ಹಾಗೂ ಮಾರಾಟವಾಗುವ ವಸ್ತುಗಳ ಪ್ರಚಾರದ ಒಂದು ಸಾಧನವಾಗಿ ಪರಿಣಮಿಸಿದೆ. ಪ್ರಕೃತ ಕಾರ್ಪೋರೇಷನ್ನಿನ ಮಾರಾಟ ವಿಭಾಗವು ವಿವಿಧ ಪ್ರದೇಶಗಳಲ್ಲಿ ಒಂಭತ್ತು ಮೋಟಾರ್ ವ್ಯಾನ್‌ಗಳನ್ನು ಕಾರ್ಯಾಚರಣೆಗೆ ತೊಡಗಿಸಿದೆ.

ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಕಾರ್ಪೋರೇಷನ್ನಿನ ಸರಕಾರದವರಿಗಾಗಿ ವಸ್ತುಗಳನ್ನು ಕೊಳ್ಳುವ ವಿಭಾಗವು ಸರಕಾರಿ ಗುತ್ತಿಗೆಗಳನ್ನು ಕೈಗೊಂಡು ಸಣ್ಣ ಕೈಗಾರಿಕಾ ಸಂಸ್ಥೆಗಳಿಗೆ ನೆರವಾಗುತ್ತಿದೆ. ಬೂಟ್ ಮತ್ತು ಷೂಗಳು, ಪೆಯಿಂಟ್ ಮತ್ತು ವಾರ್ನಿಷ್‌ಗಳು, ಮಣ್ಣಿನ ವಸ್ತುಗಳು, ಬೀಗಗಳು ಮುಂತಾದ ಸಣ್ಣ ಕೈಗಾರಿಕಾ ಉತ್ಪನ್ನಗಳಿಗಾಗಿ ಒಟ್ಟು ಗಟ್ಟಳೆ ವ್ಯಾಪಾರದ ಅಂಗಡಿಗಳನ್ನು ಪ್ರಮುಖ ಸಣ್ಣ ಪ್ರಮಾಣದ ಕೈಗಾರಿಕಾ ಕೇಂದ್ರಗಳಲ್ಲಿ ಸ್ಥಾಪಿಸಲಾಗಿವೆ.

ಸುಧಾರಿಸಿದ ರೀತಿಯ ಯಂತ್ರಗಳು ಮತ್ತು ಉತ್ಪಾದನಾ ತಂತ್ರ ವಿಧಾನಗಳನ್ನು ಬಳಸುವ ವಿಷಯಕ್ಕೆ ಉತ್ತೇಜನ ವೀಯುವುದಕ್ಕಾಗಿ ಸಣ್ಣ ಪಟ್ಟ ಕೈಗಾರಿಕಾ ಸಂಸ್ಥೆಗಳಿಗೆ ಯಂತ್ರಗಳನ್ನು ಕಂತಿನಲ್ಲಿ ಕೊಳ್ಳುವ ಸೌಲಭ್ಯವನ್ನು ನೀಡುವ ಯೋಜನೆಯೊಂದನ್ನು ವ್ಯವಹಾರಕ್ಕೆ ತರಲಾಗಿದೆ. ೧೯೫೭ರ ಮಾರ್ಚ ತಿಂಗಳ ಅಂತ್ಯದವರೆಗೆ, ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದಿರುವ ಕಾರ್ಪೋರೇಷನ್ ೨.೨ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಬೆಲೆಬಾಳುವ ಸುಮಾರು ೪೧೧೦ ಯಂತ್ರಗಳ ಬಗ್ಗೆ ಅಲ್ಪ ಪ್ರಾರ್ಥನಾ ಪತ್ರಗಳನ್ನು ಸ್ವೀಕರಿಸಿದೆ. ಅಧಿಕ ಸಂಖ್ಯೆಯ ಅರ್ಜಿಗಳನ್ನು ಕಾರ್ಪೋರೇಷನ್ ಅಂಗೀಕರಿಸಿ ಕಳೆದ ವರ್ಷ ೧೦೯ ಲಕ್ಷ ರೂಗಳ ಬೆಲೆಬಾಳುವ ಯಂತ್ರಗಳನ್ನು ಒಪ್ಪಿಸಿದೆ. ಇನ್ನೊಂದು ಯೋಜನೆಯ ಪ್ರಕಾರ ಸಾಮುದಾಯಿಕ ಯೋಜನಾ ಪ್ರದೇಶಗಳಲ್ಲಿರುವ ಅಲ್ಪ ಆದಾಯ ವರ್ಗದ ಮಹಿಳೆಯರಿಗೆ ರೂಲಿಗೆ ಯಂತ್ರಗಳನ್ನು ಕಂತುಗಳಲ್ಲಿ ಕೊಂಡುಕೊಳ್ಳುವ ಪದ್ಧತಿಯ ಮೇಲೆ ಪೂರೈಸಲಾಗುತ್ತಿದೆ. ಪ್ರಾಯೋಗಿಕ ಯೋಜನಾ ಪ್ರದೇಶಗಳಲ್ಲಿ ಉಡುಪು ಹೊಲಿಯ ಪುದನ್ನು ಕಲಿತುಕೊಳ್ಳುತ್ತಿರುವ ಯುವಕರಿಗೂ ಈ ಸೌಲಭ್ಯವನ್ನು ವಿಸ್ತರಿಸಲಾಗಿದೆ.

ದೊಡ್ಡ ಪ್ರಮಾಣದ ಕೈಗಾರಿಕಾ ಸಂಸ್ಥೆಗಳಿಗೆ ಸಹಾಯಕವಾಗಿರುವಂತೆ ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವ ಮತ್ತು ದೇಶದ ಎಲ್ಲ ಭಾಗಗಳಲ್ಲಿಯೂ ಸಣ್ಣ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸುವ ವಿಚಾರದಲ್ಲಿ ಗಮನಾರ್ಹವಾದ ರೀತಿಯಲ್ಲಿ ಪ್ರಗತಿಗಳಿಸಲಾಗಿದೆ. ಮುಂಬೈ, ಕಲ್ಕತ್ತ ಮತ್ತು ಬೆಂಗಳೂರುಗಳಲ್ಲಿ ಮೋಟಾರು ವಾಹನಗಳು, ಬೈಸಿಕಲ್‌ಗಳು ಮತ್ತು ಮೆಷಿನ್ ಟೂಲ್‌ಗಳನ್ನು ತಯಾರಿಸುತ್ತಿರುವ ಭಾರಿ ತಯಾರಕರು ಸಹ ಯಕ ಕೈಗಾರಿಕಾ ಸಂಸ್ಥೆಗಳ ಸ್ಥಾಪನೆಗೆ ತಮ್ಮ ಸಮ್ಮತಿಯನ್ನಿತ್ತಿರುವರು. ಈ ಸಂಸ್ಥೆಗಳಲ್ಲಿ ತಯಾರಾದ ಸಲಕರಣೆಗಳನ್ನು ಗೊತ್ತಾದ ದರಗಳಲ್ಲಿ ಕೊಳ್ಳಲು ಇವರು ಸಮ್ಮತಿಸಿರುವರು. ಜೊತೆಗೆ ಮತ್ತೆ ಕೆಲವು ಭಾರಿ ತಯಾರಕರು ತಮಗೆ ಅಗತ್ಯವಾಗುವ ಕೆಲವು ಉಸಕರಣಗಳನ್ನು ಸಣ್ಣ ಸಣ್ಣ ಸಂಸ್ಥೆಗಳಿಂದ ಕೊಳ್ಳಲು ಒಪ್ಪಿರುವರು.

ವಿಶ್ವದ ಕೆಲವು ರಾಷ್ಟ್ರಗಳಲ್ಲಿರುವಂತೆ ನಮ್ಮ ರಾಷ್ಟ್ರದಲ್ಲಿಯೂ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಬೇಕೆಂಬ ನಿರ್ಧಾರ ಕೈಗೊಳ್ಳಲಾಗಿದೆ. ವಿಕೇಂದ್ರೀಕರಣದ ರೀತಿಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದೊಂದು ಪರಿಣಾಮಕಾರಿಯಾದ ವಿಧಾನವಾಗಿದೆ. ನಗರ ಕ್ಷೇತ್ರಗಳಲ್ಲಿ ಈಗಿರುವ ಜನಸಿಬಿಡತೆಯನ್ನು ಬಗೆಹರಿಸಲು ಈ ಕೈಗಾರಿಕಾ ಪ್ರದೇಶಗಳು ನೆರವಾಗುತ್ತಿವೆ ಸಣ್ಣ ಪಟ್ಟ ಪ್ರಮಾಣದ ಕೈಗಾರಿಕಾ ಸಂಸ್ಥೆಗಳನ್ನು ಒಂದು ಸ್ಥಳದಲ್ಲಿ ಕೂಡಿಸಿ ಇವುಗಳಿಗೆ ಉತ್ತಮ ನಿವೇಶನ, ನೀರು, ವಿದ್ಯುಚ್ಛಕ್ತಿ, ರೈಲ್ವೆ, ಕಂಬಿದಾರಿಗಳು ಮುಂತಾದ ಸಾರ್ವತ್ರಿಕ ಸೌಲಭ್ಯಗಳನ್ನು ಒದಗಿಸಿ ಈ ಸಂಸ್ಥೆಗಳು ದಕ್ಷತೆಯಿಂದ ಕಾರ್ಯಾಚರಣೆಗೆ ತೊಡಗುವಂತೆ ಮಾಡುವುದು ಕೈಗಾರಿಕಾ ಪ್ರದೇಶಗಳ ಸ್ಥಾಪನೆಯ ಉದ್ದೇಶವಾಗಿದೆ. ವಿವಿಧ ರಾಜ್ಯಗಳಲ್ಲಿ ೨೫ ಕೈಗಾರಿಕಾ ಪ್ರದೇಶಗಳಿಗಾಗಿ ಯೋಜನೆಗಳನ್ನು ಮಂಜೂರುಮಾಡಲಾಗಿದೆ. ದೆಹಲಿಯ ರಾಜಧಾನಿ ಮುಂತಾದ ಸ್ಥಳಗಳಲ್ಲಿ ಈಗಾಗಲೆ ಈ ಕೈಗಾರಿಕಾ ಪ್ರದೇಶಗಳ ಸ್ಥಾಪನಾಕಾರ್ಯವು ಭರದಿಂದ ಸಾಗುತ್ತಿದೆ. ಅಲ್ಲಿ ಅನೇಕ ಕಾಖಾನೆಗಳೂ ಸಣ್ಣ ಕೈಗಾರಿಕಾ ಸಂಸ್ಥೆಗಳು ಕಾರ್ಯಾಚರಣೆಗೆ ತೊಡಗಲಿವೆ.

ಸರಕಾರಿ ಸಂಸ್ಥೆಗಳು ಸಣ್ಣ ಕೈಗಾರಿಕಾ ಸಂಸ್ಥೆಗಳಿಗೆ ಧಾರಾಳವಾಗಿ ಹಣಕಾಸು, ತಾಂತ್ರಿಕ ಹಾಗೂ ವ್ಯವಸ್ಥಾ ನೆರವನ್ನು

(ಉಳಿದ ಸುಟ ನೋಡಿರಿ)

ಸಾವಿರಾರು ಜನರು
ಅನುಸರಿಸುತ್ತಿರುವ
ಸುಲಭ ಠೇವಣಾತಿ ವಿಧಾನ

ದಿನಕ್ಕೆ
4 ಆಣೆ
25 ನ. ಪೈ
7 ವರುಷಗಳಲ್ಲಿ
ರೂ. 700

ಪಿಗ್ಮಿ

- ಚಿಕ್ಕ ಗಾತ್ರದ ಅಟ್ಟಿಕದ ಪಿಗ್ಮಿಯರೊಂದಾಗಿ ಬಹುದೊಡ್ಡ ಕಾಣಿಕೆಯನ್ನು ಸಂಪರಿಸಬಲ್ಲರು.
- ದಿನಕ್ಕೆ ೩೫ ನ. ಪೈಸೇಗಳಂತಹ ಪ್ರತಿ ಕಾಸುಗಳೊಟ್ಟಾಗಿ ಬೇಂಕಿನಲ್ಲಿ ಸಂಗ್ರಹವಾಗುವ ನಿಧಿಯು ಭವಿಷ್ಯದ ಸಂಕಷ್ಟಗಳನ್ನು ಸಾರುಮಾಡಬಲ್ಲದು.

ಸಿಂಡಿಕೇಟಿನ 96 ಶಾಖೆಗಳ ಯಾವುದೇ ಉದ್ಯೋಗಸ್ಥನೊಡನೆ ವಿಚಾರಿಸಿರಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್
ಲಿಮಿಟೆಡ್ ಉಡುಪಿ

The Canara Industrial & Banking
Syndicate Ltd. Udipi

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೨-೯-೧೯೫೭	೨

ಉಳಿತಾಯ ನಿಧಿ

ಉಡುಪಿ ತಾಲೂಕಿನ ಕೆಲಸಿಲ್ದಾರರು ನಮ್ಮ ಕಡೆಗೊಂದು ಪತ್ರವನ್ನು ಕಳುಹಿಸಿ, ರಾಷ್ಟ್ರೀಯ ಉಳಿತಾಯ ಯೋಜನೆಯ ಪ್ರಕಾರ ತಾಲೂಕಿನ ಮಹಾಜನರಿಂದ ಮೂರು ಲಕ್ಷ ರೂಪಾಯಿಗಳನ್ನು ಜಾಲ್ತಿ ವರ್ಷದಲ್ಲಿ ಸಂಗ್ರಹಿಸುವ ತಮ್ಮ ಗುರಿಯನ್ನು ವಿದಿತಪಡಿಸಿದ್ದಾರೆ; ಅಲ್ಲದೆ ಸಾರ್ವಜನಿಕರಲ್ಲಿ ಈ ಬಗ್ಗೆ ಹೆಚ್ಚಿನ ಆಸಕ್ತಿ ಉಂಟಾಗಲೆಂದೂ ಹಾರೈಸಿದ್ದಾರೆ. ರಾಷ್ಟ್ರೀಯ ಉಳಿತಾಯ ಯೋಜನೆಯು ಜನರಲ್ಲಿ ಸಂಚಯ ಪ್ರವೃತ್ತಿಯನ್ನು ಬಹಳ ಚೆನ್ನಾಗಿ ಮೋಷಿಸಬೇಕೆಂಬ ಉದ್ದೇಶದಿಂದ ಹುಟ್ಟಿಕೊಂಡುದಾಗಿದೆ; ಮತ್ತು ಜನರಲ್ಲಿ ತೀರ ಬಡವನೆನಿಸುವವನ ಕೈಯಲ್ಲಿಯೂ ನಿಲುಕುವಂತೆ ಯೋಜನೆಯು ರೂಪಿತವಾಗಿದೆ. ಉದಾಹರಣೆಗೆ ಐದು ರೂಪಾಯಿಗಳನ್ನು ಟಪ್ಪಾಲು ಕಟ್ಟೆಯಲ್ಲಿ ಪಾವತಿಮಾಡಿ ಉಳಿತಾಯ ಪತ್ರವನ್ನು ಕೂಡಲೇ ಪಡೆಯಬಹುದು. ಒಂದೇಸಲ ಐದು ರೂಪಾಯಿಯನ್ನು ಕೂಡಿಡುವುದಕ್ಕೆ ಅನುಕೂಲವಿಲ್ಲವಾದರೆ ಅದಕ್ಕಿಂತ ಕಡಿಮೆ ಎಷ್ಟೇ ಹಣವನ್ನಾದರೂ ಟಪ್ಪಾಲು ಕಟ್ಟೆಯಲ್ಲಿ ಕೊಟ್ಟು, ಬದಲಾಗಿ ಆ ಬೆಲೆಯ ಉಳಿತಾಯದ ಚೀಟುಗಳನ್ನ ಪಡೆದುಕೊಂಡು, ಒಟ್ಟು ಐದು ರೂಪಾಯಿ ಬೆಲೆಯ ಚೀಟುಗಳ ಸಂಗ್ರಹವಾದೊಡನೆ ಯೇ ಉಳಿತಾಯ ಪತ್ರವನ್ನು ಪಡೆಯಬಹುದು. ಈ ಚಿಕ್ಕ ಉಳಿತಾಯಕ್ಕೆ ಒಳ್ಳೆ ಬಡ್ಡಿಯು ಸಿಗುತ್ತದೆ—ಮತ್ತು ಈ ಬಡ್ಡಿಯ ಮೇಲೆ ಆದಾಯಕರವನ್ನು ಕೊಡಬೇಕಾಗಿಲ್ಲ ಸಿಗದಿಗೊಳಿಸಿದ ದೀರ್ಘಾವಧಿಗೆ ಮುಂಚೆಯೇ ಹಣ ಬೇಕೆಂದಿದ್ದರೆ, ಉಳಿತಾಯ ಪತ್ರವನ್ನು ವಾಪಸುಮಾಡಿ ಹಣವನ್ನು ಪಡೆಯುವುದಕ್ಕೂ ಅವಕಾಶವಿದ್ದು ಈ ಬಗ್ಗೆ ರಚಿಸಲಾದ ಶರತ್ತುಗಳು ಸಾಕಷ್ಟು ಉದಾರವಾಗಿವೆ. ಹೆಚ್ಚು ಹಣವುಳ್ಳವರು ಸಾಧ್ಯವೇ ಪ್ರಯೋಜನವನ್ನು ಪಡೆಯಬಾರದೆಂದೂ ಸಾಮಾನ್ಯ ಜನರೇ ಮುಖ್ಯವಾಗಿ ಈ ಯೋಜನೆಯ ಲಾಭ ಪಡೆಯಬೇಕೆಂದೂ ಸರಕಾರ ಸಂಕಲ್ಪಿಸಿದ್ದು ಈ ಉದ್ದೇಶದಿಂದ ಒಬ್ಬ ವ್ಯಕ್ತಿಯು ತನಗಾಗಿ ಪಡೆದುಕೊಳ್ಳಬಹುದಾದ ಉಳಿತಾಯ ಪತ್ರಗಳ ಮೊತ್ತವು ೨೫ ಸಾವಿರ ರೂಪಾಯಿಗಳಿಗೆ ಮಿತಿಬಾರದೆಂದು ವಿಧಿಸಲಾಗಿದೆ. ಅದುದರಿಂದ ಕಡಿಮೆ ಎಂದರೆ ೫ ರೂಪಾಯಿ, ಹೆಚ್ಚೆಂದರೆ ೭೫ ಸಾವಿರ ರೂಪಾಯಿಗಳ ನಡುಗೂ ಈ ಉಳಿತಾಯ ಪತ್ರಗಳನ್ನು ಕಂತಮ್ಮ ಸಾಂಪತ್ತಿಕ ಸ್ಥಿತಿಗೆ ಹೊಂದಿಕೊಂಡು ಬಡವರೂ ಮಧ್ಯಮ ವರ್ಗದವರೂ ಕೊಂಡುಕೊಳ್ಳಬಹುದು. ಅಲ್ಲದೆ ಅನುಕೂಲವುಳ್ಳವರು ತಮ್ಮ ಹೆಸರಿನಲ್ಲಿ ಮಾತ್ರವಲ್ಲದೆ ತಮ್ಮ ಅಪ್ರಿಕರ ಅಂದರೆ ಮಕ್ಕಳೇ ಮುಂತಾದವರ ಹೆಸರಿನ್ನ ಸಹ ಪ್ರತ್ಯೇಕವಾಗಿ ಉಳಿತಾಯಪತ್ರಗಳನ್ನು ಕೊಂಡುಕೊಳ್ಳಲು ಅಡ್ಡಿಯಿಲ್ಲ. ಟಪ್ಪಾಲುಕಟ್ಟೆಗಳು ಈಗ ನಮ್ಮ ಹಳ್ಳಿಯ ಮೂಲೆ ಮೂಲೆಗಳಲ್ಲೂ ಇವೆ- ಆದುದರಿಂದ ಹಳ್ಳಿಯ ಜನರಿಗೆ ಉಳಿತಾಯಮಾಡಬೇಕೆನಿಸಿದರೆ ಅವರು ಬ್ಯಾಂಕುಗಳನ್ನು ಹುಡುಕಾಡಬೇಕಾದ ಅವಶ್ಯಕತೆ ಇಲ್ಲ. ಟಪ್ಪಾಲುಕಟ್ಟೆಯ ಅಧಿಕಾರಿಗಳನ್ನು ಕಂಡರೆ ಸಾಕು ಅವರು ಎಲ್ಲ ಸೌಕರ್ಯಗಳನ್ನು ಕೂಡಲೆ ಒದಗಿಸಿಕೊಟ್ಟು ಉಳಿತಾಯ ಪತ್ರವನ್ನು ವಿಳಂಬವಿಲ್ಲದೆ ಕೈಗೆ ನೀಡುತ್ತಾರೆ. ಇದೇ ರೀತಿಯಲ್ಲಿ ಟಪ್ಪಾಲುಕಟ್ಟೆಯು ಚಿಕ್ಕ ಉಳಿತಾಯವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಬ್ಯಾಂಕಿನ ಲೆಕ್ಕವನ್ನೂ ನಡೆಯುತ್ತದೆ. ಕಡಿಮೆ ಎಂದರೆ ೨ ರೂಪಾಯಿ, ಹೆಚ್ಚೆಂದರೆ ೧೫ ಸಾವಿರ ರೂಪಾಯಿ ರೀತಿಯಲ್ಲಿ ಅವಕಾಶವನ್ನಿಟ್ಟು ೨ ರಿಂದ ೨೫ ಶೇಕಡಾದಷ್ಟು ಬಡ್ಡಿಯನ್ನು ಪಡೆಯುತ್ತಾ ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ಟಪ್ಪಾಲು ಕಟ್ಟೆಯೊಡನೆ ತೆರೆಯಬಹುದು. ಈ ಬಡ್ಡಿಯೂ ಕರಮುಕ್ತವಾಗಿದೆ. ಟಪ್ಪಾಲು ಕಟ್ಟೆಯ ಅಧಿಕಾರಿಗಳು ಈಗ ಉಡುಗೊರೆಯ ಕೂಪನುಗಳನ್ನು ಸಹ ಕೊಡಲು ಹೊರಟಿದ್ದಾರೆ. ಮುದುವೆ ಮತ್ತಿತರ ಶುಭ ಸಂದರ್ಭದಲ್ಲಿ ಯಾರಿಗಾದರೂ ನಗದಿ ಉಡುಗೊರೆ ಕೊಡುವುದು ನಿಮ್ಮ ಇಚ್ಛೆಯಾದರೆ ಆ ಹಣವನ್ನು ಟಪ್ಪಾಲು ಕಟ್ಟೆಯಲ್ಲಿ ಪಾವತಿಮಾಡಿ, ಅದಕ್ಕೆ ಸಮನಾದ ಉಳಿತಾಯ ಪತ್ರವನ್ನು ಕೊಂಡು ಕೊಂಡು ಬಹುಮಾನವಾಗಿ ಅಥವಾ ಉಡುಗೊರೆಯಾಗಿ ಕೊಡಲಿಕ್ಕೂ ಈಗ ಅವಕಾಶವುಂಟು. ಅಂತೂ ಜನರು ಆದಷ್ಟು ಹೆಚ್ಚು ಹಣವನ್ನು ಉಳಿಸಿ ರಾಷ್ಟ್ರಾಭಿವೃದ್ಧಿಯ ಕಾರ್ಯಗಳಿಗೆ ಈ ನಿಧಿಯನ್ನು ಒದಗಿಸಿಕೊಡಬೇಕೆಂಬುದೇ ಚಿಕ್ಕ ಉಳಿತಾಯ ಚಳವಳದ ಮೂಲೋದ್ದೇಶ. ಈ ಚಳವಳವನ್ನು ಬೆಂಬಲಿಸಿದರೆ ಬೆಲೆಯೇರಿಕೆ ಮತ್ತಿತರ ದುಷ್ಪರಿಣಾಮಗಳನ್ನೂ ಯಶಸ್ವಿಯಾಗಿ ಪಡೆಯಲು ಸಾಧ್ಯವುಂಟು. ಅದುದರಿಂದ ನಮ್ಮ ಕಹೀಲ್ದಾರರೊಡನೆ ಎಲ್ಲರೂ ಸಹಕರಿಸಿ ಅವರು ಗುರಿಯನ್ನು ಕ್ಷೇತ್ರದಲ್ಲಿ ಮುಟ್ಟುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಸರಕಾರಿ ಸಾಲ

ಭಾರತ ಸರಕಾರವು ಸಾರ್ವಜನಿಕ ಸಾಲವನ್ನು ಎತ್ತಿದ ಬೆನ್ನಲ್ಲೆ ಈಗ ಮುಂಬಯಿ ಮತ್ತು ಮೈಸೂರು ರಾಜ್ಯ ಸರಕಾರಗಳೂ ಸಾಲವೆತ್ತುವವೆಂದು ಬಹಿರಂಗವಾಗಿ ಸಾರಲಾಗಿದೆ. ಮೈಸೂರು ರಾಜ್ಯದ ಸಾಲವು ಇದೇ ೧೪ನೇ ತಾರೀಕಿನಿಂದ ಮೂರು ದಿನಗಳ ವರೆಗೆ ತೆರೆದಿರುತ್ತದೆ. ಸಾಲವು ಪೂರ್ತಿ ತುಂಬಿಬಂದರೆ, ಅಂತೆಗೆ ಪಡೆಯುವುದನ್ನು ಕೂಡಲೇ ನಿಲ್ಲಿಸಲಾಗುವುದೆಂದೂ ತಿಳಿದುಬರುತ್ತದೆ. ಮೈಸೂರಿನ ಸಾಲವು ಆಕರ್ಷಕ ರೀತಿಯದ್ದಿದ್ದು ನೂರು ರೂಪಾಯಿ ಮುಖಬೆಲೆಯದಕ್ಕೆ ೪೮ ೫೫ ರೂಪಾಯಿ ಮಾತ್ರ ಕೊಟ್ಟರೆ ಸಾಕಾಗುತ್ತದೆ. ಅಂಥಾರು ತಿಂಗಳಿಗೊಮ್ಮೆ ಅದಾಯಕವನ್ನು ವಜಾಮಾಡಿ ೪.೫% ದರದಲ್ಲಿ ಬಡ್ಡಿಯನ್ನು ಸಲ್ಲಿಸಲಾಗುತ್ತದೆ. ಹನ್ನೆರಡು ವರ್ಷಗಳ ಯೋಜನಾ ಸಾಲ ಇದಾಗಿದ್ದು ಕೂಡಿಬಂದ ಹಣವನ್ನು ಎರಡನೇ ಯೋಜನೆಯ ಪ್ರಕಾರ ರಾಜ್ಯದಲ್ಲಿ ನಡೆಯಬೇಕಾದ ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗಿಸಲಾಗುತ್ತದೆ. ರಾಜ್ಯದ ಮುಂಗಡಪತ್ರದಲ್ಲಿ ಕರಾಕರಣೆಯಿಂದಲೂ ಬಾಯಿಗೂಡಿಸಲಾಗದ ಕೊರತೆಯನ್ನು ತುಂಬುವುದಕ್ಕೆಂದು ಎತ್ತಿದ ಸಾಲವಿದು. ನಮ್ಮಲ್ಲಿರುವ ವಾಣಿಜ್ಯೋದ್ಯಮ ಸಂಸ್ಥೆಗಳೂ ಸಂಪತ್ತುಳ್ಳ ಸಾರ್ವಜನಿಕರೂ ಈ ಸಾಲದ ಸದುಪಯೋಗ ಪಡೆದುಕೊಳ್ಳಲು ಹಿಂಜರಿಯಲಾರರೆಂದು ನಂಬುತ್ತೇವೆ. ಮಧ್ಯಮ ವರ್ಗದ ಜನರ ಕೈಯಲ್ಲಿಗೂ ನಿಲುಕುವಂತೆ ಈ ಸಾಲವಿದೆ ಎಂದರೂ ತಪ್ಪಾಗದು—ಏಕೆಂದರೆ ಸಾಲವನ್ನು ನೂರು ರೂಪಾಯಿ ಅಥವಾ ಅದರ ಗುಣಕ ಪ್ರಮಾಣದಲ್ಲಿ ತುಂಬಬಹುದು. ಒಂದು ನೂರು ರೂಪಾಯಿಯಷ್ಟು ಸ್ಥಿತಿ ಇದ್ದರೆ ಸಾಕು— ದೇಶಸೇವೆ ಮಾಡಲು ಅಥವಾ ರಾಷ್ಟ್ರಾಭಿಮಾನವನ್ನು ವ್ಯಕ್ತಪಡಿಸಲು ಅವಕಾಶ ಪ್ರಾಪ್ತಿಯಾಯಿತೆಂದೇ ಲೆಕ್ಕ! ಆದುದರಿಂದ ಸರಕಾರಿ ಸಾಲಗಳನ್ನು ತುಂಬುವವರು ಬೇರೆಯೇ ಇದ್ದಾರೆ, ತಾವು ಮಾಡಲಿಕ್ಕೇನೂ ಇಲ್ಲವೆಂದು ಜನರಾರೂ ಭಾವಿಸಬಾರದು. ರಾಷ್ಟ್ರದ ಪ್ರಗತಿಗಾಗಿ ಎಷ್ಟರೂ ಕೂಡಿದಷ್ಟು ಸಹಾಯಮಾಡಿ, ಸಹಕರಿಸಿ ದುಡಿಯಬೇಕಾಗಿದೆ—ಸಾರ್ವಜನಿಕ ಸಾಲ ಇದಕ್ಕೊಂದು ಅವಕಾಶ ಮಾಡಿಕೊಡುತ್ತದೆ

ಸಂಕ್ಷಿಪ್ತ ಸುದ್ದಿಗಳು

ಮೈಸೂರಿನ ವಿಧಾನ ಪರಿಷತ್ತು

ಮೈಸೂರಿನ ವಿಧಾನ ಪರಿಷತ್ತಿಗೆ ಈಗ ಇರುವ ೬೩ ಸ್ಥಾನಗಳನ್ನು ೬೯ಕ್ಕೆ ಏರಿಸಬೇಕೆಂದು ಕರ್ನಾಟಕದ ಸದಸ್ಯರ ಸೂಚನೆಯು ಲೋಕಸಭೆಯಲ್ಲಿ ತೀವ್ರ ಚರ್ಚೆಯನಂತರ ಬಿದ್ದುಹೋಯಿತು. ವಿಶಾಲ ಮೈಸೂರಿನ ಎಲ್ಲ ಭಾಗಗಳಿಗೂ ಸಮಾನವಾದ ಸ್ಥಾನಮಾನಗಳನ್ನೀಯುವ ದೃಷ್ಟಿಯಿಂದ ಮೈಸೂರು ವಿಧಾನಸಭೆಯು ಈ ಸೂಚನೆಯನ್ನು ಈ ಮೊದಲೇ ಸ್ವೀಕರಿಸಿಕೊಂಡಿತ್ತು.

ಹುಬ್ಬಳ್ಳಿಯಲ್ಲಿ ಕಾಲೇಜು

ಅಖಂಡ ಭಾರತದಲ್ಲಿ ಉತ್ತಮದರ್ಜೆಯ ಕಾಲೇಜುಗಳಲ್ಲಿ ಒಂದಾಗಿ ಅಭಿವೃದ್ಧಿಕೊಂಡಲಿರುವ ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಕಾಲೇಜನ್ನು ತಾ. ೬ ರಂದು ಮೈಸೂರಿನ ಅರ್ಥಮಂತ್ರಿ ಶ್ರೀ ಟಿ. ಮರಿಯಪ್ಪನವರು ಉದ್ಘಾಟಿಸಿ, ಕಟ್ಟಿಸಲಿರುವ ಅಸ್ಪತ್ರೆಯ ಶಂಕುಸ್ಥಾಪನೆಯನ್ನು ಮಾಡಿದರು. ನವಿಲಗುಂದ ಗವಿಮಠದ ಮಹಾಸ್ವಾಮಿಗಳು ಸಮಾರಂಭವನ್ನು ಹರಸಿದರು.

ದ್ವಿತೀಯ ಸೌಕಾಂಗಣ

ಭಾರತದಲ್ಲಿ ದ್ವಿತೀಯ ಹಡಗು ನಿರ್ಮಾಣದ ಕಾರಖಾನೆಯ ಸ್ಥಳವನ್ನು ಆರಿಸುವ ಬಗ್ಗೆ ಬ್ರಿಟಿಷ ಕಂಪನಿಯೊಂದರ ತಜ್ಞರು ಇದೇ ತಿಂಗಳ ಮಧ್ಯದಲ್ಲಿ ಭಾರತಕ್ಕೆ ಬರಲಿರುವರು; ಅವರು ಮೈಸೂರು ರಾಜ್ಯದ ಕಾರವಾರವನ್ನೂ ಸಂದರ್ಶಿಸಲಿರುವರು. ಕಾರವಾರವೇ ಈ ಕಾರಖಾನೆಯ ಸ್ಥಾಪನೆಗೆ ಆರಿಸಲ್ಪಡುವ ಸಂಭವ ತುಂಬವಾಗಿದೆ.

ಮಲೆನಾಡಿನ ಅಭಿವೃದ್ಧಿ ಮಂಡಳ

ಮೈಸೂರು ರಾಜ್ಯದ ಮಲೆನಾಡ ಅಭಿವೃದ್ಧಿ ಮಂಡಳವನ್ನು ರಾಜ್ಯ ಸರಕಾರವು ಈ ತಿಂಗಳ ಮೂರನೇ ವಾರದಲ್ಲಿ ರಚಿಸಲಿದೆಯೆಂದೂ ಜಿಲ್ಲಾ ಮತ್ತು ತಾಲೂಕು ಅಭಿವೃದ್ಧಿ ಸಮಿತಿಗಳನ್ನು ಸರಕಾರವು ನೇಮಿಸಲಿದೆಎಂದೂ ಸಹಾ ರಾಜ್ಯಯೋಜನಾ ಶಾಖೆಯ ಉಪಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆಯವರು ತಿಳಿಸಿದ್ದಾರೆ.

ಮೈಸೂರಿನಲ್ಲಿ ಭೂಸುಧಾರಣೆ

ವಿಶಾಲ ಮೈಸೂರಿನಲ್ಲಿ ಭೂಸುಧಾರಣೆಗಳನ್ನು ವ್ಯವಹಾರದಲ್ಲಿ ತರುವುದಕ್ಕೆ ಮೊದಲು ಸುಧಾರಣೆಗಳನ್ನು ವಿಚಾರಿಸಲು ನೇಮಿಸಲ್ಪಟ್ಟಿದ್ದ ಜತ್ತಿ ಸಮಿತಿಯ ವರದಿಯು ಸರಕಾರಕ್ಕೆ ಒಪ್ಪಿಸಲ್ಪಟ್ಟಿದೆ ಈ ಸಮಿತಿಯ ವರದಿಯು ಏಕಮತವಾಗಿದ್ದಿತೆಂದೂ ಅದರ ಸೂಚನೆಗಳು ಸಾಗುವಳಿ, ಗೇಣಿ ಭೂಮಾಲಿಕರಿಗೆ ನೀಡುವ ಪರಿಹಾರ ಮೊದಲಾದ ಸಕಲಾಂಶವನ್ನು ಒಳಗೊಂಡಿದೆ ಎಂದೂ, ರೈತರಆರ್ಥಿಕ ಸ್ಥಿತಿ ಸುಧಾರಿಸುವ ಬಗ್ಗೆ ಮತ್ತು ಭೂಮಿಯ ಸ್ವಭಾವಿ ಸಾಗುವಳಿಯಾಗುವ ಬಗ್ಗೆ ಈ ಸಮಿತಿಯು ಸೂಚನೆಗಳನ್ನು ಮಾಡಿರುವುದೆಂದೂ ತಿಳಿದು ಬರತ್ತದೆ.

ಖಾದಿ-ಗ್ರಾಮೋದ್ಯೋಗ ಮಂಡಳ

ಮೈಸೂರು ರಾಜ್ಯದಲ್ಲಿ ಖಾದಿ ಗ್ರಾಮೋದ್ಯೋಗಗಳ ಕಾರ್ಯವನ್ನು ತ್ವರಿತಗತಿಯಿಂದ ಮುಂದುವರಿಸುವುದಕ್ಕಾಗಿ ಮೈಸೂರು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳವೊಂದನ್ನು ರಚಿಸಿದ್ದು ಅದಕ್ಕೆ ಶ್ರೀ ಜಿ. ವಿ. ಕಳ್ಳೀಕೇರಿಯವರು ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ.

ಅಂತಾರಾಷ್ಟ್ರೀಯ ಕೃಷಿ ಸಮ್ಮೇಳನ

ಜಾಗತಿಕ ಆಹಾರ ಒಕ್ಕಲುತನ ಸಂಸ್ಥೆಯ ಆಶ್ರಯದಲ್ಲಿ ೧೯೫೮ರ ಆಗಸ್ಟ್ ತಿಂಗಳಲ್ಲಿ ಮೈಸೂರಿನಲ್ಲೊಂದು ಅಂತಾರಾಷ್ಟ್ರೀಯ ಕೃಷಿ ಸಮ್ಮೇಳನವು ಸೇರಲಿದೆ. ಈ ಸಮ್ಮೇಳನದ ಪೂರ್ವಸಿದ್ಧತೆಗಳನ್ನು ನಡೆಯಿಸುವ ಸಲುವಾಗಿ ಜಾಗತಿಕ ಆಹಾರ ಮತ್ತು ಒಕ್ಕಲುತನ ಸಂಸ್ಥೆಯ ಇಬ್ಬರು ಪ್ರತಿನಿಧಿಗಳು ಇತ್ತೀಚೆಗೆ ಮೈಸೂರಿಗೆ ಭೇಟಿಕೊಟ್ಟು ತೆರಳಿರುವರೆಂದು ತಿಳಿದುಬಂದಿದೆ.

ಕಾರ್ಕಳ ಪ್ರ. ಮು. ಕೋರ್ಟಿನಲ್ಲಿ

O. S. No. 273/1957.

ಅನಂತರಾಜ ಕುದ್ರಿ ಸಹಾ —ವಾದಿಯು

ಮತ್ತು

ಸರಸಿಮ್ಮ ಸಹಾ —ಪ್ರತಿವಾದಿರು

ಜಿಯವರೊಳಗೆ

ಕೋರ್ಟಿನ ಹುಕ್ಮು ಪ್ರಕಾರ ಸದ್ರಿ ದಾವೆಯ ೨ನೇ ಪ್ರತಿವಾದಿ ಶ್ರೀ ಜಿನರಾಜ ಕೊಟ್ಟಾರಿ. ಸರಸಿಮ್ಮನ ಮಗ. ಕಾರ್ಕಳ ತಾಲ್ಲೂಕ ಕೊಣ್ಣಾಡಿ ಗ್ರಾಮದ ಹೊಸಮನೆಯಲ್ಲಿರುವನು ಇವನಿಗೆ. ಈ ಮೂಲ್ಕ ತಿಳಿಸುವುದೇನೆಂದ್ರೆ ಸದ್ರಿ ದಾವೆಯ ವಾದಿಗೆ ಪ್ರತಿವಾದಿರು ತಾ. 13—6—51 ರಲ್ಲು ರುಪ್ಯಾ 800—0 0ಕ್ಕೆ ಬರೆಕೊಟ್ಟ ತೋರಡವು ದಸ್ತಾವೇಜಿನ ಬಾಬ್ತು ಬಹಾ ಬಡ್ಡಿ ರೂ 119-0-0ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದ್ರಿ ದಾವೆಯ ೨ನೇ ಪ್ರತಿವಾದಿಯ ಹಾಜರಾತಿ ಬಗ್ಗೆ ತಾ. 27—9—1957ಕ್ಕೆ ಇಟ್ಟಿರುವದ್ರಿಂದ ಅಕುರತು ಅಕ್ಷೇಪಿಯದ್ರೆ ಸದ್ರಿದಿನ ಬೆಳಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನಮುಂದೆ ೨ನೇ ಪ್ರತಿವಾದಿಯು ಹಾಜರಾಗಿ ಹೇಳಿಕೊಳ್ಳತಕ್ಕದ್ದು.

(Sd) H. K. Gopalkrishna Rao,
Vakil for Plaintiff.

Karkala 9-9-57.

ತಿ. ರು ನೆಸ್ವಿಯವರು ಮರಳಿದರು

ಭಾರತದ ಸಂಸತ್ಸದಸ್ಯರಾದ ಶ್ರೀ ತಿ. ರು. ನೆಸ್ವಿಯವರು ತಮ್ಮ ಅಮೆರಿಕಾದ ಪ್ರವಾಸವನ್ನು ಸಂಯೋಗಗೊಳಿಸಿ ಲಂಡನ್ ಮಾರ್ಗವಾಗಿ ಭಾರತಕ್ಕೆ ಆಗಮಿಸಿದ್ದಾರೆ. ಇವರು ಕಳೆದ ಎಪ್ರಿಲ್ ೧೭ರಂದು ಭಾರತೀಯ ರೈತ ಪ್ರತಿನಿಧಿಗಳ ಮಂಡಳಿಗಾಗಿ ಅಮೆರಿಕೆಗೆ ಹೋಗಿದ್ದರು. ಇವರು ಸಂಸತ್ ಸದಸ್ಯರಾಗಿದ್ದರೂ, ಪ್ರತಿಜ್ಞಾವಿಧಿಯು ಮುಗಿದಿಲ್ಲವೆಂದು ತಿಳಿದಂತಿಯದೆ.

ಗಾಂಧಿ ಸ್ಮಾರಕ ನಿಧಿ

ಬಿಹಾರದ ನಿವೃತ್ತ ರಾಜ್ಯಪಾಲರಾದ ಕರ್ನಾಟಕದ ಶ್ರೀ ರಂ. ರಾ. ದಿವಾಕರರು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ. ಅಲ್ಲದೇ ಶ್ರೀಮತಿ ಸುಚೇತಾ ಕೃಪಲಾನಿಯವರು ನಿಧಿಯ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿರು. ಈ ನಿಧಿಯ ತಾತ್ಕಾಲಿಕ ಅಧ್ಯಕ್ಷರಾಗಿದ್ದ ದೇವದಾಸ ಗಾಂಧಿಯವರ ಅಕಾಲ ನಿಧನದ ದೆಸೆಯಿಂದ ಈ ಸ್ಥಾನವು ಖಾಲಿ ಬಿದ್ದಿತ್ತು.

ರಾಜಕೀಯಕ್ಕೆ ತಿಲಾಂಜಲಿ!

ಸಮಾಜವಾದಿಗಳ ಏಕೀಕರಣವು ತಾನು ದೂರಸರಿಯುವುದರಿಂದ ಸಾಧ್ಯವೆನಿಸುವುದಾದರೆ, ತಾನು ಸಮಾಜವಾದಿ ಪಕ್ಷದಿಂದ, ಬೇಕಾದರೆ, ರಾಜಕೀಯಕ್ಕೇನೇ ತಿಲಾಂಜಲಿಯಿತ್ತು ಅದರಿಂದ, ದೂರನಿಲ್ಲುವುದಾಗಿ ಸಮಾಜವಾದಿ ಪಕ್ಷದ ಧುರೀಣರಾದ ಡಾ. ರಾಮಮನೋಹರ ಲೋಹಿಯಾ ಬಹಿರಂಗಪಡಿಸಿದ್ದಾರೆ. ಡಾ ಲೋಹಿಯಾ ಒಬ್ಬರೇ ಪ್ರಜಾಪ್ರಭುತ್ವ ವಿರೋಧಿ ಎಂಬ ಅಭಿಪ್ರಾಯವು ಪ್ರಜಾಸಮಾಜವಾದಿಗಳಲ್ಲಿದೆಯಾಂತೆ.

ಶಿಕ್ಷಣ ವಿಧೇಯಕಕ್ಕೆ ವಿರೋಧ

ಕೇರಳದಲ್ಲಿ ಮೊನ್ನೆ ಮೊನ್ನೆ ಶಿಕ್ಷಣ ವಿಧೇಯಕವನ್ನು ವಿಧಾನ ಸಭೆಯು ಮಂಜೂರು ಮಾಡಿದುದಕ್ಕಾಗಿ ಕೇರಳದ ಕೆಥೋಲಿಕ ಆರ್ಚ ಬಿಷಪರು ಪ್ರತಿಭಟಿಸಿದರು. ಈ ವಿಧೇಯಕವು ಅಲ್ಪ ಸಂಖ್ಯಾಕರ ಹಿತಸಂಬಂಧಗಳಿಗೆ ವಿರೋಧಿಯಾಗಿರುವುದರಿಂದ ರಾಷ್ಟ್ರಪತಿಗಳೂ ಕೇರಳದ ರಾಜ್ಯಪಾಲರೂ ಇದಕ್ಕೆ ಒಪ್ಪಿಗೆಯನ್ನೀಯಬಾರದೆಂದು ಅವರಿಗೆ ತಿಳಿಸಲು ಒಂದು ನಿಯೋಗವನ್ನು ರಚಿಸಿಕೊಂಡಿರುವರು. ಅಲ್ಲದೆ ಭಾರತದ ಪ್ರಧಾನ ಮಂತ್ರಿ ಹಾಗೂ ಶಿಕ್ಷಣ ಮಂತ್ರಿಗಳನ್ನು ಸಹ ಭೆಟ್ಟಿಯಾಗಬೇಕೆಂದು ನಿರ್ಧರಿಸಿದ್ದಾರೆ.

ಕಾಶ್ಮೀರಕ್ಕೊಂದು ಹೊಸ ಪಕ್ಷ

ಕಾಶ್ಮೀರದ ಸರಕಾರೀ ಪಕ್ಷವಾದ ರಾಷ್ಟ್ರೀಯ ಪರಿಷತ್ತಿನಿಂದ ಇತ್ತೀಚೆಗೆ ಹೊರಬಂದಿರುವ ಶ್ರೀ ಜಿ. ಎಂ. ಸಾದಿಕರು ತಾವು ಒಂದು ಹೊಸ ಪಕ್ಷವನ್ನು ಸ್ಥಾಪಿಸುವುದಾಗಿಯೂ ಅದಕ್ಕೆ ಪ್ರಜಾತಂತ್ರ ರಾಷ್ಟ್ರೀಯ ಪರಿಷತ್ತೆಂದು ತಾತ್ಕಾಲಿಕ ಹೆಸರನ್ನೀಯುವುದೆಂದೂ ಬಹಿರಂಗಪಡಿಸಿದ್ದಾರೆ. ಭಾರತದ ಇತರ ಭಾಗಗಳ ಯಾವುದೇ ಪಕ್ಷಗಳಿಂದ ದೂರವಿದ್ದು, ಕಾಶ್ಮೀರ-ಭಾರತ ಸಂಬಂಧ ಸಂವರ್ಧನೆ, ಕಾಶ್ಮೀರದ ಆರ್ಥಿಕ ಸಾಮಾಜಿಕಾಭಿವೃದ್ಧಿಗಳಿಗಾಗಿ ಅದು ಕಾರ್ಯಶೀಲವಾಗುವುದೆಂದೂ ಅವರು ತಿಳಿದ್ದಾರೆ

ಪಾಂಡಿಚೆರಿಯ ಹಸ್ತಾಂತರ

ಪಾಂಡಿಚೆರಿಯು ಕಾಯಿದೆಬದ್ಧವಾಗಿ ಫ್ರಾನ್ಸದಿಂದ ಭಾರತಕ್ಕೆ ಈ ವರ್ಷಾಂತ್ಯದೊಳಗಾಗಿ ಹಸ್ತಾಂತರಗೊಳ್ಳುವುದೆಂದು ತಿಳಿದು ಬಂದಿದೆ ಈ ವಿಷಯ ಕ್ಕೆ ಪ್ರಧಾನಿ ನೆಹೆರೂ ಮತ್ತು ಫ್ರೆಂಚ್ ವಿದೇಶ ಮಂತ್ರಿ ವೌರರಲ್ಲಿ ಇತ್ತೀಚೆಗೆ ನಡೆದ ಮಾತುಕತೆಗಳೂ ಪುಷ್ಟಿಯಿತ್ತಿರುವುದೆಂದೂ ಗೊತ್ತಾಗಿದೆ.

ಗ್ರಾಮದಾನ ಚಳುವಳಿ

ಗ್ರಾಮದಾನ ಚಳುವಳಿಗೆ ೧೧೦೦೦ ಹಳ್ಳಿಗಳನ್ನಿತ್ತು ಒಡಿಸ್ಸಾ ರಾಜ್ಯವು ಅಖಂಡ ಭಾರತವಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದಿದೆ. ೩೦,೦೦೦ ಹಳ್ಳಿಗಳನ್ನು ಸಂಗ್ರಹಿಸಬೇಕೆಂದ ಆಚಾರ್ಯ ವಿನೋಬಾರವರ ಗುರಿಯಿದೆ. ೩೦ ಲಕ್ಷ ಎಕ್ರೆಗಳಿಗಿಂತಲೂ ಹೆಚ್ಚು ಭೂಮಿಯಿತ್ತು ಭೂದಾನ ಚಳುವಳಿಯಲ್ಲಿ ಪ್ರಥಮ ಸ್ಥಾನ ಪಡೆದ ಬಿಹಾರವು ಗ್ರಾಮದಾನಕ್ಕೆ ೧೦೦ ಹಳ್ಳಿಗಳನ್ನಿತ್ತಿದೆ

ಕೇರಳದಲ್ಲಿ ಹಸ್ತಕ್ಷೇಪ?

ಕೇರಳದ ತೋಟಗಾರಿಕೆ ಪ್ರದೇಶದಲ್ಲಿ ತಲೆಯೆತ್ತಿದ ಕಾರ್ಮಿಕ ಅಶಾಂತಿಯ ವಿಷಯದಲ್ಲಿ ಶೀಘ್ರದಲ್ಲಿಯೇ ಕೇಂದ್ರವು ಕೈ ಹಾಕಬಹುದೆಂಬ ನಿರೀಕ್ಷೆಯಿದೆ. ಅಲ್ಲಿನ ಕಮ್ಯೂನಿಸ್ಟ್ ಮಂತ್ರಿಮಂಡಳವನ್ನೇ ಪದಚ್ಯುತಿಗೊಳಿಸುವಂತಹ ತೀವ್ರ ಕಾರ್ಯಕ್ರಮವನ್ನು ಕೈಗೊಳ್ಳದೆ ಹೋದರೂ ಕಾರ್ಮಿಕ ಪರಿಸ್ಥಿತಿಯನ್ನು ದೇಶದ ಕಾಯುದೆಗನುಗುಣವಾಗಿ ಎದುರಿಸಬೆಕೆಂದೂ ಹಿಂಸಾಚಾರಗಳಿಗೆ ಅವಕಾಶ ಕೊಡುವುದೆಂದೂ ರಾಜ್ಯ ಸರಕಾರಕ್ಕೆ ಸ್ನೇಹಪರ ಸಲಹೆಯನ್ನು ಸೀಡಬಹುದೆಂದೂ ತಿಳಿದಿದೆ. ಡಾಲರುಗಳನ್ನು ಗಳಿಸುವ ಉದ್ದಿಮೆಯಾದ ತೋಟಗಾರಿಕೆಯನ್ನು ಅವಶ್ಯ ಸೇವೆಯೆಂದು ಸಾರಿ ಅಲ್ಲಿ ಸಂಪು ನಡೆಯುವುದನ್ನು ಅಕ್ರಮಗೊಳಿಸಬೇಕೆಂದು ಅಭಿಪ್ರಾಯವಿದೆ.

ಉಡುಪಿ

ಪ್ರಮಾಣಪತ್ರ ವಿತರಣೋತ್ಸವ—

ಉಡುಪಿ ಅಂಬಲಪಾಡಿ ಗೀತಾ ಭವನದಲ್ಲಿ ನೆರವೇರಿತ್ತಿರುವ ಅಖಿಲ ಭಾರತೀಯ ಸಂಸ್ಕೃತ ಭಾಷಾ ಪ್ರಚಾರಸಮಿತಿಯ ಸಂಸ್ಕೃತ ಭಾಷಾ ಪರೀಕ್ಷೆಗಳ ಚತುರ್ಥ ಪ್ರಮಾಣಪತ್ರ ವಿತರಣೋತ್ಸವವು ಲ ರೆಂದು ಶ್ರೀ ಬಿ. ಅನಂತಕೃಷ್ಣ ಸಾಮಗರ ಅಧ್ಯಕ್ಷತೆಯಲ್ಲಿ ನಡೆಯಿತು. ಗೀತಾ ಭವನದ ಅಧ್ಯಕ್ಷ ಶ್ರೀ ದೇವದಾಸರು ಸ್ವಾಗತವನ್ನು ಬಯಸಿದರು ಕಾರ್ಯದರ್ಶಿ ಗೋಪಿಚಂದರಾಯರು ಸಂಕ್ಷಿಪ್ತ ವರದಿಯನ್ನು ಓದಿದರು. ಆ ಮೇಲೆ ಶ್ರೀಗಳಾದ ಕೆ. ಎಲ್. ಎನ್. ಉಪಾಧ್ಯಾಯ ಮತ್ತು ಎ ವರದರಾಜ ಬಲ್ಲಾಳರು ಸಂಸ್ಕೃತಿಭಾಷಾಪ್ರಚಾರಕ್ಕಾಗಿ ಉಪನ್ಯಾಸಗಳನ್ನಿತ್ತರು. ಅಧ್ಯಕ್ಷರು ಅಳಿದ ಫೆಬ್ರವರಿ ತಿಂಗಳ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ೨೦ ಮಂದಿ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಣೆಮಾಡಿದರು. ಮತ್ತು ಭಾರತೀಯ ಸಂಸ್ಕೃತಿಯನ್ನುಳಿಸಲು ಸಂಸ್ಕೃತ ಭಾಷೆಯನ್ನು ಅಭ್ಯಸಿಸಿ, ಅದರಲ್ಲಿ ಪಾಂಡಿತ್ಯವನ್ನು ಪಡೆಯುವಂತಾಗಬೇಕೆಂದು ಹೇಳಿದರು.

ಅದೇ ದಿನ ಮಧ್ಯಾಹ್ನ ಗೀತಾಭವನದ ಸದಸ್ಯರ ವಾರ್ಷಿಕ ಮಹಾಧಿವೇಶನವು ಶ್ರೀ ಬಿ ನಾರಾಯಣ ಪಣಿರ ಅಧ್ಯಕ್ಷತೆಯಲ್ಲಿ ಸೇರಿ ಗತ ವರ್ಷದ ವರದಿ, ಲೆಕ್ಕಪತ್ರಗಳನ್ನು ಮಂಡನೆಮಾಡಿ, ಸಾಧಾರಿಸಿದ ಘಟನೆಯನ್ನು ಸ್ವೀಕರಿಸಿತು ಮುಂದಿನ ವರ್ಷಕ್ಕೆ ಶ್ರೀ ಕೆ. ಎಲ್. ಎನ್. ಉಪಾಧ್ಯಾಯರು ಅಧ್ಯಕ್ಷರಾಗಿಯೂ ಶ್ರೀ ಎಸ್. ಗೋಪಿಚಂದರಾವ್ ಇವರು ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಕೆ ಎ. ದೇವದಾಸ ಮೊದಲಾದ ಇತರ ಆರುಮಂದಿ ಸದಸ್ಯರಾಗಿಯೂ ಒನ್ಮತದಿಂದ ಆರಿಸಲ್ಪಟ್ಟರು.

ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿ—

ಯ ಆಶ್ರಯದಲ್ಲಿ ಹಿಂದೀ ತರಗತಿಗಳನ್ನು ನಡೆಸುತ್ತಿರುವಾಗ ರಾಷ್ಟ್ರಭಾಷಾ ಶಿಕ್ಷಣ ಶಿಬಿರದ ಹೊಸ ಪ್ರಾಥಮಿಕ, ಮಧ್ಯಮ ರಾಷ್ಟ್ರಭಾಷಾ, ಪ್ರವೇಶಿಕಾ ಹಾಗೂ ವಿಶಾರದ ಪೂರ್ವಾರ್ಧ ಮತ್ತು ಉತ್ತರಾರ್ಧ ವರ್ಗಗಳು ಇದೇ ಸೆಪ್ಟಂಬರ ೭ರಿಂದ ಪ್ರಾರಂಭವಾಗಿರುವುವು. ಈ ವರ್ಗಗಳಿಗೆ ಸೇರಲು ಅಪೇಕ್ಷಿಸುವವರು ಚಿತ್ತರಂಜನ ಭವನದಲ್ಲಿರುವ ಸಮಿತಿಯ ಕಾರ್ಯಾಲಯದಲ್ಲಿ ವಿಚಾರಿಸಬೇಕಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಉಡುಪಿ - ಬೈಲೂರು - ಕೊರಂಗ್ರಪಾಡಿ - ಉದ್ಯಾವರ ರಸ್ತೆ—

ಉಡುಪಿ ನಗರವನ್ನು ಬೈಲೂರು ಕೊರಂಗ್ರಪಾಡಿ ಗ್ರಾಮಗಳೊಂದಿಗೆ ಸಂಪರ್ಕಗೊಳಿಸುವ ಒಂದು ರಸ್ತೆಯು ಈ ಗ್ರಾಮಗಳಿಗೆ ಅತಿ ಅವಶ್ಯವಿದೆ. ಹತ್ತಿರದೆ ಇದ್ದ ಈ ಗ್ರಾಮಗಳು ಉಡುಪಿ ನಗರದೊಂದಿಗೆ ಪ್ರತ್ಯಕ್ಷಿಕಸಲ್ಪಟ್ಟು ಯಾವ ಒಂದು ಸೌಕರ್ಯ ಅನುಕೂಲತೆಗಳು ಇಲ್ಲವಾಗಿವೆ. ಶಾಲಾ ಹುಡುಗರೂ ನಿವಾಸಿಗಳೂ ವಿಶೇಷ ತೊಂದರೆಗೀಡಾಗಿದ್ದಾರೆ. ಯಾವ ವಾಹನಗಳು (ಗಾಡಿ, ಕಾರು) ಬರೂರಿನಲ್ಲಿ ಬರಬೇಕಾದರೆ ಉದಿಯಾವರವನ್ನು ಸುತ್ತುವರಿದುಕೊಂಡು ಬರಬೇಕಾಗಿದೆ. ಕಾಯಿಲೆ ಬಿದ್ದವರನ್ನು ಆಸ್ಪತ್ರೆಗೆ ಸಾಗಿಸಲು ವಿಶೇಷ ತೊಂದರೆ ಇದೆ ಮಳೆಗಾಲದಲ್ಲಂತೂ ದಾರಿ ಹೋಕರು ಹೊರೆ ಹೊರುವವರು, ಬೈಸಿಕಲ್ ಸವಾರರು ಬಿದ್ದು ಎದ್ದುಕೊಂಡು ಹೋಗಬೇಕಾದ ಪರಿಸ್ಥಿತಿಯು ವರೆಸವೂ ಇದೆ ಈ ಪ್ರಾಮುಖ್ಯವಾದ ರಸ್ತೆಯಾಗದೆ ಗ್ರಾಮಾಭಿವೃದ್ಧಿ ಹೊಂದುವಂತಿಲ್ಲ.

ಈ ಮೊದಲು ಊರ ಮಹಾಜನರು ನೇಕರು ಪ್ರಯತ್ನಿಸಿ, ಈ ರಸ್ತೆಯ ಅರ್ಧ ಕೆಲಸ ದಲ್ಲಿಯೇ ನಿಂತಿರುತ್ತದೆ. ಪ್ರಥಮ ಪಂಚವಾರ್ಷಿಕ ಯೋಜನೆಯ ಸಹಾಯದಿಂದ ಈ ರಸ್ತೆಯು ಕೊನೆಗೊಳಿಸಲ್ಪಡಲಿಲ್ಲ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಸಹಾಯದಿಂದಲಾದರೂ ಈ ರಸ್ತೆ ಪೂರೈಸಲ್ಪಡುವುದೇ? ಸಂಬಂಧಪಟ್ಟ ಅಧಿಕಾರಿಗಳೂ, ಪಂಚಾಯತ್ ಬೋರ್ಡುಗಳೂ ಈ ಕಡೆ ಗಮನವಿತ್ತು ಕಾರ್ಯತತ್ಪರರಾಗಿ, ಈ ರಸ್ತೆಯನ್ನು ಪೂರೈಸಿ ಊರ ಜನರಿಗೆ ಮಹದುಪಕಾರ ಗೈಯುವರೇ? ಎಂದು ಹಿರಿಯ ನಿವಾಸಿಗಳು ಬರೆಯುತ್ತಾರೆ.

ಎಸ್. ಜಿ. ಎಮ್ ಕಾಲೇಜಿನಲ್ಲಿ ಎಕನಾಮಿಕ್ಸ್, ಹಿಸ್ಟರಿ ಮತ್ತು ಕಾಮರ್ಸ್ ಎಸೋಸಿಯೇಶನ ಉದ್ಘಾಟನೆಯನ್ನು ಶ್ರೀ ಕೆ. ಆರ್. ಕೆ. ಬಟ್, ಡಿವಿಜನಲ್ ಮೆನೇಜರ್, ಲೈಫ್ ಇನ್ಸೂರೆನ್ಸ್ ಕೋರ್ಪೊರೇಶನ್ ಆಫ್ ಇಂಡಿಯಾ, ಉಡುಪಿ, ಅವರು ನೆರವೇರಿಸಿದರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಸಭಾಧ್ಯಕ್ಷತೆ ವಹಿಸಿದರು. ಕಾರ್ಯದರ್ಶಿ ಶ್ರೀ ಡಿ ಸೋಜರು ಧನ್ಯವಾದಗಳನ್ನಿತ್ತರು.

ನಗರ ಸಭೆಯ—ಅರ್ಜಂಟ್ ಸಭೆಯು

ತಾ. ೨೦ರಂದು ಸಂಜೆ ಸಭಾಗೃಹ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರೊವಿಡೆಂಟ್ ಫಂಡ್ ರೂಪ್ಯಾ 3000. ಮತ್ತು ನೀರು ಸರಬರಾಯಿ ಹಾಗೂ ಡ್ರೈನೇಜ್ ಘಟಿತ ರೂಪ್ಯಾ 16,000—ನ್ನು ಮೈಸೂರು ಸರಕಾರದ ಸಾಲದಲ್ಲಿ ಇಡಬೇಕೆಂದು ನಿರ್ಣಯವಾಯಿತು ಸರಕಾರದ ಸಾಲ ಪೂರೈಮಾಡಲಿ ಈ ಹಣವನ್ನು ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟು ಮೇಲಿರಿಸಬೇಕೆಂದು ತೀರ್ಮಾನಿಸಲಾಯಿತು.

ನಂತರ ಜರಗಬೇಕಾಗಿದ್ದ ಸಾಮಾನ್ಯ ಸಭೆಯು ಜರಗಲಿಲ್ಲ ಹಿರಿಯ ಸದಸ್ಯರಿಗೆ ಕೊಟ್ಟ ಮಿಟಿಂಗ್ ನೋಟಿಸುವು ಅಪೂರ್ಣವಾಗಿದ್ದುದೇ ಕಾರಣವಿದ್ದು ಅದನ್ನೇ ಎತ್ತಿತ್ತಿದರು ಎಲ್ಲರೂ ಮೂಕನಾಗಿದರು.

ಧರ್ಮಾರ್ಥ ಅಕ್ಕಿ ಹೆಂಚೋಣಿ—

ಸ್ಥಳೀಯ ಪಾಂಗಾಳ ನಾಯಕ್ ಬೇಂಕಿನ ವರಾಂಡದಲ್ಲಿ ತಾ. 12ರಂದು ಶ್ರೀ ಪಾಂಗಾಳ ಉಮೇಂದ್ರ ಶ್ರೀನಿವಾಸ ನಾಯಕರು ದೊಡ್ಡವರಿಗೆ ½ ಸೇರು ಅಕ್ಕಿ ಮತ್ತು ಎರಡಾಣೆಯಂತೆಯೂ ಚಿಕ್ಕವರಿಗೆ ¼ ಸೇರು ಅಕ್ಕಿ ಮತ್ತು ಒಂದಾಣೆಯಂತೆಯೂ ಧರ್ಮಾರ್ಥ ಅಕ್ಕಿ ಮತ್ತು ಮೊಬಲಗು ಹಂಚಲಿದುವರು.

ಉದ್ಘಾಟನಾ ಸಮಾರಂಭ

ನಾಯಕ್ ಆಯುರ್ವೇದಾಶ್ರಮದ ಮಾಂಟಿ ಕೇಂದ್ರವೊಂದನ್ನು ಕೆಥೋಲಿಕ್ ಚರ್ಚಿನ ಎದುರುಗಡೆಯಲ್ಲಿ ಇದೇ ತಾ. 8ರಂದು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡೀನರಾದ ಡಾ| ಆರ್. ಪಿ. ಕೊಟ್ಟಾಕಾರರವರು ಉದ್ಘಾಟಿಸಿದರು ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಸ್ವಾಗತಭಾಷಣ ಮಾಡಿದರು. ಡಾ| ಬಿ. ಜೆ ಆಚಾರ್, ಶ್ರೀ ಎಮ್. ಆರ್. ಭಟ್ ಶ್ರೀಮತಿ ಲೀಲಾ ಬಾಯಿ ಕಾಮತ್, ಡಾ| ಚಂದರ್ ಬೆಳ್ಳಾರೆ, ಡಾ| ರಾಮದಾಸ ಕೀಚಿ ಇವರು ಕಾರೋಟಿತ ಮಾತುಗಳನ್ನಾಡಿ, ಶುಭಕೋರಿದರು. ಶ್ರೀ ಎಸ್ ಎಲ್. ನಾರಾಯಣ ಭಟ್ಟರು ಧನ್ಯವಾದಗಳನ್ನಿತ್ತರು.

ಕುಂದಾಪುರ—

ಸ್ಥಳೀಯ ಮಹಾಜನ ಸಭೆಯೊಂದು ತಾ. 12ರಂದು ಶ್ರೀ ಕೆ. ಎಲ್. ಕಾರಂತರ ಅಧ್ಯಕ್ಷತೆಯ ಲ್ಲಿ ಜರಗಿ, ಕುಂದಾಪುರದಲ್ಲೊಂದು ಕಾಲೇಜು ಸ್ಥಾಪಿಸಬೇಕೆಂದು ನಿರ್ಣಯಿಸಲಾಯಿತು. ಮುಂದಿನ ಕಾರ್ಯಕ್ರಮಕ್ಕಾಗಿಯೂ ಶ್ರೀ ಎಮ್ ಎಮ್. ಹೆಗ್ಡೆಯವರ ಸಂಚಾಲಕತ್ವದಲ್ಲಿ ಸಮಿತಿಯೊಂದು ರಚಿಸಲ್ಪಟ್ಟಿತು.

ವಿನಂತಿ

'ನವಯುಗ'ದ 36 ನೇ ಸಂಚಿಕೆವು ಕಳದ ಅಗೋಸ್ತು ತಿಂಗಳಲ್ಲಿ ಅಂತ್ಯವಾಗಿ ಇದೇ ಸಪ್ಟಂಬರದಿಂದ 37 ನೇ ವರ್ಷಾರಂಭವಾಗಿದೆ. ಈ ಅವಧಿಗೆ ಯಾರ ಯಾರ ಚಂದಾ ಅವಧಿ ಮುಗಿಯುತ್ತದೋ, ಮತ್ತು ಯಾವ ಚಂದಾದಾರರ ಚಂದಾ-ಬಾಕಿ ಉಳಿದಿರುವುದೋ ಅವರೆಲ್ಲರೂ ದಯವಾಡಿ ಚಂದಾ ಹಣವನ್ನು ಆದಷ್ಟು ಬೇಗನೆ ಮನಿಯಾರ್ಡರು ಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ. ಇಲ್ಲವೆ ಯಾವದೊಂದೂ ಖರ್ಚಿಯಿಲ್ಲದೆ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿಮಾಡಬಹುದು.

ಉಡುಪಿ ಮೆನೇಜರ್
ನವಯುಗ

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 165/1957.

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ ಕಡೆಯಿಂದ ರಿಕವರಿ ಆಫೀಸರ್ M S. ಭಂಡಾರಿ —ವಾದಿ

ಮತ್ತು

ಯು. ಮಹಮ್ಮದ್ ಯಿಬ್ರಾಹಿಂ ಸಾಹೇಬ ಕೂಡಾ —ಪ್ರತಿವಾದಿರು

3ನೇ ಪ್ರತಿವಾದಿ ಎಮ್. ಉಸ್ಮಾನ್ ಸಾಹೇಬ ಯಿಮಾಮ್ ಸ್ಯಾಬರ ಮಗ ಕಾರ್ಕಳ ತಾಲ್ಲೂ ಮಾಡುಬಿದ್ರೆಯಲ್ಲಿರುವವನು-ಇವರಿಗೆ.

ಪ್ರತಿವಾದಿರುಬ್ಬಾಂಕಿಗೆ ತಾ. 24.5.1954 ರಲ್ಲು ರೂಪಾಯಿ 6000|-ಕ್ಕೆ ದಿಮಾಂಡ್ ನೋಟು ಬರೆಕೊಟ್ಟು 1ನೇ ಪ್ರತಿವಾದಿಯ ಹೆಸರಲ್ಲಿ ತೆರದ ಒಪರ್ ಡ್ರಾಫ್ಟ್ ಲೆಬ್ಬನಲ್ಲಿ ಪಡದ ಸಾಲದ ಬಾಬ್ತು ಪ್ರತಿವಾದಿರಿಂದ ವಾದಿಗೆ ಬರತಕ್ಕ ಅಸಲು ಬಡ್ಡಿ ಕೂಡಾ ರೂಪ್ಯಾ 2957 = 65ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯ ತಾರೀಕು 25—9—1957ಕ್ಕೆ ತಪ್ಪಿ ಬಗ್ಗೆ ಇಡೋಣಾಗಿಯದೆ-ಆ ದಿನ 5ನೇ ಪ್ರತಿವಾದಿಯು ಸ್ವತ ಹಾ ಯಾ ವಕೀಲರ ಮುಖಾಂತ್ರ ಸದರಿ ಕೋರ್ಟುಮುಂದೆ ಹಾಜರಾಗಿ ಉದಯರಿಸದೆಯಿದ್ದೆ ಅತರ ಗೈರ್ ಹಾಜರಿಯಿಂದ ಸದ್ರಿ ದಾವೆಯು ತೀರ್ಮಾನಿಸಲ್ಪಡುವದೆಂದು ಸದರಿ 3ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ.

M Damodar Kamath
Advoonte for Pltf.

ಉಡುಪಿ ದ ಕ. ತಾರೀಕು 10-9-1957.

ತಿರು ನೆಸ್ಸಿಯವರು ಮರಳಿದರು

ಭಾರತದ ಸಂಸತ್ಸದಸ್ಯರಾದ ಶ್ರೀ ತಿರು. ನೆಸ್ಸಿಯವರು ತಮ್ಮ ಅಮೆರಿಕಾದ ಪ್ರವಾಸವನ್ನು ಸಂಪೂರ್ಣಗೊಳಿಸಿ ಲಂಡನ್ ಮಾರ್ಗವಾಗಿ ಭಾರತಕ್ಕೆ ಆಗಮಿಸಿದ್ದಾರೆ. ಇವರು ಕಳೆದ ಎಪ್ರಿಲ್ ೧೭ರಂದು ಭಾರತೀಯ ರೈತ ಪ್ರತಿನಿಧಿಗಳ ಮುಖಂಡರಾಗಿ ಅಮೆರಿಕೆಗೆ ಹೋಗಿದ್ದರು. ಇವರು ಸಂಸತ್ ಸದಸ್ಯರಾಗಿದ್ದರೂ, ಪ್ರತಿಜ್ಞಾವಿಧಿಯು ಮುಗಿದಿಲ್ಲವೆಂದು ಕಿಂವದಂತಿಯಿದೆ.

ಗಾಂಧಿ ಸ್ಮಾರಕ ನಿಧಿ

ಬಿಹಾರದ ನಿವೃತ್ತ ರಾಜ್ಯಪಾಲರಾದ ಕರ್ನಾಟಕದ ಶ್ರೀ ರಂ. ರಾ. ದಿವಾಕರರು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ. ಅಲ್ಲದೇ ಶ್ರೀಮತಿ ಸುಚೇತಾ ಕೃಪಲಾನಿಯವರು ನಿಧಿಯ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು. ಈ ನಿಧಿಯ ತಾತ್ಕಾಲಿಕ ಅಧ್ಯಕ್ಷರಾಗಿದ್ದ ದೇವದಾಸ ಗಾಂಧಿಯವರ ಅಕಾಲ ನಿಧನದ ದೆಸೆಯಿಂದ ಈ ಸ್ಥಾನವು ಖಾಲಿ ಬಿದ್ದಿತ್ತು.

ರಾಜಕೀಯಕ್ಕೆ ತಿಲಾಂಜಲಿ!

ಸಮಾಜವಾದಿಗಳ ವಿಕೇಂದ್ರೀಕರಣವು ತಾನು ದೂರಸರಿಯುವುದರಿಂದ ಸಾಧ್ಯವೆನಿಸುವುದಾದರೆ, ತಾನು ಸಮಾಜವಾದಿ ಪಕ್ಷದಿಂದ, ಬೇಕಾದರೆ, ರಾಜಕೀಯಕ್ಕೇನೇ ತಿಲಾಂಜಲಿಯಿತ್ತು ಅದರಿಂದ ದೂರನಿಲ್ಲುವುದಾಗಿ ಸಮಾಜವಾದಿ ಪಕ್ಷದ ಧುರೀಣರಾದ ಡಾ. ರಾಮಮನೋಹರ ಲೋಹಿಯಾ ಬಹಿರಂಗಪಡಿಸಿದ್ದಾರೆ. ಡಾ ಲೋಹಿಯಾ ಒಬ್ಬರೇ ಪ್ರಜಾಪ್ರಭುತ್ವ ವಿರೋಧಿ ಎಂಬ ಅಭಿಪ್ರಾಯವು ಪ್ರಜಾಸಮಾಜವಾದಿಗಳಲ್ಲಿದೆಯಂತೆ.

ಶಿಕ್ಷಣ ವಿಧೇಯಕಕ್ಕೆ ವಿರೋಧ

ಕೇರಳದಲ್ಲಿ ಮೊನ್ನೆ ಮೊನ್ನೆ ಶಿಕ್ಷಣ ವಿಧೇಯಕವನ್ನು ವಿಧಾನ ಸಭೆಯು ಮಂಜೂರು ಮಾಡಿದುದಕ್ಕಾಗಿ ಕೇರಳದ ಕೆಥೋಲಿಕ ಆರ್ಚ ಬಿಷಪರು ಪ್ರತಿಭಟಿಸಿದರು. ಈ ವಿಧೇಯಕವು ಅಲ್ಪ ಸಂಖ್ಯಾತರ ಹಿತಸಂಬಂಧಗಳಿಗೆ ವಿರೋಧಿಯಾಗಿರುವುದರಿಂದ ರಾಷ್ಟ್ರಪತಿಗಳೂ ಕೇರಳದ ರಾಜ್ಯಪಾಲರೂ ಇದಕ್ಕೆ ಒಪ್ಪಿಗೆಯನ್ನೀಯಬಾರದೆಂದು ಅವರಿಗೆ ತಿಳಿಸಲು ಒಂದು ನಿಯೋಗವನ್ನು ರಚಿಸಿಕೊಂಡಿರುವರು. ಅಲ್ಲದೆ ಭಾರತದ ಪ್ರಧಾನ ಮಂತ್ರಿ ಹಾಗೂ ಶಿಕ್ಷಣ ಮಂತ್ರಿಗಳನ್ನು ಸಹ ಭೆಟ್ಟಿಯಾಗಬೇಕೆಂದು ನಿರ್ಧರಿಸಿದ್ದಾರೆ.

ಕಾಶ್ಮೀರಕ್ಕೊಂದು ಹೊಸ ಪಕ್ಷ

ಕಾಶ್ಮೀರದ ಪರಕಾರೀ ಪಕ್ಷವಾದ ರಾಷ್ಟ್ರೀಯ ಪರಿಷತ್ತಿನಿಂದ ಇತ್ತೀಚೆಗೆ ಹೊರಬಂದಿರುವ ಶ್ರೀ ಜಿ. ಎಂ. ಸಾದಿಕರು ತಾವು ಒಂದು ಹೊಸ ಪಕ್ಷವನ್ನು ಸ್ಥಾಪಿಸುವುದಾಗಿಯೂ ಅದಕ್ಕೆ ಪ್ರಜಾತಂತ್ರ ರಾಷ್ಟ್ರೀಯ ಪರಿಷತ್ತೆಂದು ತಾತ್ಪುರಿಕ ಹೆಸರನ್ನೀಯುವುದೆಂದೂ ಬಹಿರಂಗಪಡಿಸಿದ್ದಾರೆ. ಭಾರತದ ಇತರ ಭಾಗಗಳ ಯಾವುದೇ ಪಕ್ಷಗಳಿಂದ ದೂರವಿದ್ದು, ಕಾಶ್ಮೀರ-ಭಾರತ ಸಂಬಂಧ ಸಂವರ್ಧನೆ, ಕಾಶ್ಮೀರದ ಆರ್ಥಿಕ ಸಾಮಾಜಿಕಾಭಿವೃದ್ಧಿಗಳಿಗಾಗಿ ಅದು ಕಾರ್ಯಶೀಲವಾಗುವುದೆಂದೂ ಅವರು ತಿಳಿದ್ದಾರೆ

ಪಾಂಡಿಚೆರಿಯ ಹಸ್ತಾಂತರ

ಪಾಂಡಿಚೆರಿಯು ಕಾಯಿದೆಬದ್ಧವಾಗಿ ಫ್ರಾನ್ಸದಿಂದ ಭಾರತಕ್ಕೆ ಈ ವರ್ಷಾಂತ್ಯದೊಳಗಾಗಿ ಹಸ್ತಾಂತರಗೊಳ್ಳುವುದೆಂದು ತಿಳಿದು ಬಂದಿದೆ ಈ ವಿಚಾರ ಕ್ಕೆ ಪ್ರಧಾನಿ ನೆಹೆರೂ ಮತ್ತು ಫ್ರೆಂಚ್ ವಿದೇಶ ಮಂತ್ರಿ ಪೌರರಲ್ಲಿ ಇತ್ತೀಚೆಗೆ ನಡೆದ ಮಾತುಕತೆಗಳೂ ಪುಷ್ಟಿಯಿತ್ತಿರುವುದೆಂದೂ ಗೊತ್ತಾಗಿದೆ.

ಗ್ರಾಮದಾನ ಚಳುವಳಿ

ಗ್ರಾಮದಾನ ಚಳುವಳಿಗೆ ೧೦೦೦ ಹಳ್ಳಿಗಳನ್ನಿತ್ತು ಒಡಿಸ್ಸಾ ರಾಜ್ಯವು ಅಖಿಲ ಭಾರತದಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದಿದೆ. ೩೦,೦೦೦ ಹಳ್ಳಿಗಳನ್ನು ಸಂಗ್ರಹಿಸಬೇಕೆಂದು ಆಚಾರ್ಯ ವಿನೋಬಾರವರ ಗುರಿಯಿದೆ. ೩೦ ಲಕ್ಷ ಎಕ್ರೆಗಳಿಗಿಂತಲೂ ಹೆಚ್ಚು ಭೂಮಿಯಿತ್ತು ಭೂದಾನ ಚಳುವಳಿಯಲ್ಲಿ ಪ್ರಥಮ ಸ್ಥಾನವನ್ನು ಪಡೆದ ಬಿಹಾರವು ಗ್ರಾಮದಾನಕ್ಕೆ ೧೦೦ ಹಳ್ಳಿಗಳನ್ನಿತ್ತಿದೆ

ಕೇರಳದಲ್ಲಿ ಹಸ್ತಕ್ಷೇಪ?

ಕೇರಳದ ತೋಟಗಾರಿಕೆ ಪ್ರದೇಶದಲ್ಲಿ ತಲೆಯೆತ್ತಿದ ಕಾರ್ಮಿಕ ಅಶಾಂತಿಯು ವಿಷಯದಲ್ಲಿ ಶೀಘ್ರದಲ್ಲಿಯೇ ಕೇಂದ್ರವು ಕೈ ಹಾಕಬಹುದೆಂಬ ನಿರೀಕ್ಷೆಯಿದೆ. ಅಲ್ಲಿನ ಕಮ್ಯೂನಿಸ್ಟ್ ಮಂತ್ರಿವಂಶಳೆವನ್ನೇ ಪದಚ್ಯುತಿಗೊಳಿಸುವಂತಹ ತೀವ್ರ ಕಾರ್ಯಕ್ರಮವನ್ನು ಕೈಗೊಳ್ಳದೆ ಹೋದರೂ ಕಾರ್ಮಿಕ ಪರಿಸ್ಥಿತಿಯನ್ನು ದೇಶದ ಕಾಯದೆಗನುಗುಣವಾಗಿಎದುರಿಸಬೆಕೆಂದೂ ಹಿಂಸಾಚಾರಗಳಿಗೆ ಅವಕಾಶ ಕೊಡಬಾರದೆಂದೂ ರಾಜ್ಯ ಸರಕಾರಕ್ಕೆ ಸ್ನೇಹಪರ ಸಲಹೆಯನ್ನು ನೀಡಬಹುದೆಂದೂ ತಿಳಿದಿದೆ. ಡಾಲರುಗಳನ್ನು ಗಳಿಸುವ ಉದ್ದಿಮೆಯಾದ ತೋಟಗಾರಿಕೆಯನ್ನು ಅವಶ್ಯ ಸೇವೆಯೆಂದು ಸಾರಿ ಅಲ್ಲಿ ಸಾಮಾನ್ಯ ನಡೆಯುವುದನ್ನು ಅಕ್ರಮಗೊಳಿಸಬೇಕೆಂದು ಅಭಿಪ್ರಾಯವಿದೆ.

ಉಡುಪಿ

ಪ್ರಮಾಣಪತ್ರ ವಿತರಣೋತ್ಸವ-

ಉಡುಪಿ ಅಂಬಲಪಾಡಿ ಗೀತಾ ಭವನದಲ್ಲಿ ನೆರವೇರಿತ್ತಿರುವ ಅಖಿಲ ಭಾರತೀಯ ಸಂಸ್ಕೃತ ಭಾಷಾ ಪ್ರಚಾರಸಮಿತಿಯ ಸಂಸ್ಕೃತ ಭಾಷಾ ಪರೀಕ್ಷೆಗಳ ಚತುರ್ಥ ಪ್ರಮಾಣಪತ್ರ ವಿತರಣೋತ್ಸವವು ಆ ರಂದು ಶ್ರೀ ಬಿ. ಅನಂತಕೃಷ್ಣ ಸಾಮಗರ ಅಧ್ಯಕ್ಷತೆಯಲ್ಲಿ ನಡೆಯಿತು. ಗೀತಾ ಭವನದ ಅಧ್ಯಕ್ಷ ಶ್ರೀ ದೇವದಾಸರು ಸ್ವಾಗತವನ್ನು ಬಯಸಿದರು ಕಾರ್ಯದರ್ಶಿ ಗೋಪಿಚಂದರಾಯರು ಸಂಕ್ಷಿಪ್ತ ವರದಿಯನ್ನು ಓದಿದರು ಆ ಮೇಲೆ ಶ್ರೀರಂಗಾಚಾರ್ಯ ಕೆ. ಎಲ್. ಎನ್ ಉಪಾಧ್ಯಾಯ ಮತ್ತು ಎ. ಪರಿದಂಜ ಬಲ್ಲಾಳರು ಸಂಸ್ಕೃತಾಭ್ಯಾಸದ ಮಹತ್ವಕುರಿತಾಗಿ ಉಪನ್ಯಾಸವಿತ್ತರು. ಅಧ್ಯಕ್ಷರು ಳಿಳಿದ ಪೆಬ್ರವರಿ ತಿಂಗಳ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ೨೧ ಮಂದಿ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಣೆಮಾಡಿದರು. ಮತ್ತು ಭಾರತೀಯ ಸಂಸ್ಕೃತಿಯನ್ನುಳಿಸಲು ಸಂಸ್ಕೃತ ಭಾಷೆಯನ್ನು ಅಳ್ಳಸಿಸಿ, ಅದರಲ್ಲಿ ಪಾಂಡಿತ್ಯವನ್ನು ಪಡೆಯುವಂತಾಗಬೇಕೆಂದು ಹೇಳಿದರು.

ಅದೇ ದಿನ ಮಧ್ಯಾಹ್ನ ಗೀತಾಭವನದ ಸದಸ್ಯರ ವಾರ್ಷಿಕ ಮಹಾಧಿವೇಶನವು ಶ್ರೀ ಬಿ ನಾರಾಯಣ ಪರ್ವರ ಅಧ್ಯಕ್ಷತೆಯಲ್ಲಿ ಸೇರಿ ಗತ ವರ್ಷದ ವರದಿ, ಲೆಕ್ಕಪತ್ರಗಳನ್ನು ಮಂಜೂರುಮಾಡಿ, ಸಿದ್ಧಾರಿಸಿದ ಘಟನೆಯನ್ನು ಸ್ವೀಕರಿಸಿತು. ಮುಂದಿನ ವರ್ಷಕ್ಕೆ ಶ್ರೀ ಕೆ. ಎಲ್. ಎನ್. ಉಪಾಧ್ಯಾಯರು ಅಧ್ಯಕ್ಷರಾಗಿಯೂ ಶ್ರೀ ಎಸ್. ಗೋಪಿಚಂದರಾವ್ ಇವರು ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಕೆ ಎ ದೇವದಾಸ ಮೊದಲಾದ ಇತರ ಆರುಮಂದಿ ಸದಸ್ಯರಾಗಿಯೂ ಒಮ್ಮತದಿಂದ ಆರಿಸಲ್ಪಟ್ಟರು.

ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿ-

ಯ ಆಶ್ರಯದಲ್ಲಿ ಹಿಂದೀ ತರಗತಿಗಳನ್ನು ನಡೆಸುತ್ತಿರುವಾಗ ರಾಷ್ಟ್ರಭಾಷಾ ಶಿಕ್ಷಣ ಶಿಬಿರದ ಹೊಸ ಪ್ರಾಥಮಿಕ, ಮಧ್ಯಮ ರಾಷ್ಟ್ರಭಾಷಾ, ಪ್ರವೇಶಿಕ ಹಾಗೂ ವಿಶಾರದ ಪೂರ್ವಾರ್ಧ ಮತ್ತು ಉತ್ತರಾರ್ಧ ವರ್ಗಗಳು ಇದೇ ಸೆಪ್ಟಂಬರ ೩೦ರಿಂದ ಪ್ರಾರಂಭವಾಗಿರುವುವು. ಈ ವರ್ಗಗಳಿಗೆ ಸೇರಲು ಅಪೇಕ್ಷಿಸುವವರು ಚಿತ್ತರಂಜನ ಭವನದಲ್ಲಿರುವ ಸಮಿತಿಯ ಕಾರ್ಯಾಲಯದಲ್ಲಿ ವಿಚಾರಿಸಬೇಕಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಉಡುಪಿ - ಬೈಲೂರು - ಕೊರಂಗ್ರಪಾಡಿ - ಉದ್ಯಾವರ ರಸ್ತೆ-

ಉಡುಪಿ ನಗರವನ್ನು ಬೈಲೂರು ಕೊರಂಗ್ರಪಾಡಿ ಗ್ರಾಮಗಳೊಂದಿಗೆ ಸಂಪರ್ಕಗೊಳಿಸುವ ಒಂದು ರಸ್ತೆಯು ಈ ಗ್ರಾಮಗಳಿಗೆ ಅತಿ ಅವಶ್ಯವಿದೆ. ಹತ್ತಿರವೇ ಇದ್ದ ಈ ಗ್ರಾಮಗಳು ಉಡುಪಿ ನಗರದೊಂದಿಗೆ ಪ್ರತ್ಯಕ್ಷಿಸಲ್ಪಟ್ಟ ಯಾವ ಒಂದು ಸೌಕರ್ಯ ಅನುಕೂಲತೆಗಳು ಇಲ್ಲವಾಗಿವೆ ಶಾಲಾ ಯುವಜನರೂ ನಿವಾಸಿಗಳೂ ವಿಶೇಷ ತೊಂದರೆಗೀಡಾಗಿದ್ದಾರೆ. ಯಾವ ವಾಹನಗಳು (ಗಾಡಿ, ಕಾರು) ಜರಿಯಿನಲ್ಲಿ ಬರಬೇಕಾದರೆ ಉದಿಯಾವರವನ್ನು ಸುತ್ತುವರಿದುಕೊಂಡು ಬರಬೇಕಾಗಿದೆ ಕಾಯಿಲೆ ಬಿದ್ದವರನ್ನು ಆಸ್ಪತ್ರೆಗೆ ಸಾಗಿಸಲು ವಿಶೇಷ ತೊಂದರೆ ಇದೆ ಮಳೆಗಾಲದಲ್ಲಂತೂ ದಾರಿಹೋಕರು ಹೊರೆ ಹೊರುವವರು, ಬೈಸಿಕಲ್ ಸವಾರರು ಬಿದ್ದು ಎದ್ದುಕೊಂಡು ಹೋಗಬೇಕಾದ ಪರಿಸ್ಥಿತಿಯು ವರ್ಣನೆವೂ ಇದೆ ಈ ಸ್ಥಾಮುಖ್ಯವಾದ ರಸ್ತೆಯಾಗದೆ ಗ್ರಾಮಾಭಿವೃದ್ಧಿ ಹೊಂದುವಂತಿಲ್ಲ.

ಈ ಮೊದಲು ಊರ ಮುಖಂಡರುಗಳ ಸೇರಿ ಪ್ರಯತ್ನಿಸಿ, ಈ ರಸ್ತೆಯು ಅರ್ಧ ಕೆಲಸದಲ್ಲಿಯೇ ನಿಂತಿರುತ್ತದೆ ಪ್ರಥಮ ಸಂಪನ್ಮೂಲ ಯೋಜನೆಯ ಸಹಾಯದಿಂದ ಈ ರಸ್ತೆಯು ಕೊನೆಗೊಳಿಸಲ್ಪಟ್ಟಿಲ್ಲ ದ್ವಿತೀಯ ಪಂಚವರ್ಷಾರ್ಥಿಕ ಯೋಜನೆಯ ಸಹಾಯದಿಂದಾದರೂ ಈ ರಸ್ತೆ ಪೂರೈಸಲ್ಪಡುವುದೇ? ಸಂಬಂಧಪಟ್ಟ ಅಧಿಕಾರಿಗಳೂ, ಸಂಚಾಯತ್ ಬೋರ್ಡುಗಳೂ ಈ ಕಡೆ ಗಮನವಿತ್ತು ಕಾರ್ಯತತ್ಪರರಾಗಿ, ಈ ರಸ್ತೆಯನ್ನು ಪೂರೈಸಿ ಊರ ಜನರಿಗೆ ಮಹದುಪಕಾರ ಗೈಯುವರೇ? ಎಂದು ಹಿರ್ವ ನಿವಾಸಿಗಳು ಬರೆಯುತ್ತಾರೆ.

ಎಸ್. ಜಿ. ಎಸ್ ಕಾಲೇಜಿನಲ್ಲಿ ಎಕನಾಮಿಕ್ಸ್, ಹಿಸ್ಟರಿ ಮತ್ತು ಕಾಮರ್ಸ್ ಎಸೋಸಿಯೇಶನ ಉದ್ಘಾಟನೆಯನ್ನು ಶ್ರೀ ಕೆ. ಆರ್. ಕೆ. ಭಟ್, ಡಿವಿಜನಲ್ ಮೆನೇಜರ್, ಲೈಫ್ ಇನ್ಸೂರೆನ್ಸ್ ಕೋರ್ಪರೇಶನ್ ಆಫ್ ಇಂಡಿಯಾ, ಉಡುಪಿ, ಅವರು ನೆರವೇರಿಸಿದರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಸಭಾಧ್ಯಕ್ಷತೆ ವಹಿಸಿದರು. ಕಾರ್ಯದರ್ಶಿ ಶ್ರೀ ಡಿ ನೋಜರು ಧನ್ಯವಾದಗಳನ್ನಿತ್ತರು.

ನಗರ ಸಭೆಯ-

ಆರ್ಡರ್ಸ್ ಸಭೆಯು ತಾ. ೨೦ರಂದು ಸಂಜೆ ಸಭಾಸದ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರೊವಿಡೆಂಟ್ ಫಂಡ್ ರೂಪಾಯಿ 3000. ಮತ್ತು ನೀರು ಸರಬರಾಯಿ ಹಾಗೂ ಡ್ರೈನೇಜ್ ಫಂಡಿನ ರೂಪಾಯಿ 16,000-ವನ್ನು ಮೈಸೂರು ಸರಕಾರದ ಸಾಲದಲ್ಲಿ ಇಡಬೇಕೆಂದು ನಿರ್ಣಯವಾಯಿತು ಸರಕಾರದ ಸಾಲ ಪಾತ್ರಕಾರ್ಯಗಳಲ್ಲಿ ಈ ಹಣವನ್ನು ನೇರಸಾಲ ಸೇವಿಂಗ್ಸ್ ಸರ್ಟಿಫಿಕೇಟು ಮೇಲಿಸಬೇಕೆಂದು ತೀರ್ಮಾನಿಸಲಾಯಿತು

ನಂತರ ಜರಗಬೇಕಾಗಿದ್ದ ಸಾಮಾನ್ಯ ಸಭೆಯು ಜರಗಲಿಲ್ಲ ಹಿರ್ವ ಸದಸ್ಯರಿಗೆ ಕೊಟ್ಟ ಮೀಟಿಂಗ್ ನೋಟಿಸುವು ಅಪೂರ್ಣವಾಗಿದ್ದುದೇ ಕಾರಣವಿದ್ದು ಅವನ್ನೇ ಎತ್ತಿಹಿಡಿದು ಎಲ್ಲರೂ ಮಾತನಾಡಿದರು.

ಧರ್ಮಾರ್ಥ ಅಕ್ಕಿ ಹಂಚೋಣ-

ಸ್ಥಳೀಯ ಪಾಂಗಾಳ ನಾಯಕ್ ಬೇಂಕಿನ ವರಾರದಲ್ಲಿ ತಾ ೧೩ರಂದು ಶ್ರೀ ಪಾಂಗಾಳ ಉಮೇಶ್ರ ಶ್ರೀನಿವಾಸ ನಾಯಕರು ದೊಡ್ಡವರಿಗೆ ½ ಸೇರು ಅಕ್ಕಿ ಮತ್ತು ಎರಡಾಣೆಯಂತೆಯೂ ಚಿಕ್ಕವರಿಗೆ ¼ ಸೇರು ಅಕ್ಕಿ ಮತ್ತು ಒಂದಾಣೆಯಂತೆಯೂ ಧರ್ಮಾರ್ಥ ಅಕ್ಕಿ ಮತ್ತು ಮೊಬಲಗು ಹಂಚಲಿರುವರು.

ಉದ್ಘಾಟನಾ ಸಮಾರಂಭ

ನಾಯಕ್ ಆಯುರ್ವೇದಾಶ್ರಮದ ಮೂಂಗಾಟ ಕೇಂದ್ರವೊಂದನ್ನು ಕೆಮೋಲಿಕ್ ಚರ್ಚಿನ ಎದುರುಗಡೆಯಲ್ಲಿ ಇದೇ ತಾ ೩೦ರಂದು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡೀನರಾದ ಡಾ। ಆರ್. ಸಿ. ಕೊಟ್ಟಕಾರ್‌ರವರು ಉದ್ಘಾಟಿಸಿದರು ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಸ್ವಾಗತಭಾಷಣ ಮಾಡಿದರು. ಡಾ। ಬಿ. ಜಿ ಆಚಾರ್, ಶ್ರೀ ಎಮ್. ಆರ್. ಭಟ್ ಶ್ರೀಮತಿ ಲಿಲಾ ಬಾಯಿ ಕಾಮತ್, ಡಾ। ಚಂದ್ರಶೇಖರ್ ಬೆಳ್ಳಾರೆ, ಡಾ। ರಾಮದಾಸ ಕಿಣಿ ಇವರು ಕಾಮೋಚಿತ ಮಾತುಗಳನ್ನಾಡಿ, ಶುಭಕೋರಿದರು ಶ್ರೀ ಎಸ್ ಎಲ್. ನಾರಾಯಣ ಭಟ್ಟರು ಧನ್ಯವಾದಗಳನ್ನಿತ್ತರು.

ಕುಂದಾಪುರ-

ಸ್ಥಳೀಯ ಮಹಾಜನ ಸಭೆಯೊಂದು ತಾ. ೧೮ರಂದು ಶ್ರೀ ಕೆ. ಎಲ್. ಕಾರಂತರ ಅಧ್ಯಕ್ಷತೆಯ ಲ್ಲಿ ಜರಗಿ, ಕುಂದಾಪುರದಲ್ಲೊಂದು ಕಾಲೇಜು ಸ್ಥಾಪಿಸಬೇಕೆಂದು ನಿರ್ಣಯ ಸಲಾಯಿತು. ಮುಂದಿನ ಕಾರ್ಯಕ್ರಮಗಳನ್ನಾಗಿ ಶ್ರೀ ಎಮ್ ಎಮ್. ಹೆಗ್ಡೆಯವರ ಸಂಚಾಲಕತ್ವದಲ್ಲಿ ಸಮಿತಿಯೊಂದು ರಚಿಸಲ್ಪಟ್ಟಿತು.

ವಿನಂತಿ

'ನವಯುಗ'ದ 36 ನೇ ಸಂಪುಟವು ಕಳೆದ ಆಗೋಸ್ತು ತಿಂಗಳಲ್ಲಿ ಅಂತ್ಯವಾಗಿ ಇದೇ ಸೆಪ್ಟಂಬರದಿಂದ 37 ನೇ ವರ್ಷಾರಂಭವಾಗಿದೆ. ಈ ಅವಧಿಗೆ ಯಾರ ಯಾರ ಚಂದಾ ಅವಧಿ ಮುಗಿಯುತ್ತದೋ, ಮತ್ತು ಯಾವ ಚಂದಾದಾರರ ಚಂದಾ-ಬಾಕಿ ಉಳಿದಿರುವುದೋ ಅವರೆಲ್ಲರೂ ದಯವಾಡಿ ಚಂದಾ ಹಣವನ್ನು ಆದಷ್ಟು ಬೇಗನೆ ಮನಿಯಾರ್ಡರು ಮಾಡಿ ಕೃತಾರ್ಥಿಸಿಕೊಡಬೇಕಾಗಿ ವಿನಂತಿ. ಇಲ್ಲದೆ ಯಾವದೊಂದೂ ಖರ್ಚಿಯಿಲ್ಲದೆ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಾಮತಿಮಾಡಬಹುದು.

ಉಡುಪಿ ಮೆನೇಜರ್
ನವಯುಗ

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 165/1957.

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ ಕಡೆಯಿಂದ ರಿಕವರಿ ಆಫೀಸರ್ M S. ಭಂಡಾರಿ ...ವಾದಿ

ಮತ್ತು

ಯು. ಮಹಮ್ಮದ್ ಯಿಬ್ರಾಹಿಂ ಸಾಹೇಬ ಕೂಡಾ ...ಪ್ರತಿವಾದಿರು

ನೀವೇ ಪ್ರತಿವಾದಿ ಎಮ್. ಉಸ್ಮಾನ್ ಸಾಹೇಬ ಯಿಮಾಮ್ ಸ್ಯಾಬರ ಮಗ ಕಾರ್ಕಳ ತಾಲ್ಲೂ ಮೂಡುಬಿದ್ರೆಯಲ್ಲಿರುವವ-ಇವರಿಗೆ.

ಪ್ರತಿವಾದಿರುಬ್ಯಾಂಕಿಗೆ ತಾ. 24-5-1954 ರಲ್ಲು ರೂಪಾಯಿ 6000/-ಕ್ಕೆ ಡಿಮಾಂಡ್ ನೋಟು ಬರೆಕೊಟ್ಟು 1ನೇ ಪ್ರತಿವಾದಿಯು ಹೆಸರಲ್ಲಿ ತೆರದ ಒವರ್ ಡ್ರಾಫ್ಟ್ ಲೆಕ್ಕದಲ್ಲಿ ಪಡೆದ ಸಾಲದ ಬಾಬ್ತು ಪ್ರತಿವಾದಿರಿಂದ ಬಾಕಿಗೆ ಬರತಕ್ಕ ಅಸಲು ಬಡ್ಡಿ ಕೂಡಾ ರೂಪಾಯಿ 2057 = 65ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯು ತಾರೀಕು 25—9—1957ಕ್ಕೆ ತನ್ನ ಬಗ್ಗೆ ಇಡೋಣಾಗಿದೆ-ಆ ದಿನ 5ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಂತ್ರ ಸದರಿ ಕೋರ್ಟುಮುಂದೆ ಹಾಜರಾಗಿ ಉದಹರಿಸದೆಯಿದ್ದೆ ಆತರ ಗೈರ್ ಹಾಜರಿಯಿಂದ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದೆಂದು ಸದರಿ 3ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣಾಗಿದೆ.

M Damodar Kamath
Advocate for Plfl.

ಉಡುಪಿ ದಿ ೪. ತಾರೀಕು 10-9-1957.

ಮಂಗಳೂರು

ಓಣಂ ದಿನಾಚರಣೆ— ಮಂಗಳೂರ ಮಲೆಯಾಳಿಗಳು ಕೇರಳದ ನಾಡಹಬ್ಬವಾದ 'ಓಣಂ' ಉತ್ಸವವನ್ನು ತಾ ೦೧ಲ್ಲು ಗವರ್ನಮೆಂಟ್ ಕಾಲೇಜಿನಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ| ಜಿ. ಡಿ. ವೇಲಿಯತ್, ಅವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಶ್ರೀ ಕೃಷ್ಣನ್, ಅವರು ಸ್ವಾಗತ ಭಾಷಣ ಮಾಡಿದರು. ಡಾ| ಮಹಮ್ಮದಾಲಿ, ಶ್ರೀ ರಾಮಕೃಷ್ಣನ್ ಮೊದಲಾದವರು ಕಾಲೋಚಿತ ಭಾಷಣಮಾಡಿದರು. ಕಥಕ್ಕಳಿ ಮೊದಲಾದ ಕಲಾ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

ಕೆನರಾ ಬೇಂಕ್ ಲಿಮಿಟೆಡ್— ಇದರ ಮೈಸೂರು ಸರಕಾರವು ಇದೀಗ ಪ್ರಕಟಿಸಿರುವ ಸೇಕಡಾ 4½ ಬಡ್ಡಿಯ ಮೂರು ಕೋಟಿ ರೂಪಾಯಿಯ ಸಾಲಪತ್ರದಲ್ಲಿ ರೂಪಾಯಿ ಐವತ್ತು ಲಕ್ಷ ವಿನಿಯೋಗಿಸಲು ನಿರ್ಧರಿಸಿದ್ದಾರೆ. ಸಾರ್ವಜನಿಕರು ಈ ಸಾಲ ಪತ್ರದಲ್ಲಿ ಹಣ ವಿನಿಯೋಗಿಸಲು ಅನುಕೂಲವಾಗುವಂತೆ ಅದೇ ಸಾಲದ ಭದ್ರತೆಯ ಮೇಲೆ ಮುಂಗಡ ಕೊಡಲು ಸೌಕರ್ಯ ಮಾಡಿದೆ. ಮೈಸೂರು ಸರಕಾರದೊಡನೆ ಈ ಸಾಲದ ವಿಚಾರದಲ್ಲಿ ಎಲ್ಲಾ ಬಗೆಯಲ್ಲಿಯೂ ಸಹಕರಿಸಲು ಕೆನರಾ ಬೇಂಕ್ ನಿರ್ಧರಿಸಿದೆ. ಅಲ್ಲದೆ ಮೈಸೂರಿನಲ್ಲಿರುವ ಬ್ಯಾಂಕಿನ ಶಾಖೆಗಳಿಗೆ ಸಂದರ್ಶನವೀಯಲು ಶ್ರೀ ಎ. ಜಿ. ಪೈಯವರನ್ನು ನೇಮಕ ಮಾಡಲಾಗಿದೆ.

ಲೋಕ ಸಭೆಯಲ್ಲಿ ಶ್ರೀ ಕೆ. ಅರ್ ಆಚಾರ್ಯರ ವಾದ— ದಕ್ಷಿಣ ಕನ್ನಡ ಜಿಲ್ಲೆಯ ಸುಮಾರು ಲಕ್ಷ ಮಂದಿಯ ತುಳುವ ಜನಾಂಗವು ರಾಜ್ಯ ಪುನರ್ರಚನೆಯಿಂದಾಗಿ ಇಬ್ಭಾಗವಾಗಿದೆ. ತೆಲುಗು, ತಮಿಳು, ಕನ್ನಡ, ಮಲೆಯಾಳಿಗಳಂತೆ ತುಳು ಭಾಷೆಯು ದ್ರಾವಿಡ ಭಾಷೆಗಳಲ್ಲೊಂದಾಗಿದೆ. ಕಾಸರಗೋಡನ್ನು ಕೇರಳಕ್ಕೆ ಸೇರಿಸಿದುದರಿಂದ ಒಂದೇ ಆಡಳಿತಯಲ್ಲಿದ್ದ ತುಳು ಜನಾಂಗ ಇಬ್ಭಾಗವಾಗಿ, ಸುಮಾರು 1,80,000 ಮಂದಿ ಕೇರಳಕ್ಕೆ ಅರೆಳು ಲಕ್ಷ ಮಂದಿ ಮೈಸೂರಿಗೆ ಹೀಗೆ ಎರಡು ಆಡಳಿತಕ್ಕೆ ಸೇರುವಂತಾಗಿದೆ. ಈ ಜನಾಂಗವನ್ನು ಈ ರೀತಿ ಎರಡು ಭಾಗಗಳಾಗಿ ಮಾಡಿದುದು ನ್ಯಾಯವಲ್ಲ. ಇದನ್ನು ಸರಿಪಡಿಸಬೇಕು ಎಂದು ಶ್ರೀ ಕೆ. ಅರ್ ಆಚಾರ್, ಎಮ್. ಪಿ. ಅವರು ಲೋಕ ಸಭೆಯಲ್ಲಿ ಆರ್ಥವಾಸೂದೆಯ ಚರ್ಚೆಯ ವೇಳೆ ವಾದಿಸಿದ್ದಾರೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ
O. S 176/1957.

ಕೆ. ಶ್ರೀನಿವಾಸಾಚಾರ್ಯ, ಜನರಲ್ ಏಜಂಟ್—ಸರಾಫ್ ನಾರಾಯಣ ಭಟ್ಟ—ವಾದಿ

ಮತ್ತು

ಅಪ್ಪಿಯಾನೆ ಸುಶೀಲ ಭೋಜರಾಯರ ವಿಧವೆ-ಉಡುಪಿ ತಾಲ್ಲೂ ಶಿವಳ್ಳಿ ಗ್ರಾಮದ ಕುಂಜಿಬೆಟ್ಟು —೨ನೇ ಪ್ರತಿವಾದಿಯಿಸರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ-

ನಿಮ್ಮ ಗಂಡ ಮೃತ ಭೋಜರಾಯರು ಕುಟುಂಬದ ಯಜಮಾನರಾಗಿ ೨ನೇ ಪ್ರತಿವಾದಿಯ ಕೂಡುಪಿಕೆಯಿಂದ ತಾ. 16.11.1943 ರಲ್ಲಿ ರಿಜಿಸ್ಟ್ರಿ ನಿಶಿಂ ಬರಕೊಟ್ಟ ಸ್ಥಿರಾಸ್ತಿ ಈಡು ದಸ್ತಾವೇಜಿನ ಬಾಬ್ತು ಅಸ್ಲು ಬಡ್ಡಿ ಹಣಗಳನ್ನು ಬರವಾಡಿಕೊಳ್ಳುವರೆ ವಾದಿಯು ದಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾ. 17 9 - 1957ಕ್ಕೆ ಇಟ್ಟಿದೆ ಉದಾಹರಿಸುವಂಥಾದ್ದಿದ್ದರೆ ಆ ದಿವಸ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಬ್ಸೀರಿಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು

K. Ramakrishna Rao
Vakil for Plaintiff.

Udipi Dated 6--9—1957

ಬೊಂಬಾಯಿ

ಸಾಫಲ್ಯ ಸೇವಾಸಂಘ— ಇದರ ಹದಿನಾರನೇ ವಾರ್ಷಿಕೋತ್ಸವವು ಇದೇ ತಾ. 1 ರಂದು ಕಾವಾಜಾಲಿನಲ್ಲಿ ಶ್ರೀಮತಿರಮಣಿ ಕೆ. ರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ರಾಮಸ್ಸ ಸಿ. ಮೂಲ್ಕಿಯವರು ಸ್ವಾಗತಿಸಿದ ಬಳಿಕ ಶ್ರೀ ಬಿ ತಿಮ್ಮಪ್ಪನವರು ಉತ್ಸವಕ್ಕೆ ಬಂದಿದ್ದ ಶುಭ ಸಂದೇಶಗಳನ್ನು ಓದಿದರು. ಶ್ರೀ ಲಕ್ಷ್ಮಣ ಎ. ಕುಂದರವರು ಮಾತನಾಡುತ್ತಾ ಇಂದಿನ ಸಭೆಯ ಅಧ್ಯಕ್ಷಿಣಿಯವರು ಸಭೆಗೆ ಸನಾಜದ ಪರಿವಾರದಲ್ಲಿ ಪ್ರಭುವು, ಎಮ್. ಎ. ಪದವೀಧರರಿರುವರೆಂದು ಹೇಳಿದರು ಶ್ರೀಗಳಾದ ಬಿ. ಎಮ್. ಅನಂತ ಜೆ. ವಿ. ಬಂಗೇರ, ಡಿ. ಸಿ ಬಂಗೇರ ಮೊದಲಾದವರು ಸಂಘದ ಚಟುವಟಿಕೆಗಳನ್ನು ಕೊಂಡಾಡಿ ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷಿಣಿಯರು ತಮ್ಮ ಭಾಷಣದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯವರು ಬೊಂಬಾಯಿಯಲ್ಲಿ ವಾಸ್ತವ್ಯಮಾಡಿಕೊಂಡು ಇಷ್ಟು ಕಾಲವಾದರೂ ಆವರೆದೇ ಅದೆ ಪ್ರಾಥ ಆಧುನಿಕಲಾಕಾಲೆಗಳಲ್ಲದಿರುವುದು ಶೋಚನೀಯವೆಂದ ಅಭಿಪ್ರಾಯವಿತ್ತು ಆ ನ್ಯೂನತೆ ಹೋಗಲಾಡಿಸಲು ಮನಸ್ಸು ಮಾಡಬೇಕೆಂದು ಆಶೀರ್ವಚಿಸಿದರು. ಶ್ರೀ ಎಮ್. ನಾರಾಯಣನವರು ಧನ್ಯವಾದಗಳನ್ನಿತ್ತರು.

ಮದ್ರಾಸು

ಮೈಸೂರು ರಾಜ್ಯಪಾಲರಿಗೆ ಸತ್ಕಾರ— ಮದ್ರಾಸಿನ ಹೋಟೆಲ್ ದಾಸಪ್ರಕಾಶದಲ್ಲಿ, ಮಾಲೀಕರಾದ ಶ್ರೀ ಕೆ. ಸೀತಾರಾಮರಾಯರು ಇದೇ ತಾ. 1 ರಲ್ಲು ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಭೋಜನ ಸತ್ಕಾರವಿತ್ತು ಗೌರವಿಸಿದರು ಮದ್ರಾಸ್ ಎಸೆಂಬ್ಲಿಸ್ಪೀಕರ್ ಡಾ. ಯು. ಕೃಷ್ಣರಾವ್, ಕೌನ್ಸಿಲಿನ ಅಧ್ಯಕ್ಷ ಡಾ ಪಿ. ವಿ. ಚೆರಿಯನ್, ಮೇಯರ್ ಶ್ರೀ ಕೆ. ಎನ್ ಶ್ರೀನಿವಾಸನ್ ಮೊದಲಾದವರು ಸಮಾರಂಭಕ್ಕೆ ಅಗಮಿಸಿದ್ದರು. ಶ್ರೀ ಸೀತಾರಾಮರಾಯರು ರಾಜ್ಯಪಾಲರನ್ನು ಸ್ವಾಗತಿಸಿ ಅವರ ಶುಭಾಶಯಗಳೆಂದ ದಾಸಪ್ರಕಾಶ ಸಂಸ್ಥೆಯು ಬೆಳೆದುಬರುತ್ತಿದೆ ಎಂದರು. ರಾಜ್ಯಪಾಲರು ಭಾಷಣಮಾಡುತ್ತಾ ದಾಸಪ್ರಕಾಶವು ಹಿಂದುಸ್ಥಾನದಲ್ಲಿ ಮಾತ್ರವಲ್ಲದೆ ಪೂರ್ವಪ್ರದೇಶಗಳಲ್ಲಿಯೇ ಅತ್ಯುತ್ತಮ ವಸತಿಗೃಹಗಳಲ್ಲೊಂದಾಗಿದೆ ಎಂದರು. ಕೊನೆಯಲ್ಲಿ ಶ್ರೀ ಸೀತಾರಾಮರಾಯರ ಮಕ್ಕಳಾದ ಕುಮಾರಿ ವಿಜಯ, ಕುಮಾರಿ ಗೀತಾ ಮತ್ತು ಬೇಬಿ ತಾರಾ ಇವರ ನೃತ್ಯಕಲಾ ಪ್ರದರ್ಶನವಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಸರ್ವ ಧರ್ಮ ಸಮ್ಮೇಲನದ ರಜತೋತ್ಸವ— ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಸರ್ವ ಧರ್ಮ ಸಮ್ಮೇಲನ ಮತ್ತು ಸಾಹಿತ್ಯ ಸಮ್ಮೇಲನಗಳನ್ನು ಸಮಾರಾಧಿ ದೀಪೋತ್ಸವದ ಕಾಲದಲ್ಲಿ ಅರಂಭಿಸಿ ಈ ವರ್ಷಕ್ಕೆ ಇಪ್ಪತ್ತೈದು ವರ್ಷಗಳು ಸಲವುವು ಈ ಸಮ್ಮೇಲನಗಳ ರಜತೋತ್ಸವವನ್ನು ಈ ವರ್ಷ ವಿಜೃಂಭಣೆಯಿಂದ ಜರಗಿಸಲು ಶ್ರೀ ಧರ್ಮಸ್ಥಳದ ಶ್ರೀ ರತ್ನವರ್ಮ ಹೆಗ್ಗಡೆಯವರು ತಕ್ಕ ಸಿದ್ಧತೆಗಳನ್ನು ನಡೆಸುತ್ತಿರುವರು. ರಜತೋತ್ಸವದ ಅಂಗವಾಗಿ ಇದೇ ನವೆಂಬರ ತಾ. 19ರಲ್ಲಿ ಸರ್ವ ಧರ್ಮ ಸಮ್ಮೇಲನ, ತಾ. 20ರಲ್ಲಿ ಸಾಹಿತ್ಯ ಸಮ್ಮೇಲನ ಮತ್ತು ತಾ. 21ರಲ್ಲಿ ಸಂಗೀತಾದಿ ಕಲೆಗಳ ಕಾರ್ಯಕ್ರಮವಿದೆಯೆಂದೂ, ಇದೇ ಸಂದರ್ಭದಲ್ಲಿ ವಿವಿಧ ವಸ್ತು ಪ್ರದರ್ಶನವೊಂದನ್ನು ಜರಗಿಸುವುದೂ ತಿಳಿದು ಬರುತ್ತದೆ. ಅಧಿಕೃತ ವಿವರಗಳು ನಡ್ಮಲ್ಲೇ ಪ್ರಕಟವಾಗಲಿವೆ.

ಶಿರ್ವ— ಸ್ಥಳೀಯ ಪಂಚಾಯತ ಬೋರ್ಡಿನ ಸಭೆಯು ಕಳದ ತಾ. 30ರಂದು ಶ್ರೀ ಎಸ್ ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚಾಯತ ಬೋರ್ಡಿನ ರಸ್ತೆಗಳ ರಿಪೇರಿಗೆ ಹಣ ಸೆಂಕ್ಷನ್ ಮಾಡುವುದು. ಶಿರ್ವಾಪದವು ಮಾರಿಗುಡಿ ಕೆಕಂಬು ಪಳ್ಳಿರ ಸ್ತೆ ನಿರ್ಮಿಸಲು ಮತ್ತು ಮಾಣಿಬೆಟ್ಟು ಮತ್ತು ಕುಡ್ತ ಮಜಲು ಕೆರೆ ಬಳಿಯ ತೊಡುಗಳಿಗೆಗೆ ಕಲ್ವರ್ಟ್ಸುಗಳನ್ನು ಹಾಕಲು ಹಣ ಮಂಜೂರು ಮಾಡುವುದು ಇತ್ಯಾದಿ ನಿರ್ಣಯಗಳಾದುವು

ಬಸ್ರೂರು— ಸ್ಥಳೀಯ ಬೋರ್ಡು ಹೈಸ್ಕೂಲಿನ ಉದ್ಘಾಟನೆಯನ್ನು ಕುಂದಾಪುರದ ಮುನ್ಸಿಫ್ ಶ್ರೀ ವೈ ರಮಿರಾಜನವರು ನೆರವೇರಿಸಿದರು. ಗಂಗೊಳ್ಳಿ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಕೆ. ಸಂಜೀವ ಭಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಸಮಿತಿ ಅಧ್ಯಕ್ಷ ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತರು ಸ್ವಾಗತ ಭಾಷಣಮಾಡಿದ ಬಳಿಕ ಶ್ರೀ ಬಿ. ಶಂಕರರಾಯರು ವರದಿವಾಚನಮಾಡಿದರು. ಶ್ರೀಗಳಾದ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್ ಎ; ಬಿ. ಶ್ರೀನಿವಾಸ ಸೆಟ್ಟಿ, ಎಮ್. ಎಲ್. ಎ; ಎಚ್ ಕೋಟ್ಟಣ್ಣ ಸೆಟ್ಟಿ, ಎಮ್. ಎಲ್. ಎ. ಹೆಗ್ಡೆ, ಎಚ್. ಜಿ. ಕೆದಿಲಾಯ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು. ಸಭಾಧ್ಯಕ್ಷರು ಮಾತನಾಡುತ್ತಾ, ಕುಂದಾಪುರಕ್ಕೆ ಆರ್ಟ್ಸ್ ಕಾಲೇಜು ಮತ್ತು ಬಸ್ರೂರಿಗೆ ವೈದ್ಯಕೀಯ ಕಾಲೇಜು ಸ್ಥಾಪಿಸುವಂತಾದರೆ ದ. ಕ. ಜಿಲ್ಲೆಯು ಕಾಲೇಜುಗಳ ಮಟ್ಟಿಗೆ ಸಂಪೂರ್ಣತೆ ಹೊಂದಿದಂತಾಗುವುದೆಂದರು. ಶ್ರೀ ಬಿ. ವೀರರಾಜೇಂದ್ರ ಹೆಗ್ಡೆಯವರು ಧನ್ಯವಾದಗಳನ್ನಿತ್ತರು

ಕಟಪಾಡಿ— ಪಿಣಗುಡ್ಡೆ ಸಟೇಲ್ ಶ್ರೀ ವೈ. ಜಗನ್ನಾಥ ಹೆಗ್ಡೆಯವರು ತಾ. 3ನೇ ರಾತ್ರಿ ತನ್ನ 39ನೇ ವಯಸ್ಸಿನಲ್ಲಿ ಅಕಾಲ ನಿಧನ ಹೊಂದಿದರೆನ್ನಲು ವಿಷಾದವಾಗುತ್ತದೆ ಸಾರ್ವಜನಿಕ ಸೇವಾ ನಿರತರಾದ ಹೆಗ್ಡೆಯವರು ಮೆನೆಂಜೈಟಿಸ್ ಕಾಯಿಲೆ ಪೀಡಿತರಾಗಿ ಮಂಗಳೂರಿನ ವೆನ್‌ಲೋಕ್ ಆಸ್ಪತ್ರೆಯಲ್ಲಿ ಸ್ವಲ್ಪ ಸಮಯ ಚಿಕಿತ್ಸೆ ಪಡೆದರೂ ಅದು ಫಲಕಾರಿಯಾಗದೆ ಮರಳಿ ತಮ್ಮ ಸ್ವಂತ ನಿವಾಸಕ್ಕೆ ತರಲ್ಪಟ್ಟದ್ದು ಅಲ್ಲಿಯೇ ನಿಧನಗೊಂಡರು.

ಹಂಗಾರ ಕಟ್ಟೆ— ಕಳದ ತಾ. 29ರಲ್ಲು ಬೆಂಗ್ರೆ ಫಿರೇಶ್ ಹಾಲಿಯಲ್ಲಿ ಶ್ರೀ ದುರ್ಗಾ ಪರಮೇಶ್ವರಿ ಭಜನಾ ಮಂಡಳಿಯ ಹನ್ನೊಂದನೇ ವಾರ್ಷಿಕ ಮಹಾಸಭೆಯು ಶ್ರೀಯು. ಚಂದಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಸರಡವಾಚನ ಮೊದಲಾದ ಕಾರ್ಯಕ್ರಮಗಳಾದ ಬಳಿಕ ಹೊಸ ಕಾರ್ಯ ಸಮಿತಿಗೆ ಶ್ರೀಗಳಾದ ಸೀನಪ್ಪ ತಳವಾರರು ಅಧ್ಯಕ್ಷರಾಗಿಯೂ, ಚಂದಪ್ಪ ಎ. ಬಂಗೇರರು ಉಪಾಧ್ಯಕ್ಷರಾಗಿಯೂ, ಗೋಪಾಲ ಬಂಗೇರರು ಕಾರ್ಯದರ್ಶಿಗಳಾಗಿಯೂ, ಕೆ ಕುಂದರು ಉಪಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಹಲುವಳ್ಳಿ— ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಹಲುವಳ್ಳಿ ಯಕ್ಷಗಾನ ಸಂಘದ ಸಭೆಯು ಶ್ರೀ ಎಮ್. ಕೆ. ಲಕ್ಷ್ಮಣ ಸೆಟ್ಟರ ಅಧ್ಯಕ್ಷತೆಯಲ್ಲಿ ಕಳದ ತಾ. 31 ರಲ್ಲು ಜರಗಿತು. ಸಂಘದ ಕ್ರಮ ನಿಬಂಧನೆಗಳಲ್ಲಿ ತಿದ್ದುಪಡಿಗಳನ್ನು ಮಾಡಿದ ಬಳಿಕ "ಅಭಿಮನ್ಯು ಕಾಳಗ" ವೆಂಬ ಪ್ರಸಂಗ ಜರಗಿಸಲಾಯಿತು. ಇದೇ ತಾ. 14ರಂದು ರಾತ್ರಿ "ಶ್ರೀಕೃಷ್ಣ ವಿವಾಹ" ವೆಂಬ ಪ್ರಸಂಗವು ಸಂರಿತ ಅರ್ಥದಾರಿಗಳ ಕೂಡುವಿಕೆಯಿಂದ ನಡೆಯಲಿರುವುದು.

ಬ್ರಹ್ಮಾವರ— ಜರ್ನಾಸಿಯಲ್ಲಿ ಇದೇ ತಿಂಗಳಲ್ಲಿ ನೇರಲಿರುವ ಅಂಕರ್ವಾಪ್ರಿಂಟಿಯ ಬೇಂಕಿಂಗ್ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಲಿರುವ ಶ್ರೀ ಟಿ ಎ. ಪೈಗಳವರಿಗೆ ಬ್ರಹ್ಮಾವರ ಸರ್ಕಲ್ ಕಾಂಗ್ರೆಸ್ ಕಮಿಟಿ ಕಡೆಯಿಂದ ಸತ್ಕಾರವೀಯಲಾಯಿತು. ಶ್ರೀ ಬಿ. ಜಗಜ್ಜೀವನದಾಸ ಸೆಟ್ಟಿ, ಎಮ್. ಎಲ್. ಎ, ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎ. ವೈ. ರಾಮನ್ ಗುರುಕಲ್‌ರವರು ಸ್ವಾಗತಿಸಿದರು. ಶ್ರೀಗಳಾದ ಬಿ. ವೆಂಕಟಕೃಷ್ಣರಾವ್, ಬಿ. ಪದ್ಮನಾಭ ಪೈ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಶ್ರೀ ಬಿ ಶಿವರಾಮ ಸೆಟ್ಟಿರು ಧನ್ಯವಾದಗಳನ್ನಿತ್ತರು.

(ಜನಯ ಪುಟದಿಂದ)

ನೀಡುತ್ತಿವೆ. ಸಣ್ಣ ಪುಟ್ಟ ಕೈಗಾರಿಕೆಗಳ ಕಾರ್ಯಾರಂಭ ಶಕ್ತಿ ಹಾಗೂ ಸಹಕಾರಗಳಿಂದ ಭಾರತದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಸುನರ್ವ್ಯವಸ್ಥೆ ಹಾಗೂ ಅಭಿವೃದ್ಧಿ ಕಾರ್ಯವು ಸುಭದ್ರವಾದ ಆರ್ಥಿಕ ಆಧಾರದ ಮೇಲೆ ಅಂತಿಮ ಯಶಸ್ಸನ್ನು ಗಳಿಸುವುದರಲ್ಲಿ ಸಂಶಯವೇ ಇಲ್ಲ. ಈ ಮೂಲಕ ದೇಶದಲ್ಲಿ ಗ್ರಾಹಕ ವಸ್ತುಗಳ ಉತ್ಪಾದನೆಯು ಹೆಚ್ಚುವುದಲ್ಲದೆ ಹೆಚ್ಚು ಹೆಚ್ಚು ಜನರಿಗೆ ಉದ್ಯೋಗಾವಕಾಶವು ಪ್ರಾಪ್ತಿಯಾಗುವುದು. ಸಕಸ್ಸಾರು ಜನರ ಜೀವನ ಮಟ್ಟವು ಉತ್ತಮಗೊಳ್ಳುವುದರ ಜೊತೆಗೆ ದೇಶದ ವಿಶಾಲ ಪ್ರದೇಶಗಳು ಅಭ್ಯುದಯ ಪಡೆಯುವುವು.

NOTICE.

In the Court of the District Munsif of Mangalore.

O. P. 70 of 1957.

In the matter of the debts of Antony Saldanha, deceased.

Between

Rev. Fr. Charles Saldanha— Petitioner.

and

1. Mrs Jane Fernandes
2. Mrs Euphrosine Rebello
2. Canute Saldanha
4 Ben P Saldanha
5 Jerome Saldanha
6. Mrs. Dolly D'Sa

—Respondents.

Notice is hereby given that application has made to the above Court by the Petitioner above-named, residing at Cascia, Jeppo, Mangalore Town, for a grant to him of a certificate under the Indian Succession Act 1925 with respect to certain debts, namely, policy amounts in the M. R. C. P. Fund of Antony Saldanha, late of Rosario Ward, Mangalore Town who died on 23—11—1956 and that the 7th day of September 1957 has been appointed for the hearing of the said application.

N. E. L. Peris,
Vakil for Petitioner.

Mangalore, 6 --9--1957

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಭಾರತದಲ್ಲಿ ಸಂಘೀಕರಿಸಲ್ಪಟ್ಟಿದೆ; ಮುಂಬರದ ಹೊಸ ಮಿತೀಕರಿಸಲ್ಪಟ್ಟಿದೆ)

ಪೋಸ್ಟ್ ಬಾಕ್ಸ್ ನಂಬ್ರ 118] ಹೆಡ್ ಆಫೀಸು: ಮಂಗಳೂರು, ದ. ಭಾರತ. [ಟೆಲಿಫೋನ್ ನಂ. 114

ಶೇವಣಾತಿ ರೂ. 1,02,44,000 ಕ್ಕೂ ಮಿಕ್ಕಿದೆ.

(ತಾ. 14—8—1957 ರಲ್ಲಿದ್ದಂತೆ)

ಅಲ್ಪಾವಧಿಯ ಮತ್ತು ನಿರಖು ಶೇವಣಾತಿಗಳನ್ನು ಅತ್ಯನುಕೂಲವಾದ ಶರ್ತಗಳ ಮೇಲೆ ಸ್ವೀಕರಿಸಲಾಗುವುದು.

ಹೆಚ್ಚಿನ ವಿವರಗಳನ್ನು ನಮ್ಮ ಕೆಳಗಿನ ಸ್ಥಳೀಯ ಆಫೀಸಿನಿಂದ ತಿಳಿಯಬಹುದು:

ಶೆಂಕಪೇಟೆ, ಪೋಸ್ಟ್ ಬಾಕ್ಸ್ ನಂಬ್ರ 18 (ಟೆಲಿಫೋನ್ ನಂಬ್ರ 71) **ಉಡುಪಿ**

THE KARNATAKA BANK LIMITED

ಕೊಲಂಬಸನು ಅಮೆರಿಕವನ್ನು ಶೋಧಿಸಲಿಲ್ಲ!

(೪ನೇ ಪುಟದಿಂದ)

ಯಾಣಿಸಿತೇ, ಅಥವಾ ಕಾಬೂಲಿನಿಂದ ನೇರವಾಗಿ ಮಧ್ಯಅಮೆರಿಕಕ್ಕೆ ಜಲ ಮಾರ್ಗವಾಗಿ ಹೋಯಿತೇ ಇತ್ಯಾದಿ ಕಾಬೂಲಿನಿಂದ ಭಾರತೀಯ ಬಂದರೊಂದಕ್ಕೆ ಬಂದು ಅಲ್ಲಿಂದ ಶಾಂತ ಸಾಗರದ ಕರಾವಳಿಗೆ ಪ್ರಯಾಣ ಬೆಳೆಸಿತೇ ಎಂದು ನಿರ್ದುಷ್ಟವಾಗಿ ಹೇಳಬರುವುದಿಲ್ಲ. ಸ್ವಪ್ರಥಮವಾಗಿ ಈ ಪಂಗಡವು ಚೀನಕ್ಕೆ ಬಂದು ಅಲ್ಲಿಂದ ಮಧ್ಯ ಅಮೆರಿಕಕ್ಕೆ ಸಮುದ್ರ ಮಾರ್ಗವಾಗಿ ಹೋಯಿತೆಂದು ಊಹಿಸಿದ್ದಾರೆ ಆ ಸಮಯದಲ್ಲಿ ಚೀನವು ಆಸ್ಥಾನದಂತಿದ್ದ ಶಾಂತ ಸಾಗರದ ಕರಾವಳಿಗೆ ಪ್ರಯಾಣ ಬೆಳೆಸಿತೇ ಎಂದು ನಿರ್ದುಷ್ಟವಾಗಿ ಹೇಳಬರುವುದಿಲ್ಲ. ಸ್ವಪ್ರಥಮವಾಗಿ ಈ ಪಂಗಡವು ಚೀನಕ್ಕೆ ಬಂದು ಅಲ್ಲಿಂದ ಮಧ್ಯ ಅಮೆರಿಕಕ್ಕೆ ಸಮುದ್ರ ಮಾರ್ಗವಾಗಿ ಹೋಯಿತೆಂದು ಊಹಿಸಿದ್ದಾರೆ ಆ ಸಮಯದಲ್ಲಿ ಚೀನವು ಆಸ್ಥಾನದಂತಿದ್ದ ಶಾಂತ ಸಾಗರದ ಕರಾವಳಿಗೆ ಪ್ರಯಾಣ ಕೈಗೊಂಡಿತ್ತು. ಹ್ಯೂಶೇನನು ಫೂಸಾನ್ ಎಂಬ ಕನಸಿನ ರಾಜ್ಯದ ವಿವರಣೆಗಳನ್ನು ಕೊಟ್ಟಿದ್ದಾನೆ. ಆ ರಾಜ್ಯದ ಜನರ ನಡತೆ, ಪದ್ಧತಿಗಳನ್ನೂ ವಿವರಿಸಿದ್ದಾನೆ. ರಾಜ್ಯವು ೨೦೦೦ ಮೈಲುಗಳಿಂದ ೬,೫೦೦ ಮೈಲುಗಳಷ್ಟು ಚೀನಾದಿಂದ ಪೂರ್ವಕ್ಕಿರುತ್ತದೆ. ಈ ನಿಯೋಗವೊಂದು ತೆರೆದ ದೋಣಿಯಲ್ಲಿಯೇ ತಮ್ಮ ಯಾತ್ರೆಯನ್ನು ಕೈಗೊಂಡಿತ್ತು. ನಾಲ್ವತ್ತು ವರ್ಷ ಕಳೆದ ನಂತರ, ಯಾವುದೋ ಅಜ್ಞಾತ ಕಾರಣದ ದೆಸೆಯಿಂದಾಗಿ ಭಿನ್ನಾಭಿಪ್ರಾಯವೆನ್ದು, ತನ್ನ ಜೀವಕ್ಕೆ ಹಾನಿ ಬರುವ ಸಂದರ್ಭದಲ್ಲಿ ಚೀನಕ್ಕೆ ಮರಳಿದನು. ಆದರೂ ಕೆಲವು ಬಂಡೆಗಳಲ್ಲಿ ಆತನು ಕೆತ್ತನೆಗಳನ್ನು ಬಿಟ್ಟು ಹೋಗಿದ್ದಾನೆ. ಮೆಕ್ಸಿಕೋವಿನ ಮಗ್ದಲಾನದಲ್ಲಿ ಒಂದು ಪ್ರತಿಮೆಯು ನಿಕ್ಷಿಪ್ತಪಟ್ಟಿದ್ದು ಅದರಲ್ಲಿ ಆತನ ನಾಮಧೇಯವಿದೆ. ಇದಲ್ಲದೇ ಪಂಗಡದ ಇತರ ನಾಲ್ಕು ಜನರು ಪ್ರತ್ಯೇಕವಾಗಿ ಪ್ರಯಾಣ ಬೆಳೆಸಿದರೂ ಮಧ್ಯ ಅಮೇರಿಕಕ್ಕೆ ಬಂದಿದ್ದರೆಂದೂ ಅಲ್ಲಿ ಅವರು ಜಯಪ್ರದರಾಗಿ ಕಾರ್ಯಶೀಲರಾದರೆಂದೂ ತಿಳಿಯುವ ಸಾಧನಗಳಿವೆ.

ಚೀನೀಯ ವೃತ್ತೇತಿಹಾಸದ ಈಹೇಳಿಕೆಯಲ್ಲದೆ ಅಲಾಸ್ಕಾದಿಂದ ಮೆಕ್ಸಿಕೋವಿನ ವರೆಗಿನ ಶಾಂತ ಸಾಗರದ ಕರಾವಳಿಯ ಸಾಂಪ್ರದಾಯಿಕ ಕಟ್ಟಳೆಗಳು, ಕ್ರಮಗಳು ಮತ್ತು ಧಾರ್ಮಿಕ ನಂಬಿಕೆಗಳು ಒಳನಾಡಿನವರುಗಳಿಗಿಂತ ತೀರಾ ಭಿನ್ನವಾಗಿರುವುದು ಸಹಾ ಬೌದ್ಧೀಯರ ಪ್ರತಾಪವಿತ್ತೆನ್ನಲು ಸಹಾಯಕವಾಗಿದೆ. ಇದರಿಂದಾಗಿ ಬೌದ್ಧಮತ ಮತ್ತು ಭಾರತೀಯ ಸಂಸ್ಕೃತಿಯ ಪ್ರಚಾರವು ಮಧ್ಯ ಅಮೆರಿಕಾ ಮತ್ತು ಮೆಕ್ಸಿಕೊಗಳಲ್ಲಿ ಅಘಾತಸ್ಥಾನದ ರಾಬೂಲಿನ ಐದು ಮಂದಿ ಬೌದ್ಧ ಸನ್ಯಾಸಿಗಳಿಂದಾಯಿತು ಎಂದು ನಂಬುವುದು ಅಸಂಭಾವ್ಯವಲ್ಲ.

ಕನಸಿನ ತಜ್ಞರಾದ ಪ್ರೊ. ಜಾನ್ ಮುಕ್ರಿ ಗಿಬನ್ ಮತ್ತು ಶ್ರೀ ಹೋಂ ಮೆಕಿನ್ಸ್‌ರವರ ಅಭಿಪ್ರಾಯವು ಸಹ ಬಹಳ ಮಹತ್ವಮಾರಿಕವಾದುದು. ಇವರು ಅಮೆರಿಕವನ್ನು ಆಧುನಿಕ ಜಗತ್ತಿಗೆ ಪರಿಚಯಮಾಡಿಕೊಟ್ಟ ಕೀರ್ತಿಯನ್ನು ಹ್ಯೂಶೇನನಿಗಿತ್ತಿದ್ದಾರೆ. ಅವರಂಬೋಣದಂತೆ ಹ್ಯೂಶೇನನು ಚೀನೀಯ ದೋಣಿಯೊಂದರಲ್ಲಿ ಶಾಂತಸಾಗರವನ್ನು ದಾಟಿ ಸುಮಾರು ಕ್ರಿ. ಶ. ೪೯೯ರಲ್ಲಿ ಮೆಕ್ಸಿಕೋವಿನ ಪೂರ್ವ ಕರಾವಳಿಗೆ ತಲಪಿದನು. ಫೊ. ಗಿಬನರು ಮೂರನೆಯ ಜಾರ್ಜನ ಕಾಲದಲ್ಲಿದ್ದ ಶಾಂತಸಾಗರದ ಯಾತ್ರೆಯ ಬಗ್ಗೆ ಚೀನೀಯರ ದೇಣಿಗೆಯನ್ನು ಅಭ್ಯಾಸಮಾಡುತಿದ್ದ ಭೌಗೋಲಿಕನೊಬ್ಬನ ಹೆಸರೆತ್ತುತ್ತಾರೆ. ಶ್ರೀ ಮೆಕಿನ್ಸರು ಹ್ಯೂಶೇನನು ಒಂದು ಚಳಿಗಾಲವನ್ನು ನೆಂಕೂವಿನಲ್ಲಿ ಕಳೆದು, ಅಲ್ಲಿ ಮೂರು ಸಂನ್ಯಾಸಿಗಳನ್ನು ಪ್ರಚಾರಕಾರ್ಯಕ್ಕಾಗಿ ಬಿಟ್ಟನೆನ್ನುತ್ತಾರೆ ೧೯೬೬ರಲ್ಲಿ ಅಲ್ಲಿ ಚೀನೀಯ ನಾಣ್ಯಗಳನ್ನು ಶೋಧಿಸಲಾಗಿದೆ. ಬೌದ್ಧ ದೇವಾಲಯಗಳ ಅವಶೇಷಗಳನ್ನು ಮೆಕ್ಸಿಕೊದಲ್ಲಿ ಶೋಧಿಸಿದ್ದಾರೆ. ಅಲ್ಲದೆ, ಶಾಂತಸಾಗರ ಕರಾವಳಿಯ ಸೊನೊರದಲ್ಲಿ ಉರ್ಸ್ನಗರದ ಸಮೀಪದಲ್ಲಿ ಬುದ್ಧನ ವಿಗ್ರಹದೊಂದಿಗೆ ಚೀನೀಯ ಬೌದ್ಧ ಕೆತ್ತನೆಯ ಕೆಲಸವೂ ಕಂಡು ಬಂದಿದೆ.

ಹ್ಯೂಶೇನನೂ ಅವನ ಸಂಗಡಿಗರೂ ಕಾಬೂಲಿನಿಂದ ಬಂದರೆಂಬುದು, ವಾಸ್ತವ. ತನ್ನ ಅರ್ಧಂಬರ್ಧ ಚೀನೀ ಭಾಷೆಯನ್ನಾಡುತ್ತಿದ್ದನೆಂಬುದು ಆತನು ಕಾಬೂಲಿನಲ್ಲಿ ವಾಸಿಸುತಿದ್ದ ಭಾರತೀಯ ಸನ್ಯಾಸಿಯಾಗಿರಬೇಕು; ಅಥವಾ ಆ ಕಾಲದಲ್ಲಿ ಭಾರತದಘಟಕವಾಗಿದ್ದ ಅಫಘಾನಿಸ್ತಾನದ ಕಾಬೂಲಿನ ನಿವಾಸಿಯಾಗಿರಬೇಕೆಂಬುದನ್ನು ದೃಢಪಡಿಸುತ್ತದೆ. ಆ ಕಾಲದಲ್ಲಿ ಕಾಬೂಲಿಗೆ ಕೋಪನ, ಕಿಪಿನ್, ಕಂಡಾಹಾರ, ಗಾಂಧಾರ ಎಂಬತ್ತಾದಿ ನಾಮಧೇಯಗಳಿದ್ದುವು. ಅಲ್ಲದೆ ಅಶೋಕನ ಕಾಲದಿಂದಲೂ ಅದು ಬೌದ್ಧ ಮತದ ಕೇಂದ್ರವಾಗಿಯೇ ಇತ್ತು. ಕ್ರಿ. ಶ. ೪ನೆಯ ಶತಮಾನದಲ್ಲಿ ಕಾಬೂಲಿನ ಸಂಘದೇವ ಎಂಬ ಹೆಸರಿನ ಸಾಧುವೊಬ್ಬನು ಚೀನಕ್ಕೆ ಹೋಗಿ ಅಲ್ಲಿ ಹಲವಾರು ಬುದ್ಧನ ಸಂದೇಶಗಳನ್ನು ಚೀನೀ ಭಾಷೆಗೆ ಭಾಷಾಂತರಿಸಿದನು. ಹ್ಯೂಶೇನನ ಭಾರತೀಯ ನಾಮಧೇಯವು ಯಾವುದೆಂದು ನಮಗೆ ತಿಳಿಯದೇ ಹೋದರೂ, ಆತನು ಭಾರತೀಯನೆಂಬುದು ನಿತ್ಯಸತ್ಯ. ಈಗಿನ ಭಾರತದವನಿರಬಹುದು; ಅಥವಾ ಆಗಿನ ಭಾರತದಲ್ಲಿನ ಕಾಬೂಲಿನವನಿರಬಹುದು. ಶಾಂತ ಮಹಾಸಾಗರದ ಆಚೆ ಪಕ್ಕದಲ್ಲಿರುವ ಹೊಸ ಲೋಕವೊಂದನ್ನು ಕಂಡು ಹಿಡಿದು, ಚೀನೀಯ ಲಿಯಾಂಗ್ ವಂಶದ ಪೂರ್ವಿಗೆ ತನ್ನ ಯಾತ್ರೆಯ ನೈಜ ವರ್ಣನೆಯನ್ನು ಮಾಡಿ, ಇತಿಹಾಸ ಪ್ರಸಿದ್ಧನೆನಿಸಿದವನು ನಿಜವಾಗಿಯೂ ನಮ್ಮವನೇ ಎಂದು ನಮಗೆ ತಿಳಿದಾಗ, ನಾವು ದೃಢವಾಗಿ ನಂಬಿದ ಒಂದು ಸತ್ಯವು ಶೀರ ಮಿಥ್ಯವಾಯಿತೆಂದು, ನಮ್ಮ ಅಜ್ಞಾನಕ್ಕೆ ನಾವೇ ಪಶ್ಚಾತ್ತಾಪಪಟ್ಟುಕೊಳ್ಳದಿರುತ್ತೇವೆಯೇ?

—ಹೊ. ಸಾ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಶಿವಲೇಶ್ಯೆ-(ಮಿಶ್ರಛಂದ ಕಾವ್ಯ) ಕವಿ: ಅಚ್ಯುತ ಗೌಡ ಕಿನ್ನಿಗೋಳಿ ಪ್ರಕಾಶಕರು: ಯುಗಸುರುಚಿ ಪ್ರಕಟನಾಲಯ ಕಿನ್ನಿಗೋಳಿ. ಪ. ಕ. ಪುಟ 70 ಬೆಲೆ 1-8-0.

ಕ್ಷಾತ್ರದರ್ಶನ, ಯೋಗಲಹರಿ ವಧೂ ವಸಂತಸೇನೆ, ನಾಗವರ್ಮನ ಕಾದಂಬರಿ, ಒಡ್ಡಿದ ಉರುಳು ಇತ್ಯಾದಿ ಉತ್ತಮ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾದ ಬೆಳೆಯನ್ನು ಬೆಳೆಸುತ್ತಿರುವ ಅ. ಗೌ. ಕಿನ್ನಿಗೋಳಿಯವರು ಇನ್ನೊಂದು ಉತ್ತಮ ಕಾವ್ಯ 'ಶಿವಲೇಶ್ಯೆಯನ್ನು' ಕನ್ನಡ ಕಾವ್ಯಪ್ರೇಮಿಗಳಿಗೆ ಕೊಟ್ಟಿದ್ದಾರೆ. ಉತ್ತಮ ಮಟ್ಟದ ವಾರಿಕ ಪತ್ರಿಕೆ ಯುಗಸುರುಚಿದ ಸಂಪಾದಕ ಕೊ. ಅ. ಉಡುಪರು ಈ ಕೃತಿರತ್ನವನ್ನು ಪ್ರಕಟಿಸಿದ್ದಾರೆ.

ಅಫಜುಲ್‌ಖಾನ ಮತ್ತು ಶಿವಾಜಿಯ ಭೇಟಿ ಮತ್ತು ಖಾನನ ಕಥೆಯ ಚಾರಿತ್ರಿಕ ಸಮ್ಮಾನಾರ್ಹಿಸಿಕೊಂಡು ಅ ಗೌ. ಕಿ. ಯವರು ತನ್ನ ಪ್ರೌಢಿಮೆಯ ಒಪ್ಪವನ್ನು ಕೊಟ್ಟು ಸರ್ವೋತ್ಕೃಷ್ಟವಾದ ಈ ಕೃತಿಯನ್ನು ರಚಿಸಿದ್ದಾರೆ.

ನ. ಕನ್ನಡದ ಕವಿ ಕಡಂಗೋಡ್ಲು ಶಂಕರ ಭಟ್ಟರ ನಂತರ ಕನ್ನಡ ನುಡಿತಾಯ ಸೇವೆಗಾಗಿ ಯೋಗ್ಯತೆ ಮತ್ತು ಸದುದ್ದೇಶಗಳಿಂದ ಮುಂದೆ ಬಂದ ಕವಿಗಳಲ್ಲಿ ಕಿನ್ನಿಗೋಳಿಯವರಿಗೆ ಅಗ್ರಸ್ಥಾನವು ತಾನಾಗಿಯೇ ಸಲ್ಲುತ್ತಿದೆ. ಕವಿಯ ಕಲ್ಪನಾಶಕ್ತಿ, ಭಾಷಾ ಪ್ರೌಢಿಮೆ, ಅಲಂಕಾರಗಳ ಪ್ರಯೋಗ, ಛಂದಸ್ಸಿನ ಹಿಡಿತಗಳಿಗೆ ಎರಡಿಲ್ಲ. ಶಿವಲೇಶ್ಯೆಯು ಉಪಮಾದಿ ಅಲಂಕಾರಗಳ ಭಂಡಾರವಾಗಿದೆ. ಹೊಸ ಮತ್ತು ಸುಪ್ತ ಪದಪ್ರಯೋಗಗಳ ಪ್ರಯೋಗಮಂದಿರವಾಗಿದೆ. ಪ್ರತಿಯೊಂದು ಪದ್ಯವೂ ಒಂದೊಂದು ಮುತ್ತಿನೋಪಾದಿಯದ್ದು ಈ ಕಾವ್ಯ ಕನ್ನಡ ತಾಯಿಗೆ ಮುತ್ತಿನ ಲೇಶ್ಯೆಯೇ ಆಗಿದೆ.

ನಮ್ಮ ಕಾಲೇಜುಗಳ ಪಠ್ಯ ಪುಸ್ತಕಗಳಲ್ಲಿ ಪಾಲುಗೊಳ್ಳಲು ಈ ಕಾವ್ಯ ಕರ್ನಾಟಕದಲ್ಲಿಯೂ ಯೋಗ್ಯವಿದೆ. ಸಾಹಸ ಸಾಧನೆ ಮತ್ತು ಪಾಂಡಿತ್ಯಗಳ ಮೂರ್ತಿಯಾದ ಯೋಗ್ಯತೆಗಳ ಪ್ರತೀಕವಾದ ಈ ಕೃತಿಯ ರಚನೆ ಬಂದು ತಪಸ್ಸು. ಇದರ ಫಲ ಕನ್ನಡನಾಡಿನ ನುಡಿಪ್ರೇಮಿಗಳಿಗೆ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಸಿಗಬೇಕು ಕನಿಯ ಕೃತಿಕರ್ತೃ ತಕ್ಕ ಪುರಸ್ಕಾರ ದೊರೆಯಬೇಕು ಇದು ಕನ್ನಡ ನಾಡಿನ ಮಂದಾಳುಗಳು ತಜ್ಞರು, ಜನತೆ ಸಲಿಸಬೇಕಾದ ಋಣ.

ಕಿನ್ನಿಗೋಳಿಯವರ ಲೇಖನಿಯು ಕನ್ನಡ ಜನತೆಯ ಸಮಕಾಲಗಳಿಂದ ನಿತ್ಯ ಸ್ಪರ್ಶಿಯಿಂದ ಮರೆಯಲಿ.

ಸಮರ ಸಾದಾಮಿನಿ-(ಕಾದಂಬರಿ) ಲೇಖಕ: ವೆಂ. ಮು. ಜೋಶಿ ಧಾರವಾಡ ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ ಧಾರವಾಡ ಪುಟ 144 ಬೆಲೆ ರೂ. 1.4.

ನಮ್ಮ ಕಾದಂಬರಿಗಳು ಕಾಲೇಜಿನ ಗಂಡು ಹೆಣ್ಣುಗಳು ಸಮಸ್ಯೆಗಳಿಂದಲೇ ತುಂಬಿಕೊಂಡಿವೆ ಎಂದು ದೂರಿಕೊಳ್ಳುವವರಿಗೆ, ಶ್ರೀ ಜೋಶಿಯವರ ಕಾದಂಬರಿ ಒಂದು ಅಪವಾದ-ದೃಷ್ಟಾಂತವಾಗಿ ನಿಲ್ಲುತ್ತದೆ ಯುದ್ಧದ ಘಟನೆಗಳನ್ನು ಸ್ವಾರಸ್ಯವಾಗಿ ಹೆಣೆದುಕೊಂಡು ಜೀವನದ ಸಮಸ್ಯೆಗಳನ್ನು ಗಂಭೀರವಾಗಿ ಅವುಗಳಲ್ಲಿ ಅಳವಡಿಸಿಕೊಳ್ಳಬಹುದು; ಅಂತಹ ಕಥಾವಸ್ತುವೂ ಒಂದು ಉತ್ತಮ ಕಾದಂಬರಿಯ ರಚನೆಗೆ ಸಹಾಯವಾಗುತ ನೆಂಬ ಶ್ರೀ ಜೋಶಿಯವರು ಸ್ಪಷ್ಟಪಡಿಸಿದ್ದಾರೆ. ಅನೇಕ ಒಳ್ಳೆಯ ಪುಸ್ತಕಗಳನ್ನು ಪ್ರಕಾಶಿಸಿದ ಪ್ರತಿಭಾಗ್ರಂಥಮಾಲೆಯವರು ಈ ಕಾದಂಬರಿಯನ್ನು ಪ್ರಕಟಿಸಿ ಉಪಕಾರಮಾಡಿದ್ದಾರೆ.

ನಮ್ಮ ಸಾಹಿತ್ಯ ವೃದ್ಧಿಯ ಬಯಸುವ ಶಾಖೋಪಶಾಖೆಗಳಿಂದ ಸಮೃದ್ಧವಾಗಿ ಬೆಳೆದು ಹೂ ಹಣ್ಣುಗಳನ್ನು ನೀಡಬೇಕು ಇಂತಹ ಬಯಸುವುದು ಸೇರಿ ಆಂಗ್ಲ ಸಾಹಿತಿಗಳಂತೆ ಕನ್ನಡಿಗರಿಂದ ಈ ಹಿಂದೆ ಹೆಚ್ಚಾಗಿ ಆದದ್ದಿಲ್ಲ. ಕಾದಂಬರಿಯ ಭಾವಪ್ರಚೋದನೆಯ ಜೊತೆಗೆ ಇತರ ಜ್ಞಾನೋದಯಕ್ಕೂ ಕಾರಣವಾದರೆ ಪ್ರಯೋಜನವೇ ಉಂಟು ಪ್ರಚಲಿತದ ಕಾದಂಬರಿಯು 'ಅನ್ನಾ ಎಂಡ್ ಅನ್ನಾಮ್', "ಮೆನ್ ಎಂಡ್ ರಿವರ್ಸ್" ಎಂಬ ಆಂಗ್ಲ ಕಾದಂಬರಿಗಳಂತೆ ಆಕರ್ಷಣೀಯವಿದೆ ಅವನ್ನು ಕರಣೀಯವಿದೆ ಈ ಬಗೆಯ ಹೊಸ ಸಾಹಿತ್ಯ ಸೇವೆ ಸ್ವಾಗತಾರ್ಹ, ಶ್ರೀ ಜೋಶಿಯವರ ಕೃತಿಗಳನ್ನು ಅದರದಿಂದ ಅಭ್ಯಾಸಿಸಬೇಕು.

— ದಾಂತಿ.

ಹೊಸಕೆರೆ
ಚಿದಂಬರಯ್ಯನವರ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೊಕೆಟ್ ಎಡಿಷನ್.
ಸುಮಾರು 450 ಪುಟಗಳು.
ಕ್ರಯ 0—12—0
ನವಯುಗ ಹೆಸ್. ಉಡುಪಿ.

ಅವತಾರ ಪುರುಷ ವಿನೋಬಾ—

ಅರುವತ್ತಮೂರರ ನವಯುವಕ

ಶ್ರೀ ಪಿ. ಮುದ್ದು ಶೆಟ್ಟಿ.

ಸನಾತನ ಧರ್ಮದ ತವರುಮನೆಯಾದ ಭಾರತ ಭೂಮಿಯಲ್ಲಿ ಕಾಲಕಾಲಕ್ಕೆ ಅನೇಕ ಸಾಧು ಸಂತರೂ, ಧರ್ಮ ಪ್ರವರ್ತಕರೂ, ಸಮಾಜ ಸುಧಾರಕರೂ, ಸಾಹಿತಿಗಳೂ, ರಾಜಕಾರಣಿಗಳೂ ಜನ್ಮವೆತ್ತಿರುವರು. ಒಂದು ಶತಮಾನದಿಂದೀಚೆಗೇ ಕೆಲವು ಪುಣ್ಯಾತ್ಮರು ತಮ್ಮ ಉಜ್ವಲವಾದ ಜೀವನದ ಮೂಲಕ ಜನತೆಯ ಅಂಧಕಾರವನ್ನು ತೊಲಗಿಸಿ, ಜನಜೀವನದ ಬಹುಮುಖಗಳಲ್ಲಿ ನವ-ಚೈತನ್ಯವನ್ನು ತುಂಬಿ, ಜಗತ್ತಿನ ಇತರ ರಾಷ್ಟ್ರಗಳ ನಡುವೆ. ಭಾರತವೂ ತಲೆಯೆತ್ತಿ ನಿಲ್ಲುವಂತೆ ಮಾಡಿಹೋದರು. ಕೆಲವರು ಇಂದಿಗೂ ಜೀವಂತರಾಗಿದ್ದು ಪ್ರಜೆಗಳ ಆರ್ಥಿಕ, ನೈತಿಕ, ರಾಜಕೀಯ, ಔದ್ಯೋಗಿಕ, ಸಾಂಸ್ಕೃತಿಕ ಸಮಸ್ಯೆಗಳ ಪರಿಹಾರಕ್ಕಾಗಿ ತಮ್ಮ ಜೀವಮಾನವನ್ನೆ ಮುಡುಪಾಗಿಟ್ಟಿರುವರು ಅಂತಹ ಆದರ್ಶ ಪುರುಷರಲ್ಲಿ ಇಂದು ಭೂದಾನ ಆಂದೋಲನವನ್ನು ಕೈಕೊಂಡು ಭಾರತದ ಕೋಟ್ಯಾಂತರ ನಿರ್ಗತಿಕರ ಭೂಸಮಸ್ಯೆಯನ್ನು ನೀಗಿಸಲೇ ಬೇಕೆಂಬ ಪಣತೊಟ್ಟು ಪಾದಚಾರಿಯಾಗಿರುವ ವಿನೋಬಾಭಾವೆಯವರು ಒಬ್ಬರು.

ಮಹಾತ್ಮಾ ಗಾಂಧೀಜಿಯವರ ಅಧ್ಯಾತ್ಮಿಕ ಉತ್ತರಾಧಿಕಾರಿಯಾಗಿ ಸತ್ಯ ಅಹಿಂಸೆಗಳ ಮೂಲಕ ಇವರ ಕನಸಿನ ಗ್ರಾಮ ಸ್ವರಾಜ್ಯವನ್ನು ಕಟ್ಟುವ ಕಾರ್ಯಕ್ಕೆಳೆದಿರುವ ಅದ್ಭುತ ಕರ್ಮಯೋಗಿ ಪೂಜ್ಯ ವಿನೋಬಾ. ಇವರ ಜನ್ಮವು ೧೮೯೫ನೆ ಇಸವಿ ಸೆಪ್ಟಂಬರ ೧೧ನೇ ತಾರೀಕಿನಲ್ಲಾಯಿತು. ಮುಂಬೈ ನಗರದ ಸಮೀಪವಿರುವ ಕೊಲಾಬಾ ಜಿಲ್ಲೆಯ "ಗಾಗೋಡಾ"ಎಂಬ ಗ್ರಾಮವೇ ಇವರಜನ್ಮಸ್ಥಾನ. ತಂದೆಯ ಹೆಸರು ನರಹರಿ ಭಾವೆ. ತಾಯಿ ರಖುಬಾಯಿ ಮುದ್ದು ಮಗನಿಗೆ ತಂದೆ-ತಾಯಿಗಳಿಟ್ಟ ಹೆಸರು ವಿನಾಯಕ. ಹತ್ತು ವರ್ಷದ ಬಾಲಕನಿದ್ದಾಗಲೇ ಬ್ರಹ್ಮಚರ್ಯಾ ವ್ರತವನ್ನು ಕೈಕೊಂಡ ವ್ಯಕ್ತಿ ಇವರು, ಏನು ಸಂಯಮ! ತನ್ನ ಸ್ವಗ್ರಾಮದಲ್ಲೆ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಬರೋಡಾ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದರು ವಿದ್ಯಾಭ್ಯಾಸ ಕಾಲದಲ್ಲೆ ಕುಲವಾರ. ಲೈಬ್ರೆರಿ ಪುಸ್ತಕಗಳನ್ನೋದಿ ತನ್ನ ಧಾರ್ಮಿಕ, ಸಾಹಿತ್ಯ ಜ್ಞಾನವನ್ನು ವರ್ಧಿಸಿಕೊಂಡು, ಉಚ್ಚ ತಿಕ್ಷಣಕ್ಕಾಗಿ ವಿಲಾಯತಿಗೆ ಹೋಗುವ ಸಲುವಾಗಿ ತನ್ನ ತೀರ್ಥರೂಪರ ಒತ್ತಾಸೆಯಿಂದ ಫ್ರೆಂಚ್ ಭಾಷೆಯನ್ನೂ, ಸ್ವಂತ ಅಭಿರುಚಿಯಿಂದ ಸಂಸ್ಕೃತವನ್ನೂ ಅಭ್ಯಸಿಸಿದರು, ೧೯೧೮ರ ಕಾಲ ಮೊದಲಿನ ಜಾಗತಿಕ ಯುದ್ಧ ಆರಂಭವಾಗಿತ್ತು. ಇಂಟರ್ ಪರೀಕ್ಷೆಗಾಗಿ ಮುಂಬೈಗೆ ಹೊರಟಿದ್ದವರು ದಾರಿಯಲ್ಲೆ ವಿಚಾರ ಬದಲಿಸಿ ಪಾದಚಾರಿಯಾಗಿ ಕಾಶಿಗೆ ಹೋದರು. ಅಂದಿನಿಂದಲೇ ಪಾದಯಾತ್ರೆಯ ಅಭ್ಯಾಸವನ್ನು ಕೈಕೊಂಡ ಪುಣ್ಯಾತ್ಮನೇತ!

ಕಾಶಿಯಲ್ಲಿ ಗಾಂಧೀಜಿಯವರ ಭೇಟಿಯಾಗಿ, ಅವರಿಂದ ಪ್ರಭಾವಿತನಾಗಿ, ಅವರೊಂದಿಗೆ ಸಬರ್ಮತಿ ಆಶ್ರಮದಲ್ಲಿ ವಾಸಿಸಿದರು. ಆಗಲೂ ತಮ್ಮ ಸಂಸ್ಕೃತ ಅಭ್ಯಾಸವನ್ನು ಮುಂದರಿಸುತ್ತಲೇ ಇದ್ದರು. ವಿನಾಯಕನೆಂದಿದ್ದ ಇವರ ಹೆಸರು ಬಾಪೂಜಿಯ ಬಾಯಿಯಲ್ಲಿ ಪ್ರೀತಿಯಿಂದ "ವಿನೋಬಾ" ಎಂದಾಯಿತೆಂದ ಮೇಲೆ ಇವರಿಬ್ಬರೊಳಗಿದ್ದ ಬಾಂಧವ್ಯವು ಎಷ್ಟು ನಿಕಟವಾಗಿತ್ತೆಂಬುದು ನಮಗೆ ಗೋಚರವಾಗದಿರದು. ಗಾಂಧಿಯವರ ಸತ್ಯಾಗ್ರಹ ಚಳವಳಿಯ ಸೈನಿಕನಾಗಿ, ವಿನೋಬಾ ಭಾವೆ ಎಂಬ ಹೆಸರಿನಿಂದಲೇ ದೇಶಕ್ಕೆ ಪರಿಚಿತರಾದರೂ ರಚನಾತ್ಮಕ ಕಾರ್ಯಗಳಲ್ಲಿ ಅತಿ ಹೆಚ್ಚಿನ ಶ್ರದ್ಧೆ ವಹಿಸಿದುದಿದರೂ ಪಂಡಿತ ನೆಹರು, ಸರ್ದಾರ್ ಪಟೇಲ್, ಅಜಾದರಂತೆ ರಾಜಕೀಯ ಕ್ಷೇತ್ರದಲ್ಲಿ ಪ್ರಭಾವ ಬೀರಿದ ವ್ಯಕ್ತಿ ಇವರಲ್ಲ, ಮಹಾತ್ಮಾ ಗಾಂಧೀಜಿಯವರಿಂದ ಶೋಧಿಸಲ್ಪಟ್ಟ ನಯೀ ತಾಲೀಮ್ (ನವ ಶಿಕ್ಷಣ) ಸಮಿತಿಯ ಸದಸ್ಯರಲ್ಲೊಬ್ಬರಾಗಿ ದುಡಿದರು. ನಮ್ಮ ಜನತೆಗೆ ಎಂತಹ ಶಿಕ್ಷಣ ಬೇಕು ಎಂಬುದನ್ನು ಸಕಾರಣ, ಸವಿವರವಾಗಿ ತಾನು ಬರೆದ ಶಿಕ್ಷಣ ಎಂಬ ಪುಸ್ತಕದಲ್ಲಿ ವ್ಯಕ್ತಪಡಿಸಿದ್ದಾರೆ.

ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ದೊರೆತನಂತರ ಬಾಪೂಜಿಯವರು ದೈವಾಧೀನರಾದರು. ಸ್ವಾತಂತ್ರ್ಯ ದೊರೆತರೂ ಜನರ ಆರ್ಥಿಕ ತೊಳಲಾಟವು ಬಿಗಿಯಾಗುತ್ತ ಬಂತು. ಕಾರಣ, ದೇಶದ ವಿಭಜನೆಯಿಂದ ನಿರಾಶ್ರಿತರ ಸಮಸ್ಯೆ, ಆಹಾರದ ತುಟ್ಟಿ, ಬಡವ ಧನಿಕರಿಗಿದ್ದ ಭೂಮ್ಯಾಕಾಶಗಳ ಅಂತರ, ಪಕ್ಷಪಂಗಡಗಳ ಗಲಭೆ ಇವುಗಳಿಂದ ರಾಷ್ಟ್ರದ ಭವಿತವ್ಯವೇನೆಲೆ ಇಲ್ಲದಂತಾಯಿತು. ಭೂ, ನಿರುದ್ಯೋಗ ಸಮಸ್ಯೆಗಳ ವಿಕಟ ರೂಪವು ಬೃಹದಾಕಾರವಾಗಿ ದೇಶದ ಮುಂದೆ ನಿಂತಿತು. ಅಲ್ಲಲ್ಲಿ ಗಲಭೆ, ಲೂಟಿಗಳೂ ತೋರಿಬಂದುವು. ಜನತಾ ಸರಕಾರಕ್ಕೆ ಬಡಿಸಲಾರದ ಒಗಟಾಯಿತು ಈ ಪರಿಸ್ಥಿತಿ ಇನ್ನೂ ಮುಂದರಿದರೆ ರಸ್ಯಾ ದೇಶದಲ್ಲಾದಂತೆ ರಕ್ತಾಯುತ ಕ್ರಾಂತಿಯು ಭಾರತದಲ್ಲಿಯೂ ಆಗುವ ಸಂಭವ ದೂರವಿಲ್ಲವೆಂದು ಆಚಾರ್ಯ. ವಿನೋಬಾರವರು ಮನಗಂಡರು. ಆಂಧ್ರ ಪ್ರದೇಶ ತೆಲಂಗಾಣಲ್ಲಿ ಭೂದಾನ ಚಳವಳಿವನ್ನು ಆರಂಭಿಸಿದರು. ಅಹಿಂಸಾಯುತ ಪ್ರೇಮಮಯ ಕ್ರಿಯೆಯ ನೆಲೆಯಲ್ಲಿಯೇ ಈ ಆಂದೋಲನವು ಆರಂಭವಾಗಿದೆ.

ಪ್ರಕೃತಿ ನಿರ್ಮಿತಗಳಾದ ನೀರು, ಗಾಳಿ, ಆಕಾಶ, ಬೆಳಕುಗಳಂತೆಯೇ ಭೂಮಿಯಲ್ಲಿಯೂ ಪ್ರಾಣಿ ಮಾತ್ರರೆಲ್ಲರಿಗೂ ಸಮಾನ ಹಕ್ಕಿರಬೇಕೆಂದೂ ಪರಸ್ಪರರು ಸಮತೆ ಹಾಗೂ ಪ್ರೀತಿಯಿಂದ ಭೋಗಿಸಲು ಅರ್ಹರೆಂದೂ ಅವರು ಬೋಧಿಸಿದರು. ಸಂಪತ್ತನ್ನು ಒಂದೇ ಕಡೆಯಲ್ಲಿ ಕೂಡಿರದೆ ಸಮಾಜದೊಂದಿಗೆ ಹಂಚಿ ಅನುಭವಿಸುವುದು ನಮ್ಮ ಕರ್ತವ್ಯವೆಂದು ಸಾರಿದರು. ಭೂದಾನವೆಂದಿದ್ದ ಆ ಹೆಸರು ಈಗ ಸಂಪತ್ತಿದಾನ, ಶ್ರಮದಾನ ಬುದ್ಧಿದಾನ, ಗ್ರಾಮದಾನಗಳೆಂಬ ಹೆಸರಿನಿಂದ ಬಹುಮುಖವನ್ನು ತಾಳಿದೆ. ಆರು ಕೋಟಿ ಎಕರೆ ದಾನ ಸಿಗಬೇಕೆಂದು ಗುರಿಯನ್ನಿಟ್ಟುಕೊಂಡು ಕಾರ್ಯ ಪ್ರವೃತ್ತರಾಗಿದ್ದಾರೆ. ತೆಲಂಗಾಣ, ಬಿಹಾರ, ಕೇರಳ, ಈ ಪ್ರಾಂತಗಳಲ್ಲಿ ಚಳವಳಿವನ್ನು ಮುಂದರಿಸಿ ನಮ್ಮ ಕರ್ನಾಟಕ ಸ್ವಾಂತದಲ್ಲಿ ಪ್ರವೇಶಿಸಿದ್ದಾರೆ ಮೂಲತಃ ಸಣ್ಣ ರೂಪದಲ್ಲಿದ್ದ ಈ ಆಂದೋಲನಕ್ಕಾಗಿ ಈಗ ದೊಡ್ಡ ಶಾಂತಿ ಸೇನೆಯೇ ಸಿದ್ದವಾಗಿದೆ ಈ ವರೆಗೆ ೪೫ ಲಕ್ಷ ಎಕರೆಯಷ್ಟು ಭೂಮಿಯೂ ೩೦೦೦ಕ್ಕೂ ಮಿಕ್ಕಿ ಗ್ರಾಮಗಳೂ ದಾನವಾಗಿ ದೊರೆತಿವೆ.

ಸ್ವೇಚ್ಛೆಯಿಂದ ಪ್ರೇಮ ಸಾರ್ವಕವಾಗಿ ಕೊಟ್ಟ ದಾನ ಕೊರತೆ. ಒತ್ತಾಯದಿಂದ ಸಿಕ್ಕಿದ ದಾನವನ್ನು ವಾಪಾಸು ಮಾಡಬೇಕೆಂದು ಹೊನ್ನೆ ತಾನೆ ನಮ್ಮ ರಾಜ್ಯದ ಮುಖ್ಯ ಮಂತ್ರಿ ನಿಜಲಿಂಗಪ್ಪನವರೊಡನೆ ವಿನೋಬಾರವರು ಸೂಚಿಸಿದ್ದಾರೆ. ಮುಖ್ಯವಾಗಿ ಜನರ ಒಲವು ಸತ್ಯ ಅಹಿಂಸೆಗಳೆಡೆಗೆ ಪರಿವರ್ತನೆಯಾಗಿ ಆ ಮೂಲಕ ಅವರು ಸಮಾಜ ಜೀವನದಲ್ಲಿ ಸುಖ ಶಾಂತಿಯಿಂದ ಬಾಳಬೇಕೆಂದೇ ಅವರ ಆಶಯ.

ಯಾವ ಪಕ್ಷ ಹಾಗೂ ಪಂಗಡಕ್ಕೂ ಅವರು ಸೇರಿದವರಲ್ಲ. ಎಲ್ಲ ಪಕ್ಷಗಳೂ ಅವರ ನೈತಿಕ ಪ್ರಭಾವಕ್ಕೊಳಗಾಗಿವೆ. ಬಡವರೂ ಧನಿಕರೂ, ಸರಕಾರವೂ, ರಾಷ್ಟ್ರ ನಾಯಕರೂ ಅವರ ಕ್ರಾಂತಿಯ ಬಗ್ಗೆ ಸಹಾನುಭೂತಿಯನ್ನು ಕೋರಿ ಅಶಾದೃಷ್ಟಿಯಿಂದ ನೋಡುತ್ತಿವೆ ಇಡೀ ವಿಶ್ವದ ಜನತೆಯ ದೃಷ್ಟಿಯಲ್ಲಿ ಈ ಆಂದೋಲನವು ಒಂದು ಪವಾಡ ರೂಪವಾಗಿ ತೋರುತ್ತಿದೆ.

ಈ ಶಾಂತಿಯುತ ಕ್ರಾಂತಿಯು ಆರಂಭವಾಗಿ ಆರುವರೆ ವರ್ಷಗಳಾದುವು. ಈ ಕಾರ್ಯ ನಿರ್ಬಾಧವೆಯಲ್ಲಿ ದೇವರು ನನ್ನನ್ನು ಅಂತ್ಯಗೊಳಿಸುವ ವರೆಗೂ ನಾನು ನನ್ನ ಕರ್ತವ್ಯ ಮಾಡುತ್ತಲೆ ಇರುವೆನೆಂಬುದು ಪೂಜ್ಯ ವಿನೋಬರ ಉತ್ಕಟೇಚ್ಛೆ. ಪೂ| ಬಾಪೂಜಿಯವರ ಕನಸಿನ ರಾಮರಾಜ್ಯ ರಚನಾ ಕಾರ್ಯವು ಅವರ ಆಧ್ಯಾತ್ಮಿಕ ಶಿಷ್ಟ ಶಿಷ್ಯ ಸಂತ ವಿನೋಬಾರವರಿಂದ ಮುಂದರಿದು ಗುರಿ ಮುಟ್ಟಲಿ ಈ ಕಾರ್ಯದಲ್ಲಿ ಭಾಗವಹಿಸಿ ನಮ್ಮ ಪಾಲಿನ ಅಳಿಲ ಮಳಿಲ ಸೇವೆಯನ್ನು ಸಲ್ಲಿಸುವ ಸದ್ಬುದ್ಧಿಯನ್ನು ಪರಮಾತ್ಮನು ನಮಗೆ ಕರುಣಿಸಲಿ, ನವ್ಯ ಸಮಾಜ ಜೀವನದ ಪುನಾರ ರಚನೆಯಾಗಲಿ; ಭಾರತ ಖಂಡದ ಆಧ್ಯಾತ್ಮಿಕ ಪರಂಪರೆಯ ಆದರ್ಶವು ವಿಶ್ವವ್ಯಾಪಿಯಾಗಲೆಂಬ ಶುಭ ಕೋರಿಕೆಯೊಂದಿಗೆ ಪೂಜ್ಯ ವಿನೋಬಾಜೀಯವರ ೬೩ನೇ ಜನ್ಮದಿನದಂದು ನಮ್ಮ ನಮ್ರಕೃತಜ್ಞತೆಯನ್ನು ಅವರಿಗೆ ಸಲ್ಲಿಸಿ ಕರ್ತವ್ಯ ಸ್ಫೂರ್ತಿಯನ್ನು ಪಡೆಯೋಣ—

ನೆರೆ ನಿಯಂತ್ರಣಕ್ಕೆ ಅಮೂಲ್ಯ ಅಸ್ತ್ರಭಾರ

(೩ನೇ ಪುಟದಿಂದ)

ಹಾರವನ್ನು ಬಗಿಸುವುದಕ್ಕಿಂತ ನೆರೆಯ ನೀರನ್ನೇ ಮಾನವನು ಹತೋಟಿಯಲ್ಲಿಟ್ಟುಕೊಂಡ, ಡಡಮಿರಾ ನೀರು ಹರಿಯದಂತೆ ರಾಷ್ಟ್ರವಾದ ವಂಕಾರ ವಿಧಾನವನ್ನು ಕೈಗೊಳ್ಳುವುದು ಸೂಕ್ತವಾಗಿದೆ.

ಇಂತಹ ಕ್ರಮಗಳಿಗೆ ಸರಕಾರವೂ ನೆರವು ನೀಡುವುದು ಕಳೆದ ಕೆಲವು ವರ್ಷಗಳಲ್ಲಿ ಅನೇಕ ಅಣೆಕಟ್ಟುಗಳು ಕಟ್ಟಲ್ಪಟ್ಟು ಕೆಲವೊಂದು ನದಿಗಳಲ್ಲಿ ನೀರನ್ನು ನಿಯಂತ್ರಿಸಲಾಗಿದೆ. ಹಾಗಯೇ ದಡಗಳಲ್ಲಿ ಧರೆಗಳನ್ನು ಕಟ್ಟಲಾಗಿದೆ, ಆದರೆ, ಈ ಮಾರ್ಗದಲ್ಲಿ ಕೈಗೊಂಡ ಕೆಲಸ ತೀರಾ ಅತ್ಯಲ್ಪ. ಕಣ್ಣಿಗೆ ಗೋಚರವಾಗದಷ್ಟು ಇಂತಹ ಇನ್ನೂ ಅನೇಕ ವಿಧದ ಕಾರ್ಯಕ್ರಮಗಳು ತೀವ್ರವಾಗಿ ಕೈಗೊಳ್ಳಲ್ಪಡಬೇಕು; ಇದರಿಂದ ಪ್ರತಿ ವರ್ಷ ನಿರರ್ಥಕವಾಗಿ ನಷ್ಟವಾಗುವ ಜೀವಗಳನ್ನೂ ಮನೆಮಂದಿರಗಳನ್ನೂ ಮರಮಟ್ಟುಗಳನ್ನೂ ದವಸಧಾನ್ಯಗಳನ್ನೂ ಉಳಿಸಿದಲ್ಲಿ ದೇಶದ ಸಂಪತ್ತು ಅಧಿಕವಾಗುವುದು. ಸರಕಾರದವರು ಪ್ರವಾಹ ನಿಯಂತ್ರಣಕ್ಕಾಗಿ ಕೈಗೊಳ್ಳುವ ಕಾರ್ಯಕಲಾಪಗಳಲ್ಲಿ ಪ್ರಜೆಗಳೂ ಸಹಕಾರಿಗಳಾಗಬೇಕು; ಪರ್ಯಾಲಕ ಕೊಳ್ಳೆ ಹೊಡೆಯುವವರುಣ ದೇವನನ್ನು ಬಂಧಿಸಬೇಕು.

---

100 ವರ್ಷಗಳ ಖ್ಯಾತಿಗಳಿಸಿದ ಶಂ|| ಅಂಬಲಿ ರಾಮಸ್ವಾಮಿ ಅಯ್ಯರ್‌ರವರ ರತ್ನಜ್ವಲಿಗಳು

ಟ್ರೇಡ್ ಮಾರ್ಕ್

ಪಂ| A.R. ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಸ್ರುತ್ತು, ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ಸಮ್ಪೂರ್ಣಸಕ್ತಿಯನ್ನು ನಾವಾವೇಷಗೊಳಿಸುತ್ತದೆ

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ

ಹೋಗಿಯ ವಯಸ್ಸು ಮತ್ತು ಬಾಯಿಯಲ್ಲಿ ವಿವರಗಳನ್ನು ಬರೆದು 4 ಆಣೆ (25 N.P.) ಸ್ಟಾಂಪು ಕಳಿಸಿ ಸಲಹೆಯೊಡನೆ ಕ್ಯಾಟಲಾಗ್ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ. (ನ ಯು)

638, "ಸಂತಾನ ಸಿಂದೂರ ಸದನ", ಚಾಮರಾಜ ರೋಡ್, ಮೈಸೂರು-1 (S I

Quality Air Cushion Rubber Stamps

Crown RUBBER STAMP CO.

PHONE-203 ESTD 1926

BALMATTA ROAD, MANGALORE.

ಇದು ನಿಮಗೆ ತಿಳಿದಿರಲಿ!

ನಾಗರಿಕತ್ವವೆಂದರೇನು?

ತಿಳಿಸಿದವರು ಐ ವಿ. ಭಟ್.

ನಾವು ಸ್ವತಂತ್ರ ಭಾರತದ- ಒಂದು ಗಣರಾಜ್ಯದ ನಾಗರಿಕರಾಗಿರುವಾಗ ನಾಗರಿಕತ್ವದ ಕುರಿತು ಚೆನ್ನಾಗಿ ತಿಳಿದಿರುವುದು ಅತ್ಯವಶ್ಯ. ರಾಷ್ಟ್ರದ ನಾಗರಿಕತ್ವವು ಅಥವಾ ನಾಗರಿಕತೆಯ ಹಕ್ಕು ಗೌರವಪೂರ್ಣವಾದುದು. ನಮ್ಮ ದೇಶ ಸ್ವತಂತ್ರವಾಗಿದೆ ಗ್ರೀಕ್ ತತ್ವಜ್ಞಾನಿ ಪ್ಲೇಟೋ ಹೇಳಿದಂತೆ- ಸ್ವಾತಂತ್ರ್ಯ ಉಳಿಯಬೇಕಾದರೆ ಪ್ರಜೆಗಳು ಸದಾ ಜಾಗ್ರತರಾಗಿರಬೇಕು. ಅಮ್ಮ ಬೆಲೆ ಕೊಡದ ಸ್ವಾತಂತ್ರ್ಯ ಉಳಿಯುವಂತಿಲ್ಲ. ಸರಕಾರವು ಪ್ರಜೆಗಳಿಗೆ ಕೆಲವು ಅಧಿಕಾರಗಳನ್ನೂ ಸೌಲಭ್ಯಗಳನ್ನೂ ಕೊಟ್ಟಿರುತ್ತದೆ ಅಂತೆಯೇ ಅವುಗಳನ್ನನುಸರಿಸಿ ಒದಗಿ ಬಂದ ಕರ್ತವ್ಯಗಳಲ್ಲಿ ಮಗ್ನರಾಗುವುದನ್ನು ಅಪೇಕ್ಷಿಸುತ್ತದೆ. ಯಾವ ಶ್ರಮವೂ ಇಲ್ಲದೆ ಸುಲಭವಾಗಿ ತನ್ನಿಂದ ತಾನಾಗಿ ನಾಗರಿಕಾಧಿಕಾರ ದೊರೆಯುವುದೆಂಬ ಭ್ರಮೆ ಕೆಲವರಲ್ಲಿರಲೂಬಹುದು. ಪ್ರಾಚೀನಕಾಲದಲ್ಲಿ ಒಂದೊಂದು ನಗರವೂ ಒಂದೊಂದು ರಾಷ್ಟ್ರವಾಗಿದ್ದಿರಬೇಕು. ಗ್ರೀಸಿನ ಚರಿತ್ರೆಯಲ್ಲಿ ಇದು ಸ್ಫುಟವಾಗಿ ಎದ್ದು ತೋರುವುದು. ಆದುದರಿಂದ ನಗರದಲ್ಲಿ-ರಾಷ್ಟ್ರದಲ್ಲಿ ವಾಸಿಸುವ ಸರಕಾರದ ಕಾರ್ಯಗಳಲ್ಲಿ ಸಹಭಾಗಿಯಾಗುವವನಿಗೆ ನಾಗರಿಕನೆಂಬ ಹೆಸರು ಬಂದಿರಬೇಕು.

ಪ್ರಜೆಗಳಲ್ಲಿ ಎರಡು ವಿಧ; ನಾಗರಿಕರು ಮತ್ತು ನಿವಾಸಿಗಳು ಎಂದು. ನಾಗರಿಕತ್ವವುಳ್ಳವರು ನಾಗರಿಕರು. ರಕ್ಷಣೆ ಪಡೆಯುತ್ತಿದ್ದರೂ ಅಧಿಕಾರವಿಲ್ಲದವರು ನಿವಾಸಿಗಳು. ಪ್ರಜೆಗಳು ಕೆಲವು ಸಾಮಾಜಿಕ ಹಕ್ಕುಗಳನ್ನು ಅನುಭವಿಸುತ್ತಾರೆ. ಅವುಗಳಲ್ಲಿ ಸೊತ್ತುಗಳ ರಕ್ಷಣೆ, ಸಮಾನತೆ, ನ್ಯಾಯವನ್ನು ಪಡೆಯುವ ಹಕ್ಕು ಮುಖ್ಯವಾದವುಗಳು. ನಾಗರಿಕರು ರಾಷ್ಟ್ರದ ಪ್ರಭುತ್ವದಲ್ಲಿ ಸಹಭಾಗಿಗಳು, ಅವರಿಗೆ ರಾಜಕೀಯ ಹಕ್ಕುಗಳಿವೆ. ಆದರೆ ನಿವಾಸಿಗಳಿಗೆ ರಾಜಕೀಯ ಹಕ್ಕುಗಳಿರುವುದಿಲ್ಲ. ಇದು ಎರಡು ವರ್ಗಗಳಲ್ಲಿರುವ ಮುಖ್ಯ ವ್ಯತ್ಯಾಸ. ಈ ಭೇದವೇಕೆಂದು ಹಲವರು ಆಶ್ಚರ್ಯಪಡಬಹುದು. ನಾಗರಿಕತ್ವದ ಮಹತ್ವವನ್ನರಿತಾಗ ಅದರ ಮರ್ಮವು ತಿಳಿಯುವುದು.

ನಾಗರಿಕತ್ವ ವೈಶಿಷ್ಟ್ಯಪೂರ್ಣವಾದುದು ಈ ಹಕ್ಕನ್ನು ಪಡೆಯುವ ಮತ್ತು ಕಳೆದುಕೊಳ್ಳುವ ವಿಧಾನಗಳು ದೇಶಗಳ ನಿಯಮಾನುಸಾರ ಹಲವು ವಿಧಗಳಾಗಿವೆ.

ನಾಗರಿಕತ್ವವನ್ನು ಹೊಸತಾಗಿ ಪಡೆಯುವ ವಿಧಾನಗಳಲ್ಲಿ ಮುಖ್ಯವಾದವುಗಳು—ವಿದೇಶೀಯ ನಾಗರಿಕನನ್ನು ಮದುವೆಯಾದ ಹೆಂಗಸು ಗಂಡನ ರಾಷ್ಟ್ರದ ನಾಗರಿಕತ್ವವನ್ನು ಪಡೆಯುತ್ತಾಳೆ. ಕೆಲವು ರಾಷ್ಟ್ರಗಳು ನಮ್ಮ ರಾಷ್ಟ್ರದಲ್ಲಿ ಜನಿಸಿದ ವಿದೇಶೀಯರ ಮಕ್ಕಳನ್ನು ನಾಗರಿಕರೆಂದು ಒಪ್ಪಿಕೊಳ್ಳುತ್ತವೆ ಇಂಗ್ಲಂಡು ಇದಕ್ಕೊಂದು ನಿದರ್ಶನ. ವಿದೇಶೀಯನೊಬ್ಬನು ಸರಕಾರೀ ಉದ್ಯೋಗದಲ್ಲಿದ್ದರೆ ಅವನು ರಾಷ್ಟ್ರದ ನಾಗರಿಕತ್ವವನ್ನು ಪಡೆಯುತ್ತಾನೆ. ನಿಶ್ಚಿತ ಅವಧಿಯವರೆಗೆ ರಾಷ್ಟ್ರದಲ್ಲಿ ವಾಸವಾಗಿದ್ದು, ರಾಷ್ಟ್ರದ ನಾಗರಿಕತ್ವವನ್ನಿಚ್ಛಿಸಿ ತಕ್ಕ ಪ್ರತಿಜ್ಞೆಯನ್ನು ಮಾಡಿದರೆ, ಈ ಹಕ್ಕನ್ನು ಕೊಡುವ ವಿಧಾನ ಕೆಲವೆಡೆ ಬಳಕೆಯಲ್ಲಿದೆ ಕೆಲವೊಮ್ಮೆ ಎರಡು ರಾಷ್ಟ್ರಗಳ ನಾಗರಿಕತ್ವವು ದೊರಕಬಹುದು. ಆಗ ಯಾವುದಾದರೊಂದನ್ನು ಸ್ವೀಕರಿಸಬಹುದು.

ಈ ಹಕ್ಕನ್ನು ಕಳೆದುಕೊಳ್ಳುವ ಸಂದರ್ಭಗಳು; ವಿದೇಶೀಯನನ್ನು ಮದುವೆಯಾದ ಹೆಂಗಸು ನಾಗರಿಕತ್ವವನ್ನು ಕಳೆದುಕೊಳ್ಳುತ್ತಾಳೆ ರಾಜದ್ರೋಹ ಮಾಡಿದವರ ನಾಗರಿಕತ್ವವನ್ನು ರದ್ದುಮಾಡಲಾಗುತ್ತದೆ ಚಿರಕಾಲ ದೇಶದಿಂದ ಹೊರಗಿದ್ದರೆ ಈ ಹಕ್ಕನ್ನು ಕಳೆದುಕೊಳ್ಳುವ ಸಂಭವವುಂಟು ಇನ್ನೊಂದು ದೇಶದ ನಾಗರಿಕತ್ವವನು ಪಡೆದಾಗ ಮೊದಲಿನ ದೇಶದ ನಾಗರಿಕತ್ವವು ರದ್ದಾಗುವುದು.

ರಾಷ್ಟ್ರದ ಚರಿತ್ರೆಯಲ್ಲಿ ವ್ಯಕ್ತಿಯ ದಿನ ನಿತ್ಯದ ನಡತೆಯು ಪ್ರತೀಕವಾಗಿದೆ. ವ್ಯಕ್ತಿ ಸಮೂಹದ ಅಭಿವೃದ್ಧಿಯೇ ರಾಷ್ಟ್ರದ ಏಳ್ಗೆ. ವ್ಯಕ್ತಿ ಅಥವಾ ನಾಗರಿಕನೆಂದರೆ ರಾಷ್ಟ್ರದ ಒಂದು ಭಾಗ ರಾಷ್ಟ್ರದ ಅಗಾಧವಾದ ಪ್ರಜೆಯ ಅಪಕೀರ್ತಿ ರಾಷ್ಟ್ರದ ಕೀರ್ತಿಯೇ ನಾಗರಿಕನ ಹಿರಿಮೆ. ಆದುದರಿಂದ ರಾಷ್ಟ್ರದ ಹಿತಕ್ಕಾಗಿ—ಕ್ಷೇಮಕ್ಕಾಗಿ ದುಡಿಯುವುದು ನಾಗರಿಕನ ಧರ್ಮ; ಆತ್ಮ ವಿಕಾಸದ ಮಾರ್ಗ.

ಅವಿದ್ಯೆ ಅಜ್ಞಾನಗಳು ದೂರವಾಗದೆ ನಾಗರಿಕರು ಸಮರ್ಥರೆಂದಿನಿಸಲಾರರು. ಅತಿಯಾದ ಸ್ವಾರ್ಥವುಳ್ಳವರಲ್ಲಿ ಸಮಾಜದ ಹಿತಾಸಕ್ತಿಯನ್ನು ತಿಳಿದುಕೊಳ್ಳಲಾರದವರಲ್ಲಿ ಯೋಗ್ಯ ನಾಗರಿಕತ್ವಕ್ಕೆ ಅವಕಾಶವಿಲ್ಲ. ನೈತಿಕ ಮಟ್ಟದ ಔನತ್ಯವನ್ನು ನಮಗಿ ದೇಶದ ಚರಿತ್ರೆಯಲ್ಲಿ ಎದ್ದುಕಾಣುವುದು ಬೇಳುತ್ತವೆ. ನೈತಿಕ ಅಧಃಪತನವನ್ನು ಹೋಗಲಾಡಿಸಬೇಕೆಂದಿಗೂ ಸಾಧ್ಯವಿಲ್ಲದಾನದು. ವಿದ್ಯಾಪ್ರಸಾರ, ಜನರಿಗೆ ತಕ್ಕ ಶಕ್ತಿಯನ್ನು ಕೊಡುವಂತಹ ಸಹಕಾರಿ ಸಂಘಗಳು ಗ್ರಾಮ ಪಂಚಾಯತಿಗಳು, ಪ್ರತಿಯೊಬ್ಬನಿಗೂ ತನ್ನ ಏಳ್ಗೆಯನ್ನು ಸಾಧಿಸಲು ಸದವಕಾಶ—ಇವುಗಳು ಸಮಾಜದ ಹಿತೋಭಿವೃದ್ಧಿಗೆ ಅವಶ್ಯ.

ಸಮಾಜ ಶಾಸ್ತ್ರಜ್ಞರು ಆದರ್ಶ ನಾಗರಿಕನ ಲಕ್ಷಣವನ್ನು ವಿವರಿಸುವುದಕ್ಕೆ ಸಾಕಷ್ಟು ಶ್ರಮ ವಹಿಸಿದ್ದಾರೆ. ಆದರ್ಶ ಇರುವುದು ಅದರಂತಾಗುವುದಕ್ಕೆ; ಅದನ್ನು ಅನುಸರಿಸುವುದಕ್ಕೆ. ಪ್ರತಿಯೊಬ್ಬ ನಾಗರಿಕನೂ ಅದನ್ನು ತಿಳಿದಿರಲೇಬೇಕು. ಅದನ್ನು ಅನುಷ್ಠಾನಮಾಡುವುದಕ್ಕೆ ಪ್ರಯತ್ನಿಸಬೇಕು ಆದರ್ಶ ನಾಗರಿಕರಿಂದ ಮೇಲೇ ದೇಶದ ಚರಿತ್ರೆಯು ಬೆಳಗುತ್ತದೆ. ನಾಗರಿಕರು ಸಮೂಹದ ಯೋಗ್ಯತೆಯೇ ದೇಶದ ಯೋಗ್ಯತೆ

ಆದರ್ಶ ನಾಗರಿಕನಿಗೆ ಗಮನಾರ್ಹವಾದ ನೈತಿಕ ಹಾಗೂ ಬೌದ್ಧಿಕ ಯೋಗ್ಯತೆಗಳಿರಬೇಕು. ಸತ್ಯಕ್ಕಾಗಿ, ನ್ಯಾಯಕ್ಕಾಗಿ ಹೋರಾಡುವ ಧೃಢನಿರ್ಧಾರ, ಕರ್ತವ್ಯ ಪ್ರಜ್ಞೆ ಹಾಗೂ ಸಾರ್ವಜನಿಕ ಹಿತಕ್ಕಾಗಿ ದುಡಿಯುವ ಆಸಕ್ತಿ ಇವುಗಳು ನೈತಿಕ ಯೋಗ್ಯತೆಗಳು. ಇವುಗಳಲ್ಲದೆ ತನ್ನ ಅಥವಾ ತನ್ನವರ ಹಿತಕ್ಕಿಂತ ಸಾರ್ವಜನಿಕ ಸಮೂಹದ ಮೇಲು ಎಂಬ ಭಾವನೆಯ ದೃಢ ಸಾರ್ವಜನಿಕ ಸಮಸ್ಯೆಗಳ ಕುರಿತು ಸ್ವಾಭಿಪ್ರಾಯವನ್ನು ಪ್ರಕಟಿಸುವ ಎದೆಗಾರಿಕೆಯಿರಬೇಕು. ಬೌದ್ಧಿಕ ದೃಷ್ಟಿಯಿಂದ ವಿಚಾರಿಸುವುದಿದ್ದರೆ ನಾಗರಿಕನಿಗೆ ರಾಜಕೀಯವನ್ನು ಅರ್ಥಮಾಡಿಕೊಳ್ಳುವಷ್ಟು ವಿದ್ಯೆಯಿರಬೇಕು. ಸಾರ್ವಜನಿಕ ಸಮಸ್ಯೆಗಳನ್ನು ಮನನ ಮಾಡುವಷ್ಟು ಅವುಗಳ ಕುರಿತಾದ ತನ್ನ ಅಭಿಪ್ರಾಯವನ್ನು ಹೇಳುವಷ್ಟು ಸಾಮರ್ಥ್ಯ ಅವನಿಗಿರಬೇಕು ಕುಟುಂಬ ಸಮಾಜದಲ್ಲಿ ಹಾಗೂ ಸರಕಾರದ ಅಭಿರುಚಿಗಳ ಏಕ ಸೂತ್ರತೆಯನ್ನು ಸಾಧಿಸುವಷ್ಟು ಬುದ್ಧಿ ಇರಬೇಕು.

ದೇಶವನ್ನಾಳುವ ಅಧಿಕಾರದ ಸಮಭಾಗ ಪ್ರತಿಯೊಬ್ಬ ನಾಗರಿಕನಿಗೂ ದೊರೆತಿರುವಾಗ ನಾಗರಿಕ ಆದರ್ಶಗಳನ್ನು ತನ್ನದನ್ನಾಗಿ ಮಾಡಿಕೊಳ್ಳುವುದಕ್ಕೆ ಪ್ರತಿಯೊಬ್ಬನೂ ಪ್ರಯತ್ನಿಸಬೇಕು. ಆದರ್ಶ ನಾಗರಿಕರಿಂದ ಮಾತ್ರ ದೇಶ ಕಲ್ಯಾಣ ಸಾಧ್ಯ.



ಆಕಾಶವಾಣಿ ಭೂಗೋಳಿಕ ವರ್ಷವು ಉತ್ಸಾಹದಿಂದ ಆಚರಿಸಲ್ಪಡುತ್ತಿದೆ. ೨೫ ಅಡಿ ವ್ಯಾಸವುಳ್ಳ ಹರಿವಾಣಾಕಾರದ ಈ ಆಕಾಶವಾಣಿ ದೂರದರ್ಶಕ ಯಂತ್ರವು ಸೂರ್ಯನ ಶಕ್ತಿ ಹಾಗೂ ಭೂಮಿಯ ಮೇಲೆ ಆಗುವ ಅದರ ಪರಿಣಾಮಗಳನ್ನು ಅಭ್ಯಾಸಮಾಡಲು ತುಂಬ ನೆರವೀಯುತ್ತದೆ

ಎರಡು ಕೆಂಪು ಕೋಳಿಗಳು

(೧ನೇ ಪುಟದಿಂದ)

ಇನ್ನೂ ನೋಡಲಾಗಿಂಡಿಲ್ಲ ಅದರಲ್ಲಿ ನಿಮ್ಮ ಲ್ಯಾಕ್ಟರು ಏನು ಮಾಡುವುದೆಂದು ನೋಡೋಣ" ಕಿಟ್ಟನು ಹೇಳಿದ್ದನು.

"ಹಾಗೆಯೇ ಆಗಲಿ" ಎಂದು ಸಾಹೇಬನು ನುಡಿದು ಮುನಿಸು ತನ್ನ ಹೆಣೆಯನ್ನು ಒರಸಿಕೊಂಡನು.

ಮರುದಿನ ಪೂರ್ವಾಹ್ನ ಸಾಹೇಬರಂತೆಯೇ ಉಡುಪು ತೆಟ್ಟಿ ನಾಲ್ಕುಮಂದಿ ಸಹಾಯಕರಿಂದ ಕೂಡಿದ ಟ್ರ್ಯಾಕ್ಟರು ಒಂತು. ಸಾಹೇಬನ ಆದೇಶದಂತೆ ಕಿಟ್ಟನು ಗದ್ದೆಯನ್ನು ಈ ಯಂತ್ರ ಯಂತ್ರವು ಕೋಣಗಳ ನೆರವಿಲ್ಲದೆಯೇ ಯಾವ ರೀತಿಯಲ್ಲಿ ಉಳುತ್ತದೆಂಬುದನ್ನು ಕಣ್ಣಾರೆ ಕಾಣುವ ಕುತೂಹಲದಿಂದ ಕಳ್ಳಿಗರೆಲ್ಲು ಗದ್ದೆಯಂಚಿನಲ್ಲಿ ನೆರೆದಿದ್ದರು. ಟ್ರ್ಯಾಕ್ಟರು ಒಂಬತ್ತು ಅಂಗುಲ ಆಳವಾಗಿ ಉತ್ತಿತು. ಇದುವರೆಗೆ ಆ ಹಳ್ಳಿಗರು ಅಷ್ಟು ಆಳವಾಗಿ ಉತ್ತಿರುವುದನ್ನು ನೋಡಿರಲಿಲ್ಲ, ಕೇಳಿರಲಿಲ್ಲ ಕೂಡಾ. ಅಪರಾಹ್ನದೊಳಗೆ ಇಡಿ ಗದ್ದೆಯೂ ಟ್ರ್ಯಾಕ್ಟರಿನಿಂದ ಉಳಲ್ಪಟ್ಟು ಬಿತ್ತನೆಗೆ ಸಿದ್ಧವಾಯಿತು.

° ° °

ಅದೇ ದಿನ ಚಂದ್ರೋದಯದ ನಸುಬೆಳಕಿನಲ್ಲಿ ಆ ಗದ್ದೆಯಂಚಿನ ಸಲಾಶ ಮರದಡಿಯಲ್ಲಿ ಕೆಂಪು ಹೂಗಳ ಮಾಲೆಗಳಿಂದಾವೃತವಾದ ಎರಡು ಕೆಂಪು ಕೋಳಿಗಳ ಮಂತಗಳು ಬಿದ್ದಿದ್ದವು. ಕಿಟ್ಟನು ತನ್ನ ಭೂತದ ಸಾಲವನ್ನು ಹಂಚು ಸಂಪಾಯ ಮಾಡಿದ್ದನು.

(ಅಥಾಗಃ ಯೋಗಾನಾ)

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ.ಪಿ ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ವರು: ಪಾ ಕಂಪೆನಿ, ಮಂಗಳೂರು—1.

ರಜಪೂತರ ವೈಭವದ ಪ್ರತೀಕ-

ರಾಜಸ್ಥಾನದ ಉದಯಪುರ

ಶ್ರೀ. ಎಸ್. ಸದಾಶಿವ ರಾವ್.

ಭಾರತದ ಇತಿಹಾಸದಲ್ಲಿ ಎದ್ದು ತೋರುವ ಕಾಲ ರಾಜಸ್ಥಾನದ ರಜಪೂತರ ಕಾಲ. ಮೊಗಲರ ಪ್ರಾಬಲ್ಯದ ಕಾಲದಲ್ಲಿ ವಿದೇಶೀ ಸತ್ತೆಗೆ ಎದುರಾಗಿ ಟೊಂಕ ಕಟ್ಟಿ, ನಾಡಿಗಾಗಿ ದುಡಿದ ವೀರಶೂರ ಸರ ತಾಯ್ನಾಡು ರಾಜಸ್ಥಾನ. ರಾಣಾ ಪ್ರತಾಪ, ಸಂಗ್ರಾಮ ಸಿಂಹ ಬಾಪಾ ರಾವಲ್, ಉದಯಸಿಂಹ ಮೊದಲಾದ ವೀರ ರಜಪೂತ ಸರದಾರರು ರಾಜಸ್ಥಾನವನ್ನು ಒಂದು ಸ್ವತಂತ್ರ ದೇಶವನ್ನಾಗಿ ಮಾಡಿ ಅಜರಾಮರರಾದರು. ಅದರ ಅಲ್ಪಕೆಯ ಕಾಲದ ವೈಭವದ ಕುರುಹುಗಳಾಗಿ ಇಂದು ಅವರ ನಗರಗಳ, ರಾಜಧಾನಿಗಳು, ಕೋಟೆಗಳು, ಕೊತ್ತಳಗಳು, ಅರಮನೆಗಳು, ಸರೋವರಗಳು ರಾಜಸ್ಥಾನದ ಎಲ್ಲೆಡೆಗಳಲ್ಲೂ ಕಂಡುಬರುತ್ತಿವೆ. ಅವುಗಳು ರಾಜಸ್ಥಾನದ ಗತ ಇತಿಹಾಸವನ್ನು ವೈಭವಯುತವಾದ ಉನ್ನತಿಯ ಕುಲವನ್ನು ನಮ್ಮ ಸ್ಮೃತಿಗೆ ತಂದು ಕೊಡುತ್ತಿವೆ. ಜಯಪುರ, ಆಜಮೀರ್, ಬಿಕಾನೀರ್, ಚಿತ್ರದುರ್ಗ, ಚಿತ್ತೂರು, ಚಿತ್ರಗಢ, ಜೋಧಪುರ, ಬುಂಡಿ ಇವುಗಳು ರಾಜಸ್ಥಾನದ ವೈಭವವನ್ನು, ಸಾರುವ ನಗರಗಳು. ಅಂತೆಯೇ ಉದಯಪುರವೂ ಅವುಗಳಲ್ಲೊಂದಾಗಿದೆ

ಉದಯಪುರವು ಭಾರತದ ಸುಂದರ ನಗರಗಳಲ್ಲಿ ಒಂದಾಗಿದ್ದು ೧೫೭೮ರಲ್ಲಿ ನಿರ್ಮಿಸಲ್ಪಟ್ಟಿತು. ಭಾರತದ ಪ್ರವಾಸಿಯಾಗಿ ಬಂದ ಒಬ್ಬ ಫ್ರೆಂಚ್ ಲೇಖಕ 'ಪೀರೆ ಲೋಟಿ' ಎಂಬವನು ಈ ಪಟ್ಟಣವನ್ನು 'ಒಂದು ರಮ್ಯವಾದ ತಂಗುವ ಸ್ಥಳ' ಎಂದು ಕರೆದಿದ್ದಾನೆ. ಆತನು ಉದಯಪುರದ ಕುರಿತು ಬರೆಯುತ್ತಾ 'ಸರೋವರಗಳುತ್ತಾ ಬಂದಂತೆ ಉದ್ದ ತೋರುವ ಶ್ವೇತ ವರ್ಣದ ಆರಮನೆಗಳು, ದೇವಾಲಯಗಳು, ಇವುಗಳ ಸುತ್ತ ಜಾಚಿ ನಿಂತಿರುವ ಸುಂದರ, ರಮ್ಯ ಪರ್ವತಾವಳಿಗಳು, ಈ ಪರ್ವತಾವಳಿಗಳನ್ನು ಹೊದಿಸಿರುವ ದಟ್ಟವಾದ ಕಾಡುಗಳು ಇವುಗಳಿಂದ ಈ ನಗರವು ತಂಗಲು ಯೋಗ್ಯ ಕಾಣವಾಗಿದೆ" ಎಂದಿದ್ದಾನೆ. ಪ್ರಾಕೃತಿಕ ಸೌಂದರ್ಯದಿಂದ ಆವೃತವಾದ ಈ ನಗರವು ಶಾಂತಿ ಮತ್ತು ಸೌಂದರ್ಯದ ಗೂಡಾಗಿದೆ.

ಜಾಚಿನಿಂತ ಪರ್ವತ ಶ್ರೇಣಿಗಳ ಇಳಿಜಾರಿನಲ್ಲಿರುವ ಈ ಪಟ್ಟಣವು ಗೋಡೆಯಿಂದ ಆವೃತ್ತವಾಗಿದೆ ನಗರ ಪ್ರವೇಶಕ್ಕೆ ಏಳು ದ್ವಾರಗಳಿವೆ. ಅವುಗಳಲ್ಲಿ "ಸೂರ್ಯ ದ್ವಾರ"ವೇ ನಗರದ ಮುಖ್ಯ ದ್ವಾರವಾಗಿದೆ. ಇಲ್ಲಿಯ ಮಹಾರಾಣನ ಅರಮನೆಯು ಚಂದ್ರಕಾಂತ ಶಿಲೆಯಿಂದ ರಚಿತವಾದ ದೊಡ್ಡ ಭವನವಾಗಿದೆ. ಇಲ್ಲಿಯ ಕಟ್ಟಡಗಳು ಬೇರೆ ಬೇರೆ ಕಾಲಗಳಲ್ಲಿ ನಿರ್ಮಾಣಗೊಂಡಿದ್ದರೂ ಕೂಡಾ ಕಟ್ಟಡಗಳ ಮಾದರಿಯು ಉಳಿಸಿಕೊಳ್ಳಲ್ಪಟ್ಟಿದೆ. ನಗರದ ದಕ್ಷಿಣಕ್ಕೆ ಕಂಗೊಳಿಸುವ ಉದ್ಯಾನಗಳಿವೆ. ಉತ್ತರ ಮತ್ತು ಪಶ್ಚಿಮಕ್ಕೆ ಪಿಚೋಲಾ ಸರೋವರದ ತನಕವೂ ಮನೆಗಳು ಚಾಚಿಕೊಂಡಿವೆ.

ಪಿಚೋಲಾ ಸರೋವರವು ೧೪ನೇ ಶತಮಾನದ ಅಂತ್ಯದಲ್ಲಿ ರಚಿಸಲ್ಪಟ್ಟದರೂ ಮೆಟ್ಟಲುಗಳ ರಚನೆಯಾದುದು ರಾಜಾ ಉದಯಸಿಂಗನ ಕಾಲದಲ್ಲಿ ಇದು ಎರಡು ಮೈಲು ಉದ್ದ ಒಂದೂವರೆ ಮೈಲು ಅಗಲವಾಗಿದೆ. ಸರೋವರವು ೧ ಚ. ಮೈಲಿಗಿಂತಲೂ ಹೆಚ್ಚು ವಿಸ್ತಾರವುಳ್ಳದ್ದಾಗಿದೆ.

ಸರೋವರದ ಮಧ್ಯೆ ಎರಡು ಅರಮನೆಗಳಿವೆ. ಜಗಮಂದಿರ ಮತ್ತು ಜಗನಿವಾಸ ಎಂದು ಅವುಗಳ ಹೆಸರು. ಇವುಗಳು ಕಪ್ಪು ಮತ್ತು ಬಿಳಿ ಚಂದ್ರಕಾಂತ ಶಿಲೆಯಿಂದ ರಚಿಸಲ್ಪಟ್ಟಿವೆ ಇವುಗಳಲ್ಲಿ ಜಗಮಂದಿರವನ್ನು ೩೦ನೇ ಶತಮಾನದ ಆದಿಭಾಗದಲ್ಲಿ ರಚಿಸಿದ್ದಾರೆ. ಜಗನಿವಾಸದಲ್ಲಿ ವಿಶಾಲ ಅಂಗಣಗಳೂ, ಉದ್ಯಾನಗಳೂ ಇವೆ.

ರಾಜಸ್ಥಾನದ ಆಯುಧ ಗೃಹದಲ್ಲಿ ರಾಜಸ್ಥಾನವನ್ನು ಆಳಿದ ರಾಜರುಗಳ ಅಯುಧಗಳ ಒಂದು ಉತ್ತಮ ಸಂಗ್ರಹವಿದೆ ಇಲ್ಲಿಯ ನಗಾರಿಯಲ್ಲಿ ಪ್ರಾಚೀನ ಅವಶೇಷಗಳು ಸಿಕ್ಕಿವೆ. ಇವುಗಳಲ್ಲಿಯ ಕೆಲವು ಬರಹಗಳು ಕ್ರಿ. ಪೂ ೧೩ನೇ ಶತಮಾನದವುಗಳೆಂದು ಊಹಿಸಲಾಗಿದೆ.

ಉದಯಪುರದಿಂದ ಸ್ವಲ್ಪ ದೂರದಲ್ಲಿರುವ ಬರೋಲಿ ಎಂಬ ಹಳ್ಳಿಯಲ್ಲಿ ಹಿಂದೂ ದೇವಾಲಯಗಳಿವೆ ಇವುಗಳಲ್ಲಿ ಮುಖ್ಯ ದೇವಾಲಯವು ಶಿವದೇವಾಲಯವಾಗಿದ್ದು, ಇಲ್ಲಿಯ ಶಿಲ್ಪ ಶೈಲಿ ಅತ್ಯುತ್ತಮವಾಗಿದೆ. ಇಲ್ಲಿಯ ಕಂಭಗಳಲ್ಲಿ ಅತ್ಯಾಚ್ಛಮಾದರಿಯ ಶಿಲ್ಪಕೃತಿಗಳಿವೆ ಇದು ಹತ್ತನೇ ಶತಮಾನ ಕಾಲದ ದೇವಾಲಯವಾಗಿದ್ದು ಇದು ಒರಿಸ್ಸಾದ ದೇವಾಲಯಗಳ ಮಾದರಿಯನ್ನು ಹೋಲುತ್ತದೆ. ಈ ದೇವಾಲಯದ ಎದುರು ಒಂದು ಸುಂದರ ಮಂಟಪವು ಇದೆ.

ರಾಜಸ್ಥಾನದ ನೀರಿನ ಪೂರೈಕೆಗೆ ಅವಶ್ಯಕವಾದ ಸರೋವರಗಳ ರಚನೆಯಲ್ಲೂ ಕಲಾಕೌಶಲ್ಯ ನೈಪುಣ್ಯ ಎದ್ದು ತೋರುವುದು ಇವುಗಳಲ್ಲಿ ಅತಿ ಸುಂದರವಾದ ಕೊಳವು ರಾಜ ನಗರದ 'ರಾಜ ಸಾಮಂಡ್' ಆಗಿದೆ. ಇದು ಹದಿನೇಳನೇ ಶತಮಾನದ ಮಧ್ಯ ಭಾಗದಲ್ಲಿ ರಾಣಾ ರಾಜಸಿಂಗನಿಂದ ರಚಿಸಲ್ಪಟ್ಟಿತು. ಕೊಳವು ೧೦೦೦ ಅಡಿಗಳಗಿಂತಲೂ ಹೆಚ್ಚು ಉದ್ದವಾಗಿದ್ದು ಎಲ್ಲಾ ಮೆಟ್ಟಲುಗಳೂ ಚಂದ್ರಕಾಂತ ಶಿಲೆಯಿಂದ ರಚಿಸಲ್ಪಟ್ಟಿವೆ. ಈ ಸರೋವರವು ಉದಯಪುರದಿಂದ ೩೦ ಮೈಲು ದೂರದಲ್ಲಿದೆ ಇದು ೮೫ ಚದರ ಮೈಲು ಸ್ಥಳವನ್ನು ಆಕ್ರಮಿಸಿರುತ್ತದೆ. ಈ ಸರೋವರದ ದೃಶ್ಯವು ಭಾರತದಲ್ಲಿ ಇನ್ನೆಲ್ಲಿಯೂ ದೊರೆಯುವುದ ಅಪರೂಪ. ಸಾಕಾವಿಹಾರಿಗಳು, ಈಜ ಗಾರರು, ಬೇಟೆ ಪ್ರಿಯರು, ಚಿತ್ರಕಾರರು, ಛಾಯಾಗ್ರಾಹಕರು ಈ ಸರೋವರದಲ್ಲಿ ತಮ್ಮ ವಿವಿಧ ತರದ ಅಭಿರುಚಿ ಆಸಕ್ತಿಗಳ ಪೂರೈಕೆಯನ್ನು ಮಾಡಬಲ್ಲರು.

ಉದಯಸರೋವರದಿಂದ ೧೦ ಮೈಲು ಉತ್ತರಕ್ಕೆ ಸಾಕಲಿಂಗ ದೇವಸ್ಥಾನ ಇದೆ. ಈ ದೇವಸ್ಥಾನವನ್ನು ಬಾಪಾರಾವಲ್‌ನು ಎಲನೇ ಶತಮಾನದಲ್ಲಿ ಕಟ್ಟಿಸಿದನು ಇದು ಶಿವನ ದೇವಸ್ಥಾನವಾಗಿದೆ ರಾಜಪುತಾನದ ಕೀರ್ತಿಶಾಲಿ ಅರಸ ಬಾಪಾರಾವಲ್‌ನ ಕೀರ್ತಿಯನ್ನೇ ಈ ದೇವಾಲಯದ ಕೀರ್ತಿಯೂ ವ್ಯಾಪಿಸಿದೆ.

ಈ ದೇವಾಲಯಕ್ಕೆ ಸಮೀಪವಾಗಿ 'ನಾಗ್ದಾ' ಎಂಬ ಸ್ಥಳವಿದೆ. ಇದು ಮೇವಾಡದ ಅತಿ ಪುರಾತನ ಸ್ಥಳವಾಗಿದೆ. ಇಲ್ಲಿ ಹಲವು ದೇವಾಲಯಗಳಿವೆ ಈ ದೇವಾಲಯಗಳ ಶಿಲ್ಪ ಶೈಲಿಯು ಅತಿ ಉತ್ತಮವಾಗಿದೆ.

ರಾಜಸ್ಥಾನವು ಕುಶಲ ಕೈಗಾರಿಕೆಗಳಿಗೂ ಪ್ರಖ್ಯಾತವಾಗಿದೆ. ಹಿತ್ತಾಳೆಯ ಲೋಹದ ಕೆತ್ತನೆಯ ಕೆಲಸಗಳು, ಅತ್ಯಪೂರ್ಣವಾಗಿವೆ ಹಿತ್ತಾಳೆಯ ತಟ್ಟೆಗಳು ಹರಿವಾಣಗಳು, ಹೂಜಿಗಳು, ತಮ್ಮದೇ ಆದ ಅಂದವನ್ನು ಗಳಿಸಿವೆ. ಈ ಕುಶಲ ಕೆಲಸಗಳಲ್ಲಿ ಅಡಕವಾಗಿರುವ ರಾಜಸ್ಥಾನದ ನಿವಾಸಿಗಳ ಕೈಚಳಕವನ್ನು ಕಂಡು ನಾವು ಮೂಗಿಗೆ ಬೆರಳೇರಿಸಬೇಕು! ಉದಯಪುರದಲ್ಲೂ ಇಂತಹ ಕುಶಲ ಕೆಲಸಗಾರರು ಈಗಲೂ ಈ ತಮ್ಮ ವೃತ್ತಿಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾರೆ.

ಗತಿಸಿಹೋದ ವೈಭವದ ನೆನಪನ್ನು ಹುಟ್ಟಿಸುವ ಉದಯಪುರವು ನಿಜಕ್ಕೂ ವೀಕ್ಷಣೀಯ ಸ್ಥಳವಾಗಿದೆ. ಇಲ್ಲಿಗೆ ರೈಲು, ವಿಮಾನ, ಬಸ್ ಸೌಕರ್ಯಗಳು ಇವೆ. ಬೊಂಬಾಯಿ, ಅಹ್ಮದಾಬಾದ್‌ಗಳ ಮಾರ್ಗವಾಗಿ ಉದಯಪುರವನ್ನು ಸೇರಬಹುದು ರಜಪೂತರ ವೈಭವದ ಪರಿಚಯಕ್ಕಾಗಿ, ಶಿಲ್ಪದ ಪರಿಚಯಕ್ಕಾಗಿ, ಅಪೂರ್ವ ನಿರ್ಮಾಣಗಳ ಅರಿವಿಗಾಗಿ, ನಗರ ಚೆಲುವಿಗಾಗಿ ನಾವೊಮ್ಮೆ ಉದಯಪುರವನ್ನು ನೋಡಲೇಬೇಕು.

ಇತ್ತೀಚೆಗೆ ನಡೆದ ಜಾಗತಿಕ ಟ್ರಿಪ್ಸ್ ಪಂದ್ಯಾವಳಿಯಲ್ಲಿ ಅಮೇರಿಕದ ನೀಗ್ರೋ ಮಹಿಳೆ ಅಲ್ಥೀಯಾ ಗಿಬ್ಸನ್ ಜಯವನ್ನು ಸಂಪಾದಿಸಿ ಟೆನಿಸ್ ಜಗತ್ತಿನ ರಾಣಿಯೆಂದು ಗೌರವಿಸಲ್ಪಟ್ಟಳು ಆಕೆಯಿಂದ ಸೋಲಿಸಲ್ಪಟ್ಟ ಡಾರ್ಲೀನ್ ಹಾರ್ಡನು ಗಿಬ್ಸನಳನ್ನು ಮುದ್ದಿಟ್ಟು ಗೌರವಿಸಿದನು

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಪಾಲು ಖರ್ಚು ಬೇರೆ)

ನವಭಾರತ ಪುಸ್ತಕಂಭಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭ ಸಂಚಿಕೆ ೩
VOL. 37 19—9—1957 NO. 3

ನೀವು ಸುಸಂಸ್ಕೃತರೆನಿಸಬೇಕಾದರೆ–

ನಿಮ್ಮ ಸಂಸ್ಕೃತಿಯನ್ನು ಉಳಿಸಿರಿ!

ನವರಾತ್ರಿ ಅಥವಾ ದಸರಾ ಹಬ್ಬ ಸಮೀಪಗತವಾಗುತ್ತ ಬಂತು. ಅಲ್ಲಲ್ಲಿ ಈ ನಾಡಿನ ಹಬ್ಬವನ್ನು ನಾನಾ ವಿಧವಾಗಿ ಆಚರಿಸುವ ಸಿದ್ಧತೆಗಳು ನಡೆಯುತ್ತಲಿವೆ. ಈ ಸಂದರ್ಭದಲ್ಲಿ ನಾವು ನಮ್ಮ ಸಂಸ್ಕೃತಿಯನ್ನು ಉಳಿಸುವತ್ತ ಸಹಾಸ್ಪಲ್ಪ ಗಮನವೀಯಬೇಕು. ಹಬ್ಬ ಹುಣ್ಣಿಮೆಗಳೆಂದರೆ, ತಿಂದು ನಲಿಯುವ, ಹೆತ್ತವರಿಂದ, ಹಿರಿಯರಿಂದ ಬೈಗಳನ್ನು ಕೇಳಿದ ದಿನಗಳೆಂದು ಮಾತ್ರ ನನಗೆ ಇಂದು ತಿಳಿದಿದೆಯಲ್ಲದೆ, ಆ ಪರ್ವದಿನಗಳ ಹಿನ್ನೆಲೆಯಲ್ಲಿ ನಮ್ಮ ಹಿರಿಯರು ಅದಾವ ಭಾವನೆಯನ್ನು ಕಲ್ಪಿಸಿರುವರೆಂಬುದನ್ನು ನಾವು ಅರಿತುಕೊಂಡಿಲ್ಲ. ನಮ್ಮ ಇಂದಿನ ಧಾರ್ಮಿಕಾಚರಣೆಗಳು ಕೇವಲ ಪರಂಪರಾಪ್ರಾಪ್ತ ಸಾಂಪ್ರದಾಯಗಳಂತೆ ನಡೆದುಕೊಂಡು ಬರುತ್ತಿವೆ. ಆದರೆ, ನಾವು ಯಾವ ಸದುದ್ದೇಶಗಳಿಗಾಗಿ ಇಂತಹ ದಿನಗಳನ್ನು ವರ್ಷವರ್ಷವೂ ತಪ್ಪದೆ ಆಚರಿಸುತ್ತೇವೆಂಬುದರ ಕಲ್ಪನೆಯೇ ನಮಗಿಲ್ಲದೆ ಹೋದರೆ, ಅಂತಹ ಪರ್ವದಿನಗಳ ಮಹತ್ವವಾದರೂ ಏನುಳಿಯಿತು? ಕಣ್ಣು ಮುಚ್ಚಿಕೊಂಡು ಅಂಧರಂತೆ ನಾವು ಅನುಕರಣೆ ಮಾಡುತ್ತಾ ಬಂದಲ್ಲಿ ಅಡನ್ನು ಅನುಸರಿಸಿ ಅದರ ಹಿಂದೆ ಸರಿಯುವ ಕುರಿಗಳಾಗುತ್ತೇವೆ

ಇದೇಕೆ ಹೀಗಾಯಿತು? ಇದನ್ನು ಸರಿಪಡಿಸುವುದು ಅವಶ್ಯಕವೆ? ಹೌದು, ನಮ್ಮ ದೈನಂದಿನ ಆಚರಣೆಯೇಕೆ, ಏನು ಎಂಬುದನ್ನು ನಾವು ತಿಳಿಯದೆ ಹೋದರೆ, ನಿಜವಾಗಿಯೂ ಕೃತಘ್ನರೆನಿಸುತ್ತೇವೆ. ನಮ್ಮ ಅಜ್ಞಾನಕ್ಕೆ ನಮ್ಮ ಅಶ್ರದ್ಧೆಯೇ ಹೊಣೆ ಕಳೆದೆರಡು ಶತಮಾನಗಳಿಂದ ನಮ್ಮ ಮೇಲೆ ಪ್ರಭುತ್ವವನ್ನು ಹೇರಿದ ಬ್ರಿಟಿಷ ಜನಾಂಗವು ನಮ್ಮ ಮೇಲೆ ತನ್ನ ಪ್ರಭಾವನನ್ನು ಅತ್ಯಾಕರ್ಷಕ ರೀತಿಯಲ್ಲಿ ಬೀರಿತು. ನಾವಾದರೋ ಉರಿಯುವ ದೀಪವನ್ನು ಹೆಣ್ಣೆಂದು ಪರಿಭಾವಿಸಿ, ಅದನ್ನು ಮುತ್ತಿಡಲು ತೊಡಗಿ, ನಮ್ಮದಾದ ಭಾರತೀಯ ಸಂಸ್ಕೃತಿಯನ್ನು ಸ್ವಲ್ಪ ಸ್ವಲ್ಪವಾಗಿಯೇ ದೂರೀಕರಿಸಿ ಪಾಶ್ಚಾತ್ಯರ ಮನಮೋಹಕ, ಆಡಂಬರ ಶೀಲ ಸಂಸ್ಕೃತಿಯನ್ನು ಪ್ರೇಮಿಸಿದೆವು. ಇದರ ಪರಿಣಾಮವಾಗಿ, ನಮ್ಮ ಸಂಸ್ಕೃತಿಯ ಜೀವಾಳಗಳಾದ ಪರ್ವ ದಿನಗಳ ಮೇಲಿನ ಸಂಕಲ್ಪನೆ ಮಾಯವಾಗಿ, ಪಾಶ್ಚಾತ್ಯರಂತೆ "ಹಾಲಿಡ್ಡಾಗ ಹಬ್ಬ" ಎನ್ನತೊಡಗಿದೆವು. ಹಬ್ಬದ ದಿನ ಹಾಲು' ಎಂಬುದನ್ನು ನಾವು ಮರೆತು ಬಿಟ್ಟೆವು ಇದರಿಂದಾಗಿ, ನಮ್ಮ ಈ ಘೋರ ಪಾಷಾಣ ಕೃತ್ಯದಿಂದಾಗಿ ಪರಮ ಪವಿತ್ರವಾದ, ಪರಮ ಪೂಜ್ಯವಾದ, ಭಾರತದ ಸುತ್ತು ಮುತ್ತಲಿನ ಹಲವಾರು ದೇಶಗಳಲ್ಲಿ ಹರಡಿ ಅಲ್ಲಿನ ಜನಪದದ ಸದ್ಭಾವನೆಯನ್ನು ಪಡೆದು, ಅವರಿಂದ ಪೂಜಿಸಲ್ಪಟ್ಟ ಭಾರತೀಯ ಸಂಸ್ಕೃತಿಯು ಅದರ ತವರುಮನೆಯಿಂದಲೇ ನಾಶವಾಗಿ, ನಾಮಾವಶೇಷವಾಯಿತು.

ಭಾರತವು ಸ್ವತಂತ್ರವಾಗಿ ಇಂದಿಗೆ ಹತ್ತು ವರ್ಷಗಳು ಸಂದಾಯವಾದುವು. ಒಂದು ರಾಷ್ಟ್ರದ ಇತಿಹಾಸದಲ್ಲಿ ಇಷ್ಟು ವರ್ಷಗಳೊಂದು ಕಿಚ್ಚಿನ ಮಾರ್ಪಾಟಕ್ಕೆ ತಕ್ಕ ಕಾಲವಲ್ಲ ನಾವು ಅಂದು ಮಾಡಿದ ತಪ್ಪನ್ನು ಇಂದಾದರೂ ತಿದ್ದಿಕೊಳ್ಳಬೇಕು; ಇದಕ್ಕಾಗಿ, ಮೂಲೆಗುಂಪಾಗಿರುವ ಭಾರತೀಯ ಸಂಸ್ಕೃತಿಯನ್ನು ಪುನಃ ಪ್ರಕಾಶಕ್ಕೆ ತಂದು, ಅದು ಮನೆ ಮನೆಗಳಲ್ಲೂ ಪ್ರಜ್ವಲಿಸುವಂತೆ ಮಾಡಬೇಕು, ಪಾಶ್ಚಾತ್ಯರನ್ನು ಹೊರನೂಕಿದ ನಾವು ಅವರ ಸಂಸ್ಕೃತಿಯನ್ನೂ, ಅವರಿಂದ ಕಲಿತುಕೊಂಡ ಕೆಲವೊಂದು ದುರಾಭಾಸಗಳನ್ನೂ ಪ್ರಯತ್ನಪೂರ್ವಕವಾಗಿ ಹೊರದೂಡಬೇಕು. ಇದು ಇಂದಿನ ಭಾರತೀಯರ ಆದ್ಯ ಕರ್ತವ್ಯವಾಗಿದೆ.

ಭಾರತೀಯ ಸಂಸ್ಕೃತಿಯ ವೈಭವವನ್ನು ಸರಸವಾಗಿ ಆಡ ಹುದರಿಂದಾಗಲಿ, ಬರೆಯುವುದರಿಂದಾಗಲಿ, ಕಾವನಕಟ್ಟೆ ಹಾಡುವುದರಿಂದಾಗಲೀ ಯಾವ ಪ್ರಯೋಜನವೂ ಇಲ್ಲ. "ಮಾತಿಗಿಂತ ಕೃತಿ ಹೆಚ್ಚು" ಎಂದು ಒಪ್ಪುವರನ್ನುವಂತೆ ನಾವು ಕಾರ್ಯರೂಪದಲ್ಲಿ ಅದನ್ನುಳಿಸಿ ಪುನಃ ಉಚ್ಚಾಯಸ್ಥಿತಿಗೆ ತರುವಂತೆ ಮಾಡಬೇಕು. ಭಾರತದ ಭವಿಷ್ಯವು ಭಾರತೀಯರು ತಮ್ಮ ಸಂಸ್ಕೃತಿಯನ್ನು ಅದೆಷ್ಟು ಉಳಿಸಿಕೊಳ್ಳುವರೆಂಬುದನ್ನವಲಂಬಿಸಿಕೊಂಡಿರುವುದಲ್ಲದೆ, ನಾವು ಕೈಕಟ್ಟಿ ಪಾಶ್ಚಾತ್ಯರನ್ನನುಕರಿಸುವುದನ್ನಲ್ಲ.

ನಮ್ಮ ಸಂಸ್ಕೃತಿಯ ಅವಶೇಷಗಳು ಸಂಸ್ಕೃತ ಭಾಷೆಯಲ್ಲವೆ. ಸಂಸ್ಕೃತವು ಸಂಸ್ಕೃತಿಯ ಮೂಲ. ಸಂಸ್ಕೃತಿಯನ್ನುಳಿಸಲು ನಾವು ಸಂಸ್ಕೃತಿಯನ್ನು ಮೊದಲಾಗಿ ಉಳಿಸಬೇಕು. ಸಂಸ್ಕೃತಿಯನ್ನು ಅಭ್ಯಸಿಸಿದಾತರು ಸಂಸ್ಕೃತವನ್ನು ಅಭ್ಯಸಿಸಬೇಕು, ಸಂಸ್ಕೃತಿಯನ್ನು ಉನ್ನತೀಕರಿಸಲು ಸಂಸ್ಕೃತ ಭಾಷೆಯನ್ನು ಎತ್ತಿ ಹಿಡಿಯಬೇಕು

ಇಂದು ಸಂಸ್ಕೃತ ಭಾಷೆಯನ್ನು ವ್ಯವಹಾರ ಭಾಷೆಯಲ್ಲಿ, ಮೃತಭಾಷೆ ಎಂಬುದಾಗಿ ಕರೆಸಿ ಕರೆಯುತ್ತಾರೆ. ಆದರೆ ಭಾಷಾ ಶಾಸ್ತ್ರದ ದೃಷ್ಟಿಯಿಂದ ಮೃತಭಾಷೆಯೆಂದರೆ, ಒಂದು ಕಾಲದಲ್ಲಿ ಉನ್ನತಿಯನ್ನು ಹೊಂದಿದ್ದು ಇಂದು ವ್ಯವಹಾರದಲ್ಲಿಲ್ಲದ ಭಾಷೆ, ಆದರೆ ಅಭ್ಯಾಸದಿಂದ ಮಾತ್ರ ಅದನ್ನು ಕಲಿಸಬಹುದು ಸಂಸ್ಕೃತವು ವ್ಯವಹಾರದಲ್ಲಿಲ್ಲ ಎನ್ನುವವರು ಒಂದು ಹಸಿ ಸುಳ್ಳನ್ನು ಕೇಳುತ್ತಾರೆ ಭಾರತದ ಯಾವ ಭಾಷೆಯನ್ನು ತೆಗೆದು ನೋಡಿದರೂ, ಅದರಲ್ಲಿ ಸಂಸ್ಕೃತ ಭಾಷಾ ಶಬ್ದಗಳು ಸಾಕಷ್ಟು-ಕೆಲವೊಮ್ಮೆ ನೂರಕ್ಕೆ ಎಂಬತ್ತು ತೊಂಬತ್ತರಷ್ಟು ಸಂಸ್ಕೃತ— ಇರುವುದನ್ನು ಪ್ರತ್ಯಕ್ಷ ನೋಡಿ-ನೋಡಿಯೂ ಸಂಸ್ಕೃತವನ್ನು ಹೀನಯಿಸುವುದೆಂದರೆ ಅದು ಸಹನೀಯವಾಗದು. ಅದರಲ್ಲಿಯೂ ಭಾರತೀಯ ಭಾಷೆಗಳಲ್ಲಿ ಹೆಚ್ಚಿನವಕ್ಕೆ ಮಾತೃ ಭಾಷೆಯಾದ ದಕ್ಷಿಣ ಭಾರತದ ಭಾಷೆಗಳಿಗೆ ಪೋಷಕ ಭಾಷೆಯೆನಿಸಿದ ಈ ಸಂಸ್ಕೃತವನ್ನು ಭಾರತೀಯರೇ ಅವಹೇಳನ ಮಾಡುವುದೆಂದರೆ, ಗಾಂಧೀಜಿಯವರನ್ನು ಗೋಡ್ಸೆಯು ಗುಂಡಿಕ್ಕಿಕೊಂದಂತೆಯಲ್ಲದೆ ಮತ್ತೇನು?

ಸಂಸ್ಕೃತ ಭಾಷೆಯು ವ್ಯವಹಾರಕ್ಕನುಪಯೋಗಕ, ಎಂಬುದು ಅರ್ಥವಿಲ್ಲದ ಅನನುಭವದ ಮಾತು ಕೇವಲ ಪಾಶ್ಚಾತ್ಯರ ಅನುಕರಣೆಯನ್ನೇ ನುಡಿ ಮಾಡುವುದಾದರೆ, ಅವರ ಸಂಸ್ಕೃತಿಯ ಮೇಲೆಯೇ ಇನ್ನೂ ನಾವು ವಿಶ್ವಾಸವಿಟ್ಟಿದ್ದಾದರೆ, ಗೌರವಭಾವನೆಯನ್ನು ವ್ಯಕ್ತಪಡಿಸುವುದಾದರೆ, ಅದು ನಮ್ಮ ದೌರ್ಬಲ್ಯವೆನ್ನಬೇಕು. ಈ ನಮ್ಮ ಘೋರ ಅಪರಾಧಗಳಿಂದಾಗಿ ಭಾರತೀಯ ಸಂಸ್ಕೃತಿಯು ಅಳಿಯಿತು ಆದರೆ ಭಾರತವು ಸ್ವಾತಂತ್ರ್ಯ ಪಡೆದ ನಂತರ, ಡಾ ರಾಜೇಂದ್ರ ಪ್ರಸಾದ, ಪಂಡಿತ ಪಂತ ನೊದಲಾದ ನಮ್ಮ ದೇಶದ ಹಿರಿಯ ಮುಂದಾಳುಗಳು ಸಂಸ್ಕೃತದ ಮೇಲೆ ತುಂಬ ಅಭಿಮಾನವುಳ್ಳವರಾಗಿ ಅದನ್ನು ಮೇಲೆತ್ತಲಿಚ್ಛಿಸುವರಾಗಿದ್ದಾರೆ

ಸಂಸ್ಕೃತವನ್ನು ವ್ಯವಹಾರ ಭಾಷೆಯನ್ನಾಗಿ ಮಾಡುವುದು ಸಾಧ್ಯವಿಲ್ಲ ಎಂಬ ವಾದದಲ್ಲಿ ಹುರುಳಿಲ್ಲ ಅದು ನರಿಂದ ಹಿಂದೀ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡುವ ಬದಲು ಸಂಸ್ಕೃತವನ್ನು ಆಸ್ಥಾನಕ್ಕೇರಿಸಬೇಕೆನ್ನುವವರೂ ಇದ್ದಾರೆ ಹಿಂದಿಗಿಂತ ಹಿಂದೇತರ ಪ್ರದೇಶಗಳಿಗೆ ಸಂಸ್ಕೃತವನ್ನು ಕಲಿಯುವುದು ಸುಲಭವಾಗುತ್ತದೆ ಎಂದು ಹೇಳಬಹುದು. ಇನ್ನು ಸಂಸ್ಕೃತವು ಕ್ಲಿಷ್ಟಭಾಷೆ, ಅದನ್ನು ಅಧ್ಯಯನಮಾಡುವೂ ಸಾಧ್ಯವಿಲ್ಲ ಎನ್ನುವ ಪ್ರತಿಭಾವಂತರೂ ನಮ್ಮಲ್ಲಿದ್ದಾರೆ ನಿಜವಾಗಿ ನಾವು ನೋಡುವುದಾದರೆ ಸಂಸ್ಕೃತನಾ ಕಷ್ಟಸಾಧ್ಯವಾದ ಭಾಷೆಯಲ್ಲ ಅತ್ಯಲ್ಪ ಶ್ರಮವುಳ್ಳವರಾಗಿದ್ದರೂ, ನಾವು ಅದೆಷ್ಟೇ ಪ್ರಯಾಸದಿಂದ ಇಂಗ್ಲಿಷರ ರಾಜ್ಯಭಾರ ಕಾಲದಿಂದ ಇಂಗ್ಲಿಷ್ ಭಾಷೆಯನ್ನು ನಮ್ಮ ರಕ್ತಗುಣಕ್ಕೆ ಅನನುಭವಕವೆನಿಸಿದುದನ್ನು ಪ್ರಯತ್ನಪೂರ್ವಕವಾ

[ಮುಂದೇ ಪುಟ ನೋಡಿರಿ]

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H. O. MANGALORE. Estd. 1931.

BRANCHES
Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ಶಂಕರನ ನಾಲ್ಕನೆಯ ಹೆಂಡತಿ

ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್.

ಒಂದು ದಿನ ಶಂಕರನ ಮೂರನೆಯ ಹೆಂಡತಿಯೂ ಓಡಿಹೋದಳು.

ತನ್ನ ಪ್ರೀತಿಪಾತ್ರಳಾದ ಮಡದಿಯು ಮಾಯವಾದುದನ್ನು ಕೇಳಿ ಶಂಕರನು ಆಶ್ಚರ್ಯಚಕಿತನಾದನು. ಆಕೆಯ ಆ ಹುಚ್ಚುತನವನ್ನು ತಡೆಯಲು ಯಾವುದೇ ಪ್ರಯತ್ನಗಳನ್ನು ನಡೆಸದಿದ್ದ ತನ್ನ ನೆರೆಹೊರೆಯವರನ್ನು ಶಪಿಸತೊಡಗಿದನು. ಆಕೆಯನ್ನು ರಸ್ತೆಯ ಶಂಕರನು ಅಲ್ಲಿ ಇಲ್ಲಿ ಓಡಾಡಿದನು; ಪೋಲೀಸು ಸ್ಟೇಶನಿನಲ್ಲಿ ಹೋಗಿ ದೂರುಕೊಟ್ಟನು; ಆದರೆ, ಅಲ್ಲಿ ಈತನನ್ನು ಯಾರೂ ವಿಶೇಷವಾಗಿ ಗಮನಿಸಲೇ ಇಲ್ಲ. ತನ್ನ ನೆರೆಹೊರೆಯವರ ಸಹಾಯವನ್ನು ಯಾಚಿಸುವುದರಲ್ಲಿಯೂ ಶಂಕರನು ಜಯಶೀಲನಾಗಲಿಲ್ಲ. ಅಂತು ಕೊನೆಗೆ, ಪರಿಸ್ಥಿತಿಯನ್ನು ಎದುರಿಸಿಯೇ ತೀರಬೇಕಾಗಿ ಬಂದು ಮೂರನೆಯ ಹೆಂಡತಿಯನ್ನು ಅಲ್ಲಿಯೇ ಮರೆತು ಬಿಡಬೇಕಾಗಿ ಬಂತು.

"ನಿನಗೆ ಆ ಪಾಪದ ಹೆಂಗಸನ್ನು ಹೊಡೆಯಬೇಡವೆಂದು ನಾವೆಷ್ಟು ಬಾರಿ ಬುದ್ಧಿವಾದವನ್ನು ಹೇಳಿದರೂ ನೀನದನ್ನು ಕೇಳಲೇ ಇಲ್ಲ."

"ನಮ್ಮನ್ನು ಶತ್ರುಗಳೆಂದು ಕ್ರೂರ ದೃಷ್ಟಿಯಿಂದ ನೀನು ನೋಡುತಿದ್ದೆ."

"ನಾವು ನಮ್ಮ ಹೆಂಡಂದಿರನ್ನು ಹೊಡೆಯುತ್ತೇವೆ; ಆದರೆ, ನಿನ್ನ ಹಾಗಯಲ್ಲವಪ್ಪಾ!"

"ನೀನು ನಮ್ಮ ಇಡಿ ಸಮಾಜದ ಗೌರವಕ್ಕೇನೇ ಕಾಯನ್ನು ಬಳೆದ ಮುಟ್ಟಾಳ!"

ಶಂಕರನು ತನ್ನನ್ನು ತಿಳಿದ ಎಲ್ಲ ವ್ಯಕ್ತಿಗಳ ಬಾಯಿಂದಲೂ ಇದೇ ಅಥವಾ ಇಂಥದೇ ಮಾತುಗಳನ್ನು ಕೆಲವು ದಿನ ಕೇಳಬೇಕಾಗಿ ಬಂತು.

ತನ್ನ ಪ್ರೇಮದ ಸತಿಪಾರೂವು ಅದೃಶ್ಯಳಾದ ಮೂರನೆಯ ದಿನ ಬೀದಿಗೆ ಕಸ ಗುಡಿಸುವ ತನ್ನ ನಿತ್ಯೋದ್ಯೋಗಕ್ಕೆ ಆತ ಹೋಗಲಿಲ್ಲ. ಮರುದಿನ ಆತನು ಆ ಓಣಿಗೆ ಕಾಲಿರಿಸಿದಾಗಲೇ ಕೆಲವಾರು ಕೋಪಗೊಂಡ ಹೆಂಗಸರ ಬಿರು ಮಾತುಗಳು ಕೇಳಿ ಬಂದುವು.

"ಏ, ಶಂಕರ ಎಂಥ ಮಾಯಗಾರನಾಗಿದ್ದೀಯ? ನಿನ್ನೆ ನಿನಗೇನು ದಾಡಿಯಾಗಿತ್ತು?"

"ನಿನಗೇನು ಹೇಳುವವರು ಕೇಳುವವರು ಯಾರೂ ಇಲ್ಲವೆಂದು ತಿಳಿದುಕೊಂಡಿದ್ದೀಯ?"

"ನೀನು ಈ ದಿನ ಬಂದದ್ದೇ ದೊಡ್ಡದು; ಸ್ವಲ್ಪ ಬೇಗಬೇಗನೇ ಕೆಲಸ ಮುಗಿಸಿ ಹೋಗುತ್ತೀಯ?"

"ನಮಗೆ ಹೊರಲಸಾಧ್ಯವಾದ ಭಾರವಾಗಿದ್ದಿ ನೀನು!"

ಯಾವಾಗಲೂ ಪ್ರತಿಯೊಂದು ಶಬ್ದಕ್ಕೂ ತಾಸುಗಟ್ಟಲೆಯ ಭಾಷಣವನ್ನು ಬಿಗಿಯುತಿದ್ದ ಶಂಕರನು ಇಂದು ಇಂತಹ ಕೇಳಲಸಾಧ್ಯವೆನಿಸಿದ ಕಠೋರವಾದ ಮಾತುಗಳನ್ನೂ ಕೇಳಿ ನುಂಗಿಕೊಂಡು ಸುಮ್ಮನಿದ್ದನು. ಈ ಹೇಳಿಕೆಗಳ ಬಗ್ಗೆ ಯಾವ ಲಕ್ಷ್ಯವನ್ನೂ ಪೂರೈಸಲಿಲ್ಲ. ಆತನು ತನ್ನ ನಿತ್ಯಕರ್ಮವನ್ನು ಪ್ರಾರಂಭಿಸಿದನು. ಆದರೆ ದೈನಂದಿನ ಆ ಉತ್ಸಾಹ, ಆ ಹುರುಪು ಅಂದು ಕಾಣಿಸಿಕೊಳ್ಳದಿದ್ದದರಿಂದ ಕೆಲಸವು ನಿಧಾನವಾಗಿಯೇ ಸಾಗಿತು. ಮೂಕನಂತೆ ಮೆಲ್ಲನೆ ಕೆಲಸ ಮಾಡುತಿದ್ದ ಶಂಕರನನ್ನು ಕಂಡು ಹೆಂಗಸೊಬ್ಬಳು ದಿಬ್ಮೂಢಳಾಗಿಬಳು. ತನ್ನ ಕೆಲಸವನ್ನು ಶಂಕರನು ಬೇಗನೆ ಮುಗಿಸಿದನು. ಅಂದು ಆತನು ಹರಿದ ಅಂಗಿಗಾಗಲೀ, ಮುಷ್ಟಿ ಅನ್ನಕ್ಕಾಗಲೀ ಹೊಗಿ ಸೇದುವುದಕ್ಕಾಗಿ ಒಂದೆರಡು ಬೈಸೆಗಳಿಗಾಗಲೀ ಕೈನೀಡಲಿಲ್ಲ

ಸತ್ಯ ಸಂಗತಿಯೆಂದರೆ, ಪಾರೂವನ್ನು ಆತನು ಮರೆಯುಲಾರ ತನ್ನ ಮೂರು ಮಂದಿ ಪತ್ನಿಯರಲ್ಲಿ ಆತನು ಎಲ್ಲರಿಗಿಂತ ಹೆಚ್ಚಾಗಿ ಪಾರುವನ್ನು ಪ್ರೀತಿಸಿದ್ದ. ಹಿಂದಿನೆರಡು ಮಡದಿಯರು ಒಟ್ಟು ಮಾಡಿಸಿದಷ್ಟು ಖರ್ಚನ್ನು ಈಕೆಯೊಬ್ಬಳೇ ಮಾಡಿಸುತಿದ್ದಳು. ಆಕೆಯು ಈತನೊಡನೆ ಸುಮಾರು ಒಂದು ತಿಂಗಳ ಮೇಲೆ ಕೆಲವು ದಿನಗಳಷ್ಟು ಮಾತ್ರ ವಾಸಿಸಿದ್ದಳು. ಆತನು ಆ ಸಮಯದಲ್ಲಿ ಎಂಟೋ ಒಂಭತ್ತೋ ಸಲಕ್ಕಿಂತ ಹೆಚ್ಚು ಬಾರಿ ಎಂದೂ ಹೊಡೆದಿರಲಿಲ್ಲ, ಆದೂ, ಮನೆ ಬಿಟ್ಟು ಓಡಿಹೋಗುವಂತೆ! ಹೀಗಿರುವಾಗ ಆಕೆಯೇಕೆ ಪಲಾಯನ ಮಾಡಬೇಕು? ಇಡಿ ಸನ್ನಿವೇಶದಲ್ಲಿ ಏನೇ ಇರಲಿ, ಆಕೆಯು ಓಡಿಹೋಗಲು ಪ್ರೇರೇಪಣೆಯಿತ್ತ ಆ ಹುಚ್ಚು ಮನಸ್ಸನ್ನು ಆತ ಎಂದೂ ಮನ್ನಿಸಲಾರದವನಾನು.

ಇಂತಹ ಸಂಕಟಮಯ ಪರಿಸ್ಥಿತಿಯಲ್ಲಿರುವಾಗ ಯಾರೋ ಒಬ್ಬಾಕೆ ಪಾರ್ವತಿಯ ಜ್ಞಾಪಕವನ್ನು ತುಡುಗುತನದಿಂದ ಮಾಡಿದಳು. ಆಗ, ಆತನೂ ಕೆಲವೊಂದು ಬಿರುಸಿನ ಮಾತುಗಳನ್ನು ಆಡಬೇಕಾಯಿತು. ಆ ಕೃತಜ್ಞಭಾವದ ಆ ಪಾರುವನ್ನು ಅಷ್ಟು ಶೀಘ್ರದಲ್ಲಿಯೇ ಆಗಲಿಸಿದ ಪರಮಾತ್ಮನನ್ನು ಶಂಕರನು ಕೆಲವೊಮ್ಮೆ ಸ್ಮರಿಸಿದ್ದುಂಟು. ಆದರೆ, ತನ್ನ ಕೆಲಸ ಮುಗಿದು ಬಂದಾಗ, ತೋಳುಗಳು ಸೆಳೆದಾಗ, ಬೆನ್ನು ನೆಟ್ಟಗಾಗಲು ಹಂಬರಿದಾಗ, ತಾನು ಏಕಾಕಿಯಾಗಿರುವೆನೆಂದು ಕೊಳ್ಳುವನು. ಆಹಾರವನ್ನುಣ್ಣತಿದ್ದಾಗ, ತಾನು ಸಂಗ್ರಹಿಸಿದ ಅನ್ನದಲ್ಲಿ ಅರ್ಧದಷ್ಟನ್ನೂ ಉಣ್ಣುತ್ತಿರಲಿಲ್ಲವಾದುದರಿಂದ, ಉಳಿದ ಅರ್ಧ ಹಾಳಾಗಿ ಹೋಗುವುದೆಂದು ಚಿಂತಿಸುವನು ತನ್ನ ಪಕ್ಕದಲ್ಲಿ ಪಾರೂ ಕೂತಿರುವಾಗ ಉಣ್ಣುವಷ್ಟು ಆಹಾರವನ್ನು ಆತನಿಗೆ ಈಗ ತಿನ್ನುವುದು ಅಸಾಧ್ಯವೆನಿಸುತಿತ್ತು. ಆಗ ತನ್ನ ಮೂರು ಮಂದಿ ಹೆಂಡಿರಲ್ಲಿ ಪಾರುವೇ ಆರೋಗ್ಯವಂತೆಯೂ ಪ್ರಯೋಜನಕಾರಿಯೂ ಎಂದು ತಿಳಿದು ಆಕೆಯ ವಿರಹಕ್ಕಾಗಿ ಮರುಗುವನು. ಆಕೆಯ ತೋಳುಗಳು ವೃತ್ತಾಕಾರವಾಗಿದ್ದು ಬಲಶಾಲಿಗಳಾಗಿದ್ದುದರಿಂದ ಆ ರಸ್ತೆಯ ಹಲವಾರು ನವಯುವಕರು ಆಕೆಯನ್ನು ಓರೆನೋಟದಿಂದ ನೋಡುತಿದ್ದರು. ಆಕೆಯ ಕಾಲುಗಳು ಹಾಲಿನಂತೆ ಬೆಳುಪು; ಆಕೆಯ ಕೆಲಸವು ಶೀಘ್ರ ಮತ್ತು ಸಮರ್ಪಕವಾದುದು. ಆ ಓಣಿಯ ಎಲ್ಲ ಮಕ್ಕಳನ್ನೂ ತನ್ನೆಡೆಗೆ ಆಕರ್ಷಿಸಿಕೊಳ್ಳುವ ಆಕೆಯ ಮಾತುಗಳು ಮುದ್ದು ಮುದ್ದಾಗಿದ್ದುವು. ಅಲ್ಲದೇ, ಕೆಲಸವು ಯಾನಂತರವಾದರೂ ಆಕೆಯಲ್ಲಿ ಒಂದು ಮಗುವೂ ಹುಟ್ಟಬಹುದಾಗಿತ್ತು.

ಈ ನೆನಪುಗಳು ಬಂದಾಗ, ಶಂಕರನು ತನ್ನ ತಪ್ಪಿಗಾಗಿ ಅಸಮಾಧಾನಗೊಳ್ಳುತಿದ್ದನು. ಆದರೆ, ಕೂಡಲೇ ತನ್ನನ್ನು ತಾನೇ ಸಮಾಧಾನಪಡಿಸುತಿದ್ದನು: 'ನಾನು ಹೇಗೆ ತಪ್ಪುಗಾರ? ನಾನೇನು ಮಾಡಿದೆ? ಆಕೆಯನ್ನು ಹೊಗೆಂದು ನಾನು ನುಡಿದಿಲ್ಲ," ತಾನು ಹೊಸ ಮದುವೆಯೊಂದನ್ನು ಮಾಡಿಕೊಳ್ಳುವ ಪ್ರಯತ್ನಗಳನ್ನು ನೆನಪಿಗೆ ತಂದುಕೊಂಡು, ಆ ಹೊಸ ಹೆಂಡತಿಯನ್ನು ಏನೇ ಆಗಲಿ, ಮನೆಯಿಂದ ಓಡಿಹೋಗಗೊಡಲಾರೆ ಎಂದು ಗುಟ್ಟಿನಲ್ಲಿಯೇ ನಿರ್ಧರಿಸುವನು.

ಕೆಲವು ದಿನಗಳು ಕಳೆದ ನಂತರ ಶಂಕರನು ತನ್ನ ಹಿಂದಿನ ಆಚರಣೆಯಂತೆ ಜಗಳಾಡುವುದು, ಹೊಡೆದಾಡುವುದು, ಪ್ರತಿಯೊಬ್ಬರೊಡನೆಯೂ ಸಿಕ್ಕಿದ್ದನ್ನು ಕುರಿತು ಚರ್ಚಿಸುವುದು ಮೊದಲಾದ ಕೆಲಸಗಳನ್ನೂ ಪ್ರಾರಂಭಿಸಿದನು. ಎಲ್ಲರಿಗೂ ನಮಸ್ಕಾರವೇಯುವಂತೆ ತನ್ನ ಕೈಗಳನ್ನು ಮುಗಿಯುತಿದ್ದನು. ಕೆಲವೊಮ್ಮೆ ತನ್ನ ಹಣೆಯನ್ನೂ ಅಂಗಳದಲ್ಲಿ ತಿಕ್ಕುತಿದ್ದ. 'ತಾಯಿ' ಎಂದು ದಿನಂಪ್ರತಿ ಹಲವಾರು ಸ್ತ್ರೀಯರನ್ನು ಕರೆದು ಅವರನ್ನು ಕೆರಳಿಸುತಿದ್ದ.

ಈ ಸಾಮಾನ್ಯ ನಡತೆಯೊಂದಿಗೆ, ಹೊಸ ಹೆಂಡತಿಯೊಬ್ಬಳನ್ನು ಹುಡುಕುವ ಸಾಹಸವು ತೀವ್ರವಾಗಿ ನಡೆಯುತಿತ್ತು. ಅಲ್ಲಲ್ಲಿ ಮಾತುಕತೆಗಳೂ ನಡೆಯುತಿದ್ದುವು. ಸಂಪಾದನೆಯ ಪ್ರತಿ ಕಾಸೂ ಒಟ್ಟಾಗುತಿತ್ತು. ತನ್ನ ಬಿರಿಯಾನಿಗಳನ್ನೂ ಆತ ನಿಲ್ಲಿಸಿದ್ದನು. ಬೀದಿಯಲ್ಲಿ ದೊರೆಯುವ ತುಂಡು ಸಿಗರೇಟುಗಳಿಂದಲೇ ಆತನು ಸಮಾಧಾನ ಹೊಂದತೊಡಗಿದನು. ಬಟ್ಟೆ ಬರೆ ಹಾಗೂ ಆಭರಣಗಳಿಗೆ ಅತಿ ಕಡಿಮೆ ವೆಚ್ಚ ಮಾಡಬೇಕೆಂದಾತ ನೆನಸಿದನು. ಮುಂದಕ್ಕೆ, ಆಕೆ ಒಳ್ಳೆಯ ನಡತೆಯಲ್ಲಿದ್ದರೆ, ಆಕೆ ಕೇಳಿದುದನ್ನೇಕೆ ಕೊಡಲು ಸಿದ್ಧನಿದ್ದ. ಈ ಬಾರಿಯ ತನ್ನ ಮಂಜಾಗ್ರತೆಯ ಬಗ್ಗೆ ತನ್ನ ಬೆನ್ನನ್ನು ತಾನೇ ತಟ್ಟಿಕೊಂಡ. ಬಯಕೆಗಳು ಧಾರಾಳವಲ್ಲದಿದ್ದರೂ ಸಾಕಷ್ಟಿತ್ತು. ಯಾವುದೋ ಒಂದು

[ಗಂಸೇ ಪುಟ ನೋಡಿರಿ]

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8, ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕಿಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಭಾರತೀಯ ಕೈಗಾರಿಕೋದ್ಯಮ—

ವಿದೇಶೀಯ ನೆರವನ್ನು ಹೊಂದಿಕೊಂಡಿದೆ

ಕಳೆದ ವಾರದಲ್ಲಿ, ಅಮೆರಿಕದ ಸಂಯುಕ್ತ ರಾಜ್ಯಗಳಿಗೆ ತೆರಳಿದ್ದ ಭಾರತೀಯ ಉದ್ದಿಮೆದಾರರ ನಿಯೋಗವೊಂದ ಕೈ, ಅಮೆರಿಕದ ವ್ಯಾಪಾರಸ್ಥರ ಅಕ್ಷ ಮತ್ತು ದೂರಪ್ರಾಚ್ಯದಲ್ಲಿ ಅಭಿರುಚಿಯಿರುವ ಸಂಸ್ಥೆಯಾದ ದೂರಪ್ರಾಚ್ಯ ಅಮೆರಿಕದ ವಾಣಿಜ್ಯ ಹಾಗೂ ಉದ್ದಿಮೆಯ ಸಂಘವು ಉಪಾಹಾರವನ್ನಿತ್ತಿತು. ಈ ಸಂದರ್ಭದಲ್ಲಿ ಶ್ರೀ ಜಿ. ಡಿ. ಬಿರ್ಲಾಂವರು ಅಮೆರಿಕವನ್ನು ಭಾರತದಲ್ಲಿ ಖಾಸಗಿ ಬಂಡವಳವನ್ನು ಅಧಿಕ ಪ್ರಮಾಣದಲ್ಲಿ ತೊಡಗಿಸುವಂತೆ ಕೇಳಿಕೊಂಡರು.

ಭಾರತವು ಬಂಡವಳವನ್ನು ತೊಡಗಿಸಲು ಯೋಗ್ಯ ರಾಷ್ಟ್ರವಾಗಿದೆ. ಇಂದು ಇಲ್ಲಿ ಏನಾದರೂ ಸಂಕಷ್ಟವಿರುವುದಾದರೆ, ಅದು ವಿಸ್ತರಣೆಯ ಸಂದರ್ಭದ ಸಮಯದಲ್ಲಿ ಸ್ವಭಾವಿಕವಾಗಿ ಇರಬಹುದಾದುದು. ಕಣವು ಪೋಲುಹೋಗಿ ನಷ್ಟವಾಗಿಲ್ಲ. ಅದು ಸಂಪಾದನೆ ಮಾಡುವ ಕ್ಷೇತ್ರಗಳಲ್ಲಿ ಸಂಗ್ರಹಿತವಾಗಿದೆ ಭಾರತದಲ್ಲಿ ಉದ್ದಿಮೆಗಳು ಸೀಘ್ರವಾಗಿ ಬೆಳೆದು ಬರಲಿರುವುದರಿಂದ ಪರದೇಶಗಳಿಂದ ತಕ್ಕ ಬೇಕಾಗುವ ಅಮೂಲ್ಯ ಸಾಧನಗಳನ್ನು ಅಮದುಮಾಡಿಕೊಳ್ಳುವುದಕ್ಕಾಗಿ ವಿದೇಶ ವಿನಿಮಯವು ಅತ್ಯಾವಶ್ಯಕವಾಗಿರುತ್ತದೆ.

ಭಾರತದಲ್ಲಿ ಖಾಸಗಿ ವಿಭಾಗವು ಕೈಗೆತ್ತಬೇಕಾದ ಕೆಲಸವು ಬಹಳ ದೊಡ್ಡ ಪ್ರಮಾಣದಲ್ಲಿದೆ, ಮತ್ತದು ತನ್ನ ಕರ್ತವ್ಯವನ್ನು ಮಾಡುತ್ತಾ ಇದೆ ಭಾರತದ ಖಾಸಗಿ ವಿಭಾಗವು ಈಗಾಗಲೇ ಸುಮಾರು ೧೫ ಬಿಲಿಯ ಡಾಲರುಗಳಷ್ಟನ್ನು ಈಗಾಗಲೇ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿದ್ದು, ಈ ಬಗ್ಗೆ ನಿರ್ಧರಿಸಿದ್ದ ಗುರಿಯನ್ನು ಅದು ಮುಂದಿನ ವರ್ಷದೊಳಗೆ ಮುಟ್ಟಲಿದೆ. ಭಾರತವು ತನ್ನ ಅಭಿವೃದ್ಧಿಗಾಗಿ ವಿದೇಶೀಯ ಬಂಡವಳವನ್ನು ಹಾತೈಸುವುದರಲ್ಲಿ ಯಾವ ಆಶ್ಚರ್ಯವೂ ವಿಶೇಷವೂ ಇರುವುದಿಲ್ಲ; ಜಗತ್ತಿನಲ್ಲಿ ಈಗ ಮುಂದುವರಿದ ಎಲ್ಲ ರಾಷ್ಟ್ರಗಳೂ—ಸಂಯುಕ್ತ ರಾಷ್ಟ್ರಗಳು, ಮತ್ತು ರಶ್ಯಾಗಳು ಸಹ—ತಂತಮ್ಮ ಯೋಜನಾ ಕಾಲದಲ್ಲಿ ವಿದೇಶೀಯ ನೆರವನ್ನು ಬಯಸುತ್ತಿದ್ದುವು.

ವಿಶ್ವದ ಇತರೆಡೆಗಳಲ್ಲಿ ಅತ್ಯಧಿಕ ಬಂಡವಳವನ್ನು ಸಯೋಗಿಸುವ ಅಮೆರಿಕವು ಭಾರತ ಮತ್ತು ಅನ್ಯದ ಇತರ ಕೆಲವು ರಾಷ್ಟ್ರಗಳ ಕಡೆಗೆ ಮೊನ್ನೆವ್ರತ ಧಾರಣೆ ಮಾಡಿಕೊಂಡಿರುವುದು ಸಂಬಂಧಪಟ್ಟ ರಾಷ್ಟ್ರಗಳ ದುರ್ದೈವವೆನ್ನಬೇಕು, ಇತರ ದೇಶಗಳಲ್ಲಿ ಅಮೆರಿಕವು ತೊಡಗಿಸಿದ ಬಂಡವಳವು ೧೯೫೫ರ ಕೊನೆಯಲ್ಲಿ ೩೩ ಬಿಲಿಯ ಡಾಲರಿನಷ್ಟಾಗಿತ್ತು. ಇದು ಹಿಂದಿನ ವರ್ಷಕ್ಕಿಂತ ನಾಲ್ಕು ಬಿಲಿಯಗಳಷ್ಟು ಅಧಿಕವಾಗಿದೆ. ಈ ಮೊಬಲಗು ಈ ವರ್ಷ ಸಹಾ ಏಕಪ್ರಕಾರವಾಗಿ ಏರುತ್ತಿದೆ ಕೆನಡ ಮತ್ತು ಲೆಟಿನ್ ಅಮೆರಿಕಗಳ ಗಣಿ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಅಮೆರಿಕದ ಕಂಪೆನಿಗಳಿಗೆ ದೊಡ್ಡ ದೊಡ್ಡ ಯೋಜನೆಗಳಿವೆ. ಅಮೆರಿಕದ ಬಂಡವಳದಲ್ಲಿ ಬಹುಭಾಗವು ಸಾಗರೋತ್ತರ ಶಾಖೆ ಹಾಗೂ ಅಮೆರಿಕದ ಕಂಪೆನಿಗಳಿಗೆ ಹೋಗಿ, ಕೆನಡಾ, ಲೆಟಿನ್ ಅಮೆರಿಕಾ ಪಶ್ಚಿಮ ಯುರೋಪ್ ಮತ್ತು ಜಪಾನ್‌ಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹೋಗಿ, ಕೇವಲ ಅಪ್ಪಿತಪ್ಪಿ ಒಂದೊಂದು ಹನಿಯಷ್ಟು ಮಾತ್ರ ಭಾರತಗಂತಹ ಅನ್ಯದ ರಾಷ್ಟ್ರಗಳಿಗೆ ದೊರೆಯುತ್ತದೆ. ಈ ೩೩ ಬಿಲಿಯ ಡಾಲರುಗಳಲ್ಲಿ ೧೨ ೧ ಬಿಲಿಯ ಡಾಲರು ಕೆನಡಕ್ಕೆ ಸುರಿಸಲ್ಪಟ್ಟಿದೆ ಈ ಒಂದು ಪ್ರಮಾಣವು ಕನೇಡಿಯರನ್ನು ಚಿಂತೆಗೀಡು ಮಾಡಿದೆ ಈ ಪ್ರಮಾಣದಲ್ಲಿಯೇ ಈ ಕಾರ್ಯವು ಮುಂದುವರಿದಲ್ಲಿ ಕೆಲವೇ ವರ್ಷಗಳಲ್ಲಿ ಕೆನೆಡವು ಸಂಯುಕ್ತ ರಾಷ್ಟ್ರಗಳ ಆಧೀನಾನ-ಚರನಂತೆ ಬಾಳಬೇಕಾಗುತ್ತದೆ.

ಲೆಟಿನ್ ಅಮೆರಿಕದಲ್ಲಿ ಅಮೆರಿಕವು ತೊಡಗಿಸಿದ ಬಂಡವಳವು ೯.೩ ಬಿಲಿಯ ಡಾಲರ್. ಮತ್ತುಳಿದಿದು ಉಳಿದ ರಾಷ್ಟ್ರಗಳಲ್ಲಿ ತೊಡಗಿಸಲ್ಪಟ್ಟಿದೆ. ಈ ಮೊಬಲಗಿನ ಬಹುಭಾಗವು ಮಧ್ಯಪಾಚ್ಯದ ಎಣ್ಣೆಯಲ್ಲಿದೆ. ವಾಸ್ತವಿಕವಾಗಿ ನೋಡುವುದಾದರೆ, ಅಮೆರಿಕವು ಒಟ್ಟು, ವಿದೇಶಗಳಲ್ಲಿ ಖಾಸಗಿ ಬಂಡವಳವನ್ನಾಗಿ ತೊಡಗಿಸಿದ ೩೩ ಬಿಲಿಯ ಡಾಲರ್‌ಗಳಲ್ಲಿ ೭.೨ ಬಿಲಿಯ ಡಾಲರ್‌ಗಳು ಎಣ್ಣೆಯ ಗಣಿಗಳಲ್ಲಿಯೇ ಇದೆ.

ಕೇವಲ ಅಮೆರಿಕದ ಈ ಪ್ರತ್ಯಕ್ಷ ಉಳಿತಾಯವನ್ನು ವಿದೇಶಗಳಲ್ಲಿ ತೊಡಗಿಸಿರುವುದಲ್ಲದೆ, ಇಲ್ಲಿಯ ಬೇಂಕ್‌ಗಳು, ಮತ್ತು ಲೇವಾದೇವಿ ಮಾಡುವವರು, ಸಾಲ, ಉದ್ದರಿ ಮತ್ತು ವಿದೇಶೀಯ ರಕ್ಷಣಾ ಪತ್ರಗಳನ್ನು ಪಡೆಯುವುದು ಮೊದಲಾದ ವಿಧಾನಗಳಿಂದ ಕಳೆದೊಂದು ವರ್ಷದಲ್ಲಿ ಯೇ ಸುಮಾರು ಎರಡು ಬಿಲಿಯ ಡಾಲರ್‌ಗಳಷ್ಟನ್ನು ವಿದೇಶಗಳಲ್ಲಿ ತೊಡಗಿಸಿದ್ದಾರೆ ಇದರಲ್ಲಿಯೂ ಮುಖ್ಯವಾಗಿ ಐಲುಗೊಂಡ ದೇಶಗಳೆಂದರೆ, ಕೆನೆಡ, ಪಶ್ಚಿಮ ಜರ್ಮನಿ ಬ್ರಿಟನ್, ಮೆಕ್ಸಿಕೊ, ವೆನೆಝೂಲ ಮತ್ತು ಜಾಪಾನುಗಳು. ಈಗ ಬೆಲ್ಜಿಯಂ ದೇಶವು ತನ್ನ ವಾಲ್‌ಸ್ಟ್ರೀಟಿನ ಮೇಲೆ ಮೂವತ್ತು ಮಿಲಿಯ ಸಾಲವನ್ನೆತ್ತಿದೆ.

ಭಾರತವು ತನ್ನ ವಿದೇಶ ವಿನಿಮಯಗಳನ್ನು ವಿಕಪ್ರಕಾರವಾಗಿ ಕರಗಿಸುತ್ತಿರುವುದರ ಕುರಿತು ತುಂಬ ಗುಸುಗುಸು ಮಾತುಗಳು ಕೇಳಿಬರುತ್ತಿವೆ. ಆದರೆ ಭಾರತವು ತನ್ನ ಪ್ರಥಮ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ತನ್ನ ವಿನಿಮಯವನ್ನು ಉಳಿಸುತ್ತಾ ಬಂದಿದೆ. ಈಗಿನ ಯೋಜನಾವಧಿಯಲ್ಲಾದರೂ, ಭಾರತದ ಹಣವು ದೊಡ್ಡ ಯೋಜನೆಗಳಲ್ಲಿ ತೊಡಗಿಸಲ್ಪಟ್ಟಿದುದರಿಂದ ಮತ್ತು ವಿದೇಶಗಳಿಂದ ಅಧಿಕಪ್ರಮಾಣದಲ್ಲಿ ಯಂತ್ರಗಳನ್ನು ಅಮದುಗೊಳಿಸಲಿರುವುದರಿಂದ ಮಾತ್ರ ವಿನಿಮಯವು ಕರಗುತ್ತಾ ಇದೆ ಎಂದು ತಿಳಿಯಬೇಕು.

ಕೆನೆಡಾ ದೇಶವು ಆರು ತಿಂಗಳುಗಳಲ್ಲಿ ಒಂದು ಸಾವಿರ ಮಿಲಿಯ ಡಾಲರುಗಳಷ್ಟು ನಿಲವನ್ನು ಪಡೆಯುವುದಾದಲ್ಲಿ, ಭಾರತವು ತನ್ನ ವಿದೇಶವಿನಿಮಯಗಳನ್ನು ಯಾಂತ್ರಿಕ ಸಾಮಗ್ರಿಗಳಿಗಾಗಿ ಬಳಸುತ್ತಾ ಬಂದಲ್ಲಿ ಆ ಬಗ್ಗೆ ವಿಶೇಷ ವಿವಂಚನೆಗೀಡಾಗಬೇಕಾಗಿಲ್ಲ.

ಶಾಂತ ಆರ್ಥಿಕ ಪರಿಸ್ಥಿತಿಯಿರುವ ದೊಡ್ಡ ದೇಶ ಭಾರತ. ಇನ್ನೂರು ತಿಂಗಳುಗಳಲ್ಲಿ ಮಿತವ್ಯಯವು ಪ್ರಾರಂಭವಾಗುವುದು ಸಾಧ್ಯವಿದೆ. ಭಾರತವಿಂದು ಮುನ್ನಡೆಯಿಡಬಹುದು, ಇಲ್ಲವೇ ಸ್ತಬ್ಧವಾಗಬಹುದು. ಈ ಕಾರ್ಯವು ಅದು ಪಡೆಯುವ ವಿದೇಶೀಯ ಸಹಾಯವನ್ನವಲಂಬಿಸಿದೆ. ವಿದೇಶೀಯ ಬಂಡವಳವನ್ನೂ ಅದು ಹೊಂದಿಕೊಂಡಿರುತ್ತದೆ. ಭಾರತವು ಸಾಲಗಳಿಂದ, ಅನ್ಯದೇಶೀಯ ಬಂಡವಳವನ್ನು ಭಾರತದಲ್ಲಿ ತೊಡಗಿಸುವುದರಿಂದ ಅಥವಾ ತನ್ನ ನಿರ್ಯಾತವನ್ನು ಅಧಿಕಗೊಳಿಸುವುದರಿಂದ ವಿದೇಶವಿನಿಮಯಗಳನ್ನು ಪಡೆಯಬಹುದು

ಅಮೆರಿಕದ ಸಂಯುಕ್ತ ರಾಷ್ಟ್ರವು ತನ್ನ ಆಯಾತಗಳಲ್ಲಿ ಹೆಚ್ಚಿನವನ್ನು ಭಾರತದಿಂದ ಮಾಡಿಕೊಂಡು ಅವಕ್ಕೆ ನೆರವೀಯಬಹುದು ಆದರೆ, ಈ ವಿಧಾನ ಬಳಕೆ ದೀರ್ಘ ಕಾಲವನ್ನು ಕೆಗದುಕೊಳ್ಳುತ್ತದೆ ಇತ್ತೀಚೆಗೆ ಭಾರತವು ತನ್ನ ರಫ್ತನ್ನು ಹೇಗೆ ಹೆಚ್ಚಿಸಬಹುದೆಂದು ಪರಿಶೀಲಿಸಲು ಅಕ್ಕಗೆ ಹೋಗಿದ್ದ ಸಂಯುಕ್ತ ರಾಷ್ಟ್ರದ ಪ್ರತಿನಿಧಿ ನಿಯೋಗವು ಮಾಡಿದ ಸಿಫಾರಸುಗಳು ಈ ವಿಷಯದಲ್ಲಿ ಪ್ರಯೋಜನಕಾರಿಯಾಗಬಹುದು; ಆದರೆ, ಅದು ನಮ್ಮ ಈಗಿನ ಅವಶ್ಯಕತೆಯನ್ನು ಸಂಪೂರ್ಣವಾಗಿ ಪೂರೈಸಲು ಸಾಧ್ಯವಾಗಲಾರವು.

ಭಾರತದ ಪ್ರಧಾನಿಯವರು ಭಾರತಕ್ಕೆ ಒಟ್ಟು ೬೦೦ ಮಿಲಿಯ ಡಾಲರುಗಳಷ್ಟು ಆವಶ್ಯಕತೆ ಬೀಳಬಹುದೆಂದಿರುವರು. ಆವಶ್ಯಕ ವಿದೇಶೀಯ ಬಂಡವಳದ ಕಡೆಗೆ ಭಾರತೀಯ ಸರಕಾರದ ಮನೋವೃತ್ತಿಯು ನಿಜವಾಗಿಯೂ ಪ್ರಚಲಿತ ಸಮಯದಲ್ಲಿ ೧೯೫೮ರಲ್ಲಿದ್ದುದಕ್ಕಿಂತ ಹೆಚ್ಚು ಗೌರವಾನ್ವಿತವಾಗಿರುತ್ತದೆ.

ಬಿರ್ಲಾರವರ ನಿಯೋಗವು ಅಮೆರಿಕದ ಸಂಯುಕ್ತ ರಾಷ್ಟ್ರಗಳು ಮತ್ತು ಭಾರತಗಳ ನಡುವೆ ಸಂಬಂಧವನ್ನು ಸಂಸ್ಥಾಪಿಸಲು, ಭಾರತಕ್ಕೆ ಗೆಳೆಯರನ್ನು ಸಂಪಾದಿಸಲು ಮತ್ತು ಅಮೆರಿಕದಲ್ಲಿನ ಭಾರತೀಯ ವ್ಯಾಪಾರೋದ್ಯಮದಲ್ಲಿ ಆಸಕ್ತಿಯುಳ್ಳವರಿಗೆ ಭಾರತದ ಸ್ಥಿತಿಗತಿಗಳನ್ನು ವಿವರಿಸುವ ಸಲುವಾಗಿ ಅಮೆರಿಕಕ್ಕೆ ತೆರಳಿರುತ್ತದೆ.

ಕುಂದಾಪುರದಲ್ಲಿ ಮುಕೋರ್ಟಿನಲ್ಲಿ

O. S. 195/1957.

ಕನಕಮ್ಮ ಸೆಡ್ತಿ ಸಹಾ —ವಾದಿರು

ಪುಟ್ಟಮ್ಮ ಸೆಡ್ತಿ —ಪ್ರತಿವಾದಿಳು

ಕುಂದಾಪುರ ತಾಲ್ಲೂಕು ಉಳ್ತೂರು ಗ್ರಾಮದಲ್ಲಿರುವ ಸಂಕಮ್ಮ ಸೆಡ್ತಿರ ಮಗಳು ಪ್ರತಿವಾದಿಳು ಪುಟ್ಟಮ್ಮ ಸೆಡ್ತಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

1ನೇ ವಾದಿಳ ಗಂಡ ಪ ಮಿಕ್ಕ ವಾದಿರ ತಂದೆ ಹಾಲಿ ಮೃತಪಟ್ಟಿರುವ ಮಲ್ಯಾಡಿ ಸಂಸ್ಥೆಸ್ಥಿಗೆ ಕೆಳದ ಬಿರ ಸಂವತ್ಸರದ ಲಾಗಾಯ್ತು ಅವರ ಮರಣದ ಪರಿಯಂತರ ಬರತಕ್ಕ ಮನಾಫೆ ಅಕ್ಕಿಯ ಕ್ರಯ ವಗೈರೆ ಬರ ಮಾಡಿಕೊಳ್ಳುವ ಕುರಿತು ವಾದಿರು ಪ್ರತಿವಾದಿಳ ಮೇಲೆ ದಾಕ್ಲ ಮಾಡಿದ ಮೇಲಿನ ದಾವಾ ಮೇಲ್ಕಾಣುವ ಕೋರ್ಟಿನಲ್ಲಿ ತಾ. 12.10.57 ನೇ ದಿನ ಬೆಳಿಗ್ಗೆ 11 ಗಂಟೆಗೆ ತಪ್ಪಗೆ ಇಟ್ಟಿದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ.

B. S. Shetty, B. A., B. L.
Vakil for Pltff.

Coondapoor 11—9—57.

ಸಾವಿರಾರು ಜನರು
ಅನುಸರಿಸುತ್ತಿರುವ
ಸುಲಭ ಠೇವಣಾತಿ ವಿಧಾನ

ದಿನಕ್ಕೆ
4 ಆಣೆ
25 ನ. ಪೈ
7 ವರುಷಗಳಲ್ಲಿ
ರೂ. 700

ಪಿಗ್ಮಿ

- ಚಿಕ್ಕ ಗಾತ್ರದ ಅಪ್ಪಿಕದ ಪಿಗ್ಮಿಯರೊಂದಾಗಿ ಬಹುದೊಡ್ಡ ಕಾಣಿಕೆಯನ್ನು ಸಂಪಾದಿಸಬಲ್ಲರು.
- ದಿನಕ್ಕೆ ೩೨ ನ. ಪೈಸೆಗಳಂತೆ ಪುಡಿ ಕಾಸುಗಳೊಟ್ಟಾಗಿ ಬೇಂಕಿನಲ್ಲಿ ಸಂಗ್ರಹವಾಗುವ ನಿಧಿಯು ಭವಿಷ್ಯದ ಸಂಕಷ್ಟಗಳನ್ನು ಪರಿಹಾರ ಮಾಡಬಲ್ಲದು.

ಸಿಂಡಿಕೇಟಿನ 96 ಶಾಖೆಗಳ ಯಾವುದೇ ಉದ್ಯೋಗಸ್ಥನೊಡನೆ ವಿಚಾರಿಸಿರಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ

The Canara Industrial & Banking Syndicate Ltd. Udipi

ಮನೆ ಹೋಟೆಲ್ ಮುಂದಿರಗಳಿಗೂ ಶುಭ ಸಮಾರಂಭ ಸುಖ ಸಂತೋಷ ಇತ್ಯಾದಿಗಳಿಗೂ ಅತ್ಯಾವಶ್ಯಕವಿರುವ

ಅತಿ ಉತ್ತಮ ಪರಿಮಳದ

ಜೈ ಹಿಂದ್
ದಶಾಂಗ ಧೂಪವನ್ನೇ
ಉಪಯೋಗಿಸಿರಿ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸ್ವಾಕಿಸ್ಟರು ಬೇಕಾಗಿದ್ದಾರೆ ಸೆಂಪಲ್ ಬೇಕಾದವರು 0-4-0 ಸ್ಟೇಂಪು ರವಾನಿಸಿರಿ, ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ತಯಾರಕರು—
ಜೈ ಹಿಂದ್ ಪರ್‌ಫ್ಯೂಮರಿ ವರ್ಕ್ಸ್
ವಿಜಯಲಕ್ಷ್ಮಿ ಗಾರ್ಡನ್ ಮಂಗಳೂರು 1

ಜತ್ತಿ ಸಮಿತಿಯ ವರದಿ—

ಉಳುವವನೇ ಹೊಲದೊಡೆಯನಾಗುವನು

ಸಮಗ್ರ ಮೈಸೂರು ರಾಜ್ಯದ ಭೂ ಸಮಸ್ಯೆಗಳನ್ನು ಪರಿಶೀಲಿಸಿ ವರದಿ ಒಪ್ಪಿಸಲು ಸರಕಾರವು ನೇಮಿಸಿದ್ದ ಜತ್ತಿ ಸಮಿತಿಯು ಕಳೆದ ತಾ ೧೦ರಂದು ತನ್ನ ೧೧೪ ಪುಟಗಳ ವರದಿಯನ್ನು ಸರಕಾರಕ್ಕೆ ಒಪ್ಪಿಸಿತು ೧೨ ಜನ ಸದಸ್ಯರುಳ್ಳ ಈ ಸಮಿತಿಯು ಅಲ್ಪಾವಧಿಯಲ್ಲಿ ರಾಜ್ಯದಲ್ಲೆಲ್ಲ ಸಂಚರಿಸಿ ತನ್ನ ವರದಿಯನ್ನು ಒಪ್ಪಿಸಿದೆ. ಶ್ರೀ|| ಬಿ. ಡಿ. ಜತ್ತಿಯವರು ಈ ಸಮಿತಿಯ ಅಧ್ಯಕ್ಷರಾಗಿದ್ದರು. ಪ್ರಚಲಿತ ವರದಿಯು ಮುಂಬೈ ಹಾಗೂ ಹೈದರಾಬಾದ ಪ್ರದೇಶಗಳಲ್ಲಿದ್ದ ಭೂ ಸಾಗುವಳಿ ಕಾಯಿದೆಗಳ ಉತ್ತಮಾಂಶಗಳನ್ನು ತನ್ನ ಸೂಚನೆಗಳಲ್ಲಿ ಅಳವಡಿಸಿಕೊಂಡಿದೆ.

ಸಮಿತಿಯ ವರದಿಯನುಸಾರವಾಗಿ ಗೇಣಿಯ ಪ್ರಮಾಣವು ಹೀಗಿರಬೇಕೆಂದು ನಿಶ್ಚಯಿಸಿದೆ: ನೀರಾವರಿ ಭೂಮಿಗಳ ವಿಷಯದಲ್ಲಿ ಹುಟ್ಟುವಳಿಯ ¼ ಅಂಶ ಹಾಗೂ ಇನ್ನಿತರ ಭೂಮಿಗಳ ವಿಷಯದಲ್ಲಿ ಈ ಪ್ರಮಾಣವು ಹುಟುವಳಿಯ ⅓ ಅಂಶ ಮಾತ್ರವಲ್ಲದೆ ಸರಕಾರಕ್ಕೆ ತರುವ ಕರ, ತೀರ್ವೆಗಳನ್ನು ಭೂ ಒಡೆಯನೇ ಕೊಡತಕ್ಕದ್ದು. ಧಾನ್ಯರೂಪದಲ್ಲಿ ಗೇಣಿ ತೆರುವ ಪದ್ಧತಿಯನ್ನು ಸಮಾಧಾನಕರವಾಗಿ ಮುಂದುವರಿಸಬಹುದು. ಆದಕ್ಕಾಗಿ ಭೂ ಅಯೋಗವು ಪ್ರತಿವರ್ಷ ಆಯಾ ಪ್ರದೇಶದ ಪ್ರತಿಯೊಂದು ಬೆಳೆಯ ಸರಾಸರಿ ಹುಟ್ಟುವಳಿಯನ್ನು ಗೊತ್ತುಪಡಿಸಬೇಕೆಂದು ಸಮಿತಿಯು ವರದಿಮಾಡಿದೆ.

ವೈಯಕ್ತಿಕ ಹಿಡುವಳಿಯ ಪ್ರಮಾಣವು ಆರ್ಥಿಕ ಹಿಡುವಳಿಯ ನಾಲ್ಕೂವರೆ ಪಾಲಷ್ಟು ಇರಬೇಕೆಂದು ಸಮಿತಿ ಸೂಚಿಸಿದೆ, ಮಾತ್ರವಲ್ಲ ಕುಟುಂಬನಲ್ಲಿ ಐದಕ್ಕಿಂತ ಹೆಚ್ಚು ಜನ ಸದಸ್ಯರಿದ್ದರೆ ಇದನ್ನು ಇನ್ನುಡಿಗೊಳಿಸಬೇಕೆಂದು ಸೂಚಿಸಿದೆ. ವರ್ಷಕ್ಕೆ ೧೨೦೦ ರೂ. ಆದಾಯ ಬರುವ ಭೂಮಿಯೇ ಕೌಟುಂಬಿಕ ಹಿಡುವಳಿಯೆಂದು ಸಮಿತಿ ಶಿಫಾರಸು ಮಾಡಿದೆ.

ರಾಜ್ಯದ ಜನಸಂಖ್ಯೆಯ ನೇಕಡಾ ೩೪ರಷ್ಟು ಜನರು ಮಾತ್ರ ಭೂಮಿ ಉಳ್ಳವರಾಗಿದ್ದು ಉಳಿದ ಜನಸಂಖ್ಯೆಯು ಬಹುಪಂಶ ಭೂರಹಿತರಾಗಿದ್ದಾರೆ. ಮಾತ್ರವಲ್ಲ ಸಾಗುವಳಿ ಮಾಡುವವರಲ್ಲಿ ನೂರಕ್ಕೆ ೨೮ರಷ್ಟು ಮಾತ್ರ ಭೂರಹಿತರಾಗಿದ್ದು, ಭೂಮಿಯ ಒಡೆಯರಾಗಿದ್ದು ಸಾಗುವಳಿ ಮಾಡುವವರ ಸಂಖ್ಯೆ ಗೇಣಿದಾರರ ಸಂಖ್ಯೆಯ ಹದಿಮೂರರಷ್ಟಿದೆ. ಆದಕ್ಕಾಗಿ ಭೂಸಮಿತಿಯು ವರದಿಯನ್ನು ರಚಿಸುವಲ್ಲಿ ಹೊಲ ಸಾಗುವಳಿ ಬಗ್ಗೆ ಎರಡು ಧ್ಯೇಯಗಳನ್ನು ಮುಂದಿರಿಸಿದೆ. ೧) ಧನಿ-ಒಕ್ಕಲು ಸದ್ಧತಿಯನ್ನು ಬರ್ಖಾಸ್ತುಗೊಳಿಸುವುದು. ೨) ಭೂರಹಿತರ ಆಕಾಂಕ್ಷೆಗಳನ್ನು ಪೂರೈಸುವಂತೆ ಭೂಮಿಯ ವಿತರಣೆ ಮಾಡುವುದು. ರಾಜ್ಯದಲ್ಲಿ ಧನಿ ಒಕ್ಕಲು ಪದ್ಧತಿಯ ಸಂಪೂರ್ಣ ನಿರ್ಮೂಲನವಾಗಬೇಕೆಂದು ಸಮಿತಿ ಆಶಿಸಿದೆ.

ಕೆಲವು ವಿಶಿಷ್ಟ ಪರಿಸ್ಥಿತಿಗಳಲ್ಲಿ ಮಾತ್ರ ಭೂಮಿಯನ್ನು ಗೇಣಿಗೆ ಕೊಡಬಹುದೆಂದು ವರದಿ ಸೂಚಿಸಿದೆ. ಭೂಮಾಲಿಕನು ಅಲ್ಪವಯಸ್ಸು, ವಿಧವೆ, ಅವಿವಾಹಿತ ಸ್ತ್ರೀಯಾ ದೈಹಿಕ ಯಾ ಮಾನಸಿಕ ದೋಷ ಇದ್ದವನು— ಇವರ ಪ್ರಸಂಗಗಳಲ್ಲಿ ಭೂಮಿಯನ್ನು ಗೇಣಿಗೆ ಕೊಡಬಹುದು. ಹಾಗೆಯೇ ಭೂಮ್ಯಾಲಿಕನು ಸೈನ್ಯದಲ್ಲಿ ಕೆಲಸಮಾಡುವವನಾಗಿದ್ದರೆ ಅವನೂ ಈ ಸೌಲಭ್ಯಕ್ಕೆ ಅರ್ಹನಾಗುವನು. ಕೌಟುಂಬಿಕ ಹಿಡುವಳಿಗಿಂತ ಕಡಿಮೆ ಭೂ ಮಿ ಇದ್ದವರಿಗೂ ಈ ಸೌಲಭ್ಯ ಕೊಡಲಾಗಿದೆ. ಆದರೆ ಇವರ ಆದಾಯವು ಲಾವಣಿ ಕೂಡಿ ೧೨೦೦ ರೂಪಾಯಿಗಳಿಗೆ ಮೀರ ಬಾರದು. ಗೇಣಿ ಚೀಟುಗಳನ್ನು ಯೋಗ್ಯ ಅಧಿಕಾರಿಗಳ ಎದುರು ಸಾದರ ಪಡಿಸಬೇಕು ಗೇಣಿ ಚೀಟಿ ಯಾದ ನಂತರ ಎಂತಹ ಸಂದರ್ಭದಲ್ಲೂ ಭೂಮಿಯನ್ನು ಐದು ವರ್ಷಗಳ ಮೊದಲು ವಶಪಡಿಸಿಕೊಳ್ಳಲು ಸಾಧ್ಯವಿಲ್ಲ. ನಂತರ ಸಹ ಎರಡು ವರ್ಷಗಳ ನೋಟೀಸು ಕೊಟ್ಟು ಈ ಸಂಬಂಧದ ಟೆನೆನ್ಸಿ ಕೋರ್ಟುಗಳ ಮುಖಾಂತರವೇ ಭೂಮಿಯನ್ನು ಬಿಡಿಸಬೇಕು.

ಭೂಮಿಯನ್ನು ಗೇಣಿದಾರನಿಂದ ಬಿಡಿಸುವ ಕುರಿತಾಗಿಯೂ ಸಮಿತಿಯು ಕೆಲವೊಂದು ಶಿಫಾರಸುಗಳನ್ನು ಮಾಡಿದೆ. ಮೂಲ ಹಿಡುವಳಿಯ ಮಿತಿಗಿಂತ ಕಡಿಮೆ ಭೂಮಿ ಇದ್ದವರಿಗೆ ಇಡೀ ಭೂಮಿಯನ್ನು ಸ್ವಂತ ಸಾಗುವಳಿಗೆ ಬಿಡಿಸಿಕೊಳ್ಳಲು ಅಪ್ಪಣೆ ಕೊಡಬಹುದು. ಮೂಲ ಹಿಡುವಳಿಗಿಂತ ಹೆಚ್ಚಿಗೆ ಭೂಮಿ ಇದ್ದ ಕುಟುಂಬ ಹಿಡುವಳಿಗಿಂತ ಕಡಿಮೆ ಭೂಮಿ ಇರುವ ಒಡೆಯರಿಗೆ ಗೇಣಿಗೆ ಕೊಟ್ಟ ಭೂಮಿಯ ಅರ್ಧದಷ್ಟನ್ನು ವಶಪಡಿಸಲು ಅನುಮತಿ ಕೊಡಬೇಕು. ಆದರೆ, ಇದು ಮೂಲ ಹಿಡುವಳಿಗಿಂತ ಹೆಚ್ಚಾಗಬಾರದು. ಕೌಟುಂಬಿಕ ಹಿಡುವಳಿಗಿಂತ ಹೆಚ್ಚಿಗೆ ಮತ್ತು ಪರಮಾವಧಿ ಹಿಡುವಳಿಗಿಂತ ಕಡಿಮೆ ಭೂಮಿಯ ಒಡೆಯರು ತಮ್ಮ ರೈತನಿಗೆ ಕನಿಷ್ಠ ಕೌಟುಂಬಿಕ ಹಿಡುವಳಿಯಷ್ಟು ಭೂಮಿ ಉಳಿಸಿ ಮತ್ತು ತಾನು ಸ್ವಂತ ಸಾಗುವಳಿಗೆಂದು ಇಟ್ಟು ಕೊಳ್ಳುವ ಭೂಮಿಯು ಪರಮಾವಧಿ ಹಿಡುವಳಿಯ ಮಿತಿಯನ್ನು ಮಿಕ್ಕಾಂತೆ ಭೂಮಿಯನ್ನು ಬಿಡಿಸಿಕೊಳ್ಳಬಹುದು. ಪರಮಾವಧಿ ಮಿತಿಗಿಂತ ಹೆಚ್ಚಿನ ಭೂಮಿಯನ್ನು ಈಗಾಲೇ ಸ್ವಂತ ಸಾಗುವಳಿಗೆ ಇಟ್ಟು ಕೊಂಡವರಿಗೆ ಭೂಮಿ ಬಿಡಿಸಿಕೊಳ್ಳಲು ಅವಕಾಶವಿಲ್ಲ. ಯಾವದೇ ಪರಿಸ್ಥಿತಿಯಲ್ಲಿ ಪರಮಾವಧಿ ಹಿಡುವಳಿಗಿಂತ ಹೆಚ್ಚಿನ ಭೂಮಿಯನ್ನು ಯಾವುದೇ ಒಡೆಯನು ಬಿಡಿಸಿಕೊಳ್ಳಲಾರನು. ಅಷ್ಟಲ್ಲದೆ ಹೊಲದ ಉತ್ಪನ್ನವನ್ನೇ ಹೊಂದಿಕೊಂಡಿದ್ದವರಿಗೆ ಮಾತ್ರ ಹೊಲ ಬಿಡಿಸಿಕೊಳ್ಳುವ ಅಧಿಕಾರವಿರಬೇಕು. ಹೊಲ ಬಿಡಿಸಿಕೊಳ್ಳುವಾಗ ಒಕ್ಕಲಿಗೆ ಕಾಡು ಭೂಮಿ ಬಿಟ್ಟು, ತಾನು ಉತ್ತಮ ಭೂಮಿಯನ್ನು ವಶಪಡಿಸಿಕೊಳ್ಳಲೂ ಸಾಧ್ಯವಿಲ್ಲ. ಅವೆಲ್ಲವೂ ದಾವಾಶಯ ರೀತಿಯಲ್ಲಿ ಹೆಂಚಲ್ಪಡಬೇಕು.

ಪರಿಹಾರವನ್ನು ಕೊಡುವವೇಳೆ ಮೂಲ ಹಿಡುವಳಿಗಿಂತ ಕಡಿಮೆ ಭೂಮಿಯನ್ನು ತೆಗೆದುಕೊಂಡವರಿಗೆ ಕೂಡಲೇ ಒಂದೇ ಕಂತಿನಲ್ಲಿ ಹಣ ಕೊಡಬೇಕು. ಆದಕ್ಕಿಂತ ಹೆಚ್ಚು ಭೂಮಿ ಇದ್ದವರಿಗೆ ಸರಕಾರಿ ಸಾಲಪತ್ರಗಳ ರೂಪದಲ್ಲಿ ಪರಿಹಾರ ಕೊಡಬಹುದೆಂದು ಈ ಸಮಿತಿ ಶಿಫಾರಸು ಮಾಡಿದೆ. ಸಾಗುವಳಿಯ ಹೊಣೆಯನ್ನು ಒಡೆಯನು ವಹಿಸಿಕೊಂಡಿರುವಾಗ ಮತ್ತು ಅವನಾಗಲಿ ಅವನ ಕುಟುಂಬದ ಇತರ ಸದಸ್ಯರಾಗಲಿ ಬಹುಕಾಲದಿಂದ ಹೊಲವಿದ್ದ ಕಳ್ಳಿಯಲ್ಲಿ ವಾಸಿಸುವಾಗ ಅವನೇ ದುಡಿಯಬೇಕೆಂದಿಲ್ಲ. ಅವನ ವಾಸಸ್ಥಳವು ಭೂಮಿಯಿಂದ ಹತ್ತು ಮೈಲಿಗಿಂತ ಹೆಚ್ಚು ದೂರವಿರಬಾರದು ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಭೂಮ್ಯಾಲಿಕರಿಂದ ವಶಪಡಿಸಿಕೊಳ್ಳಲಾಗದ ಭೂಮಿಯ ಬಗ್ಗೆ ಭೂ ಮ್ಯಾಲಿಕ ಹಾಗೂ ರೈತಸಂಬಂಧವು ಮುಕ್ತಾಯಗೊಳ್ಳುವುದು ಅದನ್ನು ಸರಕಾರವು ತನ್ನ ವಶಕ್ಕೆ ತೆಗೆದುಕೊಂಡು ರೈತರಿಗೆ ಗೇಣಿಗೆ ಕೊಡುವ ಬಗ್ಗೆ ಸಮಿತಿ ಅನುಕೂಲವನ್ನು ಸೂಚಿಸಿಲ್ಲ. ಈ ಭೂಮಿಯ ಒಡೆತನವು ನಿರ್ದಿಷ್ಟ ದಿನ ಸರಕಾರಕ್ಕೆ ಸೇರಬೇಕು. ಆದಕ್ಕಾಗಿ ತಕ್ಕ ಪರಿಹಾರ ಭೂ ಒಡೆಯನಿಗೆ ದೊರೆಯಬೇಕು. ರೈತರು ಈ ಪರಿಹಾರ ಹಣವನ್ನು ಸರಕಾರಕ್ಕೆ ಕೊಟ್ಟ ದಿನವೇ ಅವರು ಅಂತಹ ಭೂಮಿಯ ಒಡೆಯರಾಗುವರು. ಭೂ ಒಡೆಯನಿಗೆ ದೊರೆಯುವ ಲಾವಣಿಯು ಪರಿಹಾರ ಪ್ರಮಾಣವನ್ನು ಗೊತ್ತುಪಡಿಸಲು ಯೋಗ್ಯ ತಳಹದಿಯಾಗುವುದು. ಭೂ ಒಡೆಯನಿಗೆ ಆತನ ಯೋಗ್ಯ ವಾರ್ಷಿಕ ಗೇಣಿಯಲ್ಲಿ ಭೂಕಂದಾಯವನ್ನು ಕಳೆದು ಉಳಿಯುವ ಹಣದ ೧೫ ಪಾಲು ಹೆಣವು ಪರಿಹಾರವೆಂದು ಕೊಡಬೇಕು. ಇದನ್ನು ರೈತನು ಸರಕಾರಕ್ಕೆ ಒಂದೇ ಕಂತಿನಲ್ಲಿ, ಇಲ್ಲವೇ ೨೦ ವರ್ಷಗಳ ಅವಧಿಯಲ್ಲಿ ಹೆಂಚಿಹೋದ ಸವಾಸ ಕಂತುಗಳಲ್ಲಿ ಸಾಲಿಯಾನ ೪೦/೨ ಬಡ್ಡೀ ದರದೊಂದಿಗೆ ಕೊಡಬಹುದು. ರೈತನಿಗೆ ಇಂತಹ ಭೂಮಿಯ ಒಡೆತನದ ಮೇಲೆ ನಿರ್ಬಂಧಗಳನ್ನು ಇರಿಸಬೇಕು. ಇಂತಹ ಭೂಮಿಯನ್ನು ಮತ್ತೊಬ್ಬರಿಗೆ ಬೇಸಾಯಕ್ಕೆ ಕೊಡಬಾರದು. ಇಪ್ಪತ್ತು ವರ್ಷಗಳ ವರೆಗೆ ಭೂಮಿಯ ಹಸ್ತಾಂತರ ನಡೆಯ ಕೂಡದು. ರೈತನಿಗೆ ೨೦ ವರ್ಷಗಳ ಅವಧಿಯೊಳಗೆ ಒಕ್ಕಲತನವನ್ನು ಬಿಡಬೇಕೆನಿಸಿದರೆ ಅವನು ಭೂಮಿಯನ್ನು ಸರಕಾರಕ್ಕೆ ಮರಳಿ ಕೊಡಬೇಕು. ಇಂತಹ ಪ್ರಸಂಗದಲ್ಲಿ ರೈತನಿಗೆ ಕಂತು ಹಾಗೂ ಯೋಗ್ಯ ಗೇಣಿಯ ನಡುವಿನ ಅಂತರ ಮರಳಿ ದೊರೆಯಲಾರದು.

ಪರಮಾವಧಿ ಪ್ರಮಾಣಕ್ಕಿಂತ ಹೆಚ್ಚಾದ ಭೂಮಿಯನ್ನು ಸರಕಾರವು ತನ್ನ ಒಡೆತನಕ್ಕೆ ತಂದು ಹಂಚುವಲ್ಲಿ ಪ್ರಾಶಸ್ತ್ಯನುಸಾರವಾಗಿ ನಡಿಸಬೇಕೆಂದು ಸಮಿತಿ ಸಿಫಾರಸು ಮಾಡಿದೆ: ಭೂರಹಿತ ಒಕ್ಕಲಿಗರು, ಒಕ್ಕಲುತನ ಕೆಲಸಗಾರರು, ಹಾಗೂ ಭೂಮಿ ಇಲ್ಲದ ಒಕ್ಕಲು ಎಬ್ಬಿಸಲ್ಪಟ್ಟ ರೈತರು ಇವರಿಗೆ ಮೂಲ ಹಿಡುವಳಿಗೆ ಕಡಿಮೆ ಇಲ್ಲದಷ್ಟು ಹಂಚುವುದು. ಮೂಲ ಹಿಡುವಳಿಗಿಂತ ಕಡಿಮೆ ಭೂಮಿ ಇರುವ ರೈತರಿಗೆ, ಒಕ್ಕಲೆಬ್ಬಿಸಲ್ಪಟ್ಟವರಿಗೆ ಸ್ವಂತ ಸಾಗುವಳಿ ಮಾಡುವ ಒಡೆಯರಲ್ಲಿ ಯಾರಿಗಾದರೂ ಮೂಲ ಹಿಡುವಳಿಯಷ್ಟಾಗಲು ಭೂಮಿ ಇಲ್ಲದಿದ್ದರೆ ಅವರಿಗೆ ಹಂಚಬೇಕು. ಕೌಟುಂಬಿಕ ಹಿಡುವಳಿಗಿಂತ ಕಡಿಮೆ ಭೂಮಿಯಿರುವ ರೈತರಿಗೆ ಕೊಡಬೇಕು ಸ್ವಂತ ಸಾಗುವಳಿ ಮಾಡಬಯಸುವ ಇತರ ವ್ಯಕ್ತಿಗಳಿಗೆ ಹಂಚಬೇಕು ಈ ಭೂಮಿಯ ಹಣವನ್ನು ೧೫ಕ್ಕೆ ಮಿಕ್ಕದ ವಾರ್ಷಿಕ ಕಂತುಗಳಲ್ಲಿ ಸಲ್ಲಿಸಬೇಕೆಂದು ಸಮಿತಿ ಸೂಚಿಸಿದೆ.

ಗೇಣಿ ಸಂಬಂಧಿ ಕಾರ್ಯವನ್ನು ಕಂದಾಯ ಅಧಿಕಾರಿಗಳ ಕೆಲಸದಲ್ಲಿ ಸೇರಿಸಬಾರದು. ತಾಲೂಕಿಗೊಂದು ಪ್ರತ್ಯೇಕ ನ್ಯಾಯ ಮಂಡಳ ಇರಬೇಕು. "ಮನವಿ" ಮಾಡಲು ಒಂದೇ ಅವಕಾಶವಿರಬೇಕು. ಪ್ರತಿ ಜಿಲ್ಲೆಯಾ ಜಿಲ್ಲೆಗಳ ಗುಂಪಿಗೆ ಒಂದು ನ್ಯಾಯ ಮಂಡಳವಿರಬೇಕು ಎಂದು ಮುಂತಾಗಿ ಸಮಿತಿಯು ಕಾರ್ಯಾಚರಣೆ ಸಂಬಂಧದಲ್ಲಿ ಸೂಚಿಸಿದೆ. ಈ ಹೊಲ ಸಾಗುವಳಿ ಕಾಯಿದೆಯಲ್ಲಿ ಮಹತ್ವದ ಪಾತ್ರ ವಹಿಸಲಿರುವ ಭೂ ಆಯೋಗವು ಕೌಟುಂಬಿಕ ಹಿಡುವಳಿ ಮತ್ತು ಭೂಮಿಯ ಸರಾಸರಿ ಹುಟ್ಟುವಳಿ ಇವನ್ನು ಗೊತ್ತುಪಡಿಸುವುದು. ಇದರಲ್ಲಿ ೫ ಜನ ಸದಸ್ಯರಿರಬೇಕೆಂದೂ, ಇವರ ಅಧ್ಯಕ್ಷರು ಹೈಕೋರ್ಟು ನ್ಯಾಯಾಧೀಶರಾಗಬೇಕೆಂದೂ ಸಮಿತಿ ಸೂಚಿಸಿದೆ.

ದೀರ್ಘ ಪರಿಶ್ರಮದಿಂದ ಸಿದ್ಧಗೊಳಿಸಲ್ಪಟ್ಟ ಈ ವರದಿಯಲ್ಲಿ ಹಲವಾರು ಉತ್ತಮಾಂಶಗಳಿವೆ. ಈ ವರದಿಯಲ್ಲಿ ಸರಕಾರವು ತಾನು ಸ್ವೀಕರಿಸುವ ನಿರ್ಣಯಾನುಸಾರದ ಒಂದು ವಿಧೇಯಕವು ಮುಂದಿನ ಅಧಿವೇಶನದಲ್ಲಿ ಮಂಡಿಸಲ್ಪಡಲಿದೆ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಶೇವಣಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?

ಹಾಗಿದ್ದಲ್ಲಿ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬೇಂಕಿನ ಶಾಖೆಯಲ್ಲಿ ವಿಚಾರಿಸಿರಿ. "ಕೊರ್ಪೊರೇಶನ್" ಬೇಂಕು ಎಲ್ಲಾ ತರದ ಶೇವಣಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿಯದೆ. ಅಲ್ಲದೆ ಶೇವಣಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ಶರತ್ತುಗಳನ್ನೂ ಬದಲಾಯಿಸಿಯದೆ.

51 ವರುಷಗಳ ಪರಿಶಿಷ್ಟ ಬೇಂಕಿಂಗ್ ಅನುಭವ!

7,00,00,000 ರೂಪಾಯಿಗಳಿಗೂ ಮೀರಿದ ಒಟ್ಟು ವಹಿವಾಟು!

THE CANARA BANKING CORPORATION LIMITED

ವಿವಾಹ ಸಮಸ್ಯೆ ಸರಳವಾಗಬೇಕೆ?

ಪುರುಷರು ಧೀರತ್ವವನ್ನವಲಂಬಿಸಲಿ

ಶ್ರೀ. ಎಂ. ರಂಗ ರಾವ್.

ಕಲೆ—ಅದೊಂದು ತುಂಬದ ಕಲೆ. ಯಾವುದೆನ್ನುವಿರಾ? ಯಾವುದರಲ್ಲಿ ತಾನೇ ಕಲೆಯಿಲ್ಲ? ಕಲೆಗೆ ಕಲೆಯೇ ಎಣೆ ಈ ಕಾಲದ ಪ್ರಪಂಚವೆಲ್ಲವೂ ಕಲಾಬಾಹುಳ್ಯವೇ ಆಗಿದೆ.

ಆದರೆ ಕಲೆಯನ್ನು ಕಾಣಲು ಅರಿತವರು ಮಾತ್ರ ಬಹಳ ಕಡಮೆ ಹೌದು. ಕಲಾ ಸಾಧನೆ ಮಾಡಿಕೊಳ್ಳಬೇಕಾದರೇನೇ ಒಂದು ಪ್ರತ್ಯೇಕ ಸಹೃದಯತೆಬೇಕು. ಹಣವೋ ಪ್ರತಾಪವೋ ಪದವಿಯೋ ಪಾಂಡಿತ್ಯವೋ ಇದೆಲ್ಲಾ ಎಷ್ಟೇ ಇರಲಿ, ಇಲ್ಲದಿರಲಿ; ಕಲಾ ರಸಿಕತ್ವದ ಹೃದಯವು ಮಾತ್ರ ಆ ವ್ಯಕ್ತಿಯಲ್ಲಿಂಬೇಕಾಗುತ್ತದೆ. ಇದೊಂದು ಮಾತ್ರವಿರುವ ಮಗುವಾದರೂ ಕಲೆಯ ಸಾರವನ್ನು ಹೀರಬಲ್ಲುದು. ಆದರೆ ಇದು ಒಳದ ಎಲ್ಲರಲ್ಲಿಯೂ ಇರುವುದೆಂಬ ನಿಶ್ಚಯವಿಲ್ಲ. ಕಲಾ ರಸಿಕತ್ವವು ಅಂತರಂಗದ ಮರ್ಮ ತಂತುವಿನ ಒಂದು ಪ್ರಚೋದನೆಯಾಗಿದೆ. ಆ ಪ್ರಚೋದನೆಗೆ ಸಮಯವೋ, ಸಂದರ್ಭವೋ, ಕುಲವೋ, ಸ್ಥಳವೋ, ಯುಕ್ತಿಯೋ, ನ್ಯಾಯವೋ, ಶ್ರುತಿಯೋ, ಸ್ಮೃತಿಯೋ, ಪ್ರಾಯವೋ ಪ್ರಮುಖತೆಯೋ ಆವಶ್ಯಕವಿಲ್ಲ. ಸ್ಥಳ ಕುಲ, ಮುಖನ್ಯಾಯಗಳನ್ನು ನೋಡದೆ ಕಲಾಪರವಾದ ವಸ್ತುಗಳಿಂದ ಅನಂದಾನುಭೂತಿಗೊಳಗಾಗುವ ಒಂದು ಪ್ರತ್ಯೇಕ ಭಾವಪ್ರಕರಣವಾದುದು ಕಲಾ ಸ್ವಾದನೆಯತತ್ವ. ಇದುವೇ ಸ್ವಾಭಾವಿಕ ಕಲಾರಸಿಕತನ.

ರಸಗಳು ಒಂಭತ್ತು ಅವುಗಳನ್ನು ಉಪ ವಿಭಾಗಗಳನ್ನಾಗಿ ಮಾಡಿದರೆ ಎಷ್ಟೆಂದು ಹೇಳಲು ಸಾಧ್ಯವಾಗುವುದಿಲ್ಲ. ಆದರೆ ಒಂದು ನಿಜ. ರಸಂಜನೆಂದು ಸರ್ವರೂ ಕಂಠೋಕ್ತವಾಗಿ ಉದ್ಘೋಷಿಸಿದ ಶೃಂಗಾರದಲ್ಲಿ ಕಲಾಸ್ವಾದನೆಗೆ ಸರ್ವೋತ್ತಮವಾದ ಸ್ಥಾನವಿದೆ. ಇತರ ರಸಗಳನ್ನು ಆಸ್ವಾದಿಸುವಲ್ಲಿ ಆ ಕಲೆಗೆ ಎಷ್ಟೇ ಕೌತುಕ ವಿರಲಿ ಅದು ವ್ರೇಕ್ಷಕರ ಹೃದಯದಲ್ಲಿ ತುಂಬ ಕಾಲ ಬಾಳುವುದಲ್ಲ. ಅಥವಾ ಪ್ರೇಕ್ಷಣ ಸಮಯದಲ್ಲಿ ಸಂಭೂತವಾದ ವೀಕ್ಷಣಗತಿಯನ್ನು ಹೃದಯಸ್ಪರ್ಶಗೊಳಿಸಲು ಆರಸಗಳಿಗೆ ಬಲ ಸಾಲದು. ಆದರೆ ಶೃಂಗಾರ ರಸದೊಂದಿಗೆ ಆಸ್ವಾದಿಸುವ ಕಲೆಗೆ ಅ ಜೀವನಾಂತವಾಗಿ ಸಜೀವ ಪ್ರಚೋದನೆಗೊಳಿಸುವ ಶಕ್ತಿಯುಂಟು.

ಈ ಪ್ರಪಂಚದಲ್ಲಿ ಸರ್ವೋಪರಿ ಕಲಾ ವಿಶೇಷವು ತುಳುಕುವುದು ಈ ಬ್ರಹ್ಮಸೃಷ್ಟಿಯಲ್ಲಿ ಮಾತ್ರವೇ ಸರಿ. ಇತರ ಪರಲೋಕಾದಿ ಸೃಷ್ಟಿ ವೈಚಿತ್ರ್ಯಗಳನ್ನು ಕೇಳಿ ಅರಿತಿದ್ದೇವೆಯೇ ಹೊರತು ಯಾರೂ ಅನುಭವಿಸಿದವರಿಲ್ಲ. ನಮ್ಮ ಮುಂದೆ ಕಾಣುವ ಸೃಷ್ಟಿಯಲ್ಲಿ ಪ್ರಮುಖತೆಯಿರುವುದು ಮನುಷ್ಯನಿಗೆ ತಾನೇ? ಕಲೆಯನ್ನು ಆಸ್ವಾದಿಸಬಲ್ಲ ಸಂಸ್ಕಾರ ಚಿತ್ತತೆ ಈ ಮನುಷ್ಯನಿಗೇ ವಿರಲು ಅದರಲ್ಲೂ ವಿಶೇಷತೆಯಿದೆ. ಗಂಡಿಗೆ ಹೆಣ್ಣಿನಲ್ಲಿಯೂ, ಹೆಣ್ಣಿಗೆ ಗಂಡಿನಲ್ಲಿಯೂ ಪ್ರಸ್ಫುಟತವಾಗುವ ಸೃಷ್ಟಿ ವೈಚಿತ್ರ್ಯಗಳಲ್ಲಿ ಕಲಾ ಸಂಬಂಧವಾಗಿ ಕಂಡೂ ಕೇಳಿಯೂ ಆಲೋಚಿಸಿಯೂ ಆಸ್ವಾದಿಸಲು ಪ್ರತ್ಯೇಕವಾದೊಂದು ಸಾಧ್ಯತೆಯುಂಟು.

ಆದರೆ ವಿವೇಕ ಶೂನ್ಯತೆಯಿಂದ ರಸರುಚಿ ವಿಮೂಢನಾದ ಮನುಷ್ಯನು ರಸವೈಕೃತಿಗಳನ್ನು ಕಾಣಿಸಿ ಆಸ್ವಾದ್ಯವಾದ ಕಲಾವೈಶಿಷ್ಟ್ಯವನ್ನು ನೀರಸವಾಗಿಸುವ ವಿಧದಲ್ಲಿ ಉಪಭೋಗಿಸುವನಾದರೆ ಅದೊಂದು ವ್ಯಸನ ಪಡತಕ್ಕ ವಿಷಯವೆಂದೇ ಹೇಳಬೇಕು.

ಲೋಕದಲ್ಲಿ ಹಲವು ಪುರುಷರೂ ಹಲವು ಸ್ತ್ರೀಯರೂ ಅನ್ಯೋನ್ಯ ಆಕರ್ಷಣದ ಅಭಿಲಾಷೆಪಟ್ಟು ಕಾರ್ಯಗಳು ನೆರವೇರದೆ ನೈರಾಶ್ಯದಲ್ಲಿ ಜೀವಿತವನ್ನು ಹಾಳು ಮಾಡಿಕೊಳ್ಳುವ ಪರಿತಾಪ ದೃಶ್ಯವನ್ನು ನಾವು ನಿತ್ಯಾನುಭವದಲ್ಲಿ ಕಾಣುತ್ತಿದ್ದೇವೆ. ಗಂಡನ್ನೂ ಹೆಣ್ಣನ್ನೂ ತಾರತಮ್ಯಗೊಳಿಸಿ ನೋಡುವಾಗ ಸ್ತ್ರೀಯರು ಎಷ್ಟೇ ಸ್ವಾತಂತ್ರ್ಯವೂ ಸಮತ್ವವೂ ತಮಗೆ ಬೇಕೆಂದು ಪ್ರಲೋಭಿಸುವ ಈ ಕಾಲದಲ್ಲಿ ಪುರುಷನೇ ಮುಂದಡಿಯಿಟ್ಟು ನಡೆಯಬೇಕಾದ್ದು ಸಹಜವಾಗಿದೆ, ಅವಶ್ಯವೂ ಆಗಿದೆ. ಯಾವ ಕಾರ್ಯಕ್ಕಾದರೂ ಪುರುಷನೇ ಮುಂಗೈಯಿಡಬೇಕಾಗುತ್ತದೆ ಆಕೃತಿಯಿಂದಲೋ, ಪ್ರಕೃತಿಯಿಂದಲೂ, ಮತ್ತಾವುದರಿಂದಲೋ ಅನುರೂಪಪಲಾದೊಬ್ಬಳು ಜೀವನ ಸಂಗಾತಿಯನ್ನು ಕೈಹಿಡಿಯಲಿಕ್ಕೆ ಪುರುಷನಿಗೇ ಸುಲಭಾಸ್ಯವಿರುತ್ತದೆ. ಇಷ್ಟೊಂದು ಸೌಲಭ್ಯಗಳು ಸಹಜವಾಗಿಯೇ ಹೆಣ್ಣಿಗಿರುವುದಿಲ್ಲ. ಅಂತಹ ಒಂದು ಸರಿಯಾದ ಆರಿಕೆ ಪುರುಷನಿಗೆ ಸಾಧ್ಯವಾಗದಿದ್ದರೆ ಮೊದಲನೇದಂಗಿ ಅದ ಅವನದೇ ತಪ್ಪಾಗುತ್ತದೆ ಆ ತಪ್ಪನ್ನು ಪರಿಹರಿಸಿಕೊಳ್ಳಲು ಅವನೇನೋ ಪ್ರಯತ್ನಮಾಡಿಯಾನು. ಅದಕ್ಕೆತಕ್ಕ ಉಪಾಯಗಳೂ ಅವನಿಗಿದ್ದವು ಆ ಉಪಾಯಗಳ ಉಚಿತಾನುಚಿತಗಳನ್ನು ಅವನು ಪರಿಶೀಲಿಸಿ ನೋಡಬೇಕಾದ್ದು ನ್ಯಾಯವಾಗುತ್ತದೆ.

ಮೊದಲನೇದಾಗಿ ಒಬ್ಬ ಪುರುಷನು ಒಬ್ಬಳನ್ನು ತನ್ನ ಸಂಗಾತಿಯನ್ನಾಗಿ ಮಾಡಿಕೊಳ್ಳಬೇಕಾದರೆ ಅಗತ್ಯವಾದ ಕೆಲವು ಯೋಚನೆ ಮಾಡಲಿಕ್ಕಿದೆ. ಒಂದು ರೂಪ, ಎರಡು ವಿದ್ಯೆ, ಮೂರು ಸ್ಥಿತಿ, ನಾಲ್ಕು ಕುಲ ಐದು ತನ್ನ ಸುತ್ತುಮುತ್ತುಗಳು.

ರೂಪ. 'ಕನ್ಯಾವರಯತೇ ರೂಪಂ' ಎಂದು ಅನುಭವಿಕರು ಹೇಳಿದ್ದಾರೆ. ಅದು ತುಂಬ ನಿಜ. "ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ" ಆದುದರಿಂದ ಕಣ್ಣಿಗೆ ತೃಪ್ತಿಕರವಾದ ಕಾರ್ಯಗಳು ನಿಶ್ಚಯಕ್ಕೆ ಪ್ರಾಧಾನ್ಯತೆಹಿಸಲೇಬೇಕು. ಹೆಣ್ಣಿನ ಕಣ್ಣಿಗೆ ತೃಪ್ತಿಪಡಿಸಲಿರುವ ಸಾಮಾನ್ಯ ರೂಪ ವೈಶಿಷ್ಟ್ಯ ದೃಢ ಗಾತ್ರತೆ, ಅನುಬಂಧವಾದ ವಯಸ್ಸು ಇವೆಲ್ಲ ತನಗಿದೆಯೇ ಎಂದು ಪುರುಷನು ಯೋಚಿಸಬೇಕು.

ವಿದ್ಯೆ. ತ್ವಶುರನು ಜಾಮಾತನ ವಿದ್ಯಾ ಗೌರವಗಳನ್ನೆ ಮುಖ್ಯವಾಗಿಣಿಸುತ್ತಾನೆಂಬುದು ಸತ್ಯವಾದ ಮಾತು. ಅದನ್ನು ಸಾಧಿಸಿಕೊಳ್ಳುವುದು ಪರನ ಕರ್ತವ್ಯ ಇದರಂತೆಯೇ ಹೆಣ್ಣಿನ ತಾಯಿ ಇಚ್ಛಿಸುವ ಧನವೂ, ಬಂಧುಗಳಿಚ್ಛಿಸುವ ಕುಲವೂ, ಇತರ ಜನರು ಅಭಿಲಾಷಿಸುವ ಉತ್ತಮ ಸಾಮಾಜಿಕ ಕಟ್ಟುಪಾಡುಗಳೂ ಅವನಿಗಿರಬೇಕು.

ಇದೆಲ್ಲ ಸರಿಯಾಗಿದ್ದವರನೂ ಸೋಲು ಪಡೆಯುವುದನ್ನು ನಾವು ಕಾಣುತ್ತೇವೆ. ಅದಕ್ಕೆ ಕಾರಣವೇನು? ಅದು ಮತ್ತೇನಲ್ಲ. ಅದು ಆ ವ್ಯಕ್ತಿಗೇ ಸಂಬಂಧಪಟ್ಟ ಒಂದು ವಿಶಿಷ್ಟ ಗುಣ ಅದುವೇ ಧೀರತೆ. ಧೀರತೆಯಿಲ್ಲದವರಿಗೆ ನಿಜಕ್ಕೂ ಸೋಲುಂಟಾಗುತ್ತದೆ. ಧೀರೋದಾತ್ತನಾದ ಒಬ್ಬ ನಾಗರಿಕನನ್ನು ಹಾವ ತರುಣಿಯೂ ಅಭಿಲಾಷಿಸುತ್ತಾಳೆನ್ನಲು ಎಷ್ಟೋ ಪುರಾಣಗಳು ಘೋಷಿಸಿದ ಉದಾರಣೆಗಳುಂಟು. ಸೀತೆ ರಾಮನನ್ನೋ, ದ್ರೌಪದಿ ಅರ್ಜುನನನ್ನೋ, ಸಂಯುಕ್ತೆ ಪೃಥ್ವಿರಾಜನನ್ನೋ ವರಿಸಿದ್ದರೆ, ಆ ವರ ಪುರುಷರ ಧೀರತೆಗೆ ಮೆಚ್ಚಿಯೇ ಅವರು ವರಿಸಿದ್ದಾಗಿದೆ. ಆದ್ದರಿಂದ ಪುರುಷನು ಧೀರನಾಗಲಿಕ್ಕೇ ಮೊದಲು ಶ್ರಮಿಸಿಬೇಕು. ಧೀರತ್ವವೇ ಪುರುಷರ ಪ್ರಾಮುಖ್ಯ ಧನ.

ಬಸ್ಸಿನಲ್ಲಿ ಹೋಗುವಾಗ ಸ್ತ್ರೀ ಪ್ರಯಾಣಿಕರನ್ನು ನೋಡಿ ಎದ್ದು ಅವರಿಗೆ ಸೀಟು ಕೊಡುವುದೋ, ಸಿನಿಮಾ ಕ್ಯೂವಿನಲ್ಲಿಯೋ, ರೈಲ್ವೇ ಟಿಕೇಟು ಪಡೆಯುವಾಗಲೋ ಸ್ತ್ರೀಗೆ ಪ್ರಥಮ ಗಮನ ಕೊಡುವುದೋ—ಇಂಥ ಕೃತಗಳನ್ನಷ್ಟೇ ಧೀರ ಪ್ರವರ್ತನೆಯನ್ನಾಗಿ ಗಣಿಸಿಕೊಳ್ಳುವ ಅನೇಕ ಕಾಲೇಜು ಕುಮಾರರನ್ನು ಕಾಣುತ್ತೇವೆ ತರುಣೀಮಣಿಯರು ಗುಂಪು ಗುಂಪಾಗಿ ಬರುವ ಬೀಚುಗಳಲ್ಲೋ, ಸಾರ್ವಜನಿಕ ವಿಹಾರ ಸ್ಥಳಗಳಲ್ಲೋ, ಹೋಟಲಿಯಿಂದ ಪರಿಮಳಿಸುವ ಶೃಂಗಾರ ಕೋಮಾಳಿಗಳಾಗಿ ಶೂಟುಕೋಟು ಧರಿಸಿದ ಧೀರರನ್ನು ನಾವು ಕಾಣುತ್ತೇವೆ. ಹೆಣ್ಣಾಣಿಗಳನ್ನು ಕಾಣುವಾಗ ತುಂಡಿಂಗ್ಲೀಸು, ಸಿಗರೇಟಿನ ಹೊಗೆ, ಸಿನಿಮಾ ಹಾಡ ಗಳಿರುಗ. ವಿಸಿಲು ಈ ಬಗೆಯ ಚೇಷ್ಟೆಗಳನ್ನು ಪ್ರದರ್ಶಿಸುವ ಕೆಲವಾರು ಕುಮಾರ ಧೀರರಿಗೂ ಕೊರತೆಯೇನೂ ಇಲ್ಲ. ಈ ಬಗೆಯ ಅವಹೇಳನೆಯ ಕುರುಳುಗಳೇ ಪುರುಷರ ವೈಕಲ್ಯಗಳಿಗೆ ಪ್ರಧಾನ ಕಾರಣವಾಗುತ್ತವೆ.

ಜೀವಿತದಲ್ಲಿ ಸ್ವಾತಂತ್ರ್ಯವಿಲ್ಲದೆ ಸ್ವತಂತ್ರವಾಗಿ ಪ್ರಯತ್ನಿಸಿ ತಿನ್ನುವುದರಲ್ಲಿ ರುಚಿ ಅಧಿಕವಿದೆ ವೈವಾಹಿಕ ಜೀವಿತದಲ್ಲಿಯೂ ಹೀಗೆಯೇ. ಬೇರೆಯವರು ತಲೆಗೆ ಇಟ್ಟು ಕಟ್ಟಿಕೊಡುವ ಹೆಣ್ಣನ್ನು ಸ್ವೀಕರಿಸಿ ತೃಪ್ತಿಪಟ್ಟು ಜೀವಿಸುವುದಕ್ಕಿಂತಲೂ, ಸ್ವತಂತ್ರತೆಯಿಂದ ಒಲವನ್ನು ಸಂಪಾದಿಸಿಕೊಂಡು ಜೀವನ ನಡೆಸುವುದೇ ಸುಖಪ್ರದವಾಗಿದೆ. ಆದರೆ ಸಂಪಾದಿಸುವಾಗ ನಿಮ್ಮ ಸಂವಾದನೆಯ ಗುಣಾವಗುಣಗಳನ್ನು ಯೋಚಿಸಿಕೊಳ್ಳದೆಯೇ ನಡೆದುಬಿಟ್ಟರೆ ವ್ಯಾಗಗಳಿಗೂ ಮನುಷ್ಯರಿಗೂ ವ್ಯತ್ಯಾಸ ಉಳಿಯಲಾರದು. ಈ ವಿಷಯದಲ್ಲಿ ನಿಮಗಿರಬೇಕಾದ್ದು ವಿವೇಕ ಮತ್ತು ಧೈರ್ಯ. ಇವೆರಡು ಸರಿಯಾಗಿದ್ದರೆ ಇಂದು ಸಾಮಾಜಿಕ ವ್ಯವಸ್ಥಿತಿಯಲ್ಲಿಯವ ಕೆಟ್ಟ ಆಚಾರಗಳ, ಅಂದರೆ ಸ್ತ್ರೀ ಧನ, ಸಜಾತೀಯತೆ, ವಿಜಾತೀಯತೆ, ಹಣ, ಪದವಿ ಮೆದಲಾದ ಕಲ್ಮಷಗಳೆಲ್ಲಾ ದೂರೀಕರಿಸಬಹುದು. ಈ ಬಗೆಯ ಸತ್ಪರಿಣಾಮಕ್ಕೆ ಉದುಸರ ಧೀರತ್ವವೇ ಬುನಾದಿ. ಪುರುಷನ್ನನುಸರಿಸಿ ಸ್ತ್ರೀಯರೂ ಸಹಜವಾಗಿಯೇ ಧೀರರಾಗಬಲ್ಲರು. ಹೀಗಾದರೆ ಇಂದು ಕಾಣುವ ವಿವಾಹ ಪ್ರಶ್ನೆ ಎಷ್ಟೋ ಸರಳವಾದೀತು.

BANGALORE MAKE
BRAND NEW PRINTING MACHINES
READY FOR SALE.

1 Crown Folio with power drive ... Rs 1050/-
2 F/cape size with power drive ... Rs 800/-
3. 1/4 size — Rs 450/-

Contact with

THE MYSORE TYPE FOUNDRY,
Letter Founders, Subedar Chatram Road
(Opp Himalaya Talkies) **BANGALORE-2**

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to
ADVERTISEMENT MANAGER,
'NAVAYUGA'
Post Box No. 22, UDIPI, S. K.

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವುದೊಂದು ತರದ ಖರ್ಚೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಜಮಾ ಮಾಡಬಹುದು.

ಮೆನೇಜರ್.

NAVAYUGA
Popular Kannada Weekly
Founder:—
A. B. SHETTY,
Former Minister for Public Health,
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೯-೯-'೫೭	೩

ಜತ್ತಿ ಸಮಿತಿಯ ವರದಿ

ರಾಜ್ಯದಲ್ಲಿ ಏಕರೂಪದ ಭೂಸುಧಾರಣೆಯನ್ನು ಜಾರಿಗೆ ತರಲು ಯೋಗ್ಯ ಮಾಹಿತಿಗಳನ್ನು ಕಲೆ ಹಾಕುವ ಉದ್ದೇಶದಿಂದ ಇದೇ ಮೇ ತಿಂಗಳಲ್ಲಿ ನೇಮಕಗೊಂಡಿದ್ದ ಜತ್ತಿ ಸಮಿತಿಯು ತನ್ನ ವರದಿಯನ್ನು ಸರಕಾರಕ್ಕೆ ಈಗ ತಾನೆ ಸಾದರಪಡಿಸಿದೆ; ಮತ್ತು ಈ ವರದಿಯ ಸಾರವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಜತ್ತಿ ಸಮಿತಿಯು ತನಗೆ ಒಪ್ಪಿಸಲಾದ ಕೆಲಸವನ್ನು ಅತ್ಯಂತ ದಕ್ಷತೆಯಿಂದಲೂ ಸಾಕಷ್ಟು ಕ್ಷಿಪ್ರತೆಯಿಂದಲೂ ಪೂರೈಸಿದೆ— ಬೇರೆ ಬೇರೆ ರಾಜ್ಯ ಸರಕಾರಗಳು ಹಿಂದೆ ನೇಮಿಸಿದ್ದ (ಮುಖ್ಯವಾಗಿ ಮದ್ರಾಸು ಸರಕಾರ ನೇಮಿಸಿದ್ದ) ಭೂಸುಧಾರಣೆಯ ಸಮಿತಿಗಳು ವರ್ಷಗಟ್ಟಲೆ ಸಮಯವನ್ನು ತಮ್ಮ ವರದಿ ಸಲ್ಲಿಸಲು ತೆಗೆದುಕೊಂಡಿರುವಾಗ, ಜತ್ತಿ ಸಮಿತಿಯು ನಾಲ್ಕು ತಿಂಗಳೊಳಗೆನೇ ತನ್ನ ಕೆಲಸವನ್ನು ಕೃತಿಕರವಾಗಿ ಮುಗಿಸಿದ್ದು ಪ್ರಶಂಸಾರ್ಹವಾಗಿದೆ ರಾಜ್ಯ ಸರಕಾರವು ಭೂಸುಧಾರಣೆಯ ಕಡೆಗೆ ವಿಶೇಷ ಆತುರತೆಯನ್ನು ತೋರಿಸುತ್ತಿರುವುದರ ದ್ಯೋತಕವೂ ಇದಾಗಿದೆ ಎನ್ನಬಹುದು. ಸರಕಾರವೇ ಉದಾಸೀನವಾಗಿದ್ದರೆ, ಆದರಿಂದ ನೇಮಕಗೊಂಡ ಸಮಿತಿಗಳೂ ಅವಧಿ ಬೆಳೆಸುವ ಮನವಿಯನ್ನು ಸಲ್ಲಿಸುತ್ತಾ ಹೋಗುವುದು ಸಂಪ್ರದಾಯ. ಜತ್ತಿ ಸಮಿತಿಗೆ ಈ ಅಂಟುರೋಗ ತಗಲಲಿಲ್ಲವೆನ್ನುವುದು ಶುಭಕರ. ಈ ಸಮಿತಿಯು ಒಪ್ಪಿಸಿದ ವರದಿಯು ಸಾರವನ್ನೋದಿದವರಿಗೆ ಅದು ಭೂ ಸುಧಾರಣೆಯ ಬಗ್ಗೆ ನಿಶ್ಚಲವಾದ ವಿಶ್ವಾಸವನ್ನು ಇಟ್ಟಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಗೇಣಿದಾರರೊಡನೆ ಅದಕ್ಕೆ ನಿಜವಾದ ಸಹಾನುಭೂತಿ ಇದೆ- ಯೋಜನಾ ಆಯೋಗದ ಆದೇಶವನ್ನು ಪರಿಪಾಲಿಸುವ ಶ್ರದ್ಧೆಯೂ ಅದಕ್ಕಿದೆ. ಆದುದರಿಂದಲೇ ಗೇಣಿಯು ನಂಜ ಭೂಮಿಯ ಮಟ್ಟಿಗೆ ಒಟ್ಟು ಉತ್ಪಾದನೆಯ ಕಾಲಂಶವನ್ನೂ ಪಂಜ ಭೂಮಿಗಾದರೆ ಐದರಲ್ಲಿ ಒಂದಂಶವನ್ನೂ ಪೂರಲಾಗದೆಂದು ಮತ್ತು ಭೂಮಿಯ ತೀರ್ವೆ ಮತ್ತಿತರ ಸರಕಾರಕ್ಕೆ ಸಲ್ಲತಕ್ಕ ಹಾಸಲನ್ನು ಧನಿಯಾದವನೇ ತೆರಲು ಬದ್ಧನೆಂದೂ ಅದು ಹೇಳಿದೆ. ಸ್ವಂತ ಸಾಗುವಳಿಗೆ ಭೂಮಿಯನ್ನು ಧನಿಯಾದವನು ವಾಪಸು ಪಡೆಯುವುದಕ್ಕೆ ಕೆಲವೊಂದು ಶರ್ತಗಳನ್ನು ಸಮಿತಿಯು ಹಾಕಿದ್ದು, ಈ ಶರ್ತಗಳು ಸಾಗುವಳಿ ಗೇಣಿದಾರನಾದವನಿಗೆ ಆದಷ್ಟು ಕಡಿಮೆ ಕಷ್ಟವನ್ನು ಕೊಡುವ ಹಾಗಿವೆ. ಅಂದರೆ, ಧನಿಯಾದವನು ನಿಜವಾಗಿಯೂ ಸ್ವಂತ ಸಾಗುವಳಿ ಮಾಡಲು ಆತುರನಿದ್ದರೆ ಮತ್ತು ಹಾಗೆ ಸಾಗುವಳಿ ಮಾಡದಿದ್ದರೆ ಆತನ ಜೀವನ ನಿರ್ವಹಣೆಗೆ ಕಷ್ಟಕ್ಕಿಟ್ಟುಕೊಳ್ಳುವಂತಿದ್ದರೆ ಮಾತ್ರ ಒಕ್ಕಲಿನಿಂದ ತನ್ನ ಸಾಗುವಳಿ ಭೂಮಿಯನ್ನು ಆತನು ಬಿಡಿಸಿಕೊಳ್ಳಬಲ್ಲನು ಭೂಮಿಯ ಮಾಲಕನೆಂದಲ್ಲದೆ, ಬೇರಾವ ವಿಧದಿಂದಲೂ ಆ ಸಾಗುವಳಿ ಭೂಮಿಯ ಹಿತಚಿಂತಕನಲ್ಲದವನಿಗಿಂತ ನಿಜವಾಗಿ ಹಗಲೂ ರಾತ್ರಿ ಆ ಭೂಮಿಯೊಡನೆ ಸಂಬಂಧವಿರಿಸಿಕೊಂಡಿರುವ ಒಕ್ಕಲೇ ಶ್ರೇಷ್ಠ. ಆತನೇ ಪ್ರೋತ್ಸಾಹಕ್ಕೆ ಯೋಗ್ಯ— ಎಂಬ ತತ್ತ್ವವನ್ನು ಜತ್ತಿ ಸಮಿತಿಯು ಮಾನ್ಯಮಾಡಿದೆ. ಹೀಗೆ ನೆಪಮಾತ್ರಕ್ಕೆ ಭೂಮಾಲಕರಾಗಿದ್ದು ತಾವು ಬೇರೆ ಉದ್ಯೋಗವನ್ನು ಅವಲಂಬಿಸುತ್ತಾ ಜೊತೆಗೆ ಗೇಣಿಯನ್ನು ಸಹ ಅನುಭೋಗಿಸುತ್ತಾ ವಿಲಾಸಜೀವನ ನಡೆಸುವ "ಅಬ್ಸೆಂಟೀ ಲ್ಯಾಂಡ್ ಲೋರ್ಡಿಸಂ" ಪದ್ಧತಿಗೆ ಕೊನೆಯನ್ನು ತರುವುದು ಸೂಕ್ತವೆಂದೇ ಸಮಿತಿ ಅಭಿಪ್ರಾಯಪಟ್ಟಿದೆ. ಅಲ್ಪವಯಸಿಗಳು, ವಿಧವೆ ಅಥವಾ ಅವಿವಾಹಿತ ಮಹಿಳೆ, ಸೈನ್ಯದಲ್ಲಿ ಸೇವೆ ಸಲ್ಲಿಸುವ ವ್ಯಕ್ತಿ—ಹೀಗೆ ಬಹಳ ಪರಿಮಿತವಾದ-ಆದರೆ ನಿಜಕ್ಕೂ ಕಿರಿಯಾಯಿತಿಗೆ ಪಾತ್ರವಾದ—ವರ್ಗಕ್ಕೆ ಮಾತ್ರ ಈ ಕಠಿಣ ಶರ್ತಗಳಿಂದ ವಿನಾಯತಿ ದೊರಕಿದೆ. ಸಮಿತಿಯೇ ಹೇಳುವಂತೆ, ಸಾಗುವಳಿದಾರ ಒಕ್ಕಲಿಗೂ ಸರಕಾರಕ್ಕೂ ನಡುವೆ ಮಧ್ಯವರ್ತಿ ವರ್ಗವಿರಬಾರದೆನ್ನುವುದೇ ಭೂ ಸುಧಾರಣೆಯ ನಿಜವಾದ ತಿರುಳು. ಇದನ್ನು ಸಾಧಿಸುವುದಕ್ಕೆ ಉಳುವವನಿಗೆನೇ ಭೂಮಿಯ ಒಡೆತನವನ್ನು ಕಾಲಾನುಕ್ರಮದಲ್ಲಿ ವಹಿಸಿಕೊಡುವುದು ಅವಶ್ಯ. ಆದುದರಿಂದ ಧನಿಯಾದವನ ಕೈಯಿಂದ ಗೇಣಿದಾರನಿಗೆ ಭೂಮಿಯ ಒಡೆತನವನ್ನು ಹಸ್ತಾಂತರಿಸಲು ತಕ್ಕ ಉಪಾಯಗಳನ್ನು ಯೋಜಿಸಲು ಸಮಿತಿ ಸಾಹಸಪಟ್ಟಿದೆ— ಭೂಮಿಯ ಹಸ್ತಾಂತರವು ಇನ್ನು ಮುಂದೆ ಕೃಷಿಕ ವರ್ಗದ ಹೊರಗೆ ನಡೆಯಲಾರದು ಸಾಗುವಳಿದಾರನು ದೀರ್ಘಾವಧಿಯ ಕಂತುಗಳಲ್ಲಿ ಸಾಗುಭೂಮಿಯ ಬೆಲೆಯನ್ನು ಪಾವತಿ ಮಾಡುತ್ತಾ ಬಂದು ತಾನೇ ಭೂಮಿಯ ಒಡೆಯನಾಗಬಲ್ಲನು. ಈ ಕಂತುಗಳು ವಾರ್ಷಿಕ ಉತ್ಪನ್ನದಲ್ಲಿ ಮಾತ್ರ ಸಂಪತ್ತನ್ನು ಒಳಗೊಳ್ಳುವುದರಿಂದ ಗೇಣಿ ಸಹಿತವಾಗಿ ಮೂರರಲ್ಲಿ ಒಂದಂಶದಷ್ಟು ಮಾತ್ರ ಹೊರಗೆ ಸಲ್ಲುವ ಹಾಗಾಗಿ, ವಿಶೇಷ ಭಾರವೆನಿಸದ ಕ್ರಮದಿಂದ ಒಕ್ಕಲೇ ನಿಜವಾದ ಭೂಮಾಲಕನಾಗುವ ಸಾಧ್ಯತೆಯನ್ನು ಸಮಿತಿಯು ಕಲ್ಪಿಸಿಕೊಟ್ಟಿದೆ. ಹೀಗೆ ಎಲ್ಲ ರೀತಿಯಿಂದಲೂ ಸಮಿತಿಯ ವರದಿ ಸಾಗುವಳಿದಾರ ಒಕ್ಕಲುಗಳ ಪಕ್ಷಪಾತಿಯಾಗಿದ್ದು, ಯೋಜನಾ ಆಯೋಗದ ಆದೇಶಕ್ಕೆ ವ್ಯತಿರಿಕ್ತವಾಗದ ರೀತಿಯಲ್ಲಿದೆ ಭೂಮಿಗೆ ಪರಿಹಾರ ಕೊಡುವ ಪ್ರಶ್ನೆಯೂ ಇದಕ್ಕೆ ಅಪವಾದವಲ್ಲ. ತೀರ ಕಡಿಮೆ ಭೂಮಿಯುಳ್ಳವರಿಗೆ ನಗದಾಗಿ ಪರಿಹಾರ ಸಿಗುವಾಗ, ಉಳಿದವರಿಗೆ ಸಾಲಪತ್ರಗಳ ಮೂಲಕ ಈ ಪರಿಹಾರ ಸಿಗುತ್ತದೆ. ಅನುಸಂಗಿಕವಾಗಿ ಸಮಿತಿಯು ಕಂದಾಯದ ಸುನರ್ವಿಮರ್ಶೆ ಅತ್ಯಗತ್ಯವೆಂದೂ ಸೂಚಿಸಿದೆ. ಅಲ್ಲದೆ ಭೂ — ಆಯೋಗವೊಂದನ್ನು ನೇಮಿಸಿ ಬೇರೆ ಬೇರೆ ಕಡೆಯ ಬೇರೆ ಬೇರೆ ಸ್ಥಿತಿಗತಿಯ ಭೂಮಿಯ ಉತ್ಪಾದನೆ ಎಷ್ಟು ಎಂಬುದನ್ನು ತಿಳಿದುಕೊಳ್ಳಬೇಕೆಂದೂ ಸಲಹೆ ಮಾಡಿದೆ. ಒಟ್ಟಾರೆ ಈ ಸಮಿತಿಯು ತನ್ನ ಕರ್ತವ್ಯದ ಪೂರ್ಣ ಜ್ಞಾನವನ್ನು ಕೊಂದಿ, ತಾನು ಮಾಡಬೇಕಾದುದನ್ನು ನಿರ್ವಂಚನೆಯಿಂದ ಮಾಡಿರುತ್ತದೆ. ಎಷ್ಟೊ ಸಮಿತಿಗಳು ಭೂಸುಧಾರಣೆಯೇ ಬೇಡ ಎನ್ನುವ ದಾಟಿಯಲ್ಲಿ ಅಥವಾ ಎಲ್ಲರನ್ನೂ ಮೆಚ್ಚಿಸುವ ರೀತಿಯಲ್ಲಿ ವರದಿಗಳನ್ನು ಸಲ್ಲಿಸಿರುವುದು ನಮ್ಮ ಅನುಭವ ಅದೇ ಪ್ರಕಾರ ಭಿನ್ನಾಭಿಪ್ರಾಯದ ಟಿಪ್ಪಣಿಗಳನ್ನು ಕೆಲವು ಸದಸ್ಯರು ಸಮಿತಿಯ ಬಹುಮತದ ಅಭಿಪ್ರಾಯಕ್ಕೆ ಜೋಡಿಸುವುದೂ ಒಂದು ಕ್ರಮ. ಜತ್ತಿ ಸಮಿತಿಯ ವರದಿ ಇದಕ್ಕೆ ಅಪವಾದ. ಅದು ಜಾಗರೂಕತೆಯಿಂದಲೂ ಸುವಿವೇಕದಿಂದಲೂ ಸದ್ಭಾವನೆಯಿಂದಲೂ ಸದಿಚ್ಛೆಯಿಂದಲೂ ಪ್ರಾಮಾಣಿಕತೆಯಿಂದಲೂ ದುಡಿದು ಧನ್ಯವಾಗಿದೆ ಇದಕ್ಕಿಂತ ಹೆಚ್ಚು ವರದಿಯ ಅಂಶಗಳ ಬಗ್ಗೆ ಈಗ ನಾವು ಹೇಳಬಯಸುವುದಿಲ್ಲ.

ಸಂಕ್ಷಿಪ್ತ ಸುದ್ದಿಗಳು

ರಸ್ತೆಸಾರಿಗೆ ಕಾರ್ಪೊರೇಶನ್

ಮೈಸೂರು ರಾಜ್ಯದಲ್ಲಿ ರಸ್ತೆ ಸಾರಿಗೆ ಕಾರ್ಪೊರೇಶನ್ನನ್ನು ಇದೇ ಅಕ್ಟೋಬರ ಮಾಸದಿಂದ ಪ್ರಾರಂಭಿಸಲಾಗುವುದು. ಇದರಿಂದ ರಾಜ್ಯದ ಸಾರಿಗೆ ಸಮಸ್ಯೆಯನ್ನು ಸಮರ್ಥ ರೀತಿಯಲ್ಲಿ ಪರಿಹರಿಸುವುದು ಸಾಧ್ಯವಾಗಬಲ್ಲುದೆಂಬ ನಿರೀಕ್ಷೆ ಇದೆ. ಈ ವಿಧಾನದ ನೌಕರರ ವೇತನ ಪ್ರಮಾಣದ ಪ್ರಶ್ನೆಯನ್ನು ಸಹ ಸರಕಾರವು ಪರಿಶೀಲಿಸುತಿದ್ದು ಸರಕಾರ ಮತ್ತು ನೌಕರರ ಪ್ರತಿನಿಧಿಗಳ ನಡುವೆ ಒಂದು ಸಂಧಾನವಾಗಿ ಅಕ್ಟೋಬರ ಮೊದಲನೆ ದಿನಾಂಕದೊಳಗೆ ಆ ಬಗ್ಗೆ ಒಂದು ನಿರ್ಣಯವನ್ನು ಕೈಗೊಳ್ಳುವ ಭರವಸೆಯಿದೆ.

ಭಿಕ್ಷಾಟನೆಗೆ ಪ್ರತಿಬಂಧ

ಮೈಸೂರು ರಾಜ್ಯವಿಡಿ ಭಿಕ್ಷಾಟನೆಯನ್ನು ಪ್ರತಿಬಂಧಿಸಿ, ಪ್ರತಿ ತಾಲೂಕುಗಳ ಮುಖ್ಯ ನಗರಗಳಲ್ಲಿ ಭಿಕ್ಷುಕರಿಗೆ ಉದ್ಯೋಗ ದೊರೆಯುವಂತೆ ಹಲವಾರು ಉದ್ದಿಮೆಗಳನ್ನು ಪ್ರಾರಂಭಿಸುವ ಕಡೆಗೆ ಸರಕಾರದ ಗಮನವು ಹರಿದಿದ. ನವಂಬರ ತಿಂಗಳಾತ್ಯದೊಳಗೆ ಸರಕಾರವು ಈ ಕುರಿತೊಂದು ನಿರ್ಧಾರಕ್ಕೆ ಬರಬಹುದು. ಈ ಸಂಬಂಧದಲ್ಲಿ ಪ್ರಧಾನತಃ ಮೈಸೂರು ಮತ್ತು ಮಂಗಳೂರುಗಳನ್ನು ಮಾತ್ರ ಆರಿಸಿಕೊಂಡಿದ್ದು ಅದಕ್ಕೆ ಬೇಕಾಗುವ ಆಂದಾಜನ್ನು ಸಿದ್ಧಪಡಿಸುತ್ತಿದೆ.

ರಾಜ್ಯಗಳ ಹೊಸ ಸಾಲಗಳು

ಮೈಸೂರು ಸರಕಾರವು ಸಾರ್ವಜನಿಕ ಮಾರುಕಟ್ಟೆಯಿಂದ ಬೇಡಿದ ೪ ದರದ ೧೯೭೯ರಲ್ಲಿ ಮರುಪಾವತಿಯಾಗುವ ೩ ಕೋಟಿ ರೂಪಾಯಿಗಳ ಸಾಲವು ಬೇಡಿಕೆ ಪ್ರಾರಂಭವಾದ ಕೆಲವೇ ತಾಸುಗಳಲ್ಲಿ ತುಂಬಿಹೋಯಿತು. ಹಾಗೆಯೇ ಮುಂಬಯಿ ಸರಕಾರದ ೬ ಕೋಟಿ ರೂಪಾಯಿಗಳ ಸಾಲವೂ ಪೂರ್ತಿಯಾಗಿ ಕೂಡಿ ಬಂದಿದೆ.

ಉತ್ತರ ಕನ್ನಡಕ್ಕೆ ವಿದ್ಯುತ್

ಇದುವರೆಗೆ ವಿದ್ಯುತ್ತನ್ನು ಕಾಣದಿರುವ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳಿಗೆ ವಿದ್ಯುತ್ತನ್ನು ಒದಗಿಸುವ ಸಲುವಾಗಿ ಸರ್ವೆ ಕಾರ್ಯವು ಭರದಿಂದ ನಡೆದಿದ್ದು ಯೋಜನೆಗಳು ಸಿದ್ಧವಾಗುತ್ತಿವೆ. ೨,೦೦೦ ದಿಂದ ೫,೦೦೦ದ ವರೆಗೆ ಇನ ಸಂಖ್ಯೆಯಿರುವ ಊರುಗಳಿಗೂ ವಿದ್ಯುಚ್ಛಕ್ತಿಯನ್ನು ಸೂರೈಸಲು ತಕ್ಕ ಅಂದಾಜು ನಡೆಯುತ್ತಿದೆ. ಈ ಪ್ರದೇಶದಲ್ಲಿ ಟ್ರಾನ್ಸ್‌ಮಿಶನ್ ಲೈನನ್ನು ಹಾಕುವ ಸಲುವಾಗಿಯೇ ಸುಮಾರು ೩೮ ಲಕ್ಷ ರೂಪಾಯಿಗಳು ವೆಚ್ಚವಾಗಬಹುದಾದ ನಿರೀಕ್ಷೆಯಿದೆ.

ಗ್ರಾಮದಾನ ಪರಿಷತ್ತು

ಅಖಿಲ ಭಾರತ ಸರ್ವಸೇವಾ ಸಂಘದ ನೇತೃತ್ವದಲ್ಲಿ ಮೈಸೂರಿನಿಂದ ಹತ್ತು ಮೈಲು ದೂರದ ಇಲವಾಲ ಗ್ರಾಮದಲ್ಲಿ ಸಪ್ಟಂಬರ ೨೪ರಂದು ಗ್ರಾಮದಾನ ಪರಿಷತ್ತು ಸಭೆ ಸೇರಲಿದೆ. ಈ ಸಭೆಯಲ್ಲಿ ರಾಷ್ಟ್ರಪತಿ ಡಾ ಪ್ರಸಾದ, ಪ್ರಧಾನಿ ನೆಹರೂ, ಗೃಹಮಂತ್ರಿ ಪಂತ, ಕಾಂಗ್ರೆಸ್ ಅಧ್ಯಕ್ಷ ಢೇಬರ, ಅಜಯ ಘೋಷ, ಡಾಂಗೆ, ಜಯ ಪ್ರಕಾಶ ನಾರಾಯಣ ಮೊದಲಾದವರು ಭಾಗ ವಹಿಸುವರು. ಆಚಾರ್ಯ ವಿನೋಬಾ ಭಾವೆಯವರೂ ಆ ಸಮಯದಲ್ಲಿ ಇಲವಾಲಕ್ಕೆ ಆಗಮಿಸಿ, ಗ್ರಾಮದಾನ ಚಳವಳಿಗೆ ಪ್ರೋತ್ಸಾಹ ಕೊಡುವಂತೆ ಭಾರತೀಯರನ್ನು ಉತ್ತೇಜಿಸುವುದಕ್ಕೆ ಸುಸಂಘಟಿತವಾಗಿ ಹೇಗೆ ಪ್ರಯತ್ನಿಸಬಹುದೆಂಬ ಬಗ್ಗೆ ನಡೆಯುವ ವಿಚಾರ ವಿನಿಮಯದಲ್ಲಿ ಭಾಗವಹಿಸುವರು. ಈ ಪರಿಷತ್ತು ಸೇರುವ ಬಗ್ಗೆ ಸಿದ್ಧತೆಗಳು ತೀವ್ರವಾಗಿ ಸಾಗುತ್ತಲಿವೆ.

ಶ್ರೀ ವಿಶ್ವೇಶ್ವರಯ್ಯ

ಮೈಸೂರಿನ ಹಿರಿಯ ಪ್ರಸಿದ್ಧ ಮುತ್ಸದ್ಧಿ ಹಾಗೂ ತಂತ್ರಜ್ಞರಾದ ಡಾ|| ಸೋ

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರರವರ ಪ್ರಕಟಣೆ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನಂದರೆ ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಮಣ್ಯ ಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಜರಗುವ ಜಾತ್ರೆಯಾದ ಸಂತೆಯು ಇದೇ 1957 ನೇ ಯಿಸವಿ ನವಂಬರ ತಿಂಗಳ 7 ನೇ ತಾರೀಕಿನಿಂದ 21 ನೇ ತಾರೀಕಿನ ವರೆಗೆ ಜರಗುವುದು. ಅಂದರೆ ಸಂತೆಯು ಕಾರ್ತಿಕ ಪೂರ್ಣಾಮಿಯ ದಿನ ಪ್ರಾರಂಭವಾಗಿ ಕಾರ್ತಿಕ ಅಮಾವಾಸ್ಯೆಯ ದಿನ ಅಂದರೆ ಸುಬ್ರಹ್ಮಣ್ಯ ದೀಪೋತ್ಸವದ ತನಕ ಜರಗುವುದು.

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆಯೊಂದರ 25 ನಯಾ ಪೈಸೆಯಂತೆ ಫೀಸು ವಸೂಲುಮಾಡಲಾದೀತು. ಒಂದು ತಿಂಗಳ ಕರುಗಳನ್ನು ಸದ್ರಿ ಫೀಸಿನಿಂದ ವಿರಹಿತ ಪಡಿಸೋಣಗಿಯದೆ. ಸಂಧರ್ಭಾನುಸಾರ ಅವಶ್ಯವಿದ್ದಲ್ಲಿ ಸದ್ರಿ ಫೀಸು ಏರಿಸಲೂ ಬಹುದು ಯಾ ಇತರ ಫೀಸನ್ನು ಹೊರಿಸಲೂ ಬಹುದು. ಪರಂತು ರೆವಿನ್ಯೂ ಡಿವಿಜನಲ್ ಆಫೀಸರರವರು ಅವಶ್ಯವೆಂದು ತೋರಿದ ಯಾವ ಜಾನುವಾರುಗಳನ್ನು ಸದ್ರಿ ಫೀಸುಗಳಿಂದ ವಿರಹಿತಪಡಿಸಬಹುದು.

(Sd) ಪಿ. ಎಸ್. ಶಿವಪ್ಪ ಶೆಟ್ಟಿ.
ರೆವಿನ್ಯೂ ಡಿವಿಜನಲ್ ಆಫೀಸರರು,
ಪುತ್ತೂರು

ರೆವಿನ್ಯೂ ಡಿವಿಜನಲ್ ಆಫೀಸು ಪುತ್ತೂರು
ತಾರೀಕು 9-9-57.

ಕ್ಷಗುಂಡೂ ವಿಶ್ವೇಶ್ವರಯ್ಯನವರ ೯೭ನೆಯ ವರ್ಧಂತಿಯು ಬೆಂಗಳೂರಲ್ಲಿ ದಿನಾಂಕ ೧೫ರಂದು ಸಂಭ್ರಮದಿಂದ ಆಚರಿಸಲ್ಪಟ್ಟಿತು. ಈ ಬಗ್ಗೆ ಸೇರಿದ್ದ ಸತ್ಕಾರ ಸಭೆಯಲ್ಲಿ ಮಾತಾಡುತ್ತ ಅವರು ಗ್ರಾಮಾಂತರ ಔದ್ಯಮೀಕರಣ ಯೋಜನೆಯ ಕುರಿತು ಸಕ್ರಿಯ ಆಸ್ಥೆಯನ್ನು ತಳೆಯಬೇಕೆಂದೂ ಈ ವರೆಗೆ ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದೂ ಜನತೆಯನ್ನು ಕೇಳಿಕೊಂಡರು.

ಪಶ್ಚಿಮ ಪ್ರದೇಶ ಮಂಡಳಿ

ಮುಂಬಯಿ ಮತ್ತು ಮೈಸೂರು ರಾಜ್ಯಗಳನ್ನೊಳಗೊಂಡಿರುವ ಪಶ್ಚಿಮ ಪ್ರದೇಶ ಮಂಡಳದ ಪ್ರಥಮ ಸಭೆಯು ಈ ತಿಂಗಳ ೨೦ರಂದು ಮೈಸೂರಿನಲ್ಲಿ ಸೇರಲಿರುವುದು ಕೇಂದ್ರ ಗೃಹಮಂತ್ರಿ ಪಂಡಿತ ಪಂತರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಲಿರುವರು. ಮಾನವ ಬಲದ ಯೋಜನೆ, ಘಟಕ್ರಭಾ ಆಣೆಕಟ್ಟು, ಪ್ರಾದೇಶಿಕತಳಹದಿಯನ್ನೇಲೆ ವಿದ್ಯುತ್ತಿನ ಉತ್ಪಾದನೆ ಮತ್ತು ಹಂಚಿಕೆ ಪ್ರೌಢ ನ್ಯಾಯಾಲಯಗಳಲ್ಲಿ ಮೂರರಲ್ಲೊಂದು ಭಾಗದಷ್ಟು ನ್ಯಾಯಾಧೀಶರನ್ನು ರಾಜ್ಯದ ಹೊರಗಣಿಂದ ನೇಮಕ ಮಾಡಿಕೊಳ್ಳುವುದು ಮುಂತಾದ ವಿಷಯಗಳು ಈ ಸಭೆಯಲ್ಲಿ ಚರ್ಚಿಸಲ್ಪಡುವುವು.

ಕೇರಳದಲ್ಲಿ ಹರತಾಳ

ತ್ರಿಚೂರು ಜಿಲ್ಲೆಯಲ್ಲಿ ಕೆಥೋಲಿಕ್ ಆಡಳಿತೆಗೊಳಪಟ್ಟ ನಾಲ್ಕು ಕಾಲೇಜುಗಳು ಒಳ ಮಾಧ್ಯಮಿಕ ಶಾಲೆಗಳೂ ಕೂಡಿ ಸುಮಾರು ೨೦೦ ಕ್ಕೂ ಮಿಕ್ಕಿದ ಶಿಕ್ಷಣಾಲಯಗಳು ತಾ. ೧೩ರಂದು ಸರಕಾರದ ನೂತನ ಶಿಕ್ಷಣ ವಿಧೇಯಕನನ್ನು ವಿರೋಧಿಸಿ ಹರತಾಳವನ್ನು ಕೈಗೊಂಡುವು. ಮಟ್ಟನಚೆರಿ ಎರ್ನಾಕುಲಂಗಳಲ್ಲಿ ಸುಮಾರು ೫೦೦ಕ್ಕೂ ಮಿಕ್ಕಿದ ಶಾಲೆ ಕಾಲೇಜುಗಳು ಹರತಾಳವನ್ನು ಆಚರಿಸಿದೆ. ಕೇರಳದ ರಾಜ್ಯಪಾಲರು ಹಾಗೂ ರಾಷ್ಟ್ರಪತಿಗಳು ಈಕಾಯದೆಗೆ ಮನ್ನಣೆಯೊಯಬಾರದೆಂದು ಗೊತ್ತುವಳಿಯನ್ನೂ ಸ್ವೀಕರಿಸಿರುವುವು.

ದಸರಾ ಉತ್ಸವ

ಪ್ರತಿವರ್ಷದಂತೆ ಈ ವರ್ಷವೂ ಮೈಸೂರಿನಲ್ಲಿ ಸಡಗರ ವೈಭವಗಳಿಂದಿಗೆ ದಸರಾ ಉತ್ಸವವು ನಡೆಯಲಿದೆ. ಪುದರ್ಶನ, ಮೆರವಣಿಗೆಗಳಲ್ಲದೇ ಕೆಲವು ಅವಶ್ಯಕ ಸುಧಾರಣೆಗಳೊಂದಿಗೆ ದರಬಾರು ಸಹ ನಡೆಯಲಿರುವುದು. ಅರಮನೆ ಹಾಗೂ ಬೃಂದಾವನಗಳಲ್ಲಿ ದೀಪೋತ್ಸವವೂ ನಡೆಯುವುದು.

ರಾಜಕೀಯ ಕೈದಿಗಳು

ಪಾಕಿಸ್ತಾನದಿಂದ ಆಕ್ರಮಿತವಾದ ಕಾಶ್ಮೀರ ಪ್ರದೇಶದಲ್ಲಿಯ ಕಾಯದೆ ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯು ದಿನದಿನಕ್ಕೂ ಹೆಚ್ಚಗೆಡುತ್ತಾ ನಡೆದಿದೆಯೆಂದೂ ಪಾಕಿಸ್ತಾನ ಸರಕಾರವು ಈ ಭಾಗವನ್ನು ಸೈನ್ಯ ರಾಣೆಯನ್ನಾಗಿ ಮತ್ತು ಶಸ್ತ್ರಾಸ್ತ್ರಗಳ ಸಂಗ್ರಹಾಲಯವನ್ನಾಗಿ ಪರಿವರ್ತಿಸಿದ ಬಗ್ಗೆ ಜನರಲ್ಲಿ ಹಬ್ಬಿರುವ ಅಸಂತೋಷ ಮತ್ತು ಅಸಂತೃಪ್ತಿಗಳಿಗೆ ನಿದರ್ಶನವಾಗಿದೆಯೆಂದೂ ತಿಳಿದುಬರುತ್ತದೆ. ಅಷ್ಟೇ, ಪಾಕಿಸ್ತಾನ ಕಾಶ್ಮೀರದಲ್ಲಿಯ ರಾಜಕೀಯ ಕೈದಿಗಳಿಗೆ ಪ್ರತಿ ದಿನವೂ ಬಾರ ಕೋಲುಗಳಿಂದ ಏಟು ಕೊಡಲಾಗುತ್ತಿದೆಯೆಂದೂ ರಾಜಕೀಯ ಸ್ಥಾನಬದ್ಧರನ್ನು ಅಮಾನುಷ ರೀತಿಯಲ್ಲಿ ಹಿಂಸಿಸಲಾಗುತ್ತಿದೆಯೆಂದೂ, ಜೇಲಿನ ಹೊರಗಿರುವವರು ಸಹ ಸಾವಿರಾರು ಸಂಖ್ಯೆಯಲ್ಲಿ ಉಪವಾಸದಿಂದ ಸಾಯುತ್ತಿರುವರೆಂದೂ ರಾವಲ್ಪಿಂಡಿಯ ಪತ್ರಿಕೆಯೊಂದು ವರದಿ ಮಾಡಿದೆ.

ಇಂಗ್ಲಿಷ್ ಸಹ ಭಾರತೀಯ ಭಾಷೆ!

ಇಂಗ್ಲಿಷ್ ಭಾಷೆಯನ್ನು ಭಾರತವು ಮನ್ನಿಸಿದೆ. ಅದು ಸಹ ಭಾರತೀಯ ಇತರ ಭಾಷೆಗಳಂತೆಯೇ ಸಮಾನ ಮರ್ಯಾದೆಳ್ಳುದಾಗಿದೆ ಭಾಷಾ ಸಾಮ್ರಾಜ್ಯ ಶಾಹೀ ಉದ್ದೇಶದಿಂದ ಇಂಗ್ಲಿಷನ್ನು ಆಳಿಸಲು ಯಾರಾದರೂ ಪ್ರಯತ್ನಿಸಿದರೆ, ಅದರಿಂದ ಭಾರತಕ್ಕೆ ರಾಜಕೀಯ ಮತ್ತು ಶೈಕ್ಷಣಿಕ ದೃಷ್ಟಿಯಿಂದ ಅಪಾಯ ಹಾನಿಯಾಗುವುದೆಂದು ಆಂಗ್ಲೋ ಇಂಡಿಯನ್ ಧುರೀಣರಾದ ಫ್ರಾಂಕ್ ಆಂಥೊನಿಯವರೆಂದಿದ್ದಾರೆ.

ರಾಷ್ಟ್ರಪತಿಗಳು ನಿರ್ವೃತ್ತರಾಗುವುದಿಲ್ಲ!

ಭಾರತದ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದರ ಚಿತ್ತವು ಸಾಹಿತ್ಯದತ್ತ ಒಲಿದಿರುವುದರಿಂದ ಅವರು ತಮ್ಮ ಹುದ್ದೆಗೆ ೧೯೫೯ರ ಸುಮಾರಿಗೆ ರಾಜೀನಾಮೆಯನ್ನಿತ್ತು ನಿರ್ವೃತ್ತರಾಗುವರೆಂದು ಕೆಂ ವದಂತಿಯೊಂದು ದೇಶದಾದ್ಯಂತ ಹಬ್ಬಿತ್ತು. ಆದರೆ, ಇದೀಗ, ಅವರು ಹಾಗೆ ಅವಧಿಗೆ ಮುಂಚಿತವಾಗಿ ನಿರ್ವೃತ್ತರಾಗುವುದಿಲ್ಲವೆಂದೂ ಆ ವದಂತಿಯು ಸುಳ್ಳೆಂದೂ ರಾಷ್ಟ್ರಪತಿಗಳ ಪತ್ರಿಕಾ ವಿಭಾಗದ ಅಧಿಕಾರಿಯು ಪ್ರಕಟಣೆಯೊಂದನ್ನು ಹೊಂಡಿಸಿದ್ದಾನೆ.

ಕಾಸೀಂ ರಜ್ವಿ

ದೀರ್ಘ ಕಾಲದ ಸೆರೆಮನೆ ವಾಸದ ನಂತರ ಇದೀಗ ತಾನೆ ಬಿಡುಗಡೆ ಹೊಂದಿರುವ ರಾಜಕಾರ್ಯ ಧುರೀಣ ಕಾಸೀಂ ರಜ್ವಿಯು ತಾನು ಬಯಸುವುದಾದರೆ ಪಾಕಿಸ್ತಾನಕ್ಕೆ ಹೋಗಬಹುದು ಇಲ್ಲಿಯೇ ಉಳಿಯಬಹುದಾದರೆ, ಹಾಗೆ ಮಾಡಬಹುದೆಂದು ತಿಳಿದುಬಂದಿದೆ. ಆದರೆ, ಈ ವರೆಗೆ ರಜ್ವಿಯು ಸರಕಾರಕ್ಕೆ ತನ್ನ ಪಾಕಿಸ್ತಾನ ಪ್ರಯಾಣದ ಬಗ್ಗೆ ತಿಳಿಸಿರುವುದಿಲ್ಲ.

ಅಂಚೆ ಪಾಕೀಟುಗಳ ದರ

೧೯೫೭ರ ಹಣಕಾಸಿನ ಕಾಯದೆಯಲ್ಲಿ ಸೂಚಿಸಿರುವ ಪುನರ್ವಿಮರ್ಶಿತ ಅಂಚೆ ದರಗಳು ಈ ತಿಂಗಳ ೧೮ನೆ ದಿನಾಂಕದಿಂದ ವ್ಯವಹಾರಕ್ಕೆ ಬಂದಿರುವುವು. ಪಾಕೀಟುಗಳ ಬೆಲೆಯು ಮೊದಲಿನ ೧೫ ತೊಲೆ ತೂಕದ ವರೆಗೆ ೧೫ ನಯೇ ಪೈಸೇ; ಮುಂದಿನ ಪ್ರತಿ ೧೫ ತೊಲೆ ಯಾ ಅದರ ಅಂಶಕ್ಕೆ ೧೦ ನಯೇ ಪೈಸೇ ಮತ್ತು ಉತ್ತರ ಪಾಕೀಟುಗಳಿಗೆ ಇದೇ ದರವು ಅನ್ವಯಿಸುವುದು. ಸದ್ಯ ಬಳಕೆಯಲ್ಲಿರುವ ಎರಡಾಣೆ ಮತ್ತು ೧೩ ನಯೇ ಪೈಸೆಗಳ ಪಾಕೀಟುಗಳಿಗೆ ೨ ನಯೇ ಪೈಸೆಗಳ ಹೆಚ್ಚಿನ ಚೀಟು ಹಚ್ಚಿಯೇ ಉಪಯೋಗಿಸಬೇಕು.

ರೈಲ್ವೆ ಪ್ರಯಾಣ ದರಗಳು

ದಿನಾಂಕ ೧೫ರಿಂದ ರೈಲ್ವೆ ಪ್ರಯಾಣ ದರಗಳನ್ನು ಶತಾಂಶ ನಾಣ್ಯ ಪದ್ಧತಿಯಲ್ಲಿ ಕಾಣಿಸಲಾಗಿದೆ. ೧೯೫೭ರ ರೈಲ್ವೆ ಪ್ರಯಾಣಿಕರ ಕಾಯದೆಯೂ ಅದೇ ದಿನ ವ್ಯವಹಾರಕ್ಕೆ ಬಂದಿರುತ್ತದೆ. ದಶಮಾಂಶ ಪದ್ಧತಿಯಲ್ಲಿ ದರಗಳನ್ನು ಬರೆದರೂ ಜನರಿಂದ ಈಗಿನಂತೆ ಹಳೆಯ ಹಾಗೂ ಹೊಸ ಪದ್ಧತಿಗಳಲ್ಲಿ ಹಣವನ್ನು ಸ್ವೀಕರಿಸಲಾಗುವುದು.

ಕಾಶ್ಮೀರದ ರಕ್ಷಣೆಗೆ ಸೈನ್ಯ!

ಕಾಶ್ಮೀರವನ್ನು ಪಾಕಿಸ್ತಾನದ ದಾಳಿಯಿಂದ ರಕ್ಷಿಸುವುದಕ್ಕಾಗಿ ಸೈನ್ಯ ಪಡೆಯನ್ನು ಉಪಯೋಗಿಸಲು ಭಾರತ ಸರಕಾರಕ್ಕೆ ದಿವಂಗತ ಮಹಾತ್ಮಾ ಗಾಂಧೀಜಿಯವರು ಅನುಮತಿ ಕೊಟ್ಟಿದ್ದರೆಂದು ಪ್ರಧಾನಿ ನೆಹರೂ ತಮ್ಮ ಕಾಶ್ಮೀರ ಸಂಚಾರ ವೇಳೆಯಲ್ಲಿ ಶ್ರೀನಗರದ ಒಂದು ಸಭೆಯಲ್ಲಿ ಬಹಿರಂಗ ಪಡಿಸಿದ್ದಾರೆ. ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವಾಗಿದ್ದು, ಅದು ಎಂದೆಂದಿಗೂ ಭಾರತದ್ದೇ ಎಂದವರು ದೃಢಪಡಿಸಿದ್ದಾರೆ.

ಸರಕಾರೀ ಪಕ್ಷಕ್ಕೆ ವಿಜಯ

ಪಶ್ಚಿಮ ಜರ್ಮನಿಯ ಸಾರ್ವತ್ರಿಕ ಚುನಾವಣೆಯಲ್ಲಿ ಡಾ. ಅಡೆನೂರರ ಕ್ರಿಶ್ಚನ್ ಡೆಮೊಕ್ರೆಟಿಕ್ ಪಕ್ಷವು ಆತ್ಯಧಿಕ ಬಹುಮತವನ್ನು ಸಂಪಾದಿಸಿ ಸರಕಾರದ ಅಧಿಕಾರವನ್ನು ತನ್ನ ಕೈಯಲ್ಲಿಯೇ ಇರಿಸಿಕೊಂಡಿದೆ. ಈ ವಿಜಯವು ಇಡಿ ಪಶ್ಚಿಮದ ವಿದೇಶಧೋರಣೆಗೆ ಬಲವಿತ್ತಂತಾಗಿದೆ ಅಲ್ಲದೆ ಭವಿಷ್ಯದತ್ತ ಒಂದು ಮಹಾ ಹೆಜ್ಜೆಯಿಟ್ಟಂತಾಗಿದೆ.

ರಶಿಯದ ಮೇಲೆ ಆರೋಪ

ರಶಿಯವು ಕಳೆದ ವರ್ಷ ಹಂಗೇರಿಯಲ್ಲಿ ಮಾಡಿದ ಕೃತಿಗಳಿಗಾಗಿ ಆದೇಶವನ್ನು ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಯು ಖಂಡಿಸಿದೆ. ಹಂಗೇರಿಯಲ್ಲಿ ನಡೆಯುತ್ತಿರುವ ದಬ್ಬಾಳಿಕೆಯನ್ನು ಕೊನೆಗಾಣಿಸುವ ಬಗ್ಗೆ ಸದ್ಯದ ಸಂ. ರಾ. ಸಂಘದ ಸಾಮಾನ್ಯ ಸಭೆಯ ಅಧ್ಯಕ್ಷರಾದ ಥ್ಯಾಲೇಂಡಿನ ಯುವರಾಜ ವಾನ್ ವೈಥೇಯಾಕೊರರು ಮಾಸ್ಕೋ ಹಾಗೂ ಬುಡಪೆಸ್ಟ್‌ಗಳಿಗೆ ವಿಶೇಷ ದೌತ್ಯವನ್ನೊಯ್ಯಬೇಕೆಂದೂ ಸಭೆಯು ತೀರ್ಮಾನಿಸಿದೆ. ಈ ಗೊತ್ತುವಳಿಯನ್ನು ಭಾರತವು ವಿರೋಧಿಸಿತ್ತು.

ಉಡುಪಿ

೧೯ ನಗರಸಭೆಯು—ತಾ. ೧೨ರಂದು ಸಂಜೆ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಅಜ್ಜರಕಾಡು ಗಾಂಧಿ ಸ್ಮಾರಕ ಬಳಿಯಿರುವ ಸ್ಥಳವನ್ನು ಲೋಕಲ್ ಲೈಬ್ರೆರಿ ಅಧೋಗಿಗೆ ಲೈಬ್ರೆರಿ ಕಟ್ಟಡ ಕಟ್ಟಲು ಕೊಡುವ ಕುರಿತು ನಗರ ಸಭೆಗೆ ಅಕ್ಷೇಪವೇನೂ ಇಲ್ಲವೆಂದೇ ಸಭೆಯ ಅಭಿಪ್ರಾಯವಾಯಿತು. ಗುಂಡಿಬೈಲು ವಾರ್ಡಿನಲ್ಲಿ ಕೆಲವು ರಸ್ತೆಗಳನ್ನು ಹಾಕಬೇಕೆನ್ನುವ ತೀರ್ಮಾನ ಸಂಕ ಹಾಕಬೇಕೆನ್ನುವ ಇತ್ಯಾದಿ ಸಾಕಾರ್ಯಗಳನ್ನು ಸದ್ರಿ ವಾರ್ಡಿಗೆ ಕೊಡಬೇಕಾಗಿ ಅಕ್ಷೇಪಿಸಿ ತಂದ ಶ್ರೀಮತಿ ಮನೋರಮಾ ಬಾಯಿಯವರ ನಿರ್ಣಯ ಪಾಸಾಯಿತು. ಬೀದಿಗುತ್ತೆಯಲ್ಲಿ ಮಲಮೂತ್ರ ಹುಗಿಯುವ ಜಾಗಕ್ಕೆ ಆವರಣ ಹಾಕಬೇಕೆನ್ನುವ ಮತ್ತು ಆ ಬಗ್ಗೆ ಹಣ ಮಂಜೂರುಮಾಡಬೇಕೆನ್ನುವ ಶ್ರೀ ಬಿ. ವಾಸುದೇವರಾಯರ ನಿರ್ಣಯ ಮುಂದೆಹಾಕಲಾಯಿತು ನಗರ ಸಭೆಯ ಪತ್ರವ್ಯವಹಾರಾದಿಗಳು ಕನ್ನಡದಲ್ಲಿ ಆಗಬೇಕೆನ್ನುವ ಶ್ರೀ ದಾಸ ಸೇರಿಗಾರರ ನಿರ್ಣಯದ ಕುರಿತು ಶ್ರೀಗಳಾದ ಎ. ವಿ. ಆಚಾರ್, ಸೀತಾರಾಮ ಕಾಮತ್, ಡಾ. ಪಿ. ಜಿ. ಆಚಾರ್ಯರು ಮಾತನಾಡಿದರು ನಂತರ ಮುಂದಿನ ಸಭೆಯ ತೀರ್ಮಾನಕ್ಕೆ ಬಾಕಿಯುಡಲಾಯಿತು.

ಸಹರಾಷ್ಟ್ರ ಸಂಬಂಧದ ಪಾರ್ಲಿಮೆಂಟರಿ ಅಂಡರ್ ಸೆಕ್ರೆಟರಿಯವರಾದ ಶ್ರೀ ಸಿ. ಜೆ. ಎಮ್. ಅಲ್‌ಪೋರ್ಟರು ಈ ತಿಂಗಳ ೩೮ನೆ ದಿನಾಂಕದಂದು ಕಲ್ಕತ್ತಕ್ಕೆ ಬಂದರು. ಅವರು ಭಾರತ ಹಾಗೂ ಪಾಕಿಸ್ತಾನ ನಗರಗಳನ್ನು ಸಂದರ್ಶಿಸಿ ಸಪ್ಟಂಬರ್ ೨೨ ಅಥವಾ ೨೩ನೆ ದಿನಾಂಕದಂದು ಬ್ರಿಟನಿಗೆ ಹಿಂತಿರುಗುವರು.

ಸಂಸ್ಕೃತ ಪರೀಕ್ಷೆಗಳು ಅಖಿಲಭಾರತೀಯ ಸಂಸ್ಕೃತಭಾಷಾ ಪ್ರಚಾರ ಸಮಿತಿಯ ಸಪ್ಟಂಬರ ತಿಂಗಳ ಸಂಸ್ಕೃತ ಪರೀಕ್ಷೆಗಳು ಈ ತಿಂಗಳ ೨೮ ಮತ್ತು ೨೯ರಲ್ಲಿ ಅಂಬಲಪಾಡಿ ಗೀತಾಭವನದಲ್ಲಿ ನಡೆಯಲಿರುವುವು. ಉಡುಪಿ ಕೇಂದ್ರದ ಎಲ್ಲ ಪರೀಕ್ಷಾರ್ಥಿಗಳೂ ತಂತಮ್ಮ ಪ್ರವೇಶಪತ್ರಗಳನ್ನು ಗೀತಾ ಭವನದ ಕಾರ್ಯದರ್ಶಿಯವರಿಂದ ದಿನಾಂಕ ೨೫ರ ಒಳಗೆ ಪಡೆದುಕೊಳ್ಳಬೇಕು. ಪರೀಕ್ಷಾ ಸಮಯ ಪೂರ್ವಾಹ್ನ ೧೦–೩೦ರಿಂದ ೧–೩೦ ಮತ್ತು ಅಪರಾಹ್ನ ೨–೩೦ರಿಂದ ೫–೩೦. ಪರೀಕ್ಷಾ ಭವನದಲ್ಲಿ ಪ್ರವೇಶಿಸುವಾಗ ತಮ್ಮ ಪ್ರವೇಶಪತ್ರವನ್ನು ತಾರದೆ ಪರೀಕ್ಷಾರ್ಥಿಗಳಿಗೆ ಪ್ರವೇಶವೀಯಲಾಗುವುದಿಲ್ಲ ಎಂದು ಗೀತಾ ಭವನದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಯಂ. ಜಿ. ಯಂ. ಕಾಲೇಜಿನಲ್ಲಿ—ಹಿರಿಯ ಬಿ. ಎ ತರಗತಿಯವರು ವಾಣಿಜ್ಯ ಅಚಾರ್ಯ ವಿನೋದಾಭಾವೆಯವರ ಭಾಷಣ ಕ್ರಿದ ಅನಾವರಣವನ್ನು ತಾ. ೧೬ರಂದು ಕಾಲೇಜು ಯೂನಿಯನಿನ ಅಧ್ಯಯದಲ್ಲಿ ಪ್ರಿನ್ಸಿಪಾಲ್ ಶ್ರೀ ಎಚ್ ಸುಂದರರಾಯರು ನೆರವೇರಿಸಿದರು. ಶ್ರೀ ಎ. ವಿಟ್ಟಲದಾಸ ಬಲ್ಲಾಳರು ಸ್ವಾಗತಿಸಿದರು ಶ್ರೀ ಕೆ. ಶಿ ಹರಿದಾಸ ಭಟ್ಟರು ಭಾವೆಯವರ ವಿಶಿಷ್ಟ ತತ್ವಗಳನ್ನೂ ಭೂಸಮಸ್ಯಾ ಪರಿಹಾರದಲ್ಲಿ ಭೂದಾನದ ಪಾತ್ರವನ್ನೂ ವಿವರಿಸಿ ಭಾಷಣಮಾಡಿದರು. ಅಧ್ಯಕ್ಷತೆವಹಿಸಿದ್ದ ಯೂನಿಯನಿನ ಅಧ್ಯಕ್ಷ ಶ್ರೀ ವಿನೋದಕುಮಾರ ಶೆಟ್ಟರು ಭಾಷಣದತ್ತ ಬಳಿಕ ಶ್ರೀ ಯು ವಾಮೋದರ ಅವರು ಧನ್ಯವಾದಗಳನ್ನಿತ್ತರು.

ಯೋಜನಾ ದಿನಾಚರಣೆ—ಮಹಾತ್ಮಾಗಾಂಧೀ ಮೆಮೋರಿಯಲ್ ಕಾಲೇಜಿನ ಯೋಜನಾ ಮಂಡಳಿ ಮತ್ತು ಅರ್ಥಶಾಸ್ತ್ರ ಮತ್ತು ವಾಣಿಜ್ಯ ಸಂಘದ ಆಶ್ರಯದಲ್ಲಿ ಪ್ರಿನ್ಸಿಪಾಲ ಸುಂದರರಾಯರ ಅಧ್ಯಕ್ಷತೆಯಲ್ಲಿ 'ಯೋಜನಾದಿನ'ವನ್ನು ೧೩-೯-೫೭ರಂದು ಆಚರಿಸಲಾಯಿತು. ಯೋಜನೆಯ ಗುರಿ ಮತ್ತು ಸಾಧನೆಯ ಕುರಿತು ಸರ್ವಶ್ರೀ ದಿನೋಜಾ ಮತ್ತು ಮಧುಕೂಮವರು ಎರಡು ಪ್ರಬಂಧಗಳನ್ನೂ ಯೋಜನೆಯ ಸಾಧ್ಯಸಾಧ್ಯತೆಯ ಕುರಿತು ಶ್ರೀ ಶ್ರೀರಂಗ ಅವರು ಒಂದು ಪ್ರಬಂಧವನ್ನೂ ಓದಿದರು ಪ್ರಿನ್ಸಿಪಾಲ ಸುಂದರರಾಯರು ವಿನೋದಾತ್ಮಕವಾಗಿ ಯೋಜನೆಯನ್ನು ವಿಮರ್ಶಿಸಿ, ಪ್ರಬಂಧಗಳ ಕುರಿತು ತಮ್ಮ ಮೆಚ್ಚುಗೆಯನ್ನು ಸೂಚಿಸಿದರು.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿ ರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. --ಸಂ-ನ

ಮಂಗಳೂರು

ಆಚಾರ್ಯ ವಿನೋಬಾರ ಜಯಂತಿ—ಸಮಾರಂಭವು ತಾ. 11ರಂದು ದ. ಕ. ಸೆಂಟ್ರಲ್ ಕೋಪರೇಟಿವ್ ಬೇಂಕಿನ ಮಾಳಿಗೆಯಲ್ಲಿ ಶ್ರೀ ಎಸ್. ನರ್ಸಪ್ಪಯ್ಯ, ಎಂ. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿ ಸಿ. ಮಾಲತಿ ಕಾಮತ್ ಮತ್ತು ಶ್ರೀಮತಿ ಲೀಲಾ ಬಾಯಿ ಬಾಳಿಗರಿಂದ ಭಜನೆಯಾದ ಬಳಿಕ ಶ್ರೀ ಎಸ್. ಯು. ರಾಮಚಂದ್ರರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಬಿ. ಬಿ. ಸೆಟ್ಟಿ, ಎ. ಶಂಕರ ಆಳ್ವ, ಡಾ| ಬಿ. ಸೀತಾರಾಮ ರಾವ್, ಡಾ| ಯು. ಪಿ. ಮಲ್ಯ, ಬಿ. ಎಮ್ ಇದಿನಬ್ಬ, ಪಿ. ಕೆ. ನಾರಾಯಣ ಮತ್ತು ಶ್ರೀಮತಿ ಮೀರಾ ತಾಯಿಯವರು ಕಾಲೋಚಿತ ಮಾತುಗಳನ್ನಾಡಿದರು.

ದ. ಕ. ಜಿಲ್ಲೆಯ ಕಾಲೇಜುಗಳು ಉಡುಪಿಯಲ್ಲಿರುವ ಎಮ್. ಜಿ. ಎಮ್. ಕಾಲೇಜ್ ಲಾ ಕಾಲೇಜ್ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನುಳಿದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಎಲ್ಲಾ ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿಸಲು ಮೈಸೂರು ಸರಕಾರವು ನಿರ್ಧರಿಸಿದೆಯೆಂದು ಶಿಕ್ಷಣ ಮಂತ್ರಿ ಶ್ರೀ ವಿ. ವೆಂಕಟಪ್ಪನವರು ತಾ. 12ರಂದು ಬೆಂಗಳೂರು ಪತ್ರಿಕಾ ಪ್ರತಿನಿಧಿಗಳೆದುರು ಸಾರಿದರೆಂದು ಪ್ರಕಟವಾಗಿದೆ.

ಮಂಗಳೂರ ಹತ್ತಿರ ವಿಮಾನ ಅಪಘಾತ—ತಾ. 12ರಂದು ಬೆಂಗಳೂರಿನಿಂದ ಮಂಗಳೂರಿಗೆ ಹೊರಟಿದ್ದ ಭಾರತೀಯ ವೈಮಾನಿಕ ಪಡೆಯ 'ಡಕ್ಟಾ' ವಿಮಾನವು ಅಲ್ಲಿಂದ 50 ಮೈಲಿನ ಮೇಲೆ ಅಪಘಾತಕ್ಕೀಡಾಗಿ ಅದರಲ್ಲಿದ್ದ ನಾಲ್ವರೂ ಸತ್ತಿರುವರು. ಮೂಡುಗೆರೆಯ ಹತ್ತಿರದ ಗುಡ್ಡವೊಂದರ ಮೇಲೆ ಈ ವಿಮಾನವು ಅಪಘಾತಕ್ಕೀಡಾಗಿ ಬಿದ್ದಿದೆಯೆಂದು ಸರಕಾರೀ ಪ್ರಕಟಣೆ ಹೊರಟಿದೆ.

ಈ ವಿಮಾನವು ತಾ. 12ರಂದು ಬೆಳಿಗ್ಗೆ 10.52ಕ್ಕೆ ಬೆಂಗಳೂರಿನಿಂದ ಹೊರಟು ನಂತರ ಸುಮಾರು ಒಂದು ತಾಸಿನ ಬೆರಗು ಮಂಗಳೂರಿನ ಬಜ್ಪೆ ವಿಮಾನ ನಿಲ್ದಾಣದೊಡನೆ ಸಂಪರ್ಕವಿಟ್ಟುಕೊಂಡಿತ್ತು. ಅದರ ಸಂಪರ್ಕ ತಪ್ಪಿದಾಗ ಅದು ಮಂಗಳೂರಿನಿಂದ ಪೂರ್ವಕ್ಕೆ ಸುಮಾರು ಇಪ್ಪತ್ತು ಮೈಲಿನ ಮೇಲಿತ್ತು. ವಿಮಾನ ಕಣ್ಮರೆಯಾದ ಸುದ್ದಿ ಗೊತ್ತಾದೊಡನೆ ಮಂಗಳೂರು ಕೆಲಸಗಾರರು ಎಲ್ಲಾ ಕಡೆಗಳಿಗೂ ಶೋಧ ತಂಡಗಳನ್ನು ಕಳುಹಿಸಿದರು. ಬೆಂಗಳೂರು ಮತ್ತು ಕೊಚ್ಚಿಗಳಿಂದ ನಾಲ್ಕು ವಿಮಾನಗಳೂ ಶೋಧಕಾರ್ಯ ನಡೆಸಿದವು.

In the Court of the Subordinate Judge of S. K.

O. S. No. 41/57. Prl.

Bellichi Hengsu — Plff.

Vs.

Ammare Hengsu & others—Defts.

To

1st Defendant: Ammare Hengsu, daughter of Uchire Hengsu, Residing in Kemmana Balli of Jalsoor Village of Puttur Taluk.

Please take not'ce that the Plaintiff abovenamed instituted the above suit against you for division of the Properties and for such other reliefs and the same is posted to 12—10—1957 for your appearance. If you fail to appear on that date the said suit will be decided in your absence.

By order of the Court.

(*Sd.*) S. Venkat Rao,

Vakil for Plaintiffs.

Mangalore, 16—9—1957.

ರಾತ್ರೆ 8½ ಗಂಟೆ ತನಕ ಪತ್ತೆಯಾಗಲಿಲ್ಲ. ತಾ. 13ರಂದು ಬೆಳಗ್ಗೆ 7½ ತಾಸಿಗೆ ಮೂಡಿಗೆರೆಯ ಸಬ್ ಇನ್ಸ್‌ಪೆಕ್ಟರರು ಈ ವಿಮಾನ ಅಪಘಾತದ ಸುದ್ದಿಯನ್ನು ಮೊದಲು ತಿಳಿದರು. ಗುಡ್ಡದ ಮೇಲಿನ ಆಡವಿಯಲ್ಲಿ ವಿಮಾನ ಬಿದ್ದುದನ್ನು ಒಬ್ಬ ಕುರುಬನು ನೋಡಿ ಅದನ್ನು ಗುತ್ತಿಪಲ್ಲಿಯ ಪಟೇಲರಿಗೆ ತಿಳಿಸಿದ್ದಾಗಿ ಹೇಳಲಾಗಿದೆ. ಮರಿದವರಲ್ಲಿ ಇಬ್ಬರು ದಕ್ಷಿಣ ಕನ್ನಡದವರು. ಒಬ್ಬರು ಫ್ಲೈಟ್ ಲೆಫ್ಟಿನೆಂಟ್ ಡಬ್ಲು. ಎ. ಸೆರಾನ್, ಮೂಲ್ಕಿಯವರಿದ್ದು ಅವರ ತಾಯಿಮಾಗ್ದಲೀನ್ ಸೆರಾವ್‌ರವರು ಕಾಯಿಲೆಯಲ್ಲಿದ್ದುದರಿಂದ ಅವರನ್ನು ಕಾಣಲು ಬಂದಿರಬೇಕೆಂದು ಸಂಬಲಾಗಿದೆ. ಇವರು ಅವಿವಾಹಿತ 27ವರ್ಷದ ತರುಣರಿರುವರು. ಇನ್ನೊಬ್ಬರು ಉಡುಪಿ ತಾಲೂಕು ತೆಂಕನಿಡಿಯೂರಿನ ಶ್ರೀ ನಾರಾಯಣ ಶಾಸ್ತ್ರಿಗಳ ಪುತ್ರ, ಮೂವತ್ತು ವರ್ಷ ಪ್ರಾಯದ ಶ್ರೀ ಎಸ್. ಕೆ. ಶರ್ಮರು. ಇವರು ಸಾರ್ಜಂಟರಿರುವರು.

ಜಿಲ್ಲಾ ಕಾಂಗ್ರೆಸ ಅಧ್ಯಕ್ಷರ ರಾಜೀನಾಮೆ—ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ| ಯು. ಪಿ. ಮಲ್ಯರು ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವರು. ಪಕ್ಷಕ್ಕೆ ಅಂಟಿಕೊಂಡಿರದೆ ಹೆಚ್ಚಿನ ಸೇವೆ ಸಲ್ಲಿಸಬೇಕೆಂಬ ವಿನೋಬಾಜಿಯವರ ಸೂಚನೆಯಂತೆ ಈ ರಾಜೀನಾಮೆ ಕೊಡಲಾಗುವುದು ಎಂದು ತಿಳಿದು ಬರುತ್ತದೆ.

ನ್ಯಾಯಾಧೀಶರ ನೇಮಕ—ಜಿಲ್ಲಾ ಸೆಶನ್ ಜಡ್ಜರಾದ ಶ್ರೀ ಎಮ್. ರಾಘಾಕೃಷ್ಣಪ್ಪ ತೀರ್ಪಯರು ನಿವೃತ್ತಿಹೊಂದಿರುವುದರಿಂದ ಅವರ ಸ್ಥಾನಕ್ಕೆ ಪ್ರಿನ್ಸಿಪಾಲ್ ಸೆಶನ್ ಜಡ್ಜರಾದ ಶ್ರೀ ಜಿ. ಎಮ್. ಸಿಕೇರಾರವರನ್ನು ನೇಮಿಸಲಾಗಿದೆ ಎಂದು ತಿಳಿಯುತ್ತದೆ.

ಜಿಲ್ಲಾ ಪಂಚಾಯತ ಸಮ್ಮೇಳನ ಮುಂದಿನ ದಶಂಬರ 3ರಂಗಳ ಕೊನೆಯ ವಾರದಲ್ಲಿ ದ. ಕ. ಜಿಲ್ಲಾ ಪಂಚಾಯತ ಸಮ್ಮೇಳನವನ್ನು ಜರಗಿಸುವ ಸಿದ್ಧತೆಗಳಾಗ ತೊಡಗಿವೆ. ಮೈಸೂರಿನ ಸ್ಥಳೀಯ ಆಡಳಿತೆಯ ಮಂತ್ರಿಗಳು ಸಮ್ಮೇಳನವನ್ನು ಉದ್ಘಾಟಿಸುವರೆಂದೂ ತಿಳಿದುಬರುತ್ತದೆ.

ಬಹುಮಾನ ವಿತರಣೆ—ಮಂಗಳೂರಲ್ಲಿ ಸೊಗಸಾದ ಉಡುಪಿನ ಅತ್ಯುತ್ತಮ ಪಸಾಳೆಗಳ ಸ್ಪರ್ಧೆ ಈಚೆಗೆ ನಡೆದು, ಉತ್ತೀರ್ಣರಾದ ಮಕ್ಕಳಿಗೆ ಪಾರಿತೋಷಕ ಹಂಚುವ ಸಮಾರಂಭವು ತಾ. 9ರಂದು ಡಾ. ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿ ಸಲಿಸೀ ರಾಯರಿಂದ ಪ್ರಾರ್ಥನೆಯಾದ ಬಳಿಕ ಶ್ರೀ ದೇವಿದಾಸ ಗಿರಿಧರಲಾಲರು ಸ್ವಾಗತನುಡಿಗಳನ್ನಾಡಿದರು. ಮುಂದಿನ ಜನಾಂಗವಾಗುವ ಇಂದಿನ ಮಕ್ಕಳನ್ನು ಚಲೋರೀತಿಯಲ್ಲಿ ಸಾಕಬೇಕಾದ ಅವಶ್ಯಕತೆಯನ್ನು ವಿವರಿಸಿ, ಅಧ್ಯಕ್ಷರು ಈ ಪ್ರದರ್ಶನ ವ್ಯವಸ್ಥಾಪಕರನ್ನು ಕೊಂಡಾಡಿದರು. ಶ್ರೀ ಸುರೇಶ ಚಂದ್ರನಾ ರವರು ವಂದನೆಗಳನ್ನೆತ್ತರು.

ನಗರ ಸಭೆಯು—ತಾ. 13ರಂದು ಸಂಜೆ ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ನಗರಸಭೆಯ ಆರೋಗ್ಯ ಇಲಾಖೆಯಲ್ಲಿ ಕೆಲಸಮಾಡುತ್ತಿರುವ ಮಜೂರರ ಸುಮಾರು 150 ಕುಟುಂಬಗಳಿಗೆ ದ್ವಿತೀಯ ಯೋಜನೆಯ ಅಂಗವಾಗಿ ರೂಪಾಯಿ 3,30,000 ಪಾರ್ಟಿನಿಂದ ಒದಗಿಸಿ ಕೊಡುವ ವಸತಿ ನಿರ್ಮಾಣ ಯೋಜನೆಗೆ ನಗರಸಭೆಯ ಪರವಾಗಿ ಅರ್ಧಾಂಶ ವೆಚ್ಚ ರೂಪಾಯಿ 1,15,000ನ್ನು ಕೊಡಲು ಸಭೆಯ ಒಪ್ಪಿಗೆ ದೊರೆಯಿತು. ಸ್ಥಳೀಯ ಬೀಸೆಂಟ್ ನೇಶನಲ್ ಗರ್ಲ್ಸ್ ಕಾಲೆಗೆ ಎಂಡೋಮೆಂಟಿನಿಂದ ವರ್ಷಂಪ್ರತಿ ಕೊಡುವ ಸಹಾಯಧನವನ್ನು ಮಂಜೂರುಮಾಡಲಾಯಿತು. 1956-57ನೆ ವರ್ಷದ ನಗರ ಸಭೆಯ ಆಡಳಿತ ವರದಿಯನ್ನು ವಿಶೇಷ ಸಭೆಯೊಂದರಲ್ಲಿ ಚರ್ಚಿಸಬೇಕೆಂದಾಯಿತು. ಸೊಳ್ಳೆಯ ನಿರೋಧಕ್ಕಾಗಿ ಉಪಯೋಗಿಸಲು 5000 ಗೆಲನ್ ನುರೇರಿಯಲ್ ಆಯಿಲ್ ಯನ್ನು ಪಡಕೊಳ್ಳಲು ರೂ. 7200 ಮಂಜೂರು ಮಾಡಲಾಯಿತು.

ಜಿಲ್ಲಾ ಬೋರ್ಡಿನ ಅಧಿಕಾರಾವಧಿ—ರಾಜ್ಯಕ್ಕೆಲ್ಲಾ ಸಮಾನ ರೀತಿಯ ಶಾಸನತರುವ ಉದ್ದೇಶದಿಂದ ದಕ್ಷಿಣ ಕನ್ನಡ ಜಿಲ್ಲಾಬೋರ್ಡಿನ ಅಧಿಕಾರಾವಧಿಯನ್ನು ತಾ. 27.10.1957ರಿಂದ ಮೂರು ತಿಂಗಳ ಕಾಲ ಹೆಚ್ಚಿಸಿ ರಾಜ್ಯ ಸರಕಾರವು ಅಜ್ಞೆ ಹೊರಡಿಸಿರುವುದಾಗಿ ತಿಳಿದುಬರುತ್ತದೆ.

ರೋಟರಿ ಸಭೆ—ತಾ. 12ರಂದು ಸಂಜೆ ಸ್ಥಳೀಯ ರೋಟರಿ ಕ್ಲಬ್ಬಿನಲ್ಲಿ 'ಇಂದಿನ ಶೈಕ್ಷಣಿಕ' ಸಮಸ್ಯೆಗಳು ಎಂಬ ವಿಷಯದ ಮೇಲೆ ನಡೆದ ಚರ್ಚೆಯಲ್ಲಿ ಶ್ರೀಗಳಾದ ಎ. ಎಸ್. ಕಾಮತ್, ಯು. ರಾಜಾರಾಮ ಮಲ್ಯ, ಕೆ. ವಿ. ಕಾಮತ್, ಕೆ. ಪಿ. ಕಸ್ತೂರಿ, ಎಮ್ ವಾಸುದೇವ ರಾವ್ ಮೊದಲಾದವರು ಭಾಗವಹಿಸಿದ್ದರು. ಆರಂಭದಲ್ಲಿ ರೆ| ಫಾ| ಸಾಲ್ವಾನ್ ರವರು ಭಾಷಣ ಮಾಡುತ್ತಾ, ಶೈಕ್ಷಣಿಕ ಪದ್ಧತಿಯಲ್ಲಿ ಸರಕಾರದ ಹಸ್ತಕ್ಷೇಪ ವಿಚಾರದ್ದು. ಸರಕಾರಕ್ಕೆ ಹೆಚ್ಚಿನ ನಿಯಂತ್ರಣ ಸಿದ್ದಲ್ಲಿ, ಶಾಲೆಗಳು ಆಳುವ ಪಕ್ಷಗಳ ಪ್ರಚಾರ ಸಂಸ್ಥೆಗಳಾಗಿ ಪರಿಣಮಿಸಬಹುದು. ಶಿಕ್ಷಣ ವಿಚಾರದಲ್ಲಿ ವಿದ್ಯಾರ್ಥಿಗಳ ಹೆತ್ತವರಿಗೆ ಹೆಚ್ಚಿನ ಸ್ವಾತಂತ್ರ್ಯ ದೊರೆಬೇಕು ಎಂದು ಮುಂತಾಗಿ ಹೇಳಿದರು. ಶ್ರೀ ವಿ. ಎಸ್. ಕುಡ್ವರು ಸಭಾಧ್ಯಕ್ಷತೆ ವಹಿಸಿದರು.

ದ. ಕ. ಜಿಲ್ಲೆಯ ಕಾಲೇಜುಗಳು ಕೆಲವು ಕಾಲೇಜುಗಳನ್ನು ಕರ್ನಾಟಕ ಯುನಿವರ್ಸಿಟಿಗೂ ಕೆಲವನ್ನು ಮೈಸೂರು ಯೂನಿವರ್ಸಿಟಿಗೂ ಸೇರಿಸಿಕೊಳಿಸಬೇಕೆಂಬ ಮೈಸೂರು ಸರಕಾರದ ನಿರ್ಧಾರದ್ದಾಗಿ ವಿಷಾದ ಸೂಚಿಸುವ ನಿರ್ಣಯವನ್ನು ಜಿಲ್ಲಾ ಅಭಿವೃದ್ಧಿ ಮತ್ತು ಹಿತಚಿಂತಕಾ ಬೋರ್ಡಿನ ಕಾರ್ಯಕಾರೀ ಸಮಿತಿಯು ಮಾಡಿತು.

ಬೊಂಬಾಯಿಯಲ್ಲಿ ಟಿ. ಎ. ಪೈಗಳಿಗೆ ವಿದಾಯ ಸತ್ಕಾರ

ಜರ್ಮನಿಯಲ್ಲಿ ಬೇಂಕಿಂಗ್ ವಿದಾನಗಳ ಅಧ್ಯಯನ ಮಾಡಲು ಭಾರತೀಯ ಬೇಂಕುಗಳ ಸಂಘದ ವತಿಯಿಂದ ಜರ್ಮನಿಗೆ ತೆರಳಿರುವ ಶ್ರೀ ಟಿ. ಎ. ಪೈಗಳನ್ನು ಸ್ಥಳೀಯ ಕರ್ನಾಟಕ ಸಂಘದವರು ತಾ. 10ರಂದು ಸತ್ಕರಿಸಿ ಗೌರವಿಸಿದರು. ಸಂಘದ ಅಧ್ಯಕ್ಷ ಶ್ರೀ ಎ. ಕೆ. ಹಫೀಜ್‌ಕಾರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪೈಗಳು ತನ್ನ ಮೂರು ತಿಂಗಳ ಪ್ರವಾಸದಲ್ಲಿ ನೊರ್ವೆಯಲ್ಲಿನ ಮೀನುಗಾರಿಕೆ ಉದ್ಯಮದ ಅಧ್ಯಯನ ಮಾಡಲು ನೊರ್ವೆಗೂ ಹೋಗಲಿರುವರು. ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ, ಭಾರತದಲ್ಲಿ ಬಯಸಿದ ಪ್ರಥಮವಾಗಿ ಮೀನುಗಾರಿಕೆಯ ತರಗತಿಯನ್ನು ತೆರೆಯುವ ಆಲೋಚನೆಯೂ ಶ್ರೀ ಪೈಗಳಿಗಿರುವುದೆಂದು ತಿಳಿದುಬರುತ್ತದೆ.

'ಬ್ರಿಸ್ಟಲ್ ಗ್ರೀಲ್' ದ ಸೂಲಕರಾದ ಶ್ರೀ ಟಿ. ಎಸ್. ರಾಯರೂ, ಬೊಂಬಾಯಿ ಎಸ್. ಜಿ. ಎಮ್ ಕಾಲೇಜಿನ ಹಳೆವಿದ್ಯಾರ್ಥಿ ಸಂಘದವರೂ, ಇತರ ಪ್ರಮುಖ ದಕ್ಷಿಣ ಕನ್ನಡಿಗರೂ ಶ್ರೀ ಪೈಗಳಿಗೆ ವಿದಾಯಸತ್ಕಾರವಿತ್ತು ಗೌರವಿಸಿದರು. ಇಂಡಿಯನ್ ಬೇಂಕುಗಳ ಎಸೋಸಿಯೇಶನ್ ಕಾರ್ಯದರ್ಶಿ ಡಾ. ಎಸ್. ಜಿ. ಪಾಂಡೀಕ್ಕರ್ ಶ್ರೀಗಳಾದ ಟಿ. ಎಲ್. ಎನ್. ಫೆರ್ನಾಂಡೀಸ್ ಏಕನಾಥ ಕಾಮತ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು.

ದೇವಾಡಿಗ ಸುಧಾರಕ ಸಂಘ, ಮುಂಬಾಯಿ— ಸಮ್ಮೇಳನ ಸಂಘದ 22ನೇ ವಾರ್ಷಿಕೋತ್ಸವವು ತಾ. 22-9-57ನೇ ರವಿವಾರ ಅಪರಾಹ್ನ ಗಂಟೆ 2.30ಕ್ಕೆ ಸರಿಯಾಗಿ ಸ್ಥಳೀಯ ಕವಾಸ್ಜಿ ಜಹಾಂಗೀರ್ ಪಬ್ಲಿಕ್ ಹಾಲ್‌ನಲ್ಲಿ, ಶ್ರೀಮತಿ ಸುಮಿತ್ರ ಎನ್. ರಾವ್ ಇವರ ಸಾನ್ನಿಧ್ಯ ಅಧ್ಯಕ್ಷತೆಯಲ್ಲಿ ಜರಗಿಸುವುದಾಗಿ ನಿಶ್ಚಯಿಸಿರುವೆವು ಅಂದು ಸರ್ವರಿಗೂ ಸು�್ವಾಗತವಿದೆ.

ಕಲ್ಯಾಣಪುರ:- ಶ್ರೀರಾಮ ಭಜನಾ ಮಂದಿರ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಕಲ್ಯಾಣಪುರ ಈ ಭಜನಾಮಂದಿರದ "ರಜತ ಮಹೋತ್ಸವ" ವನ್ನು ಇದೇ ಬರುವ ಹೇವಿಳಂಬಿ ಸಂವತ್ಸರದ ಕುಂಭ ಮಾಸ ದಿನ ೪ ಸಲುವ ಮಾಸ್ಯ ಬಹುಳ ೧೩ಯು ರವಿವಾರ (ತಾರೀಕು 16-2-1958)ರಂದು ಆಚರಿಸಬೇಕೆಂದು ಶ್ರೀರಾಮ ಭಜನಾ ಮಂದಿರದ ಕಾರ್ಯನಿರ್ವಾಹಕ ಸಮಿತಿಯು ಇತ್ತೀಚೆಗೆ ಸಭೆ ಸೇರಿ ನಿರ್ಧರಿಸಿ ಈ ರಜತೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಭಕ್ತಿ ಪೂರ್ವಕವಾಗಿ ಆಚರಿಸಲು ಈ ಕೆಳಗೆ ಕಾಣಿಸಿದವರಿಂದೊಡಗೂಡಿದ ರಜತ ಮಹೋತ್ಸವ ಸಮಿತಿಯೊಂದನ್ನು ನೇಮಕ ಮಾಡಿರುವುದು.—

ಶ್ರೀ ಕೆ. ಮಂಜುನಾಥಯ್ಯ ಗೌರವಾಧ್ಯಕ್ಷ, ಶ್ರೀ ಉಪ್ಪೂರು ಅನಂತಕೃಷ್ಣ ರಾಯ-ಅಧ್ಯಕ್ಷ, ಶ್ರೀ ಜಿ. ಗೋಪಾಲಕೃಷ್ಣ-ಕಾರ್ಯದರ್ಶಿ, ಶ್ರೀ ಕೆ. ಸಂಜೀವರಾಯ-ಕೋಶಾಧಿಕಾರಿ ಶ್ರೀಯುತರು ಉಪ್ಪೂರು ತಿಮ್ಮಪ್ಪಯ್ಯ ಕೆ. ರವೀಂದ್ರನಾಥ ಉಪ್ಪೂರು ರತ್ನಾಕರ ಅಡಿಗ ಮತ್ತು ಕೆ. ಪಾಂಡುರಂಗ ಭಂಡಾರಿ-ಸದಸ್ಯರು—

ರಜತ ಮಹೋತ್ಸವವನ್ನು ಅತೀ ಸಂಭ್ರಮದಿಂದ ನೆರವೇರಿಸಲು ಅನುಕೂಲವಾಗುವಂತೆ ಎಲ್ಲಾ ಹಿತೈಷಿ ಮತ್ತು ಸ್ನೇಹಿತರಿಂದ ಸಹಾಯ ಸಹಕಾರ ಮತ್ತು ಪ್ರೋತ್ಸಾಹವನ್ನು ದೃಢದಿಂದ ಹಾರೈಸುವಂತೆ ರಜತ ಮಹೋತ್ಸವ ಸಮಿತಿಯು ನಿರ್ಣಯಿಸಿತು.

ಬೆಳ್ಳಾರಿ ಸ್ಥಳೀಯ ಕರ್ನಾಟಕ ಸಂಘದ ವತಿಯಿಂದ ತಾ. 6ರಂದು ಯಕ್ಷಗಾನ ಸಾಹಿತ್ಯಗೋಷ್ಠಿಯು ಶ್ರೀ ಬಿ. ನಾರಾಯಣ ಶೇಕರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಬಿ. ಕೆ. ನಾರಾಯಣ, ಎಮ್. ನಾರಾಯಣ ರಾವ್, ಕೆ ರಘುನಾಥ ಸೆಟ್ಟಿ, ಕೆ. ಶಂಕರ ರಾವ್ ಎಮ್. ಸೀತಾರಾಮಯ್ಯ, ಎಸ್. ನಾರಾಯಣಶೆಟ್ಟಿ, ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣಾ ನಂತರ 'ಸೇತುಬಂಧನ' ಯಕ್ಷಗಾನ ಕಾಲಕ್ಷೇಪವಾಯಿತು.

ಚಂದಾದಾರರಲ್ಲಿ ವಿನಂತಿ.

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 36 ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 37 ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿ ಇರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

೫೦ ವರ್ಷಗಳಿಂದಲೂ ಪ್ರಸಿದ್ಧ ಇದೆ. | ಮಲೇರಿಯಾ | ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.

ಬಾಟ್ಲಿವಾಲಾ ಎಗ್ಝಾಮಿಕ್‌ಶ್ಚರ್

ಮತ್ತು ಗುಳಿಗೆಗಳು

ಮಾರಾಟ ಮಾಡುವ ಏಜಂಟರು: **ಹರ್ಬರ್ಟ್‌ಸನ್ಸ್ ಪ್ರೈವೆಟ್ ಲಿಮಿಟೆಡ್**, ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಮಕ್ಕಳ ಮಗ್ಗಿಪುಸ್ತಕ

(ನಯೀ ಪೈಸೆ ಕೋಷ್ಟಕ ಸಹಿತ)

100ಕ್ಕೆ 4 0 0

ಬೆಲೆ 1ಕ್ಕೆ 0 1 0

ನವಯುಗ ಪ್ರೆಸ್, ಉಡುಪಿ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ತೆಂಗಿನ ಬುಲ್ಲೆಟಿನ್ (ಸ್ವಾತಂತ್ರ್ಯ ದಿನ ಸಂಚಿಕೆ) ಸಂಪುಟ 6. ಸಂಚಿಕೆ 5. ಸಂಪಾದಕರು: ಡಾ. ಪಿ. ಜೆ. ಸ್ಟೈಗರಿ ಭಾರತ ಕೇಂದ್ರ ತೆಂಗಿನ ಕಮಿಟಿಯವರ ಪ್ರಕಟಣೆ. ವಾರ್ಷಿಕ ಚಂದಾ ರೂ. 1-00.

ಈ ವಿಶೇಷ ಸಂಚಿಕೆಯು ಹಲವಾರು ಸ್ವಾಸ್ಥ್ಯ ಶಾಸ್ತ್ರ ಪ್ರವೀಣರ ಅಭ್ಯಾಸಪೂರ್ಣ ಲೇಖನಗಳಿಂದೊಡಗೂಡಿದೆ. ತೆಂಗಿನ ಕೃಷಿಕರಿಗೆ ಉಪಯುಕ್ತವಾದ ಲೇಖನಗಳೊಂದಿಗೆ ಅಖಿಲಭಾರತದ ಮತ್ತು ಕೆಲವು ಪ್ರಾಂತ್ಯಗಳ ತೆಂಗಿನ ಬೆಳೆಯ ತಿಳಿವಳಿಕೆಯನ್ನೂ ಮಾಡುತ್ತಿದೆ.

ತೆಂಗಿನ ಬೆಳೆಯ ಅಭಿವೃದ್ಧಿ ಒಂದು ರಾಷ್ಟ್ರೀಯ ಅವಶ್ಯಕತೆ ಸ್ಪಷ್ಟವೆ ತಿಳಿವಳಿಕೆ ಮತ್ತು ಪ್ರತ್ಯಕ್ಷ ಜ್ಞಾನವನ್ನು ತೆಂಗಿನ ಕೃಷಿಕರಿಗೆ ಒದಗಿಸಿ ಕೊಟ್ಟಲ್ಲಿ ಸೆಟ್ಟಿನ ಪಯೋಜನವನ್ನು ನಿರೀಕ್ಷಿಸಬಹುದಾಗಿದೆ ಈ ಬುಲ್ಲೆಟಿನಲ್ಲಿ ತೆಂಗಿನ ಕೃಷಿಗೆ ಸಂಬಂಧಿಸಿದ ಪ್ರಶ್ನೋತ್ತರ ವಿಭಾಗವನ್ನೂ ತೆರೆಯುವ ಮತ್ತು ಕೃಷಿಕರಿಗೆ ಈ ಬುಲ್ಲೆಟಿನನ್ನು ರಿಯಾಯಿತಿ ಚಂದಾ ದರದಲ್ಲಿ ಒದಗಿಸಿಕೊಡುವ ಸೂಚನೆಗಳನ್ನು ಪರ್ಯಾಲೋಚಿಸಬಹುದು

(1) **ಶ್ರೀ ಪು ತಿ. ನರಸಿಂಹಾಚಾರ್ಯರು**—ರೇಖಕ: ಸುಬ್ಬಣ್ಣ ರಂಗನಾಥ ಎಕ್ಕುಂಡಿ ಪುಟ 56.

(2) **ಟೀ ಎಸ್ ಈಲಿಯಟ್**—ಅನುವಾದಕ: ಬಿ. ಎಚ್. ಶ್ರೀಧರ ಪುಟ 75

(3) **ಮಾಸ್ತಿ ವೆಂಕಟೇಶ ಅಯ್ಯಂಗಾರ್**—ರೇಖಕ: ಎಲ್. ಎಸ್. ಶೇಷಗಿರಿ ರಾವ್ ಪುಟ 56,

ಮೇಲಿನ ಮೂರು ಕೈಪೊತ್ತಿಗೆಗಳು ಉಡುಪಿಯ ಮಹಾತ್ಮಾಗಾಂಧೀ ಮೆಮೋರಿಯಲ್ ಕಾಲೇಜಿನ ನವೋದಯ ಪ್ರಚಾರ ಪುಸ್ತಕಮಾಲೆಯ 5, 6 ಮತ್ತು 7ನೆಯ ಪ್ರಕಟಣೆಗಳಾಗಿವೆ. ಬೆಲೆ ಪ್ರತಿಯೊಂದಕ್ಕೆ 40 ನಯಾಪೈಸೆ. ಕರ್ನಾಟಕದ ಅರು ಶೆಡ್ಯೂಲ್ಡ್ ಬೇಂಕುಗಳ ಮ್ಯಾನೇಜಿಂಗ್ ಡೈರೆಕ್ಟರ್ ಬೇಂಕಿನವರು ಈ ಪುಸ್ತಕಗಳನ್ನು ಕನ್ನಡ ಸಾಹಿತ್ಯಕ್ಕೆ ಕಾಣಿಕೆಯಾಗಿ ಅರ್ಪಿಸಿದ್ದಾರೆ:

ಕವಿ, ಕಾವ್ಯ, ಸಾಹಿತಿ, ಸಾಹಿತ್ಯಗಳ ಪರಿಚಯ ವಿಮರ್ಶೆಗಳನ್ನು ಸ್ಥೂಲವಾಗಿ ಈ ಪೊತ್ತಿಗೆಗಳಲ್ಲಿ ಕಾಣಬಹುದು. ಎಲ್. ಎಸ್. ಶೇಷಗಿರಿ ರಾಯರ ಲಲಿತ ಪದಪ್ರಯೋಗ, ಎಕ್ಕುಂಡಿಯವರ ಕವಿವಾತು, ಶ್ರೀಧರರವರ

ಜನಮತ

ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ. ಸಂ. ನ.

ಅಧ್ಯಾಪಕರ ವೇತನ ಪ್ರಶ್ನೆಯಲ್ಲಿ ವಿಳಂಬ ಸಲ್ಲದು

ಕಳೆದ ವಿಧಾನ ಸಭೆಯ ಅಧಿವೇಶನದ ಕಾಲ ನಮ್ಮ ಮಾನ್ಯ ವಿದ್ಯಾ ಸಚಿವ ಶ್ರೀ ಸಿ. ವೆಂಕಟಪ್ಪನವರು ಶಿಕ್ಷಣ ಖಾತೆಯ ಬೇಡಿಕೆಗೆ ಚರ್ಚೆಗುತ್ತರವೀಯುತ್ತಾ ತಾ. 28—7—57ರಂದು ಹೇಳಿದ ಸಂಗತಿ ಮತ್ತು ಇಂದು ವಿದ್ಯಾಂಗ ಡೈರೆಕ್ಟರರು ದಕ್ಷಿಣ ಕನ್ನಡ ಜಿಲ್ಲಾ ಸಂಚಾರದ ಕಾಲ ತಾ. 30—8—57ರಂದು ಹೇಳಿದ ಸಂಗತಿ ಇವುಗಳನ್ನು ಯೋಚಿಸುವಾಗ ಸರಕಾರದ ನುಂದಗತಿಯ ಧೋರಣೆ ಹಾಗೂ ಕಾರ್ಯಗಳ ಪರಿಚಯವಾಗದಿರದು

1—1—57ರಂದು ಪ್ರಸಿದ್ಧಿಸಿದ ನೂತನ ವೇತನದ ಪಟ್ಟಿಯನ್ನು ದಕ್ಷಿಣ ಕನ್ನಡದ ಸ್ಥಳೀಯ ಹಾಗೂ ಖಾಸಗೀ ಶಾಲೆಗಳ ಶಿಕ್ಷಕರಿಗೂ ಅನ್ವಯಿಸಬೇಕೆಂದು ನಮ್ಮ ಶಾಸನಸಭಾ ಸದಸ್ಯರು ಕೇಳಿಕೆಗೆ ಉತ್ತರವೀಯುತ್ತಾ ಮಾನ್ಯ ಸಚಿವರು ಅಂದು ಹೀಗೆ ಹೇಳಿದ್ದರು. ಈ ಪರಿಣಾಮವಾಗಿ ಉದ್ಭವವಾದ ಸಮಸ್ಯೆಗೆ ಪರಿಹಾರವನ್ನು ಸೂಚಿಸಲು ನಾವೀಗ ಒಂದು ಸಮಿತಿಯನು ರಚಿಸಿದ್ದೇವೆ. ಈ ಸಮಿತಿ ಒಂದು ತಿಂಗಳ ಒಳಗೆ, ವರದಿ ಒಪ್ಪಿಸಬಹುದು ಆ ಮೇಲೆ ಸರಕಾರ ತನ್ನ ನಿರ್ಧಾರವನ್ನು ಕೈಕೊಳ್ಳುವುದು' ಅದರ ಇದೀಗ ಆ ಮಾತು ಕೇಳಿ ತಿಂಗಳು ಒಂದು ಕಳೆದರೂ ಆ ಸಮಿತಿಯ ವರದಿಯ ಪ್ರಸ್ತಾಪವೇ ಇಲ್ಲ. ಅಲ್ಲದೆ ಆ ಸಮಿತಿ ಇನ್ನೂ ಕಾರ್ಯಾರಂಭ ಮಾಡಿಲ್ಲ ಎಂದು ಮಾನ್ಯ ಡೈರೆಕ್ಟರರು ಹೇಳುತ್ತಾರೆ ತಾ. 30ರಂದು ಮಂಗಳೂರಿನಲ್ಲಿ ಅಧ್ಯಾಪಕರ ಮತ್ತು ವಿದ್ಯಾ ತಜ್ಞರ ಸಭೆಯಲ್ಲಿ ಮಾತನಾಡುತ್ತಾ ಮಾನ್ಯ ಡೈರೆಕ್ಟರರು ಖಾಸಗೀ ಶಾಲೆಗಳಿಗೆ ಗ್ರಾಂಟುಗಳ ವಿಷಯ ಪರಿಶೀಲಿಸಲು ಗ್ರಾಂಟ್ ಇನ್ ಎಯ್ಡ್ ಸಬ್ ಕಮಿಟಿಯ ನೇಮಕವಾಗಿದೆ. **ಅದು ಬೇಗನೇ ಕಾರ್ಯಾರಂಭ ಮಾಡಿಲಿದೆ** ಎಂದಿದ್ದಾರೆ ಮಾನ್ಯ ಮಂತ್ರಿಗಳ ಒಂದು ತಿಂಗಳೊಳಗೆ ವರದಿ ಒಪ್ಪಿಸಬಹುದೆಂಬ ಮಾತಿನಂತೆ ಡೈರೆಕ್ಟರರ ಕಾರ್ಯಾರಂಭ ಮಾಡಿಲ್ಲದೆ ಎಂದು ಮಾತಿನಂತೆ ಎಷ್ಟು ಅಂತರ! ಅಲ್ಲಿಯ ಗೋಪುರವನ್ನು ಕಟ್ಟಿಕೊಂಡು, ಹೊಂಗನಸನ್ನಾದರೂ ಕಾಣುತ್ತಿದ್ದ ದಕ್ಷಿಣ ಕನ್ನಡದ ಹಿರಿಯ ಅಧ್ಯಾಪಕರ ಆಶಾಗೋಪುರ ಕುಸಿದು ಬಿದ್ದಿದೆ, ಅವರು ಹೊಂಗನಸನ್ನು ಕಾಣುವುದಿರಲಿ, ನಿದ್ದೆ ಕೂಡಾ ಮಾಡದಂತಾಗಿದೆ ಈ ವಾರ್ತೆ ಕೇಳಿ. ಸರಕಾರದ ಈ ಮಂದಗತಿಯ, ಅಸ್ಪಷ್ಟ ಹಾಗೂ ವಿಳಂಬಯುತ ಧೋರಣೆಯಿಂದ ಬಡ ಅಧ್ಯಾಪಕರ ಸಹನೆಯ ಪರೀಕ್ಷೆಯನ್ನು ಮಾಡಿದಂತಾಗಿಲ್ಲವೆ. ಬಡವರ ಹೊಟ್ಟೆಯನ್ನು ಇದು ಕಡಿದು ಅವರನ್ನು ಇನ್ನಷ್ಟು ವಿಮಂಚನೆಗೊಳಪಡಿಸುವುದೆ.

ಹೊಸ ಸಂಬಳದ ಪಟ್ಟಿಗಳು ಪ್ರಸಿದ್ಧಿಗೆ ಬಂದಿಲ್ಲ ತಿಂಗಳುಗಳು ಎಂಟು ಕಳೆದರೂ ಇನ್ನೂ ಆ ಕುರಿತು ಸರಕಾರ ಗಾಢ ಪರಿಶೀಲನೆಯಲ್ಲಿರುವುದು ನ್ಯಾಯವಲ್ಲ. ಅಧ್ಯಾಪಕರು ಭವಿಷ್ಯದ, ಬಾಳಿನ ಜೀವನಾಳವಾದ ಈ ವೇತನದ ಪ್ರಶ್ನೆಯನ್ನು ಶೀಘ್ರವೇ ಪರಿಹರಿಸುವುದು ಜನಪ್ರಿಯ ಸರಕಾರದ ಆದ್ಯ ಕರ್ತವ್ಯ! ಇದರಲ್ಲಿ ಇನ್ನು ವಿಳಂಬ ಸಲ್ಲದು.

ಕರ್ನಾಟಕ ಪ್ರಾಂತದ ಆಶೆ ಕಟ್ಟಿಕೊಂಡಿದ್ದ ದಕ್ಷಿಣ ಕನ್ನಡದ ಜನತೆ ಅಧ್ಯಾಪಕರೈದರ ಕರ್ನಾಟಕ ಸರಕಾರದ ಈ ಧೋರಣೆಯಿಂದ, ಅಸಮಾಧಾನಗೊಂಡಿದ್ದಾರೆ. 'ಎಂದು ರಾಸಿಸಲ್ಪಟ್ಟಿದ್ದ ಹಿಂದಿನ ದಿನಗಳೇ ಸುಖಕರ, ಎನ್ನುವ ಭಾವನೆ ಅಧ್ಯಾಪಕರಲ್ಲಿ ಮೂಡುವಂತೆ ಎಡೆಕೊಡಬಾರದು. ಕಾಸರಗೋಡಿನ ಜೊತೆಗೆ ನಾವೂ ಕೇರಳವನ್ನು ಸೇರಿಸಿಡಬಹುದಿತ್ತಲ್ಲಿ. ಎಂಬ ಅಸಂಬದ್ಧ, ಅಸ್ಪಷ್ಟವೇಳೆಲೂ ಬಿಡಬಾರದು! ಇದು ಜನತಾ ಸರಕಾರಕ್ಕೆ ಭೂಷಣವಲ್ಲ.

ಈಗ ಹೊಂದಿದ ಸರ್ಕಾರದವರು ಇನ್ನಾದರೂ ಈ ಒಂದು ಪ್ರಶ್ನೆಯನ್ನು ಶೀಘ್ರ ಪರಿಶೀಲಿಸಿ, ಬೆಂಬ, ನೊಂದ, ಬೇಗುದಿಗೆಂಡ ಅಧ್ಯಾಪಕರ ಹೃದಯವನ್ನು ಸಾಂತ್ವನಗೊಳಿಸುವರೆಂದು ಆಶಿಸಿಲೆ!

ಯೆನ್. ಸದಾಶಿವ ರಾವ್.
ಉಡುಪಿ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ನಿ.ಪಿ.ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.
ಸ್ವಾಕ್ಷರ ಷಾ ಕಂಪೆನಿ, ಮಂಗಳೂರು—1.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು-1.
3) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
R. E. P 386/57 O. S. 383/55.

ಸುಬ್ಬಯ್ಯ ಶೆಟ್ಟಿ —ಅರ್ಜಿದಾರ
ಗಣಪ ಸದಾ —ಎದ್ರಿಯ

ಅರ್ಜಿದಾರನ ಕಡೆಯಿಂದ ಈ ಕೂಲಕ ಜಾಹೀರುಮಾಡಿಕೊಳ್ಳುವದೇನೆಂದ್ರೆ

1. ಗಣಪ, 2. ಯಂಕ, 3. ಜೇವಿ ದೇವಡಿಗ ಲಿಂಗಿ ಹೆಗ್ಗಿನ ಮಕ್ಕಳು. ನಂಬ್ರ 11 ನೇ ಉಳ್ಳೂರು ಗ್ರಾಮ.—

ಮೇಲ್ಕಂಡ ಅನ್ಯಾಯರಿಯಲ್ಲಿ ಅರ್ಜಿದಾರನು ಚರಸೊತ್ತು ವಿಕ್ರಯದ ಬಗ್ಗೆ ಹಾಜ್ರುಪಡ್ಸಿದ ಯಿಸ್ತಿಹಾರನ ಕರ್ತ ನಿಣಾಯಿಸುವ ಗೋಸ್ಕರ ತಾ. 19 10-57ಕ್ಕೆ ಇಚೋಣಾಗಿಯದೆ ಆ ಕುರಿತು ನಿಮ್ಮದೇನಾದ್ರು ಅಕ್ಷೇಪವಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೊರ್ಟ ಮುಂದೆ ಸ್ವತಹಾ ವ ವಕೀಲರ ಮುಕಾಂತ್ರ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗತಿ ಈ ಮೂಲಕ ತಿಳಿಯಪಡ್ಸಿದೆ.

G. Sanjiva Rao. B A., LLB.
Vakil for Petitioner,
Coondapoor 12—9—57.

NOTICE

In The Court Of The District Munsif Of Mangalore

O. P No 70 of 1957.

In the matter of the debts of Antony Saldanha, deceased

Between

Rev. Fr Charles Saldanha —Petitioner

and

1. Mrs Jane Fernandes
2. Mrs Euphrosine Rebello
3. Canute Sal anha
4. Ben P. Saldanha
5. Jerome Saldanha
6. Mrs. Dolly D'sa —Respondents

Notice is hereby given that application has been made to the adove Court by the Petitioner above named residing at Cascia, Jeppoo, Mangalore Town for a grant to him of a Certificate under the Indian Succession Act, 1925 with respect to certain debts, namely, policy amounts in the M R. C P Fund Ltd of Antony Saldanha, late of Rosario ward, Mangalore Town, who died on 23—11—1956 in Mangalore Town and that the 27th day of September 1957 has been appointed for the hearing of the said application.

N. E L Peris.
Vakil for Petitioner.
Mangalore 14—9—1957

ಹೊಸಕೆರೆ
ಚಿದಂಬರಯ್ಯನವರ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೊಕೆಟ್ ಎಡಿಷನ್.
ಸುಮಾರು 450 ಪುಟಗಳು.
ಕ್ರಯ 0—12—0
ನವಯುಗ ಪ್ರೆಸ್, ಉಡುಪಿ.

ರೈತಜನರಿಗೊಂದು ಕಿವಿಮಾತು—

ಹೊಸತೆಂದರೆ ಹೆದರಬೇಡಿರಿ!

ನಾವೆಲ್ಲರೂ ತಿಳಿದಿರುವಂತೆ ಭಾರತವು ಕೃಷಿಪ್ರಧಾನವಾದ ದೇಶ. ಆದುದರಿಂದ ನಮ್ಮೆಲ್ಲರ ಅಭಿವೃದ್ಧಿಯೂ ಕೃಷಿ ವಿಭಾಗವನ್ನೇ ಹೊಂದಿಕೊಂಡಿದೆ ವ್ಯವಸಾಯ ಕ್ಷೇತ್ರದಲ್ಲಿ ತೀವ್ರವಾದ ಸುಧಾರಣೆಗಳಾಗಿ ವ್ಯವಸಾಯೋತ್ಪನ್ನಗಳು ಅಧಿಕತಮವಾದಲ್ಲಿ, ದೇಶವೂ ಸಂಪತ್ಸಮೃದ್ಧವಾಗುವುದು. ಸ್ವಾತಂತ್ರ್ಯ ಪ್ರಾಪ್ತಿಯಾನಂತರ ಭಾರತವು ವ್ಯವಸಾಯಕ್ಷೇತ್ರದಲ್ಲಿ ಸಾಕಷ್ಟು ಮುನ್ನಡೆಯನ್ನು ಇಟ್ಟಿದೆ ಎಂಬುದು ನಿರ್ವಿವಾದ ಸಂಗತಿ.

೧೯೫೬-೫೭ರಲ್ಲಿ ಎಲ್ಲ ಕೃಷಿ ವಸ್ತುಗಳ ಸೂಚ್ಯಂಕವು, ೪೯-೫೦ರಲ್ಲಿ ೧೦೦ ಎಂದಿಟ್ಟುಕೊಂಡರೆ, ೧೫೩ ಆಗಿದ್ದಿತು. ೧೯೪೭-೪೮ರಲ್ಲಿ, ಎಂದರೆ ಭಾರತವು ಸ್ವಾತಂತ್ರ್ಯವನ್ನು ಪಡೆದ ವರ್ಷದಲ್ಲಿ ಈ ಸೂಚ್ಯಂಕವು ೯೯.೨ ಆಗಿತ್ತು. ೧೯೪೭-೪೮ರಿಂದ ೧೯೫೬—೫೭ರಲ್ಲಿ ಸೂಚ್ಯಂಕವು ೨೩.೮ರಷ್ಟು ಹೆಚ್ಚಾದಂತಾಯಿತು.

೧೯೫೬—೫೭ರಲ್ಲಿ ಆಹಾರ ಧಾನ್ಯಗಳ ಮತ್ತು ವಾಣಿಜ್ಯ ಬೆಳೆಗಳಲ್ಲಿ ಉತ್ಪಾದನೆಯು ಗಣನೀಯ ಪರಿಮಾಣದಲ್ಲಿ ಹೆಚ್ಚಿತು. ಈ ವರ್ಷದ ಉತ್ಪಾದನೆಯನ್ನು ೫೫-೫೬ರ ಉತ್ಪಾದನೆಯೊಂದಿಗೆ ಹೋಲಿಸಿದ್ದಾದರೆ, ಈ ವರ್ಷದಲ್ಲಿ ಗೋಧಿ, ಅಕ್ಕಿ ಮೊದಲಾದ ಅವಶ್ಯಕ ಆಹಾರಧಾನ್ಯಗಳೂ ಸಕ್ಕರೆಯೂ ಸಾಕಷ್ಟು ಪ್ರಮಾಣದಲ್ಲಿ ಏರಿದುದು ಕಂಡುಬಂದಿದೆ.

೧೯೫೬—೫೭ರಲ್ಲಿ ೯೦ ಲಕ್ಷ ೭೦ ಸಾವಿರ ಟನ್ನುಗಳಷ್ಟು ಗೋಧಿಯು ಉತ್ಪಾದನೆಯಾಗಿದೆ. ೧೯೫೫—೫೬ರಲ್ಲಿ ೮೬ ಲಕ್ಷ ಟನ್ನುಗಳಷ್ಟು ಗೋಧಿಯು ಉತ್ಪನ್ನವಾಗಿತ್ತು. ಎಂದರೆ, ಹಿಂದಿನ ವರ್ಷಕ್ಕಿಂತ ಪ್ರಚಲಿತ ವರ್ಷದಲ್ಲಿ ನೂರಕ್ಕೆ ೫.೮ರಷ್ಟು ಬೆಳೆಯು ಹೆಚ್ಚಿದಂತಾಯಿತು. ಅಕ್ಕಿಯ ಬೆಳೆಯು ಸಹ ೨ ಕೋಟಿ ೬೮ ಲಕ್ಷ ಟನ್ನುಗಳಿಂದ ೨ ಕೋಟಿ ೮೧ ಲಕ್ಷ ಟನ್ನುಗಳಿಗೆ ಏರಿದೆ. ಎಂದರೆ, ಅಕ್ಕಿಯ ಉತ್ಪಾದನೆಯೂ ಸಾಧಾರಣ ೪ ೮ ಸೇಕಡಾದಷ್ಟು ಹೆಚ್ಚಾಯಿತೆಂದು ಹೇಳಬಹುದು.

ಭಾರತದ ವಾಣಿಜ್ಯ ಬೆಳೆಗಳಲ್ಲಿ ಕಬ್ಬು ಮತ್ತು ಹತ್ತಿಗಳು ಪ್ರಮುಖಸ್ಥಾನವನ್ನು ಪಡೆದಿರುತ್ತವೆ. ಈ ಬೆಳೆಗಳು ಸಹಾ ಪ್ರಚಲಿತ ವರ್ಷದಲ್ಲಿ ಯೋಗ್ಯ ಪ್ರಮಾಣದಲ್ಲಿ ಏರಿರುವುದು ೧೯೫೬-೫೭ರಲ್ಲಿ ೨೦ ಲಕ್ಷ ೨೧ ಸಾವಿರ ಟನ್ನುಗಳಷ್ಟು ಸಕ್ಕರೆಯನ್ನು ಭಾರತದಲ್ಲಿ ಉತ್ಪಾದಿಸಲಾಯಿತು. ೧೯೪೭-೪೮ರಲ್ಲಿ ೨೧ ಲಕ್ಷ ೯೦ ಸಾವಿರ ಬೇಲುಗಳಷ್ಟು ಹತ್ತಿಯು ಬೆಳೆದಿತ್ತು. ಅದು ಇಂದು ೪೭ ಲಕ್ಷ ೨೦ ಸಾವಿರ ಬೇಲುಗಳಿಗೆ ಏರಿರುವುದು. ಈ ಮೊತ್ತವು ೧೭-೪೮ರ ಬೆಳೆಯ ಇಮ್ಮಡಿಗಿಂತಲೂ ಹೆಚ್ಚಾಗಿರುವುದು ಗಮನಾರ್ಹವಾಗಿದೆ.

ಭಾರತವು ಸ್ವಾವಲಂಬಿ ರಾಷ್ಟ್ರವಾಗಿರುವುದು ಅಪೇಕ್ಷಣೀಯವೆನಿಸಿದೆ. ಜೀವನಕ್ಕೆ ಅತ್ಯಾವಶ್ಯಕವೆನಿಸಿದ ಆಹಾರ ಧಾನ್ಯಗಳನ್ನು ನಮಗೆ ಸಾಕಷ್ಟು ಪ್ರಮಾಣದಲ್ಲಿ ಬೆಳೆಸುವುದು ಅಗತ್ಯವಾಗಿದೆ. ತಿನ್ನುವ ಅನ್ನಕ್ಕೆ ಉಡುವ ಬಟ್ಟೆಗೆ ನಾವು ಅನ್ಯರಿಡೆಗೆ ಕೈಚಾಚುವುದು ಪ್ರಗತಿಪರ ರಾಷ್ಟ್ರಕ್ಕೆ ಶೋಭಿಸದ ಕೆಲಸವಲ್ಲ. ಆದುದರಿಂದ ನಾವು ಇನ್ನೂ ನಮ್ಮ ಕೃಷಿಯ ಉತ್ಪಾದನೆಗಳನ್ನು ಅಧಿಕವಾಗಿಸುವುದು ಅಗತ್ಯ. ಅಂತೆಯೇ ಹಣ ತರುವ ಬೆಳೆಗಳೆನಿಸಿದ ಹತ್ತಿ ಹಾಗೂ ಸಕ್ಕರೆಗಳ ಉತ್ಪಾದನಾ ಶಕ್ತಿಯು ಇನ್ನೂ ಧಾರಾಳ ಪ್ರಮಾಣದಲ್ಲಿ ಹೆಚ್ಚಬೇಕಾಗಿದೆ. ಕಲ್ಯಾಣ ರಾಷ್ಟ್ರ ಸ್ಥಾಪನೆಯಾಗಬೇಕಾದರೆ, ನಮ್ಮ ಜೀವನ ನಿರ್ವಾಹಕ್ಕೆ ಬೇಕಾಗುವ ಸಕಲ ವಸ್ತುಗಳನ್ನೂ ಬೇಕಾದಷ್ಟು ಪ್ರಮಾಣದಲ್ಲಿ ನಾವೇ ಸಿದ್ಧಪಡಿಸಿಕೊಳ್ಳಬೇಕು. ಎಲ್ಲರಿಗೂ ಹೊಟ್ಟೆತುಂಬಾ ಅನ್ನ ಮೈತುಂಬಾ ಬಟ್ಟೆಗಳನ್ನು ದೊರಕಿಸಲು ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಕೃಷಿಯ ಭೂಮಿಯ ಪ್ರಮಾಣವನ್ನು ಹೆಚ್ಚಿಸುವುದು ವ್ಯವಸಾಯ ಸಾಧನಗಳನ್ನು ಮತ್ತಷ್ಟು ಸುಧಾರಣೆಗೊಳಿಸುವುದು, ನೀರಾವರಿ ಸೌಕರ್ಯ, ಉತ್ತಮ ಗೊಬ್ಬರ, ಬೀಜ, ಪಶುಗಳ ಪೂರೈಕೆಗಳು ತೀರ ಅವಶ್ಯಕವಾದವುಗಳು.

ಭಾರತ ಸರಕಾರವು ದೇಶದ ಕೃಷಿ ಕ್ಷೇತ್ರದಲ್ಲಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೋಸ್ಕರವಾಗಿ ಕೈಗೊಂಡಿರುವ ಕ್ರಮಗಳಲ್ಲಿ ನೀರಾವರಿ ಸೌಕರ್ಯಗಳ ವಿಸ್ತರಣೆ, ಸಸ್ಯ ಹಾಗೂ ಕೃತಕ ಗೊಬ್ಬರಗಳ ಹೆಚ್ಚಿನ ಬಳಕೆ, ರೈತರಿಗೆ ಸುಧಾರಿಸಿದ ಉತ್ತಮ ಜಾತೀಯ ಬೀಜಗಳ ಸರಬರಾಜು, ಆಧುನಿಕ ತಂತ್ರ ವಿಧಾನಗಳ ಅನುಷ್ಠಾನ ಹಾಗೂ ರಾಷ್ಟ್ರೀಯ ವಿಸ್ತರಣ ಸೇವೆ ಮತ್ತು ಸಾಮುದಾಯಿಕ ಯೋಜನೆಗಳ ಉಪಯೋಗಗಳ ಸೇರಿವೆ.

ಸರಕಾರವು ವ್ಯವಸಾಯೋತ್ಪನ್ನಗಳನ್ನು ಅಧಿಕಗೊಳಿಸಲು ಕೆಲವು ಕಾರ್ಯಕ್ರಮಗಳನ್ನು ಕೈಗೊಂಡಿದೆ, ಇನ್ನುಮುಂದಕ್ಕೂ ಕೈಗೊಳ್ಳಲಿರುತ್ತದೆ. ಆದರೆ, ಸರಕಾರವು ಒದಗಿಸುವ ಸೌಕರ್ಯಗಳನ್ನು ದೇಶದ ಕೃಷಿಕರು ಪೂರ್ಣ ಮನಸ್ಸಿನಿಂದ ಸ್ವಾಗತಿಸಿ, ಅವುಗಳಿಂದಾಗಬಹುದಾದ ಎಲ್ಲತರದ ಲಾಭವನ್ನೂ ಪಡೆದುಕೊಳ್ಳಬೇಕು. ಹೀಗೆ ಪಡೆದುಕೊಂಡಲ್ಲಿ, ದೇಶದ ಮೂಲಭೂತ ಸಮಸ್ಯೆಗಳು ತನ್ನಿಂತಾನೇ ಮಾಯವಾಗುವುವು. ಸರಕಾರದ ಕ್ರಮಗಳೂ ಯಶಸ್ವಿಯಾಗುವುವು. ಆದುದರಿಂದ, ನಮ್ಮ ರೈತರ ಮುಖ್ಯ ಕಾರ್ಯವೆಂದರೆ, ಹೊಸತೊಂದನ್ನು ಕೇಳಿದೊಡನೆಯೇ ಅಥವಾ ಕಂಡೊಡನೆಯೇ ಮೂಗು ಮುರಿಯದೆ ಸಾವಧಾನ ಮನಸ್ಸಿನಿಂದ ವಿಚಾರಿಸಿ, ಅದರಿಂದ ತಮ್ಮ ಆದಾಯವನ್ನು ಹೆಚ್ಚಿಸಿಕೊಂಡು, ದೇಶದ ಸಂಪತ್ತನ್ನು ಅಧಿಕಗೊಳಿಸಬೇಕು ಸರಕಾರದ ನಾನಾ ಯೋಜನಾ ಕಾರ್ಯಕ್ರಮಗಳಲ್ಲಿ ಯನಾಧಾರಿ ಭಾಗವಹಿಸಿ, ತಮ್ಮ ಹಿತವನ್ನು ದೇಶದಆರೋಗ್ಯವನ್ನೂ ಏಕ ಸಮಯದಲ್ಲಿ ಕಾಪಾಡಿಕೊಳ್ಳಬೇಕು. ನಮ್ಮ ದೇಶದ ರೈತರು ಈ ಕಡೆಗೆ ವಿಶೇಷ ಗಮನವೀಯಲಿ. ಹೆಚ್ಚುತ್ತಿರುವ ಅವಶ್ಯಕತೆಗಳನ್ನು ಸಾಕಷ್ಟು ಭರ್ತಿ ಮಾಡುವ ಪವಿತ್ರ ಕಾರ್ಯಗಳಲ್ಲಿ ಅವರು ನಿಮಗ್ನರಾಗಲಿ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 1133/1955.

R. E. P. 320/1957.

ಕಸ್ತೂರಿ ಶ್ರೀನಿವಾಸ ಪೈ —ವಾದಿ
ಅನಂತ ಆ್ಯತಾಳ —ಪ್ರತಿವಾದಿ
ಅನಂತ ಆ್ಯತಾಳ, ಸುಬ್ರಾಯ ಆ್ಯತಾಳರ ಮಗ —ಪ್ರತಿವಾದಿ

C/o Shanbhogue Krishnappa Chikmavali Bangalore city No. 6

ಇವರಿಗೆ—

ವಾದಿಯು ಮೇಲ್ಕಂಡ ಡಿಕ್ರಿ ಪ್ರಕಾರ ಬರತಕ್ಕ ಹಣಗಳ ಬಗ್ಗೆ ಪ್ರತಿವಾದಿಯ ಹಕ್ಕಿನ ಸ್ಥಿರಾಸ್ತಿ ಏಲಂಮುಖಾಂತರ ಅಪೇಕ್ಷಿಸಿ ಯೇಲಂ ಯಿಸ್ತಿಹಾರು ದಾಖ್ಲು ಮಾಡಿರುವುದರಿಂದ ಸದ್ರಿ ಯೇಲಂಮ್ಮ ಯಿಸ್ತಿಹಾರಿನ ಶರತ್ತ ನಿರ್ಣಯಿಸುವದೇ ತಾರೀಕು ೨೬-೯-೫೭ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದ್ರು ಆಕ್ಷೇಪ ನಿದ್ದಲ್ಲಿ ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಜ್ರಿ ಶಿವ್ವಾ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂಬುದಾಗಿ ಕೋರ್ಟು ಹುಕುಂಪ್ರಕಾರ ನಿಮಗೆ ಈ ಮೂಲಕ ತಿಳಿಸೋಣವಾಗುತ್ತದೆ.

K. Raghunatha Shenoi
Pleader for Plff.

Coondapoor 14—9—1957.

NOTICE

The Moolky Bank Limited Mulki

It is reported that Shares numbering 366, 367 and 368, standing in the name of Sri. Mijar Gopal Pai, S/o Mijar Subraya Pai, Mangalore, in the Books of the Bank, are reported to have been lost and the said Share Holder has applied for the issue of Duplicate Share Certificates. Duplicate Share Certificates will be issued, unless objection, if any, is filed by 15—10—1957.

(Sd) M. R. H. Punja,
Manager.

ಪ್ರಕಟಣೆ

ಕುಂದಾಪುರ ತಾಲೋಕು ನಾಡ ಗ್ರಾಮದ ತೆಂಕಬೈಲು ಮಂದಾಸಿನ ಹಕ್ಲು ಅಲ್ಲಿ ಇರುವ ಅರೆಕಲ್ಲು ಮನೆ ವೆಂಕಿ ಹೆಗ್ಗಿನ ಮಗ ಬಿಲ್ಲಿ ಗಣಪನು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ, ನಾನು ತಾರೀಕು ೩೦-೬-೫೭ನೇ ದಿವ್ಸ ಅಲೂರು ಮಾರ್ಗವಾಗಿ ಪಳ್ಳಿಯಂಕನಮಕ್ಕಿ ಮಾಲಿಂಗ ಶೆಟ್ರ ಮನೆಗೆ ಹೋಗುತ್ತಿರುವಾಗ ಸಮಾರು ಬೆಳಿಗ್ಗೆ ೨ ಗಂಟೆಗೆ ಅಲೂರು ಪೇಟೆಯಲ್ಲಿ ಅಲೂರು ಗ್ರಾಮದ ಕಂಚಿನಕೋಡ್ಲು ಅಲ್ಲಿ ಇರುವ ಹೆಕ್ಕಾರು ಮುತ್ತಯ್ಯ ಶೆಟ್ರ ಮಗ ಜಗನ್ನಾಥ ಶೆಟ್ರ 1 ಅಲೂರು ಶಾಲಾ ಹೆಡಮಾಸ್ಟರ್ V ಜಗನ್ನಾಥ ಶೆಟ್ರ 1 ಹೆಕ್ಕಾರು ಗ್ರಾಮದ ಸೆಳಿಕೊಡೀ ಸೂರಪ್ಪ ಶೆಟ್ರ ಮಗ ಸುಬ್ಬಣ್ಣ ಶೆಟ್ರ 1 ಕೂಡಾ ಮೂರು ಜನರು ಬಂಬ್ರಾಳದಿಂದ ಒಂದು ನೋಟಿನ್ನು ಬರಾಯಿಸಿಕೊಂಡು ನನ್ನ ಎಡ ಹೆಬ್ಬೆಟ್ಟಿನ ಮುದ್ರೆಯನ್ನು ಪಡಕೊಂಡಿರುತ್ತಾರೆ ಆದರೆನಾನುಅಕ್ಷರ ಹತ್ತಿರಸಾಲ ಮಾಡಿದ್ದಾಗಲೀಯಾಬೇರೆಯಾವರಿತಿಯಿಂದಲೂನಾನು ಪ್ರತಿಫಲ ಪಡದ್ದು ಇರುವುದಿಲ್ಲ. ಆದುದರಿಂದ ಈ ನೋಟು ನನಗೆ ಸಂಬಂಧಪಟ್ಟಿದ್ದಲ್ಲ ಈ ನೋಟಿಗೆ ಸಂಬಂಧಪಟ್ಟ ನನ್ನ ಮೇಲೆ ಯಾವ ತರದ ವ್ಯವಹಾರ ನಡೆಸಿದರೂ ಕೂಡಾ ಅದಕ್ಕೆ ನಾನು ಜವಾಬ್ದಾರನಲ್ಲ ಎಂಬ ಸಂಗತಿಯನ್ನು ಈ ಮೂಲಕ ಜಾಹೀರುಮಾಡಿಕೊಳ್ಳುತ್ತೇನೆ.

● ಈ ಎಡ ಹೆಬ್ಬೆಟ್ಟಿನ ಗುರುತು
ಸದ್ರಿ ಗಣಪನ ರುಜು.

ತಾ. ೩-೯-೫೭.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.

ಸ್ಥಾಪನೆ: 1924

ದಿ ಕರ್ಣಾಟಕ ಬ್ಯಾಂಕ್ ಲಿಮಿಟೆಡ್

(ಭಾರತದಲ್ಲಿ ಸಂಘೀಕರಿಸಲ್ಪಟ್ಟಿದು. ಮೆಂಬರರ ಹೊಣೆ ಮಿತೀಕರಿಸಲ್ಪಟ್ಟಿದೆ)

ಪೋಸ್ಟ್ ಬಾಕ್ಸ್ ನಂಬ್ರ 113] ಹೆಡ್ ಆಫೀಸು: ಮಂಗಳೂರು, ದ. ಭಾರತ. [ಟೆಲಿಫೋನ್ ನಂ. 114

ಶೇವಣಾತಿ ರೂ 1,02,44,000 ಕ್ಕೂ ಮಿಕ್ಕಿದೆ.

(ತಾ. 14—8—1957ರಲ್ಲಿದ್ದಂತೆ)

ಅಲ್ಪಾವಧಿಯ ಮತ್ತು ನಿರಖು ಠೇವಣಾತಿಗಳನ್ನು ಅತ್ಯನುಕೂಲವಾದ ಶರತ್ತುಗಳ ಮೇಲೆ ಸ್ವೀಕರಿಸಲಾಗುವುದು.

ಹೆಚ್ಚಿನ ವಿವರಗಳನ್ನು ನಮ್ಮ ಕೆಳಗಿನ ಸ್ಥಳೀಯ ಆಫೀಸಿನಿಂದ ತಿಳಿಯಬಹುದು:

ತೆಂಕಪೇಟೆ, ಪೋಸ್ಟ್ ಬಾಕ್ಸ್ ನಂಬ್ರ 18 (ಟೆಲಿಫೋನ್ ನಂಬ್ರ 71) ಉಡುಪಿ

THE KARNATAKA BANK LIMITED

---

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳಿ ರಾಮಸ್ವಾಮಿ ಅಯ್ಯಂಗಾರರವರ ರತ್ನದ್ವಯಗಳು

ಟ್ರೇಡ್ ಮಾರ್ಕ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಸ್ಕಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ಸಂ|| A. R. ಅಯ್ಯರ್, ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷಗೊಳಿಸುತ್ತದೆ.

ದಂಪತಿಗಳಾಗಿ 10-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ಯಾಟಲಾಗ್ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನೆ. ಯು.)

ಸಂ. 648, "ಸಂತಾನ ಸಿಂದೂರ ಸದನ", ಚಾಮರಾಜ ರೋಡ್, ಮೈಸೂರು-1 (S.I.)

ಶಂಕರನ ನಾಲ್ಕನೆಯ ಹೆಂಡತಿ

[ತಿಂಗಳ ಪುಟದಿಂದ]

ಅಜ್ಞಾತ ಆನಂದದಿಂದ ಆತನ ಮುಖ ಪ್ರಕಾಶಮಾನವಾಗಿತ್ತು

ಒಂದು ದಿನ ಒಬ್ಬಾಕೆ ಕೇಳಿದಳು 'ಶಂಕರ ನಿನ್ನ ಹೊಸ ಹೆಂಡತಿ ಎಂದು ಬರುತ್ತಾಳೆ?" ಶಂಕರನು ತನ್ನ ಹಿಡಿ ಸೂಡಿಯನ್ನು ನೆಲದಲ್ಲಿಸೆದು ಕೈಗಳನ್ನು ಜೋಡಿಸಿ ಕಳಕಳಿಯ ಧ್ವನಿಯಲ್ಲಿ ಹೇಳಿದನು ತಾಯಿ, ನಿನಗೆ ಮಾಣಿಯುತ್ತೇನೆ. ದೇವರಾಣೆಗೂ ನನ್ನನ್ನು ಬಿಟ್ಟಬಿಡಿರಿ ನಾನು ಕೆಲಸಮಾಡಿ ನೀವು ಕೊಡುವುದನ್ನು ಸಂಪಾದಿಸುತ್ತೇನೆ ನನಗೆ ಸುಮ್ಮಗೆ ಹಣ ಕೊಡುತ್ತೀರಿ? ಹಾಗಿರುವಾಗ, ನನ್ನನ್ನೇಕೆ ಗೇಲಿಮಾಡುತ್ತೀರಿ? ಮತ್ತು ನನ್ನ ಹೆಂಡತಿಯಾಗಲು ಯಾರು ತಾನೆ ಆಗ ಬಯಸುವರು? ಒಬ್ಬ ಬಡವ, ಒಂದು ಪ್ರಾಣಿ, ಒಬ್ಬ ಮೂಳಾವಿ, ಒಬ್ಬ ಕಸ ಗುಡಿಸುವವನಲ್ಲವೇ ನಾನು?' ಅ ಹೆಂಗಸು ದೂರಕರಿದಳು

ಮರುದಿನ ತಾನು ಕೆಲವು ದಿನಗಳ ಮಟ್ಟಿಗೆ ಎಲ್ಲಿಗೋ ಹೋಗುವುದಾಗಿ ಶಂಕರನು ಬಹಿರಂಗಪಡಿಸಿದನು

ಮೂರು ದಿನಗಳ ನಂತರ ಶಂಕರನು ತನ್ನ ನಾಲ್ಕನೆಯ ಹೆಂಡತಿಯನ್ನು ಕರೆದುಕೊಂಡು ಬಂದ ಆ ಓಣಿಯ ಯುವಾನಿಗೆ, ವಯಂಜಾವದಲ್ಲಿಯೇ ತನ್ನ ಮಡದಿಯ ಪರಿಚಯ ಮಾಡಿಕೊಟ್ಟನು. ಆತನ ವಿವಾಹಣೆಯು ನಿದ್ದೆಯ ಗುಂಗಿನಲ್ಲಿದ್ದವರಿಗೆಲ್ಲಾ ಕೇಳಬಹುದಾದಷ್ಟು ಗಟ್ಟಿಯಾಗಿ ಸಾಗುತಿತ್ತು ಹೆಂಗಸರೆಲ್ಲರೂ ತಮ್ಮ ಊಹೆಯು ನಿಜವಾದುದನ್ನು ಕಂಡು ಆಶ್ಚರ್ಯಗೊಂಡರು ಆತನ ಹೆಂಡತಿಯ ಹೆಸರು, ಪ್ರಾಯ, ಮೊದಲ ಗಂಡನ ಹೆಸರುಗಳನ್ನು ಆತನೊಡನೆ ಕೇಳಿ, ಈ ಕೆಯೆಷ್ಟು ದಿನ ನಿನ್ನ ಬಳಿ ನಿಲ್ಲುವಳು?" ಎಂದು ಸಹ ಪ್ರಶ್ನಿಸಿದರು ಆದರೆ, ಇವೆಲ್ಲವನ್ನೂ ಗಮನಿಸದಿರುವಷ್ಟು ಸಂತೋಷದ ಗುಂಗಿನಲ್ಲಿ ಶಂಕರನಿದ್ದ

ಶಂಕರನು ತುಂಬಿದ ಆನಂದದಲ್ಲಿದ್ದ ರಾಮಿಯು ಪಾರುಗಿಂತಲೂ ಒಳ್ಳೆಯವಳೆನ್ನಬಹುದು ಈಕೆಯ ವೆಚ್ಚವೂ ಅಲ್ಪವಾಗಿತ್ತು ಪಾರುಗಿಂತ ಸ್ವಲ್ಪ ಹಳೆಯವಳಿರಬಹುದು ಆದರೆ ಬುದ್ಧಿವಂತಿಕೆಯಲ್ಲಿ ಈಕೆ ಬಿಗಿಯೆಂದು ಸಹ ಶಂಕರ ಊಹಿಸಿದ್ದ ಈಕೆಯ ಗಲ್ಲದಲ್ಲಿ ಎರಡು ಮಚ್ಚೆಗಳಿದ್ದವು ಈಕೆಯು ನಡೆಯುತ್ತಿರುವಾಗ, ತೋಳು ಮತ್ತು ಕಾಲುಗಳು ಪಾಡಿಗೆ ಸರಿಯಾಗಿ ನರ್ತಿಸುವವರಂತೆ ಕಾಣುತಿತ್ತು ಹೌದು ಶಂಕರನು ಸಂತೋಷಪಟ್ಟಲು ಕಾರಣಗಳಿದ್ದುವು

ಹಲವಾರು ಊಟಗಳನ್ನು ಹೂಡಿದ ನಂತರ, ಒಂದು ದಿನ ರಾಮಿಯು ತನ್ನನ್ನು ಕೆರಳಿಸುತ್ತಿದ್ದ ಒಬ್ಬಾಕೆಯೊಡನೆ ಮಾತಾಡುತಿದ್ದುದನ್ನು ಕಂಡು ಅಲ್ಲಿಗೆ ಹೋಗಿ ಆಕೆಯನ್ನು ಕೇಳಿದ "ಬೀಬಿ, ಈಕೆ ಹೋಗಿದ್ದಾಳೆ?"

'ಒಳ್ಳೆಯವಳೇ ಆದರೆ, ಇವಳು.' ಶಂಕರನು ವಾಕ್ಯಪೂರ್ಣ ಮಾಡಿಗೊಡಲಿಲ್ಲ 'ಬೀಬಿ ಜೀ, ನನ್ನ ಮೇಲೆ ನಿಮಗೇನು ಹಗೆ? ಆಕೆಯನ್ನು ನನಗೆಡುರಾಗಿ ಏಕೆ ಎತ್ತಿಕಟ್ಟುತ್ತೀರಿ? ನಾನು ನಿಮ್ಮ ಗುಲಾಮ, ನಿಮ್ಮ ಸೇವಕ, ನೀವು ಬಿಟ್ಟುದನ್ನು ಸ್ವೀಕರಿಸುವವ ಆದರೆ, ಆದರಿಂದ . ಶಂಗಸು ನಗತೊಡಗಿದಳು ಆತನು ಹೇಳಬೇಕೆಂದಿದ್ದುದನ್ನ ಅರಿತಿದ್ದಳು

ಶಂಕರ ಮುಸ್ತಾರಮಿ ಒಬ್ಬ ಓಣಿಯ ಒಂದು ಪಕ್ಕದಿಂದ, ಇನ್ನೊಬ್ಬಾಕೆ ಇನ್ನೊಂದು ಬದಿಯಿಂದ ಗುಡಿಸಲು ಬೇಗನೇ ಪ್ರಾರಂಭಿಸಿತ್ತಿದ್ದರು ಮಧ್ಯದಲ್ಲಿಯೇ ಅವರು ಒಟ್ಟುಗೂಡುತ್ತಿದ್ದರು ತಾನು ಸಂಪಾದಿಸಿದ ಆಹಾರವನ್ನು ಶಂಕರನ ರಾಮಿಗೆ ಎತ್ತಿಕೊಡುವನು ಇದೂ ಇದರೂ ಕುಳಿತು ಅವರು ಉಣ್ಣುವರು ರಾಮಿ ಬಂದ ನಂತರ ಶಂಕರನನ್ನು ಕೆರಳಿಸುವ ಗೋಜಿಗೆ ಯಾರೂ ಹೋಗಲಿಲ್ಲ ಆದರೆ, ರಾಮಿಯೋರ್ವಳೇ ಒಂದು ದಿನ 'ನಿನ್ನ ರಾಜ ಎಲ್ಲಿದ್ದಾನೆ? ಎಂದಾಕೆಯನ್ನು ಕೇಳುತಿದ್ದರು

ರಾಮಿಯೇನೂ ಮೂಕ ಸ್ವಭಾವದವಳಲ್ಲ ಎಲ್ಲರೂ ಸ್ವಲ್ಪ ಮಾತ್ರ ಮಾತಾಡುತಿದ್ದಳು ಆದರೆ, ರಾಮಿ ಒಂದು ಮುಷ್ಟಿ ಅನ್ನವನ್ನೂ ಬಾಯಿ ಬಿಟ್ಟು ಕೇಳುತ್ತಿರಲಿಲ್ಲ ಒಣಹರಟೆ ಹೊಡೆಯುತ್ತಿರಲಿಲ್ಲ ಇದರಿಂದಾಗಿ ಹೆಂಗಸರು ಆಕೆಯನ್ನು 'ದನ' ಎಂದು ಕರೆಯಲಾರಂಭಿಸಿದರು

ಆದರೆ, ಒಂದು ದಿನ ಈ ದನವು ಶಂಕರನ ಕಟ ಕತನವನ್ನು ಕಂಡು ಕೊಂಡಿತು ಆಕೆಯು ಕೂಗುತ್ತಾ ತನ್ನ ಕುಚಗಳನ್ನ ಬೀದಿಯಲ್ಲಿ ಬಡಿಯುತ್ತಿದ್ದಳು. ಜೋಲಬಿದ್ದ ಮೋರೆಯಿಂದ ಶಂಕರನು ಆಕಯನ್ನು ಹಿಂಬಾಲಿಸುತಿದ್ದನು ವಿಚಾರಿಸಿದಾಗ ಶಂಕರನ ತನ್ನನ್ನು ಸುಮ್ಮಗೆ ಹೊಡೆದನೆಂದು ರಾಮಿ ಕೂಗಿದಳು ಆತನು ಕುಡಿದಿರಬಹುದೆಂದು ಕಲವರು ಹೇಳಿದರು ಅದರ, ತನ್ನೊಡನೆ ಕುಡಿಯಲು ಹಣವಿಲ್ಲವೆಂದು ರಾಮಿಯೂ ತಿಳಿದಿದ್ದಳೆ ತನು ಕುಡಿದಿಲ್ಲವೆಂದುದನ್ನು ಆತ ಸವದಿಸಿದನ ಹಾಗೆ ಆದೇಕೆ ಆಕೆಯನ್ನು ಹೊಡೆದೆ ಎಂದಾಗ, ಆತನು ಮೌನವಿದ್ದನು. ತನ್ನ ಪರವಯೇ ಆತನಿಗಿದ್ದಂತಿರಲಿಲ್ಲ ತನ್ನೊಡನೆ ಬಾ ಎಂದಾತ ರಾಮಿಯನ್ನು ವತ್ತಾಯ ಮಾಡುತ್ತಿದ್ದ ರಾಮಿ ತಿರಸ್ಕರಿಸುತಿದ್ದಳು ಆಕೆಯು ಓಡಿಹೋಗಬಯಸಿದ್ದಾಳೆಂದೂ ತಾನು ತಡೆಯುತಿದ್ದೇನೆಂದೂ ಶಂಕರನು ಹೇಳುತಿದ್ದ

ಮನೆಯತ್ತ ಎಳೆಯುತಿದ್ದ ಶಂಕರ, ದೂರವೆಳೆಯುತಿದ್ದಳು ರಾಮಿ ಇವನ್ನು ದಾರಿಗರು ಸುತ್ತುಗಟ್ಟಿದರು ಸ್ತ್ರೀಯರಿಗೆಲ್ಲ ಸ್ವಲ್ಪ ಕರುಣೆಯೂ ಮೂಡಿತು ಆದರೆ, ಈ ಗಲಭೆಯಿಂದ ಸಂತೋಷಗೊಳ್ಳುವುದನ್ನ ಬಿಟ್ಟು ಏನಿಷ್ಟಿಕೆ ಯಾಕೆ ಮಾಡಬೇಕು? ಅವರು ಈ ಜಗಳವು ಇನ್ನೂ ಮುಂದುವರಿದು ಶಂಕರನ ಬಗ್ಗೆ ಕುತೂಹಲಜನಕ ಸಂತಿಗಳು ಹೊರಗೆ ಬರಲೆಂದು ಕಾದಿದ್ದವು

ಬಿಸಿಯೇರಿದ ವಾದಗಳಿಂದ ಗಂಡ ಹೆಂಡಿರು ರೋಸಿಹೋದರು ರಾಮಿಯನ ತಾನು ಕಳೆದ ಒಂದು ತಾಸು ಏನು ಕೇಳುತಿದ್ದಳೋ ಅದನ್ನೇ ಆಡುತಿದ್ದಳು ಕೈ ಕೊಸರಿಕೊಂಡು 'ನೀನು ಯಾಕೆ ನನ್ನನ್ನು ಹೊಡೆಯಬೇಕು? ಯಾರನ್ನಾದರೂ ಕೇಳಿ, ಅವರು ಅವರ ಹೆಂಡಿರನ್ನು ಹೊಡೆಯುತ್ತಾರೆಯೆ?' ಶಂಕರ ಒಂದುಬಾರಿ ಮುಖವೆತ್ತಿದ ಈ ಪ್ರಶ್ನೆಗೆ ಕೊಡುವ ಉತ್ತರವು ಆತನ ಭವಿಷ್ಯವನ್ನು ನಿರ್ಧರಿಸುವಂತಿತ್ತು ಎಲ್ಲರೂ ಈ ಪ್ರಶ್ನೆಯ ಉತ್ತರವನ್ನೇ ನಿರೀಕ್ಷಿಸುತಿದ್ದರು ಶಂಕರನು ಉತ್ತರಿಸಲು ಮುಂದೆಬಂದಾಗ, ಆತನ ಮುಖವು ಬಿಳಿಚಿಹೋಗಿತ್ತು "ನಾನು ಹುಚ್ಚನಾಗಿರಬಹುದು, ರಾಮಿ, ಆದರೆ, ನಾನು ಮಾಡುವಂತಹ ಕೆಟ್ಟ ಕೆಲಸವನ್ನು ಯಾಕೆ ತಾನೇ ಮಾಡಬೇಕಾಗಿದೆ? ಬೇಳು, ಈ ದುರ್ವಾಸನೆಯ ಪಾಯಿಖಾನೆಗಳನ್ನು ಯಾರು ತಾನೇ ಶುಚಿಮಾಡಬೇಕಾಗಿದೆ?'

ರಾಮಿಯು ಒಂದು ಕ್ಷಣ ಕರಿಣಳಾದಳು ಜನರೆಲ್ಲರೂ ನಕ್ಕು ಹಣ್ಣಾಗುತಿದ್ದರು ಆದರೆ, ರಾಮಿ ಶಂಕರು ಜತೆಯಾಗಿ ತಮ್ಮ ಮನೆಯತ್ತ ಹೋಗುತ್ತಿರುವುದನ್ನು ಕಂಡು ಅ ನಗೆ ಅಲ್ಲಿಯೇ ಮಾಯವಾಯಿತು

ರಾಮಿಯೇ ಶಂಕರನ ಹೆಂಡಂದಿರಲ್ಲಿ ಕೊನೆಯವಳಾದಳು.

(ಆಧಾರ: ಯೋಜನಾ)



ಬೆಂಗಳೂರಿನ ವಸಂತನಗರದಲ್ಲಿ ಅಲ್ಪಾದಾಯಗಳಿಗಾಗಿ ಕಟ್ಟಿಸಿದ ಮನೆಗಳ ಹಕ್ಕಿ ನೋಟವೊಂದು

ವಿನೋಬಾ ಭೂದಾನಯಜ್ಞಕ್ಕೆ ತೊಡಗದಿರುತಿದ್ದರೆ—

ಭಾರತದಲ್ಲಿ ಸಾಮ್ಯವಾದ ಬೆಳೆಯುತಿತ್ತು!

ಶ್ರೀ ಪಿ. ಎನ್. ರಾಮಚಂದ್ರ ರಾವ್.

ಯಾವ ಮನುಷ್ಯನು ತನ್ನ ಶಕ್ತಿಯನ್ನು ದುಡಿಮೆಗಾಗಿ ಉಪಯೋಗಿಸಿ, ದೊರೆತುದರಲ್ಲಿ ತೃಪ್ತಿಪಟ್ಟು ಕಷ್ಟ ಸುಖಗಳನ್ನು ಸಮಾನವಾಗಿ ಅನುಭವಿಸಿ ಜೀವನ ನಡೆಸುತ್ತಾನೋ ಆ ಮನುಷ್ಯನೇ ಒಂದು ದೇಶದ-ಅಮೂಲ್ಯ ರತ್ನವೆಂಬುದರಲ್ಲಿ ಸಂಶಯವಿಲ್ಲ. ಯಾವಾತನು ಇತರರಿಂದ ಸೇವೆಮಾಡಿಸಿಕೊಂಡು ಇತರರ ದುಡಿತದ ಫಲದಿಂದ ಜೀವಿಸುತ್ತಾನೋ ಆತನೇ ದೇಶದ ಪ್ರಗತಿಯ ಸಪ್ತಪಥದಲ್ಲಿರುವ ಒಂದು ದೊಡ್ಡ ಬಂಡೆಕಲ್ಲು. ಒಂದು ದೇಶವು ಎಂದಿನವರೆಗೆ ಇಂತಹ ಜನರಿಂದ ಕೂಡಿ ಬಾಹ್ಯಾಡಂಬರಕ್ಕೆ ಪ್ರಗತಿದಾಯಕವಾಗಿ ಕಾಣುತ್ತದೋ ಅಂದಿನ ವರೆಗೆ ಆ ದೇಶದ ಅಂತರಿಕ ಸ್ಥಿತಿಯು ಖಂಡಿತವಾಗಿಯೂ ಉತ್ತಮವೆನಿಸಿರಲಿಕ್ಕಿಲ್ಲ.

ಸಮಾಜ ಪೋಷಕ ಸಾಧನಗಳನ್ನು ಹೊಂದಿ—ತನ್ನ ಸುಖವನ್ನು ಹೆಚ್ಚಿಸಿಕೊಳ್ಳುವಲ್ಲಿ ಅನ್ಯರ ಕಷ್ಟವನ್ನು ಮನಸ್ಸಿಗೆ ತಂದುಕೊಳ್ಳದೆ—ಅನ್ಯರ ಕಷ್ಟವನ್ನು ತನ್ನದಾಗಿ ತಿಳಿದುಕೊಳ್ಳುವಷ್ಟು ಸಹಾನುಭೂತಿ ತೋರಿಸದ ಮನುಷ್ಯನು ದಿನಕ್ಕೆ ಸಾವಿರ ಬಾರಿ ದೇವರ ನಾಮವನ್ನು ಉಚ್ಚರಿಸಿದರೂ, ಸತತ ಭಜನೆ ಸ್ಮರಣೆ, ಧ್ಯಾನಗಳಿಂದ ಮಗ್ನನಾಗಿದ್ದರೂ ಅವನು ದೇವರ ನಿಜವಾದ ಭಕ್ತನಾಗಲಾರ.

ಈಶಾ ವಾಸ್ಯ ಮಿದಂ ಸರ್ವಂ
ಯತ್ಕಿಂಚಿ ಜಗತ್ಯಾಂ ಜಗತ್||

"ಈ ಜಗತ್ತಿನಲ್ಲಿರುವ ಸಮಸ್ತ ವಸ್ತುಗಳೂ ಪರಮಾತ್ಮನ ಅವಾಸಕ್ಕೆ ಯೋಗ್ಯವಾದುವುಗಳು" ಎಂದಲ್ಲವೇ ಉಪನಿಷತ್ತು ಸುವುದು ನಮ್ಮ ಉಪನಿಷತ್ತುಗಳು? ಹೀಗಿರುವಾಗ ಪರರು ಕಷ್ಟದಲ್ಲಿರುವಾಗ—ಉಣಲು ಉಡಲು ಇಲ್ಲದೆ ನರಳುತ್ತಿರುವಾಗ—ತಾನು ಸುಖಭೋಗಿಯಾಗಿರುವುದು ಯಾವಾತನ ಮನಸ್ಸಿಗೆ ಹಿಡಿಸುವುದಿಲ್ಲವೋ ಅವರ ಕಷ್ಟ ನಿವಾರಣೆಗಾಗಿ ಕೈಲಾದಷ್ಟು ಸೇವೆ ಮಾಡುವ ಮನಸ್ಸು ಬಾರದೋ ಯಾವಾತನು ತನ್ನ ಸುಖಕ್ಕಾಗಿ ಪರರ ಶ್ರಮದ ಫಲವನ್ನು ಬಯಸುವುದಿಲ್ಲವೋ ಅವನು ದೇವರ ನಾಮವನ್ನೇ ಉಚ್ಚರಿಸದಿದ್ದರೂ ದೇವರ ಧ್ಯಾನ, ಸ್ಮರಣೆ ಭಜನಾದಿಗಳು ಅವನ ಹತ್ತಿರ ಬಾರದಿದ್ದರೂ ಅವನೇ ನಿಜವಾದ ದೇವರ ಸಭ್ಯಕ್ತನು ಪುಣ್ಯನೆಂಬ ವಸ್ತು ಇರುವುದಾದರೆ ಅವನೇ ನಿಜವಾದ ಪುಣ್ಯಶಾಲಿ. ತನ್ನ ದುಡಿತ ಶಕ್ತಿಯಿಂದ ತನ್ನ ಜೀವನ ಸಾಗಿಸುವವನೇ ನಿಜವಾದ ದೇಶಸೇವಕ.

ಕರ್ನಾಟಕ ಪ್ರದೇಶಿಸಿದ ಪೂಜ್ಯ ವಿನೋಬಾ ಭಾವೆಯವರು ಮೊದಲಾಗಿ ಮಂಗಳೂರಲ್ಲಿ ಜನತೆಗೆ ಕರೆಯನ್ನಿತ್ತದ್ದು ಇದೇ ವಿಷಯ. ಅವರು ವಿನೋದವಾಗಿ "ಆಡಳಿತತೆಯನ್ನು ಚುನಾಯಿತ ಪ್ರತಿನಿಧಿಗಳಿಗೆ ಒಪ್ಪಿಸಿದ್ದೀರಿ. ದ್ಯಾನ, ಭಕ್ತಿ, ಧರ್ಮ ಇವುಗಳನ್ನು ವೈದಿಕರಿಗೆ ಬಿಟ್ಟಿರುವಿರಿ; ಅಂತೆಯೇ ಉಣ್ಣುವ ಮತ್ತು ನಿದ್ರಿಸುವ ಕೆಲಸಗಳನ್ನು ಇತರರಿಗೆ ಯಾಕೆ ವಹಿಸಿಕೊಡಲಿಲ್ಲ? "ಎಂದು ಪ್ರಶ್ನಿಸಿದರು ಕೊನೆಗೆ ಅವರು." ಎಂದಿನ ವರೆಗೆ ಜನರು ತಮ್ಮ ಕಾರ್ಯವನ್ನು ಪರರಿಂದ ಮಾಡಿಸಿ ಪರರ ದುಡಿತದ ಫಲವನ್ನು ಹೊಂದಿಕೊಂಡಿರುವರೋ ತಮ್ಮ ಕಾರ್ಯವನ್ನು ತಾನೇ ಮಾಡಿಕೊಳ್ಳಲು ಪ್ರವೃತ್ತರಾಗುವುದಿಲ್ಲವೋ ಅಂದಿನ ವರೆಗೆ ದೇಶದ ಪ್ರಗತಿಯಾಗದು. ಆದುದರಿಂದ ಹನುಮನ ನಾಡಿನವರಾದ ನೀವು ಆಲಸಿಗಳಂತೆ ವರ್ತಿಸದೆ ಹನುಮನ ನಿಷ್ಠೆಯಿಂದ ಕಾರ್ಯ ಪ್ರವೃತ್ತರಾಗಿರಿ" ಎಂದು ಜನತೆಗೆ ಕರೆಯಿತ್ತರು

ಸಂಕಾರದಿಂದ-ಶಾಸನದ ಮೂಲಕ ಸಾಧಿಸಲಾಗದ ಈ ಕಾರ್ಯದ ಕಡೆಗೆ ಗಮನವಿತ್ತವರು ಬಹು ಕಡಿಮೆ. ಪೂಜ್ಯ ಗಾಂಧೀಜಿಯವರ ಸಂದೇಶವನ್ನು ಹಳ್ಳಿಯಿಂದ ಹಳ್ಳಿಗೆ, ಮನೆಯಿಂದ ಮನೆಗೆ ಮುಟ್ಟಿಸುವವರು ಈ ಭಾರತದಲ್ಲಿ ಇಂದು ಓರ್ವ ವ್ಯಕ್ತಿ ಇರುವುದಾದರೆ ಆ ವ್ಯಕ್ತಿಯೇ ಆಚಾರ್ಯ ವಿನೋಬ ಭಾವೆ.

ಅಖಂಡ ೩೦ ವರ್ಷ ಗಾಂಧೀಜಿಯವರ ಸಂಗಡ ಇದ್ದು ಅವರ ತತ್ವ ಪ್ರಣಾಲಿಯನ್ನು ಮನಗಂಡು, ಅವನ್ನು ತನ್ನ ಜೀವನದಲ್ಲಿ ಸಾಕ್ಷಾತ್ಕರಿಸಿದ ಭಾವೆಯವರು ಸರ್ವೋದಯ ಸಮಾಜವನ್ನು ನಿರ್ಮಿಸಿ ಗ್ರಾಮರಾಜ್ಯ -ರಾಮರಾಜ್ಯ—ದ ಕನಸನ್ನು ನೆನಸು ಮಾಡಲು ದೀಕ್ಷಾಬದ್ಧರಾಗಿದ್ದಾರೆ. ಅವರ ಈ ಭೂದಾನ, ಗ್ರಾಮದಾನದ ಅದ್ಭುತ ಕ್ರಾಂತಿಯು ಸಕಾಲದಲ್ಲಿ ನಡೆಯದಿರುತಿದ್ದರೆ ಭಾರತದಲ್ಲಿ ಖಂಡಿತವಾಗಿಯೂ ದೊಡ್ಡ ಹಿಂಸಾಕ್ರಾಂತಿಯಾಗುವ ಕಾಲ ಒದಗಿ ಬರುತಿತ್ತು. ಅಂದರೆ ಹೆಲವರ ದುಡಿತದ ಫಲವನ್ನು ಒಬ್ಬನು ಭೋಗಿಸಿದರೆ ಎಷ್ಟ ದಿನ ಆ ಹೆಲವಾರು ದುಡಿಮೆಗಾರರು ತಾಳ್ಮೆ ವಹಿಸಿಯಾರ? ಒಂದಲ್ಲ ಒಂದು ದಿನ ಅವರ ದ್ವೇಷ ಭಾವನೆ ಸ್ಫೋಟನಗೊಳ್ಳಲೇ ಬೇಕಷ್ಟೆ? ಈ ಸಂದರ್ಭದ ಸದುಪಯೋಗವನ್ನು ಸ್ವಾಭಾವಿಕವಾಗಿ 'ಸಾಮ್ಯವಾದ'ದ ಮುಖಂಡರು ವಿನಿಯೋಗಿಸುತಿದ್ದರು. ಆದರೆ ಈ ವಿಷಯ ಗಾಂಧೀಜಿಯವರಿಗೆ ಮೊದಲೇ ಗೊತ್ತಿದ್ದುದರಿಂದ ಅದಕ್ಕೆ ಬೇಕಾದ ಯೋಗ್ಯ ಶಿಷ್ಯನನ್ನು ಆರಿಸಿ ಸರಿಯಾದ ಶಿಕ್ಷಣವನ್ನಿತ್ತು ಭಾರತದ ಪ್ರಗತಿಯ ದಾರಿಯನ್ನು ಅಂದೇ ತೋರಿಸಿರುವರು.

ಗಾಂಧಿಜಿ ಯವರ ಕನಸನ್ನು ನೆನಸು ಮಾಡಲು ಪಣತೊಟ್ಟಿರುವ ಅವರ ಶಿಷ್ಯ ವಿನೋಬಾರವರಿಗೆ ಯಶಸ್ಸು ಒದಗಿ ಬರುವಂತೆ ಮಾಡುವ ಕರ್ತವ್ಯ ಭಾರತೀಯ ಜನತೆಯ ಮೇಲೆ ಇದೆ. ನಾವೆಲ್ಲರೂ ಅವರ ಕಾರ್ಯದಲ್ಲಿ ಸಹಕರಿಸುವ ಪ್ರತಿಜ್ಞೆ ಮಾಡೋಣ.

ನಿಮ್ಮ ಸಂಸ್ಕೃತಿಯನ್ನು ಉಳಿಸಿರಿ!

[೧ನೇ ಪುಟದಿಂದ]

ಗಿ ಆರಗಿಸಿಕೊಂಡಿದ್ದೇವೆ ಇಂದು ಅದರಲ್ಲಿ ಪ್ರತಿಭಾಸಂಪನ್ನರಾದ ಅನೇಕಾನೇಕ ವ್ಯಕ್ತಿಗಳು ನಮ್ಮಲ್ಲಿದ್ದಾರೆ. ಇಲ್ಲಿನ ಕೆಲವು ಆಂಗ್ಲಭಾಷಾ ಪ್ರವೀಣರು ಇಂಗ್ಲಿಷ್ ಭಾಷೆಯಾಡುವುದನ್ನು ಕೇಳಿ, ನೋಡಿ ಹಲವಾರು ಆಂಗ್ಲರೇ ಆಶ್ಚರ್ಯವನ್ನುವ್ಯಕ್ತಪಡಿಸಿದ್ದಾರೆ. ವಿದೇಶೀಯ ಭಾಷೆಯೊಂದರಲ್ಲಿ ನಾವುಪಡೆಯಲು ಸಾಧ್ಯವಾದ ಯೋಗ್ಯತೆಯನ್ನು ಸ್ವದೇಶೀಯ ಸಂಸ್ಕೃತ ಭಾಷೆಯಲ್ಲಿ ಪಡೆಯುವುದು ಸಾಧ್ಯವಿಲ್ಲವೆಂದ, ಅದು ಅವಿವೇಕದ ಪರಮಾವಧಿಯಲ್ಲದೆ ಮತ್ತೇನು? ನಮಗೆ ಮನಸ್ಸಿದ್ದರೆ, ಯಾವ ಕೆಲಸವನ್ನೂ ಮಾಡಬಹುದು; ಕಲ್ಲುಗುಂಡನ್ನೂ ಕರಗಿಸಿಕೊಳ್ಳಬಹುದು ಹಾಗೆಯೇ ಸಂಸ್ಕೃತವನ್ನೂ ಕಲಿಯಬಹುದು. ಭಾರತದ ಮೂಲಭಾಷೆಯ ಮೇಲಿನ ಅಸಡ್ಡೆ ಮಾತ್ರ ದೂರ ಹೋಗಬೇಕು.

ಕೆಲವು ಪಾಶ್ಚಾತ್ಯ ರಾಷ್ಟ್ರಗಳು, ಉದಾಹರಣೆಗಾಗಿ ಜರ್ಮನಿಯವರು ನಮ್ಮ ಈ ಪ್ರಾಚೀನ ಭಾಷೆಯನ್ನು ಅಭ್ಯಸಿಸಿ ಪ್ರಚಾರ ಮಾಡುತಿದ್ದಾರೆ. ನಮ್ಮ ಒಳ್ಳೆಯದಕ್ಕಾಗಿ ಅವರು ಆ ಕೆಲಸವನ್ನು ಮಾಡುತ್ತಿಲ್ಲ; ವೈಜ್ಞಾನಿಕ ದೃಷ್ಟಿಯಿಂದ ಅಭ್ಯಾಸ ಮಾಡುತ್ತಾರೆ. ವೈಜ್ಞಾನಿಕ ಕ್ಷೇತ್ರದಲ್ಲಿ ಅವರು ಸಾಧಿಸಿದ ಪ್ರಗತಿಗೆ ಸಂಸ್ಕೃತ ಭಾಷಾಧ್ಯಯನದಿಂದ ಕಂಡುಕೊಂಡ ತಿಳುವಳಿಕೆಗಳೇ ಮೂಲ ಕಾರಣ ನಾವೂ ಅವನ್ನೇಕೆ ಮಾಡಬಾರದು? ನಮ್ಮದೇ ಆದ ಸಂಸ್ಕೃತಿ ಹಾಗೂ ಸಂಸ್ಕೃತ ಭಾಷೆಯ ಬಲದಿಂದ ನಾವು ಹಾಗೆ ಮಾಡುವುದು ಸಾಧ್ಯವೆಂಬುದನ್ನು ನಾವಿಂದು ತೋರಿಸಬೇಕಾಗಿದೆ.

ನಮ್ಮಲ್ಲಿ ಇಂಗ್ಲಿಷ್ ಕಲಿತ ವಿದ್ಯಾವಂತರು ಶೇಕ್ಸ್‌ಪಿಯರನು ದೊಡ್ಡ ಕವಿ; ಅವನಿಗೆ ಸಮಾನರಾದವರಾರೂ ಇಲ್ಲ ಎನ್ನುತ್ತೇವೆ ಆದರೆ, ಸಾರಾ ಸಾರ ವಿಚಾರ ಮಾಡಿದರೆ, ಅವರಿಗೆ ಸಂಸ್ಕೃತ ಭಾಷಾಜ್ಞಾನವಿಲ್ಲದುದರಿಂದ ಹಾಗೆ ಹೇಳಬೇಕಾಗುತ್ತದೆ. ವಿದೇಶೀಯ ಮತ್ತು ಸ್ವದೇಶೀಯ ಸಂಸ್ಕೃತಿ, ಸಾಹಿತ್ಯ ಕಲೆ ಮೊದಲಾದುವುಗಳನ್ನು ತುಲನಾತ್ಮಕ ದೃಷ್ಟಿಯಿಂದ ಪರಿಶೀಲಿಸಿ ಸತ್ಯವನ್ನು ಕಂಡುಕೊಳ್ಳಬೇಕು. ಅದಕ್ಕೆ ಇಂದು ಸಂಸ್ಕೃತ ಭಾಷಾಭ್ಯಾಸವೇ ಮೂಲ ಸೋಪಾನ ಆದುದರಿಂದ ಭರತೀಯರಾದ ನಾವೆಲ್ಲರೂ, ನಮ್ಮ ಭಾಷೆಗೆ ಇನ್ನಾದರೂ ಹೆಚ್ಚಿದ ಕಲಂಕವನ್ನು ಒರೆಸಲೆತ್ನಿಸದಿದ್ದರೆ, ಅಬಗ್ಗೆ ವಿಶೇಷ ಆಸಕ್ತಿ ವಹಿಸದೆ ಹೋದರೆ, ಅದು ನಮ್ಮ ಮಹತ್ತಮಾಪರಾಧವಾಗುವುದು; ನಮ್ಮ ಸಂಸ್ಕೃತಿ ನೈವೇದ್ಯಮೂಲಕ್ಕೆ ಕೊಡಲಿಯೇಟು ಕೊಟ್ಟಂತಾಗುವುದು

ಇವೆಲ್ಲಾ ಕಾರಣಗಳಿಂದ ಹಾಗೂ ಇಂಥದೇ ಇನ್ನೂ ಅನೇಕ ಕಾರಣಗಳಿಂದ ನಾವು ಸಂಸ್ಕೃತಿನಿಸಿಕೊಳ್ಳಬೇಕಾದರೆ, ವಿದೇಶೀಯ ಸಂಸ್ಕೃತಿಯನ್ನು ದೂರ ಮಾಡಿ ನಮ್ಮದನ್ನು ಉದ್ಧರಿಸಬೇಕು. ಅದಕ್ಕಾಗಿ ಸಂಸ್ಕೃತಭಾಷೆಯನ್ನಭ್ಯಾಸ ಮಾಡಿ, ವೇದ, ಉಪನಿಷತ್ತು, ಗೀತೆಗಳಲ್ಲಿ ಸಾಹಿತ್ಯವೇ ಮೊದಲಾದ ಗ್ರಂಥಗಳಲ್ಲಿ ಉಪದೇಶಿಸಲ್ಪಟ್ಟ ಪ್ರಾಚೀನ ಭಾರತೀಯರ ತತ್ವ ಪ್ರಣಾಲಿಯನ್ನರಿತುಕೊಂಡು, ಅವನ್ನು ನಮ್ಮ ದೈನಂದಿನ ಆಚರಣೆಯಲ್ಲಿ ಪರಿಪಾಲಿಸಿಕೊಂಡು ಬರಬೇಕು. ಆದುದರಿಂದ, ಸಂಸ್ಕೃತ ಭಾಷಾಧ್ಯಯನವನ್ನು ಮಾಡಿ. ಸಂಸ್ಕೃತಿಯನ್ನುಳಿಸಿ ಸುಸಂಸ್ಕೃತರೆನ್ನಿಸಿಕೊಳ್ಳೋಣ.

(ತಾ. ೮-೯-೫೭ರಂದು ಉಡುಪಿ ಗೀತಾಭವನದ ಚತುರ್ಥ ಪ್ರಮಾಣಪತ್ರ ವಿತರಣೋತ್ಸವದಲ್ಲಿ ಶ್ರೀ ಬಿ. ಅನಂತಕೃಷ್ಣ ಸಾಮಗರು ಮಾಡಿದ ಅಧ್ಯಕ್ಷ ಭಾಷಣದ ಆಧಾರದಿಂದ.)

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.
ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.
ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.
ನಮ್ಮ ಬಡ್ಡಿ ದರಗಳು.
ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭ VOL. 37

26—9—1957

ಸಂಚಿಕೆ ೪ NO. 4

ಭೂದಾನ ಗ್ರಾಮದಾನಗಳ ಉದ್ದೇಶವೇನು?

ಸಮಾಜದ ಜನರ ಪ್ರೇಮಬಂಧನ

ಶ್ರೀ. ಎಸ್ ಗೋಪೀಚಂದರಾವ್

ಪತ್ರಿಕೆಗಳನ್ನು ಓದುವ ಅಭ್ಯಾಸವಿರುವವರಿಗೆ ಸಪ್ಟಂಬರ ೨೪ ಒಂದು ಪ್ರಮುಖ ದಿನವೆಂದು ತಿಳಿಯದಿರದು. ಅಂದು ಅಖಿಲಭಾರತ ಸರ್ವಸೇವಾ ಸಂಘದ ನೇತೃತ್ವದಲ್ಲಿ ಇಲವಾಲವೆಂಬ ಮೈಸೂರ ನೆರೆಗ್ರಾಮದಲ್ಲಿ ಗ್ರಾಮದಾನ ಪರಿಷತ್ತು ಸೇರಿ ಮಹತ್ವದ ವಿಚಾರಗಳ ಕುರಿತಾಗಿ ಚರ್ಚೆ ನಡೆಸಿತು. ಗ್ರಾಮದಾನ ಪರಿಷತ್ತಿನಲ್ಲಿ ಎದ್ದು ಕಾಣುವ ದೊಡ್ಡ ಮನುಷ್ಯರು ಹಲವರಿದ್ದರೂ ಅವರೆಲ್ಲರಿಗೂ ಶಿಖರಪ್ರಾಯರಾಗಿ ಆಚಾರ್ಯ ವಿನೋಬಾ ಭಾವೆಯವರು ಕಂಗೊಳಿಸಿದ್ದಾರೆ.

ಪ್ರಾರಂಭಕಾಲದಲ್ಲಿ ಆಚಾರ್ಯ ಭಾವೆಯವರು ಭೂಮಾಲಿಕರೊಡನೆ ತಮ್ಮ ಭೂಮಿಯಲ್ಲಿ ಆರರಲ್ಲೊಂದು ಭಾಗವನ್ನು ತಮ್ಮದೇ ಗ್ರಾಮದಲ್ಲಿ ದುಡಿಯುವ ಭೂರಹಿತ ಕೂಲಿಗಳಿಗೆ ದಾನವಾಗಿ ಕೊಡುವಂತೆ ಪ್ರಾರ್ಥಿಸಿಕೊಂಡರು. ಈ ಮಾರ್ಗದಲ್ಲಿ ತಮ್ಮ ಭೂದಾನಯಜ್ಞದ ಮೂಲಕವಾಗಿ ಇದುವರೆಗೆ ೮೫ ಲಕ್ಷ ಎಕ್ರೆ ಭೂಮಿಯನ್ನು ಸಂಗ್ರಹಿಸಿದ್ದಾರೆ. ಉತ್ತರ ಪ್ರದೇಶ, ಬಿಹಾರ್ ಹಾಗೂ ಒರಿಸ್ಸಾ ತಮಿಳುನಾಡು ರಾಜ್ಯಗಳಲ್ಲಿನ ಕೆಲವು ಭೂಮಾಲಿಕರು ತಮ್ಮದಾದ ದೊಡ್ಡ ಖಂಡ ಭಾಗಗಳನ್ನು ಸಂಪೂರ್ಣವಾಗಿ ವಿನೋಬಾರವರಿಗೆ ಭೂರಹಿತರಿಗೆ ವಿತರಣೆಮಾಡುವ ಸದುದ್ದೇಶದಿಂದ ಒಪ್ಪಿಸಿದರು. ಭೂದಾನ ಚಳವಳಿ ಹೊಳೆ ಹೆಚ್ಚಿ ಗ್ರಾಮದಾನವೆಂಬ ಹೆಸರಿನಿಂದ ಪ್ರಸಿದ್ಧವಾಯಿತು. ಗಂಭೀರಾರ್ಥಯುಕ್ತವಾದ ಅಹಿಂಸಾರೂಪವಾದ ಈ ಗ್ರಾಮದಾನ ಚಳವಳಿ ಯೋಗ್ಯರೀತಿಯಲ್ಲಿ ಮುಂದುವರಿಯಿತು. ಒಂದು ಗ್ರಾಮದ ಎಲ್ಲ ಭೂ ಸಹಿತರೂ ತಮ್ಮ ಭೂಮಿಯನ್ನು ಒಮ್ಮೆ ಧಾರೆಯೆರೆದಿತ್ತು ಅದನ್ನು ಸಹಕಾರ, ಸಹಭಾವದಿಂದ ಗ್ರಾಮವಾಸಿಗಳೆಲ್ಲರೂ ಹಂಚಿಕೊಳ್ಳುವಾಗ, ತಮ್ಮ ಪಾಲಿಗೆ ಬರುವ ಅಲ್ಪ ಸ್ವಲ್ಪ ಭೂಮಿಯನ್ನು ಪಡೆಯುತಿದ್ದರು ಇಷ್ಟಕ್ಕಿಂತ ದೊಡ್ಡ ಶ್ರಾಂತಿಯೆಂಬುದೂ ಇದೆಯೆ? ಮಾನವರ ಹೃದಯ ಪರಿವರ್ತನೆಯನ್ನು ಶಾಂತ ವಿಧಾನದಿಂದ ಮಾಡುವ ಈ ಕ್ರಾಂತಿಗೂ ಸಿಗಿಲಾದುದಾವುದು? ಒರಿಸ್ಸಾ ರಾಜ್ಯದ ಕೋರಪುಟವೆಂಬ ಒಂದು ಗ್ರಾಮದಲ್ಲಿ, ಪ್ರಾರಂಭದಲ್ಲಿ ೨೪ ಎಕ್ರೆ ಜಮೀನಿಗೆ ಒಡೆಯನಾಗಿದ್ದವನು, ತನ್ನ ಆಸ್ತಿಯನ್ನು ಭೂದಾನಕ್ಕೊಪ್ಪಿಸಿ, ಭೂಮಿಯ ಪುನರ್ವಿತರಣಾ ಕಾಲದಲ್ಲಿ ಯಾವುದೇ ಭೂಮಿಯಿಲ್ಲದವನಿಗೆ ತನ್ನ ಕುಟುಂಬದ ಪದಸ್ಥರ ಸಂಖ್ಯೆಗನುಗುಣವಾಗಿ ೫ ಎಕ್ರೆ ಭೂಮಿಯನ್ನು ಪಡೆದಾಗ, ತನ್ನ ಕುಟುಂಬದಲ್ಲಿ ಕಡಿಮೆ ಇದ್ದುದರ ಪರಿಣಾಮವಾಗಿ ಕೇವಲ ಮೂರೂವರೆ ಎಕ್ರೆಯನ್ನು ಸಂತೋಷದಿಂದ ಹಿಂತಿರುಗಿ ಪಡೆದೆನೆಂದು ಸೋಜಿಗದ ಸಂಗತಿಯಲ್ಲವೆ? ಅದೂ ಅಷ್ಟಿದೆ, ಈ ಮೂರೂವರೆ ಎಕ್ರೆಯನ್ನು ವಿನೋಬಾರವರ ಅಮೃತ ಹಸ್ತದಿಂದ ಕೃತಜ್ಞತಾಪೂರ್ವಕವಾಗಿ ಆತನು ಸ್ವೀಕರಿಸಬೇಕಾದರೆ ಆತನ ಧೀಮಂತಿಕೆಯೆನಿತಿರಬೇಡ?

ಗ್ರಾಮದಾನದ ಹಳ್ಳಿಗಳಲ್ಲಿ ಒಟ್ಟು ಸಾಗು ಭೂಮಿಯ ಹತ್ತರಲ್ಲೊಂದು ಪಾಲನ್ನು ಸಾಮಾನ್ಯ ವ್ಯವಸಾಯಕ್ಕಾಗಿ ಕಾಯ್ದಿರಿಸುತ್ತಾರೆ ಇದರ ಉತ್ಪತ್ತಿಯನ್ನು ಪಂಚಾಯತ, ಅಡಳಿತೆ, ಗ್ರಾಮ ಶಾಲೆ ಹಿರಿಗೆ ಮನೆ ಶುಚಿತ್ವ, ಸಾಂಸ್ಕೃತಿಕ ಚಟುವಟಿಕೆ ಹಾಗೂ ಹಳ್ಳಿಯ ಹಬ್ಬ ಮೊದಲಾದ ಸಮಾಜ ಸೇವಕ ಕಾರ್ಯಕಲಾಪಗಳಿಗೆ ವಿನಿಯೋಗಿಸಲಾಗುವುದು. ಹಳ್ಳಿಗರೆಲ್ಲರೂ ಒಡಂಬಟ್ಟರೆ, ಗ್ರಾಮದೆಲ್ಲಾ ಭೂಮಿಯನ್ನು ಸಹಕಾರ ಪದ್ಧತಿಯಿಂದ ಬೇಸಾಯಮಾಡಬಹುದು. ವಿನೋಬಾರವರು ಈ ಪದ್ಧತಿಯ ಪುರಸ್ಕರ್ತರಾಗಿದ್ದರೂ, ವಸ್ತುಸ್ಥಿತಿಯಿಂದ ಈ ವಿಧಾನವನ್ನು ಹಳ್ಳಿಗರ ಮೇಲೆ ಹೇರಲು ಅವರು ಸಿದ್ಧರಿಲ್ಲ. ಗ್ರಾಮಸಭೆಯು ತನ್ನ ಅನುಕೂಲಕ್ಕಾಗಿ, ಎರಡೋ ಮೂರೋ ತುಂಡುಗಳಾಗಿ ಗ್ರಾಮವನ್ನು ವಿಭಜಿಸಿ ಅದನ್ನು ಸಹಕಾರೀ ಪದ್ಧತಿಯಿಂದ ವ್ಯವಸಾಯ ಮಾಡಬಹುದು. ಮುಖ್ಯವಾಗಿ ಇಂತಹ ವ್ಯವಸಾಯ ಕ್ಷೇತ್ರಗಳು ತೀರಾ ದೊಡ್ಡದಾಗಿ, ಅವುಗಳಲ್ಲಿ ಗೇಯುವವರಿಗೆ ಸಾಮಾಜಿಕ ಸಂಬಂಧವನ್ನು ಕಪ್ಪಿಸಿಕೊಳ್ಳುವಂತಹ ಗಂಡಾಂತರ ಪರಿಸ್ಥಿತಿಯೊದಗಿ ಬರಬಾರದು. ಅಲ್ಲದೆ ಸಹಕಾರ ಪದ್ಧತಿಯು ರೈತರ ಇಚ್ಛೆಯಂತೆಯಲ್ಲದೆ, ವಸ್ತುಸ್ಥಿತಿಯಿಂದಾಗಬಾರದು. ಅದರೂ ಸಹಕಾರೀ ಪದ್ಧತಿಯಿಂದ ಆಗುವ ಲಾಭ ಆದರ ಉದ್ದೇಶ, ಮಹತ್ವಗಳನ್ನು ರೈತರಿಗೆ ತಿಳಿಸಿ, ನಿರ್ಣಾಯಕ ಅಧಿಕಾರವನ್ನು ರೈತರಿಗೇನೇ ಬಿಟ್ಟುಬಿಡುವುದು ಶ್ರೇಯಸ್ಕರ.

ಒಂದು ಹಳ್ಳಿ ಸಹಕಾರಿ ವ್ಯವಸಾಯ ಪದ್ಧತಿಯಲ್ಲಿ ಗ್ರಾಮದ ಭೂಮಿಯನ್ನು ತರ ವುದಾಸ್ಥೆವೆಸಿದಲ್ಲಿ, ಭೂಮಿಯನ್ನು ಬೇರೆ ಬೇರೆ ಕುಟುಂಬಗಳಿಗೆ ಹಂಚಲಾಗುವುದು ಅವರೆ ಆ ಭೂಮಿಯ ಅಂಶ ಉಪಯೋಗಕ್ಕಾಗಿ ಕೊಡಲಾಗುವುದಲ್ಲದೆ, ವೈಯಕ್ತಿಕ ಹಿಡುವಳಿಯಂತಲ್ಲ ಹೀಗೆ ಪಡೆದ ಕೊಂಡ ಭೂಮಿಯನ್ನು ಅವರು ಮಾರುವುದಕ್ಕೆ ಅಥವಾ ಅಡವಿಟ್ಟುವುದಕ್ಕೆ ಸಮರ್ಥನಾಗಲಾರನು. ಗ್ರಾಮಸೇವಾ ಸಂಘದ ಅದೇಶದಂತೆ ಎಂದಿನವರೆಗೆ ಒಂದು ಕುಟುಂಬದವರು ಅದರಲ್ಲಿ ದುಡಿದು ತಿನ್ನುವರೋ ಅದುವರೆಗೆ ಮಾತ್ರ ಆ ಭೂಮಿಯು ಅವರ ಅಂಕಿತದಲ್ಲಿರುವುದು. ಇವರೆಲ್ಲರೂ ಭೂಮಿಯಲ್ಲಿ ಉಳುವುದು, ಬಿತ್ತುವುದು, ಕೊಯ್ಯುವುದು ನೀರು ಹಾಯಿಸುವುದು, ಗೊಬ್ಬರ ತಯಾರಿಸುವುದು, ಮೊದಲಾದ ಎಲ್ಲ ವಿಧಾನಗಳಲ್ಲಿಯೂ ಸಹಕಾರಿ ವ್ಯವಸಾಯ ವಿಧಾನವನ್ನನುಸರಿಸುವುದು ಅಪೇಕ್ಷಿತವಾದ ಹೀಗಿ ಗ್ರಾಮದ ನದ ಹಳ್ಳಿಗಳು ಎಂದಿಗೂ ಸಮಾಜದ ಸೊತ್ತುಗಳಾಗಿ ಉಳಿಯುವುವಲ್ಲದೆ, ಪ್ರತ್ಯೇಕ ಕೌಟುಂಬಿಕ ಆಸ್ತಿಗಳಾಗಿ ಪರಿಣಮಿಸುವುದಿಲ್ಲ

ಒಂದು ಕ್ಷೇತ್ರದ ವಿಸ್ತೀರ್ಣವು ಹೆಚ್ಚಿದೊಡನೆ ಉತ್ಪನ್ನವೂ ಅಧಿಕವಾಗುವುದೆಂಬ ಮಾತಿನಲ್ಲಿ ವಿನೋಬಾರವರಿಗೆ ಆಸಕ್ತಿಯಿಲ್ಲ. ಭಾರತದಂತಹ ರಾಷ್ಟ್ರದಲ್ಲಿ ಕೆಲವೊಂದು ಹೊಸ ವಿಧಾನಗಳಿಂದ ವ್ಯವಸಾಯ ಮಾಡುವುದು ಅಪೇಕ್ಷಣೀಯವಾಗಿದೆ. ಆದರೂ, ಕ್ಷೇತ್ರಗಳೂ ತೀರಾ ಸಣ್ಣದಾಗಿದ್ದು ಬದಿಯಂಚನ್ನು ಹಾಕಿ ವುದರಲ್ಲಿಯೇ ಭೂಮಿಯು ಅನಾವಶ್ಯಕವಾಗಿ ಪಾಳು ಹೋಗಬಾರದು. ಎರಡು ಕ್ಷೇತ್ರಗಳ ನಡುವೆ ಬೇರೆ ಬಣ್ಣದ ಧಾನ್ಯಗಳನ್ನು ಬಿತ್ತಿ ಕ್ಷೇತ್ರಗಳನ್ನುವಿಂಗಡಿಸಬೇಕು ಅದನ್ನು ಹೆಚ್ಚು ಭೂಮಿಯಲ್ಲಿ ಜಾವಾನೀ ಪದ್ಧತಿಯ ವ್ಯವಸಾಯ ಕ್ರಮವನ್ನು ಅನುಸರಿಸಬೇಕು. ಗ್ರಾಮದ ಕ್ಷೇತ್ರಗಳನ್ನೆಲ್ಲಾ ಒಂದು ಸೇರಿಸಿ ಸಹಕಾರ ಭಾವದಿಂದ ದುಡಿಯಬಯಸಿದರೆ, ಆಗ, ಅವರಿಗೆ ಬೇಕಾದ ಉತ್ತೇಜನ, ನಾಲ, ನೀರಾವರಿ ಸೌಕರ್ಯ ಉತ್ತಮ ಬೀಜ ಮೊದಲಾದುವನ್ನು ಕೊಡಬೇಕು ಸಮಾಜ ವಿಕಾಸ ಯೋಜನೆಯು ಗ್ರಾಮದಾನ ಪ್ರದೇಶಗಳಿಗೆ ಪ್ರಾಧಾನ್ಯವೀಯಬೇಕು. ಪಶ್ಚಿಮ ರಾಷ್ಟ್ರಗಳಲ್ಲಿ ಕ್ಷೇತ್ರಗಳನ್ನು ಒಂದುಗೂಡಿಸುವ ಕೆಲಸವು ಆಯಶಸ್ವಿಯಾಗಲು ಅದು ವಸ್ತುಸ್ಥಿತಿಯಿಂದ ಹೇರಿದುದೇ ಮುಖ್ಯ ಕಾರಣವಾಗಿದೆ ಗ್ರಾಮದಾನದ ಹಳ್ಳಿಯಲ್ಲಿ ಸ್ವೇಚ್ಛೆಯಿಂದ ಸಹಕಾರಿ ಪದ್ಧತಿಯನ್ನು ವ್ಯವಹಾರಕ್ಕೆ ತಂದರೆ, ಅದು ಯಶಸ್ವಿಯಾಗಲೇ ಬೇಕು. ಜನರಲ್ಲಿ ಸಹಕಾರಿ ವಿಧಾನದ ಬಗ್ಗೆ ತೀವ್ರ ಆಸಕ್ತಿಯಿರುವುದು ಮಾತ್ರ ಅತ್ಯಗತ್ಯವಾಗಿದೆ.

ಗ್ರಾಮದಾನದ ಹಳ್ಳಿಗಳಲ್ಲಿ ಅಲ್ಲಿನ ಪ್ರತ್ಯೇಕ ಕುಟುಂಬದಿಂದಲೂ ಒಬ್ಬೊಬ್ಬನನ್ನು ಪ್ರತಿನಿಧೀಕರಿಸುವ ತತ್ವದಮೇಲೆ ಗ್ರಾಮ ಸಭೆಗಳು ಸ್ಥಾಪಿಸಲ್ಪಡುತ್ತವೆ. ಈ ಗ್ರಾಮ ಸಭೆಗಳಲ್ಲಿ ಸಹಕಾರಿ ವ್ಯವ

(ಇನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H. O. MANGALORE. Estd. 1931.

BRANCHES
Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ಪ್ರಕೃತಿಯ ಮಡಿಲಲ್ಲಿ....

ಶ್ರೀ ಕ. ವ. ಕೇಶವ.

ಪುರುಷೋತ್ತಮರಾಯರು ಮಧ್ಯಮ ವರ್ಗದ ಕೃಷಿಕರು. ಸರಕಾರೀ ನೌಕರಿ ಮಾಡುವ ಯೋಗ್ಯತೆ ಅವರಿಗಿದ್ದರೂ, ಕೃಷಿಯೇ ಯೋಗ್ಯವೆಂದು ತಿಳಿದು ಸಾಧ್ಯವಿದ್ದಷ್ಟೂ ಭೂತಾಯಿಯ ಸೇವೆ ಮಾಡಿ ಫಲ ಪಡೆಯುತ್ತಿದ್ದರು ಆ ಸೇವೆಯಲ್ಲಿ ಅವರಿಗೆ ಆಸಕ್ತಿಯಿತ್ತು; ಸಂತೋಷವಿತ್ತು; ಮನಸ್ಸಿಗೆ ನೆಮ್ಮದಿಯಿತ್ತು. ಹೌದು; ಹಾಗೆಂದೇ ಅವರ ಜೀವನ ಸುಗಮವಾಗಿ ಸಾಗುವ ನೌಕೆಯಾಗಿತ್ತು.

ಕಡಿಮೆ ಖರ್ಚಿನಿಂದ ಹೆಚ್ಚು ಬೆಳೆ ಹೇಗೆ ಪಡೆಯಬಹುದು ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸುವುದೇ ರಾಯರ ಹೆಗ್ಗುರಿಯಾಗಿತ್ತು. ಎಂತಲೇ ಅವರು ಆ ಕುರಿತು ಪರಿಶೀಲನೆ-ಪರಿಶೋಧನೆಗಳನ್ನು ನಡೆಸುತ್ತಿದ್ದರು.

ಒಂದು ದಿನ ವರ್ತಮಾನ ಪತ್ರಿಕೆಯನ್ನು ಮಗುಚುತಿದ್ದ ರಾಯರ ದೃಷ್ಟಿ ಪಾಟಿಗಳ ಬಳಿಗೋಡಿತು. ನಿಜ; ಬಳಿಯ ಶುಭ್ರವಾದ ಉಡುಪುಗಳನ್ನು ತೊಟ್ಟ ಎಳೆಯ ಪ್ರಾಯದ ತರುಣರೋರ್ವರು ಮೆಟ್ಟಲನ್ನೇರುತ್ತಿದ್ದರು.

"ನಮಸ್ತೆ; ಬನ್ನಿ; ಆ ಕಟ್ಟೆಯಲ್ಲಿ ನೀರನ್ನಿರಿಸಿದೆ. ಕೈಕಾಲು ತೊಳೆದುಕೊಳ್ಳಿ."—ರಾಯರು ತರುಣರೊಡನೆ ನುಡಿದರು. ತರುಣರೂ ಪ್ರತಿ ನಮಸ್ಕರಿಸುತ್ತಾ ಕೈಕಾಲು ತೊಳೆದುಕೊಂಡು ಒಳ ಬಂದರು. ರಾಯರು ಕುರ್ಚಿಯೊಂದನ್ನು ಕುಳಿತುಕೊಳ್ಳಲು ತೋರಿಸಿದರು.

"ಗುರುತು ಸಿಕ್ಕಿಲ್ಲವಲ್ಲಾ! ಎಲ್ಲಾಯಿತು ನಿಮಗೆ?"—ರಾಯರ ಧ್ವನಿ.

"ನೆರೆಯ ಗ್ರಾಮದಲ್ಲೆ. ನಾನು ಈ ಗ್ರಾಮಕ್ಕೆ ಬರುವುದು ಇದು ಹೊಸತು. ಆದ್ದರಿಂದ ನನ್ನ ಪರಿಚಯ ಸಿಗಲಾರದು. ಇರಲಿ. ಪುರುಷೋತ್ತಮ ರಾಯರು ಇಲ್ಲವೆ?"—ಎದುರಿಗೆ ಕುಳಿತಿದ್ದವರೇ ಪುರುಷೋತ್ತಮರೆಂಬುದನ್ನು ಅರಿಯದೆ ನುಡಿದರು.

ಅವರು ಹಾಗೆ ಭಾವಿಸಲಿಕ್ಕೆಡೆಯಿತ್ತು. ಪುರುಷೋತ್ತಮ ರಾಯರಾಗ ತಲೆಗೆ 'ಮುಟ್ಟಾಳೆ'ಯಿಟ್ಟು ಅಡ್ಡ ಮುಂಡೋಂದನ್ನು ಮಾತ್ರ ಉಟ್ಟುಕೊಂಡಿದ್ದರು. ರಾಯರೆಂದರೆ 'ರೀತಿ' ಯಿಂದಿರಬಹುದೆಂದು ನೆನೆಸಿದ ತರುಣರು ಆ ರೀತಿ ಆಡಿದುದರಲ್ಲಿ ಆಶ್ಚರ್ಯವಿಲ್ಲ.

"ಇದ್ದೇ ಇರುವೆನಲ್ಲ; ಪುರುಷೋತ್ತಮ ರಾಯನೆಂದರೆ ನಾನೇ. ಏನು ವಿಶೇಷ?"— ರಾಯರು, ತರುಣನ ಬಗ್ಗೆ ಕನಿಕರದಿಂದ ನುಡಿದರು.

"ಓಹೋ, ಕಾವೆಯೋ; ಗುರುತುವಿಲ್ಲದ್ದರಿಂದ ಹಾಗೆ ನುಡಿದೆ. ಕ್ಷಮಿಸಿ."

"ಪರವಾಇಲ್ಲ ವಿಶೇಷವೇನು ಹೇಳಿ."

"ನೋಡಿ ಸ್ವಾಮಿ; ನಾನೊಬ್ಬ ಹೆಡ್ ಗ್ರೇಡ್ ಮಾಸ್ತರ್. ಕೆಲವು ಸಮಯ ನನ್ನ ಮನೆಯ ಹತ್ತಿರದ ಶಾಲೆಯಲ್ಲಿ ಕೆಲಸ ಮಾಡಿದೆ. ಆದರೆ ನನ್ನ ಹಣೆಬರಹ ಒಳ್ಳೆಯದಿಲ್ಲ. ಅಲ್ಲಿ ನನಗೆ ಸೀಟು ಇಲ್ಲವಾಯಿತು. ಮತ್ತೆ ಕೆಲವೆಡೆ ವಿಚಾರಿಸಿದೆ. ಎಲ್ಲೂ 'ಪೋಸ್ಟ್' ಖಾಲಿ ಇಲ್ಲ. ಹಾಗಾಗಿ ಈಗ ಕೆಲಸವಿಲ್ಲದೆ ಕಷ್ಟದಲ್ಲಿರುವೆನು...."

"ನಿಜ. ಈಗಿನ ನ್ಯಾಯ, ಕಾರ್ಯ, ಒಂದಕ್ಕೂ ಬರುಡೆ ಸರಿಯಿಲ್ಲ. ಇರಲಿ, ನಿಮಗೆ ಮನೆಯಲ್ಲಿ ಬೇರೆ ಯಾವ ಅನುಕೂಲತೆಯೂ ಇಲ್ಲವೇ?"

"ಏನೋ ಸ್ವಲ್ಪ ಭೂಮಿಯಿದೆ-ಅಷ್ಟೆ."

"ಅದನ್ನು ಯಾರು ನೋಡಿಕೊಳ್ಳುತ್ತಾರೆ?"

"ಅಣ್ಣ ಇದ್ದಾರೆ."

"ಸರಿ. ಮುಂದೆ ಹೆಚ್ಚು ಕಲಿಯಲೂ ಅನುಕೂಲವಿಲ್ಲದೆ, ನೀತ್ರ ಹಯರ್ ಗ್ರೇಡ್ ಮಾಸ್ತರರಾದಿರಿ ಸರಿತಾನೇ!"

"ಹೌದು; ಮುಂದುವರಿಸಲು ಅಸಾಧ್ಯವಾಯಿತು."

"ಮುಂದೆ ಕಲಿಯುವಅಭಿಲಾಷೆ ನಿಮಗೆ ತುಂಬಾ ಇತ್ತು ಅಲ್ಲವೇ?"

"ಕಲಿಸುವವರಿದ್ದರೆ ಕಲಿಯುತಿದ್ದೆ ಎಂದು ನೆನೆಸುತಿದ್ದೆ."

"ಮಾಸ್ತರ್; ನೀವು ತಪ್ಪು ತಿಳಿಕೊಳ್ಳದಿದ್ದರೆ, ಒಂದು ಮಾತು ಹೇಳುತ್ತೇನೆ."

"ಅಗತ್ಯವಾಗಿ ಹೇಳಿ."

"ನೋಡಿ, ನಾನು ಹೇಳಬೇಕೆಂದರೆ, ಇಂದಿನ ವಿದ್ಯಾಭ್ಯಾಸ ಪದ್ಧತಿಯನ್ನು ಪರಿಶೀಲಿಸಿದಲ್ಲಿ ನೀವು ಕಲಿಯದಿದ್ದುದೇ ಒಳ್ಳೆಯದಾಯಿತು. ಯಾಕೆಂದರೆ ಇಂದಿನ ವಿದ್ಯಾಪದ್ಧತಿಯು ಜೀವನಕ್ಕೆ ಯಾವ ಪ್ರಯೋಜನವನ್ನೂ ಕೊಡುತ್ತಿಲ್ಲ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಆದರೆ ಇದು ಸತ್ಯ. ಹೇಗೆ ಎನ್ನುವಿರಾ?"

"ಹೇಗೆ?"

"ನೀವೀಗ ಎಂಟನೆಯ ತರಗತಿಯವರೆಗೆ ಕಲಿತುದಲ್ಲದೆ, ಟ್ರೈನಿಂಗ್ ಕೂಡಾ ಆಗಿದ್ದೀರಿ. ನಿಮ್ಮ ಗೇನೆಲ್ಲ ಕಲಿಸಿದ್ದಾರೆ? ನೀವು ಏನೆಲ್ಲಾ ಕಲಿಸಬಲ್ಲಿರಿ? ಅಡಿಗೆ ಮಾಡಲು, ಬೇಸಾಯ ಮಾಡಲು ನೀವು ಕಲಿತಿರುವಿರಾ? ಬಿಡಿ, ಕುಕ್ಕೆ ಹೆಣೆಯಲು, ಚಾಪೆ ಮಾಡಲು ನೀವು ಸಮರ್ಥರೇನು? ನನಗೆ ಗೊತ್ತು ನೀವು ಸಮರ್ಥರಲ್ಲ. ನೀವೆಂದೇನು? ಬಿ. ಎ. ಅದವನಿಗೂ ಅದು ಅಸಾಧ್ಯ. ನಿಮ್ಮ ಶಿಕ್ಷಣ ಪದ್ಧತಿಯಲ್ಲೂ ಇವುಗಳಿಗೆಲ್ಲಾ ಮಹತ್ವ ಕೊಡಲಿಲ್ಲ ಎಂತಲೇ ನೀವೀಗ ಸಮರ್ಥರಾಗಿದ್ದೀರಿ— ಯಾವುದಕ್ಕೆ? ಕೇವಲ ಓದುಬರಹ ಕಲಿಸಲಕ್ಕೆ. ನೀವು ನಾನು ಹೇಳುವುದು ಸತ್ಯವನ್ನು ಮನದಾಳದ ಮಾತೋ ಎಂದು ಸರಿಯಾಗಿ ಆಲೋಚಿಸಿ ಹೇಳಬೇಕು. ನನ್ನ ಅಭಿಮತದಂತೆ ಶಿಕ್ಷಣವೆಂದರೆ ಕೇವಲ ಓದುಬರಹವೇ ಮೊದಲಾದ ಮಾನಸಿಕ ಕೆಲಸವಲ್ಲ. ದೈಹಿಕ ಶ್ರಮವುಳ್ಳದ್ದಾಗಿರಬೇಕು. 'ಅನುಭವದಲ್ಲಿ ಅಮೃತವಿದೆ' ಎಂದಿದ್ದಾರೆ ಹಿರಿಯರು. ಆದ್ದರಿಂದ ನಿದ್ಯೆಯೆಂಬುದು ಅನುಭವದ ಮೂಲಕ ದೊರಕಬೇಕು. ಹೊರತು ದೈಹಿಕ ಶ್ರಮವು ಹೀನದಾಯಕವೆಂದು ತಿಳಿಯುತ್ತಿದ್ದರೆ, ಗದ್ದೆಯಲ್ಲಿ ಉಳಲು, ಕೃಷಿಮಾಡಲು ಯಾರು ಮುಂದೆ ಬರಬೇಕು? ಚೆನ್ನಾಗಿ ಆಲೋಚಿಸಿರಿ ಮಾಸ್ತರ್; ನೀವೂ, ನಾನೂ, ಮಾತ್ರ ಉಣ್ಣುವುದೇನು ಲೋಕದಲ್ಲಿ? ಆಫೀಸಿನಲ್ಲಿ ಒರೆಯುವವರೂ, ವಿವಿಧ ಕೆಲಸಗಳಲ್ಲಿ ಮಗ್ನರಾಗಿರುವವರೂ ಎಳೆ-ಮಂತ್ರಿಗಳೂ ಆಹಾರ ಭುಂಜಿಸಲೇಬೇಕು. ಬಟ್ಟೆಬರೆ ತೊಟ್ಟುಕೊಳ್ಳಲೇಬೇಕು. ಅದನ್ನೇ ಹೇಳಿದ್ದಾರೆ ಪುರಂದರದಾಸರು —'ಗೇಣು ಹೊಟ್ಟೆಗಾಗಿ--ಗೇಣು ಬಟ್ಟೆಗಾಗಿ' ಎಂದು. ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಇಂದು ಕೃಷಿಗೆ ಮನ್ನಣೆಯಿಲ್ಲದಾಗಿದೆ. ಅಂದರೆ ವಿದ್ಯಾವಂತರು ಬಟ್ಟೆಯೆತ್ತಿ ಕಟ್ಟಿ ದುಡಿಯಲು ಸಿದ್ಧರಾಗುವ ಮನೋಭಾವವುಳ್ಳವರಾಗಬೇಕು. ಇದಕ್ಕಾಗಿ ಏನು ಮಾಡಬೇಕು ಗೊತ್ತೇ? ಆಂಗ್ಲೇಯರ ವಿದ್ಯಾಪದ್ಧತಿಯನ್ನು ತಿರಸ್ಕರಿಸಿ—ನಮ್ಮದೇ ಸಂಸ್ಕೃತಿಯುಳ್ಳ ವಿದ್ಯಾಪದ್ಧತಿಯನ್ನು ಪ್ರಾರಂಭಿಸಬೇಕು. ಅದು ಬಾಲ್ಯದಲ್ಲೇ ಅಂದರೆ ಪ್ರಾಥಮಿಕದಲ್ಲೇ ದೊರೆಯಬೇಕು. ಪ್ರತ್ಯಕ್ಷ ಜ್ಞಾನದ ಮೂಲಕ ಅನುಭವ ಪಡೆಯುವಂತಾಗಬೇಕು. ಚಿಕ್ಕಂದಿನಲ್ಲೇ ಈ ರೀತಿಯ ಶಿಕ್ಷಣವನ್ನು ಕೊಟ್ಟರೆ, ಮುಂದೆ ಕೆಲಸ ಮಾಡುವುದೆಂದರೆ ಹೀನಾಯವೆಂಬ ಅಭಿಪ್ರಾಯ ಬದಲಿಯೇ ಬದಲುವುದು. ಬರಿಯ ಶಾಲೆಯ ನಾಲ್ಕು ಗೋಡೆಗಳೊಳಗೆ ಕುಳಿತು ಸಿಸ್ಟಾರವಾಗಿ ಇಂಗ್ಲಿಷ್, ಚರಿತ್ರೆ, ಲೆಕ್ಕ, ಭೂಗೋಳವೆಂದು ಹಲವು ಸಾರಗಳನ್ನು ಮಕ್ಕಳು ಬಾಯಿಪಾಠಮಾಡುವುದಕ್ಕಿಂತ ಅದೆಷ್ಟೋ ಪ್ರಯೋಜನ ಸ್ವತಃ ನೋಡಿ, ಮಾಡಿ ಕಲಿಯುವುದು. ಪ್ರಕೃತಿಯ ವಿಶಾಲ ಮಡಿಲಲ್ಲಿ ಅದೆಷ್ಟು ವಿಷಯಗಳಿಲ್ಲ ಕಲಿಯಲಿಕ್ಕೆ!

'ಸ್ತ್ರೀಯರು ಕಲಿತು ಡಿಗ್ರಿ ಪಡೆಯದಿದ್ದರೂ ಚಿಂತಿಲ್ಲ. ಆದರೆ ಅಕೆ ಯೋಗ್ಯ ಗೃಹಿಣಿಯಾಗುವುದು ತೀರಾ ಅಗತ್ಯ— ಎಂದಿದ್ದಾರೆ ನಮ್ಮ ಹಿರಿಯರು. ಹೀಗಿರುತ್ತಾ ಸ್ತ್ರೀ ವಿದ್ಯಾಭ್ಯಾಸವೆಂದುಕೊಂಡು ಮುಂದುವರಿಯುವುದರಿಂದ ಲೋಕಕ್ಕೆ ಕಲ್ಯಾಣವಾದೀತೆ?

"ಈ ರೀತಿಯ ಬೌದ್ಧಿಕ ಶಿಕ್ಷಣ ಕೊಡುವುದರಿಂದೇನು ಬಂತು? ನೀವೆನ್ನಬಹುದು - ನಾವು ಇಂಗ್ಲೇಂಡು, ಅಮೇರಿಕಾದವರಂತೆ ಸಾಗರಿಕರಾಗಬೇಕೆಂದು. ಆದರೆ ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ಸೀಗೆ ಹುಡಿ ಹಾಕಿ ಉಜ್ಜುವುದರಿಂದ ಕಪ್ಪು ಶಿಶ್ವನ ಬೆಳ್ಳಗಾಗಲಾರದು ಅಂತೆಯೇ ಕುದುರೆಯನ್ನು ಕತ್ತೆಯಾಗಿಯೂ, ಕತ್ತೆಯನ್ನು ಕುದುರೆಯಾಗಿಯೂ ಮಾರ್ಪಡಿಸಲು ಹೊರಡುವುದು ಅವಿವೇಕತನ ನಾವು ಪದೇ ಪದೇ ಎಲ್ಲಾ ವಿಷಯಗಳಲ್ಲೂ ಪಾಶ್ಚಾತ್ಯರನ್ನು ಅನುಕರಿಸುತ್ತಾ ನಡೆದರೆ ನಮಗೆ ಮುಂದೆ ಹಿಂದೇಟು ಬಿದ್ದೇ ಬೀಳುವುದು. ಇದು ಖಂಡಿತ."

"ಆದರೆ ಈಗೀಗ ಬುನಾದಿ ಪದ್ಧತಿ ಈ ತತ್ವವನ್ನೇ ಒಳಗೊಂಡಿದೆಯಲ್ಲಾ."

"ನಿಜ, ಬುನಾದಿ ಪದ್ಧತಿ ಯೋಗ್ಯವೇ. ಆದರೆ ಅದೂ ಸರಿಯಾಗಿ ನಡೆಯುತ್ತಿಲ್ಲ. ತರಬೇತಿ ಶಾಲೆಯನ್ನು ಆಧುನಿಕ ಪಟ್ಟಣದ ನಡುವೆ ತೆರೆದಿರುತ್ತಾ ನಿಯಮ ನಿಬಂಧನೆಗಳನ್ನು ಹೇರಿದರೆ ಅದೆಷ್ಟು ಯಶಸ್ವಿಯಾಗಬಲ್ಲುದು? ಅದಕ್ಕೋಸುಗ ಶಾಲೆ ಶಾಲೇಜುಗಳೆಲ್ಲಾ ನಿಸರ್ಗದೇವಿಯ ಮಡಿಲಲ್ಲಿ—ಅಂದರೆ ಹಳ್ಳಿಯಲ್ಲಿರಬೇಕು. ಮಹಾತ್ಮಾ ಗಾಂಧಿ ಈ ಮಾತನ್ನೇ ಹೇಳಿದ್ದರು. ಹೀಗೆ ಮಾಡುವುದರಿಂದ ಹಳ್ಳಿಗರೊಡನೆಯೂ ಪರಸ್ಪರ ಸೌಹಾರ್ದ ಬೆಳೆಯಲಿಡೆಯಿದೆ."

"ಹಾಗಾದರೆ ಇನ್ನಿದು ಸರಿಯಾಗಲಾರದೇ?"

"ಸರಿಯಾಗಬಲ್ಲುದು ಕಷ್ಟವಿದೆ. ಹೊಸ ವಿದ್ಯಾಪದ್ಧತಿಯೊಂದು ರೂಪಿತಗೊಳ್ಳಬೇಕು. ಜನತೆಗೆ ವಿದ್ಯಾಭ್ಯಾಸದ ಅರ್ಥವನ್ನು ತಿಳಿಯಪಡಿಸಿ ಮಂದಟ್ಟುಮಾಡಬೇಕು. ನಮ್ಮ ದೇಶ ಸ್ವತಂತ್ರವಾಗಿದೆ. ನಮ್ಮ ಅಭಿವೃದ್ಧಿಯನ್ನು ನಾವೇ ಮಾಡಿಕೊಳ್ಳುತ್ತಿದ್ದೇವೆ ಆದರೆ ಇನ್ನೂ ಆಂಗ್ಲೇಯರ ನಡೆ ನುಡಿಗಳನ್ನು ಬಿಟ್ಟಿಲ್ಲ. ಇದು ಭಾರತೀಯರಾದ ನಮಗೆ ನಿಜಕ್ಕೂ ಭೂಷಣವಲ್ಲ. ಹೊಸ ಹೊಸ ರೀತಿಗಳನ್ನು ಅಳವಡಿಸಿಕೊಳ್ಳಬೇಕು. ಯಾಕೆ ಮಾತನಾಡುತ್ತಿಲ್ಲ? ಏನೆನ್ನುತ್ತೀರಿ ನೀವು." ರಾಯರು ಪ್ರಶ್ನಿಸಿದರು.

ನಿಜವೆಂದು ತರುಣ ತಲೆಯಲ್ಲಾಡಿಸಿದರು. ಮಾತ್ರವಲ್ಲ "ಸ್ವಾಮಿ, ನಾನು ಹೇಗೂ ಕೆಲಸವಿಲ್ಲದೆ ಊರಿನಲ್ಲೇ ಇದ್ದೇನೆ. ಈ ವಿಷಯ ಪ್ರಚಾರಮಾಡೋಣ."

"ಆಗಬಹುದು. ಆದರೆ ನೀವು ಕೆಲಸವಿಲ್ಲದೆ ಇರುವುದು ಬೇಡ. ನಮ್ಮ ಈ ಗ್ರಾಮದ ಶಾಲೆಯ ಮಾಸ್ತರರಿಗೆ ಬೇಗನೇ ನಿವೃತ್ತಿಯಾಗುತ್ತದೆ. ಬದಲಿಗೆ ನಿಮ್ಮನ್ನೇ ನೇಮಿಸೋಣ. ಮೆನೇಜ್‌ಮೆಂಟಿನಲ್ಲಿ ನಾನೂ ಇದ್ದೇನೆ."

"ಆದರೆ ನಿಮ್ಮ ಉಪಕಾರವೇ ಮರೆಯಲಾರೆ."

"ಅದು ಅಂತಿರಲಿ ನಿಮಗೆ ಸೀಟೊಂದು ಹೇಗೂ ಸಿಕ್ಕಿದಂತೆಯೆ. ಈಗ ಅದೇ ಶಾಲೆಯಲ್ಲಿ ನಾವು ಸಭೆ ಸೇರಿಸಿ ಈ ವಿಷಯ ಮಂಡಿಸೋಣ ಹೇಗೆ"?

"ಆಗಬಹುದು. ಇಂದೇ ನಾನು ಆ ಕುರಿತು ತಿಳಿಯಪಡಿಸುತ್ತೇನೆ. ನಾತಿನಲ್ಲಿ ಹೊತ್ತು ಕಳೆದುದೇ ತಿಳಿಯದಾಯಿತು ನಾನೀಗ ಹಾಗಾದರೆ ಬರುವೆ. ನಮಸ್ತೆ ನನಗಿಂದು ಹೋಗದೆ ಉಪಾಯವಿಲ್ಲ."—ತರುಣರು ಎದ್ದುನಿಂತರು.

"ಅಂದಹಾಗೇ ಉಪಾಧ್ಯಾಯರು ರಾಜಕೀಯದಲ್ಲಿ ಪ್ರವೇಶಿಸಬಾರದಲ್ಲ."—ಮುಗುಳುನಗುತ್ತಾ ನುಡಿದರು ರಾಯರು

"ಹಾಗೇನೂ ಭಯವಿಲ್ಲ ನನಗೆ ಇದ್ದುದನ್ನು ಇದ್ದಹಾಗೇ ಹೇಳಲು. ನಾನು ಅಂಜಲಾರೆ ಅದಕ್ಕೋಸುಗ ಬರುವ ಕಷ್ಟಗಳನೆದೆಕೊಡಬಲ್ಲೆ."— ಅಂಗಳದಿಂದಲೇ ನುಡಿದರವರು.

"ಶುಭಾಸ್ ಹಾಗಿರಬೇಕು."—ಎಂದೊಮ್ಮೆ ತಲೆಯಾಡಿಸಿ ಕೈಯಲ್ಲಿದ್ದ ಕಗ್ಗವನ್ನು ಬಿಚ್ಚಿದರು. ತೋರಿಬಂದ ಆ ಪದ್ಯ ಅವರಿಗೆ ತುಂಬಾ ಮೆಚ್ಚುಗೆಯಾಯಿತು. ಇನೊಮ್ಮೆ ರಾಗವತ್ತಾಗಿ ಗಟ್ಟಿಯಾಗಿ ಓದಿದರು. ಅಲೆಅಲೆಯಾಗಿ ಹೊರಟು ಲೀನವಾಯಿತದು ಪ್ರಕೃತಿಯಲ್ಲಿ-

ಹುಲ್ಲಾಗು ಬೆಟ್ಟದಡಿ; ಮನೆಗೆ ಮುಗ್ಗೆ ಯಾಗು|
ಎಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ!!
ಬೆಲ್ಲ ಸಕ್ಕರೆಯಾಗು ದೀನ ದುರ್ಬಲ ರಿಂಗೆ|
ಎಲ್ಲರೊಳಗೊಂದಾಗು - ಮಂಕುತಿಮ್ಮ."

ಸಂದರ್ಭ ಸಾಮಗ್ರಿ-

ಪಶ್ಚಿಮ ವಲಯದ ಸ್ಥೂಲ ಪರಿಚಯ

ಇದೇ ದಿನಾಂಕ ೨೦ರಂದು, ರಾಜ್ಯ ಪುನರ್ಘಟನೆಯನ್ನಯ ಭಾರತದಲ್ಲಿ ಏಕಟ್ಟ ಪಶ್ಚಿಮ ವಲಯದ ಪ್ರಪ್ರಥಮ ಸಭೆಯು ಮೈಸೂರಿನಲ್ಲಿ ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಪಶ್ಚಿಮ ವಲಯಕ್ಕೆ ಸೇರಿದ ನಾವು ಅದರ ಕುರಿತಾದ ಅಲ್ಪ ತಿಳುವಳಿಕೆಯನ್ನಾದರೂ ಪಡೆಸುಕೊಳ್ಳುವುದು ಅತ್ಯಗತ್ಯ.

ಪಶ್ಚಿಮ ವಲಯದಲ್ಲಿ ಪುನರ್ವ್ಯವಸ್ಥಿತ ಮುಂಬೈ ಮತ್ತು ಮೈಸೂರು ಈ ಎರಡು ರಾಜ್ಯಗಳಿರುವುವು. ಪುನರ್ವ್ಯವಸ್ಥಿತ ಮುಂಬೈ ರಾಜ್ಯದಲ್ಲಿ, ಅಬುತಾಲ್ಲೋಕು ಮತ್ತು ಕರ್ನಾಟಕ ಪ್ರದೇಶವನ್ನುಳಿದ ಹಳೆಯ ಮುಂಬೈ, ಕಚ್, ಸೌರಾಷ್ಟ್ರ, ವಿದರ್ಭ (ಮಧ್ಯ ಪ್ರದೇಶ) ಮತ್ತು ಮರಾಠಾವಾಡ (ಹೈದರಾಬಾದ್)ಗಳ ಸೇರುತ್ತವೆ ಪುನರ್ವ್ಯವಸ್ಥಿತ ಮೈಸೂರಿನಲ್ಲಿ, ಹಳೆಯ ಮೈಸೂರು, ಕರ್ನಾಟಕ (ಮುಂಬೈ), ಕರ್ನಾಟಕ (ಹೈದರಾಬಾದ್), ಕೊಡಗು ಮತ್ತು ದಕ್ಷಿಣ ಕನ್ನಡ (ಮದರಾಸ್)ಗಳು ಸೇರುತ್ತವೆ.

ಪಶ್ಚಿಮ ವಲಯದ ವಿಸ್ತೀರ್ಣವು ದೇಶದ ವಿಸ್ತೀರ್ಣದಲ್ಲಿ ೨೦.೮ ರಷ್ಟು ಅಥವಾ ೬೮,೨೨೦ ಚದರ ಮೈಲಿಗಳಿರುವುವು. ಜನಸಂಖ್ಯೆ ಭಾರತದ ಜನಸಂಖ್ಯೆಯಲ್ಲಿ ನೂರಕ್ಕೆ ೧೮.೭ರಷ್ಟು ಅಥವಾ ೬೬ ಲಕ್ಷ.

ಈ ವಲಯದ ಜನಸಾಂದ್ರತೆ ಚದರ ಮೈಲಿಗೆ ೩೫೫ ಅಖಿಲ ಭಾರತ ಜನಸಾಂದ್ರತೆ ೨೮೮, ಮುಂಬೈ ಜನಸಾಂದ್ರತೆ ೫೫೨ ಮತ್ತು ಮೈಸೂರಿನ ಜನಸಾಂದ್ರತೆ ೨೧೮.

ಈ ವಲಯವು ಹಲವು ಪ್ರಮುಖ ಖನಿಜಗಳನ್ನು ಹೊಂದಿರುವುದು. ಮೇಂಗನೀಸ್ ಅದಿರು, ಉಪ್ಪು, ಚಿನ್ನ ಮತ್ತು ಜೇಡಿ ಮಣ್ಣುಗಳು ಇಲ್ಲಿ ಮುಖ್ಯವಾಗಿ ದೊರೆಯುವುವು.

ಈ ವಲಯ ಕೈಗಾರಿಕೆಗಳಲ್ಲಿಯೂ ಬಹಳವಾಗಿ ಮುಂದುವರಿದಿದೆ. ಹತ್ತಿ ಬಟ್ಟೆಗಳು, ಸಿಮೆಂಟ್, ಪಿಂಗಾಣಿ, ಎಣ್ಣೆ, ಸಕ್ಕರೆ ಹೊಗೂ ಜನರಲ್ ಮತ್ತು ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಕೈಗಾರಿಕಾ ಸಂಸ್ಥೆಗಳು ಮುಂಬೈ ರಾಜ್ಯದಲ್ಲಿ ಸ್ಥಾಪನೆಗೊಂಡಿವೆ. ಮೈಸೂರಿನಲ್ಲಿ ಹತ್ತಿಬಟ್ಟೆಗಳು ಖನಿಜ, ಲೋಹ ಮತ್ತು ಎಂಜಿನಿಯರಿಂಗ್ ಕೈಗಾರಿಕೆಗಳು ಇರುವುವು.

ವಿದ್ಯುಚ್ಛಕ್ತಿಯ ಉತ್ಪಾದನೆಯ ವಿಷಯದಲ್ಲಿ ಈ ವಲಯಗಳಲ್ಲಿ, ಈ ವಲಯವು ಪ್ರಥಮ ಸ್ಥಾನವನ್ನು ಪಡೆದಿದೆ. ದ್ವಿತೀಯ ಯೋಜನೆಯ ಅಂತ್ಯದೊಳಗೆ ಈ ವಲಯದ ವಿದ್ಯುಚ್ಛಕ್ತಿಯ ಉತ್ಪಾದನಾ ಸಾಮರ್ಥ್ಯವು ೧೯೫೬ ೦೦೦ ಕಿ. ವ್ಯಾ. ಗಳಿಗೇರುವುದೆಂದು ನಿರೀಕ್ಷಿಸಲಾಗಿದೆ. ಪ್ರಥಮ ಯೋಜನೆಯ ಕೊನೆಯಲ್ಲಿ ಈ ವಲಯದ ವಿದ್ಯುಚ್ಛಕ್ತಿ ಉತ್ಪಾದನೆಯು ೪೮೦,೦೦೦ ಕಿ. ವ್ಯಾ. ಗಳಿದ್ದಿತು. ಅತ್ಯಧಿಕ ಪ್ರಮಾಣದ ಜಲಜನಕ ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯವನ್ನು ಪಡೆದಿರುವ ಕೋಯ್ನಾ, ಉಜೈ, ಶರಾವತಿ ಮತ್ತು ತುಂಗಭದ್ರಾ ಪ್ರಾಜೆಕ್ಟ್‌ಗಳ ಅಭಿವೃದ್ಧಿಕಾರ್ಯ ನಡೆಯುತ್ತಿದೆ. ಈ ವಿದ್ಯುಚ್ಛಕ್ತಿಯನ್ನು ಸುವಿನಿಯೋಜನೆಯಿಂದ ಬಳಸಿಕೊಂಡರೆ ಈ ವಲಯದ ಆರ್ಥಿಕ ಹಾಗೂ ಸಾಮಾಜಿಕ ಚಾಕಚಕ್ಯತೆಯಲ್ಲಿ ತ್ವರಿತಗತಿಯ ಪರಿವರ್ತನೆಯನ್ನು ತರಬಹುದು.

ಮೈಸೂರಿನಲ್ಲಿ ಅನೇಕ ಪ್ರಧಾನ ಕೈಗಾರಿಕಾ ಸಂಸ್ಥೆಗಳಿವೆ. ಅವುಗಳಲ್ಲಿ ಮುಖ್ಯವಾದುವು ಭದ್ರಾವತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಶಾಖಾಗಾಮತ್ತು ಭದ್ರಾವತಿಗಳಲ್ಲಿ ಸಿಮೆಂಟ್ ಕಾರ್ಖಾನೆ, ಶಿವಮೊಗ್ಗದಲ್ಲಿರುವ ಬೆಂಕಿಕಡ್ಡಿಯ ಕಾರ್ಖಾನೆ, ಬೆಂಗಳೂರು ಮತ್ತು ಮೈಸೂರುಗಳಲ್ಲಿರುವ ಉಣ್ಣೆ ಮತ್ತು ರೇಶ್ಮೆ ಬಟ್ಟೆಗಳ ಗಿರಣಿಗಳು, ಬೆಂಗಳೂರಿನಲ್ಲಿರುವ ಕೈಗಡಿಯ ಕಾರ್ಖಾನೆ, ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನ ಕಾರ್ಖಾನೆ, ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಕಾರ್ಖಾನೆ, ಭಾರತ ಎಲೆಕ್ಟ್ರಾನಿಕ್ಸ್ ಮತ್ತು ಭಾರತದ ಟೆಲಿಫೋನ್ ಕಾರ್ಖಾನೆ.

ಮೈಸೂರಿನಲ್ಲಿ ಅದರಲ್ಲೂ ಪಶ್ಚಿಮ ಘಟ್ಟಗಳಲ್ಲಿ ಅಮೂಲ್ಯವಾದ ದಿಮ್ಮಿ ಮರಗಳನ್ನುಳ್ಳ ಕಾಡಿನ ಪ್ರದೇಶದಲ್ಲಿ, ಕೈಗಾರಿಕಾಭಿವೃದ್ಧಿಗೆ ವಿಪುಲವಾದ ಸೌಲಭ್ಯಗಳೂ ಅವಕಾಶಗಳೂ ಇರುವುವು. ಮೈಸೂರಿನಲ್ಲಿ ಸದ್ಯ ಮೂರು ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳಿರುವುದರ ಜೊತೆಗೆ, ಈ ರಾಜ್ಯ ಸರ್ಕಾರದವರು ಶರಾವತಿ ನದಿಯ ಜಲಶಕ್ತಿಯಿಂದ ೭,೧೨,೦೦೦ ಕಿ. ವ್ಯಾ.ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಬೃಹತ್ ಯೋಜನೆಯೊಂದನ್ನು ಕೈಗೊಂಡಿರುವರು.

ದೇಶದಲ್ಲಿರುವ ಒಟ್ಟು ೩೫೦ ಹತ್ತಿ ಬಟ್ಟೆಯ ಗಿರಣಿಗಳ ಪೈಕಿ ೨೦೬ ಗಿರಣಿಗಳು ಮುಂಬೈ ರಾಜ್ಯದಲ್ಲಿಯೇ ಇರುವುವು. ಇ ದೇಶದಲ್ಲಿ ಉತ್ಪಾದಿಸಲಾಗುವ ಒಟ್ಟು ಬಟ್ಟೆಯಲ್ಲಿ ನೂರಕ್ಕೆ ೭೦ರಷ್ಟನ್ನು ಹಾಗೂ ನೂಲಿನಲ್ಲಿ ನೂರಕ್ಕೆ ೫೫ರಷ್ಟನ್ನು ಉತ್ಪಾದಿಸುತ್ತಿವೆ. ಈ ರಾಜ್ಯದಲ್ಲಿರುವ ಎರಡು ತೈಲ ಶುದ್ಧೀಕರಣ ಕಾರ್ಖಾನೆಗಳು ಸುಮಾರು ೫೫ ಲಕ್ಷ ಟನ್ನುಗಳ ಎಣ್ಣೆಯನ್ನು ಅಥವಾ ದೇಶಕ್ಕೆ ಅಗತ್ಯವಾಗುವ ಎಣ್ಣೆಯಲ್ಲಿ ಅರ್ಧದಷ್ಟನ್ನು ಉತ್ಪಾದಿಸುತ್ತಿವೆ. ಪೂರ್ವ ಭಾಗದಲ್ಲಿಯೇ ಭಾರಿ ಜಲವನ್ನು ಉತ್ಪಾದಿಸುವ ಏಕ ಮಾತ್ರ ಕಾರ್ಖಾನೆಯು ಹಾಗೂ ಏಕೈಕ ಆಟಾಮಿಕ್‌ರೀ ಆಕ್ಟರ್ ಯಂತ್ರವು ಮುಂಬೈ ರಾಜ್ಯದಲ್ಲಿ ಸ್ಥಾಪಿತಗೊಂಡಿವೆ.

ವಿದ್ಯುಚ್ಛಕ್ತಿಯ ಸೂರೈಕೆಯ ವಿಷಯದಲ್ಲಿ ಮುಂಬೈ ಅಗ್ರಸ್ಥಾನಗಳಿಸಿದೆ.

ಮುಂಬೈ ರಾಜ್ಯದ ಮಹಾರಾಷ್ಟ್ರ ಜಿಲ್ಲೆಗಳು ಮತ್ತು ಮೈಸೂರು ರಾಜ್ಯದ ಕೆಲವು ಭಾಗಗಳಲ್ಲಿ ಆಗಾಗ್ಗೆ ಅಭಾವ ಪರಿಸ್ಥಿತಿ ಸಂಭವಿಸುತ್ತಿರುತ್ತದೆ. ಪಶ್ಚಿಮ ಘಟ್ಟಗಳಲ್ಲಿ ಹರಿಯುವ ನೀರನ್ನು ಘಟ್ಟಗಳ ಪೂರ್ವ ದಿಕ್ಕಿನಲ್ಲಿರುವ ಅಭಾವ ಕ್ಷೇತ್ರಗಳಿಗೆ ತಿರುಗಿಸುವ ಬಗ್ಗೆ ಸೂಚನೆ ಬಂದಿದ್ದು, ಇದನ್ನು ಕೇಂದ್ರ ಜಲ ಹಾಗೂ ವಿದ್ಯುಚ್ಛಕ್ತಿ ಸಚಿವಾಲಯಕ್ಕೆ ಕಳಿಸಿ ಸಲಹೆಗಿತ್ತು. ಈ ಸೂಚನೆಯಂತೆ ಪಶ್ಚಿಮ ಘಟ್ಟಗಳಲ್ಲಿ ಹರಿಯುವ ನೀರನ್ನು ಪೂರ್ವ ದಿಕ್ಕಿನ ಅಭಾವ ಪ್ರದೇಶಗಳಿಗೆ ತಿರುಗಿಸುವುದರಿಂದ ಭಾರತದ ಪರ್ಯಾಯ ಭೂಮಿಯ ಜಲಸಂಪತ್ತು ವೃದ್ಧಿಸುವುದೆಂದು ಕಮಿಷನ್ ತಿಳಿಸಿದೆ.

ಪ್ರಥಮ ಯೋಜನಾವಧಿಯ ಅಂತ್ಯದ ವೇಳೆಗೆ ಈ ವಲಯದ ೫,೪೪೬ ಸಾವಿರ ಮೈಲಿಗಳಷ್ಟು ರಸ್ತೆಗಳಿದ್ದವೆಂದು ಅಂದಾಜು ಮಾಡಲಾಗಿದೆ. ಮುಂಬೈ ರಾಜ್ಯದಲ್ಲಿ ಸಂಚಾರ ಮಾರ್ಗಗಳ

(೧೦ನೇ ಪುಟ ನೋಡಿರಿ)

ಉಡುಪಿ ಡಿ. ಮು. ಕೋರ್ಟನಲ್ಲಿ

ಕ್ರಮಸಂಖ್ಯೆ 251/1957.

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ ಕಡೆಯಿಂದ ರಿಕವರಿ ಆಫೀಸರ್ ಎಂ. ಎಸ್. ಭಂಡಾರಿ —ವಾದಿ

ಮತ್ತು

ಪೊರ್ಗ ನೇಜ ಬಂಗೇರ ಕೂಡಾ —ಪ್ರತಿವಾದಿರು.

ಯಿವರೊಳಗೆ

ಪ್ರ ರು

2. ದಾನಯೇಲ ಬಂಗೇರ ಪೊರ್ಗ ನೇಜ ಬಂಗೇರರಮಗ 3. ತೇಜಶಾಲ ಕೋಟ್ಯಣ್ಣ ಗಿಲ್ಬರ್ಟ್ ಕೋಟ್ಯಣ್ಣರಮಗ. ಸಂಖ್ಯೆ 76ನೇ ಬಡಗಬೆಟ್ಟು ಗ್ರಾಮದ ವಳಕಾಡು.

ಪ್ರತಿವಾದಿರು ವಾದಿ ಬೇಂಕಿಗೆ ತಾರೀಖು 30 11-1956ರಲ್ಲು ರೂಪಾಯಿ 5001-ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಬಾಬ್ತು ಬರತಕ್ಕ ಅಸಲು ಬಾಕಿಯ ವಸೂಲಿ ನೋಟೀಸಿನಪರ್ಯ ಕೂಡಾ 502-63ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದ್ರಿ ವ್ಯಾಜ್ಯವು ತಾರೀಖು 8-10-1957ಕ್ಕೆ ತನ್ನ ಬಗ್ಗೆ ಯಿದೋಣಾಗಿಯದೆ-ಅ ದಿವಸ ಸದ್ರಿ 2-3ನೆ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉಪಸ್ಥಿತರಾಗಿ ಯಿದ್ರೆ ಅವರ ಗೈರ್ ಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದೆಂದು ಈ ಮೂಲಕ ಸದ್ರಿ 2-3ನೇ ಪ್ರತಿವಾದಿರಿಗೆ ತಿಳಿಯಪಡಿಸೋಣಾಗಿಯದೆ

M. Damodar Kamath
Advocate for Plff.

ಉಡುಪಿ ತಾರೀಖು 17-9-1957.

ಪ್ರಕಟಣೆ

ಆರು ಹೊಸ ಶಾಖೆಗಳು:-

ನವಮೈಸೂರು ಪ್ರಾಂತ್ಯದಲ್ಲಿ

- ಬಾದಾಮಿ ....
- ಜಮ್‌ಖಂಡಿ ....
- ಇಳ್ಕಲ್ ... } (ಬಿಜಾಪುರ ಜಿಲ್ಲೆ)
- ಗುಳೇದಗುಡ್ಡ ...
- ಶೃಂಗೇರಿ .... (ಕಡೂರು ಜಿಲ್ಲೆ)

ಆಂಧ್ರ ಪ್ರಾಂತ್ಯದಲ್ಲಿ

- ಗುಂಟಕಲ್

ಸದ್ಯದಲ್ಲಿಯೇ ತೆರೆಯಲ್ಪಡುವುವು.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್, ಲಿ., ಉಡುಪಿ.

The Canara Industrial & Banking Syndicate, Ltd.,
UDIPI.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಮಹಾತ್ಮರ ಅಮೂಲ್ಯ ನೇತೃತ್ವದ ಫಲ--

ಭಾರತೀಯ ಸ್ವಾತಂತ್ರ್ಯಚಳವಳ.

ಶ್ರೀ ಎಮ್. ರಘುನಂದನ ರಾವ್.

ಜಗತ್ತಿನ ಹಲವು ರಾಷ್ಟ್ರಗಳು ಸಶಸ್ತ್ರ ಸಂಗ್ರಾಮದಿಂದ ಸ್ವತಂತ್ರವಾಗಿದ್ದರೆ, ಭಾರತೀಯರು ಕಾಂಗ್ರೆಸಿನ ಆರ್ಥಾತ್ ಗಾಂಧೀಜಿಯವರ ಅಹಿಂಸಾತ್ಮಕ ಯುದ್ಧದಿಂದ ಸ್ವಾತಂತ್ರ್ಯ ಪಡೆದಿದ್ದೇವೆ. ಜಗತ್ತಿನ ಮಹಾರಾಷ್ಟ್ರಗಳ ಸ್ವಾತಂತ್ರ್ಯೇತಿಹಾಸದಲ್ಲಿ ಭಾರತದ್ದಕ್ಕೊಂದು ವಿಶಿಷ್ಟ ಸ್ಥಾನವಿದೆ. ಕಾರಣ ಹಿಂದೆಯೇ ಹೇಳಲಾಗಿದೆ. ಇಂದಿನ ಈ ಸ್ವಾತಂತ್ರ್ಯ ದಿನದಂದು— ಭಾರತದ ಸ್ವಾತಂತ್ರ್ಯ ಲಾಭಕ್ಕೆ ಗಾಂಧೀಜಿಯವರ ಈ ರಕ್ತಪಾತ ರಹಿತ ಸಂಗ್ರಾಮವು ಎಷ್ಟರ ಮಟ್ಟಿಗೆ ಕಾರಣವಾಯಿತೆಂದು ತಿಳಿಸುವುದೇ ಈ ಲೇಖನದ ಉದ್ದೇಶ. ಭಾರತೀಯರ ಈ ಬಿಡುಗಡೆಯ ಹೋರಾಟವು ಅಹಿಂಸೆಯ ಮಹತ್ವವನ್ನು ಜಗತ್ತಿಗೇ ಸಾರಿತು.

ನಮ್ಮ ಸ್ವಾತಂತ್ರ್ಯಕ್ಕೆ ಹೆಚ್ಚಿನ ಮಟ್ಟಿಗೆ ಕಾರಣವಾದುದು ಕಾಂಗ್ರೆಸ್ ಸಂಸ್ಥೆಯೆಂಬುದು ಸರ್ವವಿದಿತ ವಿಷಯ. ಈ ಸಂಸ್ಥೆಯು ಮೊದಲು ಮಂದಗಾಮಿಗಳ ಮುಂದಾಳ್ತನದಲ್ಲಿ ಮುನ್ನಡೆದು, ಬಳಿಕ ರಾಷ್ಟ್ರೀಯರೆಂಬ ಉಗ್ರವಾದಿಗಳ ಕರ್ಣಧಾರತ್ವದಲ್ಲಿ ತನ್ನ ಚಳವಳವನ್ನು ಮುಂದುವರಿಸಿತೆಂಬುದು ಕಾಂಗ್ರೆಸ್ಸಿನ ಇತಿಹಾಸ ಬಲ್ಲವರಿಗೆ ತಿಳಿಯದ ವಿಷಯವೇನಲ್ಲ. ಈ ಉಗ್ರವಾದಿಗಳು ೧೯೦೭ರಿಂದ ಸುಮಾರು ೧೯೧೭ರ ತನಕ ಈ ಸಂಸ್ಥೆಯ ಮುಖಂಡರಾಗಿದ್ದರು. ಆ ಮೇಲೆ ಭಾರತದ ರಾಷ್ಟ್ರೀಯ ಚಳವಳಿಯ ನೇತೃತ್ವ ಮಹಾತ್ಮಾ ಗಾಂಧಿಯವರ ಪಾಲಿಗೆ ಬಂದಿತು. ಗಾಂಧೀಜಿಯವರು ಭಾರತದಲ್ಲಿ ಹೂಡಿದ ಚಳವಳಿಗಳಲ್ಲಿ ಮೊತ್ತಮೊದಲನೆಯದು ಅಸಹಕಾರ ಚಳವಳಿ ಈ ಚಳವಳಿಗೆ ಕಾರಣವಾದ ಮುಖ್ಯ ಘಟನೆಗಳನ್ನು ವಿಚಾರಿಸುವ.

ಪ್ರಥಮ ಜಾಗತಿಕ ಮಹಾಸಮರವು ಕೊನೆಗೊಂಡ ಮೇಲೆ ಭಾರತವು ಯುದ್ಧದಲ್ಲಿ ಬ್ರಿಟಿಶಿಗೆ ನೆರವು ನೀಡಿದುದರಿಂದ ಅದಕ್ಕೆ ಸ್ವಾತಂತ್ರ್ಯವನ್ನೀಯಲಾಗುವುದೆಂದು ಘೋಷಿಸಲಾಗಿತ್ತು. ಆದರೆ ಮಹಾಯುದ್ಧ ಮುಗಿದು ಒಪ್ಪಂದವಾದರೂ, ಭಾರತವು ಸ್ವತಂತ್ರವಾಗುವ ಚಿಹ್ನೆ ಕಾಣಲಿಲ್ಲವಾದುದರಿಂದ ಭಾರತದ ಧುರೀಣರು ಸರಕಾರದ ಈ ವರ್ತನೆಯನ್ನು ನಿಷೇಧಿಸಿದರು. ಕ್ರಾಂತಿಕಾರಕ ಆಂದೋಲನಗಳನ್ನು ನಿಬಂಧಿಸಲೋಸುಗ ಸಂಕಾರ ಭೀಕರವಾದ ರೌಲೆಟ್ ಮಸೂದೆಯನ್ನು ಜ್ಯಾರಿಗೆ ತಂದಿತು. ಆಗ ಗಾಂಧೀಜಿಯವರು ಈ ಅನ್ಯಾಯದ ಶಾಸನವನ್ನು ವಿರೋಧಿಸಿ ಕರತಾಳವನ್ನಾಚರಿಸುವಂತೆ ರಾಷ್ಟ್ರಕ್ಕೆ ಕರೆಯಿತ್ತರು.

೧೯೧೯ ಎಪ್ರಿಲ್‌ನಲ್ಲಿ ಜಲಿಯನ್ ವಾಲಾ ಬಾಗ್‌ನಲ್ಲಿ ಸೇರಿದ ಸಾರ್ವಜನಿಕ ಸಭೆಯೊಂದರಲ್ಲಿ ನೆರೆದ ಜನರಲ್ಲಿ ಹಲವರನ್ನು ಜನರಲ್ ಡಾಯರ್ ಎಂಬ ಕ್ರೂರ ಸೇನಾಧಿಪತಿಯೋರ್ವನು ಗುಂಡಿಟ್ಟು ಕೊಲ್ಲಿಸಿ, ದೊಡ್ಡ ಹತ್ಯಾಕಾಂಡವನ್ನೇ ಗೈದನು. ಇದರಿಂದ ಭಾರತದಲ್ಲಿ ರಾಷ್ಟ್ರೀಯ ಜಾಗೃತಿಯುಂಟಾಯಿತು. ಮಹಾತ್ಮಾ ಗಾಂಧಿಯವರು ಅಸಹಕಾರ ಚಳವಳಿಯನ್ನಾಚರಿಸಲು ನಿರ್ಧಾರ ಗೈದರು.

ಮಹಾತ್ಮರ ನಿರ್ಧಾರಕ್ಕೆ ಕಾಂಗ್ರೆಸ್ಸಿನ ಅನುಮತಿ ದೊರೆಯಬೇಕಾಗಿದ್ದುದರಿಂದ ೧೯೨೦ರಲ್ಲಿ ಲಾಲಾಲಜಪತ್‌ರಾಯ್‌ರವರ ಅಧ್ಯಕ್ಷತೆಯಲ್ಲಿ ಸೇರಿದ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಅವರ ಠರಾವು ಮಂಡಿಸಲ್ಪಟ್ಟಿತು. ಅದು ಸ್ವೀಕೃತವಾದರೂ, ದೇಶಬಂಧು ಚಿತ್ತರಂಜನ ದಾಸರೂ, ಪಂಡಿತ ಮೋತಿಲಾಲ ನೆಹರೂರವರೂ ತಮ್ಮ ವಿರೋಧ ಸೂಚಿಸಿದರು. ಮುಂದೆ ದಶಂಬರದಲ್ಲಿ ನಡೆದ ನಾಗಪುರ ಅಧಿವೇಶನದಲ್ಲಿಯೂ ಸ್ವರಾಜ್ಯ ಪಕ್ಷದ ಇಬ್ಬರು ಪ್ರಭೃತಿಗಳೂ ತಮ್ಮ ವಿರೋಧ ಸೂಚಿಸಿದರೂ ಫಲಕಾರಿಯಾಗದೇ ಅಸಹಕಾರದ ಗೊತ್ತುವಳಿಯು ಮಂಜೂರಾಯಿತು. ಮುಂದೆ ಈ ದೇಶಸ್ತ್ರೀಮಿಗಗೇರ್ವರೂ ಗಾಂಧೀಜಿಯವರಿಗೆ ಅನುಕೂಲರಾಗಿ ಅಸಹಕಾರ ರಣರಂಗದಲ್ಲಿ ಧುಮುಕಿದರು.

೧೯೨೦ ರಲ್ಲಿ ಚಳವಳಿ ಆರಂಭವಾಯಿತು. ಇದರ ಸರ್ವಾಧಿಕಾರಿಯಾಗಿದ್ದ ಮಹಾತ್ಮಾ ಗಾಂಧೀಯವರು—ಖಾದೀ ಪ್ರಚಾರ, ಹರಿಜನೋದ್ಧಾರ, ವಿದೇಶೀ ವಸ್ತುಗಳ ಬಹಿಷ್ಕಾರ ಹಾಗೂ ಸರಕಾರಾನ ನಿಷೇಧ, ಸರಕಾರೀ ಕಚೇರಿಗಳ ಬಹಿಷ್ಕಾರ — ಮುಂತಾದ ಚಳವಳಿಯ ಮುಖ್ಯ ತತ್ವಗಳನ್ನು ಸಮಸೂರ್ವಕವಾಗಿ ಆಚರಣೆಗೆ ತರುವಂತೆ ಜನತೆಗೆ ಕರೆಯಿತ್ತರು. ಮಹಾತ್ಮರ ಈ ಉಪದೇಶದಿಂದ ಜನತೆ ಉತ್ಸಾಹಭರಿತವಾಯಿತು. ತತ್ಪರಿಣಾಮವಾಗಿ ಎಲ್ಲೆಡೆಗಳಲ್ಲೂ ವಿದೇಶೀ ಮಾಲುಗಳ ಬಹಿಷ್ಕಾರವೇ ಮೇಲಾಯಿತು. ನ್ಯಾಯಾಲಯ, ಸರಕಾರಿ ಕಚೇರಿಗಳನ್ನು ಭಾರತೀಯರು ಬಹಿಷ್ಕರಿಸಿದರು. ದೇಶಬಂಧು ದಾಸ, ಮೋತಿಲಾಲ ನೆಹರೂ, ರಾಜಗೋಪಾಲಾಚಾರ್ಯ, ರಾಜೇಂದ್ರ ಪ್ರಸಾದ ಮುಂತಾದ ಮೇಧಾವಿ ವಕೀಲರು ತಮ್ಮ ಲಾಭದಾಯಕ ವೃತ್ತಿಯನ್ನೇ ತೊರೆದರು. ಜನತೆಗೆ ವಿದ್ಯಾರ್ಥಿಗಳು ಶಾಲೆ, ಕಾಲೇಜುಗಳಿಂದ ಹೊರಬಂದುದರಿಂದ ಅವರ ವ್ಯಾಸಂಗಕ್ಕೆ ರಾಷ್ಟ್ರೀಯ ವಿದ್ಯಾಲಯಗಳೂ, ವಿದ್ಯಾಪೀಠಗಳೂ ಸ್ಥಾಪಿತವಾದುವು. ಅಲ್ಲದೇ ರವೀಂದ್ರ ನಾಥಠಾಗೂರರಂತಹ ವಿಶ್ವವಂದ್ಯ ಕವಿಯೂ ಸಿ. ಆರ್. ದಾಸ್, ಪದವೀಧರರಾಗಿ ತಾಯ್ನಾಡಿಗೆ ಮರಳಿದ್ದ ಸುಭಾಷಚಂದ್ರ ಬೋಸರೂ ತಮ್ಮ ಬಿಳಿದುಬಾವಲಿಗಳನ್ನೂ, ಘನ ಪದವಿಗಳನ್ನೂ ತ್ಯಜಿಸಿದರು. ಹೀಗೆ ಅಸಹಕಾರದ ಬೇಗೆಯು ಕೆಲಸಮಯದಲ್ಲೇ ಅಖಿಲ ರಾಷ್ಟ್ರವ್ಯಾಪಿಯಾಯಿತು. ಸರಕಾರವೂ ದಬ್ಬಾಳಿಕೆಗಾರಂಭಿಸಿ ಕೆಲವೆಡೆ ನಿರಪರಾಧಿ ಸತ್ಯಾಗ್ರಹಿಗಳ ಪ್ರಾಣಾಪಹರಣ ಕಾರ್ಯಕ್ರಮಗಳೂ ನಡೆದುವು. ಆದರೆ ಜನತೆಯು ಉತ್ಸಾಹ ನೂರ್ಮಡಿಯಾಯಿತಲ್ಲದೇ ಕುಗ್ಗಲಿಲ್ಲ.

ಇದೇ ಸಮಯದಲ್ಲಿ ಭಾರತಕ್ಕೆ ಬ್ರಿಟಿನಿಯ ವರಾಜನ ಆಗಮನವಾಯಿತು. ಸೂರ್ವನಿಶ್ಚಯದಂತೆ ಅವನ ಆಗಮನವು ಬಹಿಷ್ಕೃತವಾಯಿತಲ್ಲದೇ, ಚೌರಿ ಚೌರಾ ಎಂಬಲ್ಲಿ ಕೆಲವರು ದಂಗೆಯೆದ್ದು, ಪೋಲೀಸರನ್ನು ಕೊಂದರು. ಇದರಿಂದ ಮನಬಿತರಾದ ಗಾಂಧೀಜಿ ಉಪವಾಸವನ್ನು ಕೈಗೊಂಡರು. ಸಮರು ಸಾಧಿಸಿ ಹೊಂಚು ಹಾಕುತ್ತಿದ್ದ ಸರಕಾರ ಆ ತನಕ ನಡೆದ ಘಟನೆಗಳಿಗೆ ಗಾಂಧೀಜಿಯವರೇ ಕಾರಣರೆಂದೂಹಿಸಿ ಅವರಿಗೆ ಆರು ವರ್ಷಗಳ ಸಜೆಯನ್ನು ವಿಧಿಸಿದರು

ಅವರ ಬಂಧನ ಕಾಲದಲ್ಲಿ - ಶಾಸನ ಸಭಾ ಪ್ರವೇಶವನ್ನು ಸಮರ್ಥಿಸುವ, ದೇಶಬಂಧು ದಾಸ ಹಾಗೂ ಪಂಡಿತ ಮೋತೀಲಾಲ ನೆಹರೂರವರ ಒಂದು ಪಕ್ಷವೂ ಅದಕ್ಕೆ ವಿರೋಧಿಯಾದ, ರಾಜಗೋಪಾಲಾಚಾರ್ಯ ಹಾಗೂ ರಾಜೇಂದ್ರ ಪ್ರಸಾದರ ಇನ್ನೊಂದು ಪಂಗಡವೂ ಉದಿಸಿದುವು- ಇವುಗಳಲ್ಲಿ, ಎರಡನೆಯವರದೇ ಮೇಲುಗೈಯಾದುದರಿಂದ ಮೊದಲನೆಯವರು 'ಸ್ವರಾಜ್ಯಪಕ್ಷ' ವನ್ನು ಸ್ಥಾಪಿಸಿದರು. ತನ್ಮಧ್ಯೆ ೧೯೨೪ರಲ್ಲಿ ಗಾಂಧೀಜಿ ಬೇನೆ ಬಿದ್ದುದರಿಂದ ಅವರ ಬಿಡುಗಡೆಯಾಯಿತು ಆ ವರ್ಷದ ಅಧಿವೇಶನಕ್ಕೆ ಅಧ್ಯಕ್ಷರಾಗಿ ಚುನಾಯಿತರಾದ ಅವರು, ಸ್ವರಾಜ್ಯ ಪಕ್ಷವನ್ನು ಕಾಂಗ್ರೆಸ್ಸಿನಲ್ಲಿಯೇ ವಿಲೀನಗೊಳಿಸಿದರು.

೧೯೨೭ರಲ್ಲಿ ಡಾ| ಮುಕ್ತಾರ್ ಅಹಮದ್ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸು ಮದ್ರಾಸಿನಲ್ಲಿ ಸೇರಿತು. ಈ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಠರಾವು ಮಂಜೂರಾಗಿ, ದೇಶಕ್ಕೆ ಹೊಸ ಸಂಧಾಂಣಿಗಳನ್ನು ಕೊಡಲು ಬರಲಿದ್ದ ಸೈಮನ್ ಸಮಿತಿಯನ್ನು ಬಹಿಷ್ಕರಿಸಬೇಕೆಂದು ಅಖಿಲ ರಾಷ್ಟ್ರಕ್ಕೆ ಕರೆಯನ್ನೀಯುವ ಗೊತ್ತುವಳಿಯೂ ಸ್ವೀಕೃತವಾಯಿತು ಅದಂತೆ ಸಮಿತಿಯು ಭಾರತಕ್ಕೆ ಬಂದಾಗ ಜನತೆ ಅದನ್ನು ಬಹಿಷ್ಕರಿಸಿತ್ತಲ್ಲದೇ, ಕೆಲವೆಡೆಗಳಲ್ಲಿ ಸಮಿತಿಯ ನಿಷೇಧಾರ್ಥ ಮೆರವಣಿಗೆಗಳೂ ನಡೆದುವು ಆ ಸಮಯದಲ್ಲಿ 'ಪಂಜಾಬದ ಕೇಸರಿ' ಲಾಲಾ ಲಜಪತ್‌ರಾಯ್ ಆತ್ಮಬಲಿದಾನಗೈದು ಅಮರರಾದರು.

೧೯೩೦ನೆಯ ವರ್ಷ. ಲಾಹೋರ್ ಅಧಿವೇಶನದ ಅಧ್ಯಕ್ಷ ಪೀಠದಿಂದ ಪಂಡಿತ ಜವಾಹರಲಾಲ ನೆಹರೂರವರು ಸಮಿನಯ ಶಾಸನಭಂಗದ ಗೊತ್ತುವಳಿಯನ್ನು ಘೋಷಿಸಿ, ಜನವರಿ ೨೬ರಂದು ರಾಷ್ಟ್ರದಾದ್ಯಂತ ಸ್ವಾತಂತ್ರ್ಯ ದಿನವನ್ನಾಚರಿಸಬೇಕೆಂದು ಜನತೆಯನ್ನು ಕೇಳಿಕೊಂಡರು. ಉಪ್ಪಿನ ಕರ ನಿರಾಕರಣೆಯು ಶಾಸನಭಂಗದ ಮುಖ್ಯ ಗುರಿಯಾಗಿತ್ತು. ಜಳವಳಿಯನ್ನಾರಂಭಿಸುವ ಮುನ್ನ ಗಾಂಧೀಜಿ ರಾಷ್ಟ್ರದ ಜನತೆಗೆ ಒಂದು ಬೇಡಿಕೆಗಳನ್ನು ವೈಸರೋಯಿಯ ಮುಂದಿರಿಸಿದರು. ಆದರೆ ಅವು ತಿರಸ್ಕೃತವಾದುದರಿಂದ ಮಹಾತ್ಮರು ಸಾಬರಮತಿ ಆಶ್ರಮದ ಶಿಷ್ಯರೊಂದಿಗೆ ಕಡಲತೀರದೆಡೆಯ ನಂಡೀಗ್ರಾಮದಲ್ಲಿ ಉಪ್ಪನ್ನು ತಯಾರಿಸಿ, ಶಾಸನೋಲ್ಲಂಘನೆ ಗೈದರು. ರಾಷ್ಟ್ರದ ನರನಾಡಿಗಳಲ್ಲಿ ಸಜೀವ ಚೈತನ್ಯವೇ ಪ್ರವಹಿಸಲಾರಂಭಿಸಿತು. ರಾಷ್ಟ್ರದಾದ್ಯಂತ ಹುರುಪಿನಿಂದ ಚಳವಳಿಯು ನಡೆಯಿತು. ಸರಕಾರವೂ ದಬ್ಬಾಳಿಕೆಗೆ ಮೊದಲು ಮಾಡಿತು. ದೇಶದಲ್ಲಿ ಕೆನ್ನೀರ ಕಾಲುವೆಯೇ ಹರಿಯಿತು. ಮೇ ೫ರಂದು ಗಾಂಧೀಜಿಯವರು ಬಂಧಿತರಾದರು.

ಸತ್ಯಾಗ್ರಹವನ್ನು ನಿಲ್ಲಿಸಲೋಸುಗ ಗಾಂಧಿ-ಇರ್ವಿನ್ ಒಪ್ಪಂದವಾಗಿ ೧೯೩೧ರಲ್ಲಿ ಗಾಂಧೀಜಿಯವರ ಬಿಡುಗಡೆಯಾಯಿತು. ಎರಡನೆಯ ದುಂಡುಮೇಜಿನ ಪರಿಷತ್ತಿಗೆ ಆಮಂತ್ರಿತರಾಗಿದ್ದ ಕಾಂಗ್ರೆಸ್ಸಿನ ಏಕಮಾತ್ರ ಪ್ರತಿನಿಧಿ ಮಹಾತ್ಮರು ಲಂಡನ್ನಿನಲ್ಲಿ—ಭಾರತದ, ಅದರಲ್ಲಿಯೂ ಮುಖ್ಯವಾಗಿ ಹರಿಜನರ ಸಮಸ್ಯೆಗಳ ಪರಿಹಾರದ ಬಗ್ಗೆ ಮಾತಾಡಿಸಿದರು. ಆದರೆ ಪ್ರಯೋಜನ ದೊರೆಯಲಿಲ್ಲ. ಹರಿಜನರಿಗೆ ಪ್ರತ್ಯೇಕ ಮತದಾರ ಸಂಘಗಳನ್ನೇರ್ಪಡಿಸುವ ತನ್ನ ಅಂತಿಮ ನಿರ್ಧಾರವನ್ನು ಆಂಗ್ಲ ಸರಕಾರ ಪ್ರಕಟಿಸಿಯೇ ಬಿಟ್ಟಿತು. ಹಿಂದುಗಳಿಗೆ ಸಂಯುಕ್ತ ಮತದಾರ ಸಂಘಗಳನ್ನೇರ್ಪಡಿಸುವ ತನಕ ಗಾಂಧೀಜಿ ನಿರಶನ ವ್ರತವನ್ನು ಕೈಗೊಳ್ಳುವೆನೆಂದು ಸಾರಿದರು. ಕೊನೆಗೆ ಸರಕಾರ ಮಣಿಯಲೇ ಬೇಕಾಯಿತು. ಗಾಂಧೀಜಿಯವರ ಪಾದವನ್ನು ಸರಕಾರವೊಪ್ಪಿತು.

೧೯೩೨ರಲ್ಲಿ ಗಾಂಧೀಜಿಯವರು ವೈಯಕ್ತಿಕ ಸತ್ಯಾಗ್ರಹವನ್ನಾರಂಭಿಸಿದಾಗ ಆಗಸ್ಟ್ ೧೯ರಂದು ಅಶ್ರಮದ ಶಿಷ್ಯರೊಂದಿಗೆ ಅವರ ಬಂಧನವಾಗಿ ನಾಲ್ಕು ದಿನಗಳ ನಂತರ ಬಿಡುಗಡೆಯೂ ಆಯಿತು. ಜನತೆಗೆ ಮಣಿಯಲ್ಲೇ ವಾಸಿಸಬೇಕೆಂದು ಅವರನ್ನು ನಿರ್ಬಂಧಿಸಿದುದರಿಂದ ಅವರು ಉಪವಾಸವನ್ನಾರಂಭಿಸಿದರು. ಕೊನೆಗೆ ಉಪಾಯಗಾಣದೇ ಸರಕಾರ ಅವರನ್ನು ಬಿಡುಗಡೆಗೊಳಿಸಿತು. ೧೯೩೮ರಲ್ಲಿ ಸತ್ಯಾಗ್ರಹ ನಿಂತಿತು.

೧೯೩೫ರ ಗವರ್ನ್‌ಮೆಂಟ್ ಒಫ್ ಇಂಡಿಯಾ ಆಕ್ಟ್‌ನ ಅನ್ವಯ ೧೯೩೭ರಲ್ಲಿ ಗಡಿನಾಡಿನೊಳಗೂಡಿ ಭಾರತದ ಎಂಟು ಸ್ವಾಯತ್ತಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ಅಧಿಕಾರಗಳನ್ನು ರಚಿಸಿದುವು. ಆದರೆ ಮುಂದಿನೆರಡು ವರ್ಷಗಳಲ್ಲೇ ದ್ವಿತೀಯ ಜಾಗತಿಕ ಯುದ್ಧಾರಂಭವಾದಾಗ ಭಾರತದೊಡನೆ ವಿಚಾರ ವಿನಿಮಯ ನಡೆಸದೇ, ಭಾರತವನ್ನೂ ಯುದ್ಧದಲ್ಲಿ ಕೆಳೆದುಕೊಂಡುದರಿಂದ ಈ ಮಂತ್ರಿ

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಭಾರತದಲ್ಲಿ ಸಂಘೀಕರಿಸಲ್ಪಟ್ಟುದು: ಮೆಂಬರರ ಹೊಣೆ ಮಿತೀಕರಿಸಲ್ಪಟ್ಟಿದೆ)

ಟೆಲಿಫೋನ್ ನಂ. 114] ಹೆಡ್ ಆಫೀಸು: ಮಂಗಳೂರು, ದ. ಭಾರತ. [ಪೋಸ್ಟ್ ಬಾಕ್ಸ್ ನಂಬ್ರ 113

ವರ್ಷಕ್ಕೆ ಶೇಕಡಾ 7½ ದರಕ್ಕೆ ವಿೂರದ ಬಡ್ಡಿಯಲ್ಲಿ ಬಂಗಾರ ಮತ್ತು ಬಂಗಾರದ ಆಭರಣಗಳ ಮೇಲೆ ಸಾಲ ಕೊಡಲಾಗುವುದು.

THE KARNATAKA BANK LIMITED

ಮಂಡಲಗಳು ರಾಜಿನಾಮೆಯಿತ್ತು ಹೊರ ಬಂದುವು. ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಸಂಬಂಧವಿದ್ದದರಿಂದ ಗಾಂಧೀಜಿ ೧೯೪೦ ರಲ್ಲಿ ಸತ್ಯಾಗ್ರಹ ಹೂಡಿದರು ಅದೇ ವರ್ಷದ ರಾಮಘಡದ ಕಾಂಗ್ರೆಸ್ ಅಧಿವೇಶನದಲ್ಲಿ ಆಂಗ್ಲ ಯುದ್ಧ ನೀತಿಯನ್ನು ಖಂಡಿಸಿ ಭಾರತಕ್ಕೆ ಸ್ವಾತಂತ್ರ್ಯ ದೊರೆಯಬೇಕೆಂದು ಸಾರಲಾಯಿತು.

೧೯೪೦ರಲ್ಲಿ ಆಂಗ್ಲ ಪ್ರಧಾನಿ ಚರ್ಚಿಲರು ಭಾರತದ ರಾಜಕೀಯ ಸಮಸ್ಯೆಗಳ ಪರಿಹಾರಾರ್ಥಸರ್ ಸ್ಟ್ರಿಫೋರ್ಡ್‌ಕ್ರಿಪ್ಸ್—ಎಂಬವರನ್ನು ಭಾರತಕ್ಕೆ ಕಳುಹಿಸಿದರು. ಅವರು ಇಲ್ಲಿಗೆ ಬಂದು ಭಾರತೀಯ ಧುರೀಣರೊಂದಿಗೆ ಭಾರತದ ರಾಜಕೀಯ ಪರಿಸ್ಥಿಯ ಬಗ್ಗೆ ವಿಚಾರ ವಿನಿಮಯ ನಡೆಸಿ, ಯುದ್ಧಾನಂತರ ಭಾರತೀಯ ಒಕ್ಕೂಟವನ್ನು ರಚಿಸಲು ಬ್ರಿಟನು ಬೆಂಬಲ ನೀಡುವುದೆಂದೂ, ಎಲ್ಲಾ ಪಕ್ಷದವರೊಂದುಗೂಡಿ ತಾತ್ಕಾಲಿಕ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆಂದು ಘೋಷಣೆ ಹೊರಡಿಸಿದರು. ಆದರೆ ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್‌ಗಳಿಗೆ ಇದು ಒಪ್ಪಿಗೆಯಾಗಲಿಲ್ಲ.

೧೯೪೨ರ ಆಗಸ್ಟ್ ತಿಂಗಳು ಬಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಬಾಂಬಯಿಯಲ್ಲಿ ಸೇರಿ ಆಂಗ್ಲರು ಭಾರತದಿಂದ ತೊಲಗಬೇಕೆಂದು ಘೋಷಿಸುವ 'ಚಲೇ ಜಾವ್' ಚಳವಳಿಯ ಕಾರ್ಯಕ್ರಮಗಳನ್ನು ಸ್ವೀಕರಿಸಿತು. ಕಾರ್ಯಕ್ರಮಗಳನ್ನು ಮಂಡಿಸಿದ ಮಹಾತ್ಮರೇ ಚಳವಳಿಯ ಸರ್ವಾಧಿಕಾರಿಯಾದರು. ಈ ಚಳವಳಿಯು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಕೊನೆಯದು. ಆಗಸ್ಟ್ ೧೯ರಂದು ಚಳವಳಿಯ ಆರಂಭವಾದಾಗ ಗಾಂಧೀಜಿಯವರೊಡಗೂಡಿ ಹಲವರು ಧುರೀಣರನ್ನು ಬಂಧಿಸಿತು ಸರಕಾರ. ಜನರು ರೈಲು ಮಾರ್ಗಗಳನ್ನು ಕೀಳುವ, ಅಂಚೆ ಕಚೇರಿಗಳನ್ನು ಸುಡುವ, ತಂತಿ ಕಂಬಗಳನ್ನು ಕತ್ತರಿಸುವ—ಮೊದಲಾದ ವಿಧ್ವಂಸಕ ಕಾರ್ಯಕ್ರಮಗಳನ್ನೆಸಗಿದರು ಆಂತೆಯೇ ಸರಕಾರವೂ ದಂಡ ನೀತಿಗೆ ಶರಣಾ ಹೋಯಿತು.

ಎಷ್ಟೋ ಶತಮಾನಗಳಿಂದ ಎಂತೆಂತಹ ಭೀಕರ ಶಸ್ತ್ರ ಸಂಗ್ರಾಮಗಳಿಗೂ ಬೆದರದೇ ಅವುಗಳನ್ನೆ ಧೈರ್ಯಸ್ಥೈರ್ಯಗಳಿಂದಿರಿಸಿದ ಆಂಗ್ಲ ಸಾಮ್ರಾಜ್ಯಶಾಹಿ ಎದೆ—ಗಾಂಧೀಜಿಯವರು ಹೂಡಿದ 'ಚಲೇ ಜಾವ್' ಚಳವಳಿಯಿಂದ ತತ್ತರಿಸಿ ಅದು ಮಹಾತ್ಮರಿಗೆ ತಲೆವಾಗಬೇಕಾಯಿತಲ್ಲದೇ, ಮುಂದೆ ೫ ವರ್ಷಗಳಲ್ಲೇ ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಲು ದೃಕ್ತವಾಯಿತು! ಅಹಿಂಸೆಯ ಹಾಗೂ ಸಾತ್ವಿಕ ಶಕ್ತಿಯ ಮಹಿಮೆ ಅಪಾರವಾದುದು! ಮಹಾತ್ಮರ ಪರಿಶ್ರಮದ ಫಲದಿಂದ ೧೯೪೭ರ ಆಗಸ್ಟ್ ೧೫ರಂದು ಭರತ ಮಾತೆ ವಿದೇಶೀಯರ ಹಿಡಿತದಿಂದ ಪಾರಾದಳು.

ವಿದೇಶೀಯರ ದಬ್ಬಾಳಿಕೆಯಿಂದ ಬೇಸತ್ತು, ಜೇತನ ಹೀನರಾಗಿ, ತಮ್ಮ ಉಜ್ವಲ ಸಂಸ್ಕೃತಿಯನ್ನೂ ಮರೆತು, ನಿದ್ದೆಹತ್ತಿದ್ದ ಕಂಗಟ್ಟಿ ಭಾರತೀಯ ಜನತೆಗೆ ಸ್ಫೂರ್ತಿಯನ್ನಿತ್ತು, ಉಜ್ವಲವಾದ ಭಾರತೀಯ ಸಂಸ್ಕೃತಿಯನ್ನವರಿಗೆ ಮನಗಾಣಿಸಿ, ಅವರನ್ನು ನಿದ್ದೆಯಿಂದ ಹೊಡೆದೆಬ್ಬಿಸಿ, ಯೋಗ್ಯ ಮಾರ್ಗದರ್ಶನವನ್ನು ಮಾಡಿ ಸ್ವಾತಂತ್ರ್ಯಕ್ಕೆ ಕಾರಣರಾದ ಭಾರತೀಯ ಸ್ವಾತಂತ್ರ್ಯ ಶಿಲ್ಪಿ ಮಹಾತ್ಮಾ ಗಾಂಧಿಯವರು ಅಹಿಂಸಾತ್ಮಕವಾಗಿ ಆಂಗ್ಲ ಸರಕಾರವನ್ನಿದಿರಿಸಿ, ಅಹಿಂಸೆಯ ಹಿರಿಮೆಯನ್ನು ಜಗತ್ತಿಗೇ ಸಾರಿದರು ನಮ್ಮ ನಾಡಿನ ಪಾಲಿಗೆ ಸುದಿನವಾದ ಇಂದು, ನಮ್ಮ ಮಾತೆಯ ಬಂಧನದ ಬಿಡುಗಡೆಗೆ ಕಾರಣರಾದ ಗಾಂಧೀಜಿಯವರಂತಹ ಪ್ರಾತಃ ಸ್ಮರಣೀಯರಾದ ಮಹಾನೀಯರನ್ನು ಕೃತಜ್ಞತಾ ಸೂರ್ವಕವಾಗಿ ನೆನೆಗು ಸ್ಫೂರ್ತಿಯುತರಾಗೂವ!

ರಾಷ್ಟ್ರಭಾಷೆಯ ಪ್ರಚಾರ ಕಾರ್ಯ—

ಕೇಂದ್ರ ಸರಕಾರದ ತೀವ್ರ ಕಾರ್ಯಕ್ರಮ.

ಭಾರತವು ಸ್ವತಂತ್ರ ರಾಷ್ಟ್ರವೆನಿಸಿದ ನಂತರ, ಆ ಮೊದಲು ದೇಶಭಾಷೆಯಾಗಿ ನೆಲೆಯೂರಿದ್ದ ವಿದೇಶೀಯ ಭಾಷೆಯಾದ ಇಂಗ್ಲಿಷನ್ನು ಹೊರದೂಡುವ ಅಭಿಲಾಷೆ ನಮ್ಮಲ್ಲಿನ ಕೆಲವರಲ್ಲಿ ಹುಟ್ಟಿಕೊಂಡಿದ್ದು, ಭಾರತವು ಹಿಂದೀ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಸ್ವೀಕರಿಸಿ ಹಿಂದೀ ಅಭಿವೃದ್ಧಿಯತ್ತ ವಿಶೇಷ ಗಮನವಿತ್ತಿದೆ

ದೇವನಾಗರಿ ಲಿಪಿಯುಳ್ಳ ಹಿಂದಿಯು ಕೇಂದ್ರದ ಅಧಿಕೃತ ಭಾಷೆಯಾಗಿರುತ್ತದೆಂದೂ, ಅದನ್ನು ಅಭಿವೃದ್ಧಿಪಡಿಸಬೇಕೆಂದೂ ಭಾರತ ಸಂವಿಧಾನದಲ್ಲಿ ನಿರ್ಧರಿಸಲಾಗಿದೆ ಅದರಂತೆ ಹಿಂದಿಯು ಭಾರತದ ಸಮಗ್ರ ಸಾಂಸ್ಕೃತಿಕ ಅಂಶಗಳ ಅಭಿವ್ಯಕ್ತಿಯ ಮೂಲ ಮಾಧ್ಯಮವಾಗಿರುವುದು.

ಕೇಂದ್ರ ಸರಕಾರವು ರಾಜ್ಯಗಳಿಗೆ ಹಾಗೂ ಸ್ವಯಂ ಸಂಸ್ಥೆಗಳಿಗೆ ಹಿಂದೀ ಭಾಷಾಪ್ರಚಾರ ಮತ್ತು ಅಭಿವೃದ್ಧಿಗಾಗಿ ಸಹಾಯಧನವನ್ನು ನೀಡಿದೆ. ಇದುವರೆಗೆ ಈ ಉದ್ದೇಶಗಳಿಗಾಗಿ ಹಿಂದ್ಯೇತರ ಭಾಷಾರಾಜ್ಯಗಳಿಗೆ ಒಟ್ಟು ೧೮ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಈ ಉದ್ದೇಶಕ್ಕಾಗಿ ರಾಜ್ಯಗಳಿಗೆ ನೆರವನ್ನು ನೀಡಲು ೫ಲಕ್ಷ ರೂಪಾಯಿಗಳನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ.

ಹಿಂದ್ಯೇತರ ಕ್ಷೇತ್ರಗಳಲ್ಲಿನ ಜನರ ಅನುಕೂಲಕ್ಕಾಗಿ, ಅವರ ಸ್ವಂತ ಮಾತೃಭಾಷೆಯ ಮೂಲಕ ಹಿಂದಿಯನ್ನು ಕಲಿಯಲು ಹಿಂದಿ ಹಾಗೂ ೧೮ ಪ್ರಾದೇಶಿಕ ಭಾಷೆಗಳಲ್ಲಿ ದ್ವಿಭಾಷಾ ವರ್ಣಮಾಲೆಯನ್ನು ತಯಾರಿಸಲು ಒಂದು ಯೋಜನೆಯನ್ನು ರೂಪಿಸಲಾಗಿದೆ. ಪ್ರತಿ ಭಾಷೆಯಲ್ಲಿಯೂ ಮೂರು ಉತ್ತಮ ವರ್ಣಮಾಲೆಗಳಿಗೆ ಬಹುಮಾನಗಳನ್ನು ನೀಡಲಾಗುವುದು.

ಹಿಂದಿ ಭಾಷೆಯನ್ನರಿಯದ ಕೇಂದ್ರ ಸರಕಾರದ ನೌಕರರಿಗೆ ಹಿಂದಿಯನ್ನು ಬೋಧಿಸುವ ಯೋಜನೆಯನ್ನು ೧೯೫೨ ರ ಜುಲೈ ತಿಂಗಳಲ್ಲಿ ಆರಂಭಿಸಲಾಯಿತು. ಪ್ರಸ್ತುತ ಸಮಯದಲ್ಲಿ ಮೂರು ವರ್ಗಗಳನ್ನು ನಿರ್ದೇಶಿಸಲಾಗಿದೆ. ಇದುವರೆಗೆ ನಡೆಸಿದ ವಿವಿಧ ಪರೀಕ್ಷೆಗಳಲ್ಲಿ ೨೧೮೮ ಮಂದಿ ಉತ್ತೀರ್ಣರಾಗಿರುವರು.

ಹಿಂದಿಯ ಮೂಲ ವ್ಯಾಕರಣದ ಇಂಗ್ಲಿಷ್ ಅನುವಾದ, ಹಿಂದಿಗೆ ಸಾಮಾನ್ಯ ಪದಗಳ ದ್ವಿಭಾಷಾ ಪಟ್ಟಿಗಳು ಮತ್ತು ಇತರ ಪ್ರಮುಖ ಭಾರತೀಯ ಭಾಷೆಗಳ ಪಟ್ಟಿಗಳನ್ನು ತಯಾರಿಸಲಾಗಿದೆ. ಅವು ಈಗ ಮುದ್ರಿತವಾಗತ್ತಲಿವೆ. ಹಿಂದೀ ಭಾಷೆಯಲ್ಲಿ ಉತ್ತಮ ಸಾಹಿತ್ಯದ ಉತ್ಪಾದನೆಗೆ ಉತ್ತೇಜನವೀಯಲು. ಕೇಂದ್ರ ಸರಕಾರದ ಯೋಜನೆಗಳ ಪ್ರಕಾರ ಹಿಂದಿ ಪುಸ್ತಕ ಕರ್ತಾರಿಗೆ ಯೋಗ್ಯ ಬಹುಮಾನಗಳನ್ನು ನೀಡಲಾಗಿದೆ.

ಹಿಂದಿಯಲ್ಲಿ ವೈಜ್ಞಾನಿಕ ಪಾರಿಭಾಷಿಕ ಶಬ್ದಗಳ ಶಬ್ದಕೋಶಗಳನ್ನು ತಯಾರಿಸಲು, ೧೯೫೦ರಲ್ಲಿ ಪ್ರಖ್ಯಾತ ವಿಜ್ಞಾನಿಗಳು ಮತ್ತು ಶಬ್ದ ಶಾಸ್ತ್ರಜ್ಞರನ್ನೊಳಗೊಂಡ ವೈಜ್ಞಾನಿಕ ಪಾರಿಭಾಷಿಕ ಶಬ್ದ ಮಂಡಲಿಯೊಂದನ್ನು ಕೇಂದ್ರ ಸರಕಾರವು ರಚಿಸಿದೆ ಈಗ ಹಿಂದೀ ಮಂಡಳಿಯ ನಿರ್ದೇಶದ ಮೇರೆಗೆ ವಿವಿಧ ವಿಜ್ಞಾನಗಳಲ್ಲಿ ಕೆಲಸ ಮಾಡುತ್ತಿರುವ ಪರಿಣತರ ೨೦ ಸಮಿತಿಗಳಿವೆ. ಮತ್ತು ಮೂರು ಪರಿಣತರ ಸಮಿತಿಗಳನ್ನು ರಚಿಸಲಾಗಿದೆ. ಅವು ಸದ್ಯ

ಅಮೇರಿಕದ ಅಂತಾರಾಷ್ಟ್ರೀಯ ಕಾರ್ಪೋರೇಶನ್ ಅಡಳಿತೆಯ ಮುಖ್ಯಾಧಿಕಾರಿಯಾಗಿ ಅಧ್ಯಕ್ಷ ಐಸನ್ ಹಾವರರಿಂದ ನಾಮಕರಣ ಮಾಡಲ್ಪಟ್ಟ ಜೇಮ್ಸ್ ಎಚ್. ಸ್ಮಿತ್.

ದಲ್ಲಿಯೇ ಕೆಲಸವನ್ನು ಆರಂಭಿಸಿರುವುವು.

ಭಾರತ ಸರಕಾರದ ಶಿಕ್ಷಣ ಮತ್ತು ವೈಜ್ಞಾನಿಕ ಮಂತ್ರಿ ಶಾಖೆಯು ಹಿಂದಿ ವಿಭಾಗದ ಸಂಶೋಧನಾ ವರ್ಗವು ಹಿಂದಿಯಲ್ಲಿ ೯೦,೦೦೦ಕ್ಕೂ ಹೆಚ್ಚು ಪಾರಿಭಾಷಿಕ ಶಬ್ದಗಳನ್ನು ಸಂಗ್ರಹಿಸಿರುವುದು ಭೌತಶಾಸ್ತ್ರ, ರಸಾಯನಿಕ ಶಾಸ್ತ್ರ, ಗಣಿತ ಶಾಸ್ತ್ರ, ವನಸ್ಪತಿ ಶಾಸ್ತ್ರ, ಸಮಾಜ ವಿಜ್ಞಾನ ಹಾಗೂ ಕೃಷಿವಿಜ್ಞಾನಗಳಲ್ಲಿ ಮಾಧ್ಯಮಿಕ ಮಟ್ಟದವರೆಗೆ ಶಬ್ದಗಳ ಅಂತಿಮ ಪಟ್ಟಿಗಳನ್ನು ಪ್ರಕಟಿಸಿ ಮಾರಾಟಕ್ಕೆಡಲಾಗಿದೆ.

ಮೂಲ ಹಿಂದಿ ಶಬ್ದಗಳ ಎರಡು ಪಟ್ಟಿಗಳನ್ನು ತಯಾರಿಸಲಾಗಿದೆ. ಹಿಂದಿ ಮಾತನಾಡದ ಕ್ಷೇತ್ರಗಳ ಜನರಿಗಾಗಿ ಹಿಂದಿ ಪಾಠಾವಳಿಗಳನ್ನು ತಯಾರಿಸಲು ಬಳಸಬಹುದಾದ ೩೦೦೦ ಶಬ್ದಗಳ ಒಂದು ಪಟ್ಟಿ. ಪ ತ್ತೊಂದು ಹಿಂದಿಯಲ್ಲಿ ಕನಿಷ್ಟ ಅಕ್ಷರ ಜ್ಞಾನ ಪ್ರಮಾಣದ ೫೦೦ ಶಬ್ದಗಳ ಒಂದು ಪಟ್ಟಿಗಳು ಸಿದ್ಧವಾಗಿವೆ ಹಿಂದಿ ಟೈಪ್‌ರೈಟರಿಗಾಗಿ ಹಿಂದೀಕೀ ಬೋರ್ಡಿನ ಪ್ರಮಾಣವನ್ನು ತಯಾರಿಸಲಾಗಿದೆ.

೧೯೫೭ ಸಾಲಿನ ಕಾರ್ಯಕ್ರಮದಲ್ಲಿ ಅನೇಕ ನೂತನ ಸಲಹೆಗಳು ಹಾಗೂ ಯೋಜನೆಗಳಿರುವುವು. ಈ ಕಾರ್ಯಕ್ರಮದಲ್ಲಿ ಹಿಂದಿ ಮಾತನಾಡದ ಪ್ರತಿಭಾವಂತ ಯುವಕರು ಒಂದೊಂದು ಹಿಂದಿ ಶಿಕ್ಷಕರ ತರಬೇತಿ ಕಾಲೇಜನ್ನು ತೆರೆಯುವುದು. ಹಿಂದಿ ಶಿಕ್ಷಕರ ಅನುಕೂಲಕ್ಕಾಗಿ ದೀರ್ಘಕಾಲಿಕ ವಿಚಾರಗೋಷ್ಠಿಗಳನ್ನು ನಡೆಸುವುದು, ಹಿಂದಿ ಮಾತಾಡುವ ರಾಜ್ಯಗಳಿಂದ ಹಿಂದಿ ಮಾತಾಡದ ರಾಜ್ಯಗಳಿಗೂ ಮತ್ತು ಅದಕ್ಕೂ ಪ್ರತಿಕ್ರಮವಾಗಿ ವಿಶ್ವವಿದ್ಯಾಲಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಚರ್ಚಾ ತಂಡಗಳನ್ನು ಕಳುಹಿಸುವುದು, ಹಿಂದಿಯಲ್ಲಿ ವೈಜ್ಞಾನಿಕ ಹಾಗೂ ಪಾರಿಭಾಷಿಕ ಸಾಹಿತ್ಯದ ವಸ್ತುಪ್ರದರ್ಶನಗಳನ್ನು ಆಗಾಗ ನಡೆಸುವುದು ಮೊದಲಾದ ಕಾರ್ಯಕ್ರಮವು ಸೇರಿರುತ್ತದೆ.

---

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳಿ ರಾಮಸ್ವಾಮಿ ಅಯ್ಯಂಗಾರವರ ರಕ್ಷಣೆಯುಳ್ಳ

ಟ್ರೇಡ್ ಮಾರ್ಕ್

ಸಂತಾನ ಸಿಂದೂರ (ಸ್ತ್ರೀಯರಿಗೆ, ಪ್ಯಾಕೆಟ್) | ಮದನ ವಿಲಾಸ (ಪುರುಷರಿಗೆ, ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ಸಪುಂಸಕತೆಯನ್ನು ನಾಮಾವಶೇಷಗೊಳಿಸುತ್ತದೆ

ಪಂ|| A.R. ಅಯ್ಯರ್

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N.P.) ಸ್ಟಾಂಪು ಕಳುಹಿಸಿ ಸಲಹೆಯೊಡನೆ ಕ್ಯಾಟಲಾಗ್ ರವಾನೆ

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ, (ನ ಯು)

648, "ಸಂತಾನ ಸಿಂದೂರ ಸದನ", ಚಾಮರಾಜ ರೋಡ್, ಮೈಸೂರು-1 (S.I.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. (ನಿ.ಪಿ.ಪ್ರತ್ಯೇಕ). ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕ್ಸ್ವರು: ಸಾ ಕಂಪೆನಿ, ಮಂಗಳೂರು—1.

NAVAYUGA
Popular Kannada Weekly
Founder:—
A. B. SHETTY,
Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೨೬-೯-'೫೭	೪

ಗ್ರಾಮದಾನ ಪ್ರಯೋಗ

ಮೈಸೂರಿಗೆ ಸಮೀಪದ ಮೆಲ್ವಾಲಿನಲ್ಲಿ ಕಳೆದ ವಾರ ಸರ್ವ ಪಕ್ಷೀಯ ಸಮ್ಮೇಳನವೊಂದು ಜರಗಿ, ಗ್ರಾಮದಾನ ಚಳವಳಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿತು. ಅಖಿಲ ಭಾರತ ಸರ್ವ ಸೇವಾ ಸಂಘದವರು ಕರೆದಿದ್ದ ಈ ಸಮ್ಮೇಳನದಲ್ಲಿ ಕಾಂಗ್ರೆಸು, ಪ್ರಜಾಸಮಾಜವಾದಿ—ಮತ್ತು ಕಮ್ಯುನಿಸ್ಟ ಪಕ್ಷದ ಧುರೀಣರು ಕೂಡ—ಭಾಗವಹಿಸಿದ್ದರು. ಆಚಾರ್ಯ ವಿನೋಬಾ ಭಾವೆಯವರು ಭೂದಾನ ಯಜ್ಞವನ್ನು ಪ್ರಾರಂಭಿಸಿದಂದಿನಿಂದ ಭಾರತದಲ್ಲಿ ಒಂದು ಬಗೆಯ ಆಧ್ಯಾತ್ಮಿಕ ಕ್ರಾಂತಿ ನಡೆಯುತ್ತಾ ಬರುತ್ತಿದೆ ಎಂದು ಸಮ್ಮೇಳನದಲ್ಲಿ ಸಹಭಾಗಿಗಳಾದ ಎಲ್ಲರೂ ಅಭಿಪ್ರಾಯಪಟ್ಟರಲ್ಲದೆ, ಗ್ರಾಮದಾನ ಚಳವಳವು ವಿನೋಬಾರು ತೊಡಗಿಸಿರುವ ಆಂದೋಲನದ ಶಿಖರವೆಂದೂ ವರ್ಣಿಸಿದರು. ಸಮ್ಮೇಳನಾಂತ್ಯದಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸಲಾಯಿತು. ಮತ್ತು ಈ ಪ್ರಕಟಣೆಯನ್ನು ಸರ್ವಪಕ್ಷೀಯ ಧುರೀಣರೂ ಭಿನ್ನಾಭಿಪ್ರಾಯವಿಲ್ಲದೆ ಅನುಮೋದಿಸಿದ್ದರು. ಇದು ಗ್ರಾಮದಾನ ಚಳವಳದ ಉಪಯುಕ್ತತೆಯ ಬಗ್ಗೆ ದೇಶದ ರಾಜಕೀಯ ಪಕ್ಷಗಳಲ್ಲಿ ಯಾವುದೇ ಸಂದೇಹವಿಲ್ಲವೆಂಬುದರ ದ್ಯೋತಕವೆಂದು ಭಾವಿಸಬಹುದಾಗಿದೆ. ಕಮ್ಯುನಿಸ್ಟರು ಸಹ ಈ ಚಳವಳಕ್ಕೆ ಬೆಂಬಲಿತ್ತುದು ಒಂದು ಕೌತುಕವೆಂದರೂ ತಪ್ಪಲ್ಲ. ಆದರೆ ಗ್ರಾಮದಾನ ಚಳವಳವು ಭೂದಾನ ಚಳವಳದಷ್ಟು ಹೆಚ್ಚು ಜನಪ್ರಿಯವಾದೀತೆ, ಯಶಸ್ಸನ್ನು ಹೊಂದೀತೆ ಎಂಬ ಬಗ್ಗೆ ನಮಗೆ ಸಂಶಯವಿದೆ. ಭೂದಾನಯಜ್ಞಕ್ಕೆ ಸಾಮಾನ್ಯವಾಗಿ ಕೊಡುಗೆಯನ್ನು ನೀಡುವಾತನು ಒಬ್ಬ ವ್ಯಕ್ತಿಯಾಗಿದ್ದಾನೆ — ವಿನೋಬಾರ ಬೋಧನೆಯಿಂದ ಸ್ವಾರ್ಥತ್ಯಾಗದ ನಿರ್ಧಾರವನ್ನು ಕೈಗೊಂಡವನು ಈತನಾಗಿದ್ದಾನೆ. ಆದರೆ ಗ್ರಾಮದಾನದಲ್ಲಿ ಒಬ್ಬ ವ್ಯಕ್ತಿಯ ಹೃದಯ ಪರಿವರ್ತನೆಯಾದರೆ ಸಾಲದು— ಗ್ರಾಮದ ಎಲ್ಲ ಭೂಮಾಲಿಕರೂ ವಿನೋಬಾರ ವಚನದಿಂದ ಹೃದಯ ಪರಿವರ್ತನೆಯನ್ನು ಹೊಂದಬೇಕಾಗಿದೆ. ಇದು ಭೂದಾನ ಚಳವಳದಷ್ಟು ಯಶಸ್ಸನ್ನು ಸಂಪಾದಿಸುವುದು ಕಷ್ಟ ಎನ್ನುವಾಗ ನಾವು ಈ ಸಾಮೂಹಿಕ ನಿರ್ಧಾರದ ಪ್ರಶ್ನೆಯನ್ನೆ ಗಮನದಲ್ಲಿ ಇಟ್ಟುಕೊಂಡಿದ್ದೇವೆ. ಒಬ್ಬ ವ್ಯಕ್ತಿಯು ಒಂದು ಆದರ್ಶವನ್ನು ಅವಲಂಬಿಸುವಂತೆ ಅಧವಾ ತ್ಯಾಗಕ್ಕೆ ಸಿದ್ಧನಾಗುವಂತೆ ಮಾಡುವುದು ಹೆಚ್ಚು ಕಠಿಣವಾದ ಮಾತಲ್ಲ — ಆದರೆ ಗ್ರಾಮದ ಹತ್ತಾರು ಜನರನ್ನು ಒಡಂಬಡಿಸಿ ಗ್ರಾಮದಾನಕ್ಕೆ ಅವರು ಸಿದ್ಧರಾಗುವಂತೆ ಮಾಡುವುದು ತೀರ ಕಷ್ಟದ ಕೆಲಸ. ಇನ್ನೊಂದು ದೃಷ್ಟಿಯಿಂದಲೂ ಗ್ರಾಮದಾನ ಚಳವಳವು ಭೂದಾನ ಚಳವಳದಷ್ಟು ಆಕರ್ಷಕವಾಗದೆ ಹೋಗಿದೆ. ಭೂದಾನ ಚಳವಳದಲ್ಲಾದರೆ ಒಬ್ಬನು ದಾನವಿತ್ತ ಭೂಮಿಯನ್ನು ಭೂಮಿ ಇಲ್ಲದ ಇನ್ನೊಬ್ಬನಿಗೆ ಅನುಭೋಗಿಸಲು ಕೊಡಲಾಗುತ್ತದೆ. ಅಂದರೆ ಭೂಮಿ ಇಲ್ಲದ ಜನರ ಸಹಾನುಭೂತಿ ಮತ್ತು ಪ್ರೋತ್ಸಾಹ ಭೂದಾನ ಚಳವಳಕ್ಕೆ ಇದೆ ಇದನ್ನೆ ಬೇರೆ ಮಾತಿನಲ್ಲಿ ಹೇಳುವುದಾದರೆ ಭೂಮಾಲಕನೊಬ್ಬನು ಸಾರ್ಥತ್ಯಾಗಕ್ಕೆ ಸಿದ್ಧನಾದಾಗಲೇ ಭೂರಹಿತನೊಬ್ಬನು ತನಗೊಂದು ತುಂಡು ಭೂಮಿ ಸಿಗಲಿದೆ—ಅದು ತನ್ನದಾಗುವುದು, ತನ್ನ ಕುಟುಂಬದ್ದೆನಿಸುವುದು-ಎಂಬಂಥ ಸ್ವಾರ್ಥ ಭಾವನೆಗೆ ಒಲಿಯಾಗುತ್ತಾನೆ. ಅಂತೂ ವ್ಯಕ್ತಿಯ ಸಂಗ್ರಹ ಪ್ರವೃತ್ತಿಗೆ ಭೂದಾನದಿಂದ ಪೋಷಣೆಯೇ ಸಿಗುತ್ತದೆ. ಆದರೆ ಗ್ರಾಮದಾನ ನಡೆದಬಳಿಕ ಆ ಗ್ರಾಮವು ಗ್ರಾಮದ ಎಲ್ಲ ಜನರ ಸೊತ್ತಾಗುವುದು—ಎಲ್ಲರೂ ಒಟ್ಟುಗೂಡಿ ಸಹಕಾರ ಪದ್ಧತಿಯಿಂದ ಕೆಲಸಮಾಡಬೇಕಾಗುವುದು. ಸಹಕಾರ ಪದ್ಧತಿಯಿಂದ ಕೂಡಿ ನಡೆಯುವುದು ಭಾರತದ ಸಾಮಾಜಿಕ ಸ್ಥಿತಿಗೆ ತೀರ ಹೊಸ ಆದರ್ಶವಾಗಿದೆ. ನಮ್ಮಲ್ಲಿ ಗ್ರಾಮಗಳೇ ಸಮಾಜದ ಆಧಾರ ಸ್ತಂಭಗಳೆನಿಸಿದ್ದ ದಿನಗಳಿದ್ದರೂ ಅಲ್ಲಿ ವೈಯಕ್ತಿಕ ಒಡೆತನಕ್ಕೆ ಎಂದೂ ಚ್ಯುತಿಬಂದಿದ್ದಿಲ್ಲ. ಗ್ರಾಮದಾನವು ವೈಯಕ್ತಿಕ ಒಡೆತನವನ್ನು ಮೂಲೆಗುಂಪುಮಾಡಿ, ಸಾಮೂಹಿಕ ಒಡೆತನಕ್ಕೆ ದಾರಿಮಾಡಿಕೊಡುತ್ತದೆ. ಹಳ್ಳಿಯ ಅವಿಭಕ್ತ ಕುಟುಂಬಗಳು ಸಹ ಒಡೆದು ಪಾಲಾಗುತ್ತಾ ಹೋಗುವುದನ್ನು ನಾವಿಂದು ಕಾಣುತ್ತಿರುವಾಗ, ಗ್ರಾಮದಾನ ಚಳವಳವು ಹೆಚ್ಚಿನ ಯಶಸ್ಸನ್ನು ಪಡೆದೀತು ಎಂಬ ವಿಷಯದಲ್ಲಿ ನಮಗೆ ಅನುಮಾನವಿದೆ. ಆದರೆ— ವಿನೋಬಾರವರದು ಅದ್ಭುತ ಪ್ರಯೋಗ; ಅದುದರಿಂದ ಅದಕ್ಕೆ ಆತಂಕ ಮಾಡದೆ ಎಲ್ಲ ರೀತಿಯಿಂದ ಪ್ರೋತ್ಸಾಹ ಕೊಟ್ಟು ನೋಡಿ ಅನುಭವದಿಂದ ಪಾಠ ಕಲಿಯಲು ಯಾವ ಅಭ್ಯಂತರವೂ ಇಲ್ಲ. ಸರಕಾರ ಮಾತ್ರ ತಾಪು ಮಾಡಬೇಕೆಂದಿರುವ ಭೂಸುಧಾರಣೆಯ ಕ್ರಮಗಳನ್ನು ತಪ್ಪದೆ ತ್ವರಿತದಿಂದ ಮಾಡಲು ಹಿಂಜರಿಯಲೂಗದು. ಭಾರತವು ಆಧ್ಯಾತ್ಮಿಕವಾಗಿ ಎಷ್ಟೇ ಮುಂದುರಿಯಲಿ—ಅಲ್ಲಿ ಆದರ್ಶ ಗುರುಗಳೆನಿಸುವವರು ಕೋಟ್ಯಾಂತರ ಮಂದಿಗೊಬ್ಬ ಮಾತ್ರ! ಆದುದರಿಂದ ಉಳಿದವರ ಸುಖ ಸಾಧನೆಗೆ ಭೌತಿಕ ದೃಷ್ಟಿಯಿಂದ ಅವಶ್ಯವೆನಿಸಿದ ಕೆಲಸ ನಡೆಯಲೇಬೇಕಾಗಿದೆ.

ಸಂಕ್ಷಿಪ್ತ ಸುದ್ದಿಗಳು

ಜಾಗತಿಕ ಬೇಂಕಿನ ಸಹಾಯ

ಜೂನ್ ತಿಂಗಳ್ಕೆ ಮುಕ್ತಾಯವಾದ ಆರ್ಥಿಕ ವರ್ಷದಲ್ಲಿ ಜಾಗತಿಕ ಬೇಂಕು ಭಾರತಕ್ಕೆ ಇತ್ತ ಸಾಲಗಳ ಮೊತ್ತ ೩೫ ೪೦೦೦೦೦೦ ಡಾಲರುಗಳೆಂದೂ, ಈ ಮೊತ್ತವು ಈ ವರ್ಷದಲ್ಲಿ ಜಗತ್ತಿನ ಯಾವುದೇ ಒಂದು ರಾಷ್ಟ್ರಕ್ಕೆ ಸಂದ ಅತಿ ಹೆಚ್ಚಿನ ಸಾಲದ ಮೊತ್ತವಾಗಿದೆ. ಜಾಗತಿಕ ಬೇಂಕು ಸ್ಥಾಪನೆಗೊಂಡ ಮೇಲೆ ಭಾರತ ಇದು ವರೆಗೆ ಒಟ್ಟು ೨೩೩ ಲಕ್ಷ ಡಾಲರುಗಳ ಸಾಲವನ್ನು ಪಡೆದಿದೆ ಎಂದು ವಿಶ್ವಬೇಂಕಿನ ೧೩ನೇ ವಾರ್ಷಿಕ ವರದಿಯಲ್ಲಿದೆ.

ಸರಕಾರಿ ನೌಕರರಿಗೆ ಹಿಂದಿ

ಹಿಂದಿ ಬಾರದ ಉದ್ಯೋಗಿಗಳು ಹಿಂದಿ ಭಾಷೆಯನ್ನು ಕಲಿತುಕೊಳ್ಳುವ ಬಗ್ಗೆ ನೆರವಾಗುವುದಕ್ಕಾಗಿ ಕೇಂದ್ರ ಸರಕಾರದವರು ಪ್ರಾರಂಭಿಸಿರುವ ವಿವಿಧ ತರಗತಿಗಳಲ್ಲಿ ಇಂದು ಸುಮಾರು ೩೦ ಸಾವಿರ ಉದ್ಯೋಗಸ್ಥರು ಹಿಂದಿ ಭಾಷೆಯನ್ನು ಕಲಿಯುತ್ತಿರುವರು. ಮೂಲತಃ ೧೯೫೨ ಜುಲೈನಲ್ಲಿ ಶಿಕ್ಷಣ ಮಂತ್ರಿ ಶಾಖೆಯವರು ಈ ಯೋಜನೆಯನ್ನು ಪ್ರಾರಂಭಿಸಿರುವರು. ಈ ಯೋಜನೆಯಿಂದಾಗಿ ೧೯೫೮ರ ವೇಳೆಗೆ ಸುಮಾರು ೫೦ ಸಾವಿರ ಉದ್ಯೋಗಿಗಳು ಈ ತರಗತಿಗಳಲ್ಲಿ ಓದಲಿರುವರು.

ಪರಸ್ಪರ ಬೆದರಿಕೆ

ಭಾರತದ ಆಪೇಕ್ಷೆಗೆ ವಿರುದ್ಧವಾಗಿ, ಕಾಶ್ಮೀರಕ್ಕೆ ಸಂಯುಕ್ತ ರಾಷ್ಟ್ರಸಂಘದ ಸೇನೆಯನ್ನು ಕಳಿಸಬೇಕೆಂಬ ಪಾಕಿಸ್ತಾನದ ಹೇಳಿಕೆಗೆ ಬೆಂಬಲವೀಯುವ ರಾಷ್ಟ್ರಗಳು ಭಾರತದ ಮೈತ್ರಿಯನ್ನು ಕಳೆದುಕೊಂಡಂತೆಎಂದು ಭಾರತದ ಸಂರಕ್ಷಣಾ ಮಂತ್ರಿ ಶ್ರೀ ಮೆನೆನ್ನರು ಅಡಿದ್ದಾರೆ. ಅದಕ್ಕೆ ಪ್ರತಿಯಾಗಿ ಪಾಕಿಸ್ತಾನದ ವಿದೇಶ ಮಂತ್ರಿ ಫಿರೋಜ್ ಖಾನ ನೂನರು ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಗೆ ಸಹಾಯವೀಯುವ ರಾಷ್ಟ್ರಗಳು ಪಾಕಿಸ್ತಾನದೆದುರು ಅನೈತ್ರೀ ಭಾವವನ್ನು ಪ್ರದರ್ಶಿಸಿದಂತೆ ಎಂದು ಗುಡುಗಿದ್ದಾರೆ.

ಶಿಕ್ಷಣ ಮಂತ್ರಿ ಪರಿಷತ್ತು

ಭಾರತದಲ್ಲಿಯ ಆರರಿಂದ ಹನ್ನೊಂದು ವರ್ಷ ವಯಸ್ಸಿನವರೆಗಿನ ಎಲ್ಲ ಮಕ್ಕಳಿಗೂ ತೀರ ತಡವಾಗಿ ಅದರೂ-ಎಂದರೆ ತೃತೀಯ ಯೋಜನೆಯ ಕೊನೆಗಾದರೂ—ಉಚಿತವಾದ ಕಡ್ಡಾಯ ಶಿಕ್ಷಣವನ್ನು ಸಾರ್ವತ್ರಿಕವಾಗಿ ಕೊಡಬೇಕೆಂದು ಯೋಜನಾ ಆಯೋಗದ ಶಿಕ್ಷಣ ಸಮಿತಿಯು ಮಾಡಿದ್ದ ಸೂಚನೆಗಳನ್ನು ಏನಾಂಕ ೨೧ ರಂದು ನವದೆಹಲಿಯಲ್ಲಿ ಸೇರಿದ ರಾಜ್ಯ ಶಿಕ್ಷಣ ಮಂತ್ರಿಗಳ ಪರಿಷತ್ತು ಸ್ವೀಕರಿಸಿದೆ. ಅಲ್ಲದೆ ಮೂರು ವರ್ಷಗಳ ಪದವಿ ಶಿಕ್ಷಣ ಕ್ರಮಕ್ಕೂ ಈ ಪರಿಷತ್ತು ಅನುಕೂಲಾಭಿಪ್ರಾಯವನ್ನಿತ್ತಿದೆ.

ಸುಧಾರಿತ ಬೇಸಾಯ ಪದ್ಧತಿ

ಭಾರತವು ಆಹಾರ ವಿಷಯದಲ್ಲಿ ಸ್ವಪರಿಪೂರ್ಣತೆ ಸಾಧಿಸಲು ಒಕ್ಕಲಿಗರು ಸುಧಾರಿಸಿದ ಬೇಸಾಯ ಕ್ರಮಗಳನ್ನು ಅನುಸರಿಸಿ ಹುಟ್ಟುವಳಿಯನ್ನು ಹೆಚ್ಚಿಸಬೇಕು. ತಮ್ಮ ಬೇಸಾಯ ಹುಟ್ಟುವಳಿಯ ಮಾರಾಟದ ವಿಷಯದಲ್ಲಿ ಒಕ್ಕಲಿಗರು ಈಗ ಅನುಸರಿಸುತ್ತಿರುವ ದಲ್ಲಾಳಿ ಪದ್ಧತಿಯನ್ನು ತ್ಯಜಿಸಬೇಕು. ಸಹಕಾರಿ ವ್ಯಾಪಾರ ಕೇಂದ್ರಗಳ ಮುಖಾಂತರ ಮಾರಾಟ ನಡೆಸಿದ್ದಲ್ಲಿ ಒಕ್ಕಲಿಗನಿಗೆ ಹಾಗೂ ಧಾನ್ಯದ ಗಿರಾಕಿ ಇಬ್ಬರಿಗೂ ಹಿತವಿದೆ. ದೇಶದಾದ್ಯಂತ ಈಗ ೧೭೦೦ ಸಹಕಾರಿ ಉಗ್ರಾಣಗಳನ್ನು ಸ್ಥಾಪಿಸಲಾಗಿದೆ. ಒಕ್ಕಲಿಗರು ತಮ್ಮ ಹೊಸೆಯನ್ನುಸರಿತು ಹಳ್ಳಿಯ ಪದ್ಧತಿಯನ್ನು ನಿರ್ಮೂಲನೆ ಮಾಡಿ ದೇಶದ ಆಹಾರ ಉತ್ಪಾದನೆಯನ್ನು ಹೆಚ್ಚಿಸಬೇಕು ಎಂದು ಕೇಂದ್ರ ಸರಕಾರ ಮಂತ್ರಿ ಡಾ. ಪಂಜಾಬರಾವ ದೇಶಮುಖರು ಹೇಳಿದ್ದಾರೆ.

ಗ್ರಾಮದಾನ ಆಂದೋಲನ

ಆಚಾರ್ಯ ವಿನೋಬಾ ಭಾವೆಯವರಿಂದ ಗ್ರಾಮದಾನ ಆಂದೋಲನದಲ್ಲಿ ಇದುವರೆಗೆ ಎಲ್ಲ ರಾಜ್ಯಗಳಲ್ಲಿ ಕೂಡಿ ೨೯೩೨ ಗ್ರಾಮಗಳು ದಾನವಾಗಿ ದೊರೆತಿವೆಯೆಂದು ತಿಳಿದು ಬಂದಿದೆ. ಕೇರಳ ಮತ್ತು ಮುಂಬಯಿ ರಾಜ್ಯಗಳಲ್ಲಿ ೩೦೭ ಮತ್ತು ೨೩೭ ಗ್ರಾಮಗಳು ದೊರೆತಿದ್ದು ಮಧ್ಯ ಪ್ರದೇಶ ಮತ್ತು ಮೈಸೂರು ರಾಜ್ಯಗಳಲ್ಲಿ ಅನುಕ್ರಮವಾಗಿ ೨೬ ಮತ್ತು ೧೫ ಗ್ರಾಮಗಳು ದೊರೆತಿವೆಯೆಂದು ಕಂಡು ಬಂದಿದೆ.

ಅಮೆರಿಕೆಯ ಸೈನ್ಯದಲ್ಲಿ ಕಡಿತ

ಅಮೆರಿಕವು ತನ್ನ ಸೈನ್ಯದಲ್ಲಿ ಒಂದು ಲಕ್ಷ ಸೈನಿಕರನ್ನು ಬರುವ ಜೂನದಿಂದ ಕಡಿಮೆ ಮಾಡುವುದಾಗಿ ಹೇಳಿದೆ. ಇಷ್ಟು ಜನರನ್ನು ಕೆತ್ತು ಹಾಕುವುದರಿಂದ ಪಶ್ಚಿಮ ಯುರೋಪದಲ್ಲಿಯ ಅಮೆರಿಕೆಯ ಬಲಕ್ಕೆ ಯಾವ ಕುಂದೂ ಉಂಟಾಗಲಾರದು. ಇದೂ ಅಲ್ಲದೆ ೧೯೫೮ ಜೂನಿನೊಳಗೆ ೨೬ ಲಕ್ಷ ಸೈನಿಕರನ್ನು ಇಟ್ಟುಕೊಳ್ಳಬೇಕೆಂದು. ಮಾಡಿದ್ದರೂ ಈ ೧೨ ತಿಂಗಳಲ್ಲಿ ೨ ಲಕ್ಷ ಸೈನಿಕರನ್ನು ಕಡಿಮೆಮಾಡಿದಂತಾಗುವುದೆಂದು ಅಮೆರಿಕದ ಸಂರಕ್ಷಣಾ ಮಂತ್ರಿ ಚಾರ್ಲ್ಸ ವಿಲ್ಸನ್ನರು ತಿಳಿಸಿದ್ದಾರೆ.

ವಿಷಾದಕರ ಘಟನೆ

ಮದ್ರಾಸರಾಜ್ಯದ ರಾಮನಪುರ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಥೇವಾರ ಮತ್ತು ಹರಿಜನರ ನಡುವೆ ಜಾತೀಯ ಸಂಬಂಧಿ ಜಗಳಗಳು ನಡೆದ, ಸುಮಾರು ನಲುವತ್ತು ಜನರು ಮಡಿದರೆನ್ನಲಾಗಿದೆ. ಪೋಲೀಸರು ಸಂರಕ್ಷಣಾ ಕಾರ್ಯವನ್ನು ಕೈಗೊಳ್ಳುವುದಕ್ಕಾಗಿ ೫ ಬಾರಿ ಗೋಳಿಬಾರು ಮಾಡಬೇಕಾಯಿತು. ಜಾತೀಯ ಗಲಭೆಗಳ ಇತ್ತೀಚಿಗಿನ ಈ ಘಟನೆಯು ಚಿಂತನೀಯವಾಗಿದೆ

ಚಂದಾದಾರರಲ್ಲಿ ವಿನಂತಿ

'ನವಯುಗ'ದ 36ನೇ ಸಂಪುಟವು ಕಳೆದ ಆಗೋಸ್ತು ತಿಂಗಳಲ್ಲಿ ಅಂತ್ಯವಾಗಿ ಇದೇ ಸಪ್ಟಂಬರದಿಂದ 37ನೇ ವರ್ಷಾರಂಭವಾಗಿದೆ. ಈ ಅವಧಿಗೆ ಯಾರ ಯಾರ ಚಂದಾ ಅವಧಿ ಮುಗಿಯುತ್ತದೋ, ಮತ್ತು ಯಾವ ಚಂದಾದಾರರ ಚಂದಾ ಬಾಕಿ ಉಳಿದಿರುವುದೋ ಅವರೆಲ್ಲರೂ ದಯಮಾಡಿ ಚಂದಾಹಣವನ್ನು ಆದಷ್ಟು ಬೇಗನೆ ಮನಿಆರ್ಡರು ಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ. ಇಲ್ಲದೆ ಯಾವದೊಂದೂ ಖರ್ಚಿಯಿಲ್ಲದೆ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಾವತಿಮಾಡಬಹುದು.

ವಿ. ಪಿ. ಮಾಡಿದರೆ ವಿಶೇಷ ಪೆಚ್ಚು ಬೀಳುವುದರಿಂದ ಸರ್ವರೂ ನಮ್ಮ ವಿನಂತಿಯನ್ನು ಮನ್ನಿಸಿ ಸಹಕರಿಸಬೇಕಾಗಿ ವಿನಂತಿ.

ಉಡುಪಿ. ಮೆನೇಜರ್,
ನವಯುಗ.

ಗ್ರಾಮದಾನ ಪರಿಷತ್ತು

ಗ್ರಾಮದಾನ ಸಂಬಂಧದಲ್ಲಿ ಮೈಸೂರಿನ ಇಲಿವಾಲದಲ್ಲಿ ಸರ್ವಪಕ್ಷೀಯ ಪರಿಷತ್ತು ತಾ. ೨೨ರಂದು ನಡೆಯಿತು ಈ ಗಮನಾರ್ಹಪರಿಷತ್ತಿನಲ್ಲಿ ದೇಶದರ್ಶನ ಮುಖಾಜರೀಯ ಪಕ್ಷಗಳು ಭಾಗವಹಿಸಿ, ಭಾರತದ ಭೂಸಮಸ್ಯೆಗಳಿಗೆ ಗ್ರಾಮದಾನ, ಭೂದಾನಗಳೇ ಪರಿಹಾರವೆಂದೂ ಒಮ್ಮತದಭಿಪ್ರಾಯಕ್ಕೆ ಬಂದು, ಆಚಾರ್ಯ ವಿನೋಬಾರೊಡನೆ ಸಹಕರಿಸಲು ಒಪ್ಪಿಕೊಂಡವು.

ಅರ್ಥಮಂತ್ರಿಗಳ ಸಂಚಾರ

ಭಾರತದ ಕೇಂದ್ರೀಯ ಅರ್ಥಮಂತ್ರಿ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಗಾಗಿ ಕಂಡುಬರುವ ವಿದೇಶ ವಿನಿಮಯದ ಕೊರತೆಯನ್ನು ನೀಗಿಸಲು, ಸಹಾಯವನ್ನು ಹಾರೈಸಿ ವಿದೇಶ ಸಂಚಾರವನ್ನು ಕೈಗೊಂಡಿದ್ದಾರೆ. ಅವರು ವಾಷಿಂಗ್ ಟನ್ನಿನಲ್ಲಿ ಸೇರಲಿರುವ ಅಂತಾರಾಷ್ಟ್ರೀಯ ನಿಧಿ ಮಂಡಳದ ಸಭೆಯಲ್ಲಿ ಭಾಗವಹಿಸಿ, ಸಪ್ಟಂಬರ ೨೮ರಂದು ಮೌಂಟ್ ಟ್ರಿಬ್ಲಂಟದಲ್ಲಿ ಕೂಡಲಿರುವ ಕಾಮನ್‌ವೆಲ್ತ್ ಅರ್ಥಮಂತ್ರಿ ಸಮ್ಮೇಳನದಲ್ಲಿಯೂ ಉಪಸ್ಥಿತರಿರುವರು.

ಪಶ್ಚಿಮ ವಲಯ

ರಾಜ್ಯ ಪುನರ್ಘಟನಾ ಕಾಯದೆಯಂತೆ ನಿರ್ಮಿತವಾದ ಹೊಸ ಮೈಸೂರು ಮತ್ತು ಮುಂಬಯಿ ರಾಜ್ಯಗಳನ್ನೊಳಗೊಂಡ ಪಶ್ಚಿಮ ವಲಯದ ಪ್ರಥಮ ಸಭೆಯು ದಿನಾಂಕ ೨೦ರಂದು ಮೈಸೂರಿನಲ್ಲಿ ನಡೆಯಿತು ಉಭಯ ರಾಜ್ಯದ ಮುಖ್ಯ ಮಂತ್ರಿಗಳೂ ಇತರ ಪ್ರತಿನಿಧಿ ಮಂತ್ರಿಗಳೂ ಈ ಸಭೆಯಲ್ಲಿ ಭಾಗವಹಿಸಿದ್ದು ಕೇಂದ್ರ ಗೃಹಮಂತ್ರಿ ಪಂಡಿತ ಪಂತರು ಅಧ್ಯಕ್ಷತೆ ವಹಿಸಿದ್ದರು. ಪಶ್ಚಿಮ ಘಟ್ಟಗಳಿಂದ ಹರಿಯುವ ನದೀನೀರಿನ ಉಪಯೋಗಕ್ಕಾಗಿ ಯೋಜನೆಯನ್ನು ಸಿದ್ಧಪಡಿಸಲು ಅಂತರಿಕ್ಷ ಪರಿಶೀಲನೆಯನ್ನು ನಡೆಸಬೇಕೆಂದೂ, ಗಡಿ ಪ್ರದೇಶಗಳ ಸಮಸ್ಯೆಗಳನ್ನು ಶಾಂತಿಯಿಂದಲೇ ಬಿಡಿಸಬೇಕೆಂದೂ ಈ ಸಭೆಯಲ್ಲಿ ನಿರ್ಧಾರಿತವಾದುವೆಂದು ತಿಳಿಯುತ್ತದೆ

ಅರು ಕಾಗದದ ಕಾರಖಾನೆಗಳು

ಮೈಸೂರು ರಾಜ್ಯದಲ್ಲಿ ಅರು ಕಾಗದದ ಕಾರಖಾನೆಗಳನ್ನು ಸ್ಥಾಪಿಸಲು ಖಾಸಗಿ ವ್ಯಕ್ತಿಗಳಿಂದ ಯೋಜನೆಗಳು ಬಂದಿವೆ ಇವುಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಮುರಗೋಡ, ದಾಂಡೇಲಿ ವತ್ತು ಅಂಕೋಲಾಗಳಲ್ಲಿ ಮಂಡ್ಯದಲ್ಲಿ ನಂಜನಗೂಡಿನಲ್ಲಿ ಹಾಗೂ ಭದ್ರಾವತಿ ಪೇಟೆಯಲ್ಲಿ ಈ ಕಾರಖಾನೆಗಳಿರುವುವುಗಳೆಂದು ರಾಜ್ಯ ಉದ್ದಿಮೆ ಮಂತ್ರಿಗಳು ವಿಧಾನ ಸಭೆಯಲ್ಲಿ ಬಹಿರಂಗಪಡಿಸಿದರು.

ಆಂಧ್ರದಲ್ಲಿ ಭೂಸುಧಾರಣೆ

ಆಂಧ್ರ ಪ್ರದೇಶದ ಆಂಧ್ರ ವಿಭಾಗದಲ್ಲಿಯ ೩೦ ಎಕ್ರೆಗಳಿಗಿಂತಲೂ ಹೆಚ್ಚು ಭೂಮಿಯಿರುವ ಹಿಡುವಳಿದಾರನು ೧೦ ದಿನಗಳೊಳಗಾಗಿ ತನ್ನ ಭೂಹಿಡುವಳಿಗೆ ಸಂಬಂಧಿಸಿದ ವಿವರಗಳನ್ನು ತಹಶೀಲ್ದಾರರಿಗೆ ಒಂದು ಘೋಷಣಾ ಪತ್ರದ ಮೂಲಕ ತಿಳಿಸಬೇಕೆಂದು ಆಂಧ್ರ ಪ್ರದೇಶದ ರಾಜ್ಯಪಾಲರೊಂದು ಸುಗ್ರೀವಾಜ್ಞೆಯನ್ನು ವಿಧಿಸಿದ್ದಾರೆ. ಭೂಸುಧಾರಣೆ ಕಾಯದೆಯನ್ನು ಮಾಡುವುದಕ್ಕಾಗಿ ಅಗತ್ಯವೆನಿಸಿದ ಸರಿಯಾದ ಅಂಕಿಅಂಶಗಳನ್ನು ಬೇಗನೇ ಸಂಗ್ರಹಿಸುವ ಉದ್ದೇಶದಿಂದ ಈ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ.

ರಾಷ್ಟ್ರಪತಿಗಳಿಗೆ ಅನಾರೋಗ್ಯ

ಪ್ರಕೃತ ಇದಿನಗಳ ಕಾರ್ಯಕ್ರಮವನ್ನಿಟ್ಟುಕೊಂಡು ಕರ್ನಾಟಕಕ್ಕೆ ಬಂದಿರುವ ರಾಷ್ಟ್ರಪತಿ ಪ್ರಸಾದರಿಗೆ ಅಸ್ವಸ್ಥವು ಪ್ರಬಲಿಸಿದ್ದರಿಂದ ಅವರು ತೀವ್ರ ಅನಾರೋಗ್ಯದಿಂದಿದ್ದು ಡಾಕ್ಟರರ ಸಲಹೆಯಂತೆ ಅವರು ಸಂಪೂರ್ಣ ವಿಶ್ರಾಂತಿ ಪಡೆಯುತ್ತಿದ್ದಾರೆ ಇದರಿಂದಾಗಿ ತಮ್ಮ ಉತ್ತರ ಕನ್ನಡ ಜಿಲ್ಲೆಯ ಕಾರ್ಯಕ್ರಮಗಳನ್ನು ರದ್ದುಪಡಿಸಿರುತ್ತಾರೆ ಹುಬ್ಬಳ್ಳಿ ಮತ್ತು ಧಾರವಾಡಗಳ ಸಂಚಾರವೂ ಪ್ರಾಯಃ ತಡೆಹಿಡಿಯಲ್ಪಡುವ ನಿರೀಕ್ಷೆಯಿದೆ.

ಪಾಕ ಆಕ್ರಮಿತ ಕಾಶ್ಮೀರ

ಪಾಕಿಸ್ತಾನದ ವಶದಲ್ಲಿರುವ ಕಾಶ್ಮೀರದ ಭಾಗದಲ್ಲಿ ಪಶ್ಚಿಮ ಪಾಕಿಸ್ತಾನದ ಜನರ ಪುನರ್ನಿವೇಶನಕ್ಕೆ ಪಾಕ್ ಸರಕಾರವು ಅವಕಾಶವಿತ್ತಿದೆ. ಇದರಿಂದ ಪಾಕ್ ಆಕ್ರಮಿತ ಪ್ರದೇಶದಲ್ಲಿಯ ಕಾಶ್ಮೀರಿ ಜನರ ಹಿತಸಂಬಂಧಕ್ಕೆ ಧಕ್ಕೆಬಗಲುತ್ತಿವೆ. ಆದುದರಿಂದ ಪಾಕಿಸ್ತಾನದ ಈ ತಂತ್ರಗಳು ತನಕ್ಕೆ ಮದ್ದರೆಯಬೇಕೆಂದು ರಾವಲ್ಪಿಂಡಿಯ ಪತ್ರಿಕೆಯೊಂದು ಬರೆದಿದೆ.

ಪಾಶ್ಚಾತ್ಯ ರಾಷ್ಟ್ರಗಳ ನಿರಾಕರಣೆ

ಕಾಶ್ಮೀರ ಸಂಬಂಧದಲ್ಲಿ ಪಾಕಿಸ್ತಾನವು ಈ ಬಾರಿಯ ಭದ್ರತಾ ಮಂಡಳದ ಸಭೆಯಲ್ಲಿ ಮುಂದೆ ತರಲಿರುವ ಕಾಶ್ಮೀರ ವಿಚಾರದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಬೆಂಬಲವೀಯುವ ಮನೋವೃತ್ತಿಯಲ್ಲಿಲ್ಲವೆಂದೂ ಭದ್ರತಾಮಂಡಳದಲ್ಲಿ ಗುನ್ನಾರ್ ಯಾರಿಂಗರು ತಮ್ಮ ವರದಿಯನ್ನೊಪ್ಪಿಸಿರುವರೆಂದೂ ಉಳಿದ ಪ್ರತಿನಿಧಿಗಳು ಔಪಚಾರಿಕವಾಗಿ ವರದಿಯನ್ನು ಚರ್ಚಿಸಿದ ನಂತರ ಡಾಕ್ ಪ್ರತಿನಿಧಿ ನೂನರು ತಮ್ಮ ಪಕ್ಷವನ್ನು ಮಂಡಿಸುವರೆಂದೂ, ಕೆಲವು ದಿನಗಳ ನಂತರ ಭಾರತದ ಪ್ರತಿನಿಧಿ ಮೆನನ್ನರು ಭಾರತದ ಪಕ್ಷವನ್ನು ಮಂಡಿಸಲಿರುವರೆಂದೂ ತಿಳಿದುಬಂದಿದೆ.

ಉಡುಪಿ

ಗೋಶಾಲೆಗೆ ಬೆಂಕಿ

— ತಾ. ೨೪ನೇ ರಾತ್ರಿ ಸುಮಾರು ೧½ಗಂಟೆಗೆ ಉಡುಪಿ ಶ್ರೀಕೃಷ್ಣ ಮಠದ ಗೋ ಶಾಲೆಗೆ ಅಕಸ್ಮಾತ್ತಾಗಿ ಬೆಂಕಿ ತಗಲಿ ಒಳಗಿದ್ದ ಸುಮಾರು 250 ದನಕರುಗಳಲ್ಲಿ 6 ದನಗಳು ಮೃತಪಟ್ಟವು; ಸುಮಾರು 50 60ದನಗಳಿಗೆ ಪೆಟ್ಟಾಗಿದೆ. ಬೆಂಕಿ ತಗಲಿದುದು ತಿಳಿದೊಡನೆ ವಸಂತ ಮಾಪಲಿನಲ್ಲಿ ನವರಾತ್ರಿ ಕಾರ್ಯಕ್ರಮಕ್ಕೆ ನೆರೆದಿದ್ದ ಜನರಲ್ಲಿ 300—400 ಜನರು ಬೆಂಕಿ ನೊಂದಿಸುವ ಕಾರ್ಯದಲ್ಲಿ ಉತ್ಸಾಹದಿಂದ ನೆರವಾದರು. ಅಗ್ನಿಶಾಮಕ ದಳದವರು ಕೂಡಲೇ ಬಂದಿದ್ದರೂಯಂತ್ರ ಜಾಲಾಗದ್ದರಿಂದ ಜನರೇ ಕೈಯನೆಹಿಸಿ ಬೆಂಕಿಯನ್ನು ಹತೋಟಿಗೆ ತಂದುದು ಸ್ತುತ್ಯವಿದೆ. ಸುಮಾರು 15,000 ರೂ. ನಷ್ಟ ಸಂಭವಿಸಬಹುದಾಗಿ ತಿಳಿದು ಬರುತ್ತದೆ.

ಪರಿಯ ಯುವಾ ಫೆಸ್ಟಿವಲ್—ಜಿಲ್ಲೆಯ ಕಾಲೇಜುಗಳ ಸಹಭಾಗಿಗಳಾಗಿ ತಾ. 21ರಂದು ಮಣಿಪಾಲ ಕಸ್ತೂರ್ಬಾ ಮಾಧಿಕಲ್ ಕಾಲೇಜು ಹಾಲಿನಲ್ಲಿ ವಿವಿಧ ಮನರಂಜನ ಕಾರ್ಯಕ್ರಮಗಳೊಂದಿಗೆ ಯಶಸ್ವಿಯಾಗಿ ಆಚರಿಸಲ್ಪಟ್ಟಿತು.

ಅಧ್ಯಾಪಕರ ಸಭೆ

—ಉಡುಪಿ ತಾಲೂಕಿನ ಎಯಿಡೆಡ್ ಮತ್ತು ಬೋರ್ಡ್ ಎಲಿಮೆಂಟರಿ ಶಾಲೆಗಳ ಶಿಕ್ಷಕರ ಯೂನಿಯನ್ನಿನ ಸಂಯುಕ್ತ ಮಹಾಸಭೆಯು ತಾ 23ರಂದು ಸಂಜೆ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಶ್ರೀ ಎಸ್. ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಜರಗಿತ. ಸ್ವಾಗತಾನಂತರ ಶ್ರೀ ದಾಂತಿಯವರು ಸ್ವಾಗತಿಸಿದರು. ಜಿಲ್ಲಾ ಬೋರ್ಡ್ಸ್ ಗಿಲ್ಡಿನ ಅಧ್ಯಕ್ಷ ಶ್ರೀ ಮುಕುಂದರಾಯ್, ಗಿಲ್ಡಿನ ಕಾರ್ಯದರ್ಶಿ ಶ್ರೀ ಸಂಕಟಕ್ಷ್ಮಣರಾಯರು ಗಿಲ್ಡಿನ ಕುರಿತು ಮಾತನಾಡಿದರು ಸಭಿಕರ ಕಡೆಯಿಂದ ಶ್ರೀಗಳಾದ ಮಗ್ಗಪ್ಪ ಹೆಗ್ಡೆ, ವಿಷ್ಣುಮೂರ್ತಿ ಹೊಳ್ಳ, ಎಚ್ ಎ ಪಿ. ಕೆಲ್ಲಾಯ, ಬಿ. ಸುಬ್ರಹ್ಮಣ್ಯ ಹೆಗ್ಡೆ ಮೊದಲಾದವರು ಮಾತನಾಡಿದರು ಹೊಸಸರ್ಕಾರಿ ಸಂಯುಕ್ತ ಯೂನಿಯನ್ನಿನ ಕಾರ್ಯಕಾರೀ ಸಮಿತಿಗೆ ಶ್ರೀಗಳಾದ ಬಿ. ಸುಬ್ರಹ್ಮಣ್ಯ ಹೆಗ್ಡೆ, ಅಧ್ಯಕ್ಷ ಎಸ್. ಮಗ್ಗಪ್ಪ ಹೆಗ್ಡೆ ಮತ್ತು ಸುರೇಶ್ ಜೆ ಬಿ ಫೂಟೆನ್, ಉಪಾಧ್ಯಕ್ಷರು, ಮಂಕಿ, ಜನರಲ್ ಸೆಕ್ರೆಟರಿ, ಎಯಿಡೆಡ್ ರಾಂಗೆಗಳ ಪ್ರತಿನಿಧಿ ಕಾಂಕಶ್ಟ ಮತ್ತು ಬೋರ್ಡ್ ರಾಂಗೆಗಳ ಪ್ರತಿನಿಧಿ ಗೋಪಾಲಕೃಷ್ಣರಾಯ್, ಉಪಕಾರ್ಯದರ್ಶಿಗಳು ಭೋಜರಾಜ ಸೆಟ್ಟಿ, ಕೋಟಾಕ್ಷಿಕಾರಿಗಳಾಗಿ ಆರಿಸಲ್ಪಟ್ಟರು.

ಮಹಾಸಭೆಯಲ್ಲಿ ಈ ಕೆಳಗಿನ ನಿರ್ಣಯಗಳು ಸಾಮಾನ್ಯವು ಮೈಸೂರು ಸರಕಾರವು 1.1.1957ರಂದು ಪರಿಷತ ಸರಕಾರೀ ಸಂಬಳಗಳನ್ನು ಮೇನೇಜುಮೆಂಟುಗಳು ಭೇಧಭಾವನೆಗಳಿಗೆ ಎಲ್ಲಾ ಶಿಕ್ಷಕರಿಗೂ ಅನ್ವಯಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವುದು. ಪೆನ್ಷನ್ ಹಣವನ್ನು ಶೀಘ್ರವಾಗಿ ಕೂಡಿಸುವಂತೆ ಕೇಳಿಕೊಳ್ಳುವುದು ಮೈಸೂರು ಸರಕಾರವು ಜ್ಯಾರಿಗೆ ತರಲಿರುವ ಭೂ ಸುಧಾರಣಾ ಖಾಯಾದೆಗಳನ್ನಯ ಪ್ರತೀ ಕುಟುಂಬದ ಸದಸ್ಯರ ಸಂಖ್ಯೆಯನ್ನು ಹೊಂದಿಕೊಂಡು ಕನಿಷ್ಠ ಮಿತಿಯ ಸಾಗುವಳ್ಳಭೂಮಿಯನ್ನು ಎಲಿಮೆಂಟರಿ ಶಾಲಾ ಉಪಾಧ್ಯಾಯ ಉಪಾಧ್ಯಾಯನಿಯರು ಭೂಮೂಲಕ ಅಥವಾ ಜಾಲಗೇಣಿದಾರರಾಗಿದ್ದಲ್ಲಿ ಅವರಿಗೆ ಸಾಗುವಳ್ಳಿಯ ಸಾಲಳ್ಳೆಯನ್ನು ಒದಗಿಸಬೇಕು. ಇವರು ಕೊಡುವ ವೃತ್ತಿ ತೆರಿಗೆಯಿಂದ ಯಾವ ಅಡ್ಡಿಯು ಆಗಕೂಡದು ಅಲ್ಲದೆ ಈಗ ಬೇರೆ ಕಡೆಯಲ್ಲಿ ಅಧ್ಯಾಪಕನಾಗಿದ್ದು ಇನ್ನು ಮುಂದೆ ಸ್ವತಃ ಸಾಗುವಳ್ಳಿಗೆ ಅನುಕೂಲವಾದ ಕಾಯಂ ವಾಸ್ತವ್ಯವನ್ನು ಹೊಂದುವ ಅಧ್ಯಾಪಕನಿಗೂ ಈ ಕಾನೂನು ಮೇಲಣ ರೀತಿಯಲ್ಲಿ ಲಾಗು ಆಗಕೂಡದು. ಸಭಾಂತ್ಯದಲ್ಲಿ ಶ್ರೀ ಎಫ್. ದಾಂತಿಯವರು ಧನ್ಯವಾದಗಳನ್ನಿತ್ತರು.

ಶ್ರೀ ಕೆ. ಎಸ್. ಹೆಗ್ಡೆಯವರಿಗೆ ಸತ್ಕಾರ

—ಮೈಸೂರು ಹೈಕೋರ್ಟಿನ ನ್ಯಾಯಾಧೀಶರುಗಳಿ ನೇಮಕಗೊಂಡ ಶ್ರೀ ಕೆ. ಸದಾನಂದ ಹೆಗ್ಡೆಯವರಿಗೆ ಸ್ಥಳೀಯ ಬಾರ್ ಎಸೋಸಿಯೇಶನ್ನವರು ತಾ. ೨೩ರಂದು ಭೋಜನ ಸತ್ಕಾರವಿತ್ತು ಗೌರವಿಸಿದರು. ಬಾರ್ ಎಸೋಸಿಯೇಶನ್ನಿನ ಅಧ್ಯಕ್ಷ ಶ್ರೀ ಬಿ. ಶೀನಪ್ಪ ಹೆಗ್ಡೆಯವರು ಸ್ವಾಗತಿಸಿ ಭಾಷಣ ಮಾಡಿದರು ಅತಿಥಿ ಶ್ರೀ ಹೆಗ್ಡೆಯವರು ಸತ್ಕಾರಕ್ಕಾಗಿ ಆಭಾರ ಸೂಚಿಸಿ ಮಾತನಾಡಿದರು.

ಸರ್ಕಲ್ ಕಾಂಗ್ರೆಸ್ ಕಮಿಟಿಯ-

ಕಾರ್ಯಕಾರಿ ಸಮಿತಿ ಸಭೆಯು ತಾ. 20ರಂದು ಅಧ್ಯಕ್ಷ ಶ್ರೀ ಬಾಳ್ಳಟ್ಟೆ ಬೇಡು ಕೃಷ್ಣಯ್ಯ ಹೆಗ್ಡೆಯ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನಂತೆ 5 ಮಂಡಲಗಳನ್ನು ರಚಿಸಬೇಕೆಂದಾಯಿತು. ಮಲ್ಪೆ—ಕೊಡವೂರು, ಬಡಾನಿಡಿಯೂರುಕಟ್ಟೆ ಕಲ್ಲಡ್ಕಯವರು, ಕೆಳಾರ್ಕಳಬೆಟ್ಟು, ಪುತ್ತೂರು. ಉದಿಯಾವರ—ಕಡೆಕಾರು, ಕಿದಿಯೂರು, ಕುತ್ಪಾಡಿ, ಉದ್ಯಾವರ, ಮಣಿಪುರ. ಮಣಿಪಾಲ—ಶಿವಳ್ಳಿ, ಅಲೆವೂರು, ಕೊರಂಗರಪಾಡಿ, ಬೈಲೂರು. ಉಡುಪಿ—ನಗರ ಸಭೆಯ ಸರಿಯ್ಯ. ಹಿರಿಯಡ್ಕ ಹಿರಿಯಡ್ಕ ಮತ್ತು ಪರ್ಕಳ ಪಂಚಾಯತ ಕ್ಷೇತ್ರ.

ಶ್ರೀ ಪಿ. ಶೀನ ಶೆಟ್ಟರನ್ನು ಕಾಂಗ್ರೆಸ್ ಪ್ರಚಾರಕರನ್ನಾಗಿ ಆರಿಸಲಾಯಿತು. ಕಾಂಗ್ರೆಸ್ ಸಂಘಟನೆಯ ಕುರಿತು ಶ್ರೀಗಳಾದ ಕೆ. ಕೆ. ಪೈ. ಎ. ಜಿ. ಆಳ್ವ ಮೊದಲಾದವರು ಕೆಲ ಸೂಚನೆಗಳನ್ನಿತ್ತರು.

ಇನ್ನು—ಇನ್ನದಲ್ಲಿ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳನ್ನಯ ರಚಿಸಲಾದ ವಿವಿಧ ಅಭಿವೃದ್ಧಿ ಕಾರ್ಯಗಳ ಉದ್ಘಾಟನಾ ಸಮಾರಂಭಗಳು ತಾ. 12ರಂದು ಶ್ರೀ ಎಫ್ ಎಕ್ಸ್. ಡಿ ಪಿಂಟೊ, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗಿದವು. ಸಮಾಜ ವಿಕಾಸ ಯೋಜನೆ ಮತ್ತು ಜಿಲ್ಲಾ ಬೋರ್ಡಿನ ಸಹಾಯದಿಂದ ಕಟ್ಟಿಸಲಾದ ಬೋರ್ಡು ಹಾಲ್ ಎ ಶಾಲಾ ಕಟ್ಟಡವನ್ನು ನಿವೃತ್ತ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಶಿಂಹಪ್ಪನವರೂ, ಶಿಶುವಿಹಾರ ಕೇಂದ್ರವನ್ನು ಶ್ರೀ ಎ. ಪದ್ಮನಾಭ ಶೆಟ್ಟರೂ, ಭಜನಾ ಮಂದಿರವನ್ನು ಶ್ರೀ ಶ್ರೀನಿವಾಸ ಅಳ್ವರೂ, ಫಲಿಮಾರು ರಸ್ತೆಯನ್ನು ಜಿಲ್ಲಾ ಸಂಚಾಯತ ಅಧಿಕಾರಿ ಶ್ರೀ ಕೆ ಶೀನ ಶೆಟ್ಟರೂ ಉದ್ಘಾಟಿಸಿದರು ಬಾಪೂಜಿ, ಡಾ. ಪ್ರಸಾದ್, ಪಂಡಿತ ನೆಹ್ರೂ ಮತ್ತು ನೇತಾಜಿ ಸುಭಾಷಚಂದ್ರ ಭೋಸರ ಭಾವಚಿತ್ರಗಳನ್ನು ಅನುಕ್ರಮವಾಗಿ ಶ್ರೀಗಳಾದ ಎಚ್. ಎಮ್. ನಾರಾಯಣ ಗಣಯಾರ್ ಪಿ. ಕೆ ಶೀನ ಶೆಟ್ಟಿ, ಎಸ್ ದೇವು ಶೆಟ್ಟಿ ಮತ್ತು ಡಾ. ಟಿ. ಕೆ. ಕುಮಾರನ್ ನಂದಿಯಾರರು ಅನಾವರಣಮಾಡಿದರು ಆರಂಭದಲ್ಲಿ ಇನ್ಸ್ಪೆಕ್ಟರ್ ಶ್ರೀ. ವಿ. ಸುಧಾರಾಮ ಶೆಟ್ಟರು ಸ್ವಾಗತಿಸಿದರು. ಡಾ. ಸಂಜೀವನಾಥ್, ಶ್ರೀ ರಮಾನಾಥ್ ಮೊದಲಾದವರು ಭಾಷಣಮಿತ್ತರು ಶ್ರೀ ವಿ. ಎಮ್. ಶಿವಣ್ಣ ಶೆಟ್ಟರು ಧನ್ಯವಾದಗಳನ್ನಿತ್ತರು.

ಪುತ್ತೂರು ರೆಂಟ್‌ಕಂಟ್ರೋಲ್ಲರ ಕೋರ್ಟಿನಲ್ಲಿ

H. R. C. O. P. 8/57.

ಸುಶೀಲಮ್ಮ —ಅರ್ಜಿದಾರಳು.

ಮತ್ತು

ಗೌರಿ ಕೂಡಾ —ಎದ್ರಿರು

ಎದ್ರಿರು 3) ಕಮಲ—ಕಿಟ್ಟಣ್ಣನ ಮಗಳು—ಪ್ರಶಾಂತಸ್ಥ ಸಪಲ್ಯನ ಹೆಂಡತಿ—ಇರ್ಕತ್ತೂರು ಗ್ರಾಮ. 4) ಗಣಪತಿ—ಕಿಟ್ಟಣ್ಣನ ಮಗ—ನ್ಯೂ ದಿಲ್ಲಿಯಲ್ಲಿ ನುವ್ರಾಕ ಹೋಟೇಲಿನಲ್ಲಿದ್ದಾನೆ.

ಸದ್ರಿ 3, 4ನೇ ಎದ್ರಿರಿಗೆ ಕೋರ್ಟ್ ಸಮನ್ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿ ಅರ್ಜಿದಾರ ಸ್ವಾಧೀನತೆ ಬಗ್ಗೆ ನಿಮ್ಮ ಬಗ್ಗೆರೆರ ಮೇಲೆ ಮಾಡಿದ ಮೇಲಿನ ವ್ಯವಹಾರಿಯನ್ನು ನಿಮ್ಮ ಸೋಟೀಸಿನ ಬಗ್ಗೆ ತಾ. 28-9-57ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯವಹಾರ ದಿವಸ ಕೋರ್ಟಿಗೆ ಹಾಜರಾಗಿ ಉಪಸ್ಥಿತರಿರತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾ ಮಹಿಯುಕ್ತ ಕಂಡಂತೆ ತೀರ್ಮಾನಿಸಲಾಗುವುದು

M. Radhakrishna Rao.

Advocate for petn.

ಪುತ್ತೂರು, 15-9-57.

NOTICE

In the Court of the District Munsif of Karkala.

O. P No 37/1957.

In the matter of the debts of the deceased Janab Sheik Budan Saheb

Zorabi and others —Petitioners.

To whomsoever it may be concerned.

Whereas the petitioners have applied to the above Court for grant of a Succession Certificate in favour of the 1st Petitioner personally and on behalf of the petitioners 2 to 8 in respect of the debts shown in Schedule B and that the said petition Stands posted to 8—10—1957, you are hereby informed that you are at liberty to appear before the said Court at 11 A M. on the said date and plead your defence if any, failing whice the petition will be heard and decided in your absence.

I Ramamoorthy,

Advocate for Petitioners.

Karkala Dated. 23—9—1957

ಮಂಗಳೂರು

ದ. ಕ. ಜಿಲ್ಲಾ ಹೈಸ್ಕೂಲು ಹೆಡ್ಮಾಸ್ಟರರ ಪರಿಷತ್ತು—ತಾ. 14ರಂದು ಮಂಗಳೂರು ಸೈಂಟ್ ಆನ್ಸ್ ಟ್ರೈನಿಂಗ್ ಕಾಲೇಜಿನ ಎಕ್ಸ್‌ಟೆನ್ಸನ್ ಸರ್ವಿಸಸ್ ವಿಭಾಗದ ಆಶ್ರಯದಲ್ಲಿ, ಸರಕಾರಿ ತರಬೇತಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಅಂಚೆರ ಅಧ್ಯಕ್ಷತೆಯಲ್ಲಿ ಜರಗಿತು. ಸೈಂಟ್ ಆನ್ಸ್ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಸಿಸ್ಟರ್ ಎಮ್. ಕಾರ್ಮೆಲಿಟಾ, ಎ. ಸಿ. ಯವರು ಸ್ವಾಗತಮಾತುಗಳನ್ನಾಡಿದರು ಸ್ಥಳೀಯ ಗ್ರಂಥಾಲಯ ಅಧಿಕಾರದ ಅಧ್ಯಕ್ಷ ಶ್ರೀ ಎಮ್. ಎಸ್. ವಿಕಾಂಬರರಾಯರು ಪರಿಷತ್ತನ್ನು ಉದ್ಘಾಟಿಸಿದರು. ಶ್ರೀ ಬಿ ಭಗವಾನರಾಯರು ಶುಭ ಸಂದೇಶಗಳನ್ನು ಓದಿದರು. ಶ್ರೀಗಳಾದ ಶ್ರೀನಿವಾಸ ಕಿಣಿ, ಎಚ್. ಪಾಂಡುರಂಗ ರಾವ್ ಮತ್ತು ಸಿಸ್ಟರ್ ಬರ್ನರ್ಡಿನ್ ಮೊದಲಾದವರು ಹಲವಾರು ವಿಷಯಗಳ ಕುರಿತು ಉಪನ್ಯಾಸವಿತ್ತರು. ಸಂಜೆ ಚಲಚಿತ್ರ ಪ್ರದರ್ಶನವಿತ್ತು.

ನೇಮಕಗಳು—ಕಾರ್ಕಳದ ಎಡಿಶನಲ್ ಡಿ. ಮುನ್ಸಿಫ್ ಶ್ರೀ ಅಲ್ಲಾರಿಸರನ್ನು ಪುತ್ತೂರಿಗೆ ವರ್ಗಾಯಿಸಲಾಗಿದೆ. ಕಾರ್ಕಳದ ಅಸಿಸ್ಟಾಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಪಿ. ರಾಮರಾಯರನ್ನು ಉಡುಪಿಗೆ ಸಬ್ ಮೆಜಿಸ್ಟ್ರೇಟರಾಗಿ ವರ್ಗಾಯಿಸಲಾಗಿದೆ. ಉಡುಪಿ ಸಬ್ ಮೆಜಿಸ್ಟ್ರೇಟ್ ಶ್ರೀ ಎಮ್. ರಾಮಚಂದ್ರರಾಯರನ್ನು ಸುಂಟಿಕೇರಿಯ I ಕ್ಲಾಸ್ ಮೆಜಿಸ್ಟ್ರೇಟರಾಗಿ ವರ್ಗಾಯಿಸಲಾಗಿದೆ.

ರೋಟರಿ ಸಭೆ—ಮಂಗಳೂರು ರೋಟರಿ ಕ್ಲಬ್ಬಿನ ಸಭೆಯು ತಾ. 19ರಂದು ರಾತ್ರಿ ಸಿ. ಪಿ. ಸಿ. ಸಭಾಭವನದಲ್ಲಿ ಅಧ್ಯಕ್ಷ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ಪಿ. ಕಸ್ತೂರಿಯವರು ಗತ ಸಭೆಯ ವರದಿಯನ್ನೋದಿದರು. ಜಿಲ್ಲಾ ಪಿ. ಡೆಬ್ಲ್ಯೂ. ಡಿ. ಸೂಪರಿಂಟೆಂಡಿಂಗ್ ಇಂಜಿನೀಯರ್ ಶ್ರೀ ಜಿ. ಎಸ್. ಗಣಪತಿಯವರು 'ದ. ಕ. ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳು' ಎಂಬ ವಿಷಯದಲ್ಲಿ ಮಾತನಾಡುತ್ತಾ, ತ್ವರಿತ ಗತಿಯಲ್ಲಿ ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡವು ಒಂದಾಗಿದೆ. ದ್ವಿತೀಯ ಯೋಜನಾವಧಿಯಲ್ಲಿ ಕೂಡಾ ಜಿಲ್ಲೆಯು ಸಾಧಿಸಬೇಕಾದಷ್ಟು ಅಭಿವೃದ್ಧಿ ಸಾಧಿಸಲು ಶಕ್ತವಾಗದು ಎಂದರು. ಕರಾವಳಿ ರಸ್ತೆ, ನೀರಾವರಿ ಕಾರ್ಯಗಳು, ಆಸ್ಪತ್ರೆ ವಿವರಣೆ, ಮಂಗಳೂರಿಗೆ ನಳ್ಳಿನೀರು ಸೂಳೈಕೆ, ಮಲೆನಾಡು ಅಭಿವೃದ್ಧಿ ಮೊದಲಾದ ವಿಚಾರಗಳಲ್ಲೂ ಮಾತನಾಡಿದರು. ನಂತರ ಜರಗಿದ ಚರ್ಚೆಯಲ್ಲಿ ಶ್ರೀಗಳಾದ ಕೆ. ವಿಶ್ವನಾಥ ಕಾಮತ್, ಎ ಉಮಾನಾಥ ರಾವ್, ಕೆ. ಎಸ್. ಭಂಡಾರ್‌ಕಾರ್ ಮತ್ತು ಡಾ. ಎಮ್. ಡಿ. ಅಡಪ್ಪರು ಭಾಗವಹಿಸಿದರು.

ಶ್ರೀ ಸಿ. ಡಿ. ದೇಶಮುಖರು—ಯೂನಿವರ್ಸಿಟಿ ಗ್ರಾಂಟ್ಸ್ ಕಮಿಶನ್ನಿನ ಅಧ್ಯಕ್ಷ ಡಾ. ಸಿ. ಡಿ. ದೇಶಮುಖರು ತಮ್ಮ ಪತ್ನಿ ಶ್ರೀಮತಿ ದುರ್ಗಾಬಾಯಿಯವರೊಡನೆ ಇದೇ ತಾ. 11ರಂದು ಎನ್ಸಾಕುಲಂನಿಂದ ವಿಮಾನ ಮೂಲಕ ಮಂಗಳೂರಿಗೆ ಬಂದು ಎರಡು ದಿವಸಗಳಿದ್ದು ತಾ. 13ರಂದು ಕಲ್ಲಿಕೋಟೆಗೆ ತೆರಳಿಲಿರುವರೆಂದು ಗೊತ್ತಾಗಿದೆ.

ಶ್ರೀ ಕೆ. ಎಸ್. ಹೆಗ್ಡೆಯವರಿಗೆ ಸತ್ಕಾರ—ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಕೆ. ಸದಾನಂದ ಹೆಗ್ಡೆಯವರ ಗೌರವಾರ್ಥವಾಗಿ ದ. ಕ. ಜಿಲ್ಲಾ ಅಭಿವೃದ್ಧಿ ಮತ್ತು ಹಿತಚಿಂತನಾ ಬೋರ್ಡಿನವರು ತಾ. 22ರಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಬೋರ್ಡಿನ ಅಧ್ಯಕ್ಷ ಶ್ರೀ ವಿ. ಎಸ್. ಕುಡ್ವರು ಸ್ವಾಗತಿಸಿದರು. ಶ್ರೀ ಹೆಗ್ಡೆಯವರು ಕಾಲೋಚಿತ ಭಾಷಣಮಾಡಿದ ಬಳಿಕ ಶ್ರೀ ಬಿ. ಬಿ. ಸೆಟ್ಟರು ಶ್ರೀ ಹೆಗ್ಡೆಯವರು ಮೈಸೂರಿನ ಮಾದರಿ ಹೈಕೋರ್ಟಿನ ಮಾದರಿ ನ್ಯಾಯಾಧೀಶರಾಗಬೇಕೆಂದು ಹಾರೈಸಿದರು.

ಶ್ರೀ ಶರನ್ನು ಯಕ್ಷಗಾನ ಸಂಘದವರು—ತಾ. 21ರಂದು ರಾತ್ರಿ ಶ್ರೀ ಕೆ. ಎಸ್. ಹೆಗ್ಡೆಯವರ ಗೌರವಾರ್ಥವಾಗಿ ಯಕ್ಷಗಾನ ಕೂಟವೊಂದನ್ನು ಏರ್ಪಡಿಸಿದ್ದರು. ಶ್ರೀ ಕೆ. ಆರ್. ಆಚಾರ್, ಎಮ್. ಪಿ. ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಬಾಲಕೃಷ್ಣ ರಾಯರು ಸ್ವಾಗತಿಸಿದರು. 'ಅಂಗದ ಸಂಧಾನ' ಎಂಬ ವಿಷಯದ ಮೇಲೆ ಯಕ್ಷಗಾನ ಕಾಲಕ್ಷೇಪವು ಯಶಸ್ವಿಯಾಗಿ ಜರಗಿತು.

ಜಿಲ್ಲಾ ಕಲೆಕ್ಟರರಿಗೆ ರೈತ ಸಂಘದ ಮನವಿ—ದ. ಕ ಜಿಲ್ಲಾ ರೈತ ಸಂಘದ ಅಧ್ಯಕ್ಷ ಶ್ರೀ ಎ ಕೃಷ್ಣ ಸೆಟ್ಟಿ, ಕಾರ್ಯದರ್ಶಿ ಶ್ರೀ ಎಮ್. ಎಚ್. ಕೃಷ್ಣಪ್ಪ ಮೊದಲಾದವರ ಶಿಷ್ಟ ಮಂಡಳಿಯೊಂದು ತಾ. 19 ರಂದು ಜಿಲ್ಲಾ ಕಲೆಕ್ಟರರನ್ನು ಕಂಡು ಮನವಿಯೊಂದನ್ನು ಅರ್ಪಿಸಿತು. ಸದ್ಯ ಜ್ಯಾರಿಯಲ್ಲಿರುವ ನ್ಯಾಯಗೇಣಿ ಪಾವತಿ ಕಾಯಿದೆ ಪ್ರಕಾರ ಗೇಣಿ ಕೋರ್ಟುಗಳಿಗೆ ಅರ್ಜಿಹಾಕಲು ಬೇಕಾದ ಮಾಹಿತಿಗಳನ್ನು ಕೆಲವೆಡೆಗಳಲ್ಲಿ ಗ್ರಾಮ ಶ್ಯಾನುಭಾಗರು ನಿರಾಕರಿಸುವುದರ ಕುರಿತು ಯೋಗ್ಯ ಕ್ರಮ ಕೈಕೊಂಡು ರೈತರಿಗೆ ಸಹಾಯ ನೀಡಬೇಕಾಗಿ ಮನವಿಯಲ್ಲಿ ಕೈಕೊಳ್ಳುವ ಅಶ್ವಾಸನೆಯಿತ್ತರು.

ಜಿಲ್ಲಾ ಕಲೆಕ್ಟರ್- ಶ್ರೀ ಸೈ. ಸಿ. ಹೊಂಬಾಳೆಯ್ಯನವರು ತಾ. 21ರಂದು ಆಪರಾಷ್ಟ ದ. ಕ. ಜಿಲ್ಲಾ ಕಲೆಕ್ಟರರಾಗಿ ಅಧಿಕಾರ ವಹಿಸಿದರು.

ದ. ಕ. ಜಿಲ್ಲೆಯಲ್ಲಿ ರಾಷ್ಟ್ರೀಯ ವಿಸ್ತರಣಾ ಕ್ಷೇತ್ರಗಳು—ಮೈಸೂರು ರಾಜ್ಯಕ್ಕೆ ಮಂಜೂರಾಗಿರುವ 22 ಹೊಸ ರಾಷ್ಟ್ರೀಯ ವಿಸ್ತರಣಾ ಕ್ಷೇತ್ರಗಳ ಪೈಕಿ ದ. ಕ. ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿ ಎರಡು ಕ್ಷೇತ್ರಗಳು ಮುಂದಿನ ತಿಂಗಳ ತಾ. 2ರಂದು ತೆರೆಯಲ್ಪಡುವುವು ಎಂದು ತಿಳಿದು ಬರುತ್ತದೆ.

ಪಂಚವಾರ್ಷಿಕ ಯೋಜನೆಯ ಕುರಿತು ವಿಚಾರಗೋಷ್ಠಿ—ಸ್ಥಳೀಯ ಮಿಲಾಗ್ರಿಸ್ ಹೈಸ್ಕೂಲಿನಲ್ಲಿರುವ ಯೂತ್ ಜಸ್ಟಿಸ್ಟ್ ಸೆಂಟರಿನಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ಮೇಲಿನ ವಿಚಾರಗೋಷ್ಠಿಯೊಂದನ್ನು, ಸಾಮಾಜಿಕ ಅಧ್ಯಯನ ಗೋಷ್ಠಿಯವರ ಆಶ್ರಯದಲ್ಲಿ ತಾ. 25ರಂದು ಸಂಜೆ ನಿವೃತ್ತ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹಯ್ಯನವರು ಉದ್ಘಾಟಿಸುತ್ತಾ, ದ್ವಿತೀಯ ಪಂಚವಾರ್ಷಿಕ ಯೋಜನೆಯ ಯಶಸ್ವಿಗೆ ಸಾರ್ವಜನಿಕರ ಸರಿಯಾದ ಸಹಕಾರ ಅತ್ಯಗತ್ಯವೆಂದರು. ಉಡುಪಿಯ ಎಮ್. ಜಿ. ಎಮ್. ಕಾಲೇಜಿನ ಪ್ರಾಧ್ಯಾಪಕ ಶ್ರೀ ಕೆ. ಶಿ. ಹರಿದಾಸ ಭಟ್ಟರು 'ಯೋಜನೆಗೆ ಆರ್ಥಿಕಾನುಕೂಲತೆ' ಎಂಬ ವಿಷಯವನ್ನೆತ್ತಿ ಮಾತನಾಡುತ್ತಾ, ದ್ವಿತೀಯ ಯೋಜನೆಯ ಯಶಸ್ವಿಗೆ ಮುಖ್ಯವಾಗಿ ಭಾರತಕ್ಕೆ ಅಮೇರಿಕದಿಂದ ದೊರಕುವ ಹಣದ ಸಹಾಯವನ್ನವಲಂಬಿಸಿದೆ ಎಂದು ಮುಂತಾಗಿ ಹೇಳಿದರು. ಆರಂಭದಲ್ಲಿ ಸಾಮೂಹಿಕ ಅಧ್ಯಯನ ಗೋಷ್ಠಿಯ ಡೈರೆಕ್ಟರ್ ರೆ. ಫಾ. ಎಂಜೆಲಿಟ್ಟೋರವರು ಸ್ವಾಗತಿಸಿದರು. ಬರ್ಜಾ ಕೂಟದಲ್ಲಿ ಶ್ರೀಗಳಾದ ಕೆ. ಆರ್. ಆಚಾರ್ ಎಮ್. ಪಿ, ಟಿ. ಎಸ್. ರಾವ್, ಪ್ರಭಾಕರ ಭಾಟೆ ಮೊದಲಾದವರು ಭಾಗವಹಿಸಿದ್ದರು. ತಾ 28ರ ತನಕ ನಡೆಯುವ ಈ ವಿಚಾರಗೋಷ್ಠಿಯಲ್ಲಿ ಶ್ರೀಗಳಾದ ಪಿ. ಎಸ್. ಕುಡುವಾ, ಎಸ್. ಆರಾನ್ಹಾ, ಎಚ್. ಮುದ್ದಣ್ಣ ಸೆಟ್ಟಿ, ರೆ| ಫಾ| ಎ. ಎಗ್ನೊಲೆಟ್ಟೋರ, ಎಸ್. ಜೆ. ಮೊದಲಾದವರು ಭಾಗವಹಿಸಲಿರುವರು.

ಶ್ರೀ ಪಣಿಯಾಡಿಯವರ ಸ್ತುತ್ಯ ಸಾಹಸ—ಅಸಹಕಾರ ಚಳವಳಿ ಕಾಲದಲ್ಲಿ ಉಡುಪಿಯ ಪ್ರಮುಖ ಕಾಂಗ್ರೆಸ್ ಕೆಲಸಗಾರರಾಗಿದ್ದುಕೊಂಡು ಜನಜಾಗ್ರತಿಯನ್ನುಂಟುಮಾಡಿದ ಹಾಗೂ ಈಗ ಮದ್ರಾಸಿನಲ್ಲಿ ವಾಸ್ತವ್ಯಮಾಡಿರುವ ಶ್ರೀ ಎಸ್. ಯು. ಪಣಿಯಾಡಿಯವರು "ಚಿತ್ರ ಭಾರತಿ" ಸಂಸ್ಥೆಯೊಂದನ್ನು ಇದೇ ತಾ. 5ರಂದು ಪ್ರಾರಂಭಿಸಿದ್ದು ದೀಪಾವಳಿಕಾಲಕ್ಕೆ ಸಾಮಾಜಿಕ ಕನ್ನಡ ಚಲಚಿತ್ರವೊಂದನ್ನು ಪ್ರಾರಂಭಿಸಲಿರುವರು. ಈ ಚಿತ್ರ ನಿರ್ಮಾಪಕರು ಶ್ರೀ ಪಣಿಯಾಡಿಯವರೆ ಇರುವರು. ಶ್ರೀ ಪಿ. ಎಸ್. ಮೂರ್ತಿಯವರೆ ದಿಗ್ದರ್ಶನದಲ್ಲಿ, ಸಂಪತ್, ಹರಿಣಿ, ವಾಣಿರಾಜ ಹಾಗೂ ಮಹಾಬಲ ರಾವ್ ಮೊದಲಾದವರು ಪ್ರಮುಖ ಪಾತ್ರ ವಹಿಸಲಿರುವರು.

ಧರ್ಮಸ್ಥಳ- ಸ್ಥಳೀಯ ಲಲಿತ ಕಲಾ ಸಂಘದ ವತಿಯಿಂದ ಶ್ರೀ ರತ್ನವರ್ಮ ಹೆಗ್ಡೆಯವರ ಪಟ್ಟಾಭಿಷೇಕದ ಸ್ಮರಣಾರ್ಥವಾಗಿ ಕೃಷ್ಣ ಲೀಲಾ ನಾಟಕ ಅಭಿನಯಿಸಲಾಯಿತು. ಶ್ರೀ ಸುಬ್ರಾಯ ಆಚಾರಿಯವರು ತಾವು ರಚಿಸಿದ ದೇವರ ಸ್ತೋತ್ರವನ್ನು ಮುದ್ರಿಸಿ, ಬಿನ್ನವತ್ತಳೆ, ಹೂಮಾಲೆಗಳನ್ನು ಶ್ರೀ ಹೆಗ್ಡೆಯವರಿಗೆ ಅರ್ಪಿಸಿದರು. ಶ್ರೀ ಎ. ರಾಮಣ್ಣ ಸೆಟ್ಟರು ಹೆಗ್ಡೆಯವರಿಗೆ ದೀರ್ಘಾಯುರಾರೋಗ್ಯವನ್ನು ಕೋರಿದರು. ಶ್ರೀ ಹೆಗ್ಡೆಯವರು ಸರ್ವರಿಗೂ ಶುಭವನ್ನು ಹಾರೈಸಿ ಮಾತನಾಡಿದರು.

ಹಿಲಿಯಾಣ— ಸ್ಥಳೀಯ ಬೋರ್ಡು ಹಾ. ಎ ಶಾಲೆಯ ಆರನೇ ತರಗತಿಯ ಉದ್ಘಾಟನೆಯು ದ ಕ. ಜಿಲ್ಲಾ ಬೋರ್ಡು ಸದಸ್ಯ ಶ್ರೀ ಎಮ್. ಎಮ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್ ಶ್ರೀ ಬಿ ಆನಂದ ಹೆಗ್ಡೆಯವರು ಸ್ವಾಗತ ಮಾತುಗಳನ್ನಾಡಿದರು. ಸಭಿಕರ ಪರವಾಗಿ ಶ್ರೀಗಳಾದ ಬಿ. ಎಲ್ ಡಾಯಸ್, ಬಿ. ನರಸಿಂಹ ಸೆಟ್ಟಿ ಮೊದಲಾದವರು ಮಾತನಾಡಿದ ಬಳಿಕ, ಶಾಲೆಗೆ ಹೊಸ ಕಟ್ಟಡ ರಚಿಸಲು ಸಮಿತಿಯೊಂದರ ನೇಮಕವಾಯಿತು.

ಬೇಲಂಪಾಡಿ—ಸ್ಥಳೀಯ ಯುವಕರಿಂದ ಪ್ರಕಟವಾಗುತ್ತಿರುವ 'ವನಸುಮ' ಹಸ್ತಪತ್ರಿಕೆಯ ಎರಡನೆ ಹುಟ್ಟುಹಬ್ಬದ ಸಮಾರಂಭದ ಅಂಗವಾಗಿ ಹೈಸ್ಕೂಲು ಮತ್ತು ಕೆಳತರಗತಿಯ ವಿದ್ಯಾರ್ಥಿಗಳೊಳಗೆ ಸಾಹಿತ್ಯ ಸ್ಪರ್ಧೆಯೊಂದು ಏರ್ಪಡಿಸಲಾಗಿದೆ. ಕಥೆ, ಕವನ ಹಾಗೂ ರೇಖಾಚಿತ್ರಗಳಲ್ಲಿ ಉತ್ತಮವೆಂದು ಮನೋನಿಯಸಲಾದ ಬರೆಹಗಳಿಗೆ ಯೋಗ್ಯ ಬಹುಮಾನವನ್ನತ್ತೀಯಲಾಗುವುದು. ವಿದ್ಯಾರ್ಥಿಗಳು ತಮಗೆ ಉಚಿತವೆಂದು ಕಂಡುಬಂದ ಯಾವುದೇ ಕಥೆಯನ್ನಾಗಲೀ ರೇಖಾಚಿತ್ರವನ್ನಾಗಲೀ ಆರಿಸಿಕೊಂಡು ಅವು ಮಾತ್ರ ಎಕ್ಸರ್ ಸೈಜ್ ಪುಸ್ತಕದ 10 ಪುಟಗಳನ್ನು ಮೀರಬಾರದು. ಹೆಸರು ವಿಳಾಸಗಳನ್ನು ಪ್ರತ್ಯೇಕ ಚೀಟಿನಲ್ಲಿ ಬರೆಯತಕ್ಕದ್ದಲ್ಲದೆ ಬರೆಪಗಳಿಗೆ ಶಾಲಾ ಹೆಡ್ಮಾಸ್ಟರರ ಗುರುತು ಪತ್ರ ಕೂಡಿಬೇಕು ಬರೆಪಗಳನ್ನು 'ವನಸುಮ' ಪ್ರಕಾಶನ, ದೇಲಂಪಾಡಿ (ದ ಭಾರತ) ವಿಳಾಸಕ್ಕೆ ತಾ. 31-10-57 ರೊಳಗೆ ತಲ್ಪವಂತೆ ಕಳುಹಿಸಬಹುದು.

ಮೂಲ್ಕಿ—ನಿವೃತ್ತ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹಯ್ಯನವರಿಗೆ ತಾ. 12ರಂದು ಶ್ರೀ ಬಂಗ್ಲೆಕಾರ್ ಮಾಳಿಗೆಯಲ್ಲಿ ಶ್ರೀ ಎಫ್. ಎಕ್ಸ್. ಡಿ. ಪಿಂಟೋ, ಎಮ್ ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಸತ್ಕಾರವಿತ್ತು ಗೌರವಿಸಲಾಯಿತು. ಶ್ರೀ ಎಸ್. ಆರ್. ಕಾಮತರು ಸ್ವಾಗತಿಸಿದರು. ಶ್ರೀಗಳಾದ ಬಿ. ಎಸ್. ಬಾಳಿಗ, ಬಿ. ಭೋಜರಾವ್, ಮತ್ತು ವಿಠಲ ಶೆಣೈಯವರು ಕಾಲೋಚಿತ ಮಾತುಗಳನ್ನಾಡಿದರು.

ಕುಂದಾಪುರ—ಸ್ಥಳೀಯ ತಹಶಿಲ್ದಾರ್ ಶ್ರೀ ಟಿ.ಎಸ್. ಆರ್. ವೆಂಕಟ್ರಾಮನವರಿಗೆ ಬೆಳ್ಳಂಗಡಿಗೆ ವರ್ಗವಾದ ಪ್ರಯುಕ್ತ ಅವರನ್ನು ಬೀಳ್ಕೊಡುವ ಸಮಾರಂಭವು ಗೀತಾ ಟಾಕೀಸಿನಲ್ಲಿ ತಾ. 8ರಂದು ಶ್ರೀ ಕೆ. ವೆಂಕಪ್ಪ-ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ರಘುನಾಥ ಶ್ಯಾನುಭಾಗರು ಸ್ವಾಗತಿಸಿದರು. ಶ್ರೀಗಳಾದ ಮಂಜಯ್ಯ ಸೆಟ್ಟಿ, ಎಸ್. ಗಣಪತಿ ಭಟ್ಟ್, ಬಿ. ರಾಮರಾವ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಕೇಶವ ಕಾಮತರು ಧನ್ಯವಾದವಿತ್ತರು.

ಹೆಬ್ರಿ—ಸೋಮೇಶ್ವರದ ಬಳಿಯ ಜಕ್ಕನ ಮಕ್ಕಿ ಎಂಬಲ್ಲಿಯ ರಿಜರ್ವ್ ಕಾಡಿನಲ್ಲಿ ಶ್ರೀ ಆತ್ತಾವರ ವಿಠಲ ಪೂಜಾರಿ ಶಿಬಾರಿ ಪಾರ್ಟಿಯವರು ಸರಕಾರದ ಆಮಂತ್ರಣ ಮೇರೆಗೆ ನಡೆಸಿದ ಭೇಟೆಯಲ್ಲಿ ಮೂಲ್ಕಿಯ ಶ್ರೀ ಕುಬೇರ್ ಬಾಲಕೃಷ್ಣ ಸೆಟ್ಟಿರ ದೊಡ್ಡ ದೊಂದು ಪಟ್ಟೆ ಹುಲಿಯನ್ನು ತಾ. 21ರಂದು ಗುಂಡಿಕ್ಕಿ ಕೊಂದಿರುವರು. ಶ್ರೀ ಸೆಟ್ಟರು ಈ ಮೊದಲು 33 ಹುಲಿಗಳನ್ನು ಹೊಡೆದಿರುವರು.

ಗಂಗೊಳ್ಳಿ- ಇಲ್ಲಿಯ ಬೋರ್ಡು ಹಿಂದುಸ್ಕಾಲ ಹಾ. ಎ. ಶಾಲಾ ಕಮಿಟಿಯವರ ಆಶ್ರಯದಲ್ಲಿ ಸದ್ರಿ ಶಾಲೆಯ VI ನೆ ತರಗತಿಯನ್ನು ತಾ. 14ರಂದು ಶ್ರೀ ಮಂಜಯ್ಯ ಸೆಟ್ಟಿ, ಎಮ್. ಎಲ್ ಎ. ಅವರು ಉದ್ಘಾಟಿಸಿದರು. ನಿವೃತ್ತ ಜಿಲ್ಲಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ಹೆಡ್ಮಾಸ್ಟರ್ ಶ್ರೀ ಕೆ. ಶ್ರೀನಿವಾಸ ರಾಯರು ವರದಿಯನ್ನೋದಿದರು. ಶ್ರೀಗಳಾದ ಎಮ್. ಮುತ್ತಯ್ಯ ಹೆಗ್ಡೆ, ಆರ್. ಕೆ. ಸಂಜೀವ ರಾವ್, ಎಚ್. ಭಾಸ್ಕರ ಕಾಮತ್, ಬಿ. ರಾಮ ರಾವ್, ಕೆ. ವೆಂಕಟ್ರಾಯ ಶೆಣೈ, ಎಮ್ ಎಚ್. ಹಸನ್ ಸಾಹೇಬ್, ಎಮ್. ಎಚ್ ಕಾದಿರ್ ಸಾಹೇಬ್ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು

ಬೈಲೂರು—ಸ್ಥಳೀಯ ಹೈಸ್ಕೂಲಿನ ಇಟ್ಟದ ಬಯಲನ್ನು ಸಮತಟ್ಟುಮಾಡುವ ಕಾಲದಲ್ಲಿ, ಬೈಲೂರು ಕೇಂದ್ರದ ಪ್ರಮುಖರು, ಶಾಲಾ ಮುಖ್ಯೋಪಾಧ್ಯಾಯ ಮತ್ತು ಇತರ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಶ್ರಮದಾನ ನೀಡಿದ್ದಾರೆ.

ಏಲಂ ನೋಟೀಸು

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ.

ಈ ಕೆಳಗೆ ಕಾಣಿಸಿದ ಮುರನೀಯರು ಸದ್ರಿ ಬೇಂಕಿನಲ್ಲಿ ಚಿನ್ನದ ನಗದ ಈಡಿನ ಮೇಲೆ ಸಾಲ ಪಡೆಕೊಂಡು ಕ್ಲಪ್ತ ವಾಯಿದೆಗೆ ಅಸಲು, ಬಡ್ಡಿ ಮೈಗೆರೆಕೊಡದೆ ಬಾಕಿ ಮಾಡಿರುವುದರಿಂದಲೂ ಅಲ್ಲದೆ ಕ್ರಮಪ್ರಕಾರ ರಿಜಿಸ್ಟರ್ಡ್ ನೋಟೀಸು ಕೊಟ್ಟಲ್ಲಿ ಸದ್ರಿ ಎಲ್ಲರಿಗೂ ನೋಟೀಸು ಸಿಕ್ಕಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪದ ಕಾರಣ ಸದ್ರಿಯವರೆ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದ್ರಿಯವರು ಈಡಿಟ್ಟ ನೆಗಗಳನ್ನು ಇದೇ ತಿಂಗಳ 30ನೇ ತಾರೀಕಿನ ಒಳಗೆ ಬ್ಯಾಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದಕ್ಕಪಕ್ಷದಲ್ಲಿ ಬರುವ ತಿಂಗಳ ತಾರೀಕು 5-10-1957 ಶನಿವಾರ ಪೂರ್ವಾಹ್ನ ಗಂಟೆ 11ಕ್ಕೆ ಯಾ ನೆಮಗೆ ಯುಕ್ತಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು ರೂ.	ನೈ ಪೈ
31/749	ಬೋರೆನ್ಸ್ ಡಿಸೋಜ, ಜಾಕಿ ಡಿಸೋಜರ ಮಗ, ಹಾವಂಜೆ, ಕೆಳಲುಗಿರಿ P. O.	20	00
31/907	ಶ್ರೀಮತಿ ನಾಗಿ ಪೂಜಾರ್ತಿ, ಏತ ಪೂಜಾರಿಯ ಹೆಂಡತಿ, ಮೂಡುಬೆಟ್ಟು ಕಲ್ಯಾಣಪುರ P. O.	10	00
33/425	ಜೋನ್ ಡಾಲ್ಫೆಡಾ, ಸಂತಾನ ಡಾಲ್ಫೆಡರ ಮಗ, ಬೈಕಾಡಿ, ಬ್ರಾಹ್ಮಾವರ P. O.	150	00
33/565	ಕೆ. ಆಲ್ಫಾಸ್ಟ ಸೆಟ್ಟಿ, ದೂಮಣ್ಣ ಸೆಟ್ಟರ ಆಳಿಯ, ಅರೂರು, ಕುರುಡುಂಜೆ, ಕುಜ್ಜಾಲ P. O.	120	00

Kallianpur }
21-9-1957 }

S. REBELLO,
Agent

ಸಮಾಜದ ಜನರ ಪ್ರೇಮಬಂಧನ

(೧ನೇ ಪುಟದಿಂದ)

ಸಾಯ, ನ್ಯಾಯಾಚರಣೆ, ಅಭಿವೃದ್ಧಿ, ಚಟುವಟಿಕೆಗಳಿಗಾಗಿ ಬೇರೆ ಬೇರೆ ಉಪ ಸಮಿತಿಗಳಿವೆ. ಈ ಗ್ರಾಮ ಸಂಘಗಳ ನಿರ್ಣಯಗಳು ಸರ್ವಸಾಮಾನ್ಯವಾಗಿ ಅವಿರೋಧಿಗಳಾಗಿರುತ್ತವೆ. ಸರಕಾರ ಮತ್ತು ಸಮಾಜ ವಿಕಾಸ ಯೋಜನಾಧಿಕಾರಿಗಳು ಸಮಾಜವಿಕಾಸ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳನ್ನು ಈ ಗ್ರಾಮದಾನದ ಹಳ್ಳಿಗಳಿಗೆ ಹರಡಿಸಿ ನೆರವೀಯಬೇಕೆಂದು ವಿನೋಬಾ ಅಪೇಕ್ಷಿಸುತ್ತಾರೆ. ಬೇರೆ ಬೇರೆ ರಾಜ್ಯ ಸರಕಾರಗಳು ಅವಷ್ಟು ಶೀಘ್ರವಾಗಿ ತಕ್ಕ ಶಾಸನವನ್ನು ಮಾಡಿ, ಗ್ರಾಮದಾನದ ಹಳ್ಳಿಗಳು ರಾಜ್ಯ ಸಾಲಗಳ ಸಹಾಯವನ್ನು ಪಡೆಯುವಂತೆಯೂ, ಗ್ರಾಮ ಸಮಾಜದ ಮೂಲಕವಾಗಿ ತೀರ್ವೆಗಳನ್ನು ಸರಕಾರವು ಪಡೆದುಕೊಳ್ಳುವಂತೆಯೂ ವ್ಯವಸ್ಥೆಗೊಳಿಸಬೇಕೆಂದೆವರು ಬಯಸುತ್ತಾರೆ. ಈಗ ಗ್ರಾಮದಾನದ ಹಳ್ಳಿಗಳು ಕೆಲವೊಂದು ನಿಶ್ಚಿತ ತೊಂದರೆಗಳನ್ನು ಇದಿರಿಸಬೇಕಾಗಿದೆ. ಒಬ್ಬ ವ್ಯಕ್ತಿಯು ತನ್ನ ವಶವಿರುವ ಭೂಮಿಯನ್ನು ಗ್ರಾಮದಾನಕ್ಕೆ ಒಪ್ಪಿಸಿದನೆಂದರೆ, ರಾಜ್ಯ ಸರಕಾರವೂ ಸಹಕಾರಿ ಸಂಘಗಳೂ ಅವನಿಗೆ ತಕಾವಿ ಅಥವಾ ಇನ್ನಿತರ ಸಾಲಗಳನ್ನೀಯಲು ನಿರಾಕರಿಸುತ್ತದೆ. ಸರಕಾರವೂ ಆ ವ್ಯಕ್ತಿಯಿಂದಲೇ ತನ್ನ ಪಾಲಿನದನ್ನು ಪಡೆಯುತ್ತದೆ. ಇಂತಹ ಅಡೆತಡೆಗಳನ್ನು ಸರಕಾರವು ಮೇಲೆ ತೇಳಿದ ಕಾನೂನನ್ನು ಮಾಡುವುದರಿಂದ ಸರಳವಾಗುವುವು. ಈ ಬಗ್ಗೆ ಕಳೆದ ಎಪ್ರಿಲ್ ತಿಂಗಳಲ್ಲಿ ಮುಸ್ಸೌರಿಯಲ್ಲಿ ಜರಗಿದ ಅಭಿವೃದ್ಧಿ ಕಮಿಶನ್ ಗಂಭೀರವಾಗಿ ಚರ್ಚಿಸಿ, ರಾಜ್ಯ ಸರಕಾರಗಳೂ ಯೋಗ್ಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತೆ ವಿನಂತಿಸಿದೆ.

ಗ್ರಾಮದಾನ ಹಳ್ಳಿಗಳು ಹೊಸ ಕರದ ಜೀವನವನ್ನು ಬಾಳಲು ಮುಂದಡಿಯಿಡಬೇಕೆಂದು ವಿನೋಬಾ ಇಚ್ಛಿಸುತ್ತಾರೆ. ಭೂಮಿಯ ಪುನರ್ವಿತರಣೆಯಿಂದ ಹಳ್ಳಿಗಳ ಜೀವನದಲ್ಲಿ ಹೊಸ ಬೆಳಕು ಬೀರಬೇಕು. ಗ್ರಾಮ ಪುನಾರಚನೆಯಲ್ಲಿ ವಿನೋಬಾರವರು ನಾಲ್ಕು ಮುಖ್ಯ ದೃಷ್ಟಿಕೋನಗಳನ್ನಿಟ್ಟುಕೊಂಡಿದ್ದಾರೆ: (೧) ಯೋಗ್ಯರೀತಿಯಲ್ಲಿ ಭೂಮಿಯ ಪುನರ್ವಿತರಣೆ ಮತ್ತು ಸಹಕಾರಿ ವ್ಯವಸಾಯ ಪದ್ಧತಿ. (೨) ಗುಡಿಕೈಗಾರಿಕೆಗಳ ಅಭಿವೃದ್ಧಿ. (೩) ಬುನಾದಿ ಶಿಕ್ಷಣದ ಪ್ರಾರಂಭ ಮತ್ತು (೪) ಸ್ಥಳೀಯ ಗಡ್ಡೆಬೇರುಗಳ ಮೂಲಕ ಸ್ವದೇಶೀ ಪದ್ಧತಿಯಲ್ಲಿ ಗ್ರಾಮಾರೋಗ್ಯದ ರಕ್ಷಣೆ. ಇವಲ್ಲದೆ ಇನ್ನೂ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಅಲ್ಲಿ ಕೈಗೊಳ್ಳಬೇಕಾಗಿದೆ. ಆದರೆ ಮೇಲೆ ಸೂಚಿಸಿದ ನಾಲ್ಕು ಉದ್ದೇಶಗಳು ತೀರಾ ಅವಶ್ಯಕವೆನಿಸಿದವುಗಳಾಗಿವೆ. ತಂತಮ್ಮ ಅಭಿವೃದ್ಧಿಯ ಬಗ್ಗೆ ಯೋಜನೆಗಳನ್ನು ರೂಪಿಸಿಕೊಳ್ಳಲು ಸ್ವತಂತ್ರರಾಗಬೇಕು. ಅವರ ಪ್ರಯತ್ನದಲ್ಲಿ ರಾಜ್ಯವು ನಿಜವಾಗಿಯೂ ನೆರವೀಯಬೇಕು. ಆದರೆ, ಆರ್ಥಿಕ ಮತ್ತು ರಾಜಕೀಯ ಅಧಿಕಾರವು ವಿಶಾಲ ಪ್ರಮಾಣದಲ್ಲಿ ಹೆಂಚಲ್ಪಡಬೇಕು. ನಾವು ಭಾರತದಲ್ಲಿ ನಿಜವಾದ ಪ್ರಜಾರಾಜ್ಯವನ್ನು ಸಂಸ್ಥಾಪಿಸಬೇಕಾದರೆ, ನಾವು ಗ್ರಾಮರಾಜ್ಯ ಅಥವಾ ಗ್ರಾಮ ಸಂಘ ಸರಕಾರಗಳನ್ನು ಸ್ಥಾಪಿಸುವ ಸಲುವಾಗಿ ತೀವ್ರ ಕ್ರಮಗಳನ್ನು ಕೈಕೊಳ್ಳಬೇಕು. "ಸರಕಾರದಿಂದ ಜನತೆಗೆ ಅಧಿಕಾರವು ಎಷ್ಟು ಮಟ್ಟಿಗೆ ಹಸ್ತಾಂತರ ಹೊಂದುವುದೋ ಅಷ್ಟರ ಮಟ್ಟಿಗೆ ಅಹಿಂಸೆಯು ಅಭಿವೃದ್ಧಿ ಹೊಂದುವುದು; ರಾಜ್ಯಗಳ ಅಧಿಕಾರವು ಕ್ರಮೇಣ ಮಾಯವಾಗುತ್ತಾ ಬಂದು ಕೊನೆಗೆ ಸಂಪೂರ್ಣ ನಾಶವಾಗುವುದ" ಎಂದು ವಿನೋಬಾ ಹೇಳುತ್ತಾರೆ.

ತಮಿಳುನಾಡಿನಲ್ಲಿ ಆಚಾರ್ಯ ವಿನೋಬಾ ಭಾವೆಯವರು ಭೂದಾನ ಯಜ್ಞಕ್ಕೆ ಇಡಿ ತಾಲೂಕನ್ನೇ ದಾನವಾಗಿ ಪಡೆಯಲು ಪ್ರಯತ್ನಿಸಿದರು. ಹೀಗೆ ಈ ಗ್ರಾಮದಾನ ಮತ್ತು ಭೂದಾನ ಚಳುವಳಿಯು ಮಹತ್ವಪೂರ್ಣವಾಗಿ ಸಾಗುತ್ತಿದೆ. ಅಧಿಕಾರಕ್ಕೆ ಆಹ್ವಾನವೀಯುವದಲ್ಲಿ ಈ ಚಳುವಳಿಯು ಮಹತ್ವದ ಪಾತ್ರವಹಿಸುವುದು. ಅಹಿಂಸೆ, ಪ್ರಜಾಪ್ರಭುತ್ವ, ಹೃದಯ ಪರಿವರ್ತನೆಗಳ ಮೂಲಕವಾಗಿಯೇ ತನ್ನ ಉದ್ದೇಶಗಳನ್ನು ಪೂರೈಸಿ ಜೀವನದ ಮೂಲ ನೆಲೆಯಲ್ಲಿಯೇ ದೊಡ್ಡ ಕ್ರಾಂತಿಯನ್ನುಂಟುಮಾಡುವುದು. ಭೂದಾನ ಮತ್ತು ಗ್ರಾಮದಾನಯಜ್ಞಗಳು ಅತ್ಯಂತ ಹಿಂದುಳಿದವರ ಮತ್ತು ತೀರಾ ದರಿದ್ರರಾದ ಜನರವರೆಗೂ ಹರಡಬಲ್ಲುದು. ನಮ್ಮ ಅಭಿವೃದ್ಧಿ ಯೋಜನೆಗಳು ಜನರಲ್ಲಿ ಹಿಂದುಳಿದವರ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವಷ್ಟು ಮುಂದರಿದಿಲ್ಲ. ನಾವು ಯಾರೊಡನೆ ಆಸ್ತಿಯಿದೆಯೋ ಅಥವಾ ಬೇರೆಯ ವಿಧವಾದ ಸೊತ್ತುಗಳಿವೆಯೋ ಅಂತಹವರಿಗೆ ಮಾತ್ರ ಸಾಲಕೊಡುತ್ತೇವೆ. ಯಾರಲ್ಲಿ ಏನೂ ಇಲ್ಲವೋ ಅಂತವರಿಗೆ ಯಾವ ಸಹಾಯವೂ ಇಲ್ಲ. ಆದರೆ, ಗ್ರಾಮದಾನ ಚಳುವಳಿಯು ಈ ಪಾಡದ ಲ್ಲೊಂದು ಕ್ರಾಂತಿಕಾರಕ ಕಜ್ಜೆ. ಗ್ರಾಮರಾಜ್ಯದ ಸಹಕಾರಿ ಪದ್ಧತಿಯು ದರಿದ್ರ ವಿಭಾಗದ ಜನರನ್ನೂ ಪರಿಣಾಮಕಾರಿಯಾಗಿ ಅಭಿವೃದ್ಧಿ ಮಾಡಬಲ್ಲ ಸಾಧನವಾಗಿದೆ. ಈ ಉದ್ದೇಶಕ್ಕಾಗಿ ಗ್ರಾಮದಾನ ಚಳುವಳಿಯನ್ನು ಪ್ರತಿಯೊಬ್ಬರೂ ಉತ್ಸಾಹದಿಂದ ಮುಂದೊತ್ತುವುದು ಅತ್ಯಗತ್ಯವೆನಿಸಿದೆ.

(ಮೂಲ: ಕುರುಕ್ಷೇತ್ರ)

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. ದ. ಕ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಸಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸ್ಸು-ವಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಅಲ್ಲದೆ, ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ಸರಿಯಾಗಿ ಹಾಜರಾಗಿ ಬಾರದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗಗಳನ್ನು ಇವೇ ಆಕ್ಟೋಬರ್ ತಿಂಗಳ ತಾರೀಕು 4ನೇ ಶುಕ್ರವಾರ ಅಪರಾಹ್ನ ಗಂಟೆ 3—0ಕ್ಕೆ—ಯಾ—ಬೇಂಕಿನೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಬಾವಾದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು ತಿಳಿದಿರಲಿ.

ಜಂಜಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ರೂ.	ನಯೆ.
108/55	ಶ್ರೀ ನಾಗಯ್ಯ ಸೇರುಗಾರ, ನಾರಯ್ಯ ಸೇರುಗಾರರ ಮಗ, ಬಾಡ, ಬೈಂದೂರು.	16	94
209/55	,, ರಾಮಕೃಷ್ಣ ಸುಂಡಲೀಕ ಸೈ, ಸುಂಡಲೀಕ ಪೈಯವರ ಮಗ, ನರಕಂಟಿ, ಉಳ್ಳುಂದ.	41	75
461/55	,, ಬಟ್ಟಾಡಿ ಸುಬ್ರಾಯ ಸೇರುಗಾರ, ವೆಂಕಟ್ರಮಣ ಸೇರುಗಾರರ ಮಗ, ಬಾಡ, ಬೈಂದೂರು.	94	62
498/55	ಶ್ರೀಮತಿ ಲಕ್ಷ್ಮಿ, ಸುಬ್ರಾಯ ಸೇರುಗಾರರ ಹೆಂಡತಿ, ಬೀಜಾಡಿ ಬೈಂದೂರು.	22	56
1041/55	ಶ್ರೀ ರಾಮಯ್ಯ ಸೇರುಗಾರ, ಮಂಜಪ್ಪ ಸೇರುಗಾರರ ಮಗ, ಪಡುವರಿ.	12	56
1248/55	ತಾರಾಪತಿ ಮಹ್ಮದ್ ಸಾಹೇಬ್, ಅಬ್ದುಲ್ ಕಾದಿರ್ ಸಾಹೇಬರ ಮಗ, ಪಡುವರಿ.	36	12
262/56	,, H ಲಕ್ಷ್ಮಣ, ಪುಟ್ಟ ಮಗ, ಹಿತ್ಲುಮನೆ, ಹೇರಂಜಾಲು ಶಾಲಾ ಅಧ್ಯಾಪಕ ಹೇರಂಜಾಲು, ಕಂಬದ ಕೋಣೆ.	62	0
656/55	,, ಗೋವಿಂದ ಸೇರುಗಾರ, ಮಂಜಯ್ಯ ಸೇರುಗಾರರ ಮಗ, ಪಡುವರಿ.	36	87
790/55	,, ಪಟಾಜಡೆ ಮಾಣಾಬಲ ಸೇರುಗಾರ, ಬಗ್ಗಯ್ಯ ಸೇರುಗಾರರ ಮಗ, ಪಡುವರಿ	12	56
1115/56	,, ಕಣ್ಣ ಸುಕ್ರ, ಸುಕ್ರನ ಮಗ, ತೋಟಿ, ಬೈಂದೂರು.	14	62
341/56	,, M. V. ಜೋಸೆಫ್ ವಾರ್ಕಿ ಮಗ, ಜಡ್ಡಲ್ ಗ್ರಾಮದ ಹಾಲ್ಕಲ್ಲಿನ್ನಿರುವವರು, ಕೊಲ್ಲೂರು.	74	81
412/56	,, ಅಜ್ಜಪ್ಪ ಮಾರ್ಕ, ಅಜ್ಜಪ್ಪನ ಮಗ, ತಾರಾಪತಿ, ಬೈಂದೂರು	13	81
495/56	,, M. H. ಮಹ್ಮದ್ ಸಾಲಿಹಾ, ಮಹ್ಮದ್‌ಬಾಷಾ ಸಾಹೇಬರ ಮಗ, ಹೊಳಿಗೆಯವರು, ಶೀರೂರು.	128	31
568/56	ಶ್ರೀಮತಿ ಮೂಕಕ್ಕು, ಮಂಜಮ್ಮನ ಮಗಳು, ಪಡುವರಿ.	11	81
767/56	ಶ್ರೀ ಕೋಟಿ ಸುಬ್ರಾಯ ಸೇರುಗಾರರು, ವಾಕಪ್ಪ ಸೇರುಗಾರರ ಮಗ ಪಡುವರಿ.	55	12

ಬೈಂದೂರು
20-9-57

H. ರಾಜೀವ ಶೆಟ್ಟಿ.
ಏಜಂಟ್.

ಸೋಗಿನೀರ ವ್ಯವಸ್ಥಾಪಕ ಮಂಡಳಿ-ಮುಂಬಾಯಿ

ಮಂಡಳಿಯ 54ನೇ ವಾರ್ಷಿಕೋತ್ಸವದ ಸಮಾರಂಭವೂ, ಇದರಿಂದ ನಡಿಸಲ್ಪಡುವ ಸೋಗಿನೀರ ಫ್ರೀ ಸೈಟ್ ಪ್ರೈಮ್ಯರಿಯ ಪಾರಿತೋಷಕ ವಿತರಣೆವೂ ತಾರೀಕು 15—9—1957ರಲ್ಲಿ ಬಹು. ವಿಜ್ರಂಭಣೆಯಿಂದ ಸರ್ ಕಾವಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾಸದನದಲ್ಲಿ ಜರಗಿತು. ಶ್ರೀ ಹರೇಶ್ಚಂದ್ರ ಮಹೀಂದ್ರ ಇವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಗಾಡ್ಸಿನ ಮತ್ತು ಶಾಲಾ ಸ್ಥಾಪನ ಮಾನರಕ್ಷೆಯೊಂದಿಗೆ ಅಧ್ಯಕ್ಷರನ್ನು ಬರಮಾಡಿಕೊಳ್ಳಲಾಯಿತು. ದೇವತಾ ಪ್ರಾರ್ಥನೆಯಾದ ಬಳಿಕ ಮಂಡಳಿಯ ಅಧ್ಯಕ್ಷರಾದ ಶ್ರೀ ಬಿ. ಯಸ್. ಸಾಲ್ಯಾನರು ಶ್ರೀ ಹರೇಶ್ಚಂದ್ರ ಮಹೀಂದ್ರ ಮತ್ತು ಅವರ ಧರ್ಮಪತ್ನಿಯನ್ನು ಸ್ವಾಗತೀಕರಿಸಿದರು. ದೇಶದ ಆತ್ಮ ಮಹನೀಯರಿಂದಲೂ, ಪ್ರಮುಖ ವಿದ್ಯಾಭಿಮಾನಿಗಳಿಂದಲೂ, ವಿವಿಧ ಸಂಘ ಸಂಸ್ಥೆಗಳಿಂದಲೂ ಸಮಾರಂಭಕ್ಕೆ ಯಶಸ್ಸನ್ನು ಕೋರಿ ಬಂದ ಶುಭ ಸಂದೇಶಗಳನ್ನು ಪ್ರಧಾನ ಕಾರ್ಯದರ್ಶಿ ಶ್ರೀ ಯಜ್. ಕೆ. ಮತ್ತನವರು ಓದಿದೇಳಿದರು. ಆ ಬಳಿಕ ಶ್ರೀಮತಿ ಇಂದಿರ ಹರಿಶ್ಚಂದ್ರ ಮಹೀಂದ್ರರ ಹಸ್ತದಿಂದ ಶಾಲಾ ವಿದ್ಯಾರ್ಥಿಗಳಿಗೂ, ಮಂಡಳಿಯ ಕೆಲಸಗಾರರಿಗೂ ಬಹುಮಾನ ವಿತರಣೆ ಮಾಡಲಾಯಿತು.

ಸಭಿಕರ ಪೈಕಿ ಶ್ರೀಗಳಾದ ಎ. ಕೆ. ಪಟೇಲ್, ಯಂ. ಎಲ್. ಎ; ಕೆ. ಯಸ್. ಧಾರಿಯ ಯಂ. ಎಲ್. ಎ; ಜಿ. ಯನ್. ವೈದ್ಯ, ಎಡ್ವೋಕೇಟ್. ಜೆ. ಎನ್. ಅಯ್ಯರ್ ಮತ್ತು ಬಿ ಯಂ. ಕೋಡಿಕಲ್, ಎಂ. ಎ. ಇವರು ಮಂಡಳಿಯು ಕಳೆದ 53 ವರ್ಷಗಳಲ್ಲಿ ದೇಶಕ್ಕೆ, ಜನತೆಗೆ ಸಲ್ಲಿಸಿದ ಸಾಮಾಜಿಕ ಸೇವೆಯನ್ನು ಕೊಂಡಾಡಿ ಮಂಡಳಿಗೆ ಉತ್ತರೋತ್ತರ ಅಭಿವೃದ್ಧಿಯನ್ನು ಕೋರಿದರು.

ಅಧ್ಯಕ್ಷರು ತನ್ನ ಭಾಷಣದಲ್ಲಿ ಮಂಡಳಿಯ ವಿದ್ಯಾಪ್ರಸಾರದ ಕಾರ್ಯದಲ್ಲಿ ಮಾಡುತ್ತಿರುವ ಕಾರ್ಯವನ್ನು ಕೊಂಡಾಡಿ, ಮಂಡಳಿಯು ನಡಿಸುತ್ತಿರುವ ರಾತ್ರಿ ಶಾಲೆಯಲ್ಲಿ ಪ್ರಾಯ 5 ವರ್ಷದಿಂದ 30 ವರ್ಷ ಪ್ರಾಯದವರೆಗಿನ ವಿದ್ಯಾರ್ಥಿಗಳು ಧರ್ಮಾರ್ಥ ವಿದ್ಯಾಭ್ಯಾಸವನ್ನು ಪಡೆಕೊಳ್ಳುವುದನ್ನು ನೋಡುವಾಗ ನನಗೆ ಬಹಳ ಸಂತೋಷವೆನಿಸುತ್ತದೆ. ಈ ಮಂಡಳಿಯು ಚಟುವಟಿಕೆಗಳಿಂದ ಪ್ರಯೋಜನ ಪಡೆದು ತಮ್ಮ ಜೀವನವನ್ನು ಸುಗಮಗೊಳಿಸುತ್ತಿರುವವರೆಲ್ಲರೂ ಈ ಮಂಡಳಿಗೆ ನೆನವಾಗಿ ಇದರ ಪ್ರಗತಿಯನ್ನು ಹಾರೈಸಬೇಕೆಂದರು.

ಜತೆಕಾರ್ಯದರ್ಶಿ ಶ್ರೀ ಡಿ. ಪಿ. ಕೋಟ್ಯಾಂಕಾರರು ಧನ್ಯವಾದವನ್ನರ್ಪಿಸಿದರು.

ಕೊನೆಗೆ ಕರ್ನಾಟಕ ನಾಟಕ ಸಂಗೀತ ಸಭೆಯವರು 'ಅಳಿಯದೇವರು' ಎಂಬ ಹಾಸ್ಯಭರಿತವಾದ ನಾಟಕವನ್ನು ಅತ್ಯಂತ ಯಶಸ್ವಿನಿಂದ ಅಭಿನಯಿಸಿದರು.

ಉಡುಪಿ ಡಿ. ಮುನ್. ಕೋರ್ಟಿನಲ್ಲಿ

O. P. ನಂಬ್ರ 45/1957.

ಜನನ್ನಾಥ ಶೆಟ್ಟಿ —ಅರ್ಜಿದಾರ.
ಸೀಗಾರಿ ಶೆಟ್ಟಿ —ಎದ್ರಿ.

ಎದ್ರಿ ಸೀಗಾರಿ ಶೆಟ್ಟಿ-ನಾಗಮ್ಮ ಶೆಟ್ತಿ ಮಗಳು ಪ ಅರ್ಜಿದಾರನ ಹೆಂಡ್ತಿ, ಉಡುಪಿ ತಾಲೂಕು ಆತ್ರಾಡಿ ಗ್ರಾಮದ ಪರೀಕ ಮೂಡು ಹೊಸಮನೆಯಲ್ಲಿರುವವಳು. ಇವಳಿಗೆ ಕೊಡುವ ನೋಟೀಸು:

ಮೇಲ್ಕಾಣುವ ಅರ್ಜಿದಾರನಿಗೆ ಎದ್ರಿಳ ಕೂಡೆ ಆದ ಮದುವೆಯನ್ನು ರದ್ದುಪಡಿಸಬೇಕೆಂದು ಅರ್ಜಿದಾರನು ಕೋರ್ಟಿಗೆ ಅರ್ಜಿಮಾಡಿಕೊಂಡಿರುತ್ತಾನೆ. ಸದ್ರಿ ಅರ್ಜಿಯನ್ನು ತಾ. 9—10—1957ಕ್ಕೆ ತೆಗೆದು ಇಟ್ಟಿರುತ್ತದೆ. ಎದ್ರಿಳ ಉಮಾಹಂಡೆ ಇದ್ದರೆ ಮೇಲೆ ನಮೂದಿಸಿದ ತಾರೀಕಿನಲ್ಲಿ ಹಗಲು 10 ಗಂಟೆಗೆ ಎದ್ರಿಯು ಖುದ್ದಾಗಿಯಾಗಲಿ ಪ್ಲೀಡರ್ ಮೂಲಕವಾಗಿಯಾಗಲಿ ಕೋರ್ಟಿಗೆ ಹಾಜರಾಗಿ ತಿಳಿಕೊಳ್ಳತಕ್ಕದ್ದು ಇಲ್ಲದಿದ್ರೆ ಎದ್ರಿಳ ಗೈರು ಹಾಜರಿಯಲ್ಲಿ ಅರ್ಜಿ ಕೈಗೆಲ ಮಾಡೋಣಾದೀತೆಂತ ಎದ್ರಿಳು ತಿಳಿಯತಕ್ಕದ್ದು.

ಕೋರ್ಟು ಹುಕುಂಪ್ರಕಾರ

H. Dayananda Ballal.
ಅರ್ಜಿದಾರನ ಕಡೆ ಎಡ್ವೋಕೇಟ್.

ಉಡುಪಿ, 20—9—1957.

ಪುಸ್ತಕ ಭಂಡಾರಗಳಿಗೆ ಅತ್ಯುಪಯುಕ್ತವಾದ

- ಕಥೆ, ಕಾದಂಬರಿ, ಹರಟೆ, ನಾಟಕ, ಪ್ರಬಂಧ ಮೊದಲಾದ

ನಾನಾ ಬಗೆಯ ಅಮೂಲ್ಯ ಪುಸ್ತಕಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ (ಜೇಮ್ಸ್ ಬಿ. ಕೊನೇಂಟ್) ಅನು:- ಯು. ಲಕ್ಷ್ಮೀನಾರಾಯಣ ಆಚಾರ್ಯ.	1	8
ನಡುಹಗಲಿನ ಕಗ್ಗತ್ತಲೆ (ಆರ್ಥರ್ ಕೊಸ್ಲರ್) ಅನು:- ಕು. ಶಿ. ಹರಿದಾಸ ಭಟ್ಟ	2	8
ಶಿಕ್ಷಣದ ಧ್ಯೇಯಗಳು (ಆಲ್ಡೌಸ್‌ಹಾರ್ಥ್ ವೈಟ್‌ಹೆಡ್) ಅನು:- ಯು. ಲಕ್ಷ್ಮೀನಾರಾಯಣ ಆಚಾರ್ಯ ಕೆ. ಬಿ. ರಾಮಕೃಷ್ಣರಾವ್	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಜಾನ್ ಡ್ಯೂಯಿ) ಅನು:- ಕು. ಶಿ. ಹರಿದಾಸ ಭಟ್ಟ	2	0
ಹಿರೋತಿಮಾದಿಂದ ಜಿನೇವ (ಯು. ರಾಘವೇಂದ್ರಾಚಾರ್ಯ)	1	8
ಸಂತೆಯ ಪಿಶಾಚಿ (ನಾಟಕ) ಕೆ. ಕೆ. ಶೆಟ್ಟಿ	0	10
ಮಧುವನ (ಕಥಾ ಸಂಕಲನ)	3	0
ನಂದಾ ದೀಪ (ಕಥಾ ಸಂಗ್ರಹ) ಕೊರಡ್ಕಲ್ ಶ್ರೀನಿವಾಸರಾವ್	0	14
ದೇಶಭಕ್ತ (ನಾಟಕ) ಕೆ. ಕೆ. ಶೆಟ್ಟಿ	1	4
ಪ್ರೇಮ ವಿಜಯ (ನಾಟಕ) ಕೆ. ಕೆ. ಶೆಟ್ಟಿ	1	0
ರಂಗ ಭೂಮಿ (ನಾಟಕ) ಎಸ್. ವೆಂಕಟರಾಜ	0	10
ಸೇನಾಪಥ (ನಾಟಕ) ಟೇಟ್ ಗೋವಿಂದ ದಾಸ	0	8
ನಾರೀ ಹೃದಯ (ಕಥೆಗಳು) ಶಿವರಾಣಿ ದೇವಿ	1	8
ಭಾರತೀಯ ಕತೆಗಳು ಕೊರಡ್ಕಲ್ ಶ್ರೀನಿವಾಸ ರಾವ್	1	12
ಪ್ರಕಾಶ (ನಾಟಕ) ಸರಸ್ವತಿ ಬಾಯಿ ರಾಜವಾಡೆ	2	8
ಮೂರು ಪ್ರಹಸನಗಳು ಕೊರಡ್ಕಲ್ ಶ್ರೀನಿವಾಸ ರಾವ್	1	4
ನಗೆ ನೋಟಗಳು (ಕತೆಗಳು) ಕೆ. ವಿಟ್ಠಲ ಶೆಣೈ	1	4
ಅನ್ನ ದೇವರು ಮತ್ತು ಇತರ ಕತೆಗಳು ಕಯ್ಯಾರ ಕಿಞ್ಞಣ್ಣ ರೈ	1	0
ಭಾರತದಲ್ಲಿ ಜಾತಿಭೇದ ಎಸ್. ಎಲ್. ಸುಬ್ರಹ್ಮಣ್ಯಂ	1	0
ಆಕಾಶ ಗಂಗೆ (ಕತೆಗಳು) ಎಸ್. ವೆಂಕಟರಾಜ	1	12
ಸ್ವಾತಂತ್ರ್ಯ ವೀರ ಸಾವರಕರರು ಇಂದಿರಾಬಾಯಿ	1	4
ಜೀವನ ಸಂಗ್ರಾಮ (ನಾಟಕ) ಪಿ. ಶೀನ ಶೆಟ್ಟಿ	1	8
ಕದಂಬ (ಕಥೆಗಳು) ಸರಸ್ವತಿ ಬಾಯಿ ರಾಜವಾಡೆ	1	4
ಕವಿತಾಕಾಮಿನಿ (ಕವಿತೆಗಳ) ಎಸ್. ವೆಂಕಟರಾಜ	2	0
ಸಪ್ತ ಸಾಗರ (ಕಥೆಗಳು) ಎಸ್. ವೆಂಕಟರಾಜ	0	12
ಜಹೂನ್ದಾರ (ಕಾದಂಬರಿ) ಹೊಸಮನೆ ಗುಡ್ಡಪ್ಪ	1	8
ಬಾಳಿನ ಬೆದಗು (ಕಾದಂಬರಿ) ಯು. ನಾರಾಯಣ ಭಟ್ಟ	1	0
ಧರ್ಮಸಂಕಟ (ನಾಟಕ) ಕೊರಡ್ಕಲ್	0	6
ಕುಲವಿಲ್ಲದ ಹೆಣ್ಣು (ಕಾದಂಬರಿ) ಪಿ. ವೆಂಕೋಬಾಚಾರ್ಯ	1	8
ಭಾಗ್ಯ ಲಕ್ಷ್ಮಿ (ನಾಟಕ) ಬೆಳ್ತಂಗಡಿ ಲಕ್ಷ್ಮಣ ರಾವ್	1	4
ಯುಗವಾಣಿ (ಕವನಗಳು) ಕು. ಶಿ. ಹರಿದಾಸ ಭಟ್	0	8
ಪ್ರಜಾಪ್ರಭುತ್ವವನ್ನು ಕುರಿತು ಶಿವರಾಮ ಕಾರಂತ	0	8
ಕಾಲವೇ ಬದಲಾಗಿದೆ (ಕತೆ) ಕು. ಶಿ. ಹರಿದಾಸ್ ಭಟ್	0	5
ಭಾರತದ ಸಾಹಿತ್ಯ ಮತ್ತು ಕಲೆಗಳು ವಿಘ್ನೇಶ್ವರ ಶರ್ಮ	0	6
ಪುಸ್ತಕ ಸುರಾಣ ಕು. ಶಿ. ಹರಿದಾಸ ಭಟ್	0	4
ಶವಗಳ ಸಾಗಾಟ (ಪತ್ತೇದಾರಿ) ಸುಬ್ರಾಯ ಕೃಷ್ಣ ಹೆಗ್ಡೆ	0	12
ಸ್ವಪ್ನ ಲೋಕ (ಸ್ವಪ್ನಗಳ ಕುರಿತಾದ ವಿವರ) ಕಾರ್ತಿಕೇಯ	0	8
ಮನೆಯ ಹೊರಗಿನ ಮಹಾಜೀವಗಳು ಕು. ಶಿ. ಹರಿದಾಸ ಭಟ್	0	6
ಫಂಟಮಾರಾ (ಇಟಾಲಿಯನ್ ಕಾದಂಬರಿ) ,,	2	0
ಜೀವನ ಕಲೆ (ಬಾಳ ಕೈದೀವಿಗೆ) ಗ. ನಾ. ಪಂಡಿತ	0	10
ಪ್ರತಿಜ್ಞಾಪೂರ್ತಿ (ನಾಟಕ) ಸುಬ್ರಾಯ ಕೃಷ್ಣ ಹೆಗ್ಡೆ	0	12
ಪರ್ಲ್ ಎಸ್. ಬಕ್ (ಜೀವನ ಚರಿತ್ರೆ) ಯು. ನಾರಾಯಣ ಭಟ್	0	7
ತಿಲ್ಪಿ (ಐತಿಹಾಸಿಕ ನಾಟಕ) ಹುಲಿಮನೆ ಕಾಳೆ ತಿಮ್ಮಪ್ಪ ಹೊಸ ಮನೆ	1	8
ನೆನಪಿಗಾಗಿ (ಪ್ರಬಂಧಗಳು) ಕೊರಡ್ಕಲ್ ಸ್ಮಾರಕ ಗ್ರಂಥ	2	0
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಸರಸ್ವತಿ (ನಾಟಕ) ಡಾ| ಎಂ. ಮಾಧವಾಚಾರ್ಯ	0	12
ಬದುಕು ಬಂಗಾರ ಕುಮಾರ ಸ್ವಾಮಿ	1	8
ಮುರಲಿ ಎನ್. ಎಸ್. ಕೆಲ್ಲೆ	0	12

ಹೆಚ್ಚಿನ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.
ದೊಡ್ಡ ಆರ್ಡರಿಗೆ ಕಮಿಷನ್ ಕೊಡಲಾಗುವುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ — ದ. ಕನ್ನಡ

ಪಶ್ಚಿಮ ವಲಯದ ಸ್ಥೂಲ ಪರಿಚಯ

(೩ನೇ ಪುಟದಿಂದ)

ಸ್ಥಿತಿಯು ತೃಪ್ತಿಕರವಾಗಿದೆ. ಮುಂಬೈ ರಾಜ್ಯದಲ್ಲಿ ಪ್ರತಿ ೧೦೦ ಚದುರ ಮೈಲಿಗಳಷ್ಟು ವಿಸ್ತೀರ್ಣಕ್ಕೆ ೩೩ ಮೈಲಿಗಳಷ್ಟು ರೈಲುಮಾರ್ಗಗಳಿವೆ. ಭಾರತದಲ್ಲಿ ಪ್ರತಿ ೧೦೦ ಚದರ ಮೈಲಿಗಳಷ್ಟು ವಿಸ್ತೀರ್ಣಕ್ಕೆ ೨.೯ ಮೈಲಿಗಳಷ್ಟು ರೈಲು ಮಾರ್ಗಗಳಿವೆ.

ತೆರಿಗೆ ವಿಚಾರಣಾ ಕಮಿಷನ್ನಿನ ವರದಿಯ ಪ್ರಕಾರ ೧೯೫೩-೫೪ರಲ್ಲಿ ಮುಂಬೈ ರಾಜ್ಯದಲ್ಲಿ ಪ್ರತಿ ವ್ಯಕ್ತಿ ತೆರಿಗೆ ೧೦ ೩೧ ರೂ.ಗಳನ್ನೂ ಮೈಸೂರು ರಾಜ್ಯದಲ್ಲಿ ೫ ೯೮ ರೂ.ಗಳನ್ನೂ ವಿಧಿಸಲಾಗುತ್ತಿತ್ತು. ಈ ವಲಯದಲ್ಲಿ ಸರಾಸರಿ ಪ್ರತಿವ್ಯಕ್ತಿ ತೆರಿಗೆ ೯.೯೮ ರೂ.ಗಳನ್ನೂ ವಿಧಿಸಲಾಗುತ್ತಿತ್ತು. ಭಾರತದಲ್ಲಿ ಪ್ರತಿ ವ್ಯಕ್ತಿ ತೆರಿಗೆ ೬.೮೧ ರೂ.ಗಳನ್ನು ವಿಧಿಸಲಾಗುತ್ತಿತ್ತು. ಹಿಂದಿನ ಮುಂಬೈ ಮತ್ತು ಮೈಸೂರು ರಾಜ್ಯಗಳಲ್ಲಿ ೧೯೫೦-೫೧ರಲ್ಲಿ ಕ್ರಮಶಃ ನೂರಕ್ಕೆ ೨೪.೬ ಮತ್ತು ೩೦.೩ರಷ್ಟು ಮಂದಿ ಅಕ್ಷರಸ್ಥರಿದ್ದರು. ಭಾರತದಲ್ಲಿ ನೂರಕ್ಕೆ ೧೬.೬ ರಷ್ಟು ಮಂದಿ ಅಕ್ಷರಸ್ಥರಿದ್ದರು.

ಪ್ರಥಮ ಯೋಜನೆಯಲ್ಲಿ ಈ ವಲಯಕ್ಕಾಗಿ ತೊಡಗಿಸಿದ ಹಣ ೨೮೭.೯೮ ಕೋಟಿ ರೂ.ಗಳು. ೨೬೧.೫೨ ಕೋಟಿ ರೂ.ಗಳ ಹಣ ವೆಚ್ಚವಾಯಿತು. ೨೧ ಕೋಟಿ ರೂ.ಗಳಷ್ಟು ಕಡಿಮೆ ಬೀಳುವುದು. ಹಿಂದಿನ ಮೈಸೂರು ರಾಜ್ಯ, ಮುಂಬೈ ರಾಜ್ಯಕ್ಕೆ ಸೇರಿದ್ದ ಕರ್ನಾಟಕ ಪ್ರದೇಶ ಹಾಗೂ ಹಿಂದಿನ ಮುಂಬೈ ರಾಜ್ಯ ಇಲ್ಲಿ ಹೆಚ್ಚು ಪ್ರಮಾಣದ ಕೂರತೆ ಕಂಡು ಬಂದಿದೆ ಹಿಂದಿನ ಮುಂಬೈ, ಸೌರಾಷ್ಟ್ರ, ಮೈಸೂರು ಮತ್ತು ಕಚ್‌ಗಳಲ್ಲಿ ವೈದ್ಯಕೀಯ, ವಸತಿ ಹಾಗೂ ಹಿಂದುಳಿದ ವರ್ಗದವರ ಹಿತರಕ್ಷಣಾ ಕಾರ್ಯ ಪ್ರಗತಿ ತೃಪ್ತಿಕರವಾಗಿತ್ತು.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ವಲಯಕ್ಕೆ ೪೪೪.೧೧ ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು ಅದರಲ್ಲಿ ಮುಂಬೈ ರಾಜ್ಯಕ್ಕೆ ೩೫೦.೫೧ ಕೋಟಿ ರೂಪಾಯಿಗಳೂ, ಮೈಸೂರು ರಾಜ್ಯಕ್ಕೆ ೧೪೪.೭೫ ಕೋಟಿ ರೂಪಾಯಿಗಳೂ ದೊರೆಯುವುವು. ೧೯೫೬—೫೮ರಲ್ಲಿ ಈ ವಲಯಕ್ಕೆ ೧೦೧ ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು. ಅದರಲ್ಲಿ ಮುಂಬೈಗೆ ೭೨.೮ ಕೋಟಿ ರೂಪಾಯಿಗಳೂ ಮೈಸೂರಿಗೆ ೨೮.೨ ಕೋಟಿ ರೂಪಾಯಿಗಳು ದೊರೆಯುವುವು.

ಈ ವಲಯವು ಆಹಾರ ಧಾನ್ಯಗಳ ವಿಷಯದಲ್ಲಿ ಅಭಾವವನ್ನು ಹೊಂದಿರುವುದರಿಂದ ಇಲ್ಲಿ ಬೇಸಾಯ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಲಾಗಿದೆ. ನೀರಾವರಿ ಮತ್ತು ವಿದ್ಯುಚ್ಛಕ್ತಿ ಉತ್ಪಾದನಾ ಕಾರ್ಯಕ್ಷೇತ್ರಕ್ಕೆ ಪ್ರಾಧಾನ್ಯವನ್ನು ಕಲ್ಪಿಸಲಾಗಿದೆ. ಅದರ ನಂತರ ಬೇಸಾಯ ಮತ್ತು ಸಾಮುದಾಯಿಕ ಅಭಿವೃದ್ಧಿಗೆ ಪ್ರಾಧಾನ್ಯ ಕೊಡಲಾಗಿದೆ. ಬೇಸಾಯ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯಕವಾಗುವ ನೀರಾವರಿ ಯೋಜನೆಯ ಜೊತೆಗೆ ಈ ವಲಯದಲ್ಲಿ ೫ ವರ್ಷಗಳ, ೨೨೮ ಕೋಟಿ ರೂಪಾಯಿಗಳ ವೆಚ್ಚದ ಬೇಸಾಯ ಅಭಿವೃದ್ಧಿ ಕಾರ್ಯಕ್ರಮಗಳೂ ಇರುವುವು.

ಮುಂಬೈ ಮತ್ತು ಮೈಸೂರು ರಾಜ್ಯಗಳು ೧೯೫೬—೬೧ರ ಅವಧಿಯಲ್ಲಿ ಕ್ರಮವಾಗಿ ೧೫.೪ ಲಕ್ಷ ಟನ್ನುಗಳು ಮತ್ತು ೫.೧೦ ಲಕ್ಷ ಟನ್ನುಗಳಷ್ಟು ಹೆಚ್ಚು ಆಹಾರ ಉತ್ಪಾದನೆ ಮಾಡಲು ಅನುಮತಿಸಿವೆ. ಜಲಜನಿತ ವಿದ್ಯುಚ್ಛಕ್ತಿ ಹಾಗೂ ಖನಿಜ ಸಂಪತ್ತಿನ ಅಭಿವೃದ್ಧಿಯ ಫಲವಾಗಿ ಪರಿಶೀಲನೆಯಲ್ಲಿರುವ ಹೊಸ ಕೈಗಾರಿಕೆಗಳೆಂದರೆ ವೀರವಾಳದಲ್ಲಿ ಸ್ಪೇಸಲ್ ಫೈಬರ್ ಕಾರ್ಖಾನೆ ಹಾಗೂ ರೇಯಾನ್ ಕಾರ್ಖಾನೆ, ಸೌರಾಷ್ಟ್ರದಲ್ಲಿ ಅರು ಸಿಮೆಂಟ್ ಕಾರ್ಖಾನೆಗಳು ಜಾಂ ನಗರ ಮತ್ತು ಭುವನೇಶ್ವರಗಳಲ್ಲಿ ಹಡಗು ನಿರ್ಮಾಣ ಕೇಂದ್ರಗಳು

ಪ್ರಥಮ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಈ ವಲಯದಲ್ಲಿ ೨೨.೩೩ ಎಕರೆಗಳನ್ನು ನೀರಾವರಿಗೊಳಪಡಿಸಲಾಗಿತ್ತು ದ್ವಿತೀಯ ಯೋಜನೆಯ ಕೊನೆಯ ವೇಳೆಗೆ, ೩೧.೨ ಲಕ್ಷ ಎಕರೆಗಳನ್ನು ನೀರಾವರಿಗೊಳಪಡಿಸಲಾಗುವುದು ಪ್ರಥಮ ಯೋಜನೆಯ ಅವಧಿಯಲ್ಲಿ ೫,೪೪೬ ಮೈಲಿಗಳಷ್ಟು ರಸ್ತೆಗಳನ್ನು ನಿರ್ಮಿಸಲಾಗಿತ್ತು; ದ್ವಿತೀಯ ಯೋಜನೆಯ ಕೊನೆಯಲ್ಲಿ ೫ ೫೦೨ ಮೈಲಿಗಳಷ್ಟು ರಸ್ತೆಗಳನ್ನು ನಿರ್ಮಿಸಲಾಗುವುದು.

ಮೈಸೂರು ಮತ್ತು ಮುಂಬೈ ರಾಜ್ಯಗಳಲ್ಲಿ ಯೋಜನೆಯಲ್ಲಿ ಒಳಪಡಿಸಲಾಗಿರುವ ಅಭಿವೃದ್ಧಿ ಕಾರ್ಯಕ್ರಮಗಳ ಜೊತೆಗೆ, ಕೇಂದ್ರದವರೂ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಈ ರಾಜ್ಯಗಳಲ್ಲಿ ಅನುಷ್ಠಾನಕ್ಕೆ ತರುವವರು ಅವಾವುವೆಂದರೆ; ಹಿಂದೂಸ್ಥಾನ್ ಪೆಷಿನ್ ಟೂಲ್ಸ್, ಹಿಂದೂಸ್ಥಾನ್ ಆಂಟಿಬಯೋಟಿಕ್ಸ್, ಮೈಸೂರು ಉಕ್ಕಿನ ಮತ್ತು ಕಬ್ಬಿಣ ಕಾರ್ಖಾನೆ, ಹಿಂದೂಸ್ಥಾನ್ ಎರ್‌ಕ್ರಾಫ್ಟ್, ಹೆಚ್ಚಿನ್ನದ ಗಣಿಗಳು, ಭಾರತ್ ಎಲೆಕ್ಟ್ರಾನಿಕ್ಸ್, ಖಾಂಡ್ಲಾ ಬಂದರು, ಭಾರತೀಯ ಟೆಲಿಫೋನ್ ಕಾರ್ಖಾನೆ, ಮತ್ತು ಪ್ರೋಟೊ ಟೈಪ್ ಕಾರ್ಖಾನೆ.

ಅಂತರಿಕ್ಷದಲ್ಲಿ ರೋಮಾಂಚಕ ಪ್ರವಾಸ–

ಚಂದ್ರಗ್ರಹಕ್ಕೆ ಪ್ರಯಾಣ ಬೆಳೆಸೋಣವೆ?

ಪ್ರೊ. ಕೆ. ಎಸ್. ಸವಣೂರ, ಎಂ. ಎಸ್. ಸಿ.

ವಿಮಾನವು ಜನ್ಮವೆತ್ತಿ ಹಲವೇ ವರುಷಗಳಾಗಿದ್ದರೂ ವಿಜ್ಞಾನಿಗಳ ಅವಿಶ್ರಾಂತ ಸಂಶೋಧನೆಗಳ ಮೂಲಕ ಇದು ಇಂದು ಪ್ರೌಢಾವಸ್ಥೆಯಲ್ಲಿದ್ದು,—ಮಾನವ ಜನಾಂಗದ ಇತಿಹಾಸವನ್ನೇ ಬದಲಿಸಲಿರುವದೇ ಎಂಬ ಸಂಶಯವೂ ಕೂಡ ಜನತೆಯಲ್ಲಿ ಮೂಡತೊಡಗಿದೆ. ಮಾನವನು ಪೃಥ್ವಿಯಲ್ಲಿ ಉದಯಿಸಿದಂದಿನಿಂದ ೨೦ ನೆಯ ಶತಮಾನದ ವರೆಗಿನ ಇತಿಹಾಸವನ್ನೂ ಹಾಗು ಕಳೆದ ೫೦ ವರುಷಗಳ ಇತಿಹಾಸವನ್ನೂ ತುಲನಾತ್ಮಕವಾಗಿ ಪರಿಶೀಲಿಸಿದಲ್ಲಿ ಇಂದಿನ ಪ್ರಮುಖ ಬದಲಾವಣೆಗಳಿಗೆ ವಿಮಾನವೇ ಕಾರಣವೆಂದು ಎನಿಸದಿರದು ಪ್ರಚಂಡ ವೇಗದಿಂದ ಮುಂದುವರಿಯಲಿರುವ ವಿಜ್ಞಾನದ ಮೂಲಕ ಸಮಾಜ, ಕಲೆ, ರಾಜಕಾರಣ ಇವುಗಳಲ್ಲಿಯೂ ಸಹ ಅನೇಕ ಬದಲಾವಣೆಗಳು ಆಗತೊಡಗಿವೆ.

ಇಂದು ವಿಮಾನಗಳ ಹಾರಾಟದ ಗುಟ್ಟನ್ನು ತಿಳಿದ ವಿಜ್ಞಾನಿಯು ತನ್ನ ಜ್ಞಾನವನ್ನು ಇನ್ನೂ ಮುಂದುವರಿಸಬೇಕೆಂದಿದ್ದಾನೆ. ಇಲ್ಲಿ ಕಾರ್ಯಮಾಡಲಿರುವ ಅನೇಕರ ಧ್ಯೇಯವು ಭೂಮಿಯಿಂದ ಚಂದ್ರನಿಗೆ, ಗ್ರಹಗಳಿಗೆ ಈ ಪ್ರಕಾರವಾಗಿ ಪ್ರವಾಸವನ್ನು ಸಾಧಿಸಬೇಕೆಂದು ಇದೆ. ಚಂದ್ರನೆ ನಮಗೆ ಅತ್ಯಂತ ಸಮೀಪದವನಿದ್ದು ಪ್ರಾರಂಭದಲ್ಲಿ ವಿಜ್ಞಾನಿಯು ಚಂದ್ರಗೋಲಕ್ಕೆ ಪ್ರವಾಸವನ್ನು ಕೈಕೊಳ್ಳಬೇಕೆಂದಿದ್ದಾನೆ. ಇಂತಹ ಯೋಜನೆಗಳನ್ನು ಸೋಡಿದಲ್ಲಿ ಇಲ್ಲಿಯ ಜ್ಞಾನವು ತೀರಾ ಶೈಶವಾವಸ್ಥೆಯಲ್ಲದೆ ಇದೆ ಎಂದು ಹೇಳಬೇಕಾಗುವದು.

ಹವೆಯಿಲ್ಲದೆ ಹಾರಾಟ, ಅಣುಶಕ್ತಿ ಮುಂತಾದವುಗಳ ಗುಟ್ಟನ್ನು ಕಂಡು ಹಿಡಿದ ವಿಜ್ಞಾನಿಯು ತೋರಿಕೆಯಲ್ಲಿ ಅಸಾಧ್ಯವೆಂದು ಕಂಡುಬರುವಂತಹ ಸಮಸ್ಯೆಗಳೂ ಕೂಡ ಪ್ರಯತ್ನದಿಂದ ಬಿಡಬಹುದೆಂಬ ಭಾವನೆಯುಳ್ಳವನಾಗಿದ್ದಾನೆ. ಭೂಮಿಯನ್ನು ಸುತ್ತುವರಿದ ಹತ್ತು ಮೈಲುಗಳ ಹೊದರಿನಲ್ಲಿ ಬಂದಿಯಂತಿದ್ದ ಮಾನವನು ಕೃತಕವಾಗಿ ಪರಿಸ್ಥಿತಿಯನ್ನು ಬದಲಿಸಿಕೊಂಡು ತನ್ನ ಅಂತರಿಕ್ಷ ಪ್ರವಾಸವನ್ನು ದೂರ ದೂರ ಬೆಳೆಯಿಸಬೇಕೆಂದಿದ್ದಾನೆ. ಹತ್ತು ಮೈಲುಗಳ ಮೇಲಿನ ಅಂಧಕಾರವಾಗಲಿ, ಹವೆಯ ವಿರಳತೆಯಾಗಲಿ ಅಥವಾ ಪೃಥ್ವಿಯ ಗುರುತ್ವಾಕರ್ಷಣೆಯಾಗಲಿ ಅವನ ಈ ಪ್ರವಾಸಕ್ಕೆ ಅಡ್ಡಿಯಾಗವೆಂಬ ಅಭಿಪ್ರಾಯದಿಂದ ಅವನು ಮುಂದುವರಿಯಬೇಕೆಂದಿದ್ದಾನೆ. ಹವೆಯಿಲ್ಲದಲ್ಲಿ ತನ್ನ ಹಾರುವ ಯೋಗ್ಯತೆಯನ್ನು ಕಳೆದುಕೊಳ್ಳುವ ವಿಮಾನವು ಇಂತಹ ಪ್ರವಾಸಕ್ಕೆ ಅಯೋಗ್ಯವಿದೆ. ಕಾರಣ ಇದಕ್ಕೆ ಹವೆಯಿಲ್ಲದಲ್ಲಿಯೇ ಉತ್ತಮವಾಗಿ ಹಾರುವ ರಾಕೆಟ್ ಇದೇ ಪರಿಹಾರವು. V-2 ರಾಕೆಟ್ಟಿನ ಶೋಧವಾದಂದಿನಿಂದ ಅದರಲ್ಲಿಯ ಸುಧಾರಣೆಗಳನ್ನು ಕುರಿತಾಗಿಯೇ ಜಗತ್ತಿನಲ್ಲಿಯ ಸಹಸ್ರಾರು ವಿಜ್ಞಾನಿಗಳು ಕಾರ್ಯಮಾಡಲಿದ್ದಾರೆ, ವಿಶ್ವಯೋಗಿಕ ಪರಿಸ್ಥಿತಿಯಲ್ಲಿ ಇಂತಹ ರಾಕೆಟ್ಟುಗಳಲ್ಲಿ ಮನುಷ್ಯನು ಹೋಗುವ ವಿಚಾರವೇ ಇಲ್ಲದುದರಿಂದ ಇಂಥಯ ಜ್ಞಾನವನ್ನು ದೊರಕಿಸಲು ಅನೇಕ ಸ್ವಯಂಚಾಲಿತ ಉಪಕರಣಗಳಿಂದ ಸುಸಜ್ಜಿತವಾದ ರಾಕೆಟ್ಟುಗಳು ನಮ್ಮ ಭೂಮಿಯ ಹೊದರನ್ನು ಭೇದಿಸಿ ರೇಡಿಯೋ ಅಲೆಗಳ ಸಹಾಯದಿಂದ ಅಲ್ಲಿಯ ಸರಿಸ್ಥಿತಿಯೆಲ್ಲವನ್ನೂ ನಮಗೆತಿಳಿಸುವಂತೆ ಮಾಡಬಲ್ಲದಾಗಿದೆ.

ನಮ್ಮ ಭೂಮಿಗೆ ಚಂದ್ರನು ಅತ್ಯಂತ ಸಮೀಪದವನು. ಅತ್ಯಂತ ಸಮೀಪದವನೆಂದರೂ ಸಹ ಅವನು ೨ ಲಕ್ಷ ೪೦,೦೦೦ ಮೈಲುಗಳ ಅಂತರದಲ್ಲಿದ್ದಾನೆ. ನಮ್ಮಲ್ಲಿಯ ತಾಸಿಗೆ ೫೦೦ ಮೈಲುಗಳ ವೇಗದ ವಿಮಾನಕ್ಕೆ ಅಲ್ಲಿಗೆ ಹೋಗಿ ಮುಟ್ಟಲು ೧೧ ದಿನಗಳ ಅವಧಿಯು ಬೇಕಾಗುವದು.

ಭೂಮಿಯಿಂದ ೧೨೦ ಮೈಲುಗಳಷ್ಟು ಹೋಗುವುದರಲ್ಲಿ ಹವೆಯು ಕ್ರಮೇಣ ವಿರಳವಾಗುತ್ತ ಹೋಗಿ ಏನೂ ಇಲ್ಲದಂತಾಗುತ್ತದೆ. ಇದು ಮನುಷ್ಯಮಾತ್ರರಿಗೆ ಹೋಗಲು ಯೋಗ್ಯವಲ್ಲದ ಪ್ರದೇಶವಾದರೂ ರಾಕೆಟ್ಟುಗಳ ಚಲನೆಗೆ ಯೋಗ್ಯವಾದ ಪ್ರದೇಶವಾಗಿದೆ. ಎಂದರೆ ಇಂತಹ ದ್ರವಾಸಕ್ಕೆ ರಾಕೆಟ್ಟೇ ಯೋಗ್ಯವೆಂದು ತಿಳಿಯುವದು

ಮುಖ್ಯವಾಗಿ ನಿಸರ್ಗವು ನಮ್ಮನ್ನು ಪೃಥ್ವಿಯ ಮೇಲೆಯೇ ಬಂದಿಸಿಟ್ಟಿರಲು ಅನೇಕ ತಂತ್ರಗಳನ್ನು ಹೂಡಿದೆ. ಕೃತಕ ಹವೆಯ ಸಹಾಯದಿಂದ ನಾವು ಸ್ವಲ್ಪ ದೂರದ ವರೆಗೆ ಹೋಗಬಹುದಾದರೂ ಗೊತ್ತಿಲ್ಲದ ಹಾದಿಯಲ್ಲಿ ಇಷ್ಟು ದೂರದ ಪ್ರವಾಸವನ್ನು ಕೈಕೊಳ್ಳುವ ಅನುಕೂಲತೆಯನ್ನು ಕಲ್ಪಿಸಲು ನಮಗೆ ಸಾಧ್ಯವೇ? ಮೇಲಾಗಿ ಇಂತಹ ದೂರದ ಪ್ರವಾಸಕ್ಕೆ ಹೋಗಿ ಬರಲು ಬೇಕಿರಬಹುದಾದ ಉಂಟಲವನ್ನು ಹೊತ್ತುಕೊಂಡು ಹೋಗುವಂತಹ ರಾಕೆಟ್ಟನ್ನು ನಿರ್ಮಿಸುವದು ಕೂಡ ಒಂದು ಸಮಸ್ಯೆಯೆಂಬುದನ್ನು ನಾವು ಮರೆಯುವಂತಿಲ್ಲ.

ಎರಡನೆಯದಾಗಿ ಪೃಥ್ವಿಯ ಗುರುತ್ವಾಕರ್ಷಣೆಯನ್ನು ಮೀರಿ ನಾವು ಮುನ್ನಡೆಯಬೇಕು ಸಾಮಾನ್ಯವಾದ ಕಾರ್ಯವಲ್ಲ. ಇದನ್ನು ನೀರು ಮುಂದುವರಿಯಲು ಯಾವ ಕ್ರಮವನ್ನು ಅನುಸರಿಸಬೇಕೆಂದು ವಿಜ್ಞಾನಿಯು ವಿವೇಚಿಸಿರುವನು ಎಂಬುದನ್ನು ಮುಂದೆ ತಿಳಿಯುವ.

ಮುಖ್ಯವಾಗಿ ಚಂದ್ರಗೋಲವು ಬಂಜರು ಭೂಮಿಯಿಂದ ಕೂಡಿದುದೂ, ನಿರ್ಜೀವವಾದುದೂ ಇತ್ಯಾದಿಯಾಗಿ ಇರುವುದೆಂಬುದನ್ನೂ ಮತ್ತು ಅಲ್ಲಿಯ ನಿರ್ವಾತ ಪ್ರದೇಶವು ನೆಲೆಸಲು ವತ್ತು ಸಂಶೋಧನೆಗೆ ಕರಿಣವಾದ್ದೂ ಇದೆ ಎಂಬುದನ್ನು ನಾವು ಈ ಸಂದರ್ಭದಲ್ಲಿ ಮರೆಯುವಂತಿಲ್ಲ.

ಮನುಷ್ಯನು ಚಂದ್ರಲೋಕದಲ್ಲಿ ನೆಲೆಸುವ ಪೂರ್ವದಲ್ಲಿ ಈ ಮೊದಲೇ ವಿವರಿಸಿದ ಎಲ್ಲ ವಿಷಯಗಳ ಜ್ಞಾನವೂ ಅಗತ್ಯವಾಗಿದೆ ಚಂದ್ರಲೋಕದ ಪ್ರವಾಸವು ಮುಂದಿನ ಗ್ರಹಗಳ ಪ್ರವಾಸಕ್ಕೆ ಪೀಠಿಕೆಯೂ ಆಗಬಹುದಾಗಿದೆ. ಮನುಷ್ಯನು ಇಂತಹ ಪ್ರವಾಸವನ್ನು ಕೈಕೊಳ್ಳುವ ಪೂರ್ವದಲ್ಲಿ ನಮ್ಮ ವಾತಾವರಣವನ್ನು ಛೇದಿಸಿ ಮುನ್ನಡೆಯಲಿರುವ ರಾಕೆಟ್ಟುಗಳನ್ನು ಕಳಿಸಬೇಕಾಗುವದು. ಇವುಗಳು ಸ್ವಯಂಚಾಲಿತವಿರಬೇಕಲ್ಲದೆ, ಇವುಗಳಲ್ಲಿ ಅಲ್ಲಿಯ ಹವೆಯ ವತ್ತಡ, ಉಷ್ಣತೆ, ಎತ್ತರ ಇತ್ಯಾದಿಗಳನ್ನು ತಿಳಿದು ಇವುಗಳ ವಿವರಗಳನ್ನು ರೇಡಿಯೋ ಅಲೆಗಳಿಂದ ಪ್ರಸಾರಗೊಳಿಸಿ ನಮಗೆ ತಿಳಿಸುವ ಉಪಕರಣಗಳನ್ನೂ ಇರಿಸಬೇಕಾಗುವದು.

ಎರಡನೆಯ ಮಹಾಯುದ್ಧವು ಪೂರ್ತಿಯಾದೊಡನೆಯೆ V-2 ರಾಕೆಟ್ಟುಗಳ ಮತ್ತು ಇಂಥವೇ ವಾಹಕಗಳ ಸಹಾಯದಿಂದ ನಮ್ಮ ಭೂಮಿಯ ವಾತಾವರಣದ ಮೇಲ್ಭಾಗದ ವಿಷಯಕ ಜ್ಞಾನವನ್ನು ಹಚ್ಚೆಜ್ಞಾನಿಗಳು ಸಂಪಾದಿಸುವ ಸತ್ರವೇ ಪ್ರಾರಂಭವಾದಂತಾಗಿದೆ.

ಅಮೇರಿಕೆಯ ರಾಕೆಟ್ಟುಗಳು ಈ ವರೆಗೆ ೨೫೦ ಮೈಲುಗಳ ವರೆಗಿನ ಎತ್ತರವನ್ನು ಮುಟ್ಟಿವೆಯಲ್ಲದೆ ಅತ್ಯಗಳು ತಾಸಿಗೆ ೫೦೦೦ ಮೈಲುಗಳ ವೇಗವನ್ನೂ ಸಾಧಿಸಿವೆ. ಈ ಮೊದಲೇ ವಿವರಿಸಿದಂತೆ ೧೨೦ ಮೈಲುಗಳನ್ನು ಶ್ರಮಿಸುವದಲ್ಲಿ ಹವೆಯು ತೀರುವುದರಿಂದ ನಮ್ಮ ರಾಕೆಟ್ಟುಗಳು ನಿರ್ವಾತ ಪ್ರದೇಶವನ್ನು ಹೊಕ್ಕಂತಾಯಿತು. ಅವುಗಳು ಈ ಪ್ರದೇಶದಲ್ಲಿ ಕೇವಲ ೧—೨ ನಿಮಿಷಗಳ ವರೆಗೆ ಉಳಿದು ತಿರುಗಿ ಭೂಮಿಯೆಡೆಗೆ ಬಂದಿವೆ ಭೂಮಿಯಿಂದ ಹೊಟ್ಟ ರಾಕೆಟ್ಟು ತಿರುಗಿ ಭೂಮಿಗೆ ಬಾರದೆ ಪ್ರತಿಚಂದ್ರನಂತೆ ಭೂಮಿಯನ್ನು ಸುತ್ತುತ್ತಾ ಹೇಗೆ ಇರಬಹುದು ಇತ್ಯಾದಿ ಸಮಸ್ಯೆಗಳನ್ನು ಬಿಡಿಸುವತ್ತ ವಿಜ್ಞಾನಿಗಳು ಈಗ ಮಗ್ನರಾಗಿದ್ದಾರೆ

ಇಂತಹ ಚಂದ್ರನನ್ನು ನಿರ್ಮಿಸಲು ನಮ್ಮ ರಾಕೆಟ್ಟು ತಾಸಿಗೆ ೧೦೦೦ ಮೈಲುಗಳ ವೇಗದಿಂದ ಹೋಗಬೇಕಾಗುವದು. ವೇಗವು ಇದಕ್ಕೆ ಕಡಿಮೆಯಾದರೆ ಅದು ತಿರುಗಿ ಭೂಮಿಗೇ ಬರುವದು ವೇ

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲದೆ ನೋಡಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ

ಹೊಸ ಮುದ್ರಣ—ಸಾದಾ ಪ್ರತಿ 1·50. ಉತ್ತಮ ಪ್ರತಿ 2:00.

ಪುಸ್ತಕದ ಬೆಲೆಯೊಂದಿಗೆ ನಾಲ್ಕಾಣೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ನಮ್ಮ ಪುಸ್ತಕಗಳು ಈ ಕೆಳಗಿನವರಲ್ಲಿಯೂ ದೊರೆಯುತ್ತವೆ:–

1) ಸ್ಕೂಲ್ ಬುಕ್ ಕಂಪನಿ, ಧರ್ಮಬೀದಿ, ಮಂಗಳೂರ -1.

2) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಪೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಗವು ಹೆಚ್ಚಿದಲ್ಲಿ ಅದು ಮುಂದೆ ಮುಂದೆ ಸಾಗುವದು. ವೇಗವು ತಾಸಿಗೆ ೫೫,೦೦೦ ಮೈಲುಗಳಷ್ಟಾದಾಗ ಅದು ತಿರುಗಿ ಭೂಮಿಗೆ ಬರುವುದೇ ಇಲ್ಲ.

೫೦೦೦ ಮೈಲುಗಳ ವೇಗದಿಂದ ೫೫,೦೦೦ ಮೈಲುಗಳ ವೇಗಕ್ಕೆ ತೇಗೆ ಮುಟ್ಟಬೇಕು ಎಂಬುದನ್ನು ಕುರಿತು ಅನೇಕ ಸಂಶೋಧನೆಗಳು ನಡೆದಿವೆ. ಒಂದು ರಾಕೆಟ್ಟು ಬೇರೆ ಎರಡು ರಾಕೆಟ್ಟುಗಳನ್ನು ಕೇವಲ ಭಾರವೆಂದು ಒಯ್ಯುವದು. ಮೊದಲನೆಯ ರಾಕೆಟ್ಟಿನ ಜೊತೆಗೆ ಭಾರವೂ ಅದೇ ವೇಗದಿಂದ ಸಾಗಲಿರುವದು. ಈ ವೇಳೆಗೆ ಎರಡನೆಯದು ತನ್ನ ಕಾರ್ಯವನ್ನು ಪ್ರಾರಂಭಿಸಿ ಮೊದಲಿನ ವೇಗವನ್ನು ಇಮ್ಮಡಿಯಾಗಿಸುವದು. ಈ ರೀತಿಯಾಗಿ ೧೮೦೦೦ ಮೈಲುಗಳ ವೇಗವನ್ನು ಸಾಧಿಸಿ ಕೃತಕ ಚಂದ್ರನನ್ನು ನಿರ್ಮಿಸುವ ತಯಾರಿಯು ಭರದಿಂದ ಸಾಗತೊಡಗಿದೆ. ಇದು ಯೋಗ್ಯವಾದ ಮಾರ್ಗವೇನೋ ನಿಜ ಆದರೆ ಇಲ್ಲಿ ಮೊದಲನೆಯ ರಾಕೆಟ್ಟು ಪ್ರಾರಂಭದಲ್ಲಿ ಬೇರೆ ಎರಡನ್ನು ಕೊತ್ತುಕೊಂಡು ಹೋಗಬೇಕಾಗುತ್ತದಾದ್ದರಿಂದ ಹಣವು ಮಾತ್ರ ಹೆಚ್ಚು ವ್ಯಯವಾಗುತ್ತದೆ. ಅಣುಶಕ್ತಿಯನ್ನು ಇಂತಹ ಕಾರ್ಯಕ್ಕೆ ಉಪಯೋಗಿಸುವದರ ಸಾಧ್ಯಾಸಾಧ್ಯತೆಯನ್ನೂ ಸಹ ವಿಜ್ಞಾನಿಗಳು ಅಭ್ಯಾಸ ಮಾಡುತ್ತಲಿದ್ದಾರೆ.

ಇದೇ ಪ್ರಕಾರವಾಗಿ ಅಂತರಿಕ್ಷದಲ್ಲಿ ಉರುವಲಕ್ಕಾಗಿ ನಿಲ್ದಾಣಗಳನ್ನು ರಚಿಸುವ ವಿಚಾರವೂ ಇದೆ. ೫೫೦೦೦ ಮೈಲುಗಳ ವೇಗವನ್ನು ಸಾಧಿಸಿ ಪೃಥ್ವಿಯ ಗುರುತ್ವಾಕರ್ಷಣವನ್ನು ಮೀರುವುದೇ ತಡ—ನಮ್ಮ ರಾಕೆಟ್ಟು ತಿರುಗಿ ಬರುವ ಭೀತಿಯೇ ಇಲ್ಲ. ಮುಂದೆ ಯೋಗ್ಯದಿತಿಯನ್ನು ಅನುಸರಿಸಿದಲ್ಲಿ ೫ ದಿನಗಳ ಅವಧಿಯಲ್ಲಿ ಚಂದ್ರಗೋಲವನ್ನು ಮುಟ್ಟಬಹುದಾಗಿದೆ.

ಮನುಷ್ಯನು ನಿರ್ವಾತ ಪ್ರದೇಶದಲ್ಲಿ ಹೇಗೆ ಬದುಕಬಹುದು ಇತ್ಯಾದಿ ವಿಚಾರಗಳ ಅಗತ್ಯವು ಈಗಂತೂ ಇಲ್ಲ. ಮೊದಲನೆಯವಾಗಿ ರೇಡಿಯೋದ ಸಹಾಯದಿಂದ ಸ್ವಯಂಚಾಲಿತ ರಾಕೆಟ್ಟುಗಳನ್ನು ಕಳುಹಿಸುವುದು ಮುಖ್ಯವಿದೆ, ಇದು ಹಲವು ವರುಷಗಳಲ್ಲಿ ಸಾಧಿಸಬಹುದೆಂಬ ಲಕ್ಷಣವೂ ತೋರ ತೊಡಗಿದೆ.

ಮುಂದೆ ಮನುಷ್ಯನು ಅಲ್ಲಿಗೆ ಹೋಗುವ ಅನುಕೂಲತೆಯು ಒದಗಿದಲ್ಲಿ ರಕ್ಷಣೆಗೆಂದು ಹಾಕಿಕೊಳ್ಳಲು ಬೇಕಿರಬಹುದಾದ space suit ಎಂಬ ಕವಚವು ಹೇಗೆ ಇರಬೇಕು ಇತ್ಯಾದಿಗಳ ವಿವರಗಳನ್ನೂ ಸಹ ವಿಜ್ಞಾನಿಗಳು ತಯಾರಿಸಿದ್ದಾರೆ.

ನಿರ್ವಾತ ಪ್ರದೇಶದಲ್ಲಿ ವಿಶಿಷ್ಟ ರಾಕೆಟ್ಟಿನಲ್ಲಿ ಕುಳಿತು ಪ್ರಚಂಡ ವೇಗದಿಂದ ಪ್ರಯಾಣವನ್ನು ಬೆಳೆಯಿಸಿ ಮನುಷ್ಯನು ಮುಟ್ಟಲಿರುವ ಸ್ಥಳವು ವಾಸಕ್ಕೂ ಕೂಡ ಅಯೋಗ್ಯವಿದೆ ಎಂದ ಬಳಿಕ ಇಂತಹ ಪ್ರಯಾಸವೇಕೆಂಬ ಪ್ರಶ್ನೆಯು ಎಲ್ಲ ತಜ್ಞರ ಎದುರು ನಿಲ್ಲುವದು, ಪೃಥ್ವಿಯ ಮೇಲೆ ತಾವು ಸಾಧಿಸಬೇಕಾಗಿರುವ ಎಲ್ಲ ಕಾರ್ಯವೂ ಮುಗಿದಿದೆ ಎಂದು ಹಲವರು 'ಚಂದ್ರಲೋಕಕ್ಕೆ ಹೋಗಬೇಕೆಂದಿರಬಹುದೇ?' ಎಂಬ ಪ್ರಶ್ನೆಯನ್ನು ಈ ಜನರು ಉತ್ತರಿಸಬೇಕಾಗುವದು.

ಪೃಥ್ವಿಯ ಮೇಲೆ ಇನ್ನೂ ಸಾಧಿಸಬೇಕಾಗಿರುವ ಕಾರ್ಯಗಳು ಸಾಕಷ್ಟು ಇವೆ. ಇಲ್ಲಿಯ ಜ್ಞಾನವು ನಿಶ್ಚಯವಾಗಿ ಮಾನವ ಜನಾಂಗದ ಉನ್ನತಿಗೆ ಕಾರಣವಾಗುವದು. ವೈಜ್ಞಾನಿಕ ಶೋಧಗಳಲ್ಲಿ ತೊಡಗಿಸಿದ ಹಣವು ಯಾವ ಬ್ಯಾಂಕೂ ಕೊಡಲಾರದಷ್ಟು ಲಾಭಾಂಶವನ್ನು ಕೊಡಲು ಶಕ್ತವಿದೆ. ಆದರೆ ಜ್ಞಾನವನ್ನು ಗಳಿಸುವಾಗ ಕೇವಲ ಭೌತಿಕ ಹಿನ್ನೆಲೆಯನ್ನು ಇರಿಸುವದು ಗೌಣವೆನಿಸುವದು.

ಇತ್ತೀಚೆಗೆ ತೇನಸಿಂಗ ಮೊದಲಾದವರು ಗೌರೀಶಂಕರವನ್ನು ಮುಟ್ಟಿದರೆಂಬುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿಲ್ಲವೇ? ಇಂತಹ ಸರಿಶ್ರಮಕ್ಕೆ ಯಾವ ವ್ಯಾವಹಾರಿಕ ಬೆಲೆ ಇದೆ ಎಂಬುದನ್ನು ಯಾರಾದರೂ ತಿಳಿಯಲು ಪ್ರಯತ್ನಿಸಿರುವರೇ? ಅದೇ ಪ್ರಕಾರ ಇಂದು ಮಾನವರು ಚಂದ್ರಲೋಕವನ್ನು ಮುಟ್ಟುವಂತಾದರೆ ಇಂತಹ ಪ್ರವಾಸವು ನಮ್ಮ ಜನಾಂಗಕ್ಕೇ ಹೆಮ್ಮೆಯ ವಿಷಯವಾಗದೇ? ಜಿಜ್ಞಾಸೆ ಮತ್ತು ಸೋಜಿಗದ ಸಂಗತಿಗಳ ವಿಷಯದಲ್ಲಿ ನಮಗೆ ಇರುವ ಭಾವನೆಯೇ ನಾವು ಸಾಧಿಸಲಿರುವ ಮಹತ್ಕಾರ್ಯಗಳ ಗುಟ್ಟು ಎಂಬುದನ್ನು ಈ ಸಂದರ್ಭದಲ್ಲಿ ನೆನೆಯುವವರಾಗಬೇಕು.

ನಮ್ಮಲ್ಲಿಯ ಬಹುಭಾಗದ ಜನರು ತಮ್ಮ ಹಿರಿಯರು ಮಾಡಿದುದನ್ನೇ ಮಾಡುವವರಾಗಿದ್ದಾರೆ. ಈ ಜನರೇ ನಮ್ಮ ನಾಗರಿಕತೆಗೆ ಆಧಾರಸ್ತಂಭದಿದ್ದಂತೆ. ಆದರೆ ಇವರ ಹೊರತಾಗಿ ಯಾವುದರಿಂದಲೂ ಸಮಾಧಾನ ಪಡದೆ ಹೊಸಹೊಸದರ ಬೆನ್ನುಹತ್ತುವ ಮತ್ತು ಸಾಹಸ ಕೃತ್ಯಗಳಿಂದಲೇ ಸಮಾಧಾನಪಡುವ ಬೇರೆ ಜನರೂ ಇರುವರು. ಇಂತಹವರನ್ನು ಮನೆಯಲ್ಲಿಯೇ ಕೂಡಿಸಿ ಹಿಡಿದು ಇಡುವುದು ಅವರ ನಿರ್ಣಯಕ್ಕೆ ಕಾರಣವಾಗುತ್ತದೆ. ಸಮಾಜವು ಕರಿಯುವ ನೀರಿನ ಸ್ವಭಾವವುಳ್ಳದ್ದಿದ್ದು, ಬಿಡಿಸಲು ಸನುಸ್ಯೆಗಳೇ ಇಲ್ಲದೆ ಬಲಪರೀಕ್ಷೆಗೆ ಆಹ್ವಾನವೇ ಇಲ್ಲದ-ನಾಗರಿಕತೆಯು, ತನ್ನ ಕೊನೆಯ ಹಂತದಲ್ಲಿದೆ ಎಂದೇ ತಿಳಿಯಬೇಕಾಗುವದು. ಹೋರಾಟವಿಲ್ಲದ ಸ್ಥಿರತೆಯು ನಾಗರಿಕತೆಯ ಬೆಳವಣಿಗೆಗೆ ಪೋಷಕವಾಗದು. ಹವೆಯ ಮೇಲ್ಭಾಗದಲ್ಲಿಯ ಪರಿಸ್ಥಿತಿಯು ಇಂದು ನಮ್ಮನ್ನು ಆಹ್ವಾನಿಸುತ್ತದೆ. ಸ್ವಯಂಚಾಲಿತ ರಾಕೆಟ್ಟುಗಳು ಅಲ್ಲಿಗೆ ಹೋಗಬಹುದಾದರೂ ಮನುಷ್ಯನು ಹೋಗುವುದು ಮಾತ್ರ ಸಂಶಯಾಸ್ಪದವೆಂದು ಹೇಳುವುದೇ ಪರಿಸ್ಥಿತಿಯ ನಿಜವಾದ ವಿವರಣೆಯೆಂದು ನಾವು ಇಂದು ಅಭಿಪ್ರಾಯಪಡಬಹುದಾಗಿದೆ.

* * *

('Exploration of the Moon' by R. A. Smith and A. C. Clarke ಎಂಬ ಪುಸ್ತಕದೊಳಗಿನ ಅನೇಕ ವಿಚಾರಗಳನ್ನು ಉಪಯೋಗಿಸಿದ್ದೇನೆ. ಲೇ)

ಸರಕಾರದ ಕಲಾಭಿರುಚಿ—

ಮುದ್ರಣ ಮತ್ತು ವಿನ್ಯಾಸಕ್ಕೆ ತಕ್ಕ ಪುರಸ್ಕಾರ

ಉತ್ತಮ ಮುದ್ರಣ ಹಾಗೂ ವಿನ್ಯಾಸ (ಡಿಸೈನ್) ದಲ್ಲಿ ಸರ್ಕಾರದವರ ಪುರಸ್ಕಾರವನ್ನು ನೀಡುವುದಕ್ಕಾಗಿ ವಾರ್ಷಿಕ ಸ್ಪರ್ಧೆಯೊಂದನ್ನು ಈ ವರ್ಷ ನವೆಂಬರ್ ತಿಂಗಳಲ್ಲಿ ನಡೆಸಲಾಗುವುದು. ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಮಂತ್ರಿಶಾಖೆಯವರು, ಪುಸ್ತಕಗಳ ಮುದ್ರಣ ಹಾಗೂ ವಿನ್ಯಾಸದಲ್ಲಿ ಉನ್ನತ ಮಟ್ಟವನ್ನು ಸಾಧಿಸುವುದಕ್ಕೆ ಪ್ರೋತ್ಸಾಹ ನೀಡಲು, ೧೯೫೫ ರಲ್ಲಿ ಇದನ್ನು ಆರಂಭಿಸಿದರು.

ಈ ಪುರಸ್ಕಾರಗಳನ್ನು ಕೆಳಕಂಡ ೧೯ ವರ್ಗಗಳಲ್ಲಿ ಅತ್ಯುತ್ತಮವಾಗಿ ಹೊರತಂದ ಸಾಮಗ್ರಿಗಳಿಗೆ ಕೊಡಲಾಗುವುದು. ಹತ್ತು ವರ್ಷ ವಯಸ್ಸಿಗಿಂತ ಮೇಲ್ಪಟ್ಟ ವಯಸ್ಸಾದ ಮಕ್ಕಳಿಗಾಗಿ ಪುಸ್ತಕಗಳು, ೧೦ ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಮಕ್ಕಳಿಗಾಗಿ ಪುಸ್ತಕಗಳು, ಸಚಿತ್ರ ಪುಸ್ತಕಗಳ, ಕಲಾ ಸಂಗ್ರಹಗಳು, ಇಂಗ್ಲಿಷ್ ಮತ್ತು ಭಾರತೀಯ ಭಾಷೆಯಲ್ಲಿ ಮುದ್ರಿತವಾದ ಪುಸ್ತಕಗಳು; ಜಾಹಿರಾತುಗಳ ವಿನ್ಯಾಸ; ಕಲೆಗೆ ಸಂಬಂಧಪಟ್ಟ ಪತ್ರಿಕೆಗಳು; ಗೃಹೋಪಯುಕ್ತ ಪತ್ರಿಕೆಗಳು; ನಿಯತ ಕಾಲಿಕೆಗಳು; ಭಾರತದಲ್ಲಿ ತಯಾರಾದ ಕಾಗದದಲ್ಲಿ ಮುದ್ರಣವಾದ ಪುಸ್ತಕಗಳು; ಪೋಸ್ಟರುಗಳು, ಫೋಲ್ಡರುಗಳು ಇಂಗ್ಲಿಷ್ ಮತ್ತು ಭಾರತೀಯ ಭಾಷೆಗಳಲ್ಲಿನ ದಿನಪತ್ರಿಕೆಗಳು, ಕ್ಯಾಲೆಂಡರುಗಳು, ಡೈರಿಗಳು, ದೇವನಾಗರಿ ಅಕ್ಷರಗಳ ಮೊಳೆಗಳು, ಪ್ರಚಾರೋಪಯುಕ್ತ ಪುಸ್ತಕಗಳು, ಅತ್ಯುತ್ತಮವಾಗಿ ಬೈಂಡಾದ ಪುಸ್ತಕಗಳು ಮತ್ತು ಲೇಬಲ್‌ಗಳು.

ಈ ಹಿಂದೆ ಜಾಹಿರಾತುಗಳ ವಿನ್ಯಾಸಗಳು ಈ ಸ್ಪರ್ಧೆಯ ಕಕ್ಷೆಯಲ್ಲಿ ಬರುತ್ತಿರಲಿಲ್ಲ. ಈ ವರ್ಷ ಪ್ರಥಮತಃ ಅದನ್ನು ಸೇರಿಸಲಾಗಿದೆ ಪ್ರತಿಯೊಂದು ವರ್ಗದಲ್ಲಿಯೂ ಎರಡೆರಡು ವಿಧವಾದ ಬಹುಮಾನಗಳಿರುವುವು. ಪ್ರಕಾಶಕರು ಅಥವಾ ವಿನ್ಯಾಸ ತಯಾರಿಸಿದವರಿಗೆ ಪ್ರಥಮ ಹಾಗೂ ದ್ವಿತೀಯ ಬಹುಮಾನ; ಅದನ್ನು ಮುದ್ರಿಸಿದವನಿಗೆ ಪ್ರಥಮ ಹಾಗೂ ದ್ವಿತೀಯ ಬಹುಮಾನ. ಈ ಬಹುಮಾನಗಳಲ್ಲದೆ, ಪ್ರತಿಯೊಂದು ವರ್ಗದಲ್ಲಿಯೂ ಅರ್ಹತಾ ಸರ್ಟಿಫಿಕೇಟ್‌ಗಳನ್ನೂ ನೀಡಲಾಗುವುದು. ಭಾರತದಲ್ಲಿ ೧೯೫೬ ರ ಆಗಸ್ಟ್ ೧೫ ರಿಂದ ಈಚೆಗೆ ಸಿದ್ಧಗೊಂಡ ಸಾಮಗ್ರಿಗಳಿಗೆ ಮಾತ್ರ ಈ ವರ್ಷದ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿದೆ. ಪ್ರಮುಖ ಕಲಾವಿದರು, ವಿದ್ವಾಂಸರು, ಹಾಗೂ ಈ ವೃತ್ತಿಗಳನ್ನೂ ಪ್ರತಿನಿಧಿಸುವವರನ್ನುಳ್ಳ ತೀರ್ಪುಗಾರರ ಮಂಡಲಿಯೊಂದನ್ನು ನೇಮಿಸಲಾಗುವುದು. ಈ ಮಂಡಲಿಯು ಪುರಸ್ಕಾರವನ್ನು ನೀಡುವುದಕ್ಕೆ ಯೋಗ್ಯವಾದ ಉತ್ತಮ ಸಾಮಗ್ರಿಗಳನ್ನು ಆರಿಸುವುದು.

ಪ್ರಕಾಶಕರು, ಮುದ್ರಕರು, ವಾಣಿಜ್ಯ ಸಂಸ್ಥೆಗಳು, ಜಾಹೀರಾತು ಸಂಸ್ಥೆಗಳು, ಜಾಹೀರಾತುದಾರರು, ವಾಣಿಜ್ಯ ಕಲಾಮಂದಿರಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂದು ಸ್ವಾಗತಿಸಲಾಗಿದೆ. ಸ್ಪರ್ಧೆಗೆ ಸಾಮಗ್ರಿಗಳನ್ನು ವಸ್ತುಪ್ರದರ್ಶನ ವಿಭಾಗ, ಭಾರತ ಸರಕಾರದ ಜಾಹಿರಾತು ಮತ್ತು ಜಾಕ್ಷಿಶ ಪ್ರಚಾರ ವಿಭಾಗ ವಾರ್ತಾ ಮತ್ತು ಪ್ರಸಾರ ಮಂತ್ರಿ ಶಾಖೆ, ನವದೆಹಲಿ ಈ ವಿಳಾಸಕ್ಕೆ ೧೯೫೬ ರ ಸೆಪ್ಟೆಂಬರ್ ೩೦ ರೊಳಗಾಗಿ ಹೆಸರಿಸಿಕೊಡಬೇಕು.

೧೯೫೬ ನವೆಂಬರ್ ತಿಂಗಳಲ್ಲಿ, ಈ ಸಾಮಗ್ರಿಗಳ ಪ್ರದರ್ಶನವನ್ನು ಏರ್ಪಡಿಸುವ ಉದ್ದೇಶವಿದೆ.

.... ಹೊಸ ಪುಸ್ತಕ ....

ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಬರೆದ

ಶಿಕ್ಷಣದ ಧ್ಯೇಯಗಳು

ಮತ್ತು ಇತರ ಪ್ರಬಂಧಗಳು

ಅನುವಾದಕರು:

ಕೆ. ಬಿ. ರಾಮಕೃಷ್ಣ ರಾವ್, ಬಿ. ಎ. (ಆನರ್ಸ್)

ಉ. ಲಕ್ಷ್ಮೀನಾರಾಯಣಾಚಾರ್ಯ ಎಂ. ಎ; ಎಲ್. ಟಿ.

ಬೆಲೆ: $\frac{2-4-0}{2 \cdot 25}$ ರೂ.

ನವಯುಗ ಪ್ರೆಸ್, ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

Edited, Printed & Published by K. H. Shetty, at the Navayuga press, Udipi S. India

REGD. No. M. 5878

Licensed to Post without Prepayment

ನವಯುಗ

ಸಂಪುಟ ೩೭ ಸಂಚಿಕೆ ೫

VOL. 37 3—10—1957 NO. 5

ಉಳಿತಾಯ ಚಳವಳ—

ಕೃತಕವಾದ ಖರ್ಚುಗಳು ಅಳಿಯಲಿ

ಶ್ರೀ. ವಿ ಬಿ ಅಮ್ಮಾಡಿ

ಸಣ್ಣ ಉಳಿತಾಯ ಯೋಜನೆಯನ್ನು ಜನಪ್ರಿಯಗೊಳಿಸುವ ಚಳವಳದ ಅಂಗವಾಗಿ ಭಾರತದ ಅಲ್ಪಧನ ಉಳಿತಾಯ ಸಂಸ್ಥೆಯವರು ಒಂದು ಅಖಿಲ ಭಾರತ ಮಟ್ಟದ ಸ್ಪರ್ಧೆಯನ್ನೇರ್ಪಡಿಸಿರುವರೆಂದು ತಿಳಿದಿಯಾಗಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಸನ್ನಿವೇಶದಲ್ಲಿ ಚಿಕ್ಕ ಉಳಿತಾಯದ ಮಹತ್ವ—ಅವಶ್ಯಕತೆ ಹಾಗೂ ಅನುಕೂಲತೆಗಳ ಕುರಿತು ಜನ ಸಾಮಾನ್ಯರಿಗೆ ಸುಲಭದಲ್ಲಿ ಅರ್ಥವಾಗುವಂತೆ ಸರಳ ರೂಪದಲ್ಲಿ ರಚಿಸಲ್ಪಟ್ಟ ವಿವಿಧ ಪ್ರಾದೇಶಿಕ ಭಾಷೆಗಳ ಗೀತೆ ಅಥವಾ ಭಾವಗೀತೆಗಳಲ್ಲಿ ಉತ್ತಮವಾದುವುಗಳಿಗೆ ಬಹುಮಾನ ನೀಡುವುದಾಗಿ ಸಂಸ್ಥೆಯು ನಿರ್ಧರಿಸಿದೆಯೆಂದು ಹೇಳಲಾಗಿದೆ.

ಬಹುಮಾನದ ಹಣದ ವಿಷಯ ಅಥವಾ ಇನ್ನಿತರ ನಿಯಮಗಳೇನೇ ಇರಲಿ, ಆ ದೃಷ್ಟಿಯಿಂದ ಅದನ್ನಿಲ್ಲಿ ಪ್ರಸ್ತಾಪಿಸಲಾಗಿಲ್ಲ. ಅದು ಜನತೆಯ ಮೇಲೆ ಮಾಡಲುದ್ದೇಶಿಸಿದ ಪರಿಣಾಮ—ದೇಶವನ್ನು ಪ್ರಗತಿಯತ್ತ ಸಾಗಿಸುವಲ್ಲಿ ಜನತೆಯ ನೆರವು, ಸಹಕಾರಗಳನ್ನು ಗಳಿಸುವ ಅದರ ಮಹೋನ್ನತ ಗುರಿಯ ದೃಷ್ಟಿಯಿಂದಷ್ಟೇ ಅದನ್ನಿಲ್ಲಿ ಎತ್ತಿಕೊಳ್ಳಲಾಗಿದೆ

ಜೀವನವೆಚ್ಚವು ಏರುತಿದ್ದು ಕೊರತೆಯೇ ಹೆಚ್ಚುತ್ತಿದೆಯೆಂದು ಗುಲ್ಲೆಬ್ಬಿಸುವ ಈ ಕಾಲದಲ್ಲಿ ಮಿತವ್ಯಯದ—ಉಳಿತಾಯದ ಉಪದೇಶದ ಮಾತನ್ನು ಕೇಳಿದರೆ ಮೂಗು ಮುರಿಯುವವರು ಅನೇಕರಿರಬಹುದು- ಆದರೆ ನಿರ್ವಿಕಾರ ಚಿತ್ತದಿಂದ ವಿವೇಚಿಸುವುದಾದರೆ ನಮ್ಮಲ್ಲನೇಕರ ಕೊರತೆಗೆ ಆದಾಯ ಕಡಿಮೆಯಾಗಿರುವುದೊಂದೇ ಕಾರಣವಲ್ಲ, ಮಿತವ್ಯಯ ಪದ್ಧತಿಯನ್ನು ಅಚರಿಸದಿರುವುದೂ ಒಂದು ಕಾರಣವೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ವೆಚ್ಚವನ್ನು ಹೆಚ್ಚಿಸುವ ಹಾಗೂ ಜೀವನಕ್ಕೆ ಅವಶ್ಯಕವಲ್ಲದ ಹವ್ಯಾಸಗಳಿಗೆ ಅಂಟಿಕೊಂಡು, ಆದಾಯವನ್ನು ಹೆಚ್ಚಿಸಿಕೊಂಡೇ ತೃಪ್ತಿ ಮತ್ತು ಏಳಿಗೆಯನ್ನು ಸಾಧಿಸಬಹುದೆಂದು ನಂಬುವವರೇ ಹೆಚ್ಚು ಏನಾದರೂ ವೆಚ್ಚವನ್ನು ಇಳಿಸಿಕೊಳ್ಳುವ ಕುರಿತು ಯೋಚಿಸುವವರು ವಿರಳ. ಕೂಲಿಕಾರರು ತಮ್ಮ ಜೀವನದಲ್ಲಿ ಕೊರತೆಯೆಂದು ಕೊರಗಿದರೆ ಅವರ ಇಮ್ಮಡಿ ಮುಮ್ಮಡಿ ಆದಾಯವುಳ್ಳವರದು ಇನ್ನೂ ಹೆಚ್ಚಿನ ಗುಲ್ಲು. ದಿನಕ್ಕೆ ಸಂಸಾರಿ ತಲಾ ಒಂದು ಸೇರಕ್ಕಿಯಂತೆಯೂ ಕೂಲಿ ಬೀಳದ ಒಕ್ಕಲಿಗನ ಕುಟುಂಬವು ಕೊರತೆಯೆಂದು ಮರುಗುವುದಾದರೆ ನೂರಾರು ಮುಡಿ ಅಕ್ಕಿ ಹುಟ್ಟುವಳಿಯಿರುವ ಭೂಮಾಲಕರಲ್ಲೂ ಕೊರತೆಯನ್ನು ಅನುಭವಿಸುವವರು ಅನೇಕರಿದ್ದಾರೆ.

ಹೀಗೆ ಆದಾಯವನ್ನೇ ಹೊಂದಿರದ ಈ ಕೊರತೆಯು ಆದಾಯವನ್ನು ಹೆಚ್ಚಿಸಿಕೊಳ್ಳುವುದರಿಂದ ನೀಗಲ್ಪಡಬಹುದೆಂದು ನಂಬುವುದು ವ್ಯರ್ಥವೆನ್ನುವುದು ಸ್ಪಷ್ಟವಿದೆ ಆದರೆ ನಮ್ಮ ಶಾಂತಿ—ಸಮಾಧಾನ ಹಾಗೂ ಏಳಿಗೆಯ ಸಾಧನೆಗಾಗಿ ನಾವು ಅವಶ್ಯವಾಗಿ ಅನುಸರಿಸಬೇಕಾದ ಮಾರ್ಗಗಳಲ್ಲಿ ಮಿತವ್ಯಯ ಪದ್ಧತಿಯೂ ಒಂದು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ ಈ ಮಾರ್ಗವನ್ನನುಸರಿಸದೆ ಆದಾಯವು ಎಷ್ಟು ಹೆಚ್ಚಿದರೂ ಪ್ರಯೋಜನವಿಲ್ಲ ಇದರ ಅಭಾವದಿಂದಲೇ ಬಹುಮಟ್ಟಿಗೆ ನಮ್ಮ ಸಮಾಜವು ಆರ್ಥಿಕ ಹೇಜಾಟವನ್ನನುಭವಿಸುತ್ತಿದೆಯೆಂದರೂ ಹೆಚ್ಚಾಗದು. ಎನ್ನುವಾಗ ಮಿತವ್ಯಯ—ಉಳಿತಾಯದ ಪರಿಣಾಮಕಾರೀ ಚಳುವಳಿಯು ನಡೆಯುವುದರಿಂದ ಎಷ್ಟರ ಮಟ್ಟಿಗೆ ಪ್ರಯೋಜನವಿರುವುದೆನ್ನುವುದು ಗೊತ್ತಾಗುತ್ತದೆ ಅದುದರಿಂದ ಇಂಥ ಚಳುವಳಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ಮಾತ್ರವಲ್ಲ ಪ್ರತಿಯೊಂದು ಗ್ರಾಮದ ಮಟ್ಟದಲ್ಲೂ ಆಚರಿಸಬೇಕೆಂದು ಸೂಚಿಸುವುದೇನೂ ಅನುಚಿತವಾಗಲಾರದು. ಇಂಥ ಪ್ರವೃತ್ತಿಗೆ ಜನತೆಯನ್ನು ಪ್ರೇರೇಪಿಸುವಲ್ಲಿ—ಅದರ ಪ್ರಯೋಜನವನ್ನು ಮಂದಟ್ಟು ಮಾಡಿಸುವಲ್ಲಿ ದೇಶ—ಸಮಾಜದ ಹಿತಚಿಂತಕರು ಹಾಗೂ ಪತ್ರಿಕೆಗಳೂ ಯತ್ನವೆಸಗುವುದ ಅತೀ-ಅವಶ್ಯ. ಪರಿಣಾಮವು ಇಚ್ಛಿತ ಪ್ರಮಾಣದಲ್ಲಿ ಆಗದಿದ್ದರೂ, ಅದರಲ್ಲಿಯೂ ಎಲ್ಲರೂ ಉಳಿತಾಯವನ್ನು ಸಾಧಿಸಿ ಯೋಜನೆಯಲ್ಲಿ ತೊಡಗಿಸಲಾಗದಿದ್ದರೂ ಅನೇಕರು ಕೊರತೆಯನ್ನು ತಂಬಿಕೊಳ್ಳುವಂತಾಗುವುದರಿಂದ ಈ ದಿಶೆಯಲ್ಲಿ ಸಲ್ಲಿಸಿದ ಸೇವೆಯು ಸಾರ್ಥಕವಾಗುವುದು

ನಮ್ಮೆಲ್ಲರ ಕಲ್ಯಾಣಕ್ಕಾಗಿ ರಾಷ್ಟ್ರಪಿತ ಗಾಂಧೀಜಿಯವರು ತೋರಿಸಿಕೊಟ್ಟ ಮಾರ್ಗಗಳಲ್ಲಿ ನಿಯಮ ಮತ್ತು ಸಂಯಮ ಪಾಲನೆಯ ಮುಖ್ಯವಾದುದೆಂಬುದನ್ನು ಅವರ ಅನುಯಾಯಿಗಳೇ ಮರೆತು ವರ್ತಿಸುವುದಾದರೆ ಅವರು ಆ ಕಲ್ಯಾಣದ ಕುರಿತು ಹೇಳುವುದೆಲ್ಲಾ ವ್ಯರ್ಥವೆಂದು ಹೇಳಲಡ್ಡಿಯಿಲ್ಲ ಮಿತವ್ಯಯ ಹಾಗೂ ಉಳಿತಾಯವನ್ನು ಸಾಧಿಸಲು ನಮಗೆ ಬೇಕಾದ ಸಾಧನವೆಂದರೆ, ನಿಯಮ ಮತ್ತು ಸಂಯಮಗಳ ಪಾಲನೆಯೇ. ಕೆಲವರಲ್ಲಿ ವಿಲಾಸದಲ್ಲಿಯೂ ಇನ್ನಿತರ ವರ್ತನೆಗಳಲ್ಲಿ ನೀತಿ ನಿಯಮಗಳಿಗೊಳ ಪಡದ ಜೀವನವೇ ನಮ್ಮ ಇಂದಿನ ನಾಗರಿಕತೆಗೆ ಭೂಷಣವೋ ಎಂಬಂತೆ ಕಾಣತ್ತಿದೆ. ಇದೇ ನಮ್ಮ ಪ್ರಗತಿಯ ಮಾರ್ಗದಲ್ಲಿ ಬೇತಾಳದಂತೆ ಎಂತಿದೆ ಇದನ್ನು ಓಡಿಸದೇ ನಮ್ಮ ಮಾರ್ಗವು ಸುಗಮವಾಗದು. ಇದನ್ನು ಓಡಿಸುವ ಚಳವಳವು ದೇಶದಾದ್ಯಂತ ನಡೆದು ಪ್ರತಿಯೋರ್ವ ಪ್ರಜೆಯ ಮೇಲೆಯೂ ಪರಿಣಾಮ ಬೀರಬೇಕಾಗಿದೆ ಹಾಗಾದರೆ ನಾವು ರಾಷ್ಟ್ರಪಿತನ ಒಂದು ಉಪದೇಶವನ್ನು ಆಚರಿಸಿದಂತಾಗುವುದು ನಮ್ಮ ಏಳಿಗೆಯೂ ಸರಕಾರ ದೊಡನೆ ಸಹಕರಿಸುವ ಕಾರ್ಯವೂ ಇದರಿಂದಲೇ ಆಗುವುದು.

ದುರ್ವ್ಯಯವನ್ನನುಸರಿಸಿ ದಿವಾಳಿ ತೆಗೆದವರನ್ನು ಮಿತವ್ಯಯವನ್ನನುಸರಿಸಿಯೇ ಏಳಿಗೆ ಸಾಧಿಸಿದವರನ್ನು ಸಮಾಜದಲ್ಲಿ ನಾವು ನೋಡಬಹುದು. ಆದರೂ ಆದರ ರಹಸ್ಯವನ್ನರಿತು ನಮ್ಮ ನೀತಿಯನ್ನು ನಿಯಂತ್ರಿಸಿಕೊಳ್ಳಲು ನಾವು ಮುಂದಾಗುವುದಿಲ್ಲ ಕುಟುಂಬದ ನಿರ್ವಾಹವು ಅತಿ ಕಷ್ಟದಿಂದ ನಡೆಯುತಿದ್ದರೂ ಒಬ್ಬೊಬ್ಬ ವ್ಯಕ್ತಿಯು ಜಾ, ಬೀಡಿ ಇತ್ಯಾದಿಗಾಗಿ ವ್ಯಯಿಸುವ ಹಣದ ಒಟ್ಟು ಮೊತ್ತವು ಕುಟುಂಬದ ಪೋಷಣೆಯ ವೆಚ್ಚವನ್ನು ಮೀರಬಹುದು ಅಂದರೆ ಕುಟುಂಬದ ಅವಶ್ಯಕ ಖರ್ಚುಗಳಿಗಿಂತ ಅನಾವಶ್ಯಕ ಖರ್ಚುಗಳೇ ಹೆಚ್ಚೆಂದು ಹೇಳಬಹುದು. ಈ ಅನಾವಶ್ಯಕ ಖರ್ಚುಗಳನ್ನು ಅದಷ್ಟು ಕಡಿಮೆ ಮಾಡಿದರೆ ಜೀವನಕ್ಕೆ ಹಾನಿಯೇನು ಆಗುವುದಿಲ್ಲ; ಬದಲು ಶಾಂತಿಯೇ ದೊರೆಯುತ್ತದೆ ಈ ತೆರನಾದ ಕೃತಕ ಖರ್ಚುಗಳ ಹವ್ಯಾಸಗಳು ಸಮಾಜದಲ್ಲಿ ಸರ್ವವ್ಯಾಪಿಯಾದುದು ಕೆಲವೇ ದಶಕಗಳಿಂದೀಚೆಗೆ ಎನ್ನಬಹುದು. ಮದ್ಯಪಾನ ಪದ್ಧತಿಯು ಮೊದಲಿಂದಲೇ ಇದ್ದರೂ ಬಹುಮಟ್ಟಿಗೆ ಅದನ್ನು ಕುಡಿಯುವ ವರ್ಗವೇ ಬೇರೆಯಿತ್ತು. ಅವರಲ್ಲಿಯೂ ಕುಡಿಯುವುದಕ್ಕೆ ಹೊತ್ತು, ಮಿತಿಯೂ ಕೆಲಮಟ್ಟಿಗೆ ಇತ್ತು. ಈಗಲಾದರೆ ಯಾವುದಕ್ಕೂ ಯಾವ ಅಡೆತಡೆಯೂ ಇಲ್ಲದಂತಾಗಿದೆ ಪರಿಸ್ಥಿತಿಯು ಇನ್ನೂ ಹದಗೆಡುತ್ತಲೇ ಇದೆ—ಹಳ್ಳಿಗಳಲ್ಲಿ ಸರಳ ಜೀವನ ಸಾಗುವುದೆಂಬ ಮಾತೂ ಹುಸಿಯಾಗಹತ್ತಿದೆ

ಸಮಾಜದಲ್ಲಿ ಏಳಿಗೆಗೆ ಪ್ರತಿಕೂಲ ಪರಿಸ್ಥಿತಿಯುಂಟಾದಾಗ ಅದನ್ನು ತಿದ್ದುವ ಕಾರ್ಯಕ್ರಮಗಳೂ ಸಮಾಜದ ಒಳಿತಿನ ದಿಶೆಯಿಂದಲೇ ಕೈಗೆತ್ತಿಕೊಂಡರೆ ಹೆಚ್ಚಿನ ಫಲವು ದೊರೆಯಬಹುದೆಂದು ತೋರುತ್ತದೆ. ಯಾಕೆಂದರೆ ಯಾವುದೇ ರೀತಿಯ ಬಲಪ್ರಯೋಗವೆಸಗುವುದರಿಂದ ಒಳ್ಳೆಯ ಪರಿಣಾಮ ದೊರೆಯುವುದು ಕಷ್ಟವೆಂಬುದನ್ನು ಸಾನಸಿರೋಧ ಕಾಯದೆಯು ನಮಗೆ ಕಲಿಸಿದೆ. ಆದುದರಿಂದ 'ನೀವು ಇದನ್ನು ಮಾಡಬಾರದು; ಇದನ್ನು ಮಾಡಬೇಕು' ಎಂದು ಸರಕಾರ ಅಥವಾ ಮುಖಂಡರು ನಿರ್ದೇಶಿಸುವುದಕ್ಕಿಂತ 'ನಾವು ಇದನ್ನು ಮಾಡಬಾರದು, ಇದನ್ನು ಮಾಡಬೇಕು' ಎಂದು ಆಯಾ

(ಮುಂದೆ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ಬಂಧನದಿಂದ ಬಿಡುಗಡೆ

ಶ್ರೀ ಯು. ಪದ್ಮನಾಭ ಭಟ್.

ಶಂಕರನು ತನ್ನ ತಾಯಿಯ ನೀತಿಯು ಹಾಳೆಂದು ಒಪ್ಪಿಕೊಳ್ಳಲು ತಯಾರಿದ್ದಿಲ್ಲ. ಹಾಗೆ ಒಪ್ಪಿಕೊಳ್ಳುವಷ್ಟು ಪ್ರಾಯ ವೂ ಆತನಿಗಾಗಿರಲಿಲ್ಲ. ಗೆಳೆಯರೊಡನೆ ಆಡಲು ಹೋದಾಗ ಊರಿನವರಾಡುವ ನಿಂದೆಯ ಮಾತುಗಳನ್ನು ಅರ್ಥಮಾಡಿಕೊಳ್ಳಲು ಶಕ್ತನಾಗಿದ್ದನು. ಅದನ್ನು ತಾಯಿಗೆ ತಿಳಿಸಿದಾಗ, ತಾಯಿ, ಭಾನುಮತಿಯು, ದೇವರೊಡನೆ "ತನ್ನನ್ನು ಬೇಗ ಕರೆಸಿಕೋ" ಎಂದು ಬೇಡುತ್ತಿದ್ದಳೇ ವಿನಹ ಬೇರೇನೂ ಅವಳಿಂದ ಸಾಗುತಿದ್ದಿಲ್ಲ. ಊರ ಬಾಯಿ ಕಟ್ಟಿಸಲು ಸಾಧ್ಯವೇ?

ಆದರೆ ಈಗ, ಆತ ನೊದಲಿನ ಶಂಕರನಲ್ಲ. ಬಳೆದು ಯುವಕನಾಗಿದ್ದಾನೆ! ಶೈಶವದ ಹೊಸ್ತಿಲನ್ನು ದಾಟಿ ಯೌವನದ ಗಾಡಿಯನ್ನು ಧರಿಸಿ ಸೌಂದರ್ಯ ಶಾಲಿಯಾಗಿದ್ದಾನೆ. ಉತ್ಸಾಹವೇ ಅವನ ಸ್ವಭಾವ ಗುಣವಾಗಿಹೋಗಿದೆ! ಆದರೆ... ಅವನ. ಆ ದಿನವನ್ನು ಮರೆತಿರಲಿಲ್ಲ! .... ಆ ದಿನ, ಅವನ ಬಾಳಿನಲ್ಲೇ ಮರೆಯಲಾಗದ ದಿನ! ತನ್ನ ಇಡೀ ಜೀವಮಾನವನ್ನೇ ಶಟ್ಟನೆ ಬದಲಾಯಿಸಿದ ಮಳೆಗಾಲದ ಬೆಳಗಿನ ಆ ಹೊತ್ತು!.... ಇಂದಿಗೂ ಅವನ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ಉಳಿದು ಹೋಗಿದೆ!....

ಶಂಕರನು ಚಿಕ್ಕವನಿರುವಾಗ....

ತಾಯಿ ಭಾನುಮತಿಯು ಆ ಹಳ್ಳಿಯ ಜೋಪಡಿಯಲ್ಲಿ ಮಗನೊಡಗೂಡಿ ಜೀವಿಸುತಿದ್ದಳು. ಬಾಹ್ಯದೃಷ್ಟಿಯಿಂದ ನೀಚವೆಂದು ತೆಗಳುತಿದ್ದ ಆ ಊರ ಹತ್ತು ಜನರ ಬೆಂಬಲದಿಂದ ಅವಳ ಜೀವನ ಸಾಗುತ್ತಿತ್ತು. ಅವಳ ವೃತ್ತಿಯೆನೋ ಹೇಯ, ಆದರೆ ಅದಲ್ಲದೆ ಅವಳಿಗೆ ಬೇರೆ ಗತಿಯಿರಲಿಲ್ಲ! ಸಮಾಜ ಹಾಗೆಮಾಡಿಬಿಟ್ಟಿದೆ ಅವಳನ್ನು!

ಒಂದು ರಾತ್ರಿ ಅಪರಿಚಿತ, ಅಲ್ಲ, ಒಂಬು ಗಳಿಗೆಯ ತೀರ ಪರಿಚಯಸ್ಥ ಗಿರಾಕಿಯನ್ನು ಹೊರಕಳುಹಿಸಿ ಮನೆಯಂಗಳದಲ್ಲಿ ನಿಂತಿದ್ದಳು. ಇಡೀ ಜಗತ್ತನ್ನೇ ನಿಶ್ಯಬ್ದವಾಗಿಸಿ, ತನ್ನ ಕರಿಯ ಸೀರೆಯನ್ನು ಹೊದೆಸಿದ್ದ ಆಕಾಶ..., ಒಳಗೆ ನಿದ್ರಾಲೋಲನಾಗಿ ಮಲಗಿ ಗೊರಕೆ ಹೊಡೆಯುತಿದ್ದ ಶಂಕರುವಿನ ಭವಿತವ್ಯವನ್ನು ನೆನೆದು ಜೀವನದ ಕಹಿಯನ್ನು ಸಹಿಸದೆ ಒಬ್ಬೊಂಟಿಗಳಾಗಿ ಅಂಗಳದಲ್ಲಿ ನಿಂತು ದುಃಖಿಸುತಿದ್ದ ಆಕಾಶ.... ಅದೇ ಅವಳಿಗೆ ಕೊನೆಗಾಲವಾಗಿತ್ತು! ಹಲವಾರು ಆಲೋಚನೆಗಳು ಒಂದರ ಹಿಂದೊಂದು ಅವಳ ಮನಸ್ಸಿನಲ್ಲಿ ತೇಲಿಹೋದುವು. ತನ್ನ ಬಾಲ್ಯದ ನೆನಪು ಬಂತು. ತಂದೆ ತಾಯಿಗಳು. ಶ್ರೀಮಂತರಿದ್ದರು. ಚಿಕ್ಕ ಪ್ರಾಯದಲ್ಲಿಯೇ ಭಾನುಮತಿಯನ್ನು ಮದುವೆಮಾಡಿ ಪತಿಗೃಹಕ್ಕೆ ಕಳುಹಿಸಿದ್ದರು. ಗಂಡನ ಮನೆಯಲ್ಲಿಯೂ ಅವಳಿಗೇನೂ ಕೊರತೆಯಿರಲಿಲ್ಲ. ಆದರೆ ಕೆಲವು ವರ್ಷಗಳಲ್ಲಿಯೇ ಗಂಡನು ಪರಲೋಕವಾಸಿಯಾದನು. ಆಗವಳಿಗೆ ಎರಡೇ ತಿಂಗಳು!

ಬಸುರಿಯೆಂದರಿಯದೆ ಕುಲೀನರಿಂದ ಗಂಡನ ಮನೆಯವರು ಅಲ್ಲಿಯೇ ಸಂನ್ಯಾಸ ದೀಕ್ಷೆಯನ್ನು ಕೊಡಿಸಿಬಿಟ್ಟರು! ಇದು ವಿಧಿಯ ಕೈವಾಡವೋ ಆಕೆಯ ದುರದೃಷ್ಟವೋ ತಿಳಿಯದು. ಪಾಪ! ಅವಳೇನು ಮಾಡಿಯಾಳು?

ಕೆಲವು ತಿಂಗಳುಗಳಲ್ಲಿಯೇ ಭಾನುಮತಿ ಶಂಕರನನ್ನು ಪಡೆದಳು. ಸಮಾಜದ ವಕ್ರದೃಷ್ಟಿ ಅವಳ ಮೇಲೆ ಬಿತ್ತು! ಆ ದೃಷ್ಟಿಯೇ ಅವಳ ಸುಖ ಜೀವನದ ಪಾಲಿಗೆ ರುದ್ರನ ಹಣೆಗಣ್ಣಾಯಿತು! ಮಾವನವರು ಕ್ರುದ್ಧರಾದರು. ಅತ್ತೆಯವರು ಸಿಡಿಯುವ ಸಿಡಿಲಾದರು! "ಎಂದೂ ನಮ್ಮ ಕುಲದಲ್ಲಿ ಹೀಗಾದುದಿಲ್ಲ! ಈ ಹಾ....ಡೆ...." ಎಂದು ಮುಂತಾಗಿ ಕಟು ಮಾತುಗಳಿಂದ ಮನೆಯಿಂದ ಹೊರಡಿಸಿದರು.

ಭಾನುಮತಿ ಅನಾಥೆಯಾದಳು ತನಗೆ ಪತಿಯ ಮೇಲೂ ಪತಿಗೆ ತನ್ನಮೇಲೂ ಇರುವ ಪ್ರೀತಿ, ವಿಶ್ವಾಸ, ಅನ್ಯೋನ್ಯ ಭಾವಗಳನ್ನು ನೆನೆನೆನೆದು ಅತ್ತಳು. ದಯೆಯಿಲ್ಲದ ವಿಧಿಯನ್ನು ಶಪಿಸುವಳು. ಕುರುಡು. ಸಮಾಜವನ್ನು ಜರೆದಳು! ದಿಕ್ಕುಗೆಟ್ಟು ಪುಟ್ಟ ಮಗುವನ್ನೆತ್ತಿಕೊಂಡು ಸಿಕ್ಕುಸಿಕ್ಕಲ್ಲಿ ಅಲೆದಳು. ಮಳೆಚಳಿಯೆನ್ನದೆ ಮರದಡಿಯಲ್ಲಿಯೇ ಬಿಡಾರ ಹೂಡಿದಳು. ಆದರೆ ಒಡಲಿನ ಹಸಿವಿನ ಕಿಚ್ಚನ್ನಾರಿಸಲು ಅವಳಿಗೆ ಆಗಲಿಲ್ಲ. ಆತ್ಮಹತ್ಯೆಗೆ ಹವಣಿಸಿ ಕೊನೆಗೆ ಅದಕ್ಕೆ ಅಂಜಿದಳು. ಆ ಮೇಲೆ .. ಆ ಮೇಲೆ ಅವಳಿಗುಳಿದುದು ಒಂದೇ ದಾರಿ!

ಕೆಲವು ದಿನಗಳಲ್ಲಿಯೇ ಅವಳ ಮನಸ್ಸು ಕಲ್ಲಾಯಿತು. ಸಮಾಜದಲ್ಲಿ ವ್ಯಕ್ತಿಗೆ ಗೌರವವಿಲ್ಲ; ಕೇವಲ ಹಣಕ್ಕೆ ಮಾತ್ರ ಮಾನ್ಯತೆ ಎಂಬುದನ್ನು ಮನಗಂಡಳು. ಶಂಕರನ ಭವಿಷ್ಯಕ್ಕಾದರೂ ತಾನು ಬಾಳಬೇಕು ಎಂದು ಬಗೆದಳು.

ಇವೆಲ್ಲವುಗಳ ಸ್ಮರಣೆ ಅವಳ ಮನಸ್ಸಿನಲ್ಲಿಸುಳಿದುಹೋಯಿತು. ಹರಾತ್ತಾಗಿ ಶಂಕರನು ಒಳಗಿನಿಂದ ಕನವರಿಸಿದನು ಭಾವನೆಯ ಲೋಕದಿಂದ ಭಾನುಮತಿ ಎಚ್ಚತ್ತಳು. ಮನೆಯತ್ತ ತಿರುಗಿ. ನಾಲ್ಕುಹೆಜ್ಜೆಯಿಟ್ಟಿದ್ದಳಷ್ಟೆ! ಏನೋ ಒಂದು ವೈದುಪದಾರ್ಥವನ್ನು ಮೆಟ್ಟಿ ಹಿಂದಕ್ಕೆ ಹಾರಿದಳು!

ಹ್ಹಾಂ! ಏನದು?.....ರಾತ್ರಿಯ ತಂಗಾಳಿಗೆ ಬೆಳಕಿನಲ್ಲಿ ಅಸ್ಪಷ್ಟವಾಗಿ ತೋರುತಿತ್ತು— ಭೀಕರವಾಗಿ ಹೆಡೆಬಿಚ್ಚಿದ ಕಾಳಸರ್ಪ! ಬುಸ್.....ಒಂದೇ ಹೊಡೆತ.....“ಅಯ್ಯೋ!.....ಸತ್ತೆ!”..... ಭಾನುಮತಿ ಅಲ್ಲಿಯೇ ಕುಸಿದು ಹೋದಳು!

ಹಾವು ತನ್ನ ಕೆಲಸವಾಯಿತು ಎಂಬ ತೃಪ್ತಿಯಿಂದೆಂಬಂತೆ ಮೆಲ್ಲನೆ ಹೆಡೆ ಮಡಚಿ, ಸ್ಥಾನವಾಗಿ ಅಂಗಳದ ಅಂಚಿನಿಂದ ಹರಿದು ಹೋಯಿತು.

ಭಾನುಮತಿ ಜೀತರಿಸಿಕೊಂಡಿದ್ದಳು. ಕಾಲಿನಿಂದ ರಕ್ತ ಸುರಿಯುತಿತ್ತು. ಕಣ್ಣು ನೀರಿನಿಂದ ತುಂಬಿ ಜಗತ್ತು ಕಾಣದಾಗಿತ್ತು. ಆಕೆಗೆ ಈ ಹಿಂದೆಯೇ ಜಗತ್ತು ಶೂನ್ಯವೆನಿಸಿತ್ತು; ಆದರೆ ಈಗ, ಮತ್ತೊಂದು ರೀತಿಯಿಂದ ಶೂನ್ಯವಾಯಿತು. ಎಡವುತ್ತ ಒಳಬಂದು ಮಂಚದ ಮೇಲೆ ಮಲಗಿದಳು.....ಸಂಕಟದಿಂದ ನರಳುವಿಕೆ ಮಾತ್ರ ಸ್ವಲ್ಪಹೊತ್ತು ಕೇಳಿಬರುತಿತ್ತು! ...

ಎಲ್ಲವೂ ಮುಗಿಯಿತು!.... ಭುಜಂಗ ಲಗ್ನ!

ಬೆಳಗಾಯಿತು. ಮಳೆಗಾಲವಾಗಿದ್ದರೂ ನೋಡುವಿಲ್ಲದ ಕಾರಣ ಸೂರ್ಯನು ಪ್ರಖರನಾಗಿಯೇ ಇದ್ದನು. ಜಗತ್ತು ಎಚ್ಚರಗೊಂಡಿತು.

ಶಂಕರು ಹಾಸಿಗೆಯಿಂದೆದ್ದು ನೆಟ್ಟಗೆ ತಾಯಿಯ ಬಳಿಗೋಡಿದನು. ನಿತ್ಯವೂ ಬೇಗನೆ ಎದ್ದು ಮನೆಗೆಲಸಗಳನ್ನು ಮುಗಿಸಿ ತನ್ನನ್ನು ಬಂದು ಎಬ್ಬಿಸುತ್ತಿದ್ದ ತಾಯಿ ಇಂದೇಕೆ ಬರಲಿಲ್ಲ ಎಂಬುದೇ ಆತನಿಗೆ ಆಶ್ಚರ್ಯ! ತಾಯಿಯ ಬಳಿಗೋಡಿ, ಇನ್ನೂ ಅವಳು ಮಂಚದಲ್ಲಿ ಮಲಗಿರುವುದನ್ನ ಕಂಡು, "ಅಮ್ಮಾ! ಏಳು ಬೆಳಗಾಯಿತು ಇವತ್ತು ನಿನಗಂತ ನಾನೇ ಜಾಣ!" ಎಂದು ಕೂಗಿದನು! ಆದರೆ ಮಲಗಿದ್ದ ತಾಯಿ ಏಳಲೇ ಇಲ್ಲ. "ಅಮ್ಮಾ! ಏಳು. ಸೂರ್ಯನೆ ಬಿಸಿಲು ಕಣ್ಣು ಕುಕ್ಕುವಷ್ಟು ಬಿಸಿಯಾಗಿದೆ" ಎಂದು ತಾಯಿಯ ಕಣ್ಣಿನ ಎವೆಗಳನ್ನು ಬೆರಳುಗಳಿಂದ ತೆರೆಯಿಸಿದನು. ಆದರೆ ತಾಯಿಯ ಅರೆತೆರೆದ ಕಾಂತಿಹೀನವಾದ ಕಣ್ಣುಗಳು ಶಂಕರನನ್ನು ನೋಡಲೇ ಇಲ್ಲ. ಮೈ ಅಲುಗಿಸಿದನು ಇಡೀ ದೇಹವೇ ಕಟ್ಟಿಗೆಯಂತೆ ಅಲುಗಿತು! ಗಾಬರಿಗೊಂಡ ಶಂಕರನು, "ಜ್ವರಬಂದಿದೆಯೇನಮ್ಮಾ" ಎಂದು ಹಣೆಮುಟ್ಟಿ ನೋಡಿದನು. ಇಲ್ಲ: ದೇಹ ತಣ್ಣಗಾಗಿತ್ತು! "ತಣ್ಣಗಾಗಿದೆಯಲ್ಲ! ಶೀತಜ್ವರವೇನಮ್ಮಾ?" ಎಂದು ಕೇಳಿದನು! ಮಾತೇ ಇಲ್ಲ. ಬೇಸರಗೊಂಡು ಶಂಕರು ಗಟ್ಟಿಯಾಗಿ ಹೊರಳಿಸಿದನು.. ತಾಯಿ ಏಳಲಿಲ್ಲ- ಬದಲು. ಹೊರಳಿಸಿದ ಭರಕ್ಕೆ ಶವವು ಮಂಚದಿಂದ ಕೆಳಗೆ ಬಿತ್ತು!

ಆ ದಿನದ ಆ ಬೆಳಗು; ತನ್ನ ತಾಯಿಯನ್ನೇ ಕಳೆದುಕೊಂಡು ಅನಾಥನಾದ ಆ ಬೆಳಗು; ಇಡೀ ಪ್ರಪಂಚದಲ್ಲಿ ತನಗೆ ಸ್ಥಾನವಿಲ್ಲ, ತನ್ನನ್ನು ಪ್ರೀತಿಸುವವರಿಲ್ಲ ಎಂಬ ಅರಿವುಂಟಾಗುವಂತೆ ಮಾಡಿದ ಆ ಬೆಳಗು; ತನ್ನ ತಾಯಿಯನ್ನೇ ಮಣ್ಣಿನಲ್ಲಿ ಹುಗಿಯುವಷ್ಟು ಕ್ರೂರವಾಗಿದೆ ಈ ಜಗತ್ತು ಎಂದು ತಿಳಿದುಬಂದ ಆ ಬೆಳಗು— ಇಂದಿಗೂ ಶಂಕರನ ಮನದೆರೆಯಿಂದ ಮಾಯವಾಗಿಲ್ಲ. ಮಾಯವಾಗುವಂತೆಯೂ ಇಲ್ಲ!

ಕಾಡಿನಲ್ಲಿಯಾದರೂ ದಾರಿಯ ಬಳಿಯಲ್ಲಿ ಯಾರೊಬ್ಬರ ಸಹಾಯ ಸಹಕಾರಗಳಿಲ್ಲದೆ ಬೆಳೆದು ದಾರಿಗರಿಗೆ ಸಣ್ಣ—ನೆಳಲುಗಳನ್ನೀಯುವ ಜೊತೆ ವೃಕ್ಷದಂತೆ ಶಂಕರನು ಅಲ್ಲಿ ಇಲ್ಲಿ ಬಳೆದನು. ಈಗ ತನ್ನ ಪೊಟ್ಟೆಗೆ ತಾನೇ ಸಂಪಾದಿಸಿಕೊಳ್ಳಲು ಆತನು ಶಕ್ತನಾಗಿದ್ದಾನೆ,

ನಾಗಪುರದ ಎರಡು ಕತ್ತಿಯ ಗಿಣಿಗಳ ಮಾಲಿಕರಾದ ಮೋಹನರಾಯರನ್ನು ಶಂಕರನು ಮರೆಹೋದನು. ಶಂಕರುವಿನ ಆಕರ್ಷಕ ವ್ಯಕ್ತಿತ್ವ, ಆತನ ನಂಬುತೆ, ವಿನಯಗುಣ ರಾಯರಿಗೆ ಹಿಡಿಸಿಹೋದುವು. ಅಂ ನಿಂದ ಶಂಕರನು ಮೋಹನರಾಯರಲ್ಲಿಯೇ ಲೆಕ್ಕಪತ್ರಗಳನ್ನು ನೋಡಿಕೊಂಡು ತನ್ನಷ್ಟಕ್ಕೆ ತಾನಿದ್ದನು.

ಮೋಹನ ರಾಯರೆಂದರೆ ಆ ಪ್ರದೇಶದಲ್ಲಿ ಎಲ್ಲರ ಮನೆಮಾತಾಗಿದೆ. ಹೇರಳ ಸಂಪಾದನೆ ಅವರಿಗಿತ್ತು. ಅಲ್ಲದೆ ಅಗರ್ಭ ಶ್ರೀಮಂತರಾಗಿದ್ದರು. ಅವರ ಗೌರವ ಶ್ರೀಮಂತಿಕೆ ತಕ್ಕಂತೆಯೇ ಮನೆಯಲ್ಲಿ ಅನೇಕ ಕೆಲಸದವರಿದ್ದರು. ಅವರ ಪತ್ನಿ ಕಮಲಮ್ಮ, ಕೂಡಾ ಅಗರ್ಭ ಶ್ರೀಮಂತರ ಮನೆಯವಳು. ಇಬ್ಬರೂ ಶ್ರೀಮಂತಿಕೆಯನ್ನು ಮಾತ್ರ ಬಲ್ಲವರಾಗಿದ್ದರು.

ಅವರಿಗೆ ಇಬ್ಬರು ಮಕ್ಕಳು—ರಾಧೆ ಮತ್ತು ರಾಜೀವಿ ಇಬ್ಬರೂ ತಂದೆತಾಯಿಗಳ ಸಂಸರ್ಗ ಹೆಚ್ಚು ಪಡೆಯದ ತರುಣಿಯರು. ಮೋಹನ ರಾಯರಿಗಾದರೋ— ಗಿರಣಿಯೊಡೆ ಕಮಲಮ್ಮನಿಗೂ ಸಮಯ ಕಳೆಯಲು ಕೆಲಸವಿಲ್ಲದಿರಲಿಲ್ಲ. ರಾಧೆಯು ಕಾಲೇಜಿಗೆ ಹೋಗುತಿದ್ದಳು. ಕಾಲಗತಿ ಗನುಗುಣವಾಗಿ ಮೋಹನ ರಾಯರು ಅವಳ ಮದುವೆಯ ಬಗ್ಗೆ, "ಇಂಟರ್ ಮುಗಿಯಲಿ" ಎಂಬ ಉದಾಸೀನ ತಾಳಿದ್ದರು. 'ಬಾಲ್ಯ ವಿವಾಹದಿಂದ ಹೆಚ್ಚಾಗಿ ಸ್ತ್ರೀಯರ ಬಾಳ್ವೆ ಒಡೆದು ನ.ಚ್ಚನೂರಾಗುತಿದ್ದುದನ್ನು ನಾವು ಕಾಣುತಿದ್ದೇವೆ" ಎಂಬ ದೊಡ್ಡ ದೊಡ್ಡ ಮಾತುಗಳಿಂದ ಒಮ್ಮೊಮ್ಮೆ ಅವರು ಉದುದ್ದ ಭಾಷಣ

(೧೧ನೇ ಪುಟ ನೋಡಿರಿ)

ಝುಂಝುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ಮಿ. ನಿ. ಶೆಟ್ಟಿ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ.

ವಿವರವಾದ ಕಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಸಮಾಧಾನದ ನಿಡಿದುಸಿರು—

ನಾಗಾ ಜನರಿಗೆ ಪ್ರತ್ಯೇಕ ರಾಜ್ಯಸ್ಥಾಪನೆ.

ಭಾರತ ಸರಕಾರದ ತಲೆ ತಿನ್ನುತಿದ್ದ ಆಂತರಿಕ ಸಮಸ್ಯೆಗಳಲ್ಲಿ ನಾಗ ಜನರ ಸಮಸ್ಯೆಯೂ ಒಂದಾಗಿತ್ತು. ಅವರು ಸರಕಾರಕ್ಕೆ ವಿರುದ್ಧವಾದ ಕಾರ್ಯಾಚರಣೆಯಲ್ಲಿ ಮಗ್ನರಾಗಿ ದೇಶದ ಮುಂದಾಳುಗಳಿಗೆ ಒಂದು ದೊಡ್ಡ ಚಿಂತೆಯನ್ನು ಹುಟ್ಟಿಸುತಿದ್ದರು. ಆದರೆ, ಈ ನಾಗಾ ಜನರು ಸೌಮ್ಯ ವಿಧಾನವನ್ನೆನುಸರಿಸಿ, ಆದರೆ, ಒಂದು ಸಮ್ಮೇಳನವನ್ನು ಕರೆದು, ತಮ್ಮ ಕೆಲವೊಂದು ಬೇಡಿಕೆಗಳನ್ನು ಭಾರತ ಸರಕಾರವು ಮನ್ನಿಸಿದಲ್ಲಿ ತಾವು ಸುಮ್ಮನಿರುವುದಾಗಿ ನಿರ್ಧರಿಸಿ, ಪ್ರಧಾನಿ ನೆಹರೂರವರನ್ನು ಕಾಣಲು ಒಂಭತ್ತು ಜನರು ಪ್ರತಿನಿಧಿಗಳಾಗಿರುವ ನಿಯೋಗವೊಂದನ್ನು ರಚಿಸಿತು. ಈ ನಿಯೋಗವು ನವದೆಹಲಿಯಲ್ಲಿ ಪ್ರಧಾನಿಗಳನ್ನು ಬೇಟಿಯಾಗಿ, ತಮ್ಮ ಅಶಯಗಳನ್ನು ಕಾರ್ಯಗತಗೊಳಿಸುವ ಭರವಸೆಯನ್ನು ಪಡೆದಿದ್ದಾರೆ. ಉಭಯ ಪಕ್ಷಗಳೂ ತಂತಮ್ಮ ಆಶ್ವಾಸನೆಗಳಂತೆ ನಡೆದುಕೊಂಡಲ್ಲಿ, ಅಗಾಧ ಅಶಾಂತಿಯು ತವರು ಮನೆಯಾಗಿರುತ್ತಿರುವ ನಾಗಾನಾಡು ಶಾಂತಿಯಿಂದಿರುವುದು ಅಲ್ಲದೆ, ಅಸ್ಸಾಮು ರಾಜ್ಯದಿಂದ ಪ್ರತ್ಯೇಕವಾಗಿ, ರಾಷ್ಟ್ರಾಧ್ಯಕ್ಷರ ನೇರವಾದ ಆಳ್ವಿಕೆಯ ಒಂದು ಹೊಸ ವಿಭಾಗವಾಗಿ ಪರಿಣಾರಚಿಸಲ್ಪಡುವುದು

ಪ್ರಧಾನಿ ನೆಹರೂರವರ ಈ ನಿಯೋಗವನ್ನು ಸಪ್ಟಂಬರ ೨೧ನೆಯ ದಿನಾಂಕ ಕಂಡರು. ಅಗಸ್ಟ್ ತಿಂಗಳ ೨೨ ರಿಂದ ೨೦ನೆ ದಿನಾಂಕಗಳವರೆಗೆ ಕೋಹಿಮಾದಲ್ಲಿ ಸೇರಿದ್ದ ನಾಗರ ಸಮ್ಮೇಳನದಿಂದ ಈ ನಿಯೋಗವು ಆರಿಸಲ್ಪಟ್ಟಿದ. ಈ ನಿಯೋಗ ಪರಿಷತ್ತಿನ ಅಧ್ಯಕ್ಷರಾಗಿದ್ದ ಡಾ. ಇಂಗೊಂಗ್ಲಿ ಬಾ ಅಪೊರವರ ನೇತೃತ್ವದಲ್ಲಿದೆ.

ನಿಯೋಗದ ನೇತಾರರು ಕೋಹಿಮಾ ಪರಿಷತ್ತಿನಲ್ಲಿ ಸ್ವೀಕರಿಸಲಾದ ನಿರ್ಣಯಗಳ ಒಂದು ಪ್ರತಿಯನ್ನು ಪ್ರಧಾನಿಗಳಿಗೊಪ್ಪಿಸಿದರು. ಪ್ರಧಾನಿಯವರು ಭಾರತ ಸರಕಾರವು ನಾಗ ಜನರ ಹಿತದೃಷ್ಟಿಯಿಂದ ಕೊಡಬಹುದಾದ ಯಾವುದೇ ಸಲಹೆ ಸೂಚನೆಗಳನ್ನು ಭಾರತ ಸರಕಾರವು ಮನ್ನಿಸಲು ಸಿದ್ಧವಿದೆ ಎಂದು ತಾವು ಈ ಮೊದಲೇ ಹಲವು ಬಾರಿ ಸ್ಪಷ್ಟೀಕರಿಸಿರುವುದಾಗಿ ತಿಳಿಸಿದರು. ಆದರೆ, ನಾಗ ಜನರು ತಮ್ಮ ಸ್ವಾತಂತ್ರ್ಯದ ಜಾಡಿಗೆ ಅಂಟಿಕೊಂಡಿದ್ದು ಯಾವುದನ್ನೂ ಚರ್ಚಿಸಲು ಬಯಸಲಿಲ್ಲ. ಆದರೆ, ಕೋಹಿಮಾ ಪರಿಷತ್ತಿನಲ್ಲಿ ಸ್ವೀಕರಿಸಲಾದ ನಿರ್ಣಯಗಳಿಂದ ಈ ಪ್ರಶ್ನೆಯು ಈಗ ತಿಳಿಗೊಂಡುದಕ್ಕೆ ಪ್ರಧಾನಿ ನೆಹರೂ ತಮ್ಮ ತೃಪ್ತಿಯನ್ನೂ ಸಂತೋಷವನ್ನೂ ವ್ಯಕ್ತಪಡಿಸಿದರು.

ಪ್ರಧಾನಿ ನೆಹರೂರವರು ನಾಗಾಡಿನಲ್ಲಿ ನಡೆಯುತ್ತಿದ್ದ ಅಡೆತಡೆಗಳನ್ನೂ ಪೀಡೆಗಳನ್ನೂ ಕೊನೆಗೊಳಿಸುವ ಆವಶ್ಯಕತೆಯನ್ನು ಸ್ಪಷ್ಟಪಡಿಸಿದರು. ರಾಜ್ಯದಲ್ಲಿನ ಉಪದ್ರವಗಳೆಲ್ಲವನ್ನೂ ನಾಶಮಾಡಿ ಶಾಂತಿಸ್ಥಾಪನೆಗೆ ಪ್ರಯತ್ನಿಸುವುದಾಗಿ ನಿಶ್ಚಯಿಸಿದ ನಾಗ ಜನ ಪರಿಷತ್ತನ್ನು ಅಭಿನಂದಿಸಿದರು.

ನಾಗಗುಡ್ಡ ಜಿಲ್ಲೆ ಮತ್ತು ಚಿಯನ್ಸಿಂಗ್ ಗಡಿನಾಡನ್ನು ಒಂದು ಸೇರಿಸಿ ರಾಷ್ಟ್ರಾಧ್ಯಕ್ಷರ ನೇರವಾದ ಆಳಿಕೆಗೊಳಪಡುವ ಪ್ರತ್ಯೇಕ ಕ್ಷೇತ್ರವನ್ನಾಗಿ ರಚಿಸಬೇಕೆಂಬ ನಾಗ ಪರಿಷತ್ತಿನ ನಿರ್ಣಯವನ್ನು ಭಾರತ ಸರಕಾರದ ಪರವಾಗಿ ಪ್ರಧಾನಿ ನೆಹರೂ ಸ್ವೀಕರಿಸಿದರು. ಈ ವಿಧಾನವು ಭಾರತದ ವಿದೇಶ ಮಂತ್ರಿ ಶಾಖೆಯ ಅಡಿಯಲ್ಲಿ ರಾಷ್ಟ್ರಾಧ್ಯಕ್ಷರ ಪರವಾಗಿ ಅಸ್ಸಾಮದ ರಾಜ್ಯಪಾಲ ಮೇಲ್ವಿಚಾರಣೆಯಲ್ಲಿರುವುದು. ಈ ಬಗ್ಗೆ ಭಾರತದ ರಾಷ್ಟ್ರ ಘಟನೆಯಲ್ಲಿ ತಿದ್ದುಪಡಿಯನ್ನು ಮಾಡಬೇಕಾಗಿರುವುದರಿಂದ, ಸಂಸತ್ತಿನ ನವಂಬರ - ಡಿಸೆಂಬರದ ಅಧಿವೇಶನದ ವೇಳೆಗೆ ಇದನ್ನು ಆ ದಸ್ಟಾಕ್ಷರಿತವಾಗಿ ಕಾರ್ಯಾಚರಣೆ ಮಾಡುವ ಭರವಸೆಯನ್ನು ಪ್ರಧಾನಿಗಳು ನಾಗಾ ನಿಯೋಗಕ್ಕೆ ಇತ್ತರು. ಅಲ್ಲದೆ, ಸಂಸತ್ತನ. ಈ ಬಗೆ ಒಪ್ಪಿಗೆಯನ್ನು ಪಡೆದುಕೊಳ್ಳಲು ಯಾವ ಆತಂಕವೂ ಇರಲಾರದೆಂದು ಅಭಿಪ್ರಾಯಪಟ್ಟರು.

ತಮ್ಮ ನಿರ್ಣಯಗಳನ್ನು ಮನ್ನಿಸಿದುದಕ್ಕಾಗಿ ನಿಯೋಗದ ನೇತಾರರು ಪಂಡಿತ ನೆಹರೂರವರನ್ನು ಅಭಿನಂದಿಸಿದರು. ತಾನು ತನ್ನ ನಿಯೋಗದ ಸದಸ್ಯರು ಹಾಗೂ ತಾನೂ ಯಾರ ಸರವಾಗಿ ಬಂದಿದ್ದಾರೋ ಅವರೆಲ್ಲರೂ ಒಂದು ಸೇರಿ, ಪ್ರದೇಶದಲ್ಲಿ ಕ್ರೂರಾಚರಣೆಗಳನ್ನು ಹತ್ತಿಕ್ಕಿ ಶಾಂತಿ ಸ್ಥಾಪನೆ ಮಾಡಲು ಪ್ರಯತ್ನಿಸುವ ನಂಬುಗೆಯುತ್ತರು. ನಾಗಾ ಜನರಿಗೆ ಸಾಮಾನ್ಯವಾಗಿ ರಾಜದಂಡನೆಯ ಕ್ಷಮಾಪಣೆಯನ್ನೀಯಬೇಕೆಂದೂ, ಒಂದು ಸೇರಿಸಲ್ಪಟ್ಟ ಹಳ್ಳಿಗರು ಪ್ರತ್ಯೇಕಿಸಲ್ಪಡಬೇಕೆಂದೂ ಅವರು ಬಯಸಿ, ನ್ಯಾಯ ಪರಿಪಾಲನೆಗಾಗಿ ಒಂದಾಗಿಸಿದ ಹಳ್ಳಿಗಳಿಂದಾಗಿ ಜನರಿಗೆ ತುಂಬ ತೊಂದರೆಯುಂಟಾಗಿರುವುದೆಂದು ಅಭಿಪ್ರಾಯಪಟ್ಟರು.

ಉಪದ್ರವಗಳು ತೋರಿದ್ದ ಸ್ಥಳಗಳಲ್ಲಿ ಶಾಂತವಾತಾವರಣವು ಉಂಟಾಗಬೇಕು, ಕ್ರೂರಾಚರಣೆಗಳು ದೂರವಾಗಿ ಸಾಮಾನ್ಯ ಪರಿಸ್ಥಿತಿಗಳು ಕಾಣಿಸಿಕೊಂಡೊಡನೆ ಇಂತಹ ಪ್ರತ್ಯೇಕತೆಯೆರಲಾದ.

ಆ ದಿನವು ಬೇಗನೇ ಬರಬಹುದು. ಇನ್ನು ರಾಜಾಪರ ಧದಿಂದ ಮನ್ನಣೆಯ ಸಂಬಂಧದಲ್ಲಿ ಈ ಮೊದಲಿನ ರಾಜ್ಯ ವಿರೋಧಿ ಆಚರಣೆಗಳಿಗೆ ಭಾರತ ಸರಕಾರವು ಕ್ಷಮಾಪಣೆ ಮಾಡುವುದು ಆದರೆ, ಇನ್ನು ಮುಂದೆ ಗೆಯ್ಯಲಾಗುವ ಅಪರಾಧಗಳಿಗೆ ಮಾತ್ರ ಮನ್ನಣೆ ದೊರೆಯಲಾರದು ಎಂದು ಪ್ರಧಾನಿಗಳು ಎಚ್ಚರಿಸಿದರು.

ಹಳ್ಳಿಗಳ ಪ್ರತ್ಯೇಕೀಕರಣವು ಶಾಂತ ವಾತಾವರಣ ನೆಲಸಿದೊಡನೆಯೇ ಕಾರ್ಯಕಾರಿಯಾಗುವುದು. ಈ ತತ್ವವನ್ನು ಈ ಮೊದಲೇ ಒಪ್ಪಿಕೊಳ್ಳಲಾಗಿದ್ದು, ಸರಕಾರಕ್ಕೆ ಶಾಂತಿ ಸ್ಥಾಪನೆಯಾದ ಬಗ್ಗೆ ತೃಪ್ತಿಯು ಕಾಣಿಸಿಕೊಂಡ ಕೂಡಲೇ ಕಾರ್ಯಾಚರಣೆಗೆ ಬರುವುದು. ಈ ಮಧ್ಯದಲ್ಲಿಯೇ ನಾಗಹಳ್ಳಿಗಳನ್ನು ಇನ್ನು

(೧೦ನೇ ಪುಟ ನೋಡಿರಿ)

ತಾ. ೨೨ರಿಂದ ✝ ಪ್ರಾರಂಭ

ಹಿಂದೂಸ್ಥಾನದಲ್ಲಿ
ಟಿ. ಬಿ. ಮೊಹರು
ಮಾರಾಟದ
ಎಂಟನೆ ಚಳವಳಿ

(ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಡೆಲ್ಲಿ—ಇವರಿಂದ ಪ್ರಾರಂಭಿಸಲ್ಪಟ್ಟದ್ದು)

ತಾ. ೨೨ರಿಂದ ಮಾರಾಟಕ್ಕೆ ಪ್ರಾರಂಭವಾದ
1957-58ನೆ ವರ್ಷದ ಟಿ. ಬಿ. ಮೊಹರು

ಹೊಸ ಟಿ. ಬಿ. ಮೊಹರುಗಳನ್ನು
ದೊಡ್ಡ ಸಂಖ್ಯೆಯಲ್ಲಿ ಕೊಂಡುಕೊಳ್ಳಿರಿ
ಒಂದು ಟಿ. ಬಿ. ಮೊಹರಿನ ಬೆಲೆ
ಬರೇ ಐದು ನಯೇಪೈಸೆ

ಮೊಹರುಗಳು ದೊರೆಯುವ ಸ್ಥಳಗಳು:
(೧) ದಿ ಒನರರಿ ಸೆಕ್ರಟರಿ, ಟಿ. ಬಿ. ಸೀಲ್ ಸೇಲ್ ಕಮಿಟಿ, ಗೋಪಾಲ ಕೃಷ್ಣ ಟೆಂಪಲ್ ರೋಡು, ಮಂಗಳೂರು.
(೨) ದಿ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್, ಮಡಿಕೇರಿ, ಕೊಡಗು ಮತ್ತು
(೩) ದಿ ಒನರರಿ ಸೆಕ್ರಟರಿ, ಮೈಸೂರು ಸ್ಟೇಟ್ ಟಿ. ಬಿ. ಎಸೋಸಿಯೇಶನ್, ಲೇಡಿ ವಿಲ್ಲಿಂಗ್‌ಟನ್ ಟಿ. ಬಿ. ಕ್ಲಿನಿಕ್ ಎಂಡ್ ಡಿಸ್ಪೆನ್ಸರಿ, ಬೆಂಗಳೂರು ಮತ್ತಿತರ ಸ್ಟೇಟನಲ್ಲಿರುವ ಏಜನ್ಸಿಗಳಲ್ಲಿ.

ನೆನಪಿನಲ್ಲಿಡಿರಿ:
ನೀವು ಕೊಡುವ ಸಹಾಯಧನವು ಕ್ಷಯರೋಗ ನಿವಾರಣಾ ಜನತಾ ಚಳವಳಿಗೆ ನೇರವಾದ ಬೆಂಬಲವಾಗಿದೆ.

ಈ ಸ್ಥಳ ದಾನವಾಡಿದವರು:
ಎ. ವಿ. ಥೋಮಸ್ ಮತ್ತು ಕಂಪೆನಿ ಲಿಮಿಟೆಡ್
ಅಲಪ್ಪೆ.

ವಿಶ್ವವಿದ್ಯಾಲಯಗಳು ಹೇಗಿರಬೇಕು?

ಶೀಲಸಂವರ್ಧಕ ಸಂಸ್ಥೆಗಳಾಗಲಿ

ನಮ್ಮ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ಮೊನ್ನೆ ಮೊನ್ನೆ ಪೂನಾ ವಿಶ್ವವಿದ್ಯಾಲಯದ ಸದಸ್ಯರನ್ನುದ್ದೇಶಿಸಿ ಭಾರತೀಯ ವಿದ್ಯಾರ್ಥಿಗಳು ನಮ್ಮ ನಡತೆಯನ್ನು ಉತ್ತಮವಾಗಿರಿಸುವತ್ತ ವಿಶೇಷ ಗಮನವೀಯಬೇಕೆಂದು ಉಪದೇಶಿಸಿದ್ದಾರೆ. ದೇಶವು ದಿನೇ ದಿನೇ ಬದಲಾವಣೆಗಳನ್ನು ಪಡೆಯುತ್ತಾ ಹೋಗುತ್ತಿರುವಂತೆ ಅದರ ಆವಶ್ಯಕತೆಗಳೂ ಬೇರೆ ಬೇರೆಯಾಗಿ ಪರಿಣಮಿಸುತ್ತಾ ಬರುತ್ತಿದೆ. ಇಂತಹ ದೇಶೀಯ ಬೇಡಿಕೆಗಳನ್ನು ದೇಶೀಯ ವಿಶ್ವವಿದ್ಯಾಲಯಗಳು ಪೂರೈಸಿ ಕೊಡುವುದು ಅತ್ಯಗತ್ಯವಾಗಿದೆ. ತನ್ನ ವಿದ್ಯಾರ್ಥಿಗಳಲ್ಲಿ ಉತ್ತಮ ನಡೆವಳಿಕೆಯನ್ನು ಉಳಿಸಿಕೊಳ್ಳುವುದು, ಹಾಗೂ ಶಿಸ್ತನ್ನು ಕಾಪಾಡಿಕೊಳ್ಳುವುದು ಸಹ ಈ ವಿಶ್ವವಿದ್ಯಾಲಯಗಳು ತೀವ್ರವಾಗಿ ಗಮನಿಸತಕ್ಕ ಅಂಶಗಳೆಂದವರು ತಿಳಿಸಿದರು.

ಈಗೀಗ ಕೆಲವು ವರ್ಷಗಳಲ್ಲಿ ದೇಶದ ಎಲ್ಲೆಡೆಗಳಲ್ಲೂ ವಿದ್ಯಾಕ್ಷೇತ್ರವು ಅತಿ ವಿಸ್ತಾರವನ್ನು ಹೊಂದುತ್ತಾ ಇದೆ. ಆದರೆ ಈ ವಿಸ್ತಾರಣೆಯು ಅನೇಕ ವಿರುಪೇರುಗಳಿಂದ ಕೂಡಿದೆ. ಅದನ್ನು ಸಮತಟ್ಟಾಗಿ ಒಂದೇ ಮಟ್ಟದ ಆಳವುಳ್ಳುದಾಗಿ ಮಾಡಲಾಗಲಿಲ್ಲ. ಈ ಕೊರತೆಯನ್ನು ನೀಗಿಸುವುದು ಅಗತ್ಯವಾಗಿದೆ. ಇಂದು ಭಾರತದಲ್ಲಿ ತಾಂತ್ರಿಕ ವಿದ್ಯಾಲಯಗಳು ಮತ್ತು ಇತಿಹಾಸ, ತತ್ವಜ್ಞಾನ, ಮತ್ತು ಸಾಹಿತ್ಯಗಳ ಬಗ್ಗೆ ವಿಸುಲವಾದ ಜ್ಞಾನದಾನವನ್ನು ಮಾಡುವ ಸಂಸ್ಥೆಗಳು ಹೆಚ್ಚಾಗಿ ಬೆಳೆಯಬೇಕಾಗಿವೆ. ತಾಂತ್ರಿಕಾವಶ್ಯಕತೆಗಳನ್ನು ಪೂರೈಸುವ ಗುಂಗಿನಲ್ಲಿ ಇತಿಹಾಸ, ಸಂಸ್ಕೃತ್ಯಾದಿ ಜ್ಞಾನವನ್ನು ಅಲ್ಲಗಳೆಯುವುದು ಎಂದೂ ಸಾಧ್ಯವಾಗದು. ಅಥವಾ ಇವೆಲ್ಲವುಗಳನ್ನು ಬೆಳೆಸುವಾಗ ಸಾಮಾನ್ಯ ವಿದ್ಯೆಯನ್ನು ಮರೆತುಬಿಡುವುದೂ ಉಚಿತವಲ್ಲ. ಆದರೆ, ನಮ್ಮ ಬೆಳೆಯುತ್ತಿರುವ ದೇಶದ ಅವಶ್ಯಕತೆಗಳಿಗನುಗುಣವಾಗಿ ಇಂತಹ ವಿದ್ಯೆಗಳಲ್ಲಿ, ಅವನ್ನು ಕೊಡುವ ನಿಧಾನದಲ್ಲಿ ತಕ್ಕಷ್ಟು ಸೂಕ್ತ ಬದಲಾವಣೆಗಳನ್ನು ಅಳವಡಿಸಿಕೊಳ್ಳಬೇಕು. ತಾಂತ್ರಿಕ ಸಂಸ್ಥೆಗಳು ಇಂದು ಆಧುನಿಕ ಭಾರತವನ್ನು ನಿರ್ಮಿಸುವ, ಮಹಾ ಶಿಲ್ಪಿಗಳನ್ನೂ ತಂತ್ರಜ್ಞರನ್ನೂ ತಯಾರಿಸುತ್ತವೆ ಎಂಬುದು ಪೂರ್ಣ ಸತ್ಯ. ಆದರೆ, ಇಂತಹ ತಾಂತ್ರಿಕ ಸಂಸ್ಥೆಗಳು ಶೀಲವಂತ, ಸಾಕಲ್ಯವಂತ ಹಾಗೂ ತಮಗೆ ಒಪ್ಪಿಸಿಕೊಟ್ಟ ಎಲ್ಲತರದ ಕಾರ್ಯಗಳಿಗೂ ಹೊಂದಿಕೊಳ್ಳುವಂತಹ ವ್ಯಕ್ತಿಗಳನ್ನು ಸಿದ್ಧಗೊಳಿಸುವಲ್ಲಿ ಸಾಕಷ್ಟು ಪ್ರಮಾಣದಲ್ಲಿ ಗಮನವೀಯದಿರುವುದು ದೊಡ್ಡ ಕೊರತೆಯಾಗಿದೆ.

ವಿಶ್ವವಿದ್ಯಾಲಯಗಳಲ್ಲಿ ಇಂದು ಎದ್ದು ತೋರಿಬರುವ ಕೆಡುಕುಗಳಲ್ಲಿ ಶೀಲಾಭಾವವು ಒಂದಾಗಿದೆ. ಇಂತಹ ಹಲವಾರು ಕೊರತೆಗಳು ನಿಜವಾಗಿಯೂ ಇರುವುದಾದರೂ ಶೀಲಸಂಬಂಧಿ ಕೊರತೆಯು ಬಹಳ ಮುಖ್ಯವೆನಿಸಿದುದು. ವರ್ತಮಾನ ಪತ್ರಿಕೆಗಳನ್ನು ಓದುವ ನಾವು ಇಂದು ಪ್ರತಿದಿನವೆಂಬಂತೆ ರೈಲ್ವೆ, ಆಕಾಶಯಾನ ಮೊದಲಾದುವುಗಳಲ್ಲಿ ಅಲ್ಲದೆ ಇನ್ನೂ ಅನೇಕಾನೇಕ ವಿಭಾಗಗಳಲ್ಲಿ ಅನಿರೀಕ್ಷಿತ ದುರ್ಘಟನೆಗಳು ನಡೆದ ಸಂಗತಿಗಳನ್ನು ಓದುತ್ತೇವೆ. ಇಂತಹ ಹಲವಾರು ದುರಂತಗಳಿಗೆ ಯಂತ್ರವು ದೋಷಯುಕ್ತವಾದುದು ಕಾರಣವಿರಬಹುದು. ಆದರೆ, ಯಂತ್ರ ದೋಷಕ್ಕಿಂತಲೂ ವ್ಯಕ್ತಿ ದೋಷವೇ ಈ ರೀತಿಯ ಅಪಾಯಕರ ದುರ್ಘಟನೆಗಳಿಗೆ ಹೇತುವಾಗಿದೆ ಎಂದು ಹೇಳಬಹುದು. ವ್ಯಕ್ತಿಯು ತಪ್ಪಿದನೆಂದರೆ ಯಂತ್ರವೂ ತಪ್ಪಿದಂತೆಯೇ ಆಗ ದುರಂತಗಳು ಸಹ ಅದಂತೆಯೇ ಸರಿ. ಇಂತಹ ತಪ್ಪು ಯಾವ ರೀತಿಯಿಂದ ಆಗುತ್ತದೆ ಎಂಬುದನ್ನು ಕಂಡು ಹಿಡಿದು, ಅದರ ಕಾರಣವನ್ನು ಮೂಲ ಸಹಿತ ಕಿತ್ತು ಬಿಡುವುದು ರಾಷ್ಟ್ರೀಯ ಹಿತದೃಷ್ಟಿಯಿಂದ ಅತ್ಯಂತ ಪ್ರಮುಖವಾದ, ಮಹತ್ವ ಪೂರ್ಣ ಪ್ರಶ್ನೆಯಾಗಿದೆ.

ಒಂದು ವೇಳೆ ಯಂತ್ರದ ದೋಷವೇ ಕಾರಣವೆಂದು ಕಂಡು ಬಂದರೂ ಅಂತಹ ಯಂತ್ರಗಳನ್ನು ಮಾಡುವವನು ಮಾನವನೇ ಅಲ್ಲವೆ? ಭಾರತದಲ್ಲಿ ಈಗ ಭಾರಿಯ ಯಂತ್ರಗಳು ಸಿದ್ಧವಾಗುತ್ತಿಲ್ಲವೆಂದು ಅವನ್ನು ಪರದೇಶಗಳಿಂದ ಆಮದು ಮಾಡಿಕೊಳ್ಳುತ್ತೇವೆಂದು ಹೇಳಿದರೂ, ಭಾರತೀಯ ತಂತ್ರಜ್ಞರೇ ಅಂತಹ ನಿರ್ಯಾತವಾದ ಯಂತ್ರಗಳನ್ನು ನಡೆಸುತ್ತಾರೆಂಬುದು ಸರ್ವವಿದಿತವಷ್ಟೆ. ಹಾಗೆಯೇ ಭಾರತೀಯ ಕೆಲಸಗಾರರೇ ಯಂತ್ರಗಳನ್ನು ಜೋಡಿಸುತ್ತಾರೆ ಹೀಗಿರುವಾಗ, ಯಂತ್ರಗಳು ತಮ್ಮ ಕಾರ್ಯಗಳನ್ನು ಮಾಡಲು ತಪ್ಪಿದುವು ಎಂದರೆ, ಆಗ ಅವು ಅವನ್ನು ಜೋಡಿಸಿದ ಇಲ್ಲವೇ ನಡೆಯಿಸುವ ಭಾರತೀಯ ಕಾರ್ಯಕಾರರ ದೋಷವೆಂದು ಪ್ರತ್ಯೇಕವಾಗಿ ನುಡಿಯುವ ಅಗತ್ಯವಿಲ್ಲ. ಆದುದರಿಂದ ಎಲ್ಲ ವಿಶ್ವವಿದ್ಯಾಲಯಗಳೂ ತಮ್ಮಡಿಯಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಲ್ಲಿ ಶೀಲವರ್ಧನೆಯಾಗುವತ್ತ ಹೆಚ್ಚೆಚ್ಚು ಗಮನವನ್ನು ಈಯುವುದು ಅತ್ಯಂತಾವಶ್ಯಕವೆನಿಸಿದೆ.

ಪ್ರಾಚೀನ ಕಾಲದಲ್ಲಿದ್ದ ನಳಂದ, ತಕ್ಷಶಿಲ ಮುಂತಾದ ನಗರಗಳಲ್ಲಿದ್ದ ಭಾರತೀಯ ವಿಶ್ವವಿದ್ಯಾಲಯಗಳು ತಮ್ಮ ವಿದ್ಯಾರ್ಥಿಗಳಲ್ಲಿ ಶೀಲ ಸಂವರ್ಧನೆಯಾಗುವತ್ತ ಸರಿಯಾದ ಆಸಕ್ತಿ ಪೂರ್ಣ ಗಮನವನ್ನು ಕೊಡುತಿದ್ದುದರಿಂದಲೇ ಅವು ವಿದೇಶೀಯ ಅಭ್ಯಾಸೇಚ್ಛುಗಳನ್ನು ಸಹ ಆಕರ್ಷಿಸಿದುವು. ಆದರೆ, ನಾವಿಂದು ಮಾತ್ರ ಈ ಶೀಲ ಸಂವರ್ಧನ ಕಾರ್ಯವು ಅಷ್ಟೊಂದು ಲಕ್ಷಿಸಬೇಕಾದ ವಿಷಯವೆಂದು ಸಾಮಾನ್ಯವಾಗಿ ತಿಳಿದುಕೊಂಡಿಲ್ಲ. ಒಂದು ವಿದ್ಯಾರ್ಥಿಯ ಬಾಳನ್ನು ಒಂದು ಕ್ರಮದಲ್ಲಿರಿಸುವಲ್ಲಿ ಮತ್ತು ಅತನನ್ನು ಮಾನವ ಜೀವನದಲ್ಲಿ ಕಂಡುಬರುವ ಮೂಲಭೂತ ತತ್ವಗಳಿಗೆ ಹೊಂದಿಕೊಂಡು ಜೀವಿಸುವಂತೆ ಮಾಡುವಲ್ಲಿ ಯಾವುದೇ ಒಂದು ಪ್ರಯತ್ನವೂ ಇಂದಿನ ದಿನಗಳಲ್ಲಿ ಕೈಗೊಳ್ಳಲ್ಪಟ್ಟಿಲ್ಲ.

ಆದರೆ, ವಿದ್ಯಾರ್ಥಿಗಳಲ್ಲಿ ಯಾವುದೇ ಒಂದು ಸೈನಿಕೇಕ್ಷಣದಿಂದ. (ಶಿಸ್ತಿನ ಕಾರ್ಯಕ್ರಮದಿಂದ) ಶೀಲವನ್ನು ಸಂವರ್ಧಿಸುವುದು ಸಲ್ಲದ ಹುರುಳಿಲ್ಲದ ಮಾತು. ಏಕೆಂದರೆ, ಈ ಶೀಲವು ಅವರವರಿಗೆ ಅವರವರ ಹೃದಯದೊಳಗಿನ ಪ್ರೇರಣೆಯಿಂದ ಬರಬೇಕಲ್ಲದೆ ಬಾಹ್ಯಪ್ರೇರಣೆಯಿಂದಲ್ಲ. "ವಿದ್ಯೆ" ಎಂಬುದಕ್ಕೆ ಏನಾದರೂ ಅರ್ಥವಿರುವುದಾದರೆ, ಮಾನವನ ಸಹಜ ಗುಣಗಳನ್ನು ಅಧ್ಯಾಪಕರು ಹೊರಗೆ ತರಬೇಕು—ಈ ವಿಷಯಲ್ಲಿ ನಮ್ಮ ಶಾಲೆ ಹಾಗೂ ವಿಶ್ವವಿದ್ಯಾಲಯಗಳ ಅಧ್ಯಾಪಕ ಸ್ವಾಧ್ಯಾಯಕರು ತೀವ್ರವಾಗಿ ಈ ಕೆಲಸವನ್ನು ಮಾಡಬೇಕು.

ಮುಂದಿನ ಭಾರತೀಯ ಪೀಳಿಗೆಯವರು ಹೆಮ್ಮೆಪಟ್ಟುಕೊಳ್ಳುವಂತಹ ರೀತಿಯಲ್ಲಿ ನವಭಾರತವನ್ನು ನಿರ್ಮಿಸುವಲ್ಲಿ ಇಂದಿನ ವಿದ್ಯಾರ್ಥಿಗಳು ನಿರತರಾಗಿದ್ದಾರೆ. ಈ ಕಾರಣದಿಂದ ಇಂದು ತಂತ್ರಜ್ಞ ಹಾಗೂ ಶಿಲ್ಪಿಗಳ ಅವಶ್ಯಕತೆಯು ಸ್ವಾಭಾವಿಕವಾಗಿಯೂ ಇದೆ. ಇವರು ಮುನಾರ ಜನೆಯ ಯೋಜನೆಗಳಲ್ಲಿ ಉಚಿತ ರೀತಿಯಲ್ಲಿ ತಲ್ಲೀನರಾಗಿರುತ್ತಾರೆ. ಹಾಗಿರುವಾಗ, ಈ ತಂತ್ರಜ್ಞ ಹಾಗೂ ಶಿಲ್ಪಿಗಳು ವಿಶ್ವವಿದ್ಯಾಲಯಗಳನ್ನು ಉತ್ಪಾಹದ ಖಣಿಯಂತೆ ಕಾಣಬೇಕಾಗಿದೆ. ವಿದ್ಯಾಲಯಗಳು ತಮ್ಮ ವಿದ್ಯಾರ್ಥಿಗಳಲ್ಲಿ ನವೋತ್ಸಾಹವನ್ನು ತುಂಬಿಸುವ ಪ್ರೇರಕ ಶಕ್ತಿಗಳಾಗಬೇಕು.

ಇಂದು ಸಾಮಾನ್ಯವಾಗಿ ವಿದ್ಯಾಕ್ಷೇತ್ರವು ವಿಸ್ತಾರಗೊಂಡಿದೆಯೆಂಬುದೇನೋ ನಿಜ. ಆದರೆ, ಇದರಲ್ಲಿ ಒಂದೇ ರೀತಿಯ ವಿಸ್ತರಣೆಯಾಗಿಲ್ಲ. ನಾವು ಮಿತಿಯನ್ನು ಮುಟ್ಟಿದರೂ ಆಳವನ್ನು ಮಾತ್ರ ಮುಟ್ಟಿಲ್ಲ. ಆದುದರಿಂದ ಇಂದಿನ ಮತ್ತು ಮುಂದಿನ ಭಾರತದ ಆವಶ್ಯಕತೆಗಳನ್ನು ಅನುಲಕ್ಷಿಸಿ ಅವಶ್ಯಕನುಗುಣವಾಗಿ ತಮ್ಮನ್ನು ಹೊಂದಿಸಿಕೊಳ್ಳಬೇಕಾದ ಮಹಾ ಕರ್ತವ್ಯವು ವಿಶ್ವವಿದ್ಯಾಲಯಗಳದ್ದಾಗಿದೆ. ಈ ರೀತಿಯಿಂದ ವಿದ್ಯಾಕ್ಷೇತ್ರವನ್ನು ಅತ್ಯುತ್ತಮಗೊಳಿಸುವ ಅಗತ್ಯವಿದೆ.

ಕೆಲವು ವರ್ಷಗಳ ಹಿಂದೆ, ಇತಿಹಾಸ, ಅಥವಾ ತತ್ವಶಾಸ್ತ್ರ ಅಥವಾ ವಿಜ್ಞಾನ ಶಾಸ್ತ್ರಗಳಲ್ಲಿ ಸಾಕಷ್ಟು ಜ್ಞಾನವು ದೊರೆಯುತಿತ್ತು ಆಗಿನ ಕಾಲದಲ್ಲಿ ತಾಂತ್ರಿಕ ಮತ್ತು ಔದ್ಯೋಗಿಕ ವಿದ್ಯಾಲಯಗಳು ಬಹಳ ಅಲ್ಪ ಪ್ರಮಾಣದಲ್ಲಿದ್ದುವು. ಇಂದು ಇತಿಹಾಸ, ತತ್ವಶಾಸ್ತ್ರ ಅಥವಾ ಸಾಹಿತ್ಯಗಳನ್ನು ಅಭ್ಯಾಸ ಮಾಡಿಸುವ ವಿದ್ಯಾಲಯಗಳಿಗಿಂತ ತಾಂತ್ರಿಕ ಮತ್ತು ಔದ್ಯೋಗಿಕ ವಿದ್ಯಾಲಯಗಳ ಆವಶ್ಯಕತೆ ಇದೆ. ಉಳಿದುವುಗಳನ್ನು ಬಿಟ್ಟುಬಿಡದೆ ನಮ್ಮ ವಿದ್ಯಾಕ್ಷೇತ್ರದಲ್ಲಿ ಉಚಿತ ರೀತಿಯಲ್ಲಿ ಅಳವಡಿಸಿಕೊಳ್ಳಬೇಕು. ವಿಶ್ವವಿದ್ಯಾಲಯಗಳು ಉತ್ತಮ ರೀತಿಯಲ್ಲಿ ನಡೆದುಕೊಂಡು, ಶೀಲಸಂಪನ್ನರಾದ ನಾಗರಿಕರನ್ನಾಗಿ ಸಾಮಾನ್ಯ ವಿದ್ಯಾರ್ಥಿಗಳನ್ನು ಪರಿವರ್ತಿಸಬೇಕು.

ಭಾರತವು ಜಗತ್ತಿಗೆ ಒಂದು ಸಂದೇಶವೀಯುತ್ತಲಿದೆ ಎಂದು ನಿಮಗೆ ತಿಳಿದಿರಬಹುದು. ನಮಗಿಂದು ವಿದೇಶಗಳಿಂದ ಪಡೆದುಕೊಳ್ಳಬಹುದಾದ ಅನೇಕ ವಿಷಯಗಳಿವೆ; ಹಾಗೆಯೇ ಭಾರತವು ಕೂಡಾ ಬೇರೆ ದೇಶಗಳಿಗೆ ಕೆಲವೊಂದು ವಸ್ತುಗಳನ್ನು ಕೊಡಲಿರುವುದು ಆದರೆ ನಾವು ಏನಾದರೂ ಕೊಡುವುದಕ್ಕೆ ಮೊದಲು ನಮ್ಮಲ್ಲೇನಿದೆ ಎಂದು ತಿಳಿದುಕೊಳ್ಳಬೇಕು. ನಮ್ಮಲ್ಲಿರಬಹುದಾದುದನ್ನು ಪ್ರಕಟಿಸಿ, ನಮ್ಮ ನವಯುವಕರನ್ನು ಅವರು ಈ ಸಂದೇಶವನ್ನು ಜಗತ್ತಿಗೆ ಮುಟ್ಟಿಸುವಂತೆ ತರಬೇತುಗೊಳಿಸಬೇಕು.

ಭಾರತವು ಹಿಂದೊಮ್ಮೆ ಬಹಳ ಪ್ರಸಿದ್ಧವಾದ ದೇಶವಾಗಿತ್ತು ಆದರೆ ಅದನ್ನು ಹೇಳಿಕೊಳ್ಳುವುದರಿಂದ ಏನೂ ಪ್ರಯೋಜನವಾಗದು. ಹಿಂದಿನ ವೈಭವವನ್ನು

(ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಭಾರತದಲ್ಲಿ ಸಂಘೀಕರಿಸಲ್ಪಟ್ಟಿದೆ; ಮೆಂಬರರ ಹೊಣೆ ಮಿತೀಕರಿಸಲ್ಪಟ್ಟಿದೆ)

ಟೆಲಿಫೋನ್ ನಂ. 114] ಹೆಡ್ ಆಫೀಸ: **ಮಂಗಳೂರು, ದ. ಭಾರತ.** [ಪೋಸ್ಟ್ ಬಾಕ್ಸ ನಂ. 113

ವರ್ಷಕ್ಕೆ ಶೇಕಡಾ 7½ ದರಕ್ಕೆ ನಿರಾದ ಬಡ್ಡಿಯಲ್ಲಿ ಬಂಗಾರ ಮತ್ತು ಬಂಗಾರದ ಆಭರಣಗಳ ಮೇಲೆ ಸಾಲ ಕೊಡಲಾಗುವುದು.

THE KARNATAKA BANK LIMITED

ಕಾಶ್ಮೀರ ಪ್ರಶ್ನೆಯ ಅಂತರಾರ್ಥವೇನು?

ಪಾಕಿಸ್ಥಾನದ ಆಕ್ರಮಣ ಮನೋಭಾವ

ಸಂಯುಕ್ತ ರಾಷ್ಟ್ರಗಳ ಕಮಿಷನ್ ಇಲ್ಲಿದ್ದಾಗ ನಾವು ಒಪ್ಪಿದ ಸ್ಥಾನವು ಹೀಗಿದೆ. ಶಾಂತಿ ಸ್ಥಾಪನೆಯಾಗಬೇಕೆಂಬ ಆಕಾಂಕ್ಷೆಯಿಂದ ಮೊದಲು ಪಾಕಿಸ್ಥಾನದ ಎಲ್ಲ ಸೇನೆಗಳು, ಸಹಾಯಕ ಸೇನೆಗಳು ಮತ್ತು ಉಳಿದವರು, ರಾಜ್ಯದ ಪ್ರತಿ ಅಂಗುಲ ಸ್ಥಳದಿಂದ ಹಿಂತಿರುಗಬೇಕೆಂಬ ವಿಷಯಕ್ಕೆ ನಾವು ಒಪ್ಪಿದೆವು. ವಾಸ್ತವವಾಗಿ, ಕೇವಲ ಸೇನಾಕಾರಣಗಳಿಂದ ಮಾತ್ರವೇ ಅಲ್ಲದೆ ನೈತಿಕ ಕಾರಣಗಳಿಂದಲೂ ನಾವು ಈ ವಿಷಯದ ಬಗ್ಗೆ ಹೆಚ್ಚು ಒತ್ತಾಯ ಪಡಿಸಿದ್ದೆವು. ಅವರು ಅಲ್ಲಿರಲು ಏನು ಪ್ರಮೇಯವೂ ಇರಲಿಲ್ಲ. ಅವರು ಹಿಂದಿರುಗಲೇಬೇಕಾಗಿತ್ತು. ಅವರು ಆಕ್ರಮಣ ನಡೆಸಿದ್ದರು. ಕಾಶ್ಮೀರವು ಭಾರತದೊಂದಿಗೆ ಸೇರಿಕೆ ಹೊಂದುವ ಬಗ್ಗೆ ಪಾಕಿಸ್ಥಾನವು ಪ್ರತಿಭಟಿಸಿದ್ದಾದರೂ, ಒಂದು ವಿಷಯ ಮಾತ್ರ ತೀರಾ ಸ್ಪಷ್ಟವಾಗಿದೆ. ಅದೇನೆಂದರೆ ಪಾಕಿಸ್ಥಾನವು ನೈತಿಕವಾಗಿ, ರಾಜಕೀಯವಾಗಿ ಸಂವಿಧಾನದ ರೀತಿಯಾಗಿ ಅಥವಾ ಮತ್ತಾವ ರೀತಿಯಾಗಿ ಆ ರಾಜ್ಯದಲ್ಲಿರಲು ಕಾರಣವಿರಲಿಲ್ಲ. ಪಾಕಿಸ್ಥಾನವು ಅಲ್ಲಿಗೆ ಸೇನೆಗಳನ್ನು ಕಳುಹಿಸುವ ಅಥವಾ ಅಲ್ಲಿಗೆ ಹೋಗುವ ಸೇನೆಗಳನ್ನು ಪ್ರಚೋದಿಸುವ ಪ್ರಮೇಯವಿರಲಿಲ್ಲ. ಅದ್ದರಿಂದ ಪಾಕಿಸ್ಥಾನದೊಂದಿಗೆ ರಾಜಿಮಾಡಿಕೊಳ್ಳುವದಕ್ಕೆ ಪೂರ್ವಾಪೇಕ್ಷಿತವಾಗಿ ಪಾಕಿಸ್ಥಾನವು ಆಕ್ರಮಣ ನಡೆಸಿ ವಶಪಡಿಸಿಕೊಂಡಿದ್ದ ಪ್ರದೇಶದಿಂದ ಹಿಂತೆಗೆಯಬೇಕೆಂಬುದು ನಮ್ಮ ಪ್ರಮುಖ ಶರತ್ತಾಗಿದೆ. ಸಂಯುಕ್ತ ರಾಷ್ಟ್ರಗಳ ಕಮಿಷನ್ನಿನ ನಿರ್ಣಯದಲ್ಲಿ ಕೂಡ ಆ ವಿಚಾರವು ಅನುಮೋದಿಸಲ್ಪಟ್ಟಿದೆ.

—ಜವಾಹರಲಾಲ್ ನೆಹರೂ, ಜೂಲೈ ೨೪, ೧೯೪೭.

ದೀರ್ಘವಾಗಿ ಬಳಸಿದ ವಾದವಿವಾದಗಳು, ಲಂಬಿಸಿದ ಮಾತುಕತೆಗಳು ಮತ್ತು ನೀಡಿಕೆಗಳು ಮತ್ತು ತಿ ಸ್ಕಾರಗಳ ಜಟಿಲತೆ—ಇವು ಸಂಯುಕ್ತ ರಾಷ್ಟ್ರಗಳ ಸಂಸ್ಥೆಯ ದಾಖಲೆಪತ್ರಗಳಲ್ಲಿ ಜಮಾಕೃತಗೊಳ್ಳುತ್ತಿವೆ. ಆದರೆ ಕಾಶ್ಮೀರವು ಈ ದಾಖಲೆ ಪತ್ರಗಳಂತೆ ಜಡವಾಗಿ ಉಳಿದಿಲ್ಲ. ಬಲವತ್ತಾದ ಸಾಮಾಜಿಕ ಅಸ್ತಿತ್ವವನ್ನು ಪಡೆದಿರುವ ಈ ರಾಜ್ಯವು ಯುದ್ಧ ಸ್ತಂಭನ ರೇಖೆಯ ಈ ಪಾರ್ಶ್ವದಲ್ಲಿ ಶಾಶ್ವತವಾದ ಶಾಂತಿ ಸ್ಥಾಪನೆಗೆ ದಾರಿ ಮಾಡಿಕೊಂಡಿದೆ. ಪ್ರಗತಿಪರ ಜೀವನ ಮಾರ್ಗದಲ್ಲಿ ಸಾಗಿದ. ಯುದ್ಧ ಸ್ತಂಭನ ರೇಖೆಯ ಇನ್ನೊಂದು ಪಾರ್ಶ್ವದಲ್ಲಿ ಪಾಕಿಸ್ಥಾನವು ವಿದೇಶಗಳಿಂದ ದೊರೆತ ನೆರವಿನೊಂದಿಗೆ ಬೃಹತ್ ಪ್ರಮಾಣದಲ್ಲಿ ಸೇನಾ ನಿರ್ಮಾಣ ಕಾರ್ಯದಲ್ಲಿ ನಿರತವಾಗಿದೆ. ಅಲ್ಲದೆ ತನ್ನ ಗಡಿಗಳನ್ನೂ ವಿಶಾಲ ವ್ಯಾಪಿಸಿರುವ ಯುದ್ಧ ಸಂಬಂಧವಾದ ಒಪ್ಪಿಗೆಗಳಿಗೆ ಕಟ್ಟು ಬಿದ್ದಿದೆ. ತಾನಿತ್ತವಾಗಾದ್ದಾನಗಳಿಂದ ಹಿಂದೆಗೆದಿದೆ. ಮತ್ತು ನೀತಿ, ಧರ್ಮ, ಶಾಸನ, ನಿಯಮಗಳನ್ನು ಉಲ್ಲಂಘಿಸಿ ತನ್ನ ಸೇನೆಗಳ ವಶದಲ್ಲಿರುವ ಪ್ರದೇಶದಲ್ಲಿ ಈನತೆಯ ಅಭೀಷ್ಟಗಳನ್ನು ವ್ಯಕ್ತಪಡಿಸಲು ನಿರಾಕರಿಸುತ್ತಿದೆ.

ಪಶ್ಚಿಮ ಮತ್ತು ದಕ್ಷಿಣ ಏಷಿಯಾದಲ್ಲಿ ರಾಜಕೀಯ, ಆರ್ಥಿಕ, ಯುದ್ಧ ತಂತ್ರಗಳು ಹಾಗೂ ಸೇನಾಬಲಗಳಲ್ಲಿ ಪರಿವರ್ತನೆಗಳಾಗಿರುವುದನ್ನು ಗಮನಕ್ಕೆ ತಂದುಕೊಂಡು ಜಾರಿಂಗ್ ವರದಿಯು, ಕಾಶ್ಮೀರ ರಾಜ್ಯದಲ್ಲಿ ಸ್ಥಿರವಾಗಿ ನೆಲೆಸಿರುವ ಶಾಂತಿಯನ್ನು ಭಂಗಪಡಿಸಲು ಅವಕಾಶವೀಯಬಾರದೆಂಬ ಭಾರತೀಯ ವಾದವನ್ನು ಸಮರ್ಥಿಸಿದೆ. ವಾಸ್ತವವಾಗಿ ಆಕ್ರಮಿತ ಭೂಪ್ರದೇಶದಿಂದ ಪಾಕಿಸ್ಥಾನವು ಹಿಂದೆಗೆಯಬೇಕೆಂದು ಭದ್ರತಾ ಪರಿಷತ್ತು ಸೂಚನೆಯೂ ಯುವುದೇ ಈಗಿನ ನಿಲುವಾಗಿದೆ. ಭದ್ರತಾ ಪರಿಷತ್ತು ಭಾರತಕ್ಕೆ ಪಾಕಿಸ್ಥಾನವು ಆಕ್ರಮಿಸಿರುವ ಭೂಪ್ರದೇಶವನ್ನು ದೊರಕಿಸಿಕೊಡಬೇಕಾಗಿದೆ. ಆಕ್ರಮಣ ನಡೆಸಿರುವ ಸೇನೆಗಳನ್ನು ಹಿಂದೆ ತೆಗೆದುಕೊಳ್ಳುವ ಬಗ್ಗೆ ಯಾವ ರೀತಿಯ ವ್ಯವಸ್ಥೆಯಾಗಿದೆ ಎಂದು ಕೆಲವರು ಪ್ರಶ್ನಿಸುತ್ತಿರುವರು. ಕಾಶ್ಮೀರದಲ್ಲಿನ ಈ ಹಿನ ಘಟನೆಗಳನ್ನು, ಈಗ ಇದೀ ಕಾಶ್ಮೀರ ಪ್ರಶ್ನೆಯನ್ನು ಆವರಿಸಿರುವ ವ್ಯಾಪಕವಾದ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಘಟನಾಕ್ರಮಗಳ ದೃಷ್ಟಿಯಿಂದ ಅವಲೋಕಿಸಬೇಕೆಂದು ಶ್ರೀ ಜಾರಿಂಗ್ ಹೇಳಿರುವರು. ಶ್ರೀ ಜಾರಿಂಗ್ ರವರ ಹೇಳಿಕೆಯ ಆಧಾರದ ಮೇಲೆ ಕೆಲವರು ಸೇನೆಗಳನ್ನು ಹಿಂದಿಗೆಯುವ ಬಗ್ಗೆ ಅನಪೇಕ್ಷಿತವಾಗಿ ಒತ್ತಾಯಮಾಡುತ್ತಿರುವ ವಿಚಾರವನ್ನು ವಿಮರ್ಶಿಸಬೇಕಾಗಿದೆ. ಪಶ್ಚಿಮ ರಾಷ್ಟ್ರಗಳ ನಿಷ್ಪಕ್ಷಪಾತಿಯಾದ ವ್ಯಕ್ತಿಯೊಬ್ಬರು ಈ ರೀತಿಯಾಗಿ ಹೇಳಿರುವುದು, ಪಾಶ್ಚಾತ್ಯ ಮುಖಂಡರು ಭಾರತವು ಕಾಶ್ಮೀರ ಸಮಸ್ಯೆಯನ್ನು ತ್ವರಿತ ರೀತಿಯಲ್ಲಿ ಇತ್ಯರ್ಥಗೊಳಿಸುವ ಆಕಾಂಕ್ಷೆಯಿಂದ ರಾಯಾಯಿತಿಸೀಡಲು ಒಮ್ಮೆ ಸಿದ್ಧವಿದ್ದ ವಿಚಾರವು ಇಂದಿನ ವಾಸ್ತವಿಕ ಸ್ಥಿತಿಗೆ ಅನುಚಿತವೆಂಬುದನ್ನು ಅಂಗೀಕರಿಸಲು ಪ್ರಚೋದಿಸುವುದು.

ಒಂದು ಸತ್ಯಾಂಶವಿದೆ. ಅದು ಇನ್ನೂ ಪರಿವರ್ತನಗೊಂಡಿಲ್ಲ. ಪಾಕಿಸ್ಥಾನವು ತನ್ನ ಆಕ್ರಮಣವನ್ನು ಮುಂದುವರಿಸುತ್ತಿರುವುದೇ ಈ ಸತ್ಯಾಂಶವಾಗಿದೆ. ಕಾಶ್ಮೀರ ಮಹಾರಾಜರ ಮೇಲೆ ಜನರು ಬಂಡಾಯವೆದ್ದ ಕಾರಣದಿಂದ ಆಕ್ರಮಣ ನಡೆಸಬೇಕಾಯಿತೆಂದು ಪಾಕಿಸ್ಥಾನವು ವಿಶ್ವಕ್ಕೆ ಸುಳ್ಳು ನುಡಿಯಲು ಪ್ರಯತ್ನಿಸುತ್ತಿದೆ. ಜನರು ಆಕ್ರಮಣಕ್ಕಾಗಿ ಬಂಡಾಯವೆದ್ದಿದ್ದರೆ ಪಾಕಿಸ್ಥಾನವು ಗುಡ್ಡಗಾಡಿನ ಪ್ರದೇಶಗಳಿಂದ ಧಾಳಿಕಾರರನ್ನು ಕಳುಹಿಸುವ ಅಗತ್ಯವಿರಲಿಲ್ಲ ಎಂಬ ವಿಚಾರವು ವಿಶ್ವಕ್ಕೆ ತಿಳಿದಿದೆ. ಆಗ ಈ ಧಾಳಿಕಾರರನ್ನು ಸ್ವಾತಂತ್ರ್ಯದಿಂದ ವಿಮುಕ್ತಿಗೊಳಿಸಿದ ಮುಕ್ತಿದಾತರೆಂದೇ ಘೋಷಿಸಲಾಗುತ್ತಿತ್ತು. ಆದರೆ ಕಾಶ್ಮೀರದ ಜನರು ಈ ಧಾಳಿಕಾರರೊಂದಿಗೆ ಘೋರ ಕದನ ನಡೆಸಿ ಹಿಮ್ಮೆಟ್ಟಿಸಿದರು ದೇಶದ ವಿಭಜನೆಗೆ ಪೂರ್ವದಲ್ಲಿ ಕಾಶ್ಮೀರರಾಜ್ಯದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸ್ಥಾಪಿಸುವ ಬಗೆ ಹೋರಾಡಿದವರು. ಭಾರತ—ಪಕ್ಷೀಯ ನ್ಯಾಷನಲ್ ಕಾನ್‌ಫರೆನ್ಸ್‌ನವರು. ಪಾಕಿಸ್ಥಾನ-ಪಕ್ಷೀಯ ಮುಸ್ಲಿಂ ಕಾನ್‌ಫರೆನ್ಸ್‌ನವರು ಮುಸ್ಲಿಂ ಲೀಗ್‌ನಂತೆ ಅಳಿವರ ಪಕ್ಷವನ್ನು ವಹಿಸಿದವರು.

ಪಾಕಿಸ್ಥಾನಕ್ಕೆ ತಾನು ತಪ್ಪು ಮಾರ್ಗದಲ್ಲಿರುವುದು ಗೊತ್ತು. ಆದ್ದರಿಂದಲೇ ಪ್ರಾರಂಭದಲ್ಲಿ ಪಾಕಿಸ್ಥಾನವು ಧಾಳಿಕಾರರು ತಮಗೆ ಸೇರಿಲ್ಲವೆಂದು ಘೋಷಿಸುವ ಬಗ್ಗೆ ತೀವ್ರಾತಂಕವನ್ನು ವ್ಯಕ್ತಪಡಿಸಿತು. ಸಂಯುಕ್ತ ರಾಷ್ಟ್ರಗಳ ಕಮಿಷನ್ ಪಾಕಿಸ್ಥಾನದ ಈ ಸುಳ್ಳುಂತೆಯನ್ನು ಬಯಲುಮಾಡಿತು. ಪಾಕಿಸ್ಥಾನವು ತನ್ನ ಹೇಳಿಕೆಯನ್ನು ನಿರಾಕರಿಸುವುದು ಅಸಾಧ್ಯವಾಯಿತು. ಪಾಕಿಸ್ಥಾನವು ಧಾಳಿಕಾರರಿಗೆ ಮೊಟ್ಟಾರು ವಾಹನಗಳೆ, ಸಾಮಾನು ಸಾಂಜಾಮುಗಳು ಮತ್ತು ಸೈನಿಕರನ್ನು ಒದಗಿಸಿತು. ಪಾಕಿಸ್ಥಾನದ ಸೇನಾಧಿಕಾರಿಗಳು ಈ ಧಾಳಿಗಳನ್ನು ನಿಯೋಜಿಸಿದರಲ್ಲದೆ ನಿರ್ದೇಶಿಸಿದರು. ಈ ಪ್ರಕಾರವಾಗಿ ಕಾಶ್ಮೀರ ರಾಜ್ಯದ ಭಾಗವೊಂದು ಪಾಕಿಸ್ಥಾನದ ಹಿಡಿತಕ್ಕೆ ಸಿಕ್ಕಿತು. ಆಕ್ರಮಿತ ಪ್ರದೇಶದಲ್ಲಿ ಪಾಕಿಸ್ಥಾನವು ಆಕ್ರಮಣಕಾರರ ಹಾಗೂ ಧಾಳಿಕಾರರ ಅಂತಸ್ತಿಗಿಂತ ಕಟ್ಟಿಗೆ ಏನನ್ನು ತಾನೆ ಪಡೆಯಬಲ್ಲದು? ಭಾರತ ಕಾಶ್ಮೀರ ಸಂಬಂಧವಾದ ಸಂಯುಕ್ತ ರಾಷ್ಟ್ರಗಳ ಸಂಸ್ಥೆಯ ಕಮಿಷನ್ (ಯುನಸಿಪ್) ಪಾಕಿಸ್ಥಾನವು ಆಕ್ರಮಣಕಾರಿಯೆಂದು ನಿರ್ಣಯಿಸಿ ಕಾಶ್ಮೀರದಿಂದ ಕಾಲ್ತೆಗೆಯಬೇಕೆಂದು ಸೂಚನೆಯಿತ್ತಿದೆ.

ಸಂಯುಕ್ತ ರಾಷ್ಟ್ರಗಳ ಸಂಸ್ಥೆಯ ಸದಸ್ಯ ರಾಷ್ಟ್ರವೊಂದರ ಗಡಿಗಳನ್ನು ಮತ್ತೊಂದು ಸದಸ್ಯ ರಾಷ್ಟ್ರವು ಅತಿಕ್ರಮಿಸದಂತೆ ಭದ್ರತಾ ಪರಿಷತ್ತು ಮಾಡಬೇಕು. ಸದಸ್ಯ ರಾಷ್ಟ್ರವೊಂದು ಸೀಮೋಲ್ಲಂಘನೆಗೆ ಮಾಡಿದಾಗ, ಅತ್ಯಲ್ಪ ಕಾಲದಲ್ಲಿಯೇ ಆ ರಾಷ್ಟ್ರವು ಅತಿಕ್ರಮಿಸಿದ ಸ್ಥಳದಿಂದ ವಾಪಸಾಗುವಂತೆ ಮಾಡುವುದು ಭದ್ರತಾ ಪರಿಷತ್ತಿನ ಕರ್ತವ್ಯವಾಗಿರುವುದು. ಹೀಗೆ ಮಾಡದೇ ಬೇರೆ ಮಾರ್ಗವೇ ಇಲ್ಲ. ಏಕೆಂದರೆ ಅತಿಕ್ರಮಣವು ಸಂಯುಕ್ತ ರಾಷ್ಟ್ರಗಳ ಸಂಘದ ಪ್ರಣಾಳಿಕೆಯ ಉಲ್ಲಂಘನೆ ಯಾಗುವುದು. ಈ ಪ್ರಣಾಳಿಕೆಯು ಈ ರೀತಿ ತಿಳಿಸಿದೆ.

"ಎಲ್ಲ ಸದಸ್ಯ ರಾಷ್ಟ್ರಗಳು ತಮ್ಮ ಅಂತಾರಾಷ್ಟ್ರೀಯ ಸಂಬಂಧದಲ್ಲಿ ಮತ್ತಾವ ರಾಷ್ಟ್ರದ ಭೂಪ್ರದೇಶದ ಸಮಗ್ರತೆ ಅಥವಾ ರಾಜಕೀಯ ಸ್ವಾತಂತ್ರ್ಯದ ವಿರುದ್ಧವಾಗಿ ಬಲಾತ್ಕಾರ ಮಾಡಬಾರದು".

ಪಾಕಿಸ್ಥಾನವು ಬಲಪ್ರಯೋಗ ಮಾಡುವುದನ್ನು ನಿಲ್ಲಿಸಿಲ್ಲ ನಮಗೇ ಸೇರಿದ 'ಆಜಾದ್ ಕಾಶ್ಮೀರ'ವೆಂದು ಕರೆಯಲ್ಪಡುತ್ತಿರುವ ಭೂಪ್ರದೇಶದಲ್ಲಿ ಬಲಪ್ರಯೋಗ ಮಾಡುತ್ತಲೇ ಇದೆ. ಈ ಬಲಪ್ರಯೋಗವು ಸಂಯುಕ್ತ ರಾಷ್ಟ್ರಗಳ ಸಂಸ್ಥೆಯ ಉದ್ದೇಶಗಳಿಗೆ ಅನುಗುಣವಾಗಿದೆಯೆಂದು ಭದ್ರತಾ ಪರಿಷತ್ತಿನ ಸದಸ್ಯರಾರಾದರೂ ಸಮರ್ಥಿಸಬಲ್ಲರೆ? ವಾಸ್ತವವಾಗಿ, ಭದ್ರತಾ ಪರಿಷತ್ತು ಈಗಾಗಲೆ ಪಾಕಿಸ್ಥಾನದ ವಿರುದ್ಧವಾಗಿ ತೀರ್ಪಿತ್ತಿದೆ ಪಾಕಿಸ್ಥಾನವು ಹೆಚ್ಚು ಮಹತ್ವವಿತ್ತಿರುವ ಭಾರತ ಪಾಕಿಸ್ಥಾನ ಸಂಬಂಧವಾದ ಸಂಯುಕ್ತ ರಾಷ್ಟ್ರಗಳ ಸಂಸ್ಥೆಯ ಕಮಿಷನ್ನಿನ ಎರಡು ನಿರ್ಣಯಗಳು ಪಾಕಿಸ್ಥಾನವು ಕಾಶ್ಮೀರದಲ್ಲಿ ತನ್ನ ಸೇನೆಗಳನ್ನು ಇರಿಸಲು ಯಾವ ಹಕ್ಕೂ ಇಲ್ಲವೆಂದು ತಿಳಿಸಿವೆ.

ಆಸ್ಟ್ರೇಲಿಯಾದ ಮುಖ್ಯ ನ್ಯಾಯಾಧೀಶರಾದ ಸರ್ ಓವನ್ ಡಿಕ್ಸನ್‌ರವರು ಪಾಕಿಸ್ಥಾನದ ಆಕ್ರಮಣದ ವಿಚಾರದಲ್ಲಿ ಈ ರೀತಿ ಹೇಳಿದ್ದಾರೆ. —

"ಗಡಿಯ ಅತಿಕ್ರಮಣದಿಂದ ಅವರು ಅಂತಾರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿರುವರು". ಭದ್ರತಾ ಪರಿಷತ್ತಿನ ಯುದ್ಧಸ್ತಂಭನ ಸಂಬಂಧವಾದ ನಿರ್ಣಯದಲ್ಲಿ ಇದು ಪ್ರತಿಧ್ವನಿಸಿದೆ. ಅಂತಾರಾಷ್ಟ್ರೀಯ ಶಿಸ್ತತೆಯ ಕಾರಣದಿಂದ ಹಾಗೂ ಶೀಘ್ರವಾಗಿ ಶಾಂತಿ ಸ್ಥಾಪನೆ ಮಾಡುವ ವಿಚಾರದಿಂದ ಭದ್ರತಾ ಪರಿಷತ್ತು ಬಹಿರಂಗವಾಗಿ ಪಾಕಿಸ್ಥಾನವನ್ನು ಆಕ್ರಮಣಕಾರಿ ಎಂದು ಘೋಷಿಸದಿದ್ದಾಗ್ಯೂ ಭದ್ರತಾ ಪರಿಷತ್ತು ಪಾಕಿಸ್ಥಾನದ ಪಶಕ್ತ ಹಸ್ತಕ್ಷೇಪವು ಅಂತಾರಾಷ್ಟ್ರೀಯ ಕಾನೂನಿಗೆ ಭಂಗವನ್ನುಂಟು ಮಾಡಿದೆಯೆಂದು

(ಅನಿ ಪುಟ ನೋಡಿರಿ)

ಪ್ರಕಟಣೆ

ಆರು ಹೊಸ ಶಾಖೆಗಳು:-

ನವಮೈಸೂರು ಪ್ರಾಂತ್ಯದಲ್ಲಿ

- ಬಾದಾಮಿ ....
- ಜಮಖಂಡಿ ....
- ಇಳ್ಕಲ್ ....
- ಗುಳೇದಗುಡ್ಡ ....
  (ಬಿಜಾಪುರ ಜಿಲ್ಲೆ)
- ಶೃಂಗೇರಿ .... (ಕಡೂರು ಜಿಲ್ಲೆ)

ಆಂಧ್ರ ಪ್ರಾಂತ್ಯದಲ್ಲಿ

- ಗುಂಟಕಲ್

ಸದ್ಯವಲ್ಲಿಯೇ ತೆರೆಯಲ್ಪಡುವುವು.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್, ಲಿ., ಉಡುಪಿ.

The Canara Industrial & Banking Syndicate, Ltd., UDIPI.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

NAVAYUGA
Popular Kannada Weekly
Founder:—
A. B. SHETTY,
Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೩-೧೦-'೫೭	ಸಂಚಿಕೆ ೫

ವಿದೇಶೀಯ ಸಹಾಯ

ನಮ್ಮ ಅರ್ಥಮಂತ್ರಿಗಳು ಇದೀಗ ತನ್ನ ಅಮೆರಿಕೆಯ ಸಂಚಾರವನ್ನು ಮುಗಿಸಿ ಕೆನಡದ ರಾಜಧಾನಿ ಒಟ್ಟಾವದಲ್ಲಿ ಸಹರಾಷ್ಟ್ರ ಅರ್ಥಮಂತ್ರಿಗಳ ಪರಿಷತ್ತಿನಲ್ಲಿ ಭಾಗವಹಿಸುತಿದ್ದಾರೆ. ಮಾನ್ಯ ಮಂತ್ರಿಗಳ ಈ ಪಾಶ್ಚಾತ್ಯ ಪ್ರವಾಸದ ಏಕಮಾತ್ರ ಉದ್ದೇಶವೆಂದರೆ, ಭಾರತಕ್ಕೆ ಅಪು ನೆರವನ್ನು ಎಷ್ಟರ ಮಟ್ಟಿಗೆ ಕೀಡಲ್ಪಮುಂದೆ ಬರುವುವು ಎಂದು ಸರಿಯಾಗಿ ತಿಳಿದುಕೊಂಡು ಬರುವುದಾಗಿದೆ. ಅಮೆರಿಕೆಯಿಂದ ನಾವೆಷ್ಟು ಹಣವನ್ನು ನಿರೀಕ್ಷಿಸುತ್ತೇವೆ ಎಂಬುದು ಇದು ಮುಖ್ಯವಾದುದಲ್ಲ; ಅದು ನಮಗೆ ಎಷ್ಟನ್ನು ಕೊಡಲು ಸಿದ್ಧವಿದೆ ಎಂಬುದೇ ಅತ್ಯಂತ ಪ್ರಮುಖ ವಿಚಾರ ಇಂತಹ ಸಹಾಯವನ್ನು ಸೀಡುವಲ್ಲಿ ಅಮೆರಿಕೆ ಮತ್ತು ಭಾರತಗಳ ನಡುವಿನ ರಾಜಕೀಯ ಭಿನ್ನಾಭಿಪ್ರಾಯಗಳು ತಡೆಯನ್ನುಂಟು ಮಾಡುತ್ತವೆ ಎಂದು ಕೆಲವರು ಹೇಳುತ್ತಾರೆ. ಸದ್ಯ ಮಾನ್ಯ ಅರ್ಥಮಂತ್ರಿಗಳು ತಮ್ಮ ಸಂಚಾರ ಕಾಲದಲ್ಲಿ ವಾಶಿಂಗಟನ್ನಿನಲ್ಲಿ ಅಧ್ಯಕ್ಷ ಐಸೆನ್‌ಹಾವರರನ್ನೂ, ವಿದೇಶ ಕಾರ್ಯದರ್ಶಿ ಶ್ರೀ ಡಲ್ಲೆಸರನ್ನೂ ಭೆಟ್ಟಿ ಮಾಡಿ, ಭಾರತಕ್ಕೆ ಇಂದು ನೆರವೀಯುವುದರ ಉದ್ದೇಶವೇನೆಂಬುದನ್ನು ಖಚಿತಪಡಿಸಿದ್ದಾರೆ. ಭಾರತಕ್ಕೆ ತನ್ನ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸುವುದಕ್ಕಾಗಿ ಸುಮಾರು ೧೪೦೦ ಕೋಟಿ ವಿದೇಶ ವಿನಿಮಯದ ಕೊರತೆಯಿದೆ. ಈ ನಮ್ಮ ಯೋಜನೆಯಲ್ಲಿ ಔದ್ಯಮಿಕ ಪ್ರಗತಿಗೆ ವಿಶೇಷ ಗಮನವಿತ್ತುದರಿಂದ, ದೇಶವನ್ನು ಔದ್ಯಮೀಕರಣ ಪಥದತ್ತ ಸಾಗಿಸಲು ಬೆಲೆಬಾಳುವ ದೊಡ್ಡದೊಡ್ಡ ಯಂತ್ರಗಳು ಬೇಕಾಗಿದ್ದು, ಇಂತಹ ಯಂತ್ರಗಳನ್ನು ವಿದೇಶ ವಿನಿಮಯಗಳ ಮುಖಾಂತರವಾಗಿಯೇ ಪಡೆಯಬೇಕಾಗುವುದು. ಆಗ, ಭಾರತಕ್ಕೆ ತನ್ನ ವಿದೇಶ ವಿನಿಮಯಗಳಲ್ಲಿ ಸಹಜವಾದ ಕೊರತೆಯು ಕಂಡುಬರುವುದರಲ್ಲಿ ಆಶ್ಚರ್ಯವಿಲ್ಲ ಆದರೆ, ಅವನ್ನು ತುಂಬಬೇಕಾದುದು ಮಾತ್ರ ಅಗತ್ಯ. ಭಾರತ ಮತ್ತು ಅಮೆರಿಕೆಗಳ ನಡುವೆ ಕೆಲಪೊಂದು ರಾಜಕೀಯ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿವೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ; ಆದರೆ, ಭಾರತಕ್ಕೆ ಶತ್ರುರಾಷ್ಟ್ರಗಳೆಂಬುದೇ ಇಲ್ಲ, ಅಮೆರಿಕೆಗೆ ಸಡೆ ಭಾರತದ ಮಿತ್ರರಾಷ್ಟ್ರವೆಂದು ಗಟ್ಟಿಯಾಗಿ ಹೇಳಲಾಗದಿದ್ದರೂ ಶತ್ರುರಾಷ್ಟ್ರವಲ್ಲ ಎಂದು ನಿಸ್ಸಂಶಯದಿಂದ ಹೇಳಬಹುದು. ಇನ್ನೊಂದು ಪ್ರಶ್ನೆ ಭಾರತವು ಎಲ್ಲ ರಾಷ್ಟ್ರಗಳೊಂದಿಗೆ ಹೊಂದಿಕೊಂಡು ಮಿತ್ರತ್ವದಿಂದಲೇ ಇರುವುದಾದರೆ, ಕೇವಲ ಅಮೆರಿಕೆಯನ್ನೇ ನೆರವಿಗಾಗಿ ಕೈನೀಡುವುದೇಕೆ? ಎಂದರೆ, ಭಾರತದ ಮಿತ್ರರಾಷ್ಟ್ರಗಳೆಲ್ಲವೂ ಬಡ ರಾಷ್ಟ್ರಗಳು. ನಮ್ಮಂತೆಯೇ ತಮ್ಮ ಅಭಿವೃದ್ಧಿಗಾಗಿ ಹಗಲಿರುಳು ಪ್ರಯತ್ನ ನಡೆಸುವಂಥವು ಜಗತ್ತಿನಲ್ಲಿ ವಿದೇಶವಿನಿಮಯದ ಕೊರತೆಯನ್ನು ಅಮೆರಿಕ, ರಶ್ಯ ಮೊದಲಾದ ಕೆಲವೇ ಸಂಪನ್ನ ರಾಷ್ಟ್ರಗಳು ಹೋಗಲಾಡಿಸಲು ಶಕ್ತವಾಗಿದ್ದು, ಭಾರತವು ಅಮೆರಿಕೆಯ ನೆರವನ್ನು ಬಯಸುತ್ತದೆ. ಭಾರತದ ಅಭಿವೃದ್ಧಿ ಯೋಜನೆಯ ಈ ಹಿರಿಯ ಕೊರತೆಯನ್ನು ನೀಗಿಸಲು ಸಾಧ್ಯವಿರುವ ರಾಷ್ಟ್ರವೆಂದರೆ ಇದೇ ಆಗಿದ್ದು, ಅಮೆರಿಕೆಯಲ್ಲಿನ ಸ್ಥಿತಿಗತಿಗಳನ್ನು, ಭಾರತದ ಬಗ್ಗೆ ಅಮೆರಿಕನರ ಅಭಿಪ್ರಾಯವನ್ನು ತಿಳಿದು, ಅದಕ್ಕೆ ನೆರವು ನೀಡುವುದರ ಅವಶ್ಯಕತೆಗಳನ್ನು ಸಚಿವವರ್ಯರು ಮಂದಟ್ಟು ಮಾಡಿದ್ದಾರೆ. ಜಗತ್ತಿನ ದೊಡ್ಡ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿದೆ. ಪ್ರಪಂಚದ ಸುಮಾರು ಆರರಲ್ಲೊಂದು ಜನರನ್ನು ಕೂಡಿಕೊಂಡು, ಬಡವನೆನಿಸಿದ ರಾಷ್ಟ್ರವಾಗಿದೆ ಪರದಾಸ್ಯ ಶೃಂಖಲೆಯಿಂದ ಈಗ ತಾನೇ ಬಿಡುಗಡೆಗೊಂಡಿ ಒಡಗಿದ ಸ್ವಾತಂತ್ರ್ಯವನ್ನುಳಿಸುವ, ಪ್ರಜಾಸತ್ತಾತ್ಮಕ ರಾಷ್ಟ್ರವನ್ನು ಸಂಸ್ಥಾಪಿಸುವ ದೃಢ ಸಂಕಲ್ಪದಿಂದ ಕೂಡಿದೆ. ಸಾವಿರಾರು ಅಡೆತಡೆಗಳನ್ನು ದಾಟಿ ತನ್ನಲ್ಲಿ ಪ್ರಜಾಪ್ರಭುತ್ವದ ಪ್ರಯೋಗವೊಂದನ್ನು ನಡೆಸುತ್ತಿದೆ. ಇಂದು ಕೇವಲ ಪಾಶ್ಚಾತ್ಯ ರಾಷ್ಟ್ರಗಳು ಮಾತ್ರ ಪ್ರಜಾಪ್ರಭುತ್ವ ಪದ್ಧತಿಯನ್ನು ಅನುಸರಿಸಬಲ್ಲವು ಎಂಬ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿ, ಪೌರ್ವಾತ್ಯ ರಾಷ್ಟ್ರಗಳಲ್ಲಿಯೂ ಅದು ಸಾಧ್ಯವಿದೆ ಎಂದು ಪ್ರತ್ಯಕ್ಷವಾಗಿ ಪ್ರಮಾಣೀಕರಿಸಲು ಭಾರತ ಸನ್ನದ್ಧವಾಗಿದೆ. ಹೀಗಾಗಿ ಪ್ರಜಾಪ್ರಭುತ್ವವು ಅಳಬಲ್ಲುದೆ? ಇಲ್ಲ, ಅಳಿಯಬೇಕೆ ಎಂಬುದರ ಪ್ರಯೋಗ ಶಾಲೆಯೇ ಭಾರತವೆಂದರೂ ಅಡ್ಡಿಯಿಲ್ಲ. ಹಾಗಿರುವಾಗ, ಇಂತಹ ಸಂದಿಗ್ಧ ಸಂದರ್ಭಗಳಲ್ಲಿ ಭಾರತಕ್ಕೆ ಪ್ರಜಾಪ್ರಭುತ್ವವಾದಿ ಅಮೆರಿಕೆಯು ಬೆಂಬಲ ನೀಡುವುದು ಅಗತ್ಯ. ಭಾರತಕ್ಕೆ ಬೇಕಾದ ಸಾಲವು ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದಕ್ಕೆ ಮಾತ್ರ. ಸೈನ್ಯ ಇತ್ಯಾದಿ ಅಪೇಕ್ಷದಾಯಕ ವಿಭಾಗಗಳಿಗೆ ವ್ಯರ್ಥಗೊಳಿಸುವುದಕ್ಕಾಗಿಯಲ್ಲ; ತನ್ನ ಜನರ ಜೀವನ ಮಟ್ಟವನ್ನು, ಆರ್ಥಿಕ ಸ್ಥಿತಿಗತಿಗಳನ್ನು ಎತ್ತರಿಸುವುದಕ್ಕಾಗಿ ಈ ಸಾಲವು ಬೇಕಾಗಿದೆ. ಸಹಾಯಾಕಾಂಕ್ಷಿಯಾದ ಶ್ರೀ ಟಿ. ಟಿ. ಕೆ. ಯವರು ಅಧ್ಯಕ್ಷ ಐಸನ್‌ಹಾವರರೊಡನೆ ಮಾತ್ರವಲ್ಲ, ಡೆಮೊಕ್ರೆಟಿಕ್ ಪಕ್ಷದ ನಾಯಕ ಶ್ರೀ ಸ್ಟಿವನ್‌ಸನ್‌ರವರೊಡನೆಯೂ ದೀರ್ಘವಾದ ಮಾತುಕತೆ ಬೆಳೆಸಿದ್ದಾರೆ. ಅಧ್ಯಕ್ಷ ಐಕರು ಕಾಂಗ್ರೆಸ್ಸಿನಿಂದ ಹೆಚ್ಚು ಬೆಂಬಲಗು ವಿದೇಶಸಹಾಯಕ್ಕಾಗಿ ಮಂಜೂರು ಮಾಡಿಸುವುದನ್ನವಲಂಬಿಸಿ ಭಾರತಕ್ಕೆ ದೊರೆಯಬಹುದಾದ ಸಹಾಯವು ಇಷ್ಟೆ ಎಂದು ಕೆಲವರಾಡುತಿದ್ದಾರೆ. ಅಮೆರಿಕೆಯ ಕಾಂಗ್ರೆಸ್ಸಿನಲ್ಲಿ ನಿರೋಧಿಪಕ್ಷವಾದ ಡೆಮೊಕ್ರೆಟಿಕ್ ಪಕ್ಷಕ್ಕೆ ನಿಚ್ಚಳ ಬಹುಮತವಿದ್ದು ಒಂದುವೇಳೆ ಐಕರು ಸೂಚನೆ ಮಾಡಿದಲ್ಲಿ ಮಂಜೂರಾಗದೆ ಇರಲಾರದೆಂದು ಟಿ. ಟಿ. ಕೆ. ಸ್ಟಿವನ್‌ಸನ್ ಭೇಟಿಯಿಂದ ಹಾಗೂ ವಿಚಾರ ವಿನಿಮಯಗಳಿಂದ ತಿಳಿಯಬಹುದು. ಶ್ರೀ ಸ್ಟಿವನ್ಸನರು ಭಾರತದ ಬಗ್ಗೆ ಆಸಕ್ತಿ ಉಳ್ಳವರಾಗಿದ್ದು, ಅದರ ಪ್ರಗತಿಯನ್ನು ಬಯಸುವವರಲ್ಲೊಬ್ಬರೆನ್ನಬಹುದು. ಶ್ರೀ ಟಿ. ಟಿ. ಕೆ. ಯವರು ಭಾರತದಲ್ಲಿನ ಪ್ರಜಾಪ್ರಭುತ್ವ ಪ್ರಯೋಗಗಳನ್ನು ಯಶಸ್ವಿಯಾಗಲು ನೆರವಾಗುವಂತೆ ಅಮೆರಿಕೆಯ ಮನವೊಲಿಸಲು ಯತ್ನಿಸಿದ್ದಾರೆ. ಸಾಮಾನ್ಯ ಜನತೆಯೂ ಭಾರತಕ್ಕೆ ಈ ನೆರವನ್ನೀಯಲು ಯಾವ ಹೆಟ್ಟಿನ ಅನಾಸಕ್ತಿಯನ್ನು ತೋರುತ್ತಿಲ್ಲ ಆದುದರಿಂದ ಅಮೆರಿಕೆಯು ಭಾರತಕ್ಕೆ ನೆರವೀಯದಿರದು. ಆದರೆ ಎಷ್ಟು ಎಂಬುದನ್ನು ಮಾತ್ರ ಮುಂದೆ ತಿಳಿಯಬೇಕಾಗಿದೆ. ಮಾನ್ಯ ಭಾರತೀಯ ಅರ್ಥಮಂತ್ರಿಗಳು ಜಾಗತಿಕ ಬೇಂಕಿನ ಅಧಿಕಾರಿಗಳೊಡನೆಯೂ ವಿಚಾರವಿನಿಮಯವನ್ನು ಮಾಡಿದ್ದಾರೆ. ಭಾರತವೂ ಜಾಗತಿಕ ಬೇಂಕಿನ ಸದಸ್ಯ ರಾಷ್ಟ್ರವಾಗಿದ್ದು, ಅದಕ್ಕೆ ತನ್ನ ಪಾಲಿನ ಸೇಕಡಾ ೧೮ರಷ್ಟನ್ನು ಪ್ರತಿವರ್ಷವೂ ಸಲ್ಲಿಸುತ್ತಾ ಬರುತ್ತಿದೆ. ಹೀಗಿರುವಾಗ, ಈ ಬೇಂಕು ಭಾರತದ ನೆರವಿಗೆ ಬರುವುದೂ ತೀರಾ ಅಗತ್ಯ. ಬಡತನದೊಂದಿಗೆ ಸಮರ ಹೂಡುವ ಶಸ್ತ್ರವಾದ ಯೋಜನೆಯನ್ನು ಪೂರ್ತಿಗೊಳಿಸಲು ವಿಶ್ವ ಬೇಂಕು ಏನಾದರೂ ಮಾಡಿ, ಯಾವ ರೀತಿಯಲ್ಲಾದರೂ ಸಹಾಯವನ್ನು ಸೀಡುವುದು ಅದರ ಕರ್ತವ್ಯ. ಸೈನಿಕ ಬಡಂಬಡಿಕೆಗಳಲ್ಲಿ ಸೇರಿಕೊಂಡು, ತಮ್ಮ ಜನತೆಯ ಅಭಿವೃದ್ಧಿಗಿಂತ ಹೆಚ್ಚಾಗಿ ಸೈನಿಕರ ಅಭಿವೃದ್ಧಿಯಲ್ಲಿ, ಅಪಾರವಾದ ವಿದೇಶೀಯ ಸೈನ್ಯ ಹಣ ಸಹಾಯದಲ್ಲಿ ತಲ್ಲೀನವಾಗಿರುವ ಪಾಕಿಸ್ತಾನದಂತಹ ರಾಷ್ಟ್ರಗಳಿಗೆ ಈಯುವ ಸಹಾಯ ಧನವನ್ನಾದರೂ ಕಡಿಮೆಮಾಡಿ, ಪ್ರಜಾಪ್ರಭುತ್ವವನ್ನು ಉಳಿಸಲು ಹೋರಾಡುತ್ತಿರುವ ಭಾರತಕ್ಕೆ ವಿಶೇಷ ರೀತಿಯ ಸಹಾಯ ಮತ್ತು ಉತ್ತೇಜನ ವೀಯಬೇಕೆ ಹೋದರೆ, ಅದು ಸರಿ ಎಂದೆನಿಸಲಾರದು. ಇಂಥಾದೇ ವಿಚಾರಗಳನ್ನು ಮಾನ್ಯ ಮಂತ್ರಿಗಳು ಜಾಗತಿಕ ಬೇಂಕಿಗೂ ಅಮೆರಿಕೆಗೂ ಮನವರಿಕೆ ಮಾಡಿಕೊಟ್ಟು ಭಾರತದ ಸಾಮಾನ್ಯ ಆರ್ಥಿಕ ಪರಿಸ್ಥಿತಿ ಸುಭದ್ರವಿರುವುದೆಂದೂ, ಅದರ ಕಷ್ಟವೆಂದರೆ, ಕೇವಲ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುವುದೆಂದೂ ತಿಳಿಸಿದ್ದಾರೆ. ಈ ರೀತಿಯಾಗಿ ವಿದೇಶ ವಿನಿಮಯಗಳನ್ನು ಭಾರತವು ಸಹಾಯವಾಗಿ ಪಡೆಯಲು ಅಸಾಧ್ಯವಾದರೆ, ವತ್ತಾಯ ಪೂರ್ವಕವಾಗಿ ಮನಸ್ಸಿಲ್ಲದ ಮನಸ್ಸಿನಿಂದ ತನ್ನ ಯೋಜನೆಯನ್ನು ನಿಧಾನಗೊಳಿಸಬೇಕಾಗಿ ಪಡಂಜಲಿ ಶಾಸ್ತ್ರಿಯವರು ಹೇಳಿರುವಂತೆ ಇನ್ನೂ ಇನ್ನೂ ಮುಂದಿನ ಪೀಳಿಗೆಗಾಗಿ ಇಂದಿನವರು ತ್ಯಾಗಮಾಡಿರೆಂದು ಹೇಳುವುದು ತೀರಾ ಅಂತ್ಯಪ್ರವಾದವಾಗಿದೆ. ಆದರೆ, ಅಂತಹ ಯಾವುದೇ ಆತಂಕವು ಮುಂದೆ ಬರಬಾರದು. ನಾವು ಏಕಗುರಿಯುತ್ತ ಸಾಗುತ್ತಲಿರುವಾಗ, ಅದನ್ನು ಜಗತ್ತಿನ ರಾಷ್ಟ್ರಗಳು ಎವೆಯಿಕ್ಕೆ ನೋಡುವುದರಲ್ಲಿ ಅರ್ಥವಿಲ್ಲ, ಅವು ತಮ್ಮ ಕೈಯನ್ನಿತ್ತು, ಪ್ರೇರಕ ಪ್ರೋತ್ಸಾಹಕ ಶಕ್ತಿಗಳಾಗಿ ಸರಿ

ಸಂಕ್ಷಿಪ್ತ ಸುದ್ದಿಗಳು

ಅಪೂರ್ವ ಹಸ್ತಪ್ರತಿಗಳು

ಭಾರತ ಸರಕಾರದವರು ದೇಶದ ಬೇರೆ ಬೇರೆ ಭಾಗಗಳಲ್ಲಿ ಪ್ರಾಚೀನ ಹಾಗೂ ಅಪೂರ್ವವಾಗಿರುವ ಗ್ರಂಥಗಳ ಹಸ್ತಪ್ರತಿಗಳನ್ನು ಪಡೆದಿರುವ ಎಲ್ಲ ವ್ಯಕ್ತಿ ಮತ್ತು ಸಂಸ್ಥೆಗಳಿಗೆ ಮನವಿಯೊಂದನ್ನು ಕಳುಹಿಸಿ ಅಂತಹ ಹಸ್ತಪ್ರತಿಗಳನ್ನು ರಾಷ್ಟ್ರಕ್ಕೆ ಕೊಡುಗೆಯನ್ನಾಗಿ ಸೀಡಬೇಕೆಂದು ಕೇಳಿಕೊಂಡಿರುವರು ಇಂತಹ ಪ್ರತಿಗಳು ದೇಶದ ಅಮೂಲ್ಯವಾದ ಸಂಪತ್ತಾಗಿದ್ದು ಅದು ಭಾರತದ ನಾನಾ ಭಾಗಗಳಲ್ಲಿ ಚಲ್ಲಾಪಿಲ್ಲಿಯಾಗಿ ಹಂಚಿಹೋಗಿರುವುದು. ಇವುಗಳನ್ನು ತೀವ್ರಗತಿಯಲ್ಲಿ ಸಂಗ್ರಹಿಸಿ ಸಂರಕ್ಷಿಸದಿದ್ದರೆ, ಅವಗಳು ನಮಗ ಎಂದೆಂದಿಗೂ ದೊರೆಯದೆ ಹೋಗಬಹುದು. ಆದುದರಿಂದ ತಮ್ಮಲ್ಲಿರುವ ಹಸ್ತಪ್ರತಿಗಳನ್ನು ಬಳುವಳಿಯಾಗಿ ಯಾ ವಿಕ್ರಯ ಮಾಡಿಯಾದರೂ ಸರಕಾರಕ್ಕೆ ಮುಟ್ಟಿಸುವಂತೆ ಸಾರ್ವಜನಿಕರನ್ನು ವಿನಂತಿಸಿದೆ.

ಹೆಸರಿಗಾಗಿ ಜಗಳ

ರಾಜ್ಯದ ಹೆಸರನ್ನು ಮೈಸೂರೆಂದಿಟ್ಟುದನ್ನು ತೆಗೆದು, ಕರ್ನಾಟಕವೆಂದಿಡಬೇಕೆಂಬುದಾಗಿ ಶ್ರೀ ಅಂದಾನಪ್ಪ ದೊಡ್ಡಮೇಟಿಯವರ ಅನಧಿಕೃತ ಗೊತ್ತುವಳಿಯು ರಾಜ್ಯವಿಧಾನ ಸಭೆಯಲ್ಲಿ ಚರ್ಚೆಗೆ ಬಂದಾಗ ಸಭೆಯಲ್ಲಿನ ವಾತಾವರಣವು ಬಿಸಿಯೇರಿತು. ಅವರು ಮಾತಾಡುತ್ತಾ, ಹೆಸರಿನಲ್ಲೇನಿದೆ ಎಂಬುದರಲ್ಲಿ ಏನೂ ಇಲ್ಲ. ಹೆಸರಿನಲ್ಲಿ ಎಲ್ಲವೂ ಇದೆ. ನಮ್ಮ ಮಕ್ಕಳಿಗೆ ಕೆಟ್ಟ ಹೆಸರಿಡಲು ತಂದೆ ತಾಯಿಗಳು ಬಯಸುವುದಿಲ್ಲ ಎಂದು ಮಂತಾಗಿ ವಾದಿಸಿದರು. ಈ ಗೊತ್ತುವಳಿಯ ಚರ್ಚೆಯಲ್ಲಿ ಭಾಗವಹಿಸಿದ ೨೧ ಸದಸ್ಯರಲ್ಲಿ ೮ ಸದಸ್ಯರು ಮಾತ್ರ ಈ ಬದಲಾವಣೆಯನ್ನು ವಿರೋಧಿಸಿದರು.

ಜ್ಞಾನಾಂತ ಬೆಳೆಯಲಿ

ಕನ್ನಡ ಸಾಹಿತ್ಯದಲ್ಲಿ ಆಧುನಿಕ ಮಾನವನಿಗೆ ಉಪಯುಕ್ತವಾದ ವಿಷಯಗಳ ಬಗ್ಗೆ ಅಷ್ಟೊಂದು ಸಾಹಿತ್ಯಗಳು ರಚನೆಯಾಗಿಲ್ಲ. ಕಾದಂಬರಿ, ಕಥೆಗಳು, ಕವನ ಸಂಗ್ರಹಗಳನ್ನು ಕಂಡು ನಾವು ಹೆಮ್ಮೆಪಡುತ್ತೇವೆ. ಆದರೆ, ಗಣಿತ, ಭೌತ, ರಸಾಯನ, ಅರ್ಥ ಮುಂತಾದ ಶಾಸ್ತ್ರ ಸಂಬಂಧದಲ್ಲಿ ಶಾಸ್ತ್ರೀಯ ವಿವೇಚನೆ ಮಾಡಿದ ಗ್ರಂಥಗಳು ನಮ್ಮಲ್ಲಿ ಬಹಳ ಕಡಿಮೆಯಿವೆ ಎಂದು ಕನ್ನಡ ಜ್ಞಾನಕೋಶ ಯೋಜನಾ ಸಂಪಾದಕ ಮಂಡಳಿಯ ಸಭೆಯಲ್ಲಿ ರಾಜ್ಯದ ವಿದ್ಯಾ ಮಂತ್ರಿ ಶ್ರೀ ವೆಂಕಟಪ್ಪನವರು ಹೇಳಿದರು.

ಣಮಿಸಿದರೆ ಮಾತ್ರ ಅವುಗಳಿಗೂ ಭೂಷಣ ಮತ್ತು ನಮಗೂ ತೃಪ್ತಿ. ಆದುದರಿಂದ ಭಾರತದ ಉಳಿವಳಿವನ್ನು ನಿರ್ಧರಿಸಲಿರುವ ಈ ಯೋಜನೆಗೆ ಸಾಕಷ್ಟು ವಿದೇಶೀಯ ನೆರವು ಒದಗಬಂದಬೇಕು; ತನ್ನೊಳಕ ವಿದೇಶ ವಿನಿಮಯಗಳ ಕೊರತೆಯು ನೀಗಿ, ಭಾರತದಲ್ಲಿ ಯೋಜನೆಯು ಸಂಪೂರ್ಣವಾಗಿ ಕಾರ್ಯಗತವಾಗಿ ಪ್ರಜಾಪ್ರಭುತ್ವವು ಇಲ್ಲಿ ಯಶಸ್ವಿಯಾಗುವುದೆಂದು ಜಗತ್ತಿಗೆ ಸಾರುವಂತಾಗಬೇಕು ಎಂಬುದೇ ನಮ್ಮ ಹಾರೈಕೆ.

ಒಕ್ಕಲತನ ಆಧಾಯಕರ

ಮೈಸೂರು ಸರಕಾರದವರು ತಮ್ಮ ಪ್ರಕಟಣೆಯಲ್ಲಿ ಮೈಸೂರು ಒಕ್ಕಲತನ ಆದಾಯ ಕರ ಕಾಯಿದೆ ೧೯೫೭ ಮತ್ತು ಮೈಸೂರು ಸ್ಟಿರಿಟ್ ಮಾರಾಟ ಕರ ಕಾಯಿದೆ ೧೯೫೭ ಈ ಎರಡು ಕಾಯಿದೆಗಳು ೧೯೫೭ನೆ ಅಕ್ಟೋಬರ ೧ನೆ ದಿನಾಂಕದಿಂದ ಜಾರಿಯಲ್ಲಿ ಬಂದಿರುವುದೆಂದು ಸಾರಿದ್ದಾರೆ.

ಜಂಬೂ ಸವಾರಿಯಿಲ್ಲ!

ಮೈಸೂರಿನ (ಮಹಾರಾಜ) ರಾಜ್ಯಪಾಲರಾಗಿರುವ ಶ್ರೀ ಜಯಚಾಮರಾಜ ಒಡೆಯರವರು ಮಾಡಿಕೆಯಂತೆ ಹೊರಡಲಿರುವ ವಿಜಯದಶಮಿ ಜಂಬೂ ಸವಾರಿಯನ್ನು ಈ ವರ್ಷ ರದ್ದುಪಡಿಸಿದ್ದಾರೆ ಎಂದು ರಾಜ್ಯಪಾಲರ ಕಾರ್ಯದರ್ಶಿಯೊಂದು ಪ್ರಕಟಣೆ ಹೊರಡಿಸಿದ್ದಾನೆ. ರಾಜ್ಯಸರಕಾರವು ದಸರಾವನ್ನು ರಾಷ್ಟ್ರೀಯೋತ್ಸವವೆಂದು ಆಚರಿಸಲು ನಿರ್ಧರಿಸಿದ್ದರೂ, ರಾಜ್ಯಪಾಲ-ಹಾಗೂ ಸರಕಾರಗಳ ನಡುವೆ ಕೆಲವೊಂದು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದಿರುವುದರಿಂದಲೇ ಜಂಬೂಸವಾರಿಯು ರದ್ದುಗೊಳಿಸಿತೆಂದು ತಿಳಿಯುತ್ತದೆ.

ವಿದ್ಯುಚ್ಛಕ್ತಿಮಂಡಳ

ಭಾರತೀಯ ವಿದ್ಯುಚ್ಛಕ್ತಿ (ಸೂಪ್ಲೈಕೆ) ಕಾಯಿದೆಯನ್ವಯ ರಚಿತವಾಗಿರುವ ಮೈಸೂರು ರಾಜ್ಯ ವಿದ್ಯುಚ್ಛಕ್ತಿ ಮಂಡಳವು ಸಪ್ಟಂಬರ ೩೦ನೆ ದಿನಾಂಕದಿಂದ ಅಸ್ತಿತ್ವಕ್ಕೆ ಬಂದಿದೆ. ಈ ಮಂಡಳವು ಜಲವಿದ್ಯುತ್ ನಿರ್ಮಾಣಯೋಜನೆಗಳು, ಅವುಗಳ ಪರಿಶೋಧನೆಗಳು, ಹಾಗೂ ವಿದ್ಯುಚ್ಛಕ್ತಿ ಇನ್ಸಪೆಕ್ಟರರ ಕಾರ್ಯಾಲಯಗಳಿಗೆ ಸಂಬಂಧಿಸಿದ ಕೆಲಸಗಳನ್ನು ಬಿಟ್ಟು ಮೈಸೂರು ಸರಕಾರದ ವಿದ್ಯುಚ್ಛಕ್ತಿ ಶಾಖೆಯ ಉಳಿದೆಲ್ಲ ಕೆಲಸಗಳನ್ನು ನೋಡಿಕೊಳ್ಳುವುದು ಸದ್ಯದಲ್ಲಿರುವ ವಿದ್ಯುದುತ್ಪಾದಕ ಕೇಂದ್ರಗಳನ್ನು ನೋಡಿಕೊಳ್ಳುವುದು-ಶಂಜಿಕೆಯ ವ್ಯವಸ್ಥೆ ಹಾಗೂ ಗ್ರಾಮೀಣ ಪ್ರದೇಶಗಳಿಗೆ ವಿದ್ಯುತ್ ಪೂರೈಕೆ, ನೀರಾವರಿ ಪಂಪುಗಳಿಗೆ ವಿದ್ಯುತ್ ಪೂರೈಕೆ ಮುಂತಾದ ಅಭಿವೃದ್ಧಿ ಕೆಲಸಗಳು ಈ ಮಂಡಳದ ಕಕ್ಷೆಯಲ್ಲಿ ಬರುವುದು.

ಕೇರಳದಲ್ಲಿ ಅಶಾಂತಿ

ದೇಶದ ಎಲ್ಲ ಭಾಗಗಳಲ್ಲಿಯೂ ಕೆಲಮಟ್ಟಿಗೆ ಔದ್ಯಮಿಕ ಅಶಾಂತಿ ಇರುವುದಾದರೂ ಕೇರಳದಲ್ಲಿ ಈಗ ಅದು ನೊದಲಿದ್ದದಕ್ಕಿಂತ ಹೆಚ್ಚು ಇದೆ ಎಂದು ಕೇಂದ್ರ ಯೋಜನಾ ಮಂತ್ರಿ ಶ್ರೀ ನಂದಾರು ಹೇಳಿದ್ದಾರೆ. ಈಗಿನಂತಹ ಪರಿಸ್ಥಿತಿಯನ್ನುಳಿಯಗೊಟ್ಟರೆ, ರಾಜ್ಯದ ಔದ್ಯಮಿಕರಣವು ನಡೆಯಲಾರದು ಎಂದವರು ಅಭಿಪ್ರಾಯಪಟ್ಟರು.

ಜಪಾನಿನರು ನಿಶ್ಶೇಷರಾಗುವರೆ!

ಉಣ್ಣಾಸ್ತ್ರ-ಸ್ಫೋಟಪ್ರಯೋಗಗಳು ಈಗ ನಡೆಯುವುದಂತೆ ಮತ್ತೂ ಮತ್ತೂ ಸಂಭವಿಸುತ್ತಾ ಹತ್ತಿದರೆ, ಇನ್ನು ಹತ್ತು ಸೀಳಿಗಗಳ ಅವಧಿಯಲ್ಲಿ ಜಪಾನೀಯರು ನಿಶ್ಶೇಷವಾಗಿ ಹೋಗುವರು ಎಂದು ಇಬ್ಬರಕ್ಕೆ ವಿದ್ಯಾಲಯದ ಪ್ರೊ. ಟಾಕಾವೊ ರಾಶಿಯಾಬಾರಾ ಅವರು ಹತ್ತು ವರ್ಷಕಾಲ ಇಲಿಗಳ ಮೇಲೆ ಪ್ರಯೋಗ ನಡೆಸಿದ ನಂತರ ತಮ್ಮ ನಿರ್ಣಯವನ್ನು ಪ್ರಕಟಗೊಳಿಸಿದ್ದಾರೆ.

ವಿಶ್ವವಿದ್ಯಾಲಯ ಶಿಕ್ಷಣ

ಉಚ್ಚ ಶಿಕ್ಷಣವು ಆಸ್ತಿ ಮತ್ತು ಯೋಗ್ಯರಾದ ಕೆಲವರಿಗೆ ಮಾತ್ರ ದೊರೆಯುವುದು ವಿಹಿತ. ಬ್ರಿಟನ್, ಫ್ರಾನ್ಸ್, ರಶಿಯ ಮತ್ತು ಚೀನಾ ದೇಶಗಳಲ್ಲಿ ಸರ್ವರಿಗೂ ಉಚ್ಚ ಶಿಕ್ಷಣ ಮುಕ್ತವಾಗಿಲ್ಲ. ಆದರೆ, ಅಮೆರಿಕದಲ್ಲಿ ಮಾತ್ರ ತೆರೆದಿದೆ. ಶಿಕ್ಷಣ ಪಡೆಯುವುದರಿಂದ ಹೊಂದುವವನಿಗೆ ಲಾಭವಾಗಬೇಕು; ಮತ್ತು ಅವನಿಂದ ದೇಶಕ್ಕೆ ಉಪಯೋಗವಿರಬೇಕು ಇದು ಭಾರತದೇ ಸರಕಾರದ ಶಿಕ್ಷಣ ಧೋರಣೆಯ ಧ್ಯೇಯವಾಗಿದೆ. ಜ್ಞಾನ ಸಂಪಾದನೆಗಾಗಿಯೇ ಶಿಕ್ಷಣ ಪಡೆಯುವವರು ಕೆಲವರಿರಬಹುದು ಅಂತಹರ ಸಂಖ್ಯೆ ತೀರ ಕಡಿಮೆ ಎಂದು ಶ್ರೀ. ಸಿ. ಡಿ. ದೇಶಮುಖರಂದಿದ್ದಾರೆ

ವ್ಯಾಸಂಗ ವೇತನ

ಪ್ರತಿಭಾಶಾಲಿಗಳಾದ ಬಡ ವಿದ್ಯಾರ್ಥಿಗಳು ಮೆಟ್ರಿಕ್‌ನ ನಂತರ ವ್ಯಾಸಂಗವನ್ನು ಮುಂದುವರಿಸಲು ಅನುಕೂಲವಾಗುವಂತೆ ಭಾರತ ಸರಕಾರದವರು ಅರ್ಹತಾ ವ್ಯಾಸಂಗ ವೇತನವನ್ನು ಕೊಡಲು ನಿರ್ಧರಿಸಿರುವರು ೧೯೫೭-೫೮ರಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಇಂಟರ್ ಮೀಡಿಯೇಟ್ ಹಾಗೂ ತತ್ಸಮಾನದ ತರಗತಿಗಳಲ್ಲಿ ವ್ಯಾಸಂಗ ಮಾಡುವವರಿಗೆ ಈ ವೇತನಗಳನ್ನು ಕೊಡಲಾಗುವುದು ಒಟ್ಟು ೨೦೦ ಇಂತಹ ವೇತನಗಳನ್ನು ಅಖಿಲಭಾರತ ಆಧಾರದಮೇಲೆ ಕೊಡಲಾಗುವುದು

ಕೈಗಾರಿಕಾ ವಸತಿ ನಿರ್ಮಾಣ

ಸರಕಾರದವರು ಸಹಾಯಧನ ನೀಡಿ ಕೈಗಾರಿಕಾ ವಸತಿ ನಿರ್ಮಾಣ ಯೋಜನೆಯ ಪ್ರಕಾರ ಳಾಳ ಒಂದು ಕೋಟಿಯ ವಸತಿಗಳನ್ನು ನಿರ್ಮಿಸುವುದಕ್ಕಾಗಿ ಭಾರತ ಸರಕಾರದವರು ೧೯೫೭-೫೮ರ ಜೂನ್ ಮತ್ತು ಜುಲೈ ತಿಂಗಳಲ್ಲಿ ೮,೨೫,೯೦೦ ರೂಪಾಯಿಗಳ ಹಣವನ್ನು ಸಾಲ ಹಾಗೂ ಸಹಾಯಧನದ ರೂಪದಲ್ಲಿ ಮಂಜೂರು ಮಾಡಿದ್ದಾರೆ.

ರಾಜ್ಯಗಳಲ್ಲಿ ಭೂಸುಧಾರಣೆ

ನವದೆಹಲಿಯಲ್ಲಿ ಇತ್ತೀಚೆಗೆ ಸೇರಿದ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನ ಸ್ಥಾಯಿ ಸಮಿತಿಯು ೧೯೫೭-೫೮ರ ಕೊನೆಯ ವೇಳೆಗಾದರೂ ಭೂಹಿಡುವಳಿ ಸಂಬಂಧದ ಶಾಸನಗಳನ್ನು ಕೈಗೊಂಡಿರುವ ರಾಜ್ಯಗಳಲ್ಲಿ ಅವುಗಳ ಆಚರಣೆಯನ್ನು ಕೈಗೊಳ್ಳಬೇಕೆಂದೂ, ಇನ್ನುಳಿದ ರಾಜ್ಯಗಳಲ್ಲಿ ಹಿಡುವಳಿಗೆ ಸಂಬಂಧಪಟ್ಟ ಶಾಸನ ಕ್ರಮಗಳನ್ನು ಮುಕ್ತಾಯಗೊಳಿಸಬೇಕೆಂದೂ ಸೂಚನೆಯಿತ್ತಿದೆ.

ನ್ಯಾಯ ಮಂತ್ರಿ ಸಮ್ಮೇಳನ

ನವದೆಹಲಿಯಲ್ಲಿ ರಾಜ್ಯಗಳ ಕಾನೂನು ಮಂತ್ರಿಗಳ ಸಮ್ಮೇಳನವು ಕಳೆದ ತಿಂಗಳೊಂತ್ಯದಲ್ಲಿ ಸೇರಿತ್ತು. ನ್ಯಾಯಸ್ಥಾನಗಳಲ್ಲಿ ಅಧಿಕ ಸಂಖ್ಯೆಯಲ್ಲಿರುವ ಮೊಕದ್ದಮೆಗಳನ್ನು ಜಾಗ್ರತೆ ಬಗೆಹರಿಸುವ ಕ್ರಮ ನ್ಯಾಯತಕರಾರು ಸಂಬಂಧ ವೆಚ್ಚವನ್ನು ಕಡಿಮೆ ಮಾಡುವುದ ಈ ಸಮ್ಮೇಳನದ ಉದ್ದೇಶವಾಗಿತ್ತು. ೧೯೫೭ರ ಜನವರಿಯ ವೇಳೆಗೆ ೧೯೫೭ಕ್ಕೂ ಮೊದಲು ದಾಖಲಾದ ಎಲ್ಲ ಅಪೀಲುಗಳನ್ನೂ ಇತ್ಯರ್ಥಮಾಡಬೇಕೆಂದೂ, ಆನಂತರ ಅಧಿಕ ಸಂಖ್ಯೆಯಲ್ಲಿ ಬೆಳೆದ ಮೊಗಳನ್ನು ಇತ್ಯರ್ಥವಾಗದೆ ಉಳಿ ಎದಂತೆ ನೋಡಿಕೊಳ್ಳಬೇಕೆಂದೂ ಈ ಸಮ್ಮೇಳನದಲ್ಲಿ ಅಂಗೀಕೃತವಾಯಿತು.

ಚೀನಕ್ಕೆ ಪ್ರಾತಿನಿಧ್ಯವಿಲ್ಲ

ರಾಷ್ಟ್ರೀಯ ಚೀನಕ್ಕೆ ಯುಕ್ತ ರಾಷ್ಟ್ರ ಸಂಘದಲ್ಲಿ ಪ್ರಾತಿನಿಧ್ಯ ದೊರೆಯಬೇಕೆಂಬ ಭಾರತೀಯ ಗೊತ್ತುವಳಿಯು ಸಾಕಷ್ಟು ಬೆಂಬಲವಿಲ್ಲದೆ ಇದ್ದುದರಿಂದ ಬಿದ್ದು ಹೋಯಿತು.

ರಾಜ್ಯಪಾಲ ಎ. ಜೆ. ಜೋನರ ನಿಧನ

ಮದ್ರಾಸಿನ ರಾಜ್ಯಪಾಲರಾದ ಶ್ರೀ ಎ. ಜೆ. ಜೋನರು ಇದೇ ತಾ. ೧ನೇ ರಾತ್ರಿ ೨ ಗಂಟೆಗೆ ಮದ್ರಾಸಿನ ಜನರಲ್ ಆಸ್ಪತ್ರೆಯಲ್ಲಿ ಅಕಸ್ಮಿಕವಾಗಿ ತಮ್ಮ ೭೫ನೇ ವಯಸ್ಸಿನಲ್ಲಿ ನಿಧನರಾದರು ಎರಡು ವಾರಗಳ ಮೊದಲು ಇವರು ಆಸ್ಪತ್ರೆಗೆ ಸೇರಿ ಕರುಳುರೋಗ ಸಂಬಂಧ ಒಪರೇಶನ್ ನಡೆದಿತ್ತು. ಶಸ್ತ್ರಕ್ರಿಯೆಯ ನಂತರ ಅವರು ಗುಣ ಹೊಂದಿದ್ದರೂ ಸೋಮವಾರ ಜ್ವರ ಬರಲು ಶರಂಭಿಸಿ ಪರಿಸ್ಥಿತಿಯು ವಿಷಮಗೊಂಡು ಅವರು ಮರಣಗೊಂಡರು. ಇವರ ಸ್ಥಾನದಲ್ಲಿ ತಾತ್ಕಾಲಿಕ ರಾಜ್ಯಪಾಲರಾಗಿ ಮದ್ರಾಸಿನ ಚೀಫ್ ಜಸ್ಟೀಸ್ ಶ್ರೀ ಪಿ. ವಿ. ರಾಜಮನ್ನಾರ್ ಅವರು ತಾ. ೧ನೇ ಬೆಳಗ್ಗೆ ಅಧಿಕಾರ ವಹಿಸಿಕೊಂಡಿರುವರು.

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು—

ಕಳೆದ ತಾ ೩೦ರಂದು ಸಂಜೆ ವೈಸ್ ಚೇರ್‌ಮೆನ್ ಶ್ರೀ ಸಿ ಎ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ತಾ ೩೩ರಂದು ರಾತ್ರಿ ಶ್ರೀ ಕೃಷ್ಣರುದಿಸಿದ ಗೋಪಾಲಿಗೆ ಬೆಂಕಿ ತಗಲಿ ಉಂಟಾದ ಶೋಕದಲ್ಲಿ ಮೃತರ ಅಪಕಾರಿಗಳೊಡನೆ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಉಡುಪಿ ಅಗ್ನಿಶಾಮಕ ದಳದ ಸಹಾಯವು ಇಂತಹ ಗಂಡಾಂತರ ಸಮಯದಲ್ಲಿ ದೊರೆಯುವ, ದಳವು ಕನ್ನ ಅಪ್ರಯೋಜಕತೆಯನ್ನು ಪ್ರದರ್ಶಿಸುವಂತಾದ ಪರಿಸ್ಥಿತಿಗೆ ಬಂದುದರ ನಿಮಿತ್ತ ಸೂಚನಾರ್ಥವಾಗಿ ಕೌನ್ಸಿಲಿನ ಸಭೆಯನ್ನು ೫ ನಿಮಿಷ ಮೌನದಿಂದಿರಬೇಕೆಂಬ ಅರ್ಥಾಳ್ಳ ನಿರ್ಣಯವನ್ನು ಸರ್ವಾನುಮತದಲ್ಲಿ ಡಾ. ಸಿ ಜಿ ಆಚಾರ್ಯರು ಮುಂದೊತ್ತಿದರು. ಹಾಜರಿದ್ದ ಸದಸ್ಯರು ಚಿಂಬಲಿತ್ತುದರಿಂದ ನಿರ್ಣಯವು ಸರ್ವಾನುಮತದಿಂದ ಪಾಸುಮಾಡಲಾಯಿತು. ಬಳಿಕ ಸಾರ್ವಜನಿಕ ತೆರಿಗೆದಾರರಿಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಸದಸ್ಯರು ಅಧ್ಯಕ್ಷರ ಗಮನಕ್ಕೆ ತಂದರು ಬಳಿಕ ಸಭೆ ಪ್ರಾರಂಭವಾಯಿತು ಮುಂಬರುವ ಶ್ರೀ ಕೃಷ್ಣಾಷ್ಟಮಿ ಸ್ಥಾಪಿಗಳವರ ಪಾಯಾಣ ಕಾಲದಲ್ಲಿ ನಗರವನ್ನು ವಿಶೇಷತ ಚೊಕ್ಕಟವಾಗಿರಿಸಲು ರೂಪಾಯಿ 1600/- ವೆಚ್ಚ ಮಂಜೂರುಮಾಡಲಾಯಿತು. ಸೊಳ್ಳೆ ನಿರೋಧ ಕಾರ್ಯವೈಸಗಲು ಬೇಕಾಗುವ ಆಗತ್ಯ ಶಿಬಂಧಿಯನ್ನು ನೇಮಿಸಲು ಕೌನ್ಸಿಲಿನ ಒಪ್ಪಿಗೆ ದೊರೆಯಿತು. ಮುನಿಸಿಪಲ್ ಆಫೀಸಿನ ಟೈಪಿಸ್ಟ್ ಕ್ಲರ್ಕರಿಗೆ ಇತರ ಆಫೀಸುಗಳಲ್ಲಿ ಕೊಡ ತಂತೆ ವಿಶೇಷವಾಗಿ ತಿಂಗಳೊಂದರ ರೂಪಾಯಿ 15/- ಎಲೌವೆನ್ಸ್ ಕೊಟ್ಟಬಹುದೆಂದು ನಿರ್ಣಯಿಸಲಾಯಿತು. ವಿಷಯಪಟ್ಟಿಯಲ್ಲಿದ್ದ ಇತರ ವಿಷಯಗಳನ್ನು ಬಾಕಿಯಿಡಲಾಯಿತು.

ಶಾಲಾ ಪಾರ್ಲಿಮೆಂಟ್ ಉದ್ಘಾಟನಾ ಸಮಾರಂಭ ಮತ್ತು ಸಂಯುಕ್ತ ತರ್ಕ ಸಭೆ

ಸ್ಥಳೀಯ ಕಡಿಯಾಳಿ ಡಾ. ಎ. ಶಾಮಾಲಾ ಮತ್ತು ಸರಕಾರಿ ಪಾರ್ಲಿಮೆಂಟನಲುದ್ಘಾಟನಾ ಸಮಾರಂಭ ಮತ್ತು ಸಂಯುಕ್ತ ತರ್ಕ ಸಭೆ ಇವುಗಳು ಕಳೆದ ತಾ. ೩೧.೨.೫೭ರಂದು ಉಡುಪಿ ಉತ್ತರ ಶ್ರೀಮಠದ ಶಾಲೆಗಳ ಹಿರಿಯ ಪರೀಕ್ಷಾಧಿಕಾರಿ ಶ್ರೀ ಎಸ್. ವಿಶ್ವನಾಥ ಬಿ ಎ; ಬಿ. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ವಿ. ಗುರುರಾಜ ಭಟ್ಟರು ಸ್ವಾಗತಭಾಷಣಮಾಡಿದರು. ಶ್ರೀ ಡೇನಿಸ್ ಡಿ ಸೋಜ ಇವರು ಅಧ್ಯಕ್ಷರ ಪರಿಚಯಮಾಡಿಕೊಟ್ಟರು. ಅಬಳಿಕ ಅಧ್ಯಕ್ಷರು ಪಾರ್ಲಿಮೆಂಟಿನ ಉದ್ಘಾಟನೆ ಮಾಡಿದರು. ಪಾರ್ಲಿಮೆಂಟ್ ಅಧಿವೇಶನವು ಜರಗಿ ಪ್ರಶ್ನೋತ್ತರಗಳಾದುವು. ತದನಂತರ ಕನ್ನಡ ಹಾಡು ಹಾಗೂ ಇನ್ಸಿಕರ ಅಧಿನಯ ಸೂರ್ಯಕಾಂತ ಚಟುಪಟಿಕೆಗಳು ಪ್ರದರ್ಶಿಸಲ್ಪಟ್ಟುವು ತದನಂತರ ಪ್ರಾಥಮಿಕ ಶಾಲೆಗಳಲ್ಲಿ ಹಿಂದೀ ಶಿಕ್ಷಣ ಅಗತ್ಯವೇನು ಯಾ ಅನಗತ್ಯವೇ ಎಂಬ ವಿಷಯದ ಕುರಿತು ವಿದ್ಯಾರ್ಥಿಗಳು ಚರ್ಚಾತ್ಮಕ ಭಾಷಣ ಇತ್ತರು. ಅಧ್ಯಾಪಕರಲ್ಲಿ ಶ್ರೀ ಎಸ್. ಸೋಮಶೇಖರ ರಾಯರು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯ ಪ್ರಗತಿ, ಚಟುಪಟಿಕೆ, ಪಾಠಕ್ರಮಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ ಇಂತಹ ಒಂದು ವಿದ್ಯಾಸಂಸ್ಥೆಯಲ್ಲಿ ವಿದ್ಯಾಭ್ಯಾಸಮಾಡುವ ವಿದ್ಯಾರ್ಥಿಗಳು ಧನ್ಯರು ಎಂದರು ವಿದ್ಯಾರ್ಥಿಗಳು ಉತ್ತಮ ನಾಗರಿಕರಾಗಿ, ಜೀವನ ಶಿಕ್ಷಣವನ್ನು ಪಡೆಯಬೇಕು ಎಂದು ಹೇಳಿ ತಮ್ಮ ಭಾಷಣ ಮುಗಿಸಿದರು. ಮುಖ್ಯೋಪಾಧ್ಯಾಯರು ಧನ್ಯವಾದಾರ್ಪಣೆ ಮಾಡಿದ ಬಳಿಕ ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು.

ತಿದ್ದುಪಡಿ: ಕಳೆದ ನವಯುಗ ಸಂಚಿಕೆಯ ಎಂಟನೆ ಪುಟದಲ್ಲಿ 'ದಿ ಕೆಮೋಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ' ಅದರ ಏಲಂ ನೋಟೀಸಿನಲ್ಲಿ 'ಬೋರೆನ್ ವಿಸೋಜರ ವಿಳಾಸದಲ್ಲಿ ಕೆಳಲುಗಿರಿ P. O ಎಂಬುದನ್ನು ಕೊಳಲಗಿರಿ P. O ಎಂದೂ 'ಕೆ. ಅಣ್ಣಪ್ಪ ಪಟ್ಟರ ವಿಳಾಸದಲ್ಲಿ ಕುಜ್ಜಾಲ P. O ಎಂಬುದನ್ನು ಕುಂಜಾಲು P O ಎಂದೂ ತಿದ್ದಿ ಓದುವುದು ಸರಿ ನ

ದಸರಾ ಸಾಹಿತ್ಯಗೋಷ್ಠಿ ಅಂಬಲಪಾಡಿ ಗಿರಿಜಾ ಭವನದಲ್ಲಿ ದಸರಾ ಸಾಹಿತ್ಯಗೋಷ್ಠಿಯು ದಿನಾಂಕ ೧೯ರಂದು ಜೀವನಮೂಲ ಕಾರ್ಪೊರೇಶನಿನ ಉಡುಪಿ ವಿಭಾಗದ ಮೇನೇಜರಾದ ಶ್ರೀ ಕೆ ಆರ್ ಕೆ ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಎ ಕೃಷ್ಣಯ್ಯರು ಹಿಂದೀ ಸಾಹಿತ್ಯದ ಕುರಿತಾಗಿ ವಿಚಾರಪೂರ್ಣ ಭಾಷಣವನ್ನಿತ್ತರಲ್ಲದೇ, ಶ್ರೀ ಕೆ. ಎಲ್ ಎಸ್ ಉಪಾಧ್ಯಾಯರು ಡಿ ಪಿ ಜಿಯವರ ಮಂಕು ತಿಮ್ಮನ ಕಗ್ಗದ ಮೇಲೆ ಅಭ್ಯಾಸಪೂರ್ಣ ಉಪನ್ಯಾಸವಿತ್ತರು. ಶ್ರೀ ಸಾ. ಶ್ರೀನಿವಾಸ ಬಲ್ಲಾಳರು ದಾ ರಾ. ಬೇಂದ್ರೆಯವರ ಕೆಲವಾರು ಗೀತೆಗಳನ್ನು ಆಕರ್ಷಕ ರೀತಿಯಲ್ಲಿ ಹಾಡಿದರು ಅಧ್ಯಕ್ಷರು ಸಾಹಿತ್ಯವು ಜನಜೀವನತ್ತೊಯ್ಯ ಕೈಡಿಸಿಗೆಯಾಗಬೇಕೆಂದೂ, ಹೀಗಾಗಿಸುವಲ್ಲಿ ಎಲ್ಲ ವಿದ್ವಾಂಸರೂ ಯತ್ನಿಸಲೆಂದು ಪ್ರಯತ್ನಿಸಿ, ಕನ್ನಡ ಸಾಹಿತ್ಯವನ್ನು ಅಭಿವೃದ್ಧಿ ಪಥದಲ್ಲಿ ಸಾಗಿಸಬೇಕೆಂದೂ ತಿಳಿಸಿದರು.

ಬೊಂಬಾಯಿ

ದೇವಾಡಿಗ ಸುಧಾರಕ ಸಂಘದ ವಾರ್ಷಿಕೋತ್ಸವವು—

ಕಳೆದ ತಾ. ೨೨ರಂದು ಕವಾಸ್ಜಿ ಜಹಂಗೀರ್ ಸಭಾಭವನದಲ್ಲಿ ಶ್ರೀಮತಿ ಸುಮಿತ ಎನ್. ದಾಸ್, ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರ್ಥನೆ ಮೊದಲಾದ ಕಾರ್ಯಕ್ರಮಗಳಾದ ಬಳಿಕ ಸಭಿಕರ ಕಡೆಯಿಂದ ಹಲವಾರು ಸ್ತ್ರೀ ಬಾಲಕಿಗಳ ನೃತ್ಯರು. ಸಭಾಧ್ಯಕ್ಷೆಯರು ಸಂಘದ ಕಾರ್ಯಕಲಾಪಗಳನ್ನು ಉಲ್ಲೇಖಿಸಿ ಮಾತನಾಡಿದರಲ್ಲದೆ ಶ್ರೀ ಸಂಘದ ಅಧ್ಯಕ್ಷ ಮೆಂಬರರಾಗಿ ಸೇರಿ ಪ್ರೋತ್ಸಾಹಿಸಿದರು. ಬಳಿಕ ವಿವಿಧ ವಿನೋದಾವಳಿ ಮತ್ತು 'ಧರ್ಮಪತ್ನಿ' ಎಂಬ ಸಾಮಾಜಿಕ ಕನ್ನಡ ನಾಟಕವು ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು.

ದಯಮಾಡಿ ಬಾಕಿಯಾದ ಚಂದಾ ಹಣವನ್ನು ಕಳಿಸಿಕೊಡಿರಿ.

(ಐನೆ ಪುಟದಿಂದ)

ಭಾರತಕ್ಕೆ ಹಾಗೂ ಕಾಶ್ಮೀರದಿಂದ ಪಾಕಿಸ್ಥಾನವು ತನ್ನ ಸೇನೆಗಳನ್ನು ವಾಪಸ್ಸು ಕರೆಸಿಕೊಳ್ಳಬೇಕೆಂದು ತರೆಯಿತ್ತಿತು.

ಸುಳ್ಳು ನೆವದ ಮೇಲೆ ಅಂತಾರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಲು ಪಾಕಿಸ್ಥಾನಕ್ಕೆ ಅವಕಾಶವಿತ್ತರೆ ವಿಶ್ವದಲ್ಲಿನ ಕಂಟಕೋರರಿಗೆ ಇದೊಂದು ಪೂರ್ವ ನಿದರ್ಶನವಾಗುವುದು. ಕಾಶ್ಮೀರದಲ್ಲಿ ಪಾಕಿಸ್ಥಾನವು ನಡೆಸುತ್ತಿರುವ ಅಕೃತ್ಯಗಳು ಹಾಗೂ ನಾಜಿಗಳು ಮತ್ತು ಫ್ಯಾಸಿಸ್ಟರು ನಡೆಸುತ್ತಿದ್ದ ಅಕೃತ್ಯಗಳ ನಡುವೆ ಬಲವಾದ ಹೋಲಿಕೆಯಿರುವುದು. ದ್ವಿತೀಯ ಮಹಾ ಯುದ್ಧದಲ್ಲಿ ನಾಜಿಗಳು ಮತ್ತು ಫ್ಯಾಸಿಸ್ಟರು ನಡೆಸಿದ ಅಕೃತ್ಯಗಳ ಅನುಭವ ನಮಗೆಲ್ಲ ಇದ್ದೇ ಇದೆ. ತಾನು ಹಿಂತಿರುಗುವ ಬಗ್ಗೆ ಅಕ್ರಮಣಕಾರಿಯು ನೀಡುವ ಪರತ್ತುಗಳಿಗೆ ನಾವು ಸಮ್ಮತಿಸಬೇಕೆ? ಆತಿಕ್ರಮಣವು ಯಾವ ಕ್ಷೇತ್ರೀಯ ಅಥವಾ ರಾಜಕೀಯ ಅಧಿಕಾರವನ್ನೂ ನೀಡುವುದಿಲ್ಲ ಜನಮತಗಣನೆಯನ್ನು ಅಥವಾ ಮಹಾಚುನಾವಣೆಯನ್ನು ಕೇಳುವ ಹಕ್ಕು ಕಾಶ್ಮೀರಿ ಜನರಿಗೆ ಮಾತ್ರವಿರುವುದು. ಕಾಶ್ಮೀರಿ ಜನರು ತಮ್ಮ ಸ್ವಂತ ಇಚ್ಛೆಯನ್ನು ವ್ಯಕ್ತಪಡಿಸಲು ಅವಕಾಶವೀಯಬೇಕೆಂಬ ನೆಪದಲ್ಲಿ ಅವರನ್ನು ತನ್ನ ಅಧೀನದಲ್ಲಿಟ್ಟುಕೊಂಡಿರಲಾಗದು. ಪಾಕಿಸ್ಥಾನದ ವಿಷಯವನ್ನೇ ತೆಗೆದುಕೊಳ್ಳೋಣ. ಆಕ್ರಮಿತ ಕಾಶ್ಮೀರ ವಿಷಯವಿರಲಿ, ಪಾಕಿಸ್ಥಾನದ ಯಾವ ಭಾಗದಲ್ಲಿ ಯಾಗಲಿ ಪ್ರಜಾಸ್ವಭುತ್ವದ ತೋರಿಕೆಯಾದ ೧ ಇದೆಯೇ? ಒಂಭತ್ತು ವರ್ಷಗಳ ನಿರಂಕುಶ ಪ್ರಭುತ್ವದ ನಂತರವೂ ಅವರು ಮತದಾರರ ಪಟ್ಟಿಗಳನ್ನು ಕೂಡ ಸಿದ್ಧಪಡಿಸಿಲ್ಲ. ಅವರು ಅಂಗೀಕರಿಸುವ ಸಂವಿಧಾನವು ಇಂದು ಕೂಡ ತೀವ್ರ ರೀತಿಯ ಟೀಕೆಗೆ ಒಳಗಾಗಿದೆ. ಪಾಕಿಸ್ಥಾನವು ಕಾಶ್ಮೀರಿ ಜನರ ಆತ್ಮ ನಿರ್ಣಯದ ಹಕ್ಕಿನ ಬಗ್ಗೆ ವ್ಯಕ್ತಪಡಿಸುತ್ತಿರುವ ಆತಂಕವು ಲಕ್ಷಾಂತರ ಜನ ಕಾಶ್ಮೀರಿ ಜನರನ್ನು ಗುಲಾಮಗಿರಿಯಲ್ಲಿರಿಸಲು ಕಣ್ಣಿಗೆ ಮಣ್ಣೆರೆಚುವ ವಿದ್ಯೆಯಾಗಿದೆ. ಪಾಕಿಸ್ಥಾನವು ಕಾಶ್ಮೀರಿ ಜನರಿಗೆ ಸಾಧಾರಣವಾದ ಹಕ್ಕುಗಳನ್ನು ಕೂಡ ನೀಡದೆ ವಂಚಿಸಿದೆ. ಪಾಕಿಸ್ಥಾನದ ಕಾಶ್ಮೀರ ವಿಚಾರಗಳ ಮಂತ್ರಿ ಶಾಖೆಯು ಕಾಶ್ಮೀರಿ ಜನರ ಮೇಲೆ ಹೊರಿಸಿದ ಒಂಭತ್ತು ಸರ್ಕಾರಗಳ ಆಯ್ಕೆಯಲ್ಲಿ ಕೂಡ ಜನರ ಅಭಿಪ್ರಾಯವನ್ನು ಕೇಳಲಿಲ್ಲ.

ಭದ್ರತಾ ಪರಿಷತ್ತು ಈ ಯಥಾದೃಷ್ಟಿ ನಿರೂಪಣೆಯನ್ನು ಬಿಡುವಂತಿಲ್ಲ. ಪಾಕಿಸ್ಥಾನವು ಅಕ್ರಮಣಕಾರಿ ಪಾಕಿಸ್ಥಾನವೆನ್ನು ಭಾರತದೊಂದಿಗೆ ಸರಿಸಮಾನ ಸ್ಥಾನದಲ್ಲಿರುವ ಪ್ರಯತ್ನ ವಿಫಲಗೊಳ್ಳುವುದು ಖಂಡಿತ. ಕಾಶ್ಮೀರವು ಭಾರತದೊಂದಿಗೆ ಸೇರ್ಪಡೆಹೊಂದಿರುವುದರಿಂದ ಇತಿಹಾಸ ದೃಷ್ಟಿಯಿಂದ ಹಾಗೂ ವಿಚಾರಗಳ ಸಾಮ್ಯದ ಕಾರಣಗಳಿಂದ ಕಾಶ್ಮೀರವು ಭಾರತದ ಅವಿಭಾಜ್ಯ ಭಾಗವಾಗಿದೆ. ಕಾಶ್ಮೀರಕ್ಕೆ ಭೇಟಿಯಿತ್ತವರಿಗೆ ಈ ಏಕತೆಯನ್ನು ರಕ್ಷಿಸಿಕೊಂಡು ಬರಲು ಹಾಗೂ ಬಲಪಡಿಸಲು ಜನರು ಬದ್ಧರಾಗಿರುವುದು ಗಮನಕ್ಕೆ ಬಾರದೇ ಇರುವುದಿಲ್ಲ.

ಸುಬ್ರಹ್ಮಣ್ಯ—ಕಳೆದ ತಾ. 21ರಂದು ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ಮದ್ವಿಶ್ವಜ್ಞ ತೀರ್ಥ ಶ್ರೀ ಪಾದಂಗಳವರು ತಮ್ಮ ಗುರುಗಳ ವೃಂದಾವನ ಸನ್ನಿಧಿಯಲ್ಲಿ ಧಾರ್ಮಿಕ ಸಭೆಯೊಂದನ್ನು ಜರಗಿಸಿದರು ಪ್ರಾರ್ಥನೆ ಹಾಗೂ ಭಜನೆಗಳಾದ ನಂತರ ಶ್ರೀ ಶ್ರೀಗಳವರು ಭಕ್ತಿಯ ವಿಷಯದಲ್ಲಿ ಮನನೀಯ ಉಪನ್ಯಾಸವನ್ನಾಡಿದರು. ವೃಂದಾವನ ಪೂಜೆ ಮಂಗಳಾರತಿಯನ್ನು ಮಾಡಿ ಸ್ವಾಮಿಗಳವರು ನೆರೆದ ಭಕ್ತವೃಂದಕ್ಕೆ ಫಲಮಂತ್ರಾಕ್ಷತೆಯಿತ್ತು ಆಶೀರ್ವದಿಸಿದರು.

ಮುಕ್ಕ—ಆಗ್ಸದಕರಿ ಹಾ. ಎ. ಶಾಲೆಯಲ್ಲಿ ಸೈಂಟ್ ಎಲೋಸಿಯಸ್ ಕಾಲೇಜಿನ ಲೋಯಲಾ ಸ್ಕಾಟ್ಸ ಪಂಗಡದವರ ಶಿಬಿರವು ಕಳೆದ ತಾ. 19ರಿಂದ 21ರ ತನಕ ಸ್ಕಾಟ್ಸ ಮಾಸ್ಟರ್ ಶ್ರೀ ಎಸ್. ಎಸ್. ಐತಾಳ್ ಮತ್ತು ದ. ಕ. ಜಿಲ್ಲಾ ಆಸಿಸ್ಟಾಂಟ್ ಕಲೆಕ್ಟರ್ ಶ್ರೀ ಪಿ. ವಿಠಲ ಕಾಮತರ ನೇತೃತ್ವದಲ್ಲಿ ಯಶಸ್ವಿಯಾಗಿ ಹಲವಾರು ಚಟುವಟಿಕೆಗಳೊಡನೆ ಜರಗಿತು.

ದೇಲಂಪಾಡಿ—ಮುಯ್ಯಾಳ ಶ್ರೀ ಗೋಪಾಲಕೃಷ್ಣ ಎಯಿಡೆಡ್ ಕಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಪರೀಕ್ಷೆಯು ಕಾಸರಗೋಡು ರೇಂಜಿನ, ಕಿರಿಯ ಪರೀಕ್ಷಾಧಿಕಾರಿ ಶ್ರೀ ಸಂಜೀವನವರಿಂದ ಕಳೆದ ತಾ. 19ರಂದು ನಡೆಸಲ್ಪಟ್ಟಿತು. ಈ ಸಂದರ್ಭದಲ್ಲಿ ಶ್ರೀ ಡಿ. ಮಹಾಲಿಂಗೇಶ್ವರ ಭಟ್ಟರು ದಾನವಿತ್ತ ಶಾಲಾ ಸಾಮಗ್ರಿಗಳನ್ನು ಬಡ ವಿದ್ಯಾರ್ಥಿಗಳಿಗೆ ಪಂಚಲಾಯಿತು. ಶ್ರೀ ಕೆ ಜಿ. ಕೃಷ್ಣ ಭಟ್ಟರು ಉಪಕಾರಸ್ಮರಿಸಿದರು.

ಯಕ್ಷಗಾನ—ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ಶ್ರೀ ಕೃಷ್ಣಮೂರ್ತಿಯ ಪೂಜೆ ಹಾಗೂ ಕೃಷ್ಣ ಸಂದಾನವೆಂಬ ಪ್ರಸಂಗದ ಯಕ್ಷಗಾನ ಕೂಟವು ಶ್ರೀ ಕೆ. ಅಣ್ಣಯ್ಯನವರ ವ್ಯವಸ್ಥಾಪಕದಲ್ಲಿ ಸಾಂಗವಾಯಿತು. ಶ್ರೀ ಕೀರಿಕ್ಕಾಡು ಮಾಸ್ಟರ್ ವಿಷ್ಣುಭಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ರಮಾನಂದ ಬನಾರಿ, ಎಮ್ ಎನ್ ರೈ ಮೊದಲಾದವರು ಪ್ರಮುಖ ಭಾಗ ವಹಿಸಿದರು.

ಪುತ್ತೂರು—ಶ್ರೀ ಮೊಳಪಳ್ಳಿ ಶಿವರಾಯರು ತಾ 24ರಂದು ಇಟ್ಟಿಯ ದಸರಾ ಉತ್ಸವವನ್ನು ಮತ್ತು ಅದರ ಅಂಗವಾದ ಚಿತ್ರ ಹಾಗೂ ಕೈಗಾರಿಕಾ ಪ್ರದರ್ಶನವನ್ನು ಉದ್ಘಾಟಿಸಿದರು. ಶ್ರೀ ಎಮ್. ಸದಾಶಿವರಾಯರು ಕಳೆದ ಎರಡು ವರ್ಷಗಳಲ್ಲಿ ಜರುಗಿದ ದಸರಾ ಉತ್ಸವಗಳ ಅವಾಯವೆಚ್ಚಗಳ ವರದಿಯನ್ನೋದಿದರು. ಮಡಿಕೇರಿಯ ಶ್ರೀ ಎಸ್. ಸುಬ್ರಹ್ಮಣ್ಯ, ಅವರು "ಮಾನವಾದರ್ಶ" ಎಂಬ ವಿಷಯದ ಮೇಲೆ ಉಪನ್ಯಾಸವಿತ್ತರು ತಾ 25ರಂದು ಮೈಸೂರಿನ ಪರಮೇಶ್ವರ ಭಟ್ಟರು ಕಾಳಿದಾಸನ "ಮೇಘ ದೂತ" ಕಾವ್ಯದ ವೈಶಿಷ್ಟ್ಯವನ್ನು ವಿವರಿಸಿದರು.

ಮೂಲ್ಕಿ—ಸ್ಥಳೀಯ ರಾಷ್ಟ್ರೀಯ ವಿಸ್ತರಣಾ ಬ್ಲಾಕಿನ ಪಲು ಸಂಗೋಪನಾಧಿಕಾರಿ ಡಾ. ಪಿ. ಟಿ. ಸೆಟ್ಟಿಗಾರರು ಉಚ್ಚ ಶಿಕ್ಷಣ ವಡೆಯಲು ಲಂಡನಿಗೆ ತೆರಳುವ ಸಂದರ್ಭದಲ್ಲಿ ಅವರನ್ನು ಬೀಳ್ಕೊಡಲು ತಾ. 26ರಂದು ಪ್ರವಾಸಿ ಬಂಗ್ಲೆಯಲ್ಲಿ ಸತ್ಕಾರಕೂಟ ಏರ್ಪಡಿಸಲಾಯಿತು. ಡಾ. ಪಟ್ಟಾಭಿರಾಮ ಮತ್ತಿತರ ಸ್ವಾಗತವಾಡುಗಳನ್ನಾಡಿದರು. ಸಭಾಧ್ಯಕ್ಷತೆ ವಹಿಸಿದ್ದ ಡಾ. ಮೋಹನದಾಸ ನಾಯಕ್, ಶ್ರೀಗಳಾದ ಬಿ. ರಾಮರಾವ್, ಪ್ರೇಮದಾಸ ಸೆಟ್ಟಿ, ಎಮ್. ಆರ್. ಎಚ್. ಪೂಂಜ, ಡಾ. ವರದರಾಜ ಅಸ್ರಣ್ಣ, ಬಂಗೇರ ಡಾ. ಬಾಬು ಸೆಟ್ಟಿ, ಪ್ರೇಮನಾಥ ಅಳ್ವ, ಅಬ್ದುಲ್‌ಖಾದರ್, ರಾಮಣ್ಣ ಗೌಡ, ಬಿ. ಮಹಾಬಲ ಸೆಟ್ಟಿ ಮೊದಲಾದವರು ಡಾ ಸೆಟ್ಟಿಗಾರರಿಗೆ ಶುಭ ಪ್ರಗೂಢನವನ್ನು ಬಯಸಿದರು. ರಾತ್ರಿ ಭೋಜನ ಸತ್ಕಾರ ನಡೆಯಿತು.

ಬೆಳ್ಳಾರೆ—ಕಳೆದ ತಾ. 24ರಂದು ಬೆಳ್ಳಾರೆ ಗ್ರಾಮಸೇವಾ ಸಂಘದ ಆಶ್ರಯದಲ್ಲಿ ನಾಡಪಟ್ಟದ ಅಂಗವಾಗಿ ಶ್ರೀ ಪಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ಸಾಹಿತ್ಯೋತ್ಸವವು ಜರಗಿತು. ಸಮಾರಂಭದ ಉದ್ಘಾಟನೆಯನ್ನು ನಿವೃತ್ತ ಜಿಲ್ಲಾಧಿಕಾರಿ ಶ್ರೀ ಎಚ್. ನರಸಿಂಹಪ್ಪನವರು ನೆರವೇರಿಸಿದರು. ಸಂಘದ ಅಧ್ಯಕ್ಷ ಶ್ರೀ ಬಿ. ಕಿಟ್ಟಣ್ಣ ರೈಗಳು ಸ್ವಾಗತಭಾಷಣ ಮಾಡಿದರು. ಶ್ರೀ ಸೇವ ನಮಿರಾಜಮಲ್ಲ, ಎಡ್ವೊಕೇಟ್ ಅವರು "ಇತಿಹಾಸದಲ್ಲಿ ನವರಾತ್ರಿ" ವಿಷಯದಲ್ಲಿ ಭಾಷಣವಿತ್ತರು. ತಾ 25ರಂದು ಎಡ್ವೊಕೇಟ್ ಶ್ರೀ ಬಿ. ಬಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ಯಕ್ಷಗಾನ ಕೂಟ ಜರಗಿತು.

ಶಿರ್ವ—ಸ್ಥಳೀಯ ಪಂಚಾಯತ್ ಬೋರ್ಡಿನ ಸಾಮಾನ್ಯ ಸಭೆಯು ತಾ. 16ರಂದು ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ರಸ್ತೆ ರಿಪೇರಿ, ಹೊಸ ರಸ್ತೆ ನಿರ್ಮಾಣ, ತೋಡಿಗೆ ಸಂಕ ಹಾಕಲು ಹಣ ಮಂಜೂರು ಮಾಡಲಾಯಿತು. ಶಿರ್ವಕ್ಕೆ ಬೇಗನೆ ವಿದ್ಯುಚ್ಛಕ್ತಿ ದೀಪಗಳನ್ನು ವಿಸ್ತರಿಸುವರೆ ಅಗತ್ಯವಿರುವ ಕಾರ್ಯಕ್ರಮ ಕೈಗೊಳ್ಳಬೇಕೆಂದು ನಿರ್ಣಯವಾಯಿತು.

ಪಡುಬಿದ್ರೆ—ಕಳೆದ ತಾ. 24ರಂದು ಪಡುಬಿದ್ರೆ ನಡ್ಪಾಲು ಬೀಡಿನ ಕೆರೆ ಶಾಲೆಯಲ್ಲಿನವ ಮೈಸೂರು ಪ್ರಾಂತದ ವಿದ್ಯಾ ತತ್ತ್ವ ಪ್ರಚಾರಕರಾದ ಶ್ರೀ ಪೇಣಾವರ ಟಿ. ಎಲ್ ವಾಸುದೇವರಾಯರು "ವಿದ್ಯಾರ್ಥಿಗಳ ವಿಧೇಯತೆಯ ಪವಿತ್ರತೆ" ಎಂಬ ವಿಷಯದಲ್ಲಿ ಭಾಷಣವಿತ್ತರು. ಶಾಲಾ ಹೆಡ್ಮಾಸ್ಟರ್ ಶ್ರೀ ಪಿ. ಎನ್. ರಾಮಚಂದ್ರರಾಯರು ಮುಖ್ಯ ಅತಿಥಿಗಳ ಪರಿಚಯಮಾಡಿಕೊಟ್ಟರು. ಶಾಲಾ ಮೆನೇಜರ್ ಶ್ರೀ ಸಿ ಸದಾನಂದ ಸೆಟ್ಟಿರು ಧನ್ಯವಾದಗಳನ್ನಿತ್ತರು

ಪಡುಬಿದ್ರೆ ಕೇಂದ್ರ ಅಧ್ಯಾಪಕ ಸಂಘದ ಕಡೆಯಿಂದ ಉಡುಪಿ ತಾಲೂಕು ಅಧ್ಯಾಪಕರ ಯೂನಿಯನ್ ಕಾರ್ಯಕಾರೀ ಸಮಿತಿ ಸದಸ್ಯರಾಗಿ ನಡ್ಪಾಲು ಬೀಡಿನ ಕೆರೆಶಾಲಾ ಮುಖ್ಯೋಪಾಧ್ಯಾಯ ಶ್ರೀ ಸಿ ಎನ್. ರಾಮಚಂದ್ರರಾಯರನ್ನು ಆರಿಸಲಾಯಿತು.

ಅಜೆಕಾರು—ಸ್ಥಳೀಯ ಬೋ. ಹಾ. ಎ. ಶಾಲೆಯಲ್ಲಿದ್ದ ದಸರಾ ಉತ್ಸವವು ಜಿ ಬೋ. ಸದಸ್ಯರಾದ ಡಾ. ಯು ಕೃಷ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. ಪೂರ್ವಾಹ್ನ ಶಾರದಾ ಪೂಜೆ ನೆರವೇರಿತು. ಅಪರಾಹ್ನ ಹೆಬ್ರಿ ಬ್ಲೋಕಿನ ಸಮಸ್ತ ಅಧಿಕಾರಿಗಳು ಉಪಸ್ಥಿತರಿದ್ದ ಮಹಾ ಸಭೆಯಲ್ಲಿ ಶ್ರೀ ಎ ವಾಂಡುರಂಗ ಕಿಣಿಯರ ಸ್ವಾಗತ ಭಾಷಣ, ಶ್ರೀ ಮಲ್ಲೇಶ ಹೆಬ್ಬಾರರ ಕಾವ್ಯವಾಚನ ಬಾಲಕಿಯರ ವಿವಿಧ ಚಟುವಟಿಕೆಗಳು, ಬಾಲಕರ ಏಕಾಂಕ ಯಕ್ಷಗಾನ ಮತ್ತು ವಿನೋದ ಸಮಾಜ ಶಿಕ್ಷಣ ಸಂಘಟಿಕೆಯಿಂದ ಕುಮಾರಿ ತಾರಾ ಮಲ್ಯರ ಸಂಗೀತವಾದ ಮೇಲೆ ಸಭಿಕರಲ್ಲಿ ಶ್ರೀಗಳಾದ ವಿಶ್ವನಾಥ ಬಿಳಿಯಾಯ, ಸಣ್ಣಯ್ಯ ಕಲ್ಯರ ಮತ್ತು ಪೂರ್ಣಾ ಸೆಟ್ಟರು ಪ್ರಸಂಗೋಚಿತ ಭಾಷಣವಿತ್ತರು. ಪಾಳ್ಳೆಗೆ ಬಹುಮಾನ ವಿತರಣೆಯಾದಬಳಿಕ ಅಧ್ಯಕ್ಷರ ಭಾಷಣವಾಯಿತು ಶ್ರೀ ಬಿ. ನೇಮಿರಾಜ ಹೆಗ್ಡೆರು ಧನ್ಯವಾದಗಳನ್ನು ಸಮರ್ಪಿಸಿದರು.

ಪಳ್ಳಿ—ಪಳ್ಳಿ ಬೋರ್ಡಿಂಗ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶಾಲಾ ಮಕ್ಕಳು ಮತ್ತು ಯುವಕ ಸಮಾಜದವರ ಕೂಡುವಿಕೆಯಿಂದ ಶಾರದಾ ಪೂಜೆ ಮತ್ತು ಸಾಂಸ್ಕೃತಿಕೋತ್ಸವವು ಯುವಕ ಸಂಘದ ಅಧ್ಯಕ್ಷರಾದ ಶ್ರೀ ಪಿ ವಿ. ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಯಸ್. ಕೃಷ್ಣ ಶೆಟ್ಟಿ ತಮ್ಮ ಭಾಷಣದಲ್ಲಿ ನವರಾತ್ರಿಯ ಸಂದರ್ಭದಲ್ಲಿ ಊರ ಮತ್ತು ಪರವೂರ ಅನೇಕ ಕಲಾವಿದರ ಕೂಡುವಿಕೆಯಿಂದ ಶಾಲೆಗಳಲ್ಲಿ ನಡೆಯುವ ಈ ತರದ ಉತ್ಸವಗಳು ತಾರುಣ್ಯ ಜೀವನದಲ್ಲೇ ದೈವೀಭಕ್ತಿ, ಒಗ್ಗಟ್ಟುಗಳನ್ನು ಮೂಡಿಸುವುವುಗಳಲ್ಲದೆ ಜ್ಞಾನ ಸಂಪಾದನೆಗೂ ಅನುಕೂಲ ಒದಗಿಸಿಕೊಡುವುವೆಂದರು. ಅ ಬಳಿಕ ಭಜನೆ, ಸಿಹಿತಿಂಡಿ ಹಂಚೋಣ, ಧನ್ಯವಾದ ಮಂಗಲ ಗೀತೆಯೊಂದಿಗೆ ಸಭೆಯು ಜರಗಿತು.

ನೆಕ್ಕಾಡಿ—ವಕ್ಕಾಡಿ ಗ್ರಾಮದ ಪ್ರಾಥಮಿಕ ಶಾಲೆಗೆ ಹೊಸ ಕಟ್ಟಡ ನಿರ್ಮಿಸಲುಗ್ರಾಮಸ್ಥರ ಸಭೆಯೊಂದು ಕಳೆದ ತಾ. 29ರಂದು ಜರುಗಿ ಶಾಲಾ ಕಟ್ಟಡ ಸಮಿತಿಯೊಂದು ರಚಿಸಲಾಯಿತು. ಶ್ರೀಗಳಾದ ಎಚ್. ನಾರಾಯಣ ಸೆಟ್ಟರು ಅಧ್ಯಕ್ಷರಾಗಿಯೂ, ಎ. ನಾಗಯ್ಯ ಸೆಟ್ಟಿ ಮತ್ತು ಎ ಸೋಮ ಸೆಟ್ಟಿಗಾರರು ಜತೆಕಾರ್ಯದರ್ಶಿಗಳಾಗಿಯೂ, ಮಹಾಬಲೇಶ್ವರಯ್ಯನವರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು ಕಟ್ಟಡ ನಿರ್ಮಾಣಕಾರ್ಯಕ್ಕೆ ಸರ್ವರೂ ಧನಸಹಾಯವೀಯಬೇಕಾಗಿ ಕಟ್ಟಡ ಸಮಿತಿಯು ವಿನಂತಿಸುತ್ತದೆ.

ದ. ಕ. ಜಿಲ್ಲಾ ಬೋರ್ಡಿನ ಸಭೆಯು ತಾ. 30ರಂದು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಬೋರ್ಡಿನ ಆಡಳಿತ ವರದಿಯ ಕುರಿತು ಚರ್ಚೆಯಾಗುವ ಕಾಲದಲ್ಲಿ ರಸ್ತೆಗಳ ಮುಸ್ಥಿತಿಯನ್ನೆತ್ತಿ ಸದಸ್ಯರು ಮಾಡಿದ ಟೀಕೆಗಳಿಗೆ ಅಧ್ಯಕ್ಷರು ಉತ್ತರಿಸುತ್ತಾ ಜಿಲ್ಲಾ ಬೋರ್ಡಿನ ರಸ್ತೆಗಳ ಸ್ಥಿತಿಯು ಬಹಳ ನಿಕೃಷ್ಟಾವಸ್ಥೆಯಲ್ಲಿದೆ. ಇದಕ್ಕೆ ಮುಖ್ಯಕಾರಣ ಜಿಲ್ಲಾಬೋರ್ಡಿಗೆ ಅವುಗಳ ಮೇಲ್ವಿಚಾರಣೆಯಲ್ಲಿ ಅಧಿಕಾರವಿಲ್ಲದಿರುವುದೇ ಆಗಿದೆ ಅದು ಈಗ ಹ್ಯಾಬೇಸ್ ಡಿಪಾರ್ಟ್‌ಮೆಂಟಿನ ಅಧೀನದಲ್ಲಿದೆ. ಜಿಲ್ಲಾ ಬೋರ್ಡಿನ ರಸ್ತೆಗಳ ಸ್ಥಿತಿ ಸುಧಾರಣೆಯಾಗಬೇಕಾದ್ದಲ್ಲಿ ಮುಖ್ಯವಾಗಿ ಜಿಲ್ಲಾಬೋರ್ಡಿಗೆ ಪ್ರತ್ಯೇಕವಾದ ಇಂಜಿನಿಯರಿಂಗ್ ವಿಭಾಗವನ್ನು ಸ್ಥಾಪಿಸಬೇಕು ಮತ್ತು ಬೋರ್ಡಿನ ರಸ್ತೆಗಳ ವಿಚಾರದಲ್ಲಿ ಬೋರ್ಡಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು ಎಂದು ಹೇಳಿದರು.

ಶ್ರೀಗಳಾದ ಎನ್. ಎಸ್. ಪರಮೇಶ್ವರಯ್ಯ, ಬಿ. ಎಸ್. ಭಾಸ್ಕರ ರೈ, ಡಾ| ಕೆ. ನಾಗಪ್ಪ ಅಳ್ವ, ಎಮ್. ಎಸ್ ಹೆಗ್ಡೆ, ಆರ್. ಕೆ. ಸಂಜೀವರಾವ್ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು 1957ನೇ ವರ್ಷದಲ್ಲಿ ಜಿಲ್ಲಾ ಬೋರ್ಡು ಹೈಸ್ಕೂಲುಗಳ ಪೈಕಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಅತೀ ಹೆಚ್ಚಿನ ಫಲಿತಾಂಶ ಸಾಧಿಸಿದ ಸುಳ್ಯ ಬೋರ್ಡು ಹೈಸ್ಕೂಲಿಗೆ (98%) ಜಿಲ್ಲಾಬೋರ್ಡಿನ ರೋಲಿಂಗ್ ಶೀಲ್ಡನ್ನು ಕೊಡಲಾಯಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಸಂಕಪ್ಪ ರೈಗಳು ಶೀಲ್ಡನ್ನು ಸ್ವೀಕರಿಸಿ ಧನ್ಯವಾದನಿತ್ತರು.



ಕುಮಾರಿ ಬಿಲ್ಲೆಗಳು

Govt. Regd.

ಜೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿಸ್ತರು: ಪಾ ಕಂಪೆನಿ, ಮಂಗಳೂರು—1.

PHONE 203 ESTD 1926

FOUNDATION STONE

Engraved MARBLE TABLETS

(GOLD FILLED & LEAD FILLED)

GOAN'S

Crown RUBBER STAMP CO.

BALMATTA ROAD, MANGALORE

ಜನಮತ

ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.
ಸಂ. ನ.

ಭೂಮಾಲಿಕರಿಗೆ ಅನ್ಯಾಯವೆ?

ಸರಕಾರದ ಭೂಸುಧಾರಣೆಯ ಸಂಬಂಧದಲ್ಲಿ ಜಿಲ್ಲಾ ಸಮಿತಿಯು ಒಪ್ಪಿಸಿದ ವರದಿಯನ್ನು ನೋಡುವಾಗ ಅತ್ಯಂತ ವಿಷಾದವೆನಿಸುತ್ತದೆ. ಇದರಲ್ಲಿ ಮಧ್ಯಮ ವರ್ಗದವರಿಗೆ ವಿಶೇಷವಾಗಿ ಪ್ರಯಾಸವೆನಿಸುತ್ತದೆ. ಅಂದರೆ ನಾಲ್ವರಲ್ಲೊಂದಂಶ ಮತ್ತು ಐದರಲ್ಲೊಂದಂಶ ನಿಶ್ಚಿತ ಗೇಣಿಯೂ ಅಲ್ಲ ಬೆಳೆದುದರಲ್ಲಿ ಈ ಅಂಶವನ್ನು ಧನಿಯು ಒಕ್ಕಲಿನಿಂದ ಸಡೆದುಕೊಂಡು ಅದರಿಂದಲೇ ಕಂದಾಯವನ್ನೂ ತೆತ್ತು ಉಳಿದುಳಿದ ಅಂಶವನ್ನು ಅತನ ಉದರ ಪೋಷಣೆಗೆ ಉಪಯೋಗಿಸಬೇಕು. ಒಕ್ಕಲು ಕಡಿಮೆ ಬೆಳೆ ಬೆಳೆದಾಗ ಧನಿಯು ಮೇರೆ ಕಾಣಿಸಿದಂತೆ ಬೆಳೆದುದರ ಅಂಶವನ್ನೇ ಪಡೆಯಬೇಕು ಆದರೆ, ಸರಕಾರವು ಧನಿಯಿಂದ ಕಂದಾಯ ವಸೂಲು ಮಾಡುವಾಗ ಮಾತ್ರ ನಿರ್ಧಾರಿತ ಕಂದಾಯವನ್ನು ಕ್ಲಿಷ್ಟ ಸಮಯದಲ್ಲಿ ವಸೂಲು ಮಾಡಿಯೇ ತೀರುವುದು. ಆಗ ಸರಕಾರವು ಬೆಳೆದ ಬೆಳೆಗನುಗುಣವಾಗಿ ಕಂದಾಯವನ್ನು ತೆಗೆದುಕೊಳ್ಳಲು ಎಂದಿಗೂ ಒಪ್ಪದು. ಧನಿಯು ಪರಿಹಾರ ಕೊಡುವ ಸಂದರ್ಭದಲ್ಲಿ ಏಕಗಂಟಿನಿಂದ ತೆರಬೇಕು. ಒಕ್ಕಲು ಧನಿಗೆ ಭೂಮಿಯ ಕ್ರಯವನ್ನು ಕೊಡಲು ಕಂತುಗಳ ಸೌಲಭ್ಯವಿದೆ. ಇದರಲ್ಲಿ ತಾರತಮ್ಯವೇಕೆ? ಒಂದೊಮ್ಮೆ ಧನಿಗೆ ಒಂದೇ ವರ್ಷದಲ್ಲಿ ವಿಶೇಷ ಪೆಟ್ಟು ತಗಲಿ ನಷ್ಟಹೊಂದಿದಲ್ಲಿ ಆತನು ಭೂಕಂದಾಯವನ್ನು ಸರಕಾರಕ್ಕೆ ತೆರಲು ಅಸಮರ್ಥನಾದಲ್ಲಿ ಆತನ ಭೂಮಿಯು ಕಂದಾಯದ ನಿಮಿತ್ತವಾಗಿ ಜಪ್ತಾಗುವುದು. ಇದು ಆತನ ಕಷ್ಟಕ್ಕೆ ತಕ್ಕ ಉಪಶಮನ ಮಾರ್ಗವೆ? ಇದರಿಂದಾಗಿ ಭೂಮಾಲಿಕನ ಹಣದ ತಿಜೋರಿಯನ್ನೂ ಆತನಿಗೆ ದೊರಕುವಂತಾಗುವುದಿಲ್ಲ. ಭೂಮಾಲಿಕನು ಬಲಾತ್ಕಾರದಿಂದಾಗಿ ಭೂಮಿಯನ್ನು ಅಪಹರಿಸಿಲ್ಲ. ಆತನಿಂದ ಯಾ ಆತನ ಹಿರಿಯರಿಂದ ಬೆವರಿಳಿಸಿ ದುಡಿದು ಸಂಪಾದಿಸಲ್ಪಟ್ಟ ಹಣವನ್ನು ಬೆಲೆಯಾಗಿ ತೆತ್ತು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾನೆ ಎಂಬುದನ್ನು ಪ್ರತಿಯೊಬ್ಬರೂ ನೆನಪಿನಲ್ಲಿಟ್ಟುಕೊಳ್ಳಬೇಕು ಆದುದರಿಂದ ಭೂಮಾಲಿಕನಿಗೆ ತನ್ನ ಸೊತ್ತಿನಲ್ಲಿ ತನ್ನದೆಂಬ ಅಭಿಮಾನವಿರುವುದು ಸಾಸ್ತ್ರ.

ಇತ್ತೀಚೆಗೆ ಟ್ರಾಫಲ ಚಟುವಟಿಕೆಗಳ ಬೆಲೆ ಏರಿದೆ ಆದೂ ಸಾಲದೆ ತಾರೀಕು ೧೮ರಿಂದ ಸುಗಂಧ ಎರಿಸಲಾಗಿದೆ. ಕೆಲವೇ ದಿನಗಳಲ್ಲಿ ಬದಲಾವಣೆ ಹೊಂದುತ್ತಿರುವ ಈ ನಿರ್ಧಾರಗಳ ಭವಿಷ್ಯವೇನೆಂಬುದನ್ನು ಊಹಿಸುವುದೂ ಸಾಧ್ಯವಿಲ್ಲ. ದಿನದಿಂದ ದಿನಕ್ಕೆ ಸರಕಾರವು ತಳೆಯುತ್ತಿರುವಧೋರಣೆಯನ್ನೆಣಿಸುವಾಗಸಾಮ್ರಾಜ್ಯಶಾಹೀ ಸರಕಾರದ ಧೋರಣೆಗಳ ನೆನಪಾಯಿಟ್ಟುತ್ತದೆ. ಜನತೆಗಾಗಿ ಸರಕಾರ, ಜನತೆಯಿಂದಲೇ ನಿರ್ಮಿಸಲ್ಪಟ್ಟ ಸರಕಾರವೆಂಬುದನ್ನಾದರೂ ಗಮನಿಸಲಿ. ಸರಕಾರವು ತಾನು ಕೊಡಬೇಕಾದ ಪಡಣದಲ್ಲಿ ಉದಾಸೀನತೆಯನ್ನು ತೋರುತ್ತಿದೆ. ತನಗೆ ಬರಬೇಕಾದ ಪಡಣ ದಲ್ಲಿ ಸ್ವಲ್ಪವೂ ಉದಾಸೀನತೆಯನ್ನು ತೋರಿಸದೆ ವಸೂಲು ಮಾಡುತ್ತಿದೆ. ಉದಾಹರಣೆಗಾಗಿ ಉಸಾಧ್ಯಾಯರ ಬೊಸ ವೇತನ ಮತ್ತು ಅಂಚೆ ಸಾಸಿಲಿನ ಕ್ರಯ. ಇವುಗಳ ಬರುವಿಕೆ ಮತ್ತು ತೆರುವಿಕೆಗಳು ಸಾಮಾನ್ಯ ಜನತೆ ಅರಿತ ವಿಚಾರ. ಸರಕಾರವು ಇನ್ನಾದರೂ ಜನಾಭಿಪ್ರಾಯಕ್ಕೆ ಮನ್ನಣೆಯನ್ನು ಪಲ್ಲಿಗರೆ ಅತ್ಯಂತ ಸುಖಕಷ್ಟಗಳನ್ನರಿತು ಪುನರ್ವಿಮರ್ಶಿಸಲಿ.

— ಕೆ. ರಾಮ ರಾವ್.

[ಮಾನ್ಯ ಓದುಗರು ರಾಜ್ಯ ಮತ್ತು ಕೇಂದ್ರ ಸರಕಾರಗಳೆಂಬ ಭೇದವನ್ನರಿಯದೆ ಒಂದರಿಂದ ಇನ್ನೊಂದನ್ನು ದೂರಿದ್ದಾರೆ. ಈ ತಿಳುವಳಿಕೆಯನ್ನು ಸಾಮಾನ್ಯ ಜನತೆಗೂ ತಿಳಿಯಪಡಿಸುವುದು ಸರಕಾರದ ಕರ್ತವ್ಯಗಳಲ್ಲಿ ಒಂದು. ಸಂ. ನ.]

ಮಂಗಳೂರು

ಹೊಸ ಜಿಲ್ಲಾ ಕಲೆಕ್ಟರ್-ಶ್ರೀ ಸೈಯಿ. ಹೊಂಬಾಳಯ್ಯನವರು ಕಳೆದ ತಾ. ೨೩ ರಂದು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಜನತೆಯ ಸೇವೆ ಮಾಡುವ ಮುಖ್ಯೋದ್ದೇಶದಿಂದ ತಾನು ಈ ಜಿಲ್ಲೆಗೆ ಬಂದುದಾಗಿದೆ ಎಂದರು. ಜನರ ಆರೋಗ್ಯದ ಹಿತದೃಷ್ಟಿಯಿಂದ ಶುಚಿತ್ವದ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕಾದುದು ಅಗತ್ಯ. ಹೊಟೇಲು ಮೊದಲಾದಸ್ಥಳಗಳಲ್ಲಿ ಹೆಚ್ಚಿನ ಶುಚಿತ್ವವಿರಬೇಕಾದುದು ಅವಶ್ಯ. ಅದುದರಿಂದ ಪ್ರತಿಯೊಂದು ಸ್ಥಳವನ್ನೂ ಸ್ವಚ್ಛವಾಗಿರಿಸಬೇಕಾಗಿದೆ ಎಂದೂ ಹೇಳಿದರು.

ಸತ್ಕಾರಕೂಟ-ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಕೆ. ಎಸ್. ಹೆಗ್ಗಡೆಯವರ ಗೌರವಾರ್ಥವಾಗಿ ಸ್ಥಳೀಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಭವನದ ಹಳೆ ನಿವಾಸಿಗಳು ಸತ್ಕಾರಕೂಟವನ್ನೇರ್ಪಡಿಸಿದರು. ಶ್ರೀಗಳಾದ ಕೆ. ಸೂರ್ಯನಾರಾಯಣ ಅಡಿಗ ಬಿ. ನಾರಾಯಣ ಹೆಗ್ಡೆ, ಡಾ| ಎಸ್. ಆರ್. ಹೆಗ್ಡೆರು ಮುಖ್ಯ ಅತಿಥಿಗಳು ಕುರಿತು ಕಾರ್ಯೋಚಿತ ಮಾತುಗಳನ್ನಾಡಿದರು. ಶ್ರೀ ಹೆಗ್ಡೆಯವರು ಸೂತ್ರ ಉತ್ತರಶಿತ್ರಬಳಿಕ, ಕಾರ್ಯದರ್ಶಿ ಶ್ರೀ ಸಿ. ಡಿ ಜಯರಾಮ ಸೆಟ್ಟರು ಧನ್ಯವಾದಗಳನ್ನಿತ್ತರು.

ವಿಚಾರ ಗೋಷ್ಠಿಯಲ್ಲಿ ಶ್ರೀ ವಿ. ಎಸ್. ಕುಡ್ವರ ಭಾಷಣ-ಕಳೆದ ತಾ. ೨೮ರಂದು ಸ್ಥಳೀಯ ಮಿಲಾಗ್ರೀಸ್ ಹೈಸ್ಕೂಲು ಎಂಬಾರದ ಯುವತಿ ಒಕ್ಕೂಟದ ಸೆಂಟರಿನಲ್ಲಿ ಜರುಗಿದ ದ್ವಿತೀಯ ಸಂವತ್ಸರಿಕ ಯೋಜನೆಯ ಮೇಲಿನ ವಿಚಾರಗೋಷ್ಠಿಯಲ್ಲಿ ಶ್ರೀ ವಿ. ಎಸ್. ಕುಡ್ವರು 'ಕೈಗಾರಿಕೆಗಳು ಮತ್ತು ಯೋಜನೆ' ಎಂಬ ವಿಷಯದ ಮೇಲೆ ಭಾಷಣವಿತ್ತರು. ದೇಶದಲ್ಲಿ ಕ್ಷಿಪ್ರಗತಿಯಿಂದ ಔದ್ಯೋಗೀಕರಣವನ್ನು ಸಾಧಿಸುವುದಕ್ಕಾಗಿ ಮೂಲ ಉದ್ಯಮಗಳಾದ ಕಬ್ಬಿಣ, ಉಕ್ಕು ಮತ್ತಿತರ ಕೈಗಾರಿಕೆಗಳನ್ನು ಕ್ಷಿಪ್ರಗತಿಯಿಂದ ಅಭಿವೃದ್ಧಿಗೊಳಿಸಬೇಕೆಂಬುದು ಯೋಜನೆಯ ಉದ್ದೇಶವಾಗಿದೆ ಎಂದು ಒಪ್ಪಿಕೊಳ್ಳುವುದಾದರೂ, ಯೋಜಕರು ಈ ಬಗ್ಗೆ ಕೈಗೊಂಡಿರುವ ಕಾರ್ಯಕ್ರಮವು ಬಹಳ ಅಲ್ಪ ಪ್ರಮಾಣದ್ದಾಗಿದೆ ಯೋಜನೆಯನ್ನಯ ತಯಾರಾಗುವ ಕಬ್ಬಿಣ ಮತ್ತು ಉಕ್ಕು ದೇಶದ ಮುಂದುವರಿದ ಕೈಗಾರಿಕೆಗಳಿಗೆ ಸಾಕಷ್ಟು ಪ್ರಮಾಣದಲ್ಲಿಲ್ಲವೆಂದು ಹೇಳಿದರು. ಗೋಷ್ಠಿಯ ಡ್ಯಾಕ್ಟರ್ ರಾವ ರೆ ಘಾ. ಎಂಜಿಲಿಟ್ಸ್ವೀರವರು ಕೇಂದ್ರ ಯೋಜನಾ ಮಂತ್ರಿ ಶ್ರೀ ಜಿ. ಎಲ್. ನಂದಾರವರಿಂದ ಬಂದ ಸಂದೇಶವನ್ನು ಓದಿ ಸ್ವಾಗತ ಭಾಷಣಮಾಡಿದರು. ಶ್ರೀ ಎಸ್. ರಾಜೇವ ನವರು ಧನ್ಯವಾದಗಳನ್ನಿತ್ತರು.

ಶ್ರೀ ಎಸ್. ಅರಾನ್ಸಾರವರು 'ಸಹಕಾರ ಮತ್ತು ಯೋಜನೆ' ಕುರಿತು ಮಾತನಾಡುತ್ತಾ, ಗ್ರಾಮೀಣ ಪ್ರದೇಶಗಳ ಪುನರ್ನಿರ್ಮಾಣಕ್ಕಾಗಿ ಪ್ರತಿ ಪಲ್ಲಿಗೊಂದು ಸಹಕಾರಿ ಸಂಘದ ಸ್ಥಾಪನೆಯಾಗಬೇಕು. ಪ್ರತಿಯೋರ್ವ ಪಲ್ಲಿಗನೂ ಯಾವುದಾದರೊಂದು ಸಹಕಾರಿ ಸಂಘದ ಸದಸ್ಯನಾಗುವುದು ಅಗತ್ಯವೆಂದು ತಾ. ೨೮ರಂದು ನಡೆದ ವಿಚಾರಗೋಷ್ಠಿಯಲ್ಲಿ ಹೇಳಿದರು. ಶ್ರೀ ಎಸ್. ಎಸ್. ದೇವರಾಯರು ಕೂಡಾ ಮಾತನಾಡಿದರು. ಶ್ರೀ ಫಾ| ಎಂಜಿಲಿಟ್ಸ್ವೀರವರು ತಮ್ಮ ಸಮಾರೋಪ ಭಾಷಣದಲ್ಲಿ ದ್ವಿತೀಯ ಯೋಜನೆಯಿಂದ ತಾವು ನಿರೀಕ್ಷಿಸುವುದನ್ನು ಸಾಧಿಸುವುದಕ್ಕಾಗಿ ಜನತೆಯ ಸಹಕಾರ ಅಗತ್ಯವೆಂಬುದನ್ನು ಪಲ್ಲಿಗರಿಗೆ ಮನಗಾಣಿಸುವುದು ಉತ್ತಮವೆಂದು ಮೊದಲಾಗಿ ಹೇಳಿದರು.

ರೋಟರಿ ಕ್ಲಬ್ಬಿನ ಸಭೆಯು—ತಾ. ೨೮ರಂದು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಪಿ. ಕಸ್ತೂರಿಯವರು ಗತ ಸಭೆಯ ವರದಿವಾಚನ ಮಾಡಿದರು. ಇಲೆಕ್ಟ್ರಿಕಲ್ ಡಿವಿಜನಲ್ ಇಂಜಿನಿಯರ್ ಶ್ರೀ ಯು. ಪಿ. ನಾಯ್ಕರು ಮಾತನಾಡುತ್ತಾ, ಪಿ. ಕೆ. ಜಿಲ್ಲೆಯ ಒಟ್ಟು ೬೩೩ ಪಲ್ಲಿಗಳ ಪೈಕಿ ಈ ತನಕ ೬೭ ಪಲ್ಲಿಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲಾಗಿದೆ. ದ್ವಿತೀಯ ಯೋಜನಾವಧಿಯಲ್ಲಿ ೧೭೯ ಪಲ್ಲಿಗಳಿಗೆ ವಿದ್ಯುತ್ ಒದಗಿಸಲಾಗುವುದು. ಇನ್ನು ೨೦ ವರ್ಷಗಳಲ್ಲಿ ಜಿಲ್ಲೆಯ ಪ್ರತಿಯೊಂದು ಪಲ್ಲಿಗೂ ವಿದ್ಯುತ್ ಒದಗಿಸಬಹುದೆಂದು ತನಗೆ ಭರವಸೆಯಿದೆ ಎಂದರು.

ನಗರಸಭೆಯು-ತಾ. ೨೭ರಂದು ಸಂಜೆ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ೧೯೩೬-೩೭ನೇ ವರ್ಷದ ಆಯವ್ಯಯ ವರದಿಯ ಪ್ರತಿಯನ್ನು ಕನ್ನಡದಲ್ಲಿ ಕೊಡದಿದ್ದುದಕ್ಕೆ ನಿಷೇಧಾರ್ಥವಾಗಿ ಲ್ಯಾಪಡೆದ ನಾಲ್ವರು ಸದಸ್ಯರು ಹೊರ ನಡೆದರು. ಆದರೆ ಕೊನೆಗೆ ಮೂವರು ಮರಳಿಬಂದು ಸಭಾ ಕಾರ್ಯದಲ್ಲಿ ಭಾಗವಹಿಸಿದ್ದರು. ಇದೇ ತಿಂಗಳ ತಾ. ೧೧ ಮತ್ತು ೧೨ ರಂದು ಜಿಲ್ಲೆಯನ್ನು ಸಂದರ್ಶಿಸಲಿರುವ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಶನರ ಚೇರ್‌ಮೆನ್ ಶ್ರೀ ಸಿ. ಡಿ. ದೇಶಮುಖರಿಗೆ ಮಂಗಳೂರು ನಗರ ಸಭೆಯ ಕಡೆಯಿಂದ ಪೌರಸ್ವಾಗತವನ್ನಿತ್ತಬೇಕೆಂದು ನಿರ್ಣಯವಾಯಿತು. ಶ್ರೀಗಳಾದ ಜೆ. ಜಿ ಮಹಾದೇವ, ಎಮ್. ಶ್ರೀನಿವಾಸ ನಾಯಕ್, ಎ ಶಾಂತಾರಾಮ ಪೈ, ಪಂಡಿತ ಪಾಮನ ಕೊಡಿಯಾಲಬೈಲ್, ಕೆ. ವಿಶ್ವನಾಥ ಕಾಮತ್, ಡಾ. ಎಮ್ ಸಿ ಜಾಕ್ಸಿ ಮೊದಲಾದವರು ಅಡಳಿತ ವರದಿ ಕುರಿತು ಮಾತನಾಡಿದರು. ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಮಾತನಾಡುತ್ತಾ, ಸದಸ್ಯರು ಮಾಡಿದ ಟೀಕೆಗಳು ನ್ಯಾಯವೆಂಬುದನ್ನು ಒಪ್ಪಿದರು. ನಂತರ ಯಾವ ರೀತಿಯ ರಿಮಾರ್ಕುಗಳಲ್ಲವೇನೇ ಸರಕಾರಕ್ಕೆ ಕಳುಹಿಸಿಕೊಡುವ ನಿರ್ಧಾರವಾಯಿತು.

ನವಯುಗದಲ್ಲಿ ಜಾಹೀರಾತುಗಳನ್ನು ಕೊಡಿರಿ

ಬಾ ಚಂದಿರ!

೧

ಬಾ ಚಂದಿರ,
ಬಾ ಸುಂದರ
ಬಾಪಿನ ಬಿತ್ತರದಿ
ಕವಮಂದಿರ
ಬಲು ಬಂಧುರ
ಆಗಸದೆತ್ತರದಿ |

೨

ಮುಗಿಲಿನ ಹೋಪು
ತಿಂಗಳಲಂಪು
ಜನನ.ನಕಾನಂದ
ಮೌನಾವರಣ
ತಿಂಗಳ ಕಿರಣ —
ಕಿಳಿಬೆಳಗದೆ ಚಂದ?

೩

ಬಾನಂಚಲಿ
ತಾರಾವಳಿ
ಹೊಸತನವಾಂತಿಹುದು
ಬಾನರಳದೆ
ತಂಪೊಗೆದಿದೆ
ಜನ ಮರುಳಾಗಿಹುದು ||

೪

ನವೆಯುವ ನಿನ್ನ
ನುತಿಪೆನು ಅಣ್ಣ
ರಸವುಣಿಸಿದೆಯೆಂದು
ಬೆಳಕಿನ ಮೊನಲು
ಹರಿಸುತ ನಗಲು
ಧರೆತಣಿಸಿದೆಯೆಂದು ||

— ಟಿ. ಸದಾನಂದ, ಉಜ್ಜಿಲ.

(ಅನೇ ಪುಟದಿಂದ)

ಹೆಗ್ಗಳಿಕೆಯನ್ನು ಈಗ ಜೀವಿಸಿರುವುದೆಂಬುದನ್ನು ತೋರಿಸಿಕೊಡಬೇಕು ಅಲ್ಲದೆ ಮುಂದಕ್ಕೆ ಇನ್ನೂ ಹೆಚ್ಚಿನ ಕೀರ್ತಿಶಾಲಿಯಾಗುವಂತೆ ಸೂಕ್ತ ಪ್ರಯತ್ನಗಳನ್ನು ಕೈಗೊಳ್ಳಬೇಕು.

ಶಾಲೆಗಳಲ್ಲಿ ಇಂದ ಮುಷ್ಕರಾದಿಗಳು ನಡೆಯುತ್ತವೆ. ದೇಶಕ್ಕೆ ನೆರವೀಯುವುದು ಸೈನಿಕೀಕರಣವಲ್ಲ. ಈ ರೀತಿ ಯ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಹಿತಕರಿ ಎನಿಸದು. ವಿದ್ಯಾರ್ಥಿಗಳಿಗೆ ತಮ್ಮ ಕರ್ತವ್ಯವೇನೆಂಬುದರ ಪೂರ್ಣ ಜ್ಞಾನ ವಿರಬೇಕು. ಹಾಗೆಯೇ ಅವರು ಚಟುವಟಿಕೆಗಳಿಗೊಂದು ಮಿತಿಯೂ ಇರಬೇಕು ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ತವುಗಳ ಮನವರಿಕೆಯನ್ನು ನೂಡಿಕೆಟ್ಟರೆ, ಮತ್ತುತೆಯೇ ತಮ್ಮ ವಿದ್ಯಾರ್ಥಿಗಳನ್ನು ಗೌರವಸ್ಥರಾಗುವಂತೆ ಮಾಡುವ ವಿಧದ ಶಿಕ್ಷಣಪದ್ಧತಿಯನ್ನು ತಿದಿಕೊಂಡರೆ, ನಿಜವಾಗಿಯೂ ಅವುಗಳು ದೊಡ್ಡ ಮಹತ್ವದ ಪಾತ್ರವನ್ನು ದೇಶ ಮನಾರಚನೆಯಲ್ಲಿ ಸಡೆದಂತಾಗುವುದು.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಈಗ ಚಾಲ್ತಿಯಲ್ಲಿರುವ ಬೇಂಕಿನ ಬಡ್ಡಿ ದರಗಳು ಈ ಕೆಳಗಿನಂತಿವೆ:—

ಸೇವಿಂಗ್ಸ್ ಬೇಂಕ್ ಖಾತೆಗಳು		— ಸಾ. ಸೇ. 2½
ನಿರಖು ಠೇವಣಾತಿಗಳು		
ರೂ. 10,000ದ ಕೆಳಗೆ	(1ರಿಂದ 6 ತಿಂಗಳು)	— ಸಾ. ಸೇ. 4½
— Do —	(7ರಿಂದ 24 ತಿಂಗಳು)	— ಸಾ. ಸೇ. 4½
ರೂ. 10,000 ಮತ್ತು ಮೇಲೆ	(1ರಿಂದ 24 ತಿಂಗಳು)	— ಸಾ. ಸೇ. 4½

100 ವರ್ಷಗಳ ಖ್ಯಾತಿಗೇರಿದ ಸಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರವರ ರತ್ನದ್ವಯಗಳ ಟ್ರೇಡ್ ಮಾರ್ಕ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಆತ್ಯುಷ್ಣ, ಶುಕ್ರನಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, **ನಪುಂಸಕತೆಯನ್ನು** ನಿವಾರಿಸಬೇಕಾಗಿರುತ್ತದೆ.

ಸಂ|| A.R. ಅಯ್ಯಂಗಾರ್

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಪ್ರಾಯದೆಯ ವಿವರಗಳನ್ನು ಬರೆದು 1 ಆಣೆ (25 N.P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ಯಾಟಲಾಗ್ ಉಚಿತ.

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ. (ನ. ಯು.)
628, "ಸಂತಾನ ಸಿಂದೂರ ಭವನ", ಚಾಮರಾಜ ರೋಡ್ ಮೈಸೂರು-1 (S.I.)

ಹುರುಳಿಲ್ಲದ ಮರುಳುವಾದ—

ಸಾಹಿತ್ಯದಲ್ಲಿ ಅಶ್ಲೀಲತೆಯೆಂಬುದಿಲ್ಲ!

ಶ್ರೀ ಸಿ. ನಾರಾಯಣ ಬಲ್ಲಾಳ

ಜನರು ತಮ್ಮ ಬುದ್ಧಿಮತ್ತೆಗೆ ತೋಚಿದ ಹಾಗೆ ಸಾಹಿತ್ಯದಲ್ಲಿ ವರ್ಗಭೇದ ಮಾಡತೊಡಗಿದರು. ಸಾಹಿತ್ಯದ ಗುಣ, ವೈಶಿಷ್ಟ್ಯಗಳ ಮೇಲಿಂದ ವಿಮರ್ಶಕರು ಮಾಡಿದ್ದೆಂದು ಈ ಭೇದವನ್ನು ಸಮರ್ಥಿಸುವ ಚಟವೂ ಕೆಲವೊಂದು ಜನರಲ್ಲಿ ನೆಲೆಯಿತು ಆದರೆ ಸಾಹಿತ್ಯದಲ್ಲಿ ವರ್ಗಭೇದ ಮಾಡುವಾಗ ಕೆಲವೊಂದು ಕ್ಷುಲ್ಲಕ ವಿವೇಚನೆಗೆ ಅಗ್ರಸ್ಥಾನ ಕೊಡುವುದು ಇತ್ತೀಚೆಗೆ ಒಂದು ಚಟವೇ ಆಗಿದೆ.

ಹಳೆ ಸಾಹಿತ್ಯ, ಪ್ರಗತಿಶೀಲ ಸಾಹಿತ್ಯ, ಕ್ರಾಂತಿಕಾರಿ ಸಾಹಿತ್ಯ, ಆಧುನಿಕ ಸಾಹಿತ್ಯ ಎನ್ನುವ ಕಾಲ ಕಳೆದು ಇದೀಗ ಸುಶೀಲ ಸಾಹಿತ್ಯ, ಅಶ್ಲೀಲ ಸಾಹಿತ್ಯ—ಮುಂತಾದ ದೈಹಿಕ ಹಾಗೂ ಕಾಮಲೀಲಾ ವಿಚಾರ ಧಾರೆಯಲ್ಲಿ ಸಾಹಿತ್ಯ ಭೇದ ಮಾಡತೊಡಗಿದ ಮಂದಿ ಹೆಚ್ಚಿದ್ದಾರೆ ಸಾಹಿತ್ಯ—ಅದು ಕಾಮಪ್ರಚೋದಕವೋ, ನೀತಿ ಪೋಷಕವೋ ಅಥವಾ ಧ್ಯೇಯ ನಿರೂಪಣೆಯದೋ ಯಾವುದೇ ಇದ್ದರೂ ಇಂದು ಮಾಡುತ್ತಲಿರುವ ವರ್ಗ ಭೇದ ಕೆಲವೊಂದು ಜನರ ವ್ಯಯಕ್ತಿಕ ಕಿಲ್ಬಿಷ ಮನೋಭಾವದ ಫಲವೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಸಾಹಿತ್ಯವು ಕೇವಲ ರಸವನ್ನಷ್ಟೇ ವರ್ಣಿಸುವಂತಿಲ್ಲ. ಕಸವನ್ನೂ ರಸವತ್ತಾಗಿ ವರ್ಣಿಸುವ ಶಕ್ತಿ ಸಾಹಿತಿಗಿದೆ. ಜೀವನದ, ಪ್ರಕೃತಿಯ ಹಾಗೂ ಗೋಚರವಾಗುವ ಅಥವಾ ಅಗೋಚರವಾಗಿರುವ ಯಾವುದೇ ವಿಚಾರವನ್ನಾದರೂ ಅದು ಅಣುವಿನಷ್ಟು ಅಲ್ಪವಿರಲಿ, ಹಿಮಾಲಯದಷ್ಟು ಉನ್ನತವಿರಲಿ, ಸೂರ್ಯನಷ್ಟು ಪ್ರಭಾವಿತವಾಗಿರಲಿ, ಕತ್ತಲೆಯಂತೆ ಕಪ್ಪಿರಲಿ, ಅವರ ಯೋಗ್ಯತೆಯನ್ನು— ಔನತ್ಯವನ್ನು— ಅವಶ್ಯಕತೆಯನ್ನು ಪ್ರತಿಪಾದಿಸುವುದು ಯೋಗ್ಯ ಅದರಲ್ಲಿ ಶೀಲಾಶ್ಲೀಲದ ಪ್ರಶ್ನೆಯಾಗಲೀ, ರಸಕಸದ ಸಮಸ್ಯೆಯಾಗಲೀ, ನೀತಿ-ಅನೀತಿಯ ಬುದ್ಧಿಮತ್ತೆಯಾಗಲೀ ಇಲ್ಲವೇ ಇಲ್ಲ. ಆ ರೀತಿ ವರ್ಗ ಭೇದವನ್ನು ಸಾಹಿತ್ಯದ ವಿಚಾರದಲ್ಲಿ ಮಾಡುವ ಹಕ್ಕು ಯಾರಿಗೂ ಇಲ್ಲ. ಇದೇ ದೃಷ್ಟಿಕೋನದಿಂದಲೇ ನಾವು ಸಾಹಿತ್ಯದಲ್ಲಿ ಅಶ್ಲೀಲತೆಯ ಕುರಿತು ವಿವೇಚಿಸಬೇಕು.

ಸಾಹಿತ್ಯವು ಜನಜೀವನದ ಪ್ರತಿರೂಪ. ಜೀವನದ ಅನಂತ ಮುಖಗಳನ್ನು ಯಥಾವತ್ತಾಗಿ ಪ್ರತಿಬಿಂಬಿಸುವ ಶಕ್ತಿ, ಸಾಮರ್ಥ್ಯ ಹಾಗೂ ಸ್ವಾತಂತ್ರ್ಯ ಸಾಹಿತಿಗಿದೆ ಎನ್ನುವ ವಾದವನ್ನು ಯಾರಿಗೂ ಅಲ್ಲಗಳೆಯಲು ಸಾಧ್ಯವಿಲ್ಲ. ಇಂತಹ ಸರ್ವಶಕ್ತಿಯ ಸಾಹಿತ್ಯದಲ್ಲಿ ಅಶ್ಲೀಲತೆ ಮೂರ್ತೀಭವಿಸಿದರೆ ಅದಕ್ಕೆ ಯಾತಾರ್ಥವಾದಿ ಸಾಹಿತಿ ತಪ್ಪುಗಾರನಾಗಲಾರ. ಅಶ್ಲೀಲತೆಯನ್ನು ನಿರ್ಮಿಸಿದ ಸಮಾಜವೇ ಹೊಣೆಗಾರವಾಗಿದೆ. ಅಶ್ಲೀಲತೆಯು ಸಾಹಿತಿಯ ಭಾವನಾಲೋಕದಿಂದಿಳಿದು ಬಂದ ಒಂದು ಅಗೋಚರ ವಿಚಾರವಷ್ಟೆ. ಸಮಾಜದ ಒಂದು ಪ್ರತಿಕೃತಿ ಸ್ವರೂಪ; ನಮ್ಮ ಸುತ್ತು-ಮುತ್ತಲೂ ಕಣ್ಣು ಮುಂದೆಯೂ ನಡೆಯುವ ಒಂದು ಚಿತ್ರಣ. ಸಮಾಜದಲ್ಲೇ ಅಶ್ಲೀಲತೆ ತುಂಬಿರುವಾಗ ಅದನ್ನು ಪ್ರತಿಬಿಂಬಿಸಿದರೆ ಅದು ಸಾಹಿತಿಯ ತಪ್ಪಾಗಲಾರದು; ತಪ್ಪಾಗಬಾರದು! ಹಾಗಿರುವಾಗ ಸಾಹಿತ್ಯದಲ್ಲಿ ಅಶ್ಲೀಲತೆಯನ್ನು ತರಬಾರದೆನ್ನುವವರು ಅದನ್ನು ಸಾಹಿತಿಗೆ ಹೇಳುವ ಬದಲು ಸಮಾಜಕ್ಕೆ ಸವಾಲು ಹಾಕಬೇಕು. ಎಲ್ಲಿಯ ತನಕ ಜನರ ಬುದ್ಧಿಮತ್ತೆ ಅಶ್ಲೀಲತೆಯ ಕೂಪದಲ್ಲೇ ಓಲಾಡುತ್ತದೋ, ಅಲ್ಲಿಯ ತನಕ ಸಾಹಿತಿ ಅದನ್ನು ಪ್ರತಿಬಿಂಬಿಸುತ್ತ ಹೋಗುವುದು ನಿಶ್ಚಿತ. ಜನ ಜೀವನದ ನೈಜ ಚಿತ್ರವು ಎಂದಿನ ವರೆಗೆ ಅಶ್ಲೀಲ ಪೂರ್ಣವಾಗಿರುತ್ತದೋ ಅಲ್ಲಿಯ ತನಕ ವಾಸ್ತವಿಕ ದೃಷ್ಟಿಕೋನದ ಸಾಹಿತಿ ಅಶ್ಲೀಲತೆಯ ಮೇಲೆ ತನ್ನ ಲೇಖನಿಯ ಬೆಳಕು ಕೋರಿಸಲೇ ಬೇಕಾಗುತ್ತದೆ. ಇಲ್ಲವಾದರೆ ಅವನ ಸಾಹಿತ್ಯವು ಕೇವಲ ಭಾವನಾಮಯವಾಗಿಬಹುದು; ಕೃತಕತೆಯದೆನಿಸಬಹುದು; ನಿರ್ಜೀವವಾಗಬಹುದು.

ಇನ್ನು ಶೈಲಿಯಲ್ಲೂ ಅಶ್ಲೀಲತೆಯ ರೋಗ ಬಡಿದುಕೊಂಡಿದೆ. ಅಶ್ಲೀಲ ಪ್ರಸಂಗವನ್ನು ಬಿಡಿಸಿ—ಬಿಡಿಸಿ ವರ್ಣನಾಮಯವಾಗಿ ಹೇಳುವುದರಿಂದ ಜನಜೀವನದ ಮೇಲೆ ದುಷ್ಪರಿಣಾಮವಾಗುವುದೆಂದು ಕೆಲವರ ವಾದವಿದೆ. ಆದರೆ ಸಾಹಿತ್ಯವು ಅಶ್ಲೀಲ ಪ್ರೇರಕವೋ, ಸಮರ್ಥನೆಯದೋ ಎಂಬುದನ್ನು ಶೈಲಿಯು ಸಾರುವಂತಿಲ್ಲ. ಸಾಹಿತಿಯು ಆರಿಸಿಕೊಂಡ ವಸ್ತುವು ಹೇಳಬಹುದು.

ಕಾದಂಬರಿಯ ಕೇಂದ್ರವು ಅಶ್ಲೀಲವನ್ನು ಸಂಪೂರ್ಣವಾಗಿ ಸಾಧಿಸಿದ್ದು ಕಂಡು ಬಂದರೆ ಅದನ್ನು 'ಬಹಿಷ್ಕೃತ ಸಾಹಿತ್ಯ'ವೆನ್ನಬಹುದು. ಹೊರತು ಶೈಲಿಯ ಮೂಲಕ ಒಂದು ಕಾದಂಬರಿಯನ್ನು ಅಶ್ಲೀಲದ ಒರೆಗಲ್ಲಿಗೆ ಹಚ್ಚುವುದು ಸಮರ್ಥನೀಯವಾಗಲಾರದು.

ಅಂತಾರಾಷ್ಟ್ರೀಯ ಖ್ಯಾತಿವೆತ್ತ ಕಾದಂಬರಿಗಳಲ್ಲಿ ಹೆಚ್ಚಿನವು ಕಾಮಪ್ರಚೋದಿತ ಪ್ರಸಂಗಗಳಿಂದ ತುಂಬಿರುತ್ತವೆ. ಆದರೆ ಅದು ಎಲ್ಲರಿಂದಲೂ—ಇಂದು ಕನ್ನಡದ ವರ್ಗ ಭೇದವಾದ ಹೊಂಟಿರುವ ವಿಮರ್ಶಕರಿಂದಲೂ ಸಹಾ—ಕೊಂಡಾಡಲ್ಪಡುತ್ತದೆ. ಇಂಗ್ಲಿಷ್, ಫ್ರೆಂಚ್ ಭಾಷೆಗಳ ಸಾಹಿತ್ಯದಲ್ಲಿ ನೈಜತೆ ಸುಪ್ತ ಸೌಂದರ್ಯವನ್ನು ಕಂಡವರು ನಮ್ಮ ಕನ್ನಡದ ಕೆಲವೊಂದು ಕಾದಂಬರಿಗಳ ಕುರಿತು ತಾಳಿದ ಮನೋಭೂಮಿಕೆ ಅರ್ಥವಿಲ್ಲದ್ದೆಂದೇ ಹೇಳಬೇಕು. ಇಂದು ಜೀವನದ ತುಂಬೆಲ್ಲ ಅನ್ಯಾಯ, ವಂಚನೆ, ಅಶ್ಲೀಲತೆ, ವೈಪರೀತ್ಯ ಕಾಮ ಪಿಪಾಸೆಯೇ ತುಂಬಿಕೊಂಡಿದೆ. ಇಂದಿನ ಜನಾಂಗದ ಅಧಃಪತನವು ಇದರಿಂದಾಗಿಯೇ ಆಗುತ್ತಲಿದೆ. ಜನರ ಮನೋಭಾವವು ಈ ಅಶ್ಲೀಲತೆಯ ಕಡೆಗೆ ಬಹುಬೇಗನೇ ಮಾಲುತ್ತಿದೆ ಈ ದೃಷ್ಟಿಯಿಂದ ನೋಡಿದರೆ ಇಂದಿನ ಸಾಹಿತ್ಯವು ಜನಜೀವನದ ನೈಜತೆಯ ಪ್ರತಿಬಿಂಬವಾಗಿಲ್ಲವೆನ್ನಬೇಕು. ಇಂದಿನ ಜನರು ಕೇವಲ ಅಶ್ಲೀಲ ವಿಷಯ ವಿಚಾರಗಳಿಗೇ ಇಲ್ಲದ ಪ್ರಧಾನ್ಯ ಇತ್ತಿದ್ದಾರೆ ಸಮಾಜದ ಪ್ರತಿಕರು, ನ್ಯಾಯವೇತ್ತರು ಈ ಅಶ್ಲೀಲತೆಯ ದಾಸರಾಗಿದ್ದಾರೆ ಇಂದಿನ ಸಮಾಜದ ಧೀಮಂತ ಶಕ್ತಿಗಳು ಅಶ್ಲೀಲತೆಯ ರಕ್ಷಾ ಕವಚವನ್ನು ನ್ಯಾಯ ನೀತಿಯ ಒಪ್ಪಕೊಟ್ಟು ಶಿರದಲ್ಲಿ ಧರಿಸಿದ್ದಾರೆ. ಕಣ್ಣೆದುರೇ ಅಶ್ಲೀಲದ ಪಂಚಾಂದಾಲರು ಜನಾಂಗದ ಮೂಗುದಾರ ಹಿಡಿದು ಎಲ್ಲರಿಂದಲೂ ಗೌರವ ಪಡೆಯುತ್ತಿದ್ದಾರೆ. ಇಂತಹವರ ಕೈಗೆ ಸತ್ಯ ಶೀಲ ನ್ಯಾಯಗಳು ನೆರೆಸಿಕ್ಕು ಅವರ ಆಟದ ವಸ್ತುವಾಗಿದೆ. ಅವರ ಮಾತಿನಲ್ಲೇ ಈ ಸತ್ ಶೀಲಗಳು ನಲಿದಾಡುತ್ತಿವೆ. ಇದನ್ನು ಕಂಡು ಸಾಹಿತಿಯು ತನ್ನ ಸಾಹಿತ್ಯದಲ್ಲಿ ಅಶ್ಲೀಲವಂತರ ಕೊನೆಯನ್ನುದುರಂತವಾಗಿ ವರ್ಣಿಸುತ್ತಿರುವುದು ಎಷ್ಟೋ ಪ್ರತಿಷ್ಠಿತರ ಅಂತರಂಗದಲ್ಲಿ ಜ್ವಾಲಾಮುಖಿಯ ಕಿಚ್ಚನ್ನು ಇಟ್ಟಿದೆ. ತಮ್ಮ ವರ್ತನೆಗೆ ಕೊಟ್ಟ ಪ್ರಬಲಾಘಾತವೆನ್ನುವ ಸೇಡಿನ ಕಿಡಿ ಈ ಸಾಮಾಜದ ಅಧಿಸುರುಪರಲ್ಲಿ ಉದಯಿಸಿದೆ. ಅದರಿಂದಾಗಿಯೇ ಅಂತಹ ಸಾಹಿತಿರು ಸಾಹಿತ್ಯಕ್ಕೆ 'ಅಶ್ಲೀಲತೆ'ಯ ಪಟ್ಟಿಹಚ್ಚಿ ಜನರೆದುರು ಅವನನ್ನು ಮುಖಭಂಗ ಮಾಡಲೆತ್ನಿಸುತ್ತಿದ್ದಾರೆ ಇಂದು ಅಶ್ಲೀಲತೆಯ ವಿರುದ್ಧ ಎದ್ದಿರುವ ಆಂದೋಲನವು ಅಶ್ಲೀಲವನ್ನು ತಮ್ಮ ಜೀವನದಲ್ಲೇ ಆರಗಿಸಿಕೊಂಡ ದರ್ಪದ ಶ್ರೀಮಂತ ಶಕ್ತಿಗಳ ಬುಟಲ ಕಾರಸ್ಥಾನ. ಅವರ ಎಂಜಲಾಸೆಗೆ ಬಲಿಬಿದ್ದು ಸಾಹಿತ್ಯದಲ್ಲಿ ನೀತಿಯನ್ನು ಪ್ರಸ್ತಾಪಿಸುವ ಕೆಲವೊಂದು ಗೊಡ್ಡು ಜನರ ವಾದ ವೈಖರಿ ಇದನ್ನು ಖಂಡಾ ಖಂಡಿತವಾಗಿ ಹೇಳಬೇಕಾದ್ದು ಇಂದಿನ ಸಂದಿಗ್ಧ ಸಮಯದಲ್ಲಿ ಅವಶ್ಯಕವಾಗಿದೆ.

ಇಂದು ಅಶ್ಲೀಲ ಸಾಹಿತ್ಯವೆಂದು ಪರಿಗಣಿಸಲ್ಪಡುತ್ತಿರುವ ಸಾಹಿತ್ಯ ಬೇರೆಲ್ಲಾ ದೃಷ್ಟಿಯಲ್ಲೂ ನೈಜವಾಗಿದ್ದರೂ ಸಂಪೂರ್ಣ ವಾಸ್ತವಿಕವೆಂದು, ಜನಜೀವನದ ಪ್ರತಿಬಿಂಬವೆಂದು ಕೇಳಲು ಸಾಧ್ಯವಿಲ್ಲ ಏಕೆಂದರೆ ಸಾಹಿತಿಯು ಕೇವಲ ಒಂದು ನೀತಿ ಪ್ರಸ್ತಾವನೆಗಾಗಿ—ಸಾಮಾಜಿಕ ನ್ಯಾಯದ ಮಳಿತ್ವಿಕಗಾಗಿ ತನ್ನ ಕಾದಂಬರಿಯ, ಅಶ್ಲೀಲ ಜೀವನದ ವ್ಯಕ್ತಿಯ ಜೀವನವನ್ನು ದುರಂತದಲ್ಲಿ ಕೊನೆಗಾಣಿಸುತ್ತಾನೆ. ಆದರೆ ಅದು ಯಥಾರ್ಥದ್ದೆಂದು ಇಂದಿನ ಜೀವನವನ್ನು ಪರಿಕಿಸಿದವನು ಯಾರು ಒಪ್ಪಬಹುದು? ಇಂದು ನಿತ್ಯ ಜೀವನದಲ್ಲಿ ಸಮಾಜಕ್ಕೆ ಹತ್ತು ಬಗೆಯಲ್ಲಿ ದ್ರೋಹ ಬಗೆಯುತ್ತಿರುವವನು ಮೇಲೇರುತ್ತಿದ್ದಾನೆ. ಅವನ ಸ್ಥಾನ—ಮಾನಗಳು ಎಲ್ಲ ಕಡೆ ಎತ್ತರಿಸಲ್ಪಡುತ್ತವೆ. ಅವನ ಕಾಲ ತುಳಿತದಲ್ಲಿ ಶೀಲ, ಸಚ್ಚಾರಿತ್ರ್ಯಗಳು ನುಜ್ಜು ಗುಜ್ಜಾಗುತ್ತಿವೆ. ಇದನ್ನು ನಿತ್ಯವೂ ನೋಡುತ್ತಾ, ಸಾಹಿತಿಯು ತನ್ನ ಲೇಖನಿಯನ್ನು ದುರಂತದ ಕಡೆಗೆ ಕೊಂಡುಹೋದರೆ ಅವನು ಸಮಾಜದಿಂದ 'ಬಹಿಷ್ಕೃತ'ನೆನಿಸಿದ್ದಾನೆ. ಇಂದು ಸಮಾಜವು ಕೆಲವೇ ವ್ಯಕ್ತಿಗಳ ಗುತ್ತಿಗೆಯಾಗಿದೆ. ಅದನ್ನು ಒಪ್ಪಲು ಜನಾಂಗ ಸಿದ್ಧವಾಗಿಲ್ಲ. ಪ್ರತಿಯೊಬ್ಬನ ಸ್ವಾತಂತ್ರ್ಯ ಪ್ರೇಮವು ವಿನಸ್ಸಾಕ್ಷಿಯನ್ನು ವಿರೋಧಿಸಿ ತನ್ನ ಮರ್ಯಾದೆಯನ್ನು ಒಸ್ತಿ ಕೊಳ್ಳದಂತೆ ಮಾಡಿದೆ. ಆದ್ದರಿಂದಲೇ ಇಂದು ತಿಳಿದೂ—ತಿಳಿದೂ ಅಶ್ಲೀಲತೆಯನ್ನು ಒಂದು ಕಡೆಯಿಂದ ಧಿಕ್ಕರಿಸುವ ಜನ, ಮತ್ತೊಂದು ಕಡೆಯಿಂದ ಅದರ ಪ್ರೇರಕ ಶಕ್ತಿಗೆ ಉತ್ತೇಜನವೀಯುತ್ತಿದೆ. ಇದೇ ಇಂದಿನ ಲೋಕ ನೀತಿ.

ಸಾಹಿತ್ಯದಲ್ಲಿ ಅಶ್ಲೀಲತೆ ನಿರ್ಮಿಸಬೇಡಿರೆನ್ನುವ ಪಂಗಡದವರು ಮೊದಲಾಗಿ ತಮ್ಮ ಆತ್ಮಸಿರೀಕ್ಷಣೆ ಮಾಡಿಕೊಳ್ಳಬೇಕು; ತಮ್ಮ ಹೃದಯದಲ್ಲಿ ಸುಪ್ತವಾಗಿರುವ ಅಶ್ಲೀಲತೆಯ ಕಿಲ್ಬಿಷವನ್ನು ಕೆರೆದು ತೆಗೆದ, ಸ್ವಚ್ಛಗೊಳಿಸಿ ಆತ್ಮಸಾಕ್ಷಿತ್ಯಾರ ಮಾಡಿಕೊಳ್ಳಬೇಕು ಸಾಹಿತ್ಯದಲ್ಲಿ ನೈಜತೆಯನ್ನೇ ಪ್ರತಿಬಿಂಬಿಸಬೇಕೆನ್ನುವ ಉತ್ಕಟೇಚ್ಛೆಯ ಸಾಹಿತಿ ಕೂಡಾ ಸಮಾಜದಿಂದ ಅಶ್ಲೀಲತೆ ತೊಲಗಿದಾಗಲೇ ತನ್ನ ಲೇಖನಿಯನ್ನು ಬೇರೆ ಕಡೆಗೆ ತಿರುಗಿಸಿಯಾನು. ಸಾಹಿತಿಯು ಬೇಖನಿ ಸಮಾಜದ, ಜನಜೀವನದ ಕನ್ನಡಿಯಾಗಿದೆ ಎನ್ನುವುದನ್ನು ತಿಳಿದುಕೊಂಡರೆ, ಸಾಹಿತ್ಯದಲ್ಲಿ ಶೀಲಾಶ್ಲೀಲದ ಪ್ರಶ್ನೆಗೆ ಹುರುಳಿಲ್ಲವೆಂದು ಮನವಟ್ಟಾಗುವುದು.

ದೇಶಾಭಿವೃದ್ಧಿಯ ಮಾರ್ಗ—

ಸಾಮುದಾಯಿಕ ಅಭಿವೃದ್ಧಿ ಯೋಜನೆ

ಭವ್ಯ ಭಾರತವನ್ನು ಕಟ್ಟುವ ದೃಢ ಸಂಕಲ್ಪವನ್ನು ಮಾಡಿದ ಭಾರತ ಸರಕಾರ ಒಂದಲ್ಲ ಹಲವಾರು ಸಮಸ್ಯೆಗಳನ್ನು ಪ್ರಾರಂಭಕಾಲದಲ್ಲಿ ಎದುರಿಸಬೇಕಾಯಿತು. ಭಾರತೀಯರಲ್ಲಿ ನೂರಕ್ಕೆ ಎಪ್ಪತ್ತೈದಂಶಕ್ಕೂ ಅಧಿಕ ಸಂಖ್ಯಾತ ಜನರು ತೀರಾ ಹಳ್ಳಿಯ ಮೂಲೆಮೂಲೆಗಳಲ್ಲಿಯೇ ವಾಸಿಸುತಿದ್ದು ನಾಗರಿಕತೆಯ, ಶೈಕ್ಷಣಿಕ ಸೌಕರ್ಯದ, ವಿದ್ಯೆಬುದ್ಧಿಯ ವಾತಾವರಣದಿಂದ ಅತಿ ದೂರದಲ್ಲಿದ್ದರು. ಅವರಿಗೆ ಜನತಾ ಸರಕಾರವೆಂದರೇನು?, ನಮ್ಮ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಆರೋಗ್ಯವಂತರಾಗಿ ಬಾಳಬಹುದು ಸಂಪತ್ತು ವಿದ್ಯೆಯಿಂದೇನು ಪ್ರಯೋಜನ, ಸಂಪತ್ತನ್ನು ಯಾವ ರೀತಿಯಲ್ಲಿ ಬೇಸಾಯಮಾಡುವುದರಿಂದ ಯಾವ ತರದ ಲಾಭವೊದಗುವುದೆ ಎಂಬಿವೇ ಮೊದಲಾದ ತೀರಾ ಸಂಕುಲಭವಾದ ಅದರೆ ಅತ್ಯಂತ ಮಹತ್ವದ ವಿಷಯಗಳ ತಿಳುವಳಿಕೆ ಪರಿಜ್ಞಾನವೇ ಇರಲಿಲ್ಲ ನಾಗರಿಕತೆಯ ಗಾಳಿ ಸೋಂಕದೆ ಕೇವಲ ಪಶುಗಳಂತೆಯೇ ತನ್ನ ಜೀವನವನ್ನು ಸಾಗಿಸುತಿದ್ದ ಬಹುಸಂಖ್ಯಾತ ಭಾರತೀಯ ಹಳ್ಳಿಗರಲ್ಲಿ ನವ ಚೇತನ, ನವಶಕ್ತಿ, ನವ ಉತ್ಸಾಹವು ಮೂಡಿದಂತೆ ಕೃಷಿವಲರ ಬೀಡಾದ ಭಾರತ—ವಾತಾವರಣದಲ್ಲಿ ಕುಳ್ಳಿರಿಸಿದ್ದ ನಮ್ಮ ದೇಶ ಭವ್ಯವೂ ದಿವ್ಯವೂ ಆಗುವುದಾದರೂ ಹೇಗೆ?

ಈ ಹಿರಿಯ ಪ್ರಶ್ನೆಗೆ ಸರಕಾರವು ಉತ್ತರವನ್ನು ಅರಸುತ್ತಾ ಹಳ್ಳಿಗರ ಅಭಿವೃದ್ಧಿಯನ್ನೇ ತನ್ನ ಮೂಲ ಧ್ಯೇಯಗಳ ಒಂದನ್ನಾಗಿಟ್ಟುಕೊಂಡಿತ್ತು. ಅಜ್ಞಾನದ ಅಂಧಕಾರದಲ್ಲಿ ಕಣ್ಣು ತೋರದಂತಾಗಿಬಡುತ್ತಿರುವ ರೈತರ ನಡುವೆ ಜ್ಞಾನದೀಪವನ್ನು ಉರಿಸಿ, ಅವರಿದುರಿದ್ದ ಕತ್ತಲೆಯನ್ನು ಹೊಡೆದೋಡಿಸಿ ತಾವುಸಹ ಮಾನವರೆಂಬ ನಿಜಸ್ಥಿತಿಯನ್ನು ತಿಳಿದುಕೊಳ್ಳುವಂತೆ ಮಾಡುವ ಸದುದ್ದೇಶದಿಂದ ಸರ್ಕಾರವು ಅಕ್ಟೋಬರ ೨ನೇ ದಿನಾಂಕದಂದು ಭಾರತ ಸರಕಾರವು "ಸಾಮುದಾಯಿಕ ಅಭಿವೃದ್ಧಿಯೋಜನೆ" ಎಂಬ ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಈ ಕಾರ್ಯಕ್ರಮವು ಉಪಕ್ರಮಿಸಲ್ಪಟ್ಟು ಮೊನ್ನೆ ೨ನೇ ದಿನಾಂಕಕ್ಕೆ ಹೊರ್ತಿ ಐದು ವರ್ಷಗಳು ಸಂದುವು.

ಸಾಮುದಾಯಿಕ ಅಭಿವೃದ್ಧಿಯೋಜನೆಯನ್ನು ಮಾತ್ರವಲ್ಲದೆ ಇನ್ನೂ ಹೆಚ್ಚಿನ ಜ್ಞಾನಪ್ರಸಾರಕ್ಕಾಗಿ ಭಾರತ ಸರಕಾರವು ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಪ್ರಾರಂಭಿಸಿದೆ. ಹೀಗೆಈಎರಡುಯೋಜನೆಗಳ ಧ್ಯೇಯಗಳು ಮೂಲತಃ ಒಂದೇ ಆಗಿದ್ದರೂ ರಾಷ್ಟ್ರೀಯ ವಿಸ್ತರಣಾ ಸೇವಾ ಚಳವಳಿಯು ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮಕ್ಕಿಂತ ಕೊಂಚ ಭಿನ್ನ ವಿಧಾನದ್ದಾಗಿರುವುದು.

೧೯೫೨ರ ಅಕ್ಟೋಬರ ೨ರಂದು ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮವು ಕೇವಲ ೫೫ ಯೋಜನೆಗಳಿಂದ ಆರಂಭಿಸಲ್ಪಟ್ಟಿತು. "ಆದರೆ, ಈ ಸಂಖ್ಯೆಯು ಮುಂದೆ ಕಾಲಕಾಲದಲ್ಲಿ ಬೆಳೆಯುತ್ತಾ ಬಂದು ೧೯೫೭ರ ಆಗಸ್ಟ್ ತಿಂಗಳಂತ್ಯದಲ್ಲಿ ತಿಗಿಂತ ಸಾಮುದಾಯಿಕ ಅಭಿವೃದ್ಧಿ ಹಾಗೂ ರಾಷ್ಟ್ರೀಯ ವಿಸ್ತರಣಾ ಸೇವಾ ಕ್ಷೇತ್ರಗಳಿದ್ದುವು. ಈ ಕ್ಷೇತ್ರಗಳ ವ್ಯಾಪ್ತಿಯು ಸುಮಾರು ೧೫ ಕೋಟಿ ಜನರಿಂದ ತುಂಬಿತುಳುಕಾಡುತ್ತಿರುವ ೨೬೭,೭೫೬ ಗ್ರಾಮಗಳಲ್ಲಿ ಹರಡಿಕೊಂಡಿದೆ. ಎಂದರೆ, ಈ ಐದು ವರ್ಷಗಳಲ್ಲಿ ಈ ಯೋಜನೆಯ ಒಟ್ಟು ಜನರಲ್ಲಿ ಮೂರರಲ್ಲೊಂದಂಶಕ್ಕೂ ಮಿಕ್ಕಿದ ಜನರಿಗೆ ತಕ್ಕ ಸೇವೆಯನ್ನು ಸಲ್ಲಿಸುವಲ್ಲಿ ಸಫಲವಾಗಿದೆ ಎಂದು ತಿಳಿಯಬಹುದು. ಪ್ರತಿಯೊಂದು ರಾಷ್ಟ್ರೀಯ ವಿಸ್ತರಣಾ ಕ್ಷೇತ್ರದಲ್ಲಿ ಸುಮಾರು ೬೬,೦೦೦ ಜನಸಂಖ್ಯೆಯುಳ್ಳ ನೂರು ಹಳ್ಳಿಗಳು ಸಮಾವೇಶವಾಗುವುವು

ಇವೇ ಯೋಜನೆಗಳು ಇನ್ನುಮುಂದೆಯೂ ಹರಡಿ, ೧೯೫೬ ರವೇಳೆಗೆ ರಾಷ್ಟ್ರೀಯ ವಿಸ್ತರಣಾ ಸೇವೆಯು ದೇಶದ ಎಲ್ಲ ಪ್ರದೇಶಗಳಿಗೂ ಹರಡುವುದು ಅದೇ ಅವಧಿಯ ಕೊನೆಯವೇಳೆಗೆ ಸಾಮುದಾಯಿಕ ಅಭಿವೃದ್ಧಿ ಕ್ಷೇತ್ರಗಳು ನೂರರಲ್ಲಿ ನಲುವತ್ತರಷ್ಟು ಭಾಗಕ್ಕೆ ವ್ಯಾಪ್ತವಾಗುವುದು ಹಾಗೆಯೇ ಈ ವಿಭಾಗವೂ ಮುಂದಕ್ಕೆ ಬೆಳೆಯಬಂದು ಕೆಲವೇ ವರ್ಷಗಳಲ್ಲಿ ದೇಶದಾದ್ಯಂತವೂ ಹರಡಲಿರುವುದು.

ಇಂತಹ ಯೋಜನೆಗಳು ಹಳ್ಳಿಗರ ಜನರಿಗೆ ನಾನಾ ವಿಧದ ಸಹಾಯವನ್ನು ಮಾಡಿ, ಅವರು ತೀವ್ರ ಅಭಿವೃದ್ಧಿಯನ್ನು ಪಡೆಯುವಂತೆ ಮಾಡಿದೆ. ಹಲವಾರು ಮೈಲಿಗಳ ರಸ್ತೆಗಳು, ಊರ ಜನರಿಗೆ ಶಾಲೆಗಳ ಕಟ್ಟೋಣಗಳು, ನದಿ ನದಿಗಳಿಗೆ ಸೇತುವೆಗಳು, ಬಾವಿಗಳು ಮೊದಲಾದ ಅತ್ಯಂತಾವಶ್ಯಕವಾದ ಕೆಲಸಗಳನ್ನು ಈ ಯೋಜನೆಗಳ ಮುಖಾಂತರವಾಗಿ ಸಾಧಿಸಲ್ಪಟ್ಟಿವೆ. ತಮ್ಮ ಆರೋಗ್ಯ ರಕ್ಷಣೆಗಾಗಿ ಆಸ್ಪತ್ರೆಗಳು, ಹಳ್ಳಿಗರಿಗೆ ಮನೆಗಳು, ಜ್ಞಾನಾಭಿವೃದ್ಧಿಗಾಗಿ ವಾಚನಾಲಯಗಳು, ಧೃಢಕಾಯತೆಗೆ ಕ್ರೀಡಾಪಟಗಳು ಮೊದಲಾದುವು ಸಕ ಗ್ರಾಮೀಣ ಪ್ರದೇಶವಾಸಿಗಳಿಗೆ ಲಭ್ಯಮಾನವಾಗಿವೆ.

ಗ್ರಾಮ ಗ್ರಾಮಗಳಲ್ಲಿ ಅಲ್ಲಲ್ಲಿನ ವೇಲ್ವಿಚಾರಣೆಯನ್ನು ನೋಡಿ ಹಳ್ಳಿಗರಿಗೆ ಸಾಕ್ತ ಮಾರ್ಗದರ್ಶನ ಮಾಡುವ ಸಲುವಾಗಿ ಒಬ್ಬ ಗ್ರಾಮಸೇವಕ ಅಥವಾ ಗ್ರಾಮ ಸೇವಿಕೆಯರುತ್ತಾರೆ. ಇವರು ಒಂದು ಅಭಿವೃದ್ಧಿಕ್ಷೇತ್ರದಲ್ಲಿ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ೧೦ ಗ್ರಾಮಗಳಲ್ಲಿನ ೬,೦೦೦ ದಿಂದ ೭,೦೦೦ದ ವರೆಗಿನ ಜನರ ಮೇಲ್ವಿಚಾರಣೆಯನ್ನು ನಡೆಯಿಸುವರು.

ಇಂತಹ ಯೋಜನೆಗಳಿಂದ ಭಾರತದ ಹಳ್ಳಿಗರು ಬೆಳೆಯ ಬಲಶಾಲಿಗಳಾಗಬೇಕು; ಸ್ವಾವಲಂಬಿ ಜೀವನಕ್ಕೆ ಇಂತಹ ಗ್ರಾಮಗಳು ಮಾರ್ಗದರ್ಶನ ಮಾಡಬೇಕು.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಬಂಧನದಿಂದ ಬಿಡುಗಡೆ

(೨ನೇ ಪುಟದಿಂದ)

ಮಾಡುವುದಿತ್ತು. ಅವರು ತನ್ನ ಮಕ್ಕಳಿಗೇನೂ ಕಡಿಮೆ ಮಾಡುತ್ತಿರಲಿಲ್ಲ. ಚಿನ್ನಾಗಿಯೇ ಸಾಕುತಿದ್ದರು!

ತುಂಬು ಜವ್ವನದ ರಾಧೆ ತನ್ನ ಸೊಬಗಿನ ಲತೆಗೆ ನಾನಾತರ ಸಿಹಿ ನೀರುಗಳ ಸ್ನೇರೆಯುತ್ತ ಜಾಗರೂಕತೆಯಿಂದ ಪೋಷಿಸಿಕೊಂಡು ಬಂದಿದ್ದಳು. ಅವಳ ಕೋಣೆಯಲ್ಲಿ ಕಾಲೇಜಿನ ಪುಸ್ತಕಗಳ ರಾಶಿಯನ್ನು ತನ್ನ ದೇಹದ ಅಲಂಕಾರಗಳಿಗೆ ಬೇಕಾಗುವ ಸಾಮಗ್ರಿಗಳ ರಾಶಿಯು ಸೋಲಿಸತ್ತಿರು ದನ್ನು ನೋಡಿ ಮನದಲ್ಲಿಯೇ ಹಿಗ್ಗುತಿದ್ದಳು.

ತನ್ನ ಊರಿನಲ್ಲಿ ತಿರಸ್ಕೃತನಾಗಿದ್ದರೂ ಕೂಡ ಶಂಕರು ನಾಗಪುರದಲ್ಲಿ ಮಿ. ಶಂಕರ್ ರಾವ್ ಎಂಬುದಾಗಿ ಮಾರ್ಪಾಟು ಹೊಂದಿ ಹಲವಾರು ಗೆಳೆಯರನ್ನು ಸಂಪಾದಿಸಿಕೊಂಡನು. ಅವನ ಮೋಹಕವಾದ ನಗು ವಿನಯ ಶೀಲತೆ, ಭಾಷಾಳ ಮರ್ಜಿ ಮುಂತಾದ ಸದ್ಗುಣಗಳನ್ನು ಕಂಡು ಹಲವರು ಮಾರು ಹೋದದ್ದರಲ್ಲಿ ಆಶ್ಚರ್ಯವಿಲ್ಲ. ಮೋಹನರಾಯರು ಕೂಡ, "ತನ್ನ ಮಗಳನ್ನು ಈತನಿಗೇ ಕೊಟ್ಟರೆ ಹೇಗೆ?" ಎಂಬ ವಿಚಾರವನ್ನು ಮನಸ್ಸಿನಲ್ಲಿಯೇ ತಂದುಕೊಂಡಿದ್ದರು

ಆ ದಿನ ರಾಧೆ ಕಾಲೇಜಿಗೆ ಹೋಗಿರಲಿಲ್ಲ ಪ್ರತಿ ದಿನವೂ ತನ್ನ ತಂದೆಯ ಕಾರಿನಲ್ಲಿಯೇ ಕಾಲೇಜಿಗೆ ಹೋಗುತಿದ್ದಳು. ಕೆಲವೊಮ್ಮೆ ಸೌಂದರ್ಯದ ಪ್ರದರ್ಶನಕ್ಕಾಗಿಯೇ, ಇಲ್ಲವೇ, ತಂದೆಯ ಕಾರಿಗೆ ಬೇರೆ ಕೆಲಸವಿರುವುದರಿಂದಲೋ ನಡೆದು ಹೋಗುವುದೂ ಇತ್ತು!

ಕಮಲಮ್ಮ ಬಂದು ವಿಚಾರಿಸಿದಳು: "ರಾಧೆ, ಏನು ಇವತ್ತು ಕಾಲೇಜಿಲ್ಲವೆ?"

"ಇದೆ, ಅಮ್ಮ! ಆದರೆ ನಿನ್ನೆ ನಡೆದೇ ಹೋದೆ. ಸ್ವಲ್ಪ ಮಳೆ ಬಂತು. ತಲೆ ಹೊಡೆತ ಪ್ರಾರಂಭವಾಗಿದೆ!" ಎಂದಳು.

ಕಮಲಮ್ಮ ಔಷಧ ತೆಗೆದಿರಿಸಿ ಹೊರಟು ಹೋದಳು.

ಮಧ್ಯಾಹ್ನವು ಹೊತ್ತು. ಎಲ್ಲರೂ ಊಟ ಮುಗಿಸಿ ವಿಶ್ರಾಂತಿ ಹೊಂದುತಿದ್ದರು. ಬಿಸಿಲಿನ ಝಳಕ್ಕೆ ಎಲ್ಲರಿಗೂ ಜೊಂಪು ಬಂದಿತ್ತು. ಶಂಕರನ್ನು ಕರ್ತವ್ಯ ಕೆಲಸಗಳನ್ನು ಬದಿಗೊತ್ತಿ ಎಲ್ಲರೂ ಅಂತರ್ಮುಖಿಗಳಾಗಿದ್ದರು ರಾಧೆ ಅರ್ಧ ಗಂಟೆಯ ಪರಿಶ್ರಮದಿಂದ ತನ್ನನ್ನು ವಿಶೇಷ ವಿನ್ಯಾಸದಿಂದ ಸಿಂಗರಿಸಿಕೊಂಡು ಮೆಲ್ಲನೆ ಶಂಕರುವಿನ ಕೊರಡಿಗೆ ಬಂದಳು. ಎದೆ ಬಡಬಡನೆ ಬಡಿಯ ತಿತ್ತು ಕೈಕಾಲು ಕಂಪಿಸುತಿದ್ದವು. ಆದರೂ ಏನೋ ಒಂದು ಬಲವಾದ ಆಕಾಂಕ್ಷೆಯ ಶಕ್ತಿಯಿಂದ ತುಂಬಿಕೊಂಡಿದ್ದ ಆಕೆಯ ದೃಷ್ಟಿಯು ಎಲ್ಲನ್ನೋ ಹುಡುತ್ತ ಕುಳಿತಿದ್ದ ಶಂಕರುವಿನ ಭವ್ಯ ಮೂರ್ತಿಯನ್ನು ಕಂಡಿತು.

ಒಳಗೆ ಪ್ರವೇಶಿಸಿ ರಾಧೆ ಬಾಗಿಲಿಕ್ಕಿಕೊಂಡಳು. ಸ್ವಲ್ಪ ಸದ್ದಾದಂತಾದುದರಿಂದ ಶಂಕರು ತಲೆಯೆತ್ತಿ ನೋಡಿದ! ಎದೆಝಲ್ಲೆಂದಿತು! ಅಂಗಾಂಗಗಳ ನರನಾಡಿಗಳೆಲ್ಲ ಕ್ಷಣಕಾಲ ಸ್ತಬ್ಧವಾದಂತಾಯಿತು. ತನ್ನ ಬಲವೆಲ್ಲವೂ ಎಲ್ಲಿಯೋ ಮಾಯವಾದಂತಾಗಿ ರಾಧೆಯನ್ನೇ ಕ್ಷಣಕಾಲ ದಿಟ್ಟಿಸಿದ.

ರಾಧೆ, ನಸು ನಗುತ್ತ ಅಗಲಿಯನ್ನು ಭದ್ರವಾಗಿ ಹಾಕಿ, ಶಂಕರುವಿನೆಡೆಗೆ ಬಂದಳು. ಶಂಕರು ಫಕ್ಕನೆ ಕುರ್ಚಿಯಿಂದೆದ್ದು ಹಿಂದೆ ಸರಿದು, ನಿಧಾನವಾದರೂ ಸ್ವಲ್ಪ ಗಡಸು ದನಿಯಲ್ಲಿ "ರಾಧೆ!..." ಎಂದನು.

"ಕೂಂ!....ನಿಮಗಾಗಿ...ರಾಧೆ!..." ಕೊನೆಯ ಶಬ್ದ ಗಂಟಲಲ್ಲಿಯೇ ಅಡಗಿ ಹೋಯಿತು. ಶಂಕರನ ವ್ಯಕ್ತಿತ್ವದೆದುರು ರಾಧೆ ಕರಗಿ ಹೋದಳು. ಆದರೂ ಎದೆಗೆ ಹಲಿಲ್ಲ. ಎಷ್ಟೆಂದರೂ ಕಲಿತ ಹುಡುಗಿ!

"ರಾಧೆ! ತಿಳಿಯಿತು ನೀನೇಕೆ ಬಂದಿಯೆಂಬುದು ತಿಳಿಯಿತು ಆದರೆ, ಜೋಕೆ! ನೀನು ಕಲಿತವಳು. ತಂದೆ ತಾಯಿಗಳು ಆತ್ಮಾಭಿಮಾನಿಗಳು. ನಿನ್ನ ಈ...ಕಾರ್ಯವನ್ನು ಕೇಳಿದರೆ ಏನೆಂದಾರು? ಹಿಂದಿರುಗು...ನೀನು ಕಲಿತವಳು-ಬೇಡ...ಹೋಗು!" ಶಂಕರುವಿನ ಎದೆ ಜೋರಾಗಿ ಬಡಿಯುತಿತ್ತು.

ಅವನ ಉಪದೇಶ ರಾಧೆಯನ್ನು ನಾಟಲಿಲ್ಲ. ಅವಳ ಹೃದಯದಲ್ಲಿ ಉರಿಯುತಿದ್ದ ಅಗ್ನಿಯು ನೀರಿಲ್ಲದೆ ನಂದುವುದೆಂತು? ಬಹುವಿಧವಾಗಿ ಹೇಳಿದ, ಕೇಳಿಕೊಂಡ, ಬೇಡಿಕೊಂಡ. ಆದರೆ ರಾಧೆ ಕೇಳಲಿಲ್ಲ.

ಕೊನೆಗೆ, "ರಾಧೆ! ನೀನು ಕಲಿತವಳು. ನಿನಗೇ ತಿಳಿಯ ಬೇಕಿತ್ತು. ಹೋಗಲಿ. ಈಗಲಾದರೂ ನಡೆಯೋಕೆ! ನನ್ನಿಂದ ಹೆಚ್ಚಿಗೆ ಹೇಳಿಸಿಕೊಳ್ಳಬೇಡ. ಕುಲಗೆಟ್ಟ ಬೀದಿಯ ಬಿಕಾರಿಯಂತೆ...." ಇನ್ನೇನೋ ಶಂಕರು ಹೇಳುತಿದ್ದ; ಕೊನೆಯ ಮಾತು ರಾಧೆಯ ಅಭಿಮಾನವನ್ನು ಕೆಣಕಿತು. "ಶಂಕರು! ಜಾಗ್ರತೆಯಂಬಲಿ. ಈಗ ನೀನು ನನ್ನನ್ನು ಕೆಡಿಸುತ್ತಿರುವೆಯೆಂದು ನಾನು ಕೂಗಿಕೊಳ್ಳುವೆ. ಆಗ ನಿನ್ನ ಗತಿಯೇನೆಂಬುದನ್ನು ನೀನು ಯೋಚಿಸಿರುವೆಯಾ?" ಸಿಟ್ಟಿನಿಂದ ಸುರಿದಳು!

ಉಪಾಯವಿಲ್ಲದೆ ಈಗ ಶಂಕರು ಸುಮ್ಮನಾದ. ಕೊನೆಗೆ, "ರಾಧೆ! ಆಗಲಿ. ನಿನ್ನಿಷ್ಟದಂತೆಯೇ ಆಗಲಿ. ಆದರೆ ಸಾವಧಾನ. ದೇಶಕಾಲ ಪಾತ್ರವನ್ನು ಯೋಚಿಸು. ಇಂದಿನಿಂದ ನಾನು ನಿನ್ನವನೇ ಆಗಿದ್ದೇನೆ. ಈಗ ಹೋಗು" ಎಂದು ಸಂತವಿಸಿ ಕಳುಹಿದನು.

ರಾಧೆ ಹೊರಬಂದು, ವೇಗವಾಗಿ ತನ್ನ ಕೋಣೆಯನ್ನು ಸೇರುವಾಗ ಒಮ್ಮೆ ಹಿಂದಿರುಗಿ ಕಂಡಳು ಶಂಕರುವಿನ ಕೋಣೆಯ ಹೊರಗಡೆಯಲ್ಲಿ ಅಪ್ರತಿಭನಾಗಿ ನಿಂತ ತಂದೆ ಮೋಹನರಾಯರನ್ನು! ಆಕಾಶವೇ ಕಳಚಿ ಬಿದ್ದಂತಾಯಿತು. ತನ್ನ ತಪ್ಪಿಗೆ ಮರುಗಿದಳು. ಕೋಣೆಯನ್ನು ಸೇರಿ ಅಗಳಿ ಹಾಕಿ...

ಶಂಕರು ಯಾರಿಗೂ ತಿಳಿಯದೆ ಅದಿನ ಸಾಯಂಕಾಲವೇ ಊರಟು ಹೋಗಿದ್ದ. ಎಲ್ಲಿಗೋ .!

ಮಾರನೆಯ ದಿನ, ರಾಧೆಯು ಕೋಣೆಯ ಬಾಗಿಲು ಒಡೆದು ಒಳ ಹೋದಾಗ ಕೋಣೆಯೊಳಗೆ ಕಂಡು ಬಂತು, ನೆಲಕ್ಕುರುಳಿ ನಿಸ್ತೇಜವಾಗಿದ್ದ ರಾಧೆಯ ದೇಹ!

ಮಕ್ಕಳ ಮಗ್ಗಿಪುಸ್ತಕ

(ನಯೇ ಪೈಸೆ ಕೊ ಪ್ಪಕ ಸಹಿತ)

ಬೆಲೆ 1ಕ್ಕೆ 0 1 0

ನವಯುಗ ಪೈಸ್, ಉಡುಪಿ.

(೧ನೇ ಪುಟದಿಂದ)

ಸ್ಥಳೀಯ ಸಮಾಜಗಳೇ ಒಮ್ಮತದ ನಿರ್ಣಯಕ್ಕೆ ಬರುವಂತಾದರೆ ನಮ್ಮ ಉದ್ದೇಶವು ಸುಲಭದಲ್ಲಿ ಸಿದ್ಧಿಸುವುದು ಇಂತಹ ವಿಚಾರವನ್ನೇ ಪ್ರಚೋದಿಸುವಲ್ಲಿ ನಮ್ಮ ಪ್ರಗತಿಪ್ರಿಯರ ಪ್ರಯತ್ನವು ನಡೆಯಬೇಕಾಗಿದೆ.

ಮೇಲಿನ ಸೂಚನೆಯು ಅವ್ಯವಹಾರ್ಯವೆಂದು ಹಲವರು ಎಣಿಸಬಹುದು. ಆದುದರಿಂದ ಕೆಲವು ಸಮಯದ ಹಿಂದೆ ನಮ್ಮ ಕಡೆಯ ಕೆಲವು ಹಳ್ಳಿಗಳಲ್ಲಿ ನಡೆದ ಚಳವಳ (ಚಾ ಕುಡುಕರ ಮುಷ್ಕರ) ದ ಸ್ಥೂಲಚಿತ್ರವನ್ನಿಲ್ಲಿ ಕೊಡುವುದು ಅನುಚಿತವಾಗಲಾರದು.

ಆ ವರ್ಷ (ಬಹುಶಃ ೫೨) ಮಳೆಗಾಲದಲ್ಲಿ ಅದೇಕೋ ಹಳ್ಳಿಗರನೇಕರು ಖರ್ಚಿನ ವಿಷಯದಲ್ಲಿ ಹೆಚ್ಚು ಹೇಚಾಟದಲ್ಲಿ ಬಿದ್ದರು ಹೋಟೆಲುಗಳಲ್ಲಿ ಕಡೆ ದೊರೆಯದೆ ಇದ್ದ ಕಾರಣ ಅನೇಕರು ಹೋಟೆಲುಗಳ ಯಜಮಾನರ ಮೇಲೆ ಸಿಟ್ಟುಗೊಂಡರು. ಹೆಚ್ಚಿನಂಶ ಇದೇ ಕಾರಣ ವಿರಬೇಕು. 'ಊರಿನವರೆಲ್ಲ ಸೇರಿ ಯಾರೂ ಊರಿನ ಹೋಟೆಲುಗಳಲ್ಲಿ ಚಾ ಕುಡಿಯಬಾರದೆಂದು ನಿರ್ಧರಿಸಿದರೇನಾಗುತ್ತದೆ?' ಎಂಬ ಪ್ರಶ್ನೆ ಅಲ್ಲಲ್ಲಿ ಕೇಳಿ ಬಂತು. ಇದು ಕಚ್ಚಿನವರೆಗೆ ಮೆಚ್ಚಿಗೆಯಾದುದರಿಂದ ನಿಶ್ಚಿತ ದಿನದಲ್ಲಿ ಸಭೆ ಸೇರಿ ಆ ದಿನದಿಂದ ಮಾರಣಕಟ್ಟೆ ಜಾತ್ರೆಯ ಜನಕ, ಇದರಲ್ಲಿ ಭಾಗವಹಿಸಿದವರ ಕುಟುಂಬದಲ್ಲಿ ಯಾರೂ ತಮ್ಮೂರ ಹೋಟೆಲುಗಳಲ್ಲಿ ಏನನ್ನೂ ತಿನ್ನ- ಕುಡಿಯಬಾರದೆಂದೂ ಇದಕ್ಕೆ ತಪ್ಪಿದವರಿಗೆ 'ಇಂತಿಷ್ಟು' ಅಪನಾನವೆಸಗಬೇಕೆಂತಲೂ ನಿರ್ಣಯಿಸಿದರು. ಅಲ್ಪಸಂಖ್ಯಾಕ 'ಉಚ್ಚ ವರ್ಗ' ದವರಲ್ಲದೆ ಮಿಕ್ಕವರೆಲ್ಲ ಇದರಲ್ಲಿ ಭಾಗವಹಿಸಿದ್ದರು. ಆದರೆ ಬೇರೆ ಊರುಗಳಲ್ಲಿ ಕುಡಿಯ ಲಿಕ್ಕೆ ಆತಂಕವಿಲ್ಲದುದರಿಂದ ಕೈಯಲ್ಲಿ ಹಣವಿದ್ದವರು ಬೇರೆ ಬೇರೆ ಹಳ್ಳಿಗಳಿಗೆ ದಿಬ್ಬಣದಂತೆ ಸಾಗಿ ಕುಡಿದರಾದರೂ ಒಬ್ಬರಾದರೂ ಆ 'ನಿಯಮ'ವನ್ನು ಮೀರಿದವರಿಲ್ಲ. ಮುಖ್ಯ ಉದ್ದೇಶವು ಸಾಧಿಸಲ್ಪಡದಿದ್ದರೂ ನಿಯಮವಲ್ಲಡಕವಾದ ವಿಷಯ ಸಂಪೂರ್ಣ ಫಲಿಸಲ್ಪಟ್ಟಿತ್ತು. ಇದೇ ಆಜ್ಞೆಯನ್ನು ಸರಕಾರವು ವಿಧಿಸುತಿದ್ದರೆ ಅದು ಖಂಡಿತ ವಿಫಲಗೊಳ್ಳುತಿತ್ತು. ಪೋಲೀಸರ ಕಣ್ಣು ತಪ್ಪಿಸುವುದರಿಂದಲೂ ಬೇರೆ ವಿಧಾನದಿಂದಲೂ ಪಾರಾಗಬಹುದು, ಆದರೆ ಜನರ ಕಣ್ಣು ಜನರು ತಪ್ಪಿಸುವುದು ಸಾಧ್ಯವಿದ್ದಿಲ್ಲ. ಜನರಿಗೆ ಜನರೇ ಪೋಲೀಸರು- ಒಬ್ಬರಿಗೊಬ್ಬರು ಪೋಲೀಸರು ಇದರಿಂದ ಕಲಿಯಬಹುದಾದ ಪಾಠವೆಂದರೆ ಜನರ ಒಲವಿನ ಮೂಲಕ ಅವರಿಂದಲೇ ಮಾಡಲ್ಪಟ್ಟ ನಿರ್ಣಯವು ಸಫಲವಾಗುವುದು ಸುಲಭ-ಎಂಬುದು. ಆದುದರಿಂದ ಮಹಾ ಸದುದ್ದೇಶದಿಂದ ಕೂಡಿದ ನಿತ್ಯಯ- ಉಳಿತಾಯದ ವಿಚಾರವನ್ನು ಪ್ರಚೋದಿಸುವುದರಿಂದ ಫಲವು ಉಂಟೇ ಉಂಟು. ನಾಡಿನ ಎಲ್ಲೆಡೆಯಲ್ಲೂ ಇದು ಆಚರಿಸಲ್ಪಡುವಂತೆ ಮಾಡಲು ಪ್ರತಿಯೋರ್ವ ಪ್ರಗತಿಯನ್ನು ಬಯಸುವ ಪ್ರಜೆಯೂ ಪ್ರಯತ್ನವೆಸಗಬೇಕು. ಪರಮಾತ್ಮನು ಈ ಸದ್ಬುದ್ಧಿಯನ್ನು ನಮಗೆಲ್ಲ ಕೊಡಲಿ.

ವಿದೇಶವಿನಿಮಯದ ಸಂಪಾದನೆಯಲ್ಲಿ-

ಅರಗು ವಹಿಸುವ ಪ್ರಮುಖ ಪಾತ್ರ

. ಬಹಳ ಪ್ರಾಚೀನ ಕಾಲದಿಂದ ನೋಡಿದರೂ ಭಾರತದಲ್ಲಿ ಹಲವಾರು ತೆರಗಳಲ್ಲಿ ಅರಗನ್ನು ಬಳಸುವುದು ಕಂಡುಬಂದಿದೆ. ವ್ಯಾಸ ಮಹರ್ಷಿಗಳಿಂದ ರಚಿತವಾದ ಮಹಾಭಾರತದಲ್ಲಿ ಕೌರವರು ತಮ್ಮ ದಾಯಾದಿಗಳೆನಿಸಿದ ಪಾಂಡವರನ್ನು ನಾಶಮಾಡುವ ಉದ್ದೇಶದಿಂದ ಅರಗಿನ ಮನೆಯೊಂದನ್ನು ಕಟ್ಟಿಸಿದರೆಂಬ ಅಧಿಕೃತ ಉಲ್ಲೇಖವು ದೊರೆಯುತ್ತದೆ. ಕ್ರಿ. ಶ ೮೦೦ ರ ಸುಮಾರಿನಲ್ಲಿ ಬರೆಯಲಾದುದೆಂದು ತಿಳಿದ ಬಂದ "ಪೆರಿಪ್ಲಸ್" ಎಂಬ ಹೊತ್ತಗೆಯಲ್ಲಿ ಅರಗಿನಿಂದ ಬಣ್ಣಗಳನ್ನು ತಯಾರಿಸುವ ವಿಧಾನವನ್ನು ಸೂಚಿಸಲಾಗಿದೆ. ಸುಮಾರು ೧೫೦೦ರಲ್ಲಿ ರಚಿತವಾಗಿರುವ "ಅಯಿನೆ ಅಕ್ಬರಿ" ಎಂಬ ಅಕ್ಬರ ಬಾದಶಹನ ಕಾಲದ ಗ್ರಂಥದಲ್ಲಿ ಗುಗ್ಗುಳದಿಂದ ಬಾದಶಹನು ವಾರ್ನಿಷನ್ನು ತಯಾರಿಸುತಿದ್ದನೆಂದು ಬರೆಯಲಾಗಿದೆ

ಇಂದು ನಾವೆಲ್ಲರೂ ಗಳಿಗೆಗಳಿಗೆಯಲ್ಲಿ ಕೇಳುವ ಗ್ರಮಫೋನ್ ರಿಕಾರ್ಡುಗಳಿಗೆ ಈ ಅರಗು ಅತ್ಯಗತ್ಯ. ಇವುಗಳಿಗಾಗಿ ಅರಗಿನ ಒಟ್ಟು ಉತ್ಪಾದನೆಯಲ್ಲಿ ನೂರಕ್ಕೆ ೩೦ರಿಂದ ೪೦ರಷ್ಟನ್ನು ಉಪಯೋಗಿಸಲಾಗುವುದೆಂದು ತಿಳಿದಲ್ಲಿ ನೀವು ಆಶ್ಚರ್ಯಗೊಳ್ಳಬಹುದು. ವಿದ್ಯುತ್ ಹಾಗೂ ಬಣ್ಣದ ಕೈಗಾರಿಕೆಗಳಲ್ಲಿ ಸುಮಾರು ನೂರಕ್ಕೆ ೩೫ರಷ್ಟನ್ನೂ ಹ್ಯಾಟ್‌ಗಳ ತಯಾರಿಕೆಯಲ್ಲಿ ನೂರಕ್ಕೆ ೧೦೦ರಷ್ಟೂ ಉಪಯೋಗಿಸಲಾಗುತ್ತಿದೆ ಮೊಹರುಹಾಕಲು ಉಪಯೋಗಿಸುವ ಅರಗು, ಛಾಯಾಚಿತ್ರಗ್ರಹಣಕ್ಕೆ ಸಂಬಂಧಪಟ್ಟ ಕೆಲವೊಂದು ವಸ್ತುಗಳು, ಮಿರಾಯಿ, ಗುಂಡು ಮದ್ದಿನ ತಯಾರಿಕೆ, ಅರೆಯುವಕಲ್ಲುಗಳು, ಬಳೆಗಳು, ಆಟದ ಬೊಂಬೆಗಳು ಮೊದಲಾದ ಹಲವಾರು ಉದ್ಯಮಗಳಲ್ಲಿ ಈ ಅರಗು ಸರ್ವಸಾಮಾನ್ಯವಾಗಿ ಬಳಸಲ್ಪಡುತ್ತದೆ.

ಅರಗು ಗಾಜು, ಪಿಂಗಾಣಿ ವಸ್ತುಗಳು, ಲೋಹ ವಸ್ತುಗಳು, ಅಭ್ರಕ ಮೊದಲಾದುವುಗಳ ನಾಜೂಕಾದ ಹೊರಮೈಗಳ ಮೇಲೆ ಭದ್ರವಾಗಿ ಅಂಟಿಕೊಳ್ಳುವ ಗುಣಾಂಶವನ್ನು ಹೊಂದಿದೆ. ಆದುದರಿಂದ ಒಡೆದ ಗಾಜು ಅಥವಾ ಪಿಂಗಾಣಿ ವಸ್ತುಗಳನ್ನೆಲ್ಲಾ ಎಸೆಯಬೇಕಾದ ಪ್ರಮೇಯವಿಲ್ಲ.

ರಾಂಚಿಯಲ್ಲಿರುವ ಭಾರತೀಯ ಅರಗು ಸಂಶೋಧನಾ ಸಂಸ್ಥೆಯಲ್ಲಿ ಇತ್ತೀಚೆಗೆ ಅರಗಿನಿಂದ ಅನೇಕ ನವೀನವೆನಿಸಿದ ಅಂಟಿನ ವಸ್ತುಗಳನ್ನು ತಯಾರಿಸಲಾಗಿದೆ. ನುಣುವಾದ ಹೊರಮೈಯ ಮೇಲೆ ಹೆಚ್ಚಾಗಿ ಅಂಟುವ ಸಾಮರ್ಥ್ಯ ಹೊಂದಿರುವುದೂ ಜೊತೆಗೆ ಪೆಲ್ಲಾಕ್ ಅಂಟಿನ ವಸ್ತುಗಳು ಟ್ರಾನ್ಸ್‌ಫಾರ್ಮರ್ ಎಣ್ಣೆ ಹಾಗೂ ಪೆಟ್ರೋಲಿಯಂ ಹೈಡ್ರೋ ಕಾರ್ಬನ್‌ಗಳಿಂದ ಪ್ರತಿರೋಧಕಗಳಾಗಿರುವುವು. ಇದಲ್ಲದೆ ಇವುಗಳ ಬಲ ಬಹುವರ್ಷಗಳ ವರೆಗೂ ಇಳಿಯುವ ಪ್ರಮೇಯವಿಲ್ಲ

ಪೆಲ್ಲಾಕ್ ಅಂಟಿನ ವಸ್ತುಗಳನ್ನು ಅನೇಕ ವಿಧಾನಗಳಲ್ಲಿ ಸಿದ್ಧಪಡಿಸಲಾಗುತ್ತಿದೆ. ಉದಾಹರಣೆಗೆ. ಗಾಜನ್ನು ಗಾಜಿಗೂ, ಗಾಜನ್ನು ಲೋಹಕ್ಕೂ ಅಥವಾ ಲೋಹವನ್ನು ಲೋಹಕ್ಕೂ ಅಂಟಿಸುವಂತೆ ಮಾಡಲು ಅರಗಿನಿಂದ ಒಂದು ಅತ್ಯುತ್ತಮವಾದ ಅಂಟನ್ನು ತಯಾರಿಸಲಾಗಿದೆ ಅರಗಿನಲ್ಲುಳ್ಳ ಅಲೂಮಿನಿಕ್ ಆಮ್ಲದಿಂದ ನೀರಿನಂತಿರುವ ಪಾರದರ್ಶಕ ಅಂಟುಗಳನ್ನು ತಯಾರಿಸುತ್ತಾರೆ. ವಿದ್ಯುದ್ಬಲ್ಬುಗಳಲ್ಲಿ ಮೇಲಿನ ಹಿತ್ತಾಳೆಯ ಭಾಗವನ್ನು ಅಂಟಿಸಲು ಬೇಕಾಗುವ ಉತ್ತಮ ಅಂಟನ್ನೂ ಅರಗಿನಿಂದ ತಯಾರಿಸಲಾಗುತ್ತದೆ. ಇದನ್ನುಪಯೋಗಿಸಿದ ಕೆಲವು ಸಂಸ್ಥೆಗಳಲ್ಲಿ, ಎಡೆಸಿದ ಪ್ರಾಯೋಗಿಕ ಸಂಶೋಧನೆಗಳಿಂದ ಉತ್ತಮ ಫಲಿತಾಂಶಗಳು ಪ್ರಕಟವಾಗಿವೆ ಪೆಲ್ಲಾಕ್ ಅಂಗಿನ ಆಮ್ಲಗಳ ರೂಪಾಂತರದಿಂದ ಕಪ್ಪು ಅಂಟಿನ ಟೇಪುಗಳನ್ನು ತಯಾರಿಸಲಾಗಿದೆ.

ಅರಗನ್ನು ಒಂದು ಬಗೆಯ ಕೀಟಗಳು ತಯಾರಿಸುತ್ತವೆ. ಈ ಕೀಟಗಳು ಮರಗಳಲ್ಲಿ ವಾಸಿಸುತ್ತವೆ. ಅವುಗಳ ಶರೀರದಿಂದ ಒಂದು ವಿಧವಾದ ಪದಾರ್ಥವು ಯಾವಾಗಲೂ ಸ್ರವಿಯುತ್ತಾ ಇರುವುದು. ಅದನ್ನೇ ನಾವು ಅರಗೆಂದು ಕರೆಯುವುದು. ಭಾರತದಲ್ಲಿ ಮುಖ್ಯವಾಗಿ ಬಿಹಾರ್ ಮತ್ತು ಮಧ್ಯಪ್ರದೇಶಗಳಲ್ಲಿ ಅರಗನ್ನು ಹೆಚ್ಚು ಪ್ರಮಾಣದಲ್ಲಿ ಪಡೆಯಲಾಗುತ್ತದೆ.

ಭಾರತವು ಇಂದು ವಿದೇಶೀ ವಿನಿಮಯಗಳಲ್ಲಿ ಪೆಲ್ಲಾಕ್‌ನಿಂದ ವರ್ಷಕ್ಕೆ ಸುಮಾರು ೧೦ ಕೋಟಿ ರೂಪಾಯಿಗಳಷ್ಟನ್ನು ಗಳಿಸುತ್ತಿದೆ. ಈಗ ನೂರಕ್ಕೆ ೯೦ ರಷ್ಟು ಅರಗನ್ನು ವಿಶ್ವದಾದ್ಯಂತದ ರಾಷ್ಟ್ರಗಳಿಗೆ ರಫ್ತುಮಾಡಲಾಗುತ್ತಿದೆ. ಇತ್ತೀಚೆಗೆ ಅರಗು ಸಂಶೋಧನಾ ಸಂಸ್ಥೆಯಲ್ಲಿ ನಡೆಸಿದ ಸಂಶೋಧನೆಗಳ ಫಲವಾಗಿ, ಅನೇಕ ಉದ್ಯೋಗಗಳಲ್ಲಿ ಅರಗಿನ ಉಪಯೋಗವು ಬಹಳವಾಗಿ ಅಧಿಕವಾಗುತ್ತಿದೆ.

(೪ನೇ ಪುಟದಿಂದ)

ಮುಂದೆ ಒಂದಾಗಿಸಬಾರದೆಂಬ ಆಜ್ಞೆಯನ್ನೂ ಕೊಡಲಾಗುವುದು. ಇದರಿಂದ, ನಿಯೋಗದ ಸದಸ್ಯರೂ ಕೊಹಿಮಾ ಪಂಪತ್ತಿನಲ್ಲಿ ಸಹಭಾಗಿಗಳಾದನರೂ ಇತರ ನಾಗಜನರೂ ಶಾಂತಿಸ್ಥಾಪನೆ ಮಾಡಲು ತಮ್ಮ ಶಕ್ತಿ ಮೀರಿ ಪ್ರಯತ್ನಿಸುವಂತೆ ಪ್ರೇರೇಪಿಸಬಹುದೆಂದು ಪ್ರಧಾನಿಗಳು ಹಾರೈಸಿದರು ಪ್ರಥಮತಃ ಅಶಾಂತಿ ತುಂಬಿದ ಪ್ರದೇಶದಲ್ಲಿ ಪ್ರಶಾಂತಿಯನ್ನು ಸಂಸ್ಥಾಪಿಸುವುದು ನಾಗಜನರ ಹಾಗೂ ಸರಕಾರದ ಕರ್ತವ್ಯವಾಗಿದೆ. ಎರಡನೆಯದಾಗಿ ತೊಂದರೆಗೀಡಾದವರ ಪುನರ್ನಿವೇಶನ ಮತ್ತು ಮೂರನೆಯದಾಗಿ ನಾಗ ಜನರ ಅಭಿವೃದ್ಧಿಗಾಗಿ ಪರಸ್ಪರ ಸಹಕಾರ—ಇವು ನಾಗ ಸಮಸ್ಯೆಯನ್ನು ನಿರ್ಮೂಲನಿಸಲು ಹಾಗೂ ನಾಗರ ಉತ್ಕರ್ಷ ಸಾಧನೆಗೆ ಹೇತುವಾಗಬಲ್ಲುದೆಂದು ಶ್ರೀ ನೆಹರೂ ಅಭಿಪ್ರಾಯಪಟ್ಟರು.

ನಿಯೋಗವು ತಾವು ಹೊತ್ತುಕೊಂಡು ಬಂದ ಕಾರ್ಯವು ಯಶಸ್ವಿಯಾದುದಕ್ಕೆ ಸಂತೋಷಿಸಿ, ಅನುಕೂಲಾಭಿಪ್ರಾಯಪಿತ್ತ ಪಂಡಿತ ನೆಹರೂರವರಿಗೂ ಭಾರತ ಸರಕಾರಕ್ಕೂ ತಮ್ಮ ಹಾಗೂ ತಮ್ಮವರ ಕೃತಜ್ಞತೆಗಳನ್ನು ಸಮರ್ಪಿಸಿತು. ನಾಗ ಸೆವ ಸೈಯು ಇತ್ಯರ್ಥಗೊಳ್ಳುವ ಅನುಕೂಲ ವಾತಾವರಣ ಇದೀಗ ಕಾಣಿಸಿಕೊಂಡಿದೆ ಈ ಕಡೆಗೆ ಭಾರತ ಸರಕಾರವೂ ನಾಗ ಜನರೂ ಒಮ್ಮತದಿಂದ ಸಹಕರಿಸಿದರೆ ಮಾತ್ರ ಇದು ಸಾಧ್ಯ. ಇದು ಹೊರತು, ನಾಗರು ಈ ಹಿಂದಿನಂತೆಯೇ ಕ್ರಾಂತಿಚರಣೆಯಲ್ಲಿಯೇ ತಲ್ಲೀನರಾದರೆ ಮಾತ್ರ ಅವರ ನಾಗಾ ರಾಜ್ಯ ಕನಸಿನ ಮಂಡಿಗೆಯಾದೀತು!

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಎ.ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು.
ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd

Edited, Printed & Published by K. H. Shetty, at the Navayuga press, Udipi S. India

REGD. NO. M. 3615

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭ VOL. 37

10—10—1957

ಸಂಚಿಕೆ ೬ NO. 6

ಕನ್ನಡಿಗರ ಗಮನವಿತ್ತಹರಿಯಲಿ—

ಹೆಸರಿಗಾಗಿ ಹೊಡೆದಾಟ ಬೇಡ

ಕನ್ನಡ ಮಾತನ್ನು ಆಡುವ, ಬರೆಯುವ ಜನರು ವಾಸಿಸಿರುವ ಭೂಪ್ರದೇಶಗಳೆಲ್ಲಾ ಒಂದಾಗಿ ಸೇರಿಸಿ ಒಂದು ನವೀನ ರಾಜ್ಯದ ನಿರ್ಮಾಣವಾಗಿ ವರ್ಷವೊಂದಾಗುತ್ತ ಬಂತು. ಕನ್ನಡಿಗರ ಕನಸಾಗಿದ್ದ ಕರ್ನಾಟಕವು ಮೈಸೂರೆಂಬ ಹಳೆ ಹೆಸರನಲ್ಲಿಯೇ ನೆನೆವಾಗಿ ಪರಿಣಮಿಸಿತು. ಆದರೆ, ಕರ್ನಾಟಕವು ಮಾತ್ರ ಇಂದಿಗೂ ಕನಸಾಗಿಯೇ ಉಳಿದಿದೆ. ಅಲ್ಲದೆ, ಸದ್ಯ ನನಸಾಗುವ ಮುಂಸೂಚನೆಗಳೂ ಕಂಡು ಬರುತ್ತಿಲ್ಲ.

ಒಂದು ವರ್ಷಕ್ಕೆ ಮೊದಲು ವಿಶಾಲವಾಗಲಿ, ಕನ್ನಡ ಭಾಷಾ ಪ್ರದೇಶಗಳು ಮೊದಲಿಗೆ ಒಂದಾಗಲಿ; ಆ ಮೇಲೆ ಮೈಸೂರೋ, ಕರ್ನಾಟಕವೋ ಅನ್ನ ಮತ್ತೇನೋ ನೋಡಿಕೊಳ್ಳಬಹುದು ಎಂದು ನಿರ್ಧಾರಕ್ಕೆ ಬಂದು ಹಳೆಯ ಕತ್ತೆ ಎಂಬ ಹೆಸರನ್ನು ಧರಿಸಿಕೊಂಡೇ ಹೊಸ ಹುಲಿಯು ಹುಟ್ಟಿಕೊಂಡಿತು. ಆಗ ಅದಷ್ಟೇ ಸಮಾಧಾನ. ಕೆಲವು ದಶಕಗಳಿಂದ ಬಯಸುತಿದ್ದ ಏಕೈಕ ಕರ್ನಾಟಕ ಬೇರೆ ನಾಮಧೇಯದಿಂದಲಾದರೂ ಹುಟ್ಟಿಕೊಂಡಿತು.

ಆದರೆ, ನಮ್ಮ ಜನ ಬಯಸಿದ್ದು ಮೈಸೂರನ್ನಲ್ಲ—ಕರ್ನಾಟಕವನ್ನು. ಅದುದರಿಂದ 'ಕರ್ನಾಟಕ' ಎಂಬುದು ಅಲ್ಲಲ್ಲಿ ಅಪಸ್ವರವನ್ನೇ ಎಬ್ಬಿಸುತ್ತಿತ್ತು. ಮೊನ್ನೆ ಮೊನ್ನೆ ನಮ್ಮ ರಾಜ್ಯ ವಿಧಾನಸಭೆಯಲ್ಲಿಯೂ ಒಂದು ದೊಡ್ಡ ಚರ್ಚೆಯೂ ಆಯಿತು. ರಾಜ್ಯ ಕಾಂಗ್ರೆಸ್ ಸಮಿತಿಗೆ ನಾಮಕರಣಮಾಡುವ ವೇಳೆಯಲ್ಲಿಯೂ ಕರ್ನಾಟಕ ಮತ್ತು ಮೈಸೂರುಗಳೊಳಗೆ ಹೊಯ್ ಕಯ್ ಆಗಿತ್ತು. ಇದುವರೆಗೆ ನಡೆದುಬಂದ ದಾರಿಯನ್ನು ಸಿಂಹಾವಲೋಕಿಸಿದರೆ, ಕರ್ನಾಟಕ—ಮೈಸೂರುಗಳ ಮಲ್ಲಯುದ್ಧ ಕೊನೆಗಾಣದೆ ಶಾಂತಿಯಿಲ್ಲವೆನ್ನಬಹುದು. ಅದುದರಿಂದ, ಈ ವಿಷಯವನ್ನು ಎಷ್ಟು ಬೇಗ ಇತ್ಯರ್ಥಗೊಳಿಸುವುದೋ ಅಷ್ಟು ಕ್ಷೇಮಕರ.

ಈ ಬಾರಿಯ ವಿಧಾನಸಭಾಧಿವೇಶನದ ಕಾಂಗ್ರೆಸ್ ಸದಸ್ಯ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ರಾಜ್ಯದ ನಾಮಧೇಯವನ್ನು ಕರ್ನಾಟಕವೆಂದಿಡಬೇಕೆಂಬ ಸರಕಾರೇತರ ಗೊತ್ತುವಳಿಯೊಂದನ್ನು ತಂದಿದ್ದರು. ಆ ಗೊತ್ತುವಳಿಯನ್ನು ಮಂಡಿಸುತ್ತ ಅವರು ತಮ್ಮನ್ನು ಸಮರ್ಥಿಸಿಕೊಂಡರು. ನಮ್ಮಲ್ಲಿ ಬುದ್ಧಿವಂತರಾದವರು ಹೇಳುವುದಿದೆ: ಹೆಸರಿನಲ್ಲೇನಿದೆ? ಎಂದು. ಹಿಂದೊಮ್ಮೆ ಭಾರತದ ಪ್ರಧಾನಿಯವರು ಸಹಾ ಇದೇ ಮಾತನ್ನು ಆಡಿದ್ದರು. ಆ ಸಮಯದಲ್ಲಿ ಡೆಹಲಿಯ ಶಂಕರ್ಸ್ ವೀಕ್ಲಿಯ ವ್ಯಂಗ್ಯ ಚಿತ್ರಕಾರನೊಂದು ರಮಣೀಯವಾದ ಚಿತ್ರವನ್ನು ಬರೆದಿದ್ದ. ಪಾಕಿಸ್ತಾನವನ್ನು ಭಾರತ, ನೆಹರೂಜಿಯವರನ್ನು ಮುರಾರ್ಜಿ, ಹಿಮಾಲಯವನ್ನು ಹಿಂದೂಸಾಗರ—ಹೀಗೆ ಏನೇನೋ ಹೆಸರುಗಳಿಂದ ಆತ ಕರೆದಿದ್ದ. ಆದರೆ, ತಾತ್ವಿಕವಾಗಿ ಒಂದು ಹೆಸರೆಂಬುದು ಮಹತ್ವವಲ್ಲದೆ ಇದ್ದರೂ, ಹೆಸರಿನಲ್ಲೇನಿದೆ ಎಂಬುದು ಮಾತ್ರ ಅವಿವೇಕ. ಯಾರಾದರೂ ತಮ್ಮ ಮಕ್ಕಳಿಗೆ ಕರ್ಕಶವಾದ ಕೆಟ್ಟಬಾದ ಹೆಸರುಗಳನ್ನಿಟ್ಟು ಕರೆಯುವುದಿಲ್ಲ ಮಹಾಕವಿ ಮುದ್ದಣನ ಹೆಸರಿನಂತೆಯೇ ಆತನ ಅಮರ ಕೃತಿ ರಾಮಾಶ್ವಮೇಧ "ಮುದ್ದು ಮುದ್ದಾಯ್ತು ಜಗಕೆ" ಎಂದಾತನ ಸಹಧರ್ಮಿಣಿ ಮನೋರಮೆ ಹೇಳಿದ್ದಾಳೆ ಹಾಗಿರುವಾಗ ಒಬ್ಬ ವ್ಯಕ್ತಿಯ, ಒಂದು ಸುಸ್ತಿದ ಹಾಗೆಯೇ ಒಂದು ರಾಜ್ಯದ ಹೆಸರಿನಲ್ಲಿಯೂ ಒಂದು ಮಾಧುರ್ಯ ಬೇಕು ಅದು ವನಸ್ಸಿಗೆ ಹಿತವಾಗಿ ಪರಿಣಮಿಸಬೇಕು ಎಂಬುದರಲ್ಲಿ ಎರಡಿಲ್ಲ

ಈಗ ಮೈಸೂರು—ಮತ್ತು ಕರ್ನಾಟಕ ಇವೆರಡರಲ್ಲಿ ಯಾವುದು ಒಳ್ಳೆಯದೆಂದು ಆರಿಸುವುದು ಅಥವಾ ನಿರ್ಧರಿಸುವುದು ಕಷ್ಟದ ಕೆಲಸವೆಂದುದು ಅಲ್ಲದೆ, ಹಾಗೆ ಮಾಡುವುದೂ ಕ್ಷೇಮಕರವಲ್ಲ ಆದರೂ, ನಮ್ಮ ನೆಲಕ್ಕೆ 'ಮೈಸೂರು' ಎಂಬ ಹೆಸರು ಬಂದುದು ಕೇವಲ ಕೆಲವು ಶತಮಾನಗಳಿಗಿಂತ ಈಚೆಗೆ—ಮುಖ್ಯವಾಗಿ ವಿಜಯನಗರದ ಪರಾಜಯಾನಂತರ. ಆ ಮೊದಲು ಅದೊಂದು ಪಟ್ಟಣವೋ ಸುಭೆಯೋ ಆಗಿತ್ತು ಅಷ್ಟೆ. ಆದರೆ, ವಿಜಯನಗರವು ಪತನಗೊಂಡನಂತರ, ಮೈಸೂರಿನ ಕೀರ್ತಿ ಬೆಳೆಯತ್ತು, ರಾಜ್ಯ ವಿಸ್ತಾರವಾಯಿತು. ಮುಂದಕ್ಕೆ 'ವಿಜಯನಗರ' ರಾಜಧಾನಿಯಾಗಿದ್ದ ರಾಜ್ಯಕ್ಕೆ ವಿಜಯನಗರ ಸಾಮ್ರಾಜ್ಯವೆಂದು ಕರೆದಂತೆ ಮೈಸೂರು ಎಂಬ ಹೆಸರೇ ರೂಢಿಯಾಗಿ ಬಂದುಬಿಟ್ಟಿತು.

ಆದರೆ, ಕರ್ನಾಟಕ ಅಥವಾ ಕನ್ನಡ ನೆಂಬುದು ಬಹಳ ಪುರಾತನ ಇತಿಹಾಸವುಳ್ಳುದು. 'ಕನ್ನಡ ಮೇನಿಪ್ಪನಾಡು' ಎಂದು ೧೩ ಶತಮಾನದ ಅಂಡಯ್ಯನ ಕಬ್ಬಿಗರಕಾವದಲ್ಲಿ ದೆ ಶವಾಚಿಯಾಗಿ ಬರುತ್ತದೆ. ವ್ಯಾಸಭಾರತದಲ್ಲೂ ಕರ್ನಾಟದ ಹೆಸರು ಬರುತ್ತದೆಯಂತೆ ಪ್ರಾಚೀನವಾದುದನ್ನೇ ಗ್ರಹಿಸುವುದರಲ್ಲಿ ಏನೂ ದೋಷವಿಲ್ಲ ಅದುದರಿಂದ, ಕನ್ನಡ ಭಾಷೆಯನ್ನಾಡುವ ದೇಶ ಕನ್ನಡ ಇಲ್ಲವೇ "ಕರ್ನಾಟಕ" ಎಂದಿದ್ದರೇನೇ ಚೆನ್ನು.

ಅದೂ ಅಲ್ಲದೆ "ಮೈಸೂರು" ಎಂಬ ಹೆಸರಿನ (ಬ) ವರ್ಗದ ರಾಜ್ಯವು ಮಾಯವಾಗಿ, ರಾಜ್ಯ ಪುನರ್ಘಟನೆಯ ಕಾಯದೆಯನ್ನಯ ಹೊಸ ಮೈಸೂರು ರಾಜ್ಯವು ಉದಯವಾದರೂ, ನಮ್ಮ ಸರಕಾರದ ಅಧಿಕಾರಿಗಳು (ಅವರೆಲ್ಲರೂ ಹಳೆ ಮೈಸೂರಿಗರಿರಬಹುದು) ಹಳೆ ಮೈಸೂರೇತರ ಪ್ರದೇಶಗಳು ಮೈಸೂರ'ನಲ್ಲಿ ವಿಲೀನಗೊಂಡಿವೆ ಎಂದು ತಿಳಿದುಕೊಂಡಂತೆ ಮೊನ್ನೆ ಮೊನ್ನೆಯ ವರೆಗೂ ಆಚರಿಸುತಿದ್ದರು. ಆ ಕಲ್ಪನೆಯನ್ನವರು ಯಾವ ಆಧಾರದ ಮೇಲೆ ಇಟ್ಟುಕೊಂಡಿರುವರೋ ದೇವರೇ ಬಲ್ಲ. ಹೀಗಾಗಲು ಹಳೆ ಮೈಸೂರಿನ ಹೆಸರನ್ನೇ ವಿಶಾಲವಾದ ಹೊಸ ರಾಜ್ಯಕ್ಕೂ ಇಟ್ಟದ್ದೇ ಕಾರಣ. ಆದುದರಿಂದ ಈ ಹೆಸರು ಬದಲಾಗುವುದರಲ್ಲಿ ಯಾವ ಆಕ್ಷೇಪಣೆಯೂ ಇರಲಾರದು.

ಹಳೆ ಮೈಸೂರಿಗರು ತಮ್ಮ ಸಂಕುಚಿತ ಭಾವನೆಯನ್ನು ಇನ್ನಾದರೂ ಬಿಟ್ಟು ಬಿಡಬೇಕು. ಹೆಸರಿನಲ್ಲೇನಿಲ್ಲವೆನ್ನುವ ವಿವೇಕಿಗಳು 'ಮೈಸೂರೆಂ'ಬ ಹೆಸರಿಗೇಕೆ ದೃಢವಾಗಿ ಅಂಟಿಕೊಳ್ಳುತ್ತಾರೆ? ಸರ್ವಮಾನ್ಯವಾದ ಕರ್ನಾಟಕದತ್ತ ಸಹ ಸ್ವಲ್ಪ ಗಮನಕೊಡಬಹುದಲ್ಲವೆ? ಹಾಗೆ ಮಾಡುವುದು ಅವರಿಗೆ ಇಷ್ಟವಿಲ್ಲ, ಅವರಿಗೆ ಉಳಿಯ ಬೇಕಾದುದು 'ಮೈಸೂರು' ಮಾತ್ರ. ಆ ಹೆಸರೊಂದನ್ನು ಕಟ್ಟಿಕೊಂಡು ಏನು ಮಾಡುವುದೂ ಸಾಧ್ಯವೆಂದು ಭಾವಿಸಿರಬಹುದು.

ಮೈಸೂರಿನ ಮಹಾರಾಜರು ಎಲ್ಲ ಕನ್ನಡ ಭಾಷಾಪ್ರದೇಶಗಳೂ ತಮ್ಮ ಅಂಕಿತದಲ್ಲಿ ಇದ್ದಿಲ್ಲವಾದರೂ ತಮ್ಮನ್ನು 'ಕರ್ನಾಟಕ ಸಿಂಹಾಸನಾಧೀಶ್ವರ' ಎಂದುಕೊಳ್ಳುತಿದ್ದರು— ತಮ್ಮ ಮೈಸೂರಿನ ಬಗ್ಗೆ ಅತಿರೇಕ ಪ್ರೇಮವನ್ನು ತಾಳದೆ! ಇದೀಗ ಅಂತಹ 'ಕರ್ನಾಟಕ'ವಾಗಿದ್ದರೂ— ಹರಿಕ ಚಾಗಿ ಹೋಗಿದ್ದ ಕನ್ನಡದ ತುಂಡುಗಳೆಲ್ಲಾ ಒಂದಾಗಿ ಕೂಡಿದ್ದರೂ— 'ಮೈಸೂರೆಂ'ಬುದಾಗಿಯೇ ಕರೆಯಲ್ಪಡತ್ತಿದೆ!

ಶ್ರೀಮಾನ್ ದೊಡ್ಡಮೇಟಿಯವರು ಹೇಳಿದಂತೆ 'ಕರ್ನಾಟಕ'ವೆಂಬುದರಲ್ಲಿ ಬಹಳ ಅರ್ಥವು ಕುದುಗಿಕೊಂಡಿದೆ. ಸಮುದ್ರವನ್ನು ಅದಕ್ಕೆ ಸೇರುವ ಯಾವುದಾದರೂ ದೊಡ್ಡ ನದಿಯ ಹೆಸರಿನಿಂದ ಕರೆದರೆ ಸುಂದರವಾಗುತ್ತದೆಯೆ? ಅಥವಾ ಇಡೀ ಶರೀರವನ್ನು ಯಾವುದಾದರೊಂದು ಅಂಗದ ಹೆಸರಿನಿಂದ ಕೂಗುವುದು ಒಳ್ಳೆಯದೆನಿಸುತ್ತದೆಯೆ? ಇನ್ನು ಅಲ್ಪ ಭಾಷಾವರ್ಗದವರ ವಿಚಾರ. ಅವರಿಗೆ ತಕ್ಕ ರಕ್ಷಣೆಗೆ ಕೇಂದ್ರ ಸರಕಾರವೇ ತಕ್ಕ ವ್ಯವಸ್ಥೆಗಳನ್ನು ಮಾಡುವುದರಿಂದ ಅವರೂ ಭಯಪಡಬೇಕಾಗಿಲ್ಲ.

ಮೈಸೂರು ಎಂಬ ಹೆಸರನ್ನು ಎತ್ತಿ ದೊಡನೆಯೇ ಹಳೆ ಮೈಸೂರಿನ ಸ್ಮರಣೆ ಹುಟ್ಟುವುದು. ಆದರೆ, ಇಂದು ನಮ್ಮ ರಾಜ್ಯವು ಕೇವಲ ಹಳೆ ಮೈಸೂರಿಗರನ್ನು

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H. O MANGALORE. Estd 1931.

BRANCHES
Bombay, Bangalore. Mysore, Mercara, Kanhangad, Kasaragod and throughout the District of South Kanara.

ವಾರ್ಷಿಕ ಚಂದಾ: ೫—೧೨—೦ NAVAYUGA WEEKLY, UDIPI. ಪ್ರತಿ ಸಂಚಿಕೆ ಎರಡಾಣೆ

ವಾರದ ಸಣ್ಣ ಕಥೆ—

ದೇವರೆಂದರೆ ಹೆದರಬೇಡಿ!

ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್.

ಹತ್ತು ವರ್ಷಗಳಿಗೆ ಮೊದಲು ಅವನೊಬ್ಬ ಕ್ರಾಂತಿಕಾರಿ ಸುರುಪನೆನಿಸಿದ್ದ. ಈಗ, ದೇಶವು ಸ್ವಾತಂತ್ರ್ಯವನ್ನು ಪಡೆದಿದೆ; ಅವನಿಗೂ ಒಬ್ಬಳು ಹೆಂಡತಿ ಮತ್ತು ಮೂವರು ಮಕ್ಕಳು ದೊರೆತಿದ್ದಾರೆ. ಆದುದರಿಂದ ಇನ್ನು ಮುಂದೆ ಕ್ರಾಂತಿಕಾರಿ ಸುರುಪನಾಗುವ ಅವಶ್ಯಕತೆಯಿಲ್ಲವೆನ್ನಿ. ಹೀಗಾಗುವುದೆಂಬ ದೂರದರ್ಶತೆಯಿಂದಲೇ ಅವನೊಂದು ವಿಮೋಕಂಸೆಸಿಯನ್ನು ಸೇರಿದ್ದ; ಆ ಮೇಲೆ ತನ್ನ ಅಚ್ಚುಮೆಚ್ಚಿನದಾಗಿದ್ದ ಕ್ರಾಂತಿಯನ್ನು ಅದರ ಗೊಡವೆಗೇನೇ ಬಿಟ್ಟು, ತಾನು ತನ್ನ ಬಾಳಿಗೆಳತಿಯಿಂದ ಕೂಡಿದ ಕುಟುಂಬ ನಿರ್ವಹಣೆಯಲ್ಲೇ ದಿನಗಳೆಯುತ್ತಿದ್ದ.

ಒಂದು ಶನಿವಾರ ಅಪರಾಹ್ನ ತನ್ನ ಆಫೀಸಿನಿಂದ ಮನೆಗೆ ಹಿಂದಿರುಗುತಿದ್ದಾಗ, ಜನಸತಿ ಹೋಟೇಲಿನ ಬಳಿಯಲ್ಲಿ ನೀರು ಕುಡಿಯುವುದಕ್ಕೋಸ್ಕರ ಸ್ತಬ್ಧನಾಗಿ ನಿಂತುಬಿಟ್ಟ. ತನ್ನ ಬೈಸಿಕಲ್ಲನ್ನು ಕಾಲ್ದಾರಿಗೆ ಕಟ್ಟಿದ್ದ ಎತ್ತರವಾದ ಕಲ್ಲಿನ ಮೇಲೆ ಆಧರಿಸಿ ನಿಲ್ಲುವಂತೆ ನಿಲ್ಲಿಸಿ, ಬಾಯಾರಿದ ದಾರಿಗರಿಗೆ ತಂಪಾದ ನೀರನ್ನಿತ್ತು ಪರಮಾತ್ಮನ ದೃಷ್ಟಿಯಿಂದ ಅತ್ಯುತ್ತಮರೆಂದು ಹೇಳಿಸಿಕೊಳ್ಳುವ ಉದ್ದೇಶದಿಂದ ಸಮೀಪದಲ್ಲೇ ಕಟ್ಟಿದ್ದ ಅರವಟ್ಟಿಗೆಯತ್ತ ನಡೆದ. ಅರವಟ್ಟಿಗೆಯ ಪಕ್ಕದಲ್ಲಿನ ಒಂದು ಹಳೆಯ ದೊಡ್ಡ ಮರದ ಮೇಲೆ ಒಂದು ತಗಡಿನ ತುಂಡಿನಲ್ಲಿ "ಭಗವಂತನಿಗೆ ಅಂಜಿರಿ" ಎಂಬ ವಾಕ್ಯವನ್ನು ಬರೆದು ನೇತುಹಾಕಿದ್ದರು. ಕೇವಲ ನೀರು ಕುಡಿಯುವುದಕ್ಕೂ ಭಗವಂತನಿಗೆ ಹೆದರುವುದೆಂದರೆ, ಸಂಸಾರಿಕ ಜೀವನವೆಂಬುದು ದೊಡ್ಡ ಉಪದ್ರವಕಾರಿಯೆನಿಸುವುದೆಂದುಕೊಂಡ ಗೋಪಾಲ. ಸರ ಮಾತ್ಮನಾಗಲೀ ಆತನ ಚಿತ್ರಪರವಾಗಲೀ ಅಲ್ಲಿರುವುದೋ ನೋಡೋಣವೆಂದು ಗೋಪಾಲ ಮರವನ್ನು ನಖಶಿಖಾಂತವಾಗಿ ದೃಷ್ಟಿಸಿದ. ಆದರೆ, ಅಲ್ಲಿ ಕೆಲವೊಂದು ಕಾಗೆಗಳ ವಿನಃ ಮತ್ತಾರೂ ಕಣ್ಣಿಗೆ ಬೀಳಲಿಲ್ಲ. ಯಾರಿಗೂ ಯಾವ ಕಾಲಕ್ಕೂ ಯಾವುದೇ ರೀತಿಯ ಉಪಕಾರವನ್ನು ಮಾಡದಿರುವ ಆ ಕಾಗೆಗಳೇ ಭಗವಂತನೆಂದರೆ ಭಯಪಡಲಿ ಎಂದುಕೊಂಡನವನು. ಆಗ ತಾನು ತನಕ್ರಾಂತ್ಯಾಚಾರದ ವೇಳೆಯಲ್ಲಿ ನುಡಿದುಕೊಳ್ಳುತಿದ್ದ "ನೀರಿನಲ್ಲಿ ನಮ್ಮ ಆಹಾರವನ್ನು ಸುರಿಸು" ಎಂಬ ನುಡಿಮುತ್ತನ್ನು ಜ್ಞಾಪಿಸಿಕೊಂಡ.

ಮರದ ಮೇಲೆ ವಿರಮಿಸಿದ್ದ ತಗಡಿನ ತುಂಡಿನಲ್ಲಿ ಬರೆದಿದ್ದ ಆ ವಾತು ಉಪಕಾರವನ್ನು ಮಾಡಬೇಕು ಎಂಬುದಾಗಿ ಪುನಃ ಎಚ್ಚರಿಕೆಯನ್ನಿತ್ತಿತು. ಉತ್ತಮ ಬಾಲವೀರನಂತೆ ಪ್ರತಿದಿನವೂ ಕಡಿಮೆಪಕ್ಷ ಒಂದು ಉಪಕಾರವನ್ನಾದರೂ ಪರರಿಗೆ ಮಾಡಬೇಕೆಂಬುದಾಗಿ ದೃಢ ನಿಶ್ಚಯ ಮಾಡಿದ ಗೋಪಾಲ.

ಅಷ್ಟರಲ್ಲಿಯೇ ಹಿಂದೂ ರಾಯನ ರಸ್ತೆಯ ಭೇಟಿಯಾಯಿತು. ಅವನ ಮೈಯಲ್ಲಾ ಬೆವರಿನಿಂದ ತೊಯ್ದಿತ್ತು. ಅಲ್ಲದೆ ಅತನ ಮನೆಯು ಇನ್ನೂ ಒಂದು ಮೈಲಿಯಷ್ಟು ದೂರದಲ್ಲಿತ್ತು. ರೋಸನಾರದ ತಿರುವಿನಲ್ಲಿ ಆತನೊಂದು ಜನಸಂದಣಿಯನ್ನು ಕಂಡ. ಯಾರೋ ಬಹಳ ಗಂಡಾಂತರ ಪರಿಸ್ಥಿತಿಯಲ್ಲಿದ್ದು, ಆತನಿಗೆ ಸಹಾಯವು ಬೇಕಾಗಿದೆ ಎಂದುಕೊಂಡು, ತನ್ನ ಬೈಸಿಕಲ್ಲಿನಿಂದ ಗೋಪಾಲ ಇಳಿದ. ಸೈಕಲನ್ನು ದೂಡಿಕೊಂಡೇ ಜನಜಂಗುಳಿಯ ಮಧ್ಯಕ್ಕೆ ಬಂದ. ಅಲ್ಲೊಬ್ಬ ಪೋಲೀಸರವನು ಒಬ್ಬ ಚೇಲ ಹಿಡಿದುಕೊಂಡಿದ್ದವನನ್ನು ಬಾರಿಸುತಿದ್ದನು. "ನಿನಗೆ ಅವನನ್ನು ಹೊಡೆಯುವ ಅಧಿಕಾರವಿಲ್ಲ; ಹೆಚ್ಚೆಂದರೆ, ಆತನನ್ನು ಎಳೆದೊಯ್ಯಬಹುದು"—ಗೋಪಾಲ ಕೂಗಿ ಹೇಳಿದ. ಅವನು ಅಳವಾದ ಉಸಿರೊಂದನ್ನು ತೆಗೆದುಕೊಂಡು ಎದೆಯನ್ನು ಮುಂದೆ ದೂಡಿ, ಗಡ್ಡವನ್ನು ಒರೆ ಮಾಡುತ್ತ ಕಾದುವ ಕೋಳಿಯಂತೆ ತೋರಿದ. ಪೋಲೀಸನು ಅಶ್ಚರ್ಯದಿಂದ ಪಕ್ಕಕ್ಕೆ ತಿರುಗಿದ. ಅದೃಷ್ಟವಶಾತ್, ಪ್ರಾಯಃ ಬೇಕೆಂತಲೇ, ಪೋಲೀಸನವನ ದಪ್ಪಗಾದ ಲಾಠಿ ಬಡೆದ ಬೂಟಿನ ಹಿಂಭಾಗ ಗೋಪಾಲನ ಪಾದದೆಲುಬೊಂದನ್ನು ನೆಟ್ಟಿ ಜಜ್ಜಿ ಬಜ್ಜಿಯನ್ನಾಗಿ ಮಾಡಿತು ಗೋಪಾಲನು ನೋವಿನಿಂದ ಕುರುಡನಾದನು. ಅವನು ಅಲ್ಲೆ ರಸ್ತೆಯ ಮಧ್ಯದಲ್ಲಿಯೇ ಒಂದು ಗುದ್ದನ್ನು ತಿಂದು ಬಿದ್ದುಬಿಟ್ಟನು. ಅವನು ಪುನಃ ಕಣ್ಣು ತೆರೆದಾಗ, ಆ ಮಾನವ ಸಂದೋಹವು ಮಾಯವಾಗಿತ್ತು; ಅಪರಾಧಿ ಹಾಗೂ ಅಪರಾಧಿಗಳನ್ನು ಹಿಡಿಯುವವರೂ ದೂರವಾಗಿದ್ದರು; ಅವನ ಬೈಸಿಕಲ್ಲು ಮಾತ್ರ ತಿರಸ್ಕಾರದಿಂದ ದೂರದಲ್ಲಿ ಬಿದ್ದುಕೊಂಡಿತ್ತು. ತನ್ನ ಕಿಸೆಯಿಂದೊಂದು ಅಂಗವಸ್ತ್ರವನ್ನು ಎತ್ತಿಕೊಳ್ಳಲೆಂದು ಪ್ರಯತ್ನಿಸಿದಾಗ, ಅವನ ಕೈಸ್ತ ನೇರವಾಗಿ ಬಳಿ ಹೋಯಿತು. ಒಬ್ಬ ಬುದ್ಧಿವಂತ ಚಿಪ್ಪಿಗನು ಕತ್ತರಿಸಿದಸ್ತು ಮನೋಹರ ವಿಧಾನದಲ್ಲಿಯೇ ಅತನ ಜೇಬು ಕತ್ತರಿಸಲ್ಪಟ್ಟಿತ್ತು!

ಮರುದಿನ ಭಾನುವಾರ ಗೋಪಾಲನು ಏನಾದರೊಂದು ಒಳ್ಳೆಯ ಕಾರ್ಯವನ್ನು ಮಾಡಬೇಕೆಂದು ಬಹುಕಾಲ ಆಲೋಚಿಸಿದರೂ, ಇಡೀ ದಿನ ಕಳೆಯುತ್ತ ಬಂದರೂ ಏನೊಂದೂ ಹೊಳೆಯಲಿಲ್ಲ. ಸಂಧ್ಯಾಸಮಯದಲ್ಲಿ ಕೆಲವೊಂದು ವಸ್ತುಗಳನ್ನು ಕೊಂಡುಕೊಳ್ಳಲು ಪೇಟೆಯ ಕಡೆಗೆ ಹೋದನ. ತನ್ನ ಮಕ್ಕಳ ಚಡ್ಡಿಗಳಿಗಾಗಿ ಸ್ವಲ್ಪ ಖಾಕಿ ಬಟ್ಟೆಯನ್ನಾತ ಕರುತ್ತಿರುವಾಗ, ತನ್ನ ಪ್ರತ್ಯಂಗದಲ್ಲಿಯೂ ನಡುಗುತಿದ್ದ ಮುದುಕಿಯೋರ್ವಳನ್ನು ಕಂಡನು. ಅವಳಾಗಿಯೇ ಆತನನ್ನು ಕೇಳಿದಳು— "ಈ ರಸ್ತೆಯಿಂದ ದೇವಾಲಯಕ್ಕೆ ನನ್ನನ್ನು ಕರೆದೊಯ್ಯೆಯಾ ಮಗನೆ? ನನಗೆ ಕಣ್ಣಿಗಾಗಿ ಕಾಣಿಸುವುದಿಲ್ಲ" ಎಂದು ತನ್ನ ದಿನನಿತ್ಯದ ಕೆಲಸಗಳಲ್ಲಿ ಒಂದಾದ ಪರೋಪಕಾರವನ್ನು ಮಾಡಲು ಒದಗಿದ ಈ ಸುಸಂದರ್ಭ ಒದಗಿಸಿದ್ದಕ್ಕಾಗಿ ತನ್ನ ನಕ್ಷತ್ರಗಳನ್ನು ಪ್ರಶಂಸಿಸಿದ. ಅದೊಂದು ದೊಡ್ಡ ತಿರುವು ಆಗಿದ್ದು, ನಾಲ್ಕೈಂಟು ರಸ್ತೆಗಳಲ್ಲಿ ಬಂದು ಸೇರುತಿದ್ದುವು. ಮಾರ್ಗವನ್ನು ದಾಟಿ, ಇನ್ನೊಂದು ಪಕ್ಕದಲ್ಲಿದ್ದ ದುರ್ಗಾ ವಿಲಾಸವನ್ನು ಸಮೀಪಿಸಿದನು. ಅವನು ಆನಂದಪರವಶನಾಗಿದ್ದನು. ಅಲ್ಲೆ ಪಕ್ಕದಲ್ಲಿ ಬಿದ್ದಿದ್ದ ಬಾಳೆ ಹಣ್ಣಿನ ಸಿಪ್ಪೆಯನ್ನು ಮೆಟ್ಟಿ ಜಾರಿದನು. ಜಾರಿದವನೇ ತಾನು ಕರೆದೊಯ್ಯುತ್ತಿದ್ದ ಮುದುಕಿಯ ಮೇಲೆಯೇ ಉರುಳಿ ಬೀಳುವಷ್ಟು ದುರದೃಷ್ಟ ಶಾಲಿಯಾದನಾತ. ಅವನು ಎದ್ದು ನಿಲ್ಲಲು ಪ್ರಯತ್ನಿಸುತಿದ್ದಂತೆ, ದಾರಿ ಹೋಕರು ಆತನನ್ನು ಹಿಡಿದು ಹೊಡೆಯ ತೊಡಗಿದರು. ನಿಂದೆಗಳು, ದೂಷುವಿಕ್ಕೆ ಹಾಗೂ ಪೆಟ್ಟುಗಳು ಆತನ ಪಾಲಿಗೆ ಧಾರಾಳವಾಗಿ ದೊರೆತುವು. ಹೋಟೆಲಿನ ಮಾಲಿಕನು ಗಟ್ಟಿಯಾಗಿ ಕಿರುಚ ತೊಡಗಿದ. "ಅವನನ್ನು ನೋಡಿ, ಈಗಿನ ಕಾಲದ ಯುವಕರೇ ಹೀಗೆ, ಒಬ್ಬ ಹೆಳೆ ಮುದುಕಿಯನ್ನು ಸಹ ಎಡವಿ ಹಾಕಲು ನಾಚುಗೆಯೆನಿಸುವುದಿಲ್ಲ ಅವರಿಗೆ!"

ಈ ಭಾನುವಾರದ ತನ್ನ ಪರೋಪಕಾರಾಭಿಲಾಷೆ ಯು, ಅತನು ಅಂದು ಪ್ರತಿಯಾಗಿ ಪಡೆದ ಕುತ್ತಿಗೆ ನೋವು ಸಂಪೂರ್ಣವಾಗಿ ಇಲ್ಲವೆಂದಾಗುವವರೆವಿಗೂ ಮರೆತು ಹೋಗಲಿಲ್ಲ. ಮರುದಿನ ಕಾಗದ ಪತ್ರಗಳಿಂದ ತಲೆಯೆತ್ತಲಾರದುದೆಂದಾಗಿ ಬೇಗನೇ ಆಫೀಸಿನಿಂದ ಮರಳಿದ. ಸೆಂಟ್ರಲ್ ರಸ್ತೆಯಲ್ಲಿ ಬರುತ್ತಿರುವಾಗ, ಬೈಸಿಕಲ್ಲಿನ ಸರಪಳಿ ತನ್ನ ಫ್ರೀವೀಲಿನಿಂದ ಜಾರಿಕೊಂಡಿತು; ಅದನ್ನು ಸರಿಪಡಿಸಲಿಕ್ಕಾಗಿ ಅತನು ಕೂಡಲೇ ಇಳಿಯಬೇಕಾಯಿತು. ಅವನು ನೆಲಕ್ಕೆ ಕಾಲಿಡುತ್ತಿದಂತಾಗಲೇ ಆತನ ಎಡಗಡೆಯಲ್ಲೊಬ್ಬ ಸೈಕಲನ್ನು ಬಹಳ ವೇಗವಾಗಿ ಓಡಿಸುತ್ತಾ ಬಂದು ಎಲ್ಲಿಯೋ ಆಂಗಡಿಗಳ ಮಧ್ಯದಲ್ಲಿ ನುಸುಳಿಕೊಂಡ. ಅದೇ ಸಮಯದಲ್ಲಿ ಒಬ್ಬ ಹುಡುಗಿಯ ಕೂಗೂ ಕೇಳಿಸಿತು "ನನ್ನ ಕೈಚೀಲ, ನನ್ನ ಕೈಚೀಲ!" ಎಂದು. "ಕಳ್ಳ ಕಳ್ಳ" ಎಂದು ಕೂಗುತ್ತ ಗೋಪಾಲ ಸೈಕಲಿಗೆ ಹಾರಿ, ಕಳ್ಳನನ್ನು ಎಡವಿದ. ಅಷ್ಟರಲ್ಲಿ ಆರು ಜನ ಕೆಲಸದಲ್ಲಿ ನಿರತರಾಗಿದ್ದ ಕಮ್ಮಾರರು ಗೋಪಾಲನನ್ನು ಗಟ್ಟಿಯಾಗಿ ಹಿಡಿದು, ಹುಡುಗಿಯ ಬಳಿ ವಿಚಾರಣೆಗೆ ಸುರುಮಾಡಿದರು. ಅವರಲ್ಲೊಬ್ಬನಲ್ಲಿ ಕೆಂಪಗೆ ಕಾಯಿಸಿದ ಕಬ್ಬಿಣದ ದುಂಡಗಿನ ಕರಳು ಸಹ ಇತ್ತು. "ತಂಗಿ, ಕವನುಷ್ಯನನ್ನು ಕೊಲ್ಲುವುದೂ ನ್ಯಾಯವೆ. ನಾನಾತನನ್ನು ಹಿಂದೊಮ್ಮೆ ಗಾಂಧಿ ಪೇಟೆಯಲ್ಲಿ ಕಂಡಿದ್ದೆನು" ಆತ ಹುಡುಗಿಯೊಡನೆ ಹೇಳಿದ.

"ಆದರೆ, ಈತನು ಕಳ್ಳನಲ್ಲವಲ್ಲ; ನಿಜವಾಗಿಯಾದರೆ, ಕಳ್ಳನನ್ನು ಅರಸುತ್ತಿದ್ದನಿವನು." ಹುಡುಗಿ ಉತ್ತರಿಸಿದಳು.

ಕಮ್ಮಾರರು ಆಕೂಡಲೇ ತಿರುಗಿ ನೋಡಿದರು, ಕಳ್ಳನನ್ನರಸುವ ಉದ್ದೇಶದಿಂದ. ಅದರಿಂದ ಪ್ರಯೋಜನವಿಲ್ಲವೆಂದ. ತಿಳಿದ ಹುಡುಗಿ ರಸ್ತೆಯನ್ನು ದಾಟಿ ತನ್ನ ದಾರಿ ಹಿಡಿದಳು. ಆ ಆರುವರಲ್ಲಿ ಒಬ್ಬರಾದರೂ ಗೋಪಾಲನೊಡನೆ ಒಪ್ಪಾಯಿತೆನಲಿಲ್ಲ!

ಮರುದಿನ ಆಫೀಸಿಗೆ ತೆರಳುವ ಪ್ರಸಂಗವೇ ಉದ್ಭವಿಸುವುದಿಲ್ಲ. ಆತನು ತನ್ನ ನೋಯುತ್ತಿರುವ ಶರೀರಕ್ಕೆ ವಿಶ್ರಾಂತಿಯನ್ನೂ ಹೆದರಿಹೋದ ಮನಸ್ಸಿಗೆ ಶಾಂತ್ವಪದೇಶವನ್ನೂ ನೀಡುವ ಉದ್ದೇಶದಿಂದ ಸಂಪೂರ್ಣ ವಿರಾಮವನ್ನು ಪಡೆದ. ಸಂಜೆಯ ವೇಳೆಯಲ್ಲಿ ತುಸು ನೆಮ್ಮದಿಯಾದಂತಾಗಿ ಶುಭ್ರಗಾಳಿಸೇವನೆಯನ್ನು ಮಾಡುವುದಕ್ಕಾಗಿ ಸೈಕಲಿನಲ್ಲಿ ಮೈದಾನಕ್ಕೆ ನತ್ತ ತೆರಳಿದ. ಅಲ್ಲಿ ಆತನನ್ನು ಕಂಡು ಬೊಗಳುತ್ತ ಒಂದು ಕಂದು ಬಣ್ಣದ ನಾಯಿ ಸರಿ ಆತನ ಬೂಟುಗಳನ್ನ ನೆಕ್ಕತೊಡಗಿತು. ಮನುಷ್ಯರಿಗಿಂತಲೂ ಪ್ರಾಣಿಗಳು ಬುದ್ಧಿವಂತರಿರಬೇಕೆಂದು ಕೊಂಡನಾತ. ಆ ಪಾಪದ ನಾಯಿಮರಿ ಕೃತಜ್ಞತೆಯಿಂದ ದೂರವಾಗಿದ್ದ ಬಾಲದಂತೆ ತೋರಿತು. ಅವನು ಅದರ ಕಿವಿಗಳನ್ನು ಹಿಡಿದು ಮುದ್ದಿಸಿದ. ನಾಯಿಮರಿಯಾದರೋ ಅದರಿಂದ ಸಂತೋಷಗೊಂಡು, ನೆಗೆಯತೊಡಗಿತು. ಗೋಪಾಲ ತನ್ನ ಸೈಕಲನ್ನು ಹತ್ತಿದಾಗ, ನಾಯಿಮರಿಯೂ ಆತನೊಡನೆ ಓಟಕ್ಕೆ ನಿಂತಿತು. ಗೋಪಾಲನ ಹೃದಯ ಕರುಣೆಯಿಂದ ಬೆಣ್ಣೆಯಂತೆ ನೀರಾಯಿತು. ಅದನ್ನೇಕೆ ತೆಗೆದುಕೊಂಡ ಹೋಗಬಾರದು? ಎಂದು ಪ್ರಶ್ನಿಸಿಕೊಂಡ ತನ್ನ ಮನೆಯಲ್ಲಿ ಹೇಗೂ ನೂವರು ಮಕ್ಕಳಿದ್ದಾರೆ; ಇದೂ ನಾಲ್ಕನೆಯದಾಗಿ ಸೇರಲಿ; ಎಂದು ಯೋಚಿಸಿ ನಾಯಿಯನ್ನೆತ್ತಿಕೊಂಡು, ಸೈಕಲಿನ ಹ್ಯಾಂಡಲ್ ಬಾರ್ (ಹ್ಯಾಂಡಲ್ ಬಾರ್) ಇಟ್ಟು ಪ್ರಯಾಣ ಮುಂದುವರಿಸಿದ. ಅವನು ಕುದುರೆಸಂಕದ ಬಳಿ ಬರುತ್ತಿರುವಾಗ, ಒಂದು ಉದ್ದವಾದ ಕಸ್ತು ಮೋಟರುಕಾರು ದೂಳೆಬ್ಬಿಸುತ್ತ ಒಂದು ಗಟ್ಟಿಯಾಗಿ

(೧೧ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಭಾರತದಲ್ಲಿ ಸಂಘೀಕರಿಸಲ್ಪಟ್ಟಿದು; ಮೆಂಬರರ ಹೊಣೆ ಮಿತೀಕರಿಸಲ್ಪಟ್ಟಿದೆ)

ಟೆಲಿಫೋನ್ ನಂ. 114] ಹೆಡ್ ಆಫೀಸು: **ಮಂಗಳೂರು, ದ. ಭಾರತ.** [ಪೋಸ್ಟ್ ಬಾಕ್ಸ್ ನಂಬ್ರ 118

ವರ್ಷಕ್ಕೆ ಶೇಕಡಾ 7½ ದರಕ್ಕೆ ಮೊರದ ಬಡ್ಡಿಯಲ್ಲಿ ಬಂಗಾರ ಮತ್ತು ಬಂಗಾರದ ಆಭರಣಗಳ ಮೇಲೆ ಸಾಲ ಕೊಡಲಾಗುವುದು.

THE KARNATAKA BANK LIMITED

ಬಹುಮುಖ ಸೇವಾ ಸಂಸ್ಥೆ—

ಭಾರತೀಯ ಅಂಚೆ ಇಲಾಖೆ.

ಕಳೆದ ತಿಂಗಳ ಮಧ್ಯಕಾಲದಲ್ಲಿ ಅಂಚೆ ಮತ್ತು ತಂತಿ ಶಾಖೆಯ ವಾರ್ಷಿಕ ವರದಿಯು ಪ್ರಕಟಿಸಲ್ಪಟ್ಟಿತು ಈ ವರದಿಯ ಪ್ರಕಾರ ಅಂಚೆ ಮತ್ತು ತಂತಿ ಶಾಖೆಯ ಕಾರ್ಯಾಚರಣೆಯಿಂದ ಈ ಶಾಖೆಗೆ ೧೯೫೬-೫೭ ರಲ್ಲಿ ೩ ೪೭ ಕೋಟಿ ರೂಪಾಯಿಗಳ ಹೆಚ್ಚಳವಾದ ಹಣವು ಪ್ರಾಪ್ತಿಯಾಗಿದೆ. ೧೯೫೬-೫೭ ರಲ್ಲಿ ಈ ಲಾಭಾಂಶವು ೨೬ ಕೋಟಿ ರೂಪಾಯಿಗಳಾಗಿತ್ತು ೧೯೫೫-೫೬ ರಲ್ಲಿ ಅಂಚೆ, ಟೆಲಿಫೋನ್ ಮತ್ತು ವಯರ್‌ಲೆಸ್ ಸೇವೆಗಳು ಗಮನಾರ್ಹ ರೀತಿಯಲ್ಲಿ ವಿಸ್ತರಿಸಿವೆ

ವರ್ಷದ ಪ್ರಾರಂಭದಲ್ಲಿ ೪೯೭೧ ಅಂಚೆ ಕಛೇರಿಗಳಿದ್ದು ವರ್ಷದ ಕೊನೆಯಲ್ಲಿ ಅದು ೨೫,೦೪೭ಕ್ಕೆ ಏರಿತು. ಪ್ರಥಮ ಯೋಜನಾವಧಿಯಲ್ಲಿ ಈ ಶಾಖೆಗಾಗಿ ನಿಶ್ಚಯಿಸಿದ್ದ ಗುರಿಯನ್ನು ವರ್ಷಮಧ್ಯದಲ್ಲಿ ಮೀರಲಾಯಿತು. ದೂರಶ್ರಾವಕ ವಿನಿಮಯ ಕೇಂದ್ರಗಳ ಸಂಖ್ಯೆಯು ೫೦೪೪ ರಿಂದ ೫೪೪೦ಕ್ಕೂ ತಂತಿ ಕಛೇರಿಗಳ ಸಂಖ್ಯೆ ೭,೯೨೦ ರಿಂದ ೯,೪೯೩ಕ್ಕೂ ಹೆಚ್ಚಿತು.

ಅಂಚೆ ರವಾನೆಗಾಗಿ ಒಂದ ಕವರು ಕಾರ್ಡು ಮುಂತಾದ ವಸ್ತುಗಳ ಸಂಖ್ಯೆ ನೂರಕ್ಕೆ ೮.೪ರಷ್ಟು ಹೆಚ್ಚಿದೆ ಈ ವರ್ಷದಲ್ಲಿ ಒಟ್ಟು ೯೯೯ ೭೦ ಕೋಟಿ ವಸ್ತುಗಳು ಅಂಚೆ ಮೂಲಕ ರವಾನಿಸಲ್ಪಟ್ಟವು. ತಂತಿಗಳ ಸಂಖ್ಯೆ ನೂರಕ್ಕೆ ೯ ೪ರಷ್ಟು ಏರಿ ೩೩ ೫ ಲಕ್ಷವನ್ನು ಮುಟ್ಟಿದೆ ೫೫-೫೬ ರಲ್ಲಿ ೧೯೬ ಲಕ್ಷ ದೂರದ ದೂರಶ್ರಾವಕ ಕರೆಗಳು ದಾಖಲು ಮಾಡಲ್ಪಟ್ಟಿವೆ. ಹಿಂದಿನ ವರ್ಷ ಇದು ಕೇವಲ ೧೫೧ ಲಕ್ಷವಾಗಿದ್ದಿತು ಎಂದರೆ ಸೇಕಡಾ ೨೩ರಷ್ಟು ಹೆಚ್ಚಿದಂತಾಯಿತು.

ಅಂಚೆ ಹಾಗೂ ತಂತಿ ಶಾಖೆಯ ಆದಾಯವು ನೂರಕ್ಕೆ ೮.೪ರಷ್ಟು ಅಧಿಕವಾಗಿ ೫೦.೬ ಕೋಟಿ ರೂಪಾಯಿಗಳನ್ನು ಮುಟ್ಟಿತು ಅದೇ ಕಾಲದಲ್ಲಿ ವೆಚ್ಚವು ಸಹ ೩.೬೭ ಕೋಟಿ ರೂಪಾಯಿಗಳಿಂದ ೫.೨೦ ಕೋಟಿ ರೂಪಾಯಿಗಳಿಗೆ ಏರಿದೆ.

ಪ್ರಚಲಿತ ವರ್ಷದಲ್ಲಿ ಒಟ್ಟು ೫೯೯೫ ಅಂಚೆ ಕಚೇರಿಗಳನ್ನು ತೆರೆಯಲಾಗಿದ್ದು ಹಳ್ಳಿಗಳಲ್ಲಿ ಸೇಕಡಾ ೯೪.೪ ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿದೆ. ಅಂಚೆ ನೌಕರರು ಕಾಲ್ನಡಿಗೆಯಿಂದ ಅಂಚೆ ಟಪ್ಪಾಲನ್ನೊಯ್ಯುವ ವ್ಯವಸ್ಥೆಯಿರುವ ಸ್ಥಳಗಳಲ್ಲಿ ಮೋಟಾರು ವಾಹನಗಳನ್ನು, ಸೈಕಲ್‌ಗಳನ್ನು ಉಪಯೋಗಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ನಡೆಗೆಯ ೨೧೧೮ ಮೈಲಿಗಳ ಮಾರ್ಗದಲ್ಲಿ ಮೋಟಾರು ಸೇವೆಯನ್ನೂ ೧೦೦೭ ಮೈಲಿಗಳ ಮಾರ್ಗಗಳಲ್ಲಿ ಸೈಕಲ್ ಸೇವೆಯನ್ನೂ ಹೊಸದಾಗಿ ಆರಂಭಿಸಲಾಗಿದೆ. ವಿಮಾನ ಮೂಲಕ ರವಾನಿಸುವ ಅಂಚೆದಾಖಲು ೧,೭೦೦ ಮೈಲಿ ಹೆಚ್ಚಿತು ಒಟ್ಟು ೫೫, ೨೪೨,೪೮ ಮೈಲಿ ಉದ್ದದಲ್ಲಿ ಅಂಚೆ ಟಪ್ಪಾಲುಗಳು ರವಾನೆಯಾಗುತ್ತವೆ. ಇದಕ್ಕಾಗಿ, ರೈಲು, ವಿಮಾನ, ಮೋಟಾರು, ನಡೆಗೆಕಾರರು, ಹಡಗಗಳು, ದೋಣಿಗಳು, ಗಾಡಿಗಳು, ಕುದುರೆಗಳು, ಒಂಟೆಗಳು ಮತ್ತು ಎತ್ತುಗಳನ್ನು ಬಳಸಲಾಗುತ್ತಿದೆ

೫೪—೫೫ರಲ್ಲಿ ಖಜಾನೆಗಳು ಅಂಚೆ ಕಚೇರಿಗಳಿಗೆ ೩೮ ೫೯,೯೫,೦೦ ರೂಪಾಯಿಗಳ ಬೆಲೆಯ ಅಂಚೆ ಚೀಟಿ ಮತ್ತಿತರ ಸಾಧನ ಸಾಮಗ್ರಿಗಳನ್ನು ನೀಡಿದ್ದುವು. ೫೫—೫೬ರಲ್ಲಿ ಒಟ್ಟು ೨೬,೦೨ ೩೬ ಲಕ್ಷ ರೂಪಾಯಿಗಳಿಗೆ ಇದು ಏರಿರುತ್ತದೆ

೧೯೫೫-೫೬ ರಲ್ಲಿ ೭೧೩ ಕೋಟಿ ರೂಪಾಯಿ ಮೌಲ್ಯದ ೭೧೫ ಲಕ್ಷ ಹಣ ರವಾನೆಗಳನ್ನು ಅಂಚೆ ಕಚೇರಿಗಳು ನಿರ್ವಹಿಸಿವೆ ೫೫-೫೬ರಲ್ಲಿ ಅವು ೨೩೧ ಕೋಟಿ ರೂಪಾಯಿ ಮೌಲ್ಯದ ೬೫೦ ಲಕ್ಷ ಹಣ ರವಾನೆಗಳಿಗೇರಿದೆ. ಅಂಚೆ ಕಛೇರಿಗಳು ನೀಡಿದ ಭಾರತೀಯ ಅಂಚೆ ಆರ್ಡರ್‌ಗಳ ಸಂಖ್ಯೆ ೫೪-೫೫ರಲ್ಲಿ ೬೬,೪೮,೨೨೨ ಇದ್ದುದು ಈ ವರ್ಷ ೩೪,೪೮,೪೮೩ಕ್ಕೆ ಇಳಿಯಿತು. ವಿ. ಪಿ. ವಸ್ತುಗಳ ಸಂಖ್ಯೆ ೪೭,೬೬,೦೦೦ರಿಂದ ೪೯,೪೧,೦೦೦ಕ್ಕೆ ಏರಿತು ಅಂಚೆಯ ಮೂಲಕ ರವಾನೆಯಾದ ವಿಮೆಮಾಡಿದ ವಸ್ತುಗಳು ೪೬,೭೧ ೭೦೦ರಿಂದ ೪೯,೯೩,೭೦೦ಕ್ಕೆ ಹೆಚ್ಚಿತು ಈ ವರ್ಷದಲ್ಲಿ "ವೃತ್ತಪತ್ರ" ಕಛೇರಿಗಳು ಮೂರು ೧,೫೯,೧೧,೦೦೦ ಅಂಚೆ ವಸ್ತುಗಳ ವಹಿವಾಟನ್ನು ನಡೆಸಿವೆ ಹಿಂದಿನ ವರ್ಷ ಇದು ೧,೫೬ ೦೩,೦೦೦ ಆಗಿತ್ತು. ೧೯೫೫-೫೬ ರಲ್ಲಿ ಈ ಕಚೇರಿಗಳು ನೂರಕ್ಕೆ ೧೧ರಷ್ಟು ಅಂಚೆ ವಸ್ತುಗಳನ್ನು ವಿಶಾಸದಾರರಿಗೆ ಅಥವಾ ಅವುಗಳನ್ನು ಕಳುಹಿಸಿದವರಿಗೆ ತಲಪಿಸಿರುವುವು.

ತಂತಿ ಹಾಗೂ ದೂರಶ್ರಾವಕ ಸುತ್ತುಗಳನ್ನೂ ವಿಸ್ತರಿಸುವ ಕಾರ್ಯಕ್ರಮವು ತ್ವರಿತಗತಿಯಲ್ಲಿ ಸಾಗಿತು ತಂತಿ ಮಾರ್ಗಗಳನ್ನು ೧,೧೬,೫೦೫ ಮೈಲಿಗಳಿಂದ ೧,೨೨,೯೯೬ ಮೈಲುಗಳಿಗೆ ಹೆಚ್ಚಿಸಲಾಯಿತು. ತಂತಿ ಹಾಗೂ ದೂರ ಶ್ರಾವಕಗಳಿಗಾಗಿ ಉಪಯೋಗಿಸಿದ ತಾಮ್ರ, ಕಂಚು ಮತ್ತು ಕಬ್ಬಿಣದ ತಂತಿಗಳ ಉದ್ದ ೮,೬೬,೭೦೮ ಮೈಲುಗಳಿಂದ ೮,೬೭,೧೯೯ ಮೈಲುಗಳಿಗೇರಿತು. ತಂತಿ ಸೇವಾ ವಿಭಾಗದಲ್ಲಿ ಹೆಚ್ಚಿನ ದಕ್ಷತೆಯನ್ನು ಸಾಧಿಸಲಾಗಿದೆ. "ತ್ವರಿತಗತಿ" ಯ ತಂತಿಗಳ ಸಂಖ್ಯೆ ಇಳಿಮುಖವಾಗಿದೆ ೫೫-೫೬ರಲ್ಲಿನ ತಂತಿಗಳಲ್ಲಿ ನೂರಕ್ಕೆ ೨೯ರಷ್ಟು 'ತ್ವರಿತಗತಿ'ಯವುಗಳಾಗಿದ್ದುವು ದೂರಶ್ರಾವಕಗಳ ಮೂಲಕ ಕಳುಹಿಸಲಾದ ತಂತಿಗಳ ಸಂಖ್ಯೆ ಹಿಂದಿನ ವರ್ಷದ ೨೨,೬೦,೬೬೫ ರಿಂದ ೨೭,೪೨,೨೪೦ಕ್ಕೆ ಹೆಚ್ಚಿತು. ತಂತಿಸೇವಾ ವಿಭಾಗವನ್ನು ಆಧುನಿಕಗೊಳಿಸುವುದರ ಅಂಗವಾಗಿ ಹೆಚ್ಚಿನ ಸುತ್ತುಗಳಲ್ಲಿ "ದೂರಮುದ್ರಕ"ಗಳನ್ನು ಕಾರ್ಯಾಚರಣೆಗೆ ತರಲಾಯಿತು.

ಸರಕಾರಿ ಇಲಾಖೆಗಳು, ವೃತ್ತಪತ್ರಿಕಾ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳು ಮುಂತಾದುವುಗಳಿಗೆ ೧೩ ದೂರಮುದ್ರಕ ಸುತ್ತುಗಳನ್ನು ಒದಗಿಸಲಾಯಿತು. ಹೀಗೆ ಗುತ್ತಿಗೆಗೆ ನೀಡಲಾಗಿರುವ ದೂರ ಮುದ್ರಕ ಸುತ್ತುಗಳ ಸಂಖ್ಯೆ ಈಗ ೩೪೫ ತಾಪ್ರದ ತಂತಿ ಕಳ್ಳತನ ಪ್ರಕರಣಗಳು ತಂತಿ ಹಾಗೂ ದೂರ ಶ್ರಾವಕ ಸೇವಾ ವಿಭಾಗಗಳ ಪ್ರಗತಿಗೆ ದೊಡ್ಡ ಆತಂಕಗಳಾಗಿವೆ

ದೇವನಾಗರಿ ಲಿಪಿಯಲ್ಲಿ ತಂತಿಗಳನ್ನು ಕಳುಹಿಸುವ ಸೌಲಭ್ಯವನ್ನು ವರದಿ ವರ್ಷದಲ್ಲಿ ಮತ್ತೆ ೩೦ ತಂತಿ ಕೇಂದ್ರಗಳಿಗೆ ವಿಸ್ತರಿಸಲಾಯಿತು. ಹಾಗಾಗಿ ಈಗ ಒಟ್ಟು ೧೧೭ ಕಚೇರಿಗಳಲ್ಲಿ ಈ ವ್ಯವಸ್ಥೆಯು ಇದೆ. ದೇಶದಲ್ಲಿ ದೂರ ಶ್ರಾವಕಗಳ ಸಂಖ್ಯೆ ೨,೪೭,೦೦೦ರಿಂದ ೩,೭೮,೦೦೦ಕ್ಕೆ ಏರಿದೆ. ಇಡಿ ವರ್ಷದಲ್ಲಿ ಪ್ರತಿ ದೂರ ಶ್ರಾವಕದ ಜೋಡಣೆ ಬಗ್ಗೆ ಸಂಸಾರಿ ಒಂದು ದೂರು ಇತ್ತು.

ಅಂಚೆ ಮತ್ತು ತಂತಿ ಶಾಖೆಯ ನಿಸ್ತಂತು ವಿಭಾಗವು ಈ ವರ್ಷ ಅಸಾಮಾನ್ಯ ಪ್ರಗತಿಗಳಿಸಿದೆ. ಹಿಂದಿನ ವರ್ಷ ಈ ವಿಭಾಗಕ್ಕೆ ಸುಮಾರು ೩,೨೩,೨೭೨ ರೂಪಾಯಿಗಳಷ್ಟು ನಷ್ಟ ಸಂಭವಿಸಿತ್ತು ಈ ನಷ್ಟವು ೧೯೫,೨೩೪ ರೂಪಾಯಿಗಳಿಗೆ ಇಳಿದಿದೆ. ಉತ್ತರ ಲಿಖಂಪುರ ಮತ್ತು ಜೊರ್ಹಾತ್‌ಗಳ ನಡುವೆ ಪಿ. ಎಚ್. ಎಫ್. ದೂರದರ್ಶಕ ಸಂಪರ್ಕವನ್ನು ಕಲ್ಪಿಸಲಾಗಿದೆ. ಈ ಇಲಾಖೆಯಲ್ಲಿ ಈ ವರ್ಷ ೧೧೮ ನಿಸ್ತಂತು ಕೇಂದ್ರಗಳಿದ್ದುವು ಆಕಾಶವಾಣಿ ಅಪ್ಪಣೆ ಪತ್ರಗಳ ಸಂಖ್ಯೆ ೧೧,೯೫,೫೭೧ ಆಗಿತ್ತು.

ವರದಿಯಲ್ಲಿನ ಹಣಕಾಸಿನ ವಿಮರ್ಶೆಯ ಪ್ರಕಾರ ಎಂಟು ವರ್ಷಗಳಲ್ಲಿ ಮೊದಲನೆಯ ಸಾರಿ ಅಂಚೆ ಶಾಖೆಯು ಒಂದು ಲಕ್ಷ ರೂಪಾಯಿಗಳ ಹೆಚ್ಚು ಆದಾಯವನ್ನು ತೋರಿಸಿದೆ. ತಂತಿ ಶಾಖೆಗೆ ೬೨ ಲಕ್ಷ ರೂಪಾಯಿಗಳ ನಷ್ಟ ಸಂಭವಿಸಿದೆ. ದೂರಶ್ರಾವಕ ಶಾಖೆಯು ೪೧ ಲಕ್ಷ ರೂಪಾಯಿಗಳ ಲಾಭವನ್ನು ಪಡೆದಿದೆ ಹೀಗೆ ಒಟ್ಟು ಹೆಚ್ಚಾದ ೩೪೭ ಲಕ್ಷ ರೂಪಾಯಿಗಳಲ್ಲಿ ೧೩೩ ಲಕ್ಷ ರೂಪಾಯಿಗಳನ್ನು ಸಾಮಾನ್ಯ ಆರ್ಥಿಕಬಾಬಿಗೆ ವರ್ಗಾಯಿಸಲಾಗುವುದು ಉಳಿದ ೧೩೩ ಲಕ್ಷ ರೂಪಾಯಿಗಳನ್ನು ಇಲಾಖೆಯ ಹೆಚ್ಚುವರಿ ಹಣಕ್ಕೆ ಸೇರಿಸಲಾಗುವುದು. ಈ ರೀತಿಯಲ್ಲಿ ಇಲಾಖೆಯ ಹೆಚ್ಚುವರಿಯಾದ ಹಣವು ೧೯೫೬ ಮಾರ್ಚ್ ತಿಂಗಳಂದು ೧,೯೯೩ ಲಕ್ಷ ರೂಪಾಯಿಗಳಷ್ಟಿತ್ತು.

೫೫—೫೬ ರಲ್ಲಿ ಇಲಾಖೆಯ

(೧೦ನೇ ಪುಟ ನೋಡಿರಿ)

ಹೊಸ 501 ಸ್ಪೆಷಲ್

ನಮ್ಮ ತಯಾರಿಕೆಗಳಲ್ಲಿ ಏನಾಗಿ ಚರಸಂಚಿತವಾದವುಗಳಲ್ಲಿ ಕೂಡ ಹೊಸ ಸುಧಾರಣೆಗಳನ್ನು ಮಾಡಲು ನಾವು ಯಾವಾಗಲೂ ಪ್ರಯತ್ನಿಸುತ್ತೇವೆ. ಈಗ ನಾವು ಒಂದು ಒಳ್ಳೆಯ ಸಾಬೂನನ್ನು ಇನ್ನೂ ಸುಧಾರಿಸಿ ತತ್ತು ಉತ್ಕೃಷ್ಟ, ಆದಾಯಕರ ಮತ್ತು ಉಪಯೋಗಕರವಾಗಿ ಮಾಡುತ್ತೇವೆ.

ಹೆಚ್ಚು ಉತ್ಕೃಷ್ಟ — ಒಗೆಯುವುದು ಸುಲಭ ಮತ್ತು ಜಾಗ್ರತೆ

ಹೆಚ್ಚು ಆದಾಯಕರ — ಪ್ರತಿತುಂಡೂ ತುಂಬ ದಿವಸ ಬಾಳಿಕೆ ಬರುತ್ತದೆ

ಹೆಚ್ಚು ಉಪಯೋಗಕರ — ನಾಜೂಕಾದ ಬಟ್ಟೆಯನ್ನು ಹಾಳಾಗದಂತೆ ಕಾಪಾಡುವುದು

501 ಸ್ಪೆಷಲ್ ಎಲ್ಲ ಮನೆಯ ಒಗೆಯುವ ಕೆಲಸಕ್ಕೂ ಉಪಯೋಗಕರವಾದ ಸಾಬೂನು

ತಾತಾ ತಯಾರಿಕೆ

ಉತ್ಕೃಷ್ಟತೆ, ಮಿತವ್ಯಯ ಮತ್ತು ಉಪಯೋಗದ ಕುರುಹು

ತಾತಾ ಆಯಿಲ್ ಮಿಲ್ಸ್ ಕಂಪೆನಿ, ಲಿಮಿಟೆಡ್

ಇಂಡಿಯದ ಬಂಡವಾಳದಿಂದ, ಇಂಡಿಯದ ಸಂಚಾಲಕತ್ವದಲ್ಲಿ, ಇಂಡಿಯಾದಲ್ಲಿಯೇ ತಯಾರಿಸಿದ್ದು

FS 9-67

ಕಾಶ್ಮೀರದಲ್ಲಿ ಜಾತ್ಯತೀತ ಸಂಸ್ಕೃತಿ—

ಕಾಶ್ಮೀರವು ಭಾರತದಲ್ಲಿಯೇ ಸೇರಬೇಕು.

ಕಾಶ್ಮೀರದಲ್ಲಿ ಜಾತ್ಯತೀತ ಸಂಸ್ಕೃತಿಯು ಹೊಸದಾಗಿ ರೂಪುಗೊಂಡುದೇನಲ್ಲ. ಅದು ಗತಕಾಲದಲ್ಲಿಯೇ ಅಲ್ಲಿ ರೂಢಮೂಲವಾದ ಸಂಸ್ಕೃತಿಯಾಗಿದೆ. ಈ ರಾಜ್ಯದ ಜನತೆಯು— ಮುಸ್ಲಿಮರು, ಹಿಂದುಗಳು, ಸಿಕ್ಖರು, ಮತ್ತು ಬೌದ್ಧರು —ಇವರ ಸಂಮಿಶ್ರ ಸಂಸ್ಕೃತಿಯು, ಅನೇಕ ಆಕ್ರಮಣಶೀಲರಾದ, ವಿಧ್ವಂಸಕರ ಕೈಯಿಂದ ನರಳಿಯೂ, ಜೀವಂತವಾಗಿ ಉಳಿದಿದೆ.

ಮೊದಲು ಕಾಶ್ಮೀರದಲ್ಲಿ ಹಿಂದೂ ಮತ ಹಾಗೂ ಬೌದ್ಧ ಮತಗಳು, ಪರಸ್ಪರ ಸಹ-ಬಾಳ್ವೆ ಮಾಡಿದುದಷ್ಟೇ ಅಲ್ಲ ಕಾಶ್ಮೀರ ಶೈವ ಪಂಥವೆಂಬ ವಿಶಿಷ್ಟವಾದ ಹೊಸ ಪಂಥವು ಹುಟ್ಟಿಕೊಂಡಿದ್ದಾಗಲೂ ಉಳಿದುಕೊಂಡು ಒಂದಿದೆ. ಮತ್ತೆ ರಾಜ್ಯವು ಮುಸ್ಲಿಮರ ವಶಕ್ಕೆ ಹೋದಾಗ, ಕಾಶ್ಮೀರದಲ್ಲಿ, ಅದರದೇ ಆದ ವಿಶಿಷ್ಟ ರೀತಿಯ 'ಸೂಫಿ' ತತ್ವ ವೃದ್ಧಿಗೊಂಡಿತು ಶೈವ ಪಂಥದ ಸಂಘಟನೆಯು ನೇರವಾದ ಫಲವಿದು

ಉಚ್ಚಮಟ್ಟದ ತತ್ವಶಾಸ್ತ್ರವನ್ನು ಬಿಟ್ಟು ಕಾಶ್ಮೀರಿಯೊಬ್ಬನ ಅನುದಿನದ ಜೀವನವನ್ನು ನಿರೂಕಿಸೋಣ. ಮುಸ್ಲಿಮನೊಬ್ಬ ಹಿಂದೂ ಗೆಳೆಯನೊಂದಿಗೆ ಅವನೆಂತೆ, ಅನೇಕ ನಂಬಿಕೆಗಳನ್ನು, ಮೂಢನಂಬಿಕೆಗಳನ್ನು ಹೊಂದಿರುವನು. ಅನೇಕ —ಹಿಂದೂ ಹಾಗೂ ಮುಸ್ಲಿಂಸಾಧು ಸಂತರು, ಎಲ್ಲಾ ಮತ ಪಂಥದವರ ಅನುಯಾಯಿಗಳೂ ಇರುವರು. ಋಷಿಗಳ ಒಂದು ಪರಂಪರೆಯೇ ಇದೆ. ಈ ಋಷಿಗಳು ಹಾಗೂ ಅವರ ಅನುಯಾಯಿಗಳು, ಎಲ್ಲಾ ಮತ ಪಂಥಗಳಿಂದಲೂ ಬಂದು ಸೇರಿದವರು.

ಕಾಶ್ಮೀರದಲ್ಲಿ ಹಲವು ಕಡೆ, ವಿವಿಧ ಮತ ಸಂಥಗಳಿಗೆ ಸೇರಿದ ದೇವಸ್ಥಾನಗಳು ಒಂದೇ ಕಡೆ ನಿರ್ಮಾಣಗೊಂಡಿರುವುದು, ಅಲ್ಲಿಯ ಜನತೆಯ ಪರಮತ ಸಹಿಷ್ಣುತೆಗೆ ನಿದರ್ಶನವೀಯುತ್ತದೆ. ಮುಸ್ಲಿಂ, ಹಿಂದು ಮತ್ತು ಸಿಕ್ಖರು ಒಟ್ಟಿಗೆ ತಮ್ಮ ದೇವಾಲಯಗಳಿಗೆ ಪ್ರಾರ್ಥನೆಗೆ ಹೋಗುತ್ತಾರೆ. ಉದಾಹರಣೆಗೆ: ಶ್ರೀನಗರದಲ್ಲಿ ಮಟರನ್ ಸಾಹೇಬರ ದರ್ಗಾ, ಹರಿಪರ್ವತ ಮತ್ತು ಛತ್ತಿಪದಷಾಹಿ, ಗುರುದ್ವಾರಗಳು ಒಂದರ ಪಕ್ಕದಲ್ಲೊಂದು ಇರುವುವು. ಜೀಲಂ ನದಿಯ ದಂಡೆಯ ಮೇಲಿರುವ ಖಾನಕಾಮೆ, ಮೇಲಾ ಮತ್ತು ಕಾಳಿಯ ದೇವಸ್ಥಾನಗಳು, ಅವು ಒಂದೇ ವಸ್ತುವಿನ ಕೆಲವು ಭಾಗಗಳು ಎಂಬ ರೀತಿಯಲ್ಲಿ ನಿರ್ಮಿಸಲಾಗಿವೆ. ಸುಣ್ಣಸ್ಥಳವಾದ ಅಮರನಾಥದ ಮೇಲ್ಛಾವಣಿಯು ಮುಸ್ಲಿಂ ಮಾಲಿಕರಿಗೆ ಸೇರಿದೆ. ಭಕ್ತರು ಅರ್ಪಿಸುವ ಪ್ರಾರ್ಥನೆಗಳಲ್ಲಿ ಅವರೂ ಪಾಲುಗೊಳ್ಳುವರು.

ಕಾಶ್ಮೀರದ ಸಾಂಸ್ಕೃತಿಕ ಸಂಮಿಲನವು ಕಾಶ್ಮೀರದ ಚಿತ್ರಕಲೆ, ಸಂಗೀತ, ನೃತ್ಯ ಮತ್ತಿತರ ಕಲಾಪ್ರಕಾರಗಳಲ್ಲಿಯೂ ಕಂಡುಬರುತ್ತಿದೆ. ವಿವಿಧ ಮತೀಯ ಹಬ್ಬ ಹುಟ್ಟಿದಿನಗಳಲ್ಲಿ ಜನರು ಅನುಸರಿಸುವ ಆಚಾರವಿಚಾರಗಳಿಂದಲೂ ಅದು ವ್ಯಕ್ತವಾಗುವುದು

ಕಲ್ಹಣ ಕವಿಯು ರಚಿಸಿರುವ 'ರಾಜತರಂಗಿಣಿ' ಎಂಬ ಕೃತಿಯಲ್ಲಿ ಪ್ರಾಚೀನ ಕಾಶ್ಮೀರದ ಇತಿಹಾಸವನ್ನು ವಿವರಿಸಲಾಗಿದೆ. ಈ ಕವಿಯು ೧೧೪೮ರಲ್ಲಿ ಈ ಕೃತಿಯ ರಚನಾಕಾರ್ಯವನ್ನು ಕೈಗೊಂಡನು ಕಲ್ಹಣನ ಸಾಹಿತ್ಯ ಸೃಷ್ಟಿಕಾರ್ಯವನ್ನು ಜೋನ ರಾಜನು ಮುಂದುವರಿಸಿದನು ಆತನು ಕಡೆಯ ಹಿಂದೂ ರಾಜವಂಶೀಕರ ಕಾಲದಲ್ಲಿನ ಕ್ಷುಬ್ಧ ದಿನಗಳ ಇತಿಹಾಸವನ್ನೂ, ಮೊದಲನೆಯ ಮಹಮದೀಯ ಅರಸರು, ೧೪೨೦ರಲ್ಲಿ ಸಿಂಹಾಸನವನ್ನೇರಿದ ಜೈನುಲ್ ಅಬಿದಿನ್ ಇವರ ಇತಿಹಾಸವನ್ನು ವಿವರಿಸಿರುವನು. ಪ್ರಖ್ಯಾತ ಸಂಸ್ಕೃತ ಪಂಡಿತನೂ, ಇತಿಹಾಸಗಾರನೂ ಆದ ಶ್ರೀವರನು ೧೪೪೭ರಲ್ಲಿ ಛತ್ತಿಷಹನು ಪಟ್ಟಕ್ಕೆ ಬಂದುದನ್ನು ವಿವರಿಸಿರುವನು. 'ರಾಜಾವಲಿ ಪತಾಕಾ" ಎಂಬ ಕೃತಿಯು, ೧೫೮೮ರ ವರೆಗಿನ ಕಾಶ್ಮೀರದ ಇತಿಹಾಸವನ್ನು ತಿಳಿಸುವುದು. ೧೫೮೮ರಲ್ಲಿ ಅಕ್ಬರನು ಕಾಶ್ಮೀರ ಕಣಿವೆಯನ್ನು ಜಯಿಸಿದನು.

ಕಾಶ್ಮೀರದಲ್ಲಿ ಪ್ರಕೃತದಲ್ಲಿ ಪ್ರಚಾರದಲ್ಲಿರುವ ದಂತ ಕಥೆಯ ಪ್ರಕಾರ, ಕಾಶ್ಮೀರ ಕಣಿವೆಯು ಭಾರಿ ಸರೋವರದ ನೀರಿನಿಂದ ಆವರಿಸಲ್ಪಟ್ಟಿತು. ಭಗವತಿ ಪಾರ್ವತಿಯು ಉತ್ತರಭಾಗದಲ್ಲಿರುವ ಹರಮುಖ ಪರ್ವತದಿಂದ ದಕ್ಷಿಣ ಭಾಗದಲ್ಲಿರುವ ಕೊನಸರ್‌ನಾಗ್ ಸರೋವರಕ್ಕೆ ನಾಕೆಯೊಂದರಲ್ಲಿ ವಿಹರಿಸುತ್ತಿದ್ದಳು. ಪಾರ್ವತಿ ದೇವಿಯು ಗೌರವಾರ್ಥವಾಗಿ ಈ ಸರೋವರವನ್ನು ಸತೀಸರವೆಂದು ಕರೆಯಲಾಗುತ್ತಿದೆ. ಆ ಸಮಯದಲ್ಲಿ ಆ ಕ್ಷೇತ್ರದ ಸುತ್ತಮುತ್ತಲು ಸ್ಥಳಗಳಲ್ಲಿ ಜಲೋದ್ಭವನೆಂಬ ದೈತ್ಯನು ಹಾವಳಿಮಾಡುತ್ತಿದ್ದನು. ಬ್ರಹ್ಮನ ಪೌತ್ರನಾದ ಕಶ್ಯಪನು ಆ ಸ್ಥಳಗಳ ರಕ್ಷಣೆಗಾಗಿ ಬಂದನು. ಕೆಲವು ಕಾಲದವರೆಗೆ ಆ ದೈತ್ಯನು ಕಶ್ಯಪನಿಂದ ಕಣ್ಮರೆಯಾಗಿದ್ದು ನೀರಿನೊಳಗೆಡೆ ಅಡಗಿದ್ದನು. ಭಗವಾನ್ ವಿಷ್ಣುವು ಬಾಂಬಾ ಮೂಲಾಕ್ಕೆ ಸಮೀಪವಿದ್ದಿರುವ ಪರ್ವತವನ್ನು ತ್ರಿಶೂಲದಿಂದ ಛೇದಿಸಿದನು ಸರೋವರದ ನೀರು ನುಗ್ಗತೊಡಗಿತು. ದೈತ್ಯನು ಈಗ ಶ್ರೀನಗರವಿರುವ ಸ್ಥಳದಲ್ಲಿ ಅಡಗಿಕೊಂಡನು. ಭಗವತಿ ಪಾರ್ವತಿಯು ದೈತ್ಯನ ಮೇಲೆ ಪರ್ವತವೊಂದನ್ನು ಎಸೆದಳು. ಈ ರೀತಿಯಾಗಿ ದೈತ್ಯನ ಸಂಹಾರವಾಯಿತು. ಈ ಪರ್ವತಕ್ಕೆ ಹರಿಪರ್ವತವೆಂದು ಹೆಸರು. ಅನಾದಿಕಾಲದಿಂದಲೂ ದೇವಿ ಪಾರ್ವತಿಯ ಪೂಜೆ ನಡೆಯುತ್ತಿದೆ. ದೈತ್ಯ ಸಂಹಾರವಾದನಂತರ ಜನರು ಬೇಸಿಗೆ ಕಾಲದಲ್ಲಿ ಕಣಿವೆ ಪ್ರದೇಶವನ್ನು ಸಂದರ್ಶಿಸತೊಡಗಿದರು. ಕ್ರಮೇಣ ಚಳಿಗಾಲದಲ್ಲಿ ಕೂಡ ಈ ಪ್ರದೇಶದಲ್ಲಿ ಇರತೊಡಗಿದರು. ಚಿಕ್ಕಪುಟ್ಟ ರಾಜ್ಯಗಳು ಉದ್ಭವಿಸಿದವು ಈ ಚಿಕ್ಕ ಪುಟ್ಟ ರಾಜ್ಯಗಳು ತಮ್ಮ ತಮ್ಮಲ್ಲಿಯೇ ಹೊಡೆದಾಡಲು ಪ್ರಾರಂಭಿಸಿದವು. ತತ್ಪರಿಣಾಮವಾಗಿ ಪ್ರಬಲನಾದ ರಾಜನೊಬ್ಬನು ಈ ರಾಜ್ಯವನ್ನು ಆಳಬೇಕಾಯಿತು.

'ರಾಜತರಂಗಿಣಿ' ಮಹಾಕಾವ್ಯದ ಪ್ರಾರಂಭದಲ್ಲಿ ಕಾಶ್ಮೀರದ ಗೌರನ ಶಾಲಿ ಅರಸನಾದ ಗೋನಂದನನ ಹೆಸರು ಉಲ್ಲೇಖಿಸಲ್ಪಟ್ಟಿದೆ, ಆತನು 'ಕೈಲಾಸದ್ವಾರ ಸ್ರಕಾತಿಗೊಂಡ ಹಾಗೂ ಗಂಗಾದ್ವಾರ ಅಲಂಕೃತಗೊಂಡ ಕ್ಷೇತ್ರದಲ್ಲಿ' ಪೂಜಿಸಲ್ಪಡುತ್ತಿದ್ದನು. ಈ ಮಹಾಕಾವ್ಯದಲ್ಲಿ ಧರ್ಮಪ್ರಾಣ ಅಶೋಕ ಹಾಗೂ 'ಅತುಲ ಐಶ್ವರ್ಯಾದಿಗಳಿಂದ ಕೂಡಿದ್ದ ೬ ಲಕ್ಷ ನಿವಾಸಿಗಳನ್ನೊಳಗೊಂಡ ಶ್ರೀನಗರ ಕೂಡ ಉಲ್ಲೇಖಿಸಲ್ಪಟ್ಟಿದೆ. ಕ್ರಿಸ್ತಶಕೆಯ ಪ್ರಾರಂಭದಲ್ಲಿ ಹುಶ್ಕ, ಜುಶ್ಕ, ಮತ್ತು ಕಾನಿಷ್ಕರೆಂಬ ಮೂವರು ಕುಶಾನ ಅರಸರು ಉತ್ತರ ಭಾರತವನ್ನು ಆಳುತ್ತಿದ್ದರು. ಇತಿಹಾಸಗಳ ಪ್ರಕಾರ, ಈ ಮೂವರು ಅರಸರ ಕಾಲದಲ್ಲಿ ಕಾಶ್ಮೀರವು ಬೌದ್ಧ ಮತದ ಪ್ರಭಾವಕ್ಕೆ ಒಳಗಾಗಿತ್ತು. ೫೦೦ ವರ್ಷಗಳ ನಂತರ ಹ್ಯೂಯನತ್ಸಾಂಗನು ಕಾಶ್ಮೀರಕ್ಕೆ ಭೇಟಿಯಿತ್ತಾಗ, ಅಧಿಕಾಂಶ ಜನರು ಪ ನಿಷ ಹಿಂದೂ ಮತಾವಲಂಬಿಗಳಾಗಿದ್ದುದನ್ನು ಕಂಡನು. ಕಾಶ್ಮೀರಿ ಜನರು ಅನಾದಿಕಾಲದಿಂದಲೂ ಶೈವ ಧರ್ಮವನ್ನು ಅವಲಂಬಿಸಿರುವರು

ಆರನೆಯ ಶತಮಾನದಲ್ಲಿ ಇಮ್ಮಡಿ ಪ್ರವರ ಸೇನನು ಕಾಶ್ಮೀರವನ್ನು ಆಳುತ್ತಿದ್ದನು ಆವನು ಅನೇಕ ರಾಜ್ಯಗಳ ಮೇಲೆ ದಂಡೆತ್ತಿ ಹೋಗಿ ಜಯಶಾಲಿಯಾಗಿ ಸ್ವದೇಶಕ್ಕೆ ಆಗಮಿಸಿ, ಕಾಶ್ಮೀರದ ಈಗಿನ ರಾಜಧಾನಿ ಇರುವ ಸ್ಥಳದಲ್ಲಿ ಭವ್ಯವಾದ ನಗರವೊಂದನ್ನು ನಿರ್ಮಿಸಿದನು. ಈ ನಗರವು ಪ್ರವರಪುರವೆಂದು ಪ್ರಸಿದ್ಧವಾಗಿತ್ತು. ಹ್ಯೂಯನತ್ಸಾಂಗನು ಕ್ರಿ. ಶ. ೬೩೧ರಲ್ಲಿ ಇಲ್ಲಿಗೆ ಭೇಟಿಯಿತ್ತಿದ್ದನ್ನು ಪ್ರಸ್ತಾಪಿಸಿದ್ದಾನೆ. ಕಾಶ್ಮೀರವನ್ನು ಆಳಿದ ಅರಸರಲ್ಲಿ ಲಲಿತಾದಿತ್ಯನು ಖ್ಯಾತಿಗಳಿಸಿದನು. ಇವನು ಎಂಟನೆಯ ಶತಮಾನದಲ್ಲಿ ಈ ರಾಜ್ಯವನ್ನು ಆಳುತ್ತಿದ್ದನು. ಲಲಿತಾದಿತ್ಯನು ಉತ್ತರ ಭಾರತ ಮತ್ತು ಮಧ್ಯ ಏಷಿಯಾಗಳಲ್ಲಿ ದಂಡ ಯಾತ್ರೆಯನ್ನು ಕೈಗೊಂಡು ಹಲವಾರು ರಾಜರನ್ನು ಪರಾಜಿತಗೊಳಿಸಿದನು. ೧೨ ವರ್ಷಗಳ ಕಾಲ ಜೈತ್ರಯಾತ್ರೆ ನಡೆಸಿ ಅಟ್ಟಹಾಸದಿಂದ ರಾಜ್ಯವನ್ನು ಪ್ರವೇಶಿಸಿ, ಪರಾಸಪುರ (ಸರಿಹಾಸಪುರ)ನೆಂಬ ಭವ್ಯ ನಗರವನ್ನು ನಿರ್ಮಿಸಿದನು ಲಲಿತಾದಿತ್ಯನು ಮಾರ್ತಾಂಡ ದೇವಾಲಯವನ್ನು ಕೂಡ ನಿರ್ಮಿಸಿದನು. ಮಧ್ಯ ಏಷಿಯಾದಲ್ಲಿ ಯುದ್ಧ ನಡೆಯುತ್ತಿದ್ದಾಗ ತನ್ನ ಅಸುವನ್ನು ನೀಗಿದನು.

ಶಂಕರ ವರ್ಮ (೮೮೭-೯೦೨)ನೊಬ್ಬ ವೀರಾಗ್ರಣಿ. ಕಾಶ್ಮೀರದ ಜನಸಂಖ್ಯೆ ಕಡಿಮೆಯಾಗಿದ್ದ ಸಮಯದಲ್ಲಿ ಕೂಡ ಅವನು ಭಾರಿ ಸೇನೆಯೊಂದನ್ನು ಹೊಂದಿದ್ದನು

ಹಿಂದೂ ಅರಸರಲ್ಲಿ ಅವನ ತಿಕಪ್ರಾರಂಭವಾಯಿತು. ಇವರಲ್ಲಿ ರಾಣಿ ದಿದ್ದಾ (೯೮೦—೧೦೦೦) ಅತ್ಯಂತ ಶಕ್ತಿಶಾಲಿಯಾದವಳು ಅನಂತರ ಲೋಹಾರ ವಂಶದವರ ಆಳಿಕೆ ಪ್ರಾರಂಭವಾಯಿತು. ದೇಶದಲ್ಲಿ ಅಂತಃಕಲಹವಾರಂಭಿಸಿತು. ದಮರರು ಕಾಶ್ಮೀರದ ಕಣಿವೆಗೆ ಉಪದ್ರವವನ್ನುಂಟುಮಾಡುತ್ತಿದ್ದರು. ಲೋಹಾರ ವಂಶದವರಲ್ಲಿ ಕೊನೆಯ ಅರಸೆಂದರೆ ಸಂಗ್ರಾಮದೇವ (೧೧೮೮) ಇವನ ಆಳ್ವಿಕೆಯಲ್ಲಿ ತಾತಾರರು ಕಾಶ್ಮೀರದ ಮೇಲೆ ಆಕ್ರಮಣ ನಡೆಸಿ ಕಗೊಲೆ ನಡೆಸಿದರು. ಅಷ್ಟೇ ಅಲ್ಲದೆ ಶ್ರೀನಗರಕ್ಕೆ ಬೆಂಕಿ ಇಟ್ಟರು. ಸಿಂಹ ದೇವನು ಕಾಶ್ಮೀರದಿಂದ ಹಿಮ್ಮೆಟ್ಟುತ್ತಿದ್ದ ಸಮಯದಲ್ಲಿ ವಂಜನಲ್ಲಿ ಸಿಕ್ಕಿ ಹತನಾದನು ಕಾಶ್ಮೀರ ಸೇನೆಯು ಮಹಾದಂಡನಾಯಕನ ರಾಮಚಂದನು ಕಣಿವೆಯ ಪರಿಸ್ಥಿತಿಯನ್ನು ಹತೋಟಿಗೆ ತಂದಿತ್ತಲ್ಲದೆ ಕೆಶ್ವವಾರ್‌ನಿಂದ ಗದ್ದಿಗಳನ್ನು ಹೊಡೆದಟ್ಟಿದನು. ರಾಮಚಂದನ ಜೊತೆ ಟಿಬೆಟ್ಟಿನ ರೈನ್ ಚಾನ್‌ಶಾಹ ಮತ್ತು ಸ್ವಾತ್‌ನ ಶಹಮಿರ್ ಎಂಬ ಇಬ್ಬರು ಯೋಧರಿದ್ದರು.

ರೈನ್ ಚಾನ್‌ಶಾಹ ರಾಮಚಂದನೊಡಿಗೆ ಜಗಳವಾಡಿ ಅವನನ್ನು ಕೊಂದನು ಅವನು ರಾಮಚಂದನ ಪುತ್ರಿಯಾದ ಕೋಟಾ ರಾಣಿಯನ್ನು ವಿವಾಹವಾದನು. ಇಸ್ಲಾಂ ಧರ್ಮಾನುಯಾಯಿಯಾಗಿ ಕಾಶ್ಮೀರದ ಪ್ರಥಮ ಮಹಮ್ಮದೀಯ ಅರಸನಾದನು. ಎರಡೂವರೆ ವರ್ಷಗಳವರೆಗೆ ಮಾತ್ರ ರಾಜ್ಯವಾಳಿದನು. ಕೆಶ್ವಾರ್‌ನಿಂದ ಓಡಿಬಂದಿದ್ದ ರಾಜಾಸಿಂಹ ಬೇವನ ಸಹೋದರನಾದ ಉದಯಾನ ದೇವನು ಕೋಟಾ ರಾಣಿಯನ್ನು ವಿವಾಹವಾಗಿ ಹದಿನೈದು ವರ್ಷಗಳ ವರೆಗೆ ರಾಜ್ಯವಾಳಿದನು. ಅವನ ಮರಣಾನಂತರ ಕೋಟಾ

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ನೆಂಕಟ್ರಾವ್, ಎಲ್. ಐ.ಎಮ್.

ಮಕ್ಕಳು, ಹೆಂಗಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಣಿಯೇ ಕೆಲಕಾಲ ಅಧಿಕಾರ ಸೂತ್ರಗಳನ್ನು ವಹಿಸಿದ್ದಳು. ಶಾಹಮೀರನು ಅವಳನ್ನು ಪದವಿಚ್ಯುತಳನ್ನಾಗಿ ಮಾಡಿ ತಾನೇ ಸಿಂಹಾಸನವನ್ನೇರಿದನು. ಅವನು ಸುಲತಾನ್ ಇ— ಕಾಶ್ಮೀರ್ ಎಂಬ ವಂಶದ ಮೂಲಪುರುಷನು. ಅವನು ಶಂಸುದ್ದೀನ್ ಎಂಬ ಹೆಸರನ್ನಿಟ್ಟುಕೊಂಡನು.

೧೪೦೧ರಲ್ಲಿ ಜೈನುಲ್ ಅಬಿದಿನ್ ಸಿಂಹಾಸನವನ್ನೇರಿದನು ಅವನು ಬುದ್ಧಿವಂತನೂ, ಸದ್ಗುಣಿಯೂ, ಸಹಿಷ್ಣುತೆಯ ಪ್ರಕೃತಿಯುಳ್ಳವನೂ ಆಗಿದ್ದನು ಹಿಂದೂಗಳ ಮೇಲೆ ವಿಧಿಸಿದ್ದ ಜಜಿಯಾ ಕಂದಾಯವನ್ನು ತೆಗೆದುಹಾಕಿದನು. ಬ್ರಾಹ್ಮಣರು ಪರ್ಷಿಯನ್ ಭಾಷೆಯನ್ನು ಕಲಿತುಕೊಳ್ಳುವ ಬಗ್ಗೆ ಪ್ರೋತ್ಸಾಹಿಸಿದನು. ಕೆಲವು ಹಿಂದೂ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದನು. ಇವನ ಆಳ್ವಿಕೆಯ ಕೊನೆಗಾಲದಲ್ಲಿ ಚಾಕರು ವ್ಯಾಮುಖ್ಯಕ್ಕೆ ಬಂದರು. ಜೈನುಲ್ ಅಬಿದಿನ್ ಅವರನ್ನು ಕೊಡೆದೋಡಿಸಿದನು. ಅವನ ಉತ್ತರಾಧಿಕಾರಿಗಳು ದುರ್ಬಲರಾಗಿದ್ದುದರಿಂದ ಚಾಕರು ಹುನ್ನಾ ಧಾಳಿ ನಡೆಸಿ ಕಾಶ್ಮೀರ ಸರಕಾರವನ್ನು ವಶಪಡಿಸಿಕೊಂಡರು ಈ ರಾಜವಂಶದಲ್ಲಿ ಕೊನೆಯವನಾದ ಯಾಕೂಬ್ ಶಾಹನು ಅಕ್ಬರನನ್ನು ಪ್ರತಿಭಟಿಸಿದನು. ೧೫೮೨ರಲ್ಲಿ ಮೊಗಲಾಯರು ಕಾಶ್ಮೀರದ ಮೇಲೆ ಧಾಳಿ ನಡೆಸಲು ಯತ್ನಿಸಿದಾಗ ಯಾಕೂಬ್ ಶಾಹನು ಅವರನ್ನು ಹಿಮ್ಮೆಟ್ಟಿದನು. ೧೫೮೭ರಲ್ಲಿ ಕಾಶ್ಮೀರವು ಮೊಗಲಾಯರ ವಶವಾಯಿತು.

ಅಕ್ಬರನು ಮೂರು ಬಾರಿ ಈ ಕಣಿವೆಗೆ ಭೇಟಿಯಿತ್ತನು. ಹರಿಪರ್ವತದ ಇಳಿಜಾರು ಪ್ರದೇಶದಲ್ಲಿ ಬಲವಾದ ಕೋಟೆಯೊಂದನ್ನು ನಿರ್ಮಿಸಿದನು. ಅಕ್ಬರನ ಕಂದಾಯ ಮಂತ್ರಿಯಾದ ತೋಡರಮಲ್ ಕಾಶ್ಮೀರ ಕಣಿವೆಯ ಹಣಕಾಸಿನ ಪರಿಸ್ಥಿತಿಯನ್ನು ಕುರಿತು ಸಂಕ್ಷಿಪ್ತವಾಗಿ ವರದಿ ಮಾಡಿರುವನು. ಜಹಾಂಗೀರ್‌ಗೆ ಕಾಶ್ಮೀರವೆಂದರೆ ಅಚ್ಚುಮೆಚ್ಚು. ಅವನು ಸುಂದರವಾದ ಉದ್ಯಾನವನಗಳನ್ನು ನಿರ್ಮಿಸಿದನು ಮೊಗಲ ರಾಜ್ಯಪಾಲರಲ್ಲಿ ಅತ್ಯುತ್ತಮನೆಂದು ಪರಿಗಣಿಸಲ್ಪಟ್ಟ ಅಲಿ ಮರ್ದನಖಾನ್ ಎಂಬಾತನು ವೀರ ಪಂಜಾಬ್ ಮಾರ್ಗದ ಉದ್ದಕ್ಕೂ ಧರ್ಮಛತ್ರಗಳನ್ನು (ಸರಾಯ್) ಕಟ್ಟಿಸಿದನು. ರಾಜ್ಯಕ್ಕೆ ಬಂದೊದಗಿದ್ದ ಕ್ಷಾಮವನ್ನು ಯಶಸ್ವಿಯಾಗಿ ನಿವಾರಿಸಿದನು. ಔರಂಗಜೇಬನು ಒಂದು ಬಾರಿ ಕಾಶ್ಮೀರಕ್ಕೆ ಭೇಟಿಯಿತ್ತಿದ್ದನು. ಅವನ ನಂತರ ಮೊಗಲಾಯರ ಪ್ರಾಬಲ್ಯವು ಕುಗ್ಗಿ ೧೭೫೧ರ ವೇಳೆಗೆ ಕಾಶ್ಮೀರವು ದೆಹಲಿ ಕೇಂದ್ರದಿಂದ ಸ್ವತಂತ್ರವಾಗಿತ್ತು.

ಅನಂತರ ಕಾಶ್ಮೀರಿ ಜನರು ಕೊಂಚ ಕಾಲ ಆಸ್ಥಾನದ ಆಳಿಕೆಗೆ ಒಳಗಾದರು. ೧೮೧೪ರಲ್ಲಿ ಸಿಕ್ಖರ ಸೇನೆಯೊಂದು ಪೀರ್ ಪಂಜಾಬ್ ಮಾರ್ಗವಾಗಿ ನುಗ್ಗಿತು. ರಣಜಿತ ಸಿಂಗನು ಪೂಂಚ್‌ನಿಂದ ಈ ಯುದ್ಧ ಕಾರ್ಯಾಚರಣೆಗಳನ್ನು ವೀಕ್ಷಿಸುತ್ತಿದ್ದನು. ಈ ದಂಡಯಾತ್ರೆಯು ವಿಫಲಗೊಂಡಿತು ೧೮೧೯ರಲ್ಲಿ ರಣಜಿತ ಸಿಂಗನ ಸೇನಾದಂಡನಾಯಕನಾಗಿದ್ದ ಮಿಸ್ರ ದಿವಾನ್ ಚಂದನು ಜಮ್ಮುವಿನ ಗುಲಾಂ ಸಿಂಹನೊಡಗೂಡಿ ಮಹಮ್ಮದ್ ಅಜೀಂ ಖಾನನನ್ನು ಸೋಲಿಸಿ ಶೋಪ್ಯಾನ್‌ವನ್ನೂ ಪ್ರವೇಶಿಸಿದನು.

ರಣಜಿತ ಸಿಂಗನ ಪುತ್ರನಾದ ಷೇರ್ ಸಿಂಗ್ ದರ್ಬಲನಾದ ರಾಜ್ಯಪಾಲ. ಸಿಖ್ ರಾಜ್ಯಪಾಲರಲ್ಲಿ ಅತ್ಯುತ್ತಮನಾದ ಕರ್ನಲ್ ಮಿಯಾನ್ ಸಿಂಗ್ (೧೮೩೩)ನನ್ನು ಇನ್ನೂ ಜನರು ಕೃತಜ್ಞತಾಪೂರ್ವಕವಾಗಿ ನೆನೆಸಿಕೊಳ್ಳುವರು. ಅವನು ಕ್ಷಾಮವ ದ ಹೆಸರಿಲ್ಲದಂತೆ ಮಾಡಿದನು. ದಂಗೆಯೆದ್ದ ಅವನ ಸೈನಿಕರು ಅವನನ್ನು ಕೊಲೆಮಾಡಿದರು. ಅವನ ನಂತರ ೧೮೪೭ರಲ್ಲಿ ಷೇರ್ ಗುಲಾಂ ಮೋಹಿಯುದ್ದೀನ್ ಬಂದನು. ೧೮೪೭ರಲ್ಲಿ ಇಮಾಮುದ್ದೀನ್ ರಾಜ್ಯಪಾಲನಾದನು.

ಈ ರಾಜ್ಯದ ಇತಿಹಾಸವು ಇನ್ನು ಮುಂದೆ ಜಮ್ಮು ಮತ್ತು ಅದರ ನಾಯಕ ಗುಲಾಬ್‌ಸಿಂಗನ ಇತಿಹಾಸವಾಗುತ್ತದೆ. ಭಾರತದ ರಾಜ್ಯವಾರ್ಗಗಳಿಂದ, ಪಂಜಾಬಿನ ಫಲವತ್ತಾದ ವೈದಾನದಿಂದ ದೂರದಾಗಿರುವ ಡೋಗ್ರಾ ಪರ್ವತವು ಭಾರತದಲ್ಲಿನ ಮುಸ್ಲಿಂ ಆಕ್ರಮಣಕಾರರ ಗಮನವನ್ನು ಸೆಳೆಯಲಿಲ್ಲ ಈ ಪ್ರದೇಶದಲ್ಲಿ ಹಲವು ಸಣ್ಣ ಪುಟ್ಟ ರಾಜರು ವಾಸಿಸುತ್ತಿದ್ದರು. ಮೊದಲಿನಿಂದಲೂ ಜಮ್ಮು ರಾಜ್ಯವು ವ್ಯಾಮುಖ್ಯವನ್ನು ಸಡೆದಿತ್ತು. ೧೮೮೮ನೆಯ ಶತಮಾನದ ಕೊನೆಯಲ್ಲಿ ಜಮ್ಮು ರಾಜನ ಅಧಿಕಾರವು ರಾವಿಯ ಪೂರ್ವ ಭಾಗದವರೆವಿಗೂ, ಪಶ್ಚಿಮಕ್ಕೆ ಚೀನಾಬ್‌ವರೆವಿಗೂ ವಿಸ್ತರಿಸಿತು. ಆದರೆ, ಈ ಅಧಿಕಾರವು ಸಣ್ಣ ಪುಟ್ಟ ಕದನಗಳಿಗನುಸಾರವಾಗಿ ಹೆಚ್ಚತ್ತಾ ಅಥವಾ ಕ್ಷೀಣಿಸುತ್ತ ಇದ್ದಿತು ಬಸ್ಕೊಲಿ ಮತ್ತು ಕಿಷ್ಟ್ವಾರ್‌ನ ಪೂರ್ವಕ್ಕೆ ಸ್ವತಂತ್ರ ರಜಪೂತ ನಾಯಕರಿದ್ದರು. ವಾಯುವ್ಯದಲ್ಲಿ ಬಂಬಾರ್ ಮತ್ತು ರಜೋರಿಯಲ್ಲಿ ಮಹಮ್ಮದ್ದೀಯ ರಾಜರಿದ್ದರು. ಅವರು ಹಿಂದೂ ರಜಪೂತ ವಂಶದಿಂದ ಬಂದವರು. ಜೀಲಂ ಕಣಿವೆಯವರೆಗಿನ ಪ್ರದೇಶವು, ಸ್ವತಂತ್ರ ಮಹಮ್ಮದ್ದೀಯ ನಾಯಕನ ವಶದಲ್ಲಿದ್ದಿತು. ಅವರ ಹೆಸರಿನಲ್ಲಿರುವ ರಾಜಾ ಬಿರುದು, ಅವರು ಮೂಲತಃ ಹಿಂದೂ ವಂಶೀಯರೆಂಬುದನ್ನು ವ್ಯಕ್ತಪಡಿಸುತ್ತದೆ.

೧೮೮೮ನೆಯ ಶತಮಾನದ ಮಧ್ಯಭಾಗದ ಸುಮಾರಿನಲ್ಲಿ ರಾಜಾ ರಣಜಿತ್ ದೇವ್ ರವರು, ಜಮ್ಮುವಿನ ರಾಜರಾಗಿದ್ದರು. ಅವನು ಶೂರ, ಅವನ ರಾಜ್ಯವು ಉಚ್ಚಾಯಸ್ಥಿತಿಯಲ್ಲಿತ್ತು. ಆದರೆ ೧೮೯೦ರಲ್ಲಿ ಅವನು ಮರಣಕ್ಕೀಡಾದ ಮೇಲೆ, ಅವನ ಮೂವರು ಮಕ್ಕಳು ಅಧಿಕಾರಕ್ಕಾಗಿ ಕಾದಾಡಿದರು. ಸಿಖ್ಖರು ಪ್ರಜೋದನಗೊಂಡರು. ಜಮ್ಮು ಲೂಟಿಗೊಳಗಾಯಿತು. ರಣಜಿತ ದೇವನ ಮರಣಾನಂತರ ೧೮೪೬ರವರೆಗೆ ಡೋಗ್ರಾ ದೇಶವು ಸಿಖ್ಖರ ಅಧೀನ ರಾಜ್ಯವಾಯಿತು. ಗುಲಾಬ್ ಸಿಂಗ್, ಧ್ಯಾನ್ ಸಿಂಗ್, ಮತ್ತು ಸುಚೇತ್ ಸಿಂಗ್ ರವರು ರಣಜಿತ್ ದೇವ್‌ನ ಕಿರಿಯ ತಮ್ಮನಾದ ಸುರತ್ ಸಿಂಗನ ಮಕ್ಕಳು. ಅವರು ಲಾಹೋರಿನ ರಣಜಿತ್ ಸಿಂಗ್‌ನ ಆಸ್ಥಾನದಲ್ಲಿ ಸೇವೆಗೆ ನಿಂತರು. ಅವರು ಕ್ಷಿಪ್ರದಲ್ಲಿಯೇ ತಮ್ಮ ಶೌರ್ಯದಿಂದ, ಬೆಳಕಿಗೆ ಬಂದರು. ಗುಲಾಬ್ ಸಿಂಗನು, ಗಜಾರಿ ರಾಜನನ್ನು ಗೆದ್ದು ೧೮೮೦ರಲ್ಲಿ ಜಮ್ಮುವಿನ ರಾಜನಾದ ಧ್ಯಾನ್‌ಸಿಂಗ್ ಪಂಜ್‌ನ ಮುಖ್ಯಾಧಿಕಾರಿಯಾದ. ಸುಚೇತ್ ಸಿಂಗನಿಗೆ ರಾಮನಗರ ದೊರೆಯಿತು.

ಗುಲಾಬ್ ಸಿಂಗ್ ಮತ್ತು ಅವನ ಇಬ್ಬರು ಸಹೋದರರು ತಮ್ಮ ಪರಾಕ್ರಮದಿಂದ ಸಮಾರು ಇಡೀ ಕಾಶ್ಮೀರವನ್ನೇ ಸ್ವಾಧೀನಪಡಿಸಿಕೊಂಡರು. ರಜಾರಿಯನ್ನಳಿದ ಪಂಜಾಬು ಅವರ ವಶವಾಯಿತು. ಭದಂತ್ರಾ ಅವರ ಕೈಗೆ ಸುಲಭವಾಗಿ ಸಿಕ್ಕಿತು. ಕಿಸ್ತ್ವಾರ್‌ನಲ್ಲಿ ರಾಜ ಶರಣಾಗತನಾದನು.

ಕಿಸ್ತ್ವಾರ್ ಸುಲಭವಾಗಿ ವಶವಾದುದರಿಂದ ಗುಲಾಬ್ ಸಿಂಗನು ಪರಾಕ್ರಮಶಾಲಿಯಾದ ತನ್ನ ಸೇನಾಧಿಕಾರಿಯ ಸಹಾಯದಿಂದ ದುರ್ಗಮ ಪ್ರದೇಶದ ಲಡಕ್‌ನ್ನು ಸಹ ಗೆದ್ದನು.

ಕೆಲವು ವರ್ಷಗಳ ನಂತರ ೧೮೪೦ರಲ್ಲಿ ಜೋರಾವರ್ ಸಿಂಗನು ಲಡಖಾಗಳ ಪಕ್ಷ ವಹಿಸಿದ್ದ, ಬಲ್ತಿಸ್ಥಾನ್‌ಗೆ ಅಕ್ರಮಿಸಿ, ಸ್ಕರ್ದು ರಾಜನನ್ನು ಗೆದ್ದು, ಆ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಅದರ ಮುಂದಿನ ವರ್ಷ ಜೋರಾವರ್ ಸಿಂಗ್ ಟಿಬೆಟ್ಟನ್ನು ಆಕ್ರಮಿಸಲು ಹೊರಟು ಚಳಿಗೆ ಗಾಳಿಗೆ ಸಿಕ್ಕಿ ಸೇನೆಯೊಡನೆ ಹತನಾದನು.

ಕಾಶ್ಮೀರದ ಆಕ್ರಮಣ

೧೮೪೮ರ ಚಳಿಗಾಲದಲ್ಲಿ ಬ್ರಿಟಿಷರಿಗೂ ಸಿಖ್ಖರಿಗೂ ಯುದ್ಧವಾಯಿತು. ಬ್ರಿಟಿಷ್ ಸೊಬ್ರೋನ್ ಯುದ್ಧದ ವರೆಗೂ ಗುಲಾಬ್ ಸಿಂಗನು ತಟಸ್ಥನಾಗಿಯೇ ಇದ್ದನು, ಸರ್ ಹೆನ್ರಿಲಾರೆನ್ಸ್‌ಗೆ ಅವನು ನಂಬಿಗಸ್ಥ ಸಲಹಾಧಿಕಾರಿಯಾಗಿಯೂ, ಮಧ್ಯವರ್ತಿಯಾಗಿಯೂಇದ್ದ. ಆಗ ಎರಡು ಒಪ್ಪಂದಗಳಾಯಿತು. ಮೊದಲನೆಯದು ಲಾಹೋರನ್ನು ಬ್ರಿಟಿಷರಿಗೆ ವಹಿಸಿಕೊಡುವುದಕ್ಕೂ, ಎರಡನೆಯದು ಸಿಂಧೂ ಮತ್ತು ರಾವಿ ನದಿಯ ಪೂರ್ವದ ಎಲ್ಲಾ ಪರ್ವತ ಪ್ರದೇಶವನ್ನು ಕೊಡುವುದಕ್ಕೂ ಸಂಬಂಧಪಟ್ಟಿತ್ತು. ಅಸ್ಟರ್ ಮತ್ತು ಗಿಲ್ಗಿಟ್ ಡೋಗ್ರಾ ಸೈನಿಕರು ಗುಲಾಬ್ ಸಿಂಗ್‌ನ ಸೇನೆಯಲ್ಲಿದ್ದ ಸಿಖ್ಖರನ್ನು, ಸಿಖ್ ಸೇನಾನಿಯಾದ ನಾಥಾಖಾನನ್ನು ಬಿಡುಗಡೆ ಮಾಡಿದರು. ೧೮೫೭ರಲ್ಲಿ ಗುಲಾಬ್ ಸಿಂಗ್ ಮೃತನಾದ. ೧೮೬೦ರಲ್ಲಿ ಅವನ ಉತ್ತರಾಧಿಕಾರಿ, ರಣಭೀರ್ ಸಿಂಗನು ಸುವ್ಯವಸ್ಥಿತ ಸೇನೆಯನ್ನು ರಚಿಸಿ, ಗಿಲ್ಗಿಟ್ಟನ ದಂಗೆಕೋರರ ಮುಖಂಡ ಮತ್ತು ಅಕ್ಕಪಕ್ಕದ ಪ್ರದೇಶಗಳನ್ನು ಗೆದ್ದು, ಗಡಿಗಳಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿದನು, ೧೮೮೫ರಲ್ಲಿ ಅವನು ಮೃತನಾದನು. ಅವನ ಮಗನಾದ ಮಹಾರಾಜ ಪ್ರತಾಪ ಸಿಂಗನು ಅಧಿಕಾರಕ್ಕೆ ಬಂದನು. ೧೯೫೧ರಲ್ಲಿ ಅವನ ಸಹೋದರನ ಮಗ ಮಹಾರಾಜ ಹರಿಸಿಂಗನು ಅಧಿಕಾರಕ್ಕೆ ಬಂದನು

೧೯೪೭ರಲ್ಲಿ ಕಾಶ್ಮೀರವು ಭಾರತದಂತೆಯೇ ಪ್ರಜಾಸತ್ತಾತ್ಮಕ ಆಡಳಿತವನ್ನು ಬೇಡಿತು. ಆ ರಾಜ್ಯದಲ್ಲಿದ್ದ ಸಂಮಿಶ್ರ ಸಾಂಸ್ಕೃತಿಕ ಫಲವಾಗಿ, ಈ ಚಳುವಳಿಯು ಯೋಗ್ಯ ಮಾರ್ಗಗಳಲ್ಲಿ ಮುಂದುವರಿಯಿತು.

೧೯೪೭ರ ಅಕ್ಟೋಬರ್‌ನಲ್ಲಿ ಕಾಶ್ಮೀರವು ಭಾರತಕ್ಕೆ ಸೇರಿಕೊಂಡಿತು. ಅಲ್ಲಿಂದೀಚೆಗೆ ಈ ರಾಜ್ಯವು ಶಿಕ್ಷಣ, ಆರೋಗ್ಯ ಮತ್ತು ಜನತೆಯ ಆರ್ಥಿಕ ವ್ಯವಸ್ಥೆಯಲ್ಲಿ ಸರ್ವತೋಮುಖ ಪ್ರಗತಿಯನ್ನು ಸಾಧಿಸಿದೆ.

ಸಾವಿರಾರು ಜನರು
ಅನುಸರಿಸುತ್ತಿರುವ
ಸುಲಭ ಠೇವಣಾತಿ ವಿಧಾನ

ದಿನಕ್ಕೆ
4 ಆಣೆ
25 ನ. ಪೈ
7 ವರುಷಗಳಲ್ಲಿ
ರೂ. 700

ಸ್ಕೀಮ್

- ಚಿಕ್ಕ ಗಾತ್ರದ ಅಪ್ಪಿಕೆಯ ಸ್ಕೀಮಿನಲ್ಲಿ ಒಂದೊಡ್ಡ ಕಾಣಿಕೆಯನ್ನು ಸಂಪಾದಿಸಬಲ್ಲರು.
- ದಿನಕ್ಕೆ ೩೮ ನ. ಪೈಸೇಗಳಂತೆ ಪುಡಿ ಕಾಸುಗಳೊಟ್ಟಾಗಿ ಬೇಂಕಿನಲ್ಲಿ ಸಂಗ್ರಹವಾಗುವ ನಿಧಿಯು ಭವಿಷ್ಯದ ಸಂಕಷ್ಟಗಳನ್ನು ಪಾರು ಮಾಡಬಲ್ಲದು.

ಸಿಂಡಿಕೇಟಿನ 96 ಶಾಖೆಗಳ ಯಾವುದೇ ಉದ್ಯೋಗಸ್ಥನೊಡನೆ ವಿಚಾರಿಸಿರಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್
ಲಿಮಿಟೆಡ್ ಉಡುಪಿ

The Canara Industrial & Banking
Syndicate Ltd. Udipi

ಚಂದಾದಾರರಲ್ಲಿ ವಿನಂತಿ

'ನವಯುಗ'ದ 36ನೇ ಸಂಪುಟವು ಕಳೆದ ಆಗೋಸ್ತು ತಿಂಗಳಲ್ಲಿ ಅಂತ್ಯವಾಗಿ ಇದೇ ಸಪ್ಟಂಬರದಿಂದ 37ನೇ ವರ್ಷಾರಂಭವಾಗಿದೆ. ಈ ಅವಧಿಗೆ ಯಾರ ಯಾರ ಚಂದಾ ಅವಧಿ ಮುಗಿಯುತ್ತದೋ, ಮತ್ತು ಯಾವ ಚಂದಾದಾರರ ಚಂದಾ ಬಾಕಿ ಉಳಿದಿರುವುದೋ ಅವರೆಲ್ಲರೂ ದಯಮಾಡಿ ಚಂದಾಹಣವನ್ನು ಆದಷ್ಟು ಬೇಗನೆ ಮನಿಯಾರ್ಡರು ಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ. ಇಲ್ಲವೆ ಯಾವದೊಂದೂ ಖರ್ಚಿಯಿಲ್ಲದೆ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮಾಮಾಡಬಹುದು.

ವಿ. ಪಿ. ಮಾಡಿದರೆ ವಿಶೇಷ ವೆಚ್ಚ ಬೀಳುವುದರಿಂದ ಸರ್ವರೂ ನಮ್ಮ ವಿನಂತಿಯನ್ನು ಮನ್ನಿಸಿ ಸಹಕರಿಸಬೇಕಾಗಿ ವಿನಂತಿ.

ಉಡುಪಿ. ಮೆನೇಜರ್,
ನವಯುಗ.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೦-೧೦-'೫೭	೩

ಮೈಸೂರು – ಹಳತೊ, ಹೊಸತೊ?

ರಾಜ್ಯಗಳ ಪುನರ್ವಿಂಗಡಣೆಯು ನಡೆದು ಒಂದು ವರ್ಷವಾಗುತ್ತಾ ಬಂತು. ಆದಾಗ್ಯೂ ಹೊಸ ರಾಜ್ಯವಾದ ಮೈಸೂರಿನಲ್ಲಿ ಸರಕಾರಿ ವ್ಯವಹಾರಗಳು ಯಾವ ರೀತಿಯಲ್ಲಿ ನಡೆಯಬೇಕೊ ಹಾಗೆ ನಡೆಯುವುದಿಲ್ಲ. ಮೈಸೂರು ಎಂಬ ಹೆಸರನ್ನು ಹೊಸ ರಾಜ್ಯಕ್ಕೆ ಇರಿಸಿಕೊಂಡದ್ದೇ ತಪ್ಪೆನ್ನುವಷ್ಟರ ಮಟ್ಟಿನ ಭಾವನೆ ಉಂಟಾಗುವಂತೆ ಮೈಸೂರಿನ ಅಧಿಕಾರಿ ವರ್ಗ ಕೆಲಸ ಮಾಡುತ್ತಿದೆ. ಇದು ಹೊಸ ರಾಜ್ಯದ ಪ್ರಜೆಗಳಿಗಷ್ಟೇ ಬೇಸರ ಬರಿಸುವ ಮಾತಾಗಿಲ್ಲ– ಸರಕಾರಿ ಆಡಳಿತದ ಧೋರಣೆ ಮತ್ತು ದಕ್ಷತೆಯು ಸಂಶಯಾಸ್ಪದವೆನಿಸುವಂತೆ ಮಾಡುವ ವಿಷಯವೂ ಹೌದು. ರಾಜ್ಯದ ಸರಕಾರಿ ಅಧಿಕಾರಿಗಳಲ್ಲಿ ಒಂದು ಗುಂಪಿನವರು ಹಳೆಯ ಮೈಸೂರು ರಾಜ್ಯದೊಂದಿಗೆ ಇತರೆಡೆಯ ಕನ್ನಡ ಪ್ರದೇಶಗಳು ವಿಲೀನಹೊಂದಿವೆ ಎಂಬ ಗ್ರಹಿಕೆಯನ್ನು ಇಟ್ಟುಕೊಂಡಿರುವಂತೆ ಕಾಣುತ್ತದೆ— ವಿಧಾನಸಭೆ ಮತ್ತು ಹರಿಪತ್ತುಗಳ ಸದಸ್ಯರಲ್ಲಿಯೂ ಕೆಲವರು ಈ ಮಾತಿಗೆ ಅಪವಾದವಲ್ಲ ಎಂದರೆ ಸಹ ತಪ್ಪಾಗಲಾರದು. ಇವರಿಗೆ ಹಳೆಯ ಮೈಸೂರಿನೊಡನೆ ಯಾವದೇ ಕನ್ನಡ ಪ್ರದೇಶ ಸೇರ್ಪಡೆ ಹೊಂದಿದ್ದಿಲ್ಲ—ಹಿಂದಿನ ಐದು ರಾಜ್ಯಗಳಲ್ಲಿದ್ದ ಕನ್ನಡ ಮಾತನಾಡುವ ಪ್ರದೇಶಗಳೆಲ್ಲ ಒಟ್ಟಾಗಿ ಹೊಸರಾಜ್ಯ ತಲೆಎತ್ತಿದೆ ಎಂಬ ವಿಷಯವನ್ನು ಮನವರಿಕೆಮಾಡಿಕೊಡಬೇಕಾಗಿ ಬಂದಿದೆ. ರಾಜ್ಯಗಳ ಪುನಾರಚನೆಯನ್ನು ಮಾಡಿದ ಶಾಸನದಲ್ಲಾಗಲೀ ರಾಜ್ಯ ಘಟನೆಯಲ್ಲಿಯೇ ಆಗಲಿ ಹಳೆಯ ಮೈಸೂರಿನಲ್ಲಿ ಕನ್ನಡ ಪ್ರದೇಶಗಳು ವಿಲೀನಹೊಂದುವ ಉಲ್ಲೇಖವೇ ಇರುವುದಿಲ್ಲ ಹೊಸ ರಾಜ್ಯಕ್ಕೆ "ಮೈಸೂರು" ಎಂಬ ಹೆಸರನ್ನೆ ಇಟ್ಟುಕೊಂಡ ದೆಸೆಯಿಂದ ಉಂಟಾದ ತಪ್ಪು ಅಭಿಪ್ರಾಯವೇ ವಿಲೀನೀಕರಣದ ಗ್ರಹಿಕೆಗೆ ಕಾರಣ. ಆದುದರಿಂದ ನಮ್ಮ ನಾಡಿಗೆ ನಿಜಕ್ಕೂ ಭೂಷಣಪ್ರಾಯವಾದ ಕರ್ನಾಟಕ ಎಂಬ ಹೆಸರನ್ನೆ ರೂಢಿಗೆ ತರುವುದು ವಿಲೀನೀಕರಣದ ಮಾತನಾಡುವವರ ಮನೋಭಾವವನ್ನು ಬದಲಾಯಿಸಲು ಯೋಗ್ಯ ಕ್ರಮವೆನಿಸೀತು. ಹಳೆಯ ಮೈಸೂರಿನ ಅಧಿಕಾರಿಗಳೊಡನೆ ಮೈಸೂರಿನಲ್ಲಿ ಎಷ್ಟು ಪ್ರಾಥಮಿಕ ಶಾಲೆಗಳಿವೆ ಎಂದು ಈಗ ಕೇಳಿದರೆ, ಹೊಸ ರಾಜ್ಯದ ಅಂಕೆಸಂಖ್ಯೆಗಳನ್ನು ಅವರು ಕೊಡಲಿಕ್ಕೆನೇ ಹೋಗುವುದಿಲ್ಲ—ಬದಲಿಗೆ ಹಳೆ ಮೈಸೂರಿನ ಲೆಕ್ಕಗಳು ಸಿಗುತ್ತವೆ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಸದಸ್ಯರಾಗಿ ಬಂದು ಕೆಲಸಮಾಡುವವರು ಕೇವಲ ಹಳೆ ಮೈಸೂರಿನ ಹತ್ತು ಜಿಲ್ಲೆಗಳ ಪ್ರತಿನಿಧಿಗಳಲ್ಲ–ಹೊಸರಾಜ್ಯದ ಹದಿನೆಂಟು ಜಿಲ್ಲೆಯ ಜನರ ವಿಶ್ವಾಸಪಾತ್ರರು ಎಂಬ ಪ್ರಾಮುಖ್ಯಾಂಶವನ್ನೆ ಗಮನಿಸದ ಸರಕಾರಿ ಅಧಿಕಾರಿಗಳು ಇರುವರೆಂದರೆ ಯಾರಿಗಾದರೂ ಆಶ್ಚರ್ಯವಾಗಬೇಕು. ವಿದ್ಯಾಮಂತ್ರಿ ಶ್ರೀ ವೆಂಕಟಪ್ಪನವರೇ ಈ ಬಗ್ಗೆ ಮಾತನಾಡುತ್ತಾ "ಹಳೆಯ ಮೈಸೂರು ಪ್ರದೇಶದಿಂದ ಬಂದ ಸರಕಾರಿ ಅಧಿಕಾರಿಗಳಲ್ಲಿ ಮೈಸೂರು ರಾಜ್ಯವೆಂದರೆ ಹಳೆಯ ಮೈಸೂರು ರಾಜ್ಯವೆಂಬ ಭಾವನೆ ಈಗಲೂ ಇದೆ" ಎಂದು ಒಪ್ಪಿಕೊಳ್ಳಬೇಕಾಗಿ ಬಂದ ಘಟನೆಯೊಂದು ಈಚೆಗೆ ವಿಧಾನಪರಿಷತ್ತಿನಲ್ಲಿ ನಡೆಯಿತು. ಅಧಿಕಾರಿಗಳಲ್ಲಿ ಈ ಭಾವನೆಯನ್ನು ತೆಗೆದು ಹಾಕಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಂತ್ರಿಗಳು ಆಶ್ವಾಸನೆಯನ್ನೇನೊ ಕೊಟ್ಟರು– ಆದರೆ ಕಳೆದ ಹನ್ನೊಂದು ತಿಂಗಳಿಂದ ರಾಜ್ಯದಲ್ಲಿ ನಡೆದ ರಾಜಕೀಯ ಬದಲಾವಣೆಗಳ ತಿಲಾಂಶ ಕಲ್ಪನೆಯನ್ನೂ ಮಾಡಿಕೊಳ್ಳದೆ ಆ ಹಳೆಯ ಮೈಸೂರಿನ ಅಧಿಕಾರಿಗಳಾದರೂ ಎಷ್ಟು ದಕ್ಷರು, ಎಷ್ಟು ಸೂಕ್ಷ್ಮಗ್ರಾಹಿಗಳಾದ ಬುದ್ಧಿವಂತರು–ಎಂದು ಮೂಗಿನ ಮೇಲೆ ಬೆರಳಿಡುವಂತಾಗಿದೆ. ಇಂಥವರ ಕೈಯಲ್ಲಿ ನಮ್ಮ ರಾಜ್ಯ ಕ್ಷೇಮವಾಗಿ ಪ್ರಗತಿಪಥದಲ್ಲಿ ಮುನ್ನಡೆದೀತೆ ಎಂಬುದು ಸಂಶಯ. ಪರಿಸ್ಥಿತಿಯು ಸಂಪೂರ್ಣವಾಗಿ ಸ್ಥಿತ್ಯಂತರಗೊಂಡಿದ್ದರೂ ಅದನ್ನು ಮನವರಿಕೆಮಾಡಿಕೊಳ್ಳಲಾರೆವೆಂಬ ಅದರೊಡನೆ ಹೊಂದಿಕೊಂಡು ಹೋಗಲಾರೆವೆಂಬ ಹಠ ಮಾತನವನೇ ಹಳೆಯ ಮೈಸೂರಿಗೆ ಸಂಬಂಧಿಸಿದ ಎಲ್ಲವರ ವೈಶಿಷ್ಟ್ಯವೊ ಎಂದು ತಿಳಿಯದಾಗಿದೆ. ಭಾರತ ಸರಕಾರದ ವರಿಷ್ಠರ ಮನವೊಲಿಸಿ, ಮೈಸೂರೆಂಬ ಹೆಸರನ್ನೆ ಹೊಸ ರಾಜ್ಯಕ್ಕೆ ಇಡಿಸಲು ಯಶಸ್ವಿ ಪ್ರಯತ್ನವನ್ನು ನಡೆಸಿದವರು ಮೈಸೂರೆಂಬ ಹೆಸರಿನ ಬಗ್ಗೆ ಮುಗ್ಧರಾಗಿದ್ದರೇ ಹೊರತು—ಹೊಸ ರಾಜ್ಯದ ನಿತ್ಯ ವ್ಯವಹಾರದ ಮೇಲೆ ಅದರಿಂದಾಗಬಹುದಾದ ಈ ಬಗೆಯ ದುಷ್ಪರಿಣಾಮಗಳನ್ನು ಊಹಿಸಿರಲಿಕ್ಕಿಲ್ಲ. ಈಗಲಾದರೂ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸುವುದು ಸುಖಕರ. ಇದರಿಂದ ಹಳೆಯ ಮೈಸೂರು, ಹೊಸ ಮೈಸೂರು ಎಂದು ಮೈಸೂರಿಗೆ ವಿಶೇಷಣ ಹೆಚ್ಚುವದು ಹಾಗೆ ಹೆಚ್ಚುತ್ತಾ ಗೊಂದಲ ಹೆಚ್ಚಿಸುವ ಪ್ರಮೇಯ ಉಳಿಯುವುದಿಲ್ಲ. ಅಲ್ಲದೆ ಮೈಸೂರು ಎಂಬ ಹೆಸರಿನ ಬಗ್ಗೆ ಉಳಿದಿರುವ ಮೋಹದ ನಿವಾರಣೆ ಮಾಡಿದ ಹಾಗೂ ಆಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ರಾಜ್ಯಕ್ಕೆ ಯಾವ ಹೆಸರು ನಿಜವಾಗಿ ಶೋಭೆ ತರುವುದೋ– ಅದನ್ನೆ ಇಟ್ಟು ಕರೆಯುವ ಪುಣ್ಯ ಲಭಿಸುತ್ತದೆ. ಹಿಂದೆ ಇದ್ದು ಈಗ ಇಲ್ಲದ ಒಂದು ರಾಜ್ಯವನ್ನು ಹಳೆಯದೆಂದು ಯಾವಾಗಲೂ ಕರೆಯುತ್ತಿರಬಹುದು. ಆದರೆ, ರಾಜ್ಯಪುನಾರಚನೆಯನಂತರರೂಪಿಸಲಾಗಿರುವ ನಮ್ಮ ಕರ್ನಾಟಕವು ಎಷ್ಟು ಕಾಲದ ವರೆಗೆ "ಹೊಸ" ಮೈಸೂರಾಗಿಯೇ ಉಳಿದೀತು?

ನಮ್ಮ ಸರಕಾರಿ ಅಧಿಕಾರಿಗಳು ಹಳತು, ಹೊಸತು ಎಂಬ ವಿಶೇಷಣಶ್ಯಕ್ಯತ್ವವೆಂಬ ರೀತಿಯಲ್ಲೇ ವರ್ತಿಸುತ್ತಿರುವುದರಿಂದ ಈ ಪ್ರಶ್ನೆ ಎಳುತ್ತದೆ. ಅದಕ್ಕೆರುವ ಉತ್ತರ ಒಂದೇ —ಕರ್ನಾಟಕವೆಂಬುದೇ ರಾಜ್ಯದ ಹೆಸರಾಗಲಿ

ವಿಜ್ಞಾನದ ಮುನ್ನಡೆ—

ಕೃತಕ ಚಂದ್ರಮನ ಹಾರಾಟ!

ನೆಲಜಲಗಳಲ್ಲಿ ತನ್ನ ಆಧಿಪತ್ಯವನ್ನು ಸಂಸ್ಥಾಪಿಸಿಕೊಂಡ ಮಾನವನು ವಾಯುಮಂಡಲದಲ್ಲಿ ತೇಲಾಡುತ್ತಿರುವ ಗ್ರಹಗಳನ್ನೂ ತನ್ನ ಅಂಕಿತದಲ್ಲಿಟ್ಟುಕೊಳ್ಳಬಯಸಿ ಮೊತ್ತಮೊದಲಿಗೆ ಚಂದ್ರನತ್ತ ದೃಷ್ಟಿ ಹರಿಸಿದನು. ಚಂದ್ರಲೋಕಕ್ಕೆ ಪ್ರಯಾಣ ಬೆಳೆಸುವ ಆಶಯದಿಂದ, ಅದಕ್ಕೆ ಬೇಕಾದ ಸಾಧನ ಸಲಕರಣೆಗಳನ್ನು ಕಲೆಹಾಕತೊಡಗಿದನು. ಅಂತರಿಕ್ಷವನ್ನು ಹಾದು ಚಂದ್ರಲೋಕಕ್ಕೆ ಹೋಗಬೇಕು ತಾನೆ? ಆದುದರಿಂದ ಅಂತರಿಕ್ಷವನ್ನು ಅದರ ಸ್ಥಿತಿಗತಿಗಳನ್ನು ಸರಿಯಾಗಿ ತಿಳಿಯದೆ ದುಡುಕುವುದು ಅವಿವೇಕವೇ ಸರಿ. ಇದಕ್ಕಾಗಿ ಒಂದು ಉಪಗ್ರಹವನ್ನು ನಿರ್ಮಿಸಿ, ಅದನ್ನು ಆಕಾಶಬಾಣಗಳ ಮೂಲಕ ಆಕಾಶಕ್ಕೆ ಹಾರಿಸಿ, ಅದು ಅಲ್ಲಿಯೇ ಸುತ್ತುಬರುವಂತೆ ಮಾಡಿ, ತನ್ಮೂಲಕ ಅಂತರಿಕ್ಷದ ಇತಿವೃತ್ತವನ್ನು ಸಾಂಕೇತಿಕ ರೂಪದಲ್ಲಿ ಸಂಗ್ರಹಿಸುವ ಕೆಲಸವೊಂದನ್ನು ಅಮೆರಿಕ ಹಾಗೂ ರಶ್ಯಗಳು ಮಾಡುವ ನಿಶ್ಚಯ ಕೈಗೊಂಡುವು. ಈಗ ಈ ಕಾರ್ಯದಲ್ಲಿ ರಶಿಯವು ಮೊತ್ತಮೊದಲಿಗೆ ಜಯ ಸಂಪಾದಿಸಿದೆ.

ಸೋವಿಯೆಟ್ ರಶ್ಯದವರು ಮೊನ್ನೆ ದಿನಾಂಕ ೫ರಂದು ಭೂಮಿಯನ್ನು ಸುತ್ತುಬರುವ ಉಪಗ್ರಹವೊಂದನ್ನು ಅಂತರಿಕ್ಷದಲ್ಲಿ ೨೫೦ ಮೈಲಿತ್ತರಕ್ಕೆ ಎಸೆದರು. ಹೀಗೆ ಎಸೆಯಲು ಬೇಕಾದುದು ೧,೪೦,೦೦೦ ರಾತಲುಗಳ ಆಕಾಶಬಾಣದ ಶಕ್ತಿ. ಈ ಉಪಗ್ರಹವು ೧೮೫ ರಾತಲುಗಳಷ್ಟು ಭಾರವಿದ್ದು ಎರಡು ಟ್ರಾನ್ಸ್ ಮಿಟರುಗಳಿಂದ ಕೂಡಿದೆ. ಇದರಿಂದಾಗಿ ಅಂತರಿಕ್ಷದ ಬಗ್ಗೆ ಹೆಚ್ಚಿನ ಸಂಗತಿಗಳು ತಿಳಿದುಬರುವುವು ರಶಿಯನ್ನರು ಅಂತರಿಕ್ಷದಲ್ಲಿ ಈ ಉಪಗ್ರಹವನ್ನು ಹಾರಿಸಿಬಿಟ್ಟಿರುವುದು ಚಂದ್ರಲೋಕ ಪ್ರಯಾಣದ ಮೊದಲ ಘಟ್ಟವಾಗಿದೆ. ಜಗತ್ತಿನ ವಾಯುಮಂಡಲದಲ್ಲಿಯ ರಹಸ್ಯಗಳನ್ನು ಭೇದಿಸಲು ನಡೆದ ಪ್ರಥಮ ಪ್ರಯತ್ನವಾಗಿದೆ. ಈ ಉಪಗ್ರಹವು ತಾಸಿಗೆ ೧೮,೦೦೦ ಮೈಲಿಗಳ ವೇಗದಲ್ಲಿ ಭೂಮಿಯನ್ನು ಸುತ್ತ ಸಂಚರಿಸಬಲ್ಲುದು; ಎಂದರೆ, ೯೬ ಮಿನಿಟು ೨ ಸೆಕುಂಡುಗಳಲ್ಲಿ ಒಂದು ಸಲ ಭೂಪ್ರದಕ್ಷಿಣೆಯನ್ನು ಮಾಡಬಲ್ಲುದು. ಹೀಗೆಯೇ ಸುತ್ತುವರಿಯುತ್ತಾ ಅದು ಸುಮಾರು ೨೦ ವರ್ಷಗಳ ಕಾಲ ಅಂತರಿಕ್ಷದಲ್ಲಿ ತೇಲಾಡಬಲ್ಲುದೆಂದು ತಿಳಿದುಬರುತ್ತದೆ

ವಿಶ್ವದ ಬೇರೆ ಬೇರೆ ಆಕಾಶವಾಣಿ ಕೇಂದ್ರಗಳಲ್ಲಿ ಈ ಉಪಗ್ರಹವು ಹರಿದೋಡುವ ಸೂಚನಾ ಸಂಕೇತಗಳು ಕೇಳಿಸುವುವು. ಬೀಪ್ ಬೀಪ್ ಎಂದು ಸ್ವರವನ್ನೆಬ್ಬಿಸುವುದಂತೆ. ಆಗಾಗ ತನ್ನ ಗತಿಯನ್ನೂ ಇದು ಬದಲಾಯಿಸಿಕೊಳ್ಳಬಹುದೆನ್ನುತ್ತಾರೆ. ರಶ್ಯದ ಲೆನಿನ್ ಗ್ರೇಡಿನಲ್ಲಿ ಈ ಉಪಗ್ರಹದ ಚಲನವಲನಗಳನ್ನು ಗತಿ ಮಾನವನ್ನು ಅಳೆದು ಗುರುತಿಸುವುದಕ್ಕಾಗಿ ತಯಾರಾದ ವಿಶೇಷ ನೇಥ ಶಾಲೆಯೊಂದರಲ್ಲಿ ೩೦ ಮಹಾ ದುರ್ಬೀನುಗಳು ತಲ್ಲೀನವಾಗಿವೆ.

ಭೂಮಿಯಿಂದ ೨೫೦ ಮೈಲುಗಳೆತ್ತರದಲ್ಲಿ ಲಭ್ಯವಾಗುವ ಅಂಶಗಳನ್ನು ಕೆಲವು ಸಂಕೇತಗಳ ಮೂಲಕವಾಗಿ ಭೂಮಿಗೆ ಇದು ತಿಳಿಸುತ್ತದೆ. ಭೂಮಿ ಹಾಗೂ ಇತರ ಗ್ರಹಗಳ ನಡುವೆ ಇರುವ ಹವಾಗುಣ, ಸೂರ್ಯ ಮತ್ತು ವಿಶ್ವದ ಬಗ್ಗೆ ಪ್ರತ್ಯಕ್ಷವಾಗಿ ವಿದ್ಯಮಾನಗಳನ್ನು ಕಲೆಹಾಕುವುದು ಈ ಉಪಗ್ರಹದ ಉದ್ದೇಶ. ಇಂತಹ ಇನ್ನೂ ಹಲವಾರು ಉಪಗ್ರಹಗಳನ್ನು ರಶ್ಯವು ಹಾರಿಸಲಿರುವುದು.

ಅಮೆರಿಕೆಯು ಸಹ ಇಂತಹುದೇ ಉಪಗ್ರಹವನ್ನು ಹಾರಿಸುವುದಾಗಿ ಸಾರಿತ್ತು. ಅದರೆ, ಕಳೆದ ಸಪ್ತಾಹದಲ್ಲಾಗಬೇಕಾಗಿದ್ದ ಈ ಕಾರ್ಯವು ಮುಂದಿನ ವಸಂತಕಾಲಕ್ಕೆ ಮುಂದುವರಿದಿದೆ. ಈ ನಡುವೆ ರಶ್ಯವು ಜಯಶೀಲವಾಗಿದೆಯಲ್ಲದೆ, ಆದರ ಉಪಗ್ರಹದ ಪರಿಮಾಣ ಅಮೆರಿಕೆಯದ್ದರ ಎಂಟು ಪಾಲಷ್ಟು ಹೆಚ್ಚಿದೆ. ರಶ್ಯದ ಈ ಆತ್ಯದ್ಭುತ ವಿಜಯದಿಂದಾಗಿ, ಅಮೆರಿಕೆಗೂ ಕೆಲವೊಂದು ಸಂಗತಿಗಳು ತಿಳಿಯಬಹುದು.

ಹೇಗಿದ್ದರೂ, ಜಗತ್ತಿನ ಇತಿಹಾಸದಲ್ಲೇ ರಶಿಯಾದ ಈ ಒಂದು ವಿಜಯವು ಮಹತ್ವಪೂರಿತವಾದುದು. ಮಾನವನು ಏನನ್ನು ಮಾತಲು ಶಕ್ತನೆಂಬುದಕ್ಕೆ ಒಂದು ಮಿತಿಯಿಲ್ಲ. ಇದೇ ರೀತಿಯಲ್ಲಿ ಮುಂದೆ ಮುಂದೆ ಸಾಕಷ್ಟು ಸಂಶೋಧನೆ-ಪರಿಶೀಲನೆಗಳು ನಡೆದನಂತರ ಚಂದ್ರಲೋಕಕ್ಕೆ ಹಾಗೆಯೇ ಇನ್ನುಳಿದ ಗ್ರಹಪರಿವಾರಗಳಿಗೆ ನೆಲ ಯಾತ್ರೆ ಮಾಡುವ ದಿನವು ಹೆಚ್ಚು ದೂರವಿರಲಾರದು. ಆದರೆ, ಸಾಕಷ್ಟು ವಿದ್ಯಮಾನಗಳನ್ನು ಸಂಗ್ರಹಿಸಲು ಹತ್ತು ವರ್ಷಗಳ ಕಾಲ ಬೇಕಾಗುವುದಂತೆ. ರಶ್ಯದ ಈ ಅದ್ಭುತ ವಿಜಯವು ಜಗತ್ತಿನ ಜನರೆಲ್ಲರ ಕುತೂಹಲವನ್ನು ಕೆರಳಿಸಿದೆ.

ಅಮೆರಿಕದ ಸಂಯುಕ್ತ ರಾಷ್ಟ್ರಗಳ ಸಂರಕ್ಷಣಾ ಶಾಖೆಯ ಕಾರ್ಯದರ್ಶಿಯಾಗಿ ನಾಮನಿರ್ದೇಶಮಾಡಲ್ಪಟ್ಟ ಶ್ರೀ ನೀಲ್ ಎಚ್. ಮ್ಕೆಲ್ರೊಯ್ಯರ್ ಅವರು. ಇವರ ಪ್ರಾಯ ೩೨ ವರ್ಷಗಳಾಗಿದ್ದು ಓಹಿಯೋವಿನ ಪ್ರೊಕ್ಟರ್ ಮತ್ತು ಗಾಂಬಲ್ ಸಾಬೂನು ಕಂಪೆನಿಯ ಅಧ್ಯಕ್ಷರಾಗಿದ್ದರು.

ಸಂಕ್ಷಿಪ್ತ ಸುದ್ದಿಗಳು

ಮೈಥಾನದಲ್ಲೊಂದು ಆಣೆಕಟ್ಟು

ಪ್ರಧಾನಿ ನೆಹರೂರವರು ಕಳೆದ ವಾರದಲ್ಲಿ ದಾಮೋದರ ಕಾರ್ಪೊರೇಶನ್ನಿನ ಮೂರನೆಯ ಆಣೆಕಟ್ಟನ್ನು ಮೈಥಾನದಲ್ಲಿ ವಿಧ್ಯುಕ್ತವಾಗಿ ಉದ್ಘಾಟಿಸಿದರು. ಮೈಥಾನದ ಆಣೆಕಟ್ಟು ಹಾಗೂ ಮತ್ತಿತರ ದಾಮೋದರ ಕಣಿವೆ ಕಾರ್ಪೊರೇಶನ್ನಿನ ಯೋಜನೆಗಳು ಪಶ್ಚಿಮ ಬಂಗಾಳ ಮತ್ತು ಬಿಹಾರಿನ ಜನತೆಗೆ ಮಾತ್ರವಲ್ಲದೆ ಅಖಂಡ ಭಾರತಕ್ಕೆ ಪ್ರಯೋಜನಕಾರಿಯಾಗಿರುವುವೆಂದು ಅವರು ಹೇಳಿದರು. ದಾಮೋದರ ಕಣಿವೆ ಯೋಜನೆಯ ಮೊದಲನೆಯ ಘಟ್ಟದಲ್ಲಿ ಸೇರಿಸಿಕೊಳ್ಳಲಾಗಿರುವ ನಾಲ್ಕು ವಿವಿಧೋದ್ದೇಶದ ಆಣೆಕಟ್ಟುಗಳಲ್ಲಿ ಮೈಥಾನ್ ಆಣೆಕಟ್ಟು ಮೂರನೆಯದಾಗಿದೆ. ಈ ಆಣೆಕಟ್ಟನ್ನು ಮೈಥಾನಿನಲ್ಲಿ ಭಾರ್‌ಕಾರ್ ನದಿಗೆ ಅಡ್ಡವಾಗಿ ನಿರ್ಮಿಸಲಾಗಿದೆ. ಭಾರ್‌ಕಾರ್ ಹಾಗೂ ದಾಮೋದರ ನದಿಗಳ ಸಂಗಮ ಸ್ಥಳದಿಂದ ಎಂಟು ಮೈಲಿಗಳ ಈಚೆಯಲ್ಲಿ ಮೈಥಾನ್ ಇರುವುದು. ಪ್ರವಾಹ ನಿಯಂತ್ರಣ, ವಿದ್ಯುಚ್ಛಕ್ತಿ ಉತ್ಪಾದನೆ ಹಾಗೂ ನೀರಾವರಿಗಾಗಿ ನೀರಿನ ಸಂಗ್ರಹಣೆ ಇವು ಮೈಥಾನ್ ಆಣೆಕಟ್ಟಿನ ಮುಖ್ಯ ಕಾರ್ಯಗಳಾಗಿವೆ. ಈ ಆಣೆಕಟ್ಟು ನದಿ ತಳದಿಂದ ೧೬೦ ಅಡಿ ಎತ್ತರವಿದೆ. ಇಲ್ಲಿನ ಜಲಾಶಯವು ೪೧ ಚದರ ಮೈಲಿಗಳಷ್ಟು ವಿಸ್ತಾರವುಳ್ಳದಾಗಿದೆ. ಈ ಆಣೆಕಟ್ಟಿನಲ್ಲೊಂದು ವಿದ್ಯುದಾಗರವಿದ್ದು ಇದನ್ನು ಭೂಮಿಯೊಳಗೆ ನಿರ್ಮಿಸಲಾಗಿದೆ. ಇಂತಹ ಒಂದು ಯೋಜನೆಯು ಪೂರ್ವ ಏಶ್ಯದಲ್ಲಿಯೇ ಮೊತ್ತಮೊದಲಿನದಾಗಿದೆ.

ರಾಮನಾಥ ಪುರದ ಗಲಭೆ

ಕಳೆದ ತಿಂಗಳಲ್ಲಿ ಪೂರ್ವ ರಾಮನಾಥಪುರ ಜಿಲ್ಲೆಯಲ್ಲಿ ಸಂಭವಿಸಿದ ಗಲಭೆಗಳ ಮೂಲವು ರಾಜಕೀಯವಾಗಿದೆ ಎಂದು ಶ್ರೀ ಬಿ ಎನ್. ದಾತಾರರು ಹೇಳಿದ್ದಾರೆ. ಗಲಭೆ ಸಂತ್ರಸ್ತ ಪ್ರದೇಶದಲ್ಲಿ ಮೂರು ದಿನಗಳ ಸಂಚಾರ ಮಾಡಿದ ಕೇಂದ್ರ ಗೃಹಮಂತ್ರಿಗಳು ಕಳೆದ ಮಹಾ ಚುನಾವಣೆ ಮತ್ತು ಉಪ ಚುನಾವಣೆಗಳ ಕಾಲದಲ್ಲಿ ನಡೆದ ಘಟನೆಗಳಿಂದಲೇ ಜಾತಿ ಜಾತಿಗಳ ನಡುವೆ ಈಗ ತಲೆಯೆತ್ತಿದ ವೈಮನಸ್ಸಿಗೆ ಪುಟ ದೊರೆಯಿತು. ಅದರಿ ಇದಕ್ಕೆಂತ ಹೆಚ್ಚು ವ್ಯಾಪಕವಾದ ಅರ್ಥದಲ್ಲಿ ಗಲಭೆಗೆ ರಾಜಕೀಯವೇ ಕಾರಣವೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಗಲಭೆಯಿಂದ ಕೆಲವೊಂದು ಪ್ರಾಣಹಾನಿಗಳೂ ಪೆಟ್ಟುಗಳೂ ಆಗಿರುತ್ತವೆ.

ಗೋವಾಗಡಿಯಲ್ಲಿ ಚಳವಳಿ

ಗೋವಾ ಮತ್ತು ಮೈಸೂರಿನ ಗಡಿಯಲ್ಲಿ ಗಡಿಗಸ್ತಿ ದಳಗಳಲ್ಲಿ ಗುಂಡಿನ ಚಕಮಕಿಯಾಯಿತು. ಇದರಲ್ಲಿ ಓರ್ವ ಪೋರ್ಚುಗೀಸನು ಮರಣ ಹೊಂದಿ, ಅತ್ತ ಮೃತ ಕರೀರವು ಭಾರತದ ಗಡಿಯಲ್ಲಿ ದೊರೆತಿದೆ. ಪೋರ್ಚುಗೀಸ ಗಸ್ತಿ ದಳದವರು ಭಾರತದ ಗಡಿಯನ್ನು ಪ್ರವೇಶಿಸಿದುದೇ ಈ ಅನರ್ಥದ ಮೂಲ ಕಾರಣವೆಂದು ತಿಳಿದು ಬಂದಿದೆ.

ಪಾಕಿಸ್ತಾನ ಹಿಂದೆ ಸರಿಯಲಿ!

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಉಂಟಾಗಿರುವ ಸ್ನೇಹ ಮನೋಭಾವನೆಯ ಹೆಚ್ಚಾಗದಂತೆ ಹಾಗೂ ವಿದೇಶೀಯ ಸೈನಿಕರನ್ನು ಕಾಶ್ಮೀರಕ್ಕೆ ಕರೆಯಿಸಲು ಏನಾದರೊಂದು ಕುಂಟು ನೆವನ ಹುಡುಕುವುದಕ್ಕೆ ಅವಕಾಶ ದೊರೆಯುವಂತೆ ಕಾಶ್ಮೀರದ ಚರ್ಚೆ ನಡೆಯಬೇಕು. ಪಾಕಿಸ್ತಾನವು ಕಾಶ್ಮೀರದಿಂದ ಕೂಡಲೇ ಹಿಂದೆ ಸರಿಯುವಂತೆ ಮಾಡುವುದು ಭದ್ರತಾ ಮಂಡಲದ ಕರ್ತವ್ಯವಾಗಿದೆ. ಆದರೆ, ಅದಿನ್ನೂ ಆ ಕೆಲಸವನ್ನು ಪೂರೈಸಿಲ್ಲ. ಆದುದರಿಂದ ಅದು ಈ ಬಾರಿಯಾದರೂ ತನ್ನ ಕರ್ತವ್ಯವನ್ನು ಪೂರ್ತಿಗೊಳಿಸಬೇಕೆಂದು ಅಖಿಲ ಭಾರತ ಶಾಂತಿ ಸಮಿತಿಯು ಒಂದು ಪ್ರಕಟಣೆಯನ್ನು ಹೊರಡಿಸಿ ಭದ್ರತಾಮಂಡಲಕ್ಕೆ ವಿನಂತಿ ಮಾಡಿದೆ. ಕಾಶ್ಮೀರ ಪ್ರಶ್ನೆಯು ಇಷ್ಟರಲ್ಲೇ ಭದ್ರತಾ ಸಮಿತಿಯಲ್ಲಿ ಚರ್ಚಿಸಲ್ಪಡಲಿದೆ.

ಪ್ರಧಾನಿಯವರ ಜಾಪಾನ್ ಸಂಚಾರ

ಪ್ರಧಾನಿ ಪಂಡಿತ ನೆಹರೂರವರು ಜಾಪಾನಿನ ಸಂಚಾರದಲ್ಲಿ ಮಗ್ನರಾಗಿದ್ದಾರೆ. ಅಲ್ಲಿನ ಪ್ರಧಾನಿ ಕಿಶಿಯವರೊಡನೆ ಹಲವಾರು ಸಂಗತಿಗಳ ಕುರಿತಾಗಿ ವಿಚಾರವಿನಿಮಯಮಾಡಿದರೆಂದು ತಿಳಿದಿದೆ. ಅಣ್ವಸ್ತ್ರಗಳ ಬಹಿಷ್ಕರಣೆ, ಭಾರತ ಜಾಪಾನ್ ಸ್ನೇಹಸಂಬಂಧ ಹಾಗೂ ಇನ್ನಿತರ ಸೈನಿಕ ಒಡಂಬಡಿಕೆಗಳ ಕುರಿತಾದ ವಿಷಯಗಳು ಚರ್ಚಿಸಲ್ಪಟ್ಟುವೆಂದೂ ವರದಿಯಾಗಿದೆ. ಟೋಕಿಯೊದ ವಾಸೆಡಾ ಹಾಗೂ ಕಿಯೋ ವಿಶ್ವವಿದ್ಯಾನಿಲಯಗಳು ಅವರಿಗೆ ಗೌರವ 'ಡಾಕ್ಟರ್ ಆಫ್ ಲಾ' ಪದವಿಯನ್ನಿತ್ತು ಗೌರವಿಸಿದುವು. ಒಂದು ಹೈಡ್ರೋಜನ್ ಬಾಂಬನ್ನು ಇನ್ನೊಂದು ಹೈಡ್ರೋಜನ್ ಬಾಂಬಿನಿಂದ ಎದುರಿಸುವುದು ಮೂರ್ಖತನವೆಂದವರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನುಪದೇಶಿಸುತ್ತ ನುಡಿದರು.

ದ್ವಿತೀಯ ಯೋಜನೆಯ ವೆಚ್ಚ

ಹೊಸ ಮೈಸೂರು ರಾಜ್ಯದ ದ್ವಿತೀಯ ಪಂಚವಾರ್ಷಿಕ ಯೋಜನೆಯ ವೆಚ್ಚವು ಸರಾಸರಿ ೧೪೫ ಕೋಟಿ ರೂಪಾಯಿಗಳಿಗೆ ಮಿಕ್ಕಬಾರದೆಂದು ಯೋಜನಾ ಆಯೋಗವು ನಿರ್ಧರಿಸಿದೆ. ಮೈಸೂರು ರಾಜ್ಯವು ೧೫೨ ೬೨ ಕೋಟಿ ರೂಪಾಯಿಗಳ ಯೋಜನೆಯನ್ನು ಸಿದ್ಧಪಡಿಸಿದೆ. ಈಗಿನ ಪುನರ್ವಿನ್ಯಾಸಿತ ಅಂದಾಜಿನನ್ವಯ ವಿವಿಧ ಮಹತ್ವದ ಚಟುವಟಿಕೆಗಳಿಗೆ ಮೀಸಲಿಟ್ಟ ಹಣದ ವಿವರಗಳು ಹೀಗಿದೆ:— ಒಕ್ಕಲುತನ, ಅಹಾರೋತ್ಪಾದನೆ, ತೋಟಗಾರಿಕೆ ಮತ್ತು ತುಂಗಭದ್ರಾಯೋಜನೆಯ ಅಭಿವೃದ್ಧಿ- ೧೧.೨೨ ಕೋಟಿ; ದೊಡ್ಡ ಮತ್ತು ಚಿಕ್ಕ ನೀರಾವರಿ ರೂ. ೬೧.೬೫; ಚಿಕ್ಕ ಉದ್ದಿಮೆ ಗ್ರಾಮೋದ್ಯೋಗ, ರೇಶಿಮೆ ಮತ್ತು ಗಣಿ ರೂ. ೮.೫೪ ಕೋಟಿ, ರಸ್ತೆ ೭.೫೬ ಕೋಟಿ ರೂ.; ಶಿಕ್ಷಣ ರೂ ೧೧.೫೦ ಕೋಟಿ, ಸಾರ್ವಜನಿಕ ಆರೋಗ್ಯ, ವೈದ್ಯಕೀಯ, ಆಯುರ್ವೇದ ಮತ್ತು ಯುನಾನಿ ಮತ್ತು ಸೈಮಲ್ಯ ರಕ್ಷಣೆ ರೂ. ೧೩.೮೬ ಕೋಟಿ, ಗೃಹನಿರ್ಮಾಣ ರೂ ೩.೫೫ ಕೋಟಿ, ವಿದ್ಯುತ್ ೨೬.೨೮ ಕೋಟಿ ರೂಪಾಯಿಗಳು.

ಮಾಧ್ಯಮಿಕ ಶಾಲಾ ಅಡಳಿತ

ಮೈಸೂರಿನಲ್ಲಿಯ ಮಾಧ್ಯಮಿಕ ಶಿಕ್ಷಣದ ಅಡಳಿತಕ್ಕಾಗಿ ಒಂದು ಕಾರ್ಪೊರೇಶನನ್ನು ರಚಿಸಬೇಕೆಂದು ಹಿಂದಿನ ಮೈಸೂರ ವಿಧಾನ ಪರಿಷತ್ತಿನ ಉಪಸಭಾಪತಿಗಳಾದ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟಿಯವರು ಹೇಳಿದರು. ರಾಜ್ಯದಲ್ಲಿನ ೫೦-೮ ಮಾಧ್ಯಮಿಕ ಶಾಲೆಗಳನ್ನು ಖಾಸಗಿ ಸಂಸ್ಥೆಗಳಾಗಲೀ ಸರಕಾರವಾಗಲೀ ನಡೆಸುವುದು ಸಾಧ್ಯವಿಲ್ಲ. ಆದುದರಿಂದ ಅವೆಲ್ಲವನ್ನೂ ಕಾರ್ಪೊರೇಶನ್ನಿಗೆ ಒಪ್ಪಿಸಿ ಎಲ್ಲ ಚಿಕ್ಕ ಮಕ್ಕಳಿಗೆ ಉಚಿತ ಪ್ರಾಥಮಿಕ ಶಿಕ್ಷಣ ಕೊಡುವ ಕಾರ್ಯವನ್ನು ತಾನು ಕೈಯಲ್ಲಿ ಎತ್ತಿಕೊಳ್ಳಬೇಕೆಂದು ಅವರು ಹೇಳಿದರು

ಕನ್ನಡ ಟೈಪರೈಟರು

ಶ್ರೀ ಅನಂತ ಸುಬ್ಬರಾಯರು ಸಿದ್ಧಪಡಿಸಿದ ಕನ್ನಡ ಟೈಪ್‌ರೈಟರನ್ನು ಮೈಸೂರು ಸರಕಾರವು ಸ್ವೀಕರಿಸಿಕೊಂಡಿದೆ. ಕನ್ನಡ ಟೈಪರೈಟರ ಬಗೆ ಸರಕಾರವು ಇನ್ನೂ ಆರ್ಡರು ಕೊಟ್ಟಿಲ್ಲವೆಂದೂ ಶೀಘ್ರದಲ್ಲಿಯೇ ಕೊಡಲಿರುವುದೆಂದೂ ವಿದ್ಯಾಮಂತ್ರಿ ಶ್ರೀ ವಿ ವೆಂಕಟಪ್ಪನವರು ರಾಜ್ಯ ವಿಧಾನ ಪರಿಷತ್ತಿನಲ್ಲಿ ಶ್ರೀ ಗೋರೂರು ರಾಮಸ್ವಾಮಿ ಮಂಗಳಾಚಾರಿಗೆ ತಿಳಿಸಿದರು.

ಶಾಂತಿ ದೂತನಿಗೆ ಖಡ್ಗ

ಜಪಾನದ ಪ್ರತಿನಿಧಿ ಭೈಯು ಹಿಂದಿನ ಅಧ್ಯಕ್ಷರಾದ ಯಾಸುಜೀರೋ ಮಿಯಾಮಿಯವರು ಭಾರತದ ಪ್ರಧಾನಮಂತ್ರಿ ನೆಹರೂರವರನ್ನು ಕಂಡು ತನ್ನುಳ್ಳಿದ್ದ ೫೫೦ ವರ್ಷ ಹಳೆಯ ಖಡ್ಗವೊಂದನ್ನು ಕಾಣಿಕೆಯಾಗಿ ಅರ್ಪಿಸಿದರು. ಜಾಗತಿಕ ಶಾಂತಿಯ ಕೈವಾರಿಗಳಾದ ನೆಹರೂರವರಿಗೆ ತಮ್ಮ ವೈಯಕ್ತಿಕ ಕಾಣಿಕೆಯೆಂದು ಈ ಖಡ್ಗವನ್ನು ಅವರು ಇತ್ತಿರುವರು.

ಭಾರತದ ಸ್ನೇಹವೆಂದಿಗೆ?

ಕಾಲುವೆ ನೀರನ್ನು ಭಾರತವು ಪಾಕಿಸ್ತಾನಕ್ಕೆ ಒದಗಿಸಬೇಕೆ; ಮತ್ತು ಕಾಶ್ಮೀರ ಸಮಸ್ಯೆಯಲ್ಲಿ ಭಾರತವು ಅಂತಾರಾಷ್ಟ್ರೀಯ ಒಡಂಬಡಿಕೆಗಳನ್ನು ಮನ್ನಿಸಬೇಕು ಇವರಡಾಗುವ ವರೆಗೆ, ಪಾಕಿಸ್ತಾನವು ಭಾರತದ ಸೇಹ ಬೆಳೆಸುವುದು ಸಾಧ್ಯವಿಲ್ಲ. ನಮ್ಮ ನಾವಿಕರು ವೈಲುದ್ದದ ಭೂಮಿಯು ಮರುಭೂಮಿಯನ್ನಾಗಿಸಿ ಬಾಗ, ನಾವದನ್ನು ಎಂದೂ ಸೈರಿಸಲಾರೆವು ಎಂದು ಪಾಕೀಸ್ತಾನದ ಅಧ್ಯಕ್ಷರು ನುಡಿದು, ನೀರೊದಗಿಸುವುದನ್ನು ತಡೆದರೆ ತೀರ ಭೀಕರ ಆಕ್ರಮಣವಾಗುವುದು ಮತ್ತದನ್ನು ಪಾಕಿಸ್ತಾನವು ಎಂದಿಗೂ ಕಡೆದುಕೊಳ್ಳದೆಂದಿದ್ದಾರೆ.

ಜಗತ್ತಿನ ರಾಷ್ಟ್ರಗಳಲ್ಲಿ ಅಣುಶಕ್ತಿಯನ್ನು ಶಾಂತಿ ಕಾರ್ಯಗಳಿಗಾಗಿ ಬಳಸುವಂತೆ ಕೇಳಿಕೊಳ್ಳಲು ಹೊರಟ "ಅಂತಾರಾಷ್ಟ್ರೀಯ ಅಣುಶಕ್ತಿ ಏಜನ್ಸಿ"ಯ ಅಮೇರಿಕಕ್ಕೆ ದಾಂದಾಗ, ಅಧ್ಯಕ್ಷ ಐಸನ್ ಹಾವರರು ಸಂಯುಕ್ತ ರಾಷ್ಟ್ರಗಳ ಪರವಾಗಿ ಒಪ್ಪಿಗೆಗೆ ಸಹಿ ಹಾಕುತ್ತಿದ್ದಾರೆ

ಉಡುಪಿ

ಶ್ರೀ ಶಿವಾನಂದ ಸಾಧನ ಕುಟೀರದ ಉದ್ಘಾಟನೆ—ಹೃಷಿಕೇಶ ದಿವ್ಯ ಜೀವನ ಸಂಘದ ಉಡುಪಿ ಶಾಖೆಗಳ ವತಿಯಿಂದ ತಾ ೩ರಲ್ಲಿ ಡಾ ಸುಂದರರಾಮಯ್ಯಗಳ ಅಧ್ಯಕ್ಷತೆಯಲ್ಲಿ ಶ್ರೀ ಶಿವಾನಂದ ಸಾಧನ ಕುಟೀರದ ಉದ್ಘಾಟನೆಯು ಟ್ರಿನ್ಸಿಪಾಲ್ ಸುಂದರ ರಾಯರಿಂದ ನೆರವೇರಿಸಲ್ಪಟ್ಟಿತು. ಶ್ರೀ ಕೆ ಎಸ್. ಕಲ್ಲಾಯರು ಸ್ವಾಗತವನ್ನಾಡಿದರು. ಶ್ರೀಮತಿ ಲೀಲಾಬಾಯಿ ಕಾಮತ್ ಸೊದರಾವರು ಸಭಿಕರ ಪರವಾಗಿ ಭಾಷಣಮಾಡಿದರು. ಅಧ್ಯಕ್ಷರು ದಿವೈನ್ ರೈಫ್ ಸೊಸೈಟಿಯ ಉದ್ದೇಶಕನ್ನು ಶ್ರೀ ಶಿವಾನಂದರ ಸಂದೇಶವನ್ನು ವಿವರಿಸಿ ಉಪನ್ಯಾಸವಿತ್ತರು. ರಮಾದೇವಿ ಭಜನಾ ಮಂಡಳಿಯವರಿಂದ ಭಜನೆ ನಡೆದ ಬಳಿಕ ಆರತಿ ಪ್ರಸಾದಗಳಾದುವು. ಶ್ರೀ ಆರ್. ಕೆ ಶರ್ಮರು ಧನ್ಯವಾದಗಳನ್ನಿತ್ತರು.

ಹಿಂದೀ ಕ್ಲಾಸಿನ ಉದ್ಘಾಟನೆ—ತಾ ೩ ರಂದು ಸರಕಾರಿ ಉದ್ಯೋಗಸ್ಥರ ಹಿಂದೀ ತರಗತಿಯ ಉದ್ಘಾಟನೆಯು ಉಡುಪಿ ತಾಲೂಕು ಹಿಂದೀ ಪ್ರಚಾರಸಮಿತಿಯ ನೇತೃತ್ವದಲ್ಲಿ ಶ್ರೀ ಎ. ಕೃಷ್ಣ ರಾಯರಿಂದ ನೆರವೇರಿಸಲ್ಪಟ್ಟಿತು. ತಹಸೀಲ್ದಾರ್ ಶ್ರೀ ಕೆ. ಮಹಮ್ಮದ್ ಬ್ಯಾರಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎ. ಜೆ ಅಲ್ಲಿಯವರು ಸ್ವಾಗತಿಸಿದರು. ಶ್ರೀ ಯು. ಲಕ್ಷ್ಮೀನಾರಾಯಣ ಕಿಣಿಯವರು ಆಭಾರ ಸೂಚಿಸಿದರು.

ಚೆರಿಯಾ ಜಯಂತಿಯು ತಾ. ೭ರಂದು ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ಸೂತ್ರಯಜ್ಞ, ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಸಭೆ ಭಾಷಣಾದಿ ಕಾರ್ಯಕ್ರಮಗಳಿಂದ ಜರಗಿತು.

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಹುಬ್ಬಳ್ಳಿ ಶಾಖೆಯ ರಜತ ಮಹೋತ್ಸವವು ತಾ. ೨೧ರಂದು ಹುಬ್ಬಳ್ಳಿ ಟೌನ್ ಹಾಲಿನಲ್ಲಿ ಶ್ರೀ ಆರ್. ಎಸ್. ಹುಕ್ಕೇರಿಕರರ ಅಧ್ಯಕ್ಷತೆಯಲ್ಲಿ ನೆರವೇರಿತು. ಉಪಾಹಾರವಾದ ಬಳಿಕ ಡಾ. ಟಿ. ಎಂ ಎ. ಪೈಗಳು ಸ್ವಾಗತಿಸಿ ಬ್ಯಾಂಕಿನ ಪ್ರಗತಿ, ಜನರ ಸಹಕಾರ, ಜನಸೇವೆಯನ್ನು ವಿವರಿಸಿದರು. ಹಲವರು ಬ್ಯಾಂಕಿನ ಸುನ್ನಡೆಯನ್ನು ಶ್ಲಾಘಿಸಿ ಮಾತನಾಡಿದ ಮೇಲೆ ಅಧ್ಯಕ್ಷ ಭಾಷಣ, ಧನ್ಯವಾದದೊಂದಿಗೆ ಸಮಾರಂಭ ಕೊನೆಗೊಂಡಿತು.

ಕೊಡವೂರು—ಸುಮಾರು ಒಂದು ವರ್ಷದಿಂದ ಕಾಯಿಲೆಯಲ್ಲಿದ್ದ ಶ್ರೀ ಅನ್ನಿಟೆಟ್ಟು ಬಪ್ಪ ಶೆಟ್ರು ತಾ. ೩—೧೦—೫೭ರಂದು ತಮ್ಮ ೭೫ನೇ ವಯಸ್ಸಿನಲ್ಲಿ ನಿಧನ ಹೊಂದಿರುವರು. ದಿವಂಗತರು ದೈವ ಭಕ್ತರೂ ಪರೋಪಕಾರಿಗಳೂ ಆಗಿದ್ದು ಜನಪ್ರಿಯರಾಗಿದ್ದರು.

ವರಂಗ—ತಾ. ೨೮ರಲ್ಲು ವರಂಗ ಗ್ರಾಮ ಪ್ರಮುಖರ ಪರಿಷತ್ತನ್ನು ಜಿಲ್ಲಾ ಕಲೆಕ್ಟರ್ ಶ್ರೀ ಹೊಂಬಾಳಯ್ಯನವರು ಉದ್ಘಾಟಿಸಿದರು. ಜಿಲ್ಲಾ ಜೋರ್ಡ್ ಅಧ್ಯಕ್ಷ ಶ್ರೀ ಮಂಜಯ್ಯ ಶೆಗ್ತೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿ ಸಮಾಜ ಸೇವಾ ತರಬೇತಿ ಶಿಬಿರ:

ಭಾರತ ಸೇವಕ ಸಮಾಜದ ವತಿಯಿಂದ ಆರೆಯೂರಿನಲ್ಲಿ 60 ಮಂದಿ ಪ್ರೌಢಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳೂ, 15 ಮಂದಿ ತರಬೇತಿ ಶಿಕ್ಷಕ ವ ಶಿಕ್ಷಕರೂ 20 ಮಂದಿ ವಿದ್ಯಾರ್ಥೀತರರ ಯುವಕರೂ ಇರುವ ಶಿಬಿರವನ್ನು ತಾ. 16—10—57 ರಿಂದ 30—10—57ರ ವರೆಗೆ ಜರಿಗಿಸಬೇಕಾಗಿ ಕೇಂದ್ರ ಶಿಕ್ಷಣ ಖಾತೆಯ ಸುಂಜೂರಿಯಂತೆ ಕರ್ನಾಟಕ ಪ್ರದೇಶ ಭಾ. ಸೇ. ಸಮಾಜದ ಕಾರ್ಯಕರ್ತರು ನಿಶ್ಚಯಿಸಿರುತ್ತಾರೆ.

ಶಿಬಿರದಲ್ಲಿ ಶ್ರಮದಾನವೇ ಮೊದಲಾದ ರಚನಾತ್ಮಕ ಕಾರ್ಯ, ಶಾಂತಿನಿಕೇತನ ಮಾದರಿಯ ಉಪನ್ಯಾಸಗಳು ಮತ್ತು ಗಾಂಧೀ ಮಾರ್ಗದ ಶಿಬಿರವಾಸ ಮೊದಲಾದ ಕಾರ್ಯಕ್ರಮಗಳಿವೆ ಶಿಬಿರಾಧಿಯ ಊಟ ವಸತಿಯ ಏರ್ಪಾಡನ್ನು ಭಾರತ ಸೇವಕಸಮಾಜವೇ ಮಾಡುವುದು. ಮತ್ತು ಶಿಬಿರ ವಾಸಿಗಳಿಗೆ ಪ್ರಯಾಣ ಭತ್ತೆಯನ್ನು ಸಹಾ ತೆರಲಾಗುವುದು. ಶಿಬಿರವಾಸಿಗಳಿಗೆ ಯೋಗ್ಯತಾ ಪತ್ರಗಳನ್ನೂ ಕೊಡಲಾಗುವುದು.

ಕಳೆದ ಬಾರಿ ಉಡುಪಿಯ ದಕ್ಷಿಣ ವಿಭಾಗದ ಪಡುಬಿದ್ರೆಯಲ್ಲಿ ಜರಿಗಿದ ಶಿಬಿರಕ್ಕೆ ಪಡುಬಿದ್ರೆಯ ಆಸುಪಾಸಿನ ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶಿಬಿರವಾಸಿಗಳಿಗೆ ಯೋಗ್ಯತಾ ಪತ್ರಗಳನ್ನು ಕೊಡಲಾಗಿತ್ತು. ಈ ಬಾರಿ ಉಡುಪಿಯ ಆಸುಪಾಸಿನ ಅಂದರೆ ಉಡುಪಿಬೋರ್ಡುಹೈಸ್ಕೂಲು ಕ್ರಿಶ್ಚಿಯನ್ ಹೈಸ್ಕೂಲು, ಮಲ್ಪೆ ಫಿಶರೀಸ್ ಹೈಸ್ಕೂಲು, ಮಣಿಪಾಲ, ಬಾರಕೂರು ಬ್ರಾಹ್ಮಣರ, ಹಿರಿಯಡ್ಕ, ಬೈಲೂರು ಹೈಸ್ಕೂಲಿನ ವಿದ್ಯಾರ್ಥಿಗಳೂ, ಉಡುಪಿ ಬುನಾದಿ ತರಬೇತಿ ಶಾಲೆಯ ತರಬೇತಿ ಶಿಕ್ಷಕರೂ, ಯಂ. ಜಿ. ಯಂ ಕಾಲೇಜಿನ ವಿದ್ಯಾರ್ಥಿಗಳೂ ಭಾಗವಹಿಸಲು ಅನುಕೂಲತೆಯಿದೆ.

ಶಿಬಿರಕ್ಕೆ ಸೇರಬಯಸುವ ವಿದ್ಯಾರ್ಥಿಗಳೂ ವಿದ್ಯಾರ್ಥೀತರರೂ ಅರ್ಜಿಗಳನ್ನು ಯಕ್ಷಾ. ದಾಂತಿ ಪ್ರಧಾನ ಶಿಬಿರಾಧಿಕಾರಿ P O ALEVOOR ಉಡುಪಿ ಇವರಿಗಾಗಲೀ ಶ್ರೀ ಎ. ಜೆ. ಆಲ್ವೆ. S. R. ಥಿಯೇಟರ್ಸ್ ಉಡುಪಿ ಇವರಿಗಾಗಲೀ ಕಳುಹಿಸಿಕೊಡಬಹುದು

ರಾಜ್ಯದಲ್ಲಿ ಹೊಸ ಮಾರಾಟ ತೆರಿಗೆ ಕಾಯಿದೆ ವ್ಯಾಪಾರಸ್ಥರಿಗೆ ಸೂಚನೆ

ಹೊಸ ಮೈಸೂರು ಮಾರಾಟ ತೆರಿಗೆ ಕಾನೂನಿನನ್ವಯ ಇಸ್ಟರಲ್ಲಿಯೇ ಪ್ರಕಟವಾಗಲಿರುವ ನಿಯಮಗಳ ಪ್ರಕಾರ ರಜಿಸ್ಟ್ರೇಷನ್ನು ಮತ್ತು ಲೈಸೆನ್ಸುಗಳಿಗಾಗಿ ಅರ್ಜಿಮಾಡುವುದಕ್ಕೆ 30 ದಿನಗಳ ಅವಕಾಶವಿದೆಯೆಂದು ಮೈಸೂರು ರಾಜ್ಯದ ವಾಣಿಜ್ಯ ತೆರಿಗೆಗಳ ಕಮಿಶನರರು ಎಲ್ಲ ಮಾರಾಟ ತೆರಿಗೆ ಅಧಿಕಾರಿಗಳಿಗೆ ಕಳುಹಿಸಿದ ಸೂಚನಾ ಪತ್ರದಲ್ಲಿ ತಿಳಿಸಿದ್ದಾರೆ. ಮುದ್ರಿತ ಅರ್ಜಿ ನಮೂನೆಗಳು, ಪ್ರಮಾಣ ಪತ್ರಗಳು ಮತ್ತು ಲೈಸೆನ್ಸ್ ನಮೂನೆಗಳನ್ನು ಎಲ್ಲ ಅಧಿಕಾರಿಗಳಿಗೆ ಬಂದೆರಡು ದಿನಗಳಲ್ಲಿಯೇ ಕಳುಹಿಸಲಾಗುವುದೆಂದೂ ಅವರು ಹೇಳಿದ್ದಾರೆ. ಎತ್ತನ್ಮಧ್ಯೆ ವ್ಯವಹಾರಕ್ಕೆ ತಡೆಯಾಗಕೂಡದು. ಹಳೆಯ ಕಾಯಿದೆಯ ಪ್ರಕಾರ ರಜಿಸ್ಟರ್ ಮಾಡಲ್ಪಟ್ಟ ಅಥವಾ ಲೈಸೆನ್ಸು ಪಡೆದ ವ್ಯಾಪಾರಸ್ಥರು ಆ ತಮ್ಮ ಹಳೆಯ ಸರ್ಟಿಫಿಕೇಟು ಅಥವಾ ಲೈಸೆನ್ಸಿನ ಬಲದ ಮೇಲೆ ವ್ಯಾಪಾರವನ್ನು ಮುಂದುವರಿಸಬಹುದು. ಮತ್ತು ಬರಲಿರುವ ನಿಯಮಗಳ ಪ್ರಕಾರ ನೀಡಲ್ಪಟ್ಟ ಕಾಲಾವಧಿಯಲ್ಲಿ ಹೊಸ ರಜಿಸ್ಟ್ರೇಶನ್ ಅಥವಾ ಲೈಸೆನ್ಸಿಗಾಗಿ ಅರ್ಜಿ ಮಾಡಿಕೊಳ್ಳಬೇಕು. ರಜಿಸ್ಟ್ರೇಷನ್‌ಗಾಗಿ ಇಟ್ಟಲೇ ಲೈಸೆನ್ಸ್ ನೀಡಿಕೆಗಾಗಿ ಹೊಸದಾಗಿ ಅರ್ಜಿಮಾಡಿಕೊಳ್ಳಬಯಸುವವರು ಕೈ ಬರಿಹದಲ್ಲಿ ಅರ್ಜಿ ಸಾಕಬಹುದು. ಅಂಥವರಿಗೆ ಕೈ ಬರಿಹದಲ್ಲಿಯೇ ತಾತ್ಕಾಲಿಕ ರಿಜಿಸ್ಟ್ರೇಷನ್ ಅಥವಾ ಲೈಸೆನ್ಸುಗಳನ್ನು ನೀಡಬೇಕೆಂದೂ ಎಲ್ಲ ಮಾರಾಟ ತೆರಿಗೆ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಅದರೂ ವ್ಯಾಪಾರಿಗಳು ಅಕ್ಟೋಬರ್ ೧, ೧೯೫೭ರಿಂದ ಹೊಸ ಮಾರಾಟ ತೆರಿಗೆ ಕಾಯಿದೆಯ ಪ್ರಕಾರವೇ ತೆರಿಗೆ ಮತ್ತು ಫೀ ಹಣ ಸಲ್ಲಿಸಲು ಬಾಧ್ಯರಾಗುತ್ತಾರೆ.

ಮೂಡಬಿದ್ರೆ:—ಶ್ರೀ ಸರಸ್ವತಿ ಸೇವಾ ಸಂಘದ ಆಶ್ರಯದಲ್ಲಿ ದಸರಾ ಸಾಹಿತ್ಯೋತ್ಸವವು ಕಳೆದ ತಾ. 29ರಿಂದ ತಾ. 3-10-57 ರ ವರೆಗೆ ಸ್ಥಳೀಯ ಸಮಾಜ ಮಂದಿರದಲ್ಲಿ ವಿಜೃಂಭಣೆಯಿಂದ ನೆರವೇರಿತು. ಅರಂಭದ ದಿನ ಉತ್ಸವವು ಶ್ರೀ ಎ. ಸೋಮಪ್ಪ ರೈಗಳಿಂದ ಧ್ವಜಾರೋಹಣದಿಂದ ಪ್ರಾರಂಭವಾಯಿತು. ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಡೆ ಎಂ. ಎಲ್. ಎ ಅವರು ಸಾಹಿತ್ಯೋತ್ಸವವನ್ನು ಉದ್ಘಾಟಿಸಿದರು. ಸಂಘದ ವತಿಯಿಂದ ಶ್ರೀ ಹೆಗ್ಡೆಯವರಿಗೆ ಮಾನಪತ್ರವೊಂದನ್ನು ಅರ್ಪಿಸಲಾಯಿತು. ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಎರಡನೇ ದಿನ ಮಹಿಳಾ ಗೋಷ್ಠಿಯು ಶ್ರೀಮತಿ ಆರಾ ಕೆ. ಆರ್. ಕೆ. ಭಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು—ಕುಮಾರಿ ವಿಮಲಾ ಬಾಯಿಯವರು ಸಮಾಜದಲ್ಲಿ ಮಹಿಳೆಯರ ಸ್ಥಾನಮಾನಗಳ ಕುರಿತು ಭಾಷಣಮಾಡಿದರು. ಶ್ರೀಮತಿ ಅನಸೂಯಾ ಬಿ ಸೆಟ್ಟಿಯವರಿಂದ ಸಂಗೀತ ಕಚೇರಿ ಜರಿಗಿತು ಮೂರನೇ ದಿನ ವಿಜ್ಞಾನಗೋಷ್ಠಿಯು ಶ್ರೀ ನಾರಾಯಣ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಿಗಿತು ಶ್ರೀಗಳಾದ ಯು ಲಕ್ಷ್ಮೀನಾರಾಯಣಾಚಾರ್ಯ, ಪಿ. ಗುರುರಾಜ ಭಟ್ಟ ಇವರ ಭಾಷಣಗಳಾದುವು. ನಾಲ್ಕನೇ ದಿನ ರಾಜಕೀಯ ಗೋಷ್ಠಿಯು ಶ್ರಿ ವಿ. ಎಸ್ ಕುಡುವರ ಅಧ್ಯಕ್ಷತೆಯಲ್ಲಿ ಜರಗಿ. ಡಾ! ಟಿ. ಮಾಧವ ಪೈ; ಶ್ರೀ ಪರ್ಯಾ ಲಕ್ಷ್ಮೀನಾರಾಯಣ ಆಳ್ವ ಮೊದಲಾದವರ ಭಾಷಣಗಳಾದುವು. ಕೊನೆಯ ದಿನ ಸಾಹಿತ್ಯಗೋಷ್ಠಿಯು ಶ್ರೀ ಎ. ನರಸಿಂಹ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಎಸ್. ಕೃಷ್ಣಭಟ್ಟ ಶ್ರೀ ಟಿ. ಗಭುಚಂದ್ರ ಸೆಟ್ಟಿ ಮೊದಲಾದವರ ಉಪನ್ಯಾಸಗಳಾದುವು. ಪ್ರತಿ ದಿನವೂ ವಿವಿಧ ವಿನೋದಾವಳಿಗಳಿದ್ದುವು. ಕಾರ್ಯದರ್ಶಿ ಶ್ರೀ ಕೆ ಕಾಂತರೈಗಳು ಧನ್ಯವಾದಗಳನ್ನರ್ಪಿಸಿದರು.

ಬಂಗಾಡಿ. ತಾ. 2 ರಲ್ಲು ದ. ಕ ಜಿಲ್ಲಾ ಬೋರ್ಡಿನ ವತಿಯಿಂದ ಗ್ರಾಮಸ್ವಾಸ್ಥ್ಯಕ್ರೀಯೊಂದನ್ನು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಸುಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮೆಡಿಕಲ್ ಆಫೀಸರ್ ಡಾ. ಎ. ತಿಮ್ಮಯ್ಯನವರು ಉದ್ಘಾಟಿಸಿದರು, ಡಾ. ಎಸ್. ಎಂ. ಮಾದೇಶಯ್ಯ, ಡಾ. ಬಿ. ನಾರಾಯಣರಾವ್ ಮೊದಲಾದವರು ಸಂದರ್ಭೋಚಿತ ಭಾಷಣಮಾಡಿದರು.

ಫರಂಗಿ ಪೇಟೆ—ಶ್ರೀ ರಾಮಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ದಸರಾ ಮಹೋತ್ಸವವು ತಾ. 30—9 57ರಿಂದ 30-10-57 ವರೆಗೆ ಬಹಳ ವಿಜೃಂಭಣೆಯಿಂದ ನಡೆಯಿತು. ತಾ. 2-10-57ರಂದು ಗಾಂಧೀ ಜಯಂತಿಯು ಶ್ರೀ ಕೆ. ಶ್ರೀನಿವಾಸ ಕಾಮತರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಮಕ್ಕಳಿಗೆ ಹಾಲಿನ ಪಾಯಸದ ವಿತರಣೆಯನ್ನೂ ಮಾಡಲಾಯಿತು. ರಾತ್ರಿ ಫರಂಗಿಪೇಟೆ ಯುವಸ್ಥರ ಶಾಲೆಯವರ ನೇತೃತ್ವದಿಂದ ಭಜನೆ, ಸಂಸ್ಕೃತೀ ಸೂಜಿ ಇತ್ಯಾದಿಗಳು ನೆರವೇರಿಸಲ್ಪಟ್ಟುವು.

ನೀಲಾವರ. ತಾ 30.8-57 ರಂದು ನೀಲಾವರ ಮಹಿಷಮರ್ಧಿನಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀಯುತ ಕೆ. ರಾಜೀವ ಸೆಟ್ಟಿ, ಬಿ. ಎ. ಬಿ. ಟಿ ಅವರ ಅಧ್ಯಕ್ಷತೆಯಲ್ಲಿ ಶಾರದಾಪೂಜಾ ಕಾರ್ಯಕ್ರಮ ಸಾಂಗವಾಗಿ ನೆರವೇರಿತು. ಶಾಲಾ ಪ್ರಾಧ್ಯಾಪಕ ಮ. ಬಾಲಕೃಷ್ಣ ಸೆಟ್ಟರು ವರದಿ ಓದಿದರು; ಮಕ್ಕಳ ವಿವಿಧ ಚಟುವಟಿಕೆಯ ಪ್ರದರ್ಶನವಾಗಿ ಶ್ರೀ ಕೆ. ಎಸ್. ಮಕ್ಕತ್ತಾಯರು ಅಧ್ಯಾಪಕರ ಕೆಲಸಕ್ಕೆ ಮೆಚ್ಚುಗೆ ಸೂಚಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಶಾಲೆಯ ವಿವಿಧ ಕಾರ್ಯಕ್ರಮವನ್ನು ಅವರೋಚಿತವಾಗಿ ಇದು ಕೆಲವು ಮಟ್ಟಿಗೆ ಹ್ಯಾಸ್ಕೂಲಿಗೂ ಮಿರುತ್ತದೆ ಎಂದರು ವಿದ್ಯಾರ್ಥಿಗಳಿಂದ "ನನ್ನ ಗೋಪಾಲ" ಸಂಗೀತನಾಟಕ, "ಕೃಷ್ಣ ಸಂಧಾನ" ಯಕ್ಷಗಾನ ನಾಟಕ ಉತ್ತಮವಾಗಿ ಪ್ರದರ್ಶಿಸಲ್ಪಟ್ಟಿತು ಮೆನೇಜರ್ ಶ್ರೀ ಅಣ್ಣಪ್ಪ ಭಟ್ಟರಿಂದ ಸಿಹಿತಿಂಡಿ ಹಂಚಲಾಯಿತು.

ತಲ್ಲೂರು ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಗಾಂಧೀಜಯಂತಿಯನ್ನಾಚರಿಸಲಾಯಿತು. ಧ್ವಜಾರೋಹಣಾನಂತರ ಹೆರೆನಟೆಗೆ ನಡೆದು ಶಾಲೆಯಲ್ಲಿ ಶ್ರೀ ಟಿ. ವಿಷ್ಣು ಕಾಮತರವರ ಅಧ್ಯಕ್ಷತೆಯಲ್ಲಿ ಸಭೆಸೇರಿತು. ಪ್ರಾರ್ಥನೆಯಾದನಂತರ ಶ್ರೀ ಸ್ವಾ. ಸಭಾರಾಮಾಂಯರು ತಾನೇ ವಿರಚಿಸಿದ ಬಾಪೂಜಿಯ ಕುರಿತಾದ ಕವನವೊಂದನ್ನು ಹಾಡಿದರು ಆ ಮೇಲೆ ಶ್ರೀಗಳಾದ ಪಿ. ರಾಧಾಕೃಷ್ಣರಾವ್, ಎ. ನಾಗಪ್ಪ ಹೆಬ್ಬಾರ್, ಎಮ್. ರಘುನಂದನರಾವ್ ಇವರ ಸಂದರ್ಭೋಚಿತ ಭಾಷಣಗಳಾದುವು. ಜೋ. ಹಾ. ಎ. ಶಾಲೆಯಲ್ಲಿ ಅಪರಾಹ್ನ ಗಂಟೆ 3ಕ್ಕೆ ಗ್ರಾಮಸ್ವಚ್ಛತೆ ಸಹಕಾರದಿಂದ ಭಜನೆ ಮುಂತಾದ ಕಾರ್ಯಕ್ರಮಗಳೊಂದಿಗೆ ಶ್ರೀ ಶಾರದಾ ಪೂಜೆಯೂ ಸಾಂಗವಾಗಿ ನೆರವೇರಿತು.

ಶಿರ್ವ—ಇಲ್ಲಿಯ ಕಲಾರಂಧಾನ ಸಂಘದ ವತಿಯಿಂದ ತಾ 60 — 9—57ರಿಂದ 3—10 57ರ ವರೆಗೆ ದಸರಾ ಮಹೋತ್ಸವವು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಪಂಚಾಯತಬೋರ್ಡು ಅಧ್ಯಕ್ಷ ಶ್ರೀ ಯಸ್. ಅಣ್ಣಯ್ಯ ಹೆಗ್ಡೆಯವರು ಉತ್ಸವದ ಉದ್ಘಾಟಣೆಯನ್ನು ಮಾಡಿದರು. ಶ್ರೀಗಳಾದ ಸೇತುಮಾಧವರಾವ್, ಎಲ್. ಮಂಡೋನ್ಸ್, ಟಿ. ವಿಠಲ ಶೆಣೈ, ಬಿ ಜಯರಾಮ ಸೆಟ್ಟಿ, ಎಂ. ಗೋವಿಂದರಾವ್, ಕೆ. ಜಗನ್ನಾಥ ಸೆಟ್ಟಿ ಕೆ. ಶ್ರೀನಿವಾಸ ಉಡುಪ, ಮೊದಲಾದವರು ಸಿವಿದ ವಿಷಯಗಳ ಮೇಲೆ ಬೇರೆ ಬೇರೆ ದಿನಗಳಲ್ಲಿ ಭಾಷಣವಿತ್ತರು. ಪ್ರತಿದಿನವೂ ಸಂಜೆ ವಿವಿಧ ವಿನೋದಾವಳಿ ಕಾರ್ಯಕ್ರಮಗಳಿದ್ದವು.

ದೇವಲ್ಕುಂದ:—ಸ್ಥಳೀಯ ವಿಜಯಾ ಪ್ರಾಥಮಿಕ ಶಾಲೆಯಲ್ಲಿ ಶಾರದಾ ಪೂಜೆಯ ಅಂಗವಾಗಿ ಶ್ರಿ ಸಿ ರಾಧಾಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಭೆಜರಗಿ ವಿವಿಧ ಕಾರ್ಯಕ್ರಮಗಳು ನೆರವೇರಿದವು.

ಸುರತ್ಕಲ್. ಮುಕ್ಕ ಮಿತ್ರ ಪಟ್ಟಣ ಗಂಗಯ ಸ್ಮಾರಕ ರಾತ್ರಿಶಾಲೆಯಲ್ಲಿ ತಾ. 1ರಂದು ದಸರಾ ಹಬ್ಬವು ಮುಟ್ಟೋಸಾಧ್ಯಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಸುರತ್ಕಲ್ ಅಗ್ರಹಾರ ಕರಿ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ 30ರಲ್ಲಿ ಶ್ರೀ ಐ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ತಾ 1ರಂದು ಸುರತ್ಕಲ್ ವಿದ್ಯಾದಾಯಿನಿ ಪ್ರಾಸ್ಕೂಲಿನಲ್ಲಿ ನಾಡಹಬ್ಬ ಮತ್ತು ಶ್ರೀ ಸುರತ್ಕಲ್ ಸುಬ್ಬರಾಯರ ಶಸ್ತ್ರಾಭಿಷೇಕ ಮೂರ್ತಿ ಶಮೂರಂಭಗಳು ಶ್ರೀ ಕಡಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿನೆರವೇರಿದುವು. ಶ್ರೀಗಳಾದ ಇಡ್ಯ ಶಿವ್ವನಾಭಯ್ಯ, ಕೆ. ವೆಂಕಟರಾಯಾಚಾರ್ಯ, ಬಿ. ಕೇಶವ ಸೆಟ್ಟಿಗಾರ ಇವರು ಶ್ರೀ ಸುಬ್ಬರಾಯರ ಗುಣಕಥನಮಾಡಿದರು. ಬಳಿಕ ಶಾಲಾ ವಿದ್ಯಾರ್ಥಿಗಳ ಮತ್ತು ಸನ್ಮಾನ ಸಮಿತಿಯವರು ಸಂಗ್ರಹಿಸಿದ ನಿಧಿಯನ್ನು ಶ್ರೀ ಸುಬ್ಬರಾಯರಿಗೆ ಸಮರ್ಪಿಸಿ ಅಧ್ಯಕ್ಷರ ಭಾಷಣಾನಂತರ ಶ್ರೀ ಸುಬ್ಬರಾಯರು ಉತ್ತರವಿತ್ತರು. ಕೊನೆಯಲ್ಲಿ ಮನರಂಜನೆಯ ಕಾರ್ಯಕ್ರಮಗಳಿದ್ದುವು.

ಸೂಡ.—ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ. 30ರಲ್ಲಿ ಪಶೇಲ್ ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸೂಡ ಮೇಲೆ ಮುಂಡಾಜಾಲು ಸಂಕಪ್ಪ ಸೆಟ್ಟಿರ ಉದಾರ ಸಹಾಯದಿಂದ ಶಾರದಾ ಪೂಜೋತ್ಸವಗಳು ವಿಜೃಂಭಣೆಯಿಂದ ಜರಗಿದುವು.

ಕಾಂತಾವರ—ದೇಲಾದಿ ಪ್ರಾಥಮಿಕ ಶಾಲೆಯಲ್ಲಿ ತಾ. 30ರಿಂದ ಶಾರದಾ ಪೂಜೋತ್ಸವವು 3 ದಿನಗಳ ವರೆಗೆ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು. ಶ್ರೀಗಳಾದ ಕೆ ನಾರಾಯಣಾಚಾರ್ಯ, ಎಂ. ವಿಠಲ ಸೆಟ್ಟಿ, ಕುಮಾರಿ ಬಿ. ಗಿರಿಜ, ಶ್ರೀ ಕೆ. ರಾಮ ಭಟ್ಟ, ಶ್ರೀ ಕೆ. ಶಿವರಾಮ್, ಶ್ರೀ ಕೆ. ಸುರೇಶೋತ್ತಮ ಭಟ್ಟರ ಮೊದಲಾದವರು ಇದರಲ್ಲಿ ಭಾಗವಹಿಸಿದ್ದರು. ಶ್ರೀ ಕೆ. ವಾಸರ ಣ್ಣಾಳ್ವರು ಧನ್ಯವಾದ ಸಮರ್ಪಿಸಿದರು.

ಪೆಬ್ರಿ—ಸಮಾಜ ಕಲ್ಯಾಣ ಯೋಜನೆಯಲ್ಲಿನ ಗ್ರಾಮಸೇವಾ ಕಾರ್ಯಗಳಲ್ಲಿ ಪ್ರಾಮುಖ್ಯ ಪಾತ್ರವಹಿಸಿದ ಪೆಬ್ರಿ ಪಟೇಲ ಶ್ರೀ ಎಜ್, ಭುಜಂಗ ಬಲ್ಲಾಳರಿಗೆ ಮೈಸೂರು ದಸರಾ ಮಹೋತ್ಸವ ಕಾಲದಲ್ಲಿ ತಾ. 30 ರಂದು ಮೈಸೂರು ಮುಖ್ಯಮಂತ್ರಿಗಳು ಪಾರಿತೋಷವಿತ್ತು ಗೌರವಿಸಿದರು.

ತಾ. 6ರಲ್ಲಿ ಜಿಲ್ಲಾಕಲೆಕ್ಟರ್ ಶ್ರೀ ಹೊಂಬಾಳಯ್ಯನವರು ಇಲ್ಲಿಗೆ ಆಗಮಿಸಿ ಸರಕಾರಿ ಆಸ್ಪತ್ರೆ ಬೋರ್ಡ್ ಹೈಸ್ಕೂಲ್, ಸಮಾಜ ಮಂದಿರ ಮೊದಲಾದ ಸಂಸ್ಥೆಗಳಿಗೆ ಭೇಟಿಯಿತ್ತರು. ಶ್ರೀಗಳಾದ ಎಚ್. ಬೀಮ ಬಲ್ಲಾಳ, ಕೆ. ಪಿ. ಮುಕುಂದ ಪ್ರಭು ಮೊದಲಾದವರು ಕಲೆಕ್ಟರರನ್ನು ಸ್ವಾಗತಿಸಿ ಸಂಸ್ಥೆಗಳ ಪರಿಚಯಮಾಡಿಕೊಟ್ಟರು. ನಂತರ ಜರಗಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಎಚ್. ಭುಜಂಗ ಬಲ್ಲಾಳರ ಉತ್ಸಾಹದಿಂದ ಹೆಬ್ರಿಯಲ್ಲಾದ ಅಭಿವೃದ್ಧಿಗೆ ಕಲೆಕ್ಟರರು ಮೆಚ್ಚುಗೆ ಸೂಚಿಸಿದರು. ಅರಂಭದಲ್ಲಿ ಶ್ರೀ ಎಚ್. ಸಂಜೀವ ನಾಯ್ಕರು ಕೆಲವು ಕೊರತೆಗಳನ್ನು ಕಲೆಕ್ಟರರಿಗೆ ನಿವೇದಿಸಿದರು. ಅಂತ್ಯದಲ್ಲಿ ಶ್ರೀ ಎಚ್. ಬಿ. ಕೆಮ್ಮಾಯರು ಧನ್ಯವಾದಗಳನ್ನಿತ್ತರು

ಮೆತ್ತೊರು—ಮೈಸೂರು ರಾಜ್ಯ ಸರಕಾರದವರು 1957ನೆ ಸಾಲಿನ ಬಾಬ್ತು ದಕ್ಷಿಣಕನ್ನಡ ಜಿಲ್ಲೆಗೆ ಮಂಜೂರು ಮಾಡಿದ ವಿಟ್ಟು ಮತ್ತು ಮೆತ್ತೊರು ಫಿಕಾರಗಳ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಎರಡು ಬ್ಲೋಕುಗಳು ಇದೇ ತಾ 2ರಂದು ಉದ್ಘಾಟಿಸಲ್ಪಟ್ಟವು.

ಮೆತ್ತೊರು ತಾಲೂಕು ಮುಡುಕ್ಕೆ ಗ್ರಾಮಸ್ಥರು ಕಡೇ ಗಾವಿ ಯೋಜನೆ ಮತ್ತು ಗ್ರಾಮಸ್ವಚ್ಛತೆ ಸಹಾಯದಿಂದ ಕಟ್ಟಿಸಿದ ಹೊಸ ಶಾಲಾಕಟ್ಟೋಣದ ಪ್ರವೇಶ ಸಮಾರಂಭವು ವಿವಿಧ ಕಾರ್ಯಕ್ರಮಗಳಿಂದ ಶ್ರೀ ಎಸ್. ಯು. ಪರಕುರೆಮನ ನಾಯ್ಕ ಇವರಿಂದ ಉದ್ಘಾಟನೆಯಾಗಿ ನೆರವೇರಿಸಲ್ಪಟ್ಟಿತು ಒಳಿಕ ಶ್ರೀ ಕೆ ಪದ್ಮಯ್ಯಗೌಡರ ಅಧ್ಯಕ್ಷತೆಯಲ್ಲಿ ಹಲವರ ಭಾಷಣ ಶ್ರೀ ಎಂ ಅಂ ನಾರಾಯಣ ಅವರಿಂದ ಮ. ಗಾಂಧಿ, ನೆಹರೂರವರ ಭಾವಚಿತ್ರ ಅನಾವರಣ ಬೆಳ್ಳಾರೆ ಗ್ರಾಮಸೇವಾ ಸಂಘದವರಿಂದ ಯಕ್ಷಗಾನ ಮೊದಲಾದ ಕಾರ್ಯಕ್ರಮಗಳು ನೆರವೇರಿದುವು.

ಬ್ರಹ್ಮಾವರ— ಸ್ಥಳೀಯ ಕರ್ನಾಟಕ ಸಂಘದ ಆಶ್ರಯದಲ್ಲಿ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಹಳೇ ವಿದ್ಯಾರ್ಥಿ ಸಂಘದ ವತಿಯಿಂದ ತಾ. 2ರಂದು ಶ್ರೀ ಬಿ ಎಚ್. ಶ್ರೀಧರ ಅವರ ಅಧ್ಯಕ್ಷತೆಯಲ್ಲಿ ನಾಡಹಬ್ಬವು ಆಚರಿಸಲ್ಪಟ್ಟಿತು. ಶ್ರೀ ಬಿ ವಿ. ಮಾಧವ ರಾಯರು ಸ್ವಾಗತಿಸಿದರು. ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರು ಸಂದೇಶಗಳನ್ನು ಓದಿದರು. ಕರ್ನಾಟಕ ಸಂಘದ ಪರವಾಗಿ ಚಿತ್ರಿಯ ಸಂಗೀತ ವಿದ್ವಾಂಸರಾದ ಶ್ರೀ ಕೆ. ಮಂಜುನಾಥಯ್ಯನವರಿಗೆ ಮಾನಪತ್ರ ಮತ್ತು ಉಡುಗೊರೆಗಳನ್ನು ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಭಾಷಣ, ಮನರಂಜನೆ ಕಾರ್ಯಕ್ರಮಗಳೂ ಇದ್ದುವು.

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ
ಹಿರೋಶಿಮಾದಿಂದ ಜಿನೇವ
ಬರೆದವರು:
ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ, ನವಬೆಹಲಿ.
ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.
ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ
ಉತ್ತಮ ಕಾಗದ. ಬೆಲೆ: ರೂ. ೧—೮—೦.
ನವಯುಗ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಕವಿತಾ ಕಾಮಿನಿ: ಭಾಗ: ೨ ಕವಿ: ಎಸ್. ವೆಂಕಟರಾಜ. (ಅರುವತ್ತು ಕವನಗಳ ಸಂಗ್ರಹ) ಪ್ರಕಾಶಕರು: ಶ್ರೀ ಕೃಷ್ಣ ಪ್ರಕಾಶನ ಉಡುಪಿ. ಪುಟ 151. ಬೆಲೆ ರೂ 2—4—0.

ಹೆಸರಿನಂತೆ ಈ ಪುಸ್ತಕವು ರಸಪುಷ್ಟಿ, ಭಾವ ಪರಿಪೂರ್ಣತೆಗಳನ್ನೊಳಗೊಂಡ ಕವಿತಾ ಕಾಮಿನಿಯೇ ದೊಡ್ಡ ಕಲ್ಪನಾ ಸಾಗರದಲ್ಲಿ ಕವಿ ಭಾವನೆಗಳು ತೆರೆತೆರೆಯಾಗಿ ಎದ್ದು ಅಲೌಕಿಕವಾದ ಆನಂದವನು ಒಟುಮಾಡಿದುದರ ಪರಿಣಾಮವಾಗಿ ಕವಿಯ "ಗೀತಗಳೆಲ್ಲವುಗಳಲ್ಲೂ ಒಂದು ವಿಧವಾದ ಮೋಹಕತೆ ಎದ್ದು ಕಾಣುತ್ತವೆ.

ಯಸ್. ವೆಂಕಟರಾಜರು ಕತೆಯನ್ನು ಬರೆಯಲಿ ಕವಿತೆಯನ್ನು ಬರೆಯಲಿ ಅಲ್ಲೊಂದು ಇನಿದಾದ ನಾದರ್ಸನತೆ, ಆಸ್ತಿತೆ ಕಂಡುಬರುತ್ತಿರುವುದು ಅವರ ವೈಶಿಷ್ಟ್ಯ.

"ಪುನರಾಗಮನ"ದಲ್ಲಿ

ಕಾಡಿನೆನೆಯಾಳದಲಿ ಹುಗಿದ ಕೋಗಿಲೆ
ಯೊಂದು!
ಎನಿತೇ ಹಾಡನು ಹಾಡಿ ನಲಿದಿರುವುದೆಂತು!
ಕೀಡುವೆಲರಲಿ ಕೊರಳ ಮೆಲುಮಾಮೆಜ್ಜುಗೆಯೂಡಿ

ಭಾವಭಾವನವನಲಂತೆ ತೇಲಿರುವುದೆಂತು ಎಂಬ ಜಾಹದಿ ಈ ಮಾತು ಈ ಕಾರ್ಯಕಾರಣಗಳಿಗೆ ಸೋಪಾನಪಂಡಿಯಾಗಿದೆ. ಅಸ್ತೇ ಸೊಗಸಾಗಿ "ಬಳಮಾತಿ"ನಲ್ಲಿ—

"ಅರೊಡನೆಯು ಹೇಳದಿರು
ಅರೊಡನೆಯು ಕೇಳದಿರು
ಅರೊಡನೆಯು ಹಿತವಾಸಿಸಿ
ಮನದಣಿಕೆಯ ಸಾರದಿರು"

ಎಂಬುದು ಓದಿ ಯೋಚಿಸಿ ಮೆಚ್ಚುವಂತಹದೇ.

ಮತ್ತೆ ಈ ಕವಿ ಉಮರನಿಗೆ ಸರಿಸಮಿಲಂತಿದ್ದಾರೆ ಎಂಬುದಕ್ಕೆ

"ತಳೆರು ಚೆಂದುಟಿಗಳಲಿ
ಮೋಸ ಮದಿರೆಯನಿರಿಸಿ
ಪೃಥಯಸೊಲವನೆಯ ಹೆಸರಿಗೆ
ಕರೆ ಕರೆವೆಯೇನು?
ಬಿಗಿದ ತೋಳಿನ ಸೆರೆಯೊಳೆದೆಯ
ಬಟ್ಟಲ ತುಂಬಿ
ಸರಸ ಸಾಯುಜ್ಯದಲಿ ಮೈ
ಮರೆವೆಯೇನು?"

ವಸಂತೋತ್ಸವದಲ್ಲಿ ಅಗ್ರಪೂಜೆಗೊಳ್ಳುವ ಕಾಮದೇವನಿಂದ ಹೊರಹೊಮ್ಮುವ ಪುಷ್ಪಬಾಣಗಳಂತೆ, ಕನ್ನಡ ಸಾಹಿತ್ಯದ ಸೌಂದರ್ಯ ರಸವಿಭಾಗದೊಡತಿ, ಕವಿ ವೆಂಕಟರಾಜರ "ಕವಿತಾ ಕಾಮಿನಿ" ಹರಿದು ಬಂದಿದ್ದಾಳೆ; ನಲಿದು ಬಂದಿದ್ದಾಳೆ.

ಕಾದಂಬರಿಯಂತೆ ಇದು ಇಂಜಕ್ಷನ್ ಆಗಲಾರದು ಆಸವ ಅರಿಸ್ಟಗಳಂತೆ ಬಿಡದೆ ಸೇವಿಸಿದರೆ ಉತ್ತಮ ಆನಂದವನ್ನು ತರಬಲ್ಲುದು. ಅಂತಹ ಚಿತ್ತಸ್ಥೈರ್ಯ, ಸೌಂದರ್ಯಾನುಭಾವವಿರುವ ಪುಣ್ಯಾತ್ಮರಿಗೆ ಇದು "ಪರಸ ಸಾಯುಜ್ಯವೆ."

ಭಾರತೀಯ ಆರೋಗ್ಯ ಸೂತ್ರಗಳು—(ವಿಸ್ತೃತ ಮತ್ತು ಪರಿಷ್ಕೃತ—ಎರಡನೇ ಆವೃತ್ತಿ.) ಲೇಖಕ ಮತ್ತು ಪ್ರಕಾಶಕರು—ಆಯುರ್ವೇದ ವಿಶಾರದ ಮತ್ತು ಭೂಷಣ ಡಾ| ಐ. ಕೆ. ಪಿ. ಶರ್ಮಾ ಎ ಯೂ. ಎ. ಸಿ. ಮಂಗಳೂರು-3 ಪುಟ 93 ಬೆಲೆ 62 ನ ಪೈ.

ಈ ಗ್ರಂಥವನ್ನು ರೇಖಾಕರು ತನ್ನ ಗುರುಗಳಾದ ಡಾ. ಆ. ಲಕ್ಷ್ಮೀಪತಿ ಮತ್ತು ಎಂ. ವಿ. ಶಾಸ್ತ್ರೀ ಇವರಿಗೆ ಅರ್ಪಣೆ ಮಾಡಿದ್ದಾರೆ.

ಈ ಪುಸ್ತಕದಲ್ಲಿ ಆರೋಗ್ಯ ಶಾಸ್ತ್ರದ ಪ್ರಾಧಾನ್ಯತೆ, ಇತ್ಯಾದಿ 48 ಪುಟ್ಟ ಪ್ರಕರಣಗಳಿವೆ. ಭೃತ್ಯವಾರಿಗೆ ನಿದ್ರೆಯಿಂದ ಏಳುವ ಸಮಯ ಮೊದಲಾದ ಲಕ್ಷಣ ಹಾಗೂ ಯೋಗಾಸನ ಅಥವಾ ಯೋಗ ವ್ಯಾಯಾಮಗಳಿಂತಹ ಗುರು ವಿಷಯಗಳೂ ಉಲ್ಲೇಖಿಸಲ್ಪಟ್ಟಿವೆ. ವಿವಿಧ ಆಸನಗಳ ಚಿತ್ರಗಳೂ ಇವೆ.

ಆರೋಗ್ಯ ಸೂತ್ರಗಳನ್ನು ಅನುಸರಿಸಿ ಜೀವನದ ಪ್ರಥಮಾವಶ್ಯಕತೆಯಾದ ದೇಹದಾರ್ಢ್ಯತೆಯನ್ನು ಸಂಪಾದಿಸಿಕೊಳ್ಳಬೇಕೆಂಬ ಮಾತಿಗೆ ಎರಡಿಲ್ಲ. ಆರೋಗ್ಯ ಸೂತ್ರಗಳ ಜ್ಞಾನವು ನಮ್ಮ ಜನತೆಗೆ ಇನ್ನೂ ಸಾಕಷ್ಟು ಆಗಿಲ್ಲವೆಂಬ ಮಾತೂ ಒಪ್ಪತಕ್ಕದ್ದು. ಮುಂದಿನ ಜನಾಂಗವಾದರೂ ಆರೋಗ್ಯಕಾಯರಾಗಿ ಬಾಳಬೇಕಾದರೆ ಶಾಲೆ ಕಾಲೇಜುಗಳಲ್ಲಿ ಈ ಸೂತ್ರಗಳನ್ನು ಕಲಿಸುವುದು ಅಗತ್ಯ ಅಂತಹ ಕಾರ್ಯಗಳಿಗೆ ಈ ಪುಸ್ತಕ ಕೈಪಿಡಿಯಾಗಿದೆ. ಮಾತ್ರವಲ್ಲ ಜನಸಾಮಾನ್ಯರೂ ಈ ಪುಸ್ತಕದಿಂದ ತಿಳಿದುಕೊಳ್ಳಬೇಕಾದ ಸಂಗತಿಗಳು ತುಂಬಾ ಇವೆ.

ಇಲ್ಲಿ ಒಂದು ಮಾತು ಹೇಳಬೇಕಾಗುತ್ತದೆ. ಅದು ಜಾಹೀರಾತುಗಳ ಕುರಿತು. ಇಂತಹ ಒಂದು ಉತ್ತಮ ಅವಶ್ಯಕತೆಯ ಕೈಪಿಡಿಯನ್ನು ಜಾಹೀರಾತುಗಳ ಜೋಡಣೆಯಲ್ಲಿದ್ದ ಪ್ರಕಟಿಸಲು ಸಾಧ್ಯವಿಲ್ಲದಿರುವುದು ಕನ್ನಡ ನಾಡಿನ ಲೇಖಕ—ಪ್ರಕಾಶಕರ ಆರ್ಥಿಕ ಸ್ಥಿತಿಯ ದ್ಯೋತಕ. ಅವರಿಗೆ ಜನತೆ ಸಲಿಸುವ ಪ್ರೋತ್ಸಾಹದ ಪ್ರತೀಕ ಅದರೂ ಒಂದು. ಹೆಗ್ಗಳಿಕೆ ಇಲ್ಲಿ ಪ್ರಕಟಿಸಲ್ಪಟ್ಟ ಜಾಹೀರಾತುಗಳು ಉಚ್ಚಮಟ್ಟದವುಗಳೆಂದೇ ನಾವು ಸಂತೈಸಿಕೊಳ್ಳಬೇಕು.

ಆಳವಾದ ವ್ಯಾಸಂಗ, ಪ್ರತ್ಯಕ್ಷ ಜ್ಞಾನ, ಭಾಷಾ ಪಾಂಡಿತ್ಯಗಳಿರುವ ಪಾತ್ರವಲ್ಲಿ ಉತ್ಪಾದಿಸಿರುವ ಇಂತಹ ಕೃತಿಗಳ ಲೇಖಕ—ಪ್ರಕಾರಕರನ್ನು ಸಾರ್ಥವತ್ತಾಗಿ ಪ್ರೋತ್ಸಾಹಿಸಬೇಕು

—ದಾಂತಿ

ವಿಕ್ರಮ: ವಿಜಯದರಸು ವಿಶೇಷಾಂಕ. ಸಂಪಾದಕರು ಶ್ರೀ ಬಿ ಎಸ್. ಎನ್. ಮಲ್ಯ ಕೇಶರಿ ಪ್ರೆಸ್, ಚಾಮರಾಜ ಪೇಟೆ, ಬೆಂಗಳೂರು ತ. ಕ್ರೌನ್ ¼ ಅಕಾರದ ೨೦೦ ಪುಟಗಳು. ಬೆಲೆ 0—12—0.

ಈ ಸಂಚಿಕೆಯಲ್ಲಿ ಶ್ರೀ ಗುರೂಜಿ, ಪ್ರೊ. ಎಸ್. ವಿ. ವೆಂಕಟರಾಮ್, ಶ್ರೀ ಗೋಪಿಂದ ಪೈ, ಡಾ ಸಂಪೂರ್ಣಾನಂದ, ಡಾ. ಪ. ಸಾ. ವೆಂಕಟಸ್ವಾಮಿ ಶೆಟ್ಟಿ, ಶ್ರೀ ಬಿ ವಿ ಬಾಳಿಗಾ, ಶ್ರೀ ಧಾರವಾಡ ರಾಮಾಜೀ ಜೋಶಿ, ಶ್ರೀ ದಿ. ಆರ್. ರಾಮಯ್ಯ, ಶ್ರೀ ಜಗನ್ನಾಥ ರಾವ್ ಜೋಶಿ, ಶ್ರೀ ಗ ದ. ಖಿಡಿ, ಶ್ರೀ ಭಾಪೂರಾವ್ ವೇರಣಾಂತೆ, ಶ್ರೀ ನಂ. ಮಧ್ವರಾವ್, ಶ್ರೀ ಕೃಷ್ಣ ಶ್ರೀ ಎಸ್. ತಿರುಮಲೇಶ್ವರ ಬಟ್ಟ ಮೊದಲಾದವರ ವಿಚಾರ ಪರಿಪೂರ್ಣ ಲೇಖನ, ಕವನಗಳಿದ್ದು, ಸಂಚಿಕೆಯು ವಾಙ್ಮಯಸಿರಿಯೂ ಸಂಗ್ರಹಣೆಯೂ ಆಗಿದೆ ಶ್ರೀ ರಾಮಚಂದ್ರನು ರಾಮೇಶ್ವರ ದಲ್ಲಿರುವ ಈಶ್ವರ ಲಿಂಗವನ್ನು ಪೂಜಿಸುತ್ತಿರುವ ತ್ರಿವರ್ಣರಂಜಿತ ಮುಖಪತ್ರವು ಸಂಚಿಕೆಯ ಸೊಬಗನ್ನು ಹೆಚ್ಚಿಸಿದೆ ವೃತ್ತಪತ್ರಿಕೆಗಳ ಕಾಗದ ಬೆಲೆಯು ಇಮ್ಮಡಿಯಾಗಿರುವ ಈ ಕಾಲದಲ್ಲಿ ಇಷ್ಟು ಗಾತ್ರದ ವಿಶೇಷಾಂಕವನ್ನು ಪ್ರಕಟಿಸಿದ ಸಂಪಾದಕರ ಸಾಹಸವು ಸ್ತುತ್ಯರ್ಹವೆ.

The Divine Life: ಡಿವೈನ್ ಲೈಫ್ ಸೊಸೈಟಿಯ ಸ್ಥಾಪಕ, ಅಧ್ಯಕ್ಷ ಶ್ರೀ ಸ್ವಾಮಿ ಶಿವಾನಂದ 71ನೇ ಜನ್ಮದಿನಾಚರಣೆಯ ಸ್ಮರಣೆಗಾಗಿ ಪ್ರಕಟಿಸಿದ ವಿಶೇಷ ಸಂಚಿಕೆ, ಸಂಪಾದಕರು ಶ್ರೀ ಶಿವಪ್ರೇಮ್, ಶಿವಾನಂದ ನಗರ, ಋಷಿಕೇಶ, ಯು ಪಿ. ಕ್ರೌನ್ ¼ ಅಕಾರದ ಸುಮಾರು 250 ಪುಟಗಳು.

ಈ ಸಂಚಿಕೆಯಲ್ಲಿ ಶ್ರೀ ಸ್ವಾಮಿ ಶಿವಾನಂದ, ಡಾ. ಕೆ. ಸಿ ವರದಾಚಾರಿ, ಡಾ ಹೊವಾರ್ಡ್ ಜೋನ್ಸ್ ಜಿಟ ಕೊ, ಕರ್ನೆಲ್ ಎ. ಎನ್. ಎಸ್. ಮೂರ್ತಿ, ಅರ್ಚಿಬಿಸಪ್ ಡಾ ಡಬ್ಲು, ಎಫ್ ಅಲ್ಗಸೆ, ಡಾ ಮಹಮ್ಮದ್ ಪಕ್ಷಾಜಿ ಸೈಯದ್, ಶ್ರೀ ಜೋಸೆಫ್ ಬ್ರೌನ್, ಶ್ರೀ ಕೆ ಎಸ್ ರಾಮಸ್ವಾಮಿ ಶಾಸ್ತ್ರಿ, ಡಾ ಎನ್ ಕೃಷ್ಣರಾವ್, ಜನರಲ್ ಕೆ. ಎಮ್. ಕಾರ್ಯಪ್ಪ, ಶ್ರೀಮತಿ ಪದ್ಮಾ ಹೆರ್ಮನ್, ಶ್ರೀ ಎ ಸಿ. ರಾಮನ್, ಮೊದಲಾದವರ ನೂರಕ್ಕೂ ಮಿಕ್ಕಿ ಲೇಖನಗಳಿವೆ. ಕೆಲವು ಲೇಖಕ ಲೇಖಕಿಯರ ಪರಿಚಯಚಿತ್ರಗಳನ್ನು ಕೊಡಲಾಗಿದೆ ಸಂಚಿಕೆಯು ಅತ್ಯಂತ ಸಂಗ್ರಾಹ್ಯವಾಗಿದೆ.

ಮಂಗಳೂರು

ದ. ಕ ಜಿಲ್ಲಾ ಭೂಮಾಲಿಕ ಹಾಗೂ ಕೃಷಿಕರ ಸಂಘದ ಸಭೆಯು—ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಶ್ರೀ ಎಸ್. ಎಮ್. ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ. 30ರಂದು ಜರಗಿ ಭೂಸುಧಾರಣೆಯ ಕುರಿತು ಜತ್ತಿ ಸಮಿತಿಯವರು ಮಾಡಿದ ವರದಿಯನ್ನು ಪರಿಶೀಲಿಸಲಾಯಿತು. ಅಲ್ಲದೆ ದ. ಕ. ಜಿಲ್ಲೆಯಲ್ಲಿ ನ್ಯಾಯಗೇಣಿಯ ಉತ್ಪತ್ತಿಯ ಸೇಕಡೆ 400ಕ್ಕಿಂತ ಹೆಚ್ಚಿರಬೇಕು, ಅವಿಭಕ್ತ ಕುಟುಂಬಗಳಿಗೆ ತಲಾ ೫ ಎಕ್ರೆಯ ಪ್ರಮಾಣದಲ್ಲಿ ಸ್ವಂತ ಸಾಗುವಳಿಗೆ ಭೂಮಿಯನ್ನು ಪಡೆದುಕೊಳ್ಳುವ ಹಕ್ಕಿರಬೇಕು, ಹಿಡುವಳಿಯ ಪರಿಮಿತಿಯನ್ನು ಈಗಿಂದೀಗಲೇ ನಿರ್ಣಯಿಸಬಾರದು, ಜತ್ತಿ ಸಮಿತಿಯು ಸೂಚಿಸಿದ ಪರಿಹಾರವು ತೀರ ಕಡಿಮೆಯಾಗಿದೆ, ಜತ್ತಿ ಸಮಿತಿಯ ಶಿಫಾರಸುಗಳು ಭೂಮಾಲಿಕರು ತಮ್ಮ ಭೂಮಿಯ ಮೇಲಿನ ನ್ಯಾಯವಾದ ಹಕ್ಕನ್ನು ಕಸಿದುಕೊಳ್ಳುವಷ್ಟು ಕ್ರಾಂತಿಕಾರಿಯಾಗಿಯೂ ಸಮಾಜಘಾತಕವಾಗಿಯೂ ಆಗಿದೆ ಎಂಬಿವೇ ಮೊದಲಾದ ಅಭಿಪ್ರಾಯದ ನಿರ್ಣಯಗಳಾದುವು ಅಲ್ಲದೆ ಈ ನಿರ್ಣಯಗಳನ್ನು ಪೈಸೂರು ಮಂತ್ರಿಮಂಡಲದ ಸದಸ್ಯರಿಗೂ ಜಿಲ್ಲೆಯ ಎ. ಎಲ್ ಎ. ಗಳಿಗೂ ಕಳುಹಿಸಿಕೊಡಬೇಕೆಂದಾಯಿತು

ಗಾಂಧೀ ಜಯಂತಿಯು— ತಾ. 2ರಂದು ಪ್ರಾರ್ಥನಾ ಸಾರ್ವಜನಿಕ ಧ್ವಜಾರೋಹಣದೊಂದಿಗೆ ಆರಂಭವಾಯಿತು. ಶ್ರೀ ಕೆ. ಆರ್ ಆಚಾರ್ ಎಂ. ಪಿ ಅವರು ಧ್ವಜವನ್ನರಳಿಸಿದರು. ಸಂಜೆ ಕೇಂದ್ರ ಮೈದಾನದಲ್ಲಿ ಶ್ರೀ ಆಚಾರ್ಯರ ಅಧ್ಯಕ್ಷತೆಯಲ್ಲಿಯೇ ಸಾರ್ವಜನಿಕ ಸಭೆ ನೆರವೇರಿತು. ಆರಂಭದಲ್ಲಿ ಮದ್ರಾಸಿನ ರಾಜ್ಯಸಾಲ ಶ್ರೀ ಎ. ಜಿ. ಜೋಸರವಿಧನ ಕ್ಯಾಗಿ ದುಃಖಸೂಚಿಸಿ ಮಾಡಲಾಯಿತು. ಬಳಿಕ ಡಾ| ಯು. ಪಿ. ಮಲ್ಯ, ಶ್ರೀ ಲಕ್ಷ್ಮಣ ದೇವ ವಿದ್ಯಾರ್ಥಿ, ಮತ್ತು ಅಧ್ಯಕ್ಷರ ಭಾಷಣಗಳಾದುವು.

ಬೆಸೆಂಟ್ ದಿನಾಚರಣೆ— ತಾ. 1ರಂದು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ವಾರ್ಷಿಕೋತ್ಸವ ಮತ್ತು ಡಾ| ಅನ್ನಿ ಬೆಸೆಂಟರವರ ದಿನಾಚರಣೆಯ ಶ್ರೀ ಎಜ್. ನರಸಿಂಹ, ಬಿ. ಎ. ಎಲ್. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಬಿ ಜಿ ಪ್ರಭುಗಳಿಂದ ಸ್ವಾಗತ ಭಾಷಣ, ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಂ. ಜಲಜಾಕ್ಷಿಯವರಿಂದ ವರದಿವಾಚನ, ಡಾ| ಸಿ. ಜಿ. ಗೌಲ್ಲರಕೇರಿಯವರಿಂದ ಬೆಸೆಂಟ್ ಸ್ಮಾರಕ ಭಾಷಣಗಳಾದ ಮೇಲೆ ವಿವಿಧ ಮನೋರಂಜನೆಗಳು ನಡೆದವು

ದಸರಾ ಸಮಾರಂಭದ ಅಂಗವಾಗಿ ತಾ. 3ರಂದು ಬೆಳಿಗ್ಗೆ ಕೇಂದ್ರ ಮೈದಾನದಲ್ಲಿ ಎರಡು ಸಾವಿರಕ್ಕೂ ಮೇಲ್ಪಟ್ಟು ಮಕ್ಕಳ ಕೂಟವೊಂದು ಜರಗಿತು ಜಿಲ್ಲಾ ಕಲೆಕ್ಟರರ ಪರ್ಸನಲ್ ಅಸಿಸ್ಟಾಂಟರಾದ ಶ್ರೀ ಎಸ್. ಯು ಪರಶುರಾಮ ನಾಯ್ಡರು ಧ್ವಜಾರೋಹಣವಾಡಿದರು ಆ ಮೇಲೆ ಶ್ರೀ ಬೇಲಗಡ್ಡೆ ಅಪ್ಪಯನವರು ದಸರಾ ಮಕ್ಕಳ ಕುರಿತು ಭಾಷಣವಾಡಿದರು. ಸಾಯಂಕಾಲ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಶ್ರೀ ವಿ. ಎಸ್. ಕುಡುವರ ಅಧ್ಯಕ್ಷತೆಯಲ್ಲಿ ಕಲಾಕಾರ್ಯಕ್ರಮಗಳು ನೆರವೇರಿದುವು ಅಂತ್ಯದಲ್ಲಿ ಮಂಗಳೂರು ತಹಶೀಲ್ದಾರ್ ಶ್ರೀ ಎಂ ಶ್ರೀನಿವಾಸರಾಯರು ಧನ್ಯವಾದಗಳನ್ನರ್ಪಿಸಿದರು.

ಗಣಪತಿ ಹೈಸ್ಕೂಲಿನ—ವಿದ್ಯಾರ್ಥಿಗಳ ಪೆತ್ತವರ ಮತ್ತು ಉಪಾಧ್ಯಾಯರ ಸಂಘದ ವಾರ್ಷಿಕ ಮಹಾಸಭೆಯು ತಾ 1ರಲ್ಲಿ ಡಾ. ಪಿ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು ತಾ 3ರಲ್ಲಿ ಹೈಸ್ಕೂಲಿನ ವಾರ್ಷಿಕೋತ್ಸವವು ಶ್ರೀ. ಎಚ್. ನರಸಿಂಹನವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಶ್ರೀ ಎ. ಕೆ. ಗೋಪಾಲನ್ ಎಂ. ಪಿ. ಅವರು ಕಳೆದ ತಾ. 29ರಲ್ಲಿ ಇಲ್ಲಿಗೆ ಆಗಮಿಸಿದಾಗ ಸ್ಥಳೀಯ ಕಮ್ಯೂನಿಸ್ಟ್ ಪಕ್ಷದ ಆಫೀಸಿನಲ್ಲಿ ಜರಗಿದ ಪತ್ರಿಕಾ ಸೋಷ್ಟಿಯಲ್ಲಿ ಪ್ರಚಲಿತ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿ ಭಾಷಣಮಾಡಿದರು.

ಉತ್ತಮ ಸಾಹಿತ್ಯಗಳಿಗೆ ಸರಕಾರದ ಪ್ರೋತ್ಸಾಹ—ಕೊಡುವ ಯೋಜನೆಯಂತೆ ಪರ್ಸಡಿಸಲಾದ ವಿವಿಧ ಭಾಷೆಗಳ ಪುಸ್ತಕಗಳ ಸ್ವಾಧೀನಯಲ್ಲಿ ರೂ. ಎಣಿಸುವಂತೆ 10 ಪುಸ್ತಕಗಳಿಗೆ ಬಹುಮಾನ ದೊರೆತಿದೆ. ಕನ್ನಡದಲ್ಲಿ ಶ್ರೀ ಕೆ. ಆರ್. ಉಡುಪರ 'ಕುಟುಂಬಯೋಜನೆ' ಮತ್ತು ಶ್ರೀ ಯು. ಆರ್. ಆಚಾರ್ಯರ 'ಪರಮಾಣು' ಈ ಎರಡು ಪುಸ್ತಕಗಳಿಗೆ ಈ ಪುರಸ್ಕಾರಗಳು ದೊರೆತಿವೆ.

ಪ್ರಕಟಣೆ

ಉಡಿಪಿ ತಾಲೂಕು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ಸನ್ನಿಧಿಯ ದಶಾವತಾರ ಮೇಳವನ್ನು 1957—58ರಲ್ಲಿ ತಿರುಗಾಡಿಸುವ ಹಕ್ಕನ್ನು ಎಂಡೋಸೆಂಟ್ ಕಲಿಸರವರವರ ಮುಂದೆ ಬಹಿರಂಗ ಸ್ಥಿರಪಡಿಸುವರೆ ತಾರೀಕು 13—10—57ನೇ ದಿನ ಮಧ್ಯಾಹ್ನ ಗಂಟೆ 1ಕ್ಕೆ ಪುನಃ ಪಬ್ಲಿಕ್ ಸೇಲಂ ಕರೆಯಲಾಗುವುದು ಕಾಯಮಸುಳ್ಳವರು ಸದ್ರಿ ಸಮಯ ಹಾಜರಾಗಿ ಮೇಳವನ್ನು ಪಡೆಕೊಳ್ಳಬಹುದು. ಸೇಲಂ ಶರತ್ತನ್ನು ದೇವಸ್ಥಾನದ ಆಫೀಸಿನಲ್ಲಿ ತಿಳಿದುಕೊಳ್ಳತಕ್ಕದ್ದು.

(Sd) B Umesh Rao.
Executive Officer

ಮಂದಾರ್ತಿ ದೇವಸ್ಥಾನ, ತಾ. 30-9-57.

ನವಯುಗದಲ್ಲಿ ಜಾಹೀರಾತುಗಳನ್ನು ಕೊಡಿರಿ

ಸಿಂ ಕರ್ ಗಳಿಂದಲೂ ಪ್ರಸಿದ್ಧ ಇದೆ. | ಮಲೇರಿಯಾ | ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತದೆ.

ಬಾಟ್ಲಿವಾಲಾ ಎಗ್ಯೂಮಿಕ್‌ಶ್ಚರ್

ಮತ್ತು ಗುಳಿಗೆಗಳು

ಮಾರಾಟ ಮಾಡುವ ಪಬ್ಲಿಸಿಟಿ: ಹರ್ಬರ್ಟ್‌ಸನ್ಸ್ ಪ್ರೈವೆಟ್ ಲಿಮಿಟೆಡ್, ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಭಾರತೀಯ ಅಂಚೆ ಇಲಾಖೆ

(೩ನೇ ಪುಟದಿಂದ)

ಸ್ಥಿರಾಸ್ಥಿಯ ಮೇಲೆ ನಿವ್ವಳವಾಗಿ ೯೭೭ ಲಕ್ಷ ರೂಪಾಯಿ ವೆಚ್ಚವಾಗಿದೆ. ಈ ಹಣದಲ್ಲಿ ೬೩ ಲಕ್ಷ ರೂಪಾಯಿಗಳನ್ನು ಅಂಚೆ ಕಛೇರಿ ಕಟ್ಟಡಗಳು ಅಂಚೆ ಟಪ್ಪಾಲು ರವಾನೆಯ ಬಗ್ಗೆ ಮೋಟಾರು ವಾಹನಗಳಿಗಾಗಿ ಬಳಸಲಾಯಿತು. ೨೨೧ ಲಕ್ಷ ರೂಪಾಯಿಯನ್ನು ತಂತಿ ಕಛೇರಿಯ ಕಟ್ಟಡಗಳು, ಕೇಬಲ್‌ಗಳು, ತಂತಿ ಮಾರ್ಗಗಳು ಮತ್ತು ಸಲಕರಣೆಗಳಿಗಾಗಿ ಬಳಸಲಾಯಿತು. ದೂರದರ್ಶಕ ಭವನಗಳು, ಮಾರ್ಗಗಳು ಮತ್ತು ಸಲಕರಣೆಗಳಿಗಾಗಿ ೬೯೦ ಲಕ್ಷ ರೂಪಾಯಿ ಹಣವನ್ನು ಬಳಸಲಾಯಿತು. ಆಕಾಶವಾಣಿ ಭವನಗಳು, ಮತ್ತದರ ಸಲಕರಣೆಗಳಿಗೆ ೩ ಲಕ್ಷ ರೂಪಾಯಿಗಳನ್ನು ವ್ಯಯಿಸಲಾಯಿತು ಹೀಗೆ ೫೫-೫೬ರ ಅಂತ್ಯದಲ್ಲಿ ೯,೦೩೭ ಲಕ್ಷ ರೂಪಾಯಿಗಳು ಈ ವಿಭಾಗದಲ್ಲಿ ತೊಡಗಿಸಲ್ಪಟ್ಟಿದೆ

ಈ ವರ್ಷ ಸಂದಾಯವಾದ ಆದಾಯದಿಂದ "ರಿನ್ಯೂವಲ್ಸ್ ರಿಸರ್ವ್" ನಿಧಿಗೆ ೧೩೫ ಲಕ್ಷ ರೂಪಾಯಿಗಳನ್ನು ಹಾಕಲಾಗಿದೆ. ಈ ನಿಧಿಯಿಂದ ೯೮ ಲಕ್ಷ ರೂಪಾಯಿಗಳನ್ನು ಹಿಂದಿರುಗಿ ಪಡೆಯಲಾಯಿತು. ೫೬ ಮಾರ್ಚಿಯಂತ್ಯದಲ್ಲಿ ಈ ನಿಧಿಯಲ್ಲಿ ೫೯೯ ಲಕ್ಷ ರೂಪಾಯಿಗಳು ಉಳಿದಿದ್ದುವು. ಈ ವರ್ಷದಲ್ಲಿ ದೂರ ಶ್ರಾವ್ಯಕಾಭಿವೃದ್ಧಿ ನಿಧಿಗೆ ೭೧ ೫೭ ಲಕ್ಷ ರೂಪಾಯಿಗಳನ್ನು ಜಾಕಲಾಯಿತು. ಈ ನಿಧಿಯಿಂದ ೨೭ ೫೦ ಲಕ್ಷ ರೂಪಾಯಿಗಳನ್ನು ಹಿಂದೆ ಪಡೆಯಲಾಯಿತು. ಈ ನಿಧಿಯಲ್ಲಿ ವರ್ಷಾಂತ್ಯದಲ್ಲಿ ೨೯೯ ಲಕ್ಷ ರೂಪಾಯಿಗಳಿದ್ದುವು.

ಅಂಚೆ ಮತ್ತು ತಂತಿ ಶಾಖೆಯಲ್ಲಿ ೫೫ರ ಮಾರ್ಚ ೩೧ರಂದು ೨,೬೨,೯೯೯ ಉದ್ಯೋಗಿಗಳಿದ್ದು ೫೬ರ ಮಾರ್ಚಿಯಂತ್ಯದಲ್ಲಿ ಈ ಸಂಖ್ಯೆಯು ೨,೮೪,೫೧೧ಕ್ಕೆ ಏರಿದೆ.

ವರದಿ ವರ್ಷದಲ್ಲಿ ಹೊಸದಾಗಿ

ನೋಟೀಸು

ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರರ ಕೋರ್ಟಿನಲ್ಲಿ

ಮೊಕ್ದಾಂ ಉಡುಪಿ.

O. P. No. 706/1957.

ಅನಂತಯ್ಯ ಪ್ರಭು —ಅರ್ಜಿದಾರ
ಮತ್ತು
ಕಮಲ ಯಾನೆ ಸರಸ್ವತಿ —ಎದ್ರಿಳು
ಇವರೊಳಗೆ

ಉಪ್ಪಿ ತಾಲೂಕು ಚೇರ್ಕಾಡಿ ಗ್ರಾಮದ ಹುತ್ತಿಯಲ್ಲಿರುವ ರಾಮಚಂದ್ರ ಪ್ರಭು ಳ ಮಗಳು ಕಮಲ ಯಾನೆ ಸರಸ್ವತಿ ಬ್ಯಾ.. ಇವರೇಗೆ,

ನಿಮ್ಮ ಮೇಲೆ ಜಾಲಗೇಣ ಆಸ್ತಿ ಸ್ವಾಧೀನತೆ ಕೇಳಿ ಮಾಡಿದ ಮೇಲ್ಕಂಡ ಅರ್ಜಿಗೆ ನಿಮ್ಮದೇನಾದ್ರು ಆಕ್ಷೇಪಣೆ ಇದ್ದಲ್ಲಿ ತಾ. ೩೧-೦-೫೭ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು. ಕಷ್ಟದಲ್ಲಿ ನಿಮ್ಮ ಉಜ್ರು ಶಿವ್ಯಾ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

P. Ramachandra Rao.
Advocate for Petitioners.

Udipi 30--9—1957.

ಭಾರತ ಕಲಾನಿಧಿ—

ಸೂರತ್ತಿನ ಜನತಾ ವಸ್ತು ಸಂಗ್ರಹಾಲಯ

ಸೂರತ್‌ನಲ್ಲಿರುವ ಮಿಂಚೆಸ್ಟರ್ ವಸ್ತು ಸಂಗ್ರಹಾಲಯವನ್ನು ಅರ್ಥಾತ್ "ಜನತಾ ವಸ್ತುಸಂಗ್ರಹಾಲಯ"ವೆಂದೇ ಕರೆಯಬಹುದಾಗಿದೆ. ಸೂರತ್ತಿನ ಪ್ರಜೆಗಳೂ ಮತ್ತು ಪೌರಸಭೆಯವರೂ ಸಂಯುಕ್ತ ಪ್ರಯತ್ನದಿಂದಾಗಿ ಈ ವಸ್ತು ಸಂಗ್ರಹಾಲಯವು ಸ್ಥಾಪಿತಗೊಂಡು ಭಾರತದಲ್ಲಿನ ಪ್ರಮುಖ ವಸ್ತು ಸಂಗ್ರಹಾಲಯಗಳಲ್ಲಿ ಒಂದೆನಿಸಿಕೊಂಡಿದೆ.

ಈ ವಸ್ತು ಸಂಗ್ರಹಾಲಯದ ನಿರ್ಮಾಣಕ್ಕೆ ಒಂದುಲಕ್ಷರೂಗಳಿಗೂ ಹೆಚ್ಚಿನ ಹಣ ವೆಚ್ಚವಾಗಿದೆ. ಪ್ರಜೆಗಳು ಉದಾರವಾಗಿ ನೀಡಿದ ಚಂದಾಹಣದಿಂದ ಈ ಭವನದ ನಿರ್ಮಾಣವಾಗಿದೆ. ಈ ಭವನದಲ್ಲಿ ೯,೦೦೦ ವಸ್ತುಗಳನ್ನು ಸಂರಕ್ಷಿಸಿಡಲಾಗಿದೆ. ಇವುಗಳಲ್ಲಿ ಸುಮಾರು ೬,೦೦೦ ವಸ್ತುಗಳನ್ನು ಸೂರತ್‌ನ ಪ್ರಜೆಗಳು ಉಚಿತವಾಗಿ ನೀಡಿರುವರು. ಉಳಿದವನ್ನು ಕೊಳ್ಳಲಾಗಿದೆ. ಇಲ್ಲವೇ ಸಾಲದಮೇಲೆ ಪಡೆಯಲಾಗಿದೆ.

ಈ ಸಂಗ್ರಹಾಲಯದಲ್ಲಿ ವಸ್ತ್ರವಿಭಾಗವು ಸಮೃದ್ಧವಾಗಿದೆ. ಇಲ್ಲಿ ಖಾದಿ, ಧಾಕದ ಮಲ್ ಮಲ್, ಕಿಂಖಾಬು, ತಾನ ಘೋಯ, ಮಶ್ರು, ಬಾಂಧನೀ, ಪಟೋಲಾ, ಬಂಗಾಲೂ, ಖಾಟೋ, ವಾಯಲ್, ಹಸ್ತಮುದ್ರಿತ ವಸ್ತ್ರ ಮುಂತಾದ ದೇಶದ ವಸ್ತ್ರಕಲೆಯ ನಾನಾ ನಮೂನೆಗಳಿವೆ. ಸೂರತ್ತಿನ ಜರೀಕೆಲಸದ ಹಾಗೂ ಕಸೂತಿ ಕೆಲಸದ ನಮೂನೆಗಳು ಇಲ್ಲಿವೆ. ಪೌರಾಣಿಕ ಕಲೆ ಮತ್ತು ಸಿಂಧ್‌ಗಳ ಕಸೂತಿ ಕೆಲಸದ ವಿವಿಧ ನಮೂನೆಗಳು ಮತ್ತು ಸುಂದರ ಪೌರಾಣಿಕ ಚಿತ್ರಗಳನ್ನೊಳಗೊಂಡ ಸಿಹಾಸನಿಯನ್ನು ನೋಡಬಹುದು.

ಚಿತ್ರ ವಿಭಾಗದಲ್ಲಿ ರಾಜಪೂತ, ಮೊಗಲ, ಕಾಂಗಡಾ ಹಾಗೂ ಗುಜರಾತ್ ಪಂಥಗಳ ವರ್ಣಚಿತ್ರಗಳನ್ನೂ, ಆನೆಯ ದಂತದ ಮೇಲೆ ಚಿತ್ರಿಸಿರುವ ಮೊಗಲ್ ಶೈಲಿಯ ಸೂಕ್ಷ್ಮ ಚಿತ್ರಗಳನ್ನೂ ಪ್ರದರ್ಶಿಸಲಾಗಿವೆ

ಜೈನ ಧರ್ಮಕ್ಕೆ ಸಂಬಂಧಿಸಿದ ಕಲ್ಪಸೂತ್ರಗಳ ಅನೇಕ ವರ್ಣ ಚಿತ್ರಗಳೂ, ಮಣ್ಣಿನ ಮೂರ್ತಿಗಳೂ, ಅಮೃತ ಶಿಲಾ ಮೂರ್ತಿಗಳು, ಪ್ರಾಚೀನ ಶಿಲಾ ಪ್ರತಿಮೆಗಳೂ ಸುಂದರವಾದ ಸ್ಫಟಿಕ ಶಿಲೆಯ ವಸ್ತುಗಳೂ ಇಲ್ಲಿರುವುವು.

ಲೋಹದ ಶಿಲ್ಪ

ಲೋಹಶಿಲ್ಪ ವಿಭಾಗದಲ್ಲಿ ಅನೇಕ ಪ್ರಕಾರದ ಪಾತ್ರೆ ಪಡಗಗಳೂ, ಪುಷ್ಪ ಕರಂಡಕಗಳೂ, ದೀಪ ಸ್ತಂಭಗಳೂ, ತಟ್ಟೆಗಳೂ ಇವೆ. ಶಂಖ, ವಣಿ ಹಾಗೂ ಎನಾಮಲ್ ವಸ್ತುಗಳೂ ಇಲ್ಲಿವೆ.

ಅಲಂಕೃತ ರಥಗಳೂ, ಹಿಂಡೋಲಗಳೂ, ಸಿಂಹಾಸನಗಳು ಹಾಗೂ ಅತ್ಯುತ್ತಮ ರೀತಿಯಲ್ಲಿ ಕೆತ್ತಲ್ಪಟ್ಟಿರುವ ಪೀಠೋಪಕರಣಗಳು ಇವೆ. ಗುಜರಾತಿನ ಒಂದು ಪ್ರಾಚೀನ ಮನೆಯ ಅತ್ಯಂತ ಅಲಂಕೃತ ಭಾಗವನ್ನು ಪ್ರದರ್ಶಿಸಲಾಗಿದೆ. ಅಕ್ಕಿಕಾಳುಗಳ ಮೇಲೆ ಚಿತ್ರಿಸಿರುವ ವರ್ಣಚಿತ್ರಗಳನ್ನು ಹಾಗೂ ಅನೆದಂತದ ಮತ್ತು ಅರಗಿನ ಚಿತ್ತಾರದ ಇಸ್ಪೇಟು ಕಾರ್ಡುಗಳನ್ನು ನೋಡಬಹುದಾಗಿದೆ.

ಗುಜರಾತಿನ ಉಡುಪುಗಳ ವಿಭಾಗದಲ್ಲಿ ನಾನಾ ರೀತಿಯ ಉಡುಪುಗಳನ್ನು ಪ್ರದರ್ಶಿಸಲಾಗಿವೆ ಇಲ್ಲಿ ಗುಜರಾತಿನ ವೇಷಭೂಷಣಗಳೂ ಆ ಭೂಷಣಗಳ ನಮೂನೆಗಳಿವೆ.

ತಾಮ್ರದ ಶಾಸನಗಳು, ತಾಡಪತ್ರ ಗ್ರಂಥಗಳು, ಚಿತ್ರ ಸಂಗ್ರಹ ಹಾಗೂ ಚಿತ್ರಿತ ಜಾತಕಗಳ ಸುಂದರ ಸಂಗ್ರಹವಿದೆ. ಈ ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿಟ್ಟಿರುವ ವಸ್ತುಗಳಲ್ಲಿ ವಿಚಿತ್ರ ವಸ್ತು ಪೊಂದಿರುವುದು. ಅದ್ಭುತ ಶಿಲೆಯೊಂದಿರುವುದು. ಈ ಶಿಲೆಯು ನೀರಿನಲ್ಲಿ ತೇಲುವುದು. 'ಅಗೇಟ' ಶಿಲೆಯ ಕಲಾಕೃತಿಯೊಂದಿರುವುದು. ಇದರಲ್ಲಿ ಮೇಲೆ ಚಂದ್ರನ ವಿಭಿನ್ನ ಕಲೆಗಳನ್ನು ಕಾಣಬಹುದು.

ಸೂರತ್ತಿನ ಸಂಗ್ರಹಾಲಯವು ೧೯೪೦ರಲ್ಲಿ ಸ್ಥಾಪಿತವಾಯಿತು. ಆಗ ಸ್ಥಳೀಯ ಶಾಲಾ ಮಂಡಲಿಯ ಅಧ್ಯಕ್ಷರಾಗಿದ್ದ ಶ್ರೀ ಕಾಲಾಭಾಯ್ ಲಲ್ಲುಭಾಯ್‌ರವರು ಹೇಳಿದಂತೆ, ಮಕ್ಕಳ ಜ್ಞಾನಾಭಿವೃದ್ಧಿಗಾಗಿ ಈ ಸಂಗ್ರಹಾಲಯವನ್ನು ಪ್ರಾರಂಭಿಸಲಾಯಿತು. ಸೂರತ್ತಿನ ನಾಗರಿಕ ಹಾಗೂ ಹೊರಗಿನವರ ಅನುಕೂಲಕ್ಕಾಗಿ ಸೂರತ್ ನಗರದ ಕಲಾ ವಸ್ತುಗಳನ್ನು ಪ್ರದರ್ಶಿಸಬೇಕೆಂದು ಸಂಗ್ರಹಾಲಯದ ಸಮಿತಿಯವರು ನಿರ್ಧರಿಸಿದರು.

ದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾದ ನಂತರ ಸಂಗ್ರಹಾಲಯವು ಶ್ರದ್ಧಿತ ರೀತಿಯಲ್ಲಿ ಅಭಿವೃದ್ಧಿ ಪಡೆಯಿತು. ಸೂರತ್ತಿನ ನಾಗರಿಕರು ಈ ಸಂಗ್ರಹಾಲಯದ ಅಭ್ಯುದಯಕ್ಕಾಗಿ ಹೆಚ್ಚು ಹೆಚ್ಚು ಉತ್ಸಾಹತೆಯಿಂದ ಶ್ರಮಿಸಿರುವರು. ಗೌರವ ಕ್ಯೂರೇಟರೊಬ್ಬರು ಸಂಗ್ರಹಾಲಯವನ್ನು ನೋಡಿಕೊಳ್ಳುತ್ತಿರುವರು. ಕಲಾಕೃತಿಗಳನ್ನು ಕೊಳ್ಳುವುದಕ್ಕಾಗಿ ಸಲಹಾಸಮಿತಿಯೊಂದಿರುವುದು.

ಸಾರ್ವಜನಿಕರಿಂದ ಚಂದಾ ಸಂಗ್ರಹಿಸಿ ಸಂಗ್ರಹಾಲಯಕ್ಕಾಗಿ ಒಂದು ಲಕ್ಷ ರೂಗಳ ವೆಚ್ಚದಲ್ಲಿ ಹೊಸ ಭವನವೊಂದನ್ನು ಕಟ್ಟಿಸಲಾಯಿತು. ಈ ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿಟ್ಟಿರುವ ಅಮೂಲ್ಯ ವಸ್ತುಗಳ ಸಂಖ್ಯೆ ೯೦೦೦ಕ್ಕೂ ಹೆಚ್ಚಿದೆ.

ಸೂರತ್ತಿನ ಈ ಸಂಗ್ರಹಾಲಯದ ಬಗ್ಗೆ ನಾಗರಿಕರು ಹೆಚ್ಚು ಅಭಿಮಾನಶಾಲಿಗಳಾಗಿರುವರು. ಗುಜರಾತಿನ ಸಂಸ್ಕೃತಿ ಕಲೆಗಳಿಗೆ ಇದೊಂದು ಜೀವಿತ ಕೇಂದ್ರವಾಗಿರುವುದು.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮೂಲ್ಕಿ ಬೇಂಕ್ ಲಿಮಿಟೆಡ್,

ಮೂಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ.	
3 ತಿಂಗಳಿಗೆ	3%
4 ರಿಂದ 6 ,,	3½%
7 ,, 12 ,,	4%
13 ,, 24 ,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ	2½%
ಕರೆಂಟ್ ಎಕೌಂಟು	½%

The Moolky Bank, Ltd.

ದೇವರೆಂದರೆ ಹೆದರಬೇಡಿರಿ!

(೩ನೇ ಪುಟದಿಂದ)

ಬ್ರೇಕೊತ್ತಿದುದರಿಂದ ಕೂಗು ತ್ತಾ ನಿಂತಿತು.

"ಅಪ್ಪ ನಮ್ಮ ಟೋಮಿ ಅಲ್ಲಿದ್ದಾನೆ"- ಕಾರಿನೊಳಗಿಂದಲೇ ಒಂದು ಮಗು ಗಟ್ಟಿಯಾಗಿ ಹೇಳಿತು. ಕಾರಿನ ಒಂದು ಬಾಗಿಲು ಜಕ್ಕೆಂದು ತೆರೆಯಿತು. ಒಬ್ಬ ಸೈನಿಕ ಅಧಿಕಾರಿಯು ರಸ್ತೆಗೆ ಹಾರಿ 'ಕಳ್ಳ' ಎಂದು ಕೂಗುತ್ತಾ ಗೋಪಾಲನಿದ್ದೆಡೆಗೆ ಓಡಿಬಂದ ಈಗ ಒದಗಿಬಂದ ಗಂಡಾಂತರದ ಅರಿವು ಗೋಪಾಲನಿಗಾಯಿತು. ಅವನು ನಾಯಿಯನ್ನೂ ಸೈಕಲನ್ನೂ ಹಿಡಿದುಕೊಂಡು ಒಂದು ಪಕ್ಕದಲ್ಲಿ ನಿಂತ. ಇನ್ನು ಹೆಚ್ಚಿನ ಪೆಟ್ಟುಗಳನ್ನು ತಿನ್ನಲು ಅವನಿಂದ ಸಾಧ್ಯವಿದ್ದಿಲ್ಲ ಸೈನಿಕ ಅಧಿಕಾರಿಯೊಬ್ಬ ಸಭ್ಯ ಗ್ರಹಸ್ಥನಾಗಿದ್ದುದರಿಂದ ಆ ನಾಯಿ ಮರಿಯನ್ನು ತೆಗೆದುಕೊಂಡು ತನ್ನ ಮಕ್ಕಳಿಗೆ ಕೊಟ್ಟ ಅವರು ಆ ದೊಡ್ಡ ಕಾರಿನಲ್ಲಿಯೇ ಹೋದರು. ನಾಯಿ ಮಾತ್ರ ಗೋಪಾಲನನ್ನು ಕುರಿತು ಬೊಗಳುತಿತ್ತು. ತನ್ನ ಹಿಂಬದಿಯಲ್ಲಿ ಬೇತಾಳವು ಓಡಿಸಿಕೊಂಡು ಬರುತಿದ್ದಂತೆ ಅತನು ಅತ್ಯಂತ ವೇಗವಾಗಿ ಮನೆಯತ್ತ ಧಾವಿಸಿದನು.

"ನಾನಿನ್ನು ಪದೇಪದೇ ಉಲ್ಲಂಘನೆ ಮಾಡುವುದನ್ನು ತ್ಯಜಿಸಿಬಿಟ್ಟೆ. ಲೋಕವು ತನ್ನಷ್ಟಕ್ಕೇ ತನಗೆ ಶಕ್ಯವಿದ್ದಷ್ಟು ಗಟ್ಟಿಯಾಗಿ ಅರಚಿಕೊಳ್ಳಲಿ. ನಾನತ್ತಗಮನ ವೀಯಲಾರೆ ನನ್ನಹೃದಯವನ್ನು ಇನ್ನಾದರೂಕಲ್ಲು ಮಾಡಿಕೊಳ್ಳುವೆ." ಗೋಪಾಲತನ್ನಲ್ಲಿಯೇ ಸಿಸು ನುಡಿದ.

ಮರುದಿನ, ತನ್ನ ಮನೆಯ ಉಪ್ಪರಿಗೆಯ ವರಾಂಡದಲ್ಲಿ ಕೂರುವ ಸಂಕಲ್ಪವನ್ನು ಮಾಡಿಕೊಂಡು ಅತ ನೆಟ್ಟಿಗಾಗಿ ಆಫೀಸಿನಿಂದ ಮನೆಗೆ ಬಂದ. ಆ ಕೂಡಲೇ ತನ್ನ ವರಾಂಡದ ಆಚೆ ಪಕ್ಕದ ವರಾಂಡದಲ್ಲಿ ಹಲವಾರು ತಳಿಯ ಹೂತೊಟ್ಟಿಗಳಿರುವುದು ನೆನಪಿಗೆ ಬಂತು. ಅವು ಅತನ ನೆರೆಮನೆಯವನಿಗೆ ಸೇರಿದ್ದಾಗಿತ್ತು ಅವುಗಳಲ್ಲಿ ಕೆಲವೊಂದನ್ನು ನಾನು ನನಗಾಗಿ ತೆಗೆದು ಕೊಂಡರೆ, ನೆರೆಯ ವನಿಗೇನೂ ನಷ್ಟವಿಲ್ಲ. ಎಂದು ಕೊಂಡ. ಎರಡು ವರಾಂಡಗಳನ್ನು ಪ್ರತ್ಯೇಕಿಸಿದ ಗೋಡೆ ಅಷ್ಟೇನೂ ಎತ್ತರವಿರಲಿಲ್ಲ. ಅತನು ಇನ್ನೊಂದು ಪಕ್ಕಕ್ಕೆ ಹಾರಿ, ಒಂದು ಹೂದೊಟ್ಟಿಯನ್ನು ಹಿಡಿದುಕೊಂಡು, ಈಚೆ ಹಾರುವ ಮೊದಲು ಗೋಡೆಯಲ್ಲಿಡುವುದಲ್ಲಿದ್ದ; ಆಗ ಕೆಳಗೆ ವರಾಂಡದಲ್ಲಿ ದೊಡ್ಡದೊಂದು ಶಬ್ದ ಕಿವಿಗೆ ಕೇಳಿಸಿತು. ಹೂದೊಟ್ಟಿಯು ಅತನ ಕೈತಪ್ಪಿ ದೊಡ್ಡ ಸದ್ದುಗೆಯ್ತು ಬಿದ್ದು ಬಿಟ್ಟಿತು. ಗೋಪಾಲನು ಕೆಳಗೆ ನೋಡಿದ. ಸುತ್ತುಮುತ್ತಲಿನ ನಾಲ್ಕೈದು ಕೋಣೆಗಳಿಂದ ಕೆಲವೊಂದು ಹೊರಿಗೆಳನ್ನು ಹೊತ್ತುಕೊಂಡ ನಾಲ್ಕೈದು ಜನರು ಆ ಹೊರಿಗೆಳನ್ನೆಲ್ಲಿಯೇ ಎಸೆದು ಗೋಪಾಲನನ್ನೇ ನೋಡುತ್ತಾ ಓಡ ತೊಡಗಿದರು. 'ಅವರು ಕಳ್ಳರಾಗಿರಬೇಕು —ಗೋಪಾಲನೆಂದುಕೊಂಡ. ನಾನೂ ದೊಡ್ಡ ಧ್ವನಿಯಿಟ್ಟಿಸಬೇಕು ಆ, ಅತನ ವಿವೇಕವು ಎಚ್ಚರಿಸಿತು-"ನೀನೇಕೆ ಹಾಗೆ ಮಾಡಬೇಕು? ನೀನು ಪುನಃ ಪರೋಪಕಾರ ಮಾಡಲು ಮುಂದುವರಿದೆಯ?" ಅದುದರಿಂದಾತನು ಸುಮ್ಮನಾದ ಅಷ್ಟರಲ್ಲಿ ಆ ವರಾಂಡದಲ್ಲಿ ಇನ್ನೊಂದು ಭಯಂಕರವಾದ ಗಲಭೆ ಕೇಳಿಸಿತು. ಹಿಂಸೆಯ ಬೆದರಿಕೆಯಿಂದ ಸುಮ್ಮನಾಗಿದ್ದ ಹೆಂಗಸರು ಸಹ ಮನೆಯೊಳಗಿಂದ ಕೆರಳಿ ಚಲಾರಂಭಿಸಿದರು ಮೊಹಲ್ಲಾದ ಜನರು ತಂತಮ್ಮ ಲಾರಿಗಳನ್ನು ಜಳಪಿಸುತ್ತಾ ಮನೆಯನ್ನು ಪ್ರವೇಶಿಸಿದರು. ಗೋಪಾಲನ ಎದೆ ಡಡಬಡವೆಂದಿತು. ಅದರೇನು ಮಾಡಲಿ?

ಒಂದವರ ದೃಷ್ಟಿ ಗೋಪಾಲನತ್ತ ಹರಿಯಿತು. ಪಹರೆಯವನಂತೆ ಗೋಪಾಲ ಅವರಿಗೆ ಕಂಡುಬಂದಿರಬೇಕು. ಒಳ್ಳೆಯ ಕೆಲಸ ಮಾಡಿದೆ ಶಹಬಾಸ್ ಗೋಪಾಲ!"—ಅವರಲ್ಲೊಬ್ಬ ಹೇಳಿದ. ಆ ಮನೆಯಲ್ಲಿ ವಾಸಿಸುತಿದ್ದವನ ಅಂಗಡಿಗೆ ಇನ್ನೊಬ್ಬ ಒಡಿದ ಅವನು ಬಂದು ಮೊತ್ತಮೊದಲಿಗೆ ಗೋಪಾಲನನ್ನು ಕುರಿತು "ನಿನ್ನ ಧೈರ್ಯವೇ!" ಎಂದು ಅಲಂಗಿಸಿದ "ಇಲ್ಲ, ನಾನು ನಿಮ್ಮ ಪ್ರಶಂಸೆಗೆ ಅರ್ಹನಲ್ಲ!" ಗೋಪಾಲ, ತನ್ನ ತುಳಿಸಿಗಳ್ಳತನವನ್ನು ಸ್ಮರಿಸಿಕೊಂಡು ವ್ಯಥುವಾಗಿಯೇ ಹೇಳಿದ

ಮರುಮುಂಜಾನೆ, ಐದು ಭಯಂಕರ ರೆಸಿಸಿದ ಕಳ್ಳರನ್ನು ಒಬ್ಬ ಪಿಮಾ ಕಂಪೆನಿಯ ನೌಕರನಾದ ಗೋಪಾಲನೆಂಬವನ ಧೈರ್ಯ ಮತ್ತು ಸಾಹಸದ ಸಹಾಯದಿಂದ ಹಿಡಿಯಲಾಯಿತೆಂದೂ, ಸರಕಾರವು ಎರಡು ಸಾವಿರ ರೂಪಾಯಿಗಳ ಬಹುಮಾನವನ್ನು ಶ್ರೀಮಾನ್ ಗೋಪಾಲರಿಗೆ ಕೊಡುವುದೆಂದು ಘೋಷಿಸಿರುವುದಾಗಿಯೂ ವರ್ತಮಾನ ಪತ್ರಗಳಲ್ಲಿ ದಪ್ಪಕ್ಷರಗಳಲ್ಲಿ ಪ್ರಕಟವಾದುದನ್ನು ಗೋಪಾಲ ಸ್ವತಃ ಓದಿದ.

ಸಂಜೆ, ಆಫೀಸಿನಿಂದ ಮನೆಗೆ ಮರಳುತ್ತಿರುವಾಗ,ಅವನು ಪುನಃ ಜನಪತಿ ಹೋಟೇಲಿನ ಬರಿಯ ಅರವಟ್ಟಿಗೆಯ ಸಮಿಪದಲ್ಲಿ ನಿಂತುಬಿಟ್ಟ. ಅಲ್ಲಿ ನೀರು ಕೊಡಲು ನೇಮಿಸಿಲ್ಪಟ್ಟಿದ್ದ ಹಳೆಯ ಮುದುಕನನ್ನು ಗೋಪಾಲನು ಕೇಳಿದ-" ನೀನು ಭಗವಂತನೆಂದರೆ ಹೆದರುತ್ತಿಯಾ?'

ಮುದುಕನಿಗೆ ಏನೋ ಒಂದು ಒಗಟಿನಂತೆ ತೋರಿಬಂದ ಈ ಪ್ರಶ್ನೆಗೆ ಉತ್ತರಿಸದ-"ಇಲ್ಲ" "ಹಾಗಾದರೆ ಈ ಸೂಚನಾ ಫಲಕವನ್ನು ಇಲ್ಲಿಯೇಕೆ ಇಟ್ಟಿದ್ದಿ?" ಎಂದು ಮನಸಿನಿಂದಲೇ ಅರ್ಥಪಟಿಸಿದ

(ಮೂಲ ಯೋಜನಾ)

ಜ್ಞಾನಾಭಿವೃದ್ಧಿಗೆ ಅಮೂಲ್ಯ ಸಾಧನ—

ಪುಸ್ತಕಾಲಯಗಳ ಬೆಳವಣಿಗೆ.

ವಿದ್ಯೆಯನ್ನು ಕಲಿತ ಮಾತ್ರಕ್ಕೆ ಸಂಪೂರ್ಣ ಜ್ಞಾನವನ್ನು ಪಡೆಯುವುದು ಅಸಾಧ್ಯ. ಕಲಿತ ವಿದ್ಯೆಯನ್ನು ಮತ್ತೂ ಬೆಳೆಸಿಕೊಳ್ಳುವುದು ಪ್ರತಿಯೊಬ್ಬನಿಗೂ ಇಷ್ಟಕರವಾಗಿರುವುದು. ಹೀಗೆ ತಮ್ಮ ಜ್ಞಾನಾಭಿವೃದ್ಧಿಯನ್ನು ಮಾಡಿಕೊಳ್ಳುವದಲ್ಲಿ ಪುಸ್ತಕಭಂಡಾರಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಭಾರತದಂತಹ ದೇಶದಲ್ಲಿ ಅಲ್ಪ ವಿದ್ಯಾವಂತರು ಹಾಗೂ ಅವಿದ್ಯಾವಂತರು ಧಾರಾಳವಾಗಿದ್ದಾರೆ. ಅಲ್ಪವಿದ್ಯಾವಂತರಾದರೋ ಇಂತಹ ಪುಸ್ತಕ ಭಂಡಾರಗಳ ಸಂಪೂರ್ಣ ಉಪಯೋಗವನ್ನು ಮಾಡಿಕೊಂಡಲ್ಲಿ ಅವರ ಜ್ಞಾನವು ಹೆಚ್ಚುವುದು. ಅಲ್ಲದೇ, ಅಮೂಲ್ಯವಾಗಿರುವ, ಮತ್ತು ಅಪರೂಪವಾಗಿರುವ ಪುಸ್ತಕಗಳನ್ನು ಇಂತಹ ಪುಸ್ತಕ ಭಂಡಾರಗಳಲ್ಲಿ ಸಂಗ್ರಹಿಸಲ್ಪಡುತ್ತವೆ. ಖಾಸಗಿ ವ್ಯಕ್ತಿಗಳಿಗೆ ಕೊಂಡುಕೊಳ್ಳಲಾಗದ ವಿಶೇಷ ರೀತಿಯ ಪುಸ್ತಕಗಳು ಈ ವಿವಿಧ ಭಂಡಾರಗಳಲ್ಲಿದ್ದು, ಜ್ಞಾನ ಪಿಪಾಸುಗಳಿಗೆ ಜ್ಞಾನದಾಹವನ್ನು ತೀರಿಸುತ್ತವೆ ಹೀಗಾಗಿ ಆಧುನಿಕ ಭಾರತದ ನಿರ್ಮಾಣದಲ್ಲಿ ಪುಸ್ತಕ ಭಂಡಾರಗಳ ಬೆಳವಣಿಗೆಯೂ ಪ್ರಮುಖವಾದುದೆಂದು ಮತ್ತೆ ಹೇಳಬೇಕಾಗಿಲ್ಲ.

ನಮ್ಮ ದೇಶದಲ್ಲಿ ಆಧುನಿಕ ರೀತಿಯ ಪುಸ್ತಕ ಭಂಡಾರಗಳ ಚಳವಳಿಯು ೧೮೦೮ರಲ್ಲಿ ಮೊತ್ತಮೊದಲಿಗೆ ಪ್ರಾರಂಭವಾಯಿತು. ಆ ಸಮಯದಲ್ಲಿ ಮುಂಬಯಿ ಸರಕಾರವು "ಸಾಹಿತ್ಯ ಉತ್ತೇಜಕ ನಿಧಿ" ಯಿಂದ ಪ್ರಕಟಿಸಲಾಗುತಿದ್ದ ಪುಸ್ತಕಗಳನ್ನು ಒದಗಿಸುತ್ತಿದ್ದಂತಹ ಪುಸ್ತಕ ಭಂಡಾರಗಳನ್ನು ಸ್ಥಾಪಿಸಿಕೊಳ್ಳಲು ಆರಂಭವಾಡಿತು ಮುಂದಕ್ಕೆ ೧೯ನೆಯ ಶತಮಾನದ ಮಧ್ಯಭಾಗದಲ್ಲಿ ಮುಂಬಯಿ ಕಲಕತ್ತೆ ಮತ್ತು ಮದರಾಸುಗಳಲ್ಲಿ, ಎಂದರೆ ಆ ಕಾಲದ ಭಾರತದ ಮುಖ್ಯ ಮೂರು ಪ್ರಾಂತ್ಯಗಳಾಗಿದ್ದವುಗಳ ಕೇಂದ್ರ ಸ್ಥಳಗಳಲ್ಲಿ, ಒಂದೊಂದು ಸಾರ್ವಜನಿಕ ಪುಸ್ತಕ ಭಂಡಾರಗಳನ್ನು ಸ್ಥಾಪಿಸಲಾಯಿತು.

ಈ ಕುರಿತಾದ ಕೆಲವೊಂದು ಮಾಹಿತಿಗಳನ್ನು ಭಾರತ ಸರಕಾರವು ಒಟ್ಟುಗೂಡಿಸಿದೆ ಅದು ಸಂಗ್ರಹಿಸಿದ ಲೆಕ್ಕಗಳಂತೆ, ೧೯೫೦-೫೧ರಲ್ಲಿ ಭಾರತದಲ್ಲಿ ಒಟ್ಟು ೧೨೧೬ ಪುಸ್ತಕಾಲಯಗಳಿದ್ದುವು ಇವುಗಳಲ್ಲಿ ೨೮ ವಿಶ್ವವಿದ್ಯಾನಿಲಯ ಪುಸ್ತಕ ಭಂಡಾರಗಳೂ ೭೭೪ ಶಾಲೆಗಳು ಮತ್ತು ಕಾಲೇಜುಗಳಿಗೆ ಸಂಬಂಧಿಸಿದ ಪುಸ್ತಕ ಭಂಡಾರಗಳೂ ೨೪೮ ಸಾರ್ವಜನಿಕ ಪುಸ್ತಕ ಭಂಡಾರಗಳೂ ಇದ್ದುವು.

ಭಾರತೀಯ ಪ್ರಥಮ ಪಂಚವಾರ್ಷಿಕ ಯೋಜನೆಯ ಪ್ರಕಾರ ೧೪೮ ಜಿಲ್ಲಾ ಪುಸ್ತಕ ಭಂಡಾರಗಳು ಮತ್ತು ೯ ರಾಜ್ಯ ಪುಸ್ತಕ ಭಂಡಾರಗಳನ್ನು ಸಂಸ್ಥಾಪಿಸಲಾಯಿತು. ಈ ಅವಧಿಯಲ್ಲಿ ಮತ್ತೊಂದು ಗಮನಾರ್ಹವಾದ ವಿಶೇಷ ಸಂಸ್ಥೆಯೊಂದು ಸ್ಥಾಪಿತವಾಯಿತು. ನವದೆಹಲಿಯಲ್ಲಿ ಯುನೆಸ್ಕೋ ಮತ್ತು ಭಾರತ ಸರಕಾರದ ಸಹಯೋಗದೊಂದಿಗೆ ಪ್ರಾಯೋಗಿಕ ಯೋಜನಾ ಪುಸ್ತಕ ಭಂಡಾರದ ಸ್ಥಾಪನೆಯು ಈ ವೇಳೆಯಲ್ಲೇ ಆಯಿತು.

ಭಾರತದಲ್ಲಿ ಪುಸ್ತಕ ಪಾವತಿ ಕಾನೂನನ್ನು ೧೯೫೪ರಲ್ಲಿ ನಿರ್ಣಯಿಸಲಾಯಿತು. ಜ್ಞಾನ ಹಾಗೂ ಸಂಶೋಧನಾಭಿವೃದ್ಧಿಗಾಗಿ, ಕಲ್ಕತ್ತದ ರಾಷ್ಟ್ರೀಯ ಪುಸ್ತಕ ಭಂಡಾರ ಮತ್ತು ರಾಷ್ಟ್ರದ ವಿವಿಧ ಭಾಗಗಳಲ್ಲಿರುವ ನಾಲ್ಕು ಪುಸ್ತಕ ಭಂಡಾರಗಳಿಗೆ ಭಾರತದಲ್ಲಿ ಪ್ರಕಟಣೆಗೊಂಡ ಎಲ್ಲ ಪುಸ್ತಕಗಳ ಒಂದೊಂದು ಪ್ರತಿಯನ್ನು ಉಚಿತವಾಗಿ ಎಲ್ಲ ಪ್ರಕಾಶಕರು ಖಡ್ಡಾಯವಾಗಿ ಸಲ್ಲಿಸಬೇಕೆಂಬುದಾಗಿ ಈ ಕಾನೂನು ವಿಧಿಸುತ್ತದೆ. ಈ ಕಾರಣದಿಂದ ಇಂತಹ ಭಂಡಾರಗಳಲ್ಲಿ ಎಲ್ಲ ಭಾಷೆಯ ಎಲ್ಲ ಪುಸ್ತಕಗಳನ್ನೂ ಸಂಗ್ರಹಿಸುವುದು ಸಾಧ್ಯವಾಗಿ ಪರಿಣಮಿಸಿದೆ.

ದ್ವಿತೀಯ ಪಂಚವಾರ್ಷಿಕ ಯೋಜನಾಂತ್ಯದಲ್ಲಿ, ಎಂದರೆ, ೧೯೬೧ರ ವೇಳೆಗೆ ತಾಲೂಕಿಗಳಲ್ಲಿ ಪುಸ್ತಕ ಭಂಡಾರಗಳನ್ನು ಸ್ಥಾಪಿಸುವ ಉದ್ದೇಶವನ್ನು ಸರಕಾರವು ಇಟ್ಟುಕೊಂಡಿದೆ ಜಿಲ್ಲಾ ಪುಸ್ತಕ ಭಂಡಾರಗಳು ಶೇವಣಾತಿ ನಿಲಯ ಹಾಗೂ ಪಾವತಿ ನಿಲಯಗಳ ಮೂಲಕವಾಗಿ ಪುಸ್ತಕ ಪ್ರಸಾರಣಾ ಸೇವೆಯನ್ನು ಮಾಡಿ, ಓದುವ ಹವ್ಯಾಸವನ್ನು ಜನರಲ್ಲಿ ಕೆರಳಿಸುವುವು

ಈ ವ್ಯವಸ್ಥೆಯ ನಂತರ ಗ್ರಾಮಾಂತರ ಪುಸ್ತಕ ಭಂಡಾರಗಳಿರುವುವು. ಇಂತಹ ಗ್ರಾಮಾಂತರ ಭಂಡಾರಗಳಿಗೆ ಜಿಲ್ಲಾ ಹಾಗೂ ಉಪಜಿಲ್ಲಾ ಪುಸ್ತಕ ಭಂಡಾರಗಳಿಂದ ಬೇಕಾದ ಪುಸ್ತಕಗಳನ್ನು ಒದಗಿಸಲಾಗುವುದು. ಭಾರತದ ಎಲ್ಲ ಗ್ರಾಮಗಳಿಗೂ ಪುಸ್ತಕ ಭಂಡಾರಗಳ ಸೌಕರ್ಯವನ್ನು ಒದಗಿಸಲು ಇನ್ನೂ ಹಲವಾರು ವರ್ಷಗಳು ಬೇಕಾಗಬಹುದು. ಅದರೂ ಪುಸ್ತಕ ಭಂಡಾರಗಳಿಲ್ಲದ ಗ್ರಾಮಗಳಲ್ಲಿ ಸಂಚಾರಿ ಪುಸ್ತಕ ಭಂಡಾರಗಳ ಗಾಡಿಗಳು ಅಗತ್ಯವಿರುವ ಸೇವೆಯನ್ನು ಸಲ್ಲಿಸುತ್ತಿರುವುವು.

ಈಗ, ಜಿಲ್ಲಾ ಮಟ್ಟಕ್ಕೆ ಮೇಲ್ಪಟ್ಟು, ಪ್ರತಿ ರಾಜ್ಯವೂ ಒಂದೊಂದು ಕೇಂದ್ರ ಪುಸ್ತಕ ಭಂಡಾರವನ್ನು ಹೊಂದಿರುವುದು ಈ ರಾಜ್ಯಗಳ ಕೇಂದ್ರ ಭಂಡಾರಗಳನ್ನು ಕಲ್ಕತ್ತ, ಮುಂಬಯಿ ಮತ್ತು ಮದ್ರಾಸಗಳಲ್ಲಿರುವ ರಾಷ್ಟ್ರೀಯ ಪುಸ್ತಕ ಭಂಡಾರಗಳಿಗೂ, ದಹಲಿಯಲ್ಲಿ ತೆರೆಯಲಾಗುವ ರಾಷ್ಟ್ರೀಯ ಕೇಂದ್ರ ಪುಸ್ತಕ ಭಂಡಾರಕ್ಕೂ ಸಂಪರ್ಕಗೊಳಿಸಲಾಗುವುದು. ಇದರಿಂದ, ರಾಜ್ಯ ಕೇಂದ್ರಗಳ ಪುಸ್ತಕಾಲಯಗಳಲ್ಲಿ ಎಲ್ಲ ಬಗೆಯ ಪುಸ್ತಕಗಳೂ ದೊರೆಯುವುದು ಸಾಧ್ಯ. ಹೀಗೆ ಭಾರತದಲ್ಲಿ ಪುಸ್ತಕ ಭಂಡಾರದ ಚಳುವಳಿಯು ಕ್ರಮೇಣ ಬೆಳೆಯುತ್ತಾ ಇದೆ.

---

100 ವರ್ಷಗಳ ಖ್ಯಾತಿಗಳಿಸಿದ ಶ್ರೀ॥ ಅಂಬಳಿ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟು)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ಸಂ॥ A.R. ಅಯ್ಯರ್ ವೃದ್ಧಿಸಿ, **ನಪುಂಸಕತೆಯನ್ನು** ನಿವಾರಿಸುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N P) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ಯಾಟಲಾಗ್ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ, (ನ ಯು)

628, "ಸಂತಾನ ಸಿಂದೂರ ಸದನ", ರಾಮರಾಜ ರೋಡ್, ಮೈಸೂರು-1 (S.I.)

ತಾಂತ್ರಿಕ ಶಿಕ್ಷಣ ಹೆಚ್ಚಬೇಕು—

ವಿದ್ಯಾಪದ್ಧತಿಯಲ್ಲಿ ಬದಲಾವಣೆಯಾಗಲಿ

ಇಂದು ಭಾರತದಲ್ಲಿ ಎದ್ದು ತೋರುವ ಸಮಸ್ಯೆಯೆಂದರೆ ನಿರುದ್ಯೋಗಕ್ಕೆ ಸಂಬಂಧಿಸಿದ್ದು. ಅದರಲ್ಲೂ ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಗೆ ಪರಿಹಾರವನ್ನರಸುವುದು ತೀರಾ ಪ್ರಯಾಸಕರವಾದ ಕೆಲಸವಾಗಿದೆ. ಇಂತಹ ಬೃಹದಾಕಾರವನ್ನು ತಾಳಿ, ದೇಶವನ್ನು ಪೀಡಿಸುವ ನಿರುದ್ಯೋಗ ರಾಕ್ಷಸನನ್ನು ಜಯಿಸಬೇಕಾದರೆ, ಮತ್ತದರಿಂದ ದೇಶದ ಸಂಪನ್ಮೂಲಗಳನ್ನು ಹೆಚ್ಚಿಸಿ, ದೇಶದಭಿವೃದ್ಧಿಯನ್ನು ಸಾಧಿಸಲು ನಾವು ಬಯಕೆಯುಳ್ಳವರಾಗಿರುವುದಾದರೆ, ನಮ್ಮ ವಿದ್ಯಾಪದ್ಧತಿಯು ಸಂಪೂರ್ಣವಾಗಿ ಬದಲಾಗಬೇಕು. ಮತ್ತದಕ್ಕೆ ಹೊಸ ರೂಪವನ್ನಿಡಬೇಕು. ಇಂತಹ ನವೀನ ವಿಧಾನವನ್ನನು ಸರಿಸುವಾಗ, ನಾವು ನಮ್ಮ ದೇಶದ ಅಭಿವೃದ್ಧಿಕಾರ್ಯಕ್ಕೆ ಅತ್ಯಾವಶ್ಯಕವೆನಿಸಿದ ರೀತಿ ರಿವಾಜುಗಳನ್ನು ಹೊಂದಿಸಿ, ಸಮತೂಗಿಸಿಕೊಳ್ಳಬೇಕು. ಇಂದು ಭಾರತದಲ್ಲಿರುವ ಏಕ ಪಕ್ಷೀಯ ವಿಧಾನದ ವಿದ್ಯಾಕ್ರಮದಲ್ಲಿ ಆಗುತ್ತಿರುವ ವಿಸ್ತರಣಾ ಕಾರ್ಯವೇ ಜನರ ಹೃನ್ಮಂದಿರಗಳಲ್ಲಿ ತಾಂಡವವಾಡುತ್ತಿರುವ ಅಸಂತೃಪ್ತಿಗೆ ಮೂಲಕಾರಣವಾಗಿದೆ. ಮುಖ್ಯವಾಗಿ ನಮ್ಮ ಯುವ ಜನಾಂಗದ ಹೃದಯಗಳಲ್ಲಿಯೂ ಈ ವಿಧದ ಯಾಂತ್ರಿಕ ವಿದ್ಯೆಯು ಬೇಸರವನ್ನೂ ನೀರಸಿಕೆಯನ್ನೂ ಉಂಟುಮಾಡಿದೆ ಎಂದರೆ, ಅದರಲ್ಲಿ ಸೋಜಿಗವಿಲ್ಲ.

ಭಾರತ ಸರಕಾರವು ಇಂದಿನ ದಿನಗಳಲ್ಲಿ ತನ್ನ ರಾಷ್ಟ್ರೀಯ ಯೋಜನೆಗಳಡಿಯಲ್ಲಿ ನವೀನ ಕೈಗಾರಿಕೆಗಳ ಉದ್ಯಮಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ, ಅವಶ್ಯಕ ಬೇಳುವ ಸಾಕಷ್ಟು ಸಂಖ್ಯೆಯಲ್ಲಿ ಜನರನ್ನು ತರಬೇತಿಗೊಳಿಸುವ ಸಲುವಾಗಿ, ತಾಂತ್ರಿಕ ಸಂಸ್ಥೆಗಳನ್ನು ಕೈಲಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸಂಸ್ಥಾಪಿಸಲು ದೃಢ ನಿಶ್ಚಯ ಮಾಡಿದೆ.

ನಮ್ಮಲ್ಲಿಂದು ಬೇಕಾದಷ್ಟು ವಿದ್ಯಾವಂತರಿದ್ದಾರೆ. ಅವ-ಲ್ಲಿ ಗಣನೀಯ ಸಂಖ್ಯೆಯ ಪದವೀಧರರೂ ಸೇರಿರುತ್ತಾರೆ. ಆದರೆ, ಅವರಿಗೆ ತಕ್ಕ ಕೆಲಸವನ್ನು ಮಾತ್ರ ಒಪ್ಪಿಸುವುದು ಕಷ್ಟಸಾಧ್ಯವಾಗಿದೆ. ನಮಗಿಂದು ತಾಂತ್ರಿಕ ತರಬೇತಿಯನ್ನು ಪಡೆದವರು ಅಧಿಕ ಸಂಖ್ಯೆಯಲ್ಲಿ ಬೇಕಾಗಿದ್ದಾರೆ. ಆದರೆ, ತಾಂತ್ರಿಕಜ್ಞರ ಸಂಖ್ಯೆ ನಮಲ್ಲಿ ಧಾರಾಳವಾಗಿಲ್ಲ. ಜನತೆಯಲ್ಲಿ ಅಸಮಾಧಾನವನ್ನು ಹೆಬ್ಬಿಸಿದ ವಿರೋಧಾಭಾಸವೇ ಇದು.

ಈ ಕಾರಣಗಳಿಂದ, ನಮ್ಮ ವಿದ್ಯಾಪದ್ಧತಿಯು ಪುನರ್ವ್ಯವಸ್ಥಿತಗೊಳಿಸಲ್ಪಡುವುದು ಅತ್ಯಂತ ಅಗತ್ಯವಾಗಿದೆ. ಒಂದು ಸಮತೂಕದಲ್ಲಿ ಕೊಡಲ್ಪಡುವ ವಿದ್ಯಾ ಸದ್ಧತಿಯೇ ದೇಶದ ಹಾಗೂ ಜನತೆಯ ಅವಶ್ಯಕತೆಗಳನ್ನು ಪೂರೈಸಬಲ್ಲುದು. ಭಾರತವನ್ನಿಂದು ಇತರ ಅಭಿವೃದ್ಧಿಹೊಂದಿದ ದೇಶಗಳ ಮಟ್ಟಕ್ಕೆ ತರುವಂತಹ ಕಾರ್ಯವು ತ್ವರಿತಗತಿಯಿಂದ ಕೈಗೊಳ್ಳಲ್ಪಡಲು ಹಲವಾರು ರಾಷ್ಟ್ರೀಯ ಯೋಜನೆಗಳನ್ನು ಕೈಗೊಂಡಿದ್ದಾರೆ. ಆದರೆ, ಇಂತಹ ಯೋಜನೆಗಳನ್ನು ಜಯಪ್ರದ ವಿಧಾನದಲ್ಲಿ ಪೂರ್ತಿಗೊಳಿಸಲ್ಪಡಬೇಕಾದರೆ, ಸಾಕಷ್ಟು ಹಣವು ದೊರೆತರೆ ಮಾತ್ರ ಸಾಲದು, ತರಬೇತಿಹೊಂದಿದ ಅನುಭವಿಕ ತಾಂತ್ರಿಕಜ್ಞರೂ ಸಾಕಷ್ಟು ಸಿಗಬೇಕು.

ಈಗ ವಿದೇಶಗಳಿಂದ ಆಮದುಮಾಡುತ್ತಿರುವ ಕೆಲವೊಂದು ಉಪಯುಕ್ತ ವಸ್ತುಹಾಗೂ ಒಡವೆಗಳಲ್ಲಿ ಸ್ವಾವಲಂಬನೆಯನ್ನು ಪಡೆದುಕೊಳ್ಳಬೇಕೆಂದು ಭಾರತವು ಅಪೇಕ್ಷಿಸುತ್ತದೆ. ಇದಕ್ಕಾಗಿ ದೊಡ್ಡ ಕಾಖಾರನೆಗಳನ್ನು ಕಟ್ಟುವಸಲುವಾಗಿ ವಿಶುಲವಾದ ಬಂಡವಾಳವು ಬೇಕಾಗಿದೆ. ಹೀಗೆ ಕಟ್ಟಲಾಗುವ ಭಾರಿ ಉದ್ದಿಮೆಗಳಲ್ಲಿ ಅತ್ಯಂತ ನಿಷ್ಠೆಯಿಂದ ಕರ್ತವ್ಯತೀಲರಾಗಿರತಕ್ಕ ತಾಂತ್ರಿಕ ಕರ್ಮಚಾರಿಗಳು ಸಹ ಅತ್ಯಂತಾವಶ್ಯಕವಾಗಿದ್ದಾರೆ ಎಂಬುದನ್ನು ಮರೆಯಬಾರದು.

ಕಳೆದ ಐದು ದಶಕಗಳಲ್ಲಿ ಕಾಲೇಜುಗಳ, ಶಾಲೆಗಳ ಹಾಗೂ ಅವುಗಳಲ್ಲಿ ವಿದ್ಯೆಯನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ಆಶ್ಚರ್ಯಕರವಾಗಿ ಏರಿರುತ್ತದೆ ಹೀಗಿದ್ದರೂ ನಮ್ಮಲ್ಲಿಂದು ತಾಂತ್ರಿಕ ಶಿಕ್ಷಣದ ಅಭಾವವು ಕಣ್ಣಿಗೆ ಕಟ್ಟುವಂತಿದೆ.

ಆದುದರಿಂದ ನಮ್ಮ ಶಿಕ್ಷಣ ಪದ್ಧತಿಯು ತೀವ್ರಪಲ್ಲಟಗೊಳ್ಳಬೇಕು. ಬೇರೆ ಬೇರೆ ವಿಷಯಗಳಲ್ಲಿ ಪರ್ಯಾಪ್ತ ಜ್ಞಾನವನ್ನು ಪಡೆಯುವುದರೊಂದಿಗೆ ತಮ್ಮ ಉದರ ಪೋಷಣೆಗಾಗಿ ಅನ್ನವನ್ನು ಸಂಪಾದಿಸುವ ವಿದ್ಯೆಯಲ್ಲಿಯೂ ಪ್ರಾವೀಣ್ಯವನ್ನು ಹಸ್ತಗತಮಾಡಿಕೊಳ್ಳಲು ಜನರು ಕೂಲವಾಗುವಂತೆ ನಮ್ಮಿಂದಿನ ಶಿಕ್ಷಣ ಪದ್ಧತಿಯನ್ನು ತ್ವರಿತಗತಿಯಲ್ಲಿ ಬದಲಾಯಿಸಬೇಕು. ಈ ಕಾರಣದಿಂದ, ಅದಷ್ಟು ಅಧಿಕ ಸಂಖ್ಯೆಯ ನವಯುವಕರಿಗೆ ತಾಂತ್ರಿಕ ಶಿಕ್ಷಣದಲ್ಲಿ ತಕ್ಕ ತರಬೇತಿಯನ್ನು ಪಡೆಯುವ ಸದವಕಾಶಗಳನ್ನು ಕಲ್ಪಿಸಿಕೊಡುವ ಸಲುವಾಗಿ ನಾನಾ ಕಲಾ ಶಿಕ್ಷಣ ಸಂಸ್ಥೆಗಳನ್ನೂ ಇನ್ನಿತರ ತಾಂತ್ರಿಕ ತರಬೇತಿ ಸಂಸ್ಥೆಗಳನ್ನೂ ಸಂಸ್ಥಾಪಿಸುವುದು ಅತ್ಯಗತ್ಯದ ಕಾರ್ಯವೆನಿಸಿದೆ. ಅದರೆ, ದೇಶದಲ್ಲಿ ತಾಂತ್ರಿಕ ಸಂಸ್ಥೆಗಳ ವಿಸ್ತರಣೆಗೆಅವಕಾಶವನ್ನು ಕಲ್ಪಿಸುತ್ತಿರುವಾಗ, ಭಾರತದ ನಾಗರಿಕರನ್ನು ತಾವು ತಯಾರಿಸುತ್ತಿರುವೆವೆಂಬುದನ್ನು ಮರೆಯಬಾರದು. ಆದುದರಿಂದ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳನ್ನು ಕೇವಲ ಸುಸಮರ್ಥ ತಾಂತ್ರಿಕಜ್ಞರಾಗುವಂತೆ ತರಬೇತಿಯನ್ನೀಯುವುದಲ್ಲದೇ, ವಿಸ್ತಾರವಾಗಿ ಹರಡಿರುವ ಸಮಾಜದ ಲಾಭಕ್ಕಾಗಿ ತಮ್ಮ ಜ್ಞಾನವನ್ನು ಉಪಯೋಗಿಸುವ ಶಕ್ತಿಹೊಂದಿದ ಉತ್ತಮ ನಾಗರಿಕರಾಗುವಂತೆಯೂ ಪ್ರಯತ್ನ ಮಾಡಬೇಕು.

ಪ್ರಜಾಪ್ರಭುತ್ವವನ್ನು ಅಂಗೀಕರಿಸಿದ ಸಮಾಜದಲ್ಲಿ ವಿಜ್ಞಾನಗಳ ಅಭ್ಯಾಸ ವೃತ್ತದರಲ್ಲಿ ಪರಿಪೂರ್ಣ ಜ್ಞಾನಸಂಪಾದನೆ-ಇವುಗಳಿಂದಲೇ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬಹುದೆಂದು ತಿಳಿಯಬಾರದು. ಎಲ್ಲಾ ವಿಭಾಗದ ವಿದ್ಯಾರ್ಥಿಗಳಿಗೂ ಜೀವನದಲ್ಲಿ ಸ್ವಾಭಾವಿಕವಾಗಿ ಬಂದೊದಗುವಂತಹ ವ್ಯಾವಹಾರಿಕ ವಿಧಾನದಲ್ಲಿ ತಕ್ಕ ತರಬೇತಿಯನ್ನೀಯಬೇಕು. ಮತ್ತಿದರಿಂದಾಗಿ ಅವರು ಸಮಾಜದಲ್ಲಿ ತೀರ ಅವಶ್ಯಕವಾಗುವ ಘಟನೆಗಳಲ್ಲಿ ಅತ್ಯುತ್ತಮವಾದ ಪರಿಣಾಮಗಳನ್ನು ಹೊಂದಲು ಶಕ್ತರಾಗುವರು.

ಆದುದರಿಂದ ಕೇವಲ ಕಾರಕೂನರನ್ನು ತಯಾರಿಸುವ ನಮ್ಮ ಇಂದಿನ ಶಿಕ್ಷಣ ಪದ್ಧತಿಯು ಮಾರ್ಪಾಟನ್ನು ಪಡೆದು, ಭಾರತದ ಪ್ರಜೆಗಳಿಗೆ ವ್ಯಾವಹಾರಿಕವಾದ ವಿದ್ಯಾಭ್ಯಾಸವು ದೊರೆಯುವಂತೆ ಮಾಡುವುದು ದೇಶದ ಆರೋಗ್ಯ ದೃಷ್ಟಿಯಿಂದ ಕ್ಷೇಮಕರವಾಗಿದೆ.

(ರಾಜೀಂದ್ರ ಪ್ರಸಾದರ ಭಾಷಣದ ಆಧಾರದಿಂದ).

(ಗಸೇ ಪುಟದಿಂದ)

ಮಾತ್ರ ನೋಡುವುದಲ್ಲ. ಕನ್ನಡ ಭಾಷಾ ಪ್ರದೇಶಗಳೆಲ್ಲವುಗಳ ಹಿತರಕ್ಷಣೆಗಳನ್ನು ಏಕರೀತಿಯಲ್ಲಿ ನಿಷ್ಪಕ್ಷಪಾತದೃಷ್ಟಿಯಿಂದ ವಿವೇಚಿಸಿ ಯೋಗ್ಯ ಕಾರ್ಯಾಚರಣೆಯಲ್ಲಿ ಮಗ್ನವಾಗಬೇಕು. ಆದುದರಿಂದ, ಎಲ್ಲರನ್ನೂ ಎಲ್ಲವನ್ನೂ ಸೂಚಿಸುವ ಮತ್ತು ಹೆಚ್ಚಿನವರು ಒಪ್ಪಿಕೊಂಡಿರುವ "ಕರ್ನಾಟಕ" ಎಂಬ ಹೆಸರನ್ನು ಬೇಗನೇ ಇಟ್ಟು, ಮುಂದಕ್ಕಾದರೂ ಆ ಬಗ್ಗೆ ಹೆಚ್ಚು ಹೊತ್ತೆದಾಟವಾಗದಂತೆ ನೋಡಿಕೊಳ್ಳುವುದು ಜಾಣತನ ಮೈಸೂರಿಗ (ಹಳೆ) ರಲ್ಲಿ ಕೆಲವರ ಸಮಾಧಾನಕ್ಕಾಗಿ ಇಟ್ಟ ಹೆಸರು ಹೊಸ ಮೈಸೂರಿಗರೆಲ್ಲರಲ್ಲಿ ಅಸಂತೃಪ್ತಿಯನ್ನುಂಟುಮಾಡುವುದೆಂದರೆ, ರಾಜ್ಯದ ಏಕತೆಯನ್ನು ಒಡೆದಂತೆಯೇ ಸರಿ. ಹೆಸರಿಗಾಗಿ ನಡೆಯುವ ಹೊಡೆದಾಟ ಇನ್ನಾದರೂ ನಿಲ್ಲಲಿ.

— ಗೋರಾ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ. ನೋಡಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:00.

ಪುಸ್ತಕದ ಬೆಲೆಯೊಂದಿಗೆ ಸಾಲ್ಯಾಣೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ನಮ್ಮ ಪುಸ್ತಕಗಳು ಈ ಕೆಳಗಿನವರಲ್ಲಿಯೂ ದೊರೆಯುತ್ತವೆ:—

1) ಸ್ಕೂಲ್ ಬುಕ್ ಕಂಪೆನಿ, ರಥಬೀದಿ, ಮಂಗಳೂರು.-1.

2) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಪೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭
VOL. 37

17—10—1957

ಸಂಚಿಕೆ ೭
NO. 7

ಆಸ್ಯಾದ ರಾಷ್ಟ್ರಗಳಲ್ಲಿ ಹೊಸ ಯುಗಾರಂಭ—

ಜೀವನಮಟ್ಟ ಏರಿದರೂ ತಾಂತ್ರಿಕಾಭಾವವಿದೆ

ಮುಂದಿನ ತಿಂಗಳ ದಿನಾಂಕ ೧೩ರಿಂದ ೨೬ರ ವರೆಗೆ ಅಂತಾರಾಷ್ಟ್ರೀಯ ಮಜದೂರ ಸಂಸ್ಥೆಯ ಆಸ್ಯಾ ವಿಭಾಗದ ನಾಲ್ಕನೆಯ ಸಮ್ಮೇಳನವು ನೆವದೆಹಲಿಯಲ್ಲಿ ನಡೆಯಲಿದ್ದು, ಅದನ್ನು ಭಾರತದ ಪ್ರಧಾನಿ ಶ್ರೀ ಜವಾಹರಲಾಲ ನೆಹರುರವರು ಉದ್ಘಾಟಿಸುವರು. ಈ ಸಮ್ಮೇಳನವು ಆಸ್ಯಾ ಖಂಡದ ಸುಮಾರು ೨೫ ರಾಷ್ಟ್ರಗಳ ಕೆಲಸಗಾರ, ಒಡೆಯ ಹಾಗೂ ಸರಕಾರಗಳ ಪ್ರತಿನಿಧಿಗಳನ್ನು ಒಟ್ಟು ಸೇರಿಸುವುದು. ಇದರಲ್ಲಿ ಸಾದರಪಡಿಸುವುದಕ್ಕಾಗಿ ಅಂತಾರಾಷ್ಟ್ರೀಯ ಮಜದೂರ ಸಂಸ್ಥೆಯ ಡೈರೆಕ್ಟರ ಜನರಲ್ಲರಾದ ಶ್ರೀ ಜೇವಿಡ್ ಎ. ಮೋರ್ಸೆಯವರೊಂದು ವರದಿಯನ್ನು ಸಿದ್ಧಪಡಿಸಿದ್ದಾರೆ. ಈ ವರದಿಯುಳ್ಳವರು ಆಸ್ಯಾ ಹಾಗೂ ಜಗತ್ತಿನ ಇತರ ರಾಷ್ಟ್ರಗಳಲ್ಲಿನ ಜನರ ಜೀವನ ಮಟ್ಟವು ಕಳೆದ ಕೆಲವರ್ಷಗಳಿಂದ ವಿಶಾಲಗೊಂಡಿರುವುದಾಗಿ ಅಭಿಪ್ರಾಯಪಟ್ಟಿದ್ದಾರೆ. ಪ್ರಥಮ ಜಾಗತಿಕ ಯುದ್ಧಾನಂತರದ ಈ ಪ್ರಥಮ ದಶಕವು ಆಸ್ಯಾದ ರಾಷ್ಟ್ರಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಹೊಸಯುಗಾರಂಭದ ಆತಿಯನ್ನು ಹೊಂದುವಂತೆ ಮಾಡಿದೆ ಎಂದವರು ಹೇಳಿದ್ದಾರೆ.

ಆಸ್ಯಾದ ರಾಷ್ಟ್ರಗಳ ಸಾಮಾನ್ಯಾಭಿವೃದ್ಧಿಯನ್ನು ವಿವರಿಸುತ್ತಾ, ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆ ಮತ್ತು ಅದೇ ರೀತಿಯ ಇತರ ದೇಶಗಳ ಅಭಿವೃದ್ಧಿಯೋಜನೆಗಳನ್ನು ಪ್ರಸ್ತಾಪಿಸಿದ್ದಾರೆ "ಈ ಯೋಜನೆಗಳು ಆಸ್ಯದ ರಾಷ್ಟ್ರಗಳಲ್ಲಿ ತಮ್ಮ ಜನರಿಗೆ ಸಹಜವಾಗಿ ಅಂಟಿಕೊಂಡಿರುವ ಬಡತನವನ್ನು ದೂರೀಕರಿಸುವ ಪ್ರಬಲೇಚ್ಛೆಯು ಹುಟ್ಟಿಕೊಂಡಿರುವ ದ್ಯೋತಕವಾಗಿದೆ ಅಲ್ಲದೆ, ಈ ಯೋಜನೆಗಳು ಮಹತ್ವಾಕಾಂಕ್ಷಾಪೂರಿತವಾಗಿರವುದಿಲ್ಲ" ಎಂದು ಎಂದಿದ್ದಾರೆ

"ಹಣದುಬ್ಬರ, ಬಾಹ್ಯದೇಶಗಳ ಸಹಾಯಾಧಾನ ಮತ್ತು ಆರ್ಥಿಕ ಸಮನಾರಚನೆಗೆ ಬೇಕಾದ ಬಂಡವಾಳವನ್ನು ಒಟ್ಟುಗೂಡಿಸುವಲ್ಲಿ ಅಸಮರ್ಥತೆ ಈ ಮೂರು ಪ್ರಬಲವಾದ ಕಾರಣಗಳಿಂದಾಗಿ ಆಸ್ಯಾದ ರಾಷ್ಟ್ರಗಳ ಅಭಿವೃದ್ಧಿ ಪ್ರಯತ್ನಗಳನ್ನು ಒಂದು ಮಿತಿಯಲ್ಲಿಟ್ಟುಕೊಳ್ಳಬೇಕಾಗಿದೆ. ಸಾಮಾನ್ಯವಾಗಿ ನುಡಿಯುವುದಾದಲ್ಲಿ ಈ ದೇಶಗಳಲ್ಲಿ ಸಾರ್ವಜನಿಕ ಬಂಡವಳವು ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು ಬಂಡವಳದ ನಾಲ್ಕರಲ್ಲೊಂದಂಶದಷ್ಟು ಮಾತ್ರ ಒಂದುಗೂಡಿದೆ. ಈ ರಾಷ್ಟ್ರಗಳಲ್ಲಿ ದೊರೆಯುವ ವಿದ್ಯೆಯ ಮಟ್ಟವು ಸುಧಾರಣೆಕೊಂಡಿಲ್ಲವಾದರೆ, ಅಧಿಕ ಔದ್ಯೋಗೀಕರಣಗೊಂಡ ರಾಷ್ಟ್ರ ಮತ್ತು ಅಲ್ಪ ಮುಂದುವರಿದ ರಾಷ್ಟ್ರಗಳಲ್ಲಿನ ಹಿಡಿತವು ಈಗ ಇರುವಷ್ಟು ಅದವಾ ಇನಕ್ಕಿಂತಲೂ ಹೆಚ್ಚಾಗಿ ವಿಶಾಲಹೊಂದಬಹುದು. ಆದುದರಿಂದ ಆಸ್ಯಾದ ರಾಷ್ಟ್ರಗಳು ತೀವ್ರವಾಗಿ ತಮ್ಮ ವಿದ್ಯಾಪದ್ಧತಿಯಲ್ಲಿ ಸೂತ್ತ ಒದಲಾವಣೆಗಳನ್ನು ಮಾಡಿಕೊಳ್ಳಬೇಕೆ"ಂದವರು ಎಚ್ಚರಿಸಿದ್ದಾರೆ.

ಆಸ್ಯಾದ ರಾಷ್ಟ್ರಗಳಲ್ಲಿ ನಿಧಾನವಾಗಿಯಾದರೂ ಎಲ್ಲ ದೇಶಗಳ ಜೀವನದಲ್ಲಿಯೂ ಒದಲಾವಣೆಯನ್ನು ಎದ್ದು ತೋರಿಸುವ ರೀತಿಯಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯಾಗಿದೆ. ದೇಶಗಳ ಮೂಲಭೂತ ಸಮಸ್ಯೆಗಳನ್ನು ಹೋಗಲಾಡಿಸುವ ಸಲುವಾಗಿ, ಕೃಷಿ ಹಾಗೂ ಒಕ್ಕಲತನದ ಉತ್ಪತ್ತಿ ಮತ್ತು ಸಮಾಜಾಭಿವೃದ್ಧಿಕಾರ್ಯಕ್ರಮಗಳಲ್ಲಿನ ಪ್ರಗತಿಯನ್ನು ವರದಿಯು ಎತ್ತಿ ತೋರಿಸಿದೆ. ಜಪಾನು ಮತ್ತು ಬ್ರಹ್ಮದೇಶಗಳನ್ನು ಹೊಂತು ಪಡಿಸಿದರೆ, ಇತರ ಆಸ್ಯಾದ ದೇಶಗಳನ್ನು ಯುದ್ಧಾನಂತರದ ಅಭಿವೃದ್ಧಿಯ ಪಥದಲ್ಲಿ ಉಳಿದ ಜಗತ್ತಿನ ರಾಷ್ಟ್ರಗಳ ಅಭಿವೃದ್ಧಿಯೋಜನೆಗಳೊಂದಿಗೆ ಹೋಲಿಸಿದರೆ, ಕೇವಲ ಅಲ್ಪ ವಟ್ಟದ ಹೆಜ್ಜೆಯನ್ನಿಟ್ಟಿವೆಯೆಂದು ಹೇಳಬಹುದು-ಎಂದು ವರದಿಯು ಉಲ್ಲೇಖಿಸಿದೆ.

ಆಸ್ಯಾದ ಎಲ್ಲ ದೇಶಗಳೂ ಕೃಷಿಯಲ್ಲಿ ಅಭಿವೃದ್ಧಿಯನ್ನು ಹೊಂದಿ, ತಮ್ಮ ಆಹಾರದ ಪರಿಸ್ಥಿತಿಯನ್ನು ಸುಧಾರಿಸಿಕೊಂಡಿವೆ ಜಾಗತಿಕ ಆಹಾರ ಮತ್ತು ಒಕ್ಕಲುತನ ಸಂಸ್ಥೆಯವರ ಅಂಕಿಸಂಖ್ಯೆಗಳನ್ವಯವಾಗಿ, ೧೯೫೫ ಜೂನರಲ್ಲಿ ೧೦೪ ಎಂದಿಟ್ಟುಕೊಂಡರೆ ಅದು ೫೫ ಜೂನರಲ್ಲಿ ೧೧೯ ಕ್ಕೆ ಏರಿರುವುದು. ಭೂಸುಧಾರಣೆ ಸಮಾಜಾಭಿವೃದ್ಧಿ ಯೋಜನೆ, ಸಹಕಾರ, ಕೈಕಸಬು ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಸಮಾಜ ಸೇವೆಗಳನ್ನು ವಿಮರ್ಶಿಸಿ, ಶ್ರೀ ಮೋರ್ಸೆಯವರು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯನ್ನು ಅಲ್ಲಿನ ಸರಕಾರಗಳು ಮಾಡುವ ಆವಶ್ಯಕತೆಗಳನ್ನು ಒತ್ತಿಹೇಳಿದರು ಬಾಹ್ಯಪ್ರದೇಶಗಳಿಂದ ಸಹಾಯವನ್ನು ಬಯಸದೆ, ತಮ್ಮ ಉನ್ನತಿಕೆಯನ್ನು ತಾವೇ ಮಾಡಿಕೊಂಡಲ್ಲಿ ಅದೊಂದು ಉತ್ತಮವಾದ ಕೆಲಸವಾಗುವುದೆಂದವರೆಂದಿರುವರು.

ಅಸ್ಯದ ರಾಷ್ಟ್ರಗಳ ಔದ್ಯೋಗಿಕೋತ್ಪಾದನೆಯನ್ನು ಪ್ರಸ್ತಾಪಿಸಿ, ಸಾಮಾನ್ಯವಾಗಿ, ಆಸ್ಯಾದ ಅಭಿವೃದ್ಧಿ ಯೋಜನಗಳು ವಿದ್ಯುಚ್ಛಕ್ತಿ ಮತ್ತು ಸಂಗಿಗೆ ಸಂಸರ್ಕಗಳಿಗೆ ಪ್ರಧಾನ ಸ್ಥಾನವನ್ನಿತ್ತಿವೆ, ಖಾರಕಾನೆಗಳನ್ನು ಸ್ಥಾಪಿಸುವತ್ತ ವಿಶೇಷ ಗಮನವೀಯಲಿಲ್ಲ ಆದರೂ ಕೆಲವೊಂದು ದೇಶಗಳಲ್ಲಿ ಕಾರಖಾನೆಗಳೂ ತುಂಬಿ ಬಂದಿವೆ. ಭಾರತದಲ್ಲಿ ಸಿಮೆಂಟು, ರಾಸಾಯನಿಕ, ಮತ್ತು ತಾಂತ್ರಿಕ, ಕಬ್ಬಿಣ ಮತ್ತು ಉಕ್ಕುಗಳ ಉತ್ಪಾದನೆಯು ಅತ್ಯಧಿಕ ಪ್ರಮಾಣದಲ್ಲಿ ಹೆಚ್ಚಿದ ಔದ್ಯೋಗಿಕ ಉತ್ಪಾದನೆಯನ್ನು ೧೯೫೫ರಲ್ಲಿ ೧೦೦ ಎಂದಿಟ್ಟುಕೊಂಡರೆ, ಅದು ೧೯೫೬ರಲ್ಲಿ ೧೩೦ಕ್ಕೆ ಏರಿದೆ ಎಂದು ಮೋರ್ಸೆಯವರಿಯಲ್ಲಿ ಹೇಳಿದ್ದಾರೆ.

ಆಸ್ಯಾದಲ್ಲಿ ಹೆಚ್ಚಿರುವ ನಿರುದ್ಯೋಗ ಸಮಸ್ಯೆಯ ಕುರಿತಾಗಿ ವಿಚಾರಿಸುತ್ತಾ ಅದಕ್ಕೆ ಮೂರು ಕಾರಣಗಳಿವೆಯೆಂದು ಶ್ರೀ ಮೋರ್ಸೆಯವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಮೊದಲನೆಯದಾಗಿ, ಪ್ರತಿವರ್ಷವೂ ೧೫೦ ಲಕ್ಷದಂತೆ ಹೆಚ್ಚುತ್ತಿರುವ ದಟ್ಟವಾದ ಜನಸಂಖ್ಯೆ ಇದರಿಂದಾಗಿ ಪ್ರತಿವರ್ಷವೂ ೮೫, ೦೦, ೦೦೦ ಜನರು ಹೊಸದಾಗಿ ಉದ್ಯೋಗವನ್ನು ಅರಸುತ್ತಲಿದ್ದಾರೆ ಎರಡನೆಯದಾಗಿ, ಮೂರರಷ್ಟೆರಡು ಅಂಶಕ್ಕಿಂತಲೂ ಹೆಚ್ಚಿನ ಜನರು ಕೃಷಿಯನ್ನೇ ತಮ್ಮ ಪ್ರಧಾನ ಕಸಬನ್ನಾಗಿ ಮಾಡಿಕೊಂಡಿರುವುದು. ಮೂರನೆಯದಾಗಿ, ದೀರ್ಘಾವಧಿಯಾಗಿ ಮತ್ತು ವಿಸ್ತಾರವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹೊಸತಾಗಿ ಹರಡುತ್ತಿರುವ ನಿರುದ್ಯೋಗ ಪ್ರವೃತ್ತಿ. ಮಾನವಶಕ್ತಿಯು ಬೆಳೆಯುತ್ತಿರುವ ಪ್ರಮಾಣದಲ್ಲಿ ಅದನ್ನು ತಣಿಸಲು ಆರ್ಥಿಕ ಚಟುವಟಿಕೆಗಳು ಬೆಳೆಯದಿರುವುದೇ ಪ್ರಬಲ ಕಾರಣವೆಂದ ಶ್ರೀ ಮೋರ್ಸೆ ತಮ್ಮ ವರದಿಯಲ್ಲೆಂದಿದ್ದಾರೆ.

ಒಕ್ಕಲುತನದಲ್ಲಿಯೇ ಮಗ್ನರಾಗಿರುವವರಲ್ಲಿ ಅರೆನಿರುದ್ಯೋಗವೊಂದು ಭಯಂಕರ ವ್ಯಾಧಿಯಾಗಿದೆ. ಅಲ್ಲದೆ, ಕೆಲವು ವರ್ಷಗಳಿಂದೀಚೆಗೆ ಇಂತಹ ನಿರುದ್ಯೋಗಿಗಳ ಸಂಖ್ಯೆ ಮತ್ತಷ್ಟು ಅಧಿಕವಾಗಿದೆ, ಜಪಾನಿನಲ್ಲಿ ೧೯೫೫ರಲ್ಲಿ ತಮ್ಮ ಹೆಸರನ್ನು ನೋಂದಾಯಿಸಿದ ನಿರುದ್ಯೋಗಿಗಳು ೬೫೦ ಸಾವಿರವಿದ್ದರೆ ಆಗಸ್ಟ್ ೫೬ರಲ್ಲಿ ಅದು ೫೬೦ ಸಾವಿರಕ್ಕೇರಿದೆ. ಭಾರತದಲ್ಲಿ ಯಾದರೂ ಇದೀಗ ೫೫ ಲಕ್ಷ ನಿರುದ್ಯೋಗಿಗಳ ವಿವರಗಳು ದೊರೆಯುತ್ತವೆ ಆದರೆ, ಅರ್ಥಮಂತ್ರಿಗಳ ಸೂಚನೆಗನುಸಾರವಾಗಿ, ೧ ಕೋಟಿಗೂ ಮಿಕ್ಕಿದ ನಿರುದ್ಯೋಗಿಗಳಿರಬಹುದು ಇವುಗಳಿಗೆ ಅರೆನಿರುದ್ಯೋಗಿಗಳ ಸಂಖ್ಯೆಯೂ ಕೂಡಿಕೊಂಡಿದೆ. ಬ್ರಹ್ಮದೇಶ, ಇಂಡೋನೇಶಿಯ ಮತ್ತು ಥೈಲೇಂಡುಗಳಲ್ಲಿ ಸಹ ಗ್ರಾಮೀಣ ಪ್ರದೇಶಗಳಲ್ಲಿ ಅರೆನಿರುದ್ಯೋಗವು ವಿಶಾಲವಾಗಿ ಹರಡಿಕೊಂಡಿದೆ.

ನಿರುದ್ಯೋಗ ಸಮಸ್ಯೆಯಿಂದ ಅವರಿಸಲು ಆಸ್ಯಾದ ರಾಷ್ಟ್ರಗಳಲ್ಲಿ ಉದ್ಯೋ

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H. O. **MANGALORE.** Estd. **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ಈ ಲೋಕ ಯಾರದು?

ಶ್ರೀ ಎಸ್. ಗೋಪೀಚಂದರಾವ್, ವಿದ್ವಾನ್.

ರಾಮಿಯು ಆಕಸ್ಮಿಕವಾಗಿ ಒಂದು ಕಠಿನ ಸಮಸ್ಯೆಯನ್ನು ಎದುರಿಸಬೇಕಾಯ್ತು. ಮನೆಯಲ್ಲಿ ಅನ್ನವಿಲ್ಲ, ಕಟ್ಟಿಗೆಯಿಲ್ಲ, ಬಟ್ಟೆ ಸಹ ಇಲ್ಲ! ಹುಡುಗಿ ಪ್ರಾಯ ಭರಿತಳಾಗಿದ್ದಳು; ಆಕೆಯ ಮೊರಟು ಬಟ್ಟೆಯು ಚೂರುಚೂರಾಗಿ ಹೋಗಿತ್ತು. ಅದಕ್ಕೆ ಅಲ್ಲಲ್ಲಿಯೇ ಎತ್ತಿಹೆಲಿದು ಅದೆಷ್ಟುದಿನ ಧರಿಸಿಕೊಳ್ಳಬಹುದು?

ಮನೆಯ ಸಂಪೂರ್ಣ ಹೊರೆಯು ರಾಮಿಯ ತಲೆಯ ಮೇಲಿತ್ತು. ಪ್ರಾಯಕ್ಕೆ ಬಂದಿರುವ ಮಗಳ ವಿವಾಹದ ಚಿಂತೆಯು ಹೇಗೂ ಇತ್ತು ಎನ್ನಿ, ಈಗ ಅದಲ್ಲದೆ ಹೊಸದೊಂದು ಸಮಸ್ಯೆಯು ಹುಟ್ಟಿಕೊಂಡು ಆಕೆಯನ್ನು ರಾತ್ರಿಹಗಲು ಚಿಂತಿಸುವಂತೆ ಮಾಡಿತ್ತು. ದೊಡ್ಡ ನಗರ, ತಮ್ಮವರೆಂಬವರಾರೂ ಇಲ್ಲ - ರಾಮಿಯನ್ನು ಮಾತಾಡಿಸುವವರಾದರೂ ಯಾರು? ಸಂಗಳಿಗೆ ಕೆಲಸದ ಚಿಂತೆ!

ಒಂದುದಿನ ಅವಳೊಂದು ಧರ್ಮಸಂಕಟದಲ್ಲಿ ಬಿದ್ದಿರುವಾಗ, ಅವಳ ಮಗ ಸತೀಶನು ಮನೆಯನ್ನು ಪ್ರವೇಶಿಸಿ ಹೇಳಿದ ಅಮ್ಮ, ನಾನು ಸಿನೇಮಾ ನೋಡಿಬಂದೆ. "ರಾಜನು ಹೋಗಿದ್ದ, ನನ್ನನ್ನೂ ಕರೆದುಕೊಂಡು ಹೋದ."

ಬಾಲನ ಈ ಮಾತನ್ನು ಕೇಳುತ್ತಲೇ ರಾಮಿಯು ತನ್ನ ಚಿಂತೆಯನ್ನಲ್ಲೇ ಬಿಟ್ಟು ಸತೀಶನೆಡೆಗೆ ನೋಡಿದಳು. ಸತೀಶನಿಗೆ ತನ್ನ ನಿಜ ಪರಿಸ್ಥಿತಿಯು ತಿಳಿಯದಂತೆ ಗುಪ್ತವಾಗಿದ್ದಿತ್ತಿದ್ದಳು ಅದವಳ ಹುಟ್ಟುಗುಣವಾಗಿತ್ತು. ಸತೀಶನಾದರೋ ಚಿಕ್ಕ ಹುಡುಗ, ಈಗ ಬಡುತ್ತಾ ಇದ್ದಾನೆ, ಜಗತ್ತಿನ ಚಿಂತೆ ಸಾಗರಕ್ಕೆ ಅತನನ್ನೆಳೆಯುವಾ ದುರುದ್ದೇಶವನ್ನು ತಾನೆ ಪಡೆಯಬಹುದು?

ನಿದಾನವಾಗಿ, ಸತೀಶ ಮಾತನ್ನು ಕೇಳಿ ಕಿನ್ನದಿಂದ ಒಂದು ನಗೆಯನ್ನು ನಕ್ಕು ಹೇಳಿದಳು. ಹೋ, ಹಾಗಾದರೆ, ಸಿನೆಮಾನಲ್ಲಿ ಏನು ನೋಡಿದೆ? ಹೇಳು ಕಾಣುವ ರಾಜನಾದರೋ ಶ್ರೀಮಂತರ ಮನೆಯವನು ನೀನೇಕೆ ಸಿನೆಮಾ ನೋಡಲು ಅನಿಸಿಡುತ್ತೀಯ?"

ಹಿಂದಿನಂತೆಯೇ ಆಹ್ಲಾದಿತನಾಗಿ ಸತೀಶ ನುಡಿದನು. "ಅಮ್ಮಾ, ಚಿತ್ರ ಬಹಳ ಚೆಲೋದಾಗಿತ್ತು, ನೀನು ನೋಡಿರುತ್ತಿದ್ದರೆ ಕೇಳುತ್ತಿದ್ದಿ. ಮನೆಯಲ್ಲಿ ಉಳಿತಾಯ ಮಾಡುವುದು ಹೇಗೆಂದು ಅದರಲ್ಲಿ ತೋರಿಸಿದ್ದಾರೆ. ಅದೊಂದು 'ಇಕಾನಮಿ' ಸಂಬಂಧವಾದ ಚಿತ್ರ."

"ಅದರಲ್ಲೇನಿತ್ತು?" ರಾಮಿಯು ಕೇಳಿದಳು.

ಸತೀಶನು ಹೇಳಿದನು-"ಹರಿದ ಹಳೆಯ ಬಟ್ಟೆಗಳ ರಿಪೇರಿಮಾಡುವುದು. ಮತ್ತದನ್ನು ಹೊಸ ಕೊಸ ವಿಧಾನಗಳಿಂದ ಹೊಲಿಯುವುದು, ಮನೆಯನ್ನು ಯಾವ ರೀತಿಯಿಂದ ಇಟ್ಟುಕೊಳ್ಳಬೇಕು, ಇವೆಲ್ಲ ಆ ಸಿನೆಮಾದಲ್ಲಿ ಹೇಳಲ್ಪಟ್ಟಿದೆ"

ಆಗ ರಾಮಿಯುತನ್ನ ಹರಕು ಮುರುಕು ಬಟ್ಟೆಯನ್ನು ನೋಡಿಕೊಂಡಳು ಅದರಲ್ಲಿ ಅಲ್ಲಲ್ಲಿ ಹತ್ತೈವತ್ತು ಎತ್ತೆಗಳು ಬಿದ್ದು ಕೊಂಡಿದ್ದುವು ಅವಳು ತನ್ನಲ್ಲಿಯೇ ಹೇಳಿಕೊಂಡಳು. "ಹಾಗಾದರೆ, ಈ ಹರಕು ಬಟ್ಟೆಯನಳಿಂದಲೂ ಉಪಯೋಗವಿದೆಯೆ?" ಈ ಮೂದಲವಳು ಹೇಳುತಿದ್ದಳು-"ಅಧಿಕ ಹಣ ಸಂಪಾದಿಸುವ ಶ್ರೀಮಂತರು ಮಾತ್ರ ಸಿನೆಮಾ ನೋಡುತ್ತಾರೆ. ಅದರಲ್ಲಿ ಅವರಿಗೆ ಮಾತ್ರ ಸದುಪದೇಶವೇಯಿಲ್ಲವಾಗುತ್ತದೆ—ನನಗಿಲ್ಲ ನನ್ನಂತಹ ಬಡವಾಗಿನಿಯರಿಗೂ ಇಲ್ಲ"

ಅಷ್ಟರಲ್ಲಿ ಅಲ್ಲಿಗೆ ಸತೀಶನ ಅಕ್ಕಳೂ ಬಂದಳು. ಸತೀಶನಾಕೆಯನ್ನು ಕಂಡು ಹೇಳಿದನು: "ಅಕ್ಕಾ, ಸಿನೆಮಾದಲ್ಲಿ ನಿನ್ನಂತಹ ಓರ್ವ ದೊಡ್ಡ ಹುಡುಗಿ ಓದು ಬರಹವನ್ನು ಕಲಿತು, ಬಣ್ಣ ಬಳೆಯುವುದು, ಹೊಲಿಯುವುದು ಮೊದಲಾದವನ್ನು ಕಲಿತು ತನ್ನ ಮನೆಯನ್ನು ಸ್ವರ್ಗಸಮಾನವನ್ನಾಗಿ ಮಾಡಿದಳು. ಆ ಮನೆಯ ಒಂದೊಂದು ಕಾಳು ಸಹ ವ್ಯರ್ಥವಾಗಿ ಹೋಗುವುದಿಲ್ಲ. ಆಕೆ ತನ್ನೊಂದಿಗೆ ತನ್ನ ದೇಶದ ಸಂಪತ್ತನ್ನೂ ಹೆಚ್ಚಿಸಿದಳು. ಆಕೆ ತನ್ನ ಸಂಪಾದನೆಯಲ್ಲಿ ಉಳಿತಾಯ ಮಾಡಿದಳು, ಅದರಿಂದ ದೇಶದ ವ್ಯಾಪಾರಿ ಹಾಗೂ ಸರಕಾರೀ ಕರ್ಮಚಾರಿಗಳ ಮೂಲಕವಾಗಿ ಮಾಡಲ್ಪಟ್ಟ ಯೋಜನೆಗಳಲ್ಲಿ ಅಧಿಕ ಪ್ರಗತಿ ಜಾಯ್ತು."

ಆ ಸಮಯದಲ್ಲಿ ತಾಯಿಯು ಸ್ವಲ್ಪ ಉದ್ವಿಗ್ನ ಭಾವದಿಂದ ಹೇಳಿದಳು "ನಮ್ಮದೂ, ಇಂದು ಇವನು ಸಿನೆಮಾ ನೋಡಿ ಬಂದಿದ್ದಾನೆ ನಿನ್ನ ತಮ್ಮ ಸಂಡಿತನಾಗಿದ್ದಾನೆ. ಅತನಂದುದನ್ನು ಜೆನ್ನಾಗಿ ಕೇಳು."

ಈ ಮಾತುಗಳನ್ನು ಕೇಳಿ ಮುಖ ತಿರುಗಿಸಿ ಸತೀಶನೆಂದನು—"ಸಾಕು. ನಾನಿಷ್ಟು ಹೇಳಿದುದನ್ನೂ ನಕ್ಕು ಮರೆತುಬಿಟ್ಟಳು"

ತಾಯಿ ಹೇಳಿದಳು—"ನಕ್ಕರೇನಾತು? ನೀನು ನೋಡಿ ಬಂದ ಸಿನೆಮಾ ನಮ್ಮಂತಹವರಿಗಾಗಿ; ಕೇವಲ ಶ್ರೀಮಂತರಿಗಾಗಿ. ನೀನು ನನ್ನನ್ನು, ನಿನ್ನ ಅಕ್ಕನನ್ನು ಬೇಡ, ನಿನ್ನನ್ನು ನೋಡಿಕೊಳ್ಳು. ದೇಹದಲ್ಲಿ ತುಣುಕೂ ವಸ್ತ್ರವಿಲ್ಲ, ಹಾಗೂ ಹೀಗೂ ಮಾಡಿ ನಿನಗೊಂದೀ ಅಂಗಿಯನ್ನು ಹೊಲಿಸಿ ಕೊಟ್ಟೆ ನನಗಂತೂ ಏನಾಗಬೇಕು? ಹೇಗಿದ್ದರೂ ಆಗುತ್ತದೆ. ನಮ್ಮದೆಯ ವಸ್ತ್ರ ಕಾಣುವಾಗ ನನ್ನ ಮನಸ್ಸೇ ಒಡೆದು ಹೋಗುತ್ತದೆ. ಪ್ರಾಯಕ್ಕೆ ಬಂದ ಹುಡುಗಿಯೋಜಿಸಿದಾಗ ಕಣ್ಣೀರೇ ಬರುತ್ತದೆ."

ತಾಯಿಂದ ಈ ಮಾತುಗಳನ್ನು ಕೇಳಿದ ಬಾಲಕ ಸತೀಶನ ಮನಸ್ಸು ಬಿದ್ದುಬಿಟ್ಟಿತು ಅವನು ಉದಾಸನಾದನು. ಅವನ ತಾಯಿ ಮತ್ತು ಅಕ್ಕ ಯಾವುದೋ ತೊಂದರೆಯಲ್ಲಿದ್ದಾರೆ. ಈ ಹುಡುಗನಿಗೂ ಅಷ್ಟು ತಿಳಿದುಬಂತು. ಆದರೆ, ಬಾಲಕನ ಸಣ್ಣ ಮುಖವನ್ನು ಕಂಡು ತಾಯಿಂದ್ವಟ್ಟ ನೆಕ್ಕು ಹೇಳಿದಳು—"ನಡೆ ಸ್ವಲ್ಪ ಏನಾದರೂ ತಿನ್ನು ಮುಂಜಾನೆ ಸ್ವಲ್ಪ ತಿಂದು ಹೋಗಿದ್ದಾನೆ; ಈಗ ಸಂಜೆ ತಿರುಗಿ ಬಂದಿದ್ದಾನೆ! ಇಂಥ ಕಷ್ಟದಿಂದ ಎರಡುಸೇರು ಇದ್ದಲು ದೊರಕಿತ್ತು. ಅದರಿಂದಲೇ ಈ ಹೊತ್ತಿಗೆ ಅಡುಗೆ ಮಾಡಿದ್ದೆನೆ" ಆಕೆ ಹೇಳುತ್ತಾ ಎದ್ದು ಬೇರೆಡೆಗೆ ತೆರಳಿದಳು

ಇಷ್ಟು ಮಾತನ್ನು ಕೇಳುತ್ತ ಸತೀಶನು ಮತ್ತೂ ದುಃಖಿತನಾಗಿ ಕುಗ್ಗಿಹೋದನು. ಗಟ್ಟಿಯಾದ ಉಸಿರನ್ನು ಬಿಡತೊಡಗಿದ. ಅವನು ಏಕಾಗ್ರ ದೃಷ್ಟಿಯಿಂದ ಅಲವನ್ನೇ ದೃಷ್ಟಿಸುತ್ತ ಕಣ್ಣೀರು ಸುರಿಸತೊಡಗಿದ. ಸನಿಹದಲ್ಲೇ ಕುಳಿತು ನೋಡುತಿದ್ದ ನರ್ಮದೆಯು ಅವನನ್ನು ಸಮಾಧಾನಗೊಳಿಸುವ ಸಲುವಾಗಿ, ತನ್ನ ತೊಡೆ ಮೇಲೆ ಅತನ ತಲೆಯನ್ನಿಟ್ಟುಕೊಂಡ. ಮೃದುವಾಗಿ ಸೇವಿಸತೊಡಗಿದಳು. "ತಮ್ಮಾ, ಸತೀಶ, ಇದೇನು ಹೀಗೆ ಅಳುತ್ತಿ? ಹೋಗು, ಸ್ವಲ್ಪ ಊಟಮಾಡು ಮಗು" ಎಂದು ಹೇಳಿ ತಮ್ಮನನ್ನು ಪ್ರಸನ್ನವಾಗಿಸಲೆತ್ನಿಸಿದಳು. ಅಷ್ಟರಲ್ಲಿ ರಾಮಿಯೂ ಹಿಂತಿರುಗಿ ಬಂದಳು. "ತಮ್ಮಾ ನೋಡು, ಹುಡುಗ ಅಳುತಿದ್ದಾನೆ!"

"ಏಕೆ ಮಗು, ಏಳು ಬಾ" ಎಂದಾಕೆ ಸತೀಶನನ್ನು ಎಬ್ಬಿಸಿದಳು. ಅಡಿಗೆ ಮನೆಯತ್ತ ಕರೆದೊಯ್ಯುತ್ತಾ ಆಕೆ ಹೇಳಿದಳು: "ಸತೀಶ, ಅಳುವುದರಿಂದ ಏನೂ ಆಗುವುದಿಲ್ಲ ಬಾಯಿಬಿಟ್ಟು ಹೇಳಿದರೆ ಏನಾದರೂ ಸಿಗುತ್ತದೆ." ಸತೀಶನು ಇದಕ್ಕೆ ಉತ್ತರಕೊಡಲಿಲ್ಲ. ಅವನು ತಾಯಿಯ ಮಾತುಗಳ ಅಂತರಾಳದಲ್ಲಿಯೆ ಮುಳುಗಿಹೋಗಿದ್ದನು.

ತನ್ನ ಜೀವನದ ಏಕಮಾತ್ರ ಅವಲಂಬನವಾಗಿರುವ ಸತೀಶನ ಮನಸ್ಸನ್ನು ಪ್ರಸನ್ನಗೊಳಿಸುವದಕ್ಕಾಗಿ ಬಯಕೆಗೆ ವಿರೋಧವಾಗಿದ್ದರೂ ರಾಮಿಯು ನಗುನಗುತ್ತಾ ಆಹಾರವನ್ನಿತ್ತಳು. ಪಾಪ, ಅತನೇ ಈ ತೊಡಗಿದರೆ, ಸಂಸಾರದಲ್ಲಿ ಸುಖವೆಲ್ಲಿ?

೦೦ ೦೦

ಒಂದು ದಿನ ಆಕೆಯು ಹೊಲಿದ ಕೆಲವೊಂದು ಬಟ್ಟೆಗಳನ್ನು ತೆಗೆದುಕೊಂಡು ಊರಿನ ಧನಿಕನೂ ಸಮಾಜದಲ್ಲಿ ಪ್ರತಿಷ್ಠಿತನೂ ಆದವನೊಬ್ಬನ ಮನೆಗೆ ಹೋದಳು. ರಸ್ತೆಯಲ್ಲಿ ಒಬ್ಬಳೇ ನಡೆಯಬೇಕಾದುದರಿಂದ, ಜತೆಯಲ್ಲಿ ಸತೀಶನನ್ನೂ ತೆರೆದುಕೊಂಡು ಹೋದಳು. ಆ ಮನೆಯ ಬಾಹ್ಯಾವರಣವನ್ನು ತಲಸಿದಾಗ, ಸತೀಶನನ್ನಲ್ಲಿಯೇ ಸಿಕ್ಕಿಸಿ ಮುಂದೆ ಹೋದಳು. ಅಲ್ಲಿ ಅತಿಥಿಗಳನ್ನು ಸ್ವಾಗತಿಸಿ ಒಂದು ಆಸನವನ್ನು ಕೂಡಿಸಿದ್ದರು ಕೆಲವರ ಭೋಜನ ಈ ಮೊದಲೇ ಮುಗಿದಿತ್ತು. ಅವರ ಎಂಜಲೆಲೆ ಮಾರ್ಗದೊಂದಿಗೆ ಪಕ್ಕದಲ್ಲಿ ಬಿದ್ದು ಕೊಂಡಿತ್ತು. ಅದರಲ್ಲಿ ಕೆಲವು ಶ್ವಾನಗಳು, ಕೆಲವು ಭಿಕ್ಷುಕರು ಮತ್ತು ಕೆಲವು ಕಂಗಾಲರು ಗುಂಪುಗೂಡಿದ್ದರು ಅವರ ನಡುವೆ ಹೊಯ್ ಕಾಯ್ ಆಗುವಂತಿತ್ತು. ಬಾಗಿಲಲ್ಲಿ ಒಂದೆಡೆ ನಿಂತಿದ್ದ ಬಾಲಕ ಸತೀಶನು ಆಶ್ಚರ್ಯದಿಂದ ಈ ದೃಶ್ಯವನ್ನು ನೋಡುತ್ತ ಸ್ತಂಭಿತನಾದ ಏಕೆಂದರೆ ಅವನು ಇದು ವರೆಗೆ ತಿಳಿದಿದ್ದ-ನಾಯಿಗಳು ಬೇರೆ ಮತ್ತು ಮಾನವರು ಬೇರೆ ಎಂದು ಆದರೆ, ಇಲ್ಲಿ ಇವರಿಬ್ಬರು ರೊಟ್ಟಿ ತುಂಡಿಗಾಗಿ ಒಬ್ಬರ ಬಾಯಿಂದ ಇನ್ನೊಬ್ಬರು ಎಂಜಲನ್ನೆಳೆದುಕೊಳ್ಳುವಂತೆ ಹೊಡೆದಾಡಿಕೊಳ್ಳುತಿದ್ದರೆ! ಆಡುಗೆ ಹಾಗೂ ಸಿಹಿ ತಿಂಡಿಗಳ ಪರಿಮಳವು ಬಾಲಕನ ಮೂಗಿನ ಮೂಲಕ ಮನಸ್ಸಿನೊಳ ಹೊಕ್ಕು ನಾಲಗೆಯ ಮೂಲಕ ನೀರಿನರೂಪದಲ್ಲಿ ಆಸೆ ವ್ಯಕ್ತಪಟ್ಟಿತು.

ಸತೀಶನು ಹೆಲವಾರು ದಿನಗಳಿಂದ ಸಿಹಿ ತಿಂದಿರಲಿಲ್ಲ. ಹೂರಿಬಾಜಿಯನ್ನೂ ಮುಟ್ಟಿರಲಿಲ್ಲ. ಹಾಗಿರುವಾಗ, ಈ ಸೇರನ ಇಷ್ಟು ಒನ್ನ ಪದಾರ್ಥಗಳನ್ನು ಸಂಪಾದಿಸಿ ಇಷ್ಟೊಂದು ಎಂಜಲನ್ನು ದೂರ ಎಸೆದುಬಿಡಲು ಹೇಗೆ ಸಮರ್ಥನಾದ ಎಂದಾತ ಚಿಂತಿಸತೊಡಗಿದ. ಈ ಪ್ರಶ್ನೆಗೆ ಉತ್ತರವನ್ನು ಹುಡುಕುತ್ತಿರುವಂತೆಯೆ ಬಾಲಕನ ಮನಸ್ಸಿನಲ್ಲಿ ಸಿಟ್ಟು ಹುಟ್ಟಿಕೊಂಡಿತು. ಮನುಷ್ಯರ ಎಂಜಲನ್ನು ಮನ ಪ್ರಯರಿಗೆ ತಿನ್ನುತಿದ್ದಾರೆ? ಶಿ (ಮಂತ್ರ) ಈ ವಾಸ ಕೃತ್ಯ ಕಮಾಜವನ್ನು ಹಾಳುಗೆಡಹುತ್ತಾ, ದೇಶಸ್ಥರನ್ನು ದುಃಖಕ್ಕೀಡು ಮಾಡುತ್ತದೆ -ಸತೀಶನು ವಿಷ ಸರೋವರದಲ್ಲಿ ಮುಳುಗಿದವನಂತೆ ಬಡಿದಾಡತೊಡಗಿದನು.

ಅಷ್ಟರಲ್ಲಿ ರಾಮಿಯು ಹಿಂದಿನಿಂದ ಬಂದು ಮಗನ ಹೆಗಲಲ್ಲಿ ಕೈಯಿಟ್ಟಳು, ಆಕೆ ಆಶ್ಚರ್ಯಚಕಿತನಾದ. ತಾಯಿಯನ್ನು ಕಂಡವನೇ ನಿತಾಂತ ಆತ ರಸೂಣ ಸ್ವರದಿಂದ ಕೇಳಿದ—"ಅಮ್ಮಾ"

ತಾಯಿ ಉದ್ವಿಗ್ನಳಾಗಿ ನುಡಿದಳು - "ಬಾ, ನಡೆ ಮಗು, ಬೇಗ" ಆಕೆ ಮಗನ

(೧೧ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾದ ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾದುದೆ 1 ರಾತಲಿಗೆ ರೂ 6/8, ½ ರಾತಲಿಗೆ ರೂ. 1/13

ಈ ಕೆಸರದ ಕೆಳಗಿನ ವಿಳಾಸದಲ್ಲಿ ಸಿಗುವುದು.

1. ಉಡುಪಿ ಕೃಷ್ಣ ಭವನ ಹೊಟೆಲ್, ಮಂಗಳೂರು
2. ಶ್ರೀ ರಾಮ್ಸ್ ಫಾರ್ಮಸಿ, ಮಂಗಳೂರು.
3. ವಿ ವಿ. ರೈಲ್ವೆ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿಸ್ತರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,

ಮದ್ರಾಸ್—3.

ಕಬಳಿಸುವವರಿಗೆ ಕಳವಳವೇಕೆ?

ಕಾಶ್ಮೀರ ರಾಜ್ಯದ ಸರ್ವತೋಮುಖ ಪ್ರಗತಿ

ಕಾಶ್ಮೀರ ರಾಜ್ಯವು ಇಂದು ನವಜೀವನ, ನವಚೇತನ ಹಾಗೂ ನವೋತ್ಸಾಹಗಳಿಂದ ಕೂಡಿದ್ದು ಎಲ್ಲೆಲ್ಲಿಯೂ ಅಭಿವೃದ್ಧಿ ಕಾರ್ಯ ಚಟುವಟಿಕೆಗಳು ಕಾಣಬರತ್ತಿವೆ. ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ಮೂರು ವರ್ಷಗಳಲ್ಲಿ ಯೇ ಯಶಸ್ವಿಯಾಗಿ ಮುಕ್ತಾಯಗೊಳಿಸಿರುವುದೊಂದು ಮಹತ್ಸಾಧನೆಯಾಗಿದೆ. ಏಕೆಂದರೆ ಪ್ರಥಮ ಯೋಜನೆಯನ್ನು ೧೯೫೩ಕ್ಕೆ ಪೂರ್ವದಲ್ಲಿ ಕಾರ್ಯಾನುಷ್ಠಾನಕ್ಕೆ ತರಲು ಸಾಧ್ಯವಾಗಲಿಲ್ಲ. ಇದೀಗ ಜನರು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿನ ಆರಾಧಿತ ಕಾರ್ಯಕ್ರಮಗಳನ್ನು ಆಚರಣೆಗೆ ತರುವ ವಿಚಾರದಲ್ಲಿ ಮಗ್ನರಾಗಿರುವರು.

ರಾಜ್ಯದ ಪ್ರಥಮ ಯೋಜನೆಯಲ್ಲಿ ೧೨೭ ಕೋಟಿ ರೂ.ಗಳ ಹಣವನ್ನು ವೆಚ್ಚಮಾಡಲಾಗಿದೆ. ಜನರ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಪ್ರಥಮ ಯೋಜನೆಯಲ್ಲಿ ಪ್ರಯತ್ನಿಸಲಾಯಿತು. ಆಹಾರ ಧಾನ್ಯಗಳನ್ನು ಹೆಚ್ಚು ಬೆಳೆದು ಆಹಾರಧಾನ್ಯವನ್ನು ನೀಗಿಸುವ ಪ್ರಯತ್ನವು ಒಹುಮಟ್ಟಿಗೆ ಸಫಲಗೊಂಡಿದೆ. ಹೊಸ ಕಾಲುವೆಗಳನ್ನು ತೋಡಿಸಲಾಗಿದೆ. ಈಗಿರುವ ಕಾಲುವೆಗಳನ್ನು ವಿಸ್ತರಿಸುವುದು, ದುರಸ್ತುಪಡಿಸುವುದು ಮುಂತಾದ ಕಾರ್ಯಗಳನ್ನು ಕೈಗೊಳ್ಳಲಾಯಿತು. ಹಳೆ ರಸ್ತೆಗಳನ್ನು ಮತ್ತು ಸೇತುವೆಗಳನ್ನು ಉತ್ತಮಪಡಿಸಲಾಯಿತು. ನಗರಗಳಲ್ಲಿ ಮಾತ್ರವೇ ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿಯೂ ಹೆಚ್ಚಿನ ಪ್ರಮಾಣದ ನೀರನ್ನು ಒದಗಿಸುವ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ಕೈಗಾರಿಕಾ ಹಾಗೂ ವಾಣಿಜ್ಯ ಜೀವನವನ್ನು ಸುವ್ಯವಸ್ಥೆಗೊಳಿಸಲಾಗಿದೆ. ಕಲೆ ಹಾಗೂ ಕಸಬುಗಳನ್ನು ಸಮನ್ವಯಗೊಳಿಸುವ ಕಾರ್ಯವು ಮುಂದುವರಿಯುತ್ತಿದೆ.

ಕೈಗಾರಿಕಾ ಕೇಂದ್ರಗಳ ಸ್ಥಾಪನೆಯಾಗಿದೆ. ಹೊಸ ಪ್ರವಾಸೀ ಕೇಂದ್ರಗಳನ್ನು ವ್ಯವಸ್ಥೆಗೊಳಿಸಿ ಪ್ರವಾಸಿಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲಾಗಿದ. ಸಾಮುದಾಯಿಕ ಅಭಿವೃದ್ಧಿ ಯೋಜನಾ ಕ್ಷೇತ್ರಗಳಲ್ಲಿ ನಿರಂತರ ಪ್ರಗತಿ ಕಂಡುಬಂದಿದೆ. ರಾಷ್ಟ್ರೀಯ ವಿಸ್ತರಣಾ ಸೇವಾ ಕಾರ್ಯಕ್ಷೇತ್ರಗಳಲ್ಲಿ ಕೂಡ ಅಭಿವೃದ್ಧಿ ಕಾರ್ಯವು ಅನುಕೂಲಪ್ರದವಾದ ಫಲಿತಾಂಶಗಳನ್ನು ನೀಡಿದೆ. ಎಲ್ಲ ಮಟ್ಟಗಳಲ್ಲಿಯೂ ಉಚಿತ ಶಿಕ್ಷಣದ ವ್ಯವಸ್ಥೆಯಿರುವುದು. ಹಲವಾರು ಕಾಲೇಜುಗಳು, 'ಮುಖತಬ್'ಗಳು ಮತ್ತು ವಾಶಾಲೆಗಳನ್ನು ಪ್ರಾರಂಭಿಸಲಾಗಿದೆ. ಇಡೀ ರಾಜ್ಯದಲ್ಲಿ ಭೂಸುಧಾರಣೆಗಳನ್ನು ಆಚರಣೆಗೆ ತರಲಾಗಿದೆ. ಈಗ ತೀವ್ರ ರೀತಿಯ ಸಹಕಾರಿ ಬೇಸಾಯ ಪದ್ಧತಿಯನ್ನೂ ಆಚರಣೆಗೆ ತರುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ರಾಜ್ಯವು ಎಲ್ಲ ಕ್ಷೇತ್ರಗಳಲ್ಲಿಯೂ ಸರ್ವತೋಮುಖ ಪ್ರಗತಿ ಗಳಿಸುತ್ತಿದೆ. ನವಕಾಶ್ಮೀರವು ನಿರ್ಮಾಣಗೊಳ್ಳುತ್ತಿದೆ.

ಮೊತ್ತಮೊದಲಿಗೆ ಕಾಶ್ಮೀರದಲ್ಲಿ ಕ್ಷಾಮದ ಭೀತಿಯನ್ನು ತಪ್ಪಿಸುವ ಕೆಲಸವು ತೀರ ಅವಶ್ಯಕವಿತ್ತು. ಇದಕ್ಕಾಗಿ ಭಾರತದ ಉಳಿದ ಭಾಗಗಳಿಂದ ಎಳು ಲಕ್ಷ ಮಣಗಳ ಆಹಾರ ಧಾನ್ಯಗಳನ್ನು ತಮದು ಮಾಡಿಕೊಳ್ಳಲಾಯಿತು. ಕಡ್ಡಾಯವಾಗಿ ಆಹಾರಧಾನ್ಯಗಳನ್ನು ಸಂಗ್ರಹಿಸುವ ವ್ಯವಸ್ಥೆಯನ್ನು ಏರ್ಪಡಿಸಲಾಯಿತು. ಆಹಾರಧಾನ್ಯಗಳನ್ನು ಅನಿರ್ಬಂಧಿತವಾಗಿ ಸಾಗಿಸಲು ಅನುಮತಿಕೊಡಲಾಯಿತು. ಆಹಾರಧಾನ್ಯಗಳನ್ನು ಕೊಳ್ಳುವ ಬೆಲೆಯನ್ನು ಹೆಚ್ಚಿಸಲಾಯಿತು. ಭತ್ತದ ಮಾರಾಟದ ಬೆಲೆಯನ್ನು ಪ್ರತಿ ಖರ್ವಾರ್‌ಗೆ (ಸುಮಾರು ೨ ಮಣಗಳು) ಎರಡು ರೂಪಾಯಿಗಳಷ್ಟು ತಗ್ಗಿಸಲಾಯಿತು. ವ್ಯಾವಸಾಯಿಕ ಪದ್ಧತಿಗಳ ಉತ್ಪಾದನೆಯನ್ನು ಹೆಚ್ಚಿಸಲಾಯಿತು. ಕಳೆದ ಮೂರು ವರ್ಷಗಳಲ್ಲಿ ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆಯನ್ನು ಪ್ರತಿ ಸೇರಿಗೆ ಮೂರು ಆಣೆಗಳಂತೆ ಸ್ಥಿರೀಕರಿಸಲಾಗಿದೆ. ರಾಷ್ಟ್ರೀಯ ವಿಸ್ತರಣಾ ಸೇವಾ ಕ್ಷೇತ್ರಗಳಲ್ಲಿರುವ ಸರಕಾರಿ ಕೃಷಿಕ್ಷೇತ್ರಗಳಲ್ಲಿ ಗಳಿಸಿದ ಪರಿಜ್ಞಾನ, ಅನುಭವಗಳನ್ನು ಬೇಸಾಯಗಾರರಿಗೆ ತಿಳಿಸಲಾಗುತ್ತಿದೆ. ಸಮುದ್ರ ಮಟ್ಟಕ್ಕೆ ೭,೦೦೦ ಅಡಿಗಳ ಎತ್ತರದಲ್ಲಿ ಈಗ ಭತ್ತವನ್ನು ಯಶಸ್ವಿಯಾಗಿ ಬೆಳೆಸಲಾಗುತ್ತಿದೆ. ಗುರೆಜ್ ವಿಭಾಗದಲ್ಲಿ ಭತ್ತ ಬೆಳೆಯುವುದನ್ನು ಮೊದಲಿನಿಂದ ಸಲ ಪ್ರಾರಂಭಿಸಲಾಗಿದೆ. ಚೀನಾದ ಬೀಜದ ಭತ್ತವನ್ನು ಹೆಚ್ಚು ಹೆಚ್ಚಾಗಿ ಹಂಚಲಾಗಿದೆ. ಜಪಾನೀ ವಿಧಾನದಲ್ಲಿ ಭತ್ತವನ್ನು ಸಾಗುವಳಿ ಮಾಡಲಾಗುತ್ತಿದೆ.

ಇಲ್ಲಿಯವರಗೆ ಒಂಭತ್ತು ಕೂಸ ನಾಲೆಗಳನ್ನು ನಿರ್ಮಿಸಲಾಗಿದೆ. ಈಗಿರುವ ನಾಲೆಗಳನ್ನು ನಾನಾ ರೀತಿಗಳಲ್ಲಿ ಉತ್ತಮಪಡಿಸಲಾಗಿದೆ. ೮೯,೦೦೦ ಎಕರೆಗಳ ಹೆಚ್ಚಿನ ಜಮೀನನ್ನು ಸಾಗುವಳಿಗೆ ತರಲಾಗಿದ. ೧೯೫೫ರ ವೇಳೆಗೆ ರಾಜ್ಯವು ಆಹಾರದ ವಿಚಾರದ್ದು ಸ್ವಯಂಪೂರ್ಣತೆ ಸಾಧಿಸುವ ನಿರೀಕ್ಷೆಯಿದೆ.

ಭೂಸಾರವನ್ನು ರಕ್ಷಿಸುವ ಕಾರ್ಯಕ್ರಮದಪ್ರಕಾರ ೩೧೭ ಎಕರೆಗಳ ಭೂಮಿಯಲ್ಲಿ ಬಿತ್ತಲಾಗಿದೆ. ೨,೩೩೫ ಎಕರೆಗಳ ಭೂಮಿಯಲ್ಲಿ ಸಸಿಗಳನ್ನು ನೆಡಲಾಗಿದೆ. ೨೧೧ ಸಸಿ ಪೋಷಣಾಲಯಗಳನ್ನು ಸ್ಥಾಪಿಸಲಾಗಿದೆ.

ಪ್ರಥಮ ಪಂಚವಾರ್ಷಿಕ ಯೋಜನಾವಧಿಯಲ್ಲಿ ೧೦ ಸಾಮುದಾಯಿಕ ಅಭಿವೃದ್ಧಿಯೋಜನೆಗಳನ್ನು ಪ್ರಾರಂಭಿಸಬೇಕೆಂಬ ಉದ್ದೇಶದನ್ನು ಇಟ್ಟುಕೊಂಡಿತ್ತು. ಇವುಗಳ ಪೈಕಿ ಮೂರು ಯೋಜನೆಗಳು ಯಶಸ್ವಿಯಾಗಿ ಕಾರ್ಯಾಚರಣೆಯಲ್ಲಿವೆ. ಗ್ರಾಮಸ್ಥಿವಾಸಿಗಳೇ ವಾಹನ ಸಂಚಾರ ಯೋಗ್ಯವಾದ ರಸ್ತೆಗಳನ್ನು ನಿರ್ಮಿಸಿರುವರು. ಹೊಸ ವ್ಯಾವಸಾಯಿಕ ಕ್ಷೇತ್ರಗಳನ್ನು ಪ್ರಾರಂಭಿಸಲಾಗಿದೆ. ಭೂ ಸುಧಾರಣೆಯ ವಿರುದ್ಧ ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗಿದೆ. ಸುಧಾರಿಸಿದ ಜಾತಿಯ ಬೀಜದ ಭತ್ತ, ಕಣ್ಣಿನ ಸಸಿಗಳು ಮತ್ತು ಕಾಯಿಪಲ್ಲೆ ಬೀಜಗಳನ್ನು ಬೇಸಾಯಗಾರರಿಗೆ ಹಂಚಲಾಗಿದೆ.

ಜೋಗೇಂದ್ರ ನಗರ ವಿದ್ಯುಚ್ಛಕ್ತಿ ಕೇಂದ್ರದಲ್ಲಿ ಕೊಳ್ಳಲಾದ ಅಧಿಕ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಜಮ್ಮು ನಗರ, ಉಧಮಪುರ, ಕಥುವ ಮತ್ತು ಸಾಂಬಗಳಿಗೆ ಸಂಬರಾಯಿ ಮಾಡಲಾಗಿದೆ. ವಿದ್ಯುಚ್ಛಕ್ತಿ ರವಾನೆಗಾಗಿ ೬೦ ಮೈಲಿಗಳಷ್ಟು ದೂರ ತಂತಿ ಹಾಕಲಾಗಿದೆ. ೫೫ ಮೈಲಿಗಳಷ್ಟು 'ಮೈಟೆನೆನ್' ಲೈನ್‌ಗಳನ್ನು ಮತ್ತು ೬೦ ಮೈಲಿಗಳಷ್ಟು ವಿತರಣಾ ಲೈನ್‌ಗಳನ್ನು ಹಾಕಲಾಗಿದೆ. ಜಮ್ಮು ನಗರಕ್ಕೆ ೧೫೦ ಕಿಲೋವಾಟುಗಳಷ್ಟು ಹೆಚ್ಚಿನ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಲಾಗಿದೆ.

ಸಿಂಧ್ ಜಲಜನಿತ ವಿದ್ಯುಚ್ಛಕ್ತಿ ಕೇಂದ್ರವನ್ನು ೧೯೫೧ ಜೂಲೈನಲ್ಲಿ ಕಾರ್ಯಾಚರಣೆಗೆ ತರಲಾಯಿತು. ಈ ವಿದ್ಯುದ್ದಾಗಾರದಿಂದ ಶ್ರೀನಗರಕ್ಕೆ ೩೧೦ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ.

ಸಿಂಧ್ ಜಲಜನಿತ ವಿದ್ಯುದ್ದಾಗಾರವು ಮೊದಲನೆಯ ಘಟ್ಟದಲ್ಲಿ ೬೦೦೦ ಕಿವಾ.ಗಳಷ್ಟು ವಿದ್ಯುಚ್ಛಕ್ತಿ ಸ್ಥಾಪಿತ ಸಾಮರ್ಥ್ಯ ಪಡೆದಿದೆ. ಈ ವಿದ್ಯುಚ್ಛಕ್ತಿಯನ್ನು ಮುಖ್ಯವಾಗಿ ಶ್ರೀನಗರ ಹಾಗೂ ಉಪನಗರಗಳಲ್ಲಿನ ಬಳಕೆಗಾಗಿ ಸರಬರಾಯಿ ಮಾಡಲಾಗುತ್ತಿದೆ. ಶ್ರೀನಗರದಿಂದ ೩೪ ಮೈಲಿಗಳ ದೂರದಲ್ಲಿರುವ ಅನಂತ್‌ನಾಗ್‌ಗೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಬಗ್ಗೆ ತಂತಿ ಹಾಕಲಾಗಿದೆ. ಹರ್‌ಬಾರ್ ಮತ್ತು ವಿಜಾರ್ ಗುಂಪ್‌ಗಳಲ್ಲಿ ನೀರು-ವರಿ ಸೌಕರ್ಯಕ್ಕಾಗಿ ತಂತಿ ಹಾಕಲಾಗಿದೆ.

ಸಂಚಾರ ಮಾರ್ಗಗಳ ವಿಷಯದಲ್ಲಿ ರಾಜ್ಯವು ತೀರಾ ಹಿಂದುಳಿದಿತ್ತು. ಯೋಜನೆಗೆ ಪೂರ್ವದಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯವು ಪ್ರತಿ ೧೦೦ ಚದುರ ಮೈಲಿಗಳಿಗೂ ೨೫ ಮೈಲಿಗಳಷ್ಟು ಸಂಚಾರ ಮಾರ್ಗಗಳನ್ನು ಹೊಂದಿತ್ತು. ಪ್ರತಿ ೨,೦೦೦ ಜನಸಂಖ್ಯೆಗೆ ಒಂದು ಮೈಲಿಯಷ್ಟು ರಸ್ತೆಯನ್ನು ಪಡೆದಿತ್ತು. ಮೋಟಾರು ವಾಹನಗಳ ಸಂಚಾರ ಯೋಗ್ಯವಾದ ೧,೬೦೦ ಮೈಲಿಗಳಷ್ಟು ರಸ್ತೆಗಳು, ಜೀಪ್ ವಾಹನಗಳು ಸಂಚರಿಸಲು ಯೋಗ್ಯವಾದ ೪೨೭ ಮೈಲಿಗಳಷ್ಟು ರಸ್ತೆಗಳು ಮತ್ತು ೨,೪೦೦ ಮೈಲಿಗಳಷ್ಟು ಹಾದಿಗಳು ಇದ್ದವು.

ಕಾಶ್ಮೀರದ ಪಂಚವಾರ್ಷಿಕ ಯೋಜನೆಯ ಅತಿ ದೊಡ್ಡದಾದ ಯೋಜನೆಯೆಂದರೆ ಮೂರು ಕೋಟಿ ರೂ.ಗಳ ವೆಚ್ಚದ ಬನಿಹಾಲ್ ಸುರಂಗಮಾರ್ಗ ಯೋಜನೆ. ಈ ಸುರಂಗ ನಿರ್ಮಾಣವು ಪ್ರಗತಿ ಗಳಿಸುತ್ತದೆ. ಸುರಂಗ ಮಾರ್ಗದ ಒಂದು ಕೊಳವೆಯನ್ನು ೧೯೫೬ ಡಿಸೆಂಬರ್‌ನಲ್ಲಿ ವಾಹನ ಸಂಚಾರಕ್ಕಾಗಿ ತೆರೆಯಲಾಯಿತು. ಪರಾಣ ಕೋಟೆಯಿಂದ ಮೀರ್ಪುರಕ್ಕೆ ರೈಲು ಮಾರ್ಗವನ್ನು ಹಾಕಲಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನಾವಧಿಯಲ್ಲಿ ೪೫೫ ಮೈಲಿಗಳಷ್ಟು ಹೊಸ ರಸ್ತೆಗಳನ್ನು, ೨೫ ದೊಡ್ಡ ಸೇತುವೆಗಳನ್ನು ನಿರ್ಮಿಸಲಾಗಿವೆ. ೪೮೨ ಮೈಲಿಗಳಷ್ಟು ರಸ್ತೆಗಳನ್ನು ದುರಸ್ತುಪಡಿಸಲಾಯಿತು.

ಭಾರತದ ಉಳಿದ ಭಾಗಗಳಲ್ಲಿರುವ ದೊಡ್ಡ ನಗರಗಳಲ್ಲಿ ೧೨ 'ಎಂಪೋರಿಯಂ'ಗಳನ್ನು ಸ್ಥಾಪಿಸಲಾಗಿದೆ. ಶ್ರೀನಗರದ್ದು ಇವುಗಳ ಪ್ರಧಾನ ಕಾರ್ಯಾಲಯವಿರುವುದು. ಈ ನಗರಗಳಲ್ಲಿ ದೆಹಲಿ, ಕಲ್ಕತ್ತ, ಮುಂಬೈ, ಮದರಾಸು, ಲಖನೌ, ಬೆಂಗಳೂರು ಮತ್ತು ಸಿಮ್ಲಾಗಳೂ ಸೇರಿವೆ. ವರ್ಷಕ್ಕೆ ೩೫ ಲಕ್ಷ ರೂಪಾಯಿಗಳ ಬೆಲೆಬಾಳುವ ವಸ್ತುಗಳನ್ನು ಈ ಕೇಂದ್ರಗಳಲ್ಲಿ ವಿಕ್ರಯಿಸಲಾಗುತ್ತಿವೆ. ಕಾಶ್ಮೀರದ

(೧೦ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

H. O: ಉಡುಪಿ. ಸ್ಥಾಪನೆ: 1925.

ಹೊಸ ಶಾಖೆಗಳು

ಸಿಂಡಿಕೇಟ್ ಬೇಂಕಿನ

- ಶೃಂಗೇರಿ (ಕಡೂರು) ಶಾಖೆಯು ತಾ 3—10—57 ರಂದೂ
- ಗುಂಟಕಲ್ (ಆಂಧ್ರ) ಶಾಖೆಯು ತಾ 7—10—57 ರಂದೂ ತೆರೆಯಲ್ಪಟ್ಟಿವೆ.

The Canara Industrial & Banking Syndicate Limited, Udipi.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ನವಂಬರ ೧ ಮತ್ತು ದ. ಕ.ದ ಶಿಕ್ಷಕರು–

ಕರಿದಿನವನ್ನಾಗಿ ಆಚರಿಸಲಿ

ಶ್ರೀ. ಎಸ್. ಸದಾಶಿವ ರಾವ್, ಅಧ್ಯಾಪಕ, ಕಡಿಯಾಳಿ.

'ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು' ಎಂದು ಯಾವ ಬಾಯಿಯಿಂದ ಹಾಡಿದ್ದರೋ, ಹಾಡಿಸಿದ್ದರೋ, ಅದೇ ಬಾಯಿಯಿಂದ ಈಗ ಶಿಕ್ಷಕರು 'ಅಯ್ಯೊ, ಮೈಸೂರೇ' ಎನ್ನಬೇಕಾಗಿದೆ. ಯಾವ ಶಿಕ್ಷಕರು ಒಂದು ವರುಷದ ಹಿಂದೆ ತಮ್ಮ ವಿದ್ಯಾರ್ಥಿಗಳೆದುರು ಕರ್ನಾಟಕದ ಅಲ್ಲ ಮೈಸೂರಿನ ದರ್ಬಾರಿನ ವಿಚಾರ ವರ್ಣಿಸಿ, ನಮಗೆಲ್ಲಾ ಶುಭವಾಗುವುದೆಂದಿದ್ದರೋ ಅವೇ ಬಾಯಿಗಳಿಂದ ಇಂದು ಮೈಸೂರಿನ, ಮೈಸೂರು ಸರಕಾರದ 'ಕಪ್ಪು ಕನ್ನಡಕ'ದ ದೃಷ್ಟಿಕೋನದ ಕುರಿತು, ಶಿಕ್ಷಕರಲ್ಲಿ ಮಾಡಿದ ಪರಿಬೇಧದ ಕುರಿತು ಮೊರೆ ಇಡುವಂತಾಗಿದೆ. ಇದು ಅಭಾಸವಾಗಿ ವಿದ್ಯಾರ್ಥಿಗಳಲ್ಲಿ ತೋರುತ್ತಿದೆ!

ಮೈಸೂರಿನ ಸರಕಾರವೆಂದರೆ ಅದು ಕೇವಲ ಹಳೆ ಮೈಸೂರಿನ ಸರಕಾರವೋ ಎಂಬ ಭಾವನೆಗೆ ಅವಕಾಶ ತುಂಬಾ ದೊರೆತಿದೆ. ಮೈಸೂರಿನ ಆಳರಸರು ತಮ್ಮ 'ಕಪ್ಪು ಕನ್ನಡಕ'ವನ್ನು ತುಸು ಬದಿಗೆ ಸರಿಸಿ ಒಮ್ಮೆ ತಮ್ಮ ನೆಟ್ಟ ದೃಷ್ಟಿಯನ್ನು 'ಮಹಾ ಮೈಸೂರು' ರಾಜ್ಯದಡೆಗೆ ಹರಿಯಿಸಬೇಕು. ಮಹಾ ಮೈಸೂರು ರಾಜ್ಯ ರೂಪುಗೊಂಡ ಆ ಬಿಸಿ ಮೈಸೂರಿನ ದಪ್ಪ ಚರ್ಮದ ಅಧಿಕಾರಿಗಳ ಮೈಗೆ ಇನ್ನೂ ತಾಗಿಲ್ಲವೇನೋ? ಇಲ್ಲವಾದರೆ, ಮಹಾ ಮೈಸೂರು ರಾಜ್ಯ ರೂಪುಗೊಂಡು ವರ್ಷ ಒಂದು ಆಗುತ್ತಾ ಬಂದರೂ ಇನ್ನು ಕೂಡಾ ವಿಲೀನಗೊಂಡ ಇತರ ಪ್ರದೇಶಗಳಿಂದ ಬಂದ ಫೈಲುಗಳ ಕಟ್ಟನ್ನು ಬಿಚ್ಚಿಲ್ಲವೆಂದರೆ, ಅದನ್ನು ಮಂತ್ರಿಗಳು ಸಂತೋಷದಿಂದ ಒಪ್ಪುವರೆಂದರೆ, ಮೇಲಾಗಿ ಬಹಿರಂಗ ಸಭೆಯಲ್ಲಿ ಜಾಹೀರು ಮಾಡುವದೆಂದರೆ ಇದು ಆಡಳಿತೆಯ ಉಚ್ಚ ಮಾದರಿಯೇ? ಯೂ ಹುಚ್ಚುಮಾದರಿಯೇ? ಎಂದು ಜನ ಮೂಗಿಗೆ ಬೆರಳೇರಿಸುವಂತಾಗಿದೆ! ಅಯ್ಯೋ, ನಮ್ಮ ಕರ್ನಾಟಕವೇ? ಇದು ಕರ್ನಾಟಕವೋ, ಕಾಕೋಟಕನ ದರ್ಬಾರವೋ ಎನ್ನುವಂತಾಗಿದೆ.

ಮೈಸೂರಿನ ಮಂತ್ರಿಗಳು ತಂಡ ತಂಡವಾಗಿ ದ. ಕ. ಜಿಲ್ಲೆಗೆ ಬಂದರು. ಅವರಿಗೆ ಇಲ್ಲಿಯ ಜನಸಂಭ್ರಮದ ಸ್ವಾಗತವಿತ್ತು. ನಿಮ್ಮ ಸಾಧನೆಗಳನ್ನೆಲ್ಲಾ ಇದ್ದುದ ಕ್ಕಿಂತಲೂ ಹೆಚ್ಚಾಗಿ ನಾವು ಅವರಿಗೆ ಬಣ್ಣಿಸಿದೆವು. ಇಲ್ಲಿಯ ಕಾಲೇಜುಗಳು, ಹೈಸ್ಕೂಲುಗಳು, ಇತರ ಶಾಲೆ, ಆಫೀಸುಗಳನ್ನೆಲ್ಲಾ ನೋಡುವಾಗ ಅವರು 'ಓಹೋ ಹೋ' ಎಂದರು. 'ಸರವಾಗಿಲ್ಲ' ಎಂದೂ ಜತೆಗೆ ಸೇರಿಸಿದರು. ತಮ್ಮ ಬೆಣ್ಣೆಯಂತಹ, ನುಣ್ಣಗಿನ ಮಾತುಗಳಿಂದ ನಮ್ಮನ್ನು ಮರುಳು ಮಾಡುವ ಪ್ರಯತ್ನ ಮಾಡಿದರು. ನಾವು ಹಾಗೆ ಮಾಡುತ್ತೇವೆ. ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ. ನಮ್ಮನ್ನು ನಿಮ್ಮ ಸೇವಕರೆಂದೇತಿಳಿದುಕೊಳ್ಳಿ ಎಂದರು. ಆ ಮಾತುಗಳೆಲ್ಲಾ ನಮ್ಮ ಕಿವಿಗೆ ರಮ್ಯವಾಗಿ ಕಂಡುವೇನೋ? ಮಂತ್ರಿಗಳು ಹೋದರು! ಅವರ ಜೊತೆಗೆ ಅವರಿಗೆ ಅರ್ಪಿಸಿದ್ದ ಮನವಿಗಳ ಗಟ್ಟು ಹೋಯಿತು! ಮಂತ್ರಿಗಳು ಬೆಂಗಳೂರಿಗೆ ಹೋದರು! ಮನವಿಗಳು ಕಸದ ಬುಟ್ಟಿಗೆ ಹೋದವು!

ಈ ಹಿಂದೆ ನಾನೊಮ್ಮೆ ಸರಕಾರೀ ಕೆಲಸಗಳಲ್ಲಾಗುವ ವಿಳಂಬದ ಕುರಿತು ಬರೆದಿದ್ದೆ. ಬೆಂಗಳೂರು ಸೇರಿದ ಕಾಗದ ಪತ್ರಗಳು ಬೇಗನೆ ಮರಳಿಬರುವುದಿಲ್ಲವೆಂದೂ ಹೇಳಿದ್ದೇನೆ. ಇದು ಎಷ್ಟರಮಟ್ಟಿಗೆ ಸತ್ಯವೆಂದರೆ ತಂತಿಗಳ ಮೇಲೆ ತಂತಿಗಳನ್ನು ಬಿಟ್ಟರೂ ಬೆಂಗಳೂರಿನ ಅಧಿಕಾರಿಗಳ ಆ ಚರ್ಬಿಭರಿತ ದಪ್ಪ ಚರ್ಮಕ್ಕೆ ಅದು ತಗಲುವುದೇ ಇಲ್ಲ. ಅವರಿಗೆ ನಾವೂ ಒಂದೇ! ಹುಟ್ಟೂ ಒಂದೇ! ಸಂಬಳ ಪಾವತಿಗೆ ಸಂಬಂಧಿಸಿದ ಕಾಗದ ಪತ್ರಗಳ ಕಡೆಗೆ ತೀವ್ರ ಗಮನಕೊಡಬೇಕೆಂಬ ಪರಿಜ್ಞಾನವಾಗಲೀ, ರಜಾ ಅರ್ಜಿ ಮಂಜೂರಾತಿ ಕಾಗದಗಳನ್ನು ನಿಧಾನ ಪರಿಶೀಲಿಸಿದರೆ ಸಾಕೆಂಬ ವಿವೇಕವಾಗಲೀ ಅಲ್ಲಿನ ಅಧಿಕಾರಿಗಳಿಗಿಲ್ಲ! ಈಗ ತಂತಿಗಳನ್ನು ಬಿಟ್ಟರೆ 'ಅದು ಮಾಮೂಲು ಸೇರೆ' ಎನ್ನುವಂತಾಗಿದೆ ಬೆಂಗಳೂರಿನ ಅಧಿಕಾರಿಗಳಿಗೆ.

ಇವೆಲ್ಲಾ ನಾವು ದಿನನಿತ್ಯವೆಂಬಂತೆ ಕೇಳುತ್ತಿರುವ ಸಂಗತಿಗಳು. 'ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟ' ಎನ್ನುವಂತೆ ಮೈಸೂರು ಸರಕಾರದ ಈ ಧೋರಣೆ ಬಡ ಜನತೆಯಾಳಿಗೆ ಪ್ರಾಣಸಂಕಟವಾಗಿದೆ ರಾಜಕೀಯಚದುರಂಗದಾಟಕ್ಕೆ, ರಾಜಕೀಯ ಒಳಜಗಳಗಳಿಗೆ ಮೈಸೂರಿನ ಹೆಸರು ಇಡೀ ಭಾರತದಲ್ಲಿ ಎಷ್ಟು ಮುಂದಿದೆಯೋ ಹಾಗೆಯೇ ಉತ್ತಮ ಆಡಳಿತೆಗೆ ಮೈಸೂರು ಅಷ್ಟೆ ಹಿಂದಿದೆ. ಎಲ್ಲವೂ ಅದರ ಸರಿ ಎನ್ನುವ ಉದಾಸೀನ ಧೋರಣೆ, ಯಾರಿಗೆ ಏನಾದರೇನು ನಮ್ಮ ಮೈ ಬೆಚ್ಚಗಿದ್ದರೆ ಸರಿ ಎನ್ನುವ ಸಂಕುಚಿತ ಧೋರಣೆ, ಇತರರ ಕಷ್ಟವನ್ನು ಅರಿಯಲಾಗದ ಆ ಸ್ವಾರ್ಥಪೂರ್ಣ ಧೋರಣೆ ಇವುಗಳು ನಿಜ ಲಿಂಗಪ್ಪನವರಂತಹ ದಕ್ಷ ಯೋಗ್ಯ, ಪ್ರಾಮಾಣಿಕ ವ್ಯಕ್ತಿಮುಖಂಡನಾಗಿರುವ ಸರಕಾರಕ್ಕೆ ಭೂಷಣವಲ್ಲ.

ಎಂ. ಎಲ್. ಎ.ಗಳ ಹೊಸ ಸಂಬಳದ ಮಸೂದೆ ಅತಿಬೇಗನೇ ಶಾಸನ ಸಭೆಯ ಮುಂದಿರಿಸಲ್ಪಟ್ಟು ಅತಿ ಬೇಗನೇ ಮಂಜೂರಾಯಿತು. ಆಹಾ! ಎಷ್ಟು ತ್ವರಿತದ ಕಾರ್ಯ! ಎಂದು ಎಲ್ಲರೂ ಹೇಳುವಂತಾಯಿತು. ಅದರೆ, ದ. ಕ. ಜಿಲ್ಲಾ ಬೋರ್ಡು ಹೊಸ ಸಂಬಳದ ಮಟ್ಟವನ್ನು ಶಿಕ್ಷಕರಿಗೆ ಕೊಡಬೇಕೆಂದು ಮಾಡಿದ ನಿರ್ಣಯ, ಖಾಸಗಿ ಶಾಲಾ ಶಿಕ್ಷಕರ ಮನವಿಗಳು (ಪ್ರಾಯಶಃ ಈ ವರೆಗೆ ಅರ್ಪಿಸಿದ್ದ ಮನವಿಗಳ ಸುಟ್ಟ ೦೦೦ಕ್ಕೆ ಸಮಿಪವಾದೀತು! ಪುಣ್ಯದಿಂದ ಅದಕ್ಕೆ ಒಂದು ಸುಟ್ಟದ ಉತ್ತರ ಇನ್ನೂ ಬಾರದಿರುವುದು ತುಂಬಾ ಸಂತೋಷದ ಸಂಗತಿ) ಇವೆಲ್ಲವನ್ನೂ ಅರ್ಥಮಾಡಿಕೊಳ್ಳುವುದೇ ಪ್ರಾಯಶಃ ಅವರಿಗೆ ಕಷ್ಟವಾಗಿರಬೇಕು! ಇಲ್ಲವೇ ಅದಕ್ಕಾಗಿ ನೇಮಿಸಲ್ಪಟ್ಟ ಸಮಿತಿಯು ಈ ವರೆಗೂ ಸಭೆ ಸೇರಿಲ್ಲವೆಂದರೆ ಇದೇನು ಸರಕಾರವೇ, ಅಥವಾ ಚರಿತ್ರೆಯಲ್ಲಿ ಬರುವ 'ಮಹಮ್ಮದ್ ಬಿನ್ ತೊಗ್ಲಖನ ದರ್ಬಾರೋ' ಎನ್ನಬೇಕಾದೆ.

ಮೈಸೂರು ಸರಕಾರದ ಆಸೆ ತೋರಿಸಿ ಮೋಸ ಮಾಡುವ ಧೋರಣೆಯ ಪ್ರತಿಭಟನಾರ್ಥವಾಗಿ, ದ. ಕ. ಜಿಲ್ಲೆಯ ಶಿಕ್ಷಕರಿಗೆ ಅದ ತೀವ್ರ ಅನ್ಯಾಯದ, ಸರಕಾರವು ಈ ವರೆಗೂ ವಹಿಸಿದ ಉದಾಸೀನ ಧೋರಣೆಯ ಪ್ರತಿಭಟನಾರ್ಥವಾಗಿ, ನಮ್ಮ ಪಾಲಿಗೆ ಮೈಸೂರು ಸರಕಾರ ಇಲ್ಲ, ಕರ್ನಾಟಕ ರಾಜ್ಯ ರೂಪುಗೊಂಡಿಲ್ಲ ಎಂದು ತಿಳಿದು ಶಿಕ್ಷಕರು ನವಂಬರ್ ೧ನೆ ದಿನವನ್ನು ಕರಿ ದಿನವನ್ನಾಗಿ ಆಚರಿಸಬೇಕು. ನವಂಬರ್ ೧, ೨ ಕೋಟಿ ಕನ್ನಡಿಗರಕನಸುನೆನಸಾದ ದಿನವಾಗಿರಬಹುದು. ಆದರೆ ದ. ಕ. ಜಿಲ್ಲೆಯ ಶಿಕ್ಷಕರು ತಮ್ಮ ಅತೃಪ್ತ ಮನಸ್ಸಿನೊಂದಿಗೆ, ತೀವ್ರ ಅನ್ಯಾಯದಿಂದ ಬೇಸತ್ತ ಹೃದಯದೊಂದಿಗೆ, ಈ ದಿನವನ್ನು ಹೇಗೆ ಆಚರಿಸಬಲ್ಲರು? ಸುಖ ಸಂತೋಷಗಳಿಂದ ಹೇಗೆ ಆಚರಿಸಿಯಾರು? 'ಉದಯವಾಯಿತು ನಮ್ಮ ಚೆಲುವಕನ್ನಡನಾಡು' ಎಂದು ಯಾವ ಸಂತೋಷಕ್ಕಾಗಿ, ಯಾರ ಪ್ರೀತ್ಯರ್ಥವಾಗಿ, ಯಾವುದರ ಪುರುಷಾರ್ಥವಾಗಿ ಶಿಕ್ಷಕರು ಹಾಡಬೇಕು. ಎಲ್ಲಾ ರಾಷ್ಟ್ರೀಯ ಹಬ್ಬಗಳನ್ನೂ ತಮ್ಮ ಶಕ್ತಿಗೂ ಮೀರಿಲಾದ ಉತ್ಸಾಹದಿಂದ ಆಚರಿಸುತ್ತಿದ್ದ ಶಿಕ್ಷಕರು, ತಮ್ಮ ಶಾಲಾ ಮಕ್ಕಳಲ್ಲಿ ರಾಷ್ಟ್ರಪ್ರೇಮವನ್ನು ಉಟ್ಟಿಸುತ್ತಿದ್ದ ಶಿಕ್ಷಕರು, ಹೆತ್ತವರಿಂದ ಬೈಗಳು ಕೇಳಿಯಾದರೂ ಊರಿನ ಪ್ರಭಾತ ಫೇರಿಗೆ ತಮ್ಮ ಶಾಲಾ ಮಕ್ಕಳನ್ನು ಬಹುಸಂಖ್ಯೆಯಲ್ಲಿ ಕರೆದುಕೊಂಡು ಬಂದು ಸಮಾರಂಭಗಳ ಯಶಸ್ಸಿಗೆ ಕಾರಣರಾದ ಶಿಕ್ಷಕರು ನವಂಬರ ೧ ದಿನವನ್ನು ಆಚರಿಸಲಾಗದು. ಕರ್ನಾಟಕ ರಾಜ್ಯದ ಮೇಲಿನ ದ್ವೇಷದಿಂದಲ್ಲ. ಬದಲು ಮೈಸೂರು ರಾಜ್ಯದಲ್ಲಿ ತಮಗಾದ ಅನ್ಯಾಯದ ಪ್ರತಿಭಟನಾರ್ಥವಾಗಿ.

ಯಾವ ಶಾಲೆಗಳಲ್ಲೂ ಈ ದಿನದ ಆಚರಣೆ ನಡೆಸಲಾಗದು. ಮಕ್ಕಳಿಗೆ ಆ ದಿನದ ನೆನಪು ಹುಟ್ಟಿಸಬಾರದು. ಊರಲ್ಲಿ ನಡೆಯುವ ಸಮಾರಂಭಗಳಲ್ಲಿ ಉತ್ಸವ, ಮೆರವಣಿಗೆಗಳಲ್ಲಿ ಶಾಲಾ ವಿದ್ಯಾರ್ಥಿಗಳ ತಂಡಕಟ್ಟಿಕೊಂಡು ಹೋಗಬಾರದು. ಆ ಬುಗಳಲ್ಲಿ ಯಾವುದರಲ್ಲೂ ಭಾಗವಹಿಸಬಾರದು. ಆ ದಿನವನ್ನು ಶ್ರೀ ಜಿ. ಕೆ. ಉದ್ಯಾವರ್ ಇವರ ಸಲಹೆಯಂತೆ ಶಿಕ್ಷಕರ 'ಕೇಳಿಕೆಯ ದಿನ'ವನ್ನಾಗಿ ಆಚರಿಸಬೇಕು. ಈ ಬಗ್ಗೆ ತಾಲೂಕು ಯೂನಿಯನ್ನುಗಳೂ, ಜಿಲ್ಲಾಗಿಲ್ಲಾ ತಕ್ಕಕಾರ್ಯಕ್ರಮವನ್ನಸಿದ್ಧಪಡಿಸುವುದುಒಳ್ಳೆದು. ಶಿಕ್ಷಕರ ಈತರದ ಪ್ರತಿಭಟನೆಯನ್ನು ಭಿತ್ತಿ ಪತ್ರಗಳ ಮೂಲಕ, ಪತ್ರಿಕೆಗಳ ಮೂಲಕ ಪ್ರಸಾರಗೊಳಿಸಬೇಕು. ಶಿಕ್ಷಕ ಬಂಧುಭಗಿನಿಯರೇ, ನವಂಬರ ೧, ನಮ್ಮ ಪಾಲಿನ ದುರ್ದಿನ, 'ಮೂಡಡೆಯ ದಿನಕರನು ಉಂಟಾದ ದಿನ'. ನಮ್ಮ ಜೀವನದ "ಕರಿದಿನ" ಈ ರೀತಿಯಾಗಿಯೇ ಆ ದಿನವನ್ನು ಆಚರಿಸಿರಿ! ಇದರಿಂದಾದರೂ ಸರಕಾರ ಕಣ್ಣುತೆರೆಯುವುದೋ ನೋಡೋಣ!

ನೋಟೀಸು

ಕಳಂಜ ಪಂಚಾಯತ ಕೋರ್ಟಿನಲ್ಲಿ

ಸಿವಿಲ್ ವ್ಯಾಜ್ಯ ನಂಬ್ರ 4/57.

ರುಕ್ಮಿಣಿ ಅಮ್ಮ— ವಾದಿ
ತಿಮ್ಮಪ್ಪ ರೈ— ಪ್ರತಿವಾದಿ

ಮೇಲ್ಕಂಡ ದಾವೆಯ ಪ್ರತಿವಾದಿ ಪುತ್ತೂರು ತಾಲೂಕು ಕಳಂಜ ಗ್ರಾಮದ ಕಳಂಜ ತೇಪಪ್ಪ ರೈಯ ಅಳಿಯ ತಿಮ್ಮಪ್ಪ ರೈಗೆಗೆ ತಿಳಿಯಪಡಿಸುವುದೇನೆಂದರೆ:—

ವಾದಿಗೆ ತಾ. 15–9–54ರಲ್ಲು ಬರೆಕೊಟ್ಟ ಪ್ರೊ ನೋಟಿನ ಬಾಬ್ತು ಬಾಕಿ ಇರುವ ಐವೇಜಿನ ಪಸೂಲಾತಿ ಬಗ್ಗೆ ಸದ್ರಿ ವಾದಿ ರುಕ್ಮಿಣಿ ಅಮ್ಮನು ನಿಮ್ಮ ಮೇಲೆ ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿ ನ ಉದಾಹರಣೆ ಬಗ್ಗೆ ತಾ. 19–10–57ಕ್ಕೆ ವ್ಯಾದೆಯಾಗಿದೆ. ನೀವು ಆ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು.

N. Venkat Subba Rao.
President
ಕಳಂಜ ಪಂಚಾಯತ್

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ; ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction Madras.

ನವಭಾರತದ ತೀರ್ಥಕ್ಷೇತ್ರ-

ದಾಮೋದರ ಕಣಿವೆಯ ವಿಹಂಗಮ ದೃಶ್ಯ

ದಾಮೋದರವೆಂಬುದು ಹುಚ್ಚಿ ನದಿಯ ಉಪನದಿಯಾಗಿದೆ. ದಾಮೋದರ ಹಾಗೂ ಅದರ ಉಪನದಿಗಳು ಬೇಸಗೆಯ ಕಾಲದಲ್ಲಿ ಒಂದೇ ಸವನೆ ಒಣಗಿ ಹೋಗುತ್ತವೆ ಮತ್ತು ವರ್ಷ ಕಾಲದಲ್ಲಿ ವಿಸ್ತಾರವಾಗಿ ಹರಿಯುವ ಸ್ವಭಾವವುಳ್ಳವುಗಳಾಗಿವೆ. ಇದರಿಂದಾಗಿ ಸುತ್ತ ಮುತ್ತಲಿನ ಬಹು ಪ್ರದೇಶವು ನೀರಿನಿಂದ ಮುಳುಗುತ್ತವೆ. ಬಂಗಾಳ ಅಥವಾ ಬಿಹಾರಿನ ರೈತನು ಗೊಂದಲಕ್ಕೀಡಾಗುತ್ತಾನೆ. ಈ ಕಾರಣದಿಂದ ದಾಮೋದರ ನದಿಗೆ "ಶೋಕ ನದಿ" ಎಂಬ ಹೆಸರು ಪ್ರಚಲಿತವಾಗಿತ್ತು. ೧೯೫೪ರಲ್ಲಿ ಬಂದ ದೊಡ್ಡ ನೆರೆಯ ಪರಿಣಾಮವಾಗಿ ಬಂಗಾಳದಲ್ಲಿ ಸುಮಾರು ೮ ಕೋಟಿ ರೂಪಾಯಿಗಳ ಹಾನಿಯು ಸಂಭವಿಸಿತು. ದಾಮೋದರ ನದಿಗೊಂದು ಆಣೆಕಟ್ಟನ್ನು ಕಟ್ಟುವ ಹಂಚಿಕೆಯನ್ನು ಮಾಡುವಾಗ, ವರ್ಷ ಕಾಲದಲ್ಲಿ ನಿರುಪಯೋಗಿಯಾಗಿ ಸಮುದ್ರ ಸೇರುವ ನೀರನ್ನು ವರ್ಷಪರ್ಯಂತ ಸುರಕ್ಷಿತವಾಗಿಡುವುದು ಮತ್ತದನ್ನು ಕಾಲುವೆಗಳ ಮುಖಾಂತರ ಲಕ್ಷಾಂತರ ವಿಕರೆಗಳಿಗೆ ಹಾಯಿಸುವುದು ಮಾತ್ರವಲ್ಲದೆ ಆಣೆಕಟ್ಟನ್ನು ಕಟ್ಟುವುದರಿಂದ ನೆರೆಯ ನಿಯಂತ್ರಣವನ್ನು ಮಾಡುವುದು ಸಹ ಸಾಧ್ಯವೆಂದು ತಿಳಿದು ಈ ಕೆಲಸಕ್ಕೆ ಕೈಹಚ್ಚಲಾಯಿತು.

ದಾಮೋದರ ನದಿಯು ಪ್ರವಹಿಸುವ ಭೂಪ್ರದೇಶವು ಖನಿಜ ಮತ್ತು ಉದ್ಯೋಗಗಳ ದೃಷ್ಟಿಯಿಂದ ಸಹ ಬಹಳ ಸಮೃದ್ಧವಾಗಿದೆ. ಕಬ್ಬಿಣ, ಕಲ್ಲಿದ್ದಲು, ಮೆಂಗನೀಸು, ಅಬ್ರಕ, ಬಾಕ್ಸೈಟ್, ಸಾಯನಾಯಿಟ್ ಮೊದಲಾದ ಅನೇಕ ಬೆಲೆ ಬಾಳುವ ಖನಿಜಗಳು ಈ ಪ್ರದೇಶದಲ್ಲಿ ದೊರೆಯುತ್ತವೆ. ಈ ಎಲ್ಲ ಉದ್ಯೋಗಗಳಿಗೆ ವಿದ್ಯುತ್ತು ಬಹಳ ಸಹಾಯಕವಾಗಿದೆ. ಸಿಂಧ್ರಿಯ ರಾಸಾಯನಿಕ ಗೊಬ್ಬರದ ಕಾರ್ಖಾನೆ, ಜಮ್‌ಶೆಡ್‌ಪುರ ಮತ್ತು ಅಸ್ಸನ್‌ಸೋಲ್‌ಗಳ ಕಾರಖಾನೆಗಳಲ್ಲವಕ್ಕೂ ವಿದ್ಯುಚ್ಛಕ್ತಿಯ ಆವಶ್ಯಕತೆಯು ತುಂಬಾ ಇರುವುದು.

ದಾಮೋದರ ಯೋಜನೆಯು ಬಹಳ ಮಹತ್ವಪೂರಿತವಾದುದು. ಎಲ್ಲಕ್ಕಿಂತ ಮೊದಲು ಬ್ರಿಟಿಷ ಶಾಸನಕಾಲದಲ್ಲಿ ಶ್ರೀ ವೂಟಿಡುಯಿನ ಎಂಬವನು ದಾಮೋದರ ಯೋಜನೆಯ ಪ್ರಾರಂಭ ರೂಪವನ್ನು ರೂಪಿಸಿ ಅದಕ್ಕೆ ೨೫ ಕೋಟಿ ರೂಪಾಯಿಗಳ ವೆಚ್ಚ ಬರಬಹುದೆಂದು ಅಂದಾಜು ಮಾಡಿದನು. ಆದರೆ, ಆ ಸಮಯದಲ್ಲಿ ಯೋಜನೆಯು ಕಾರ್ಯರೂಪಕ್ಕೆ ಬರಲಿಲ್ಲ. ಭಾರತವು ಸ್ವತಂತ್ರವಾದ ತರುವಾಯ ೧೯೪೮ರಲ್ಲಿ ಜುಲೈ ಮಾಸದಲ್ಲಿ ಎಲ್ಲ ಕಾರ್ಯಗಳನ್ನೂ ಸಂಚಾಲಿಸುವ ಸಲುವಾಗಿ ಒಂದು ಮಂಡಳಿಯ ಸ್ಥಾಪನೆಯಾಯಿತು. ಅದರ ಸಂಗಟನೆಯು ಅಮೆರಿಕದ ಟೆನೆಸೀ ಕಣಿವೆಯ ಅಧಾರಿಟಿಯ ಅಧಾರದಿಂದ ಮಾಡಲ್ಪಟ್ಟಿದ್ದು, ತನ್ನ ವ್ಯವಹಾರದಲ್ಲಿ ಸ್ವತಂತ್ರವಾಗಿದೆ. ಸಂಸತ್ ಅಥವಾ ಧಾರಾಸಭೆಗಳ ನಿಯಂತ್ರಣವು ಪ್ರತ್ಯಕ್ಷವಾಗಿರುವುದಿಲ್ಲ. ಈ ಸಮಿತಿಯಲ್ಲಿ ಕೇಂದ್ರ, ಬಿಹಾರ ಮತ್ತು ಪಶ್ಚಿಮ ಬಂಗಾಳದ ಸರಕಾರಗಳ ಪ್ರತಿನಿಧಿಗಳೂ ಸೇರಿಕೊಂಡಿದ್ದಾರೆ. ಈ ಮಂಡಲವು ಸ್ಥಾಪನೆಗೊಂಡಾಗ ಯೋಜನೆಯ ರೂಪವೂ ದೊಡ್ಡದಾಯಿತು. ೧೯೪೮ರಲ್ಲಿ ರೂಪಾಯಿಯ ಮೌಲ್ಯಚ್ಛೇದದಿಂದ ಹಾಗೂ ಅನೇಕ ಹೊಸ ಕಾರ್ಯಕ್ರಮಗಳ ಸೇರ್ಪಡೆಯಿಂದಾಗಿ ವೆಚ್ಚವು ಸೇರಿ ಡಾಲರುಗಳ ಬೆಲೆಯಬಹುದೆಂದು ಅಂದಾಜು ಮಾಡಲಾಯಿತು. ಆದರೂ, ಪದಾರ್ಥಗಳ ಬೆಲೆ ಮತ್ತೂ ಏರತೊಡಗಿದುದರಿಂದಾಗಿ ಯೋಜನೆಯ ಒಟ್ಟು ವೆಚ್ಚವು ರೂ. ೫೫ ಕೋಟಿಯಿಂದ ೭೭ ಕೋಟಿಯ ಮತ್ತು ೧೦೫ ಕೋಟಿಯ ಯೋಜನೆಯಾಗಿ ಪರಿಣಾಮ ಹೊಂದಿತು. ಇದೀಗ ಈ ಯೋಜನೆಯ ಬಹುಕಾರ್ಯಗಳಲ್ಲಿ ನೂರಕ್ಕೆ ಅರವತ್ತು ಪೂರ್ತಿಗೊಂಡಿದೆ.

ದಾಮೋದರ ಘಾಟಿಯ ವಿಶಾಲ ಯೋಜನೆಯನುಸಾರವಾಗಿ, ಎಂಟು ಆಣೆಕಟ್ಟುಗಳು, ಮತ್ತು ಜಲವಿದ್ಯುತ್ ಕೇಂದ್ರಗಳು, ಘಾಟಿಯಲ್ಲಿ ದೊರೆಯುವ ಕಲ್ಲಿದ್ದಲನ್ನುಪಯೋಗಿಸುವ ಸಲುವಾಗಿ ವಿದ್ಯುತ್ತನ್ನು ಒದಗಿಸುವುದಕ್ಕಾಗಿ ಒಂದು ದೊಡ್ಡ ಕಾರಖಾನೆ, ನೀರು ಹಾಯಿಸುವುದಕ್ಕಾಗಿ ಮತ್ತು ಯಾನಗಳ ಚಲನೆಗಾಗಿ ಕಾಲುವೆಗಳು ಮತ್ತು ವಿದ್ಯುತ್ ಪ್ರವಾಹವನ್ನು ರವಾನಿಸುವುದಕ್ಕಾಗಿ ಸಿಗೆಗಳನ್ನು ಜೋಡಿಸುವುದು—ಈ ಕಾಮಗಾರಿಗಳು ಕೈಗೊಳ್ಳಲ್ಪಡುತ್ತವೆ. ಈ ಯೋಜನೆಗಳಿಂದ ೪,೭೯,೦೦೦ ಕಿಲೋವಾಟ್‌ಗಳಷ್ಟು ವಿದ್ಯುತ್ ಹುಟ್ಟುತ್ತದೆ ಮತ್ತು ೧೫ ಲಕ್ಷ ಎಕ್ರೆ ಜಮೀನಿಗೆ ನೀರು ದೊರೆಯುವುದಲ್ಲದೆ, ನೆರೆಯಿಂದೊದಗಬಹುದಾದ ಹಾನಿಯನ್ನೂ ತಡೆಗಟ್ಟುತ್ತದೆ.

ದಾಮೋದರ ಕಣಿವೆಯಲ್ಲಿನ ವಿಕಾಸ ಕಾರ್ಯಗಳಲ್ಲಿ ತಿಲೈಯಾಕಟ್ಟು, ಕೋನಾರಕಟ್ಟು, ಬೋಕಾರೋ ವಿದ್ಯುದಾಲಯ ಮತ್ತು ದುರ್ಗಾಪುರ ಕಟ್ಟುಗಳು ಸಂಪೂರ್ಣವಾಗಿದೆ. ತಿಲೈಯಾ ಆಣೆಕಟ್ಟನ ಕೆಲಸವು ೧೯೪೮ರಲ್ಲಿ ಪ್ರಾರಂಭವಾಯಿತು. ಕಾಂಕ್ರೀಟನ ಗೂಡೆಯು ೫೦೦ ನವಂಬರದಲ್ಲಿ ಹಾಕಲಾಯಿತು. ಪ್ರಾರಂಭಕಾಲದಲ್ಲಿ ದಿನವೊಂದಕ್ಕೆ ೪೦ ಘನ ಗಜದಷ್ಟು ಕಾಂಕ್ರೀಟನ್ನೂ ಹಾಕಲಾಗುತ್ತಿರಲಿಲ್ಲ. ಆದರೆ ಮುಂದಕ್ಕೆ ಈ ಪ್ರಮಾಣವು ಬೆಳೆಯುತ್ತ ಬಂದು ೧೯೫೧ರಲ್ಲಿ ೫೦೦ ಘನಗಜ ಕಾಂಕ್ರೀಟು ತಯಾರಾಗುವುದು ಸಾಧ್ಯವೆನಿಸಿತು. ೨೦೨—೨೫ರಲ್ಲಿ ಈ ಕಟ್ಟನಲ್ಲಿ ನೀರು ತುಂಬಿ ಬಂದಿತು;—೨೧ನೆ ಫೆಬ್ರವರಿ ೨೫ರಲ್ಲಿ ಪ್ರಧಾನ ಮಂತ್ರಿ ಪಂಡಿತ ನೆಹರೂರವರು ಅದನ್ನು ಉದ್ಘಾಟಿಸಿದರು. ದಾಮೋದರದ ಸಹಾಯಕ ನದಿಯಾಗಿರುವ ಕೋನಾರದಲ್ಲಿ ಆಣೆಕಟ್ಟನ ಕಾರ್ಯವು ೧೯೫೦ರಲ್ಲಿ ಪ್ರಾರಂಭವಾಗಿ ಇದು ಸಕ ೫೫ರ ಫೆಬ್ರವರಿ ೨೧ರಂದು ಉದ್ಘಾಟಿತವಾಯಿತು.

ಬಿಹಾರ ಮತ್ತು ಬಂಗಾಳ ರಾಜ್ಯಗಳಲ್ಲಿರುವ ವೈಧಾನ ಆಣೆಕಟ್ಟು ಸಹ ಪೂರ್ಣಗೊಂಡಿದ್ದು, ಪಂಚೇಟ ಕಟ್ಟು ಕೂಡಾ ತೀವ್ರವಾಗಿ ಮುಂದುವರಿಯುತ್ತ ಇದೆ. ಮುಖ್ಯ ವೈಧಾನದ ಆಣೆಕಟ್ಟು ೨೦೬ ಅಡಿ ಉದ್ದವಿದ್ದು ಮಣ್ಣಿನಿಂದ ಕಟ್ಟಲ್ಪಟ್ಟಿದೆ. ನದಿಯ ತಳದಿಂದ ಈ ಕಟ್ಟು ೧೭೨ ಅಡಿ ಎತ್ತರವಿದೆ. ಈ ಕಟ್ಟನ ವಿದ್ಯುದಾಗರವು ಭೂಮಿಯಡಿಯಲ್ಲಿರುವುದೊಂದು ವಿಶೇಷತೆಯಾಗಿದೆ. ಇದರಲ್ಲಿ ಮೂರು ವಿದ್ಯುತ್ ಯಂತ್ರಗಳಿದ್ದು ಅವುಗಳಲ್ಲಿ ಒಂದು ಕಳೆದ ಜೂನ್ ತಿಂಗಳಲ್ಲಿ ಕಾರ್ಯಾಚರಣೆಗೆ ತೊಡಗಿದೆ. ಉಳಿದೆರಡು ಸದ್ಯದಲ್ಲಿಯೇ ತಮ್ಮ ಕೆಲಸದಲ್ಲಿ ತೊಡಗುವ ನಿರೀಕ್ಷೆಯಿದೆ.

ಪಂಚೇಟದ ಆಣೆಕಟ್ಟು ೧೫೪ ಅಡಿ ಎತ್ತರವಿದ್ದು ಇದರಲ್ಲಿ ೧೩-೧೪ ಲಕ್ಷ ಎಕರೆ ಅಡಿ ನೀರು ಶೇಕರಿಸಲ್ಪಡುವುದು ಮುಖ್ಯವಾಗಿ ನೆರೆಯ ನಿಯಂತ್ರಣ ಹಾಗೂ ವಿದ್ಯುದುತ್ಪಾದನೆಯ ಕಾರ್ಯಕ್ಕಾಗಿ ಈ ಕಟ್ಟನ್ನು ಕಟ್ಟಲಾಗುವುದು. ಈ ವಿದ್ಯುದಾಗರದಲ್ಲಿ ಸುಮಾರು ೪೦ ಸಾವಿರ ಕಿಲೋವಾಟ್ ಉತ್ಪತ್ತಿಯಾಗಲಿದ್ದು ಈ ಕಟ್ಟು ಹಾಗೂ ವಿದ್ಯುದಾಗರಗಳು ಮುಂದಿನ ವರ್ಷಾಂತ್ಯದೊಳಗೆ ಪೂರ್ಣಗೊಳ್ಳುವ ಭರವಸೆಯಿದೆ.

ದುರ್ಗಾಪುರದ ಆಣೆಕಟ್ಟು ೧೯೫೦ರಲ್ಲಿ ಪ್ರಾರಂಭವಾಗಿದ್ದು ಇದರ ದೊಡ್ಡ ಭಾಗವೊಂದು ೨೫ರ ಎಪ್ರಿಲ್ ತಿಂಗಳಲ್ಲಿಯೇ ಪೂರ್ಣವಾಗಿತ್ತು. ಇನ್ನು ಇದರ ಚಿಕ್ಕ ಸುಟ್ಟ ಶಾಖೆಗಳು ಸಂಪೂರ್ಣವಾದನಂತರ ಸುಮಾರು ಒಂದೂವರೆ ಲಕ್ಷ ಎಕ್ರೆಗಳಿಗೆ ನೀರನ್ನು ಒದಗಿಸಲು ಇದು ಶಕ್ತವಾಗಲಿದ್ದು, ಆ ಕೆಲಸವು ಮುಂದಿನ ಬೇಸಗೆಯಲ್ಲಿ ಪೂರ್ಣವಾಗಬಹುದು.

ಈ ದಾಮೋದರ ಘಾಟಿಯ ಸಂಪೂರ್ಣ ಯೋಜನೆಯ ವ್ಯಾವಹಾರಿಕತೆ, ಉಪಯೋಗಿತೆ ಮತ್ತು ಲಾಭದ ಆಶ್ವಾಸನೆ ಮತ್ತು ನಿಶ್ಚಿಂತತೆಯನ್ನು ಗಮನಿಸಿಯೇ ವಿಶ್ವ ಬೇಂಕು ಬೋಕಾರೋದ ವಿದ್ಯುದುತ್ಪಾದನಾ ಕೇಂದ್ರಕ್ಕೆ ೧೮೫ ಲಕ್ಷ ಮತ್ತು ಮೈಧಾನ್ ಹಾಗೂ ಪಂಚೇಟ ಆಣೆಕಟ್ಟುಗಳ ಸಲುವಾಗಿ ೧೯೫ ಲಕ್ಷ ಡಾಲರುಗಳ ಸಹಾಯ ಮಾಡಿರುವುದನ್ನು ಉಲ್ಲೇಖಿಸುವುದು ಅನಾವಶ್ಯಕವೆನಿಸಲಾರದು.

ಈ ದೊಡ್ಡ ಯೋಜನೆಯ ಒಂದು ಉದ್ದೇಶವೆಂದರೆ, ವಿದ್ಯುದುತ್ಪಾದನೆಯೂ ಗಿದೆ. ಬೋಕಾರೋ ಮತ್ತು ತಿಲೈಯಾದ ವಿದ್ಯುದಾಲಯಗಳು ೫೫ರಲ್ಲಿಯೇ ಕಾರ್ಯಮಗ್ನವಾಗಿವೆ. ಈಗ ಅವನ್ನು ಮತ್ತೂ ವಿಸ್ತಾರಗೊಳಿಸುವ ಸಲುವಾಗಿ ಹೊಸ ಹೊಸ ಯೋಜನೆಗಳನ್ನು ಕೈಗೊಳ್ಳಲಾಗುತ್ತದೆ. ಹೀಗೆ ಮಾಡುವುದರಿಂದ ೨೬ ಭಾರಿಯ ಕಾರಖಾನೆಗಳಿಗೆ ವಿದ್ಯುತ್ ಸೌಕರ್ಯ ದೊರೆಯಬಲ್ಲುದು ವಿದ್ಯುತ್ತನ್ನು ಬಳಸಿದುದರ ಮೌಲ್ಯವಾಗಿ ಆರ್ಥಿಕ ವರ್ಷದಲ್ಲಿ ೧ ಕೋಟಿ ೩೬ ಲಕ್ಷ ರೂಪಾಯಿಗಳ ಆಸುವಾಗಿತ್ತು. ಈ ವರ್ಷದ ೧೧ ತಿಂಗಳುಗಳಲ್ಲಿಯೇ ಈ ಮೌಲ್ಯವು ೧ ಕೋಟಿ ೭೩ ಲಕ್ಷ ರೂಪಾಯಿಗಳಷ್ಟಿದೆ. ಆದುದರಿಂದ, ಈ ಯೋಜನೆಗಳನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತಂದಲ್ಲಿ ಸುಮಾರು ಎರಡೂವರೆಯಿಂದ ಮೂರು ಕೋಟಿ ರೂಪಾಯಿಗಳ ವಾರ್ಷಿಕಾದಾಯವಾಗುವುದು ಸುಲಭ ಸಾಧ್ಯ. ಹಾವ್ರಾ ಬರ್ದವಾನ ಸೆಕ್ಷನ್‌ನಲ್ಲಿ ರೈಲ್ವೆಗೆ ವಿದ್ಯುತ್ತನ್ನು ಉಪಯೋಗಿಸುತ್ತಾರೆ. ರಾಸಾಯನಿಕ ಗೊಬ್ಬರ, ಸಿಮೆಂಟು, ಉಕ್ಕು ಮತ್ತು ಚಿತ್ತರಂಜನ ರೈಲ್ವೆ ಇಂಜಿನ್ ಕಾರಖಾನೆ ಮೊದಲಾದುವುಗಳ ವಿಸ್ತಾರಣೆಗಾಗಿ, ಹಾಗೂ ಇನ್ನಿತರ ವಿವಿಧ ಕಾರಖಾನೆಗಳಿಗಾಗಿ ಇನ್ನೂ ಹೆಚ್ಚು ವಿದ್ಯುಚ್ಛಕ್ತಿಯು ಬೇಕಾಗುತ್ತದೆ. ಕಲಕತ್ತೆ, ಗಯೆ, ಪಾಟ್ನ ಮತ್ತು ಡಾಲ್ಮಿಯಾಪುರಗಳಿಗೆ ಸಹ ಈ ಯೋಜನೆಯಿಂದಲೇ ವಿದ್ಯುತ್ತನ್ನು ಒದಗಿಸಬೇಕಾಗಿದೆ. ಹೀಗೆ ದ್ವಿತೀಯ ಯೋಜನೆಯು ಪೂರ್ತಿಗೊಳ್ಳುವ ೧೯೬೦-೬೧ರ ಸುಮಾರಿಗೆ ಒಟ್ಟು ೪,೬೮,೦೦೦ ಕಿಲೋವಾಟ್ ವಿದ್ಯುಚ್ಛಕ್ತಿಯ ಬೇಡಿಕೆಯನ್ನು ಪೂರೈಸಬೇಕಾಗಿದೆ.

ಇಂತಹ ದಾಮೋದರ ಕೊಳ್ಳದ ಬೃಹದ್ಯೋಜನೆಯ ಉದ್ದೇಶವು ಕೇವಲ ನೀರಾವರಿ ಮತ್ತು ವಿದ್ಯುದ ತ್ಪಾದನೆಯಲ್ಲಿಯೇ ನಿಲ್ಲುವುದಿಲ್ಲ. ಇದೊಂದು ಬಹುಮುಖಿನಿಸುವ ಯೋಜನೆಯಾಗಿದೆ. ಪ್ರಳಯಂಕರ ಪ್ರವಾಹವನ್ನು ತಡೆದು ನೆರೆಯ ಹಾವಳಿಯನ್ನು ಕಡಿಮೆಮಾಡುವುದೂ ಇದರ ಉದ್ದೇಶವೆಂದು ಮೊದಲೇ ಹೇಳಲಾಗಿದೆ. ತಿಲೈಯಾ ಮತ್ತು ಮೈಥಾನದ ಆಣೆಕಟ್ಟುಗಳು ಈ ಬಗ್ಗೆ ರಚಿಸಲ್ಪಟ್ಟವುಗಳಾಗಿವೆ. ದೇವಚಂದ ಎಂಬಲ್ಲಿ ಭೂಮಿಯು ಕೊಚ್ಚಿಹೋಗುತ್ತಿರುವುದನ್ನು ತಡೆಯುವಸಲುವಾಗಿ ಲಕ್ಷಗಟ್ಟಲೆ ಹಣವ್ಯಯಿಸಿ ಪರೀಕ್ಷಾಕಾರ್ಯಗಳನ್ನು ಕೈಗೊಳ್ಳಲಾಗಿದೆ. ಇಲ್ಲಿನ ನದಿಗಳಲ್ಲಿ ಸಣ್ಣ ಸಣ್ಣ ಕಟ್ಟುಗಳನ್ನು ಕಟ್ಟಲಾಗಿದೆ. ಇದರಿಂದ ನದಿಯ ನೀರು ತಡೆಯಲ್ಪಟ್ಟು ಪ್ರವಾಹದ ವೇಗವು ಮಂದವಾಗಿ ಸುಣ್ಣ ಕೊಚ್ಚಿ ಹೋಗುವುದು ಕಡಿಮೆಯಾಗುವುದು ಈ ಕ್ಷೇತ್ರಗಳಲ್ಲಿ ಮರಗಳನ್ನು ನೆಡುವುದರ ಮೂಲಕ ಭೂಕ್ಷರಣವನ್ನು ತಡೆಹಿಡಿಯುವ ಪ್ರಯತ್ನವೂ ನಡೆದಿದೆ. ಈಗಾಗಲೇ ೨,೦೦೦ ಎಕ್ರೆ ಭೂಮಿಯಲ್ಲಿ

(ಎನೇ ಸುಟ ನೋಡಿರಿ)

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಈಗ ಚಾಲ್ತಿಯಲ್ಲಿರುವ ಬೇಂಕಿನ ಬಡ್ಡಿ ದರಗಳು ಈ ಕೆಳಗಿನಂತಿವೆ:—

ಸೇವಿಂಗ್ಸ್ ಬೇಂಕ್ ಖಾತೆಗಳು — ಸಾ. ಸೇ. 2½

ನಿರಬು ಶೇವಣಾತಿಗಳು

ರೂ. 10,000ದ ಕೆಳಗೆ (1ರಿಂದ 6 ತಿಂಗಳು) — ಸಾ. ಸೇ. 4¼

— Do — (7ರಿಂದ 24 ತಿಂಗಳು) — ಸಾ ಸೇ. 4½

ರೂ. 10,000 ಮತ್ತು ಮೇಲೆ (1ರಿಂದ 24 ತಿಂಗಳು) — ಸಾ. ಸೇ. 4¾

NAVAYUGA

Popular Kannada Weekly

Founder:—

A. B. SHETTY,
Former Minister for Public Health,
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೭-೧೦-೫೭	೭

ಭಾರತ-ಜಪಾನು ಸಹಕಾರ

ನಮ್ಮ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲರು ಇದೇ ತಾ. ೪ರಿಂದ ೧೨ನೇ ದಿನಾಂಕದ ತನಕ ಜಪಾನು ದೇಶದಲ್ಲಿ ಸಂಚಾರವನ್ನು ಮಾಡಿ ಇದೀಗ ಸ್ವದೇಶಕ್ಕೆ ಆಗಮಿಸಿರುವರಷ್ಟೇ! ಜಪಾನಿನಲ್ಲಿ ಅವರು ಭಾರತದ ಶ್ರೇಯೋಭಿವೃದ್ಧಿಯಾಗುವ ಹಲವಾರು ಕೆಲಸಗಳನ್ನು ಸೂರೈಸಿಕೊಂಡು ಬಂದಿರುವುದನ್ನು ಕೇಳಿದರೆ ಅವರ ಸಂಚಾರ ಸಫಲವಾಗಿದೆ ಎಂಬ ತೃಪ್ತಿ ಉಂಟಾಗದಿರದು. ನೆಹರೂರವರು ಯಾವ ದೇಶದಲ್ಲಿಯೇ ಆಗಲಿ, ಸಂಚಾರ ಕೈಗೊಂಡಾಗಲೆಲ್ಲ ಸಹಸ್ರ ಸಂಖ್ಯೆಯಲ್ಲಿ ಜನರು ಅವರ ಸ್ವಾಗತಕ್ಕೆ ನೆರೆದಿರುವುದು ಸಂಪ್ರದಾಯ. ಜಪಾನಿನಲ್ಲಂತೂ ಅವರನ್ನು ಎರಡನೇ ಗಾಂಧಿ ಎಂಬ ಅಭಿಮಾನದಿಂದ ಜನರು ಸ್ವಾಗತಿಸಿದರು. ಅಣುಬಾಂಬುಗಳ ಭೀಕರ ದುಷ್ಪರಿಣಾಮಗಳನ್ನು ಪ್ರತ್ಯಕ್ಷ ಅನುಭವಿಸಿರುವ ಜಪಾನಿ ಜನತೆಯು ನೆಹರೂರವರು ಅಣ್ವಾಯುಧದಿಂದ ಉದ್ದೇಶವಾದ ಹಿರೋಶಿಮಾ ನಗರಕ್ಕೆ ಭೇಟಿ ಕೊಟ್ಟ ವಾರ್ತೆ ಕೇಳಿ ಭಾವಾವೇಗದಿಂದ ತುಂಬಿಕೊಂಡು ಆತ ಶಾಂತಿ ದೂತ ಎಂದು ಉದ್ಗರಿಸಹತ್ತಿದರು ಭಾರತದ ಬಗ್ಗೆ ಇರುವ ಸ್ನೇಹ ಸಂಬಂಧವು ಅತ್ಯೀಯತೆಯ ವರ್ತನೆಯಿಂದ ಮತ್ತಷ್ಟು ದೃಢವಾಗಿದೆ ಎಂಬುದಕ್ಕೆ ಈ ಚಿಕ್ಕ ಪುಟ್ಟ ನಿದರ್ಶನಗಳು ಸಾಕು. ಜನತೆಯು ಭಾರತದ ಕಡೆಗೆ ಒಲವುಳ್ಳದ್ದಾಗುವಂತೆ ಮಾಡಿದರೆ, ಆಗ ಆ ದೇಶದ ಸರಕಾರದಿಂದ ನಾವು ವಿಶೇಷ ಸಹಕಾರಗಳನ್ನು ಪಡೆಯುವುದಕ್ಕೆ ಹೆಚ್ಚಿನ ತಡೆ ಉಳಿಯುವುದಿಲ್ಲ. ಏಕೆಂದರೆ ಸರಕಾರದ ನಿರ್ಧಾರಗಳನ್ನು ಜನತೆಯು ಸಹಾನುಭೂತಿಯಿಂದಲೇ ಕಾಣುತ್ತದೆ— ಟೀಕಿಸುವುದಿಲ್ಲ. ಮಿತ್ರರಾಷ್ಟ್ರಗಳ ಸಹಾಯ ಸಲ್ಲಿಸುವುದು ಆದ್ಯ ಕರ್ತವ್ಯವೆಂಬ ಭಾವನೆಯು ಸದಾ ಜನತೆಯಲ್ಲಿ ಜಾಗೃತವಾಗಿರುತ್ತದೆ. ಉಭಯ ದೇಶಗಳ ಪ್ರಧಾನಿಗಳು ಹೊರಡಿಸಿರುವ ಸಂಯುಕ್ತ ಪ್ರಕಟಣೆಯಲ್ಲಿ ಇಂಥ ಆತ್ಮೀಯಭಾವನೆಯು ಸ್ಪಷ್ಟವಾಗಿ ವ್ಯಕ್ತವಾಗಿದೆ. ಉದಾಹರಣೆಗೆ, ಜನತೆಗೆ ನಿರ್ಭಯರಾಗಿಯೂ ಸ್ವತಂತ್ರರಾಗಿಯೂ ಬಾಳಲು ಅನುಕೂಲವಾಗುವಂತೆ ಅಣ್ವಸ್ತ್ರಗಳ ಉತ್ಪಾದನೆ ಮತ್ತು ಉಪಯೋಗದ ಬಹಿಷ್ಕಾರವನ್ನೇ ಮಾಡಬೇಕೆಂದು ಉಭಯತರೂ ಒಪ್ಪಿದ್ದಾರೆ—ಈ ದಿಸೆಯಲ್ಲಿ ಪ್ರಥಮ ಹೆಜ್ಜೆಯಲ್ಲಿ ಪ್ರಾಯೋಗಿಕ ಸ್ಫೋಟನ ನಡೆಸುವುದನ್ನೆ ನಿಲ್ಲಿಸಿಬಿಡಬೇಕೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಭಾರತದ ಪಾಲಿಗೆ ಇದೇನೂ ಹೊಸ ನೀತಿಯಲ್ಲ—ಜವಾಹರಲಾಲರಿಗೂ ಈ ನಿಲುಮೆ ನೂತನವಾದುದಲ್ಲ: ಆದರೆ ಉಭಯ ಪ್ರಧಾನಿಗಳಲ್ಲಿ ಅಭಿಪ್ರಾಯ ಸಾಮ್ಯವಿರುವುದು ಅಣ್ವಸ್ತ್ರಗಳಿಂದ ತ್ರಸ್ತರಾಗಿರುವ ಜಪಾನೀಯರ ಹೃದಯಕ್ಕೆ ಸಾಂತ್ವನವನ್ನು ತಂದಿದೆ; ಅವರನ್ನು ತೃಪ್ತರನ್ನಾಗಿ ಮಾಡಿದೆ ಹಾಗೆಯೇ ಭಾರತೀಯರಿಗೆ ಸಮಾಧಾನ ತರುವ ವಿಷಯವೂ ಪ್ರಕಟಣೆಯಲ್ಲಿದೆ. ನಮ್ಮ ಎರಡನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಜಪಾನಿನ ಪ್ರಧಾನಿ ತುಂಬು ಸಹಕಾರವನ್ನು ನೀಡಲು ಮುಂದೆ ಬಂದಿದ್ದಾರೆ. ಯಂತ್ರ ಸಾಮಗ್ರಿಗಳನ್ನು ಸೂರೈಸಲು ಜಪಾನಿನಾಣ್ಯದಲ್ಲಿ ಸಾಲವನ್ನು ಕೊಡುವುದಕ್ಕೆ ಅವರು ಸಿದ್ಧರಾಗಿದ್ದಾರೆ. ಅದೂ ಅಲ್ಲದೆ ಭಾರತದಲ್ಲಿ ಕೆಲವು ಯಂತ್ರೋದ್ಯಮ ತರಬೇತಿ ಕೇಂದ್ರಗಳನ್ನು ತೆರೆಯುವ ಸಲುವಾಗಿ ತಜ್ಞರನ್ನು ಕಳುಹಿಸಲಿಕ್ಕೂ ಅವರು ಸಿದ್ಧರಾಗಿದ್ದಾರೆ. ಭಾರತವು ಇದಕ್ಕೆ ಪ್ರತಿಯಾಗಿ ಕಬ್ಬಿಣದ ಅದುರನ್ನು ದೀರ್ಘಾವಧಿಯ ವರೆಗೆ ಜಪಾನು ದೇಶಕ್ಕೆ ಪೂರೈಸಲು ಸಮ್ಮತಿ ಸೂಚಿಸಿದೆ. ಆದರೆ ಭಾರತವು ಜಪಾನಿಗೆ ಕೊಡುವುದಕ್ಕಿಂತಲೂ ಪಡೆಯುವ ಸಹಾಯದ ಮೂಲ್ಯ ಹೆಚ್ಚಿನದ್ದಾಗಬೇಕು—ಏಕೆಂದರೆ ಜಪಾನು ದೇಶವು ಪಶ್ಚಿಮ ರಾಷ್ಟ್ರಗಳಷ್ಟೇ ಹೆಚ್ಚು ಪ್ರಮಾಣದಲ್ಲಿ ಔದ್ಯಮೀಕರಣವನ್ನು ಹೊಂದಿರುವ ಏಶ್ಯದ ಏಕಮೇವ ರಾಷ್ಟ್ರ. ಜಪಾನೀಯರಿಗೆ ಕುಶಲಿಗಳು ಕೈಗಾರಿಕೆಯ ಕ್ಷೇತ್ರದಲ್ಲಿ ಬೇರೊಬ್ಬರು ಏಶ್ಯದಲ್ಲಿ ಸಿಗಲಾರರು. ಸಣ್ಣಮಟ್ಟದ ಗುಡಿಕೈಗಾರಿಕೆ ಇರಲಿ, ಭಾರಿ ಯಂತ್ರೋದ್ಯಮವಿರಲಿ. ಜಪಾನೀಯರು ಎಲ್ಲದರಲ್ಲೂ ಎತ್ತಿದ ಕೈಯಂತಿದ್ದಾರೆ. ಜಪಾನು ದೇಶವು ವಿಸ್ತೀರ್ಣದಲ್ಲಿ ನಮ್ಮ ದೇಶದಲ್ಲಿ ಎರಡರಲ್ಲಿ ಒಂದು ಪಾಲಷ್ಟಿದ್ದರೂ ಜನಸಂಖ್ಯೆಯು ನಮ್ಮದರ ಕಾಲಂಶದಷ್ಟಿದೆ. ಆ ದೇಶದ ಭೂಮಿಯೂದರೊಳಗೆ ಗುಡ್ಡ ಬೆಟ್ಟಗಳಿಂದ ತುಂಬಿದೆ. ಹಾಗಿರುವಾಗ ಅಲ್ಲಿಯ ಜನದಟ್ಟಣೆ ನಮ್ಮಲ್ಲಿಗಿಂತ ಕೆಲವು ಪಟ್ಟು ಹೆಚ್ಚು. ಆದಾಗ್ಯೂ ಅವರು ನಿಸರ್ಗದೊಡನೆ ಹೋರಾಡಿ ಗೆದ್ದಿದ್ದಾರೆ. ಅದೇ ಸ್ಫೂರ್ತಿ ನಮ್ಮಲ್ಲಿ ಉದಯವಾದರೆ, ಜಪಾನಿನಿಂದ ನಮಗೆ ಸಿಗುವ ಸಹಾಯದ ಸದುಪಯೋಗವಾದಂತಾಗುತ್ತದೆ. ಈ ಹಾರೈಕೆ ನಮ್ಮದು.

ವಿದ್ಯಾರ್ಥಿಗಳ ಕಲಾಭಿರುಚಿ ಪ್ರದರ್ಶನ-- ಅಂತರ್ವಿಶ್ವವಿದ್ಯಾನಿಲಯದ ಯುವಜನೋತ್ಸವ

ನವದೆಹಲಿಯಲ್ಲಿರುವ ತಾಲ್ಕತೋರ ಉದ್ಯಾನವನದಲ್ಲಿ ೧೯ನೇ ನವೆಂಬರ ೧ರಿಂದ ನಾಲ್ಕನೆಯ ಅಂತರ್ವಿಶ್ವವಿದ್ಯಾನಿಲಯ ಯುವಜನೋತ್ಸವದ ಪ್ರಾರಂಭವಾಗುವುದು. ನವೆಂಬರ ೧೦ನೇ ತಾರೀಕಿನ ವರೆಗೆ ನಡೆಯಲಿರುವ ಈ ಉತ್ಸವದಲ್ಲಿ ಭಾರತದ ೩೭ ವಿಶ್ವವಿದ್ಯಾಲಯಗಳಿಗೆ ಸೇರಿದ ಸುಮಾರು ೧,೩೦೦ ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗ ವಹಿಸಲಿರುವರು.

ಉತ್ಸವದ ವೇಳೆಯಲ್ಲಿ ಕಲೆ, ನಾಟಕ, ಸಾಮೂಹಿಕ ನೃತ್ಯ, ಸಾಮೂಹಿಕ ಸಂಗೀತ, ಶಾಸ್ತ್ರೀಯ ನೃತ್ಯ, ಶಾಸ್ತ್ರೀಯ ಹಾಡುಗಾರಿಕೆ, ವಾದ್ಯ ಸಂಗೀತ ಮತ್ತು ಹಿಂದಿ ವಾಕ್ಪಟುತ್ವ—ಈ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು.

ಪ್ರತಿದಿನವೂ ಪ್ರಾತಃಕಾಲ, ಸಂಧ್ಯಾಕಾಲ ಹಾಗೂ ರಾತ್ರಿ ಹೊತ್ತುಗಳಲ್ಲಿ ಮೂರು ಅಧಿವೇಶನಗಳಿರುವುವು. ನಾಟಕ ಸ್ಪರ್ಧೆಯೊಂದಿಗೆ ಶಾಸ್ತ್ರೀಯ ನೃತ್ಯ ಹಾಗೂ ಸಾಮೂಹಿಕ ನೃತ್ಯ ಸ್ಪರ್ಧೆಗಳನ್ನೂ ಪ್ರತಿನಿತ್ಯ ಸೂರ್ಯಾಸ್ತಮಯದ ನಂತರ ನಡೆಸಲಾಗುವುದು.

ನವದೆಹಲಿಯಲ್ಲಿ ನಡೆಯುವ ವಾರ್ಷಿಕ ಯುವಜನೋತ್ಸವಕ್ಕೆ ಪೂರ್ವದಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳು ಪ್ರಾದೇಶಿಕ ಅಂತರ್ ಕಾಲೇಜುಗಳ ಉತ್ಸವಗಳನ್ನು ನಡೆಸುತ್ತವೆ. ಪ್ರಾದೇಶಿಕ ಉತ್ಸವಗಳಲ್ಲಿ ಆಯ್ಕೆಗೊಂಡ ವಿದ್ಯಾರ್ಥಿಗಳು ಮುಂದೆ, ಅಂತರ್ವಿಶ್ವ ವಿದ್ಯಾನಿಲಯ ಯುವಜನೋತ್ಸವದಲ್ಲಿ ಸ್ಪರ್ಧಿಸುವರು.

ಈ ವರ್ಷದ ಉತ್ಸವವು ಹಲವಾರು ವಿಶೇಷಾಂಶಗಳಿಂದ ಕೂಡಿದೆ. ಉತ್ಸವದಲ್ಲಿ ಭಾಗ ವಹಿಸುವ ವಿದ್ಯಾರ್ಥಿಗಳು ದೆಹಲಿಯನ್ನು ನೋಡಲು ಹಾಗೂ ಗಣ್ಯರನ್ನು ಭೇಟಿ ಮಾಡಲು ಅನುಕೂಲವಾಗುವಂತೆ ಉತ್ಸವವನ್ನು ೧೦ ದಿನಗಳ ವರೆಗೆ ವ್ಯವಸ್ಥೆಗೊಳಿಸಲಾಗಿದೆ. ಇಲ್ಲಿಯ ವರೆಗೆ ಉತ್ಸವವು ೩ ದಿನಗಳ ವರೆಗೆ ಮಾತ್ರ ನಡೆಯುತಿತ್ತು.

ಸ್ಪರ್ಧೆಗಳ ಕಾರ್ಯಕ್ರಮಗಳ ಜೊತೆಗೆ ವಿದ್ಯಾರ್ಥಿಗಳಿಗೆ ವಿಚಾರಪೂರ್ಣವಾದ ವಿಷಯಗಳ ಬಗ್ಗೆ ವಿಧ್ಯುಕ್ತವಲ್ಲದ ಗೋಷ್ಠಿಯೊಂದನ್ನು ಸಹ ನಡೆಸಲು ಯೋಗ್ಯ ಏರ್ಪಾಡುಗಳನ್ನು ಮಾಡಲಾಗುತ್ತಿದೆ. ಈ ಉದ್ದೇಶಕ್ಕಾಗಿ ಇಬ್ಬರು ಪ್ರತಿನಿಧಿಗಳನ್ನು—ಒಬ್ಬ ವಿದ್ಯಾರ್ಥಿ ಮತ್ತೊಬ್ಬಳು ವಿದ್ಯಾರ್ಥಿನಿ—ಕಳುಹಿಸಬೇಕೆಂದು ಪ್ರತಿ ವಿಶ್ವವಿದ್ಯಾನಿಲಯಕ್ಕೂ ಆಹ್ವಾನ ಸೂಚಿಸಲಾಗಿದೆ

ಕಲಾ ಹಾಗೂ ಕುಶಲಕಲಾ ವಸ್ತು ಪ್ರದರ್ಶನವನ್ನು ಓಲ್ಡ್ ಮಿಲ್ ರಸ್ತೆಯಲ್ಲಿರುವ ಅಖಿಲ ಭಾರತ ಕುಶಲ ಕಲಾ ವಸ್ತುಗಳ ಸಂಘದ ಆವರಣದಲ್ಲಿ ನಡೆಸಲಾಗುವುದು. ಇತರ ಸ್ಪರ್ಧೆಗಳು ತಾಲ್ಕತೋರ ಉದ್ಯಾನವನದಲ್ಲಿರುವ ಬಯಲು ರಂಗಭೂಮಿಯಲ್ಲಿ ನಡೆಯುವುವು.

ಕೊನೆಯ ದಿನದ ರಾತ್ರಿ ಕಾರ್ಯಕ್ರಮವನ್ನು ಕೊರತಾಗಿ ಉಳಿದ ಪ್ರದರ್ಶನಗಳಿಗೆ ಮಹಾಜನರನ್ನು ಪ್ರವೇಶಿಸಲು ಬಿಡುವುದಿಲ್ಲ. ಇವರಿಗಾಗಿ ಕೊನೆಯ ರಾತ್ರಿ ವಿಶೇಷ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತದೆ. ಆ ಪ್ರದರ್ಶನದಲ್ಲಿ ಆರಿಸಿದ ಕೆಲವು ಕಾರ್ಯಕ್ರಮಗಳನ್ನು ನೀಡಲಾಗುವುದು. ಈ ಕಾರ್ಯಕ್ರಮಕ್ಕೆ ಟಿಕೇಟುಗಳ ಮೂಲಕವೇ ಪ್ರವೇಶಾವಕಾಶವನ್ನು ನೀಡಲಾಗುವುದು.

ಹೀಗೆ ಹಿಂದಿನ ಯುವಜನೋತ್ಸವಗಳೆಲ್ಲವನ್ನೂ ಮೀರಿ ಈ ವರ್ಷದ ಅಂತರ್ವಿಶ್ವವಿದ್ಯಾನಿಲಯ ಯುವಜನೋತ್ಸವವು ಯಶಸ್ವಿಯಾಗುವ ನಿರೀಕ್ಷೆಯಿದೆ.

ಸಂಕ್ಷಿಪ್ತ ಸುದ್ದಿಗಳು

ಪಾಕಿಸ್ತಾನದಲ್ಲಿ ಅರಾಜಕತೆ

ಪಾಕಿಸ್ತಾನವು ಭಾರತದಿಂದ ಸಿಡಿದು ಹೋದ ಹತ್ತು ವರ್ಷಗಳಲ್ಲಿ ಐದನೆಯ ಪ್ರಧಾನಿಯಾದ ಶ್ರೀ ಶುಹ್ರವರ್ದಿಯವರು ಇದೇ ೧೧ನೆ ದಿನಾಂಕದಂದು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಅಧ್ಯಕ್ಷ ಇಸ್ಕಂದರ ಮಿರ್ಜರಿಗೆ ಒಪ್ಪಿಸಿದ್ದಾರೆ; ಈ ರಾಜೀನಾಮೆಯನ್ನು ಅಧ್ಯಕ್ಷರು ಸ್ವೀಕರಿಸಿದ್ದು ನೂತನ ಮಂತ್ರಿಮಂಡಲವು ಅಧಿಕಾರವನ್ನು ಸ್ವೀಕರಿಸುವವರೆಗೆ ಅಧಿಕಾರದಲ್ಲುಳಿಯುವಂತೆ ಕೇಳಿಕೊಂಡಿದ್ದಾರೆ ಜಗತ್ತಿನ ರಾಷ್ಟ್ರಗಳೆಲ್ಲವುಗಳಲ್ಲಿಯೂ ಈ ಬಗ್ಗೆ ವಿಶೇಷ ಆಶ್ಚರ್ಯವಾಗಲೀ ಸಂತೋಷವಾಗಲೀ ಆಗಲಿಲ್ಲ. ಪಶ್ಚಿಮ ಪಾಕಿಸ್ತಾನವನ್ನು ಭಾಷಾನುಗುಣವಾಗಿ ವಿಭಜಿಸುವ ಕುರಿತಾಗಿ, ರಿಪಬ್ಲಿಕನ್ ಪಕ್ಷ ಮತ್ತು ಸಮ್ಮಿಶ್ರ ಸರಕಾರದ ಪ್ರಧಾನಿ ಸುಹ್ರವರ್ದಿಯವರ ನಡುವೆ ತೀವ್ರವಾದ ಭಿನ್ನಾಭಿಪ್ರಾಯವೆದ್ದು ಗಂಭೀರ ಸ್ವರೂಪವುಂಟಾದುದೇ ಈ ಘಟನೆಗೆ ಮೂಲಕಾರಣವೆಂದು ತಿಳಿದುಬಂದಿದೆ. ಇನ್ನು ಮುಂದಿನ ಪ್ರಧಾನಿ ಯಾರು ಎಂಬ ಬಗ್ಗೆ ಸಹ ಬೇರೆ ಬೇರೆ ಪಕ್ಷಗಳಲ್ಲಿ ಭಿನ್ನಾಭಿಪ್ರಾಯವಿದೆ. ಇದುವರೆಗೆ ಬಂದ ಸುದ್ದಿಯಂತೆ ಹಿಂದೊಮ್ಮೆ ಪ್ರಧಾನಿಗಳಾಗಿದ್ದ ಶ್ರೀ ಚೌಧರಿ ಮಹಮ್ಮದಾಲಿಯವರು ಪುನಃ ಪ್ರಧಾನಿಯಾಗುವ ಸಂಭವವು ಹೆಚ್ಚು. ಆದರೆ, ಅವರೀಗ ಮುಸ್ಲಿಂ ಲೀಗಿನವರಾಗಿದ್ದದರಿಂದ, ರಿಪಬ್ಲಿಕ್ ಪಕ್ಷಕ್ಕೆ ಸೇರಬೇಕೆಂಬ ಶರತ್ತಿದೆ ಎಂದು ವರದಿಯಾಗಿದೆ.

ಸಿಂಹಳದ ನೌಕಾ ಕಾಣ್ಯಗಳ ಹಸ್ತಾಂತರ

ಸಿಂಹಳದಲ್ಲಿ ಕಳೆದ ಹಲವು ವರ್ಷಗಳಿಂದ ತಮ್ಮ ಅಂಕೆಯಲ್ಲಿಟ್ಟುಕೊಂಡಿದ್ದ ನೌಕಾ ತಾಣಗಳನ್ನು ಮಂಗಳವಾರ ದಿನ (ತಾ. ೧೫)ರಂದು ಸಿಂಹಳದ ಪ್ರಧಾನಿ ಶ್ರೀ ಬಂಡಾರ ನಾಯಕೆಯವರಿಗೆ ಬ್ರಿಟಿಷ್ಸದ ಪರವಾಗಿ ಹೈಕಮಿಶನರರಾದ ಶ್ರೀ ಸಿ. ಎಲ್. ಕ್ರಾಸ್ಟ ವೈಟರು ಒಪ್ಪಿಸಿಕೊಟ್ಟರು. ಇಷ್ಟು ವರ್ಷಗಳಿಂದ ತ್ರಿಂಕೊಮಾಲಿ ಬಂದರದಲ್ಲಿ ಹಾರಾಡುತ್ತಿದ್ದ ಬ್ರಿಟಿಷ ನೌಕಾ ಧ್ವಜವು ಕೆಳಗಿಳಿದು ಸಿಂಹಳದ ರಾಷ್ಟ್ರ ಧ್ವಜವು ನಲಿದಾಡ ತೊಡಗಿತು

ಸುಸಂಸ್ಕೃತರಾಗೆ ಬೇಕಾವರೆ...

ವಿಶ್ವವು ತಾಂತ್ರಿಕವಾಗಿ ವೈಜ್ಞಾನಿಕವಾಗಿ ಪ್ರಚಂಡ ಪ್ರಗತಿಯನ್ನು ಸಾಧಿಸಿದರೂ ಜನರು ಸುಸಂಸ್ಕೃತರಾಗಿಲ್ಲ ಆದುದರಿಂದ ಈ ತಾಂತ್ರಿಕ ವಿಜ್ಞಾನವನ್ನು ಮಾನವನ ವಿನಾಶಕ್ಕಾಗಿ ಉಪಯೋಗಿಸದೆ ಕಲ್ಯಾಣಕ್ಕಾಗಿ ಬಳಸಬೇಕು. ಹಾಗಾದಾಗಲೇ ಜಗತ್ತು ಸುಸಂಸ್ಕೃತವಾಗುವುದೆಂದು ಶ್ರೀ ನೆಹರೂ ಹಾಂಗ್‌ಕಾಂಗದಲ್ಲಿ ಒಂದು ಸತ್ಕಾರಸಮಾರಂಭದಲ್ಲಿ ಮಾತಾಡುತ್ತಾ ನುಡಿದರು.

ಶತಸಿಗೆ ಶಾರ್ಯವೇ ಔಷಧಿ!

ರತಿಯೊಡವರು ಒಂದು ಉಪಗ್ರಹವನ್ನು ಆಕಾಶದಲ್ಲಿ ತೇಲಬಿಟ್ಟಿರುವರಷ್ಟೇ! ರಶಿಯನ್ನರು ಅಪೇಕ್ಷಿಸಿದಲ್ಲಿ, ಈ ಉಪಗ್ರ

ಹದಲ್ಲಿ ಕ್ರಿಮಿಗಳನ್ನಿಟ್ಟು ಅವು ಅಮೆರಿಕೆಯ ಯಾವುದೇ ರಾಜ್ಯದಲ್ಲಿ ಬೀಳುವಂತೆ ಮಾಡುವುದು ಸಹ ಸಾಧ್ಯವಿದೆ. ಆದುದರಿಂದ, ಅಮೆರಿಕೆಯು ಸಹ ಅಷ್ಟೇ ಹೆದರಿಕೆಯುನ್ನುಂಟುಮಾಡುವ ತನ್ನದೇ ಆದ ಉಗ್ರ ಬೊಂದನ್ನು ನಿರ್ಮಿಸಿ, ಆದಷ್ಟು ಶೀಘ್ರವಾಗಿ ಹಾರಿಸಬೇಕು. ಇಂತಹ ಅಪಾಯಕಾರೀ ಸಂಭಾವನೆಗೆ ಅಂತದೇ ಸಂಭಾವನೆಯು ಪರಿಹಾರವೆಂದು ಮೆಕ್ಸಿಕೋ ವಿಶ್ವವಿದ್ಯಾಲಯದ ಖಗೋಳ ವಿಜ್ಞಾನ ಸಂಸ್ಥೆಯ ಡೈರೆಕ್ಟರರಾದ ಡಾ. ಲಿಂಕೊಲಿನ್ ಲಾಪ್‌ಜರು ತಮ್ಮ ಭೀತಿಯನ್ನೂ ಅದರ ಪರಿಹಾರೋಪಾಯವನ್ನೂ ವ್ಯಕ್ತಪಡಿಸಿರುವರು.

ಭದ್ರತಾಮಂಡಳಕ್ಕೆ ಎಚ್ಚರಿಕೆ!

ಭಾರತದಲ್ಲಿ ಈ ದೊಡಲೇ ಸೇರ್ಪಡೆಗೊಂಡಿರುವ ಕಾಶ್ಮೀರದಲ್ಲಿ ವಿದೇಶಿ ಸೈನ್ಯವನ್ನು ಇಳಿಸುವ ಉದ್ದೇಶದಿಂದ ಭದ್ರತಾ ಸಮಿತಿಯ ಆ ತರದ ವರ್ತನೆಯನ್ನು ಭಾರತವು ಎಂದಿಗೂ ಸಹಿಸದು; ಮತ್ತು ಒಂದು ವೇಳೆ ಸಾಮ್ರಾಜ್ಯಶಾಹಿ ರಾಷ್ಟ್ರಗಳೆ ಬಲವಂತದಿಂದ ಈ ಕೆಲಸವನ್ನು ಮಾಡಿದ ಪಕ್ಷದಲ್ಲಿ, ಈಜಿಪ್ತುವು ಸುಯೇಜ ಕಾಲುವೆಯನ್ನು ರಕ್ಷಿಸಿಕೊಳ್ಳಲು ಸೊಂಟಕಟ್ಟಿದಂತೆ ಭಾರತೀಯರು ಸಹ ತಯಾರಾಗುವರೆಂದು ಭಾರತೀಯ ಸರ್ವಪಕ್ಷೀಯ ರಾಜಕೀಯೇತರ ಸಂಘವಾದ ಕಾಶ್ಮೀರ ಸಮಿತಿಯು ಒಂದು ಸಭೆಯಲ್ಲಿ ಭದ್ರತಾ ಮಂಡಳಕ್ಕೆ ಎಚ್ಚರಿಕೆಯನ್ನಿತ್ತಿದೆ.

ಮೈಸೂರಿಗೆ ಅಕ್ಕಿ ಹೂರೈಕೆ

ಈ ವರುಷದ ಅಕ್ಟೋಬರ ತಿಂಗಳಿಂದ ದಶಂಬರವರೆಗಿನ ಮೂರುತಿಂಗಳುಗಳವರೆಗೆ ಪ್ರತಿ ತಿಂಗಳೂ ನಾಲ್ಕು ಸಾವಿರ ಟನ್ನುಗಳಷ್ಟು ಅಕ್ಕಿಯನ್ನು ಕೇಂದ್ರಸರಕಾರವು ಮೈಸೂರು ರಾಜ್ಯಕ್ಕೆ ಹೂರೈಸುವುದೆಂದು ಕೇಂದ್ರ ಆಹಾರಶಾಖೆಯ ಉಪಮಂತ್ರಿ ಶ್ರೀ ಎ. ಎಂ. ಥಾಮಸರು ಬೆಂಗಳೂರಿನಲ್ಲಿ ಪ್ರಕಟಪಡಿಸಿದ್ದಾರೆ.

ಟಿ. ಟಿ. ಕೆ. ಲಂಡನಿನಲ್ಲಿ

ಭಾರತದ ಅರ್ಥಮಂತ್ರಿ ಶ್ರೀ ಕೃಷ್ಣಮಾಚಾರಿಯವರು ತಮ್ಮ ಅಮೆರಿಕದ ಪ್ರವಾಸವನ್ನು ಮುಗಿಸಿ ಬ್ರಿಟನಿನ ಆಮಂತ್ರಣದಂತೆ ಲಂಡನಿಗೆ ತೆರಳಿದ್ದಾರೆ ಅಮೆರಿಕೆಯಲ್ಲಿ ಜಾಗತಿಕ ಬೇಂಕಿನ ಅಭಿವೇಶನ, ಅಂತಾರಾಷ್ಟ್ರೀಯ ಹಣಕಾಸಿನ ನಿಧಿ ಸಮಿತಿಯ ಅಧಿವೇಶನ ಮತ್ತು ಕೆನೆಡವಲ್ಲಿ ಏರ್ಪಟ್ಟ ಸಹರಾಷ್ಟ್ರ ಅರ್ಥಮಂತ್ರಿ ಪರಿಷತ್ತುಗಳಲ್ಲಿ ಭಾಗವಹಿಸಿದ್ದರು. ಹಾಗೆಯೇ ಭಾರತಕ್ಕೆ ಬೇಕಾಗುವ ವಿದೇಶ ವಿನಿಮಯಗಳನ್ನು ಸಾಲವಾಗಿ ಪಡೆಯಲು ತಕ್ಕ ಮಾತುಕತೆಗಳನ್ನೂ ನಡೆಸಿದ್ದರು. ಈ ಮಾತುಕತೆಗಳು ಸಾಮಾನ್ಯವಾಗಿ ಫಲಿಸುವ ಆಶೆಯಿದೆ. ಲಂಡನಿನಿಂದ ಅವರು ಪಶ್ಚಿಮ ಜರ್ಮನಿಗೆ ತೆರಳಿದ್ದಾರೆ.

ಭೂದಾನಕ್ಕೆ ಸರಕಾರದ ಕೊಡುಗೆ

ಮೈಸೂರು ಸರಕಾರವು ರಾಜ್ಯದಲ್ಲಿ ತನ್ನ ಅಂಕಿತನಲ್ಲಿರುವ ಎಲ್ಲ ಭೂಮಿಯನ್ನೂ ಇತ್ತೀಚೆಗೆ ಭೂದಾನ — ವಿದ್ಯಾದಾನಗಳಲ್ಲಿ ಸಂಗ್ರಹಿಸಿದ ಭೂಮಿಯನ್ನೂ ವಿನೋಬಾರವರಿಗೆ ಅರ್ಪಿಸಲಿರುವುದೆಂದು ತಿಳಿದು ಬಂದಿದೆ. ಮೈಸೂರು ಮಂತ್ರಿಮಂಡಲವು ಈ ಬಗ್ಗೆ ಗಂಭೀರವಾಗಿ ಆಲೋಚನೆ ನಡೆಸುವುದೆಂದೂ ತಿಳಿಯುತ್ತದೆ. ಮಾಜಿ ಮುಖ್ಯ ಮಂತ್ರಿ ಹನುಮಂತಯ್ಯನವರು ತಮ್ಮ ಅಧಿಕಾರಾವಧಿಯಲ್ಲಿ ಭೂದಾನ—ವಿದ್ಯಾದಾನ ಚಳುವಳಿ ನಡೆಸಿ ಸುಮಾರು ೨೫ ಸಾವಿರ ಎಕ್ರೆ ಭೂಮಿಯನ್ನು ಸಂಗ್ರಹಿಸಿದ್ದರು.

ದ. ಕನ್ನಡದ ಸಂಸ್ಕೃತ ಕಾಲೇಜುಗಳು

ದಕ್ಷಿಣ ಕನ್ನಡದ ಪುತ್ತೂರ ಕಾಲೇಜು (ಲಾ, ಮೆಡಿಕಲ್ ಮತ್ತು ಇಂಜನಿಯರಿಂಗ್)ಗಳನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೂ ಸಂಸ್ಕೃತ ಕಾಲೇಜುಗಳನ್ನುಳಿದ ಕಲಾ ಶಾಲೆಗಳನ್ನು ಮೈಸೂರು ವಿಶ್ವವಿದ್ಯಾಲಯಕ್ಕೂ ಈಗಾಗಲೇ ಸೇರ್ಪಡಿಸಲಾಗಿದೆಯಷ್ಟೆ? ಆ ಸಮಯದಲ್ಲಿ ಸಂಸ್ಕೃತ ಕಾಲೇಜುಗಳು ತ್ರಿಶಂಕು ಸ್ವರ್ಗದಲ್ಲಿದ್ದುವು. ಇದೀಗ, ಮೈಸೂರು ಸರಕಾರವು ಇವುಗಳನ್ನು ಸಹ ಮೈಸೂರ ವಿಶ್ವವಿದ್ಯಾಲಯಕ್ಕೆ ಜೋಡಿಸುವ ವಿಚಾರಮಾಡಿದೆ. ಉಡುಪಿ ಮತ್ತು ಕಾರ್ಕಳಗಳಲ್ಲಿನ ಕಾಲೇಜುಗಳ ಪ್ರಿನ್ಸಿಪಾಲರುಗಳಿಗೆ ಸರಕಾರವು ಈ ಸಂಬಂಧವಾಗಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರರನ್ನು ಕಾಣಲು ಸೂಚಿಸಿದ್ದು ಪ್ರಿನ್ಸಿಪಾಲರುಗಳು ಬೆಂಗಳೂರಿಗೆ ಪ್ರಯಾಣಿಸಿರುವರು. ಅಲ್ಲಿಗೆ ದ. ಕನ್ನಡ ಕಾಲೇಜುಗಳ ಸೇರ್ಪಡೆಯ ಕೆಲಸವು ಒಸ್ತಿಗೆ ಮುಗಿದಂತಾಗುವುದು.

ಉಡುಪಿ

ಭೂಮಾಲಿಕರ ಮತ್ತು ಕೃಷಿಕರ ಸಂಘದ ಮಹಾಸಭೆಯು—ಇದೇ ತಾ. ೨೦ನೆ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಸ್ಥಳೀಯ ಮಿರ್ಜಾ ಅಸ್ಪತ್ರೆಯ ಬಳಿಯಲ್ಲಿರುವ ಬೀಟರ ಹೊಸಲೈನಿನಲ್ಲಿ ಜರಗುವುದು. ಭೂಸುಧಾರಣೆಯ ಕುರಿತು ಮೈಸೂರು ಸರಕಾರದವರು ಶ್ರೀ ಬಿ. ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ ನೇಮಿಸಿದ ಸಮಿತಿಯ ಶಿಫಾರಸುಗಳನ್ನು ವಿಮರ್ಶಿಸಿ, ಅವುಗಳ ಕುರಿತು ಸಂಘದ ಅಭಿಪ್ರಾಯವನ್ನು ಸಂಗ್ರಹಿಸಿ ಮುಂದಿನ ಕಾರ್ಯಕ್ರಮವನ್ನು ನಿರ್ಣಯಿಸುವ ಕುರಿತು ಈ ಮಹಾ ಸಭೆಯಲ್ಲಿ ವಿಚಾರವಿನಿಮಯ ನಡೆಸಲಾಗುವುದು ಭೂಮಾಲಿಕರೆಲ್ಲರೂ ಬಂದು ಸಭೆಕಾರ್ಯಕ್ಕಾಗಿ ಸಂಘದ ಕಾರ್ಯಕಾರೀ ಸಮಿತಿಯ ವಿನಂತಿಯಿದೆ.

ಎಂಜಿ. ಜಿ. ಎಮ್. ಕಾಲೇಜು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾಗಿರಲು ವಿದ್ಯಾರ್ಥಿಗಳ ಮನವಿ—ಸ್ಥಳೀಯ ಕುಮಟಾ ಮಾಂಗಾಂಧಿ ಮೆಮೋರಿಯಲ್ ಕಾಲೇಜಿನ ವಿದ್ಯಾರ್ಥಿಗಳ ಸಭೆಯು ತಾ. ೨೦ರಂದು ಜರಗಿ, ಈ ಕಾಲೇಜನ್ನು ಮೈಸೂರು ಯುನಿವರ್ಸಿಟಿಗೆ ಸೇರಿಸಲು ಮೈಸೂರು ಎಸೆಂಬ್ಲಿಯಲ್ಲಾದ ತೀರ್ಮಾನವನ್ನು ವಿರೋಧಿಸಲಾಯಿತು ಅಲ್ಲದೆ ಮೈಸೂರು ರಾಜ್ಯಪಾಲರಿಗೂ, ಮುಖ್ಯಮಂತ್ರಿಗಳಿಗೂ ವಿದ್ಯಾಮಂತ್ರಿಗಳಿಗೂ ವಿದ್ಯಾರ್ಥಿಗಳಕಡೆಯಿಂದ ಮನವಿಯೊಂದನ್ನು ಕಳುಹಿಸಲು ತೀರ್ಮಾನವಾಯಿತು. ಜನತೆ ಮತ್ತು ಪತ್ರಿಕೆಗಳ ಅಭಿಪ್ರಾಯವನ್ನು ಅಲ್ಲಗಳೆದು ಎಂಜಿ. ಜಿ. ಎಮ್. ಕಾಲೇಜನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿಸಲು ನಿರ್ಣಯವಾದುದು ವಿದ್ಯಾರ್ಥಿಗಳಿಗೆ ಅತೀವ ಬೇಸರವನ್ನುಂಟುಮಾಡಿದೆ. ಸ್ವಾತಂತ್ರ್ಯಭೂತ್ವದ ತತ್ವಗಳನ್ನು ಎತ್ತಿಹಿಡಿದು ಮೈಸೂರು ಮುಖ್ಯಮಂತ್ರಿಗಳು ವಿದ್ಯಾರ್ಥಿಗಳಿಗೆ ನ್ಯಾಯ ದಾನಮಾಡಬೇಕಾಗಿದೆ. ಕರ್ನಾಟಕ ಮೆಡಿಕಲ್ ಕಾಲೇಜು, ಎಂಜಿನಿಯರಿಂಗ್ ಕಾಲೇಜು, ಲಾ ಕಾಲೇಜುಗಳು ಕರ್ನಾಟಕ ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿರುವಾಗ ಎಂಜಿ. ಜಿ ಎಮ್. ಕಾಲೇಜನ್ನು ಮಾತ್ರ ಮೈಸೂರಿಗೆ ಸೇರಿಸುವುದು ಹಿತಕರವಲ್ಲ. ಅಲ್ಲದೆ ಮೈಸೂರು ವಿಶ್ವವಿದ್ಯಾಲಯದ ಇಂಟರ್‌ಮೀಡಿಯಟ್ ವರ್ಗವನ್ನು ಇತರ ಕೆಲವು ವಿಶ್ವವಿದ್ಯಾಲಯಗಳು ಮಾನ್ಯಮಾಡುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೆಲವೇ ಎಮ್. ಎಲ್. ಎ. ಗಳ ಅಭಿಪ್ರಾಯವನ್ನು ಮನ್ನಿಸುವುದೂ, ಜನಾಭಿಪ್ರಾಯವನ್ನು ಧಿಕ್ಕರಿಸುವುದೂ ಪ್ರಜಾಪ್ರಭುತ್ವದ ಲಕ್ಷಣಗಳಿಗೆ ತೀರ ವಿರುದ್ಧವೆಂದು ಮಂಗಳಾಗಿ ಮನವಿಯಲ್ಲಿ ಹೇಳಲಾಗಿದೆ.

ಕೋರಂ ಇಲ್ಲ—ತಾ. 14ರಂದು ಸಂಜೆ ಕರಿಯಲಾಗಿದ್ದ ಉಡುಪಿ ಮುನಿಸಿಪಲ್ ಸಭೆಗೆ ಕೋರಂ ಇಲ್ಲದೆ ಹೋಗುವದರಿಂದ ಸಭೆ ಜರಗಲಿಲ್ಲ ಇಪ್ಪತ್ತು ಮಂದಿ ಮೆಂಬರರಿರುವ ಈ ಕೌನ್ಸಿಲಿನಲ್ಲಿ ಈ ದಿನದ ಸಭೆಗೆ ಬರೇ ಐದುಮಂದಿ ಮಾತ್ರ ಸಭೆಗೆ ಬಂದಿದ್ದರು ಇತ್ತೀಚೆಗೆ ಕೋರಮಿನ ಕೊರತೆ ಎತ್ತಿ ಕಾಣುತ್ತಿದೆ.

ಸಂಸ್ಕೃತಾಭ್ಯಾಸದ ನೂತನ ತರಗತಿಗಳು— ಅಂಬಲಪಾಡಿ ಗೀತಾ ಭವನದವತಿಯಿಂದ ನಡೆಯುತ್ತಿರುವ ಅಖಿಲ ಭಾರತ ಸಂಸ್ಕೃತ ಭಾಷಾ ಪ್ರಚಾರ ಸಮಿತಿಯ ಪ್ರಾರಂಭಿಕ, ಪ್ರವೇಶಿಕಾ, ಪರಿಚಯ ಮತ್ತು ವಿಶಾರದ ಪರೀಕ್ಷೆಗಳ ಸಂಸ್ಕೃತ ತರಗತಿಗಳು (ಅಪ್ಪಯ್ಯಾಸ್ವಾಮಿಯವರಿಂದ ಪ್ರೊದಲಾಗಿ) ಸಂವತ್ಸರದ ದಿನಾಂಕದಿಂದ ಉಡುಪಿಯ ಆರ್ಯ ಸಮಾಜದ ಕಟ್ಟಡದಲ್ಲಿ ಪ್ರಾರಂಭವಾಗಲಿವೆಯೆಂದು ಈ ಸಂಬಂಧದಲ್ಲಿ ಪ್ರವೇಶ ಬಯಸುವ ವಿದ್ಯಾರ್ಥಿಗಳು ಗೀತಾಭವನ, ಅಂಬಲಪಾಡಿ ಉಡುಪಿ ಇವರಲ್ಲಿಯಾಗಲೀ ಉಡುಪಿ ಕಲ್ಯಾಣಿದವರಿಗೆ ಆರ್ಯ ಸಮಾಜದಲ್ಲಾಗಲೀ ಸಂಜೆ ೬ ರಿಂದ ೭ ರ ವರೆಗೆ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಬೇಕೆಂದು ಸಂಸ್ಕೃತ ಅಧ್ಯಾಪಕರಿಂದ ಉತ್ತಮ ರೀತಿಯ ಅಭ್ಯಾಸವು ಮಾಡಿಸಲ್ಪಡುವುದು. ಸಂಸ್ಕೃತ ಎಸ್ ಟ್ರಿನ್ಸ್, ಸಂಸ್ಕೃತ ತೆಗೆದುಕೊಂಡು ಎಸ್. ಎಸ್ ಎಲ್ ಸಿ., ಇಂಟರ್ ಮೀಡಿಯೆಟ್, ಅದವಾ ಬಿ. ಎ. ಮೊದಲಾದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಕೆಲವೊಂದು ರಿಯಾಯಿತಿಗಳು ಸಹ ಇರುತ್ತವೆ ಆದುದರಿಂದ ಸಂಸ್ಕೃತಾಭ್ಯಾಸಿಗಳು ಕೂಡಲೇ ತರಗತಿಗಳನ್ನು ಸೇರುವುದುತ್ತಮ. ಇವರು ಗಣಪತಿ ಪೆಬ್ರವರಿ ತಿಂಗಳ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ಸಿದ್ಧತೆಗಳನ್ನು ಮಾಡಲಾಗುವುದು ಎಂದು ಗೀತಾ ಭವನದ ಕಾರ್ಯದರ್ಶಿಯವರು ತಿಳಿಸುತ್ತಾರೆ

ಯುವಕ ಕಾಂಗ್ರೆಸ್ಸಿನ ಸಂಘಟನೆ—ಕರ್ನಾಟಕ ಪ್ರಾದೇಶಿಕ ಯುವಕ ಕಾಂಗ್ರೆಸ್ಸಿನ ಸಂಘಟಕರಾದ ಶ್ರೀ ರಾಮಚಂದ್ರ ಪಡಿಯವರು ತಾ. ೨೦ರಂದು ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ಯುವಕ ಕಾಂಗ್ರೆಸ್ ಸಂಘಟನೆಯ ಕುರಿತು ಮಾತನಾಡಿದರು. ಪ್ರಾರಂಭದಲ್ಲಿ ಉಡುಪಿ ಯುವಕ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ಎ. ಜಿ ಆಚ್ಚಿಯವರು ಸ್ವಾಗತ ಭಾಷಣ ಮಾಡಿ ಉಡುಪಿ ಯುವಕ ಕಾಂಗ್ರೆಸ್ಸಿನ ಚಟುವಟಿಕೆಗಳನ್ನು ವಿವರಿಸಿದರು. ಶ್ರೀ ಪಡಿಯವರು ಭಾರತದ ಭವಿಷ್ಯ ನಿರ್ಮಾಣಕಾರರಾದ ಯುವಕರಲ್ಲಿ ದೇಶಪ್ರೇಮ, ಕರ್ಮನಿಷ್ಠೆ, ಧೈರ್ಯ, ಸ್ವಾಭಿಮಾನ, ಧೈರ್ಯ, ಶಿಸ್ತು ಮೊದಲಾದ ಗುಣಗಳು ಬೆಳೆದಿರಬೇಕಾದ ಅವಶ್ಯಕತೆಯನ್ನು ವಿವರಿಸಿದರು. ಸಭೆಗೆ ನಗರ ಸಭಾಪತಿಗಳಾದ ಶ್ರೀ ಕೆ. ಕೆ ಪೈಗಳವರ ಮೊದಲಾದವರು ಸಮಾಗಮಿಸಿದ್ದರು.

ಹರಿಜನ ದಿನಾಚರಣೆ ಮತ್ತು ಸ್ವೈ ಸ್ವೈಗಳ ಸಂರಕ್ಷಣಾ ದಿನಾಚರಣೆ—ಯು ಇದೇ ತಾ. ೧೦ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೆಟರಿನಲ್ಲಿ ಜರುಗಿತು. ತಹಶೀಲ್ದಾರರು ಸೂಚಿಸಿದ ಮೇರೆಗೆ ನಗರ ಸಭಾಪತಿಗಳಾದ ಶ್ರೀ ಕೆ. ಕೆ. ಪೈಗಳವರು ಸಭಾಧ್ಯಕ್ಷತೆಯನ್ನು ಪಡೆದಿದ್ದರು. ಶ್ರೀ ಎ. ಜಿ ಆಚ್ಚಿಯವರು ಸ್ವಾಗತ ಭಾಷಣ ಮಾಡಿದರು. ಟ್ರೈಸಿಂಗ್ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಎಸ್. ಆಚಾರ್ಯರು ಸ್ವೈ ಸ್ವೈಗಳ ಸಂರಕ್ಷಣೆಯ ಮತ್ತು ಹರಿಜನೋದ್ಧಾರದ ಕುರಿತು ಮಾತನಾಡಿದರು. ಅಧ್ಯಕ್ಷರು ಗಾಂಧೀಜೀ ಬೋಧಿಸಿದ ವಿಧಾಯಕ ಕಾರ್ಯಕ್ರಮದಲ್ಲಿ ಪ್ರಮುಖವೆನಿಸಿದ ಹರಿಜನ ಸುಧಾರಣೆ ಕಾರ್ಯದ ಮಹತ್ವವನ್ನು ವಿವರಿಸಿ ಭಾಷಣಮಾಡಿದರು. ಡಾ! ಪಿ ಎಲ್. ಪಂಡಿತರು ಧನ್ಯವಾದವಿತ್ತರು. ಕೊನೆಯಲ್ಲಿ ಸಿನೆಮಾ ಪ್ರದರ್ಶನವಿತ್ತು.

ಡಾ. ಸುಂದರರಾಮ ಪೈಗಳ ಷಷ್ಟ್ಯಬ್ಧಿ ಪೂರ್ತಿ ಸಮಾರಂಭವು—ಗೌಡಸಾರಸ್ವತ ಬ್ರಾಹ್ಮಣ ಸಮಾಜದವತಿಯಿಂದ ತಾ. 14ರಂದು ಶ್ರೀ ಶರದೇಂದ್ರ ಕಲಾಮಂದಿರದಲ್ಲಿ ಜರಗಿತು. ಡಾ. ಪಿ. ಆರ್. ನಾಯಕ್ ಮತ್ತು ಡಾ. ಟಿ ಎಸ್ ಎ ಪೈಗಳು ಡಾ. ಸುಂದರರಾಮ ಪೈಗಳು ಮಾಡಿದ ಸಮಾಜ ಹಾಗೂ ಜನತಾ ಸೇವೆಗಳನ್ನು ಪ್ರಶಂಸಿಸಿ ಶುಭಕೋರಿ ಭಾಷಣವಿತ್ತರು ಅತಿಥಿಗಳಿಗೆ ಮಾನಪತ್ರವನ್ನು ಅರ್ಪಿಸಲಾಯಿತು. ಅತಿಥಿಗಳು ತಕ್ಕ ಉತ್ತರವಿತ್ತರು. ಶ್ರೀಮತಿ ಅನಸೂಯಾ ಬಿ. ಶೆಟ್ಟಿಯವರ ಸಂಗೀತ, ನಾಟ್ಯ ಕೂಟದವರಿಂದ "ಜೀವನ ಸಂಗ್ರಾಮ" ನಾಟಕ ಪ್ರದರ್ಶನಾದಿ ಮನರಂಜನಾ ಕಾರ್ಯಕ್ರಮಗಳೂ ಇದ್ದುವು

ವಿದ್ಯಾರ್ಥಿ ಸಮಾಜ ಸೇವಾ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವು—ಉಡುಪಿ ಭಾರತ ಸೇವಕ ಸಮಾಜದ ವತಿಯಿಂದ ಅಲೆವೂರಲ್ಲಿ ಸುಬ್ರಹ್ಮಣ್ಯ ಸಾ. ಎ. ಶಾಲೆಯಲ್ಲಿ ತಾ 16ನೇ ಬೆಳಿಗ್ಗೆ ನಗರ ಸಭಾಪತಿಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಎ ಜೆ. ಆಚ್ಚಿಯವರು ಸ್ವಾಗತಭಾಷಣ ಮಾಡಿದ ಮೇರೆ ಜಿಲ್ಲಾ ಕಲೆಕ್ಟರ್ ಶ್ರೀ ವೈ ಸಿ. ಹೊಂಬಾಳಯ್ಯನವರು ಶಿಬಿರವನ್ನು ಉದ್ಘಾಟಿಸಿದರು ಅಧ್ಯಕ್ಷರ ಭಾಷಣ, ಧನ್ಯವಾದಗಳಾದುವು ಶಿಬಿರವು ತಾ 30—10—57ರ ತನಕ ನಡೆಯಲಿರುವುದು.

ಕೆನರಾ ಬ್ಯಾಂಕಿನ— ಹೊಸ ಶಾಖೆಯೊಂದು ತಾ 8ರಂದು ಹೊಸನ ಕಟ್ಟಿಯ ಡೈರೆಕ್ಟ್ ಬಿಲ್ಡಿಂಗ್ಸಿನಲ್ಲಿ ತೆರೆಯಲ್ಪಟ್ಟಿದೆ. ಮಂಗಳೂರು ನಗರದಲ್ಲಿ ಇದರದೆ ಶಾಖೆಯಿದೆ. ಈ ಶಾಖೆ ತೆರೆಯೋತ್ಸವದ ಸಂಬಂಧ ಸಂಜೆ ಉಪಹಾರ ಸತ್ಕಾರವಿತ್ತು.

ಹೊಸ ಕುತ್ತೂರು—ಇಲ್ಲಾ ಬೋರ್ಡಿನಿಂದ ಹೊಸತಾಗಿ ತೆರೆಯಲ್ಪಟ್ಟ ಏಕೋಪಾಧ್ಯಾಯರ ಶಾಲೆಯು ತಾ. 14ರಂದು ಜಿಲ್ಲಾ ಬೋರ್ಡು ಸದಸ್ಯ ಶ್ರೀ ಎಮ್. ಎಮ್. ಜೆಡ್ಡಿಯವರ ಅಧ್ಯಕ್ಷತೆಯಲ್ಲಿ ಶ್ರೀ ಎಚ್. ಜಿ. ಕೆಮ್ಮಾಯರಿಂದ ಉದ್ಘಾಟಿಸಲ್ಪಟ್ಟಿತು. ಶಾಲಾ ಸೀನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಲ್ ಬಿ. ಲಕ್ಷ್ಮಿ ನರಸಿಂಹಯ್ಯನವರೂ ಹಾಗೂ ಶ್ರೀಗಳಾದ ಕೆ ಸಂಜೀವ ಶೆಟ್ಟಿ, ನಂಕಿಪ್ಪಾಡಿ ಅಚಾರ್ಯ ಮೊದಲಾದವರು ಕಾರ್ಯೋಚಿತ ಮಾತುಗಳನ್ನಾಡಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಕೆ ಭಾಸ್ಕರ ಭಂಡಾರಿಗಳು ಧನ್ಯವಾದಗಳನ್ನರ್ಪಿಸಿದರು. ಸುಕ್ಷೇಗೆ ಸಿಹಿ ತಿಂಡಿ ಹಂಚೋಣವಾಗಿ ಸಮಾರಂಭ ಕೊನೆಗೊಂಡಿತು.

ನವಯುಗದ ದೀಪಾವಳಿ ಸಂಚಿಕೆ

ಬರುವ ವಾರದ ದೀಪಾವಳಿ ಸಂಚಿಕೆಯನ್ನು ಪ್ರಕಟಿಸಬೇಕೆಂದಿದ್ದರೂ ಕೆಲವೊಂದು ಅನಾನುಕೂಲತೆಗಳ ದೆಸೆಯಿಂದ ಸ್ವಲ್ಪ ವಿಳಂಬವಾಗಿ ಪ್ರಕಟಿಸಲಿರುವೆವು. ಈ ವಿಶೇಷ ಸಂಚಿಕೆಯ ಕೆಲಸದಿಂದಾಗಿ ಬರುವ ವಾರದ (ತಾ. 24ರ) ಸಂಚಿಕೆಯನ್ನು ಸಿಲ್ಲಿಸಿದ್ದೇವೆ. ದೀಪಾವಳಿ ಸಂಚಿಕೆಯು ತಾ. 31ರೊಳಗಾಗಿಯೇ ವಾಚಕರ ಕೈಸೇರುವುದು.

ಮೆನೇಜರ್.

ದಾಮೋದರ ಕಣಿವೆಯ ವಿಹಂಗಮ ದೃಶ್ಯ

(೫ನೇ ಪುಟದಿಂದ)

ಕಾಡನ್ನು ಬೆಳೆಸಲಾಗಿದೆ. ಐದು ವರ್ಷಗಳಲ್ಲಿ ೨೫ ಸಾವಿರ ಎಕ್ರೆಗಳಷ್ಟು ಅರಣ್ಯವನ್ನು ಹೆರಡಿಸುವ ಉದ್ದೇಶವಿದೆ. ಕೃಷಿ ಸುಧಾರಣೆಗಾಗಿ ಶಿಕ್ಷಣ ಕೇಂದ್ರ ಮತ್ತು ಪರೀಕ್ಷಣಾ ಕೇಂದ್ರಗಳನ್ನು ಇಲ್ಲಿ ತೆರೆಯಲಾಗುವುದು ದೊಡ್ಡದೊಡ್ಡ ಅಣೆಕಟ್ಟುಗಳ ರಚನೆಯಿಂದಾಗಿ ಆದ ಜಲಾಶಯಗಳಲ್ಲಿ ಮತ್ಸ್ಯಪಾಲನೆಯ ಕಾರ್ಯವೂ ಬೆಳೆದುಬರುತ್ತಿದೆ. ದುರ್ಗಾಪುರದ ಅಣೆಕಟ್ಟಿನಿಂದ ಮಾಡಲ್ಪಟ್ಟ ಉದ್ದವಾದ ಕಾಲುವೆಯ ಮೂಲಕ ಕಲಕತ್ತೆಯ ಬರೆಗೆ ಹಡಗುಗಳ ಯಾತಾಯತದ ಸಂದಣಿ ಸ್ವಲ್ಪ ಕಡಿಮೆಯಾಗಿದೆ. ಈ ಕಾಲುವೆಗಳಲ್ಲಿ ನೀರು ಹರಿಯುವುದರಿಂದ, ನೀರು ಒಂದೆಡೆಯೇ ನಿಲ್ಲದೆ ಮಲೇರಿಯಾವೂ ದೂರವಾಗತೊಡಗಿದೆ.

ವಿದ್ಯುಶ್ಶಕ್ತಿನ ಸೌಕರ್ಯವಿರುವುದರಿಂದ ಹೊಸ ಉದ್ಯೋಗಗಳನ್ನು ಮಾಡಲು ಪ್ರೋತ್ಸಾಹ ದೊರೆಯುತ್ತದೆ. ಶಿಳರಿಂದ ಬೀಗ ತಯಾರಿಸುವ ಕಾರಖಾನೆಯು ನಡೆಯುತ್ತಾ ಇದೆ. ಮೈಥಾನದಲ್ಲಿ ಹಸ್ತಾಯುಧಗಳನ್ನು ಸಿದ್ಧಗೊಳಿಸುವ ಕಾರಖಾನೆಯು ತೆರೆದಿದೆ. ಬರ್ದವಾನದಲ್ಲಿ ಒಂದು ಶೀತ ಸಂಗ್ರಹಾಲಯವು ಶೀಘ್ರದಲ್ಲಿಯೇ ತೆರೆಯಲ್ಪಡುವುದು.

ಹೀಗೆ ಈ ಸಂಕ್ಷಿಪ್ತ ವಿವೇಚನೆಯಿಂದ, ದಾಮೋದರ ಘಾಟಿಯ ಯೋಜನೆಯು ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವಪೂರ್ಣವಾಗಿದೆಯೆಂದು ತಿಳಿಯಬಹುದು. ಭಾರತದಲ್ಲಿ ಹಲವಾರು ತೀರ್ಥಕ್ಷೇತ್ರಗಳಿವೆ. ನವೀನ ಭಾರತದಲ್ಲಿ ನದೀಘಾಟಿ ಯೋಜನಾಸ್ಥಳಗಳು ಕೂಡಾ ತೀರ್ಥಸಮಾನವಾಗಿವೆ. ಭಾಕ್ರಾ ನಂಗಲ್, ದಾಮೋದರ, ತುಂಗಭದ್ರಾ, ಚಂಬಲ್, ವಿಶಾಖಪಟ್ಟಣ, ಸಿಂಧ್ರಿ ಮತ್ತು ಬೆಂಗಳೂರು ಮೊದಲಾದ ಸ್ಥಳಗಳಿಗೆ ಭೇಟಿಯನ್ನಿತ್ತು ಭಾರತದ ಪುನಾರಚನೆಯ ಈ ತೀರ್ಥಕ್ಷೇತ್ರಗಳನ್ನು ಗೌರವಾದರ ಪೂರ್ವಕವಾಗಿ ನೋಡಬೇಕು. ಇಂತಹ ತೀರ್ಥ ಸ್ಥಳಗಳಲ್ಲಿಯೇ ನವಭಾರತದ ನಿರ್ಮಾಣವಾಗುತ್ತಿಲಿದೆಯೆಂಬುದನ್ನು ಮಾತ್ರ ನಾವು ಮರೆಯಬಾರದು.

(ಕೃಷ್ಣಚಂದ್ರ ವಿದ್ಯಾಲಂಕಾರರ ಲೇಖನದ ಆಧಾರದಿಂದ)

ಹೊಸಕೆರೆ
ಚಿದಂಬರಯ್ಯನವರ
ಭಗವದ್ಗೀತೆಯು
ಸಮೂಲ ಭಾಷಾಂತರ
ಪೊಕೆಟ್ ಎಡಿಷನ್.
ಸುಮಾರು 450 ಪುಟಗಳು.
ಕ್ರಯ 0—12—0
ನವಯುಗ ಪ್ರೆಸ್, ಉಡುಪಿ.

ಭಾರತದಲ್ಲಿ ಅಮೆರಿಕದ ರಾಯಭಾರಿಗಳಾದ ಶ್ರೀ. ಎಲ್ಸ್‌ವರ್ತ್ ಬಂಕರ್‌ರವರು ತಮ್ಮ ಮುಂಬಯಿಯ ಪ್ರಥಮ ಅಧಿಕಾರಿಕ ಸಂದರ್ಶನಾ ಕಾಲದಲ್ಲಿ ಮುಂಬಯಿ ಮುಖ್ಯಮಂತ್ರಿ ಶ್ರೀ. ಸೈ. ಜಿ. ಚವನರೊಡನೆ ಮಾತುಕತೆಯಾಡುತಿದ್ದಾರೆ.

ಸಿಂಡಿಕೇಟ್ ಬೇಂಕಿನ ಮಂಗಳೂರು ಶಾಖೆಯ ರಜತೋತ್ಸವ—ತಾ. 13ರಂದು ಸಂಜೆ ಸ್ಥಳೀಯ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಭಾಭವನದಲ್ಲಿ ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಆಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಮಂಗಳೂರು ಶಾಖೆಯ ವಿಜಿಟರ್ ಶ್ರೀ ಎಚ್. ಡಿ. ಎಸ್. ಪೈಗಳು ಅಡಿಗರನ್ನು ಅಧ್ಯಕ್ಷತೆ ವಹಿಸಬೇಕೆಂತೆ ಕೇಳಿಕೊಂಡರು ಡಾ| ಟಿ. ಎಸ್. ಎ. ಪೈಗಳು ಸಭಾಧ್ಯಕ್ಷರಿಗೆ ಹಾರವನ್ನರ್ಪಿಸಿ ಸ್ವಾಗತ ಭಾಷಣ ಮಾಡಿದರು. ಮಂಗಳೂರು ನಗರ ಸಭೆಯ ಉಪಾಧ್ಯಕ್ಷ ಎಸ್. ಗೊನ್ಸಾಲ್ವಿಸ್ ಮತ್ತು ಶ್ರೀಗಳಾದ ಎ. ಶ್ರೀಪತಿ ರಾವ್, ಮಣೇಲ್ ಶ್ರೀನಿವಾಸನಾಯಕ್ ಮೊದಲಾದವರು ಕಾಲೋಚಿತ ಭಾಷಣಗಳನ್ನಾಡುತ್ತಾ ಡಾ| ಪೈಗಳ ಕಾರ್ಯಾಸಕ್ತಿಪರತೆಯನ್ನು ಪ್ರಶಂಸಿಸಿದರು. ಸಭಾಧ್ಯಕ್ಷರು ಕೂಡಾ ಸಿಂಡಿಕೇಟ್ ಬೇಂಕಿನ ಪ್ರಗತಿಯನ್ನು ಕೊಂಡಾಡಿದರಲ್ಲದೆ ಆ ಬಗ್ಗೆ ದುಡಿಯುತ್ತಿರುವ ಡಾ| ಟಿ. ಎಮ್. ಎ. ಪೈ ಮತ್ತು ಡಾ| ಟಿ. ಎ. ಪೈಗಳನ್ನು ಅಂಭಿನಂದಿಸಿದರು. ವಂದನಾರ್ಪಣೆಯಾಗಿ ಸಮಾರಂಭ ಕೊನೆಗೊಂಡಿತು.

ಯುವಕ ಕಾಂಗ್ರೆಸ್ ಕಮಿಟಿ ಸಭೆಯು—ತಾ. 7ರಂದು ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ ಕೆ. ಆರ್. ಆಚಾರ್, ಎಸ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕರ್ನಾಟಕ ಪ್ರದೇಶ ಯುವಕ ಕಾಂಗ್ರೆಸಿನ ಸಂಘಟಕರಾದ ಶ್ರೀ ರಾಮಚಂದ್ರ ಪತಕಿಯವರು ಯುವಕ ಕಾಂಗ್ರೆಸಿನ ಸಂಘಟನೆಯ ಬಗ್ಗೆ ಸದಸ್ಯರ ಶಿಸ್ತು ಇತ್ಯಾದಿ ಕುರಿತು ಭಾಷಣ ಮಾಡಿದರು.

ಭಾರತದ ನೌಕಾದಳ ಶಾಖೆಗೆ—ಅಭ್ಯರ್ಥಿಗಳನ್ನು ಆರಿಸುವ ಬಗ್ಗೆ ಲೆಫ್ಟಿನೆಂಟ್ ಕಮಾಂಡರ್ ಬಿ. ಸಿ. ಎಮ್. ಮಸ್ಕರೇಂಹಾಸ್, ಐ ಎನ್. ಅವರು ಕಡ್ರಿಯ ಬಂಗ್ಲೆಯಲ್ಲಿ ತಾ. 18ರಂದು ಸೊಕ್ಕಾಂ ಮಾಡುವರು. ಸೇರಲಿಚ್ಛಿಸುವವರು ಆ ದಿನ ಬೆಳಗ್ಗೆ ಏಳು ಗಂಟೆಗೆ ಬಂಗ್ಲೆಯಲ್ಲಿ ಹಾಜರಿರಬೇಕಾಗಿದೆ

ರಕ್ಕದ ಉಪಗ್ರಹವು—ತಾ. 11ರಂದು ಸುಮಾರು 11½ ಗಂಟೆಗೆ ಮಂಗಳೂರಿನ ಮೇಲೆ ಹಾಯಿಹೋಗಿದೆ ಎಂದು ಆ ಉಪಗ್ರಹದ ರೇಡಿಯೋ ಸಂಕೇತಗಳನ್ನು ಕೇಳಿದ ಬಜ್ಪೆ ವಿಮಾನ ನಿಲ್ದಾಣದ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಶ್ರೀ ಧರ್ಮಸ್ಥಳದಲ್ಲಿ ರಜತೋತ್ಸವ ಸಿದ್ಧತೆಗಳು—ಇದೇ ಬರುವ ನವೆಂಬರ ತಾ. 19, 20, ಮತ್ತು 21ರಲ್ಲಿ ವರ್ಷಾಗಣ ದೀಪೋತ್ಸವ ಕಾಲದಲ್ಲಿ, ಶ್ರೀ ಧರ್ಮಸ್ಥಳದಲ್ಲಿ ನಡೆವ ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನಗಳ ರಜತೋತ್ಸವಕ್ಕೆ ತತ್ಕಾಲ ಸಿದ್ಧತೆಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಜರಗುವ ವಿವಿಧ ವಸ್ತು ಪ್ರದರ್ಶನವನ್ನು ತಾ. 18—11—57ರಲ್ಲಿ ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಉದ್ಘಾಟಿಸುವರು. ತಾ. 21ರಲ್ಲಿ ಜರಗುವ ಕಲಾ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಕೇರಳದ ರಾಜ್ಯಪಾಲ ಡಾ. ಬಿ. ರಾಮಕೃಷ್ಣರಾವ್‌ರವರು ಒಪ್ಪಿರುವರು ನೃತ್ಯ, ನಾಟಕ, ಬಯಲಾಟಗಳ ಕಾರ್ಯಕ್ರಮವಿದೆ. ಪ್ರದರ್ಶನವನ್ನು ದೇವಾಲಯದ ಬಳಿಯ ಗಾರೆಮೂಡು ಗದ್ದೆಯಲ್ಲಿ ಏರ್ಪಡಿಸಲಾಗುವುದು. (ಪ್ರದರ್ಶನದ ಕುರಿತು ಹೆಚ್ಚಿನ ಮಾಹಿತಿಯನ್ನು ಆಪೇಕ್ಷಿಸುವವರು, ಶ್ರೀ ಕುಂದ್ರಾ ವಾಸುದೇವ ಶೆಟ್ಟಿ, ಸಂಪಾದಕ—'ಪ್ರಭಾತ', ಮಂಗಳೂರು-1, ಇವರಿಗೆ ಬರೆಯಬಹುದು)

ನಿಂಜೂರು—ಸ್ಥಳೀಯ ವಿವೇಕಾನಂದ ಸೇವಾ ಸಂಘದ ಸಮಾಜ ಮಂದಿರದಲ್ಲಿ ತಾ. 8ರಂದು ಶ್ರೀ ಕೆ. ಕೃಷ್ಣ ಭಾಗವತರಿಂದ 'ಪಾಂಡವ ಸತ್ವಪರೀಕ್ಷೆ' ಎಂಬ ಹರಿಕಥಾ ಕಾಲಕ್ಷೇಪ ಜರಗಿಸಲ್ಪಟ್ಟಿತು.

ಪೆರಂಪಳ್ಳಿ—ತಾ. 8ರಂದು ಪೆರಂಪಳ್ಳಿ ಶ್ರೀ. ಪಿ ಎಸ್. ರಾಮರಾಯರ ಮನೆಯಲ್ಲಿ ಶ್ರೀ. ಹಂಚೆ ಗುರು ವೇದವ್ಯಾಸಾಚಾರಿಂದ 'ಸತ್ಯ ಹರಿಶ್ಚಂದ್ರ' ಎಂಬ ಹರಿಕಥಾಕಾಲಕ್ಷೇಪ ನಡೆಯಿತು.

ಕಾರ್ಕಳ—ದ. ಕ. ಜಿಲ್ಲಾ ವಿದ್ಯಾಪರಿಷತ್ತು ತಾ. 10—11—57ರಲ್ಲಿ ಕಾರ್ಕಳದಲ್ಲಿ ಶ್ರೀ ಎಮ್. ಪಿ. ಎಲ್. ಶಾಸ್ತ್ರಿ, ಎಮ್. ಎಲ್. ಸಿ ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದಾಗಿಯೂ ವಿದ್ಯಾಮಂತ್ರಿ ಶ್ರೀ ವಿ ವೆಂಕಟಪ್ಪನವರು ಪರಿಷತ್ತನ್ನು ಉದ್ಘಾಟಿಸಲಿರುವರೆಂದಾಗಿಯೂ ತಿಳಿದುಬರ ತ್ತದೆ.

ಡಾ| ಕೆ. ಕೆ. ಹೆಗ್ಡೆಯವರ ಅಯ್ಕೆ—ಮೈಸೂರು ವಿಶ್ವವಿದ್ಯಾನಿಲಯದ ಸೆನೆಟಿಗೆ, ಮೈಸೂರು ಪ್ರಧಾನ ಸಭೆಗೆ ಪ್ರತಿನಿಧಿಗಳಾಗಿ ಆರಿಸಲ್ಪಟ್ಟ ದ. ಕ. ಜಿಲ್ಲೆಯ ಪ್ರತಿನಿಧಿಗಳಲ್ಲಿ ಡಾ| ಕೆ. ಕೆ. ಹೆಗ್ಡೆಯವರೊಬ್ಬರು ಅಯ್ಕೆಗೊಂಡಿರುವರು.

ಕನ್ನಡ ಸಂಘ—ಅಂಬರನಾಥ ತಾ. 9—10—57ರಲ್ಲಿ ಮಹಾತ್ಮಾಗಾಂಧಿ ವಿದ್ಯಾಲಯದಲ್ಲಿ ಕನ್ನಡ ಸಂಘ ಅಂಬರನಾಥ ಇವರ ಆಶ್ರಯದಲ್ಲಿ ನಾಡ ಹಬ್ಬವನ್ನು ಜರಗಿಸಲಾಯಿತು ಅಂದಿನ ಸಭೆಗೆ ಮುಂಬಾಯಿಯ ಪ್ರಮುಖ ಸಮಾಜ ಸೇವಕರೂ, ಕನ್ನಡ ಕಾಪಂಬರಿಗಾರರೂ ಆದ ಶ್ರೀ ನ್ಯಾಸಾಯಿ ಬಲ್ಲಾಳರು ಅಧ್ಯಕ್ಷರಾಗಿದ್ದರು. ಕನ್ನಡ ಶಾಲಾ ಮಕ್ಕಳಿಂದ ದೇವತಾ ಪ್ರಾರ್ಥನೆಯಾದ ಬಳಿಕ ಸಂಘದ ಅಧ್ಯಕ್ಷರಾದ ಶ್ರೀ ಟಿ. ಯಲ್ ಪತ್ತಣ್ಣಾಯರು ಶ್ರೀ ಬಲ್ಲಾಳರಿಗೂ, ಅತಿಥಿಗಳಿಗೂ ಮತ್ತು ಸಭಿಕರಿಗೂ ಸ್ವಾಗತವನ್ನು ಬಯಸಿ ಸಂಘದ ಉದ್ದೇಶ ಮತ್ತು ಕಾರ್ಯಕಲಾಪಗಳನ್ನು ವಿವರಿಸಿದರಲ್ಲದೆ ಜಾತಿ, ಮತ, ಜಿಲ್ಲೆಗಳೆಂಬ ಯಾವ ತರದ ಭೇಧಗಳಿಲ್ಲದೆ ಈ ಕನ್ನಡ ಸಂಘಕ್ಕೆ ಪ್ರತಿಯೊಬ್ಬ ಕನ್ನಡಿಗನು ಸದಸ್ಯನಾಗಿ ಸೇರಿ ಪ್ರೋತ್ಸಾಹಿಸಬೇಕೆಂದು ವಿನಂತಿಸಿದರು. ಶಾಲಾ ಮಕ್ಕಳಿಗೆ ಬಾರಿ ತೋಷಕವನ್ನು ಹಂಚೋಣಾದ ಬಳಿಕ ಸಭಾಧ್ಯಕ್ಷರು, ತನ್ನ ಅತೀ ಸುರಸವಾದ ಭಾಷಣದಲ್ಲಿ, ಕನ್ನಡಿಗರ ಗತ ವೈಭವ ಮತ್ತು ಕನ್ನಡಿಗರು ಕರ್ನಾಟಕ ಪ್ರಾಂತ ರಚಿಸಲ್ಪಟ್ಟ ನಂತರ ಹೊರನಾಡಿದಲ್ಲಿ ಮಾಡಬೇಕಾದ ಕಾರ್ಯಕಲಾಪಗಳನ್ನೂ, ಕನ್ನಡಿಗರ ಏಳ್ಗೆಗಾಗಿ ಮತ್ತು ಕನ್ನಡ ಸಂಸ್ಕೃತಿಯನ್ನು ಬೆಳೆಸುವ ಉದ್ದೇಶವನ್ನೂ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾಡಬೇಕಾದ ಪ್ರಯತ್ನಗಳನ್ನೂ ವಿವರಿಸಿ ಮಾತಾಡಿದರಲ್ಲದೆ ಅಂಬರನಾಥದ ಪ್ರತಿಯೊಬ್ಬ ಕನ್ನಡಿಗನು ಈ ಸಂಘಕ್ಕೆ ಸದಸ್ಯನಾಗಿ ಸೇರಿ ಸಂಘಶಕ್ತಿಯನ್ನು ಬಲಗೊಳಿಸಬೇಕೆಂದು ಹೇಳಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಬಸವರಾಜರು, ಧನ್ಯವಾದಗಳನ್ನರ್ಪಿಸಿದರು. ನಂತರ ಶಾಲಾ ಮಕ್ಕಳಿಂದ ಕನ್ನಡ ನಾಟಕ ಇತ್ಯಾದಿ ವಿವಿಧ ಏನೋದ ಕಾರ್ಯಕ್ರಮಗಳಾದವು.

ರಾಯಚೂರು—ರಾಯಚೂರು ಜಿಲ್ಲೆಯ ದೇವಸುಗೂರ ತಾಲೂಕಿನಲ್ಲಿ ಪರ್ಯಾಪ್ರತಿ ನಡೆಯುವ ನಾಡ ಹಬ್ಬವು ಈ ಬಾರಿ ಡಾ ಪಿ ರಘುನಾಥ ಸೆಟ್ಟರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಸಾಹಿತಿಗಳಿಂದ ಭಾಷಣ ನಾಟಕ, ಅಟಗಳಲ್ಲಿ ಸ್ಪರ್ಧೆ ಇತ್ಯಾದಿ ಮನರಂಜನ ಕಾರ್ಯಕ್ರಮಗಳಾಗಿ ವಿಜಯದಶಮಿ ದಿವಸ ಅಧ್ಯಕ್ಷರಿಂದ ಬಾರಿತೋಷವಿತರಣೆ ನಡೆಸಲ್ಪಟ್ಟಿತು.

NOTICE

Notice is hereby given that Share Certificate Nos. 286, 290 & 291 issued by the Vijaya Bank Limited, in respect of 20 shares numbered 1226, 1507 to 1515 & 1516 to 1525 now standing in the name of late Sri Halnad Nandiappa Shetty, Dt. Manager, The Prithvi Insurance Co., Ltd, at Mangalore, who died in the year 1949, are reported to be lost and an application has been received from his widow, Mrs Heroor Kalyani Shedthy, for the issue of a fresh Share Certificate in the place of the originals for the purpose of transmission of the said shares to her name. Any person having any objection whatsoever for the issue of a fresh Share Certificate or for the transmission of the said shares to the name of the applicant, should communicate immediately the same to the undersigned. If objection is not filed with the undersigned within 15 days from this date, a fresh Share Certificate in the place of the said original Share Certificate Nos. 286, 290 & 291 for the total number of 20 shares, will be issued and the transmission of the said shares to the name of the applicant Mrs. Heroor Kalyani Shedthy will be registered in the books of the Bank.

The Vijaya Bank Ltd,
Head Office, Mangalore—3
Dated: 14—10—1957.

(*Sd*) B. Mahabala Shetty,
Secretary.

ಉಡುಪಿ, ಮಂಗಳೂರಲ್ಲಿ ದೇಶಮುಖ ದಂಪತಿಗಳು

ಯುನಿವರ್ಸಿಟಿ ಗ್ರಾಂಟ್ಸ್ ಕಮಿಶನಿನ ಅಧ್ಯಕ್ಷರಾದ ಡಾ. ಸಿ. ಡಿ. ದೇಶಮುಖರು ತಮ್ಮ ಪತ್ನಿ ಶ್ರೀಮತಿ ದುರ್ಗಾಬಾಯಿ ದೇಶಮುಖರನ್ನು ಕೂಡಿಕೊಂಡು ತಾ. 11ರಂದು ಸಂಧ್ಯಾಹ್ನ ಕೊಚ್ಚಿಯಿಂದ ವಿಮಾನ ಮೂಲಕ ಬೆಜ್ಜಿಗೆ ಆಗಮಿಸಿದರು. ಡಾ. ದೇಶಮುಖರು ಕಾರ್ಕಳ ಮಾರ್ಗವಾಗಿಯೂ ಶ್ರೀಮತಿ ದೇಶಮುಖರು ಪಡುಬಿದ್ರೆ, ಕಾಪು, ಕಟಪಾಡಿಯಲ್ಲಿರುವ ಮಹಿಳಾಭಿವೃದ್ಧಿ ಕೇಂದ್ರಗಳನ್ನು ಸಂದರ್ಶಿಸಿ ಉಡುಪಿಗೆ ಆಗಮಿಸಿದರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ—

ಡಾ. ದೇಶಮುಖರು ಕಾರ್ಕಳ ಮಾರ್ಗವಾಗಿ ಉಡುಪಿಗೆ ಬರುವ ಮೊದಲು ಮಣಿಪಾಲದಲ್ಲಿ ತಂಗಿ ಅಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಸಂದರ್ಶನವಿತ್ತರು. ಎಕಾಡೆಮಿ ಆಫ್ ಜನರಲ್ ಎಡ್ಯುಕೇಶನಿನ ರಿಜಿಸ್ಟ್ರಾರ್ ಡಾ. ಟಿ. ಮಾಧವ ಪೈ, ಉಡುಪಿ ಮುನಿಸಿಪಲ್ ಚೇರ್‌ಮೆನ್ ಶ್ರೀ ಕೆ. ಶೆ. ಪೈ ಮೊದಲಾದವರು ಸ್ವಾಗತ ನೀಡಿದರು. ಡಾ. ದೇಶಮುಖರು ವಿದ್ಯಾರ್ಥಿಗಳನ್ನುದ್ದೇಶಿಸಿ ‘ಸಹಕಾರ ತತ್ವದ ಮೇಲೆ ನಡೆಸುವ ಈ ಕಾಲೇಜಿನ ಸೇವಾ ಸ್ಫೂರ್ತಿಯನ್ನು ಶ್ಲಾಘಿಸಬೇಕಾಗಿದೆ. ವಿದ್ಯಾರ್ಥಿಗಳಿಂದ ಸಹಾಯಧನವನ್ನು ಪಡೆಯುವುದರ ಕುರಿತು ಭಿನ್ನಾಭಿಪ್ರಾಯಗಳಿರುವುದು ಸಹಜವೇ. ಆದರೆ ಇಂಥ ಸಂದರ್ಭದಲ್ಲಿ ಪರಿಶೀಲಿಸಿಯೇ ಸತ್ಯ ಶೋಧನೆ ಮಾಡಬೇಕು. ಈ ಕಾಲೇಜನ್ನು ಸ್ವತಃ ಸಂದರ್ಶಿಸಿದ ನಂತರ ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಅಧ್ಯಕ್ಷರೊಡನೆ ಸಹಮತವಾಗಿ ಕಾಲೇಜಿನ ಉನ್ನತ ಮಟ್ಟವನ್ನು ಕಾಯಂಡಾಡುವಂತಾಗಿದೆ. ಡಾ| ಪೈಗಳದಕ್ಷ ಆಡಳಿತದಲ್ಲಿ ಸೂರ್ಯ ಸಿದ್ಧತೆಗಳೆಲ್ಲವೂ ಸರಿಯಾಗಿವೆ. ರಾಜ್ಯ ಸರಕಾರಗಳು ಹೆಚ್ಚಾದರೆ ಸ್ವಾಧೀನದಲ್ಲಿ ನಿಂತು ವೈದ್ಯಕೀಯ ಶಿಕ್ಷಣವನ್ನು ಕೊಡುತ್ತಿವೆ. ಇದರ ಮಟ್ಟವನ್ನು ಜನರೇ ತೆರಿಗೆಯ ಮೂಲಕ ತುಂಬಬೇಕಾಗುವುದು. ಆದುದರಿಂದ ಹೆತ್ತವರು ತಮ್ಮ ತಮ್ಮ ಮಕ್ಕಳಿಗೆ ವೈದ್ಯಕೀಯ ಶಿಕ್ಷಣದ ಭಾರವಹಿಸುವಂತೆ ಕಾಲೇಜಿಗೆ ಸಹಾಯಧನವೀಯುವ ಪದ್ಧತಿ ತಪ್ಪೇನಲ್ಲ. ವೃತ್ತಿ ಶಿಕ್ಷಣ ಶಾಲೆಗಳಿಗೆ ಪ್ರವೇಶಕೊಡುವಾಗ ಪ್ರತಿಭೆ-ಪ್ರಜ್ಞೆಗಳನ್ನು ಕಡೆಗಣಿಸುವ ಪ್ರವೃತ್ತಿ ಇಷ್ಟವಲ್ಲವೆಂದರು. ಡಾ. ಕೊಸ್ಟಿಕರ್‌ರವರು ಧನ್ಯವಾದಗಳನ್ನಿತ್ತರು.

ಲಾ ಕಾಲೇಜಿನಲ್ಲಿ—

ಡಾ. ದೇಶಮುಖರು ಮಣಿಪಾಲದಿಂದ ಉಡುಪಿಗೆ ಬಂದು ಇಲ್ಲಿಯ ಲಾ ಕಾಲೇಜಿಗೆ ಸಂದರ್ಶನವಿತ್ತರು. ವಿದ್ಯಾರ್ಥಿ ಮುಖಂಡ ಶ್ರೀ ಗೋಪಿನಾಥರಾಯರು ಸ್ವಾಗತಿಸಿದರು. ವಿದ್ಯಾರ್ಥಿಗಳಿಗೆ ನಾಲ್ಕು ಉಪದೇಶದ ಮಾತುಗಳನ್ನಾಡುತ್ತಾ ಲಾಯರರು ನ್ಯಾಯಾಧೀಶರಿಗೂ ಜನತೆಗೂ ನ್ಯಾಯವಾದಿಸಬಾಡುವ ಧೈರ್ಯವನ್ನಿಟ್ಟುಕೊಳ್ಳಬೇಕೆಂದರು. ಈ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಲಾಯರು ವಿದ್ಯಾರ್ಥಿಗಳು ಕಾಲೇಜಿಗೆ ಹೆಸರು ತರುವಂತಾಗಬೇಂದು ಹಾರೈಸಿದರು.

ನಗರಸಭೆಯಲ್ಲಿ—

ಮಹಾತ್ಮಾಗಾಂಧಿ ಬೂನಾದಿ ಪ್ರಾಥಮಿಕ ಶಾಲೆಯಲ್ಲಿ ಡಾ| ದೇಶಮುಖ ದಂಪತಿಗಳಿಗೆ ನಗರಸಭೆಯ ಪರವಾಗಿ ನಗರ ಸಭಾಧ್ಯಕ್ಷ ಶ್ರೀ ಕೆ. ಶೈಗಳು ಮಾನಪತ್ರವನ್ನೊದಿ ಒಪ್ಪಿಸಿದರು ಮಾನಪತ್ರದಲ್ಲಿ ದೇಶಮುಖ ದಂಪತಿಗಳು ಸಲ್ಲಿಸುತ್ತಿರುವ ಸೇವೆಗಳನ್ನು ಎತ್ತಿ ತೋರಲಾಗಿತ್ತು. ಡಾ| ದೇಶಮುಖರು ಉತ್ತರಿಸುತ್ತಾ, ದ. ಕ ಜಿಲ್ಲೆಯ ಜನತೆ ಸಾಹಸಿಗರು ಸಹಕಾರ ತತ್ವದಮೇಲೆ ಕಾರ್ಯಗಳನ್ನು ಸಾಧಿಸುವರು. ಆದ್ದರಿಂದಲೇ ಈ ಜಿಲ್ಲೆಯ ಸಮಾಜವಿಕಾಸ ಯೋಜನೆ ಮೊದಲಾದ ರಾಷ್ಟ್ರಾಭಿವೃದ್ಧಿ ಕಾರ್ಯಗಳು ಯಶಸ್ವಿಯಾಗಿ ಉತ್ತಮ ಶ್ರೇಣಿಯಲ್ಲಿ ನಡೆದಿರುವುದು ಇದು ಈ ಜಿಲ್ಲೆಯ ಜನತೆಗೆ ಹೆಮ್ಮೆತರುವಂತಾಗಿದೆ ಎಂದರು. ನಗರ ಸೌಕರ್ಯಗಳ ಕುರಿತು ಮಾತನಾಡುತ್ತಾ ಉಡುಪಿಗೆ ಪ್ರಕೃತಿ ನಿರ್ಮಿತ ಸೌಕರ್ಯಗಳಿರುವುದರಿಂದ ಹೆಚ್ಚಿಗೆ ಬೇಕಾದ ಮಾದರಿ ನಗರ ಸಭೆಯ ಸೌಕರ್ಯವೀಯಲು ಅನುಕೂಲಗಳಿವೆ. ಆದಾಗ್ಯೂ ನಗರ ಸಭೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸೋಣಗಾಗಿ ಚಿಕ್ಕ ಮಟ್ಟದ ಕೈಗಾರಿಕೆಗಳನ್ನು ಹೆಚ್ಚಿಸಬೇಕು ತನ್ಮೂಲಕ ನಿರುದ್ಯೋಗ ಸಮಸ್ಯೆಯನ್ನು ಕೆಲಮಟ್ಟಿಗೆ ಬಗೆಹರಿಸುವಂತಾಗಬೇಕು. ಸಮಾಜ ಹಿತಸಾಧನಾ ಕಾರ್ಯದಲ್ಲಿ ಉಡುಪಿಯ ಸ್ವಾಮಿಗಳವರು ಕೂಡಾ ಸಿದ್ಧರಾಗಿರುವುದು ಲಾಭಚಿಹ್ನೆ ಎಂದು ಸಂತೋಷ ವ್ಯಕ್ತಪಡಿಸಿದರು.

ಶ್ರೀಮತಿ ದುರ್ಗಾಬಾಯಿ ದೇಶಮುಖರು ನಂತರ ಮಾತನಾಡುತ್ತಾ ತನ್ನ ಮತ್ತು ತನ್ನ ಪತಿಯ ಕುರಿತು ಮಾನಪತ್ರದಲ್ಲಿ ವ್ಯಕ್ತಪಡಿಸಲಾದ ಸ್ತುತಿ ವಚನಗಳಿಗೆ ತಲೆಬಾಗಿ, ತಾನು ಮಾಡಿದ ಕೆಲಸವಾದರೋ ಮಹಾ ಸಾಗರದಲ್ಲಿ ಒಂದು ಬಿಂದು ಸೇರಿಸಿದ್ದಿರುವುದೆಂದರು ಕೇಂದ್ರ ಮಹಿಳಾ ಅಭಿವೃದ್ಧಿ ಬೋರ್ಡಿನ ಕಾರ್ಯಕಲಾಪಗಳನ್ನು ತುಸು ವಿವರಿಸಿ ಈ ಭಾಗದಲ್ಲಿ ಆದ ಕಾರ್ಯಗಳ ಬಗ್ಗೆ ಶ್ರೀಮತಿ ಶ್ರೀ ಪ್ರೇಮಾ. ಎ. ಪೈಗಳ ಸಾಧನೆಯನ್ನು ಕೊಂಡಾಡಿದರು. ಹಿರಿಗೆ ಮನೆಗಳು ನಿರ್ಮಾಣವಾಗಿವೆ. ಅವರಿ ಅವುಗಳನ್ನು ಶಾಶ್ವತವಾಗಿ ಉಳಿಸಿಕೊಂಡುಬರಲು ಹಣದ ಅಭಾವವಿದೆ. ಸ್ಟೇಟಸರಕಾರವು ಈ ಕುರಿತು ತೀವ್ರ ಗಮನಕೊಟ್ಟು ಅವುಗಳ ರಕ್ಷಣೆಗೆ ಬರುವ ಪರ್ಯಾಯಮಾರ್ಗ ಸ್ನೇಹಿತವಾಗಿದೆ. ಮೈಸೂರು ಸರಕಾರವು ಹಿಂದುಳಿಯಲಾರದೆಂದು ತಾನು ಆಶಿಸುತ್ತೇನೆಂದರು. ನಗರ ಸಭೆಯ ಉಪಾಧ್ಯಕ್ಷ ಶ್ರೀ ಸಿ. ವಿ. ಆಚಾರ್ಯರು ವಂದನೆಗಳನ್ನಿತ್ತರು.

ಶ್ರೀ ಕೃಷ್ಣದರ್ಶನ—

ರಾತ್ರಿ ಎಂಟು ತಾಸಿಗೆ ಶ್ರೀ ದೇಶಮುಖ ದಂಪತಿಗಳು ಶ್ರೀ ಕೃಷ್ಣದರ್ಶನ ಮಾಡಿ ಪರ್ಯಾಯ ಅಧಮಠರು ನುರದ ಸ್ವಾಮಿಗಳವರಿಂದ ಸ್ನಾಥಾನದ ಫಲ ಮಂತ್ರಾಕ್ಷತೆ ಸ್ವೀಕರಿಸಿದರು

ಸಂಸ್ಕೃತ ಕಾಲೇಜಿನಲ್ಲಿ—

ತಾ. 12ರಂದು ಬೆಳಗ್ಗೆ ಡಾ| ದೇಶಮುಖ ದಂಪತಿಗಳು ಸಂಸ್ಕೃತ ಕಾಲೇಜಿಗೆ ಭೇಟಿಯಿತ್ತರು. ಪ್ರಿನ್ಸಿಪಾಲ್ ಕೌಳಿಗಿ ಕೇಶವಾಚಾರ್ಯರು ಸಂಸ್ಕೃತ ಭಾಷೆಯಲ್ಲಿ ಸ್ವಾಗತ ಬಯಸಿದರು. ಡಾ| ದೇಶಮುಖರು ಸಂಸ್ಕೃತದಲ್ಲಿ ಮಾತನಾಡುತ್ತಾ ಕಾಲೇಜು ಸಂಸ್ಕೃತಕರಾದ ಉಡುಪಿ ಮಠಾಧೀಶರನ್ನು ಅಭಿನಂದಿಸಿದರು. ಸಂಸ್ಕೃತ ಆಯೋಗದ ವರದಿ ಸತ್ಯವೇ ಪ್ರಕಟವಾಗಲಿದ್ದು ಆದರೆ ಶಿಫಾರಸುಗಳು ಅಕಾರಾಯಕವಿರಬಹುದೆಂದು ತನಗೆ ವಿಶ್ವಾಸವಿದೆ ಎಂದು ನುಡಿದರು. ಯಜ್ಞಕುಂಡಲಿ ಪಂಡಿತ ಅಲಿಪೂರು ಸೀತಾರಾಮಾಚಾರ್ಯರು ಧನ್ಯವಾದಗಳನ್ನಿತ್ತರು. ನಂತರ ಮಂಗಳೂರಿಗೆ ಪ್ರಯಾಣ ಬೆಳೆಸಿದರು.

ಮಂಗಳೂರು ನಗರಸಭೆಯ ಸ್ವಾಗತ ಸ್ವೀಕಾರ—

ಡಾ. ದೇಶಮುಖರಿಗೆ ಮಂಗಳೂರು ನಗರ ಸಭೆಯ ಕಡೆಯಿಂದ ಆದರ ಅಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಆಚಾರ್ಯರು ಮಾನಪತ್ರವಿತ್ತು ಗೌರವಿಸಿದರು. ಡಾ. ದೇಶಮುಖರು ಮಾತನಾಡುತ್ತಾ, ನಗರ ಸಭೆಯ ಪ್ರಕೃತಿದತ್ತ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕಾಗಿ ಸಾಮಾನ್ಯ ಜನರಿಗೆ ಯಾವುದೇ ರೀತಿಯಲ್ಲಿ ಹಣವನು ಉಂಟುಮಾಡಿದ ಅಕ್ಕಾಯ್ ತೆರಿಗೆಯನ್ನು ವಿಧಿಸಬಹುದು. ಕಾರಣ ನಗರ ಸಭೆಯ ಈಗಿನ ಉತ್ಪತ್ತಿಯು ಒಬ್ಬ ವ್ಯಕ್ತಿಗೆ ರೂ 12ರಂತಿರುವುದು. ನಗರದ ನಾಗರಿಕರಿಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡುವುದಕ್ಕೆ ಇದು ಸಾಕಾಗಲಾರದೆಂದು ಅಭಿಪ್ರಾಯಪಟ್ಟರು.

ಶ್ರೀಮತಿ ದೇಶಮುಖರು ಮಾತನಾಡುತ್ತಾ ರಾಜ್ಯದಲ್ಲಿ ಕೈಕೊಳ್ಳಲಿರುವ ಸಾಮಾಜಿಕ ಹಿತಚಿಂತನಾ ಕಾರ್ಯಗಳನ್ನು ವಿವರಿಸಿ ಈ ಕಾರ್ಯಗಳಿಗೆ ಯಶಸ್ಸಿಗೆ ಗಂಡಸರ ಸಹಕಾರಿ ಅಗತ್ಯವೆಂದರು. ಸರಕಾರು ಮೂವತ್ತು ಲಕ್ಷ ರೂಪಾಯಿ ಖರ್ಚು ತನ್ನಲಬಹುದಾದ ಒಂದು ಅನಾಥ ಸ್ತ್ರೀಯರ ಗೃಹವನ್ನು ಮಂಗಳೂರಿಗೆ ಮಂಜೂರುಮಾಡಲಾಗಿದೆ ಎಂದೂ ಇದಕ್ಕೆ ಸೇರಿದಾ 75 ಎಕರೆಗಳನ್ನು ಕೇಂದ್ರ ಸಾಮಾಜಿಕ ಹಿತಚಿಂತನಾ ಬೋರ್ಡಿನಿಂದ ಕೊಡುವುದೆಂದೂ ನಿರ್ಧರಿಸಲಾಗಿದೆ ಎಂದು ಹೇಳಿದರು.

ಕಾಲೇಜುಗಳಿಗೆ ಭೇಟಿ—

ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಡಾ| ದೇಶಮುಖರು ಭೇಟಿಕೊಟ್ಟು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ವೈದ್ಯಕೀಯ ಸಂಶೋಧನೆಯಕಡೆಗೆ ಹೆಚ್ಚಿನ ಗಮನಕೊಡಬೇಕಾಗಿದೆಯೆಂದು ಬೇಳಿದರು. ಈಗ ಗ್ರಾಮೀಣ ಪ್ರದೇಶಗಳಲ್ಲಿ ಡಾಕ್ಟರುಗಳ ಅಭಾವವಿರುವುದರಿಂದ ಈ ಕಾಲೇಜಿನಿಂದ ಹೊರಬರುವ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶಗಳ ಕಡೆಗೆ ಹೆಚ್ಚಿನ ಗಮನಕೊಡಬೇಕೆಂದೂ ಹೇಳಿದರು.

ಸೈಂಟ್ ಎಲೋಶಿಯಸ್ ಕಾಲೇಜು, ಸರಕಾರೀ ಕಾಲೇಜು, ಸೈಂಟ್ ಆಗ್ನೆಸ್ ಕಾಲೇಜುಗಳಿಗೂ ಡಾ| ದೇಶಮುಖರು ಭೇಟಿಯಿತ್ತರು

ಮಹಿಳೆಯರ ಹಿತ ಚಿಂತನಾ ಸಂಸ್ಥೆಗಳ—

ಸಂಯುಕ್ತ ಸಭೆಯಲ್ಲಿ ಶ್ರೀಮತಿ ದುರ್ಗಾಬಾಯಿ ದೇಶಮುಖರು ಮೈಸೂರು ರಾಜ್ಯದಲ್ಲಿರುವ ಸಾಮಾಜಿಕ ಹಿಂದುಳಿತಚಿಂತನಾ ಕಾರ್ಯಗಳ ವಿವರಣೆಯಿತ್ತರು. ಮಹಿಳೆಯರ ಸಂಸ್ಥೆಗಳ ಹೆಚ್ಚಿನ ಸಾಮಾಜಿಕ ಹಿಂತಚಿಂತನಾ ಕಾರ್ಯವನ್ನು ಕೈಕೊಳ್ಳುವಂತೆ ಮೈಸೂರು ಸರಕಾರವನ್ನು ಒತ್ತಾಯಿಸಬೇಕೆಂದು ಕೂಡಾ ಸೂಚಿಸಿಯಿತ್ತರು.

ಕೆನರಾ ಚೇಂಬರ್ ಆಫ್ ಕಾಮರ್ಸ್ ಸಭೆಯಲ್ಲಿ—

ಡಾ| ದೇಶಮುಖರು ಮಾತನಾಡುತ್ತಾ, ದೇಶದ ಆರ್ಥಿಕ ಅಭಿವೃದ್ಧಿಯು ಹೆಚ್ಚಾಗಿ ವಿಶ್ವವಿದ್ಯಾಲಯಗಳ ಪ್ರಗತಿಮೇಲೆ ಕೊಂದಿಕೊಂಡಿದೆ. ಹೀಗಾಗಿ ಚೇಂಬರ್ ಆಫ್ ಕಾಮರ್ಸಿನಂತಹ ವ್ಯಾಪಾರಿ ಸಂಸ್ಥೆಗಳು ವಿದ್ಯಾ ಸಂಸ್ಥೆಗಳಿಗೆ ಸಹಾಯನೀಡಬೇಕು. ವಿದೇಶಗಳಲ್ಲಿ ಶ್ರಮಿಸುವಂತೆ ಹಳೇ ವಿದ್ಯಾರ್ಥಿ ಸಂಘಗಳಿದ್ದು, ಆ ಸಂಘಗಳು ತಮ್ಮ ಮಾತೃ ಶಾಲೆಗೆ ಬೇಕಾದ ಸಹಾಯವನ್ನು ಒದಗಿಸುತ್ತವೆ. ಭಾರತದಲ್ಲಿ ಅಂತಹ ಸಂಸ್ಥೆಗಳ ಅಭಾವವಿದೆ. ಈ ಅಭಾವವನ್ನು ವ್ಯಾಪಾರಿ ಸಂಸ್ಥೆಗಳು ತುಂಬಬೇಕು ಎಂದರು. ಚೇಂಬರಿನ ಅಧ್ಯಕ್ಷ ಶ್ರೀ ಕೆ. ಶ್ರೀನಿವಾಸ ಶೆಣೈಯವರು ಪೂರಾವೆ ನಾಕಿದರು. ಉಪಾಧ್ಯಕ್ಷ ಶ್ರೀ ಮಹೇಲ್ ಶ್ರೀನಿವಾಸ್ನಾಯ್ಕರು ಧನ್ಯವಾದಗಳನ್ನಿತ್ತರು.

ಭೋಜನ ಸತ್ಕಾರ—

ಕೀರ್ತಿ ಮಹಲಿನಲ್ಲಿ ಡಾ. ದೇಶಮುಖ ದಂಪತಿಗಳಿಗೆ ಭೋಜನ ಸತ್ಕಾರ ನಡೆಯಿತು. ಶ್ರೀ ಬಿ. ಡಿ. ಸೆಟ್ಟಿರು ಅತಿಥಿಗಳನ್ನು ಸ್ವಾಗತಿಸಿದರು.

ಜಿಲ್ಲಾ ಅಭಿವೃದ್ಧಿ ಮತ್ತು ಹಿತ ಚಿಂತನಾ ಬೋರ್ಡಿನವರು—

ಅರ್ಪಿಸಿದ ಮಾನಪತ್ರಕ್ಕೆ ಉತ್ತರವೀಯುತ್ತಾ, ಡಾ. ದೇಶಮುಖರು ದ. ಕ. ಜಿಲ್ಲೆಗೆ ಪ್ರತ್ಯೇಕ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಬೇಕೆನ್ನುವ ಕೇಳಿಕೆಯು ಸದ್ಯದ ಪರಿಸ್ಥಿತಿಯಲ್ಲಿ ಕಾರ್ಯರೂಪಕ್ಕೆ ಬರುವಂತಾಗದಲ್ಲ. ಈ ಕೇಳಿಕೆಯು ಕಾರ್ಯರೂಪಕ್ಕೆ ಬರಬೇಕಾದಲ್ಲಿ ಇನ್ನು ಹೆಚ್ಚು ಸಮಯ ಹೋಗಬಹುದು. ಈಗ ಭಾರತದ ಒಂದು ವಿಶ್ವವಿದ್ಯಾಲಯದಲ್ಲಿ ಸರಾಸರಿ ಸುಮಾರು ಇಪ್ಪತ್ತು ಸಾವಿರ ವಿದ್ಯಾರ್ಥಿಗಳಿದ್ದಾರೆ ಅಮದಂದರೆ ಬರೇ ಎರಡು ಅಥವಾ ಮೂರು ಸಾವಿರ ವಿದ್ಯಾರ್ಥಿಗಳಿರುವ ಈ ಜಿಲ್ಲೆಗೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕೆ ಸರಕಾರವು ಒಪ್ಪುವಂತಿಲ್ಲವೆಂದರು. ಬೋರ್ಡಿನ ಕಾರ್ಯದರ್ಶಿ ಶ್ರೀ ಬಿ. ಬಿ. ಸೆಟ್ಟಿರು ಮಾನಪತ್ರವನ್ನರ್ಪಿಸಿದರು. ಬೋರ್ಡಿನ ಅಧ್ಯಕ್ಷ ಶ್ರೀ ಸಿ. ಎಸ್. ಕುಡ್ವರು ಧನ್ಯವಾದಗಳನ್ನಿತ್ತರು. ತಾ 13ರಂದು ಬೆಳಗ್ಗೆ ಡಾ| ದೇಶಮುಖ ದಂಪತಿಗಳು ಮಮ್ರಾಸು ಮೈಲಿನ ಮೂಲಕ ಕಲ್ಲಿಕೋಟೆಗೆ ಪ್ರಯಾಣಬೆಳೆಸಿದರು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 668/57 O. S. 450/51.

ನರಸಿಂಹ ಶೇರಿಗಾರ —ವಾದಿ.

ಮಂಜಯ್ಯ ಸೆಟ್ಟಿ ಕೂಡಾ —ಪ್ರತಿವಾದಿರು.

5ನೇ ಪ್ರ. ಸಂಕಮ್ಮ ಸೆಟ್ತಿ

6ನೇ ಪ್ರ. ಮೋನಪ್ಪ ಸೆಟ್ಟಿ

—ಸುಬ್ಬಕ್ಕ ಸೆಟ್ತಿರ ಮಕ್ಕಳು.

8ನೇ ಪ್ರ. ಕೊರಗಯ್ಯ ಸೆಟ್ಟಿ

—ಮುತ್ತಕ್ಕ ಸೆಟ್ತಿ ಮಗ.

ಕುಂದಾಪುರ ತಾಲ್ಲೂ ಅನಗಳ್ಳಿ ಗ್ರಾಮದಲ್ಲಿರುವವರು ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದ್ರೆ.

ಮೇಲಿನ ಅಮಲ್ಜಾರಿಯಲ್ಲಿ ವಾದಿಯು ಸ್ತ್ರಾಸ್ತಿಯನ್ನು ಜೇಲಮ್ಮಿಗೆ ಅಪೇಕ್ಷಿಸಿದ್ದಾನೆ. ಯೇಲಂ ಯಿಸ್ತಿಹಾನಿನ ಶರ್ತಗಳನ್ನು ನಿರ್ಣಯಿಸುವದೇ ಅಮಲ್ಜಾರಿಯನ್ನು 23-10 57 ಕ್ಕೆ ತಪ್ಪಿಗೆ ಯಿಟ್ಟಿದೆ. ನಿಮ್ಮದೇನಾದರೂ ಅಕ್ಷೇಪಯಿದ್ದರೆ ಆ ದಿನ ಬೇಗ 11ಗಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿಯದೆ.

By order of the Court.

Y. Thejappa Shetty,

Advocate for Plaintiff.

Coondapoor, 9—10—1957.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೆರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್
ಸಂತೆಕಟ್ಟೆ, ಉಡುಪಿ.

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಭಾರತದಲ್ಲಿ ಸಂಘೀಕರಿಸಲ್ಪಟ್ಟಿದು; ಮೆಂಬರರ ಹೊಣೆ ಮಿತಿಕರಿಸಲ್ಪಟ್ಟಿದೆ)

ಟೆಲಿಫೋನ್ ನಂ. 114] ಹೆಡ್ ಆಫೀಸು: ಮಂಗಳೂರು, ದ. ಭಾರತ. [ಫೋಸ್ಟ್ ಬಾಕ್ಸ್ ನಂಬ್ರ 113

ವರ್ಷಕ್ಕೆ ಶೇಕಡಾ 7½ ದರಕ್ಕೆ ಮೀರದ ಬಡ್ಡಿಯಲ್ಲಿ ಬಂಗಾರ ಮತ್ತು ಬಂಗಾರದ ಆಭರಣಗಳ ಮೇಲೆ ಸಾಲ ಕೊಡಲಾಗುವುದು.

THE KARNATAKA BANK LIMITED

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕಾಶ್ಮೀರ ರಾಜ್ಯದ ಸರ್ವತೋಮುಖ ಪ್ರಗತಿ

(೩ನೇ ಪುಟದಿಂದ)

ಕಲೆ ಹಾಗೂ ಕಸಬುಗಳನ್ನು ಸಮನ್ವಯಗೊಳಿಸುವುದಕ್ಕಾಗಿ ೨೦೦ ಉತ್ಪಾದನಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಶ್ರೀನಗರದ ಸಮೀಪದಲ್ಲಿ ಪೀಠೋಪಕರಣಗಳನ್ನು ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗಿದೆ. ಜಮ್ಮು ಮೂಲ ಔಷಧ ಸಂಶೋಧನಾ ಪ್ರಯೋಗಶಾಲೆಯು ರಕ್ಷೆ ಸೂರಕವಾಗಿರುವಂತೆ ಶ್ರೀ ನಗರದಲ್ಲಿ ಕಾರ್ಖಾನೆಯೊಂದನ್ನು ನಿರ್ಮಿಸಲಾಗಿದೆ ಉತ್ತಮ ರೀತಿಯ ಮಾರಾಟ ವ್ಯವಸ್ಥೆ, ಕಚ್ಚಾ ಪದಾರ್ಥಗಳನ್ನು ಪಡೆದುಕೊಳ್ಳುವ ಬಗ್ಗೆ ಸುಧಾರಿಸಿದ ವಿಧಾನಗಳು ಬೆಲೆಗಳ ನಿಯಂತ್ರಣೆ, ಸಂಶೋಧನೆಗಾಗಿ ಉತ್ತಮ ಸೌಲಭ್ಯಗಳು ಈ ಕ್ರಮಗಳನ್ನು ಕೈಗೊಳ್ಳಲಾಗಿವೆ ಈ ಎಲ್ಲ ಕ್ರಮಗಳ ಫಲರೂಪವಾಗಿ ೧೯೫೭ರ ಅಂತ್ಯದ ವೇಳೆಗೆ ಮೂಲ ಔಷಧಗಳ ಮಾರಾಟದಿಂದ ವರ್ಷಕ್ಕೆ ೧೦ ಲಕ್ಷ ರೂ. ಗಳ ಹಣ ದೊರೆಯುವುದೆಂಬ ನಿರೀಕ್ಷಣೆಯಿದೆ. ಸರಕಾರಿ ರೇಷ್ಮೆ ನೇಯಿಗೆ ಕಾರ್ಖಾನೆಯಲ್ಲಿನ ಮಗ್ಗಗಳ ಸಂಖ್ಯೆಯನ್ನು ನೂರಕ್ಕೆ ೨೫ರಷ್ಟು ಹೆಚ್ಚಿಸಲಾಗಿದೆ ಜಮ್ಮು ಮತ್ತು ಶ್ರೀನಗರದಲ್ಲಿರುವ ಮುದ್ರಣಾಲಯಗಳಿಗಾಗಿ, ಮುದ್ರಣ ಸಂಬಂಧವಾದ ಯಂತ್ರೋಪಕರಣಗಳನ್ನು ಕೊಳ್ಳಲಾಗಿದೆ.

ರಾಜ್ಯಕ್ಕೆ ಪ್ರವಾಸಿಗರು ಹೆಚ್ಚು ಹೆಚ್ಚಾಗಿ ಬರುವಂತೆ ಮಾಡುವುದಕ್ಕಾಗಿ ಜಮ್ಮು ಶ್ರೀನಗರ ರಸ್ತೆಯಲ್ಲಿರುವ ಡಾಕ್ ಬಂಗಲೆಗಳು ಹಾಗೂ ವಿಶ್ರಾಂತಿ ಧಾಮಗಳಲ್ಲಿನ ಸ್ಥಳಾವಕಾಶವನ್ನು ಹೆಚ್ಚಿಸಲಾಗಿದೆ. ಮೊಗಲ್‌ಉದ್ಯಾನ ವನವನ್ನು ಉತ್ತಮಪಡಿಸಲಾಗಿದೆ. ಪ್ರವಾಸಿಗರನ್ನು ಆಕರ್ಷಿಸುವ ಸ್ಥಳಗಳಿಗೆ ಹೊಸದಾಗಿ ರಸ್ತೆಗಳನ್ನು ನಿರ್ಮಿಸಲಾಗಿವೆ.

ಈಗಿರುವ ಜಲಾಶಯಗಳನ್ನು ಉತ್ತಮಪಡಿಸಿರುವುದರ ಜೊತೆಗೆ ಜಮ್ಮು ಮತ್ತು ಶ್ರೀನಗರಗಳಲ್ಲಿ ದೊಡ್ಡ ದೊಡ್ಡ ಕೊಳಾಯಿಗಳನ್ನು ಹಾಕಲಾಗಿವೆ. ಜಮ್ಮು ಪ್ರಾಂತದಲ್ಲಿನ ವಿವಿಧ ಸ್ಥಳಗಳಲ್ಲಿ ಹತ್ತು ಕೊಳವೆ ಬಾವಿಗಳನ್ನು ಸ್ಥಾಪಿಸಲಾಗಿವೆ.

ಜಮ್ಮು-ಕಂಡಿ ಜಲ ಸೂಚಿಕೆಯೋಜನೆಯಿಂದ, ಅಖನೂರ್ ಮತ್ತು ಲಖನ್‌ಪುರಗಳ ನಡುವೆ ಇರುವ ಗ್ರಾಮಗಳಲ್ಲಿನ ಒಂದು ಲಕ್ಷ ಜನರಿಗೆ ಹಾಗೂ ಸುಮಾರು ೫೦,೦೦೦ ಜಾನುವಾರುಗಳಿಗೆ ನೀರಿನ ತಾಪತ್ರಯ ನಿವಾರಣೆಯಾಗಿದೆ. ಯುಗ ಯುಗಗಳಿಂದ ಈ ಪ್ರದೇಶಗಳಲ್ಲಿನ ನಿವಾಸಿಗಳು ಕುಡಿಯುವ ನೀರಿಗಾಗಿ ಬಾವಿ, ಹೊಂಡ, ಕುಂಟೆಗಳನ್ನು ನೆಚ್ಚಬೇಕಾಗಿತ್ತು.

ಜಮ್ಮು ಮತ್ತು ಶ್ರೀನಗರಗಳಲ್ಲಿರುವ ಎರಡು ಕೇಂದ್ರ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆಯನ್ನು ೪೫೦ಕ್ಕೆ ಹೆಚ್ಚಿಸಲಾಗಿದೆ. ಜಮ್ಮು ಆಸ್ಪತ್ರೆಯಲ್ಲಿ ದಂತ ಚಿಕಿತ್ಸೆಯ ವ್ಯವಸ್ಥೆ ಮಾಡಲಾಗಿದೆ. ೨೦೦ ಹಾಸಿಗೆ ಸೌಲಭ್ಯಗಳುಳ್ಳ ಎರಡು ಕ್ಷಯರೋಗ ಚಿಕಿತ್ಸಾ ಆಸ್ಪತ್ರೆಗಳನ್ನು ೭೫ ಹಾಸಿಗೆಗಳುಳ್ಳ ೮ ಡೆಲ್ಲಾ ಆಸ್ಪತ್ರೆಗಳನ್ನು ೧೮ ಪ್ರಥಮ ದರ್ಜೆಯ ಹಾಗೂ ೭೪ ದ್ವಿತೀಯ ದರ್ಜೆಯ ಆಲೋಪಥಿಕ್ ಚಿಕಿತ್ಸಾಲಯಗಳನ್ನು, ೬೫ ದ್ವಿತೀಯ ದರ್ಜೆಯ ಆಯುರ್ವೇದ ಔಷಧಾಲಯಗಳನ್ನು ಮತ್ತು ಒಂದು ಕ್ಷಯ ರೋಗದ ಚಿಕಿತ್ಸಾಲಯವನ್ನು ಸ್ಥಾಪಿಸಲಾಗಿದೆ. ೪ ವೈದ್ಯಾಧಿಕಾರಿಗಳು ಮತ್ತು ೧೦ ತಂತ್ರಜ್ಞರನ್ನೊಳಗೊಂಡ ಮೂರು ತಂಡಗಳು ಪ್ರವಾಸ ಕೈಗೊಂಡು ಗುಹ್ಯರೋಗಗಳಿಂದ ನರಳುತ್ತಿರುವವರಿಗೆ ಔಷಧೋಪಚಾರ ನೀಡುತ್ತವೆ. ಸಾಂಕ್ರಾಮಿಕ ರೋಗ ಶಾಖೆಯವರು ಟೈಫಾಯಿಡ್ ರೋಗ ವಿರುದ್ಧ ಕಾರ್ಯಾಚರಣೆ ಕೈಗೊಂಡಿರುವರು.

ಸರಕಾರಿ ವಿದ್ಯಾ ಸಂಸ್ಥೆಗಳಲ್ಲಿ ಉಚಿತ ಶಿಕ್ಷಣ ಸೌಲಭ್ಯವಿದೆ ಪ್ರಾಥಮಿಕ ತರಗತಿಗಳಿಂದ ಪದವಿನಂತರದ ತರಗತಿಗಳ ವರೆಗೆ ಉಚಿತ ಶಿಕ್ಷಣ ಸೌಲಭ್ಯ ಕಲ್ಪಿಸಲಾಗಿದೆ. ೫ ಹೊಸ ಕಾಲೇಜುಗಳು ೫೫ ಪ್ರೌಢ ವಿದ್ಯಾಶಾಲೆಗಳು, ೪೮ ಮಾಧ್ಯಮಿಕ ಶಾಲೆಗಳು, ೭೬ ಕೇಂದ್ರ ಶಾಲೆಗಳು ಮತ್ತು ೫೯೦ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಲಾಗಿವೆ.

ಸರಕಾರಿ ಕಾರ್ಖಾನೆಗಳಲ್ಲಿ ಉಚಿತ ಔಷಧೋಪಚಾರ ವ್ಯವಸ್ಥೆ ಮಾಡಲಾಗಿದೆ, ಕೆಲಸಗಾರರಿಗೆ ಒಂದರಿಂದ ಮೂರು ತಿಂಗಳ ವೇತನವನ್ನು 'ಬೋನಸ್' ರೂಪದಲ್ಲಿ ಕೊಡಲಾಗುತ್ತಿದೆ. ಸರಕಾರಿ ಉದ್ಯೋಗಿಗಳ ಸಂಬಳ ಸಾರಿಗೆಗಳನ್ನು ಪರಿಷ್ಕರಿಸಲಾಗಿದೆ. ಗುಮಾಸ್ತೆ ಅಥವಾ ಅಧ್ಯಾಪಕರ ಕನಿಷ್ಠ ವೇತನವನ್ನು ತಿಂಗಳಿಗೆ ೫೦ ರೂ ಗಳಿಗೆ ಹೆಚ್ಚಿಸಲಾಗಿದೆ ಈ ವೇತನಗಳ ಪರಿಷ್ಕರಣೆಯಿಂದಾಗಿ ಸರಕಾರದವರಿಗೆ ೪೯.೨೭ ಲಕ್ಷ ರೂ.ಗಳ ಹೆಚ್ಚಿನ ಹಣ ವೆಚ್ಚವಾಗಿದೆ. ಈ ಹಣದಲ್ಲಿ ನೂರಕ್ಕೆ ೯೪ರಷ್ಟನ್ನು (ಅಂದರೆ ೪೭.೦೩ ಲಕ್ಷ ರೂ ಗಳ ಹಣವನ್ನು) ಗೆಜೆಟೆಡ್ ಹುದ್ದೆಯ ಕೆಳಗಿನ ಅಧಿಕಾರಿಗಳ ಸೌಲಭ್ಯಗಳಿಗಾಗಿ ಹೆಂಚಲಾಗಿದೆ.

೫೧ ಕೋಟಿ ರೂ ಗಳ ವೆಚ್ಚದ ದ್ವಿತೀಯ ಪಂಚವಾರ್ಷಿಕ ಯೋಜನೆಯು ಈಗ ಕಾರ್ಯಾಚರಣೆಯಲ್ಲಿದೆ. ಆಹಾರ ಅಭಾವದಿಂದ ಕೂಡಿರುವ ಈ ರಾಜ್ಯದಲ್ಲಿ ಆಹಾರ ಧಾನ್ಯಗಳನ್ನು ಹೆಚ್ಚುಹೆಚ್ಚಾಗಿ ಉತ್ಪಾದಿಸುವುದು ಯೋಜನೆಯ ಗುರಿಯಾಗಿದೆ ಜಮ್ಮು ಪ್ರಾಂತ್ಯದಲ್ಲಿ ಭತ್ತದ ಉತ್ಪಾದನೆಯು ೫೫-೫೬ರಲ್ಲಿ ಉತ್ಪಾದನೆಯಾದ ಪ್ರಮಾಣಕ್ಕಿಂತ ನೂರಕ್ಕೆ ೪೦ರಷ್ಟು ಹೆಚ್ಚುವ ನಿರೀಕ್ಷೆಯಿದೆ ಕಾಶ್ಮೀರ ಪ್ರಾಂತ್ಯದಲ್ಲಿ ನೂರಕ್ಕೆ ೩ ರಷ್ಟು ಹೆಚ್ಚುವ ನಿರೀಕ್ಷೆಯಿದೆ. ೧೮೪ ಲಕ್ಷ ಎಕರೆಗಳ ಹೆಚ್ಚಿನ ಭೂಮಿಯನ್ನು ನೀರಾವರಿಗೆ ಒಳಪಡಿಸುವ ನಿರೀಕ್ಷೆಯಿದೆ

ಯೋಜನಾವಧಿಯಲ್ಲಿ ವಿದ್ಯುಚ್ಛಕ್ತಿಯ ಸರಬರಾಯಿಯನ್ನು ನೂರಕ್ಕೆ ನೂರರಷ್ಟು ಹೆಚ್ಚಿಸುವ ನಿರೀಕ್ಷೆಯಿದೆ.

ರಾಜ್ಯದಲ್ಲಿ ೮೨೦ ಮೈಲಿಗಳಷ್ಟು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು. ೭೪೦ ಮೈಲಿಗಳ ರಸ್ತೆಗಳನ್ನು ದುರಸ್ತುಪಡಿಸಲಾಗುವುದು ೧೯ ಮುಖ್ಯವಾದ ಸೇತುವೆಗಳನ್ನು ನಿರ್ಮಿಸಲಾಗುವುದು. ಪ್ರವಾಸಿಗರ ಅನುಕೂಲಕ್ಕಾಗಿ ೩೬ ಲಕ್ಷ ರೂ ಗಳ ಬೆಲೆ ಬಾಳುವ ವಾಹನಗಳನ್ನು ಕೊಳ್ಳಲಾಗುವುದು. ಗ್ರಾಮೀಣ ಹಾಗೂ ನಗರಬಸ್ ಸೇವೆಗಳನ್ನು ಮತ್ತು ಶ್ರೀನಗರದಲ್ಲಿ ಕೇಂದ್ರ ವರ್ಕ್‌ಶಾಪ್‌ವೊಂದನ್ನು ಪ್ರಾರಂಭಿಸಲಾಗುವುದು

ರಾಜ್ಯದಲ್ಲಿ ಕಸಬುದಾರರ ಆರ್ಥಿಕ ವ್ಯವಸ್ಥೆಯನ್ನು ಉತ್ತಮಗೊಳಿಸುವ ನಿರೀಕ್ಷೆಯಿದೆ. ಎಂಪ್ಲೋಯಮೆಂಟ್‌ಗಳ ಸಂಖ್ಯೆಯು ೧೩೦ರಿಂದ ೨೦೦ಕ್ಕೆ ಹೆಚ್ಚುವುದು. ಬೆಕರಿನ್ ಹಾಂಗಾಂಗ್, ಕೈರೋ ಮತ್ತು ನೈರೋಬಿಗಳಲ್ಲಿ ಶಾಖೆಗಳನ್ನು ಸ್ಥಾಪಿಸಲಾಗುವುದು.

ಅಕ್ಷರಜ್ಞರ ಸಂಖ್ಯೆಯನ್ನು ನೂರಕ್ಕೆ ೧೨೦ರಿಂದ ೪೦ಕ್ಕೆ ಹೆಚ್ಚಿಸುವುದಕ್ಕಾಗಿ ನಾನಾ ರೀತಿಯ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ ೧೫೦ ಮೂಲ ಶಿಕ್ಷಣ ಶಾಲೆಗಳನ್ನು ತೆರೆಯಲಾಗುವುದು ಈಗಿರುವ ೫೦ ಪ್ರಾಥಮಿಕ ಮೂಲ ಶಿಕ್ಷಣ ಶಾಲೆಗಳನ್ನು ಮೂಲಶಿಕ್ಷಣ ಶಾಲೆಗಳನ್ನಾಗಿ ಪರಿವರ್ತಿಸಲಾಗುವುದು ಮಹಿಳೆಯರಿಗಾಗಿ ಎರಡು ಸ್ನಾತಕೋತ್ತರ ತರಬೇತಿ ಕಾಲೇಜುಗಳನ್ನು ತೆರೆಯಲಾಗುವುದು ಇವುಗಳಲ್ಲಿ ಶಾರೀರಿಕ ಶಿಕ್ಷಣ ಕಾಲೇಜೂ ಒಂದು. ೪ ಇಂಟರ್ ಕಾಲೇಜುಗಳನ್ನು ಡಿಗ್ರಿ ಕಾಲೇಜುಗಳನ್ನಾಗಿ ಪರಿವರ್ತಿಸಲಾಗುವುದು ಒಂದು ಎಂಎಡ್ ತರಗತಿಯನ್ನು ಪ್ರಾರಂಭಿಸಲಾಗುವುದು ಎಂಜಿನಿಯರಿಂಗ್ ಟೆಕ್ನಿಕ್ ಸಂಸ್ಥೆಯೊಂದನ್ನು ೪ ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳನ್ನೂ ಪ್ರಾರಂಭಿಸಲಾಗುವುದು.

ದ್ವಿತೀಯ ಯೋಜನೆಯಲ್ಲಿ ಕ್ಷಯ ಗುಹ್ಯರೋಗಗಳು ಮತ್ತು ಮಲೇರಿಯಾ ರೋಗಗಳ ವಿರುದ್ಧ ತೀವ್ರ ರೀತಿಯ ಕಾರ್ಯಾಚರಣೆ ಕೈಗೊಳ್ಳಲಾಗುವುದು. ವಿವಿಧ ಆಸ್ಪತ್ರೆಗಳಲ್ಲಿನ ಹಾಸಿಗೆಗಳ ಸಂಖ್ಯೆಯನ್ನು ೬೦೦ಕ್ಕೆ ಹೆಚ್ಚಿಸಲಾಗುವುದು ೧೬ ಕೊಸ ಚಿಕಿತ್ಸಾಲಯಗಳನ್ನು ರಾಜ್ಯದ ಇತರ ಭಾಗಗಳಲ್ಲಿ ತೆರೆಯಲಾಗುವುದು. ಜಿಲ್ಲಾ ಸಾರ್ವಜನಿಕ ಆರೋಗ್ಯ ಸೇವಾ ವಿಭಾಗವನ್ನೂ ಮೆಡಿಕಲ್ ಕಾಲೇಜೊಂದನ್ನೂ ಸ್ಥಾಪಿಸಲಾಗುವುದು.

ರಾಜ್ಯದಲ್ಲಿನ ಊರುಗಳು ಮತ್ತು ನಗರಗಳನ್ನು ಆಧುನೀಕರಿಸುವ ಉದ್ದೇಶವನ್ನು ಹೊಂದಲಾಗಿದೆ ಜಮ್ಮು ಪ್ರಾಂತ್ಯದ ಕಂಡಿ ಪ್ರದೇಶದಲ್ಲಿ ೩೦ ಕೊಳವೆ ಬಾವಿಗಳನ್ನು ನಿರ್ಮಿಸಲಾಗುವುದು ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು ಯೋಜನೆಯ ವಿವಿಧ ಬಾಬುಗಳ ಪ್ರಕಾರ ಅಗತ್ಯವಾಗುವ ಧನದ ಶಕ್ತಿ ಎಂದರೆ ವ್ಯಕ್ತಿ ಒಂದು ಲಕ್ಷ ಜನರಿಗೂ ೧೪೮ ತಿಂಗಳಕಾಲ ಉದ್ಯೋಗವಿರುವುದು.

ಹೀಗೆ ಕಾಶ್ಮೀರವು ೧೯೪೭ರಿಂದ ಭಾರತದಲ್ಲಿ ಸೇರಿಕೊಂಡಿದ ಕಳೆದ ಹತ್ತು ವರ್ಷಗಳಲ್ಲಿ ಇತರ ಭಾರತೀಯ ರಾಜ್ಯಗಳಂತೆಯೇ ಗಣನೀಯ ಅಭಿವೃದ್ಧಿಯನ್ನು ಪಡೆದಿದೆ, ಇನ್ನು ಮುಂದಕ್ಕೂ ಪಡೆಯಲಿದೆ. ಆದೇ ಪ್ರತ್ಯೇಕವಾಗಿ ಸಿಟಿದು ನಿಂತ ವಾಕಿಸ್ತಾನ ಅಂತರ್ಯುದ್ಧಗಳಲ್ಲಿಯೇ ತಲ್ಲೀನವಾಗಿ ತನ್ನ ಪ್ರಗತಿಯನ್ನು ಸಾಧಿಸ ಪುದರಲ್ಲಿ ತೀರ ಹಿಂದುಳಿದಿದೆ. ಅಲ್ಲದೆ, ಒಂದು ಘಟನಾತ್ಮಕವ ವ ಚುನಾವಣೆಯನ್ನೂ ಅದೊಂದ ಮಾಡಲಾಗಲಿಲ್ಲ. ಕಾಶ್ಮೀರವು ತನ್ನ ಘಟನೆಯನ್ನು ಸ್ವೀಕರಿಸಿ, ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿ, ಘಟನಾಬದ್ಧವಾದ ಆಡಳಿತೆಯನ್ನು ನಡೆಸುತ್ತಿದೆ. ಇಂತಹ ಕಾಶ್ಮೀರವನ್ನು ಕಬಳಿಸಲು ನೋಡುತ್ತಿರುವ, ಅದಕ್ಕಾಗಿ ಪ್ರಯತ್ನಿಸುತ್ತಿರುವ ಪಾಕಿಸ್ತಾನದ ಅನಿವೇತಕ್ಕೆ ಏನೆನ್ನಬೇಕು?



ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ.

3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಈ ಲೋಕ ಯಾರದು?

(೨ನೇ ಪುಟದಿಂದ)

ಕೈಯನ್ನು ಹಿಡಿದುಕೊಂಡಳು. ಬೇಗ ಬೇಗನೇ ಆ ಮಾರ್ಗವನ್ನು ಅವರು ದಾಟಿದರು. ಆಗ ಸತೀಶನೆಂದನು: "ಅಮ್ಮಾ ನೆಲ್ಲ ಮೆಲ್ಲನೆ...." ತಾಯಿ ಅರ್ಧದಲ್ಲಿಯೇ ತಡೆದು ಕೇಳಿದಳು: "ಬೇಗ ಬಾ"

ಅವರು ತಮ್ಮ ಮನೆಯೊಳಗೆ ಹೋದರು. ಅಲ್ಲಿ ಕೂತುಕೊಂಡು ಸೇಂಕುತ್ತಾ ತಾಯಿ ಹೇಳಿದಳು: "ಕೆಟ್ಟ ಹೆಂಗಸು! ಹೆಣದ ಅಹಂಕಾರ ಹೀಗೆಯೇ ಇರುತ್ತದೆ!"

ತಾಯಿ ಹಿಂತಿರುಗಿ ಬಂದುದನ್ನು ಕಂಡು ನರ್ಮದೆಯೂ ಅಲ್ಲಿ ಬಂದು ಕೂತಳು. "ಏನಾಯಿತಮ್ಮ? ಹಣ ಕೊಟ್ಟರೆ?" ಆಕೆ ಕಾತರಳಾಗಿಯೇ ಕೇಳಿದಳು.

"ಎಲ್ಲಿ ಕೊಟ್ಟಾರು? ಮದುವೆನೆಂತರ ಕೊಡುವರಂತೆ!"

"ನೀನು ಅವ ಗೆ ಹೇಳಲಿಲ್ಲವೆ, ಮನೆಯಲ್ಲಿ ಏನೂ ಇಲ್ಲ.. ಬಟ್ಟೆ ಇಲ್ಲ....ಅನ್ನ ಇಲ್ಲ....ಎಂದು?"

"ಎಲ್ಲವನ್ನೂ ಹೇಳಿದೆ. ಆದರೆ, ಕೇಳುವವರಾರು? ಅವರೆಲ್ಲೇನಾದರೂ ಅಭಾವವಾಗಿದ್ದರೆ ಕೇಳುತಿದ್ದರು. ಅಲ್ಲಿಯಾದರೋ ರೇಶ್ಮೆ ಸೀರೆಗಳ ಸಂತೆಯೇ ಇದೆ! ಚಿನ್ನ ಬೆಳ್ಳಿಗಳ ತಗಡಿನ ಮನೆ!" ರಾಮಯ್ಯ ಕರುಣ ಸ್ವರದಲ್ಲಿ ಹೇಳಿದಳು— "ಮತ್ತು; ಆ ಹೆಂಗಸು ನನ್ನ ಈ ಸೀರೆಯನ್ನು ನೋಡಿ ಹೇಳಿದಳು 'ಈ ದಿನವಾದರೂ ಈ ವಸ್ತ್ರದಲ್ಲಿ ಬರಬಾರದಾಗಿತ್ತು—ಮಾನಯಿಲ್ಲ, ನಾಚಿಗೆಯಿಲ್ಲ....' ಎಂದು."

ಆಕೆಯು ಸಿಟ್ಟಿನಲ್ಲಿಯೇ ಮುಂದುವರಿದಳು: "ಅವಳನ್ನು ಗದರಿಸಿ ಬಿಡುವ ಎಂದುಕೊಂಡೆ. ಆಕೆಯ ಮುಖಕ್ಕೆ ಒಂದು ಏಟು ಕೊಡುವವಳಿದ್ದೆ."

ನರ್ಮದಾ ಕೇಳಿದಳು: "ಕೆಲಸ ಮಾಡಿದುದರ ಮಜೂರಿ ಕೇಳುತಿದ್ದೇನೆ, ಭಿಕ್ಷೆಯನ್ನಲ್ಲ ಎಂದು ನೀನು ಹೇಳಿಲ್ಲವೆ?"

"ನಾನು ಹೇಳಿದೆ—ಯಜಮಾನ್ತಿಯರೆ, ಶ್ರಾವಣ ಮಾಸದಲ್ಲಿ ಕತ್ತಲೆಯೂ ಹಸುರಾಗಿಯೇ ಕಾಣುವುದು; ನೀವು ಈ ಲೋಕವನ್ನು ನಿಮ್ಮ ಕಣ್ಣುಗಳಿಂದ ನೋಡಿದ್ದೀರಿ. ನನ್ನ ದೃಷ್ಟಿಗಳಿಂದ ಅದನ್ನು ದಯಮಾಡಿ ಒಮ್ಮೆ ನೋಡಿರಿ."

"ಇದಕ್ಕೆ ಅವರೇನೆಂದರು?"

"ಈ ಮಾತನ್ನು ಕೇಳುತ್ತಲೆ ಅವರು ಸಿಡಿದು ಬಿದ್ದರು. ಒಳ್ಳೆದು, ಹೆಚ್ಚು ಮಾತಾಡ ಬೇಡ. ಯಾರಿಗೆ ತಿಂದುಂಣುವ ಭಾಗ್ಯವಿಲ್ಲ, ಅವರಿಗೆ ಏನೂ ಸಿಗುವುದಿಲ್ಲ ಅಗ ಬೇರೆಯವರನ್ನು ಕಂಡು ಅವರು ಅಸೂಯೆ ಪಡುತ್ತಾರೆ. ಇಲ್ಲಿ ಏನು ಭಾಗ್ಯ ಬರೆದಿದೆಯೋ ಅದನ್ನು ಪಡೆದೆ ಸರಿ, ನಾಳೆದು ಬಂದು ಲೆಕ್ಕ ಮಾಡಿ ದುಡ್ಡು ತೆಗೆದುಕೊಂಡು ಹೋಗು!"

"ಹಾಗಾದರೆ, ಇಂದಿನ ದಿನ ಹೇಗೆ ಕಳೆಯುವುದು? ಸತೀಶನೂ ..." ನರ್ಮದಾ ದುಃಖದಿಂದಲೇ ಕೇಳಿದಳು.

ರಾಮಯ್ಯ ತಡೆದು ಹೇಳಿದಳು— "ಆಕೆಯ ಮಾತು ಕೇಳುವಾಗಲೇ ನನ್ನ ಕಣ್ಣಿನಲ್ಲಿ ಬೆಂಕಿಯ ಕಿಡಿ ಸಿಡಿಯಿತು. ಆದರೆ, ಸಿಟ್ಟು ಮತ್ತು ತಿರಸ್ಕಾರಗಳಿಂದ ಅವು ಕಣ್ಣೀರಿನಲ್ಲಿ ಆರಿ ಹೋದುವು. ನಾನು ಕೂಡಲೇ ಅಲ್ಲಿಂದ ಹೊರಬಂದೆ. ಕೆಲವು ವರ್ಷಗಳ ಹಿಂದೆ ಆ ಮನೆಯೂ ಹೆಸರಿನಿಂದ ಕಂಗಾಲಾಗಿತ್ತು. ಕಾಳಿಕಂತೆಯ ವ್ಯಾಪಾರ ಮಾಡಿ ಅವನಿಷ್ಟು ದೊಡ್ಡವನಾಗಿದ್ದಾನೆ. ಮನೆಯಾಕೆ ಸೀತಾಸಿಯಾಗಿ ಬಿಟ್ಟಳು ಇಂದು ಊರಿನ ಅನೇಕ ಪ್ರತಿಷ್ಠಿತರು ಹಾಗೂ ಸರಕಾರೀ ಅಧಿಕಾರಿಗಳು ಭೋಜನ ಸಮಾರಂಭಕ್ಕೆ ಅಲ್ಲಿಗೆ ಬಂದಿದ್ದರು. ಜನತಾ ಸೇವೆ ಮಾಡುವುದನ್ನು ಬಿಟ್ಟು ಸಮಾಜದ ಶರೀರದ ಮೇಲೆ ನಿಂತಿರುವ ಸೇಠಿನ ಮನೆಯಲ್ಲಿ ತಿಂದುಂಡು ನಲಿಯುತಿದ್ದಾರೆ. ಅವರೆಲ್ಲರೂ ಕಳ್ಳ ಮತ್ತು ಕೊಲೆಗಾರರಂತಿದ್ದಾರೆ."

ಅಷ್ಟರಲ್ಲಿ ಸತೀಶ ಹೇಳಿದ—"ಓ ನಾನೂ. ಅವರ ಎಂಜಲನ್ನವನ್ನು ಕಂಡಿದ್ದೆ. ಅದರ ಮೇಲೆ ನಾಯಿ ಹಾಗೂ ಕಾಗಾಲರು ಹೊಡೆದಾಡಿಕೊಳ್ಳುತಿದ್ದರು. ಅನ್ನವನ್ನು ಎಂಜಲುಮಾಡಿ ಬಿಸಾಡುವುದು ಪಾಪವೆಂದು ಶಾಲೆಯಲ್ಲಿ ಅಧ್ಯಾಪಕರು ಒಂದು ದಿನ ಹೇಳಿದ್ದಾರೆ—ಅದು ದೇಶ ಮತ್ತು ಸಮಾಜಕ್ಕೆ ಬಗೆದ ದ್ರೋಹವಂತೆ ರೈತನು ಒಂದೊಂದು ಧಾನ್ಯವನ್ನೂ ಶ್ರಮಪೂರ್ವಕ ಬೆಳೆಯುತ್ತಾನೆ, ಹಾಗಿರುವಾಗ, ಹಣವಂತರು ಅದನ್ನು ಹಾಳುಗೆಡಹುತ್ತಾರೆ! ಎಂಜಲುಮಾಡುತ್ತಾರೆ!"

ತಾಯಿ ಹೇಳಿದಳು "ಹಾಂ ಮಗು, ಶ್ರೀಮಂತರು ಹಾಗೆಯೇ ಮಾಡುತ್ತಾರೆ. ಅವರಿಗೇನು ಜನತೆಯ ನೋವು ತಿಳಿದಿದೆಯೆ?

ನರ್ಮದಾ ನುಡಿದಳು "ಇದು ಶ್ರೀಮಂತರ ಜಗತ್ತು, ಅಮ್ಮಾ ನಮ್ಮಂತಹ ಬಡವರು ಜೀವಿಸುವುದಕ್ಕಾದರೂ ಅವಕಾಶವಿಲ್ಲ?"

ತಾಯಿಯು ಅದಕ್ಕೆ ಉತ್ತರ ಕೊಡಲಿಲ್ಲ. ಯಾವ ಕಾಲಕ್ಕೂ ಈ ಪ್ರಶ್ನೆಗೆ ಆಕೆ ಮರುತ್ತರವನ್ನೀಯಲೇ ಇಲ್ಲ.

(ಮೂಲ: ಯೋಜನಾ)

ಬೆಳೆದು ಬಾರದ ಶಿಶು ಸಾಹಿತ್ಯ—

ಬೆಳೆದು ತುಂಬಿ ಬರಬೇಕು

ಶ್ರೀ ಎಂ. ರಂಗ ರಾವ್

ಆಧುನಿಕ ಸಾಹಿತ್ಯಗಳಿಗೊಂದು ಪ್ರವಾಹಗತಿಯಿರುವ ಹಾಗೆಯೇ ಮಕ್ಕಳ ಸಾಹಿತ್ಯಕ್ಕೂ ಒಂದು ಗತಿಯುಂಟು. ಒಂದು ಚರಿತ್ರೆಯುಂಟು. ಮೊದಲು ಹೇಗೆಹೇಗೋ ಹರಿದುಬಂದ ಮಕ್ಕಳ ಸಾಹಿತ್ಯವು ಸುಮಾರು ಕಾಲು ಶತಮಾನದಿಂದ ಆಧುನಿಕ ಗತಿಯನ್ನು ವ್ರಾರಂಭಿಸಿತೆನ್ನಬಹುದು. ಅದಕ್ಕಿಂತ ಮೊದಲು ಅದು 'ಅಜ್ಜಿ ಕತೆಗಳ' ರೂಪದಲ್ಲಿ ಮನೆಮನೆಗಳಲ್ಲಿ ಬಾಯಿಂದ ಬಾಯಿಗೆ ಹರಿದುಕೊಂಡಿತ್ತು. ದೊಡ್ಡವರ ಸಾಹಿತ್ಯವೆನಿಸುವ ಜಾನಪದ ಕಥೆಗಳಾಗಿತ್ತು. ಗಾದೆಗಳು ಜೋಗುಳ ಹಾಡು, ಕೋಲಾಟದ ಹಾಡು, ಜಡೆಹೆಣೆಯುವ ಹಾಡು ಇವಲ್ಲಾ ಹಿಂದೆ ಸರ್ವಸಾಮಾನ್ಯವಾದ ಮಕ್ಕಳ ಸಾಹಿತ್ಯ. ಅವುಗಳಿಗೆಲ್ಲ ಮೇಲು ಪಜ್ಜುಯಾಗಿದ್ದುದು 'ಪಂಚತಂತ್ರ' ದಂತಹ ವ್ರಾಚೀನ ಕಥೆಗಳು.

ಇವುಗಳಿಗೆಲ್ಲ ಆಧುನಿಕ ರೂಪವು ದಿ. ಪಂಜೆ ಮಂಗೇಶರಾಯರಿಂದ ವ್ರಾರಂಭವಾಯಿತೆನ್ನಬಹುದು. ಮಕ್ಕಳ ಸಾಹಿತ್ಯಕ್ಕೆ ತಕ್ಕ ರೂಪರೇಷೆಗಳನ್ನು ಕೊಟ್ಟು ಒಪ್ಪ ಓರಣವಾಗಿ ಬಿಡಿಸಲಾರಂಭಿಸಿದವರು ಪಂಜೆ ಮಂಗೇಶರಾಯರು. ಆಗ ಮಕ್ಕಳಾಗಿದ್ದ ಈಗಿನ ಹಿರಿಯರಿಗೆಲ್ಲಾ ಅವರೇ ಮೇಲುಪಜ್ಜು ಹಾಕಿಕೊಟ್ಟ ಹಿರಿಯ ಗುರುಗಳು.

ಅನಂತರ ಅವರು ಹಾಕಿಕೊಟ್ಟ ದಾರಿಯಲ್ಲಿ ಹಲವಾರು ಮಂದಿ ಮಕ್ಕಳ ಸಾಹಿತ್ಯವನ್ನು ಬೆಳೆಸಿದ್ದಾರೆ, ಬೆಳೆಸುತ್ತಿದ್ದಾರೆ. ಬೆಂಗಳೂರು ಮಂಗಳೂರು, ಧಾರವಾಡ, ಹುಬ್ಬಳ್ಳಿ, ಬಿಜಾಪುರ ಮೊದಲಾದ ಮುಖ್ಯ ಮುಖ್ಯ ಕನ್ನಡ ಸ್ಥಾನಗಳಲ್ಲಿ ಮಕ್ಕಳ ಸಾಹಿತ್ಯ ಸಂಘಗಳು ಹುಟ್ಟಿ ಮಕ್ಕಳ ಸಾಹಿತ್ಯ ಬೆಳೆಸಲು ಶ್ರಮಪಡುತ್ತಿವೆ. ಇವುಗಳಲ್ಲಿ ಕೆಲವು ಉತ್ತಮ ಕೃಷಿಗಳು ನಡೆಯುತ್ತಿದ್ದರೂ ಅವು ಅಖಿಲ ಕರ್ನಾಟಕಕ್ಕೂ ಮಟ್ಟವಷ್ಟು ವಿಸ್ತೃತ ಯೋಜನೆಯ ಸುಲಭಸಾಧ್ಯ ವಸ್ತುಗಳಾಗಿಲ್ಲ.

ಇನ್ನು ಎಲ್ಲಾ ಕತೆಯೂ ಕಣ್ಣಿಗೆ ಬೀಳುವಂಥವು ಪತ್ರಿಕೆಗಳು. ಹೆಚ್ಚಾಗಿ ಎಲ್ಲಾ ಪತ್ರಿಕೆಗಳಲ್ಲಿಯೂ ಒಂದಾದರೂ ಮಕ್ಕಳ ಸಾಹಿತ್ಯದ ಪುಟವಿದ್ದೇ ಇದೆ ದೊಡ್ಡವರ ಪತ್ರಿಕೆಯಲ್ಲಿ ಮಕ್ಕಳ ಪುಟವಿರುವುದು ವಂಚಿತವೋ ಉಚಿತವೋ ಎಂಬ ವಿಷಯ ಹಾಗಿರಲಿ, ಆ ಪುಟಗಳಲ್ಲಿ ಬರುವ ಮಕ್ಕಳ ಸಾಹಿತ್ಯ ಆಧುನಿಕ ಅಭಿವೃದ್ಧಿಯ ಲಕ್ಷಣಗಳಿರುವ ಎಷ್ಟರ ಮಟ್ಟಿಗೆ ಕೂಡಿದೆ ಎಂದು ನೋಡಿದರೆ ಮುಖ ತಿರುಗಿಸಿಕೊಳ್ಳಬೇಕಾಗುತ್ತದೆ. ಇದಕ್ಕಿಂತ ಹತ್ತು ವರ್ಷ ಹಿಂದೆ ಇದ್ದ ಅಲ್ಪ ಸ್ವಲ್ಪ ಮಕ್ಕಳ ಸಾಹಿತ್ಯಗಳೇ ಎಷ್ಟೋ ಕ್ರಮಬದ್ಧವಾಗಿದ್ದುವೆಂದು ಹೇಳಬಹುದು.

ಈಗ ಮಕ್ಕಳ ಸಾಹಿತ್ಯವೆಂದು ಪ್ರಚಲಿತವಾಗುವ ವಿಷಯವನ್ನು ನೋಡುವಾಗ ಮಕ್ಕಳಿಂದಲೇ ರಚಿತವಾದ ತೊದಲುಮಾಡಿಗಳು, ಅನುಕರಣೆಗಳು, ಅನುವಾದಗಳು, ಆಧಾರ ಲೇಖನಗಳು, ಚೌರ್ಯಬುದ್ಧಿಯಿಂದ ಹಿಂದುಮುಂದು ಮಾಡಿ ಬರೆದ ಪ್ರಸಿದ್ಧ ಕಥೆಗಳು ಇಂಥವೇ ಮಕ್ಕಳ ಸಾಹಿತ್ಯವೆಂದು ಹೇಳಬೇಕಾಗುತ್ತದೆ, ನಮ್ಮದೇ ಎಂದು ಹೇಳಿಕೊಳ್ಳುವಂಥ ಬಾಲಸಾಹಿತ್ಯಗಳು ಅಪೂರ್ವವಾಗಿ ಹೋಗಿವೆ. ಅನುಕರಣೆ ಮಾಡಿ ಮಾಡಿ ಮೈಯುಂಡು ಹೋಯಿತೋ, ಕಲ್ಪನಾಶಕ್ತಿ ಕುಂಠಿಸಿ ಹೋಯಿತೋ ಎಂದು ಭಯವಾಗುತ್ತದೆ. ಮಕ್ಕಳ ಸಾಹಿತ್ಯವೆಂಬುದು. ಇನೋಪನ ಕಥೆಗಳು, ಅರೇಬಿಯನ್ ನೈಟ್ಸ್, ಪಂಚತಂತ್ರ ಮೊದಲಾದ ಸುಪ್ರಸಿದ್ಧ ಅಮರ ಸಾಹಿತ್ಯಗಳ ಚರ್ವಿತ ಚರ್ವಣಗಳಾಗಿವೆಯೇ ಹೊರತು ಆಧುನಿಕ ರೀತಿನೀತಿಗಳ ಸಂಬಂಧವುಳ್ಳ, ರಸ್ಯದವಂಥ, ಚೇಗಾದವರಂಥ, ಹೊಸಬಗೆಯ ಸುಂದರ ಕೌತುಕದಾಯಕವಾದ ಕೃತಿಗಳು ಕನ್ನಡದಲ್ಲಿ ಕಾಣಿಬರುವುದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ಅನುಕರಣೆಯಲ್ಲಾದರೂ ವ್ರಾವೀಣ್ಯ ಕಾಣಿಸಿದರೆ ಸಂತೋಷ ಪಡಬಹುದಿತ್ತು. ಮಕ್ಕಳ ಸಾಹಿತ್ಯದಲ್ಲಿ ಚಿತ್ರಗಳು ಒಹಳ ಮುಖ್ಯವಾಗಿವೆ. ಈಗಿನ ಮಕ್ಕಳ ಸಾಹಿತ್ಯದಲ್ಲಿ ಕೆಲವೊಂದು ಚಿತ್ರಗಳು ಬರುತ್ತವಾದರೂ ಅವುಗಳ ಅವಕ್ವತೆ, ಅನುಕರಣತೆಗಳು ಕೂಡಾ ಬೇಕರಬರಿಸುವಂತಿವೆ.

ಮಕ್ಕಳ ಸಾಹಿತ್ಯಕ್ಕೆ ಬುನಾದಿ ಸ್ವರೂಪವಾದುವು ಪಾಠಶಾಲೆಗಳು. ಶಾಲೆಯ ಪಾಠ್ಯದ ಸ್ತಂಭಗಳೇ ನಿಜವಾದ ಮಕ್ಕಳ ಸಾಹಿತ್ಯವೆನ್ನಬಹುದು. ಮಕ್ಕಳಿಗೆ ಬೇಕಾದ ಎಲ್ಲಾ ಸಾಹಿತ್ಯ ವಿಭಾಗಗಳೂ ಪಾಠ್ಯ ಪುಸ್ತಕಗಳಲ್ಲಿ ಅಳವಡಿಸಲಾಗುತ್ತಿದೆಯನ್ನೇ. ಆ ಪಾಠ್ಯ ಪುಸ್ತಕ ಪ್ರಕಾಶಕರ ಪರಿಣತ ಮತಿಗಳಿಂದ ಪದವೀಧರ ರೊಬ್ಬರ ಹೆಸರು ಆ ಪಾಠ್ಯ ಪುಸ್ತಕದ ಮುಖಪುಟದಲ್ಲಿ ಕಾಣಿಸುವುದಕ್ಕಾಗಿ, ಒಳಗಿನ ವಿಷಯಗಳಿಗೂ ಎಷ್ಟರ ಮಟ್ಟಿಗೆ ಸಂಬಂಧವಿದೆಯೆಂಬುದಕ್ಕೂ ದೇವರೇ ಉತ್ತರ ಕೊಡಬೇಕಾಗಿದೆ. ಅಕ್ಷರಗಳು ಸರಸ್ವತೀ ಸ್ವರೂಪವೆಂಬುದನ್ನು ನಂಬುವುದಾದರೆ ಈ ಬಗೆಯ ಮಿಥ್ಯಾಕ್ಷರಗಳನ್ನೋದುವ ಮಕ್ಕಳು ಮುಂದೆ ಸ್ವತಂತ್ರ ಸಾಹಿತ್ಯ ಸೃಷ್ಟಿಯ ಶಕ್ತಿಯನ್ನು ಹೇಗೆ ಪಡೆದಾರು? ಒತ್ತಾಯದಿಂದ ಕಲಿಸಲ್ಪಡುವ ಪಾಠ್ಯ ಪುಸ್ತಕಗಳಿಗೆಲ್ಲ ಒಳಗೂ ಹೊರಗೂ ಸಂಪೂರ್ಣ ಸತ್ಯವಾಗಿದ್ದರೇನೇ ಆ ಕ್ಷ ಸ್ವಾತಂತ್ರ್ಯವು ಸಿದ್ಧಿಸೀತೆಂದು, ಧಾವುಕರು ಅಭಿಪ್ರಾಯಪಟ್ಟರೆ ಅಲ್ಲವೆನ್ನಲಾದೀತೆ?

ಒಟ್ಟಾರೆ ಈಗಿನ ನಮ್ಮ ಮಕ್ಕಳ ಸಾಹಿತ್ಯ ಗತಿಯನ್ನು ಪರದೇಶಗಳ ಜತೆಗೆ ಹೋಲಿಸಲು ದೂರವೇ ಉಳಿಯಿತು. ಉತ್ತರ ಭಾರತದ ಜತೆಗೆ ಸೇರಿಸಲೂ ಸ್ವಲ್ಪಕಾಲ ಸಾಧನೆಬೇಕು. ಹೋಗಲಿ ನಮ್ಮ ದಕ್ಷಿಣದ ಜತೆ ಭಾಷೆಗಳಿಂದಿಗೆ ಸರಿಸಮವಾಗಿಯಾದರೂ ನಿಲ್ಲಬಲ್ಲುದೆ? ಎಂದರೆ ಊಹುಂ; ಇದಕ್ಕೂ ಈಗಿನ ಅಭಿವೃದ್ಧಿ ಸಾಲದು. ಮುಖ್ಯವಾಗಿ ಈಗಿನ ಮಕ್ಕಳ ಸಾಹಿತ್ಯಕರ್ತರೆಲ್ಲರೂ ಸ್ವತಂತ್ರ ಕಲ್ಪನೆಗೆ ಎಡೆಗೊಟ್ಟು ಸ್ವತಂತ್ರ ಸಾಹಿತ್ಯವನ್ನು ಮಕ್ಕಳು ನೆಕ್ಕು ನಲಿಯುವಂಥ್ಥಾ ಜೊತ್ತ ಚಿತ್ರಗಳೊಂದಿಗೆ ನಿರ್ಮಿಸಲು ತಮ್ಮನ್ನು ಪಳಗಿಸಿಕೊಂಡು ಅದಕ್ಕೆ ತಕ್ಕ ಸಾಹಿತ್ಯ ಸಾಧನವಾಗಬೇಕು. ಕನ್ನಡ ಚಿತ್ರಕಾರರೂ ಬಿಚ್ಚುಮನದಿಂದ ಸೊಂಟಕಟ್ಟಿ ಸಹಕರಿಸಬೇಕು.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. ೫/- ದೀರ್ಘಕಾಲದ ಬಾಧೆಗೆ ರೂ. ೮/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿಸ್ತರು: ಷಾ ಕಂಪೆನಿ, ಮಂಗಳೂರು—1.

(೧ನೇ ಪುಟದಿಂದ)

ಗಾವಕಾಶಗಳು ಬೆಳೆಯದಿರುವುದೇ ಕಾರಣ ಕುಶಲತಾಭಾವ, ತಾಂತ್ರಿಕಾಭಿವೃದ್ಧಿಯ ನಿಧಾನವು ನ್ಯಡೆ ಇವು ಸಹಾ ಅಲ್ಪ ಸ್ವಲ್ಪ ಅದಕ್ಕೆ ಪುಟ ಕೊಟ್ಟಿರುವುವು. ಯಂತ್ರಗಳನ್ನು ಬಳಸುವುದರಿಂದ ನಿರುದ್ಯೋಗ ಪ್ರಶ್ನೆಯು ಇನ್ನೂ ಹೆಚ್ಚಬಹುದೆಂದು ಕೆಲವರು ಹೆದರುತಿದ್ದಾರೆ.

ರಾಷ್ಟ್ರದ ಆರ್ಥಿಕಾಭಿವೃದ್ಧಿಯ ಬೆಳವಣಿಗೆಗೆ ಅಡ್ಡಗಾಲು ಹಾಕುವ ಕಾರಣಗಳಲ್ಲಿ ಅನುಭವಿಕ ಕುಶಲತಾಪೂರ್ಣ ಕರ್ಮಚಾರಿಗಳ ಅಭಾವ, ಮೇಲ್ವಿಚಾರಕರ ಕೊರತೆ, ತಂತ್ರಜ್ಞರು ಇಲ್ಲದಿರುವುದು ಎಲ್ಲ ಅಸ್ಯಾದ ರಾಷ್ಟ್ರಗಳಲ್ಲಿಯೂ ಕಂಡು ಬರುತ್ತದೆ. ಆದುದರಿಂದ, ಇದಕ್ಕಾಗಿ ಕುಶಲತೆಯ ಬೇಡಿಕೆಯನ್ನು ಈ ಅಸ್ಯಾದ ರಾಷ್ಟ್ರಗಳು ಮೊದಲಾಗಿ ಪೂರೈಸಿಕೊಳ್ಳಬೇಕು.

ಶ್ರೀ ಮೋರ್ಸೆಯವರು ಕೆಲಸದ ವೇತನ ಮತ್ತಿತರ ಸ್ಥಿತಿಗತಿಗಳಲ್ಲಿ ಅಸಮವಾದ ಬೆಳವಣಿಗೆಯನ್ನುಲ್ಲೇಖಿಸಿದ್ದಾರೆ ವೇತನಗಳ ಮಟ್ಟಗೆ ಕಳೆದ ಅಸ್ಯಾ ರಾಷ್ಟ್ರಗಳ ಸರ್ವೇಕ್ಷಣದಿಂದೀಚೆಗೆ ಬೇರೆ ಬೇರೆ ರಾಷ್ಟ್ರಗಳಲ್ಲಿ ಕನಿಷ್ಠ ವೇತನವನ್ನು ನಿಶ್ಚಯಿಸಿ ವೇತನ ಮಟ್ಟವನ್ನು ಸುಧಾರಿಸಿದ್ದಾರೆ ಇದರಿಂದಾಗಿ ಆಡಳಿತದಲ್ಲಿ ಬರುವ ಆತಂಕಗಳು ಕಡಿಮೆಯಾಗಿವೆ ವೇತನದ ಪ್ರಶ್ನೆಯನ್ನೇ ತಮ್ಮ ವಿಷಯವನ್ನಾಗಿಸಿದ ಟ್ರೇಡ್ ಯೂನಿಯನ್ ಸಂಸ್ಥೆಗಳು ಸಾಕಷ್ಟು ಬೆಳೆದಿವೆ.

ಸಾಮಾಜಿಕ ಭದ್ರತಾ ಕ್ಷೇತ್ರದಲ್ಲಿ ನಿಧಾನವಾದರೂ ನಿಶ್ಚಿತವಾದ ಕಾರ್ಯಗಳು ಕೈಗೊಳ್ಳಲ್ಪಟ್ಟಿವೆ ಬಡತನ, ಜನಸಾಂದ್ರತೆ, ವೈದ್ಯರ ಅಭಾವ, ವೈದ್ಯಕೀಯ ಸೇವೆಗಳ ಕೊರತೆಗಳಿಂದ ಎಲ್ಲ ರಾಷ್ಟ್ರಗಳೂ ಬಳಲುತ್ತಿವೆ ಹೀಗೆ ಬಳಲುವುದಕ್ಕೆ ಒಂದೇ ಒಂದು ಕಾರಣವೆಂದರೆ, ಜನಸಂಖ್ಯೆಯ ಹೆಚ್ಚಿನ ಭಾಗವು ಗ್ರಾಮೀಣ ಪ್ರದೇಶಗಳಲ್ಲಿ ಹರಡಿದ್ದು ಅವುಗಳಲ್ಲಿ ಸಮಾಜ ಭದ್ರತಾ ಯೋಜನೆಗಳನ್ನು ಹರಡುವುದು ತೀರ ಅಸಾಧ್ಯ ಆಧುನಿಕ ಒಹು ಕಷ್ಟತಮವಾದ ಕೆಲಸವಾಗಿದೆ— ಎಂದು ಶ್ರೀ ಮೋರ್ಸೆಯವರು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಅಸ್ಯಾದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಆದ ಪ್ರಗತಿಯು ಅತ್ಯಲ್ಪವಾದರೂ ಅದು ಸ್ಥಿರವಾದುದಾಗಿದೆ ಆದರೂ ತಾಂತ್ರಿಕ ವಿಭಾಗದತ್ತ ಹಾಗೂ ಔದ್ಯೋಗೀಕರಣದತ್ತ ಈ ರಾಷ್ಟ್ರಗಳು ತ್ವರಿತಗತಿಯಿಂದ ಮುಂದೊತ್ತಿ ಬಂದು ತಮ್ಮ ಅಭಿವೃದ್ಧಿಯನ್ನು ಮಾಡಿಕೊಳ್ಳುವುದು ಅತ್ಯಂತಾವಶ್ಯಕವಾಗಿದೆ ಎಂದು ಈ ವರದಿಯಿಂದ ತಿಳಿಯಬಹುದು.





ಅಮೆರಿಕದ ಸಂಯುಕ್ತ ರಾಷ್ಟ್ರದ ಸೇನಾಪಡೆಯ ವಾಯುದಳದ ಒಂದು ವಿಹಂಗಮ ನೋಟ ಇವುಗಳಲ್ಲಿ ಜೆಟ್ ಬಾಂಬರ್, ಬಾಂಬರ್, ಜೆಟ್ ಟೆಂಕರ್, ಟ್ಟೇಂಕರ್ ಮೊದಲಾದ ವಿಮಾನಗಳು ಕೂಡಿಕೊಂಡಿವೆ.

ಎದೆ ಮುಟ್ಟಿ ಸತ್ಯ ಹೇಳಿರಿ—

ನೀವು ಕರ್ತವ್ಯ ಪೂರೈಸಿರುವಿರಾ?

ಶ್ರೀ ಪಿ ಎನ್ ರಾಮಚಂದ್ರ ರಾವ್

ಭಾರತದ ದ ಸ್ಯವಿಮೋಚನೆಗೋಸ್ಕರ ಹೋರಾಡುತಿದ್ದ ಕಾಲವದು. ಇಡೀ ವಿಶ್ವವು ಎರಡು ವ್ಯಕ್ತಿಗಳ ಕಡೆಗೆ ಕಾತರತೆಯಿಂದ ನಿರೀಕ್ಷಿಸುತ್ತಿತ್ತು ಭಾರತವೆಂದರೆ ಈ ಇಬ್ಬರು ವ್ಯಕ್ತಿಗಳು ಎಂದಾಗಿತ್ತು ಮಹಾತ್ಮಾ ಗಾಂಧಿಯವರ ಬಲಗೈಯಾಗಿ ಮೆಚ್ಚಿನ ಶಿಷ್ಯನಾಗಿ, ಆತ್ಮೀಯ ಸ್ನೇಹಿತನಾಗಿ ನೆಹರೂರವರು ಕಾರ್ಯಮಗ್ನರಾಗಿದ್ದರು. ರಾಷ್ಟ್ರದ ನಾಯಕತ್ವಕ್ಕೆ ಗಾಂಧೀಜಿಯವರ ಉತ್ತರಾಧಿಕಾರಿ ಯಾರು ಎಂಬ ಪ್ರಶ್ನೆ ಬಂದಾಗ ಕೇವಲ ಎರಡೇ ಎರಡು ಹೆಸರುಗಳು ಜನತೆಯ ನಾಲಿಗೆಯ ಮೇಲೆ ಎದ್ದುಕಾಣುತ್ತಿದ್ದುವು ಒಂದು ಜವಾಹರಲಾಲರ ಹೆಸರು ಇನ್ನೊಂದು, ಸುಭಾಷ್‌ಚಂದ್ರ ಬೋಸರದು. ಭಾರತದ ಭವಿಷ್ಯ ಇವರನ್ನು ಹೊಂದಿಕೊಂಡಿದೆ ಎಂಬ ಭಾವನೆ ಮೂಡಿತ್ತು ಸುಭಾಷ್‌ಚಂದ್ರ ಬೋಸರ ಮಾರ್ಗ ಬೇರೆಯಾದಾಗ ನೆಹರೂ ಒಬ್ಬರೇ ಉಳಿದರು ಗಾಂಧಿಜೀಯವರ ತತ್ವಗಳನ್ನು ಅರ್ಥಮಾಡಿಕೊಂಡು ಅವರ ಪ್ರಕಾರ ನಡೆಯುವ ಸಂಪೂರ್ಣ ಶಕ್ತಿ ಇದ್ದುದು ಆಗ ಅವರೊಬ್ಬರಿಗೇ

ನೆಹರೂರವರ ಮನಸ್ಸಿನಲ್ಲಿ ಕೆಲವು ಸಲ ಪಾಶ್ಚಾತ್ಯ ಸಂಸ್ಕೃತಿ ಉಂಟುಮಾಡಿದ್ದ ಪ್ರಭಾವ ಎದ್ದು ನಿಲ್ಲುತಿತ್ತು ಆ ಸಂದರ್ಭದಲ್ಲಿ ಗಾಂಧಿಯವರೊಡನೆ ಒಮ್ಮೆ ವಿಚಾರವಿನಿಮಯ ಮಾಡುತ್ತಿದ್ದರೆ ಸಾಕು ಅವರು ಏನು ಪವಾಡ ಮಾಡುವರೋ? ನೆಹರೂರವರ ಮನಸ್ಸಿಗೆ ಶಾಂತಿ ಸಿಗತಿತ್ತು ನೆಹರೂ ಮತ್ತು ಗಾಂಧಿ ಇವರ ನಡುವೆ ಇದ್ದ ಅನ್ಯೋನ್ಯತೆಗೆ ಅವರಿಬ್ಬರಲ್ಲೂ ಇರುವ ಸಮಾನ ಗುಣಗಳೆನ್ನಬಹುದು ಸತ್ಯಪ್ರಿಯತೆ, ನ್ಯಾಯಪ್ರತಿಪಾದನೆ, ಅನ್ಯಾಯದ ಪ್ರತಿಭಟನೆ, ಸ್ವಾತಂತ್ರ್ಯಪ್ರಿಯತೆ ಮತ್ತು ಎಲ್ಲಕ್ಕೂ ಮೇಲಾಗಿ 'ಮಾನವತೆ' ಇವುಗಳಿಗೆ ಇಬ್ಬರೂ ಒಂದೇ ರೀತಿಯ ಗೌರವ ಕೊಡುತ್ತಿದ್ದರು

ಗಾಂಧಿಜೀಯವರ ರಾಜಕೀಯ 'ಪಟ್ಟಶಿಷ್ಯ' ನೆಹರೂರವರಾದರೆ ಆಧ್ಯಾತ್ಮಿಕ 'ಪಟ್ಟಶಿಷ್ಯ' ವಿನೋಬರವರು. ಈ ಈರ್ವರು ಶಿಷ್ಯರ ಇಂದಿನ ಕಾರ್ಯವನ್ನು ವಿಶ್ವವೇ ನೋಡುತ್ತಿದೆ. ಅವರ ವ್ಯಕ್ತಿತ್ವ ಹಿಮಾಲಯದಂತಿದೆ ಎನ್ನಬಹುದು ಬಾಪೂಜಿಯವರ 'ರಾಮರಾಜ್ಯ'ದ ಕನಸನ್ನು ನೆನಸನ್ನಾಗಿ ಮಾಡಲು ಪಣತೊಟ್ಟ ವೀರರಿವರು ಇಂತಹ ವ್ಯಕ್ತಿಗಳಿಗೆ ತರಬೇತಿ ನೀಡಿ 'ವ್ಯಕ್ತಿತ್ವ' ರೂಪಿಸಿದ ಬಾಪೂಜಿಯವರ 'ದೂರದೃಷ್ಟಿ'ಯನ್ನು ನೆನೆಸಬೇಕು

ಗಾಂಧೀಜಿಯವರನ್ನು ಭಾರತೀಯ ಜನರ ಹೃದಯದಲ್ಲಿ ಅಚ್ಚಳಿಯದಂತೆ ರೂಪಿಸಿದ ಅಂಶಗಳೆಂದರೆ ಎರಡು:— ಅವರ ಧಾರ್ಮಿಕ ಮನೋವೃತ್ತಿ ಮತ್ತು ಅವರ ಉನ್ನತ ಗುಣಗಳು ಭಾರತದಲ್ಲಿ ಧಾರ್ಮಿಕ ಮನೋವೃತ್ತಿಗಳಿಗೆ ವಿಶಿಷ್ಟ ಹಾಗೂ ಪೂಜ್ಯ ಸ್ಥಾನವಿದೆ ಹಿಂದೂ ಮತಕ್ಕೆ ಕಳಂಕ ಪ್ರಾಯವಾಗಿದ್ದ ಅಸ್ಪೃಶ್ಯತೆಯನ್ನು ನೀಗಿಸಲು ಅವರು ಪಟ್ಟಿದ ಶ್ರಮ ಪ್ರಯತ್ನ, ಹರಸಾಹಸ ಅವರನ್ನು ಅಷ್ಟು ಜನಪ್ರಿಯಗೊಳಿಸಿತು. ಪರಮತ ಸಹಿಷ್ಣುತೆ ಅವರ ಉನ್ನತವಾದ ಶ್ರೇಷ್ಠಗುಣ ಖಿಲಾಫತ್' ಚಳವಳದಲ್ಲಿ ಅವರು ಮುಸ್ಲಿಮರ ವಿಶ್ವಾಸಗಳಿಸಿದರು ಅವರು ವಿರೋಧಿಗಳೊಡನೆಯೂ ಉನ್ನತ ಮಟ್ಟದ ಸೌಜನ್ಯ ತೋರಿಸುತ್ತಿದ್ದರು ದಕ್ಷಿಣ ಆಫ್ರಿಕದಲ್ಲಿ ಅವರ ತೀವ್ರ ವಿರೋಧಿಗಳಾಗಿದ್ದ ಸೀಲ್ಡ್ ಮಾರ್ಷಲ್ ಸ್ಮಟ್ಸ್ ಮತ್ತು ಸರ್ ಸ್ಯಾಮ್ಯುಯೆಲ್ ಹೋರ್‌ರಂಥವರೂ ಗಾಂಧೀಜಿಯ ಬಗ್ಗೆ ಅಪಾರ ಗೌರವನ್ನಿಟ್ಟಿದ್ದರು ವೈಸರಾಯಿಯಾಗಿದ್ದ ಲಾರ್ಡ್ ವೆಲ್ಲಿಂಗ್‌ಟನ್ ಗಾಂಧೀಜಿಯಿಂದ ದೂರವಿರಲು ಪ್ರಯತ್ನಿಸುತ್ತಿದ್ದರು ಈ 'ನಾಂತ್ರಿಕ' ತನ್ನ ಮೇಲೆ ಮೋಹನಾಸ್ತ್ರ ಬೀರುವನೋ ಎಂಬ ಹೆದರಿಕೆಯಿಂದ.

ಪೂಜ್ಯ ಗಾಂಧೀಜಿಯವರು ಮುಗಿಸದೆ ಹೋಗಿದ್ದ ಕೆಲಸವನ್ನು ಇಂದು ವಿನೋಬಾ ಹಾಗೂ ನೆಹರೂರವರು ಮುಂದುವರಿಸುತ್ತಿರುವರು ವಿಶ್ವದಲ್ಲಿ ಶಾಂತಿದೂತರಾಗಿ ನೆಹರೂರವರು ಮಾಡುವ ಕಾರ್ಯ ಅಪಾರ ದೇಶದಲ್ಲಿ ಗಾಂಧೀಜಿಯವರ 'ರಾಮರಾಜ್ಯ' ದ ಕನಸನ್ನು ನೆನಸನ್ನಾಗಿ ಮಾಡಲು 'ಪ್ರಜಾಸೂಯ ಯಜ್ಞ'ದ ಅಧ್ವರ್ಯವಾಗಿ ನಿಂತು ಭೂದಾನ, ಗ್ರಾಮದಾನಾದಿಗಳಿಂದ 'ಗ್ರಾಮರಾಜ್ಯ' ವನ್ನು ಸ್ಥಾಪಿಸಹೊರಟಿದ್ದಾರೆ ವಿನೋಬರವರು. ಗ್ರಾಮರಾಜ್ಯದ ಸರಪಣಿ ಹರಡಿ ಎಲ್ಲೆಲ್ಲಿಯೂ ವ್ಯಾಪಿಸಿದಾಗಲೇ ಸರ್ವೋದಯ ಸಮಾಜ ಅರ್ಥಾತ್ 'ರಾಮರಾಜ್ಯ' ವಾಗಿರುತ್ತದೆ ಬಾಪೂ ಕನಸನ್ನು ನೆನಸನ್ನಾಗಿ ಮಾಡಲು ಪಣತೊಟ್ಟ ಈ ಮಹಾತ್ಮರ ಕಾರ್ಯದಲ್ಲಿ ಸಹಕರಿಸುವುದೇ ಬಾಪೂರವರ ಆತ್ಮ ಪ್ರೀತಿಯರ್ಥವಾಗಿ ಪ್ರತಿಜ್ಞಾಬದ್ಧರಾಗುವುದು ನಮ್ಮೆಲ್ಲರ ಕರ್ತವ್ಯ ನಾವದನ್ನು ನಿರ್ವಹಿಸಿರುವೆವೆ?

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು ಡಾಕ್ಟರ್ ಕೊರತ್ಕಲ್ ವೆಂಕಟ್ರಾಯ್, ಎಲ್ ಎಂ ಎಸ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ

ಬೆಲೆ ರೂ ೨—೦—೦ (ಟಪಾಲು ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K H Shetty, at the Navayuga press, Udipi S. India



ದೀಪಾವಳಿ ಸಂಚಿಕೆ
೧೯೫೭

Navayuga Deepavali Special 1957

ಬೆಲೆ: ೦—೩—೦

[illegible] ಲಿಮಿಟೆಡ್.

H. O: ಉಡುಪಿ. ESTD: 1925.

ದೀಪಾವಳಿಯ ಪುಣ್ಯದಿನದಂದು

ಗತವರ್ಷದ ಆಯವ್ಯಯಗಳ ಪರಿಶೀಲನೆ, ಮುಂದಿನ ವರುಷದ ವ್ಯವಹಾರದ ಕಲ್ಪನೆಗಳನ್ನು ಮಾಡುವುದರ ಜೊತೆಗೆ ನಿಮ್ಮ ಆರ್ಥಿಕ ವ್ಯವಹಾರಕ್ಕೆ ಅನುಕೂಲವಾದ ಒಂದು ಬೇಂಕನ್ನೂ ನೀವು ಆರಿಸಬೇಕಾಗಿದೆ.

[illegible] ಬೇಂಕ್

98 ಶಾಖೆಗಳಿಂದಲೂ ರೂ 11 ಕೋಟಿಗೂ ಮಿಕ್ಕಿದ ಚಲಾವಣಾನಿಧಿಯಿಂದಲೂ 32 ವರುಷಗಳಿಗೂ ಮಿಕ್ಕಿದ ಅನುಭವದಿಂದಲೂ ನಿಮ್ಮ ಸೇವೆಗೆ ಸಿದ್ಧವಿದೆ.

[illegible] INDUSTRIAL & BANKING
[illegible] LTD., UDIPI.

ದಿ. ಕೆನರಾ ಬೇಂಕಿಂಗ್ ಕೊರ್ಪೋರೇಶನ್ ಲಿಮಿಟೆಡ್

(ಸ್ಥಾಪನೆ 1906)

ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನಮ್ಮೆಲ್ಲ ಹಿತಚಿಂತಕರಿಗೆ, ಭಾಗೀದಾರರಿಗೆ, ಠೇವಣಾತಿದಾರರಿಗೆ ಹಾಗೂ ಇತರ ಗ್ರಾಹಕರಿಗೆ,
ಈ ವರುಷದ ದೀಪಾವಳಿಯು ಸುಖ-ಶಾಂತಿ-ಸಮೃದ್ಧಿಗಳಿಂದೊಡಗೂಡಿ
ಸಂತೋಷದಾಯಕವಾಗಿ ಪರಿಣಮಿಸಲಿ!

ಪ್ರತಿಯೊಂದು ವಿಷಯದಲ್ಲೂ, ಪ್ರತಿಯೊಂದು ಸಂದರ್ಭದಲ್ಲಿ,
ಮಿತವ್ಯಯವನ್ನು ತಪ್ಪದೆ ಅಭ್ಯಾಸಿಸಿರಿ; ಇದೇ ಈ ವರುಷದ
ದೀಪಾವಳಿಯಂದು ನಿಮ್ಮಲ್ಲಿ ನಮ್ಮ ಕೋರಿಕೆ!!

ನಮ್ಮ ಬೇಂಕು ಸಮಗ್ರ ಕರ್ನಾಟಕದ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ಅತಿ ಹಿರಿಯದಾಗಿ, ದಕ್ಷಿಣ ಭಾರತದ 5 ಸಂಸ್ಥಾನಗಳಲ್ಲಿ ಇದಕ್ಕೆ ಒಟ್ಟು 49 ಶಾಖೆಗಳೂ, ರಾಷ್ಟ್ರದಾದ್ಯಂತ ಏಜನ್ಸಿ ಏರ್ಪಾಡುಗಳೂ ಇವೆ! ಎಲ್ಲಕ್ಕೂ ಮೇಲಾಗಿ, ಇದಕ್ಕೆ 51 ವರುಷಗಳಿಗೂ ಮೇಲ್ಪಟ್ಟ ಅಗಾಧ ಬೇಂಕು ಅನುಭವವೂ ಇದ್ದು, ನಿಮ್ಮ ಬೇಂಕಾಗಿ ಆರಿಸಲ್ಪಡಲು ಇದು ಸರ್ವೋತ್ಕೃಷ್ಟವಿದೆ!!

ಸ್ಪ್ರಿಂಗುಗಳು ಮುರಿದು ಬೀಳುವುದನ್ನು ತಪ್ಪಿಸಿರಿ.

ಕೆನರಾ ಸ್ಪ್ರಿಂಗುಗಳು ನಿಶ್ಚಿಂತೆಯಿಂದ ನಿಮ್ಮನ್ನೊಯ್ಯುವುವು.

ಬಾಳಿಕೆ ಮತ್ತು ಭರವಸೆ ಬೇಕಾದಲ್ಲಿ ಅವೆರಡೂ ಈ ಸ್ಪ್ರಿಂಗಿನಲ್ಲಿವೆ.

ತಯಾರಿಕೆಯ ಪ್ರತಿ ಮಟ್ಟದಲ್ಲೂ ಗುಣ ಪರೀಕ್ಷಿಸಲಾಗಿದ್ದು ಅಮೇರಿಕದ ಅತ್ಯುತ್ತಮ ಮಟ್ಟದಂತೆ ಸ್ಪ್ರಿಂಗಿನ ಪ್ರತಿ ಹಾಳೆಗಳನ್ನು ದೀರ್ಘಕಾಲ ಬಾಳುವಿಕೆಯ ಬಗ್ಗೆ ಆಧುನಿಕ ವಿಜ್ಞಾನ ರೀತ್ಯಾ ಉಷ್ಣಶಕ್ತಿ ಪ್ರಯೋಗಿಸಲ್ಪಟ್ಟಿದೆ.

ತಯಾರಕರು

ದಿ. ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್

ಮಂಗಳೂರು — 3.

ನ ವ ಯು ಗ

ದೀಪಾವಳಿ ಸಂಚಿಕೆ ೧೯೫೭

ಸಂಪುಟ ೩೭. ಸಂಚಿಕೆ ೮.

ದೀಪಾವಳಿಯ ಪರ್ವದಿನಗಳು.

ಶ್ರೀ ಎಸ್. ಗೋಪೀಚಂದ ರಾವ್.

ಹಬ್ಬಹರಿದಿನಗಳಿಲ್ಲಾ ಹಿನ್ನೆಲೆಗಳಿವೆ. ಆದರೆ, ಒಂದೊಂದು ಮತ ಸಾಂಪ್ರದಾಯದವರು ತಮಗನುಕೂಲವಾದ ಹಿನ್ನೆಲೆಯ ಕಥೆಗಳನ್ನು ಕಟ್ಟಿ ಪ್ರಚಾರಮಾಡಿದ್ದಾರೆ. ಪ್ರಕೃತ ವಿಷ್ಣುಪುರಾಣವನ್ನು ಅನುಸರಿಸುವ ವೈಷ್ಣವ ಸಾಂಪ್ರದಾಯದಲ್ಲಿ ಬಳಕೆಯಿರುವ ಹಿನ್ನೆಲೆಯನ್ನೂ ದೀಪಾವಳಿಯ ಪ್ರಾಮುಖ್ಯವನ್ನೂ ಈ ಲೇಖನ ತಿಳಿಸುತ್ತದೆ.

ಯುಗಾದಿ ಮತ್ತು ದೀಪಾವಳಿ ಹಬ್ಬದ ದಿನಗಳು ಸರ್ವ ಸಾಮಾನ್ಯವಾಗಿ ಜನರ ಮೆಚ್ಚಿನ ಉತ್ಸವಗಳಾಗಿ ಪರಿಣಮಿಸಿವೆ. ಯುಗಾದಿ ಕಟ್ಟಿದಂದು ಹೊಸ ವರ್ಷವು ಪ್ರಾರಂಭವಾಗಿ ವರ್ಷದ ಮೊದಲ ದಿನದಲ್ಲಿಯೇ ಜೀವನದ ಕಹಿಸಿಹಿಗಳನ್ನು ಅನುಭವಿಸಲು ನಾವು ಸಿದ್ಧರಾಗಿ ಬೇವು ಬೆಲ್ಲವನ್ನು ತಿನ್ನುತ್ತೇವೆ. ದೀಪಾವಳಿಯ ದಿನ ದೀಪಗಳನ್ನು ಬೆಳಗಿಸಿ, ಅಂಧಕಾರದಲ್ಲಿ ಪ್ರಭೆಯನ್ನು ಬೀರುತ್ತೇವೆ.

ದೀಪಾವಳಿ ಹಬ್ಬವನ್ನೇಕೆ ಆಚರಿಸಬೇಕೆಂಬುದರ ಬಗ್ಗೆ ಹಲವಾರು ಕಥೆಗಳು ಪ್ರಚಲಿತವಿವೆ. ಒಂದೊಂದು ಕಡೆಗಳಲ್ಲಿ ಒಂದೊಂದು ಕಥೆಗೆ ಜನರ ಮನಪೊಲಿದಿದೆ. ಈ ದೀಪಾವಳಿ ಸರ್ವ ಸಾಮಾನ್ಯವಾಗಿ ಮೂರು ದಿನಗಳ ಹಬ್ಬ. ಪ್ರಾಯಶಃ ಬೇರುವ ಹಬ್ಬಗಳೂ ಇಷ್ಟೊಂದು ದೀರ್ಘಕಾಲವಿರಲಾರದು. ಎಂತಲೇ ಈ ದೀಪಾವಳಿಯು ಇತರ ಎಲ್ಲ ಸರ್ವದಿನಗಳಿಗಿಂತಲೂ ದೊಡ್ಡ ಹಾಗೂ ವೈಶಿಷ್ಟ್ಯ ಪೂರ್ಣ ಹಬ್ಬವೆಂದು ಪ್ರಖ್ಯಾತವಾಗಿದೆ.

ದೀಪಾವಳಿಯು ಅಮವಾಸ್ಯೆಯ ದಿನ ಬರುವುದು. ಅದರ ಹಿಂದಿನ ದಿನ ನರಕ ಚತುರ್ದಶಿಯ ಹಬ್ಬ. ಮುಂದಿನ ದಿನ ಗೋಪೂಜೆಯೆಸಗುವ ಪಾಡ್ಯದಿನವೆಂಬುದು ಎಲ್ಲರಿಗೂ ತಿಳಿದಿದೆ. ಕೆಲವೊಮ್ಮೆ ತಿಥಿಗಳ ದೆಸೆಯಿಂದಾಗಿ ಮೂರುದಿನಗಳ ಹಬ್ಬವನ್ನು ಎರಡೇ ದಿನಗಳಲ್ಲಿ ಮುಗಿಸಬೇಕಾಗಿಯೂ ಬರುವುದುಂಟು!

ದೀಪಾವಳಿಯು ಆಶ್ವೀಜ ಮಾಸದಲ್ಲಿ ಬರುವುದು. ಶಂದ್ಯತುವು ತಾಂಡವವಾಡುತ್ತಿದ್ದು, ಜನಕ್ಕೆ ಹಿತವಾಗಿ ಕಣ್ಣಿಗೆ ಕಟ್ಟುವುದು. ಬಿಸಿಲು, ಮಳೆ, ಚಳಿ ಎಲ್ಲವೂ ಒಂದು ಮಿತಿಯಲ್ಲಿದ್ದು ಹಿತವಾದ ವಾತಾವರಣದಿಂದ ಕೂಡಿರುವುದು. ಆಕಾಶವು ನಿರಭ್ರವಾಗಿಯೂ ಸ್ವಚ್ಛವೇತಳವು ಹಚ್ಚನೆ ಹುಲ್ಲಿನ ಹಾಸಿಗೆಯಂದಲೂ ರಮಣೀಯವಾಗಿ ಕಾಣುವುದು. ನದಿ, ಕೆರೆ, ಕುಂಟೆಗಳ ನೀರು ಪಡೆದೊಳಗೇನೆ ಹರಿದು, ತಳವು ಹಾವನೆಗಳಿಂದ ಆವರಿಸಿಕೊಂಡಿರುವುದು. ಪೈರು ಹಣ್ಣಾಗಿ, ಬೆಳೆ ಕೈಗೆಬಂದು, ಮನೆಗಾಲದ ಉದ್ದವಾದ ದಿನಗಳು ದೂರವಾಗಿ, ಜನವೆಲ್ಲರೂ ಹೊಸ ಫಸಲನ್ನು ಸಂತೋಷದಿಂದ ಕಣ್ಣಾಣಿಯೆ ನೋಡುತ್ತಿರುವರು. ಅಂತೆಯೇ ಬಹಳ ಕಷ್ಟದಿಂದ ತಾವು ಕುಂಟುತ್ತ ಕಳೆದ ವರ್ಷಕಾಲದ ದುರ್ದಿನಗಳ ಜ್ಞಾಪಕವು ಮರೆತುಹೋಗಿ, ಜನರಲ್ಲಿ ನೂತನ ಚೇತನೋತ್ಸಾಹಗಳು ಕುಂಬಿ ತುಳುಕುತ್ತಿರುವುವು. ಇಂತಹ ಸಮಯದಲ್ಲಿ ಎಡೆಬಿಡದೆ ಮೂರು ದಿನಗಳ ಹಬ್ಬವನ್ನು ನಮ್ಮ ಜನರು ಆಚರಿಸದೆ, ಅದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ.

ಭಾರತೀಯರು ಆಚರಿಸುವ ಪ್ರತಿಯೊಂದು ಹಬ್ಬಕ್ಕೂ ಒಂದೊಂದು ತನ್ನದೇ ಆದ ಹಿನ್ನೆಲೆಯ ಕಥೆಯಿದೆ. ಕೃಷ್ಣನ ಜನ್ಮದಿನ ಕೃಷ್ಣಾಷ್ಟಮಿ, ಗಣೇಶನ ಜನ್ಮದಿನ ಗಣೇಶೋತ್ಸವ, ಮಹಿಷಾಸುರನನ್ನು ಕೊಂದ ದಿನ ವಿಜಯದಶಮಿ ಹೀಗೆಯೇ ದೀಪಾವಳಿಯ ಪ್ರತಿ ದಿನದಾಚರಣೆಯೂ ವಿಶಿಷ್ಟ ಹಿನ್ನೆಲೆಯಿಂದ ಕೂಡಿದೆ.

ಹಿಂದೊಮ್ಮೆ ಭೂದೇವಿಯ ಭಾರವು ಹೆಚ್ಚಾಗಲು ಭೂಮಿಯು ಕುಸಿಯತೊಡಗಿತಂತೆ. ಆ ಸಂದರ್ಭದಲ್ಲಿ ಭಗವದ್ಭಕ್ತರೂ ದೇವತೆಗಳೂ ಜನರಕ್ಷಕನಾದ ಭಗವಂತ ಶ್ರೀ ವಿಷ್ಣುವನ್ನು ಪ್ರಾರ್ಥಿಸಲು, ಆಗ ಆತನು ಕೂರ್ಮಾವತಾರವನ್ನು ಕಡೆದು, ಮುಳುಗುತ್ತಿರುವ ಪೃಥ್ವೀದೇವಿಯನ್ನು ಅಧರಿಸಿ ಹಿಡಿದನಂತೆ! ಹೀಗಿರುವಾಗ ಕಾರಣಾಂತರದಿಂದ, ಭೂದೇವಿಗೂ ವಿಷ್ಣುವಿಗೂ ಸಂಭೋಗದ ಅಚಾತುರ್ಯ ನಡೆದುಹೋಯಿತು. ತತ್ಪರಿಣಾಮವಾಗಿ ಭೂದೇವಿಯ ಗರ್ಭದಲ್ಲಿ ಒಂದು ಶಿಶು ಹುಟ್ಟಿತು. ಅದರ ಹೆಸರೇ ನರಕಾಸುರ ಎಂದು.

ಕಾಲ ಕಳೆದಂತೆ ಬಾಲಕ ದೊಡ್ಡವನಾದ. ಭೂಮಿಯೆಲ್ಲವನ್ನೂ ತನ್ನ ಅಂಕಿತದಲ್ಲಿಟ್ಟುಕೊಂಡು ಆಳ ತೊಡಗಿದ. ರಾಕ್ಷಸ ಸ್ವಭಾವ ಆತನನ್ನು ಅಗಲದಿದ್ದುದರಿಂದ, ಜನರಿಗೆ ಕಷ್ಟ ಹೆಚ್ಚಾಯಿತು, ಭೂಮಿಯ ಭಾರ ಮತ್ತೂ ಹೆಚ್ಚಾಯಿತು. ಆಕೆ, ಬ್ರಹ್ಮನನ್ನು ಮುಂದಿಟ್ಟುಕೊಂಡು ವಿಷ್ಣುವನ್ನೊಲಿಸಿ, ಭೂಭಾರ ಹರನಾಗಿ ಜನಿಸುವಂತೆ ಪ್ರಾರ್ಥಿಸಲು, ಶ್ರೀ ಕೃಷ್ಣನಾಗಿ ಅವತಾರವನ್ನು ಮಾಡಿ, ನರಕಾಸುರನನ್ನು ಕೊಂದನಂತೆ! ಆ ಮೇಲೆ, ನರಕಾಸುರನು ತನ್ನ ಪರಮ ಭಕ್ತನಾದುದರಿಂದ, ಆಯಸಿಚ್ಛೆಯಂತೆ, ಅವನು ಮರಣಗೊಂಡ ದಿನವನ್ನು ಚಂದ್ರತಾರೆಯರಿರುವವರೆಗೂ ಭೂಮಿಯ ಜನರು ಆಚರಿಸುವಂತೆ ತಕ್ಕ ಏರ್ಪಾಡನ್ನು ಮಾಡುವುದಾಗಿ ಭರವಸೆಯಿತ್ತು, ಆತನನ್ನು ಗತಾಸುವನ್ನಾಗಿ ಗೈದನಂತೆ ಆತನ ಭಂವಸೆಯಂಪೊಳ್ಳಾಗದೆ, ಆದರ ಚಿರಸ್ಮರಣಾರ್ಥವಾಗಿಯೇ ನಾವು ನರಕ ಚತುರ್ದಶೀ ದಿನವನ್ನು ಆಚರಿಸುತ್ತಿದ್ದೇವಂತೆ.

ನರಕ ಚತುರ್ದಶಿಯ ದಿನ ಮುಂಜಾನೆ ಬಲುಬೇಗನೆ, ಎಂದರೆ, ಹಿಂದಿನ ರಾತ್ರೆ ಚಂದ್ರೋದಯದಲ್ಲಿ ಎಣ್ಣೆಹಚ್ಚಿ ಸ್ನಾನ ಮಾಡಿ, ನರಕಾಸುರನ ಸೂತಕ ಕಳೆದುಕೊಂಡುದನ್ನು ನಾವು ನೆನಪಿಸುತ್ತೇವೆ. ಇದೇ ನರಕನ ಬಯಕೆಯಾಗಿತ್ತು. ಅಲ್ಲದೆ, ಇದರಿಂದಾಗಿ, ಅನಾಯಾಸವಾಗಿ ವರುಣದೇವರಿಗೂ ಒಂದು ಪೂಜೆ ಪಡೆಯುವ ಭಾಗ್ಯ ಬಂತು. ಸ್ನಾನಮಾಡುವುದಕ್ಕೆ ಹಿಂದಿನರಾತ್ರಿ ಹರಿಗೆಯನ್ನು ನೀರಿನಿಂದ ತುಂಬಿಸಿ, ನಾನಾ ವಿಧದ ಪುಷ್ಪಗಳಿಂದ ಅಲಂಕರಿಸಿ, ಜಲಪೂಜೆಯನ್ನೂ ಮಾಡಿ, ವರುಣದೇವರ ಕೃಪಾಕಟಾಕ್ಷವನ್ನೂ ನಾವು ಪಡೆದು ಪಾವನರಾಗುತ್ತೇವೆ. ಹೀಗೆ ಮೊದಲನೆಯದಿನ ಬಹಳ ಮೋಜಿನಲ್ಲಯೇ ಕಳೆದರೆ, ಮತ್ತೆ ಬರುವುದು ಅನಂದದ ಸುಗ್ಗಿ!

ಚತುರ್ದಶಿಯ ಮಾರನೆದಿನ ದೀಪಾವಳಿ ಅಮವಾಸ್ಯೆ. ಅಮವಾಸ್ಯೆಯದಿನ ಚಂದ್ರೋದಯವೇ ಇಲ್ಲದ ರಾತ್ರೆ ಭೂಮಿಯಲ್ಲಿ ದೀಪಗಳನ್ನಿಟ್ಟು ಬಲಿಯನ್ನು ಕರೆದು, ಪ್ರತಿವರ್ಷವೂ ಭೂಮಿಯಲ್ಲಿ ಫಲ ಹೆಚ್ಚುಬರಲೆಂದು ಕೇಳಿಕೊಳ್ಳುವುದು ಸಾಂಪ್ರದಾಯಕ ಪದ್ಧತಿಯಾಗಿದೆ. ಅಂದು ಭೂಮಿಗೆ ದೀಪವನ್ನಿಟ್ಟು, ಅವಲಕ್ಕಿಯಾದಿಗಳನ್ನು ಹಾಕಿ, ಬಲೀಂದ್ರನನ್ನು ಕರೆದು ಹೋದ ಮೇಲೆ, ಪಾತಾಳ ಲೋಕದಿಂದ ಬಲಿಯು ಬಂದು ಅವನ್ನು ತಿಂದು, ಹೊಲದೊಡೆಯನನ್ನು ಹರಸುವನಂತೆ. ಬಲಿಚಕ್ರವರ್ತಿ ಪಾತಾಳವನ್ನೇಕೆ ಹೊಕ್ಕ?

ನರಸಿಂಹಾವತಾರದಲ್ಲಿ ಭಗವಂತ ವಿಷ್ಣುವು ದುಷ್ಟರಕ್ಷಕನೂ ಶಿಷ್ಟಜನ ಕಷ್ಟಕರನೂ ಆಗಿ ಮೂರು ಲೋಕದ ಗಂಡೆನಿಸಿ ಮೆರೆಯುತ್ತಿದ್ದ ರೂಕ್ಷರಾಕ್ಷಸ ಹಿರಣ್ಯ ಕಶಿಪುವನ್ನು ಆತನ ಮಗ ಪ್ರಹ್ಲಾದನನ್ನುದ್ಧರಿಸುವ ಸಲುವಾಗಿ ಕೊಂದನಷ್ಟೆ? ಆ ಪ್ರಹ್ಲಾದನು ಪರಮ ಭಾಗವತನಾಗಿದ್ದರೂ, ಮುಂದೆ, ಆ ವಂಶದವರನ್ನು ಹುಟ್ಟುಗುಣ ಬಿಡಲಿಲ್ಲ. ಪ್ರಹ್ಲಾದನ ಮೊಮ್ಮಗನಾದ ಬಲಿ ಎಂಬವನು ಮಹತ್ವಾಕಾಂಕ್ಷಿಯಾಗಿದ್ದು, ಸ್ವರ್ಗ ಮರ್ತ್ಯ ಪಾತಾಳವನ್ನು ತನ್ನ ಅಂಕಿತದಲ್ಲಿರಿಸಿ, ದೇವೇಂದ್ರನ ಸಿರಿವೈಭವವೆಲ್ಲವನ್ನೂ ನೆಳೆದೊಯ್ದು ದಿಕ್ಕುಗೆಡಿಸಿದನಂತೆ! ಅಂತಹ ಪರಾಕ್ರಮಿಯಾದ ರಾಕ್ಷಸ ರಾಜನಾದ ಬಲಿಯು ದೇವತೆಗಳಿಗೆ ಉಪದ್ರಕಾರಿಯೆನಿಸಿದರೂ, ಪ್ರಜಾಜನರನ್ನು ವಿವಿಧ ವಿಧಾನಗಳಿಂದ ರಂಜಿಸುತ್ತಾ ರಾಜನೆಂಬ ಹೆಸರಿಗೆ ಯೋಗ್ಯನಾಗಿದ್ದನು. ಅಲ್ಲದೆ, ಪ್ರಹ್ಲಾದನಂತೆ ಪರಮಾತ್ಮ ಭಕ್ತನೂ ಹೌದು. ಹೀಗಿದ್ದುದರಿಂದ, ದೇವತೆಗಳ ಯಾವ ಕೃತ್ರಿಮೋಪಾಯವೂ ಆತನಲ್ಲಿ ನಡೆಯಲಿಲ್ಲ. ಸರಿ, ಜಗದ್ರಕ್ಷಕ ಮಹಾವಿಷ್ಣುವನ್ನು ಹುಯ್ಲಿಡುವುದೊಂದೇ ಬಾಕಿ. ಕನ್ನೆಡೆಗೆ ಬಂದವರನ್ನು ಕಂಡು ಆತನಿಗೆ ಧರ್ಮ ಸಂಕಟವಾಯಿತು. ಬಲಿಯನ್ನು ಗೆಲ್ಲುವುದಾದರೂ ಹೇಗೆ? ಆತನ ಅಭ್ಯುತ್ಥಾನವನ್ನು ತಡೆ ಹಿಡಿಯುವುದಾದರೂ ಹೇಗೆ? ಆದರೆ, ದೇವತೆಗಳನ್ನು ಮರೆತು ಬಿಡಲಾಗುತ್ತದೆಯೆ? ಅದುದರಿಂದಲೇ ಮಲತಾಯಿ ಮಕ್ಕಳಾದ ದೈತ್ಯರ ಮೇಲೆ ಕ್ರೂರಕಟಾಕ್ಷವನ್ನು ಪಸರಿಸಲೇ ಬೇಕಾಗಿತ್ತು.

ದಾನಶೂರನೆನಿಸಿದ ದಾನವನನ್ನು ದಾನದಿಂದಲೇ ದಾಸ್ಯತನವನ್ನು ಕೈಗೊಳ್ಳುವಂತೆ ಮಾಡಲು ನಿಶ್ಚಯಿಸಿ, ಶೇಷತಲ್ಪದಿಂದುಪ್ಪವಡಿಸಿ ಮೆಲ್ಲನೆ ತಕ್ಕ ಹಂಚಿಕೆಯನ್ನು ಹೂಡುತ್ತಾ ಬಲಿಚಕ್ರವರ್ತಿಯಲ್ಲಿಗೆ ಬಂದನು. ಅರಸನನ್ನು ಕಾಣುವಾಗ ಒಬ್ಬ ಎಳೆಯ ಬ್ರಹ್ಮಚಾರಿಯಂತೆ ವೇಷವನ್ನು ಧರಿಸಿದ. ಬಾಲಕ, ಅದರಲ್ಲೂ ಬ್ರಹ್ಮಚರ್ಯವೇ ರೂಪುನೆತ್ತಿ ಬಂದಂತಿರುವ ಈ ಬಾಲಕನನ್ನು ಕಂಡು ಬಲಿಯ ಮನವೇ ಹಾರಿಯಾಯಿತು. ಎಂತಾದರೂ ಆತನನ್ನು ಸಂತುಷ್ಟಗೊಳಿಸುವ ವಾಂಛೆ ಬೆಳೆಯಿತು. ಬಂದ ವಾಮನರೂಪಿ ವಟುವನ್ನು ಸತ್ಕರಿಸಿ, ವಾಂಛಿತವೇನೆಂದು ಕೇಳಲು, ತನಗೆ ಕೂರಿ ತಸವನ್ನೆಸಗಲು ಮೂರು ಪದ ಭೂಮಿ ಬೇಕೆಂದನು. ಸರಿ ಕೊಟ್ಟೆನೆನ್ನುವಷ್ಟರಲ್ಲಿ ಶುಕ್ರಾಚಾರ್ಯರು, ಇದು ವಿಷ್ಣುವಿನ ಮಾಯೆ, ಆತನು ನಿನ್ನನ್ನು ಬಗ್ಗುಬಡೆಯದೆ ಮಾಣನೆಂದು ಹಿತೋಪದೇಶವಿತ್ತರೂ, ಬಾಲ ಬ್ರಹ್ಮಚಾರಿಯ ಮೃದುಲಮನವನ್ನು ನೋಯಿಸಲಾರದೆ, "ಇಳೆ ಕೊಟ್ಟೆ" ಎಂದುಚ್ಚರಿಸಿದನು.

ಸರಿ, ದಾನವೀಯಲು ದಾನವಾರಿಯ ಧಾರೆಯೆರೆಯಬೇಕಷ್ಟೆ? ವಟು, ತಾನು ತನ್ನ ಕರ್ಣವಲ್ಲಿಟ್ಟುಕೊಂಡ ತುಳಸಿಯನ್ನೂ, ತನ್ನ ಕಮಂಡಲುವಿನ ನೀರನ್ನೂ ಇತ್ತು ದಾನ ಧಾರೆಯನ್ನು ತಡೆದ ಶುಕ್ರಾಚಾರ್ಯರ ಕಣ್ಣು ಕೊರೆದು ಸ್ವೀಕರಿಸಿದ. ಇನ್ನು ಅಳೆಯುವ ಕೆಲಸವಷ್ಟೇ? ಬಾಲವಟು ತನ್ನ ರೂಪವನ್ನು ಬಿಟ್ಟುಬಿಟ್ಟ; ರಾಕ್ಷಸಶರೀರದ ಇಮ್ಮಡಿ, ಮೂಮಡಿ, ನಾಲ್ಮಡಿ, ಸಾಸಿರ್ಮಡಿ ಆತನ ಶರೀರಬೆಳೆಯಿತು. ಪೃಥಮಕ್ರಮದಲ್ಲಿ ಜಗತೀತಳವನ್ನೂ, ದ್ವಿತೀಯ ಪದದಲ್ಲಿ ಸ್ವರ್ಗ ಪಾತಾಳ ಲೋಕವನ್ನೂ ಅಳೆದುಬಿಟ್ಟ! ಇನ್ನೂ ಒಂದು

(೨೧ನೇ ಪುಟ ನೋಡಿರಿ)

ನಮ್ಮ ಶುಭಾಶಯಗಳು.

ಹೇವಿಳಂಬಿ ಸಂವತ್ಸರದ ದೀಪಾವಳಿಯು ನಮ್ಮ ಪರಮ ಪ್ರೋತ್ಸಾಹಕರಾದ ಬರಹಕಾರರು, ಚಂದಾದಾರ ಜಾಹೀರಾತುದಾರರು, ಮತ್ತು ಓದುಗ ಬಂಧುಗಳಿಗೆ ಮಾತ್ರವಲ್ಲ, ದೇಶದ ಸಮಸ್ತ ಜನತೆಯ ಮೇಲೆಯೂ ಸಂತೋಷ ಸಾಗರವನ್ನು ಉಕ್ಕಿ ಹರಿಸಲಿ; ಹೊಸ ಚೇತನ, ಹೊಸ ಜೀವನದ ಸವಿಯನ್ನು ಉಣ್ಣಿಸಿ ಸದಾ ನಿರೋಗಿಗಳಾಗಿರುವಂತೆ ಹರಸಲಿ ಎಂದು ಮನಸಾರೆ ಅಭಿಲಷಿಸುತ್ತೇವೆ.

ಸ್ವಾರ್ಥಯುಗದ ವಾಮನಾವತಾರ.

ಶ್ರೀ ರಾಜೇಂದ್ರ ಸಿಂಹ.

ವಿನೋಬಾ ಭೂದಾನಾಂದೋಲನವನ್ನು ವಾಮನಾವತಾರವೆನ್ನುತ್ತಾರೆ. ವಾಮನನು ಮೂರು ಪದಗಳಲ್ಲಿ ಪೃಥ್ವಿ, ಆಕಾಶ ಮತ್ತು ಪಾತಾಳಗಳನ್ನು ಅಳೆದರೆ, ವಿನೋಬಾರವರೂ ಆರುವರ್ಷಗಳಲ್ಲಿ ಭಾರತವರ್ಷವನ್ನು ಅಳೆದಿದ್ದಾರೆ. ಸರ್ವೋದಯ ಸಮ್ಮೇಳನ ಅವರ ಒಂದೊಂದು ಹೆಜ್ಜೆಗೆ ಸಮಾನವಾಗಿದೆ. ವಾರ್ಧಾದಿಂದ ಪ್ರಾರಂಭವಾಗಿ, ಮಥುರಾ, ಕಾಶಿ, ಬುದ್ಧಗಯಾ, ಪುರಿ, ಕಾಂಚೀಪುರಿ ಮತ್ತು ಕಾಲಡೀಯಾ ಸಮ್ಮೇಳನದ ವರೆಗೆ ಈ ಆಂದೋಲನವು ವಿಜಯಭೇರಿಯನ್ನು ಭಾರಿಸಿದೆ. ಮೈಸೂರಿನ ಸರ್ವಪಕ್ಷೀಯ ಸಮ್ಮೇಳನವು ಕೀರ್ತಿಮುಖದಂತಾಗಿದೆ.

ಈಗ ನಡೆಯುತ್ತಿರುವುದು ಕಲಿಯುಗವಲ್ಲ; ಸ್ವಾರ್ಥಯುಗ. ಜನರು ಪ್ರತಿಯೊಂದು ಅಂಗುಲದಷ್ಟು ಭೂಮಿಗೆ ಸಹಜಗಳ ಕಾಯುತ್ತಾರೆ. ಮಾತ್ರವಲ್ಲ, ದುರ್ಯೋಧನನ ಶ್ವರದಲ್ಲಿ ಆಡ ತೊಡಗುತ್ತಾರೆ—"ಯುದ್ಧದಿಂದಲ್ಲದೆ ಸೂಜಿಯ ನೊನೆಯೊರುವಷ್ಟು ಭೂಮಿಯನ್ನಾದರೂ ಕೊಡಲಾರೆ". ಎಂದು. ಇಂತಹ ಸಮಯದಲ್ಲಿ ಯಾವುದೇ ಬೆದರಿಕೆ ಅಥವಾ ವತ್ತಾಯವಿಲ್ಲದೆ ಸುಮಾರು ೨೨ ಲಕ್ಷ ಎಕರೆಯಷ್ಟು ಭೂಮಿಯನ್ನು ಪಡೆಯುವುದೆಂದರೆ, ಅದು ಈ ಯುಗದ ಮಹಾದಾಶ್ಚರ್ಯಕರ ಸಂಗತಿಯೆಂದು ಹೇಳಬಹುದು. ಗಾಂಧೀಜೀಯವರು ಅಹಿಂಸಾತ್ಮಕ ಯುದ್ಧದಿಂದ ಸ್ವರಾಜ್ಯವನ್ನು ಯೊಂದಿಸಿ ರಾಜನೀತಿಕ ಚಮತ್ಕಾರವನ್ನು ಪ್ರದರ್ಶಿಸಿದಂತೆ, ಹರಿಜನರಿಗೆ ಸಮಾನಾಧಿಕಾರವನ್ನು ಕೊಡಿಸಿ ಸಾಮಾಜಿಕ ಕ್ರಾಂತಿಯನ್ನೆಬ್ಬಿಸಿದಂತೆ ಮೂರನೆಯದಾದ ನೂತನ ಆಶ್ಚರ್ಯಕರ ಘಟನೆಯೊಂದನ್ನು ಭೂಮಿದಾನದ ರೂಪದಲ್ಲಿ ಆಚಾರ್ಯ ವಿನೋಬಾ ಮಾಡಿ ತೋರಿಸುತ್ತಿದ್ದಾರೆ.

ಪ್ರಾಯಶಃ ವಿನೋಬಾಜೀ ಜಯಶೀಲರಾಗಿರುವಷ್ಟು ಗಾಂಧೀಜೀ ಸಹ ಆಗಿರಲಾರರು. ಭೂಮಿದಾನದಪ್ರಾರಂಭಿಕಹೆಜ್ಜೆಯಿಂದ ವಿನೋಬಾ ತಟಕ್ಕನೆ ಗ್ರಾಮದಾನಕ್ಕೆನೆಗೆದರು. ಮೈತ್ರೀಗ ಗ್ರಾಮರಾಜ್ಯದ ಮೂರನೆ ಹೆಜ್ಜೆಯನ್ನಿಡುತಿದ್ದಾರೆ. ಈ ಹೆಜ್ಜೆಗಳು ಭಗವಾನ್ ವಾಮನನ ಮೂರು ಹೆಜ್ಜೆಗಳಂತೆ ಎಲ್ಲ ಪೃಥ್ವೀಮಂಡಳವನ್ನು ಆವರಿಸುವುದು. "ನಾನೀಗ ಗ್ರಾಮದಾನದಿಂದ ದೊಡ್ಡದಾಗಿ ಗ್ರಾಮರಾಜ್ಯದಲ್ಲಿ ಬಂದು ಮುಟ್ಟಿದ್ದೇನೆ" ಎಂದು ವಿನೋಬಾ ಘೋಷಿಸುತ್ತಾರೆ. ಒರ್ವ ಋಷಿತುಲ್ಯರಾಗಿ ಅವರು ಉದ್ಘೋಷಿಸಿದರು: "ಗ್ರಾಮರಾಜ್ಯದ ಸ್ಥಾಪನೆ ಇನ್ನು ಆಗಬೇಕಾದುದಿಲ್ಲ; ಅದು ಈಗಾಗಲೇ ಆಗಿ ಹೋಗಿದೆ" ಮತ್ತು ಎರಡನೆ ಕ್ಷಣದಲ್ಲಿಯೇ ಅಲ್ಲೇ ಇದ್ದ ಒಬ್ಬ ಸೇನಾಪತಿಯೊಡನೆ ಹೇಳಿದರು: "ಈಗ ಈ ಗ್ರಾಮರಾಜ್ಯದ ರಕ್ಷಣೆಗಾಗಿ ಶಾಂತಿಸೇನೆಯ ಅವಶ್ಯಕತೆ ಇದೆ. ಆ ಸೇನೆಯ ಸರ್ವೋಚ್ಚ ಸೇನಾಪತಿತ್ವವನ್ನು ನಾನು ಗ್ರಹಣಮಾಡುತ್ತೇನೆ."

ವಿನೋಬಾರ ವ್ಯಕ್ತಿತ್ವದಲ್ಲಿ ಒಬ್ಬ ಋಷಿ, ಸೇನಾಪತಿ ಮತ್ತು ಒಬ್ಬ ಅರ್ಥಶಾಸ್ತ್ರಿ ಈ ಮೂವರ ಅತ್ಮಗಳೂ ಸಂಮಿಳಿತವಾಗಿವೆ ಎಂಬುದು ನಿಶ್ಚಯ. ಅರ್ಥಶಾಸ್ತ್ರಿಯಂತೆ ಚಿಂತನೆಯನ್ನು ಮಾಡುತ್ತಾರೆ, ಸೇನಾಪತಿಯಂತೆ ಅಡಿಮಂದಿಡುತ್ತಾರೆ; ಮತ್ತು ಋಷಿಯಂತೆ ಭವಿಷ್ಯ ದರ್ಶನಮಾಡುತ್ತಾರೆ. ಅವರ ವ್ಯಕ್ತಿತ್ವದ ಮೂರು ಮುಖಗಳೆಂದರೆ ಇವೇ.

ಮೈಸೂರಲ್ಲಿ ನಡೆದ ಕಾರ್ಯಕರ್ತ ಸಮ್ಮೇಳನದಲ್ಲಿ ಭೂಮಿದಾನ ಆಂದೋಲನದ ವಿಕಾಸದ ರೂಪರೇಷೆಯನ್ನು ತಿಳಿಸುತ್ತಾ ಆಚಾರ್ಯ ವಿನೋಬಾ ಹೇಳಿದರು: "ಪ್ರಪ್ರಥಮವಾಗಿ ಬಿಹಾರದಲ್ಲಿ ಭೂಮಿದಾನವು ಬಹಳ ಮುಕ್ತವರ್ಜಿಯಿಂದ ನಡೆಯಿತು ಮತ್ತದರಿಂದ ನಮ್ಮಲ್ಲಿ ಆತ್ಮವಿಶ್ವಾಸವು ಬೆಳೆಯಿತು. ಪರರಿಗೂ, ಈ ಆಂದೋಲನದ ಮೇಲೆ ಶ್ರದ್ಧೆ ಹುಟ್ಟಿಕೊಂಡಿತು. ಒಡಿಸಾದಲ್ಲಿ ಪ್ರವೇಶಿಸಿದಾಗ, ಮೊದಲು ಅಸಂಭವವೆಂದು ತಿಳಿಯಲಾಗಿದ್ದ ಗ್ರಾಮದಾನವೂ ಸಂಭಾವ್ಯವೆಂದು ಅನಿಸತೊಡಗಿತು. ತಮಿಳುನಾಡಿನಲ್ಲಿ ಗ್ರಾಮರಾಜ್ಯಕ್ಕೆ ಉಪಯುಕ್ತ ವಾತಾವರಣ ನಿರ್ಮಾಣಮಾಡುವ ಉದ್ದೇಶದಿಂದ ತಾಲೂಕು ದಾನದ ಮಹತ್ಕಾರ್ಯಗಳು ನಡೆದುವು. ಕೇರಳದಲ್ಲಿ ನಮಗೆ ಸ್ವರಕ್ಷಣೆ ಮಾಡಿಕೊಂಡೇ ನಡೆಯಬೇಕಿತ್ತು. ಅಲ್ಲಿ ಸಾಮ್ಯವಾದಿಗಳ ವಿರೋಧದ ಭಯವಿತ್ತು; ಕೆಂಪುಅವಾಯವು ಬೇರೆಯವರಿಂದಲ್ಲ; ನಮ್ಮಿಂದಲೇ ಎಂದು ತಿಳಿಯಿತು.

"ನಮ್ಮ ಶರೀರದ ಬಾಧಕರು ನಾವೇ ಆದೆವು. ಆದುದರಿಂದ, ಅದನ್ನು ಸಮಾಧಾನದಲ್ಲಿಡಬೇಕಾಗಿ ಬಂತು. ಅನಾರೋಗ್ಯದ ಕಾಲದಲ್ಲಿ ಏಕಾಗ್ರತೆಯು ಸಂಕಾಸ್ಥೆಯನ್ನು ಮುಟ್ಟಿತು. ನಮಗೆ ಏಕಾಗ್ರತೆಗಾಗಿ ಪ್ರಯತ್ನಿಸಬೇಕಾಗಿರಲಿಲ್ಲ; ಆದರೆ ಬೇರೆಡೆಗೆ ಧ್ಯಾನವೀಯಲು ಪ್ರಯತ್ನಪಡಬೇಕಾಗಿ ಬಂತು. ಸೀಡೆಯಿಂದ ಬುದ್ಧಿ ಕುಂಠಿತವಾಗದೆ ಅದು ತೀವ್ರವಾಗುವುದೆಂಬ ಉಪನಿಷದ್ವಾಕ್ಯದ ಸತ್ಯತೆಯ ಅರಿವು ಆಗ ನಮಗಾಯಿತು."

ಜಗದ್ಗುರು ಶಂಕರ, ಮಾಧ್ವ, ರಾಮಾನುಜ ಆಚಾರ್ಯರಂತೆ ವಿನೋಬಾಜೀ ಸಹ ಭಾರತದ ಧಿಗ್ವಿಜಯದಲ್ಲಿ ತೊಡಗಿದ್ದಾರೆ. ಭಗವಂತನಲ್ಲಿ ಅವರಿಗೆ ಎಲ್ಲರಿಗಿಂತಲೂ ಅಧಿಕ ಶ್ರದ್ಧೆಯಿದೆ ಆದರೆ, ಪಾರ್ಥಿವ ದಿಗ್ವಿಜಯಕ್ಕಿಂತ ಅವರ ಮಾನಸಿಕ ದಿಗ್ವಿಜಯಕ್ಕೆ ಅಧಿಕವಃಹತ್ವವಿದೆ.

ಮೈಸೂರಿನಲ್ಲಿ ಈ ಆಧುನಿಕ ಋಷಿವರ್ಯರ ದಿವ್ಯ ಸಂದೇಶವನ್ನು ಕೇಳಿದೊಡನೆ ಅಖಂಡ ದೇಶದಲ್ಲಿ ನೂರಾರು ಕಾರ್ಯಕರ್ತರು ಮಿಲಿತವಾದರು. ನಮಗೆಲ್ಲರಿಗೂ ಅವರ ದರ್ಶನ ಮತ್ತು ಸಂದೇಶದಿಂದ ದಿವ್ಯಪ್ರೇರಣೆ ಪ್ರಾಪ್ತಿಸಿತು. ಉದರವನ್ನು ತಣಿಸುವುದಕ್ಕಾಗಿ ನೊಸರು ತಿಂದು, ಕೇರು ಕುಡಿದು ಇವರು ನಿರಂತರ ಸೂರ್ಯನಂತೆ ಮಳೆ, ಬಿಸಿಲು, ಸಿಮಗಳಲ್ಲಿ ಆರು ವರ್ಷಗಳಿಂದ ನಡೆಯುತಿದ್ದಾರೆ, ಮತ್ತು ನಾವು ಪ್ರಗತಿಶೀಲರಾಗುವಂತೆ "ಚರೈವೇತಿ—ಚರೈವೇತಿ" (ನಡೆಯುತ್ತೀರಿ, ನಡೆಯುತ್ತೀರಿ) ಎಂದು ಸಂದೇಶವನ್ನು ಈಯುತಿದ್ದಾರೆ. ಈ ದಿವ್ಯ ಪುರುಷನ ವ್ಯಕ್ತಿತ್ವದಲ್ಲಿ ಒಬ್ಬ ಋಷಿಯ ಮೌಲಿಕತೆ ಇದೆ, ಭಾಷೆಯಲ್ಲಿ ಓರ್ವ ಕವಿಯ ಕಲ್ಪನೆ ಇದೆ ಮತ್ತು ಮಾತಿನಲ್ಲಿ ಒಬ್ಬ ಸೇನಾನಿಯ ಆಜ್ಞೆ ಇದೆ.

ಭೂದಾನ ಆಂದೋಲನದಲ್ಲಿ ಇಬ್ಬಗೆಯ ಕಾರ್ಯಕರ್ತರು: ಕರ್ಮನಿರತರಾಗಿದ್ದಾರೆ-ಲೋಕಸೇವಕ ಮತ್ತು ನಿವೇದಕ ರೆಂದವರ ಹೆಸರು. ನಿವೇದಕನು ಉದ್ಯೋಗಾರ್ಜನೆಗಾಗಿಯಾದರೂ ಕೆಲಸ ಮಾಡಬಾರದೆಂದು ವಿನೋಬಾರ ಅಪೇಕ್ಷೆ. ಲೋಕ ಸೇವಕರಿಗಾನರೆ, ಅವರ ಗೃಹಕಾರ್ಯಕ್ಕೆ ಎಷ್ಟು ಸಮಯವು ಅತ್ಯಂತಾವಶ್ಯಕವಾಗಿದೆಯೋ ಅಷ್ಟು ಹೊತ್ತು ಬಿಟ್ಟು ಉಳಿದ ಸಮಯ ಈ ಆಂದೋಲನವನ್ನು ಮುಂದೆ ನಡೆಸಬೇಕು. ಲೋಕಸೇವಕನಲ್ಲಿರಬೇಕಾದ ಪಂಚಶೀಲಗಳನ್ನು ವಿನೋಬಾಜಿ ಹೇಳಿದ್ದಾರೆ:

(೧) ಅಹಿಂಸೆ, ಸತ್ಯ ಮೊದಲಾದ ವ್ರತಗಳನ್ನು ಪಾಲಿಸುವವನಾಗಿರಬೇಕು.

(೨) ರಾಜನೈತಿಕ ದಳಗಳಿಂದ ಪ್ರಥಕ್ಕಾಗಿದ್ದು ಲೋಕನೀತಿಯಲ್ಲಿ ನಿಷ್ಠೆಯಳ್ಳವನಿರಬೇಕು.

(೩) ಸರ್ವೋದಯವನ್ನು ಯಾವಾಗಲೂ ಚಿಂತಿಸುತ್ತಿರಬೇಕು.

(೪) ಎಲ್ಲ ರಾಜನೈತಿಕ ದಳಗಳ ಸಹಯೋಗವನ್ನು ಪಡೆದುಕೊಳ್ಳುವವನಿರಬೇಕು. ಮತ್ತು

(೫) ಪೂರ್ಣ "ಸಮಯದಾನ" ಮಾಡುವವನಾಗಿರಬೇಕು.

ಈ ಐದು ನಿಷ್ಠೆಗಳು ಇಲ್ಲದೆ ಹೋದರೆ ಕ್ರಾಂತಿಕಾರಿ ಭಾವನೆಯು ಹುಟ್ಟಲಾರದು ಎಂದು ವಿನೋಬಾ ನಿಶ್ಚಿತ ಮತವುಳ್ಳವರಾಗಿದ್ದಾರೆ. ಸರ್ವಸ್ವ ಚಿಂತನದ ನಿಷೇಧಾತ್ಮಕ ವ್ಯಾಖ್ಯೆಯನ್ನು ಮಾಡುತ್ತಾ ಅವರು ಹೀಗೆ ಹೇಳಿದ್ದಾರೆ— "ಅವನು—

(೧) ವಿಷಯ ಚಿಂತನೆಯನ್ನು ಮಾಡಬಾರದು.

(೨) ಪರನಿಂದೆಯನ್ನು ಮಾಡಬಾರದು ಮತ್ತು

(೩) ವ್ಯರ್ಥ ರಾಜನೀತಿಯ ಚಿಂತನೆಯನ್ನು ಮಾಡಬಾರದು.

ವ್ಯರ್ಥ ರಾಜನೀತಿಯೆಂದರೇನು ಎಂದು ವಿನೋಬಾಜೀಯವರೊಡನೆ ಕೇಳಿದಾಗ, ಒಂದು ದೊಡ್ಡ ವಿನೋದ ಪ್ರಸಂಗವಾಯಿತು. "ಲೋಕ ನೀತಿಯಿಂದ ಹೊರಗೆ ಯಾವ ರಾಜನೀತಿಯಿದೆಯೋ ಅದು ವ್ಯರ್ಥ ರಾಜನೀತಿ" ಎಂದು ವಿನೋಬಾ ಸಾಮಾನ್ಯವಾದ ಉತ್ತರವನ್ನು ಕೊಟ್ಟು ಎಲ್ಲರನ್ನೂ ಶಾಂತರಾಗುವಂತೆ ಮಾಡಿದರು

ಸಮ್ಮೇಳನದಲ್ಲಿ ಕ್ರಿಯಾತ್ಮಕ ವಾದಗಳಲ್ಲದೆ ಸೈದ್ಧಾಂತಿಕ ಚರ್ಚೆಯು ಸಹ ಅಧಿಕವಾಯಿತು. ಮುಂದಾಳುಗಳ ಸಂಮ್ಮೇಳನವು ಮುಗಿದಿತ್ತು. ಅದರಲ್ಲಿ ಎಲ್ಲ

(೨೦ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H. O. **MANGALORE.** Estd: **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ತುಳಸಿಗಿಡಕ್ಕೆ ಪೂಜೆಯೇಕೆ?

ಶ್ರೀ. ಎ. ಶಂಕರ ಶೆಟ್ಟಿ

ದೀಪಾವಳಿಯ ಪಕ್ಷದಲ್ಲಿ ತುಲಸೀ ಪೂಜೆಯೂ ಒಂದು ಮಹತ್ವಪೂರ್ಣ ಕಾರ್ಯಕ್ರಮವಾಗಿದೆ. ಇದು ಸಾಂಪ್ರದಾಯಿಕವಾಗಿ ನಡೆದು ಬಂದ ದಾರಿ. ಅದರೆ, ತುಲಸಿಗಿಡದಲ್ಲಿ ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿಯವರು ವಾಸವಾಗಿದ್ದು ಅದರ ದರ್ಶನದಿಂದ ಲಕ್ಷ್ಮಿ, ಸರಸ್ವತಿ ಮತ್ತು ಪಾರ್ವತಿಯರ ಕೃಪೆಗೆ ಪಾತ್ರರಾಗಬಹುದೆಂದು ಎಷ್ಟು ಜನರಿಗೆ ತಿಳಿದಿದೆ? ದೇವತ್ವರೂಪಿಣಿಯಾಗಿರುವುದರಿಂದಲೇ ಆ ಗಿಡಕ್ಕೆ ಎಲ್ಲಿಲ್ಲದ ಮನ್ನಣೆ. ಸ್ವರ್ಗಲೋಕದಲ್ಲಿ ಅರಾಮವಾಗಿದ್ದ ಈ ತ್ರಿದೇವಿಯರು ಈ ಭೂಮಿಗೆ ಹೇಗೆ ಬಂದರು ಎಂದು ಈ ಉತ್ತರ ಭಾರತದ ಕಥೆಯನ್ನು ಓದಿ ತಿಳಿಯಿರಿ.

ಆರ್ಯಾವರ್ತದ ಮಹಾಪ್ರತಾಪಿಂಜನಾದ ಸುರಥನಿಗೆ ತನ್ನ ಧನಧಾನ್ಯಪೂರ್ಣವಾದ ವಿಶಾಲರಾಜ್ಯದಿಂದ ಆನಂದವೇನೋ ದೊರೆಯುತ್ತಿತ್ತು; ಆದರೆ ಮನಸ್ಸಿಗೆ ನೆಮ್ಮದಿ ದೊರೆಯುತ್ತಿರಲಿಲ್ಲ. ಪ್ರಪಂಚದ ಅಪಾರ ಐಶ್ವರ್ಯ ಹಾಗೂ ಯಶಭೋಗದಿಂದ ಅವನ ಹೃದಯಕ್ಕೆ ಅಭೀಷ್ಟ ಪ್ರಾಪ್ತಿಯಾಗಿರಲಿಲ್ಲ. ಅವನ ಮನಸ್ಸಿನಲ್ಲಿ ತ್ರೈಲೋಕ್ಯ ಶಕ್ತಿ, ಸಂಪತ್ತು ಮತ್ತು ಮೇಧಾಶಕ್ತಿಗಳನ್ನು ಪಡೆಯುವ ಉತ್ಕಟೇಚ್ಛೆಯಿತ್ತು. ಈ ಆಕಾಂಕ್ಷೆಯಿಂದ ಪ್ರೇರಿತನಾಗಿ ಅವನು ಒಂದು ದಿನ ದಟ್ಟನಾದ ಕಾಡಿಗೆ ಹೋಗಿ ತಪಸ್ಸು ಮಾಡತೊಡಗಿದನು. ಅವನ ತಪಸ್ಸು ಬಹಳ ಕಠಿಣವಾಗಿತ್ತು. ಭಗವಂತನ ಮೇಲಿನ ಅವನ ಶ್ರದ್ಧೆಯು ಪ್ರಬಲವಾಗಿತ್ತು. ಅವನ ಜಡೆಗಳಲ್ಲಿ ಹಕ್ಕಿಗಳು ಗೂಡುಕಟ್ಟಿದುವು. ಅವನ ಶರೀರದ ಸುತ್ತಲೂ ಕುತ್ತವು ಬೆಳೆದುಬಂತು. ಗೆದ್ದಲು ಹುಳಗಳು ಅಲ್ಲಿ ಮನೆಮಾಡಿಕೊಂಡುವು ಈ ರೀತಿ ತಪಸ್ಸುಮಾಡಿಕೊಂಡಿದ್ದ ರಾಜನನ್ನು ಕಂಡು ದೇವತೆಗಳು ಆಶ್ಚರ್ಯದಿಂದ ಹೂವುಮಳೆಗರೆದರು. ಜಯಕಾರ ಮಾಡತೊಡಗಿದರು; ಆದರೂ ರಾಜನ ಸಮಾಧಿ ಮುರಿಯಲಿಲ್ಲ.

ಒಂದು ದಿನ ಆ ಕಾಡಿಗೆ ಮೇಯುವುದಕ್ಕಾಗಿ ಬಂದ ಒಂದು ದನದ ಕರು ಅಹುತ್ತವನ್ನು ತನ್ನ ಕೊಂಬುಗಳಿಂದ ಕೆರೆಯತೊಡಗಿತ್ತು. ಕೊಂಬಿನ ಪೆಟ್ಟಿನಿಂದ ರಾಜನ ಶರೀರದಲ್ಲಿ ಗಾಯಗಳಾದುವು; ಅವುಗಳಿಂದ ರಕ್ತ ಸುರಿಯ ತೊಡಗಿತು. ಆದರೂ ರಾಜನ ಸಮಾಧಿ ಮುರಿಯಲಿಲ್ಲ. ಈ ಪರೀಕ್ಷೆಯಿಂದ ಸಂತುಷ್ಟನಾದ ಭಗವಾನ್ ವಿಷ್ಣುವು ಅಲ್ಲಿ ಪ್ರತ್ಯಕ್ಷನಾಗಿ ರಾಜನೊಡನೆ ವರಗಳನ್ನು ಬೇಡಲು ಹೇಳಿದನು. ಸುರಥನು ವಿನಯಪೂರ್ವಕವಾಗಿ ನುಡಿದು "ಹೇ ವೈಕುಂಠೇಶ್ವರಾ! ತ್ರಿಭುವನದ ಶಕ್ತಿ, ಸಂಪತ್ತು ಮೇಧಾ ಶಕ್ತಿಗಳು ನನ್ನ ರಾಜ್ಯದಲ್ಲಿ ಬಂದು ನೆಲಸುವಂತೆ ವರವನ್ನು ನಯಪಾಲಿಸು" ಎಂದು ವಿನಂತಿಸಿಕೊಂಡನು.

ಇದನ್ನು ಕೇಳಿದ ವಿಷ್ಣುವು ತುಸು ಹೊತ್ತು ಮೌನತಾಳಿದನು. ಅನಂತರ ಅವನು "ಮಹಾರಾಜಾ! ಇದು ನನ್ನ ಶಕ್ತಿಯಿಂದ ಹೊರಗಾದ ಮಾತು. ಇದಕ್ಕಾಗಿ ನೀನು ಬ್ರಹ್ಮದೇವನ ಆರಾಧನೆ ಮಾಡಬೇಕು" ಎಂದು ಹೇಳಿ ಅಂತರ್ಧಾನನಾದನು.

ಸುರಥನು ಇದರಿಂದ ನಿರಾಶನಾಗದೆ ತನ್ನ ತಪಸ್ಸನ್ನು ಮುಂದುವರಿಸಿದನು. ಈಗವನು ನೀರಿನಲ್ಲಿದ್ದು ತಪಗೈಯತೊಡಗಿದನು. ಅವಿಚಲನಾಗಿ ತಪಸ್ಸು ಮಾಡುತ್ತಿರುವ ರಾಜನನ್ನು ಕಂಡ ಮೀನುಗಳು ಅವನ ಮೈಯ ಮಾಂಸವನ್ನು ಕುಕ್ಕಿ ಕುಕ್ಕಿ ತಿನ್ನತೊಡಗಿದುವು. ಅವನ ಎಲೆಯ ಗೂಡು ಮಾತ್ರ ಬಾಕಿ ಉಳಿಯಿತು. ಆಗ ಬ್ರಹ್ಮದೇವನು ಪ್ರಸನ್ನನಾಗಿ ಪ್ರತ್ಯಕ್ಷನಾದನು ಆದರೆ ರಾಜನು ಅವನೊಡನೆ ವರ ಕೇಳಿದಾಗ ಅವನು ತನ್ನ ಅಸಮರ್ಥತೆಯನ್ನು ವ್ಯಕ್ತಪಡಿಸಿ ಭಗವಾನ್ ರುದ್ರನ ತಪಸ್ಸು ಮಾಡುವಂತೆ ಪ್ರೇರೇಪಿಸಿದನು.

ಇಷ್ಟಾದರೂ ರಾಜನ ಧೈರ್ಯಗೆಡಲಿಲ್ಲ, ಉತ್ಸಾಹ ಕುಗ್ಗಲಿಲ್ಲ. ಕಷ್ಟಗಳನ್ನು ಲಕ್ಷಿಸದೆ ಅವನು ಈಶ್ವರನನ್ನು ಒಲಿಸುವುದಕ್ಕಾಗಿ ಅಗ್ನಿ ತಪಸ್ಸನ್ನು ಮಾಡತೊಡಗಿದನು. ಅವನು ಪ್ರತಿ ದಿನವೂ ತನ್ನ ಶರೀರವನ್ನು ಅಗ್ನಿಗೆ ಆಹುತಿಯಾಗಿ ಕೊಡುತ್ತಿದ್ದನು. ಆದರೆ ರುದ್ರಗಣಗಳು ಅವನನ್ನು ಅಗ್ನಿ ಕುಂಡದಿಂದ ಹೊರಗೆ ತೆಗೆದು ಜೀವದಾನ ಮಾಡುತ್ತಿದ್ದರು.

ಅನೇಕ ವರ್ಷಗಳ ವರೆಗೆ ಈ ರೀತಿ ತಪಸ್ಸು ನಡೆಯಿತು. ಹತ್ತು ಸಾವಿರ ಬಾರಿ ರಾಜನು ತನ್ನನ್ನು ಅಗ್ನಿಗೆ ಸಮರ್ಪಿಸಿದನು. ಆಗ ಭಗವಾನ್ ಶಿವನು ಸಂತೋಷಗೊಂಡು ಪ್ರತ್ಯಕ್ಷನಾದನು. ಅವನು "ಮಹಾರಾಜ! ನಿನ್ನ ಈ ಭಯಂಕರ ಅಗ್ನಿ ತಪಸ್ಸಿಗೆ ನಾನು ಮೆಚ್ಚಿದೆನು. ನಿನ್ನ ಅಭಿಲಾಷೆ ಏನೆಂದು ಹೇಳು" ಎಂದನು.

ಸುರಥನು ಕರಗಳನ್ನು ಜೋಡಿಸಿಕೊಂಡು 'ಭಗವಂತಾ! ತ್ರಿಭುವನದ ಶಕ್ತಿ, ಸಂಪತ್ತು ಮತ್ತು ಮೇಧಾಶಕ್ತಿಗಳನ್ನು ನನ್ನ ರಾಜ್ಯದಲ್ಲಿ ಸ್ಥಾಪಿಸುವ ಕರುಣೆ ತೋರು. ಇದೇ ನನ್ನ ಅಭೀಷ್ಟ" ಎಂದನು.

ಈಶ್ವರನು ತುಸು ಸಂಕೋಚಗೊಂಡು "ರಾಜಾ! ಈ ಮೂರನ್ನು ನಿನಗೆ ಕೊಡುವುದು ನನ್ನ ಅಧಿಕಾರದೊಳಗಿಲ್ಲ. ಆದಕ್ಕಾಗಿ ನೀನು ವಿಷ್ಣು ಹಾಗೂ ಬ್ರಹ್ಮನ ತಪಸ್ಸುಮಾಡು" ಎಂದನು.

ರಾಜನು ಈಗ ನಿರಾಶೆಗೊಂಡನು ಅವನು ದೀನಭಾವದಿಂದ "ಪ್ರಭೋ! ವಿಷ್ಣು ಹಾಗೂ ಬ್ರಹ್ಮರು ಮೊದಲೇ ನನಗೆ ಈ ವರವನ್ನು ದಯಪಾಲಿಸಲು ಅಸಮರ್ಥರೆಂದು ಅಲ್ಲಗಳೆದಿರುವರು. ಭಗವಾನ್! ತ್ರಿಭುವನದ ಈ ಮಹಾ ಶಕ್ತಿಗಳೂ ಕೇವಲ ವ.ನವನಾದ ನನ್ನ ಈ ಆಕಾಂಕ್ಷೆಯನ್ನು ಪೂರ್ಣಗೊಳಿಸಲಾರರೇ?" ಎಂದು ವಿನಂತಿಸಿಕೊಂಡನು.

ಆಗಲೇ ನಾರದರು ಅಲ್ಲಿಗೆ ಬಂದರು. ಅವರು ಈಶ್ವರನೊಡನೆ "ದೇವಾ! ತಾವು ವೈಕುಂಠ ಮತ್ತು ಸತ್ಯ ಲೋಕಗಳಿಗೆ ಹೋಗಿ ವಿಷ್ಣು ಮತ್ತು ಬ್ರಹ್ಮರೊಡನೆ ಸಂಭಾಷಣೆ ನಡೆಸಿ ರಾಜನ ಈ ತಪಸ್ಸನ್ನು ಫಲಕಾರಿಗೊಳಿಸುವಲ್ಲಿ ಸಹಾಯಕರಾಗಿರಿ. ಇಲ್ಲವಾದರೆ ಸಂಪೂರ್ಣ ದೇವತ್ವವೇ ಕಳಂಕಿತವಾಗುವುದು. ಭಕ್ತರ ನೆಲೆಯೇ ತಪ್ಪಿದಂತಾಗುವುದು. ಭಕ್ತಿಗೆ ಸ್ಥಾನವೇ ಇಲ್ಲದಂತಾಗುವುದು ಜಗತ್ತಿನಲ್ಲಿ ನಿರೀಶ್ವರ ವಾದವು ತಲೆದೋರುವುದು" ಎಂದು ಯುಕ್ತಿಪಲಹೆಯನ್ನಿತ್ತರು.

ವೈಕುಂಠದಲ್ಲಿ ಮೂರು ಮೂರ್ತಿಗಳ ಕೂಟವೊಂದು ನಡೆಯಿತು. ಕಡೆಗೆ ಶಕ್ತಿ, ಸಂಪತ್ತು ಮತ್ತು ಮೇಧಾಶಕ್ತಿಗಳ ಮೂವರು ದೇವಿಯರು—ಪಾರ್ವತಿ, ಲಕ್ಷ್ಮಿ ಮತ್ತು ಸರಸ್ವತಿಯರು—ಸುರಥನ ಇಷ್ಟದಂತೆ ಭೂಲೋಕಕ್ಕೆ ಕಳುಹಿಸಲ್ಪಡಬೇಕೆಂಬ ನಿರ್ಣಯವಾಯಿತು.

ಇದು ಇತರ ದೇವತೆಗಳಿಗೆ ತಿಳಿಯಿತು' ಆಗಲೇ ನಾಲ್ಕೂ ದಿಕ್ಕುಗಳಲ್ಲಿ ಹಾಹಾಕಾರವೇಳಲಾರಂಭಿಸಿತು. ಧನಲಕ್ಷ್ಮಿ, ಜಯಲಕ್ಷ್ಮಿ, ವರಲಕ್ಷ್ಮಿಯರು ಇಲ್ಲದಿರುವಾಗ ಸ್ವರ್ಗದಲ್ಲಿ ಮತ್ತೇನಿದೆ. ಅದಕ್ಕೆ ಸ್ವರ್ಗವೆಂಬ ಹೆಸರು ಹೇಗೆ ಸಲ್ಲುವುದು? ಆದ್ದರಿಂದ ಸಮಸ್ತ ದೇವತೆಗಳೂ ಅಪ್ಸರೆಯರೂ ಗಂಧರ್ವರೂ ಈ ಮೂವರು ಲಕ್ಷ್ಮಿಯರ ದಾರಿಗೆ ಅಡ್ಡವಾಗಿ ನಿಂತು ರೋದನಗೈಯತೊಡಗಿದರು. ಅಂತೆಯೇ ಹೋಗದಂತೆ ಸಾದರ ಆಗ್ರಹ ಮಾಡತೊಡಗಿದರು.

ಸ್ವರ್ಗದಲ್ಲೇಗೆ ಬಂದೊದಗಿದ ಈ ಭಯಂಕರ ಸಂಕಟವನ್ನು ಕಂಡು ನಾರದರು ಕಂಗಾಲಾದರು. ಅವರು ಸುರಥನಲ್ಲಿಗೆ ಧಾವಿಸಿದರು. ಅವರು ರಾಜನನ್ನು ಬಹಳವಾಗಿ ಸಮಾಧಾನಪಡಿಸತೊಡಗಿದರು ಕಡೆಗೆ ಅವರು ರಾಜನನ್ನು ಇನ್ನೊಂದು ವರ ಕೇಳುವಂತೆ ಒಪ್ಪಿಸಿದರು. ಅವನು ತನ್ನ ವರದಲ್ಲಿ ಶಕ್ತಿ, ಸಂಪತ್ತು ಹಾಗು ಮೇಧಾಶಕ್ತಿಗಳ ಸಮ್ಮಿಲನರೂಪದ ಒಂದು ಹೆಣ್ಣುಕೂಸನ್ನು ಬೇಡುವಂತೆ ನಿರ್ದೇಶಿಸಿದರು. ರಾಜನೂ ಸಮ್ಮತಿ ಇತ್ತನು. ಹಾಗೆಯೇ ತ್ರಿಮೂರ್ತಿಗಳೊಡನೆ ಆ ವರವನ್ನು ಬೇಡಿಕೊಂಡು ಮರಳಿದನು.

ಮಹಾರಾಣಿಯು ಗರ್ಭವತಿಯಾದಳು. ಯುಕ್ತಸಮಯದಲ್ಲಿ ಅವಳು ಒಂದು ಹೆಣ್ಣುಮಗುವನ್ನು ಹೆಡೆದಳು. ಅದು ಹುಟ್ಟಿದಾಗಲೇ ಮಾತಾಡತೊಡಗಿತು (ಮೇಧಾಶಕ್ತಿಯ ಬಲದಿಂದ). ತಂದೆತಾಯಿಗಳು ಆ ಮಗುವಿಗೆ 'ತುಲಸಿ' ಎಂದು ಹೆಸರಿಟ್ಟರು.

ದೇವತೆಗಳು ವೇಲೆ ವಾಸಿಸುವವರಾದರೂ ಅವರ ಬುದ್ಧಿ ಕೆಳಮಟ್ಟದ್ದಲ್ಲವೇ ಇವೆ. ಅವರು ಭೂಲೋಕದ ಭೋಗಗಳನ್ನು ಕಂಡು ಮತ್ಸರಗೊಳ್ಳುವುದಿದೆ. ಸುರಥನ ಈ ಸಂಪತ್ತನ್ನು ಕಂಡು ದೇವತೆಗಳೊಡೆಯನಾದ ಇಂದ್ರನೂ ಸಮುದ್ರಾದನು. ಅವನು ಬೆಳೆಯುತ್ತಿರುವ ತುಲಸಿಯನ್ನು ಕಂಡು ತನ್ನ ಮತ್ಸರವನ್ನು ಬೆಳೆಯಬಿಟ್ಟನು. ಅವನು ಒಂದು ದಿನ ಒಂದು ಅತ್ಯಂತ ವಿಷಭರಿತವಾದ ಹಾವಿನ ರೂಪಧರಿಸಿ ಸುರಥನ ಉದ್ಯಾನಕ್ಕೆ ಬಂದನು. ತೋಟದಲ್ಲಿ ಅಡುತ್ತಿರುವ ತುಲಸಿಯನ್ನು ಕಂಡು ಕೂಡಲೇ ಕಚ್ಚಿಬಿಟ್ಟನು.

THE MYSORE SUGAR COMPANY, LIMITED.

HEAD OFFICE:
SREE JAYACHAMARAJA WADIYAR ROAD,
BANGALORE—2.

Factory and Distillery:
MANDYA (Mysore State).

Manufacturers of:
PURE WHITE CRYSTAL
SUGAR.

OTHER PRODUCTS INCLUDE
Delicious Golden Syrup and a wide range of Alcohols-Absolute, Rectified, Denatured and Potable.

(ಹಿಂದಿನ ಸುಟದಿಂದ)

ತುಲಸಿಯು ವಿಷವೇರಿ ಸತ್ತುಹೋದಳು.

ಮಗುವಿನ ಮರಣವಾರ್ತೆಯನ್ನು ತಿಳಿದ ರಾಜರಾಣಿಯರು ದುಃಖ ಸಾಗರದಲ್ಲಿ ಮುಳುಗಿದರು. ಅವರು ಮಗುವಿನ ದಹನಕ್ರಿಯೆಯನ್ನು ಮುಗಿಸಿ ತಮ್ಮ ವೇದನಾಪೂರ್ಣವಾದ ಬಾಳನ್ನೂ ಮುಗಿಸಿಬಿಡುವ ಸಂಕಲ್ಪ ಮಾಡಿಕೊಂಡರು.

ಚಿತೆಯು ತಯಾರಿಸಲ್ಪಟ್ಟಿತು. ಆದರೆ ಆಗಲೇ ಬ್ರಹ್ಮ ವಿಷ್ಣು ಮಹೇಶ್ವರರು ಪ್ರತ್ಯಕ್ಷರಾದರು. ಅವರನ್ನು ಕಂಡು ವ್ಯಾಕುಲಚಿತ್ತನಾದ ರಾಜನು "ದೇವಾ! ತಾವು ಈ ರೀತಿಯ ವರದಾನವನ್ನೇಕೆ ಮಾಡಿದಿರಿ. ನನ್ನ ಕರೋರ ಸಾಧನೆಯ ಬಗ್ಗೆ ಈ ರೀತಿಯ ಕುತಂತ್ರವನ್ನು ಹೂಡುವುದು ತಮ್ಮ ಉದ್ದೇಶವಾಗಿತ್ತೇನು?" ಎಂದು ಕೇಳಿದನು.

ಆಗ ವಿಷ್ಣುವು ಸಹಜ ಸರಳಭಾವದಿಂದ "ರಾಜಾ! ತುಸು ಶಾಂತಿಯಿಂದ ಕೆಲಸಮಾಡು; ನೀನು ಒಬ್ಬನ ಸ್ವಾರ್ಥಕ್ಕಾಗಿ ತ್ರಿಭುವನಗಳ ಅಮೂಲ್ಯ ಸಂಪತ್ತನ್ನು ಬೇಡಿದೆ. ಆದ್ದರಿಂದಲೇ ನಿನ್ನ ವರವು ನಿಷ್ಪ್ರಯೋಜನವಾಯಿತು. ಸ್ವಾರ್ಥವು ನಾಶದ ಎರಡನೆಯ ರೂಪವಾಗಿದೆ" ಎಂದನು.

ಸುರಥನ ಅಂತಃಕರಣದಲ್ಲಿ ಈ ಮಾತುಗಳಿಂದ ಜ್ಞಾನೋದಯವಾಯಿತು. ಅವನು "ಪ್ರಭೋ! ಕ್ಷಮಿಸು. ನಾನು ನಿಜವಾಗಿಯೂ ಸ್ವಾರ್ಥದಿಂದ ಅಂಧನಾಗಿದ್ದೇನೆ. ಆದರೆ ದೇವ! ಒಂದು ವಿನಂತಿಯಿದೆ. ಯಾವ ನನ್ನ ತಪಸ್ಸಿನ ಫಲವು ಅಪಹರಿಸಲ್ಪಟ್ಟಿತೋ ಅದು ಸಮಸ್ತ ಜೀವರಾಶಿಯ ಕಲ್ಯಾಣಕ್ಕಾಗಿ ವಿನಿಯೋಗಿಸಲನುಕೂಲವಾಗುವಂತೆ ದಯದೋರಬೇಕು" ಎಂದು ಬೇಡಿಕೊಂಡನು.

"ತಥಾಸ್ತು" ಎಂದು ಹೇಳಿ ವಿಷ್ಣುವು ಮುಗುಳ್ನಕ್ಕನು. "ಇಂದಿನಿಂದ ಲಕ್ಷ್ಮಿಯು ಒಂದು ಗಿಡದ ರೂಪದಲ್ಲಿ ನಿನ್ನ ಹತ್ತಿರವೇ ಇರುವಳು ನಾನು ಪ್ರತಿದಿನ ಸಾಯಂಕಾಲ ಅವಳೊಡನೆ ಭೇಟಿಗಾಗಿ ಬರುವೆನು" ಎಂದನು. ಬ್ರಹ್ಮದೇವನೂ ಹಾಗೆಯೇ ಹಂಸಿದನು—"ಸರಸ್ವತಿಯೂ ಆ ಗಿಡದಲ್ಲಿ ವಾಸಿಸುತ್ತಿರಲಿ, ನಾನು ಪ್ರತಿ ಸಾಯಂಕಾಲ ಅವಳೊಡನೆ ಕೂಡುವುದಕ್ಕಾಗಿ ಬರುವೆನು."

ಈಶ್ವರನೂ ಹಾಗೆಯೇ ಹರಸಿದನು—"ಇಂದಿನಿಂದ ಆದಿ ಶಕ್ತಿಯು ಈ ಗಿಡದಲ್ಲಿ ವಾಸಿಸುವಳು. ನಾನೂ ಪ್ರತಿ ಸಾಯಂಕಾಲ ಅವಳ ಮಿಲನಕ್ಕಾಗಿ ಬರುವೆನು". ಆನಂತರ ಮೂರು ಮೂರ್ತಿಗಳೂ ಅಂತರ್ಧಾನರಾದರು. ಅದೇ ಸ್ಥಳದಲ್ಲಿ ಒಂದು ತುಳಸಿ ಗಿಡವು ಮೂಡಿಬಂತು.

ಸುರಥನೂ ಅವನ ಪ್ರಜೆಗಳೂ ಈ ಗಿಡದ ಪೂಜೆಯನ್ನು ಬಹಳ ಶ್ರದ್ಧೆಯಿಂದ ಮಾಡತೊಡಗಿದರು. ಭೂಲೋಕದ ನಾಲ್ದೆಸೆಗಳಲ್ಲಿಯೂ ಸುಖಶಾಂತಿಗಳು ಹರಡಿಹೋದುವು. ನಾರದರೂ ಅಲ್ಲಿ ಪ್ರತ್ಯಕ್ಷರಾಗಿ "ಯಾವ ಗೃಹಿಣಿಯು ದೀಪದ ಬೆಳಕಿನಲ್ಲಿ ಪ್ರತಿ ಸಂಜೆಯೂ ತುಳಸಿ ದರ್ಶನ ಮಾಡುತ್ತಾಳೋ ಅವಳ ಮನೆಯಲ್ಲಿ ಲಕ್ಷ್ಮಿ, ಸರಸ್ವತಿ ಮತ್ತು ಪಾರ್ವತಿಯರು ಸ್ಥಿರನಿವಾಸಿಗಳಾಗುವರೆಂದು ನಿನ್ನ ರಾಜ್ಯದಲ್ಲಿ ಡಂಗುರ ಹೊಯಿಸು" ಎಂದು ಸುರಥನೊಡನೆ ಸೂಚಿಸಿದರು. ಸುರಥನೂ ಋಷಿಗಳ ಆಜ್ಞೆಯಂತೆ ಪಾಲಿಸಿದನು.

(ಸುಕ್ತಕ ಪ್ರಸಂಗದಿಂದ)

ಪಾಲಿನೇಶ್ಯಾದ ಜನರು

ಶ್ರೀ. ಹೊಯಿಸಳ

ಜಗತ್ತು ಅಜ್ಞಾನಾಂಧಕಾರದಲ್ಲಿ ಮುಳುಗಿದ್ದಾಗ ಭಾರತ ದೀಪಾವಳಿಯನ್ನು ಹಚ್ಚಿ, ನೀತಿ ಪೂರೈದಿರಿ ಎಂದು ಸನ್ಮಾರ್ಗವನ್ನು ತೋರಿಸಿತು. ಹೀಗೆಯೇ ತನ್ನ ಸಂದೇಶವನ್ನು ಹೊತ್ತುಕೊಂಡು ಜಗತ್ತಿನ ಬೇರೆಬೇರೆ ಭಾಗಕ್ಕೆ ಜ್ಞಾನಜ್ಯೋತಿಗಳನ್ನಿಸಿದ ಪ್ರತಿನಿಧಿಗಳನ್ನು ಕಳಿಸಿತು. ಒಂದಲ್ಲ ಒಂದು ಕಾರಣದಿಂದ ಶಾಂತಸಾಗರದ ಒಂದು ಮೂಲೆಯ ದ್ವೀಪಸ್ತೋಮದಲ್ಲಿ ನಮ್ಮ ಭಾರತೀಯರು ನೆಲೆನಿಂತರು, ಆದರೆ, ಅವರು ನಮ್ಮವರೆಂದು ತಿಳಿಯಲು ಮಾತ್ರ ನಮಗೆಷ್ಟು ಕಾಲ ಹಿಡಿಯಿತು!

ಸುಂಕಾತನ ಕಾಲದಲ್ಲಿ ವಿದ್ಯಾ ಮತ್ತು ಯೂರೋಪು ಖಂಡಗಳಲ್ಲಿ ಜನಸಂಖ್ಯೆ ಹೆಚ್ಚಾಗಿತ್ತು. ಸುಮಾರು ಆರುನೂರು ವರ್ಷಗಳ ಹಿಂದೆ ಅಗಿನ ಜನರು ತಮ್ಮ ದೇಶಗಳನ್ನು ಬಿಟ್ಟು ಬೇರೆ ಬೇರೆ ದೇಶಗಳಿಗೆ ವ್ಯಾಪಾರಕ್ಕೋಸ್ಕರ, ವಾಸಕ್ಕೋಸ್ಕರ ಹೋಗುವ ಕುತೂಹಲವಂತರಾದರು. ಈ ಸೇವೆಗೆ ಸರಿಯಾಗಿ ಭೂಮಿ ಗುಂಡಾಗಿದೆಯೆಂಬ ವಿಚಾರವು ಸಿದ್ಧಾಂತವಾಯಿತು. ಅದೇ ಸಮಯದಲ್ಲಿ ಸಮುದ್ರಯಾನ ಮಾಡುವವರಿಗೆ ಪರಮ ಸಹಾಯಕವಾದ ಉತ್ತರಮುಖಿಯೂ ತಯಾರಾಯಿತು. ಆಗ ಅನೇಕ ನೌಕಾನಾಯಕರು ಭೂಪ್ರದಕ್ಷಿಣೆ ಮಾಡಿಬರುವ ಪ್ರಯತ್ನ ಮಾಡಿದರು. ಹೀಗೆ ಸಾಗರ ಯಾತ್ರೆಗಾಗಿ ಹೋದವರು ಯೂರೋಪಿನ್ನರೋ ಕಾಣದಿದ್ದ ಅನೇಕ ಭೋಗ್ಯ ವಸ್ತುಗಳನ್ನು ತಂದು ಮಾರಿದರು. ಅನಂತರ ವ್ಯಾಪಾರಿಗಳು ಈ ನೌಕಾ ಯಾತ್ರೆಗಳಲ್ಲಿ ಭಾಗವಹಿಸಿ ಲಾಭಹೊಂದಿದರು. ರಾಜ ಮಹಾರಾಜರೂ ಭಾರಿ ಭಾರಿ ಹಡುಗಗಳನ್ನು ಕಟ್ಟಿಸಿ ನಾವಿಕರನ್ನು ಹುರಿದುಂಬಿಸಿ ಹೊಸ ದೇಶಗಳಾವಿಷ್ಕಾರಕ್ಕಾಗಿ ಕಳಿಸಿದರು.

ಅಂತೂ ಜನಗಳಲ್ಲಿ ಪರದೇಶಗಳನ್ನು ಹುಡುಕಿಹೋಗುವ ಆಸೆಯು ಬಲವತ್ತರವಾಯಿತು. ಕಾರಣಾಂತರಗಳಿಂದ ಹೀಗೆ ತಮ್ಮ ದೇಶವನ್ನು ತೊರೆದು ಬೇರೆ ದೇಶಗಳಿಗೆ ಹೋಗಿ ನೆಲಸಿದವರ ನಡುವೆ ಮೇಫ್ಲವರ್ ಹಡಗಿನಲ್ಲಿ ಅಮೆರಿಕ ದೇಶಕ್ಕೆ ವಲಸೆಹೋಗಿ ನೆಲಸಿದ ಯಾತ್ರಾರ್ಥಿತಾತ ಪಾದರು ಪ್ರಸಿದ್ಧರಾಗಿದ್ದಾರೆ. ಅವರಿಗೂ ಹಿಂದೆ ನಮ್ಮ ಭಾರತ ದೇಶದಿಂದ ಕಣ್ಣ ಕಣ್ಣ ದೋಣಿಗಳಲ್ಲಿ ತಮ್ಮ ನಾಯಕರೊಂದಿಗೆ ಪೆಸಫಿಕ್ ಸಾಗರದ ದ್ವೀಪಗಳಿಗೆ ವಲಸೆ ಹೋಗಿ ನೆಲಸಿ ನಿಂತವರ ವಿಚಾರವು ಪ್ರಪಂಚಕ್ಕೆ ಹೆಚ್ಚಾಗಿ ತಿಳಿದಿರದಿಲ್ಲ. ಅವರೇ ನ್ಯೂಜಿಲೆಂಡ್, ಹೈಟಿ, ಹವೈ ದ್ವೀಪಗಳಲ್ಲಿರುವ ಪಾಲಿನೇಶ್ಯಾ ಜನಗಳು ಈ ಜನಗಳ ಆಚಾರ ವ್ಯವಹಾರ ಭಾಷೆ ಮುಂತಾದುವುಗಳನ್ನೆಲ್ಲ ಅಭ್ಯಾಸಮಾಡಿದ ಇತಿಹಾಸಕಾರರು ಇವರೆಲ್ಲ ಪೂರ್ವ ಭಾರತೀಯರೆಂದು ಸಿದ್ಧಾಂತ ಮಾಡಿದ್ದಾರೆ.

ಸುಮಾರು ಇನ್ನೂರು ವರ್ಷಗಳ ಹಿಂದೆ ಸಮುದ್ರಯಾನಮಾಡಿ ಪಾಲಿನೇಶ್ಯಾ ಜನಗಳ ವಿಚಾರಗಳನ್ನು ಪ್ರಪಂಚಕ್ಕೆ ನೇರವಾಗಿ ಸ್ಪಷ್ಟವಾಗಿ ತಿಳಿಸಿದವನೇ ಇಂಗ್ಲೆಂಡಿನ ಜೇಮ್ಸ್ ಕುಕ್ ಎಂಬ ನೌಕಾ ನಾಯಕನು.

ಜೇಮ್ಸ್ ಕುಕ್ಕನ ತಂದೆ ಜಹಗೀರುದಾರ ತನ್ನ ಪುತ್ರನು ಮಹಾ ವ್ಯಾಪಾರಿಯಾಗಬೆಂದು ಅವನಿಗೊಂದು ಅಂಗಡಿ ಹಚ್ಚಿಕೊಟ್ಟನು ಆದರೆ ಹನ್ನೆರಡನೆ ವರ್ಷದಲ್ಲೇ ಜೇಮ್ಸ್ ಕುಕ್ಕನಿಗೆ ಕೂತಲ್ಲೇ ಕೂತಿರುವುದು ಸಾಧ್ಯವಾಗಲಿಲ್ಲ. ಸಾಗರ ಯಾತ್ರೆ ಮಾಡಿ ದೇಶದೇಶಾಂತರ ತಿರುಗಿ ಬರಬೇಕೆಂದು ಎತ್ತಹಲವುಂಟಾಯಿತು ಸರಿ, ಹೊರಟೇಬಿಟ್ಟ ನಾವಿಕರ ಸೇವಕನಾಗಿ ಹಡಗೊಂದರಲ್ಲಿ ಇಪ್ಪತ್ತೇನೇ ವಯಸ್ಸಿನಲ್ಲಿ ಬ್ರಿಟಿಷ್ ನೌಕಾ ಸೈನ್ಯದಲ್ಲಿ ಕ್ಯಾಪ್ಟನ್ ಆದನು. ಈತನ ಜ್ಞಾನವನ್ನೂ ಉತ್ಸಾಹವನ್ನೂ ಕಂಡುಕೊಂಡ ಸರಕಾರದವರು ಅಟ್ಲಾಂಟಿಕ್ ಸಾಗರ ತೀರದಲ್ಲಿ ನೌಕಾ ಯಾತ್ರೆಮಾಡಿ ಕೂಸ ವಿಚಾರಗಳನ್ನು ಕಂಡುಬರುವುದಕ್ಕಾಗಿ ಕಳಿಸಿಕೊಟ್ಟರು. ಆ ಕೆಲಸವನ್ನು ಸಮರ್ಪಕವಾಗಿ ಮಾಡಿ ಮೆಚ್ಚುಗೆಪಡೆದಾಗ ಬ್ರಿಟಿಷ್ ರಾಯಲ್ ಸೊಸೈಟಿಯವರು ಕುಕ್ಕ್ ಮಹಾಶಯನನ್ನು ತಮ್ಮ ಸಂಘಕ್ಕೆ ಸೇರಿಸಿಕೊಂಡು ಪೆಸಫಿಕ್ ಸಾಗರ ದ್ವೀಪಗಳನ್ನೆಲ್ಲ ನೋಡಿಬರಲಾಗಿ ಹಡಗಿನಲ್ಲಿ ಕಳಿಸಿಕೊಟ್ಟರು. ಈ ರೀತಿಯಾಗಿ ಪೆಸಫಿಕ್ ನೌಕಾಯಾತ್ರೆಗೆ ಹೊರಟ ಜೇಮ್ಸ್ ಕುಕ್ಕನು ನ್ಯೂಜಿಲೆಂಡ್, ಹೈಟಿ, ಹವೈ ದ್ವೀಪಗಳಲ್ಲಿದ್ದ ಪಾಲಿನೇಶ್ಯಾ ಜನರ ವಿಚಾರಗಳನ್ನೆಲ್ಲ ಬ್ರಿಟಿಷ್ ರಾಯಲ್ ಸೊಸೈಟಿಯ ಗಮನಕ್ಕೆ ತಂದನು.

ಕುಕ್ ಮಹಾ ನಾವಿಕನು ಪಾಲಿನೇಶ್ಯಾ ಜನರ ಮುಖ್ಯ ದ್ವೀಪವಾದ ನ್ಯೂಜಿಲೆಂಡನ್ನು ಬಳಸಿಬಂದು ಅವೆಂಡು ಅವಳ ದ್ವೀಪಗಳ ನಡುವೆ ಇರುವ ಜಲಸಂಧಿಗೆ ತನ್ನ ಹೆಸರಿಟ್ಟನು. ಈಗಲೂ ಕುಕ್ ಸ್ಟ್ರೇಟ್ ಎಂದು ಅದು ಪ್ರಸಿದ್ಧಿಯಾಗಿದೆ. ಕುಕ್ ಮಹಾನಾವಿಕನು ಆಸ್ಟ್ರೇಲಿಯ, ಮತ್ತು ದಕ್ಷಿಣ ಧ್ರುವ ದ್ವೀಪಗಳನ್ನೆಲ್ಲ ಶೋಧಿಸಿ ಹಿಂತಿರುಗುವಾಗ ೧೭೭೬ರಲ್ಲಿ ಪೆಸಫಿಕ್ ಸಾಗರದಲ್ಲೇ ಮರಣಹೊಂದಿದನು. ಅವನು ನಿಜವಾದ ಸಾಗರ ಪುತ್ರನು. ಕುಕ್ಕನ ಪ್ರಯಾಸಕ್ಕೆ ಜಗತ್ತು ಅವನನ್ನು ವಂದಿಸುತ್ತದೆ.

ಆದರೆ ನಮ್ಮ ಜನಕ್ಕೆ ಪೆಸಫಿಕ್ ಸಾಗರ ದ್ವೀಪಗಳೆಲ್ಲ ದ್ವೀಪಾಂತರಗಳೆಂದು ಪರಿಚಿತವಾಗಿದ್ದವು. ಕರ್ಪೂರ, ದಾಲ್ಚಿನೋ, ಬಾದಾಮಿ, ಲವಂಗ ತೆವಾಕ್ಷೀರ ಮೊದಲಾದ ಕಬ್ಬ ಕರಿದಿನಗಳ ಭೋಗ್ಯವಸ್ತುಗಳೆಲ್ಲ ದ್ವೀಪಾಂತರದಿಂದ ಬಂದವೆಂದು ಪ್ರತೀತಿ. ಮಲಯ, ನ್ಯೂಜಿಲೆಂಡ್, ಸುಮಾತ್ರಾ, ಜಾವಾ, ಹವೈ, ಹೈಟಿ ಮೊದಲಾದ ಪಾಲಿನೇಶ್ಯ ದ್ವೀಪಗಳೆಲ್ಲ ದ್ವೀಪಾಂತರಗಳೆಂಬ ಮೋಹಕ ನಾಮದಲ್ಲಿ

(೧ನೇ ಸುಟ ನೋಡಿರಿ)

37 ವರುಷಗಳ
ಭದ್ರ ಯಾಗೂ ಸಮರ್ಥ
ಬೇಂಕಿಂಗ್ ಸೇವೆ
ಸ್ಥಾಪನೆ: 1920
ದಿ
ಪಾಂಗಾಳ ನಾಯಕ್ ಬೇಂಕ್
ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಸೇವಿಂಗ್ಸ್ ಬೇಂಕ್ ಲೆಖ್ಖಗಳು
ರೂಪಾಯಿ 5/- ರಿಂದ ತೆರೆಯಲ್ಪಡುವುವು.
ಸುಲಭದಲ್ಲಿ ಚೆಕ್ ಮೂಲಕ ವಾಪಾಸು ಪಡೆಯುವ
ಸೌಲಭ್ಯ. ಬಡ್ಡಿ ಸೇಕಡಾ 2½ಯಂತೆ.

ಕರೆ, ಚಿಕ್ಕ ನ್ಯಾಪೆ ಮತ್ತು ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುವುವು. ಬಡ್ಡಿ ಸೇಕಡಾ 4½ ವರೆಗೆ. ದೊಡ್ಡ ಠೇವಣಾತಿಗಳ ಮೇಲೆ ಜಾಸ್ತಿ ಬಡ್ಡಿ ಕೊಡಲಾಗುವುದು.

ಶಾಖೆಗಳು

ಹೆಂಪನಕಟ್ಟೆ-ಮಂಗಳೂರು, ಬಂದರ-ಮಂಗಳೂರು, ಉಡುಪಿ, ಕಟಪಾಡಿ, ಶಂಕರಪುರ, ಹಳೆಯಂಗಡಿ, ಕಿನ್ನಿಗೋಳಿ, ಸುರತ್ಕಲ್, ಕಾವರಗೋಡು, ಕನ್ನಂಗಾಡ್ ಸೀತೇಶ್ವರ ಮತ್ತು ಮುದರಂಗಡಿ.

ಗೋಪೂಜೆಯನ್ನೇಕೆ ಮಾಡಬೇಕು?

ಶ್ರೀ ಪಿ ಎನ್. ರಾಮಚಂದ್ರ ರಾವ್.

ಬಲಿಪಾಡ್ಯದ ದಿನ ಸಾಮಾನ್ಯವಾಗಿ ಗೋಪೂಜೆಯನ್ನು ಮಾಡುವುದು ಪುರಾತನ ಸಂಪ್ರದಾಯ. ಪ್ರಾಣಿಶ್ರೇಷ್ಠನಾದ ಮಾನವನಿಂದಲೂ ಪೂಜಿಸಲ್ಪಡತಕ್ಕ ಈ ಮೂಕಪ್ರಾಣಿಗಳ ವಿಶೇಷತೆಯೇನು, ಎಂಬುದನ್ನು ನಾವು ತಿಳಿಯುವುದು ಶ್ರೇಯಸ್ಕರ

"ನಾಸ್ತಿ ನಾಸ್ತಿ ಸರೋಧರ್ಮೋ ಲೋಕೇ ಗೋರಕ್ಷಣಾದೃತೇ" ಅಂದರೆ ಲೋಕದಲ್ಲಿ ಗೋರಕ್ಷಣೆಗಿಂತ ಹೆಚ್ಚಿನ ಧರ್ಮವಿಲ್ಲವೆಂಬ ಶ್ರುತಿ ವಾಕ್ಯದಂತೆ ಒಂದು ರಾಷ್ಟ್ರದ ಗೋಸಂಪತ್ತು ಅದರ ಎಲ್ಲಾ ಸಂಪತ್ತನ್ನು ಹೊಂದಿಕೊಂಡಿದೆ ಎನ್ನಬಹುದು. ಅಮೇರಿಕದ ಹಾಗೂ ರಶ್ಯಗಳ ಗೋವುಗಳನ್ನು ಮತ್ತು ನಮ್ಮ ದೇಶದ ಗೋವುಗಳ ಪರಿಸ್ಥಿತಿಯನ್ನು ತುಲನೆಮಾಡಿದರೆ ಅದರ ಸೂಕ್ಷ್ಮ ಜ್ಞಾನವಾಗಬಹುದು. ನಮ್ಮಲ್ಲಿ ಅವುಗಳ ಸಂಖ್ಯೆಯೇನೋ ಅಧಿಕವಿದಬಹುದು. ಆದರೆ ಅವುಗಳ ಪಾಲನೆ, ಕ್ಷಣೆ, ಆದಾಯವನ್ನು ನೋಡಿದರೆ ಯಾರು ಕೂಡಾ ಅವಮಾನಪಡಬೇಕಾದ ವಿಷಯ. ಪುರಾಣ ಕಾಲದಲ್ಲಿ ಗೋವುಗಳಿಗೆ ಅಷ್ಟೊಂದು ಪ್ರಾಮುಖ್ಯಯಾಕೆ ಕೊಟ್ಟಿರಬಹುದು? ಕಾರಣವಿಲ್ಲದೆ ಕಾರ್ಯವಾಗದು. ವೈದಿಕರ ಗೊಡ್ಡು ವಿಚಾರಂಗಳೆಂದು ಹೆಲವಾರು ವಿಷಯಗಳಿಗೆ ಆರೋಪಿಸಬಹುದು. ಆದರೆ ಅಂದಿನ ಜನರು ಮಾಡಿರುವ ಕೆಲ ಆಚಾರಗಳನ್ನು ವಿಚಾರ ಮಾಡಿ ನೋಡಿದರೆ ಮಹತ್ತರವಾದ ಉದ್ದೇಶಗಳಿಂದ ಕೂಡಿರುತ್ತವೆ ಎಂಬುದನ್ನು ಮನಗಾಣಬಹುದು. ಕಾಲಕ್ರಮೇಣ ಆ ಆಚಾರಗಳ ಹಿಂದಿರುವ ಇಂತಹ ಘನವಾದ ಉದ್ದೇಶವು ಗೌಣಸ್ಥಾನಹೊಂದಿ ಆಚಾರಗಳೇ ಪ್ರಾಮುಖ್ಯವೆನಿಸಿದುವು. ಆದುದರಿಂದ ಇಂದಿನ ಕೆಲ ಆಚಾರಗಳು ವಿಚಾರ ಶೂನ್ಯವಾಗಿವೆ ಎನ್ನುವುದರಲ್ಲಿ ಯಾರೂ ಬೇಸರಪಡಲಾರರು.

ವ್ಯವಸಾಯ ಪ್ರಧಾನವಾದ ನಮ್ಮ ದೇಶದಲ್ಲಿ ಉಳುಮೆಯ ಕೆಲಸವು ವಿಶೇಷವಾಗಿ ಗೋ ಸಂಪತ್ತನ್ನು ಹೊಂದಿಕೊಂಡಿದೆ. ಬಡವರ 'ಕ ವ ಧೇನ' ಆಗಿರುವ ಈ ಸಂಪತ್ತು ರಾಷ್ಟ್ರದ ಅಮೂಲ್ಯ ಸೊತ್ತೆಂಬುದರಲ್ಲಿ ಅನುಮಾನವಿಲ್ಲ. ನಮಗೆ ಉಪಯೋಗವಿರುವ ಪ್ರತಿ ಪ್ರಾಣಿ ಯಾ ವಸ್ತು ವಿಶೇಷಗಳು ನಮಗೆ ದೇವತೆಗಳು ಇಲ್ಲವೇ ದೇವರ ಪ್ರೀತಿಯ ವಸ್ತುಗಳಾಗಿವೆ. ಇದುವೇ ನಮ್ಮ ಸಂಸ್ಕೃತಿಯ ವಿಶೇಷತೆ ಯಾವುದರಲ್ಲಿ ಭಕ್ತಿ ಇದೆಯೋ-ಪವಿತ್ರವಾದ ಪ್ರೇಮವಿದೆಯೋ-ಅದನ್ನು ರಕ್ಷಿಸುವ-ಪಾಲಿಸುವ-ಹೊಣೆಗಾರಿಕೆ ಸ್ವತಃ ಬರುವುದಷ್ಟೇ? ಇದುವೇ ನಾವು ಕೆಲವು ಪ್ರಾಣಿಗಳನ್ನು ಮತ್ತು ವಸ್ತುಗಳನ್ನು ಪೂಜಿಸುವುದರ ರಹಸ್ಯ

ಗೋಪೂಜೆಯು ನಮ್ಮ ದೇಶಕ್ಕೆ ಅನಾದಿಕಾಲದಿಂದ ಬಂದಿರುವ ಶ್ರೇಯೋ ಸಾಧನ. ಅಕಳು ಪಶು ಜನ್ಮದಲ್ಲಿದ್ದರೂ ಅದರಲ್ಲಿರುವ ಕತ್ವಗುಣದಿಂದ ಅದು ಮನುಷ್ಯನಿಗೆ ಪೂಜ್ಯವಾಗಿರುವುದ. ಅಕಳು ಸಾತ್ವಿಕ ಪ್ರಾಣಿಯೆಂದು ಎಲ್ಲರ ಅನುಭವದಲ್ಲಿ ಸೂ ಇದೆ. ಅಕಳ ಹಾಲಿನಂಥ ಸಾತ್ವಿಕವಾದ ಆಹಾರವು ಈ ಜಗತ್ತಿನಲ್ಲಿ ಇನ್ನೊಂದಿಲ್ಲ. ಸಾತ್ವಿಕ ಆಹಾರವನ್ನು ಹೇಳುವಾಗ ಭಗವದ್ಗೀತೆಯು—

"ಆಯುಃ ಸತ್ವ ಬಲಾರೋಗ್ಯ
ಸುಖ ಪ್ರೀತಿ ವಿವರ್ಧನಾಃ ।
ರಸ್ಯಾ ಸ್ನಿಗ್ಧಾಃ ಸ್ಥಿರಾ ಹೃದ್ಯಾ
ಆಹಾರಾಃ ಸಾತ್ವಿಕ ಪ್ರಿಯಾಃ"

ಎಂದು ಹೇಳಿದೆ ಆಯುಸ್ಸು, ಸಾತ್ವಿಕ ಗುಣ, ಶಕ್ತಿ, ಆರೋಗ್ಯ, ಸುಖ, ಪ್ರೀತಿ ಇವುಗಳನ್ನು ಹೆಚ್ಚಿಸುವುದಾಗಿಯೂ, ರಸಯುಕ್ತವಾಗಿಯೂ, ಸ್ಥಿರ ಸ್ವಭಾವದ್ದಾಗಿಯೂ, ಮನೋಹರವಾಗಿಯೂ, ಇರುವದೇ ಸಾತ್ವಿಕಾಹಾರವೆಂದು ಅದರ ತಾತ್ಪರ್ಯ. ಅಕಳ ಹಾಲು ಈ ಎಲ್ಲಾ ಗುಣಗಳಿಂದ ಕೂಡಿದೆ. "ಆಯುರ್ವೈ ಘೃತಂ" ಎಂದು ಶ್ರುತಿಯೇ ಹೇಳುತ್ತದೆ.

"ಗೋಭಿಷ್ಟರೇ ಮಾಮತಿಂ ದುರೇವಾಂ" ಎಂದೂ ಶ್ರುತಿಯಲ್ಲಿದೆ. "ದಾರಿದ್ರ್ಯದಿಂದ ಬಂದ ದುಷ್ಟವಾದ ಬುದ್ಧಿಯನ್ನು ಗೋವುಗಳಿಂದ ಕಳೆದು ಕೊಳ್ಳೋಣ" ಎಂದು ಈ ಶ್ರುತಿ ವಾಕ್ಯದ ಅರ್ಥ.

ಭೌತಿಕ ಶಾಸ್ತ್ರಜ್ಞರಾದ ಪಾಶ್ಚಾತ್ಯ ವೈದ್ಯರೂ, ಪೌರ್ವಾತ್ಯ ವೈದ್ಯರೂ ಅಕಳ ಹಾಲಿನಿಂದಾಗುವ ಆರೋಗ್ಯದ ವಿಚಾರದಲ್ಲಿ ಒಂದೇ ಅಭಿಪ್ರಾಯವುಳ್ಳವರಾಗಿರುವುದರಿಂದ ಅದಕ್ಕಾಗಿ ಶ್ರುತಿಯು ತನಕ ಹೋಗುವ ಅವಶ್ಯವಿಲ್ಲ. ಇಂತಹ ಸಾತ್ವಿಕ ಆಹಾರಕ್ಕೆ ಆಧಾರ ಸ್ಥಾನವಾಗಿರುವದೊಂದು ಉತ್ಕೃಷ್ಟವಾದ ಹೆಚ್ಚುಗಾರಿಕೆಯಲ್ಲವೇ? ಇಂಥ ಸಾತ್ವಿಕ ಪ್ರಾಣಿಯನ್ನು—ಭಕ್ತಿಯಿಂದ ಪರಮಾತ್ಮನ ವಿಭೂತಿವಿಶೇಷವೆಂದು ಪೂಜಿಸುವುದರಲ್ಲಿ-ಪ್ರೀತಿಯಿಂದ ರಕ್ಷಿಸುವುದರಲ್ಲಿ ತೊಂದರೆಯೇನು?

ಅಕಳ ಗೋಮಯ, ಗೋಮೂತ್ರವು ಕ್ರಿಮಿನಾಶಕವೆಂದು ಭೌತಿಕ ಶಾಸ್ತ್ರಜ್ಞರು ಒಪ್ಪುವರು. ಹೀಗಿರುವಾಗ ಅವುಗಳಿಂದ ಕೂಡಿದ ಸಂಜಗವ್ಯವನ್ನು ಪಾಪ ಪರಿಹಾರಕವೆಂದು (ರೋಗವಿನಾಶಕ ಯಾಕಾಗಲೊಲ್ಲದು?) ಸೇವಿಸುವುದರಲ್ಲಿ ಆಶ್ಚರ್ಯವೇನಿದೆ?

ಗೋವುಗಳ ಆರೈಕೆಯು ಪ್ರತಿಯೊಬ್ಬ ಮನುಷ್ಯನ ಧಾರ್ಮಿಕ ಕರ್ತವ್ಯವಾಗಿದೆ. ಸಾಕ್ಷಾತ್ಪರಮಾತ್ಮನು ಕೃಷ್ಣಾವತಾರದಲ್ಲಿ ಈ ಉದ್ಯೋಗಕ್ಕೆ ಉದಾಹರಣೆಯನ್ನು ಕೊಟ್ಟಿರವನು.

"ಕೃಷಿಗೋರಕ್ಷ್ಯ ವಾಣಿಜ್ಯಂ ವೈಶ್ಯ ಕರ್ಮ ಸ್ವಭಾವಜಮ್" ಎಂಬ ಮಾತಿನಿಂದ ಗೋರಕ್ಷಣೆಯನ್ನೆ ಧರ್ಮವೆಂದು ಆಡಿ ತೋರಿಸಿರುವನು. "ಆಂತ್ಯೇ ಗೋಘ್ನಮುತ ಪೂರುಷಘ್ನಂ" ಎಂದು ಶ್ರುತಿಯಲ್ಲಿರುವುದು.

ಮುಸಲ್ಮಾನ್ ಜನ ಪವಿತ್ರ ಗ್ರಂಥವಾದ ಕುರಾನಿನಲ್ಲಿ ಕೂಡಾ—

"ನಿಶ್ಚಯ ಇನೀ ಮಕಾಸೇಕ್ ಪರಾತುಗೂರ್| ಜೆಬೆ ಹರಿ ಬಹಾಮಯ್ ಜೆಬೆ ಹರಿ ತುಯೂಂ| " ಎಂದು ಹೇಳಿದೆ. "ಹಸು ಮೊದಲಾದ ನಾಲ್ಕು ಕಾಲಿನ ಪಶುಗಳು ಮನುಷ್ಯನ ಆಹಾರಕ್ಕಾಗಿ ಹಟ್ಟಿಲ್ಲ ಭಾರವನ್ನು ಹೊರುವುದು ಮೊದಲಾದ ಕೆಲಸಕ್ಕೆ ಹುಟ್ಟಿವೆ" ಎಂದು ಅದರ ತಾತ್ಪರ್ಯ. ಕ್ರಿಸ್ತ ಬಂಧುಗಳ ಧರ್ಮಗ್ರಂಥವಾದ ಬೈಬಲಿನಲ್ಲಿ—

"Thou shalt not kill; and who-so-ever shall kill, shall be in danger of the Judgement" ಅಂದರೆ "ಕೊಲ್ಲಬೇಡ; ಯಾರು ಕೊಲ್ಲುವರೊ ಅವರು ಅದಕ್ಕಾಗಿ ಶಿಕ್ಷೆಯನ್ನು ಅನುಭವಿಸಬೇಕಾದೀತು"

ಆದುದರಿಂದ ಭಾರತದ ಸಂಪತ್ತು ಎನಿಸುವ ಈ ಗೋವುಗಳ ರಕ್ಷಣೆಯಾಗಬೇಕಾದದ್ದು ಬಹಳ ಅವಶ್ಯ. ಕ್ಷೀರ ಸಾಗರದ ಕಲ್ಪನೆಯುಳ್ಳ ಭಾರತದಲ್ಲಿ ಒಂದು ಕುಡಿ ಅಕಳ ಹಾಲಿಗೆ ಅವಕಾಶವಿಲ್ಲದೆ ಮಕ್ಕಳೆಲ್ಲಾ ಅಕಾಲ ಮರಣಕ್ಕೆ ಗುರಿಯಾಗುವ ಸಂದರ್ಭ ಬಂದಿದೆ. ಲಕ್ಷ್ಮಿಯು ಕ್ಷೀರಸಾಗರದಲ್ಲಿ ಹುಟ್ಟಿರುವುದರಿಂದ ಹಾಲಿನ ಅಭಾವವಾಗುತ್ತಿದೆ ಅವಳು ಇಲ್ಲಿಂದ ಅಂತರ್ಧಾನವಾದಳೋ ಏನೋ?

ಪ್ರತಿದಿನ ಗೋವುಗಳ ಹತ್ತಿರ ಹೋಗುವುದರಿಂದ ಮನುಷ್ಯನ ಕೆಲವು ರೋಗಗಳು ಗುಣವಾಗುತ್ತವೆಂತೆ. ಇದಕ್ಕೋಸ್ಕರವಾಗಿಯೇ ಪ್ರತಿದಿನ ಗೋಪೂಜೆ ಮಾಡಬೇಕೆಂದು ವಿಧಿಸಿದರೋ ಏನೋ ಗೋಪೂಜೆ ಎಂದರೆ ಗೋವುಗಳಿಗೆ ಆರತಿಯೇ ಮಾಡಬೇಕೆಂದಿಲ್ಲ. ಗೋವುಗಳ ಆರೈಕೆಯೇ ಗೋಪೂಜೆ.

[ಆಧಾರದಿಂದ]

ನೀವು ತೆಂಗು ಬೆಳೆಸುವವರೆ?

ಹಾಗಾದರೆ ತೆಂಗಿನ ಬೆಳೆಯನ್ನು ವೃದ್ಧಿಸುವುದರಲ್ಲಿ ನೀವು ನಿಮ್ಮ ಕರ್ತವ್ಯವನ್ನು ಪಾಲಿಸಬೇಕು.

ಕೋಕನಟ್ ಬುಲೆಟಿನ್

ಇಂಡಿಯನ್ ಸೆಂಟ್ರಲ್ ಕೋಕನಟ್ ಕಮಿಟಿಯವರಿಂದ ಪ್ರಕಟವಾಗುತ್ತಿರುವ ಈ ಮಾಸಪತ್ರಿಕೆಯಲ್ಲಿ ತೆಂಗಿನಬೆಳೆಯನ್ನು ಅಭಿವೃದ್ಧಿಪಡಿಸುವ ಎಲ್ಲಾ ವಿಧಾನಗಳೂ ಕೊಡಲ್ಪಡುತ್ತಿವೆ ಈ ಪತ್ರಿಕೆಯು ಇಂಗ್ಲಿಷ್, ಕನ್ನಡ, ಮಲೆಯಾಳ, ಭಾಷೆಗಳಲ್ಲಿ ಪ್ರಕಟವಾಗುತ್ತದೆ. ಇಂಗ್ಲಿಷ್ ಬುಲೆಟಿನ್‌ಗೆ ವರ್ಷಕ್ಕೆ ರೂಪಾಯಿ 2/- ಚಂದಾಹಣ ಕನ್ನಡ ಅಥವಾ ಮಲೆಯಾಳ ಮಾಸಪತ್ರಿಕೆಗಳಿಗೆ ವರ್ಷಕ್ಕೆ ಚಂದಾಹಣ ರೂಪಾಯಿ 1/- ಮಾತ್ರ.

ಬುಲೆಟಿನ್ ಪತ್ರಿಕೆಯನ್ನೋದಿರಿ. ಮೊದಲು ಒಂದು ತೆಂಗು ಬೆಳೆದಲ್ಲಿ ಎರಡು ತೆಂಗುಗಳನ್ನು ಬೆಳೆಸಲು ಸಹಾಯಮಾಡಿರಿ.

ಕಮಿಟಿಯವರ ಇತರ ಪ್ರಕಟಣೆಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ದಿ ಸೆಕ್ರೆಟರಿ,
ಇಂಡಿಯನ್ ಸೆಂಟ್ರಲ್ ಕೋಕನಟ್ ಕಮಿಟಿ,
ಎರ್ನಾಕುಲಂ.

ಗೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಹೊಸಕೆರೆ
ಚಿದಂಬರಯ್ಯನವರ

ಭಗವದ್ಗೀತೆಯ

ಸಮೂಲ ಭಾಷಾಂತರ

ಪೊಕೆಟ್ ಎಡಿಷನ್.

ಸುಮಾರು 450 ಪುಟಗಳು.

ಕ್ರಯ 0—12—0

ನವಯುಗ ಪ್ರೆಸ್, ಉಡುಪಿ.

ಯಕ್ಷಗಾನದ ಅಪೂರ್ವ ಕಲೆ

ಶ್ರೀ. ರಮಾನಂದ ಬನಾರಿ

ಕನ್ನಡ ನಾಡಿನ ಕಲೆಗಳಲ್ಲಿ ಯಕ್ಷಗಾನವೂ ಪ್ರಧಾನ ಸ್ಥಾನ ಪಡೆದಿದೆ. ಏಕೈಕ ಕರ್ನಾಟಕದ ಜನರ ಮನೆಮಾತಾಗಿರುವ ಈ ಯಕ್ಷಗಾನವನ್ನು ಬೆಳೆಯಿಸಿಕೊಂಡು ಬರುವುದು ಸಂಸ್ಕೃತಿಪ್ರಿಯ ಕಲಾರಾಧಕ ಕನ್ನಡಿಗರೆಲ್ಲರ ಆದ್ಯ ಕರ್ತವ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಕಲೆಯೇ ಜೀವನ; ಜೀವನವೇ ಕಲೆ ಜೀವನದ ಹೆಜ್ಜೆ ಹೆಜ್ಜೆಗಳಲ್ಲೂ ಕಲಾತ್ಮಕವಾದ ವಸ್ತುಗಳನ್ನೇ ನಾವು ಕಾಣುತ್ತೆವೆ. ನಾವು ಉಣ್ಣುವ ಊಟ, ಆಡುವ ಆಟ, ನೋಡುವ ನೋಟ, ಉಡುವ ಉಡುಗೆ, ತೊಡುವ ತೊಡಿಗೆ—ಇವೆಲ್ಲವೂ ಕಲಾಮಯವಾಗಿದ್ದು ಬಾಳಿನ ಬಯಕೆಯ ಪೂರ್ಣತೆ ಕಲಾಧೀನವಾಗಿದೆ ಎಂದರೆ ಹೆಚ್ಚಾಗಲಾರದು! ಈ ಮಾತು ಕಲೆಯ ಬೃಹದ್ವ್ಯಾಪಕತ್ವವನ್ನೂ, ಜೀವನದಲ್ಲಿ ಅದಕ್ಕಿರುವ ಮಹತ್ವವನ್ನೂ ಎತ್ತಿ ತೋರಿಸುತ್ತದೆ.

ಕಲೆಯೆಂದರೇನು? ಯಕ್ಷಗಾನವನ್ನು ಯಾಕಾಗಿ ಒಂದು ಕಲೆಯೆಂದು ಕರೆಯಬೇಕು? ಎಂಬುದು ಸಹಜವಾಗಿ ಉದ್ಭವಿಸುವ ಪ್ರಶ್ನೆ. ಯಾವುದು ಅಲ್ಪ ಸಂಖ್ಯಾಕರಿಗೆ ಮಾತ್ರ ದೀರ್ಘಕಾಲದ ಪರಿಶ್ರಮದಿಂದ ಸಾಧಿಸಲು ಸಾಧ್ಯವೋ ಅದೇ ಕಲೆ. ಗದ್ದೆಯುಳುವುದನ್ನಾಗಲಿ, ಕೂಲಿ ಕೆಲಸವನ್ನಾಗಲಿ ನಾವು ಕಲೆ ಎಂದು ಕರೆಯುವುದಿಲ್ಲ. ಕಾರಣವೇನು? ಅವು ಬಹುಸಂಖ್ಯಾಕರಿಂದ ಬಹು ಬೇಗನೆ ಗಳಿಸಲ್ಪಡುವುವುಗಳು. ಸಂಗೀತ ಕಲೆ, ಶಿಲ್ಪ ಕಲೆ, ನಾಟ್ಯ ಕಲೆ, ಚಿತ್ರ ಕಲೆ—ಇವುಗಳನ್ನು ಸಿದ್ಧಿಸಲು ಎಷ್ಟೋ ಮಂದಿ ಪ್ರಯತ್ನಿಸಿದರೂ ಅವುಗಳಲ್ಲಿ ಪ್ರವೀಣರೆನ್ನಿಸಿದವರನ್ನು ಕೆಲವೇ ಜನರನ್ನು ಮಾತ್ರ ನಾವು ಕಾಣುತ್ತೇವೆ. ಅಂತೆಯೇ ಯಕ್ಷಗಾನವು ಕೂಡ! ಆದುದರಿಂದಲೇ ಇವುಗಳೆಲ್ಲವನ್ನೂ ಕಲೆಗಳೆಂದು ಕರೆಯುತ್ತೇವೆ.

ಯಕ್ಷಗಾನಕ್ಕೆ ಈ ಹೆಸರು ಏಕೆ ಒಪ್ಪುತ್ತದೆ ಎಂಬುದನ್ನು ಆಲೋಚಿಸೋಣ. ಯಕ್ಷರು ಒಂದಾಗಿ ಗಾನವನ್ನು ಹಾಡುವ ಕ್ರಮವಿದೆಯಂತೆ. ಇಲ್ಲಿ ಇಂದು ಹಾಡುವವರು ಯಕ್ಷರಲ್ಲದಿದ್ದರೂ ಈ ಸಂಗೀತದ ಸೊಗಸು ಯಕ್ಷರ ಗಾನದಷ್ಟೇ ಶ್ರುತಿ ರಸಾಯನವಾಗಿರುವುದರಿಂದ ಇದಕ್ಕೆ ಈ ಹೆಸರು ಬಂದಿರಬಹುದು ಎಂದು ವಿದ್ವಾಂಸರು ತರ್ಕಿಸುತ್ತಾರೆ. ಈ ಕಲೆಗೆ 'ದಶಾವತಾರ'ವೆಂಬ ಹೆಸರೂ ಪುರಾತನದಿಂದಲೇ ಇತ್ತು ಎಂಬುದು ಸರ್ವವಿದಿತ! ಜಗತ್ಕಲ್ಯಾಣಕ್ಕಾಗಿ ಮಹಾ ವಿಷ್ಣುವು ತಕ್ಕು ಅವತಾರಗಳನ್ನೆತ್ತಿದ ಕಥೆಗಳನ್ನೇ ಇದು ಒಳಗೊಂಡಿರುವುದರಿಂದ ಇದಕ್ಕೆ ಆ ಹೆಸರೂ ಬಂದಿರಬಹುದು ಎಂದು ವಿದ್ವಜ್ಜನರು ಸಮಾಧಾನವೀಯುತ್ತಾರೆ.

'ಯಕ್ಷಗಾನಕ್ಕೆ' ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲ. ಭಾರತದ ಬೇರೆ ಬೇರೆ ಭಾಗಗಳಲ್ಲಿವೆ. ಆದರೆ ಅವುಗಳಲ್ಲಿ ಪರಿಸ್ಥಿತಿಗಳಾನುಗುಣವಾದ ತುಸು ವ್ಯತ್ಯಾಸವನ್ನು ಕಾಣಬಹುದು. ಆದರೂ ಹೇಗೆ ನೀರು ಪಾತ್ರೆ ಬದಲಾದಂತೆಯಿಂದ ರೂಪದಲ್ಲಿ ವ್ಯತ್ಯಾಸ ತೋರಿದರೂ ಅದರ ಮೂಲ ವಸ್ತುವು ಒಂದೇ ಆಗಿರುವುದೋ ಅದೇ ರೀತಿಯಲ್ಲಿ ಇವುಗಳೆಲ್ಲವುಗಳ ಜನನವು ಒಂದೇ ಆಗಿದ್ದು ಅವುಗಳ ಉದ್ದೇಶವೂ ಒಂದೇ ಆಗಿದೆ. ಈ ಲೇಖನದಲ್ಲಿ ದಕ್ಷಿಣ ಕನ್ನಡದ ಯಕ್ಷಗಾನದ ಕುರಿತು ನೋಡೋಣ.

ಯಕ್ಷಗಾನದ ಹುಟ್ಟು ಹೇಗಾಯಿತೆಂದು ಹೇಳಲು ತರ್ಕಸೋಣ. 'ರಾಮಾಯಣ' 'ಮಹಾಭಾರತ' 'ಭಾಗವತ' ಇವುಗಳು ಹಿಂದೂ ಸಂಸ್ಕೃತಿಯ ಸಾರಸರ್ವಸ್ವವಾಗಿದ್ದು ಅಮಲ ಆಗರಗಳೆನ್ನಿಸಿಕೊಂಡಿವೆ. ಪುರಾತನ ಕವಿಗಳು ಇವುಗಳಲ್ಲಿ ಒಂದೊಂದು ಭಾಗವನ್ನು ಆಧಾರವಾಗಿಟ್ಟುಕೊಂಡು ಒಂದೊಂದು ಯಕ್ಷಗಾನ 'ಪ್ರಸಂಗ'ಗಳನ್ನು ರಚಿಸಲು ಮೊದಲು ಮಾಡಿದರು. ದಕ್ಷಿಣದಲ್ಲಿ ಕುಂಬಳೆಯ ಪಾರ್ತಿಸುಬ್ಬನೂ ಉತ್ತರದಲ್ಲಿ ಗೆರಸೊಪ್ಪೆಯ ಶಾಂತಯ್ಯನವರೂ, ಮೊತ್ತಮೊದಲು ಯಕ್ಷಗಾನ 'ಪ್ರಸಂಗ'ಗಳನ್ನು ರಚಿಸಿದರು. ಇವರ ಕಾಲ ಹದಿನೆಂಟನೇ ಶತಮಾನದ ಉತ್ತರಾರ್ಧವೆಂದು ಮೇಧಾವಿಗಳು ನಿಶ್ಚೈಸಿರುವರು ಆದುದರಿಂದ ಇಂದಿನ ಈ ಯಕ್ಷಗಾನವೆಂಬ ಕಟ್ಟಡವು ಪಾರ್ತಿಸುಬ್ಬನಂತಹ ಪಂಡಿತೋತ್ತಮನಿಂದ ರಚಿಸಲ್ಪಟ್ಟ ಭದ್ರವಾದ ತಳಹದಿಯ ಮೇಲೆ ನಿಂತಿದೆ ಎಂದು ನಾವು ಹೇಳಬಹುದು ಈ ಪ್ರಸಂಗಗಳನ್ನು ನೋಡಿ ಕೆಲವರು ಕೆಲವು ತಾಸುಗಳ ತನಕವಾದರೂ ಇವುಗಳ ಅರ್ಥ ವಿವರಣೆಯನ್ನು ಮಾಡುವುದರಿಂದ ಜನತೆಗೆ ಜ್ಞಾನಾರ್ಜನೆಯಾಗಬಹುದೆಂದು ಭಾವಿಸಿದರು. ಅದರೊಡಿಗೆ ಮನೋರಂಜನೆಯಾಗುವಂತೆ ಹಿನ್ಮೇಳವನ್ನು ಜೋಡಿಸಿದರು. ಹೀಗೆ ಯಕ್ಷಗಾನದ ಉದ್ಭವವಾಗಿರಬೇಕು ಎಂದು ಹೆಚ್ಚಿನ ಜನರು ಅಭಿಪ್ರಾಯಪಡತ್ತಾರೆ. ಆಗ ಈ ಯಕ್ಷಗಾನವೆಂಬುದು ಕೇವಲ ಒಂದು ಬೀಜದಂತಿತ್ತು ಅಂದು ಬಿತ್ತಿದ ಆ ಬೀಜ ಇಂದು ಹೆಮ್ಮರವಾಗಿ ಹಳ್ಳಿಗಳಲ್ಲಿ ಮಾತ್ರವಲ್ಲ ಪಟ್ಟಣಗಳಲ್ಲಿಯೂ ತನ್ನ ಶಾಖೆಗಳನ್ನು ಹರಡಿಸಿ ಉತ್ಕೃಷ್ಟಮ ಫಲಗಳನ್ನೀಯುತ್ತಿದೆ.

ಯಕ್ಷಗಾನದಲ್ಲಿ "ತಾಳಮದ್ದಳೆ" (ಯಕ್ಷಗಾನ ಕೂಟ) 'ನಾಟಕ' 'ಬಯಲಾಟ' ಗಳೆಂಬ ಮೂರು ವಿಧಗಳಿವೆ. ಇವುಗಳೆಲ್ಲವುಗಳಿಗೂ ಹಿನ್ಮೇಳವು ತೀರಾ ಅಗತ್ಯ. ಮೂರು ವಿಭಾಗಗಳಲ್ಲಿಯೂ ಇದಕ್ಕೆ ಕಟ್ಟ ಪ್ರಾಧಾನ್ಯವಿದ್ದೇ ಇದೆ. ಆದರೆ ಇವುಗಳನ್ನು ಮಾಡಿ ಆಡಿ ತೋರಿಸುವ ವಿಧಾನಗಳಲ್ಲಿ ವೈವಿಧ್ಯವಿದೆ. ತಾಳಮದ್ದಳೆಯಲ್ಲಿ ವೇಷ ಕಟ್ಟುವುದಾಗಲಿ, ಕುಣಿತವಾಗಲಿ ಇರುವುದಿಲ್ಲ. ಭಾಗವತನು ಹಾಡಿದ ಹಾಡಿಗೆ ಸರಿಯಾದ ಅರ್ಥ ವಿವರಣೆಯನ್ನು ಅರ್ಥಧಾರಿಯು ಮಾಡುವನು. ಆಗ ಅವನ ಹಾವ ಭಾವಗಳಿಗೂ, ಸ್ವರಕ್ಕೂ ಅಲ್ಲಿ ವಿಶೇಷ ಪ್ರಾಧಾನ್ಯವಿದೆ.

ನಾಟಕಗಳಲ್ಲಿ ಹಾರಾಟ ಕುಣಿದಾಟಗಳಲ್ಲದಿದ್ದರೂ ನೇಪಥ್ಯ ಹಾಕುವ ಪದ್ಧತಿಯಿದೆ. ಅಲ್ಲಿಯೂ ವ್ಯಕ್ತಿಯ ಕೈಕರಣಗಳಿಗೂ, ಮುಖ ಭಂಗಿಗೂ, ಅರ್ಥ ವಿವರಣೆಗೂ ಪ್ರಾಧಾನ್ಯವನ್ನು ಕೊಡುವುದಿದ್ದರೂ ಆಯಾಯ ದೃಶ್ಯಗಳ ವ್ಯವಸ್ಥೆಗೇ ಅಧಿಕ ಪ್ರಾಮುಖ್ಯವನ್ನು ಕೊಡಲಾಗುತ್ತದೆ

'ತಾಳ ಮದ್ದಳೆ' 'ನಾಟಕಗಳು' ಪಂಡಿತ ಪಾಮರರಿಬ್ಬರಿಗೂ ಮೆಚ್ಚಿಗೆಯಾಗುವುವುಗಳಿದ್ದರೆ 'ಬಯಲಾಟಗಳು' ಸಾಮಾನ್ಯವಾಗಿ ಪಾಮರರಿಗೆ ಮಾತ್ರ ಮೆಚ್ಚುವಂತಹುವುಗಳಾಗಿವೆ. ಇದರಲ್ಲಿ ವ್ಯಕ್ತಿಯ ವೇಶಕ್ಕೂ, ಅವನ ಕುಣಿತಕ್ಕೂ, 'ಚೆಂಡೆ ಮದ್ದಳೆ'ಗಳ ಹೊಡೆತಕ್ಕೂ ಹೆಚ್ಚಿನ ಪ್ರಾಮುಖ್ಯತೆಯನ್ನೀಯಲಾಗುತ್ತದೆ; ಹೊರತು ಅರ್ಥವಿವರಣೆಗೆ ಹೆಚ್ಚಿನ ಪ್ರಾಶಸ್ತ್ಯವಿಲ್ಲ. ಆದರೂ ಇವು ಮೂರು ಒಂದೊಂದು ವಿಧದಲ್ಲಿ ಜನತೆಯನು ನೋರಂಜನೆ ಮತ್ತು ಜ್ಞಾನರಂಜನೆಗೆ ಸಹಕಾರಿಗಳಾಗಿವೆ.

ಎಂತಹ ಕಷ್ಟ-ಸಂಕಷ್ಟಗಳಲ್ಲಾಗಲಿ, ಇಕ್ಕಟ್ಟಿನ-ಬಿಕ್ಕಟ್ಟಿನ ಸಂದರ್ಭಗಳಲ್ಲಾಗಲಿ ಮನಸ್ಸಿಗೆ ಶಾಂತಿ ದೊರೆಯಬೇಕಾದರೆ ಸಂತೋಷ ಅಗತ್ಯ. ದೇಹದ ಮನಸ್ಸಿನ ದಣಿವಿನ ಆರುವಿಕೆಗೆ ಮನೋರಂಜನೆಯು ಸಹಕಾರಿಯಾಗುತ್ತದೆ. ಯಕ್ಷಗಾನವು ಇದನ್ನು ಪೂರೈಸುವ ಹಲವು ವಿಷಯಗಳಲ್ಲಿ ಒಂದಾಗಿದೆ. ಇದು ರಾತ್ರಿಯೇ ಕುಳ್ಳಿರಿಗೆ ಜರಿಗೆ ಪುದರಿಂದ ಜನ ಸಾಮಾನ್ಯರಿಗೂ ನೋಡಲು-ಕೇಳಲು ಅನುಕೂಲವಿದೆ. ಹಗಲಿಡೀ ಬಿಡುವಿಲ್ಲದೆ ದುಡಿಯುವ ಕಾರ್ಮಿಕರಿಗೆ ರಾತ್ರಿಯ ಕೆಲವು ತಾಸುಗಳನ್ನಾದರೂ ಸಂತೋಷದಿಂದ ಕಳೆಯುವ ಸುಸಂದರ್ಭವನ್ನು ಇದು ಒದಗಿಸಿ ಕೊಡುತ್ತದೆ! ಆಪ್ಯಾಯ ನೂನವಾದ ಗಾನಾಮೃತದ ಸರಸಿಯಲ್ಲಿ ತೇಲಾಡಿ, ತನ್ಮಯನಾಗಿ ರಸಭರಿತವಾದ ಅರ್ಥ ವಿವರಣೆಗಳನ್ನಾರಿಸಿ, ಜೀವದದ ಕಷ್ಟ ನಿಷ್ಠುರತೆಗಳನ್ನು ಮರೆತು ಸ್ವರ್ಗ ಸುಖವನ್ನೆ ಸುಖವೆನಲು ಇದು ಸರಿಯಾದ ಸಂದರ್ಭವನ್ನೀಯುತ್ತದೆ! ಭಾರವಾದ ಹೃದಯಕ್ಕೆ ಶಾಂತಿ ಸುಧಾ ಧಾರೆಯನ್ನೆರೆದು ಸಂತೋಷವನ್ನುಂಟು ಮಾಡುವ ಶಕ್ತಿ ಇದ್ದಕ್ಕಿದೆ! ಎಪ್ಪತ್ತರ ವೃದ್ಧನನ್ನು ಇಪ್ಪತ್ತರ ಹರೆಯದವನನ್ನಾಗಿ ಮಾಡುವ ವಿಶೇಷ ಚೈತನ್ಯವು ಇದರಲ್ಲಿ ಅಡಕವಾಗಿದೆ.

ಕೇವಲ ಮನೋರಂಜನೆಯನ್ನು ಮಾತ್ರ ಉಂಟುಮಾಡುವ ಕಲೆಗಳು ಹಲವಿರಬಹುದು. ಆದರೆ ಯಕ್ಷಗಾನ ಕಲೆಗೆ ಇನ್ನೊಂದು ವೈಶಿಷ್ಟ್ಯವಿದೆ. ಇದನ್ನು ನೋಡಿದರೆ ಮನೋರಂಜನೆಯೊಂದಿಗೇ ಅವರವರಿಗೆ ಅರಿಯದಂತೆಯೇ ಜ್ಞಾನರಂಜನೆಯೂ ಆಗುತ್ತಿದೆ. ಈ ರೀತಿ ಎರಡೂ ಉದ್ದೇಶಗಳನ್ನು ಏಕ ಕಾಲದಲ್ಲಿ ಸಾಧಿಸುವ ಕಲೆಗಳು ಕೆಲವೇ ಇರಬಹುದು. ಯಕ್ಷಗಾನವು ಆಕರ್ಷಣೀಯವಾಗಿರುವುದರಿಂದ,—ಸಕಲರಿಗೂ ಸುಲಭದಲ್ಲೇ ಸಂತೋಷವನ್ನುಂಟು ಮಾಡುವುದರಿಂದ—ಸ್ವಾಭಾವಿಕವಾಗಿಯೇ ಹೆಚ್ಚು ಹೆಚ್ಚು ಜನರು ಇದನ್ನು ನೋಡುವುದಕ್ಕಾಗಿ ಬರುತ್ತಾರೆ ಆದರೊಂದಿಗೆ ಅಧಿಕ ಜನರಿಗೆ ಸುಲಭದಲ್ಲೇ ಜ್ಞಾನಾರ್ಜನೆಯುಂಟಾಗುತ್ತದೆ. ಜ್ಞಾನಾಭಿವೃದ್ಧಿಗೆ ಮಾತ್ರ ಪ್ರಯೋಜನವಾದುದನ್ನು ನೋಡಲು ಬರುವವರ ಸಂಖ್ಯೆ ಕಡಮೆ. ಎರಡೂ ಮಿಶ್ರವಾಗಿದ್ದರೆ ಮಾತ್ರ ಅಧಿಕ ಜನ ಆಗಮಿಸುತ್ತಾರೆ.

ಸಂಸ್ಕೃತಿ, ಧರ್ಮಗಳ ತಿರ್ಮಾನೆಯಾದ 'ರಾಮಾಯಣ' ಮಹಾಭಾರತಗಳೇ ಮೂಲವಾದುದರಿಂದ ಯಕ್ಷಗಾನದ ಪ್ರತಿಯೊಂದು ಪ್ರಸಂಗಗಳಲ್ಲಿಯೂ ಒಂದಲ್ಲ ಒಂದು ನೀತಿ, ಧರ್ಮ, ತತ್ವ ಅಡಕವಾಗಿರುತ್ತದೆ. ಆದರೆ ಅವು ಪ್ರತ್ಯಕ್ಷ ಕಣ್ಣಿಗೆ ಗೋಚರವಲ್ಲ ಪ್ರಭು ಸಮ್ಮಿತವಾಗಿ 'ಇದನ್ನು ಮಾಡು. ಇದನ್ನು ಮಾಡ ಬೇಡ' ಎಂದು ಆವು ಕಟ್ಟಿಶ್ಚಣೆಯನ್ನು ಮಾಡುವುದಿಲ್ಲ. ಕಾಂತಾ ಸಮ್ಮಿತನಾಗಿ ನಮ್ಮ ಹೃದಯಕ್ಕೆ ಅರಿವಾಗುವಂತೆ ಹೀಗೆ ಮಾಡಿದರೆ ಈ ಫಲ ದೊರೆಯುತ್ತದೆ. ಎಂಬುದನ್ನು ತೋರಿಸಿ ಕೊಡುತ್ತದೆ. ನಮ್ಮ ಹಳ್ಳಿಯ ಹಲವರು 'ಭಾರತ ರಾಮಾಯಣ'ಗಳ ಯೋಗ್ಯ ಉದಾಹರಣೆಗಳನ್ನು ಕೊಟ್ಟು ನ್ಯಾಯ ಸಮರ್ಥನೆಯನ್ನು ಮಾಡುವುದನ್ನು ಕಂಡರೆ ಈ ಯಕ್ಷಗಾನಗಳು ಅವರ ಮೇಲೆ ಯಾವ ರೀತಿಯ ಪರಿಣಾಮವನ್ನುಂಟು ಮಾಡಿವೆ ಎಂಬುದು ವ್ಯಕ್ತವಾಗುತ್ತದೆ. ಇದರ ಬದಲು ಈ ಭಾಗಗಳಲ್ಲಿ ಭಾಷಣಗಳನ್ನು ಮಾಡಿದರೆ ಅಥವಾ ಪ್ರಬಂಧಗಳನ್ನು ಬರೆದರೆ ವಿಶೇಷ ಪ್ರಯೋಜನವಾಗಲಾರದು. ಹೃದಯವೊಂದಿದ್ದರೆ ಒಂದೇ ಒಂದು ಯಕ್ಷಗಾನ

(೧೭ನೇ ಪುಟ ನೋಡಿರಿ)



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿಸ್ವರು:

1) ಷಾ ಕಂಪೆನಿ, ಮಂಗಳೂರು—1.
2) ಸಿಟಿ ಮೆಡಿಕಲ್ & ಜನರಲ್ ಏಜನ್ಸಿ, ಚಿಕ್ಕಪೇಟೆ, ಬೆಂಗಳೂರು.
3) ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್‌ಮೆಂಟ್.
4) ರಾಘವನ್ & ಕೊ, ಉಸ್ಮಾನಿಯಾ ಬಿಲ್ಡಿಂಗ್ಸ್, ಬೆಂಗಳೂರು ಸಿಟಿ.
5) ಪಿ. ಕುಟ್ಟಿನ್ ಬ್ರದರ್ಸ್, ಹಡೂರು ರೋಡ್, ಕೋಜಿಕೋಡ್ 1.

ಮಾನವನಿರ್ಮಿತ ಕೃತಕ ಚಂದ್ರ.

ಶ್ರೀ ಆರ್. ಸಿ ಭಟ್ಟಾಚಾರ್ಯಜಿ.

ಮಾನವನಿರ್ಮಿತ ಕೃತಕ ಚಂದ್ರನು ಪೃಥ್ವಿಯ ಸುತ್ತಲೂ ಪರಿಭ್ರಮಿಸ ತೊಡಗಿದ್ದಾನೆ ರಶ್ಯದ ಈ ಸಂಶೋಧನೆಯನ್ನು ಜಗತ್ತಿನ ವಿಜ್ಞಾನಿಗಳು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರಲ್ಲದೇ, ಅದನ್ನು ವಿಜ್ಞಾನದ ಪ್ರಗತಿಯಲ್ಲಿ ಮಹತ್ವದ ಮೈಲಿಗಲ್ಲೆಂದು ಒಪ್ಪಿದ್ದಾರೆ ಆದರೆ ಸಾಮಾನ್ಯ ಜನತೆ ಇದರಿಂದ ದಿಗಿಲುಗೊಂಡಿದೆ ಕೃತಕ ಚಂದ್ರನನ್ನು ಹೇಗೆ ನಿರ್ಮಿಸುತ್ತಾರೆ ಅದನ್ನು ಆಕಾಶದಲ್ಲಿ ಹೇಗೆ ನೂಕಾರು ಮೈಲು ತೂರಿಬಿಡುತ್ತಾರೆ ಅದರ ಭವಿಷ್ಯವೇನು ತಮ್ಮ ಜೀವನದ ಮೇಲೆ ಅದರಿಂದಾಗುವ ಪರಿಣಾಮವೇನು ಎಂದೆಲ್ಲ ಪ್ರಶ್ನೆಗಳು ಜನ ಸಾಮಾನ್ಯರನ್ನು ಕಾಡತೊಡಗಿವೆ ಈ ಲೇಖನದಲ್ಲಿ ಭಾರತೀಯ ವಿಜ್ಞಾನಿ ಡಾ| ಭಟ್ಟಾಚಾರ್ಯರು ಆ ಪ್ರಶ್ನೆಗಳನ್ನು ಉತ್ತರಿಸಲು ಪ್ರಯತ್ನ ಮಾಡಿದ್ದಾರೆ.

ಉಪಗ್ರಹ ಅಥವಾ ಕೃತಕ ಚಂದ್ರನನ್ನು ಅಂತರಿಕ್ಷದಲ್ಲಿ ಹಾರಿಸಿದ ಸಂಗತಿ ಜಗತ್ತಿನಲ್ಲಿ ಎಲ್ಲ ವಿಜ್ಞಾನಿಗಳಿಗೆ ಅತ್ಯಂತ ಮಹತ್ವವಾದ ಘಟನೆ. ಆದರೆ, ಸಾಮಾನ್ಯ ಮನುಷ್ಯನಿಗೆ ಅದು ಹೇಗೆ ಎನಿಸುತ್ತದೆ? ಆವನು ಆ ಸುದ್ದಿ ಕೇಳುತ್ತಾನೆ ನಿಜ; ಆದರೆ, ಬರಿಗಣ್ಣಿನಿಂದ ಈ ಮಾನವ ನಿರ್ಮಿತ ಚಂದ್ರನನ್ನು ನೋಡಲಾರನು. ಅಥವಾ ಅದರ ನಿಗೂಢ ಅರ್ಥವನ್ನೂ ತಿಳಿದುಕೊಳ್ಳಲಾರನು. ಗಲಗ ರಾತ್ರಿಯ ಭಾರವಾದ ಈ ಚಂದ್ರನನ್ನು ಅಂತರಿಕ್ಷದಲ್ಲಿ ಇಷ್ಟು ಮೇಲಕ್ಕೆ ಹೇಗೆ ತೂರಿದರೆಂಬುದೂ ಅವನ ಕಲ್ಪನೆಗೆ ನಿಲುಕದ ವಿಷಯ. ಆದುದರಿಂದ, ಇಂದಿನ ಈ ವಿಜ್ಞಾನ ಯುಗದಲ್ಲಿ ಅವನಿಗೆ ಈ ಸಂಗತಿಯನ್ನೆಲ್ಲಾ ತಿಳಿಯಾದ ಭಾಷೆಯಲ್ಲಿ ಪರಿಚಯಮಾಡಿಕೊಡುವುದು ಅವಶ್ಯವಿರುತ್ತದೆ. ಕೃತಕ ಚಂದ್ರನು ಆಕರ್ಷಣ ಶಕ್ತಿಯಿಂದ ಭೂಪ್ರದಕ್ಷಿಣೆ ಮಾಡುವಂತಾಗಬೇಕಾದರೆ, ಭೂಮಿಯ ಮೇಲೆ ಹೊದಿಕೆಯಂತಿರುವ ವಾತಾವರಣವನ್ನು ದಾಟಿ ಹೋಗಬೇಕಾಗುತ್ತದೆ. ಕಾರಣ, ಭೂಮಿಯ ಮೇಲಿನ ವಾತಾವರಣದ ಕುರಿತು ಮೊದಲು ತಿಳಿದುಕೊಳ್ಳಬೇಕಾಗುವುದು.

ಭೂಮಿಯ ಮೇಲೆಲ್ಲ ವಾಯುವಿನ ಆಚ್ಛಾದನವಿರುತ್ತದೆ; ಅದಕ್ಕೆ ವಾತಾವರಣವೆಂದು ಹೆಸರು. ನಕ್ಷತ್ರಗಳು ಮತ್ತು ಬುಧನ ಹೊರತು ಇತರ ಗ್ರಹಗಳ ಮೇಲೆ ಸಹ ಇಂಥ ಆವರಣವಿರುತ್ತದೆ. ಚಂದ್ರ ಹಾಗೂ ಉಪಗ್ರಹಗಳಿಗೆ ಇಂಥ ವಾತಾವರಣವಿರುವುದಿಲ್ಲವೆಂದು ನಂಬಲಾಗಿದೆ.

ಭೂಮಿಯ ಮೇಲಿನ ವಾತಾವರಣವು ೬೦೦ರಿಂದ ೭೦೦ ಮೈಲು ಎತ್ತರದವರೆಗಿದೆ. ಇದರಲ್ಲಿ ಮನುಷ್ಯನಿಗೆ ಪ್ರತ್ಯಕ್ಷ ಪರಿಚಯವಿರುವುದು ಹತ್ತು ಮೈಲುಗಳ ತನಕ ಮಾತ್ರ. ಆನಂತರ ಉಪಕರಣಗಳ ಸಹಾಯದಿಂದ ೩೦ ಮೈಲುಗಳವರೆಗೆ ಸರಿಯಮಾಡಿಕೊಂಡಿರವನು. ಅದರ ಮೇಲಿನ ಸ್ತರಗಳ ಸ್ಥೂಲಪರಿಚಯವನ್ನು ವಾಯು ಮಂಡಲದ ಪ್ರಭೆ, ವಿದ್ಯುತ್ಕಿರಣಗಳಿಂದ ಹೊರಹೊಮ್ಮುವ ಪ್ರಭಾವ ಮತ್ತು ಧ್ವನಿತ ರಂಗಗಳ ಸಹಾಯದಿಂದ ಕೆಲಮಟ್ಟಿಗೆ ಸಂಗ್ರಹಿಸಿರುವನು

ಭೂಮಿಯ ಮೇಲಿನ ವಾತಾವರಣದಲ್ಲಿ ಮೂರು ಭಾಗಗಳನ್ನು ಕಲ್ಪಿಸಲಾಗಿದೆ. ಅದರಲ್ಲಿ ಎಲ್ಲಕ್ಕೂ ಕೆಳಗಿನ ಭಾಗವು ಭೂಪೃಷ್ಠದಿಂದ ೪೦,೦೦೦ ಅಡಿ ಅಥವಾ ಸುಮಾರು ಎಂಟು ಮೈಲು ಎತ್ತರವಿದ್ದು ಅದಕ್ಕೆ ಟ್ರಾಪೊಸ್ಫಿಯರ್ ಎನ್ನುವರು. ಬರುಗಾಳಿ ಮತ್ತು ಮೋಡಗಳು ಈ ಕ್ಷೇತ್ರದಲ್ಲಿ ಮಾತ್ರ ಇರುತ್ತವೆ. ಚಿಕ್ಕ ವಿಮಾನಗಳು ಸಾಮಾನ್ಯವಾಗಿ ಎರಡು ಮೈಲುಗಳಿಗಿಂತ ಕಡಿಮೆ ಎತ್ತರದಲ್ಲಿ ಹಾರುತ್ತವೆ. ಏಕೆಂದರೆ, ಎಂಡರಿಂದ ಆರುಮೈಲುಗಳ ವರೆಗೆ ಪ್ರಾಣವಾಯುವಿನ ಪ್ರಮಾಣ ಇಳಿಯುತ್ತದೆ. ಎರಡು ಮೈಲುಗಳಿಗಿಂತ ಮೇಲೆ ಹಾರುವ ವಿಮಾನಗಳು ಪ್ರವಾಸ ಮಾಡುವವರಿಗಾಗಿ ಪ್ರಾಣವಾಯುವನ್ನು ಒಯ್ಯಬೇಕಾಗುವುದು. ತಂತು ಮೋಡಗಳು ಟ್ರಾಪೊಸ್ಫಿಯರದ ಮೇಲಿನ ಹಂತದಲ್ಲಿ ನಿರ್ಮಾಣವಾಗುತ್ತವೆ.

ಟ್ರಾಪೊಸ್ಫಿಯರದ ಮೇಲಿನದು ಸ್ಟ್ರಾಟೊಸ್ಫಿಯರ್. ಊರ್ಧ್ವ ವಾಯುಮಂಡಲವೆಂದೂ ಇದನ್ನು ಸಾಮಾನ್ಯವಾಗಿ ಕರೆಯುವರು. ಕೆಲವು ವರ್ಷಗಳ ಹಿಂದೆ ಪ್ರೊ. ಸಿಕಾರ್ಡರು ವಿಶೇಷವಾಗಿ ರಚಿಸಿದ ಆಕಾಶಬುಟ್ಟಿಯೊಂದರಲ್ಲಿ ಈ ಊರ್ಧ್ವ ವಾಯುಮಂಡಲದ ಸ್ತರವು ಆರಿಂದ ೫೦ ಮೈಲುಗಳವರೆಗಿದೆಯೆಂದು ನಂಬಲಾಗಿದೆ ಈ ಸ್ತರದಲ್ಲಿ ಶಾಖವು ಯಾವಾಗಲೂ ಸ್ಥಿರವಾಗಿರುತ್ತದೆ. ಆದುದರಿಂದ ಇದಕ್ಕೆ ಇಸೊಥರ್ಮಲ್‌ಸ್ತರವೆಂದೂ ಅನ್ನುವುದುಂಟು. ಊರ್ಧ್ವ ಮಂಡಲದ ಉಷ್ಣಾಂಶವು ಬಹಳ ಕಡಿಮೆ; ಅಲ್ಲಿ ಮೋಡಗಳಿರುವುದಿಲ್ಲ; ಧೂಳು ಇಲ್ಲ ಮತ್ತು ನೀರಿನ ಉಗಿಯೂ ಇರುವುದಿಲ್ಲ ವಿದ್ಯುತ್ತಿನ ಪ್ರಸರಣ ಸಹ ಇರುವುದಿಲ್ಲ.

ಇದರ ಮೇಲಿನಸ್ತರಕ್ಕೆ ಇನೊಸ್ಫಿಯರ ಎಂದೆನ್ನುವರು. ಇದರಲ್ಲಿ ಮತ್ತೆ ಕೆಲ ವಿಭಾಗಗಳಿರುತ್ತವೆ. ಇವೆಲ್ಲಕ್ಕೂ ಕೆಳಗಿನ ಸ್ತರಕ್ಕೆ "ಈ" ಸ್ತರವೆನ್ನುವರು. ಆಕಾಶವಾಣಿಯ ದೀರ್ಘ ತರಂಗಗಳು ಇದಕ್ಕೆ ಬಡಿದು ಮರಳಿ ಬರುತ್ತವೆ. ಈ ಸ್ತರವು ೫೦ ರಿಂದ ೭೦ ಮೈಲುಗಳ ವರೆಗಿರುವುದು. ಅನಂತರದ ಸ್ತರವಿಭಾಗವು ೭೦ರಿಂದ ೧೩೦ ಮೈಲುಗಳ ವರೆಗಿದೆ. ಉಲ್ಕೆಗಳನ್ನು ಇಲ್ಲಿ ಕಾಣಬಹುದು ಇದರ ಮೇಲಿನ ಸ್ತರಕ್ಕೆ "ಎಫ್" ಸ್ತರವೆನ್ನುವರು. ಅದು ೧೩೦ ಮೈಲುಗಳಿಂದ ೧೬೦ ಮೈಲುಗಳ ವರೆಗಿದೆ. ಆಕಾಶವಾಣಿ ಲಘು ತರಂಗಗಳು ಇಲ್ಲಿ ವರಾವರ್ತನ ಹೊಂದುತ್ತವೆ. ಯುದ್ಧಕಾಲದ ಆಕಾಶ ಬಾಣಗಳನ್ನು ಸುಧಾರಿಸಿದರೆ ಅವು ಈ ಕೊನೆಯ ಸ್ತರವನ್ನು ಒಂದಿಲ್ಲೊಂದು ದಿನ ಮುಟ್ಟಬಹುದೆಂದು ನಂಬಲಾಗಿದ್ದಿತು.

ಆಕಾಶಬಾಣ ಎಂದರೇನು? ಮತ್ತು ಉಪಗ್ರಹವೆಂದರೇನು? ಆಕಾಶ ಬಾಣವನ್ನು ಎಲ್ಲರೂ ಬಲ್ಲರು ಹಬ್ಬದ ದಿನಗಳಲ್ಲಿ ಮದ್ದು ಹಾರಿಸುವ ಪ್ರಸಂಗಗಳಲ್ಲೆಲ್ಲಾ ಅದು ಕಂಡುಬರುವುದು. ಶತಮಾನದ ಹಿಂದೆ ಆಕಾಶ ಬಾಣವು ಚೀನೀಯರ ಯುದ್ಧಾಸ್ತ್ರವಾಗಿತ್ತು. ಹತ್ತೊಂಬತ್ತನೆ ಶತಮಾನದಲ್ಲಿ ಅದು ಪರಿಪೂರ್ಣಗೊಳಿಸಲ್ಪಟ್ಟಿದ್ದರೂ ತೋಪುಗಳ ಶೋಧನೆಯಿಂದ ನಿರ್ನಾಮವಾಯಿತು. ಆದರೆ, ಯುದ್ಧದಲ್ಲಿ ತೋಪು ಪ್ರಬಲ ಅಸ್ತ್ರವೆನಿಸಿದರೂ ಆಕಾಶ ಬಾಣದ ಇನ್ನೊಂದು ವೈಶಿಷ್ಟ್ಯ ಎತ್ತರ ಹಾರುವುದಾಗಿದೆ. ತತ್ಪರಿಣಾಮವಾಗಿ ದ್ವಿತೀಯ ಮಹಾ ಯುದ್ಧದಲ್ಲಿ ಇದು ಮತ್ತೆ ಪ್ರಸಿದ್ಧಿಗೆ ಬಂದಿತು.

ಆಕಾಶ ಬಾಣಗಳು ಸ್ವಯಂ ಚಾಲಿತ ವಸ್ತುಗಳು ವಾತಾವರಣ ಇಲ್ಲದಲ್ಲಿ ಅವು ವೇಗದಿಂದ ಚಲಿಸುತ್ತಿದ್ದು, ಅಂತರಿಕ್ಷಯಾನಕ್ಕೆ ಬಹಳೆ ಉಪಯುಕ್ತವಿರುತ್ತವೆ. ಅಂತರಿಕ್ಷ ಉಡ್ಡಾಣಕ್ಕೆ ಇವೇ ಮುಖ್ಯ ಸಾಧನವಾಗುವ ಕಾಲವೂ ಸನ್ನಿಹಿತವಾಗಬಹುದು.

ಭೂಮಿಯ ಗುರುತ್ವಾಕರ್ಷಣ ಶಕ್ತಿಯನ್ನು ದಾಟಿ ಮೇಲೆ ಹಾರಿ ಹೋಗಬೇಕಾದರೆ, ಯಾವುದೇ ವಸ್ತುವು ಸೆಕುಂಡಿಗೆ ಏಳುಮೈಲು ವೇಗದಿಂದ ಮೇಲಕ್ಕೆ ಜಿಗಿಯಬೇಕಾಗುವುದು. ರಷಿಯನ್ನರು ಗ್ಯಾಸೊಲಿನ್ ಮತ್ತು ದ್ರಾವಕ ಪ್ರಾಣವಾಯುವಿನ ಶಕ್ತಿಯಿಂದ ಆಕಾಶ ಬಾಣವು ೫೦ ಮೈಲೆತ್ತರ ಮುಟ್ಟುವಂತೆ ಮಾಡಿರುವರು.

ರಷಿಯನ್ನರು ಕೃತಕ ಚಂದ್ರನನ್ನು ಒಂದು ದೊಡ್ಡ ಆಕಾಶಬಾಣದ ತುದಿಗೆ ಕಟ್ಟಿದರು. ಅದರ ರಕ್ಷಣೆಗೆ ಶಂಕುವಿನಾಕಾರದ ಇನ್ನೊಂದು ವಸ್ತುವನ್ನೂ ಇಟ್ಟಿದರು. ಆಕಾಶಬಾಣದ ಯಂತ್ರ ನಿಂತೊಡನೆ ಈ ರಕ್ಷಣಾ ವಸ್ತು ಬಿಟ್ಟುಹೋಗುತ್ತದೆ ಮತ್ತು ಉಪಗ್ರಹವು ಆಕಾಶಬಾಣದಿಂದ ತನಗೆ ತಾನೇ ಬಿಡುಗಡೆಹೊಂದಿ ಚಲಿಸಹತ್ತುವುದು. ಮಾನವ ನಿರ್ಮಿತ ಈ ಚಂದ್ರ ವರ್ತುಲಾಕಾರನಿದ್ದು ಚಿತ್ರಗಳು ಅಲ್ಲಲ್ಲಿ ಪ್ರಕಟವಾಗಿವೆ. ಕೃತಕ ಚಂದ್ರನನ್ನು ಮೇಲಕ್ಕೊಯ್ದ ಆಕಾಶಬಾಣವಲ್ಲದೆ ರಕ್ಷಣಾ ವಸ್ತು ಸಹ ಪೃಥ್ವಿಯ ಸುತ್ತಲೂ ಭ್ರಮಣ ಮಾಡಲಾರಂಭಿಸಿದೆ.

ಕೃತಕ ಚಂದ್ರನನ್ನು ಅಲ್ಯೂಮಿನಿಯಂ ಲೋಹದಿಂದ ಮಾಡಲಾಗುತ್ತದೆ. ಅದರ ಗರ್ಭದಲ್ಲಿ ಅನೇಕ ತರದ ಉಪಕರಣಗಳು ಇದ್ದಲ್ಪಡುವುವು, ಆಕಾಶ ಬಾಣಗಳು ತಾಸಿಗೆ ೧೮,೦೦೦ ಮೈಲು ವೇಗದಿಂದ ಕೃತಕ ಚಂದ್ರನನ್ನು ಮೇಲಕ್ಕೊಯ್ಯುವುದರಿಂದ ಅದೇ ವೇಗದಿಂದ ಚಂದ್ರನು ಭೂಪ್ರದಕ್ಷಿಣೆಯನ್ನಾರಂಭಿಸುತ್ತಾನೆ.

ರಶ್ಯನ್ ನಿರ್ಮಿತ ಚಂದ್ರನಲ್ಲಿ ಕೇವಲ ಕೆಲ ಉಪಕರಣಗಳಿರುತ್ತವೆ. ಆದರೆ ಮನುಷ್ಯನನ್ನೇ ಕರೆದೊಯ್ಯುವಂತಹ ಉಪಗ್ರಹಗಳು ಬೇಗನೇ ನಿರ್ಮಾಣಗೊಳ್ಳಬಹುದು. ಅಂತರಿಕ್ಷದಲ್ಲಿ ಖಗೋಲ, ವ್ಯಾಪಾರ ಶಾಸ್ತ್ರ ಮತ್ತು ಭೌತಶಾಸ್ತ್ರಗಳ ಜಿಜ್ಞಾಸೆ ಕೈಗೊಳ್ಳುವುದು ಅವಶ್ಯಕವಿರುವುದರಿಂದ ಮನುಷ್ಯನೇ ಉಪಗ್ರಹಗಳಲ್ಲಿ ಕುಳಿತು ಹೋಗಬೇಕಾಗುವುದು. ಇನ್ನು ಹತ್ತಿಪ್ಪತ್ತು ವರ್ಷಗಳಲ್ಲಿ ಮನುಷ್ಯನಿರುವ ಉಪಗ್ರಹಗಳು ಪೃಥ್ವಿಯ ಸುತ್ತಲೂ ಚಲಿಸ

(೧೬ನೆಯ ಪುಟ ನೋಡಿರಿ)

ಅಯುರ್ವೇದ ಔಷಧಗಳಿಂದ ತಯಾರು ಮಾಡಿದ

ರಾಮತೀರ್ಥ ಬ್ರಾಹ್ಮೀ ತೈಲ

ಅಯುರ್ವೇದ ಔಷಧ

ಸ್ಪೆಶಲ್ ನಂ. ೧ (ರಿಜಿಸ್ಟರ್ಡ್)

ಪ್ರಖ್ಯಾತ ಡಾಕ್ಟರರು, ವೈದ್ಯರು, ವಿದ್ವಾಂಸರು ಮತ್ತು ಅನೇಕ ಸ್ತ್ರೀಪುರುಷರು ಈ ತೈಲದ ಪ್ರಶಂಸೆ ಮಾಡುತ್ತಾರೆ.

ಯಾಕೆಂದರೆ ಈ ತೈಲವು ಅನೇಕ ಬಗೆಯ ಲಾಭವನ್ನು ಕೊಡುತ್ತದೆ. ಕಿವಿಯಲ್ಲಿ ಹಾಕಿದರೆ ಕಿವಿಯ ನರಗಳು ಸಶಕ್ತವಾಗಿ ಕಿವಿಯ ಕೆಲವು ರೋಗಗಳು ಗುಣವಾಗುತ್ತವೆ. ಶಾಂತವಾದ ನಿದ್ದೆ ಬರುತ್ತದೆ ತಲೆನೋವು ನಿಲ್ಲುತ್ತದೆ.

ಮಿದುಳು ಮತ್ತು ಕೂದಲಿಗೆ ಶ್ರೇಷ್ಠ.

ಸೂಚನೆ: ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಕ್ಕಳಿಗೆ ಈ ತೈಲವು ಎಲ್ಲಾ ಋತುಗಳಲ್ಲಿ ಅನುಕೂಲವಿದೆ. ಎಲ್ಲಾ ಕಡೆಗಳಲ್ಲಿ ಸಿಗುತ್ತದೆ. ಇದೇ ಎಚ್ಚರಿಯನ್ನೇ ಕೇಳಿರಿ.

ತೈಲದ ಕ್ರಯ: ದೊಡ್ಡ ಬಾಟ್ಲಿ ರೂ. ೪-೦-೦. ಸಣ್ಣ ಬಾಟ್ಲಿ ರೂ. ೨-೦-೦.

ಕೋಸ್ಟ ಮುಖಾಂತರ ತರಿಸುವವರು ದೊಡ್ಡ ಬಾಟ್ಲಿಗೆ ರೂ. ೫ ೧೩-೦. ಸಣ್ಣ ಬಾಟ್ಲಿಗೆ ರೂ. ೩-೧೩-೦ (ಪೇಕಿಂಗ್ ಖರ್ಚು ಮತ್ತು ಅಂಚೆ ವೆಚ್ಚ ನೇರಿ) ಮನಿಯಾರ್ಡರಿನಿಂದ ಕಳುಹಿಸಬೇಕು. ವಿ. ಪಿ. ಮಾಡುವುದಿಲ್ಲ

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ನೋಡಿ ದಣಿಯದ ನೋಟ.

ಶ್ರೀ ಎಸ್. ಸದಾಶಿವ ರಾವ್

ಸೃಷ್ಟಿಸೌಂದರ್ಯದ ತವರುಮನೆ ಕನ್ನಡನಾಡೆಂದು ಪುರಾತನ ಕಾಲದಿಂದಲೂ ಹೆಸರು ಪಡೆದಿದೆ. ಪ್ರಕೃತಿದತ್ತ ರಾಮಣೀಯಕ ಶರಾವತಿಯ ಗೆರಸೊಪ್ಪೆಯ ಜಲಪಾತ ಮಾನವನ ಕರ್ತೃತ್ವಶಕ್ತಿಯಿಂದ ಕರ್ನಾಟಕದ ಹೆಬ್ಬೆಸ ಭಾಗಗಳನ್ನು ಹಗಲಿನಂತೆ ಬೆಳಗಿಸುವಂತೆ ಮಾಡಿದೆ ಅಂತಹ ಪ್ರೇಕ್ಷಣೀಯ ಜೋಗವನ್ನು ಪ್ರತ್ಯೇಕ ಕನ್ನಡಿಗನೂ ಕರ್ನಾಟಕ ಕಾಣಬೇಕು

'ದಕ್ಷಿಣದ ಕಾಶ್ಮೀರ' ಎಂದು ಹೆಸರಾದ ಕರ್ನಾಟಕ ಪ್ರಕೃತಿ ದೇವಿಯು ಹರಸಿ ಕೊಟ್ಟ ನಾಡಾಗಿದೆ. ಹಲವಾರು ಪ್ರೇಕ್ಷಣೀಯ ಸ್ಥಳಗಳನ್ನೊಳಗೊಂಡ ಮೈಸೂರು ಸೀಮೆ ಚಾರಿತ್ರಿಕ, ಪ್ರಾಕೃತಿಕ, ಭೌಗೋಲಿಕ ಹಾಗೂ ಔದ್ಯೋಗಿಕ ಕೇಂದ್ರಗಳನ್ನೊಳಗೊಂಡ ಪ್ರವಾಸಿಗರ ತವರು ಮನೆ. ಉಚ್ಚ ಮಾದರಿಯ ಶಿಲ್ಪಕಲೆ, ಪ್ರಕೃತಿಯ ನಿರಾಡಂಬರ ಬೆಡಗು, ಮಾನವ ನಿರ್ಮಿತ ಅದ್ಭುತ ಸಾಧನೆಗಳು., ಇವುಗಳನ್ನೆಲ್ಲಾ ನೋಡಲು ನಾವು ನಮ್ಮ ಪ್ರಾಂತ್ಯಕ್ಕೇನೇ ಶರಣು ಹೋಗಬೇಕು.

ಅತ್ಯುಚ್ಚ ಇತಿಹಾಸ ಪರಂಪರೆಯುಳ್ಳ ಕರ್ನಾಟಕ ತನ್ನ ನೈಸರ್ಗಿಕ ಸೊಬಗಿನಿಂದ ಪ್ರವಾಸಿಗರನ್ನು ಆಕರ್ಷಿಸುತ್ತದೆ, ಮೋಹಗೊಳಿಸುತ್ತದೆ. ಮೈಮರೆಯುವಂತೆ ಮಾಡುತ್ತದೆ ಇಂತಹ ತಾಣಗಳಲ್ಲಿ ಮೈಸೂರಿನ ವಾಯುವ್ಯ ಭಾಗದಲ್ಲಿರುವ ಜೋಗದ ಜಲಪಾತವೂ ಒಂದು. ಅಖಿಲ ಬಾರತದಲ್ಲಿಯೇ ಅತಿ ಎತ್ತರದ ಜಲಪಾತ ಇದು. ನಿಸರ್ಗಪ್ರಿಯರನ್ನು ಪರವಶರನ್ನಾಗಿ ಮಾಡುವ ಜೋಗ ಇದು.

ಗೇರು ಸೊಪ್ಪೆಯಲ್ಲಿ ಈ ಜಲಪಾತ ಇದೆ. ಘಟ್ಟಗಳಿಂದ ಹರಿದು ಬರುವ ಶರಾವತಿ ಈ ಗೇರು ಸೊಪ್ಪೆಯಲ್ಲಿ ಒಮ್ಮೆಲೇ ಲಕ್ಷ ಅಡಿ ಎತ್ತರದ ಗುಡ್ಡದಿಂದ ಕೆಳಕ್ಕೆ ಧುಮುಕುತ್ತಾಳೆ ಆವಳ ಅಧುಮುಕಾಟದ ನೋಟವು ಅದೆಷ್ಟು ರಮ್ಯ! ಕಣ್ಣುಗಳಿಗೂ ಮನಸ್ಸು, ಮನಗಾಲಪ್ತ ಕಳೆದು ಚಲಗಾಲದ ಮಧ್ಯಭಾಗವೇ ಇಲ್ಲದಂತೆ ಪ್ರವಾಸಕ್ಕೆ ಯುಕ್ತಕಾಲ. ಆ ಕಾಲ ಶರಾವತಿಯು ತನ್ನ ರಭಸವನ್ನು ಕಳೆದುಕೊಂಡು ಮಂದಗಾಮಿನಿಯಾಗಿ ಇರುತ್ತಾಳೆ. ನವೆಂಬರ, ದಶಂಬರ ತಿಂಗಳಲ್ಲಿ ಜೋಗವನ್ನು ನೋಡುವುದು ಉತ್ತಮ; ಅಲ್ಲಿಯ ಪ್ರವಾಸ ಕೈಗೊಳ್ಳುವುದು ಕ್ಷೇಮಕರ. ಉತ್ತಮವಾದ ರಸ್ತೆಗಳು, ಬಸ್ಸುಗಳು ನಮ್ಮನ್ನು ಎಲ್ಲಾ ಕಡೆಗಳಿಂದಲೂ ಜೋಗಕ್ಕೆ ತಂದು ಮುಟ್ಟಿಸುವುವು. ರೈಲು ಪ್ರಯಾಣ ಮಾಡಲಿಚ್ಛಿಸುವವರು ತಾಳಗುಪ್ಪದ ವರೆಗೆ ರೈಲಿನಲ್ಲಿ ಬಂದು ಉಳಿದ ದೂರವನ್ನು ಬಸ್ಸಿನಲ್ಲಿಯೇ ಪ್ರಯಾಣಿಸಿ ಕಳೆಯಬೇಕು. ದಿನ ನಿತ್ಯವೂ ನಾಡಿನ ಮೂಲೆ ಮೂಲೆಗಳಿಂದ ಬಸ್ಸುಗಳು ಇಲ್ಲಿಗೆ ಬರುತ್ತವೆ. ಹೀಗಾಗಿ ಪ್ರಯಾಣಿಕರು ಕಷ್ಟಪಡುವ ಪ್ರಮೇಯ ಒದಗಲಾರದು

ಗೇರುಸೊಪ್ಪೆಯ ಬಸ್ ನಿಲ್ದಾಣಕ್ಕೂ ಜೋಗಕ್ಕೂ ಸುಮಾರು ಎರಡು ಮೈಲಿಯ ದೂರವಿದೆ ಅದುದೂರದಿಂದಬಂದ ಪ್ರವಾಸಿಗರಿಗೆ ಗಣನೀಯವೆನಿಸಲಾರದು. ರಸ್ತೆಯ ಮಗ್ಗುಲಲ್ಲಿ 'ಪ್ರವಾಸಿ ಮಂದಿರ'ವು ಕಾಣಿಸುವುದು ಎಲ್ಲಾ ರೀತಿಯ ಸೌಕರ್ಯವನ್ನೊಳಗೊಂಡ ಈ ಪ್ರವಾಸಿ ಮಂದಿರವು ಯಾವಾಗಲೂ ತುಂಬಿಯೇ ಇರುತ್ತದೆ. ಈ ಪ್ರವಾಸಿ ಮಂದಿರದ ಹೊರಂಗಣದಲ್ಲಿ ಇಟ್ಟ ಆಸನಗಳಲ್ಲಿ ಕುಳಿತಾಗ ಅಲ್ಲಿಯೇ ಎದುರು ಕಾಣಿಸುವಳು ನಿಧಾನವಾಗಿ ಕೆಳಗಿಳಿಯುತ್ತಿರುವ ಶರಾವತಿ' ಈ ಬಂಗಲೆಯನ್ನು ಕಟ್ಟಿಸಿದ ಸ್ಥಳವೆಂತೂ ಅತಿ ಸುಂದರ! ಜೋಗಕ್ಕೆ ಸರಿ ಎದುರಾಗಿದೆ ಈ ಬಂಗಲೆ! ಅದರ ಸುತ್ತಮುತ್ತಲೂ ಪ್ರೇಕ್ಷಕರು ಆಸೀನರಾಗಲು ಯೋಗ್ಯ ಆಸನಗಳಿವೆ. ಇವುಗಳಲ್ಲಿ ಕುಳಿತು ನಾವು ಜೋಗದ ಸೊಬಗನ್ನು ನೋಡಿದಾಗ ಸಮಯವು ಹೋದ ಪರಿವೆಯೇ ಇರುವುದಿಲ್ಲ.

ಜೋಗಿನ ಸೌಂದರ್ಯ ಪ್ರಾತಃಕಾಲ ಒಂದು ತೆರನಾದರೆ, ಬಿಸಿಲೇರಿದಾಗ ಮಧ್ಯಾಹ್ನ ಇನ್ನೊಂದು ತೆರ. ಸಂಜೆಯಲ್ಲಿ ಒಂದು ರೀತಿಯಾದರೆ ರಾತ್ರಿ ಬೆಳದಿಂಗಳಲ್ಲಿ ಮತ್ತೊಂದು ರೀತಿ! ನೋಡಿದಷ್ಟು ಸಾಲದೆಂದೆನಿಸುವ ಅನುಪಮ ಸೌಂದರ್ಯ ಜೋಗಿನದು. ಪ್ರಾತಃಕಾಲ ಎದುನೋಡಿದಾಗ ಸುತ್ತಲೂ ಮಂಜು ಮುಸುಕಿದ ವಾತಾವರಣ ಸಮೂಹದ ದೃಶ್ಯಗಳೇ ಗೋಚರವಾಗದ ಸನ್ನಿವೇಶ. ಈ ಸಮಯ ಪಟ್ಟಗಳ ಎಡೆಯಿಂದ ತರುಣ ಭಾಸ್ಕರನ್ನು ಮೇಲಕ್ಕೆದ್ದು ಬಂದಂತೆ, ಆತನ ಕಿರಣಗಳು ಈ ಮುಸುಕಿದ್ದ ಮಂಜನ್ನು ಹೊಡೆದೋಡಿಸುತ್ತವೆ ಘಟ್ಟದ ಸೆರಗು ಸೂರ್ಯಕಿರಣದ ಹೊಳಪಿಗೆ ಕಂಗೊಳಿಸುತ್ತದೆ ಮಂಜು ಮುಸುಕಿದ ಜೋಗವು ಬೆಳಕಿರೆ ಹೆಣಿಸಿದಂತೆ ಕಾಣುವುದು ಸೂರ್ಯೋದಯವಾಗುತ್ತಾ ಬಂದಂತೆ ಬಿಳಿ ಹೊದಿಕೆ ಮಾಯವಾಗಿ ಯಥಾ ಪ್ರಕಾರ ಜೋಗು ತನ್ನ ಪ್ರಾತಃಕಾಲದ ಸೌಂದರ್ಯವನ್ನು ಬೀರುವುದು.

ಮಧ್ಯಾಹ್ನ ಕಾಲದ ಸೌಂದರ್ಯ ಅವರ್ಣನೀಯ. ಅಳ್ಳ ಅಡಿ ಎತ್ತರದಿಂದ ದುಮುಕುವ ಜೋಗದ ಧುಮುಕಾಟದ ರಭಸಕ್ಕೆ ಹಾರುವನೀರಿನ ತುಂತುರುಗಳ ಮೇಲೆ ಸೂರ್ಯಕಿರಣವು ಬಿದ್ದಾಗ ಕಾಮನ ಬಿಲ್ಲು ಉಂಟಾಗುವುದು. ಈ ಕಾಮನ ಬಿಲ್ಲಿನ ಹಿಂಭಾಗದಲ್ಲಿ ಆಗ ಜೋಗದ ಸೌಂದರ್ಯ ಇಮ್ಮಡಿಸುವುದು. ದೂರಕ್ಕೆ ಬಹುದೂರಕ್ಕೆ ಸಿಡಿಯುವ ಈ ನೀರಿನ ತುಂತುರುಗಳು ಸೂರ್ಯನ ತೀಕ್ಷ್ಣ ಕಿರಣಕ್ಕೆ ಅಣಿ ಮುತ್ತುಗಳಾಗಿ ಹೊಳೆಯುವುವು. ಸಂಜೆಯ ವೇಳೆ ಬಿಸಿಲಿನ ಜಳ ಕಡಿಮೆಯಾದಾಗ ಪ್ರೇಕ್ಷಕರು ಆಸನಗಳಲ್ಲಿ ತುಂಬಿರುತ್ತಾರೆ ಘಟ್ಟದ ನೆರಗಿನಿಂದ ಹಾಲುಕ್ಕಿ ಬಂದಂತೆ, ಬಿಳಿನೊರೆಯೋ ಪಾವಿ ಕೆಳಗೆ ಧುಮುಕುವ ನೀರು ಹಾಲಿನಂತೆ ಬಿಳುಪಾಗಿ, ತೋರುವುದು. ಮುಖ್ಯ ನಾಲ್ಕು ಕವಲುಗಳಾಗಿ ಕೆಳಗೆ ಧುಮುಕುತ್ತದೆ ಈ ಜೋಗ. ಎದುರು ನಿಂತಾಗ ಎಡಗಡೆಯಿಂದ ಅನುಕ್ರಮವಾಗಿ ಬೀಳುವವುಗಳು ರಾಜಾ, ರೋರರ್, ರಾಕೆಟ್, ರಾಣಿ. ಈ ಹೆಸರುಗಳು ಇವುಗಳಿಗೆ ಅನ್ವರ್ಥ ನಾಮಗಳಾಗಿವೆ. ಅಗಲವಾಗಿ ಕೆಳಕ್ಕೆ ಧುಮುಕುವ ರಾಜಾ ಕವಲಿನಲ್ಲಿ ರಾಜನ ಆ ಗಂಭೀರತ್ವ, ರೀವಿ, ಹಿರಿಮೆಗಳನ್ನು ಕಾಣಬಹುದು. ರೋರರ್ ಹೆಸರೇ ಸೂಚಿಸುವಂತೆ ಗರ್ಜಿಸುತ್ತಾ, ನಿರೀತ ರಭಸದಿಂದ, ವೇಗದಿಂದ ಕೆಳಕ್ಕೆ ಧುಮುಕುತ್ತದೆ. ರಾಣಿಯು ಮಂದಗಮನೆಯಾಗಿ, ಮೆಲುನಡೆಯಿಂದ, ಬಳುಕುತ್ತಾ, ಬಾಗುತ್ತಾ, ಕೊಂಕುತ್ತಾ; ಅಳುಕುತ್ತಾ ಧುಮ್ಮುಕುವ ಕವಲು ಈ ಹೆಸರನ್ನು ಕಲ್ಪಿಸಿದವರು ನಿಜಕ್ಕೂ ಪ್ರಕೃತಿ ಪುತ್ರರು ಎಂಬುದಕ್ಕೆ ಸಂದೇಹ ಇಲ್ಲ.

ಬಂಗಲೆಯಲ್ಲಿ ರಾತ್ರಿ ಮಲಗಿದಾಗ ಜೋಗವು ಜೋಗುಳ ಹಾಡುವುದು. 'ಜೋ' ಎಂದು ಗರ್ಜಿಸುವ ಅದರ ಧುಮುಕಾಟದ ಸ್ವರವು ಮಲಗಿದವರಿಗೆ ಜೋಗುಳವಾಗಿ ಪರಿಣಮಿಸಿ ಎಂತಹ ಅತೃಪ್ತ ಮನಸ್ಸಿನವನೂ ಆ ರಾತ್ರಿ ತನ್ನ ಸಮಸ್ತ ಅತೃಪ್ತಿಗಳನ್ನು ಮರೆತು ಸುಖ ನಿದ್ರೆಯನ್ನು ಪಡೆಯುತ್ತಾನೆ. ಪ್ರಾತಃಕಾಲ ಸುಖ ನಿದ್ರೆಯ ಜೊಂಪಿನಿಂದ ಎದ್ದಾಗ ಮನಃ ಆ ಮೋಹಕ ಜೋಗವು ಅತನನ್ನು ತನ್ನೆಡೆಗೆ ಸೆಳೆದು ತಲ್ಲೀನನನ್ನಾಗಿ ಮಾಡುವುದು.

ಜೋಗದ ಬುಡ ಮುಟ್ಟಬೇಕೆಂಬ ಸಾಹಸಿಗಳಿಗೆ ಬುಡವನ್ನು ಮುಟ್ಟಲು ದಾರಿಯ ರಚನೆ ಇದೆ. ಈ ದಾರಿ ಆಷ್ಟೊಂದು ಉತ್ತಮವಾಗಿಲ್ಲದಿದ್ದರೂ ಸಾಹಸಿಗಳ ಪಾಲಿಗೆ ತಕ್ಕ ರೀತಿಯಲ್ಲೇ ಇದೆ ಬಂಗಲೆಯ ಬದಿಯಿಂದಲೇ ಇಳಿಯುವ ಈ ದಾರಿಯಲ್ಲಿ ಸುಮಾರು ಮೆಟ್ಟಲುಗಳಿವೆ ಈ ಮೆಟ್ಟಲುಗಳಲ್ಲಿ ಇಳಿದು ಹೋಗುವಾಗ ಅತ್ತಿತ್ತ ಗಿಡ ಕುಲ್ಲು ಪೊದೆ, ಕಾಡುಗಳ ಆವರಣವು ಭಯ ಹುಟ್ಟಿಸುವುದಾದರೂ ನಮ್ಮ ಕುತೂಹಲ ನಮ್ಮನ್ನು ಕೆಳಕ್ಕೊಯ್ಯುವುದು. ಮೆಟ್ಟಲು ಕಳೆದು ಹಾರಿ ಬಂದಾಗ, ಮತ್ತು ಕೆಳಕ್ಕೆ ನಾವು ಹೋದಾಗ, ಜೋಗದ ಧುಮುಕಾಟದ ರಭಸದಿಂದ ಹಾರಿದ ತುಂತುರು ಹನಿಗಳ ದೆಸೆಯಿಂದ ದಾರಿಯು ಒದ್ದೆಯಾಗಿ ಕಾಣುವುದು. ಬಂಡೆಕಲ್ಲುಗಳು ಜಾರುವುವು. ಜಾಗ್ರತೆಯಿಂದ ನಾವು ಇಳಿದಾಗ ನಾವು ಜೋಗಿನ ಬುಡಕ್ಕೇ ಬರುತ್ತೇವೆ. ಅದರೆ ನೀರಿನ ಹನಿಯ ದೆಸೆಯಿಂದ ನಮ್ಮ ಮೈಯೆಲ್ಲಾ ಒದ್ದೆಯಾಗುವುದು. ಬುಡದಲ್ಲಿ ನಿಂತು ಕತ್ತನ್ನು ಮೇಲಕ್ಕೆ ಚಾಚಿ ನೋಡುವಾಗ, ಆ ಕಾಲ ಆ ಜಲಪಾತದ ಸೊಬಗು ಹೊಸತೊಂದು ಬಗೆ! ಅನಂತರ ಮೇಲೆ ಬುವ ಕಷ್ಟ ಮಾತ್ರ ಬರೆಯುವಂತಕುದಲ್ಲ!

ಗೇರು ಸೊಪ್ಪೆಗೆ ಬಂದವರು ಪ್ರಕೃತಿ ನಿರ್ಮಿತ ಜಲಪಾತವನ್ನು ಕಂಡಂತೆ ಮಾನವ ನಿರ್ಮಿತ ಜಲ ವಿದ್ಯುದುತ್ಪಾದನಾ ಕೇಂದ್ರವನ್ನು ನೋಡಬೇಕು. ನೋಡದೆ ಮರಳಲಾಗದು. ಬಸ್ಸು ನಿಲ್ದಾಣದಿಂದ ತುಸು ಮುಂದಕ್ಕೆ ಹೋದಾಗ ಸ್ವಲ್ಪ ಎತ್ತರದ ಸ್ಥಳದಲ್ಲಿಯೇ ಟೆಲಿಫೋನ್ ಎಕ್ಸ್‌ಚೇಂಜ್ ಆಫೀಸು ಇದೆ ಅಲ್ಲಿಗೆ ಹೋಗಿ ತಲಾ ಒಂದರ ಎರಡೂವರೆ ಆಣೆ ತೆತ್ತು

(೧೪ನೇ ಪುಟ ನೋಡಿರಿ)





ಮಲೆಯಾಳ ಮಾಂತ್ರಿಕ ವೈದ್ಯಶಾಲೆ,

ಮೆಯಿನ್ ರೋಡು, ಕೊಯ್‌ಲೋನ್, S. I.

ಕರ್ಣಾಟಕ ಸಂಗೀತ.

ಪ್ರೊ. ಪಿ. ಸಾಂಬ ಮೂರ್ತಿ

ಭಾರತೀಯ ಸಂಗೀತ ಶಾಸ್ತ್ರವು ಉತ್ತರಾದಿ ಮತ್ತು ದಕ್ಷಿಣಾದಿ ಎಂದು ವಿಭಾಗಿತವಾಗಿದೆ. ದಕ್ಷಿಣಾದಿಗೆ ಕರ್ಣಾಟಕ ಸಂಗೀತವೆಂದೇ ಹೆಸರು ಪ್ರಸಿದ್ಧ. ಉತ್ತರಾದಿಯಿಂದ, ತನ್ನ ಹಲವಾರು ವೈಶಿಷ್ಟ್ಯಪೂರ್ಣ ವೈಲಕ್ಷಣ್ಯಗಳಿಂದ ಕರ್ಣಾಟಕ ಸಂಗೀತವು ಸರ್ವರಾಗಲಕ್ಷಣವಿರುವುದರಿಂದಲೇ ಜನಸೋಪಾಧಿಯಾಗಿ ಪರಿಣಮಿಸಿದೆ.

ದಕ್ಷಿಣಭಾರತವು ಸಂಗೀತ ಹಾಗೂ ನೃತ್ಯಕಲೆಗೆ ಹೆಸರುವಾಸಿಯಾಗಿದೆ. ನಾಟ್ಯಶಾಸ್ತ್ರದ ಪ್ರಕಾರ ಇಲ್ಲಿಯ ನೃತ್ಯ ಮತ್ತು ಗಾಯನ ಹಾಗೂ ವಾದನ ಸಂಗೀತಗಳು ವೈವಿಧ್ಯಪೂರ್ಣವಾಗಿರುವುವು. ಶೈಲಿ ಹಾಗೂ ಅಭಿನಯಗಳಿಂದ ಈ ವೈವಿಧ್ಯವನ್ನು ನಾವು ಕಾಣಬಹುದು.

ಪ್ರಾಚೀನ ಸಂಗೀತದೊಂದಿಗೆ, ಕರ್ಣಾಟಕದ ಸಂಗೀತವು ನೇರವಾದ ಹಾಗೂ ಸಂತತವಾದ ಸಂಬಂಧವನ್ನುಳಿಸಿಕೊಂಡು ಬಂದಿದೆ. ಕರ್ಣಾಟಕ ಸಂಗೀತ ಪದ್ಧತಿಯು ವಿದೇಶೀಯ ಪ್ರಭಾವಗಳಿಗೆ ಒಳಗಾಗಿಲ್ಲ. ವಾದ್ಯ ಸಂಗೀತವು, ಅದರಲ್ಲಿಯೂ ವೀಣೆಯು ಕರ್ಣಾಟಕ ಸಂಗೀತವನ್ನು ಒಂದು ರೂಪಕ್ಕೆ ತರುವಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದೆ. ೨೨ಅರೆ ಅರ್ಧಸ್ವರಗಳು ಮತ್ತು ಕೆಲವು ಸೂಕ್ಷ್ಮ ಸ್ವರಗಳನ್ನು ನುಡಿಸುವ ಹಾಗೂ ಸೂಕ್ತ ಗಮಕಗಳೊಂದಿಗೆ ಸ್ವರಗಳನ್ನು ಹಾಡುವಾಗ ಈ ವೈಣಿಕ ಸಂಪ್ರದಾಯದ ಪ್ರಭಾವವು ಕಂಡುಬರುತ್ತದೆ. ದಕ್ಷಿಣ ಭಾರತದಲ್ಲಿ, ಬಹುತೇಕವಾಗಿ, ಸಂಗೀತ ಕೃತಿಗಳ ನಿರ್ಮಾತೃಗಳು ಗಾಯಕರು ಮಾತ್ರವಲ್ಲದೆ ವೈಣಿಕರೂ ಆಗಿದ್ದರು. ಆಧುನಿಕ ಕರ್ಣಾಟಕ ಸಂಗೀತವು ತನ್ನ ಪ್ರಾಚೀನ ಮಹಾನ್ ಸಂಗೀತಜ್ಞರ, ಕೃತಿ ನಿರ್ಮಾತೃಗಳ ಮತ್ತು ಗಾಯಕರ ಸಂಗೀತ ಜ್ಞಾನದ ಭವ್ಯ ಪರಂಪರೆಯ ಮೇಲೆ ನಿಂತಿದೆ.

ದಕ್ಷಿಣ ಭಾರತದಲ್ಲಿ ಜನತೆಯ ಜೀವನದಲ್ಲಿ ಸಂಗೀತವು ಒಂದು ಅಂಗವಾಗಿದೆ. ದೇವರನ್ನು ನಾದಬ್ರಹ್ಮನೆಂದು ಕಲ್ಪಿಸಿಕೊಂಡಿರುವುದು ಇಲ್ಲಿ ಬಹಳ ಆಳವಾಗಿ ಬೇರೂರಿದೆ ಇದಕ್ಕೆ ಅತ್ಯಂತ ಪ್ರಾಚೀನ ವೆನಿಸಿದ ಉಲ್ಲೇಖಗಳು (೧ನೆಯ ಶತಮಾನದ) ತೇವರಂ ಎಂಬಲ್ಲಿ ದೊರೆಯುತ್ತವೆ.

ಸಂಗೀತದ ದೃಷ್ಟಿಯಿಂದ, ದಕ್ಷಿಣ ಭಾರತವು, ಭಾರತದ ಇನ್ನಿತರ ಭಾಗಗಳಿಗಿಂತ, ಸಂಪದ್ಯುಕ್ತವಾಗಿದೆ ಎಂದು ಹೇಳಬಹುದು. ಎಲ್ಲಾ ರಾಜ್ಯಗಳಲ್ಲಿ, ಜಮೀನ್ದಾರಿಗಳು, ಮಠಗಳು ಮತ್ತು ದೇವಸ್ಥಾನಗಳಲ್ಲಿ ವೇತನದ ಮೇಲೆ ಸಂಗೀತಗಾರರನ್ನು ನಿಯಮಿಸಿಕೊಳ್ಳಲಾಗುತ್ತಿತ್ತು. ತಂಜಾವೂರುಗಳಂತಹ ರಾಜ್ಯಗಳಲ್ಲಿ ಒಂದು ಕಾಲಕ್ಕೆ, ೩೬೦ ಸಂಗೀತ ವಿದ್ವಾಂಸರಿದ್ದರು; ಪ್ರತಿಯೊಬ್ಬ ವಿದ್ವಾಂಸರಿಗೂ ವರ್ಷಕ್ಕೆ ಒಂದು ಬಾರಿ, ರಾಜರ ಸಮ್ಮುಖದಲ್ಲಿ ಹಾಡುವ ಅವಕಾಶಮಾತ್ರ ದೊರೆಯುತ್ತಿತ್ತು. ಆ ದಿವಸ ಯೋಗಸಾಗಿ ಹಾಡುವುದಕ್ಕೋಸ್ಕರವಾಗಿ ಅವರು, ವಿದ್ವಾಂಸರು ಮತ್ತು ರಸಿಕರ ಸಮ್ಮುಖದಲ್ಲಿ ಇಡೀ ವರ್ಷ ಸಾಧನೆಯನ್ನು ಮಾಡುತ್ತಿದ್ದರು.

ದಕ್ಷಿಣ ಭಾರತದ ದೇವಸ್ಥಾನಗಳನ್ನು ಅಲಂಕರಿಸುವ ಶಿಲ್ಪಕಲಾ ಕೃತಿಗಳು ಉಪಯೋಗಿಸುತ್ತಿದ್ದ ವಿವಿಧ ಸಂಗೀತ ವಾದ್ಯಗಳನ್ನು ತೋರಿಸುವ ಶಾಶ್ವತ ದಾಖಲೆಗಳೆನ್ನಬಹುದು.

ಮಧುರೈ, ತಿರುನೆಲ್‌ವೆಲ್ಲಿ, ಅಶ್ವತ್ತಿರು ನಾಗರಿ, ಕಲಕ್ಕಡ್, ಕುಚೀರದ್ರಂ, ತಿರುವನಂತಪುರ, ತಿರುಪತಿ, ತಾಡಪತ್ರಿ, ಲೇಪಾಕ್ಷಿ ಮತ್ತು ಕುಂಬಿಗಳಲ್ಲಿರುವ ಸಂಗೀತ ಶಿಲಾಸ್ತಂಭಗಳು, ಶಾನಭಾಗ ರಾಮನಲ್ಲೂರ್‌ನಲ್ಲಿರುವ ಕಲ್ಲುಕಂಬದ ಮೇಲೆ ಕೆತ್ತಿರುವ ಓಲಗ ಇವು ವಾದ್ಯ ಶಿಲ್ಪ ಹಾಗೂ ಸಂಗೀತ ಶಾಸ್ತ್ರದ ಕುಶಲತೆಯನ್ನು ನಿರೂಪಿಸುತ್ತವೆ. ಪ್ರಾಸ ಮತ್ತು ಪಕ್ಕ ವಾದ್ಯಗಳನ್ನು ಒದಗಿಸುವುದಕ್ಕಾಗಿಯೂ ಈ ಸ್ತಂಭಗಳನ್ನು ಉಪಯೋಗಿಸಲಾಗುತ್ತಿತ್ತು. ಅವು ಪ್ರದರ್ಶನ ಸ್ತಂಭಗಳೂ ಆಗಿವೆ. ಅವುಗಳಿಂದ, ದ್ವಿಗುಣತ್ವ ಮತ್ತು ಸರಳ ಸ್ಪಂದನಗಳನ್ನು ಪ್ರದರ್ಶನಮಾಡಿ ತೋರಿಸಬಹುದು. (ಕ್ರಿ. ಶ. ೭ನೆಯ ಶತಮಾನದ) ಕುಡುಮಿಯಲೈ ಸಂಗೀತ ಶಿಲಾಶಾಸನವು. ಆ ಕಾಲದಲ್ಲಿಯೂ ಅತ್ಯುತ್ತಮ ಸ್ವರಸಂಕೇತ ಪದ್ಧತಿಯು ಆಚರಣೆಯಲ್ಲಿತ್ತೆಂಬುದನ್ನು ತಿಳಿಸುತ್ತದೆ. ತಿರುಕೋಟೆಕಾವಲ್‌ನಲ್ಲಿರುವ ದೇವಸ್ಥಾನದ ಗೋಪುರದಲ್ಲಿರುವ ಕೆತ್ತನೆಯ ಕೆಲಸವು, ವಿಜಯೋನ್ಮಾದದಿಂದ ಬಂದ ಸೇನೆಯನ್ನು ಸ್ವಾಗತಿಸುವುದು ಹೇಗೆ? ಎಂಬುದನ್ನು ನಿರೂಪಿಸುತ್ತದೆ. ಇದೊಂದು ಅಭೂತಪೂರ್ವವಾದ ವಸ್ತು ಶಿಲ್ಪ. ಇಡೀ ಭಾರತದಲ್ಲಿ ಇಂತಹ ಶಿಲ್ಪ ಇರುವುದು ಇದೊಂದೇ ಕಡೆ

ಸರ್ವವಾದ್ಯಂ ಎಂಬುದು ದಕ್ಷಿಣ ಭಾರತದದೇವಸ್ಥಾನಗಳಿಗೆ ವಿಶಿಷ್ಟವಾದುದು. ಅಲ್ಲಿ ದೇವರಿಗೆ, ಗಾಯನ, ವಾದ್ಯ ಮತ್ತು ನೃತ್ಯಗಳಿಂದ ಪೂಜೆಯನ್ನು ಸಲ್ಲಿಸಲಾಗುವುದು. ಇಡೀ ಕಾರ್ಯಕ್ರಮವು ಸುಮಾರು ೪ ಘಂಟೆಗಳ ಕಾಲ ನಡೆಯುವುದು. ಈ ಕಾರ್ಯಕ್ರಮಕ್ಕೆ ಬರುವ ಪ್ರೇಕ್ಷಕರು, ವಿವಿಧ ರೀತಿಯ ಗಾಯನ, ಪಾಡನೆ ಮತ್ತು ಗೀತೆಗಳನ್ನು ಕೇಳುವ ಪಾಲಭ್ಯವನ್ನು ಪಡೆಯುವರು ವಿವಿಧ ರೀತಿಯ ನೃತ್ಯಗಳನ್ನು ದೇವರ ಮುಂದೆ ಮಾಡಲಾಗುವುದು. ವಿವಿಧ ಸಂಗೀತ ವಾದ್ಯಗಳನ್ನು ಒಬ್ಬೊಬ್ಬರೇ ಹಾಗೂ ಸಾಮೂಹಿಕವಾಗಿ, ಬಾರಿಸಲಾಗುವುದು. ಈ ಕಾರ್ಯಕ್ರಮವು, ಶಿಕ್ಷಣ, ಮನರಂಜನೆ, ಮತ್ತು ಆತ್ಮೋದ್ಧಾರವನ್ನು ಸಾಧಿಸುವುದು.

ದಕ್ಷಿಣ ಭಾರತದಲ್ಲಿ ನೃತ್ಯ ಪ್ರತಿಮೆಗಳು ತೇಲಿಸಲಾಗಿ ದೊರೆಯುತ್ತವೆ. ಸ್ತ್ರೀ ಅಥವಾ ಪುರುಷರ ನೃತ್ಯ ಭಂಗಿಗಳ ಪ್ರತಿಮೆಗಳಿರದ ದೇವಸ್ಥಾನಗಳೇ ಇಲ್ಲ. ಚಿದಂಬರ ದೇವಾಲಯದ ಗೋಪುರದಲ್ಲಿರುವ ಶಿಲ್ಪಗಳ ಕೆಳಗಡೆ ಶ್ಲೋಕಗಳನ್ನೂ ಕೆತ್ತಲಾಗಿದೆ. ಇದು ನಮ್ಮ ಪೂರ್ವಿಕರ ಪ್ರತಿಭೆಯ ಸಂಕೇತವಾಗಿರುವುದು.

ದಕ್ಷಿಣ ಭಾರತವು ಶತಮಾನಗಳ ಕಾಲದಿಂದಲೂ ತರ್ಕಕ್ಕೆ ಪ್ರಸಿದ್ಧವೆನಿಸಿದೆ. ಈ ಅಂಶವು ಸಂಗೀತ ಶಾಸ್ತ್ರದಲ್ಲಿಯೂ ಪ್ರತಿಪಾದಿತವಾಗಿದೆ ಕರ್ಣಾಟಕ ಸಂಗೀತದ ಶುದ್ಧ ಸ್ವರಗಳು, ರಿ ಗ ಮ ಧ ನಿ ಸ್ವರಗಳು ತಗ್ಗಿದ ಧ್ವನಿಯುವು, ಇನ್ನುಳಿದ ಸ್ವರಗಳೆಲ್ಲ ವಿಕೃತ ಸ್ವರಗಳು, ೨೨ ಮೇಳಕರ್ತ ಯೋಜನೆಯನ್ನು ಸಾಂದರ್ಭಾಭಿ

(೧೪ನೇ ಪುಟ ನೋಡಿರಿ)



ದೀಪಾವಳಿ - ದೀಪೋತ್ಸವದ ಸುಸಂದರ್ಭದಲ್ಲಿ

ನೀವು ಪಡಕೊಳ್ಳುವ ಪ್ರತಿಯೊಂದು ಕ್ಷಯರೋಗ ಮುದ್ರೆಯು

ಕ್ಷಯರೋಗ ಪೀಡಿತರಲ್ಲಿ ಉತ್ತಮ ಮತ್ತು ಪ್ರಕಾಶಮಾನ

ಭವಿಷ್ಯತ್ತಿನ ಹೊಸ ಆಸೆಯನ್ನು ಜಾಗೃತಗೊಳಿಸುವುದು.



ಎಂಟನೆಯ ಕ್ಷಯರೋಗ ಮುದ್ರೆಗಳ ಮಾರಾಟ ಚಳವಳಿ

ಈ ಸ್ಥಳದ ನಾನಿಗಳು—

ಅಮೃತ್‌ಲಾಲ್ ಎಂಡ್ ಕೊ. ಪ್ರೈವೇಟ್ ಲಿಮಿಟೆಡ್,

ಬೊಂಬಾಯಿ.

NAVAYUGA
Popular Kannada Weekly
Founder:—
A. B. SHETTY,
Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೩೦-೧೦-೧೯೭೭	೮

ದೀಪಾವಳಿ

ಪ್ರತಿ ವರ್ಷದಂತೆ ಈ ಸಂವತ್ಸರದಲ್ಲಿಯೂ ದೀಪಾವಳಿ ಬಂದಿದೆ. ಬಂದ ಹಾಗೆಯೇ ಹೋಗುತ್ತದೆ. ಜನತೆಯು ಉತ್ಸಾಹದಿಂದ, ತಂತಮ್ಮ ಆರ್ಥಿಕಾನುಸಾರವಾಗಿ ಯಥಾಯೋಗ್ಯವಾಗಿ ಈ ಹಬ್ಬವನ್ನು ವೈಭವದಿಂದ ಆಚರಿಸುತ್ತಾರೆ. ಮಕ್ಕಳುಮರಿಗಳು ತಿಂಡಿ, ತೇಗಿ, ಪಟಾಕಿ ಸುಟ್ಟು ಸಂತೋಷಿಸುವುದರಲ್ಲಿ ಮಗ್ನರಾಗುತ್ತಾರೆ—ಹೌದು, ಇದು ಸರ್ವ ಸಾಮಾನ್ಯವಾಗಿ ನಾವು ಆಚರಿಸುವ ಹಬ್ಬಗಳ ಬಾಹ್ಯಾಡಂಬರ ಮಾತ್ರ. ಪ್ರತಿ ಹಬ್ಬಕ್ಕೂ ಒಂದೊಂದು ವೈಶಿಷ್ಟ್ಯವಿದೆ. ಅದರಲ್ಲೂ ಸಮಸ್ತ ಭಾರತದಲ್ಲಿಯೂ ವ್ಯಾಪಿಸಿರುವ ಈ ದೀಪಾವಳಿಯು ವಿಶೇಷ ಮಹತ್ವಪೂರ್ಣವಾದುದು. ತಮಸ್ಸಿನಿಂದ ಆವೃತವಾದ ಜಗತ್ತಿನಲ್ಲಿ ದೀಪಜ್ಯೋತಿಗಳನ್ನಿಟ್ಟು, ಪ್ರಕಾಶಮಾನವನ್ನಾಗಿ ಮಾಡುವ ಹಬ್ಬ. ಅಜ್ಞಾನಾಂಧಕಾರದಿಂದ ಸುಜ್ಞಾನದೆಡೆಗೆ ಎಯ್ದುವ ಜ್ಞಾನಜ್ಯೋತಿಗಳನ್ನು ಉರಿಸುವ ದಿನ. ಇಂತಹ ಪರ್ವದಿನವು ಪ್ರತಿವರ್ಷದಂತೆ ಬಂದಿದೆ; ಒಂದು ಹೊಸ ಸಂದೇಶ ತಂದಿದೆ.

ಕಳೆದ ದೀಪಾವಳಿಯ ದಿನಗಳು ಕರ್ಣಾಟಕಕ್ಕೆ ಜನ್ಮವಿತ್ತುವು. ಐದು ಪ್ರತಿಪ್ರತ್ಯೇಕವಾದ, ರಾಜ್ಯಗಳಲ್ಲಿ ಹರಿತಂಚಾಗಿದ್ದ ಕರ್ಣಾಟಕ ಒಂದಾಗಿ ಪರಿಣಮಿಸಿತು. ಅಂದಿನಿಂದಿಂದಿಗೆ ಹನ್ನೆರಡು ಮಾಸಗಳು ಸಂದುವು. ಆದರೆ, ಭೂಮಿ ಒಂದಾದೊಡನೆಯೇ ನಾವೊಂದಾಗಲಿಲ್ಲ. ನಾಡ ಜನಮನದಲ್ಲಿ ಅಜ್ಞಾನವು ದೂರವಾಗಲಿಲ್ಲ. ಯಾವ ಕರ್ಣಾಟಕವನ್ನು ನಾವೆಲ್ಲರೂ ಬಯಸಿದ್ದೆವೋ ಅಂತಹ ಸುದೃಢ, ಸುಂದರ, ಸುಸಂಪನ್ನವಾದ ನಾಡು ಕಟ್ಟುವುದು ನಮ್ಮಿಂದ ಸಾಧ್ಯವಾಗಲಿಲ್ಲ. ಅಂಕು ಡೊಂಕಾದ ದಾರಿಯಲ್ಲಿ ಸಾಗುತ್ತಿರುವ ಎರಡು ಕೋಟಿ ಕನ್ನಡಿಗರ ಮನಸವನ್ನು ಒಂದಾಗಿಸುವುದು ನಮ್ಮಳವಿಗೆ ಸಿಲುಕಲಿಲ್ಲ. ಅಭಿವೃದ್ಧಿ ಪಥದಲ್ಲಿ ನವೋತ್ಸಾಹ, ನವಚೇತನಗಳು ತೋರಲಿಲ್ಲ. ಇಂತಹ ಘನಾವೃತಾಕಾಶದಂತೆ ನಮ್ಮ ನಾಡಿನ ಭವಿಷ್ಯ ಅಂಧಕಾರಮಯವಾಗಿಯೇ ಉಳಿದಿದೆ. ಕನ್ನಡಿಗರ ಬಯಕೆಯು ನಿಶ್ಚಿತ ಫಲ ಪಡೆಯಲು ತೇಜೋಹೀನವಾಗಿದೆ.

ರಾಷ್ಟ್ರೀಯ ಪರ್ವವಾದ ದೀಪಾವಳಿ ರಾಷ್ಟ್ರಕ್ಕೊಂದು ಸಂದೇಶ ತಂದಿದೆ. ಭಾರತದಲ್ಲಿ ಎಲ್ಲರೂ ತಿಳಿದಿರುವಂತೆ, ಎಲ್ಲರನ್ನೂ ಕಾಡುತ್ತಿರುವ, ಎಲ್ಲರ ತಲೆಯನ್ನೂ ತಿನ್ನುತ್ತಿರುವ ಕಲ್ಲೊಂದು ಸಮಸ್ಯೆಗಳವೆ. ಒಂದು ಕಾಲದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಅಜ್ಞಾನಾಂಧಕಾರದಲ್ಲಿ ಕಂಗಾಣದಿದ್ದಾಗ ಜ್ಞಾನಜ್ಯೋತಿಯನ್ನು ಉರಿಸಿ, ಕತ್ತಲೆಯಿಂದ ಬೆಳಕಿನೆಡೆಗೆ ನಡೆಯುವಂತೆ ನೇರವಾದ ಭಾರತ ತಾನೇ ಇಂದು ಅಜ್ಞಾನ, ಬಡತನ ಹಾಗೂ ಅಂಧಾನುಕರಣೆಗಳ ಕ್ರೂರ ವ್ಯಾಘ್ರದ ದವಡೆಯಲ್ಲಿ ಸಿಕ್ಕಿ ದಿಕ್ಕುಗಾಣದೆ ಜರ್ಜರಿತವಾಗಿದೆ. ಈ ರೂಕ್ಷರಾಕ್ಷಸನ ಕೈಯಿಂದ ನಮ್ಮನ್ನು ರಕ್ಷಿಸಿಕೊಳ್ಳುವ ಭಾರವು ಸ್ವತಂತ್ರ ಪ್ರಜೆಗಳಾದ ನಮ್ಮ ಮೇಲೆಯೇ ಇದೆಯೆಂಬುದನ್ನು ಮರೆಯಬಾರದು. ಅದಕ್ಕಾಗಿ ದೇಶದಲ್ಲಿ ದ್ವಿತೀಯ ಪಂಚವರ್ಷಿಕ ಯೋಜನೆಯ ಮೂಲಕ ಆರ್ಥಿಕ ಪುನಾರಚನೆಯನ್ನು ಮಾಡಿ ಬಡತನದ ಭೂತವನ್ನು ದೂರಪೋಡಿಸುವ ಕೆಲಸ ನಡೆಯುತ್ತಿದೆ. ದೀಪಾವಳಿಯ ಪ್ರಮುಖ ಅಂಗವಾದ ಧನಲಕ್ಷ್ಮೀ ಪೂಜೆಯು ಈ ದರಿದ್ರತೆಯ ದೂರೀಕರಣ ಮಾಡುವ ಒಂದು ಪ್ರಾರ್ಥನೆ.

ಭಾರತವು ತನ್ನ ಯೋಜನೆಗಳಿಗೆ ಹಣವನ್ನು ಸಂಪಾದಿಸಿಕೊಳ್ಳಲು ಲಕ್ಷ್ಮಿ ಇಂದು ಒಲಿಯಬೇಕಾಗಿದೆ. ಪರರಿಗೆ ಶಾಂತಿ ಮಂತ್ರವನ್ನುಪದೇಶಿಸಿದ ಭಾರತ ಇಂದು ತನ್ನ ಸುತ್ತುಮುತ್ತಲೂ ತನಗೆದುರಾಗಿ ಎದ್ದ ಕಠಿಣ ಸಮಸ್ಯೆಗಳನ್ನು ಶಾಂತ ವಿಧಾನಗಳಿಂದ ಬಿಡಿಸಿಕೊಳ್ಳಬೇಕಾಗಿದೆ. ಕಾಶ್ಮೀರ ಪ್ರಶ್ನೆ ಹಾಗೂ ಕಾಲುವೆ ನೀರ ತಂಟೆಗಳ ಅಣ್ವಾಕಾರವನ್ನು ಬ್ರಹತ್ತಾಗಿ ಮಾರ್ಪಡಿಸಿ, ತಮ್ಮ ಹರಸೂರಾಂತನದ ಅಂಧಕಾರದಲ್ಲಿಯೇ ಕೊಳೆಯುತ್ತಿರುವ ಸಹೋದರ ರಾಷ್ಟ್ರ ಪಾಕಿಸ್ತಾನಕ್ಕೆ ವಿವೇಕೋದಯವನ್ನು ಮಾಡಿ, ಜ್ಞಾನಜ್ಯೋತಿಯನ್ನು ಬೆಳಗಿಸಿ ಮಾರ್ಗದರ್ಶನ ಮಾಡಬೇಕಾಗಿದೆ. ಅಂತೆಯೇ ಪೋರ್ಚುಗೀಸರನ್ನೂ ಎಚ್ಚರವಾಗುವಂತೆ ಸಗಬೇಕಾಗಿದೆ. ದೇಶದ ಹೊರಗೂ ಒಳಗೂ ಮನೆಮಾಡಿಕೊಂಡಿರುವ ಸಾವಿರಾರು ಸಮಸ್ಯೆಗಳಿಗೆ ತನ್ನ ಜ್ಞಾನದೀವದ ಪ್ರಕಾಶದಲ್ಲಿ ಉತ್ತರವನ್ನು ಹುಡುಕುವುದು ತೀರ ಅವಶ್ಯಕವಾಗಿ ಪರಿಣಮಿಸಿದೆ.

ಪ್ರಗತಿಪರವೆನ್ನುವ ಮಹಾ ರಾಷ್ಟ್ರಗಳಲ್ಲಿ ವಿಜ್ಞಾನ ರಾಕ್ಷಸನು ತನ್ನ ಕರಾಳ ಛಾಯೆಯಿಂದ ಹರಡಿಕೊಂಡಿದ್ದರೆ, ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಅನೈಕ್ಯ, ಅಜ್ಞಾನಗಳು ತಾಂಡವವಾಡುತ್ತಿವೆ. ಈ ಸಂವತ್ಸರದ ದೀಪಾವಳಿಯು ನಮ್ಮನ್ನು ಈ ಅಂಧಕಾರಮಯ ವಾತಾವರಣದಲ್ಲಿ ಯೋಗ್ಯ ದೀಪಾವಳಿಯನ್ನಿಟ್ಟು ಮುನ್ನಡೆಸಬೇಕಾಗಿದೆ. ನಾವಾದರೋ ದೇಶದ ಏಕತೆ, ಅಭಿವೃದ್ಧಿಗಳನ್ನು ಉದ್ದೇಶವಾಗಿಟ್ಟುಕೊಂಡು, ಈ ದೀಪಾವಳಿಯ ಪ್ರಕಾರದಲ್ಲಿ ಮುಂದುವರಿಯುವ ದೃಢ ಸಂಕಲ್ಪವನ್ನು ಮಾಡಬೇಕು. ನಮ್ಮ ಮನೆಮನೆಯಲ್ಲೂ ದಿವ್ಯಜ್ಯೋತಿಯು ಉರಿಯುವಂತೆ ಮಾಡುವತ್ತ ಗಮನವೀಯಬೇಕು. ಸಮಸ್ತ ಜನವೂ ಬಗ್ಗಿದ ಬೆನ್ನನ್ನು ನೆಟ್ಟಗೆ ಮಾಡುವಂತೆ ಶಗ್ಗಿದ ಮುಖವನ್ನು ಎತ್ತಿನಡೆವಂತೆ ಮಾಡಲು ಶ್ರಮಿಸಬೇಕೆಂಬ ದೀಪಾವಳಿಯ ಶುಭ ಸಂದೇಶವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಭುವನೇಂದ್ರ ಪ್ರೊಡಕ್ಟ್ಸ್ ಪ್ರೈವೇಟ್ ಲಿಮಿಟೆಡ್

ರೋಗಿಗಳಿಗೆ ಬಂದನಂತರ ಅವಕ್ಕೆ ಪರಿಹಾರೋಪಾಯವನ್ನು ಕಂಡುಹಿಡಿಯುವುದಕ್ಕಿಂತ, ಅವನ್ನು ಪ್ರಾರಂಭದಲ್ಲಿಯೇ ತಡೆಗಟ್ಟುವುದು ವಿವೇಕ. ಆದರೆ, ದರಿದ್ರತೆಯ ಕಾರಣದಿಂದ, ಅನಾರೋಗ್ಯದ ತವರುಮನೆಯಾಗಿದ್ದ ಹಳ್ಳಿಗಳಲ್ಲಿ ಈ ವಿವೇಕವಿರುವುದಾದರೂ ಎಂತು? ಅಲ್ಲದೆ, ಬಂದ ಅನಾರೋಗ್ಯವನ್ನಾದರೂ ಹೋಗಲಾಡಿಸಲು ತಕ್ಕ ಸೌಲಭ್ಯವಾದರೂ ಇರ್ಲಿದ ಕಾಲವದು. ಆಂಗ್ಲ ವೈದ್ಯರು ಸಾಮಾನ್ಯ ಜನರಿಂದ ಪ್ರತ್ಯೇಕರಾಗಿದ್ದು, ವೈದ್ಯಕೀಯ ಕ್ಷೇತ್ರವು ಸೀಮಿತವಾಗಿದ್ದ ಕೂತ್ತದು. ಅಂತಹ ವಾತಾವರಣದಲ್ಲಿ ಪಾಂಗಾಳ ನಾಯಕರ ಮನೆಯು ರೋಗನಾಶದ ಒಂದು ಕೇಂದ್ರದಂತಿತ್ತು. ಬಹುರೋಗಿಗಳನ್ನು ವ್ಯವಸ್ಥಿತರೀತಿಯಲ್ಲಿ ಉಪಚರಿಸಿ, ಅವರಿಗೆ ಧರ್ಮಾರ್ಥ ಔಷಧವನ್ನು ಸಹ ಇಲ್ಲಿ ಕೊಡಲಾಗುತಿತ್ತು. ದಿವಂಗತ ಪಾಂಗಾಳ ರಾಮಚಂದ್ರ ನಾಯಕ ಯಾನೆ ತಿಮ್ಮ ನಾಯಕರೆಂಬವರು ತಮ್ಮ ತನುಮನಧನಗಳಿಂದ, ಜನತೆಯ ಆರೋಗ್ಯ ರಕ್ಷಣೆಯನ್ನು ಅವಿರತವಾಗಿಯೂ ನಿಷ್ಠಾಪೂರ್ಣವಾಗಿಯೂ ಮಾಡುತ್ತ ಕೀರ್ತಿಶೇಷರಾದರು. ಇವರು ವೈದ್ಯಕೀಯದಲ್ಲಿ ಅಪಾರ ಹಾಗೂ ಅದ್ಭುತವಾದ ಪಾಂಡಿತ್ಯವನ್ನು ಸಂಪಾದಿಸಿದ್ದರು. ಕೈಮುಟ್ಟಿತ್ತುದೇ ಅಮೃತವೆನುವಾಗಿ ಪರಿಣಮಿಸಿ ರೋಗಿಗಳಲ್ಲಿ ತೀವ್ರ ಪರಿಣಾಮವನ್ನು ಮಾಡುತಿತ್ತು. ಇವರ ಜೀವಿತ ಕಾಲದಲ್ಲಿ ಶ್ರೀ ಸಂಸ್ಥಾನ ಕಾಶೀ ಪೀಠಾಧೀಶ ಶ್ರೀಮತ್ ಭುವನೇಂದ್ರ ತೀರ್ಥ ಸ್ವಾಮಿಯವರು ಸರ್ವ ವಿದ್ಯಾವಿಶಾರದರಾಗಿದ್ದರು. ಆಯುರ್ವೇದ ಮತ್ತು ವಿಷ ವೈದ್ಯವಲ್ಲವರದು ಎತ್ತಿದ ಕೈಯಾಗಿತ್ತು. ಇಂತಹ ಸದ್ಗುರುಗಳು ತಿಮ್ಮ ನಾಯಕರ ಸೇವಾಭಾವನೆಯನ್ನೂ ವೈದ್ಯಕೀಯ ನೈಪುಣ್ಯವನ್ನೂ ಕಂಡ, ಸಂತುಷ್ಟರಾಗಿ, ತಮ್ಮ ಕೆಲವು ಯಶಸ್ವೀ ಪ್ರಯೋಗಗಳನ್ನು ಅವರಿಗೆ ಅನುಗ್ರಹಿಸಿದರು. ಶ್ರೀ ಶ್ರೀ ಪಾದಂಗಳವರ ಅಮೃತಕಟಾಕ್ಷದ ಫಲವಾಗಿ, ಜನಸೇವೆಯನ್ನು ಇನ್ನೂ ವಿಶಾಲ ಕ್ಷೇತ್ರದಲ್ಲಿ ಹರಡಿಸುವುದಕ್ಕೋಸ್ಕರ ನಾಯಕ್ ಮನೆತನದವರು "ಶ್ರೀಮದ್ಭುವನೇಂದ್ರ ಮಹೌಷಧಾಲಯ"ವೆಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿದರು.

ಶ್ರೀ ತಿಮ್ಮನಾಯಕರನಂತರ, ಈ ವಿಸ್ತಾರವಾದ ಔಷಧಾಲಯದ ಹೊಣೆ ಹೊತ್ತು ಅದರ ಪ್ರಯೋಜನವನ್ನು ಜನತೆಗೆ ಒದಗಿಸಿದ ಪ್ರತಿಭಾವಂತರು ದಿವಂಗತ ವೈದ್ಯ ಪಾಂಗಾಳ ಕೇಶವನಾಯಕರು. ತಮ್ಮ ಅಪಾರ ಸ್ಮರಣಶಕ್ತಿಯ ಪ್ರಭಾವದಿಂದ, ಹಾಗೂ ಶ್ರೋತ್ರಿಕ ಮನೋವೃತ್ತಿಯಿಂದ ವನಸ್ಪತಿಗಳನ್ನು ಪ್ರಯೋಗಮಾಡಿ, ದೊರೆತ ಅನುಭವದಿಂದ, ಸುಲಭವಾಗಿ ದೊರೆಯುವ ವನಸ್ಪತಿಗಳನ್ನು ರೋಗಿಗಳಿಗೆ ಪರಿಚಯ ಮಾಡಿಸಿ ಸರಳ ವಿಧಾನದಿಂದ ಉಪಚರಿಸುತಿದ್ದರು. ತನ್ನಲ್ಲಿಗೆ ಬಂದ ರೋಗಿಗಳಿಗೆ ಧೈರ್ಯ ಮತ್ತು ವಿಶ್ವಾಸಗಳು ಹುಟ್ಟುವಂತೆ ಮಾಡುವುದೇ ಇವರ ಪ್ರಥಮ ಚಿಕಿತ್ಸೆ. ಇವರ ಸತತ ಪರಿಶ್ರಮದ ಫಲವಾಗಿ ಶ್ರೀಮದ್ಭುವನೇಂದ್ರ ಮಹೌ

ಪ್ರೈವೇಟ್ ಲಿಮಿಟೆಡ್

ಷಧಾಲಯವು ಅಂಗೀರಸ ಸಂವತ್ಸರದ ಮಾರ್ಗಶೀರ್ಷ ಬಹುಳ ಷಷ್ಠಿಯಂದು (೧೯ ೧೨-೩೨) "ನಾಯಕ ಸಹೋದರರ ಶ್ರೀಮದ್ಭುವನೇಂದ್ರ ಮಹೌಷಧಾಲಯ" ಎಂಬ ಹೆಸರಿನ ಖಾಸಗಿ ಪಾಲು ಬಂಡವಾಳದ ಸಂಸ್ಥೆಯಾಗಿ ರೂಪಾಂತರಗೊಂಡಿತು.

ಬೀಜವಾಗಿ ಬಿತ್ತಿದ ಸಂಸ್ಥೆ ಇದೀಗ ಮರವಾಗತೊಡಗಿತು. ಈ ಕಿರಿಯರದ ನೆರಳನಲ್ಲಿ ಅನೇಕ ಜನರು ಆಶ್ರಯ ಪಡೆಯುತ್ತಾ ಬಂದರು. ಜನತೆಯ ಪ್ರೀತಿ ವಿಶ್ವಾಸಗಳು ಬೆಳೆಯುತ್ತಾ ಬಂತು. ವ್ಯವಹಾರ ಕ್ಷೇತ್ರವು ಮತ್ತೂ ವಿಶಾಲವಾಯಿತು. ಜನತೆಯ ನಿಕಟ ಸಂಬಂಧ ಸಂಸ್ಥೆಯ ಸುರಕ್ಷಿತತೆ, ವ್ಯವಹಾರದಲ್ಲಿ ಯೋಗ್ಯ ರೀತಿಯ ವ್ಯವಸ್ಥೆ ಮತ್ತು ಉನ್ನತಿಯ ಸಲುವಾಗಿ ೧೯೩೭ನೆ ಇಸವಿ ಸೆಪ್ಟಂಬರ ೧೯ನೆ ತಾರೀಕಿನಂದು ಭಾರತೀಯ ಕಂಪನಿ ಅಕ್ಟಿನಪ್ರಯ "ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್" ಎಂಬ ಹೆಸರಿನಿಂದ ರಿಜಿಸ್ಟ್ರಿ ಮಾಡಲಾಯಿತು. ಅಂದಿನಿಂದ ಇಂದಿನವರೆಗೂ ಈ ಸಂಸ್ಥೆಯು ತನ್ನ ನಿಷ್ಪಕ್ಷಪಾತ ದೃಷ್ಟಿಯಿಂದಲೂ ಸರಳ ಸುಲಭೋಪಾಯಗಳಿಂದಲೂ ಜನಸೇವೆಯನ್ನು ಮಾಡಿ ಆಯುರ್ವೇದ ಕ್ಷೇತ್ರವಲ್ಲಿ ಬಲುದೊಡ್ಡ ಕ್ರಾಂತಿಯನ್ನೇ ಎಬ್ಬಿಸಿತು.

ಔಷಧಿಯನ್ನು ಸಿದ್ಧಪಡಿಸುವುದರಲ್ಲಿ ಶಾಸ್ತ್ರೀಯ ಸದ್ಧತಿಯನ್ನು ಅಳವಡಿಸಿಕೊಂಡು, ಉತ್ತಮ ವನಸ್ಪತಿಗಳನ್ನೇ ಬಳಸಿಕೊಂಡು, ತೀವ್ರ ಪರಿಣಾಮಕಾರೀ ಔಷಧಿಗಳನ್ನೇ ತಯಾರಿಸಿ, ವೈದ್ಯರ, ರೋಗಿಗಳ ಪ್ರೀತಿ ಮತ್ತು ನಂಬಿಕೆಗೆ ಪಾತ್ರವಾದ ಈ 'ಭುವನೇಂದ್ರ"ನ ವ್ಯಾಪ್ತಿಯು ಕರ್ಣಾಟಕ, ಬೊಂಬಾಯಿ, ಆಂಧ್ರ ಪ್ರದೇಶ ಮತ್ತು ಮದ್ರಾಸು ರಾಜ್ಯಗಳಲ್ಲಿ ಇದೆ. ಇಂದು ಇದರ ನೆರಳಡಿಯಲ್ಲಿ ಸಹಸ್ರಾರು ವೈದ್ಯರೂ ರೋಗಿಗಳೂ ಪ್ರಯೋಜನ ಹೊಂದುತಿದ್ದಾರೆ. ಹುಬ್ಬಳ್ಳಿ ಮತ್ತು ಉಡುಪಿಗಳಲ್ಲಿ ಸ್ವಂತ ಶಾಖೆಗಳ ಮೂಲಕವೂ ೩೦೦ಕ್ಕೂ ಮಿಕ್ಕಿದ ಪ್ರಾತಿನಿಧ್ಯಗಳಿಂದಲೂ ದೇಶದ ಜನತೆಯ ಸೇವೆಯನ್ನು ಮಾಡುತ್ತಿದೆ.

ಈಗಲೂ ಚಿಕಿತ್ಸೆಗಾಗಿ ತಮ್ಮಲ್ಲಿಗೆ ಬರುವ ರೋಗಿಗಳನ್ನು ಧರ್ಮಾರ್ಥ ನರೀಕ್ಷೆನಡೆಸಿ ತಕ್ಕ ಔಷಧಿಗಳನ್ನು ಕೊಡುತ್ತಾರೆ. ನಿಜವಾದ ಬಡವರಿಗೆ ಪುಕ್ಕಟೆ ಉಪಚಾರ ನಡೆಸಿ, ವೈದ್ಯಕೀಯ ಸಲಹೆಯೊಯಲು ಯೋಗ್ಯ ವೈದ್ಯರನ್ನು ನೇಮಿಸಿದ್ದಾರೆ-ತಮ್ಮ ಸಂಸ್ಥೆಯ ಮೂಲೋದ್ದೇಶವನ್ನು ಯಶಸ್ವಿಯಾಗಿ ಪಾಲಿಸುತಿದ್ದಾರೆ.

ಇಂತಹ ಬೃಹದಾಯುರ್ವೇದ ಸಂಸ್ಥೆಯು ಈ ವರ್ಷಾಂತ್ಯದಲ್ಲಿ ತನ್ನ ರಜತೋತ್ಸವವನ್ನು ಆಚರಿಸಲಿದೆ. ದಕ್ಷ ಹಾಗೂ ಅನುಭವಶಾಲಿ ಆಡಳಿತಾಧ್ಯಕ್ಷ ಶ್ರೀ ಪಾಂಗಾಳ ಜನಾರ್ದನ ನಾಯಕರ ಸಮರ್ಥ ನೇತೃತ್ವದಲ್ಲಿ ಆದರ್ಶ ರೀತಿಯಲ್ಲಿ ಸೇವಾಭಾವನೆಯಿಂದ ದುಡಿಯುತ್ತಿರುವ ಈ ಸಂಸ್ಥೆಯು ಹಲವಾರು ಶಾಖಾಯುಕ್ತವಾಗಿ, ಸರ್ವತೋಮುಖ ಅಭಿವೃದ್ಧಿಯನ್ನು ಹೊಂದಿ ಪ್ರಕಾಶಮಾನವಾಗಿ ಬೆಳೆಗಲಿ ಎಂದು ನಾವು ಪ್ರಾರ್ಥಿಸುತ್ತೇವೆ.

ಎಂಟೆದೆಯ ಬಂಟ — ಡಾ. ಮಾಧವ ಪೈ

ಅರುವತ್ತು ತುಂಬಿದ ಡಾ. ಸುಂದರರಾಮ ಪೈ

ಉಡುಪಿಯಲ್ಲಿ ಸಾರ್ವಜನಿಕ ಸೇವಕರೆನಿಸಿಕೊಳ್ಳುವವರು ಅನೇಕರಿದ್ದರೂ, ಅವರೆಲ್ಲರಿಗೂ ಡಾ ಸುಂದರರಾಮ ಪೈ ಅವರು ಕೆಲಸಪ್ರಿಯರಾಗಿದ್ದಾರೆ ರಾಜಕೀಯದಿಂದ ಹಿಡಿದು, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಆರೋಗಿಕ ಕ್ಷೇತ್ರಗಳನ್ನು ದಾಟಿ, ಆಧ್ಯಾತ್ಮಿಕದಲ್ಲಿ ಸಹ ಇತಿಮಿತಿಯನ್ನರಿತು ಆಸ್ಥೆಯನ್ನು ವಹಿಸಿ, ರಾಜಕೀಯ ಪಕ್ಷಪಂಗಡಗಳಿಂದ ನಿರ್ಲಿಪ್ತರಾಗಿ, ಜನತಾ ಸೇವೆಯೇ ಜನಾರ್ದನ ಸೇವೆ ಎಂಬುದನ್ನು ಸಾರ್ಥಕಮಾಡಿಕೊಂಡವರು ಶ್ರೀ ಸುಂದರರಾಮ ಪೈ. ಎಲೆಮರೆಯ ಹಣ್ಣಿನಂತೆ ಬಾಹ್ಯಾಡಂಬರಗಳನ್ನು ಬದಿಗೊತ್ತಿ ಮೌನವಾಗಿಯೇ ತೆರೆಯ ಮರೆಯಲ್ಲಿ ತನ್ನ ಸೇವಾಕಾರ್ಯವನ್ನು ಮಾಡುತ್ತಿದ್ದಾರೆ ಇವರು ಎಂ. ಬಿ. ಬಿ. ಎಸ್ ಪದವೀಧರರಾಗಿ, ವೈದ್ಯವೃತ್ತಿಯನ್ನು ಅವಲಂಬಿಸಿದರೂ, ಅವರ ಸಾರ್ವಜನಿಕ ಸೇವಾಮನೋವೃತ್ತಿಗೆ ಆತಂಕ ಬರಲಿಲ್ಲ ಎಂತಲೇ ಅವರು ಜಿಲ್ಲೆಯ ಪ್ರಮುಖ ತೆಡ್ಯೂಲ್ಡ್ ಬೇಂಕುಗಳಲ್ಲೊಂದಾದ ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್‌ನ ಅಧ್ಯಕ್ಷರಾಗಿ ಹಲವಾರು ವರ್ಷಗಳಿಂದ ದುಡಿದು, ಬೇಂಕಿನ ಏಳಿಗೆಗೂ, ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೂ ಮೈಮರೆದು ದುಡಿದಿದ್ದಾರೆ. ವಿದ್ಯಾಕ್ಷೇತ್ರದಲ್ಲಿ ಸಾಹಸದ ಹೆಜ್ಜೆಯನ್ನಿಟ್ಟ ಎಕೆಡೆಮಿ ಆಫ್ ಜನರಲ್ ಎಜುಕೇಶನಿನಲ್ಲಿ ಸಹ ಉತ್ಸಾಹದಿಂದ ಭಾಗವಹಿಸಿ, ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು, ಮೆಡಿಕಲ್, ಲಾ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಯಲ್ಲೂ ಸೇವೆ ಸಲ್ಲಿಸಿದ್ದಾರೆ ಹೀಗೆಯೇ ಸಮಾಜೋನ್ನತಿಗಾಗಿ ನಿಷ್ಠೆಯಿಂದ ದುಡಿದ ವ್ಯಕ್ತಿಯಾಗಿದ್ದಾರೆ. ಸದಾ ನಗು ಮೊಗದಿಂದ ಸ್ವಾಗತಿಸುವ ಡಾ ಪೈಯವರಿಗೆ ಇದೀಗ ಅರುವತ್ತು ವರ್ಷಗಳು ಸಂದುವು ಈ ಸುದಿನವನ್ನು ನಗರದ ಹಲವೆಡೆಗಳಲ್ಲಿ ಬೇರೆ ಬೇರೆ ರೀತಿಗಳಿಂದ ಆಚರಿಸಿದರು. ಸಮಾಜದಲ್ಲಿ ಸೇವಾನಿರತರಾಗಿ, ಗೌರವ ಪ್ರದಸ್ಥಾನವನ್ನು ಪಡೆಯ ಬಯಸುವವರೆಲ್ಲರೂ ಡಾ. ಸುಂದರರಾಮ ಪೈಯವರನ್ನು ಅನುಕರಿಸಬಹುದು. ಡಾ ಪೈಯವರು ಇದಕ್ಕಿಂತಲೂ ಹೆಚ್ಚಾಗಿ ಸಾರ್ವಜನಿಕ ಸೇವೆಯನ್ನು

ಕಷ್ಟಪಡದಲ್ಲಿ ನಿನಗೇನೆಂಟೆದೆಯೆ? ಎನ್ನುವ ಒಂದು ನುಡಿಯಿದೆ ಇದನ್ನೊಂದು ಪ್ರಶ್ನೆ ಎಂದು ಗ್ರಹಿಸಿದರೆ, ಅದಕ್ಕೆ 'ಹೌದು' ಎಂದುತ್ತರಿಸಬಲ್ಲ ಕೆಲವೇ ಜನರಲ್ಲೊಬ್ಬರು ಡಾ. ಪೈಯವರು ಸಾಮಾನ್ಯ ಕುಟುಂಬದ ಕುಲೀನ ಮನೆತನದಲ್ಲಿ ಜನಿಸಿದ ಮಾಧವ ಪೈ ಇಂದು ಭಾರತದಲ್ಲೇ ಕೀರ್ತಿಮಾನರಾಗಿದ್ದಾರೆ ಅತಿ ಕಷ್ಟದಲ್ಲಿಯೇ ಇಂಟರ್‌ಮೀಡಿಯೆಟ್ ಕಲಿತನಂತರ, ಕಲ್ಯಾಣಪುರದಲ್ಲಿ ಕೆಲವು ತಿಂಗಳು ಅಧ್ಯಾಪಕವೃತ್ತಿಯನ್ನು ಕೈಕೊಂಡಿದ್ದ ಶ್ರೀ ಪೈಯವರ ಹಣೆ ಬರಹ ಒಳ್ಳೆಯದಿತ್ತು. ಅವರು ವೈದ್ಯಕೀಯವನ್ನು ಅಭ್ಯಸಿಸಿ, ಎಂ ಬಿ ಬಿ. ಎಸ್. ಪದವಿಯನ್ನು ಪಡೆದು, ವೈದ್ಯರಾದರೂ, ಅವರ ಮನಸ್ಸು ಅದರಲ್ಲಿ ಶಾಶ್ವತವಾಗಿ ನೆಲೆನಿಲ್ಲಲಿಲ್ಲ ಪ್ರಾರಂಭದಿಂದಲೂ ವಾಣಿಜ್ಯ ಕ್ಷೇತ್ರದತ್ತ ಆಸಕ್ತಿಯಿಂದಿದ್ದವರು ತಮ್ಮ ಸಹೋದರರ ಹಾಗೂ ಮಿತ್ರರ ಸಹಾಯದಿಂದ ಗಿರಣಿಯಲ್ಲಿ ಕೇವಲ ೮ ಸಾವಿರ ರೂಪಾಯಿಗಳ ಬಂಡವಾಳದಿಂದ ಸಿಂಡಿಕೇಟ್ ಬೇಂಕನ್ನು ಸ್ಥಾಪಿಸಿದರು ಆದಿಯಿಂದಲೂ, ಉಳಿದ ಬೇಂಕುಗಳು ದೊಡ್ಡವರ ದೊಡ್ಡ ಮೊತ್ತ ಕೈಕಣ್ಣಿಟ್ಟಿದ್ದರೆ, ಡಾ ಪೈ ಸಣ್ಣವರ ಸಣ್ಣ ಹಣವನ್ನೇ ನೋಡುತಿದ್ದರು ಇದರಿಂದಾಗಿ, ಜನಸಾಮಾನ್ಯರ ಕುಳಗಳಾಗಿ ಬೇಂಕು ಬೆಳೆದುಬಂತು.

ಗ್ರಾಮಾಂತರ ಪ್ರದೇಶಗಳಲ್ಲಿ ಬೇಂಕಿಂಗ್ ಸೌಕರ್ಯವನ್ನು ಒದಗಿಸಬೇಕು, ಚಿಕ್ಕ ಉಳಿತಾಯ ಯೋಜನೆಯನ್ನು ಪ್ರಚಾರ ಮಾಡಬೇಕು ಎನ್ನುವ ವಿಚಾರಧಾರೆ ಬಹಳ ಹಿಂದೆಯೇ ಡಾ ಪೈಯವರ ತಲೆಯಲ್ಲಿ ಹೊಕ್ಕಿತ್ತು. ಪರಿಣಾಮವಾಗಿ ಇಂದು ಸಿಂಡಿಕೇಟಿನ ಶಾಖೆಗಳಲ್ಲಿ ಸುಮಾರು ೨೫೦ ಕ್ಕೂ ಹೆಚ್ಚು ಗ್ರಾಮಗಳಲ್ಲಿಯೇ ಇದ್ದು ಹಳ್ಳಿಗರ ಮನೆಮಾತಾಗಿದೆ ಹೀಗೆ ಡಾ ಪೈಯವರ ವಿಚಾರಶೀಲತೆಯಿಂದಲೂ ಚಾಣಾಕ್ಷತನದಿಂದಲೂ ವಾಮನ ರೂಪದಲ್ಲಿದ್ದ ಬೇಂಕು ತ್ರಿವಿಕ್ರಮಾವತಾರವನ್ನು ಪಡೆದಿದೆ ಸುಮಾರು ೧೧ಕೋಟಿಗೂ ಮಿಕ್ಕಿದ ವ್ಯವಹಾರವನ್ನು ಮಾಡುತ್ತದೆ

ಬೋಳುಗಡ್ಡೆಯಾಗಿದ್ದ ಮಣಿಪಾಲವನ್ನು ಒಂದು ದರ್ಶನೀಯ ಕ್ಷೇತ್ರವನ್ನಾಗಿರಿಸಿದವರು ಡಾ. ಮಾಧವ ಪೈ "ವಿದ್ಯಾದಾನಂ ಮಹಾದಾನಂ" ಎಂದು ನಮ್ಮ ಪ್ರಾಚೀನ ವಾಕ್ಯ ಅದನ್ನರಿತು, ಉಚ್ಚ ವಿದ್ಯಾಭ್ಯಾಸದ ಆವಶ್ಯಕತೆ, ಅದರೆ ಅವನ್ನು ಕೊಡುವ ಶಾಲೆಗಳ ಅಭಾವ, ಇದ್ದುವುಗಳಲ್ಲಿಯೂ ಸ್ಥಾನ ಪಡೆಯಲಿರುವ ಕಷ್ಟಗಳನ್ನು ಗಮನಿಸಿ, ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು (ವಿಜ್ಞಾನ, ಕಲೆ, ವಾಣಿಜ್ಯ,) ಕಸ್ತೂರ್ಬಾ ವೈದ್ಯಕೀಯ ಕಾಲೇಜು, ಉಡುಪಿ ನ್ಯಾಯ ಶಾಸ್ತ್ರ ಕಾಲೇಜು ಹಾಗೂ ಮಣಿಪಾಲದ ತಾಂತ್ರಿಕ ಕಾಲೇಜು—ಹೀಗೆ ಚತುರ್ವಿಧವ ವೈಯಸ್ರದವಾದ ಕಾಲೇಜುಗಳನ್ನು ಸ್ಥಾಪಿಸಿ ಭಾರತದ ಶೈಕ್ಷಣಿಕ ಕ್ಷೇತ್ರದಲ್ಲಿಯೇ ಒಂದು ವಿಶ್ವವನ್ನೂ ದಾಖಲೆಯನ್ನೂ ನಿರ್ಮಿಸಿದ ಎಕೆಡೆಮಿ ಆಫ್ ಜನರಲ್ ಎಜುಕೇಶನ್ ಎಂಬ ವಿದ್ಯಾವಾನಿ ಸಂಸ್ಥೆ. ಪ್ರಾಥಮಿಕ ಶಿಕ್ಷಣದಿಂದಾರಂಭಿಸಿ ಉಚ್ಚ ವಿದ್ಯಾಭ್ಯಾಸವನ್ನೊದಗಿಸುವ ಈ ಸಂಸ್ಥೆಯ ರಿಜಿಸ್ಟ್ರಾರರಾಗಿ ಡಾ ಪೈ ಇದ್ದುಕೊಂಡು ನಿಜವಾಗಿಯೂ ಅದರ ಸೂತ್ರಧಾರಿಯಾಗಿದ್ದಾರೆ. ಮಹಾ ಭಾರತದಲ್ಲಿ ಲಕ್ಷ್ಮಿ ರಮಣನು ಸೂತ್ರಧಾರನಾಗಿದ್ದುದರಿಂದಲೇ ಪಾಂಡವರು ಕುರುಕ್ಷೇತ್ರದಲ್ಲಿ ಗೆದ್ದರು ಅಂತೆಯೇ ಇಂದು ವಿದ್ಯಾಕ್ಷೇತ್ರದಲ್ಲಿ ಈ ಮಾಧವ ಪೈಯವರ ಸೂತ್ರಧಾರಿತನದಿಂದಲೇ ಉಡುಪಿಯ ಹಾಗೂ ಅಸುಪಾಸಿನ ನಾಗರಿಕರು ತಮ್ಮ ಜಯಭೇರಿಯನ್ನು ಹೊಡೆದರು

ಡಾ. ಪೈಯವರು ತಮ್ಮ ಪ್ರತಿಯೊಂದು ಯೋಜನೆಯಲ್ಲಿಯೂ ಯಶಸ್ಸನ್ನು ಪಡೆದಿದ್ದಾರೆ. ಈ ಯಶಸ್ವಿತೆಯ ಗುಟ್ಟೆಂದರೆ, ಅವರು ಒಮ್ಮೆ ತನಗೆ ಪರಿಚಿತರಾದವರನ್ನು ಎಂದೆಂದಿಗೂ ಮರೆಯದಿರುವುದೆನ್ನಬಹುದು. ಸಿಂಡಿಕೇಟ್ ಬೇಂಕಿನ ಸುಮಾರು ನೂರು ಶಾಖೆಗಳು ಆಂಧ್ರ, ಮದ್ರಾಸು, ಕೇರಳ, ಬೊಂಬಾಯಿ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಹಬ್ಬಿಕೊಂಡಿರುವುದರಿಂದ ಸಾಧ್ಯಯಿ ದಕ್ಷಿಣ ಭಾರತವನ್ನೆಲ್ಲಾ ಸಂಚರಿಸಿ, ಅಲ್ಲಿನ ವ್ಯವಹಾರವನ್ನು ಅರಿತುಕೊಂಡಿರುವ ವ್ಯಕ್ತಿಯಾಗಿದ್ದಾರೆ. ಅನುಭವದಿಂದ ತುಂಬಿದಂದ ಮೂರ್ತಿಯಾಗಿದ್ದಾರೆ ಇಂತಹ ಮೇಧಾವಿಯ ಆಶ್ರಯದಲ್ಲಿಯೇ ಶ್ರೀ ಟಿ. ಎ. ಪೈಯಂತಹ ಪ್ರಭಾವಿ ವ್ಯಕ್ತಿಯು ತರಬೇತಿಯನ್ನು ಪಡೆದಿದ್ದಾರೆ. ಡಾ ಪೈಯವರ ಪ್ರತಿಯೊಂದು ಕೆಲಸಗಳಲ್ಲಿಯೂ ಆಸಕ್ತಿಯಿಂದ ಜನ ನರವೀಯುತಿದ್ದಾರೆ ಯಾವ ಕಾರ್ಯವನ್ನೂ ಪ್ರಯತ್ನಪೂರ್ವಕವಾಗಿ ಸಾಧಿಸಿದಲ್ಲಿ ಜಯಶೀಲನಾಗಬಹುದೆಂಬುದನ್ನೇ ಡಾ. ಪೈಯವರು ತಮ್ಮ ಇದುವರೆಗಿನ ಕೃತ್ಯಗಳಲ್ಲಿ ತೋರಿಸಿಕೊಟ್ಟಿದ್ದಾರೆ ಇವರ ಜನಪ್ರಿಯತೆಯು ಕೇವಲ ನಮ್ಮ ಜಿಲ್ಲೆ ಅಥವಾ ರಾಜ್ಯದಲ್ಲಿ ಮಾತ್ರವಲ್ಲ, ನೆರೆರಾಜ್ಯಗಳಲ್ಲಿಯೂ ಕಂಡುಬರುತ್ತದೆ. ಇತ್ತೀಚೆಗೆ ಕೇರಳ ರಾಜ್ಯದ ಎರ್ನಾಕುಲಂನಲ್ಲಿ ಒಂದು ವೈದ್ಯಕೀಯ ಕಾಲೇಜನ್ನು ಸರಕಾರದ ನೆರವಿಲ್ಲದೆ ಕೇವಲ ಖಾಸಗಿ ಪ್ರಯತ್ನದಿಂದ ಸ್ಥಾಪಿಸಲು ಒಂದು ಸಮಿತಿಯ ನೇಮಕವಾಯಿತು. ಆ ಸಮಿತಿಯ ಉಪ ಪೆಟ್ರೋನ್ ಆಗಿ ಡಾ ಪೈಯವರು ಆರಿಸಲ್ಪಟ್ಟಿರುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ

ಡಾ ಪೈಯವರ ಪ್ರಾರ್ಥಿವ ಶರೀರ ಇದೀಗ ೫೯ ವರ್ಷಕ್ಕೆ ಸವೆದಿದೆ ಆದರೆ, ಅವರ ಅನುಭವ ೬೫ ವರ್ಷದ್ದು. ಉತ್ಸಾಹಗಳ ವರ್ಷದ ಎಳೆಯ ಬಾಲಕನದ್ದು, ಮಾತುಗಳ ವರ್ಷದ ಹಾಸು ಹಸುಳೆಯದ್ದು ಮೃದುವಾದುದು. ಇವರ ಪರಿಪಕ್ವ ಅನುಭವದ ಶಾಶ್ವತೋಪಯೋಗವು ಭಾರತೀಯರಿಗೆ ಮುಂದಕ್ಕೂ ದೊರೆಯುವಂತಾಗಲೆಂದು ನಾವು ಪರಮಾತ್ಮನಲ್ಲಿ ಬೇಡಿಕೊಳ್ಳುತ್ತೇವೆ

ದೀಪಾವಳಿ ಸಂಚಿಕೆ

ನಮ್ಮ ಈ ದೀಪಾವಳಿ ಸಂಚಿಕೆಯನ್ನು ಸಕಾಲದಲ್ಲಿಯೇ ಪ್ರಕಟಿಸುವ ಯೋಜನೆಯಿದ್ದರೂ, ಅನನುಕೂಲದ ದೆಸೆಯಿಂದಾಗಿ ಕೆಲವುದಿನ ತಡವಾಯಿತು ಈ ವಿಶೇಷ ಸಂಚಿಕೆಯನ್ನು ಪ್ರಕಟಿಸುವಲ್ಲಿ, ತಮ್ಮ ನೆರವಿತ್ತ ಲೇಖಕ, ಜಾಹೀರಾತುದಾರರನ್ನು ನಾವು ಕೃತ್ಜ್ಞಾಪೂರ್ವಕವಾಗಿ ಅಭಿನಂದಿಸುತ್ತೇವೆ.

ದೀಪಾವಳಿಯ ಹೊಸ ಬೆಳಕು ನಮ್ಮೆಲ್ಲರ ಅಜ್ಞಾನವನ್ನು ದೂರಮಾಡಲಿ ಲೋಕಾಸಮಸ್ತಾ ಸುಖಿನೋ ಭವಂತ !

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಚಿಲ್ಲರೆ ಇಲ್ಲದೆ (ನವಯುಗ ಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು

ಮೆನೇಜರ್.

ಕರ್ನಾಟಕ ಸಂಗೀತ

(೧೦ನೇ ಸುಟದಿಂದ)

ಜ್ಞಾತಿ ಹಾಗೂ ತರ್ಕದ ಆಧಾರದ ಮೇಲೆ ರಚಿಸಲಾಗಿದೆ. ಮಿಶ್ರ ಮೇಳಗಳನ್ನು ರತ್ನಾಕರನ ಸಂಕೀರ್ಣ ಜತಿಗಳಲ್ಲಿ ಸೂಚಿಸಿರುವುದರಿಂದ ಮಿಶ್ರ ಮೇಳಗಳನ್ನು ೧೨ ಸ್ವರ ಸ್ಥಾನಗಳ ಮೇಲೆ ೫೧೮ಳ ಗಳಿಗೆ ನಿಯೋಜಿಸಲಾಗಿದೆ. ಶುದ್ಧ–ಮಿಶ್ರ ಮೇಳಗಳು ತುಂಬಾ ವ್ಯಾಪಕವಾಗಿವೆ. ಆದ್ದರಿಂದ, ಅವುಗಳಲ್ಲಿ ಸೇರದ, ಸ್ವರ ಶ್ರೇಣಿಯನ್ನು ವಿಶ್ವದ ಯಾವ ಸಂಗೀತ ಶಾಸ್ತ್ರಜ್ಞನೂ ಸೇರಿಸಲಾರ. ಈ ಯೋಜನೆಯಲ್ಲಿ ಪಾಶ್ಚಾತ್ಯ ಸಂಗೀತವು ೧೬೦೪ ನೆಯ ಮೇಳವಾಗುವುದು.

ತಾಳಪದ್ಧತಿಯು ದಕ್ಷಿಣಾತ್ಯ ಸಂಗೀತದಲ್ಲಿ ವ್ಯಾಪಕವಾಗಿ ವೃದ್ಧಿಗೊಂಡಿದೆ. ಷಡಂಗ ಮತ್ತು ಷೋಡಶಾಂಗಗಳನ್ನು ಇಲ್ಲಿ ಅನುಸರಿಸಲಾಗುವುದು. ಪ್ರಾಸ ವಿಶ್ಲೇಷಣೆಯನ್ನು ಎಷ್ಟರ ಮಟ್ಟಿಗೆ ನಡೆಸಬಹುದೆಂಬುದಕ್ಕೆ ತಾಳ, ದಶ, ಪ್ರಾಣಗಳ ಕಲ್ಪನೆಯೇ ದೃಷ್ಟಾಂತವಾಗಿರುವುದು.

ಸಂಗೀತದ ಪ್ರಕಾರಗಳಲ್ಲಿಯೂ ವೈವಿಧ್ಯಗಳನ್ನು ನಿಯೋಜಿಸಲಾಗಿದೆ. ಕಲಾ ಸಂಗೀತ, ಭಕ್ತಿ ಸಂಗೀತ, ನೃತ್ಯ ಸಂಗೀತ ಗೇಯ ನಾಟಕ, ಜಾನಪದ ಸಂಗೀತ ಮತ್ತು ಸಮರ ಸಂಗೀತ-ಇತ್ಯಾದಿಗಳನ್ನು ಇಲ್ಲಿ ಉದಾಹರಿಸಬಹುದು. ರಾಮಸ್ವಾಮಿ ದೀಕ್ಷಿತರ (೧೭೩೦—೧೮೧೭) ೧೧೮ ರಾಗತಾಳ ಮಾಲಿಕ ಮತ್ತು ಮಹಾ ವೈದ್ಯನಾಥ ಅಯ್ಯರ್ (೧೮೪೪–೧೯೯೩)ರ ೭೨ ಮೇಳ ರಾಗ ಮಾಲಿಕಾ ಎಂಬ ಸಂಗೀತ ಕೃತಿಗಳು ವಿಶ್ವದಲ್ಲಿಯೇ ಅತ್ಯಂತ ನೊಡ್ಡ ಕೃತಿಗಳೆನಿಸಿವೆ. ಪ್ರಜ್ಞಾದ ಭಕ್ತಿ ವಿಜಯಂ ಮತ್ತು ತ್ಯಾಗರಾಜರ ನೌಕಾ ಚರಿತಂ ಪಾಹಜಿ ಮಹಾರಾಜರ ಪಲ್ಲಕ್ಕಿ ಸೇವಾ ಪ್ರಬಂಧಂ ಮತ್ತು ಗೋಪಾಲ ಕೃಷ್ಣ ಭಾರತಿಯವರ ನಂದನಾರ್ ಚರಿತಂ ಮುಂತಾದ ಗೇಯ ನಾಟಕಗಳು ಅತ್ಯಂತ ದೀರ್ಘವಾದುವು. ದಕ್ಷಿಣ ಭಾರತದ ಸಂಗೀತದಲ್ಲಿ ಸಾಹಿತ್ಯ, ಸಂಗೀತ ಸ್ವರಗಳಿಗನುಸಾರವಾಗಿ ಭರ್ತಿ ಮಾಡಿದ ಪದಗಳಲ್ಲ. ಅವು ಅತ್ಯುತ್ತಮ ಪದ್ಯಗಳೂ ಹೌದು. ಸುಂದರವಾದ ಕಲ್ಪನೆ ಹಾಗೂ ಸಾಹಿತ್ಯಶಕ್ತಿ ಈ ಪದ್ಯಗಳಲ್ಲಿರುವುವು.

ದಕ್ಷಿಣ ಭಾರತದಲ್ಲಿ ಹೆಸರಾಂತ ಸಂಗೀತ ಕೃತಿ ರಚನಾಕಾರರು ಇದ್ದರು. ತೇವರು ದಿವ್ಯ ಪ್ರಬಂಧಂ ಮತ್ತು ತಿರುಪ್ಪಗಳು ಮುಂತಾದುವುಗಳ ಕರ್ತೃಗಳು ಸಾವಿರಾರು ಪವಿತ್ರ ಗೀತೆಗಳನ್ನು ಬರೆದಿರುವರು. ಪುರಂದರ ದಾಸರು, ಅವರ ಹೇಳಿಕೆಯ ಪ್ರಕಾರ ೪,೭೫,೦೦೦ ಗೀತೆಗಳನ್ನು ಬರೆದಿರುವರು. 'ಕ್ಷೇತ್ರಯ್ಯನವರು ೪೧೦೦ ಪದಗಳನ್ನು ಬರೆದಿರುವರು. ಅವರ ಸಾವಿರಾರು ಕೃತಿಗಳಲ್ಲದೆ ಶತರಂಗಿರತ್ನ ಮಾಲಿಕಾ, ಕೀರ್ತನ ಶತಕ, ದಿವ್ಯನಾಮಕೀರ್ತನೆ, ಉತ್ಸವ ಸಂಪ್ರದಾಯಗಳು ಮತ್ತು ಮೂರುಗೇಯ ನಾಟಕಗಳನ್ನು ರಚಿಸಿರುವರು. ಭಜನೆ ವಿಧಾನವು ಬೋಧೇಂದ್ರ ಸದ್ಗುರು ಸ್ವಾಮಿಯವರ ಕಾಲದಿಂದ ಆಚರಣೆ ಬಂದಿತು. ವೈಷ್ಣವ ಮೊದಲ ಗುರುಮೂರ್ತಿ ಶಾಸ್ತ್ರಿ, (೧೮ನೆಯ ಶತಮಾನ)ಗಳು ಸುಮಾರು ೧೦೦ ಗೀತೆಗಳನ್ನು ರಚಿಸಿದರು.

ಭಕ್ತಿ ಗೀತೆಗಳಿಂದ ಜನಸಾಮಾನ್ಯರಿಗೆ ಶಿಕ್ಷಣ ನೀಡಬಹುದು ಎಂಬ ಅಂಶವನ್ನು ಬಹಳ ಹಿಂದೆಯೇ ಗ್ರಹಿಸಲಾಗಿತ್ತು. ಆದ ಕ್ಕಾಗಿ ಅನೇಕ ಸಂಗೀತವಿಧಾನಗಳನ್ನು ರಚಿಸಲಾಗಿದೆ. ಅವುಗಳಲ್ಲಿ ಕಥಾ ಕಾಲಕ್ಷೇಪವೂ ಮುಖ್ಯವಾದುದು.

ಮರತ್ತೂರು ವೆಂಕಟರಾಮಾ ಶಾಸ್ತ್ರಿಗಳು ಅತ್ಯುತ್ಕೃಷ್ಟ ನೃತ್ಯ ನಾಟಕಗಳನ್ನು ಬರೆದಿರುವರು. ನೃತ್ಯ ನಾಟಕಗಳನ್ನು ತಂಜಾವೂರು ಜಿಲ್ಲೆಯಲ್ಲಿ ೩೦೦ ವರ್ಷಗಳಿಗೂ ಹೆಚ್ಚು ಕಾಲ ಆಡುತ್ತಿದ್ದರು. ಭಾರತದ ನಾಟ್ಯ ಶಾಸ್ತ್ರದಲ್ಲಿ ನಿರೂಪಿಸಿರುವ ನೃತ್ಯ ರೀತಿಯಲ್ಲಿ ಈ ನೃತ್ಯ ನಾಟಕಗಳನ್ನು ಪ್ರದರ್ಶಿಸಲಾಗುತ್ತಿತ್ತು.

ಗೇಯ ನಾಟಕಗಳಲ್ಲಿ ಮುಖಗೀತೆ, ಪತ್ರಜತಿ, ಪತ್ರವಾದ್ಯ ಮತ್ತು ಪತ್ರಗೀತೆ ಮುಂತಾದುವು ಪ್ರೇಕ್ಷಕರ ಕಣ್ಮನಸಗಳನ್ನು ಮುದಗೊಳಿಸುತ್ತದೆ. ಸಂಸ್ಕೃತದಲ್ಲಿ ಕೃಷ್ಣಲೀಲಾ ತರಂಗಿಣಿಯು ಅತ್ಯಂತ ದೀರ್ಘವಾದ ಗೇಯ ನಾಟಕವಾಗಿದೆ.

ವಾದ್ಯ ಸಂಗೀತವು ದಕ್ಷಿಣ ಭಾಗದಲ್ಲಿ ಪರಿಪೂರ್ಣತೆಯನ್ನು ತಾಳಿರುವುದು.

ದಕ್ಷಿಣ ಭಾರತದಲ್ಲಿ ಜಾನಪದ ಸಂಗೀತವೂ, ಜಾನಪದ ನೃತ್ಯವೂ, ಜಾನಪದ ನಾಟಕವೂ, ಜಾನಪದ ಸಂಗೀತ ವಾದ್ಯಗಳೂ ವಿಪುಲವಾಗಿವೆ. ಜಾನಪದ ಸಂಗೀತಗಳಲ್ಲಿ ಗ್ರಾಮಾಂತರ ಹಾಗೂ ಶುದ್ಧ ರೀತಿಯ ಗೀತೆಗಳೂ ಇರುವುವು.

ನೋಡಿ ದಣಿಯದ ನೋಟ

(೧೦ನೇ ಸುಟದಿಂದ)

ನಾವು ಟಕೇಟು ಪಡಕೊಳ್ಳಬೇಕು. ಅಲ್ಲಿಯೇ ವಿದ್ಯುದುತ್ಪಾದನಾ ಕೇಂದ್ರಕ್ಕೆ ಹೋಗುವ ರಸ್ತೆ ಇದೆ. ಈ ರಸ್ತೆಯಲ್ಲಿ ಎರಡು ಫರ್ಲಾಂಗುಗಳಷ್ಟು ಹೋದಾಗ ನಾವು ಒಂದು ಕಟ್ಟಡವನ್ನು ಬಂದು ಮುಟ್ಟುತ್ತೇವೆ. ಈ ಕಟ್ಟಡದ ಹಿಂಭಾಗದಲ್ಲಿ ಬಂದು ನಾವು ನೋಡಿದಾಗ ಅಲ್ಲಿ ಒಮ್ಮೆಲೇ ನಮ್ಮ ಎದೆನಡುಗಿಸುವ ರಚನೆ ಕಂಡು ಬರುವುದು! ಒಮ್ಮೆಲೇ, ಹರಾತ್ತನೆ ೯೫ ಅಡಿ ಆಳದ ಪ್ರಪಾತ! ಈ ಪ್ರಪಾತವನ್ನು ಮುಟ್ಟಲು ರಚಿಸಿದ ದಾರಿಯು ೧೬೫ ಅಡಿ ಉದ್ದ! ಈ ಪ್ರಪಾತದ ಬುಡದ ಕಣಿವೆಯಲ್ಲೇ ಇದೆ ವಿದ್ಯುದುತ್ಪಾದನಾ ಕೇಂದ್ರ! ೧೨೫ ಮೆಟ್ಟಲುಗಳು ಇದ್ದರೂ ಇಳಿಯುವ ಕಾರ್ಯ ಅವಾಯುಕಾರಿ ಎಂದೇ ಟ್ರೋಲಿಯಸಹಾಯದಿಂದ ನಾವು ಕೆಳಕ್ಕೆ ಇಳಿಯಬೇಕು. ಕೆಳಕ್ಕೆ ಇಳಿಯುವಾಗ ಕಾಣುವ ಪ್ರಪಾತ ನಮ್ಮ ಕಣ್ಣುಕುಕ್ಕುತ್ತದೆ! ಚಿಕ್ಕ ಮಕ್ಕಳು ಹೆದರುವ ಪ್ರಸಂಗ! ರೈಲು ಪಟ್ಟಿಯಲ್ಲಿ ಕೆಳಕ್ಕಿಳಿಯುವಾಗ ದೂರ ಸಾಗಿದಷ್ಟೂ ಇದೆ ಎಂದು ತೋರುವುದು ಮನಸ್ಸಿಗೆ.

ಗಾಡಿಯಿಂದ ಕೆಳಗಿಳಿದಾಗ ನಾವು ನೇರವಾಗಿ ವಿದ್ಯುದುತ್ಪಾದನಾ ಕೇಂದ್ರವನ್ನು ಪ್ರವೇಶಿಸುತ್ತೇವೆ. ಉತ್ತರಕ್ಕೆ ಕಣಿವೆಯಲ್ಲಿ ಕಟ್ಟಲ್ಪಟ್ಟ ಇದರ ರಚನೆ ನಮ್ಮನ್ನು ಬೆರಗುಗೊಳಿಸುವುದು. ಇಂತಹ ಒಂದು ಸ್ಥಳದ ಕೋಣೆ ನಡೆಸಿದ ಆ ಮಹಾವ್ಯಕ್ತಿ, ವಿಶ್ವೇಶ್ವರಯ್ಯನವರ ನೆನಪು ಆಗ ಎಲ್ಲರಿಗೂ ಆಗಿಯೇ ಆಗುವುದು 'ಮಹಾತ್ಮಾ ಗಾಂಧಿ ಹೈಡ್ರೋ ಇಲೆಕ್ಟ್ರಿಕ್ ವರ್ಕ್ಸ್' ಎಂಬ ಹೆಸರಿನ ಕೇಂದ್ರ ಇದು. ಶಂಭವತಿಯ ನೀರನ್ನು ಕೊಳ್ಳದಲ್ಲಿ ಸಂಗ್ರಹಿಸಿ, ಆ ನೀರನ್ನು ಸುಮಾರು ೨೦ ಸಾರು ಅಡಿ ವ್ಯಾಸದ ತೋರ ನಳಿಗೆಗಳಲ್ಲಿ ದೂರದಿಂದ ತರುತ್ತಾರೆ. ನಾಲ್ಕು ನಳಿಗೆಗಳಲ್ಲಿ ನೀರು ಕೇಂದ್ರದ ಮೇಲಿನ ಬುಡದವರೆಗೂ ಬರುತ್ತದೆ. ಅನಂತರ ಅವೇ ನಳಿಗೆಗಳು ಪ್ರಪಾತದಲ್ಲಿ ಇಳಿಯುತ್ತಾ ಕೇಂದ್ರಕ್ಕೆ ಸಮೀಪವಾಗುವಾಗ ಅದರ ನೀರನ್ನು ಎಂಟು ನಳಿಗೆಗಳಮೂಲಕಹಾಯಿಸುತ್ತಾರೆ. ಈ ಕೇಂದ್ರದಲ್ಲಿ ಎಂಟು ವಿದ್ಯುದುತ್ಪಾದನಾ ಯಂತ್ರಗಳಿವೆ. ಇವುಗಳ ಒಳಗೆ ನೀರು ರಭಸದಿಂದ ಬರುತ್ತದೆ. ಈ ಯಂತ್ರಗಳ ಒಳಭಾಗದಲ್ಲಿ ರಭಸದಿಂದ ತಿರುಗುವ ಚಕ್ರ ಇದೆ. ಈ ಚಕ್ರದ ಸುತ್ತಳತೆ ಅಂದಾಜು ಎರಡು ಅಡಿ, ಎರಡೂವರೆ ಅಡಿ ಅಗಲದ ಗೊರಸಿನಾಕಾರದ ೨೨ ಬಾಯಿಗಳಿವೆ. ಈ ಚಕ್ರವು ರಭಸದಿಂದ ತಿರುಗುವಾಗ ನೀರು ಹಾಗೂ ಚಕ್ರದ ಘರ್ಷಣೆಯಿಂದ ವಿದ್ಯುತ್ತು ಉಂಟಾಗುವುದು. ಜಲಚಕ್ರದ ತತ್ವವನ್ನು ಅನುಸರಿಸಿ ವಿದ್ಯುತ್ತಿನ ಉತ್ಪಾದನೆಯಾಗುವುದು. ಒಂದು ಯಂತ್ರದ ಭಾಗವನ್ನು ಬಿಚ್ಚಿ ವೀಕ್ಷಕರಿಗೆ ಮಂದಟ್ಟಾಗಲು ಇಟ್ಟಿರುತ್ತಾರೆ. ಉತ್ಪಾದಕ ಯಂತ್ರಗಳ ಕೆಳಬದಿಯಲ್ಲಿ ವೃತ್ತಾಕಾರದಲ್ಲಿ ಇರುವ ಪಾರದರ್ಶಕ ಭಾಗದಲ್ಲಿ ನೊರೆ ನೀರು ತಿರುಗುವುದು ನಮ್ಮ ದೃಷ್ಟಿಗೆ ಗೋಚರವಾಗುವುದು. ಇಲ್ಲಿಂದಲೇ ಕರ್ನಾಟಕದ ಬಹುಭಾಗಗಳಿಗೆ ವಿದ್ಯುತ್ತಿನ ಸರಬರಾಯಿಯಾಗುವುದು. ಕೇಂದ್ರದ ಮಾಳಿಗೆಯಲ್ಲಿ ವಿದ್ಯುತ್ತಿನ ಸಂಗ್ರಹ ಹಾಗೂ ವಿತರಣೆಯ ಪರಿಶೀಲಕ ಯಂತ್ರ ಇದೆ. ಕೇಂದ್ರದ ಹಿಂಬದಿಯಲ್ಲೇ ಇದರ ವಿತರಣೆಗೆ ಸಂಬಂಧಿಸಿದ ಕೇಂದ್ರ ಇದೆ. ಅಲ್ಲದೆ ಘರ್ಷಣೆಗೊಳಪಟ್ಟ ನೀರು ಎಳೆ ಧಾರೆಯಾಗಿ ನದಿ ಕಣಿವೆಯನ್ನು ಸೇರುವುದನ್ನು ನಾವು ಇಲ್ಲಿ ಕಾಣಬಹುದು. ಪುನಃ ಟ್ರೋಲಿಯ ಸಹಾಯದಿಂದ ನಾವು ಮೇಲಕ್ಕಾಗಲೆ ಬರಬೇಕು. ಮೇಲೆ ಬರುವಾಗ ನಾವು ನಮ್ಮೊಂದಿಗೆ ಮಾನವನ ಕರ್ತೃತ್ವ ಶಕ್ತಿಯ ಉಚ್ಚಜ್ಞಾನವನ್ನು ಹಿಡಿದುಕೊಂಡು ಬರುತ್ತೇವೆ.

ಕನ್ನಡಿಗರು ನೋಡಲೇ ಬೇಕಾದ ಸ್ಥಳಗೇರುಸೊಪ್ಪೆ. ಪ್ರಕೃತಿ ತಾಯಿಯ ಮಡಿಲಿನಲ್ಲಿ ಕಾಲ ಕಳೆಯುವ ಸುಯೋಗಕ್ಕಾಗಿ, ವಿಜ್ಞಾನದ ಮುನ್ನಡೆಯ ದರ್ಶನಕ್ಕಾಗಿ ಮಾನವನ ಪ್ರಯತ್ನ, ಸಾಧನೆಗಳ ಪರಿಶೀಲನೆಗಾಗಿ ನಾವೊಮ್ಮೆ ಗೇರುಸೊಪ್ಪೆ ಪ್ರವಾಸವನ್ನು ಕೈಕೊಳ್ಳಬೇಕು. ದೇಶದ ನಾಲ್ಕು ನಿಟ್ಟಿನಿಂದ ವೀಕ್ಷಕರು ದಿನಾ ಬಹುಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ. ಅಂದ ಮೇಲೆ ಕನ್ನಡಿಗರು, ನಮ್ಮ ಪ್ರಾಂತ್ಯದ ಮಹತ್ವಿಕೆಯನ್ನರಿತು, ಪ್ರೇಕ್ಷಣೀಯ ಸ್ಥಳಗಳ ಕುರಿತಾದ ಸ್ಥೂಲ ಜ್ಞಾನವನ್ನಾದರೂ ಪಡೆದುಕೊಳ್ಳುವುದು ಅಗತ್ಯ. ನಮ್ಮಲ್ಲಿಯ ಪ್ರೇಕ್ಷಣೀಯ ಸ್ಥಳಗಳ ಪರಿಚಯವನ್ನು ಮೊದಲು ಮಾಡಿ ಆ ಬಳಿಕ ಉಳಿದವುಗಳನ್ನು ನಾವು ತಿಳಿಯೋಣ!

ಉಡುಪಿಯ ಕರ್ನಾಟಕ ಸಂಘದ ಪ್ರಕಟಣೆಗಳು

ಬೇಗನೆ ಪ್ರಕಟವಾಗಲಿವೆ

ಭೌತಿಕ ದರ್ಶನ

(ಭೌತಿಕದರ್ಶನದ ಸಾರಸಂಗ್ರಹ)

ಬಡೆಕ್ಕಿಲ ಕೃಷ್ಣ ಭಟ್ಟ,
ಎಲ್. ಎಲ್. ಬಿ.
ಛದ್ರಾವತಿ.

ಚಂದ್ರಲೋಕಕ್ಕೆ ಪ್ರಯಾಣ

ಯು. ಆರ್. ಆಚಾರ್ಯ,
ಸ್ಕ್ವಾಡ್ರನ್ ಲೀಡರ್, ಐ. ಎ. ಎಫ್, ದಿಲ್ಲಿ.

ಸಾಮಾನ್ಯ ರೋಗಗಳು

(ಸಾಮಾನ್ಯ ರೋಗಗಳ ಕಾರಣ ಮತ್ತು ಚಿಕಿತ್ಸಾಕ್ರಮದ ಸರಲ ನಿರೂಪಣೆ)

ಡಾ। ಕೆ. ಎಲ್. ಐತಾಳ,
ಎಂ. ಬಿ, ಬಿ. ಎಸ್.

.... ಹೊಸ ಪುಸ್ತಕ ....

ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಬರೆದ

ಶಿಕ್ಷಣದ ಧ್ಯೇಯಗಳು

ಮತ್ತು ಇತರ ಪ್ರಬಂಧಗಳು

ಅನುವಾದಕರು:

ಕೆ. ಬಿ. ರಾಮಕೃಷ್ಣ ರಾವ್, ಬಿ. ಎ. (ಆನರ್ಸ್)

ಉ. ಲಕ್ಷ್ಮೀನಾರಾಯಣಾಚಾರ್ಯ ಎಂ. ಎ; ಎಲ್. ಟಿ.

ಬೆಲೆ: $\frac{2-4-0}{2 \cdot 25}$ ರೂ.

ನವಯುಗ ಪ್ರೆಸ್, ಉಡುಪಿ.

ಪಾಶ್ಚಾತ್ಯರು ತಪ್ಪುದಾರಿ ತುಳಿಯದಿರಲಿ

ಶ್ರೀ. ಎಂ ರಘುನಂದನ ರಾವ್

ಕಾಶ್ಮೀರ ಸಮಸ್ಯೆಯ ಮೇಲೆ ಪಾಕಿಸ್ತಾನವು ಜಿಲ್ಲೆದ ಘೋರಾಂಧಕಾರದಲ್ಲಿ ಬಿಟ್ಟಿದೋರದ ಪಾಶ್ಚಾತ್ಯ ರಾಷ್ಟ್ರಗಳು ಭಾರತವು ಈ ಬಾರಿ ಆಚರಿಸುವ ದೀಪಾವಳಿಯ ಪ್ರಕಾಶದಿಂದಲಾದರೂ ಸಚೇತನರಾಗಿ, ಕಾಶ್ಮೀರ ಪ್ರಶ್ನೆಯ ಸತ್ಯಜ್ಞಾನವನ್ನು ಪಡೆದು ಭಾರತಕ್ಕೆ ನ್ಯಾಯದಾನ ಮಾಡುವಲ್ಲಿ ನೆರವೀಯಲಿ.

ಕಂತೆ! ಸ್ವಾಭಿಮಾನವುಳ್ಳ ಯಾವ ರಾಷ್ಟ್ರವಾದರೂ ಇದನ್ನೊಪ್ಪೀತೆ? ಪ್ರಬಲ ಪಾಶ್ಚಾತ್ಯರ ತಾಳಕ್ಕೆ ಸರಿಯಾಗಿ ಲಾಗಹಾಕುವ ಕೀಲುಗೊಂಬೆಯಾದ ಪಾಕಿಸ್ತಾನ ವಿದನ್ನೊಪ್ಪೀತು! ಆದರೆ ಭಾರತ ಮಾತ್ರ ಇಂತಹ ವಿಚಾರಗಳಲ್ಲಿ ಪಾಕಿಸ್ತಾನದಂತೆ ತನ್ನ ಮಾನವನ್ನು ಮಾರಿಕೊಂಡು, ಪರಕೀಯರನ್ನು ಅನುಸರಿಸಲು ಸಿದ್ಧವಿಲ್ಲ. ಈ ಮತಗಣನೆಯ ಸೂಚನೆಗೆ ಬೆಂಬಲ ವಿತ್ತವರಲ್ಲೊಂದಾದ ಬ್ರಿಟನಿನ ದಬ್ಬಾಳಿಕೆ ನಡೆಯುತ್ತಿರುವ ಸೈಪ್ರಸ್ಸಿನಲ್ಲಿಂದು ತಮ್ಮ ತಾಯ್ನಾಡ ಬಿಡುಗಡೆಗಾಗಿ ಅಸಂಖ್ಯಾತ ದೇಶಪ್ರೇಮಿಗಳು ಆತ್ಮಬಲಿದಾನ ಗೈಯುತ್ತಿದ್ದಾರೆ ಸೈಪ್ರಸ್ಸಿನ ಸ್ಥಿತಿ ಹೀಗಿರುವಾಗ ಭಾರತದ ಅಂಗವಾಗಿರುವ ಕಾಶ್ಮೀರದಲ್ಲಿ ಜನತೆ ಸುಖದಿಂದ ಜೀವನ ನಡೆಸುತ್ತಿದ್ದಾರೆ. ಅಲ್ಲಿ ಅತೃಪ್ತಿಯೆಂಬುದು ಕಂಡುಬರದು. ಒಂದುವೇಳೆ ಕುಹಕಿಗಳ ಅಸೂಯೆಯಿಂದ ಕೂಡಿದ ಕಣ್ಣುಗಳಿಗೆ 'ಅತೃಪ್ತಿ' ಯೆಂಬುದು ಕಂಡ ಬಂದರೂ, ಅದು ಸೈಪ್ರಸ್ಸಿನ ಹೀನಸ್ಥಿತಿಯ ಸಾವಿರದಲ್ಲಿ ಒಂದು ಪಾಲು ಕೂಡ ಇಲ್ಲವೆಂಬುದನ್ನು ಜಗತ್ತೇ ತಿಳಿದಿ ಎವುದನಿಶ್ಯ.

ಕಾಶ್ಮೀರದಲ್ಲಿ ಮತಗಣನೆ ನಡೆಸಬೇಕೆನ್ನುವ ಆಂಗ್ಲರು ಸೈಪ್ರಸ್ಸಿನಲ್ಲಿ ವಿಶ್ವಸೇನೆ ತಳವೂರುವುದನ್ನು ಸಹಿಸುವರೇ? ಅಲ್ಲಿನ ಜನಾಭಿಪ್ರಾಯ ಸಂಗ್ರಹಕ್ಕೆ ಅವರು ಸಿದ್ಧರಿರುವರೇ? ಭಾರತದ ಅಂಗವಾಗಿರುವ ಕಾಶ್ಮೀರದ ವಿಚಾರದಲ್ಲಿ ಮಾತ್ರ ಏಕಿಂತಹ ಅಸಹನೆಯ ಧೋರಣೆ? ತಾನು ಹೇಳಿದುದು ನ್ಯಾಯವೆಂದು ಬ್ರಿಟನಿನ ಪ್ರತಿನಿಧಿಯ ಮಾದವರಿಬಹುದು, ಆದರೆ ಇದುಲ್ಲಿ ತಿಲಾಂಶದಷ್ಟುದರೂ ಹುರುಳಿದೆಯೇ? ಜಗತ್ತಿನ ನ್ಯಾಯಪರರಾದ ಪ್ರಜೆಗಳೇ ಆಲೋಚಿಸಲಿ!

೧೯೪೮ರ ಅಗಸ್ಟ್ ೧೫ರಂದು ಭದ್ರತಾ ಸಮಿತಿ ಸ್ವೀಕರಿಸಿದ ಗೊತ್ತುವಳಿಯನ್ನು —ಪಾಕಿಸ್ತಾನದ ಸೇನೆ ಕಾಶ್ಮೀರದಿಂದ ಕಾಲ್ದೆಗೆಯಬೇಕು—ಪಾಕಿಸ್ತಾನ ವಾಲಿಸಿದಲ್ಲಿ ೧೯೪೮ ಜನವರಿ ೫ರ ಭದ್ರತಾ ಸಮಿತಿಯ ಠರಾವನ್ನು—ಪಾಕಿಸ್ತಾನದ ಸೇನೆ ಕಾಶ್ಮೀರದ ನೆಲ ತೊರೆದಲ್ಲಿ ಮತಗಣನೆಯ ನಿರ್ಣಯ—ಭಾರತವು ಕಾರ್ಯಗತಗೊಳಿಸಿಯೇ ತೀರುತ್ತಿತ್ತು. ಆದರೆ ಕಾಶ್ಮೀರದಿಂದ ತೊಲಗುವ ಬದಲಿಗೆ ಗಡಿಯಲ್ಲಿ ಇನ್ನಿಷ್ಟು ಸೇನೆಯನ್ನು ಸಂಗ್ರಹಿಸಿ, ಭೀಕರ ಸೇನಾಡಳಿತೆ ನಡೆಯಿಸುತ್ತಲಿದೆ, ಪಾಕಿಸ್ತಾನ. ವಸ್ತುಸ್ಥಿತಿ ಹೀಗಿರುವಾಗ ಭಾರತವು ಅಂತಾರಾಷ್ಟ್ರೀಯ ನಿಯಮೋಲ್ಲಂಘನೆ ಮಾಡಿತೆಂದು ಪಾಕ್ ನಾಯಕರು ಬೊಬ್ಬಿಟ್ಟರೆ, ಅದನ್ನು ನಂಬುವವರಾರು? ಅಪರಾಧವನ್ನು ಮಾಡುತ್ತಿರುವಾಗಲೇ ಸಿಕ್ಕಿಬಿದ್ದ ಅಪರಾಧಿಯು ತನ್ನ ಸಂಭಾವಿತತನವನ್ನು ತೋರ್ಪಡಿಸಿದರೂ, ಅವನಲ್ಲಿ ಯಾರಾದರೂ ವಿಶ್ವಾಸವನ್ನಿರಿಸಿಯಾರೇ? ಹೀಗಾಗಿದೆ, ಪಾಕಿಸ್ತಾನದ ಸ್ಥಿತಿಯಿಂದು. ಕಾಶ್ಮೀರದ ವೇಲಿನ ಭಾರತದ ಹಕ್ಕು ಘಟನಾತ್ಮಕವಾಗಿ ನ್ಯಾಯಬದ್ಧವಾದುದು. ಇದನ್ನು ಎಲ್ಲರೂ ತಿಳಿದಿರಲಿ! ಸ್ವಲ್ಪವೂ ಲಜ್ಜೆಯಿಲ್ಲದೇ ಅಸಂಬದ್ಧ ಹೇಳಿಕೆಗಳನ್ನು ಪ್ರಲಾಪಿಸಿ, ಭಾರತದ ಅಪರಾಧವನ್ನು ಜಗತ್ತಿಗೆ ತಿಳಿಯಪಡಿಸಲೆತ್ನಿಸುತ್ತಿದ್ದಾರೆ ಪಾಕಿಸ್ತಾನದ ನೇತೃಗಳು ಆದರೆ ಪಾಕ್ ನಾಯಕರ ಈ ಯಕ್ಷ ದೇಶೋದ್ಧಾರದ ಕಾರ್ಯದಲ್ಲಿ ವಿನಿಯೋಗಿಸಲ್ಪಡಲಿಲ್ಲವಲ್ಲ, ಎಂಬುದೇ ಶೋಚನೀಯ ವಿಚಾರ ಇಂತಹ ಆಂಬದ್ಧ ಪ್ರಲಾಪಕ್ಕೆ ಸೈಗುಟ್ಟುವ ಪಾಶ್ಚಾತ್ಯರ ಧೋರಣೆ ಇನ್ನಷ್ಟು ವಿಷಾದನೀಯವಾದುದೆನ್ನದೇ ನಿರ್ವಾಹವಿಲ್ಲ,

ಹಜ್ಜೆ ಹಜ್ಜೆಗೂ ಪಾಕಿಸ್ತಾನದ ಅಪರಾಧ ಜಗತ್ತಿನ ಕಣ್ಣಾಂದೆ ಸುಳಿಯುತ್ತಿದ್ದರೂ, ಅದನ್ನಸ್ಪಷ್ಟವಾಗಿ ವಿರುದ್ಧವಾಗಿ ಪಾಶ್ಚಾತ್ಯರ ಪಾಕಿಸ್ತಾನಕ್ಕೆ ಬೆಂಬಲ ನೀಡುತ್ತಿದ್ದಾರೆ ಭಾರತದ ಮೇಲೆ ಸೇಡು ತೀರಿಸಿಕೊಳ್ಳುವುದೊಂದೇ ಇವರ ಉದ್ದೇಶ. ಇದನ್ನು ಸಾಧಿಸಲು ಅವರು ಹೊಂಚಿ ಕೊಂಡಿದ್ದಾರೆ. ಅವರೆ ಪಾಶ್ಚಾತ್ಯರಿಂದಲೇ ನೇಮಿಸಲ್ಪಟ್ಟ ಸ್ವೀಡನಿನ ಮಿ। ಗುನ್ನಾರ್ ಜಾರಿಂಗರು ತನ್ನ ವರದಿಯಲ್ಲಿ ಭಾರತದ ನ್ಯಾಯಪರತೆಯನ್ನೂ, ಪಾಕಿಸ್ತಾನದ ಆಕ್ರಮಣಕಾರಿ ಮನೋವೃತ್ತಿಯನ್ನೂ ಅನ್ಯಕ್ತವಾಗಿ ಸೂಚಿಸಿದ್ದಾರೆ. ಸೂಕ್ಷ್ಮಮತಿಗಳಾದ ಪಾಶ್ಚಾತ್ಯರಿದನ್ನು ತಿಳಿದಿ ಲಾರರೇ? ಖಂಡಿತವಾಗಿಯೂ ಅವರಿದನ್ನು ತಿಳಿದೇ ಇರುವರು. ಆದರೆ ಅಭಿವೃದ್ಧಿ ಹೊಂದುತ್ತಿರುವ ಭಾರತವನ್ನು ಕಂಡು ಅವರಿಗೆ ಅಸಹನೀಯವೆನಿಸಿದೆ. ಆದ ಕಾರಣ ಭಾರತದ ಮೇಲೆ ಸೇಡು ತೀರಿಸಿಕೊಳ್ಳಲು ಅವರು ಹಂಚಿ ಕೊಂಡಿದ್ದಾರೆ ಆದರೆ ಈ ಸೇಡು ತೀರಿಸಿಕೊಳ್ಳುವ ನು ನೋ.ವೃತ್ತಿ ಒಂದು ಸಮಸ್ಯೆಯ ನಿವಾರಣೆಗೆ ಸಹಾಯಕವಾಗದು, ನ್ಯಾಯಪರತೆ ಮಾತ್ರ ಸಹಕಾರಿ ಯಾಗುವುದೆಂದು ಪಾಶ್ಚಾತ್ಯರು ಮನಗಂಡಿರಲಿ! ವಸ್ತು ಸ್ಥಿತಿಯ ಅರಿವಿದ್ದರೂ, ಪಾಕಿಸ್ತಾನಕ್ಕೆ ಬೆಂಬಲವೀಯುವುದನ್ನಿಂದು ಪಾಶ್ಚಾತ್ಯರು ನಿಲ್ಲಿಸಿ ನ್ಯಾಯಕ್ಕೆ ತಲೆವಾಗಲಿ! ಕಾಶ್ಮೀರದ ವಿಚಾರದಲ್ಲಿ ಭಾರತದ ಧೋರಣೆಯು ಸತ್ವಯುತವಾಗಿಯೂ ಸತ್ಯ ಭರಿತವಾಗಿಯೂ ಇದೆ ಇದನ್ನು ಪಾಶ್ಚಾತ್ಯರು ಮಂಗಟ್ಟು ಪಡಿಸಿಕೊಳ್ಳುವುದವಶ್ಯ ಹಿಂದಿನಂತೆಯೇ ಇಂದೂ ಪಾಶ್ಚಾತ್ಯರು ತಪ್ಪು ಹಾದಿ ತುಳಿಯದಿರಲಿ! ಪಾಶ್ಚಾತ್ಯರ ನ್ಯಾಯಪರತೆಯೇ ಕಾಶ್ಮೀರ ಸಮಸ್ಯೆಯ ಯೋಗ್ಯ ತೀರ್ಮಾನಕ್ಕೆ ಸಹಾಯಕವಾಗುವುದು.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಪುಸ್ತ ಎಲ್ಲ ತರದ ಫಾರ್ಮುಗಳು, ಕುರಿಪುಂಡು ಪುಸ್ತಕ, ರಶೀದಿಗಳು, ಕೋರ್ಟ್‌ಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಜಾಲ್ತಿ ನಮೂನೆಯ ಜಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೆರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ನಮ್ಮ ಎಲ್ಲಾ ಗ್ರಾಹಕರಿಗೂ
ಹಿತಚಿಂತಕರಿಗೂ
ದೀಪಾವಳಿಯ
ಶುಭಾಶಯಗಳು.

"ಹೊಸವರ್ಷವು
ಸುಖಸಮೃದ್ಧಿದಾಯಕವಾಗಲಿ!"

U. HARI KAMATH,
Prop: S, R, BEEDI WORKS,
UDIPI, S. K.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು. **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್**, ಎಲ್. ಎಂ. ಎಸ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹಿರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

(೯ನೆಯ ಪುಟದಿಂದ)

ಶಕ್ತಿದರೆ ಆಶ್ಚರ್ಯಪಡಬೇಕಾಗಿಲ್ಲ.

ಈಗ, ಮಾನವ ನಿರ್ಮಿತ ಉಪಗ್ರಹಗಳನ್ನು ಹಾರಿಸುವುದು ಸಾಧ್ಯವೆಂದಾಯಿತು ಅಂತರಿಕ್ಷದಲ್ಲಿ ಅಲ್ಲಲ್ಲಿ ಪೂರ್ವಸಿದ್ಧ ವಸ್ತುಗಳಿಂದ ಸ್ಥಿರ ಕಟ್ಟಡಗಳನ್ನು ಸಹ ಸ್ಥಾಪಿಸುವುದು ಶಕ್ಯವಾಗಬಹುದು. ಈ ರಚನೆಗಳು ಅಂತರ್ಗ್ರಹ ಉಡ್ಡಾಣಕ್ಕೆ ನೆಲ ನಿಲ್ದಾಣಗಳಾಗಿ ಕೆಲಸ ಮಾಡಬಹುದು; ಜಗತ್ತನ್ನೇ ಆವರಿಸುವಂತಹ ಟೆಲಿವಿಜನ್ (ದೂರದರ್ಶಕ) ಹಾಗೂ ಆಕಾಶವಾಣಿ ಕೇಂದ್ರಗಳಾಗಿಯೂ ಕೆಲಸಮಾಡಬಹುದು.

ರಶಿಯನ್ನರು ರಚಿಸಿರುವ ಉಪಗ್ರಹಗಳು ಅತ್ಯಂತ ವೇಗದಿಂದ ಚಲಿಸುತ್ತಿವೆ. ಭೂಮಿಗೆ ಬಹಳ ಸಮೀಪದಲ್ಲಿರುವುದರಿಂದ ಆಕಾಶವಾಣಿ ಬಿತ್ತರಣೆಗೆ ನಿರುಪಯುಕ್ತವಾಗಿದೆ. ಆದರೆ, ಉಪಗ್ರಹವನ್ನು ೨೨,೦೦೦ ಮೈಲು ಎತ್ತರಕ್ಕೆ ತೂರಿದರೆ, ಅದು ಅಂತರಿಕ್ಷದಲ್ಲಿ ಸ್ಥಿರವಾಗಿ ಉಳಿಯುವುದು ಏಕೆಂದರೆ, ಆಗ ಪೃಥ್ವಿಯು ತನ್ನ ಮೈಸುತ್ತು ತಿರುಗುವ ಹೊತ್ತಿಗೆ, ಇದು ಪೃಥ್ವಿಯ ಸುತ್ತಲೂ ಒಂದೇ ಪದ್ರಕ್ಷಿಣೆ ಹಾಕುತ್ತದೆ ಹಾಗಾದಾಗ ಮಾತ್ರ ಅದು ಸ್ಥಿರ ಆಕಾಶವಾಣಿ ಕೇಂದ್ರವಾಗಬಹುದು. ಹೀಗೆ ಅಂತರಿಕ್ಷ ನಿಲ್ದಾಣಗಳು ಸ್ಥಾಪಿತವಾದ ಮೇಲೆ ನಮ್ಮ ಜೀವನ ಕ್ರಮವೇ ಬದಲಾಗುವುದು. ಹತ್ತು ಹನ್ನೆರಡು ಕೃತಕ ಚಂದ್ರರು ಕತ್ತಲಿರುವ ಪೃಥ್ವಿಯ ಪ್ರದೇಶದ ಮೇಲೆ ಬೆಳಕನ್ನು ಸಹ ಚೆಲ್ಲಲು ಸಮರ್ಥರಾಗಬಹುದು.

(ಹಿಂದುಸ್ತಾನ ಟೈಮ್ಸ್‌ದಿಂದ)

ದರ್ಶನ

೧

ಜಗುರು ಹೂಗನಸೊಂದು ಕಣ್ಣಮುರು
ಕುಣಿದಿತ್ತು
ತಾನಪ್ಪೊಂದೆದ್ದಿತ್ತು ಬಾನನಲ್ಲಿ
ತನ್ನ ತಾ ಮರೆತಿರಲು ಮನಕಣ್ಣ ಮುಚ್ಚಿ
ತಿಳಿಯಾಗಿ ಚಿಮ್ಮಿತ್ತು ಭಾವದೊಸರು ||

೨

ಕಡಲತಡಿಯಾ ಜ್ಯೋತಿ ದೇಹಿಗಳ ಬಳಗ
ತಮ್ಮತೆಗೆ ಕರೆಯುತಿದೆ ಕೈಯ ಬೀಸಿ
ಇಳೆಯೊಳಗಿನಾ ಸೆಳತ ಎಳೆಯುತಿರೆ ತನ್ನ
ಜೋಕಾಲಿಯಾಡುತಿದ ಜೀವ ತಾನು ||

೩

ಒಳಗಣ್ಣು ತೆರೆದಾಗ ಅಲ್ಲಿ ತಾ ಬಂದಿತ್ತು
ಆನಂದದೊಂದಾ ಪುಟಾಪೂರ.
ತೆರೆಗೈಯು ತಬ್ಬಿತ್ತು ಅಂತರಾಳವನಾಗ
ಸಚ್ಚಿದಾನಂದದಾ ದರ್ಶನದೊಳು ||

೪

ಹೊರಗಣ್ಣು ಬಿಟ್ಟಾಗ ತಂದ್ರಿಯಾವರಿಸಿತ್ತು
ಕಣ್ಣೆನೊಳು ಇಲ್ಲಿನಾ ಬೆಡಗು ನೋಡಿ
ಕರೆದಿತ್ತು ತನ್ನಯಾ ಗಾದಿಸೋದಿಯ ದೀರಿ
ಎದ್ದಿರಲು ಬಗೆಯೊಳಗೆ ಹಾಲಾಹಲ ||

೫

ಇಬ್ಬಗೆಯ ಕರೆಯಲ್ಲಿ ಕರ್ಣದೊಳು
ದನಿಗೊಳಲು
ವಿಶ್ವ ಚೈತನ್ಯದಾ ದನಿಮೂಡಿದತ್ತು
ನಿದ್ದೆಯಿಂದೆದ್ದು ಕಣ್ದೆರೆದು ನೋಡಿದೆನತ್ತ
ಹೊದ್ದಿದೆ ನವ್ಯೋದಯದ ಪೀತಾಂಬರ ||

ಶ್ರೀ ರಾಮ ಮೂರ್ತಿ.

ವಿಶ್ವದ ಟೆನ್ನಿಸ್ ಸ್ಪರ್ಧೆಯಲ್ಲಿ ಜಯಶೀಲೆಯಾದ ಆಲ್ಥಿಯಾ ಗಿಬ್ಸನಳಿಗೆ ಇಂಗ್ಲೆಂಡಿನ ರಾಣಿಯವರು ಜಯಶೀಲೆಯಾದುದಕ್ಕೆ ಕುರುಹನ್ನೀಯುತಿದ್ದಾರೆ. ಗಿಬ್ಸನಳ ಪಕ್ಕದಲ್ಲಿ ಆಕೆಯಿಂದ ಸೋಲಿಸಲ್ಪಟ್ಟ ಡಾರ್ಲಿನ್ ಹಾರ್ಡ್ ಇದ್ದಾಳೆ.

ದೀಪಳಿಗೆ

– ೧ –

ಭಾಗ್ಯದ ಲಕ್ಷ್ಮಿಯು ಬಾಗಿಲ ತೆರೆಯುತ-
ಬಂದಳು ಬಡವರ ಮನೆ ಮನೆಗೆ.
ಜನಮನ ಕೇಳಿತಿ ಅನಂದತಿಶಯ
ದೀಪಳಿಗೆಯ ದಿನದೀ ಒಸಗೆ!

– ೨ –

ಮಣ್ಣಿನ ಮಕ್ಕಳ ಮನೆಯನುಮನವನು
ಬೆಳಗುವ ಮಂಗಳ ಶುಭ ದಿನವು.
ಬೇನೆಯ ಬಾಳಿನ ಭಾಗ್ಯದ ಬಾಗಿಲು—
ತೆರೆದಿರೆ—ಜನಮನಕತಿಸುದವು!

– ೩ –

ದೀನರು ದುರ್ಬಲರಾಗಿಹರೆಲ್ಲರ
ನಗಿಸುವ ನಲಿಸುವ ಐಸಿರಿಯು!
ತನುಮನತಣಿಸುವ ಜೇತನ ಸ್ಫೂರ್ತಿಯು
ಬಾಳಿಗೆ ಬೆಂಬಲ—ಮುಂಬಲವು!

– ೪ –

ನೇಗಿಲಯೋಗಿಯ ಭಾಗ್ಯೋದಯವಿದು
ಉಂಡುಡುವಷ್ಟಿರೆ—ಏಂ ಭಯವು?
ಪ್ರಕೃತಿ ಮಾತೆಯ ಮಡಿಲಲೆ ದುಡಿಯುವ
ಆತನ ಜೀವನ ಸುಂದರವು.

– ೫ –

ನಾಡಿನ ಎಲ್ಲೆಡೆ ಮನೆಮನೆಯಲ್ಲೂ—
ಹರೋದ್ಗಾರವು ಕೇಳುತಿದೆ!
'ಕೃಷಿಋಷಿ'ಯೆನಿಸಿದ ರೈತನ ಮನೆಯಾ
ಮಂದಿಯು ಎದೆ—ಹಿರಿಹಿಗ್ಗುತಿದೆ!

– ೬ –

ಸುತ್ತಲು ಮುತ್ತಿದ ಕತ್ತಲೆ ಕತ್ತಲೆ
ಹರಿಯಿತು ದೀಪದ ಬೆಳಕಿನಲಿ!
ದೀಪಳಿಗೆಯ ಈ ಹೆಬ್ಬದ ಉಬ್ಬರ—
ದಂತಿಹ ಸುಖಸುದಿನವೆ ಬರಲಿ!

—ಕಡಂದಲೆ, ಜಯರಾಮ ಸೆಟ್ಟಿ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction Madras.

The Vijaya Bank, Ltd., Brahmavar

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬ್ರಹ್ಮಾವರ

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಶಾಖೆಯಿಂದ ಚಿನ್ನಾಭರಣ ಸಗಗಳ ಈಡಿನ ಮೇಲೆ ಪಡೆದ ಸಾಲವನ್ನೂ ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು ವ ಬಡ್ಡಿ ಯೊವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಸದ್ರಿಯವರು ಈಡಿಟ್ಟ ಸಗಗಳನ್ನು ಇದೇ ಬರುವ 14—11—1957ನೇ ಗುರುವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಯಾ ಬ್ಯಾಂಕಿಗೆಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಸುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿಸಿರಲಿ.

ಸಾಲದ ನಂಬ್ರ	ಹೆಸರು ಮತ್ತು ನಿವಾಸ	ಮೊಬಲಗು ಬಡ್ಡಿ ಸಮೇತ 30-9-57ರ ವರೆಗೆ Rs. N.P.
82/55	ಭಾಗೀರಥರಾಮ ಮಧ್ವಸ್ಥ, ರಗುನಾಥ ಮಧ್ವಸ್ಥರ ಮಗ ನೀಲಾವರ ಗ್ರಾಮ ಪೋಸ್ಟು ನೀಲಾವರ.	132=31
392/53	— do —	148=81
785/55	ಕೆ. ಮಾಬಲ ಮಧ್ವಸ್ಥ, ನರಸಿಂಹ ಮಧ್ವಸ್ಥರ ಮಗ ಬೈಕಾಡಿ ಗ್ರಾಮ ಪೋಸ್ಟು ಬೈಕಾಡಿ.	76=00
412/56	— do —	109=12
577/56	ಶೇಕ್ ಅಲ್ಲಿ ಸಹೇಬ, ಶೇಕ್ ಇಸ್ಮಾಯಿಲ್ ಸಹೇಬರ ಮಗ ಕಚ್ಚೂರು ಗ್ರಾಮ ಪೋಸ್ಟು ಬಾರ್ಕೂರು.	19=00
597/56	ಕುಶಲ ಸೆಟ್ಟಿ, ಸುಬ್ಬಣ್ಣ ಸೆಟ್ಟಿ ಆಳಿಯ, ಹಂದಾಡಿ ಗ್ರಾಮ ಬಂಡಾರಿ ಮನೆ ಪೋಸ್ಟು ಬ್ರಹ್ಮಾವರ.	62=56
657/56	ನಾಗಪ್ಪ ನಾಯ್ಕ, ಶಿವ ನಾಯ್ಕರ ಮಗ, ತೆಂಕಬೆಟ್ಟು ಹಂದಾಡಿ ಗ್ರಾಮ ಪೋಸ್ಟು ಬ್ರಹ್ಮಾವರ.	51=00
721/56	ಇಗ್ನೇಸಿಯಸ್ ವಾಸ್, ದುಮಿಂಗ್ ಫ್ರಾನ್ಸಿಸ್ ವಾಸರ ಮಗ ವಾರಂಬಳ್ಳಿ ಗ್ರಾಮ ಪೋಸ್ಟು ಬ್ರಹ್ಮಾವರ.	67=31
798/56	— do —	55=75
848/56	ಮಂಜಯ್ಯ ಸೆಟ್ಟಿ, ಸೂರ್ಯಣ್ಣ ಸೆಟ್ಟಿ ಆಳಿಯ, ನಡುಮನೆ ಹಂದಾಡಿ ಗ್ರಾಮ ಪೋಸ್ಟು ಬ್ರಹ್ಮಾವರ.	99=37

ಬ್ರಹ್ಮಾವರ
18-10-57

ಬಿ. ಭಾಸ್ಕರಸೆಟ್ಟಿ.
ಏಜಂಟ್.

BANGALORE MAKE BRAND NEW PRINTING MACHINES READY FOR SALE.

1. Crown Folio with power drive .... Rs. 1050/-
2. F/cape size with power drive .... Rs. 800/-
3. 1/4 size — Rs. 450/-

Contact with:

THE MYSORE TYPE FOUNDRY,
Letter Founders, Subedar Chatram Road,
(Opp: Himalaya Talkies) **BANGALORE-2.**

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ಇಂದೇ ವಿವರಗಳಿಗೆ ಬರೆಯಿರಿ.

ಯಕ್ಷಗಾನದ ಅಪೂರ್ವ ಕಲೆ

(ಆನೇ ಬುಟದಿಂದ)

ವನ್ನು ನೋಡಿದುದರ ಪರಿಣಾಮವಾಗಿ ನಮ್ಮಲ್ಲಿರುವ ಎಲ್ಲಾ ದುಶ್ಚಟಗಳೂ ಮಾಯವಾಗಲು ಸಾಧ್ಯವಿದೆ. ಪ್ರತಿಯೊಂದು ಭಾಗವನ್ನೂ ಇದ್ದಕ್ಕಿದ್ದಂತೆಯೇ ಅಡಿ ತೋರಿಸುವುದರಿಂದಲೇ ಇದು ಅಷ್ಟೊಂದು ಹೃದಯ ಸ್ಪರ್ಶಿಯಾಗಿದೆ. ಇದು ಬುದ್ಧಿಯನ್ನು ಮುಟ್ಟುವುದಕ್ಕಿಂತಲೂ ಹೆಚ್ಚಾಗಿ ಹೃದಯವನ್ನು ಮಿಟುಕುತ್ತದೆ!

ಸಾಹಿತ್ಯ ಸಂಗೀತಗಳೆರಡೂ ಸಮರಸದಿಂದ ಸಂಯೋಗ ಹೊಂದಿರುವ ಕಲೆಯೊಂದಿದ್ದರೆ ಅದು ಯಕ್ಷಗಾನವೆಂದು ನಾವು ಎದೆತಟ್ಟಿ ಹೇಳಬಹುದು. ಒಂದೇ ಮಾತಿನಲ್ಲಿ ಹೇಳುವುದಿದ್ದರೆ-ಶಿಲುರ್ವೇತ್ತಿ ಪಶುರ್ವೇತ್ತಿ, ವೇತ್ತಿಗಾನರಸಂ ಫಣಿ!' ಎಂದು ಹೊಗಳಲ್ಪಟ್ಟ ಸಂಗೀತದಿಂದ ಯಾವ ಪ್ರಯೋಜನಗಳಿವೆಯೋ, ಸಂಸ್ಕೃತಿಯ ಪ್ರತೀಕದಂತಿರುವ ಸಾಹಿತ್ಯದಿಂದ ಸಮಾಜಕ್ಕೆ ಸಲ್ಲುವ ಸೇವೆಗಳು ಯಾವುವೊ ಅವೆಲ್ಲಾ ಈ ಯಕ್ಷಗಾನ ಕಲೆಯಿಂದ ಜನತೆಗೆ ದೊರೆಯುವುದೆಂದು ಹೇಳಬಹುದು. ಏಕೆಂದರೆ ಮೇಲಂದಂತೆಯೇ ಸಂಗೀತ ಸಾಹಿತ್ಯಗಳೆರಡನ್ನೂ ಇದು ಒಳಗೊಂಡಿದೆ ಭಾಗವತನ ಸುಮಧುರ ಸಂಗೀತ ಎಂತಹ ವ್ಯಕ್ತಿಯನ್ನೂ ತನ್ಮಯನನ್ನಾಗಿ ಮಾಡಬಲ್ಲದು! ಕಷ್ಟ ಕಾರ್ಪಣ್ಯಗಳನ್ನು ಮರೆಯಿಸಿ ಹೃದಯದಲ್ಲಿ ಒಂದೇ ಬಾರಿಗೆ ಧರ್ಮದ ಬೀಜವನ್ನು ಬಿತ್ತಬಲ್ಲುದು! "ನ್ಯಾಯವೆ ತಮ್ಮನ ಸತಿಯ ಮುಟ್ಟುವುದು! ಹೇಯವಿದ್ದುದರಿಂದ ದೋಷ ತಟ್ಟಿದುದು" ಎಂಬ ಈ ಒಂದೇ ಒಂದು ಪದ್ಯವು ಎಂತಹ ಉದಾತ್ತ ಭಾವನೆಗಳನ್ನೊಳಗೊಂಡಿದೆ! ಇದರಲ್ಲಿ ನಾವಿರ ನಾವಿರ ಪುಟಗಳ ಗ್ರಂಥವನ್ನು ಬರೆಯಬಹುದಾದ ತತ್ವ ಅಡಕವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಸಂಗೀತ ಕಛೇರಿಯಲ್ಲಿ ನಡೆಯುವ ಸಂಗೀತಕ್ಕೂ ಯಕ್ಷಗಾನರಂಗ ಮಂಟಪದಲ್ಲಿ ಹೇಳುವ ಸಂಗೀತಕ್ಕೂ ತುಂಬ ವ್ಯತ್ಯಾಸವಿದೆ. ಕಛೇರಿಯಲ್ಲಿ ಕುಜ್ಜಾಗಿ ಕೀರ್ತನೆಗಳನ್ನೇ ಆಯ್ದು ಏರಿಳಿತಗಳಿಲ್ಲದೆ ಸಮಾಧಾನವಾಗಿ ಹಾಡುತ್ತಾರೆ. ಯಕ್ಷಗಾನದಲ್ಲಿ ಹಾಗಲ್ಲ, ಅದರಲ್ಲಿ ನವರಸಾಲಂಕಾರ ಭರಿತವಾದಪದ್ಯಗಳೇ ತುಂಬಿರುವುದರಿಂದ ಆಯಾಯ ರಸ ಭಾವ ಸಂದರ್ಭ ಸನ್ನಿವೇಶಗಳಿಗನುಗುಣವಾಗಿ ಹೇಳುವ ಸ್ವರದಲ್ಲಿ ಏರಿಳಿತಗಳಾಗಿಯೇ ಆಗುತ್ತದೆ ಅದು ಪರ್ವತ ಪ್ರವಾಹದಂತೆ ಒಂದೇ ಬಾರಿ ಕೆಳಗೆ ಧುಮುಕಲಾರದು. ಇದರಿಂದ ಪ್ರೇಕ್ಷಕರಿಗೆ ನವೋತ್ತೇಜನವುಂಟಾಗಿ ಅದನ್ನು ಕೇಳುವರೆ ಕುತೂಹಲ ಇಮ್ಮಡಿಸುತ್ತದೆ.

ಸಾಹಿತ್ಯ ರತ್ನಗಳಾದ 'ರಾಮಾಯಣ' ಮಹಾ ಭಾರತಗಳೇ ಕಥಾ ವಸ್ತುಗಳೆಂದು ಮೊದಲೇ ಹೇಳಿರುವೆನು. ಎಂದ ಮೇಲೆ ಇದರಲ್ಲಿ ಸಾಹಿತ್ಯವೂ ಅಡಕವಾಗಿದೆ ಎಂಬುದು ವಿದಿತವಾಗುತ್ತದೆ. ಪದ್ಯದ ಅರ್ಥವಾಗದಿದ್ದವರಿಗೆ ಅರ್ಥಧಾರಿಗಳ ಅರ್ಥ ವಿವರಣೆಯಿಂದಾಗಿ ಅದರ ಪರಿಯಾದ ಅರ್ಥವಾಗುತ್ತದೆ. ಅರ್ಥ ಹೇಳುವವರು ಮಾತ್ರ ಪಾತ್ರ ಗೌರವವನ್ನು ಕಾಯ್ದುಕೊಳ್ಳಬೇಕು. ಉದಾಹರಣೆಗಾಗಿ ಕರ್ಣಾರ್ಜುನರ ಕಾಳಗದಲ್ಲಿ ಕರ್ಣನ ಅರ್ಥ ಹೇಳುವವನು. ಕರ್ಣನ ಮನೋಸ್ಥಿತಿ, ದೇಹಸ್ಥಿತಿ-ಅವನಿತನ ಪರಿಸ್ಥಿತಿ ಇವುಗಳನ್ನು ಸರಿಯಾಗಿ ವಿವರಿಸಿ ಕರ್ಣನ ಮೇಲ್ಮೈಯನ್ನು ಕಾಣಿಸಿ ತನ್ಮೂಲಕ ಧರ್ಮದ ಮರ್ಮವನ್ನು ತೋರಿಸಿ ಜನರಿಂದ ತಲೆದೂಗಿಸಿಕೊಳ್ಳಬೇಕು.

ತಾಳವಾದ್ಯಗಳಿಗಳ್ಳಿ ಆಗಾಗ ವಾಗ್ವಾದಗಳೇಳುತ್ತದೆ. ಇವು ಅಗತ್ಯವೋ ಅನಗತ್ಯವೋ ಎಂಬುದು ಇಂದಿನ ಸಮಸ್ಯೆಗಳಲ್ಲಿ ಒಂದಾಗಿದೆ ರಸಭರಿತವಾದ ವಾದ ಯಕ್ಷಗಾನದಲ್ಲಿ ತೀರಾ ಅಗತ್ಯ ಎಂಬುದೇನ್ನ ವಾದ! 'ಭಾರತೆ' 'ರಾಮಾಯಣ'ಗಳು ಇಲ್ಲವೇ ಅವುಗಳಿಂದ ರಚಿಸಲ್ಪಟ್ಟ ಪ್ರಸಂಗಗಳೆಲ್ಲಾ 'ಸುಲಿದ ಬಾಳೆಯ ಹಣ್ಣಿನಂದದಿ' ಸುಲಭವಾಗಿಲ್ಲ. ಅವುಗಳಲ್ಲಿ ಕೆಲವು ಕಬ್ಬಿಣದ ಕಡಲೆಗಳಂತೆಯೂ ಇವೆ. ಹಾಗಿರುವಾಗ ಸ್ವಾಭಾವಿಕವಾಗಿಯೇ ಸಮಸ್ಯೆಗಳೇಳುತ್ತವೆ. ಕರ್ಣನು ಅಭಿಮನ್ಯುವಿನ ಕೈಯನ್ನು ಹಿಂದಿನಿಂದ ತುಂಡರಿಸಿದುದು ನ್ಯಾಯವೋ ಅನ್ಯಾಯವೋ? ದ್ರೋಣನನ್ನು ಕೊಂದರೀತಿ ತಪ್ಪೋ ಸರಿಯೊ? ಎಲೆಗೆ ಮರದ ಮರೆಯಿಂದ ಬಾಣವಿಟ್ಟುದು ಧರ್ಮವೊ ಅಧರ್ಮವೊ? ಎಂಬ ಜಟಿಲ ಸಮಸ್ಯೆಗಳು ಆಗಿಂದಾಗ ನಮ್ಮನ್ನು ಕಾಡುತ್ತಿವೆ. ಇದರಿಂದಾಗಿ ಜನತೆಗೆ ಸರಿಯಾದ ಧರ್ಮವನ್ನು ತಿಳಿಯಲು ಕಷ್ಟವಾಗುತ್ತದೆ. ಅದುದರಿಂದ ಇವುಗಳೆಲ್ಲವನ್ನೂ ಬಿಡಿಸಿ 'ತಾಯಿಗು ಹಾಲನ್ನವನ್ನು ಮಗುವಿಗೆ ಅನುಕೂಲವಾಗುವಂತೆ ಹೇಗೆ ಮಾಡಿಕೊಡುತ್ತಾಳೋ ಹಾಗಿಯೇ ನಮಗೆ ಅದರ ರಸಾಸ್ವಾದನೆಯನ್ನು ಮಾಡಲು ಅನುಕೂಲವಾಗುವಂತೆ ಮಾಡಿಕೊಡುವುದು ಅರ್ಥಧಾರಿಗಳ ಕೆಲಸ. ಆಗ ಸಹಜವಾಗಿಯೇ ವಾದಗಳೇಳಬಹುದು. ಮೂಸರನ್ನು ಕಡೆದರೆ ಮಾತ್ರ ಬೆಣ್ಣೆ ಬರಬಹುದಲ್ಲವೆ? ಅದೇ ರೀತಿಯಲ್ಲಿ ವಾದಗಳುಂಟಾದಾಗ ಮಾತ್ರ ಸತ್ಯ ತತ್ವಗಳು ಬೆಳಕನ್ನು ಕಾಣಬಹುದು. ಆದರೆ ಈ ಸಂದರ್ಭದಲ್ಲಿ ಅರ್ಥಧಾರಿಯು ಮಾತ್ರ ಸರ್ವಶಾಸ್ತ್ರ ವಿಶಾರದನಾಗಿ ಸಾಹಿತ್ಯದ ಆಳವಾದ ಅಭ್ಯಾಸ ಪೂರ್ಣವನಾಗಬೇಕು. ಅನನುಭವಿಗಳು ಇದಕ್ಕೆ ಕೈಯಿಕ್ಕಿದಾಗ ಮಾತ್ರ ಕಲೆಯು ಕೊಲೆಯಾಗುವ ಸಂಭವವಿದೆ

ಆದರೆ ಈ ವಾದಗಳು ಒಣಮಾದಳಾಗಿರಬಾರದು ಎಂಬುದು ಬಹಳ ಪ್ರಾಮುಖ್ಯವಾದ ವಿಷಯ. ವ್ಯಕ್ತಿಗತವಾದ ಟೀಕೆಗಳಿಂದ, ಅವಾಚ್ಯ ಶಬ್ದಗಳಿಂದೊಡಗೂಡಿದ ಹೊಲಸುವಾದ ಪವಿತ್ರವಾದ—ಸರಸ್ವತಿಯೇ ನರ್ತಿಸುತ್ತಿರುವ ಈ ರಂಗಭೂಮಿಗೆ ಬರಲೇಬಾರದು.

ಮೊದಲು ಕೇಳಿದಂತೆಯೇ ಯಕ್ಷಗಾನವು ಇಂದು ಹಳ್ಳಿಗರ ಒಂದು ಕಲೆಯಾಗಿ ಉಳಿಯದೆ ಇಡೀ ಕರ್ನಾಟಕದ ಒಂದು ಕಲೆಯೆನಿಸಿದೆ ಎಂಬ ಮಾತು ಸತ್ಯ. ಕುಲವಾರು ಮಹನೀಯರು ತಮ್ಮ ಕಷ್ಟಗಳನ್ನ ಕಡೆಗಣಿಸಿ ಈ ಕಲೆಗಾಗಿ ಇಡೀ ತಮ್ಮ ಜೀವಮಾನವನ್ನೇ ಸವೆಯಿಸುತ್ತಿದ್ದಾರೆ ಎಂಬುದು ಪ್ರಶಾಂಸಾರ್ಹವಾಗಿದೆ. ಕೆಲವರು ಹಳ್ಳಿಯ ಮೂಲೆ ಮೂಲೆಗಳಲ್ಲಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಯಕ್ಷಗಾನ ಮಂಡಳಗಳನ್ನು ಕಟ್ಟಿಕೊಂಡು ತಮ್ಮ ಕೈಯಿಂದಲೇ ಖರ್ಚುಮಾಡಿ ಈ ಕಲೋದ್ಧಾರಕ್ಕಾಗಿದುಡಿಯುತ್ತಿದ್ದಾರೆ ಅದರೆ ಮಾಡಲೇನು? ಸ್ವಾರ್ಥ ಸಂಕುಚಿತ ಮನೋಭಾವನೆಗಳುಳ್ಳ ಸಮಾಜದ ವಕ್ರದೃಷ್ಟಿ ಅವನಮೇಲೆಯೂ ಬಿದ್ದೇ ಬೀಳುತ್ತದೆ. ಕಲೆಯಮೇಲಣ ದ್ವೇಷದಿಂದಲ್ಲವಾದರೂ, ಆ ವ್ಯಕ್ತಿಯ ಮೇಲಣ—ಅವನಿಗೆ ದೊರೆಯುವ ಕೀರ್ತಿಯಮೇಲಣ ದ್ವೇಷ ಅಲ್ಲ ಅಸೂಯೆಯಿಂದ ಅವನನ್ನೂ ತನ್ಮೂಲಕ ಕಲೆಯನ್ನೂ ಹೀನೈಸುತ್ತಾರೆ. ಜನತೆಗೆ ಬೇಡವಾದ ವಸ್ತು ಯಾವುದೂ ಬಹುಕಾಲ ಬಾಳಲಾರದು. ಅಂತೆಯೇ ಈ ಕಲೆಯ ಪಾಡೂ ಆಗುತ್ತದೆ.

ತಮ್ಮ ಮಾತೇ ನಡೆಯಬೇಕು. ತಮಗೇ ದೊಡ್ಡ ಪಾತ್ರವು ದೊರೆಯಬೇಕು. ತಮ್ಮ ಮಾತಿಗೆಲ್ಲಾ ಜನ ತಲೆಯಲ್ಲಾಡಿಸಬೇಕು ಎಂಬ ಇನ್ನೊಂದು ವಿಧದ ಸ್ವಾರ್ಥದಿಂದ ಸಂಘಕಟ್ಟುವವರೂ ಕೆಲವರಿದ್ದಾರೆ. ಇಂಥವರು ಕಲೆಯ ಬೆಳವಣಿಗೆಗೆ ಕಂಟಕಿಗಳು, ಮಾತ್ರವಲ್ಲ ಇಡೀ ಸಮಾಜದ ಉನ್ನತಿಗೇ ಕಂಟಕಿಗಳು ಎಂಬುದು ನಿಶ್ಚಿಯ ಈ ಕಲೆಯಲ್ಲಿ ವ್ಯಕ್ತಿಯ ಪಾಂಡಿತ್ಯಗಳಿಗೆ ಮನ್ನಣೆ ದೊರೆಯಬೇಕೇ ವಿನಹ, ಹೆಮ್ಮೆ ಅಹಂಕಾರಗಳಿಗಾಗಲಿ, ಹಣ ದಾಲತ್ತುಗಳಿಗಾಗಲಿ ಎಂದಿಗೂ ಮಾನ್ಯತೆ ದೊರೆಯಬಾರದು. ನಿಜವಾದ ಯೋಗ್ಯ ಅರ್ಥಧಾರಿಯನ್ನು ಹಿಂದಿಟ್ಟು, ಇನ್ನೊಬ್ಬ ಅನನುಭವಿಕನ ಶ್ರೀಮಂತಿಕೆಗೆ ತಲೆಬಾಗಿ ಅವನಿಗೇ ದೊಡ್ಡ ಅರ್ಥಗಳನ್ನು ಕೊಡುವ ವ್ಯಕ್ತಿಪೂಜೆ ಇಂದಿಗೇ ನಿಲ್ಲಬೇಕು! ಕಲಾದೇವಿ ಕಲಾರಾಧಕನಿಗೆ ಮಾತ್ರ ಒಲಿಯುವಳು! ಎಂಬುದನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು.

ಇಷ್ಟು ಹೇಳಿದ ಮಾತ್ರಕ್ಕೆ ಯಕ್ಷಗಾನವು ಬಹಳ ನಿಕೃಷ್ಟವಸ್ಥೆಯಲ್ಲಿದೆ ಯೆಂದು ಯಾರೂ ಗ್ರಹಿಸಬಾರದು. ಇದು ಕೇವಲ ಒಂದುಕಡೆಯ ನೋಟ ಇನ್ನೊಂದೆಡೆ ದೃಷ್ಟಿಸಿದರೆ ಇದು ದಿನದಿಂದ ದಿನಕ್ಕೆ ಅಭಿವೃದ್ಧಿಯಾಗುತ್ತಾ ಉತ್ತಮ ಭವಿಷ್ಯವನ್ನು ಪಡೆಯುತ್ತಿದೆ. ಪದವೀಧರರೂ ದೊಡ್ಡ ದೊಡ್ಡ ವಿದ್ವಾಂಸರೂ ಇದರ ಏಳಿಗೆಗಾಗಿ ಪ್ರಯತ್ನಿಸುತ್ತಿದ್ದಾರೆ. ಆಗಾಗ ಅಲ್ಲಲ್ಲಿ ಕರ್ನಾಟಕದ ಹಿರಿಯ ಕಿರಿಯ ಅರ್ಥಧಾರಿಗಳ ಸಮ್ಮೇಳನದಿಂದ ಯಕ್ಷಗಾನಕೂಟಗಳು ಜರಗುತ್ತವೆ. ಹತ್ತಾರು ಮೇಳಗಳು (ಬಯಲಾಟಗಳು) ಈ ಕಲೆಯ ಸೇವೆಗಾಗಿ ಸಿದ್ಧವಾಗಿವೆ. ಸರಕಾರವೂ ಅಲ್ಪಸ್ವಲ್ಪ ಉತ್ತೇಜನವನ್ನೀಯುತ್ತಿದೆ

ಚಲಚ್ಚಿತ್ರಗಳ ಪ್ರದರ್ಶನದಿಂದಾಗಿ ಯಕ್ಷಗಾನದ ಬೆಲೆ ಕಡಮೆಯಾಗುತ್ತಿದೆ ಎಂದು ಹಲವೆಡೆಗಳಲ್ಲಿ ಗುಲ್ಲು ಕೇಳುತ್ತಿದೆ. ಅದರೆ ಆಳವಾಗಿ ಆಲೋಚಿಸಿದರೆ ನಾವೆಷ್ಟೊಂದು ಬೆದರಬೇಕಾದ ಅಗತ್ಯವಿಲ್ಲ. ಏಕೆಂದರೆ ಚಲಚ್ಚಿತ್ರಗಳನ್ನು ಪ್ರದರ್ಶಿಸಲು ತುಂಬಾ ಹಣದ ಅವಶ್ಯಕತೆಯಿರುವುದರಿಂದ ಅದು ಎಂದೂ ಹಳ್ಳಿಗಳಿಗಾಗಲಿ ಸಾಮಾನ್ಯ ಪಟ್ಟಣಗಳಿಗಾಗಲಿ ಬರುವ ಸೂಚನೆ ಕಂಡುಬರುವುದಿಲ್ಲ. ಮುಂದುವರಿದ ಬೇರೆ ದೇಶಗಳಲ್ಲಿ ನೋಡಿದುದಾದರೂ ಅಲ್ಲಿ ಪ್ರಾಚೀನ ಕಲೆಗಳೇನೂ ನಾಶಗೊಂಡಿಲ್ಲ. ಆದುದರಿಂದ ಆಧುನಿಕ ಸಾಧನಗಳಿಂದಾಗಿ ಯಕ್ಷಗಾನದ ಕಳೆ ಕುಂದಬಹುದೆಂದು ಧೈರ್ಯಗೆಡುವುದು ಅನಗತ್ಯ!

ಮುಖ್ಯವಾಗಿ ಯಕ್ಷಗಾನವು ಊರ್ಜಿತ ಸ್ಥಿತಿಗೆ ಮುಟ್ಟಬೇಕಾದರೆ ಕಲಾರಾಧಕರೆಲ್ಲರೂ 'ನಾವು ಒಂದು' ಎಂಬ ಭಾವನೆಯನ್ನು ತಾಳಬೇಕು. ತಮ್ಮ ತಮ್ಮಲ್ಲಿರುವ ವೈಮನಸ್ಸನ್ನು ತೊರೆದು ಬೇರೆ ಬೇರೆ ಪಕ್ಷಗಳನ್ನು ಕಟ್ಟಿಕೊಳ್ಳುವ ಹವ್ಯಾಸವನ್ನು ತೊರೆಯಬೇಕು! ನಾವೆಲ್ಲರೂ ಕನ್ನಡಮ್ಮನ ಕುವರರು, ಈ ಕಲೋದ್ಧಾರವೇ ನಮ್ಮ ಧ್ಯೇಯ ಎಂಬ ಒಮ್ಮನಸ್ಸಿನಿಂದ ಮುಡಿಯಲು ಮನವಾಡಬೇಕು.

'ಸಾಹಿತ್ಯವು ಸಂಸ್ಕೃತಿಯ ಪ್ರತಿಬಿಂಬ'! ಆದುದರಿಂದ ಹಿಂದಿನ ಸಂಸ್ಕೃತಿಯನ್ನು ಮಾತ್ರವಲ್ಲದೆ ಇಂದಿನ ಸಂಸ್ಕೃತಿಯನ್ನೂ ಜನರ ಮುಂದಿಡುವ 'ಯಕ್ಷಗಾನ ಪ್ರಸಂಗ'ಗಳನ್ನು ರಚಿಸಬೇಕು. ಅವು ಇಡೀ ರಾತ್ರಿ ಅಡಿ ತೋರಿಸಲು ಅನುಕೂಲವಾಗಿಂದೆ ಕೇವಲ ಮೂರು-ನಾಲ್ಕು ತಾಸುಗಳಲ್ಲಿ ಮುಗಿಯುವಂತಿರಬೇಕು.

ಸರಕಾರವು ಈಗಾಗಲೇ ಸಹಾಯವನ್ನು ನೀಡುವುದಿದ್ದರೂ ಈ ಕಲೆಗೆ ಇನ್ನೂ ಹೆಚ್ಚಿನ ಸಹಾಯ ಅಗತ್ಯವಿದೆ. ಸರಕಾರವು ಈ ಕಲೆಯ ಅಭಿವೃದ್ಧಿಗಾಗಿ ಧನಸಹಾಯವನ್ನು ಮಾಡಬೇಕು. ಕಲಾಪುತ್ರರಿಗೆ ಪ್ರೋತ್ಸಾಹವನ್ನು ನೀಡಬೇಕು. ಕರ್ನಾಟಕ ಪ್ರಾಂತದಲ್ಲಿ ಇದಕ್ಕೆ ಸುಭದ್ರವಾದ ಸ್ಥಾನವನ್ನೀಯಲೇಬೇಕು.

ನೂರಾರು ವರ್ಷಗಳಿಂದಲೂ ಕನ್ನಡ ಸೇವೆಯನ್ನು ಮಾಡುತ್ತಿರುವ ಈ ಕಲೆಗೆ ಸಂಪೂರ್ಣ ನೆರವನ್ನು ನಾವೆಲ್ಲರೂ ನೀಡಿ ಅದರ ಏಳಿಗೆಯನ್ನು ಹುರಿಗೊಳಿಸಬೇಕಾಗಿದೆ. ನಮ್ಮ ತನುಮನಧನ ಸಹಾಯವನ್ನು ಅದಕ್ಕಾಗಿ ಅರ್ಪಿಸಬೇಕಾಗಿದೆ. ಕನ್ನಡ ನಾಡಿನ, ಕನ್ನಡ ಭಾಷೆಯ, ಕನ್ನಡ ಜನತೆಯ, ಯಶೋಮಂದಿರವನ್ನು ದಿಗ್ದಿಗಂತಗಳಲ್ಲಿ ಮೊಳಗಿಸಿ, ಕನ್ನಡಮ್ಮನ ಮಸ್ತಕದಲ್ಲಿ ಸೆಯುವ ಮಕುಟದ ಮಣಿಯಂತೆ ಶೋಭಿಸುತ್ತಿರುವ ಈ ಕಲೆಯು ಇನ್ನೂ ಊರ್ಜಿತ ಸ್ಥಿತಿಗೆ ಬರುವಂತೆ ಮಾಡಲು ಹೃತ್ಪೂರ್ವಕವಾಗಿ ಕರ್ತವ್ಯೋನ್ಮುಖರಾಗೋಣ!

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣು ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂವಾದದಲ್ಲೆಲ್ಲ ಪ್ರತಿಯೊಂದು ದೃಶ್ಯದಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ..... ...ಶೈಲಿಯು ಚಲೋದಿದೆ"

—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: 0–4–0

ನವಭಾರತ ಪುಸ್ತಕ ಭಂಡಾರ, ಉಡುಪಿ.

೩೧ನೆ ಕನ್ನಡ ಸಾಹಿತ್ಯ ಸಮ್ಮೇಳನದ ಸಮಯಪ್ರಕಟಿಸಿದ "ತೌಳವನಾಡು"ಎಂಬ ಗ್ರಂಥದಲ್ಲಿ ರಾವ್ ಸಾಹೇಬ ರಂಗನಾಥ ಪೂಂಜರು ಭೂತಾರಾಧನೆಯ ವಿಷಯದಲ್ಲೊಂದು ಲೇಖನವನ್ನು ಬರೆದು, ಅದರಲ್ಲಿ "ಸುಮೇರಿಯನ್ ಸಂಸ್ಕೃತಿ ಅತಿ ಪುರಾತನವಾದುದೆಂದೂ ಅದು ದಕ್ಷಿಣ ಹಿಂದೂಸ್ಥಾನದಿಂದ ಮೆಸೆಪೊಟೇಮಿಯಕ್ಕೆ ಹೋಗಿ, ಅನೇಕ ಶತಮಾನಗಳ ವರೆಗೆ ಮೆರೆದು ಐಗುಪ್ತ, ಗ್ರೀಸ್ ಮೊದಲಾದ ದೇಶಗಳಲ್ಲಿ ರೂಪಾಂತರಗೊಂಡು ಬೆಳೆಯಿತೆಂದೂ ಸಿದ್ಧವಾಗಿದೆ. ಹೀಗೆ ಅನ್ಯ ದೇಶಗಳಿಗೂ ಹಬ್ಬಿ ಅಲ್ಲಿಯ ಜನರನ್ನು ಸುಧಾರಿಸಿ, ಕಾಲಾನುಕಾಲದಲ್ಲಿ ರೂಪಾಂತರಗೊಂಡರೂ ತನ್ನ ವಿಶಿಷ್ಟತೆಯನ್ನು ಕಳೆದುಕೊಳ್ಳದೆ ಇನ್ನೂ ಮೆರೆಯುತ್ತಿರುವ ಸಂಸ್ಕೃತಿಯಲ್ಲಿ ಏನೋ ಹುರುಳಿರಬೇಕೆಂಬ ವಿಶ್ವಾಸದಿಂದ, ಸದಭಿಪ್ರಾಯದಿಂದ ಅಂದಿನ ಸಂಸ್ಕೃತಿಯನ್ನು ಅದರ ತಳಹದಿಯಿಂದ ಭೂತಾರಾಧನೆಯನ್ನು ನಾವು ವಿವೇಚಿಸಬೇಕು' ಎಂದು ಬರೆದಿದ್ದಾರೆ.

ಈ ಮಾತುಗಳ ಮೇಲಿಂದ, ಭೂತಾರಾಧನೆಯು ದಕ್ಷಿಣ ಹಿಂದೂಸ್ತಾನದಿಂದ ಹೊರಟು ಸಮುದ್ರದಾಚೆಯ ಮೊಸೆಪೊಟೇಮಿಯದತ್ತ ಹಬ್ಬಿರಬೇಕೆಂದು ತಿಳಿಯುವುದು. ಈ ಭೂತಾರಾಧನೆಯು ಪ್ರಾಚೀನ ಸಾಂಪ್ರದಾಯವೆಂಬುದರಲ್ಲಿ ಸಂಶಯವಿಲ್ಲ. ಮೊದಲಿಗೆ ಅದು ದಮ್ಮ ಸಾಂಪ್ರದಾಯವೇ ಆಗಿತ್ತು. ಮತ್ತು ಇದರ ಹಬ್ಬಗೆಯು ಸುತ್ತಮುತ್ತಲೂ ಅದಕಾರಣ, ಆಯಾ ಎಡೆಗಳಲ್ಲಿ ಕೆಲವೊಂದು ಬದಲಾವಣೆಗಳು ಸಂಭವಿಸಿದುವು. ಆದುದರಿಂದ, ಅದರ ನಿಜವಾದ ಉತ್ಪತ್ತಿ ಸ್ಥಳಗಳನ್ನು ನಿರ್ಣಯಿಸುವುದು ಈಗ ಕಷ್ಟವಾಗಿದೆ.

ದಕ್ಷಿಣ ಕನ್ನಡ(ತುಳುನಾಡು)ದಲ್ಲಿಯ ಭೂತಗಳ ಗುಡಿಗಳ ವಿಷಯ ಶ್ರೀ ಪೂಂಜರು ಹೀಗೆ ಬರೆಯುತ್ತಾರೆ. "ಸುಮಾರು ೪ಗಜ ಉದ್ದ, ೩ ಗಜ ಅಗಲವಿರುವ ಒಂದು ಸಣ್ಣ ಕಟ್ಟಡವೇ ಅದರ ಸ್ಥಾನ. ಅದಕ್ಕೆ ಕಿಟಕಿಗಳಿಲ್ಲ. ಅದರ ಮೂಡು ಅಥವಾ ಪಡುಗಡೆಯ ಗೋಡೆಯಲ್ಲಿ ಅದಕ್ಕೊಂದು ಬಾಗಿಲಿದೆ. ಅದರಿದಿರಲ್ಲಿ ಎರಡು ಕಂಬಗಳ ಮೇಲೆ ಆಧರಿಸಿರುವ ಒಂದು ಮುಖಮಂಟಪವಿದೆ. ಆ ಕಟ್ಟಡದೊಳಗೆ ಒಂದು ತೂಗು ಮಂಚದ ಮೇಲೆ ಹಿತ್ತಾಳೆ ಕಂಚುಗಳ ಒಂದು ಪ್ರತಿಮೆಯಿದೆ. ಅದುಮನುಷ್ಯಾನಾಕಾರದ ಅಥವಾ ಹುಲಿ, ಹಂದಿ, ಕೋಣ ಇತ್ಯಾದಿ ಮೃಗಗಳ ಆಕಾರದಲ್ಲಿದೆ. ಆ ಪ್ರತಿಮೆಯ ಎಡಗಡೆಯಲ್ಲಿ ಒಂದು ಗಂಟೆಯೂ ಬಲಬದಿಯಲ್ಲಿ ಒಂದು ಕೂಜೆಯೂ ಇದೆ."

ಹಿಂದೂ ಗುಡಿಯಲ್ಲಿ ಇಂತಹ ವಸ್ತುಗಳು ವಿಲಕ್ಷಣವಾಗಿವೆ. ಹೊಸ ಸಂದರ್ಶಕನಿಗೆ ಅವುಗಳಲ್ಲಿ ಏನೊಂದು ಅರ್ಥವೂ ತಿಳಿದು ಬರುವುದಿಲ್ಲ. ಹಿಂದೂ ಜನರಲ್ಲಿ ಸಹ ಬಹಳಷ್ಟು ಜನರಿಗೆ ಈ ವಸ್ತುಗಳು ವಿಚಿತ್ರವಾಗಿ ಕಾಣಿಸುತ್ತವೆ. ಮತ್ತು ಈ ವೈಚಿತ್ರ್ಯದಿಂದಲೇ ಅವರ ಮನಸ್ಸಿನಲ್ಲಿ ಒಂದು ತರದ ಭೀತಿ ಹುಟ್ಟಿಕೊಳ್ಳುತ್ತದೆ. ಅವುಗಳಿಂದ ಅವರು ಮನಸ್ಸಿನಲ್ಲಿ ಇದು ಮನಸ್ಸಿಗೆ ಹೊಳೆಯದಷ್ಟು ಪ್ರಾಚೀನವಾಗಿರುವುದು ಎಂದು ಕಲ್ಪಿಸಿ ಕೊಳ್ಳುತ್ತಾರೆ.

ಭೂತಾರಾಧನೆ ಮತ್ತು ಕೇಲಮಾರಿ

ಶ್ರೀ. ಸೆವೆರಿನ್ ಸಿಲ್ವಾ

ತುಳುನಾಡಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂತಾರಾಧನೆಯೆಂದು ಅತಿಪ್ರಸಿದ್ಧಿಯಿಂದ ಕೈಗೊಳ್ಳುವ ಧಾರ್ಮಿಕಾಚರಣೆಯಾಗಿದೆ. ಈ ಸಂದರ್ಭದಲ್ಲಿ ಸಮ್ಮ ಭೂತದ ಗುಡಿಗಳಲ್ಲಿಟ್ಟು ಪೂಜಿಸುವ ಪ್ರತಿಮೆಗಳು, ಭೂತದ ಗುಡಿಯ ರಚನೆ ಮೊದಲಾದುವುಗಳಿಂದ ಮೈಸೂರಿನ ಕೇಲಮಾರಿಗೆ ಇದು ಹೋಲುತ್ತದೆ ಎಂದು ಶ್ರೀ ಸಿಲ್ವರು ತಮ್ಮ ಸಂಶೋಧನೆಗಳ ಆಧಾರದಿಂದ ಹೇಳಿದ್ದಾರೆ.

ಆದರೆ ಕೆಲ ಮಾನವವಂಶಶಾಸ್ತ್ರಸಂಶೋಧನೆಯಿಂದ ಈ ವಿಷಯದಲ್ಲಿ ನಮಗೆ ಕೆಲವು ನಿಶ್ಚಯಾತ್ಮಕಾನುಮಾನಗಳು ದೊರೆಯುತ್ತವೆ. ದಕ್ಷಿಣ ಹಿಂದುಸ್ತಾನದಲ್ಲೆಲ್ಲ ಮಾರಿ ಪೂಜೆಯು ಸರ್ವ ಸಾಮಾನ್ಯವಾಗಿತ್ತು. ಅದು ಪುರಾತನ ಸಾಂಪ್ರದಾಯ. ದಕ್ಷಿಣ ಹಿಂದುಸ್ತಾನದಲ್ಲಿಯಂತೂ ಬಹಳ ಪ್ರಾಚೀನ ಪದ್ಧತಿ. ಭಾಷಿಕ ಭೇದಗಳು ಹುಟ್ಟಿದಂದಿನಿಂದ ಇವು ಸಹ ಪ್ರಾಚೀನವೇ ಆದ ಕಾರಣ, ಪ್ರತಿಯೊಂದು ಭಾಷಾ ಪಂಗಡವೂ ಸರ್ವಮಾನ್ಯವಾದ ಈ ಮಾರಿ ಪೂಜೆಗೆ ಅಂಟಿಕೊಂಡಿತು. ಅದರೆ, ಪ್ರತಿಯೊಂದು ಪಂಗಡವೂ ತನ್ನದೇ ಆದ ಒಂದು ಪುರಾಣ ಕಥೆಯನ್ನು ಕಲ್ಪಿಸಿಕೊಂಡಿತು. ಮುಖ್ಯವಾದ ತತ್ವವು ತಿರುಳೂ ಎಲ್ಲ ಕಥೆಗಳಲ್ಲೂ ಒಂದೇ ಆಗಿತ್ತು. ಮಾರಿ ಪೂಜೆಯು ಹಳ್ಳಿಗಳಲ್ಲಿ ಆಚರಿಸಲ್ಪಡುತ್ತಿರುವ ಹೆಬ್ಬವಾಗಿದ್ದು ಹಳ್ಳಿಗರೆಲ್ಲರೂ ಅದರಲ್ಲಿ ಆಸ್ಥೆ ವಹಿಸುತ್ತಿದ್ದರು.

ಇಂತಹ ಮಾರಿಯಲ್ಲದೆ ಇತರ ಅಸಂಖ್ಯಾತ ದೇವತೆಗಳು ದಕ್ಷಿಣ ಹಿಂದುಸ್ತಾನದಲ್ಲಿದ್ದುವು. ಪ್ರತಿಯೊಂದು ಹಳ್ಳಿಗೂ ತನ್ನದೇ ಆದ ಕೆಲವು ದೇವತೆಗಳ ಸಮೂಹವಿತ್ತು. ಪ್ರತಿ ಸಮಾಜಕ್ಕೆ ಸಹ ಇಂತಹ ದೇವತೆಗಳಿದ್ದುವು. ಅಲ್ಲದೆ ಎಲ್ಲ ದೇವತೆಗೂ ತನ್ನದೇ ಆದ ಒಂದೊಂದು ಕಥೆಯಿರುವುದು.

ಇಂತಹ ಹಲವಾರು ದಂತ ಕಥೆಗಳಲ್ಲಿ ಮೈಸೂರಿನ ಒಂದು ಕಥೆಯನ್ನು ಪರಿಶೀಲಿಸುವ ಮೈಸೂರಲ್ಲಿ ಪ್ರಚಲಿತವಾಗಿರುವ ಪುರಾಣ ಕಥೆಯ ಪ್ರಕಾರ ಮಾರಿಗಳಲ್ಲಿ ಏಳುಜನ ಅಕ್ಕತಂಗಿಯರಿದ್ದಾರೆ. ಅವರ ಹೆಸರುಗಳು: ಬಿಸಿಲಮಾರಿ, ಗೂನಾಲಮಾರಿ, ಕೇಲಮಾರಿ, ಈರನಗೆರೆಮಾರಿ, ಹಾರದೇವತಾ, ಚಾಮುಂಡಮ್ಮ ಮತ್ತು ಉತ್ತನ್ನ ಹುಲಿಯಮ್ಮ.

ಈ ಹೆಸರುಗಳು ವಿವಿಧ ದೇವತೆಗಳನ್ನು ಅಕ್ಕತಂಗಿಯರಾಗಿ ಮಾರ್ಪಡಿಸಿದುದಲ್ಲದೆ ಬೇರೆಯಲ್ಲ. ನಾನಾ ಕಡೆಗಳಲ್ಲಿ ಈ ಅಕ್ಕತಂಗಿಯಂದಿರ ಬಗ್ಗೆ ಬೇರೆ ಬೇರೆ ಕಲ್ಪನೆಗಳಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಮಾರಿಯು ೨೧ ಜನ ತಮ್ಮಂದಿರು ಮತ್ತು ೨೧ ಜನ ತಂಗಿಯಂದಿರಲ್ಲಿ ಒಂದೆಂದು ತಿಳಿಯುತ್ತಾರೆ. ಇದು ಹಳ್ಳಿಯ ಎಲ್ಲಾ ದೇವತೆಗಳ ನಡುವೆ ಪರಸ್ಪರ ಸಂಬಂಧವನ್ನು ಕಲ್ಪಿಸಿಕೊಡಲು ನಡೆಸಿದ ಪ್ರಯತ್ನ ಎಂದು ತಿಳಿದುಕೊಳ್ಳಲು ಸಾಧ್ಯವಿದೆ.

ಮೈಸೂರಿನ ಮಾರಿಗಳನ್ನು ಶುದ್ಧವಾಗಿ ತಿಳಿದುಕೊಂಡರೆ, ಅವರು ಒಬ್ಬರಿಗೊಬ್ಬರು ಭಿನ್ನವೆಂದು ತೋರುತ್ತಾರೆ. ಬಿಸಿಲಮಾರಿ ಎಂದರೆ ಬಿಸಿಲಮ್ಮ, ಎಂದರೆ, ಸೂರ್ಯ ಬಿಸಿಲಮಾರಿ. ಕೇಲಮಾರಿ ಎಂದರೆ ಕೇಲಮ್ಮ. ಕೇಲ ಎಂದರೆ ಮಣ್ಣಿನ ದೊಡ್ಡಕೊಡ, ನೀರು ತುಂಬಿಸಲು ಉಪಯೋಗಿಸ ಮಡಿಗೆ ಎಂದು ಕಿಟ್ಟೆಲ್ ಅರ್ಥ ಬರೆದಿದ್ದಾರೆ. ಆಗ, ಕೇಲಮಾರಿ ಎಂದರೆ ಬೇಯಿಸುವ ಮಾತೃ ಎನ್ನಬಹುದು. ಅಥವಾ ನೀರು ತುಂಬಿಡುವ ಹರಿಗೆಯಿರಲೂ ಶಕ್ಯ. ಹುಲಿಯಮ್ಮ ಎಂದರೆ, ಹುಲಿಯೇ ಸರಿ. ಹುಲಿಗೆ ಸಹ ಪೂಜೆಯಿತ್ತು ಅದನ್ನೂ ದೇವತೆಯೆಂದು ಮಾಡಿದ್ದಾರೆ

ಹೀಗೆ ಇವರೆಲ್ಲರೂ ಒಂದೇ ಹಳ್ಳಿಯೊಳಗಿನ ದೇವತೆಗಳಾಗಿದ್ದಾರೆಂದು ತರ್ಕಿಸಬಹುದು. ಅದಕಾರಣ, ಅವುಗಳಲ್ಲಿ ಪರಸ್ಪರ ಸಂಬಂಧವನ್ನು ಜೋಡಿಸಲಾಗಿದೆ.

ಭೂತದ ಗುಡಿಗೆ ಕೇಲ ಎಂದು ಹೆಸರು. ತುಳುಭಾಷೆಯಲ್ಲಿ ಅದಕ್ಕೆ ಮಾಣಿಶೆರೆ ಕೇಲ (ಮಾಹಾರರ ಕೇಲ) ಎನ್ನುತ್ತಾರೆ. ಕೊಂಕಣಿಯಲ್ಲಿ ಮಾರಾಂಟೆ ಕೇಲ ಎನ್ನುತ್ತಾರೆ. ಇದು ಮೈಸೂರಿನ ಕೇಲಿ ಮಾರಿಯೇ ಸರಿ. ಈ ಕೇಲದೊಳಗೆ ತೂಗುವ ಕಟ್ಟೆಗೆಮಣೆಯ ಮೇಲೆ ಹಂದಿ, ಹುಲಿ, ಕೋಣ ಮೊದಲಾದ ಪ್ರತೀಕಗಳಿರುತ್ತವೆ. ಈ ತೂಗುವ ಮಣೆಯು ಮೈಸೂರಿನ ಮಣೆ ಮಂಚ ದೇವತೆಯ ಅ ಹುಲಿಯು ಮೈಸೂರಿನ ಉತ್ತನ್ನ ಹುಲಿಯಮ್ಮ. ಮಾರಿಯ ವಾಹನ ಕೋಣ. ಹಂದಿಯು ಮಾರಿ ಜಾತ್ರೆಯ ಹೊತ್ತಿಗೆ ಆಹುತಿ ಕೊಡುವ ಪ್ರಿಯವಾದ ಪ್ರಾಣಿ. ಮಂಚದ ಮೇಲೆ, ಅಕ್ಕಪಕ್ಕದಲ್ಲಿ ಗಂಟೆ ಮತ್ತು ಕೂಜೆಗಳಿರುತ್ತವೆಯಷ್ಟೆ? ಈ ಗಂಟೆಯು ಮೈಸೂರಿನ ಗಂಟೆಲಮ್ಮನ ಪ್ರತೀಕ. ಅವಳು ಗಂಟೆ ಬಾರಿಸುತ್ತಾ ಸುತ್ತಲೂ ಹೋಗುತ್ತಾಳೆ. ಕೂಜೆಯು ಕೇಲ ಮಾರಿಯ ಪ್ರತಿನಿಧಿ. ಈ ರೀತಿಯ ದೇವಾಲಯಗಳಲ್ಲಿ ಮೂಲ ಪೂಜಾರಿ ಹೊಲೆಯನೇ ಇರುತ್ತಿದ್ದನು. ತುಳು ಮತ್ತು ಹಳೆಗನ್ನಡದಲ್ಲಿ 'ಕೇಲ" ಎಂದರೆ ದೇವಸ್ಥಾನ. 'ಊರು ಕೇಲ" ಎಂದರೆ ಗ್ರಾಮ ದೇವಾಲಯ. ಇದು ತಮಿಳು ಶಬ್ದ. ಆ ಭಾಷೆಯಲ್ಲಿ ಕೌ ಅಂದರೆ ದೇವರು ಕೌಲ ಅಥವಾ ಕೇಲ ಎಂದರೆ ದೇವಸ್ಥಾನ.

ಹೀಗೆ, ತುಳುವರ ಭೂತಾರಾಧನೆಯು ಬೇರೇನೂ ಅಲ್ಲದೆ, ಮೈಸೂರಿಗರ ಮಾರಿ ಪೂಜೆ ಮತ್ತದರಲ್ಲಿ ಬಂದು ಕೂಡಿದ ಬೇರೆ ಕೆಲವು ದೇವತೆಗಳ ಪೂಜೆ. ಆದುದರಿಂದ ಈ ತುಳುವರ ಭೂತಾರಾಧನೆಯು ಮೈಸೂರಿನಿಂದ ಬಂದಿರಬಹುದು. ತುಳು ದೇಶವು ಅಳಿಯ ಕಟ್ಟಿನ ದೇಶವಾದುದರಿಂದ, ಇದು ಭೂಮಿತಾಯಿಯ ಆರಾಧನೆ ಆಗಿ ಮುಂದೆ, ಭೂತಾರಾಧನೆ ಎಂಬ ಹೆಸರು ರೂಢಿಗೆ ಬಂದಿರಬಹುದು.

ಪ್ರಾಚೀನ ಮಾರಿಪೂಜೆಯು ಮಾತೃ ಹಕ್ಕಿನ ಮತ್ತು ಪ್ರಕೃತಿ ಮೂಲ ಬಣಗಳ ಸಂಸ್ಕೃತಿಗಳ ಸಂಯೋಗ ಎಂದು ನಿಶ್ಚಯವಾಗಿ ನಿರ್ಧರಿಸಲಾಗಿದೆ ಪ್ರತಿಯೊಂದು ಹಳ್ಳಿಯಲ್ಲಿಯ ದೇವತೆಯು ಸ್ತ್ರೀ ದೇವತೆಯಾಗಿ ಕಾಣಿಸುತ್ತಾಳೆ. ಮಾತೃ ಹಕ್ಕಿನ ಪದ್ಧತಿಯಲ್ಲಿ ಸ್ತ್ರೀಯು ಪ್ರಧಾನವಾಗಿದ್ದು, ಪುರುಷನು ಆಕೆಗೆ ಅಧೀನವಾಗಿರುತಿದ್ದನು. ಹಂದಿ, ಕೋಣ ಅಥವಾ ಇತರ ಪಶುಗಳ ಪೂಜೆಯು ಇಂತಹ ಮಾತೃ ಹಕ್ಕಿನ ಸಂಸ್ಕೃತಿಯಲ್ಲಿ ಕಾಣಬರುವ ವೈಶಿಷ್ಟ್ಯಗಳು. ಕೃಷಿಕಾಲದಲ್ಲಿ ಮಾತೃ ವಾರೀಸು ಹಕ್ಕು ಇದ್ದ ಕಡೆಗೆ ಹಂದಿ ಸಾಕುವುದು ಬಹಳವಿತ್ತು. ಬಹಳ ಸ್ಥಳಗಳು ಈ ಹಂದಿ ಸಾಕುವ ಕಾರಣದಿಂದ ಮುಂಚೆಬಂದಿವೆ ಉದಾಹರಣೆಗಾಗಿ ಹೇಳುವುದಾದರೆ, ಹಂದಿಗೋಣ, ಹಂದಿಮುಡಿ, ಹಂದಿಕುರ ಮೊದಲಾದುವನ್ನು ಹೆಸರಿಸಬಹುದು.

ಜಾದು,ಮಾಟ ಮತ್ತು ಐಂದ್ರಜಾಲಿಕರು. ಪ್ರಕೃತಿಮೂಲ ಜಾತಿಗಳಲ್ಲಿ ಶಾಸ್ತ್ರೀಯ ಪ್ರಗತಿಯನ್ನು ಕಂಡಿದ್ದಾರೆ. ಜಾದುವನ್ನು ಬರೇ ಶಿಕಾರಿಯಲ್ಲಿ ಯಾಯುದ್ಧಭೂಮಿಯಲ್ಲಿ ಜಯಸಿಗಬೇಕಾಗುವಲ್ಲಿಯೂ ಉಪಯೋಗಿಸದೆ, ರೋಗಗ್ರಸ್ಥರನ್ನು ನೀರೋಗಿಗಳಾಗಿಸುವಲ್ಲಿ, ಶತ್ರುಗಳನ್ನು ದುಃಖಾಪತ್ತುಗಳನ್ನು ನಾಶಮಾಡುವಲ್ಲಿ, ಪ್ರೇಮ ಸಂಪಾದನೆಯಲ್ಲಿ ಮತ್ತು ದೈನಂದಿನ ಜೀವನದಲ್ಲಿ ಸಹ ಉಪಯೋಗಿಸುತ್ತಾರೆ—ಇದು ಪ್ರಕೃತಿ ಮೂಲ ಸಂಸ್ಕೃತಿಯಲ್ಲಿ ನಮಗೆ ಕಂಡುಬರುವುದು. ಸೂರ್ಯದೇವನಿಗೆ ಹೋಲುವ ತತ್ವಗಳಲ್ಲಿ ಒಂದು ಮಹಾನ್ ದೇವರಲ್ಲಿ ವಿಶ್ವಾಸ. ಇದು ವಿಶಿಷ್ಟ ಸೂರ್ಯಪುರಾಣವೊಂದರಿಂದ ಬಲಗೊಂಡಿದೆ. ಹೀಗಾಗಿ ಈ ಪ್ರಕೃತಿ ಮೂಲ ಧರ್ಮವು ಉಚ್ಚ ಕರ್ಮದ ಸುಧಾರಿಸಿದ ಸೂರ್ಯ ಸಂಸ್ಕೃತಿಯದಾಗಿದ್ದು ಅಮರತ್ವವನ್ನು ಹವಣಿಸುವ ಹಾಗೂ ಜಾದು ಮತ್ತು ಪಾರಲೌಕಿಕವಿಚಾರ ಮಾಡುವಂಥದ್ದಾಗಿದೆ.

ಇವೆಲ್ಲ ಭೂತಾರಾಧನೆಯಲ್ಲಿಯೂ ಮತ್ತು ಮೈಸೂರಿನ ಮಾರಿಯಲ್ಲಿಯೂ ಸಮಾನವಾಗಿದ್ದುದು ಕಂಡುಬರುತ್ತದೆ.

(೨೦ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಭಾರತದಲ್ಲಿ ಸಂಘೀಕರಿಸಲ್ಪಟ್ಟಿದೆ: ಮೆಂಬರರ ಹೊಣೆ ಮಿತೀಕರಿಸಲ್ಪಟ್ಟಿದೆ)

ಟೆಲಿಫೋನ್ ನಂ. 114] ಹೆಡ್ ಆಫೀಸು: ಮಂಗಳೂರು, ದ. ಭಾರತ. [ಪೋಸ್ಟ್ ಬಾಕ್ಸ್ ನಂಬ್ರ 113

ವರ್ಷಕ್ಕೆ ಶೇಕಡಾ 7½ ದರಕ್ಕೆ ನೂರದ ಬಡ್ಡಿಯಲ್ಲಿ ಬಂಗಾರ ಮತ್ತು ಬಂಗಾರದ ಆಭರಣಗಳ ಮೇಲೆ ಸಾಲ ಕೊಡಲಾಗುವುದು.

THE KARNATAKA BANK LIMITED

ಪಾಲಿನೇಶ್ಯಾದ ಜನರು

(೬ನೇ ಪುಟದಿಂದ)

ಮಲ್ಕಳ ಕತೆಗಳಲ್ಲೂ ಪರಿಚಿತವಾಗಿವೆ. ಜೇಮ್ಸ್ ಕುಕ್ಕನ ತರುವಾಯ ಇನ್ನಿತರ ನಾವಿಕರೂ ವಿಜ್ಞಾನಿಗಳೂ. ಇತಿಹಾಸಕಾರರೂ ಪರಿಶೀಲಿಸಿದನಂತರ ಈ ಪಾಲಿನೇಶ್ಯಾ ಜನರೆಲ್ಲ ಶಿಲಾ ಶಿಲ್ಪದಲ್ಲಿ ನುರಿತ ಪುರಾತನ ಭಾರತೀಯರೆಂದು ತಿಳಿದು ಬಂದಿದೆ.

ಭಾರತ ಭೂಮಿಗೆ ಸುಮಾರು ನಾಲ್ಕು ಸಾವಿರ ಮೈಲಿಗಳಾಚೆ ಪಾಲಿನೇಶ್ಯಾ ದ್ವೀಪಸ್ತೋಮಗಳಿವೆ. ೧೭೦ರಿಂದ ೧೧೦ ಡಿಗ್ರಿ ಪಶ್ಚಿಮ ರೇಖಾಂಶಗಳ ತನಕ ಇವು ಹಬ್ಬಿವೆ ಭೂಮಧ್ಯ ರೇಖೆಯಿಂದ ಕರ್ಕಾಟಕ ಮತ್ತು ಮಕರ ಸಂಕ್ರಾತಿ ವೃತ್ತಗಳ ತನಕ ಇವು ಕವಿಕೊಂಡಿರುವುದರಿಂದ ಇಲ್ಲಿನ ವಾಯುಗುಣ ಉಷ್ಣ ಪ್ರಧಾನವಾದರೂ ಸಾಗರಿಕವಾಗಿ ಸಮಧಾತುವಾಗಿದೆ.

ಪಾಲಿನೇಶ್ಯಾ ಜನರು ನ್ಯೂಜಿಲ್ಯಾಂಡ್, ಹವೈ. ಮಾರ್ಕ್ವಿಸಾಸ್ ಟೊಂಗಾ, ಸಾಮೋವಾ ದ್ವೀಪಾಂತರಗಳಲ್ಲಿದ್ದಾರೆ. ಇವರು ಕಟ್ಟಿರುವ ಕಲ್ಲಿನ ದಿಬ್ಬಗಳಿಂದ ಇವರೆಲ್ಲ ಶಿಲಾಶಿಲ್ಪದಲ್ಲಿ ನುರಿತವರೆಂದೂ, ಇವರ ದೇವರು, ಪೂಜೆ, ಪುರಸ್ಕಾರ ಹಿರಿಯರ ಪೂಜೆ, ಪರಲೋಕದಲ್ಲಿ ನಂಬಿಕೆ ಮುಂತಾದುವುಗಳನ್ನು ಪರಿಶೀಲಿಸಿದರೆ ಇವರೆಲ್ಲ ನೂರಾರು ವರ್ಷಗಳ ಹಿಂದೆ ಭಾರತದ ಪೂರ್ವ ದ್ವೀಪಗಳಿಂದ ಜಾವಾ ದ್ವೀಪಕ್ಕೆ ಬಂದು ಅಲ್ಲಿಂದ ತನ್ಮ ಪಣ್ಣ ಪಣ್ಣ ದೋಣಿಗಳಲ್ಲೇ ಸಹಸ್ರಾರು ಮೈಲಿಗಳ ತನಕ ದ್ವೀಪದಿಂದ ದ್ವೀಪಕ್ಕೆ ತಿರಗುತ್ತಾ ಹೋಗಿರಬಹುದೆಂದು ಮನವರಿಕೆಯಾಗುತ್ತದೆ. ಇಂಥಾ ಎಲ್ಲಿನ ದಿಬ್ಬಗಳು ಈಜಿಪ್ಟಿನಲ್ಲೂ ಜಾವಾದಲ್ಲೂ ಅಸ್ಸಾಮು, ಕಾಂಬೋಡಿಯಾ, ಕೆರೋಲಿನ್, ಲಾಡ್ರೋನ್, ದ್ವೀಪಗಳಲ್ಲೂ ದಕ್ಷಿಣ ಮತ್ತು ಮಧ್ಯ ಅಮೆರಿಕಗಳಲ್ಲೂ ಇರುವುದರಿಂದ ಈ ಪೂರ್ವ ಭಾರತೀಯರು ಬೇರೊಂದು ಸಂಸ್ಕೃತಿಯ ಸಂಪರ್ಕ ಹೊಂದಿರಬಹುದೆಂದು ಅರಿವಾಗುತ್ತದೆ. ಸಣ್ಣ ಸಣ್ಣ ನೌಕೆಗಳಲ್ಲಿ ತಿರುಗುವವರಾದರೂ ಇವರೆಲ್ಲ ಧಟ್ಟಿಕೀರರಾಗಿ ಸಾವಿರ ಎರಡು ಸಾವಿರ ಮೈಲಿಗಳ ತನಕ ಯಾನ ಮಾಡಿ ಒರತ್ತಿದ್ದರೆಂದೂ ತಿಳಿದು ಬರುತ್ತದೆ

ಈ ಜನಕ್ಕೆ ಒಟ್ಟಾಗಿ ಪಾಲಿನೇಶ್ಯಾ ಜನರೆಂದು ಹೆಸರು ಇವರಲ್ಲಿ ಮುಖ್ಯ ಪಂಗಡಗಳೇ ಮೆಯೋರೀ ಮತ್ತು ಸಾಮೋವಾ ಇವರ ಎತ್ತರ ಸಾಧಾರಣ. ಕೂದಲು, ಕಪ್ಪು, ಕಣ್ಣು ಮೋಹಕವಾದ ಕಪ್ಪು, ಇವರೆಲ್ಲ ಬಿಳಿಬಣ್ಣದ ರೂಪವಂತರು. ಇವರು ಪ್ರಕೃತಿ ಪ್ರಿಯರು. ಶುಭ್ರವಂತರು ಸದಾ ಭಾವಾವೇಶಸೂರಂತರು. ಬಟ್ಟೆ ಬರೆಯಲ್ಲಿ ಸರಳ. ಸಾಗರ ಸ್ನಾನದಲ್ಲಿ ಪ್ರೀಯರು ಕಂಪಿನ ಕೊಬರಿ ಎಣ್ಣೆ ತಿಕ್ಕಿ ಇವರ ಮೈ ಸದಾ ಥಳಥಳಿಸುತ್ತಿರುತ್ತವೆ. ಇವರ ಮನೆಗಳೆಲ್ಲ ಸಮುದ್ರಕ್ಕೆ ಸಮೀಪ. ಮನೆಗೆ ಮೇಲ್ ಭಾವಣಿ ಮಾತ್ರ ಭದ್ರ. ಗೋಡೆಗಳಲ್ಲದ ಮನೆಗಳೇ ಹೆಚ್ಚು. ಈ ಸುಂದರ ರೂಪಿಗಳು ಮಾತಿನ ಮಲ್ಲರು. ಇವರ ಭಾಷೆಯಲ್ಲಿ ಸ್ವರಗಳೇ ಮಿಗಿಲಾದ್ದರಿಂದ ಮಾತಿನ ಹೊಳೆಯನ್ನೇ ಹರಿಯಿಸಿ ಬಿಡುತ್ತಾರೆ

ಈ ಪಾಲಿನೇಶ್ಯಾ ದ್ವೀಪಗಳವರಿಗೆ ತಮ್ಮ ಹಿರಿಯರಲ್ಲಿ ತುಂಬಾ ಗೌರವ. ಪರಲೋಕದಲ್ಲಿರುವವರಾಗಲೀ ಇಹಲೋಕದಲ್ಲಿರುವವರಾಗಲೀ ಅವರನ್ನು ಕಂಡರೆ, ಬಹು ಗೌರವ. ಇವರ ಸಾಗರ ದೇವರಿಗೆ "ತಂಗರೋವಾ"-(ಅಂದರೆ ನಮ್ಮ ವರುಣನಿಗೆ ಸಮ)-ಎಂದು ಕರೆದು ಸೂರ್ಯನಿಗೆ "ರಾ" ಮತ್ತು ಪರಮೇಶ್ವರನಿಗೆ "ಇಟಿ" ಎಂದು ಹೆಸರು, ಇವು ರವಿಗೂ ಶಿವನಿಗೂ ಸಮನಿರಬಹುದು. ಇವರ ಹಿರಿಯರೆಲ್ಲ ಪಶ್ಚಿಮದಲ್ಲಿ ಎದ ಭಾರತದ ಕಡೆಗೆ ಹಾರಿಹೋಗುತ್ತಾರಂತೆ. ನಿತ್ಯಬಳಕೆಯ ಕಾರ್ಯಗಳಿಗೆಲ್ಲ ದೇವರುಗಳಿದ್ದರೆ, ಮತ್ತು ಸುಂದರವಾದ, ವಿಚಿತ್ರವಾದ, ಅದ್ಭುತವಾದ ಮರ, ಕಲ್ಲು, ಪ್ರಾಣಿ, ಹೊಳೆಗೆಲ್ಲ ದೇವತೆಗಳಿದ್ದಾರೆಂದು ನಂಬಿ ಹಣ್ಣು, ಹಂದಿ, ಮನುಷ್ಯ ದೇಹಗಳನ್ನೂ ಪ್ರಿಸಿ ಪೂಜೆಯೊಪ್ಪಿಸುತ್ತಾರೆ ಇವರ ದೇವರಾದ ತಂಗರೋವಾನ ವಿಗ್ರಹವೊಂದು ಬ್ರಿಟಿಷ್ ಮ್ಯೂಸಿಯಂನಲ್ಲಿದೆ. ಇವರ ಮುಖ್ಯ ದೇವರೇ ಸೂರ್ಯ. ಈ ಸೂರ್ಯಾರಾಧನೆ ಭಾರತದಿಂದ ಅಲ್ಲಿಗೆ ಹರಿದುಕೊಂಡಿರಬಹುದು. ದೇವತೆಗಳೆಲ್ಲ ಪರಲೋಕದಲ್ಲಿದ್ದಾರೆ. ಸತ್ತು ಅತ್ತಕಡೆ ಹೋಗಿರುವ ಹಿರಿಯರ ಮೂಲಕ ದೇವತೆಗಳನ್ನೂ ಆಹ್ವಾನಿಸಬಹುದೆಂದು ಅವರ ನಂಬಿಕೆ.

ನಾಯಕನ ಸ್ಥಾನ ಹಕ್ಕುದಾದಿ ಹಿರಿಯರಿಗೆ ಮೀಸಲು. ಗಂಡಸರು ಮತ್ತು ಹೆಂಗಸರಿಗೆ ವಯಸ್ಸಿನ ಪ್ರಕಾರ ಮಾನ ಮರ್ಯಾದೆ. ಗುಂಪಿನ ನಾಯಕನು ಪೂಜಾರಿಯ ಮೂಲಕ ದೇವತೆಗಳನ್ನು ಒಲಿಸಿಕೊಂಡಿರುತ್ತಾನೆ. ನಾಯಕನ ವಾಣಿಯೇ ದೈವವಾಣಿ. ಜನನಾಯಕನ ನಂತರ ನೆಲ ನಾಯಕರಿಗೆ ಸನ್ಮಾನ ಅನಂತರ ಕುಶಲ ಕೆಲಸಗಾರರಿಗೆ ಮತ್ತು ವ್ಯಾಪಾರಿಗಳಿಗೆ. ಯುದ್ಧ ಮುಂತಾದ ಸಂದರ್ಭಗಳಲ್ಲಿ ಸಭೆನಡೆಸಿ, ಬುದ್ಧಿವಂತರಿಂದ ಸಲಹೆ ಪಡೆಯುತ್ತಾರೆ ಸತ್ತವರಿಗಾಗಿ ದಿಬ್ಬಗಳೂ, ದೇವರುಗಳಿಗಾಗಿ ವಿಗ್ರಹಗಳೂ ಹೇರಳವಾಗಿವೆ ಸತ್ತವರ ದೇಹಗಳನ್ನು ಹಿಂದಿನಕಾಲದಲ್ಲಿ ಮಮ್ಮಿಮಾಡಿ ಗುಹೆಗಳಲ್ಲಿಡುತ್ತಿದ್ದರು. ಈಗಲೂ ಹೆಬ್ಬ ಹಿರಿದಿನಗಳಲ್ಲಿ ಸಭೆಸೇರಿದಾಗ "ಕಾವಾ" ಬೇವಿನ ರಸವನ್ನು ಕುಡಿಯುತ್ತಾರೆ. ಅದರಿಂದ ಆವೇಶಪೂರಿತರಾಗುತ್ತಾರೆ ಆ ಜನ.

ಜೇಮ್ಸ್ ಕುಕ್ಕನು ೧೭೯೯ರಲ್ಲಿ ಈ ಜನರನಡುವೆ ಇದ್ದಾಗ್ಗೆ ಈ ಪಾಲಿನೇಶ್ಯಾ ಜನರೆಲ್ಲ ಸಂದರ್ಭೋಚಿತವಾಗಿ ಧೈರ್ಯ ಸಾಹಸಿಗಳಾದರೂ, ನಿತ್ಯಜೀವನದಲ್ಲಿ ವಿಷಯಲೋಲುಪರೂ, ಸೋಮಾರಿಗಳೂ ಆಗಿದ್ದರು. ಫೀಜಿ, ಸೋಲೊಮನ್, ನ್ಯೂ ಹೆಬ್ರಿಡಿಸ್. ಲಾಯಲ್ಟಿಗ್ರೂಪ್, ಟೋಂಗಾ, ಸಾಮೋವಾ ದ್ವೀಪದವರೆಲ್ಲ ಸಾಗರ ಪ್ರಿಯರೂ, ಶುಚಿವಂತರೂ, ಶಿಲಾ ಶಿಲ್ಪ ಕುಶಲಿಗರೂ, ಯುದ್ಧಾಸಕ್ತರೂ, ಶ್ರದ್ಧಾವಂತರೂ, ಸೂರ್ಯಪೂಜಕರೂ ಆಗಿದ್ದರು. ಆಗ ಸುಮಾರು ೧೫೦ ದ್ವೀಪಗಳಲ್ಲಿ ೨೦೦೦೦ ಜನರಾಗಿ ಇವರು ಹರಡಿದ್ದರು.

ಇವರ ಭಾಷೆಯಲ್ಲಿ ಮಲೆನೇಶ್ಯನ್, ಪೈಕ್ರೊನೇಶ್ಯನ್ ಇಂಡೋನೇಶ್ಯನ್, ಸಾಮೋವಾ, ಮೋಯೋರೀ, ಟಾಹಿಟಿಯನ್, ಟೋಂಗನ್, ಮ್ಯಾಂಗರೋವನ್, ನಾಕುಹೀವನ್, ಪಾಮೋಟೋ ಮೊದಲದ ಕಿರು ಭಾಷಾಪಂಗಡಗಳಿವೆ. ಈ ಭಾಷೆಗಳಿಗೆಲ್ಲ ಮೂಲ ಇಂಡೋನೇಶ್ಯನ್ ಇದ್ದರೂ, ಫ್ರೆಂಚ್ ಇಂಗ್ಲಿಷ್ ಮೊದಲಾದ ಭಾಷೆಗಳೂ ಬೆರೆತ ವಾಗಿವೆ. ಈ ಭಾಷೆಗಳಿಗೆಲ್ಲ ಸ್ವರಗಳೇ ಹೆಚ್ಚು ವ್ಯಂಜನಗಳು ಕಡಿಮೆ. ಅ, ಆ, ಇ ಈ, ಒ ಓ, ಉ ಊ ಮುಂತಾಗಿ ಸ್ವರಗುಣ. ಕ್, ಟ, ಸ, ಸ, ಲ, ಣ, ನಮ ಎಂಬೆನೇ ವ್ಯಂಜನಗಳು ಭಾಷೆಯಿಂದ ಭಾಷೆಗೆ ಸಕ್ಕಹ, ಲಕ್ಕೆವ, ಪಕ್ಕೆವ, ಟಿಕ್ಕೆಕ ಮುಂತಾದುವು ಬದಲಾಯಿಸುತ್ತವೆ. ಇಂಗ್ಲೀಷಿನ ಕ್ವಾರ್ಟರ್—ಟಾವಾಟಿ ಆಗದೆ, ಡಾಕ್ಟರ್ ಟಾವಟಿ ಆಗಿದೆ ಕಾಹುನಾ=ಪುರೋಹಿತ, ರೊಪ= ಮಂತ್ರ, ಹೀರೆ ಹೀರೆ=ತಿರುಗಾಟ, ವಾರು ವಾರು = ಹರಟೆ, ಟಾಪು = ನಾಯಕ, ಆರಿಕಾಗು, ಟಾಂಟಿ= ಮನುಷ್ಯ, ಮಹನೆ= ಹೆಂಗುಸು—ಈ ಭಾಷೆಗಳಲ್ಲಿ ಏಕವಚನಕ್ಕೂ ಬಹುವಚನಕ್ಕೂ ವ್ಯತ್ಯಾಸವಿಲ್ಲ. ವಿಭಕ್ತಿ ಪ್ರತ್ಯಯಗಳು ಸೇರಿ ನಾಮದ ಮತ್ತು ಗುಣವಾಚಕಗಳು ಬಳಕೆಯಲ್ಲಿವೆ ಈ ಭಾಷೆಗಳಲ್ಲಿ ದಿನ ಬಳಕೆ ಉಪಯೋಗಕ್ಕೇ ಸಹ ಸಹನ ವಿಚಾರಗಳಿಗೆ ಸರಿಯಾಗಿಲ್ಲ.

ಪಾಲಿನೇಶ್ಯಾ ಜನರ ಸಾಹಿತ್ಯವೆಲ್ಲ ಕಾಹುನಾ ಪೂಜಾರಿಗಳ ಸ್ಮರಣೆಯಲ್ಲಿ ಉಳಿದಿದೆ. ಸಾಮೋಹ ಜನರ ಸೃಷ್ಟಿಕಥೆ, ಮೇಯೋರೀ ಜನರ ಸನಾತನ ಗೀತೆ ಮತ್ತು ಇತರ ಗುಂಪುಗಳ ಹರ್ಷ, ಪ್ರೇಮ, ವಿಹಾಸ ಗೀತೆಗಳುಗಮನಾರ್ಹವಾದವು. "ಮ ಆ ಉ ಈ" ಎಂಬ ಪೂರ್ವೀಕನು ವೈನಸ್ವತ ಮನುವಿಗೆ ಸಮಾನ. ಅತನಿಂದ ಪ್ರಪಂಚ ಸೃಷ್ಟಿಯಾಯಿತು. ಎಂದು ಇವರ ನಂಬಿಕೆ "ಹೊಲಾ ಮೇಲೆ" ಎಂಬ ವಸಂತ ಪೂಜೆಯಲ್ಲಿ ಇವರು ಮನಮರೆಯುತ್ತಾರೆ. ಬಿಸಿ ಗಾಳಿ ಬೀಸುತ್ತದೆ, ಬಂಗಾರ ಕಿರಣ ನೀಲಿ ಸಾಗರದಲೆಗಳ ಮೇಲೆ ಧಳ ಧಳಿಸುತ್ತದೆ, ದೇವತೆಗಳು ಕವಿಗಳಿಗೆ ಭಾವಸ್ಫೂರ್ತಿ ಕೊಡುತ್ತಾರೆ= ಎಂದು ಮುಂತಾಗಿರುವ ಅನಂದ ಗೀತೆಗಳು ಈ ಭಾಷೆಗಳಲ್ಲಿ ಹೇರಳವಾಗಿವೆ. "ಪೇಲೆ" ಎಂಬ ಜ್ವಾಲಾಮುಖಿ ದೇವತೆ ಈ ಜನಕ್ಕೆಲ್ಲ ಹಾಡಿ ಕುಣಿವ ಸ್ಫೂರ್ತಿ ಕೊಡುತ್ತಾಳೆ.

ಈ ರೀತಿಯಾಗಿವೆ ಪಾಲಿನೇಶ್ಯಾ ಜನರ, ಮೂಲ, ಸಮಾಜ, ವೃತ, ಪೂಜೆ, ಸಾಹಿತ್ಯ ಮುಂತಾದುವು. ಪಾಲಿನೇಶ್ಯನರೆಲ್ಲ ಪುರಾತನ ಪೂರ್ವ ಭಾರತೀಯರು ಶಿಲಾಶಿಲ್ಪ ನಿಪುಣರು. ನೌಕಾಯಾನ ಸಾಹಸಿಗಳು ಸ್ಫುರದ್ರೂಪಿಗಳು. ಅವರೆಲ್ಲ ನಮ್ಮ ಪೂರ್ವ ಬಂಧುಗಳೆಂದರೆ ನಮಗೊಂದು ಹೆಮ್ಮೆ. ಇವರ ವಿಚಾರವಾಗಿ ಇನ್ನು ಹೆಚ್ಚಿನ ಸಂಶೋಧನೆ ಅವಶ್ಯಕ.

ಒಂದು ಹೊಸ ಮಹಾ ಕಾದಂಬರಿ

ನಡುಹಗಲಿನ ಕಗ್ಗತ್ತಲೆ

ಸಿಲ್ಕ ಪುಟಿಗಳು ಬೆಲೆ 2·50 ರೂಪಾಯಿ

- ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದ ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.
- ರಶಿಯದ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ನೆತ್ತರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ.
- ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.
- ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು ಕು. ಶಿ. ಹರಿದಾಸ ಭಟ್ಟರು.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)

PHONE 203 ESTD 1926

FOUNDATION STONE

Engraved MARBLE TABLETS

(GOLD FILLED & LEAD FILLED)

Crown RUBBER STAMP CO.

BALMATTA ROAD, MANGALORE.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿ ರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

"ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾರನಾ ನೆಲನಂ, ಮತ್ತಿನ ಮಾನಿಸರ್ ಪೊಗಳಲೇನಂ ಬಲ್ಲರ್?" ಎಂದು ಕನ್ನಡ ನಾಡಿನ ಹಿರಿಮೆಯನ್ನೂ ನೈಜವೈಭವವನ್ನೂ 'ಕಬ್ಬಿಗರ ಕಾವ್ಯದ ರಜಯುತನಾದಕವಿ ಅಂಡಯ್ಯ' ಹೊಗಳಲಾರದೆ ಹೊಗಳಿದ್ದಾನೆ. ಸಂಸ್ಕೃತದೊಂದಕ್ಷರವನ್ನು ಕಬ್ಬಿಗರ ಕಾವದಲ್ಲಿ ನೇರಿಸದೆ, ಕಬ್ಬಗನ್ನಡಿಯನ್ನು ಹಿಡಿದು ಕನ್ನಡ ನುಡಿಗಳ ಪಡಿನೆಳಲನ್ನು, ಕನ್ನಡದ ಸರ್ವರೂಪನನ್ನು, ಬೆಳಗಿಸಿದ ಸಾಮರ್ಥ್ಯ ಕವಿ ಅಂಡಯ್ಯನದು. ಈತನ ಕಾಲ ಕ್ರಿ. ಶ. ಸು. ೧೨೩೦ ವರಕವಿಗಳಾದ ಸಂಸ್ಕೃತ ಪಂಡಿತರು ಉಬ್ಬಿ ಕೊಬ್ಬಿದ ಕಾಲದಲ್ಲಿ ಸಂಸ್ಕೃತದ ಆತ್ಯಭಿಮಾನಿಯಾದ ಕವಿ, ಬಲ್ಲವರ ಮುಖಕ್ಕೆ "ಸಂಸ್ಕೃತವೇ ಭಾಷೆಯಲ್ಲ. ಸಂಸ್ಕೃತವಲ್ಲದೆ ಕನ್ನಡ ಬಾಳದಿಲ್ಲ. ಕವಿ ಹೃದಯದ ಕಾವ್ಯ ಭಾವಗಳನ್ನು ಬಿತ್ತರಿಸಲು ಸಂಸ್ಕೃತವೇ ಕಾವ್ಯ ಭಾಷೆಯಲ್ಲ ಕನ್ನಡವು ಅನಾಗರಿಕರ ಬಲಿಯ ಭಾಷೆಯೆಂದೂ, ಸಂಸ್ಕೃತವು ಕಲ್ಪಣಿ ಮುತ್ತಿನ ಹಾರವೆಂದೂ ತಿಳಿಯಬೇಕಾಗಿಲ್ಲ' ಎಂದು ಕನ್ನಡದ ಕೆಚ್ಚಿನ ಕಾವ್ಯವನ್ನು ಬರೆದಿದ್ದಾನೆ ಆದರೆ ಸಂಸ್ಕೃತದ ಗಾಳಿಯನ್ನು ಸೋಂಕದ ಕಬ್ಬಿಗರ ಕಾವದಲ್ಲಿ ಕನ್ನಡವು ಗಾಂಭೀರ್ಯ, ರಸಯುಕ್ತ ಉದ್ಭಾವಿಸಿ, ಕಾವ್ಯ ಭಾಷೆಯೆಂದು ಮೆರೆದು ಸಂಸ್ಕೃತದ ಬಿಗುವನ್ನೇ ಮುಟ್ಟಿದೆ ಯೆಂದರೆ ಸಂಸ್ಕೃತಾಚಾರ್ಯರಿಗೂ ಆಶ್ಚರ್ಯ! "ಈ ಮಿರುಗು-ಈ ಬಿಗುಪು, ಈ ಗಾಂಭೀರ್ಯ ಕನ್ನಡಕಲ್ಲಿದೆ"ಂದು ಕಬ್ಬಿಗರ ಕಾವವನ್ನು ಹಲವು ಬಾರಿ ತಿರುವಿದರು! ಸಂಸ್ಕೃತವೇ ವೃಕ್ಷ, ಸಂಸ್ಕೃತ ಭಾಷೆಯೇ ಹೂ, ಎಲೆ, ಬೇರು, ಫಲಗಳೆಂದೂ, ಕನ್ನಡ ಅದರಿಂದುದುರಿದ ಒಣ ಎಲೆಯೆಂದೂ ಸಂಸ್ಕೃತವೇ ಅದರ ಮೂಲವೆಂದೂ, ಸಂಸ್ಕೃತ ವಿಲ್ಲದಿದ್ದರೆ ಕನ್ನಡವೆಲ್ಲಿ?" ಎಂದೂ ಹೆಮ್ಮೆಯಿಂದ ಸ್ವ—ದುರಭಿಮಾನದಿಂದ ಉಬ್ಬಿದ ಸಂಸ್ಕೃತಜ್ಞರಿಗೆ ದಿಗ್ಭ್ರಾಂತಿಯಾದರೆ ಆಶ್ಚರ್ಯವೇನಲ್ಲ.

ಮಧುರವಾದ ಕರನುಡಿಯಲ್ಲೇ ಕನ್ನಡನಾಡನ್ನು ವರ್ಣಿಸಿದ್ದಾನೆ ಕವಿ ಅಂಡಯ್ಯ. ಅಂಡಯ್ಯ ಹೊಗಳಿದ, ಅತಕಂಡ ಆ ಕನ್ನಡ ನಾಡು ಹೇಗಿತ್ತು?

ಕನ್ನಡ ಮೆಸಿವ್ವ ನಾಡು ಚೆಲ್ವಯ್ತು.....ಎಂತು? ....ಮೆಲ್ಲಲರಿಂ ಪೂತ ಕೊಳಂಗಳಿಂ ಕೆರೆಗಳಿಂ ಕಾಲೂಗಳಿಂ ಕಯ್ಗಳಿಂ ರಂಜಿಸುತ್ತಿತ್ತು ಕನ್ನಡ ನಾಡು ಮಾತ್ರವಲ್ಲ,—

ಮಲ್ಲಿಗೆ ಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬ ಮಲ್ಲದೊಪ್ಪುವ
ಚೆಂದಿಂ
ಗಲ್ಲದೆ ಮಾವಲ್ಲದೆ ಕೌಂ
ಗಲ್ಲದೆ ಗಿಡಮರಗಳೆಂಬುವಿಲ್ಲಾ
ನಾಡೋಳ್

ರಂಭ, ಖಮರ, ಜೊತ, ಕಲ್ಪವೃಕ್ಷಾದಿಗಳಿಂದ ನಿತ್ಯವೂ ಶೋಭಿಸುತ್ತಿರುವ ನಾಡು ಕನ್ನಡ ನಾಡು. ಇದೆಂದಲ್ಲ, ಇಂದೂ ಎಂದೆಂದೂ ಪ್ರಸಿದ್ಧ ಮಲ್ಲಿಗೆ, ಸಂಪಗೆ, ದಾಳಿಂಬ....ತೆಂಗು-ಚೆಂದೆಂಗು ಮಾವು ಕೌಂಗಲ್ಲದೆ ಬೇರೆ ಮರಗಳೇ ಇಲ್ಲವಂತೆ!

ಕನ್ನಡದ ಕಾರಣೀಕತೆ

ಶ್ರೀ. ಕೆ. ತಿಮ್ಮಪ್ಪ ಗಟ್ಟಿ

ಕಾವೇರಿಯಿಂದ ಮಾಗೋದಾವರಿವರೆವಿರ್ದನಾಡದಾ ಕನ್ನಡದೊಳ್ಭಾವಿಸಿದ ಜನಪದಂ ವಸುಧಾವಳಯ ವಿಲೀನ ವಿಶದ ವಿಷಯ ವಿಶೇಷಂ—ಎಂದು, ಕನ್ನಡದ ವಿಸ್ತಾರವನ್ನೂ ಕನ್ನಡಿಗರ ನಡೆನುಡಿಗಳನ್ನೂ ವರ್ಣಿಸಿದ ಕವಿರಾಜಮಾರ್ಗಕಾರ ಮುಂದೆ, ಕನ್ನಡ ಜನತೆಯ, ನುಡಿಯ ಕನ್ನಡತನವನ್ನು ವರ್ಣಿಸಿದ ಹಿರಿಮೆ ಅಂಡಯ್ಯನಿಗೆ ಸಲ್ಲಬೇಕು ಕನ್ನಡ ನುಡಿಯಾಡುವ ಪ್ರದೇಶಗಳೆಲ್ಲವೂ ಸಾಮಾನ್ಯವಾಗಿ ಒಂದಾದ ಸಾಂವತ್ಸರಿಕ ಉತ್ಸವದ ಈ ಸಮಯದಲ್ಲಿ ಕನ್ನಡ ನಾಡಿನ ಬಗ್ಗೆ ರಮ್ಯ ಸುಂದರ ಹಾಗೂ ರಾಮಣೀಯಕ ಮನಹರೀ ವರ್ಣನೆಯನ್ನು ನೆನೆಸಿಕೊಂಡರೆ ಅಪ್ರಾಸಂಗಿಕವಾಗದು

ಇವು ಪಳ್ಳಿಗಳಿವು ಪಟ್ಟಣ
ನಿವು ಕೆರೆಗಳಿವೆರೆಗಿ ನಿಂದ ಮುಗಿ
ಲೋಳಿಗಳಿಂ
ತಿವು ಕಾಡಿವು ಪೆಸರ್ವೊಡೆದೊ
ಪ್ಪುವ ಬನ ಮೆಂದರಿದು ಪೇಳ್ವುದ
ರಿದಾ ನಾಡೋಳ್

ಕಾಡುಗಳು ಮಾತ್ರವಲ್ಲ. ಪೆಸರ್ವಡೆದು "ಒಪ್ಪುವ ಬನಗಳೂ" ಇದ್ದುವು. ಗಂಭೀರವಾದ ಕಾಡಂತಿರಲಿ, ರಮ್ಯವಾಗಿದ್ದ ಬನ ಪೆಸರ್ವಡೆದೆಂತೊಪ್ಪುತ್ತಿತ್ತು?

ಅಡರ್ವೇರಿ ಕೋಡಗಂಗಳ್
ಕಡುಸಿಂದೀಡಾಡೆ ಗಳಿಲ ನೊಡೆದೆಳೆ
ಗಾಯಿಂ
ದೆಡೆ ವಿಡಿದೊಸರ್ವೆಳ ನೀರ್ಗಳ್
ಮಡು ಗೊಂಡೋವುತ್ತು ಮಿರ್ಪುರ
ವಲ್ಲಿಯ ಬನಮಂ

ಅಬ್ಬಾ! ಬನವೆಂದರೆ ಹೇಗಿತ್ತು? ಕನ್ನಡನಾಡಿನ ಆ ಬನಗಳೆಂತಿದ್ದುವೆಂದು ಕವಿ ಬೆಕ್ಕಸಬಡುವಂತೆಯೂ, ಬಾಯಿ ನೀರೂರಿಸುವಂತೆಯೂ ಬಣ್ಣಿಸಿ ತಿಳಿಸಿಯಾಯಿತು.

ಉರೆ ಕಾಯ್ವು ಬಿಸಿಲೊಳೆ ಮ್ಮಂ
ಮರೆದುಂ ಕೊರಗಸದೆ ಪೊರೆದು
ದೆಂದೊಲವಿಂ

ದೆರಗುನ ಪೊಲ್ ತೆನೆಯಂಕಾ
ಲ್ಗೆರಗುವ ಕಳವೆಗಳಪೆಲ್ಲಿಯುಂ
ಸೊಗಯಿಸುಗುಂ

ಪಚ್ಚೆ ಪೈರಿನಿಂದ ತುಂಬಿದ ಹೊಲಗದ್ದೆಗಳ ಕನ್ನಡ ನಾಡಿನ ಸುಂದರ ದೃಶ್ಯಗಳು ನಮ್ಮ ಕಣ್ಣ ಮುಂದೆ ಹಾದು ಹೋದುವು. ಮಾತ್ರವಲ್ಲಾ ಪೈರುಗಳಲ್ಲವೂ ಕಾಂತಿಗಳೆ! ಕಂಪೂ, ಸೊಂಪೂ ಬೆರೆತಿವೆ!

ನೆಯ್ದಲ್ಗೊಳಂಗಳೆಡೆಯೊಳ್
ಕಾಯ್ದೊಂದೆ ಪೋರ್ವ ಪಲವು
ನೀರ್ವಕ್ಕಿಗಳಿಂ
ದೆಯ್ದುಣ್ಣುವ ಸೀರ್ಪಸಿಯೊಳ್
ತೊಯ್ದೊಯ್ಯನೆ ಗಾಳಿ ಕೂಡೆ ತೀಡು
ತ್ತಿರ್ಕುಂ

ಎಂತಹ ಸುಂದರ ದೃಶ್ಯ! ವೈಯ್ಯಂದಾವನ, ಅಲ್ಲನೆಯ್ದಲ್ಲೊಳ. ಅಲ್ಲಿ ನಿತ್ಯವಾಸಿಸುತ್ತಿರುವ, ಅಡುತ್ತಿರುವ ನೀರ್ವಕ್ಕಿಗಳು! ಅಲ್ಲಿಯವುಗಳ ಚೆಲ್ಲಾಟದಿಂದ ಹಾರುತ್ತಿರುವ ಸೀರ್ಪನಿಗಳು! ಅಲ್ಲಿಂದ ಬೀಸುತ್ತಿರುವ ಮಂದಾನಿಲ! ನೀರ ತುಂತುರು ಅದರಲ್ಲಿ ತುಂಬಿದೆ, ಅಷ್ಟೇ ಅಲ್ಲ ನೈದಿಲೆಯ ಸೌರಭವೂ ಇದೆ! ಇರಲೇಬೇಕಲ್ಲ!

ಹೃದಯಾಂತರ್ಗತ ಕಾವ್ಯರಸವು ಹೊರಹೊಮ್ಮ ಬೇಕಾದರೆ ಸಂಸ್ಕೃತವೇ ಬೇಕೇನು? ಸಂಸ್ಕೃತವು ದಿವ್ಯ ಭಾಷೆ. ಗೀರ್ವಾಣ-ದೇವಭಾಷೆ. ಪೂಜಿತವೇ ಅಂಡಯ್ಯನಿಗೂ ಸಂಸ್ಕೃತದ ಮೇಲೆ ದುರ್ಭಾವನೆಯಿರಲಿಕ್ಕಿಲ್ಲ. ಸಂಸ್ಕೃತವರಿತರೆ ಕನ್ನಡದ ಮೂಲವರಿತಂತೆ.

ಕನ್ನಡ ನಾಡನ್ನು ಎಷ್ಟೋ ಮಂದಿ ಕವಿ ವರ್ಯರು ಹಲ ವಿಧದಲ್ಲಿ ಕಂಡು, ಬಣ್ಣಿಸಿರಬಹುದು. ಆದರೆ ಕನ್ನಡವನ್ನು ಕನ್ನಡದಲ್ಲೇ ಬಣ್ಣಿಸಿ ಜನ ಮನವನ್ನು ತಣಿಸಿ ಶ್ಲಾಘನೆಯ ಕೊರೆಯನ್ನು ಹೊತ್ತು "ಕನ್ನಡನಾಡ ಚೆಲ್ವೇ ಚೆಲ್ವ" ಎಂದು ತೋರಿಸಿ ಕೊಟ್ಟವನು ಅಂಡಯ್ಯನು.

ಕಾವೇರಿಯಿಂದ ಮಾ ಗೋದಾವರಿವರೆ ಮಿರ್ದ ಕನ್ನಡ ನಾಡು ಇಂದೂ ಇದೆಯೇ? ಇರಲಾರದೇಕೆ? ಎಂತಿದ್ದರೂ ಕನ್ನಾಡ ನೆಲ ಮಾಸುವುದೆ? ಜನ ಬೇರಾದರೂ, ಬಣ್ಣಿಸುವ ನುಡಿ ಬೇರಾದರೂ, ನಡೆ, ಬಾಳು ಬೇರಾದರೂ ನೆಲ ಬೇರಾಗುವುದೆ?

ಕನ್ನಡ ಮೆಸಿವ್ವಾ ನಾಡ. ಚೆಲ್ವಯ್ತು ಎಂದೊಡನೆ ಕನ್ನಡ ನಾಡ ಸೌಮ್ಯ, ರಮ್ಯ ಚಿತ್ರ ಕಣ್ಣ ಮುಂದೆ ಮೂಡುವುದು. ತಿಳಿನೀರಿನ ಕಲಕಲ ಹ್ರಾದವು ಕಿವಿಗೆ ಕೇಳಿಸುವುದು. ಏನೋ ಒಂದು ಹೊಸ ಲೋಕದ ಹ್ಲೆನ್ನ-ಕ್ಲ್ಪನೆಯಿಂದ ಭಾವಗಳರಳುವುವು. ಪುಷ್ಪ ಸೌಗಂಧವನ್ನು ತುಂಬಿ ತೀಡುತ್ತಿರುವ ತಂಬೆಲರು ಮೈಮನಗಳನ್ನು ಸೋಂಕಿದಂತೆ ಭಾಸವಾಗುವುದು ಹಚ್ಚ ಹಸುರಿನ ಬಯಲು, ವಂಕಿ ಮಗಡಿಯ ನೀಲವು ದಿಕ್ಚಕ್ರ ತಲೆಯೆತ್ತಿ ನಿಂತ ಹಿಮಾಚ್ಛಾದಿತ ಗಿರಿಶೃಂಗಾರಣ್ಯಗಳು ಶೋಭಿಸುವ ವಲೆನಾಡು ವ್ರಾಚ್ಯ ದೃಶ್ಯ ಸಂಧ್ಯೋದಯ ಶುಭಸಮಯ. ಚಂದ್ರಿಕೆಯಿಂದ ಬೆಳಗುವ ಬೆಳ್ನಿಲಿಯ ಛಾತ್ರಿ, ಚಂದ್ರಿಕೆಯ ನಾಟ್ಯ, ಪಶ್ಚಿಮ ತೀರದಲ್ಲಿ ಕಡಲಿನ ಬೆಡಗು..... ಪಲವು ನಾಲಗೆಯುಳ್ಳವಂ ಬಣ್ಣಿಸಲಾರನೈ ಮತ್ತೆಂತು ಬಣ್ಣಿಸಲಾವುದು? ಛಾವೋ ದ್ವೇಗದಿಂದ ಬಾಯಿಕಟ್ಟಿ ಹೋಗುವುದು, 'ಇಂತಿರ್ಕೆ, ಬಂದುದು ಕನ್ನಡ ನಾಡಿಗೆ ವಸಂತಂ' ಎಂದು ನ.ಡಿದನೋ ಕವಿ, ಸರಿ. ಬಳಿಕ ಯೋಚನೆಗೂ ನಿಲುಕದು ಆ ಸೌಂದರ್ಯ ಕನ್ನಡ ಪ್ರಕೃತಿ ಮಾತೆಯ ಸಾಸಿರ ತೆರದ, ಸಾಸಿರ ಬೆಡಗಿನ, ಸಾಸಿರ ರೂಪಿನ ಸಾಸಿರ ಕಳೆಯ, ಬಣ್ಣ ಬಣ್ಣದ ಸುಂದರ ದೃಶ್ಯ ವಿಶೇಷ ವಿಲಾಸವೇನು? ನಿತ್ಯ ಪುಷ್ಪವತಿ! 'ಅದರೆ ಕಣ್ದೆರೆದು ನೋಡು ಓ ನೋಟಿಕ! ಕನ್ನಡದ ಸೊಬಗ'! ಎಂದು ಅಂಡಯ್ಯ ಸೃಷ್ಟಿಯೆದುರಿಗೆ ನಿಲ್ಲಿಸಿ ಪ್ರಕೃತಿಯ ಉಪಾಸಕ ಭಾವಜೀವಿಯೊಡನೆ ಉಳಿದವರನ್ನು ಕುಣಿಸುತ್ತಿದ್ದಾನೆ.

ಅದೊ, ಕಂಗಾಣಿನಾಗಸದಲ್ಲಿ ಜಲಭರಿತ ಜಲದಗಳು ಮದೋನ್ಮತ್ತ ಆನೆಗಳಂತೆ ತೇಲುತ್ತಿವೆ. 'ಉಷಾ ಕಿರಣದ ಸೊಂಪೂ, ಬೈಗುಗೆಂಪೂ ಚಿಮ್ಮುತ್ತಿದೆ.' ಫಲಭರಿತ ತರುಲತೆಗಳಿಂದೊಡಗೂಡಿ ಫಲ ಪಾತ್ರೆಯ ಹೊಲ ಹೊಲಗಳಲ್ಲಿ ತೊನೆದಾಡುವ ಜೋಂಗದಿರು ಜೋಗುಳವ ಹಾಡುತ್ತಿದೆ' ವಸಂತ ಮಾಸದ ಹರ್ಷ ತರಂಗಗಳು ಹೃದಯ ಸಮುದ್ರದೊಳಪ್ಪಳಿಸಿ ಮೈ ನವಿರೇಳಿಸಿ, ಮುಳಕವೇರಿಸಿ ಭಾವ ವಿಕಾಸನಗೊಳಿಸುತ್ತಿದೆ! ಅದೋ ಕಾಮನ ಬಿಲ್ಲು' ಅತ್ತ ಮುಂಗಾರ ಮಿಂಚಿನದೂ ಒಂದು ಲಾವಣ್ಯ. ಇತ್ತ ಜಡಿ ಮಳೆಯದೂ ಒಂದು ಲಾಘವ. ಚಂದ್ರ ಮನಿಂದೊಡಗೂಡಿ ಮಿನುಗುವ ವಿಲಸಿತ ನಕ್ಷತ್ರಗಳ ಕಾಂತಿಯಲ್ಲೂ ಒಂದು ಜೋಂಪಿಸುವ ಸೊಬಗು! ನಿರ್ಮಾನ್ವಾವಸ್ಥೆಯಲ್ಲಿ ಮಲಗಿದ ಸೃಷ್ಟಿಯದೂ ಒಂದು ಮಧುರ ನೋಟ... .....ಕಣಕಣದಲ್ಲು ಚೆಲುವು! ಗುಲಾಬಿಗೂ ಚೆಲುವು! ಗುಲಾಬಿಯ ಮುಳ್ಳಿಗೂ ಚೆಲುವು! ಎಲ್ಲಿ ಕನ್ನಡ ನಾಡೋ ಅಲ್ಲಿ ಚೆಲುವು! ಎಲ್ಲಿ ಚೆಲುವೋ ಅಲ್ಲೂ ಕನ್ನಡ ನಾಡು. ಎಲ್ಲಿ ನಾಡು, ನಿಸರ್ಗ ರಮ್ಯವೋ, ಮಂಗಳವೋ ಅಲ್ಲಿ ಜೀವನವೂ ಮಧುರ; ಭಾವನೆಯೂ ಮಧುರ!

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%

ಸೇವಿಂಗ್ಸ್ ಬೇಂಕ್ ಲೆಕ್ಕ 2½%
ಕರೆಂಟ್ ಎಕೌಂಟು ½%

The Moolky Bank, Ltd.

೭೦ ವರ್ಷ ಗಳಿಂದಲೂ ಪ್ರಸಿದ್ಧ ಇದೆ. } ಮಲೇರಿಯಾ } ಇನ್‌ಫ್ಲುಯೆಂಜಾ ಸುತ್ತು ಎಲ್ಲ ಜ್ವರಗಳಿಗೆ } ಎಲ್ಲ ಕೆಮಿಸ್ಟರಲ್ಲಿ ಗ್ರೊಸರರಲ್ಲಿ ದೊರೆಯುತ್ತವೆ.

ಬಾಟ್ಲಿವಾಲಾ ಎಗ್ಯಾಮಿಕ್‌ಶ್ಚರ ಚೆ
ಮತ್ತು ಗುಳಿಗೆಗಳು

ಮಾರಾಟ ಮಾಡುವ ಏಜಂಟರು: ಹರ್ಬರ್ಟ್‌ಸನ್ಸ್ ಪ್ರೈವೆಟ್ ಲಿಮಿಟೆಡ್, ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ದೀಪಾವಳಿಯ ಪರ್ವದಿನಗಳು

(೩ನೇ ಪುಟದಿಂದ)

ಹಜ್ಜೆಯನ್ನು ಕೊಡಬೇಕಷ್ಟೆ? ಎಂತಲೇ ಬಲಿಯನ್ನು ಕೇಳಿದ ಆಕ, ಸತ್ಯಸಂಗತಿಯನ್ನು ತಿಳಿದು, ತಾನು ತನ್ನ ಮಹಾತ್ವಾಕಾಂಕ್ಷೆಯಿಂದಾಗಿ ಸುರರಿಗೆಸಗಿದ ಅನ್ಯಾಯವನ್ನು ನೆನೆದು ತಕ್ಕ ಪ್ರಾಯಶ್ಚಿತ್ತವಾಯಿತೆಂದು ತಿಳಿದು, ವಿಷ್ಣುಪದಘಾತದಿಂದಲೇ ತನ್ನ ಇಹಜೀವನವನ್ನಂತ್ಯಗೊಳಿಸುವುದು ಕ್ಷೇಮಕರವೆಂದು ಭಾವಿಸಿ, ತನ್ನ ಶಿರಸ್ಸನ್ನೇ ತೋರಿಸಿದ ಅಂತೂ, ಬಲಿಯನ್ನು ಮೆಟ್ಟಿ ಒತ್ತಿ ಪಾತಾಳದಲ್ಲಿರಿಸಿದ ತ್ರಿವಿಕ್ರಮಾವತಾರಿ ವಿಷ್ಣು.

ಆದರೂ, ಬಲಿಯ ಭಕ್ತಿಗೆ ಮೆಚ್ಚಿ ಆತನ ಅಪೇಕ್ಷೆಯಂತೆ, ಪಾತಾಳದಲ್ಲಿಯೇ ಒಂದು ವೈಭವಯುಕ್ತವಾದ ಅರಮನೆಯಲ್ಲಿ ಬಲಿಯನ್ನಿರಿಸಿ, ಆತನಿಗೆ ಚಿರಂಜೀವಿ ಪದವನ್ನಿತ್ತನಂತೆ. ಅಲ್ಲದೆ, ಆತನ ಅರಮನೆಯ ದ್ವಾರವನ್ನು ತಾನೇ ಕಾಯತೊಡಗಿದ್ದಾನಂತ! ವರ್ಷದಲ್ಲೊಂದು ಬಾರಿ, ಆತನು ಭೂಮಿಗೆ ಬಂದು, ಜನರು ನಿಷ್ಠೆಯಿಂದ ಹಾಕಿರುವುವನ್ನೆಲ್ಲಾ ತಿಂದು ಹೋಗಿ ತೃಪ್ತಿಪಡುವನಂತೆ! ಅದೇ ಅಮವಾಸ್ಯೆ, ಬಲೀಂದ್ರ ಪೂಜಾ ದಿನ

ಇನ್ನು ಗೋಪೂಜೆಯ ಕಥೆ ವಿಚಿತ್ರವಾದುದು ಪಣ್ಯ ಕೋಟಿಯೆಂಬ ದನವು ಕಾಡಿನಲ್ಲಿ ಹುಲಿಗೆ ಎದುರಾಗಿ, ಅದು ತಿನ್ನುವೆನೆಂದಾಗ, ಹಟ್ಟಿಯ ಕರುವಿಗೆ ಹೊಲೆಯೂಡಿ ಬರುವೆನೆನ್ನಲು, ವ್ಯಾಘ್ರನು ಕರುಣೆದೋರಿ, ಅನುವ ತಿಸಲು, ದನವು ಹಾಗೆಯೇ ಮಾಡಿತು ಹುಲಿಯಾದರೋ. ಸತ್ಯವನ್ನಾಡಿದ ನಿನ್ನನ್ನು ಕೊಂದು ತಿಂದರೆ, ಮೆಚ್ಚನಾಜಗದೀಶನೆಂದು ಪ್ರಾಣ ಬಿಟ್ಟಿತಂತೆ! ದನವು ಹುಲಿಯನ್ನು ಗೆದ್ದ ಶುಭ ದಿನವೇ ಈ ಗೋಪೂಜೆಯ ದಿನವೆಂದು ಒಂದು ಜನಪದದ ಕಥೆಯಿದೆ ಅದರಿ, ವಿಷ್ಣು ಪುರಾಣದಲ್ಲಿ ಬೇರೆಯೇ ಒಂದು ವಿಶಿಷ್ಟಪೂರ್ಣಕಥೆಯಿದೆ

ನರಕ, ಕಾಲನೇಮಿ ಶಿಶುಪಾಲ, ದಂತವಕ್ರ ಮೊದಲಾದ ಅಸುರರನ್ನು ಕೊಲ್ಲಲು, ಬಾಹುವಿಷ್ಣು ವಸುದೇವನಿಗೆ ಕೃಷ್ಣಾಭಿಧಾನದಿಂದ ಮಗನಾಗಿ ಜನಿಸಿದನಷ್ಟೆ? ಆ ಕೃಷ್ಣನು ಕೆಲವೊಂದು ಅದ್ಭುತತನವಾದ ಕಾರ್ಯಗಳನ್ನು ಮಾಡಿದ ಅದೇ ಗೋವರ್ಧನೋದ್ಧಾರ

ಗೋಪರು ತಮ್ಮ ಮೂಲಸಂಪತ್ತುಗಳಾದ ದನಗಳಿಗೆ ಬೇಕಾದ ಹುಲ್ಲನ್ನು ಬೆಳೆಯಿಸುವಂತೆ ಮಳೆಸುರಿಸುವ ಮೇಘಾಧಿಪತಿ ಇಂದ್ರನನ್ನು ಪೂಜಿಸುವ ಪದ್ಧತಿಯಿಂದ ಸುರಂದರ ಮುಖವನ್ನು ಪ್ರತಿವರ್ಷವೂ ಗೈಯುತಿದ್ದರಂತೆ ಬಾಲಕೃಷ್ಣನು ತನ್ನ ಸ್ವಾಭಾವಿಕವಾದ ತುಡುಗುತನದಿಂದ, ನಮಗೆ ಇಂದ್ರನು ಪ್ರಯೋಜನವಿಲ್ಲ ನಮ್ಮ ಗೋವುಗಳನ್ನು ಪೊರೆಯುವುದು ಗೋವರ್ಧನ ಗಿರಿ ಅಮದರಿಂದ, ಈ ದನಗಳೆಲ್ಲವನ್ನೂ ಅಲಂಕರಿಸಿ, ಗೋವರ್ಧನಗಿರಿಗೆ ಒಯ್ದು ಅಲ್ಲಿ ಗೋವುಗಳನ್ನೂ ಗೋವುಗಳನ್ನು ವರ್ಧಿಸುವ ಗಿರಿಯನ್ನೂ ಪೂಜಿಸುವ ಎಂದು ನುಡಿಯಲು ಅದಕ್ಕೊಪ್ಪಿ ಹಾಗೆಯೇ ಗೋವುಗಳನ್ನೂ ಗಿರಿಯನ್ನೂ ಪೂಜಿಸಿದನು ಇದರಿಂದ ಕುಪಿತನಾದ ಇಂದ್ರನು ತನ್ನ ಶಕ್ತಿ ಸಾಮರ್ಥ್ಯದಿಂದ ಪ್ರಳಯಕಾಲ ಸದೃಶವಾಗಿ ಸಪ್ತ ಮೇಘಗಳಂಡಲೂ ವೃಷ್ಟಿಸುತ್ತ, ಗೋವುಗಳನ್ನು ಕೊಚ್ಚಿಹೋಗುವಂತೆಸಗಲು, ಕೃಷ್ಣನು ತನ್ನ ಕಿರಿವೆರಲಿನಿಂದ ಗಿರಿಯನ್ನೆತ್ತಿ, ಅದರ ಮರೆಯಲ್ಲಿ ಕ್ಷೇಮವಾಗಿರಿಸಿದನು ಅಂತೂ ಕೊನೆಗೆ, ಇಂದ್ರನು ಸೋತು ಶರಣು ಬರಬೇಕಾಯಿತು ಇಂತಹ ದಿನ ಮಕ್ಕಳ ಪೂರಿತ ದಿನವನ್ನು ವೈಭವಯುತವಾಗಿ ಆಚರಿಸುವ ಪದ್ಧತಿ ಆ ಮೇಲೆ ಬಂದಿತು

ಬಲಿಪಾಡ್ಯದ ದಿನದಿಂದ ತುಳಸೀಪೂಜೆಯು ನಡೆಯುವುದು. ಪಾರ್ವತಿ, ಸರಸ್ವತಿ, ಲಕ್ಷ್ಮಿಯರೆಂಬ ತ್ರಿದೇವಿಯರೂ ಆವಾಸವಾಗಿರುವ ಗಿಡ ತುಳಸಿ ತುಳಸಿ ಪೂಜೆಯಿಂದ ತ್ರಿಮೂರ್ತಿಗಳ ಕೃಪೆಗೂ ಪಾತ್ರರಾಗಬಹುದು

ಹೀಗೆ ಈ ದೀಪಾವಳಿಯು ಉತ್ಸವದ ಉತ್ಸಾಹವು ಪ್ರಕೃತಿ ಪೂಜೆಗೆ ಸಂಬಂಧಿಸಿದುದು ಹಿನ್ನೆಲೆಗಳೇನೇ ಇರಲಿ. ಆಚರಿಸುವ ಪದ್ಧತಿಗಳೆಲ್ಲವೂ ಪ್ರಕೃತಿಗೆ ಸಂಬಂಧಿಸಿದ್ದು. ಹಿಂದೂ ಧರ್ಮದಲ್ಲಿ ಪ್ರಾಣಿಗಳೂ ವೃಕ್ಷಗಳೂ ಪೂಜೆ ಪಡೆಯಲು ಅರ್ಹವಾಗಿವೆ ಸಾಮಾನ್ಯವಾಗಿ, ಮಾನವನು ಶುದ್ಧ ಜೀವನವನ್ನು ಬಾಳಲು ಅನುಕೂಲವಾದ ಪ್ರತಿಯೊಂದು ವಸ್ತುವನ್ನೂ ಪೂಜಿಸುವುದ ಪ್ರಾಚೀನ ಭಾರತೀಯರ ಸಾಂಪ್ರದಾಯ ಅಂತೆಯೇ, ಭೂಮಿ, ಗೋವು, ತುಳಸಿ ಇತ್ಯಾದಿಗಳ ಪೂಜೆಗಳು ಆಚರಣೆಯಲ್ಲಿ ಬಂದು ಮುಂದೆ ಹಿನ್ನೆಲೆಯ ಕಥೆಗಳು ಹುಟ್ಟಿಕೊಂಡುವು

ಕಾರ್ತಿಕ ಮಾಸದಲ್ಲಿ ವಿಶಿಷ್ಟವಾದುದು ದೀಪವಿಡುವ ಪದ್ಧತಿ. ದೇವಾಲಯಗಳಲ್ಲಿ ಲಕ್ಷದೀಪೋತ್ಸವಗಳು ನಡೆಯುವುವು ಶರದೃತುವು ವಾತಾವರಣವು ಒದಲಾಗುವ ಸಂಧಿಕಾಲ ವರ್ಷಕಾಲ ಹಾಗೂ ಮುಂದೆ ಬರುವ ಚಳಿಗಾಲಗಳ ಮಧ್ಯಂತರದಲ್ಲಿದ್ದು ರಾತ್ರಿ ದೊಡ್ಡದಾಗಲು ಪ್ರಾರಂಭವಾಗುವ ಸಮಯ. ಅಂಧಕಾರವು ಪರಿಸರವಾಗ, ಆಕಾಶದಲ್ಲಿ ಗೂಡು ದೀಪಗಳನ್ನು ಏರಿಸಿಯೋ ಇಲ್ಲ, ದೀಪಾವಳಿಯನ್ನಿರಿಸಿಯೋ ಪ್ರಕೃತಿಯನ್ನು ಪೂಜಿಸುವುದೂ ಒಂದು ಹೃದ್ಯವಾದ ಹಬ್ಬವಲ್ಲದೆ ಮತ್ತೇನು?

ಹೀಗೆ, ಒಂದೊಂದು ಸಾಂಪ್ರದಾಯಗಳಲ್ಲಿ ಒಂದೊಂದು ಸ್ಮಾರಕ ಹುದುಗಿದೆ. ಅವೆಲ್ಲವನ್ನೂ ಕಲೆಹಾಕುವ ಕೆಲಸವು ನಡೆಯಬೇಕು

USEFUL IN EVERY HOUSEHOLD—
KHANDELLAB MILK OF MAGNESIA
LIQUID & TABLETS

For upset Stomach, Indigestion, Flatulance, Nausea etc
CORNOSOL — Removes Corns, Calluses etc
MERGINOL — Heals Cracks & Fissures, for Chapped Hands etc
AND FOR ALL OTHER MEDICINES

MULLER PATEN BROS.
CHEMISTS & DRUGGISTS
49, SUBEDAR CHATRAM ROAD, BANGALORE—9
ALSO AT: 441, Chickpet Phone 2872, BANGALORE—2
Sampige Road, Malleshwaram, BANGALORE—3

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್., ಉಡುಪಿ.

ನಮ್ಮ **99**ನೇ ಶಾಖೆಯು
ಜಮಖಂಡಿಯಲ್ಲಿ
(ಬಿಜಾಪುರ ಜಿಲ್ಲೆ)
ತಾ. **25—10—'57** ರಲ್ಲಿ ತೆರೆಯಲ್ಪಟ್ಟಿದೆ.

ಸದ್ಯದಲ್ಲಿಯೇ ತೆರೆಯಲ್ಪಡುವ ಇತರ ಶಾಖೆಗಳು —
- ಇಳ್ಕಲ್ ತಾ 28—10—1957
- ಗುಳೇದಗುಡ್ಡ ತಾ 30—10—1957
- ಬಾದಾಮಿ ತಾ 1—11—1957

The Canara Industrial & Banking Syndicate Limited, Udipi.

Sri Ramakrishna Theatre Limited,
UDIPI.

ನಿಮ್ಮ ಮನರಂಜನೆಗೆ
ಉತ್ತಮ ಚಿತ್ರಗಳ ಪ್ರದರ್ಶನ!
ವ್ಯಾಪಾರ ಅಭಿವೃದ್ಧಿಗೆ ಸ್ಲೈಡ್ ಮತ್ತು ಪತ್ರಿಕಾ ಜಾಹೀರಾತಿನ ನಿದರ್ಶನ!!!

- "ಪ್ರಕಾಶ' ವಾರಪತ್ರಿಕೆಯ ಮೂಲಕ ವರ್ತಮಾನ ಪ್ರಸಾರ, ಪ್ರಚಲಿತ ವಿಚಾರಗಳ ಮೇಲೆ ಕ್ಷ-ಕಿರಣ—
- ಮೋಟಾರು, ರೇಡಿಯೋ ಚಿಟ್ರಿಗಳನ್ನು ಅತ್ಯುತ್ತಮವಾಗಿ ಚಾರ್ಜ್ ಮಾಡಿಕೊಡುವುದು—
- ಸಭೆ, ಸತ್ಕಾರಕೂಟದಲ್ಲಿ ಉಪಯೋಗವಾಗುವ ಧ್ವನಿವರ್ಧಕ ಯಂತ್ರವನ್ನು ಒದಗಿಸುವುದು—
- ಮದುವೆ, ಮುಂಜಿಗಳಾಗಲು ಯೋಗ್ಯ ಸನ್ನಾಹ—

ಇವೆಲ್ಲವುಗಳ ವ್ಯವಸ್ಥೆ ಎಲ್ಲಿ?
ಇಲ್ಲಿಯೇ—
ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್.
ಉಡುಪಿ.



ಕಟಕ

ಸ್ವಾರ್ಥಯುಗದ ವಾಮನಾವತಾರ

(೪ನೇ ಪುಟದಿಂದ)

ಪಕ್ಷಗಳೂ ಏಕಮತದಿಂದ ಗ್ರಾಮದಾನದ ಸಮರ್ಥನೆ ಮಾಡಿದರು. ಅವರು ಈ ಆಂದೋಲನಕ್ಕೆ ಯಾವ ವಿಧದ ಕ್ರಿಯಾತ್ಮಕ ಸಹಾಯವನ್ನೀಯುವರೆಂದು ಸ್ಪಷ್ಟಪಡಿಸಿರಲಿಲ್ಲ ಕೆಂತು, ಗ್ರಾಮದಾನದಲ್ಲಿ ಸಂಗ್ರಹಿತವಾದ ಗ್ರಾಮಗಳನ್ನು ಪುನಾರಚಿಸುವುದು, ಭೂಮಿಯ ಅಧಿಕತಮ ಸೀಮೆಯನ್ನು ನಿರ್ಧರಿಸುವುದು ಮತ್ತು ವಿಕಾಸಯೋಜನೆಗಳಿಗೆ ಅಧಿಕ ಸಹಯೋಗ ನೀಡುವುದು ಮೊದಲಾದ ಆಶೆಯನ್ನಿಟ್ಟುಕೊಂಡಿದ್ದಾರೆ.

ವಿನೋಬಾ ಸರ್ವದಲೀಯ ನೇತಾರರ ಪರಿಷತ್ತಿನ ಮಹತ್ವವನ್ನು ಹೇಳುತ್ತಾ ಹೀಗೆಂದರು: ಅದರಿಂದ ಅವರಿಗೆ ಮಹಾಪ್ರಕಾಶ ದೊರೆತಿದೆ. ಮುಂದುವರಿಯುವಾಗ ಅನುಭವವು ಇದಕ್ಕಿಂತಲೂ ಮಹಾನ್ ಆಗುವುದೆಂದು ಶ್ರದ್ಧೆ ಇಡಬೇಕು. ಗ್ರಾಮದಾನ ಸಂಬಂಧದಲ್ಲಿ ಎಲ್ಲ ಪಕ್ಷಗಳ ಪ್ರಸ್ತಾಪವು ರವೀ ತಟದಲ್ಲಿರುವ ಸ್ವತಂತ್ರತಾ ಪ್ರಸ್ತಾಪದ ತುತ್ತಾಗುದಿಯ ಗುರಿಯಾಗಿದೆ. ಗ್ರಾಮದಾನವು ಕೇವಲ ರಾಷ್ಟ್ರೀಯ ಕಾರ್ಯಕ್ರಮವಲ್ಲ, ಆಧ್ಯಾತ್ಮಿಕ ಕಾಯಕ್ರಮವಾದ ಹಾದು. ಪೂರ್ವಜನ್ಮವನ್ನು ನಾವು ಮರೆತುಬಿಡುವಂತೆ, ಪೂರ್ವಾನುಭವಗಳನ್ನು ಮರೆತು ಹೊಸ ಅನುಭವಗಳನ್ನು ಪಡೆಯಬೇಕು.

"ಈ ಸಮ್ಮೇಳನದ ಫಲಸ್ವರೂಪವಾದ ಅನುಭವದ ಆಧಾರದಿಂದ ದೇಶವ್ಯಾಪಿ ಸದ್ಭಾವದ ವಾತಾವರಣವನ್ನು ತಯಾರಿಸಬೇಕು. ಅದಕ್ಕಾಗಿ, ಪ್ರತ್ಯೇಕ ಪ್ರದೇಶದಲ್ಲಿ ಸ್ಥಾನೀಯ ದಳಗಳ ಮುಖಂಡರ ಪರಿಷತ್ತುಗಳು ಸೇರಲಿ." ಇದಕ್ಕಾಗಿ, ಪ್ರಾಂತೀಯ ಕಾರ್ಯಕರ್ತರ ಸಣ್ಣ ಸಣ್ಣ ಸಮಿತಿಗಳ ನಿರ್ಮಾಣವೂ ಅಲ್ಲಿ ಆಯಿತು.

"ಗ್ರಾಮದಾನದ ವಿಚಾರದಲ್ಲಿ ನಾವು ಹೆಚ್ಚಾಗಿ ಚಿಂತಿಸಬಾರದು. ಇದೀಗ ಒಂದು ಸ್ಥಿತ್ಯಂತರವಾದವಾಗಿ ಹೋಗಿದೆ. ಈಗ ನಾವು ಗ್ರಾಮರಾಜ್ಯದ ಕುರಿತಾಗಿ ಆಲೋಚಿಸಬೇಕು. ಗ್ರಾಮದಾನದಲ್ಲಿ ವ್ಯಕ್ತಿಗತ ಸ್ವಾಮಿತ್ವದ ವಿಸರ್ಜನೆಯಾಗುತ್ತದೆ. ಆದರೆ, ವ್ಯಕ್ತಿಗತ ಸ್ವಾಮಿತ್ವದಂತೆಯೇ ಸಾಮೂಹಿಕ ಮೂಲತತ್ವವೂ ದೋಷವಾಗಿದೆ" ಎಂದು ವಿನೋಬಾ ಅಭಿಪ್ರಾಯಪಡುತ್ತಾರೆ.

"ಬುದ್ಧನ ನಂತರ ತಾರುಣ್ಯ ಪೂರ್ಣ ಹೃದಯದಿಂದ ದೀನರಿಗಾಗಿ ತನ್ನ ಧ್ವನಿಯೆಬ್ಬಿಸಿದವನೆಂದರೆ ಕಾರ್ಲ ಮಾರ್ಕ್ಸ್ ನೊಬ್ಬನೇ. ಯದ್ಯಪಿ ಅವನು ಬುದ್ಧನಂತೆ ಜೀವನದ ಆಳದಲ್ಲಿ ಉತ್ತರ ಪಡೆಯಲಿಲ್ಲ" ಎಂದವರು ಕಾರ್ಲ ಮಾರ್ಕ್ಸನನ್ನು ಹೊಗಳುತ್ತಾರೆ ಹಾಗೆಯೇ "ವ್ಯಕ್ತಿಗತ ಸ್ವಾಮಿತ್ವಕ್ಕಿಂತ ವ್ಯಕ್ತಿಗತ ಹೊಣೆಗಾರಿಕೆಯು ಅಧಿಕ ಪವಿತ್ರವಾಗಿದೆ. ಆದರೆ, ಅದರ ಉತ್ಸರ್ಗವು ಮತ್ತೂ ಪರಮಪಾವನವಾಗಿದೆ" ಈ ರೀತಿಯಾಗಿ ವಿನೋಬಾ ಮೈಸೂರು ಸಮ್ಮೇಳನದ ಸಂದೇಶವನ್ನು ದೇಶದ ಪ್ರಜೆಗಳಿಗಿತ್ತರು.

ವಾಮನನು ಮೂರು ಕ್ರಮಗಳಿಂದ ಸ್ವರ್ಗ, ಮರ್ತ್ಯ ಪಾತಾಳಗಳನ್ನು ಜಯಿಸಿ ಮಹತ್ವಾಕಾಂಕ್ಷಿ ಬಲಿಯನ್ನು ಮೆಟ್ಟಿದನು. ಆಧುನಿಕ ವಾಮನ ವಿನೋಬಾ ಮೂರು ಕ್ರಮಗಳಿಂದ, ಭೂಮಿದಾನ, ಗ್ರಾಮದಾನ ಮತ್ತು ಗ್ರಾಮರಾಜ್ಯಗಳಲ್ಲಿ ಜಯಶೀಲರಾಗಿ, ವೈಯಕ್ತಿಕ ಅಧಿಕಾರವನ್ನು ಮೆಟ್ಟುವರೆಂಬುದು ನಿಸ್ಸಂಶಯ.

(ಹಿಂದಿ "ನವಭಾರತ ಟೈಮ್ಸ್")

ಭೂತಾರಾಧನೆ ಮತ್ತು ಕೇಲಮಾರಿ

(೧ನೇ ಪುಟದಿಂದ)

ಜಾದುಕೃತಿಯೆಂದರೆ ಭಕ್ತನು ತನ್ನ ಮೈಮೇಲೆ ದೈವವೀಸಂಚಾರವಾಗಿದೆ ಎಂದು ತಿಳಿದುಕೊಳ್ಳುವುದು. ಹೀಗೆ ಅವನು ಜನರ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾನೆ. ಅವನ ಆಡಚಣೆಗಳನ್ನು ನಿವಾರಿಸುತ್ತಾನೆ; ಮತ್ತು ಅವರ ಯಾವತ್ತು ಕಾರ್ಯಗಳಲ್ಲಿ ಯಶಸಿಗುವ ಭರವಸೆ ಕೊಡುತ್ತಾನೆ. ಸೂರ್ಯನ ಪೂಜೆಯನ್ನು ಗುಡಿಯ ಬಾಗಿಲು ಪೂರ್ವ ಯಾ ಪಶ್ಚಿಮ ದಿಕ್ಕಿಗೆ ಇರುವುದಗ ಮೂಲಕ ಗುರುತಿಸಬಹುದು. ತುಳುವರಲ್ಲಿ ಬಹಳವಾಗಿ ಅಸ್ತಿತ್ವದಲ್ಲಿದ್ದ ಸೂರ್ಯ ಪೂಜೆಯನ್ನು ಈಗ ಖ್ಯಾತಿಲಿತವಿರುವ 'ಸೂರ್ಯ ಪಂಚಾಂಗ' ಎಂಬ ಹೆಸರಿಂದಲೂ ತಿಳಿದುಕೊಳ್ಳಬಹುದು.

ಮೈಸೂರಿನ ಈ ಸೂರ್ಯ ಪೂಜೆಯು ಉದಾಹರಣೆ ಎಂದರೆ, ಬಿಸಿಲವಾರಿ. ಆ ಜಾಮಿನ ಕೃತಿಗಳನ್ನು ಆಂಧ್ರದ ಮತ್ತು ಉತ್ತರ ಕನ್ನಡದ ಗಿಂಡಿ ಪೂಜಾರಿಗಳ ಕೃತಿಗಳೊಂದಿಗೆ ಪೂರ್ಣವಾಗಿ ಹೋಲಿಸಬಹುದು. ಈ ಪೂಜಾರಿಯು ಸಹದರ್ಶನ ಬಂದ ನಂತರ ಜನರ ಪ್ರಶ್ನೆಗಳನ್ನು ಸಮರ್ಪಕ ವಿಧಾನದಲ್ಲಿ ಉತ್ತರಿಸುತ್ತಾನೆ.

ಮಾತೃವಾರೀಸು ಪದ್ಧತಿ ಮತ್ತು ಪ್ರಕೃತಿ ಮೂಲ ಜಾತಿತ್ವವು ಹಿಂದುಸ್ಥಾನದಲ್ಲಿ ಹೊರಗಣಿಂದ ಬಂದುವೆಂದು ಈಗ ಎಲ್ಲರೂ ಒಪ್ಪುತ್ತಾರೆ. ಇಂಡೊನೇಶಿಯಾ ಮತ್ತು ಪೂರ್ವ ಭೂಮಧ್ಯ ಪ್ರದೇಶದಿಂದ ಮಾತೃಹಕ್ಕು ಬಂದಿತ್ತು. ಅದೇ ಪ್ರಕಾರ ಪ್ರಕೃತಿ ಮೂಲ ಜಾತಿತ್ವವು ಎರಡೂ ಬದಿಗಳಿಂದ ಬಂದಿತ್ತು. ಇವು ಒಂದರಲ್ಲೊಂದು ಕೂಡಿಕೊಂಡು ಬಂದುವೋ ಯಾ ಇಲ್ಲಿ ಬಂದ ಮೇಲೆ ದಕ್ಷಿಣ ಹಿಂದುಸ್ಥಾನದಲ್ಲಿ ಒಂದರಲ್ಲೊಂದು ಬೆರೆತುವೋ ಎಂಬುದು ಮುಂದಿನ ಸಂಶೋಧನೆ ಮಾಡುವ ವಿಷಯವಾದುದರಿಂದ, ಈ ಪೂಜೆಯು ಹಿಂದುಸ್ಥಾನದಲ್ಲಿ ಆಯಾತವಾದುದೆಂದು ಹೇಳಲು ಶಂಕೆಯಿಲ್ಲ.

ಆದುದರಿಂದ, ಮೊದಲು ಹೊಲೆಯರೇ ಭೂತಾರಾಧನೆಯನ್ನು ಮಾಡುತಿದ್ದರೆಂಬುದು ನಿಜ ಸಂಗತಿ. ಆ ಮೇಲೆ ದಿವರರು ಬಂದರು. ಮತ್ತು ಆ ಕೆಲಸವನ್ನು ಸಂಪೂರ್ಣವಾಗಿ ಅಕ್ರಮಿಸಿದರು. ಹೊಲೆಯರು ಅವರಿಗೆ "ಬೈದೆ" (ಅಂದರೆ ತುಳುಬಾಷೆಯಲ್ಲಿ ಬಂದಿದ್ದಾರೆ, ಬಂದವರು ಎಂದರ್ಥ) ಎಂದು ಕರೆಯುತ್ತಾರೆ. ಶ್ರೀ ಪೂಂಜರೂ ಇದನ್ನೂ ಒಪ್ಪುತ್ತಾರೆ. ಈಗ ಈ ಎಲ್ಲಾ ಪೂಜೆಯರ ಸ್ವಾರಗಳು ಬಂಟರ ನಿಯಂತ್ರಣದಲ್ಲಿದೆ.

ನಾನು ಈ ಎಲ್ಲ ತೊಡಕಿನ ಸಮಸ್ಯೆಯ ಹೊರನೋಟವನ್ನಷ್ಟೇ ಕಾಣಿಸಿದ್ದೇನೆ. ಜನರು ಈ ಕುರಿತಾಗಿ ಇನ್ನೂ ಹೆಚ್ಚಿನ ಅಭ್ಯಾಸಮಾಡಬೇಕು ಎಂಬುದೇ ನನ್ನ ಮನೀಷೆಯಾಗಿದೆ.

ಅನುಭವದಿಂದ ಬಂದ ಜ್ಞಾನ

• • •

ಶ್ರೀಗಂಧದ ಮರಗಳನ್ನು ಸಮೃದ್ಧವಾಗಿ ಬೆಳೆಸುವುದರ ರಹಸ್ಯವು ನೂರಾರು ವರ್ಷಗಳ ಅನುಭವವಾದ ಮೇಲೂಕೂಡಾ ಇನ್ನೂ ಮೈಸೂರು ಸೀಮೆಯೊಂದರ ವಶದಲ್ಲಿಯೇ ಇರುವ ಸ್ವತ್ತಾಗಿದೆ. ಮೈಸೂರು ಸಂಸ್ಥಾನದ ಕಾರ್ಖಾನೆಗಳಲ್ಲಿ ಬಟ್ಟಿಯಿಳಿಸಿದ ಅತ್ಯಂತ ಮನೋಹರವಾದ ಪರಿಮಳವುಳ್ಳ ಶ್ರೀಗಂಧದ ಎಣ್ಣೆಯೇ ಪ್ರಪಂಚದಲ್ಲೆಲ್ಲ ಅತ್ಯಂತ ಶ್ರೇಷ್ಠವಾದದ್ದು. ಈ ಎಣ್ಣೆಯು ಸರ್ವಸಮರ್ಪಕವಾದ ಸ್ಥಳ ಸನ್ನಿವೇಶದಲ್ಲಿ ಬೆಳೆದು ಕಡಿದು ಕೂಡಿಟ್ಟ ಶ್ರೀಗಂಧದ ಮರದಿಂದ ತಯಾರಾದದ್ದು. ಅದರ ಸುವಾಸನೆಯು ಮರದಲ್ಲಿ ಸಾಕ್ಷಾತ್ತಾಗಿರುವ ಎಣ್ಣೆಯದು ಹೇಗೆಯೋ ಹಾಗೆಯೇ ತುಂಬಿಕೊಂಡು ಸ್ವಲ್ಪವೂ ಕುಂದದೆ ಇರುತ್ತದೆ. ಲೋಕದಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಸಾಬೂನುಗಳ ಮತ್ತು ಪರಿಮಳ ದ್ರವ್ಯಗಳ ತಯಾರಿಕೆಯಲ್ಲಿ ಈ ಸುವಾಸನೆಯು ಉಪಯುಕ್ತವಾಗುತ್ತದೆ.

ಮೈಸೂರು ಶ್ರೀಗಂಧದ ತೈಲ

ಗವರ್ನಮೆಂಟ್ ಸ್ಯಾಂಡಲ್‌ಉಡ್ ಆಯಿಲ್ ಫ್ಯಾಕ್ಟರಿ

ಮೈಸೂರು.

ಆಹ್ಲಾದ!....

ನಿಮ್ಮ ಶರೀರ ಸೌಭಾಗ್ಯಕ್ಕೆ ವ್ಯಾಯಾಮ ಮತ್ತು ಗಾಳಿ ಹೇಗೆ ಅವಶ್ಯಕವೋ, ವ್ಯಾಯಾಮದಿಂದ ಹೇಗೆ ಅವಯವಗಳು ಸುಲಭ ಚೇತನಗೊಳ್ಳುವುವೋ, ಅದರಂತಾಗಿ ಹೇಗೆ ಶರೀರದ ಮಾಂಸಖಂಡಗಳೇ ಅಲ್ಲದೆ, ರಕ್ತನಾಳಗಳೆಲ್ಲವೂ ಹೊಸ ರಕ್ತ ಹೊಂದುವವೋ, ಅಂತೆಯೇ ಶರೀರದ ಹೊರ ಹೊದಿಕೆಯಾದ ಚರ್ಮವೂ ಇದೆಲ್ಲಕ್ಕೂ ಅತಿ ಉಪಯುಕ್ತವಾದ ಸಹಕಾರಿಯಲ್ಲವೇ?

ನಿಮ್ಮ ಈ ಚರ್ಮವು ಹೊರಗಣ ಎಲ್ಲ ಜಾಗರೂಕತೆಯನ್ನೂ ಅಪೇಕ್ಷಿಸಬಲ್ಲುದು. ಇದೇ "ಮೈಸೂರು ಸ್ಯಾಂಡಲ್ ಸಾಬೂನು" ಇದು ಉತ್ತಮವಾದ ಮತ್ತು ಶ್ರೇಷ್ಠತಮವಾದ ರಾಸಾಯನಿಕ ಸುಗಂಧದ್ರವ್ಯಗಳಿಂದ ತಯಾರಾದುದು. ಇದು ಚರ್ಮದ, ಹೊರಭಾಗದ ಎಲ್ಲ ಕಲ್ಮಶವನ್ನೂ ಹೊರಗೆಡಹಬಲ್ಲುದು. ಹಾಗೂ ಚರ್ಮವನ್ನು ಅತಿ ಸುಗುಣವಾಗಿಯೂ ಹೆಚ್ಚು ಕಾಂತಿಯುತವಾಗಿಯೂ ಮಿಗಿಲಾಗಿ ಮನಸ್ಸನ್ನು ಆಹ್ಲಾದಕರವನ್ನಾಗಿಯೂ ಮಾಡಬಲ್ಲುದು.

ಮೈಸೂರು ಸ್ಯಾಂಡಲ್ ಸೋಪ್

ಎಲ್ಲೆಲ್ಲಿಯೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ರಾಜಾಜಿ ನಗರ

ಬೆಂಗಳೂರು-3

Regd. No. M. 3610
LICENCE NO 31
Licensed to Post without Prepayment

ಸರ್ವರಿಗೂ ದೀಪಾವಳಿಯು ಸುಖಸಮೃದ್ಧಿದಾಯಕವಾಗಲಿ!
ನಿಮ್ಮೆಲ್ಲರ ಆರೋಗ್ಯಕ್ಕೆ ಧನ್ವಂತರಿಯ ರಕ್ಷೆ ಇರಲಿ!!

ನಿಮಗೆ ಹೇಳಿಕೊಳ್ಳುವ

ಉತ್ತಮ ರೀತಿಯ ಆಯುರ್ವೇದ ಶಾಸ್ತ್ರೀಯ ರೀತ್ಯಾ ಆಸವಾರಿಷ್ಟಗಳನ್ನು, ಕಣ್ಣಿಗೂ ಮೆದುಳಿಗೂ ತಂಪನ್ನೀಯುವ ತಲೆಗಿಡುವ ತೈಲಗಳನ್ನು, ಮೈಗೆ ಕಾಂತಿಯನ್ನೂ ಶಕ್ತಿಯನ್ನೂ ಕೊಡುವ ಮೈಗೆ ಮೂಸುವ ತೈಲಗಳನ್ನು, ನಿಮಗೆ ಹಿತವಾದ, ಪುಷ್ಟಿದಾಯಕ ಮತ್ತು ಚೈತನ್ಯದಾಯಕ ಲೇಹ್ಯಗಳನ್ನು, ಪರಿಣಾಮಕಾರಿಯಾದ ಚೂರ್ಣ, ವಟಿ, ಗುಟಿ, ಗುಗ್ಗಲುವ ಅನುಭವಸಿದ್ಧ ಔಷಧಿಗಳನ್ನು ತಯಾರಿಸುವ ನಿಮ್ಮ ಪ್ರೀತಿ ವಿಶ್ವಾಸದ ಸಂಸ್ಥೆ:—

ಶ್ರೀಮಹಾಲಿಂಗೇಶ್ವರ ಫಾರ್ಮಸಿ ಪ್ರೈವೇಟ್ ಲಿಮಿಟೆಡ್

ಕಟಪಾಡಿ, ದ. ಕನ್ನಡ.

ಡಿಪೋ (1) ಉಡುಪಿ (2) ಮರಾಠಗಲ್ಲಿ, ಹುಬ್ಬಳ್ಳಿ.

Edited, Printed & Published by K. B. Shetty at the Navayuga Press, Udipi S. India